ಕರ್ನಾಟಕ ಸರ್ಕಾರ



# ಆದಿಪುರಾಣ

ಸಂಪುಟ - ೧

ಡಾ. ಪಿ.ವಿ. ನಾರಾಯಣ

೧೯೯೩-೨೦೧೮
ಬೆಳ್ಳಿ ಹೊತ್ತಿಗೆ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು - ೫೬೦ ೦೦೨

S

# ಆದಿಪುರಾಣ

## ಸಂಪುಟ – ೧

ಡಾ| ಪಿ. ವಿ. ನಾರಾಯಣ

೧೯೯೩ - ೨೦೧೮
ಬೆಳ್ಳಿ ಹೊತ್ತಿಗೆ

**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦೦೦೨
ದೂರವಾಣಿ: ೦೮೦–೨೨೧೦೭೭೦೪, ೨೨೪೮೪೫೧೬
ವೆಬ್‌ಸೈಟ್: www.kannadapustakapradhikara.com
ಈಮೇಲ್: kannadappradhikara@gmail.com

**AADIPURANA Samputa-1** Written by: **Dr. P.V. Narayana**, Published by : Sowbhagya, Administrative Officer, Kannada Pusthaka Pradhikara, Kannada Bhavana, J.C. Road, Bengaluru-560 002

| | | |
|---|---|---|
| ಪ್ರಥಮ ಮುದ್ರಣ | : | ೨೦೧೮ |
| ಪುಟಗಳು | : | xxxvi + ೭೫೬ |
| ಬೆಲೆ | : | ರೂ. ೧೨೦೦/- (ಸಂಪುಟ ೧ ಮತ್ತು ೨ ಸೇರಿ) |
| ಪ್ರತಿಗಳು | : | ೫೦೦ |
| ಐ.ಎಸ್.ಬಿ.ಎನ್. ಸಂಖ್ಯೆ | : | ೯೭೮-೯೩-೫೨೮೯-೨೦೭-೫ |
| ಬಳಸಿದ ಕಾಗದ | : | ೭೦ ಜಿ.ಎಸ್.ಎಂ. ಎನ್.ಎಸ್. ಮ್ಯಾಪ್ಲಿಥೋ |
| ಅಳತೆ | : | ೧/೮ ಡೆಮ್ಮಿ |
| © ಗ್ರಂಥ ಸ್ವಾಮ್ಯ | : | ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು |

| | | |
|---|---|---|
| First Print | : | 2018 |
| Page | : | xxxvi + 756 |
| Price | : | Rs. 1200/- (Include Samputa 1 & 2) |
| Copies | : | 500 |
| ISBN | : | 978-93-5289-207-5 |
| Paper used | : | 70 G.S.M. N.S. Maplitho |
| Size | : | 1/8 Demy |
| © Copy Rights | : | Kannada Pusthaka Pradhikara, Bengaluru |

| | | |
|---|---|---|
| ಮುಖಪುಟ ವಿನ್ಯಾಸ | : | ಎಂ. ಭಕ್ತವತ್ಸಲ |

ಪ್ರಕಾಶಕರು
**ಸೌಭಾಗ್ಯ**
ಆಡಳಿತಾಧಿಕಾರಿ
ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು-೫೬೦ ೦೦೨.
ದೂರವಾಣಿ: ೨೨೧೦೭೭೦೪/೨೨೪೮೪೫೧೬
ಈಮೇಲ್: kannadappradhikara@gmail.com
ವೆಬ್: www.kannadapustakapradhikara.com

ಮುದ್ರಕರು:
**ರಾಜಾ ಪ್ರಿಂಟರ್ಸ್**
ಪುಖ್‌ರಾಜ್ ಲೇಔಟ್, ಬನ್ನೇರುಘಟ್ಟ ರಸ್ತೆ
ಬೆಂಗಳೂರು-೫೬೦ ೦೩೦. ದೂರವಾಣಿ: ೨೨೨೩೪೦೬೬
ಈಮೇಲ್: rajaprinters@gmail.com

# ಅಧ್ಯಕ್ಷರ ನುಡಿ

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಪರಂಪರೆಯ ಬೇರನ್ನು ಸುಭದ್ರಗೊಳಿಸುವ ನಿಟ್ಟಿನಲ್ಲಿ ಪುಸ್ತಕಗಳ ಪ್ರಕಟಣೆಗೆ ಮಾತ್ರ ಸೀಮಿತವಾಗದೇ, ಪುಸ್ತಕಗಳ ಉಚಿತ ವಿತರಣೆಗಾಗಿ ಸಗಟು ಖರೀದಿ ಯೋಜನೆ ಸೇರಿದಂತೆ ಹಲವಾರು ಮಹತ್ವದ ಯೋಜನೆಗಳನ್ನು ಹೊಂದಿದೆ. ಪುಸ್ತಕ ಸಂಸ್ಕೃತಿಯ ಪ್ರಸಾರದಲ್ಲಿ ಬಲವಾದ ಹೆಜ್ಜೆಗಳನ್ನೂರುತ್ತ, ಪ್ರಕಾಶಕರು – ಲೇಖಕರು – ಓದುಗರ ನಡುವೆ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತಿದೆ. ೧೯೯೩ರಲ್ಲಿ ಪ್ರಾರಂಭವಾದ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಈಗ ಬೆಳ್ಳಿ ಹಬ್ಬದ ಸಂಭ್ರಮ. ಪ್ರಕಾಶಕರ ಕೈಪಿಡಿ, ಪ್ರಾಧಿಕಾರದ ಹೆಜ್ಜೆಗುರುತುಗಳ ಪ್ರಕಟಣೆಗಳೊಂದಿಗೆ, ದೇಸಿಜ್ಞಾನ ಪರಂಪರೆ, ಪ್ರಕಾಶಕರ ಸಮ್ಮೇಳನ, ಪುಸ್ತಕೋದ್ಯಮ ಚರಿತ್ರೆಯ ಕುರಿತು ಸಂಪುಟಗಳ ರಚನೆ ಮುಂತಾದ ಯೋಜನೆಗಳನ್ನು ಕೈಗೊಂಡಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ಅಚ್ಚುಮೆಚ್ಚಿನ ಪುಸ್ತಕ', ಕಾಲೇಜು ವಿದ್ಯಾರ್ಥಿಗಳಿಗೆ 'ಜಾಣ ಜಾಣೆಯರ ಬಳಗ' ಕಾರ್ಯಕ್ರಮಗಳೊಂದಿಗೆ, ಉದಯೋನ್ಮುಖ ಬರಹಗಾರರನ್ನು ಪ್ರೋತ್ಸಾಹಿಸುವ ಚೊಚ್ಚಲ ಕೃತಿಗಳಿಗೆ ಧನಸಹಾಯ ನೀಡುವುದನ್ನು ೩೦ ರಿಂದ ೫೦ ಬರಹಗಾರರಿಗೆ ಹೆಚ್ಚಿಸಲಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರದ ಯೋಜನೆಗಳಲ್ಲಿ ಸಾಹಿತ್ಯ ಲೋಕದ ಅಪರೂಪದ, ವಿಶೇಷವೆನಿಸುವ ಪುಸ್ತಕಗಳ ಪ್ರಕಟಣೆಯೂ ಒಂದು.

ನೂರಾರು, ಸಾವಿರಾರು ವರ್ಷಗಳ ಹಿಂದೆ ರಚಿತವಾಗಿದ್ದರೂ ಕೆಲವು ಕಾವ್ಯಗಳು ಈಗಲೂ ಯಾಕೆ ಓದುಗರನ್ನು ತಲುಪುತ್ತವೆ ಎಂಬುದನ್ನು ಕುರಿತು ಆಲೋಚಿಸಿದಾಗ, ಅವುಗಳ ಸತ್ವವೇ ಅದಕ್ಕೆ ಕಾರಣ ಎಂಬುದು ಹೊಳೆಯದಿರದು. ಸತ್ವ ಎಂದರೆ, ಎಲ್ಲ ಕಾಲದ ಜನಗಳ ಬದುಕಿನ ನಿತ್ಯ ನಿರಂತರವಾದುದನ್ನು ಕುರಿತು ಅನ್ವೇಷಿಸುವ ಪರಿ. ಹಳಗನ್ನಡ ಕಾವ್ಯಗಳಲ್ಲಿ ಕೆಲವು ಅಂತಹವಾದ್ದರಿಂದ, ಭಾಷೆಯ ಸ್ವರೂಪ ಬದಲಾಗಿದ್ದರೂ ಬದುಕಿನ ಬಗೆ ಒಂದೇ ಆಗಿರುವುದರಿಂದ,

ಅವು ರಚಿತವಾದ ಕಾಲದಲ್ಲಿ ಹೇಗೆಯೋ ಈಗಲೂ ಜನಮನವನ್ನು ಕಾಡುವ ಅಂಶಗಳನ್ನು ಪರೀಕ್ಷಿಸುವ ಕಾರಣದಿಂದ, ಅವು ಈಗಲೂ ಪ್ರಸ್ತುತವಾಗಿರುತ್ತದೆ. ಕನ್ನಡದ ಆದಿ ಕವಿ ಎನಿಸಿದ ಪಂಪನ ಎರಡು ಕೃತಿಗಳೂ ಅಂತಹವೇ. ಹತ್ತನೆಯ ಶತಮಾನದ ಮೊದಲರ್ಧದಲ್ಲಿದ್ದ ಅವನ ಮೊದಲ ಕಾವ್ಯವಾದ 'ಆದಿಪುರಾಣ'ವು ಹೊರ ಪರಿವೇಷದಲ್ಲಿ ಜೈನಧರ್ಮೀಯರಿಗೆ ಸಂಬಂಧಿಸಿದಂತೆ ಕಂಡರೂ ಆಂತರ್ಯದಲ್ಲಿ ಅದು ಬದುಕನ್ನು ಕುರಿತ ಹುಡುಕಾಟವೇ ಆಗಿದೆ. ಕಾವ್ಯಕ್ಕೆ ಆ ಹೆಸರು ಬಂದಿರುವುದು ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಮೊದಲನೆಯವನಾದ ಋಷಭನಾಥನ ಕಥಾನಕ ಎಂಬುದಾದರೂ, ಇಡೀ ಮನುಷ್ಯಕುಲದ ಇತಿವೃತ್ತವೂ ಅದರಲ್ಲಿ ಅಂತರ್ಗತವಾಗಿದೆ. ಕಾವ್ಯದ ಮೊದಲಲ್ಲಿ ಮಾನವ ಸಂಕುಲವು ತನ್ನ ಅಸ್ತಿತ್ವದ ಆದಿಮ ಹಂತದಲ್ಲಿ ಪ್ರಕೃತಿಯೊಡನೆ ಹೊಂದಿಕೊಳ್ಳುವ ಕ್ರಮಾಗತವಾದ ರೀತಿಯ ಕುರಿತ ಬಣ್ಣನೆಯಿದ್ದರೆ, ಮುಂದಿನ ನಿರೂಪಣೆಯಲ್ಲಿ ಮಾನವ ಚೇತನವು ಎದುರಿಸುವ ಬದುಕಿನ ನಿತ್ಯನಿಗೂಢಗಳು ಹಾಗೂ ಇರುವಿಕೆಯ ಸಾರ್ಥಕತೆಯ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಪರಿಯನ್ನು ಚಿತ್ರಿಸುತ್ತದೆ. ಇಲ್ಲಿನ ಕಥಾವಸ್ತುವನ್ನು ಹಾಗೂ ಅನೇಕ ವಿವರಗಳನ್ನು ಒಂಬತ್ತನೆಯ ಶತಮಾನದಲ್ಲಿದ್ದು, ಜಿನಸೇನಾಚಾರ್ಯನ 'ಪೂರ್ವಪುರಾಣ'ವೆಂಬ ಸಂಸ್ಕೃತ ಕಾವ್ಯದಿಂದ ಪಂಪ ತೆಗೆದುಕೊಂಡಿದ್ದರೂ, ಅದರಲ್ಲಿ ತನ್ನ ಒಳನೋಟಗಳ ದ್ರವ್ಯವನ್ನು ತುಂಬಿ ಕಾವ್ಯವನ್ನು "ಇದು ನಿಚ್ಚಂ ಪೊಸತು" ಎನಿಸುವಂತೆ ಮಾಡಿದ್ದಾನೆ. ಹನ್ನೊಂದು ಶತಮಾನಗಳ ಹಿಂದಿನ ಕನ್ನಡ ಭಾಷೆಯ ಸ್ವರೂಪವು ಸಹಜವಾಗಿಯೇ ಈಗಿನದಕ್ಕಿಂತ ತುಂಬ ಭಿನ್ನವಾದುದು. ಆದರೆ ಅದು ಮುಂದಿನ ಎಲ್ಲ ಪೀಳಿಗೆಗಳ ಓದುಗರನ್ನು ತಲುಪುತ್ತ ಬಂದಿರುವ ಕಾರಣವೆಂದರೆ, ಅದು ಪ್ರತಿ ಓದುಗನನ್ನೂ ಕಾಡುವ ಪ್ರಶ್ನೆಗಳನ್ನು ಕುರಿತಾಗಿರುವುದು. ಈ ಶತಮಾನದ ಓದುಗರಿಗೂ ಅದು ತಲುಪುವಂತೆ ಮಾಡುವುದೆಂದರೆ ಅಲ್ಲಿನ ಹಳಗನ್ನಡವನ್ನು ಒಡೆದು ಹೊಸಭಾಷೆಯಲ್ಲಿ ಹೇಳುವುದು, ಅದನ್ನು ಮಾಡಬೇಕಾದುದು ಹಿರಿಯರ ಕರ್ತವ್ಯ. ಅದನ್ನು ಅನೇಕ ರೀತಿಗಳಲ್ಲಿ ಮಾಡಬಹುದು; ಹಳೆಯದನ್ನು ಸುಲಿದು, ಹೊಸತರ ಮೂಲಕ ವ್ಯಕ್ತಪಡಿಸುವುದು. ಪ್ರಸಿದ್ಧ ವಿದ್ವಾಂಸರಾದ ಡಾ. ಪಿ.ವಿ. ನಾರಾಯಣ ಅವರು ಕನ್ನಡದ ಓದುಗರು ಆದಿಪುರಾಣದ ಅನುಭೂತಿಗೆ ಒಳಗಾಗುವಂತೆ ವಿವರಣೆ ನೀಡಿದ್ದಾರೆ.

ಇದನ್ನು ಪ್ರಕಟಿಸಲು ಸಮ್ಮತಿಸಿದ ಲೇಖಕರಾದ ಡಾ. ಪಿ.ವಿ. ನಾರಾಯಣ ಅವರಿಗೆ ಮನಃಪೂರ್ವಕ ಕೃತಜ್ಞತೆಗಳು. ಈ ಕೃತಿ ಪ್ರಕಟವಾಗುವಲ್ಲಿ ಆಸಕ್ತಿವಹಿಸಿದ

ಆಡಳಿತಾಧಿಕಾರಿ ಶ್ರೀಮತಿ ಸೌಭಾಗ್ಯ ಅವರಿಗೆ, ಪ್ರಾಧಿಕಾರದ ಎಲ್ಲ ಸದಸ್ಯರಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ವಂದನೆಗಳು. ಕನ್ನಡ ಸಾರಸ್ವತಲೋಕ ಈ ಕೃತಿಯನ್ನು ಬೆರಗುಗಣ್ಣಿನಿಂದ ಎದೆಗೊತ್ತಿಕೊಳ್ಳುತ್ತದೆ ಎಂಬ ಭರವಸೆ ಪ್ರಾಧಿಕಾರದ್ದಾಗಿದೆ.

**– ಡಾ॥ ವಸುಂಧರಾ ಭೂಪತಿ**

# ಲೇಖಕರ ನುಡಿ

ಸುಮಾರು ೧೬೦೦ ಪದ್ಯಗಳುಳ್ಳ ಗಾತ್ರ ಮತ್ತು ಕಾವ್ಯಘನತೆ ಎರಡರಲ್ಲೂ ಹಿರಿದಾದ ಹಾಗೂ ಕನ್ನಡದ ಸಿಕ್ಕಿರುವ ಮೊದಲನೆಯ ಸೃಜನಕಾವ್ಯವಾದ ಪಂಪನ 'ಆದಿಪುರಾಣ'ವನ್ನು ಸಂಪೂರ್ಣವಾಗಿ ಈಗಿನವರಿಗೆ ದೊರಕುವಂತೆ ಮಾಡಲು ಸಹಕರಿಸಬೇಕೆಂದು ಕನ್ನಡ ಪುಸ್ತಕ ಪ್ರಾಧಿಕಾರವು ಕೇಳಿದಾಗ ನನಗೆ ಆದುದು ಪುಲಕ ಮತ್ತು ದಿಗಿಲು. ನಾನು ಪಂಪನ ಅಭಿಮಾನಿ. ಅವನಿಂದಲೇ, ಅಂದರೆ ಅವನ ಕಾವ್ಯಧೋರಣೆಯ ಬೆಳಕಿನಲ್ಲಿಯೇ, ಇದುವರೆಗಿನ ಕನ್ನಡ ಕಾವ್ಯ ನಿರಂತರವಾಗಿ ನಡೆದುಕೊಂಡು ಬಂದಿದೆ, ಈಗಲೂ ಹಾಗೆಯೇ ಸಾಗಿದೆ ಎಂಬುದು ನನ್ನ ಮನವರಿಕೆ. ಅವನ ಕಾವ್ಯಗಳ ಕುರಿತು ಈವರೆಗೆ ಒಂದಷ್ಟು ಕೆಲಸಗಳನ್ನು ಮಾಡಿ ನನ್ನ ಕೈಲಾದ ಪಂಪಸೇವೆಯನ್ನು ಸಲ್ಲಿಸಿದ್ದೆ. ಈಗ ಅದರೊಡನೆ ಈ ಹೊಸ ಸಿಹಿಹೊರೆಯನ್ನು ಅನುಭವಿಸುವ ಅವಕಾಶ ಒದಗಿದ್ದಕ್ಕಾಗಿ ಸಂತಸ. ಆದರೆ ಈ ಕೆಲಸ ನಿಭಾಯಿಸಬಲ್ಲೆನೇ, ಅಂಥ ಮಹಾ ಪಂಡಿತನಲ್ಲದ ಹಾಗೂ ಸಂಸ್ಕೃತವಿದ್ವಾಂಸನಲ್ಲದ ನಾನು ಇದನ್ನು ನಿಭಾಯಿಸಬಲ್ಲೆನೇ ಎಂಬ ಅಳುಕು. ಆದರೆ 'ಧೈರ್ಯಂ ಸರ್ವತ್ರ ಸಾಧನಂ' ತಾನೇ! ಹೀಗಾಗಿ ಜೀವಮಾನದ ಅವಕಾಶವಾದ ಇದನ್ನು ಒಪ್ಪಿಕೊಂಡೆ; ಪೂರ್ಣಗೊಳಿಸಿದ್ದೇನೆ. ಯಾವ ಕಾರ್ಯವೂ ಪರಿಪೂರ್ಣವಾಗಲಾರದು, ನನ್ನ ಕೆಲಸವೂ ಖಂಡಿತ ಆ ರೀತಿ ಇರದು ಎಂದು ಗೊತ್ತಿದ್ದರೂ ಇದಕ್ಕೆ ಕೈಹಾಕಲು ನನಗಿದ್ದ ಧೈರ್ಯವೆಂದರೆ, ಇದನ್ನು ಹೆಚ್ಚು ಸಮರ್ಪಕವಾಗಿ ಮಾಡಬಲ್ಲಂತಹವರು ಈಗ ಹೆಚ್ಚು ಮಂದಿಯಿಲ್ಲ, ಇರುವವರೂ ವಯಸ್ಸು ಮುಂತಾದ ಕಾರಣದಿಂದ ಇದನ್ನು ಒಪ್ಪಿಕೊಳ್ಳದಿರಬಹುದು, ಹಾಗಾಗಿ ಸಾಕಷ್ಟು ವಯಸ್ಸಾಗಿ 'ಹಿರಿಯ'ನೆನಿಸಿರುವ ನಾನೇ ಮಾಡಬಹುದೆಂದು ತೀರ್ಮಾನಿಸಿದೆ. ಈ ಕೃತಿಯ ಮೂಲನೆಲೆಯಾಗಿ (ಅಂದರೆ ಪದ್ಯಾನುಪೂರ್ವಿಗಾಗಿ) ನಾನು ೨೦೦೬ ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ 'ಸಮಗ್ರ ಕನ್ನಡ ಜೈನ ಸಾಹಿತ್ಯ ಮಾಲೆ'ಯ ಮೊದಲ ಸಂಪುಟವಾಗಿ ಪ್ರಕಟಗೊಂಡ ಡಾ। ಟಿ.ವಿ. ವೆಂಕಟಾಚಲಶಾಸ್ತ್ರಿಗಳವರ ಸಂಪಾದಕತ್ವದ 'ಪಂಪಸಂಪುಟ'ದಲ್ಲಿನ 'ಆದಿಪುರಾಣಂ' ಅನ್ನು ಇರಿಸಿಕೊಂಡಿದ್ದೇನೆ. ಆದರೆ ಅದರೊಡನೆ ಮುಖ್ಯ ಪಾಠಗಳಿಗಾಗಿ ಡಾ। ಎಲ್. ಬಸವರಾಜು ಸಂಪಾದಕತ್ವದ

'ಪಂಪನ ಆದಿಪುರಾಣ'ದ ೧೯೭೬ ರ ಮೊದಲ ಮುದ್ರಣ ಹಾಗೂ ೨೦೦೪ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟಿಸಿದ ಗದ್ಯಾನುವಾದ ಸಮೇತವಾದ ಕೆ.ಎಲ್. ನರಸಿಂಹಶಾಸ್ತ್ರಿ ಅವರ 'ಪಂಪಮಹಾಕವಿ ವಿರಚಿತ ಆದಿಪುರಾಣಂ' ಅನ್ನು ಗಮನಿಸಿದ್ದೇನೆ. ಹಾಗೆ ಕಂಡುಬಂದ ಪಾಠವ್ಯತ್ಯಾಸಗಳನ್ನು ಅನ್ವಯಿಸುವ ಪದ್ಯಗಳ ಬಗ್ಗೆ 'ವಿಶೇಷ ವಿಚಾರ' ಬರೆಯುವಾಗ ಉಲ್ಲೇಖಿಸಿದ್ದೇನೆ. ನನಗೆ ಸಂಸ್ಕೃತ ತಿಳಿಯದು; ಹೀಗಾಗಿ ಪಂಪನ ಭಾಗಗಳನ್ನು ಜಿನಸೇನನ ಪೂರ್ವಪುರಾಣದ ಭಾಗಗಳ ಜೊತೆಗೆ ಹೋಲಿಸುವಲ್ಲಿ ಸಂಪೂರ್ಣವಾಗಿ ಡಾ। ಎಲ್ ಬಸವರಾಜು ಅವರ 'ಆದಿಪುರಾಣ'ದ ಆವೃತ್ತಿ ಹಾಗೂ ತ.ಸು. ಶಾಮರಾಯ ಮತ್ತು ಪಂಡಿತ ಪ. ನಾಗರಾಜಯ್ಯನವರ ಕರ್ತೃತ್ವದ 'ಆದಿಪುರಾಣ ದೀಪಿಕೆ'ಯನ್ನು ಅವಲಂಬಿಸಿದ್ದೇನೆ. ಅವರೆಲ್ಲರಿಗೆ ನನ್ನ ವಂದನೆಗಳು. ಪದ್ಯಗಳಿಗೆ ಅರ್ಥವನ್ನು ವಿವರಿಸಲು ಸಹ ಅನೇಕ ಕೃತಿಗಳನ್ನು ಆಶ್ರಯಿಸಿದ್ದೇನೆ. ನಾನು ನೆರವು ಪಡೆದ ಕೃತಿಗಳ ಪಟ್ಟಿ ಗ್ರಂಥದ ಕೊನೆಗಿದೆ; ನನ್ನ ಈ ಕೃತಿಯ ಅಂತಿಮ ಕರಡನ್ನು ನೋಡಿ ಪ್ರೊ। ಕೆ.ಎಸ್. ಮಧುಸೂದನ ಅವರು ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಆ ಎಲ್ಲರಿಗೆ ನಮಸ್ಕಾರಗಳು. ನನ್ನ ಈ ಕಾರ್ಯ ಎಷ್ಟು ಉಪಯುಕ್ತವೋ ಗೊತ್ತಿಲ್ಲ; ಆದರೆ ಪ್ರಾಮಾಣಿಕ ಪ್ರಯತ್ನ ಮತ್ತು ಶ್ರದ್ಧೆಗಳಿಂದ ಈ ಕೆಲಸವನ್ನು ಪೂರೈಸಿರುವೆನೆಂಬ ಸಂತೋಷ ನನಗಿದೆ. ಈ ಸಂತೋಷಕ್ಕೆ ಕಾರಣರಾದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ನಾನು ಆಭಾರಿಯಾಗಿದ್ದೇನೆ.

ಬೆಂಗಳೂರು **ಪಿ. ವಿ. ನಾರಾಯಣ**

# ಪ್ರಸ್ತಾವನೆ

## ೧

ಪಂಪನದು ಸಾಕಷ್ಟು ಶ್ರೀಮಂತವೂ ವಿದ್ವತ್ತಿನಿಂದ ಕೂಡಿದ್ದುದೂ ಆದ ಕೌಟುಂಬಿಕ ಹಿನ್ನೆಲೆ. ಅವನ ಪೂರ್ವಿಕರು ಇದ್ದದ್ದು ವೆಂಗಿಮಂಡಲವೆಂಬ ಪ್ರಾಂತದ ವೆಂಗಿಪಟು ಎಂಬ ಊರಲ್ಲಿ. ವೆಂಗಿಮಂಡಲವೆಂದರೆ ಆಗ ಕೃಷ್ಣೆ–ಗೋದೆಯರ ನಡುವೆ ಬಂಗಾಳ ಸಮುದ್ರದವರೆಗೂ ಹಬ್ಬಿದ್ದ ನಾಡು. ಆ ಊರಲ್ಲಿ ಹಿರಿಯ ವಿದ್ವಾಂಸನೂ ಅನೇಕ ಯಜ್ಞಯಾಗಾದಿಗಳನ್ನು ಮಾಡಿದವನೂ ಆದ ಮಾಧವ ಸೋಮಯಾಜಿ ಎಂಬ ಬ್ರಾಹ್ಮಣ ಇದ್ದ; ಅವನ ಮಗ ಅಭಿಮಾನ ಚಂದ್ರ. ಅವನಿಗೆ ವೇಮುಲವಾಡ (ಈಗಿನ ತೆಲಂಗಾಣ ರಾಜ್ಯದ ಕರೀಂನಗರ ಜಿಲ್ಲೆಯಲ್ಲಿದೆ) ಚಾಲುಕ್ಯ ರಾಜರ ಆಶ್ರಯ ದೊರೆಯಿತು. ಆದ್ದರಿಂದ ಅವನು ನಿಡುಂಗೊಂಡೆಯೆಂಬ ಗ್ರಾಮಕ್ಕೆ ಬಂದು ನೆಲಸಿದ. ಇವನ ಮಗ ವೇದವೇದಾಂಗಗಳಲ್ಲಿ ಮಹಾಪಂಡಿತನಾಗಿದ್ದ ಕೊಮರಯ್ಯ; ಇವನ ಮಗ ಭೀಮಪಯ್ಯ. ಭೀಮಪಯ್ಯನಿಗೆ ಬೆಳ್ವೊಲ ನಾಡಿನ ಅಣ್ಣಿಗೇರಿ (ಧಾರವಾಡ ಜಿಲ್ಲೆ) ಎಂಬ ಊರಿನ ಸಿಂಘಜೋಯಿಸನ ಮೊಮ್ಮಗಳಾದ ಅಬ್ಬಣಬ್ಬೆಯೊಡನೆ ಮದುವೆಯಾಯಿತು. ಇವನ ಇಬ್ಬರು ಮಕ್ಕಳು ಪಂಪ ಮತ್ತು ಜಿನವಲ್ಲಭರು. ಪಂಪನ ತಂದೆಯ ಕಡೆಯ ಹಿರಿಯರು ಕನ್ನಡ ನಾಡಿನಿಂದ ತೆಲುಗುನಾಡಿಗೆ ಹೋಗಿದ್ದಿರಬೇಕು; ಪಂಪಭಾರತದಲ್ಲಿನ ಬನವಾಸಿಯ ವರ್ಣನೆಯ ಹಿನ್ನೆಲೆಯನ್ನು ನೋಡಿದರೆ ಅದೇ ಪ್ರಾಯಶಃ ಅವರ ಹಿರಿಯರ ಮೂಲ ನೆಲೆಯಾಗಿದ್ದಿರಬಹುದಾದ ಸಾಧ್ಯತೆಯನ್ನು ತೋರಿಸುತ್ತದೆ. ಹೀಗೆ ಪಂಪ ಮೂಲ ಕನ್ನಡನಾಡಿನವನೇ; ಕೆಲಕಾಲ ಅವನು ವೇಮುಲವಾಡದಲ್ಲಿದ್ದಿರಬಹುದು. ಕುರ್ಕ್ಯಾಲ ಶಾಸನ ಇದನ್ನು ಸ್ಪಷ್ಟಪಡಿಸುತ್ತದೆ. ಹಾಗೆಂದ ಮಾತ್ರಕ್ಕೆ ಅವನ ಮನೆಮಾತು ತೆಲುಗಾಗಿದ್ದಿರಬಹುದು ಎಂದು ಊಹಿಸಬೇಕಾದ್ದಿಲ್ಲ. ಇದಕ್ಕೆ ಎರಡು ಕಾರಣಗಳು: ಒಂದು, ಅವನ ತಾಯ್ತಂದೆಯರ ಹಿರಿಯರ ಮೂಲನೆಲೆ ಕನ್ನಡನಾಡು; ಎರಡನೆಯದು, ಕುರ್ಕ್ಯಾಲದಲ್ಲಿರುವ ಜಿನವಲ್ಲಭನ ಶಾಸನವೇ ಆಗ ಆ ಪ್ರಾಂತವೂ ಕನ್ನಡಮಯವಾಗಿದ್ದಿರಬಹುದಾದುದನ್ನು ಸೂಚಿಸುತ್ತದೆ. ಅವನ ತಾಯಿನುಡಿ ತೆಲುಗಾಗಿದ್ದರೆ ಅವನು ತೆಲುಗಿನಲ್ಲಿಯೇ ಕಾವ್ಯರಚನೆ ಮಾಡುತ್ತಿದ್ದ; ಆಗ ಅವನು ತೆಲುಗಿನ ಆದಿಕವಿ ಎನಿಸಿಕೊಳ್ಳುತ್ತಿದ್ದ. ಆದರೆ ಇವನ ಪಂಪಭಾರತವನ್ನು ಅನುಸರಿಸಿದ

ನನ್ನಯಭಟ್ಟ ಈಗ ತೆಲುಗಿನ ಆದಿಕವಿ.

ಪಂಪನ ಕಾಲದ ಬಗ್ಗೆ ಯಾವ ಗೊಂದಲವೂ ಇಲ್ಲ. ಅವನು ಕ್ರಿಸ್ತಶಕ ಹತ್ತನೆಯ ಶತಮಾನದ ಮೊದಲಲ್ಲೇ ಹುಟ್ಟಿದವನು. ತನ್ನ ಆದಿಪುರಾಣದ ರಚನಾಕಾಲವನ್ನು ಅವನೇ ಶಕವರ್ಷ ೮೬೩ನೇ ಪ್ಲವ ಸಂವತ್ಸರದ ಕಾರ್ತಿಕ ಶುದ್ಧ ಪಂಚಮಿ ಭಾನುವಾರವೆಂದು ವಿವರವಾಗಿ ಹೇಳಿಕೊಂಡಿದ್ದಾನೆ. ಅಂದರೆ ಈ ಕಾವ್ಯರಚನೆಯ ಕಾಲ ಕ್ರಿಶ. ೯೪೨. ತಾನು ದುಂದುಭಿ ಸಂವತ್ಸರದಲ್ಲಿ ಹುಟ್ಟಿದೆನೆಂದು ಹೇಳಿಕೊಂಡಿರುವುದರಿಂದ ಇದರ ರಚನಾಕಾಲದ ಹಿಂದಿನ ದುಂದುಭಿ ಸಂವತ್ಸರವು ಕ್ರಿಶ ೯೦೨-೦೩ ರಲ್ಲಿ. ಪಂಪ ತನ್ನ ಮೊದಲ ಕಾವ್ಯವಾದ ಆದಿಪುರಾಣವನ್ನು ರಚಿಸುವ ಮುಂಚೆ ಪ್ರಾಯಶಃ ಯಾವ ಕಾವ್ಯವನ್ನೂ ಬರೆದಿರಲಿಲ್ಲ; ಬರೆದಿದ್ದರೆ ಅವನೇ ಹೇಳಿಕೊಳ್ಳುತ್ತಿದ್ದ, ಅಥವಾ ಮುಂದಿನ ಕವಿಗಳಾದರೂ ಆ ಕುರಿತು ಉಲ್ಲೇಖಿಸುತ್ತಿದ್ದರು. ಆದಿಪುರಾಣದಂತಹ ಬೃಹತ್ತು-ಮಹತ್ತುಗಳ ಕಾವ್ಯರಚನೆಗೆ ಒಮ್ಮೆಲೇ ಪಂಪ ಕೈಹಾಕಿದನೇ; ಆ ಕಾಲದ ಬರವಣಿಗೆಯ ರೀತಿಯೇ ಹಾಗಿತ್ತೇ ಅಥವಾ ಅದಕ್ಕೂ ಮೊದಲು ಅಲ್ಲೊಂದು ಇಲ್ಲೊಂದು ಏನನ್ನಾದರೂ ಬರೆದು ಕೈಪಳಗಿಸಿಕೊಂಡಿದ್ದನೇ! ಮುಂದಿನ ಅನೇಕ ಪ್ರಸಿದ್ಧ ಕವಿಗಳು ಮಾಡಿದಂತೆ ಪಂಪ ಯಾವುದೇ ಶಾಸನವನ್ನೂ ರಚಿಸಿರಲಿಕ್ಕಿಲ್ಲ. ತನ್ನ ಕಾವ್ಯಕ್ಕೆ ಜಿನಸೇನರ 'ಪೂರ್ವಪುರಾಣ'ದ ಹಿನ್ನೆಲೆಯಿದ್ದುದರಿಂದ ಅವನು ಪ್ರತಿಯೊಂದಕ್ಕೂ ತಡಕಾಡಬೇಕಾಗಿರಲಿಲ್ಲ: ಕಥಾ ಚೌಕಟ್ಟು, ಪಂಚಕಲ್ಯಾಣಗಳ ನಿರೂಪಣೆ, ಆದಿದೇವನ ಬದುಕಿನ ವಿವರಗಳೆಲ್ಲ 'ಪೂರ್ವಪುರಾಣ'ದಲ್ಲಿಯೇ ಕೈಗೆಟಕುವಂತಿದ್ದುವಲ್ಲ. ಹಾಗಾಗಿ ನಡುನಡುವೆ ತನ್ನ ನಲವತ್ತು ವರ್ಷಗಳ ಬದುಕಿನ ಅನುಭವ-ಕಾಣ್ಕೆಗಳನ್ನು ವಿವರಗಳ ರೂಪದಲ್ಲಿ ಸೇರಿಸಿರಬಹುದು. ಯಾಕಂದರೆ ಅವನ ಐಹಿಕ ಕಾಣ್ಕೆಗಳು ಅನೇಕ ಕಡೆ ಸ್ಪಷ್ಟವಾಗಿ ಇಣುಕುಹಾಕಿರುವುದನ್ನು 'ಆದಿಪುರಾಣ'ದಲ್ಲಿ ಕಾಣಬಹುದು.

ಪಂಪ ಈ ಕಾವ್ಯವನ್ನು ಮೊದಲು ಬರೆದ, ಪ್ರಾಯಶಃ ಆಗ ಅವನು ಅರಿಕೇಸರಿಯ ಆಶ್ರಯವನ್ನಿನ್ನೂ ಪಡೆದಿರಲಿಲ್ಲ. (ಕೆಲವು ವಿದ್ವಾಂಸರು ಆದಿಪುರಾಣದ ರಚನಾಕಾಲದ ಹೊತ್ತಿಗಾಗಲೇ ಪಂಪ ಅರಿಕೇಸರಿಯನ್ನು ಆಶ್ರಯಿಸಿದ್ದನೆಂದು ಹೇಳುತ್ತಾರೆ). 'ಆದಿಪುರಾಣ' ಬರೆದ ಪಂಪನ ಹೆಸರು ಕಿವಿಗೆ ಬಿದ್ದ ಮೇಲೆ ಅರಿಕೇಸರಿ ಅವನಿಗೆ 'ವಿಕ್ರಮಾರ್ಜುನ ವಿಜಯ' ಬರೆಯಲು ಕೇಳಿಕೊಂಡಿರಬೇಕು. 'ಕೀರ್ತಿ ಜಗದೊಳ್ ನಿಲೆ ಪೇಟಿಸಿದಂ ಜಗಕ್ಕೆ ನಚ್ಚಿನ ಕವಿತಾಗುಣಾರ್ಣವನಿನೀ ಕೃತಿಬಂಧಮಮಂ ಗುಣಾರ್ಣವಂ' (ಪಂಪಭಾ, ೧೪. ೫೪). ಅಂದರೆ ಪಂಪಭಾರತ ರಚನೆಗೆ ಅರಿಕೇಸರಿಯೇ ಪ್ರೇರಕನಾದನೆನ್ನಬೇಕು. ಆ ಕಾವ್ಯವನ್ನು ಈಗಿನಂತೆ ಬರೆಯಲು ಪಂಪನಿಗೆ ಅವನ ಔದಾರ್ಯದ ಕೊಡುಗೆಗಳೂ ಗೆಳೆತನವೂ

ನಚ್ಚಿಕೆಯೂ ಕಾರಣವಾಗಿದ್ದಿರಬೇಕು. ಮೊದಲ ಕಾವ್ಯದಲ್ಲಿಯೇ ಆದಿಪುರಾಣದಂತಹ ಧಾರ್ಮಿಕ ಕಾವ್ಯರಚನೆಯ ಮನೋಧರ್ಮವಿದ್ದಿರಬೇಕಾದರೆ, ಅವನು ಆನಂತರ ಲೌಕಿಕ ಕಾವ್ಯ ಬರೆಯಲು ಪ್ರೇರಣೆ ಲೌಕಿಕ ಸವಲತ್ತುಗಳಿಂದಲೇ ಉಂಟಾಗಿರಬೇಕು. 'ನೆಗಟ್ತೆವೆತ್ತ ಸತ್ಕವಿಗಳ ಷೋಡಶಾವನಿಪರೋಳಿಯೊಳಂ ಕವಿತಾ ಗುಣಾರ್ಣವಂ ಕವಿತೆಯೊಳಗ್ಗಳಂ ಗುಣದೊಳಗ್ಗಳಮೆಲ್ಲಿಯುಮೀ ಗುಣಾರ್ಣವಂ' – ತಾನು ಕವಿಗಳ ಹೆಸರುಮಾತ್ರದವನಲ್ಲ, ಅರಿಕೇಸರಿ ನರಾಧಿಪ ಎಂಬ ಹೆಸರು ಮಾತ್ರ ಪಡೆದವನಲ್ಲ; ತಾನು 'ಕವಿತಾಗುಣಾರ್ಣವ', ಈತ 'ಗುಣಾರ್ಣವ'. ಅಂದರೆ ರಾಜಾಶ್ರಯಕ್ಕೆ ಬರುವ ಮುಂಚೆ ತನ್ನನ್ನು ಬಣ್ಣಿಸಿಕೊಂಡಿದ್ದಂತೆಯೇ ತನ್ನ ಆಶ್ರಯದಾತನನ್ನೂ ಪಂಪ ಕರೆದ. ಅಂದರೆ ಅರಿಕೇಸರಿಯ ಈ ವಿಶೇಷಣ ಕವಿ ಇತ್ತುದು; ಅದೂ ತನ್ನದರಂತೆಯೇ ಇರುವಂಥದು. ಎಂದರೆ ತನ್ನ ಗುಣಕ್ಕನುಗುಣನಾದವನು ಅರಿಕೇಸರಿ ಎಂಬ ಭಾವವಿಲ್ಲಿದೆ.

ಪಂಪನು ಆದಿಪುರಾಣವನ್ನು ಬರೆಯುವ ಕಾಲದ ಮನೋಭಾವ ಬೇರೆ; ವಿಕ್ರಮಾರ್ಜುನವಿಜಯವನ್ನು ಬರೆಯುವಾಗಿನ ಮನಃಸ್ಥಿತಿ ಬೇರೆ ಇದ್ದಂತೆ ಕಾಣುತ್ತದೆ. ಏರುಜವ್ವನದ ಒಂಧೇ ಪೀಳಿಗೆಯ ಆನಂತರದ ಈ ನವಜೈನನಿಗೆ ಆ ಧರ್ಮದ ಬಗ್ಗೆ ಅಸೀಮ ಶ್ರದ್ಧೆ–ಭಕ್ತಿಗಳಿದ್ದಿರಬೇಕು. ಅದಕ್ಕಾಗಿಯೇ ಹೊಸ ಹುರುಪಿನಿಂದ ತನ್ನ ಧರ್ಮದ ತಾತ್ವಿಕ ಮತ್ತು ಆಚರಣಾತ್ಮಕ ವಿವರಗಳನ್ನೆಲ್ಲ ಅಭ್ಯಾಸ ಮಾಡಿ, ಜಿನಸೇನನ ಪುರಾಣದ ಹಿನ್ನೆಲೆಯಲ್ಲಿ ಆದಿಜಿನನ ಬಗ್ಗೆ ಬರೆಯಲು ಹೊರಟಾಗ, ಅವನದು ಸಹಜ ಕವಿಪ್ರತಿಭೆಯಾದುದರಿಂದ ಪುರಾಣವು ತನ್ನ ಮೈಯೊಳಗೆ ಕಾವ್ಯವನ್ನೂ ತುಂಬಿಕೊಂಡಿತು. ಕಾವ್ಯದ ಹೊರಗಿನ ವಿವರವೆಲ್ಲ ಧಾರ್ಮಿಕವೇ, ಸಾಂಪ್ರದಾಯಿಕವೇ, ಆದರೆ ಹಲವಾರು ಕಡೆಗಳಲ್ಲಿ ವಾಸ್ತವಿಕವೂ ಮಾನವಸಹಜವೂ ಆದ ನೆಲೆಗಳಲ್ಲಿ ಅನುಭವಗಳನ್ನು ಎರಕಹೊಯ್ದು ಅದು ಒಮ್ಮೆಗೇ ಕಾವ್ಯಾಸಕ್ತರ ಮತ್ತು ಧಾರ್ಮಿಕ ಮನೋಭಾವದವರ ಮನಸ್ಸನ್ನು ಸೆರೆಹಿಡಿಯಲು ಸಹಾಯಕವಾಯಿತು. ಅಂದರೆ ಆದಿಪುರಾಣವು ವಿಸ್ತಾರವಾದ ಓದಿನಿಂದ ಒದಗಿದ ವಿವರಗಳಿಂದ ಕೂಡಿದುದು. ಮುಂದೆ ವಿಕ್ರಮಾರ್ಜುನ ವಿಜಯ ಬರೆಯುವ ಹೊತ್ತಿಗೆ ಪಂಪನ ಮನಃಸ್ಥಿತಿ ಬೇರೆಯಾಗಿದ್ದಿರಬಹುದು. ಏರುಜವ್ವನದ ಹುರುಪು, ನೊರೆ ಅಡಗಿ ದ್ರವ ಉಳಿದ ಹಾಗೆ, ವಾಸ್ತವಪ್ರಜ್ಞೆ ಅವನನ್ನು ಆವರಿಸಿತು; ಪ್ರಾಯಶಃ ಇಮ್ಮಡಿಯ ವಾಸ್ತವತೆ: ಒಂದು, ಬದುಕು ಇರುವುದು ಇಚ್ಛೆಯ ಅನುಭವವನ್ನು ಪಡೆಯುವುದಕ್ಕಾಗಿ ಎಂಬ ಅರಿವು, ಎರಡು ಸಮಕಾಲೀನ ಸಾಮಾಜಿಕ ಇರುವಿಕೆಗಳು. ಹೀಗಾಗಿ ಅವನ ಮನಸ್ಸು ಸಂಪ್ರದಾಯವನ್ನು ಬಿಡದೆ ಪ್ರಾತಿಭ ಪಾತಳಿಯಲ್ಲಿ ವಾಸ್ತವತೆಗೆ ಹೆಚ್ಚು ಮನ್ನಣೆಯೀಯುವ ಹಾಗಾಯಿತು. ಅಂದರೆ ಒಟ್ಟಿಗೇ ಆದರ್ಶ–

ವಾಸ್ತವಗಳು, ಇಹ–ಪರಗಳು, ಭೋಗ–ವಿರಾಗಗಳು, ಔದಾರ್ಯ–ಕೊಳಕುತನ, ತನ್ನ–ಎಲ್ಲರ – ಎಂಬಂತಹ ಭಾವನೆಗಳು ಅವನ ಪ್ರಜ್ಞೆಯ ಎರಡು ಪಾತಳಿಗಳಲ್ಲಿ ಕೆಲಸ ಮಾಡಿದೆ. ಆದಿಪುರಾಣದಲ್ಲಿ ಆದಿದೇವನ ವೈಯಕ್ತಿಕ ಭೋಗ–ವೈರಾಗ್ಯಗಳು ಮಾತ್ರವಲ್ಲ, ಪಂಪನ ವೈಯಕ್ತಿಕ ಭೋಗೇಚ್ಛೆ ಮತ್ತು ಕಾಣದುದನ್ನು ಕಾಣುವ ತವಕ ಎರಡೂ ಸೇರಿಕೊಂಡಿವೆ; ವಿಕ್ರಮಾರ್ಜುನ ವಿಜಯದಲ್ಲಿ ಆದರ್ಶಕ್ಕಿಂತ ವಾಸ್ತವ ಅವನನ್ನು ಹೆಚ್ಚು ಮುಟ್ಟಿದೆ. ಹಾಗಾಗಿಯೇ 'ವ್ಯಾಸಮುನಿಂದ್ರ ರುಂದ್ರ ವಚನಾಮೃತ ವಾರ್ಧಿ'ಯನ್ನು ಅಂಗೈಯಲ್ಲಿ ತೆಗೆದುಕೊಂಡಿದ್ದರೂ ನಮ್ಮ ನಡುವಣ ಬದುಕಿನ ಸ್ವರೂಪ ಅವನನ್ನು ಕಾಡಿದೆ; ಅದೂ ಎರಡು ಬಗೆಯಲ್ಲಿ: ಒಂದು, ತನ್ನದರ ಬಗ್ಗೆ ಹೆಮ್ಮೆ ಆದರೂ ಕೆಳಗಿನ ಸ್ತರದವರ ಬಗ್ಗೆ ಅನುಕಂಪ; ಮತ್ತೊಂದು ವೈಭವದ ಆಕರ್ಷಣೆ ಜೊತೆಗೆ ಅದರ ಹಿಂದಿರುವ ಕ್ರೌರ್ಯ. ಆದಿಪುರಾಣದಲ್ಲಿ ದ್ವಂದ್ವ ಕಡಿಮೆ; ಯಾಕಂದರೆ ಒಂದೆಡೆ ಅದು ಆದಿದೇವನ ವ್ಯಕ್ತಿತ್ವವು ಮಾಗಿದ ಕಥನ; ಮತ್ತೊಂದೆಡೆ ತನ್ನ ಹೆಮ್ಮೆಯ ಧರ್ಮದ ಬಗೆಗಿನ ಗತ್ತು. ಆದರೆ ವಿಕ್ರಮಾರ್ಜುನ ವಿಜಯದಲ್ಲಿ ಹೊರಗಿನ ಬೆರಗು ಒಳಗಿನ ಅಸಹನೆಯನ್ನು ಸೆರಗಿನಲ್ಲಿ ಕಟ್ಟಿಕೊಂಡಿದೆ. ಈ ಕಾರಣದಿಂದಲೇ ಅದು ಅವನು ರಾಜಾಸ್ಥಾನವನ್ನು ಸೇರಿದ ಮೇಲೆ ರಚಿತವಾಗಿರಬಹುದು. ಯಾಕೆಂದರೆ, ರಾಜನ ಬಗೆಗಿನ ವ್ಯಾಪಕ ಭಕ್ತಿ ಜಾಗೃತ ನೆಲೆಯಲ್ಲಿ ಪಂಪನನ್ನು ಆವರಿಸಿದ್ದರೂ, ಒಳಗಿನ ಮಾನವಿಯ ಪಾತಳಿಯ ಅನುಕಂಪ ಅವನಲ್ಲಿ ಸಾತ್ವಿಕ ಕ್ರೋಧವನ್ನೂ ಉಂಟುಮಾಡುವಂತಾಗುತ್ತದೆ.

ಪಂಪನು ತೀರ್ಥಂಕರ ಪುರಾಣದ ಧಾರ್ಮಿಕ ಕಟ್ಟುಪಾಡುಗಳನ್ನು ಎಲ್ಲಿಯೂ ಮೀರಿಲ್ಲ; ಬಹುತೇಕ ಅವುಗಳನ್ನು ಪೂರ್ವಪುರಾಣದ ನೆರಳಿನಲ್ಲಿಯೇ ನಿರ್ವಹಿಸಿದ್ದಾನೆ; ಅಲ್ಲಿ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲ. ಆದರೆ ಹಲವಾರು ಸಂದರ್ಭಗಳಲ್ಲಿ ಸ್ವಂತಿಕೆಯನ್ನು ತೋರುತ್ತಾನೆ. ವಿವರಗಳಲ್ಲಿ, ಭರತನ ಅಂತಃಪುರಸ್ತ್ರೀಯರ ವನವಿಹಾರ ಸಂದರ್ಭದಲ್ಲಿ, ಶ್ರೀಮತಿ–ವಜ್ರಜಂಘರ ಸಾವಿನ ಸಂದರ್ಭದಲ್ಲಿ, ಸೂಳೆಗೇರಿ ವರ್ಣನೆಯಲ್ಲಿ, ಭರತ–ಬಾಹುಬಲಿ ಯುದ್ಧದ ನಿರ್ವಹಣೆಯ ಹಲವಾರು ವಿವರಗಳು ಮುಂತಾದುವಲ್ಲಿ ಇದಕ್ಕೆ ನಿದರ್ಶನಗಳನ್ನು ಕಾಣಹುದು. ಎಲ್ಲಿ ಸ್ವಂತಿಕೆಯಿದೆಯೋ ಅದೇ ಆ ಕವಿಯ ಕಾವ್ಯ; ಉಳಿದದ್ದೆಲ್ಲ ಮೂಲಕವಿಯದು. ಆದರೆ ಇವುಗಳ ಮೂಲಕವಾಗಿ ಈ ಕವಿ ಪುರಾಣದ ಒಟ್ಟು ಧಾರೆಗೆ ಆನುಷಂಗಿಕವಾಗಿಯೆಂಬಂತೆ ಬದುಕಿನ ಬಗೆಗಿನ ತನ್ನ ಒಳಮನಸ್ಸಿನ ಅನಿಸಿಕೆಗಳನ್ನು ಪವಣಿಸುತ್ತಾನೆ, ಮೂಲವು ಭಂಗಗೊಳ್ಳದಂತೆಯೇ ಒಟ್ಟು ಕಥಾನಕಕ್ಕೆ ತನ್ನದೇ ನೋಟವನ್ನು ಕಾಣುವಂತೆ ಮಾಡುತ್ತಾನೆ. ಪ್ರಾಯಶಃ ಇದೇ ಅವನ ಸ್ವಂತವಾದದ್ದು. ಎಲ್ಲ ಕಲಾಕೃತಿಗಳ ಸ್ವರೂಪವೂ ಇದೇ ತಾನೇ: ಮೂಲವಸ್ತುಗಳನ್ನು ಬಳಸುವ ತನ್ನ ಕ್ರಮದಲ್ಲಿ. ಬೆಲೆ

ಬರುವುದು ಈ ಕಿರುಪ್ರಯತ್ನಕ್ಕೆ ತಾನೇ. ಎಷ್ಟೇ ಆಗಲಿ ಸಾಹಿತ್ಯ ಕೃತಿಯೊಂದು ಹಳೆಯದನ್ನು ಹೊಸತಾಗಿ ನಿರೂಪಿಸುವ ಬಗೆ ತಾನೇ? ಅಲ್ಲಿ ಪಂಪತನವನ್ನು ಕಾಣಬೇಕು, ಹಾಗೆ ಅವನಲ್ಲಿ ಇದನ್ನು ಅವನ ನಂತರದ ಕನ್ನಡ ಕವಿಗಳು ಕಂಡಿದ್ದಾರೆ. ಆದ್ದರಿಂದಲೇ 'ಪಸರಿಪ ಕನ್ನಡಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂಬ ಉದ್ಗಾರ ಹೊಮ್ಮಿದ್ದು. ಒಂದು ವರ್ಗಕ್ಕೆ ಸೇರಿರುವ ಒಂದು ಕಥನಕ್ರಮದಲ್ಲಿ ಸ್ವಂತಕ್ಕೂ ಸಮಕಾಲಕ್ಕೂ ಸಲ್ಲುವ ಸುಳುಹುಗಳನ್ನು ನೀಡಬಲ್ಲುದೇ ಒಳ್ಳೆಯ ಕಾವ್ಯ. ಅಂತಹ ಅಂಶಗಳನ್ನು ಈ ಪ್ರಸ್ತಾವನೆಯ ಮೂರನೆಯ ಒಂದು ಭಾಗ ವಿವರಿಸುತ್ತದೆ.

## ೨

ಪಂಪ ಈಗ್ಗೆ ಸುಮಾರು ಒಂದು ಸಾವಿರದ ಎಪ್ಪತ್ತು ವರ್ಷಗಳಷ್ಟು ಹಿಂದೆ ತನ್ನ ಕಾವ್ಯಗಳನ್ನು ಹೇಳಿದ. ಅವನನ್ನು ಎಲ್ಲ ಕಾಲದ ಕವಿಗಳು ಹೊಗಳಿದರು, ಚಂಪೂ ಕವಿಗಳಂತೂ ಅವನನ್ನು ಅನುಕರಿಸಲು ಹೆಣಗಿದರು. ಈಗಲೂ ಪಂಪನ ಕಾವ್ಯಗಳ ಹಿರಿಮೆಯ ಬಗ್ಗೆ ಆಧುನಿಕ ವಿಮರ್ಶಕರೂ ಮುಕ್ತಕಂಠದ ಮಾತುಗಳನ್ನಾಡುತ್ತಿದ್ದಾರೆ. ಹೀಗೆ ಪಂಪ ಯಾಕೆ ಎಲ್ಲ ಕಾಲದಲ್ಲಿಯೂ ಮಹತ್ವವನ್ನು ಗಳಿಸಿಕೊಂಡ? ಅಥವಾ, ಒಬ್ಬ ಪ್ರಾಚೀನ ಕವಿ ಇವತ್ತಿಗೂ ಮಹತ್ವದವನಾಗಿ ಕಾಣಲು ಏನು ಕಾರಣ? ಎಂದು ಆಲೋಚಿಸಬೇಕಾಗಿದೆ. ಪಂಪನನ್ನು ಸಾಮಾನ್ಯವಾಗಿ 'ಕನ್ನಡದ ಆದಿಕವಿ' ಎಂದು ಕರೆಯುವ ರೂಢಿಯಿದೆ. ಆದರೆ ಅವನು ಕನ್ನಡದಲ್ಲಿ ಬರೆದ ಮೊದಲನೆಯ ಕವಿಯೇನಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಅಂಶವೇ. ಅವನಿಗಿಂತ ಮುಂಚೆ ಅನೇಕ ಕವಿಗಳ, ಅದೂ ಮಹತ್ತರ ಕೆಲಸ ಮಾಡಿದವರು ಆಗಿಹೋದ, ವಿಷಯವನ್ನು ಪಂಪನಿಗಿಂತ ಸುಮಾರು ಒಂದು ಶತಮಾನದ ಹಿಂದೆ ರಚಿತವಾದ 'ಕವಿರಾಜ ಮಾರ್ಗ' ಸ್ಪಷ್ಟವಾಗಿ ಹೇಳುತ್ತದೆ. ಪಂಪನಿಗೆ ಈ 'ಆದಿತನ'ವನ್ನು ನೀಡಲು ಕಾರಣವೇನು?

ಪಂಪನಿಗೆ ಮುಂಚೆಯೇ ಅನೇಕ ಕನ್ನಡ ಕವಿಗಳಿದ್ದುದು ಮಾತ್ರವಲ್ಲದೆ, ಅವರು ವಿವಿಧ ಬಗೆಯ ಕೃತಿಗಳನ್ನು ರಚಿಸಿದರು ಎಂದೂ 'ಕವಿರಾಜಮಾರ್ಗ' ಹೇಳುತ್ತದೆ, ಹಾಗೂ ತನ್ನ ಹಿಂದಿನ ಮತ್ತು ತನ್ನ ಕಾಲದ ಅನೇಕ ಸಾಹಿತ್ಯ ಪ್ರಕಾರಗಳ ಹೆಸರನ್ನು ಹೇಳುತ್ತದೆ. ಅವುಗಳಲ್ಲಿ ಒಂದು 'ಗದ್ಯಕಥಾ'. 'ಮಿಗೆ ಕನ್ನಡಗಬ್ಬಂಗಳೊಳ್ ಅಗಣಿತಗುಣಗಣ ಗದ್ಯಪದ್ಯಸಮ್ಮಿಶ್ರಿತಮಂ ನಿಗದಿಸುವರ್ ಗದ್ಯಕಥಾಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್' ಎಂಬ ಪದ್ಯವನ್ನು ಗಮನಿಸಿ. ಎಂದರೆ ಅಪರಿಮಿತ ಗುಣಗಳಿಂದ ಕೂಡಿದ ಗದ್ಯಪದ್ಯಗಳು ಸೇರಿದ ಕಾವ್ಯ

ಪ್ರಕಾರವನ್ನು ಕವಿರಾಜಮಾರ್ಗಕಾರ 'ಗದ್ಯಕಥಾ' ಎಂದು ಕರೆಯುತ್ತಿದ್ದಾನೆ. ಇದು ಈಗ ನಾವು 'ಚಂಪೂ' ಎಂದು ಕರೆಯುವ ಪ್ರಕಾರವೇ ಎಂದು ಹಲವು ವಿದ್ವಾಂಸರ ಅಭಿಪ್ರಾಯ. ಚಂಪೂ ಕನ್ನಡದಲ್ಲಿಯೇ ಜನ್ಮತಾಳಿದ ಕಾವ್ಯಪ್ರಕಾರ, ಅದು ಕನ್ನಡದಿಂದ ಸಂಸ್ಕೃತಕ್ಕೆ ಹೋಯಿತು ಎಂಬ ಒಂದು ವಾದವಿದ್ದರೆ, ಕನ್ನಡ ಸಂಸ್ಕೃತಕ್ಕೆ ಏನು ಕೊಟ್ಟೀತು ಎಂಬ ಭಾವನೆಯಿಂದಲೋ ಏನೋ ಸಂಸ್ಕೃತದಲ್ಲಿಯೇ ಅದರ ಜನನವಾಯಿತು ಎಂದು ಅನೇಕರು ವಾದಿಸುತ್ತಾರೆ. ಸಂಸ್ಕೃತದಲ್ಲಿರುವ ದಂಡಿಯ 'ಕಾವ್ಯಾದರ್ಶ' ಎಂಬ ಲಕ್ಷಣಗ್ರಂಥ 'ಕವಿರಾಜಮಾರ್ಗ'ಕ್ಕೆ ಮಾದರಿ ಎಂಬುದು ನಿಜ (ಅದರೊಡನೆ ಭಾಮಹನ 'ಕಾವ್ಯಾಲಂಕಾರ' ಕೂಡ). ಅಲ್ಲಿ 'ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿವಿದ್ಯತೇ' ಎಂಬ ಮಾತಿದೆ (ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಬಿಧೀಯತೇ – ಎಂಬುದು ಅದಕ್ಕಿರುವ ಪಾಠಾಂತರ). ಈ ಮಾತು ಚಂಪೂ ಪ್ರಕಾರ 'ಕವಿರಾಜಮಾರ್ಗ'ಕ್ಕಿಂತ ಮುಂಚೆಯೇ ಸಂಸ್ಕೃತದಲ್ಲಿತ್ತು ಎಂಬ ವಾದಕ್ಕೆ ಪುಷ್ಟಿ ಕೊಡುತ್ತದೆ. ಆದರೆ ಇದರಲ್ಲೊಂದು ತೊಡಕು ಇದೆ. ದಂಡಿಯನ್ನು ಬಹು ವಿಷಯಗಳಲ್ಲಿ ಅನುಸರಿಸುವ 'ಕವಿರಾಜಮಾರ್ಗ'ವು ಚಂಪೂ ಎಂಬ ಹೆಸರನ್ನೇ ಹೇಳುವುದಿಲ್ಲ. ಇದಕ್ಕೇನು ಕಾರಣ? ಜೊತೆಗೆ ಬಲದೇವ ಉಪಾಧ್ಯಾಯರು 'ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿಧೀಯತೇ' ಎಂಬ ಮಾತಿಗೆ ವ್ಯಾಖ್ಯಾನ ಮಾಡುತ್ತ, ಕಾಚಿತ್ ಮತ್ತು ಅಭಿಧೀಯತೇ ಎಂಬ ಶಬ್ದಗಳ ಕಾರಣದಿಂದಾಗಿ, ದಂಡಿಯ ಕಾಲಕ್ಕೆ ಚಂಪೂ ಇತ್ತು, ಆದರೆ ದಂಡಿ ಅದನ್ನು ಕಣ್ಣಾರೆ ಕಂಡಿರಲಿಲ್ಲ ಎಂದು ತೀರ್ಮಾನಿಸುತ್ತಾರೆ. ಹೀಗಾಗಿ, ಈ ವಾಕ್ಯವು ದಂಡಿಯ 'ಕಾವ್ಯಾದರ್ಶ'ದ ಮೂಲದಲ್ಲಿತ್ತೇ ಎಂಬ ಸಂದೇಹ ಮೂಡುತ್ತದೆ. ದಂಡಿಯೇ ಗದ್ಯ, ಪದ್ಯ ಮತ್ತು ಮಿಶ್ರ ಎಂಬ ಮೂರು ಕಾವ್ಯಪ್ರಕಾರಗಳನ್ನು ಉಲ್ಲೇಖಿಸುತ್ತಾನೆ. ಮಿಶ್ರ ಎಂಬುದು ಚಂಪೂವನ್ನು ಸೂಚಿಸುತ್ತಿದೆಯೋ ಅಥವಾ ಬೇರೇನನ್ನಾದರೋ ಎಂಬ ಅನುಮಾನ ಉಂಟಾಗುತ್ತದೆ. ಏಕೆಂದರೆ, ಸಾಮಾನ್ಯವಾಗಿ ಹಿಂದೆಲ್ಲ ಕಾವ್ಯವನ್ನು 'ಶ್ರವ್ಯ ಕಾವ್ಯ' ಮತ್ತು 'ದೃಶ್ಯ ಕಾವ್ಯ' ಎಂಬ ವಿಂಗಡಣೆ ಮಾಡುವ ಪರಿಪಾಠವಿತ್ತು. 'ಶ್ರವ್ಯಕಾವ್ಯ'ದಲ್ಲಿ ಗದ್ಯ ಮತ್ತು ಎಂಬೆರಡು ಭೇದ. ದಂಡಿ ಹೇಳುವ ಮಿಶ್ರ ಇನ್ನೊಂದು ಕಾವ್ಯಪ್ರಕಾರವಾದ 'ದೃಶ್ಯ ಕಾವ್ಯ'ವನ್ನೇನಾದರೂ ಸೂಚಿಸುತ್ತದೆಯೇ? ಏಕೆಂದರೆ ಸಂಸ್ಕೃತ ದೃಶ್ಯಕಾವ್ಯ(ನಾಟಕ)ಗಳಲ್ಲಿ ಸಂಭಾಷಣೆಯಲ್ಲಿ ಗದ್ಯವೂ ಪದ್ಯವೂ ಇರುತ್ತಿತ್ತು. ಇದನ್ನೇ ಮಿಶ್ರ ಎಂದು ದಂಡಿ ಸೂಚಿಸುತ್ತಿದ್ದಿರಬಹುದು. ಸಂಸ್ಕೃತದಲ್ಲಿಯೂ ಚಂಪೂ ಬಂದ ಮೇಲೆ ಯಾರಾದರೂ 'ಕಾವ್ಯಾದರ್ಶ'ದಲ್ಲಿ ಈ ಮಾತನ್ನು ಸೇರಿಸಿರಬಹುದು; ಅಂದರೆ ಚಂಪೂವಿನ ಈ ವ್ಯಾಖ್ಯೆ ಪ್ರಕ್ಷೇಪವಿರಬಹುದು. ಅಲ್ಲದೆ ಮೊದಮೊದಲ ಸಂಸ್ಕೃತ ಚಂಪೂ ಕಾವ್ಯಗಳನ್ನು ರಚಿಸಿದವರು ಕನ್ನಡಿಗರು; ಸಂಸ್ಕೃತದಲ್ಲಿ ದೊರೆತಿರುವ

ಅತ್ಯಂತ ಪ್ರಾಚೀನ ಚಂಪೂ ಕೃತಿಯಾದ ತ್ರಿವಿಕ್ರಮನ 'ನಲಚಂಪೂ' ಹತ್ತನೆಯ ಶತಮಾನದ್ದು; ಪಂಪನ ಕಾಲವೇ, ಸ್ವಲ್ಪ ಹಿಂಚು ಮುಂಚು.

ಈ ವಾದ ಸಾಕು. ನಮಗಿಲ್ಲಿ ಪ್ರಸ್ತುತವಾದುದೆಂದರೆ, 'ಕವಿರಾಜಮಾರ್ಗ'ಪೂರ್ವದಲ್ಲಿಯೇ ಚಂಪೂ ಕನ್ನಡದಲ್ಲಿ ನೆಲೆಯೂರಿತ್ತು ಮಾತ್ರವಲ್ಲ, ದೊಡ್ಡ ಕವಿಗಳು ಆ ಪ್ರಕಾರದಲ್ಲಿ ಕಾವ್ಯ ರಚಿಸಿದ್ದರು ಎಂಬ ಅಂಶ. ಅದು ಕಾಲಕಾಲಕ್ಕೆ ಹೆಚ್ಚೆಚ್ಚು ಪರಿಷ್ಕರಣಗೊಳ್ಳುತ್ತ ಅಂತಸ್ಸತ್ವವನ್ನು ಹೆಚ್ಚಿಸಿಕೊಳ್ಳುತ್ತ ಪಂಪನ ಕಾವ್ಯಗಳಲ್ಲಿ ತನ್ನ ಸಾಧನೆಯ ಶಿಖರವನ್ನು ತಲುಪಿತು. ಆನಂತರ ಆ ಕಾವ್ಯದ ಸತ್ವ ಇಳಿಮುಖವಾಯಿತು. ಅಂದರೆ ಪಂಪ ಚಂಪೂ ಪ್ರಕಾರದ ಪಕ್ವಫಲ. ಆ ಪಕ್ವತೆಗೆ ಕಾರಣ ತನ್ನೆರಡು ಕಾವ್ಯಗಳ ವಸ್ತು, ಭಾಷೆ, ಅಭಿವ್ಯಕ್ತಿವಿಧಾನ, ಪಾತ್ರಚಿತ್ರಣ, ತನ್ನ ಕಾಲದ ಸ್ಥಿತಿಗತಿಗಳನ್ನು ಒಳಗೊಳ್ಳುವ ಬಗೆ – ಇವೆಲ್ಲ ವಿಶಿಷ್ಟವಾದವು ಎಂಬುದು. ಪಂಪ ತನ್ನೆರಡೂ ಕಾವ್ಯಗಳಲ್ಲಿನ ವೈಶಿಷ್ಟ್ಯಗಳನ್ನು ಒಟ್ಟಾರೆಯಾಗಿ 'ದೇಸಿ' ಎಂದು ಬಣ್ಣಿಸಿಕೊಳ್ಳುತ್ತಾನೆ. ತನ್ನ ಮೊದಲ ರಚನೆಯಾದ 'ಆದಿಪುರಾಣ'ದ ಕೊನೆಯಲ್ಲಿ 'ಸ್ವರ್ಗಾಪವರ್ಗಕ್ಕಮಾಸ್ಪದಮಪ್ಪ ಆದಿಪುರಾಣವಸ್ತುಕೃತಿಯಂ ಪೇೞ್ದಂ ಬೆಡಂಗಪ್ಪ ಮಾರ್ಗದೊಳಂ ದೇಸಿಯೊಳಂ ಪೊದಳ್ದೆಸೆವಿನಂ ಸಂಸಾರಸಾರೋದಯಂ' ಎಂದು ಹೇಳಿಕೊಂಡರೆ, 'ವಿಕ್ರಮಾರ್ಜುನವಿಜಯ'ದ ಮೊದಲ ಆಶ್ವಾಸದಲ್ಲಿ, ಒಂದೆಡೆ 'ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದು ಒಂದಿ ದೇಸಿಯೊಳ್ ಪುಗುವುದು' ಎಂದೂ; ಮತ್ತೊಂದೆಡೆ, 'ವರ್ಣಕಂ ಕತೆಯೊಳೊಡಂಬಡಂಬಡೆಯೆ ಪೇೞ್ವೊಡೆ ಪಂಪನೆ ಪೇೞ್ಗುಂ ಎಂದು ಪಂಡಿತರೆ ತಗುಳ್ದು ಬಿಚ್ಚಳಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ' ಎಂದೂ ನುಡಿಯುತ್ತಾನೆ. ಅದೇ ಕಾವ್ಯದ ಕೊನೆಯ ಆಶ್ವಾಸದಲ್ಲಿ ಒಂದೆಡೆ, ತನ್ನ ಕಾವ್ಯವೈಶಿಷ್ಟ್ಯಗಳಲ್ಲಿ 'ಕೈತ ದೇಸಿ'ಯೂ ಸೇರುವುದನ್ನು ಉಲ್ಲೇಖಿಸುತ್ತಾನೆ; ಮತ್ತೊಂದೆಡೆ, 'ವ್ಯಾಸಮುನಿಪ್ರಣೂತಕೃತಿಯಂ ಸಲೆ ಪೇೞ್ದು ಪೊದಳ್ದ ಸತ್ಕವಿವ್ಯಾಸಸಮಾಗಮಾನ್ವಿತನುಂ ಆದಿಪುರಾಣಮನೆಯ್ದೆ ಪೇೞ್ದು ವಾಕ್‌ಶ್ರೀಸುಭಗಂ ಪುರಾಣಕವಿಯುಂ ಧರೆಗಾಗಿರೆ ಉಣ್ಮೆ ಪೊಣ್ಮುವೀ ದೇಸಿಗರಂತೆ ನಾಡೊವಜನಾದನೊ ಪೇೞ್ದು ಕವಿತಾಗುಣಾರ್ಣವಂ' ಎಂದೂ ಹೇಳೀಕೊಳ್ಳುತ್ತಾನೆ. ('ದೇಸಿಗಳುಂತೆ' ಎಂಬುದನ್ನು ವೆಂಕಟಾಚಲಶಾಸ್ತ್ರಿಗಳು 'ದೇಸಿಗರಂತೆ' ಎಂದು ಪರಿಷ್ಕರಿಸುತ್ತಾರೆ). ಹೀಗಾಗಿ ಪಂಪನಿಗೆ ತನ್ನ ಕಾವ್ಯವೈಶಿಷ್ಟವಾದ 'ದೇಸಿಯ' ಬಗ್ಗೆ ಅರಿವು ಮಾತ್ರವಲ್ಲದೆ ಅಪಾರ ಹೆಮ್ಮೆಯೂ ಇದೆ. ಮುಂದಿನ ಕವಿಗಳು ಪಂಪನ ವೈಶಿಷ್ಟವೆಂದು 'ದೇಸಿ'ಯನ್ನು ಉಲ್ಲೇಖಿಸುವುದನ್ನು ಗಮನಿಸಬೇಕು. ಹಾಗಾದರೆ 'ದೇಸಿ' ಎಂದರೇನು ಎಂಬ ಪ್ರಶ್ನೆ ಏಳುತ್ತದೆ. ಕನಿಷ್ಠ ಪಕ್ಷ, ತನ್ನ ವೈಶಿಷ್ಟವೆಂದು ಹೆಮ್ಮೆಯಿಂದ ಬೀಗುವ ಪಂಪನ ಕಾವ್ಯಗಳ ದೇಸಿಯ ಸ್ವರೂಪವೇನು

ಎಂಬುದನ್ನು ಅನ್ವೇಷಿಸಬೇಕಾಗಿದೆ.

ಸಾಮಾನ್ಯವಾಗಿ ಪಂಪನ ಎರಡು ಕಾವ್ಯಗಳಾದ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನವಿಜಯ'ಗಳನ್ನು ಕ್ರಮವಾಗಿ 'ಧಾರ್ಮಿಕ' ಮತ್ತು 'ಲೌಕಿಕ' ಕಾವ್ಯಗಳೆಂದು ಗುರುತಿಸುವ ಪದ್ಧತಿಯಿದೆ; ಇದೇನೂ ತಪ್ಪಲ್ಲ. ಏಕೆಂದರೆ ಪಂಪನೇ ತನ್ನ 'ವಿಕ್ರಮಾರ್ಜುನವಿಜಯ'ದ ಕೊನೆಯಲ್ಲಿ 'ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ' ಎಂದು ಹೇಳಿಕೊಂಡಿದ್ದಾನೆ. ಆದರೆ 'ಧಾರ್ಮಿಕ' ಹಾಗೂ 'ಲೌಕಿಕ' ಎಂಬುದನ್ನು ನಾವು ಹೇಗೆ ನಿರ್ವಚಿಸಬೇಕು ಎಂಬ ಪ್ರಶ್ನೆ ಏಳುತ್ತದೆ. ಧರ್ಮ ಎಂಬುದಕ್ಕೆ ನಿರ್ದಿಷ್ಟ ಅರ್ಥವಿದೆಯೇ, ಉಹ್ಞೂ, ಇಲ್ಲ. ಹಾಗೆಯೇ ಲೌಕಿಕ ಎಂಬುದಕ್ಕೂ. ಏಕೆಂದರೆ 'ಛಲದೊಳ್ ದುರ್ಯೋಧನಂ' ಎಂದು ಮೊದಲಾಗುವ, 'ವಿಕ್ರಮಾರ್ಜುನವಿಜಯ'ದ ಹದಿನಾಲ್ಕನೆಯ ಆಶ್ವಾಸದ ಅರುವತ್ತನಾಲ್ಕನೆಯ ಪದ್ಯದಲ್ಲಿ ವಿವಿಧ ಪಾತ್ರಗಳು ವಿಭಿನ್ನ ಗುಣಗಳಿಂದಾಗಿ ವಿಶಿಷ್ಟವಾಗುತ್ತಾರೆಂದು ಹೇಳಿದ ಮೇಲೆ, 'ಇವರ್ಗಳಿನ್ ಈ ಭಾರತಂ ಲೋಕಪೂಜ್ಯಂ' ಎನ್ನುತ್ತಾನೆ. ಹಾಗಾದರೆ, ಲೌಕಿಕ ಗುಣಗಳೂ ಪೂಜ್ಯವೇ ಎಂದಂತಾಯಿತು. ಹಾಗಾದರೆ, ಧಾರ್ಮಿಕ ಗುಣಗಳಿಗೂ ಲೌಕಿಕ ಗುಣಗಳಿಗೂ ಏನು ವ್ಯತ್ಯಾಸವೆಂದು ಕೇಳಬೇಕಾಗುತ್ತದೆ. ಕೊನೆಯ ಪಕ್ಷ, ಪಂಪನ ದೃಷ್ಟಿಯಲ್ಲಿ ಇವುಗಳ ಸ್ವರೂಪವೇನು ಎಂದು ವಿವೇಚಿಸಬೇಕು.

'ಆದಿಪುರಾಣ'ದ ಆರಂಭದ ಪದ್ಯಗಳಲ್ಲೊಂದರಲ್ಲಿ ಕವಿಯು ತನ್ನ ಈ ಪುರಾಣಕಾವ್ಯ ಎಲ್ಲರಿಗೂ ಹೇಗೆ ಪ್ರಿಯವಾಗುತ್ತದೆಂದು ಹೇಳಿಕೊಳ್ಳುವ ಮಾತುಗಳಿವೆ: 'ಇದುವೆ ಸುಕವಿಪ್ರಮೋದಪ್ರದಂ ಇದುವೆ ಸಮಸ್ತಭವ್ಯಲೋಕಪ್ರಮದಪ್ರದಂ ಎನೆ ನೆಗಲ್ದಿ ಆದಿಪುರಾಣದೊಳ್ ಅಱಿವುದು ಕಾವ್ಯಧರ್ಮಮಂ ಧರ್ಮಮುಮಂ' ಎಂಬುದೇ ಆ ಮಾತುಗಳು. ಧರ್ಮ ಎಂಬುದಕ್ಕೆ ಪಂಪ ಏನು ಅರ್ಥ ಕೊಡುತ್ತಿದ್ದಾನೆಂಬುದನ್ನು ಹುಡುಕುವುದು ಕಷ್ಟವೇನಲ್ಲ. ಏಕೆಂದರೆ ಅವನ ಕೃತಿಯದು 'ಸ್ವರ್ಗಾಪವರ್ಗಕ್ಕೆ ಆಸ್ಪದಮಪ್ಪ' ವಸ್ತು, ಎಂದರೆ ಮೊದಲ ತೀರ್ಥಂಕರನ ಚರಿತೆ, 'ತ್ರಿದಶಸ್ತುತ್ಯಮಿದಾದಿದೇವಚರಿತಂ'; ಇದು 'ಸಮಸ್ತಭವ್ಯಲೋಕಪ್ರಮದಪ್ರದ'ವಾದುದು, ಮತ್ತು ಇದರ ರಚನೆಯೇ 'ಕರ್ಣಾಮೃತಸ್ಯಂದಿಯಕ್ಕೆ ಭವ್ಯಾವಳಿಗೆ' ಎಂಬ ಉದ್ದೇಶವನ್ನು ಹೊಂದಿರುವಂಥದು. ಇಲ್ಲಿನ ವಸ್ತು ಮತ್ತು ಈ ವಸ್ತುವನ್ನು ಪುಣ್ಯಕರವೆಂದು ಭಾವಿಸುವ ಶ್ರೋತೃವರ್ಗ ಇವುಗಳು, ಹಾಗೂ ಪಂಪನೂ ಜೈನನೇ ಆಗಿ ಕಾವ್ಯದ ಆರಂಭದಲ್ಲಿ ಜೈನ ಪರಿಕಲ್ಪನೆಗಳಿಗನುಗುಣವಾದ ಪ್ರಾರ್ಥನಾಪದ್ಯಗಳಿರುವುದರಿಂದ, ಇಲ್ಲಿನ 'ಧರ್ಮ' ಎಂಬ ಶಬ್ದಕ್ಕೆ 'ಜೈನಧರ್ಮ' ಎಂಬ ಪರಿಮಿತವಾದ ಮತ್ತು ನಿರ್ದಿಷ್ಟವಾದ ಅರ್ಥವಿರುವುದು ಸ್ಪಷ್ಟವಾಗುತ್ತದೆ.

ಅಂದರೆ ತನ್ನ ಕೃತಿಯ ಒಂದು ಗುಂಪಿನ ಓದುಗವರ್ಗವು ಜೈನಮತಕ್ಕೆ ಸಂಬಂಧಿಸಿದವರು ಎಂಬುದು ಆಶಯ, ಅದರಲ್ಲಿ ಅನುಮಾನವಿಲ್ಲ. ಆದರೆ ಅದಕ್ಕೂ ಮೊದಲೇ ಬರುವ 'ಸುಕವಿಪ್ರಮೋದಪ್ರದಂ' ಎಂಬ ಮಾತೂ, 'ಅಱಿವುದು ಕಾವ್ಯಧರ್ಮಮಂ' ಎಂಬ ಮಾತೂ ಏನನ್ನು ಸೂಚಿಸುತ್ತವೆ? ಅಲ್ಲದೆ ತನ್ನ ಕಾವ್ಯ ಸಂತಸವನ್ನುಂಟುಮಾಡುವುದು ಮುಖ್ಯವಾಗಿ ಕಾವ್ಯಾಸಕ್ತರನ್ನು ಎಂಬ ಆಶಯವು ಧರ್ಮಕ್ಕೆ ಅವನು ನೀಡಿದ ಎರಡನೆಯ ಸ್ಥಾನದಿಂದ ವಿದಿತವಾಗುತ್ತದೆ ('ಸುಕವಿ' ಎಂದರೆ ಕವಿಗಳು ಎಂಬ ಅರ್ಥಕ್ಕಿಂತ ಒಳ್ಳೆಯ ಕಾವ್ಯಗಳಲ್ಲಿ ಆಸಕ್ತರಾದವರು ಎಂಬ ಅರ್ಥವೇ ಇಲ್ಲಿ ಸೂಕ್ತ). ಅಂಥವರಿಗಾಗಿ ಇಲ್ಲಿರುವುದು 'ಕಾವ್ಯಧರ್ಮ' ಎನ್ನುತ್ತಾನೆ ಕವಿ. ಈಗ ಇನ್ನೊಂದು ಪ್ರಶ್ನೆ ತಲೆದೋರುತ್ತದೆ: 'ಕಾವ್ಯಧರ್ಮ' ಎಂದರೇನು?

ಕಾವ್ಯ ಎಂದರೇನೆಂಬುದನ್ನು ಇದುವರೆಗೂ ಯಾರೂ ಖಚಿತವಾಗಿಯೂ, ಸರ್ವಸಮ್ಮತವಾಗಿಯೂ ಸೂತ್ರರೂಪದಲ್ಲಿ ಹೇಳಿಲ್ಲ. ಜಗತ್ತಿನೆಲ್ಲೆಡೆಯ ಕಾವ್ಯಮೀಮಾಂಸೆ ಮತ್ತು ವಿಮರ್ಶೆಗಳು ಆದಿಯಿಂದ ಇಲ್ಲಿಯವರೆಗೂ ಅದರ ಬಗ್ಗೆ ಚರ್ಚಿಸುತ್ತಲೇ ಬಂದಿವೆ; ಆದರೆ ಏನನ್ನೂ ನಿರ್ದಿಷ್ಟವಾಗಿ ಹೇಳಲಾಗಿಲ್ಲ. ಏಕೆಂದರೆ ಹೇಳಲಾಗುವುದಿಲ್ಲ. ಏಕೆಂದರೆ ಕಾವ್ಯ (ಸಾಹಿತ್ಯ) ಎಂಬುದು ಅನಂತಮುಖಿಯಾದುದು, ಅಮೂರ್ತವಾದುದು. ಪಂಪನೇ 'ಆದಿಪುರಾಣ'ದಲ್ಲಿ 'ಇದು ನಿಚ್ಚಂ ಪೊಸತು ಅರ್ಣವಂಬೊಲ್ ಅತಿಗಂಭೀರಂ ಕವಿತ್ವಂ' ಎನ್ನುತ್ತಾನೆ. ಎಂದರೆ ಕವಿತ್ವವು ಹಿಡಿತಕ್ಕೆ ಸಿಕ್ಕುವಂತಹುದಲ್ಲ, ಆಗಸವನ್ನು ಹಿಡಿಯಲು ಸಾಧ್ಯವೇ? ಈ ಮಾತುಗಳಲ್ಲಿ ಪಂಪ ಯಾವ ಆಶಯವನ್ನು ಹೇಳುತ್ತಿದ್ದಾನೆಯೋ ತಿಳಿಯದು; ಅವನು ನಮಗಿಂತ ಒಂದು ಸಾವಿರ ವರ್ಷಕ್ಕೂ ಹಿಂದೆ ಇದ್ದವನು, ತನ್ನ ಮಾತುಗಳನ್ನು ಅವನು ವಿವರಿಸಿಲ್ಲ. ಜೊತೆಗೆ ಇಂಥ ಮಾತುಗಳೂ 'ನಿಚ್ಚಂ ಪೊಸತು', ಎಂದರೆ ಹೊಸ ಹೊಸ ಅರ್ಥಗಳನ್ನು ಸ್ಫುರಿಸುವಂತಹವು. ಕವಿತ್ವ ಎಂಬುದು ಸಮುದ್ರದ ಹಾಗೆ: ಹರಹು ಮತ್ತು ಆಳಗಳನ್ನು ಹೊಂದಿರುವಂಥದು. ಜೊತೆಗೆ ಸಮುದ್ರದ 'ನೀರು' ನಮ್ಮನ್ನೇ ಪ್ರತಿಬಿಂಬಿಸುವಂಥದು. ಹಾಗೆಯೇ ಕಾವ್ಯವೂ ಕಾಣುವವರ ಕಣ್ಣಿಗೆ ಸಾಧ್ಯವಾದಂತೆ ಕಾಣುವಂಥದೇ ಹೊರತು ಎಲ್ಲರಿಗೂ ಒಂದೇ ರೀತಿಯಲ್ಲಿ ಅಲ್ಲ. ಏಕೆಂದರೆ ಕವಿತ್ವಕ್ಕೆ 'ಅರ್ಥವಿಲ್ಲ, ಸ್ವಾರ್ಥವಿಲ್ಲ'; ಓದುಗ ಅದಕ್ಕೆ ಅರ್ಥ ನೀಡಬೇಕು, ಅಷ್ಟೆ. ಹಾಗೆ ನೀಡುವುದು ತನ್ನ ಅರ್ಥವನ್ನು ಮಾತ್ರ ಎಂಬುದನ್ನು ಮರೆಯಲಾಗದು. ಅಂದರೆ ಪಂಪನ ಕಾವ್ಯಕ್ಕಾಗಲೀ, ನಮ್ಮ ಚರ್ಚೆಯ ಆಧಾರವಾದ 'ಕಾವ್ಯಧರ್ಮ' ಎಂಬ ಮಾತಿಗಾಗಲೀ ನಾವೊಂದು ಅರ್ಥ ನೀಡಿ, ಅದಕನ್ನನುಗುಣವಾಗಿ ಕಾವ್ಯವನ್ನು ವಿವರಿಸಬೇಕು.

'ಕಾವ್ಯ ಎಂದರೇನು', ಯಾರೂ ಹೇಳಲಾರರು ಎಂಬುದನ್ನಾಗಲೇ ಒಪ್ಪಿಕೊಂಡು ಬಿಟ್ಟಿದ್ದೇವಲ್ಲ. ಆದ್ದರಿಂದ ಈಗ ಕಾವ್ಯವನ್ನು ನಾವೇ ನಮ್ಮ ಅನುಕೂಲಕ್ಕಾಗಿ ನಿರ್ವಚಿಸಿಕೊಳ್ಳಬೇಕು; ಬೇರೆಯವರು ಒಪ್ಪಲಿ ಬಿಡಲಿ, ಇದು ನಮಗೆ ಆವಶ್ಯಕ. ಇಲ್ಲದಿದ್ದರೆ ಮುಂದುವರಿಯಲಾಗುವುದಿಲ್ಲ. ಕಾವ್ಯ ಎಂದರೆ, ನನ್ನ ದೃಷ್ಟಿಯಲ್ಲಿ, ವೈಯಕ್ತಿಕ ಅನುಭವಗಳ ನೆಲೆಯಿಂದ ಮತ್ತು ಅವುಗಳ ಆಧಾರದ ಮೇಲೆ, ಬದುಕಿನ ಸ್ವರೂಪವನ್ನು ಕಂಡುಕೊಳ್ಳುವ ಅನ್ವೇಷಣಾ ಪ್ರಕ್ರಿಯೆಯನ್ನು ಭಾಷೆಯ ಮಾಧ್ಯಮದಿಂದ ಅಭಿವ್ಯಕ್ತಗೊಳಿಸುವ ಪ್ರತಿಭಾವಂತನ 'ಅಸಲು ಕಸಬು'. ಬದುಕು ಕಾವ್ಯಕ್ಕಿಂತ ದೊಡ್ಡದು; ಏಕೆಂದರೆ ಕಾವ್ಯವೇ ಬದುಕಿನ ಒಂದು ಸಣ್ಣ ಭಾಗ. ಕಾವ್ಯವೇ ಅಸಂಖ್ಯಮುಖಿಯಾದರೆ, ಇನ್ನು ಬದುಕು? ಇನ್ನೂ ವಿಸ್ತಾರವಾದುದು. ಹಾಗಾಗಿ ಕವಿಕರ್ಮವೂ ಅಸಂಖ್ಯ ಬಗೆಯದು. ಅಂದರೆ ಒಂದು ಕಾವ್ಯಕೃತಿ ಮೇಲೆ ಹೇಳಿದ ಪ್ರತಿಭಾವಂತನೊಬ್ಬನ ಯಾವುದೋ ಒಂದು ಕಾಣ್ಕೆಯ ಅಭಿವ್ಯಕ್ತಿ. ಇಂತಹ ಕಾವ್ಯದ ಧರ್ಮ ಯಾವುದು? ಕಾವ್ಯಧರ್ಮ ಎಂದರೆ ಕಾವ್ಯದ ಪರಿಣಾಮ ಎಂದು ಅರ್ಥವಿಸಬಹುದೇನೋ. ಎಂದರೆ ತನ್ನ 'ಆದಿಪುರಾಣ' ಇಂತಹ ಕಾವ್ಯಕುತೂಹಲಿಗಳಾದ ಓದುಗರ ಮತ್ತು ಜಿನಧರ್ಮೀಯ ಓದುಗರ ಮೇಲೆ ವಿಭಿನ್ನ ಪರಿಣಾಮಗಳನ್ನು ಬೀರುತ್ತದೆ ಎಂಬ ಅರಿವು ಪಂಪನಿಗಿದೆ.

ಜೈನಧರ್ಮೀಯರಿಗೆ ಈ ಕಾವ್ಯವು ಉಂಟುಮಾಡುವ ಪರಿಣಾಮದ ಸ್ಥೂಲ ಸ್ವರೂಪವನ್ನು ಸ್ವಲ್ಪಮಟ್ಟಿಗೆ ಪರಿಭಾವಿಸಿಕೊಳ್ಳಬಹುದು: ಪುಣ್ಯ, ಶ್ರೇಯಸ್ಸು, ಸದ್ಗತಿ ಇಂತಹವುಗಳಿಗೆ ಇದರ ಓದು, ಮನನ, ಮತ್ತು ಅಲ್ಲಿನ ಧಾರ್ಮಿಕತೆಯ ಅನುಸರಣ ಕಾರಣವಾಗುತ್ತದೆ ಎನ್ನಬಹುದೇನೋ. ಆದರೆ ಕವಿ ಅದಕ್ಕಿಂತ ಹೆಚ್ಚಾಗಿ ಮತ್ತು ಮುಖ್ಯವೆಂದು ಬಗೆದು ನಿರೀಕ್ಷಿಸುವ 'ಸುಕವಿಜನ'ರ ಮೇಲೆ ಯಾವ ಪರಿಣಾಮ ಬೀರಬೇಕೆಂದು ನಿರೀಕ್ಷಿಸುತ್ತಾನೆ ಎಂಬುದನ್ನೀಗ ಸ್ವಲ್ಪ ವಿಶದಪಡಿಸಿಕೊಳ್ಳಬೇಕು. ಇಂಥ ಓದುಗರು ಜೈನರಾಗಿದ್ದೂ, ಧರ್ಮೇತರವಾದ 'ಕಾವ್ಯಧರ್ಮ'ವನ್ನು ನಿರೀಕ್ಷಿಸುವವರಾಗಬಹುದು, ಅಥವಾ ಜೈನೇತರ ಕಾವ್ಯಾಸಕ್ತರಾಗಿರಬಹುದು. ಆ ಮನೋಭಾವದ ಓದಿನ ಮಟ್ಟಿಗೆ ಅವರಿಬ್ಬರಲ್ಲಿರುವುದು ಒಂದೇ ಬಗೆಯ ನಿರೀಕ್ಷೆ. ಇಲ್ಲಿ ಪುಣ್ಯ, ಸದ್ಗತಿ ಇವುಗಳ ನಿರೀಕ್ಷೆಯಿಲ್ಲ. ಇಂಥವರು ಏನನ್ನು ನಿರೀಕ್ಷಿಸಬಹುದು ಅಥವಾ ಇಂಥವರ ಮೇಲೆ ಕಾವ್ಯ ಏನು ಪರಿಣಾಮ ಬೀರಬಹುದು?

ಕಾವ್ಯಾಸಕ್ತನು ಕಾವ್ಯದಿಂದ ನಿರೀಕ್ಷಿಸುವುದು ಒಂದು ವಿಶಿಷ್ಟ ಅನುಭವದ ಪುನರ್ನಿರ್ಮಿತಿಯನ್ನು, ಮತ್ತು ಬದುಕಿನ ಒಂದಂಶದ ವಿಶಿಷ್ಟ ಕಾಣ್ಕೆಯೊಂದನ್ನು. ಇಲ್ಲಿರುವುದು ಆದಿಜಿನನ ಚರಿತ್ರೆ, ಅವನು ಒಬ್ಬ ಮನುಷ್ಯನೇ; ನಾವೂ ಮನುಷ್ಯರೇ.

ಹಾಗಾಗಿ ನಮ್ಮಿಬ್ಬರಲ್ಲಿರುವ ಸಮಾನಾಂಶ ಮಾನವ ಬದುಕು. ಜೈನರು ದೇವರಲ್ಲಿ ನಂಬಿಕೆಯಿಡದವರು; ಹೀಗಾಗಿ ಅವರಿಗೆ ಸಾಕ್ಷಾತ್ಕರಿಸಿಕೊಳ್ಳಬೇಕಾದ ಅಥವಾ ಸಾಯುಜ್ಯ ಹೊಂದಬೇಕಾದ ಅಥವಾ ತನ್ನಲ್ಲಿರುವ ದೈವಾಂಶವನ್ನು ಕಂಡುಕೊಳ್ಳಬೇಕಾದ ತುರ್ತು ಇಲ್ಲ. ಆದರೆ ತೀರ್ಥಂಕರನು ಸಾಮಾನ್ಯ ವ್ಯಕ್ತಿಗಳಿಗಿಂತ ತುಂಬ ಮೇಲುಮಟ್ಟದ ಜೀವಿ, ಅವನು ಜೀವನವನ್ನು (ಬದುಕು ಎಂಬ ನೀರು) ಪವಿತ್ರ ತೀರ್ಥವನ್ನಾಗಿ ಪರಿವರ್ತಿಸಿಕೊಂಡವನು. ಅವನ ಬದುಕು ಹೀಗಾಗಿರುವುದು ಅವನ ವೈಯಕ್ತಿಕ ಸಾಧನೆಯಿಂದ, ಅವನ ಬದುಕಿನ ಪರಿಯು ಎಲ್ಲರಿಗೂ ಆದರ್ಶವಾದುದು, ಮತಧರ್ಮಗಳ ಪರಿಧಿಯನ್ನು ಮೀರಿ. ಪ್ರಾಯಶಃ ಆ ಪರಿಣಾಮವನ್ನು ತನ್ನ 'ಪುರಾಣಕಾವ್ಯ'ವು ಕಾವ್ಯಾಸಕ್ತರ ಮೇಲೆ ಮಾಡುತ್ತದೆ ಎಂಬುದು ಕವಿಯ ನಿರೀಕ್ಷೆಯಾಗಿರಬೇಕು

ಪಂಪ 'ಲೌಕಿಕ' ಎಂದು ಕರೆದುಕೊಳ್ಳುವ 'ವಿಕ್ರಮಾರ್ಜುನವಿಜಯ'ದ ಬಗ್ಗೆ ಒಂದಷ್ಟು ಚರ್ಚಿಸೋಣ. ಇಲ್ಲಿ ಲೌಕಿಕತೆ ನಮ್ಮ ವ್ಯಾವಹಾರಿಕ ಬದುಕಿಗೆ ಸಂಬಂಧಿಸಿದ್ದೇ? ಅಲ್ಲ. ಏಕೆಂದರೆ ಇಲ್ಲಿ ತುಂಬಿರುವುದು ರಾಜರ ಕತೆ, ಅವರ ನಡುವಣ ಭಿನ್ನಾಭಿಪ್ರಾಯಗಳು, ಕುಟಿಲ ಕಾರಾಸ್ಥಾನಗಳು, ಯುದ್ಧಗಳ ವರ್ಣನೆ ಇಂತಹವು. ಇವು ಸಾಮಾನ್ಯನ ಬದುಕಿಗೆ ಹೊರತಾದುದು, ತಾನೇ ಸೈನ್ಯದಲ್ಲಿ ಪಾಲ್ಗೊಳ್ಳದಿದ್ದರೆ. ಇಡೀ ಈ ಕಾವ್ಯವು ಉದ್ದಕ್ಕೂ ರಾಜತ್ವದ ವೈಭವೀಕರಣಕ್ಕೆ ಮೀಸಲಾಗಿದೆ ಎಂಬ ಭಾವನೆಯನ್ನು ಓದುಗನಲ್ಲಿ ಉಂಟುಮಾಡಿದರೆ ಆಶ್ಚರ್ಯವಿಲ್ಲ. ಕಾವ್ಯದ ಮೊದಲ ಪದ್ಯದಿಂದ ಕೊನೆಯದರವರೆಗೂ ಈ ಕಾರ್ಯ ನಡೆದಿರುವುದೂ ಸುಳ್ಳಲ್ಲ. (ಈ ಅಂಶವು ಇದೇ ಲೇಖಕನ 'ಪಂಪ ಮತ್ತು ರಾಜತ್ವ' ಎಂಬ ಲೇಖನದಲ್ಲಿ ವಿವರವಾಗಿ ಪ್ರಸ್ತಾಪಿತವಾಗಿದೆ). ಆದರೆ ಅದರ ಒಡಲಲ್ಲಿಯೇ ರಾಜತ್ವದ ವಿರುದ್ಧವಾದ ಆಕ್ರೋಶವೂ ಅಡಗಿದೆ, ಅದನ್ನು ಗುರುತಿಸಬೇಕು. ಈ ಆಕ್ರೋಶ ಯಾಕೆ?

ಪಂಪನ ಕಾಲದ ಕನ್ನಡ ನಾಡು, ನನ್ನ ದೃಷ್ಟಿಯಲ್ಲಿ, ಎರಡು ಬಗೆಯ ತೀವ್ರ ತಲ್ಲಣಗಳನ್ನು ಅನುಭವಿಸುತ್ತಲಿತ್ತು; ಹೇಳಿಕೊಳ್ಳಲಾಗದ ಸಂಕಟದ ಉರಿಯನ್ನು ಜನಪದವು ತನ್ನ ಮಡಿಲಲ್ಲಿ ಕಟ್ಟಿಕೊಂಡಿತ್ತು. 'ಸೆರಗಿನ ಕೆಂಡ'. ಅವುಗಳೆಂದರೆ ಜಾತಿ ಮತ್ತು ಯುದ್ಧ – ಇವುಗಳು. ಜಾತಿ ಎಂಬುದು ಒಬ್ಬ ವ್ಯಕ್ತಿಯ ಬದುಕನ್ನು ನಿರ್ಧರಿಸಿಬಿಡುವ ವ್ಯಾಪಕವೂ ಬಲಿಷ್ಠವೂ ಆದ ವ್ಯವಸ್ಥೆ. ವ್ಯಕ್ತಿಯೊಬ್ಬ ಯಾವ ಜಾತಿಯಲ್ಲಿ ಹುಟ್ಟಿದ್ದಾನೆ ಎಂಬುದರ ಮೇಲೆಯೇ ಆ ಕಾಲದ ವ್ಯಕ್ತಿ ಮುಂದೇನಾಗುತ್ತಾನೆ ಎಂಬುದು ನಿರ್ಧರಿತವಾಗುತ್ತಿತ್ತು. ಈಗಿಗಿಂತ ಆಗ ಜಾತಿವ್ಯವಸ್ಥೆ ತೀರ ನಿಷ್ಠುರವಾಗಿತ್ತು, ಕ್ರೂರವಾಗಿತ್ತು. ಹಾಗೆಯೇ ಯುದ್ಧ. ಯುದ್ಧ ನಡೆಯುತ್ತಿದ್ದುದು ಯಾರಿಗಾಗಿ, ರಾಜನ ಸಾಮ್ರಾಜ್ಯವಿಸ್ತರಣೆಗಾಗಿ ತಾನೇ? ಆದರೆ ಯುದ್ಧದಲ್ಲಿ

ಪಾಲ್ಗೊಳ್ಳಬೇಕಾದವರು ಸಾಮಾನ್ಯರು, ದೃಢಕಾಯರಾದ ಯುವಕರು. ಯುದ್ಧದ ಗೆಲವು ದೊರೆಯುತ್ತಿದ್ದುದು ರಾಜನಿಗೆ, ಆದರೆ ಗೆದ್ದ ಮತ್ತು ಸೋತ ಎರಡೂ ಕಡೆಯ ಜನಗಳಿಗೆ ಸಿಕ್ಕುವುದು ಬವಣೆ. ಕಟ್ಟಿದ ಬದುಕನ್ನು ಕೆಡಹುವುದು, ಯುದ್ಧಪರಿಣಾಮದ ಬಗೆಗಿನ ಆತಂಕ, ಬಿಟ್ಟಿಯ ಕೆಲಸ, ಸಾವು–ನೋವು, ಆಸ್ತಿಪಾಸ್ತಿಯ ಹಾನಿ, ಮುಂದೆ ಏರಬಹುದಾದ ತೆರಿಗೆಯ ಭೀತಿ – ಇವುಗಳು. ಯಾವ ಕಾಲದಲ್ಲಿಯೂ ಯುದ್ಧ ಅದರ ಫಲಾನುಭವಿಗಳಾದ ಕೆಲವರಿಗೆ ಹೊರತಾಗಿ ಜನಗಳಿಗೆ ಬೇಕಾಗದು. ಜನ ಮೂಲತಃ ಯುದ್ಧವಿರೋಧಿಗಳೇ. ಆದರೆ ತನ್ನ ರಾಜ್ಯದ ಒಡೆಯ ಯುದ್ಧದಲ್ಲಿ ತೊಡಗಿರುವಾಗ ಯಾರಾದರೂ ಅದರ ವಿರುದ್ಧ ಮಾತನಾಡಿದರೆ, ಅದು ರಾಜದ್ರೋಹವಾಗುತ್ತಿತ್ತು, ಹಾಗೆ ಮಾತನಾಡಿದವರು ದಂಡನೆಗೆ ಈಡಾಗಬೇಕಾಗಿತ್ತು. ಹೀಗಾಗಿ ಯುದ್ಧಪರಿಸ್ಥಿತಿಯೆಂದರೆ 'ಅನ್ನಲಾಗದ ಅನುಭವಿಸಲಾಗದ' ಸಂಕಟ. ಯುದ್ಧಕ್ಕೆ ಕಾರಣವಾದ ರಾಜನ ವಿರುದ್ಧ ಎಲ್ಲ ಕಾಲದಲ್ಲಿಯೂ ಸಾಮಾನ್ಯ ಜನತೆ ಹೊಂದುವ ಭಾವನೆ ಆಕ್ರೋಶವೇ. ನಮ್ಮ ನಾಡಿನ ಹತ್ತನೆಯ ಶತಮಾನದ ಸುತ್ತುಮುತ್ತಲ ಪರಿಸ್ಥಿತಿಯನ್ನು ನೋಡಿದರೆ, ಪ್ರಾಯಶಃ ಆಗಿನ ಕಾಲದ ರಾಜರು ನಡೆಸಿದ ಯುದ್ಧಗಳು ಅಸಂಖ್ಯಾತ; ಆರನೆಯ ವಿಕ್ರಮಾದಿತ್ಯನೆಂಬ ಚಾಲುಕ್ಯ ಚಕ್ರವರ್ತಿ ಐವತ್ತು ವರ್ಷ ಆಳಿದನಂತೆ, ಆವನ ಆಳ್ವಿಕೆಯ ಅವಧಿಯಲ್ಲಿ ಐವತ್ತು ಯುದ್ಧಗಳನ್ನು ಮಾಡಿದನಂತೆ, ಇವನ ಮೇಲೆ ದಂಡೆತ್ತಿ ಬಂದವರೊಡನೆ, ತಾನೇ ದಂಡೆತ್ತಿ ಹೋಗಿ ಆಕ್ರಮಣ ಮಾಡಿ ಇತರರೊಡನೆ. ಜನರ ಪಾಡು ಏನಾಗಬೇಕು!

ಪಂಪನ 'ವಿಕ್ರಮಾರ್ಜುನವಿಜಯ' ಕಾವ್ಯವು ತನ್ನ ಒಡಲಲ್ಲಿ ಹುದುಗಿಸಿಕೊಂಡಿರುವುದು ಈ ಎರಡು ತಲ್ಲಣಗಳನ್ನೇ. ಕರ್ಣನ ಪ್ರಸಂಗದ ಮೂಲಕ ಕವಿ ಧ್ವನಿಸುತ್ತಿರುವುದು ಒಂದು ಪಾತ್ರದ ದುರಂತವನ್ನು ಮಾತ್ರವಲ್ಲ, ಅದಕ್ಕೆ ಕಾರಣವಾದ ವ್ಯವಸ್ಥೆಯ ದುರಂತದ ಬಗ್ಗೆ. ಕರ್ಣನ ಸಾವಿನ ಸನ್ನಿವೇಶದಲ್ಲಿ ಬರುವ 'ನೆನೆಯದಿರಣ್ಣ ಭಾರತದೊಳಿಂ ಪೆಜಿರಾರುಮನ್ ಒಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ' ಎಂಬ ಮಾತಿನ ಮೂಲಕ ತನ್ನ 'ಸಮಸ್ತ ಭಾರತ' ಕಾವ್ಯದಲ್ಲಿನ ನೆನಪಿನಲ್ಲಿಡಬೇಕಾದ ಅಂಶವೆಂದರೆ ಜಾತಿದುರಂತದ ಪರಿಯನ್ನು ಎಂಬುದನ್ನು ಕವಿ ಸೂಚಿಸುತ್ತಿರುವಂತೆ; ತನ್ನ ಕಾವ್ಯವನ್ನು ಓದಿದ ಮೇಲೆ ಕರ್ಣನ ಸಾವಿಗೆ ಕಾರಣವಾದ ಜಾತಿವ್ಯವಸ್ಥೆಯ ದುರಂತದ ಬಗ್ಗೆ ಓದುಗ ಚಿಂತಿಸಬೇಕೆಂಬ ಆಶಯವೂ ಇರಬಹುದು.

ಮತ್ತೊಂದು ಅಂಶದ ಕಡೆಗೆ ನಮ್ಮ ಗಮನವನ್ನೀಗ ಹರಿಸಬಹುದು. ದ್ರೋಣನ ಸಾವಿನ ನಂತರ ಕರ್ಣನಿಗೆ ವೀರಪಟ್ಟವನ್ನು ಕಟ್ಟುವ ತನ್ನ ನಿರ್ಧಾರವನ್ನು

ದುರ್ಯೋಧನ ಹೇಳಿದಾಗ ಅಶ್ವತ್ಥಾಮನು 'ನಿಜದೊಳೆ ಭೂಪರೆಂಬರವಿವೇಕಿಗಳಪ್ಪರ್' ಎಂದು ಉದ್ಗರಿಸುತ್ತಾನೆ. ಅಂತೆಯೇ, ವೀರಪಟ್ಟ ಕಟ್ಟಿಸಿಕೊಂಡ ಮೇಲೆ ಕರ್ಣನು ಶರಶಯ್ಯೆಯ ಮೇಲೆ ಕುರುಕ್ಷೇತ್ರದ ಮತ್ತೊಂದು ಮೂಲೆಯಲ್ಲಿ ಮಲಗಿದ್ದ ಭೀಷ್ಮನ ಬಳಿ ಹೋಗಿ ಮುಂದೇನು ಮಾಡಬೇಕೆಂಬ ಬಗ್ಗೆ ಸಲಹೆ ಕೇಳುತ್ತಾನೆ. ಆಗ ಅವನು ಹೇಳುವುದೆಂದರೆ, 'ಎಮಗಿಂಬುಕಯ್ವೊಡಂ ಸುಯೋಧನನ ರಾಜ್ಯಮನೊಲ್ವೊಡಂ ಶಲ್ಯನನೆ ಸಾರಥಿಮಾಡಿ ಕಾದುವುದು' ಎಂದು. ಅದರಂತೆಯೇ ದುರ್ಯೋಧನನು ಕರ್ಣನಿಗೆ ಸಾರಥಿಯಾಗೆಂದು ಕೇಳುವ ಪ್ರಸಂಗ. ಕೀಳು ಕುಲದವನಿಗೆ ಸಾರಥಿಯಾಗೆಂದು ಕೇಳಿದಾಕ್ಷಣವೇ ಸಿಡಿಲಾದ ಶಲ್ಯನು ಆಡುವ ಮಾತುಗಳೆಂದರೆ, 'ಪೊದಳ್ದು ಪರ್ವಿದವಿವೇಕತೆಯಿಂ ನೃಪಚಿತ್ತವೃತ್ತಿ ಸಂಚಲಂ ಅದಱಿಂದಮೋಲಗಿಸಿ ಬಾಳ್ವುದೆ ಕಷ್ಟಮಿಳಾಧಿನಾಥರಂ' ಮತ್ತು 'ಮದಾನ್ವಿತ ರಾಜಬೀಜಸಂಜನಿತಗುಣಂ ಮದಂ, ಮದಮನಾಳ್ದವಿವೇಕತೆಯಿಂದ ಮಲ್ತೆ ತೊಟ್ಟಿನ ಮೊಲೆವಾಲನುಂಡ ಗುಣಂ, ಆರ್ ಕಿಡಿಪರ್ ನರೇಂದ್ರರೊಳ್' ಎಂಬಿವು. ಅಶ್ವತ್ಥಾಮ ಮತ್ತು ಶಲ್ಯರ ಮಾತುಗಳು ಅವರ ವೈಯಕ್ತಿಕ ಅಭಿಪ್ರಾಯವನ್ನು ಸೂಚಿಸುತ್ತವೆ ಎಂದು ನನಗನ್ನಿಸುವುದಿಲ್ಲ, ಜನತೆಯು ರಾಜತ್ವದ ಬಗ್ಗೆ ಹೊಂದಿದ ಆಕ್ರೋಶ ಇಲ್ಲಿ ಹೊರಬಂದಿದೆ ಎನ್ನಿಸುತ್ತದೆ. ಈ ಎರಡೂ ಮಾತುಗಳು ಹೊಮ್ಮಿರುವುದು ಯುದ್ಧರಂಗದಲ್ಲಿ, ಯುದ್ಧದ ನಡುವೆ, ರಾಜನ ಎದುರಿಗೆ. ಯಾವಾಗಿನದೋ ಸಿಟ್ಟು ಇನ್ನಾವಾಗಲೋ ಸಿಡಿಯುವಂತೆ ಪಂಪ ಪ್ರತಿಭೆಯ ಆಳದಲ್ಲಿನ ರಾಜತ್ವವಿರೋಧಿ (ಯುದ್ಧವಿರೋಧಿ) ಧೋರಣೆ ಈ ಸನ್ನಿವೇಶಗಳಲ್ಲಿ ಹೊಮ್ಮಿದೆ.

ಕವಿಗೆ, ಎರಡು ನೆಲೆಯ ವ್ಯಕ್ತಿತ್ವಗಳು (ಎಲ್ಲರದೂ): ವೈಯಕ್ತಿಕ ನೆಲೆ ಮತ್ತು ಪ್ರಾತಿಭ ನೆಲೆ. ಸಂಗತಿಯೊಂದರ ನಿಜಸ್ವರೂಪವನ್ನು ವ್ಯಕ್ತ್ಯತೀತ ನೆಲೆಯಲ್ಲಿ ಕಂಡುಕೊಳ್ಳುವ ಗುಣವೇ ಪ್ರತಿಭೆ ಎನ್ನುವುದಾದರೆ, ಕವಿ ವೈಯಕ್ತಿಕ ನೆಲೆಯಲ್ಲಿ ನಡೆದುಕೊಳ್ಳುವುದಕ್ಕಿಂತ ಅವನ ಈ ವ್ಯಕ್ತ್ಯತೀತ ನೆಲೆಯಲ್ಲಿನ ಕಾಣ್ಕೆ ಭಿನ್ನವಾದುದಾಗಿರುತ್ತದೆ ಎನ್ನಬಹುದು. ಹೀಗಾಗಿ ವ್ಯಕ್ತಿಯಾಗಿ ಪಂಪನಿಗೆ ರಾಜತ್ವದ ಬಗ್ಗೆ ಅಕ್ಕರೆಯಿರಬಹುದಾದರೂ, ಅವನ ಪ್ರಾತಿಭ ದೃಷ್ಟಿಗೆ ಅದರ ಕ್ರೌರ್ಯ ಸ್ಪಷ್ಟವಾಗುತ್ತದೆ. ಸಮರ್ಥ ಕವಿಯೊಬ್ಬನ ಕೃತಿಯು ಕವಿಕಾಲದ ಸುತ್ತಲ ವಾಸ್ತವವನ್ನು ಕಟ್ಟಿಕೊಡುತ್ತಲೇ ಅದು ಇರಬೇಕಾದ ಬಗೆಯನ್ನೂ ಒಳಗೊಳ್ಳುತ್ತದೆ; ಇದನ್ನೇ ಸದ್ಯ ಮತ್ತು ಶಾಶ್ವತ ಎಂಬ ಮಾತುಗಳ ಮೂಲಕ ಕೆಲವರು ಸೂಚಿಸುವುದು. ಕಣ್ಣಿಗೆ ಕಾಣುವುದರ ವಿವರಗಳ ಮೂಲಕ ಅದು ಬದಲುಗೊಳ್ಳಬೇಕಾದ ರೀತಿಯನ್ನು ಉತ್ತಮ ಕಾವ್ಯ ಧ್ವನಿಸುತ್ತದೆ.

ಪಂಪನ ಮತ್ತು ಅವನಂತಹ ಕವಿಗಳ ವೈಶಿಷ್ಟ್ಯ ಇರುವುದು ಇಲ್ಲಿಯೇ.

ವ್ಯಾಸನ ಕತೆಯನ್ನಾರಿಸಿಕೊಂಡರೂ ಮಹಾಭಾರತವನ್ನವನು ಮೂಲದಲ್ಲಿದ್ದಂತೆಯೇ ಸ್ವೀಕರಿಸಲಿಲ್ಲ. ಸನ್ನಿವೇಶ ಪಾತ್ರಸ್ವರೂಪಗಳಂತಹ ಅಂಶಗಳಲ್ಲಿ ವ್ಯತ್ಯಾಸಗಳನ್ನು ಮಾತ್ರವೇ ಮಾಡಿಕೊಳ್ಳದೆ, ತನ್ನ ಕಾವ್ಯಗಳಲ್ಲಿ ತನ್ನ ಕಾಲದ ತಲ್ಲಣಗಳನ್ನೂ ಒಳಗೊಂಡು ನಿಜವಾದ ಜನಮಾನಸದ ಆಳದಲ್ಲಿನ ಅನಿಸಿಕೆಯನ್ನು ಹುದುಗಿಸಿದ್ದಾನೆ. ಇದನ್ನೇ ಕೆಲವರು ಪಂಪನ 'ಸಮಸ್ತಭಾರತ'ದ ಪರಿಕಲ್ಪನೆ ಎಂದು ಹೇಳುತ್ತಾರೆ, ಇರಬಹುದು. ಆದರೆ ನಾನು ಇದನ್ನೇ 'ದೇಸಿ' ಎನ್ನುತ್ತೇನೆ, ಆದರೆ ಇಷ್ಟು ಮಾತ್ರವೇ ಅಲ್ಲ. ಭಾಷೆ, ಸಂಸ್ಕೃತ ಮಾದರಿಯ ಕಾವ್ಯವಸ್ತು ಮತ್ತು ಆಕಾರಗಳ ನಡುವೆ ಕನ್ನಡದ ಸತ್ವವನ್ನು ಪ್ರಕಟಿಸುವ ಬಗೆ, ಮಾತಿನ ಬಳಕೆಯ ಪರಿ, ಕನ್ನಡದ್ದಲ್ಲದ ಅಕ್ಷರ ಛಂದಸ್ಸಿಗೆ ಅಚ್ಚಗನ್ನಡವನ್ನು ಒಗ್ಗಿಸುವ ಬಗೆ, ಕನಕಸ್ವಾಮಿಯ ಪ್ರಸಂಗದಂತಹ ಸನ್ನಿವೇಶಗಳಲ್ಲಿ ಸೇರಿಸಿರುವ ಜಾನಪದ ಸಂಸ್ಕೃತಿ ವಿವರಗಳು ಮತ್ತು, ಎಲ್ಲಕ್ಕಿಂತ ಮಿಗಿಲಾಗಿ, ತನ್ನ ಕಾಲದ ಜನರ ತಲ್ಲಣಗಳು ತವಕಗಳು, ಭಾವನೆ–ನಂಬಿಕೆಗಳು, ನೋವು ನಲಿವುಗಳು, ಆಸೆ ಆಕಾಂಕ್ಷೆಗಳು ಇವೆಲ್ಲ ಒಗ್ಗೂಡಿ 'ದೇಸಿ'ಯಾಗುತ್ತದೆ ಎಂದು ನನ್ನ ಭಾವನೆ. 'ಆದಿಪುರಾಣ'ದಲ್ಲಿ ಒಂದು ಮತಧರ್ಮದವರ ಆರಾಧ್ಯ ವ್ಯಕ್ತಿತ್ವದ ಚಿತ್ರಣವನ್ನು ಜೈನೀಯ ಪರಿಭಾಷೆಯ ಮೂಲಕವೂ ಅದರ ಚೌಕಟ್ಟಿನ ಪರಿಧಿಯಲ್ಲಿಯೂ ಮಾಡುತ್ತಲೇ, ಜೀವನ ಪಾವನವಾಗುವುದು ಹೇಗೆ, ನೀರು ತೀರ್ಥವಾಗುವುದು ಹೇಗೆ, ವ್ಯಕ್ತಿಯ ಬದುಕಿನ ಸಾರ್ಥಕತೆ ಎಲ್ಲಿ ಎಂಬುದರ ಬಗ್ಗೆ ಧ್ಯಾನಿಸಿದ್ದರೆ (ಆ ಕಾರಣದಿಂದಲೇ ಅದು ಧಾರ್ಮಿಕ, ಏಕೆಂದರೆ ಧಾರ್ಮಿಕತೆ ಎಂಬುದು ವೈಯಕ್ತಿಕ ಸಾರ್ಥಕತೆಯ ತುರ್ತೇ ವಿನಾ ಸಾಮೂಹಿಕ ಕ್ರಿಯೆಯಲ್ಲ), 'ವಿಕ್ರಮಾರ್ಜುನವಿಜಯ'ವು ತನ್ನ ಕಾಲದ ಸಾಮಾಜಕ ನಂಬಿಕೆಗಳು, ವಾಸ್ತವಗಳು ಇವುಗಳ ಸ್ವರೂಪದ ವಿವರಗಳ ನಡುವೆಯೇ ಒಡಲಾಳದ ಸಂವೇದನೆಯನ್ನು ಒಳಗೊಳ್ಳುತ್ತದೆ. ಮಾನವನ ಬದುಕೆಂದರೆ ಎರಡು ನೆಲೆಯದು: ಆಂತರಿಕ ಬದುಕು, ಮತ್ತು ಸಾಮಾಜಿಕ ಬದುಕು; ವ್ಯಕ್ತಿಯ ಆಶೋತ್ತರಗಳು ಮತ್ತು ಸಾಮಾಜಿಕ ಹೊಣೆಗಾರಿಕೆಗಳು. ಪಂಪನ ಈ ಎರಡು ಕಾವ್ಯಗಳು ಮಾನವ ಬದುಕಿನ ಎರಡು ಮುಖ್ಯ ನೆಲೆಗಳನ್ನು ಕುರಿತ ಪ್ರಾತಿಭ ಕಾಣ್ಕೆಯ ಫಲ. ಎಲ್ಲ ಕಾಲದ ಮಾನವ ಬದುಕಿನ ಪರಿಯೂ ಇದೇ ಆದುದರಿಂದ, ಆಯಾ ಕಾಲಕ್ಕೆ ಅನುಗುಣವಾಗಿ ಓದುಗರಿಗೆ ಇಂತಹ ಕಾವ್ಯಗಳು ಓದುಗರಲ್ಲಿ ಅರಳುತ್ತ, ಪ್ರಸ್ತುತವಾಗುತ್ತವೆ. ಹೀಗಾಗಿಯೇ ಈ ಕಾವ್ಯಗಳು ಒಂದು ಸಾವಿರದ ಎಪ್ಪತ್ತು ವರ್ಷಗಳ ತಮ್ಮ ಇರುವಿಕೆಯಲ್ಲಿ ಎಲ್ಲ ಕಾಲದ ಕಾವ್ಯಾಸಕ್ತರ ಹೃದಯವನ್ನು ಗೆಲ್ಲಲು ಸಾಧ್ಯವಾಗಿದೆ.

ಅಂದರೆ, ಪಂಪನ ಕಾವ್ಯಗಳ ಶ್ರೇಷ್ಠತೆಯಿರುವುದು ಅದರ ಹೂರಣದಲ್ಲಿ. ಕನ್ನಡಿಗರ ಬದುಕಿನ ಸಂವೇದನೆ ಎಲ್ಲ ಕಾಲಕ್ಕೂ ಒಂದೇ, ತನ್ನದೇ ವಿಶಿಷ್ಟ

ರೂಪದ್ದು. ಇದೇ 'ಕನ್ನಡತನ', ಅಂದರೆ ಕನ್ನಡಿಗರು ಬದುಕನ್ನು ಗ್ರಹಿಸಿಕೊಳ್ಳುವ ಕ್ರಮ. ಪ್ರಾಯಶಃ ಅದೇ ದೇಸಿ. ಪಂಪ ತನ್ನ ಕಾವ್ಯದ ವೈಶಿಷ್ಟವೆಂದರೆ 'ದೇಸಿ' ಎಂದು ಹೇಳಿಕೊಳ್ಳುವವುದರ ಹಿಂದೆ ಈ ಮನೋಭಾವವಿರಬಹುದು. ಇದನ್ನು ಮುಂದಿನ ಕವಿಗಳೂ ಮೆಚ್ಚಿಕೊಂಡಿದ್ದಾರೆ 'ಪಂಪನ ದೇಸಿ' ಎನ್ನುವುದು ಒಂದು ನುಡಿಗಟ್ಟಾಗಿಬಿಟ್ಟಿದೆ. ಅಷ್ಟು ಮಾತ್ರವಲ್ಲ, ಪಂಪ ಯಾವುದೇ ಅಭಿವ್ಯಕ್ತಿವಿಧಾನದಲ್ಲಿ ಅಂತರ್ವಾಹಿನಿಯಾಗಿರಬೇಕಾದುದು ದೇಸಿಯೇ ಎಂಬ ಅಭಿಪ್ರಾಯದವನಾಗಿ ಕಾಣುತ್ತಾನೆ. ಆದ್ದರಿಂದಲೇ 'ಬಗೆ ಪೊಸತಪ್ಪುದಾಗಿ ದೇಸಿಯೊಳ್ ಪುಗುವುದು, ಪೊಕ್ಕ ಮಾರ್ಗದೊಳೆ ತಳ್ವುದು' ಎನ್ನುವುದು. ಇಲ್ಲಿ 'ಬಗೆ ಪೊಸತಪ್ಪುದಾಗಿ' ಎಂಬ ಮಾತು 'ಆದಿಪುರಾಣ'ದ 'ಇದು ನಿಚ್ಚಂ ಪೊಸತು ಅರ್ಣವಂಬೊಳ್ ಅತಿ ಗಂಭೀರಂ ಕವಿತ್ವಂ' ಎಂಬ ವಾಕ್ಯವನ್ನು ನೆನಪಿಸುತ್ತದೆ. ಹೊಸತಾಗುವುದೆಂದರೆ ಅಪರಿಮಿತ ದೃಷ್ಟಿಕೋನಗಳಿಗೆ ಅನ್ವಯಿಸಬಹುದಾದುದು, ಪ್ರತಿ ಓದುಗನಿಗೂ ಪ್ರತಿ ಪೀಳಿಗೆಗೂ ಪ್ರಸ್ತುತವಾಗಿ ಕಾಣುವುದು ಎಂದರ್ಥ. ಕನ್ನಡ ಕಾವ್ಯ ಹೀಗಾಗಬೇಕಾದರೆ ಅದರ ಒಡಲಲ್ಲಿ 'ದೇಸಿ' ಅಥವಾ 'ಕನ್ನಡತನ' ಹುದುಗಿರಬೇಕು. ಇದು ಎಲ್ಲ ಕಾಲದ ಎಲ್ಲ ಬಗೆಯ ಕನ್ನಡ ಸಾಹಿತ್ಯದ ಮಾರ್ಗದರ್ಶಿ ಅಂಶ. ಇದನ್ನು ಮುಂದಿನ ಕನ್ನಡ ಕಾವ್ಯ ಪರಂಪರೆ ಒಪ್ಪಿದೆ. ಅದಕ್ಕಾಗಿಯೇ ಪಂಪ ಸಾವಿರ ವರ್ಷದ ಸರದಾರನಾಗಿದ್ದಾನೆ. ನಾಗರಾಜನೆಂಬ ಒಬ್ಬ ಹಿಂದಿನ ಕವಿಯಂತೂ 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂದು ಉದ್ಗರಿಸಿದ್ದಾನೆ. ಇವತ್ತೂ ಕನ್ನಡ ಸಾಹಿತ್ಯ ಜನಸಂವೇದನೆಗೆ ಮಿಡಿಯುವುದನ್ನು ತನ್ನ ಆದರ್ಶವಾಗಿ ಸ್ವೀಕರಿಸಿದೆ. ಆ ಕಾರಣಕ್ಕಾಗಿ ಪಂಪ 'ಆದಿಕವಿ'ಯಾಗಿದ್ದಾನೆ, ಅವನ ಕಾವ್ಯಗಳು ಇಂತಹವಲ್ಲದ ರಚನೆಗಳನ್ನು 'ಇಕ್ಕಿ ಮೆಟ್ಟಿವೆ'

೩

ಬದುಕಿನ ಸಾಫಲ್ಯದ ಬಗ್ಗೆ, ಜೀವನ ಸಾರ್ಥಕತೆಯ ಬಗ್ಗೆ ನಾವು ಮಾತನಾಡುತ್ತೇವೆ. ಪ್ರಾಕೃತಿಕ ಜೈವಿಕ ಕ್ರಿಯೆಯಾದ ಸಂತಾನಾಭಿವೃದ್ಧಿಯಲ್ಲದೆ ನಮ್ಮ, ಅಂದರೆ ಮಾನವನ ಬದುಕಿನ, ಗುರಿಯೇನು ಅಥವಾ ಅದಕ್ಕೊಂದು ಗುರಿ ಇದೆಯೇ? ಗುರಿ ಎಂಬುದು ಇರುವುದು ನಿಶ್ಚಿತವಾದರೆ ಅದರ ಸ್ವರೂಪವೇನು? ಅಂಥ ಗುರಿ ಮಾನವನ ಬಾಳಿಗೆ ಮಾತ್ರ ಅನ್ವಯಿಸುವಂಥದೇ ಅಥವಾ ಮಿಕ್ಕ ಜೀವಜಾತಿಗಳಿಗೂ ಗುರಿ ಎಂಬುದಿದೆಯೇ – ಇಂಥ ಪ್ರಶ್ನೆಗಳ ಮಾಲೆಯು ಅನಾದಿ ಕಾಲದಿಂದಲೂ ಮಾನವನನ್ನು ಕಾಡುತ್ತಲೇ ಬಂದಿದೆ. ಇತರ ಪ್ರಾಣಿಗಳ ಬಗ್ಗೆ ನಾವೇನೂ ಹೇಳಲಾರೆವು, ಆ ಬಗ್ಗೆ ಹೇಳುವುದಾದರೆ ಆಯಾ ಪ್ರಾಣಿಗಳೇ ಹೇಳಬೇಕು. ಹೀಗಾಗಿ ನಾವು ಮಾನವ ಕುಲದ ಗುರಿಯ ಬಗ್ಗೆ ಮಾತ್ರ ಆಲೋಚನೆ

ಮಾಡಬಹುದೇನೋ? ಆಲೋಚನೆ ಎಂದೆ, ಇರುವುದೆಲ್ಲ ನಮ್ಮ 'ದೃಷ್ಟಿ'ಯಲ್ಲಿ ಇರುವುವು, ನಮ್ಮ ಅನಿಸಿಕೆಯ ಹೊರತಾಗಿ ಅದು ಇದೆಯೋ ಇಲ್ಲವೋ ಪತ್ತೆ ಹಚ್ಚುವುದು ಹೇಗೆ. ಆಲೋಚನೆ ಇಲ್ಲದಿದ್ದರೆ ಇರುವಿಕೆಯೂ ಇಲ್ಲ. 'Cogito, ergo sum' ಅಂದರೆ 'ನಾನು ಯೋಚಿಸುತ್ತೇನೆ, ಆದ್ದರಿಂದ, ನಾನು ಇದ್ದೇನೆ' ಎಂದು ಡೆಕಾರ್ಟ್ ಹೇಳಿದನಂತೆ. ಎಲ್ಲ ಇರುವಿಕೆಯೂ ನಮ್ಮ ಆಲೋಚನೆಯಿಂದ ಹುಟ್ಟಿದಂಥವೇ ಎನ್ನಬಹುದೇನೋ. ಆದ್ದರಿಂದ ಮಾನವ ಬದುಕಿನ ಗುರಿಯೂ ನಮ್ಮ ಆಲೋಚನೆಯ ಫಲವೇ. ಅಲ್ಲದೆ ಎಲ್ಲರೂ ಒಂದೇ ಬಗೆಯಲ್ಲಿ ಈ ಗುರಿಯನ್ನು ನಿರ್ದೇಶಿಸುವುದಿಲ್ಲ, ಅಥವಾ ಎಲ್ಲ ಮಾನವರ ಆದರ್ಶವೂ ಒಂದೇ ರೂಪದ್ದಲ್ಲ, ಏಕೆಂದರೆ ಇಡೀ ಮಾನವ ಕುಲದ ಆದರ್ಶ ಇಂಥದು ಎಂದು ಎಲ್ಲರ ಪರವಾಗಿ ಯಾರೋ ಒಬ್ಬ ಹೇಗೆ ನಿರ್ಧರಿಸಬಲ್ಲ? ಹಾಗೆಂದು ಎಷ್ಟು ಜನರಿದ್ದಾರೆಯೋ ಅಷ್ಟೊಂದು ಗುರಿಗಳಿರುವಂತೆ ನಮಗೆ ಕಾಣುವುದಿಲ್ಲ. ಯಾಕೆಂದರೆ ಎಲ್ಲರೂ ಆಳವಾಗಿಯೂ ಸೂಕ್ಷ್ಮವಾಗಿಯೂ ಆಲೋಚಿಸುವುದಿಲ್ಲವಲ್ಲ, ಅಥವಾ ಈ ಕುರಿತು ಆಲೋಚನೆಯನ್ನೇ ಮಾಡಲಾರರೇನೋ. ಹಾಗಾಗಿ ಯಾವನೋ ಆಳವಾಗಿ ಚಿಂತಿಸಿ ಒಂದು ನಿರ್ಧಾರಕ್ಕೆ ಬಂದು 'ಇದು ಮಾನವನ ಗುರಿ' ಎಂದು ಹೇಳಿ ಅದನ್ನು ಇತರರ ಬಳಿ ವಿವರಿಸಿದಾಗ ಅನೇಕರು ಅದರ ತಾರ್ಕಿಕತೆಯಿಂದಲೋ, ರೋಚಕತೆಯಿಂದಲೋ, ಅದು ನೀಡಬಹುದಾದ ಭರವಸೆಯಿಂದಲೋ ಪ್ರಭಾವಿತರಾಗಿ 'ಹೌದು, ಇದು ನಮ್ಮ ಆದರ್ಶ, ಇದನ್ನು ಸಾಧಿಸುವುದು ನಮ್ಮ ಬಾಳಿನ ಗುರಿ' ಎಂದು ಒಪ್ಪಬಹುದು. ಇಂಥ ಪ್ರಭಾವಶಾಲಿಗಳಾದ ಅನೇಕ ಚಿಂತಕರು ಬಂದು ಹೋಗಿರುವುದರಿಂದ ವಿವಿಧ ಬಣದವರಿಗೆ ವಿಭಿನ್ನ ಗುರಿಗಳು ಇರುವಂತೆ ನಂಬುತ್ತೇವೆ. ಜೀವನದ ಆತ್ಯಂತಿಕ ಗುರಿ ಯಾವುದು, ನಾವು ತಲುಪಬೇಕಾದ ಬಿಂದು ಯಾವುದು ಎಂದರೆ ಒಬ್ಬರು ಮೋಕ್ಷ ಎನ್ನಬಹುದು, ಮತ್ತೊಬ್ಬರು ನಿರ್ವಾಣ ಎನ್ನಬಹುದು, ಮಗುದೊಬ್ಬರು ಪ್ರಪತ್ತಿ ಎನ್ನಬಹುದು, ಇನ್ನೂ ಒಬ್ಬರು ಸಾಮರಸ್ಯ ಎನ್ನಬಹುದು. ಇಂಥ ಗುರಿಗಳನ್ನು ನಾವು ತಲುಪಬೇಕಾಗಿರುವುದು ಇಲ್ಲಿ ಬದುಕಿರುವಾಗಲೋ ಅಥವಾ ತೀರಿದ ಬಳಿಕವೋ ಎಂಬುದೂ ನಮ್ಮ ಮುಂದೆ ಏಳುವ ಪ್ರಶ್ನೆ. ಇಲ್ಲಿಯೇ ಇದನ್ನು ಸಾಧಿಸಬಹುದಾದರೆ, ಅದನ್ನು ತಲುಪಿದ್ದೇವೆ ಎಂದು ತೀರ್ಪು ಕೊಡುವವರು ಯಾರು? ಅಥವಾ ತೀರಿದ ಮೇಲೆ ಅದನ್ನು ತಲುಪಬಹುದೇ ಹೊರತು ಇರುವಾಗಲಲ್ಲ, ಬದುಕಿರುವಾಗ ಆ ಗುರಿ ತಲುಪಲು ಸಾಧನೆ ಮಾಡಬೇಕು ಎಂದು ಹೇಳಿದರೆ, ಅದನ್ನು ಒಬ್ಬ ಅಥವಾ ಒಂದು ಚೇತನ ತಲುಪಿದೆಯೋ ಇಲ್ಲವೋ ಎಂದು ನಿರ್ಧರಿಸುವುದು ಹೇಗೆ? ಆ ಬಗ್ಗೆ ಖಚಿತವಾಗಿ ನಮಗೆ ತಿಳಿವಳಿಕೆಯನ್ನು ಯಾರು ಕೊಡಬೇಕು?

ಬರೀ ಪ್ರಶ್ನೆಗಳು, ಪ್ರಾಯಶಃ ಬದುಕಿನ ಬಹು ಪ್ರಮುಖವಾದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳು ಮಾತ್ರ ಸಾಧ್ಯ, ಉತ್ತರ ನಮ್ಮ ಆಲೋಚನೆಗೆ ತಕ್ಕಂತೆ.

ಭಕ್ತಿ ಅಥವಾ ನಂಬಿಕೆಯೇ ಇವೆಲ್ಲ ಪ್ರಶ್ನೆಗಳನ್ನು ನಿವಾರಿಸಿಕೊಳ್ಳಲು ಭಾವುಕರು ಕಂಡುಕೊಂಡ ಮಾರ್ಗ, ಅದೇ ಎಲ್ಲ 'ಸಾಧನೆ'ಯ ನೆಲೆಗಟ್ಟು, ಅದಿಲ್ಲದಿದ್ದಲ್ಲಿ ಈ ಪರಿಯ ಗುರಿ ಎಂಬುದು ಇರಲು ಸಾಧ್ಯವಿಲ್ಲ. ಮಾನವನ ಬಾಳಿಗೆ ಗುರಿಯೊಂದಿದೆಯೆಂದು ಹೇಳುವವರೆಲ್ಲರಲ್ಲಿಯೂ ಆಯಾ ಗುರಿಯ ಬಗೆಗಿನ ನಂಬಿಕೆ ಸಮಾನ: ಆದರೆ ಬಾಳಿನ ಗುರಿ ಯಾವುದು ಎಂಬ ಬಗೆಗಿನ ತಿಳಿವಳಿಕೆಯ ವಿಭಿನ್ನತೆಯ ಕಾರಣದಿಂದ ಬೇರೆ ಬೇರೆ ಪಂಥಗಳವರು ಬೇರೆ ಬೇರೆ ಬಗೆಯಾಗಿ ಬದುಕಿನ ಗುರಿಯನ್ನು ಗುರುತಿಸುತ್ತಾರೆ.

ಈ ತಾತ್ವಿಕತೆಯ ಹಿನ್ನೆಲೆಯಲ್ಲಿ ನಾನು ಪಂಪನ 'ಆದಿಪುರಾಣ'ದ ಬಗ್ಗೆ ಪ್ರಸ್ತಾಪಿಸುತ್ತೇನೆ. ಪಂಪನ ಕಾಲ ಕ್ರಿ.ಶ. ಹತ್ತನೆಯ ಶತಮಾನ; ಕನಿಷ್ಠ ಪಕ್ಷ, ಕನ್ನಡ ನಾಡಿನ ಮಟ್ಟಿಗೆ, ನಂಬಿಕೆಗಳ ಪಲ್ಲಟದ ಕಾಲವೇನೋ. ಅದರಿಂದಾಗಿಯೇ ಪಂಪನ ತಂದೆ ಭೀಮಪಯ್ಯ ಬ್ರಾಹ್ಮಣನಾಗಿದ್ದವನು ಜೈನ ಮತಾವಲಂಬಿಯಾದ. ಪಂಪ ತನ್ನ ಸುಮಾರು ಮೂವತ್ತೊಂಬತ್ತು–ನಲವತ್ತರ ಪ್ರಾಯದಲ್ಲಿ ಮೊದಲ ಕಾವ್ಯವಾದ 'ಆದಿಪುರಾಣ'ವನ್ನು ಬರೆದ. ಅವನು ಆರಿಸಿಕೊಂಡದ್ದು ಇಪ್ಪತ್ತನಾಲ್ಕು ಮಂದಿ ತೀರ್ಥಂಕರರಲ್ಲಿ ಮೊದಲನೆಯವನಾದ ಆದಿದೇವ ಅಥವಾ ವೃಷಭನಾಥನ ಕಥಾನಕವನ್ನು. ಜೈನರಲ್ಲಿ ದೇವರ ಬಗ್ಗೆ ಶ್ರದ್ಧೆಯಿಲ್ಲ, ಸಾಧನೆಯಿಂದ ಆದರ್ಶವನ್ನು ತಲುಪಿದ ತೀರ್ಥಂಕರರು ಅವರಿಗೆ ಪೂಜ್ಯರು. ತೀರ್ಥಂಕರ ಎಂದರೆ ಬದುಕನ್ನು ಪವಿತ್ರ ತೀರ್ಥವನ್ನಾಗಿ ಮಾಡಿಕೊಂಡವನು. ದೇಹ ಮತ್ತು ಮನಸ್ಸುಗಳನ್ನು ಶುಭ್ರಗೊಳಸಿ ಬಾಳನ್ನು ಉನ್ನತಿಗೇರಿಸಿಕೊಂಡವನು. ಅಂತಹವನ ಬಗ್ಗೆ ತನ್ನ ಕಾವ್ಯವಿದ್ದರೂ ಪಂಪ ಮೂಲತಃ ಒಬ್ಬ ಕವಿ, ಹೀಗಾಗಿ ಅವನು ಈ ಕಾವ್ಯವನ್ನು ರಚಿಸಿದ್ದು ಇಬ್ಬಗೆಯ ಗುರಿಗಳ ಸಾಧನೆಗಾಗಿ. ಅವನೇ ಹೇಳಿಕೊಳ್ಳುತ್ತಾನೆ

**ಇದುವೆ ಸುಕವಿಪ್ರಮೋದ**
**ಪ್ರದಂ ಇದುವೆ ಸಮಸ್ತ ಭವ್ಯಲೋಪ್ರಮದ**
**ಪ್ರದಂ ಎನೆ ನೆಗಟ್ದಿ ಆದಿಪುರಾ**
**ಣದೊಳ್ ಅಜಿವುದು ಕಾವ್ಯಧರ್ಮಮಂ ಧರ್ಮಮುಮಂ**

ಎಂದು. ತನ್ನ ರಚನೆಯು ಕವಿಹೃದಯದ ಜನರಿಗೂ ಭವ್ಯಜನ ಅಂದರೆ ಜೈನರಿಗೂ ಸಂತೋಷ ತರುತ್ತದೆ ಎಂಬವುದು ಅವನ ವಿಶ್ವಾಸ. ಪಂಪನದೇ ಆಯ್ಕೆಯೆಂದರೆ, ತನ್ನ ಕಾವ್ಯವು ಕವಿಹೃದಯದವರಿಗೆ ಸಂತೋಷವುಂಟುಮಾಡವುದು ಮೊದಲ ಗುರಿ, ಜೈನರಿಗೆ ಸಂತೋಷಕರವಾಗಬೇಕಾದುದಕ್ಕೆ ಎರಡನೆಯ ಸ್ಥಾನ. ಏಕೆಂದರೆ

ತನ್ನ ಕಾವ್ಯದಲ್ಲಿ ಓದುಗರು ಅರಿಯಬೇಕಾದುದು ಕಾವ್ಯಧರ್ಮವನ್ನು, ಜೊತೆಗೆ ಧರ್ಮವನ್ನೂ. ಆದರೆ ಈ ಎರಡರ ನಡುವಣ ವ್ಯತ್ಯಾಸವೇನು ಎಂಬುದನ್ನು ಕವಿ ಸ್ಪಷ್ಟಪಡಿಸುವುದಿಲ್ಲ. ಆದರೆ ನಾವು ಅದನ್ನು ಅರ್ಥವಿಸಬೇಕಾಗುತ್ತದೆ; ಇಲ್ಲದಿದ್ದರೆ ಕವಿಯ ಆಶಯವನ್ನು ತಿಳಿಯಲು ಸಾಧ್ಯವಿಲ್ಲ. ತೀರ್ಥಂಕರನ ಚರಿತೆಯನ್ನು ಜೈನಮತದ ಚೌಕಟ್ಟು ಮತ್ತು ಪರಿಭಾಷೆಯ ಹಿನ್ನೆಲೆಯಲ್ಲಿ ನಿರೂಪಿಸಿದ್ದರೂ, ಅದು ಮತಧರ್ಮಾತೀತವಾಗಿ ಎಲ್ಲ ಕವಿಮನೋಭಾವದವರಿಗೆ ಸಂತೋಷ ತರಬೇಕು ಎಂಬುದು ಕವಿಯ ಆಶಯ. ಹಾಗಾದರೆ ಕಾವ್ಯಧರ್ಮ ಎಂದರೇನು? ಇದೂ ವ್ಯಾಖ್ಯಾನಕ್ಕೆ ಬಿಟ್ಟ ವಿಚಾರ. ಹಾಗಾಗಿ ಅದಕ್ಕೆ ನನ್ನದೇ ಅರ್ಥವನ್ನು ನೀಡಿ ಮುಂದುವರಿಯಬೇಕು. ನನ್ನ ಪ್ರಕಾರ, ಬದುಕಿನ ನಿಗೂಢಗಳನ್ನು ವೈಯಕ್ತಿಕ ಅನುಭವದ ಮೂಲಕ ಶೋಧಿಸುವುದೇ ಕಾವ್ಯದ ಕೆಲಸ. ಹಾಗಾಗಿ ಬದುಕು ಒಂದೆಡೆ ಜೈನಮತದ ಪಾರಂಪರಿಕ ಕಲ್ಪನೆಯ ಪ್ರಕಾರ ಹೇಗೆ ಸಾರ್ಥಕವಾಗುತ್ತದೆ ಎಂಬುದನ್ನು ಹೇಳುವುದರ ಜೊತೆಗೆ, ಎಲ್ಲ ಮಾನವರಿಗೂ ಅನ್ವಯಿಸುವಂತೆ ಬದುಕಿನ ಸಾರ್ಥಕ್ಯದ ಸ್ವರೂಪವೇನು ಎಂಬುದನ್ನು ತನ್ನ ತಿಳಿವಳಿಕೆ ಮತ್ತು ಅನುಭವಗಳ ಹಿನ್ನೆಲೆಯಲ್ಲಿ ಶೋಧಿಸುವುದು ಈ ರಚನೆಯ ಹಿಂದಿರುವ ಕವಿಯ ಮೂಲ ಆಶಯ.

'ಆದಿಪುರಾಣ'ದಲ್ಲಿ ಮೂರು ಭಾಗಗಳಿವೆ: ನಡುವಿನದು ತೀರ್ಥಂಕರ ಜನ್ಮದ ಕಥಾನಕ; ಅದು ಜೈನಕಲ್ಪನೆಯಂತೆ ಗರ್ಭಾವತರಣ, ಜನನ, ಪರಿನಿಷ್ಕ್ರಮಣ, ಕೇವಲಜ್ಞಾನ ಮತ್ತು ಪರಿನಿರ್ವಾಣಗಳೆಂಬ ಐದು ಹಂತಗಳ ಮೂಲಕ (ಇದನ್ನು 'ಪಂಚಕಲ್ಯಾಣ'ಗಳೆಂದು ಕರೆಯುತ್ತಾರೆ) ನಿರೂಪಿತವಾಗಿದ್ದರೆ; ಮೊದಲಿನ ಭಾಗ ಅವನ ಹಿಂದಿನ ಹತ್ತು ಜನ್ಮಗಳ ಅಥವಾ ಭವಾವಳಿಯ ಕತೆ; ಮೂರನೆಯದು, ಅವನ ಮುಂದಿನ ಪೀಳಿಗೆಯಾದ ಅವನ ಮಕ್ಕಳ ಕತೆ. ಈ ಮೂಲಕ ಇಡೀ ಕಥಾನಕಕ್ಕೆ ಒಂದು ಏಕಕೇಂದ್ರ ಲಭ್ಯವಾಗುತ್ತದೆ. ಎಲ್ಲವನ್ನೂ ಒಟ್ಟಾರೆ ಪರಿಭಾವಿಸಿದಾಗ, ಇಲ್ಲಿನ ಜನ್ಮಾಂತರದ ಕತೆಗಳು ಒಬ್ಬನೇ ವ್ಯಕ್ತಿಯ ಬೆಳವಣಿಗೆಯ ವಿವಿಧ ಹಂತಗಳನ್ನು ಸೂಚಿಸುತ್ತದೆ, ಅವನ ಮಕ್ಕಳ ಕತೆ ಅವನ ವ್ಯಕ್ತಿತ್ವದ ಮತ್ತೊಂದು ವಲಯದ ಅಭಿವ್ಯಕ್ತಿಯಾಗುತ್ತದೆ. ಹೀಗಾಗಿ ಇದು ವ್ಯಕ್ತಿತ್ವವಿಕಾಸದ ಕತೆ. ಋಷಭನಾಥನಿಗೆ ನೇರವಾಗಿ ಸಂಬಂಧಿಸಿದ ಮೊದಲೆರಡು ಭಾಗಗಳು ಭೋಗನಿರಸನವನ್ನೂ, ಅವನ ಮಕ್ಕಳಿಗೆ ಸಂಬಂಧಿಸಿದ ಮೂರನೆಯ ಭಾಗವು ಅಹಂಕಾರನಿರಸನವನ್ನೂ ಸೂಚಿಸುತ್ತದೆ ಎಂದು ವಿಮರ್ಶಕರು ಈಗಾಗಲೇ ಗುರುತಿಸಿದ್ದಾರೆ. ಅದು ಸರಿಯೇ. ವ್ಯಕ್ತಿಯ ವ್ಯಕ್ತಿತ್ವದ ವಿಕಸನ ಎಂದರೆ ಭೋಗ-ಅಹಂಕಾರಗಳನ್ನು ದೂರೀಕರಿಸುವುದೇ ಆಗಿದೆ. ಹಾಗೆ ಸಂಪೂರ್ಣವಾಗಿ ಮಾಡುವುದರ ಮೂಲಕವಾಗಿಯೇ ತೀರ್ಥಂಕರ

ಚೇತನವು ತನ್ನ ಬದುಕನ್ನು ತೊಳೆದು ಪವಿತ್ರವನ್ನಾಗಿ ಮಾಡುತ್ತದೆ. ಕವಿಯ ಆಶಯವೂ ಇದೇ ಅಗಿದೆ: ತೀರ್ಥಂಕರನ ಬಾಳು ಎಂದರೆ ಕೇವಲ ಜೈನ ಪರಿಕಲ್ಪನೆಗೆ ಅನುಗುಣವಾಗಿರುವುದು ಮಾತ್ರವಲ್ಲದೆ, ಜೈನ ಆವರಣವನ್ನು ಕಳಚಿದರೆ ಋಷಭನಾಥನ ಬದುಕು ಒಟ್ಟಾರೆ ಮನುಷ್ಯನ ಬದುಕು ಸಾರ್ಥಕವಾಗುವುದರ ಪರಿಯನ್ನು ಸಂಕೇತಿಸುತ್ತದೆ ಎಂಬುದು. ಇದೇ ಪ್ರಾಯಶಃ ಪಂಪನ ಮನಸ್ಸಿನಲ್ಲಿದ್ದ ಕಾವ್ಯಧರ್ಮದ ಸ್ವರೂಪ.

ಜಯವರ್ಮನೆಂಬುವನು ಮಹಾಬಳ, ಲಲಿತಾಂಗ, ವಜ್ರಜಂಘ, ಆರ್ಯ, ಶ್ರೀಧರದೇವ, ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ, ಅಹಮಿಂದ್ರ – ಈ ಜನ್ಮಗಳನ್ನು ಪೂರೈಸಿ ಹತ್ತನೆಯ ಜನ್ಮದಲ್ಲಿ ಆದಿನಾಥ ಹುಟ್ಟುತ್ತಾನೆ. ಇವರೆಲ್ಲ ರಾಜರು, ಚಕ್ರವರ್ತಿಗಳು, ಅಷ್ಟೇ ಅಲ್ಲ, ಅವರ ವಾಸ ವಿವಿಧ ದೇವಲೋಕಗಳಲ್ಲಿ, ಎಲ್ಲ ಬಗೆಯ ಭೋಗಸುಖಗಳನ್ನು ಯಥೇಚ್ಛವಾಗಿ ಸವಿಯುವವರು. ಜನ್ಮದಿಂದ ಜನ್ಮಕ್ಕೆ ಭೋಗಲಾಲಸೆಯ ತೀವ್ರತೆಯು ಕಡಿಮೆಗೊಳ್ಳುವ ಪ್ರಕ್ರಿಯೆಯ ಮೂಲಕ ಇದರ ಅಶಾಶ್ವತತೆಯನ್ನೂ ಅಸಾರ್ಥಕತೆಯನ್ನೂ ಚಿತ್ರಿಸುವುದು ಇಲ್ಲಿನ ಪರಿ. ಹಾಗೆ ನೋಡಿದರೆ, ತೀರ್ಥಂಕರನ ಕಥೆಯು ಚಿತ್ರಣಗೊಳ್ಳುವ ಐದು ಹಂತಗಳು ಎಲ್ಲರ ಬದುಕಿನಲ್ಲೂ ಇರುವ ಹಂತಗಳೇ. ಜೀವ ಗರ್ಭದಲ್ಲಿ ಸೇರುವುದು, ಹುಟ್ಟು, ಒಂದು ಸನ್ನಿವೇಶದಲ್ಲಿ ಬದುಕಿನ ನಶ್ವರತೆಯ ಬಗ್ಗೆ ಬರಬಹುದಾದ ತಿಳಿವು, ವ್ಯಕ್ತಿಯ ಅಸಹಾಯಕತೆಯ ಪರಿಜ್ಞಾನ ಮತ್ತು ಸಾವು – ಇವೆಲ್ಲ ಎಲ್ಲರಿಗೂ ಇದ್ದದ್ದೇ. ಏರುಂಜವ್ವನದಲ್ಲಿರುವ ಭೋಗಪ್ರಿಯತೆ ವಯಸ್ಸಾದಂತೆ ತಾನಾಗಿ ಕಡಿಮೆಯಾಗುವುದು, ಇಂದ್ರಿಯಗಳ ಪಟುತ್ವ ಮೊನಚನ್ನು ಕಳೆದುಕೊಳ್ಳುವುದು ಇವೆಲ್ಲ ಎಲ್ಲರ ಬದುಕಿನ ವಿವಿಧ ಮಜಲುಗಳೇ. ಆದರೆ ತೀರ್ಥಂಕರನ ಸತ್ವ ದೊಡ್ಡದು, ಮತ್ತು ಅರಿವಿನ ಹಿನ್ನೆಲೆಯಲ್ಲಿ ಅದನ್ನು ಸಾಧಿಸಲು ಪ್ರಯತ್ನಿಸುವುದು – ಇದರಿಂದಾಗಿ ಅದು ಭಿನ್ನವಾಗುತ್ತದೆ. ಹತ್ತು ಜನ್ಮಗಳಲ್ಲಿ ಭೋಗಲಾಲಸೆಯು, ದೊಡ್ಡ ವಿಚಾರಗಳು ಕಿವಿಯ ಮೇಲೆ ಬೀಳುವ ಮೂಲಕ ಉಂಟಾಗುವ, ತಿಳಿವಳಿಕೆಯ ಕಾರಣದಿಂದಾಗಿ ಕಡಿಮೆಯಾಗುತ್ತ ಹೋಗುವ ಮತ್ತು ಅದರ ಸ್ವರೂಪ ಬದಲಾವಣೆಗೊಳ್ಳುವ ಸೂಕ್ಷ್ಮತೆಗಳು ಪಂಪನ ನಿರೂಪಣೆಯ ಹೈಲೈಟ್‌ಗಳು.

ಇದನ್ನು ಭೋಗನಿರಸನದ ಪ್ರಕ್ರಿಯೆಯ ಮೂರು ಮಜಲುಗಳನ್ನು ಪರಿಶೀಲಿಸುವ ಮೂಲಕ ತಿಳಿಯಬಹುದು. ಮೊದಲನೆಯ ಹಂತ ಮಹಾಬಳನದು: ಅವನ ಭೋಗಾಪೇಕ್ಷೆಯ ತೀವ್ರತೆ ಎಷ್ಟೆಂದರೆ ವಯಸ್ಸಾದರೂ ಅವನ ಲಾಂಪಟ್ಯ ಕಡಿಮೆಯಾಗದ ಪ್ರಮಾಣದ್ದು. ಅವನ ಅಮಾತ್ಯರಲ್ಲೊಬ್ಬನಾದ ಸ್ವಯಂಬುದ್ಧ ಎನ್ನುವವನು ತನ್ನ ರಾಜ ಇಳಿವಯಸ್ಸಿನಲ್ಲಿಯೂ ಹೊಂದಿದ್ದ ಲಾಂಪಟ್ಯವನ್ನು

ಕಂಡು ಈ ರೀತಿ ಕಳವಳ–ಅಚ್ಚರಿಗಳಿಗೊಳಗಾಗುತ್ತಾನೆ:

**ಮುಸು ಮುತ್ತಂತೆ ತೆರಳ್ದ ತನ್ನ ಮೊಗಂ ಕಂಡಳ್ಕನೋ ಕೂಡೆ ಜೋ**
**ಲ್ದು ಸಡಿಲ್ದಿರ್ದ ಒಡಲ ಅಳ್ಳೆತನಮಂ ಕಾಣನೋ ಸಂತತ**
**ವ್ಯಸನೋದ್ರೇಕದ ಕುಂದಂ ಏನೊಣರನೋ ಶಕ್ತಿಕ್ಷಯಂ ಕಾಣನೋ**
**ಬಿಸುಡಂ ಮುನ್ನಿನ ತನ್ನ ಲಂಪಳಿಕೆಯಂ ಮತ್ತಂ ಜರಾಜರ್ಜರಂ**

(ಮುದಿತನದಿಂದ ಮುದ್ದೆಯಾಗಿ ಕಪಿಯದರಂತೆ ಕಾಣುವ ತನ್ನ ಮುಖವನ್ನು ಕಂಡೂ ಅಳುಕನಲ್ಲ! ಜೋತುಬಿದ್ದಿರುವ ತನ್ನ ಮೈಯ ಅಳ್ಳೆಗಳ ಟೊಳ್ಳುತನವನ್ನು ಗಮನಿಸದೆ ಇರುವನಲ್ಲ! ವ್ಯಸನೋದ್ರೇಕದಿಂದ ಆದ ಕುಂದನ್ನು ಅವನು ಕಾಣನೇ! ಶಕ್ತಿಯು ಕಡಿಮೆಯಾಗಿರುವುದನ್ನು ಅನುಭವಿಸನೇ! ಮುಪ್ಪಿನಿಂದ ತರತರಿಸುತ್ತಿದ್ದರೂ ಲಂಪಟತೆಯನ್ನು ಮಾತ್ರ ಬಿಡನಲ್ಲ!)

ಮಹಾಬಳನ ಈ ಸಾಮಾನ್ಯ ಭೋಗಾಪೇಕ್ಷೆಯು ಸ್ವಲ್ಪ ಉತ್ತಮಗೊಂಡು ಮುಂದಿನ ಲಲಿತಾಂಗನ ಜನ್ಮದಲ್ಲಿ ಮನಃಪ್ರಿಯೆಯಾದ ಸ್ವಯಂಪ್ರಭೆಯಲ್ಲಿನ ತೀವ್ರಾನುರಕ್ತಿಯಾಗಿ ಮಾರ್ಪಡುತ್ತದೆ. ದೀರ್ಘಕಾಲ ದೇವಲೋಕದಲ್ಲಿ ಅವಳೊಡನೆ ಲೈಂಗಿಕಸುಖವನ್ನು ಅನುಭವಿಸಿದ ಬಳಿಕ ಅವನಿಗೆ ಸ್ವರ್ಗಚ್ಯುತಿಯಾಗುವ ಕಾಲ ಸನ್ನಿಹಿತವಾಗುತ್ತದೆ. ಆಗ ಅವನು ತನ್ನ ಸುಖವು ಕೊನೆಗೊಳ್ಳುವುದಲ್ಲ ಎಂಬ ಅಳಲಿನಿಂದ ಈ ರೀತಿ ಪ್ರಲಾಪಿಸುತ್ತಾನೆ:

**ಸಂತಸದ ಅಂತವನೆಯ್ದಿ ಸುರತಾಮೃತದೊಳ್ ತಣಿದು ಅಟ್ಟಿಂ ಜಿಗಿ**
**ಲ್ದಂತಿರೆ ಪತ್ತಿ ಮೆಯ್ಗಳ್ ಎರಡಾದೊಡಂ ಏನಸುವೊಂದೇ ನೊಟಿಕ್ಕೊಡೆ**
**ಎಂಬಂತಿರೆ ಕೂಡಿ ನಿನ್ನೊಡನೆ ಭೋಗಿಸಲೀಯದೆ ಕೆಮ್ಮನೆ ಎನ್ನಂ ಉಯ್ವ**
**ಅಂತಕನೆಂಬ ಬೂತನೆಲೆ ಮಾಣಿಸಲಾಗದೇ ಪೇಟಿಬ್ ಸ್ವಯಂಪ್ರಭೇ**

(ಸುರತಸುಖದಲ್ಲಿ ಸಂತೋಷದ ತುತ್ತತುದಿಯನ್ನು ಮುಟ್ಟಿ ನಮ್ಮ ಮನಸ್ಸುಗಳು ತಣಿದು, ದೇಹಗಳು ಎರಡಾದರೂ ಪ್ರಾಣ ಒಂದೇ ಎಂಬ ರೀತಿಯಲ್ಲಿ ಅವು ಒಂದರೊಡನೊಂದು ಬೆಸೆದುಕೊಂಡಿವೆ ಎಂಬಂತೆ ನಿನ್ನೊಡನೆ ಭೋಗಿಸಲು ಅವಕಾಶವೀಯದೆ ಯಮನೆಂಬ ಭೂತವು ಎಳೆದೊಯ್ಯುತ್ತಿರುವಾಗ ನಿನಗೆ ನನ್ನನ್ನು ಬಿಡಿಸಲಾಗದೆ ಸ್ವಯಂಪ್ರಭೇ!)

ಅವನಂತೆಯೇ ಅವನ ನಲ್ಲೆ ಸ್ವಯಂಪ್ರಭೆ ಅವನ ಬಗ್ಗೆ ಇಟ್ಟಿರುವಪ್ರೀತಿಯೂ. ಲಲಿತಾಂಗ–ಸ್ವಯಂಪ್ರಭೆಯರ ಅನುರಾಗ ಎಷ್ಟು ತೀವ್ರವೆಂದರೆ ಅದು ಮುಂದಿನ ಜನ್ಮದಲ್ಲಿಯೂ ಮುಂದುವರಿಯುತ್ತದೆ. ಬೇರೆ ಬೇರೆ ಕಡೆಗಳಲ್ಲಿ ಅವರು ವಜ್ರಜಂಘ ಮತ್ತು ಶ್ರೀಮತಿಯರಾಗಿ ಹುಟ್ಟುತ್ತಾರೆ. ಪ್ರಾಪ್ತವಯಸ್ಕರಾಗುತ್ತಾರೆ. ಆದರೆ ಅವರಿಬ್ಬರನ್ನೂ ಹಿಂದಿನ ಜನ್ಮದ ನೆನಪು ಕಾಡುತ್ತದೆ. ಶ್ರೀಮತಿ ತನ್ನ ಪೂರ್ವಜನ್ಮದ

ನೆನಪಿನಿಂದಲೇ ವಜ್ರಜಂಘನ ಚಿತ್ರವನ್ನು ಬರೆಯುತ್ತಾಳೆ, ಅದರಿಂದಾಗಿ ಅವರಿಬ್ಬರೂ ಮತ್ತೆ ಒಂದಾಗುವಂತಾಗುತ್ತದೆ. ಆ ಬಳಿಕ ಅವರಿಬ್ಬರೂ ಗಾಢ ಪ್ರೇಮದಿಂದ ಕೆಲಕಾಲ ಬಾಳುತ್ತಾರೆ. ಒಂದು ರಾತ್ರಿ ಅವರ ಮಲಗುವ ಮನೆಯನ್ನು ಸಿದ್ಧಪಡಿಸಿದ ಸೇವಕನು ಕೃಷ್ಣಾಗುರುವಿನ ಧೂಪವನ್ನು ಕೆಂಡದಲ್ಲಿ ಹಾಕಿ ಗವಾಕ್ಷಿಯನ್ನು ತೆರೆಯುವುದನ್ನು ಮರೆತು ಹೋಗುತ್ತಾನೆ. ಗಂಡಹೆಂಡಿರಿಬ್ಬರೂ ಒಳಬಂದು ಅಪ್ಪಿಕೊಂಡು ಮಲಗುತ್ತಾರೆ. ಒಳಗೆ ಕೃಷ್ಣೋರಗನಂತೆ ಅಗರುವಿನ ಹೊಗೆ ಎಲ್ಲೆಡೆ ಆವರಿಸಿ ಅವರಿಬ್ಬರೂ ನಿದ್ರಾಪರವಶರಾಗಿರುವಾಗ ಉಸಿರುಕಟ್ಟಿ ಅಪ್ಪಿಕೊಂಡಿರುವಂತೆಯೇ ಸಾಯುತ್ತಾರೆ. ಆ ದೃಶ್ಯವನ್ನು ಕವಿ ಹೀಗೆ ವರ್ಣಿಸಿ ಉದ್ಗರಿಸುತ್ತಾನೆ:

**ಬಿಡದೆ ಪೊಗೆ ಸುತ್ತೆ ತೋಳಂ**
**ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮಂ ಅಂದು**
**ಒಡಗಳೆದರ್ ಓಪರ್ ಓಪರೊಳ್**
**ಒಡಸಾಯಲ್ ಪಡೆದರ್ ಇನ್ನವೇಂ ಸಯ್ಪು ಒಳವೇ**

(ದಟ್ಟವಾಗಿ ಅಗರುವಿನ ಹೊಗೆ ಅವರಿಸಿ ಆ ಪ್ರಾಣವಲ್ಲಭರು ಜೊತೆಗೆ ಅಪ್ಪುಗೆಯಲ್ಲಿಯೇ ಸತ್ತರು. ಅದಕ್ಕಿಂತ ಪುಣ್ಯವಿನ್ನೇನಿದೆ!)

ಮೊದಲು ಕೇವಲ ಲೈಂಗಿಕ ಅಪೇಕ್ಷೆಯಾಗಿದ್ದುದು ಜನ್ಮಾಂತರದಲ್ಲಿ ಕ್ರಮೇಣ ಅನುರಾಗವಾಗಿ ಗಾಢ ಪ್ರೇಮವಾಗಿ ಮಾರ್ಪಟ್ಟಿದೆ. ಹೀಗೆ ಭವಾವಳಿಯು ಮುಂದುವರಿದು ಹತ್ತನೆಯ ಜನ್ಮದಲ್ಲಿ ಈ ಚೇತನ ನಾಭಿರಾಜ–ಮರುತಾದೇವಿಯರ ಮಗ ಆದಿನಾಥ ಅಥವಾ ಋಷಭನಾಗಿ ಜನ್ಮ ತಳೆಯುತ್ತದೆ. ಇದು ಎಲ್ಲರಂತಹ ಮನುಷ್ಯ ಜನ್ಮವೇ, ಹೊರಗೆ ನೋಡಲು. ಆದರೆ ಒಳಗೆ ಪಕ್ವತೆಯನ್ನು ಪಡೆದಂತಹುದು. ಈ ಜನ್ಮದಲ್ಲಿಯೂ ಅವನು ಯಥಾಪ್ರಕಾರವೇ ಬೆಳೆಯುತ್ತಾನೆ. ಅವನಿಗೆ ಯೌವನೋದಯವಾಗುತ್ತದೆ, ಮಗನಿಗೆ ಮದುವೆ ಮಾಡುವ ಅಪೇಕ್ಷೆ ತಂದೆತಾಯಿಗಳಿಗೆ. ಅವನ್ನು ಕೂಡಿಸಿಕೊಂಡು ತಂದೆ ಹೀಗೆ ಕೇಳಿಕೊಳ್ಳುತ್ತಾನೆ:

**ಶಾಂತಾತ್ಮಾ ಮದುವೆ ನಿಲ್ ನೀಂ**
**ಇಂತೆನ್ನ ಗೃಹಸ್ಥಧರ್ಮದಿಂದಂ ನೀನೆಂ**
**ತಂತೆ ಸಲೆ ನೆಗಟ್ದಿ ಜಗತೀ**
**ಸಂತತಿ ನಿಲೆ ನಿನ್ನ ಧರ್ಮಸಂತತಿ ನಿಲ್ಗುಂ**

(ಶಾಂತಾತ್ಮನೇ ಮದುವೆಯಾಗು. ನನ್ನ ಹಾಗೆ ನೀನೂ ಗೃಹಸ್ಥಧರ್ಮವನ್ನು ಅನುಸರಿಸಿದರೆ ಜಗತ್ತಿಗೂ ಸಂತತಿಯು ನಿಲ್ಲುತ್ತದೆ, ನಿನ್ನ ಧರ್ಮಸಂತತಿಯೂ ನಿಲ್ಲುತ್ತದೆ). ಅದಕ್ಕನುಗುಣವಾಗಿ ಆದಿನಾಥ ಮದುವೆಯಾಗುತ್ತಾನೆ. ಈಗ ಅವನಲ್ಲಿ

ಭೋಗಾಪೇಕ್ಷೆಯೂ ಇಲ್ಲ, ಅನುರಾಗವೂ ಇಲ್ಲ, ಅವನು ಮದುವೆಯಾಗುವುದು ಗೃಹಸ್ಥಧರ್ಮಪಾಲನೆಗಾಗಿ ಮಾತ್ರ, ಮುಂದೆ ಅವನು ಅರಮನೆಯಲ್ಲಿ ನಡೆಯುವ ನೀಲಾಂಜನೆ ಎಂಬುವವಳ ನೃತ್ಯವನ್ನು ನೋಡುತ್ತಿರುವಾಗ, ಅವಳು ನರ್ತಿಸುತ್ತಲೇ ಬಿದ್ದು ಸಾಯುತ್ತಾಳೆ, ಇಂದ್ರ ರಸಭಂಗವಾಗದಿರಲೆಂದು ಯಾರಿಗೂ ತಿಳಿಯದಂತೆ ಅವಳಂತೆಯೇ ಮತ್ತೊಬ್ಬಳನ್ನು ಕ್ಷಣಾರ್ಧದಲ್ಲಿ ಸೃಷ್ಟಿಸಿ ನೃತ್ಯ ಮುಂದುವರಿಯುವಂತೆ ಮಾಡುತ್ತಾನೆ. ಈ ಬದಲು ಬೇರಾರಿಗೂ ತಿಳಿಯದಿದ್ದರೂ ಆದಿನಾಥನ ಸೂಕ್ಷ್ಮತೆಯಿಂದ ಅವನ ಅರಿವಿಗೆ ಬಂದು, ಅವನ ಪಕ್ವ ಜೀವದಲ್ಲಿ ಮಡುಗಟ್ಟಿದ್ದ ವೈರಾಗ್ಯಪರತೆಯು ಹೊರಬರಲು ನೆಪವಾಗುತ್ತದೆ. ಅವನು ದೀಕ್ಷೆ ವಹಿಸಿ ತಪಸ್ಸಿಗೆ ತೆರಳುತ್ತಾನೆ.

ಹೀಗೆ ಜನ್ಮಾಂತರಗಳ ಚಿತ್ರಣದ ಮೂಲಕ ಭೋಗನಿರಸನವನ್ನು ನಿರೂಪಿಸುವ ಕವಿಯು ಮುಂದೆ ಅವನ ಮಕ್ಕಳೇ ಆದ ಭರತ ಮತ್ತು ಬಾಹುಬಲಿಗಳು ರಾಜ್ಯಕ್ಕಾಗಿ ಹೋರಾಡುವ ಪ್ರಸಂಗವನ್ನು ಚಿತ್ರಿಸುವ ಮೂಲಕ ಅಹಂಕಾರದ ಎರಡು ಮಗ್ಗುಲುಗಳನ್ನು ನಮ್ಮ ಮುಂದಿಡುತ್ತಾನೆ. ಹಿರಿಯನೆಂಬ ಕಾರಣದಿಂದ ಚಕ್ರವರ್ತಿಯಾದ ಅಣ್ಣ ಭರತನ ದಬ್ಬಾಳಿಕೆಯನ್ನು ತಮ್ಮ ಬಾಹುಬಲಿ ಪ್ರತಿಭಟಿಸಿ ಅವನೊಡನೆ ಯುದ್ಧಕ್ಕೆ ನಿಲ್ಲುತ್ತಾನೆ. ತಿಳಿವಳಿಕಸ್ಥರು ಅವರಿಗೆ ಸಾಮಾನ್ಯ ಯುದ್ಧವನ್ನು ಬಿಟ್ಟು ಪರಸ್ಪರ ಬಲಪ್ರದರ್ಶನಕ್ಕೆ ಏರ್ಪಾಟು ಮಾಡುತ್ತಾರೆ. ದೃಷ್ಟಿಯುದ್ಧ, ಜಲಯುದ್ಧ ಮತ್ತು ಮುಷ್ಟಿಯುದ್ಧ – ಈ ಮೂರರಲ್ಲಿಯೂ ಹೆಚ್ಚು ಎತ್ತರವಾಗಿದ್ದ ತಮ್ಮನಾದ ಬಾಹುಬಲಿ ಅಣ್ಣನನ್ನು ಮಣಿಸುತ್ತಾನೆ. ತೀವ್ರ ಅವಮಾನ, ಆಕ್ರೋಶಗಳಿಂದ ಕೂಡಿದ ಭರತ ತಮ್ಮನನ್ನು ಕೊಲ್ಲಲು ಸಿದ್ಧನಾಗುತ್ತಾನೆ. ಈ ಇಡೀ ಬೆಳವಣಿಗೆಯು ಬಾಹುಬಲಿಯಲ್ಲಿ ಐಹಿಕತೆಯ ಬಗ್ಗೆ ತೀವ್ರ ಜಿಹಾಸೆ ತಳೆಯುವಂತೆ ಮಾಡುತ್ತದೆ. ತಾನು ಯುದ್ಧದಲ್ಲಿ ಗೆದ್ದ ರಾಜ್ಯವನ್ನು ಅಣ್ಣನಿಗೇ ಕೊಟ್ಟು ಹೇಳುವ ಮಾತುಗಳಿವು:

**ನೆಲಸುಗೆ ನಿನ್ನ ವಕ್ಷದೊಳೆ ನಿಚ್ಚಳಂ ಈ ಭಟಖಡ್ಗಮಂಡಲೋ**
**ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ**
**ವಲಯಮಂ ಅಯ್ಯನಿತ್ತುದುಮಂ ಆಂ ನಿನಗಿತ್ತೆಂ ಇದೇವುದಣ್ಣ ನೀನ್**
**ಒಲಿದ ಲತಾಂಗಿಗಂ ಧರೆಗಂ ಆಟಿಸಿದಂದು ನೆಗಟ್ಟೆ ಮಾಸದೇ**

(ಸೈನಿಕರ ಖಡ್ಗಸಮೂಹವೆಂಬ ನೈದಿಲೆಗಳ ಸರೋವರದಲ್ಲಿ ಸುಳಿದಾಡುವ ದುಂಬಿಯಂತಹ ರಾಜ್ಯಲಕ್ಷ್ಮಿಯು ನಿನ್ನ ಎದೆಯಲ್ಲಿಯೇ ಶಾಶ್ವತವಾಗಿ ನೆಲಸಲಿ. ಇದರಿಂದ ಏನಾದೀತು! ಅಲ್ಲದೆ, ಅಣ್ಣನಾದ ನೀನು ಒಲಿದ ಹೆಣ್ಣಿಗಾಗಲೀ ಮಣ್ಣಿಗಾಗಲೀ ಆಸೆಪಟ್ಟರೆ ನನಗೆ ಕೆಟ್ಟ ಹೆಸರು ಬಾರದೇ). ಆ ಬಳಿಕ ಅವನು ತಪಸ್ಸಿಗೆ ತೆರಳುತ್ತಾನೆ. ಭರತ ಚಕ್ರವರ್ತಿಯಾಗಿ ಮುಂದುವರಿದರೂ ಕ್ರಮೇಣ

ಅವನೂ ಪಕ್ವಗೊಳ್ಳುತ್ತಾನೆ. ಈ ಅಣ್ಣತಮ್ಮದಿರ ಮೂಲಕ ಕವಿ ಅಹಂಕಾರದ ಎರಡು ಮಗ್ಗುಲುಗಳ ಪರಿಚಯ ಮಾಡಿಸುತ್ತಿದ್ದಾನೆ. ಇಬ್ಬರೂ ಒಬ್ಬನ ಮಕ್ಕಳು. ಭರತನ ಅಹಂಕಾರದ ಸ್ವರೂಪವು ಮಿಕ್ಕವರನ್ನೆಲ್ಲ ಗೆದ್ದು ತನ್ನ ಹಿರಿಮೆಯನ್ನು ಸ್ಥಾಪಿಸಬೇಕೆಂಬ ಬಗೆಯದಾದದರೆ, ಬಾಹುಬಲಿಯದು ಯಾರಿಗೂ ಬಾಗೆನೆಂಬ ಸ್ವಾಭಿಮಾನಸ್ವರೂಪದ್ದು. ಒಂದು ಎಲ್ಲರ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುವ ಬಗೆಯದಾದರೆ, ಮತ್ತೊಂದು ತನ್ನತನವನ್ನು ಬಲಿಗೊಡದೆ ಎಲ್ಲರಿಗಿಂತ ತಾನು ಭಿನ್ನ ಹಾಗೂ ಮಿಗಿಲು ಎಂಬುದನ್ನು ತೋರಿಸುವುದು. ಎರಡೂ ಒಂದೇ ಭಾವನೆಯ ಮಗ್ಗಲುಗಳು. ಅಲ್ಲದೆ ಇವರಿಬ್ಬರೂ ಆದಿನಾಥನ ಮಕ್ಕಳು, ಅಂದರೆ ಅವನಿಂದಾದವರು, ಅಂದರೆ ಅವನತನದ ಹೊರರೂಪಗಳು. ಹೀಗೆ 'ಆದಿಪುರಾಣ'ವನ್ನು ಒಂದು ಚೇತನದ ಮಹಾಪಯಣ ಎಂದು ಪರಿಭಾವಿಸಿದರೆ, ಒಂದೆಡೆ ತನ್ನ ಸುಖದಲ್ಲಿ ಕೇಂದ್ರೀಕೃತವಾಗುವ ಭೋಗಾಕಾಂಕ್ಷೆ, ಮತ್ತೊಂದೆಡೆ ತನ್ನ ಹಿರಿಮೆಯ ಭಾವನೆಯ ಅಹಂಕಾರ – ಇವೆರಡೂ ಅದೇ ಚೇತನದ್ದೇ. ಪ್ರಾಯಶಃ ಆ ಕಾರಣಕ್ಕಾಗಿಯೇ ಕವಿ ಆದಿನಾಥ ಕೇವಲಜ್ಞಾನವನ್ನು ಪಡೆದು ಕೊನೆಗೆ ಪರಿನಿರ್ವಾಣ ಹೊಂದುವ ಸನ್ನಿವೇಶವನ್ನು ಭರತ–ಬಾಹುಬಲಿಗಳ ಯುದ್ಧದ ನಂತರವೇ ಚಿತ್ರಿಸುವುದು. ಭೋಗ–ಅಹಂಕಾರಗಳೂ ಬೇರೆ ಬೇರೆಯಲ್ಲ, ಒಂದೇ ಸ್ವಕೇಂದ್ರಿತ ಆಲೋಚನೆಯ ಎರಡು ಮಗ್ಗುಲಗಳು; ಎರಡರಲ್ಲಿಯೂ ತಾನೇ ಕೇಂದ್ರ, ಅನ್ಯವನ್ನು ಕಡೆಗಣಿಸಿ ತನ್ನ ಬಗ್ಗೆ ಮಾತ್ರ, ತನ್ನ ಸುಖವನ್ನು ಮಾತ್ರ, ತನ್ನ ಶ್ರೇಷ್ಠತೆಯನ್ನು ಮಾತ್ರ ಆಲೋಚಿಸುವ ಪರಿ. ತೀರ್ಥಂಕರತ್ವ ಪ್ರಾಪ್ತವಾಗಬೇಕಾದರೆ ಇವೆರಡೂ ಸಂಪೂರ್ಣವಾಗಿ ಇಲ್ಲವಾಗಬೇಕು.

ಪಂಪನ ವಿಷಯದಲ್ಲಿ ನಾವು ಒಂದಂಶವನ್ನು ಗಮನಿಸಬೇಕು, ಅಥವಾ ಇದು ಜೈನ ಮನೋಭಾವವೂ ಇದ್ದೀತು. ಅವನು ಭೋಗ, ಎಂದರೆ ಲೈಂಗಿಕತೆಯನ್ನು ಸಂಪೂರ್ಣವಾಗಿ ನಿರಾಕರಿಸುವುದಿಲ್ಲ. 'ಆದಿಪುರಾಣ'ವನ್ನು ಬರೆದಾಗ ಪಂಪನಿಗೆ ಮೂವತ್ತೊಂಬತ್ತು–ನಲವತ್ತು ವರ್ಷಗಳು, ಅಂದರೆ ಎಲ್ಲ ಚೈತನ್ಯಗಳೂ ತಮ್ಮ ಉಚ್ಛ್ರಾಯಸ್ಥಿತಿಯಲ್ಲಿರುವ ವಯಸ್ಸು. ಈ ಕಾವ್ಯದ ಆರಂಭದಲ್ಲಿ ಪಂಪ ತನ್ನ ರೂಪದ ಬಗ್ಗೆ, ರಸಿಕತೆಯ ಬಗ್ಗೆ ದೀರ್ಘವಾಗಿ ಹೇಳಿಕೊಳ್ಳುತ್ತಾನೆ. ಮುಂದೆ ಅವನು ಬರೆದ ಅವನ ಪ್ರಕಾರ 'ವಿಕ್ರಮಾರ್ಜುನವಿಜಯ'ದಲ್ಲಿಯಂತೂ ಕಾವ್ಯದ ಆರಂಭದಲ್ಲಿನ ಪ್ರಾರ್ಥನೆಯಲ್ಲಿಯೂ, ಕೊನೆಯ ಫಲಶ್ರುತಿಯಲ್ಲಿಯೂ ಅವನು ಅಪೇಕ್ಷಿಸುವುದು ಮಿಕ್ಕೆಲ್ಲದರ ಜೊತೆಗೆ ಭೋಗವನ್ನೇ. ಕಾವ್ಯದ ಆರಂಭದಲ್ಲಿ ಅವನು ಪ್ರಾರ್ಥಿಸುವುದು ಐವರು ದೇವತೆಗಳನ್ನು, ಅವರಲ್ಲಿ ಒಬ್ಬನೆಂದರೆ ಸಹಜ ಮನೋಜನೋಜ, ಅವನನ್ನು ಕವಿ ಕೇಳಿಕೊಳ್ಳುವುದು

'ಸಹಜಮನೋಜನೋಜನೆಮಗೀಗೆ ವಿಚಿತ್ರ ರತೋತ್ಸವಂಗಳಂ' ಎಂದು. ಹಾಗೆಯೇ ಕಾವ್ಯದ ಕೊನೆಯ ಫಲಶ್ರುತಿಯ ಪದ್ಯದಲ್ಲಿ 'ಲೋಕಪೂಜ್ಯವಾದ' ಭಾರತವನ್ನು ಓದಿದವರಿಗೆ, ಕೇಳಿದವರಿಗೆ, ಬರೆದವರಿಗೆ ಅವನ ಪ್ರಕಾರ ಸಿಕ್ಕುವ ಫಲಗಳೆಂದರೆ 'ಧೃತಿ ತುಷ್ಟಿ ಪುಷ್ಟಿ ವಿಭವಂ ಸೌಭಾಗ್ಯಂ ಇಷ್ಟಾಂಗನಾಸುರತಂ ಕಾಂತಿ ಅಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ'. ಹಾಗಾಗಿ ಪಂಪನ ದೃಷ್ಟಿಕೋನ ಅನುಭವಿಸುವ ಮೊದಲೇ ಐಹಿಕತೆಯನ್ನು ನಿರಾಕರಿಸುವಂಥದಾಗಿರದೆ, ಅವುಗಳನ್ನು ಆರೋಗ್ಯಕರವಾಗಿ ಅನುಭವಿಸುತ್ತ ಕ್ರಮೇಣ ಅವುಗಳನ್ನೇ ಹಿರಿಯ ಆದರ್ಶಗಳಾಗಿ ಮಾರ್ಪಡಿಸಿಕೊಳ್ಳಬೇಕು, ಇಹವೇ ಪರವಾಗಿ ಅರಳಬೇಕು ಎಂಬುದು. ಇದೇ ಕವಿಯ ಕಾವ್ಯವು ಕಂಡುಕೊಂಡ 'ಕಾವ್ಯಧರ್ಮ' ಅನ್ನಿಸುತ್ತದೆ.

ಆಧುನಿಕ ಮನೋವಿಜ್ಞಾನದ ಕೆಲವು ಪರಿಕಲ್ಪನೆಗಳೂ ಇವಕ್ಕೆ ಸಂವಾದಿಯಾಗಿವೆ ಎಂದು ನನ್ನ ಭಾವನೆ. ನನ್ನ ಸೀಮಿತ ತಿಳಿವಳಿಕೆಯಲ್ಲಿ ವ್ಯಕ್ತಿತ್ವದ ಎರಡು ಪ್ರಮುಖ ಅಂಶಗಳು ಮೂಲಕಾಮ (libido) ಮತ್ತು ಅಹಂಕಾರ (ego) –ಇವುಗಳು. ಸಿಗ್ಮಂಡ್ ಫ್ರಾಯ್ಡ್ ಪ್ರಕಾರ ಆ ಮೂಲಕಾಮವು ಬದುಕಿನ ಮೂಲ ಶಕ್ತಿ, ಆದರೆ ಅವನೇ sublimation ಎಂಬ ಪರಿಕಲ್ಪನೆಯ ಮೂಲಕ ಅದು ಉದಾತ್ತಗೊಳ್ಳುವ ಪರಿಯನ್ನು ಪ್ರತಿಪಾದಿಸುತ್ತಾನೆ. ಯೂಂಗ್ ಲಿಬಿಡೊ ಎಂಬುದು ಮಾನವನ ಸೃಜನಶಕ್ತಿಯೆಂದು ಹೇಳುತ್ತಾನೆ, ಅದರಿಂದಲೇ ಕಲೆ, ಸಾಹಿತ್ಯ ಮುಂತಾದವು ಹೊಮ್ಮುವುದು. ಹೀಗಾಗಿ ಆಧುನಿಕ ಪರಿಭಾಷೆಯ ದೃಷ್ಟಿಯಿಂದಲೂ 'ಆದಿಪುರಾಣ'ವನ್ನು ಅರ್ಥವಿಸಿಕೊಳ್ಳುವುದು ಅನುಕೂಲ. ಮುಕ್ತಿ, ತೀರ್ಥಂಕರತ್ವ, ಪ್ರಪತ್ತಿ – ಇವನ್ನೆಲ್ಲ ಕಂಡವರಾರು? ಹಿಂದೆಯೇ ಹೇಳಿದಂತೆ ನಾವು ಹೊರಡುವ ಆಲೋಚನೆಯ ನೆಲೆಯೇ ನಮ್ಮ ನಿಲವಿನ ಸ್ವರೂಪವನ್ನು ನಿರ್ಧರಿಸುವುದು. ಬದುಕಿನ ಗುರಿಯನ್ನು ಬೇರೆ ಬೇರೆಯವರು ವಿಭಿನ್ನವಾಗಿ ಪರಿಭಾವಿಸಲು ಕಾರಣ ಅವರ ಆಲೋಚನೆಯ ವಿಭಿನ್ನ ನೆಲೆಗಳು. ಅವುಗಳಲ್ಲಿ ಯಾವುದು ಸಮರ್ಪಕವೋ ಯಾರಿಗೆ ಗೊತ್ತು? ಸ್ವಕೇಂದ್ರಿತವಾದ ಪ್ರಜ್ಞೆಯು ಸುತ್ತಲೂ ಹರಡಿಕೊಂಡಾಗ ಉಂಟಾಗುವ ಅನುಭವವೇ ಬೇರೆ. ತನ್ನ ಚೈತನ್ಯವನ್ನು ಸರ್ವಹಿತಕ್ಕಾಗಿ ಬಳಸಿದಾಗ ಉಂಟಾಗುವ ಕೃತಕೃತ್ಯ ಭಾವನೆಯೇ ಬೇರೆ. ಇಂಥ ಕೃತಕೃತ್ಯತೆಯನ್ನು ಅನುಭವಿಸುವ ಕ್ಷಣವು ಬದುಕಿನ ಸಾರ್ಥಕ ಕ್ಷಣ. ಬದುಕಿನುದ್ದಕ್ಕೂ ಇದೇ ಬಗೆಯಲ್ಲಿ ಮುನ್ನಡೆಯುವುದು ಪ್ರಾಯಶಃ ಬದುಕಿನ ಸಾರ್ಥಕ್ಯವೇನೋ. ಇದೇ ಪಂಪನ ಕಾಣ್ಕೆಯಿದ್ದಂತಿದೆ.

******

# ಪರಿವಿಡಿ

## ಮೊದಲನೆಯ ಸಂಪುಟ


| | | |
|---|---|---|
| ೧. | ಅಧ್ಯಕ್ಷರ ನುಡಿ | iii |
| ೨. | ಲೇಖಕರ ನುಡಿ | vii |
| ೩. | ಪ್ರಸ್ತಾವನೆ | ix |
| ೪. | ಮೊದಲನೆಯ ಆಶ್ವಾಸ – ಮಹಾಬಳಕುಮಾರೋದಯಂ – | ೦೧ |
| ೫. | ಎರಡನೆಯ ಆಶ್ವಾಸ – ಲಲಿತಾಂಗದೇವವರ್ಣನಂ – | ೭೧ |
| ೬. | ಮೂರನೆಯ ಆಶ್ವಾಸ – ವಜ್ರಜಂಘದರ್ಶನವ್ಯಾವರ್ಣನಂ – | ೧೬೩ |
| ೭. | ನಾಲ್ಕನೆಯ ಆಶ್ವಾಸ – ಚಾರಣಯುಗಳದಾನೋತ್ಸವವರ್ಣನಂ– | ೨೬೫ |
| ೮. | ಐದನೆಯ ಆಶ್ವಾಸ – ಸುವಿಧಿಮಹಿಮೋತ್ಪತ್ತಿವರ್ಣನಂ – | ೩೬೭ |
| ೯. | ಆರನೆಯ ಆಶ್ವಾಸ – ನಾಭಿರಾಜರಾಜ್ಯಲಾಭವರ್ಣನಂ – | ೪೫೩ |
| ೧೦. | ಏಳನೆಯ ಆಶ್ವಾಸ – ಮಹೇಂದ್ರನಾನಂದನೃತ್ಯಂ – | ೫೪೬ |
| ೧೧. | ಎಂಟನೆಯ ಆಶ್ವಾಸ – ಕರ್ಮಭೂಮಿನಿಯೋಗನಿರೂಪಣಂ – | ೬೬೨ |

# ಮೊದಲನೆಯ ಆಶ್ವಾಸ

ಶ್ರೀದೇವೇಂದ್ರಮುನೀಂದ್ರವಂದಿತಗುಣವ್ರಾತಂ ಜಗತ್ಸ್ವಾಮಿ ಸಂ
ದಾದಿಬ್ರಹ್ಮನಗಾಧಬೋಧನಿಳಯಂ ದುರ್ವಾರಸಂಸಾರವಿ
ಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪಹೃ
ತ್ಪಾದಾಬ್ಜಂ ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ ೧

**ಪದವಿಭಾಗ-ಅನ್ವಯ-ಅರ್ಥ:** ಶ್ರೀ ದೇವೇಂದ್ರಮುನೀಂದ್ರ = ದೇವೇಂದ್ರರಿಂದಲೂ ಮುನೀಂದ್ರರಿಂದಲೂ, ವಂದಿತ = ವಂದಿತವಾದ, ಗುಣವ್ರಾತಂ = ಗುಣಸಮೂಹವುಳ್ಳವನೂ; ಅಗಾಧ = ಎಣೆಯಿಲ್ಲದ, ಬೋಧನಿಳಯಂ = ಜ್ಞಾನಕ್ಕೆ ನೆಲೆವನೆಯಾದವನೂ; ದುರ್ವಾರಸಂಸಾರ = ನಿವಾರಿಸಲು ಅಶಕ್ಯವೆನ್ನಿಸುವ ಸಂಸಾರವನ್ನು, ವಿಚ್ಛೇದ ಉಪಾಯ = ವಿನಾಶ ಮಾಡಲು, ನಿಯುಕ್ತ = ತಕ್ಕುದಾದ, ಸೂಕ್ತಿ = ತಿಳಿವಳಿಕೆಯುಳ್ಳವನೂ; ವೃಷಮಾರ್ಗ = ಧರ್ಮದ ಹಾದಿಯಲ್ಲಿ, ಅಗ್ರೇಸರಂ = ಮುಂದಿರುವವನೂ, ಪಾಪಹೃತ್ = ಪಾಪವನ್ನು ವಿನಾಶಗೊಳಿಸುವ, ಪಾದಾಬ್ಜಂ = ಪಾದಕಮಲಗಳುಳ್ಳವನೂ, ಜಗತ್‌ಸ್ವಾಮಿ = ಜಗತ್ತಿನ ಒಡೆಯನೂ, ಸಂದ = ಆದ, ಆದಿಬ್ರಹ್ಮನ್ = ಆದಿಬ್ರಹ್ಮನು (ಆದಿ ತೀರ್ಥಂಕರನು) ಎಮಗೆ = ನಮಗೆ, ಮುಕ್ತಿ ಶ್ರೀ ಸುಖ = ಮುಕ್ತಿ ಎಂಬ ಸಿರಿಯ ಸುಖದ, ಆವಾಪ್ತಿಯಂ = ಪ್ರಾಪ್ತಿಯನ್ನು, ದಯೆಗೆಯ್ವನ್ + ಅಕ್ಕೆ = ದಯಗೆಯ್ಯುವವನಾಗಲಿ.

**ಗದ್ಯಾನುಸರಣ:** ಎಲ್ಲ ಸ್ವರ್ಗಗಳ ಒಡೆಯರೂ ಮುನಿಶ್ರೇಷ್ಠರೂ ಗೌರವಿಸುವ ಗುಣಸಮೂಹವನ್ನುಳ್ಳವನೂ, ಎಲ್ಲ ತಿಳಿವಳಿಕೆಗೆ ನೆಲೆವನೆಯಂತಿರುವವನೂ, ನಿವಾರಿಸಲು ಅಸಾಧ್ಯವೆನ್ನಿಸುವ ಸಂಸಾರವನ್ನು ಸೀಳಲು ಬೇಕಾದ ಉಪಾಯವನ್ನು ಬಲ್ಲವನೂ, ಧರ್ಮಮಾರ್ಗಕ್ಕೆ ಮುಂದಾಳುವೂ, ಪಾಪಸಮೂಹವನ್ನು ವಿನಾಶಗೊಳಿಸಬಲ್ಲಂತಹ ಅಡಿದಾವರೆಗಳುಳ್ಳವನೂ, ಲೋಕದ ಒಡೆಯನೂ ಆದ ಆದಿತೀರ್ಥಂಕರನು (ವೃಷಭದೇವನು) ನಮಗೆ ಮುಕ್ತಿ ಎಂಬ ಸಂಪತ್ತಿನ ಲಾಭವನ್ನು ದಯಪಾಲಿಸಲಿ.

**ಪೆಣೆದೆಂಟುಂ ಕಿಲ್ಬಿಷಂಗಳ್ಕಿಡೆ ಕಿಡದ ಗುಣಂ ಪೊರ್ದೆ ಬಂದೆಂಟುಮಾದಂ**
**ತಣಿವಂ ಕೈಕೊಂಡಮೂರ್ತರ್ಚರತನುಸಮಾಕಾರರುದ್ಧೂತಲೇಪರ್**
**ಪ್ರಣುತರ್ನಿತ್ಯರ್ಜಗನ್ಮಂಗಳನಿಳಯರನಂತರ್ತ್ರಿಲೋಕೈಕಚೂಡಾ**
**ಮಣಿಗಳ್ಸಿದ್ಧರ್ ಸ್ವಕೀಯಪ್ರಭುತೆಯನೆಮಗಂ ಮಾಳ್ಕಿತಿಪ್ರೀತಿಯಿಂದಂ೨**

**ಪದವಿಭಾಗ–ಅನ್ವಯ–ಅರ್ಥ:** ಪೆಣೆದ = ಆವರಿಸುವ, ಎಂಟುಂ ಕಿಲ್ಬಿಷಂಗಳ್ = ಎಂಟು ಕೊಳಕುಗಳು, ಕಿಡೆ = ನಾಶವಾಗುವಂತೆಯೂ; ಕಿಡದ = ನಾಶವಾಗದ, ಎಂಟುಂ = ಎಂಟು, ಗುಣಂ = ಗುಣಗಳು, ಬಂದು ಪೊರ್ದೆ = ಬಂದು ಸೇರುವಂತೆಯೂ; ಆದಂ = ಅತಿಶಯವಾದ, ತಣಿವಂ = ತೃಪ್ತಿಯನ್ನು, ಕೈಕೊಂಡ = ಪಡೆದ, ಮೂರ್ತರ್ = ಸಾಕಾರಗೊಳಿಸಿಕೊಡವರೂ; ಚರತನುಸಮ = ಕೊನೆಯ (ಮಾನುಷ) ಜನ್ಮದಂತಹ, ಆಕಾರರ್ = ಆಕೃತಿಯುಳ್ಳವರೂ; ಉದ್ಧೂತಲೇಪರ್ = (ಐಹಿಕತೆಯ) ಲೇಪನವನ್ನು ತೊಡೆದುಕೊಂಡವರೂ; ಪ್ರಣುತರ್ = ಸ್ತುತ್ಯರೂ; ನಿತ್ಯಜರ್ = ಶಾಶ್ವತರೂ; ಜಗತ್ ಮಂಗಳನಿಳಯರ್ = ಜಗತ್ತಿಗೆ ಮಂಗಳವನ್ನುಂಟುಮಾಡುವವರೂ; ಅನಂತರ್ = ಕೊನೆಯಿಲ್ಲದವರೂ; ತ್ರಿಲೋಕ ಏಕಚೂಡಾಮಣಿಗಳ್ = ಮೂರು ಲೋಕಗಳಲ್ಲಿಯೂ ಚೂಡಾಮಣಿಗಳಂತೆ ಶ್ರೇಷ್ಠರಾಗಿರುವವರೂ; (ಆದ) ಸಿದ್ಧರ್ = ಸಿದ್ಧರು; ಅತಿಪ್ರೀತಿಯಿಂದಂ = ಅಪಾರವಾದ ಪ್ರೀತಿಯಿಂದ ಕೂಡಿ; ಎಮಗಂ = ನಮಗೆ; ಸ್ವಕೀಯಪ್ರಭುತೆಯಂ = ಸ್ವಪ್ರಭುತ್ವವನ್ನು (ತನಗೆ ತಾನೇ ಒಡೆಯನಾಗುವುದನ್ನು); ಮಾಳ್ಕೆ = ಉಂಟುಮಾಡಲಿ.

**ಗದ್ಯಾನುಸರಣ:** ಎಂಟು ಅವಗುಣಗಂನ್ನು ಕಳೆದುಕೊಂಡು (ಅವುಗಳ ಬದಲು) ಶಾಶ್ವತವಾಗಿ ಎಂಟು ಗುಣಗಳನ್ನು ಹೊಂದಿದವರೂ, ಅತಿಶಯ ತೃಪ್ತಿಯನ್ನು ಸಾಕಾರಗೊಳಿಸಿಕೊಂಡವರೂ, ಮುಕ್ತಿಯನ್ನು ಹೊಂದುವ ಅರ್ಹತೆಯುಳ್ಳವರೂ, ಐಹಿಕತೆಯ ಅಂಟನ್ನು ತೊಡೆದುಕೊಂಡವರೂ, ಸ್ತುತ್ಯರೂ ನಿತ್ಯರೂ ಮೂರು ಲೋಕಗಳಿಗೆ ಒಳಿತನ್ನು ಉಂಟುಮಾಡಬಲ್ಲವರೂ ಅನಂತರೂ ಮೂಲೋಕಗಳಿಗೂ ತಲೆವಣಿಯಂತೆ ಶೋಭಿಸುವವರೂ ಆದ ಸಿದ್ಧರು ನಮ್ಮ ಮೇಲೆ ಅತಿಶಯ ಪ್ರೀತಿಯನ್ನಿಟ್ಟು ತನಗೆ ತಾನೇ ಒಡೆಯನಾಗುವ ರೀತಿಯನ್ನು ತೋರಿಸಿಕೊಡಲಿ.

**ವಿಶೇಷ ವಿಚಾರ:** ಈ ಕಾವ್ಯದ ಜೈನಪರಿಭಾಷೆಯ ವಿವರಗಳಿಗೆ ಅನುಬಂಧ ೧ – ನೋಡಿ

**ಮೂವತ್ತಾಱು ಗುಣಂಗಳ್ತಮಗಮರ್ದಿರೆ ಸಂದ್ಯೆದುಮಾಚಾರದೊಳ್ಸ**
**ದ್ಭಾವಂ ಕೈಗಣ್ಮೆ ಶಿಷ್ಯಾಚರಣವಿಧಿಗಳಂ ತಿರ್ದಿ ಕಾರುಣ್ಯದಿಂದಂ**
**ಸಾವದ್ಯಂ ಸಾರದಂತಾಗಿರೆ ನಿಯಮಿಸುಚಾಚಾರ್ಯರಿನ್ನೆಮ್ಮನೇನೋ**
**ದಾವಂ ತಳ್ತಟ್ಟಿದಂತೋಸರಿಸಿ ಕಳೆಗೆ ಸಂಸಾರಕಾಂತಾರದಿಂದಂ ೩**

**ಪದವಿಭಾಗ-ಅನ್ವಯ-ಅರ್ಥ:** ತಮಗೆ = ತಮ್ಮನ್ನು, ಮೂವತ್ತಾಱು ಗುಣಂಗಳ್ = ಆಚಾರ್ಯರಿಗೆ ಆವಶ್ಯಕವಾದ ಮೂವತ್ತಾರು ಗುಣಗಳು [ದ್ವಾದಶ ತಪಸ್ಸು, ಷಡಾವಶ್ಯಕ, ದಶಧರ್ಮ, ಪಂಚಾಚಾರ, ತ್ರಿಗುಪ್ತಿ ಎಂಬ ಮೂಲೋತ್ತರ ಗುಣಗಳು, ತಳ್ತು = ವ್ಯಾಪಿಸಿ, ಅಮರ್ದಿರೆ = ಹೊಂದಿಕೊಂಡಿರಲು; ಸಂದ = ಪ್ರಖ್ಯಾತವಾದ, ಐದುಂ ಆಚಾರದೊಳ್ = ದರ್ಶನಾಚಾರ, ಜ್ಞಾನಾಚಾರ, ಚಾರಿತ್ರಾಚಾರ, ತಪಾಚಾರ ಮತ್ತು ವೀರ್ಯಾಚಾರಗಳಲ್ಲಿ, ಸದ್ಭಾವಂ = ಶ್ರದ್ಧೆಯು, ಕೈಗಣ್ಮೆ = ಉಂಟಾಗಲು; ಶಿಷ್ಯ ಆಚಾರ ವಿಧಿಗಳಂ = ಶಿಷ್ಯರ ನಡವಳಿಕೆಯ ಕ್ರಮವನ್ನು, ಕಾರುಣ್ಯದಿಂದಂ = ಕರುಣೆಯಿಂದ, ತಿರ್ದಿ = ನೇರ್ಪಡಿಸಿ, ಸಾವದ್ಯಂ = ಕಳಂಕವು, ಸಾರದಂತಾಗಿರೆ = ಸಮೀಪಕ್ಕೆ ಬಾರದಂತೆ ನಿಯಮಿಸುವ = ಎಚ್ಚರವಹಿಸುವ; ಆಚಾರ್ಯರ್ = ಆಚಾರ್ಯರುಗಳು, ಇನ್ನು ಎಮ್ಮನ್ = ಮುಂದೆ ನಮ್ಮನ್ನು, ಏನೋದಾವಂ = ಪಾಪವೆಂಬ ಕಾಳ್ಗಿಚ್ಚು, ತಳ್ತು ಅಟ್ಟದಂತೆ = ವ್ಯಾಪಿಸಿ ಸುಡದಂತೆ, ಓಸರಿಸಿ = ದೂರಮಾಡಿ, ಸಂಸಾರಕಾಂತಾರದಿಂದಂ = ಐಹಿಕತೆಯೆಂಬ ಕಾಡಿನಿಂದ, ಕಳೆಗೆ = (ನಮ್ಮನ್ನು) ಕಾಪಾಡಲಿ.

**ಗದ್ಯಾನುಸರಣ:** ಆವಶ್ಯಕವಾದ ಮೂವತ್ತಾರು ಗುಣಗಳನ್ನು ಹೊಂದಿ, ಐದು ಆಚಾರಗಳನ್ನು ತಮ್ಮ ಜೀವನದ ಭಾಗವಾಗಿಸಿಕೊಂಡು ಶಿಷ್ಯರ ನಡವಳಿಕೆಯ ಕ್ರಮವನ್ನು ಕರುಣೆಯಿಂದ ನೇರ್ಪಡಿಸುತ್ತ, ಅವರ ಬಳಿ ದೋಷಗಳು ಸಾರದಂತೆ ಎಚ್ಚರವಹಿಸುವ ಆಚಾರ್ಯರುಗಳು ನಮ್ಮನ್ನು ಪಾಪವೆಂಬ ಕಾಳ್ಗಿಚ್ಚು ಆವರಿಸಿ ಸುಡದಂತೆ ಐಹಿಕತೆಯೆಂಬ ಕಾಡಿನಿಂದ ಹೊರತಂದು ಕಾಪಾಡಲಿ.

**ಹೇಯಂಗಳ್ ಖಳಕರ್ಮಬಂಧನಕರ ಕ್ರೋಧಾದಿಗಳ್ ಮತ್ತುಪಾ**
**ದೇಯಂಗಳ್ ದುರಿತೇಂಧನಾನಳಲಸದ್ರತ್ನತ್ರಯಂಗಳ್ ಸುಖೋ**
**ಪಾಯಂಗಳ್ಗಡಿವೆಂದು ಭವ್ಯಜನಮಂ ಕಣ್ಣೂಱಿ ಕಲ್ಪಿಪ್ಪುಪಾ**
**ಧ್ಯಾಯಜ್ಯೋತಿಸುಗೆಮ್ಮ ಚಿತ್ತಗೃಹದೊಳ್ರತ್ನತ್ರಯಜ್ಯೋತಿಯಂ ೪**

**ಪದವಿಭಾಗ-ಅನ್ವಯ-ಅರ್ಥ:** ಖಳ = ದುಷ್ಟ, ಕರ್ಮಬಂಧನಕರ = ಕರ್ಮಗಳಿಂದ ಬಂಧಿಸುವಂತಹ, ಕ್ರೋಧಾದಿಗಳ್ = ಕೋಧವೇ ಮುಂತಾದವು, ಹೇಯಂಗಳ್ = ಹೀನವಾದವು; ಮತ್ತು = ಅಲ್ಲದೆ, ದುರಿತ + ಇಂಧನ = ಪಾಪವನ್ನು ಸುಡುವ ಉರುವಲಾದ, ಲಸತ್ = ಹೊಳೆಯುವ, ರತ್ನತ್ರಯಂಗಳ್ = ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ ಮತ್ತು ಸಮ್ಯಕ್ ಚಾರಿತ್ರಗಳೆಂಬ ಮೂರು ರತ್ನಗಳು, ಉಪಾದೇಯಂಗಳ್ = ಸ್ವೀಕಾರಾರ್ಹವಾದವು; ಇವು, ಸುಖೋಪಾಯಂಗಳ್ = ಸುಖವನ್ನು ಸಾಧಿಸುವ ಉಪಾಯಗಳು, ಗಡ = ಅಲ್ಲವೇ, ಎಂದು; ಭವ್ಯಜನಮಂ = ಜೈನ ಭಾವುಕರಿಗೆ, ಕಣ್ಣೂಱಿ = ಕಣ್ಣಿಟ್ಟು (ಗಮನವಿರಿಸಿ),

ಕಲ್ಪಿಪ್ಪ = ತಿಳಿಯಹೇಳುವ, ಉಪಾಧ್ಯಾಯರ್ = ಉಪಾಧ್ಯಾಯರುಗಳು; ಎಮ್ಮ ಚಿತ್ತಗೃಹದೊಳ್ = ನಮ್ಮ ಮನಸ್ಸು ಎಂಬ ಮನೆಯಲ್ಲಿ, ರತ್ನತ್ರಯಜ್ಯೋತಿಯಂ = ರತ್ನತ್ರಯದ ಬೆಳಕನ್ನು, ಜ್ಯೋತಿಸುಗೆ = ಬೆಳಗುವಂತೆ ಮಾಡಲಿ.

**ಗದ್ಯಾನುಸರಣ:** ದುಷ್ಟ ಕರ್ಮಗಳು ನಮ್ಮನ್ನು ಸುತ್ತುವರಿಯುವಂತೆ ಮಾಡುವ ಕ್ರೋಧವೇ ಮುಂತಾದ ಷಡ್ವರ್ಗಗಳು ಹೀನವಾದವು; ಅದೇ ಬೆಳಗುವ ರತ್ನತ್ರಯಗಳು ಪಾಪಗಳನ್ನು ಸುಡುವ ಉರುವಲಾಗಿ ನಮಗೆ ಸುಖವನ್ನುಂಟುಮಾಡುವಂಥವು ಎಂದು ಭಾವುಕರಿಗೆ ಪ್ರೀತಿಯಿಂದ ತಿಳಿಹೇಳುವ ಉಪಾಧ್ಯಾಯರುಗಳು ನಮ್ಮ ಮನೆಯೆಂಬ ಮನೆಯಲ್ಲಿ ರತ್ನತ್ರಯದ ಬೆಳಕನ್ನು ಹೊತ್ತಿಸಲಿ.

**ಬಗೆಯೊಳ್ಪೊಣ್ಮೆ ದಯಾರಸಂ ಚರಿತದೊಳ್ಕೈಗಣ್ಮೆ ಚಾರಿತ್ರಮಾ**
**ವಗಮಾವಶ್ಯಕದೊಳ್ತಗುಳ್ದು ಪಲವುಂ ಶೀಲಂಗಳಂ ತಾಳ್ದಿ ದಂ**
**ದುಗಮೆಂದುಂ ತಮಗಾಗದಂತೆಸಗುವರ್ಸರ್ವೋತ್ತಮರ್ಸರ್ವಸಾ**
**ಧುಗಳೋರಂತೆ ಕಱುಲ್ಚುಗೆಮ್ಮ ಮನದಿಂ ದುರ್ಮೋಹಸಂದೋಹಮಂ೫**

**ಪದವಿಭಾಗ-ಅನ್ವಯ-ಅರ್ಥ:** (ತಮ್ಮ) ಬಗೆಯೊಳ್ = ಮನಸ್ಸಿನಲ್ಲಿ (ಆಲೋಚನೆಯಲ್ಲಿ), ದಯಾರಸಂ = ದಯಾರಸವು, ಪೊಣ್ಮೆ = ಹೊಮ್ಮುತ್ತಿರಲು; (ತಮ್ಮ) ಚರಿತದೊಳ್ = ನಡವಳಿಕೆಯಲ್ಲಿ, ಆವಗಂ = ಸದಾ ಕಾಲವೂ, ಚಾರಿತ್ರಂ = ಸಮ್ಯಕ್ ಚಾರಿತ್ರವು, ಕೈಗಣ್ಮೆ = ಉಂಟಾಗಲು; ಆವಶ್ಯದೊಳ್ = ತಮ್ಮ ಆವಶ್ಯಕತೆಗಳಲ್ಲಿ, ತಗುಳ್ದು = ಸೇರಿ, ಪಲವುಂ ಶೀಲಂಗಳಂ = ಹಲವು ಶೀಲಗಳನ್ನು (ಮುನಿಗಳು ಆಚರಿಸುವ ದಿಗ್‌ವ್ರತ, ದೇಶವ್ರತ ಮತ್ತು ದಂಡವಿರತಿವ್ರತ ಎಂಬ ಮೂರು ಗುಣವ್ರತಗಳು ಹಾಗೂ ಸಾಮಯಿಕ, ಪ್ರೋಷಧೋಪವಾಸ, ಉಪಭೋಗಪರಿಭೋಗಾತಿಥಿಸಂಗ್ರಹ ಮತ್ತು ಪಶ್ಚಿಮ ಸಲ್ಲೇಖನ ಎಂಬ ನಾಲ್ಕು ಶಿಕ್ಷಾವ್ರತಗಳು – ಇವು ಸೇರಿ 'ಶೀಲಸಪ್ತಕ' ಎನಿಸಿಕೊಳ್ಳುತ್ತದೆ), ತಾಳ್ದಿ = ಹೊಂದಿ; ದಂದುಗಂ = ವ್ಯಥೆಯು, ಎಂದುಂ = ಯಾವತ್ತೂ, ತಮಗಾಗದಂತೆ = ತಮಗೆ ಉಂಟಾಗದ ರೀತಿಯಲ್ಲಿ, ಎಸಗುವರ್ = ಆಚರಿಸುತ್ತಾರೆಯೋ; (ಅಂತಹ) ಸರ್ವೋತ್ತಮರ್ = ಅತ್ಯಂತ ಶ್ರೇಷ್ಠರಾದ ಸರ್ವಸಾಧುಗಳ್ = ಸಮಸ್ತ ಸಾಧುವೃಂದವು, ಎಮ್ಮ ಮನದಿಂ = ನಮ್ಮ ಮನಸ್ಸುಗಳಿಂದ, ದುರ್ಮೋಹ ಸಂದೋಹಮಂ = ಕೆಟ್ಟ ಆಸೆಗಳನ್ನು, ಕಱುಲ್ಚುಗೆ = ತೊಲಗಿಸಲಿ.

**ಗದ್ಯಾನುಸರಣ:** ತಮ್ಮ ಮನಸ್ಸಿನಲ್ಲಿ ಸದಾ ಕರುಣೆಯನ್ನು ತುಂಬಿಕೊಂಡು, ತಮ್ಮ ನಡವಳಿಕೆಯನ್ನು ಅತ್ಯುಚ್ಚವಾದುದನ್ನಾಗಿ ಮಾಡಿಕೊಂಡು, ಷಡಾವಶ್ಯಕಗಳಿಂದ ಶೀಲಸಪ್ತಕವನ್ನು ಸಾಧಿಸಿಸಿಕೊಂಡು, ಎಂದೆಂದೂ ತಮ್ಮನ್ನು ವ್ಯಥೆಯು ಕಾಡಿಸದಂತೆ

ನೋಡಿಕೊಳ್ಳುವ ಸಮಸ್ತ ಸಾಧುವೃಂದವು ನಮ್ಮ ಮನಸ್ಸಿನ ಕೆಟ್ಟ ಆಮಿಷಗಳನ್ನು ದೂರಮಾಡಲಿ.

**ವಿಶೇಷವಿಚಾರ:** ಈ ಐದು ಪದ್ಯಗಳಲ್ಲಿ ಕವಿಯು, ಜೈನ ಕವಿಗಳ ಪರಿಪಾಟದಂತೆ, ಕಾವ್ಯಾರಂಭದಲ್ಲಿ ಪಂಚಪರಮೇಷ್ಠಿಗಳ ಪ್ರಾರ್ಥನೆಯನ್ನು ಮಾಡಿದ್ದಾನೆ. ಅರ್ಹಂತ, ಸಿದ್ಧರು, ಆಚಾರ್ಯರು, ಉಪಾಧ್ಯಾಯರು ಮತ್ತು ಸರ್ವ ಸಾಧುಗಳನ್ನು ಪಂಚಪರಮೇಷ್ಠಿಗಳೆನ್ನುತ್ತಾರೆ. ಇಂತಹ ಪ್ರಾರ್ಥನೆಯನ್ನು'ಪಂಚ ನಮಸ್ಕಾರ'ಗಳೆಂದು ಕರೆಯುವುದೂ ವಾಡಿಕೆ. ಮೂಲತಃ ಪ್ರಾಕೃತದ ಈ ವಾಕ್ಯಗಳು ಪಂಚನಮಸ್ಕಾರಗಳೆನ್ನಿಸಿಕೊಳ್ಳುತ್ತವೆ: ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಯಾರಿಯಾಣಂ, ಣಮೋಉವಜ್ಝಾಯಾಣಮ, ಣಮೋ ಲೋಏ ಸಬ್ಬಸಾಹೂಣಂ).

**ಕಾರ್ಯಮೆಮಗಿದುವೆ ಶಿವಪದ**
**ಪರ್ಯಂತಂಬರಮಮೋಘಮುದ್ಧರಿಸುಗೆ ತಾ**
**ತ್ಪರ್ಯದಿನರ್ಹತ್ಸಿದ್ಧಾ**
**ಚಾರ್ಯೋಪಾಧ್ಯಾಯಸರ್ವಸಾದುಗಳೆಮ್ಮಂ** ೬

**ಪದವಿಭಾಗ–ಅನ್ವಯ–ಅರ್ಥ:** ಶಿವಪದಪರ್ಯಂತಂ = ಮುಕ್ತಿ ಸಿಗುವವರೆಗೂ, ಎಮಗೆ = ನಮಗೆ, ಇದುವೆ = ಇದೇ, ಕಾರ್ಯಂ = ಕೆಲಸ; ಗದ್ಯಾನುಸರಣದಿನ್ = ಆ ದೃಷ್ಟಿಯಿಂದ, ಅರ್ಹತ್ ಸಿದ್ಧ ಆಚಾರ್ಯ ಉಪಾಧ್ಯಾಯ ಸಾಧುಗಳೆಲ್ಲಂ = ಅರ್ಹಂತ ಸಿದ್ಧ ಆಚಾರ್ಯ ಉಪಾಧ್ಯಾಯ ಸರ್ವ ಸಾಧುಗಳೆಲ್ಲರೂ, ಅಮೋಘಂ = ತಪ್ಪದೆ, ಎಮ್ಮಂ = ನಮ್ಮನ್ನು, ಉದ್ಧರಿಸುಗೆ = ಉದ್ಧರಿಸಲಿ

**ಗದ್ಯಾನುಸರಣ:** ಮುಕ್ತಿ ಸಿಕ್ಕುವವರೆಗೂ ನಮಗಿದೇ ಕರ್ತವ್ಯವಾಗಿದೆ; ಪಂಚಪರಮೇಷ್ಠಿಗಳು ನಮ್ಮನ್ನು ತಪ್ಪದೆ ಉದ್ಧರಿಸಲಿ.

**ವರದಂ ಪದ್ಮಾಂಕಿತಂ ತೋಳೆರಡು ನಿಶಿತವಜ್ರಪ್ರಭಾಭಾಸುರಂ ತೋ**
**ಳೆರಡುದ್ಯಚ್ಚಕ್ರಿಚಕ್ರೋಜ್ಜ್ವಳತರತರಳಜ್ಯೋತಿ ತೋಳೆಂಟಗುರ್ವಾ**
**ಗಿರೆ ಬಣ್ಣಂ ಪೊನ್ನಂ ಬಣ್ಣಕ್ಕೆಣೆಯೆನೆ ಗರುಡಂ ವಾಹಮಾಗಿರ್ಪ**
**ಚಕ್ರೇಶ್ವರಿ ಭಾಸ್ವದ್ಧರ್ಮಚಕ್ರಾಕ್ರಮಿಗಳನಲೆದಾಟಕ್ಕೆ ವಿಕ್ರಾಂತದಿಂದಂ** ೭

**ಪದವಿಭಾಗ–ಅನ್ವಯ–ಅರ್ಥ:** ವರದಂ ಪದ್ಮಾಂಕಿತಂ = ವರದ ಮತ್ತು ಪದ್ಮಮುದ್ರೆಗಳಿಂದ ಕೂಡಿದ ತೋಳೆರಡು = ಎರಡು ತೋಳುಗಳು; ಹಾಗೂ ನಿಶಿತ = ಹರಿತವಾದ, ವಜ್ರಪ್ರಭಾಭಸುರಂ = ವಜ್ರಾಯುಧದ ದೀಪ್ತಿಯಿಂದ

ತೋಳೆರಡು = ಎರಡು ತೋಳುಗಳು; ಉದ್ಯತ್ = ಅತಿಶಯವಾದ, ಚಕ್ರಿಚಕ್ರ = ಚಕ್ರವರ್ತಿಯ ಚಕ್ರಗಳಿಗಿಂತಲೂ, ಉಜ್ಜ್ವಳತರ = ಹೆಚ್ಚು ಜಾಜ್ವಲ್ಯಮಾನವಾದ, ಜ್ಯೋತಿ = ಜ್ಯೋತಿಯಿಂದ (ಕೂಡಿದ), ತೋಳೆಂಟು = ಎಂಟು ತೋಳುಗಳು; ಅಗುರ್ವು ಆಗಿರೆ = ಅದ್ಭುತವಾಗಿರಲು; ಬಣ್ಣಂ = (ಯಾರ) ಬಣ್ಣವು, ಪೊನ್ನ ಬಣ್ಣಕ್ಕೆ ಎಣೆಯೆನೆ + ಚಿನ್ನದ ಬಣ್ಣಕ್ಕೆ ಸಮಾನವಾಗಿದೆಯೋ; ಗರುಡವಾಹನ ಮಾಗಿರ್ಪ = ಗರುಡನನ್ನು ತನ್ನ ವಾಹನವಾಗುಳ್ಳ, ಚಕ್ರೇಶ್ವರಿ = ಚಕ್ರೇಶ್ವರಿ ಯಕ್ಷಿಯು, ವಿಕ್ರಾಂತದಿಂದಂ = (ತನ್ನ) ಪರಾಕ್ರಮದಿಂದ, ಭಾಸ್ವತ್ = ಹೊಳೆಯುವ, ಧರ್ಮಚಕ್ರ ಆಕ್ರಮಿಗಳನ್ = ಧರ್ಮಚಕ್ರದ ಮೇಲೆ ಆಕ್ರಮಣ ಮಾಡುವವರನ್ನು, ಅಲೆದಾಟಿಕ್ಕೆ = ಅಲೆದಾಡಿಸಲಿ (ಬಳಲಿಸಲಿ).

**ಗದ್ಯಾನುಸರಣ:** ವರದ ಪದ್ಮ ಮುದ್ರೆಗಳನ್ನೊಳಗೊಂಡ ಎರಡು ತೋಳುಗಳು, ಹರಿತವಾದ ವಜ್ರಾಯುಧದಂತೆ ಹೊಳೆಯುವ ಇನ್ನೆರಡು ತೋಳುಗಳು, ಚಕ್ರವರ್ತಿಯ ಚಕ್ರಗಳಿಗಿಂತಲೂ ಹೆಚ್ಚಿನ ಪ್ರಭೆಯುಳ್ಳ ಮತ್ತೂ ಎಂಟು ತೋಳುಗಳು – ಹೀಗೆ ಹನ್ನೆರಡು ತೋಳುಗಳನ್ನು ಪಡೆದ, ಚಿನ್ನದ ಬಣ್ಣವನ್ನು ಹೊಂದಿದ, ಗರುಡವಾಹನೆಯಾದ ಚಕ್ರೇಶ್ವರಿ ಯಕ್ಷಿಯು ತನ್ನ ಪರಾಕ್ರಮದಿಂದ ಧರ್ಮಚಕ್ರದ ಆಕ್ರಮಣಕಾರರನ್ನು ಅಡಗಿಸಲಿ.

**ಪರಶುಫಳಾಕ್ಷಸೂತ್ರವರದೋಚಿತಚಿಹ್ನಚತುರ್ಭುಜಂ ಮನೋ**
**ಹರವೃಷಲಾಂಛನಂ ವೃಷಮುಖಂ ವೃಷವಾಹನನಿಂದುಕುಂದಸುಂ**
**ದರತರವರ್ಣನೀ ವೃಭನಾಥಕಥಾರಚನೋಕ್ತಿಯಲ್ಲಿ ಮಾ**
**ಱ್ಕಿರದೆಮಗಾಗಳುಂ ವೃಷಭಯಕ್ಷನವಿಘ್ನಮನಃಪ್ರವೃತ್ತಿಯಂ** ೮

**ಪದವಿಭಾಗ–ಅನ್ವಯ–ಅರ್ಥ:** ಪರಶು ಫಳ ಅಕ್ಷಸೂತ್ರ ವರದ = ಕೊಡಲಿ ಹಣ್ಣು ಜಪಮಾಲೆ ಮತ್ತು ವರದ ಮುದ್ರೆ (ಎಂಬ), ಉಚಿತಚಿಹ್ನ = ಸೂಕ್ತವಾದ ಗುರುತುಗಳುಳ್ಳ, ಚತುರ್ಭುಜಂ = ನಾಲ್ಕು ತೋಳುಗಳುಳ್ಳ; ಮನೋಹರ = ಸುಂದರವಾದ, ವೃಷಲಾಂಛನಂ = ಧರ್ಮಧ್ವಜವುಳ್ಳ; ವೃಷವಾಹನಂ = ಎತ್ತನ್ನು ವಾಹನವಾಗುಳ್ಳ; ಇಂದು = ಚಂದ್ರ(ನಂತೆ) ಮತ್ತು ಕುಂದ = ಕುಂದಪುಷ್ಪದಂತೆ, ಸುಂದರತರವರ್ಣನ್ = ಬಹು ಸುಂದರ ಬಣ್ಣವುಳ್ಳ, ವೃಷಮುಖಂ = ವೃಷಭಮುಖನಾದ, ವೃಷಭಯಕ್ಷನ್ = ವೃಷಭನಾಥ ಯಕ್ಷನು, ವೃಷಭನಾಥ = ಆದಿದೇವ(ನ), ಕಥಾರಚನೋಕ್ತಿಯಲ್ಲಿ = ಕಥೆಯನ್ನು ಹೇಳುವ ಮಾತುಗಳಲ್ಲಿ, ವಿಘ್ನಮನಃಪ್ರವೃತ್ತಿಯಂ = ಅಡ್ಡಿಯಾಗದ ಮನಃಪ್ರವೃತ್ತಿಯನ್ನು, ಆಗಳುಂ = ಸದಾ ಕಾಲವೂ, ಇರದೆ = ಒಂದೇ ಬಗೆಯಲ್ಲಿ, ಮಾಱ್ಕೆ = ಉಂಟುಮಾಡಲಿ.

**ಗದ್ಯಾನುಸರಣ:** ಕೊಡಲಿ ಹಣ್ಣು ಜಪಮಾಲೆ ಮತ್ತು ವರದ ಮುದ್ರೆಗಳಿಂದ ಕೂಡಿದ ನಾಲ್ಕು ತೋಳುಗಳುಳ್ಳ, ಮನೋಹರವಾದ ವೃಷಲಾಂಛನವನ್ನುಳ್ಳ, ವೃಷಭವಾಹನನಾದ ಹಾಗೂ ಚಂದ್ರ ಮತ್ತು ಕುಂದಪುಷ್ಪದಂತಹ ಮೈಬಣ್ಣವನ್ನುಳ್ಳ ವೃಷಭಯಕ್ಷನು ಆದಿತೀರ್ಥಂಕರನಾದ ವೃಷಭನಾಥನ ಕಥಾ ನಿರೂಪಣೆಯಲ್ಲಿ ಸದಾ ಅಡ್ಡಿಯೊದಗದ ಮನಃಪ್ರವೃತ್ತಿಯನ್ನು ನಮಗೆ ಉಂಟುಮಾಡಲಿ.

**ಪರಮಜಿನೇಂದ್ರವಾಣಿಯೆ ಸರಸ್ವತಿ ಬೇಱದು ಪೆಣ್ಣ ರೂಪಮಂ**
**ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ**
**ದರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದಾನದ**
**ರ್ಕೆರೆದಪೆನಾ ಸರಸ್ವತಿಯೆ ಮಾೞ್ಕೆಮಗಿಲ್ಲಿಯೆ ವಾಗ್ವಿಳಾಸಮಂ ೯**

**ಪದವಿಭಾಗ-ಅನ್ವಯ-ಅರ್ಥ:** ಪರಮ = ಅತ್ಯಂತ ಶ್ರೇಷ್ಠನಾದ, ಜಿನೇಂದ್ರ = ಜಿನನ, ವಾಣಿಯೆ = (ವಿವೇಕದ) ಮಾತುಗಳೇ, ಸರಸ್ವತಿ = ವಿದ್ಯೆಯ ಅಧಿದೇವತೆಯೇ (ಹೊರತು), ಅದು, ಬೇಱ = ಬೇರೆಯ, ಪೆಣ್ಣ ರೂಪಮಂ = ಹೆಣ್ಣಿನ ಆಕಾರವನ್ನು, ಧರಿಯಿಸಿ = ಪಡೆದು, ನಿಂದುದು ಅಲ್ತು = ಇರುವಂಥದಲ್ಲ; ಭಾವಿಸಿ = ಮನನಮಾಡಿಕೊಂಡು, ಓದುವ = ಪಠಿಸುವ, ಕೇಳ್ವ = ಕೇಳುವ, ಪೂಜಿಪ = ಗೌರವಿಸುವ, ಆದರಿಸುವ = ಪ್ರೀತಿಯಿಂದ ಕಾಣುವ, ಭವ್ಯಕೋಟಿಗೆ = ಅಸಂಖ್ಯ ಭಾವುಕರಿಗೆ, ಅದುವೆ = ಜಿನೇಂದ್ರನ ಮಾತುಗಳೇ, ನಿರಂತರಸೌಖ್ಯಮನ್ = ಕೊನೆಯಿಲ್ಲದ ಆನಂದವನ್ನು, ಈವುದು = ನೀಡುತ್ತದೆ; ಅದರ್ಕೆ = ಆ ಮಾತುಗಳ (ಉಪದೇಶ) ರೂಪದ ಸರಸ್ವತಿಗೆ, ಆನ್ = ನಾನು, ಎರೆದಪೆನ್ = ಬೇಡಿಕೊಳ್ಳುತ್ತೇನೆ; ಆ ಸರಸ್ವತಿಯೆ = ಅಂತಹ ಜಿನೇಂದ್ರನ ಮಾತು ಎಂಬ ಸರಸ್ವತಿಯೆ, ಎಮಗೆ = ನಮಗೆ, ಇಲ್ಲಿಯೆ = ಈಗ, ವಾಗ್ವಿಳಾಸಮಂ = ಮಾತಿನ ವೈಭವವನ್ನು, ಮಾೞ್ಕೆ = ಉಂಟುಮಾಡಲಿ.

**ಗದ್ಯಾನುಸರಣ:** ಅತ್ಯಂತ ಶ್ರೇಷ್ಠನಾದ ಜಿನೇಂದ್ರನ ಮಾತುಗಳು ಸರಸ್ವತಿಯೇ ಹೊರತು, ಅದು ಹೆಣ್ಣಿನ ಆಕಾರವುಳ್ಳ ದೇವತೆಯಲ್ಲ; ಅಂತಹ ಜಿನೇಂದ್ರನ ಮಾತುಗಳನ್ನು ಯಾರು ಓದಿ ಕೇಳಿ ಮನನಮಾಡಿಕೊಂಡು ಗೌರವಿಸುತ್ತಾರೆಯೋ ಅಂಥವರಿಗೆ ಕೊನೆಯಿಲ್ಲದ ಆನಂದವುಂಟಾಗುತ್ತದೆ. ಅಂತ ವಾಗ್ದೇವಿಗೆ ನಾನು ಎರಗುತ್ತೇನೆ; ಆ ದೇವತೆಯು ನಮಗೆ ಈಗ ವಾಕ್ಸಂಪತ್ತನ್ನು ನೀಡಲಿ

**ವಿಶೇಷ ವಿಚಾರ:** ಸಾಂಪ್ರದಾಯಿಕವಾದ ಮೂರ್ತರೂಪದ ದೇವತಾ ಸ್ವರೂಪವನ್ನು ನಿರಾಕರಿಸುವ ಪಂಪನು ಜಿನನ ವಿವೇಕವಾಣಿಯನ್ನೇ ವಾಗ್ದೇವಿ ಯೆಂದು ಕರೆಯುತ್ತಿದ್ದಾನೆ. ಸರಸ್ವತಿ ಎಂಬ ಆಕಾರದ ದೇವತೆಯೂ ಅಮೂರ್ತವಾದ ಜ್ಞಾನದ ಪ್ರತಿಮೆ ತಾನೇ? ಹಾಗಾಗಿ ಸರಸ್ವತಿಯ ಪೂಜೆಯೆಂದರೆ ಬೊಂಬೆಯನ್ನು

ಪೂಜಿಸುವುದಲ್ಲ ವಿವೇಕವನ್ನು ಗೌರವಿಸುವುದು ಮತ್ತು ಅದನ್ನು ಮನನ ಮಾಡಿಕೊಳ್ಳುವುದು ಎಂಬುದು ಕವಿಯ ಆಶಯ.

ಇಲ್ಲಿ 'ವಾಗ್ವಿಳಾಸ' ಎಂಬ ಮಾತು ಅತ್ಯಂತ ಮುಖ್ಯವಾದುದು; ಇದು ಪದಸಂಯೋಜನೆಯೂ, ಅಭಿವ್ಯಕ್ತಿ ಸಾಮರ್ಥ್ಯವೂ ಆಗಿರುವುದು ವಿಶೇಷ; ಭಾಷೆಯ ಮೂಲಕವೇ ಕಾವ್ಯ ಸೃಷ್ಟಿ ಯಾಗುವುದೆಂದರೆ, ಈ 'ವಾಗ್ವಿಳಾಸ' ಅದನ್ನೇ ಪ್ರತೀಕಿಸುತ್ತದೆ.

**ಅನುಯೋಗಕುಸುಮಪಾದಪ**
**ಮನೇಕನಯಲತಿಕಮಂಗಫಲಮಹಿಜಂ ಸ**
**ದ್ವನಜವನವೆಮಗೆ ವಿಶ್ರಮ**
**ವನಮಕ್ಕತಿಶ್ರುತಶ್ರುತಸ್ಕಂಧವನಂ** ೧೦

**ಪದವಿಭಾಗ-ಅನ್ವಯ-ಅರ್ಥ:** ಅನುಯೋಗ = ತೀರ್ಥಂಕರರು ಉಪದೇಶಿಸಿದ ಶಾಸ್ತ್ರಸಮೂಹ (ಎಂಬ), ಕುಸುಮಪಾದಪಂ = ಹೂಬಿಟ್ಟ ಮರಗಳ ತೋಪು, ಅನೇಕ = ಹಲವಾರು, ನಯಲತಿಕೆ = ನಯಗಳೆಂಬ ಬಳ್ಳಿಗಳೂ, ಅಂಗಫಲಮಹಿಜಂ = ಅಂಗಗಳೆಂಬ ಹಣ್ಣುಗಳಿಂದ ಕೂಡಿದ ಮರವೂ, ಸದ್ವನಜವನಂ = ಸಜ್ಜನರೆಂಬ ತಾವರೆಯ ವನವೂ, (ಇರುವ) ವಿಶ್ರುತ = ಸುಪ್ರಸಿದ್ಧವಾದ, ಶ್ರುತಸ್ಕಂಧವನಂ = ಗಣಧರರು ಬರೆದ ದ್ವಾದಶಾಂಗಸೂತ್ರಗಳು, ಎಮಗೆ = ನಮಗೆ, ವಿಶ್ರಮವನಂ ಅಕ್ಕೆ = ವಿಶ್ರಾಂತಿಯ ಜಾಗವಾಗಲಿ.

**ಗದ್ಯಾನುಸರಣ:** ತೀರ್ಥಂಕರರು ಉಪದೇಶಿಸಿದ ಶಾಸ್ತ್ರಸಮೂಹವೆಂಬ ಹೂಬಿಟ್ಟ ಮರಶ್ರೇಣಿ, ವಿವಿಧ ನಯಗಳೆಂಬ ಬಳ್ಳಿಗಳು, ಅಂಗಗಳೆಂಬ ಹಣ್ಣುಗಳನ್ನು ಬಿಟ್ಟ ಮರ, ಸಜ್ಜನರೆಂಬ ತಾವರೆಯ ಸಮೂಹ – ಇವುಗಳಿರುವ ಶ್ರುತಸ್ಕಂಧ ಎಂಬ ತೋಟವು ನಮಗೆ ವಿಶ್ರಾಂತಿಯ ತಾಣವಾಗಲಿ.

**ವಿಶೇಷ ವಿಚಾರ:** ತೀರ್ಥಂಕರರು ಉಪದೇಶಿಸಿದ ಶಾಸ್ತ್ರಸಮೂಹಕ್ಕೆ ಗಣಧರರು ಬರೆದ ದ್ವಾದಶಾಂಗ ಸೂತ್ರಗಳನ್ನು ಅನುಯೋಗಗಳೆನ್ನುತ್ತಾರೆ. ಇದರಲ್ಲಿ ನಾಲ್ಕು ವಿಭಾಗಗಳು; ತ್ರಿಷಷ್ಟಿಶಲಾಕಾಪುರುಷರ ಚರಿತ್ರೆಗಳಿಂದ ಕೂಡಿದ ಪ್ರಥಮಾನುಯೋಗ; ಮೂರುಲೋಕಗಳ ಪ್ರಮಾಣ ಮುಂತಾದ ವಿವರಗಳಿರುವ ಕರಣಾನುಯೋಗ; ಜೈನಮುನಿಗಳೂ ಶ್ರಾವಕರೂ ಅನುಸರಿಸಬೇಕಾದ ಆಚಾರಸಂಹಿತೆಯನ್ನೊಳಗೊಂಡ ಚರಣಾನುಯೋಗ; ಮತ್ತು ಜೀವಾದಿದ್ರವ್ಯಗಳ ವಿವರಣೆಯನ್ನೊಳಗೊಂಡ ದ್ರವ್ಯಾನುಯೋಗ. ನಯವೆಂದರೆ ತಿಳಿಯುವವನ

ಅಭಿಪ್ರಾಯಕ್ಕೆ ವಿಷಯವಾದ ವಸ್ತುಜ್ಞಾನ; ಇದರಲ್ಲಿ ನೈಗಮ, ಸಂಗ್ರಹ, ವ್ಯವಹಾರ, ಋಜುಸೂತ್ರ, ಶಬ್ದ, ಸಮಭಿರೂಢ ಮತ್ತು ಏವಂಭೂತ ಎಂಬ ಭೇದಗಳಿವೆ. ಅಂಗವೆಂದರೆ ಶ್ರುತದ ದ್ವಾದಶಾಂಗಗಳು. ಶ್ರುತಸ್ಕಂಧ ಎಂದರೆ ಗಣಧರರು ಬರೆದ ಜೈನಶಾಸ್ತ್ರಗಳು.

**ಶ್ರೀಮತ್ಸಮಂತಭದ್ರ**
**ಸ್ವಾಮಿಗಳ ಜಗತ್ಪ್ರಸಿದ್ಧಕವಿಪರಮೇಷ್ಠಿ**
**ಸ್ವಾಮಿಗಳ ಪೂಜ್ಯಪಾದ**
**ಸ್ವಾಮಿಗಳ ಪದಂಗಳೀಗೆ ಶಾಶ್ವತಪದಮಂ ೧೧**

**ಪದವಿಭಾಗ–ಅನ್ವಯ–ಅರ್ಥ:** ಪೂಜ್ಯರಾದ ಸಮಂತಭದ್ರರು, ಜಗತ್ಪ್ರಸಿದ್ಧ = ಕೀರ್ತಿವಂತರಾದ, ಕವಿಪರಮೇಷ್ಠಿಗಳು, ಪೂಜ್ಯಪಾದರು – ಇವರುಗಳ, ಪದಂಗಳ್ = ಪಾದಗಳು, ಶಾಶ್ವತಪದಮಂ = ಮೋಕ್ಷವನ್ನು, ಈಗೆ = ದಯಪಾಲಿಸಲಿ

**ಗದ್ಯಾನುಸರಣ:** ಪೂಜ್ಯರಾದ ಸಮಂತಭದ್ರ, ಕವಿಪರಮೇಷ್ಠಿ, ಹಾಗೂ ಪೂಜ್ಯಪಾದರು ನಮಗೆ ಮೋಕ್ಷವನ್ನು ದಯಪಾಲಿಸಲಿ.

**ಆರ್ಯನುತಗೃಧ್ರಪಿಂಛಾ**
**ಚಾರ್ಯ ಜಟಾಚಾರ್ಯ ವಿಶ್ರುತಶ್ರುತಕೀರ್ತ್ಯಾ**
**ಚಾರ್ಯಪುರಸ್ಸರವುಪ್ಪಾ**
**ಚಾರ್ಯಪರಂಪರೆಯೆ ಕುಡುಗೆ ಭವ್ಯೋತ್ಸವಮಂ ೧೨**

**ಪದವಿಭಾಗ–ಅನ್ವಯ–ಅರ್ಥ:** ಆರ್ಯನುತ = ಜ್ಞಾನಿಗಳಿಂದ ಸ್ತುತರಾದ, ಗೃಧ್ರಪಿಂಛಾಚಾರ್ಯ, ಜಟಾಚಾರ್ಯ, ವಿಶ್ರುತ = ಪ್ರಖ್ಯಾತರಾದ, ಶ್ರುತಕೀರ್ತ್ಯಾಚಾರ್ಯ – ಮುಂತಾದವರ ಆಚಾರ್ಯಪರಂಪರೆ = ಆಚಾರ್ಯರ ಪೀಳಿಗೆಗಳು, ಭವ್ಯೋತ್ಸವಮಂ = ಭವ್ಯತ್ವ ವೈಭವವನ್ನು, ಕುಡುಗೆ = ನೀಡಲಿ.

**ಗದ್ಯಾನುಸರಣ:** ಜ್ಞಾನಿಗಳು ತುತಿಸುವ ಗೃಧ್ರಪಿಂಛಾಚಾರ್ಯ, ಜಟಾಚಾರ್ಯ ಹಾಗೂ ಶ್ರುತಕೀರ್ತ್ಯಾಚಾರ್ಯ ಮುಂತಾದವರ ಆಚಾರ್ಯಪರಂಪರೆಯು ನಮಗೆ ಭವ್ಯರಾಗಿರುವ ಸಂತೋಷವನ್ನು ದಯಪಾಲಿಸಲಿ.

**ಎಮಗೆ ಮಲಧಾರಿಸಿದ್ಧಾಂ**
**ತಮುನೀಶ್ವರಚರಣಸರಸಿಜಾತಂ ದೇವೇಂ**
**ದ್ರಮುನಿಪದಾಬ್ಜಂ ಜಯನಂ**
**ದಿಮುನಿಕ್ರಮಕಮಳಮೀಗೆ ಬೋಧೋದಯಮಂ ೧೩**

**ಪದವಿಭಾಗ-ಅನ್ವಯ-ಅರ್ಥ:** ಮಲಧಾರಿಸಿದ್ಧಾಂತ ಮುನೀಶ್ವರ, ಚರಣಸರಸಿಜಾತಂ = ಪಾದಕಮಲಗಳೂ, ದೇವೇಂದ್ರಮುನಿ ಪದಾಬ್ಜಂ = ಅಡಿದಾವರೆಗಳೂ, ಜಯನಂದಿ ಮುನಿಕ್ರಮಕಮಳಂ = ಪಾದಗಳೆಂಬ ಕಮಲಗಳು, ಎಮಗೆ = ನಮಗೆ, ಬೋಧೋದಯಮಂ = ತಿಳಿವಳಿಕೆಯ ಬೆಳಕನ್ನು ಈಗೆ = ಉಂಟುಮಾಡಲಿ.

**ಗದ್ಯಾನುಸರಣ:** ಮಲಧಾರಿಸಿದ್ಧಾಂತಮುನಿಗಳು, ದೇವೇಂದ್ರಮುನಿಗಳು, ಜಯನಂದಿ ಮುನಿಗಳೂ – ಇವರು ನಮಗೆ ತಿಳಿವಳಿಕೆಯುಂಟಾಗುವಂತೆ ಆಶೀರ್ವದಿಸಲಿ.

**ಮುನಿಜನದೋದಿಸಿದೋಜೆಯೊ**
**ಳನುವದಿಪುದಿದೊಂದೆ ಕೊಂಡಕುಂದಾನ್ವಯನಂ**
**ದನವನಶುಕಮೆಂದೆನಗಿನಿ**
**ಸನುಗ್ರಹಂಗೆಯ್ಗೆ ಕರುಣದಿಂ ಮುನಿನಿವಹಂ ೧೪**

**ಪದವಿಭಾಗ-ಅನ್ವಯ-ಅರ್ಥ:** ಮುನಿಜನದ = ಮುನಿಗಳು, ಓದಿಸಿದ = ಉಪದೇಶಿಸಿದ, ಓಜೆಯೊಳ್ = ರೀತಿಯಲ್ಲಿಯೇ, ಅನುವದಿಪುದು = ಅನುಸರಿಸಿ ಹೇಳುವುದು, ಒಂದೆ = ಮಾತ್ರವೇ (ತನ್ನ ಕರ್ತವ್ಯ), ಎಂದು, (ಭಾವಿಸಿರುವ) ಕೊಂಡಕುಂದಾನ್ವಯ = ಕೊಂಡಕುಂದ ಅಥವಾ ಕುಂದಕುಂದರೆಂಬುವ ಆಚಾರ್ಯರ ವಂಶವೆಂಬ, ನಂದನವನ = ಉದ್ಯಾನವನದ, ಶುಕಂ = ಗಿಳಿಯಾದ, ಎನಗೆ = ನನಗೆ, ಮುನಿನಿವಹಂ = ಮುನಿಸಮೂಹವು, ಕರುಣದಿಂ = ದಯೆಯಿರಿಸಿ, ಇನಿಸು = ಸ್ವಲ್ಪ, ಅನುಗ್ರಹಂಗೆಯ್ಗೆ = ಅನುಗ್ರಹವನ್ನುಂಟುಮಾಡಲಿ.

**ಗದ್ಯಾನುಸರಣ:** ಕೊಂಡಕುಂದಾಚಾರ್ಯರ ವಂಶವೆಂಬ ನಂದನವನದ ಗಿಳಿಯಾದ ನನಗೆ ಮುನಿಸಂದೋಹವು ಕರುಣೆಯಿಟ್ಟು ಅನುಗ್ರಹವನ್ನುಂಟುಮಾಡಲಿ.

**ಪರಮಜಿನಮಾಲೆ ವರಗಣ**
**ಧರಮಾಲೆ ಮುನೀಂದ್ರಮಾಲೆ ಮುನಿಮಾಲೆ ನಿರಂ**
**ತರಮೀಗೆ ಭವ್ಯಮಾಲೆಗೆ**
**ಪರಾರ್ಥ್ಯಗುಣರತ್ನಮಾಲೆಯುಂ ದಯೆಯಿಂದಂ ೧೫**

**ಪದವಿಭಾಗ-ಅನ್ವಯ-ಅರ್ಥ:** ಪರಮಜಿನಮಾಲೆ = ಉನ್ನತರಾದ ಜಿನಸಮೂಹ, ವರಗಣಧರಮಾಲೆ = ತೀರ್ಥಂಕರರ ಮುಖ್ಯ ಶಿಷ್ಯರ ಸಮೂಹ, ಮುನೀಂದ್ರಮಾಲೆ = ಮುನಿಶ್ರೇಷ್ಠರ ಸಮೂಹ, ಮುನಿಮಾಲೆ = ಮುನಿಸಮೂಹ (ಇವರೆಲ್ಲರೂ), ಭವ್ಯಮಾಲೆಗೆ = ಜೈನ ಭಾವುಕ ಸಮುದಾಯಕ್ಕೆ, ದಯೆಯಿಂದಂ

= ದಯೆಯನ್ನು ಹೊಂದಿ, ಪರಾರ್ಥ್ಯ = ಅಮೂಲ್ಯವಾದ, ಗುಣರತ್ನಮಾಲೆಯಂ = ಗುಣರತ್ನಗಳ ಹಾರವನ್ನು, ನಿರಂತರಮ್ = ನಿಲುಗಡೆಯಿಲ್ಲದೆ, ಈಗೆ = ದಯಪಾಲಿಸಲಿ.

**ಗದ್ಯಾನುಸರಣ:** ಉನ್ನತ ಜಿನಸಮೂಹವೂ, ಗಣಧರಸಮೂಹವೂ, ಮುನಿಶ್ರೇಷ್ಠಸಮೂಹವೂ ಜೈನ ಭಾವುಕ ಸಮುದಾಯಕ್ಕೆ ದಯೆಯಿಂದ ಒಂದೇ ಸಮನೆ ಗುಣರತ್ನಗಳ ರಾಶಿಯನ್ನು ನೀಡಲಿ.

**ತಮುಮಂ ದ್ಯುಮಣಿಮಯೂಖೋ**
**ದ್ಗಮುಮಲೆವವೊಲಲೆಗೆ ಜಗದ ಮಿಥ್ಯಾತ್ವತಮ**
**ಸ್ತಮುಮನಕಳಂಕದೇವ**
**ಪ್ರಮಾಣರತ್ನಪ್ರದೀಪರಶ್ಮಿಕಳಾಪಂ** ೧೬

**ಪದವಿಭಾಗ–ಅನ್ವಯ–ಅರ್ಥ:** ತಮುಮಂ = ಕತ್ತಲೆಯನ್ನು, ದ್ಯುಮಣಿ = ಸೂರ್ಯನ, ಮಯೂಖ ಉದ್ಗಮಂ = ಕಿರಣಸಂದೋಹವು, ಅಲೆವವೊಲ್ = ಓಡಿಸುವ ಹಾಗೆ, ಜಗದ = ಜಗತ್ತಿನ, ಮಿಥ್ಯಾತ್ವತಮಃ + ತಮಂ = ಮಿಥ್ಯಾತ್ವ ಎಂಬ ಕತ್ತಲರಾಶಿಯುನ್ನು ಅಕಳಂಕದೇವ(ನ), ಪ್ರಮಾಣ = ಪ್ರಮಾಣಗಳೆಂಬ, ಪ್ರದೀಪರಶ್ಮಿ = ಸೊರಡಪ್ರಭೆಯು, ಅಲೆಗೆ = ಓಡಿಸಲಿ.

**ಗದ್ಯಾನುಸರಣ:** ಕತ್ತಲೆಯನ್ನು ಸೂರ್ಯನ ಕಿರಣಸಮೂಹವು ಓಡಿಸುವ ಹಾಗೆ, ಜಗತ್ತಿನ ಮಿಥ್ಯಾತ್ವ ಎಂಬ ಕತ್ತಲರಾಶಿಯುನ್ನು ಅಕಳಂಕದೇವನ ಪ್ರಮಾಣಗಳೆಂಬ ರತ್ನದೀಪಗಳ ಪ್ರಭೆಯು ಓಡಿಸಲಿ.

**ಮೃದುಪದಗತಿಯಿಂ ರಸಭಾ**
**ವದ ಪೆರ್ಚಿಂ ಪಣ್ಯವನಿತೆವೋಲ್ ಕೃತಿ ಸೌಂದ**
**ರ್ಯದ ಚಾತುರ್ಯದ ಕಣಿಯೆನೆ**
**ವಿದಗ್ಧಬುಧಜನದ ಮನಮುನಲೆಯುಲೆವೇಡಾ** ೧೭

**ಪದವಿಭಾಗ–ಅನ್ವಯ–ಅರ್ಥ:** ಮೃದುಪದಗತಿಯಿಂ = ಕೋಮಲವಾದ ಹೆಜ್ಜೆಗಳ ನಡಿಗೆಯಿಂದಲೂ, ರಸಭಾವದ = ಸಂತಸ ಮತ್ತು ಭಾವನೆಗಳ, ಪೆರ್ಚಿಂ = ಆಧಿಕ್ಯದಿಂದಲೂ, ಕೃತಿ = ಕಾವ್ಯವು, ಪಣ್ಯವನಿತೆವೋಲ್ = ವಿಲಾಸಿನಿಯ ಹಾಗೆ, ಸೌಂದರ್ಯದ ಚಾತುರ್ಯದ = ಚೆಲುವು ಮತ್ತು ಕೌಶಲಗಳ, ಕಣಿಯೆನೆ = ಗಣಿಯ ರೀತಿಯಲ್ಲಿ, ವಿದಗ್ಧ = ರಸಿಕರಾದ, ವಿಬುಧಜನದ = ವಿದ್ವಾಂಸರ ಗುಂಪಿನ, ಮನಮಂ = ಮನಸ್ಸನ್ನು, ಅಲೆಯಲೆವೇಡಾ = ಸೋಲಿಸಬೇಡವೇ?

**ಗದ್ಯಾನುಸರಣ:** ಪಣ್ಯವನಿತೆಯು ಹೇಗೆ ತನ್ನ ಚೆಲುವು ಚಾತುರ್ಯಗಳಿಂದ ರಸಿಕರನ್ನು ಆಕರ್ಷಿಸುವಳೋ ಹಾಗೆ ಕಾವ್ಯವು ತನ್ನ ಕೋಮಲವಾದ ಪಾದರಚನೆಯಿಂದಲೂ ರಸಭಾವಗಳ ಆಧಿಕ್ಯದಿಂದಲೂ ರಸಿಕರಾದ ವಿದ್ವಾಂಸವರ್ಗದ ಮನಸ್ಸನ್ನು ಸೆರೆಹಿಡಿಯಬೇಡವೇ?

**ವಿಶೇಷ ವಿಚಾರ:** ಹೆಣ್ಣು ಮತ್ತು ಕಾವ್ಯಗಳು ಆಕರ್ಷಕವಾಗುವ ಬಗೆ ಎಂತು ಎಂಬುದನ್ನು ಕವಿ ಇಲ್ಲಿ ಶ್ಲೇಷೆಯಿಂದ ಬಣ್ಣಿಸುತ್ತಿದ್ದಾನೆ. ಮೃದುಪದಗತಿ ಎಂಬುದು ಹೆಣ್ಣಿಗೆ ಅನ್ವಯಿಸಿಕೊಂಡಾಗ ಕೋಮಲ ನಡಿಗೆಯನ್ನೂ, ಕಾವ್ಯಕ್ಕೆ ಅನ್ವಯಿಸಿಕೊಂಡಾಗ ಪದ್ಯಗಳ ಸಾಲುಗಳ ಸುಭಗ ಸಂರಚನೆಯನ್ನೂ ಸೂಚಿಸುತ್ತದೆ. ಹಾಗೆಯೇ ರಸಭಾವ ಚಾತುರ್ಯಗಳು ಹೆಣ್ಣಿಗೆ ಸಂಬಂಧಿಸಿದಂತೆ ಸಂತಸ ನೀಡುವ ಮನೋಭಾವಕ್ಕೂ, ಕಾವ್ಯಕ್ಕೆ ಸಂಬಂಧಿಸಿದಂತೆ ಕಾವ್ಯಪರಿಣಾಮಕ್ಕೂ ಅನ್ವಯಿಸುತ್ತವೆ. ಕವಿಯ ಕಾಲದ ಸಮಾಜದಲ್ಲಿ ವೇಶ್ಯೆಗೆ ಗೌರವದ ಸ್ಥಾನವೇ ಇತ್ತು. ಅವಳು ಎಲ್ಲರನ್ನೂ ಆಕರ್ಷಿಸುವ ಹಾಗೆ ಕಾವ್ಯವೂ ಎಲ್ಲರ ಮನಸ್ಸನ್ನೂ ಗೆಲ್ಲಬೇಕೆಂಬ ಆಶಯವಿಲ್ಲಿದೆ. ಹೀಗಾಗಿ ಕಾವ್ಯವನ್ನು ವೇಶ್ಯೆಗೆ ಹೋಲಿಸುವುದನ್ನು ಕಂಡು ನಾವೇನೂ ಮೂಗುಮುರಿಯಬೇಕಾಗಿಲ್ಲ. ಈ ಬಗ್ಗೆ ಎಲ್. ಬಸವರಾಜು ಅವರ ಅಭಿಪ್ರಾಯವೂ ಇದೇ ಆಗಿದೆ: ನೋಡಿ, 'ಆದಿಪುರಾಣ' ಈ ಪದ್ಯಕ್ಕೆ ನೀಡಿರುವ ಅಡಿಟಿಪ್ಪಣಿ. ಆದರೆ ಇದಕ್ಕೆ 'ಪುಣ್ಯವನಿತೆ'ಎಂಬ ಪಾಠವೂ ಇದೆ; ಕೆ.ಜಿ.ಕುಂದಣಗಾರರು ಸಂಪಾದಿಸಿರುವ 'ಆದಿ ಪುರಾಣ'ದಲ್ಲಿ ಈ ಪಾಠವನ್ನೇ ಮುಖ್ಯಪಾಠವಾಗಿ ಸ್ವೀಕರಿಸಲಾಗಿದೆ.

**ಕಿವಿಯಿಂ ಬಗೆವುಗುವೊಡೆ ಕೊಂ**
**ಕುವೆತ್ತ ಪೊಸನುಡಿಯೆ ಪುಗುಗುಮುೞಿದುದು ಸಱಸ್ಸೈ**
**ತವಚಱನೆ ಮಾಡಿ ಸಱಸ್ಸೈ**
**ತುವೋಕುಮೇಂ ಬಗೆಯ ಬಟ್ಟೆಯಂ ಮುಟ್ಟುಗುಮೇ ೧೮**

**ಪದವಿಭಾಗ–ಅನ್ವಯ–ಅರ್ಥ:** ಕಿವಿಯಿಂ = ಕಿವಿಯ ಮೂಲಕ, ಬಗೆ ಪುಗುವೊಡೆ = ಮನಸ್ಸನ್ನು ಹೊಗಬೇಕೆಂದರೆ, ಪೊಸನುಡಿಯೆ = ಹೊಸ ಬಗೆಯ ಮಾತುಗಾರಿಕೆಯು ಮೂಲಕ ಮಾತ್ರವೇ, ಪುಗುಗುಂ = ಹೊಗಬೇಕು; ಉೞಿದುದು = ಬೇರೆಯ ಬಗೆಯಾದರೆ, ಸಱಸ್ಸೈತು = ವ್ಯರ್ಥವಾಗಿ, ಅವಚಱನೆ = ಬೇಸರವನ್ನು, ಮಾಡು = ಉಂಟುಮಾಡಿ, ಸಱಸ್ಸೈತು ಪೋಕುಂ = ನಿಷ್ಫಲವಾಗಿ ಹೋಗುವುದೇ ವಿನಾ, ಬಗೆಯ ಬಟ್ಟೆಯಂ = ಮನಸ್ಸೆಂಬ ಗುರಿಯನ್ನು, ಮುಟ್ಟುಗುಮೇ = ತಲುಪಬಲ್ಲುದೆ?

**ಗದ್ಯಾನುಸರಣ:** (ಕಾವ್ಯವು) ಕಿವಿಯ ಮೂಲಕ ಮನಸ್ಸನ್ನು ತಲುಪಬೇಕಾದರೆ ಹೊಸಬಗೆಯ ಮಾತುಗಾರಿಕೆಯಿಂದ ಮಾತ್ರವೇ ಹಾಗೆ ಮಾಡಬಲ್ಲುದು; ಇಲ್ಲದಿದ್ದರೆ, ಕೇವಲ ಬೇಸರವನ್ನುಂಟುಮಾಡಿ ವ್ಯರ್ಥವಾಗುವುದೇ ವಿನಾ ಮನಸ್ಸನ್ನು ಮುಟ್ಟಲಾರದು.

**ವಿಶೇಷ ವಿಚಾರ:** ಪಂಪ ಇಲ್ಲಿ ಸಂವಹನ ಪ್ರಕ್ರಿಯೆಯನ್ನು ಕುರಿತು ಮಾತಾಡಿದಂತಿದೆ; ಪಂಪ ಒಬ್ಬ ಮಾರ್ಗಕವಿ, ಅದರಿಂದ ಈ ಮಾತು ಮುಖ್ಯ; ಇದರಲ್ಲಿನ "ಕಿವಿಯಂ ಬಗೆವುಗುವೊಡೆ' ವಾಕ್ಯ ಬಹಳ ಮುಖ್ಯವೆನಿಸುತ್ತದೆ. ಕಾವ್ಯದ ಓದು ಅಥವಾ ಗಮಕದ ಮೂಲಕ ಕಾವ್ಯವನ್ನು ತಲುಪಿಸುವ ಬಗ್ಗೆ ಕವಿ ಮಾತಾಡುತ್ತಿದ್ದಾನೆಯೆ? ಯೋಚಿಸಬೇಕು; ಆ ಕಾಲದಲ್ಲಿ ಗಮಕವಿತ್ತೆ ಎಂಬುದೂ ಮುಖ್ಯವೇ.

**ಮೃದುಮಧುರವಚನರಚನೆಯೊ**
**ಳುದಾತ್ತಮರ್ಥಪ್ರತೀತಿಯಂ ಕೇಳ್ವ ಜನ**
**ಕ್ಕಿದಿರೊಳ್ಕುಡದಂದದು ಕ**
**ಬ್ಬದೊಳಿರ್ದುಂ ಕವಿಯ ಮನದೊಳಿರ್ದಂತೆ ವಲಂ ೧೯**

**ಪದವಿಭಾಗ–ಅನ್ವಯ–ಅರ್ಥ:** ಕೇಳ್ವ ಜನಕ್ಕೆ = (ಕಾವ್ಯವನ್ನು) ಆಲಿಸುವ ಸಹೃದಯರಿಗೆ, ಮೃದುಮಧುರ = ಕರ್ಕಶವಲ್ಲದ ಹಾಗೂ ಕೇಳಲು ಹಿತಕರವಾದ, ವಚನರಚನೆಯೊಳ್ = ಕಾವ್ಯನೆಯ್ಗೆಯ ಮೂಲಕ, ಉದಾತ್ತ = ಉನ್ನತವಾದ, ಅರ್ಥಪ್ರತೀತಿಯಂ = ಅರ್ಥಸ್ಪಷ್ಟತೆಯನ್ನು ಕುಡದಂದು = ನೀಡಲು ಸಾಧ್ಯವಿಲ್ಲದ ಪಕ್ಷದಲ್ಲಿ, ಅದು = ಅಂಥ ಕಾವ್ಯವು, ಕಬ್ಬದೊಳ್ ಇರ್ದುಂ = ಕಾವ್ಯಸ್ವರೂಪದಲ್ಲಿದ್ದರೂ, ಕವಿಯ ಮನದೊಳ್ = ಕವಿಯ ಮನಸ್ಸಿನಲ್ಲಿಯೇ ಇರ್ದಂತೆ ವಲಂ = ಇರುವ ಹಾಗಲ್ಲವೇ?

**ಗದ್ಯಾನುಸರಣ:** ಕಾವ್ಯವು ತನ್ನ ಕೋಮಲ ರಚನೆಯ ಮೂಲಕ ಕೇಳುಗರ ಮನಸ್ಸಿನಲ್ಲಿ ತನ್ನ ಉನ್ನತ ಅರ್ಥವಂತಿಕೆಯನ್ನು ಹೊಳೆಯಿಸಬೇಕು; ಇಲ್ಲದಿದ್ದರೆ ಕಾವ್ಯರೂಪದಲ್ಲಿದ್ದರೂ ಅದು ಕವಿಯ ಮನಸ್ಸಿನಲ್ಲಿಯೇ ಉಳಿದು ಬಿಟ್ಟಂತೆಯೇ ಅಲ್ಲವೇ?

**ವಿಶೇಷ ವಿಚಾರ:** ಕಾವ್ಯವು ಒಂದೆಡೆ ತನ್ನ ಶಬ್ದಶಯ್ಯೆಯ ಮೂಲಕ ಕಿವಿಗೆ ಆಕರ್ಷಕವಾಗಿರುವುದರ ಜೊತೆಗೆ, ಕೇಳಿದ ತಕ್ಷಣವೇ ತನ್ನ ಅರ್ಥವಂತಿಕೆಯನ್ನು ಬಿಟ್ಟುಕೊಡುವಂತಿರಬೇಕು. ಇಲ್ಲದಿದ್ದರೆ ಶಬ್ದರೂಪದಲ್ಲಿದ್ದರೂ ಕವಿಯ ಮನಸ್ಸಿನಲ್ಲಿರುವ ಕಾವ್ಯದಂತೆಯೇ ಸಂವಹನವಿಹೀನವಾಗುತ್ತದೆ ಇಲ್ಲಿ ಕವಿ ಕಾವ್ಯದ ಸಂವಹನಶೀಲತೆಯ ಬಗ್ಗೆ ಅಂದರೆ ಅದರ ಪಾರದರ್ಶಕತೆಯ ಬಗ್ಗೆ

ಮಾತನಾಡುತ್ತಿದ್ದಾನೆ. ಈ ಕೆಲವು ಪದ್ಯಗಳಲ್ಲಿ ಪಂಪ ತನ್ನ ಕಾವ್ಯಮೀಮಾಂಸೆಯನ್ನೇ ಪ್ರಸ್ತುತಪಡಿಸುತ್ತಿದ್ದಾನೆ. ಇಲ್ಲಿನ 'ಕೇಳ್ವಜನ' ಎಂಬ ಮಾತಿನ ಪ್ರಯೋಗ ಹಿಂದಿನ ಪದ್ಯದ 'ಕಿವಿಯಿಂ ಬಗೆಪುಗುವೊಡೆ' ಮಾತನ್ನೇ ನೆನಪಿಸುತ್ತದೆ; ಓದು ಮತ್ತು ಗ್ರಹಿಕೆಯ ಬಗ್ಗೆ ಕವಿ ಹೆಚ್ಚು ಒತ್ತು ಕೊಟ್ಟಿರುವಂತೆ ಕಾಣುತ್ತದೆ. ನಮ್ಮ ಹಿಂದಿನ ಕವಿಗಳೆಲ್ಲಕೇಳುಗರಿಗಾಗಿಯೇ ಕಾವ್ಯ ರಚಿಸಿದ್ದು; ಕಾವ್ಯಗಳು ಸಾಮಾನ್ಯರಿಗೆ ತಲುಪುತ್ತಿದ್ದುದು ಗಮಕವು ಕೇಳಿಸುವುದರ ಮೂಲಕವೇ ಆಗಿತ್ತೆನ್ನಬಹುದು.

**ಕವಿತಾರಹಸ್ಯಮಂ ಸ**
**ತ್ಕವಿಯಱಿಗುಮನೇಡಮೂಕನೇಡಂ ಜಡನೆಂ**
**ಬವನಱಿಗುಮೆ ವಿಟನಱಿಗುಂ**
**ಕುವಿಟಂ ಸ್ತ್ರೀರತರಹಸ್ಯದೊಳಗಱಿದಪನೇ ೨೦**

**ಪದವಿಭಾಗ-ಅನ್ವಯ-ಅರ್ಥ:** ಕವಿತಾರಹಸ್ಯಮಂ = ಕಾವ್ಯದ ಅಂತರಾರ್ಥವನ್ನು, ಸತ್ಕವಿ = ಕವಿ ಮನೋಭಾವದ ಸಹೃದಯನು, ಅಱಿಗುಂ = ತಿಳಿಯಬಲ್ಲನೇ (ಹೊರತು), ಅನೇಡಮೂಕ = ಒಮ್ಮೆಗೇ ಕಿವಿಡನೂ ಮೂಕನೂ ಆದವನೂ, ಏಡಂ = ಕಿವುಡನಾದವನೂ, ಜಡಂ = ಸಂವೇದನಾಶಿಲನಲ್ಲದವನೂ, ಎಂಬವಂ = ಎಂಬಂತಹವನು, ಅಱಿಗುಮೇ = ಅರ್ಥ ಮಾಡಿಕೊಳ್ಳಬಲ್ಲನೇ? ಸ್ತ್ರೀರತರಹಸ್ಯದೊಳ್ = ಸ್ತ್ರೀಪ್ರಣಯದ ಒಳಗುಟ್ಟನ್ನು, ವಿಟಂ = ರಸಿಕನಾದವನು, ಅಱಿಗುಂ = ತಿಳಿಯಬಲ್ಲನೇ (ಹೊರತು), ಕುವಿಟಂ = ಒರಟು ಕಾಮಿಯಾದವನು, ಅಱಿದಪನೇ = ಅರ್ಥಮಾಡಿಕೊಳ್ಳಬಲ್ಲನೇ?

**ಗದ್ಯಾನುಸರಣ:** ಕವಿಯ ಆಶಯವನ್ನು ಕವಿಮನೋಭಾದವದ ಸಹೃದಯ ಮಾತ್ರ ಮನದಟ್ಟುಮಾಡಿಕೊಳ್ಳಬಲ್ಲನೇ ವಿನಾ ಕೇಳುವುದೇ ಸಾಧ್ಯವಿಲ್ಲದ ಕಿವುಡನೂ ಅಲ್ಲ, ಸಂವೇದನೆಯಿಲ್ಲದವನೂ ಅಲ್ಲ; ಹೇಗೆಂದರೆ ಪ್ರಣಯದ ಮರ್ಮವನ್ನು ರಸಿಕ ಪ್ರಣಯಿಯು ಅರಿಯಬಲ್ಲನೇ ಹೊರತು ಕೇವಲ ಕಾಮಿಯಲ್ಲ.

**ವಿಶೇಷ ವಿಚಾರ:** ಇಲ್ಲಿಯೂ ಪಂಪನು ಕಾವ್ಯ-ಸಹೃದಯ ಸಂಬಂಧವನ್ನು ವೇಶ್ಯೆ-ವಿಟರ ಸಂಬಂಧಕ್ಕೆ ಹೋಲಿಸುತ್ತಿದ್ದಾನೆಂಬುದನ್ನು ಗಮನಿಸಬೇಕು. ಆ ಕಾಲದಲ್ಲಿ ವೇಶ್ಯಾವೃತ್ತಿಗೆ ಯಾವುದೇ stigma ಇದ್ದಂತೆ ಕಾಣುವುದಿಲ್ಲ.

**ಭಾಷಾವಿದರ್ಕವಿತ್ವವಿ**
**ಶೇಷಜ್ಞನಿಕಷರಪ್ಪೊಡಪ್ಪುದು ಸಭೆಯೊಳ್**
**ಮಾಷಮುಖದಂತೆ ದೋಷಗ**
**ವೇಷಣಪರರಪ್ಪರೆಂದೊಡದು ತೆಗಟಲ್ತೇ ೨೧**

**ಪದವಿಭಾಗ–ಅನ್ವಯ–ಅರ್ಥ:** ಭಾಷಾವಿದರ್ = ಭಾಷೆಯ ಮರ್ಮಗಳನ್ನು ಬಲ್ಲವರು, ಕವಿತ್ವವಿಶೇಷಜ್ಞನಿಕಷರ್ = ಕಾವ್ಯದ ವಿಶೇಷಗಳನ್ನು ಅರಿತುಕೊಳ್ಳಬಲ್ಲವರು, ಅಪ್ಪೊಡೆ = ಅದರೆ, (ಅಂತಹವರು) ಸಭೆಯೊಳ್ = ಸಭೆಯಲ್ಲಿ ಕುಳಿತು, ಮಾಷಮುಖದಂತೆ = ನೊಣದ ಹಾಗೆ, ದೋಷಗವೇಷಣರ್ = ದೋಷವನ್ನು ಹುಡುಕುವವರು, ಅಪ್ಪರ್ + ಎಂದೊಡೆ = ಆಗುತ್ತಾರೆ ಎಂದರೆ, ಅದು ತೆಗಟಿಲ್ತೇ = ತೆಗಳಿಕೆಯೇ ಸರಿ.

**ಗದ್ಯಾನುಸರಣ:** ಭಾಷೆಯ ಮರ್ಮವನ್ನು ಬಲ್ಲವರೂ, ಕಾವ್ಯಸೂಕ್ಷ್ಮಗಳನ್ನು ಅರಿಯಬಲ್ಲವರೂ ಆದರೆ ಸಭೆಯಲ್ಲಿ ಕುಳಿತು ನೊಣದ ಹಾಗೆ ಹೇಸಿಕೆಯನ್ನೇ ಹುಡುಕಿದರೆ ಅದು ತೆಗಳಿಕೆಯ ಕೃತ್ಯವಲ್ಲವೇ?

**ಧಿಷಣರ ಕೃತಿಗಳೊಳೆಸೆವಭಿ**
**ಲಷಿತಗುಣಂಗಳನೆ ಬಿಸುಟು ಮಾತ್ಸರ್ಯಮಹಾ**
**ವಿಷಮತಿಯಿಂದೆ ದೋಷಾ**
**ಮಿಷಮನೆ ಪೊರ್ದಿರ್ಪುವಲ್ತೆ ಕುಕವಿಬಕಂಗಳ್** ೨೨

**ಪದವಿಭಾಗ–ಅನ್ವಯ–ಅರ್ಥ:** ಧಿಷಣರ = ಪ್ರತಿಭಾವಂತರ, ಕೃತಿಗಳೊಳ್ = ಕಾವ್ಯಗಳಲ್ಲಿ, ಅಭಿಲಷಿತ = ಅಪೇಕ್ಷಣೀಯ, ಗುಣಂಗಳನೆ = ಗುಣಗಳನ್ನು, (ಗಮನಿಸುವುದನ್ನು) ಬಿಸುಟು = ಬಿಟ್ಟು, ಕುಕವಿಬಕಂಗಳ್ = ಕೆಟ್ಟ ಕವಿಗಳೆಂಬ ಬಕಗಳು, ಮಾತ್ಸರ್ಯಮಹಾ = ಅಧಿಕವಾದ ಹೊಟ್ಟೆಯಕಿಚ್ಚಿನ, ವಿಷಮಮತಿಯಿಂದೆ = ದುಷ್ಟ ಮನೋಭಾವದಿಂದ, ದೋಷ ಆಮಿಷಮನೆ = ದೋಷಗಳ ಆಕರ್ಷಣೆಯನ್ನು, ಪೊರ್ದಿರ್ಪುವಲ್ತೆ = ಹೊಂದಿರುತ್ತಾರಲ್ಲವೇ?

**ಗದ್ಯಾನುಸರಣ:** ಪ್ರತಿಭಾವಂತ ಕವಿಗಳ ಕಾವ್ಯಗಳಲ್ಲಿನ ಒಳ್ಳೆಯ ಅಂಶಗಳನ್ನು ಬಿಟ್ಟು ಕುಕವಿಗಳೆಂಬ ಬಕಗಳು ಕೇವಲ ದೋಷಗಳ ಬಗ್ಗೆಯೇ ಆಕರ್ಷಣೆ ಹೊಂದುವರಲ್ಲವೇ?

**ವಿಶೇಷ ವಿಚಾರ:** ಕವಿ ಎಂಬ ಶಬ್ದಕ್ಕೆ ಕಾವ್ಯ ರಚಿಸುವವನು ಎಂಬ ಅರ್ಥವಲ್ಲದೆ, ಬಕ ಎಂಬ ಅರ್ಥವೂ ಇದೆ. ಕವಿ ಇಲ್ಲಿ ಕವಿ ಪದದ ಬಗ್ಗೆ ಶ್ಲೇಷೆ ಮಾಡುತ್ತಿದ್ದಾನೆ. ತೆಲುಗು ಚಾಟುಪದ್ಯವೊಂದರಲ್ಲಿ, 'ಕವಿನಾಮಂಬು ನೀರುಕಾಕಿಕಿ ಲೇದೇ?' ಎಂಬ ವಾಕ್ಯವಿದೆ. ನೀರುಕಾಕಿ = ನೀರ ಕಾಗೆ.

**ಇದು ಮರುಳೆ ಶುಷ್ಕವೈಯಾ**
**ಕರಣಂಗಂ ಶುಷ್ಕತಾರ್ಕಿಕಂಗಂ ಬೆಳ್ಳ**
**ಕ್ಕರಿಗಂಗಂ ವಿಷಯಮೆ ಕಾ**
**ವ್ಯರತ್ನಮತಿಚತುರಕವಿಕದಂಬಕವಿಷಯಂ** ೨೩

ಮಾತು. ಬಲಿಷ್ಠರು ಮಾಡುವುದೆಲ್ಲಕ್ಕೂ ವಿಶೇಷ ಶಕ್ತಿಯಿರುತ್ತದೆ, ಅದನ್ನು ಟೀಕಿಸಲಾಗದು ಎಂಬ ಭಾವ

**ವಿದಿತಂ ಪ್ರಾತೀತಿತಂ ಕೋಮಳಮತಿಸುಭಗಂ ಸುಂದರಂ ಸೂಕ್ತಿಗರ್ಭಂ**
**ಮೃದುಸಂದರ್ಭಂ ವಿಚಾರಕ್ಷಮಮುಚಿತಪದಂ ಶ್ರವ್ಯಮವ್ಯಾಕುಳಂ ವ್ಯಾ**
**ಪ್ತದಿಗಂತಂ ಕಾವ್ಯಮೆಂದನ್ವಿತಸುಕವಿಜನಂ ಮೆಚ್ಚಿ ನಿಚ್ಚಂ ಮನಂಗೊ**
**ಳ್ವುದಱಿಂದಂ ನೆಟ್ಟನೀತಂ ಸುಕವಿಮನೋಮಾನಸೋತ್ತಂಸಹಂಸಂ ೨೬**

**ಪದವಿಭಾಗ-ಅನ್ವಯ-ಅರ್ಥ:** ಕಾವ್ಯಂ = ಈ ಕಾವ್ಯವು, ವಿದಿತಂ = ಪಾರದರ್ಶಕವಾದುದು, ಪ್ರಾತೀತಿಕಂ = ಅರ್ಥಪ್ರತೀತಿಯುಳ್ಳದ್ದು, ಕೋಮಳಸುಭಗಂ = ಕೋಮಲತೆಯಿಂದ ಮನೋಹರವಾದುದು, ಸುಂದರಂ = ಚೆಲುವಾದುದು, ಸೂಕ್ತಿಗರ್ಭಂ = ಒಳ್ಳೆಯ ಮಾತುಗಳಿಂದ ತುಂಬಿರ.ವಂಥದು, ಮೃದುಸಂದರ್ಭಂ = ಸೂಕ್ಷ್ಮ ಸನ್ನಿವೇಶಗಳನ್ನೊಳಗೊಂಡಿರುವಂಥದು, ವಿಚಾರಕ್ಷಮಂ = ವಿಚಾರಪ್ರಚೋದಕವಾದದ್ದು, ಉಚಿತಪದಂ = ತಕ್ಕುನಾದ ಮಾತುಗಾರಿಕೆಯುಳ್ಳದ್ದು, ಶ್ರವ್ಯಂ = ಕೇಳಲು ಹಿತಕರವಾದದ್ದು, ಅವ್ಯಾಕುಳಂ = ಕೋಟಲೆಯುಂಟುಮಾಡದಂಥದ್ದು, ವ್ಯಾಪ್ತದಿಗಂತಂ = ಇದರ ವಸ್ತುವು ದಿಗಂತದವರೆಗೂ ವ್ಯಾಪ್ತಿಯುಳ್ಳದ್ದು, ಎಂದು = ಎಂಬುದಾಗಿ, ಅನ್ವಿತಸುಕವಿಜನಂ = ಕವಿಹೃದಯವುಳ್ಳ ಸಹೃದಯಸಮೂಹವು, ಮೆಚ್ಚಿ = ಇಷ್ಟಪಟ್ಟು, ನಿಚ್ಚಂ = ಸದಾ ಕಾಲವೂ, ಮನಂಗೊಳ್ವುದಱಿಂದಂ = ಮನಸ್ಸಿಗೆ ತಂದುಕೊಳ್ಳುವುದರಿಂದಾಗಿ, ಈತಂ = ಈ ಕಾವ್ಯವನ್ನು ಬರೆದ ತಾನು, ನೆಟ್ಟನೆ = ನೇರವಾಗಿ, ಸುಕವಿಜನಮನೋ ಮಾನಸ ಉತ್ತಂಸಹಂಸಂ = ಸಹೃದಯರ ಮನಸ್ಸೆಂಬ ಸರೋವರದಲ್ಲಿ (ವಿಹರಿಸುವ) ಶ್ರೇಷ್ಠವಾದ ಹಂಸದಂತಿದ್ದಾನೆ.

**ಗದ್ಯಾನುಸರಣ:** ಈ ಕಾವ್ಯವು ಅರ್ಥಪಾರದರ್ಶಕತೆಯಿಂದ ಕೂಡಿ, ತನ್ನ ಕೋಮಲನುಡಿಗಳ ಸೊಬಗನಿಂದ ಕೂಡಿ, ಚೆಲುವಾಗಿ, ಒಳ್ಳೆಯ ನುಡಿಗಳನ್ನು ತುಂಬಿಕೊಂಡು, ಸೂಕ್ಷ್ಮ ಸನ್ನಿವೇಶಗಳಿಂದಲೂ ವಿಚಾರಕ್ಷಮತೆಯಿಂದಲೂ ತಕ್ಕುನಾದ ಶಬ್ದಶಯ್ಯೆಯಿಂದಲೂ ಕೂಡಿ, ಕೇಳಲು ಕಷ್ಟ ಕೊಡದೆ ಹಿತಕರವಾಗಿದ್ದು, ಜೊತೆಗೆ ಕಥೆಯು ದಿಗಂತವ್ಯಾಪ್ತಿಯನ್ನು ಪಡೆದಿರುವುದರಿಂದ ಸಹೃದಯಸಮೂಹವು ಮೆಚ್ಚಿ ನಿತ್ಯಂ ತನ್ನ ಮನಸ್ಸಿಗೆ ತಂದುಕೊಳ್ಳುವುದರಿಂದಾಗಿ ಇದನ್ನು ರಚಿಸಿದ ಕವಿಯಾದ ತಾನು ನಿಜವಾಗಿ ಸಹೃದಯರ ಮನಸ್ಸೆಂಬ ಸರೋವರದಲ್ಲಿ ತೇಲಾಡುವ ಶ್ರೇಷ್ಠ ಹಂಸದಂತೆ ಇದ್ದಾನೆ.

**ವಿಶೇಷ ವಿಚಾರ:** ತನ್ನ ಕಾವ್ಯವನ್ನು ಕವಿ 'ಸೂಕ್ತಿಗರ್ಭಂ' ಎಂದೂ ಹೇಳಿಕೊಳ್ಳುತ್ತಿದ್ದಾನೆ. ಪಂಪನಿಗೆ ತನ್ನ ಮಾತುಗಾರಿಕೆಯಲ್ಲಿ ತುಂಬ ವಿಶ್ವಾಸ;

ಹೀಗಾಗಿಯೇ ಕಾವ್ಯದ ಕೊನೆಯಲ್ಲಿ ತನ್ನ ಕಾವ್ಯವನ್ನು 'ವಾಕ್ಯಮಾಣಿಕ್ಯಕೋಶ' ಎಂದು ವಿಶೇಷಿಸಿಕೊಂಡಿದ್ದಾನೆ.

**ಇದು ನಿಚ್ಚಂ ಪೊಸತರ್ಣವಂಬೊಲತಿಗಂಭಿರಂ ಕವಿತ್ವಂ ಜಗ**
**ಕ್ಕದಱಿಂದಂ ಕವಿತಾಗುಣಾರ್ಣವನಿಳಾಲೋಕೈಕವಿಖ್ಯಾತನ**
**ಭ್ಯುದಯಪ್ರಾಪ್ತಿನಿಮಿತ್ತಮುತ್ತಮಯಶಂ ಸಂಸಾರದೊಳ್ಸಾರಮ**
**ಪ್ಪುದಱಿಂ ಧರ್ಮಮದಂ ನಿಮಿರ್ಚುವುದಱಿಂ ಸಂಸಾರಸಾರೋದಯಂ ೨೭**

**ಪದವಿಭಾಗ–ಅನ್ವಯ–ಅರ್ಥ:** ಇದು ಕವಿತ್ವಂ = ಈ ಕವಿತೆಯು ಅರ್ಣವಂಬೊಲ್ = ಸಮುದ್ರದ ಹಾಗೆ, ಪೊಸತು = ಹೊಸತಾದುದು, (ಹಾಗೂ) ಅತಿ ಗಂಭೀರಂ = ತುಂಬ ಆಳವಾದುದು; ಅದಱಿಂದಂ = ಆ ಕಾರಣಕ್ಕಾಗಿ, ಕವಿತಾಗುಣಾರ್ಣವಂ = ಕಾವ್ಯಗುಣದ ಸಮುದ್ರದಂತಿರುವ (ಮತ್ತು), ಇಳಾಲೋಕೈಕವಿಖ್ಯಾತಂ = ಜಗತ್ತಿನಲ್ಲಿಯೇ ಹೆಸರುವಾಸಿಯಾದ ಒಬ್ಬನೇ ಕವಿಯಾಗಿರುವ ತಾನು, ಧರ್ಮಂ = ಧರ್ಮವು, ಸಂಸಾರದೊಳ್ = ಇಡೀ ಬದುಕಿನಲ್ಲಿಯೇ, ಸಾರಂ = ಸಾರವತ್ತಾದುದು, ಅಪ್ಪುದಱಿಂ = ಆಗಿರುವುದರಿಂದಾಗಿ, ಅದಂ = ಆ ಧರ್ಮವನ್ನು ನಿಮಿರ್ಚುವುದಱಿಂ = (ಈ ಕಾವ್ಯವು) ಹರಡುವುದರಿಂದಾಗಿ, (ಕವಿಯು) ಸಂಸಾರಸಾರೋದಯಂ = ಸಂಸಾರದ ತಿರುಳನ್ನು ಹೆಚ್ಚಿಸುವಂಥವನು (ಆಗಿದ್ದಾನೆ).

**ಗದ್ಯಾನುಸರಣ:** ತನ್ನ ಈ ಕಾವ್ಯವು ಸಮುದ್ರದ ಹಾಗೆ ನಿತ್ಯನೂತನವಾದುದು ಮತ್ತು ತುಂಬ ಆಳವಾದ ಅರ್ಥವಂತಿಕೆಯನ್ನು ಪಡೆದಿರುವುದೂ ಆಗಿದೆ. ಇದರಿಂದಾಗಿ ತಾನು ಕವಿತಾಗುಣಾರ್ಣವ ಎನಿಸಿಕೊಂಡು ಜಗತ್ತಿನಲ್ಲಿ ಹೆಸರುವಾಸಿಯಾಗಿರು ಏಕೈಕ ಕವಿಯಾಗಿದ್ದೇನೆ. ಅಲ್ಲದೆ ಸಂಸಾರದ ತಿರುಳೆಂದರೆ ಧರ್ಮ, ಮತ್ತು ತನ್ನ ಈ ಕಾವ್ಯವು ಅಂತಹ ಧರ್ಮವನ್ನು ಹರಡುವುದರಿಂದ ತಾನು ಸಂಸಾರಸಾರವನ್ನು ಹೆಚ್ಚಿಸುವವನು ಎಂಬ ಹೆಗ್ಗಳಿಕೆಗೂ ಪಾತ್ರ.

**ವಿಶೇಷ ವಿಚಾರ:** ಪಂಪ ತನ್ನನ್ನು 'ಲೋಕೈಕವಿಖ್ಯಾತಂ' ಎಂದು ಕರೆದುಕೊಂಡಿದ್ದಾನೆ. ಅಂದರೆ ಇಡೀ ಲೋಕದಲ್ಲಿ ತನ್ನ ಕೀರ್ತಿ ಹರಡಿದೆ ಎಂಬ ಭ್ರಮೆ ಅವನಿಗಿತ್ತೆ? ಯಾಕೆಂದರೆ ಕನ್ನಡವು ಸೀಮಿತ ಪ್ರದೇಶದ ಭಾಷೆ ಎಂಬುದು ಅವನಿಗೂ ತಿಳಿದಿತ್ತು. ಸಂಸ್ಕೃತ ಮತ್ತು ಪ್ರಾಕೃತಗಳ ಆಳವಾದ ಪಾಂಡಿತ್ಯ ಅವನದು. ಹಾಗಾಗಿ ಲೋಕ ಎಂದರೆ ಬರಿ ಜಗತ್ತು ಎಂದು ಅರ್ಥೈಸದೆ 'ಕನ್ನಡ ಜಗತ್ತು' ಎಂದು ಅರ್ಥವಿಸುವುದು ಸೂಕ್ತ. ಒಂದೊಂದು ಭಾಷೆಯದೂ ಪ್ರತ್ಯೇಕ ಜಗತ್ತೇ ತಾನೇ?

**ಅತಿಸುಭಗೆಗೆ ಸಂದ ಸರ**
**ಸ್ವತಿಗೀತನ ಲಲಿತವಾಗ್ವಿಳಾಸಮೆ ದಲಲಂ**
**ಕೃತಿಯವೊಲೆಸೆದಪುದು ಜಗ**
**ತ್ಪ್ರತೀತನೀತನೆ ಸರಸ್ವತೀಮಣಿಹಾರಂ** ೨೮

**ಪದವಿಭಾಗ-ಅನ್ವಯ-ಅರ್ಥ:** ಅತಿಸುಭಗೆಗೆ = ಅತೀವ ಸುಂದರಿಯಾದ ಸರಸ್ವತಿಗೆ = ಕಾವ್ಯದೇವತೆಗೆ, ಈತನ + ಈ ಕವಿಯ, ವಾಗ್ವಿಳಾಸಮೆ = ಮಾತಿನ ಚಾತುರ್ಯವೇ, ಅಲಂಕೃತಿಯವೊಳ್ = ಅಲಂಕಾರದ ಹಾಗೆ, ಎಸೆದಪುದು = ಶೋಭಿಸುತ್ತದೆ, (ಅಂತಹ) ಜಗತ್ಪ್ರತೀತನ್ = ಜಗತ್ ಪ್ರಸಿದ್ಧನಾದ, ಈತನೆ = ಈ ಕವಿಯೆ, ಸರಸ್ವತೀಮಣಿಹಾರಂ = ಕಾವ್ಯದೇವಿ ತೊಟ್ಟ ಮುತ್ತಿನ ಸರ, ದಲ್ = ಅಲ್ಲವೇ?

**ಗದ್ಯಾನುಸರಣ:** ಯಾವ ಕವಿಯ ಮಾತಿನ ಚಾತುರ್ಯವು ಅತ್ಯಂತ ಸುಂದರಿಯಾದ ಕಾವ್ಯದೇವಿಯ ಅಲಂಕಾರವಾಗಿರುವುದರಿಂದ ಅಂಥ ಕವಿಯು ಸರಸ್ವತಿ ತೊಟ್ಟ ಮಣಿಯ ಹಾರ ಎಂದು ಕರೆಯಬಹುದು.

**ವಿಶೇಷ ವಿಚಾರ:** ಇಲ್ಲಿ ಅಲಂಕಾರ ಎಂಬ ಶಬ್ದವನ್ನು ಕವಿ ಎರಡು ಅರ್ಥಗಳಲ್ಲಿ ಬಳಸುತ್ತಿದ್ದಾನೆ: ಸರಸ್ವತಿ ಎಂಬ ಹೆಣ್ಣು ತೊಟ್ಟ ಒಡವೆ ಮತ್ತು ಕಾವ್ಯಕ್ಕೆ ಶೋಭೆ ತರುವ ಅಲಂಕಾರಗಳು = ಅರ್ಥಾಲಂಕಾರ ಶಬ್ದಾಲಂಕಾರಗಳು. ಪದ್ಯ ೧೭ ರಿಂದ ೨೮ ರವರೆಗಿನ ಹನ್ನೊಂದು ಪದ್ಯಗಳಲ್ಲಿ ಪಂಪನು ಕಾವ್ಯದ ಬಗೆಗಿನ ತನ್ನ ಮೀಮಾಂಸೆಯನ್ನು ವಿವರಿಸಿದ್ದಾನೆ. ಇವೆಲ್ಲ ಪ್ರತಿಭಾವಂತನಾದ ಕವಿಯೊಬ್ಬ ಕಾವ್ಯದ ಬಗೆಗಿನ ತನ್ನ ಅಭಿಪ್ರಾಯಗಳನ್ನು ಮಂಡಿಸಿ ಆ ಚರ್ಚೆಗೆ ತನ್ನ ಕೊಡುಗೆಯನ್ನು ನೀಡಿದ್ದಾನೆ.

**ಕದಳೀಗರ್ಭಶ್ಯಾಮಂ**
**ಮೃದುಕುಟಿಲಶಿರೋರುಹಂ ಸರೋರುಹವದನಂ**
**ಮೃದುಮಧ್ಯಮತನು ಹಿತಮಿತ**
**ಮೃದುವಚನಂ ಲಲಿತಮಧುರ ಸುಂದರವೇಷಂ** ೨೯

**ಪದವಿಭಾಗ-ಅನ್ವಯ-ಅರ್ಥ:** ತಾನು, ಕದಳೀಗರ್ಭ = ಬಾಳೆಯ ತಿರುಳಿನಂತಹ, ಶ್ಯಾಮಂ = ಕಂದುಗಪ್ಪು ಬಣ್ಣದವನು; ಮೃದು = ನಯವಾದ, ಹಾಗೂ, ಕುಟಿಲ = ಗುಂಗುರಾದ, ಶಿರೋರುಂ = ಕೂದಲುಳ್ಳವನು; ಸರೋರು = ಕಮಲದಂತಹ, ವದನಂ = ಮುಖವುಳ್ಳವನು; ಮೃದು = ಶೋಭಾಯಮಾನವಾದ, ಮಧ್ಯಮತನು = ಅತಿ ದೊಡ್ಡದೂ ಅಲ್ಲದ ಅತಿ

ಸಣ್ಣದೂ ಅಲ್ಲದ ದೇಹಗಾತ್ರವುಳ್ಳವನು; ಹಿತಮಿತ = ಆಹ್ಲಾದಕರವಾಗಿಯೂ, ಮಿತ = ದುಂದುಗಾರಿಕೆಯಿಲ್ಲದ, ವಚನಂ = ಮಾತುಗಳನ್ನಾಡುವವನು; ಲಲಿತ ಮಧುರ = ನಯವಾದ ಹಾಗೂ ಸಂತಸದಾಯಕವಾದ, ಸುಂದರವೇಷಂ = ಸುಂದರ ವಸ್ತ್ರಗಳನ್ನು ಧರಿಸುವವನು ಅಥವಾ ಆಕಾರವುಳ್ಳವನು.

**ಗದ್ಯಾನುಸರಣ:** ಪಂಪ ಇನ್ನು ಮುಂದೆ ಕೆಲವು ಪದ್ಯಗಳಲ್ಲಿ ತನ್ನ ಸ್ವರೂಪ ಬಣ್ಣನೆಯನ್ನು ಮಾಡಿಕೊಳ್ಳುತ್ತಾನೆ. ಈ ಪದ್ಯದಲ್ಲಿ ಆತನ ಹೊರರೂಪದ ವರ್ಣನೆಯಿದೆ: ತಾನು ಬಾಳೆಯ ಒಳಭಾಗದಂತಹ ಬಣ್ಣವುಳ್ಳವನೂ, ನಯವಾದ ಹಾಗೂ ಗುಂಗುರಾದ ತಲೆಗೂದಲುಳ್ಳವನೂ, ಕಮಲದಂತಹ ಮುಖವುಳ್ಳವನೂ, ಹಿತಕರವಾದ ಮಟ್ಟಸ ದೇಹಗಾತ್ರವುಳ್ಳವನೂ, ಹಿತಕರವಾಗಿ ಹಾಗೂ ಎಷ್ಟು ಬೇಕೋ ಅಷ್ಟು ಮಾತನಾಡುವವನೂ, ಒಟ್ಟಾರೆ ತನ್ನದು ಸುಂದರವಾದ ಆಕೃತಿ.

**ವಿಶೇಷ ವಿಚಾರ:** 'ಕದಳೀಗರ್ಭಶ್ಯಾಮಂ' ಎಂಬ ಶಬ್ದವು ಸಾಕಷ್ಟು ಚರ್ಚೆಗೊಳಗಾಗಿದೆ. ಬಾಳೆಯ ಗರ್ಭ ಏನನ್ನು ಸೂಚಿಸುತ್ತದೆ? ಬಾಳೆಯ ಮರದ ಗರ್ಭ ಅಂದರೆ ಅದರ ದಿಂಡೇ ಅಥವಾ ಮೋತೆಯೇ? ದಿಂಡು ಬೆಳ್ಳಗಿರುತ್ತದೆ, ಆದರೆ ಮೋತೆಯ ಬಣ್ಣ ನಮ್ಮ ನಾಡಿನ ಜನರ ಮೈಬಣ್ಣಕ್ಕೆ ಹತ್ತಿರವಿರುತ್ತದೆ; ಹೀಗಾಗಿ ಬಾಳೆಯ ತಿರುಳು ಎಂದರೆ ಅದರ ಗರ್ಭದಿಂದ ಹೊರಬಂದ ಮೋತೆ ಎಂದು ಕೆಲವರು ಅರ್ಥೈಸುತ್ತಾರೆ. ಮತ್ತೆ ಕೆಲವರು, ಬಾಳೆಯ ರಸ ಬಟ್ಟೆಗೆ ಸೋಕಿದರೆ ಉಂಟಾಗುವ ಕಂದುಬಣ್ಣವನ್ನು ಸೂಚಿಸುತ್ತದೆ ಎನ್ನುತ್ತಾರೆ.

**ವತ್ಸಕುಲತಿಲಕನಭಿಜನ**
**ವತ್ಸಳನಭಿಮಾನಮೂರ್ತಿ ಸುಕವಿಯಶೋನಿ**
**ರ್ಮತ್ಸರನಮೃತಮಯೋಕ್ತಿ ಶ**
**ರತ್ಸಮಯಸುಧಾಂಶೂವಿಶದಕೀರ್ತಿವಿತಾನಂ ೩೦**

**ಪದವಿಭಾಗ-ಅನ್ವಯ-ಅರ್ಥ:** ವತ್ಸಕುಲತಿಲಕನ್ = ವತ್ಸಕುಲಕ್ಕೆ ತಿಳಕದಂತಿರುವವನು; ಅಭಿಜನವತ್ಸಳನ್ = ಸಜ್ಜನರನ್ನು ಪ್ರೀತಿಸುವವನು; ಅಭಿಮಾನಮೂರ್ತಿ = ಸ್ವಾಭಿಮಾನದಿಂದ ಮೆರೆಯುವವನು; ಸುಕವಿಯಶೋನಿರ್ಮತ್ಸರನ್ = ಒಳ್ಳೆಯ ಕವಿಗಳ ಕೀರ್ತಿಯನ್ನು ಕಂಡು ಮತ್ಸರಪಡದಿರುವವನು; ಅಮೃತಮಯೋಕ್ತಿ = ಅಮೃತಕ್ಕೆ ಸಮಾನವಾದ ಮಾತುಗಳನ್ನಾಡುವವನು; ಶರತ್ಸಮಯ = ಶರತ್ಕಾಲದ, ಸುಧಾಂಶು = ಬೆಳುದಿಂಗಳಿನಂತಹ, ಕೀರ್ತಿವಿತಾನಂ = ಕೀರ್ತಿಯನ್ನು ಪಡೆದವನು.

**ಗದ್ಯಾನುಸರಣ:** ತಾನು ವತ್ಸಕುಲದಲ್ಲಿ ಹುಟ್ಟಿ ಅದಕ್ಕೆ ಹೆಸರು ತಂದವನು,

ಸಜ್ಜನರನ್ನು ಪ್ರೀತಿಸುವವನು, ಸ್ವಾಭಿಮಾನಿಯಾದವನು, ಸತ್ಕವಿಗಳ ಕೀರ್ತಿಯನ್ನು ಕಂಡು ಹೊಟ್ಟೆಕಿಚ್ಚುಪಡದವನು, ಹಿತಕರವಾಗಿ ಮಾತನಾಡುವವನು, ಮಾಗಿಯ ಕಾಲದ ಬೆಳುದಿಂಗಳಿನಂತೆ ನಿರ್ಮಲವಾದ ಕೀರ್ತಿಯನ್ನು ಗಳಿಸಿಕೊಂಡವನು.

**ವನಿತಾಕಟಾಕ್ಷಕುವಲಯ**
**ವನಚಂದ್ರಂ ಯುವತಿಜಘನಕಾಂಚೀರತ್ನಂ**
**ಸ್ತನಭರವಿನಮ್ರಗಣಿಕಾ**
**ಸ್ತನತಟಹಾರಂ ಸರಸ್ವತೀಮಣಿಹಾರಂ** ೩೧

**ಪದವಿಭಾಗ-ಅನ್ವಯ-ಅರ್ಥ:** ಸರಸ್ವತೀಮಣಿಹಾರಂ = ಸರಸ್ವತಿಯ ಅಲಂಕಾರದಂತಿರುವ ತಾನು, ವನಿತಾ = ಹೆಣ್ಣುಮಕ್ಕಳ, ಕಟಾಕ್ಷ(ಕಟ + ಅಕ್ಷ) = ಕುಡಿನೋಟವೆಂಬ, ಕುವಲಯವನ = ನೈದಿಲೆಯ ಸಮೂಹಕ್ಕೆ, ಚಂದ್ರಂ = ಚಂದ್ರನ ಹಾಗಿರುವವನು; ಯುವತೀಜನ = ಪ್ರಾಯದ ಹೆಣ್ಣುಮಕ್ಕಳ ಜಘನ = ಸೊಂಟದ, ಕಾಂಚೀರತ್ನಂ = ಡಾಬಿನ ರತ್ನಮಣಿಯಂತಿರುವವನು; ಸ್ತನಭರ = ಮೊಲೆಗಳ ಭಾರದಿಂದ, ವಿನಮ್ರ = ಬಾಗಿದ, ಗಣಿಕಾ + ವೇಶ್ಯೆಯರ, ಸ್ತನ = ಮೊಲೆಗಳ, ತಟಹಾರಂ = ಮೇಲಾಡುವ ಸರದಿಂತಿರುವವನು.

**ಗದ್ಯಾನುಸರಣ:** ಸರಸ್ವತಿಗೆ ಹಾರದಂತಿರುವ ತಾನು ಮಿಕ್ಕ ಯುವತಿಯರಿಗೂ ಅಲಂಕಾರಪ್ರಾಯನಾಗಿದ್ದೇನೆ: ಹೆಣ್ಣುಮಕ್ಕಳ ಕುಡಿನೋಟವೆಂಬ ನೈದಿಲೆಯನ್ನು ಅರಳಿಸುವ ಚಂದ್ರ ತಾನು; ಯುವತಿಯರು ಸೊಂಟದಲ್ಲಿ ಧರಿಸುವ ಡಾಬಿನ ಶೋಭಾಯಮಾನ ರತ್ನ ತಾನು; ತೋರ ಮೊಲೆಗಳ ವೇಶ್ಯೆಯರ ಮೊಲೆಗಳ ನಡುವೆ ಶೋಭಿಸುವ ಮುತ್ತಿನ ಹಾರ ತಾನು.

**ಕೇರಳವಿಟೀಕಟೀಸೂ**
**ತ್ರಾರುಣಮಣಿ ಮಲಯುಯುವತಿದರ್ಪಣನಾಂಧ್ರೀ**
**ನೀರಂಧ್ರಬಂಧುರಸ್ತನ**
**ಹಾರನುದಾರಂ ಸರಸ್ವತೀಮಣಿಹಾರಂ** ೩೨

**ಪದವಿಭಾಗ-ಅನ್ವಯ-ಅರ್ಥ:** ಉದಾರನ್ = ಔದಾರ್ಯವುಳ್ಳ, ಸರಸ್ವತೀಮಣಿಹಾರಂ = ಸರಸ್ವತಿಯ ಅಲಂಕಾರದಂತಿರುವ ತಾನು, ಕೇರಳವಿಟೀ = ಕೇರಳದ ವಿಟವನಿತೆಯರ, ಕಟೀಸೂತ್ರ = ಸೊಂಟದ ದಾರಕ್ಕೆ (ಕಟ್ಟಿದ), ಅರುಣಮಣಿ = ಕೆಂಪು ಮಣಿ ಅಥವಾ ಮಾಣಿಕ್ಯ; ಮಲಯಯುವತಿ = ಮಲಯ ಯುವತಿಯರ, ದರ್ಪಣನ್ = ಕನ್ನಡಿ, ಆಂಧ್ರೀ _ ಆಂಧ್ರ ಯುವತಿಯರ, ಬಂಧುರಸ್ತನ = ಸುಂದರ ಮೊಲೆಗಳ, ಹಾರನ್ = ಹಾರದಂತಿರುವವನು.

**ಗದ್ಯಾನುಸರಣ:** ಕೇರಳದ ವಿಟವನಿತೆಯರ ಸೊಂಟದ ದಾರಕ್ಕೆ ಕಟ್ಟಿದ ರತ್ನದಂತಿರುವ, ಮಲಯಯುವತಿಯರ ನೋಡಿಕೊಳ್ಳುವ ಕನ್ನಡಿಯಂತಿರುವ, ಆಂಧ್ರಯುವತಿಯರ ಮೊಲೆಗಳ ನಡುವಣ ಹಾರದಂತಿರುವವನು ತಾನು.

**ವಿಶೇಷ ವಿಚಾರ:** ಈ ಕೆಲವು ಪದ್ಯಗಳಲ್ಲಿ ಪಂಪ ತನ್ನ ಪ್ರಣಯರಸಿಕತೆಯನ್ನು ವ್ಯಕ್ತಪಡಿಸಿಕೊಳ್ಳುತ್ತಿದ್ದಾನೆ. ಈ ಕವಿಗೆ ಇವನ್ನೆಲ್ಲ ಹೇಳಿಕೊಳ್ಳಲು ಸಂಕೋಚವಿಲ್ಲವೇ ಎಂದು ಈಗಿನವರಿಗೆ ಅನ್ನಿಸಬಹುದು. ಆದರೆ ಯುವಕನಾದವನು ರಸಿಕನಾಗಿ ವೇಶ್ಯೆಯರ ಸಹವಾಸ ಮಾಡುವುದು – ಕನಿಷ್ಠ ಪಕ್ಷ, ಮೇಲ್ವರ್ಗದ ಜನಗಳಲ್ಲಿ – ಆ ಕಾಲದಲ್ಲಿ ನಿಷಿದ್ಧವಾಗದೆ ಒಂದು ಬಗೆಯಲ್ಲಿ ಸಾಮಾಜಿಕ ಮಟ್ಟದ ಸಂಕೇತವಾಗಿದ್ದಿತೇನೋ. . ಮಹಾಕಾವ್ಯಗಳಲ್ಲಿನ ಅಷ್ಟಾದಶವರ್ಣನೆಗಳು ಬದುಕಿನ ವಿವಿಧ ನೆಲೆಗಳ ವರ್ಣನೆಗಳು; ಅವುಗಳಲ್ಲಿ ಸೂಳೆಗೇರಿಯ ವರ್ಣನೆಯನ್ನು ಸೇರಿಸಿರುವುದನ್ನೂ ಈ ಹಿನ್ನೆಲೆಯಲ್ಲಿ ನೋಡಬೇಕು ಅನ್ನಿಸುತ್ತದೆ.

**ದುಂದುಭಿಗಭೀರನಿನದಂ**
**ದುಂದುಭಿಸಂವತ್ಸರೋದ್ಭವಂ ಪ್ರಕಟಯಶೋ**
**ದುಂದುಭಿ ಸಿಂಹಾಸನಪುರ**
**ದುಂದುಭಿಪತಿಚರಣಕಮಳಭೃಂಗಂ ಪಂಪಂ** ೩೩

**ಪದವಿಭಾಗ–ಅನ್ವಯ–ಅರ್ಥ:** ಪಂಪನು, ದುಂದುಭಿ = ಭೇರಿಯಂತೆ, ಗಭೀರನಿನದಂ = ಆಳವಾದ ಧ್ವನಿಯುಳ್ಳವನು; ದುಂದುಭಿಸಂವತ್ಸರ = ಅರುವತ್ತು ಸಂವತ್ಸರಗಳಲ್ಲಿ ಒಂದಾದ ದುಂದುಭಿ ಹೆಸರಿನ ವರ್ಷದಲ್ಲಿ ಉದ್ಭವಂ = ಹುಟ್ಟಿದವನು; ಪ್ರಕಟ = ಮೊಳಗುವ, ಯಶೋದುಂದುಭಿ = ಕೀರ್ತಿಯ ಭೇರಿಯುಳ್ಳವನು; ಸಿಂಹಾಸನ = ಸಿಂಹಾಸನಕ್ಕೂ, ಸುರದುಂದುಭಿ = ದೇವತೆಗಳ ದುಂದುಭಿಗೂ, ಪತಿ = ಒಡೆಯನಾದ (ಜಿನನ), ಚರಣಕಮಲ = ಪಾದಪದ್ಮಗಳಲ್ಲಿ ವಿಹರಿಸುವ, ಭೃಂಗಂ = ದುಂಬಿಯಂತಿರುವವನು.

**ಗದ್ಯಾನುಸರಣ:** ಪಂಪನಾದ ತನ್ನ ಧ್ವನಿಯು ದುಂದುಭಿಸ್ವನದಂತೆ ಆಳವಾದುದು, ತಾನು ಹುಟ್ಟಿದುದೂ ದುಂದುಭಿ ಹೆಸರಿನ ಸಂವತ್ಸರದಲ್ಲಿ, ತನ್ನ ಕೀರ್ತಿದುಂದುಭಿಯು ಎಲ್ಲೆಡೆ ಮೊಳಗುತ್ತಿರುವಂಥದು, ಆದರೆ ತಾನು ಮಾತ್ರ ಸಿಂಹಾಸನ ಮತ್ತು ಸುರಭೇರಿಗಳ ಒಡೆಯಯನಾದ ಜಿನನ ಪಾದಕಮಲಗಳಲ್ಲಿ ದುಂಬಿಯಂತೆ ನೆಲೆನಿಂತವನು.

**ವಿಶೇಷ ವಿಚಾರ:** ದುಂದುಭಿ ಸಂವತ್ಸರವು ಕ್ರಿಶ ೯೦೨ ಕ್ಕೆ ಸರಿಹೋಗುತ್ತದೆ.

ಇದೇ ಕಾವ್ಯದ ಹದಿನಾರನೆಯ ಆಶ್ವಾಸದ ೭೭ ನೇ ಪದ್ಯದಲ್ಲಿ ಪಂಪನು ಈ ಕಾವ್ಯವನ್ನು ಶಕವರ್ಷ ೮೬೩ ನೇ ಪ್ಲವ ಸಂವತ್ಸರದ ಕಾರ್ತಿಕ ಶುಕ್ಲಪಕ್ಷದ ಪಂಚಮಿ ಭಾನುವಾರದಂದು ಬರೆದು ಮುಗಿಸಿದಂತೆ ಹೇಳಿಕೊಳ್ಳುತ್ತಾನೆ; ಇದು ಕ್ರಿಶ ೯೪೨ ನೇ ಇಸವಿ ಅಕ್ಟೋಬರ್ ತಿಂಗಳ ೧೬ ನೆಯ ದಿನಾಂಕಕ್ಕೆ ಸರಿಹೋಗುತ್ತದೆ. ಅಂದರೆ ಪಂಪನು ಈ ಕಾವ್ಯವನ್ನು ಬರೆದುದು ತನ್ನ ೪೦ ನೆಯ ವಯಸ್ಸಿನಲ್ಲಿ ಎಂದಂತಾಯಿತು.

**ಎಂದಿಂತು ತಮ್ಮ ತಮ್ಮಣು**
**ಗಿಂದಂ ಪೆಸರಿಟ್ಟು ಬುಧಸಮೂಹಮಿದಂ ಪೇ**
**ಟ್ಎಂದೊಡೆ ಪೇೞಲ್ಕಾಂ ಬಗೆ**
**ದಂದೆನಿದೆನ್ನಳವೆ ಗಣಧರೋದಿತಚರಿತಂ ೩೪**

**ಪದವಿಭಾಗ–ಅನ್ವಯ–ಅರ್ಥ:** ಎಂದು = ಎಂಬುದಾಗಿ, ಬುಧಸಮೂಹಂ = ವಿದ್ವಾಂಸರ ಗುಂಪು, ತಮ್ಮ ತಮ್ಮ, ಅಣುಗಿಂದಂ = ಪ್ರೀತಿಯಿಂದ, ಪೆಸರಿಟ್ಟು = ಹೆಸರುಗಳನ್ನಿಟ್ಟು, ಇದಂ = ಈ ಕಾವ್ಯವನ್ನು, ಪೇೞ್ = ಹೇಳು, ಬರೆ, ಎಂದೊಡೆ = ಎಂದು ಕೇಳಿಕೊಳ್ಳಲು, ಆಂ = ನಾನು, ಪೇೞಲ್ಕೆ = ಹೇಳುವುದಕ್ಕೆ ಬಗೆದೆನ್ = ನಿರ್ಧರಿಸಿದೆ; (ಇಲ್ಲದಿದ್ದರೆ) ಗಣಧರ ಉದಿತ = ಗಣಧರರಿಂದ ಹೇಳಲಾದ, ಚರಿತಂ = ಚರಿತ್ರೆಯಾದ, ಇದು = ಈ ಕಾವ್ಯವು, ಎನ್ನಳವೆ = ನನ್ನ ಸಾಮರ್ಥ್ಯಕ್ಕೊಳಗಾದುದೇ?

**ಗದ್ಯಾನುಸರಣ:** ವಿದ್ವಾಂಸರು ಹೀಗೆ ಬೇರೆ ಬೇರೆ ಹೆಸರುಗಳಿಂದ ನನ್ನನ್ನು ಪ್ರೀತಿಯಿಂದ ಕಂಡು ಈ ಕಾವ್ಯವನ್ನು ಬರೆಯಲು ಪ್ರೇರಿಸಿದರು; ಇಲ್ಲದಿದ್ದರೆ ಗಣಧರರಿಂದ ಉಕ್ತವಾದ ಈ ಚರಿತ್ರೆಯನ್ನು ಬರೆಯಲು ನಾನು ಸಮರ್ಥನೇ?

**ಪುರುದೇವಾದಿಜಿನೇಂದ್ರವಾಳೆ ಗಣಭೃತ್ಸಂತಾನಮೆಂದೀ ಪರಂ**
**ಪರೆಯಿಂ ವಿಶ್ರುತವೀರಸೇನಜಿನಸೇನಾಚಾರ್ಯಪರ್ಯಂತಮಾ**
**ಗಿರೆ ಬಂದೀ ಕಥೇ ಗುಣ್ಪುವೆತ್ತುದವರಂ ಜ್ಞಾನವರ್ಧಿಸಂಪನ್ನರೆಂ**
**ದಿರದಾಂ ಧೃಷ್ಟನೆನೀ ಕಥಾಬ್ಧಿಯುಮನೇನೀಸಲ್ಕನಂದಂದೆನೋ೩೫**

**ಪದವಿಭಾಗ–ಅನ್ವಯ–ಅರ್ಥ:** ಪುರುದೇವಾದಿ = ಪುರುದೇವನೇ ಮುಂತಾದ, ಜಿನೇಂದ್ರಂ = ಜಿನೇಂದ್ರರು, ಗಣಭೃತ್ + ಗಣಧರರ, ಸಂತಾನಂ = ಗುಂಪು, ಎಂದು = ಎಂಬುವರರ, ಪರಂಪರೆಯಿಂ = ಪರಂಪರೆಯಿಂದ, ವಿಶ್ರುತ = ಜ್ಞಾನಿಗಳಾಥ, ವೀರಸೇನಜಿನಸೇನಾಚಾರ್ಯ = ವೀರಸೇನ ಮತ್ತು ಜಿನಸೇನಾಚಾರ್ಯರ, ಪರ್ಯಂತಂ = ವರೆವಿಗೂ, ಆಗಿರೆ = ಆಗಿ, ಬಂದ = ಸಾಗಿ ಬಂದಿರುವ, ಈ ಕಥೆ = ಆದಿದೇವನ ಈ ಚರಿತ್ರೆಯು, ಗುಣ್ಪು + ಪೆತ್ತುದು = ಅಗಾಧವಾದುದು; ಅವರುಂ = ಆ ಪರಂಪರೆಯುವರಾದರೋ,

ಜ್ಞಾನರ್ಧಿಸಂಪನ್ನರ್ = ಅಪಾರವಾದ ಜ್ಞಾನವೆಂಬ ಸಂಪತ್ತಿನಿಂದ ಕೂಡಿದವರು; ಎಂದು, ಇರದೆ = ಸುಮ್ಮನಿರದೆ, ಧೃಷ್ಟನೆನ್ = ಉದ್ಧತನಾದ, ಆಂ = ನಾನು, ಈ ಕಥಾಬ್ಧಿಯುಮನ್ = ಈ ಕಥೆಯೆಂಬ ಸಮುದ್ರವನ್ನು, ಈಸಲ್ = ಈಜಲು, ಮನಂದಂದೆನೋ = ಮನಸ್ಸು ಮಾಡಿದೆನೋ!

**ಗದ್ಯಾನುಸರಣ:** ಪುರುದೇವನ ಈ ಕಥೆಯು ಪುರುದೇವಾದಿ ಜಿನೇಂದ್ರರು ಹಾಗೂ ಗಣಧರಸಮೂಹದಿಂದ ಹಿಡಿದು ಜ್ಞಾನಿಗಳಾದ ವೀರಸೇನ ಜಿನಸೇನಾಚಾರ್ಯರವರೆಗೂ ಬಂದಿರುವಂಥದು; ಅವರುಗಳಾದರೋ ಅಗಾಧ ಜ್ಞಾನಸಂಪನ್ನರು; ಆದರೆ ಈ ಖಥಾಸಾಗರವನ್ನು ನಿಭಾಯಿಸಲು ನಿರ್ಧರಿಸಿರುವ ನಾನು ಉದ್ಧತನೇ ಸರಿ!

**ವಿಶೇಷ ವಿಚಾರ:** ತಾನು ನಿರ್ವಹಿಸಬೇಕಾದ ಕಥಾವಿಸ್ತಾರವನ್ನು ಪಂಪ ಸಾಗರಕ್ಕೆ ಹೋಲಿಸುವುದನ್ನು 'ವಿಕ್ರಮಾರ್ಜುನವಿಜಯ'ದಲ್ಲೂ ಕಾಣಬಹುದು. 'ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿಯನ್ ಈಸುವೆನೆಂಬ ಗರ್ವಮೆನಗಿಲ್ಲ' ಎಂದು ಅಲ್ಲಿಯೂ ಹೇಳಿಕೊಳ್ಳುತ್ತಾನೆ. ತನ್ನ ಎರಡೂ ಕಾವ್ಯಗಳ ವಸ್ತು ವ್ಯಾಪ್ತಿಯಲ್ಲಿ ದೊಡ್ಡದು ಮಾತ್ರವಲ್ಲ, ಗಾಂಭೀರ್ಯದಲ್ಲಿಯೂ ಹಿರಿದು. ವಸ್ತುವಿನ ಅಗಾಧತೆಯ ಹಿನ್ನೆಲೆಯಲ್ಲಿ ತನ್ನ ಹೊಣೆಗಾರಿಕೆಯೆಂಥದು ಎಂಬ ಎಚ್ಚರ ಕವಿಗಿದೆ. ಹಾಗಾಗಿ ಎರಡೂ ಕಡೆ ವಿನಯವನ್ನು ಮೆರೆಯುತ್ತಿದ್ದಾನೆ.

**ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗಟ್ತೆ ಲಾಭಮೆಂ**
**ಬಿವೆ ವಲಮಿಂದ್ರಪೂಜೆ ಭುವನಸ್ತುತಮಪ್ಪ ನೆಗಟ್ತೆ ಮುಕ್ತಿ ಸಂ**
**ಭವಿಸುವ ಲಾಭಮೆಂಬಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆ**
**ಸಾರವೆ ಪೆರಱೀವುದೇಂ ಪೆಱರ ಮಾಡುವುದೇಂ ಪೆಱರಿಂದಮಪ್ಪುದೇಂ೩೬**

**ಪದವಿಭಾಗ–ಅನ್ವಯ–ಅರ್ಥ:** ಕವಿತೆಯೊಳ್ = ಕಾವ್ಯರಚನೆಯಿಂದ, ಆಸೆಗೆಯ್ವ = ನಿರೀಕ್ಷಿಸುವ (ನಿರೀಕ್ಷಿಸಬೇಕಾದ), ಫಲಂ ಆವುದೊ = ಪ್ರತಿಫಲಗಳು ಯಾವುವು? ಪೂಜೆ = ಗೌರವ, ನೆಗಟ್ತೆ = ಕೀರ್ತಿ, ಲಾಭಂ = ಲಾಭ, ಎಂಬಿವೆ ವಲಂ = ಎಂಬುವು ತಾನೇ? (ಆದರೆ) ಜಿನೇಂದ್ರಗುಣಸ್ತುತಿಯಿಂದೆ = ಜಿನನ ಗುಣಗಣಗಳನ್ನು ಹೊಗಳುವುದರಿಂದ, ಇಂದ್ರಪೂಜೆ = ಇಂದ್ರನೇ ನೀಡುವ ಗೌರವ, ಭುವನಸ್ತುತಮಪ್ಪ = ಜಗತ್ತೇ ಹೊಗಳುವಂತಹ, ನೆಗಟ್ತೆ = ಕೀರ್ತಿ, ಮುಕ್ತಿ ಸಂಭವಿಸುವ = ಮೋಕ್ಷವೇ ದೊರಕುವಂತಹ, ಲಾಭಮೆಂಬಿವೆ = ಈ ಲಾಭಗಳು, ತಾಮೆ = ಸಾವಾಗಿ, ಸಾರವೆ = ಉಂಟಾಗುವುದಿಲ್ಲವೇ? (ಹೀಗಾಗಿ) ಪೆಱರ್ = ಬೇರೆಯವರು, ಈವುದೇಂ = ಏನು ಕೊಡಬಲ್ಲರು, ಪೆಱರ = ಬೇರೆಯವರು, ಮಾಡುವುದೇಂ = ಏನು (ಸಹಾಯ) ಮಾಡಬಲ್ಲರು, ಪೆಱರಿಂದಂ = ಬೇರೆಯವರಿಂದಂ, ಅಪ್ಪುದೇಂ = ಏನಾದೀತು?

**ಗದ್ಯಾನುಸರಣ:** ಕಾವ್ಯರಚನೆ (ಅಥವಾ ವಾಚನ)ದಿಂದ ನಿರೀಕ್ಷಿಸಬಹುದಾದ ಫಲಗಳೆಂದರೆ ಗೌರವ, ಕೀರ್ತಿ ಮತ್ತು ಲಾಭಗಳೇ ತಾನೇ? ಆದರೆ ಈ ಕಾವ್ಯರಚನೆಯ ಮೂಲಕ ಮಾಡುವ ಜಿನೇಂದ್ರನ ಸ್ತುತಿಯಿಂದ ಇಂದ್ರ ತೋರುವ ಗೌರವ, ಜಗತ್ತೇ ಹೊಗಳುವ ಕೀರ್ತಿ ಹಾಗೂ ಮೋಕ್ಷದ ಲಾಭ ತಾವಾಗಿ ಕೈಸೇರುತ್ತವೆ. ಹೀಗಾಗಿ ಬೇರೆಯವರು ಇಂಥ ಕಾವ್ಯಕ್ಕೆ ಬೇರೆಯವರು ಏನು ತಾನೇ ನೀಡಬಲ್ಲರು, ಬೇರೆಯವರು ಏನು ತಾನೇ ಸಹಾಯ ನೀಡಬಲ್ಲರು, ಬೇರೆಯವರಿಂದ ಏನು ತಾನೇ ಆದೀತು?

**ವಿಶೇಷ ವಿಚಾರ:** ಒಂದು ರೀತಿ ಈ ಪದ್ಯದ ಮೂಲಕ ಪಂಪ ಕಾವ್ಯಪ್ರಯೋಜನಗಳ ಬಗ್ಗೆ ಆಲೋಚಿಸುತ್ತಿರುವಂತಿದೆ. ತನ್ನ ಕಥಾನಾಯಕ ಆದಿ ಜಿನನೇ ಆದ್ದರಿಂದ ಅವನ ಕಥೆಯನ್ನು ಶ್ರದ್ಧೆಯಿಂದ ನಿರೂಪಿಸಿದರೆ, ಸಿಕ್ಕುವ ಫಲಗಳು ಅಲೌಕಿಕ ಸ್ವರೂಪದವು ಎಂದವನ ಅನಿಸಿಕೆ. ಆದರೆ ಇದು ಅವನ ಮೊದಲ ಕಾವ್ಯ; ಮುಂದೆ 'ವಿಕ್ರಮಾರ್ಜುನ ವಿಜಯ' ರಚಿತವಾಯಿತು. ಬೇರೆಯವರ ಬಗ್ಗೆ ಇಲ್ಲಿ ನಿಕೃಷ್ಟವಾಗಿ ಮಾತನಾಡುವ ಪಂಪ ಅಲ್ಲಿ ವಿಭಿನ್ನ ನಿಲವನ್ನು ತಾಳುತ್ತಾನೆ. ಆ ಕಾವ್ಯವನ್ನು ಆತ ಬರೆದುದೇ ಅರಿಕೇಸರಿಯ ವೈಭವೀಕರಣದ ಉದ್ದೇಶದಿಂದ; ಅವನ ಆಹ್ವಾನದ ಮೇರೆಗೆ. 'ಎಸೆಯೆ ಸಮಸ್ತಭಾರತಮನಾವ ನರೇಂದ್ರರುಮಾರ್ತು ಕೂರ್ತು ಪೇೞಿಸರೆ ಕವೀಂದ್ರರುಂ ನೆಱೆಯೆ ಪೇೞರೆ ಪೇೞ್ಪೊಡೆಯ್ದೆ ನೀನೆ ಪೇೞಿಸುವೆಯುದಾತ್ತ ಕೀರ್ತಿ ನಿಲೆ, ಪೇೞ್ವೊಡೆ ಪಂಪನೆ ಪೇೞ್ಗಂ' ಎಂದು ಜನರೆಲ್ಲ ಹೇಳಲು ಹಾಗೆ ಮಾಡಿದ ಅರಿಕೇಸರಿ ಅವನಿಗಿತ್ತುದು ಅಪಾರವಾದ ಹಣ, ಗೌರವ ಮತ್ತು ಧರ್ಮವುರ ಎಂಬ ಅಗ್ರಹಾರಗಳೆಂಬ ಬಳುವಳಿಗಳನ್ನು. ವಿವರಗಳಿಗೆ ನೋಡಿ: 'ವಿಕ್ರಮಾರ್ಜುನವಿಜಯ', ಆಶ್ವಾಸ ೧೪, ಪದ್ಯಗಳು ೫೧ ರಿಂದ ೫೭ ರವರೆಗೆ. ಹಾಗಾಗಿ ಕವಿತೆಯ ಫಲಗಳ ಬಗ್ಗೆ ಇಲ್ಲಿ ಮಾತಾಡುವ ಪಂಪ ಕೇವಲ ಧಾರ್ಮಿಕ ಕಾವ್ಯಗಳ ಕುರಿತಂತೆ ಹೀಗೆನ್ನುತ್ತಿದ್ದಾನೇನೋ!

**ಪೆಸರ್ಗೊಂಡಿಂದ್ರನರೇಂದ್ರವಂದ್ಯನನೊಱಲ್ದೆತ್ತಾನುಮೋರೊರ್ಮೆ ಚಿಂ**
**ತಿಸಿದೊಂಗಂ ಪವಣಿಲ್ಲ ಪುಣ್ಯಮೆನೆ ಪೂಣ್ದೊಲ್ಪಿಂದಮೋರಂತೆ ಭಾ**
**ವಿಸಿ ತಾಂ ತನ್ಮಯನಾಗಿ ತಚ್ಚರಿತಮುಂ ಕಾವ್ಯಂಗಳೊಳ್ಕೂಡೆ ಬ**
**ಣ್ಣಿಸಿ ಪೇೞ್ದಾತನ ಕರ್ಮನಿರ್ಜರೆಯನಂತಿಂತುಂತೆನಲ್ಬರ್ಕುಮೇ॥೩೭**

**ಪದವಿಭಾಗ–ಅನ್ವಯ–ಅರ್ಥ:** ಪೆಸರ್ಗೊಂಡ = ಹೆಸರುವಾಸಿಯಾದ, ಇಂದ್ರನರೇಂದ್ರ = ದೇವೇಂದ್ರ ಮತ್ತು ನರೇಂದ್ರರಿಂದ ಪೂಜಿತನಾದ (ಜಿನನನ್ನು), ಎತ್ತಾನುಂ = ಎಲ್ಲಿಯೋ, ಓರೊರ್ಮೆ = ಒಂದೊಂದು ಸಲ, ಒಱಲ್ದು = ಕೂಗಿ, ಚಿಂತಿಸಿದೊಂಗಂ = ಧ್ಯಾನಿಸಿದವನಿಗೂ, ಪುಣ್ಯಂ = (ಬರುವ) ಪುಣ್ಯಕ್ಕೆ, ಪವಣಿಲ್ಲ = ಮಿತಿಯಿಲ್ಲ; ಎನೆ = ಎಂದ ಮೇಲೆ, ಓರಂತೆ = ನಿರಂತರವಾಗಿ, ಭಾವಿಸಿ =

ಮನಸ್ಸಿಗೆ ತಂದುಕೊಂಡು, ತನ್ಮಯನಾಗಿ = ಅದರಲ್ಲಿಯೇ ಮುಳುಗಿ, ತಾಂ = ತಾನು, ತತ್ = ಆ(ತನ), ಚರಿತಮಂ = ಚರಿತೆಯನ್ನು, ಕಾವ್ಯಂಗಳೊಳ್ಕೂಡೆ = ಕಾವ್ಯಭಾಗಗಳಲ್ಲಿ ಸೇರುವಂತೆ, ಬಣ್ಣಿಸಿ = ವರ್ಣನೆ ಮಾಡುತ್ತ, ಪೇೞ್ವಾತನ = ಹೇಳುವಾತನ, ಕರ್ಮನಿರ್ಜರೆಯನ್ = (ಆಗುವಂತಹ) ಕರ್ಮಕ್ಷಯವನ್ನು, ಅಂತು ಇಂತು ಉಂತು = ಹಾಗೆ ಹೀಗೆ ಹೇಗೆ, ಎನಲ್ ಬರ್ಕುಮೇ = ಎಂದು ಹೇಳಲು ಸಾಧ್ಯವೇ?

**ಗದ್ಯಾನುಸರಣ:** ಹೆಸರುಗೊಂಡ ಇಂದ್ರನರೇಂದ್ರರಿಂದ ಪೂಜಿತನಾದ ಜಿನನನ್ನು ಆಗೊಮ್ಮೆ ಈಗೊಮ್ಮೆ ಹೆಸರು ಹೇಳುತ್ತ ನೆನಪಿಸಿಕೊಳ್ಳುವವನಿಗೂ ಬರುವ ಪುಣ್ಯಕ್ಕೆ ಮಿತಿಯಿಲ್ಲ ಎಂದ ಮೇಲೆ, ಅವನನ್ನೇ ಸದಾ ಮನಸ್ಸಿನಲ್ಲಿರಿಸಿಕೊಂಡು ಅವನ ಕತೆಯನ್ನು ತನ್ನ ಕಾವ್ಯದಲ್ಲಿ ಬಣ್ಣಿಸುವ ಕವಿಗಾಗುವ ಕರ್ಮಕ್ಷಯದ ಸ್ವರೂಪವನ್ನು ಹಾಗೆ ಹೀಗ ಹೂಗೆ ಎಂದು ವಿವರಿಸಲು ಸಾಧ್ಯವೇ?

**ಇದುವೆ ಸುಕವಿಪ್ರಮೋದಪ್ರದ**
**ಮಿದುವೆ ಸಮಸ್ತಭವ್ಯಲೋಕಪ್ರಮುದ**
**ಪ್ರದಮೆನೆ ನೆಗೞ್ದಾದಿಪುರಾ**
**ಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ ೩೮**

**ಪದವಿಭಾಗ–ಅನ್ವಯ–ಅರ್ಥ:** ಇದುವೆ = ಈ ಕಾವ್ಯವು, ಸುಕವಿ = ಒಳ್ಳೆಯ ಕಾವ್ಯಮನೋಭಾವವಿರುವವರಿಗೆ, ಪ್ರಮೋದಪ್ರದಂ = ಸಂತಸವುಂಟುಮಾಡುವಂತಹುದು, ಇದುವೆ = ಈ ಕಾವ್ಯವು, ಸಮಸ್ತ = ಎಲ್ಲ, ಭವ್ಯಲೋಕ=ಭವ್ಯರುಗಳ ಸಮೂಹಕ್ಕೆ, ಪ್ರಮದಪ್ರದಂ = ಸಂತಸವುಂಟುಮಾಡುವಂತಹುದು, ಎನೆ = ಎನ್ನು ಹಾಗೆ, ನೆಗೞ್ದ = ಹೆಸರುಗೊಂಡ, ಆದಿಪುರಾಣದೊಳ್ = ಮೊದಲ ಜಿನನ ಬಗೆಗಿನ ಪುರಾಣದಲ್ಲಿ, ಕಾವ್ಯಧರ್ಮಮಂ = ಕಾವ್ಯಧರ್ಮವನ್ನು, (ಅಂತೆಯೇ) ಧರ್ಮಮುಮಂ = ಧರ್ಮವನ್ನೂ, ಅಱಿವುದು = ತಿಳಿಯಬೇಕು

**ಗದ್ಯಾನುಸರಣ:** ಆದಿಪುರಾಣವು ಎಲ್ಲ ಕವಿಹೃದಯುದವರಿಗೆ ಸಂತಸದಾಯಕವಾದುದು ಹಾಗೆಯೇ ಭವ್ಯಜನರಿಗೂ ಆನಂದ ತರುವಂಥದು; ಹೀಗಾಗಿ ಈ ಕಾವ್ಯದಲ್ಲಿ ಕಾವ್ಯಧರ್ಮ ಮತ್ತು ಧರ್ಮ ಎರಡನ್ನೂ ಮನನಮಾಡಿಕೊಳ್ಳಬೇಕು.

**ವಿಶೇಷ ವಿಚಾರ:** ಪಂಪನಿಗೆ ತಾನು ಕೇವಲ ಪುರಾಣಕಾರನಲ್ಲ ಎಂಬ ಅರಿವಿದೆ; ತನ್ನ ಬರಹವು ಸುಕವಿಗಳಿಗೆ ಸಂತಸವುಂಟುಮಾಡಬೇಕೆಂದು ಮೊದಲು ಹೇಳಿ ಆನಂತರ ಭವ್ಯಜನ (ಜೈನ ಭಾವುಕರು)ರಿಗೆ ಆನಂದ ತರಲಿ ಎನ್ನುತ್ತಿದ್ದಾನೆ;

ಹಾಗೆಯೇ ತನ್ನ ಕಾವ್ಯದಲ್ಲಿ ಅರಿಯಬೇಕಾದುದರಲ್ಲಿ ಕಾವ್ಯಧರ್ಮಕ್ಕೆ ಮೊದಲ ಸ್ಥಾನ, ಆಮೇಲಿನದು ಧರ್ಮದ ಸ್ಥಾನ. ಪುಣ್ಯಪ್ರದವಾದುದೆಂಬ ನಂಬಿಕೆಯ ಜೈನರಿಗೆ ಇದು ಒಂದು ಬಗೆಯ ಸಂತಸ ತರುವುದು ಸರಿಯೇ, ಆದರೆ ಹಾಗಲ್ಲದ ಇತರರಿಗೆ ಅಂದರೆ ಕಾವ್ಯಪ್ರೇಮಿಗಳಿಗೂ ಇದು ಆನಂದವುಂಟುಮಾಡಬೇಕೆಂಬುದು ಅವನ ಅಪೇಕ್ಷೆ, ಹಾಗೆ ಮಾಡುತ್ತದೆನ್ನುವುದು ಅವನ ನಿರೀಕ್ಷೆ. ಅಂದರೆ ಇದು ಧಾರ್ಮಿಕ ಕಾವ್ಯವಾದರೂ ಧರ್ಮೇತರ ಪರಿಣಾಮವನ್ನುಂಟುಮಾಡಬೇಕೆಂದು ಅವನು ಬಯಸುತ್ತಾನೆ. ಅದನ್ನೇ ಕಾವ್ಯಧರ್ಮ ಎನ್ನುತ್ತಿರುವುದು. ಹಾಗಾದರೆ 'ಕಾವ್ಯಧರ್ಮ' ಎಂದರೆ ಏನರ್ಥ? ಇದನ್ನು ಯಾವ ಅರ್ಥದಲ್ಲಿ ಪಂಪ ಬಳಸುತ್ತಿರುವನೆಂಬುದನ್ನು ನಾವೇ ಊಹಿಸಿಕೊಳ್ಳಬೇಕು. ಕಾವ್ಯ ಮಾಡಬೇಕಾದ ಪರಿಣಾಮವೇ ಕಾವ್ಯಧರ್ಮ. ಅಂತಹ ಪರಿಣಾಮದ ಸ್ವರೂಪವೇನು ಎಂಬ ಪ್ರಶ್ನೆ ಸಹಜ. ಇದು ನಿಜವಾಗಿ ಕಾವ್ಯಮೀಮಾಂಸೆಯ ವಿಷಯ. ಕಾವ್ಯದ ಪರಿಣಾಮವನ್ನು 'ಆನಂದಾಯ, ಕಾಂತಾತುಲ್ಯತಯಾ ಉಪದೇಶಾಯ' ಎಂದು ಹಿಂದಿನ ಕಾವ್ಯಮೀಮಾಂಸಕರು ಹೇಳಿದರು. ಆದರೆ ಕಾವ್ಯ ಮಾಡುವ ಪರಿಣಾಮ ಎಂತಹುದು? ಎಂಬುದನ್ನು ಖಚಿತವಾಗಿ ಯಾರೂ ಹೇಳಲಾರರು. ಹೀಗಾಗಿ ನಾವು ಪಂಪನ ಮಾತಿನ ಹಿನ್ನೆಲೆಯಲ್ಲಿ ಮತ್ತು ಪ್ರಸ್ತುತಕ್ಕೆ ತಗುವ ರೀತಿಯಲ್ಲಿ ಅದನ್ನು ಅರ್ಥೈಸಿಕೊಳ್ಳಬೇಕಾಗಿದೆ. ಕಾವ್ಯವು ಅನುಭವದ ಮಾತಿನ ರೂಪದ ಅಭಿವ್ಯಕ್ತಿ; ಹಾಗಾಗಿ ಅದರ ಪರಿಣಾಮವೂ ಅನುಭವವಿಸ್ತರಣೆಯೇ ತಾನೇ? ಅಂದರೆ ಇಲ್ಲಿ ಅಂತರ್ಗತವಾದ ಅನುಭವಸ್ವರೂಪವು ಎಂತಹುದೆಂದರೆ ಎಲ್ಲರಿಗೂ ಜೀವನಸೂಕ್ಷ್ಮಕ್ಕೆ ಸಂಬಂಧಿಸಿದ ಅನುಭವವನ್ನು ತಂದುಕೊಡುವುದು. ಆದಿಜಿನನ ಜೀವನ ವಿವರಗಳ ಬಣ್ಣನೆಯ ಈ ಕಥಾನಕದ ಮೂಲಕ ಒಟ್ಟಾರೆ ಮಾನವ ಬದುಕಿನ ಅನುಭವವು ಹೇಗೆ ವಿಕಾಸಗೊಳ್ಳಬೇಕು, ಜೀವ ಹೇಗೆ ಸಹಜ ಮಾಗುವಿಕೆಗೆ ಒಳಗಾಗಬೇಕು ಎಂಬುದರ ವಿವೇಚನೆಯಿದೆ ಎಂದು ಕವಿ ಸೂಚಿಸುತ್ತಿರಬಹುದು.

**ನೆಱವಂ ತಾಳ್ದಿದಪಾಸ್ತದುರ್ನಯತಮೋಬಂಧಂ ಶ್ರುತಸ್ಕಂಧಮಾ**
**ದಱವಿಂದಂ ಗಣನಾಯಕರ್ಸಮಱ ಭವ್ಯಶ್ರೇಣಿಗವ್ಯಾಜದಿಂ**
**ದಱಯಲ್ನಾಲ್ಕನುಯೋಗಮಾದುದಱಿಂಳ್ಪೂರ್ವಾನುಯೋಗಾಬ್ಧಿಯಿಂ**
**ಪೊಱಪೊಣ್ಮುತ್ತಿದು ವೇಳೆಯಂತೆ ಕಥೆ ಲಂಬೋದ್ದಾಮವೀಚೀಚಯಂ ೩೯**

**ಪದವಿಭಾಗ–ಅನ್ವಯ–ಅರ್ಥ:** ನೆಱವಂ = ನೆಲೆಯನ್ನು, ತಾಳ್ದಿದ = ಕಂಡುಕೊಂಡ, ದುರ್ನಯ = ದುರ್ನೀತಿ ಎಂಬ, ತಮೋಬಂಧಂ = ಕತ್ತಲ ಮೊತ್ತವು, ಶ್ರುತಸ್ಕಂಧಂ = ಆಗಮಗಳ ಸಂಘಟನೆಯು, ಆದ ಅಱವಿಂದ = ಉಂಟುಮಾಡಿದ ತಿಳಿವಳಿಕೆಯಿಂದ, ಅಪಾಸ್ತ = ದೂರಗೊಂಡವು; ಅವ್ಯಾಜದಿಂದ = ಸ್ವಹಿತಾಸಕ್ತಿಯಿಲ್ಲದೆ, ಗಣನಾಯಕರ್ = ಗಣಧರರು, ಸಮಱ = ಅಣಿಗೊಳಿಸಲು, ಭವ್ಯಶ್ರೇಣಿಗೆ = ಜೈನ ಭಾವುಕ ಕೋಟಿಗೆ, ಅಱಯಲ್ = ಗೊತ್ತಿರುವಂತೆ ನಾಲ್ಕು

ಅನುಯೋಗಮಾದುದು = ಅನುಯೋಗಗಳಾದವು; ಅದಱೊಳ್ = ಆ ನಾಲ್ಕರಲ್ಲಿ, ಪೂರ್ವಾನುಯೋಗ = ಪೂರ್ವಾನುಯೋಗವೆಂಬ, ಅಬ್ಧಿಯಿಂ = ಸಮುದ್ರದಿಂದ, ವೇಳೆಯಂತೆ = ಅಲೆಯಂತೆ, ಲಂಬ = ಉದ್ದವೂ, ಉದ್ದಾಮ = ದೊಡ್ಡದೂ ಆದ, ವೀಚೀಚಯಂ = ಅಲೆಗಳ ಸಮೂಹದಂತೆ, ಅದು ಕಥೆ = ಆದಿಜಿನನ ಈ ಕತೆಯು, ಪೊಱಪೊಣ್ಮಿತ್ತು = ಹೊರಹೊಮ್ಮಿತು.

**ಗದ್ಯಾನುಸರಣ:** ತಳವೂರಿದ ದುರ್ನೀತಿ ಎಂಬ ಕಗ್ಗತ್ತಲರಾಶಿಯು ಶ್ರುತಸ್ಕಂಧದಿಂದ ದೂರವಾಯಿತು; ಗಣಧರರು ನಿಸ್ವಾರ್ಥದಿಂದ ಅದನ್ನು ಅಣಿಗೊಳಿಸಿಕೊಟ್ಟದ್ದರಿಂದ ಭವ್ಯಜನಕೋಟಿಗೆ ತಿಳಿಯುವ ಹಾಗೆ ನಾಲ್ಕು ಅನುಯೋಗಗಳೆಂಬ ಭಾಗಗಳಾದವು; ಅದರಲ್ಲಿ ಮೊದಲ ಅನುಯೋಗವೆಂಬ ಸಮುದ್ರದಿಂದ ಹೊರಟ ದೊಡ್ಡ ಅಲೆಯು ಪರಂಪರೆಯಾಗಿ ವಿಸ್ತಾರಗೊಳ್ಳುವಂತೆ ಆದಿಜಿನನ ಈ ಕತೆಯು ಹೊಮ್ಮಿತು.

**ವಿಶೇಷ ವಿಚಾರ:** ತೀರ್ಥಂಕರರ ಉಪದೇಶದಿಂದ ಗಣಧರರು ಬರೆದ ದ್ವಾದಶಾಂಗಸೂತ್ರಗಳೇ ಒಟ್ಟಾರೆಯಾಗಿ ಶ್ರುತಸ್ಕಂಧ ಎನ್ನಿಸಿಕೊಳ್ಳುತ್ತದೆ. ಅದರಲ್ಲಿ ನಾಲ್ಕು ಭಾಗಗಳು – ತ್ರಿಷಷ್ಟಿಶಲಾಕಾಪುರುಷರ ಚರಿತ್ರೆಗಳನ್ನೊಳಗೊಂಡ ಪ್ರಥಮಾನುಯೋಗ, ಮೂರು ಲೋಕಗಳ ಪ್ರಮಾಣ ಮೊದಲಾದ ವಿವರಗಳನ್ನೊಳಗೊಂಡ ಕರಣಾನುಯೋಗ, ಜೈನಮುನಿಗಳೂ ಶ್ರಾವಕರೂ ಅನುಸರಿಸಬೇಕಾದ ವಿವರಗಳಿರುವ ಚರಣಾನುಯೋಗ ಮತ್ತು ಜೀವಾದಿ ದ್ರವ್ಯಗಳ ವಿವರಣೆಯನ್ನೊಳಗೊಂಡ ದ್ರವ್ಯಾನುಯೋಗ. ಮೊದಲನೆಯದರಲ್ಲಿಯೇ ಆದಿಜಿನನ ಕತೆ ಇರುವುದು; ತಾನು ಈ ಕತೆಯನ್ನು ಅಲ್ಲಿಂದ ತೆಗೆದುಕೊಂಡಿದ್ದೇನೆ ಎನ್ನುವುದು ಕವಿಯ ಭಾವ. ''

ಇಲ್ಲಿಯವರೆಗಿನದು ಕಥಾವತರಣ; ನೇರವಾಗಿ ಕಾವ್ಯನಿರೂಪಣೆ ಮಾಡಲು ತೊಡಗುವ ಮುಂಚೆ ಬರೆಯುವ ಪೀಠಿಕಾಭಾಗ. ಚಂಪೂ ಕವಿಗಳು ಸಾಮಾನ್ಯವಾಗಿ ಈ ಭಾಗದಲ್ಲಿ ಇಷ್ಟದೇವತಾ ಪ್ರಾರ್ಥನೆ, ತನ್ನ ಪ್ರಸ್ತುತ ಕಾವ್ಯದ ಹೆಗ್ಗಳಿಕೆ, ಸತ್ಕವಿ ಪ್ರಶಂಸೆ, ಕುಕವಿ ನಿಂದೆ ಹಾಗೂ ಸ್ವವಿಷಯ. ಬಹು ಮಂದಿ ಹಿಂದಿನ ಕನ್ನಡ ಕವಿಗಳು ತಮ್ಮ ವಿಷಯವನ್ನು ಹೇಳಿಕೊಳ್ಳುವುದಿಲ್ಲ. ಹೀಗಾಗಿ ಸಾಹಿತ್ಯ ಚರಿತ್ರೆಯ ರಚನೆಯ ಸಂದರ್ಭದಲ್ಲಿ ಕವಿಯ ಕಾಲನಿರ್ಣಯ ಮಾಡುವುದೇ ಕಷ್ಟವಾಗುತ್ತದೆ. ಆದರೆ ಪಂಪ–ರನ್ನರಂತಹ ಕವಿಗಳು ತಮ್ಮ ವಿಷಯವನ್ನೂ ಕೆಲವು ಮುಖ್ಯ ಸಮಕಾಲೀನ ಸಂಗತಿಗಳನ್ನೂ ಹೇಳಿಕೊಂಡಿರುವುದು ಅನುಕೂಲಕರವಾಗಿದೆ. ಇಲ್ಲಿ ಸ್ವವಿಷಯ ಹೆಚ್ಚಾಗಿದ್ದರೆ, 'ವಿಕ್ರಮಾರ್ಜುನ ವಿಜಯ'ದಲ್ಲಿ ಸಮಕಾಲೀನ ಸಂಗತಿಗಳು ವಿಪುಲವಾಗಿವೆ.

**ಪಾಪಹರಂ ಪ್ರಕಾಶಿತವೃಷಂ ವೃಷಭಂ ವೇಷಧ್ವಜಂ ಮಹಾ**
**ಷ್ಟಾಪದಶೈಲದೊಳ್ವಿಜಿತಘಾತಿಚತುಷ್ಟಯನತ್ಯುದಾರರಾ**
**ಗೋಪತಾಮರೇಂದ್ರದನುಜೇಂದ್ರನರೇಂದ್ರಪದಂ ಸಮಸ್ತವಿ**
**ದ್ಯಾಪತಿ ನಾಭಿನಂದನನುಪಾಶ್ರಿತಭವ್ಯಜನಾಭಿನಂದನಂ ೪೦**

**ಪದವಿಭಾಗ–ಅನ್ವಯ–ಅರ್ಥ:** ನಾಭಿನಂದನಂ = ನಾಭಿರಾಜನ ಮಗನಾದ (ಪುರುದೇವನು), ಪಾಪಹರಂ = ಪಾಪಗಳನ್ನು ನಿವಾರಣೆ ಮಾಡುವವನು, ಪ್ರಕಾಶಿತವೃಷಂ = ಧರ್ಮವನ್ನು ಬೆಳಗುವವನು, ವೃಷಭಂ = ವೃಷಭನೆಂಬ ಹೆಸರಿನವನು, ವೃಷಧ್ವಜಂ = ತೀರ್ಥಂಕರನಾದವನು, ಮಹಾ ಅಷ್ಟಾಪದಶೈಲದೊಳ್ = ಮೇರುಪರ್ವತದಲ್ಲಿ, ವಿಜಿತ ಘಾತಿಚತುಷ್ಟಯಂ = ನಾಲ್ಕು ಘಾತಿಕರ್ಮಗಳನ್ನು ಗೆದ್ದನು, ಅತ್ಯುದಾರರಾಗ = ಅತ್ಯಂತ ಪ್ರೀತಿಯನ್ನು ಹೊಂದಿದವರಾದ, ಅಮರೇಂದ್ರ = ದೇವೇಂದ್ರ, ದನುಜೇಂದ್ರ = ದನುಜೇಂದ್ರ, ನರೇಂದ್ರ = ಮಾನವೇಂದ್ರರುಗಳಿಂದ ಉಪನತ = ನಮಸ್ಕರಿಸಲ್ಪಟ್ಟವನು, ಸಮಸ್ತ = ಎಲ್ಲ, ವಿದ್ಯಾಪತಿ = ವಿದ್ಯೆಗಳಿಗೂ ಒಡೆಯನೂ (ಆಗಿ), ಉಪಾಶ್ರಿತ = ತನ್ನನ್ನು ಆಶ್ರಯಿಸಿದ, ಭವ್ಯಜನ = ಭಾವುಕರಿಗೆ ಅಭಿನಂದನಂ = ಸಂತೋಷವುಂಟುಮಾಡುವವನಾಗಿದ್ದಾನೆ.

**ಗದ್ಯಾನುಸರಣ:** ಪಾಪವನ್ನು ನಿವಾರಿಸುವವನೂ, ಧರ್ಮವನ್ನು ಬೆಳಗುವವನೂ, ತೀರ್ಥಂಕರನೂ, ಮೇರುಪರ್ವತದಲ್ಲಿ ಘಾತಿಚತುಷ್ಟಯಗಳನ್ನು ಗೆದ್ದವನೂ, ಉನ್ನತರಾದ ಅಮರ ದಾನವ ಮಾನವಶ್ರೇಷ್ಠರಿಂದ ನಮಸ್ಕೃತನಾದವನೂ, ಎಲ್ಲ ವಿದ್ಯೆಗೆ ಒಡೆಯನೂ ಆದ ವೃಷಭನಾಥನು ಭವ್ಯಜನಕೋಟಿಗೆ ಆನಂದವನ್ನು ಉಂಟುಮಾಡುತ್ತಾನೆ.

**ಇರೆ ಹರಿಪೀಠದೊಳ್ಭರತನಾದರದಿಂ ಬೆಸಗೊಂಡುದಂ ಜಿನೇ**
**ಶ್ವರಮತದಿಂದಮಾ ವೃಷಭಸೇನಗಣಾಗ್ರಣಿ ಪೇೞ್ದುದಂ ಸವಿ**
**ಸ್ತರದೊಳೆ ವರ್ಧಮಾನಜಿನಸನ್ನಿಧಿಯೊಳ್ವಿಪುಳಾದ್ರಿಯೊಳ್ನಿಜಾ**
**ದರದೊಳೆ ಗೌತಮರ್ಮಗಧನಾಯಕನುಂ ತಿಳಿವಂತು ಪೇೞ್ದುದಂ ೪೧**

**ಪದವಿಭಾಗ–ಅನ್ವಯ–ಅರ್ಥ:** ಭರತಂ = ಭರತ ಚಕ್ರವರ್ತಿಯು, ಹರಿಪೀಠದೊಳಿರೆ = ಸಿಂಹಾಸನದಲ್ಲಿ ಕುಳಿತಿದ್ದು, ಬೆಸಗೊಂಡುದಂ = ಕೇಳಿದ್ದಕ್ಕೆ, ವೃಷಭಸೇನ = ವೃಭಸೇನನೆಂಬ, ಗಣಾಗ್ರಣಿ = ಗಣಧರರು, ಜಿನೇಶ್ವರಮತದಿಂ = ಜೈನಮತಕ್ಕನುಗುಣವಾಗಿ, ಸವಿಸ್ತರದೊಳೆ = ವಿಶದವಾಗಿ, ಪೇೞ್ದುದಂ = ವಿವರಿಸಿದ್ದನ್ನು, ವಿಪುಳಾದ್ರಿಯೊಳ್ = ವಿಪುಳಪರ್ವತದಲ್ಲಿ, ವರ್ಧಮಾನಜಿನಸನ್ನಿಧಿಯೊಳೆ = ವರ್ಧಮಾನ ಮಹಾವೀರನ ಸಾನ್ನಿಧ್ಯದಲ್ಲಿ, ನಿಜಾದರದೊಳೆ = ವಿಪುಲ ಆದರದಿಂದ, ಗೌತಮರ್ = ಗೌತಮ ಗಣಧರರು,

ಮಗಧನಾಯಕನುಂ = ಮಗಧದೇಶಾಧಿಪತಿಯಾದ ಶ್ರೇಣಿಕ ಮಹಾರಾಜನಿಗೂ ತಿಳಿವಂತು = ಮನದಟ್ಟಾಗುವಂತೆ, ಪೇೞ್ದುದಂ = ಹೇಳಿದುದನ್ನು (ಈ ಕಥೆಯನ್ನು)

**ಗದ್ಯಾನುಸರಣ:** ಭರತನು ಚಕ್ರವರ್ತಿಯಾಗಿದ್ದಾಗ ಕೇಳಿಕೊಂಡಾಗ ವೃಷಭಸೇನ ಗಣಾಗ್ರಣಿಗಳು ಜಿನೇಶ್ವರಮತಕ್ಕನುಗುಣವಾಗಿ ಮೊದಲ ಬಾರಿಗೆ ನಿರೂಪಿಸಿದ್ದ ಕಥೆಯನ್ನೇ ವಿಪುಳಾದ್ರಿಯಲ್ಲಿ ವರ್ಧಮಾನ ಜಿನನ ಸಾನ್ನಿಧ್ಯದಲ್ಲಿ ಪ್ರೀತಿಯಿಂದ ಗೌತಮ ಗಣಧರರು ಮಗಧದ ದೊರೆ ಶ್ರೇಣಿಕನಿಗೆ ಮನದಟ್ಟಾಗುವಂತೆ ಹೇಳಿದ್ದರು; ಆ ಕಥೆಯನ್ನೇ (ವಾಕ್ಯವು ಮುಂದಿನ ಪದ್ಯದಲ್ಲಿ ಮುಂದುವರಿದಿದೆ).

**ಪ್ರಾಣಿಹಿತವಮಂ ವಿನೇಯ**
**ಪ್ರೀಣನಕರಮಂ ಜಗತ್ತ್ರಯಪ್ರಕಟಿತಕ**
**ಲ್ಯಾಣಮನೀ ನೆಗೞ್ದಾದಿಪು**
**ರಾಣಮನಪರಿಮಿತಭಕ್ತಿಯಿಂ ವಿರಚಿಸುವೆಂ ೪೨**

**ಪದವಿಭಾಗ–ಅನ್ವಯ–ಅರ್ಥ:** ಪ್ರಾಣಿಹಿತಮಂ = ಸಕಲ ಜೀವಿಗಳಿಗೆ ಹಿತವನ್ನುಂಟುಮಾಡುವ, ವಿನೇಯ = ವಿನಯವಂತರಿಗೆ, ಪ್ರೀಣನಕರಮಂ = ಸಂತಸದಾಯಕವಾದ, ಜಗತ್ತ್ರಯ = ಮೂರು ಲೋಕಗಳ, ಪ್ರಕಟಿತಕಲ್ಯಾಣಮನ್ = ಹಿತವನ್ನೇ ಬಯಸುವಂತಹದು, (ಎಂದು) ನೆಗೞ್ದ = ಪ್ರಖ್ಯಾತವಾದ, ಆದಿಪುರಾಣಮನ್ = (ಈ) ಆದಿಪುರಾಣಕಾವ್ಯವನ್ನು, ಭಕ್ತಿಯಿಂ = ಪೂಜ್ಯಭಾವನೆಯಿಂದ, ವಿರಚಿಸುವೆಂ = ಬರೆಯುತ್ತೇನೆ.

**ಗದ್ಯಾನುಸರಣ:** ಎಲ್ಲ ಜೀವರುಗಳ ಹಿತವನ್ನು ಬಯಸುವ, ವಿನಯವಂತರಿಗೆ ಸಂತೋಷ ತರುವ, ಮೂರು ಲೋಕಗಳ ಒಳಿತನ್ನೇ ಬಯಸುವ ಆದಿಪುರಾಣ ಕಾವ್ಯವನ್ನು ನಾನು ಭಕ್ತಿಯಿಂದ ರಚಿಸುತ್ತೇನೆ.

**ವ॥ ಆ ಪುರಾಣಕ್ಕಂ ಲೋಕಾಕಾರಕಥನಂ ದೇಶನಿವೇಶೋಪದೇಶಮುಂ ನಗರಸಂಪತ್ಪರಿವರ್ಣನಮುಂ ರಾಜ್ಯರಮಣೀಯಥಾಖ್ಯಾತಮುಂ ತೀರ್ಥ ಮಹಿಮೆ ಸಮರ್ಥನಮುಂ ಚತುರ್ಗತಿಸ್ವರೂಪನಿರೂಪಣಮುಂ ತಪೋದಾನ ವಿಧಾನವರ್ಣನಮುಂ ತತ್ಫಳಪ್ರಾಪ್ತಿಪ್ರಕಟನ ಮುಮೆಂದಿಂತವಯುವಂ ಗಳೆಂಟಕ್ಕುಂ.**

**ಪದವಿಭಾಗ–ಅನ್ವಯ–ಅರ್ಥ :** ಲೋಕಾಕಾರಕಥನಂ = ಲೋಕದ ಆಕೃತಿಯ ವರ್ಣನೆ, ದೇಶನಿವೇಶೋಪದೇಶಮುಂ = ದೇಶದ ವಿನ್ಯಾಸ, ವಿಸ್ತೀರ್ಣ, ರೀತಿ ಮುಂತಾದವುಗಳ ವರ್ಣನೆ, ನಗರಸಂಪತ್ ಪರಿವರ್ಣನಮುಂ = ನಗರ ಸಂಪತ್ತಿನ

ವರ್ಣನೆ, ರಾಜ್ಯರಮಣೀಯತ ಆಖ್ಯಾನಮುಂ = ರಾಜ್ಯದ ಚೆಲುವಿನ ಬಣ್ಣನೆ, ತೀರ್ಥಮಹಿಮಸಮರ್ಥನಮುಂ = ತೀರ್ಥಕ್ಷೇತ್ರಗಳ ಮಹಿಮೆಯನ್ನು ವಿವರಿಸುವುದು, ಚತುರ್ಗತಿಸ್ವರೂಪನಿರೂಪಣಮುಂ = ದೇವ ಮಾನವ ತಿರ್ಯಕ್ ನಾರಕ ಎಂಬ ನಾಲ್ಕು ಬಗೆಯ ಜನ್ಮಗಳ ಸ್ವರೂಪದ ಜ್ಞಾನವಿವರಣೆ, ತಪೋದಾನವಿಧಾನವರ್ಣನಮುಂ = ತಪ್ಪಸ್ಸು ಮತ್ತು ದಾನಗಳ ಸ್ವರೂಪದ ವಿವರಣೆ, ತತ್ಫಳಪ್ರಾಪ್ತಿಪ್ರಕಟನ = ಅದರಿಂದಾದ ಫಲಗಳನ್ನು ಹೇಳುವುದು – ಎಂದು = ಆ ಪುರಾಣಕ್ಕಂ = ಈ ಪುರಾಣಕ್ಕೆ, ಎಂಟು = ಎಂಟು, ಅವಯವಂಗಳ್ = ವಿಭಾಗಗಳು, ಅಕ್ಕುಂ = ಇವೆ; (ಅವುಗಳೆಂದರೆ).

**ಗದ್ಯಾನುಸರಣ:** ತೀರ್ಥಂಕರ ಪುರಾಣವು ಎಂಟು ವರ್ಣನೆಗಳಿಂದ ಕೂಡಿರತಕ್ಕದ್ದು; ಅವುಗಳೆಂದರೆ: ಈ ಲೋಕದ ಸ್ವರೂಪ, ನಿರ್ದಿಷ್ಟ ದೇಶದ ವಿಸ್ತೀರ್ಣ–ವಿನ್ಯಾಸಗಳ ಪರಿ, ಅದರ ರಾಜಧಾನಿಯ ಚೆಲುವು, ಅಲ್ಲಿನ ತೀರ್ಥಕ್ಷೇತ್ರಗಳ ಮಹಿಮೆ, ನಾಲ್ಕು ಬಗೆಯ ಜೀವಿಗಳ ಬಗೆಗಳು, ತಪಸ್ಸು ಮತ್ತು ದಾನಗಳ ಸ್ವರೂಪ, ಮತ್ತು ಅವುಗಳ ಫಲಗಳು.

**ವಿಶೇಷ ವಿಚಾರ:** ಕಾವ್ಯಗಳಿಗೆ ಅಷ್ಟಾದಶವರ್ಣನೆಗಳಿರುವಂತೆ ತೀರ್ಥಂಕರ ಪುರಾಣಗಳಲ್ಲಿನ ಎಂಟು ವಿಭಾಗಗಳನ್ನಿಲ್ಲಿ ಹೆಸರಿಸಲಾಗಿದೆ. ಒಟ್ಟಾರೆ ಲೋಕ, ಅದರಲ್ಲಿ ತೀರ್ಥಂಕರನಿದ್ದ ದೇಶ, ಅದರ ರಾಜಧಾನಿ, ಅಲ್ಲಿನ ಪವಿತ್ರ ಕ್ಷೇತ್ರಗಳು – ಹೀಗೆ ಭೌತಿಕ ವಿವರಣೆಗಳು ಹಾಗೂ ಜೈನಮತಕ್ಕನುಗುಣವಾದ ಜೀವವಿಂಗಡಣೆ, ತಪಸ್ಸು ದಾನಗಳ ಬಗೆ, ಅದರಿಂದಾಗುವ ಫಲ – ಇಂತಹ ಮತಸಂಬಂಧಿ ವಿವರಣೆಗಳೆರಡೂ ಇರಬೇಕೆಂಬುದು ನಿಯಮ. ಜಿನಸೇನನು 'ದ್ರವ್ಯಂ ಕ್ಷೇತ್ರಂ ತಥಾ ತೀರ್ಥಂ ಕಾಲೋ ಭಾವಃ ಫಲಂ ಮಹತ್। ಪ್ರಕೃತಂ ಚೇತ್ಯಮೂನ್ಯಾಹುಃ ಸಪ್ತಾಂಗಾನಿ ಕಥಾ ಮುಖೇ' ಎನ್ನುತ್ತಾನೆ (ಪೂಪು. ೧–೧೨೨

**ಅವಱೊಳ್ಲೋಕಮದೆಂತುಟೆಂದೊಡೆ ಸಮಂತಾವಂಗಮೆತ್ತೆತ್ತ ನೋ**
**ಡುವೊಡಂ ನೋಡಲನಂತಮಪ್ಪ ವಿಭುವಪ್ಪಾಕಾಶಪದ್ಮಕ್ಕೆ ತಾ**
**ನೆ ವಲಂ ಕರ್ಣಿಕೆಯಂದವಾಯ್ತೆನೆ ವಿಯನ್ಮಧ್ಯಸ್ಥಮಂತಸ್ಸ್ವಕ**
**ರ್ಮವಶಭ್ರಾಮ್ಯದನೇಕಜೀವನಿವಹಕ್ರೋಡೀಕೃತಾಭ್ಯಂತರಂ ೪೩**

**ಪದವಿಭಾಗ–ಅನ್ವಯ–ಅರ್ಥ:** ಅವಱೊಳ್ = ಅವುಗಳಲ್ಲಿ, ಲೋಕಂ = ಲೋಕಾಕಾರವು, ಎಂತುಟು ಎಂದೊಡೆ = ಹೇಗಿದೆ ಎಂದರೆ, (ಅದು) ಆವಂಗಂ = ಯಾರಿಗಾದರೂ, ಎತ್ತೆತ್ತ = ಯಾವ ಕಡೆಗಾದರೂ, ಸಮಂತು = ಚೆನ್ನಾಗಿ, ನೋಡುವೊಡೆ = ನೋಡಿದರೆ, ನೋಡಲ್ = ನೋಡುವುದಕ್ಕೆ, ಅನಂತಮಪ್ಪ = ಕೊನೆಯೇ ಇಲ್ಲದಂತಹ, ವಿಭುವಪ್ಪ = (ಎಲ್ಲಕ್ಕೂ) ಹಿರಿದಾದ,

ಆಕಾಶಪದ್ಮಕ್ಕೆ = ಆಗಸವೆಂಬ ತಾವರೆ(ಯ), ಕರ್ಣಿಕೆ = ಮಧ್ಯಭಾಗ (ಬೀಜಕೋಶ)ವು, ತಾನೆ ವಲಂ = ತಾನೇ ಅಲ್ಲವೇ, (ಎನ್ನುವ) ಅಂದಂ ಆಯ್ತು ಎನೆ = ರೀತಿಯಲ್ಲಿದೆ ಎನ್ನುವಂತೆ, ವಿಯತ್ = ಆಕಾಶದ, ಮಧ್ಯಸ್ಥ = ನಡುಭಾಗದಲ್ಲಿ, ಕರ್ಮವಶ = ಕರ್ಮದ ಕಟ್ಟಿಗೆ ಸಿಲುಕಿ, ಭ್ರಾಮ್ಯತ್ = ತೊಳಲುವ, ಜೀವನಿವಹ = ಜೀವಿಗಳ ಸಮೂಹವು, ಕ್ರೋಡೀಕೃತ = ತುಂಬಿಕೊಂಡ, ಅಭ್ಯಂತರಂ = ಒಳಗನ್ನು ಹೊಂದಿದೆ.

**ಗದ್ಯಾನುಸರಣ:** ಈ ಎಂಟು ಅವಯವಗಳಲ್ಲಿ ಮೊದಲನೆಯದಾದ ಲೋಕದ ಆಕೃತಿ ಹೇಗೆಂದರೆ, ಈ ಲೋಕವು ಅನಂತವಾದ ಆಕಾಶವೆಂಬ ತಾವರೆಯ ನಡುಭಾಗವಾದ ಕರ್ಣಿಕೆಯಂತಿದೆ; ಅದರಲ್ಲಿ ಕರ್ಮವಶವಾದ ಜೀವರುಗಳ ರಾಶಿಯು ತೊಳಲುತ್ತಿದೆ.

**ಅದನಾದ್ಯನಿಧನಗುಣಂಯುತ**
**ಮದಕೃತ್ರಿಮಮದು ಮರುತ್ತ್ರಿಕಾವೇಷ್ಟಿತಮಂ**
**ತದು ಸುಪ್ರತಿಷ್ಠಕೋಪಮ**
**ಮದು ಜಿನಮತದೊಳ್ ದ್ವಿಸಪ್ತರಜ್ಜೂತ್ಸೇಧಂ ೪೪**

**ಪದವಿಭಾಗ-ಅನ್ವಯ-ಅರ್ಥ:** ಅದು = ಲೋಕವು, ಅನಾದಿ = ಮೊದಲಿಲ್ಲದ, ಅನಿಧನ = ಕೊನೆಯಿಲ್ಲದ, ಗುಣಯುತಂ = ಗುಣಗಳುಳ್ಳುದು, ಅದು, ಅಕೃತ್ರಿಮಂ = ತಾನಾಗಿ ಹುಟ್ಟಿದುದು, ಅದು, ಮರುತ್ತ್ರಿಕ = ಮೂರು ಬಗೆಯ ಮಾರುತಗಳಿಂದ, ಆವೇಷ್ಟಿತಂ = ಸುತ್ತುವರಿಯಲ್ಪಟ್ಟುದು, ಅಂತದು = ಹಾಗೆಯೇ ಅದು, ಸುಪ್ರತಿಷ್ಠಕ ಉಪಮಂ = ಸುಪ್ರತಿಷ್ಠಕದಂತಿರುವುದು, ಜಿನಮತದೊಳ್ = ಜೈನಸಂಪ್ರದಾಯದ ಪ್ರಕಾರ, ಸ್ವಿಸಪ್ತ = ಹದಿನಾಲ್ಕು, ರಜ್ಜು = ರಜ್ಜುಗಳಷ್ಟು, ಉತ್ಸೇಧಂ = ಎತ್ತರವಾದದ್ದು.

**ಗದ್ಯಾನುಸರಣ:** ಈ ಲೋಕವು ಮೊದಲುಕೊನೆಗಳಿದ್ದು ಮಾತ್ರವಲ್ಲ ತಾನಾಗಿ ರೂಪುಗೊಂಡದ್ದಾಗಿದೆ; ಅದರ ಸುತ್ತಲೂ ಮೂರು ಬಗೆಯ ವಾತಗಳು ಆವರಿಸಿವೆ; ನೋಡಲು ಅದು ಸುಪ್ರತಿಷ್ಠಕದ ಆಕಾರದಲ್ಲಿರುವಂಥದ್ದು, ಕೈನ ಸಂಪ್ರದಾಯದ ಪ್ರಕಾರ ಅದರ ಎತ್ತರ ಹದಿನಾಲ್ಕು ರಜ್ಜುಗಳಷ್ಟು.

**ವಿಶೇಷ ವಿಚಾರ:** ಲೋಕವನ್ನು ಆವರಿಸಿರುವ ಮೂರು ಬಗೆಯ ವಾತಗಳೆಂದರೆ ಘನೋದಧಿ, ಘನವಾತ ಮತ್ತು ತನುವಾತಗಳು; ಸುಪ್ರತಿಷ್ಠಕ ಎನ್ನುವುದು ಅಷ್ಟಮಂಗಳಗಳಲ್ಲಿ ಒಂದಾದ ಪೂಜಾದ್ರವ್ಯಗಳನ್ನಿಡುವ ಪಾತ್ರೆ, ರಜ್ಜು ಎಂಬುದು ಅನೂಹ್ಯವಾದ ಒಂದು ಅಳತೆ.

**ಸ್ಫುಟವೈಶಾಖಸ್ಥಾನಂ**
**ಕಟಿತಟವಿನ್ಯಸ್ತಹಸ್ತಯುಗನಾಗಿ ಮಹಾ**
**ಲಟಹಬೆರಸಿರ್ದೊಪ್ಪುವ**
**ನಟನಾಕೃತಿ ತಾನೆ ಲೋಕದೊಂದಾಕಾರಂ** ೪೫

**ಪದವಿಭಾಗ–ಅನ್ವಯ–ಅರ್ಥ:** ಲೋಕದ ಒಂದು ಆಕಾರಂ = ಲೋಕದ ರೂಪವು, ಸ್ಫುಟ = ವಿಶದವಾದ, ವೈಶಾಖಸ್ಥಾನಂ = ವೈಶಾಖಸ್ಥಾನದಲ್ಲಿ ನಿಂತು, ಕಟಿತಟದ = ಸೊಂಟದ ಮೇಲೆ, ಹಸ್ತಯುಗನ್ = ತನ್ನೆರಡೂ ಕೈಗಳನ್ನು, ವಿನ್ಯಸ್ತನ್ ಆಗಿ = ಇಟ್ಟುಕೊಂಡ,, ಮಹಾಲಟಹಂ = ಮಹಾ ಸೊಬಗನ್ನು, ಬೆರಸಿರ್ದು ಒಪ್ಪುವ = ಹೊಂದಿ ಶೋಭಿಸುವ, ನಟನಾಕೃತಿ = ನಟನ ಭಂಗಿಯಂತಿರುವುದು, ತಾನೆ = ಅದರದ್ದು.

**ಗದ್ಯಾನುಸರಣ:** ಕಾಲುಗಳನ್ನು ಕಿಸಿದು ನಿಂತು, ತನ್ನೆರಡೂ ಕೈಗಳನ್ನು ಸೊಂಟದ ಮೇಲಿಟ್ಟುಕೊಂಡು, ಮಹಾ ಸೊಬಗಿನಿಂದ ಕೂಡಿ ಶೋಭಿಸಿ (ನಿಂತ). ನಟನ ಆಕೃತಿ = ನಟನ ಭಂಗಿಯಲ್ಲಿ, ಈ ಲೋಕದ ಆಕಾರವಿದೆ.

**ವಿಶೇಷ ವಿಚಾರ:** ವೈಶಾಖಸ್ಥಾನವೆಂಬುದು ನೃತ್ಯದ ಒಂದು ನಿಲವು: ಎರಡೂ ಕಾಲುಗಳನ್ನು ದೂರ ಇಟ್ಟುಕೊಂಡು ನಿಲ್ಲುವಂಥದು. ಜೈನ ಪರಿಕಲ್ಪನೆಯ ಲೋಕಾಕಾರದ ಹೆಚ್ಚಿನ ವಿವರಣೆಗೆ ಮತ್ತು ರೇಖಾಚಿತ್ರಕ್ಕೆ ನೋಡಿ: ಎಲ್.ಗುಂಡಪ್ಪನವರು ಸಂಪಾದಿಸಿರುವ 'ಆದಿಪುರಾಣ ಸಂಗ್ರಹ'.

**ಮಾಡುವ ಕಿಡಿಸುವ ಗಸಣೆಗೆ**
**ನಾಡೆಯುಮದು ಪೊಱಗು ಸಹಜನಿಯತಸ್ಥಿತಿ ನಾ**
**ಡಾಡಿಯ ನರರ್ಗದು ಬಗೆಯಲ್**
**ಕೂಡದದಧಸ್ತಿರ್ಯಗೂರ್ಧ್ವಭೇಧವಿಭಿನ್ನಂ** ೪೬

**ಪದವಿಭಾಗ–ಅನ್ವಯ–ಅರ್ಥ:** ಅದು = ಲೋಕವು, ಮಾಡುವ ಕಿಡಿಸುವ = ಸೃಷ್ಟಿ ಮತ್ತು ಲಯಕಾರ್ಯಗಳ, ಗಸಣಿಗೆ = ಗೊಡವೆಯಿಂದ, ನಾಡೆ = ಸಂಪೂರ್ಣವಾಗಿ, ಪೊಱಗು = ಹೊರತಾದುದು; ಸಹಜನಿಯತಸ್ಥಿತಿ = (ಅದರದ್ದು) ಸಹಜವೂ ಸತತವೂ ಆದ (ಬದಲಾವಣೆಗೊಳ್ಳದ) ಸ್ಥಿತಿ; ನಾಡಾಡಿಯ ನರರ್ಗೆ = ಸಾಮಾನ್ಯ ಜನರಿಗೆ, ಅದು, ಬಗೆಯಲ್ = ಕಲ್ಪಿಸಿಕೊಳ್ಳಲು, ಕೂಡದು = ಸಾಧ್ಯವಾಗದ್ದು; ಅದು, ಅಧಃ = ಕೆಳಗಿನ, ತಿರ್ಯಕ್ = ಜೀವಿಗಳ, ಮತ್ತು ಊರ್ಧ್ವ = ಮೇಲಿನ(ದೆಂಬ), ಭೇದವಿಭಿನ್ನಂ = ಬೇರೆ ಬೇರೆ ಸ್ವರೂಪವುಳ್ಳದ್ದು.

**ಗದ್ಯಾನುಸರಣ:** ಲೋಕವು ಸೃಷ್ಟಿ ಮತ್ತು ಲಯಗಳಿಂದ ಮುಕ್ತವಾಗಿದ್ದು ಒಂದೇ ಸ್ವರೂಪವನ್ನು ಹೊಂದಿರುವಂಥದು; ಅದರ ಸ್ವರೂಪವನ್ನು ಸಾಮಾನ್ಯರು ತಿಳಿಯಲಾರರು; ಅದು ಅಧೋಲೋಕ, ತಿರ್ಯಕ್‌ಲೋಕ ಮತ್ತು ಊರ್ಧ್ವಲೋಕಗಳೆಂಬ ವಿಂಗಡಣೆಯುಳ್ಳದ್ದು.

**ವಿಶೇಷ ವಿಚಾರ:** ವೈದಿಕ ಪರಿಕಲ್ಪನೆಯಲ್ಲಿ ಬ್ರಹ್ಮ ಸೃಷ್ಟಿಕರ್ತ ಮತ್ತು ಶಿವ ಲಯಕರ್ತ; ಆದರೆ ಜೈನ ಸಂಪ್ರದಾಯವು ಇದನ್ನು ಒಪ್ಪದೆ ಲೋಕಸ್ವರೂಪವು ಬದಲಾಗುವುದಿಲ್ಲವೆಂದು ತಿಳಿಯುತ್ತದೆ. ಮೂರು ಹಂತದ ಈ ಲೋಕದಲ್ಲಿ, ಅದರ ಪ್ರಕಾರ, ಮಧ್ಯಭಾಗದಲ್ಲಿ ಜೀವಜಂತುಗಳಿರುವುದು.

**ವಿತ್ರಸ್ತಕರ್ಮಾರಿಪುವ ಜ**
**ಗತ್ತ್ರಯದೀಪಕನ ಕಾಣ್ಕೆಗೊಳಗಾದುದು ಲೋಕ**
**ಕತ್ರಯಮದನುಕ್ರಮದೊಳ್**
**ವೇತ್ರಾಸನಝುಲ್ಲರೀಮೃದಂಗಸಮಾನಂ ೪೭**

**ಪದವಿಭಾಗ–ಅನ್ವಯ–ಅರ್ಥ:** ಕರ್ಮಾರಿಪುವ = ಕರ್ಮವೆಂಬ ಶತ್ರುವನ್ನು, ವಿತ್ರಸ್ತ = ಗೆದ್ದ, ಜಗತ್ ತ್ರಯದೀಪಕನ = ಮೂರು ಲೋಕಗಳನ್ನು ಬೆಳಗುವ, ಕಾಣ್ಕೆಗೆ = ನೋಟಕ್ಕೆ, ಲೋಕತ್ರಯಂ = ಈ ಮೂರೂ ಲೋಕಗಳು, ಒಳಗಾದುದು = ಸಿಲುಕಿರುವಂಥದು; ಅದು, ಅನುಕ್ರಮದೊಳ್ = ಕ್ರಮವಾಗಿ, ವೇತ್ರ ಆಸನ = ಬೆತ್ತದ ಚಾಪೆ, ಝುಲ್ಲರಿ = ಒಂದು ಚರ್ಮವಾದ್ಯ, ಮೃದಂಗ = ಮೃದಂಗಕ್ಕೆ, ಸಮಾನಂ = ಸಮಾನವಾದವು.

**ಗದ್ಯಾನುಸರಣ:** ಕರ್ಮವೆಂಬ ಶತ್ರುವನ್ನು ಗೆದ್ದು ಮೂರು ಲೋಕಗಳ ಬೆಳಕಾಗಿರುವ ಜಿನೇಶನ ಕಣ್ಣರಕೆಯಲ್ಲೇ ಈ ಮೂರು ಲೋಕಗಳಿರುತ್ತವೆ; ಈ ಮೂರೂ ಬೆತ್ತದ ಚಾಪೆ, ಝುಲ್ಲರೀ ಮತ್ತು ಮೃದಂಗಗಳಂತಿರುವುವು.

**ವ = ಗದ್ಯ; ಆ ಲೋಕತ್ರಯದೊಳ್ ಮಧ್ಯಮಲೋಕಮೆಂಬ ಪೆಸರಂ ಪಡೆದು**

**ಪದವಿಭಾಗ–ಅನ್ವಯ–ಅರ್ಥ:** ಆ ಲೋಕತ್ರಯದೊಳ್ = ಮೂರೂ ಲೋಕಗಳಲ್ಲಿ, ಮಧ್ಯಮಲೋಕಮೆಂಬ = ನಡುವಿನ್ನಿರುವ ಲೋಕವೆಂಬ ಹೆಸರನ್ನು ಪಡೆದು = ಹೊಂದಿ,

**ಗದ್ಯಾನುಸರಣ;** ಮೂರು ಲೋಕಗಳ ನಡುವಣ ಲೋಕವೇ ಮಧ್ಯಮಲೋಕ, ಅದು

**ಪರ್ಯಾಯಂದಪ್ಪದೇಂ ಸುತ್ತಿಱಿದುವೊವಳಯಾಕಾರದೊಂದೊಂದನತ್ಯಾ**
**ಶ್ಚರ್ಯಂ ದ್ವೀಪಾಬ್ಧಿವರ್ಗಕ್ರಮಮದುವುಮಸಂಖ್ಯಾತಮಾ ಸಂಖ್ಯೆಯೊಳ್ತಾ**
**ತ್ಪರ್ಯಂಗೆಯ್ವನ್ನವೆಂಬಗ್ಗಳಿಕೆಯಿನೆಸೆದತ್ತೇಕರಜ್ಜುಪ್ರಮಾಣಂ**
**ತಿರ್ಯಗ್ಲೋಕಂ ಸ್ವಯಂಭೂರಮಣಜಲಧಿಪರ್ಯಂತಂ ತಾಗುವನ್ನಂ ೪೮**

**ಪದವಿಭಾಗ–ಅನ್ವಯ–ಅರ್ಥ:** ಏಕರಜ್ಜು = ಒಂದು ರಜ್ಜುವಿನಷ್ಟು, ಪ್ರಮಾಣಂ = ಗಾತ್ರವುಳ್ಳ, ತಿರ್ಯಕ್ ಲೋಕಂ = ಜೀವಿಗಳಿರುವ ಈ ಲೋಕವು, ಸ್ವಯಂಭೂರಮಣ (ಎಂಬ ಹೆಸರಿನ), ಜಲಧಿ = ಸಮುದ್ರದ, ಪರ್ಯಂತಂ = ವರೆವಿಗೂ, ತಾಗುವನ್ನಂ = ಹಬ್ಬಿಕೊಂಡಿದ್ದು, (ಅದರಲ್ಲಿ) ದ್ವೀಪ ಅಬ್ಧಿವರ್ಗಂ = ದ್ವೀಪ ಮತ್ತು ಸಮುದ್ರಗಳು, ಪರ್ಯಾಯಂ ತಪ್ಪದೆ = ಕ್ರಮ ವ್ಯತ್ಯಾಸವಾಗದಂತೆ, ಒಂದೊಂದಂ = ಒಂದು ಇನ್ನೊಂದನ್ನು, ವಳಯಾಕಾರದಿಂ = ಬಳೆಯ ಆಕಾರದಲ್ಲಿ, ಅದೇಂ ಸುತ್ತಿಱಿದುವೋ = ಸುತ್ತಿಕೊಂಡಿವೆ; ಅದುವುಂ = ಆ ದ್ವೀಪ ಮತ್ತು ಸಮುದ್ರಗಳು ಅಸಂಖ್ಯಾತಂ = ಎಣಿಕೆಗೆ ಸಿಕ್ಕದಷ್ಟು ಸಂಖ್ಯೆಯವು; ಆ ಸಂಖ್ಯೆಯೊಳ್ = ಅದರ ಅಸಂಖ್ಯಾತತನದಲ್ಲಿ, ಗದ್ಯಾನುಸರಣಂ = ಅದರ ಪರಿಯನ್ನು, ಗೆಯ್ವನ್ನಂ = ಸೂಚಿಸುವಂತೆ (ಇದೆ), ಅಗ್ಗಳಿಕೆಯಿನ್ = ಹೆಗ್ಗಳಿಕೆಯಿಂದ ಎಸೆದತ್ತು = ಮೆರೆಯುತ್ತಿದೆ.

**ಗದ್ಯಾನುಸರಣ:** ತಿರ್ಯಕ್ ಲೋಕವು ಒಂದು ರಜ್ಜುಪ್ರಮಾಣದ್ದು, ಅದರಲ್ಲಿ ಎಣಿಸಲಾಗದಷ್ಟು ಸಂಖ್ಯೆಯ ದ್ವೀಪಗಳು ಮತ್ತು ಸಮುದ್ರಗಳು ಒಂದನ್ನೊಂದು ಕ್ರಮಬದ್ಧವಾಗಿ ಬಳೆಗಳಂತೆ ಸುತ್ತುವರಿದಿವೆ; ಅಸಂಖ್ಯಾತ ಎಂಬ ಶಬ್ದವೇ ಅದರ ಸ್ವರೂಪವನ್ನು ವರ್ಣಿಸುತ್ತದೆ.

**ವ॥ ಆ ತಿರ್ಯಗ್ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತೈರಾವತಗಳೆಂಬೇೞು ಜನಪದಂಗಳಿಂದಂ ಪೂರ್ವಾಪರಾಯಿತಂಗಳುಂ ಹೇಮಾರ್ಜುನ ತಪನೀಯವೈಡೂರ್ಯ ವಜ್ರರಜತಹೇಮ ಮಯಂಗಳುಂ ಮಣಿವಿಚಿತ್ರ ಪಾರ್ಶ್ವಂಗಳುಮಧಸ್ಥಳೋಪರಿಮ ತಳಸಮಾನವಿಸ್ತಾರಂಗಳುಮಪ್ಪ ಹಿಮ ವನ್ಮಹಾಹಿಮವನ್ನಿಷಧನೀಳರುಗ್ಮಿಶಿಖರಿಗಳೆಂಬ ವರ್ಷಧರ ಮಹೀಧರಂ ಗಳಿಂದಂ ಇನ್ನೂಱು ಕನಕಗಿರಿಗಳಿಂದಂ ನಾಲ್ಕು ನಾಭಿನಗಂಗಳಿಂದಂ ಮೂವತ್ತನಾಲ್ಕು ವಿಜಯಾರ್ಧಪರ್ವತಂಗಳಿಂದಮನಿತೆ ವೃಷಭಾದ್ರಿಗಳಿಂದಂ ಚತುರ್ದಶ ಮಹಾವಾಹಿನಿಗಳಿಂದಮೆಸೆದು**

**ಪದವಿಭಾಗ–ಅನ್ವಯ–ಅರ್ಥ:** ಆ ತಿರ್ಯಕ್ ಲೋಕದ, ನಟ್ಟ ನಡುವೆ = ಸರಿಯಾಗಿ ಮಧ್ಯದಲ್ಲಿ, ಲವಣಜಲಧಿ = ಉಪ್ಪುನೀರಿನ ಸಮುದ್ರದಿಂದ, ಪರಿವೃತಂ

ಆಗಿ = ಸುತ್ತುವರಿಯಲ್ಪಟ್ಟು, ಭರತ ಹೈಮವತ ಹರಿವರ್ಷ ವಿದೇಹ ರಮ್ಯಕ ಹೈರಣ್ಯವತ ಐರಾವತಗಳೆಂಬ ಏೞು = ಏಳು ಜನಪದಂಗಳಿಂದಂ = ಜನಪದಗಳಿಂದಲೂ, ಪೂರ್ವ ಅಪರ ಆಯತಂಗಳುಂ = ಮೂಡಣದಿಂದ ಪಡುವಣದವರೆಗೆ ಹರಡಿದ, ಹೇಮ = ಚಿನ್ನದ ಬಣ್ಣ, ಅರ್ಜುನ = ಬಿಳಿಯ ಬಣ್ಣ, ತಪನೀಯ = ಸೂರ್ಯನಂತಹ ಹೇಮವರ್ಣ, ವೈಡೂರ್ಯದ ನೀಲಿಯ ಬಣ್ಣ, ರಜತ = ಬೆಳ್ಳಿಯ ಬಣ್ಣ, ಹೇಮವರ್ಣಂಗಳುಂ = ಚಿನ್ನದ ಬಣ್ಣಗಳುನ್ನುಳ್ಳವೂ; ಮಣಿ = ರತ್ನಗಳಿಂದ, ವಿಚಿತ್ರ = ಆಕರ್ಷಕ ಬಣ್ಣದ, ಪಾರ್ಶ್ವಗಳುಂ = ಪಕ್ಕಗಳನ್ನುಳ್ಳ, ಅಧಃ ಸ್ಥಳ = ಕೆಳಭಾಗ, (ಮತ್ತು) ಉಪರಿಮತಳ = ಮೇಲ್ಭಾಗಗಳು, ಸಮಾನ = ಒಂದೇ ರೀತಿಯ, ವಿಸ್ತಾರಂಗಳುಮಪ್ಪ = ವಿಸ್ತಾರವನ್ನುಳ್ಳ, ಹಿಮವತ್ ಮಹಾಹಿಮವತ್ ನಿಷಧ ನೀಳ ರುಗ್ಮ ಶಿಖರಿಗಳೆಂಬ = ಪರ್ವತಗಳೆಂಬ, ವರ್ಷಧರ = ಕಾವಲು ಕಾಯುವ, ಮಹೀಧರಂಗಳಿಂದಂ = ಪರ್ವತಗಳಿಂದಲೂ; ಇನ್ನೂೞು = ಇನ್ನೂರು, ಕನಕಗಿರಿಗಳಿಂದಂ = ಚಿನ್ನದ ಬೆಟ್ಟಗಳಿಂದಲೂ, ನಾಲ್ಕು ನಾಭಿನಗಂಗಳಿಂದಂ = ಮೇರುಗಿರಿಗಳಿಂದಲೂ, ಮೂವತ್ತನಾಲ್ಕು ವಿಜಯಾರ್ಧಪರ್ವತಂಗಳಿಂದಂ = ವಿಜಯಾರ್ಧ ಪರ್ವತಗಳಿಂದಲೂ, ಅನಿತೆ = ಅಷ್ಟೇ ಸಂಖ್ಯೆಯ, ವೃಷಭಾದ್ರಿಗಳಿಂದಂ = ವೃಷಭಪರ್ವತಗಳಿಂದಲೂ, ಚತುರ್ದಶ = ಹದಿನಾಲ್ಕು, ಮಹಾವಾಹಿನಿಗಳಿಂದಂ = ದೊಡ್ಡ ನದಿಗಳಿಂದಲೂ, ಎಸೆದು = (ಕೂಡಿ) ಶೋಭಿಸುತ್ತ

**ಗದ್ಯಾನುಸರಣ:** ಆ ತಿರ್ಯಕ್ ಲೋಕದ ಮಧ್ಯದಲ್ಲಿ ಉಪ್ಪುನೀರಿನ ಸಮುದ್ರದಿಂದ ಸುತ್ತುವರಿಯಲ್ಪಟ್ಟು, ಏಳು ಜನಪದಗಳಿಂದ; ಪೂರ್ವದಿಂದ ಪಶ್ಚಿಮಕ್ಕೆ ಹರಡಿಕೊಂಡ ನಾನಾ ಬಣ್ಣಗಳಿಂದಲೂ, ಆಕರ್ಷಕ ಬಣ್ಣಗಳ ಪಕ್ಕಗಳಿಂದಲೂ ಕೂಡಿದ ಆರು ಪರ್ವತಗಳಿಂದ; ಇನ್ನೂರು ಚಿನ್ನದ ಬೆಟ್ಟಗಳಿಂದಲೂ ಅಷ್ಟೇ ಸಂಖ್ಯೆಯ ನಾಭಿಪರ್ವತಗಳಿಂದಲೂ ಮೂವತ್ತನಾಲ್ಕು ವಿಜಯಾರ್ಧಪರ್ವತಗಳು ಮತ್ತು ಅಷ್ಟೇ ಸಂಖ್ಯೆಯ ವೃಷಭಾದ್ರಿಗಳಿಂದಲೂ ಹದಿನಾಲ್ಕು ಮಹಾನದಿಗಳಿಂದಲೂ ಕೂಡಿದೆ.

**ವಿಶೇಷ ವಿಚಾರ:** ಮಹಾನದಿಗಳೆಂದರೆ ಜೈನ ಪುರಾಣ ಪ್ರಸಿದ್ಧವಾದ ಗಂಗೆ, ಸಿಂಧು, ರೋಹಿತ್, ರೋಹಿತಾಸ್ಯಾ, ಹರಿತ್, ಹರಿಕಾಂತಾ, ಸೀತಾ, ಸೀತೋದಾ, ನಾರೀ, ನರಕಾಂತಾ, ಸುವರ್ಣಕೂಲಾ, ರೂಪ್ಯಕೂಲಾ, ರಕ್ತಾ ಮತ್ತು ರಕ್ತೋದಾ.

**ಅತಿವೃತ್ತದೆ ರವಿಬಿಂಬಾ**
**ಕೃತಿ ಯೋಜನಶತಸಹಸ್ರವಿಷ್ಕಂಭಂ ವಿ**
**ಶ್ರುತಜಂಬೂವೃಕ್ಷಮಹಾ**
**ಪ್ರತೀತಿಯಿಂ ನೆಗೞ್ದಿದಿಳೆಗೆ ಜಂಬೂದ್ವೀಪಂ ೪೯**

**ಪದವಿಭಾಗ-ಅನ್ವಯ-ಅರ್ಥ:** ರವಿಬಿಂಬ = ಸೂರ್ಯಮಂಡಳದ, ಆಕೃತಿ = ಆಕಾರದಂತೆ, ಅತಿವೃತ್ತದೆ = ಅತಿಶಯವಾಗಿ ಗುಂಡಗಿರುವ, (ಮತ್ತು) ಯೋಜನಸಹಸ್ರ = ನೂರು ಯೋಜನ ವಿಷ್ಕಂಭಂ = ವಿಸ್ತಾರವಾಗಿಯೂ, ವಿಶ್ರುತ = ಪ್ರಖ್ಯಾತವಾದ, ಜಂಬೂವೃಕ್ಷ = ನೇರಿಳೆ ಮರಗಳ, ಮಹಾಪ್ರತೀತಿಯಿಂ = ದಟ್ಟತೆಯಿಂದ (ಕೂಡಿ) ಜಂಬೂದ್ವೀಪಂ = ಜಂಬೂದ್ವೀಪವು, ಇಳೆಗೆ = ಭೂಮಿಯಲ್ಲಿ, ನೆಗೞ್ದುದು = ಶೋಭಿಸುವುದು

**ಗದ್ಯಾನುಸರಣ:** ಸೂರ್ಯಮಂಡಲದಂತೆ ಗುಂಡಗಿದ್ದು ನೂರು ಯೋಜನದಷ್ಟು ವಿಸ್ತಾರವಾಗಿ ನೇರಿಳೆ ಮರಗಳಿಂದ ಇಡಿಕಿರಿದು ಜಂಬೂದ್ವೀಪವು ಜಗತ್ತಗೇ ಭೂಷಣಪ್ರಾಯವಾಗಿತ್ತು.

**ವಿಶೇಷ ವಿಚಾರ:** ಯೋಜನವೆಂದರೆ ಎರಡು ಗಾವುದ ಅಥವಾ ನಾಲ್ಕು ಹರದಾರಿ ದೂರ.

**ವ॥ ಆ ಜಂಬೂದ್ವೀಪದ ನಟ್ಟವಡುವೆ ನವನವತಿಯೋಜನ ಸಹಸ್ರೋತ್ಸೇಧಮುಂ ಯೋಜನಸಹಸ್ರಾವಗಾಹಮುಂ ಸರ್ವರತ್ನ ಜಾಂಬೂನದ ವೈಡೂರ್ಯಮಯಮುಂ ಅಂತರಾಂತರ ನಿರಂತರಕಾಂತ ಸೋಮ ಯಮ ವರುಣ ಕುಬೇರ ಪ್ರಮುಖ ಲೋಕಪಾಲಾಭಿಯೋಗ್ಯ ದಿಗ್ಗಜೇಂದ್ರ ದೇವವಿಹಾರಪ್ರಾಸಾದಾಭಿರಾಮಮುಂ ಅನೇಕನಾಕನಾಯಕ ಲೋಕಪಾಳ ಲೀಲಾ ಭವನಾಧ್ಯಾಸಿತಮುಂ ಪದ್ಮವೇದಿಕಾ ಪರಿವೃತರತ್ನತೋರಣಾಂಚಿತ ಜಿನಭವನಪರಿವೃತಮುಂ ಪಂಚರತ್ನಮಯ ಸುಶ್ಲಿಷ್ಟಾಷ್ಟಾದಶ ಸಹಸ್ರಲಕ್ಷಣ ವ್ಯಂಜನಾಮುಕಿತಾಷ್ಟಶತ ಕಳಶಭೃಂಗಾರಾದ್ಯುಪಕರಣೋಪಶೋಭಿತಮುಂ ವೈಡೂರ್ಯದಂಡಮುಕ್ತಾಮಣಿಜಾಳಾಳಂಕೃತ ರತ್ನಶಲಾಕಾ ಶತಕಾಂಚನ ಕುಂಭಬಿಂಬ ರಜತಚ್ಛದಚ್ಛತ್ರವಿಚಿತ್ರ ಜಿನೇಂದ್ರಪ್ರತಿಕೃತಿ ಪ್ರಕೀರ್ಣಮುಂ ಭದ್ರಶಾಲಾ ನಂದನ ಸೌಮನಸಪಾಂಡುಕವನವಿರಾಜಿತಮುಂ ಪಾಂಡುಕ ಪಾಂಡುಕಂಬಳ ರಕ್ತಕಂಬಳಾತಿರಕ್ತಕಂಬಳವಿಶಾಲರತ್ನಶಿಲಾಪ್ರತಿಷ್ಠಿತ ಭಗವಜ್ಜನ್ಮಾಭಿಷೇಕ ಸಿಂಹಾಸನಾಳಂಕೃತಮುಮಾಗಿ**

**ಪದವಿಭಾಗ-ಅನ್ವಯ-ಅರ್ಥ:** ಆ ಜಂಬೂದ್ವೀಪದ ನಟ್ಟನಡುವೆ, ನವನವತಿ = ತೊಂಬತ್ತೊಂಬತ್ತು, ಯೋಜನಸಹಸ್ರ = ಸಾವಿರ ಯೋಜನ, ಉತ್ಸೇಧಮುಂ = ಎತ್ತರವೂ; ಯೋಜನಸಹಸ್ರ = ಒಂದು ಸಾವಿರ ಯೋಜನ, ಅವಗಾಹಮುಂ = ಅಗಲವೂ (ಇರುವ); ಸರ್ವರತ್ನ = ಎಲ್ಲ ಬಗೆಯ ರತ್ನಗಳು, ಜಾಂಬೂನದ = ಚಿನ್ನ, ವೈಡೂರ್ಯಮಯಮುಂ = ವೈಡೂರ್ಯಗಳಿಂದಲೂ; ಅಂತರಾಂತರ =

ನಡುನಡುವೆ, ನಿರಂತರಕಾಂತ = ಸದಾ ಪ್ರಕಾಶಿಸುವ, ಸೋಮ ಯಮ ವರುಣ ಕುಬೇರ ಪ್ರಮುಖ = (ಈ) ಮುಖ್ಯರಾದಿಯಾದ, ಲೋಕಪಾಲ ಅಭಿಯೋಗ್ಯ = ಲೋಕಪಾಲರಿಗೆ ತಕ್ಕವರಾದ, ದಿಗ್ಗಜೇಂದ್ರದೇವ(ತೆಗಳ), ವಿಹಾರಪ್ರಾಸಾದ = ವಿಹಾರಭೂಮಿಯಾದ, ಪ್ರಾಸಾದ = ಉಪ್ಪರಿಗೆಗಳಿಂದ, ಅಭಿರಾಮಮುಂ = ಶೋಭಿಸುವಂತಹವೂ; ಅನೇಕ = ನಾನಾ, ನಾಕನಾಯಕ= ಸ್ವರ್ಗಾಧಿಪತಿಗಳ, ಲೋಕಪಾಳ = (ಹಾಗೂ) ಲೋಕಪಾಳರುಗಳ, ಲೀಲಾಭವನ = ಆಟದ ಮನೆಗಳಂತೆ, ಅಧ್ಯಾಸಿತಮುಂ = ಬಳಸಲಾಗುವಂಥವೂ; ಪದ್ಮವೇದಿಕಾಪರಿವೃತ = ಪದ್ಮೇದಿಕೆಗಳಿಂದ ಸುತ್ತುವರಿಯಲ್ಪಟ್ಟ, ರತ್ನತೋರಣ ಅಂಚಿತ = ರತ್ನತೋರಣಗಳಿಂದ ಕೂಡಿದ, ಜಿನಭವನಪರಿವೃತಮುಂ = ಜೈನಾಲಯಗಳಿಂದ ಸುತ್ತುವರಿಯಲ್ಪಟ್ಟ, ಪಂಚರತ್ನಮಯ = ಐದುರತ್ನಗಳಿಂದ, ಸುಶ್ಲಿಷ್ಟ = ಮುಚ್ಚಿಕೊಂಡ, ಅಷ್ಟಾದಶಸಹಸ್ರ = ಹದಿನೆಂಟು ಸಾವಿರ, ಲಕ್ಷಣವ್ಯಂಜನ ಅಂಕಿತ = ಲಕ್ಷಣಗಳಿಂದ ಕೂಡಿದ, ಅಷ್ಟಾಶತ = ಎಂಟುನೂರು, ಕಳಶಭೃಂಗಾರಾದಿ = ಚಿನ್ನದ ಕಳಶವೇ ಮುಂತಾದವುಗಳಿಂದ, ಉಪಕರಣ = ಸಾಧನಗಳಿಂದ, ಉಪಶೋಭಿತಮುಂ = ಶೋಭಾಯಮಾನವಾದ; ವೈಡೂರ್ಯದಂಡ = ವೈಡೂರ್ಯದ ಶಲಾಕೆಗಳಿಂದಲೂ, ಮುಕ್ತಾಮಣಿಜಾಳ = ಮುತ್ತುಗಳ ರಾಶಿಗಳಿಂದಲೂ, ಅಳಂಕೃತ = ಅಲಂಕರಗೊಂಡ, ರತ್ನಶಲಾಕಾಶತಕಾಂಚನ = ಅಸಂಖ್ಯ ರತ್ನಶಲಾಕೆಗಳ, ಕಾಂಚನಕುಂಭಬಿಂಬ = ಚಿನ್ನದ ಕೊಡಗಳಿಂದ, ರಜತಚ್ಛದಚ್ಛತ್ರ = ಬೆಳ್ಳಿಯ ಕೊಡೆಗಳಿಂದಲೂ; ವಿಚಿತ್ರ = ಆಕರ್ಷಕವಾದ ಜಿನೇಂದ್ರ ಪ್ರತಿಕೃತಿ = ಜಿನ ಪ್ರತಿಮೆಗಳಿಂದ, ಪ್ರಕೀರ್ಣಮುಂ = ಕಿಕ್ಕಿರಿದವೂ, ಭದ್ರಶಾಲ ನಂದನ ಸೌಮನಸ ಪಾಂಡುಕ (ಎಂಬ), ವನವಿರಾಜಿತಮುಂ = ವನಗಳಿಂದ ಸೊಗಸುವಡೆದುದೂ; ಪಾಂಡಕ ಪಾಂಡುಕಂಬಳ ರಕ್ತಕಂಬಳ ಅತಿರಕ್ತಕಂಬಳ (ಇವುಗಳಿಂದ) ವಿಶಾಲ(ವಾದ), ರತ್ನಶಿಲಾತಳ = ಮಣಿಮಯತಳದಲ್ಲಿ, ಪ್ರತಿಷ್ಠಿತ = ಪ್ರತಿಷ್ಠಾಪನೆಗೊಂಡು, ಭಗವತ್ = ಆದಿಜಿನನ, ಜನ್ಮಾಭಿಷೇಕ = ಹುಟ್ಟಿದಾಗ ಮಾಡುವ ಅಭಿಷೇಕ (ಮಾಡುವ), ಸಿಂಹಾಸನ ಅಳಂಕೃತಮುಂ = ಪೀಠದಿಂದ ಶೋಭಿತವಾಗಿ

**ಗದ್ಯಾನುಸರಣ:** ಜಂಬೂದ್ವೀಪದ ಮಧ್ಯದಲ್ಲಿ ತೊಂಬತ್ತೊಂಬತ್ತು ಸಾವಿರ ಯೋಜನದಷ್ಟು ಎತ್ತರ ಹಾಗೂ ಒಂದು ಸಾವಿರ ಯೋಜನ ಅಗಲವಿರುವ; ನಾನಾ ಬಗೆಯ ರತ್ನ ಚಿನ್ನ ವೈಡೂರ್ಯಗಳಿಂದ ತುಂಬಿ, ನಡುನಡುವೆ ಸುಂದರವಾದ ಪ್ರಸಿದ್ಧ ಲೋಕಪಾಲರುಗಳಿಗೆ ಹಾಗು ಅವರಿಗೆಣೆಯಾದ ದಿಗ್ಗಜೇಂದ್ರರಿಗೆ ವಿಹಾರಸ್ಥಾನವಾದ ಉಪ್ಪರಿಗೆಯ ಮಹಲುಗಳಿಂದ ಕೂಡಿ, ಆಟದ ಮನೆಗಳು ಹಾಗೂ ವೈಭವಯುತವಾಗಿ ಅಲಂಕೃತಗೊಂಡ ಜಿನಾಲಯಗಳನ್ನು ಹೊಂದಿ, ಸಲ್ಲಕ್ಷಣಸಹಿತವಾದ ಅಸಂಖ್ಯ ಸ್ವರ್ಣಕುಂಭಗಳಿಂದಲೂ ಬೆಳ್ಳಿಯ ಕೊಡೆಗಳಿಂದ

ರಾರಾಜಿಸುವ ಜಿನಪ್ರತಿಮೆಗಳಿಂದ ಕೂಡಿದ ವಿವಿಧ ವನಗಳಿಂದ ಶೋಭಿತವಾಗಿ, ಜಿನನ ಜನ್ಮಾಭಿಷೇಕವನ್ನು ನೆರವೇರಿಸುವ ಸಿಂಹಾಸನದಿಂದ ಸೊಗಸುವ ಸುಮೇರುಪರ್ವತವಿತ್ತು..

**ನೆಲಸಿರ್ದಪ್ಪುದಧಸ್ಸ್ಥಳಂಬಿಡಿದಧೋಲೋಕಂ ಸಮಂತೆಯ್ದೆ ಸು**
**ತ್ತಲುಮಿರ್ದಪ್ಪುದು ಮಧ್ಯಲೋಕಮೆಸೆದಿರ್ದಾ ಚೂಳಿಕಾಭಾಗದಾ**
**ದಲೆಯೊಳ್ನಿಂದಪುದೂರ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದಗುಂ**
**ದಲೆಯಾಗಿರ್ದುದು ದೇವದಂಪತಿರತಶ್ರೀಸುಂದರಂ ಸುಮೇರುಂ ೫೦**

**ಪದವಿಭಾಗ–ಅನ್ವಯ–ಅರ್ಥ:** (ಅದರ) ಅಧಃಸ್ಥಳಂಬಿಡಿದು = ಆಶ್ರಯಿಸಿ, ಅಧೋಲೋಕಂ = ಅಧೋಲೋಕವು (ಇದೆ); (ಸುಮೇರುದ) ಸುತ್ತಲುಂ = ಸುತ್ತಲೂ, ಮಧ್ಯಲೋಕಂ = ಮಧ್ಯಲೋಕವು, ಇರ್ದಪ್ಪುದು = ಇದೆ; ಎಸೆದಿರ್ದ = ಶೋಭಿಸುವ, ಆ = ಅದರ, ಚೂಳಿಕಾಭಾಗದ = ಕೇಶ ಭಾಗದ, ಆದಲೆಯೊಳ್ = ಅತ್ತ ಕಡೆ (ಅಂದರೆ ಮೇಲುಗಡೆ), ಊರ್ಧ್ವಲೋಕಂ = ಊರ್ಧ್ವಲೋಕವು, ನಿಂದಪ್ಪುದು = ನಿಂತಿದೆ, ಎನೆ = ಎಂಬಂತೆ, ದೇವದಂಪತಿ = ದೇವತೇ ಜೋಡಿಗಳ, ರತಶ್ರೀ = ಪ್ರಣಯದ ಸೊಬಗಿನಿಂದ, ಸುಂದರಂ ಸುಮೇರುಂ = ಸುಂದರವಾದ ಸುಮೇರು ಪರ್ವತವು, ಮೂಲೋಕಕ್ಕೆ = ಮೂರು ಲೋಕಗಳಿಗೂ, ಪೆಂಪಿಂದೆ = ಹಿರಿಮೆಯಿಂದ, ಅಗುಂದಲೆಯಾಗಿರ್ದುದು = ಅತಿಶಯವಾಗಿದೆ.

**ಗದ್ಯಾನುಸರಣ:** ಸುಮೇರುಪರ್ವತದ ಕೆಳಗಡೆಯಲ್ಲಿ ಅಧೋಲೋಕವಿದೆ; ಅದನ್ನು ಸುತ್ತಲೂ ಆವರಿಸಿದಂತೆ ಮಧ್ಯಲೋಕವಿದೆ; ಅದರ ತಲೆದಿಸೆಯಲ್ಲಿ ಊರ್ಧ್ವಲೋಕವಿದೆ; ದೇವದಂಪತಿಗಳ ಪ್ರಣಯದ ಆಡುಂಬೊಲವಾದ ಆ ಸುಮೇರುವು ಸುಂದರವಾಗಿದೆ.

**ವ॥ ಗದ್ಯ, ಆ ಮಂದಾರದ ಪೂರ್ವಾಪರ ದಿಗ್ವಿಭಾಗದೊಳ್ ವಿದೇಹಂಗಳಿರ್ದುವಲ್ಲಿ**

**ಅರ್ಥ:** ಆ ಮಂದಾರದ ಪೂರ್ವ + ಅಪರ ದಿಗ್ವಿಭಾಗದೊಳ್ ವಿದೇಹಂಗಳಿರ್ದುವು + ಅಲ್ಲಿ = ಆ ಸುಮೇರು ಪರ್ವತದ ಮೂಡಣ ಮತ್ತು ಪಡುವಣ ದಿಕ್ಕುಗಳಲ್ಲಿ ಪೂರ್ವ ವಿದೇಹ ಮತ್ತು ಪಶ್ಚಿಮ ವಿದೇಹ ಎಂಬ ಎರಡು ದೇಶಗಳಿದ್ದವು; ಅಲ್ಲಿ

**ಪದನಂ ಕಾಣಿಸಿಕೊಳ್ವುವಲ್ಲಿ ಮಟಿಗಳ್ ಷಡ್ಭಾಗಮಂ ಕೊಂಡು ತ**
**ಪ್ಪದೆ ಭೂಪರ್ ಪ್ರತಿಪಾಳಿಪರ್ ಪ್ರಜೆಗಳಂ ಶ್ರೀಜೈನಧರ್ಮಂ ಪೊದ**
**ಳ್ದೊದವುತ್ತಿರ್ಪುದು ವುತ್ತಿನನ್ಯಸಮಯಕ್ಕುತ್ಪತ್ತಿಯಿಲ್ಲೊಂದಱೊಳ್**
**ಪದಿನಾರಾಗಿ ನಿರಂತರಂ ಸೊಗಯಿಕುಂ ಮೂವತ್ತರೆಟ್ನಾಡುಗಳ್ ೫೧**

**ಪದವಿಭಾಗ–ಅನ್ವಯ–ಅರ್ಥ:** ಅಲ್ಲಿ, ಮೞೆಗಳ್ = ಮಳೆಯು, ಪದನಂ = ಹದವಾಗಿ, ಕಾಣ್ಸಿಕೊಳ್ವುವು = ಸುರಿಯುತ್ತವೆ; ಭೂಪರ್ = ರಾಜರುಗಳು, ಷಡ್ಭಾಗಮಂ = ತೆರಿಗೆಯನ್ನು, ಕೊಂಡು = ತೆಗೆದುಕೊಂಡು, ಪ್ರಜೆಗಳಂ = ತಮ್ಮ ಪ್ರಜೆಗಳನ್ನು, ಪ್ರತಿಪಾಳಿಪರ್ = ಕಾಪಾಡುತ್ತಾರೆ; ಶ್ರೀಜೈನಧರ್ಮಂ = ಜೈನಧರ್ಮವು, ಪೊದಳ್ದು = ವ್ಯಾಪಕವಾಗಿ, ಒದವುತ್ತಿರ್ಪುದು = ಏಳಿಗೆ ಹೊಂದುತ್ತದೆ, ಅನ್ಯಸಮಯಕ್ಕೆ = ಇತರ ಧರ್ಮಗಳಿಗೆ, ಉತ್ಪತ್ತಿಯಿಲ್ಲ = ಅವಕಾಶವಿಲ್ಲ; ಒಂದಱೊಳ್ = ಒಂದೊಂದರಲ್ಲಿಯೂ, ಪದಿನಾರಾಗಿ = ಹದಿನಾರು (ವಿಭಾಗಗಳಾಗಿ), (ಒಟ್ಟು) ಮೂವತ್ತೆರೆಡು ನಾಡುಗಳ್ = ಮೂವತ್ತೆರೆಡು ನಾಡುಗಳು, ಸೊಗಯಿಕುಂ = ಸೊಗಸುತ್ತಿವೆ.

**ಗದ್ಯಾನುಸರಣ:** ಎರಡೂ ವಿದೇಹಗಳಲ್ಲಿ ಹದನಾದ ಮಳೆ ಬರುತ್ತದೆ; ರಾಜರುಗಳು ತಮ್ಮ ಭಾಗದ ತೆರಿಗೆಯನ್ನು ಪಡೆದು ಪ್ರಜೆಗಳನ್ನು ರಕ್ಷಿಸುತ್ತಾರೆ; ಜೈನಧರ್ಮವು ಏಳಿಗೆ ಹೊಂದಿದ್ದು, ಅಲ್ಲಿ ಇತರ ಧರ್ಮಗಳಿಗೆ ಅವಕಾಶವಿಲ್ಲ; ಒಂದೊಂದು ವಿದೇಹದಲ್ಲೂ ಹದಿನಾರರಂತೆ ಒಟ್ಟು ಮೂವತ್ತೆರಡು ನಾಡುಗಳು ಅಲ್ಲಿವೆ.

**ವಿಶೇಷ ವಿಚಾರ:** ಷಡ್ಭಾಗ ಎಂಬುದು ಪ್ರಜೆಗಳು ರಾಜನಿಗೆ ಸಲ್ಲಿಸಬೇಕಾಗಿದ್ದ ತಮ್ಮ ಉತ್ಪತ್ತಿಯ ಆರನೇ ಒಂದು ಭಾಗವನ್ನು ಸೂಚಿಸುತ್ತದೆ. ಕನ್ನಡದ ಅತ್ಯಂತ ಹಳೆಯ ಬರಹವಾದ ಹಲ್ಮಿಡಿ ಶಸನದಲ್ಲಿ ಉಲ್ಲೇಖಿತವಾಗಿರುವ 'ಸಟ್ಬಂಗ' ಎಂಬ ಶಬ್ದವು 'ಷಡ್ಭಾಗ' ಎಂಬುದರ ತದ್ಭವವೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಎರಡೂ ವಿದೇಹಗಳಲ್ಲಿ ಜೈನಧರ್ಮ ಮಾತ್ರ ಇತ್ತು ಎಂಬುದು ಪುರಾಣಕಾರನ ಹೇಳಿಕೆ.

**ತೊಲಗದು ಪುಬ್ಬಕೋಟಿಪರಿಸಂಖ್ಯೆವರಂ ಪರಮಾಯು ಕಳ್ಳರಾ**
**ಯಿಲಮೞೆಯೇಱು ಮಾರಿ ಪಸವಿಟ್ಟಿ ಬಱು ಪೆಱವುಂ ಭಯಂಗಳಾ**
**ಕುಲಿತೆಗಳಿಲ್ಲ ಧಾತ್ರಿ ಪುಸಿವೋಗದು ಪಂಚಧನುಶ್ಶತಂ ಪವ**
**ಣ್ಣೆಲೆ ನರರ್ಗೆಂದೊಡಿನ್ನಿಮಿರೆ ಬಣ್ಣಿಸಲಾನಱಿಯೆಂ ವಿದೇಹಮಂ ೫೨**

**ಪದವಿಭಾಗ–ಅನ್ವಯ–ಅರ್ಥ:** ಪರಮಾಯು = (ಜನಗಳ) ಆಯುಸ್ಸು, ಪುಬ್ಬಕೋಟಿ = ಹಲವು ಪೂರ್ವಗಳಷ್ಟು, ಪರಿಸಂಖ್ಯೆವರಂ = ಸಂಖ್ಯೆಯವರೆಗೂ, ತೊಲಗದು = ಕಡಿಮೆಯಾಗುವುದಿಲ್ಲ; ಕಳ್ಳರ ಆಯಿಲಂ = ಕಳ್ಳರ ಕಾಟ, ಅಱಿಯ ಏಱು = ಪೆಟ್ಟಿನಿಂದಾದ ಗಾಯ, ಮಾರಿ = ಅಂಟು ರೋಗ, ಪಸವು = ಹಸಿವು, ಇಟ್ಟಿ = ದರೋಡೆ, ಬಱು = ಬರ, ಪೆಱವುಂ ಭಯಂಗಳ = ಇನ್ನಿತರ

ಭಯಗಳ, ಆಕುಲಿತೆಗಳಿಲ್ಲ = ದುಃಖಗಳಿಲ್ಲ; ಧಾತ್ರಿ = ಭೂಮಿಯು, ಪುಸಿ ಪೋಗದು = ಬರಡಾಗುವುದಿಲ್ಲ; ನರರ್ಗೆ = ಮಾನವರಿಗೆ, ಪವಣ್ = (ಎತ್ತರದ) ಮಿತಿ, ಪಂಚಧನುಶ್ಶತಂ = ಐನೂರು ಧನುಸ್ಸುಗಳು, ಎಂದೊಡೆ = ಎಂದ ಮೇಲೆ, ಇನ್ನು ನಿಮಿರೆ = ಇನ್ನೂ ವಿವರವಾಗಿ, ವಿದೇಹಮಂ = ವಿದೇಹವನ್ನು, ಬಣ್ಣಿಸಲ್ = ವರ್ಣಿಸುವುದಕ್ಕೆ, ಆನ್ ಅಱಿಯೆಂ = ನಾನು ತಿಳಿದವನಲ್ಲ.

**ಗದ್ಯಾನುಸರಣ:** ವಿದೇಹದಲ್ಲಿ ಜನಗಳ ಆಯುಸ್ಸಿನ ಪರಿಮಿತಿ ಹಲವು ಪೂರ್ವಗಳಷ್ಟು; ಆ ದೇಶಗಳಲ್ಲಿ ಕಳ್ಳರ ಕಾಟವಾಗಲೀ, ಪೆಟ್ಟು ಬಿದ್ದ ಗಾಯಗಳಾಗಲೀ, ಅಂಟುರೋಗಗಳಾಗಲೀ, ಹಸಿವಿನ ಸಂಕಟವಾಗಲೀ, ಬರವಾಗಲೀ, ಬೇರೆ ಯಾವು ಬಗೆಯ ಭಯಗಳಾಗಲೀ ಇಲ್ಲ; ಅಲ್ಲಿನ ಭೂಮಿ ಎಂದೂ ಬರಡಾಗದು; ಮಾನವರ ಎತ್ತರ ಐನೂರು ಧನುಸ್ಸುಗಳಷ್ಟು – ಎಂದ ಮೇಲೆ ಆ ದೇಶವನ್ನು ಮತ್ತಷ್ಟು ವಿವರವಾಗಿ ವರ್ಣಿಸಲು ನನ್ನಿಂದ ಸಾಧ್ಯವಿಲ್ಲ.

**ವಿಶೇಷ ವಿಚಾರ:** ಪುಬ್ಬ ಅಥವಾ ಪೂರ್ವ ಎಂದರೆ ಎಪ್ಪತ್ತು ಲಕ್ಷ ಮೂವತ್ತು ಸಾವಿರ ಕೋಟಿ ವರ್ಷಗಳು ಎಂಬ ನಂಬಿಕೆ; ಧನುಸ್ಸು (ಬಿಲ್ಲು) ಎಂಬುದು ನಾಲ್ಕು ಮೊಳ ಎತ್ತರವನ್ನು ಸೂಚಿಸುವ ಒಂದು ಅಳತೆ. ಇಲ್ಲಿ ಸೂಚಿತವಾಗಿರುವ ಸಾಮಾಜಿಕ ಸ್ಥಿತಿ ಪಂಪನ ಕಾಲದ್ದೊ ಅಥವಾ ತೀರ್ಥಂಕರನ ಕಾಲದ್ದೊ ಹೇಳಲು ಬರುವುದಿಲ್ಲ; ಆದರೂ ಇದೊಂದು ಆದರ್ಶದ ಮಾದರಿಯದು.

**ಉತ್ತಮ ತಪಂಗಳಿಂದ**
**ತ್ಯುತ್ತಮದೇಹರ್ ವಿದೇಹರಪ್ಪುದಱಿಂ ಮೆ**
**ಯ್ವೆತ್ತನ್ವರ್ಥತೆಯಂ ತಾ**
**ಳ್ದಿತ್ತು ವಿದೇಹಂ ವಿದೇಹಮೆಂಬೀ ಪೆಸರಂ** ೫೩

**ಪದವಿಭಾಗ–ಅನ್ವಯ–ಅರ್ಥ:** ವಿದೇಹರ್ = ವಿದೇಹದ ಜನರು, ಉತ್ತಮ ತಪಂಗಳಿಂ = ಶ್ರೇಷ್ಠ ತಪಸ್ಸುಗಳನ್ನು ಮಾಡುವುದರಿಂದ, ಅತ್ಯುತ್ತಮ ದೇಹರ್ = ಅತ್ಯುತ್ತಮ ದೇಹಗಳನ್ನು ಪಡೆದವರು, (ಹಾಗಾಗಿ) ವಿದೇಹರ್ = ದೇಹವಿಲ್ಲದವರು, ಅಪ್ಪುದಱಿಂ = ಆದುದರಿಂದ, ಅನ್ವರ್ಥತೆಯಂ = ಅರ್ಥಕ್ಕನುಗುಣವಾಗಿ, ಮೆಯ್ವೆತ್ತು = ಪಡೆದು, ವಿದೇಹಂ = ಆ ದೇಶವು, ವಿದೇಹಮೆಂಬ = ವಿದೇಹವೆನ್ನುವ, ಈ ಪೆಸರಂ = ಈ ಹೆಸರನ್ನು, ತಾಳಿತು = ಪಡೆಯಿತು.

**ಗದ್ಯಾನುಸರಣ:** ಅಲ್ಲಿನ ಜನರು ಶ್ರೇಷ್ಠವಾದ ತಪಸ್ಸುಗಳನ್ನು ಮಾಡುವುದರಿಂದಾಗಿ ವರ ದೇಹಗಳು ಅತ್ಯುತ್ತಮವಾಗಿ ದೇಹದ ಮಿತಿಗಳನ್ನು ಮೀರುವುದರಿಂದ ಆ ದೇಶಕ್ಕೆ ವಿದೇಹ ಎಂಬ ಹೆಸರು ಅನ್ವರ್ಥವಾದುದು

**ವಿಶೇಷ ವಿಚಾರ:** ಕವಿ 'ವಿದೇಹ' ಎಂಬ ಶಬ್ದವನ್ನು ಶ್ಲೇಷೆ ಮಾಡುತ್ತಿದ್ದಾನೆ. ವಿ + ದೇಹ ಎಂಬುದು ದೇಹವಿಲ್ಲದ್ದನ್ನು ಸೂಚಿಸುವಂತೆಯೇ ವಿಶೇಷ ದೇಹವನ್ನೂ ಸೂಚಿಸುತ್ತದೆ.

**ವ॥ ಗದ್ಯ: ಅಲ್ಲಿ ಪಶ್ಚಿಮವಿದೇಹಮಧ್ಯಭೂಭಾಗಕ್ಕಳಂಕಾರಮಾಗಿ ಪಂಚಶತಯೋಜನ ಪ್ರಮಾಣವಿಸ್ತೀರ್ಣಮುಮಪ್ಪ,**

**ಪದವಿಭಾಗ–ಅನ್ವಯ–ಅರ್ಥ:** ಅಲ್ಲಿ ಪಶ್ಚಿಮವಿದೇಹದ ಮಧ್ಯಭೂಭಾಗಕ್ಕೆ + ಅಳಂಕಾರಮಾಗಿ ಪಂಚಶತ ಯೋಜನಪ್ರಮಾಣ = ವಿಸ್ತೀರ್ಣಮುಂ ಅಪ್ಪ = ಆ ಎರಡು ವಿದೇಶಗಳಲ್ಲಿ ಒಂದಾದ ಪಶ್ಚಿಮ ವಿದೇಹದ ನಟ್ಟ ನಡುವಣ ಪ್ರದೇಶದಲ್ಲಿ ಐನೂರು ಯೋಜನಗಳಷ್ಟು ವಿಸ್ತೀರ್ಣವನ್ನು ಪಡೆದ,

**ಪ್ರಿಯಹಂಸೀಯುತಹಂಸನಾದೆಯು ಮಹಾಕುತ್ಕೀಲಕೂಟಪ್ರಭೇ**
**ದೆಯು ತೀರಸ್ಥಲವಂಗಚೂತಲವಲೀಪುಷ್ಪಾಸವಾಸ್ವಾದಿತೋ**
**ದಯುತೋನ್ಮಾದೆಯು ತದ್ವಿದೇಹಜನತಾಸ್ವಾಂತೋದ್ಯತ್ಪ್ರಮೋ**
**ದೆಯ ಸೀತೋದೆಯ ಪೋಲ್ವೆಗಿಲ್ಲ ತೊಱೆಗಳ್ ವಿಶ್ವಂಭರಾಭಾಗದೊಳ್ ೫೪**

**ಪದವಿಭಾಗ–ಅನ್ವಯ–ಅರ್ಥ:** ಪ್ರಿಯಹಂಸೀಯುತ = ಹಂಸಗಳಿಂದ ಕೂಡಿ, ಹಂಸೀನಾದೆಯ = ಹಂಸದಂತೆ ಕಲರವ ಮಾಡುವವಳಾದ; ಮಹಾಕುತ್ಕೀಲ = ದೊಡ್ಡ ಪರ್ವತಗಳ, ಕೂಟ = ಶ್ರೇಣಿಗಳನ್ನು, ಪ್ರಭೇದೆಯ = ಸೀಳುವವಳಾದ; ತೀರಸ್ಥ = ದಡಗಳಲ್ಲಿರುವ, ಲವಂಗ = ಲವಂಗ, ಚೂತ = ಮಾವು, ಲವಲೀಪುಷ್ಪ = ಅರನೆಲ್ಲಿ ಮರ – ಇವುಗಳ ಹೂಗಳ, ಆಸವ = ಮಕರಂದವನ್ನು, ಆಸ್ವಾದಿತ = ಹೀರಿ, ಉದಯುತ = ಉಂಟಾಗುವ, (ತುಂಬಿಗಳ) ಉನ್ಮಾದೆಯ = ಮದಕ್ಕೆ ಕಾರಣಳಾದ; ತತ್ ವಿದೇಹಜನತಾ = ಆ ವಿದೇಹದ ಜನರ, ಸ್ವಾಂತ = ಮನಸ್ಸಿಗೆ, ಅರ್ಪಿತ = ನೀಡುವ, ಉದ್ಯತ್ = ಅಧಿಕವಾದ, ಪ್ರಮೋದೆಯ = ಸಂತೋಷವನ್ನು ನೀಡುವವಳಾದ, ಸೀತೋದೆಯ = ಸೀತೋದೆ ಎಂಬ ನದಿಯ, ಪೋಲ್ವೆಗೆ = ಹೋಲಿಕೆಗೆ, ವಿಶ್ವಂಭರಾಭಾಗದೊಳ್ = ಇಡೀ ಭೂಮಿಯಲ್ಲಿ, ಇಲ್ಲ ತೊಱೆಗಳ್ = ಬೇರೆ ನದಿಗಳೇ ಇಲ್ಲ.

**ಗದ್ಯಾನುಸರಣ:** ಅಲ್ಲ ಹರಿಯುವ ಸೀತೋದೆ ಎಂಬ ನದಿಗೆ ಇಡೀ ಜಗತ್ತಿನಲ್ಲಿ ಹೋಲಿಸಬಹುದಾದ ಮತ್ತೊಂದು ನದಿಯಿಲ್ಲ: ಯಾಕೆಂದರೆ, ಹಂಸಗಳಿಂದ ಕೂಡಿ, ತಾನೇ ಕಲರವ ಮಾಡುವಂತೆ ಅದು ಕಾಣುತ್ತದೆ, ಮಹಾ ಪರ್ವತಶ್ರೇಣಿಗಳನ್ನು ಸೀಳಿಕೊಂಡು ಆ ನದಿ ಹರಿಯುತ್ತದೆ, ದಡಗಳ ಗುಂಟ ಬೆಳೆದ ಲವಂಗ ಮಾವು ಅರೆನೆಲ್ಲಿ ಮುಂತಾದ ಮರಗಿಡಗಳ ಹೂಗಳ ಬಂಡನ್ನುಂಡು

ಸೊಕ್ಕಿದ ದುಂಬಿಗಳಿಗೆ ಅದು ಎಡೆಯಿತ್ತಿದೆ, ವಿದೇಹದ ಜನರ ಮನಸ್ಸಿಗೆ ಅಪಾರ ಉಲ್ಲಾಸವನ್ನು ತಂದಿತ್ತಿದೆ.

**ವಿಶೇಷ ವಿಚಾರ:** ಸೀತೋದೆಯಲ್ಲಿ ಹಂಸಗಳು ವಿಹರಿಸುವುದಾಗಿ ಕವಿ ವರ್ಣಿಸುತ್ತಾನೆ. ಹಂಸಗಳು ಕೊಳ ಸರೋವರಗಳಲ್ಲಿಇರಬಹುದೇ ಹೊರತು ಹರಿಯುವ ನದಿಗಳಲ್ಲಲ್ಲ; ಆದರೆ ಹೀಗೆಂದು ಕವಿಗಳು ಕಲ್ಪಿಸಿಕೊಂಡು ವರ್ಣಿಸಿ ಅದು ಒಂದು ಸಂಪ್ರದಾಯವಾಗಿಬಿಡುತ್ತದೆ. ಅಂಥದನ್ನೇ 'ಕವಿಸಮಯ' ಎನ್ನುವುದು.

**ಅದು ನೀರೇಭಕರಾಭೀಘಾತವಿಚಳದ್ವಾರಾಶಿಯೊಳ್ ಪೋಗಿ ಕೂ**
**ಡಿದೊಡಾವಾರ್ಧಿಯಪೆಂಪುಮಾತೊಱೆಯೊಳಾಯ್ತಿಂತಾದ ಪೆಂಪಿಂದಮು**
**ರ್ಬಿದ ಗುಣ್ಪಿಂದಮಿದಬ್ಧಿಗಗ್ಗಳಮೆನಲ್ ಕುಂದೊಂದು ಕಣ್ಗೆತ್ತಿದಂ**
**ತಿದು ದಲ್ ನೇರ್ಗಿಱಿದೆಂದೊಡಾವ ತೊಱೆಯುಂ ಸೀತೋದೆಯಂ ಪೋಲ್ಗುಮೇ ೫೫**

**ಪದವಿಭಾಗ-ಅನ್ವಯ-ಅರ್ಥ:** ಅದು = ಸೀತೋದೆಯು, ನೀರೇಭ = ನೀರಾನೆಗಳ, ಕರ ಆಘಾತ = ಸೊಂಡಿಲುಗಳ ಹೊಡೆತದಿಂದ, ವಿಚಳತ್ = ಓಲಾಡುವ, ವಾರಾಶಿಯೊಳ್ = ಸಮುದ್ರದಲ್ಲಿ, ಪೋಗಿ ಕೂಡಿದೊಡೆ = ಹೋಗಿ ಸೇರಿದರೆ, ಆ ವಾರ್ಧಿಯ = ಆ ಸಮುದ್ರದ, ಪೆಂಪುಂ = ಹಿರಿಮೆಯು, ಆ ತೊಱೆಯೊಳ್ = ಆ ನದಿಯಲ್ಲಿ, ಆಯ್ತು = ಉಂಟಾಯಿತು; ಇಂತಾದ = ಹೀಗೆ ಉಂಟಾದ, ಪೆಂಪಿದಂ = ಹಿರಿಮೆಯಿಂದ, ಉರ್ಬಿದ = ಉಬ್ಬಿ (ಹೆಚ್ಚಿದ), ಗುಣ್ಪಿಂದಂ = ಆಳದಿಂದಾಗಿ, ಇದು = ಈ ನದಿಯು, ಅಬ್ಧಿಗೆ = ಸಮುದ್ರಕ್ಕಿಂತಲೂ, ಅಗ್ಗಳಂ ಎನಲ್ = ಮಿಗಿಲಾದುದು ಎಂದ ಮೇಲೆ, (ಆ ಸಮುದ್ರದ), ಕುಂದು = ಕೊರತೆಯು, ಕಣ್ಗೆತ್ತಿದಂತೆ, ಕಣ್ಣಿಗೆ ಎತ್ತಿ ತೋರುವಂತೆ, ಇದು = ಈ ಸಮುದ್ರವೇ, ನೇರ್ಗಿಱಿದು ದಲ್ = ಕೊಂಚ ಕಿರಿದಲ್ಲವೇ, ಎಂದೊಡೆ = ಎನ್ನಿಸಿಬಿಟ್ಟಮೇಲೆ, ಆವ ತೊಱೆಯುಂ = ಬೇರಾವ ನದಿಯಾದರೂ, ಸೀತೋದೆಯಂ ಪೋಲ್ಗುಮೇ = ಸೀತೋದೆಯನ್ನು ಹೋಲಬಲ್ಲುದೇ!

**ಗದ್ಯಾನುಸರಣ:** ನೀರಾನೆಗಳ ಸೊಂಡಿಲ ಹೊಡೆತದಿಂದ ಅಲೆಗಳುಂಟಾಗಿ ತೊನೆದಾಡುವ ಸಮುದ್ರದಲ್ಲಿ ಹೋಗಿ ಸೇರುವ ಸೀತೋದೆಗೆ ಆ ಸಮುದ್ರದ ಹಿರಿಮೆ ಪ್ರಾಪ್ತವಾಗಿಬಿಡುತ್ತದೆ; ಹೀಗಾಗಿ ಅದರ ಆಳವು ಮತ್ತಷ್ಟು ಹೆಚ್ಚಿ ನೋಡಿದವರಿಗೆ ಸಮುದ್ರವೇ ತನಗಿಂತ ಕಿರಿದು ಎನ್ನಿಸಿಬಿಡುತ್ತದೆ; ಅಂದಮೇಲೆ ಬೇರಾವ ನದಿಗಳಾದರೂ ಸೀತೋದೆಯನ್ನು ಹೋಲಬಲ್ಲುದೇ?

**ವ ಗದ್ಯ: ಆ ಸೀತೋದಾನದಿಯ ತೆಂಕಣ ಬಡಗಣ ತಡಿವಿಡಿದಿರ್ದುಮೆಂಟು ನಾಳ್ಕಿಳ್, ಅಲ್ಲಿ**

**ಅರ್ಥ:** ಆ ಸೀತೋದಾ ನದಿಯ ತೆಂಕಣ ಬಡಗಣ ತಡಿ + ಪಿಡಿದು ಎಂಟು ನಾಳ್ಕಳ್ ಅಲ್ಲಿ = ಸೀತೋದೆಯ ಉತ್ತರ ಮತ್ತು ದಕ್ಷಿಣ ದಡಗಳ ಗುಂಟ ಎಂಟು ಎಂಟು ನಾಡುಗಳು ಹರಡಿಕೊಂಡಿದ್ದುವು, ಅಲ್ಲಿ

**ಬಡಗಣ ತಡಿಯೊಳಮೇೞನೆ**
**ಯೆಡೆಯದು ನೀಳಾಚಳಕ್ಕೆ ತೆಂಕಣದು ಬೆಡಂ**
**ಗೊಡರಿಪ ವಕ್ಷಾರಾದ್ರಿಗೆ**
**ಪಡುವಣದದು ಸುಜನನಿಳಯಮಪಗತವಿಳಯಂ** ೫೬

**ಪದವಿಭಾಗ–ಅನ್ವಯ–ಅರ್ಥ:** ಬಡಗಣ ತಡಿಯೊಳಂ = ದಕ್ಷಿಣದ ದಂಡೆಯಲ್ಲಿದ್ದ, ಏೞನೆ ಎಡೆ = ಏಳನೆಯ ನಾಡು, ಅದು, ನೀಳಾಚಳಕ್ಕೆ = ನೀಳಪರ್ವತಕ್ಕೆ, ತೆಂಕಣದು = ಅದು ದಕ್ಷಿಣದಲ್ಲಿರುವಂಥದು; ಬೆಡಂಗು ಒಡರಿಪ = ಬೆಡಗಿನಿಂದ ಕೂಡಿದ, ವಕ್ಷಾರಾದ್ರಿಗೆ = ವಕ್ಷಾರ ಪರ್ವತಕ್ಕೆ ಪಡುವಣದು = ಪಶ್ಚಿಮದಲ್ಲಿರುವಂಥದು, ಅದು ಸುಜನನಿಳಯಂ = ಸಜ್ಜನರ ಆವಾಸಸ್ಥಾನ, ಅಪಗತವಿಳಯಂ = ವಿನಾಶವಿಲ್ಲದ್ದು.

**ಗದ್ಯಾನುಸರಣ:** ಸೀತೋದೆಯ ಉತ್ತರ ದಂಡೆಯಲ್ಲಿನ ಏಳನೆಯ ನಾಡು ನೀಳಾಚಳದ ದಕ್ಷಿಣಕ್ಕೂ, ವಕ್ಷಾರಾದ್ರಿಯ ಪಶ್ಚಿಮಕ್ಕೂ ಇದ್ದು ಸಜ್ಜನರಿಂದ ಕೂಡಿ ವಿನಾಶರಹಿತವಾಗಿದೆ.

**ಅಳಿಕುಳರುತಿಗಳಿನವನತ**
**ಫಳತರುಗಳಿನುಚಿತಕುಸುಮಗಂಧದಿನಬಳಾ**
**ವಿಳಸನದಿಂದೀವುದು ಗಂ**
**ಧಿಳವಿಷಯಂ ಸಕಳವಿಷಯರಸರಸಿಕತೆಯಂ** ೫೭

**ಪದವಿಭಾಗ–ಅನ್ವಯ–ಅರ್ಥ:** ಅಳಿಕುಳ = ದುಂಬಿಗಳ ಸಮೂಹದ, ರುತಿಗಳಿನ್ = ಝೇಂಕಾರದಿಂದಲೂ, ಅವನತಫಳ = ಹಣ್ಣುಗಳಿಂದ ಬಾಗಿದ ತರುಗಳಿನ್ = ಮರಗಳಿಂದಲೂ, ಉಚಿತ = ಆಹ್ಲಾದಕರವಾದ, ಕುಸುಮಗಂಧದಿನ್ = ಹೂಗಳ ಪರಿಮಳದಿಂದಲೂ, ಅಬಳಾ = ಹೆಂಗೆಳೆಯದರ, ವಿಳಾಸದಿನ್ = ಬಿನ್ನಾಣದಿಂದಲೂ, (ಕೂಡಿ), ಗಂಧಿಳವಿಷಯಂ = ಗಂಧಿಳವೆಂಬ ಆ ನಾಡು, ಸಕಳವಿಷಯರಸ = ಎಲ್ಲ ಇಂದ್ರಿಯಗಳ ಸಂತೋಷದ, ರಸಿಕತೆಯಂ = ಆಸ್ವಾದನೆಯನ್ನು, ಈವುದು = ನೀಡುತ್ತದೆ.

**ಗದ್ಯಾನುಸರಣ:** ಗಂಧಿಳ ನಾಡು ದುಂಬಿಗಳ ಝೇಂಕಾರ, ಹಣ್ಣುಗಳು ಇಡಿಕಿರಿದು ಕೊಂಬೆಗಳು ಜಗ್ಗಿರುವ ಮರಗಳು, ಆಹ್ಲಾದಕರವಾದ ಹೂಗಳ ಕಂಪು, ಮತ್ತು ಹೆಣ್ಣುಗಳ ವಿಲಾಸದಿಂದ ಕೂಡಿ ಎಲ್ಲ ಇಂದ್ರಿಯಗಳಿಗೂ ಸಂತಸವನ್ನುಂಟುಮಾಡುತ್ತದೆ.

**ಬಕಕುರರಪಕ್ಷವಿಕ್ಷಿ**
**ಪ್ತಕಂಜಕಿಂಜಲ್ಕಮಂಜಪಿಂಜರಿತಾಚ್ಛೋ**
**ದಕಪರಿಪೂರ್ಣತಟಾಕ**
**ಪ್ರಕರಸರೋನಿಕರರಂಜಿತಾಶಾವಳಯಂ** **೫೮**

**ಪದವಿಭಾಗ–ಅನ್ವಯ–ಅರ್ಥ:** ಬಕ = ಬಕಪಕ್ಷಿ, ಕುರರ = ಕುರವಕ್ಕಿ, ಪಕ್ಷ = ರೆಕ್ಕೆಗಳಿಂದ, ವಿಕ್ಷಿಪ್ತ = ಸಿಡಿಸಲಾದ, ಕಂಜ = ತಾವರೆಗಳ, ಪಿಂಜಲ್ಕಪುಂಜ = ಕೇಸರಸಮೂಗಳಿಂದಾಗಿ, ಪಿಂಜರಿತ = ಕೆಂಬಣ್ಣಕ್ಕೆ ತಿರುಗಿದ, ಅಚ್ಚ ಉದಕ = ತಿಳಿನೀರಿನಿಂದ, ಪರಿಪೂರ್ಣ = ತುಂಬಿದ, ತಟಾಕಪ್ರಕರ = ಕೆರೆಗಳ ಗುಂಪುಗಳಿಂದಲೂ, ಸರೋನಿಕರ = ಸರೋವರಗಳ ಸಮೂಹದಿಂದಲೂ, ರಂಜಿತ = ಸುಂದರವಾಗಿ, ಆಶಾವಳಯಂ = ದಿಕ್ಕುಗಳು (ಎಂದರೆ ಆ ಪ್ರದೇಶವು) (ಇದ್ದಿತು).

**ಗದ್ಯಾನುಸರಣ:** ಆ ಪ್ರದೇಶದಲ್ಲಿ ಅನೇಕ ಕೆರೆಗಳೂ ಸರೋವರಗಳು ತುಂಬಿದ್ದವು; ಅವುಗಳಲ್ಲಿನ ತಿಳಿನೀರು ಬಕ ಕುರರ ಮುಂತಾದ ನೀರುಹಕ್ಕಿಗಳು ಬಡಿಯುವ ರೆಕ್ಕೆಗಳಿಂದ ಸಿಡಿಯುವ ತಾವರೆಗಳ ಕೇಸರರಾಶಿಯಿಂದ ಕೆಂಬಣ್ಣವನ್ನು ತಳೆದಿತ್ತು.

**ಪಸರಿಸಿ ದುಗ್ಧಾಬ್ಧಿಜಳ**
**ಪ್ರಸರಮನೊಡವೇಱ ಬಂದು ಕಱೆವುವು ಮೇಘ**
**ಪ್ರಸರಂಗಳಲ್ಲಿಯೆನೆ ರಸ**
**ಮೊಸರ್ವುವು ಪುಂಡ್ರೇಕ್ಷುವಾಟಿಕೋಕೋಟಿಗಳದಱೊಳ್** **೫೯**

**ಪದವಿಭಾಗ–ಅನ್ವಯ–ಅರ್ಥ:** ದುಗ್ಧ ಅಬ್ಧಿ – ಹಾಲ್ಗಡಲಿನ, ಜಳಪ್ರಸರಮನ್ = ನೀರ ಹರಹನ್ನು, ಒಡವೇಱ ಬಂದು = ಜೊತೆಯಲ್ಲಿ ತೆಗೆದುಕೊಂಡು ಬಂದು, ಮೇಘಪ್ರಸರಂಗಳ್ = ಮೋಡಗಳ ರಾಶಿಯು, ಪಸರಿಸಿ = ಎಲ್ಲೆಡೆ ಹರಡಿ, ಕಱೆವುವು = (ಮಳೆ)ಕರೆಯುತ್ತವೆ, ಎನೆ = ಎಂಬ ಹಾಗೆ, ಅದಱೊಳ್ = ಆ (ಗಂಧಿಳ) ನಾಡಿನಲ್ಲಿ ಪುಂಡ್ರೇಕ್ಷು = ಪಟ್ಟೆ ಕಬ್ಬುಗಳ, ವಾಟಿಕೋಟಿಗಳ್ = ಗದ್ದೆ ಬಯಲುಗಳು, ರಸಂ ಒಸರ್ವುವು = ರಸವನ್ನು ಸುರಿಸುತ್ತವೆ.

**ಗದ್ಯಾನುಸರಣ:** ಹಾಲುಗಡಲಿನ ನೀರಹರಹನ್ನು ಹೀರಿ ಮೋಡಗಳು ಬಂದು ಸಮೃದ್ಧವಾಗಿ ಮಳೆ ಸುರಿಸುವುದರಿಂದ ಆ ನಾಡಿನಲ್ಲಿ ರಸಭರಿತವಾದ ಪಟ್ಟೆಕಬ್ಬುಗಳು ಬೆಳೆದ ವಿಸ್ತಾರವಾದ ಗದ್ದೆ ಬಯಲುಗಳಿವೆ.

**ಮಡುಗಳೊಳಗಲರ್ದ ನೆಯ್ದಿಲ**
**ಕಡುಗಂಪುಮನಿವಱ ಕಂಪು ಗೆಲ್ದುವು ಸಾಸಿ**
**ರ್ಮಡಿಯೆನೆ ಪೊಂಬಣ್ಣದ ಕೆಂ**
**ಪಿಡಿದಿರೆ ಸೊಗಯಿಪುವು ಗಂಧಶಾಳಿವನಂಗಳ್ ೬೦**

**ಪದವಿಭಾಗ-ಅನ್ವಯ-ಅರ್ಥ:** ಮಡುಗಳೊಳ್ = ಸರೋವರಗಳಲ್ಲಿ, ಅಲರ್ದ = ಅರಳಿದ, ನೆಯ್ದಿಲ = ನೆಯಿಲೆ ಹೂಗಳ, ಕಡುಗಂಪುಮನ್ = ಆಹ್ಲಾದಕರ ಪರಿಮಳವನ್ನು, ಇವಱ = ಈ ಗದ್ದೆಗಳ, ಕಂಪು = ಪರಿಮಳವು, ಸಾಸಿರ್ಮಡಿ = ಸಾವಿರ ಪಾಲು, ಗೆಲ್ದುವು = ಗೆದ್ದುವು, ಎನೆ = ಎಂಬಂತೆ, ಪೊಂಬಣ್ಣದ ಕೆಂಪು = ಹೊನ್ನು ಕೆಂಪು, ಇಡಿದಿರೆ = ಕೂಡಿರಲು, ಗಂಧಶಾಳಿವನಂಗಳ್ = ಗಂಧಶಾಲಿ ಬತ್ತದ ಗದ್ದೆಗಳು, ಸೊಗಯಿಪುವು = ಸೊಗಸುತ್ತವೆ.

**ಗದ್ಯಾನುಸರಣ:** ಸರೋವರಗಳಲ್ಲಿ ಅರಳಿದ ನೆಯ್ದಿಲೆ ಹೂಗಳ ಕಂಪಿಗಿಂತ ಇದರದ್ದು ಸಾವಿರ ಪಟ್ಟು ನರುಗಂಪು ಎನ್ನುವಂತೆ ಅಲ್ಲಿ ಗಂಧಶಾಲಿ ಬತ್ತದ ಗದ್ದೆಗಳು ಶೋಭಿಸುತ್ತವೆ.

**ವ॥ ಗದ್ಯ: ಮತ್ತಂ ಅಲ್ಲಿ**

**ಅರ್ಥ:** ಮತ್ತಂ ಅಲ್ಲಿ = ಅಷ್ಟಲ್ಲದೆ, ಆ ನಾಡಿನಲ್ಲಿ

**ಕೊಂಕಿದ ಕೊಂಕು ತದ್ವಿಷಯಕಾಂತೆಯ ಪುರ್ವಿನ ಕೊಂಕಿನಂತೆ ಚೆ**
**ಲ್ವಂ ಕುಡೆ ತಳ್ತೆರಟ್ಟಿಡಿಯ ಪೂಮರದಿಂ ಕಱವೂಗಳತ್ತಮಿ**
**ತ್ತಂ ಕವಿದಲ್ಲಿ ಮೆಲ್ಲನುಗೆ ತೇಂಕುವ ಪೂವಿನ ಸಂಕರಂಗಳಂ**
**ನೂಂಕುವುವೂರ್ಮಿಮಾಳಿನಿಯ ತುಂಗತರತ್ತರಳೋರ್ಮಿಮಾಲೆಗಳ್ ೬೧**

**ಪದವಿಭಾಗ-ಅನ್ವಯ-ಅರ್ಥ:** ಕೊಂಕಿದ ಕೊಂಕು = ಅಂಕುಡೊಂಕಾದ ಸೀತೋದಾ ನದಿಯ ಬಾಗುವಿಕೆಯು, ತತ್ ವಿಷಯಕಾಂತೆಯ = ಆ ನಾಡು ಎಂಬ ಹೆಣ್ಣಿನ, ಪುರ್ವಿನ ಕೊಂಕಿನಂತೆ = ಹುಬ್ಬಿನ ಬಾಗಿನಂತೆ, ಚೆಲ್ವಂ ಕುಡೆ = ಸೊಬಗನ್ನು ನೀಡಲು, ಎರಟ್ಟಿಡಿಯ = ಎರಡೂ ದಂಡೆಗಳಲ್ಲಿ, ತಳ್ತ = ಚಿಗುರಿದ, ಪೂಮರದಿಂ = ಹೂಬಿಟ್ಟ ಮರಗಳಿಂದ, ಕಱವೂಗಳ್ = (ಉದುರಿದ) ಬಾಡಿದ ಹೂಗಳು, ಅತ್ತಂ ಇತ್ತಂ = ಆ ಕಡೆ ಈಕಡೆ, ಕವಿದು = ಆವರಿಸಿ, ಅಲ್ಲಿ, ಮೆಲ್ಲನೆ ಉಗೆ = ನವಿರಾಗಿ ಹರಡಿಕೊಳ್ಳಲು, ತೇಂಕುವ = ತೇಲಾಡುವ, ಹೂವಿನ ಸಂಕರಂಗಳಂ = ಹೂಗಳ ರಾಶಿಯನ್ನು, ಊರ್ಮಿಮಾಳಿನಿಯ = ಅಲೆಗಳ

ಮಾಲೆ ತೊಟ್ಟ, ತುಂಗ = ಎತ್ತರವಾದ, ತರತ್ ತರಳ = ಮೇಲೆಕ್ಕೇಳುವ, ಊರ್ಮಿಮಾಲೆಗಳ್ = ಅಲೆಗಳ ಪರಂಪರೆಯು, ನೂಂಕುವುವು = ಮುಂದೆ ಒಯ್ಯುತ್ತವೆ.

**ಗದ್ಯಾನುಸರಣ;** ಅಂಕುಡೊಂಕಾಗಿ ಹರಿಯುವ ನದಿಯ ಬಾಗು ಆ ನಾಡದೇವಿಯ ಬಾಗಿದ ಹುಬ್ಬುಗಳಿಂತೆ ಕಾಣಿಸುತ್ತದೆ; ಎರಡೂ ದಡಗಳಲ್ಲಿ ಬೆಳೆದ ಹೂಬಿಟ್ಟ ಮರಗಳಿಂದ ಬೀಳುವ ಹೂಗಳ ರಾಶಿಯನ್ನು ಹರಡಿಕೊಂಡು ಆ ನದಿಯ ಅಲೆಗಳು ಮುಂದೊಯ್ಯುತ್ತವೆ.

**ಕನಕಾಂಭೋಜರಜಂ ನಿಜಾಂಗರುಚಿಯಂ ಕನ್ನೈಯ್ದಿಲಿಂದಂ ಕಱಿ**
**ಲ್ದಿನಿಸಂ ತೂಳ್ದಿ ತೆರಳ್ದೆಸಳ್ನಯನಮಂ ಕಂಪಂ ಕೊಳಲ್ಬರ್ಪ ಭೃಂ**
**ಗನಿಕಾಯಂ ನಿಜಕೇಶಪಾಶರುಚಿಯಂ ಕೈಕೊಳ್ವಿನಂ ಮೆಲ್ಲಮೆ**
**ಲ್ಲನೆ ನೋಟಕ್ಕೆ ಸದೇಹವಾಗಿ ಸುಳಿಯುತ್ತಿರ್ಕುಂ ವಿದೇಹಾನಿಳಂ ೬೨**

**ಪದವಿಭಾಗ–ಅನ್ವಯ–ಅರ್ಥ:** ಕನಕ ಅಂಭೋಜ = ಹೊಂದಾವರೆಗಳ, ರಜಂ = ಪರಾಗವು, ನಿಜಾಂಗ = ಅವನ ದೇಹದ, ರುಚಿಯಂ = ಕಾಂತಿಯನ್ನೂ, ಕನ್ನೈಯ್ದಿಲಿಂದಂ = ಕನ್ನೈದಿಲೆ ಹೂಗಳಿಂದ, ಕಱಲ್ದು = ಉದುರಿ, ಇನಿಸಂ = ಒಂದಷ್ಟು ಮಾತ್ರ, ತೂಳ್ದಿ = ಚೆದುರಿ, ತೆರಳ್ದು = ಹೋದ, ಎಸಳ್ = ಪಕಳೆಗಳು, ನಯನಮಂ = (ಅವನ) ಕಣ್ಣುಗಳನ್ನೂ, ಕಂಪಂ ಕೊಳಲ್ ಬರ್ಪ = ಬಂಡನ್ನುಣ್ಣಲು ಬರುವ, ಭೃಂಗನಿಕಾಯಂ = ದುಂಬಿವಿಂಡು, ನಿಜಕೇಶಪಾಶರುಚಿಯಂ – ಅವನ ತಲೆಗೂದಲ ಕಾಂತಿಯನ್ನೂ, ಕೈಕೊಳ್ವಿನಂ = ಪಡೆಯುವ ರೀತಿಯಲ್ಲಿ, ಮೆಲ್ಲಮೆಲ್ಲನೆ = ನಿಧಾನವಾಗಿ, ನೋಟಕ್ಕೆ = ನೋಡಿದರೆ, ಸದೇಹಮಾಗಿ = ದೇಹದಿಂದ ಕೂಡಿ, ವಿದೇಹ ಅನಿಳಂ = ವಿದೇಹದ ಗಾಳಿಯು, ಸುಳಿಯುತ್ತಿರ್ಕುಂ = ಬೀಸುತ್ತದೆ.

**ಗದ್ಯಾನುಸರಣ:** ಹೊಂದಾವರೆಗಳ ಪರಾಗವು ಅವನ ಮೈಕಾಂತಿಯನ್ನೂ, ಕನ್ನೈದಿಲೆಯಿಂದ ಉದರಿದ ಎಸಳುಗಳು ಅವನ ಕಣ್ಣ ನಯಗಾರಿಕೆಯನ್ನೂ, ಹೂಗಳ ಬಂಡನ್ನುಣ್ಣಲು ಬರುವ ದುಂಬಿಗಳು ಅವನ ಕೂದಲ ಕಾಂತಿಯನ್ನೂ ಸ್ವೀಕರಿಸುತ್ತವೆಯೇನೋ ಎಂಬಂತೆ ವಿದೇಹದ ಗಾಳಿಯು ನೋಡಬಲ್ಲ ದೇಹಸಮೇತ ಬೀಸುತ್ತದೆ.

**ವ।** **ಅಂತನೇಕನದ್ಯುದ್ಯಾನ ನಾನಾ ಜನಪದ ಜನಾನುರಾಗ ರಸರಮಣೀಯಮಪ್ಪ ಗಂಧಿಳ ವಿಷಯದ ನಡುವೆ ತನ್ಮಹೀವಿಳಾಸಿನಿಯ**

**ಮೇಲ್ಕೊಂಡ ದುಕೂಲಮುಮಂ ಅರ್ಹತ್ಪರಮೇಶ್ವರನ ವಿಶದಯಶಃಪುಂಜ ಮುಮಂ ಅನುಕರಿಸಿ ವಿವಿಧ ವಿದಗ್ಧವಿದ್ಯಾಧರ ಜನಕ್ರೀಡಾನೀಡಂಗಳಾಗಿ ದಕ್ಷಿಣೋತ್ತರಶ್ರೇಢಿಗಳ್ಗೆ ರಾಜಧಾನಿಗಳಾಗಿರ್ದ ರಥನೂಪುರಚಕ್ರವಾಳ ಗಗನ ವಲ್ಲಭಾದಿಗಳಪ್ಪ ನೂಱುಪತ್ತುಂ ಪೊೞಲ್ಗಳನೊಳಕೊಂಡು ಸಪಾದ ಷಡ್ಯೋ ಜನಾವಗಾಹದೊಳು ಪಂಚಷಡ್ಯೋಜನಾಧೋವಿಸ್ತಾರದೊಳಂ ತದರ್ಧ ಯೋಜನೇತ್ಸೇಧದೊಳಂ ದಶಯೋಜನೋಪರಿಮತಳಸಮಾನ ವಿಸ್ತಾರದೊಳಂ ವಿದ್ಯಾಧರಾಭಿಯೋಗ್ಯ ದಿಗ್ಗಜೇಂದ್ರ ವಿಜಯಾರ್ಧಕುಮಾರನಿವಾಸಾದಿ ಮೇಖಳಾತ್ರಯದೊಳಂ ಸಿದ್ಧಾಯತನಪ್ರಭೃತಿ ನವಕೂಟಂಗಳೊಳಂ ನೆಱೆದು**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಆ ರೀತಿಯಲ್ಲಿ, ಅನೇಕ, ನದಿ ಉದ್ಯಾನ = ನದಿಗಳು ಉದ್ಯಾನವನಗಳೂ, ನಾನಾ ಜನಪದ = ಅನೇಕ ಜನಪದಗಳ, ಜನ ಅನುರಾಗರಸ = ಜನರ ಪ್ರೀತಿಯಿಂದ, ರಮಣೀಯಮಪ್ಪ = ಸುಂದರವಾಗಿದ್ದ ಗಂಧಿಳ ವಿಷದ ನಡುವೆ = ಆ ಗಂಧಿಳ ನಾಡಿನ ಮಧ್ಯದಲ್ಲಿ, ತತ್ + ಮಹೀವಿಳಾಸಿನಿಯ = ಆ ಭೂದೇವಿಯೆಂಬ ವಿಲಾಸಿನಿಯು, ಮೇಲ್ಕೊಂಡ = ಹೊದ್ದುಕೊಂಡ, ದುಕೂಲಮುಮಂ = ರೇಷ್ಮೆವಸ್ತ್ರವನ್ನೂ, ಅರ್ಹತ್ ಪರಮೇಶ್ವರನ = ಭಗವಂತನಾದ ಅರ್ಹಂತನ, ವಿಶದ = ನಿರ್ಮಲವಾದ, ಯಶಃಪುಂಜಮುಮಂ = ಕೀರ್ತಿರಾಶೀಯನ್ನೂ, ಅನುಕರಿಸಿ = ಹೋಲುವ, ವಿವಿಧ = ನಾನಾ, ವಿದಗ್ಧವಿದ್ಯಾಧರಜನ = ಜ್ಞಾನಿಗಳಾದ ವಿದ್ಯಾಧರಸಮೂಹದ, ಕ್ರೀಡಾನೀಡಂಗಳಾಗಿ = ಆಡುಂಬೊಲವಾಗಿ, ದಕ್ಷಿಣ ಉತ್ತರ ಶ್ರೇಢಿಗಳ್ಗೆ = ದಕ್ಷಿಣ ಮತ್ತು ಉತ್ತರ ನಾಡುಗಳ ಸಮೂಹಗಳಿಗೆ, ರಾಜಧಾನಿಗಳಾಗಿ ಇರ್ದ = ಮೆರೆಯುತ್ತಿದ್ದ, ರಥನೂಪುರಚಕ್ರವಾಳ ಮತ್ತು ಗಗನವಲ್ಲಭ, ಆದಿಗಳಪ್ಪ = ಮುಂತಾದ, ನೂಱುಪತ್ತುಂ = ನೂರಹತ್ತು, ಪೊೞಲ್ಗಳನ್ = ಪಟ್ಟಣಗಳನ್ನು, ಒಳಗೊಂಡು, ಸಪಾದಷಟ್ = ಆರೂಕಾಲು, ಯೋಜನ, ಅವಗಾಹದೊಳು = ಅಗಲದಿಂದಲೂ, ಪಂಚಷಟ್ = ಐವತ್ತು, ಯೋಜನ, ಅಧೋ ವಿಸ್ತಾರದೊಳಂ = ವಿಸ್ತಾರವಾಗಿಯೂ, ತತ್ ಅರ್ಧ = ಳ್ದರ ಅರ್ಧದಷ್ಟು (ಇಪ್ಪತ್ತೈದು), ಯೋಜನ, ಉತ್ಸೇಧದೊಳಂ = ಎತ್ತರವಾಗಿಯೂ, ದಶಯೋಜನ = ಹತ್ತು ಯೋಜನ, ಉಪರಿಮತಳ = ಅಷ್ಟು ವಿಸ್ತಾರದೊಳಂ = ವಿಸ್ತಾರವಾಗಿಯೂ, ವಿದ್ಯಾಧರ ಅಭಿಯೋಗ್ಯ = ವಿದ್ಯಾಧರರಿಗೆ ತಕ್ಕುದಾದ, ದಿಗ್ಗಜೇಂದ್ರ, ವಿಜಯಾರ್ಧ, ಕುಮಾರ ನಿವಾಸಾದಿ = ಅರಮನೆಗಳೆಂಬ, ಮೇಖಲಾತ್ರಯದೊಳಂ = ಮೂರು ಶಿಖರಗಳಿಂದಲೂ, ಸಿದ್ಧಾಯತನಪ್ರಭೃತಿ = ಸಿಲದ್ಧಾಯತವೇ ಮುಂತಾದ, ನವಕೂಟಂಗಳೊಳಂ = ನವಕೂಟಗಳಿಂದಲೂ, ನೆಱೆದು = ಕೂಡಿ

**ಗದ್ಯಾನುಸರಣ:** ಆ ಗಂಧಿಳ ನಾಡು ಅನಕ ನದಿಗಳು ಉದ್ಯಾನವನಗಳು, ಜನಪದಗಳ ಪ್ರಜೆಗಳ ಪ್ರೀತಿಯನ್ನು ಪಡೆದು ಮೆರೆಯುತ್ತಿತ್ತು. ಆ ನಾಡಿನ ಮಧ್ಯದಲ್ಲಿ

ಭೂರಮಣೀಯ ಹೊದ್ದ ರೇಷ್ಮೆಯ ಸೆರಗಿನಂತೆಯೂ, ಅರ್ಹಂತನ ಕೀರ್ತಿಯಂತೆಯೂ ಶುಭ್ರವಾಗಿ, ಉತ್ತರ ದಕ್ಷಿಣ ನಾಡುಸಮೂಹದ ರಾಜಧಾನಿಗಳದ ರಥನೂರ ಚಕ್ರವಾಳಪುರ ಮತ್ತು ಗಗನವಲ್ಲಭ ನಗರಗಳು ವಿದ್ಯಾಧರರ ಆಡುಂಬೊಲವೆನಿಸಿದ್ದವು. ಅವುಗಳಂತೆಯೇ ನೂರಹತ್ತು ಪಟ್ಟಣಗಳು ಅಲ್ಲಿದ್ದುವು. ಅಲ್ಲದೆ, ಆರೂಕಾಲ ಯೋಜನ ಉದ್ದವೂ, ಐವತ್ತು ಯೋಜನ ವಿಸ್ತಾರವೂ, ಇಪ್ಪತ್ತೈದು ಯೋಜನ ಎತ್ತರವೂ, ಹತ್ತು ಯೋಜನ ವಿಸ್ತೀರ್ಣದಿಂದಲೂ ಕೂಡಿದ ಆ ನಾಡಿನಲ್ಲಿ ವಿದ್ಯಾಧರರಿಗೆ ತಕ್ಕುದಾದ ದಿಗ್ಗಜೇಂದ್ರ ವಿಜಯಾರ್ಧ ಕುಮಾರರ ಅರಮನೆಗಳೂ, ಸಿದ್ಧಾಯತನ ಮುಂತಾದ ಒಂಬತ್ತು ಶಿಖರಗಳು ಶೋಭಿಸುತ್ತಿದ್ದುವು.

**ಉತ್ಕಶಿಖಂಡಿತಾಣ್ಡವಮನೋಹರಮುಜ್ಜ್ವಳರತ್ನರಾಜಿರಾ**
**ಜತ್ಕಟಕಂ ಸರಃಕನಕಪದ್ಮಪರಾಗಪಿಶಂಗಿತಾಂಗರಂ**
**ಗತ್ಕಳಹಂಸನಾದರಮಣೀಯತರಂ ಮದದಂತಿದಾನಗಂ**
**ಧೋತ್ಕಟಮೊಪ್ಪುಗುಂ ಕುಮುದಪಾಂಡುರಮಾ ವಿಜಯಾರ್ಧಪರ್ವತಂ೬೩**

**ಪದವಿಭಾಗ–ಅನ್ವಯ–ಅರ್ಥ:** ಉತ್ಕ = ಉತ್ಕಂಠಿತವಾದ, ಶಿಖಂಡಿ = ನವಿಲುಗಳ, ತಾಂಡವ = ನರ್ತನದಿಂದ, ಮನೋಹರಂ = ಸೊಬಗುವಡೆದ; ಉಜ್ಜ್ವಳ = ಹೊಳೆಯುವ, ರತ್ನರಾಜಿ = ರತ್ನಗಳ ರಾಶಿಯಿಂದ, ರಾಜತ್ = ಹೊಳೆಯುವ, ಕಟಕಂ = ತಪ್ಪಲಿನಿಂದ ಕೂಡಿ, ಸರಃ = ಸರೋವರದಲ್ಲಿ, ಕನಕಪದ್ಮ = ಹೊಂದಾವರೆಗಳ, ಪಿಶಂಗಿತ = ಕೆಂಬಣ್ಣವನ್ನು ಪಡೆದ; ಅಂಗ = ಜಾಗದಲ್ಲಿ, ರಂಗತ್ = ಹೊಳೆಯುವ ಕಳಹಂಸನಾದ = ಕಳಹಂಸಗಳ ಕಲರವದಿಂದ, ರಮಣೀಯತರಂ = ಅಧಿಕ ಶೋಭೆವಡೆದ, ಮದದಂತಿ = ಮದಿಸಿದ ಆನೆಗಳ, ದಾನಗಂಧ = ಮದಜಲದ ಕಂಪಿನಿಂದ ಕೂಡಿದ, ಕುಮುದಪಾಂಡುರಂ = ನೈದಿಲೆಯಂತೆ ಬೆಳ್ಳಗಿನ, ವಿಜಯಾರ್ಧಪರ್ವತಂ = ಪರ್ವತಂ, ಒಪ್ಪುಗುಂ = ಶೋಭಿಸುತ್ತದೆ.

**ಗದ್ಯಾನುಸರಣ:** ಉತ್ಕಂಠಿತ ನವಿಲುಗಳ ಕುಣಿತ, ರತ್ನಸಮೂಹದ ಕಾಂತಿ, ಸರೋವರದ ಹೊಂದಾವರೆಗಳ ಪರಾಗಗಳಿಂದ ಹೊಂಬಣ್ಣ ಪಡೆದ ರಂಗಸ್ಥಳದಲ್ಲಿ ವಿಹರಿಸವ ಕಲಹಂಸಗಳು ಹಾಗೂ ಮದ್ದಾನೆಗಳ ಮದಜಲದ ಕಂಪು – ಇವುಗಳಿಂದ ಕೂಡಿ ವಿಜಯಾರ್ಧಪರ್ವತವು ಮೆರೆಯುತ್ತಿತ್ತು.

**ಎಳನೀರೊತ್ತಿನೊಳೊತ್ತಿ ಬರ್ಪ ಪೊನಲೋಳ್ಸಾಂದ್ರೇಂದುಕಾಂತೋಪಳೋ**
**ಚ್ಛಳಿತಾಚ್ಛಾಚ್ಛಜಲಪ್ರವಾಹಭರದೊಳ್ ಮಂದಾನಿಳಾಂದೋಳನಾ**
**ಕುಳಿತಾರಾಮಫಲಾಮೃತೋಪಮರಸಸ್ರೋತಂಗಳೊಳ್ ಸಾಲ್ವಿನಂ**
**ಬೆಳೆದೋರಂತೊಱಗಿರ್ದ ಶಾಳಿವನದಿಂ ಸೇವ್ಯಂ ನಗೋತ್ಕಂ ೬೪**

**ಪದವಿಭಾಗ-ಅನ್ವಯ-ಅರ್ಥ:** ಎಳನೀರ = ಎಳನೀರಿನ, ಒತ್ತಿನೊಳ್ = ಬುಗ್ಗೆಯಲ್ಲಿ, ಒತ್ತಿ ಬರ್ಪ = ಉಕ್ಕಿ ಹರಿಯುವ, ಪೊನಲೊಳ್ = ನದಿಯಿಂದ ಕೂಡಿ, ಸಾಂದ್ರ = ದಪ್ಪನಾದ ಇಂದುಕಾಂತ ಉಪಳ = ಚಂದ್ರಕಾಂತಶಿಲೆಯಿಂದ, ಉಚ್ಚಳಿತ = ಜಿನುಗುವ, ಅಚ್ಛ ಅಚ್ಛ = ಪರಿಶುದ್ಧವಾದ, ಜಲಪ್ರವಾಹ = ನೀರಿನ ಹರಿವಿನ, ಭರದೊಳ್ = ರಭಸದಲ್ಲಿ, ಮಂದಾನಿಳ = ಮಂದ ಮಾರುತದ, ಆಂದೋಳನ = ಬೀಸುವಿಕೆಯಿಂದ, ಆಕುಳಿತ = ಬೀಳುವ, ಆರಾಮಫಲ = ಉದ್ಯಾನವನಗಳ ಹಣ್ಣುಗಳ, ಅಮೃತರಸ = ಅಮೃತದಂತಹ, ರಸಸ್ರೋತಂಗಳೊಳ್ = ನೀರಿನ ಪ್ರವಾಹದಲ್ಲಿ, ಸಾಲ್ವಿನಂ = ಸಮೃದ್ಧಿಯಿಂದ, ಬೆಳೆದು, ಓರಂತೆ = ಹಾಗೆಯೇ, ಒಱಗಿರ್ದ = ಒರಗಿರುವ, ಶಾಳಿವನದಿಂ = ಬತ್ತದ ಗದ್ದೆಗಳಿಂದಲೂ, ನಗ ಉಪತ್ಯಕಂ = ಬೆಟ್ಟದ ತಪ್ಪಲು., ಸೇವ್ಯಂ = ಅನುಭವಯೋಗ್ಯವಾಗಿತ್ತು.

**ಗದ್ಯಾನುಸರಣ:** ಎಳನೀರ ಚಿಲುಮೆಗಳಂತೆ ಉಕ್ಕಿ ಹರಿಯುವ ನದಿಯಿಂದಲೂ, ಚಂದ್ರಕಾಂತಶಿಲೆಯ ಬಂಡೆಗಳಲ್ಲಿ ಒಸರುವ ಶುಭ್ರ ಜಲಪ್ರವಾಹದಿಂದಲೂ, ಮಂದ ಮಾರುತವು ಬೀಸಿ ಉದ್ಯಾನದ ಮರಗಳಿಂದುರಿದ ಹಣ್ಣುಗಳ ರಸಪ್ರವಾಹದಿಂದಲೂ, ಸಮೃದ್ಧವಾಗಿ ಬೆಳೆದು ಒರಗಿದ್ದ ಗದ್ದೆ ಬಯಲುಗಳಿಂದಲೂ ಆ ಬೆಟ್ಟದ ತಪ್ಪಲು ಆಹ್ಲಾದಕಾರಿಯಾಗಿತ್ತು.

**ನನೆಯೆನೆ ಪೇಱಿ ಕೆಂದಳಿರೊಳೆಯ್ದೆ ಬಟಲ್ದೆಳಮಾವು ಬಂದ ಮಾ**
**ವನೆ ಮಱೆಗೊಂಡು ಬಗ್ಗಿಸುವ ಕೋಗಿಲೆ ಕೋಗಿಲೆಯಿರ್ಕೆದಾಣದೊಳ್**
**ಜಿನುಗುವ ತುಂಬಿ ತುಂಬಿಯೊಳರಲ್ದಲರೆಂಬಿವಱಿಂ ಬಸಂತರಾ**
**ಜನ ಮನೆಯಂತೆ ಕಣ್ಗೆಸೆದು ತೋಱುಗುಮಲ್ಲಿಯ ನಂದನಾಳಿಗಳ್೬೩**

**ಪದವಿಭಾಗ-ಅನ್ವಯ-ಅರ್ಥ:** ಕೆಂದಳಿರೊಳ್ = ಕೆಂಪು ಚಿಗುರಿನನಡುವೆ, ನನೆಯನೆ = ಮೊಗ್ಗುಗಳನ್ನು, ಪೇಱಿ = ಹೇರಿಕೊಂಡು, ಎಯ್ದೆ = ಅಧಿಕವಾಗಿ, ಬಟಲ್ದ = ಜೋತುಬಿದ್ದ, ಎಳಮಾವು = ಹೊಸತಾಗಿ ಚಿಗುರಿದ ಮಾವು; ಬಂದ = ಹಣ್ಣು ಬಿಟ್ಟ, ಮಾವನೆ = ಮಾವಿನ ಮರವನ್ನು, ಮಱೆಗೊಂಡು = ಅಡಗಿಕೊಂಡು, ಬಗ್ಗಿಸುವ = ಕೂಜಿಸುವ, ಕೋಗಿಲೆ = ಕೋಗಿಲೆಗಳು; ಕೋಗಿಲೆಯ ಇರ್ಕೆದಾಣದೊಳ್ = ಕೋಗಿಲೆಗಳಿರುವ ಜಾಗದಲ್ಲಿ, ಜಿನುಗುವ = ಝೇಂಕರಿಸುವ, ತುಂಬಿ = ದುಂಬಿಗಳು; ತುಂಬಿಯೊಳ್ = ದುಂಬಿಗಳಿರುವ ಎಡೆಗಳಲ್ಲಿ, ಅರಲ್ದ = ಅರಳಿದ, ಅಲರ್ = ಹೂಗಳು; ಎಂಬಿವಱಿಂ = ಇವುಗಳಿಂದ ಕೂಡಿದ, ನಂದನ ಆಳಿಗಳ್ = ಉದ್ಯಾನಗಳ ಸಾಲುಗಳು, ಬಸಂತರಾಜನ = ವಸಂತ ಚಕ್ರವರ್ತಿಯ, ಮನೆಯಂತೆ = ಅರಮನೆಯ ಹಾಗೆ, ಕಣ್ಗೆಸೆದು = ಕಣ್ಣಿಗೆ ಆಹ್ಲಾದಕಾರಿಯಾಗಿ, ತೋಱುಗುಂ = ಕಾಣಿಸುತ್ತವೆ.

**ಗದ್ಯಾನುಸರಣ:** ಕೆಂಪಾದ ಚಿಗುರಿನ ನಡುವೆ ಹೂಬಿಟ್ಟು ಬಾಗಿದ ಕೊಂಬೆಗಳು, ಮರೆಯಲ್ಲಿದ್ದುಕೊಂಡು ಕೂಗುವ ಕೋಗಿಲೆಗಳು, ಕೋಗಿಲೆಗಳಿರುವ ಎಡೆಗಳಲ್ಲಿ ಝೇಂಕರಿಸುವ ದುಂಬಿಗಳು, ಆ ದುಂಬಿಗಳಿರುವೆಡೆಯಲ್ಲಿ ಅರಳಿದ ಹೂಗಳು, ಇವುಗಳಿಂದ ಕೂಡಿ ಅಲ್ಲಿನ ಉದ್ಯನವನಗಳು ವಸಂತರಾಜನ ಅರಮನೆಯಂತೆ ಶೋಭಿಸುತ್ತಿತ್ತು.

**ವಿಶೇಷ ವಿಚಾರ:** ಹಣ್ಣು ಬಿಡು ಎಂಬರ್ಥದ ವರ್>ಬರ್ ಎಂಬುದು ಭೂತನ್ಯೂನದಲ್ಲಿ ಬಂದ ಎಂದಾಗುತ್ತದೆ; ಬಲಿ ಎಂಬ ಅರ್ಥದ ಬಲ್ ಧಾತುವೂ ಭೂತನ್ಯೂನದಲ್ಲಿ (ಬಲ್ತ>) ಬಂದ ಎಂದಾಗುತ್ತದೆ.

**ಪೊಸನನೆಯೊಳ್ ಪಸುರ್ಪಲರೊಳಂಚಿರಮಲ್ಲದ ಬೆಳ್ಪು ಪಲ್ಲವ**
**ಪ್ರಸರದೊಳೆಯ್ದೆ ಕಣ್ಗೆ ಪಸರಂಬಡೆದೊಪ್ಪುವ ಕೆಂಪು ತುಂಬಿಯೊಳ್**
**ಮಿಸುಗುವ ಕರ್ಪು ಬರ್ಚಿಸಿದವೋಲ್ ಬಗೆಗೊಳ್ವಿನೆಗಂ ಬಸಂತದೊಳ್**
**ಬಸದಿಯ ಬಾಗಿಲಂ ತೆಱೆದ ಮಾಱ್ಕೆಯೊಳಿರ್ದುವು ಬಂದ ಮಾವುಗಳ್ ೬೬**

**ಪದವಿಭಾಗ–ಅನ್ವಯ–ಅರ್ಥ:** ಪೊಸನನೆಯೊಳ್ = ಹೊಸ ಮೊಗ್ಗುಗಳಲ್ಲಿ, ಪಸುರ್ಪು = ಹಸಿರು ಬಣ್ಣ, ಅಲರೊಳ್ = ಹೂಗಳಲ್ಲಿ, ಅಂಚಿರಂ ಅಲ್ಲದ = ಹೆಚ್ಚು ಕಾಲ ನಿಲ್ಲದ, ಬೆಳ್ಪು = ಬಿಳಿಬಣ್ಣ, ಪಲ್ಲವ ಪ್ರಸರದೊಳ್ = ಚಿಗುರುಗಳ ಸಮೂಹದಲ್ಲಿ, ಎಯ್ದೆ = ವಿಶೇಷವಾಗಿ, ಕಣ್ಗೆ = ಕಣ್ಣಿಗೆ, ಪಸರಂ ಪಡೆದು = ಹಬ್ಬಿಕೊಂಡು, ಒಪ್ಪುವ = ಸೊಗಸುವ, ಕೆಂಪು = ಕೆಂಬಣ್ಣ, ತುಂಬಿಯೊಳ್ = ದುಂಬಿಗಳಲ್ಲಿ, ಕರ್ಪು = ಕಪ್ಪು ಬಣ್ಣ, ಬರ್ಚಿಸಿದವೋಲ್ = ಲೇಪಿಸಿದ ಹಾಗೆ, ಬಗೆ ಕೊಳ್ವಿನಂ = ಮನಸ್ಸನ್ನು ಹಿಡಿದಿಡುವ ಹಾಗೆ, ಬಸಂತದೊಳ್ = ವಸಂತ ಮಾಸದಲ್ಲಿ, ಬಸದಿಯ ಬಾಗಿಲಂ = ಜಿನಾಲಯಗಳ ಬಾಗಿಲನ್ನು, ತೆಱೆದ = ತೆಗೆದ, ಮಾಱ್ಕೆಯೊಳ್ = ರೀತಿಯಲ್ಲಿ, ಬಂದ ಮಾವುಗಳ್ = ಹಣ್ಣಬಿಟ್ಟ ಮಾವಿನ ಮರಗಳು, ಇರ್ದುವು = ಇದ್ದುವು.

**ಗದ್ಯಾನುಸರಣ:** ಕಾಯಿ ಮೊಗ್ಗುಗಳಲ್ಲಿನ ಹಸುರುಬಣ್ಣ, ಹೂಗಳಲ್ಲಿ ಸ್ವಲ್ಪ ಕಾಲ ಉಳಿಯುವ ಬಿಳಿಬಣ್ಣ, ಚಿಗುರುಗಳಲ್ಲಿವ್ಯಾಪಕವಾಗಿ ಕಾಣುವ ಕೆಂಪುಬಣ್ಣ ಹಾಗೂ ದುಂಬಿಗಳ ಕಪ್ಪುಬಣ್ಣ ಒಟ್ಟಾರೆಯಾಗಿ ವಸಂತಕಾಲದದಲ್ಲಿ ಬಸದಿಯ ಬಾಗಿಲು ತೆರೆದಂತೆ ಕಾಣುವುವು.

**ಅಲರ್ದಂಭೋರುಹಷಂಡಮುಳ್ಳಲರ್ದ ಚೆನ್ನೆಯ್ದಿಲ್ಗೊಳಂ ತೂಗಿ ಪ**
**ಣ್ಗೊಲೆಯಿಂ ಬಳ್ಕುವ ಕೌಂಗು ಕಾಯ್ದುಱಗಲಂ ಪೇಱೆರ್ದ ಚೆಂದೆಂಗುಕ**
**ಟ್ಟಿಲಿಸುತ್ತಿರ್ಪೆಲೆವಳ್ಳಿ ಪಣ್ತೊಲೆವ ನಾರಂಗಂ ಫಲವ್ರಾತದಿಂ**
**ನೆಲನಂ ಮೋದುವ ಮಾತುಳಂಗಮೆಸೆಗುಂ ವಿದ್ಯಾಧರೋದ್ಯಾನದೊಳ್ ೬೭**

**ಪದವಿಭಾಗ–ಅನ್ವಯ–ಅರ್ಥ:** ಅಲರ್ದ = ಅರಳಿದ, ಅಂಭೋರುಹ ಷಂಡಂ = ತಾವರೆಗಳ ಹರಹು (ಕೊಳ), ಉಳ್ಳಲರ್ದ = ನಸು ಅರಳಿದ, ಚೆನ್ನಯ್ದಿಲೆ ಕೊಳಂ = ಕನ್ನೈದಿಲೆಗಳಿರುವ ಕೊಳ, ತೂಗಿ = ಓಲಾಡುತ್ತ, ಪಣ್ಗೊಲೆಯಿಂ = ಕಾಯಿಗಳ ಗೊಂಚಲುಗಳಿಂದ, ಬಳ್ಕುವ = ತೊನೆದಾಡುವ, ಕೌಂಗು = ಅಡಿಕೆಮರಗಳು, ಪೇಜುರ್ದ = ಹೊತ್ತುಕೊಂಡಿರುವ, ಚೆಂದೆಂಗು = ಕೆಂದೆಂಗು ಮರಗಳು, ಕಟ್ಟಿಲಿಸುತ್ತಿರ್ಪ = ಕತ್ತಲನ್ನು ಉಂಟುಮಾಡುವ, ಎಲೆವಳ್ಳಿ = ವೀಳೆಯದೆಲೆಗಳ ಬಳ್ಳಿ, ಪಣ್ತು ಒಲೆವ = ಹಣ್ಣುಗಳಿಂದ ಕೂಡಿ ತೊನೆದಾಡುವ, ನಾರಂಗಂ = ಕಿತ್ತಿಳೆ ಗಿಡಗಳು, ಫಲವ್ರಾತದಿಂ = ಹಣ್ಣುಗಳ ಗೊಂಚಲಿನಿಂದ, ನೆಲನಂ = ಭೂಮಿಯನ್ನು, ಮೋದುವ = ತಾಗುವ, ಮಾತುಳಂಗಂ = ಮಾದಲ ಮರಗಳು, ಆ ವಿದ್ಯಾಧರ ಉದ್ಯಾನದೊಳ್ = ವಿದ್ಯಾಧರರ ಆ ಉದ್ಯಾನಗಳಲ್ಲಿ, ಎಸೆಗುಂ = ಶೋಭಿಸುತ್ತವೆ.

**ಗದ್ಯಾನುಸರಣ:** ಅರಳಿದ ತಾವರೆಗಳು ಹಾಗೂ ನಸು ಅರಳಿದ ಕನ್ನೈದಿಲೆಗಳಿಂದ ಕೂಡಿದ ಕೊಳಗಳು, ಕಾಯಿಗಳ ಗೊಂಚಲುಗಳಿಂದ ಕೂಡಿ ಬಾಗಿ ಬಳುಕುವ ಅಡಿಕೆಮರಗಳು, ಕಾಯಿಗಳ ಗೊಂಚಲುಗಳನ್ನು ಹೇರಿಕೊಂಡ ಚೆಂದೆಂಗು ಮರಗಳು, ದಟ್ಟವಾಗಿ ಹಬ್ಬಿ ಕತ್ತಲೆಯುಂಟುಮಾಡುವ ವೀಳೆಯದೆಲೆ ಹಂಬುಗಳು, ಹಣ್ಣುಗಳಿಂದ ಜಗ್ಗಿರುವ ಕಿತ್ತಿಳೆ ಗಿಡಗಳು, ಹಣ್ಣುಗಳ ಗೊಂಚಲುಗಳು ಜಗ್ಗಿ ನೆಲಕ್ಕೆ ತಾಕುತ್ತಿರುವ ಮಾದಲ ಗಿಡಗಳು – ಇವುಗಳಿಂದ ಕೂಡಿ ಅಲ್ಲಿನ ವಿದ್ಯಾಧರ ವನಗಳು ಶೋಭಿಸುತ್ತವೆ.

**ಮಲರ್ದಲರ್ದ ನಾಗಸಂಪಗೆ**
**ಯಲರ್ಗಳೊಳಗ್ಗಳಿಸಿ ಬಿರಿವ ಪೊಂಬಾೞೆಯ ತ**
**ಣ್ಮಲೆವ ಪೊಸಗಂಪಿನೊಳ್ ಪುದಿ**
**ದಲೆವೆಲರಾಱಿಪುದು ಖಚರದಂಪತಿಶತಮಂ ೬೮**

**ಪದವಿಭಾಗ–ಅನ್ವಯ–ಅರ್ಥ:** ಮಲರ್ದು = ದೊಡ್ಡದಾಗಿ, ಅಲರ್ದ = ಅರಳಿದ, ನಾಗಸಂಪಗೆಯ, ಅಲರ್ಗಳೊಳ್ = ಹೂಗಳಲ್ಲಿ, ಅಗ್ಗಲಿಸಿ = ಅತಿಶಯವಾಗಿ, ಬಿರಿವ = ಅರಳುವ, ಪೊಂಬಾೞೆಯ = ಹೊಂಬಾಳೆಯ, ತಣ್ಮಲೆವ = ಗಾಢವಾಗುವ, ಪೊಸ ಕಂಪಿನೊಳ್ = ಹೊಸಗಂಪಿನಲ್ಲಿ, ಪುದಿದು = ಸೇರಿಕೊಂಡು, ಅಲೆವ = ಸುಳಿಯುವ, ಎಲರ್ = ಗಾಳಿಯು, ಖಚರ = ಖೇಚರ, ದಂಪತಿಶತಮಂ = ನೂರಾರು ದಂಪತಿಗಳ, (ಆಯಾಸವನ್ನು), ಆಱಿಪುದು = ನಿವಾರಿಸುತ್ತದೆ.

**ಗದ್ಯಾನುಸರಣ:** ವಿಶಾಲವಾಗಿ ಅರಳಿದ ನಾಗಸಂಪಗೆ ಹೂಗಳ ಮೇಲೆ ಹಾಗೂ ಹೊಂಬಾಳೆಯ ಕಂಪಿನಲ್ಲಿ ಸುಳಿದು ಗಾಢ ಕಂಪಿನಿಂದ ಕೂಡಿ ಬರುವ ಗಾಳಿಯು ನೂರಾರು ದೇವದಂಪತಿಗಳ ಆಯಾಸವನ್ನು ಪರಿಹರಿಸುತ್ತದೆ.

**ಬೆಸನಂ ಪಾರ್ವುವು ಮನ್ತ್ರದೇವತೆಗಳಾದೇಬಾರ್ತೆಗಂ ಬೇಗಮಾ**
**ಗಸದೊಳ್ ವಿದ್ಯೆಗಳೆಯ್ದೆ ಬರ್ಪುವು ಜಗಕ್ಕಾಶ್ಚರ್ಯಮೈಶ್ವರ್ಯಮಾ**
**ವಸಥಂ ರೂಪ್ಯಮಹೀಧರೇಂದ್ರಮೆನೆ ಪೂಣ್ದಾವಂಗಮಂತೆಯ್ದೆ ಬ**
**ಣ್ಣಿಸಲೇಂ ಬರ್ಕುಮೆ ಬಾರದಂಬರಚರಶ್ರೀಯಂ ಪುರಶ್ರೀಯುಮಂ ೬೯**

**ಪದವಿಭಾಗ-ಅನ್ವಯ-ಅರ್ಥ:** ಮನ್ತ್ರದೇವತೆಗಳ್ = ಮಂತ್ರದೇವತೆಗಳು, ಬೆಸನಂ = ಆಜ್ಞೆಯನ್ನು, ಪಾರ್ವುವು = ಎದುರು ನೋಡುತ್ತವೆ; ಏ ಬಾರ್ತೆಗಂ = ಯಾವುದೇ ವಿಷಯಕ್ಕಾಗಲೀ, ವಿದ್ಯೆಗಳ್ = ವಿದ್ಯೆಗಳು, ಆಗಸದೊಳ್ = ಆಕಾಶದಲ್ಲಿ, ಬೇಗಂ = ಬೇಗನೇ, ಎಯ್ದೆ ಬರ್ಪುವು = ಹತ್ತಿರ ಬರುತ್ತವೆ; (ಈ ರೀತಿಯಲ್ಲಿ) ಜಗಕ್ಕೆ = ಪ್ರಪಂಚಕ್ಕೆ, ಆಶ್ಚರ್ಯಂ = ಅಚ್ಚರಿಯುಂಟುಮಾಡುವಂಥದು; ರೂಪ್ಯಮಹೀಧರಂ = ಬೆಳ್ಳಿಯ ಬೆಟ್ಟವು, ಐಶ್ವರ್ಯಂ = ಐಸಿರಿಯ, ಅವಸಥಂ = ಆವಾಸಸ್ಥಾನ, ಎನೆ = ಎಂದ ಮೇಲೆ; ಪೂಣ್ದು - ಹಟತೊಟ್ಟು, ಆವಂಗಂ = ಯಾರಿಗಾದರೂ, ಅಂಬರಚರಶ್ರೀಯಂ = ವಿದ್ಯಾಧರರ ಸೊಬಗನ್ನೂ, ಪುರಶ್ರೀಯುಮಂ = ಊರಿನ ಮಹಿಮೆಯನ್ನೂ, ಬಣ್ಣಿಸಲ್ = ವರ್ಣಿಸಲು, ಏಂ ಬರ್ಕುಮೇ = ಬರುತ್ತದೆಯೇ? ಬಾರದು = ಆಗದು.

**ಗದ್ಯಾನುಸರಣ:** ಮಂತ್ರದೇವತೆಗಳು ಅವರ ಆಜ್ಞೆಯನ್ನೇ ಎದುರು ನೋಡುತ್ತಾರೆ, ವಿದ್ಯೆಗಳು ಯಾವ ಕಾರಣಕ್ಕಾದರೂ ಸರಿ ಅವರ ಬಳಿಗೆ ಓಡಿ ಬರುತ್ತವೆ, ಇದು ಜಗತ್ತಿನಲ್ಲಿಯೇ ಅಚ್ಚರಿಯ ವಿಷಯ. ಆ ಬೆಳ್ಳಿಯ ಬೆಟ್ಟವು ಐಶ್ವರ್ಯಕ್ಕೆ ಆವಾಸಸ್ಥಾನ ಎಂದಮೇಲೆ, ಸಮರ್ಪಕವಾಗಿ ವಿದ್ಯಾಧರರ ವೈಭವವನ್ನಾಗಲೀ ಆ ಪುರದ ಸೊಬಗನ್ನಾಗಲೀ ಸಮರ್ಪಕವಾಗಿ ಬಣ್ಣಿಸುವೆನೆಂದು ಧೈರ್ಯದಿಂದ ಹೇಳಿಕೊಳ್ಳಲು ಸಾಧ್ಯವೇ? ಇಲ್ಲ.

**ಜಿನಪೂಜೋತ್ಸವಮಂಗಳಾನಕಮೃದುಪ್ರಧ್ವಾನದೊಳ್ ಗಾಯಕೀ**
**ಜನಗೀತಾನ್ವಿತವಲ್ಲಕೀಕ್ವಣಿತದೊಳ್ ವಿದ್ಯಾಧರೀರಮ್ಯನ**
**ರ್ತನರಾಗೋತ್ಥಿತಪಾರಿಹಾರ್ಯರಶನಾಮಂಜೀರಿಕೋದ್ದಾಮನಿ**
**ಸ್ವನದೊಳ್ ಪೊಂಪುಳಿವೋಗುತಿರ್ಪವೆರಡುಂ ವಿದ್ಯಾಧರಶ್ರೇಢಿಗಳ್ ೭೦**

**ಪದವಿಭಾಗ-ಅನ್ವಯ-ಅರ್ಥ:** ಜಿನಪೂಜೋತ್ಸವ = ಜಿನಪೂಜೆ ಮತ್ತು ಉತ್ಸವಗಳ ಕಾಲದ, ಮಂಗಳ ಆನಕ = ಮಂಗಳ ವಾದ್ಯಗಳ, ಮೃದು = ನಯವಾದ, ಪ್ರಧ್ವಾನದೊಳ್ = ಶಬ್ದದಿಂದಲೂ, ಗಾಯಕೀಜನ = ಹಾಡುಗಾರ್ತಿಯರ, ಗೀತ ಅನ್ವಿತ = ಹಾಡುಗಳ ಜೊತೆಗಿನ, ವಲ್ಲಕೀ = ವೀಣಾ,

ಕ್ವಣಿತದೊಳ್ = ನಾದದಿಂದಲೂ, ವಿದ್ಯಾಧರೀ = ವಿದ್ಯಾಧರ ಸ್ತ್ರೀಯರ, ರಮ್ಯ = ಸೊಬಗಿನ, ನರ್ತನ = ನರ್ತನ ಕಾಲದ, ರಾಗ ಉತ್ಥಿತ = ರಾಗಕ್ಕೆ ಅನುಗುಣವಾಗಿ ಹೊಮ್ಮುವ, ಪಾರಿಹಾರ್ಯ = ಬಳೆಗಳ, ರಶನಾ = ಡಾಬುಗಳ, ಮಂಜೀರಿಕ = ಒಡ್ಯಾಣಗಳ, ಉದ್ದಾಮ = ಅತಿಶಯವಾದ, ನಿಸ್ವನದೊಳ್ = ಸದ್ದಿನಿಂದಲೂ, ಎರಡುಂ = ಆ ಎರಡೂ (ಪೂರ್ವ ಮತ್ತು ಪಶ್ಚಿಮ) ವಿದ್ಯಾಧರ ಶ್ರೇಢಿಗಳ್ = ನಾಡಸಮೂಹಗಳು, ಪೊಂಪುಳಿ ಪೋಗುತಿರ್ಪುವು = ಪುಲಕಗೊಳ್ಳುತ್ತವೆ.

**ಗದ್ಯಾನುಸರಣ:** ಜಿನ ಪೂಜೆ ಮತ್ತು ಉತ್ಸವಗಳ ಕಾಲದ ಮಂಗಳ ವಾದ್ಯಗಳ ನಯವಾದ ಶಬ್ದದಿಂದಲೂ, ಹಾಡುಗಾರ್ತಿಯರ ಹಾಡುಗಳ ಜೊತೆಗಿನ ವೀಣಾನಾದದಿಂದಲೂ, ವಿದ್ಯಾಧರ ಸ್ತ್ರೀಯರು ನರ್ತಿಸುವ ಕಾಲದ ರಾಗಕ್ಕೆ ಅನುಗುಣವಾಗಿ ಹೊಮ್ಮುವ ಬಳೆ ಡಾಬು, ಒಡ್ಯಾಣಗಳ ಮಂಜುಳ ಸದ್ದಿನಿಂದಲೂ ಕೂಡಿ ಆ ಎರಡೂ ವಿದ್ಯಾಧರ ನಾಡಸಮೂಹಗಳು ರೋಮಾಂಚನಗೊಳ್ಳುತ್ತವೆ.

**ವ। ಅವಱೊಳುತ್ತರಶ್ರೇಢಿಯೊಳುದಗ್ರಮುಹಿಮಶಿಖರಿಶಿಖರ ಶಾರದ ನೀರದಾಕಾರ ಸುಧಾಧವಳಿತೋತ್ತುಂಗ ಪ್ರಾಸಾದಕೂಟ ಕೋಟಿ ಸಂಕೀರ್ಣ ಮುಂ ಆತ್ಮೀಯ ಜಾತ್ಯನುರೂಪಾಚರಣಪರಿಣತಚತುರಜನ ಪರಿಪೂರ್ಣನುಂ ಅನೇಕವಿದ್ಯಾಧರ ರಾಜರಾಜದ್ರಾಜವೀಧೀ ವಿಸ್ತೀರ್ಣಮುಮಾಗಿ**

**ಗದ್ಯ – ಪದವಿಭಾಗ–ಅನ್ವಯ–ಅರ್ಥ:** ಅವಱೊಳ್ = ಆ ನಾಡುಗಳಲ್ಲಿ, ಉತ್ತರಶ್ರೇಢಿಯೊಳ್ = ಉತ್ತರ ವಿದೇಹದ ನಾಡುಗಳಲ್ಲಿ, ಉದಗ್ರ = ಎತ್ತರವಾದ, ಹಿಮಶಿಖರಿ = ಹಿಮತ್ಪರ್ವತದ, ಶಿಖರ = ಶಿಖರದಂತೆ, ಶಾರದನೀರದ = ಮಾಗಿಯ ಕಾಲದ ಮೋಡಗಳ, ಆಕಾರ(ದಲ್ಲಿರುವ), ಸುಧಾ = ಹಾಲಿನಂತೆ, ಧವಳಿತ = ಬೆಳ್ಳಗಿರುವ, ಉತ್ತುಂಗ = ಎತ್ತರವಾದ, ಕೋಟಿ = ಅಸಂಖ್ಯಾತ, ಪ್ರಾಸಾದಕೂಟ = ಉಪ್ಪರಿಗೆಳ ಸಮೂಹದ, ಸಂಕೀರ್ಣಮುಂ = ತುಂಬಿರುವಂತಹುದೂ; ಆತ್ಮೀಯ = ತಮ್ಮ, ಜಾತಿ ಅನುರೂಪ = ಗುಂಪಿಗೆ ಅನುಗುಣವಾದ, ಆಚರಣ ಪರಿಣತ = ಆಚರಣೆಗಳ(ನ್ನು ನಡೆಸುವುದರಲ್ಲಿ) ಪರಿಣತರಿಂದಲೂ, ಚತುರಜನ = ಬುದ್ಧಿವಂತ ಜನರಿಂದಲೂ, ಪರಿಪೂರ್ಣಮುಂ = ತುಂಬಿರುವಂತಗದೂ, ಅನೇಕ ವಿದ್ಯಾಧರರಾಜ = ನಾನಾ ವಿದ್ಯಾಧರರಾಜರ, ರಾಜತ್ = ಶೋಭಿಸುವ, ರಾಜವೀಧೀ = ರಾಜ ಬೀದಿಗಳ, ವಿಸ್ತೀರ್ಣಮುಂ = ತುಂಬಿದಂತಹುದೂ

**ಗದ್ಯಾನುಸರಣ =** ಆ ನಾಡುಗಳಲ್ಲಿ ಎತ್ತರವಾದ ಹಿಮವತ್ಪರ್ವತದ ಶಿಖರದಂತೆ ಶರತ್ಕಾಲದ ಮೋಡಗಳಂತೆ ಬೆಳ್ಳಗಿರುವ ಅಸಂಖ್ಯಾತ, ಎತ್ತರವಾದ ಉಪ್ಪರಿಗೆಗಳ ಕೂಟಗಳೂ, ತಮ್ಮ ತಮ್ಮ ಗುಂಪಿಗೆ ತಕ್ಕಂತಹ ಆಚರಣೆಗಳಲ್ಲಿ ಪರಿಣತರಾದ

ಬುದ್ಧಿವಂತರ ಸಮೂಹವೂ, ಅನೇಕ ವಿದ್ಯಾಧರರಾಜರಿಂದ ಶೋಭಿಸುವ ರಾಜಬೀದಿಗಳೂ ಇದ್ದುವು.

**ಬಳಸಿದ ಪೊನ್ನ ಕೋಂಟೆ ಪುರಲಕ್ಷ್ಮಿಯ ಕೈಗೆಯಲಿರ್ದ ತಾಣದೊಳ್**
**ಬಳಸಿದ ಪೊನ್ನ ಕನ್ನವಡದಂತಿರೆ ರುಂದ್ರನರೇಂದ್ರಗೇಹಮಾ**
**ಲಳಿತೆಯ ವಕ್ತ್ರಪಂಕಜವಿಳಾಸಮನಾಂತಿರೆ ರಮ್ಯರಾಜತಾ**
**ಚಳತಿಳಕೋಪಮಾನಮೆನೆ ಸಂದಳಕಾಪುರಮೊಪ್ಪಿ ತೋಱುಗುಂ ೭೧**

**ಪದವಿಭಾಗ-ಅನ್ವಯ-ಅರ್ಥ:** ಬಳಸಿದ = ಸುತ್ತುವರಿದ, ಪೊನ್ನ ಕೋಂಟೆ = ಚಿನ್ನದ ಕೋಟೆಯು, ಪುರಲಕ್ಷ್ಮಿಯ = ಪುರದೇವಿಯು, ಕೈಗೆಯಲ್ ಇರ್ದ = ಅಲಂಕರಿಸಿಕೊಳ್ಳಲು ಇದ್ದಂತಹ, ತಾಣದೊಳ್ = ಜಾಗದಲ್ಲಿ, ಬಳಸಿದ = ಬಳಕೆಗೊಂಡ, ಪೊನ್ನ ಕನ್ನವಡದಂತಿರೆ = ಚಿನ್ನದ ತೆರೆಯಂತಿರಲು, ರುಂದ್ರ = ವಿಸ್ತಾರವಾದ, ನರೇಂದ್ರಗೇಹಂ = ಅರಮನೆಯು, ಆ ಲಳಿತೆಯ = ಆ ಸುಂದರಿಯ, ವಕ್ತ್ರಪಂಕಜ = ಮುಖದಾವರೆಯ, ವಿಳಾಸಮನ್ = ಸೊಬಗನ್ನು, ಆಂತಿರೆ = ಹೊಂದಿರಲು, ರಮ್ಯ = ಚೆಲುವಾದ, ರಾಜತಾಚಳ = ಬೆಳ್ಳಿಯ ಬೆಟ್ಟದ, ತಿಳಕ ಉಪಮಾನಂ = ತಿಲಕದಂತೆ, ಎನೆ = ಎನಿಸಿರಲು, ಸಂದ = ಕೀರ್ತಿತವಾದ, ಅಳಕಾಪುರಂ = ಅಳಕಾವತಿಯು, ಒಪ್ಪಿ ತೋಱುಗುಂ = ಶೋಭಿಸುತ್ತದೆ.

**ಗದ್ಯಾನುಸರಣ:** ಸುತ್ತುವರಿದ ಚಿನ್ನದ ಕೋಟೆಯು ಆ ಪುರಲಲನೆಯು ಅಲಂಕಾರತಾಣದಲ್ಲಿ ಬಳಸುವ ಜರತಾರಿ ತೆರೆಯಂತೆ, ವಿಶಾಲವಾದ ಅರಮನೆಯು ಆ ಲಲನೆಯ ಮುಖಕಮಲದ ಸೊಬಗನ್ನು ಹೊಂದಿ, ಸುಂದರವಾದ ಬೆಳ್ಳಿಯ ಬೆಟ್ಟದ ತಿಳಕಪ್ರಾಯವಾಗಿ ಅಲಕಾವತಿ ನಗರವು ಶೋಭಿಸುತ್ತಿತ್ತು.

**ವ। ಅದನಾಳ್ವನಖಿಳ ಖಚರಪತಿಮಕುಟ ಮಣಿಗಣಕಿರಣರಾಗ ರಂಜಿತ ಚರಣನಳಿನಯುಗಳಂ ಉದಿತೋದಿತನಿಜಕುಲ ಮಂದರಾಚಳ ಮಂದಾರ ಪಾದಪಂ ಅನೇಕ ಸಮರ ಸಮ್ಮರ್ದನನಿರ್ಜಿತೋರ್ಜಿತಾರಾತಿಬಳಂ ಅತಿಬಳ ನೆಂಬಂ ಆತನ ಮಹಾದೇವಿ ನಯನ ಮನೋಹರಿ ಮನೋಹರಿಯೆಂಬಳ್**

**ಗದ್ಯ – ಪದವಿಭಾಗ-ಅನ್ವಯ-ಅರ್ಥ:** ಅದನಾಳ್ವನ್ = ಆ ನಾಡನ್ನು ಆಳುವವನು, ಅಖಿಳ = ಎಲ್ಲ, ಖಚರಪತಿ = ಖೇಚರರಾಜರ, ಮಣಿಮಕುಟ = ಕಿರೀಟಗಳ ರತ್ನಗಳ, ಗಣಕಿರಣ = ಕಿರಣಸಮೂಹದ, ರಾಗ = ಪ್ರಭೆಯಿಂದ, ರಂಜಿತ = ಬೆಳಗುವ, ಚರಣನ್ = ಪಾದಗಳುಳ್ಳವನೂ; ಉದಿತೋದಿತ = ಏಳಿಗೆ ಹೊಂದುತ್ತಿರುವ, ನಿಜ = ತನ್ನ, ಕುಲ = ಕುಲವೆಂಬ,ಸುಮೇರು ಅಚಳ = ಸುಮೇರು ಪರ್ವತದ ಮೇಲಿನ, ಮಂದಾರಪಾದಪಂ = ಮಂದಾರ

ವೃಕ್ಷನೆನಿಸಿದವನೂ, ಅನೇಕ, ಸಮರ = ಯುದ್ಧಗಳಲ್ಲಿ, ಸಮ್ಮರ್ದನ = ಹೋರಾಡುತ್ತ, ಅರಾತಿ ಬಳಂ = ಶತ್ರು ಸೈನ್ಯವನ್ನು, ನಿರ್ಜಿತ = ಗೆದ್ದ, ಅತಿಬಳಂ = ಮಹಾ ಶೂರ ಎನಿಸಿದ ಅತಿಬಳ, ಎಂಬಂ = ಎನ್ನುವವನು; ಆತನ, ಮಹಾದೇವಿ = ಮಹಾರಾಣಿಯು, ನಯನಮನೋಹರಿ = ಕಣ್ಣಿಗೆ ಹಬ್ಬವಾಗಿದ್ದ, ಮನೋಹರಿಯೆಂಬಳ್ = ಮನೋಹರಿ ಎಂಬ ಹೆಸರಿನವಳು.

**ಗದ್ಯಾನುಸರಣ:** ಆ ನಾಡನ್ನು ಆಳುವವನು ಎಲ್ಲ ಖೇಚರರಾಜರ ಕಿರೀಟರತ್ನಗಳ ಪ್ರಭೆಯಿಂದ ಬೆಳಗುವ ಪಾದಗಳುಳ್ಳವನೂ, ಏಳಿಗೆ ಹೊಂದುತ್ತಿರುವ ತನ್ನ ಕುಲವೆಂಬ ಸುಮೇರುಪರ್ವತದ ಮಂದಾರವೃಕ್ಷನೆನಿಸಿದ್ದವನೂ ನಾನಾ ಯುದ್ಧಗಳಲ್ಲಿ ಶತ್ರುಸೈನ್ಯವನ್ನು ಗೆದ್ದ ಮಹಾಶೂರನೂ ಆದ ಅತಿಬಳ ಎನ್ನುವವನು; ಅವನ ಮಹಾರಾಣಿ ಅತ್ಯಂತ ಚೆಲುವೆಯಾದ ಮನೋಹರಿ ಎನ್ನುವವಳು.

**ವಿಶೇಷ ವಿಚಾರ:** ಚಂಪೂ ಕಾವ್ಯಗಳು ಸಂಸ್ಕೃತ ಕಾವ್ಯ ಮಾದರಿಗಳನ್ನು ಅನುಸರಿಸಿದ್ದರಿಂದ ಅದರ ದಟ್ಟ ಪ್ರಭಾವಕ್ಕೊಳಗಾದವು. ಅಕ್ಷರವೃತ್ತಗಳು ಗುರುಲಘುವಿನ್ಯಾಸನಿರ್ದಿಷ್ಟತೆಯ ಕಾರಣದಿಂದ ಸಮಾಸ ಭೂಯಿಷ್ಠವಾಗಿರ ಬೇಕಾದುದರಿಂದ ಸಂಸ್ಕೃತಶಬ್ದಗಳನ್ನು ಹೆಚ್ಚು ಬಳಸಿಕೊಳ್ಳಬೇಕಾಯಿತು. ಜೊತೆಗೆ ಅಲ್ಲಿನ ವಾಕ್ಯಸ್ವರೂಪವನ್ನೂ ಅನುಸರಿಸಿತು. ಅದರ ಒಂದು ಲಕ್ಷಣವೆಂದರೆ ಬಹುವ್ರೀಹಿ ರಚನೆ. ನೇರವಾಗಿ ಇಂತಹವನು ಇಂತಹ ಗುಣಗಳನ್ನು ಹೊಂದಿದ್ದ ಎಂದು ವರ್ಣನೆ ಮಾಡದೆ ಇಂತಹ ಗುಣಗಳಿಂದ ಕೂಡಿದ್ದವನಾದ ಎಂದು ವರ್ಣಿಸುವ ರಚನೆ. ಇಲ್ಲಿನ ಮೊದಲ ವಾಕ್ಯವನ್ನೇ ನೋಡಿ: 'ಎಲ್ಲ ಖೇಚರರಾಜರ ಕಿರೀಟರತ್ನಗಳ ಪ್ರಭೆಯಿಂದ ಬೆಳಗುವ ಪಾದಗಳುಳ್ಳವನೂ' ಎಂಬುದನ್ನು ನೇರವಾಗಿ ಕನ್ನಡದಲ್ಲಿ 'ಎಲ್ಲ ಖೇಚರರಾಜರೂ ಅವನಿಗೆ ಭಯಭಕ್ತಿಗಳಿಂದ ನಮಸ್ಕರಿಸುತ್ತಿದ್ದರು' ಎಂದು ಮುಂತಾಗಿ ಹೇಳಬಹುದು.

**ಒಲಿಸುವ ರೂಪು ಗಾಡಿಯೊಳೊಡಂಬಡೆ ಗಾಡಿ ವಿಳಾಸದೇೞ್ಗೆಯೊಳ್**
**ನೆಲಸೆ ವಿಳಾಸಮಂಬರಚರಾಮರಕಾಂತೆಯರೆಲ್ಲರಂ ಪಳಂ**
**ಚಲೆಯೆ ನೆಗೞ್ತೆವೆತ್ತ ಪತಿಭಕ್ತಿಯು ಮ್ಮೆಮೆಯು ಮಾನಸಿಕ್ಕೆಯು**
**ಗ್ಗಲದ ಮೊಗೞ್ತೆ ತನ್ನದೆನೆ ಪೆಂಪು ಮನೋಹರಿಗಲ್ಲದಕ್ಕುಮೆ ೭೨**

**ಪದವಿಭಾಗ–ಅನ್ವಯ–ಅರ್ಥ:** ಒಲಿಸುವ ರೂಪು = (ಮನೋಹರಿಯ) ಆಕರ್ಷಿಸುವ ಸೌಂದರ್ಯವು, ಗಾಡಿಯೊಳ್ = ಬೆಡಗಿನಿಂದ, ಒಡಂಬಡೆ = ಕೂಡಿರಲು, ಗಾಡಿ = ಆ ಬೆಡಗು, ವಿಳಾಸದ ಏೞ್ಗೆಯೊಳ್ = ಹಾವಭಾವಗಳ, ಏೞ್ಗೆಯೊಳ್ = ಆಧಿಕ್ಯದಲ್ಲಿ, ನೆಲಸೆ = ಸೇರಿರಲು, ವಿಳಾಸಂ = ಆ ಹಾವಭಾವಗಳು, ಅಂಬರಚರ

= ಆಗಸದಲ್ಲಿ ಅಡ್ಡಾಡುವ, ಅಮರಕಾಂತೆಯರ್ ಎಲ್ಲರಂ = ದೇವತಾ ಸ್ತ್ರೀಯರೆಲ್ಲರನ್ನೂ, ಪಳಂಚಲೆಯೆ = ಮೀರಿಸಿರಲು, ನೆಗಟ್ತೆ ಪೆತ್ತ = ಕೀರ್ತಿಯನ್ನು ಪಡೆದ, ಪತಿಭಕ್ತಿಯ ಮೈಮೆಯ = ಪಾತಿವ್ರತ್ಯದ ಮಹಿಮೆಯ ಮಾನಸಿಕ್ಕೆಯ = ಹಿರಿಮೆಯ, ಅಗ್ಗಲದ = ಅಸಮಾನವಾದ, ಪೊಗಟ್ತೆ = ಹೆಗ್ಗಳಿಕೆ, ತನ್ನದು ಎನೆ = ತನಗಿದೆ ಎಂದ ಮೇಲೆ, ಪೆಂಪು = (ಅಂತಹ) ಹಿರಿಮೆಯು, ಮನೋಹರಿಗಲ್ಲದೆ, ಅಕ್ಕುಮೇ = (ಇತರರಿಗೆ) ಇರುವುದೇ?

**ಗದ್ಯಾನುಸರಣ:** ಅವಳದು ಆಕರ್ಷಿಸವ ಚೆಲುವು; ಬೆಡಗಿನಿಂದ ಕೂಡಿದುದು; ಅವಳ ಹಾವಭಾವವಿಲಾಸಗಳು ಖೇಚರಸ್ತ್ರೀಯರೆಲ್ಲರಿಗಿಂತ ಮಿಗಿಲಾದುದು; ಅವಳ ಅಗ್ಗಳಿಕೆಯ ಪತಿಭಕ್ತಿಯ ಮಹಿಮೆಯ ಹಿರಿಮೆ ಅವಳಿಗಲ್ಲದೆ ಬೇರಾರಿಗಿರಲು ಸಾಧ್ಯ?

**ಹಾವಭಾವವಿಳಾಸವಿಭ್ರಮಸಮನ್ವಿತರೂಪಕಳಾಪದಾ ಮಹಾ**
**ದೇವಿಗಮಾ ವಿಯಚ್ಚರಗಣಾಗ್ರಣೀಗಂ ಗುಣರತ್ನವಾರ್ಧಿ ನಾ**
**ನಾವಿಧಸೌಖ್ಯಭಾಜನನುಪಾರ್ಜಿತಖೇಚರರಾಜಹೃದ್ಯವಿ**
**ದ್ಯಾವಿಭವಂ ಮಗಂ ಜಿತವಿರೋಧಿನರೇಂದ್ರಬಳಂ ಮಹಾಬಳಂ ೭೩**

**ಪದವಿಭಾಗ–ಅನ್ವಯ–ಅರ್ಥ:** ಹಾವಭಾವವಿಳಾಸವಿಭ್ರಸಮನ್ವಿತ = ಹಾವ ಭಾವ ವೈಭವ ಬೆಡಗುಗಳಿಂದ ಕೂಡಿದ (ಕೂಡಿದವಳೂ), ರೂಪಕಳಾಪದ = ರೂಪ ಮತ್ತು ನಡವಳಿಕೆಯ, ಆ ಮಹಾದೇವಿಗಂ = ಆ ಮನೋಹರಿಗೂ, ವಿಯಚ್ಚರ ಅಗ್ರಣೀಗಂ = ಖೇಚರಮುಖ್ಯನಾದ ಅತಿಬಲನಿಗೂ, ಗುಣರತ್ನವಾರ್ಧಿ = ಗುಣಗಳ ರತ್ನಗಳ ಆಗರವಾದ ಸಮುದ್ರದಂತಹವನೂ, ನಾನಾವಿಧ, ಸೌಖ್ಯಭಾಜನ = ಅನೇಕ ಬಗೆಯ ಸುಖಗಳನ್ನು ಅನುಭವಿಸುವವನೂ, ಉಪಾರ್ಜಿತ = ಗಳಿಸಿದ, ಖೇಚರರಾಜಹೃದ್ಯವಿದ್ಯಾವಿಭವಂ = ವಿದ್ಯಾಧರರಾಜರ ಹೃದ್ಯ ವಿದ್ಯೆಗಳ ವೈಭವವುಳ್ಳವನೂ, ಜಿತವಿರೋಧಿಬಳಂ = ಶತ್ರುಸೈನ್ಯವನ್ನು ಗೆಲ್ಲಬಲ್ಲವನೂ, (ಆದ) ಮಹಾಬಳಂ = ಮಹಾಬಲನು, ಮಗಂ = ಮಗ.

**ಗದ್ಯಾನುಸರಣ:** ಹಾವ ಭಾವ ವೈಭವ ಬೆಡಗುಗಳು ಹಾಗೂ ರೂಪ ಮತ್ತು ನಡವಳಿಕೆಗಳಿಂದ ಕೂಡಿದ ಮನೋಹರಿಗೂ ಖೇಚರಮುಖ್ಯನಾದ ಅತಿಬಲನಿಗೂ ಮಗನಾಗಿ ಹುಟ್ಟಿದವನು ಮಹಾಬಲ; ಅವನು ಗುಣಗಳ ರತ್ನಗಳ ಆಗರವಾದ ಸಮುದ್ರದಂತಹವನು, ಅನೇಕ ಬಗೆಯ ಸುಖಗಳನ್ನು ಅನುಭವಿಸುವವನು, ವಿದ್ಯಾಧರರಾಜರ ಹೃದ್ಯ ವಿದ್ಯೆಗಳ ವೈಭವನ್ನು ಗಳಿಸಿದವನು, ಶತ್ರುಸೈನ್ಯವನ್ನು ಗೆಲ್ಲಬಲ್ಲವನು.

ವ। ಆ ಮಹಾಬಳಂ ಬಾಲಕಾಲದಿಂ ತಗುಳ್ದಭ್ಯಸ್ತಸಮಸ್ತವಿದ್ಯಾಧರ ವಿದ್ಯಾಪಾರಗನುಂ ಪರಿಸಮಾಪ್ತ ಸಕಳಕಳಾವಿಜ್ಞಾನನುಂ ಅಧಿಗತಾಶೇಷ ಶಾಸ್ತ್ರನುಂ ಪರಿಣತಸಕಳಶಸ್ತ್ರನುಂ ಆಗಿ ಯೌವನಂ ನೆಱೆಯೆ ನೆಱೆಯೆ

**ಪದವಿಭಾಗ–ಅನ್ವಯ–ಅರ್ಥ:** ಆ ಮಹಾಬಳಂ = ಮಹಾಬಲನು, ಬಾಲಕಾಲದಿಂ = ಬಾಲ್ಯದಿಂದ ಮೊದಲಾಗಿ, ತಗುಳ್ದ = ಕಲಿತ, ಸಮಸ್ತ = ಎಲ್ಲ, ವಿದ್ಯಾಧರವಿದ್ಯಾ = ಖೇಚರರ ವಿದ್ಯೆಗಳಲ್ಲಿ, ಪಾರಗನುಂ = ಪಂಡಿತನಾಗಿಯೂ, ಸಕಳ = ಎಲ್ಲ, ಕಳಾವಿಜ್ಞಾನನುಂ = ಕಲೆ ಮತ್ತು ವಿಜ್ಞಾನಗಳ (ಕಲಿಕೆಯ)ನ್ನು, ಪರಿಸಮಾಪ್ತ = ಪೂರೈಸಿದವನೂ, ಅಶೇಷಶಾಸ್ತ್ರ = ಒಂದೂ ಬಿಡದೆ ಶಾಸ್ತ್ರಗಳನ್ನು, ಅಧಿಗತ = ವಶಪಡಿಸಿಕೊಂಡವನೂ, ಸಕಳಶಸ್ತ್ರನುಂ = ಎಲ್ಲ ಶಸ್ತ್ರಪ್ರಯೋಗದಲ್ಲಿ, ಪರಿಣತ = ಕೌಶಲವನ್ನು (ಪಡೆದು), ಯೌವನಂ ನೆಱೆಯೆ ನೆಱೆಯೆ = ಪ್ರಾಯಕ್ಕೆ ಸಲ್ಲಲು

**ಗದ್ಯಾನುಸರಣ:** ಆ ಮಹಾಬಲನು ಚಿಕ್ಕಂದಿನಿಂದಲೇ ವಿದ್ಯಾಧರವಿದ್ಯೆಗಳನ್ನೆಲ್ಲ ಕಲಿತ, ಕಲೆ ಮತ್ತು ವಿಜ್ಞಾನಗಳನ್ನು ಕೈವಶಮಾಡಿಕೊಂಡ, ಒಂದೂ ಬಿಡದಂತೆ ಶಾಸ್ತ್ರಗಳಲ್ಲಿ ಪಂಡಿತನಾದ, ಎಲ್ಲ ಶಸ್ತ್ರಗಳ ಪ್ರಯೋಗಗಳಲ್ಲಿಯೂ ಪರಿಣತನಾದ. ಹೀಗೆ ಅವನು ಯಾವನದಲ್ಲಿ ಕಾಲಿಟ್ಟ.

**ಮೊಗಮುತ್ಫುಲ್ಲಸರೋಜಹಾಸಿ ನಯನಂ ನೀಲಾಂಬುಜಸ್ಪರ್ಧಿ ಬಾ**
**ಹುಗಳಾಜಾನುವಿಳಂಬಿಗಳ್ ತೊಡೆಗಳುಂ ರಂಭಾಮೃದುಸ್ತಂಭಶೋ**
**ಭೆಗಳಂ ಗೆಲ್ದುವು ವಕ್ಷಮಂಬರಚರಶ್ರೀಗೇಹಮೆಂಬೊಂದೆ ರೂ**
**ಪೆ ಗಡಂ ನೋಡಲೊಡಂ ಮರುಳ್ಗೊಳಿಸುಗುಂ ವಿದ್ಯಾಧರಸ್ತ್ರೀಯರಂ ೭೪**

**ಪದವಿಭಾಗ–ಅನ್ವಯ–ಅರ್ಥ:** ಅವನ, ಮೊಗಂ = ಮುಖವು, ಉತ್ಫುಲ್ಲ = ಅರಳಿದ, ಸರೋಜ ಹಾಸಿ = ತಾವರೆಯಂತಹದು; ನಯನಂ = ಕಣ್ಣುಗಳು, ನಿಲಾಂಬುಜಸ್ಪರ್ಧಿ = ನೈದಿಲೆಯೊಡನೆ ಮೇಲಾಟ ನಡೆಸುವಂತಹವು, ಬಾಹುಗಳ್ = ತೋಳುಗಳು, ಆಜಾನುವಿಳಂಬಿಗಳ್ = ಮೊಣಕಾಲವರೆಗೂ ನೀಳವಾದವು; ತೊಡೆಗಳುಂ = ತೊಡೆಗಳು, ರಂಭಾಮೃದುಸ್ತಂಭ = ಮೃದುವಾದ ಬಾಳೆಯ ದಿಂಡುಗಳಂತೆ, ಶೋಭೆಗಳಂ = ಸೊಗಸನ್ನು, ಗೆಲ್ದುವು = ಮೀರಿಸಿದವು; ವಕ್ಷಂ = ಎದೆಯು, ಅಂಬರಚರ = ಖೇಚರ, ಶ್ರೀಗೇಹಂ = ಐಸಿರಿಯ ನೆಲೆವನೆ; ಎಂಬೊಂದೆ ರೂಪೆ = ಎನ್ನುವಂತಹ ರೂಪೆ, ನೋಡಲೊಡಂ = ನೋಡಿದಾಕ್ಷಣ, ವಿದ್ಯಾಧರಸ್ತ್ರೀಯರಂ = ಖೇಚರ ಹೆಣ್ಣುಗಳನ್ನು, ಮರುಳ್ + ಕೊಳಿಸುಗುಂ = ಮರುಳು ಮಾಡುತ್ತವೆ, ಗಡಂ = ಅಲ್ಲವೇ

**ಗದ್ಯಾನುಸರಣ:** ಅವನ ಮುಖವು ಅರಳಿದ ಕಮಲದಂತೆ, ಕಣ್ಣುಗಳು ನೈದಿಲೆಯನ್ನೂ ಮೀರಿಸಿದಂತಹವು, ತೋಳುಗಳು ಮೊಳಕಾಲವರೆಗಿನಷ್ಟು ನೀಳವಾದವು, ತೊಡೆಗಳು ಮೃದುವಾದ ಬಾಳೆಯ ದಿಂಡಿನಂತಹವು, ಎದೆಯೋ ಖೇಚರರ ಐಸಿರಿ ನೆಲಸಿದ ಮನೆ ಎನ್ನುವಂತಹ ಅವನ ರೂಪು ವಿದ್ಯಾಧರಸ್ತ್ರೀಯರ ಮನಸ್ಸುಗಳನ್ನು ಮರುಳುಗೊಳಿಸಲು ಸಾಕು.

**ಮವೊಲ್ದಾತನ ಗಾಡಿಯಂ ದರವುರಂಗಂಡಾಕೆಗಳ್ ಪೂವಿನಂ**
**ಬಿನ ಕೋಳ್ಗಂ ತಳಿವಾಲಿನೀರ್ಗಮಲರ್ವಾಸಿಂಗಂ ಕುಳಿರ್ಕೋಟ್ಟಿ ನಂ**
**ದನಕಂ ಚಂದನಕಂ ಪುಸುರ್ಪೆಸೆವ ಬಾಟ್ಜೊಂಪಕ್ಕಮೊಂದೊಂದೆ ತ**
**ಣ್ಬನಿಯೊಳ್ಕೋಡಿಸುತಿರ್ಪ ಬಿಜ್ಜಣಿಗೆಗಂ ಪಕ್ಕಾಗದೇಂ ಪೋಪರೇ ೭೫**

**ಪದವಿಭಾಗ–ಅನ್ವಯ–ಅರ್ಥ:** ಮನಂ ಒಲ್ದ = ಮನಸ್ಸನ್ನು ಗೆಲ್ಲುವ, ಆತನ ಗಾಡಿಯಂ = ಗಂಡು ಚೆಲುವನ್ನು, ದರವುರಂ = ಆಕಸ್ಮಿಕವಾಗಿ, ಕಂಡಾಕೆಗಳ್ = ಕಂಡ ಹೆಣ್ಣುಗಳು, ಪೂವಿನಂಬಿನ = ಹೂಬಾಣಗಳ, ಕೋಳ್ಗಂ = ಹೊಡೆತಕ್ಕೂ, ತಳಿವ = ಎರಚುವ, ಆಲಿನೀರ್ಗಳ = ತಂಪು ನೀರಿಗೂ, ಅಲರ್ ಪಾಸಿಂಗಂ = ಹೂವಿನ ಹಾಸಿಗೆಗೂ, ಕುಳಿರ್ ಕೋಟ್ಟ = ತಣ್ಣಗಿರುವ, ನಂದನಕಂ = ಉದ್ಯಾನಕ್ಕೂ, ಚಂದನಕಂ = ಶ್ರೀಗಂಧಕ್ಕೂ, ಪುಸುರ್ಪು ಎಸೆವ = ಹಸುರಿನಿಂದ ಶೋಭಿಸುವ, ಬಾಟ್‌ಜೊಂಪಕ್ಕಂ = ಬಳ್ಳಿಮಾಡಕ್ಕೂ, ಒಂದೊಂದೆ = ಹನಿಹನಿಯಾಗಿ, ತಣ್ಬನಿಯೊಳ್ = ತಣ್ಣೀರಿನಿಂದ, ಕೋಡಿಸುತಿರ್ಪ = ತಂಪುಗೊಳಿಸುವ, ಬಿಜ್ಜಣಿಗೆಗಂ = ಬೀಸಣಿಗೆಗೂ, ಪಕ್ಕಾಗದೆ = ಒಳಗಾಗದೆ, ಏಂ ಪೋಪರೇ = ಹೋಗುತ್ತಾರೇನು?

**ಗದ್ಯಾನುಸರಣ:** ಮನಮೋಹಕವಾದ ಅವನ ಗಂಡಗಾಡಿಯನ್ನು ಒಮ್ಮೆ ನೋಡಿದ ಹೆಣ್ಣುಗಳು ಹೂಬಾಣದ ಹೊಡೆತಕ್ಕೂ, ತಣ್ಣೀರನ್ನು ಸಿಂಪಡಿಸಬೇಕಾದ ಸ್ಥಿತಿಗೂ, ಹೂವಿನ ಹಾಸಿಗೆಗೂ, ತಂಪು ನೀಡುವ ಉದ್ಯಾನ ಮತ್ತು ಶ್ರೀಗಂಧಗಳಿಗೂ, ಹಸುರಾದ ಬಳ್ಳಿಮಾಡಕ್ಕೂ ಹನಿಹನಿಯಾಗಿ ನೀರನ್ನು ಸಿಂಡಿಸುವ ಬೀಸಣಿಗೆಗೂ ಒಳಗಾಗದಿರುತ್ತಾರೆಯೇ?

**ವಿಶೇಷ ವಿಚಾರ:** ಮಹಾಬಲನನ್ನು ಕಂಡ ಹೆಣ್ಣು ಈ ಎಲ್ಲ ಬಗೆಯ ಶೀತಲೋಪಚಾರಗಳನ್ನು ಪಡೆಯುವ ಸ್ಥಿತಿಯನ್ನು ತಲುಪುವಷ್ಟು ತೀವ್ರವಾದ ವಿರಹಕ್ಕೊಳಗಾಗುವಳೆಂದು ಭಾವ.

**ವ। ಅಂತು ಮಹಾಬಳ ಕುಮಾರಂ ಕುಮಾರಕೇಳೀವಿಳಾಸವಿಶ್ರಾಂತ ಸ್ವಾಂತಂ ಯುವರಾಜ ಪದವಿಗೆ ಯೋಗ್ಯನಾಗೆ**

**ಅರ್ಥ:** ಅಂತು ಕುಮಾರಂ ಕುಮಾರಕೇಳೀ ವಿಳಾಸವಿಶ್ರಾಂತ ಸ್ವಾಂತಂ

ಯುವರಾಜ ಪದವಿಗೆ ಯೋಗ್ಯನಾಗೆ = ಈ ರೀತಿಯಲ್ಲಿ ಮಹಾಬಲ ಕುಮಾರನು ಬಾಲಲೀಲೆಗಳಲ್ಲಿ ಸಂತೋಷ ಹೊಂದುತ್ತ ಯುವರಾಜಪದವಿಯನ್ನು ಸ್ವೀಕರಿಸುವ ವಯಸ್ಸಿನವನಾದ.

**ಬಳವದ್ದಿದ್ವಿಷ್ಟವಿದ್ಯಾಧರಕರಟಿಶಿರಶ್ಶುಕ್ತಿಸಂಭೂತಮುಕ್ತಾ**
**ವಳಿಯೊಳ್ಕಣ್ಣಿಟ್ಟು ತನ್ನೊಳ್ನೆರೆಯಲಿದು ಜಯಶ್ರೀಯ ಮುಂದಟ್ಟಿದೆಕ್ಕಾ**
**ವಳಿಯೆಂಬಂತಿರ್ದುದಂ ಕಂಠಿಕೆಯನುಭಯವಿದ್ಯಾಧರಶ್ರೇಣಿಗಳ್ ಮಂ**
**ಗಳಗೀತಾತೋದ್ಯನಾದಂಗಳೊಳೆ ಪುದುವಿನಂ ಕಟ್ಟಿದಂ ಖೇಚರೇಂದ್ರ ೭೬**

**ಪದವಿಭಾಗ–ಅನ್ವಯ–ಅರ್ಥ:** ಬಳವತ್ = ಬಲಿಷ್ಠವಾದ, ವಿದ್ಯಾಧರಕರಟಿ = ವಿದ್ಯಾಧರರ ಆನೆಗಳ, ಶಿರಃ ಶುಕ್ತಿ = ತಲೆಗಳೆಂಬ ಚಿಪ್ಪುಗಳಲ್ಲಿ ಸಂಭೂತ = ಹುಟ್ಟಿದ, ಮುಕ್ತ ಆವಳಿಯೊಳ್ = ಮುತ್ತುಗಳ ರಾಶಿಯಲ್ಲಿ, ಕಣ್ಣಿಟ್ಟು = ಆಸಕ್ತನಾಗಿ, ತನ್ನೊಳ್ ನೆರೆಯಲ್ = ತನ್ನಲ್ಲಿ ಸೇರಲು, ಇದು, ಜಯಶ್ರೀಯ = ಜಯಲಕ್ಷ್ಮಿಯು, ಮುಂದೆ ಅಟ್ಟಿದ =ಮೊದಲೇ ಕಳುಹಿಸಿದ, ಎಕ್ಕಾವಳಿ = ಒಂದೆಳೆಯ ಹಾರ, ಎಂಬಂತೆ ಇರ್ದುದಂ = ಎನ್ನುವ ಹಾಗಿದ್ದ, ಕಂಠಿಕೆಯನ್ = ಕಠೀಹಾರವನ್ನು, ಉಭಯ = ಎರಡೂ, ವಿದ್ಯಾಧೃಶ್ರೇಣಿಗಳ್ = ವಿದ್ಯಾಧರ ನಾಡುಗಳ ಸಮೂಹವು, ಮಂಗಳಗೀತ = ಶುಭಕರವಾದ ಹಾಡುಗಳು, ಆತೋದ್ಯ = ವಾದ್ಯವಾದನಗಳ, ನಾದಂಗಳೊಳೆ = ನಾದಗಳಲ್ಲಿ, ಪುದುವಿನಂ = ಹುದುಗಿಹೋಗಿರಲು, ಖೇಚರೇಂದ್ರಂ, ಖೇಚರರಾಜನಾದ ಅತಿಬಲನು, ಕಟ್ಟಿದಂ = ಮಗನಿಗೆ ಕಟ್ಟಿದ.

**ಗದ್ಯಾನುಸರಣ:** ವಿದ್ಯಾಧರರ ಬಲಿಷ್ಠ ಆನೆಗಳ ತಲೆಯ ಚಿಪ್ಪುಗಳಲ್ಲಿನ ಮುತ್ತುಗಳ ಮೇಲೆ ಕಣ್ಣಿಟ್ಟು, ಜಯಲಕ್ಷ್ಮಿಯು ಮೊದಲೇ ಕಳಿಸಿದ ಒಂದೆಳೆಯ ಹಾರದಂತಿದ್ದ ಕಂಠೀಹಾರವನ್ನು, ಎರಡೂ ವಿದ್ಯಾಧರ ನಾಡುಗಳು ಹಾಡು-ವಾದನಗಳ ನಾದಗಳಲ್ಲಿ ಮುಳುಗಿ ಹೋಗಿರಲು, ಅತಿಬಲನು ಮಗನಿಗೆ ಕಟ್ಟಿದನು.

**ವ। ಅಂತು ಕಟ್ಟಿದಾಗಳ್**

**ಅರ್ಥ:** ಅಂತು ಕಟ್ಟಿದಾಗಳ್ = ಹಾಗೆ ಕಟ್ಟಿದಾಗ

**ಹಿಮಶೈಳದೊಳಂ ಜಳಧಿಯೊ**
**ಳಮೆಂತಭಿನ್ನಾಂಗಿ ಗಂಗೆ ಸಂಗತೆ ಖಚರೋ**
**ತ್ತಮನೊಳಮಾ ವಿದ್ಯಾಧರ**
**ಕುಮಾರನೊಳಮಂತೆ ಲಕ್ಷ್ಮಿ ಸಂಗತೆಯಾದಳ್ ೭೭**

**ಪದವಿಭಾಗ-ಅನ್ವಯ-ಅರ್ಥ:** ಹಿಮಶ್ಶೈಳದೊಳಂ = ಹಿಮವತ್ ಪರ್ವತದಲ್ಲಿಯೂ, ಜಳಧಿಯೊಳಂ = ಸಮುದ್ರದಲ್ಲಿಯೂ, ಎಂತು = ಹೇಗೆ, ಗಂಗೆ = ಗಂಗೆಯು, ಸಂಗತೆ = ಸೇರಿಹೋಗುವಳೋ, ಅಂತೆ = ಹಾಗೆಯೇ, ಖಚರೋತ್ತಮನೊಳಂ = ಖೇಚರ ಶ್ರೇಷ್ಠ (ಅತಿಬಳ)ನಲ್ಲಿಯೂ, ವಿದ್ಯಾಧರಕುಮಾರನೊಳಂ = ಮಹಾಬಲನಲ್ಲಿಯೂ, ಲಕ್ಷ್ಮಿ = (ರಾಜ್ಯ)ಲಕ್ಷ್ಮಿಯು, ಸಂಗತೆಯಾದಳ್ = ಸೇರಿದಳು.

**ಗದ್ಯಾನುಸರಣ:** ಗಂಗೆಯು ಹೇಗೆ ಹಿವವತ್ಪರ್ವತದಲ್ಲಿಯೂ ಸಾಗರದಲ್ಲಿಯೂ ಸೇರುತ್ತಾಳೆಯೋ ಹಾಗೆಯೇ ಮಹಾಬಲ ಮತ್ತು ಅತಿಬಲರಲ್ಲಿ ರಾಜ್ಯಲಕ್ಷ್ಮಿಯು ಸೇರಿದಳು.

**ವಿಶೇಷ ವಿಚಾರ:** ಮಗನಿಗೆ ಯುವರಾಜ್ಯಪಟ್ಟವನ್ನು ಕಟ್ಟಿದ ಮೇಲೆ ರಾಜ್ಯವನ್ನು ಪಾಲಿಸುವ ಹೊಣೆ ತಂದೆಮಕ್ಕಳಿಬ್ಬರಿಗೂ ಸೇರಿತು ಎಂದು ಭಾವ.

**ಪೆಸರ್ಗಳ್ಕಿತ್ತು ಸಮಸ್ತಖೇಚರಬಲಂ ತೇಜಕ್ಕೆ ಬೆರ್ಚಿತ್ತು ಮುಂ**
**ಪೊಸಪೊಚ್ಚಂಬೆರಸಿರ್ಪ ಭೂಚರಬಲಂ ಮೆಲ್ಪಿಂಗೆ ಮೆಚ್ಚಿತ್ತು ತ**
**ನ್ನ ಸಮಸ್ತಂ ಪರಿವಾರಮೆಂಬ ಗುಣಸಂಘಾತಂಗಳಂ ತಾಳ್ದಿ ಪೆಂ**
**ಪೆಸಕಂಬೆತ್ತಿರೆ ಸಂತಮಿಂತತಿಬಳಂ ರಾಜ್ಯಗೆಯ್ಯುತ್ತಿರ್ಪಿನಂ ೭೮**

**ಪದವಿಭಾಗ-ಅನ್ವಯ-ಅರ್ಥ:** ಇಂತು = ಈ ರೀತಿ, ಅತಿಬಳಂ = ಅತಿಬಲನು, ರಾಜ್ಯಂಗೆಯ್ಯುತ್ತಿರ್ಪಿನಂ = ರಾಜ್ಯವನ್ನಾಳುತ್ತಿರುವಾಗ, ಸಮಸ್ತ = ಎಲ್ಲ, ಖೇಚರಬಲಂ = ಖೇಚರಸೈನ್ಯವೂ, (ಅವನ) ಪೆಸರ್ಗೆ = ಹೆಸರನ್ನು ಕೇಳಿದರೇ, ಅಳ್ಕಿತ್ತು = ಬೆದರುತ್ತಿತ್ತು; ಮುಂ = ಮೊದಲೇ, ಪೊಸಪೊಚ್ಚಂ = ಹೊಸ ಪ್ರಭೆಯಿಂದ ಕೂಡಿದ, ತೇಜಕ್ಕೆ = ಅವನ ತೇಜಸ್ಸಿಗೆ, ಭೂಚರಬಲಂ = ಮಾನವಸೈನ್ಯವು, ಬೆರ್ಚಿತ್ತು = ಬೆಚ್ಚಿಬೀಳುತ್ತಿತ್ತು; ಆದರೆ ತನ್ನ ಸಮಸ್ತ = ತನ್ನೆಲ್ಲ, ಪರಿವಾರಂ = ಪರಿವಾರವೂ, ಮೆಲ್ಪಿಂಗೆ = ಅವನ ನಯವಂತಿಕೆಯನ್ನು, ಮೆಚ್ಚಿತ್ತು = ಮೆಚ್ಚಿಕೊಂಡಿತ್ತು, ಎಂಬ, ಗುಣಸಂಘಾತಗಳಂ = ಗುಣಗಳಗಳನ್ನು, ತಾಳ್ದಿ = ಪಡೆದ, ಪೆಂಪು = ಹಿರಿಮೆಯು, ಎಸಕಂ ಪೆತ್ತಿರೆ = ವೈಭವವನ್ನು ಹೊಂದಿರಲು, ಸಂತಂ = ನೆಮ್ಮದಿ (ನೆಲಸಿತ್ತು).

**ಗದ್ಯಾನುಸರಣ:** ಅತಿಬಲನು ರಾಜ್ಯವನ್ನಾಳುತ್ತಿರುವಾಗ ಖೇಚರಸೈನ್ಯವು ಅವನ ಹೆಸರನ್ನು ಕೇಳಿದರೇ ಬೆದರುತ್ತಿತ್ತು; ಖೇಚರಬಲವೆಲ್ಲ ಹೊಸ ಪ್ರಭೆಯಿಂದ ಕೂಡಿದ ಅವನ ತೇಜಸ್ಸನ್ನು ಕಂಡು ಮಾನವಸೈನ್ಯವು ಬೆಚ್ಚಿಬೀಳುತ್ತಿತ್ತು; ಆದರೆ ಅವನ ಪರಿವಾರವು ಮಾತ್ರ ಅವನ ನಯವಂತಿಕೆಯನ್ನು ಮೆಚ್ಚಿಕೊಂಡಿತ್ತು. ಈ

ಎಲಲ ಗುಣಗಳಿಂದ ಕೂಡಿದ ಅವನ ಹಿರಿಮೆಯಿಂದ ರಾಜ್ಯದಲ್ಲಿ ನೆಮ್ಮದಿಯು ನೆಲಸಿತ್ತು.

**ತೊಡರ್ದೀ ಪುತ್ರಕಳತ್ರಮೋಹದೊಳಿದೇಕಬ್ದಿರ್ದಪೈ ನಿನ್ನ ಮೆ**
**ಟ್ಟಿಡಿದೇಕಾರಣಮಂತಕಂ ಕಡುಪಿನಿಂ ಕಂಠಗ್ರಹಂಗ್ಯ್ಯದಿಂ**
**ತಡೆಯಂ ಚೇತರಿಸೆಂದು ಬಂದು ಕಿವಿಯೊಳ್ಪೇಟ್ವಂತೆವೊಲ್ಕೆನ್ನೆಯಿಂ**
**ದೊಡೆದೋರೊಂದೊಗೆತಂದುವಂದು ನರೆಗಳ್ ವಿದ್ಯಾಧರಾಧೀಶನಾ ೭೯**

**ಪದವಿಭಾಗ–ಅನ್ವಯ–ಅರ್ಥ:** ತೊಡರ್ದ = ಆವರಿಸಿರುವ, ಈ ಪುತ್ರಕಳತ್ರ ಮೋಹದೊಳ್ = ಮಗಹೆಂಡತಿಯ ಮೋಹದೊಳ್ = ವ್ಯಾಮೋಹದಲ್ಲಿ, ಏಕೆ, ಅಬ್ದಿರ್ದಪೈ = ಮುಳುಗಿದ್ದೀಯೆ? ನಿನ್ನ, ಮೆಟ್ಟಿಡು = ಭ್ರಮೆಗೆ, ಏ ಕಾರಣಂ = ಏನು ಕಾರಣ? ಅಂತಕಂ = ಯಮನು, ಕಡುಪಿನಿಂ = ಬಲವಾಗಿ, ಕಂಠಗ್ರಹಂಗೆಯ್ಯದೆ = ಕತ್ತು ಹಿಸುಕಲು, ಇಂ ತಡೆಯಂ = ಇನ್ನು ತಡಮಾಡುವುದಿಲ್ಲ, ಚೇತರಿಸು = ಎಚ್ಚೆತ್ತುಕೋ, ಎಂದು, ಬಂದು, ಕಿವಿಯೊಳ್ = (ಅವನ) ಕಿವಿಯಲ್ಲಿ, ಪೇಟ್ವಂತೆವೊಲ್ = ಹೇಳುವ ಹಾಗೆ, ಅಂದು = ಆಗ, ನರೆಗಳ್ = ನರೆತ ಕೂದಲುಗಳು, ವಿದ್ಯಾಧರ ಅಧೀಶನಾ = ವಿದ್ಯಾಧರ ರಾಜನಾದ ಅತಿಬಲನ, ಕೆನ್ನೆಯಿಂದೊಡೆದು = ಕೆನ್ನೆಯಿಂದ ಮೂಡಿ, ಓರೊಂದು = ಒಂದೊಂದು, ಒಗೆತಂದುವು = ಕಾಣಿಸಿಕೊಂಡವು.

**ಗದ್ಯಾನುಸರಣ:** 'ಮಡದಿಮಕ್ಕಳ ಮೋಹದಲ್ಲಿ ಏಕೆ ಮುಳುಗಿದ್ದೀಯೆ, ನಿನ್ನ ಈ ಭ್ರಮೆಗೆ ಕಾರಣವೇನು, ಇನ್ನು ತಡಮಾಡದೆ ಯಮನು ಬಂದು ನಿನ್ನ ಕತ್ತು ಹಿಸುಕದಿರಲಾರ, ಎಚ್ಚರಗೊಳ್ಳು' ಎಂದು ಹತ್ತಿರ ಬಂದು ಕಿವಿಯಲ್ಲಿ ಹೇಳಿದ ಹಾಗೆ ಅತಿಬಲನ ಕೆನ್ನೆಯಿಂದ ಮೊದಲುಗೊಂಡು ಅಲ್ಲಲ್ಲಿ ನರೆತ ಕೂದಲುಗಳು ಕಾಣಿಸಿಕೊಂಡುವು.

**ವ। ಅಂತು ಮೇಲೆ ಬಂದ ಕೃತಾಂತರಾಜವಾಹಿನಿಯ ಸಿತಪತಾಕೆಗಳನನು ಕರಿಸುವ ಪಳಿತಂಗಳಂ ದರ್ಪಣದೊಳ್ನೋಡಿ ಕಂಡು ಪರಪತಾಕಿನೀ ಪತಾಕೆಯಂ ಕಂಡು ಸೆರಗಿಲ್ಲದ ಗಂಡನಂತಿಮಿಸಪ್ಪೊಡಂ ಮಾಣದದುವೆ ಸಂಸಾರನಿರ್ವೇಗಕಾರಣಮಾಗೆ**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಮೇಲೆ ಬಂದ = ಮೇಲೇರಿ ಬಂದ, ಕೃತಾಂತರಾಜ = ಯಮನೆಂಬ ರಾಜನ, ವಾಹಿನಿಯ = ಸೈನ್ಯದ, ಸಿತಪತಾಕೆಗಳನ್ = ಬಿಳಿಯ ಬಾವುಟಗಳನ್ನು, ಅನುಕರಿಸು = ಅನುಕರಿಸಿ ಕಾಣುವ, ಪಳಿತಂಗಳಂ = ನರೆತ ಕೂದಲನ್ನು, ದರ್ಪಣದೊಳ್ = ಕನ್ನಡಿಯಲ್ಲಿ, ನೋಡಿ ಕಂಡು = ನೋಡಿಯೂ, ಪರಪತಾಕಿನೀ = ಅನ್ಯಸೈನ್ಯ, ಪತಾಕೆಯಂ =

ಬಾವುಟವನ್ನು, ಕಂಡು = ನೋಡಿ, ಸೆರಗಿಲ್ಲದ, ಭಯವಿಲ್ಲದ, ಗಂಡನಂತೆ = ವೀರನಂತೆ, ಇನಿಸು ಅಪ್ಪೊಡಂ = ಸ್ವಲ್ಪವಾದರೂ, ಮಾಣದೆ = ಹಿಂಜರಿಯದೆ, ಅದುವೆ = ಆ ನರೆಗೂದಲುಗಳೇ, ಸಂಸಾರನಿರ್ವೆಗ = ಐಹಿಕತೆಯ ಬಗ್ಗೆ ವೈರಾಗ್ಯಕ್ಕೆ, ಕಾರಣಂ ಆಗೆ = ಕಾರಣವಾಗಲು

**ಗದ್ಯಾನುಸರಣ:** ತನ್ನ ಮೇಲೆ ಏರಿ ಬಂದ ಯಮರಾಜನ ಸೈನ್ಯದಂತೆ ಕಾಣುವ ನರೆಗೂದಲನ್ನು ಕನ್ನಡಿಯಲ್ಲಿ ನೋಡಿದರೂ ಅತಿಬಳನು ಪರಸೈನ್ಯವು ದಂಡೆತ್ತಿ ಬಂದರೂ ಹೆದರದ ವೀರನಂತೆ ಹಿಂಜರಿಯಲಿಲ್ಲ; ಬದಲು ಅದೇ ಇಹದ ಬಗೆಗಿನ ವೈರಾಗ್ಯಕ್ಕೆ ಕಾರಣವಾಯಿತು.

**ಕರೆದಾಗಳ್ನಿಜಮನಸ್ತ್ರಿಮಂಡಳಮಹಾಸಾಮಂತಶುದ್ಧಾಂತಮು**
**ಖ್ಯರನಾ ವೃತ್ತಕಮೆಲ್ಲಮಂ ತಿಳಿಯೆ ಪೇೞ್ದಾಶಾಂತಮಂ ತಾಗಿ ತೂ**
**ರ್ಯರವಂ ಪೊಣ್ಮೆ ಮಹಾಬಳಂಗತಿಬಳಂ ಕೊಟ್ಟಂ ಸಿತಚ್ಛತ್ರಚಾ**
**ಮರಸಿಂಹಾಸನಚಿಹ್ನಭಾಸುರವಿಯದ್ಗಾಮೀಶ್ವರರೈಶ್ವರ್ಯಮಂ ೮೦**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ = ಆಗಲೇ, ನಿಜ = ತನ್ನ, ಮನ್ತ್ರಿ ಮಂಡಲ = ಮಂತ್ರಿಸಮೂಹ, ಮಹಾಸಾಮಂತ = ಮಹಾ ಮಾಂಡಳಿಕ, ಶುದ್ಧಾಂತ = ಅಂತಃಪುರ, (ಇವರಲ್ಲಿನ) ಮುಖ್ಯರನ್ = ಪ್ರಮುಖರನ್ನು, ಕರೆದು = ಬರಮಾಡಿಕೊಂಡು, ಆ ವೃತ್ತಕಮೆಲ್ಲಮಂ = ವಿಷಯಗಳನ್ನೂ, ತಿಳಿಯೆ ಪೇೞ್ದು = ತಿಳಿಸಿ ಹೇಳಿ, ಆಶಾಂತಮಂ = ದಿಗಂತವನ್ನು, ತಾಗಿ = ತಲುಪುವಂತೆ, ತೂರ್ಯರವಂ = ವಾದ್ಯಗಳ ಶಬ್ದವು, ಪೊಣ್ಮೆ = ಹೊಮ್ಮಲು, ಸಿತಚ್ಛತ್ರ = ಬೆಳ್ಗೊಡೆ, ಚಾಮರ, ಸಿಂಹಾಸನ, ಚಿಹ್ನ = ರಾಜಲಾಂಛನ, (ಹಾಗೂ) ವಿಯತ್ ಗಾಮೀಶ್ವರ = ಖೇಚರರಾಜನ, ಐಶ್ವರ್ಯಮಂ = ಸಂಪತ್ತನ್ನೂ, ಅತಿಬಳಂ = ಅತಿಬಳನು, ಮಹಾಬಳಂಗೆ = ಮಗನಾದ ಮಹಾಬಲನಿಗೆ, ಕೊಟ್ಟಂ = ವಹಿಸಿಕೊಟ್ಟ

**ಗದ್ಯಾನುಸರಣ:** ತಡಮಾಡದೆ ಅತಿಬಲನು ತನ್ನ ಮಂತ್ರಿಮಂಡಲದ ಸದಸ್ಯರನ್ನೂ, ಮಹಾಸಾಮಂತಮುಖ್ಯರನ್ನೂ, ಅಂತಃಪುರದ ಪ್ರಮುಖರನ್ನೂ ಕರೆಯಿಸಿಕೊಂಡು ಎಲ್ಲ ವಿಷಯವನ್ನೂ ಹೇಳಿ, ದಿಗ್ದಿಗಂತಗಳನ್ನು ತಲುಪುವ ಹಾಗೆ ವಾದ್ಯಗಳ ಶಬ್ದವು ಹೊಮ್ಮುತ್ತಿರಲು ಬೆಳ್ಗೊಡೆ ಚಾಮರ ಸಿಂಹಾಸನ ರಾಜಲಾಂಛನ ಮುಂತಾದ ಅಧಿಕಾರಚಿಹ್ನೆಗಳನ್ನೂ ಖೇಚರರಾಜನ ಸಂಪತ್ತೆಲ್ಲವನ್ನೂ ಮಗನಾದ ಮಹಾಬಲನಿಗೆ ವಹಿಸಿಕೊಟ್ಟನು.

**ವ ಅಂತು ಮಹಾಬಳಂಗೆ ಮಹಾವಿಭೂತಿಯಿಂದಮಂಬರಚರಶ್ರೀಯ ನಿತ್ತು ಭವ್ಯಸಾರ್ಥ ಪ್ರಾರ್ಥನೀಯ ಮುಕ್ತಿಶ್ರೀಯನಾಸೆವಟ್ಟು ಸಕಳಮಳ ನಿರ್ಜರಣ ಕರಣ ಕಾರಣಮಂ ತಪಶ್ರೀಯಂ ಕೈಕೊಳಲ್ಬಗೆದು ಸಾಸಿರ್ವರರಸು ಮಕ್ಕಳು ಮಯ್ನೂರ್ವರರಸಿಯರುಂಬೆರಸು ಗುಣಧರ ಕೇವಳಿಗಳ ಪಾದಪದ್ಮ ಮೂಲದೊಳ್**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಆ ರೀತಿಯಿಂದ, ಮಹಾಬಳಂಗೆ, ಮಹಾವಿಭೂತಿಯಿಂದಂ = ಅತ್ಯಂತ ವೈಭವದಿಂದ, ಅಂಬರಚರಶ್ರೀಯನ್ = ಖೇಚರಸಂಪತ್ತನ್ನು, ಇತ್ತು = ನೀಡಿ, ಭವ್ಯಸಾರ್ಥ = ಭವ್ಯಸಮೂಹರು, ಪ್ರಾರ್ಥನೀಯ = ಬಯಸುವ, ಮುಕ್ತಿಶ್ರೀಯನ್ = ಮೋಕ್ಷ ಎಂಬ ಐಶ್ವರ್ಯಕ್ಕೆ, ಆಸೆ ಪಟ್ಟು = ಆಸೆಪಟ್ಟು, ಸಕಳ = ಎಲ್ಲ, ಮಳನಿರ್ಜರಣಕರಣ = ತೊಡೆದುಹಾಕಲು, ಕಾರಣಮಂ = ಕಾರಣವಾದ, ತಪಶ್ರೀಯಂ = ತಪಸ್ಸೆಂಬ ಸಂಪತ್ತನ್ನು, ಕೈಕೊಳಲ್ = ಸ್ವೀಕರಿಸಲು, ಬಗೆದು = ನಿರ್ಧರಿಸಿ, ಸಾಸಿರ್ವರ್ = ಒಂದು ಸಾವಿರ ಮಂದಿ, ಅರಸುಮಕ್ಕಳ್ = ರಾಜಕುಮಾರರೂ, ಐನೂರ್ವರ್ = ಐನೂರು ಮಂದಿ, ಅರಸಿಯರುಂ = ರಾಣಿಯರೂ, ಬೆರಸು = ಜೊತೆಗೂಡಿರಲು, ಗಣಧರ ಕೇವಳಿಗಳ, ಪಾದಪದ್ಮಮೂಲದೊಳ್ = ಅಡಿದಾವರೆಗಳ ಸನ್ನಿಧಿಯಲ್ಲಿ

**ಗದ್ಯಾನುಸರಣ:** ಹೀಗೆ ಮಹಾಬಲನಿಗೆ ಅತ್ಯಂತ ವೈಭವದಿಂದ ಖೇಚರಸಂಪತ್ತನ್ನು ನೀಡಿ, ಭವ್ಯಸಮೂಹವು ಬಯಸುವ ಮುಕ್ತಿಲಕ್ಷ್ಮಿಯನ್ನು ಪಡೆಯಲು ಆಸೆಪಟ್ಟು, ಎಲ್ಲ ಕಲ್ಮಷಗಳನ್ನೂ ತೊಡೆದುಹಾಕಲು ಕಾರಣವಾದ ತಪೋಲಕ್ಷ್ಮಿಯನ್ನು ಹೊಂದಲು ನಿರ್ಧರಿಸಿ, ಒಂದು ಸಾವಿರ ಮಂದಿ ರಾಜಕುವರರೂ ಐನೂರು ಮಂದಿ ರಾಣಿಯರೂ ಅವನೊಡನೆ ಸೇರಿಕೊಳ್ಳಲು, ಗುಣಧರರೆಂಬ ಕೇವಳಿಗಳ ಸಾನ್ನಿಧ್ಯದಲ್ಲಿ

**ಅತಿತೃಷ್ಣಾಪರನಾಗಿ ಮುನ್ನೆ ತೊಡದಿರ್ದಾ ಗಾಂಪೆ ಸಾಲ್ಗುಂ ಮದಾ<br>ಕೃತಿಯಂ ಮಾಸಿಸಿ ಮುಪ್ಪು ಚಪ್ಪರಿಸೆಯುಂ ಚಿಃ ಕೆಮ್ಮಿನೊಳ್ಕುಮ್ಮಿ ಸಂ<br>ಸೃತಿಯೊಳ್ಮತ್ತೆ ಗಡಂ ಕಡಂಗಿ ತೊಡರ್ದಾಂ ಮಾಣ್ದಪೆರ್ನೆಂದಣ್ಮಿ ಘೋ<br>ರತಪೋವೃತ್ತಿಯನಾಂತ ಪೆಂಪತಿಬಳಂಗಕ್ಕುಂ ಪೆರ್ಗಕ್ಕಮೇ ೮೧**

**ಪದವಿಭಾಗ–ಅನ್ವಯ–ಅರ್ಥ:** ಮುನ್ನೆ = ಈ ಮುಂಚೆ (ಇಲ್ಲಿಯವರೆಗೂ), ಅತಿತೃಷ್ಣಾಪರನಾಗಿ = ಹೆಚ್ಚಿನ ಆಸೆಗಳಿಂದ ಕೂಡಿ, ತೊಡದಿರ್ದ = ತೊಡಗಿಕೊಂಡಿದ್ದ, ಗಾಂಪೆ = ದಡ್ಡತನವೆ, ಸಾಲ್ಗುಂ = ಸಾಕು; ಮತ್ ಆಕೃತಿಯಂ = ನನ್ನ ಆಕಾರವನ್ನು, ಮಾಸಿಸಿ = ಮರೆಮಾಡಿ, ಮುಪ್ಪು = ಮುದಿತನವು, ಚಪ್ಪರಿಸೆಯುಂ = ನೆಕ್ಕುತ್ತಿದ್ದರೂ, ಚಿಃ = ಛೀ, ಕೆಮ್ಮಿನೊಳ್ ಕುಮ್ಮಿ = ಕೆಮ್ಮಿನಿಂದ ಕುಕ್ಕರಿಸುತ್ತ, ಮತ್ತೆ = ಆನಂತರವೂ, ಸಂಸೃತಿಯೊಳ್ = ಸಂಸಾರದಲ್ಲಿ, ಕಡಂಗಿ

= ಉತ್ಸಾಹದಿಂದ, ತೊಡರ್ದುದಂ = ತೊಡಗಿದ್ದು, ಆಂ = ನಾನು, ಗಡಂ ಮಾಣ್ದಿರ್ಪೆಂ = ಬಿಟ್ಟುಬಿಡುತ್ತೇನೆ, ಎಂದು = ಎಂಬ ನಿರ್ಧಾರದಿಂದ, ಅಣ್ಮಿ = ಪ್ರೀತಿಯಿಂದ, ಘೋರತಪೋವೃತ್ತಿಯನ್ = ಕಠಿಣವಾದ ತಪಸ್ಸನ್ನು, ಆಂತ = ಹೊಂದಿದ, ಪೆಂಪು = ಹಿರಿಮೆಯು, ಅತಿಬಳಂಗೆ ಅಕ್ಕುಂ = ಅತಿಗಳನಿಗೆ ಮಾತ್ರ ಸಾಧ್ಯ; ಪೆಜರ್ಗೆ = ಇತರರಿಗೆ, ಅದು, ಅಕ್ಕುಮೇ = ಸಾಧ್ಯವೇ?

**ಗದ್ಯಾನುಸರಣ:** 'ಇಲ್ಲಿಯವರೆಗೂ ಆಸೆಗಳಿಂದ ಕೂಡಿ ಬದುಕಿದ ದಡ್ಡತನ ಸಾಕು; ಮುಪ್ಪು ನನ್ನ ದೇಹಾಕಾರವನ್ನೆಲ್ಲ ನೆಕ್ಕುತ್ತಿದ್ದರೂ, ಕೆಮ್ಮಿನ ರಭಸದಿಂದ ಕುಕ್ಕರಿಸುತ್ತಿದ್ದರೂ ಪುನಃ ಈ ಸಂಸಾರದಲ್ಲಿ ತೊಡಗಿಕೊಂಡಿದ್ದ ಉತ್ಸಾಹ ಇನ್ನು ಸಾಕು; ಇದನ್ನು ನಾನು ತೊರೆಯುತ್ತೇನೆ ಎಂದು ನಿರ್ಧರಿಸಿ, ಸ್ವಯಂ ಇಚ್ಛೆಯಿಂದ ಕಠಿಣ ತಪಸ್ಸನ್ನು ಆಚರಿಸಲು ಹೊರಟ ಹಿರಿಮೆ ಅತಿಬಳನಿಗಲ್ಲದೆ ಇತರರಿಗೆ ಸಾಧ್ಯವೇ?

**ವಿಶೇಷ ವಿಚಾರ:** ಮುಪ್ಪು ದೇಹದ ಮೇಲೆ ಮಾಡುವ ಪರಿಣಾಮವನ್ನು 'ಚಪ್ಪರಿಸು' ಎಂಬ ಮಾತಿನಿಂದ ಸೂಚಿಸುತ್ತಿರುವುದು ಎಷ್ಟು ಸೂಕ್ಷ್ಮವೂ ಸೂಕ್ತವೂ ಆಗಿದೆ! ಇದನ್ನು ಪರಿಭಾವಿಸಿ ಅನುಭವಕ್ಕೆ ತಂದುಕೊಳ್ಳಬೇಕು!

**ವ॥ ಮತ್ತಿತ್ತ ಮಹಾಬಲಖಚರಪತಿಯುಮಾತ್ಮೀಯ ಗುರುನಿರೂಪಿತ ಗಗನಚರರಾಜ್ಯಭಾರಮನಾಶೈಶವ ಪ್ರಭೃತಿಪ್ರರೂಢ ನಿರ್ಭರಪ್ರೇಮ ರಸರುಮನೇಕಾರ್ಥಶಾಸ್ತ್ರ ಪ್ರಯೋಗಕುಶಲರುಂ ಸಕಳಕಳಾವಗಾಹ ಸಮಾಹಿತ ಮತಿಗಳುಮಾಗಿ ನಾಲ್ಕುಮುಪಧೆಗಳೊಳಂ ಶುದ್ಧರಾಗಿ ನಾಲ್ಕುಮುಪಾಯಂಗಳಿ ರ್ಪಂತಿರ್ದ ಜಗತ್ಪ್ರಸಿದ್ಧ ಸ್ವಯಂಬುದ್ಧ ಮಹಾಮತಿ ಸಂಭಿನ್ನಮತಿ ಶತಮತಿ ಗಳೆಂಬ ನಾಲ್ವರುಮಮಾತ್ಯರ ಮೆಯ್ಯೊಳ್ನಿಱಿಸಿ ನಿರಾಕುಳಸಾಂತ್ವನಸಂಪನ್ನಗತ ರಾಜ್ಯಚಿಂತನಮರಸೌಂದರೀವಿಳಾಸೋಪಹಾಸ ಗಗನಚರಸೌಂದರೀ ಮನೋನಯನ ಸೌಂದರನಾಗಿ ವಿದ್ಯಾಧರಶ್ರೀಯನನುಭವಿಸಿ**

**ಪದವಿಭಾಗ–ಅನ್ವಯ–ಅರ್ಥ:** ಮತ್ತೆ ಇತ್ತ = ಆನಂತರ ಈ ಕಡೆ, ಮಹಾಬಳ, ಖಚರಪತಿಯುಂ = ಖೇಚರರಾಜನು, ಆತ್ಮೀಯ = ತನ್ನ, ಗುರುನಿರೂಪಿತ = ಗುರುಗಳು ಹೇಳಿದ, ಗಗನಚರ = ಖೇಚರ, ರಾಜ್ಯಭಾರಮನ್ = ರಾಜ್ಯದ ಹೊಣೆಯನ್ನು, ಆಶೈಶವ = ಮಗುವಾಗಿದ್ದಾಗಿನಿಂದಲೂ, ಪ್ರರೂಢ = ಚೆನ್ನಾಗಿ ಬೆಳೆದ, ನಿರ್ಭರ = ಅಧಿಕವಾದ, ಪ್ರೇಮರಸರುಂ = ಪ್ರೀತಿಪಾತ್ರರೂ, (ಆದ) ಪ್ರಭೃತಿ = ವ್ಯಕ್ತಿಗಳೂ, ಅನೇಕ = ನಾನಾ, ಶಾಸ್ತ್ರಪ್ರಯೋಗ = ಶಾಸ್ತ್ರಗಳನ್ನು ಅಳವಡಿಸುವುದರಲ್ಲಿ, ಕುಶಲರುಂ = ಕೌಶಲವುಳ್ಳವರೂ, ಸಕಳ ಕಳಾ = ಎಲ್ಲ ಕಲೆಗಳಲ್ಲಿ, ಅವಗಾಹರುಂ = ಮುಳುಗಿದವರೂ, ಸಮಾಹಿತಮತಿಗಳಾಗಿ =

ಸಮಾಧಾನಚಿತ್ತರಾಗಿ, ನಾಲ್ಕುಂ ಉಪಧೆಗಳೊಳಂ = ರಾಜಭಕ್ತಿ, ಸ್ವಾರ್ಥರಹಿತತೆ, ಇಂದ್ರಿಯನಿಗ್ರಹ ಮತ್ತು ಧೈರ್ಯಗಳೆಂಬ ನಾಲ್ಕು ಪರೀಕ್ಷೆಗಳಲ್ಲಿ, ಶುದ್ಧರಾಗಿ = ಶುದ್ಧರೆಂದು ಉತ್ತೀರ್ಣರಾದವರಾದ, ನಾಲ್ಕುಂ ಉಪಾಯಂಗಳಂತೆ = ಸಾಮ, ದಾನ, ಭೇದ ಮತ್ತು ದಂಡಗಳೆಂಬ ನಾಲ್ಕು ಉಪಾಯಗಳ ಹಾಗೆ, ಇರ್ದ = ಇದ್ದ, ಸ್ವಯಂಬುದ್ಧ ಮಹಾಮತಿ ಸಂಭಿನ್ನಮತಿ ಮತ್ತು ಶತಮತಿಗಳೆಂಬ, ನಾಲ್ವರುಂ ಅಮಾತ್ಯರ = ನಾಲ್ಕು ಮಂದಿ ಮಂತ್ರಿಗಳ, ಮೆಯ್ಯೊಳ್ = ಮೇಲೆ, ನಿಱಿಸಿ = ಹೊರಿಸಿ, ನಿರಾಕುಳಸ್ವಾಂತನ್ = ಚಿಂತೆಯಿಲ್ಲದ ಮನಸ್ಸುಳ್ಳವನೂ, ಅಪಗತ ರಾಜ್ಯಚಿಂತನ್ = ರಾಜ್ಯದ ಚಿಂತೆಯನ್ನು ಬಿಟ್ಟವನೂ, (ಆಗಿ) ಅಮರಸೌಂದರೀ = ವಿದ್ಯಾಧರಸ್ತ್ರೀಯ್ಯರ, ವಿಳಾಸ ಉಪವಾಸಿ = ಹಾವಭಾವಗಳಿಗಾಗಿ ಹಸಿದವನೂ, ಗಗನಚರ = ಖೇಚರ, ಸೌಂದರೀಮನೋನಯನ = ಸುಂದರಿಯರನ್ನು ಮನಸ್ಸೆಂಬ ಕಣ್ಣುಗಳಿಂದ, ವಿದ್ಯಾಧರಶ್ರೀಯನ್ = ವಿದ್ಯಾಧರಸಂಪತ್ತನ್ನು, ಅನುಭವಿಸಿ = ಅನುಭವಿಸುತ್ತ

**ಗದ್ಯಾನುಸರಣ:** ಈ ಕಡೆ ಮಹಾಬಲನು ಹಿರಿಯರು ಹೇಳಿದಂತೆ ವಿದ್ಯಾಧರರಾಜ್ಯದ ಹೊಣೆಯನ್ನು ತನ್ನ ಬಾಲ್ಯಕಾಲದಿಂದಲೂ ಪ್ರೀತಿಪಾತ್ರರೂ, ನಾನಾ ಶಾಸ್ತ್ರಗಳಲ್ಲಿ ಪರಿಣತಿ ಹೊಂದಿದವರೂ, ಎಲ್ಲ ಕಲೆಗಳನ್ನು ಬಲ್ಲವರೂ, ರಾಜಭಕ್ತಿ, ಸ್ವಾರ್ಥರಹಿತತೆ, ಇಂದ್ರಿಯನಿಗ್ರಹ ಮತ್ತು ಧೈರ್ಯಗಳೆಂಬ ನಾಲ್ಕು ಪರೀಕ್ಷೆಗಳಲ್ಲಿ ಗೆದ್ದವರೂ, ಸಾಮ, ದಾನ, ಭೇದ ಮತ್ತು ದಂಡಗಳೆಂಬ ನಾಲ್ಕು ಉಪಾಯಗಳ ಹಾಗಿದ್ದ, ಸ್ವಯಂಬುದ್ಧ ಮಹಾಮತಿ ಸಂಭಿನ್ನಮತಿ ಮತ್ತು ಶತಮತಿಗಳೆಂಬ ನಾಲ್ಕು ಮಂದಿ ಮಂತ್ರಿಗಳಿಗೆ ವಹಿಸಿ ತಾನು ರಾಜ್ಯದ ಚಿಂತೆಯನ್ನು ಬಿಟ್ಟು, ವಿದ್ಯಾಧರಸ್ತ್ರೀಯರ ಹಾವಭಾವವಿಲಾಸಗಳಿಗೆ ಸೋತು ಸಂಪತ್ತನ್ನು ಅನುಭವಿಸುತ್ತಿದ್ದನು.

**ಪೊಸತಂ ಸ್ತ್ರೀರಾಜ್ಯಮಂ ಮೇಣ್ಪಡೆದನೊ ಬಿದಿ ಲಾವಣ್ಯಸಿಂಧುಪ್ರವಾಹಂ**
**ಪೊಸತೀಗಳ್ಬಂದು ಬೆಳ್ಳಂಗೆಡೆದುದೊ ಗಣಿಕಾಸೃಷ್ಟಿಯಂ ಪುಷ್ಪಚಾಪಂ**
**ಪೊಸತಂ ಮಾಡಿಟ್ಟನೋ ನಿಪ್ಪೊಸತು ದಲಿದಱೊಂದಂದಮೆಂಬಂತದೇಂರಂ**
**ಜಿಸಿತೋ ವಿದ್ಯಾಧರಾಧೀಶ್ವರನ ಕೆಲದ ವಿದ್ಯಾಧರಸ್ತ್ರೀಸಮೂಹಂ ೮೨**

**ಪದವಿಭಾಗ-ಅನ್ವಯ-ಅರ್ಥ:** ಬಿದಿ = ಸೃಷ್ಟಿಕರ್ತನು, ಪೊಸತಂ = ಹೊಸದಾಗಿ, ಸ್ತ್ರೀರಾಜ್ಯಮಂ = ಹೆಂಗಳೆಯರ ರಾಜ್ಯವನ್ನು, ಮೇಣ್ ಪಡೆದನೋ =ಸೃಷ್ಟಿಸಿದನೋ: ಲಾವಣ್ಯಸಿಂದು ಪ್ರವಾಹಂ = ಚೆಲುವೆಂಬ ನದಿಯ ಪ್ರವಾಹವು, ಪೊಸತು = ಹೊಸತಾಗಿ, ಈಗಳ್ ಬಂದು = ಈಗ ತಾನೆ, ಬೆಳ್ಳಂ ಕೆಡೆದುದೋ = ಜಲಪಾತವಾಗಿ ಕೆಳಗೆ ಬಂದಿತೋ; ಪುಷ್ಪಚಾಂ = ಮನ್ಮಥನು, ಪೊಸತಂ =

ಹೊಸದಾಗಿ, ಗಣಿಕಾ = ವಿಳಾಸಿಯರ, ಸೃಷ್ಟಿಯಂ ಮಾಡಿಟ್ಟನೋ = ಸೃಷ್ಟಿಸಿ ಇರಿಸಿರುವನೋ: ಇದಱ ಅಂದಂ ಇದರ ರೀತಿಯು, ನಿಪ್ಪೊಸತು = ಹೊಚ್ಚ ಹೊಸದಾದುದು, ಎಂಬಂತೆ = ಎನ್ನುವ ಹಾಗೆ, ವಿದ್ಯಾಧರಾಧೀಶ್ವರನ = ಮಹಾಬಲನ, ಕೆಲದ = ಅಕ್ಕಪಕ್ಕದ, ವಿದ್ಯಾಧರಸ್ತ್ರೀಸಮೂಹಂ = ವಿದ್ಯಾಧರ ಹೆಣ್ಣುಗಳ ಗುಂಪು, ಅದೇಂ ರಂಜಿಸಿತೋ = ಅದೇನು ರಂಜಿಸಿತೋ

**ಗದ್ಯಾನುಸರಣ:** ಬ್ರಹ್ಮನು ಹೊಸ ಸ್ತ್ರೀಸಾಮ್ರಾಜ್ಯವನ್ನೇನಾದರೂ ಸೃಷ್ಟಿಸಿದ್ದಾನೆಯೋ, ಅಥವಾ ಸೊಬಗಿನ ನದಿಯು ಈಗ ತಾನೆ ಹರಿದು ಬಂದಿದೆಯೋ, ಅಥವಾ ಮನ್ಮಥನೇನಾದರೂ ಹೊಸ ವಿಳಾಸಿನಿಯರನ್ನು ರೂಪಿಸಿ ಇರಿಸಿದನೋ, ಅಂತೂ ಇದರ ಪರಿ ಹೊಸತು ಎಂಬಂತೆ ಮಹಾಬಲನ ಸುತ್ತ ವಿದ್ಯಾಧರಸ್ತ್ರೀಯರು ತುಂಬಿರುತ್ತಿದ್ದರು.

**ವನರಾಜಿಕ್ರೀಡೆಯಂ ಯೌವನವನದೊಳ್ ತೋಱಲ್ಜಲಕ್ರೀಡೆಯಂ ನೂ**
**ತನಲಾವಣ್ಯಾಚ್ಛತೋಯಾಶಯದೊಳ್ ಮೆಱೆಯಲ್ ನರ್ತನಕ್ರೀಡೆಯಂನ**
**ಚ್ಚಿನ ನಾನಾಭಾವರತ್ಯುತ್ಸವದೊಳ್ ಪಡೆಯಲ್ ಬಲ್ಲ ವಿದ್ಯಾಧರಸ್ತ್ರೀ**
**ಜನದಿಂದಂ ಕಣ್ಗೆವಂದಂ ಸುಕವಿಮನೋಮನಸೋತ್ತಂಸಹಂಸಂ ೮೩**

**ಪದವಿಭಾಗ–ಅನ್ವಯ–ಅರ್ಥ:** ವನರಾಜಿಕ್ರೀಡೆಯಂ = ವನಕ್ರೀಡೆಯನ್ನು, ಯೌವನ ವನದೊಳ್ = ಯೌವನವೆಂಬ ವನದಲ್ಲಿಯೇ, ತೋಱಲ್ = ತೋರಿಸಲು; ಜಲಕ್ರೀಡೆಯಂ = ನೀರಾಟವನ್ನು, ನೂತನ = ಹೊಸತಾದ, ಲಾವಣ್ಯ = ಚೆಲುವಿನ, ಅಚ್ಛ ತೋಯ + ಆಶಯದೊಳ್ = ತಿಳಿನೀರ ಸರೋವರದಲ್ಲಿಯೇ, ಮೆಱೆಯಲ್ = ಆಡಲು; ನರ್ತನಕ್ರೀಡೆಯಂ = ನೃತ್ಯದ ಆಟವನ್ನು, ನಚ್ಚಿನ = ಇಷ್ಟವಾದ, ನಾನಾ ಭಾವ ರತಿ + ಉತ್ಸವದೊಳ್ = ವಿವಿಧ ರತಿಕೂಟಗಳಲ್ಲಿ, ಪಡೆಯಲ್ = ಅನುಭವಿಸಲು, ಬಲ್ಲ = ತಿಳಿದಿದ್ದ, ವಿದ್ಯಾಧರಸ್ತ್ರೀಜನದಿಂದಂ = ವಿದ್ಯಾಧರಸ್ತ್ರೀಯರ ಗುಂಪಿನಲ್ಲಿ, ಸುಕವಿಮನೋಮಾನಸೋತ್ತಂಸಹಂಸನಾದ, ಮಹಾಬಲನು, ಕಣ್ಗೆವಂದಂ = ಕಂಗೊಳಿಸಿದ.

**ವಿಶೇಷ ವಿಚಾರ:** ಸುಕವಿಮನೋಮಾನಸೋತ್ತಂಸಹಂಸ ಎಂಬ ಮಾತನ್ನು ಪಂಪ (ತನ್ನನ್ನೂ) ತನ್ನ ನಾಯಕರನ್ನು ವರ್ಣಿಸಲು ಬಳಸುತ್ತಾನೆ. ಶ್ರೇಷ್ಠಕವಿಗಳ ಮನಸ್ಸೆಂಬ ಸರೋವರದಲ್ಲಿ ತೇಲಾಡುವ ಹಂಸ ಎಂಬುದು ಇದರ ಅರ್ಥ. 'ಕಣ್ಗೆವಂದಂ' ಎಂಬುದು 'ಕಣ್ಗೆವರ್' – ಅಂದರೆ ಕಣ್ಣಿಗೆ ಬರುವುದು ಎಂದರೆ ಶೋಭಿಸುವುದು ಎಂಬರ್ಥದ – ಧಾತುವಿನಿಂದ ರೂಪಿತವಾದುದು.

ಲಳಿತಾಳಂಕರಣಪ್ರಸನ್ನರಸವದ್ಗೇಯಂಗಳೊಳ್ ಮೂಡುತುಂ
ಮುೞುಗುತ್ತುಂ ಖಚರೀಜನಾನನನವಾಂಭೋಜಂಗಳೊಳ್ ಕಂಪನೀ
ಟಿಕೊಳುತುಂ ನಂದನರಾಜಿಯೊಳ್ನಲಿಯುತುಂ ತದ್ರಾಜಹಂಸಂ ನಿರಾ
ಲುಳಮೀ ಮಾೞ್ಕೆಗಳಿಂದೆ ಪೊೞ್ತುಗಳೆವಂ ಸಂಸಾರಸಾರೋದಯಂ ೮೪

**ಪದವಿಭಾಗ–ಅನ್ವಯ–ಅರ್ಥ:** ಲಲಿತ = ಸೊಬಗಿನ, ಅಲಂಕರಣ = ಅಲಂಕಾರಗಳಲ್ಲಿಯೂ, ರಸವತ್ = ರಶಭರಿತ, ಗೇಯಂಗಳೊಳ್ = ಸಂಗೀತದಲ್ಲಿಯೂ, ಮೂಡುತುಂ ಮುೞುಗುತ್ತುಂ = ಎದ್ದು ಮುಳುಗುತ್ತಲೂ, ಖಚರೀಜನ = ವಿದ್ಯಾಧರಸ್ತ್ರೀಯರ, ಆನನ = ಮುಖಗಳೆಂಬ, ನವ ಅಂಭೋಜಂಗಳೊಳ್ = ಹೊಸ ಕಮಲಗಳಲ್ಲಿ, ಕಂಪನ್ = ಪರಿಮಳವನ್ನು, ಈಟಿಕೊಳುತುಂ = ಆಸ್ವಾದಿಸುತ್ತಲೂ, ನಂದನರಾಜಿಯೊಳ್ = ಉದ್ಯಾನವನಗಳಲ್ಲಿ 'ಸಂಸಾರಸಾರೋದಯ'ನೆನಿಸಿದ, ತತ್ = ಆ, ರಾಜಹಂಸಂ = ರಾಜನೆಂಬ ಹಂಸನು (ಅಥವಾ ರಾಜರುಗಳಲ್ಲಿ ಹಂಸದಂತೆ ಶ್ರೇಷ್ಠನಾದವನು) ನಿರ್ + ಆಕುಳಂ = ಚಿಂತೆಯಿಲ್ಲದೆ, ಈ ಮಾೞ್ಕೆಯಿಂದೆ = ಈ ಬಗೆಗಳಲ್ಲಿ, ಪೊೞ್ತು ಕಳೆವಂ = ಹೊತ್ತನ್ನು ಕಳೆಯುತ್ತಿದ್ದನು.

**ಗದ್ಯಾನುಸರಣ:** ಚಂದದ ಅಳಮಕಾರಗಳಲ್ಲಿಯೂ ಮಧುರ ಸಂಗೀತದಲ್ಲಿಯೂ ಮೂಡಿ ಮುಳುಗುತ್ತ; ಖೇಚರಸ್ತ್ರೀಯರ ಮುಖಕಮಲಗಳ ಬಂಡುಣ್ಣುತ್ತ, ವನವಿಹಾರಗಳಲ್ಲಿ ಸಂತೋಷಪಡುತ್ತ ಮಹಾಬಲನು ಕಾಲ ಕಳೆಯುತ್ತಿದ್ದ.

**ವಿಶೇಷ ವಿಚಾರ:** 'ಸಂಸಾರಸಾರೋದಯ' ಎಂಬ ಮಾತನ್ನೂ ಪಂಪ ಅನೇಕ ವೇಳೆ ಬಳಸುತ್ತಾನೆ. ಈ ಆಶ್ವಾಸದ ೨೭ ನೆಯ ಪದ್ಯದಲ್ಲಿ ತನ್ನನ್ನೇ ಈ ವಿಶೇಷಣದಿಂದ ಕರೆದುಕೊಂಡಿದ್ದಾನೆ. ಈ ವಿಶೇಷಣವನ್ನು ತನ್ನ ಕಾವ್ಯದ ಇತರ ನಾಯಕಪಾತ್ರಗಳಿಗೂ ಪಂಪ ಅನ್ವಯಿಸುತ್ತಾನೆ. ಬದುಕಿನ ಸಾರವನ್ನು ಕಡೆದು ತೆಗೆಯುವವನು" ಎಂಬರ್ಥ ಇದಕ್ಕಿರಬಹುದು, ಇಲ್ಲಿ, ಮಹಾಬಲನ ಮಟ್ಟಿಗೆ ಅವನು ಸಂಸಾರದ ಸಾರವಾದ ಲೈಂಗಿಕತೆಯಲ್ಲಿ ತೊಡಗಿದವನು ಎಂಬರ್ಥವನ್ನು ನೀಡಬಹುದು.

**ಇದು ದೇವೇಂದ್ರಮುನೀಂದ್ರವಂದ್ಯಪರಮಜಿನೇಂದ್ರಮುಖಚಂದ್ರ ವಾಕ್ಚಂದ್ರಿಕಾಪ್ರಸರ ಪ್ರಸಾದೋದೀರ್ಣಸೂಕ್ತಿಕಲ್ಲೋಲವಮಾಲಾಕೀರ್ಣ ಕವಿತಾ ಗುಣಾರ್ಣವ ಪ್ರಣೀತಮಪ್ಪಾದಿಪುರಾಣದೊಳ್ ಮಹಾಬಳಕುಮಾರೋ ದಯವರ್ಣನಂ ಪ್ರಥಮಾಶ್ವಾಸಂ**

**ಪದವಿಭಾಗ–ಅನ್ವಯ–ಅರ್ಥ:** ಇದು = ಈ ಆಶ್ವಾಸವು, ದೇವೇಂದ್ರಮುನೀಂದ್ರ ವಂದ್ಯ = ಇಂದ್ರರಿಂದಲೂ ಮುನಿಶ್ರೇಷ್ಠರಿದಲೂ ವಂದಿತನಾದ, ಪರಮಜಿನೇಂದ್ರ = ಆದಿ ತೀರ್ಥಂಕರನ, ಮುಖಚಂದ್ರ = ಮುಖಚಂದ್ರದ, ವಾಕ್ ಚಂದ್ರಿಕಾ = ಮಾತುಗಳೆಂಬ ಬೆಳುದಿಂಗಳ, ಪ್ರಸರ = ಧಾರೆಯ, ಪ್ರಸಾದ = ಕೃಪೆಯಿಂದ, ಉದೀರ್ಣ = ಹೆಚ್ಚಳವಾದ, ಸೂಕ್ತಿಕಲ್ಲೋಲಮಾಲಾ = ಸುಂದರ ಮಾತುಗಳೆಂಬ ಅಲೆಗಳಿಂದ, ಆಕೀರ್ಣ = ತುಂಬಿದ, ಕವಿತಾ ಗುಣಾರ್ಣವ = ಕಾವ್ಯಸಾಗರನೆನಿಸಿದ ಪಂಪನಿಂದ, ಪ್ರಣೀತಂ ಅಪ್ಪ = ರಚಿತವಾದ, ಆದಿಪುರಾಣದೊಳ್ = ಆದಿಪುರಾಣವೆಂಬ ಹೆಸರಿನ ಕಾವ್ಯದಲ್ಲಿ, ಮಹಾಬಳ ಕುಮಾರೋದಯ = ಮಹಾಬಲನ ಹುಟ್ಟು ಬೆಳವಣಿಗೆಯ, ವರ್ಣನಂ = ವರ್ಣನೆಯಿಂದ ಕೂಡಿದ, ಪ್ರಥಮ = ಮೊದಲನೆಯ, ಆಶ್ವಾಸಂ = ಆಶ್ವಾಸ

**ಗದ್ಯಾನುಸರಣ:** ದೇವೇಂದ್ರಮುನಿಂದ್ರರಿಂದ ವಂದಿತನಾದ ಆದಿಜಿನನ ಮುಖಚಂದ್ರವು ಸೂಸುವ ಉಪದೇಶದ ಮಾತುಗಳೆಂಬ ಬೆಳುದಿಂಗಳ ಧಾರೆಯಿಂದ ಉಬ್ಬುವ ಅಲೆಗಳಿಂದ ತುಂಬಿದ ಕವಿತಾಸಾಗರನಾದ ಪಂಪನಿಂದ ರಚಿತವಾದ ಆದಿಪುರಾಣ ಕಾವ್ಯದಲ್ಲಿ ಮಹಾಬಲನ ಹುಟ್ಟು ಬೆಳವಣಿಗೆಯನ್ನು ವರ್ಣಿಸುವ ಮೊದಲನೆಯ ಆಶ್ವಾಸವಿದು.

**ಇಲ್ಲಿಗೆ ಮಹಾಬಳಕುಮಾರೋದಯಂ ಎಂಬ ಮೊದಲನೆಯ ಆಶ್ವಾಸ ಮುಗಿಯಿತು**

# ಎರಡನೆಯ ಆಶ್ವಾಸ

**ಶ್ರೀವಿಜಯಾರ್ಧಾಚಳಖಚ**
**ರಾವಳಿಮಣಿಮಕುಟಮಕರಿಕಾನಿಕಷಣಲೇ**
**ಖಾವಿಳಸಿತಪದಕಮಳನಿ**
**ಳಾವಂದ್ಯಯಶಂ ಸರಸ್ವತೀಮಣಿಹಾರಂ** ೧

**ಪದವಿಭಾಗ-ಅನ್ವಯ-ಅರ್ಥ:** ಶ್ರೀವಿಜಯಾರ್ಧ, ಅಚಳ = ಪರ್ವತದಲ್ಲಿರುವ, ಖಚರ ಆವಳಿ = ಖೇಚರರ ಸಮೂಹದ, ಮಣಿಮಕುಟ = ರತ್ನಖಚಿತ ಕಿರೀಟಗಳ, ಮಕರಿಕಾ = ಅಲಂಕರಣ ಚಿತ್ರಗಳ, ನಿಕಷಣ = ಉಜ್ಜುವಿಕೆಯಿಂದ, ಲೇಖಾವಿಳಸಿತ = (ಮೂಡಿದ) ರೇಖೆಗಳಿಂದ ಶೋಭಿಸುವ, ಪದಕಮಳನ್ = ಅಡಿದಾವರೆಗಳುಳ್ಳವನೂ, ಇಳಾವಂದ್ಯ = ಜಗತ್ತೇ ಗೌರವಿಸುವಂತಹ, ಯಶಂ = ಕೀರ್ತಿಯುಳ್ಳವನೂ, ಸರಸ್ವತೀಮಣಿಹಾರಂ = ಸರಸ್ವತಿಯ ಮಣಿಹಾರದಂತಿದ್ದ ಮಹಾಬಲನು (ಇದ್ದನು).

**ಗದ್ಯಾನುಸರಣ:** ವಿಜಯಾರ್ಧಪರ್ವತದ ಖೇಚರರ ರತ್ನಖಚಿತವಾದ ಕಿರೀಟಗಳ ಅಲಂಕರಣ ಚಿತ್ರಗಳ ಉಜ್ಜಾಟದಿಂದ ಮಹಾಬಲನ ಪಾದಕಮಲಗಳಲ್ಲಿ ರೇಖೆಗಳು ಮೂಡಿದ್ದುವು (ಎಂದರೆ, ಎಲ್ಲರೂ ಅವನಿಗೆ ನಮಸ್ಕರಿಸುತ್ತಿದ್ದರು); ಹಾಗೂ ಕೀರ್ತಿವಂತನಾದ ಅವನನ್ನು ಜಗತ್ತೇ ಗೌರವಿಸುತ್ತಿತ್ತು.

**ಕಟಕಕಟಿಸೂತ್ರಕುಂಡಲ**
**ಹಟತ್ಕಿರೀಟಾಂಗದಾದಿಮಣಿಭೂಷಣಭಾ**
**ಜಟಳಿತಮೂರ್ತ್ಯುತ್ಕರ್ಷಂ**
**ಸ್ಫುಟಹರ್ಷಂ ತನ್ನ ವರ್ಷವರ್ಧನದಿನದೊಳ್** ೨

**ಪದವಿಭಾಗ-ಅನ್ವಯ-ಅರ್ಥ:** ಕಟಕ = ಕಡಗಗಳು, ಕಟಿಸೂತ್ರ = ಉಡಿದಾರ, ಕುಂಡಲ = ಕಿವಿಗಳ ಆಭರಣಗಳು, ಹಟತ್ ಕಿರೀಟ = ಕಾಂತಿಯುಕ್ತ ಕಿರೀಟ, ಅಂದ ಆದಿ = ಭುಜಕೀರ್ತಿ ಮೊದಲಾದ, ಮಣಿಭೂಷಣ = ರತ್ನಖಚಿತ ಆಭರಣಗಳ, ಭಾಜಳಿತ = ಹೊಳಪಿನಿಂದ, ಮೂರ್ತಿ + ಉತ್ಕರ್ಷಂ = ಹೆಚ್ಚುಗಾರಿಕೆಯನ್ನು ಹೊಂದಿದ, ದೇಹಂ = ಶರೀರವುಳ್ಳವನೂ, ಸ್ಫುಟಹರ್ಷಂ =

ಸಂತಸವನ್ನು ಹೊಂದಿದವನೂ (ಆದ), ಮಹಾಬಲನು, ತನ್ನ ವರ್ಷವರ್ಧನ ದಿನದೊಳ್ = ಹುಟ್ಟಿದ ಹಬ್ಬದಂದು

**ವಿಶೇಷ ವಿಚಾರ:** ವರ್ಷವರ್ಧನ ಎಂದರೆ ಅಕ್ಷರಶಃ ಅರ್ಥ ವರ್ಷ ಹೆಚ್ಚುವುದು ಎಂದು; ಎಂದರೆ ವಯಸ್ಸು ಒಂದು ವರ್ಷದಷ್ಟು ಆ ದಿನ ಹೆಚ್ಚುತ್ತದೆ.

**ವ॥ ಆಸ್ಥಾನಮಂಡಪದೊಳ್ ಅತಿಪ್ರಚಂಡಮಂಡಳಿಕ ಮಹಾಸಾಮಂತ ಮಂತ್ರಿಪ್ರಧಾನ ಪುರೋಹಿತಾಂತರ್ವಂಶಿಕಾ ಪರಿವಾರಪರಿವೃತಂ ಉತ್ತುಂಗ ಸಿಂಹಾಸನಾಸೀನಂ ಅಧಃಸ್ಥಿತಮಣಿ ಮಯಪೀಠವೇದಿಕಾವಿನ್ಯಸ್ತವಾಮಪಾದಂ ಅಂಬರಾಚರಾಂಗನಾ ಕರತಳಪಲ್ಲವೋಲ್ಲಸಿತ ಹೇಮಚಾಮರ ಪವನ ವಿಲೋಲ ದುಕೂಲವಸನಪರಿವೃತಂ ಪಂಚರತ್ನಪ್ರಭಾಭಾಸುರವಿವಿಧ ವಿಭೂಷಣವಿರಚಿತ ಸುರಶರಾಸನಂ ಒಡ್ಡೋಗಲಂಗೊಟ್ಟಿರೆ**

**ಪದವಿಭಾಗ–ಅನ್ವಯ–ಅರ್ಥ:** ಆಸ್ಥಾನಮಂಡಪದೊಳ್ = ಆಸ್ಥಾನದಲ್ಲಿ, ಅತಿಪ್ರಚಂಡ = ಮಹಾ ಸಮರ್ಥರಾದ, ಮಂಡಳಿಕ ಮಹಾಸಾಮಂತ ಮಂತ್ರಿ ಪ್ರಧಾನ ಪುರೋಹಿತರೂ ಅಂತರ್ವಂಶಿಕಾ = ಅಂತಃಪುರದ ಅಧಿಕಾರಿಗಳ, ಪರಿವಾರ ಪರಿವೃತಂ = ಪರಿವಾರದಿಂದ ಸುತ್ತುವರಿಯಲ್ಪಟ್ಟವನಾಗಿ; ಉತ್ತುಂಗ = ಎತ್ತರವಾದ, ಸಿಂಹಾಸನ + ಆಸೀನಂ = ಸಿಂಹಾಸದಲ್ಲಿ ಕುಳಿತವನೂ: ಅಧಃ ಸ್ಥಿತ = ಕೆಳಗೆ ಇರಿಸಿದ, ಮಣಿಮಯ ಪೀಠವೇದಿಕಾ = ರತ್ನಖಚಿತವಾದ ಕಾಲಿಟ್ಟುಕೊಳ್ಳುವ ಪೀಠದ ಮೇಲೆ, ವಿನ್ಯಸ್ತವಾಮಪಾದಂ = ಎಡಗಾಲನ್ನು ಇಟ್ಟುಕೊಂಡವನೂ; ಅಂಬರಚರ ಅಂಗನಾ = ಖೇಚರ ಸ್ತ್ರೀಯರ, ಕರತಳಪಲ್ಲವ = ಕೈಬೆರಳುಗಳು, ಉಲ್ಲಸಿತ = ಹಿಡಿದುಕೊಂಡ, ಹೇಮಚಾಮರ = ಚಿನ್ನದ ಹಿಡಿಕೆಯ ಚಾಮರಗಳಿಂದ, (ಹೊಮ್ಮುವ) ಪವನವಿಲೋಲ = ಗಾಳಿಯಿಂದ ಅಲುಗಾಡುವ, ದುಕೂಲವಸನ = ರೇಷ್ಮೆವಸ್ತ್ರವನ್ನು, ಪರಿವೃತಂ = ಹೊದ್ದವನೂ; ಪಂಚರತ್ನಪ್ರಭಾ = ಐದು ಬಗೆಯ ರತ್ನಗಳಿಂದ, ಭಾಸುರ = ಹೊಳೆಯುವ, ವಿವಿಧ ವಿಭೂಷಣ = ನಾನಾ ಬಗೆಯ ಆಭರಣಗಳಿಂದ, ವಿರಚಿತ = ಮಾಡಲಾದ, ಸುರಶರಾಸನಂ = ಇಂದ್ರಧನುಸ್ಸನ್ನು (ಉಂಟುಮಾಡುತ್ತಿರಲು; ಒಡ್ಡೋಲಗಂ + ಕೊಟ್ಟಿರೆ = ಸಭೆಯನ್ನು ಸೇರಿಸಿರಲು

**ಗದ್ಯಾನುಸರಣ:** ಆಸ್ಥಾನಮಂಟಪದಲ್ಲಿ ಮಹಾ ಸಮರ್ಥರಾದ ಮಾಂಡಳಿಕ ಮಹಾಸಾಮಂತ ಮಂತ್ರಿ ಪ್ರಧಾನ ಪುರೋಹಿತ ಅಂತಃಪುರದ ಅಧಿಕಾರಿಗಳ ಪರಿವಾರವು ಅವನ ಸುತ್ತಲೂ ನೆರೆದಿದ್ದರು; ಅವನು ಎತ್ತರವಾದ ಸಿಂಹಾಸನದಲ್ಲಿ ಕುಳಿತು ಕೆಳಗಿರಿಸಿದ್ದ ಮಣಿಪಯ ಪಾದಪೀಠದ ಮೇಲೆ ಎಡಗಾಲನ್ನಿಟ್ಟು ಕೊಂಡಿದ್ದನು; ವಿದ್ಯಾಧರಸ್ತ್ರೀಯರು ಚಾಮರಗಳನ್ನು ಕೈಗಳಲ್ಲಿ ಹಿಡಿದು ಬೀಸುವಾಗ

ಉಂಟಾದ ಗಾಳಿಯಿಂದಾಗಿ ಅವನು ಹೊದ್ದ ರೇಷ್ಮೆವಸ್ತ್ರವು ಹೊಯ್ದಾಡುತ್ತಿತ್ತು; ಹಾಗೂ ಅವನು ಧರಿಸಿದ್ದ ರತ್ನಖಚಿತವಾದ ವಿವಿಧ ಆಭರಣಗಳ ಕಾಂತಿಯು ಅವನ ಸುತ್ತ ಕಾಮಬಿಲ್ಲನ್ನು ರಚಿಸಿದ್ದವು.

**ವಿಶೇಷ ವಿಚಾರ:** ಕರತಳ = ಎಂದರೆ ಅಂಗೈ, ಪಲ್ಲವ ಎಂದರೆ ಚಿಗುರು; ಒಟ್ಟಾಗಿ ಕರತಳಪಲ್ಲವ ಎಂದರೆ ಅಂಗೈಯ ಚಿಗುರುಗಳು ಎಂದು ಅಕ್ಷರಶಃ ಅರ್ಥವಾಗುತ್ತದೆ. ಆದರೆ ಅಂಗೈಯ ಚಿಗುರುಗಳ ಹಾಗಿರುವ ಬೆರಳುಗಳು ಎಂದು ಅರ್ಥೈಸಬೇಕು. ಐದು ಬೆರಳುಗಳಲ್ಲಿ ಬೇರೆ ಬೇರೆ ಬಣ್ಣಗಳ – ನೀಲ, ವಜ್ರ, ಪದ್ಮರಾಗ, ಮುತ್ತು, ಹವಳ – 'ಪಂಚರತ್ನ'ಗಳ (ಉಂಗುರಗಳಿ)ದ್ದುವೆಂಬುದು ಇಲ್ಲಿನ ಕಲ್ಪನೆ.

**ಎರಡುಂ ವಿದ್ಯಾಧಶ್ರೇಢಿಯ ಖಚರಮಹೀಪಾಳಕರ್ ಸುತ್ತಲುಂ ಬಂ**
**ದಿರೆ ನಾನಾತೋದ್ಯವಾದ್ಯಂಗಳನೆ ಮೆಱೆದು ಮೆಚ್ಚಂ ಕೊಳಲ್ವಾದಕರ್ಬಂ**
**ದಿರೆ ಗೀತಾರಾವದಿಂದಂ ನೆಱೆಯೆ ನೆಱಗೊಳಲ್ ರಕ್ತಕಂಠೀಜನಂಬಂ**
**ದಿರೆ ವಂದಿವ್ರಾತಮೆತ್ತಂ ಬಗೆಗೊಳಲಿರೆ ಚೆಲ್ವಾದುದಾಸ್ಥಾನರಂಗಂ ೩**

**ಪದವಿಭಾಗ–ಅನ್ವಯ–ಅರ್ಥ:** ಎರಡುಂ ವಿದ್ಯಾಧೃಶ್ರೇಢಿಯ = ಪೂರ್ವ ಮತ್ತು ಪಶ್ಚಿಮಗಳ ನಾಡುಗಳ, ಖಚರ ಮಹೀಪಾಳಕರ್ = ಖೇಚರ ರಾಜರುಗಳು, ಸುತ್ತಲುಂ = ಅಲ್ಲೆಲ್ಲ, ಬಂದಿರೆ = ಬಂದು ಕೂತಿರಲು; ನಾನಾ + ಆತೋದ್ಯ = ವಿವಿಧ ವಾದ್ಯಗಳ, ವಾದ್ಯಂಗಳನೆ = ಆದನಗಳನ್ನು, ಮೆಱೆದು = ತೋರಿಸಿ, ಮೆಚ್ಚಂ ಕೊಳಲ್ = ಬಹುಮಾನವನ್ನು ಪಡೆಯಲು, ವಾದಕರ್ ಬಂದಿರೆ = ವಾದನಕಾರರು ಸೇರಿರಲು; ಗೀತ + ಆರಾವದಿಂದಂ = ಹಾಡುಗಳ ನಾದದಿಂದ, ನೆಱೆಯೆ = ಹೆಚ್ಚಿನ ರೀತಿಯಿಂದ, ನೆಱಗೊಳಲ್ = ಮನಸ್ಸನ್ನು ಗೆಲ್ಲಲು, ರಕ್ತಕಂಠೀಜನಂ = ಇನಿದನಿಯ ಸ್ತ್ರೀಯರು, ಬಂದಿರೆ = ಕೂತಿರಲು; ವಂದಿವ್ರಾತಂ = ಹೊಗಳುಭಟರು, ಎತ್ತಂ = ಎಲ್ಲೆಡೆಯೂ, ಬಗೆಗೊಳಲ್ ಇರೆ = ಮನಸೆಳೆಯುತ್ತಿರಲು; ಆಸ್ಥಾನರಂಗಂ = ಆ ಒಡ್ಡೋಲಗವು, ಚೆಲ್ವಾದುದು = ಸುಂದರವಾಯಿತು.

**ಗದ್ಯಾನುಸರಣ:** ಎರಡೂ ಶ್ರೇಢಿಗಳಿಂದ ಬಂದ ವಿದ್ಯಾಧರ ರಾಜರುಗಳಿಂದ, ನಾನಾ ವಾದ್ಯಗಳನ್ನು ನುಡಿಸುವ ವಾದಕರಿಂದ, ಇನಿದನಿಯಿಂದ ಹಾಡುವ ಗಾಯಕಿಯರು ಗುಂಪಿನಿಂದ, ಹೊಗಳುಭಟರ ಸಮೂಹವು ಸ್ತುತಿಗಳಿಂದ ಆಸ್ಥಾನವು ಶೋಭೆವಡೆಯಿತು.

**ನುಡಿ ಮೊಗರಾಗಮಂ ಪಡೆಯೆ ನೋಟಮನಂಗನ ಬಿಲ್ಲ ಬಲ್ಮೆಯಂ**
**ಪಡೆಯೆ ನಯಂ ನಯಂಬಡೆಯೆ ಕಲ್ಪಮಹೀಜದ ಪಕ್ಕದಿರ್ಕೆಲಂ**
**ಬಿಡಿದು ಮಡಲ್ತು ತೋಱುವ ಲತಾವಳಿಗಳೆಗೆಣೆಯಾಯ್ತೆರಟ್ಕೆಲಂ**
**ಬಿಡಿದು ಖಗೇಂದ್ರನೋಲಗದೊಳಿರ್ದ ವಿಳಾಸವಿಳಾಸಿನೀಜನಂ ೪**

**ಪದವಿಭಾಗ–ಅನ್ವಯ–ಅರ್ಥ:** ನುಡಿ = ಮಾತುಗಳು, ಮೊಗರಾಗಮಂ = ಮುಖದ ಕಾಂತಿಯನ್ನು, ಪಡೆಯೆ = ಹೊಂದಲು; ನೋಟಂ = (ಅವರ) ದೃಷ್ಟಿಗಳು, ಅನಂಗನ = ಕಾಮನ, ಬಿಲ್ಲ ಬಲ್ಮೆಯಂ = ಬಿಲ್ಲಿನ ಬಲವನ್ನು, ಪಡೆಯೆ = ಹೊಂದಿರಲು: ನಯಂ = (ಅವರ) ಲಾಲಿತ್ಯವು, ನಯಂ + ಪಡೆಯೆ = ಕೋಮಲತೆಯನ್ನು ಹೊಂದಿರಲು; ಖಗೇಂದ್ರನ = ಮಹಾಬಲನ, ಓಲಗದೊಳ್ = ಆಸ್ಥಾನಮಂಟಪದಲ್ಲಿ, ಇರ್ದ = ಇದ್ದ, ವಿಳಾಸ = ಬೆಡಗಿಯರಾದ, ವಿಳಾಸಿನೀಜನಂ = ವಿಳಾಸಿನಿಯರ ಗುಂಪು, ಕಲ್ಪಮಹೀಜದ = ಕಲ್ಪವೃಕ್ಷದ, ಪಕ್ಕದ ಇರ್ಕೆಲಂ ಪಿಡಿದು = ಎರಡೂ ಪಕ್ಕಗಳನ್ನು ಆಧರಿಸಿ, ಮಡಲ್ತು ತೋಱುವ = ಹಬ್ಬಿ ಶೋಭಿಸುವ, ಲತಾವಳಿಗಳ್ಗೆ = ಬಳ್ಳಿಗಳ ಸಮೂಹಕ್ಕೆ, ಎಣೆಯಾಯ್ತು = ಸಮಾನವಾಯಿತು.

**ಗದ್ಯಾನುಸರಣ:** ಮಾತು ಮುಖಕಾಂತಿಯನ್ನು ಹೆಚ್ಚಿಸುತ್ತಿರಲು, ದೃಷ್ಟಿಗಳು ಮನ್ಮಥನ ಬಾಣಗಳ ಹರಿತವನ್ನು ಹೊಂದಿರಲು, ಲಾಲಿತ್ಯವು ಕೋಮಲತೆಯನ್ನು ಹೊಂದಿರಲು, ಮಹಾಬಲನ ಓಲಗದಲ್ಲಿದ್ದ ನೆರೆದಿದ್ದ ಬೆಡಗಿಯರಾದ ವಿಳಾಸನಿಯರು ಕಲ್ಪವೃಕ್ಷದ ಎರಡೂ ಕಡೆಗಳಲ್ಲಿ ಹಬ್ಬಿದ ಬಳ್ಳಿಗಳ ಸಮೂಹದಂತೆ ರಾಜನ ಅತ್ತ ಇತ್ತ ಸೇರಿದ್ದರು.

**ವಿಶೇಷ ವಿಚಾರ:** 'ಕಲ್ಪಮಹೀಜದ ಪಕ್ಕದಿರ್ಕೆಲಂಬಿಡಿದು ಮಡಲ್ತು ತೋಱುವ ಲತಾವಳಿಗಳಂ'ತೆ ರಾಜನ ಎರಡೂ ಕಡೆಗಳಲ್ಲಿ ವಿಳಾಸಿನಿಯರು ಸೇರಿದ್ದರು ಎಂಬುದು, ಅವನನ್ನು ಕಲ್ಪವೃಕ್ಷಕ್ಕೆ ಹೋಲಿಸುವುದರ ಜೊತೆಗೆ, ಅವನ ಭೋಗಾಕಾಂಕ್ಷೆಯ ತೀವ್ರತೆಯನ್ನು ವರ್ಣಿಸಲೂ ಸಹಾಯಕವಾಗಿದೆ.

**ನಿರುಪಮದೇಹದೀಪ್ತಿಗಳೊಳೆಕ್ಕೆಯಿನೆಯ್ದೆ ಪಳಂಚಿ ಮಿಂಚುವಾ**
**ಭರಣದ ಮಿಂಚು ಕಪ್ಪುರದ ಪಾಱುವ ಸುಟ್ಟುರೆ ಪೂವಿನುರ್ಬು ಕ**
**ಸ್ತುರಿಯ ತಗುಳ್ದು ಪೊಯ್ವ ಸೊವಡಾಸೊವಡೊಳ್ ಕಡುಸೊರ್ಕುಸೊರ್ಕಿಗಾ**
**ವರಿಸುವ ತುಂಬಿ ಚೆಲ್ವೆಸೆಯೆ ಕಣ್ಗೆಸೆದತ್ತು ಖಗೇಂದ್ರನೋಲಗಂ ೫**

**ಪದವಿಭಾಗ–ಅನ್ವಯ–ಅರ್ಥ:** ನಿರುಪಮ = ಹೋಲಿಕೆಯಿಲ್ಲದಂತಹ, ದೇಹದೀಪ್ತಿಗಳೊಳ್ = ದೇಹಕಾಂತಿಗಳಲ್ಲಿ, ಎಕ್ಕೆಯಿನ್ = ಜೊತೆಯಲ್ಲಿ, ಪಳಂಚಿ = ತಾಗಿ, ಮಿಂಚುವ = ಹೊಳೆಯುವ, ಆ ಆಭರಣದ = ಆಭರಣಗಳ,

ಮಿಂಚು = ಹೊಳಪು; ಕಪ್ಪುರದ = ಕರ್ಪೂರದ, ಪಾಱುವ = ವ್ಯಾಪಿಸುವ, ಸುಟ್ಟುರೆ = ಗಾಳಿ, ಹಾಗೂ, ಪೂವಿನ = ಹೂಗಳ, ಉರ್ಬು = ಗಾಢತೆಗಳು, ಕತ್ತುರಿಯ = ಕಸ್ತೂರಿಯ, ತಗುಳ್ದು = ಜೊತೆಗೂಡಿ, ಪೊಯ್ವ = ಸೂಸುವ, ಸೊಡು = ಕಂಪು; ಆ ಸೊಡೊಳ್ = ಆ ಕಂಪಿನಲ್ಲಿ, ಕಡುಸೊರ್ಕಿಂಸೊರ್ಕಿ = ಅತಿಶಯವಾದ ಸೊಕ್ಕಿನಿಂದ ಕೂಡಿ, ಗಾವರಿಸುವ = ಝೇಂಕರಿಸುವ, ತುಂಬಿ = ದುಂಬಿಗಳು, ಚೆಲ್ವು + ಎಸೆಯೆ = ಸೊಬಗನ್ನು ಸೂಸುತ್ತ, ಖಗೇಂದ್ರನ = ವಿದ್ಯಾಧರರಾಜನ, ಓಲಗಂ = ಆಸ್ಥಾನವು, ಕಣ್ಗೆ + ಎಸೆದತ್ತು = ಕಾಣಿಸಿತು.

**ಗದ್ಯಾನುಸರಣ:** ಹೋಲಿಕೆಯಿಲ್ಲದ ದೇಹಕಾಂತಿಗಳ ಜೊತೆಗೆ ಸೇರುವ ಆಭರಣಗಳ ಕಾಂತಿ; ಬೀಸುವ ಗಾಳಿಯಿಳಂದ ಹರಡುವ ಕಪೂರ ಮತ್ತು ಹೂಗಳ ಗಾಢ ಕಂಪಿನೊಡನೆ ಸೇರಿದ ಕಸ್ತೂರಿಯ ಪರಿಮಳ; ಮತ್ತು ಬಂಡನ್ನುಂಡು ಸೊಕ್ಕಿದ ದುಂಬಿಗಳ ಝೇಂಕಾರ – ಇವುಗಳು ಖೇಚರರಾಜನ ಆಸ್ಥಾನದ ಸೊಬಗನ್ನು ಹೆಚ್ಚಿಸುತ್ತಿದ್ದುವು.

**ವ। ಅಂತೊಡ್ಡೋಲಂಗೊಟ್ಟಿರ್ದ ವಿದ್ಯಾಧರರಾಜನಂ ಸ್ವಯಂಬುದ್ಧಂ ಅಭ್ಯುದಯಪರಂಪರಾನಿಮಿತ್ತಂ ಸದ್ಧರ್ಮೋಪದೇಶಲಬ್ಧಾವಸರನಾಗಿ**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಆ ಬಗೆಯಲ್ಲಿ, ಒಡ್ಡೋಲಗಂ + ಕೊಟ್ಟಿರ್ದ = ಸಭೆ ಸೇರಿದ್ದ, ವಿದ್ಯಾಧರರಾಜನಂ = ಮಹಾಬಲನಿಗೆ, ಅಭ್ಯುದಯಪರಂಪರಾ = ಏಳಿಗೆಗಳನ್ನು ಹೊಂದುವ, ನಿಮಿತ್ತಂ = ಕಾರಣದಿಂದ, ಸ್ವಯಂಬುದ್ಧಂ .= ಆ ಹೆಸರಿನ ಮಂತ್ರಿಯು, ಸದ್ಧರ್ಮ + ಉಪದೇಶ = ಧರ್ಮವನ್ನು ಉಪದೇಶಿಸುವ, ಲಬ್ಧ + ಅವಸರನಾಗಿ = ಅವಕಾಶ ಪಡೆದು

**ಗದ್ಯಾನುಸರಣ:** ಈ ರೀತಿಯಲ್ಲಿ ಆಸ್ಥಾನವು ಸೇರಿರಲು ರಾಜನಿಗೆ ಏಳಿಗೆಗಳನ್ನು ಉಂಟುಮಾಡಲೆಂದು ಧರ್ಮೋಪದೇಶಕಾಗಿ ಅವಕಾಶವನ್ನು ಕೇಳಿಕೊಂಡು ಹೀಗೆ ನುಡಿದ:

**ಲಾವಣ್ಯಾಬ್ಧಿತರಂಗಭಂಗಲಲಿತಭ್ರೂಭಂಗದಿವ್ಯಾಂಗನಾ**
**ಭಾವಾಪಾಂಗನಿರೀಕ್ಷಣಾಮೃತಕೃತಾನಂಗೋತ್ಸವಂ ಚೋದ್ಯವಿ**
**ದ್ಯಾವಷ್ಟಂಭವಿಜೃಂಭಿತಾಂಬರಚರೇಶಾರಾಧ್ಯನಾಗಿರ್ದ ನಿ**
**ನ್ನೀ ವಿದ್ಯಾಧರಲಕ್ಷ್ಮಿಪುಣ್ಯಜನಿತಂ ವಿದ್ಯಾಧರಾಧೀಶ್ವರಾ ೬**

**ಪದವಿಭಾಗ–ಅನ್ವಯ–ಅರ್ಥ:** ವಿದ್ಯಾಧರ + ಈಶ್ವರಾ = ಎಲೈ ವಿದ್ಯಾಧರ ಚಕ್ರವರ್ತಿಯೇ, ಲಾವಣ್ಯ + ಅಬ್ಧಿ = ಚೆಲುವಿನ ಸಾಗರದ, ತರಂಗಭಂಗ = ಅಲೆಗಳ ಬಾಗುವಿಕೆಯಂತೆಯೇ, ಭ್ರೂಭಂಗ = ಹುಬ್ಬುಗಳ ಮುರಿವು, ಭಾವ =

ಇರುವ, ದಿವ್ಯ + ಅಂಗನಾ = ದೇವತಾಸ್ತ್ರೀಯರ, ನಿರೀಕ್ಷಣ = ನೋಟಗಳ, ಅಮೃತಕೃತ = ಅಮೃತದಿಂದ ಉಂಟಾದ, ಅನಂಗ + ಉತ್ಸವಂ = ಈ ಕಾಮೋತ್ಸವವು, ಚೋದ್ಯವಿದ್ಯಾ = ಆಶ್ಚರ್ಯಕರವಾದ ವಿದ್ಯೆಗಳಿಂದ, ವಿಜೃಂಭಿತ = ಮೆರೆಯುವ, ಅಂಬರಚರ = ಖೇಚರರ, ಆರಾಧ್ಯನಾಗಿರ್ದ = ಗೌರವಾನ್ವಿತವಾದ, ನಿನ್ನ + ಈ = ನೀನು ಪಡೆದಿರುವ ಈ, ವಿದ್ಯಾಧರಲಕ್ಷ್ಮಿ(ಯು), ಪುಣ್ಯಜನಿತಂ = ಪುಣ್ಯದಿಂದ ದೊರಕಿರುವುದು.

**ಗದ್ಯಾನುಸರಣ:** ವಿದ್ಯಾಧೀಶ್ವರನೇ, ಲಾವಣ್ಯಸಮುದ್ರದ ಅಲೆಗಳಂತೆ ಬಾಗಿದ ಹುಬ್ಬುಗಳು ಹಬ್ಬುವ ಕುಡಿನೋಟಗಳಿಂದ ಅಮೃತದಂತಹ ಕಾಮೋತ್ಸವವನ್ನೂ; ವಿಸ್ಮಯಕರ ವಿದ್ಯೆಗಳ ವೈಭವವನ್ನು ಪಡೆದ ವಿದ್ಯಾಧರರ ಗೌರವವನ್ನೂ ನೀನು ಪುಣ್ಯಮಾಡಿ ಪಡೆದಿರುವೆ.

**ಭವವಾರಾಶಿನಿಮಗ್ನರಂ ದಯೆ ದಮಂ ದಾನಂ ತಪಂ ಶೀಲಮೆಂ**
**ಬಿವೆ ಮೆಯ್ಯಾಗಿರೆ ಸಂದ ಧರ್ಮಮೆ ವಲಂ ಪೊತ್ತೆತ್ತುಗುಂ ಮುಕ್ತಿಪ**
**ರ್ಯವಸಾನಂಬರಮಾನುಷಂಗಿಕಫಲಂ ಭೂಪೇಂದ್ರದೇವೇಂದ್ರರಾ**
**ರಾಜ್ಯವಿಳಾಸಂ ಪೆಱತಲ್ತು ನಂಬು ಖಚರಕ್ಷ್ಮಾಪಾಚೂಡಾಮಣೀ ೭**

**ಪದವಿಭಾಗ-ಅನ್ವಯ-ಅರ್ಥ:** ಖಚರಕ್ಷ್ಮಾಪಾಲಚೂಡಾಮಣೀ = ಖೇಚರರಾಜಶ್ರೇಷ್ಠನೇ, ಭವವಾರಾಶಿ = ಐಹಿಕತೆಯೆಂಬ ಸಾಗರದಲ್ಲಿ, ನಿಮಗ್ನರಂ = ಮುಳುಗಿರುವವರನ್ನು, ಮುಕ್ತಿಪರ್ಯವಸಾನಂಬರಂ = ಮುಕ್ತಿಯು ದೊರಕುವವರೆಗೆ, ಪೊತ್ತು + ಎತ್ತುಗುಂ = ಹಿಡಿದು ಮೇಲೆತ್ತುವುದು, ದಯೆ = ಕರುಣೆ, ದಮಂ = ಇಂದ್ರಿಯನಿಗ್ರಹ, ದಾನಂ = ನೀಡುವಿಕೆ, ತಪಂ = ತಪಸ್ಸು, ಶೀಲಂ = ಆಚರಣೆಗಳು, ಎಂಬಿವೆ = ಇವುಗಳು, ಮೆಯ್ಯಾಗಿರೆ = ರೂಪಡೆದ, ಧರ್ಮಮೆ = ಧರ್ಮವೇ, ವಲಂ = ಅಲ್ಲವೇ? ಭೂಪೇಂದ್ರ = ರಾಜರುಗಳ, ದೇವೇಂದ್ರ = ದೇವೇಂದ್ರರ, ರಾಜ್ಯವಿಳಾಸಂ = ಸಾಮ್ರಾಜ್ಯವೈಭವವು, ಆನುಷಂಗಿಕಫಲಂ = ಅಪ್ರಧಾನ ಫಲಗಳು, ಪೆಱತು + ಅಲ್ತು = ಬೇರೆಯಲ್ಲ, ನಂಬು

**ಗದ್ಯಾನುಸರಣ:** ಖೇಚರರಾಜಶ್ರೇಷ್ಠನೇ ಕೇಳು, ಮೋಕ್ಷವು ಸಿಕ್ಕುವವರೆಗೂ ಸಂಸಾರಸಾಗರದಲ್ಲಿ ಮುಳುಗಿರುವವರನ್ನು ಮೇಲೆತ್ತುವುದು ಕರುಣೆ ಇಂದ್ರಿಯನಿಗ್ರಹ ದಾನ ತಪಸ್ಸು ಸದಾಚರಣೆಗಳು ಎಂಬಿವುಗಳಿಂದ ರೂಪುವಡೆದ ಧರ್ಮವೇ ಅಲ್ಲವೇ? ಮುಷ್ಯರ ಹಾಗೂ ದೇವತೆಗಳ ರಾಜವೈಭವವು ಗೌಣಫಲಗಳೇ ವಿನಾ ಬೇರೆಯಲ್ಲ, ನೀನು ನಂಬು.

**ವ ಎಂದು ಧರ್ಮಪ್ರಭಾವಮುಮಂ ತತ್ಫಲಸ್ವಭಾವಮುಮಂ ತಿಳಿಪುವವಸರದೊಳುೞಿದ ಮಹಾಮತಿ ಸಂಭಿನ್ನಮತಿ ಶತಮತಿಗಳ್ ಲೋಕಾಯತಿಕ ಯೋಗಾಚಾರ ಮಾಧ್ಯಮಿಕಮತ ವಿತಥಾಭಿದಾಯಿಗಳ್ ಜೀವಾಭಾವಮನೆ ಪಿಡಿಯಚ್ಚುವಿಡಿದು**

**ಪದವಿಭಾಗ–ಅನ್ವಯ–ಅರ್ಥ:** ಎಂದು = ಎಂಬುದಾಗಿ, ಧರ್ಮ ಪ್ರಭಾವಮುಮಂ = ಧರ್ಮದ ಪರಿಣಾಮಕಾರಿತೆಯನ್ನೂ, ತತ್ಫಲಸ್ವಭಾವಮುಮಂ = ಅದರ ಫಲದ ಸ್ವರೂವನ್ನೂ, ತಿಳಿಪುವ = ತಿಳಿಹೇಳುವ, ಅವಸರದೊಳ್ = ಸಂದರ್ಭದಲ್ಲಿ, ಉೞಿದ = ಮಿಕ್ಕ ಮಂತ್ರಿಗಳಾದ, ಮಹಾಮತಿ ಸಂಭಿನ್ನಮತಿ ಮತ್ತು ಶತಮತಿಗಳು, ಲೋಕಾಯತಿಕ, ಯೋಗಾಚಾರ ಮತ್ತು ಮಾಧ್ಯಮಿಕ ಮತಗಳ, ವಿತತ + ಅಭಿದಾಯಿಗಳ್ = ಯಥಾರ್ಥವಾದಿಗಳು, ಜೀವ + ಅಭಾಮನೆ = ಜೀವವಿಲ್ಲ ಎಂಬ ವಾದವನ್ನು, ಪಿಡಿ + ಅಚ್ಚುವಿಡಿದು = ಪಟ್ಟುಹಿಡಿದು,

**ಗದ್ಯಾನುಸರಣ:** ಹೀಗೆ ಧರ್ಮದ ಪರಿಣಾಂಮ ಮತ್ತು ಅದರಿಂದಾಗುವ ಫಲಗಳ ಬಗೆಯನ್ನು (ಸ್ವಯಂಬುದ್ಧನು) ಉಪದೇಶಿಸುವ ಸಂದರ್ಭದಲ್ಲಿ ಇತರ ಮಂತ್ರಿಗಳು ಮಿಕ್ಕ ಮತಗಳ ವಾದಕ್ಕನುಗುಣವಾಗಿ ಯಥಾರ್ಥವಾದವನ್ನು ಪಟ್ಟುಹಿಡಿದು ಮಂಡಿಸಿದರು.

**ವಿಶೇಷ ವಿಚಾರ:** ಲೋಕಾಯತಿಕ ಅಥವಾ ಲೋಕಾಯತವು ಅಥವಾ ನಾಸ್ತಿಕ ಮತ; ಲೋಕಾಚಾರ ಎಂದರೆ ಬೌದ್ಧ ಹಾಗೂ ಶೂನ್ಯವಾದ ಮಾಧ್ಯಮಿಕ ಎಂದರೆ ಶೂನ್ಯವಾದಿ. ಹಾಗೆ ನೋಡಿದರೆ ಜೈನಮತವೂ ವೈದಿಕರ ದೃಷ್ಟಿಯಲ್ಲಿ ವೈದಿಕ ವಿರೋಧಿಯಾದದ್ದರಿಂದಲೂ, ಮೂಲತಃ ದೇವರ ಅಸ್ತಿತ್ವದಲ್ಲಿ ನಂಬಿಕೆ ಇಟ್ಟಂತಹುದಲ್ಲದ್ದರಿಂದಲೂ ನಾಸ್ತಿಕ ಮತವೇ, ಆದರೆ ಕಾಲಕ್ರಮೇಣ ವೈದಿಕದ ಪ್ರಬಲ ವಿರೋಧವನ್ನೆದುರಿಸಲಾಗದೆ ತನ್ನ ಅಸ್ತಿತ್ವವನ್ನುಳಿಸಿಕೊಳ್ಳಲು ಅದರ ದಟ್ಟ ಪ್ರಭಾವಕ್ಕೊಳಗಾಗಿ ಅಲ್ಲಿನ ಬಹುತೇಕ ನಂಬಿಕೆ ಆಚರಣೆಗಳನ್ನು ಅನುಕರಿಸ ತೊಡಗಿದಂತೆ ತೋರುತ್ತದೆ.

**ಒಡಲೊಳೆ ಜೀವಮಿರ್ದು ಗಡ ಸಂಚಿಸುತಿರ್ಪುದು ಪುಣ್ಯಪಾಪಮಂ**
**ಗಡ ಬೞಿಕತ್ತ ಬೇಱೆ ಪೆಱತೊಂದೊಡಲೊಳ್ಗಡ ತಾನೆ ನಿಂದೊಡಂ**
**ಬಡುವುದು ಧರ್ಮಕರ್ಮಫಲಮಂ ಗಡ ಸತ್ತನೆ ಮತ್ತೆ ಪುಟ್ಟುವಂ**
**ಗಡ ಪುಸಿ ಕಾಣ ಡಂಬಮಿದು ಖೇಚರ ನೀನಿದನೆಂತು ನಂಬಿದೋ ೮**

**ಪದವಿಭಾಗ-ಅನ್ವಯ-ಅರ್ಥ:** ಒಡಲೊಳೆ = ದೇಹದಲ್ಲಿಯೇ, ಜೀವಂ = ಜೀವವು, ಇರ್ದು ಗಡ = ಇರುವುದಂತೆ; (ಅದು) ಪುಣ್ಯಪಾಪಮಂ = ಪುಣ್ಯ ಹಾಗೂ ಪಾಪಗಳನ್ನು, ಸಂಚಿಸುತ + ಇರ್ಪುದು ಗಡ = ಸಂಗ್ರಹಿಸುತ್ತಿರುವುದಂತೆ; ಬಱಿಕ = ಸತ್ತ ಮೇಲೆ, ಅತ್ತ = ಮತ್ತೊಂದೆಡೆ, ಬೇಱೆ ಪೆಱತೊಂದು = ಮತ್ತೆ ಇನ್ನೊಂದು, ಒಡಲೊಳ್ ಗಡ = ದೇಹದಲ್ಲಿ, ತಾನೆ ನಿಂದು = ಆ ಜೀವವೇ ಸೇರಿ, ಧರ್ಮಕರ್ಮಫಲಮಂ = ಧರ್ಮಕರ್ಮಫಲಗಳನ್ನು, ಒಡಂಬಡುವುದು ಗಡ = ಒಪ್ಪಿಕೊಳ್ಳುತ್ತದಂತೆ; ಸತ್ತನೆ = ಸತ್ತ ವ್ಯಕ್ತಿಯೇ, ಮತ್ತೆ ಪುಟ್ಟುವಂ ಗಡ = ಪುನಃ ಹುಟ್ಟುತ್ತಾನಂತೆ; ಪುಸಿ ಕಾಣ = ಇದೆಲ್ಲ ಸುಳ್ಳು, ಕಾಣು; ಡಂಬಂ ಇದು = ಇದೆಲ್ಲ ಸುಳ್ಳು, ಖೇಚರ = ವಿದ್ಯಾಧರನೇ, ನೀನದಂ = ನೀದಯು ಇಂಥ ಮಾತುಗಳನ್ನು, ಎಂತು ನಂಬಿದೋ = ಹೇಗೆ ನಂಬುತ್ತೀಯೆ?

**ಗದ್ಯಾನುಸರಣ:** ಎಲೈ ವಿದ್ಯಾಧರನೇ, ದೇಹದಲ್ಲಿ ಜೀವ ಇರುವುದಂತೆ; ಅದರಲ್ಲಿ ಪುಣ್ಯಪಾಪಗಳು ಕೂಡಿಕೊಳ್ಳುವುದಂತೆ; ಸತ್ತ ಮೇಲೆ ಮತ್ತೊಂದು ದೇಹವನ್ನು ಸೇರಿ ಅಲ್ಲಿನ ಧರ್ಮಕರ್ಮಫಲಗಳನ್ನು ಅನುಭವಿಸುವುದಂತೆ; ಸತ್ತ ವ್ಯಕ್ತಿಯೇ ಮತ್ತೆ ಹುಟ್ಟುತ್ತಾನಂತೆ – ಇವೆಲ್ಲ ಸುಳ್ಳು ಮಾತುಗಳು, ನೀನಿದನ್ನು ಹೇಗೆ ತಾನೇ ನಂಬುವೇ?

**ತಲೆವಱಿದುಟ್ಟುದಿಕ್ಕಿ ಸುರಲೋಕಸುಖಂಗಳನುಣ್ಬೆವೆಂಬ ಬ**
**ತ್ತಲೆಗರ ಮಾತುಗೇಳದಿರು ಬಾೞ್ವನಮಿಂದ್ರಿಯವರ್ಗದಿಚ್ಚೆಯಂ**
**ಸಲಿಸಿ ಬಸಂತದೊಳ್ ಕಳಿಕೆಗರ್ಚಿದ ಕೋಗಿಲೆಯಂತೆ ಬಿಚ್ಚತಂ**
**ನಲಿವುದು ಕಂಡರಾರ್ ಮಱುಭವಂಗಳನಿಲ್ಲಿ ವಿಯಚ್ಚರೇಶ್ವರಾ. ೯**

**ಪದವಿಭಾಗ-ಅನ್ವಯ-ಅರ್ಥ:** ವಿಯಚ್ಚರೇಶ್ವರಾ = ಖೇಚರರಾಜನೇ, ತಲೆ + ಪಱಿದು = ತಲೆಯ ಕೂದಲನ್ನು ಕೀಳಿಸಿಕೊಂಡು, ಉಟ್ಟುದ = ಧರಿಸಿರುವ (ಬಟ್ಟೆಯನ್ನು), ಇಕ್ಕಿ = ತೆಗೆದುಹಾಕಿ, ಸುರಲೋಕಸುಖಂಗಳನ್ = ದೇವಲೋಕದ ಭೋಗಗಳನ್ನು, (ಸತ್ತ ಮೇಲೆ), ಉಣ್ಬೆವು + ಎಂಬ = ಅನುಭವಿಸುತ್ತೇವೆ ಎನ್ನುವ, ಬತ್ತಲೆಗರ = ನಗನರಾದ ಶ್ರಮಣರ, ಮಾತು + ಕೇಳದಿರು = ಮಾತುಗಳನ್ನು ಗಮನಿಸಬೇಡ; ಬಾೞ್ವನಂ = ಬದುಕಿರುವವರೆಗೂ, ಇಂದ್ರಿಯವರ್ಗದ = ಇಂದ್ರಿಯಗಳ, ಇಚ್ಚೆಯಂ ಸಲಿಸಿ = ಆಸೆಗಳನ್ನು ಪೂರೈಸಿಕೊಂಡು; ಕಳಿಕೆ + ಕರ್ಚಿದ = ಚಿಗುರನ್ನು ತಿಂದ, ಕೋಗಿಲೆಯಂತೆ = ಕೋಗಿಲೆಯ ಹಾಗಮಿಲ್ಲಿ = ಈ ಲೋಕದಲ್ಲಿ, ಬಿಚ್ಚತಂ = ಹೆಚ್ಚಾಗಿ, ನಲಿವುದು = ಸಂತೋಷಪಡು; ಮಱುಭವಂಗಳನ್ = ಪುನರ್ ಜನ್ಮಗಳನ್ನು, ಯಾರು, ಕಂಡರ್ = ನೋಡಿದವರಾರು?

**ಗದ್ಯಾನುಸರಣ:** ಎಲೈ ಖೇಚರರಾಜನೇ, ಸತ್ತ ಬಳಿಕ ದೇವಲೋಕದ ಭೋಗಗಳನ್ನು ಪಡೆಯುತ್ತೇವೆಂದು ತಲೆಕೂದಲನ್ನು ಕೀಳಿಸಿಕೊಂಡು, ಬಟ್ಟೆಗಳನ್ನು ಕಿತ್ತೆಸೆದ ದಿಗಂಬರ ಸನ್ಯಾಸಿಗಳ ಮಾತಿಗೆ ಕಿವಿಕೊಡಬೇಡ, ಮಾವು ಚಿಗರಿದಾಗ ಅದನ್ನು ತಿಂದು ನಲಿಯುವ ಕೋಗಿಲೆಗಳ ಹಾಗೆ ಬದುಕಿರುವವರೆಗೂ ಇಂದ್ರಿಯಗಳ ಆಸೆಯನ್ನು ಪೂರೈಸಿಕೊ; ಮುಂದಿನ ಜನ್ಮವನ್ನು ಕಂಡವರಾರು?

**ವಿಶೇಷ ವಿಚಾರ:** ಜೈನ ದಿಗಂಬರ ಸನ್ಯಾಸಿಗಳು ಕೇಶಲುಂಛನ ಮಾಡಿಸಿಕೊಳ್ಳುವ ಸಂಪ್ರದಾಯವನ್ನು ಕವಿ ಉಲ್ಲೇಖಿಸುತ್ತಿದ್ದಾನೆ. ಖಚಿತವಿಲ್ಲದ ದೇವಲೋಕದ ಸುಖಗಳಿಗಾಗಿ ಇರುವಾಗ ಅಷ್ಟೆಲ್ಲ ಕಷ್ಟಪಡುವ ಅಗತ್ಯವೇನಿದೆ? ಇರುವಾಗ ಈ ಲೋಕದ ಸುಖಗಳನ್ನು ಅನುಭವಿಸಬೇಕೆಂಬುದು ಲೋಕಾಯತರ ಉಪದೇಶವೆಂದು ಹೇಳುತ್ತಾರೆ. 'ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ। ತಸ್ಮಾತ್ ಸರ್ವಪ್ರಯತ್ನೇನ ಋಣಂ ಕೃತ್ವಾ ಘೃತಂ ಪಿಬೇತ್॥' (ದೇಹ ಸತ್ತು ಬೂದಿಯಾದ ಮೇಲೆ ಮತ್ತೆ ಬರಲು ಸಾಧ್ಯವಿಲ್ಲ; ಹೀಗಾಗಿ ಇರುವಾಗ ಸಾಲ ಮಾಡಿಯಾದರೂ ತುಪ್ಪ ತಿನ್ನು – ಅಂದರೆ ಸುಖಪಡು) ಎಂದು ಅವರು ಹೇಳುತ್ತಿದ್ದರಂತೆ.

ವ। ಅದಲ್ಲದೆಯುಂ ಸ್ನಾಯ್ವಲಾಬೂದಂಡಾಂಗುಷ್ಠಾಂಗುಳಿಪ್ರಯತ್ನದಿಂ ಶ್ರವಣರಮಣೀಯಕ್ವಣಿತಮೆಂತು ನೆಗೞ್ದಪ್ಪುದು ಅಂತೆ ಕಾಯಾಕಾರಪರಿಣತ ಪೃಥ್ವಪ್ತೇಜೋವಾಯುಗಳತ್ತಣಿಂ ಬಂದು ಗರ್ಭಾದಿಮರಣಪರ್ಯಂತಂ ತದಾತ್ಮಕಂ ಚೈತನ್ಯಂ ಪುಟ್ಟುಗುಂ; ಅದಱಿಂ ಪರಲೋಕಮಿಲ್ಲ; ಪರಲೋಕಮಿಲ್ಲ ದಂದು ತಲ್ಲೋಕಸುಖಾನುಭವಾಪೇಕ್ಷೆ ಯಿನೈಹಿಕಸುಖವಿಮುಖನಾಗಿ ಶರೀರಾರ್ಥವ್ಯಯಮಂಮಾಡುವಾತಂ ಕಯ್ಯದಂ ಬಿಟ್ಟು ಕಾಲದರ್ಕೆಱಗು ವಾತನಂ ಪೋಲ್ಗುಂ ಎಂದು ಬೃಹಸ್ಪತಿ ಮತಾನುಸಾರಿ ಯಪ್ಪ ಮಹಾಮತಿ ನುಡಿದು ಮಾಣ್ದು ತದನಂತರದೊಳ್ ವಿಜ್ಞಾನವಾದ ಮನಾಶ್ರಯಿಸಿ, ಪೂರ್ವಪೂರ್ವಚಿತ್ತ ವಿಶೇಷಪ್ರಭವಂಗಳುತ್ತರೋರ ಚಿತ್ತಕ್ಷಣಂಗಳುಪಾದಾನೋ ಪದಾನೋಪಾಯಕ್ಷಣಸಂಪೃಕ್ತಂಗಳ್ ನಿರನ್ವಯ ಪ್ರತಿಕ್ಷಣ ವಿಶರಾರುಗಳ್ ನಿರಂಶಂಗಳಾಗಿಯುಂ ಭ್ರಾಂತಿವಶದಿಂ ಗ್ರಾಹ್ಯಗ್ರಾಹಕ ಸಂವೇದನಾಕಾರ ತ್ರಯಾಕ್ರಾಂತಂಗಳ್ವಿಜಾತೀಯಾವ್ಯವಧಾನಲಘೂತ್ಪತ್ತಿ ಸದೃಶಾಪರಾಪರೋ ತ್ಪತ್ತಿಯೆಂಬಿವಱಿಂ ವಿಪ್ರಲಬ್ಧಬುದ್ಧಿಗೆ ಸಂತಾನರೂಪದಿಂ ಪುಟ್ಟುತ್ತಿರ್ದ ವಿಜ್ಞಾನಲಕ್ಷಣಂಗಳಾತ್ಮಾಭಿಮಾನಮಂ ಪುಟ್ಟಿಸುಗುಂ, ತದೇಕತ್ವಗ್ರಾಹಕ ಪ್ರತ್ಯಭಿಜ್ಞಾನಮಂ ಲೂನಪುನರ್ಜಾತನಖಕೇಶಾದಿಗ'ಳೊಳ್ ಪೂರ್ವಾಪರೈಕ ತತ್ತ್ವಮಿಲ್ಲದಲ್ಲಿಯುಂ ಕಾಣಲಕ್ಕುಂ; ಅಪ್ಪುದಱಿಂದದುವುಂ ತ್ರಿಕಾಲಾನುಯಾಯಿ ಜೀವಾಸ್ತಿತ್ವಮನಱಿಪಲಾಱದು; ಅದಱಿಂ ಪರಲೋಕಸುಖಾರ್ಥ ಮಾತ್ಮಾಸ್ತಿತ್ವಾಭಿ ನಿವೇಶದಿಂ ತನುಮನನಿಧನಂ ಮಾಡಿಸೇದೆಗೊಡಲ್ವೇಡೆಂದು ಸಂಭಿನ್ನಮತಿ ನಿಜವಿಜ್ಞಾನವಾದ

**ಪುರಸ್ಸರಾತ್ಮನಿರಾಕರಣಮನೆ ನುಡಿದು ಮಾಣೆ; ಶೂನ್ಯವಾದಪ್ರಕಾಶನಪರಂ, ಆವುದಂತರ್ಬಹೀರೂಪದಿಂ ವಿಶದರ್ಶನಾವ ಗಮ್ಯಂ ಅದೆಲ್ಲಮಸತ್ಯಾವಭಾಸಿ; ಎಂತು ಮರುಮರೀಚಿಕಾಸ್ವಪ್ನೇಂದ್ರ ಜಾಲಾದಿಗಳೊಳ್ ವಿಶದರ್ಶನಾವಗಮ್ಯ ಜಲಕರಿತುರಗನರಾದಿಗಳ್ ಅಂತೆ ಜಾಗ್ರದ್ದಶಾವಭಾಸ ಮಾನಾಂತರಂಗ ಬಹಿರಂಗವಸ್ತುಗಳುಂ, ಅದಱಿಂ ಜೀವಮೆಂಬುದೆಲ್ಲತ್ತು ಪರಲೋಕಮೆಂಬು ದಾವೆಡೆಯದು, ಅದರ್ಕೆ ಕಾರಣಮಪ್ಪ ಪಾಪಪುಣ್ಯಂಗಳೆತ್ತಣಿಂ ಬಂದುವು, ಇವೆಲ್ಲಂ ಗಂಧರ್ವನಗರ ವಿಳಾಸವಿಳಸಿತಂಗಳ್, ಅದನಱಿಯದ ಬೋಧ ಬೋಧಿತಮೋದಾನ ವಿಧಾನದಿಂ ಮುಧಾಕ್ಲೇಶಾಯಾಸನಿರತನಾಗಿ ನಮೆವರೆಂದು ಶತಮತಿ ಯುಮೀ ಮಾಟ್ಕೆಯೊಳೆ ಜೀವಾಭಾವಮನೆ ಸಮರ್ಥಿಸೆ; ತದುಪನ್ಯಸ್ತ ಕುಹೇತು ಕುದೃಷ್ಟಾಂತಾನರ್ಥಕವಚನ ರಚನಾಪ್ರಲಾಪಮನವ್ಯಗ್ರಕುಶಾಗ್ರೀಯ ಬುದ್ಧಿಸಮೃದ್ಧಂ ಸ್ವಯಂಬುದ್ಧ ನವಧಾರಿಸಿ,**

**ಪದವಿಭಾಗ–ಅನ್ವಯ–ಅರ್ಥ:** ಅದಲ್ಲದೆಯುಂ = ಅಷ್ಟೇ ಅಲ್ಲದೆ, ಸ್ನಾಯು ಅಲಾಬೂ ದಂಡ ಅಂಗುಷ್ಠ + ಅಂಗುಳಿ = ನರ ಸೋರೆಬುರುಡೆ ಕೋಲು ಹೆಬ್ಬೆರಳುಗಳ, ಪ್ರಯತ್ನದಿಂ = ಪ್ರಯತ್ನದಿಂದ, ಶ್ರವಣರಮಣೀಯ = ಕವಿಗೆ ಇಂಪಾದ, ಕ್ವಣಿತಂ = ನಾದವು ಎಂತು = ಹೇಗೆ, ನೆಗಳ್ದಿಪ್ಪುದು = ಉಂಟಾಗುತ್ತದೆ, ಅಂತೆ = ಅದೇ ರೀತಿಯಲ್ಲಿ, ಕಾಯ + ಆಕಾರ = ದೇಹದ ರೂಪಗಳ, ಪರಿಣತ = ಪರಿಣಾಮದಿಂದ, ಪೃಥ್ವಿ = ಮಣ್ಣು, ಅಪ್ = ನೀರು, ತೇಜಸ್ = ಬೆಂಕಿ, ವಾಯುಗಳ = ಗಾಳಿಗಳ, ಅತ್ತಣಿಂ = ಕಾರಣದಿಂದ, ಬಂದು, ಗರ್ಭ + ಆದಿ = ಗರ್ಭದಿಂದ ಹಿಡಿದು, ಮರಣಪರ್ಯಂತಂ = ಸಾವಿನವರೆವಿಗೂ, ತತ್ + ಆತ್ಮಕಂ = ಅವುಗಳಿಂದ ಕೂಡಿದ, ಚೈತನ್ಯಂ = ಚೈತನ್ಯವು, ಪುಟ್ಟುಗುಂ = ಹುಟ್ಟುತ್ತದೆ; ಅದಱಿಂ = ಹೀಗಾಗಿ, ಪರಲೋಕಂ + ಇಲ್ಲ = ಪರಲೋಕವಿಲ್ಲ; ಅಪರಲೋಕಂ + ಇಲ್ಲದಂದು = ಪರಲೋಕವಿಲ್ಲದ್ದರಿಂದ, ತತ್ + ಲೋಕಸುಖ + ಅನುಭವ = ಆ ಲೋಕದ ಸುಖಗಳನ್ನು ಅನುಭವಿಸುವ, ಅಪೇಕ್ಷೆಯಿಂ = ಆಸೆಯಿಂದ, ಐಹಿಕಸುಖವಿಮುಖನಾಗಿ = ಈ ಲೋಕದ ಸುಖಗಳಿಗೆ ಮುಖ ತಿರುಗಿಸಿ, ಶರೀರ + ಅರ್ಥವ್ಯಯಂ ಮಾಡುವಾತಂ = ಶರೀರವನ್ನು ಸವೆಸುವವನು, ಕಯ್ + ಅದಂ ಬಿಟ್ಟು = ಕೈಯ್ಯಲ್ಲಿರುವುದನ್ನು ಬಿಟ್ಟು, ಕಾಲದರ್ಕೆ = ಕಾಲಿಂದ ದೂರ ನಡೆದು ಹೋಗಿ, ಎಱಗುವಾತನಂ = ಆಸೆಪಡುವವನ್ನು, ಪೋಲ್ಗುಂ = ಹೋಲುತ್ತದೆ – ಎಂದು, ಬೃಹಸ್ಪತಿಮತ + ಅನುಸಾರಿಯಪ್ಪ = ಚಾರ್ವಾಕಮತದ ಅನುಯಾಯಿಯಾದ, ಮಹಾಮತಿ, ನುಡಿದು = ಹೇಳಿ, ಮಾಣ್ದ = ನಿಲ್ಲಿಸಿದ, ತತ್ + ಅನಂತರದೊಳ್ = ಆ ಬಳಿಕ, ವಿಜ್ಞಾನವಾದಮನ್ + ಆಶ್ರಯಿಸಿ = ವಿಜ್ಞಾನವಾದವನ್ನು ಅನುಸರಿಸಿ, ಪೂರ್ವಪೂರ್ವ = ಹಿಂದುಹಿಂದಿನ, ಚಿತ್ತವಿಶೇಷ = ಚಿತ್ತವಿಶೇಷಗಳಾದ ಜ್ಞಾನದಿಂದ, ಉತ್ತರ + ಉತ್ತರ = ಮುಂದು ಮುಂದಿನ, ಚಿತ್ತಕ್ಷಣಂಗಳ್ = ಜ್ಞಾನವು, ಪ್ರಭವಂಗಳ್ = ಹುಟ್ಟುತ್ತವೆ; ಉಪಾದಾನ =

ಕಾರ್ಯ = ಉಪಾದೇಯ = ಕಾರಣದಿಂದ, ಸಂಪೃಕ್ತಂಗಳ್ = ಕೂಡಿಕೊಂಡು, ನಿರನ್ವಯ = ಮುಂದಿನ ಅನ್ವಯವಿಲ್ಲದ, ಪ್ರತಿಕ್ಷಣವಿಶರಾರುಗಳ್ = ಪ್ರತಿಕ್ಷಣದಲ್ಲಿಯೂ ನಾಶಗೊಳ್ಳುವಂತಹವು, ನಿರಂಶಂಗಳ್ + ಆಗಿಯುಂ = ಅಂಶವಿಲ್ಲದೆಯೂ, ಭ್ರಾಂತಿವಶದಿಂ = ಭ್ರಾಂತಿಗೊಳಗಾಗಿ, ಗ್ರಾಹ್ಯ = ತಿಳಿಯಬೇಕಾದದ್ದು (ಜ್ಞೇಯ), ಗ್ರಾಹಕ = ತಿಳಿಯುವಂತಹುದು (ಜ್ಞಾತೃ), ಸಂವೇದನಾ = ತಿಳಿವಳಿಕೆ (ಜ್ಞಾನ), ಆಕಾರತ್ರಯ = ಮೂರು ರೂಪದಿಂದ, ವಿಜಾತೀಯ = ಬೇರೆ ಬಗೆಯದೂ, ಅವ್ಯವಧಾನ = ಸಂತತವಾದುದೂ, ಲಘು + ಉತ್ಪತ್ತಿ = ಬೇಗ ಹುಟ್ಟುವುದೂ, ತ್ರಯ + ಆಕ್ರಾಂತಂಗಳ್ = ಈ ಮೂರಾಗಿ ಸೇರಿ, ಸದೃಶ = ಹೋಲಿಕೆಯ, ಅಪರ = ಹಿಂದಿನ, ಪರ = ಮುಂದಿನ, ಉತ್ಪತ್ತಿ = ಹುಟ್ಟುವಿಕೆ, ಎಂಬ + ಇವಱಿಂ = ಎನ್ನುವ ಇವುಗಳಿಂದಾಗಿ, ವಿಪ್ರಲಬ್ಧಬುದ್ಧಿಗೆ = ಭ್ರಮೆಗೊಂಡ ಮನಸ್ಸಿಗೆ, ಸಂತಾನರೂಪದಿಂ = ನಿರಂತರವಾಗಿ, ಪುಟ್ಟುತಿರ್ದ = ಹುಟ್ಟುವ, ವಿಜ್ಞಾನಲಕ್ಷಣಗಂಗಳ್ = ತಿಳಿವಳಿಕೆಯೇ, ಆತ್ಮ + ಅಭಿಧಾನಮಂ = ಆತ್ಮ ಎಂಬ ಹೆಸರನ್ನು, ಪುಟ್ಟಿಸುಗುಂ = ಉಂಟುಮಾಡುತ್ತದೆ; ತತ್ + ಏಕ = ಅವುಗಳಲ್ಲಿ ಒಂದೇ, ಗ್ರಾಹಕ = ವಸ್ತುವಾಗಿ, ಪ್ರತಿ + ಅಭಿಜ್ಞಾನಮುಂ = ಅದೇ ಇದು ಎಂಬ ತಿಳಿವಳಿಕೆಯೂ, ಲೂನ = ಕತ್ತರಿಸಲ್ಪಟ್ಟ, ಪುನರ್ಜಾತ = ಮತ್ತೆ ಹುಟ್ಟಿದ, ನಖ = ಉಗುರು, ಕೇಶ + ಆದಿಗಳೊಳ್ = ಕೂದಲು ಮುಂತಾದವುಗಳಲ್ಲಿ, ಏಕತ್ವಂ ಇಲ್ಲದಲ್ಲಿಯುಂ = ಏಕತ್ವವಿಲ್ಲದಿದ್ದರೂ, ಪೂರ್ವ + ಅಪರ = ಹಿಂದುಮುಂದಿನದನ್ನು, ಕಾಣಲ್ + ಅಕ್ಕುಂ = ಉಂಟಾಗಬಹುದು, ಅಪ್ಪುದಱಿಂದಂ = ಆದ್ದರಿಂದ, ಅದುವುಂ = ಅದೂ ಸಹ, ತ್ರಿಕಾಲ + ಅನುಯಾಯಿ = ಮೂರು ಕಾಲಗಳನ್ನು ಅನುಸರಿಸುವ, ಜೀವ + ಅಸ್ತಿತ್ವಮನ್ = ಜೀವದ ಇರುವಿಕೆಯನ್ನು, ಅಱಿಪಲ್ + ಆಱದು = ಸಿದ್ಧಪಡಿ ಸಲಾರದು; ಅದಱಿಂ = ಆದ್ದರಿಂದ, ಪರಲೋಕಸುಖಾರ್ಥಂ = ಪರಲೋಕದ ಸುಖವನ್ನು ಅನುಭವಿಸಲೆಂದು, ಆತ್ಮ + ಅಸ್ತಿತ್ವ = ಆತ್ಮದ ಇರುವಿಕೆಯ, ಅಭಿನಿವೇಶದಿಂ = ನಂಬಿಕೆಯಿಂದ, ತನುಧನನಿಧನಂ ಮಾಡಿ = ದೇಹ ಮತ್ತು ಹಣಗಳನ್ನು ಸವೆಸಿ, ಸೇದೆ + ಕಿಡಲ್ + ಬೇಡ = ಬಳಲಬೇಡ – ಎಂದು ಸಂಭಿನ್ನಮತಿಯು, ನಿಜ + ತನ್ನ, ವಿಜ್ಞಾನವಾದಪುರಸ್ಸರಂ = ವಿಜ್ಞಾನ ವಾದಕ್ಕನುಗುಣವಾಗಿ, ಆತ್ಮನಿರಾಕರಣಮನೆ ಮಾಡಿ = ಆತ್ಮದ ಅಸ್ತಿತ್ವವನ್ನು ಅಲ್ಲಗಳೆದು, ಮಾಣೆ = ನಿಲ್ಲಿಸಲು; ಶೂನ್ಯವಾದಪ್ರಕಾಶನಪರಂ = ಶೂನ್ಯವಾದವನ್ನು ಸಮರ್ಥಿಸುವವನಾದ, ಆವುದು + ಅಂತರ್ ಬಹೀರೂಪದಿಂ = ಯಾವುವು ಒಳಗೂ ಹೊರಗೂ ಇರುವಂತೆ, ವಿಶದದರ್ಶನ + ಅವಗಮ್ಯಂ = ಸ್ಪಷ್ಟವಾಗಿ ತೋರುವುದೋ, ಅದೆಲ್ಲಂ = ಅದೆಲ್ಲವೂ, ಅಸತ್ಯ + ಅವಭಾಸಿ = ಅಸತ್ಯವಾಗಿ ತೋರುವಂಥದು; ಎಂತು = ಹೇಗೆ, ಮರುಮರೀಚಿಕಾ = ಮರುಭೂಮಿಯ ಬಿಸಿಲುಗುದುರೆ, ಸ್ವಪ್ನ = ಕನಸು,

ಇಂದ್ರಜಾಲ = ಯಕ್ಷಿಣಿ, ಆದಿಗಳೊಳ್ = ಮುಂತಾದವುಗಳಲ್ಲಿ, ವಿಶದದರ್ಶನ + ಅವಗಮ್ಯ = ಸ್ಪಷ್ಟವಾಗಿ ತೋರುವಂತಹ, ಜಲ = ನೀರು, ಕರಿ = ಆನೆ, ತುರಗ = ಕುದುರೆ, ನರ + ಆದಿಗಳಂತೆ = ಮನುಷ್ಯರೇ ಮುಂತಾದವರಂತೆ, ಜಾಗೃತ್ + ದಶಾ = ಎಚ್ಚರಸ್ಥಿತಿಯಲ್ಲಿ, ಅಂತರಂಗ ಬಹಿರಂಗವಸ್ತುಗಳುಂ = ಒಳಗಿನ ಮತ್ತು ಹೊರಗಿನ ವಸ್ತುಗಳೂ, ಅವಭಾಸಮಾನ = ತೋರುತ್ತವೆ; ಅದಱಿಂ = ಆ ಕಾರಣದಿಂದ, ಜೀವಂ + ಎಂಬುದು = ಜೀವವೆಂಬುದು, ಎಲ್ಲಿತ್ತು = ಎಲ್ಲಿದೆ? ಪರಲೋಕಂ + ಎಂಬುದು = ಪರಲೋಕ ಎಂಬುದು, ಆವ + ಎಡೆಯದು = ಯಾವ ಸ್ಥಳದಲ್ಲಿದೆ? ಅದರ್ಕೆ = ಅದಕ್ಕೆ, ಕಾರಣಂ + ಅಪ್ಪ = ಕಾರಣವಾದ, ಪಾಪಪುಣ್ಯಂಗಳ್ = ಪಾಪಪುಣ್ಯಗಳು, ಎತ್ತಣಿಂ = ಯಾವ ಕಡೆಯಿಂದ, ಬಂದುವು? ಇವೆಲ್ಲಂ = ಇವೆಲ್ಲವೂ, ಗಂಧರ್ವನಗರಿವಿಳಾಸವಿಳಸಿತಂಗಳ್ = ಗಂಧರ್ವನಗರದ ವೈಭವದಂತೆ ಕಾಣಿಸಿ ಕಣ್ಮರೆಯಾಗುವಂಥವು. ಅದಱಿನ್ = ಆ ಕಾರಣದಿಂದ, ಅಱಿಯದ = ತಿಳಿಯದ, ಅಬೋಧಬೋಧಿತ = ಅಜ್ಞಾನದ ಉಪದೇಶಗೊಂಡ, ತಪೋದಾನವಿಧಾನದಿಂ = ತಪಸ್ಸು ಮತ್ತು ದಾನಗಳಿಂದ, ಮುಧಾ = ವ್ಯರ್ಥವಾದ, ಕ್ಲೇಶ + ಆಯಾಸನಿರತನಾಗಿ = ತೊಂದರೆ ಆಯಾಸಗಳಲ್ಲಿ, ನಿರತರ್ + ಆಗಿ = ತೊಡಗಿಕೊಂಡು, ನಮೆವರ್ = ನವೆಯುತ್ತಾರೆ, ಎಂದು = ಎಂಬುದಾಗಿ, ಶತಮತಿಯುಂ = ಶತಮತಿಯೂ, ಈ ಮಾಟ್ಕೆಯೊಳೆ = ಅದೇ ರೀತಿಯಲ್ಲಿಯೇ, ಜೀವ + ಅಭಾವಮನೆ = ಜೀವವಿಲ್ಲದ್ದನ್ನು, ಸಮರ್ಥಿಸೆ = ಸಮರ್ಥಿಸಿ ಮಾತನಾಡಲು, ತತ್ + ಉಪನ್ಯಸ್ತ = ಆ ಬೋಧನೆಗಳ, ಕುಹೇತು = ಕುತರ್ಕ, ಕುದೃಷ್ಟಾಂತ = ಅಸಮಂಜಸ ನಿದರ್ಶನಗಳಿಂದ ಕೂಡಿದ, ಅನರ್ಥಕ = ಅರ್ಥರಹಿತವಾದ, ವಚನರಚನಾ = ಮಾತುಗಾರಿಕೆಯ, ಪ್ರಲಾಪಮನ್ = ಹರಟೆಯನ್ನು, ಕುಶ + ಅಗ್ರೀಯಬುದ್ಧಿ = ದರ್ಭೆಯಂತೆ ಹರಿತವಾದ ಬುದ್ಧಿ, ಸಮೃದ್ಧಂ = ತುಂಬಿದ, ಸ್ವಯಂಬುದ್ಧನ್ = ಸ್ವಯಂಬುದ್ಧನು, ಅವಧಾರಿಸಿ = ಕೇಳಿ,

**ಗದ್ಯಾನುಸರಣ:** 'ಅಷ್ಟಲ್ಲದೆ, ನರ, ಸೋರೆಬುರುಡೆ, ಕೋಲು ಮತ್ತು ಬೆರಳುಗಳ ಪ್ರಯತ್ನದಿಂದ (ಏಕತಾರಿಯಲ್ಲಿ) ಕಿವಿಗಿಂಪಾದ ನಾದವು ಹೇಗೆ ಹೊಮ್ಮುತ್ತದೆಯೋ ಹಾಗೆಯೇ ಮಣ್ಣು, ನೀರು, ಬೆಂಕಿ ಮತ್ತು ಗಾಳಿಗಳಿಂದ ಬಂದು ಗರ್ಭದ ಆರಂಭದಿಂದ ಹಿಡಿದು ಸಾವಿನವರೆಗೆ ಅವುಗಳ ಸತ್ವದಿಂದ ಚೈತನ್ಯವು ಹುಟ್ಟುತ್ತದೆ; ಹೀಗಾಗಿ ಪರಲೋಕವೂ ಇಲ್ಲ, ಅದೇ ಇಲ್ಲದಿರುವಾಗ ಲೋಕದ ಸುಖವೂ ಇಲ್ಲವಾದ್ದರಿಂದ, ಆ ಲೋಕದ ಸುಖಕ್ಕೆ ಆಸೆಪಟ್ಟು ಈ ಲೋಕದ ಸುಖಗಳಿಂದ ದೂರನಾಗಿ ದೇಹ ಮತ್ತು ಹಣಗಳನ್ನು ವ್ಯಯಮಾಡಿಕೊಳ್ಳುವವನು ಕೈಗೆ ಸಿಕ್ಕಿದ್ದನ್ನು

ಬಿಟ್ಟು ದೂರಕ್ಕೆ ನಡೆದುಕೊಂಡು ಹೋಗಿ ಪಡೆಯುವವನನನ್ನು ಹೋಲುತ್ತಾನೆ' – ಎಂದು ಚಾರ್ವಾಕಮತಕ್ಕನುಗುಣವಾಗಿ ವಾದಮಾಡಿ ನಿಲ್ಲಿಸಿದ; ಆ ಬಳಿಕ ವಿಜ್ಞಾನವಾದವನ್ನು ಅನುಸರಿಸಿ ಸಂಭಿನ್ನಮತಿಯು, ಹಿಂದಿನ ಜ್ಞಾನದಿಂದ ಮುಂದಿನ ಜ್ಞಾನವು ಹುಟ್ಟುತ್ತದೆ; ಕಾರ್ಯಕಾರಣಗಳೊಡನೆ ಸೇರಿಕೊಂಡು ಪ್ರತಿಕ್ಷಣವೂ ನಾಶವಾಗುತ್ತ ಅಂಶಗಳಿಲ್ಲದೆಯೂ ಭ್ರಾಂತಿಯಿಂದಾಗಿ – ತಿಳಿಯಬೇಕಾದ್ದು, ತಿಳಿಯುವಂತಹುದು ಮತ್ತು ತಿಳಿವಳಿಕೆಗಳ ರೂಪದಿಂದ ಕೂಡಿ – ಬೇರೆ ಬಗೆ, ಸಂತತವಾದುದು ಮತ್ತು ಬೇಗ ಹುಟ್ಟುವುದು ಈ ಮೂರೂ ಸೇರಿ ಹೋಲಿಕೆಯ ಹಿಂದುಮುಂದಿನ ಹುಟ್ಟುಗಳಿಂದ ಕೂಡಿರುವುದರಿಂದಾಗಿ ಈ ತಿಳಿವಳಿಕೆಯೇ ಭ್ರಾಂತಮನಸ್ಸಿಗೆ 'ಆತ್ಮ' ಎನಿಸುತ್ತದೆ. ಅವುಗಳಲ್ಲಿನ ಒಂದುತನದಿಂದಾಗಿ ಅದೇ ಇದು ಎನ್ನಿಸಿ, ಕತ್ತರಿಸಿದ ಉಗುರು ಹಾಗೂ ಕೂದಲುಗಳಲ್ಲಿ ಹಿಂದಿನ ಮತ್ತು ಮುಂದಿನವುಗಳಲ್ಲಿ ಒಂದುತನವಿಲ್ಲದಿದ್ದರೂ ಹಾಗೆ ಕಾಣಿಸುತ್ತದೆ. ಆದ್ದರಿಂದ ಅದೂ ಮೂರು ಕಾಲಗಳನ್ನು ಅನುಸರಿಸುವ ಜೀವದ ಇರುವಿಕೆಯನ್ನು ಸಿದ್ಧಪಡಿಸಲಾರದು; ಆದ್ದರಿಂದ ಪರಲೋಕದ ಸುಖವನ್ನು ಅನುಭವಿಸಲೆಂದು ಆತ್ಮದ ಇರುವಿಕೆಯ ನಂಬಿಕೆಯಿಂದ, ದೇಹ ಮತ್ತು ಹಣಗಳನ್ನು ಸವೆಸಿ ಬಳಲಬೇಡ' – ಎಂದು ಆತ್ಮನಿರಾಕರಣೆಯನ್ನು ಮಾಡಿದನು. ಆಗ, ಶೂನ್ಯವಾದದ ಸಮರ್ಥಕನಾದ ಶತಮತಿಯು, 'ಯಾವುವು ಒಳಗೂ ಹೊರಗೂ ಇರುವಂತೆ ತೋರುವುದೋ ಅದೆಲ್ಲ ಅಸತ್ಯಗಳು; ಹೇಗೆ ಮರುಭೂಮಿಯ ಬಿಸಲುಗುದುರೆ, ಕನಸು ಮತ್ತು ಯಕ್ಷಿಣಿಗಳಲ್ಲಿ ಸ್ಪಷ್ಟವಾಗಿ ಕಾಣಿಸುವ ನೀರು, ಆನೆ, ಕುದುರೆ ಮತ್ತು ಮನುಷ್ಯರಂತೆ ಸತ್ಯದ ಹಾಗೆ ತೋರುವುವು; ಹಾಗೆಯೇ ಎಚ್ಚರದ ಸ್ಥಿತಿಯಲ್ಲಿ ತೋರುವ ಅಂತರಂಗ ಬಹಿರಂಗ ವಸ್ತುಗಳು. ಹಾಗಾಗಿ ಜೀವ ಎಲ್ಲಿದೆ, ಪರಲೋಕ ಯಾವ ಜಾಗದಲ್ಲಿದೆ, ಅದಕ್ಕೆ ಕಾರಣವೆನಿಸಿದ ಪಾಪಪುಣ್ಯಗಳು ಎಲ್ಲಿನವು? ಇವೆಲ್ಲ ಗಂಧರ್ವನಗರದ ವೈಭವದಂತೆ ಮಿಂಚಿ ಮಾಯವಾಗುವಂಥವು. ಇದನ್ನು ಅರ್ಥಮಾಡಿಕೊಳ್ಳದೆ ಅಜ್ಞಾನದ ಉಪದೇಶಗೊಂಡ ತಪಸ್ಸು ಮತ್ತು ದಾನಗಳನ್ನು ಮಾಡುತ್ತ ಕಷ್ಟಕಾರ್ಪಣ್ಯಗಳನ್ನು ತಂದುಕೊಂಡು ಜನರು ನವೆಯುತ್ತಾರೆ' ಎಂದು ವಾದಿಸಿದ. ಈ ವಾದಗಳ ಕುತರ್ಕ, ಅಸಮಂಜಸ ನಿದರ್ಶನಗಳಿಂದ ಕೂಡಿದ ಅರ್ಥರಹಿತವಾದ ಹರಟೆಯಂತಹ ಮಾತುಗಳನ್ನು ಹರಿತಬುದ್ಧಿಯಿಂದ ತುಂಬಿದ್ದ ಸ್ವಯಂಬುದ್ಧನು ಕೇಳಿದ.

**ಅನುವದಿಸಿದಪುದು ನುಡಿ ನುಡಿ**
**ದನಿತುಮನೆ ತೊದಳ ತೊದಳ ದೆಸೆಯಿಲ್ಲೆನೆ ವಾ**
**ತಿನ ಪಸುಗೆ ಪಸುಗೆವಡೆದ**
**ತ್ತೆನೆ ನುಡಿದಂ ಮಧುರಮೃದುಗಭೀರಧ್ವನಿಯಿಂ ೧೦**

**ಪದವಿಭಾಗ–ಅನ್ವಯ–ಅರ್ಥ:** ನುಡಿ = ಆಡುವ ಮಾತು, ನುಡಿದ + ಅನಿತುಮನೆ = ಹಿಂದೆ ಹೇಳಿದುದನ್ನೇ, ಅನುವದಿಪುದು = ಅನುವಾದಿಸುತ್ತದೆ, ಎನೆ = ಎನ್ನುವಂತೆ; ತೊದಳ = ಮಧುರಧ್ವನಿಯಲ್ಲಿ, ತೊದಳಿಲ್ಲ = ಕುಂದಿಲ್ಲ, ಎನೆ = ಎನ್ನಿಸುವಂತೆಯೂ; ಮಾತಿನ = ಮಾತುಗಳಲ್ಲಿನ, ಪಸುಗೆ = ವಿವೇಕವು, ಪಸುಗೆ + ಪಡೆದತ್ತು = ತನ್ನ ಪಾಲನ್ನು ಪಡೆಯಿತು ಎಂಬಂತೆ; ಸ್ವಯಂಬುದ್ಧನು, ಮೃದುಗಭೀರಧ್ವನಿಯಿಂ = ಮಧುರವೂ ಆಳವೂ ಆದ ಧ್ವನಿಯಿಂದ, ನುಡಿದಂ = ಮಾತನಾಡಿದ.

**ಗದ್ಯಾನುಸರಣ:** ಸ್ವಯಂಬುದ್ಧನ ಮೃದುವೂ ಆಳವೂ ಆದ ಮಾತುಗಳು ಹಿಂದೆ ತಾನಾಡಿದ ಅನುವಾದದಂತೆ, ಕುಂದಿಲ್ಲದ ರೀತಿಯಲ್ಲಿ, ವಿವೇಕದ ಮುಖ್ಯ ಪಾಲನ್ನು ಒಳಗೊಂಡು ಇದ್ದುವು.

**ವ।** ನಿಮ್ಮ ಮುನ್ನ ನುಡಿದ ಕಾಯಾಕಾರಣಪರಿಣತಭೂತಸ್ವಭಾವಮೆ ಚೈತನ್ಯಮರ್ಥಾಂತರಭೂತಮಲ್ಲೆಂಬ ನುಡಿ ಕಾಯಾಕಾರ ಪರಿಣತ ಭೂತ ಚೈತನ್ಯಂಗಳ್ ಬಹಿರಂತರ್ಮುಖಾವಭಾಸಿಗಳ್ ಬಾಲ್ಯಾದಿ ರಾಗಾದಿವಿರುದ್ಧ ಧರ್ಮಾಧ್ಯಾಸಿಂತಗಳುಮೊ ರ್ಬನಿಂದೊಂದೆ ಸಮಯ ದೊಳ್ ನಿಯಮದಿಂ ದ್ರವ್ಯಾಂತರಭಾವದಿಂ ಭಿನ್ನಪ್ರಮಾಣ ಗ್ರಾಹ್ಯಂ ಗಳಪ್ಪುದಱಿಂ ಕೂಡಿಬಾರದು. ದೇಶಭೇದದಿಂ ಬೇಱ್ವೇಱ್ ಕಾಣಲಾಗದದ ಱಿಂದದರ್ಕೆ ಭೇದಮೆಂಬೆ ಯಪ್ಪೊಡೆ ಶರೀರರೂಪ ಪರಿಣತಾವನಿ ಪವನಸಖ ಪವನಂಗಳ್ಗೆ ದೇಶಭೇದ ಮಿಲ್ಲ. ಅವರ್ಕಮೇಕತ್ವಮಾಗಿ 'ಚತ್ವಾರ್ಯೇವ ತತ್ವಾನಿ' ಯೆಂಬ ನಿನ್ನ ಮಾತು ವಿಘಟಿಸುಗುಂ. ಪಿಷ್ಟೋದಕಾದಿ ದ್ರವ್ಯಾನ್ವಯ ವ್ಯತಿರೇಕಾನುವಿಧಾಯಿ ಯಪ್ಪ ಮದಶಕ್ತಿ ಎಂತು ತತ್ಕಾರ್ಯಮಂತೆ ತಚ್ಚೈತನ್ಯಮುಂ ಭೂತಾನ್ವಯ ವ್ಯತಿಕಾರಿಯುಪ್ಪುದಱಿಂ ಭೂತೋ ಪಾದಾನಕಾರಣಕಾರ್ಯಮೆಂಬೀ ವಚನಮುಪಾದಾನವಿಕಾರಮಲ್ಲದೆ ವಿಕಾರಮಂ ಕೈಕೊಳ್ಳದು. ಉಪಾದೇಯ ಧರ್ಮಮುಂ ತನ್ನ ವಿಕಾರಮನುಪಾದೇಯಕೊಪ್ಪಿಸುವ ಪೂರ್ವಾಕಾರಮಂ ಬಿಸುಟ್ಟುತ್ತರಾಕಾರಮಂ ಕೈಕೊಳ್ವುಪಾದಾನಧರ್ಮಮುಂ ಭೂತಚೈತನ್ಯಂಗ ಳೊಳ್ ಕಾಣಲಾಗುದುದಱಿಂ ಕೂಡಿಬಾರದು; ಬಾಲ್ಯಾದಿ ವಯೋ ವಿಶೇಷಂಗಳೊಳ್ ಶರೀರಂ ಬಳಿಯೆ ಚೈತನ್ಯ ಬಳಿವುದಱಿಂ ಭೂತೋಪಾದಾನ ಕಾರಣಕಾರ್ಯಂ ಚೈತನ್ಯಮೆಂಬೆಯಪ್ಪೊಡೆಯದುವುಂ ಹಿತಾಹಿತವಿವೇಕ ವಿಕಳತೆಯಿಂ ತಮ್ಮಿಂ ತಾಮೆ ಕಟ್ಟಿಸುವ ಮಹಾಕಾಯಂಗಳಪ್ಪ ಕರಿಪತಿ ಗಳಂದಂ; ಅನ್ಯೆಕಾಂತಿಕರ್ಕೆಲರ್ತನುತರತನುಗಳೊಳ ಮತಿವಿಶದ ಪ್ರಜ್ಞಾ ತಿಶಯಮಂ ಕಾಣಲಾದಪ್ಪುದು, ಶರೀರವೃದ್ಧಿಯೊಳ್ ಚೈತನ್ಯವೃದ್ಧಿಯೆಂಬುು ದುದಕ ವೃದ್ಧಿಯೊಳಂಕುರವೃದ್ಧಿಯೆಂತಂತೆ ಸಹಕಾರಿ ಕಾರಣಮೆಂದನೇಕ ಯುಕ್ತ್ಯೋಕ್ತಿಗಳಿಂ

ಭೂತವಾದಿಯಪ್ಪ ಮಹಾಮತಿಯಂ ನಿರಾಕರಿಸಿ, ವಿಶ್ವವಿಜ್ಞಾನವಾದಮೆಂಬಿದಂ ವಿಜ್ಞಾನದಿಂದೆ ನೀಂ ಸಾಧಿಸುವೆಯಪ್ಪೊಡೆ ಸಾಧ್ಯಸಾಧನಂಗಳವ್ಯಕ್ತಮಪ್ಪುದಱಿಂ ಸಾಧ್ಯಂ ನಿಶ್ಚಯಮಾಗದು, ವಿಜ್ಞಾನ ವ್ಯತಿರಿಕ್ತಸಾಧನ ವಾಕ್ಯೋಪನ್ಯಾಸದಿಂ ಸಾಧಿಸುವೊಡಾವಾಕ್ಯಮುಂ ಬಹಿರರ್ಥಮಪ್ಪುದಱಿಂ ಬಾಹ್ಯಾರ್ಥ ಸಿದ್ಧಿಯಕ್ಕುಂ; ಆ ವಾಕ್ಯಮುಂ ವಿಜ್ಞಾನಮೆಂಬೆ ಯಪ್ಪೊಡೆ ಪೂರ್ವೋಕ್ತ ದೋಷ ಪಾಷಾಣ ಸಂಚೂರ್ಣಿತಮತಿಯ್ಯೆ ಏನನೇತಱಿನೊಳ್ನಿಶ್ಚೈಸುವೈ ಮತ್ತಂ ವಿಜ್ಞಾನಂ ವಿಜ್ಞಾನಾಂತರ ಗ್ರಾಹಕ ಮಕ್ಕುಮಪ್ಪೊಡಾವ ಮಾಱ್ಕೆಯೊಳ್ ವಿಜ್ಞಾನಾಂತರಮಪ್ಪುದಾ ಮಾಱ್ಕೆಯೊಳೆ ಬಹಿರರ್ಥಸಿದ್ಧಿಯಾಗಿ ಸರ್ವಪ್ರತ್ಯಯ ನಿರಾಲಂಬನವಾದಂ ಕಿಡುಗುಂ, ಅದುವುಂ ವಿಜ್ಞಾನಾಂತರ ಗ್ರಾಹಿಯಾಗದಪ್ಪೊಡೆ ಸಂತಾನಾಂತರ ನಿರಸನಮಕ್ಕುಂ ಅನುಮಾನದಿಂ ಸಂತಾನಾಂತರಮಂ ಸಾಧಿಸುವೆನೆಂಬೆ ಯಪ್ಪೊಡೆ ಬಹಿರರ್ಥ ಸಿದ್ಧಿಯಕ್ಕುಂ; ಮತ್ತಂ ವಿಜ್ಞಾನವಮಾತ್ರಮಲ್ಲದೆ ಪೆಱತಿಲ್ಲಕ್ಕುಮಪ್ಪೊಡೆ ವಿಜ್ಞಾನಮಾತ್ರಮೇ ತತ್ವಮೆಂಬೀ ವಚನವಿಲಜ್ಞಾನಂಗಳ್, ಒ ಸ್ಯಾರ್ಥ ಶೂನ್ಯಂಗಳಪ್ಪುದಱಿನನಂತ್ಯಂಗಳಕ್ಕುಮಾದಂದ ಸತ್ಯೇತರ ವಿಭಾಗಂಗಳಂ ಪಡೆಯಲಾಗದು, ಅದು ಸಾಧನದೂಷಣ ಪ್ರಯೋ ಗಾನ್ಯಥಾನುಪಪತ್ತಿಯಿಂ ಬಹಿರರ್ಥಸಿದ್ಧಿಯಕ್ಕುಮದಱಿಂ ವಿಜ್ಞಾನ ಮಾತ್ರಮೆ ತತ್ವಮಾತ್ಮಾದಿ ತತ್ವಮಿಲ್ಲೆಂಬನಿನ್ನ ಮಾತು ಭಿನ್ನಭಾಜನಸಮಾನಮೆಂದು ಸಂಭಿನ್ನಮತಿಗಂ ಪ್ರತಿಭಾಭಂಗಮಂ ಮಾಡಿ, ಸಕಳಬಹಿರಜ್ಞಾನ್ತರಜ್ಞತತ್ವಂಗಳ್ ಶೂನ್ಯಂಗಳೆಂಬಿದನಱಿಮುವ ಭವತ್ತ್ರಯಭಿದಾನಂಗಳ್ ಶೂನ್ಯಂಗಳೆ ಅಕ್ಕುಮಪ್ಪೊಡೆ ಸರ್ವಶೂನ್ಯಮೆಂಬೀ ನಿನ್ನ ಮಾತು ಕೆಟ್ಟುಪೋಕುಂ ತತ್ತ್ರತ್ಯಯಾಭಿದಾನಂಗಳುಳ್ಳೊಡೆ ಅವೆಂತೊಳವಂತೆ ವಸ್ತುಗಳೆಲ್ಲಮೊಳವಪ್ಪು ದಱಿನನಾದ್ಯನಿಧನ ಸ್ವಭಾವನುಂ ಸುಕೃತ ದುಷ್ಕೃತಕರ್ಮೋಪಾರ್ಜನನುಂ ತತ್ಫಲಭಾಜನನುಂ ಸೂಕ್ಷ್ಮರೂಪಮನಂತಜ್ಞಾನಾದಿ ಗುಣರೂಪನುಂ ಸಂಹರಣ ವಿಸರ್ಪಣಸ್ವರೂಪನುಮಾತ್ಮೋಪಾತ್ತಶರೀರ ಪ್ರಮಾಣನುಮು ತ್ಪಾದವ್ಯಯ ಧ್ರುವ್ಯಾತ್ಮಕನುಂ ಸಕಳಕರ್ಮನಿರ್ಮೂಲನಕರನುಂ ತ್ರಿಲೋಕಶಿಖರಿ ಶೇಖರನುಮಪ್ಪ ಜೀವನುಂಟೆಂದು ಶತಮತಿವೆರಸು ಮೂವರುಂ ಪ್ರತಿವಾದಿಗಳನಪ್ರತಿಹತಪ್ರತಿಭೆಯಿನಪಗತಪ್ರತಿಭರ್ಮಾಡಿ ಸಭಾಪತಿಯಾಗಿರ್ದ ಮಹಾಬಳನುಂ ಪ್ರಾಶ್ನಿಕರಾಗಿರ್ದ ವಿದ್ವಜ್ಜನಮುಮಂ ಸಭಾಜನಮುಮಂ ತಿಳಿಪಿ,

**ಪದವಿಭಾಗ–ಅನ್ವಯ–ಅರ್ಥ:** ನಿಮ್ಮ ಮುನ್ನ ನುಡಿದ = ನೀವು ಈಗ ಹೇಳಿದ, ಕಾಯ + ಆಕಾರ = ದೇಹದ ಆಕೃತಿಯನ್ನು, ಪರಿಣತ = ಆಶ್ರಯಿಸಿದ, ಭೂತಸ್ವಭಾವಮೆ = ಭೂತವೇ, ಚೈತನ್ಯಂ = ಚೈತನ್ಯ; ಅರ್ಥಾಂತರಭೂತಂ + ಅಲ್ಲ = ಬೇರೆ ಅಲ್ಲ, ಎಂಬ ನುಡಿ = ಎಂಬ ಮಾತು, (ಸರಿಯಲ್ಲ); ಕಾಯಾಕಾರ = ದೇಹದ ಆಕೃತಿ, ಪರಿಣತಭೂತಚೈತನ್ಯಂಗಳ್ = ಆಶ್ರಯಿಸಿದ ಚೈತನ್ಯವು, ಬಹಿರಂತರ್ಮುಖ = ಹೊರಗಣ್ಣಿಗೆ, ಅವಭಾಸಿಗಳ್ = ಕಾಣಿಸುವಂಥವು; ಬಾಲ್ಯಾದಿ = ಬಾಲ್ಯ ಮೊದಲಾದ, ರಾಗಾದಿ = ಭಾವನೆಗಳೆ ಮೊದಲಾದುಗಳ, ವಿರುದ್ಧಧರ್ಮ = ವಿರುದ್ಧವಾದ ಸ್ವಭಾವಗಳನ್ನು, ಅಧ್ಯಾಸಿಂತಗಳುಂ =

ಒಳಗೊಂಡಿರುವಂಥದೂ, ಒರ್ಬನಿಂದ = ಒಬ್ಬನಿಂದ, ಒಂದೆ ಸಮಯದೊಳ್ = ಒಂದು ಬಾರಿಗೆ, ನಿಯಮದಿಂ = ನಿಯಮಕ್ಕನುಸಾರವಾಗಿ, ದ್ರವ್ಯಾಂತರಭಾವದಿಂ = ಭಿನ್ನ ದ್ರವ್ಯಗಳಿಂದ, ಭಿನ್ನಪ್ರಮಾಣ = ಬೇರೆ ಬೇರೆ ಗಾತ್ರಗಳು, ಗ್ರಾಹ್ಯಂಗಳಪ್ಪುದಱಿಂ = ಕಾಣಿಸುವುದರಿಂದ, ಕೂಡಿಬಾರದು = ಸರಿಹೋಗದು; ದೇಶಭೇದದಿಂ = ಜಾಗದ ವ್ಯತ್ಯಾಸದಿಂದ, ಬೇಱೆವೇಱೆ ಕಾಣಲಾಗದು = ಬೇರೆ ಬೇರೆ ರಿತಿಯಲ್ಲಿ ಕಾಣಿಸದು, ಅದಱಿಂದ + ಆ ಕಾರಣದಿಂದ, ಅದರ್ಕೆ = ಅದನ್ನು, ಭೇದಂ + ಎಂಬೆ + ಅಪ್ಪೊಡೆ = ಬೇರೆ ಎನ್ನುವುದಾದರೆ, ಶರೀರರೂಪ = ದೇಹದ ಆಕೃತಿಯಲ್ಲಿ, ಪರಿಣತ = ಕೂಡಿರುವ, ಅವನಿ = ಮಣ್ಣು, ಪವನಸಖ = ಬೆಂಕಿ, ಪವನಂಗಳ್ಗೆ = ಗಾಳಿಗಳಿಗೆ, ದೇಶಭೇದಮಿಲ್ಲ = ಜಾಗದ ವ್ಯತ್ಯಾಸ ಇರುವುದಿಲ್ಲ; ಅವರ್ಕಂ = ಅವೆಲ್ಲಕ್ಕೂ, ಏಕತ್ವಮಾಗಿ = ಏಕತ್ವವುಂಟಾಗಿ, 'ಚತ್ವಾರ್ಯೇವ ತತ್ವಾನಿ' + ಎಂಬ = ತತ್ವಗಳು ನಾಲ್ಕು ಎನ್ನುವ, ನಿನ್ನ ಮಾತು, ವಿಘಟಿಸುಗುಂ = ಸುಳ್ಳಾಗುತ್ತದೆ; ಪಿಷ್ಟ + ಉದಕ + ಆದಿ = ಹಿಟ್ಟು ನೀರು ಮುಂತಾದ, ದ್ರವ್ಯಾನ್ವಯ ವಸ್ತುಗಳ ಸೇರುವಿಕೆಯು, ವ್ಯತಿರೇಕ + ಅನುವಿಧಾಯಿ + ಅಪ್ಪ = ಭಿನ್ನತೆಯನ್ನು ಹೊಂದಿದ್ದರೂ, ಮದಶಕ್ತಿ = ಮದಶಕ್ತಿಯು, ಎಂತು = ಹೇಗೆ, ತತ್ + ಕಾರ್ಯಂ + ಅಂತೆ = (ಉಂಟುಮಾಡುವುದು) ಅದರ ಪರಿಣಾಮವೋ, (ಹಾಗೆಯೇ) ತತ್ + ಚೈತನ್ಯಮುಂ = ಆ ಚೈತನ್ಯವೂ, ಭೂತಾನ್ವಯವ್ಯತಿಕಾರಿ + ಅಪ್ಪುದಱಿಂ = ಭೂತಸಮುದಾಯಗಳನ್ನು ಅನುಸರಿಸುವುದರಿಂದ, ಭೂತ + ಉಪಾದಾನ = ಭೂತಗಳಿಂ ಪಡೆದ, ಕಾರಣ = ಕಾರಣದಿಂದಾದ, ಕಾರ್ಯಂ + ಎಂಬೀ = ಕೆಲಸ ಎನ್ನುವ, ವಚನಂ = ಮಾತು, ಉಪಾದಾನವಿಕಾರಂ = ತಪ್ಪು ತಿಳಿವಳಿಕೆ, ಅಲ್ಲದೆ, ವಿಕಾರಮಂ = ಬೇರೆಯದನ್ನು, ಕೈಕೊಳ್ಳದು = ಪಡೆಯುವುದಿಲ್ಲ. ಉಪಾದೇಯ ಧರ್ಮಮುಂ = ಸ್ವೀಕರಿಸುವ ಧರ್ಮವೂ, ತನ್ನ ವಿಕಾರಮನ್ = ತನ್ನ ಬೇರೆತನವನ್ನು, ಉಪಾದೇಯಕೆ + ಒಪ್ಪಿಸುವ = ಸ್ವೀಕಾರಾರ್ಹವಾದುದಕ್ಕೆ ಅರ್ಪಣೆಗೊಳ್ಳುವ, ಪೂರ್ವ + ಆಕಾರಮಂ = ಹಿಂದಿನ ಸ್ವರೂಪವನ್ನು, ಬಿಸುಟ್ಟು = ಬಿಟ್ಟು ಉತ್ತರ + ಆಕಾರಮಂ = ಆನಂತರದ ಸ್ವರೂಪವನ್ನು, ಕೈಕೊಳ್ವ + ಉಪಾದಾನಧರ್ಮಮುಂ = ಧರಿಸುವ ಸ್ವಭಾವವೂ, ಭೂತಚೈತನ್ಯಂಗಳೊಳ್ = ಭೂತ ಮತ್ತು ಚೈತನ್ಯಗಳಲ್ಲಿ, ಕಾಣಲಾಗದು = ಕಾಣಲಾಗುವುದಿಲ್ಲ, ಅದಱಿಂ = ಆದ್ದರಿಂದ, ಕೂಡಿಬಾರದು = ಸರಿಹೋಗದು.; ಬಾಲ್ಯ + ಆದಿ = ಬಾಲ್ಯವೇ ಮುಂತಾದ, ವಯೋವಿಶೇಷಂಗಳೊಳ್ = ವಯಸ್ಸಿನ ವಿಶೇಷ ಸ್ಥಿತಿಗಳಲ್ಲಿ, ಶರೀರಂ ಬಳೆಯೆ = ದೇಹವು ಬೇಳೆದಾಗ, ಚೈತನ್ಯಂ = ಚೈತನ್ಯವೂ, ಬಳೆವುದಱಿಂ = ಬೆಳೆಯುವುದರಿಂದ, ಭೂತ + ಉಪಾದಾನಕಾರಣ = ಭೂತದ ನೀಡುವಿಕೆಯಿಂದಾದ, ಕಾರ್ಯಂ = ಪರಿಣಾಮವೇ, ಚೈತನ್ಯಂ + ಎಂಬೆಯಪ್ಪೊಡೆ =ಚೈತನ್ಯ ಎಂದು ಹೇಳುವುದಾದರೆ, ಅದುವುಂ = ಅದೂ ಸಹ,

ಹಿತ + ಅಹಿತವಿವೇಕವಿಕಳತೆಯಿಂ = ಒಳ್ಳೆದು ಕೆಟ್ಟುದು ಎಂಬ ವಿವೇಚನೆಯಿಲ್ಲದೆ, ತಮ್ಮಿಂ ತಾಮೆ ಕಟ್ಟಿಸುವ = ತಮಗೆ ತಾವೇ ಕಟ್ಟಿಸಿಕೊಳ್ಳುವ, ಮಹಾಕಾಯಂಗಳ್ + ಅಪ್ಪ = ಭಾರಿ ದೇಹಗಳನ್ನುಳ್ಳ, ಕರಿಪತಿಗಳಂದಂ = ಆನೆಗಳಂತೆ; (ಹೇಗೆಂದರೆ) ಅನ್ಯೈಕಾಂತಿಕರ್ + ಕೆಲರ್ = ಏಕಾಂಗಿಗಳಾದ ಕೆಲವರು, ತನುತರ = ಕೃಶವಾದ, ತನುಗಳೊಳಂ = ದೇಹಗಳಲ್ಲಿಯೂ, ಅತಿವಿಶದಪ್ರಜ್ಞಾ + ಅತಿಶಯಮಂ = ಅತ್ಯಂತ ಸ್ಪಷ್ಟವಾದ ಪ್ರಜ್ಞೆಯನ್ನು, ಕಾಣಲ್ + ಆದಪ್ಪುದು = ಕಾಣಬಹುದು; ಶರೀರವೃದ್ಧಿಯೊಳ್ ಚೈತನ್ಯವೃದ್ಧಿಯೆಂಬುದು ದೇಹ ಬೆಳೆದಂತೆ ಚೈತ್ಯವೂ ಬೆಳೆಯುತ್ತದೆ ಎಂಬುದು, ಉದಕವೃದ್ಧಿಯೊಳ್ = ನೀರು ಹೆಚ್ಚಾದರೆ, ಅಂಕುರವೃದ್ಧಿಯೆಂತು = ಮೊಳಕೆಯೂ ಹೆಚ್ಚಾಗುತ್ತದೆಯೋ, ಅಂತೆ = ಹಾಗೆಯೇ, ಸಹಕಾರಿಕಾರಣಂ = ಪರಸ್ಪರತ್ವವು ಕಾರಣ, ಎಂದು + ಅನೇಕ = ಎಂಬುದಾಗಿ ನಾನಾ, ಯುಕ್ತ್ಯೋಕ್ತಿಗಳಿಂ = ಸಮಂಜಸವಾದ ಮಾತುಗಳಿಂದ, ಭೂತವಾದಿಯಪ್ಪ = ನಿರೀಶ್ವರವಾದಿಯಾದ, ಮಹಾಮತಿಯುಂ ನಿರಾಕರಿಸಿ = ಮಹಾಮತಿಯನ್ನು ಸೋಲಿಸಿ; ವಿಶ್ವವಿಜ್ಞಾನವಾದಮೆಂಬಿದಂ = ವಿಜ್ಞಾನವಾದದ ಮೂಲಕ, ವಿಜ್ಞಾನದಿಂದೆ = ವಿಜ್ಞಾನದಿಂದ, ನೀಂ ಸಾಧಿಸುವೆಯಪ್ಪೊಡೆ = ಸಾಧಿಸಿ ತೋರಿಸುತ್ತೇನೆಂದರೆ, ಸಾಧ್ಯಸಾಧನಂಗಳ್ = ಸಾಧಿಸುವ ಸಾಧನಗಳು, ಅವ್ಯಕ್ತಂ + ಅಪ್ಪುದಱಿಂ = ಕಾಣಿಸದಿರುವುದರಿಂದ, ಸಾಧ್ಯಂ = ವಿಜ್ಞಾನವು, ನಿಶ್ಚಯಂ + ಆಗದು = ನಿಶ್ಚಿತವಾಗುವುದಿಲ್ಲ; ವಿಜ್ಞಾನವ್ಯತಿರಿಕ್ತ = ಜ್ಞಾನಕ್ಕೆ ಭಿನ್ನವಾದ, ಸಾಧನ ವಾಕ್ಯ + ಉಪನ್ಯಾಸದಿಂ = ಮಾತುಗಳಿಂದ, ಸಾಧಿಸುವೊಡೆ = ಸಾಧಿಸುವುದಾದರೆ, ಆ ವಾಕ್ಯಮುಂ = ಆ ಮಾತೂ, ಬಹಿರ್ + ಅರ್ಥಮಪ್ಪುದಱಿಂ = ಹೊರ ಅರ್ಥವನ್ನು ತಿಳಿಸುವುದರಿಂದಾಗಿ, ಬಾಹ್ಯಾರ್ಥಸಿದ್ಧಿಯಕ್ಕುಂ = ಹೊರ ಅರ್ಥವು ಲಭಿಸುತ್ತದೆ; ಆ ವಾಕ್ಯಮುಂ = ಅದನ್ನೂ, (ನೀನು) ವಿಜ್ಞಾನಂ + ಎಂಬೆಯಪ್ಪೊಡೆ = ವಿಜ್ಞಾನವೇ ಎನ್ನುವುದಾದರೆ, ಪೂರ್ವೋಕ್ತ = ಹಿಂದೆ ಹೇಳಿದ, ದೋಷಪಾಷಾಣ = ತಪ್ಪುಗಳಿಂದ, ಸಂಚೂರ್ಣಿತಮತಿಯೈ = ಎಲೈ ಚೂರಾದ ಬುದ್ಧಿಯುಳ್ಳವನೇ, ಏನನ್ + ಏತಱೊಳ್ + ನಿಶ್ಚೈಸುವೈ = ಯಾವುದನ್ನು ಯಾವುದರಿಂದ ಸಿದ್ಧಪಡಿಸುತ್ತೀಯೆ;? ಮತ್ತಂ = ಅದಲ್ಲದೆ, ವಿಜ್ಞಾನಂ = ವಿಜ್ಞಾನವನ್ನು, ವಿಜ್ಞಾನಾಂತರ = ಬೇರೊಂದು ವಿಜ್ಞಾನದಿಂದ, ಗ್ರಾಹಕಂ + ಅಕ್ಕುಂ + ಅಪ್ಪೊಡೆ = ತಿಳಿಯಬಹುದಾದರೆ, ಆವ ಮಾಟ್ಕೆಯೊಳ್ = ಯಾವ ಬಗೆಯಲ್ಲಿದು, ಅದು ಬೇರೊಂದು ವಜ್ಞಾನವಾಗುತ್ತದೆ? ಆ ವಿಜ್ಞಾನಾಂತರಮಪ್ಪುದು = ಹಾಗೆ ಬೇರೊಂದು ವಿಜ್ಞಾನವಾಗುವುದೋ, ಆ ಮಾಟ್ಕೆಯೊಳ್ = ಅದೇ ರೀತಿಯಲ್ಲಿಯೇ, ಬಹಿರರ್ಥಸಿದ್ಧಿಯಾಗಿ = ಹೊರ ಅರ್ಥವು ಉಂಟಾಗಿ, ಸರ್ವಪ್ರತ್ಯಯ = ಎಲ್ಲಕ್ಕೂ ಕಾರಣವಾಗುವ ನಿರಾಲಂಬನವಾದಂ ಕಿಡುಗುಂ = ನಿರಾಲಂಬವಾದವು ಕೆಡುತ್ತದೆ; ಅದುವುಂ = ಅದೂ ಸಹ, ವಿಜ್ಞಾನಾಂತರಗ್ರಾಹಿಯಾಗದಪ್ಪೊಡೆ = ಮತ್ತೊಂದು

ಜ್ಞಾನದಿಂದ ತಿಳಿಯಲಾರದ್ದಾದರೆ, ಸಂತಾನಾಂತರ = ಸಾತತ್ಯವು, ನಿರಸನಂ + ಅಕ್ಕುಂ = ನಾಶವಾಗುತ್ತದೆ; ಅನುಮಾನದಿಂ = ಊಹೆಯಿಂದ, ಸಂತಾನಾಂತರಮಂ = ಸಾತತ್ಯವನ್ನು, ಸಾಧಿಸುವೆನ್ + ಎಂಬೆಯಪ್ಪೊಡೆ = ಸಾಧಿಸುತ್ತೇನೆ ಎನ್ನುವೆಯಾದರೆ, ಬರ್ + ಆರ್ಥಸಿದ್ಧಿಯಕ್ಕುಂ = ಹೊರ ಅರ್ಥವೇ ಸಿದ್ಧಿಸುತ್ತದೆ; ಮತ್ತಂ = ಅದೂ ಅಲ್ಲದೆ, ವಿಜ್ಞಾನಮಾತ್ರಮಲ್ಲದೆ = ವಿಜ್ಞಾನವಷ್ಟೇ ಅಲ್ಲದೆ, ಪೆಱತು + ಇಲ್ಲಕ್ಕುಂ + ಅಪ್ಪೊಡೆ = ಬೇರೊಂದು ಇಲ್ಲವಾದರೆ, ವಿಜ್ಞಾನಮಾತ್ರಮೇ = ವಿಜ್ಞಾನವಷ್ಟೇ, ತತ್ವಂ + ಎಂಬ ಈ = ತತ್ವ ಎನ್ನುವ ಈ, ವಚನವಿಜ್ಞಾನಂಗಳ್ = ಮಾತಿನ ವಿಜ್ಞಾನಗಳು, ಬಾಹ್ಯಾರ್ಥಶೂನ್ಯಂಗಳ್ + ಅಪ್ಪುದಱಿನ್ = ಹೊರ ಅರ್ಥಗಳಿಲ್ಲದ್ದರಿಂದ, ಅನಂತ್ಯಂಗಳಕ್ಕುಂ = ಕೊನೆಯಿಲ್ಲದವಾಗುತ್ತವೆ; ಆದಂದು = ಹಾಗಾದರೆ, ಅಸತ್ಯೇತರವಿಭಾಗಂಗಳಂ = ಸತ್ಯದ ಹೊರತಾದ ಏನನ್ನೂ, ಪಡೆಯಲಾಗದು = ಪಡೆಯಲಾಗುವುದಿಲ್ಲ; ಅದು ಸಾಧನದೂಷಣಪ್ರಯೋಗ + ಅನ್ಯಥಾ + ಅನುಪಪತ್ತಿಯಿಂ = ಸಾಧನಗಳ ತಪ್ಪಾದ ಬಳಕೆಯಿಂದ, ಬಹಿರರ್ಥಸಿದ್ಧಿಯಕ್ಕುಂ = ಹೊರ ಅರ್ಥ ಮಾತ್ರ ಸಿದ್ಧಿಸುತ್ತದೆ, ಅದಱಿಂ = ಹೀಗಾಗಿ, ವಿಜ್ಞಾನಮಾತ್ರಮೆ ತತ್ವಂ = ವಿಜ್ಞಾನಮಾತ್ರವೇ ತತ್ವ, ಆತ್ಮಾದಿ ತತ್ವಮಿಲ್ಲ = ಆತ್ಮ ಮುಂತಾದ ತತ್ವಗಳಿಲ್ಲ, ಎಂಬ ನಿನ್ನ ಮಾತು, ಭಿನ್ನಭಾಜನಸಮಾನಂ = ಒಡೆದ ಗಡಿಗೆಯ ಹಾಗೆ, ಎಂದು = ಎಂಬುದಾಗಿ, ಸಂಭಿನ್ನಮತಿಗಂ ಪ್ರತಿಭಾಭಂಗಮಂ ಮಾಡಿ = ಸಂಭಿನ್ನಮತಿಯ ವಾದವನ್ನೂ ಅಲ್ಲಗಳೆದು, ಸಕಳ = ಎಲ್ಲ, ಬಹಿರಙ್ಗ + ಅನ್ತರಙ್ಗತತ್ವಂಗಳ್ = ಹೊರ ಮತ್ತು ಒಳ ತತ್ವಗಳೆಲ್ಲವೂ, ಶೂನ್ಯಂಗಳ್ = ಶೂನ್ಯಗಳೇ, ಎಂಬಿದನ್ + ಅಱಿಪುವ = ಎಂಬುದನ್ನು ತಿಳಿಸುವ, ಭವತ್ = ನಿನ್ನ, ಪ್ರತ್ಯಯಭಿದಾನಂಗಳ್ = ಮಾತುಗಳೆಲ್ಲವೂ, ಶೂನ್ಯಂಗಳೆ ಅಕ್ಕುಂ = ಶೂನ್ಯಗೇ ಆಗುತ್ತವೆ, ಅಪ್ಪೊಡೆ = ಹಾಗಾದರೆ, ಸರ್ವಶೂನ್ಯಮೆಂಬ ಈ ನಿನ್ನ ಮಾತು = ಸರ್ವವೂ ಶೂನ್ಯವೆಂಬ ನಿನ್ನ ವಾದವೇ, ಕೆಟ್ಟುಪೋಕುಂ = ಅಸಮರ್ಥನೀಯವಾಗುತ್ತದೆ; ತತ್ಪ್ರತ್ಯಯಾಭಿದಾನಂಗಳ್ + ಉಳ್ಳೊಡೆ = ಅರ್ಥಗಳು ಇರುವುವಾದರೆ, ಅವು + ಎಂತು + ಒಳವು + ಅಂತೆ = ಅವು ಹೇಗೆ ಇವೆಯೋ ಹಾಗೆಯೇ, ವಸ್ತುಗಳೆಲ್ಲಂ + ಒಳವು = ವಸ್ತುಗಳೆಲ್ಲವೂ ಇವೆ, ಅಪ್ಪುದಱಿನ್ = ಆದ್ದರಿಂದ, ಅನಾದಿ + ಅನಿಧನಸ್ವಭಾವನುಂ = ಆದಿ ಅಂತ್ಯಗಳಿಲ್ಲದ ಸ್ವಭಾವವನ್ನು ಪಡೆದ, ಸುಕೃತದುಷ್ಕೃತಕರ್ಮ + ಉಪಾರ್ಜನನುಂ = ಒಳ್ಳೆಯ ಮತ್ತು ಕೆಟ್ಟ ಕೆಲಸಗಳಿಂದ ಪಡೆದವನು; ತತ್ + ಫಲಭಾಜನನುಂ = ಅದರ ಫಲಕ್ಕೆ ಭಾಜನನೂ, ಸೂಕ್ಷ್ಮರೂಪಂ = ಸೂಕ್ಷ್ಮರೂಪ ಮತ್ತು, ಅನಂತಜ್ಞಾನಾದಿ = ಅನಂತಜ್ಞಾನವೇ ಮುಂತಾದ, ಗುಣರೂಪನುಂ = ಗುಣಗಳುಳ್ಳವನೂ, ಸಂಹರಣವಿಸರ್ಪಣಸ್ವರೂಪನುಂ = ಕಡಿಮೆಗೊಳಿಸುವ ಮತ್ತು ಹೆಚ್ಚಿಸುವ, ಆತ್ಮ + ಉಪಾತ್ತ = ತಾನು ಹೊತ್ತ, ಶರೀರಪ್ರಮಾಣನುಂ = ದೇಹಕ್ಕನುಗುಣವಾಧ,

ಉತ್ಪಾದ ವ್ಯಯ = ಸಂಪಾದನೆ ಮತ್ತು ವೆಚ್ಚಗಳ ರೂಪದ, ದ್ರವ್ಯಾತ್ಮಕನುಂ = ಹಣಸ್ವರೂಪದ, ಸಕಳಕರ್ಮನಿರ್ಮೂಲನಕರನುಂ = ಎಲ್ಲ ಕರ್ಮಗಳನ್ನು ತೊಡೆಯಬಲ್ಲಂತಹುದೂ, ತ್ರಿಲೋಕಶಿಖರಿಶೇಖರನುಂ + ಅಪ್ಪ = ಮೂರು ಲೋಕಗಳೆಂಬ ಪರ್ವತದ ಶಿಖರಸ್ವರೂಪದ್ದೂ (ಆದ) ಜೀವನ್ + ಉಂಟು + ಎಂದು = ಜೀವವು ಇದೆ ಎಂದು, ಶತಮತಿವೆರಸು = ಶತಮತಿಯೂ ಸೇರಿದಂತೆ, ಮೂವರುಂ = ಮೂರೂ ಮಂದಿ, ಪ್ರತಿವಾದಿಗಳನ್ = ಪ್ರತಿವಾದಿಗಳನ್ನು, ಅಪ್ರತಿಹತಪ್ರತಿಭೆಯಿನ್ = ತನ್ನ ಕುಗ್ಗದ ಪ್ರತಿಭೆಯಿಂದ, ಅಪಗತಪ್ರತಿಭರ್ + ಮಾಡಿ = ದಿಕ್ಕು ತೋಚದವರನ್ನಾಗಿಸಿ, ಸಭಾಪತಿಯಾಗಿರ್ದ = ಸಭೆಯ ಅಧ್ಯಕ್ಷತೆ ವಹಿಸಿದ್ದ, ಮಹಾಬಳನುಂ = ಮಹಾಬಲನೂ, ಪ್ರಾಶ್ನಿಕರಾಗಿರ್ದ = ಪ್ರಶ್ನೆ ಮಾಡುವ, ವಿದ್ವತ್ + ಜನಮುಮಂ = ವಿದ್ವಾಂಸರನ್ನೂ, ಸಭಾಜನಮುಮಂ = ಸಭೆಯ ಜನರನ್ನೂ, ತಿಳಿಪಿ = ತಿಳಿಯುವಂತೆ ಮಾಡಿ,

**ಗದ್ಯಾನುಸರಣ:** ನೀವು ಈಗ ಹೇಳಿದ ದೇಹದ ಆಕೃತಿಯನ್ನು ಆಶ್ರಯಿಸಿದ (ಮಣ್ಣು, ನೀರು, ಗಾಳಿ ಮತ್ತು ಬೆಂಕಿ) ಭೂತವೇ ಚೈತನ್ಯ; ಬೇರೆ ಅಲ್ಲ, ಎಂಬ ಮಾತು, (ಸರಿಯಲ್ಲ); ಚೈತನ್ಯವು ಆಶ್ರಯಿಸಿದ ದೇಹದ ಆಕೃತಿಯು ಹೊರಗಣ್ಣಿಗೆ ಕಾಣಿಸುವಂಥದೂ, ಬಾಲ್ಯ ಮೊದಲಾದ ಹಾಗೂ ಭಾವನೆಗಳೆ ಮೊದಲಾದವುಗಳ ವಿರುದ್ಧವಾದ ಸ್ವಭಾವಗಳನ್ನು ಒಳಗೊಂಡಿರುವಂಥದೂ, ಒಬ್ಬನಿಂದ ಒಂದು ಬಾರಿಗೆ, ನಿಯಮಕ್ಕನುಸಾರವಾಗಿ ಭಿನ್ನ ದ್ರವ್ಯಗಳಿಂದ ಬೇರೆ ಬೇರೆ ಗಾತ್ರಗಳು ಕಾಣಿಸುವುದರಿಂದ ಸರಿಹೋಗದು; ಜಾಗದ ವ್ಯತ್ಯಾಸದಿಂದ, ಬೇರೆ ಬೇರೆ ರಿತಿಯಲ್ಲಿ ಕಾಣಿಸದು, ಆ ಕಾರಣದಿಂದ ಅದನ್ನು ಬೇರೆ ಎನ್ನುವುದಾದರೆ, ದೇಹದ ಆಕೃತಿಯಲ್ಲಿ ಕೂಡಿರುವ ಮಣ್ಣು, ನೀರು, ಬೆಂಕಿ, ಗಾಳಿಗಳಿಗೆ ಜಾಗದ ವ್ಯತ್ಯಾಸ ಇರುವುದಿಲ್ಲ; ಅವೆಲ್ಲಕ್ಕೂ ಏಕತ್ವವುಂಟಾಗಿ, ತತ್ವಗಳು ನಾಲ್ಕು ಎನ್ನುವ ನಿನ್ನ ಮಾತು ಸುಳ್ಳಾಗುತ್ತದೆ; ಹಿಟ್ಟು ನೀರು ಮುಂತಾದ ವಸ್ತುಗಳ ಸೇರುವಿಕೆಯು ಭಿನ್ನತೆಯನ್ನು ಹೊಂದಿದ್ದರೂ, ಮದಶಕ್ತಿಯನ್ನು ಉಂಟುಮಾಡುವುದು ಹೇಗೆ ಅದರ ಪರಿಣಾಮವೋ, ಹಾಗೆಯೇ ಆ ಚೈತನ್ಯವೂ ಭೂತಸಮುದಾಯಗಳನ್ನು ಅನುಸರಿಸುವುದರಿಂದ, ಭೂತಗಳಿಂದ ಪಡೆದ ವಸ್ತು ಎನ್ನುವ ಮಾತು ತಪ್ಪು ತಿಳಿವಳಿಕೆ; ಅಲ್ಲದೆ, ಬೇರೆಯದನ್ನು ಪಡೆಯುವುದಿಲ್ಲ. ಸ್ವೀಕರಿಸುವ ಧರ್ಮವೂ ತನ್ನ ತನ್ನ ಬೇರೆತನವನ್ನು ಸ್ವೀಕಾರರ್ಹವಾದುದಕ್ಕೆ ಅರ್ಪಣೆಗೊಳ್ಳುವ ಹಿಂದಿನ ಸ್ವರೂಪವನ್ನು ಬಿಟ್ಟು ಆನಂತರದ ಸ್ವರೂಪವನ್ನು ಧರಿಸುವ ಸ್ವಭಾವವೂ ಭೂತ ಮತ್ತು ಚೈತನ್ಯಗಳಲ್ಲಿ ಕಾಣಲಾಗುವುದಿಲ್ಲ, ಆದ್ದರಿಂದ ಅದು ಸರಿಹೋಗದು; ಬಾಲ್ಯವೇ ಮುಂತಾದ ವಯಸ್ಸಿನ ವಿಶೇಷ ಸ್ಥಿತಿಗಳಲ್ಲಿ ದೇಹವು ಬೆಳೆದಾಗ ಚೈತನ್ಯವೂ ಬೆಳೆಯುವುದರಿಂದ ಭೂತದ

ನೀಡುವಿಕೆಯಿಂದಾದ ಪರಿಣಾಮವೇ ಚೈತನ್ಯ ಎಂದು ಹೇಳುವುದಾದರೆ, ಅದೂ ಸಹ ಒಳ್ಳೆಯದು ಕೆಟ್ಟುದು ಎಂಬ ವಿವೇಚನೆಯಿಲ್ಲದೆ ತಮಗೆ ತಾವೇ ಕಟ್ಟಿಸಿಕೊಳ್ಳುವ ಭಾರಿ ದೇಹಗಳನ್ನುಳ್ಳ, ಆನೆಗಳಂತೆ; (ಹೇಗೆಂದರೆ) ಏಕಾಂಗಿಗಳಾದ ಕೆಲವರ ಕೃಶವಾದ ದೇಹಗಳಲ್ಲಿಯೂ, ಅತ್ಯಂತ ಸ್ಪಷ್ಟವಾದ ಪ್ರಜ್ಞೆಯನ್ನು ಕಾಣಬಹುದು; ದೇಹ ಬೆಳೆದಂತೆ ಚೈತ್ಯವೂ ಬೆಳೆಯುತ್ತದೆ ಎಂಬುದು, ನೀರು ಹೆಚ್ಚಾದರೆ ಹೇಗೆ ಮೊಳಕೆಯೂ ಹೆಚ್ಚಾಗುತ್ತದೆಯೋ ಹಾಗೆಯೇ ಪರಸ್ಪರತ್ವವು ಕಾರಣ ಎಂಬುದಾಗಿ – ಅನೇಕ ಸಮಂಜಸವಾದ ಮಾತುಗಳಿಂದ ನಿರೀಶ್ವರವಾದಿಯಾದ ಮಹಾಮತಿಯನ್ನು ಸೋಲಿಸಿದ;

ವಿಜ್ಞಾನವಾದದ ಮೂಲಕ ವಿಜ್ಞಾನದಿಂದ ಸಾಧಿಸಿ ತೋರಿಸುತ್ತೇನೆಂದರೆ, ಸಾಧಿಸುವ ಸಾಧನಗಳು ಕಾಣಿಸದಿರುವುದರಿಂದ, ವಿಜ್ಞಾನವು ನಿಶ್ಚಿತವಾಗುವುದಿಲ್ಲ; ಜ್ಞಾನಕ್ಕೆ ಭಿನ್ನವಾದ ಮಾತುಗಳಿಂದ ಅದನ್ನು ಸಾಧಿಸುವುದಾದರೆ ಆ ಮಾತೂ ಹೊರ ಅರ್ಥವನ್ನು ತಿಳಿಸುವುದರಿಂದಾಗಿ ಬರಿಯ ಹೊರ ಅರ್ಥವು ಲಭಿಸುತ್ತದೆ; ಅದನ್ನೂ ನೀನು ವಿಜ್ಞಾನವೇ ಎನ್ನುವುದಾದರೆ, ಹಿಂದೆ ಹೇಳಿದ ತಪ್ಪುಗಳಿಂದ ಯಾವುದನ್ನು ಯಾವುದರಿಂದ ಸಿದ್ಧಪಡಿಸುತ್ತೀಯೆ;? ಅದಲ್ಲದೆ ವಿಜ್ಞಾನವನ್ನು ಬೇರೊಂದು ವಿಜ್ಞಾನದಿಂದ ತಿಳಿಯಬಹುದಾದರೆ ಯಾವ ಬಗೆಯಲ್ಲಿದು ಅದು ಬೇರೊಂದು ವಿಜ್ಞಾನವಾಗುತ್ತದೆ? ಹಾಗೆ ಬೇರೊಂದು ವಿಜ್ಞಾನವಾಗುವುದೋ, ಅದೇ ರೀತಿಯಲ್ಲಿಯೇ ಹೊರ ಅರ್ಥವು ಉಂಟಾಗಿ ಎಲ್ಲಕ್ಕೂ ಕಾರಣವಾಗುವ ನಿರಾಲಂಬವಾದವು ಕೆಡುತ್ತದೆ; ಅದೂ ಸಹ = ಮತ್ತೊಂದು ಜ್ಞಾನದಿಂದ ತಿಳಿಯಲಾರದ್ದಾದರೆ ಸಾತತ್ಯವು ನಾಶವಾಗುತ್ತದೆ; ಊಹೆಯಿಂದ ಸಾತತ್ಯವನ್ನು ಸಾಧಿಸುತ್ತೇನೆ ಎನ್ನುವೆಯಾದರೆ, ಹೊರ ಅರ್ಥವೇ ಸಿದ್ಧಿಸುತ್ತದೆ; ಅದೂ ಅಲ್ಲದೆ ವಿಜ್ಞಾನವಷ್ಟೇ ಅಲ್ಲದೆ ಬೇರೊಂದು ಇಲ್ಲವಾದರೆ, ವಿಜ್ಞಾನವಷ್ಟೇ ತತ್ವ ಎನ್ನುವ ಈ ಮಾತಿನ ವಿಜ್ಞಾನಗಳು ಹೊರ ಅರ್ಥಗಳಿಲ್ಲದ್ದರಿಂದ ಕೊನೆಯಿಲ್ಲದವಾಗುತ್ತವೆ; ಹಾಗಾದರೆ ಸತ್ಯದ ಹೊರತಾದ ಏನನ್ನೂ ಪಡೆಯಲಾಗುವುದಿಲ್ಲ; ಸಾಧನಗಳ ತಪ್ಪಾದ ಬಳಕೆಯಿಂದ ಹೊರ ಅರ್ಥ ಮಾತ್ರ ಸಿದ್ಧಿಸುತ್ತದೆ; ಹೀಗಾಗಿ, ವಿಜ್ಞಾನಮಾತ್ರವೇ ತತ್ವ, ಆತ್ಮ ಮುಂತಾದ ತತ್ವಗಳಿಲ್ಲ, ಎಂಬ ನಿನ್ನ ಮಾತು ಒಡೆದ ಗಡಿಗೆಯ ಹಾಗೆ, ಎಂಬುದಾಗಿ ಸಂಭಿನ್ನಮತಿಯ ವಾದವನ್ನೂ ಅಲ್ಲಗಳೆದ;

ಎಲ್ಲ ಹೊರ ಮತ್ತು ಒಳ ತತ್ವಗಳೆಲ್ಲವೂ ಶೂನ್ಯಗಳೇ ಎಂಬುದನ್ನು ತಿಳಿಸುವ ನಿನ್ನ ಮಾತುಗಳೆಲ್ಲವೂ ಶೂನ್ಯಗೇ ಆಗುತ್ತವೆ, ಹಾಗಾದರೆ ಸರ್ವವೂ ಶೂನ್ಯವೆಂಬ ನಿನ್ನ ವಾದವೇ ಅಸಮರ್ಥನೀಯವಾಗುತ್ತದೆ; ಅರ್ಥಗಳು ಇರುವುವಾದರೆ, ಅವು ಹೇಗೆ ಇವೆಯೋ ಹಾಗೆಯೇ ವಸ್ತುಗಳೆಲ್ಲವೂ ಇವೆಯಾದ್ದರಿಂದ ಆದಿ ಅಂತ್ಯಗಳಿಲ್ಲದ

ಸ್ವಭಾವವನ್ನು ಪಡೆದ, ಒಳ್ಳೆಯ ಮತ್ತು ಕೆಟ್ಟ ಕೆಲಸಗಳಿಂದ ಪಡೆದವನು ಅದರ ಫಲಕ್ಕೆ ಭಾಜನನೂ, ಸೂಕ್ಷ್ಮರೂಪ ಮತ್ತು ಅನಂತಜ್ಞಾನವೇ ಮುಂತಾದ ಗುಣಗಳುಳ್ಳವನೂ, ಕಡಿಮೆಗೊಳಿಸುವ ಮತ್ತು ಹೆಚ್ಚಿಸುವ, ತಾನು ಹೊತ್ತ ದೇಹಕ್ಕನುಗುಣವಾದ ಸಂಪಾದನೆ ಮತ್ತು ವೆಚ್ಚಗಳ ರೂಪದ, ಹಣಸ್ವರೂಪದ, ಎಲ್ಲ ಕರ್ಮಗಳನ್ನು ತೊಡೆಯಬಲ್ಲಂತಹುದೂ, ಮೂರು ಲೋಕಗಳೆಂಬ ಪರ್ವತದ ಶಿಖರಸ್ವರೂಪದ್ದೂ (ಆದ) ಜೀವವು ಇದೆ ಎಂದು ಶತಮತಿಯೂ ಸೇರಿದಂತೆ, ಮೂರೂ ಮಂದಿ ಪ್ರತಿವಾದಿಗಳನ್ನು ತನ್ನ ಕುಗ್ಗದ ಪ್ರತಿಭೆಯಿಂದ ದಿಕ್ಕು ತೋಚದವರನ್ನಾಗಿಸಿ, ಸಭೆಯ ಅಧ್ಯಕ್ಷತೆ ವಹಿಸಿದ್ದ, ಮಹಾಬಲನಿಗೂ, ಪ್ರಶ್ನೆ ಮಾಡುವ ವಿದ್ವಾಂಸರಿಗೂ, ಸಭೆಯ ಜನರಿಗೂ ತಿಳಿಯುವಂತೆ ಮಾಡಿದ.

**ವಿಶೇಷ ವಿಚಾರ:** ಸ್ವಯಂಬುದ್ಧನು ಆತ್ಮವನ್ನು ಅಲ್ಲಗಳೆದದ್ದು ಹಾಗೆ ವಾದಿಸುವ ಚಾರ್ವಾಕ, ವಿಜ್ಞಾನವಾದಿ ಮತ್ತು ಶೂನ್ಯವಾದಿಗಳ ವಾದಗಳನ್ನು. ಚಾರ್ವಾಕವೆಂದರೆ ಸ್ಥೂಲವಾಗಿ: ಮಣ್ಣು, ನೀರು, ಗಾಳಿ ಮತ್ತು ಅಗ್ನಿಗಳನ್ನು ಚತುರ್ಭೂತಗಳನ್ನು ಮಾತ್ರ ಒಪ್ಪುವ, (ಜೈನವೂ ನಾಲ್ಕು ಮೂಲವಸ್ತುಗಳನ್ನೇ – ಭೂತಗಳನ್ನೇ – ಒಪ್ಪುವುದು.) ಚೈತನ್ಯವು ಮೂಲವಸ್ತುಗಳು ರಹಸ್ಯರೀತಿಯಲ್ಲಿ ಒಗ್ಗೂಡಿದಾಗ ಹುಟ್ಟುವ ದೇಹದ ಒಂದು ಗುಣವೇ ಹೊರತು ಅದು ವಿಶಿಷ್ಟವಾದುದಲ್ಲ; ದೇಹ ನಾಶವಾದಾಗ ಚೈತನ್ಯವೂ ಇಲ್ಲವಾಗುತ್ತದೆ; ಅಂದರೆ ದೇಹ–ಆತ್ಮಗಳೆರಡೂ ಒಂದೇ ಎಂಬ ನಂಬಕೆಯುಳ್ಳದು. ಎರಡನೆಯದಾದ ವಿಜ್ಞಾನವಾದವು ಬೌದ್ಧದ ಒಂದು ಶಾಖೆಯ ತಾತ್ವಿಕ ನಿಲುವು: ವಿಜ್ಞಾನವಾದ (ಯೋಗಾಚಾರ) ಮಹಾಯಾನಕ್ಕೆ ಸೇರಿದೆ. ಪರಮಸತ್ಯವನ್ನು ಯಾ ಬೋಧಿಯನ್ನು ಯೋಗದ ಮೂಲಕ ಪಡೆಯಬಹುದು – ಎನ್ನುವುದು ಯೋಗಾಚಾರ. ಬಾಹ್ಯ ವಸ್ತುಗಳ ಅಸ್ತಿತ್ವವನ್ನು ನಿರಾಕರಿಸಿ ಜ್ಞಾನವೊಂದೇ (ಜ್ಞಾನ ಒಂದೇ) ಸತ್ಯವೆನ್ನುವುದು ವಿಜ್ಞಾನವಾದ. – ಇದು ತಾತ್ವಿಕ ದೃಷ್ಟಿ. ಕ್ರಿ.ಶ. ೩ ನೇ ಶತಮಾನದ ಆಚಾರ್ಯ ಮೈತ್ರೇಯನು ಇದರ ಪ್ರವರ್ತಕ. ಅಸಂಗನು ಇದನ್ನು ಪ್ರಚುರ ಪಡಿಸಿದನು. ವಿಜ್ಞಾನವಾದಿಗಳು ಶೂನ್ಯವಾದವನ್ನು (ಸ್ವಯಂಬುದ್ಧನಂತೆಯೇ) ನಿರಾಕರಿಸುತ್ತಾರೆ. ಎಲ್ಲವೂ ಶೂನ್ಯವಾದರೆ ಚಿತ್ತವೂಇಲ್ಲ. ಎಲ್ಲವೂ ನಿರರ್ಥಕ; ಆತ್ಮ ಘಾತಕ ; ಆದ್ದರಿಂದ ಚಿತ್ತದ ಸತ್ಯತೆಯನ್ನು ಅಂಗೀಕರಿಸಬೇಕು. ವಿಜ್ಞಾನವೆಂದರೆ ಕ್ಷಣಿಕವಾದ ಜ್ಞಾನಗಳ ಪರಂಪರೆ . ಇದೇ ಚಿತ್ತ; ಚಿತ್ತವನ್ನು ಬಿಟ್ಟು ಉಳಿದದ್ದೆಲ್ಲಾ ಮಿಥ್ಯೆ. ಮಾನಸಿಕ ಕಲ್ಪನೆ. ಈ ಪ್ರಪಂಚವು ಸ್ವಪ್ನ ಸದೃಶ – ಕಲ್ಪನೆ. ಸ್ವಪ್ನದಲ್ಲಿರುವವನು ಅದನ್ನೇ ಸತ್ಯವೆಂದು ತಿಳಿದಂತೆ ಬಾಹ್ಯ ವಸ್ತುಗಳ ಅಸ್ತಿತ್ವವನ್ನು ಸಿದ್ಧಪಡಿಸಲು ಸಾಧ್ಯವಿಲ್ಲ. ವಸ್ತುವಿಗೂ ವಸ್ತುವಿನ ಜ್ಞಾನಕ್ಕೂ ವ್ಯತ್ಯಾಸವಿಲ್ಲ. ಜ್ಞಾನವಿಲ್ಲದೆ ವಸ್ತುವನ್ನು ತಿಳಿಯಲು

ಸಾಧ್ಯವಿಲ್ಲ. ಅಂತೆಯೇ ಜ್ಞಾನಕ್ಕಿಂತ ಬೇರೆಯಾಗಿ ವಸ್ತುವಿಗೆ ಅಸ್ತಿತ್ವವಿಲ್ಲ. ಶೂನ್ಯ ತತ್ವದ ಪ್ರಕಾರ ಶೂನ್ಯವೆಂದರೆ ಏನೂ ಇಲ್ಲದ್ದೆಂಬ ಅರ್ಥವಲ್ಲ ; ವರ್ಣನೆಗೆ ನಿಲುಕದ್ದು . ವಸ್ತು ನಿರ್ಣಯ – ಇದೆ (ಅಸ್ತಿ) – ಇದೆ ಮತ್ತು ಇಲ್ಲ (ತದುಭಯಂ); ಇದೆ ಮತ್ತು ಇಲ್ಲ ಎರಡೂ ಅಲ್ಲದ್ದು ; **(ನ ಅಸ್ತಿ ನ ಚ ನ ಅಸ್ತಿ)** ಎಂಬುದಾಗಿ ಹೇಳುವುದುಂಟು. ತತ್ವ (ಶೂನ್ಯ) ಚತುಷ್ಕೋಟಿ ವಿನಿರ್ಮುಕ್ತವಾದುದೆಂಬ ಅರ್ಥದಲ್ಲಿ ಅನಿರ್ವಚನೀಯವಾದುದು. ಶೂನ್ಯವು ಭಾವವೂಅಲ್ಲ; ಅಭಾವವೂ ಅಲ್ಲ, ಅನಿರ್ವಚನೀಯ. ಅದೇ ಅಪರೋಕ್ಷ ತತ್ವ; ಇಡೀ ಪ್ರಪಂಚವು ಈ ಶೂನ್ಯ ವಿವರ್ತವೇ ಆಗಿದೆ.

**ಪುಸಿಯ ಪರಾಂಗನಾರತದ ಮದ್ಯದ ಮಾಂಸದ ಮೆಯ್ಗೊಱಲ್ದ ದು**
**ರ್ವ್ಯಸನಿಯ ಮಾಡಿದೋದೆ ನಿಮಗಾಗಮಮಾಗಿರಸತ್ಯವಾದಮಂ**
**ಪೊಸಯಿಸಿ ಜೀವನಿಲ್ಲ ಮೋಕ್ಷ್ಯಿಯಿಲ್ಲಱನಿಲ್ಲ ಪರತ್ರೆಯಿಲ್ಲೆನ**
**ಲ್ಕಸಕಳಿಯಂತು ನಾಲಗೆ ಪೊರಳ್ವುದು ರಾಜಸಭಾಂತರಾಳದೊಳ್** ೧೧

**ಪದವಿಭಾಗ–ಅನ್ವಯ–ಅರ್ಥ:** ಪುಸಿಯ = ಸುಳ್ಳಿನ, ಪರ + ಅಂಗನಾರತದ = ಪರಸ್ತ್ರೀವ್ಯಾಮೋಹದ, ಮದ್ಯದ = ಹೆಂಡದ, ಮಾಂಸದ, ಮೆಯ್ಗೆ + ಒಱಲ್ದ = ದೇಹಸುಖಕ್ಕಾಗಿ ಆಸೆಪಡುವ, ದುರ್ವ್ಯಸನಿಯ = ಕೆಟ್ಟ ಚಟಗಳಿಂದ ಕೂಡಿದವರು, ಮಾಡಿದ + ಓದೆ = ಸೃಷ್ಟಿಸಿದ ವಿದ್ಯೆಯೇ, ನಿಮಗೆ + ಆಗಮಂ + ಆಗಿರೆ = ನಿಮ್ಮಂಥವರಿಗೆ ಶಾಸ್ತ್ರಗಳಾಗಿ, ಅಸತ್ಯವಾದಮಂ = ಅಸತ್ಯವನ್ನು ಸಮರ್ಥಿಸುವ ವಾದವನ್ನು, ಪೊಸಯಿಸಿ = ಹೊಸತಾಗಿ ನಿರ್ಮಿಸಿಕೊಂಡು, ಜೀವನಿಲ್ಲ = ಜೀವವೂ ಇಲ್ಲ, ಮೋಕ್ಷ್ಯಿಯಿಲ್ಲ = ಶರಣ್ಯವಸ್ತುವೂ ಇಲ್ಲ, ಅಱನ್ + ಇಲ್ಲ = ಧರ್ಮವೂ ಇಲ್ಲ, ಪರತ್ರೆಯಿಲ್ಲ = ಪರಲೋಕವೂ ಇಲ್ಲ, ಎನಲ್ = ಎಂದು ಹೇಳಿದರೆ, ರಾಜಸಭಾ + ಅಂತರಾಳದೊಳ್ = ಆಸ್ಥಾನದ ಒಳಗೆ, ಅಸಕಳಿಯಂತು = ಪೊರಕೆಯಂತೆ, ನಾಲಗೆ ಪೊರಳ್ವುದು = ನಾಲಗೆಯು ಹೊರಳುತ್ತದೆ.

**ಗದ್ಯಾನುಸರಣ:** ಸುಳ್ಳು, ಪರಸ್ತ್ರೀಸಂಗ, ಹೆಂಡ, ಮಾಂಸಗಳನ್ನು ದೇಹಸುಖಕ್ಕಾಗಿ ಬಯಸುವ ಕೆಟ್ಟ ಚಟದವರು ಹೇಳಿದ ಮಾತನ್ನೇ ವೇದವಾಕ್ಯವಾಗಿ ಪರಿಗಣಿಸಿ, ಸುಳ್ಳನ್ನೇ ವಾದವಾಗಿ ಮಾಡಿಕೊಂಡು ಆತ್ಮ, ಶರಣ್ಯವಸ್ತು, ಧರ್ಮ, ಪರಲೋಕ ಇವುಗಳನ್ನು ಅಲ್ಲಗಳೆಯುತ್ತ ಆಸ್ಥಾನದಲ್ಲಿ ನಿಮ್ಮ ನಾಲಗೆಯು ಪೊರಕೆಯಂತೆ ಹೊರಳಾಡುತ್ತದಲ್ಲ!

**ವ॥ ಎಂದು ಮತ್ತಮದನೆ ತಿಳಿಪುವ ಬಗೆಯಿಂ ದೃಷ್ಟಶ್ರುತಾನು ಭೂತಕಥೆಗಳಂ ತದನ್ವಯಸಂಬಂಧಿಗಳನಿಂತೆಂದು ಪೇಟಲ್ತು ಗುಳ್ದಂ: ಈತನ ಸಂತತಿಯೊಳರವಿಂದನೆಂಬನಂ**

**ಬರಚರಂ ನಿಜಮನೋ ವಿಜಯಿ ವಿಜಯಿಯೆಂಬಳ್ಗೆ ಪುಟ್ಟಿದ ಹರಿಶ್ಚಂದ್ರ ಕುರುವಿಂದರೆಂಬ ನಿಜತ ನೂಜರೊಡನೆ ಖೇಚರಗೋಚರವಿಭವಮನನುಭವಿಸಿ ಬಹ್ವಾರಂಭ ಸಂರಂಭ ರೌದ್ರಧ್ಯಾನಪರಿಣತನುಪಾರ್ಜಿತ ನರಕಾಯುಷ್ಯಂ ಪ್ರತ್ಯಾಸನ್ನ ಮೃತ್ಯುವಾಗಿ**

**ಪದವಿಭಾಗ–ಅನ್ವಯ–ಅರ್ಥ:** ಎಂದು, ಮತ್ತಂ = ಪುನಃ, ಅದನೆ ತಿಳಿಪುವ ಬಗೆಯಿಂ = ಅದನ್ನೇ ಹೇಳು ರೀತಿಯಿಂದ, ದೃಷ್ಟ = ನೋಡಿ, ಶ್ರುತ = ಕೇಳಿ, ಅನುಭೂತ = ಅನುಭವಿಸಿದ, ಕಥೆಗಳಂ = ಕತೆಗಳನ್ನು, ತತ್ + ಅನ್ವಯ = ಅದೇ ವಂಶಕ್ಕೆ, ಸಂಬಂಧಿಗಳನ್ = ಸಂಬಂಧಿಸಿದವುಗಳನ್ನು, ಇಂತೆಂದು = ಹೀಗೆ, ಪೇೞಲ್ + ತಗುಳ್ದಂ = ಹೇಳಲು ತೊಡಗಿದನು: ಈತನ ಸಂತತಿಯೊಳ್ = ಮಹಾಬಲನ ವಂಶದಲ್ಲಿ, ಅರವಿಂದನೆಂಬನ್ = ಅರವಿಂದ ಎಂಬ, ಅಂಬರಚರಂ = ಖೇಚರನು, ನಿಜಮನೋವಿಜಯಿ = ತನ್ನ ಮನಸ್ಸನ್ನು ಗೆದ್ದ, ವಿಜಯಿ + ಎಂಬಳ್ಗೆ = ವಿಜಯಿ ಎಂಬ ಹೆಸರಿನ ಹೆಂಡತಿಯಲ್ಲಿ, ಪುಟ್ಟಿದ = ಹುಟ್ಟಿದ, ಹರಿಶ್ಚಂದ್ರ ಕುರುವಿಂದರೆಂಬ, ನಿಜತನೂಜರೊಡನೆ = ತನ್ನ ಮಕ್ಕಳ ಜೊತೆಯಲ್ಲಿ, ಖೇಚರಗೋಚರ = ಖೇಚಚರಿಗೆ ಕಾಣುವ ಎಲ್ಲ, ವಿಭವಮನ್ + ಅನುಭವಿಸಿ = ವೈಭವಗಳನ್ನು ಅನುಭವಿಸಿ, (ಕೊನೆಗೆ) ಬಹ್ವಾರಂಭಸಂರಂಭರೌದ್ರಧ್ಯಾನ(ಗಳಲ್ಲಿ) ಪರಿಣತನ್ = ಪರಿಣತಿ ಹೊಂದಿ, ಉಪಾರ್ಜಿತ = ಗಳಿಸಿಕೊಂಡ, ಪ್ರತಿ + ಆಸನ್ನಮೃತ್ಯುವಾಗಿ = ಸಾವಿಗೆ ಎದುರಾಗಿ, ನರಕಾಯುಷ್ಯಂ = ನರಕಾಯುಷ್ಯವನ್ನು,

**ಗದ್ಯಾನುಸರಣ:** ಮತ್ತೆ ಅದೇ ವಿಷಯವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ತಿಳಿಸಲೆಂದು ಸ್ವಯಂಬುದ್ಧನು ತಾನು ಕಂಡು ಕೇಳಿ ಅನುಭವಿಸಿದ ಕತೆಗಳನ್ನು ಹೇಳಲಾರಂಭಿಸಿದನು: ಮಹಾಬಲನ ವಂಶದಲ್ಲಿ ಅರವಿಂದ ಎಂಬುವವನು ವಿಜಯಿಯೆಂಬುವವಳನ್ನು ಮದುವೆಯಾಗಿ ಹರಿಶ್ಚಂದ್ರ ಕುರುವಿಂದರೆಂಬ ಮಕ್ಕಳನ್ನು ಪಡೆದ; ಅವರೊಡನೆ ಖೇಚರರ ಸರ್ವಸುಖಗಳನ್ನೂ ಅನುಭವಿಸಿ ನರಕವಾಸವನ್ನು ಗಳಿಸಿಕೊಂಡ; ಕೊನೆಗೆ ಸಾವಿನ ಸಂದರ್ಭದಲ್ಲಿ,

**ವಿಶೇಷ ವಿಚಾರ:** ಬಹ್ವಾರಂಭಸಂರಂಭ ಎಂದರೆ ಯಥೇಚ್ಛವಾಗಿ ಹಣಸಂಪಾದನೆ ಮಾಡುವುದರಲ್ಲಿ ತೋರುವ ಸಂಭ್ರಮ; ರೌದ್ರಧ್ಯಾನ ಎಂದರೆ ಕೆಟ್ಟುದರಲ್ಲಿ ಸಂತೋಷ ಕಾಣುವುದು – ಇದರಲ್ಲಿ, ಹಿಂಸಾನಂದ (ಹಿಂಸೆ ಮಾಡಿ ಪಡೆಯುವ ಸಂತೋಷ), ಮೃಷಾನಂದ (ಸುಳ್ಳು ಹೇಳಿ ಪಡುವ ಸಂತೋಷ), ಸ್ತೇಯಾನಂದ (ಕಳ್ಳತನದಲ್ಲಿ ಪಡೆಯುವ ಸಂತೋಷ), ಮತ್ತು ಪರಿಗ್ರಹಾನಂದ (ಅನವಶ್ಯಕ ವಸ್ತುಸಂಗಹದಲ್ಲಿ ಪಡೆಯುವ ಸಂತೋಷ) ಎಂಬ ನಾಲ್ಕು ಬಗೆಗಳು

ಉರಿಯಳುರ್ವಂತತಿದಾಹ
ಜ್ವರಮಳುರೆ ಪೊರಳ್ದು ನಾಡೆಯುಂ ಕೊರಗಿದನಂ
ದರವಿಂದಂ ಕೊಳದಿಂದಂ
ಕರಿಪತಿ ಕಿೞ್ತಿಕ್ಕೆ ಕೊರಗಿದರವಿಂದದವೊಲ್ ೧೨

**ಪದವಿಭಾಗ–ಅನ್ವಯ–ಅರ್ಥ:** ಉರಿ + ಅಳುರ್ವಂತೆ = ಬೆಂಕಿಯು ವ್ಯಾಪಿಸಿಕೊಂಡಂತೆ, ಅತಿದಾಹಜ್ವರಂ = ಸುಡುವಂತಹ ಜ್ವರವು, ಅಳುರೆ = ಆವರಿಸಲು, ಪೊರಳ್ದು = ಹೊರಳಾಡುತ್ತ, ಕರಿಪತಿ = ಆನೆಯು, ಕೊಳದಿಂದಂ = ಕೊಳದಲ್ಲಿದ್ದ, ಕೊರಗಿದ = ಬಾಡಿಹೋಗುವ, ಅರವಿಂದದಂತೆ = ತಾವರೆಯ ಹಾಗೆ, ಅರವಿಂದಂ = ಅರವಿಂದನೂ, ನಾಡೆಯುಂ = ಅತಿಶಯವಾಗಿ, ಕೊರಗಿದಂ = ಬಾಡಿಹೋದ.

**ಗದ್ಯಾನುಸರಣ:** ಮೈಯೆಲ್ಲ ಸುಡುವಂತೆ ವಿಪರೀತ ಜ್ವರವು ಅರವಿಂದನನ್ನು ಕಾಡಲು, ಅವನು ಆನೆಯು ಕೊಳದಿಂದ ಕಿತ್ತೆಸೆದ ತಾವರೆಯಂತೆ ಬಳಲಿ ಕೊರಗಿದ.

ವಾರಿಜಮಳಯಜಮಳಯಸ
ಮೀರಣಚಂದ್ರಾಂಶುಚಂದ್ರಕಾಂತ್ದ್ರವಕ
ರ್ಪೂರಮೃಣಾಳಾದಿಗಳುಂ
ಬಾರಿಸಲಾಱವೆ ದಲವನ ದಾಹಜ್ವರಮಂ ೧೩

**ಪದವಿಭಾಗ–ಅನ್ವಯ–ಅರ್ಥ:** ವಾರಿಜ = ತಾವರೆ, ಮಳಯಜ = ಶ್ರೀಗಂಧ, ಮಳಯಸಮೀರಣ = ಮಲಯಮಾರುತ, ಚಂದ್ರ + ಅಂಶು = ಬೆಳುದಿಂಗಳು, ಚಂದ್ರಕಾಂತದ್ರವ = ಚಂದ್ರಕಾಂತದ ರಸ, ಕರ್ಪೂರ = ಪಚ್ಚಕರ್ಪೂರ, ಮೃಣಾಳ + ಆದಿಗಳುಂ = ತಾವರೆಯ ದಂಟು ಮುಂತಾದವುಗಳೂ, ಅವನ, ದಾಹಜ್ವರಮಂ = ಸುಡುವಂತಹ ಜ್ವರವನ್ನು, ಬಾರಿಸಲಾಱವೆ ದಲ್ = ನಿವಾರಿಸದೆ ಹೋದುವಲ್ಲವೇ!

**ಗದ್ಯಾನುಸರಣ:** ತಾವರೆ ಶ್ರೀಗಂಧ ತಂಗಾಳಿ, ಬೆಳುದಿಂಗಳು ಚಂದ್ರಕಾಂತದ್ರವ, ಪಚ್ಚಪಕರ್ಪೂರ ಹಾಗೂ ತಾವರೆಯ ದಂಟುಗಳು ಕೂಡ ಅವನ ಸುಡುವ ಜ್ವರವನ್ನು ಇಳಿಸಲಾರದಾದುವು.

ಕುಳಿರ್ವ ತಿಳಿನೀರನುಡುಗದೆ
ತಳಿ ನೀರಂ ಪಾಸು ಜಳದೆಯಿಂ ಬೀಸೆಂದು
ಮ್ಮಳಿಸಿ ಕಳವಳಿಸಿ ವಿರಹಾ
ಕುಳನವೊಲಾ ಖಚರನಿಂತು ತಳವೆಳಗಾದಂ ೧೪

**ಪದವಿಭಾಗ-ಅನ್ವಯ-ಅರ್ಥ:** ಕುಳಿರ್ವ = ತಣ್ಣಗಿರುವ, ತಿಳಿನೀರನ್ = ಸ್ವಚ್ಛವಾದ ನೀರನ್ನು, ಉಡುಗದೆ = ಕಡಿಮೆ ಮಾಡದೆ, ತಳಿ = ಸಿಂಪಡಿಸು; ತಳಿರಂ = ಚಿಗುರನ್ನು, ಪಾಸು = ಹಾಸಿಗೆಯಾಗಿ ಹಾಸು; ಜಳದೆಯಿಂ = (ಬಾಳದ ಬೇರಿನ) ಬೀಸಣಿಗೆಯಿಂದ, ಬೀಸು = ಗಾಳಿ ಹಾಕು, ಎಂದು, ಉಮ್ಮಳಿಸಿ = ನರಳುತ್ತ, ಕಳವಳಿಸಿ = ಕಳವಳದಿಂದ, ವಿರಹ + ಆಕುಳನವೊಲ್ = ವಿರಹತಪ್ತನಂತೆ, ಆ ಖಚರನ್ = ಅರವಿಂದ ಖೇಚರನು, ಇಂತು = ಹೀಗೆ, ತಳವೆಳಗಾದಂ = ಗಾಬರಿಗೊಳಗಾದ

**ಗದ್ಯಾನುಸರಣ:** ಒಂದೇ ಸಮನೆ ತಣ್ಣೀರನ್ನು ಚಿಮುಕಿಸುತ್ತಿರು, ಚಿಗುರಿನ ಹಾಸುಗೆ ಹಾಕು, ಬೀಸಣಿಗೆಯಿಂದ ಗಾಳಿ ಹಾಕುತ್ತಿರು ಎಂದು ನರಳುತ್ತ ಚಡಪಡಿಸುತ್ತ ವಿರಹತಪ್ತನಂತೆ ಅರವಿಂದನು ಬಡಬಡಿಸತೊಡಗಿದ.

ವ। ಅಂತನೇಕಪ್ರಕಾರಶೀತಳಕ್ರಿಯೆಗಳಿಂ ಶರೀರಸಂತಾಪಮನೆಂತುಂ ಮಾಣಿಸಲಾಱದೆ ಪುಣ್ಯಕ್ಷಯದೊಳ್ತನ್ನ ವಿದ್ಯೆಗಳುಂ ತನಗೆ ಬೆಸಕೆಯ್ಯದಿರೆ ಹರಿಶ್ಚಂದ್ರನೆಂಬ ತನ್ನ ಪಿರಿಯ ಮಗನಂ ಕರೆದು ತನ್ನ ದುಸ್ಸಹಾವಸ್ಥಾಂತರ ಮನಱಿಪಿ ನೀನೆನ್ನಂ ನಿನ್ನ ಗಗನಗಾಮಿನೀವಿದ್ಯೆಯಿನುತ್ತರ ಕುರುವನೆಯ್ದಿಸು; ಅಲ್ಲಿಯ ಸುರತರುಗಳ ತಣ್ಣೆೞಲ್ಗಳೊಳಂ ಕಲ್ಪಲತೆಯ ಜೋಂಪಂಗಳೊಳಂ ಸೀತಾನದೀತರಙ್ಗಾಲಿಂಗಿತ ಸಂತಾನಲತಾಲತಾಂತ ಸುರಭಿತರಮಂದಾರ ವನವೀಧೀವಿಹಾರಪರಿಶ್ರಾಂತ ಪವಮಾನಸ್ಪರ್ಶದಿಂ ಮದೀಯಾಂಗಸಂಗತ ಪರಿತಾಪ ವನಾಱುಸುವೆ ನೆಂದು ನಿಜನಂದನಂಗೆ ಪೇೞ್ದೊಡಾತನುಂ ತನ್ನ ಪಯೋಧರ ಪಥಗಾಮಿನೀವಿದ್ಯೆಯಂ ಬೆಸಸಿದೊಡೆ ನರಕಗಮನಾಭಿಮುಖ ನಾಗಿರ್ದರವಿಂದಂಗುಪಕಾರಂ ಗೆಯ್ವುದೆನಗಶಕ್ಯಮೆನೆ ವಿದ್ಯಾವಚನ ದಿನಾತ ನಾಸನ್ನ ಮೃತ್ಯುವನಱಿದು ವಿಷಣ್ಣಮನನುದಾಸೀನ ನಾಗಿರ್ದಂ; ಅನ್ನೆಗಂ ಪರಸ್ಪರ ಕಲಹಕಲುಷಿತ ಗೃಹಕೋಕಿಳಂ ಗಳೊಳೊಂದೊಂದಂ ತಿನೆ ಪನಿತ ಶೋಣಿತಬಿಂದುಗಳ್ ತನ್ನ ಮೆಯ್ಗೆ ಪಾಪಪರಿಪಾಕದಿಂ ತಣ್ಪಂ ಪಡೆಯೆ ಪರಮೌಷಧಮಂ ಪಡೆದೆನೆಂದು ಕರಮೊಸೆದರವಿಂದಂ ಕುರುವಿಂದನಂ ಕರೆದುತ್ಪನ್ನವಿಭಂಗಜ್ಞಾನದಿಂ ಮೃಗಂಗಳಿರ್ದೆಡೆಯನಱಿದು ನಿಷ್ಕರುಣ ನವ ಅರುಣಜಳದೊಳೆನಗೆ ಲೀಲಾಸರೋವರಮಂ ನೀಡಿಲ್ಲದೆ ಮಾಡೆಂದು ಪೇೞ್ದೊಡವನಾ ನಿಸ್ತ್ರಿಂಶಕರ್ಮಕ್ಕೆ ಕೊಕ್ಕರಿಸಿ ಪಾಪಭೀರುವಪ್ಪುದಱಿಂ ತಂದೆಯ ತದುಪರೋಧದಿಂ ಮನಮಲ್ಲದ ಮನದೊಳ್ ತದುದ್ದಿಷ್ಟ ಮೃಗಾವಾಸ ಮನೆಯ್ದಿ ದಿವ್ಯಜ್ಞಾನಿಗಳನಲ್ಲಿರ್ದರಂ ಕಂಡು ನಿವೇದಿತ ನಿಜಜನಕ ವೃತ್ತಾಂತನವರ ವಚನದಿನಾತ್ಮೀಯ ಪಿತೃಮರಣ ಮುಮನಾತನ ನರಕಗತಿ ಗಮನಮುಮನಱಿದು ಕರುಣಾರಸಾರ್ದ್ರ ಹೃದಯನದಂ ಮಾಡಲಾಱದೆ ಲಾಕ್ಷಾದ್ರವಾದಿಕಾರಿತ ಮಾಯಾರುಣಜಲ ಪರಿಪೂರ್ಣವಾಪಿಯಂ ಸಮೆಯಿಸಿದೊಡಂ ಕಂಡು ರಾಗಿಸಿ ಪೊಕ್ಕು ನೀಡುಮೋಲಾಡಿ ಮುಕ್ಕುಳಿಸಿ ನೋಡಿ ಕೃತಕ ರುಧಿರಮಪ್ಪುದನಱಿದು ಬೂತೆನ್ನಂ ಬಂಚಿಸಿದನೆಂದು ನೆಱೆಯದ ನರಕಾಯುಷ್ಯಮಂ

**ನೆಱಿಯುವನೆಂಬಂತೆ ಮುಳಿದು ಘೂರ್ಣಮಾನ ಲೋಹಿತಲೋಚನಂ ದಶನನಿಪೀಡಿತ ದಶನವಸನ ನಸಿಧೇನುವಂ ಕಿೞ್ತು ನಡನಡನಡುಗಿ ತಡದಡಿಸುತ್ತುಮಿೞಿಯಲ್ ಪರಿವಾತಂ ವಾಪೀಸೋಪಾನಮನಡರುತ್ತುಂ ಜಾಱಿವರಿದು ಕೆಡದುರದೊಳ್ ನಟ್ಟ ಸುರಿಗೆ ಬೆನ್ನೊಳ್ಮೂಡೆ ಗತಜೀವಿತನಾಗಿ ನರಕಕ್ಕಿೞಿದನೀಗಳುಮೀ ಪುರಜನಂಗಳ್ಪೇೞ್ ಕೇಳಲಕ್ಕುಂ; ಮತ್ತಮೀತನ ವಂಶದೊಳೀ ಪೊೞಲೊಳ್ ನೆಗೞ್ತೆವೆತ್ತಂ ದಂಡಿತಾರಾತಿಮಂಡಳಂ ದಂಡಕನೆಂಬನಾತನ ಮನೋನಯನಸೌಂದರಿ ಸೌಂದರಿಯೆಂಬಳರ್ವೆ ಪುಟ್ಟಿದ ಮಗನುಗ್ರಪ್ರತಾಪವಿಜಿತಾಂಶುಮಾಳಿ ಮಣಿಮಾಳಿಯೆಂಬೊನಾಗೆ ಪಲಕಾಲಮರಸುಗೆಯ್ದು,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಅನೇಕಪ್ರಕಾರ = ನಾನಾ ವಿಧವಾದ, ಶೀತಳಕ್ರಿಯೆಗಳಿಂ = ತಂಪುಮಾಡುವ ಕಾರ್ಯಗಳಿಂದಲೂ, ಶರೀರಸಂತಾಪಮನ್ = ದೇಹದ ಉರಿಯನ್ನು, ಎಂತುಂ ಮಾಣಿಸಲ್ + ಆಱದೆ = ಯಾವ ರೀತಿಯಲ್ಲಿಯೂ ನೀಗಿಸಿಕೊಳ್ಳಲಾರದೆ, ಪುಣ್ಯಕ್ಷಯದೊಳ್ = ಪುಣ್ಯವು ನಶಿಸಿದ್ದರಿಂದಾಗಿ, ತನ್ನ ವಿದ್ಯೆಗಳುಂ = ತಾನು ಕಲಿತ ವಿದ್ಯೆಗಳೂ, ತನಗೆ ಬೆಸಕೆಯ್ಯದಿರೆ = ವಿಧೇಯಾಗದಿರಲು, ಹರಿಶ್ಚಂದ್ರನೆಂಬ ತನ್ನ, ಪಿರಿಯ ಮಗನಂ = ಹಿರಿಯ ಮಗನನ್ನು, ಕರೆದು, ತನ್ನ ದುಸ್ಸಹಾವಸ್ಥಾಂತರಮನ್ + ಱಿಪಿ = ಸಹಿಸಲಾಸಾಧ್ಯವಾದ ಸ್ಥಿತಿಯನ್ನು ತಿಳಿಸಿ, ನೀನೆನ್ನಂ = ನೀನು ನನ್ನನ್ನು, ನಿನ್ನ ಗಗನಗಾಮಿನೀವಿದ್ಯೆಯಿನ್ = ಆಕಾಶದಲ್ಲಿ ಸಂಚರಿಸುವ ನಿನ್ನ ವಿದ್ಯೆಯ ಬಲದಿಂದ, ಉತ್ತರ ಕುರುವನೆಯ್ದಿಸು = ಉತ್ತರ ಕುರು ಎಂಬ ಪ್ರದೇಶಕ್ಕೆ ಕರೆದೊಯ್ಯಿ; ಅಲ್ಲಿಯ, ಸುರತರುಗಳ = ಕಲ್ಪವೃಕ್ಷಗಳ, ತಣ್ಣೆೞಲ್ಗಳೊಳಂ = ತಂಪಾದ ನೆರಳಿನಲ್ಲಿಯೂ, ಕಲ್ಪಲತೆಯ ಜೊಂಪಂಗಳೊಳಂ = ಕಲ್ಪಲತೆಗಳ ತೊಂಗಲುಗಳಲ್ಲಿಯೂ, ಸೀತಾನದೀ ತರಙ್ಗಾಲಿಂಗಿತ = ಸೀತಾನದಿಯ ಅಲೆಗಳನ್ನಪ್ಪುವ, ಸಂತಾನಲತಾ = ಸಂತಾನ ಬಳ್ಳಿಗಳ, ಲತಾಂತ = ಹೂಗಳಲ್ಲಿಯೂ, ಸುರಭಿತರ = ಕಂಪುಎಸೆವ, ಮಂದಾರವನ = ಮಂದಾರ ವೃಕ್ಷಗಳಿರುವ, ವೀಧೀವಿಹಾರ = ಬೀದಿಗಳಲ್ಲಿ ಬೀಸಿ, ಪರಿಶ್ರಾಂತ = ದಣಿಯುವ, ಪವಮಾನಸ್ಪರ್ಶದಿಂ = ಗಾಳಿಯ ಸ್ಪರ್ಶದಿಂದ, ಮದೀಯ + ಅಂಗಸಂಗತ = ನನ್ನ ದೇಹದಲ್ಲಿನ, ಪರಿತಾಪವನ್ = ಬೇಗೆಯನ್ನು, ಆಱಿಸುವೆನ್ + ಎಂದು = ಹೋಗಲಾಡಿಸಿಕೊಳ್ಳುತ್ತೇನೆಂದು, ನಿಜನಂದನಂಗೆ = ತನ್ನ ಮಗನಿಗೆ, ಪೇೞ್ದೊಡೆ = ಹೇಳಲು, ಆತನುಂ = ಅವನು, ತನ್ನ ಪಯೋಧರಪಥ = ಮೋಡಗಳ ಹಾದಿಯಾದ ಆಕಾಶದಲ್ಲಿ, ಗಾಮಿನೀ = ಹಾರುವ, ವಿದ್ಯೆಯಂ = ವಿದ್ಯೆಗೆ, ಬೆಸಸಿದೊಡೆ = ಆದೇಶಿಸಲು, ನರಕಗಮನಾಭಿಮುಖನಾಗಿರ್ದ = ನರಕದ ಕಡೆಗೆ ಹೋಗುತ್ತಿರುವ, ಅರವಿಂದಂಗೆ, ಉಪಕಾರಂಗೆಯ್ವುದು = ಉಪಕಾರ ಮಾಡುವುದು, ಎನಗೆ + ಅಶಕ್ಯಂ + ಎನೆ = ನನಗೆ ಅಸಾಧ್ಯ ಎನ್ನಲು;

(ಹರಿಶ್ಚಂದ್ರನು) ವಿದ್ಯಾವಚನದಿನ್ = ವಿದ್ಯಾಧಿದೇವತೆಯ ಮಾತಿನಿಂದ, ಆತನ್ =ಅವನು, (ತಂದೆಗೆ) ಆಸನ್ನಮೃತ್ಯುವನ್ + ಅಱಿದು = ಸಾವು ಸಮೀಪಿಸಿರುವುದನ್ನು ತಿಳಿದು, ವಿಷಣ್ಣಮನ್ = ಖಿನ್ನಮನಸ್ಕನಾಗಿ, ಉನುದಾಸೀನನಾಗಿ + ಇರ್ದಂ = ಸುಮ್ಮನಾದನು; ಅನ್ನೆಗಂ = ಅಷ್ಟರಲ್ಲಿ, ಪರಸ್ಪರಕಲಹಕಲುಷಿತ = ಒಂದರೊಡನೊಂದು ಜಗಳವಾಡಿ ಕ್ರುದ್ಧವಾದ, ಗೃಹಕೋಕಿಳಂಗಳೊಳ್ = ಮನೆಯ ಕೋಗಿಲೆಗಳಲ್ಲಿ (ಹಲ್ಲಿಗಳು?), ಒಂದೊಂದಂ ತಿನೆ = ಒಂದು ಇನ್ನೊಂದನ್ನು ಕೊಲ್ಲಲು, ಪನಿತ ಶೋಣಿತಬಿಂದುಗಳ್ = ಹನಿಗಳಾಗಿ ಬಿದ್ದ ರಕ್ತಬಿಂದುಗಳು, ತನ್ನ ಮೆಯ್ಗೆ = ತನ್ನ ದೇಹಕ್ಕೆ, (ತನ್ನ) ಪಾಪಪರಿಪಾಕದಿಂ = ಪಾಪ ತುಂಬಿಬಂದಿರಲು, ತಣ್ಪಂ ಪಡೆಯೆ = ತಂಪನ್ನು ಅನುಭವಿಸಿದನು; ಪರಮೌಷಧಮಂ ಪಡೆದೆನ್ = ಶ್ರೇಷ್ಠ ಔಷಧಿಯನ್ನು ಪಡೆದೆ, ಎಂದು, ಕರಂ + ಒಸೆದು = ತುಂಬ ಸಂತೋಷಪಟ್ಟು, ಅರವಿಂದಂ, ಕುರುವಿಂದನಂ ಕರೆದು ತನ್ನ ಇನ್ನೊಬ್ಬ ಮಗನಾದ ಕುರುವಿಂದನನ್ನು ಬರಮಾಡಿಕೊಂಡು, (ತನ್ನಲ್ಲಿ) ಉತ್ಪನ್ನ = ಉಂಟಾದ, ವಿಭಂಗಜ್ಞಾನದಿಂ = ಆತ್ಮನಿಗೆ ಅಹಿತವನ್ನುಂಟುಮಾಡುವ ತಿಳಿವಿನಿಂದ, ಮೃಗಂಗಳ್ + ಇರ್ದ + ಎಡೆಯನ್ + ಅಱಿದು = ಪ್ರಾಣಿಗಳಿದ್ದ ಜಾಗವನ್ನು ತಿಳಿದುಕೊಂಡು, ನಿಷ್ಕರುಣ(ನಾಗಿ) ನವ ಅರುಣಜಳದೊಳ್ = ಹೊಸತಾದ ರಕ್ತದಲ್ಲಿ, ಎನಗೆ = ನನಗಾಗಿ, ಲೀಲಾಸರೋವರಮಂ = ಈಜಾಡಲು ಕೊಳವೊಂದನ್ನು, ನೀಡಿಲ್ಲದೆ = ತಡವಿಲ್ಲದೆ, ಮಾಡು ಎಂದು, ಪೇೞ್ದೊಡೆ = ಹೇಳಲು, ಅವನ್ + ಆ ನಿಸ್ತ್ರಿಂಶಕರ್ಮಕ್ಕೆ = ಅವನು ಆ ಕ್ರೂರಕೆಲಸಕ್ಕೆ, ಕೊಕ್ಕರಿಸಿ = ಹೇಸಿ, (ತಾನು) ಪಾಪಭೀರು + ಅಪ್ಪುದಱಿಂ = ಪಾಪಕ್ಕೆ ಹಿಂಜರಿಯುವವನಾದ್ದರಿಂದ, ತಂದೆಯ ತತ್ + ಉಪರೋಧದಿಂ = ಆ ಬಲವಂತಕ್ಕೆ, ಮನಮಲ್ಲದ ಮನದೊಳ್ = ಮನಸ್ಸಿಲ್ಲದ ಮನಸ್ಸಿನಿಂದ, ತತ್ + ಉದ್ದಿಷ್ಟ =ಆ ಉದ್ದೇಶಕ್ಕಾಗಿ, ಮೃಗ + ಆವಾಸಮನ್ + ಎಯ್ದಿ = ಪ್ರಾಣಿಗಳ ನೆಲೆಗಳಿಗೆ ಹೋಗಿ, ಅಲ್ಲಿರ್ದರಂ = ಅಲ್ಲಿದ್ದ, ದಿವ್ಯಜ್ಞಾನಿಗಳನ್ ಕಂಡು = ಋಷಿಗಳನ್ನು ಕಂಡು, ನಿಜಜನಕವೃತ್ತಾಂತಮನ್ = ತನ್ನ ತಂದೆಯ ವಿಚಾರವನ್ನು, ನಿವೇದಿತ = ನಿವೇದಿಸಿಕೊಂಡು, ಅವರ ವಚನದಿನ್ = ಮಾತಿನಿಂದ, ಆತ್ಮೀಯಪಿತೃ = ತನ್ನ ತಂದೆಯ, ಮರಣಮುಮನ್ = ಸಾವಿನ ವಿಷಯವನ್ನೂ, ಆತನ ನರಕಗತಿಗಮನಮುಮನ್ = ಅವನು ನರಕದೆಡೆಗೆ ಸಾಗುತ್ತಿರುವನೆಂಬುದನ್ನು, ಅಱಿದು = ತಿಳಿದುಕೊಂಡು, ಕರುಣಾರಸಾರ್ದ್ರಹೃದಯನ್ = ಕರುಣೆಯಿಂದ ತೊಯ್ದು ಹೃದಯವುಳ್ಳ ಕುರುವುಂದನು, ಅದಂ ಮಾಡಲಾಱದೆ = ರಕ್ತದ ಮಡುವನ್ನು ಮಾಡಲಾರದೆ, ಲಾಕ್ಷಾದ್ರವಾದಿಕಾರಿತ = ಅರಿನ ರಸವೇ ಮುಂತಾದವುಗಳಿಂದ ನಿರ್ಮಿತವಾದ, ಮಾಯಾ + ಅರುಣಜಲಪರಿಪೂರ್ಣ = ಕೃತಕವಾದ ರಕ್ತದಿಂದ ಕೂಡಿದ, ವಾಪಿಯಂ = ಬಾವಿಯನ್ನು, ಸಮೆಯಿಸಿದೊಡೆ = ನಿಮಿಸಲು, ಅದಂ ಕಂಡು = ಅದನ್ನು ನೋಡಿದ ಅರವಿಂದನು, ರಾಗಿಸಿ =

ಸಮತೋಷದಿಂದ, ಪೊಕ್ಕು = ದುಮುಕಿ, ನೀಡುಂ + ಓಲಾಡಿ = ದೀರ್ಘ ಕಾಲ ಈಜಾಡಿ, ಮುಕ್ಕುಳಿಸಿ ನೋಡಿ = ಬಾಯಲ್ಲಿ ಹಾಕಿಕೊಂಡು ಮುಕ್ಕುಳಿಸಿದಾಗ ಕೃತಕರುಧಿರಮಪ್ಪುದನ್ + ಅಱಿದು = ಅದು ಕೃತಕ ರಕ್ತವೆಂದು ತಿಳಿದು, ಬೂತು + ಎನ್ನಂ ಬಂಚಿಸಿದನ್ = ಈ ಪಿಶಾಚಿ ನನಗೆ ಓಸಮಡಿದ, ಎಂದು = ಎಂದು, ನೆಱೆಯದ = ಪೂರ್ಣಗೊಳ್ಳದ, ನರಕಾಯುಷ್ಯಮಂ = ನರಕವಾಸವನ್ನು, ನೆಱಪುವನೆ + ಎಂಬಂತೆ = ಪೂರ್ಣಗೊಳಿಸುವವನಂತೆ, ಮುಳಿದು = ಕೋಪಿಸಿಕೊಂಡು, ಘೂರ್ಣಮಾನ = ಮೊರೆಯುವ, ಲೋಹಿತಲೋಚನಂ = ಕೆಂಪಾದ ಕಣ್ಣುಗಳನ್ನುಳ್ಳವನಾಗಿ, ದಶನನಿಪೀಡಿತ ದಶನವಸನನ್ = ಹಲ್ಲುಗಳಿಂದ ತುಟಿಯನ್ನು ಕಚ್ಚಿಕೊಂಡು, ಅಸಿಧೇನುವಂ ಕಿೞ್ತು = ಕಿರುಗತ್ತಿಯನ್ನು ಸೆಳೆದುಕೊಂಡು, ನಡನಡನಡುಗಿ ತಡದಡಿಸುತ್ತುಂ + ಇೞಿಯಲ್ = ದಡಬಡಿಸುತ್ತ ಬಂದು (ಮಗನನ್ನು) ಇರಿಯಲು, ಪರಿವ + ಆತಂ = ಓಡಿದ ಅವನು, ವಾಪೀಸೋಪಾನವನ್ + ಅಡರುತ್ತುಂ = ಬಾವಿಯ ಮೆಟ್ಟಿಲನ್ನು ಹತ್ತಿ, ಜಾಱಿವರಿದು ಕೆಡದು = ಜಾರಿ ಬಿದ್ದು, ಉರದೊಳ್ = ಎದೆಯಲ್ಲಿ, ನಟ್ಟ = ನಾಟಿಕೊಂಡ, ಸುರಿಗೆ = ಕಿರುಗತ್ತಿಯು, ಬೆನ್ನೊಳ್ಮೂಡೆ = ಬೆನ್ನಿನಲ್ಲಿ ಕಾಣಿಸಿಕೊಳ್ಳಲು, ಗತಜೀವಿತನಾಗಿ = ಪ್ರಾಣವಿರಹಿತನಾಗಿ (ಸತ್ತು), ನರಕಕ್ಕಿೞಿದನ್ = ನರಕಕ್ಕೆ ಬಿದ್ದ; ಈಗಳುಂ = ಈಗಲೂ, ಈ ಪುರಜನಂಗಳ್ಪೇೞೆ = ಈ ರಿನ ಜನಗಳು ಹೇಳುವುದನ್ನು, ಕೇಳಲಕ್ಕುಂ = ಕೇಳಬಹುದು; ಮತ್ತಂ = ಆಮೇಲೆ, ಈತನ ವಂಶದೊಳ್ = ಇವನ ವಂಶದಲ್ಲಿ, ಈ ಪೊೞಲೊಳ್ = ಈ ಊರಿನಲ್ಲಿ, ನೆಗೞ್ತೆ + ಪೆತ್ತಂ = ಕೀರ್ತಿವಡೆದ, ದಂಡಿತ + ಅರಾತಿಮಂಡಳಂ = ಶತ್ರುಸಮೂಹವನ್ನು ದಂಡಿಸುವ, ದಂಡಕನೆಂಬನಾತನ= ದಂಡಕ ಎಂಬ ಹೆಸರಿನ (ರಾಜನಿಗೂ), ಮನೋನಯನಸೌಂದರಿ = ಮನಸ್ಸು ಮತ್ತು ಕಣ್ಣುಗಳಿಗೆ ಮುದ ನೀಡುವ ಸುಂದರಿಯಾಗಿದ್ದ, ಸೌಂದರಿಯೆಂಬಳ್ = ಸೌಂದರಿಯೆಂಬುವ, ಅವರ್ಗೆ = ಆ ದಂಪತಿಗೆ, ಪುಟ್ಟಿದ = ಹುಟ್ಟಿದ, ಉಗ್ರಪ್ರತಾಪ = ಮಹಾ ಪ್ರತಾಪಿಯೂ, ವಿಜಿತ + ಅಂಶುಮಾಳಿ = ಗೆಲವಿನ ಸೂರ್ಯನೆನಿದ, ಮಣಿಮಾಳಿಯೆಂಬೊನ್ = ಮಣಿಮಾಳಿ ಎಂಬುವವನು, ಮಗನ್ + ಆಗೆ = ಮಗನಾಗಲು, (ಅವನು) ಪಲಕಾಲಂ = ಕೆಲವು ಕಾಲ, ಅರಸುಗೆಯ್ದು = ರಾಜ್ಯಭಾರ ಮಾಡಿ,

**ಗದ್ಯಾನುಸರಣ:** ಹಾಗೆ ನಾನಾ ವಿಧವಾದ ತಂಪುಮಾಡುವ ಕಾರ್ಯಗಳಿಂದಲೂ ದೇಹದ ಉರಿಯನ್ನು ಯಾವ ರೀತಿಯಲ್ಲಿಯೂ ನೀಗಿಸಿಕೊಳ್ಳಲಾರದೆ, ಪುಣ್ಯವು ನಶಿಸಿದ್ದರಿಂದಾಗಿ, ತಾನು ಕಲಿತ ವಿದ್ಯೆಗಳೂ ತನಗೆ ವಿಧೇಯವಾಗದಿರಲು, ಹರಿಶ್ಚಂದ್ರನೆಂಬ ತನ್ನ ಹಿರಿಯ ಮಗನನ್ನು ಕರೆದು, ತನ್ನ ಸಹಿಸಲಾಸಾಧ್ಯವಾದ ಸ್ಥಿತಿಯನ್ನು ತಿಳಿಸಿ, 'ನೀನು ನನ್ನನ್ನು ಆಕಾಶದಲ್ಲಿ

ಸಂಚರಿಸುವ ನಿನ್ನ ವಿದ್ಯೆಯ ಬಲದಿಂದ ಉತ್ತರ ಕುರು ಎಂಬ ಪ್ರದೇಶಕ್ಕೆ ಕರೆದೊಯ್ಯಿ; ಅಲ್ಲಿಯ, ಕಲ್ಪವೃಕ್ಷಗಳ ತಂಪಾದ ನೆರಳಿನಲ್ಲಿಯೂ, ಕಲ್ಪಲತೆಗಳ ತೊಂಗಲುಗಳಲ್ಲಿಯೂ, ಸೀತಾನದಿಯ ಅಲೆಗಳನ್ನಪ್ಪುವ, ಸಂತಾನ ಬಳ್ಳಿಗಳ ಹೂಗಳಲ್ಲಿಯೂ, ಕಂಪುಬೀರುವ ಮಂದಾರವೃಕ್ಷಗಳ ಬೀದಿಗಳಲ್ಲಿ ಬೀಸಿ ದಣಿಯುವ, ಗಾಳಿಯ ಸ್ಪರ್ಶದಿಂದ ನನ್ನ ದೇಹದಲ್ಲಿನ ಬೇಗೆಯನ್ನು ಹೋಗಲಾಡಿಸಿಕೊಳ್ಳುತ್ತೇನೆ' ಎಂದು ತನ್ನ ಮಗನಿಗೆ ಹೇಳಲು, ಅವನು ತನ್ನ ಆಕಾಶದಲ್ಲಿ ಹಾರುವ ವಿದ್ಯೆಗೆ ಆದೇಶಿಸಲು, ನರಕದ ಕಡೆಗೆ ಹೋಗುತ್ತಿರುವ, ಅರವಿಂದನಿಗೆ ಉಪಕಾರ ಮಾಡುವುದು ನನಗೆ ಅಸಾಧ್ಯ ಎನ್ನಲು; ವಿದ್ಯಾಧಿದೇವತೆಯ ಮಾತಿನಿಂದ ಹರಿಶ್ಚಂದ್ರನು ತಂದೆಗೆ ಸಾವು ಸಮೀಪಿಸಿರುವುದನ್ನು ತಿಳಿದು, ಖಿನ್ನಮನಸ್ಕನಾಗಿ ಸುಮ್ಮನಾದನು; ಅಷ್ಟರಲ್ಲಿ ಒಂದರೊಡನೊಂದು ಜಗಳವಾಡಿ ಕ್ರುದ್ಧವಾದ ಮನೆಯ ಕೋಗಿಲೆಗಳಲ್ಲಿ (ಹಲ್ಲಿಗಳು?) ಒಂದು ಇನ್ನೊಂದನ್ನು ಕೊಲ್ಲಲು, ಹನಿಗಳಾಗಿ ಬಿದ್ದ ರಕ್ತಬಿಂದುಗಳು ತನ್ನ ದೇಹಕ್ಕೆ, (ತನ್ನ) ಪಾಪ ತುಂಬಿಬಂದಿರಲು, ತಂಪನ್ನು ಅನುಭವಿಸಿದನು; 'ಶ್ರೇಷ್ಠ ಔಷಧಿಯನ್ನು ಪಡೆದೆ' ಎಂದು ತುಂಬ ಸಂತೋಷಪಟ್ಟ ಅರವಿಂದನು ತನ್ನ ಇನ್ನೊಬ್ಬ ಮಗನಾದ ಕುರುವಿಂದನನ್ನು ಬರಮಾಡಿಕೊಂಡು, (ತನ್ನಲ್ಲಿ) ಉಂಟಾದ, ಆತ್ಮನಿಗೆ ಅಹಿತವನ್ನುಂಟುಮಾಡುವ ತಿಳಿವಿನಿಂದ ಪ್ರಾಣಿಗಳಿದ್ದ ಜಾಗವನ್ನು ತಿಳಿದುಕೊಂಡು, ನಿಷ್ಕರುಣ(ನಾಗಿ) ಹೊಸತಾದ ರಕ್ತದಲ್ಲಿ ನನಗಾಗಿ, ಈಜಾಡಲು ಕೊಳವೊಂದನ್ನು ತಡವಿಲ್ಲದೆ ಮಾಡಿಸು ಎಂದು ಹೇಳಲು, ಅವನು ಆ ಕ್ರೂರಕೆಲಸಕ್ಕೆ ಹೇಸಿ, (ತಾನು) ಪಾಪಕ್ಕೆ ಹಿಂಜರಿಯುವವನಾದ್ದರಿಂದ, ತಂದೆಯ ಬಲವಂತಕ್ಕೆ ಮನಸ್ಸಿಲ್ಲದ ಮನಸ್ಸಿನಿಂದ, ಆ ಉದ್ದೇಶಕ್ಕಾಗಿ ಪ್ರಾಣಿಗಳ ನೆಲೆಗಳಿಗೆ ಹೋಗಿ, ಅಲ್ಲಿದ್ದ ಋಷಿಗಳನ್ನು ಕಂಡು, ತನ್ನ ತಂದೆಯ ವಿಚಾರವನ್ನು ನಿವೇದಿಸಿಕೊಂಡು, ಅವರ ಮಾತಿನಿಂದ ತನ್ನ ತಂದೆಯ ಸಾವಿನ ವಿಷಯವನ್ನೂ, = ಅವನು ನರಕದೆಡೆಗೆ ಸಾಗುತ್ತಿರುವನೆಂಬುದನ್ನೂ ತಿಳಿದುಕೊಂಡು, ಕರುಣೆಯಿಂದ ತೊಯ್ದ ಹೃದಯವುಳ್ಳ ಕುರುವಿಂದನು ರಕ್ತದ ಮಡುವನ್ನು ಮಾಡಲಾರದೆ, ಅರಗಿನ ರಸವೇ ಮುಂತಾದವುಗಳಿಂದ ನಿರ್ಮಿತವಾದ ಕೃತಕವಾದ ರಕ್ತದಿಂದ ಕೂಡಿದ ಬಾವಿಯನ್ನು ನಿರ್ಮಿಸಲು, ಅದನ್ನು ನೋಡಿದ ಅರವಿಂದನು, ಸಮತೋಷದಿಂದ ಅದರಲ್ಲಿ ದುಮುಕಿ ದೀರ್ಘ ಕಾಲ ಈಜಾಡಿ, ಕೊನೆಗೆ ಬಾಯಲ್ಲಿ ಹಾಕಿಕೊಂಡು ಮುಕ್ಕುಳಿಸಿದಾಗ ಅದು ಕೃತಕ ರಕ್ತವೆಂದು ತಿಳಿದು, 'ಈ ಪಿಶಾಚಿಯೂ ನನಗೆ ಮೋಸಮಡಿದ' ಎಂದು ಇನ್ನೂ ಪೂರ್ಣಗೊಳ್ಳದ ನರಕಾಯುಷ್ಯವನ್ನು ಪೂರ್ಣಗೊಳಿಸುವವನಂತೆ, ಮಗನ ಮೇಲೆ ಕೋಪಿಸಿಕೊಂಡು, ಮೊರೆಯುತ್ತ ಕೆಂಪಾದ ಕಣ್ಣುಗಳನ್ನುಳ್ಳವನಾಗಿ, ಹಲ್ಲುಗಳಿಂದ ತುಟಿಯನ್ನು ಕಚ್ಚಿಕೊಂಡು, ಕಿರುಗತ್ತಿಯನ್ನು ಸೆಳೆದುಕೊಂಡು ದಡಬಡಿಸುತ್ತ ಬಂದು (ಮಗನನ್ನು) ಇರಿಯ್ಯತ್ತ ಓಡಿದ ಅವನು ಬಾವಿಯ ಮೆಟ್ಟಿಲನ್ನು ಹತ್ತಿ ಜಾರಿ ಬಿದ್ದು, ಎದೆಯಲ್ಲಿ ನಾಟಿಕೊಂಡ

ಕಿರುಗತ್ತಿಯು ಬೆನ್ನಿನಲ್ಲಿ ಕಾಣಿಸಿಕೊಳ್ಳಲು, ಸತ್ತು ನರಕಕ್ಕೆ ಬಿದ್ದ; ಈ ಕತೆಯನ್ನು ಈಗಲೂ ಈ ಊರಿನ ಜನಗಳು ಹೇಳುವುದನ್ನು ಕೇಳಬಹುದು; ಆಮೇಲೆ, ಇವನ ವಂಶದಲ್ಲಿ ಈ ಊರಿನಲ್ಲಿಯೇ ಶತ್ರುಸಮೂಹವನ್ನು ದಂಡಿಸುವವನು ಎಂದು ಕೀರ್ತಿವಡೆದ ದಂಡಕ ಎಂಬ ಹೆಸರಿನ ರಾಜನಿಗೂ, ಮನಸ್ಸು ಮತ್ತು ಕಣ್ಣುಗಳಿಗೆ ಮುದ ನೀಡುವ ಸುಂದರಿಯಾಗಿದ್ದ ಅವನ ಹೆಂಡತಿ ಸೌಂದರಿಯೆಂಬುವವಳಿಗೂ ಮಹಾ ಪ್ರತಾಪಿಯೂ, ಗೆಲವಿನ ಸೂರ್ಯನೂ ಎನಿಸಿದ ಮಣಿಮಾಳಿ ಎಂಬುವವನು ಮಗನಾಗಿ ಹುಟ್ಟಿ ಕೆಲವು ಕಾಲ ರಾಜ್ಯಭಾರ ಮಾಡಿದ.

**ಇಳೆಯಂ ಘಾತಿಸಿ ತಕ್ಕರಂ ಕವರ್ದುಕೊಂಡಾದರ್ಥಮಂ ಪೂಳ್ದುಮಿ**
**ಳ್ಮಿಳ ನೋಡುತ್ತುಮುದಗ್ರಲೋಭವಶದಿಂ ತನ್ನುಂಡುದಂ ತಪ್ಪುದೆಂ**
**ದಳವಂ ಮಾಣಿಸಿ ಸತ್ತು ದಂಡಕನೃಪಂ ಲೋಭಾಭಿಭೂತಂ ವಿಷಾ**
**ವಿಳದಂಷ್ಟ್ರಂ ಶ್ವಯುವಾಗಿ ಪುಟ್ಟಿ ಸುೞಿಗುಂ ಮುಂ ಬಯ್ತ ಭಂಡಾರದೊಳ್ ೧೫**

**ಪದವಿಭಾಗ–ಅನ್ವಯ–ಅರ್ಥ:** ಇಳೆಯಂ = ಭೂಮಿಯನ್ನು, ಘಾತಿಸಿ = ಹಿಂಸಿಸಿ, ತಕ್ಕರಂ = ಯೋಗ್ಯರಿಂದ, ಕವರ್ದುಕೊಂಡು = ಸುಲಿಗೆಮಾಡಿ, ಆದ = ಸಂಪಾದಿಸಿದ, ಅರ್ಥಮಂ = ಸಂಪತ್ತನ್ನು, ಪೂೞ್ದು = ಹೂತಿಟ್ಟು, ಉದಗ್ರಲೋಭವಶದಿಂ = ಮಹಾ ಜಿಪುಣತನದಿಂದ, ಮಿಳ್ಮಿಳ ನೋಡುತ್ತುಂ = ಪಿಳಿಪಿಳಿ ಎಂದು ನೋಡುತ್ತ, ತನ್ನುಂಡುದಂ = ತಾನು ತಿಂದುದನ್ನೂ, ತಪ್ಪುದು = ವ್ಯರ್ಥವಾಯಿತು, ಎಂದು, ಲೋಭ + ಅಭಿಭೂತಂ = ಲೋಭದಿಂದ ಕೂಡಿ, ಅಳವಂ ಮಾಣಿಸಿ = ಶಕ್ತಿಯನ್ನು ನಾಶಮಾಡಿಕೊಂಡು, ಸತ್ತು, ದಂಡಕನೃಪಂ = ರಾಜನು, ವಿಷ + ಆವಿಳ + ದಂಷ್ಟ್ರಂ = = ವಿಷದ ಹಾವಿನಿಂದ ಕೂಡಿದ, ಶ್ವಯುವಾಗಿ ಪುಟ್ಟಿ = ಹೆಬ್ಬಾವಾಗಿ ಹುಟ್ಟಿ, ಮುಂ ಬಯ್ತ ಭಂಡಾರದೊಳ್ = (ತಾನು) ಮುಂಚೆ ಬಚ್ಚಿಟ್ಟಿದ್ದ ಭಂಡಾರದಲ್ಲಿ, (ಅದನ್ನು ಕಾಯಲು), ಸುೞಿದಂ = ಹುಟ್ಟಿದ.

**ಗದ್ಯಾನುಸರಣ:** ಭೂಮಿಯನ್ನು ಹಿಂಸಿಸಿ, ಯೋಗ್ಯರಿಂದ ಹಣವನ್ನು ಸುಲಿಗೆಮಾಡಿ ಸಂಪಾದಿಸಿದ ಸಂಪತ್ತನ್ನು ಭೂಮಿಯಲ್ಲಿ ಹೂತಿಟ್ಟು, ಮಹಾ ಜಿಪುಣತನದಿಂದ ಅದನ್ನೇ ಪಿಳಿಪಿಳಿ ನೋಡುತ್ತ, ತಿಂದರೂ ವ್ಯರ್ಥವಾಗುತ್ತದೆಂದು ತನ್ನ ಶಕ್ತಿಯನ್ನು ನಾಶಮಾಡಿಕೊಂಡು ಸತ್ತು, ದಂಡಕರಾಜನು (ತಾನು) ಮುಂಚೆ ಬಚ್ಚಿಟ್ಟಿದ್ದ ಭಂಡಾರದಲ್ಲಿಯೇ ಕಾಯಲೆಂದು ವಿಷದ ಹೆಬ್ಬಾವಾಗಿ ಹುಟ್ಟಿದ.

ವ॥ ಅಂತಾರ್ತಧ್ಯಾನದೊಳಜಗರನಾಗಿ ತನ್ನ ಮುನ್ನಿನ ಸಂಚಿತವಸ್ತುಗಳಂ ಕಾವಂದು ಮಗಂ ಮಣಿಮಾಳಿಯಂ ಕಂಡು ಜಾತಿಸ್ಮರನಾಗಿ ಮಣಿಮಾಳಿ ಯಲ್ಲದುೞದಾರುಮಂ ಸಾರಲೀಯದೆ ಭಂಡಾರಮಂ ಕಾದುಕೊಂಡಿರ್ಪುದುಮೊಂದು ದಿವಸಂ ಮಣಿಮಾಳಿ ರತಿಚಾರಣರೆಂಬ ಚಾರಣರನವಧಿ ಜ್ಞಾನಿಗಳಂ ಕಂಡಜಗರವೃತ್ತಾಂತಮಮಂ ಬೆಸಗೊಂಡು ವಿಷಮವಿಷಧರ ನಾತ್ಮೀಯಜನಕನೆಂದಱಿದು ತತ್ಸಮೀಪಕ್ಕೆ ವಂದು,

**ಪದವಿಭಾಗ-ಅನ್ವಯ-ಅರ್ಥ:** ಅಂತು = ಆ ರೀತಿಯಲ್ಲಿ, ಆರ್ತಧ್ಯಾನದೊಳ್ = ಇಷ್ಟವಾದುದು ದೂರವಾದೀತೆಂಬ ಚಿಂತೆಯಿಂದ, ಅಜಗರನಾಗಿ = ಹೆಬ್ಬಾವಾಗಿ, ತನ್ನ ಮುನ್ನಿನ = ತಾನು ಮುಂಚೆ, ಸಂಚಿತವಸ್ತುಗಳಂ ಸಂಗ್ರಹಿಸಿದ್ದ ಸಂಪತ್ತನ್ನು, ಕಾವಂದು = ಕಾಯುತ್ತಿರಲು, ಮಗಂ ಮಣಿಮಾಳಿಯಂ ಕಂಡು, ಜಾತಿಸ್ಮರನಾಗಿ = ಹಿಂದಿನ ಜನ್ಮದ ನೆನಪು ಬಂದು, ಮಣಿಮಾಳಿಯಲ್ಲದೆ, ಉೞದಾರುಮಂ = ಬೇರೆ ಯಾರನ್ನೂ, ಸಾರಲ್ + ಈಯದೆ = ಹತ್ತಿರ ಬಾರದಂತೆ, ಭಂಡಾರಮಂ ಕಾದುಕೊಂಡಿರ್ಪುದುಂ = ಸಂಪತ್ತನ್ನು ಕಾಯುತ್ತಿರಲು, ಒಂದು ದಿವಸಂ ಮಣಿಮಾಳಿಯು, ರತಿಚಾರಣರೆಂಬ = ರತಿಚಾರಣರೆಂಬ ಹೆಸರಿನ ಅವಧಿಜ್ಞಾನಿಗಳಂ ಚಾರಣರನ್ = ಅವಧಿಜ್ಞಾನಿಗಳಾದ ಚಾರಣಋಷಿಗಳನ್ನು, ಕಂಡು, ಅಜಗರವೃತ್ತಾಂತಮಂ = ಆ ಹಾವಿನ ವೃತ್ತಾಂತವನ್ನು, ಬೆಸಗೊಂಡು = ವಿಚಾರಿಸಿಕೊಂಡು, ವಿಷಮವಿಷಧರನ್ = ಮಹಾವಿಷದಿಂದ ಕೂಡಿದ ಆ ಹಾವು, ಆತ್ಮೀಯ = ತನ್ನ, ಜನಕನೆಂದು + ಅಱಿದು = ತನ್ನ ತಂದೆಯೇ ಎಂದು ಅರಿತು, ತತ್ + ಸಮೀಪಕ್ಕೆ ವಂದು = ಅದರ ಹತ್ತಿರ ಬಂದು.

**ಗದ್ಯಾನುಸರಣ:** ಆ ರೀತಿ ಆರ್ತಧ್ಯಾನದಿಂದ ಹೆಬ್ಬಾವಾಗಿ ತಾನು ಹಿಂದೆ ಸಂಗ್ರಹಿಸಿದ್ದ ಸಂಪತ್ತನ್ನು ಕಾಯುತ್ತಿರಲು, ಮಗನಾದ ಮಣಿಮಾಳಿಯಂ ಕಂಡು ಜಾತಿಸ್ಮರನಾಗಿ ಅವನಲ್ಲದೆ ಬೇರೆ ಯಾರನ್ನೂ ಸಂಪತ್ತಿನ ಹತ್ತಿರ ಬಾರದಂತೆ ಕಾಯುತ್ತಿರಲು, ಒಂದು ದಿವಸ ಮಣಿಮಾಳಿಯು ರತಿಚಾರಣರೆಂಬ ಹೆಸರಿನ ಅವಧಿಜ್ಞಾನಿಗಳಾದ ಚಾರಣಋಷಿಗಳನ್ನು ಕಂಡು, ಆ ಹಾವಿನ ವೃತ್ತಾಂತವನ್ನು, ವಿಚಾರಿಸಿ ಆ ಹಾವು ತನ್ನ ತಂದೆಯೇ ಎಂದು ಅರಿತು, ಅದರ ಹತ್ತಿರ ಬಂದ.

**ನೀನತಿಲೋಭದೊಳಿಲ್ಲಿ ಕು**
**ಯೋನಿಯೊಳಜಗರನಾದೆಯಾ ಮೋಹಮುದೇ**
**ನೇನಂ ಮಾಡದೊ ಬಿಸುಡಿದ**
**ನಾನಿನ್ನೇನೆಂಬೆನೆಂಬುದಂ ಕೈಕೊಳ್ಳಾ ೧೬**

**ಪದವಿಭಾಗ-ಅನ್ವಯ-ಅರ್ಥ:** ನೀನು, ಅತಿಲೋಭದೊಳ್ = ತೀರ ಲೋಭದಿಂದ, 'ಇಲ್ಲಿ ಕುಯೋನಿಯೊಳ್ = ಪಶುಪಕ್ಷಿಯಂತಹ ಕೆಳವರ್ಗದ

ಜನ್ಮದಲ್ಲಿ, ಹುಟ್ಟಿ, ಅಜಗರನಾದೆ = ಹೆಬ್ಬಾವಾಗಿದ್ದೀಯೆ; ಆ ಮೋಹಂ = ಮೋಹವೆಂಬುದು, ಅದು + ಏನೇನಂ ಮಾಡದೊ = ಅದೇನನ್ನು ಮಾಡಿಬಿಡುತ್ತದೆ, ಇದನ್ ಬಿಸುಡು = ಈ ಲೋಭವನ್ನು ಬಿಟ್ಟುಬಿಡು, ಆನ್ + ಇನ್ನೇನೆಂಬೆನ್ = ನಾನೀಗ ಏನು ಹೇಳುತ್ತೇನೆಯೋ, ಎಂಬುದಂ = ಅದರಂತೆ, ಕೈಕೊಳ್ಳಾ = ಅನುಸರಿಸು.

**ಗದ್ಯಾನುಸರಣ:** 'ತೀರ ಲೋಭದಿಂದ, ನೀನು ಪಶುಪಕ್ಷಿಯಂತಹ ಕೆಳವರ್ಗದ ಜನ್ಮದ ಹೆಬ್ಬಾವಾಗಿ ಹುಟ್ಟಿದ್ದೀಯೆ; ಮೋಹವೆಂಬುದು ಏನೇನನ್ನೋ ಮಾಡಿಬಿಡುತ್ತದೆ; ಲೋಭವನ್ನು ಬಿಟ್ಟು ನಾನೀಗ ಏನು ಹೇಳುತ್ತೇನೆಯೋ ಹಾಗೆ ಮಾಡು' ಎಂದು ಹೇಳಿದ.

**ವಿಷಯಾಮಿಷಲಂಪಟತೆಯೆ**
**ವಿಷಧರನೆನಿಸಿದುದು ನಿನ್ನನೆಲೆ ವಿಷಧರ ನೀಂ**
**ವಿಷಧರನಾಗದೆ ಬೇಗಂ**
**ವಿಷಯಾಮಿಷವಿಷಮನುಗುಳ್ದು ನಿರ್ವಿಷನಾಗಾ ೧೭**

**ಪದವಿಭಾಗ–ಅನ್ವಯ–ಅರ್ಥ:** ವಿಷಧರ ಎಲೈ ಹಾವೇ, ವಿಷಯ + ಆಮಿಷ = ಸಂಪತ್ತು ಮತ್ತು ಆಸೆಗಳ ಲಂಪಟತೆಯೆ = ಲಾಲಸೆಯೇ, ನಿನ್ನಂ = ನಿನ್ನನ್ನು, ವಿಷಧರನ್ + ಎನಿಸಿದುದು ಹಾವನ್ನಾಗಿ ಮಾಡಿದೆ; ನೀಂ ವಿಷಧರನಾಗದೆ = ನೀನಿನ್ನು ಆ ವಿಷವನ್ನು ಉಳಿಸಿಕೊಳ್ಳದೆ, ಬೇಗಂ = ಬೇಗನೆ ವಿಷಯ + ಆಮಿಷವಿಷಮನ್ = ಲಂಪಟತೆಯೆಂಬ ವಿಷವನ್ನು, ಉಗುಳ್ದು = ಕಕ್ಕಿ, ನಿರ್ವಿಷನಾಗಾ = ವಿಷವಿರಹಿತನಾಗು

**ಗದ್ಯಾನುಸರಣ:** 'ಎಲೈ ಹಾವೇ, ಸಂಪತ್ತಿನ ಲಾಲಸೆಯೇ ನಿನ್ನನ್ನು ಹಾವನ್ನಾಗಿ ಮಾಡಿದೆ; ನೀನಿನ್ನು ಆ ವಿಷವನ್ನು ಉಳಿಸಿಕೊಳ್ಳದೆ ಬೇಗನೆ ಲಂಪಟತೆಯನ್ನು ಕಕ್ಕಿ ವಿಷವಿರಹಿತನಾಗು.'

**ವ। ಎಂದು ತನ್ನಂ ಪ್ರತಿಬೋಧಿಸಿದ ನಿಜತನೂಜನ ವಚನ ತಿಗ್ಮರೋಚಿ ರುಚಿನಿ ಚಯದಿನಾತ್ಮೀಯ ಚೇತೋನಿಚಿತ ಮೋಹಾಂಧತಮ ಸ್ತೋಮಮಂ ಕಳೆದು ಕೃತಾನುಶಯನನಶನವಿಧಾನದಿನಸುವಂ ವಿಸರ್ಜಿಸಿ ಸೌಧರ್ಮ ಕಲ್ಪದೊಳ್ ದೇವನಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಎಂದು ತನ್ನಂ = ತನಗೆ, ಪ್ರತಿಬೋಧಿಸಿದ =ಉಪದೇಶ ಮಾಡಿದ, ನಿಜತನೂಜನ = ತನ್ನ ಮಗನ, ವಚನ = ಮಾತುಗಳೆಂಬ ತಿಗ್ಮರೋಚಿ + ರುಚಿನಿಚಯದಿನ್ = ಸೂರ್ಯಕಿರಣಗಳ ಸಮೂಹದಿಂದದ,

ಆತ್ಮೀಯಚೇತೋನಿಚಿತ = ತನ್ನ ಮನಸ್ಸಿನಲ್ಲಿನ, ಮೋಹಾಂಧತಮಃ + ಸ್ತೋಮಮಂ = ಮೋಹವೆಂಬ ಕತ್ತಲ ರಾಶಿಯನ್ನು, ಕಳೆದು = ನೀಗಿಕೊಂಡು, ಕೃತಾನುಶಯನ್ = ಪಶ್ಚಾತ್ತಪಪಟ್ಟವನಾಗಿ, ಅನಶನವಿಧಾನದಿನ್ = ಉಪವಾಸದ ಮೂಲಕ, ಅಸುವಂ ವಿಸರ್ಜಿಸಿ = ದೇಹವನ್ನು ತೊರೆದು, ಸೌಧರ್ಮಕಲ್ಪದೊಳ್ ದೇವನಾಗಿ,

**ಗದ್ಯಾನುಸರಣ:** ಹೀಗೆಂದು ತನಗೆ ಉಪದೇಶ ಮಾಡಿದ ಮಗನ ಮಾತುಗಳೆಂಬ ಸೂರ್ಯಕಿರಣಗಳು ತನ್ನ ಮನಸ್ಸಿನ ಮೋಹವೆಂಬ ಕತ್ತಲನ್ನು ಹೋಗಲಾಡಿಸಿಕೊಂಡು, ಪಶ್ಚಾತ್ತಪದಿಂದ ಉಪವಾಸವಿದ್ದು ದೇಹವನ್ನು ತೊರೆದು ಸೌಧರ್ಮಕಲ್ಪದ್ಳೊಳ್ ದೇವನಾಗಿ ಹುಟ್ಟಿದ.

**ನೆನೆದಾಗಳ್ ನಿಜನಂದನೋಪಕೃತಮಂ ತದ್ದೇವನೆಯ್ತಂದು ದೇ**
**ವನಿಕಾಯಂ ಬೆರಸಪ್ಪಿಕೊಂಡು ದಿವದೊಳ್ ಮೇಲಪ್ಪ ರತ್ನಂಗಳೆಂ**
**ದನಿತಂ ಮುಂ ಮಣಿಮಾಳಿಗಿತ್ತನವು ತಮ್ಮಾಮ್ನಾಯದಿಂಬಂದೊಡೀ**
**ತನುಮೀಗಳ್ ನೆಱ ತೊಟ್ಟು ಬಂದನಿದೇಂ ನೀಮೆಲ್ಲರುಂ ಕಾಣಿರೇ೧೮**

**ಪದವಿಭಾಗ–ಅನ್ವಯ–ಅರ್ಥ:** ನಿಜನಂದನ = ತನ್ನ ಮಗನ, ಉಪಕೃತಮಂ = ಉಪಕಾರವನ್ನು, ಆಗಳ್ ನೆನೆದು ಆಗ ಜ್ಞಾಪಿಸಿಕೊಂಡು, ದೇವನಿಕಾಯಂ ಬೆರಸು = ದೇವಸಮೂಹದ ಜೊತೆಗೆ, ತತ್ + ದೇವನ್ + ಎಯ್ತಂದು = ಆ ದೇವನು ಬಂದು, (ಮಣಿಮಾಳಿಯನ್ನು) ಅಪ್ಪಿಕೊಂಡು, ದಿವದೊಳ್ = ದೇವಲೋಕದಲ್ಲಿ, ಮೇಲಪ್ಪ ರತ್ನಂಗಳೆಂದು + ಅನಿತಂ = ದೇವಲೋಕದಲ್ಲಿಯೇ ಅಮೂಲ್ಯವೆನಿಸಿದ ಅಷ್ಟೂ ರತ್ನಂಗಳನ್ನು, ಮುಂ ಮಣಿಮಾಳಿಗಿತ್ತನ್ = ಮಣಿಮಾಳಿಗೆ ನೀಡಿದ; ಅವು = ಆ ರತ್ನಗಳು, ತಮ್ಮ + ಆಮ್ನಾಯದಿಂ = ಪರಂಪರೆಯಿಂದ, ಬಂದೊಡೆ = ಬಂದಿರಲು, ಈತನುಂ + ಈಗಳ್ = ಈ ಮಹಾಬಲನು ಈಗಲೂ, ನೆಱ ತೊಟ್ಟು ಬಂದನ್ = ಧರಿಸಿ ಬಂದಿದ್ದಾನೆ, ಇದೇಂ ನೀಮೆಲ್ಲರುಂ ಕಾಣಿರೇ = ಇದನ್ನು ನೀವೆಲ್ಲ ನೋಡುತ್ತಿರುವಿರಷ್ಟೇ?

**ಗದ್ಯಾನುಸರಣ:** ತನ್ನ ಮಗನ ಉಪಕಾರವನ್ನು ನೆನೆದು ಆ ದೇವನು ದೇವಸಮೂಹದ ಜೊತೆಗೆ ಬಂದು ಮಣಿಮಾಳಿಯನ್ನು ಅಪ್ಪಿಕೊಂಡು ದೇವಲೋಕದಲ್ಲಿಯೇ ಅಮೂಲ್ಯವೆನಿಸಿದ ತಾನು ತಂದ ಅಷ್ಟೂ ರತ್ನಗಳನ್ನು ಮಣಿಮಾಳಿಗೆ ನೀಡಿದ; ವಂಶಪಾರಂಪರ್ಯವಾಗಿ ಬಂದ ಆ ರತ್ನಗಳು ಮಹಾಬಲನು ಈಗಲೂ ಧರಿಸಿ ಬಂದಿದ್ದಾನೆ; ಇದನ್ನು ನೀವೆಲ್ಲ ನೋಡುತ್ತಿರುವಿರಲ್ಲವೇ?

**ವ। ಇದನ್ನೆಗಮನುಭೂತಮಿದಲ್ಲದೆಯುಂ ವಯೋಧಿಕ ವ್ಯೋಮಚರ**

'ಪ್ರತ್ಯಕ್ಷಮೀ ಮಹಾಬಳನ ಪಿತೃಪಿತಾಮಹಂ ಸಹಸ್ರಬಳನೆಂಬನಂಬರಚರ ನಾತ್ಮೀಯ ಶ್ರೀಯನನುಭವಿಸಿ ವಿಷಯವಿರಕ್ತನಾಗಿ ನಿಜರಾಜ್ಯಪದವಿಯೊಳ್ ತನ್ನ ಪಿರಿಯ ಮಗನಪ್ಪ

**ಪದವಿಭಾಗ–ಅನ್ವಯ–ಅರ್ಥ:** ಇದು, ಅನ್ನೆಗಂ + ಅನುಭೂತಂ = ಇದೆಲ್ಲವೂ ಹಿಂದಿನದು, ಅಲ್ಲದೆಯುಂ = ಅಲ್ಲದೆ, ವಯೋಧಿಕ = ಹೆಚ್ಚು ವಯಸ್ಸಾದ, ವ್ಯೋಮಚರ = ಖೇಚಚರರಿಗೆ, ಪ್ರತ್ಯಕ್ಷಂ = ತಿಳಿದಿರುವಂಥದು; ಈ ಮಹಾಬಳನ, ಪಿತೃಪಿತಾಮಹಂ = ಮುತ್ತಾತನಾದ, ಸಹಸ್ರಬಳನೆಂಬನ್ + ಅಂಬರಚರನ್ = ಸಹಸ್ರಬಳನೆಂಬ ಖೇಚರನು, ಆತ್ಮೀಯಶ್ರೀಯನ್ + ಅನುಭವಿಸಿ = ತನ್ನ ಸೌಭಾಗ್ಯವನ್ನು ಅನುಭವಿಸಿ, ವಿಷಯುವಿರಕ್ತನಾಗಿ = ವೈರಾಗ್ಯದಿಂದ, ನಿಜರಾಜ್ಯಪದವಿಯೊಳ್ = ತನ್ನ ರಾಜ್ಯಾಧಿಕಾರದಲ್ಲಿ, ತನ್ನ ಪಿರಿಯ ಮಗನಪ್ಪ = ತನ್ನ ಹಿರಿಯ ಮಗನಾದ,

**ಗದ್ಯಾನುಸರಣ:** ಇದೆಲ್ಲವೂ ಹಿಂದಿನದು ಮಾತ್ರವಲ್ಲ, ಹಿರಿಯರಾದ ಖೇಚಚರರಿಗೆ ತಿಳಿದಿರುವಂಥದು; ಈ ಮಹಾಬಳನ ಮತ್ತಾತನಾದ ಸಹಸ್ರಬಳನೆಂಬ ಖೇಚರನು ತನ್ನ ರಾಜ್ಯವನ್ನು ಅನುಭವಿಸಿ, ಕೊನೆಗೆ ವೈರಾಗ್ಯದಿಂದ ತನ್ನ ತನ್ನ ಹಿರಿಯಮಗನನ್ನು ರಾಜ್ಯಾಧಿಕಾರದಲ್ಲಿ ನಿಲ್ಲಿಸಿದ.

**ಶತಬಳನಂ ಸಹಸ್ರಬಳಖೇಚರನಿಟ್ಟು ತಪೋನಿಯೋಗನಿ**
**ಶ್ಚಿತಮನನಾಗಿ ಸಂದನಪವರ್ಗಪದಕ್ಕೆ ಬಟಿಕ್ಕೆ ಧಾತ್ರಿಯುಂ**
**ಶತಬಳನಾತ್ಮಜಂಗೆ ನೆಗಟ್ದೀ ಖಚರೇಂದ್ರನ ತಂದೆಯಪ್ಪ ಸಂ**
**ದತಿಬಳಖೇಚರಂಗೆ ತೊದಳಿಲ್ಲದೆ ಕೊಟ್ಟುಪಶಾಂತಮಾನಸಂ ೧೯**

**ಪದವಿಭಾಗ–ಅನ್ವಯ–ಅರ್ಥ:** ಸಹಸ್ರಬಳಖೇಚರನ್ = ಸಹಸ್ರಬಳ ವಿದ್ಯಾಧರನು, ಮಗನಾದ ಶತಬಳನಂ, ಇಟ್ಟು = ರಾಜ್ಯಭಾರದಲ್ಲಿ ತೊಡಗಿಸಿ, ತಪೋನಿಯೋಗ = ತಪಸ್ಸಿನ ಕಾರ್ಯದಲ್ಲಿ, ನಿಶ್ಚಿತಮನನಾಗಿ = ಮನಸ್ಸನ್ನು ಕೇಂದ್ರೀಕರಿಸಿ, ಅಪವರ್ಗಪದಕ್ಕೆ = ಮೋಕ್ಷಪದವಿಗೆ, ಸಂದನ್ = ಸೇರಿದ; ಬಟಿಕ್ಕೆ = ಆನಂತರ, ಶತಬಳನ್ = ಶತಬಳನು, ನೆಗಟ್ದಿ = ಖ್ಯಾತನಾದ, ಈ ಖಚರೇಂದ್ರನ ತಂದೆಯಪ್ಪ = ಈ ಮಹಾಬಳನ ತಂದೆಯಾದ, ಆತ್ಮಜಂಗೆ = ತನ್ನ ಮಗನಿಗೆ, ಅತಿಬಳಖೇಚರಂಗೆ = ಅತಿಬಳನಿಗೆ, ಧಾತ್ರಿಯಂ = ರಾಜ್ಯವನ್ನು, ತೊದಳಿಲ್ಲದೆ = ಗೊಂದವಿಲ್ಲದೆ, ಕೊಟ್ಟು, ಉಪಶಾಂತಮಾನಸಂ = ಸಮಾಧಾನಮನಸ್ಕ(ನಾದ).

**ಗದ್ಯಾನುಸರಣ:** ಶತಬಳ ವಿದ್ಯಾಧರನು ಮಗನಾದ ಶತಬಳನನನ್ನು ರಾಜ್ಯಭಾರದಲ್ಲಿ ನಿಲ್ಲಿಸಿ, ತಾನು ತಪಸ್ಸಿನ ಕಾರ್ಯದಲ್ಲಿ, ಮನಸ್ಸನ್ನು ಕೇಂದ್ರೀಕರಿಸಿ

ಮೋಕ್ಷಪದವಿಯನ್ನು ಗಳಿಸಿದ; ಆನಂತರ ಶತಬಳನು ಖ್ಯಾತನಾದ ಈ ಮಹಾಬಳನ ತಂದೆಯಾದ ಅತಿಬಳಖೇಚರನಿಗೆ ತನ್ನ ಮಗನಿಗೆ ನಿಶ್ಚಿಂತೆಯಿಂದ ರಾಜ್ಯವನ್ನು ಕೊಟ್ಟು ಸಮಾಧಾನಗೊಂಡ

**ವ|| ಗೃಹೀತೋಪಾಸಕವ್ರತನನಶನಾವಮೋದರ್ಯಾದ್ಯಾಚರಣಪರಿಣತಂ ಯಥೋಚಿತ ವಿಧಿಯಿಂದಾಯುರವಸಾನದೊಳೆ ಸಂಸಾರಕ್ಷಪಕನಾಗಿ ಸಮಾಧಾನಪುರಸ್ಸರಂ ಸನ್ನ್ಯಸನವಿಧಾನದಿಂ ಪರಿತ್ಯಕ್ತಜೀವಿತಂ ಮಾಹೇಂದ್ರ ಕಲ್ಪದೊಳಣಿಮಾದ್ಯಷ್ಟ ಗುಣೈಶ್ವರ್ಯೋಪೇತನುಂ ಸಪ್ತಸಾಗರ ಪ್ರಮಿತ ಜೀವಿತನುಂ ಲಬ್ಧಾತ್ಮಲಾಭನುಮಾಗಿ ನಮ್ಮ ಕುಮಾರಕಾಲದಂದು ನೀಮು ಮಾಮುಂ ಮಹಾಬಳನುಂ ಕ್ರೀಡಾನಿಮಿತ್ತಂ ಪೋಗಿ ಸುಮೇರು ಮಹೀಧರದ ನಂದನವನದೊಳ್ ವನಕ್ರೀಡೆಯನಾಡುತ್ತಿರ್ಪಿನಮಲ್ಲಿಯ ಕೃತ್ರಿಮಚೈತ್ಯಾ ಲಯಮಂ ಬಂದಿಸಲಾ ಮಹೇಂದ್ರಕಲ್ಪಜನುಂ ಮಹಾವಿಭೂತಿಯಿಂ ಬಂದು**

**ಪದವಿಭಾಗ–ಅನ್ವಂಯ–ಅರ್ಥ:** ಗೃಹೀತೋಪಾಸಕವ್ರತನ್ = ಉಪಾಸಕವ್ರತವನ್ನು ಹಿಡಿದವನಾಗಿ, ಅನಶನ = ಉಪವಾಸ, ಅವಮೋದರ್ಯ = ಆಹಾರ ಕಡಿಮೆ ಮಾಡುತ್ತ ಹೋಗುವ ವ್ರತ, ಆದಿ + ಆಚರಣಪರಿಣತಂ = ಮುಂತಾದವುಗಳನ್ನು ಆಚರಿಸುವಲ್ಲಿ ಸಿದ್ಧಹಸ್ತನಾಗಿ, ಯಥಾ + ಉಚಿತವಿಧಿಯಿಂದ = ಸರಿಯಾದ ಕ್ರಮದಿಂದ, ಆಯುರ್ + ಅವಸಾನದೊಳೆ = ಆಯುಸ್ಸಿನಕೊನೆಯಲ್ಲಿ, ಸಂಸಾರಕ್ಷಪಕನಾಗಿ = ಸಂಸಾರವನ್ನು ಪರಿತ್ಯಜಿಸಿದವನಾಗಿ, ಸಮಾಧಾನಪುರಸ್ಸರಂ = ಸಮಾಧಾನಚಿತ್ತದಿಂದ, ಸನ್ನ್ಯಸನವಿಧಾನದಿಂ = ಸನ್ನ್ಯನವಿಧಿಯಿಂದ, ಪರಿತ್ಯಕ್ತಜೀವಿತಂ = ಜೀವವನ್ನು ತೊರೆದವನಾಗಿ, ಮಾಹೇಂದ್ರಕಲ್ಪದೊಳ್, ಅಣಿಮಾದ್ಯಷ್ಟಗುಣ + ಐಶ್ವರ್ಯ + ಉಪೇತನುಂ = ಅಣಿಮಾದಿ ಎಂಟುಗುಣಗಳೆಂಬ ಐಶ್ವರ್ಯಗಳನ್ನು ಸಂಪಾದಿಸಿ, ಸಪ್ತಸಾಗರಪ್ರಮಿತಜೀವಿತನುಂ = ಏಳು ಸಾಗರಗಳಷ್ಟು ಕಾಲ ಜೀವಿಸಿದ್ದು, ಲಬ್ಧಾತ್ಮಲಾಭನುಂ + ಆಗಿ = ಆತ್ಮಲಾಭವನ್ನು ಸಂಪಾದಿಸದವನಾಗಿ, ನಮ್ಮ ಕುಮಾರಕಾಲದಂದು = ನಮ್ಮ ಬಾಲ್ಯಕಾಲದಲ್ಲಿ, ನೀಮುಂ + ಆಮುಂ ಮಹಾಬಳನುಂ = ನೀವು ನಾನು ಮತ್ತು ಮಹಾಬಳ – ಮೂವರೂ, ಕ್ರೀಡಾನಿಮಿತ್ತಂ ಪೋಗಿ = ಆಟವಾಡಲೆಂದು ಹೋಗಿ, ಸುಮೇರುಮಹೀಧರದ = ಸುಮೇರುಪರ್ವತದ, ನಂದನವನದೊಳ್ = ಉದ್ಯಾನವನದಲ್ಲಿ, ವನಕ್ರೀಡೆಯನಾಡುತ್ತಿರ್ಪಿನಂ = ವನವಿಹಾರ ಮಾಡುತ್ತಿರುವ ಸಂದರ್ಭದಲ್ಲಿ, ಅಲ್ಲಿ, ಅಕೃತ್ರಿಮಚೈತ್ಯಾಲಯಮಂ = ಸಹಜವಾದ ಬಸದಿಗಳಲ್ಲಿ, ಬಂದಿಸಲ್ = ಪ್ರಾರ್ಥನೆಗೈಯಲು, ಆ ಮಹೇಂದ್ರಕಲ್ಪಜನುಂ = ಮಹೇಂದ್ರಕಲ್ಪದಲ್ಲಿ ಹುಟ್ಟಿದವನೂ, ಮಹಾವಿಭೂತಿಯಿಂ ಬಂದು = ವೈಭವದಿಂದ ಬಂದು,

**ಗದ್ಯಾನುಸರಣ:** ಉಪಾಸಕವ್ರತವನ್ನು ಹಿಡಿದು, ಉಪವಾಸ ಅವಮೋದರ್ಯ ಮುಂತಾದವುಗಳನ್ನು ಆಚರಿಸುವಲ್ಲಿ ಸಿದ್ಧಹಸ್ತನಾಗಿ, ಸರಿಯಾದ ಕ್ರಮದಿಂದ ಆಯುಸ್ಸಿನ ಕೊನೆಯಲ್ಲಿ ಸಂಸಾರವನ್ನು ಪರಿತ್ಯಜಿಸಿ ಸಮಾಧಾನಚಿತ್ತದಿಂದ ಸನ್ಯಸನವಿಧಿಯಿಂದ ಜೀವವನ್ನು ತೊರೆದ; ಆನಂತರ ಮಾಹೇಂದ್ರಕಲ್ಪದಲ್ಲಿ ಅಣಿಮಾದಿ ಎಂಟು ಗುಣಗಳೆಂಬ ಐಶ್ವರ್ಯಗಳನ್ನು ಸಂಪಾದಿಸಿ, ಏಳು ಸಾಗರಗಳಷ್ಟು ಕಾಲ ಜೀವಿಸಿದ್ದು ಆತ್ಮಲಾಭವನ್ನು ಸಂಪಾದಿಸಿದ. ಬಾಲ್ಯಕಾಲದಲ್ಲಿ ನೀವು ನಾನು ಮತ್ತು ಮಹಾಬಳ – ಮೂವರೂ, ಆಟವಾಡಲೆಂದು ಹೋಗಿ ಸುಮೇರುಪರ್ವತದ ಉದ್ಯಾನವನದಲ್ಲಿ ಆಟವಾಡುವ ಸಂದರ್ಭದಲ್ಲಿ, ಅಲ್ಲಿದ್ದ ಬಸದಿಗಳಲ್ಲಿ ಪ್ರಾರ್ಥನೆಗೈಯಲು ಹೋದಾಗ, ಆ ಮಹೇಂದ್ರಕಲ್ಪಜನೂ ವೈಭವದಿಂದ ಬಂದ.

**ವಿಶೇಷ ವಿಚಾರ:** ಉಪಾಸಕವ್ರತ = ಜೈನ ಗೃಹಸ್ಥರು ತೊಡಬೇಕಾದ ವ್ರತ; ಅವಮೋದರ್ಯ ಎಂದರೆ ಆಹಾರವನ್ನು ಕ್ರಮೇಣ ಒಂದೊಂದು ತುತ್ತಿನಷ್ಟು ಕಡಿಮೆಮಾಡುತ್ತ ಒಂದು ಅಗುಳಿಗೆ ಇಳಿಸುವ ಒಂದು ವ್ರತ; ಸನ್ಯಸನವಿಧಿ = ಆಹಾರಪಾನೀಯಗಳನ್ನು ತೊರೆದು ಪ್ರಾಣಬಿಡುವ ವಿಧಾನ; ಅಣಿಮಾದ್ಯಷ್ಟಗುಣ = ಅಣಿಮಾ (ಬಹು ಸೂಕ್ಷ್ಮ ರೂಪ ಧರಿಸುವುದು), ಮಹಿಮಾ (ಭಾರಿ ದೊಡ್ಡದಾಗುವುದು), ಲಘಿಮಾ (ತುಂಬ ಹಗುರವಾಗುವುದು), ಗರಿಮಾ (ತುಂಬ ಭಾರವಾಗುವುದು), ಪ್ರಾಪ್ತಿ (ಏನನ್ನು ಬೇಕಾದರೂ ಹೊಂದುವ ಸಾಮರ್ಥ್ಯ), ಪ್ರಾಕಾಮ್ಯ (ಸ್ವಲ್ಪವನ್ನು ಹೆಚ್ಚಿಸುವುದು), ಈಶಿತ್ವ (ಎಲ್ಲೆಡೆಯೂ ಪ್ರಭಾವ ಬೀರುವುದು) ಮತ್ತು ವಶಿತ್ವ (ಇಂದ್ರಿಯ ನಿಗ್ರಹ) ಎಂಬ ಎಂಟು ಸಿದ್ಧಿಗಳು

**ಜಿನಪಾದಾಂಭೋಜಮಂ ಪೂಜಿಸಿ ಪೊಱಮಡುತುಂ ಸಾರೆವಂದೀತನಂ ಭೋಂ**
**ಕೆನೆ ಕಂಡಟ್ಟಿರ್ತು ನೋಟಂಬೆರಸು ಪರಸಿ ತಳ್ಕೈಸಿಕೊಂಡಮ್ಮ ನೀಂಮ**
**ಮಮ್ಮನೆಯುಪ್ಪೈ ನೋಡು ನಣ್ಪಿಂ ನಿಮಗಮೆಗವಮಾವಪ್ಪಾಂಯುದಿಂ ಬಂದುದಿಂತೀ**
**ಜಿನಧರ್ಮಂ ಪ್ರಾಣಿಗಾರ್ಮಂ ಮಱಿಯದಿರಿದು ನಿನ್ನೆಂದುದುಂಟಿಲ್ಲ ಪೇೞಿಂ ೨೦**

**ಪದವಿಭಾಗ–ಅನ್ವಯ–ಅರ್ಥ:** ಜಿನಪಾದಾಂಭೋಜಮಂ = ಜಿನನ ಪಾದಕಮಲಗಳನ್ನು, ಪೂಜಿಸಿ, ಪೊಱಮಡುತುಂ = ಹೊರಹೋಗುವಾಗ, ಭೋಂಕೆನೆ ಕಂಡು = ಆಕಸ್ಮಿಕವಾಗಿ ನೋಡಿ, ಈತನಂ ಸಾರೆವಂದು = ಮಹಾಬಲನ ಹತ್ತಿರ ಬಂದು, ಅಟ್ಟಿರ್ತು ನೋಟಂಬೆರಸು = ಪ್ರೀತಿಯ ನೋಟದಿಂದ ಕೂಡಿ,

ಪರಸಿ ತೆಕ್ಕೈಸಿಕೊಂಡು = ಆಶೀರ್ವದಿಸಿ ಅಪ್ಪಿಕೊಂಡು, ಅಮ್ಮ = ಅಯ್ಯಾ, ನೀಂ ಮಮಮ್ಮನೆ + ಅಪ್ಪೈ = ನೀನು ನನ್ನ ಮೊಮ್ಮಗನಾಗಿರುವೆ, ನೋಡು, ನಣ್ಪಿಂ ನಿಮಗಂ + ಎಮಗಂ = ನಿನಗೂ ನಮಗೂ, ಈ ಜಿನಧರ್ಮಂ = ಈ ಜೈನಧರ್ಮವು, ಆಮ್ನಾಯದಿಂ ಬಂದುದು = ಪರಂಪರೆಯಿಂದ ಬಂದಿದೆ, ಇದು = ಈ ಧರ್ಮವು, ಪ್ರಾಣಿಗೆ + ಆರ್ಮಂ = ಜೀವಿಗಳಿಗೆ ರಕ್ಷಣೆ, ಮಱೆಯದಿರು, ಇಂ ನಿನ್ನೆಂದುದುಂಟಿಲ್ಲ ಪೇೞ್ = ಇದನ್ನು ಹೊರತು ಬೇರಿಲ್ಲ (ಎಂದ)

**ಗದ್ಯಾನುಸರಣ:** ಜಿನನ ಪಾದಕಮಲಗಳನ್ನು ಪೂಜಿಸಿ ಹೊರಹೋಗುವಾಗ, ಆಕಸ್ಮಿಕವಾಗಿ ನೋಡಿ ಮಹಾಬಲನ ಹತ್ತಿರ ಬಂದು, ಪ್ರೀತಿಯ ನೋಟದಿಂದ ಕೂಡಿ ಆಶೀರ್ವದಿಸಿ ಅಪ್ಪಿಕೊಂಡು, 'ಅಯ್ಯಾ, ನೀನು ನನ್ನ ಮೊಮ್ಮಗ, ನಿನಗೂ ನಮಗೂ ಈ ಜೈನಧರ್ಮವು ಪರಂಪರೆಯಿಂದ ಬಂದಿದೆ; ಈ ಧರ್ಮವು ಜೀವರಾಶಿಗೆ ರಕ್ಷಣೆ, ಇದನ್ನು ಹೊರತು ಬೇರಿಲ್ಲ, ಮರೆಯಬೇಡ' ಎಂದ.

**ಅತಿಬಳಖೇಚರೇಂದ್ರನಿವರಮ್ಮನುಮೀತನನೂರ್ಜಿತಾತ್ಮಸಂ**
**ತತಿಯೊಳನಾಕುಳಂ ನಿಱಿಸಿ ಸಂಯಮಸಾರಥಿಯಾಗಿ ಕರ್ಮಸಂ**
**ತತಿಯನನಂತರಂ ಕಿಡಿಸಿ ಕೇವಳಿಯಾಗಿರೆ ಬರ್ಪ ದೇವಸಂ**
**ತತಿಯೊಡವೋಗಿ ನಾವುಮೊಸೆದರ್ಚಿಸಿ ಬಂದಿಸಿ ಬಂದೆಮಲ್ಲೆಮೇ** ೨೧

**ಪದವಿಭಾಗ–ಅನ್ವಯ–ಅರ್ಥ:** ಇವರಮ್ಮನ್ = ಈ ಮಹಾಬಲನ ತಂದೆ, ಅತಿಬಳಖೇಚರೇಂದ್ರನುಂ, ಈತನನ್ = ಇವನನ್ನು, ಊರ್ಜಿತಾತ್ಮಸಂತತಿಯೊಳ್ = ತನ್ನ ವಂಶದ ಪ್ರಧಾನನ್ನಾಗಿ, ಅನಾಕುಳಂ ನಿಱಿಸಿ = ನಿಶ್ಚಿಂತೆಯಿಂದ ಇರಿಸಿ, ಅತಿಬಲನು, ಸಂಯಮಸಾರಥಿಯಾಗಿ = ಸಂಯಮದಿಂದ ಕೂಡಿ, ಅನಂತರಂ = ಆ ಬಳಿಕ, ಕರ್ಮಸಂತತಿಯನ್ ಕಿಡಿಸಿ = ಕರ್ಮಪರಂಪರೆಯನ್ನು ನಾಶಮಾಡಿಕೊಂಡು, ಕೇವಳಿಯಾಗಿರೆ = ಕೇವಲಿಯಾಗಿ, ಬರ್ಪ = ಜೊತೆಗೂಡಿ ಬರುವ, ದೇವಸಂತತಿಯ + ಒಡವೋಗಿ = ದೇವತಾಸಮೂಹದೊಡನೆ ಸಂಚರಿಸಿದ; ಆಮೇಲೆ, ನಾವುಂ = ನಾವು ಕೂಡ, ಒಸೆದು + ಅರ್ಚಿಸಿ ಬಂದಿಸಿ = ಭಕ್ತಿಯಿಂದ ಪ್ರಾರ್ಥಿಸಿ, ಬಂದೆಂ + ಅಲ್ಲೆಮೇ = ಬಂದೆವು ತಾನೇ?

**ಗದ್ಯಾನುಸರಣ:** 'ಈ ಮಹಾಬಲನ ತಂದೆ ಅತಿಬಳಖೇಚರೇಂದ್ರನು ಇವನನ್ನು ತನ್ನ ವಂಶದ ಪ್ರಧಾನನ್ನಾಗಿ ನಿಶ್ಚಿಂತೆಯಿಂದ ಇರಿಸಿದ ಅತಿಬಲನು ಸಂಯಮವನ್ನು ಸಾಧಿಸಿ ಕರ್ಮಪರಂಪರೆಯನ್ನು ನಾಶಮಾಡಿಕೊಂಡು ಕೇವಲಿಯಾಗಿ ದೇವತಾಸಮೂಹದೊಡನೆ ಸಂಚರಿಸಿದ; ಆಮೇಲೆ ನಾವು ಕೂಡ ಭಕ್ತಿಯಿಂದ ಪ್ರಾರ್ಥಿಸಿ ಬಂದೆವಲ್ಲ, ನೆನಪಿದೆಯೇ?'

**ವಿಶೇಷ ವಿಚಾರ:** ಕೇವಲಿ ಎಂದರೆ ಕೇವಲಜ್ಞಾನವನ್ನು ಸಂಪಾದಿಸಿದವನು; ಕೇವಲಜ್ಞಾನವೆಂದರೆ ಆವರಣರಹಿತ ಜ್ಞಾನ

**ಅನುಭೂತಶ್ರುತದೃಷ್ಟಖೇಚರಕಥಾನೀಕಂಗಳಿಂ ಯುಕ್ತಿಯಿಂ**
**ದಿನಿತಂ ಸಾಧಿಸಿ ಜೀವಸಿದ್ಧಿಯನಿದಂ ನಿಶ್ಚೈಸಿ ವಿದ್ವತ್ಸಭಾ**
**ಜನಮೆಲ್ಲಂ ತಿಳಿದತ್ತು ನಿಮ್ಮ ಮನದಿಂ ಮಿಥ್ಯಾಕಳಂಕಂ ತೆರ**
**ಳ್ದಿನಿತುಂ ಪೋಗದು ಕಾಲಲಬ್ಧಿ ದೊರೆಕೊಂಡುದಲ್ಲದೇಂ ಪೋಕುಮಾ೨೨**

**ಪದವಿಭಾಗ–ಅನ್ವಯ–ಅರ್ಥ:** ಸ್ವಯಂಬುದ್ಧನು ಈ ರೀತಿಯಲ್ಲಿ, ಅನುಭೂತ = ಅನುಭವಿಸಿದ, ಶ್ರುತ = ಕೇಳಿದ, ದೃಷ್ಟ = ಕಂಡ, ಖೇಚರಕಥಾ + ಆನೀಕಂಗಳಿಂ = ಖೇಚರರ ಕಥೆಗಳಿಂದಲೂ, ಯುಕ್ತಿಯಿಂದ = ಬುದ್ಧಿವಂತಿಕೆಯಿಂದಲೂ ಇನಿತಂ ಜೀವಸಿದ್ಧಿಯನಿದಂ ಸಾಧಿಸಿ = ಜೀವಸಿದ್ಧಿಯನ್ನು ಸಾಧಿಸಿದ; ವಿದ್ವತ್ಸಭಾಜನಮೆಲ್ಲಂ = ವಿದ್ವಾಂಸರ ಸಭೆಯೆಲ್ಲವನ್ನೂ, ನಿಶ್ಚೈಸಿ = ಖಚಿತವಾಗಿ, ತಿಳಿದತ್ತು = ಅರ್ಥಮಾಡಿಕೊಂಡಿತು; ನಿಮ್ಮ ಮನದಿಂ = ನಿಮ್ಮ ಮನಸ್ಸಿನಿಂದ, ಮಿಥ್ಯಾಕಳಂಕಂ = ಮಿಥ್ಯೆಯೆಂಬ ಮಸಿಯು, ಇನಿತುಂ ತೆರಳ್ದು ಪೋಗದು = ಸ್ವಲ್ಪವಾದರೂ ಹೋಗುವುದಿಲ್ಲ; ಕಾಲಲಬ್ಧಿ ದೊರೆಕೊಂಡುದಲ್ಲದೆ = ಕಾಲವು ಕೂಡಿಬಾರದಿದ್ದರೆ, ಪೋಕುಮೇ = ಹೋಗುತ್ತದೆಯೇ?

**ಗದ್ಯಾನುಸರಣ:** ಸ್ವಯಂಬುದ್ಧನು ಈ ರೀತಿಯಲ್ಲಿ ತಾನು ಕಂಡು ಕೇಳಿ ಅನುಭವಿಸಿದ ಖೇಚರರ ಕಥೆಗಳಿಂದಲೂ, ಬುದ್ಧಿವಂತಿಕೆಯಿಂದಲೂ ಜೀವಸಿದ್ಧಿಯನ್ನು ಸಾಧಿಸಿದ; ಇದರಿಂದಾಗಿ ವಿದ್ವಾಂಸರ ಸಭೆಯು ಎಲ್ಲವನ್ನೂ ಖಚಿತವಾಗಿ ಅರ್ಥಮಾಡಿಕೊಂಡಿತು; ನಿಮ್ಮ ಮನಸ್ಸಿನಿಂದ ಮಿಥ್ಯೆಯೆಂಬ ಮಸಿಯು ಸ್ವಲ್ಪವಾದರೂ ಹೋಗುವುದಿಲ್ಲ; ಕಾಲವು ಕೂಡಿಬಾರದಿದ್ದರೆ, ಹೇಗೆ ಹೋದೀತು ಎಂದು ಎಚ್ಚರಿಸಿದ.

**ವ। ಎಂದು ಪರಪಕ್ಷದೂಷಣಪುರಸ್ಸರಮನೇಕೋಪಪತ್ತಿಗಳಿಂ ಸ್ವಪಕ್ಷಸ್ಥಾಪನಂ ಗೆಯ್ದು ಸನ್ಮಾರ್ಗಪ್ರಕಾಶನದಿಂ ಮಾರ್ಗಪ್ರಭಾವನೆಯುಂ ಮಾಡಿ ಸಭಾಸದರಿಂ ಲಬ್ಧಪ್ರಶಂಸನಾಗಿ**

**ಪದವಿಭಾಗ–ಅನ್ವಯ–ಅರ್ಥ:** ಎಂದು, ಪರಪಕ್ಷದೂಷಣಪುರಸ್ಸರಂ = ಎದುರು ವಾದಿಗಳ ಪಕ್ಷವನ್ನು ಖಂಡಿಸಿ, ಅನೇಕ + ಉಪಪತ್ತಿಗಳಿಂ = ನಾನಾ ತರ್ಕಮಾರ್ಗದಿಂದ, ಸ್ವಪಕ್ಷಸ್ಥಾಪನಂ ಗೆಯ್ದು = ತನ್ನ ವಾದವನ್ನು ನೆಲೆಗೊಳಿಸಿ, ಸತ್ + ಮಾರ್ಗಪ್ರಕಾಶನದಿಂ = ಒಳ್ಳೆಯ ದಾರಿಯಲ್ಲಿ ಬೆಳಕು ಚೆಲ್ಲಿ,

ಮಾರ್ಗಪ್ರಭಾವನೆಯಂ ಮಾಡಿ = ಜೈನಧರ್ಮದ ಹಿರಿಮೆಯನ್ನು ತೋರಿಸಿ. ಸಭಾಸದರಿಂ = ಸಭೆಯಲ್ಲಿದ್ದವರಿಂದ, ಲಬ್ಧಪ್ರಶಂಸನಾಗಿ = ಹೊಗಳಿಕೆಯನ್ನು ಸಂಪಾದಿಸಿದವನಾದ.

**ಗದ್ಯಾನುಸರಣ:** ಎಂದು ಎದುರು ವಾದಿಗಳ ವಾದವನ್ನು ಖಂಡಿಸಿ, ನಾನಾ ತರ್ಕದಿಂದ ತನ್ನ ವಾದವನ್ನು ನೆಲೆಗೊಳಿಸಿ, ಒಳ್ಳೆಯ ದಾರಿಯಲ್ಲಿ ಬೆಳಕು ಚೆಲ್ಲಿ, ಜೈನಧರ್ಮದ ಹಿರಿಮೆಯನ್ನು ತೋರಿಸಿದ; ಸಭೆಯಲ್ಲಿದ್ದವರೆಲ್ಲ ಅವನನ್ನು ಹೊಗಳಿದರು.

**ವಿಶೇಷ ವಿಚಾರ:** 'ಪ್ರಭಾವನೆ' ಎಂಬುದು ದರ್ಶನಸೌಖ್ಯದ ಎಂಟು ಅಂಗಗಳಾದ ನಿಶ್ಶಂಕೆ (ಜೈನದರ್ಶನದಲ್ಲಿ ಸಂಶಯ ತಾಳದಿರುವುದು), ನಿಷ್ಕಾಂಕ್ಷೆ (ಸುಖಭೋಗಗಳ ಆಸೆಯಿಲ್ಲದಿರುವುದು), ನಿರ್ವಿಚಿಕಿತ್ಸೆ (ದೇಹದ ಮೇಲೆ ಮಮತೆಯಾಗಲೀ ದ್ವೇಷವಾಗಲೀ ಇಲ್ಲದಿರುವುದು), ಅಮೂಢದೃಷ್ಟಿತ್ವ (ಅನ್ಯಮಾರ್ಗವನ್ನು ಅನುಸರಿಸದಿರುವುದು), ಉಪಗೂಹನ (ಜೈನಧರ್ಮದ ಬಗೆಗಿನ ಸಂದೇಹನಿವಾರಣೆ ಮಾಡುವುದು), ಸ್ಥಿತಿಕರಣ (ಸರಿಯಾದ ನಂಬಿಕೆಯನ್ನು ಬಿಡದಿರುವುದು), ವಾತ್ಸಲ್ಯ (ಸಹಯೋಗಗಳ ಬಗೆಗಿನ ಪ್ರೀತಿ) ಮತ್ತು ಧರ್ಮಪ್ರಭಾವನೆ (ಜೈನಧರ್ಮದ ಹಿರಿಮೆಯನ್ನು ಪ್ರಚಾರ ಮಾಡುವುದು) – ಇವುಗಳಲ್ಲಿ ಕೊನೆಯದು

**ಪರವಾದಿಗಳ ಮೊಗಂಗಳ್**
**ಕರಿಕುವರಿದಂತೆ ಕಂದಿ ಕುಂದಿರೆ ಖಚರೇ**
**ಶ್ವರನೀಯೆ ಪಡೆದನತ್ಯಾ**
**ದರದಿಂ ಜಯಪತ್ರಮಂ ಸ್ವಯಂಬುದ್ಧ ಬುಧಂ ೨೩**

**ಪದವಿಭಾಗ–ಅನ್ವಯ–ಅರ್ಥ:** ಪರವಾದಿಗಳ = ಎದುರು ವಾದಿಗಳ, ಮೊಗಂಗಳ್ = ಮುಖಗಳು, ಕರಿಕು + ಪರಿದಂತೆ = ಕರಿಕುಗೊಂಡ ಹಾಗೆ, ಕಂದಿ ಕುಂದಿರೆ = ಬಾಡಿ ಬಸವಳಿದಿರಲು, ಸ್ವಯಂಬುದ್ಧ ಬುಧಂ = ಮಹಾವಿದ್ವಾಂಸನಾದ ಸ್ವಯಂಬುದ್ಧನು, ಖಚರೇಶ್ವರನ್ = ಖೇಚರರಾಜನು, ಅತ್ಯಾದರದಿಂ ತುಂಬು ಗೌರವದಿಂದ, ಈಯೆ = ನೀಡಲು, ಜಯಪತ್ರಮಂ = ಗೆಲುವಿನ ಪತ್ರವನ್ನು, ಪಡೆದಂ = ಸ್ವೀಕರಿಸಿದ.

**ಗದ್ಯಾನುಸರಣ:** ತರ್ಕದಲ್ಲಿ ಸೋತ ಎದುರು ವಾದಿಗಳ ಮುಖಗಳು ಕರಿಕುಗೊಂಡ ಹಾಗೆ ಬಾಡಿರಲು ಮಹಾವಿದ್ವಾಂಸನಾದ ಸ್ವಯಂಬುದ್ಧನು ಖೇಚರರಾಜನು ತುಂಬು ಗೌರವದಿಂದ ನೀಡಿದ ಜಯಪತ್ರವನ್ನು ಸ್ವೀಕರಿಸಿದ.

**ವ ಅಂತು ಮಹಾಬಳಖಚರೇಂದ್ರಂ ಸ್ವಯಂಬುದ್ಧನೆ ತನಗೆ ಪರಮವಿಶ್ವಾಸಭೂಮಿಯಾಗೆ ತತ್ಪರ್ಯಾಳೋಚಿತ ಕಾರ್ಯ ಪರ್ಯವಸಾನ ನುಂ ಮನೋಭಿಲಷಿತ ವಿಷಯಸುಖಾನುಭವ ನಿರತನುಮಾಗಿ ಮೂವತ್ತಾಱು ಲಕ್ಕೆ ಪುರ್ಬಂ ರಾಜ್ಯಂಗೆಯ್ದು,**

**ಪದವಿಭಾಗ-ಅನ್ವಯ-ಅರ್ಥ:** ಅಂತು = ಆ ರೀತಿಯಲ್ಲಿ, ಮಹಾಬಳಖಚರೇಂದ್ರಂ = ಖಚರರಾಜನಾದ ಮಹಾಬಳನು, ಆ ಮುಂದೆ ತನಗೆ, ಸ್ವಯಂಬುದ್ಧನೆ, ಪರಮವಿಶ್ವಾಸಭೂಮಿಯಾಗೆ = ಗಾಢ ನಂಬಿಕೆಯ ನೆಲೆಯಾಗಲು, ತತ್ಪರ್ಯಾಳೋಚಿತ = ಅವನೊಡನೆ ಚರ್ಚಿಸಿದಂತೆ, ಕಾರ್ಯ ಪರ್ಯವಸಾನನುಂ = ಕೆಲಸಗಳನ್ನು ಮಾಡುವವನಾಗಿಯೂ, ಮನಃ + ಅಭಿಲಷಿತ = ಮನಸ್ಸು ಇಷ್ಟಪಟ್ಟ, ವಿಷಯಸುಖಾನುಭವನಿರತನುಂ + ಆಗಿ = ಇಂದ್ರಿಯ ಸುಖಾನುಭವಗಳಲ್ಲಿ ತೊಡಗಿಕೊಂಡು, ಮೂವತ್ತಾಱುಲಕ್ಕೆ = ಮೂವತ್ತಾರು ಲಕ್ಷ, ಪುರ್ಬಂ = ಪೂರ್ವಗಳಷ್ಟು ಕಾಲ, ರಾಜ್ಯಂಗೆಯ್ದು = ರಾಜ್ಯಭಾರಮಾಡಿ(ದ ಬಳಿಕ),

**ಗದ್ಯಾನುಸರಣ:** ಹಾಗೆ ಖಚರರಾಜನಾದ ಮಹಾಬಳನು ಆ ಮುಂದೆ ತನಗೆ ಸ್ವಯಂಬುದ್ಧನೆ ಗಾಢನಂಬಿಕೆಯ ನೆಲೆಯಾಗಲು, ಅವನೊಡನೆ ಆಲೋಚಿಸಿ ಕೆಲಸಗಳನ್ನು ಮಾಡುವವನಾಗಿಯೂ, ತನ್ನ ಮನಸ್ಸು ಇಷ್ಟಪಟ್ಟ ರೀತಿಯಲ್ಲಿ ಇಂದ್ರಿಯಸುಖಾನುಭವಗಳಲ್ಲಿ ತೊಡಗಿಕೊಂಡೂ ಮೂವತ್ತಾರು ಲಕ್ಷ ಪೂರ್ವಗಳಷ್ಟು ಕಾಲ ರಾಜ್ಯಭಾರಮಾಡಿದ.

**ವಿಶೇಷ ವಿಚಾರ:** ಪುರ್ಬ ಎಂಬ ಶಬ್ದವು ಪೂರ್ವ ಎಂಬುದರ ತದ್ಭವ; ಪೂರ್ವ ಎನ್ನುವುದು ಒಂದು ಜೈನ ಪರಿಕಲ್ಪನೆಯ ಕಾಲಮಾನ; ಒಂದು ಪರಮಾಣು ಒಂದು ಪ್ರದೇಶಕ್ಕೆ ಸರಿಯುವ ಕಾಲವು ಒಂದು ಸಮಯ; ಅಸಂಖ್ಯಾತ ಸಮಯಗಳು, ಒಂದು ಆವಲಿ; ಆವಲಿಗಳ ಸಾಲು ಒಂದು ಉಚ್ಛ್ವಾಸ; ಏಳು ಉಚ್ಛ್ವಾಸಗಳು ಒಂದು ಸ್ತೋಕ; ಏಳು ಸ್ತೋಕಗಳು ಒಂದು ನಿಮೇಷ ಅಥವಾ ಲವ; ಮೂವತ್ತೆಂಟೂವರೆ ಲವಗಳು ಒಂದು ನಾಡಿ; ಎರಡು ನಾಡಿಗಳು ಒಂದು ಮುಹೂರ್ತ; ಮೂವತ್ತು ಮುಹೂರ್ತಗಳು ಒಂದು ದಿನ ಮತ್ತು ರಾತ್ರಿ; ಹದಿನೈದು ದವಸರಾತ್ರಿಗಳು ಒಂದು ಪಕ್ಷ; ಎರಡು ಪಕ್ಷಗಳು ಒಂದು ತಿಂಗಳು; ಎರಡು ಮಾಸಗಳು ಒಂದು ಋತು; ಮೂರು ಋತುಗಳು ಒಂದು ಅಯನ; ಎರಡು ಅಯನಗಳು ಒಂದು ವರ್ಷ; ಹತ್ತು ಸಾವಿರ ವರ್ಷಗಳು = ಒಂದು ಅಯುತ, ಹತ್ತು ಅಯುತಗಳು ಒಂದು ಲಕ್ಷ; ಎಂಬತ್ತನಾಲ್ಕು ಲಕ್ಷಗಳು ಒಂದು ಪೂರ್ವ ಎನಿಸಿಕೊಳ್ಳುತ್ತದೆ

**ಪೊಡರರದೆ ಕಪ್ಪಮೀವ ಪರಮಂಡಳಿಕರ್ ಮನೆದೀವಿ ಮಕ್ಕಳಂ**
**ಪಡೆದಬಳಾಜನಂ ನೆರೆದ ಮಕ್ಕಳ ಮಕ್ಕಳ ನೀಳ್ದದೊಂದು ದಾಂ**
**ಗುಡಿಪಿಡಿದೀವ ಚಾಗಮೆಡಱೋಡುವಿನಂ ಪೊರೆದೊಳ್ನೆಗಟ್ತೆಯೊಳ್**
**ತೊಡರ್ದಿರೆ ವೃದ್ಧರಾಜಮುಮದೇನೆಸೆದತ್ತೊ ನಭಶ್ಚರೇಂದ್ರನಾ ೨೪**

**ಪದವಿಭಾಗ-ಅನ್ವಯ-ಅರ್ಥ:** ಪೊಡರರದೆ = = ತಕರಾರು ಮಾಡದೆ, ಕಪ್ಪಂ + ಈವ = ಕಪ್ಪವನ್ನು ಕೊಡುವ, ಪರಮಂಡಳಿಕರ್ = ಮಾಂಡಳಿಕರು, ಮನೆ + ತೀವಿ = ಮನೆಯ ತುಂಬ, ಮಕ್ಕಳಂ ಪಡೆದ, ಅಬಳಾಜನಂ = ಹೆಂಗಸರು, ನೆರೆದ ಮಕ್ಕಳ ಮಕ್ಕಳ = ಆ ಮಕ್ಕಳು ಪಡೆದ ಮಕ್ಕಳ, ನೀಳ್ದು = ದೀರ್ಘವಾಗಿ, ಒಂದು ದಾಂಗುಡಿ + ಪಿಡಿದೀವ = ನೀಳವಾಗಿ ಕುಡಿಯನ್ನು ಚಾಚುವ (ವಂಶ); ಚಾಗಂ = ತ್ಯಾಗವು, ಎಡಱ್ + ಓಡುವಿನಂ = ಬಡತನವನ್ನು ಒದ್ದೋಡಿಸುವಂತೆ, ಪೊರೆದು = ಜನರನ್ನು ಕಾಪಾಡಿ, ಒಳ್ + ನೆಗಟ್ತೆಯೊಳ್ = ಅಪಾರ ಕೀರ್ತಿಯಿಂದ, ತೊಡರ್ದಿರೆ = ರಾಜ್ಯಭಾರ ಮಾಡುತ್ತಿರಲು, ನಭಶ್ಚರ + ಇಂದ್ರನಾ = **ಖೇಚರರಾಜನ,** ವೃದ್ಧರಾಜಮುಂ = ಹಳೆಯ ರಾಜ್ಯವು ಅದೇನ್ + ಎಸೆದತ್ತೊ = ಅದೆಷ್ಟು ಶೋಭಿಸಿತು!

**ಗದ್ಯಾನುಸರಣ:** ತಕರಾರು ಮಾಡದೆ ಮಾಂಡಳಿಕರು ಕಪ್ಪವನ್ನು ಕೊಡುತ್ತಿದ್ದರು; ಹೆಂಗಸರು ಮನೆಯ ತುಂಬ ಮಕ್ಕಳನ್ನು ಹಡೆದರು; ಆ ಮಕ್ಕಳು ಪಡೆದ ಮಕ್ಕಳ ಸಾಲು ನೀಳವಾಗಿ ಕುಡಿಯನ್ನು ಚಾಚುವ (ವಂಶ)ವಾಗಿ ಸಾಗಿತು; ಚಾಗಂ = ತ್ಯಾಗವು, ಎಡಱ್ + ಓಡುವಿನಂ ಬಡತನವನ್ನು ಒದ್ದೋಡಿಸುವಂತೆ ತ್ಯಾಗವು ಮೆರೆಯಿತು; ಹೀಗೆ ಜನರನ್ನು ಕಾಪಾಡಿ ಅಪಾರ ಕೀರ್ತಿಯಿಂದ ರಾಜ್ಯಭಾರ ಮಾಡುತ್ತಿರಲು ಖೇಚರರಾಜನ ಹಳೆಯ ರಾಜ್ಯವು ಶೋಭಿಸಿತು!

**ವ। ಮತ್ತೊಂದು ಪುಣ್ಯದಿನದೊಳ್ ಸ್ವಯಂಬುದ್ಧಂ ಅಗಣ್ಯಪುಣ್ಯೋಪಾರ್ಜನಕರ ಸಪರ್ಯಾಸಮೇತಂ ಅಪರಿಮಿತಭಕ್ತಿಯಿಂ ಪರಿಮಿತಪರಿಜನಪರಿವೃತನಾಗಿ**

**ಪದವಿಭಾಗ-ಅನ್ವಯ-ಅರ್ಥ:** ಮತ್ತೆ = ಆನಂತರ ಒಂದು, ಪುಣ್ಯದಿನದೊಳ್ = ಶುಭದಿನದಲ್ಲಿ, ಸ್ವಯಂಬುದ್ಧಂ, ಅಗಣ್ಯಪುಣ್ಯ + ಉಪಾರ್ಜನಕರ = ಎಣೆಯಿಲ್ಲದ ಪುಣ್ಯವನ್ನು ತಂದುಕೊಡುವಂತಹ, ಸಪರ್ಯಾಸಮೇತಂ = ಪೂಜಾಸಾಮಗ್ರಿಗಳೊಡನೆ, ಅಪರಿಮಿತಭಕ್ತಿಯಿಂ = ಗಾಢ ಭಕ್ತಿಯಿಂದ, ಪರಿಮಿತಪರಿಜನ = ಕೆಲವೇ ಜನರಿಂದ, ಪರಿವೃತನಾಗಿ ಕೂಡಿ,

**ಗದ್ಯಾನುಸರಣ:** ಹೀಗಿರಲು, ಒಂದು ಶುಭದಿನದಲ್ಲಿ ಸ್ವಯಂಬುದ್ಧನು ಗಾಢ ಭಕ್ತಿಯಿಂದ ಕೂಡಿ ಎಣೆಯಿಲ್ಲದ ಪುಣ್ಯವನ್ನು ತಂದುಕೊಡುವಂತಹ ಪೂಜಾಸಾಮಗ್ರಿಗಳೊಡನೆ ಕೆಲವೇ ಜನರ ಜೊತೆ ಹೊರಟ.

**ಅನೇಕರಸಭಂಗಿಸಂಗತಸುರಾಂಗನಾಪಾದಜಂ**
**ಕನತ್ಕನಕಕಿಂಕಿಣೀಮೃದುನಿನಾದವಿಭ್ರಾಜಿಯಂ**
**ಕನತ್ಕನಕತುಂಗಶೃಂಗಕುಳಮಂ ಮನೋವೇಗದೆ**
**ಯ್ದಿ ನೋಡಿದನೊಱಲ್ದು ಪುಷ್ಪಿತ ನಮೇರುವಂ ಮೇರುವಂ ೨೫**

**ಪದವಿಭಾಗ–ಅನ್ವಯ–ಅರ್ಥ:** ಅನೇಕ = ನಾನಾ, ರಸ = ಆಕರ್ಷಕವಾದ, ಭಂಗಿಸಂಗತ = ನಿಲುವಿನಿಂದ ಕೂಡಿದ, ಸುರಾಂಗನಾ = ದೇವಕನ್ನಿಕೆಯರ, ಪಾದಜಂ = ಪಾದಗಳಲ್ಲಿ ಹೊರಡುವ, ಕನತ್ + ಕನಕ = ಹೊಳೆಯುವ ಚಿನ್ನದ, ಕಿಂಕಿಣೀ = ಗೆಜ್ಜೆಗಳ, ಮೃದುನಿನಾದ = ಮೆಲುಪು ದನಿಯಿಂದ, ವಿಭ್ರಾಜಿಯಂ = ಹೊಳೆಯುವ, ಕನತ್ + ಕನಕ = ಹೊಳೆಯುವ ಚಿನ್ನದ, ತುಂಗಶೃಂಗಕುಳಮಂ = ಎತ್ತರವಾದ ಶಿಖರಗಳ ಸಾಲನ್ನು, ಮನೋವೇಗದೆ + ಎಯ್ದಿ = ಮನಸ್ಸಿನ ವೇಗದಿಂದ ಹೋಗಿ ಸೇರಿ, ಪುಷ್ಪಿತ ನಮೇರುವಂ = ಹೂಬಿಟ್ಟ ಸುರಗಿ ಮರಗಳಿದ್ದ, ಮೇರುವಂ = ಮೇರುಪರ್ವತವನ್ನು, ಒಱಲ್ದು ನೋಡಿದಂ = ಪ್ರೀತಿಪೂರ್ವಕವಾಗಿ ನೋಡಿದ.

**ಗದ್ಯಾನುಸರಣ:** ನಾನಾ ಬಗೆಯ ಆಕರ್ಷಕ ನಿಲುವಿನಿಂದ ಕೂಡಿದ ದೇವಕನ್ನಿಕೆಯರ ಪಾದಗಳಲ್ಲಿನ ಹೊಳೆಯುವ ಚಿನ್ನದ ಗೆಜ್ಜೆಗಳಿಂದ ಹೊರಡುವ ಮೆಲುಪು ದನಿಯಿಂದ ಕೂಡಿದ ಹಾಗೂ ಹೊಳೆಯುವ ಚಿನ್ನದ ಎತ್ತರವಾದ ಶಿಖರಗಳ ಸಾಲನ್ನು ಮನಸ್ಸಿನ ವೇಗದಿಂದ ಹೋಗಿ ಸೇರಿ ಹೂಬಿಟ್ಟ ಸುರಗಿ ಮರಗಳಿದ್ದ ಮೇರುಪರ್ವತವನ್ನು ಪ್ರೀತಿಯಿಂದ ನೋಡಿದ.

**ಇದು ಶಾಲ್ಮಲಿಪಾದಪಮಿಂ**
**ತಿದು ಜಂಬೂವೃಕ್ಷಮಿದುವೆ ಕುರುಭೂಮಿಗಳೊ**
**ಪ್ಪಿದುವರ್ಧಚಂದ್ರನಾಕಾ**
**ರದಿನುಚಿತದಶಾಂಗಕಲ್ಪಕುಜನಿಳಯಂಗಳ್ ೨೬**

**ಪದವಿಭಾಗ–ಅನ್ವಯ–ಅರ್ಥ:** ಇದು ಶಾಲ್ಮಲಿಪಾದಪಂ = ಬೂರುಗದ ಮರಗ, ಇಂತಿದು = ಇದೀಗ, ಜಂಬೂವೃಕ್ಷಂ = ನೇರಿಳೆಯ ಮರ, ಇದುವೆ =

ಮತ್ತಿದು, ಅರ್ಧಚಂದ್ರನ + ಅಕಾರದಿನ್ = ಅರ್ಧಚಂದ್ರನ ಆಕಾರದಿಂದ, ಉಚಿತ = ಸೂಕ್ತವಾದ, ದಶಾಂಗ = ಧೂಪದ, ಕಲ್ಪಕುಜ = ಕಲ್ಪವೃಕ್ಷಗಳಿಗೆ, ನಿಳಯಂಗಳ್ = ಆಗರವೆನಿಸಿದ, ಕುರುಭೂಮಿಗಳು, ಒಪ್ಪಿದುವು = ಕಂಗೊಳಿಸುತ್ತಿವೆ.

**ಗದ್ಯಾನುಸರಣ:** 'ಕುರುಭೂಮಿಗಳು ಬೂರುಗದ ಮರ, ನೇರಿಳೆಯ ಮರ, ಅರ್ಧಚಂದ್ರಾಕೃತಿಯ ಧೂಪದ ಮರಗಳು ಮತ್ತು ಕಲ್ಪವೃಕ್ಷಗಳಿಂದ ಕೂಡಿ ಕಂಗೊಳಿಸುತ್ತಿವೆ.'

**ಗಜದಂತಾಕಾರಂಗಳ್**
**ಗಜದಂತಾದ್ರಿಗಳಿವಲ್ತೆ ತೋರ್ಪುವು ಮಧುಪ**
**ವ್ರಜಪರಿವಾರಿತಮಾದ್ಯ**
**ದ್ಗಜಕಟಕರ್ಷಪ್ರಭಗ್ನ ಚಂದನತರುಗಳ್** ೨೭

**ಪದವಿಭಾಗ-ಅನ್ವಯ-ಅರ್ಥ:** ಗಜದಂತಾಕಾರಂಗಳ್ = ಆನೆಯ ದಂತದ ಆಕಾರಗಳಿಂದ ಕೂಡಿದ, ಇವು, ಗಜದಂತಾದ್ರಿಗಳ್ ಅಲ್ತೆ = ಗಜದಂತಾದ್ರಿಗಳಲ್ಲವೇ? ತೋರ್ಪುವು ಮಧುಪವ್ರಜ = ದುಂಬಿವಿಂಡಿನಿಂದ, ಪರಿವಾರಿತ = ಸುತ್ತುವರಿಯಲ್ಪಟ್ಟ, ಮಾದ್ಯತ್ = ಮದಿಸಿದ, ಗಜಕಟಕರ್ಷ = ಆನೆಯ ಹಿಂಡಿನ ಉಜ್ಜುವಿಕೆಯಿಂದ, ಪ್ರಭಗ್ನ = ಮುರಿಯಲಾದ, ಚಂದನತರುಗಳ್ = ಶ್ರೀಗಂಧದ ಮರಗಳು

**ಗದ್ಯಾನುಸರಣ:** ದುಂಬಿವಿಂಡಿನಿಂದ ಸುತ್ತುವರಿಯಲ್ಪಟ್ಟ ಮದಿಸಿದ ಆನೆಯ ಹಿಂಡು ಮುರಿದ ಶ್ರೀಗಂಧದ ಮರಗಳಿಂದ ಕೂಡಿದ ಗಜದಂತಾದ್ರಿಗಳು ಆನೆಯ ದಂತದ ಆಕಾರಗಳಿಂದಲೇ ಕೂಡಿವೆ.

**ನೀಲನಿಷದಮುಮನೆಯ್ದಿದ**
**ನೀಲದ ಗಜದಂತಗಿರಿಗಳಾಳ್ದುವು ಪಿರಿದುಂ**
**ಲೀಲೆಯುನದಂತೆ ಮಾಡದೆ**
**ಲೀಲೆಗಳಂ ಪಾದಸೇವೆ ಭೂಭೃತ್ಪತಿಯಾ** ೨೮

**ಪದವಿಭಾಗ-ಅನ್ವಯ-ಅರ್ಥ:** ನೀಲನಿಷದಮುಮನ್ = ನೀಲಿಯ ನಿಷದ ಪರ್ವತದವರೆಗೆ, ಎಯ್ದಿದ = ಹಬ್ಬಿದ, ನೀಲದ ಗಜದಂತಗಿರಿಗಳ್ = ಕಪ್ಪಾದ ಗಜದಂತಗಿರಿಗಳು, ಪಿರಿದುಂ ಲೀಲೆಯನ್ = ಹೆಚ್ಚು ವೈಭವವನ್ನು, ಆಳ್ದುವು = ತಾಳಿದುವು; ಅದು ಅಂತೆ = ಅವು ಆ ರೀತಿಯಲ್ಲಿ, ಭೂಭೃತ್ + ಪತಿಯಾ = ಪರ್ವತರಾಜನ, ಪಾದಸೇವೆ = ಪಾದಸೇವೆಯು, ಲೀಲೆಗಳಂ = ವೈಭವವನ್ನು, ಮಾಡದೆ = ತಾಳದೆ!

**ಗದ್ಯಾನುಸರಣ:** ನೀಲಿಯ ನಿಷದ ಪರ್ವತದವರೆಗೆ ಹಬ್ಬಿದ ಕಪ್ಪಾದ ಗಜದಂತಗಿರಿಗಳು ಹೆಚ್ಚು ವೈಭವವನ್ನು ತಾಳಿದುವು; ಅದೇ ರೀತಿಯಲ್ಲಿ ಪರ್ವತರಾಜನಾದ ಮೇರುಗಿರಿಯ ಪಾದಸೇವೆಯು ವೈಭವವನ್ನು ತಾಳದೆ!

**ಇದು ಭದ್ರಶಾಲಿನಂದನ**
**ಮದು ನಂದನವನಮದಲ್ತೆ ಸೌಮನಸಮದೇಂ**
**ತುದಿಯೊಳ್ ಪಾಂಡುಕವೆಸದಿ**
**ರ್ದುದೊ ಜಿನಪತಿಸವನವಾರಿಪೂತಗ್ರಾವವ್** ೨೯

**ಪದವಿಭಾಗ-ಅನ್ವಯ-ಅರ್ಥ:** ಇದು ಭದ್ರಶಾಲಿನಂದನಂ = ಇದು ಭದ್ರಶಾಲಿವನ, ಅದು ನಂದನವನಂ = ಅದು ನಂದನವನ, ಅದಲ್ತೆ ಸೌಮನಸಂ = ಅದು ಸೌಮನಸವನವಲ್ಲವೇ? ಪಾಂಡುಕವು + ಎಸದಿರ್ದುದೊ = ಪಾಂಡುಕವು ಶೋಭಿಸುತ್ತಿದೆ; ಅದೇಂ ತುದಿಯೊಳ್ = ತುದಿಯಲ್ಲಿರುವುದೇನು? ಜಿನಪತಿ = ಆದಿಜಿನನ, ಸವನವಾರಿ = ಅಭಿಷೇಕದ ನೀರಿನಿಂದ, ಪೂತ = ಪಾವನವಾದ, ಗ್ರಾವಮ್ = ಬಂಡೆ

**ಗದ್ಯಾನುಸರಣ:** ಇದು ಭದ್ರಶಾಲಿವನ, ಅದು ನಂದನವನ, ಅದು ಸೌಮನಸವನ, ಅದು ಪಾಂಡುಕವಲ್ಲವೇ? ತುದಿಯಲ್ಲಿರುವುದೇನು? ಆದಿಜಿನನ ಅಭಿಷೇಕದ ನೀರಿನಿಂದ ಪಾವನವಾದ ಶಿಲೆ ತಾನೇ!

**ವಿಶೇಷ ವಿಚಾರ:** ಜೈನ ಪೌರಾಣಿಕತೆಯಂತೆ ಮೇರುಪರ್ವತದ ಮೇಲೆ ನಾಲ್ಕು ನಂದನವನಗಳಿವೆ: ಭದ್ರಶಾಲ, ನಂದನ, ಸೌಮನಸ ಮತ್ತು ಪಾಂಡುಕ; ತುತ್ತ ತುದಿಯಲ್ಲಿ ಒಂದು ವಿಶಾಲವಾದ ಬಂಡೆ; ಅಲ್ಲಿಯೇ ಸೌಧರ್ಮೇಂದ್ರನು ಆದಿಜಿನಶಿಶುವಿಗೆ ಅಭಿಷೇಕ ಮಾಡುವುದು.

**ಆಗ್ರಹಮಂ ಬಿಸುಟಿದುವೆ ನ**
**ಗಾಗ್ರಣಿಯೆಂದಿದನೆ ನೋಡೆ ಬಲಗೊಳ್ವುವು ನಿ**
**ರ್ವ್ಯಗ್ರತೆಯಿಂ ಚಂದ್ರಾದಿ**
**ತ್ಯಗ್ರಹನಕ್ಷತ್ರತಾರಕಾನಿಕರಂಗಳ್** ೩೦

**ಪದವಿಭಾಗ-ಅನ್ವಯ-ಅರ್ಥ:** ಆಗ್ರಹಮಂ ಬಿಸುಟು = ಹಟವನ್ನು ಬಿಟ್ಟು, ಇದುವೆ ನಗಾಗ್ರಣಿಯೆಂದು = ಇದೇ ಪರ್ವತಶ್ರೇಷ್ಠ ಎಂದು, ಚಂದ್ರ + ಆದಿತ್ಯ + ಗ್ರಹ + ನಕ್ಷತ್ರತಾರಕಾ + ನಿಕರಂಗಳ್ = ಚಂದ್ರ ಸೂರ್ಯ ಗ್ರಹಗಳು ನಕ್ಷತ್ರಗಳ ಸಮೂಹವು, ಇದನೆ = ಈ ಪರ್ವತವನ್ನು, ನೋಡೆ = ಸದಾ ನೋಡಲೆಂದು, ನಿರ್ + ವ್ಯಗ್ರತೆಯಿಂ = ನಿರುದ್ವಿಗ್ನತೆಯಿಂದ, ಬಲಗೊಳ್ವುವು = ಸುತ್ತು ಹಾಕುತ್ತಿವೆ.

**ಗದ್ಯಾನುಸರಣ:** ಇದು ಪರ್ವತಶ್ರೇಷ್ಠ ಎಂದು ತೀರ್ಮಾನಿಸಿದ ಆಕಾಶಕಾಯಗಳಾದ ಚಂದ್ರ ಸೂರ್ಯ ಗ್ರಹ ಮತ್ತು ನಕ್ಷತ್ರಗಳು ಸದಾ ಇದನ್ನೇ ನೋಡುತ್ತಿರಬೇಕೆಂಬ ಬಯಕೆಯಿಂದ ನಿರುದ್ವಿಗ್ನವಾಗಿ ಇದನ್ನು ಸುತ್ತು ಹಾಕುತ್ತಿವೆ!

**ಇದು ರಿತುವಿಮಾನಮಮಂ ತ**
**ನ್ನುದಗ್ರಚೂಳಿಕೆಯೊಳಾಂತುಕೊಂಡಿರೆ ಸಗ್ಗ**
**ಕ್ಕಿದು ನಿಚ್ಚಣಿಗಿಪ್ಪವೊಲಿ**
**ರ್ದುದಲ್ತೆ ಜಿನಸವನಜಳಪವಿತ್ರಿತತಟಕಂ** ೩೧

**ಪದವಿಭಾಗ-ಅನ್ವಯ-ಅರ್ಥ:** ಇದು = ಬೆಟ್ಟವು, ತನ್ನ + ಉದಗ್ರಚೂಳಿಕೆಯೊಳ್ = ತನ್ನ ಎತ್ತವಾದ ಶಿಖರದಲ್ಲಿ, ರಿತುವಿಮಾನಮಂ = ಋತು ವಿಮಾನವನ್ನು, ಆಂತುಕೊಂಡಿರೆ = ಹೊಂದಿರಲು, ಮತ್ತು, ಇದು ಜಿನಸವನಜಳಪವಿತ್ರಿತತಟಕಂ = ಜಿನನ ಅಭಿಷೇಕದ ನೀರಿನಿಂದ ಪಾವನಗೊಂಡ ಈ ಗಿರಿತಪ್ಪಲು, ಸಗ್ಗಕ್ಕೆ = ಸ್ವರ್ಗಕ್ಕೆ, ನಿಚ್ಚಣಿಗೆ + ಇಪ್ಪವೊಲ್ = ಏಣಿಯು ಇರುವಂತೆ, ಇರ್ದುದು + ಅಲ್ತೆ= ಇದೆಯಲ್ಲವೇ!

**ಗದ್ಯಾನುಸರಣ:** ತನ್ನ ಎತ್ತರವಾದ ಶಿಖರದಲ್ಲಿ ಋತು ವಿಮಾನವನ್ನು ಹೊಂದಿ, ಅಂತೆಯೇ ಜಿನನ ಅಭಿಷೇಕದ ನೀರಿನಿಂದ ಪಾವನಗೊಂಡ ಈ ಗಿರಿತಪ್ಪಲಿನಿಂದಾಗಿ ಈ ಬೆಟ್ಟವು ಸ್ವರ್ಗಕ್ಕೆ ಏಣಿಯಂತೆ ಇದೆಯಲ್ಲವೇ!

**ವಿಶೇಷ ವಿಚಾರ:** ರಿತುವಿಮಾನ ಅಥವಾ ಋತುವಿಮಾನ ಎನ್ನುವುದು ಸೌಧರ್ಮೇಂದ್ರನ ವಿಮಾನ; ಅರವತ್ತುಮೂರು ಐಂದ್ರಕಗಳಲ್ಲಿ ಒಂದು}

**ಸ್ಫುರಿತಮಣಿಕಳಶವಿರಚಿತ**
**ಪರಭಾಗಂಗಳ್ ಮನೋಹರಂಗಳ್ ವಿದ್ಯಾ**
**ಧರವಿಬುಧವಂದಿತಂಗಳ್**
**ಕರಮೆಸೆದಪುವಿದಱ ನೆಲೆಯ ಚೈತ್ಯಗೃಹಂಗಳ್** ೩೨

**ಪದವಿಭಾಗ-ಅನ್ವಯ-ಅರ್ಥ:** ಸ್ಫುರಿತ = ಹೊಳೆಯುವ, ಮಣಿಕಳಶವಿರಚಿತ = ಮಣಿಗಳಿಂದ ಕೂಡಿದ ಕಳಶವನ್ನು ಹೊಂದಿದ, ಪರಭಾಗಂಗಳ್ = ಗೋಪುರಗಳು, ಮನೋಹರಂಗಳ್ = ಚಿತ್ತಾಪಹಾರಿಯಾಗಿವೆ, ಇದಱ ನೆಲೆಯ = ಇದರ ಪ್ರದೇಶದಲ್ಲಿರುವ, ಚೈತ್ಯಗೃಹಂಗಳ್ = ಚೈತ್ಯಾಲಯಗಳು, ವಿದ್ಯಾಧರ = ವಿದ್ಯಾಧರರಿಂದಲೂ, ವಿಬುಧ = ದೇವತೆಗಳಿಂದಲೂ, ವಂದಿತಂಗಳ್ = ವಂದಿತವಾಗಿ, ಕರಂ + ಎಸೆದಪುವು = ತುಂಬ ಶೋಭೆಯಿಂದ ಕೂಡಿವೆ.

**ಗದ್ಯಾನುಸರಣ:** ಹೊಳೆಯುವ ಮಣಿಗಳಿಂದ ಕೂಡಿದ ಕಳಶವನ್ನು ಹೊಂದಿದ ಗೋಪುರಗಳು ಚಿತ್ತಾಪಹಾರಿಯಾಗಿವೆ, ಇದಲ್ಲಿರುವ ಚೈತ್ಯಾಲಯಗಳು ವಿದ್ಯಾಧರರಿಂದಲೂ ದೇವತೆಗಳಿಂದಲೂ ವಂದಿತವಾಗಿ ತುಂಬ ಶೋಭೆಯಿಂದ ಕೂಡಿವೆ.

**ವ॥ ಎಂದು ನಿಜಪರಿಜನಕೆಲ್ಲಂ ಪೊಗೞುತ್ತುಂ ಭದ್ರಶಾಲದಿಂ ತಗುಳ್ದು ಪಾಂಡುಕವನಂ ಬರಮದಱ ನೆಲೆಯೊಳಿರ್ದಕೃತ್ರಿಮಚೈತ್ಯಾಲಯಂಗಳನಖಿಳ ಜಗತ್ಪಾವನಕರಸರಸ್ಸಂ 'ಸೀಸರಿನ್ನಾಥತೀರ್ಥಜಲಂಗಳಿಂದಮತಿಮಸೃಣಘಸೃಣ ಗೋಶೀರ್ಷ ಚಂದನಾಗುರುಕರ್ಪೂರ ಸಂಮಿಶ್ರಿತ ಸುರಭಿಗಂಧಂ ಗಳಂದಮಗಣ್ಯಪುಣ್ಯ ಪುಂಜಾಂಕುರಾನುಕಾರಿ ಕಳಮಾಕ್ಷತಂ ಗಳಿಂದ ಮಾಮೋದಿತೋದ್ದಾಮ ವಾಚಾಲಷಟ್ಚರಣಕುಳಾಕುಳ ಕುಸುಮದಾಮಂ ಗಳಿಂದಂ ಅನೇಕ ಭಕ್ಷೋಪದಂಶರಸಪ್ರಚುರ ಚಾರುಚರುಕಂಗಳಿಂದಂ ಆಕಾಶ ಸ್ಫಟಿಕಕಳಶಸ್ಥೂಲ ಕರ್ಪೂರಪಾಳೀಪ್ರದೀಪಂಗಳಿಂದಂ ಅತಿಬಹಳ ದಹ್ಯಮಾನ ಕಾಳಾಗರುಧೂಪಧೂಮ ಯಷ್ಟಿಘಟಿತ ಘನಶ್ಯಾಮಳಿತ ವ್ಯೋಮ ತಳಧೂಪಂಗಳಿಂದಂ ಅತಿಸುರಭಿಸುರಸಸುರುಚಿರಫಲ ನಿಚಯಂ ಗಳಿಂದಂ ಮತ್ತಮುತ್ತಪ್ತಜಾಂಬೂನದ ಕುಸುಮದಾಮಂಗಳಿಮದುದ್ದೀಪಿತ ರತ್ನ ಪ್ರದೀಪಂಗಳಿಂದಂ ಅತಿತರಳಮುಕ್ತಾಮಣಿಪ್ರಲಂಬಂಗಳಿಂದಂ ಅನೇಕ ಪ್ರಕಾರದೇವಾಂಗ ವಸ್ತ್ರವಿಸ್ತಾರಿತ ರತ್ನಸಂಚಿತಮಣಿವಿತಾನಂಗಳಿಂದಂ ಅನುಕ್ರಮಂದಪ್ಪದರ್ಚಿಸಿ ನಿರ್ವರ್ತಿತ ದೇವತಾರ್ಚನನಾಗಿ ಸೌಮನಸವನದ ಪೌರಸ್ತ್ಯಜಿನಭವನಂಗಳೊಳಿನಿಸಾನುಂ ಬೇಗಮಿರ್ಪನ್ನೆಗಂ**

**ಪದವಿಭಾಗ–ಅನ್ವಯ–ಅರ್ಥ:** ಎಂದು = ಎಂಬುದಾಗಿ, ನಿಜಪರಿಜನಕೆಲ್ಲಂ = ತನ್ನ ಪರಿವಾರದ ಜನಕ್ಕೆಲ್ಲ, ಪೊಗೞುತ್ತುಂ = ವಿವರಿಸಿ ಹೊಗಳುತ್ತ, ಭದ್ರಶಾಲದಿಂ ತಗುಳ್ದು = ಭದ್ರಶಾಲವನದಿಂದ ಹಿಡಿದು, ಪಾಂಡುಕವನಂಬರಂ = ಪಾಂಡುಕವನದವರೆವಿಗೂ, ಅದಱ ನೆಲೆಯೊಳಿರ್ದ = ಆ ಪರ್ವತ ಪ್ರದೇಶದಲ್ಲಿದ್ದ, ಅಕೃತ್ರಿಮ= ಸಹಜವಾದ ಚೈತ್ಯಾಲಯಂಗಳನ್ = ಚೈತ್ಯಾಲಯಗಳಲ್ಲಿ, ಅಖಿಳ ಜಗತ್ಪಾವನಕರ = ಜಗತ್ತೆಲ್ಲವನ್ನೂ ಪಾವನಗೊಳಿಸುವ, ಸರಸ್ = ಕೊಳಗಳು, ಸರಸೀ = ಕಲ್ಯಾಣಿಗಳು, ಸರಿತ್ + ನಾಥ =ಶ್ರೇಷ್ಠ ನದಿಗಳ, ತೀರ್ಥಜಲಂಗಳಿಂದಂ = ಪವಿತ್ರವಾದ ನೀರಿನಿಂದ ಕೂಡಿ, ಅತಿಮಸೃಣ = ಅತ್ಯಂತ ನಯವಾದ, ಘಸೃಣ = ಕುಂಕುಮ ಕೇಸರಿ, ಗೋಶೀರ್ಷ = ಗೋರೋಚನ, ಚಂದನ = ಶ್ರೀಗಂಧ, ಅಗುರು = ಅಗಿಲು, ಕರ್ಪೂರ = ಕರ್ಪೂರಗಳಿಂದ, ಸಂಮಿಶ್ರಿತ = ಕೂಡಿದ, ಸುರಭಿಗಂಧಂಗಳಂದಂ = ಪರಿಮಳಭರಿತ ಸುಗಂಧದ್ರವ್ಯಗಳಿಂದಲೂ, ಅಗಣ್ಯಪುಣ್ಯಪುಂಜ = ಎಣೆಯಿಲ್ಲದ ಪುಣ್ಯಪುಂಜವನ್ನು, ಅಂಕುರಾನುಕಾರಿ = ಸೂಸುವಂತಿರುವ, ಕಳಮ + ಅಕ್ಷತಂಗಳಿಂದಂ = ಅಕ್ಷತೆಯ ಕಾಳುಗಳಿಂದಲೂ, ಆಮೋದಿತ = ಸಂತಸಗೊಂಡು, ಉದ್ದಾಮವಾಚಾಲ = ವಿಪುಲವಾಗಿ ಝೇಂಕರಿಸುವ, ಷಟ್ಚರಣಕುಳ + ಆಕುಳ = ದುಂಬಿಗಳ ಸಮೂಹದಿಂದ

ಪೀಡಿತವಾದ, ಕುಸುಮದಾಮಂಗಳಿಂದಂ = ಹೂದಂಡೆಗಳಿಂದಲೂ, ಅನೇಕ = ನಾನಾ ಬಗೆಯ, ಭಕ್ಷ್ಯ = ತಿಂಡಿ, ಉಪದಂಶ = ತಿನಿಸುಗಳ, ರಸಪ್ರಚುರ = ರುಚಿಕಟ್ಟಾದ, ಚಾರುಚರುಕಂಗಳಿಂದಂ = ಶ್ರೇಷ್ಠ ಅನ್ನಗಳಿಂದಲೂ, ಆಕಾಶಸ್ಫಟಿಕ = ಆಕಾಶ ಸ್ಫಟಿಕದ, ಕಳಶ = ಹಣತೆಗಳು, ಮತ್ತು, ಸ್ಥೂಲಕರ್ಪೂರ = ದಪ್ಪ ಕರ್ಪೂರದ, ಪಾಳೀ ಪ್ರದೀಪಂಗಳಿಂದಂ = ಸಾಲುದೀಪಗಳಿಂದಲೂ, ಅತಿಬಹಳದಹ್ಯಮಾನ = ಹೆಚ್ಚಿನ ಪ್ರಮಾಣದಲ್ಲಿ ಉರಿಯುತ್ತಿರುವ, ಕಾಳ + ಅಗರು = ಕಪ್ಪು ಅಗರಿನ, ಧೂಪಧೂಮ = ಧೂಪದ ಹೊಗೆಯ, ಯಷ್ಟಿಘಟಿತ = ಸಾಲಿನಿಂದಾದ, ವ್ಯೋಮತಳ = ಆಕಾಶತಳವನ್ನೇ, ಘನಶ್ಯಾಮಳಿತ = ಬಹು ಕಪ್ಪಾಗಿ ಮಾಡಿದ, ಧೂಪಂಗಳಿಂದಂ = ಧುಪಗಳಿಂದಲೂ, ಅತಿಸುರಭಿ = ಬಹು ಪರಿಮಳದ, ಸುರಸ = ರಸಭರಿತವಾದ, ಸುರುಚಿರ = ರುಚಿಕರವಾದ, ಫಲನಿಚಯಂಗಳಿಂದಂ = ಹಣ್ಣುಗಳ ರಾಶಿ ಯಿಂದಲೂ, ಮತ್ತಂ = ಜೊತೆಗೆ, ಉತ್ತಪ್ತಜಾಂಬೂನದ = ಅಪರಂಜಿ ಚಿನ್ನದ, ಕುಸುಮದಾಮಂಗಳಿಂದ = ಹೂಮಾಲೆಗಳಿಂದಲೂ, ಉದ್ದೀಪಿತ = ಸೂಸುವ, ರತ್ನಪ್ರದೀಪಂಗಳಿಂದಂ = ರತ್ನಗಳ ಪ್ರಭೆಯಿಂದಲೂ, ಅತಿತರಳ = ಮಹಾ ಉಜ್ವಲವಾದ, ಮುಕ್ತಾಮಣಿ = ಮುತ್ತಿನ ಮಣಿಗಳ, ಪ್ರಲಂಬಂಗಳಿಂದಂ = ಹಾರಗಳಿಂದಲೂ, ಅನೇಕಪ್ರಕಾರ = ನಾನಾ ಬಗೆಯ, ದೇವಾಂಗವಸ್ತ್ರವಿಸ್ತಾರಿತ = ರೇಷ್ಮೆ ಬಟ್ಟೆಗಳಿಂದ ಮಾಡಿದ, ರತ್ನಸಂಚಿತ = ರತ್ನಖಚಿತವಾದ, ಮಣಿವಿತಾನಂಗಳಿಂದಂ = ಮಣಿಮಯ ಧ್ವಜಗಳಿಂದಲೂ, ಅನುಕ್ರಮಂದಪ್ಪದೆ = ಕ್ರಮ ತಪ್ಪದೆ, ಅರ್ಚಿಸಿ = ಪೂಜೆ ಮಾಡಿ, ನಿರ್ವರ್ತಿತದೇವತಾರ್ಚನನಾಗಿ = ದೇವತಾರ್ಚನೆಯನ್ನು ಮುಗಿಸಿದವನಾಗಿ, ಸೌಮನಸವನದ, ಪೌರಸ್ತ್ಯ = ಪೂರ್ವದಿಕ್ಕಿನ, ಜಿನಭವನಂಗಳೊಳ್ = ಚೈತ್ಯಾಲಯಗಳಲ್ಲಿ, ಇನಿಸಾನುಂ ಬೇಗಂ = ಸ್ವಲ್ಪ ಹೊತ್ತು, ಇರ್ಪನ್ನೆಗಂ = ಇರುವಷ್ಟರಲ್ಲಿ

**ಗದ್ಯಾನುಸರಣ:** ಎಂಬುದಾಗಿ ತನ್ನ ಪರಿವಾರದ ಜನಕ್ಕೆ ವಿವರಿಸಿ ಹೊಗಳುತ್ತ, ಭದ್ರಶಾಲವನದಿಂದ ಹಿಡಿದು ಪಾಂಡುಕವನದವರೆವಿಗೂ ಆ ಪರ್ವತಪ್ರದೇಶದಲ್ಲಿ ವ್ಯಾಪಿಸಿದ್ದ ಸಹಜ ಚೈತ್ಯಾಲಯಗಳಲ್ಲಿ – ಜಗತ್ತೆಲ್ಲವನ್ನೂ ಪಾವನಗೊಳಿಸುವ ಕೊಳಗಳು, ಕಲ್ಯಾಣಿಗಳು, ಶ್ರೇಷ್ಠ ನದಿಗಳು – ಇವುಗಳ ಪವಿತ್ರವಾದ ನೀರಿನಿಂದಲೂ; ಅತ್ಯಂತ ನಯವಾದ ಕುಂಕುಮ ಕೇಸರಿ, ಗೋರೋಚನ, ಶ್ರೀಗಂಧ, ಅಗಿಲು, ಕರ್ಪೂರಗಳಿಂದ ಕೂಡಿದ ಪರಿಮಳಭರಿತ ಸುಗಂಧದ್ರವ್ಯಗಳಿಂದಲೂ; ಎಣೆಯಿಲ್ಲದ ಪುಣ್ಯಪುಂಜವನ್ನು ಸೂಸುವಂತಿರುವ ಅಕ್ಷತೆಯ ಕಾಳುಗಳಿಂದಲೂ; ಸಂತಸದಿಂದ ಜೋರಾಗಿ ಝೇಂಕರಿಸುವ ದುಂಬಿಗಳ ಸಮೂಹದಿಂದ ಪೀಡಿತವಾದ ಹೂದಂಡೆಗಳಿಂದಲೂ; ನಾನಾ ಬಗೆಯ ತಿಂಡಿತಿನಿಸುಗಳ ರುಚಿಕಟ್ಟಾದ ಶ್ರೇಷ್ಠ ಅನ್ನಗಳಿಂದಲೂ; ಆಕಾಶ ಸ್ಫಟಿಕದ ಹಣತೆಗಳು ಮತ್ತು ದಪ್ಪ ಕರ್ಪೂರದ

ಸಾಲುದೀಪಗಳಿಂದಲೂ; ಹೆಚ್ಚಿನ ಪ್ರಮಾಣದಲ್ಲಿ ಉರಿಯುತ್ತಿರುವ ಕಪ್ಪು ಅಗರಿನ ಧೂಪದ ಹೊಗೆಯ ಸಾಲು ಆಕಾಶತಳವನ್ನೇ ಬಹು ಕಪ್ಪಾಗಿ ಮಾಡುವ ಧೂಪಗಳಿಂದಲೂ; ಮಧುರ ಪರಿಮಳದ ರಸಭರಿತವಾದ ರುಚಿಕರವಾದ ಹಣ್ಣುಗಳ ರಾಶಿಯಿಂದಲೂ; ಅಪರಂಜಿ ಚಿನ್ನದ ಹೂಮಾಲೆಗಳು ಸೂಸುವ ರತ್ನಗಳ ಪ್ರಭೆಯಿಂದಲೂ; ಮಹಾ ಉಜ್ವಲವಾದ ಮುತ್ತಿನ ಮಣಿಗಳ ಹಾರಗಳಿಂದಲೂ; ನಾನಾ ಬಗೆಯ ರೇಷ್ಮೆ ಬಟ್ಟೆಗಳಿಂದ ಮಾಡಿದ, ರತ್ನಖಚಿತವಾದ ಮಣಿಮಯ ಧ್ವಜಗಳಿಂದಲೂ – ಕ್ರಮಬದ್ಧವಾಗಿ ಪೂಜೆ ಮಾಡಿ, ದೇವತಾರ್ಚನೆಯನ್ನು ಮುಗಿಸಿ, ಸೌಮನಸವನದ ಪೂರ್ವದಿಕ್ಕಿನ ಚೈತ್ಯಾಲಯಗಳಲ್ಲಿ ಸ್ವಲ್ಪ ಹೊತ್ತು ಇರುವಷ್ಟರಲ್ಲಿ,

**ಭಾನುದ್ಯುತಿತನುರುಚಿಯ ದಿ**
**ಶಾನೀಕಮನೊಡನೆ ಬೆಳಗೆ ಮಿಂಚೆರಡು ನಭ**
**ಸ್ಸ್ಥಾನದಿನಿೞಿದಪುದೆನೆಯೆನೆ**
**ತಾನಿೞಿದುದು ಜಿನಗೃಹಕ್ಕೆ ಚಾರಣಯುಗಳಂ** **೩೩**

**ಪದವಿಭಾಗ–ಅನ್ವಯ–ಅರ್ಥ:** ದಿಶಾ + ಆನೀಕಮನ್ = ದಿಕ್ಕಗಳನ್ನೆಲ್ಲ, ಒಡನೆ ಬೆಳಗೆ = ತಕ್ಷಣ ಬೆಳಗುತ್ತ, ಮಿಂಚೆರಡು = ಎರಡು ಮಿಂಚುಗಳು, ನಭಃ + ಸ್ಥಾನದಿನ್ = ಆಕಾಶದೆಡೆಯಿಂದ, ಇೞಿದಪುದು + ಎನೆಯೆನೆ = ಇಳಿಯುತ್ತಿದೆಯೋ ಎಂಬಂತೆ, ಭಾನುದ್ಯುತಿ = ಸೂರ್ಯನ ಪ್ರಭೆಯಂತೆ, ತನುರುಚಿಯ = ದೇಹಕಾಂತಿಯನ್ನು ಪಡೆದ, ಚಾರಣಯುಗಳಂ = ಚಾರಣ ಜೋಡಿಯು, ಜಿನಗೃಹಕ್ಕೆ = ಜಿನಾಲಯದಲ್ಲಿ, ತಾನ್ + ಇೞಿದುದು = ತಾನು ಬಂದು ಇಳಿಯಿತು.

**ಗದ್ಯಾನುಸರಣ;** ದಿಕ್ಕಗಳನ್ನೆಲ್ಲ ಇದ್ದಕ್ಕಿದ್ದಂತೆ ಬೆಳಗುತ್ತ ಎರಡು ಮಿಂಚುಗಳು ಆಕಾಶದೆಡೆಯಿಂದ ಇಳಿಯುತ್ತಿದೆಯೋ ಎಂಬಂತೆ, ಸೂರ್ಯನ ಪ್ರಭೆಯಂತೆ ದೇಹಕಾಂತಿಯನ್ನು ಪಡೆದ ಚಾರಣ ಜೋಡಿಯು ಜಿನಾಲಯದಲ್ಲಿ ಬಂದು ಇಳಿಯಿತು.

**ವಿಶೇಷ ವಿಚಾರ:** ಚಾರಣಯುಗಳ ಎಂದರೆ ಗಗನಗಾಮಿ ಋಷಿಗಳ ಜೋಡಿ; 'ಚಾರಣಋದ್ಧಿ'ಯನ್ನು ಪಡೆದವನು ಚಾರಣ ಋಷಿ; ವಿವಿಧ ಬಗೆಯ ಸಂಚಾರ ಶಕ್ತಿಯೇ ಚಾರಣಋದ್ಧಿ; ತಪೋಬಲದಿಂದ ಮುನಿಗಳಿಗೆ ತಾವಾಗಿ ಒದಗುವ ಎಂಟು ಬಗೆಯ ಋದ್ಧಿಗಳಲ್ಲಿನ ಕ್ರಿಯಾಋದ್ಧಿಯ ಒಂದು ಬಗೆ ಇದು: ಋದ್ಧಿಗಳೆಂದರೆ – ಬುದ್ಧಿ, ಕ್ರಿಯಾ, ವಿಕ್ರಿಯಾ, ತಪಸ್ಸು, ಬಲ, ಔಷಧಿ, ರಸ ಮತ್ತು ಅಕ್ಷೀಣಋದ್ಧಿಗಳು. ಆದರೆ ಪಂಪನು ಇದೇ ಕಾವ್ಯದ ಮತ್ತೊಂದೆಡೆ (೬. ೩೩ ವ)

'ಬುದ್ಧಿತಪೋವಿಕ್ರಿಯೌಷಧಿರಸಬಲಾಕ್ಷೀಣಾಭಿಧಾನಸಪ್ತರ್ಧಿಗಳೊಳಂ ನೆಱೆದು' ಎಂದು ಹೇಳಿದ್ದಾನೆ; ಇಲ್ಲಿ ಕ್ರಿಯಾಋದ್ಧಿ ಸೇರಿಲ್ಲ

**೫ ಅಂತು ಪೂರ್ವವಿದೇಹದ ಸೀತಾನದಿಯ ಬಡಗಣ ತಡಿಯ ಮಹಾಕಚ್ಛವಿಷಯದ ಅರಿಷ್ಟಪುರದಿಂದಂ ಯುಗಂಧರ ತೀರ್ಥ ಸರಸೀಹಂಸ ನಾಯಕರೆನಿಸಿದ ಗಗನಚಾರಣಾದಿತ್ಯಗತಿಗಳು ಮರಿಂಜಯರುಮೆಂಬರ್ ಅವಧಿಜ್ಞಾನಿಗಳ್ ಪವನಮಾರ್ಗದಿಂದಿೞಿವುದಂ ಕಂಡು ಪಾದಪ್ರತೀಕ್ಷಣ ಪರನವರಂ ಗುರುಭಕ್ತಿಪೂರ್ವಕಂ ಬಂದಿಸಿ ಸಕಳಶ್ರಾವಕವ್ರತಾರೋಪಣ ಪವಿತ್ರನಾಗಿ ಧರ್ಮಕಥಾಪ್ರಸಂಗದೊಳಂ ಲಬ್ಧಪ್ರಸ್ತಾವಂ ಅವರೊಳಾದಿತ್ಯ ಗತಿಗಳಂ**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹೀಗೆ, ಪೂರ್ವವಿದೇಹದ ಸೀತಾನದಿಯ, ಬಡಗಣ ತಡಿಯ = ಉತ್ತರ ದಡದಲ್ಲಿದ್ದ, ಮಹಾಕಚ್ಛ ವಿಷಯದ = ದೇಶದ, ಅರಿಷ್ಟಪುರದಿಂದಂ, ಯುಗಂಧರತೀರ್ಥ ಎಂಬ, ಸರಸೀ = ಸರೋವರದಲ್ಲಿ ವಿಹರಿಸುವ, ಹಂಸನಾಯಕರ್ + ಎನಿಸಿದ = ಹಂಸಶ್ರೇಷ್ಠರೆನಿಸಿದ, ಗಗನಚಾರಣ = ಆಗಸಗಾಮಿಗಳಾದ, ಆದಿತ್ಯಗತಿಗಂ + ಮರಿಂಜಯರುಂ + ಎಂಬರ್ = ಆದಿತ್ಯಗತಿ ಮತ್ತು ಅರಿಂಜಯ ಎಂಬ ಹೆಸರಿನ, ಅವಧಿಜ್ಞಾನಿಗಳ್, ಪವನಮಾರ್ಗದಿಂದ = ಆಕಾಶದ ದಾರಿಯಿಂದ, ಇೞಿವುದಂ ಕಂಡು = ಕೆಳಗಿಳಿದು ಬರುವದನ್ನು ನೋಡಿ, ಸ್ವಯಂಬುದ್ಧನು, ಪಾದಪ್ರತೀಕ್ಷಣಪರನ್ = ಅವರ ಪಾದಗಳನ್ನು ಕಂಡವನಾಗಿ, ಗುರುಭಕ್ತಿಪೂರ್ವಕಂ ಅವರಂ ಬಂದಿಸಿ = ಗುರುಭಕ್ತಿಯಿಂದ ಅವರಿಗೆ ನಮಸ್ಕರಿಸಿ, ಸಕಳಶ್ರಾವಕವ್ರತ + ಆರೋಪಣಪವಿತ್ರನಾಗಿ = ಶ್ರಾವಕವ್ರತಗಳನ್ನೆಲ್ಲ ಅನುಸರಿಸುವ ಮನೋಭಾವದಿಂದ ಪಾವನ ದೇಹದವನಾಗಿ, ಧರ್ಮಕಥಾಪ್ರಸಂಗದೊಳಂ = ಧರ್ಮಕಥೆಯನ್ನು ಕೇಳುವುದರಲ್ಲಿಯೂ, ಲಬ್ಧಪ್ರಸ್ತಾವಂ = ಪಡೆಯುವುದರಲ್ಲಿ ಆಸಕ್ತನಾಗಿ, ಅವರೊಳ್ + ಆದಿತ್ಯಗತಿಗಳಂ = ಆ ಇಬ್ಬರಲ್ಲಿ ಆದಿತ್ಯಗತಿಗಳನ್ನು (ಹೀಗೆಂದು ಕೇಳಿದ):

**ಗದ್ಯಾನುಸರಣ:** ಹೀಗೆ, ಪೂರ್ವವಿದೇಹದ ಸೀತಾನದಿಯ ಉತ್ತರ ದಡದ ಮಹಾಕಚ್ಛ ದೇಶದ ಅರಿಷ್ಟಪುರದಿಂದ ಯುಗಂಧರತೀರ್ಥ ಎಂಬ ಸರೋವರದಲ್ಲಿ ವಿಹರಿಸುವ ಹಂಸಶ್ರೇಷ್ಠರೆನಿಸಿದ ಆದಿತ್ಯಗತಿ ಮತ್ತು ಅರಿಂಜಯ ಎಂಬ ಹೆಸರಿನ ಆ ಅವಧಿಜ್ಞಾನಿಗಳು ಆಕಾಶದ ದಾರಿಯಿಂದ ಕೆಳಗಿಳಿದು ಬರುವುದನ್ನು ನೋಡಿದ ಸ್ವಯಂಬುದ್ಧನು ಅವರನ್ನು ಕಂಡು ಗುರುಭಕ್ತಿಯಿಂದ ನಮಸ್ಕರಿಸಿ ಶ್ರಾವಕವ್ರತಗಳನ್ನೆಲ್ಲ ಅನುಸರಿಸುವ ಮನೋಭಾವದಿಂದ ಕೂಡಿ ಪಾವನದೇಹಿಯಾಗಿ ಧರ್ಮಕಥೆಯನ್ನು ಕೇಳುವುದರಲ್ಲಿ ಆಸಕ್ತನಾಗಿ, ಆದಿತ್ಯಗತಿಗಳನ್ನು ಹೀಗೆಂದು ಕೇಳಿದ:

**ವಿಶೇಷ ವಿಚಾರ:** ಶ್ರಾವಕ ಎಂದರೆ ನಿಷ್ಠಾವಂತ ಜೈನ ಗೃಹಸ್ಥ; ಅವನು ಅನುಸರಿಸಬೇಕಾದ ಹನ್ನೆರಡು ವ್ರತಗಳೆಂದರೆ – ಐದು ಪಂಚಾಣುವ್ರತಗಳು

(ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯೆ ಮತ್ತು ಅಪರಿಗ್ರಹ), ಮೂರು ಗುಣವ್ರತಗಳು (ದಿಗ್ವಿರತಿ, ದೇಶವಿರತಿ ಮತ್ತು ಅನರ್ಥದಂಡವಿರತಿ) ಹಾಗೂ ನಾಲ್ಕು ಶಿಕ್ಷಾವ್ರತಗಳು (ಸಾಮಯಿಕ, ಪ್ರೋಷಧ, ಅತಿಥಿಸಂಗ್ರಹ ಮತ್ತು ಸಲ್ಲೇಖನ)

**ಮನ್ನಿಸಿ ಮನ್ತ್ರಿಮುಖ್ಯನತಿಭಕ್ತಿಭರಾನತಮೂರ್ಧನಟ್ಟಿಯಿಂ**
**ಬಿನ್ನವಿಕುಂ ಮುನೀಂದ್ರಗಣಮುಖ್ಯ ಮಹಾಬಳನಸ್ಮದೀಶನಿ**
**ನ್ನುನ್ನಿಜಭೋಗಕಾಂಕ್ಷೆಯನಣಂ ಬಿಸುಡಲ್ ಬಗೆದಾರನಾತನ**
**ತ್ಯುನ್ನತಬೋಧ ನೀಂ ಬೆಸಸಭವ್ಯನೋಭವ್ಯನೋ ದೂರಭವ್ಯನೋ ೩೪**

**ಪದವಿಭಾಗ–ಅನ್ವಯ–ಅರ್ಥ:** ಮನ್ತ್ರಿಮುಖ್ಯನ್ = ಮಂತ್ರಿಮುಖ್ಯನಾದ ಸ್ವಯಂಬುದ್ಧನು, ಅತಿಭಕ್ತಿಭರ = ಗಾಢಭಕ್ತಿಯಿಂದ, ಆನತಮೂರ್ಧನ್ = ತಲೆಬಾಗಿದವನಾಗಿ, ಅಟ್ಟಿಯಿಂ = ಪ್ರೀತಿಯಿಂದ, ಮನ್ನಿಸಿ = ಗೌರವಿಸಿ, (ಈ ರೀತಿ) ಬಿನ್ನವಿಕುಂ = ಬಿನ್ನವಿಸಿಕೊಳ್ಳುತ್ತಾನೆ: ಮುನೀಂದ್ರಗಣಮುಖ್ಯ = ಮುನಿಶ್ರೇಷ್ಠನೇ, ಮಹಾಬಳನ್ = ಮಹಾಬಲನು, ಅಸ್ಮತ್ + ಈಶನ್ = ನನ್ನ ಒಡೆಯ, ನಿಜಭೋಗಕಾಂಕ್ಷೆಯನ್ = ತನ್ನ ಭೊಗಾಪೇಕ್ಷೆಯನ್ನು, ಇನ್ನುಂ = ಇನ್ನೂ (ಇಷ್ಟು ವಯಸ್ಸಾಗಿದ್ದರೂ) ಅಣಂ = ಸ್ವಲ್ಪವಾದರೂ, ಬಿಸುಡಲ್ + ಬಗೆದು + ಆರನ್ = ಬಿಡಲಾರದವನಾಗಿದ್ದಾನೆ; ಆತನ್ = ಆತನು, ಅಭವ್ಯನೋ ಭವ್ಯನೋ ದೂರಭವ್ಯನೋ, ಅತ್ಯುನ್ನತಬೋಧ = ಮಹಾಜ್ಞಾನಿಗಳಾದ, ನೀಂ = ತಾವು, ಬೆಸಸಿ = ತಿಳಿಸಿ.

**ಗದ್ಯಾನುಸರಣ:** ಮಂತ್ರಿಮುಖ್ಯನಾದ ಸ್ವಯಂಬುದ್ಧನು ಗಾಢಭಕ್ತಿಯಿಂದ ತಲೆಬಾಗಿ ಗೌರವದಿಂದ ಹೀಗೆಂದು ಬಿನ್ನವಿಸಿಕೊಂಡ: 'ಮುನಿಶ್ರೇಷ್ಠನೇ, ನನ್ನ ಒಡೆಯನಾದ ಮಹಾಬಲನು ಇಷ್ಟು ವಯಸ್ಸಾದರೂ ಇನ್ನೂ ತನ್ನ ಭೋಗಾಪೇಕ್ಷೆಯನ್ನು ಸ್ವಲ್ಪವಾದರೂ ಬಿಡಲಾರದವನಾಗಿದ್ದಾನೆ; ಆತನು ಅಭವ್ಯನೋ ಭವ್ಯನೋ ದೂರಭವ್ಯನೋ ಮಹಾಜ್ಞಾನಿಗಳಾದ ತಾವು ತಿಳಿಸಬೇಕು.'

**ವಿಶೇಷ ವಿಚಾರ:** ಮೋಕ್ಷಾರ್ಹನಾದ ಸಂಸಾರಿ ಜೀವನನ್ನು ಭವ್ಯನೆನ್ನುತ್ತಾರೆ; ಅಂತಹ ಅರ್ಹತೆಯನ್ನು ಪಡೆಯದವನು ಅಭವ್ಯ; ಬಹಳ ಕಾಲದ ನಂತರ ಅರ್ಹತೆಯನ್ನು ಗಳಿಸುವವನು ದೂರಭವ್ಯ}

**ಪೋದುದು ಜೌವನಂ ಕ್ರಮದಿನಾದುದು ಮುಪ್ಪಿನಿಸಾದೊಡಂ ಸ್ಮರೋ**
**ನ್ಮಾದದೊಳೀ ವಿಮೋಹದೊಳದೇಕೆ ಗಡಂ ಬಗೆಯಂ ತಗುಳ್ಚಿ ಬೆ**
**ಳ್ಳಾದಪನಕ್ಕಟಾ ಖಚರನೆಂದೆನಗಿಂತಿದೆ ನಾಡೆಯುಂ ಮನಃ**
**ಖೇದಮಿದಂ ಪ್ರಬೋಧಿಸಿ ನಿಜಾವಧಿಯಿಂ ಕಳೆಯಿಂ ಮುನೀಶ್ವರಾ ೩೫**

**ಪದವಿಭಾಗ-ಅನ್ವಯ-ಅರ್ಥ:** ಪೋದುದು ಜೌವನಂ = ಯಾವನವು ಮುಗಿದುಹೋಗಿದೆ, ಕ್ರಮದಿನ್ = ಕ್ರಮವಾಗಿ, ಮುಪ್ಪು ಆದುದು = ಮುಪ್ಪು ಅಡರಿದೆ; ಇನಿಸಾದೊಡಂ = ಇಷ್ಟಾದರೂ, ಸ್ಮರ + ಉನ್ಮಾದದೊಳ್ = ಕಾಮತೀವ್ರತೆಯ, ಈ ವಿಮೋಹದೊಳ್ = ಭ್ರಮೆಯಿಂದ, ಅದೇಕೆ = ಯಾವ ಕಾರಣದಿಂದಾಗಿ, ಬಗೆಯಂ ತಗುಳ್ಚಿ = ತನ್ನ ಮನಸ್ಸನ್ನು ತೊಡಗಿಸಿಕೊಂಡು, ಅಕ್ಕಟಾ = ಅಯ್ಯೋ, ಖಚರನ್ = ಖೇಚರರಾಜನು, ಬೆಳ್ಳಾದಪನ್ ಗಡಂ = ಅವಿವೇಕಿಯಾಗಿದ್ದಾನೆ, ಎಂದು + ಎನಗೆ + ಇಂತಿದೆ = ಎಂಬ ಈ ಯೋಚನೆಯೇ, ನಾಡೆಯುಂ ಮನಃಖೇದಂ = ತೀವ್ರವಾದ ವಿಷಾದಕ್ಕೆ (ಕಾರಣವಾಗಿದೆ); ಮುನೀಶ್ವರಾ = ಮುನಿಶ್ರೇಷ್ಠರೇ, ಇದಂ = ಇದನ್ನು, ನಿಜ + ಅವಧಿಯಿಂ = ತಮ್ಮ ಅವಧಿಜ್ಞಾನದ ಬಲದಿಂದ, ಪ್ರಬೋಧಿಸಿ = ತಿಳಿಸಿ, ಕಳೆಯಿಂ = ಪರಿಹರಿಸಿರಿ.

**ಗದ್ಯಾನುಸರಣ:** ರಾಜನಿಗೆ ಯಾವನವು ಮುಗಿದುಹೋಗಿದೆ, ಕ್ರಮವಾಗಿ ಮುಪ್ಪು ಅಡರಿದೆ; ಇಷ್ಟಾದರೂ ಖೇಚರರಾಜನು ಕಾಮತೀವ್ರತೆಯ ಭ್ರಮೆಯಲ್ಲಿ ತನ್ನ ಮನಸ್ಸನ್ನು ಏಕಾಗಿ ತೊಡಗಿಸಿಕೊಂಡು ಅವಿವೇಕಿಯಾಗಿದ್ದಾನೆಯೋ ಎಂಬ ಯೋಚನೆಯೇ ನನ್ನ ತೀವ್ರವಾದ ವಿಷಾದಕ್ಕೆ ಕಾರಣವಾಗಿದೆ; ಮುನಿಶ್ರೇಷ್ಠರೇ, ತಮ್ಮ ಅವಧಿಜ್ಞಾನದ ಬಲದಿಂದ ಈ ಕುರಿತು ತಿಳಿಸಿ ನನ್ನ ವಿಷಾದವನ್ನು ಪರಿಹರಿಸಿರಿ.

**ವ। ಎಂದು ಬೆಸಗೊಂಡೊಡೆ ಆತನಭವ್ಯನಲ್ಲಂ ಭವ್ಯನೇ, ಭವ್ಯನಾಗಿಯುಮಾಸನ್ನಭವ್ಯಂ; ಎಂತೆಂದೊಡೆ ಜಂಬೂದ್ವೀಪದಪರ ವಿದೇಹದೊಳ್ ಗಂಧಿಳಮೆಂಬುದು ವಿಷಯಂ, ಆ ವಿಷಯವಿಳಾಸಿನಿಗೆ ತಿಳಕ ಮಿರ್ಪಂತಿರ್ದುದು ವಿಜಿತಸುರಪುರಂ ಸಿಂಹಪುರಮೆಂಬುದು ಪುರಂ; ಅದನಾಳ್ವನ ತುಳಭುಜಬಳಸಮಚೂರ್ಣಿತಾರಾತಿಪಾಷಾಣಂ ತ್ರಿಷೇಣ ನೆಂಬರಸಂ; ಆತಂಗೆ**

**ಪದವಿಭಾಗ-ಅನ್ವಯ-ಅರ್ಥ:** ಎಂದು ಬೆಸಗೊಂಡೊಡೆ = ಎಂದು ಕೇಳಲು, (ಮುನಿಯು ಹೀಗೆಂದರು): ಆತನಭವ್ಯನಲ್ಲಂ ಭವ್ಯನೇ = ಮಹಾಬಲನು ಅಭವ್ಯನಲ್ಲ, ಭವ್ಯನೇ, ಭವ್ಯನಾಗಿಯುಂ + ಆಸನ್ನಭವ್ಯಂ = ಭವ್ಯಮಾತ್ರವಲ್ಲ, ಆಸನ್ನಭವ್ಯನೇ: ಎಂತೆಂದೊಡೆ = ಹೇಗೆಂದರೆ, ಜಂಪೂದ್ವೀಪದ, ಅಪರವಿದೇಹದೊಳ್ = ಪಶ್ಚಿಮ ವಿದೇಹ ನಾಡಸಮೂಹದಲ್ಲಿ, ಗಂಧಿಳಮೆಂಬುದು, ವಿಷಯಂ = ಒಂದು ನಾಡು; ಆ ವಿಷಯವಿಳಾಸಿನಿಗೆ = ಆ ನಾಡೆಂಬ ಸುಂದರಿಗೆ, ತಿಳಕಂ + ಇರ್ಪಂತೆ + ಇರ್ದುದು = ತಿಲಕದ ಹಾಗಿದ್ದುದು, ವಿಜಿತ + ಸುರಪುರಂ = ಇಂದ್ರನ ಊರನ್ನೂ ಗೆದ್ದಂತಿದ್ದ, ಸಿಂಹಪುರಮೆಂಬುದು ಪುರಂ = ಸಿಂಹಪುರ ಎಂಬ ನಗರ; ಅದನ್ + ಆಳ್ವನ್ = ಅದನ್ನಾಳುತ್ತಿದ್ದವನು, ಆರಾತಿಪಾಷಾಣಂ = ಶತ್ರುಸೈನ್ಯವೆಂಬ ಬಂಡೆಯನ್ನು ಅತುಳಭುಜಬಳ = ತನ್ನ

ತೋಳ್ಬಲದಿಂದ, ಸಮಚೂರ್ಣಿತ = ಪುಡಿಗುಟ್ಟಿದ್ದ, ತ್ರಿಷೇಣನೆಂಬ + ಅರಸಂ = ತ್ರಿಷೇಣನೆಂಬ ರಾಜ; ಆತಂಗೆ = ಅವನಿಗೆ,

**ಗದ್ಯಾನುಸರಣ:** ಎಂದು ಕೇಳಲು ಮುನಿಯು ಹೀಗೆಂದರು: 'ಮಹಾಬಲನು ಅಭವ್ಯನಲ್ಲ, ಭವ್ಯನೇ; ಅದರಲ್ಲಿಯೂ ಆಸನ್ನಭವ್ಯನೇ. ಹೇಗೆಂದರೆ, ಜಂಬೂದ್ವೀಪದ ಪಶ್ಚಿಮ ವಿದೇಹ ನಾಡಸಮೂಹದಲ್ಲಿ ಗಂಧಿಳಮೆಂಬುದು ಒಂದು ನಾಡು; ಆ ನಾಡೆಂಬ ಸುಂದರಿಗೆ ತಿಲಕದ ಹಾಗಿದ್ದುದು ಇಂದ್ರನ ಊರನ್ನೂ ಗೆದ್ದಂತಿದ್ದ ರಾಜಧಾನಿ ಸಿಂಹಪುರ; ಅದನ್ನಾಳುತ್ತಿದ್ದವನು ಶತ್ರುಸೈನ್ಯವೆಂಬ ಬಂಡೆಯನ್ನು ತನ್ನ ತೋಳ್ಬಲದಿಂದ ಪುಡಿಗುಟ್ಟಿದ್ದ ತ್ರಿಷೇಣನೆಂಬುವವನು ರಾಜ.

**ಸೌಂದರಿಯುರ ಗಾಡಿಗಳೊಳ**
**ಗೊಂದೊಂದನೆ ನೆರಪಿ ಮಾಡಿದಂ ಬಿದಿಯೆನೆ ಹೃ**
**ತ್ಸೌಂದರಿ ಜಿತಾಮರಾಧಿಪ**
**ಸೌಂದರಿ ಸೌಂದರಿಯು ಪೆಸರೊಳಂ ರೂಪಿನೊಳಂ ೩೬**

**ಪದವಿಭಾಗ-ಅನ್ವಯ-ಅರ್ಥ:** ಬಿದಿ = ಸೃಷ್ಟಿಕರ್ತನು, ಸೌಂದರಿಯರ = (ಬೇರೆ ಬೇರೆ) ಸುಂದರಿಯರ, ಗಾಡಿಗಳೊಳಗೆ = ಸೌಂದರ್ಯಾಂಶಗಳಲ್ಲಿ, ಒಂದೊಂದನೆ ನೆರಪಿ = ಒಂದೊಂದನ್ನು ಸೇರಿಸಿ, ಮಾಡಿದಂ ಎನೆ = ಸೃಷ್ಟಿಸಿದನೋ ಎನ್ನುವ ಹಾಗಿದ್ದ, ಹೃತ್ಸೌಂದರಿ = ಹೃದಯಸುಂದರಿಯಾದ, ಜಿತ + ಅಮರಾಧಿಪಸೌಂದರಿ = ದೇವೇಂದ್ರನ ಹೆಂಡತಿಯ ಸೌಂದರ್ಯವನ್ನೂ ಕೀಳುಮಾಡುವಂತಹ ಚೆಲುವೆ; (ಅವಳು) ಪೆಸರೊಳಂ = ಹೆಸರಿನಿಂದಲೂ, ರೂಪಿನೊಳಂ = ಚೆಲುವಿನಿಂದಲೂ, ಸೌಂದರಿಯೆ = ಸುಂದರಿಯೇ ಸರಿ.

**ಗದ್ಯಾನುಸರಣ:** ಅವನ ಮಡದಿ ಸುಂದರಿ; ಸೃಷ್ಟಿಕರ್ತನು ಜಗತ್ತಿನ ಇತರ ಸುಂದರಿಯರ ಸೌಂದರ್ಯಾಂಶಗಳಲ್ಲಿ ಒಂದೊಂದನ್ನು ಆರಿಸಿ ಸೇರಿಸಿ ಸೃಷ್ಟಿಸಿದನೋ ಎನ್ನುವ ಹಾಗಿದ್ದ ಅವಳು ಶಚೀದೇವಿಯ ಸೌಂದರ್ಯವನ್ನೂ ಮೀರಿಸುವಂತಹ ಚೆಲುವೆ; ಹೆಸರಿನಲ್ಲಿಯೂ ಚೆಲುವಿನಲ್ಲಿಯೂ ಅವಳು ಸುಂದರಿಯೇ ಸರಿ.

**ಒರ್ಮೆಯುಮವಚಜಿದೊಲವಿನ**
**ಕೂರ್ಮೆಯು ತತ್ಪತಿಗಮಾಕೆಗಂ ನಿಜವಂಶ**
**ಕ್ಕಾರ್ಯವೆನೆ ಪುಟ್ಟಿದರ್ ಜಯ**
**ವರ್ಮಶ್ರೀವರ್ಮರೆಂಬಿರ್ವರ್ ತನಯುರ್ ೩೭**

**ಪದವಿಭಾಗ-ಅನ್ವಯ-ಅರ್ಥ:** ಒರ್ಮೆಯುಮ್ = ಒಮ್ಮೆಯಾದರೂ, ಅವಚಜಿದ = ಬೇಸರಿಸದ, ಒಲವಿನ ಕೂರ್ಮೆಯ = ಪ್ರೀತಿ ಪ್ರಣಯಗಳಿಂದ

ಕೂಡಿದ್ದ, ತತ್ + ಪತಿಗಂ + ಆಕೆಗಂ = ಅವನಿಗೂ ಅವಳಿಗೂ, ನಿಜವಂಶಕ್ಕೆ = ತಮ್ಮ ವಂಶಕ್ಕೆ, ಆರ್ಮಂ + ಎನೆ = ರಕ್ಷಣೆ ಎಂಬಂತೆ, ಜಯವರ್ಮಶ್ರೀವರ್ಮ, ಎಂಬ + ಇರ್ವರ್ = ಎಂಬ ಹೆಸರಿನ ಇಬ್ಬರು, ತನಯರ್ = ಮಕ್ಕಳು, ಪುಟ್ಟಿದರ್ = ಹುಟ್ಟಿದರು.

**ಗದ್ಯಾನುಸರಣ:** ಒಮ್ಮೆಯಾದರೂ ಪರಸ್ಪರರು ಬೇಸರಿಸದಂತಹ ಪ್ರೀತಿ ಪ್ರಣಯಗಳಿಂದ ಕೂಡಿದ್ದ ಆ ದಂಪತಿಗೆ ತಮ್ಮ ವಂಶಕ್ಕೆ ರಕ್ಷಣೆ ಎಂಬಂತೆ ಜಯವರ್ಮ ಶ್ರೀವರ್ಮ ಎಂಬ ಇಬ್ಬರು ಮಕ್ಕಳು ಹುಟ್ಟಿದರು.

**ವ॥ ಅವರೊಳ್ ಕಿಱಿಯಾತನೆ ನೃಪತಿಗಂ ಪರಿವಾರಕ್ಕಮಣುಗನಾಗಿ ಬಳೆಯೆ ಪಲಕಾಲಂ ಶ್ರೀಷೇಣನರಸುಗೆಯ್ಯೆ**

**ಪದವಿಭಾಗ–ಅನ್ವಯ–ಅರ್ಥ:** ಅವರೊಳ್ = ಆ ಇಬ್ಬರು ಮಕ್ಕಳಲ್ಲಿ, ಕಿಱಿಯಾತನೆ = ಚಿಕ್ಕವನಾದ ಶ್ರೀವರ್ಮನೇ, ನೃಪತಿಗಂ = ರಾಜನಿಗೂ, ಪರಿವಾರಕ್ಕಂ = ಪರಿವಾರದವರಿಗೂ, ಅಣುಗನಾಗಿ = ಪ್ರೀತಿಪಾತ್ರನಾಗಿ, ಬಳೆಯೆ = ಬೆಳೆಯಲು, ಶ್ರೀಷೇಣನ್, ಪಲಕಾಲಂ = ಸಾಕಷ್ಟು ಕಾಲ, ಅರಸುಗೆಯ್ಯೆ = ರಾಜ್ಯಭಾರ ಮಾಡಲು,

**ಗದ್ಯಾನುಸರಣ:** ಆ ಇಬ್ಬರು ಮಕ್ಕಳಲ್ಲಿ ಚಿಕ್ಕವನಾದ ಶ್ರೀವರ್ಮನು ರಾಜನಿಗೂ ಪರಿವಾರದವರಿಗೂ ಹೆಚ್ಚು ಪ್ರೀತಿಪಾತ್ರನಾಗಿ ಬೆಳೆಯಲು, ಶ್ರೀಷೇಣನು ಸಾಕಷ್ಟು ಕಾಲ ರಾಜ್ಯಭಾರ ಮಾಡಿದ.

**ಎಡೆವೆತ್ತೊರ್ಮೆಯೆ ಮುಪ್ಪು ಕುತ್ತದೊಳೊಡಂಬಟ್ಟೊತ್ತೆ ಮತ್ತಲ್ಲಿ ಮೆ**
**ಟ್ಟಿಡದಾರ್ತಣ್ಮಿ ತಪಕ್ಕೆ ಪೋಪ ಪದದೊಳ್ ತನ್ನಗ್ರಪುತ್ರಂ ಕ್ರಮಂ**
**ಬಿಡಿದಿರ್ದಂ ಜಯವರ್ಮನಿರ್ದೊಡಮವಂ ಮುಟ್ಟಲ್ಲನೆಂದೊಳ್ಪೊಡಂ**
**ಬಡುವನ್ನಂ ಕಿಱಿಯಾತನಂ ನಿಱಿಸಿದಂ ಶ್ರೀವರ್ಮನಂ ರಾಜ್ಯದೊಳ್॥೩೮**

**ಪದವಿಭಾಗ–ಅನ್ವಯ–ಅರ್ಥ:** ಎಡೆ + ಪೆತ್ತು = ಅವಕಾಶ ಪಡೆದು, ಒರ್ಮೆಯೆ = ಒಮ್ಮೆ, ಮುಪ್ಪು = ಮುದಿತನವು, ಕುತ್ತದೊಳ್ + ಒಡಂಬಟ್ಟು + ಒತ್ತೆ = ರೋಗದಿಂದೊಡಗೂಡಿ ಒತ್ತರಿಸಲು, ಮತ್ತಲ್ಲಿ = ಮತ್ತೆ ಸಂಸಾರದಲ್ಲಿ, ಮೆಟ್ಟಿಡದೆ = ಭ್ರಮೆಯಿರಿಸಿಕೊಳ್ಳದೆ, ಆರ್ತು = ಕುಗ್ಗಿ, ಅಣ್ಮಿ = ಧೈರ್ಯಮಾಡಿ, ತಪಕ್ಕೆ ಪೋಪ = ತಪಸ್ಸಿಗೆ ಹೋಗುವ, ಪದದೊಳ್ = ಸಂದರ್ಭದಲ್ಲಿ, ತನ್ನ + ಅಗ್ರಪುತ್ರಂ = ತನ್ನ ಹಿರಿಯ ಮಗನು, ಕ್ರಮಂಬಿಡಿದಿರ್ದಂ = ಪದ್ಧತಿಗೆ ಅನುಗುಣವಾಗಿ, ಜಯವರ್ಮನಿರ್ದೊಡಂ = ಜಯವರ್ಮನಿದ್ದರೂ, ಅವಂ ಮುಟ್ಟಲ್ಲನ್ = ಅವನು ಯೋಗ್ಯನಲ್ಲ, ಎಂದು, ಒಳ್ಪು + ಒಡಂಬಡುವನ್ನಂ =

ಪ್ರೀತಿಯಿಂದ, ಕಿಱಿಯಾತನಂ = ಕಿರಿಯ ಮಗನಾದ, ಶ್ರೀವರ್ಮನಂ = ಶ್ರೀವರ್ಮನನ್ನು, ರಾಜ್ಯದೊಳ್ = ರಾಜನಾಗಿ, ನಿಱಿಸಿದಂ = ಕೂರಿಸಿದ.

**ಗದ್ಯಾನುಸರಣ:** ಒಮ್ಮೆ ಅವಕಾಶ ಪಡೆದು ಮುದಿತನವೂ ರೋಗವೂ ಜೊತೆಗೂಡಿ ಅವನನ್ನು ಒತ್ತರಿಸಲು, ಕುಗ್ಗಿ ಮತ್ತೆಯೂ ಸಂಸಾರದಲ್ಲಿ ಭ್ರಮೆಯಿರಿಸಿಕೊಳ್ಳದೆ ಕೊನೆಗೂ ಧೈರ್ಯಮಾಡಿ ತಪಸ್ಸಿಗೆ ಹೋಗುವ ಸಂದರ್ಭದಲ್ಲಿ, ಪದ್ಧತಿಗೆ ಅನುಗುಣವಾಗಿ ತನ್ನ ಹಿರಿಯ ಮಗ ಜಯವರ್ಮನಿದ್ದರೂ ಅವನು ಯೋಗ್ಯನಲ್ಲ ಎಂದು ತೀರ್ಮಾನಿಸಿ, ಪ್ರೀತಿಯಿಂದ ಕಿರಿಯ ಮಗನಾದ ಶ್ರೀವರ್ಮನಿಗೆ ರಾಜ್ಯಪಟ್ಟವನ್ನು ಕಟ್ಟಿದ.

**ವ॥ ಆ ಜಯವರ್ಮನುಮವಮಾನಪವಮಾನಾವಧೂತನಾಗಿ ಪೋಗಿ,**

**ಅರ್ಥ:** ಆ ಜಯವರ್ಮನುಂ + ಅವಮಾನಪವಮಾನ + ಅವಧೂತನಾಗಿ ಪೋಗಿ = ಜಯವರ್ಮನು ಅವಮಾನವೆಂಬ ಬಿರುಗಾಳಿಯಿಂದ ತಳ್ಳಲ್ಪಟ್ಟವನಾದ.

**ಪ್ರಭು ಕಿಱಿಯಾತನಂ ನಿಱಿಸಿ ರಾಜ್ಯದೊಳೆನ್ನವಸ್ತುಮಾಡಿ ಪೂ**
**ಣ್ದಭಿಭವಮೀಗಳೀ ಭವದೊಳಿಂತಿದು ನೀಗದು ರಾಜ್ಯಲಕ್ಷ್ಮಿಗ**
**ನ್ಯಭವದೊಳಪ್ಪೊಡಂ ನೆಱೆಯೆ ನೋಂಪೆನೆನುತ್ತೆ ಜಗನ್ನುತಸ್ವಯಂ**
**ಪ್ರಭಗುರುಪಾದಮೂಲದೊಳೆ ಕೊಂಡನಖಂಡಿತಜೈನಸದೀಕ್ಷೆಯಯಂ ೩೯**

**ಪದವಿಭಾಗ–ಅನ್ವಯ–ಅರ್ಥ:** ಪ್ರಭು = ಒಡೆಯನಾದ ತಂದೆಯು, ಕಿಱಿಯಾತನಂ = ನನಗಿಂತ ಚಿಕ್ಕವನನ್ನು, ರಾಜ್ಯದೊಳ್ = ಪಟ್ಟದಲ್ಲಿ, ನಿಱಿಸಿ = ಕೂಡಿಸಿ, ಎನ್ನನ್ = ನನ್ನನ್ನು, ಅವಸ್ತುಮಾಡಿ = ನಿಕೃಷ್ಟ ಪದಾರ್ಥವನ್ನಾಗಿಸಿ, ಪೂಣ್ದ = ಮಾಡಿದ, ಅಭಿಭವಂ = ಅವಮಾನವು, ಈಗಳ್ + ಈ = ಇದೇ, ಭವದೊಳ್ + ಇಂತಿದು = ಹೀಗೆಯೇ ಇದು, ನೀಗದು = ಹೋಗುವುದಿಲ್ಲ; ಅನ್ಯಭವದೊಳಪ್ಪೊಡಂ = ಬೇರೊಂದು ಜನ್ಮದಲ್ಲಾದರೂ, ರಾಜ್ಯಲಕ್ಷ್ಮಿಗೆ = ರಾಜ್ಯಶ್ರೀಗೆ, ನೆಱೆಯೆ = ಕಠಿಣವಾಗಿ, ನೋಂಪೆನ್ = ವ್ರತತೊಡುತ್ತೇನೆ, ಎನುತ್ತೆ = ಎಂಬುದಾಗಿ, ಜಗತ್ + ನುತ = ಜಗತ್ತಿನಿಂದ ವಂದ್ಯರಾದ, ಸ್ವಯಂಪ್ರಭ, ಗುರುಪಾದಮೂಲದೊಳೆ = ಗುರುಗಳ ಪಾದದ ಬಳಿ, ಅಖಂಡಿತಜೈನಸದೀಕ್ಷೆಯಯಂ = ಸಮಗ್ರ ಜೈನದೀಕ್ಷೆಯನ್ನು, ಕೊಂಡನ್ = ಕೈಗೊಂಡ.

**ಗದ್ಯಾನುಸರಣ:** ತಂದೆಯು ನನ್ನ ತಮ್ಮನನ್ನು ಪಟ್ಟದಲ್ಲಿ ಕೂಡಿಸಿ, ನನ್ನನ್ನು ನಿಕೃಷ್ಟ ಪದಾರ್ಥವನ್ನಾಗಿಸಿ ಮಾಡಿದ ಅವಮಾನವು ಈ ಜನ್ಮದಲ್ಲಿ ಹೋಗುವುದಿಲ್ಲ; ಮುಂದಿನ ಜನ್ಮದಲ್ಲಾದರೂ ರಾಜ್ಯಶ್ರೀಯನ್ನು ಸೇರಲು ಕಠಿಣವಾದ ವ್ರತತೊಡುತ್ತೇನೆ

– ಎಂಬುದಾಗಿ ನಿಶ್ಚೈಸಿ ಜಗತ್‌ವಂದ್ಯರಾದ ಸ್ವಯಂಪ್ರಭ ಗುರುಗಳ ಪಾದದ ಬಳಿ ಜಯವರ್ಮನು ಜೈನದೀಕ್ಷೆಯನ್ನು ಕೈಗೊಂಡ.

**ವ|| ಅಂತು ಜಾತರೂಪಧರನಾಗಿ ತನ್ನ ಪಱಿದು ಬಿಸುಟ ಸಹಸ್ರ ಕುಂತಳಂಗಳಂ ತನ್ನ ತಳದೊಳ್ ತೆಮಳ್ದಿಕೊಂಡು ತುಂಬಿಯ ಬಂಬಲ್ಗಳಂ ಕೆಂದಾವರೆಯರಲ್ಗಳೊಳ್ ಪುದಿದುಯ್ವಂತುಯ್ದು,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಜಾತರೂಪಧರನಾಗಿ = ದಿಗಂಬರನಾಗಿ, ತುಂಬಿಯ ಬಂಬಲ್ಗಳಂ = ದುಂಬಿಯ ಹಿಂಡನ್ನು, ಕೆಂದಾವರೆಯ + ಅರಲ್ಗಳೊಳ್ = ಕೆಂಪು ತಾವರೆಹೂಗಳಲ್ಲಿ, ಪುದಿದು + ಉಯ್ವಂತೆ = ತುಂಬಿಕೊಂಡು ತೆಗೆದೊಯ್ಯುವಂತೆ, ತನ್ನ ಪಱಿದು ಬಿಸುಟ = ತಾನು ಕಿತ್ತು ಎಸೆದ, ಸಹಸ್ರಕುಂತಳಂಗಳಂ = ಕೂದಲ ರಾಶಿಯನ್ನು, ತನ್ನ ತಳದೊಳ್ = ತನ್ನ ಕೈಗಳಲ್ಲಿ, ತೆಮಳ್ದಿಕೊಂಡು = ಕೂಡಿಸಿಕೊಂಡು, ಉಯ್ದು = ಒಯ್ದು,

**ಗದ್ಯಾನುಸರಣ:** ಹಾಗೆ ದಿಗಂಬರನಾಗಿ, ದುಂಬಿಯ ಹಿಂಡನ್ನು ಕೆಂಪು ತಾವರೆಹೂಗಳಲ್ಲಿ ತುಂಬಿಕೊಂಡು ತೆಗೆದೊಯ್ಯುವಂತೆ, ತಾನು ಕಿತ್ತು ಎಸೆದಿದ್ದ ಕೂದಲ ರಾಶಿಯನ್ನು ತನ್ನ ಅಂಗೈಗಳಲ್ಲಿ ಕೂಡಿಸಿಕೊಂಡು ಒಯ್ದು.

**ವಿಶೇಷ ವಿಚಾರ:** ಜಾತರೂಪಧರ ಎನ್ನುವುದಕ್ಕೆ ಹುಟ್ಟಿದ ರೂಪವನ್ನು ಧರಿಸಿದವನು ಎಂದರ್ಥ; ಜೈನ ಸನ್ಯಾಸಿದೀಕ್ಷೆಯನ್ನು ಕೈಗೊಂಡವನು ತನ್ನ ಕೂದಲುಗಳನ್ನು ಕಿತ್ತುಕೊಳ್ಳಬೇಕು, ಇದಕ್ಕೆ ಲುಂಛನ ಅಥವಾ ಲೋಚು ಎನ್ನುತ್ತಾರೆ.

**ಮಡಗಿಡಲೆಂದು ಪುತ್ತಿನೊಳಗೊಯ್ಯನೆ ಕುತ್ತಿದ ಕಯ್ಯನಾಗಳಾ**
**ಗಡೆ ಪಸಿವಟ್ಟೆ ನೀಳ್ದ ಪೊಗೆಯಂ ಕಿಡಿಯುಂ ಬಿಸುಸುಯ್ಯ ಗಾಳಿಯೊಳ್**
**ತೊಡರ್ದೊಡನುಣ್ಮಿ ಭೋಂಕೆನೊಗೆತರ್ಪ ಮಹೋರಗನೆಯ್ದೆ ಪಲ್ಗಳ**
**ಟ್ಟೊಡೆ ಕಿಡಿವೀಟ್ ನೆತ್ತರೊಱಿದುರ್ಚುಗೆ ಕೊಂಡುದು ತತ್ತಪಸ್ವಿಯಂ.೪೦**

**ಪದವಿಭಾಗ–ಅನ್ವಯ–ಅರ್ಥ:** ಮಡಗಿ + ಇಡಲೆಂದು = ಕಾಣದಂತೆ ಇರಿಸಲೆಂದು, ಒಯ್ಯನೆ = ಮೆಲ್ಲಗೆ, ಪುತ್ತಿನೊಳಗೆ = ಹುತ್ತದಲ್ಲಿ, ಕುತ್ತಿದ = ಚಾಚಿದ, ಕಯ್ಯನ್ = ಕೈಯನ್ನು, ಆಗಳಾಗಡೆ = ಆಗಲೇ, ಪಸಿವು + ಅಟ್ಟೆ = ಹಸಿವು ಸುಡುತ್ತಿರಲು, ಒಗೆತರ್ಪ = ಹೊರಬಂದ, ಮಹೋರಗನ್ = ಮಹಾಸರ್ಪವು, ನೀಳ್ದ = ಚಾಚಿದ, ಪೊಗೆಯಂ = ಹೊಗೆಯೂ, ಕಿಡಿಯುಂ = ಕಿಡಿಗಳೂ, ಬಿಸುಸುಯ್ಯ ಗಾಳಿಯೊಳ್ = ತನ್ನ ಬುಸುಗುಡುವ ಗಾಳಿಯಲ್ಲಿ, ತೊಡರ್ದು = ಸೇರಿಸಿ, ಒಡನೆ + ಉಣ್ಮಿ = ಜೊತೆಗೆ ಮೇಲೆದ್ದು, ಭೋಂಕೆನೆ = ತಕ್ಷಣವೇ, ಎಯ್ದೆ ಪಲ್ಗಳ + ಅಟ್ಟೊಡೆ = ಹಲ್ಲುಗಳನ್ನೂರಲು, ಕಿಡಿವೀಟ್ =

ಕಿಡಿಗಳನ್ನು ಸೂಸುತ್ತ, ನೆತ್ತರ್ + ಒಱೆದು = ರಕ್ತವು ಚಿಮ್ಮಿ, ಉರ್ಚುಗೆ = ಸುರಿಯುವಂತೆ, ತತ್ + ತಪಸ್ವಿಯಂ ಆ ತಪಸ್ವಿಯನ್ನು, ಕೊಂಡುದು = ಕಚ್ಚಿತು.

**ಗದ್ಯಾನುಸರಣ:** ಕೂದಲನ್ನು ಯಾರೂ ಕಾಣದಂತೆ ಇರಿಸಲೆಂದು ಕೈಯನ್ನು ಹುತ್ತದಲ್ಲಿ ಮೆಲ್ಲಗೆ ಚಾಚಿದ ಕ್ಷಣವೇ ಹಸಿವಿನಿಂದ ಬೇಯುತ್ತಿದ್ದ ಮಹಾಸರ್ಪವೊಂದು ತನ್ನ ಬುಸುಗುಡುವ ಉಸಿರಿನಲ್ಲಿ ಹೊಗೆಯನ್ನೂ ಕಿಡಿಗಳನ್ನೂ ಸೇರಿಸಿಕೊಂಡು ಮೇಲೆದ್ದು ತಕ್ಷಣವೇ ತನ್ನ ಹಲ್ಲುಗಳನ್ನೂರಿ ಕಿಡಿಗಳು ಸೂಸುವ ಹಾಗಿದ್ದ ರಕ್ತವು ಚಿಮ್ಮಿ ಸುರಿಯುವಂತೆ ಆ ತಪಸ್ವಿಯನ್ನು ಕಚ್ಚಿತು.

**ವ। ಆ ಪ್ರಸ್ತಾವದೊಳ್**

ಅರ್ಥ: ಆ ಪ್ರಸ್ತಾವದೊಳ್ = ಆ ಸಂದರ್ಭದಲ್ಲಿ,

**ಎಸೆವ ವಿಮಾನಘಂಟೆಗಳ ಮೆಲ್ಲುಲಿ ಕಿನ್ನರಗೇಯದೊಳ್ ಪೊದ**
**ಳ್ದೆಸೆಯೆ ವಿಚಿತ್ರಪಾತ್ರಪರಿನರ್ತನಮುಣ್ಮುವ ತೂರ್ಯನಾದದೊಳ್**
**ಪೊಸಯಿಸೆ ಸೋಂಕಿನೊಳ್ ನಲಿವ ನಲ್ಲಳಲಂಪನೊಡರ್ಚೆ ಲೀಲೆಕ**
**ಣ್ಗಸದಳಮಾಗೆ ಪಾಱುವ ಮಹೀಧರನೆಂಬ ವಿಯಚ್ಚರೇಂದ್ರನಂ ೪೧**

**ಪದವಿಭಾಗ–ಅನ್ವಯ–ಅರ್ಥ:** ಎಸೆವ = ಶೋಭಿಸುವ, ವಿಮಾನಘಂಟೆಗಳ, ಮೆಲ್ಲುಲಿ = ಮೃದುವಾದ ಸದ್ದು, ಕಿನ್ನರಗೇಯದೊಳ್ = ಕಿನ್ನರರ ಗಾಯನದಲ್ಲಿ, ಪೊದಳ್ದು + ಎಸೆಯೆ = ಸೇರಿಕೊಂಡು, ವಿಚಿತ್ರಪಾತ್ರ = ಆಕರ್ಷಕವಾದ ಪಾತ್ರಗಳ, ಪರಿನರ್ತನಂ = ನೃತ್ಯವು, ಉಣ್ಮುವ = ಹೊಮ್ಮಿಸುವ, ತೂರ್ಯನಾದದೊಳ್ = ವಾದ್ಯಗಳ ಶಬ್ದದೊಡನೆ ಸೇರಿ, ಪೊಸಯಿಸೆ = ಹೊಸದಾಗಿರಲು, ಸೋಂಕಿನೊಳ್ = ಸ್ಪರ್ಶದಲ್ಲಿಯೇ, ನಲಿವ = ಸಂತೋಷಪಡುವ, ನಲ್ಲಳ, = ಪ್ರಿಯೆಯ, ಅಲಂಪನ್ = ಸುಖವನ್ನು, ಒಡರ್ಚೆ = ತರುವ, ಲೀಲೆ = ಆಟವು, ಕಣ್ಗೆ + ಅಸದಳಮಾಗೆ = ಕಣ್ಣಿಗೆ ಮಿಗಿಲಾಗಲು, ಪಾಱುವ = ಮೇಲೆ ಹಾರುತ್ತಿದ್ದ, ಮಹೀಧರನೆಂಬ, ವಿಯಚ್ಚರೇಂದ್ರನಂ = ಖೇಚರರಾಜನು

**ಗದ್ಯಾನುಸರಣ:** .ವಿಮಾನಘಂಟೆಗಳ ಮೃದುವಾದ ಸದ್ದು ಕಿನ್ನರರ ಗಾಯನದಲ್ಲಿ ಸೇರಿಕೊಂಡು, ಆಕರ್ಷಕವಾದ ಪಾತ್ರಗಳ ರಿಂಗಣಗುಣಿತವು ಹೊಮ್ಮುತ್ತಿದ್ದ ವಾದ್ಯಗಳ ಶಬ್ದದೊಡನೆ ಸೇರಿ ಹೊಸದಾಗಲು, ಪ್ರಿಯೆಯ ಸ್ಪರ್ಶದಲ್ಲಿಯೇ ಸಂತೋಷಪಡುವ ಸುಖವನ್ನನುಭವಿಸುವ ಆಟವು ಕಣ್ಣಿಗೆ ಮಿಗಿಲಾಗಲು ಮೇಲೆ ಹಾರುತ್ತಿದ್ದವನು ಮಹೀಧರನೆಂಬ ಖೇಚರರಾಜ.

**ವ। ಭೋಂಕನೆ ಕಂಡು ವಿಷಮವಿಷಧರವಿಷಪೂರಿತ ಶರೀರಮನೊಯ್ಯ ನೊಯ್ಯನೆ ಆಱಿಸಿ ಬಂದು ಕಿವಿಯೊಳ್ ಪಳಂಚಲೆರ್ದೆಯಂ ಪಿಡಿದಲುಗುವ ಸೀಯನಪ್ಪ ಗೀತಾತೋದ್ಯನಾದ ಕ್ರಮದಿರೊಳೆ ಕಣ್ಗೆ ವಂದು ಬಗೆಯನುಱೆ**

**ಸೆಱೆವಿಡಿದ ವಿದ್ಯಾಧರವಿಳಾಸಕ್ಕಂ ಬೆಕ್ಕಸಂಬಟ್ಟೀಗಳೆನ್ನ ತಪಂಬಟ್ಟ ಫಳಮುಂಟಕ್ಕುಮಪ್ಪೊಡೆ ವಿದ್ಯಾಧರನಪ್ಪೆನಕ್ಕೆಂದು ವಿದ್ಯಾಧರವಿಮಾನಮಂ ನೋಡಿ**

**ಪದವಿಭಾಗ–ಅನ್ವಯ–ಅರ್ಥ:** ಭೋಂಕೆನೆ ಕಂಡು = ಆ ಕ್ಷಣ ಆ ದೃಶ್ಯವನ್ನು ಕಂಡು, ವಿಷಮವಿಷಧರ = ವಿಷಸರ್ಪದ, ವಿಷಪೂರಿತ = ವಿಷವು ಹಬ್ಬಿದ್ದ ತನ್ನ, ಶರೀರಮನ್ = ದೇಹದ ನೋವನ್ನು, ಒಯ್ಯನೆ + ಒಯ್ಯನೆ = ಮೆಲ್ಲಗೆ, ಆಱಿಸಿ = ಸಹಿಸಿಕೊಂಡು, ಕಿವಿಯೊಳ್ ಪಳಂಚಲೆದು = ತುಂಬಿಕೊಂಡು, ಎರ್ದೆಯಂ ಪಿಡಿದಲುಗುವ = ಎದೆಯನ್ನು ಹಿಡಿದು ಅಲುಗಿಸುವ, ಸೀಯನಪ್ಪ = ಮಧುರವಾದ, ಗೀತಾ + ಆತೋದ್ಯ = ಹಾಡು ಮತ್ತು ವಾದ್ಯಗಳ, ನಾದಕ್ಕಂ = ನಾದಕ್ಕೂ, ಇದಿರೊಳೆ = ಎದುರಿನಲ್ಲಿಯೇ, ಕಣ್ಗೆ ವಂದು = ಕಣ್ಣಿಗೆ ಬಿದ್ದು, ಬಗೆಯನ್ = ಮನಸ್ಸನ್ನು, ಉಱೆ ಸೆಱೆವಿಡಿದ = ಬಹಳವಾಗಿ ಹಿಡಿದಿಟ್ಟ, ವಿದ್ಯಾಧರವಿಳಾಸಕ್ಕಂ = ವಿದ್ಯಾಧರನ ವೈಭವಕ್ಕೂ, ಬೆಕ್ಕಸಂಬಟ್ಟು = ವಿಸ್ಮಯಗೊಂಡು, ಈಗಳ್ + ಎನ್ನ = ಈಗ ತಾನೆ ನಾನು, ತಪಂಬಟ್ಟ = ತಪಸ್ಸಿಗೆ ತೊಡಗಿದ, ಫಳಂ = ಫಲವು, ಉಂಟಕ್ಕುಂ + ಅಪ್ಪೊಡೆ = ಇರುವುದೇ ಆದರೆ, ವಿದ್ಯಾಧರನ್ + ಅಪ್ಪೆನ್ + ಅಕ್ಕೆ + ಎಂದು = ವಿದ್ಯಾಧರನಾಗುತ್ತೇನೆ ಎಂಬ ನಿರ್ಧಾರದಿಂದ, ವಿದ್ಯಾಧರವಿಮಾನಮಂ = ವಿದ್ಯಾಧರವಿಮಾನವನ್ನು, ನೋಡಿ

**ಗದ್ಯಾನುಸರಣ:** ಆ ಕ್ಷಣ ಆ ದೃಶ್ಯವನ್ನು ಕಂಡು ವಿಷಪೂರಿತ ಹಾವಿನ ವಿಷವು ಹಬ್ಬಿದ್ದ ತನ್ನ ದೇಹದ ನೋವನ್ನು ಮೆಲ್ಲಗೆ ಸಹಿಸಿಕೊಂಡು, ಕಿವಿಯನ್ನು ತುಂಬಿ ಎದೆಯನ್ನು ಹಿಡಿದು ಅಲುಗಿಸುವ ಮಧುರವಾದ ಹಾಡು ಮತ್ತು ವಾದ್ಯಗಳ ನಾದಕ್ಕೂ, ಎದುರಿನಲ್ಲಿಂ ಕಣ್ಣಿಗೆ ಬಿದ್ದು ಮನಸ್ಸನ್ನು ಬಹಳವಾಗಿ ಹಿಡಿದಿಟ್ಟ ವಿದ್ಯಾಧರನ ವೈಭವಕ್ಕೂ ಬೆರಗಾಗಿ, ಈಗ ತಾನೆ ನಾನು ತೊಡಗಿದ ತಪಸ್ಸಿಗೆ ಫಲವು ಇರುವುದೇ ಆದರೆ ನಾನು ವಿದ್ಯಾಧರನಾಗುತ್ತೇನೆ ಎಂಬ ನಿರ್ಧಾರದಿಂದ ವಿದ್ಯಾಧರವಿಮಾನವನ್ನು ನೋಡಿದ.

**ಅಲ್ಲಿಯ ಕಣ್ ಪಳಂಚೆ ಮನಮನಲ್ಲಿಯೆ ಕೀಲಿಸೆ ನೆಚ್ಚು ಮೆಚ್ಚು ತ**
**ಳ್ತಲ್ಲಿಯೆ ಸೋಲ್ತು ಪತ್ತೆ ಗತಜೀವಿತನಾಗವಿವೇಕದಿಂ ತಪೋ**
**ವಲ್ಲಿಯೊಳಪ್ಪನಲ್ಪಸುಖಮನಲ್ಪಸುಖಕ್ಕೆ ಮಾಱೆ ಬಂ**
**ದಿಲ್ಲಿ ನಿದಾನದಿಂದತಿಬಳಂಗೆ ಮಹಾಬಳನಾಗಿ ಪುಟ್ಟಿದಂ ೪೨**

**ಪದವಿಭಾಗ–ಅನ್ವಯ–ಅರ್ಥ:** ಅಲ್ಲಿಯ ಕಣ್ ಪಳಂಚೆ = ಆ ದೃಶ್ಯದ ಮೇಲಿದ್ದ ನೋಟವು ಅಲ್ಲಿಯೇ ನಾಟಿರಲು, ಮನಮನ್ + ಅಲ್ಲಿಯೆ ಕೀಲಿಸೆ = ಮನಸ್ಸನ್ನೂ ಅದರಲ್ಲಿ ಕೀಲಿಸಿರಲು, ಅಲ್ಲಿಯೆ ನೆಚ್ಚು ಮೆಚ್ಚು ತಳ್ತು = ಅದರಲ್ಲಿ ತನ್ನ ನಂಬಿಕೆಯೂ ಮೆಚ್ಚಿಕೆಯೂ ಉಂಟಾಗಿ, ಸೋಲ್ತು ಪತ್ತೆ = (ಮನಸ್ಸು)

ಸೋತು, ಗತಜೀವಿತನಾಗಿ = ಸತ್ತು, ಅವಿವೇಕದಿಂ = ವಿವೇಚನಾರಹಿತತೆಯಿಂದ, ತಪೋವಲ್ಲಿಯೊಳಪ್ಪ = ತಪಸ್ಸೆಂಬ ಬಳ್ಳಿಯಲ್ಲಿ ಬಿಡುವ, ಅನಲ್ಪಸುಖಮನ್ = ಮಹಾಸುಖವನ್ನು, ಅಲ್ಪಸುಖಕ್ಕೆ ಮಾಱಿ = ಅಲ್ಪಸುಖಕ್ಕೆ ಮಾರಿಕೊಂಡು, ಬಂದು = ಮರುಜನ್ಮದಲ್ಲಿ, ನಿದಾನದಿಂದ = ಆ ಕಾರಣದಿಂದ, ಇಲ್ಲಿ = ಈ ಜನ್ಮದಲ್ಲಿ, ಅತಿಬಳಂಗೆ ಮಹಾಬಳನಾಗಿ, ಪುಟ್ಟಿದಂ = ಹುಟ್ಟಿದ

**ಗದ್ಯಾನುಸರಣ:** ಆ ದೃಶ್ಯದ ಮೇಲೆ ನೋಟವು ನಾಟಿ, ಮನಸ್ಸನ್ನೂ ಅದರಲ್ಲಿಯೇ ಕೀಲಿಸಿ ಅದರಲ್ಲಿ ನಂಬಿಕೆ ಮೆಚ್ಚಿಕೆಗಳುಂಟಾಗಿ, ಮನಸ್ಸು ಅದಕ್ಕೆ ಸೋತಿತು; ಆನಂತರ ಸತ್ತು, ತನ್ನ ವಿವೇಚನಾರಹಿತತೆಯಿಂದಾಗಿ ತಪಸ್ಸಿನ ಫಲವಾದ ಮಹಾಸುಖವನ್ನು ಸಾಮಾನ್ಯಸುಖಕ್ಕೆ ಮಾರಿಕೊಂಡು ಬಂದು ಈ ಜನ್ಮದಲ್ಲಿ ಅತಿಬಳನಿಗೆ ಮಹಾಬಳನೆಂಬ ಮಗನಾಗಿ ಹುಟ್ಟಿದ್ದಾನೆ.

**ವ। ಅಂತು ಮುನ್ನಿನ ಭವದೊಳಾದಲಂಪು ಪೊಂಪುಳಿವೋಗೆ ಬಯಸಿ ಪಡೆದ ವಿದ್ಯಾಧರಶ್ರೀಯನಿನ್ನೆಗಂ ಬಿಸುಡಲಾಱದಿರ್ದೊಡಮೇನಾದುದು**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಮುನ್ನಿನ ಭವದೊಳ್ + ಆದ + ಅಲಂಪು = ಹಿಂದಿನ ಹುಟ್ಟಿನಲ್ಲಾದ ಮೋಹವು, ಪೊಂಪುಳಿ + ಪೋಗೆ = ಅಧಿಕವಾಗಿ, ಬಯಸಿ ಪಡೆದ, ವಿದ್ಯಾಧರಶ್ರೀಯನ್ = ವಿದ್ಯಾಧರಸಂಪತ್ತನ್ನು, ಇನ್ನೆಗಂ = ಈತನಕ, ಬಿಸುಡಲಾಱದಿರ್ದೊಡಂ = ಬಿಡಲಾರದವನಾದರೂ, ಏನಾದುದು = ಅದರಿಂದೇನು?

**ಗದ್ಯಾನುಸರಣ:** ಹಿಂದಿನ ಹುಟ್ಟಿನಲ್ಲಾದ ಮೋಹಾಧಿಕ್ಯದಿಂದ ಬಯಸಿ ಪಡೆದ ವಿದ್ಯಾಧರಸಂಪತ್ತನ್ನು ಈತನಕ ಬಿಡಲಾರದವನಾದರೂ ಅದರಿಂದೇನಾಯಿತು?

**ಕನಸಿನೊಳಿಂದು ಮೂವರುಮಮಾತ್ಯರಸುಂಗೊಳೆ ಕಟ್ಟಿ ತಂದಗು**
**ರ್ವಿನ ಕೊಳೆನಾರ್ಪ ಕೋೞ್ಕಸರ ಬಾವಿಯೊಳರ್ದೆ ಕಡಂಗಿ ಬಂದುನೀ**
**ನನಿಬರುಮಂ ಕರಂ ಕೞಲೆ ಬಗ್ಗಿಸಿ ತನ್ನನುಗ್ರಮಪ್ಪ ಕಾಂ**
**ಚನಹರಿಪೀಠದೊಳ್ ಮಿಸಿಸುವಂದಮನೆರ್ದುಱಿ ನಂದುವಂದಮಂಳಕಿ**

**ಪದವಿಭಾಗ–ಅನ್ವಯ–ಅರ್ಥ:** ಮೂವರುಮಮಾತ್ಯರ್ = ಮೂರು ಜನ ಮಂತ್ರಿಗಳು, ಅಸುಂಗೊಳೆ ಕಟ್ಟಿ ತಂದು = ಆಕರ್ಷಿಸಿ ಕಟ್ಟಿ ತಂದು, ಅಗುರ್ವಿನ ಕೊಳೆನಾರ್ಪ = ಮಹಾ ಕೆಟ್ಟ ವಾಸನೆಯಿಂದ ಕೂಡಿದ, ಕೋೞ್ಕಸರ ಬಾವಿಯೊಳ್ = ಕೊಚ್ಚೆಯ ಬಾವಿಯಲ್ಲಿ, ಅರ್ದೆ = ಮುಳುಗಿಸಲು, ಕಡಂಗಿ = ಆವೇಶದಿಂದ, ಬಂದು ನೀನ್, ಅನಿಬರುಮಂ = ಅವರೆಲ್ಲರನ್ನೂ, ಉಗ್ರಮಪ್ಪ = ಕಠಿಣವಾಗಿ, ಕರಂ ಕೞಲೆ ಬಗ್ಗಿಸಿ = ಜೋರಾಗಿ ಗದರಿಸಿ, ತನ್ನನ್ = ಬಹಾಬಲನನ್ನು, ಕಾಂಚನಹರಿಪೀಠದೊಳ್ = ಚಿನ್ನದ ಸಿಂಹಾಸನದಲ್ಲಿ, ಕುಳ್ಳಿರಿಸಿ, ಮಿಸಿಸುವ +

ಅಂದಮನ್ = ಅಭಿಷೇಕ ಮಾಡಿದಂತೆಯೂ, ಎರ್ದುರಿ = ಮೇಲೆದ್ದ ಬೆಂಕಿಯು, ನಂದುವಂದಮಂ = ಆರಿಹೋದಂತೆಯೂ, ಇಂದು ಕನಸಿನೊಳ್ = ಈ ದಿನ ಕನಸಿನಲ್ಲಿ ಕಂಡ

**ಗದ್ಯಾನುಸರಣ:** ಮೂರು ಜನ ಮಂತ್ರಿಗಳು ತನ್ನನ್ನು ಆಕರ್ಷಿಸಿ ಕಟ್ಟಿ ತಂದು ಮಹಾ ಕೆಟ್ಟ ವಾಸನೆಯಿಂದ ಕೂಡಿದ ಕೊಚ್ಚೆಯ ಬಾವಿಯಲ್ಲಿ ಮುಳುಗಿಸಿದ ಹಾಗೂ ನೀನು ಬಂದು ಅವರೆಲ್ಲರನ್ನೂ ಜೋರಾಗಿ ಗದರಿಸಿ ತನ್ನನ್ನು ಚಿನ್ನದ ಸಿಂಹಾಸನದಲ್ಲಿ ಕುಳ್ಳಿರಿಸಿ ಅಭಿಷೇಕ ಮಾಡಿದ ಹಾಗೂ, ಮೇಲೆದ್ದ ಬೆಂಕಿಯೊಂದು ಆರಿಹೋದಂತೆಯೂ – ಈ ದಿನ ಮಹಾಬಲನು ಒಂದು ಕನಸನ್ನು ಕಂಡ.

**ವ। ಕಂಡು ತದಶುಭಸ್ವಪ್ನದರ್ಶನಕ್ಕೆ ಕೊಕ್ಕರಿಸಿ ಭವಾಗಮನ ಪ್ರತೀಕ್ಷಣ ಪರನಾಗಿರ್ದಂ: ಆತಂಗೆ ತದುತ್ಥಿತ ಶಿಖಿಶಿಖಾಕಳಾಪಪ್ರಶಮನದಿ ಇಂದೊಂದು ತಿಂಗಳಾಯುಷ್ಯಂ; ಆತನಿಂ ಮುನ್ನಂ ನಿನ್ನೀ ಕನಸುಗಳಂ ಪೇಟಿ, ಪೇೞಲೊಡ ಮಾತಂ ನಿನ್ನ ಮಾತನೆ ಪವಣ್ಮಾಡಿ ಪೇೞ್ದುದಂ ಕೈಕೊಳ್ಗುಂ ಅಂತು ಕೈಕೊಂಡು**

**ಪದವಿಭಾಗ–ಅನ್ವಯ–ಅರ್ಥ:** ಕಂಡು, ತತ್ + ಅಶುಭಸ್ವಪ್ನದರ್ಶನಕ್ಕೆ = ಕೆಟ್ಟ ಕನಸನ್ನು ಕಂಡದ್ದಕ್ಕೆ, ಕೊಕ್ಕರಿಸಿ = ಗಾಬರಿಗೊಂಡು, ಭವ + ಆಗಮನಪ್ರತೀಕ್ಷಣಪರನಾಗಿರ್ದಂ = ನಿನ್ನ ಬರವನ್ನು ನಿರೀಕ್ಷಿಸುತ್ತಿದ್ದಾನೆ; ಆತಂಗೆ = ಅವನಿಗೆ, ತತ್ + ಉತ್ಥಿತ = ಆ ಮೇಲೆದ್ದ, ಶಿಖಿಶಿಖಾಕಳಾಪ = ಬೆಂಕಿಯ ಉರಿಯ, ಪ್ರಶಮನದಿಂದ = ನಂದುವಿಕೆಯಿಂದಾಗಿ, ಒಂದು ತಿಂಗಳ್ + ಆಯುಷ್ಯಂ = ಮಹಾಬಲನಿಗೆ ಇನ್ನು ಒಂದು ತಿಂಗಳಷ್ಟೇ ಆಯುಸ್ಸು ಇರುವುದು; ಆತನಿಂ ಮುನ್ನಂ = ಅವನು ಹೇಳಿಕೊಳ್ಳುವುದಕ್ಕೆ ಮುಂಚೆಯೇ, ನಿನ್ನೀ ಕನಸುಗಳಂ ಪೇಟಿ = ನೀನು ಈ ಕನಸನ್ನು ಹೇಳು, ಪೇೞಲ್ + ಒಡಂ + ಆತಂ = ಹೇಳಿದಾಕ್ಷಣವೇ, ನಿನ್ನ ಮಾತನೆ ಪವಣ್ಮಾಡಿ = ನಿನ್ನ ಮಾತುಗಳನ್ನು ಪ್ರಮಾಣವೆಂದು ತಿಳಿದು, ಪೇೞ್ದುದಂ = ನೀನು ಹೇಳಿದುದನ್ನು, ಕೈಕೊಳ್ಗುಂ = ಕೈಗೊಳ್ಳುತ್ತಾನೆ, ಅಂತು ಕೈಕೊಂಡು = ಹಾಗೆ ಮಾಡಿ

**ಗದ್ಯಾನುಸರಣ:** ಕೆಟ್ಟ ಕನಸನ್ನು ಕಂಡು ಗಾಬರಿಗೊಂಡು ಅವನು ನಿನ್ನ ಬರವನ್ನು ನಿರೀಕ್ಷಿಸುತ್ತಿದ್ದಾನೆ; ಮೇಲೆದ್ದ ಆ ಬೆಂಕಿಯ ನಂದುವಿಕೆಯಿಂದಾಗಿ ಮಹಾಬಲನಿಗೆ ಇನ್ನು ಒಂದು ತಿಂಗಳಷ್ಟೇ ಆಯುಸ್ಸು ಇರುವುದು; ಅವನು ಹೇಳಿಕೊಳ್ಳುವುದಕ್ಕೆ ಮುಂಚೆಯೇ ನೀನು ಈ ಕನಸನ್ನು ಹೇಳು, ಹಾಗೆ ಹೇಳಿದಾಕ್ಷಣವೇ ನಿನ್ನ ಮಾತುಗಳನ್ನು ಪ್ರಮಾಣವೆಂದು ತಿಳಿದು ಅವನು ನೀನು ಹೇಳಿದುದನ್ನು ಕೈಗೊಳ್ಳುತ್ತಾನೆ.

**ಈಗಳ್ ನೀನಿರ್ದು ನೋನಿಸೆ ನೋಂತು ಮಹಾಬಳಂ ಲಲಿತಾಂಗಂ ವಜ್ರಜಂಘಂ ಭೋಗಭೂಮಿಜಂ ಶ್ರೀಧರದೇವಂ ಸುವಿಧಿನರಾಧಿಪನಚ್ಯುತೇಂದ್ರಂ ಸಾಗರಾಂತಂ ನೆಲನೆನಿತನಿತುಮಮಂ ಚಕ್ರದಿಂ ಬೆಸಕೆಯ್ಸಿ ವಜ್ರನಾಭಿಯಾಗಿ ಸರ್ವಾರ್ಥಸಿದ್ಧಿಯೊಳ್ಪುಟ್ಟಿ ಭರತದೊಳಿನ್ನಾದಿದೇವನಪ್ಪೆಂ ೪೪**

**ಪದವಿಭಾಗ-ಅನ್ವಯ-ಅರ್ಥ:** ಈಗಳ್ ನೀನಿರ್ದು = ಈ ಸಂದರ್ಭದಲ್ಲಿ ನೀನಿದ್ದುಕೊಂಡು, ನೋನಿಸೆ ನೋಂತು = ವ್ರತತೊಡು ಎಂದರೆ ತೊಟ್ಟು, ಮಹಾಬಳಂ ಲಲಿತಾಂಗಂ ವಜ್ರಜಂಘಂ ಭೋಗಭೂಮಿಜಂ ಶ್ರೀಧರದೇವಂ ಸುವಿಧಿನರಾಧಿಪನ್ + ಅಚ್ಯುತೇಂದ್ರಂ = ಈ ಹೆಸರುಗಳಿಂದ ಜನ್ಮಗಳನ್ನು ಪಡೆದು, ಸಾಗರ + ಅಂತಂ ನೆಲನೆನ್ + ಅತನಿತುಮಂ = ಸಮುದ್ರದವರೆಗಿನ ಭೂಮಿಯನ್ನೆಲ್ಲ, ಚಕ್ರದಿಂ ಬೆಸಕೆಯ್ಸಿ = ಚಕ್ರದ ನೆರವಿನಿಂದ ಆಳಿ, ವಜ್ರನಾಭಿಯಾಗಿ, ಸರ್ವಾರ್ಥಸಿದ್ಧಿಯೊಳ್ + ಪುಟ್ಟಿ = ಸರ್ವಾರ್ಥಸಿದ್ಧಿ ಎಂಬ ವಿಮಾನದಲ್ಲಿ ಹುಟ್ಟಿ, ಇನ್ನು = ಆ ಬಳಿಕ, ಭರತದೊಳ್ = ಭರತಖಂಡದಲ್ಲಿ, ಆದಿದೇವನಪ್ಪೆಂ = ಮೊದಲ ತೀರ್ಥಂಕರನಾಗುತ್ತಾನೆ.

**ಗದ್ಯಾನುಸರಣ:** ಈ ಸಂದರ್ಭದಲ್ಲಿ ನೀನಿದ್ದುಕೊಂಡು ವ್ರತತೊಡು ಎಂದರೆ ತೊಟ್ಟು ಮಹಾಬಳನು ಲಲಿತಾಂಗ ವಜ್ರಜಂಘ ಭೋಗಭೂಮಿಜ ಶ್ರೀಧರದೇವ ಸುವಿಧಿನರಾಧಿಪ ಅಚ್ಯುತೇಂದ್ರಂ – ಈ ಹೆಸರುಗಳಿಂದ ಜನ್ಮಗಳನ್ನು ಪಡೆದು, ಸಮುದ್ರದವರೆಗಿನ ಭೂಮಿಯನ್ನೆಲ್ಲ ಚಕ್ರದ ನೆರವಿನಿಂದ ಗೆದ್ದು, ವಜ್ರನಾಭಿಯಾಗಿ ಸರ್ವಾರ್ಥಸಿದ್ಧಿ ಎಂಬ ವಿಮಾನದಲ್ಲಿ ಹುಟ್ಟಿದ ಬಳಿಕ ಭರತಖಂಡದಲ್ಲಿ, ಮೊದಲ ತೀರ್ಥಂಕರನಾಗುತ್ತಾನೆ.

**ವ ನೀನುಂ ತೃತೀಯಜನ್ಮದೊಳ್ ವಿಗಳಿತಸಂಸೃತಿನಿಗಳನೆಯಪ್ಪೆ ಯೆಂಬುದುಂ, ಚಾರಣ ಯುಗಳಕ್ಕೆ ಕರಕಮಳಯುಗಳಮಂ ಮಾಡಿ ಬೀಟ್ಕೊಂಡತಿತ್ವರಿತಗತಿಯಿಂ ಬರುತ್ತುಂ**

**ಪದವಿಭಾಗ-ಅನ್ವಯ-ಅರ್ಥ:** ನೀನುಂ = ಅಲ್ಲದೆ ನೀನು ಕೂಡ, ತೃತೀಯಜನ್ಮದೊಳ್ = ಮೂರನೆಯ ಜನ್ಮದಲ್ಲಿ, ವಿಗಳಿತಸಂಸೃತಿನಿಗಳನೆ + ಅಪ್ಪೆ = ಸಂಸಾರವನ್ನು ತೆರದಂತಹವನಾಗುತ್ತೀಯೆ, ಎಂಬುದುಂ = ಎಂದಾಗ, ಚಾರಣಯುಗಳಕ್ಕೆ, ಕರಕಮಳಯುಗಳಮಂ ಮಾಡಿ = ಕೈಗಳನ್ನು ಜೋಡಿಸಿ, ಬೀಟ್ಕೊಂಡು = ಹೊರಟು, ಅತಿತ್ವರಿತಗತಿಯಿಂ ಬರುತ್ತುಂ = ತುಂಬ ವೇಗವಾಗಿ ವಾಪಸ್ಸಾದ.

**ಗದ್ಯಾನುಸರಣ:** ಅಲ್ಲದೆ ನೀನು ಕೂಡ ಮೂರನೆಯ ಜನ್ಮದಲ್ಲಿ ಸಂಸಾರದಿಂದ

ಬಿಡುಗಡೆಗೊಳ್ಳುತ್ತೀಯೆ – ಎನ್ನಲು ಅವರಿಗೆ ಕೈಮುಗಿದು ಸ್ವಯಂಬುದ್ಧನು ಅವಸರದಿಂದ ವಾಪಸ್ಸಾದ.

**ಮುಸು ಮುತ್ತಂತೆ ತೆರಳ್ದ ತನ್ನ ಮೊಗಮಂ ಕಂಡಳ್ಕನೋ ಕೂಡೆಜೋ**
**ಲ್ದು ಸಡಿಲ್ದಿರ್ದೊಡಲಳ್ಳೆಜೊಳ್ಳೆತನಮಂ ಮೇಣ್ಕಾಣನೋ ಸಂತತ**
**ವ್ಯಸನೋದ್ರೇಕದ ಕುಂದನೇನೊಣರನೋ ಶಕ್ತಿಕ್ಷಯಂಗಾಣನೋ**
**ಬಿಸುಡಂ ಮುನ್ನಿನ ತನ್ನ ಲಂಪಳಿಕೆಯಂ ಮತ್ತಂ ಜರಾಜರ್ಜರಂ ೪೫**

**ಪದವಿಭಾಗ–ಅನ್ವಯ–ಅರ್ಥ:** ಮುಸು ಮುತ್ತಂತೆ = ಮುದಿ ಕಪಿಯಂತೆ, ತೆರಳ್ದ = ಸುಕ್ಕುಗಟ್ಟಿದ, ತನ್ನ ಮೊಗಮಂ ಕಂಡು + ಅಳ್ಕನೋ = ತನ್ನ ಮುಖವನ್ನು (ಕನ್ನಡಿಯಲ್ಲಿ) ನೋಡಿಕೊಂಡರೂ ಅಳುಕುವುದಿಲ್ಲವೇ? ಕೂಡೆ ಜೋಲ್ದು ಸಡಿಲ್ದಿರ್ದ + ಒಡಲ = ಜೊತೆಗೆ ಜೋತುಬಿದ್ದ ದೇಹದ, ಮೇಣ್ ಅಳ್ಳೆಜೊಳ್ಳೆತನಮಂ = ಮತ್ತು ನಿಸ್ಸಾರತೆಯನ್ನು, ಕಾಣನೋ, ಸಂತತ ವ್ಯಸನೋದ್ರೇಕದ ಕುಂದನ್ = ಒಂದೇ ಸಮನೆ ವ್ಯಸನೋದ್ರೇಕದಲ್ಲಿದ್ದು (ದೇಹದಲ್ಲಿ ಉಂಟಾದ) ಅಸಾಮರ್ಥ್ಯವನ್ನು, ಏನ್ + ಒಣರನೋ = ಗಮನಿಸನೋ? ಶಕ್ತಿಕ್ಷಯಂ + ಕಾಣನೋ = ಶಕ್ತಿಯು ಕಡಿಮೆಯಾಗಿರುವುದನ್ನು ಅನುಭವಿಸುತ್ತಿಲ್ಲವೇ? (ಆದರೂ) ಮತ್ತಂ ಜರಾಜರ್ಜರಂ = ಮುಪ್ಪಿನಿಂದ ತೀವ್ರವಾಗಿ ಜರ್ಜರಿತನಾದ ಮಹಾಬಲನು, ಮುನ್ನಿನ ತನ್ನ ಲಂಪಳಿಕೆಯಂ = ತನ್ನ ಮೊದಲಿನ ಲಾಂಪಟ್ಯವನ್ನು, ಬಿಸುಡಂ = ಬಿಡನಲ್ಲ!

**ಗದ್ಯಾನುಸರಣ:** ಮುದಿ ಕಪಿಯಂತೆ ಸುಕ್ಕುಗಟ್ಟಿದ, ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಂಡರೂ ಮಹಾಬಲನಿಗೆ ಹೆದರಿಕೆಯಾಗದೇ? ಜೊತೆಗೆ ಸಡಿಲಗೊಂಡ ದೇಹದ ನಿಸ್ಸಾರತೆಯು ಅವನ ಗಮನಕ್ಕೆ ಬಾರದೇ? ಒಂದೇ ಸಮನೆ ವ್ಯಸನೋದ್ರೇಕದಲ್ಲಿದ್ದುದರಿಂದ ದೇಹದಲ್ಲಿ ಉಂಟಾದ ನಿಶ್ಯಕ್ತಿಯನ್ನು ಅವನಿನ್ನೂ ಗಮನಿಸಿಲ್ಲವೇ? ತನ್ನ ಶಕ್ತಿಯು ಕಡಿಮೆಯಾಗಿರುವುದು ಅನುಭವಕ್ಕೆ ಬಂದಿಲ್ಲವೇ? ಮುಪ್ಪಿನಿಂದ ನಜ್ಜುಗುಜ್ಜಾಗಿದ್ದರೂ ಅವನು ತನ್ನ ಹಿಂದಿನ ಲಾಂಪಟ್ಯವನ್ನು ಬಿಡುತ್ತಿಲ್ಲವಲ್ಲ!

**ವ। ಅಂತಾತ್ಮಗತದೊಳೆ ಬಗೆಯುತ್ತುಂ ಬಂದು ಖಚರಪತಿಯುನೆಯ್ದಿ ತತ್ಪ್ರಪಂಚಮಂ ಸಪ್ರಪಂಚಮಱಿಪಿ,**

**ಅರ್ಥ:** ಅಂತು + ಆತ್ಮಗತದೊಳೆ ಬಗೆಯುತ್ತುಂ ಖಚರಪತಿಯನ್ + ಎಯ್ದಿ ತತ್ + ಪ್ರಪಂಚಮಂ ಸಪ್ರಪಂಚಂ + ಅಱಿಪಿ = ಹೀಗೆ ಮನಸ್ಸಿನಲ್ಲಿಯೇ

ಯೋಚಿಸಿದ ಸ್ವಯಂಬುದ್ಧನು ರಾಜನ ಬಳಿ ಬಂದು ನಡೆದುದನ್ನೆಲ್ಲ ವಿವರವಾಗಿ ಅರುಹಿದ.

**ಮನದಳಿಪಿಂ ತಮಾಳಲತಿಕಾಂಗಿಯರಾಟಿಸೆ ಬರ್ದುಗೆಟ್ಟು ಕಾಂ**
**ಚನಲತಿಕಾಂಗಿಯರ್ ಬಯಸೆ ಸೋಲ್ತು ಸರೋಜದಳಾಯತಾಕ್ಷಿಯರ್**
**ನೆನೆಯೆ ವಿಳಾಸದುತ್ಪಳದಳಾಕ್ಷಿಯರೀಕ್ಷಿಸೆ ಸಂದ ನಿನ್ನ ಮು**
**ನ್ನಿನ ಚರಿತಂಗಳಂ ನೆನೆಯದಿರ್ ನೆನೆ ಜೈನಪದಾಂಬುಜಮಂ ೪೬**

**ಪದವಿಭಾಗ-ಅನ್ವಯ-ಅರ್ಥ:** ತಮಾಳಲತಿಕಾಂಗಿಯರ್ + ಆಟಿಸೆ = (ಚಿಗುರಿದ) ಹೊಂಗೆಯ ರೆಂಬೆಯಂತಹ ಚೆಲುವೆಯರು ಬಯಸಿ ಬರಲು, ಮನದ + ಅಳಿಪಿಂ = ನಿನ್ನ ಮನಸ್ಸಿನ ಆಸೆಯಿಂದ, ಬರ್ದು + ಕೆಟ್ಟು = ನಾಚಿಕೆಯನ್ನು ಬಿಟ್ಟು; ಕಾಂಚನಲತಿಕಾಂಗಿಯರ್ ಬಯಸೆ = ಚಿನ್ನದ ಬಳ್ಳಿಯಂತಹ ಸುಂದರಿಯರು ಮೋಹಿಸಲು, ಸೋಲ್ತು = ಅವರಿಗೆ ಮನಸೋತು, ಸರೋಜದಳಾಯತಾಕ್ಷಿಯರ್ ನೆನೆಯೆ = ಕಮಲದಳದಂತಹ ವಿಶಾಲನೇತ್ರೆಯರು ನೆನಪು ಮಾಡಿಕೊಂಡಾಗಲೂ, ವಿಳಾಸದ + ಉತ್ಪಳದಳಾಕ್ಷಿಯರ್ + ಈಕ್ಷಿಸೆ = ಬೆಡಗುಗಾತಿಯರಾದ ನೈದಿಲೆಯ ಕಣ್ಣುಳ್ಳ ಚೆಲುವೆಯರು ನೋಡಲೂ, ಸಂದ = ಮಾಡುತ್ತಿದ್ದ, ನಿನ್ನ ಮುನ್ನಿನ ಚರಿತಂಗಳಂ = ಅನುಸರಿಸುತ್ತಿದ್ದ ನಿಮ್ಮ ನಡಳಿಕೆಗಳನ್ನು, ನೆನೆಯದಿರ್ = ನೆನಪಿಸಿಕೊಳ್ಳಬೇಡಿ; ನೆನೆ ಜೈನಪದ + ಅಂಬುಜಮಂ = (ಇನ್ನು ಮುಂದೆ) ಜಿನನ ಪಾದಕಮಲಗಳನ್ನು ಮಾತ್ರ ಧ್ಯಾನಿಸಿರಿ

**ಗದ್ಯಾನುಸರಣ:** ಚಿಗುರಿದ ಹೊಂಗೆಯ ರೆಂಬೆಯಂತಹ ಚೆಲುವೆಯರು ಬಯಸಿ ಬಂದುದು, ಚಿನ್ನದ ಬಳ್ಳಿಯಂತಹ ಸುಂದರಿಯರು ಮೋಹಿಸಲು ಅವರಿಗೆ ಮನಸೋತುದು, ಕಮಲದಳದಂತಹ ವಿಶಾಲನೇತ್ರೆಯರು ನೆನಪು ಮಾಡಿಕೊಂಡುದು, ಬೆಡಗುಗಾತಿಯರಾದ ಅಗಲ ಕಣ್ಣುಳ್ಳ ಚೆಲುವೆಯರನ್ನು ನೋಡಿ ಅನುಸರಿಸುತ್ತಿದ್ದ ನಿಮ್ಮ ನಡವಳಿಕೆಗಳನ್ನು ನೆನೆಯದೆ ಇನ್ನು ಮುಂದೆ ಜಿನನ ಪಾದಕಮಲಗಳನ್ನು ಮಾತ್ರ ಧ್ಯಾನಿಸಿರಿ.

**ಮಸೆದಂಗೋದ್ಭವನಸ್ತ್ರದಂತೆಸೆದ ನಿನ್ನೀ ರೂಪು ವೃದ್ಧತ್ವದೊಳ್**
**ಪೊಸತೊಂದಾಯ್ತು ಮಮತ್ವಮಂ ಬಿಸುಟು ನೀನೇಕತ್ವಮಂ ಭವ್ಯಭಾ**
**ವಿಸು ನಿನ್ನೀ ತನುವಂ ತಪೋವನವನಕ್ರೀಡಾಸುಖಕ್ಕೊಡ್ಡು ಚಿಂ**
**ತಿಸದಿರ್ ಮುನ್ನಿನ ನಿನ್ನ ಯಾವನವನಕ್ರೀಡಾವಿಳಾಸಂಗಳಂ೪೭**

**ಪದವಿಭಾಗ-ಅನ್ವಯ-ಅರ್ಥ:** ಮಸೆದ = ಹರಿತಗೊಳಿಸಿದ, ಅಂಗೋದ್ಭವನ + ಅಸ್ತ್ರದಂತೆಸೆದ = ಕಾಮನ ಬಾಣದಂತೆ ಕಂಗೊಳಿಸಿದ, ನಿನ್ನೀ ರೂಪು =

ನಿನ್ನ ಗಂಡುಗಾಡಿಯು ವೃದ್ಧತ್ವದೊಳ್ = ಮುಪ್ಪಿನಲ್ಲಿ, ಪೊಸತೊಂದು + ಆಯ್ತು = ಹೊಸತೇ ಆಗಿ ಮಾರ್ಪಟ್ಟಿದೆ; ಭವ್ಯ = ಮೋಕ್ಷಾರ್ಹನೇ, ಮಮತ್ವಮಂ ಬಿಸುಟು = ಸ್ವಮೋಹವನ್ನು ಬಿಟ್ಟು, ನೀನು + ಏಕತ್ವಮಂ ಭಾವಿಸು ='ಅದರಲ್ಲಿ' ಒಂದುತನವನ್ನು ಕುರಿತು ಧ್ಯಾನಿಸು; ನಿನ್ನೀ ತನುವಂ ತಪೋವನವನಕ್ರೀಡಾಸುಖಕ್ಕೆ + ಒಡ್ಡು = ನಿನ್ನ ಈ ದೇಹವನ್ನು ತಪಸ್ಸೆಂಬ ವನವಿಹಾರಕ್ಕೆ ಅರ್ಪಿಸಿಕೋ, ಮುನ್ನಿನ ನಿನ್ನ ಯಾವನವನಕ್ರೀಡಾವಿಳಾಸಂಗಳಂ = ಈ ಮುಂಚಿನ ನಿನ್ನ ಯೌವನವನವಿಹಾರವನ್ನು ಕುರಿತು, ಚಿಂತಿಸದಿರ್ = ಆಲೋಚಿಸಬೇಡ.

**ಗದ್ಯಾನುಸರಣ:** ಹರಿತಗೊಳಿಸಿದ ಕಾಮನ ಬಾಣದಂತೆ ಕಂಗೊಳಿಸಿದ ನಿನ್ನ ಗಂಡುಗಾಡಿಯು ಮುಪ್ಪಿನಲ್ಲಿ ಹೊಸತೇ ಆಗಿ ಮಾರ್ಪಟ್ಟಿದೆ; ಎಲೈ ಮೋಕ್ಷಾರ್ಹ ಜೀವಿಯೇ, ಸ್ವಮೋಹವನ್ನು ಬಿಟ್ಟು 'ಅದರಲ್ಲಿ' ಒಂದುತನವನ್ನು ಕುರಿತು ಧ್ಯಾನಿಸು; ನಿನ್ನ ಈ ದೇಹವನ್ನು ತಪಸ್ಸೆಂಬ ವನವಿಹಾರಕ್ಕೆ ಅರ್ಪಿಸಿಕೋ, ಈ ಮುಂಚಿನ ನಿನ್ನ ಯೌವನವನವಿಹಾರವನ್ನು ಕುರಿತು, ಆಲೋಚಿಸಬೇಡಿ.

**ವಿಶೇಷ ವಿಚಾರ**: 'ಏಕತ್ವ' ಸಾಧನೆ ಎಂದರೆ ತೀರ್ಥಂಕರತ್ವದಲ್ಲಿ ಒಂದಾಗುವುದು. ತೀರ್ಥಂಕರತ್ವವನ್ನು ಆಗುಮಾಡಿಕೊಳ್ಳಲು ಹೊಂದಿರಬೇಕಾದ ದರ್ಶನವಿಶುದ್ಧಿ, ವಿನಯುಸಂಪನ್ನತೆ, ಶೀಲೇಷ್ವನತಿವಿಚಾರ, ಅಭೀಕ್ಷ್ಣ ಜ್ಞಾನೋಪಯೋಗ, ಸಂವೇಗ, ಶಕ್ತಿತಸ್ತ್ಯಾಗ, ಶಕ್ತಿತಸ್ತಪ, ಸಾಧುಸಮಾಧಿ, ವೈಯಾವೃತ್ಯಕರಣ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಬಹುಶ್ರುತಭಕ್ತಿ, ಪ್ರವಚನಭಕ್ತಿ, ಆವಶ್ಯಕಾಪರಿಹಾರಿಣಿ, ಮಾರ್ಗಪ್ರಭಾವನೆ ಮತ್ತು ಪ್ರವಚನ ವತ್ಸಲತ್ವಗಳೆಂಬ 'ಷೋಡಶಭಾವನೆ'ಗಳನ್ನು ಹೊಂದಿರಬೇಕು.

**ವ। ಅಂತುಮಲ್ಲದೆಯುಂ**

**ಅರ್ಥ:** ಅಂತುಮಲ್ಲದೆಯುಂ = ಅದೂ ಅಲ್ಲದೆ

**ನಿನಗೀ ಸಂಸೃತಿವಾರಿರಾಶಿತಟಮತ್ಯಾಸನ್ನಮಾಸನ್ನಭ**
**ವ್ಯನೆಯೆಂದೆಯ್ದೆ ಮುನೀಂದ್ರದಿವ್ಯಮತದಿಂ ನಿಶ್ಚೈಸಿದೆಂ ಮಾಣಲಿ**
**ನ್ನೆನಸುಂ ಬಾರದು ನಿನ್ನೊಳಾತ್ಮಹಿತಮಂ ನಿಶ್ಚೈಸು ಸನ್ಮಾರ್ಗಸೂ**
**ಚನೆಗೆಯ್ದೆ ಶರಣಂ ಜಿನೇಂದ್ರಚರಣಂ ವಿದ್ಯಾಧರಾಧೀಶ್ವರಾ ೪೮**

**ಪದವಿಭಾಗ–ಅನ್ವಯ–ಅರ್ಥ:** ವಿದ್ಯಾಧರಾಧೀಶ್ವರಾ = ವಿದ್ಯಾಧರರಾಜನೇ, ಈ ಸಂಸೃತಿ = ಈ ಸಂಸಾರವೆಂಬ ವಾರಿರಾಶಿತಟಂ = ಸಮುದ್ರದ ದಡವು, ನಿನಗೆ, ಅತಿ + ಆಸನ್ನಂ = ತುಂಬ ಹತ್ತಿರದಲ್ಲಿದೆ, ಆಸನ್ನಭವ್ಯನೆ

= ನೀನು ಆಸನ್ನಭವ್ಯ, ಎಂದು = ಎಂಬುದನ್ನು, ಮುನೀಂದ್ರದಿವ್ಯಮತದಿಂ = ಮುನಿಗಳ ದೈವಿಕ ಅಭಿಪ್ರಾಯದಿಂದ, ನಿಶ್ಚೈಸಿದೆಂ = ನಿರ್ಧಾರಕ್ಕೆ ಬಂದಿದ್ದೇನೆ; ಸನ್ಮಾರ್ಗಸೂಚನೆಗೆ + ಎಯ್ದೆ = ಶ್ರೇಯಸ್ಸಿನ ದಾರಿಯಲ್ಲಿ ಹೋಗಲು, ಮಾಣಲ್ + ಇನ್ನೆನಸುಂ ಬಾರದು = ತಡಮಾಡುವುದು ಇನ್ನು ಸ್ವಲ್ಪವಾದರೂ ಸರಿಯಲ್ಲ; ನಿನ್ನೊಳ್ = ನಿನ್ನಲ್ಲಿ ನೀನೇ, ಆತ್ಮಹಿತಮಂ ನಿಶ್ಚೈಸು = ನಿನ್ನ ಹಿತದ ಬಗ್ಗೆ ನಿರ್ಧರಿಸು; ಜಿನೇಂದ್ರಚರಣಂ = ಜಿನನ ಪಾದಗಳೇ, (ನಿನಗೆ) ಶರಣಂ = ಶರಣು.

**ಗದ್ಯಾನುಸರಣ:** ವಿದ್ಯಾಧರರಾಜನೇ, ಈ ಸಂಸಾರವೆಂಬ ಸಮುದ್ರದ ದಡವು ನಿನಗೆ ತುಂಬ ಹತ್ತಿರದಲ್ಲಿದೆ; ನೀನು ಆಸನ್ನಭವ್ಯ, ಎಂಬುದು ನನಗೆ ಮುನಿಗಳ ದೈವವಾಕ್ಕುಗಳಿಂದ ದೃಢವಾಗಿದೆ; ಶ್ರೇಯಸ್ಸಿನ ದಾರಿಯಲ್ಲಿ ಹೋಗಲು ಇನ್ನು ಸ್ವಲ್ಪವೂ ತಡಮಾಡುವುದು ಸರಿಯಲ್ಲ; ನಿನ್ನ ಆತ್ಮಹಿತದ ಬಗ್ಗೆ ನೀನೇ ನಿರ್ಧರಿಸು; ಇನ್ನು ಜಿನನ ಪಾದಗಳೇ ನಿನಗೆ ಶರಣು.

**ವ॥ ಎಂದು ಪರಿಮಿತಹಿತವಚನಂಗಳಿಂ ಮುಟ್ಟೆ ನುಡಿದು ತನ್ನ ಕಂಡ ಕನಸುಗಳನನು ಕ್ರಮಂದಪ್ಪದಱಿಪಿದ ಮಂತ್ರಿಮುಖ್ಯನ ನುಡಿಯೊಳಪಗತ ಕಲುಷಹೃದಯನಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಎಂದು ಪರಿಮಿತಹಿತವಚನಂಗಳಿಂ = ಕೆಲವೇ ಹಿತನುಡಿಗಳನ್ನು, ಮುಟ್ಟೆ ನುಡಿದು = ಮನಮುಟ್ಟುವಂತೆ ಹೇಳಿ, ತನ್ನ ಕಂಡ ಕನಸುಗಳನ್ = ತಾನು ಕಂಡ ಕನಸುಗಳನ್ನು, ಅನುಕ್ರಮಂದಪ್ಪದೆ = ಕಂಡ ಕ್ರಮದಲ್ಲಿಯೇ, ಅಱಿಪಿದ = ನಿರೂಪಿಸಿದ, ಮಂತ್ರಿಮುಖ್ಯನ = ಸ್ವಯಂಬುದ್ಧನ, ನುಡಿಯೊಳ್ = ಮಾತುಗಳಿಂದ, ಅಪಗತಕಲುಷಹೃದಯನಾಗಿ ಕಳೆದುಕೊಂಡ ಹೃದಯಕಲ್ಮಷಗಳುಳ್ಳವನಾಗಿ.

**ಗದ್ಯಾನುಸರಣ:** ಎಂದು ಮನಮುಟ್ಟುವಂತೆ ಕೆಲವೇ ಹಿತನುಡಿಗಳನ್ನು ಹೇಳಿ, ತಾನು ಕಂಡ ಕನಸುಗಳನ್ನು ಕಂಡ ಕ್ರಮದಲ್ಲಿಯೇ, ನಿರೂಪಿಸಿದ ಸ್ವಯಂಬುದ್ಧನ ಮಾತುಗಳಿಂದ ಮಹಾಬಲನು ತನ್ನ ಹೃದಯದ ಕಲ್ಮಷಗಳನ್ನು ಕಳೆದುಕೊಂಡು ಪರಿಶುದ್ಧನಾದ.

**ಜರೆ ಬಂದೊಟ್ಟೈಸೆ ಮಾಣ್ದುರ್ದಿಳಿಪೆನಗಿದೆ ಮುಂ ಸಾಲದೇಕಾಳರಾಜಂ**
**ಬಿಡೆ ಮಾಣ್ದುರ್ಪನೇ ನಿಶ್ಚಯಿಸಿ ತನುವನಿನ್ನೊಪ್ಪುಗೊಳ್ಮುನ್ನಮಿನ್ನುಂ**
**ಕರಣೀಯಂ ನಿನ್ನ ವಾಕ್ಯಂ ನಿಜಮತಮೆ ಮತಂ ಮೆಚ್ಚಿದಂತೆನ್ನನೀಸಂ**
**ಸರಣಾಂಭೋರಾಶಿಯಿಂದಂ ಪೊಱಮಡಿಸೆನಗಿಂ ನೀನೆ ಹಸ್ತಾವಲಂಬಂರ್ಳ್**

**ಪದವಿಭಾಗ-ಅನ್ವಯ-ಅರ್ಥ:** ಜರೆ ಬಂದು + ಒಟ್ಟೈಸೆ = ಮುಪ್ಪು ಬಂದು ಕವಿದಿದ್ದರೂ, ಮಾಣ್ದಿರ್ದ + ಅಳಿಪು = ನಿಲ್ಲದ ಆಸೆಯ, ಎನಗಿದೆ ಮುಂ ಸಾಲದೇ = ಸಾಲದೇ? ಕಾಳರಾಜಂ = ಯಮನು, ಬಿಡೆ ಮಾಣ್ದಿರ್ಪನೇ = ಸುಮ್ಮನಿದ್ದುಬಿಡುವನೇ? ಮುನ್ನಂ = ಆ ಮೊದಲೇ, ನಿಶ್ಚಯಿಸಿ ತನುವನಿನ್ನೊಪ್ಪುಗೊಳ್ = ದೇಹವನ್ನು ಅವನಿಗೆ ಇನ್ನು ಒಪ್ಪಿಸಿಕೊಡುವುದಕ್ಕೆ ನಿಶ್ಚೈಸು ಎಂಬ, ನಿನ್ನ ವಾಕ್ಯಂ = ನಿನ್ನ ಮಾತುಗಳು, ಇನ್ನುಂ ಕರಣೀಯಂ = ಇನ್ನು ನನಗೆ ಅನುಕರಣೀಯ, ನಿಜಮತಮೆ ಮತಂ = ನಿನ್ನ ಅಭಿಪ್ರಾಯವೇ ಸರಿಯಾದುದು, ಮೆಚ್ಚಿದಂತೆ = ನೀನು ಇಷ್ಟಪಟ್ಟಂತೆ, ಎನ್ನನ್ ಈ ಸಂಸರಣ + ಅಂಭೋರಾಶಿಯಿಂದಂ = ನನ್ನನ್ನು ಈ ಸಂಸಾರವೆಂಬ ಸಾಗರದಿಂದ, ಪೋಱಮಡಿಸು = ಹೊರಗೆಳೆ; ಎನಗಿಂ ನೀನೆ ಹಸ್ತಾವಲಂಬಂ = ನನಗೆ ನಿನ್ನ ಕೈಗಳೇ ಆಧಾರ

**ಗದ್ಯಾನುಸರಣ:** 'ಮುಪ್ಪು ಬಂದು ಕವಿದಿದ್ದರೂ ನಿಲ್ಲದ ಆಸೆಯೇ ಸಾಲದೇ? ಯಮನು ಸುಮ್ಮನಿದ್ದುಬಿಡುವನೇ? ಅದಕ್ಕೆ ಮೊದಲೇ, ನಿನ್ನ ದೇಹವನ್ನು ಅವನಿಗೆ ಇನ್ನು ಒಪ್ಪಿಸಿಕೊಡುವುದಕ್ಕೆ ನಿಶ್ಚೈಸು' ಎಂಬ ನಿನ್ನ ಮಾತುಗಳು ಇನ್ನು ನನಗೆ ಅನುಕರಣೀಯ; ನಿನ್ನ ಅಭಿಪ್ರಾಯವೇ ಸರಿಯಾದುದು, ನೀನು ಇಷ್ಟಪಟ್ಟಂತೆ ನನ್ನನ್ನು ಈ ಸಂಸಾರವೆಂಬ ಸಾಗರದಿಂದ ಹೊರಗೆಳದು ಪಾರುಮಾಡು, ನಿನ್ನ ಕೈಗಳೆ ನನಗೆ ಆಧಾರ.

**ವಿಶೇಷ ವಿಚಾರ:** ಈ ಮೇಲಿನ ನಾಲ್ಕು ಪದ್ಯಗಳಲ್ಲಿನ ವಿವರಗಳೆಲ್ಲ ಪಂಪನವೇ; ಮೂಲದಲ್ಲಿ ಎರಡು ಶ್ಲೋಕಗಳು ಮಾತ್ರ ಇವೆ: ಪೂಪು. ೫. ೨೨೫-೨೬.

ಪಂಪನಿಗೆ ಶಾಸ್ತ್ರಗಳಲ್ಲಿರುವ ವಿದ್ವತ್ ಸಾಮರ್ಥ್ಯವನ್ನು ಈ ಪದ್ಯಗಳು ಹೇಳುತ್ತವೆ; ಅನುಭವ ಮತ್ತು ಆಧ್ಯಾತ್ಮಪ್ರವೇಶ ಎರಡೂ ಕೂಡಿಕೊಂಡೇ ಇಂತಹ ಅಭಿವ್ಯಕ್ತಿ ಸಾಧ್ಯವಾಗಿದೆ.

**ವ॥ ಎಂದು ಪರಿಚ್ಛೇದಿಸಿ ಮನಮಱಿಯೆ ನುಡಿದು ನಿಜಗೃಹೋದ್ಯಾನದ ಜಿನಭವನ ದೊಳೆಂಟುದಿವಸಂಬರಂ ಮಹಾಮಹಮೆಂಬ ಜಿನಮಹಿಮೆಯಂ ಮಹಾವಿಭೂತಿಯಿಂ ಮಹಾಬಳಂ ಮಾಡಿದಿಂಬೞಿಯಂ ನಿಜಾಪ್ತವರ್ಗ ಮುಮಂ ಸಾಮಂತವರ್ಗಮುಮಂ ಬರಿಸಿ ಕವಚಹರನಾದ ನಿಜಸುತನತಿಬಳ ಕುಮಾರನಂ ರಾಜ್ಯಭಾರದೊಳ್ ನಿಱಿಸಿ,**

**ಪದವಿಭಾಗ-ಅನ್ವಯ-ಅರ್ಥ:** ಎಂದು ಪರಿಚ್ಛೇದಿಸಿ = ಎಂದು ನಿರ್ಧಾರ ಮಾಡಿ, ಮನಮಱಿಯೆ ನುಡಿದು = ಮನಸ್ಸಿಗೆ ಮುಟ್ಟುವಂತೆ ಹೇಳಿ, ನಿಜಗೃಹೋದ್ಯಾನದ = ತನ್ನ ಅರಮನೆಯ ಉದ್ಯಾನವನದಲ್ಲಿದ್ದ, ಜಿನಭವನದೊಳ್ = ಜಿನಾಲಯದಲ್ಲಿ, ಎಂಟುದಿವಸಂಬರಂ = ಎಂಟು ದಿವಸಗಳ ಕಾಲ, ಮಹಾಮಹಮೆಂಬ ಜಿನಮಹಿಮೆಯುಂ = ಮಹಾಮಹವೆನ್ನುವ ಜಿನನ ಮಹಿಮಾವ್ರತವನ್ನು, ಮಹಾವಿಭೂತಿಯಿಂ = ಮಹಾ ವೈಭವದಿಂದ, ಮಾಡಿದ + ಇಂಬಱಿಯಂ = ನೆರವೇರಿಸಿದ ಮೇಲೆ, ಮಹಾಬಳಂ ಮಹಾಬಲನು, ನಿಜಾಪ್ತವರ್ಗಮುಮಂ = ತನ್ನ ಆಪ್ತಸಮೂಹವನ್ನೂ, ಸಾಮಂತವರ್ಗಮುಮಂ = ಸಾಮಂತಸಮೂಹವನ್ನೂ, ಬರಿಸಿ = ಕರೆಸಿಕೊಂಡು, ಕವಚಹರನಾದ ನಿಜಸುತನ್ = ಕೌಮಾರ್ಯವನ್ನು ಕಳೆದವನಾದ (ಪ್ರಾಪ್ತವಯಸ್ಕನಾಗಿದ್ದ) ಅತಿಬಳಕುಮಾರನಂ = ಅತಿಬಳಕುಮಾರನನ್ನು, ರಾಜ್ಯಭಾರದೊಳ್ ನಿಱಿಸಿ = ರಾಜ್ಯದ ಪಟ್ಟದಲ್ಲಿ ಕೂರಿಸಿ(ದನು).

**ಗದ್ಯಾನುಸರಣ:** ಎಂದು ನಿರ್ಧಾರ ಮಾಡಿ ಮನಮುಟ್ಟುವಂತೆ ಹೇಳಿ, ತನ್ನ ಅರಮನೆಯ ಉದ್ಯಾನವನದಲ್ಲಿದ್ದ ಜಿನಾಲಯದಲ್ಲಿ, ಎಂಟು ದಿವಸಗಳ ಕಾಲ ಮಹಾಮಹವೆನ್ನುವ ಜಿನನ ಮಹಿಮಾವ್ರತವನ್ನು ಮಹಾ ವೈಭವದಿಂದ ನೆರವೇರಿಸಿದ ಮೇಲೆ, ಮಹಾಬಲನು ತನ್ನ ಆಪ್ತಸಮೂಹವನ್ನೂ ಸಾಮಂತಸಮೂಹವನ್ನೂ ಕರೆಸಿಕೊಂಡು ಕೌಮಾರ್ಯವನ್ನು ಮುಗಿಸಿ ಪ್ರಾಪ್ತವಯಸ್ಕನಾಗಿದ್ದ ತನ್ನ ಮಗ ಅತಿಬಳಕುಮಾರನನ್ನು ಪಟ್ಟದಲ್ಲಿ ಕೂರಿಸಿದ.

**ವಿಶೇಷ ವಿಚಾರ:** ಮಹಾಮಹ ಎಂಬುದು ಮಹಾರಾಜನು ಚತುರ್ಮುಖಮಂಟಪದಲ್ಲಿ ಮಾಡುವ ಜಿನಪೂಜೆ; ಕಲ್ಪದ್ರುಮ, ಚತುರ್ಮುಖ, ಸರ್ವತೋಭದ್ರ, ಇಂದ್ರಧ್ವಜ, ಅಷ್ಟಾಹ್ನಿಕ, ಬಲಿ, ಸವನ, ತ್ರಿಸಂಧ್ಯಾಸೇವೆ ಎಂಬ ಎಂಟು ಬಗೆಯ ಪೂಜೆಗಳು ಸೇರಿದ ಪೂಜೆ.

**ಒಡವಳೆದಂಬರೇಚರರನನ್ವಿತಮಂತ್ರಿಸಮೂಹಮಂ ಮನಂ**
**ಬಿಡೆ ಪೊರೆದಿಷ್ಟಬಂಧುಜನಮಂ ಕರೆದೆಲ್ಲರುಮೀ ಕುಮಾರನಂ**
**ಪಿಡಿದಿರಿಮೆನ್ನ ಪಂಬಲನಿದಂ ಬಿಸುಡಿಂ ಬಿಡಿಮೆಂದು ಖೇಚರಂ**
**ಬಿಡಿಸಿದನಾಪ್ತರಂ ಬಿಡಿಸುವಂತಿರೆ ಮೋಹದ ಬಳ್ಳವಳ್ಳಿಯುಂ ೫೦**

**ಪದವಿಭಾಗ-ಅನ್ವಯ-ಅರ್ಥ:** ಒಡವಳೆದ = ಜೊತೆಯಲ್ಲಿ ಬೆಳೆದಿದ್ದ, ಅಂಬರೇಚರರನ್ = ಖಚರರನ್ನೂ, ಅನ್ವಿತಮಂತ್ರಿಸಮೂಹಮಂ = ಜೊತೆಗೂಡಿದ್ದ ಮಂತ್ರಿಗಳ ಗುಂಪನ್ನೂ, ಮನಂಬಿಡೆ ಪೊರೆದು = ಮನಮೆಚ್ಚುವಂತೆ ಸನ್ಮಾನಿಸಿ, ಇಷ್ಟಬಂಧುಜನಮಂ = ಆಪ್ತೇಷ್ಟರನ್ನೆಲ್ಲ ಕರೆದು, ಎಲ್ಲರುಂ = ನೀವೆಲ್ಲರೂ, ಈ

ಕುಮಾರನಂ ಪಿಡಿದಿರಿಂ = ಈ ನನ್ನ ಮಗನನ್ನು ಕೈಹಿಡಿದು ನಡೆಸಿರಿ, ಎನ್ನ ಪಂಬಲನಿದಂ ಬಿಸುಡಿಂ ಬಿಡಿಂ = ನನ್ನ ಬಗೆಗಿನ ವಾಂಛೆಯನ್ನು ಇನ್ನು ಬಿಟ್ಟುಬಿಡಿರಿ, ಎಂದು, ಖೇಚರಂ, ಮೋಹದ ಬಳ್ಳವಳ್ಳಿಯಂ = ಆವರಿಸಿದ್ದ ಮೋಹವೆಂಬ ಬಳ್ಳಿಯಿಂದ, ಬಿಡಿಸುವಂತಿರೆ = ಬಿಡಿಸುವ ಹಾಗೆ, ಆಪ್ತರಂ = ಬಂಧುಗಳನ್ನು (ಮೋಹದಿಂದ) ಬಿಡಿಸಿದಂ = ಬಿಡಿಸಿದನು.

**ಗದ್ಯಾನುಸರಣ:** ಜೊತೆಯಲ್ಲಿ ಬೆಳೆದಿದ್ದ ಖಚರರನ್ನೂ, ಸೇರಿದ್ದ ಮಂತ್ರಿಗಳ ಗುಂಪನ್ನೂ ಸನ್ಮಾನಿಸಿದ; ಆಪ್ತೇಷ್ಟರನ್ನೆಲ್ಲ ಕರೆದು, 'ನೀವೆಲ್ಲರೂ ಈ ನನ್ನ ಮಗನನ್ನು ಕೈಹಿಡಿದು ನಡೆಸಿರಿ, ನನ್ನ ಬಗೆಗಿನ ವಾಂಛೆಯನ್ನು ಇನ್ನು ಬಿಟ್ಟುಬಿಡಿ' ಎಂದು ನುಡಿದು, ತೊಡರುಗಾಲಾಗಿದ್ದ ಮೋಹವೆಂಬ ಬಳ್ಳಿಯಿಂದ ಬಿಡಿಸಿಕೊಳ್ಳುವವನಂತೆ ಬಂಧುಗಳ ಮೋಹವನ್ನು ತೊರೆದ.

**ವ। ಅಂತು ನಿಜಾಪ್ತವರ್ಗಮುಮಂ ಬಂಧುವರ್ಗಮುಮಂ ವಿದ್ಯೆಗಳುಮಂ ಬಿಡಿಸಿ ವಿದ್ಯಾಧರಪ್ರಸಾಧನವೆನಗಿಂದಿನೊಳಿನಿತೆಂಬಂತೆ ನೆಱಿಯೆ ಕೈಗೆಯ್ದು ಮಣಿಮಯ ಶಿಬಿಕಾರೂಢನಾಗಿ ಪೊೞಲಂ ಪೊಱ ಮಟ್ಟನೇಕಹಾಟಕಕೂಟ ಕೋಟಿಘಟಿತ ಸಿದ್ಧಕೂಟಮಂ ತ್ರಿಪ್ರದಕ್ಷಿಣಂ ಗೈದು ಜಿನೇಂದ್ರಾರ್ಚನಪುರಸ್ಸರಂ ವಾಚನಾಗ್ರಹಣಸಮೇತ ಮಾರಾಧನೆ ಯಿನರ್ಚಿಸಿ ವೀರಸಂಸ್ತರಾರೂಢನಾದಾಗಳ್,**

**ಪದವಿಭಾಗ-ಅನ್ವಯ-ಅರ್ಥ:** ಅಂತು = ಆ ರೀತಿಯಲ್ಲಿ, ನಿಜ + ಆಪ್ತವರ್ಗಮುಮಂ = ತನ್ನ ಆತ್ಮೀಯರನ್ನೂ, ಬಂಧುವರ್ಗಮುಮಂ = ನೆಂಟರಿಷ್ಟರನ್ನೂ, ವಿದ್ಯೆಗಳುಮಂ = ತನ್ನ ಇದುವರೆಗಿನ ಕಲಿಕೆಗಳನ್ನೂ, ಬಿಡಿಸಿ = ಬಿಟ್ಟು, ನೆಱಿಯೆ ಕೈಗೆಯ್ದು = (ಕರ್ತವ್ಯಗಳನ್ನು) ನೆರವೇರಿಸಿ, ಮಣಿಮಯಶಿಬಿಕಾ + ಆರೂಢನಾಗಿ = ಮಣಿಮಯವಾದ ಪಲ್ಲಕ್ಕಿಯಲ್ಲಿ ಕುಳಿತು, ಪೊೞಲಂ ಪೊಱಮಟ್ಟು = ನಗರದಿಂದ ಹೊರಹೊರಟು, ಅನೇಕ, ಹಾಟಕಕೂಟಕೋಟಿಘಟಿತ = ಚಿನ್ನದ ಗೋಪುರಗಳಿಂದ ಕೂಡಿದ್ದ, ಸಿದ್ಧಕೂಟಮಂ = ಸಿದ್ಧಕೂಟದ ಸುತ್ತ, ತ್ರಿಪ್ರದಕ್ಷಿಣಂಗೈದು = ಮೂರು ಬಾರಿ ಪ್ರದಕ್ಷಿಣೆಗೈದು, ಜಿನೇಂದ್ರಾರ್ಚನಪುರಸ್ಸರಂ = ಜಿನನ ಪೂಜೆಯಿಂದ ಕೂಡಿದ, ವಾಚನಾಗ್ರಹಣಸಮೇತಂ = ಹೇಳಿದುದನ್ನು ಅರ್ಥಮಾಡಿಕೊಳ್ಳುವ ಕ್ರಮದಿಂದ ಕೂಡಿದ, ಆರಾಧನೆಯಿನರ್ಚಿಸಿ = ಆರಾಧನೆಯನ್ನು ಮಾಡಿ, ವಿದ್ಯಾಧರಪ್ರಸಾಧನಂ = ವಿದ್ಯಾಧರವೈಭವವು, ಎನಗೆ + ಇಂದಿನೊಳ್ + ಇನಿತೆ = ಇನ್ನು ಮೇಲೆ ನನಗೆ ಇಷ್ಟೇ, ಎಂಬಂತೆ = ಎಂಬ ರೀತಿಯಲ್ಲಿ, ವೀರಸಂಸ್ತರ + ಆರೂಢನಾದಾಗಳ್ = ವೀರಶಯ್ಯೆಯಲ್ಲಿ ಮಲಗಿದನು

**ಗದ್ಯಾನುಸರಣ:** ಆ ರೀತಿಯಲ್ಲಿ ತನ್ನ ಆತ್ಮೀಯರನ್ನೂ ನೆಂಟರಿಷ್ಟರನ್ನೂ ತನ್ನ ಇದುವರೆಗಿನ ಕಲಿಕೆಗಳನ್ನೂ ಬಿಟ್ಟು ಮಣಿಮಯವಾದ ಪಲ್ಲಕ್ಕಿಯಲ್ಲಿ ಕುಳಿತು ನಗರದಿಂದ ಹೊರಹೊರಟು ನಾನಾ ಚಿನ್ನದ ಗೋಪುರಗಳಿಂದ ಕೂಡಿದ್ದ ಸಿದ್ಧಕೂಟದ ಸುತ್ತ ಮೂರು ಬಾರಿ ಪ್ರದಕ್ಷಿಣೆ ಬಂದು ಹೇಳಿದುದನ್ನು ಅರ್ಥಮಾಡಿಕೊಳ್ಳುವ ಕ್ರಮದಿಂದ ಕೂಡಿದ ಆರಾಧನೆಯನ್ನು ಮಾಡಿ, ಇನ್ನು ಮೇಲೆ ನನಗೆ ವಿದ್ಯಾಧರವೈಭವವೆಂದರೆ ಇಷ್ಟೇ ಎನ್ನುವ ಹಾಗೆ ವೀರಶಯ್ಯೆಯಲ್ಲಿ ಮಲಗಿದ.

**ವಿಶೇಷ ವಿಚಾರ:** ಸಿದ್ಧಕೂಟ ಎಂದರೆ ಸಿದ್ಧಕ್ಷೇತ್ರ, ಸಿದ್ಧರು ನೆಲೆಸಿರುವ ಸ್ಥಳ; ಸೇವೆ, ಪೂಜೆ, ಆದರಣೆ ಮತ್ತು ತಪ್ಪಸ್ಸಾಧನೆಗಳಿಂದ ಕೂಡಿದುದು ಆರಾಧನೆ; ಸಲ್ಲೇಖನವ್ರತಧಾರಿಯಾಗಿ ಆಹಾರವನ್ನು ತೊರೆದು ಒಂದೇ ಮಗ್ಗುಲಿನಲ್ಲಿ ಮಲಗಿ ಸಾವನ್ನು ಬರಮಾಡಿಕೊಳ್ಳುವ ಕ್ರಮವೇ ವೀರಸಂಸ್ತರ

**ಅರಸರ ಮಚ್ಚು ತಮ್ಮ ಮನದೊಳ್ ನಿಲೆ ಸೈರಿಸದಂತನಿತ್ಯಮೀ**
**ನರರ ವಿಭೂತಿಯೆಂಬ ಬಗೆ ಬಂದಿರೆ ಮಾಣದೆ ತಮ್ಮ ತಮ್ಮ ಪು**
**ತ್ರರನಭಿಯೋಗದಿಂದತಿಬಳಂಗೆ ನಿಯೋಜಿಸಿ ಪೂಣ್ದರಂಬರೇ**
**ಚರಿಯರುಮಂಬರೇಚರರುಣ್ಮಳವಟ್ಟಿರೆ ಜೈನದೀಕ್ಷೆಯಂ ೫೧**

**ಪದವಿಭಾಗ–ಅನ್ವಯ–ಅರ್ಥ:** ಅರಸರ ಮಚ್ಚು = ರಾಜನ ಒಲವು ಎಂತಹುದೆಂಬುದು, ತಮ್ಮ ಮನದೊಳ್ ನಿಲೆ = ತಮ್ಮ ಮನಸ್ಸಿನಲ್ಲಿ ಮನವರಿಕೆಯಾಗಲು, ಈ ನರರ ವಿಭೂತಿ = ಮಾನವರ ವೈಭವವೆಂಬುದು ಸೈರಿಸದಂತೆ + ಅನಿತ್ಯಂ = ಸಹಿಸಲಾರದಷ್ಟು ನಶ್ವರವಾದುದು, ಎಂಬ ಬಗೆ ಬಂದಿರೆ = ಎಂಬ ವಿಷಯವು ಮನದಟ್ಟಾಗಿರಲು, ಮಾಣದೆ = ಸುಮ್ಮನಿರದೆ, ತಮ್ಮ ತಮ್ಮ ಪುತ್ರರನ್ = ತಮ್ಮ ಮಕ್ಕಳನ್ನು ಅತಿಬಳಂಗೆ = ಅತಿಬಲನಿಗೆ, ಅತಿ ಅಭಿಯೋಗದಿಂದ ನಿಯೋಜಿಸಿ = ಒತ್ತಾಯಪೂರ್ವಕವಾಗಿ ಒಪ್ಪಿಸಿಕೊಟ್ಟು, (ಅನೇಕ ಮಂದಿ) ಅಂಬರೇಚರಿಯರುಂ + ಅಂಬರೇಚರರುಂ = ಖೇಚರಖೇಚರಿಯರು, ಅಣ್ಮು + ಅಳವಟ್ಟಿರೆ = ಸ್ವಯಮೇಚ್ಛೆಯಿಂದ, ಜೈನದೀಕ್ಷೆಯಂ = ಜೈನ ಸನ್ಯಾಸದೀಕ್ಷೆಯನ್ನು, ಪೂಣ್ದರ್ = ಕೈಗೊಂಡರು.

**ಗದ್ಯಾನುಸರಣ:** ರಾಜನ ನಿಶ್ಚಯ ಎಂತಹುದೆಂಬುದು ತಮ್ಮ ಮನಸ್ಸಿಗೆ ಮನವರಿಕೆಯಾಗಿ, ಮಾನವರ ವೈಭವವೆಂಬುದು ತೀರ ನಶ್ವರವಾದುದು ಎಂದು ಮನದಟ್ಟಾಗಿರಲು, ಅತಿಬಲನಿಗೆ ಒತ್ತಾಯಪೂರ್ವಕವಾಗಿ ತಮ್ಮ ಮಕ್ಕಳ ಜವಾಬುದಾರಿಯನ್ನು ಒಪ್ಪಿಸಿಕೊಟ್ಟು, ಅನೇಕ ಮಂದಿ ಖೇಚರಖೇಚರಿಯರೂ ಸ್ವಯಮೇಚ್ಛೆಯಿಂದ ಜೈನ ಸನ್ಯಾಸದೀಕ್ಷೆಯನ್ನು ಕೈಗೊಂಡರು.

**ವ ಆಗಳಾ ಸ್ವಯಂಬುದ್ಧಂ ನಿರ್ಯಾಪಕಾಚಾರ್ಯನಾಗಿ ಪಂಚಗುರು ಸಮಕ್ಷಮದೊಳ್ ಬಾಹ್ಯಾಭ್ಯಂತರಪರಿಗ್ರಹ ತ್ಯಾಗಮುರಸ್ಸರಂ ವೀರಸಂಸ್ತರಾ ರೂಢನಂ ಮಹಾಬಳನಂ ಜಾತರೂಪಧರನಂ ಮಾಡಿ ಚತುರ್ವಿಧಾಹಾರ ಶರೀರಪ್ರತ್ಯಾಖ್ಯಾನಮಂ ಕೊಟ್ಟು**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ + ಆ ಸ್ವಯಂಬುದ್ಧಂ = ಆಗ ಸ್ವಯಂಬುದ್ಧನು, ನಿರ್ಯಾಪಕಾಚಾರ್ಯನಾಗಿ, ಪಂಚಗುರುಸಮಕ್ಷಮದೊಳ್ = ಪಂಚಪರಮೇಷ್ಠಿಗಳ ಎದುರಿನಲ್ಲಿ, ಬಾಹ್ಯ + ಅಭ್ಯಂತರಪರಿಗ್ರಹತ್ಯಾಗಪುರಸ್ಸರಂ = ಹೊರಗಿನ ಮತ್ತು ಒಳಗಿನ ವಸ್ತುಗಳ ಬಗೆಗಿನ ಮೋಹವನ್ನು ತೊರೆದು, ವೀರಸಂಸ್ತರಾರೂಢನಂ ಮಹಾಬಳನಂ = ವೀರಶಯ್ಯೆಯಲ್ಲಿ ಮಲಗಿದ್ದ ಮಹಾಬಲನನ್ನು, ಜಾತರೂಪಧರನಂ ಮಾಡಿ = ದಿಗಂಬರನನ್ನಾಗಿಸಿ, ಚತುರ್ವಿಧಾಹಾರ = ನಾಲ್ಕು ಬಗೆಯ ಆಹಾರಗಳನ್ನೂ, ಶರೀರ = ಶರೀರದ (ಮೋಹವನ್ನೂ) ಪ್ರತ್ಯಾಖ್ಯಾನಮಂ = ತೊರೆಯುವ ವ್ರತವನ್ನು, ಕೊಟ್ಟು,

**ಗದ್ಯಾನುಸರಣ:** ಆಗ ಸ್ವಯಂಬುದ್ಧನು ತಾನೇ ನಿರ್ಯಾಪಕಾಚಾರ್ಯನಾಗಿ ನಿಂತು ಪಂಚಪರಮೇಷ್ಠಿಗಳ ಸಾಕ್ಷಿಯಾಗಿ ಹೊರಗಿನ ಮತ್ತು ಒಳಗಿನ ಮೋಹವನ್ನು ತೊರೆದು ವೀರಶಯ್ಯೆಯಲ್ಲಿ ಮಲಗಿದ್ದ ಮಹಾಬಲನನ್ನು ದಿಗಂಬರನನ್ನಾಗಿಸಿದ; ನಾಲ್ಕು ಬಗೆಯ ಆಹಾರಗಳನ್ನೂ ಶರೀರದ ಮೋಹವನ್ನೂ ತೊರೆಯುವ ವ್ರತವನ್ನು ನೀಡಿದ.

**ವಿಶೇಷ ವಿಚಾರ:** ನಿರ್ಯಾಪಕಾಚಾರ್ಯ ಎಂದರೆ ಸಲ್ಲೇಖವ್ರತವನ್ನು ಬೋಧಿಸುವ ಗುರು; ಪಂಚಪರಮೇಷ್ಠಿಗಳೆಂದರೆ ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧುಗಳು. ಜಾತರೂಪಧರ ಎಂದರೆ ಹುಟ್ಟಿದ ಸ್ಥಿತಿಯನ್ನೇ ಪಡೆಯುವುದು ಎಂದರೆ ದಿಗಂಬರತ್ವವನ್ನು ಹೊಂದುವುದು

**ತನ್ನಿಂದಂ ಪೆಱರಿಂದಂ**
**ತನ್ನಂ ಸಾವಗಿಸುವಾಸೆಯಿಲ್ಲದೆ ದೇಹೋ**
**ತ್ಪನ್ನಪರೀಷಹಸಂಹತಿ**
**ತನ್ನೊಡಲಂ ನೆಱೆಯೆ ತವಿಸುತಿರ್ಪುದುಮತ್ತಂ ೫೨**

**ಪದವಿಭಾಗ–ಅನ್ವಯ–ಅರ್ಥ**: ತನ್ನಿಂದಂ = ತನ್ನಿಂದಾಗಲೀ, ಪೆಱರಿಂದಂ = ಬೇರೆಯವರಿಂದಾಗಲೀ, ತನ್ನಂ = ತನ್ನನ್ನು, ಸಾವಗಿಸುವ + ಆಸೆಯಿಲ್ಲದೆ = ಸಾಂತ್ವನಗೊಳಿಸುವ ನಿರೀಕ್ಷೆಯಿಟ್ಟುಕೊಳ್ಳದೆ, ದೇಹ + ಉತ್ಪನ್ನ = ತನ್ನ ದೇಹದಲ್ಲಿ ಉಂಟಾಗುವ, ಪರೀಷಹಸಂಹತಿ = ಪರೀಷಹಸಮೂಹವು, ತನ್ನ + ಒಡಲಂ

ನೆಱೆಯೆ = ತನ್ನ ದೇಹವನ್ನು ಬಹುವಾಗಿ, ತವಿಸುತ + ಇರ್ಪುದುಂ = ಕ್ಷಯಿಸುತ್ತಿದ್ದರೂ, ಅತ್ತಂ = ಆ ಕಡೆ

**ಗದ್ಯಾನುಸರಣ:** ತನ್ನಿಂದಾಗಲೀ ಬೇರೆಯುವರಿಂದಾಗಲೀ ತನ್ನನ್ನು ಉಪಚರಿಸುವ ಪ್ರಯತ್ನ ಮಾಡದೆ, ತನ್ನ ದೇಹದಲ್ಲಿ ಉಂಟಾಗುವ, ಪರೀಷಹಗಳು ತನ್ನ ದೇಹವನ್ನು ಬಹುವಾಗಿ ಕೃಶಗೊಳಿಸುತ್ತಿತ್ತು.

**ಆಯಿರ್ದ ಮಾಟ್ಕೆಯೊಳ್ ಪರ**
**ಮಾಯುಷ್ಯಾಂತಂಬರಂ ನಿರಾಕುಳಮಾಗಿ**
**ರ್ಪಾಯಿರವಿನ ಜೈನಾಭಿ**
**ಪ್ರಾಯಂ ಪ್ರಾಯೋಪಗಮನದಿಂ ತೊರೆಯಿಸಿದಂ ೫೩**

**ಪದವಿಭಾಗ-ಅನ್ವಯ-ಅರ್ಥ:** ಆ + ಇರ್ದ ಮಾಟ್ಕೆಯೊಳ್ = ಹಾಗಿದ್ದ ರೀತಿಯಲ್ಲಿಯೇ, ಪರಮ + ಆಯುಷ್ಯಾಂತಂಬರಂ = ಆಯುಸ್ಸಿನ ಕೊನೆಯನ್ನು ತಲುಪಬೇಕೆಂಬ, ನಿರಾಕುಳಮಾಗಿರ್ಪ = ಯೋಚನೆಯಿಲ್ಲದೆ ಇರಬೇಕೆಂಬ, ಆ + ಇರವಿನ = ಬದುಕಿನ ಬಗೆಗಿನ, ಜೈನಾಭಿಪ್ರಾಯಂ = ಜೈನಮತಾನುಸಾರಿಯಾದ ಆದರ್ಶದಿಂದ, ಪ್ರಾಯೋಪಗಮನದಿಂ = ಪ್ರಾಯೋಪಗಮನ ಕ್ರಮದಿಂದ, (ಪರೀಷಹಗಳನ್ನು) ತೊರೆಯಿಸಿದಂ = ಹೋಗಲಾಡಿಸಿಕೊಂಡ.
**ಗದ್ಯಾನುಸರಣ:** ಇದೇ ರೀತಿಯಲ್ಲಿಯೇ ಸಾಯುವವರೆಗೂ ಬದುಕಬೇಕು, ಯೋಚನೆಯಿಲ್ಲದೆ ಇರಬೇಕು - ಎಂಬ ಬದುಕಿನ ಬಗೆಗಿನ ಜೈನಮತಾನುಸಾರಿಯಾದ ಆದರ್ಶದಿಂದಾಗಿ, ಮಹಾಬಲನು ಪ್ರಾಯೋಪಗಮನ ಕ್ರಮದಿಂದಲೇ ಪರೀಷಹಗಳನ್ನು ಕಳೆದುಕೊಂಡ.

**ವ॥ ಅಂತು ತೊರೆಯಿಸಿ**

**ಅರ್ಥ:** ಅಂತು ತೊರೆಯಿಸಿ = ಹಾಗೆ ನೀಗಿಕೊಂಡು

**ಮಂಗಳಕಾರಣಪಂಚಪ**
**ದಂಗಳನಪವರ್ಗಮಾರ್ಗವಿರಚಿತಸೋಪಾ**
**ನಂಗಳನಕ್ಷಯಮಂತ್ರಪ**
**ದಂಗಳನೋದುವುದು ನೆಱೆಯೆ ನಿಶ್ಚಳಮತಿಯಿಂ ೫೪**

**ಪದವಿಭಾಗ-ಅನ್ವಯ-ಅರ್ಥ:** ಮಂಗಳಕಾರಣ = ಶುಭಕ್ಕೆ ಕಾರಣವಾದ, ಅಪವರ್ಗಮಾರ್ಗ = ಮೋಕ್ಷದ ಹಾದಿಯಲ್ಲಿ, ವಿರಚಿತ = ನಿರ್ಮಿಸಿರುವ

ಸೋಪಾನಂಗಳನ್ = ಮೆಟ್ಟಿಲುಗಳಾದ, ಅಕ್ಷಯಮಂತ್ರಪದಂಗಳನ್ = ಕೊನೆಯಿರದ ಸಾಮರ್ಥ್ಯವಿರುವ ಮಂತ್ರಗಳಾದ, ಪಂಚಪದಂಗಳನ್ = ಪಂಚನಮಸ್ಕಾರಗಳನ್ನು, ನಿಶ್ಚಳಮತಿಯಿಂ = ಒಂದೇ ಮನಸ್ಸಿನಿಂದ, ನೆಱೆಯೆ ಓದುವುದು = ಧ್ಯಾನಿಸಬೇಕು

**ಗದ್ಯಾನುಸರಣ:** ಶುಭಕ್ಕೆ ಕಾರಣವಾದುದೂ, ಮೋಕ್ಷದ ಹಾದಿಯಲ್ಲಿ ನಿರ್ಮಿಸಿರುವ ಮೆಟ್ಟಿಲುಗಳೂ, ಕೊನೆಯಿರದ ಸಾಮರ್ಥ್ಯವಿರುವ ಮಂತ್ರಗಳೂ ಆದ ಪಂಚನಮಸ್ಕಾರಗಳನ್ನು ಒಂದೇ ಮನಸ್ಸಿನಿಂದ ಧ್ಯಾನಿಸಿದ.

**ವಿಶೇಷ ವಿಚಾರ:** ಪಂಚಪದ = ಪಂಚನಮಸ್ಕಾರಗಳು.

**ಅವನೋದುವನಿತು ಬುದ್ಧಿಯೆ**
**ತವುತಂದೊಡೆ ಪಂಚಪದದ ನಾಮಾಕ್ಷರಮಂ**
**ಧ್ರುವಮೋದುವುದವು ತೊಡರ್ವುದು**
**ಮವಶ್ಯಮೋದಲಸದವಱ ಮೊದಲಕ್ಕರಮಂ** ೫೫

**ಪದವಿಭಾಗ–ಅನ್ವಯ–ಅರ್ಥ:** ಅವನ್ = ಪಂಚಮಂತ್ರಗಳನ್ನು, ಓದುವನಿತು = ಧ್ಯಾನಿಸುವಷ್ಟು, ಬುದ್ಧಿಯೆ = ಶಕ್ತಿಯು, ತವುತಂದೊಡೆ = (?ತವುತರ್=ಬರಿದಾಗು) ಕಡಿಮೆಯಾದರೆ, ಪಂಚಪದದ = ಪಂಚಪರಮೇಷ್ಠಿಗಳ, ನಾಮಾಕ್ಷರಮಂ = ಹೆಸರುಗಳನ್ನಾದರೂ, ಓದುವುದು = ಜಪಿಸಬೇಕು; (ಅದೂ ಸಾಧ್ಯವಾಗದಿದ್ದರೆ) ಅಲಸದೆ = ಆಲಸ್ಯಪಡದೆ, ಧ್ರುವಂ = ನಿಶ್ಚಲವಾಗಿ, ಅವಱ ಮೊದಲಕ್ಕರಮಂ = ಪರಮೇಷ್ಠಿಗಳ ಮೊದಲಕ್ಷರಗಳನ್ನಾದರೂ – ಅ ಸಿ ಆ ಉ ಸಾ – ಓದು = ಜಪಿಸು ತೊಡರ್ವುದುಂ = ತೊಡಗುವುದು, ಅವಶ್ಯಂ = ಆವಶ್ಯಕ

**ಗದ್ಯಾನುಸರಣ:** 'ಪಂಚಮಂತ್ರಗಳನ್ನು ಧ್ಯಾನಿಸಲಾಗವಷ್ಟು ಶಕ್ತಿಯು ಕಡಿಮೆಯಾದರೆ, ಪಂಚಪರಮೇಷ್ಠಿಗಳ ಹೆಸರುಗಳನ್ನಾದರೂ ಜಪಿಸಬೇಕು; ಅದೂ ಸಾಧ್ಯವಾಗದಿದ್ದರೆ ಆಲಸ್ಯಪಡದೆ ನಿಶ್ಚಲವಾಗಿ ಪರಮೇಷ್ಠಿಗಳ ಮೊದಲಕ್ಷರಗಳನ್ನಾದರೂ ಜಪಿಸುವುದು ಆವಶ್ಯಕ.'

**ಅದು ತಡತಡಾದೊಡರ್ಹ**
**ತ್ವದಮಂ ನಾಲಗೆಗೆ ತರ್ಪುದದು ಬಾರದೊಡಿ**
**ಪರ್ದಕಾರಮೊಂದಱೊಳ್ ಮ**
**ತ್ತದು ತೊಡರ್ದೊಡೆ ತೊಡರದಿರ್ ಬೞಿಕ್ಕೇತಱೊಳಂ** ೫೬

**ಪದವಿಭಾಗ–ಅನ್ವಯ–ಅರ್ಥ:** ಅದು = ಪರಮೇಷ್ಠಿಗಳ ಮೊದಲಕ್ಷರಗಳನ್ನು ಪಠಿಸುವುದೂ, ತಡತಡಾದೊಡೆ = ತಡವರಿಸುವ ಹಾಗಾದರೆ, ಅರ್ಹತ್ವದಮಂ

ನಾಲಗೆಗೆ ತರ್ಪುದು = ಅರ್ಹಂತನ ಹೆಸರನ್ನು ನಾಲಗೆಯ ಮೇಲೆ ತಂದುಕೊಳ್ಳಬೇಕು; ಅದು ಬಾರದೊಡೆ = ಅದೂ ಕಷ್ಟವಾದರೆ, ಅಕಾರಮೊಂದಱೊಳ್ = ಅಕಾರದಲ್ಲಿಯೇ, ಇರ್ಪುದು = ನಾಲಗೆಯ ಮೇಲಿರಲಿ, ಮತ್ತದು ತೊಡರ್ದೊಡೆ = ಮತ್ತೆ ಅದೂ ತೊಡರುವಂತಾದರೆ, ಬಱಿಕ್ಕೆ =ಏತಱೊಳಂ = ಆನಂತರ ಯಾವದರಲ್ಲೂ, ತೊಡರದಿರ್ = ತೊಡಗಬೇಡ.

ಗದ್ಯಾನುಸರಣ: 'ಪರಮೇಷ್ಠಿಗಳ ಮೊದಲಕ್ಷರಗಳನ್ನು ಪಠಿಸುವುದೂ ತಡವರಿಸುವ ಹಾಗಾದರೆ = ಅರ್ಹಂತನ ಹೆಸರನ್ನು ನಾಲಗೆಯ ಮೇಲೆ ತಂದುಕೊಳ್ಳಬೇಕು; ಅದೂ ಕಷ್ಟವಾದರೆ ಮೊದಲಕ್ಷರವಾದ ಅಕಾರವಷ್ಟೇ ನಾಲಗೆಯ ಮೇಲಿರಲಿ; ಮತ್ತೆ ಅದೂ ತೊಡರುವಂತಾದರೆ ಆನಂತರ ಯಾವದರಲ್ಲೂ ತೊಡಗಬೇಡ.'

**ಮುನಿವೃಂದೋಚ್ಚಾರಿತಪಂ**
**ಚನಮಸ್ಕೃತಿಗಾಂತು ಕಿವಿಯನರ್ಹತ್ಪದಮಂ**
**ನೆನೆಯುತ್ತುಮನುಪ್ರೇಕ್ಷೆಯೆ**
**ಮನದೊಳ್ ತಣ್ಮಲೆಯೆ ಸೇಸೆಗೊಳ್ ಖಚರಪತೀ** ೫೭

**ಪದವಿಭಾಗ-ಅನ್ವಯ-ಅರ್ಥ:** ಖಚರಪತೀ = ಖೇಚರರಾಜರೇ, ಮುನಿವೃಂದೋಚ್ಚಾರಿತ = ಮುನಿಸಮುದಾಯವು ಪಠಿಸುವ, ಪಂಚನಮಸ್ಕೃತಿಗೆ = ಪಂಚಮಂತ್ರಗಳಿಗೆ, ಕಿವಿಯನ್ ಆಂತು = ಕಿವಿಗೊಟ್ಟು, ಅರ್ಹತ್ಪದಮಂ ನೆನೆಯುತ್ತುಂ = ಅರ್ಹಂತನ ಪಾದಗಳನ್ನು ಧ್ಯಾನಿಸುತ್ತ, ಮನದೊಳ್ = ಮನಸ್ಸಿನಲ್ಲಿ, ಅನುಪ್ರೇಕ್ಷೆಯೆ, ತಣ್ಮಲೆಯೆ = ದೃಢವಾಗಿ ನಿಲ್ಲುವಂತೆ, ಸೇಸೆಗೊಳ್ = ಸ್ವೀಕರಿಸಿ.

ಗದ್ಯಾನುಸರಣ: 'ಖಚರಪತಿಗಳೇ, ಮುನಿಸಮುದಾಯವು ಪಠಿಸುವ ಪಂಚಮಂತ್ರಗಳಿಗೆ ಕಿವಿಗೊಟ್ಟು, ಅರ್ಹಂತನ ಪಾದಗಳನ್ನು ಧ್ಯಾನಿಸುತ್ತ, ಮನಸ್ಸಿನಲ್ಲಿ ಅನುಪ್ರೇಕ್ಷೆಗಳು ದೃಢವಾಗಿ ನೆಲೆಗೊಳ್ಳುವಂತೆ ನೋಡಿಕೊಳ್ಳಿರಿ.'

**ಮಿಡಿದನಿತು ಬೇಗದಿಂದಱಿ**
**ವೊಡಲನಿದಂ ಪೋಗೆ ನೂಂಕಿ ಚೆಲ್ವಪ್ಪೊಡಲಂ**
**ಪಡೆದಪೆಯೀಗಲೆ ಬಲ್ವಿಡಿ**
**ವಿಡಿದು ಶರಣ್ಬುಗು ಜಿನೇಂದ್ರಪದಸರಸಿಜಮಂ** ೫೮

**ಪದವಿಭಾಗ-ಅನ್ವಯ-ಅರ್ಥ:** ಜಿನೇಂದ್ರಪದಸರಸಿಜಮಂ = ಜಿನೇಂದ್ರನ ಪಾದಕಮಲಗಳನ್ನು, ಬಲ್ವಿಡಿವಿಡಿದು = ಬಲವಾಗಿ ಆಶ್ರಯಿಸಿ, ಶರಣ್ಬುಗು = ಶರಣಾಗು. ಮಿಡಿದ + ಅನಿತು ಬೇಗದಿಂದ = ಬೆರಳು ಮಿಡಿಯುವಷ್ಟು ಬೇಗ,

ಅಱುವ + ಒಡಲನ್ + ಇದಂ = ನಾಶವಾಗುವ ಈ ದೇಹವನ್ನು, ಪೋಗೆ ನೂಂಕಿ = ತಿರಸ್ಕರಿಸಿ, ಚೆಲ್ವಪ್ಪ + ಒಡಲಂ = ಸುಂದರ ದೇಹವನ್ನು, ಈಗಲೆ ಪಡೆದಪೆ = ತಕ್ಷಣವೇ ಪಡೆಯುತ್ತೀಯೆ;

**ಗದ್ಯಾನುಸರಣ:** 'ಜಿನೇಂದ್ರನ ಪಾದಕಮಲಗಳನ್ನು ಬಲವಾಗಿ ಆಶ್ರಯಿಸಿ ಶರಣಾಗು. ಚಿಟಿಕೆ ಹೊಡೆಯುವಷ್ಟು ಬೇಗ ನಾಶವಾಗುವ ಈ ದೇಹವನ್ನು ಕಳೆದುಕೊಂಡು ಸುಂದರ ದೇಹವನ್ನು ತಕ್ಷಣವೇ ಪಡೆಯುತ್ತೀಯೆ.'

**ವ। ಎಂದಾ ಮಹಾನುಭಾವನ ಪೇೞ್ದ ಮಾೞ್ಕೆಯೊಳಿರ್ಪತ್ತೆರಡು ದಿವಸಂಬರಂ ವೀರ ಶಯ್ಯಾತಳಗತನಾಗಿರೆ,**

**ಪದವಿಭಾಗ-ಅನ್ವಯ-ಅರ್ಥ:** ಎಂದು, ಆ ಮಹಾನುಭಾವನ ಪೇೞ್ದ = ಮಹಾಪುರುಷನಾದ ಸ್ವಯಂಬುದ್ಧನು ಹೇಳಿದ, ಮಾೞ್ಕೆಯೊಳ್ = ರೀತಿಯಲ್ಲಿ, ಇರ್ಪತ್ತೆರಡು ದಿವಸಂಬರಂ = ಇಪ್ಪತ್ತೆರಡು ದಿವಸಗಳಷ್ಟು ಕಾಲ, ವೀರಶಯ್ಯಾತಳಗತನಾಗಿರೆ = ವೀರಶಯ್ಯೆಯ ಮೇಲೆ ಮಲಗಿರಲು,

**ಗದ್ಯಾನುಸರಣ:** ಮಹಾಪುರುಷನಾದ ಸ್ವಯಂಬುದ್ಧನು ಹೇಳಿದ ರೀತಿಯಲ್ಲಿ ಮಹಾಬಲನು ಇಪ್ಪತ್ತೆರಡು ದಿವಸಗಳು ವೀರಶಯ್ಯೆಯ ಮೇಲೆ ಮಲಗಿದ್ದ.

**ಅಳುರ್ವ ಪರೀಷಹಾನಳಶಿಖಾವಳಿಗಳ್ ಕೊಳೆ ಧೈರ್ಯಮಂ ಪುದುಂ**
**ಗೊಳಿಸಿ ಸುರುಳ್ದು ಕರ್ಗಿದ ಕಱಂಗಿದ ಖೇಚರನಂಗಮಂ ಮೃಗಂ**
**ಗಳುಮಿರದೆಯ್ದೆ ವಂದು ನಡೆ ನೋಡಿದುವಿಂತಿದು ದಾವಪಾವಕಂ**
**ಬಳಸೆ ಸುರುಳ್ದ ಬಾಳಸಹಕಾರಮಹೀರುಹಮೆಂಬ ಶಂಕೆಯಿಂ ೫೯**

**ಪದವಿಭಾಗ-ಅನ್ವಯ-ಅರ್ಥ:** ಅಳುರ್ವ = ಆವರಿಸುವ, ಪರೀಷಹ + ಅನಳಶಿಖಾವಳಿಗಳ್ = ಪರೀಷಹಗಳೆಂಬ ಬೆಂಕಿಯ ಜ್ವಾಲೆಗಳು, ಕೊಳೆ = ಸುಡಲು, ಧೈರ್ಯಮಂ = ಧೈರ್ಯವನ್ನು, ಪುದುಂಗೊಳಿಸಿ = ತುಂಬಿಕೊಂಡು, ಸುರುಳ್ದು ಕರ್ಗಿದ ಕಱಂಗಿದ = ಸುರುಟಿಕೊಂಡು ಕಪ್ಪಾಗಿ ಕರಗಿದ, ಖೇಚರನ + ಅಂಗಮಂ = ಮಹಾಬಲನ ದೇಹವನ್ನು, ಮೃಗಂಗಳುಂ = ಕಾಡುಮೃಗಗಳು, ಇರದೆ + ಎಯ್ದೆ ವಂದು = ಸುಮ್ಮನಿರದೆ ಹತ್ತಿರ ಬಂದು, ಇಂತಿದು = ಇದು, ದಾವಪಾವಕಂ = ಕಾಡುಗಿಚ್ಚು, ಬಳಸೆ = ಆವರಿಸಲು, ಸುರುಳ್ದ = ಸುರುಟಿಹೋದ, ಬಾಳ = ಎಳೆಯ, ಸಹಕಾರಮಹೀರುಹಂ = ಮಾವಿನ ಗಿಡ, ಎಂಬ ಶಂಕೆಯಿಂ = ಅನುಮಾನ (ಭಾವನೆಯಿಂದ) ನಡೆ ನೋಡಿದುವು = ಪರಿಶೀಲಿಸಿದುವು.

**ಗದ್ಯಾನುಸರಣ:** ಆವರಿಸುವ ಪರೀಷಹಗಳೆಂಬ ಬೆಂಕಿಯ ಜ್ವಾಲೆಗಳು ದೇಹವನ್ನು ಸುಡಲು, ಧೈರ್ಯವನ್ನು ತುಂಬಿಕೊಂಡು ಸುರುಟಿ ಕಪ್ಪಾಗಿ ಕೃಶವಾದ ಮಹಾಬಲನ ದೇಹವನ್ನು ಕಾಡುಮೃಗಗಳು ಕಂಡು ಹತ್ತಿರ ಬಂದು, ಇದು ಕಾಡುಗಿಚ್ಚು ಆವರಿಸಲು ಸುರುಟಿಹೋದ ಎಳೆಯ ಮಾವಿನ ಗಿಡವೇನೋ ಎಂಬ ಭಾವನೆಯಿಂದ ನೋಡಿದುವು.

**ವ॥ ಅಂತು ನೋಡಿ,**

**ಅರ್ಥ:** ಅಂತು ನೋಡಿ = ಹಾಗೆ ನೋಡಿ,

**ಸೊಗಯಿಪ ಮುನ್ನಿರ್ದ ಪರಿಜಿಂ ಕಡುಚೆಲ್ವು ಗಡಂ ಜಿನೇಂದ್ರನಂ**
**ಬಗೆವ ಮನಂ ಗಡಂ ಮುಗುಳ್ದು ಜಾನಿಪ ಕಣ್ಗಡಮಾತ್ಮತತ್ತ್ವದೊಳ್**
**ಬಗೆ ಗಡಮೆಯ್ದೆ ಸೂಳ್ಗೆಡದೆ ಪಂಚಪದಂಗಳನೋದುತಿರ್ಪ ನಾ**
**ಲಗೆ ಗಡಮೇಂ ಸಮಾಧಿವಿಧಿಯಂ ನೆಱೆ ತಾಳ್ದಿದನೋ ಮಹಾಬಳಂ ೬೦**

**ಪದವಿಭಾಗ–ಅನ್ವಯ–ಅರ್ಥ:** ಸೊಗಯಿಪ = ಸೊಗಸಾಗಿದ್ದ, ಮುನ್ನಿರ್ದ = ಮುಂಚೆ ಇದ್ದ, ಪರಿಜಿಂ = ದೇಹಕ್ಕಿಂತಲೂ, ಜಿನೇಂದ್ರನಂ ಬಗೆವ ಮನಂ = ಜಿನನನ್ನು ಧ್ಯಾನಿಸುವ ಮನಸ್ಸು, ಮುಗುಳ್ದು ಜಾನಿಪ ಕಣ್ ಗಡಂ = ಮುಚ್ಚಿಕೊಂಡು ಧ್ಯಾನಿಸುವ ಕಣ್ಣುಗಳು, ಆತ್ಮತತ್ತ್ವದೊಳ್ ಬಗೆ = ಆತ್ಮದ ಸ್ವರೂಪವನ್ನು ಕುರಿತು ಚಿಂತಿಸುವ ಮನಸ್ಸು, ಎಯ್ದೆ ಸೂಳ್ಗೆಡದೆ = ಕ್ರಮತಪ್ಪದೆ, ಪಂಚಪದಂಗಳನೋದುತಿರ್ಪ ನಾಲಗೆ = ಪಂಚಮಂತ್ರಗಳನ್ನು ಉಸುರುವ ನಾಲಗೆ, ಕಡುಚೆಲ್ವು ಗಡಂ = ಹೆಚ್ಚು ಚೆಲುವಾದುದಲ್ಲವೇ! ಸಮಾಧಿವಿಧಿಯಂ = ಇಂತಹ ಸಮಾಧಿವಿಧಿಯನ್ನು, ಮಹಾಬಳಂ = ಮಹಾಬಲನು, ಏಂ ನೆಱೆ ತಾಳ್ದಿದನೋ = ಅದೆಷ್ಟು ಒಪ್ಪವಾಗಿ ತಾಳಿದನೋ!

**ಗದ್ಯಾನುಸರಣ:** ಸೊಗಸಾಗಿದ್ದ ಮುಂಚಿನ ದೇಹಕ್ಕಿಂತಲೂ ಜಿನನನ್ನು ಧ್ಯಾನಿಸುವ ಮನಸ್ಸು, ಮುಚ್ಚಿಕೊಂಡು ಧ್ಯಾನಿಸುವ ಕಣ್ಣುಗಳು, ಆತ್ಮದ ಸ್ವರೂಪವನ್ನು ಕುರಿತು ಚಿಂತಿಸುವ ಮನಸ್ಸು, ಕ್ರಮತಪ್ಪದೆ ಪಂಚಮಂತ್ರಗಳನ್ನು ಉಸುರುವ ನಾಲಗೆ – ಇವುಗಳು ಹೆಚ್ಚು ಚೆಲುವಾದುವು! ಮಹಾಬಲನು ಇಂತಹ ಸಮಾಧಿವಿಧಿಯನ್ನು ಒಪ್ಪವಾಗಿ ತಾಳಿದ!

**ಇಂತನವದ್ಯಮಪ್ಪ ಪದದೊಳ್ ಪತಿಯಂ ನಡೆಯಲ್ಕೆ ಪೇೞ್ದು ತಾ**
**ನುಂ ತಱಿಸಂದುದಗ್ರತಪಮಂ ತಡವಿಲ್ಲದೆ ಕೊಂಡು ಘೋರವೀ**
**ರಂ ತಪಮೆಂಬಿನಂ ನೆಗೞ್ದು ತತ್ಸಚಿವೋತ್ತಮನೊಳ್ಪಿಕೆಯ್ದನಿ**
**ನ್ನಂತುಟು ಪೇೞ್ದು ಕೆಮ್ಮಗಿರೆ ಗಮ್ಮನೆ ಕಮ್ಮರಿಯೋಜನಾಗನೇ ೬೧**

**ಪದವಿಭಾಗ–ಅನ್ವಯ–ಅರ್ಥ:** ಇಂತು = ಹೀಗೆ, ಅನವದ್ಯಂ + ಅಪ್ಪ ಪದದೊಳ್ = ನಿರ್ದುಷ್ಟ ಸ್ಥಿತಿಯಲ್ಲಿ, ಪತಿಯಂ ನಡೆಯಲ್ಕೆ ಪೇೞ್ದು = ತನ್ನ ಒಡೆಯನನ್ನು ಸಾಗಲು ಹೇಳಿ, ತಾನುಂ ತಱಿಸಂದು = ಸ್ವಯಂಬುದ್ಧನು ತಾನೂ, ತಡವಿಲ್ಲದೆ = ತಡಮಾಡದೆ, ಉದಗ್ರತಪಮಂ = ಘೋರತಪಸ್ಸನ್ನು, ಕೊಂಡು = ಕೈಗೊಂಡು, ಘೋರವೀರಂ ತಪಂ = ತಪಸ್ಸು ಘೋರವೀರವಾದುದು, ಎಂಬಿನಂ ನೆಗೞ್ದು = ಎನ್ನುವಂತೆ ನಡೆದುಕೊಂಡು, ತತ್ + ಸಚಿವೋತ್ತಮನ್ = ಆ ಮಂತ್ರಿಶ್ರೇಷ್ಠನು, ಒಳ್ಳಿಕೆಯ್ದನ್ = ಒಳ್ಳೆಯದನ್ನು ಮಾಡಿದ, ಇನ್ನಂತುಟು ಪೇೞ್ದು = (ಬೇರೆಯವರಿಗೆ) ಹಾಗೆ ಮಾಡು ಎಂದು ಹೇಳುತ್ತ, ಕೆಮ್ಮಗಿರೆ = ತಾನು ಸುಮ್ಮನಿದ್ದರೆ, ಗಮ್ಮನೆ = ತಪ್ಪದೆ, ಕಮ್ಮರಿ + ಓಜನ್ + ಆಗನೇ = ಕೆಲಸ ಮಾಡದವನ ಗುರು ಎನಿಸಿಕೊಳ್ಳುವುದಿಲ್ಲವೇ?

**ಗದ್ಯಾನುಸರಣ:** ಹೀಗೆ ನಿರ್ದುಷ್ಟ ಸ್ಥಿತಿಯಲ್ಲಿ ತನ್ನ ಒಡೆಯನನ್ನು ಸಾಗಲು ಹೇಳಿದ ಸ್ವಯಂಬುದ್ಧನು ತಾನೂ ತಡಮಾಡದೆ ಘೋರತಪಸ್ಸನ್ನು ಕೈಗೊಂಡ; ತಪಸ್ಸು 'ಘೋರವೀರವಾದುದು' ಎನ್ನುವಂತೆ ನಡೆದುಕೊಂಡು ಆ ಮಂತ್ರಿಶ್ರೇಷ್ಠನು ಒಳ್ಳೆಯದನ್ನು ಮಾಡಿದ, 'ಹಾಗೆ ಮಾಡು ಹೀಗೆ ಮಾಡು' ಎಂದು ಬೇರೆಯವರಿಗೆ ಹೇಳಿ ತಾನು ಸುಮ್ಮನಿದ್ದರೆ ಅಂಥವನು ಕೆಲಸ ಕದಿಯುವವರ ಗುರು ಎನಿಸಿಕೊಳ್ಳುವುದಿಲ್ಲವೇ?

**ವಿಶೇಷ ವಿಚಾರ:** ಕಮ್ಮರಿ ಎಂಬುದು 'ಕರ್ಮ + ಅರಿ = ಕರ್ಮಾರಿ' ಎಂಬುದರ ರೂಪ; ಕೆಲಸದ ಶತ್ರು ಎಂಬುದು ಅದರರ್ಥ – ಎಂದು ಡಿಎಲ್ಎನ್ ಹೇಳುತ್ತಾರೆ; ನೋಡಿ 'ಪಂಪಭಾರತ ದೀಪಿಕೆ': ಪು. ೪೩೭)

**ವ। ಅಂತು ಮಹಾಬಳಖಚರೇಂದ್ರಂ ಪ್ರಾಯೋಪಗಮನ ವಿಧಿಯಿಂದ ಮಾತ್ಮೀಯ ಶರೀರಭಾರಮನಿೞಿಪಿ ತತ್ಸಮಯದೊಳನಲ್ಪಸುಖ ನಿವಾಸ ಮೆನಿಸಿದೀಶಾನಕಲ್ಪದೊಳಪ್ರತಿಹತ ಚಂಚತ್ಪಂಚರತ್ನಪ್ರಭಾಪ್ರಸರಪ್ರಕಟಿತ ಸಂಧ್ಯಾಭ್ರವಿಭ್ರಮಭ್ರಾಜಿಯಪ್ಪ ದಿವ್ಯತಳ್ಪತಳದ ಪೊರೆಯೊಳಗೆ ತೊಳತೊಳಗಿ ಪೊಱಮಡುವೆಳನೇಸಱ ಬಳಗದ ಬೆಳಗನೊಳಕೊಂಡು,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಮಹಾಬಳಖಚರೇಂದ್ರಂ = ಮಹಾಬಲನು, ಪ್ರಾಯೋಪಗಮನವಿಧಿಯಿಂದಮ್ = ಪ್ರಾಯೋಪಗಮನವಿಧಿಯ ಮೂಲಕವಾಗಿ, ಆತ್ಮೀಯಶರೀರಭಾರಮನ್ + ಇೞಿಪಿ = ತನ್ನ ದೇಹದ ಭಾರವನ್ನು ಇಳಿಸಿ (ಎಂದರೆ ಮರಣಹೊಂದಿ), ತತ್ಸಮಯದೊಳ್ = ಆಗ, ಅನಲ್ಪಸುಖನಿವಾಸಮೆನಿಸಿದ = ಅಲ್ಪವಲ್ಲದ ಸುಖಕ್ಕೆ ಆಗರವೆನಿಸಿದ, ಈಶಾನಕಲ್ಪದೊಳ್ = ಈಶಾನಕಲ್ಪದಲ್ಲಿ, ಅಪ್ರತಿಹತ = ಅಡಗಿಸಲಾಗದ, ಚಂಚತ್ + ಪಂಚರತ್ನಪ್ರಭಾಪ್ರಸರಪ್ರಕಟಿತ = ಹೊಳೆಯುವ ಪಂಚರತ್ನಗಳ ಕಾಂತಿಯ ಹರಡುವಿಕೆಯಿಂದ, ಸಂಧ್ಯಾ + ಅಭ್ರ = ಸಂಜೆಯ ಆಗಸದ, ವಿಭ್ರಮಭ್ರಾಜಿಯಪ್ಪ

= ವಿಲಾಸದಿಂದ ಶೋಭಿಸುವ, ದಿವ್ಯತಳ್ಪತಳದ = ದಿವ್ಯವಾದ ಹಾಸಿಗೆಯ, ಪೊರೆಯೊಳಗೆ = ಪದರಗಳಲ್ಲಿ, ತೊಳತೊಳಗಿ ಪೊಱಮಡುವ = ಕಾಂತಿಯಿಂದ ಕೂಡಿ ಹೊಮ್ಮುವ, ಎಳನೇಸಱ ಬಳಗದ = ಬಾಲಸೂರ್ಯರುಗಳ, ಬೆಳಗನೊಳಕೊಂಡು = ಪ್ರಕಾಶವನ್ನು ಕೂಡಿಕೊಂಡು,

**ಗದ್ಯಾನುಸರಣ:** ಹಾಗೆ, ಮಹಾಬಲನು ಪ್ರಾಯೋಪಗಮನವಿಧಿಯ ಮೂಲಕವಾಗಿ ಮರಣಹೊಂದಿದ; ಆನಂತರ ಮಹಾಸುಖದ ಆಗರವೆನಿಸಿದ ಈಶಾನಕಲ್ಪದಲ್ಲಿ, ಹೊಳೆಯುವ ಪಂಚರತ್ನಗಳ ಕಾಂತಿಯೆಂಬ ಸಂಜೆಯ ಆಗಸದ ವಿಲಾಸದಿಂದ ಶೋಭಿಸುವ ದಿವ್ಯತಲ್ಪದ ಕಾಂತಿಯಿಂದ ಕೂಡಿ ಬಾಲಸೂರ್ಯರುಗಳ ಪ್ರಕಾಶವನ್ನು ಪಡೆದುಕೊಂಡ.

**ವಿಶೇಷ ವಿಚಾರ:** ದಿವ್ಯತಲ್ಪವೆಂದರೆ ದೇವತೆಗಳು ಹುಟ್ಟುವ ಉಪಪಾದವೆಂಬ ಶಯ್ಯೆ

**ಮಿಱುಗುವ ರತ್ನಭಿತ್ತಿಗಳ ದೀಧಿತಿಯಂ ನಿಜದೇಹದೀಪ್ತಿಗಳ್**
**ಮಱಸೆ ಸಮಸ್ತದೀಪ್ತಿಪರಮಾಣುಗಳಂ ಗೆಡೆಗೊಂಡು ಜೌವನಂ**
**ನೆಱೆದಿರೆ ದಿವ್ಯಮೂರ್ತಿಸಹಜಾಂಬರಭೂಷಣದಿವ್ಯಮಾಲೆಗಳ್**
**ನೆಱೆದೊಡವುಟ್ಟೆ ಮುನ್ನೆ ಮಱಲುಂದಿದನೆಟ್ಚಱುವಂತೆ ಪುಟ್ಟಿದಂ ೬೨**

**ಪದವಿಭಾಗ–ಅನ್ವಯ–ಅರ್ಥ:** ನಿಜದೇಹದೀಪ್ತಿಗಳ್ = ತನ್ನ ದೇಹಕಾಂತಿಯು, ಮಿಱುಗುವ = ಹೊಳೆಯುವ, ರತ್ನಭಿತ್ತಿಗಳ = ರತ್ನಖಚಿತ ಗೋಡೆಗಳ, ದೀಧಿತಿಯಂ = ಹೊಳಪನ್ನು, ಮಱಸೆ = ಇಳಿಕೆಗೊಳಿಸುವಂತಿರಲು, ಸಮಸ್ತದೀಪ್ತಿಪರಮಾಣುಗಳಂ = ಎಲ್ಲ ಕಾಂತಿಯ ಅಂಶಗಳನ್ನೂ, ಗೆಡೆಗೊಂಡು = ಕೂಡಿಕೊಂಡು, ಜೌವನಂ ನೆಱೆದಿರೆ = ಯೌವನದಿಂದ ಕೂಡಿ, ದಿವ್ಯಮೂರ್ತಿ = ದಿವ್ಯದೇಹಿಯಾಗಿ, ಸಹಜ + ಅಂಬರಭೂಷಣದಿವ್ಯಮಾಲೆಗಳ್ = ಜೊತೆಯಲ್ಲಿಯೇ ಹುಟ್ಟಿದ ವಸ್ತ್ರವಿಭೂಷಣಗಳೂ, ನೆಱೆದೊಡವುಟ್ಟೆ = ಒಟ್ಟಾಗಿ ಹುಟ್ಟಲು, ಮುನ್ನೆ ಮಱಲುಂದಿದನ್ = ಹಿಂದೆ ಮೈಮರೆತು ಮಲಗಿದವನು, ಎಟ್ಚಱುವಂತೆ = ನಿದ್ದೆಯಿಂದ ಎಚ್ಚೆತ್ತವನ ಹಾಗೆ, ಪುಟ್ಟಿದಂ = ಹುಟ್ಟಿದನು.

**ಗದ್ಯಾನುಸರಣ:** ತನ್ನ ದೇಹಕಾಂತಿಯು ರತ್ನಖಚಿತ ಗೋಡೆಗಳ ಹೊಳಪನ್ನು ಇಳಿಕೆಗೊಳಿಸುವಂತಹ ಎಲ್ಲ ಕಾಂತಿಯನ್ನೂ ಕೂಡಿಸಿಕೊಂಡು, ಯೌವನದಿಂದ ಕೂಡಿದ ದಿವ್ಯದೇಹಿಯಾಗಿ ಸಹಜ ವಸ್ತ್ರವಿಭೂಷಣಗಳೂ ಒಟ್ಟಾಗಿ ತನ್ನೊಡನೆ ಹುಟ್ಟಲು, ಮೈಮರೆತು ಮಲಗಿದ್ದವನು ನಿದ್ದೆಯಿಂದ ಎಚ್ಚೆತ್ತವನಂತೆ, ಹುಟ್ಟಿದ.

**ವ॥ ಅಂತು ಪುಟ್ಟಿದಾಗಳ್**

**ಅರ್ಥ:** ಅಂತು ಪುಟ್ಟಿದಾಗಳ್ = ಹಾಗೆ ಹುಟ್ಟಲು,

**ತೆಱೆಯವೆ ಮುನ್ನ ಕೆತ್ತ ಪಡಿಗಳ್ ನವಸೌರಭಮುಣ್ಮೆ ಮೊಕ್ಕಳಂ**
**ತೆಱೆದುವು ರತ್ನತೋರಣಗಣಂಗಳುದಗ್ರವಿಮಾನರಾಜಿಯೊಳ್**
**ನೆಱೆದವು ಜೈನರೊಳ್ಗುಡಿಯ ದಾಂಗುಡಿಗಳ್ ನಲಿದಾಡುವಂತೆ ಸು**
**ತ್ತಿಱಿದುವು ಭೋಂಕೆನಾತನ ಪುರಾತನಪುಣ್ಯಫಲಪ್ರಭಾವದಿಂ ೬೩**

**ಪದವಿಭಾಗ–ಅನ್ವಯ–ಅರ್ಥ:** ಆತನ ಪುರಾತನಪುಣ್ಯಫಲಪ್ರಭಾವದಿಂ = ಅವನ ಹಿಂದಿನ ಪುಣ್ಯಫಲದ ಪ್ರಭಾವದಿಂದಾಗಿ, ಭೋಂಕೆನೆ = ಇದ್ದಕ್ಕಿದ್ದಂತೆಯೇ, ಜೈನರೊಳ್ಗುಡಿಯ = ಜೈನರ ಬಾವುಟಗಳ, ದಾಂಗುಡಿಗಳ್ = ಚಿಗುರುಗಳು, ನಲಿದಾಡುವಂತೆ = ಶೋಭಿಸುವಂತೆ, ಉದಗ್ರವಿಮಾನರಾಜಿಯೊಳ್ = ಎತ್ತರವಾದ ವಿಮಾನಗಳಲ್ಲಿ, ಮುನ್ನ ಕೆತ್ತ = ಮೊದಲು ಮುಚ್ಚಿಕೊಂಡಿದ್ದ, ಪಡಿಗಳ್ = ಕದಗಳು, ತೆಱೆಯವೆ = ತೆಗೆದುಕೊಂಡುವು, ನವಸೌರಭಂ + ಉಣ್ಮೆ = ಹೊಸ ಸುಗಂಧವು ಹೊಮ್ಮಿತು, ರತ್ನತೋರಣಗಣಂಗಳ್ = ರತ್ನಖಚಿತ ತೋರಣಗಳು, ಮೊಕ್ಕಳಂ = ಅತಿಶಯವಾಗಿ, ತೆಱೆದುವು = ತೂಗಿದವು, ಸುತ್ತಿಱಿದುವು = ಎಲ್ಲೆಡೆ ಆವರಿಸಿತು.

**ಗದ್ಯಾನುಸರಣ:** ಅವನ ಹಿಂದಿನ ಜನ್ಮದ ಪುಣ್ಯಫಲದ ಪ್ರಭಾವದಿಂದಾಗಿ, ಇದ್ದಕ್ಕಿದ್ದಂತೆಯೇ ಜೈನರ ಬಾವುಟಗಳ ಚಿಗುರುಗಳು ಶೋಭಿಸುವಂತೆ ಎಲ್ಲೆಡೆ ಆವರಿಸಿದಂತೆ, ವಿಮಾನಗಳಲ್ಲಿ ಈವರೆಗೆ ಮುಚ್ಚಿಕೊಂಡಿದ್ದ ಕದಗಳು ತೆಗೆದು ಕೊಂಡುವು, ಹೊಸ ಸುಗಂಧವು ಹೊಮ್ಮಿತು, ರತ್ನಖಚಿತ ತೋರಣಗಳು ಅತಿಶಯವಾಗಿ ತೂಗಾಡಿದವು,

**ವಿಶೇಷ ವಿಚಾರ:** ವಿಮಾನ ಎಂಬುದು ದೇವತೆಗಳ ಉಪ್ಪರಿಗೆಗಳನ್ನೂ ವಾಹನಗಳನ್ನೂ ಸೂಚಿಸುತ್ತದೆ.

**ವ॥ ಅದಱ ತದನಂತರದೊಳ್,**

**ಅರ್ಥ:** ಅದಱ ತದನಂತರದೊಳ್ = ಅದಾದ ಬಳಿಕ,

**ನೆಗೞ್ದುವು ಪಟುಪಟಹಮೃದಂ**
**ಗಗಭೀರಾರಾವಮಮರನಾಟಕಶಾಲಾ**
**ದಿಗಳೊಳತಿಮಧುರಮೊರ್ಮೊದ**
**ಲೊಗೆದುದು ಜಯಜೀಯನಂದವರ್ಧಸ್ವ ರವಂ ೬೪**

**ಪದವಿಭಾಗ–ಅನ್ವಯ–ಅರ್ಥ:** ಅಮರನಾಟಕಶಾಲಾದಿಗಳೊಳ್ =

ದೇವತೆಗಳ ನಾಟ್ಯಶಾಲೆಗಳಲ್ಲಿ, ಪಟು = ಜೋರಾದ, ಪಟಹ = ಭೇರಿ, ಮೃದಂಗ = ಮೃದಂಗ ಮುಂತಾದ ವಾದ್ಯಗಳ, ಗಭೀರ + ಆರಾವಂ = ಗಾಢಧ್ವನಿಯು, ಅತಿಮಧುರಂ = ಅತ್ಯಂತ ಮಧುರವಾಗಿ, ನೆಗೞ್ದುವು = ಮೊಳಗಿತು, 'ಜಯ, ಜೀಯ, ನಂದ, ವರ್ಧಸ್ವ' = 'ಜಯವಾಗಲಿ, ಮಹಾಸ್ವಾಮಿಯವರ ಏಳಿಗೆಯಾಗಲಿ' ಎಂಬ ರವಂ = ಘೋಷಣೆಯು, ಒರ್ಮೊದಲ್ + ಒಗೆದುದು = ಒಟ್ಟಿಗೇ ಕೇಳಿಬಂತು.

**ಗದ್ಯಾನುಸರಣ:** ದೇವತೆಗಳ ನಾಟ್ಯಶಾಲೆಗಳಲ್ಲಿ ಜೋರಾಗಿ ಭೇರಿ, ಮೃದಂಗ ಮುಂತಾದ ವಾದ್ಯಗಳ ಗಾಢಧ್ವನಿಯು ಅತ್ಯಂತ ಮಧುರವಾಗಿ ಮೊಳಗಿತು; 'ಜಯವಾಗಲಿ, ಮಹಾಸ್ವಾಮಿಯವರ ಏಳಿಗೆಯಾಗಲಿ' ಎಂಬ ಘೋಷಣೆಯು ಕೇಳಿಬಂತು.

**ಸುರತರುನಂದನಂಗಳಿನಲರ್ವೞೆ ಬಂದೆಱಗಿತ್ತು ದೇವಸೌಂ**
**ದರಿಯರ ದಿವ್ಯಮಪ್ಪ ಪೊಸಗಂಪಿನಲಂಪನವುಂಕಿಕೊಂಡವ**
**ಳ್ದಿರ ಮಿಳಿರ್ವೊಳ್ಗುರುಳ್ಗಳನೆ ಲೀಲೆಯಿನಾಡಿಸಿ ಪುಷ್ಪಕೇಸರಂ**
**ತೆರಳೆ ತೆರಳ್ಚಿ ಬೀಸಿದುದು ತೆಂಬೆಲರೆಂಬೆಲರಪ್ಪಿಕೊಳ್ವವೋಲ್ ೩೫**

**ಪದವಿಭಾಗ–ಅನ್ವಯ–ಅರ್ಥ:** ಸುರತರುನಂದನಂಗಳಿನ್ = ಕಲ್ಪವೃಕ್ಷಗಳ ಗುಂಪುಗಳಿಂದ, ಅಲರ್ + ಮೞೆ = ಹೂಮಳೆಯು, ಬಂದೆಱಗಿತ್ತು = ಸುರಿಯಿತು, ದೇವಸೌಂದರಿಯರ = ದೇವತಾಸ್ತ್ರೀಯರ, ದಿವ್ಯಮಪ್ಪ = ಶ್ರೇಷ್ಠವಾದ, ಪೊಸಗಂಪಿನ = ಹೊಸ ಪರಿಮಳದ, ಅಲಂಪನ್ = ಸೊಂಪನ್ನು, ಅವುಂಕಿಕೊಂಡು = ಅವುಚಿಕೊಂಡು, ಅವಳ್ದಿರ = ಅವರುಗಳ, ಮಿಳಿರ್ವ + ಒಳ್ಗುರುಳ್ಗಳನೆ = ಒಲೆದಾಡುವ ಮುಂಗೂದಲನ್ನು, ಲೀಲೆಯಿನಾಡಿಸಿ = ಅಲುಗಾಡಿಸುತ್ತ, ಪುಷ್ಪಕೇಸರಂ = ಹೂವಿನ ಪರಾಗವು, ತೆರಳೆ ತೆರಳ್ಚಿ = ಎಲ್ಲೆಡೆ ಚೆಲ್ಲುತ್ತ, ತೆಂಬೆಲರ್ + ಎಂಬ, ತೆಂಕಣಗಾಳಿ ಎಂಬ, ಎಲರ್ = ನರ್ತಕನು, ಅಪ್ಪಿಕೊಳ್ವವೋಲ್ = ಆಲಂಗಿಸಿಕೊಳ್ಳುವಂತೆ, ಬೀಸಿದುದು = ಬೀಸಿತು.

**ಗದ್ಯಾನುಸರಣ:** ಕಲ್ಪವೃಕ್ಷಗಳ ಗುಂಪುಗಳಿಂದ ಹೂಮಳೆಯು ಸುರಿಯಿತು, ದೇವತಾಸ್ತ್ರೀಯರ ಶ್ರೇಷ್ಠವಾದ ಹೊಸ ಪರಿಮಳದ ಸೊಂಪನ್ನು ಅವುಚಿಕೊಂಡು, ಅವರುಗಳ ಒಲೆದಾಡುವ ಮುಂಗೂದಲನ್ನು ಮೆಲುವಾಗಿ ನೇವರಿಸುತ್ತ, ಹೂವಿನ ಪರಾಗವನ್ನು ಎಲ್ಲೆಡೆ ಚೆಲ್ಲುತ್ತ ತೆಂಕಣಗಾಳಿ ಎಂಬ ನರ್ತಕನು ಆಲಂಗಿಸಿಕೊಳ್ಳುವಂತೆ ಬೀಸಿತು.

**ವ॥ ಮತ್ತಮಮರಲೋಕಾನೇಕವಾದ್ಯಂಗಳ ಲಯಂಗಳೊಳಂ ಪೂತಜಂಗಮಲತೆಗಳಂತೆ ಱಗಿ ತನ್ನ ಮುಂದೆ ಬಂದಾಡುವಚ್ಚರಸಿಯರುಮಂ**

**ಅನೇಕಭಂಗಿಭೃಂಗಾರಮಣಿದರ್ಪಣ ಕನಕಕಳಶಚಾರುಚಾಮರಾತಪತ್ರಪವಿತ್ರಿತ ಕರಪಲ್ಲವೆಯರಾಗಿ ಸೇಸಿಕ್ಕಲೆಂದು ಬಂದಮರಪು ರಂಧ್ರಿಯರುಮಂ ಆಲೋಕನಮಾತ್ರದೊಳೆ ಮನಮನುಗಿಬಗಿಮಾಡಿ ಮಸೆದ ಮದನನಲಗಿನ ಲರ್ಗಳಂತೆ ಕಣ್ಣೊಳೆಳಸಿ ಬಳಸಿ ಬಂದಿರ್ದ ಪಾಟದಾಟದ ಮುದ್ದಿನ ಬರ್ದಿನ ಪರಿವಾರದೇವಿಯ ರುಮಂ ಅತಿಲಲಿತಭೂಷಾಭ್ಯಸನ ಚತುರಭಾಷಾ ವಿಶೇಷಕುಶಲೆಯರಪ್ಪ ದೇವವಿಳಾಸಿನಿಯರುಮಂ ಭೋಂಕೆನೆ ಕಂಡು**

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ = ಅಲ್ಲದೆ, ಅಮರಲೋಕ = ದೇವಲೋಕದ, ಅನೇಕವಾದ್ಯಂಗಳ = ನಾನಾ ವಾದ್ಯಗಳ, ಲಯಂಗಳೊಳಂ = ತಾಳಬದ್ಧತೆಯ ನಡುವೆ, ಪೂತ = ಹೂಬಿಟ್ಟ, ಜಂಗಮಲತೆಗಳಂತೆ = ಓಡಾಡುವ ಬಳ್ಳಿಗಳಂತೆ, ಎಱಗಿ = ಬಾಗಿ, ತನ್ನ ಮುಂದೆ ಬಂದಾಡುವ = ಬಂದು ತನ್ನ ಮುಂದೆ ನರ್ತಿಸುವ. ಚ್ಚರಸಿಯರುಮಂ = ಅಪ್ಸರೆಯರನ್ನೂ, ಅನೇಕಭಂಗಿ = ವಿವಿಧ ಭಂಗಿಗಳಲ್ಲಿ ಭೃಂಗಾರಮಣಿದರ್ಪಣ = ಚಿನ್ನರನ್ನಗಳ ಕನ್ನಡಿಗಳನ್ನೂ, ಕನಕಕಳಶ = ಚಿನ್ನದ ಕಳಶಗಳನ್ನೂ, ಚಾರು = ಸುಂದರವಾದ, ಚಾಮರ + ಆತಪತ್ರ = ಚಾಮರ ಮತ್ತು ಛತ್ರಗಳನ್ನು ಹಿಡಿದು, ಪವಿತ್ರಿತ= ಪಾವನವಾದ, ಕರಪಲ್ಲವೆಯರಾಗಿ = ಕೈಗಳುಳ್ಳವರಾಗಿ, ಸೇಸೆ + ಇಕ್ಕಲೆಂದು ಬಂದ = ಮಂತ್ರಾಕ್ಷತೆಗಳನ್ನು ಹಾಕಲೆಂದು ಬಂದ, ಅಮರಪುರಂಧ್ರಿಯರುಮಂ = ದೇವತಾಸ್ತ್ರೀಯರನ್ನೂ, ಆಲೋಕನಮಾತ್ರದೊಳೆ = ನೋಟಮಾತ್ರದಿಂದಲೇ, ಮನಮನ್ + ಉಗಿಬಗಿಮಾಡಿ = ಮನಸ್ಸನ್ನು ಕಲಕುವಂತಹ, ಮಸೆದ = ಹರಿತಗೊಳಿಸಿದ, ಮದನನ + ಅಲಗಿನ + ಅಲರ್ಗಳಂತೆ = ಕಾಮಬಾಣವಾದ ಹೂಗಳಂತೆ, ಕಣ್ಣೊಳೆಳಸಿ = ಕಣ್ಣಿನಲ್ಲಿಯೇ ಆಸೆಯನ್ನು ವ್ಯಕ್ತಪಡಿಸಿ, ಬಳಸಿ ಬಂದಿರ್ದ = ಸುತ್ತಲೂ ಬಂದಿದ್ದ, ಪಾಟದ + ಆಟದ = ಹಾಡುನರ್ತನಗಳ, ಮುದ್ದಿನ = ಚೆಲುವಿನ, ಬರ್ದಿನ = ಪ್ರೌಢಿಮೆಯ, ಪರಿವಾರದೇವಿಯರುಮಂ = ಪರಿವಾರಸ್ತ್ರೀಯರನ್ನೂ, ಅತಿಲಲಿತ = ಅತ್ಯಂತ ಸುಂದರವಾದ, ಭೂಷಾ + ಆಭ್ಯಸನ = ಒಡವೆಗಳನ್ನು ಧರಿಸಿದ, ಚತುರಭಾಷಾವಿಶೇಷಕುಶಲೆಯರಪ್ಪ = ಚಾತುರ್ಯದ ಮಾತುಗಳನ್ನಾಡುವುದರಲ್ಲಿ ಕುಶಲೆಯರಾದ, ದೇವವಿಳಾಸಿನಿಯರುಮಂ = ದೇವವಿಲಾಸಿನಿಯರನ್ನೂ, ಭೋಂಕೆನೆ ಕಂಡು = ತಟ್ಟಕ್ಕನೆ ನೋಡಿ,

**ಗದ್ಯಾನುಸರಣ:** ಅಲ್ಲದೆ, ದೇವಲೋಕದ ನಾನಾ ವಾದ್ಯಗಳ ತಾಳಬದ್ಧತೆಯ ನಡುವೆ, ಓಡಾಡುವ ಹೂಬಿಟ್ಟ ಬಳ್ಳಿಗಳಂತೆ ಬಾಗುತ್ತ ಬಂದು ತನ್ನ ಮುಂದೆ ನರ್ತಿಸುವ ಅಪ್ಸರೆಯರನ್ನೂ; ವಿವಿಧ ಭಂಗಿಗಳಲ್ಲಿ ಚಿನ್ನರನ್ನಗಳ ಕನ್ನಡಿಗಳನ್ನೂ, ಚಿನ್ನದ ಕಳಶಗಳನ್ನೂ ಸುಂದರವಾದ ಛತ್ರಚಾಮರಗಳನ್ನು ಹಿಡಿದು, ತಮ್ಮ ಪಾವನವಾದ ಕೈಗಳಿಂದ ಮಂಗಳ ಮಂತ್ರಾಕ್ಷತೆಗಳನ್ನು ಹಾಕಲೆಂದು ಬಂದ

ದೇವತಾಸ್ತ್ರೀಯರನ್ನೂ; ನೋಟಮಾತ್ರದಿಂದಲೇ ಮನಸ್ಸನ್ನು ಕಲಕುವ ಹರಿತಗೊಳಿಸಿದ ಕಾಮಬಾಣದ ಹೂಗಳಂತೆ ಕಣ್ಣಿನಲ್ಲಿಯೇ ಆಸೆಯನ್ನು ವ್ಯಕ್ತಪಡಿಸುತ್ತ ಬಂದು ಸುತ್ತಲೂ ಇದ್ದ ಹಾಡುನರ್ತನಗಳ ಹಾಗೂ ಚೆಲುವು-ಪ್ರೌಢಿಮೆಗಳ ಪರಿವಾರಸ್ತ್ರೀಯರನ್ನೂ; ಅತ್ಯಂತ ಸುಂದರವಾದ ಒಡವೆವಸ್ತ್ರಗಳನ್ನು ಧರಿಸಿದ ಚತುರ ಮಾತುಗಾರಿಕೆಯಲ್ಲಿ ಕುಶಲೆಯರಾದ ದೇವವಿಲಾಸಿನಿಯರನ್ನೂ ಅವನು ತಟಕ್ಕನೆ ನೋಡಿದ.

**ಆನಾರ್ಗಿರ್ದ ವಿಮಾನವಾವುದಿವರಾರ್ಗೀ ಲೋಕಮೇನೆಂಬುದಾ**
**ನೇನೋಂತಿಲ್ಲಿಗೆ ವಂದೆನೀ ವಿಭವಮಿಂತಾರಿಂದಮಾಯ್ತೆಂಬುದಂ**
**ತಾನಾಗಳ್ ಬಗೆವನ್ನೆಗಂ ಮನದೊಳಾ ದೇವಂ ಭವಪ್ರತ್ಯಯ**
**ಜ್ಞಾನಂ ತೊಟ್ಟನೆ ಪುಟ್ಟೆ ಪೂರ್ವಭವದೊಳ್ತೊಟ್ಟೊಂದು ವೃತ್ತಾಂತಮಂ೬೬**

**ಪದವಿಭಾಗ-ಅನ್ವಯ-ಅರ್ಥ:** ಆನ್ + ಆರ್ಗೆ = ನಾನು ಯಾರು? ಇರ್ದ ವಿಮಾನವಾವುದು = ನಾನಿರುವ ವಿಮಾನವು ಯಾವುದು? ಇವರಾರ್ಗೆ = ಇವರೆಲ್ಲ ಯಾರು? ಈ ಲೋಕಂ + ಏನೆಂಬುದು = ಈ ಲೋಕದ ಹೆಸರೇನು? ಆನ್ + ಏ + ನೋಂತು + ಇಲ್ಲಿಗೆ ವಂದೆನ್ = ನಾನು ಯಾವ ಹರಕೆಯಿಂದ ಇಲ್ಲಿಗೆ ಬಂದೆ? ಈ ವಿಭವಂ + ಇಂತು + ಆರಿಂದಂ + ಆಯ್ತು = ಈ ವೈಭವವು ಯಾರಿಂದ ಉಂಟಾಯಿತು? ಎಂಬುದಂ = ಎಂಬುದರ ಬಗ್ಗೆ, ಮನದೊಳ್ + ಆ ದೇವಂ = ತನ್ನ ಮನಸ್ಸಿನಲ್ಲಿ ಆ ದೇವನು, ತಾನಾಗಳ್ ಬಗೆವ + ಅನ್ನೆಗಂ = ತಾನು ಆಲೋಚನೆಗೆ ತೊಡಗುವಷ್ಟರಲ್ಲಿ, ತೊಟ್ಟನೆ = ಇದ್ದಕ್ಕಿದ್ದಂತೆ, ಭವಪ್ರತ್ಯಯಜ್ಞಾನಂ ಪುಟ್ಟೆ = ಭವಪ್ರತ್ಯಯಜ್ಞಾನವು ಹುಟ್ಟಲು, ಪೂರ್ವಭವದೊಳ್ = ಹಿಂದಿನ ಜನ್ಮದಲ್ಲಿ, ತೊಟ್ಟ + ಒಂದು ವೃತ್ತಾಂತಮಂ = ನಡೆದ ಒಂದು ಸಂಗತಿಯನ್ನು,

**ಗದ್ಯಾನುಸರಣ:** 'ನಾನು ಯಾರು? ನಾನಿರುವ ವಿಮಾನವು ಯಾವುದು? ಇವರೆಲ್ಲ ಯಾರು? ಈ ಲೋಕದ ಹೆಸರೇನು? ನಾನು ಯಾವ ಹರಕೆಯಿಂದ ಇಲ್ಲಿಗೆ ಬಂದೆ? ಈ ವೈಭವವು ಯಾರಿಂದ ಉಂಟಾಯಿತು?' ಎಂಬುದರ ಬಗ್ಗೆ, ತನ್ನ ಮನಸ್ಸಿನಲ್ಲಿ ಆ ದೇವನು ಆಲೋಚಿಸುವಷ್ಟರಲ್ಲಿ, ಇದ್ದಕ್ಕಿದ್ದಂತೆ ಭವಪ್ರತ್ಯಯಜ್ಞಾನವು ಹುಟ್ಟಲು ಹಿಂದಿನ ಜನ್ಮದಲ್ಲಿ ನಡೆದ ಒಂದು ಸಂಗತಿಯನ್ನು,

**ವಿಶೇಷ ವಿಚಾರ:** ಭವಪ್ರತ್ಯಯಜ್ಞಾನ ಎಂದರೆ ದೇವರುಗಳಿಗೂ ನಾರಕಿಗಳಿಗೂ ಕೈಗೂಡುವ ವಿಶೇಷ ಜ್ಞಾನ; ಇಂದ್ರಿಯಗಳಿಗೆ ಅಗೋಚರವಾದ ವಿಷಯಗಳನ್ನು ತಿಳಿಯುವ ಜ್ಞಾನ

**ವ ನೆಱೆಯನಱಿದು**

**ಅರ್ಥ:** ನೆಱೆಯನ್ + ಅಱಿದು = ಸ್ಪಷ್ಟವಾಗಿ ತಿಳಿದುಕೊಂಡು,

**ಇದು ದೇವೇಂದ್ರನಿವಾಸಮೆನ್ನ ನೆಲೆಯುಂ ಶ್ರೀ ಶ್ರೀಪ್ರಭಂ ಮುಂದೆನಿಂ**
**ದಿದು ದೇವವ್ರಜಮಿಂತಿದೆಲ್ಲಮುಮರೀಸಂದೋಹಮಾಂ ದೇವನ**
**ಪ್ಪುದು ಮುಂ ಖೇಚರರಾಜನಾದ ಭವದೊಳ್ ಸಯ್ಪಿಂಸ್ವಯಂಬುದ್ಧನೆಂ**
**ಬುದನಾನೆಂದೆನದಲ್ಲದಂದೆನಗಮೀ ಲೋಕಕ್ಕಮೇಂ ಸಮ್ಮದಂ ೬೭**

**ಪದವಿಭಾಗ-ಅನ್ವಯ-ಅರ್ಥ:** ಇದು ದೇವೇಂದ್ರನಿವಾಸಂ = ಇದು ದೇವೇಂದ್ರನ ಅರಮನೆ, ಎನ್ನ ನೆಲೆಯುಂ = ನನ್ನ ನೆಲೆ ಈ ಶ್ರೀ ಶ್ರೀಪ್ರಭಂ = ಶ್ರೀಪ್ರಭ ಎಂಬ ವಿಮಾನ, ಮುಂದೆ ನಿಂದ + ಇದು = ಮುಂದಿರುವಂಥದು, ದೇವವ್ರಜಂ = ದೇವಮೂಹ, ಇಂತಿದೆಲ್ಲಂ = ಇವರೆಲ್ಲ, ಅಮರೀಸಂದೋಹಂ = ದೇವತಾಸ್ತ್ರೀಯರು, ಮುಂ ಖೇಚರರಾಜನಾದ ಭವದೊಳ್ = ಖೇಚರನಾಗಿದ್ದ ಈ ಹಿಂದಿನ ಜನ್ಮದಲ್ಲಿ, ಸಯ್ಪಿಂ = ಮಾಡಿದ ಪುಣ್ಯದಿಂದಾಗಿ, ಆಂ ದೇವಂ + ಅಪ್ಪುದು = ನಾನು ದೇವನಾಗಿದ್ದೇನೆ, ಸ್ವಯಂಬುದ್ಧನ್ = ಸ್ವಯಂಬುದ್ಧನು, ಎಂಬುದನ್ = ಹೇಳಿ ಕೊಟ್ಟುದನ್ನು, ಆನ್ = ನಾನು, ಎಂದೆನ್ = ಹೇಳಿದೆ. ಅದಲ್ಲದಂದು = ಹಾಗಿಲ್ಲದಿದ್ದರೆ, ಎನಗಂ + ಈ ಲೋಕಕ್ಕಂ + ಏಂ ಸಮ್ಮದಂ = ನನಗೂ ಈ ಲೋಕಕ್ಕೂ ಏನು ಸಂಬಂಧ!

**ಗದ್ಯಾನುಸರಣ:** 'ಇದು ದೇವೇಂದ್ರನ ಅರಮನೆ; ನನ್ನ ನೆಲೆಯೂ ಈ ಶ್ರೀಪ್ರಭ ಎಂಬ ವಿಮಾನವೇ; ಮುಂದಿರುವವರು ದೇವಮೂಹ; ಇವರೆಲ್ಲ ದೇವತಾಸ್ತ್ರೀಯರು; ಖೇಚರನಾಗಿದ್ದ ಈ ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದಿಂದಾಗಿ, ಸ್ವಯಂಬುದ್ಧನು ಹೇಳಿ ಕೊಟ್ಟುದನ್ನು ನಾನು ಹೇಳಿದ ಕಾರಣದಿಂದಾಗಿ, ನಾನು ಈಗ ದೇವನಾಗಿದ್ದೇನೆ, ಹಾಗಿಲ್ಲದಿದ್ದರೆ ನನಗೂ ಈ ಲೋಕಕ್ಕೂ ಎಲ್ಲಿಯ ಸಂಬಂಧ!'

**ವ॥ ಎಂದು ಬಗೆವನ್ನಮೆತ್ತಿದ ನಮೇರುಮಂದಾರಪಾರಿಜಾತದ ಬಣ್ಣವಾಸಿಗಂಗಳುಂ ಮುತ್ತಿನ ಮಾಣಿಕದ ಪಡಲಿಗೆಗಳೊಳ್ ಪಸರಿಸಿದ ವಿಚಿತ್ರ ವಸ್ತ್ರಾಭರಣಂಗಳುಂ ಚೆಂಬೊನ್ನ ತಳಿಗೆಗಳೊಳ್ ತೆಕ್ಕನೆ ತೀವಿದ ಬಿಡುಮುತ್ತಿನ ಸೇಸೆಗಳುಂ ಬೆರಸು ಮಹತ್ತರದೇವಿಯರ್ ಬಂದು ಪೊಡೆವಟ್ಟು**

**ಪದವಿಭಾಗ-ಅನ್ವಯ-ಅರ್ಥ:** ಎಂದು ಬಗೆವನ್ನಂ = ಎಂದು ಆಲೋಚಿಸುವಷ್ಟರಲ್ಲಿ, ಎತ್ತಿದ ನಮೇರುಮಂದಾರಪಾರಿಜಾತದ = ಸುರಗಿ ಮಂದಾರ ಪಾರಿಜಾತಗಳ, ಬಣ್ಣವಾಸಿಗಂಗಳುಂ = ಬಣ್ಣ ಬಣ್ಣದ ಹೂಗುಚ್ಛಗಳನ್ನೂ, ಮುತ್ತಿನ ಮಾಣಿಕದ = ಮುತ್ತುಮಾಣಿಕ್ಯಗಳಿಂದ ಮಾಡಿದ, ಪಡಲಿಗೆಗಳೊಳ್ =

ಹರಿವಾಟಣಗಳಲ್ಲಿ, ಪಸರಿಸಿದ = ತುಂಬಿಕೊಂಡಿದ್ದ, ವಿಚಿತ್ರ ವಸ್ತ್ರಾಭರಣಂಗಳುಂ = ಆಕರ್ಷಕ ಬಟ್ಟೆಬರೆಗೆಳನ್ನೂ, ಚೆಂಬೊನ್ನ = ಚಿನ್ನದ, ತಳಿಗೆಗಳೊಳ್ = ತಟ್ಟೆಗಳಲ್ಲಿ, ತೆಕ್ಕನೆ ತೀವಿದ = ಭರ್ತಿಯಾಗಿ ತುಂಬಿದ, ಬಿಡುಮುತ್ತಿನ ಸೇಸೆಗಳುಂ = ಬಿಡಿಮುತ್ತುಗಳ ಅಕ್ಷತೆಗಳಿಂದಲೂ, ಬೆರಸು = ಕೂಡಿ, ಮಹತ್ತರದೇವಿಯರ್ = ಮಹತ್ತರದೇವಿಯರು, ಬಂದು = ಅವನ ಬಳಿ ಸಾರಿ, ಪೊಡೆವಟ್ಟು = ನಮಸ್ಕರಿಸಿ,

**ಗದ್ಯಾನುಸರಣ:** ಎಂದು ಆಲೋಚಿಸುವಷ್ಟರಲ್ಲಿ ಸುರಗಿ ಮಂದಾರ ಪಾರಿಜಾತಗಳ ಬಣ್ಣ ಬಣ್ಣದ ಹೂಗುಚ್ಛಗಳನ್ನೂ, ಮುತ್ತಿನ ಮುತ್ತುಮಾಣಿಕ್ಯಗಳಿಂದ ಮಾಡಿದ ಹರಿವಾಟಣಗಳಲ್ಲಿ ತುಂಬಿಕೊಂಡಿದ್ದ ಆಕರ್ಷಕ ಬಟ್ಟೆಬರೆಗಳನ್ನೂ, ಚಿನ್ನದ ತಟ್ಟೆಗಳಲ್ಲಿ ಭರ್ತಿಯಾಗಿ ತುಂಬಿದ ಬಿಡಿಮುತ್ತುಗಳ ಅಕ್ಷತೆಗಳನ್ನೂ ಕೈಯಲ್ಲಿ ಹಿಡಿದ ಮಹತ್ತರದೇವಿಯರು ಅವನ ಬಳಿ ಸಾರಿ ನಮಸ್ಕರಿಸಿ ಹೀಗೆಂದರು:

**ವಿಶೇಷ ವಿಚಾರ:** ಮಹತ್ತರದೇವಿ = ಸಾಮಾನಿಕ ದೇವತೆ, ಆಜ್ಞೆ-ಐಶ್ವರ್ಯಗಳನ್ನು ಹೊರತುಪಡಿಸಿ ಉಳಿದ ಗುಣಗಳಲ್ಲಿ ಇಂದ್ರರಿಗೆ ಸಮಾನರಾಗಿ ಅವರ ತಾಯ್ತಂದೆಯರಂತಿರುವ ದೇವತಾವರ್ಗಕ್ಕೆ ಸೇರಿದ ದೇವತೆ

**ಇದು ನಿಜಪೂರ್ವಪುಣ್ಯಫಲದಿಂ ದೊರೆಕೊಂಡ ವಿಮಾನಮೀ ವಿಮಾ**
**ನದೊಳನುಬಂಧಿಸಿರ್ದುದಿದು ದೇವನಿಕಾಯಮಿದೀ ತ್ವದಂಘ್ರಿಪ**
**ದ್ಮದ ಬಳಸಿರ್ಪ ದಿವ್ಯಗಣಿಕಾಜನಮಿಂತಿದನಾಳ್ದು ದೇವ ರಾ**
**ಗದೊಳಿರು ನೀನುಮಿಲ್ಲಿ ಲಲಿತಾಂಗತೆಯಿಂ ಲಲಿತಾಂಗದೇವನೈ ೬೮**

**ಪದವಿಭಾಗ-ಅನ್ವಯ-ಅರ್ಥ:** ದೇವ = ದೇವನೇ, ಇದು ನಿಜಪೂರ್ವಪುಣ್ಯಫಲದಿಂ = ನಿನ್ನ ಪೂರ್ವಜನ್ಮದ ಪುಣ್ಯಫಲವಾಗಿ, ದೊರೆಕೊಂಡ = ಸಿಕ್ಕಿರುವ, ವಿಮಾನಂ = ವಿಮಾನ, ಈ ವಿಮಾನದೊಳ್ = ಈ ವಿಮಾನದಲ್ಲಿ, ಇದು ದೇವನಿಕಾಯಂ = ದೇವಸಮೂಹವು, ಅನುಬಂಧಿಸಿರ್ದುದು = ಸೇರಿರುವುದು, ಇದು ಈ = ಇವರೆಲ್ಲ, ತ್ವತ್ + ಅಂಘ್ರಿಪದ್ಮದ = ನಿನ್ನ ಪಾದಕಮಲಗಳ, ಬಳಸಿರ್ಪ = ಸೇರಿರುವ ದಿವ್ಯಗಣಿಕಾಜನಂ = ದಿವ್ಯಗಣಿಕೆಯರು, ಇಂತು + ಇದನಾಳ್ದು = ಇದನ್ನು ಆಳಿಕೊಂಡು, ನೀನು + ಇಲ್ಲಿ = ಇಲ್ಲಿ ನೀನು, ಲಲಿತಾಂಗತೆಯಿಂ = ಕೋಮಲಶರೀರಿಯಾಗಿ, ರಾಗದೊಳಿರು = ಸಂತೋಷವಾಗಿರು, ಲಲಿತಾಂಗದೇವನೈ = ನೀನು ಲಲಿತಾಂಗದೇವ

**ಗದ್ಯಾನುಸರಣ:** 'ದೇವನೇ, ಇದು ನಿನ್ನ ಪೂರ್ವಜನ್ಮದ ಪುಣ್ಯಫಲವಾಗಿ ಸಿಕ್ಕಿರುವ ವಿಮಾನ; ಈ ದೇವಸಮೂಹವು ಈ ವಿಮಾನದಲ್ಲಿರುವವರು; ಇವರೆಲ್ಲ

ನಿನ್ನ ಪಾದಕಮಲಗಳ ಸೇವೆಗಿರುವ ದಿವ್ಯಗಣಿಕೆಯರು; ಇದನ್ನು ಆಳಿಕೊಂಡು, ಇಲ್ಲಿ ನೀನು ಲಲಿತಾಂಗದೇವನೆಂಬ ಹೆಸರಿನಿಂದ ಸಂತೋಷವಾಗಿರು.'

**ಇದು ಸುಖದೊಂದು ತುತ್ತತುದಿ ರಾಗದ ಮೊತ್ತಮೊದಲ್ ನಿರಂತರಾ**
**ಭ್ಯುದಯದ ಸಾಗರಂ ವಿಭವದಾಗರಮೀ ದಿವಿಜೇಂದ್ರರುಂದ್ರಲೋ**
**ಕದೊಳಮಿದೊಂದೆ ಸಾರಮಿದು ಜೈನಪದಾಬ್ಜವರಪ್ರಸಾದದಾ**
**ದುದು ನಿನಗಪ್ಪ ಕಾರಣದಿನೀಗಳೆ ಪೂಜಿಸು ಚೈತ್ಯರಾಜಿಯಂ ೬೯**

**ಪದವಿಭಾಗ–ಅನ್ವಯ–ಅರ್ಥ:** ಇದು = ಈ ವಿಮಾನವು, ಸುಖದೊಂದು ತುತ್ತತುದಿ = ಸುಖದ ಶಿಖರ, ರಾಗದ ಮೊತ್ತಮೊದಲ್ = ಅನುರಾಗದ ನೆಲೆ, ನಿರಂತರ + ಅಭ್ಯುದಯದ ಸಾಗರಂ = ಕೊನೆಯಿಲ್ಲದ ಏಳಿಗೆಯ ಸಮುದ್ರ, ವಿಭವದ + ಆಗರಂ = ವೈಭವದ ಮೂಲ, ಈ ದಿವಿಜೇಂದ್ರರುಂದ್ರಲೋಕದೊಳಂ = ದೇವೇಂದ್ರನ ಮಹಾಲೋಕದಲ್ಲಿನ, ಇದೊಂದೆ ಸಾರಂ = ಸಾರವಿದು, ಇದು = ಈ ನಿನ್ನ ಸುಖವು, ನಿನಗೆ, ಜೈನಪದಾಬ್ಜವರಪ್ರಸಾದದಾದುದು = ಜಿನನ ಕರುಣೆಯಿಂದ ದೊರಕಿರುವಂಥದು, ಅಪ್ಪ ಕಾರಣದಿನ್ = ಆಗಿರುವ ಕಾರಣದಿಂದ, ಚೈತ್ಯರಾಜಿಯಂ = ಜಿನಾಲಯಸಮೂಹದಲ್ಲಿ, ಈಗಳೆ ಪೂಜಿಸು = ತಕ್ಷಣದಿಂದಲೇ ಪೂಜೆಗೆ ತೊಡಗು

**ಗದ್ಯಾನುಸರಣ:** 'ಈ ವಿಮಾನವು ಸುಖದ ಶಿಖರ, ಅನುರಾಗದ ನೆಲೆ, ಕೊನೆಯಿಲ್ಲದ ಏಳಿಗೆಯ ಸಮುದ್ರ, ವೈಭವದ ಮೂಲ, ದೇವೇಂದ್ರನ ಈ ಮಹಾಲೋಕದಲ್ಲಿನ ಸಾರವಿದು, ಈ ಎಲ್ಲ ಸುಖವು ನಿನಗೆ ದೊರಕಿರುವುದು ಜಿನನ ಕರುಣೆಯಿಂದ, ಆದ್ದರಿಂದ ತಕ್ಷಣದಿಂದಲೇ ಜಿನಾಲಯಸಮೂಹದಲ್ಲಿ ಪೂಜೆಗೆ ತೊಡಗು'

**ವ। ಎಂಬುದುಮಮಲೋಕದರ್ಶನಾನಂತರೋತ್ಪನ್ನರಾಗ ಸಾಗರೋ ದಾರ ಪೂರಪರಿಪ್ಲಾವಿತಾಂತ ರಂಗನನುಸಂಗತಾತ್ಯಂಗ ನುತ್ತುಂಗಮಣಿ ಭೂಷಣಮರೀಚಿಮೇಚಕಿತ ದೇವಾಂಗನಾನಿಕಾಯ ಸಮೇತನೀಶಾನ ಕಲ್ಪದಕೃತ್ರಿಮಚೈತ್ಯಾಲಯಂಗಳಂ ಅರ್ಚಿಸಿ ತಪ್ತ ತಪನೀಯಚ್ಛಾಯನುಂ ಸಪ್ತಹಸ್ತೋಚ್ಚ್ರಯನುಂ ಏಕಪಾರಾವಾರೋಪ ಮಾಯುಷ್ಯನುಂ ವರ್ಷಸಹಸ್ರ ಸಂಕಲ್ಪಕಲ್ಪಿತಾಮೃತಾಹಾರನುಂ ಅರ್ಧ ಮಾಸ'ನಿರ್ಯತ್ಸುರಭಿ ನಿಶ್ವಾಸನುಂ ಕಾಯ ಪ್ರವೀಚಾರನುಂ ಅಪರಿಮ್ಲಾನ ಸುರತರು ಪ್ರಸೂನ ಶೇಖರನುಮಾಗಿ ನಾಲ್ಸಾಸಿರ್ವರ್ ಮನೋನಯನ ವಲ್ಲಭೆಯರೊಳಂ ಸ್ವಯಂಪ್ರಭೆ ಕನಕಲತೆ ಕನಕಮಾಳೆ ವಿದ್ಯುಲ್ಲತೆಯೆಂಬ ನಾಲವರ್ ಮಹಾದೇವಿಯರೊಳಂ,**

**ಪದವಿಭಾಗ–ಅನ್ವಯ–ಅರ್ಥ:** ಎಂಬುದುಂ = ಎಂದು ಹೇಳಿದಾಗ, ಅಮರಲೋಕದರ್ಶನ + ಅನಂತರ = ದೇವಲೋಕವನ್ನು ನೋಡಿದ ಬಳಿಕ,

ಉತ್ಪನ್ನ = ಉಂಟಾದ, ರಾಗಸಾಗರ = ಪ್ರೀತಿಯ ಸಮುದ್ರದಲ್ಲಿ, ಉದಾರಪೂರ = ಭರಪೂರ, ಪರಿಪ್ಲಾವಿತ + ಅಂತರಂಗನ್ = ತೇಲುವ ಹೃದಯವುಳ್ಳವನಾಗಿ, ಅನುಸಂಗತ = ಜೊತೆಯಲ್ಲಿ, ಆತ್ಯಂಗನ್ = ವಿಶೇಷವಸ್ತ್ರಧಾರಿಗಳಾಗಿ, ಉತ್ತುಂಗಮಣಿಭೂಷಣ = ಶ್ರೇಷ್ಠ ರತ್ನಾಭರಣಗಳ, ಮರೀಚಿ = ಕಾಂತಿಯಿಂದ ಕೂಡಿ, ಮೇಚಕಿತ = ಶೋಭಿಸುವ, ದೇವಾಂಗನಾನಿಕಾಯಸಮೇತನ್ = ದೇವತಾಸ್ತ್ರೀಸಮೂಹದೊಡನೆ, ಈಶಾನಕಲ್ಪದ, ಅಕೃತ್ರಿಮ = ಸಹಜವಾದ, ಚೈತ್ಯಾಲಯಂಗಳಂ ಅರ್ಚಿಸಿ = ಜಿನಾಲಯಗಳಲ್ಲಿ ಪೂಜೆಗೈದು, ತಪ್ತ = ಕಾಸಿದ, ತಪನೀಯಚ್ಛಾಯನುಂ = ಚಿನ್ನದ ಬಣ್ಣದವನಾಗಿ, ಸಪ್ತಹಸ್ತ = ಏಳು ಹಸ್ತಗಳಷ್ಟು, ಉಚ್ಚ್ರಯನುಂ = ಎತ್ತರದವನೂ, ಏಕಪಾರಾವಾರ + ಉಪಮ + ಆಯುಷ್ಯನುಂ = ಒಂದು ಸಾಗರಪ್ರಮಾಣದಷ್ಟು ಆಯುಸ್ಸುಳ್ಳವನೂ, ವರ್ಷಸಹಸ್ರ = ಸಾವಿರ ವರ್ಷಗಳ ಕಾಲಕ್ಕೊಮ್ಮೆ, ಸಂಕಲ್ಪಕಲ್ಪಿತ + ಅಮೃತಾಹಾರನುಂ = ಅಮೃತಾಹಾರವನ್ನು ಉಣ್ಣುವ ಸಂಕಲ್ಪವುಳ್ಳವನಗಿ, ಅರ್ಧಮಾಸ = ಅರ್ಧ ತಿಂಗಳು (ಹದಿನೈದು ದಿನ), ನಿರ್ಯತ್ + ಸುರಭಿನಿಶ್ವಾಸನುಂ = ಸುಗಂಧಯುಕ್ತ ನಿಶ್ವಾಸವುಳ್ಳವನಾಗಿಯೂ, ಕಾಯಪ್ರವೀಚಾರನುಂ = ಕಾಯಪ್ರವೀಚಾರನಾಗಿ, ಅಪರಿಮ್ಲಾನ = ಬಾಡದ, ಸುರತರು = ಕಲ್ಪತರುವಿನ, ಪ್ರಸೂನಶೇಖರನುಂ + ಆಗಿ = ಹೂಗಳನ್ನು ಮುಡಿಯುವಂಥವನಾಗಿ, ನಾಲ್ಸಾಸಿರ್ವರ್ = ನಾಲ್ಕು ಸಾವಿರ, ಮನೋನಯನವಲ್ಲಭೆಯರೊಳಂ = ಮನಸ್ಸನ್ನಪಹರಿಸುವ ಪ್ರೇಯಸಿಯರಲ್ಲಿ, ಸ್ವಯಂಪ್ರಭೆ ಕನಕಲತೆ ಕನಕಮಾಳೆ ವಿದ್ಯುಲ್ಲತೆಯೆಂಬ, ನಾಲ್ವರ್ ಮಹಾದೇವಿಯರೊಳಂ = ನಾಲ್ಕು ಮಂದಿ ಮಹಾದೇವಿಯರಿಂದ ಕೂಡಿ (ಇದ್ದನು)

**ಗದ್ಯಾನುಸರಣ:** ಎಂದು ಹೇಳಿದಾಗ ದೇವಲೋಕದಲ್ಲಿ ಸುತ್ತಾಡಿದ ಬಳಿಕ ತನ್ನ ಮನಸ್ಸು ಪ್ರೀತಿಯ ಸಮುದ್ರದಲ್ಲಿ ತೇಲುತ್ತ, ವಿಶೇಷವಸ್ತ್ರಧಾರಿಗಳಾಗಿ ಶ್ರೇಷ್ಠ ರತ್ನಾಭರಣಗಳ ಕಾಂತಿಯಿಂದ ಶೋಭಿಸುವ ದೇವತಾಸ್ತ್ರೀಸಮೂಹದೊಡನೆ ಹೋಗಿ ಈಶಾನಕಲ್ಪದ ಸಹಜವಾದ ಜಿನಾಲಯಗಳಲ್ಲಿ ಪೂಜೆಗೈದನು. ಅವನದು ಅಪರಂಜಿಯ ಮೈಬಣ್ಣ, ಏಳು ಹಸ್ತಗಳಷ್ಟು ಎತ್ತರ, ಒಂದು ಸಾಗರಪ್ರಮಾಣದಷ್ಟು ಆಯುಸ್ಸು, ಸಾವಿರ ವರ್ಷಗಳಿಗೊಮ್ಮೆ ಅಮೃತಾಹಾರವನ್ನು ಉಣ್ಣುವ ಸಂಕಲ್ಪಶಕ್ತಿ, ಅರ್ಧ ತಿಂಗಳಿಗೊಮ್ಮೆ (ಹದಿನೈದು ದಿನಕ್ಕೊಮ್ಮೆ) ಸುಗಂಧಯುಕ್ತ ನಿಶ್ವಾಸವುಳ್ಳವನೂ, ಕಾಯಪ್ರವೀಚಾರನೂ, ಬಾಡದ ಕಲ್ಪತರುಗಳ ಹೂಗಳನ್ನು ಮುಡಿದವನೂ ಆಗಿ – ನಾಲ್ಕು ಸಾವಿರ ಮನಃಪ್ರಿಯೆಯರಲ್ಲಿ ಸ್ವಯಂಪ್ರಭೆ ಕನಕಲತೆ ಕನಕಮಾಳೆ ವಿದ್ಯುಲ್ಲತೆಯೆಂಬ ನಾಲ್ಕು ಮಂದಿ ಮಹಾದೇವಿಯರಲ್ಲಿ ವಿಶೇಷ ಅನುರಕ್ತಿಯಿಂದ ಕೂಡಿದ್ದ.

**ವಿಶೇಷ ವಿಚಾರ:** ಸಾಗರ ಎಂಬುದು ಅನೂಹ್ಯವಾದ ದೀರ್ಘ

ಕಾಲಪ್ರಮಾಣವನ್ನು ಸೂಚಿಸುತ್ತದೆ. ಕಾಯಪ್ರವೀಚಾರ ಎಂದರೆ ದೇಹಸುಖವನ್ನು ಹೊಂದಬಲ್ಲವನು; ಈಶಾನಕಲ್ಪದವರೆಗೆ ಅಮರರು ದೇಹಸಂಬಂಧದಿಂದ ಮೈಥುನಸುಖವನ್ನನುಭವಿಸುತ್ತಾರೆ; ಆ ಮೇಲಣ ಲೋಕಗಳವರು ಮನಸ್ಸಿನಿಂದ ಮೈಥುನಸುಖ ಅನುಭವಿಸಬಲ್ಲ(ಮನಃಪ್ರವೀಚಾರ)ವರಾಗುತ್ತಾರೆ

**ಮಣಿಮಯದೀಪ್ತಿಯೊಳ್ ಪುದಿದು ಪಜ್ಜಳಿಪುಜ್ಜ್ವಳಕಾಂತಿ ಗಾಡಿಯೊಳ್**
**ಪೆಣೆದು ವಿಳಾಸದೊಳ್ ತೊಡರ್ದು ಕೆಯ್ತಮಲಂಪನೆ ಮಾಡೆ ನೋಡಿಕಣ್**
**ತಣಿವಿನಮಪ್ಪಿ ತೋಳ್ ತಣಿವಿನಂ ಸುರತಾಮೃತಸೇವೆಯೊಳ್ ಮನಂ**
**ತಣಿವಿನಮಾದಲಂಪು ಮಿಗೆ ಭೋಗಿಸಿದಂ ಸುರಲೋಕಸೌಖ್ಯಮಂ ೭೦**

**ಪದವಿಭಾಗ–ಅನ್ವಯ–ಅರ್ಥ:** ಮಣಿಮಯದೀಪ್ತಿಯೊಳ್ ಪುದಿದು = ರತ್ನದ ಕಾಂತಿಯಿಂ ಕೂಡಿ, ಪಜ್ಜಳಿಪ + ಉಜ್ಜ್ವಳಕಾಂತಿ = ಬೆಳಗುವ ಮಹಾಪ್ರಭೆಯ, ಗಾಡಿಯೊಳ್ ಪೆಣೆದು = ಸೊಗಸಿನಲ್ಲಿ ಬೆರೆತು, ಕೆಯ್ತಂ + ಅಲಂಪನೆ ಮಾಡೆ ನೋಡಿ = ಸಲ್ಲಾಪವು ಪ್ರೀತಿಯನ್ನುಕ್ಕಿಸುವಂತೆ, ವಿಳಾಸದೊಳ್ ತೊಡರ್ದು = ವಿಲಾಸದಿಂದ ಕೂಡಿ, ಕಣ್ ತಣಿವಿನಂ = ಕಣ್ಣಿಗೆ ತೃಪ್ತಿಯಾಗುವವರೆಗೂ ನೋಡಿ, ತೋಳ್ ತಣಿವಿನಂ = ತೋಳುಗಳು ದಣಿಯುವವರೆಗೂ ತಬ್ಬಿಕೊಂಡು, ಮನಂ ತಣಿವಿನಂ = ಮನಸ್ಸು ತಣಿಯುವವರೆಗೂ ಸುರತಾಮೃತಸೇವೆಯೊಳ್ = ಸಂಭೋಗದಲ್ಲಿ, ಆದ + ಅಲಂಪು = ಉಂಟಾದ ಸುಖವು, ಮಿಗೆ = ಅಧಿಕವಾಗುವಂತೆ, ಸುರಲೋಕಸೌಖ್ಯಮಂ = ದೇವಲೋಕದ ಸುಖವನ್ನು, ಭೋಗಿಸಿದಂ = ಅನುಭವಿಸಿದ

**ಗದ್ಯಾನುಸರಣ:** ರತ್ನದ ಕಾಂತಿಯಿಂದ ಕೂಡಿ ಬೆಳಗುವ ಮಹಾಪ್ರಭೆಯ ಸೊಗಸಿನಲ್ಲಿ ಬೆರೆತು, ಪ್ರೀತಿಯನ್ನುಕ್ಕಿಸುವ ಸಲ್ಲಾಪದ ಲಲ್ಲೆಯಿಂದ ಕೂಡಿ, ಕಣ್ಣಿಗೆ ತೃಪ್ತಿಯಾಗುವವರೆಗೂ ನೋಡುತ್ತ, ತೋಳುಗಳು ದಣಿಯುವವರೆಗೂ ತಬ್ಬಿಕೊಂಡು, ಮನಸ್ಸು ತಣಿಯುವವರೆಗೂ ಸಂಭೋಗದಲ್ಲಿ ನಿರತನಾಗಿ ಲಲಿತಾಂಗನು ದೇವಲೋಕದ ಸುಖವನ್ನು ಮನದಣಿಯೆ ಅನುಭವಿಸಿದ.

**ಪೊಳೆವೆಳಮಿಂಚಿನಂತೆಸೆದು ಗಾಡಿಯೊಳೊಂದಿದ ತನ್ನ ರೂಪು ಕ**
**ಣ್ಗೊಳೆ ಸವಿಯ ಪುದುಂಗೊಳಿಪ ಚಿತ್ರರತಂಗಳ ಭಂಗಿಗಳ್ ಮನಂ**
**ಗೊಳೆ ನಗೆ ಸಬ್ಬವಂ ಬಿನದಮೆಂಬಿವಱಿಂ ಲಲಿತಾಂಗನಂ ಮನಂ**
**ಗೊಳಿಸುವರಿಚ್ಚೆಕಾರ್ತನದ ಲಲ್ಲೆಯ ಸಗ್ಗದ ದೇಸೆಗಾರ್ತಿಯರ್ ೭೧**

**ಪದವಿಭಾಗ–ಅನ್ವಯ–ಅರ್ಥ:** ಪೊಳೆವ + ಎಳಮಿಂಚಿನಂತೆ + ಎಸೆದು = ಹೊಳೆಯುವ ಕುಡಿಮಿಂಚಿನಂತೆ ಕೋರೈಸುವ, ಗಾಡಿಯೊಳ್ + ಒಂದಿದ = ಚೆಲುವಿನಿಂದ, ರೂಪು ಕಣ್ಗೊಳೆ = ತನ್ನ ಆಕೃತಿಯು ಕಂಗೊಳಿಸಲು, ಸವಿಯ

ಪುದುಂಗೊಳಿಪ = ಸವಿಯನ್ನುಂಟುಮಾಡುವ, ಚಿತ್ರರತಂಗಳ ಭಂಗಿಗಳ್ = ವಿಶಿಷ್ಟ ಕಾಮಭಂಗಿಗಳು, ಮನಂಗೊಳೆ = ಮನಸೆಳೆಯಲು, ನಗೆ ಸಬ್ಬವಂ ಬಿನದಂ = ನಗು ಹಾಸ್ಯ ವಿನೋದಗಳು, ಎಂಬಿವಱಿಂ = ಇವುಗಳಿಂದ, ಸಗ್ಗದ ಸುರಲೋಕದ, ಇಚ್ಛೆಕಾರ್ತನದ = ಕಾಮವಾಂಛೆಯ, ಲಲ್ಲೆಯ ದೇಸೆಗಾರ್ತಿಯರ್ = ಸವಿಮಾತುಗಳ ಬೆಡಗಿಯರು, ಲಲಿತಾಂಗನಂ = ಲಲಿತಾಂಗನನ್ನು, ಮನಂಗೊಳಿಸುವರ್ = ಸಂತಸಪಡಿಸುತ್ತಾರೆ

**ಗದ್ಯಾನುಸರಣ:** ಹೊಳೆಯುವ ಕುಡಿಮಿಂಚಿನಂತೆ ಕೋರೈಸುವ ಚೆಲುವಿನ ರೂಪದಿಂದ ಕಂಗೊಳಿಸುತ್ತ, ವಿಶಿಷ್ಟ ಕಾಮಭಂಗಿಗಳಿಂದ ಕೆರಳಿಸುತ್ತ, ತಮ್ಮ ನಗು ಹಾಸ್ಯ ವಿನೋದಗಳಿಂದ ಸವಿಮಾತುಗಳ ಮೂಲಕ ಕಾಮವಾಂಛೆಯನ್ನು ಉದ್ದೀಪಿಸುವ ಸುರಲೋಕದ ಬೆಡಗಿಯರು ಲಲಿತಾಂಗನನ್ನು ಸಂತಸಪಡಿಸುವರು.

**ಕಱಿಯೆ ವಿಳಾಸಮಂ ಪಡೆದ ರಾಗದ ಭೋಗದಲಂಪಿನಿಂಪು ಪೊಂ**
**ಪುಱಿಯೆನೆ ತದ್ವಿಮಾನದೊಳೆ ಪುಟ್ಟಿದ ತನ್ನಯ ದೇವಿಯರ್ ಪಲರ್**
**ಕಱಿವಿನಮಾಯುರಬ್ಧಿಯೊಳನುಕ್ರಮದಿಂ ಪಳಿತೋಪಮಂಗಳ**
**ಯ್ದುಱಿವಿನಮುಂಡನಾ ತ್ರಿದಶಲೋಕಸುಖಾಮೃತಮಂ ಸುರೋತ್ತಮಂ೭೨**

**ಪದವಿಭಾಗ–ಅನ್ವಯ–ಅರ್ಥ:** ವಿಳಾಸಮಂ ಪಡೆದ = ವಿಲಾಸದಿಂದ ಕೂಡಿದ, ರಾಗದ ಭೋಗದ + ಅಲಂಪಿನ + ಇಂಪು = ಅನುರಾಗ ಸಂಭೋಗ ಸುಖಗಳ ಮಾಧುರ್ಯವು, ಕಱಿಯೆ = ಕಡಿಮೆಯಾಗಲು, ಪೊಂಪುಱಿಯೆನೆ = ಅತಿಶಯವಾಗೆಂಬಂತೆ, ತತ್ + ವಿಮಾನದೊಳೆ ಪುಟ್ಟಿದ = ಆ ಲೋಕದಲ್ಲಿಯೇ ಹುಟ್ಟಿದ್ದ, ತನ್ನಯ ದೇವಿಯರ್ ಪಲರ್ = ತನ್ನ ಪ್ರೇಯಸಿರಲ್ಲಿ ಕೆಲವರು, ಆಯುರಬ್ಧಿಯೊಳ್ = ಆಯುಸ್ಸು ಮುಗಿದು, ಅನುಕ್ರಮದಿಂ = ಒಬ್ಬೊಬ್ಬರಾಗಿ, ಕಱಿವಿನಂ = ಗತಿಸಿಹೋಗಲು, ಪಳಿತೋಪಮಂಗಳ್ ಅಯ್ದುಱಿವಿನಂ = ಐದು ಪಳಿತಗಳಷ್ಟು ಅವಧಿ ಮಾತ್ರ ತನ್ನ ಆಯುಸ್ಸು ಉಳಿಯುವರೆಗೂ, ಆ ಸುರೋತ್ತಮಂ = ಆ ದೇವೋತ್ತಮನು, ತ್ರಿದಶಲೋಕಸುಖಾಮೃತಮಂ = ದೇವಲೋಕದ ಸುಖಾಮೃತವನ್ನು ಉಂಡನ್ = ಅನುಭವಿಸಿದ,

**ಗದ್ಯಾನುಸರಣ:** ವಿಲಾಸಮಯವಾದ ಅನುರಾಗ ಸಂಭೋಗ ಸುಖಗಳ ಮಾಧುರ್ಯಗಳು ಕಡಿಮೆಯಾದುವು;ಅದಕ್ಕೂ ಮಿಗಿಲಾಗಿ, ಆ ಲೋಕದಲ್ಲಿಯೇ ಹುಟ್ಟಿದ್ದ ತನ್ನ ಪ್ರೇಯಸಿರಲ್ಲಿ ಕೆಲವರು ಆಯುಸ್ಸು ಮುಗಿದು ಒಬ್ಬೊಬ್ಬರಾಗಿ ಗತಿಸಿಹೋದರು; ಇನ್ನು ಐದು ಪಳಿತಗಳಷ್ಟು ಮಾತ್ರ ತನ್ನ ಆಯುಸ್ಸು ಇದೆಯೆನ್ನುವವರೆಗೂ ಲಲಿತಾಂಗನು ದೇವಲೋಕದ ಸುಖಾಮೃತವನ್ನು ಸವಿದ.

**ವಿಶೇಷ ವಿಚಾರ:** ಪಳಿತ ಎಂಬುದು ದೀರ್ಘ ಕಾಲಮಾನವನ್ನು ಸೂಚಿಸುವ ಒಂದು ಶಬ್ದ.

**ವ। ಅನ್ನೆಗಂ ಸ್ವಯಂಪ್ರಭಾಭಿದಾನೆಯರ್ ಪಲಂಬರುಮತಿ ಕ್ರಾಂತೆಯರಾಗೆ ತತ್ಸಂತಾನದೊಳ್ ಶ್ರೀಪ್ರಭವಿಮಾನದೊಳುಪಪಾದತಳ್ಪತಳದ ಪೊರೆಯೊಳಂ ಮೊರೆವೊರೆಯಿಲ್ಲದ ಮದನರಾಗರಸದೊಳ್ ಪೊರೆದು**

**ಪದವಿಭಾಗ–ಅನ್ವಯ–ಅರ್ಥ:** ಅನ್ನೆಗಂ = ಅಷ್ಟರಲ್ಲಿ, ಸ್ವಯಂಪ್ರಭಾ + ಅಭಿದಾನೆಯರ್ ಪಲಂಬರುಂ = ಸ್ವಯಂಪ್ರಭೆ ಎಂಬ ಹೆಸರಿನ ಹಲವರು, ಅತಿ ಕ್ರಾಂತೆಯರಾಗೆ = ಗತಿಸಲು, ತತ್ + ಸಂತಾನದೊಳ್ = ಅವರ ಸಾಲಿನಲ್ಲಿಯೇ, ಶ್ರೀಪ್ರಭವಿಮಾನದೊಳ್ = ಶ್ರೀಪ್ರಭವಿಮಾನದ, ಉಪಪಾದತಳ್ಪತಳದ = ಹಾಸಿಗೆಗಳ, ಪೊರೆಯೊಳಂ = ಪದರಗಳಲ್ಲಿ, ಪೊರೆವೊರೆಯಿಲ್ಲದ = ಒಂದೇ ಸಮನಾಗಿರದ, ಮದನರಾಗರಸದೊಳ್ ಪೊರೆದು = ಕಾಮಾಭಿಲಾಷೆಯಿಂದ ಕೂಡಿ,

**ಗದ್ಯಾನುಸರಣ:** ಅಷ್ಟರಲ್ಲಿ ಸ್ವಯಂಪ್ರಭೆ ಎಂಬ ಹೆಸರಿನ ಅವನ ಹಲವರು ಪ್ರೇಯಸಿಯರು ಗತಿಸಿದರು; ಆ ಸಾಲಿನಲ್ಲಿ ಶ್ರೀಪ್ರಭವಿಮಾನದಲ್ಲಿನ ದೇವದೇವಿಯರು ಹುಟ್ಟುವ ಹಾಸಿಗೆಯ ಪದರಗಳಲ್ಲಿ ಒಂದೇ ಭಿನ್ನ ತೀವ್ರತೆಯ ಕಾಮವಾಂಛೆಯಿಂದ ಕೂಡಿದ.

**ವಿಶೇಷ ವಿಚಾರ:** ದೇವಲೋಕದಲ್ಲಿ ಸ್ತ್ರೀಯರ ಆಯಸ್ಸು ಪುರುಷರದಕ್ಕಿಂತ ತುಂಬ ಕಡಿಮೆ; ಹಾಗಾಗಿ ಲಲಿತಾಂಗನ ಜೀವಿತಾವಧಿಯಲ್ಲಿ ಹಲವರು ಗತಿಸಿಹೋಗುತ್ತಾರೆ; ಹೊಸಬರು ಹುಟ್ಟುತ್ತಾರೆ. ಪ್ರಾಯಶಃ ಈ ಸ್ವಯಂಪ್ರಭೆ ಆ ಹೆಸರಿನ ಸರಣಿ'ಯಲ್ಲಿ ಹುಟ್ಟಿದ ಕೊನೆಯವಳು.

**ಅಭಿನವಪಾರಿಜಾತಕುಸುಮಾಸವಮೊರ್ಮೊದಲುಣ್ಮೆ ದೇವದುಂ**
**ದುಭಿ ನಭದೊಳ್ ಪೊದಳ್ದೆಸೆಯೆ ಕಣ್ಗೆಸೆದಿರ್ಪ ನಿಜಾಂಗಸಂಗತ**
**ಪ್ರಭೆ ಸುರಲೋಕಮಂ ಬೆಳಗೆ ವಿಸ್ಮಯಮಪ್ಪಿನಮಾಗಳಾ ಸ್ವಯಂ**
**ಪ್ರಭೆ ಲಲಿತಾಂಗನಳ್ಕಿರ್ದೆಗೆ ತೊಟ್ಟನೆ ಬೇಂಟಮೆ ಪುಟ್ಟೆ ಪುಟ್ಟಿದಳ್೭೩**

**ಪದವಿಭಾಗ–ಅನ್ವಯ–ಅರ್ಥ:** ಅಭಿನವ = ಹೊಸ, ಪಾರಿಜಾತಕುಸುಮ + ಆಸವಂ = ಪಾರಿಜಾತದ ಹೂವಿನ ಮಕರಂದವು, ಒರ್ಮೊದಲ್ + ಉಣ್ಮೆ = ಇದ್ದಕ್ಕಿದ್ದಂತೆ ತುಂಬಿಕೊಳ್ಳುವಂತೆ, ನಭದೊಳ್ = ಆಗಸದಲ್ಲಿ, ದೇವದುಂದುಭಿ = ದೇವವಾದ್ಯಗಳು, ಪೊದಳ್ದು + ಎಸೆಯೆ = ವ್ಯಾಪಿಸಿಕೊಳ್ಳಲು, ಕಣ್ಗೆ + ಎಸೆದಿರ್ಪ = ಕಂಗೊಳಿಸುವ, ನಿಜ + ಅಂಗಸಂಗತಪ್ರಭೆ = ತನ್ನ ದೇಹದ ಕಾಂತಿಯು, ಸುರಲೋಕಮಂ ಬೆಳಗೆ = ದೇವಲೋಕವನ್ನು ಬೆಳಗಿಸುವಂತೆ, ವಿಸ್ಮಯಮಪ್ಪಿನಂ

= ಅಚ್ಚರಿಯುಂಟಾಗುವಂತೆ, ಲಲಿತಾಂಗನ + ಅಳ್ಳೆರ್ದೆಗೆ = ಲಲಿತಾಂಗನ ಕೋಮಲಹೃದಯದಲ್ಲಿ, ತೊಟ್ಟನೆ = ಇದ್ದಕ್ಕಿದ್ದಂತೆ, ಬೇಂಟಮೆ ಪುಟ್ಟೆ = ಪ್ರಣಯಭಾವವು ಹುಟ್ಟುವಂತೆ, ಆಗಳ್ ಆ ಸ್ವಯಂಪ್ರಭೆ = ಆಗ ಸ್ವಯಂಪ್ರಭೆಯು, ಪುಟ್ಟಿದಳ್ = ಹುಟ್ಟಿದಳು

**ಗದ್ಯಾನುಸರಣ:** ಹೊಸ ಪಾರಿಜಾತದ ಹೂವಿನಲ್ಲಿ ಇದ್ದಕ್ಕಿದ್ದಂತೆ ಮಕರಂದವು ತುಂಬಿಕೊಳ್ಳುವಂತೆ, ಆಗಸದಲ್ಲಿ ದೇವವಾದ್ಯಗಳ ಶಬ್ದವು ವ್ಯಾಪಿಸಿಕೊಳ್ಳಲು, ಕಂಗೊಳಿಸುವ ತನ್ನ ದೇಹಕಾಂತಿಯು ದೇವಲೋಕವನ್ನು ಅಚ್ಚರಿಯುಂಟುಮಾಡಿ ಬೆಳಗಿಸುವಂತೆ – ಲಲಿತಾಂಗನ ಕೋಮಲಹೃದಯದಲ್ಲಿ ಇದ್ದಕ್ಕಿದ್ದಂತೆ ಪ್ರಣಯಭಾವವನ್ನು ಹುಟ್ಟಿಸುವಂತೆ ಸ್ವಯಂಪ್ರಭೆಯು ಹುಟ್ಟಿದಳು.

**ವಿಶೇಷ ವಿಚಾರ:** ದೇವಲೋಕದಲ್ಲಿ ಜನಿಸುವವರು ಹುಟ್ಟುವಾಗಲೇ ಯೌನದಲ್ಲಿರುತ್ತಾರೆ

**ಅದು ಸುಖದೊಂದು ಪಿಂಡಮದು ಪುಣ್ಯದ ಪುಂಜಮದಂಗಜಂಗೆಬಾ**
**ೞ್ಮೊದಲದು ಚಿತ್ತಜಂಗೆ ಕುಲದೈವಮದಂಗಜಚಕ್ರವರ್ತಿಗೆ**
**ತ್ತಿದ ಪೊಸವಟ್ಟಮಂತದು ಮನೋಜನ ಕೈಪಿಡಿಯೆಂದು ಮಾಣ್ದೆನಾ**
**ಸುದತಿಯ ರೂಪಿಂ ಪೆರ್ಚಿಸನೆಂದೊಡೆ ಚಿಃ ಕರಮೆಗ್ಗನಾಗೆನೇ ೭೪**

**ಪದವಿಭಾಗ–ಅನ್ವಯ–ಅರ್ಥ:** ಅದು ಸುಖದೊಂದು ಪಿಂಡಂ = ಅವಳ ರೂಪು ಸುಖದ ಮುದ್ದೆ, ಅದು ಪುಣ್ಯದ ಪುಂಜಂ = ಪುಣ್ಯದ ಗೊಂಚಲು, ಅದು + ಅಂಗಜಂಗೆ ಬಾೞ್ಮೊದಲ್ = ಕಾಮನ ಬದುಕಿನ ಬಂಡವಾಳ, ಅದು ಚಿತ್ತಜಂಗೆ ಕುಲದೈವಂ = ಮನ್ಮಥನ ಮನೆದೇವರು, ಅದು + ಅಂಗಜಚಕ್ರವರ್ತಿಗೆ + ಎತ್ತಿದ = ಕಾಮನೆಂಬ ರಾಜನಿಗೆ ಬೆಳಗಿದ, ಪೊಸವಟ್ಟಂ = ಹೊಸ ಬಾಸಿಂಗ, ಅಂತದು ಮನೋಜನ ಕೈಪಿಡಿ = ಅದು ಮ್ಮಥನ ಕನ್ನಡಿ, ಎಂದು ಮಾಣ್ದೆನ್ = ಎಂದಷ್ಟೇ ಹೇಳಿ ಸುಮ್ಮನಾಗುತ್ತೇನೆ; ಸುದತಿಯ ರೂಪನ್ = ಆ ಸುಂದರಿಯ ರೂಪವನ್ನು, ಇಂ ಪೆರ್ಚಿಸನ್ + ಎಂದೊಡೆ = ಇನ್ನೂ ಹೆಚ್ಚು ವರ್ಣಿಸಿದರೆ, ಚಿಃ ಕರಂ + ಎಗ್ಗನಾಗೆನೇ = ನಾನು ದೊಡ್ಡ ಮೂರ್ಖನೆನಿಸಿಕೊಳ್ಳುವುದಿಲ್ಲವೇ!

**ಗದ್ಯಾನುಸರಣ:** ಅವಳ ರೂಪು ಎಂದರೆ ಸುಖದ ಮುದ್ದೆ, ಪುಣ್ಯದ ಗೊಂಚಲು, ಕಾಮನ ಬಂಡವಾಳ, ಮನ್ಮಥನ ಮನೆದೇವರು, ಅಂಗಜನೆಂಬ ರಾಜನಿಗೆ ಕಟ್ಟಿದ ಹೊಸ ಬಾಸಿಂಗ, ಅದು ಮನ್ಮಥನ ಕನ್ನಡಿ – ಎಂದಷ್ಟೇ ಹೇಳಿ ಸುಮ್ಮನಾಗುತ್ತೇನೆ; ಆ ಸುಂದರಿಯ ರೂಪವನ್ನು ಇನ್ನೂ ಹೆಚ್ಚು ವರ್ಣಿಸಿದರೆ ನಾನು ದೊಡ್ಡ ಮೂರ್ಖನೆನಿಸಿಕೊಳ್ಳುತ್ತೇನೆ, ಅಷ್ಟೆ.

ನೆಗಟ್ದಮರಾಂಗನಾಜನದ ರೂಪುಗಳೆಲ್ಲಮದೀಕೆಯೊಂದು ದೇ
ಸೆಗೆ ನಿಮಿರ್ವೊಂದು ಪುರ್ವಿನ ನಯಕ್ಕಮರ್ವೊಂದದಗುಂತಿಗೊಂದುಭಂ
ಗಿಗೆ ನೆಗಟ್ಟೊಂದು ಮೆಲ್ಪಿನ ತೊದಳ್ನುಡಿಗಪ್ಪೊಡಮೆಯ್ದೆ ವಾರವೇ
ನೊಗಸುಗಮೆಂದು ತಳ್ತಗಲನಾಕೆಯುನಾ ಲಲಿತಾಂಗವಲ್ಲಭಂ ೭೫

**ಪದವಿಭಾಗ-ಅನ್ವಯ-ಅರ್ಥ:** ನೆಗಟ್ದ + ಅಮರಾಂಗನಾಜನದ = ಪ್ರಸಿದ್ಧರಾದ ದೇವತಾಸ್ತ್ರೀಯರೆಲ್ಲರ, ರೂಪುಗಳೆಲ್ಲಂ = ಸೌಂದರ್ಯವೆಲ್ಲವೂ, ಅದು + ಈಕೆಯ + ಒಂದು ದೇಸೆಗೆ = ಇವಳೊಂದು ರೂಪಿಗೆ, ನಿಮಿರ್ವ + ಒಂದು ಪುರ್ವಿನ ನಯಕ್ಕಂ = ನೀಳವಾದ ಹುಬ್ಬಿನ ಚೆಲುವಿಗೆ, ಅರ್ವು + ಒಂದದು = ಹೆಚ್ಚಿನದಲ್ಲ; ಅಗುಂತಿಗೆ + ಒಂದು ಭಂಗಿಗೆ = ಅತಿಶಯವಾದ ಇವಳ ಭಂಗಿಗೂ, ನೆಗಟ್ದ + ಒಂದು ಮೆಲ್ಪಿನ ತೊದಳ್ನುಡಿಗೆ + ಅಪ್ಪೊಡಂ = ಇಂಪಾದ ಒಂದು ತೊದಲು ನುಡಿಗೂ, ಎಯ್ದೆ ವಾರವು = ಹತ್ತಿರವೂ ಬಾರವು; ಎನ್ + ಒಗಸುಗಂ + ಎಂದು = ಎಷ್ಟು ಅತಿಶಯವಾದವು ಎಂದು, ಆ ಲಲಿತಾಂಗವಲ್ಲಭಂ = ಲಲಿತಾಂಗನು, ಆಕೆಯನ್ = ಅವಳನ್ನು, ತಳ್ತು = ಸೇರಿ, ಅಗಲನ್ = ಬೇರೆಯಾಗಲಾರ

**ಗದ್ಯಾನುಸರಣ:** ಪ್ರಸಿದ್ಧರಾದ ದೇವತಾಸ್ತ್ರೀಯರೆಲ್ಲರ ಸೌಂದರ್ಯವೆಲ್ಲ ಇವಳೊಂದು ರೂಪಿಗೂ, ನೀಳವಾದ ಹುಬ್ಬಿನ ಚೆಲುವಿಗೂ ಹೆಚ್ಚಾಗಲಾರದು; ಅತಿಶಯವಾದ ಇವಳ ಭಂಗಿಗೂ, ಇವಳ ಇಂಪಾದ ಒಂದು ತೊದಲು ನುಡಿಗೂ ಸಮನಾಗವು; ಇವಳ ಚೆಲುವು ಅಷ್ಟು ಅತಿಶಯವಾದುದು ಎಂದು ಲಲಿತಾಂಗನು ಅವಳನ್ನು ಬಿಟ್ಟಿರದಾದ.

ಬ್ರತದಿಂದಂ ಪಡೆದಿಂದ್ರಲೋಕವಿಭವಂ ಮುನ್ನಾದ ದೇವಾಂಗನಾ
ತತಿಯಿಂದಂದಿನಿತಿಂಪನೀಯದು ಮನಕ್ಕಾಹ್ಲಾದಮಂ ಮಾಟ್ಪಿ ತ
ತ್ಸತಿಯಿಂ ನೆಟ್ಟನೆ ಸಾರಮಾದುದು ಗಡಂ ತತ್ಕಲ್ಪಜಂಗೆಂದೊಡಾ
ಜಿತವಿದ್ಯುತ್ಪ್ರಭೆಯುಂ ಸ್ವಯಂಪ್ರಭೆಯನಿನ್ನೇವಣ್ಣಿಪಂ ಬಣ್ಣಿಪಂ ೭೬

**ಪದವಿಭಾಗ-ಅನ್ವಯ-ಅರ್ಥ:** ಬ್ರತದಿಂದಂ = ವ್ರತವನ್ನು ಮಾಡಿ, ಪಡೆದ, ಇಂದ್ರಲೋಕವಿಭವಂ = ಅಮರಲೋಕದ ವೈಭವವು, ಮುನ್ನಾದ ದೇವಾಂಗನಾತತಿಯಿಂದ ಅಂದು = ಮುನ್ನಿನ ದೇವಾಂಗನಾಸಮೂಹದಿಂದ ಪಡೆದ ಸುಖವೂ, ಇನಿತು=ಇಂಪನ್ + ಈಯದು = ಸ್ವಯಂಪ್ರಭೆಯಿಂದ ಪಡೆವ ಇಷ್ಟು ಸುಖಕ್ಕೆ ಸಮನಾಗಲಾರದು; ಈ ರೀತಿ, ಮನಕ್ಕೆ + ಆಹ್ಲಾದಮಂ ಮಾಟ್ಪಿ = ಮನಸ್ಸಿಗೆ ಉಲ್ಲಾಸವನ್ನು ತರುವ, ತತ್ + ಸತಿಯಿಂ = ಆ ಹೆಣ್ಣಿನಿಂದಾಗಿ, ತತ್ + ಕಲ್ಪಜಂಗೆ = ಆ ಲಲಿತಾಂಗನಿಗೆ, ನೆಟ್ಟನೆ ಸಾರಮಾದುದು ಗಡಂ =

ಹೆಚ್ಚು ಸಾಮರ್ಥ್ಯವುಂಟಾಯಿತು, ಎಂದೊಡೆ = ಎಂದ ಮೇಲೆ, ಜಿತವಿದ್ಯುತ್ಪ್ರಭೆಯಂ = ಮಿಂಚಿನ ಕಾಂತಿಯನ್ನು ಗೆಲ್ಲುವ ಆ ಸ್ವಯಂಪ್ರಭೆಯನ್ = ಆ ಸ್ವಯಂಪ್ರಭೆಯನ್ನು, ಬಣ್ಣಿಪಂ = ವರ್ಣಿಸುವವನು, ಇನ್ನು + ಏವಣ್ಣಿಪಂ = ಇನ್ನೇನೆಂದು ವರ್ಣಿಸಬಲ್ಲ!

**ಗದ್ಯಾನುಸರಣ:** ವ್ರತವನ್ನು ಮಾಡಿ ಪಡೆದ ಅಮರಲೋಕದ ವೈಭವವಾಗಲೀ, ಮುನ್ನಿನ ದೇವಾಂಗನಾಸಮೂಹದಿಂದ ಪಡೆದ ಸುಖವಾಗಲೀ ಸ್ವಯಂಪ್ರಭೆಯಿಂದ ಪಡೆವದೀ ಸುಖಕ್ಕೆ ಎಷ್ಟೂ ಸಮನಾಗಲಾರದು; ಈ ರೀತಿ ಮನಸ್ಸಿಗೆ ಉಲ್ಲಾಸವನ್ನು ತರುವ ಆ ಹೆಣ್ಣಿನಿಂದಾಗಿ ಲಲಿತಾಂಗನಿಗೆ ಹೆಚ್ಚು ಸಾಮರ್ಥ್ಯವುಂಟಾಯಿತು ಎಂದ ಮೇಲೆ, ಮಿಂಚಿನ ಕಾಂತಿಯನ್ನು ಮೀರುವ ಆ ಸ್ವಯಂಪ್ರಭೆಯನ್ನು ವರ್ಣಿಸ ಹೊರಡುವವನು ಏನೆಂದು ತಾನೇ ವರ್ಣಿಸಬಲ್ಲ!

**ಎಸೆದೆರ್ದೆಯೊಳ್ ಪಳಂಚುವ ಕಲಧ್ವನಿಯಿಂ ಪೊಸತೊಂದು ರಾಗಮಂ**
**ಪೊಸಯಿಸಿ ಸೋಂಕಿ ಸೋಂಕಿದೊಡೆ ನಿಂದಿರೆ ನಿಂದಧರೋತ್ತರಂಗಳೊಳ್**
**ಮಿಸುಪ ರಸಾಂತರಂಗಳಿನೆಡಂಬಡನಾಗದೆ ತನ್ನೊಳಿಂತು ಪೋ**
**ಲಿಸುವೊಡೆ ಪೋಲಿಸಲ್ಕೆ ದೊರೆ ವೀಣೆಯಿನಾ ಸುರತಪ್ರವೀಣೆಯಂ ೭೭**

**ಪದವಿಭಾಗ-ಅನ್ವಯ-ಅರ್ಥ:** ಕಲಧ್ವನಿಯಿಂ = ಮಧುರಧ್ವನಿಯಿಂದ, ಪೊಸತೊಂದು ರಾಗಮಂ ಪೊಸಯಿಸಿ = ಹೊಸತೊಂದು ರಾಗವನ್ನೇ ಸೃಷ್ಟಿಸಿ, ಎಸೆದು + ಎರ್ದೆಯೊಳ್ = ಎದೆಯಲ್ಲಿ, ಪಳಂಚುವ = ಉಜ್ವಲವಾಗುವ, ಸೋಂಕಿ = ತಾಕಿ, ಸೋಂಕಿದೊಡೆ ನಿಂದಿರೆ = ತಾಕಿ ನಿಂತಿರಲು, ನಿಂದು + ಅಧರೋತ್ತರಂಗಳೊಳ್ = ಹಾಗೆ ನಿಂತು, ತುಟಿಗಳಲ್ಲಿ, ಮಿಸುಪ ರಸಾಂತರಂಗಳಿನ್ = ಪ್ರಜ್ವಲವಾದ ರಸವಿನ್ಯಾಸದಿಂದ, ಎಡಂಬಡನಾಗದೆ = ಹೊಂದಿಕೆಯಾಗದೆ, ತನ್ನೊಳ್ = ತನ್ನಲ್ಲಿಯೇ, ಇಂತು ಪೋಲಿಸುವೊಡೆ = ಹೋಲಿಸುವುದಾದರೆ, ಆ ಸುರತಪ್ರವೀಣೆಯಂ = ಆ ಸಂಭೋಗಕುಶಲೆಯಾದ ಆ ಸ್ವಯಂಪ್ರಭೆಯನ್ನು, ವೀಣೆಯನ್ = ವೀಣೆಯ ಜೊತೆ, ಪೋಲಿಸಲ್ಕೆ ದೊರೆ = ಹೋಲಿಸುವುದು ಸರಿ

**ಗದ್ಯಾನುಸರಣ:** ತನ್ನ ಮಧುರಧ್ವನಿಯಿಂದ ಹೊಸತೊಂದು ರಾಗವನ್ನೇ ಸೃಷ್ಟಿಸಿ, ಎದೆಯನ್ನು ಉಜ್ವಲವಾಗಿ ತಾಕಿ ನಿಂತು, ತುಟಿಗಳಲ್ಲಿ ಪ್ರಜ್ವಲವಾದ ರಸವಿನ್ಯಾಸದಿಂದ ಕೂಡಿದ ಸಂಭೋಗಕುಶಲೆಯಾದ ಆ ಸ್ವಯಂಪ್ರಭೆಯನ್ನು ವೀಣೆಯ ಜೊತೆ ಹೋಲಿಸುವುದು ಸರಿ

**ವಿಶೇಷ ವಿಚಾರ:** ಈ ಪದ್ಯದಲ್ಲಿ ಸ್ವಯಂಪ್ರಭೆಯನ್ನು ವೀಣೆಗೆ ಹೋಲಿಸಲಾಗಿದೆ; ಕಲಧ್ವನಿ, ರಾಗ, ಸೋಂಕು, ಅಧರ + ಉತ್ತರ, ರಸ – ಮುಂತಾದ ಶಬ್ದಗಳು ಒಂದೆಡೆ ವೀಣೆಗೂ ಇನ್ನೊಂದೆಡೆ ಸ್ವಯಂಪ್ರಭೆಯ ಸುರತಕೌಶಲಕ್ಕೂ ಅನ್ವಯಿಸಿಕೊಳ್ಳಬೇಕು.

ವ। ಮತ್ತಮಾಕೆವೆರಸೊರ್ಮೆ ನಂದೀಶ್ವರಮಹಾಮಹಿಮೆಗಂ ಪಂಚ ಕಲ್ಯಾಣೋತ್ಸವಕ್ಕಮ ಚ್ಯುತೇಂದ್ರನೊಡನೆ ನಿಜಪೂಜಾವಿಳಾಸಮಂ ಮೆಱೆಯ ಲೆಂದು ಪೋಗಿ ವಿವಿಧ ದಿವ್ಯದ್ರವ್ಯಾರ್ಚನೆಗಳಿಂ ತ್ರೈಲೋಕ್ಯ ಪೂಜ್ಯನಂ ಪೂಜಿಸಿಯುಮೋರೊರ್ಮೆ,

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ = ಅಲ್ಲದೆ, ಒರ್ಮೆ ಆಕೆವೆರಸು = ಒಮ್ಮೆ ಆಕೆಯ ಜೊತೆಯಲ್ಲಿ, ನಂದೀಶ್ವರಮಹಾಮಹೆಗಂ = ನಂದೀಶ್ವರವ್ರತಕ್ಕೂ, ಪಂಚಕಲ್ಯಾಣೋತ್ಸವಕ್ಕಂ = ಪಂಚಕಲ್ಯಾಣಕ್ಕೂ, ಅಚ್ಯುತೇಂದ್ರನೊಡನೆ, ನಿಜಪೂಜಾ ವಿಳಾಸಮಂ ಮೆಱೆಯಲ್ + ಎಂದು = ತನ್ನ ಪೂಜಾವೈಖರಿಯನ್ನು ನೆರವೇರಿಸ ಲೆಂದು, ಪೋಗಿ = ಹೋಗಿ, ವಿವಿಧ ದಿವ್ಯದ್ರವ್ಯಾರ್ಚನೆಗಳಿಂ = ನಾನಾ ವಸ್ತುಗಳಿಂದ ತ್ರೈಲೋಕ್ಯಪೂಜ್ಯನಂ = ತ್ರಿಲೋಪೂಜಿತನಾದ ಅರ್ಹಂತನನ್ನು, ಪೂಜಿಸಿಯುಂ = ಪೂಜಿಸಿಯೂ, ಓರೊರ್ಮೆ = ಒಮ್ಮೊಮ್ಮೆ

**ಗದ್ಯಾನುಸರಣ:** ಅಲ್ಲದೆ, ಒಮ್ಮೆ ಆಕೆಯ ಜೊತೆಯಲ್ಲಿ ನಂದೀಶ್ವರವ್ರತಕ್ಕೂ, ಪಂಚಕಲ್ಯಾಣೋತ್ಸವಕ್ಕೂ ತನ್ನ ಪೂಜಾವೈಖರಿಯನ್ನು ನೆರವೇರಿಸಲೆಂದು ಅಚ್ಯುತೇಂದ್ರನೊಡನೆ ಹೋಗಿ ತ್ರಿಲೋಪೂಜಿತನಾದ ಅರ್ಹಂತನನ್ನು ವಿಧವಿಧವಾಗಿ ಪೂಜಿಸುತ್ತಿದ್ದ.

**ಹಿಮವತ್ಕುತ್ಕೀಳಲೀಲಾವನಪರಿಸರರಮ್ಯೋಪಕಂಠಂಗಳೊಳ್ಪಿಂ**
**ಹಿಮವದ್ದೇವೇಂದ್ರಶೈಲೋಪರಿತಳವನದೊಳ್ತಳ್ತಲಂಪಿಂ ಸ್ವಯಂಭೂ**
**ರಮಣಾಂಭೋರಾಶಿವೇಳಾವನನಿಕಟನಿಕುಂಜಂಗಳೊಳ್ ಕ್ರೀಡಿಸುತ್ತು**
**ತ್ತಮಸೌಖ್ಯಾಧಾರನಾದಂ ಸುಕವಿಜನಮನೋಮಾನಸೋತ್ತಂಸಹಂಸಂ ೭೮**

**ಪದವಿಭಾಗ–ಅನ್ವಯ–ಅರ್ಥ:** ಹಿಮವತ್ + ಕುತ್ಕೀಳ = ಹಿಮವತ್ ಪರ್ವತದಲ್ಲಿನ, ಲೀಲಾವನಪರಿಸರ = ವಿಹಾರತಾಣಗಳಲ್ಲಿ, ರಮ್ಯ + ಉಪ ಕಂಠಂಗಳ = ಸುಂದರವಾದ ತಪ್ಪಲುಗಳಲ್ಲಿ, ಒಳ್ಪಿಂ ಹಿಮವತ್ + ದೇವೇಂದ್ರಶೈಳ = ಹಿಮದಿಂದ ಕೂಡಿದ ದೇವೇಂದ್ರಶೈಲದ, ಉಪರಿತಳವನದೊಳ್ = ಮೇಲ್ಭಾಗದಲ್ಲಿನ ಉದ್ಯಾನಗಳಲ್ಲಿ, ಸ್ವಯಂಭೂರಮಣ + ಅಂಭೋರಾಶಿ = ಸಮುದ್ರದ, ವೇಳಾವನನಿಕಟ = ಅಂಚಿಗೆ ಹತ್ತಿರವಿದ್ದ, ನಿಕುಂಜಂಗಳೊಳ್ = ಬಳ್ಳಿಮಾಡಗಳಲ್ಲಿಯೂ, ಕ್ರೀಡಿಸುತ್ತೆ = ವಿಹರಿಸುತ್ತ, ತಳ್ತ + ಅಲಂಪಿಂ = ಉಂಟಾದ ಸಂತೋಷದಿಂದ, ಸುಕವಿಜನಮನೋಮಾನಸೋತ್ತಂಸಹಂಸಂ = (ಶ್ರೇಷ್ಠ ಕವಿಗಳ ಮನಸ್ಸುಗಳೆಂಬ ಸರೋವರದಲ್ಲಿ ತೇಲಾಡುವ ಹಂಸದಂತಿದ್ದ) ಲಲಿತಾಂಗನು, ಉತ್ತಮಸೌಖ್ಯಾಧಾರನಾದಂ = ಮೇಲ್ಮಟ್ಟದ ಸುಖಕ್ಕೆ ಆಗರವಾದ

**ಗದ್ಯಾನುಸರಣ:** ಹಿಮವತ್ ಪರ್ವತಶ್ರೇಣಿಯ ವಿಹಾರತಾಣಗಳಲ್ಲಿಯೂ, ಪರ್ವತದ ಸುಂದರವಾದ ತಪ್ಪಲುಗಳಲ್ಲಿಯೂ, ಹಿಮದಿಂದ ಕೂಡಿದ ದೇವೇಂದ್ರಶೈಲದ ಮೇಲ್ಭಾಗದಲ್ಲಿನ ಉದ್ಯಾನಗಳಲ್ಲಿಯೂ ಸ್ವಯಂಭೂರಮಣ

ಸಮುದ್ರದ ಅಂಚಿಗೆ ಹತ್ತಿರವಿದ್ದ ಬಳ್ಳಿಮಾಡಗಳಲ್ಲಿಯೂ ಸಂತೋಷದಿಂದ ವಿಹರಿಸುತ್ತಿದ್ದ; ಹೀಗೆ ಶ್ರೇಷ್ಠ ಕವಿಗಳ ಮನಸ್ಸುಗಳೆಂಬ ಸರೋವರದಲ್ಲಿ ತೇಲಾಡುವ ಹಂಸದಂತಿದ್ದ ಲಲಿತಾಂಗನು ಮೇಲ್ಮಟ್ಟದ ಸುಖಕ್ಕೆ ಆಗರವಾದ.

**ಅಣಿಮಾದ್ಯಷ್ಟಗುಣಪ್ರವೀಣವಿಭವಂ ದೇವಾಂಗನಾಸನ್ಮನಃ**
**ಪ್ರಣಯಪ್ರೀಣಿತಮಾನಸಂ ಸುರವಧೂಲೀಲಾವಧೂತಪ್ರತಿ**
**ಕ್ಷಣಚಂಚಚ್ಚಮರೀರುಹಂ ಪಟುನಟಪ್ರಾರಬ್ಧಸಂಗೀತಕಂ**
**ತಣಿದಂ ಸಂತತಮಿಂತು ದಿವ್ಯಸುಖದೊಳ್ ಸಂಸಾರಸಾರೋದಯಂ೭೬**

**ಪದವಿಭಾಗ–ಅನ್ವಯ–ಅರ್ಥ:** ಅಣಿಮಾದಿ + ಅಷ್ಟಗುಣ = ಅಣಿಮಾ ಮುಂತಾದ ಎಂಟು ಗುಣಗಳಲ್ಲಿ, ಪ್ರವೀಣವಿಭವಂ = ತನಗಿರುವ ಪ್ರಾವೀಣ್ಯದ ವೈಭವವುಳ್ಳವನೂ, ದೇವಾಂಗನಾಸನ್ಮನಃಪ್ರಣಯಪ್ರೀಣಿತಮಾನಸಂ = ದೇತಾಸ್ತ್ರೀಯರ ಪ್ರಣಯದಿಂದ ಸಂಪ್ರೀತನಾದ ಮನಸ್ಸುಳ್ಳವನೂ, ಸುರವಧೂ = ದೇವತಾಸ್ತ್ರೀಯರಿಂದ, ಲೀಲಾ + ಅವಧೂತಪ್ರತಿಕ್ಷಣಚಂಚತ್ + ಚಮರೀರುಹಂ = ಒನಪಿನಿಂದ ಸತತವಾಗಿ ಬೀಸಲ್ಪಟ್ಟ ಚಾಮರವುಳ್ಳವನೂ, ಪಟುನಟ ಪ್ರಾರಬ್ಧಸಂಗೀತಕಂ = ಸಮರ್ಥ ನಟರಿಂದ ಆರಂಭಿಸಲಾದ ಸಂಗೀತ ವನ್ನಾಲಿಸುವವನೂ, ಸಂಸಾರಸಾರೋದಯಂ = ಸಂಸಾರಸಾರದ ಏಳಿಗೆಯನ್ನು ಪಡೆದ ಲಲಿತಾಂಗನು, ಇಂತು = ಹೀಗೆ ಸಂತತಂ = ನಿರಂತರವಾದ ದಿವ್ಯಸುಖದೊಳ್ = ದೇವಲೋಕದ ಸುಖದಲ್ಲಿ, ತಣಿದಂ = ಮುಳುಗಿಹೋದ

**ಗದ್ಯಾನುಸರಣ:** ಅವನು ಅಣಿಮಾ ಮುಂತಾದ ಎಂಟು ಗುಣಗಳಲ್ಲಿ ಪ್ರಾವೀಣ್ಯವನ್ನು ಪಡೆದ; ದೇವತಾಸ್ತ್ರೀಯರ ಪ್ರಣಯದಿಂದ ಸಂತುಷ್ಟಗೊಂಡ; ದೇವತಾಸ್ತ್ರೀಯರು ಒನಪಿನಿಂದ ಅವನಿಗೆ ಚಾಮರಗಳಿಂದ ಗಾಳಿ ಹಾಕುತ್ತಿದ್ದರು, ಸಮರ್ಥ ನಟರು ಇಂಪಾದ ಸಂಗೀತವನ್ನು ಕೇಳಿಸುತ್ತಿದ್ದರು ಹೀಗೆ, ಸಂಸಾರಸಾರೋದಯನಾದ ಲಲಿತಾಂಗನು ದೇವಲೋಕದ ನಿರಂತರ ಸುಖದಲ್ಲಿ ಮುಳುಗಿಹೋದ.

**ವಿಶೇಷ ವಿಚಾರ:** ಅಣಿಮಾದ್ಯಷ್ಟಗುಣ = ಯೋಗದಿಂದ ಸಿದ್ಧಿಸುವ ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ ಎಂಬ ಸಾಮರ್ಥ್ಯಗಳು

**ಇಲ್ಲಿಗೆ ಲಲಿತಾಂಗದೇವವರ್ಣನಂ ಎಂಬ ಎರಡನೆಯ ಆಶ್ವಾಸ ಮುಗಿದುದು**

# ಮೂರನೆಯ ಆಶ್ವಾಸ

**ಶ್ರೀಮದಮರಾಂಗನಾನನ**
**ತಾಮರಸಾಮೋದಮತ್ತಮಧುಕರನಾ ಕ**
**ಲ್ಪಾಮರನೊಸೆದಂ ಸುರಸೌ**
**ಖ್ಯಾಮೃತರಸದೊಳ್ ಸರಸ್ವತೀಮಣಿಹಾರಂ** ೧

**ಪದವಿಭಾಗ-ಅನ್ವಯ-ಅರ್ಥ:** ಶ್ರೀಮತ್ + ಅಮರಾಂಗನ + ಆನನ = ಸುಂದರವಾದ ಅಮರಲಲನೆಯರ ಮುಖಗಳೆಂಬ, ತಾಮರಸ + ಆಮೋದ = ತಾವರೆಯಲ್ಲಿ ಸಂತೋಷ ಕಾಣುವ, ಮತ್ತಮಧುಕರನ್ = ಸೊಕ್ಕಿದ ದುಂಬಿಯಂತಿದ್ದ, ಸರಸ್ವತೀಮಣಿಹಾರಂ = ಸರಸ್ವತಿಯ ಮುತ್ತಿನ ಹಾರವಾಗಿದ್ದ, ಆ ಕಲ್ಪಾಮರನ್ = ಶ್ರೀಪ್ರಭ ಕಲ್ಪದ ದೇವತೆಯಾದ ಲಲಿತಾಂಗನು, ಸುರಸೌಖ್ಯ + ಅಮೃತರಸದೊಳ್ = ದೇವಲೋಕದ ಸಂತೋಷರಸದಲ್ಲಿ, ಎಸೆದಂ = ಸೊಗಸಿದ

**ಗದ್ಯಾನುಸರಣ:** ಸುಂದರವಾದ ಅಮರಲಲನೆಯರ ಮುಖತಾವರೆಯಲ್ಲಿ ಸಂತೋಷ ಕಾಣುವ ಸೊಕ್ಕಿದ ದುಂಬಿಯಂತಿದ್ದ ಸರಸ್ವತಿಯ ಮುತ್ತಿನ ಹಾರವಾಗಿದ್ದ ಶ್ರೀಪ್ರಭ ಕಲ್ಪದ ದೇವತೆಯಾದ ಲಲಿತಾಂಗನು ದೇವಲೋಕದ ಸಂತೋಷರಸದಲ್ಲಿ ಶೋಭೆವಡೆದ.

**ಸುರತರುನಂದನಾವಳಿಗಳಂಗಜರಾಗಮನೀವುವಾವುದೊಂ**
**ದಿರಲೆಡೆ ಚೆಲ್ವದರ್ಕೆ ಬಗೆದಾಗಳೆ ವಾಹನದೇವಿಯರುಯ್ವರ**
**ಚ್ಚರಿಸಿಯರಿಚ್ಚೆಯಂ ಸಲಿಪರೊಲ್ದಣಿಮಾದಿಗುಣಾನ್ವಿತಾಮರರ್**
**ಪರಿವೆಸಗೆಯ್ವರೆಂಬೆನೆಱಿಯೆಂ ಪೊಗಟಲ್ ಸುರಸೌಖ್ಯಲೋಕಮಂ** ೨

**ಪದವಿಭಾಗ-ಅನ್ವಯ-ಅರ್ಥ:** ಸುರತರುನಂದನ + ಆವಳಿಗಳ್ = ಕಲ್ಪವೃಕ್ಷಗಳ ಗುಂಪುಗಳು, ಅಂಗಜರಾಗಮನೀವುವು = ಕಾಮವಾಂಛೆಯನ್ನು ನೀಡುತ್ತವೆ; ಆವುದೊಂದು + ಇರಲ್ + ಎಡೆ ಚೆಲ್ವು = ಯಾವುದಾದರೂ ಒಂದು ಸುಂದರ ತಾಣವಿದ್ದರೆ, ಬಗೆದಾಗಳೆ = ಆಸೆಪಟ್ಟಾಗ, ಅದರ್ಕೆ = ಅಂಥ ಎಡೆಗಳಿಗೆ, ವಾಹನದೇವಿಯರ್ + ಉಯ್ವರ್ = ವಾಹನದೇವಿಯರು ಕರೆದೊಯ್ಯುವರು; ಅಚ್ಚರಿಸಿಯರ್ = ಅಪ್ಸರಸ್ತ್ರೀಯರು, ಒಲ್ದು ಇಚ್ಚೆಯಂ ಸಲಿಪರ್

= ಪ್ರೀತಿಯಿಂದ ಆಸೆಯನ್ನು ಪೂರೈಸುತ್ತಾರೆ; ಅಣಿಮಾದಿಗುಣಾನ್ವಿತ + ಅಮರರ್ = ಅಣಿಮಾದಿ ಗುಣಗಳನ್ನು ಸಿದ್ಧಿಸಿಕೊಂಡ ದೇವತೆಗಳು, ಪರಿವೆಸಗೆಯ್ವರ್ = ಪರಿಚಾರಿಕೆ ಮಾಡುತ್ತಾರೆ; ಎಂಬೆನ್ = ಎನ್ನುತ್ತೇನೆ, ಅಷ್ಟೆ; ಸುರಸೌಖ್ಯಲೋಕಮಂ = ಆ ದೇವಲೋಕದ ಸುಖವನ್ನು, ಪೊಗಟಲ್ ಅಱಿಯೆಂ = ಹೊಗಳಲು ನಾನು ಅಸಮರ್ಥ

**ಗದ್ಯಾನುಸರಣ:** ಕಲ್ಪವೃಕ್ಷಗಳು ಅವನ ಕಾಮವಾಂಛೆಯನ್ನು ಕೆರಳಿಸುತ್ತವೆ; ಯಾವುದಾದರೂ ಒಂದು ಸುಂದರ ತಾಣವಿದ್ದರೆ, ನೋಡಲು ಆಸೆಪಟ್ಟರೆ ಅಂಥ ಎಡೆಗಳಿಗೆ ವಾಹನದೇವಿಯರು ಕರೆದೊಯ್ಯುತ್ತಾರೆ; ಅಪ್ಸರಸ್ತ್ರೀಯರು ಪ್ರೀತಿಯಿಂದ ಅವನ ಆಸೆಯನ್ನು ಪೂರೈಸುತ್ತಾರೆ; ಅಣಿಮಾದಿ ಗುಣಗಳನ್ನು ಸಿದ್ಧಿಸಿಕೊಂಡ ದೇವತೆಗಳು ಅವನ ಪರಿಚಾರಿಕೆ ಮಾಡುತ್ತಾರೆ – ಎಂದು ಹೇಳಬಹುದೇ ಹೊರತು ಆ ದೇವಲೋಕದ ಸುಖವನ್ನು ಹೊಗಳಲು ನಾನು ಅಸಮರ್ಥ.

**ವ| ಅಂತಾತ್ಮಪುಣ್ಯೋಪಾರ್ಜಿತಾಮರಲೋಕ ಭೋಗಮೇಕ**
**ಸಾಗರಪ್ರಮಿತಜೀವಿತ ಮಱುದಿಂಗಳುೞಿದುವೆಂಬಂದಿಂಗೆ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಆತ್ಮಪುಣ್ಯ + ಉಪಾರ್ಜಿತ = ತನ್ನ ಪುಣ್ಯದಿಂದ ಗಳಿಸಿದ್ದ, ಅಮರಲೋಕಭೋಗಂ = ದೇವಲೋಕದ ಸುಖವು, ಏಕಸಾಗರಪ್ರಮಿತಜೀವಿತಂ = ಒಂದು ಸಾಗರಪ್ರಮಾಣದ ಜೀವನದಲ್ಲಿ, ಅಱುದಿಂಗಳ್ + ಉೞಿದುವು = ಇನ್ನು ಆರು ತಿಂಗಳು ಮಾತ್ರ ಉಳಿದಿವೆ, ಎಂಬಂದಿಂಗೆ = ಎನ್ನುವ ಹೊತ್ತಿನಲ್ಲಿ,

**ಗದ್ಯಾನುಸರಣ:** ಹಾಗೆ ತನ್ನ ಪುಣ್ಯದಿಂದ ಗಳಿಸಿದ್ದ ಒಂದು ಸಾಗರಪ್ರಮಾಣದ ದೇವಲೋಕದ ಸುಖಜೀವನದಲ್ಲಿ ಇನ್ನು ಆರು ತಿಂಗಳು ಮಾತ್ರ ಉಳಿದಿವೆ ಎನ್ನುವ ಹೊತ್ತಿನಲ್ಲಿ,

**ಸೂಡಿದ ಪಾರಿಜಾತದ ನಮೇರುವ ಬಾಸಿಗಮೊಯ್ಯನೊಯ್ಯನಿ**
**ರ್ಪೋೞಿದಿದುದಂದಿನಂಗರುಚಿ ಕಣ್ಗೊಳಿದಾಯ್ತು ವಿಭೂಷಣಂಗಳೊಳ್**
**ತೀಡುವ ರಶ್ಮಿಗಳ್ ಮಸುಳ್ದುವಾಗುಳಿಯಾಯ್ತಿನಿತುಬ್ಬೆಗಂ ಮೊಗಂ**
**ಬಾಡೆ ತಗುಳ್ದು ಸೂಚಿಸಿದುವಾ ದಿವಿಜಂಗವಸಾನಕಾಲಮಂ ೩**

**ಪದವಿಭಾಗ–ಅನ್ವಯ–ಅರ್ಥ:** ಸೂಡಿದ = ಧರಿಸಿದ್ದ, ಪಾರಿಜಾತದ ನಮೇರುವ ಬಾಸಿಗಂ = ಪಾರಿಜಾತ ಸುರಗಿ ಹೂಗಳ ಮಾಲೆಯು, ಒಯ್ಯನೊಯ್ಯನೆ = ನಿಧಾನವಾಗಿ, ಇರ್ಪೋೞಿದುದು = ಬಾಡಲು ತೊಡಗಿತು; ಅಂದಿನ +

ಅಂಗರುಚಿ = ಆಗಿನ ದೇಹಕಾಂತಿಯು, ಕಣ್ಗೆ + ಇಳಿದಾಯ್ತು = ನೋಡಲು ಕ್ಷೀಣವಾಯ್ತು; ವಿಭೂಷಣಂಗಳೊಳ್ = ಆಭರಣಗಳಲ್ಲಿ, ತೀಡುವ = ತುಂಬಿದ್ದ, ರಶ್ಮಿಗಳ್ = ಕಿರಣಗಳು, ಮಸುಳ್ದುವು = ಕುಂದಿದುವು; ಆಗುಳಿಯಾಯ್ತು = ಆಕಳಿಕೆ ಆರಂಭವಾಯಿತು, ಮೊಗಂ ಬಾಡೆ = ಮುಖವು ಕಾಂತಿಹೀನವಾಗಿ, ಇನಿತು + ಉಬ್ಬೆಗಂ = ಒಂದಷ್ಟು ಕಳವಳವು, ತಗುಳ್ದು = ತಲೆದೋರಿ, ದಿವಿಜಂಗೆ = ಲಲಿತಾಂಗನಿಗೆ ಅವಸಾನಕಾಲಮಂ = ಮರಣಕಾಲವನ್ನು, ಸೂಚಿಸಿದುವು

**ಗದ್ಯಾನುಸರಣ:** ಅವನು ಧರಿಸಿದ್ದ ಪಾರಿಜಾತ ಸುರಗಿ ಹೂಗಳ ಮಾಲೆಯು ನಿಧಾನವಾಗಿ ಬಾಡಲತೊಡಗಿತು; ದೇಹಕಾಂತಿಯು ಕ್ಷೀಣವಾಯ್ತು; ಆಭರಣಗಳಲ್ಲಿನ ಹೊಳಪು ಕುಂದಿತು; ಆಕಳಿಕೆ ಬರಲು ಆರಂಭವಾಯಿತು; ಮುಖವು ಕಾಂತಿಹೀನವಾಯಿತು; ಒಂದಷ್ಟು ಕಳವಳವು ತಲೆದೋರಿತು – ಇವು ಲಲಿತಾಂಗನಿಗೆ ಮರಣಕಾಲವನ್ನು ತನ್ನ ಸೂಚಿಸಿದುವು.

**ವಿಶೇಷ ವಿಚಾರ:** ಇಲ್ಲಿ ನಕಾರಾತ್ಮಕವಾಗಿ ಸಂಭವಿಸಿದ ಎಲ್ಲಕ್ಕೂ ವಿರುದ್ಧವಾದ ಸ್ಥಿತಿಯು ಅಮರರದು ಎಂದು ಭಾವ. ಲಲಿತಾಂಗನು ತನ್ನ ಶರೀರಕಾಂತಿಯಂತೆ ಬಾಡದ ಮಾಲೆಯನ್ನು ಧರಿಸಿದ್ದನೆಂಬುದು 'ಪೂರ್ವಪುರಾಣ'ದ ವರ್ಣನೆ – 'ತನುಚ್ಛಾಯಾಮಿವಾಮ್ಲಾನಿಂ ದಧಾನಃ ಪ್ರಜಮುಜ್ಜ್ವಲಂ' (ಪೂಪು ೫–೨೮೧)

**ವ ಮತ್ತಂ ತನ್ನ ಪೋಗಿಂಗೆ ನಡನಡನಡುಗುವಂತೆ ನಡುಗುವಪವನದ ಕಲ್ಪವೃಕ್ಷಂಗಳುಮಂ ತನ್ನಗಲ್ಕೆಗೆ ಬಿನ್ನನಿರ್ಪಂತೆ ಬಿನ್ನನಾಗಿರ್ದ ವಿಮಾನದ ಮಣಿಕುಟ್ಟಿಮಭೂಮಿಗಳುಮಂ ಆಗಳಾಗಳೆ ತನ್ನಂ ಪೆಜರ್ ಪಿಡಿದು ತೆಗೆವಂತೆ ತನಗೆ ತಾನೆ ಪೋಣ್ಮುವ ಭಯಮುಮಂ ಭೋಂಕೆನೆ ಕಂಡು ನಾಕಲೋಕ ಚ್ಯುತಿಯನಾಗಳಱಿದು ಮನದೊಳಳ್ಕಿ ಬೆಳ್ಕನೆವೋಗಿ,**

**ಪದವಿಭಾಗ–ಅನ್ವಯ–ಅರ್ಥ;** ಮತ್ತಂ = ಜೊತೆಗೆ, ತನ್ನ ಪೋಗಿಂಗೆ = ತಾನು ಅಮರಲೋಕದಿಂದ ಹೋಗುತ್ತಿರುವದರಿಂದ, ನಡನಡನಡುಗುವಂತೆ = ಭಯದಿಂದ ತಲ್ಲಣಿಸುವ ಹಾಗೆ, ನಡುಗುವ = ನಡುಗುತ್ತಿರುವ, ಉಪವನದ ಕಲ್ಪವೃಕ್ಷಂಗಳುಮ್ಮಂ = ಉದ್ಯಾನವನದ ಕಲ್ಪತರುಗಳನ್ನೂ, ತನ್ನ + ಅಗಲ್ಕೆಗೆ = ತನ್ನ ವಿಯೋಗದಿಂದ, ಬಿನ್ನನಿರ್ಪಂತೆ ಬಿನ್ನನಾಗಿರ್ದ = ಕಳೆಗುಂದಿದಂತೆ ಸುಮ್ಮನಿದ್ದ, ವಿಮಾನದ = ಶ್ರೀ ಪ್ರಭವಿಮಾನದಲ್ಲಿನ, ಮಣಿಕುಟ್ಟಿಮಭೂಮಿಗಳುಮಂ = ರತ್ನದ ನೆಲಗಟ್ಟಿನ ನೆಲವನ್ನೂ, ಆಗಳಾಗಳೆ = ಆಗಿಂದಾಗ್ಗೆ, ಪೆಜರ್ ಪಿಡಿದು = ಇತತರು ಹಿಡಿದುಕೊಂಡು, ತನ್ನಂ ತೆಗೆವಂತೆ = ತನ್ನನ್ನು ಹಿಡಿದು ಅಲುಗಾಡಿಸು

ವಂತೆ, ತನಗೆ ತಾನೆ ಪೋಣ್ಮುವ = ತಾನಾಗಿ ಹೊಮ್ಮುವ, ಭಯಮುಮಂ + ಭಯವನ್ನೂ, ಭೋಂಕೆನೆ ಕಂಡು = ಎಂದೂ ಇಲ್ಲದ್ದನ್ನು ಗಮನಿಸಿ, ನಾಕಲೋಕಚ್ಯುತಿಯನ್ = ದೇವಲೋಕದಿಂದ ಕೆಳಗೆ ಬೀಳುವುದನ್ನು, ಆಗಳ್ + ಅಱಿದು = ಆಗ ತಿಳಿದು, ಮನದೊಳ್ + ಅಳ್ಕಿ ಬೆಳ್ಕನೆವೋಗಿ = ಮನಸ್ಸಿನ ಅಳುಕಿನಿಂದ ದಿಗ್ಭ್ರಾಂತನಾಗಿ

**ಗದ್ಯಾನುಸರಣ:** ಜೊತೆಗೆ, ತಾನು ಅಮರಲೋಕದಿಂದ ಹೋಗುತ್ತಿರುವದರಿಂದ ಉದ್ಯಾನವನದ ಕಲ್ಪತರುಗಳು ಭಯದಿಂದ ತಲ್ಲಣಿಸುವ ಹಾಗೆ ಕಂಡಿತು; ತನ್ನ ವಿಯೋಗದಿಂದ ಕಳೆಗುಂದಿದಂತೆ ಶ್ರೀ ಪ್ರಭವಿಮಾನದಲ್ಲಿನ ರತ್ನಖಚಿತ ನೆಲಗಟ್ಟಿನ ನೆಲವು ಭಯದಿಂತ ತಲ್ಲಣಿಸುಂತೆ ತೋರಿತು; ಇತತರು ಬಲವಾಗಿ ಹಿಡಿದುಕೊಂಡು ತನ್ನನ್ನು ಹಿಡಿದು ಅಲುಗಾಡಿಸುವಂತಹ ಅನುಭವದಿಂದ ಆಗಾಗ ಭಯವುಂಟಾತೊಡಗಿತು; ಎಂದೂ ಇಲ್ಲದ ಈ ಅನುಭವಗಳನ್ನು ಗಮನಿಸಿ ತಾನು ದೇವಲೋಕದಿಂದ ಚ್ಯುತಿಗೊಳ್ಳುವುದನ್ನು, ತಿಳಿದು, ಲಲಿತಾಂಗನು ದಿಗ್ಭ್ರಾಂತನಾದ

**ಸುರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ**
**ತರಸುರತಾಲಯಂಗಳಿರ ಚಾರುವಿಲೋಲಕಟಾಕ್ಷಪಾತಸೌಂ**
**ದರಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ**
**ರ್ನೆರಮೆಟಿದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇಳಿ**

**ಪದವಿಭಾಗ-ಅನ್ವಯ-ಅರ್ಥ:** ಸುರತರುನಂದನಂಗಳಿರ = ಎಲೈ ದೇವವೃಕ್ಷಸಮೂಹವೇ, ವಿಮಾನಕುಟ್ಟಿಮ + ಅಂತರ = ಶ್ರೀಪ್ರಭವಿಮಾನದ ನೆಲಗಟ್ಟುಗಳಲ್ಲಿನ, ರತ್ನಪಿನದ್ಧ = ರತ್ನಖಚಿತವಾದ, ಸುರತಾಲಯಂಗಳಿರ = ಸಂಭೋಗಕೋಣೆಗಳೇ, ಚಾರುವಿಲೋಲಕಟಾಕ್ಷಪಾತ = ಸುಂದರವೂ ಚಂಚಲವೂ ಆದ ಕುಡಿನೋಟಗಳನ್ನು ಚೆಲ್ಲುವ, ಸೌಂದರಪರಿವಾರದೇವಿಯರಿರಾ = ಚೆಲುವೆಯರಾದ ಪರಿವಾರದೇವತೆಗಳೇ, ಇಂತು ಕೃತಾಂತನ್ = ಹೀಗೆ ಯಮನು, ಕಡುಕೆಯ್ದು = ಬಲವಂತವಾಗಿ, ನಿರ್ನೆರಂ = ಕರುಣೆಯಿಲ್ಲದೆ, ಎಟಿದುಯ್ಯೆ = ಎಳೆದೊಯ್ಯುತ್ತಿದ್ದರೆ, ಬಾರಿಸದೆ = ತಡೆಯದೆ ಕೆಮ್ಮನೇ = ಸುಮ್ಮನೆ, ಉಪೇಕ್ಷಿಸಿ ನೋಡುತಿರ್ಪಿರೇ = ಕಡೆಗಣಿಸಿ ನೋಡುತ್ತಿರುವಿರಲ್ಲ!

**ಗದ್ಯಾನುಸರಣ:** ಎಲೈ ದೇವವೃಕ್ಷಸಮೂಹವೇ, ಶ್ರೀಪ್ರಭವಿಮಾನದ ರತ್ನಖಚಿತ ನೆಲಗಟ್ಟುಗಳಲ್ಲಿನ ಸಂಭೋಗಕೋಣೆಗಳೇ, ಸುಂದರವೂ ಚಂಚಲವೂ ಆದ ಕುಡಿನೋಟಗಳನ್ನು ಚೆಲ್ಲುವ ಚೆಲುವೆಯರಾದ ಪರಿವಾರದೇವತೆಗಳೇ, ನನ್ನನ್ನು

ಯಮನು ಹೀಗೆ ಬಲವಂತವಾಗಿ ಕರುಣೆಯಿಲ್ಲದೆ ಎಳೆದೊಯ್ಯುತ್ತಿದ್ದರೆ, ಅದನ್ನು ತಡೆಯದೆ ಕಡೆಗಣಿಸಿ ಸುಮ್ಮನೆ ನೋಡುತ್ತಿರುವಿರಲ್ಲ!

**ವ। ಎಂದು ಸೈರಿಸದೆ ಕಾಮಸಾಮ್ರಾಜ್ಯಸರ್ವಸ್ವಭೂತೆಯಪ್ಪ ತನ್ನ ನಲ್ಲಳ ಮೊಗಮಂ ನೋಡಿ,**

**ಪದವಿಭಾಗ–ಅನ್ವಯ–ಅರ್ಥ:** ಎಂದು ಸೈರಿಸದೆ = ಹೀಗೆ ಹಲುಬಿಯೂ ತಲ್ಲಣವನ್ನು ಕಡಿಮೆಗೊಳಿಸಿಕೊಳ್ಳಲಾಗದೆ, ಕಾಮಸಾಮ್ರಾಜ್ಯಸರ್ವಸ್ವಭೂತೆಯಪ್ಪ = ತನ್ನ ಭೋಗರಾಜ್ಯದ ಸಮಸ್ತ ಸಂಪತ್ತಾದ, ತನ್ನ ನಲ್ಲಳ ಮೊಗಮಂ = ತನ್ನ ಪ್ರೇಯಸಿ ಸ್ವಯಂಪ್ರಭೆಯ ಮುಖವನ್ನು, ನೋಡಿ

**ಗದ್ಯಾನುಸರಣ:** ಹೀಗೆ ಹಲುಬಿಯೂ ತಲ್ಲಣವನ್ನು ತಡೆದುಕೊಳ್ಳಲಾಗದೆ ತನ್ನ ಭೋಗರಾಜ್ಯದ ಸಮಸ್ತ ಸಂಪತ್ತಾದ ತನ್ನ ಪ್ರೇಯಸಿ ಸ್ವಯಂಪ್ರಭೆಯ ಮುಖವನ್ನು ನೋಡಿ ಹೀಗೆಂದ:

**ಸಂತಸದಂತಮನೆಯ್ದಿ ಸುರತಾಮೃತದೊಳ್ ತಣಿದಟ್ಟಿಱಿಂ ಜಗಿ**
**ಲ್ತಂತಿರೆ ಪತ್ತಿ ಮೆಯ್ಗಳೆರಡಾದೊಡಮೇನಸುವೊಂದೆ ನೋೞ್ಪೊಡಂ**
**ಬಂತಿರೆ ನಿನ್ನೊಡನೆ ಭೋಗಿಸಲೀಯದೆ ಕೆಮ್ಮನೆನ್ನನು**
**ಯ್ವಂತಕನೆಂಬ ಬೂತನೆಲೆ ಮಾಣಿಸಲಾಗದೆ ಪೇೞ್ ಸ್ವಯಂಪ್ರಭೇ॥**

**ಪದವಿಭಾಗ–ಅನ್ವಯ–ಅರ್ಥ:** ಅಟ್ಟಿಱಿಂ = ಒಲುಮೆಯಿಂದ, ಜಗಿಲ್ತಂತಿರೆ ಪತ್ತಿ = ಅಂಟಕೊಂಡಂತೆ ಕೂಡಿ, ಸಂತಸದ + ಅಂತಮನ್ + ಎಯ್ದಿ = ಆನಂದದ ಪರಮಾವಧಿಯನ್ನು ತಲುಪಿ, ಸುರತಾಮೃತದೊಳ್ = ಸಂಭೋಗಸುಖದಲ್ಲಿ, ತಣಿದು = ತೃಪ್ತಿಹೊಂದಿ, ನೋೞ್ಪೊಡೆ = ನೋಡಿದವರಿಗೆ, ಮೆಯ್ಗಳ್ + ಎರಡಾದೊಡಂ + ಏನ್ + ಅಸುವೊಂದೆ = ದೇಹಗಳೆರಡಾದರೂ ತಾನೇ ಏನು, ಇವರ ಪ್ರಾಣ ಒಂದೇ, ಎಂಬಂತಿರೆ = ಎನಿಸುವ ಹಾಗೆ, ನಿನ್ನೊಡನೆ ಭೋಗಿಸಲೀಯದೆ = ನಿನ್ನ ಜೊತೆಯಲ್ಲಿ ಸುರತಕ್ಕೆ ಅವಕಾಶವೀಯದೆ, ಕೆಮ್ಮನೆ + ಎನ್ನನ್ + ಉಯ್ವ = ಸುಮ್ಮಸುಮ್ಮನೆ ನನ್ನನ್ನು ಎಳೆದೊಯ್ಯುವ, ಅಂತಕನೆಂಬ ಬೂತನ್ = ಯಮನೆಂಬ ಪಿಶಾಚಿಯನ್ನು, ಎಲೆ ಸ್ವಯಂಪ್ರಭೇ = ಎಲೈ, ಸ್ವಯಂಪ್ರಭೆಯೇ, ಮಾಣಿಸಲಾಗದೆ ಪೇೞ್ = ತಡೆಯಲಾರೆಯಾ?

**ಗದ್ಯಾನುಸರಣ:** ಒಲುಮೆಯಿಂದ ಅಂಟಕೊಂಡಂತೆ ಕೂಡಿ, ಸಂಭೋಗಸುಖದಲ್ಲಿ ಆನಂದದ ತುತ್ತತುದಿಯನ್ನು ತಲುಪಿ ತೃಪ್ತಿಹೊಂದಿ, ನೋಡಿದವರಿಗೆ ಇವರ ದೇಹಗಳೆರಡಾದರೂ ಪ್ರಾಣ ಒಂದೇ ಎನಿಸುವ ಹಾಗೆ

ನಿನ್ನ ಜೊತೆಯಲ್ಲಿ ಸುರತಕ್ಕೆ ಅವಕಾಶವೀಯದೆ, ಸುಮ್ಮಸುಮ್ಮನೆ ನನ್ನನ್ನು ಎಳೆದೊಯ್ಯುವ ಈ ಯಮನೆಂಬ ಪಿಶಾಚಿಯನ್ನು ಸ್ವಯಂಪ್ರಭೆಯೇ ನೀನಾದರೂ ತಡೆಯಲಾರೆಯಾ?

**ವಿಶೇಷ ವಿಚಾರ:** ಭೋಗತೀವ್ರತೆಯ ಹಿನ್ನೆಯಲ್ಲಿನ ಕವಿಯು ಸಾವಿನ ಭಯವನ್ನು ಚಿತ್ರಿಸುವ ಪರಿ ಅನನ್ಯವಾಗಿದೆ; ಇದು ಕಲ್ಪವೊಂದರಲ್ಲಿನ ಅಮರನ ಅನುಭವವೆಂದು ಹೇಳಿದ್ದರೂ ಇದು ನಿಜವಾಗಿ ಸಾವಿನ ತಲ್ಲಣದ ಎಲ್ಲ ಮಾನವರ ಅನುಭವವಾಗಿದೆ. ಸಾವು ಬಂದಾಗ ಅಚೇತನವಸ್ತುಗಳು ತನಗಾಗಿ ಮರುಗುವಂತೆ ಕಾಣುವ ಹಾಗೂ ಯಾರೂ ಅದನ್ನು ತಡೆಯಲಾಗದ ಪರಿಸ್ಥಿತಿಯು ಸಾವಿನ ಮುಂದೆ ವ್ಯಕ್ತಿಗಳ ಅಸಹಾಯಕತೆಯನ್ನು ಮನಂಬುಗುವಂತೆ ಈ ಪದ್ಯ ಚಿತ್ರಿಸುತ್ತದೆ. ಆದರೆ ಈ ವರ್ಣನೆ ಪೂರ್ವಪುರಾಣದಲ್ಲಿ ಇಲ್ಲ!

**ವ। ಎಂದು ಧೈರ್ಯಮಂ ಪತ್ತುವಿಟ್ಟು ಅತಿಪ್ರಲಾಪಂಗೆಯ್ವ ಲಲಿತಾಂಗದೇವನಂ ಸಾಮಾನಿಕದೇವರ್ಯೆದೆವಂದು**

**ಅರ್ಥ:** ಎಂದು ಧೈರ್ಯಮಂ ಪತ್ತುವಿಟ್ಟು = ಎಂದು ಧೈರ್ಯವನ್ನು ಕಳೆದುಕೊಂಡು, ಅತಿಪ್ರಲಾಪಂಗೆಯ್ವ = ದೊಡ್ಡದಾಗಿ ರೋದಿಸುತ್ತಿದ್ದ, ಲಲಿತಾಂಗದೇವನಂ = ಲಲಿತಾಂಗದೇವನನ್ನು, ಸಾಮಾನಿಕದೇವರ್ = ಸಾಮಾನಿಕ ದೇವರುಗಳು, ಎಯ್ದೆವಂದು = ಹತ್ತಿರ ಬಂದು,

**ನಿನಗೊರ್ವಂಗಲ್ಲವಸ್ಥಾಂತರಮಮರಜನಕ್ಕೆಲ್ಲಮೀ ಪಾಂಗೆ ಕಾರು**
**ಣ್ಯನಿನಾದಂ ನಿನ್ನನಾದಂ ನಗಿಸುಗುಮೆಟಿದುಯ್ವಂತಕಂಗಿಲ್ಲ ದೇವಾಂ**
**ಗನೆಯರ್ ಮಾಱಾಂಪರೇ ಪೇಟ್ ಜನನಮೃತಿಜರಾತಂಕ ಶೋಕಾಗ್ನಿ ಯಿಂದಾ**
**ವನುಮೀ ಸಂಸಾರದೊಳ್ ಬೇಯುದನೊಳನೆ ಶರಣ್ಧರ್ಮದಿಂದೊಂದು ಮುಂಟೇ ೬**

**ಪದವಿಭಾಗ–ಅನ್ವಯ–ಅರ್ಥ:** ಅವಸ್ಥಾಂತರಂ = ಬದಲಾವಣೆಯು, ನಿನಗೊರ್ವಂಗಲ್ಲ = ನಿನಗೊಬ್ಬನಿಗೇ ಅಲ್ಲ, ಅಮರಜನಕ್ಕೆಲ್ಲಂ + ಈ ಪಾಂಗೆ = ದೇವತೆಗಳಿಗೆಲ್ಲರಿಗೂ ಇದೇ ಬಗೆಯೇ: ನಿನ್ನನ್ ಕಾರುಣ್ಯನಿನಾದಂ = ನಿನ್ನ ಈ ಗೋಳಾಟವು, ಆದಂ ನಗಿಸುಗುಂ = ತುಂಬ ನಗೆಯನ್ನು ತರುತ್ತದೆ; ಎಟಿದುಯ್ವ + ಅಂತಕಂಗೆ + ಇಲ್ಲ = ಎಳೆದೊಯ್ಯುವ ಯಮನಿಗೆ (ಕರುಣೆ) ಇಲ್ಲ; (ಅವನನ್ನು) ದೇವಾಂಗನೆಯರ್ = ದೇವತಾಸ್ತ್ರೀಯರು, ಮಾಱಾಂಪರೇ ಪೇಟ್

= ಎದುರಿಸಬಲ್ಲರೇ, ಹೇಳು; ಜನನ ಮೃತಿ ಜರಾ + ಅತಂಕ ಶೋಕ + ಅಗ್ನಿಯಿಂದ = ಹುಟ್ಟು ಸಾವು ಮುಪ್ಪು ಕಳವಳ ದುಃಖಗಳಿಂದ, ಆವನುಂ = ಯಾವನಾದರೂ, ಈ ಸಂಸಾರದೊಳ್ = ಈ ಬದುಕಿನಲ್ಲಿ, ಬೇಯದನ್ + ಒಳನೆ = ಬೆಂದುಹೋಗದವನು ಇದ್ದಾನೆಯೇ? ಧರ್ಮದಿಂದ ಒಂದುಂ = ಬೇರಾವುದಾದರೂ, ಶರಣ್ ಉಂಟೇ = ಶರಣು ಇದೆಯೇ!

**ಗದ್ಯಾನುಸರಣ:** 'ಇಂತಹ ಬದಲಾವಣೆಯು ನಿನ್ನೊಬ್ಬನದಲ್ಲ, ದೇವತೆಗಳಿಗೆಲ್ಲರದೂ ಇದೇ ಪಾಡೇ: ನಿನ್ನ ಈ ಗೋಳಾಟವು ನಗೆಪಾಟಲಾದುದು; ಎಳೆದೊಯ್ಯುವ ಯಮನಿಗೆ ಕರುಣೆಯಿಲ್ಲ; ಅಂದಮೇಲೆ ಅವನನ್ನು ದೇವತಾಸ್ತ್ರೀಯರು ಎದುರಿಸಬಲ್ಲರೇ, ಹೇಳು; ಹುಟ್ಟು ಸಾವು ಮುಪ್ಪು ಕಳವಳ ದುಃಖಗಳಿಂದ ಬೆಂದುಹೋಗದವನು ಈ ಬದುಕಿನಲ್ಲಿ ಯಾವನಾದರೂ ಇದ್ದಾನೆಯೇ? ಧರ್ಮಕ್ಕಿಂತ ಬೇರೆ ಶರಣು ಇದೆಯೇ?'

**ಜಿನಚೈತ್ಯಬ್ರಾತಮಂ ಬಂದಿಸು ಜಿನಪದಪದ್ಮಪದ್ಮಂಗಳಂ ದಿವ್ಯಮಪ್ಪ**
**ರ್ಚನೆಯಿಂದಂ ಭಕ್ತಿಯಿಂದರ್ಚಿಸು ಜಿನನ ನಮಸ್ಕಾರಮಂತ್ರಂಗಳೊಳ್‌ಭಾ**
**ವನೆಯಂ ತಾಳ್ದಟ್ಟಿಯಿಂದಂ ಜಿನಮಹಿಮೆಗಳಂ ಮಾಡು ನೀಂ ಭವ್ಯನೈಮ**
**ತ್ತಿನ ಮಿಥ್ಯಾಜ್ಞಾನಿವೋಲ್ ನೀಂ ತರಳತೆವರಸಿಂತೇಕೆ ವಿಭ್ರಾಂತನಪ್ಪೈ೭**

**ಪದವಿಭಾಗ–ಅನ್ವಯ–ಅರ್ಥ:** ಜಿನಚೈತ್ಯಬ್ರಾತಮಂ = ಜಿನನ ಆಲಯಗಳಲ್ಲಿ, ಬಂದಿಸು = ಪೂಜೆ ಮಾಡು; ಜಿನಪದಪದ್ಮಪದ್ಮಂಗಳಂ = ಜಿನನ ಪಾದಕಮಲಗಳನ್ನು, ದಿವ್ಯಮಪ್ಪರ್ಚನೆಯಿಂದಂ = ಶ್ರೇಷ್ಠ ವಸ್ತುಗಳಿಂದ, ಭಕ್ತಿಯಿಂದ + ಅರ್ಚಿಸು = ಭಕ್ತಿಯಿಂದ ಪೂಜಿಸು, ಜಿನನ ನಮಸ್ಕಾರಮಂತ್ರಂಗಳೊಳ್ = ಜಿನನ ನಮಸ್ಕಾರಮಂತ್ರಗಳನ್ನು, ಭಾವನೆಯಂ ತಾಳ್ದು = ಮನಸ್ಸಿನಲ್ಲಿ ಇರಿಸಿಕೊಂಡು, ಅಟ್ಟಿಯಿಂದಂ = ಜಿನಮಹಿಮೆಗಳಂ ಮಾಡು = ಶ್ರದ್ಧೆಯಿಂದ ಜಿನವ್ರತಗಳನ್ನು ನೆರವೇರಿಸು; ನೀಂ ಭವ್ಯನೈ = ನೀನು ಭವ್ಯ, ಮತ್ತಿನ ಮಿಥ್ಯಾಜ್ಞಾನಿವೋಲ್ = ಉಳಿದ ಮಿಥ್ಯಾಜ್ಞಾನಿಯಂತೆ, ತರಳತೆವರಸಿ = ಚಪಲತೆಯಿಂದ ಕೂಡಿ, ನೀಂ ಇಂತೇಕೆ ವಿಭ್ರಾಂತನಪ್ಪೈ = ನೀನು ಹೀಗೇಕೆ ಭ್ರಾಂತಿಗೊಳಗಾಗುವೆ?

**ಗದ್ಯಾನುಸರಣ:** 'ಜಿನನ ಆಲಯಗಳಿಗೆ ಹೋಗಿ ಪೂಜೆ ಮಾಡು; ಶ್ರೇಷ್ಠ ವಸ್ತುಗಳಿಂದ ಜಿನನ ಪಾದಕಮಲಗಳನ್ನು ಭಕ್ತಿಯಿಂದ ಪೂಜಿಸು; ಜಿನನ ನಮಸ್ಕಾರಮಂತ್ರಗಳನ್ನು ಮನಸ್ಸಿನಲ್ಲಿ ಇರಿಸಿಕೊಂಡು ಶ್ರದ್ಧೆಯಿಂದ ಜೈನವ್ರತಗಳನ್ನು

ನೆರವೇರಿಸು; ನೀನು ಭವ್ಯ, ಉಳಿದ ಮಿಥ್ಯಾಜ್ಞಾನಿಯಂತೆ ಚಪಲತೆಗೊಳಗಾಗಿ ಹೀಗೇಕೆ ಭ್ರಾಂತಿಗೊಳಗಾಗುವೆ?' ಎಂದು ತಿಳಿವಳಿಕೆ ಹೇಳಿದರು,

**ಎನೆ ಬಗೆಗೊಂಡಭೀತಮನನರ್ಚಿಸಿ ಬಂದಿಸಿ ಚೈತ್ಯಗೇಹಮು**
**ಳ್ಳನಿತುಮನಾಱುಮಾಸದವಱಿಂ ಬೞಿಕಚ್ಯುತಕಲ್ಪದೊಳ್ ಜಿನೇಂ**
**ದ್ರನನೊಸೆದರ್ಚಿಸುತ್ತುಮಮರಂ ಚ್ಯುತನಾದನಲ್ತೆ ವಿಶ್ವಲೋ**
**ಚನನಘವೈರಿಯಲ್ಲದುೞಿದಂ ಗೆಲಲಾರ್ಕೆಮೆ ಮೃತ್ಯುರಾಜನಂ ೮**

**ಪದವಿಭಾಗ-ಅನ್ವಯ-ಅರ್ಥ:** ಎನೆ = ಎಂದು ಹೇಳಲು, ಬಗೆಗೊಂಡು = ಮನಸ್ಸಿಗೆ ತಂದುಕೊಂಡು, ಅಭೀತಮನನ್ = ಹೆದರಿಕೆಯನ್ನು ಗೆದ್ದ ಮನಸ್ಸಿನವನಾಗಿ, ಅರ್ಚಿಸಿ = ಪೂಜಿಸಿ, ಉಳ್ಳನಿತುಮಂ + ಆಱುಮಾಸಂ = ಉಳಿದಿದ್ದ ಆರು ತಿಂಗಳ ಕಾಲ, ಚೈತ್ಯಗೇಹಂ = ಜಿನಾಲಯಗಳಲ್ಲಿ, ಬಂದಿಸಿ = ಆರಾಧನೆಗೈಯ್ಯುತ್ತ, ಅಚ್ಯುತಕಲ್ಪದೊಳ್ = ಅಚ್ಯುತಕಲ್ಪದಲ್ಲಿನ, ಜಿನೇಂದ್ರನನ್ + ಒಸೆದು + ಅರ್ಚಿಸುತ್ತುಂ = ಜಿನನನ್ನು ಪ್ರೀತಿಯಿಂದ ಪೂಜಿಸುತ್ತ, ಅಮರಂ = ಲಲಿತಾಂಗನು, ಅದಱಿಂ ಬೞಿಕ = ಆ ಅವಧಿಯ ಬಳಿಕ, ಚ್ಯುತನಾದನಲ್ತೆ = ಮರಣ ಹೊಂದಿದ; ವಿಶ್ವಲೋಚನನ್ = ಜಗತ್ತಿಗೆ ಕಣ್ಣಾದವನೂ, ಅಘವೈರಿಯಲ್ಲದೆ = ಪಾಪವೈರಿಯಲ್ಲದೆ, ಉೞಿದಂ = ಬೇರೆಯವನು, ಮೃತ್ಯುರಾಜನಂ = ಯಮನನ್ನು, ಗೆಲಲ್ + ಆರ್ಕೆಮೆ = ಗೆಲಲ್ಲು ಸಮರ್ಥನೇ!

**ಗದ್ಯಾನುಸರಣ:** ಎಂದು ಹೇಳಲು, ಅದನ್ನು ಮನಸ್ಸಿಗೆ ತಂದುಕೊಂಡು ಹೆದರಿಕೆಯನ್ನು ಗೆದ್ದು ಉಳಿದಿದ್ದ ಆರು ತಿಂಗಳ ಆಯುಷ್ಯವನ್ನು ಜಿನಾಲಯಗಳಿಗೆ ಹೋಗಿ ಪೂಜೆ-ಆರಾಧನೆಗಳಲ್ಲಿ ತೊಡಗಿ, ವಿನಾಶವಿಲ್ಲದ ಕಲ್ಪದಲ್ಲಿನ ಜಿನನನ್ನು ಪ್ರೀತಿಯಿಂದ ಪೂಜಿಸುತ್ತ ಲಲಿತಾಂಗನು ಆಯುಸ್ಸು ಮುಗಿದ ಬಳಿಕ ಮರಣ ಹೊಂದಿದ; ಜಗತ್ತಿಗೆ ಕಣ್ಣಾದವನೂ ಪಾಪವೈರಿಯಲ್ಲದವನೂ ಸಾವನ್ನು ಗೆಲ್ಲಬಲ್ಲನೇ!

**ವ ಅಂತು ನೋಡೆ ನೋಡೆ ಶರತ್ಸಮಯಸಮುದಿತ ಜಳಧರರೂಪದಿಂದ ದೃಶ್ಯರೂಪನಾಗಿ ಜಂಬೂದ್ವೀಪದ ಮೇರುವಿನ ಮೂಡಣ ವಿದೇಹದ ಸೀತಾನದಿಯ ಬಡಗಣ ತಡಿಯೊಳಶೇಷ ಜನಪದ ಜನಾನುರಾಗ ಜನನಸಮಸ್ತಸಸ್ಯಸಂಪತ್ಪ್ರದ ಪುಷ್ಕಳಾವತೀವಿಷಯದೊಳನೇ ಕಜಳಚರಕುಳಕಳರವಪರಸ್ಪರೋಚ್ಚಾಲಿತ ವೀಚೀಚಯಜಳಧಿನಿಭ ವಿಭವಪರಿಖಾ ಪರಿವೃತಮುಂ ಉದಗ್ರ ಚಂಚತ್ಕಾಂಚನಮಯ ವಿಶಾಲಭಿತ್ತಿ ಪರೀತಮುಂ ಅಂತರ್ಗತ ಧವಳ ವಿಪುಳ ಪ್ರಾಸಾದನಿರಂತರನಿರುದ್ಧಭೂಮಿವಿಭಾಗಮುಂ ಉಪವನ ಲತಾಕುಸುಮಪರಿಮಳಸಮೀ ರಣಾಂದೋಳಿತ ಪ್ರಾಸಾದ ಪತಾಕಾವರುದ್ಧಾಂಬರಮುಂ ನೀಲೋತ್ಪಲವನಷಂಡ ಸಂಛನ್ನಮುಮಪ್ಪುದು**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ ಸತ್ತು, ನೋಡೆ ನೋಡೆ = ನೋಡುತ್ತಿರುವಂತೆಯೇ, ಶರತ್ಸಮಯಸಮುದಿತ = ಶರತ್ಕಾಲದಲ್ಲಿ ಹುಟ್ಟಿದ, ಜಳಧರರೂಪದಿಂದ = ಮೋಡದ ರೀತಿಯಿಂದ, ಅದೃಶ್ಯರೂಪನಾಗಿ = ಕಣ್ಮರೆಯಾಗಿ, ಜಂಬೂದ್ವೀಪದ, ಮೇರುವಿನ ಮೂಡಣ = ಮೇರುಪರ್ವತಕ್ಕೆ ಪೂರ್ವದಲ್ಲಿದ್ದ, ವಿದೇಹದ ಸೀತಾನದಿಯ, ಬಡಗಣ ತಡಿಯೊಳ್ = ಪಶ್ಚಿಮ ದಡದಲ್ಲಿ, ಅಶೇಷಜನಪದಜನ = ಎಲ್ಲ ಜನತೆಯ, ಅನುರಾಗ = ಪ್ರೀತಿಯನ್ನು ಪಡೆದು, ಜನನಸಮಸ್ತಸಸ್ಯಸಂಪತ್ಪ್ರದ = ಹುಟ್ಟಿದ ಸಮೃದ್ಧ ಸಸ್ಯರಾಶಿಯಿಂದ ಕೂಡಿದ್ದ, ಪುಷ್ಕಳಾವತೀವಿಷಯದೊಳ್ = ಪುಷ್ಕಳಾವತೀ ಎಂಬ ನಾಡಿನಲ್ಲಿ, ಅನೇಕಜಳಚರಕುಳ = ನಾನಾ ಬಗೆಯ ನೀರುಜೀವಿಗಳ, ಕಳರವ = ಕಲಕಲ ಧ್ವನಿಯಿಂದಲೂ, ಪರಸ್ಪರ + ಉಚ್ಚಾಲಿತ = ಒಂದನ್ನೊಂದು ನೂಕುವ, ವೀಚೀಚಯ = ಅಲೆಗಳಿಂದ ಕೂಡಿದ, ಜಳಧಿನಿಭ = ಸಮುದ್ರದ ಹಾಗಿದ್ದ, ವಿಭವ = ವೈಭವಯುಕ್ತವಾದ, ಪರಿಖಾಪರಿವೃತಮುಂ = ಕಂದಕಗಳಿಂದ ಸುತ್ತುವರಿಯಲ್ಪಟ್ಟುದೂ, ಉದಗ್ರ + ಚಂಚತ್ + ಕಾಂಚನಮಯ = ಎತ್ತರವಾಗಿ ಚಿನ್ನದಿಂದ ಕೂಡಿದ, ವಿಶಾಲಭಿತ್ತಿಪರೀತಮುಂ = ಅಗಲವಾದ ಗೋಡೆಗಳಿಂದ ಕೂಡಿದುದೂ, ಅಂತರ್ಗತಧವಳವಿಪುಳಪ್ರಾಸಾದ = ಒಳಗಿದ್ದ ಬಿಳಿಬಣ್ಣದ ಅಗಲವಾದ ಪ್ರಾಸಾದಗಳಿಂದಲೂ, ನಿರಂತರನಿರುದ್ಧ = ಕೂಡಿದ್ದ, ಭೂಮಿವಿಭಾಗಮುಂ = ಭೂಪ್ರದೇಶದಿಂದಲೂ, ಉಪವನ = ಉದ್ಯಾನವನಗಳ, ಲತಾಕುಸುಮಪರಿಮಳಸಮೀರಣ = ಬಳ್ಳಿಗಳು ಮತ್ತು ಹೂಗಳ ಕಂಪಿನಿಂದ ಕೂಡಿದ ಗಾಳಿಯಿಂದ, ಆಂದೋಳಿತ = ಅಲುಗಾಡುವ, ಪ್ರಾಸಾದಪತಾಕಾ = ಪ್ರಾಸಾದಗಳಲ್ಲಿನ ಬಾವುಟಗಳಿಂದ, ಅವರುದ್ಧ + ಅಂಬರಮುಂ = ತುಂಬಿದ ಆಗಸದಿಂದ ಕೂಡಿದುದೂ, ನೀಲೋತ್ಪಲವನಷಂಡ = ಕನ್ನೈದಿಲೆಗಳುಳ್ಳ ಸರೋವರಗಳಿಂದ, ಸಂಛನ್ನಮುಂ = ತುಂಬಿದುದೂ, ಅಪ್ಪುದು = ಆದ

**ಗದ್ಯಾನುಸರಣ:** ಹಾಗೆ ಸತ್ತು, ನೋಡುತ್ತಿರುವಂತೆಯೇ ಶರತ್ಕಾಲದ ಮೋಡದ ಹಾಗೆ ಕಣ್ಮರೆಯಾಗಿ, ಜಂಬೂದ್ವೀಪದಲ್ಲಿನ ಮೇರುಪರ್ವತಕ್ಕೆ ಪೂರ್ವದಲ್ಲಿ ಹಾಗೂ ವಿದೇಹದ ಸೀತಾನದಿಯ ಪಶ್ಚಿಮ ದಡದಲ್ಲಿ, ಜನರ ಪ್ರೀತಿಯಿಂದ ಬೆಳೆದಿದ್ದ ಸಮೃದ್ಧ ಸಸ್ಯರಾಶಿಯಿಂದ ಕೂಡಿದ್ದ ಪುಷ್ಕಳಾವತೀ ಎಂಬ ನಾಡಿನಲ್ಲಿ; ನಾನಾ ಬಗೆಯ ನೀರುಜೀವಿಗಳ ಕಲಕಲ ಧ್ವನಿಯಿಂದಲೂ, ಒಂದರ ಹಿಂದೊಂಂದು ನೂಕಿಕೊಂಡು ಬರುವ ಅಲೆಗಳಿಂದ ಕೂಡಿ ಸಮುದ್ರದ ಹಾಗಿದ್ದ ಕಂದಕಗಳಿಂದ ಸುತ್ತುವರಿಯಲ್ಪಟ್ಟುದೂ; ಎತ್ತರವಾಗಿಯೂ ಅಗಲವಾಗಿಯೂ ಇದ್ದ ಚಿನ್ನದ ಬಣ್ಣದ ಗೋಡೆಗಳಿಂದ ಕೂಡಿ, ಒಳಗಿನ ಬೆಳ್ಳನೆಯ ಅಗಲವಾದ ಪ್ರಾಸಾದಗಳಿಂದ ಕೂಡಿದ್ದ ಭೂಪ್ರದೇಶದಿಂದ ಮತ್ತು ಉದ್ಯಾನವನಗಳಲ್ಲಿನ ಬಳ್ಳಿಗಳು ಮತ್ತು

ಹೂಗಳ ಕಂಪಿನಿಂದ ಕೂಡಿದ ಗಾಳಿಯಿಂದ ಹಾರಾಡುವ ಪ್ರಾಸಾದಗಳಲ್ಲಿನ ಬಾವುಟಗಳಿಂದ ತುಂಬಿದ ಆಗಸದಿಂದ ಕೂಡಿದುದೂ; ಕನ್ನೈದಿಲೆಗಳ ಸರೋವರಗಳಿಂದ ಕಿಕ್ಕಿರಿದಿದ್ದ

**ಉತ್ಪಳಖೇಟಮೆಂಬುದು ಪೊೞಲ್ ನಯದಿಂದದನಾಳ್ವುದಗ್ರಭೂ**
**ಭೃತ್ಪತಿ ವಜ್ರಬಾಹುನೃಪನಾ ನೃಪನಗ್ಗದುದಗ್ರಕಾಂತೆ ನೀ**
**ಲೋತ್ಪಲಲೋಲಲೋಚನೆ ವಸುಂಧರೆಯಂತವರ್ಗಗ್ರಸೂನು ಸಂ**
**ಪತ್ಪತಿ ವಜ್ರಜಂಘನೆನೆ ತಲ್ಲಲಿತಾಂಗನೆ ಬಂದು ಪುಟ್ಟಿದಂ ೯**

**ಪದವಿಭಾಗ–ಅನ್ವಯ–ಅರ್ಥ:** ಉತ್ಪಳಖೇಟಮೆಂಬುದು ಪೊೞಲ್ = ಉತ್ಪಳೇಟವೆಂಬುದು ಒಂದು ನಗರ; ಅದನ್ = ಆ ನಾಡನ್ನು, ನಯದಿಂದ = ರಾಜನೀಗನುಗುಣವಾಗಿ, ಆಳ್ವ + ಉದಗ್ರಭೂಭೃತ್ಪತಿ = ಆಳುವವನು ಶ್ರೇಷ್ಠ ರಾಜ, ವಜ್ರಬಾಹುನೃಪನ್ = ವಜ್ರಬಾಹು ಎನ್ನುವವನು; ಆ ನೃಪನ + ಅಗ್ಗದ + ಉದಗ್ರಕಾಂತೆ = ಆ ರಾಜನ ಪಟ್ಟದಮಹಾರಾಣಿಯೆಂದರೆ, ನೀಲೋತ್ಪಲಲೋಲಲೋಚನೆ = ಕನ್ನೈದಿಲೆಯಂತಹ ಚಂಚಲಕಣ್ಣುಗಳ, ವಸುಂಧರೆ = ವಸುಂಧರೆ ಎಂಬ ಹೆಸರಿನವಳು; ಅಂತು + ಅವರ್ಗೆ + ಅಗ್ರಸೂನು = ಅಂತಹ ಅವರ ಹಿರಿಯ ಮಗ, ಸಂಪತ್ಪತಿ = ಸಂಪತ್ತಿಗೊಡೆಯನಾದ, ವಜ್ರಜಂಘನ್ + ಎನೆ = ವಜ್ರಜಂಘ ಎಂಬ ಹೆಸರಿನಿಂದ, ತತ್ + ಲಲಿತಾಂಗನೆ ಬಂದು = ಆ ಲಲಿತಾಂಗನೇ ಇಳಿದು, ಪುಟ್ಟಿದಂ = ಹುಟ್ಟಿದ

**ಗದ್ಯಾನುಸರಣ:** ಉತ್ಪಳಖೇಟವೆಂಬ ಒಂದು ನಗರವಿತ್ತು; ಅದನ್ನು ರಾಜನೀತಿಗನುಗುಣವಾಗಿ ಆಳುತ್ತಿದ್ದವನು ಶ್ರೇಷ್ಠವ್ಯಕ್ತಿಯಾಗಿದ್ದ ವಜ್ರಬಾಹು ಎಂಬ ರಾಜ; ಅವನ ಮಹಾರಾಣಿಯೆಂದರೆ ಕನ್ನೈದಿಲೆಯಂತಹ ಚಂಚಲಕಣ್ಣುಗಳ ವಸುಂಧರೆ ಎಂಬ ಹೆಸರಿನ ಸುಂದರಿ; ಆ ಲಲಿತಾಂಗನು ಬಂದು ಆ ದಂಪತಿಗಳ ಹಿರಿಯ ಮಗ ವಜ್ರಜಂಘ ಎಂಬ ಹೆಸರಿನಿಂದ ಹುಟ್ಟಿದ.

**ವ। ಆ ರಾಜಕುಮಾರನನೇಕಕಲಾಕಲಾಪಪ್ರವೀಣನಾಗಿ, ಯುವ ರಾಜಲಕ್ಷ್ಮಿಯೊಡನೆ ವಿಸ್ತಾರಮಂ ಕೈಕೊಂಡ ವಕ್ಷಸ್ಸ್ಥಳಮುಂ ಬಂಧುಜನ ಮನೋರಥಂಗಳೊಡನೆ ಪೊದಳ್ಕೆವಡೆದ ವೃತ್ತೋರುಸ್ತಂಭಂಗಳುಂ ಪೊಡರ್ವ ಪಗೆವರೊಡನೆ ಕರಮುಸಿದಾದ ಮಧ್ಯಪ್ರದೇಶಮುಂ ಪಗೆವರ ಪೆಂಡಿರ ಸುಯ್ಯೊಡನೆ ನಿಡಿಯುವಾದ ತೋಳ್ಗಳುಂ ಯಶಃಪ್ರಸರದೊಡನೆ ನೀಳ್ಪುಂ ಬೆಳ್ಪುಂ ಮನೊಳಕೊಂಡು ಕಿಸುಸೆರೆವರಿದ ಕಣ್ಗಳುಂ ಆಜ್ಞೆಯೊಡನೆ ಕುಲಶಿಖರಿ ಶಿಖರೋತ್ತುಂಗಂಗಳಾದ ಭುಜಶಿಖರಂಗಳುಂ ಸರದೊಡನೆ ಗಂಭೀರಮಾದ**

**ದಕ್ಷಿಣಾವರ್ತ ನಾಭಿಯುಂ ಅಧರಪಲ್ಲವದೊಡನೆ ಅಶೋಕ ಪಲ್ಲವಾನುರಕ್ತಂ ಗಳಾದ ಪಾಣಿಪಾದತಳಂಗಳುಂ ಲಲಾಟಪಟ್ಟದೊಡನೆ ಲಲಿತೋನ್ನತಂಗಳಾದ ಪೊಜಱಡಿಗಳುಂ ಉಗುರ್ಗಳೊಡನೆ ದೀಪ್ತಿಯೊಳ್ ಪುದಿದು ಮಧುರ ವರ್ಣಮಾದ ದಂತಪಜ್ತ್ತಿಗಳುಂ ಆತ್ಮೀಯಯೌವನ'ಪ್ರಾದುರ್ಭಾವಮಂ ಪ್ರಕಟಂಮಾಡೆ,**

**ಪದವಿಭಾಗ–ಅನ್ವಯ–ಅರ್ಥ:** ಆ ರಾಜಕುಮಾರನ್ = ಆತನು, ಅನೇಕ ಕಲಾಕಲಾಪಪ್ರವೀಣನಾಗಿ = ನಾನಾ ಕಲೆಗಳ ಪ್ರದರ್ಶನದಲ್ಲಿ ಪರಿಣತಿಯನ್ನು ಹೊಂದಿ, ಯುವರಾಜಲಕ್ಷ್ಮಿಯೊಡನೆ = ರಾಜ್ಯದಂತೆ, ವಿಸ್ತಾರಮಂ ಕೈಕೊಂಡ = ವಿಶಾಲತೆವಡೆದ, ವಕ್ಷಸ್ಥಳಮುಂ = ಎದೆಯೂ, ಬಂಧುಜನಮನೋ ರಥಂಗಳೊಡನೆ = ಬಾಂಧವರ ಅಭೀಷ್ಟಗಳ ಜೊತೆಯಲ್ಲಿಯೇ, ಪೊದಳ್ಕೆವಡೆದ = ಪುಷ್ಟವಾದ, ವೃತ್ತ + ಊರುಸ್ತಂಭಂಗಳುಂ = ಗುಂಡಾದ ಕಂಬಗಳಂತಹ ತೊಡೆಗಳೂ, ಪೊಡರ್ವ ಪಗೆವರೊಡನೆ = ಎದುರಿಸುವ ಶತ್ರುಗಳೊಡನೆ, ಕರಂ + ಅಸಿದಾದ = ತೀರ ಸಣ್ಣದಾದ, ಮಧ್ಯಪ್ರದೇಶಮುಂ = ಸೊಂಟವೂ, ಪಗೆವರ ಪೆಂಡಿರ ಸುಯ್ಯೊಡನೆ = ಶತ್ರುಗಳ ಹೆಂಡಿರ ನಿಟ್ಟುಸಿರಿನೊಡನೆ, ನಿಡಿಯವಾದ ತೋಳ್ಗಳುಂ = ನೀಳವಾದ ತೋಳುಗಳೂ, ಯಶಃಪ್ರಸರದೊಡನೆ = ಕೀರ್ತಿಯ ವಿಸ್ತಾರದೊಡನೆ, ನೀಳ್ಪಂ ಬೆಳ್ಪುಮನೊಳಕೊಂಡು = ವೈಶಾಲ್ಯ ಹಾಗೂ ಕಾಂತಿಗಳಿಂದ ಕೂಡಿ, ಕಿಸುಸೆರೆವರಿದ ಕಣ್ಗಳುಂ = ಕೆಂಪಾದ ನಾಳಗಳ ಕಣ್ಣುಗಳೂ, ಆಜ್ಞೆಯೊಡನೆ = ಅವನ ಆಜ್ಞೆಯಂತೆಯೇ, ಕುಲಶಿಖರಿ = ಕುಲಪರ್ವತಗಳ, ಶಿಖರ + ಉತ್ತುಂಗಂಗಳಾದ = ಶಿಖರಗಳಂತೆ ಎತ್ತರವಾದ, ಭುಜಶಿಖರಂಗಳುಂ = ಭುಜಶಿಖರಗಳೂ, ಸರದೊಡನೆ ಗಂಭೀರಮಾದ = ಧ್ವನಿಯ ಜೊತೆಗೇ ಗಾಢವಾದ, ದಕ್ಷಿಣಾವರ್ತನಾಭಿಯುಂ = ಬಲಕ್ಕೆ ಸುತ್ತುವ ಹೊಕ್ಕುಳೂ, ಅಧರಪಲ್ಲವದೊಡನೆ = ತುಟಿಗಳೆಂಬ''ಚಿಗುರುಗಳೊಡನೆ, ಅಶೋಕಪಲ್ಲವ + ಅನುರಕ್ತಂಗಳಾದ = ಅಶೋಕವೃಕ್ಷದ ಚಿಗುರಿನಂತೆ ಕೆಂಪಾದ, ಪಾಣಿಪಾದತಳಂಗಳುಂ = ಅಂಗೈ ಅಂಗಾಲುಗಳೂ, ಲಲಾಟಪಟ್ಟದೊಡನೆ = ಹಣೆಯ ಪ್ರದೇಶದಂತೆ, ಲಲಿತೋನ್ನತಂಗಳಾದ = ಸುಂದರವೂ ಎತ್ತರವೂ ಆದ, ಪೊಜಱಡಿಗಳುಂ = ಅಡಿಯ ಮೇಲುಭಾಗವೂ, ಉಗುರ್ಗಳೊಡನೆ = ಉಗುರುಗಳ ಜೊತೆಯೇ, ದೀಪ್ತಿಯೊಳ್ ಪುದಿದು = ಕಾಂತಿಯಿಂದ ತುಂಬಿ, ಮಧುರವರ್ಣಮಾದ = ಹಿತಕರ ಬಣ್ಣವನ್ನು ಪಡೆದ, ದಂತಪಜ್ತ್ತಿಗಳುಂ = ಹಲ್ಲಿನ ಸಾಲುಗಳೂ, ಆತ್ಮೀಯಯೌವನಪ್ರಾದುರ್ಭಾವಮಂ = ಅವನ ಹರೆಯದ ಬರುವಿಕೆಯನ್ನು, ಪ್ರಕಟಂಮಾಡೆ = ತೋರಿಸಲು,

**ಗದ್ಯಾನುಸರಣ:** ಆ ರಾಜಕುಮಾರನು ಯೌನದಲ್ಲಿ ಕಾಲಿಟ್ಟ; ಅವನ ಹರೆಯದ ಬರುವಿಕೆಯ ಕುರುಹುಗಳೆಂದರೆ: ನಾನಾ ಕಲೆಗಳ ಪ್ರದರ್ಶನದಲ್ಲಿನ ಪರಿಣತಿ,

ರಾಜ್ಯದಂತೆಯೇ ವಿಶಾಲತೆವಡೆದ ಎದೆಗಳ ಹರಹು, ಬಾಂಧವರ ಅಭೀಷ್ಟಗಳಂತೆಯೇ ಪುಷ್ಟವಾದ ಗುಂಡಾದ ಕಂಬಗಳಂತಹ ತೊಡೆಗಳು, ಎದುರಿಸುವ ಶತ್ರುಗಳಷ್ಟೇ ಕಿರಿದಾದ ಸೊಂಟ, ಶತ್ರುಗಳ ಹೆಂಡಿರ ನಿಟ್ಟುಸಿರಿನಂತೆ ನೀಳವಾದ ತೋಳುಗಳು, ಕೀರ್ತಿಯ ವಿಸ್ತಾರದಂತೆಯೇ ವೈಶಾಲ್ಯ ಹಾಗೂ ಕಾಂತಿಗಳಿಂದ ಕೂಡಿ ಕೆಂಪಾದ ನಾಳಗಳುಳ್ ಕಣ್ಣುಗಳು, ಅವನ ಆಜ್ಞೆಯಂತೆಯೇ ಕುಲಪರ್ವತಗಳ ಶಿಖರಗಳಂತೆ ಎತ್ತರವಾದ ಭುಜಶಿಖರಂಗಳು, ಧ್ವನಿಯಂತೆಯೇ ಗಾಢವಾದ ಬಲಕ್ಕೆ ಸುತ್ತುವ ಹೊಕ್ಕುಳು, ತುಟಿಗಳೆಂಬ ಚಿಗುರುಗಳೊಡನೆ ಅಶೋಕವೃಕ್ಷದ ಚಿಗುರಿನಂತೆ ಕೆಂಪಾದ ಅಂಗೈ ಅಂಗಾಲುಗಳು, ಹಣೆಯ ಪ್ರದೇಶದಂತೆ ಸುಂದರವೂ ಎತ್ತರವೂ ಆದ ಹಿಮ್ಮಡಿಗಳು, ಉಗುರುಗಳಂತೆಯೇ ಕಾಂತಿಯುಕ್ತವಾಗಿ ಹಿತಕರ ಬಣ್ಣವನ್ನು ಪಡೆದ ಹಲ್ಲಿನ ಸಾಲುಗಳು.

**ಆ ದಿವಿಜೇಂದ್ರಲೋಕದಿರವುಂ ಪೆಸರುಂ ತನಗಿಲ್ಲಿ ಬಂದು ಬೇ**
**ಱಾದುದೆ ಭೇದಮಂಗರುಚಿ ರೂಪಿನ ಪೊಂಪುಟಿ ಗಾಡಿಯೇಟ್ಗೆಮೇ**
**ಲಾದ ವಿಳಾಸದೊಡ್ಡವಿನಿತುಂ ದಿವದಿಂದೊಡವಂದುವೆಂಬನಿ**
**ತ್ತಾದುದು ರೂಪು ಜವ್ವನಮನೊತ್ತರಿಸುತ್ತಿರೆ ವಜ್ರಜಂಘನಾ** ೧೦

**ಪದವಿಭಾಗ–ಅನ್ವಯ–ಅರ್ಥ:** ಜವ್ವನಮನೊತ್ತರಿಸುತ್ತಿರೆ = ಹರೆಯವು ಒತ್ತರಿಸಿಕೊಂಡು ಬರುತ್ತಿರಲು, ವಜ್ರಜಂಘನ + ಆ ರೂಪು = ವಜ್ರಂಘನ ಚೆಲುವು, ಆ ದಿವಿಜೇಂದ್ರಲೋಕದಿರವುಂ = ಅಮರಲೋಕದ ವಾಸ್ತವ್ಯವೂ ಪೆಸರುಂ = ಹೆಸರೂ, ತನಗಿಲ್ಲಿ ಬಂದು = ಈ ಲೋಕಕ್ಕೆ ಬಂದದ್ದರಿಂದ, ಬೇಱಾದುದೆ ಭೇದಂ = ಬೇರೆಯಾದವೆಂಬುದಷ್ಟೇ ವ್ಯತ್ಯಾಸ; ಅಂಗರುಚಿ = ದೇಹಕಾಂತಿಯಾಗಲೀ, ರೂಪಿನ ಪೊಂಪುಟಿ = ಚೆಲುವಿನ ಅತಿಶಯತೆಯಾಗಲೀ, ಗಾಡಿಯೇಟ್ಗೆ = ಸೊಗಸಿನ ಉತ್ಕೃಷ್ಟತೆಯಾಗಲೀ, ಮೇಲಾದ ವಿಳಾಸದ + ಒಡ್ಡವ = ಹೆಚ್ಚಿನ ವಿಲಾಸದ ಸೊಬಗು, ಇನಿತುಂ = ಎಲ್ಲವೂ, ದಿವದಿಂದ + ಒಡವಂದುವು = ದೇವಲೋಕದಿಂದಲೇ ಜೊತೆಯಲ್ಲಿ ಬಂದುವು, ಎಂಬನಿತ್ತಾದುದು = ಎನಿಸುವಂತಿತ್ತು.

**ಗದ್ಯಾನುಸರಣ:** ಈ ಲೋಕಕ್ಕೆ ಬಂದದ್ದರಿಂದ ಅಮರಲೋಕದ ವಾಸ್ತವ್ಯವೂ ಹೆಸರೂ ಬೇರೆಯಾದವೆಂಬುದಷ್ಟೇ ವ್ಯತ್ಯಾಸ; ಹರೆಯವು ಒತ್ತರಿಸಿಕೊಂಡು ಬರುತ್ತಿರಲು ವಜ್ರಂಘನ ಚೆಲುವು ಹೇಗಿತ್ತೆಂದರೆ – ದೇಹಕಾಂತಿ, ಚೆಲುವಿನ ಅತಿಶಯತೆ, ಸೊಗಸಿನ ಉತ್ಕೃಷ್ಟತೆ, ವಿಲಾಸದ ಸೊಬಗು – ಎಲ್ಲವೂ ದೇವಲೋಕದಿಂದ ಜೊತೆಯಲ್ಲಿಯೇ ಇಳಿದು ಬಂದವು ಎನಿಸುವಂತಿತ್ತು.

**ಎನಿತೆನಿತೆಂತು ಯೌವನಮನಂಗವಿಕಾರವಿನೋದಿಯಕ್ಕುಮಂ**
**ತನಿತನಿತೀ ಮಹೀತಳದ ಭಾರಮನೊಲ್ಲದೆ ತತ್ಸ್ವಯಂಪ್ರಭಾ**
**ನನಸಕಳೇಂದುಬಿಂಬರಮಣೀಯಮನಕ್ಷಯಕಲ್ಪವೃಕ್ಷನಂ**
**ದನವನರಮ್ಯಮಂ ನೆನೆದು ದೂಱಿಸಿದಂ ಸುರಲೋಕಸೌಖ್ಯಮಂ೧೧**

**ಪದವಿಭಾಗ-ಅನ್ವಯ-ಅರ್ಥ:** ಎನಿತು + ಎನಿತು + ಎಂತು = ಎಷ್ಟೆಷ್ಟು ಮತ್ತು ಯಾವ ಯಾವ ಬಗೆಯಲ್ಲಿ, ಯೌವನಂ = ಅವನ ಹರೆಯವು, ಅನಂಗವಿಕಾರವಿನೋದಿಯಕ್ಕುಂ = ಕಾಮಭಾವನೆಯಿಂದ ಕೂಡುವುದೋ, ಅಂತು + ಅನಿತು + ಅನಿತು = ಹಾಗೆ ಅಷ್ಟಷ್ಟು, ಈ ಮಹೀತಳದ = ಈ ಭೂಮಿಯ ಭಾರಮನ್ + ಒಲ್ಲದೆ = ಭಾರವನ್ನು ತಡೆದುಕೊಳ್ಳಲಾರದೆ, ತತ್ + ಸ್ವಯಂಪ್ರಭಾ = ಸ್ವಯಂಪ್ರಭೆಯ, ಆನನಸಕಳೇಂದುಬಿಂಬರಮಣೀಯಮನ್ = ಮುಖವೆಂಬ ಪೂರ್ಣಚಂದ್ರನ ಕಾಂತಿಯ ಚೆಲುವನ್ನು, ಅಕ್ಷಯಕಲ್ಪವೃಕ್ಷನಂದನವನರಮ್ಯಮಂ = ಕೊನೆಯಿಲ್ಲದ ಕಲ್ಪವೃಕ್ಷದ ಉದ್ಯಾನವನದ ಸೌಂದರ್ಯವನ್ನು, ನೆನೆದು = ನೆನೆಸಿಕೊಂಡು, ಸುರಲೋಕಸೌಖ್ಯಮ = ದೇವಲೋಕದ ಸುಖವನ್ನೂ, ಅವನು, ದೂಱಿಸಿದಂ = ದೂರಮಾಡಿದ

**ಗದ್ಯಾನುಸರಣ:** ಎಷ್ಟೆಷ್ಟು ಮತ್ತು ಯಾವ ಯಾವ ಬಗೆಯಲ್ಲಿ ಅವನ ಹರೆಯವು ಕಾಮಭಾವನೆಯಿಂದ ಕೂಡುವುದೋ ಅವನ ಮನಸ್ಸು ಅಷ್ಟಷ್ಟೂ ಈ ಭೂಮಿಯ ಭಾರವನ್ನು ತಡೆದುಕೊಳ್ಳದಾಯಿತು; ಸ್ವಯಂಪ್ರಭೆಯ ಮುಖವೆಂಬ ಪೂರ್ಣಚಂದ್ರನ ಕಾಂತಿಯ ಚೆಲುವನ್ನೂ ಕೊನೆಯಿಲ್ಲದ ಕಲ್ಪವೃಕ್ಷದ ಉದ್ಯಾನವನದ ಸೌಂದರ್ಯವನ್ನೂ ನೆನೆಸಿಕೊಂಡು ದೇವಲೋಕದ ಸುಖವನ್ನೂ ಅವನು ದೂರಮಾಡಿದ.

**ವ॥ ಅಂತು ಗಗನತಳಕುಸುಮಮನೆ ಬಯಸಿ ಮರುಳ್ಗೊಂಡ ಮರುಳಂತೆ ದೇವಲೋಕ ದೊಳಿನಿತಾನುಂ ಕಾಲಮನನುಭವಿಸಿದನುಭವಕ್ಕೆ ಮೊದಲಿಗೆ ಯೆನಿಸಿದಾ ಸ್ವಯಂಪ್ರಭೆಯಂ ನೆನೆನೆನೆದು,**

**ಪದವಿಭಾಗ-ಅನ್ವಯ-ಅರ್ಥ:** ಅಂತು = ಹಾಗೆ, ಗಗನತಳಕುಸುಮಮನೆ ಬಯಸಿ = ಆಕಾಶದ ಹೂವಿಗೆ ಇಷ್ಟಪಟ್ಟು, ಮರುಳ್ಗೊಂಡ ಮರುಳಂತೆ = ಭ್ರಾಂತನಾಗುವ ಗಾಂಪನಂತೆ, ದೇವಲೋಕದೊಳ್ + ಇನಿತಾನುಂ ಕಾಲಂ = ದೇವಲೋಕದಲ್ಲಿ ಇಷ್ಟು ಕಾಲ, ಅನನುಭವಿಸಿದನುಭವಕ್ಕೆ = ಪಡೆದ ಅನುಭವಕ್ಕೆ,

ಮೊದಲಿಗೆ + ಎನಿಸಿದ = ಆರಂಭಗಾರ್ತಿ ಎನಿಸಿದ್ದ, ಆ ಸ್ವಯಂಪ್ರಭೆಯಂ ನೆನೆನೆನೆದು = ಸ್ವಯಂಪ್ರಭೆಯನ್ನು ನೆನೆಸಿಕೊಂಡು,

**ಗದ್ಯಾನುಸರಣ:** ಆಕಾಶದ ಹೂವಿಗೆ ಇಷ್ಟಪಟ್ಟು ಭ್ರಾಂತನಾಗುವ ಗಾಂಪನಂತೆ, ದೇವಲೋಕದಲ್ಲಿ ಇಷ್ಟು ಕಾಲ, ಪಡೆದ ಅನುಭವಕ್ಕೆ, ಆರಂಭಗಾರ್ತಿ ಎನಿಸಿದ್ದ ಸ್ವಯಂಪ್ರಭೆಯನ್ನು ನೆನೆಸಿಕೊಂಡು ಕೊರಗಿದ. ಶ್ರೀಪ್ರಭ ವಿಮಾನದಲ್ಲಿಯೂ ಅವನಿಗೆ ಇತರ ಪ್ರೇಯಸಿಯರಿದ್ದರೂ, ಸ್ವರ್ಗಸುಖ ಏನೆಂಬುದನ್ನು ಅನುಭವಕ್ಕೆ ತಂದವಳು ಅವಳು ಎಂಬ ಭಾವ.

**ಕುಡುಮಿಂಚಂ ಮಸೆದನ್ನರಪ್ಪ ಪಲರೊಳ್ವೆಂಡಿರ್ ಮನಂಗೊಂಡುಬಂ**
**ದೊಡಮಾ ರಾಜಕುಮಾರನೊಲ್ಲನೆ ದಳನ್ಮಂದಾರಿಕಾಮಾಲೆಯೊಳ್**
**ಕಡುಗಂಪಂ ಸವಿದೊಂದು ತುಂಬಿ ಪಸಿವಿಂ ಮೆಟ್ಟುಟ್ಟು ಬಂಡುಣ್ಣದಿ**
**ರ್ಪೊಡಮಿರ್ಕುಂ ಬಟಿಕೆಂತುಮನ್ಯಕುಸುಮಾಮೋದಕ್ಕೆ ಮಯ್ದರ್ಕುಮೇ ೧೨**

**ಪದವಿಭಾಗ-ಅನ್ವಯ-ಅರ್ಥ:** ಕುಡುಮಿಂಚಂ = ಬಳ್ಳಿಮಿಂಚಿಗೆ, ಮಸೆದ = ಸಾಣೆಹಿಡಿದ, ಅನ್ನರಪ್ಪ = ಹಾಗಿದ್ದ, ಪಲರರ್ + ಒಳ್ವೆಂಡಿರ್ = ಹಲವು ಮಂದಿ ಸುಂದರಯುವತಿಯರು, ಮನಂಗೊಂಡು = ಇಷ್ಟಪಟ್ಟು, ಬಂದೊಡಂ = ಬಂದರೂ, ಆ ರಾಜಕುಮಾರನ್ + ಒಲ್ಲನೆ = ವಜ್ರಜಂಘನು ಖಂಡಿತವಾಗಿ ನಿರಾಕರಿಸಿದ; ದಳತ್ + ಮಂದಾರಿಕಾಮಾಲೆಯೊಳ್ = ಅರಳಿದ ಮಂದಾರ ಕುಸುಮಗಳಲ್ಲಿ, ಕಡುಗಂಪಂ ಸವಿದ = ರುಚಿಕಟ್ಟಾದ ಮಕರಂದವನ್ನು ಸವಿದ, ಒಂದು ತುಂಬಿ = ದುಂಬಿಯೊಂದು, ಪಸಿವಿಂ ಮೆಟ್ಟುಟ್ಟು = ಹಸಿವಿನಿಂದ ಬಳಲಿ, ಬಂಡುಣ್ಣದೆ = ಮಕರಂದವನ್ನು ಹೀರದೆಯೇ, ಇರ್ಪೊಡಂ + ಇರ್ಕುಂ = ಇದ್ದಾದರೂ ಇರಬಹುದು, ಬಟಿಕ, ಎಂತುಂ = ಯಾವ ಕಾರಣಕ್ಕೂ, ಅನ್ಯಕುಸುಮ + ಆಮೋದಕ್ಕೆ = ಬೇರೆ ಹೂಗಳ ಸವಿಗೆ, ಮಯ್ದರ್ಕುಮೇ = ಇಷ್ಟಪಡುವುದೇ?

**ಗದ್ಯಾನುಸರಣ:** ಬಳ್ಳಿಮಿಂಚಿಗೆ ಸಾಣೆಹಿಡಿದ ಹಾಗಿದ್ದ ಎಷ್ಟೋ ಮಂದಿ ಸುಂದರಯುವತಿಯರು ತಾವಾಗಿ ಬಯಸಿ ಬಂದರೂ ಆ ವಜ್ರಜಂಘನು ಅವರನ್ನು ಖಡಾಖಂಡಿತವಾಗಿ ನಿರಾಕರಿಸಿದ; ಅರಳಿದ ಮಂದಾರಕುಸುಮಗಳ ರುಚಿಕಟ್ಟಾದ ಮಕರಂದವನ್ನು ಸವಿದ ದುಂಬಿಯೊಂದು ಹಸಿವಿನಿಂದ ಬಳಲಿದರೂ ಮಕರಂದವನ್ನು ಹೀರದೆಯೇ ಇದ್ದಾದರೂ ಇರಬಹುದು, ಆದರೆ ಯಾವ ಕಾರಣಕ್ಕೂ, ಬೇರೆ ಹೂಗಳ ಹತ್ತಿರವಾದರೂ ಸುಳಿದೀತೇ!

**ವ॥ ಅನ್ನೆಗಂ ಈಶಾನಕಲ್ಪದೊಳಾ ಶ್ರೀಪ್ರಭವಿಮಾನದೊಳ್**

**ಅರ್ಥ:** ಅನ್ನೆಗಂ ಈಶಾನಕಲ್ಪದೊಳಾ ಶ್ರೀಪ್ರಭವಿಮಾನದೊಳ್ = ಆ ಹೊತ್ತಿನಲ್ಲಿ ಈಶಾನಕಲ್ಪದ ಶ್ರೀಪ್ರಭವಿಮಾನದಲ್ಲಿಯೇ ಇದ್ದ (ಸ್ವಯಂಪ್ರಭೆಯ) ಸ್ಥಿತಿ

**ಅಲಕಂ ಮಂದಾರಶೂನ್ಯಂ ಕದಪು ಮಕರಿಕಾಪತ್ರಶೂನ್ಯಂ ಲಲಾಟಂ**
**ತಿಲಕಾಳಂಕಾರಶೂನ್ಯಂ ಘನಕುಚಯುಗಳಂ ಹಾರಶೂನ್ಯಂ ನಿತಂಬಂ**
**ಕಲಕಾಂಚೀದಾಮಶೂನ್ಯಂ ಚರಣಯುಗಳಮುಂ ನೂಪುರಾಳಾಪಶೂನ್ಯಂ**
**ಲಲಿತಾಂಗಂ ಪೋದೊಡಾಯ್ತಾಕೆಗೆ ದಿವಮನಿತುಂ ನಿರ್ಜನಾರಣ್ಯಶೂನ್ಯಂ ೧೩**

**ಪದವಿಭಾಗ–ಅನ್ವಯ–ಅರ್ಥ:** ಲಲಿತಾಂಗಂ ಪೋದೊಡೆ = ಲಲಿತಾಂಗನು ಹೊರಟುಹೋದ ಮೇಲೆ, ಆಕೆಗೆ = ಅವಳಿಗೆ, ಅಲಕಂ = ತಲೆಗೂದಲು, ಮಂದಾರಶೂನ್ಯಂ = ಮಂದಾರಹೂಗಳಿಲ್ಲದಿದ್ದುವು; ಕದಪು = ಕೆನ್ನೆಗಳು, ಮಕರಿಕಾಪತ್ರಶೂನ್ಯಂ – ಅಲಂಕಾರಚಿತ್ತಾರಗಳಿಲ್ಲದೆ ಹೋದುವು; ಲಲಾಟಂ = ಹಣೆಯು, ತಿಲಕಾಳಂಕಾರಶೂನ್ಯಂ = ಅಲಂಕಾರದ ತಿಳಕವಿಲ್ಲದಿತ್ತು; ಘನಕುಚಯುಗಳಂ = ತೋರ ಮೊಲೆಗಳೆರಡೂ, ಹಾರಶೂನ್ಯಂ = ಸರಗಳಿಲ್ಲದಿದ್ದುವು, ನಿತಂಬಂ = ಪಿರ್ರೆಗಳು, ಕಲಕಾಂಚೀದಾಮಶೂನ್ಯಂ = ಒಡ್ಯಾಣಗಳಿಲ್ಲದಿದ್ದುವು; ಚರಣಯುಗಳಮುಂ = ಹೆಜ್ಜೆಗರಳೆರಡೂ, ನೂಪುರ + ಆಳಾಪಶೂನ್ಯಂ = ಗೆಜ್ಜೆಗಳ ದನಿಯಿಲ್ಲದೆ ಹೋದುವು; ದಿವಂ + ಅನಿತುಂ = ದೇವಲೋಕವೆಲ್ಲ, ನಿರ್ಜನ + ಅರಣ್ಯಶೂನ್ಯಂ = ಬರಿದಾದ ಕಾಡಿನಂತೆ, ಆಯ್ತು **ಗದ್ಯಾನುಸರಣ:** ಲಲಿತಾಂಗನು ಹೊರಟುಹೋದ ಮೇಲೆ ಅವಳು ಮುಂಗುರಳಲ್ಲಿ ಮಂದಾರಹೂಗಳಿನ್ನು ಮುಡಿಯುವುದನ್ನು ಬಿಟ್ಟಳು; ಕೆನ್ನೆಗಳುಲಿ ಅಲಂಕಾರಚಿತ್ತಾರಗಳನ್ನು ಮಾಡಿಕೊಳುವ ಆಸಕ್ತಿಯನ್ನು ತೊರೆದಳು; ಹಣೆಯಲ್ಲಿ ಅಲಂಕಾರದ ತಿಳಕವಿಲ್ಲಡುವುದಕ್ಕೂ ಬೇಸರ; ತೋರ ಮೊಲೆಗಳೆರಡರ ನಡುವೆ ಓಲಾಡುವಂತೆ ಸರಗಳನ್ನು ಧರಿಸುವುದು ಬೇಸರವೆನಿಸಿತು; ಸೊಂಟದಲ್ಲಿ ಒಡ್ಯಾಣಗಳು ಕಾಣದಾದುವು; ಹೆಜ್ಜೆಗಳೆರಡರ ಗೆಜ್ಜೆಗಳ ದನಿ ಉಡುಗಿಹೋದುವು; ದೇವಲೋಕವೆಲ್ಲ ಜನವಿಲ್ಲದ ಕಾಡಿನಂತೆ ಆಯ್ತು..

**ವ॥ ಅಂತಾ ಸ್ವಯಂಪ್ರಭಾದೇವಿ ನಿಜಪ್ರಾಣವಲ್ಲಭವಿಯೋಗವಿಧುರೆ ಯಾಗಿ**

**ಅರ್ಥ:** ಅಂತಾ ಸ್ವಯಂಪ್ರಭಾದೇವಿ ನಿಜಪ್ರಾಣವಲ್ಲಭವಿಯೋಗವಿಧುರೆಯಾಗಿ = ಈ ರೀತಿ ತನ್ನ ಪ್ರಾಣಕಾಂತನನ್ನು ಕಳೆದುಕೊಂಡು ಒಂಟಿಯಾಗಿ,

**ಮುರಿದೆಟಿದುಯ್ಯೆ ನಿನ್ನನಿರದಂತಕನಾಂ ನಡೆ ನೋಡೆ ನೋಡೆನೀಂ**
**ಕರಗಿದೆಯೆಂತುಮೆನ್ನ ಸುಶರೀರದೊಳಿರ್ದುದು ಜೀವಮೀಯೊಡಲ್**
**ಕರಗಿದುದಿಲ್ಲದೆನ್ನ ಬಸಮಲ್ತೊಡಲಿಂದೆಮ ಶೋಕದೊಳ್ ಮನಂ**
**ಕರಗಿದುದೆಯ್ದೆ ವಾರದಿರೆಯಿರ್ದೆಡೆಯಿಂ ಲಲಿತಾಂಗವಲ್ಲಭಾ ೧೪**

**ಪದವಿಭಾಗ–ಅನ್ವಯ–ಅರ್ಥ:** ಲಲಿತಾಂಗವಲ್ಲಭಾ = ಪ್ರಾಣಕಾಂತನಾದ ಲಿತಾಂಗನೇ, ಅಂತಕಂ = ಯಮನು, ಇರದೆ = ಬಿಡದೆ, ನಿನ್ನನ್ = ನಿನ್ನನ್ನು, ಮುರಿದು + ಎಟಿದು + ಉಯ್ಯೆ = ಮುರಿದು ಕರೆದೊಯ್ಯಲು, ಆಂ ನಡೆ ನೋಡೆ ನೋಡೆ = ನಾನು ನೋಡುತ್ತಿರುವಂತೆಯೇ, ನೀಂ ಕರಗಿದೆ = ನೀನು ಕರಗಿ ಕಣ್ಮರೆಯಾದೆ; ಎಂತುಂ = ಹೇಗೋ, ಎನ್ನ ಸುಶರೀರದೊಳ್ = ನನ್ನ ದೇಹದಲ್ಲಿ, ಜೀವಂ ಇರ್ದುದು = ಇನ್ನೂ ಪ್ರಾಣ ಉಳಿದಿದೆ, ಈ ಒಡಲ್ ಕರಗಿದುದಿಲ್ಲ = ಈ ದೇಹ ಕರಗಿ ಹೋಗಲಿಲ್ಲ, ಅದು ಒಡಲ್ + ಇಂದು + ಎಮ ಎನ್ನ ಬಸಂ + ಅಲ್ತು = ಆ ದೇಹ ನನ್ನ ವಶದಲ್ಲಿಲ್ಲವಲ್ಲ; ವಾರದೆ + ಇರೆ + ಇರ್ದೆಡೆಯಿಂ = ಇದ್ದ ಕಡೆಯಿಂದ ನೀನು ಬಾರದಿರಲು, ಮನಂ = ನನ್ನ ಮನಸ್ಸು, ಶೋಕದೊಳ್ ಕರಗಿದುದು = ದುಖದಿಂದಾಗಿ ಕರಗಿಹೋಗಿದೆ

**ಗದ್ಯಾನುಸರಣ:** ಪ್ರಾಣಕಾಂತನಾದ ಲಲಿತಾಂಗನೇ, ಯಮನು ಬಿಡದೆ ನಿನ್ನನ್ನು ಮುರಿದು ಕರೆದೊಯ್ಯಲು, ನಾನು ನೋಡುತ್ತಿರುವಂತೆಯೇ ನೀನು ಕರಗಿ ಕಣ್ಮರೆಯಾದೆ; ಹೇಗೋ ನನ್ನ ದೇಹದಲ್ಲಿ ಇನ್ನೂ ಪ್ರಾಣ ಉಳಿದಿದೆ; ಈ ದೇಹ ಕರಗಿ ಹೋಗಲಿಲ್ಲ, ಅದು ನನ್ನ ವಶದಲ್ಲಿಲ್ಲವಲ್ಲ! ಇದ್ದ ಕಡೆಯಿಂದ ನೀನು ಬಾರದಿರಲು ನನ್ನ ಮನಸ್ಸು ದುಃಖದಿಂದಾಗಿ ಕರಗಿಹೋಗಿದೆ!

**ಮದನನ ಕೈದುವೆಲ್ಲಿದನನಂಗನ ಕೈಪೊಡೆಯೆಲ್ಲಿದಂ ವಿಳಾ**
**ಸದ ಕಣಿಯೆಲ್ಲಿದಂ ಚದುರ ಪುಟ್ಟಿದನೆಲ್ಲಿದನೆಲ್ಲಿದಂ ವಿನೋ**
**ದದ ಮೊದಲೆಲ್ಲಿದಂ ಸೊಬಗಿನಾಗರಮೆಲ್ಲಿದನಿಚ್ಚೆಯಾಣ್ಮನೆ**
**ಲ್ಲಿದನೆರ್ದೆಯಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ ೧೫**

**ಪದವಿಭಾಗ–ಅನ್ವಯ–ಅರ್ಥ:** ಮದನನ ಕೈದುವು + ಎಲ್ಲಿದನ್ = ಮನ್ಮಥನ ಆಯುಧವಾದವನು ಎಲ್ಲಿ? ಅನಂಗನ ಕೈಪೊಡೆ + ಎಲ್ಲಿದಂ = ದೇಹರಹಿತನಾದವನ ಬಾಣದ ಗರಿಯಂತಹವನು ಎಲ್ಲಿ? ವಿಳಾಸದ ಕಣಿ + ಎಲ್ಲಿದಂ = ವಿಲಾಸದ ಗಣಿಸ್ವರೂಪನೆಲ್ಲಿ? ಚದುರ ಪುಟ್ಟಿದನ್ + ಎಲ್ಲಿದನ್ + ಎಲ್ಲಿದಂ = ಚತುರತೆಯ ಸಾಕಾರವಾಗಿದ್ದವನೆಲ್ಲಿ? ವಿನೋದದ ಮೊದಲ್ + ಎಲ್ಲಿದಂ = ವಿನೋದಾಗ್ರಣಿ ಎಲ್ಲಿ? ಸೊಬಗಿನ್ + ಆಗರಂ + ಎಲ್ಲಿದನ್ = ಸೊಬಗಿನ ನೆಲೆಯಾದವನು ಎಲ್ಲಿ? ಇಚ್ಚೆಯ + ಆಣ್ಮನ್ + ಎಲ್ಲಿದನ್ = ನನ್ನ

ಆಸೆಯ ಪ್ರಿಯಕರನೆಲ್ಲಿ? ಎರ್ದೆಯ + ಆಣ್ಮನ್ + ಎನ್ನರಸನ್ = ನನ್ನ ಹೃದಯಪ್ರಿಯನೆಲ್ಲಿ? ಲಲಿತಾಂಗವಲ್ಲಭಂ = ನನ್ನ ಒಡೆಯನಾದವನು, ಎಲ್ಲಿದನೋ = ಎಲ್ಲಿರುವನೋ?

**ಗದ್ಯಾನುಸರಣ:** ಮನ್ಮಥನ ಆಯುಧ, ಕಾಮನ ಬಾಣದ ಗರಿ, ವಿಲಾಸದ ಗಣಿ, ಚತುರತೆಯ ಸಾಕಾರ, ವಿನೋದಾಗ್ರಣಿ, ಸೊಬಗಿನ ನೆಲೆ, ಇಷ್ಟದ ಪ್ರಿಯಕರ, ಹೃದಯಪ್ರಿಯ, ನನ್ನ ಒಡೆಯ – ಈ ಎಲ್ಲವೂ ಆಗಿದ್ದ ಲಲಿತಾಂಗನು ಎಲ್ಲಿದ್ದಾನೆಯೋ!

**ವ। ಎಂದು ನಿಜಪ್ರಾಣವಲ್ಲಭ ವಿಯೋಗಶೋಕೋದ್ರೇಕ ವ್ಯಾಕುಳೆಯಾಗಿರ್ದ ತತ್ಸ್ವಯಂ ಪ್ರಭಾದೇವಿಯ ಸಮೀಪಕ್ಕೆ ಮಹತ್ತರ ದೇವಿಯರ್ ಬಂದು**

**ಪದವಿಭಾಗ–ಅನ್ವಯ–ಅರ್ಥ:** ಎಂದು ನಿಜಪ್ರಾಣವಲ್ಲಭವಿಯೋಗ = ತನ್ನ ಪ್ರಾಣದೊಡೆಯನ ಕಣ್ಮರೆಯಿಂದ, ಶೋಕ + ಉದ್ರೇಕವ್ಯಾಕುಳೆಯಾಗಿರ್ದ = ದುಃಖತೀವ್ರತೆಯಿಂದ ಗಾಸಿಗೊಂಡಿದ್ದ, ತತ್ + ಸ್ವಯಂಪ್ರಭಾದೇವಿಯ ಸಮೀಪಕ್ಕೆ = ಸ್ವಯಂಪ್ರಭೆಯ ಬಳಿಗೆ, ಮಹತ್ತರದೇವಿಯರ್ = ಸಾಮಾನಿಕ ದೇವಿಯರು, ಬಂದು,

**ಗದ್ಯಾನುಸ್ಮರಣ:** ಎಂದು ತನ್ನ ಪ್ರಾಣದೊಡೆಯನ ಕಣ್ಮರೆಯಿಂದಾದ ದುಃಖತೀವ್ರತೆಯಿಂದ ಗಾಸಿಗೊಂಡಿದ್ದ ಸ್ವಯಂಪ್ರಭೆಯ ಬಳಿಗೆ ಸಾಮಾನಿಕ ದೇವಿಯರು ಬಂದು,

**ಮುಂಪಿಂತೆಂಬುದಿದಲ್ತೆ ನಿ**
**ಳಿಂಪಯುಗಕ್ಕೆಲ್ಲಮಿಂತು ಬಾಯಟಿವುದೆ ಚಿಃ**
**ಗಾಂಪು ಬಗೆಗೊಂಡು ಜಿನಪತಿ**
**ಯ ಪೂಜಿಸು ಪಡೆವೆಯಿನಿಯನಂ ಮಱುಭವದೊಳ್ ೧೬**

**ಪದವಿಭಾಗ–ಅನ್ವಯ–ಅರ್ಥ:** ನಿಳಿಂಪಯುಗಕ್ಕೆಲ್ಲಂ = ದೇವದಂಪತಿಗಳಿಗೆಲ್ಲ, ಇಂತು = ಹೀಗೆಯೇ, ಮುಂಪಿಂತೆಂಬುದು = ಹಿಂಚುಮುಂಚು ಎಂಬಂತೆ, ಇದಲ್ತೆ = ಇದೇ ಅಲ್ಲವೇ? ಬಾಯಟಿವುದೆ = (ಇದಕ್ಕಾಗಿ) ಗೋಳಾಡುವುದೇ? ಚಿಃ ಗಾಂಪು = ಛೇ, ದಡ್ಡತನ! ಬಗೆಗೊಂಡು = ಮನಃಪೂರ್ವಕವಾಗಿ, ಜಿನಪತಿಯ ಪೂಜಿಸು = ಜಿನಪತಿಯನ್ನು ಧ್ಯಾನಿಸು; ಇನಿಯನಂ = ನಿನ್ನ ಪ್ರಿಯಕರನನ್ನು, ಮಱುಭವದೊಳ್ ಪಡೆವೆ = ಮುಂದಿನ ಜನ್ಮದಲ್ಲಿ ಹೊಂದುತ್ತೀಯೆ.

**ಗದ್ಯಾನುಸರಣ:** ದೇವದಂಪತಿಗಳಿಗೆಲ್ಲ ಹಿಂಚುಮುಂಚು ಹೀಗೆಯೇ ಸಂಭವಿಸುತ್ತದೆ; ಇದಕ್ಕಾಗಿ ಗೋಳಾಡುವುದೇ? ಛೇ, ನಿನ್ನದು ಎಂಥ ದಡ್ಡತನ! ಮನಃಪೂರ್ವಕವಾಗಿ ಜಿನಪತಿಯನ್ನು ಧ್ಯಾನಿಸು; ಮುಂದಿನ ಜನ್ಮದಲ್ಲಿ ನಿನ್ನ ಪ್ರಿಯಕರನನ್ನು ಹೊಂದುತ್ತೀಯೆ.

**ವಿಶೇಷ ವಿಚಾರ**: ಪೂರ್ವಪುರಾಣದಲ್ಲಿ ಸ್ವಯಂಪ್ರಭೆಯನ್ನು ಸಮಾಧಾನಪಡಿಸುವವರು ದೃಢವರ್ಮನೆಂಬ ದೇವ, ಮಹತ್ತರಿಕೆಯರಲ್ಲ – ಪೂಪು. ೬–೫೩

**ವ। ಎಂಬುದುಮದನೆ ಮನದೇಗೊಂಡು**

**ಅರ್ಥ:** ಎಂಬುದುಂ + ಅದನೆ ಮನದೆ + ಏಗೊಂಡು = ಎಂದು ಹೇಳಲು, ಸ್ವಯಂಪ್ರಭೆಯು ಅದನ್ನು ಒಪ್ಪಿದಳು.

**ಅನ್ನೆಗಮಾ ಸ್ವಯಂಪ್ರಭೆಯುಮಾ ಲಲಿತಾಂಗವಿಯೋಗದಿಂ ಸಮಾ**
**ಸನ್ನನಿಜಾಯುವಂತೆ ಗುರುಪಂಚಕಮಂ ನೆನೆಯುತ್ತೆ ಭೋಂಕೆನು**
**ತ್ಸನ್ನಶರೀರೆಯಾಗಿ ದಿವದಿಂದಿೞಿದಳ್ ಗಡಮಪ್ಪುದಂತು ಬೆಂ**
**ಬೆನ್ನನೆ ಬಾರದಂದು ಲಲಿತಾಂಗಿಯ ನಲ್ಮೆಗೆ ಬನ್ನವಾಗದೇ ೧೭**

**ಪದವಿಭಾಗ–ಅನ್ವಯ–ಅರ್ಥ:** ಅನ್ನೆಗಮಾ = ಈ ನಡುವೆ, ಸ್ವಯಂಪ್ರಭೆಯುಂ = ಸ್ವಯಂಪ್ರಭೆಯೂ, ಆ ಲಲಿತಾಂಗವಿಯೋಗದಿಂ = ಲಲಿತಾಂಗನ ಸಾವಿನಿಂದ, ಸಂ + ಆಸನ್ನನಿಜಾಯುವು = ಆಯುಸ್ಸಿನ ಕೊನೆಯನ್ನು ತಲುಪಿ, ಅಂತೆ ಗುರುಪಂಚಕಮಂ ನೆನೆಯುತ್ತೆ = ಪಂಚಪರಮೇಷ್ಠಿಗಳ ಧ್ಯಾನ ಮಾಡುತ್ತ, ಭೋಂಕೆನೆ = ಇದ್ದಕ್ಕಿದ್ದಂತೆ, ಉತ್ಸನ್ನಶರೀರೆಯಾಗಿ = ದೇಹವನ್ನು ತೊರೆದವಳಾಗಿ, ದಿವದಿಂದ + ಇೞಿದಳ್ = ದೇವಲೋಕದಿಂದ ಇಳಿದಳು, ಗಡಂ = ಅಲ್ಲವೇ! ಅಪ್ಪುದು = ಸರಿಯೇ, ಅಂತು ಬೆಂಬೆನ್ನನೆ ಬಾರದಂದು = ಹಾಗೆ ಹಿಂಬಾಲಿಸಿ ಬಾರದಿದ್ದರೆ, ಲಲಿತಾಂಗಿಯ ನಲ್ಮೆಗೆ = ಆ ಸುಂದರಿಯ ಒಲುಮೆಗೆ, ಬನ್ನಂ + ಆಗದೇ = ಭಂಗವಾಗುವುದಿಲ್ಲವೇ!

**ಗದ್ಯಾನುಸರಣ:** ಈ ನಡುವೆ ಸ್ವಯಂಪ್ರಭೆಯೂ ಆ ಲಲಿತಾಂಗನ ಸಾವಿನ ಬಳಿಕ ವಿರಹದಿಂದಲೇ ಆಯುಸ್ಸಿನ ಕೊನೆಯನ್ನು ತಲುಪಿ, ಪಂಚಪರಮೇಷ್ಠಿಗಳ ಧ್ಯಾನ ಮಾಡುತ್ತ, ಇದ್ದಕ್ಕಿದ್ದಂತೆ ದೇಹವನ್ನು ತೊರೆದು ದೇವಲೋಕದಿಂದ ಇಳಿದಳು, ಸರಿಯೇ; ಹಾಗೆ ಹಿಂಬಾಲಿಸಿ ಬಾರದಿದ್ದರೆ, ಆ ಸುಂದರಿಯ ಒಲುಮೆಗೆ ಭಂಗವಾಗುತ್ತಿರಲಿಲ್ಲವೇ!

ವ॥ ಅಂತು ನಿಶಾಂತತಾರಕಾಕಾರದಿಂದದೃಶ್ಯರೂಪಿಯಾಗಿ ಜಂಬೂ ದ್ವೀಪದ ಪೂರ್ವವಿದೇಹದ ಪುಂಡರೀಕಿಣೀಯೆಂಬ ಪೊೞಲನಾಳ್ವ ವಜ್ರದಂತ ಭೂಪತಿಗಮಾತನ ಮನೋರಥಜನ್ಮಭೂಮಿಯೆನೆಸಿದ ಲಕ್ಷ್ಮೀಮತಿ ಮಹಾದೇವಿಗಂ

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ನಿಶಾಂತ = ಬೆಳಗುಜಾವದ, ತಾರಕಾಕಾರದಿಂದ = ನಕ್ಷತ್ರದ ಆಕಾರದಂತೆ, ಅದೃಶ್ಯರೂಪಿಯಾಗಿ = ಕಣ್ಮರೆಯಾಗಿ, , ಜಂಬೂದ್ವೀಪದ ಪೂರ್ವವಿದೇಹದ ಪುಂಡರೀಕಿಣೀಯೆಂಬ, ಪೊೞಲನ್ + ಆಳ್ವ = ನಗರವನ್ನಾಳುವ, ವಜ್ರದಂತಭೂಪತಿಗಂ = ವಜ್ರದಂತರಾಜನಿಗೂ, ಆತನ ಮನೋರಥಜನ್ಮಭೂಮಿಯೆನೆಸಿದ = ಅವನ ಇಷ್ಟಾರ್ಥಗಳ ತವರಿನಂತಿದ್ದ ಲಕ್ಷ್ಮೀಮತಿಮಹಾದೇವಿಗಂ = ಲಕ್ಷ್ಮೀಮಹಾರಾಣಿಗೂ

**ಗದ್ಯಾನುಸರಣ:** ಹಾಗೆ, ಬೆಳಗುಜಾವದ ನಕ್ಷತ್ರದಂತೆ ಕಣ್ಮರೆಯಾಗಿ, ಜಂಬೂದ್ವೀಪದ ಪೂರ್ವವಿದೇಹದ ಪುಂಡರೀಕಿಣೀಯೆಂಬ ನಗರದ ವಜ್ರದಂತ–ಲಕ್ಷ್ಮೀಮತಿ ರಾಜದಂಪತಿಗಳಿಗೆ

**ಕಾಮನ ಮಂತ್ರದೇವತೆಯೊ ಕಾಮನ ವಿದ್ಯೆಯೊ ಬದ್ಧರಂ ಗೆಲಲ್**
**ಕಾಮನ ನಿಚ್ಚಮರ್ಚಿಸುವ ಕೈದುವೊ ಕಾಮನ ಮೋಹಪಾಶಮೋ**
**ಕಾಮನ ಕಾಣ್ಬ ಕೈಪಿಡಿಯೊ ವಿಸ್ಮಯಮಾದಪುದೆಂಬಿನಂ ಮಗಳ್**
**ಶ್ರೀಮತಿಯೆಂಬಳಾಗಿ ನವಯೌವನಲಕ್ಷ್ಮಿಯನೆಯ್ದೆ ತಾಳಿದಳ್ ೧೮**

**ಪದವಿಭಾಗ–ಅನ್ವಯ–ಅರ್ಥ:** ಕಾಮನ ಮಂತ್ರದೇವತೆಯೊ ಕಾಮನ ವಿದ್ಯೆಯೊ, ಬದ್ಧರಂ ಗೆಲಲ್ = ಪ್ರೌಢರನ್ನು ಗೆಲ್ಲಲು, ಕಾಮನ = ಕಾಮನು, ನಿಚ್ಚಂ + ಅರ್ಚಿಸುವ ಕೈದುವೊ = ನಿತ್ಯವೂ ಪೂಜಿಸುವ ಆಯುಧವೋ, ಕಾಮನ ಮೋಹಪಾಶಮೋ = ಕಾಮನು ಬಳಸುವ ಕಾಮಪಾಶವೋ, ಕಾಮನ = ಕಾಮನು = ಕಾಣ್ಬ ಕೈಪಿಡಿಯೊ = ನೋಡಿಕೊಳ್ಳುವ ಕನ್ನಡಿಯೋ, ವಿಸ್ಮಯಮಾದಪುದು + ಎಂಬಿನಂ = ಆಶ್ಚರ್ಯ ಹುಟ್ಟಿಸುತ್ತದೆ ಎನ್ನುವಂತಿದ್ದ, ಮಗಳ್ ಶ್ರೀಮತಿಯೆಂಬಳ್ ಆಗಿ = ಶ್ರೀಮತಿ ಎಂಬ ಹೆಸರನ್ನು ಹೊಂದಿದ ಮಗಳಾಗಿ, (ಹುಟ್ಟಿ) ನವಯೌವನಲಕ್ಷ್ಮಿಯನ್ + ಎಯ್ದೆ ತಾಳಿದಳ್ = ಹೊಸ ಯೌವನವೆಂಬ ಸಂಪತ್ತನ್ನು ಹೊಂದಿದಳು

**ಗದ್ಯಾನುಸರಣ:** ಕಾಮನ ಮಂತ್ರದೇವತೆಯೊ, ಕಾಮನ ವಿದ್ಯೆಯೊ, ಪ್ರೌಢರನ್ನು ಗೆಲ್ಲಲು ಕಾಮನು ನಿತ್ಯವೂ ಪೂಜಿಸುವ ಆಯುಧವೋ, ಕಾಮನು ಬಳಸುವ

ಕಾಮಪಾಶವೋ, ಕಾಮನು ನೋಡಿಕೊಳ್ಳುವ ಕನ್ನಡಿಯೋ – ಎಂಬಂತೆ ಆಶ್ಚರ್ಯ ಹುಟ್ಟಿಸುವಂತೆ ಚೆಲುವಾದ, ಮಗಳಾಗಿ ಹುಟ್ಟಿ ಶ್ರೀಮತಿ ಎಂಬ ಹೆಸರನ್ನು ಹೊಂದಿ ಸುಂದರ ಯುವತಿಯಾಗಿ ಅರಳಿದಳು.

**ಅಲರ್ವ ಪದಕ್ಕೆ ಬಂದಲೆವ ತಂಬೆಲರಿಲ್ಲದೆ ಮಾಣ್ದ ಮಲ್ಲಿಕೋ**
**ಜ್ಜ್ವಲಕುಳಕ್ಕಮಾದ ಪೊಸಗಂಪನುಗುಟ್ಟಿರಲಿರ್ದ್ದ ರಾಗದಿಂ**
**ನಲಿವ ಮದಾಳಿಯಿಲ್ಲದಿನಿಸಂ ತಡೆದಂತರಿಸಿರ್ದ ಪದ್ಮಕು**
**ಙ್ಮಲ ವಿಭವಕ್ಕಂ ದೊರೆಗೆ ವಂದುದೊ ಯೌವನದೇಱ್ಗೆ ಕನ್ನೆಯಾರ್ಗೆ**

**ಪದವಿಭಾಗ–ಅನ್ವಯ–ಅರ್ಥ:** ಕನ್ನೆಯಾ ಯೌವನದ + ಏಱ್ಗೆ = ಶ್ರೀಮತಿಯ ಏರುಜವ್ವನವು, ಅಲರ್ವ ಪದಕ್ಕೆ = ಅರಳುವ ಹೊತ್ತಿಗೆ, ಬಂದು + ಅಲೆವ = ಸುತ್ತಾಡುವ, ತಂಬೆಲರ್ + ಇಲ್ಲದೆ ಮಾಣ್ದ = ತಂಗಾಳಿಯಿಲ್ಲದಿರುವ, ಮಲ್ಲಿಕಾ + ಉಜ್ಜ್ವಲಕುಳಕ್ಕಂ = ಮಲ್ಲಿಗೆಯ ಹೂಗಳಿಗೂ, ಆದ ಪೊಸಗಂಪನ್ + ಉಗುಟ್ಟಿರಲಿರ್ದ್ದ = ತನ್ನಲ್ಲಿ ಹುಟ್ಟಿದ ನರುಗಂಪನ್ನು, ರಾಗದಿಂ ನಲಿವ = ಒಲವಿನಿಂದ ಹೀರಿ, ಮದಾಳಿಯಿಲ್ಲದೆ = ಸೊಕ್ಕುವ ದುಂಬಿಯಿಲ್ಲದೆ, ಇನಿಸಂ ತಡೆದು + ಅಂತರಿಸಿರ್ದ = ಮರೆಯಾದ, ಪದ್ಮಕುಙ್ಮಲ = ತಾವರೆಯ ಮೊಗ್ಗಿನ, ವಿಭವಕ್ಕಂ = ವೈಭವಕ್ಕೂ, ದೊರೆಗೆ ವಂದುದೊ = ಸಮನಾಯಿತು.

**ಗದ್ಯಾನುಸರಣ:** ಶ್ರೀಮತಿಯ ಏರುಜವ್ವನವು – ಅರಳುವ ಹೊತ್ತಿಗೆ ಬೀಸುವ ತಂಗಾಳಿಯಿಲ್ಲದ ಮಲ್ಲಿಗೆಯ ಹೂವಿನಂತೆ, ತನ್ನಲ್ಲಿ ಹುಟ್ಟಿದ ನರುಗಂಪನ್ನು ಒಲವಿನಿಂದ ಹೀರಿ ಸೊಕ್ಕುವ ದುಂಬಿಯಿಲ್ಲದೆ ಮರೆಯಾಗುವ ತಾವರೆಯ ಮೊಗ್ಗಿನ ವೈಭವದಂತೆ – ಆಯಿತು. (ಸಂಗಾತಿಯಿಲ್ಲದೆ ಅವಳ ಚೆಲುವು–ಜವ್ವನಗಳು ಕಾಡಬೆಳುದಿಂಗಳಾಯಿತು ಎಂದು ಭಾವ.)

**ಈ ಪರಿಜೀ ತನುಚ್ಛವಿಯನೀ ಪೊಸಜವ್ವನವೀ ಬೆಡಂಗನೀ**
**ರೂಪುಮನೀ ವಿಳಾಸಮುಮನೇನೊಳಕೊಳ್ಗುಮೊ ತಪ್ಪದೀ ಕಳಾ**
**ಳಾಪೆ ಸುರೇಂದ್ರಕಾಂತೆಯೆನುತುಂ ನಡೆ ನೋಟ್ಪ ವರ್ಗಕ್ಷಿಪಕ್ಷ್ಮವಿ**
**ಕ್ಷೇಪಣಮೊಂದೆ ಮಾಡುವುದವಳ್ ಮನುಜಾಂಗನೆಯೆಂಬ ಭೇದಮಂ೨೦**

**ಪದವಿಭಾಗ–ಅನ್ವಯ–ಅರ್ಥ:** ಈ ಪರಿಜು = ಆಕಾರ, ಈ ತನುಚ್ಛವಿಯನ್ = ಈ ದೇಹಕಾಂತಿಗಳನ್ನೂ, ಈ ಪೊಸಜವ್ವನ = ಈ ನವಯೌವನ, ಈ ಬೆಡಂಗನ್ = ಈ ಬೆಡಗನ್ನೂ, ಈ ರೂಪುಮನ್ = ಈ ರೂಪವನ್ನೂ, ಈ

ವಿಳಾಸಮುಮನ್ = ಈ ವಿಲಾಸವನ್ನೂ, ಅವಳ ಇರವು, ಏನ್ + ಒಳಕೊಳ್ಗುಮೊ = ಏನು ಕೂಡಿಕೊಂಡಿದೆಯೋ! ಈ ಕಳಾಳಾಪೆ = ಮಧುರಭಾಷಿಣಿಯು, ಸುರೇಂದ್ರಕಾಂತೆ = ದೇವತಾಸ್ತ್ರೀಯೇ, ತಪ್ಪದು = ಸರಿ, ಎನುತುಂ = ಎಂದು, ನಡೆ ನೋಳ್ಪವರ್ಗೆ = ಸೂಕ್ಷ್ಮವಾಗಿ ನೋಡುವವರಿಗೆ, ಅಕ್ಷಿಪಕ್ಷ್ಮವಿಕ್ಷೇಪಣಂ = ಅವಳ ರೆಪ್ಪೆಯ ಬಡಿತವು, ಅವಳ್ ಮನುಜಾಂಗನೆಯೆಂಬ ಭೇದಮಂ = ಮಾನವಸ್ತ್ರೀಯೆಂಬ ವ್ಯತ್ಯಾಸವನ್ನು ಒಂದೆ ಮಾಡುವುದು = ಉಂಟುಮಾಡುತ್ತದೆ.

**ಗದ್ಯಾನುಸರಣ:** ಆಕಾರ, ಈ ದೇಹಕಾಂತಿ, ಈ ನವಯೌವನ, ಈ ಬೆಡಗು, ಈ ರೂಪ ವಿಳಾಸಗಳೆಲ್ಲ ಅವಳ ಇರವು, ಹೇಗೆ ಉಂಟಾಗಿದೆಯೋ! ಈ ಮಧುರಭಾಷಿಣಿಯು ದೇವತಾಸ್ತ್ರೀಯೇ ಸರಿ ಎನ್ನಿಸಿದರೂ, ಸೂಕ್ಷ್ಮವಾಗಿ ನೋಡುವವರಿಗೆ ರೆಪ್ಪೆಯ ಬಡಿತದಿಂದ ಮಾನವಸ್ತ್ರೀಯೆಂಬುದು ತಿಳಿಯುತ್ತಿತ್ತು!

**ಪಂಡಿತೆಯೆಂಬ ನೆಗಟ್ತೆಯು**
**ಕೊಂಡಾಟದ ದಾದಿ ತನ್ನನೋದಿಸುತಿರೆ ಕ**
**ಯ್ಕೊಂಡ ಕಳಾಪರಿಣತೆಯೊಳ್**
**ಪಂಡಿತೆಯಿಂದಾಕೆ ಪರಮಪಂಡಿತೆಯಾದಳ್** ೨೧

**ಪದವಿಭಾಗ-ಅನ್ವಯ-ಅರ್ಥ:** ಪಂಡಿತೆಯೆಂಬ ನೆಗಟ್ತೆಯು = ಪಂಡಿತೆಯೆಂದು ಪ್ರಸಿದ್ಧಳಾದ, ಕೊಂಡಾಟದ ದಾದಿ = ನೆಚ್ಚಿನ ದಾದಿಯೊಬ್ಬಳು, ತನ್ನನ್ + ಓದಿಸುತಿರೆ = ತನಗೆ ವಿದ್ಯೆಯನ್ನು ಕಲಿಸಲು, ಕಯ್ಕೊಂಡ ಕಳಾಪರಿಣತೆಯೊಳ್ = ತಾನು ಸಾಧಿಸಿಕೊಂಡ ಕಳಾಪ್ರೌಢಿಮೆಯಲ್ಲಿ, ಪಂಡಿತೆಯಿಂದ + ಆಕೆ = ಪಂಡಿತೆಗಿಂತ ಶ್ರೀಮತಿಯು, ಪರಮಪಂಡಿತೆ + ಆದಳ್ = ಮಿಗಿಲಾದ ಪಂಡಿತೆ ಎನಿಸಿದಳು.

**ಗದ್ಯಾನುಸರಣ:** ಪಂಡಿತೆಯೆಂದು ಪ್ರಸಿದ್ಧಳಾದ ನೆಚ್ಚಿನ ದಾದಿಯೊಬ್ಬಳು ತನಗೆ ವಿದ್ಯೆಯನ್ನು ಕಲಿಸಲು, ತಾನು ಸಾಧಿಸಿಕೊಂಡ ಕಳಾಪ್ರೌಢಿಮೆಯಿಂದಾಗಿ ಶ್ರೀಮತಿಯು ಪಂಡಿತೆಗಿಂತ ಮಿಗಿಲಾದ ಪಂಡಿತೆ ಎನಿಸಿದಳು.

**ವ॥ ಒಂದು ದಿವಸಮಾ ಕನ್ನೆ ತನ್ನ ಚೆಂಬೊನ್ನ ಕನ್ನೆಮಾಡದೋವರಿಯೊಳಗೆ ಗಂಗಾ ತರಙ್ಗಧವಳದುಕೂಲಪ್ರಚ್ಛದಾಚ್ಛಾದಿತ ಮೃದುತಳ್ಪತಳದೊಳ್ ಪವಡಿಸಿರೆ ನಿಶಾವಸಾನ ಸಮಯದೊಳ್ ತತ್ಪುರಬಹಿರ್ಭಾಗಸ್ಥಿತ ಮನೋಹರೋದ್ಯಾನಾಸೀನ ಯಶೋಧರಗುರುಗಳ ಕೇವಳಜ್ಞಾನೋತ್ಪತ್ತಿಯೊಸಗೆಗೆ,**

**ಪದವಿಭಾಗ-ಅನ್ವಯ-ಅರ್ಥ:** (ಹೀಗಿರಲು), ಒಂದು ದಿವಸಂ ಆ ಕನ್ನೆ

= ಒಂದು ದಿವಸ ಶ್ರೀಮತಿಯು, ತನ್ನ, ಚೆಂಬೊನ್ನ = ಚಿನ್ನದ ಕನ್ನೆಮಾಡದ + ಓವರಿಯೊಳಗೆ = ಅರಮನೆಯ ಕೋಣೆಯಲ್ಲಿ, ಗಂಗಾತರಙ್ಗಧವಳ = ಗಂಗಾನದಿಯ ಅಲೆಯಂತೆ ಬೆಳ್ಳಗಿದ್ದ, ದುಕೂಲಪ್ರಚ್ಛದ್ + ಆಚ್ಛಾದಿತ = ಮಗ್ಗುಲಹಾಸಿಗೆಯನ್ನು ಹಾಸಿದ್ದ, ಮೃದುತಳ್ಪತಳದೊಳ್ ಪವಡಿಸಿರೆ = ಮೃದುವಾದ ಹಾಸಿಗೆಯಲ್ಲಿ ಮಲಗಿರಲು, ನಿಶಾ + ಅವಸಾನಸಮಯದೊಳ್ = ಬೆಳಗಿನ ಜಾವದ ಹೊತ್ತಿನಲ್ಲಿ, ತತ್ + ಪುರಬಹಿರ್ಭಾಗಸ್ಥಿತ = ಆ ಊರಿನ ಹೊರವಲಯದಲ್ಲಿದ್ದ, ಮನೋಹರೋದ್ಯಾನ + ಆಸೀನ = ಸುಂದರ ಉದ್ಯಾನವನದಲ್ಲಿ, (ಧ್ಯಾನದಲ್ಲಿ) ಕುಳಿತಿದ್ದ ಯಶೋಧರಗುರುಗಳು, ಕೇವಳಜ್ಞಾನೋತ್ಪತ್ತಿಯ + ಒಸಗೆಗೆ = ಕೇವಲಜ್ಞಾನವನ್ನು ಪಡೆದ ಕಾರಣ ನಡೆಯುತ್ತಿದ್ದ ಉತ್ಸವಕ್ಕೆಂದು,

**ಗದ್ಯಾನುಸರಣ:** ಹೀಗಿರಲು ಒಂದು ದಿವಸ ತನ್ನ ಚಿನ್ನದ ಅರಮನೆಯ ಕೋಣೆಯಲ್ಲಿ, ಗಂಗಾನದಿಯ ಅಲೆಯಂತೆ ಬೆಳ್ಳಗಿದ್ದ ಮಗ್ಗುಲಹಾಸಿಗೆಯನ್ನು ಹಾಸಿದ್ದ ಮೃದುವಾದ ಹಾಸಿಗೆಯಲ್ಲಿ ಶ್ರೀಮತಿಯು ಮಲಗಿದ್ದಳು; ಆ ಊರಿನ ಹೊರವಲಯದ ಸುಂದರ ಉಪವನದಲ್ಲಿ ಧ್ಯಾನದಲ್ಲಿ ಕುಳಿತು ಯಶೋಧರಗುರುಗಳು ಕೇವಲಜ್ಞಾನವನ್ನು ಪಡೆದ ಕಾರಣ ನಡೆಯುತ್ತಿದ್ದ ಉತ್ಸವಕ್ಕೆಂದು ಅಂದು ಬೆಳಗಿನ ಜಾವ.

**ನೆರೆದ ಸಮಸ್ತದೇವನಿಕುರುಂಬದ ಯಾನವಿಮಾನಕಿಂಕಿಣೀ**
**ವಿರುತಿಯ ದುಂದುಭಿಧ್ವನಿಯ ಮಂಗಳಗೇಯದ ನಾದಮಂ ತರಂ**
**ತರದೊಳೆ ಪೊತ್ತು ಪೂಮಟಿಯ ಕಂಪನಿತಿಂಪು ಪೊದಳ್ದು ಬಂದುಬಂ**
**ಧುರಹಿಮಮಂದಗಂಧವಹಮೆಚ್ಚೆಱಿಸಿತ್ತಮೃತಾಂಶುವಕ್ತ್ರೆಯಂ ೨೨**

**ಪದವಿಭಾಗ–ಅನ್ವಯ–ಅರ್ಥ:** ನೆರೆದ = ಸೇರಿದ್ದ, ಸಮಸ್ತದೇವ ನಿಕುರುಂಬದ = ಎಲ್ಲ ದೇವತಾಸಮುದಾಯದ, ಯಾನವಿಮಾನಕಿಂಕಿಣೀವಿರುತಿಯ = ಪಯಣವಿಮಾನದ ಗೆಜ್ಜೆಗಳ ಸದ್ದು, ದುಂದುಭಿಧ್ವನಿಯ = ದುಂದುಭಿಯ ಶಬ್ದ, ಮಂಗಳಗೇಯದ = ಮಂಗಳ ಗಾಯನ, (ಇವುಗಳ) ನಾದಮಂ = ಧ್ವನಿಯನ್ನು, ತರಂತರದೊಳೆ ಪೊತ್ತು = ಮತ್ತೆ ಮತ್ತೆ ಹೊತ್ತು, ಪೂಮಟಿಯ ಕಂಪನಿತಿಂಪು ಪೊದಳ್ದು = ಹೂಮಳೆಯ ಕಂಪು ಸೊಬಗುಗಳನ್ನು ತುಂಬಿಕೊಂಡು, ಬಂದು, ಬಂಧುರಹಿಮಮಂದಗಂಧವಹಂ = ಮೆಲುವಾದ ಆಹ್ಲಾದಕರ ತಂಗಾಳಿಯು, ಅಮೃತಾಂಶುವಕ್ತ್ರೆಯಂ = ಚಂದ್ರಮುಖಿಯನ್ನು, ಎೞ್ಚೆಱಿಸಿತ್ತು = ಎಚ್ಚರಗೊಳಿಸಿತು\

**ಗದ್ಯಾನುಸರಣ:** ಸೇರಿದ್ದ ದೇವತಾಸಮುದಾಯದ ಪಯಣವಿಮಾನದ ಗೆಜ್ಜೆಗಳ ಸದ್ದು, ದುಂದುಭಿಯ ಶಬ್ದ, ಮಂಗಳ ಗಾಯನಗಳ ಧ್ವನಿಯನ್ನು ಹೊತ್ತ ಹಾಗೂ ಹೂಮಳೆಯ ಕಂಪುಸೊಬಗುಗಳನ್ನು ಹೊತ್ತು ಆಹ್ಲಾದಕರವಾದ ತಂಗಾಳಿಯು ಮತ್ತೆ ಮತ್ತೆ ಬೀಸಿತು; ಆಗ ಸದ್ದು ಕಿವಿಗೆ ಬಿದ್ದು ಆ ಚಂದ್ರಮುಖಿಯನ್ನು ಎಚ್ಚರಗೊಳಿಸಿತು.

**ವ। ಅಂತು ನವಜಳದನಿನದಮಂ ಕೇಳ್ದ ಹಂಸವನಿತೆಯಂತಾ ವನಿತೆ ಶಂಕೆವೆರಸು ಭೋಂಕನೆೞ್ದು ಸೌಧೋಪರಿಮತಳದೊಳ್ ನಿಂದು ದೇವಾಗಮನಮಂ ನೋಡಲೊಡಂ ಪೂರ್ವಭವಸ್ಮರಣಮಾಗಿ ದೇವಲೋಕದ ಲಲಿತಾಂಗದೇವನಂ ನೆನೆದು,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ನವಜಳದನಿನದಮಂ = ಹೊಸತಾಗಿ ಗುಡುಗಿನ ಶಬ್ದವನ್ನು, ಕೇಳ್ದ = ಕೇಳಿದ, ಹಂಸವನಿತೆಯಂತೆ = ಹಂಸಿನಿಯ ಹಾಗೆ, ಆ ವನಿತೆ = ಶ್ರೀಮತಿಯು, ಶಂಕೆವೆರಸು = ಸಡಗರದಿಂದ, ಭೋಂಕನೆ + ಎೞ್ದು = ತಕ್ಷಣ ಮೇಲೆದ್ದು, ಸೌಧ + ಉಪರಿಮತಳದೊಳ್ = ಕನ್ನೆಮಾಡದ ಮಹಡಿಯಲ್ಲಿ, ನಿಂದು ದೇವಾಗಮನಮಂ ನೋಡಲೊಡಂ = ನಿಂತುಕೊಂಡು ಬರುವ ದೇವತೆಗಳನ್ನು ಕಂಡಾಕ್ಷಣವೇ, ಪೂರ್ವಭವಸ್ಮರಣಮಾಗಿ = ಹಿಂದಿನ ಜನ್ಮದ ನೆನಪುಂಟಾಗಿ, ದೇವಲೋಕದ ಲಲಿತಾಂಗದೇವನಂ ನೆನೆದು.

**ಗದ್ಯಾನುಸರಣ:** ಹಾಗೆ ಹೊಸತಾಗಿ ಗುಡುಗಿನ ಶಬ್ದವನ್ನು ಕೇಳಿದ ಹಂಸಿನಿಯಂತೆ ಶ್ರೀಮತಿಯು ಸಡಗರದಿಂದ ತಕ್ಷಣ ಮೇಲೆದ್ದು, ಕನ್ನೆಮಾಡದ ಮಹಡಿಯಲ್ಲಿ ನಿಂತು ಬರುವ ದೇವತೆಗಳನ್ನು ಕಂಡಾಕ್ಷಣವೇ ಹಿಂದಿನ ಜನ್ಮದ ನೆನಪು ಮರುಕಳಿಸಿ ದೇವಲೋಕದ ಲಲಿತಾಂಗದೇವನನ್ನು ನೆನೆದಳು.

**ಹಾ ಲಲಿತಾಂಗ ದೇವವನಿತಾವದನಾಂಬುಜಭೃಂಗ ನಿನ್ನ ಲೀ**
**ಲಾಲಸದೃಷ್ಟಿಪಾತಮೆರ್ದೆಯೊಳ್ ನೆಲಸಿರ್ದುವು ನಿನ್ನ ಮಾತುಗಳ್**
**ಕೀಲಿಸಿದಂತೆವೊಲ್ ಮನದೊಳಿರ್ದುವು ನಿನ್ನನೆ ಕಾಣಲಾಗದೆಂ**
**ದಾ ಲಲಿತಾಂಗಿ ಬೆಚ್ಚನುಸಿರ್ದಚ್ಚರಿವೆತ್ತಿರೆ ಮೂರ್ಛೆವೋಪುದುಂ॥೨೩**

**ಪದವಿಭಾಗ–ಅನ್ವಯ–ಅರ್ಥ:** ದೇವವನಿತಾವದನ + ಅಂಬುಜಭೃಂಗ = ದೇವವನಿತೆಯರೆಂಬ ತಾವರೆಗಳಿಗೆ ದುಂಬಿಯಂತಿದ್ದ, ಹಾ ಲಲಿತಾಂಗ, ನಿನ್ನ ಲೀಲಾಲಸದೃಷ್ಟಿಪಾತಂ = ನಿನ್ನ ಸೊಬಗಿನ ನೋಟವು, ಎರ್ದೆಯೊಳ್ ನೆಲಸಿರ್ದುವು = ನನ್ನ ಹೃದಯದಲ್ಲಿ ನೆಲೆನಿಂತಿದೆ, ನಿನ್ನ ಮಾತುಗಳ್ = ನಿನ್ನ ಮಾತುಗಳು, ಮನದೊಳ್ = ನನ್ನ ಮನಸ್ಸಿನಲ್ಲಿ, ಕೀಲಿಸಿದಂತೆವೊಲ್ ಇರ್ದುವು = ನಾಟಿನಿಂತಿವೆ;

ನಿನ್ನನೆ ಕಾಣಲಾಗದು = (ಆದರೆ) ನಿನ್ನನ್ನು ನೋಡಲಾಗುತ್ತಿಲ್ಲವಲ್ಲ, ಎಂದು + ಆ ಲಲಿತಾಂಗಿ = ಎಂದು ಆ ಕೋಮಲೆಯು, ಬೆಚ್ಚನೆ + ಉಸಿರ್ದು = ಬಿಸುಪಾದ ಉಸಿರನ್ನು ಬಿಟ್ಟು, ಅಚ್ಚರಿವೆತ್ತಿರೆ ಮೂರ್ಛೆವೋಪುದುಂ = ಆಶ್ಚರ್ಯವುಂಟುಮಾಡಿ ಮೂರ್ಚೆ ಹೋದಳು.

**ಗದ್ಯಾನುಸರಣ:** 'ಹಾ, ದೇವವನಿತೆಯರೆಂಬ ತಾವರೆಗಳಿಗೆ ದುಂಬಿಯಂತಿದ್ದ ಲಲಿತಾಂಗನೇ, ನಿನ್ನ ಸೊಬಗಿನ ನೋಟವು ನನ್ನ ಹೃದಯದಲ್ಲಿ ನೆಲೆನಿಂತಿದೆ, ನಿನ್ನ ಮಾತುಗಳು ನನ್ನ ಮನಸ್ಸಿನಲ್ಲಿ ನಾಟಿನಿಂತಿವೆ, ಆದರೆ ನಿನ್ನನ್ನು ನೋಡಲಾಗುತ್ತಿಲ್ಲವಲ್ಲ' ಎಂದು ಆ ಕೋಮಲೆಯು ಬಿಸುಪಾದ ಉಸಿರನ್ನು ಬಿಟ್ಟು ಆಶ್ಚರ್ಯಕರವಾಗಿ ಮೂರ್ಚೆ ಹೋದಳು.

**ವ॥ ಚಾಮರದಡಪದ ಡವಕೆಯ ಕನ್ನಡಿಯ ಪರಿಚಾರಿಕೆಯರು ಮೊಡನಾಡಿ ಬಳೆದ ಮೇಳದ ಕೆಳದಿಯರು ಮತಿ ವಿಕಳ ಮತಿಗಳಾಗಿ ಪರಿತಂದು ಮಲಯಜರಸಲುಳಿತ ಕದಳೀದಳವ್ಯಜನ ಮಂದ ಮಾರುತಾಂದೋಳನದಿನೆಂತಾನುಂ ಮೂರ್ಛೆಯಿಂದೆಚ್ಚುಱಿಸಿ ಬೆಸಗೊಳೆ ಮಱುಮಾತುಗುಡದೆಯುಂ ಮನಂಗುಡದೆಯುಮಿರೆ ನಡುಗಿ ಪರಿದು ಕನ್ಯಾಂತಃಪುರ ಮಹತ್ತರದೇವಿಯರ್ ಬಂದು ವಜ್ರದಂತಂಗಂ ಲಕ್ಷ್ಮೀಮತಿ ಮಹಾದೇವಿಗಮಱುಪಿ ದೊಡವರಿರ್ವರುಂ ಸಸಂಭ್ರಮಂ ಬಂದು,**

**ಪದವಿಭಾಗ–ಅನ್ವಯ–ಅರ್ಥ:** ಚಾಮರದಡಪದ ಡವಕೆಯ ಕನ್ನಡಿಯ ಪರಿಚಾರಿಕೆಯರುಂ = ಚಾಮರ, ತಾಂಬೂಲಕರಂಡಕ, ಪೀಕದಾನಿ, ಕನ್ನಡಿಗಳನ್ನು ಹಿಡಿಯುವ ಸೇವಕಿಯರೂ, ಒಡನಾಡಿ ಬಳೆದ ಮೇಳದ ಕೆಳದಿಯರುಂ = ಜೊತೆಗೆ ಬೆಳೆದಿದ್ದ ಜೊತೆಗಾತಿಯರೂ, ಅತಿವಿಕಳಮತಿಗಳಾಗಿ ಪರಿತಂದು = ತುಂಬ ಕಾತರದಿಂದ ಓಡಿ ಬಂದು, ಮಲಯಜರಸಲುಳಿತ = ಗಂಧದ ನೀರನ್ನು ಚಿಮುಕಿಸಿದ, ಕದಳೀದಳವ್ಯಜನ = ಬಾಳೆಯೆಲೆಯ ಬೀಸಣಿಗೆಯಿಂದ, ಮಂದಮಾರುತ + ಆಂದೋಳನದಿನ್ = ಮೆಲುಗಾಳಿಯ ಬೀಸುವಿಕೆಯಿಂದ, ಎಂತಾನುಂ ಮೂರ್ಛೆಯಿಂದೆಚ್ಚುಱಿಸಿ = ಅಂತೂ ಮೂರ್ಚೆಯಿಂದ ಎಚ್ಚರಗೊಳ್ಳವಂತೆ ಮಾಡಿ, ಬೆಸಗೊಳೆ = ವಿಚಾರಿಸಲು, ಮಱುಮಾತು + ಕುಡದೆಯುಂ = ಮಾರುತ್ತರ ನೀಡದೆಯೂ, ಮನಂ + ಕುಡದೆಯುಂ = ಗಮನ ಕೊಡದೆಯೂ, ಇರೆ = ಇರಲು, ಕನ್ಯಾ + ಅಂತಃಪುರಮಹತ್ತರದೇವಿಯರ್ = ಕನ್ನೆಮಾಡದ ಸೇವಕಿಯರು, ನಡುಗಿ ಪರಿದು = ನಡುಗುತ್ತ ಓಡಿ ಬಂದು ವಜ್ರದಂತಂಗಂ ಲಕ್ಷ್ಮೀಮತಿಮಹಾದೇವಿಗಂ ಅಱುಪಿದೊಡೆ = ತಿಳಿಸಿದಾಗ, ಇವರಿರ್ವರುಂ = ಅವರಿಬ್ಬರೂ, ಸಸಂಭ್ರಮಂ ಬಂದು = ಗಾಬರಿಯಿಂದ ಬಂದು,

**ಗದ್ಯಾನುಸರಣ:** ಚಾಮರ, ತಾಂಬೂಲಕರಂಡಕ, ಪೀಕದಾನಿ, ಕನ್ನಡಿಗಳನ್ನು ಹಿಡಿಯುವ ಸೇವಕಿಯರೂ, ಜೊತೆಗೆ ಬೆಳೆದಿದ್ದ ಸಖಿಯರೂ ತುಂಬ ಕಾತರದಿಂದ

ಓಡಿ ಬಂದು ಗಂಧದ ನೀರನ್ನು ಚಿಮುಕಿಸಿದ ಬಾಳೆಯೆಲೆಯ ಬೀಸಣಿಗೆಯಿಂದ ಮೆಲುಗಾಳಿಯನ್ನು ಹಾಕಿ ಅಂತೂ ಅವಳನ್ನು ಮೂರ್ಚೆಯಿಂದ ಎಚ್ಚರಗೊಳ್ಳವಂತೆ ಮಾಡಿ ಏನಾಯಿತೆಂದು ವಿಚಾರಿಸಿದರೆ ಅವಳು ಮಾರುತ್ತರವನ್ನೂ ನೀಡಲಿಲ್ಲ, ಅವರೆಡೆಗೆ ಗಮನವನ್ನೂ ಹರಿಸಲಿಲ್ಲ. ಇದರಂದ ಕನ್ನೆಮಾಡದ ಸೇವಕಿಯರು ನಡುಗುತ್ತ ಓಡಿ ಬಂದು ವಜ್ರದಂತನಿಗೂ ಲಕ್ಷ್ಮೀಮತಿಮಹಾದೇವಿಗೂ ವಿಷಯವನ್ನು ತಿಳಿಸಿದಾಗ ಅವರಿಬ್ಬರೂ ಮಗಳಿಗೇನಾಯಿತೋ ಎಂದು ಗಾಬರಿಯಿಂದ ಓಡಿ ಬಂದರು.

**ಇನಿತೇಕಾದುದೊ ನೋವಿದೆಮ್ಮ ದೆಸೆಯಿಂ ಮೇಣಾದುದೋ ಮೇಣ್‌ಸಖೀ**
**ಆನದಿಂ ಬಂದುದೊ ನಿನ್ನ ಬಂಧುಜನದಿಂ ಮೇಣ್ ಪುಟ್ಟತೋ ಮತ್ಸುಹೃ**
**ಜ್ಜನದಿಂ ಮೇಣ್ ತ[illegible]ರ್ದತ್ತೊ ವಿಸ್ಮಯಮಿದೇಂ ಪೇೞ್ಎಂಬುದುಂಕೂಡೆಕ**
**ಣ್ಬನಿಯಂ ಸೂಸಿದ[illegible]ಂದುಮಂ ನುಡಿದಳಿಲ್ಲಾ ಕನ್ನೆ ತನ್ನಂದಮಂ೨೪೪**

**ಪದವಿಭಾಗ–ಅನ್ವಯ–ಅರ್ಥ:** ಇನಿತು + ಏಕಾದುದೊ = ಇಷ್ಟೆಲ್ಲ ಆಗಲು ಕಾರಣವೇನು? 'ನೋವಿದೆಮ್ಮ ದೆಸೆಯಿಂ ಮೇಣ್ + ಆದುದೋ = ನಮ್ಮ ದೆಸೆಯಿಂದೇನಾದರೂ ನಿನಗೆ ನೋವಾಯಿತೇ? ಮೇಣ್ ಸಖೀಜನದಿಂ ಬಂದುದೊ = ಅಥವಾ ನಿನ್ನ ಸಖಿಯರಿಂದ ಹೀಗಾಯಿತೋ? ನಿನ್ನ ಬಂಧುಜನದಿಂ ಮೇಣ್ ಪುಟ್ಟತೋ = ನೆಂಟರಿಷ್ಟರಿಂದಲೇ ಈ ರೀತಿಯಾಯಿತೋ? ಮತ್ + ಸುಹೃಜ್ಜನದಿಂ ಮೇಣ್ ತೊಡರ್ದತ್ತೊ = ಇದನ್ನು ನನ್ನ ಗೆಳೆಯರಿಂದೇನಾದರೂ ಆಯಿತೋ? ವಿಸ್ಮಯಂ = ಆಶ್ಚರ್ಯಕರವಾಗಿದೆಯಲ್ಲ, ಇದೇಂ ಪೇೞ್ = ಇದಕ್ಕೇನು ಕಾರಣ ಹೇಳು, ಎಂಬುದುಂ = ಎಂದು ವಿಚಾರಿಸಿದಾಗ, ಕೂಡೆ ಕಣ್ಬನಿಯಂ ಸೂಸಿದಳ್ = ತಕ್ಷಣವೇ ಅವಳ ಕಣ್ಣಲ್ಲಿ ನೀರು ತುಂಬಿತೇ ವಿನಾ, ತನ್ನ + ಅಂದಮಂ = ತನಗಾದುದರ ಬಗ್ಗೆ, ಆ ಕನ್ನೆ = ಆ ಹುಡುಗಿಯು, ಒಂದುಮಂ ನುಡಿದಳಿಲ್ಲ = ಒಂದು ಮಾತನ್ನೂ ಆಡಲಿಲ್ಲ.

**ಗದ್ಯಾನುಸರಣ:** 'ಇಷ್ಟೆಲ್ಲ ಆಗಲು ಕಾರಣವೇನು? ನಮ್ಮ ದೆಸೆಯಿಂದೇನಾದರೂ ನಿನಗೆ ನೋವಾಯಿತೇ? ಅಥವಾ ನಿನ್ನ ಸಖಿಯರಿಂದ ಹೀಗಾಯಿತೋ? ನೆಂಟರಿಷ್ಟರಿಂದಲೇ ಈ ರೀತಿಯಾಯಿತೋ? ನನ್ನ ಗೆಳೆಯರೇನಾದರೂ ಇದನ್ನು ತಂದಿಟ್ಟರೋ? ಆಶ್ಚರ್ಯಕರವಾಗಿದೆಯಲ್ಲ, ಇದಕ್ಕೇನು ಕಾರಣ ಹೇಳು' ಎಂದು ವಿಚಾರಿಸಿದಾಗ ತಕ್ಷಣ ಅವಳ ಕಣ್ಣಲ್ಲಿ ನೀರು ತುಂಬಿತೇ ವಿನಾ, ತನಗೇನಾಯಿತು ಎಂಬುದರ ಬಗ್ಗೆ ಆ ಹುಡುಗಿಯು ಒಂದು ಮಾತನ್ನೂ ಆಡಲಿಲ್ಲ.

**ವ। ಅಂತದಂ ಕಂಡು ಮತ್ತಂ**

**ಅರ್ಥ:** ಅಂತದಂ ಕಂಡು ಮತ್ತಂ = ಅದನ್ನು ನೋಡಿ ಮತ್ತೆಯೂ

**ಇದಿರೇೞಲ್ ಪೊಡೆವಟ್ಟು ಬಂದಿದಿರ್ಗೊಳಲ್ ಬಾಯ್ವಾಯೊಳಾದಟ್ಟೞೊಂ**
**ದೊದವಿಂತಂಬುಲಮಂ ಕೊಳಲ್ ಮಱೆದು ನೀನಿರ್ದಂದಮೇಂ ಕಂದಿಕುಂ**
**ದಿದುದೇಕೀ ಲಲಿತಾಂಗಮೀ ಮೊಗಮಿದಿಂತೇತರ್ಕೆ ಬಾಡಿರ್ದುದಾ**
**ವುದು ನಿನ್ನುಬ್ಬೆಗಮೆಮ್ಮ ಬಾೞನಿತೆ ನೀನಿಂತಿರ್ದೊಡಾವಾಸೆಯೋ ೨೫**

**ಪದವಿಭಾಗ–ಅನ್ವಯ–ಅರ್ಥ:** ಇದಿರೇೞಲ್ = ಎದುರಿಗೆ ಬಂದರೆ, ಬಂದು, ಪೊಡೆವಟ್ಟು ಇದಿರ್ಗೊಳಲ್ = ನಮಸ್ಕರಿಸಿ ಎದುರುಗೊಳ್ಳುವುದಾಗಲೀ, ಆದ ಅೞ್ಕಱ + ಒಂದು + ಒದವಿಂ = ಉಕ್ಕುವ ಪ್ರೀತಿಯಿಂದ, ಬಾಯ್ವಾಯೊಳ್ = ಬಾಯಿಗೆ ಬಾಯಿ ಇಟ್ಟು, ತಂಬುಲಮಂ ಕೊಳಲ್ ಮಱೆದು = ತಾಂಬೂಲವನ್ನು ತೆಗೆದುಕೊಳ್ಳುವುದರ ಬದಲು, ನೀನಿರ್ದ + ಅಂದಮೇಂ = ನೀನಿರುವ ಪಾಡೇನು? ಏಕೀ ಲಲಿತ + ಅಂಗಂ = ಈ ನಿನ್ನ ಕೋಮಲ ದೇಹವು, ಕಂದಿ ಕುಂದಿದುದು = ಬಾಡಿ ಸುರುಟಿದೆಯಲ್ಲ, ಈ ಮೊಗಮಿದು + ಇಂತು + ಏತರ್ಕೆ ಬಾಡಿರ್ದುದು = ಈ ನಿನ್ನ ಮುಖವೂ ಹೀಗೇಕೆ ಬಾಡಿಹೋಗಿದೆಯಲ್ಲ! ಆವುದು ನಿನ್ನ + ಉಬ್ಬೆಗಂ = ನಿನ್ನ ಅಳಲು ಯಾವುದು. ನೀನು + ಇಂತಿರ್ದೊಡೆ = ನೀನು ಹೀಗಿದ್ದರೆ, ಎಮ್ಮ ಬಾೞನಿತೆ, ಆವಾಸೆಯೋ = ನಮ್ಮ ಬದುಕು ಇಷ್ಟೇ, ಯಾವ ಆಸೆ ಇಟ್ಟುಕೊಳ್ಳೋಣ

**ಗದ್ಯಾನುಸರಣ:** 'ಎದುರಿಗೆ ಬಂದರೂ ನಮಸ್ಕರಿಸಿ ಎದುರುಗೊಳ್ಳದೆ, ಉಕ್ಕುವ ಪ್ರೀತಿಯಿಂದ ಬಾಯಿಗೆ ಬಾಯಿ ಹಾಕಿ ತಾಂಬೂಲವನ್ನು ತೆಗೆದುಕೊಳ್ಳುವುದರ ಬದಲು ನೀನು ಹೀಗಿರುವ ಈ ಪಾಡೇನು? ಈ ನಿನ್ನ ಕೋಮಲ ದೇಹವು ಬಾಡಿ ಸುರುಟಿದೆಯಲ್ಲ, ಈ ನಿನ್ನ ಮುಖವೂ ಹೀಗೇಕೆ ಬಾಡಿಹೋಗಿದೆ! ನಿನ್ನ ಅಳಲು ಯಾವುದು? ನೀನು ಹೀಗಿದ್ದರೆ ನಮ್ಮ ಬದುಕು ಇಷ್ಟೇ, ಯಾವ ಆಸೆ ಇಟ್ಟುಕೊಳ್ಳೋಣ?'

**ಎಂಬುದುಮಂಬುದಾಗಮನದ ಕೋಗಿಲೆಯಂತಿರೆ ಮೂಗುವಟ್ಟುನೀ**
**ಮೆಂಬುದನೆನ್ನಿಮೆಂದುಸಿರದಿರ್ದ ತನೂಜೆಯ ಭಾವಮಂ ಮಹೀ**
**ಶಂ ಬಗೆದೀಗಳೀ ಕಿಱುಯವಳ್ ನಮಗೊಂದುಮನಿಂತುಟೆನ್ನಳಿ**
**ನ್ನುಂ ಬಗೆಗಲ್ವಗನ್ನೆವರಮುಮ್ಮಳಿಸುತ್ತಿರದಿರ್ ತಳೋದರೀ ೨೬**

**ಪದವಿಭಾಗ–ಅನ್ವಯ–ಅರ್ಥ:** ಎಂಬುದುಂ = ಎಂದು ಕೇಳಲು, ಅಂಬುದ + ಆಗಮನದ ಕೋಗಿಲೆಯಂತಿರೆ = ಮಳೆಗಾಲ ಬಂದಾಗಿನ ಕೋಗಿಲೆಯ ಹಾಗೆ, ಮೂಗುವಟ್ಟು = ಮೌನದಿಂದ, ನೀಂ + ಎಂಬುದನ್ + ಎನ್ನಿಂ = ನೀವನ್ನುವುದನ್ನು ಅಂದುಕೊಳ್ಳಿ ಎಂದು + ಉಸಿರದಿರ್ದ = ಎಂದು ಮಾತನಾಡದ, ತನೂಜೆಯ ಭಾವಮಂ = ಮಗಳ ಅಭಿಪ್ರಾಯವನ್ನು, ಬಗೆದು ಮಹೀಶಂ =

ಅರ್ಥಮಾಡಿಕೊಂಡ ಮಹಾರಾಜನು, ಈಗಳ್ + ಈ ಕಿಱಿಯವಳ್ = ಈಗ ಈ ಹುಡುಗಿಯು, ನಮಗೊಂದುಮನ್ = ನಮಗೆ ಏನನ್ನೂ, ಇಂತುಟು + ಎನ್ನಳ್ = ಹೀಗೆ ಎಂದು ಹೇಳುವುದಿಲ್ಲ, ಇನ್ನುಂ ಬಗೆ + ಕಲ್ವಗನ್ನೆವರಂ = ಇವಳ ಮನಸ್ಸನ್ನು ಅರಿಯುವವರೆಗೂ, ತಳೋದರೀ = ಸುಂದರಿಯೇ, ಉಮ್ಮಳಿಸುತ್ತ + ಇರದಿರ್ = ದುಃಖಿಸುತ್ತ ಕೂರಬೇಡ

**ಗದ್ಯಾನುಸರಣ:** ಎಂದು ಕೇಳಲು, ಮಳೆಗಾಲ ಬಂದಾಗಿನ ಕೋಗಿಲೆಯ ಹಾಗೆ ಮೌನದಿಂದ 'ನೀವನ್ನುವುದನ್ನು ಅಂದುಕೊಳ್ಳಿ' ಎಂದು ಮಾತನಾಡದ ಮಗಳ ಮನೋಭಾವವನ್ನು ಅರ್ಥಮಾಡಿಕೊಂಡ ಮಹಾರಾಜನು, 'ಈಗ ಈ ಹುಡುಗಿಯು ನಮಗೆ ಏನನ್ನೂ ಹೇಳುತ್ತಿಲ್ಲ, ಇವಳ ಮನಸ್ಸನ್ನು ಅರಿಯುವವರೆಗೂ ನೀನು ದುಃಖಿಸುತ್ತ ಕೂರಬೇಡ' ಎಂದು

**ವ ಎಂದು ತನ್ನಗ್ರಮಹಿಷಿಯ ಮನಮನಾಱೆ ನುಡಿದು ಪಂಡಿತೆಯಂ ನೀನೀಕೆಯಮಾ ನಿನ್ನ ಬಲ್ಲ ಮಾಟ್ಕೆಯೊಳೆಲ್ಲಮೆಲ್ಲಂದದೊಳಮೊಡಂಬಡಿಸಿ ಮನಂಗೆಲ್ವುದೆಂದು ನಿಯೋಜಿಸಿ ಪೋದಂ; ಅನ್ನೆಗಮಾ ಮಹೀಪತಿಯ ಪೂರ್ವಜನ್ಮದ ಪುಣ್ಯೋದಯದಿಂ**

**ಪದವಿಭಾಗ–ಅನ್ವಯ–ಅರ್ಥ:** ಎಂದು ತನ್ನ + ಅಗ್ರಮಹಿಷಿಯ ಮನಮನ್ + ಆಱೆ ನುಡಿದು = ಎಂದು ತನ್ನ ಪಟ್ಟದ ರಾಣಿಯ ಮನಸ್ಸಿಗೆ ಸಮಾಧಾನ ವಾಗುವಂತೆ ಹೇಳಿ, ಪಂಡಿತೆಯಂ = ಪಂಡಿತೆಗೆ, ನೀನು, ಆ ನಿನ್ನ ಬಲ್ಲ ಮಾಟ್ಕೆ ಯೊಳೆಲ್ಲಂ = ನಿನಗೆ ತಿಳಿದ ಎಲ್ಲ ರೀತಿಗಳಲ್ಲೂ, ಎಲ್ಲಂದದೊಳಂ = ಎಲ್ಲ ಬಗೆಯಲ್ಲಿಯೂ, ಈಕೆಯಂ ಒಡಂಬಡಿಸಿ = ಇವಳನ್ನು ಒಪ್ಪಿಸಿ, ಮನಂಗೆಲ್ವುದು = ಮನಸ್ಸನ್ನು ಗೆಲ್ಲು, ಎಂದು ನಿಯೋಜಿಸಿ = ಆದೇಶಿಸಿ ಪೋದಂ = ಹೋದ; ಅನ್ನೆಗಂ = ಈ ನಡುವೆ, ಆ ಮಹೀಪತಿಯ ಪೂರ್ವಜನ್ಮದ ಪುಣ್ಯೋದಯದಿಂ = ಆ ಮಹಾರಾಜನ ಹಿಂದಿನ ಜನ್ಮದ ಪುಣ್ಯಕಾರಣದಿಂದ

**ಗದ್ಯಾನುಸರಣ:** ಎಂದು ತನ್ನ ಪಟ್ಟದ ರಾಣಿಯು ಮನಸ್ಸಿಗೆ ಸಮಾಧಾನವಾಗುವಂತೆ ಹೇಳಿದ; ಪಂಡಿತೆಯನ್ನು ಕರೆದು, 'ನೀನು ನಿನಗೆ ತಿಳಿದ ಎಲ್ಲ ರೀತಿಗಳಿಂದಲೂ ಇವಳನ್ನು ಒಲಿಸಿ ಅವಳ ಮನಸ್ಸನ್ನು ಗೆಲ್ಲು' ಎಂದು ಆದೇಶಿಸಿ ಹೋದ; ಈ ನಡುವೆ, ಆ ಮಹಾರಾಜನ ಹಿಂದಿನ ಜನ್ಮದ ಪುಣ್ಯದ ಫಲವಾಗಿ,

**ಗುರುಗೆ ಯಶೋಧರಮುನಿಪತಿ**
**ಗುರು ಕೇವಲಬೋಧಮಾಯುಧಾಗರದೊಳಂ**
**ಖರಕರಸಮಪ್ರಭಂ ಚ**
**ಕ್ರರತ್ನಮೊಡವುಟ್ಟೆ ಪುಟ್ಟಿದೆರಡೊಸಗೆಯೊಳಂ** ೨೭

**ಪದವಿಭಾಗ-ಅನ್ವಯ-ಅರ್ಥ:** ಗುರುಗೆ ಯಶೋಧರಮುನಿಪತಿಗೆ = ಗುರುಗಳಾದ ಯಶೋಧರಮುನಿಗಳಿಗೆ, ಉರು ಕೇವಲಬೋಧಂ = ಶ್ರೇಷ್ಠವಾದ ಕೇವಲಜ್ಞಾನವೂ, ಆಯುಧ + ಆಗರದೊಳಂ = ಶಸ್ತ್ರಾಗಾರದಲ್ಲಿ, ಖರಕರಸಮಪ್ರಭಂ = ಪ್ರಖರತೆಯಲ್ಲಿ ಸೂರ್ಯನಿಗೆ ಸಮನಾದ, ಚಕ್ರರತ್ನ = ಚಕ್ರರತ್ನವೂ, ಒಡ + ಪುಟ್ಟೆ = ಜೊತೆಗೇ ಉದಯಿಸಲು, ಪುಟ್ಟಿದ + ಎರಡು + ಒಸಗೆಯೊಳಂ = ಉಂಟಾದ ಈ ಎರಡೂ ಶುಭ ಸನ್ನಿವೇಶಗಳಲ್ಲಿ,

**ಗದ್ಯಾನುಸರಣ:** ಗುರುಗಳಾದ ಯಶೋಧರಮುನಿಗಳಿಗೆ ಶ್ರೇಷ್ಠವಾದ ಕೇವಲಜ್ಞಾನವೂ. ಅರಮನೆಯ ಶಸ್ತ್ರಾಗಾರದಲ್ಲಿ ಪ್ರಖರತೆಯಲ್ಲಿ ಸೂರ್ಯನಿಗೆ ಸಮನಾದ ಚಕ್ರರತ್ನವೂ ಜೊತೆಗೆ ಉದಯಿಸಿತು; ಈ ಎರಡೂ ಶುಭ ಸನ್ನಿವೇಶಗಳಲ್ಲಿ

**ಆವುದು ಮುಖ್ಯಂ ವಿಪುಳಫಳಾ**
**ಳಾವಹಮೆಂಬೆರಡುಮಂ ವಿಚಾರಿಸುವ ನೃಪಂ**
**ಗಾವೊಗೆದ ಪುಣ್ಯಬಂಧಮ**
**ನಾವರಿಸುವ ಜಿನಸಪರ್ಯೆ ತೊಡರ್ದುದು ಬಗೆಯೊಳ್** ೨೮

**ಪದವಿಭಾಗ-ಅನ್ವಯ-ಅರ್ಥ:** ಆವುದು ಮುಖ್ಯಂ = ಯಾವುದು ಮುಖ್ಯವಾದುದು, ವಿಪುಳಫಳ + ಆಳ + ಆವಹಂ = ಮಹಾಶ್ರೇಯಸ್ಸು ಮತ್ತು ಭಟನ ಕಾದಾಟ, ಎಂಬ + ಎರಡುಮಂ ವಿಚಾರಿಸುವ ನೃಪಂಗೆ = ಎಂದು ಎರಡಕ್ಕೂ ಬೆಲೆಕೊಡುವ ಮಹಾರಾಜನಿಗೆ, ಆ ಒಗೆದ = ಉಂಟಾದ, ಪುಣ್ಯಬಂಧಮನ್ + ಆವರಿಸುವ = ಪುಣ್ಯವು ದೊರಕುವ, ಜಿನಸಪರ್ಯೆ = ಜಿನಸೇವೆಯೇ, ಮುಖ್ಯವೆಂದು, ಬಗೆಯೊಳ್ ತೊಡರ್ದುದು = ಮನಸ್ಸಿನಲ್ಲಿ ಉಂಟಾಯಿತು.

**ಗದ್ಯಾನುಸರಣ:** ಯಾವುದು ಮುಖ್ಯವಾದುದು? ಮಹಾಶ್ರೇಯಸ್ಸು ಮತ್ತು ಯುದ್ಧ - ಎರಡಕ್ಕೂ ಬೆಲೆಕೊಡುವ ಮಹಾರಾಜನಿಗೆ ಎರಡರಲ್ಲಿ ದೊರಕುವ ಜಿನಸೇವೆಯೇ ಮುಖ್ಯವೆಂದು ತೋಚಿತು.

**ತೊಡರೆ ನೃಪನಾಪ್ತಪರಿಜನ**
**ಮೊಡವರೆ ಜಿನಪತಿಗೆ ಪೂಜೆಯಂ ಮಾಡಿ ಮಗು**
**ೞ್ದಡಿಗೆಱಗಲೊಡಂ ಪಡೆದಂ**
**ಗಡಮವಧಿಯನಧಿಕಭಕ್ತರೇನಂ ಪಡೆಯರ್** ೨೯

**ಪದವಿಭಾಗ-ಅನ್ವಯ-ಅರ್ಥ:** ತೊಡರೆ = ಹೀಗೆ ತೋಚಲು, ನೃಪನ್ + ಆಪ್ತಪರಿಜನಂ + ಒಡವರೆ = ಆಪ್ತಪರಿವಾರವು ಜೊತೆಯಲ್ಲಿ ಬರಲು ರಾಜನು, ಜಿನಪತಿಗೆ ಪೂಜೆಯಂ ಮಾಡಿ, ಮಗುೞ್ದು + ಅಡಿಗೆ + ಎಱಗಲೊಡಂ

= ಮತ್ತೆ ಪಾದಗಳಿಗೆರಗಿದಾಗ, ಅವಧಿಯನ್ = ಅವಧಿಜ್ಞಾನವನ್ನು ಪಡೆದಂ ಗಡಂ = ಪಡೆದನಲ್ಲವೇ; ಅಧಿಕಭಕ್ತರ್ + ಏನಂ ಪಡೆಯರ್ = ಮಹಾಭಕ್ತರು ಏನನ್ನು ತಾನೇ ಪಡೆಯಲಾರರು!

**ಗದ್ಯಾನುಸರಣ:** ಹೀಗೆ ತೋಚಲು ರಾಜನು ಆಪ್ತಪರಿವಾರವನ್ನು ಜೊತೆಯಲ್ಲಿ ಕರೆದೊಯ್ದು ಜಿನಪತಿಗೆ ಪೂಜೆಯನ್ನು ಮಾಡಿ, ಗುರುಗಳ ಪಾದಗಳಿಗೆರಗಿದಾಗ ಅವನಿಗೆ ಅವಧಿಜ್ಞಾನವುಂಟಾಯಿತು; ಅವರ ಮಹಿಮೆ ಅಂತಹುದು!

**ವ। ಅಂತು ವಜ್ರದಂತಚಕ್ರವರ್ತಿ ಲಬ್ಧಾವಧಿಲೋಚನಂ ತ್ರೈಲೋಕ್ಯಲೋಚನಂಗೆ ಸಾಷ್ಟಾಂಗಪ್ರಣತನಾಗಿ ಮಗುೞ್ದು ಬಂದು ಚಕ್ರ ಪೂಜೆಯಂ ನಿರ್ವರ್ತಿಸಿ ಪರಾಕ್ರಮಾಕ್ರಾಂತಾ ರಾತಿಚಕ್ರನುಂ ಸಂಧಿತದಿಕ್ಚಕ್ರನು ಮಾಗಲ್ಬಗೆದು ಗಜತುರಗರಥಪದಾತಿ ದಿವಿಜವಿದ್ಯಾಧರಬಲಂ ಬೆರಸು ದಿಗ್ವಯೋದ್ಯೋಗದಿಂ ಪೋದಂ; ಪಂಡಿತೆಯುಮತಿಶೋಕಾಕ್ರಾಂತಮತಿಯಂ ಶ್ರೀಮತಿಯನೊರ್ಬಳನೆ ಕನ್ನೆಮಾಡದ ಪೆಱಗನ ನಂದನವನಕ್ಕುಯ್ದದಱೊಳಗೆ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಲಬ್ಧ + ಅವಧಿಲೋಚನಂ = ಅವಧಿಜ್ಞಾನವನ್ನು ಪಡೆದ, ವಜ್ರದಂತಚಕ್ರವರ್ತಿ, ತ್ರೈಲೋಕ್ಯಲೋಚನಂಗೆ = ಮೂರು ಲೋಕಗಳಿಗೆ ಕಣ್ಣಾದ ಅರ್ಹಂತನಿಗೆ, ಸಾಷ್ಟಾಂಗಪ್ರಣತನಾಗಿ = ದೀರ್ಘದಂಡ ನಮಸ್ಕಾರಮಾಡಿ, ಮಗುೞ್ದು ಬಂದು = ಅರಮನೆಗೆ ವಾಪಸಾಗಿ, ಚಕ್ರಪೂಜೆಯಂ ನಿರ್ವರ್ತಿಸಿ = ಶಸ್ತ್ರಾಗಾರದಲ್ಲಿ ಉದಯಿಸಿದ್ದ ಚಕ್ರರತ್ನಕ್ಕೆ ಪೂಜೆಯನ್ನು ಮಾಡಿ, ಪರಾಕ್ರಮ + ಆಕ್ರಾಂತ + ಅರಾತಿಚಕ್ರನುಂ = ಶತ್ರುವಲಯಗಳನ್ನು ತನ್ನ ಶೌರ್ಯದಿಂದ ಗೆದ್ದು, ಸಂಧಿತದಿಕ್ಚಕ್ರನುಂ + ಆಗಲ್ = ದಿಗ್ವಲಯವನ್ನೆಲ್ಲ ಗೆದ್ದವನಾಗಲು, ಬಗೆದು = ನಿರ್ಧರಿಸಿ, ಗಜತುರಗರಥ ಪದಾತಿದಿವಿಜವಿದ್ಯಾಧರಬಲಂ ಬೆರಸು = ಆರೂ ಬಗೆಯ ಸೈನ್ಯಗಳ ಸಮೇತ, ದಿಗ್ + ಜಯ + ಉದ್ಯೋಗದಿಂ = ದಿಗ್ವಿಜಯದ ಉದ್ದೇಶದಿಂದ, ಪೋದಂ = ಹೊರಟ; ಇತ್ತ, ಪಂಡಿತೆಯುಂ = ಪಂಡಿತೆಯು, ಅತಿಶೋಕ + ಆಕ್ರಾಂತಮತಿಯಂ = ತೀವ್ರ ಶೋಕದಿಂದ ಕೂಡಿದ್ದ, ಶ್ರೀಮತಿಯನ್ + ಒರ್ಬಳನೆ = ಶ್ರೀಮತಿಯೊಬ್ಬಳನ್ನೇ, ಕನ್ನೆಮಾಡದ ಪೆಱಗಣ = ಕನ್ಯಾಂತಃಪುರದ ಹಿಂದುಗಡೆಯ, ನಂದನವನಕ್ಕುಯ್ದು = ಉದ್ಯಾನವನಕ್ಕೆ ಕರೆದುಕೊಂಡು ಹೋಗಿ, ಅದಱೊಳಗೆ = ಅಲ್ಲಿ,

**ಗದ್ಯಾನುಸರಣ:** ಅವಧಿಜ್ಞಾನವನ್ನು ಪಡೆದ ವಜ್ರದಂತಚಕ್ರವರ್ತಿಯು ಅರ್ಹಂತನಿಗೆ ದೀರ್ಘದಂಡ ನಮಸ್ಕಾರಮಾಡಿ ಅರಮನೆಗೆ ವಾಪಸಾಗಿ ಶಸ್ತ್ರಾಗಾರದಲ್ಲಿ ಉದಯಿಸಿದ್ದ ಚಕ್ರರತ್ನಕ್ಕೆ ಪೂಜೆಯನ್ನು ಮಾಡಿ, ಶತ್ರುವಲಯಗಳನ್ನು ತನ್ನ ಶೌರ್ಯದಿಂದ ಗೆದ್ದು ದಿಗ್ವಲಯವನ್ನೆಲ್ಲ ಗೆದ್ದು ಬರಲು ನಿರ್ಧರಿಸಿ,

ಗಜತುರಗರಥಪದಾತಿದಿವಿಜವಿದ್ಯಾಧರಬಲಗಳೆಂಬ ಆರೂ ಬಗೆಯ ಸೈನ್ಯಗಳ ಸಮೇತ ದಿಗ್ವಿಜಯಕ್ಕೆಂದು ಹೊರಟ; ಇತ್ತ, ಪಂಡಿತೆಯು ತೀವ್ರ ಶೋಕದಿಂದ ಕೂಡಿದ್ದ ಶ್ರೀಮತಿಯೊಬ್ಬಳನ್ನೇ ಕನ್ಯಾಂತಃಪುರದ ಹಿಂದುಗಡೆಯ ಉದ್ಯಾನವನಕ್ಕೆ ಕರೆದುಕೊಂಡು ಹೋದಳು.

**ವಿಶೇಷ ವಿಚಾರ:** ಸಾಷ್ಟಾಂಗವೆಂದರೆ ಎದೆ, ಎರಡು ಕೈಗಳು, ಎರಡು ಮಂಡಿಗಳು ಮತ್ತು ಎರಡು ಪಾದಗಳು ನೆಲಕ್ಕೆ ತಾಕುವಂತೆ ಮಾಡುವ ನಮಸ್ಕಾರ; ಸಾಮಾನ್ಯವಾಗಿ ಚತುರಂಗಸೈನ್ಯದ ಪರಿಕಲ್ಪನೆಯಿದ್ದರೂ, ಪಂಪನು ಅವುಗಳ ಜೊತೆಗೆ ದಿವಿಜ ಮತ್ತು ವಿದ್ಯಾಧರಬಲಗಳನ್ನು ಇಲ್ಲಿ ಸೇರಿಸಿದ್ದಾನೆ; ಇವುಗಳನ್ನೇ ಪಂಪನು ಈ ಕಾವ್ಯದ ಮತ್ತೊಂದೆಡೆ 'ಷಡಂಗಬಲ' ಎಂದೂ (೧೧. ೩೪), ಮಗುದೊಂದೆಡೆ 'ಆಱುಂ ಬಲಂಗಳ್' ((೧೪.೮೨) ಎಂದೂ ಕರೆದಿದ್ದಾನೆ; ಇದರ ಉಲ್ಲೇಖವು ಬೇರೆ ಜೈನಕಾವ್ಯಗಳಲ್ಲೂ ಕಾಣಸಿಗುತ್ತದೆ.

> **ತೋಳ ನೀಳದ ಕೆಂದಳಿರಿಂದಂ ಸಂದಣಿಸಿರ್ದ ಮದಾಳಿಯಿಂ**
> **ದೋಳದಿಂ ಮಳಯಾನಿಳಲೀಲಾಂದೋಳದಿನೊಪ್ಪೆ ಮನೋಭವಂ**
> **ಗಾಳುಮಿರ್ಪವೊಲಿರ್ದತಿರಕ್ತಾಶೋಕದ ಸುತ್ತಿನೊಳಿರ್ದ ರೂ**
> **ಕ್ಷಾಳಕಂಗಳನೋಸರಿಸುತ್ತುಂ ಮೆಲ್ಲನೆ ಮೇಳಿಸಿ ಕನ್ನೆಯಂ ೩೦**

**ಪದವಿಭಾಗ-ಅನ್ವಯ-ಅರ್ಥ:** ತೋಳ ನೀಳದ = ತೋಳಿನಷ್ಟು ನೀಳವಾದ, ಕೆಂದಳಿರಿಂದಂ = ಕೆಂಪು ಚಿಗುರಿನಿಂದಲೂ, ಸಂದಣಿಸಿರ್ದ = ಗುಂಪುಗೂಡಿದ್ದ, ಮದಾಳಿಯ + ಇಂದೋಳದಿಂ = ಸೊಕ್ಕಿದ ದುಂಬಿಗಳ ಝೇಂಕಾರದಿಂದಲೂ, ಮಳಯಾನಿಳಲೀಲಾ + ಆಂದೋಳದಿನ್ = ತಂಗಾಳಿಯ ಹಿತಕರವಾದ ಬೀಸುವಿಕೆಯಿಂದಲೂ, ಒಪ್ಪೆ = ಶೋಭಿಸುತ್ತಿರಲು, ಮನೋಭವಂಗೆ + ಆಳುಂ + ಇರ್ಪವೊಲಿರ್ದ = ಮನ್ಮಥನ ಸೇವಕನಂತಿದ್ದ, ಅತಿರಕ್ತ + ಅಶೋಕದ = ಕಡುಗೆಂಪುಬಣ್ಣದ ಅಶೋಕದ, ಸುತ್ತಿನೊಳಿರ್ದ = ನಡುವೆ, ರೂಕ್ಷ + ಅಳಕಂಗಳನ್ + ಓಸರಿಸುತ್ತುಂ = ಹಿಡಿತಕ್ಕೆ ಸಿಕ್ಕದ ಮುಂಗುರುಳನ್ನು ಸರಿಸುತ್ತ, ಮೆಲ್ಲನೆ = ನಿಧಾನವಾಗಿ, ಕನ್ನೆಯಂ ಮೇಳಿಸಿ = ಆ ಕುಮಾರಿಯೊಡನೆ,

**ಗದ್ಯಾನುಸರಣ;** ತೋಳಿನಷ್ಟು ನೀಳವಾದ ಕೆಂಪು ಚಿಗುರಿನಿಂದಲೂ, ಗುಂಪುಗೂಡಿದ್ದ, ಸೊಕ್ಕಿದ ದುಂಬಿಗಳ ಝೇಂಕಾರದಿಂದಲೂ, ತಂಗಾಳಿಯ ಹಿತಕರವಾದ ಬೀಸುವಿಕೆಯಿಂದಲೂ ಉದ್ಯಾನವು ಶೋಭಿಸುತ್ತಿತ್ತು; ಆಗ, ಮನ್ಮಥನ ಸೇವಕನಂತಿದ್ದ ಕಡುಗೆಂಪುಬಣ್ಣದ ಅಶೋಕದ ನಡುವೆ ಹಿಡಿತಕ್ಕೆ ಸಿಕ್ಕದ ಶ್ರೀಮತಿಯ ಮುಂಗುರುಳನ್ನು ನೇವರಿಸುತ್ತ, ನಿಧಾನವಾಗಿ, ಆ ಕುಮಾರಿಯೊಡನೆ,

**ನುಡಿದಳ್ ನೀನೆನಗಿಂತು ನಿನ್ನ ಬಗೆಯಂ ಕಾದಕ್ಕ ಪೇೞಾರೊಳಿಂ**
**ನುಡಿವೋ ಬೇಸಱನೆಯ್ದೆ ಕೂರ್ಪವರನೇನೆನ್ನಿಂದಮಿನ್ನಗ್ಗಳಂ**
**ಪಡೆವೋ ಮೌನದೊಳಿಂತು ನೀನಿರೆ ರುವದ್ಭೃಂಗಾಳಿಯಿಂ ಪತ್ತುವಿ**
**ಟ್ಟುಡುಗಿರ್ದಬ್ಜಮನೆಯ್ದೆ ಪೋಲ್ತುದು ಭವದ್ವಕ್ತ್ರಾಬ್ಜಮಬ್ಜಾನನೇ೩೧**

**ಪದವಿಭಾಗ–ಅನ್ವಯ–ಅರ್ಥ:** ನುಡಿದಳ್ = ಹೀಗೆಂದಳು: ನೀನ್ + ಎನಗಿಂತು ನಿನ್ನ ಬಗೆಯಂ ಕಾದು = ನನ್ನಿಂದ ಹೀಗೆ ನೀನು ನಿನ್ನ ಮನಸ್ಸಿನಲ್ಲಿರುವುದನ್ನು ಕಾಯ್ದುಕೊಂಡು, ಅಕ್ಕ, ಪೇೞ್ + ಆರೊಳ್ + ಇಂ ಬೇಸಱನ್ ನುಡಿವೋ = ಬೇರೆ ಯಾರೊಡನೆ ಬೇಗುದಿಯನ್ನು ಹೇಳಿಕೊಳ್ಳುವೇ? ಎನ್ನಿಂದಂ + ಇನ್ನಗ್ಗಳಂ = ನನಗಿಂತಲೂ ಹೆಚ್ಚಾಗಿ, ಕೂರ್ಪವರನ್ = ಪ್ರೀತಿಸುವವರನ್ನು, ಎಯ್ದೆ ಪಡೆವೋ = ಹೇಳು ಎಲ್ಲಿ ಪಡೆಯುವೆ? ನೀನ್ ಇಂತು ಮೌನದೊಳ್ ಇರೆ = ಈ ರೀತಿ ನೀನು ಮಾತಾಡದಿದ್ದರೆ, ಅಬ್ಜಾನನೇ = ತಾವರೆಮೊಗದವಳೇ, ಭವತ್ + ವಕ್ತ್ರಾಬ್ಜಂ = ನಿನ್ನ ಮುಖಕಮಲವು, ರುವತ್ + ಭೃಂಗಾಳಿಯಿಂ = ಝೇಂಕರಿಸುವ ದುಂಬಿವಿಂಡಿನಿಂದ, ಪತ್ತುವಿಟ್ಟು = ದೂರಾಗಿ, ಉಡುಗಿರ್ದ + ಅಬ್ಜಮನ್ = ಸೊರಗಿದ ಕಮಲವನ್ನು, ಎಯ್ದೆ ಪೋಲ್ತುದು = ಹೋಲುತ್ತದೆ,

**ಗದ್ಯಾನುಸರಣ:** ಹೀಗೆಂದಳು: 'ಹೀಗೆ ನಿನ್ನ ಮನಸ್ಸಿನಲ್ಲಿರುವುದನ್ನು ನನ್ನಿಂದ ಮುಚ್ಚಿಟ್ಟುಕೊಂಡು ಬೇರೆ ಯಾರೊಡನೆ ಬೇಗುದಿಯನ್ನು ಹೇಳಿಕೊಳ್ಳುವೇ? ನನಗಿಂತಲೂ ಹೆಚ್ಚಾಗಿ ಪ್ರೀತಿಸುವವರು ನಿನಗೆ ಬೇರೆ ಯಾರಿದ್ದಾರೆ? ಈ ರೀತಿ ನೀನು ಮೂಕಳಾಗಿದ್ದರೆ ಸುಂದರವಾದ ನಿನ್ನ ಮುಖಕಮಲವು ಝೇಂಕರಿಸುವ ದುಂಬಿವಿಂಡಿನಿಂದ ದೂರಾಗಿ ಸೊರಗಿದ ಕಮಲದಂತಿರುತ್ತದೆ.'

**ನವೋತ್ಪಳದಳೇಕ್ಷಣೇ ಮನದೊಳಾದ ನಿರ್ವೇಗವೊಂ**
**ದವಶ್ಯಮದು ಕೂರ್ಪರೊಳ್ ನುಡಿದೊಡಲ್ಲದೇಂ ಪೋಕುಮೇ**
**ನಿವೇದಿಸು ನಿಜಾಂತರಂಗಗತಮಪ್ಪುದಂ ನೀನಿದಂ**
**ವಿವೇಕವಿಕಳರ್ಕಳಂತೆಲೆಗೆ ಚಿತ್ತದೊಳ್ ತಾಳ್ದುವೋ ೩೨**

**ಪದವಿಭಾಗ–ಅನ್ವಯ–ಅರ್ಥ:** ಎಲೆಗೆ = ಎಲೌ, ನವ + ಉತ್ಪಳದಳೇಕ್ಷಣೇ = ಕನ್ನೈದಿಲೆಯ ಎಸಳಿನಂತಹ ಕಣ್ಣುಳ್ಳವಳೇ, ಮನದೊಳಾದ ನಿರ್ವೇಗಂ + ಒಂದು + ಅವಶ್ಯಂ = ಮನಸ್ಸಿನಲ್ಲಾಗುವ ತಲ್ಲಣವೆಂಬುದು ನಮ್ಮ ವಶವನ್ನು ಮೀರಿದುದು, ಅದು ಕೂರ್ಪರೊಳ್ ನುಡಿದೊಡಲ್ಲದೆ + ಏಂ ಪೋಕುಮೇ = ಪ್ರೀತಿಪಾತ್ರರಲ್ಲಿ ಹೇಳಿಕೊಂಡಲ್ಲದೇ ಅದು ಹೋಗದು, ನಿಜ + ಅಂತರಂಗಗತಂ

+ ಅಪ್ಪುದಂ = ನಿನ್ನ ಮನಸ್ಸಿನಲ್ಲಿರುವುದನ್ನು, ನಿವೇದಿಸು = ಹೇಳಿಕೊ, ವಿವೇಕವಿಕಳರ್ಕಳಂತೆ = ವಿವೇಕಶೂನ್ಯರಾದವರಂತೆ, ನೀನಿದಂ = ಈ ನಿನ್ನ ಬೇಗುದಿಯನ್ನು, ಚಿತ್ತದೊಳ್ ತಾಳ್ದುವೋ = ಮನಸ್ಸಿನಲ್ಲೇಕೆ ತಳೆದಿದ್ದೀಯೆ?

**ಗದ್ಯಾನುಸರಣ:** 'ಕನ್ನೈದಿಲೆಯ ಎಸಳಿನಂತಹ ಕಣ್ಣುಳ್ಳವಳೇ, ಮನಸ್ಸಿನಲ್ಲಾಗುವ ತಲ್ಲಣವೆಂಬುದು ನಮ್ಮ ಹತೋಟಿಯನ್ನು ಮೀರಿದುದು, ಪ್ರೀತಿಪಾತ್ರರಲ್ಲಿ ಹೇಳಿಕೊಂಡಲ್ಲದೇ ಅದು ಹೋಗದು, ನಿನ್ನ ಮನಸ್ಸಿನಲ್ಲಿರುವುದನ್ನು ನನ್ನ ಬಳಿ ಹೇಳಿಕೊ, ವಿವೇಕಶೂನ್ಯರಂತೆ ಈ ನಿನ್ನ ಬೇಗುದಿಯನ್ನು ಮನಸ್ಸಿನಲ್ಲೇಕೆ ತುಂಬಿಕೊಂಡಿದ್ದೀಯೆ?'

**ವ। ಎಂಬುದುಂ ಸ್ವಭಾವಮುಗ್ಧೆ ಮುಗ್ಧವದನವನಜಮನೆಱಗಿ ತನ್ನ ಮುನ್ನಿನ ಜನ್ಮಂಗಳನಿಂತೆಂದು ಬರೆದು ತೋರ್ಪಂತೆ ನೆಲನಂ ಬರೆಯುತ್ತುಮ ಪಗತಮುಖಮುದ್ರೆಯಾಗಿ**

**ಪದವಿಭಾಗ-ಅನ್ವಯ-ಅರ್ಥ:** ಎಂಬುದುಂ = ಎಂದು ತಿಳಿಹೇಳಲು, ಸ್ವಭಾವಮುಗ್ಧೆ = ಮುಗ್ಧಸ್ವಭಾವದ ಶ್ರೀಮತಿಯು, ಮುಗ್ಧವದನವನಜಮನ್ + ಎಱಗಿ = ತನ್ನ ಮುಗ್ದ ಮುಖವನ್ನು ಬಾಗಿಸಿ, ಮುನ್ನಿನ ಜನ್ಮಂಗಳನ್ + ಇಂತೆಂದು ಬರೆದು ತೋರ್ಪಂತೆ = ತನ್ನ ಹಿಂದಿನ ಜನ್ಮಗಳ ಬಗ್ಗೆ ಬರೆದು ತೋರಿಸುವಂತೆ, ನೆಲನಂ ಬರೆಯುತ್ತುಂ = ಕಾಲಿನಿಂದ ನೆಲದ ಮೇಲೆ ಗೆರೆ ಎಳೆಯುತ್ತ, ಅಪಗತಮುಖಮುದ್ರೆಯಾಗಿ = ಮಂಕಾದ ಮುಖವುಳ್ಳವಳಾಗಿ

**ಗದ್ಯಾನುಸರಣ:** ಎಂದು ತಿಳಿಹೇಳಲು ಮುಗ್ಧಸ್ವಭಾವದ ಶ್ರೀಮತಿಯು ತನ್ನ ಮುಗ್ದ ಮುಖವನ್ನು ಬಾಗಿಸಿ, ತನ್ನ ಹಿಂದಿನ ಜನ್ಮಗಳ ಬಗ್ಗೆ ಬರೆದು ತೋರಿಸುವಂತೆ, ಕಾಲಿನಿಂದ ನೆಲದ ಮೇಲೆ ಗೆರೆ ಎಳೆಯುತ್ತ ಮಂಕಾದ ಮುಖವುಳ್ಳವಳಾದಳು.

**ಬಗೆಯ ಬಯ್ಕೆಯನೊಪ್ಪಿಸುವಾಗಳ್ ನೀನೆ ವಲಂ ದೊರೆ ಪೇೞ್ವಪೆಂ**
**ಬಗೆದು ಕೇಳ್ ನಡೆ ನೋಡಲೊಡಂ ದೇವಾಗಮಮಂ ಪಿರಿದೊಂದುದಂ**
**ದುಗದ ಸಂದಣಿ'ಯಿಂದಮೆ ಮತ್ಪ್ರಾಗ್ಜನ್ಮಕಥಾವಳಿಯೆಲ್ಲಮುಂ**
**ಬಗೆದು ನೋವೆನಗಾದುದು ನೋವಂತುಂತೆನಗಾವುದು ಬೇವಸಂ೩೩**

**ಪದವಿಭಾಗ-ಅನ್ವಯ-ಅರ್ಥ:** ಬಗೆಯ ಬಯ್ಕೆಯನೊಪ್ಪಿಸುವಾಗಳ್ = ನನ್ನ ಮನಸ್ಸಿನಲ್ಲಿ ಮುಚ್ಚಿಟ್ಟುಕೊಂಡುದನ್ನು ಹೇಳಿಕೊಳ್ಳಲು, ನೀನೆ ವಲಂ ದೊರೆ = ನೀನೇ ತಾನೇ ತಕ್ಕವಳು; ಪೇೞ್ವಪೆಂ ಬಗೆದು ಕೇಳ್ = ಹೇಳುತ್ತೇನೆ, ಗಮನವಿರಿಸಿ ಕೇಳಿಸಿಕೋ: ದೇವ + ಆಗಮಮಂ = ದೇವತೆಗಳ ಬರುವಿಕೆಯನ್ನು,

ನಡೆ ನೋಡಲೊಡಂ = ನೋಡಿದ ತಕ್ಷಣವೇ, ಪಿರಿದೊಂದು ದಂದುಗದ ಸಂದಣಿಯಿಂದಮೆ = ಹಿರಿದಾದ ವ್ಯಥೆಯ ಮೊತ್ತದಿಂದ, ಮತ್ + ಪ್ರಾಚ್ + ಜನ್ಮಕಥಾವಳಿಯೆಲ್ಲಮಂ ಬಗೆದು = ನನ್ನ ಹಿಂದಿನ ಜನ್ಮಗಳ ಕತೆಗಳನ್ನು ನೆನಪಿಸಿಕೊಂಡು, ನೋವು + ಎನಗಾದುದು = ನನಗೆ ನೋವುಂಟಾಯಿತು, ನೋವಂತು = ನೋಯುವ ಹಾಗೆ, ಉಂತು ಬೇವಸಂ ಎನಗೆ + ಆವುದು = ಬೇರೆ ಕಷ್ಟವು ನನಗೆ ಯಾವುದಿದೆ?

**ಗದ್ಯಾನುಸರಣ:** ಆ ಬಳಿಕ, 'ನನ್ನ ಮನಸ್ಸಿನಲ್ಲಿ ಮುಚ್ಚಿಟ್ಟುಕೊಂಡುದನ್ನು ಹೇಳಿಕೊಳ್ಳಲು ನೀನೇ ತಾನೇ ತಕ್ಕವಳು, ಹೇಳುತ್ತೇನೆ ಗಮನವಿರಿಸಿ ಕೇಳಿಸಿಕೋ: ದೇವತೆಗಳು ಬರುವುದನ್ನು ನೋಡಿದಾಕ್ಷಣವೇ ಹಿರಿದಾದ ವ್ಯಥೆಯ ಮೊತ್ತದಿಂದ ಕೂಡಿದ ನನ್ನ ಹಿಂದಿನ ಜನ್ಮಗಳ ಪ್ರಸಂಗಗಳನ್ನು ನೆನಪಿಸಿಕೊಂಡು ನನಗೆ ನೋವುಂಟಾಯಿತೇ ಹೊರತು ವ್ಯಥೆಪಡುವಂತಹ ಬೇರೆ ಕಷ್ಟವು ನನಗೆ ಯಾವುದಿದೆ?'

**ವ। ಅದೆಂತೆಂದೊಡೆ ಆನೀ ಭವಕ್ಕೆ ಮೂಱನೆಯ ಭವದೊಳ್ ಈ ಧಾತಕೀಷಂಡದ ಮೂಡಣ ಸುಮೇರುದಪರವಿದೇಹದ ಸೀತಾನದಿಯ ಬಡಗಣ ತಡಿಯ ಗಂಧಿಳವಿಷಯದ ಪಾಟಳಿಗ್ರಾಮದೊಳ್ ನಾಗದತ್ತನೆಂಬ ಪರದಂಗವಾತನ ಪರದಿತಿ ವಸುದತ್ತೆಗಂ ಪುಟ್ಟಿದ ನಂದ ನಂದಿಮಿತ್ರ ನಂದಿಷೇಣ ವರಷೇಣ ಜಯಸೇನರರೆಂಬರಯ್ವರ್ ತನಯರಿಂದಂ ಮದನಕಾಂತೆಯುಂ ಶ್ರೀಕಾಂತೆಯುಮೆಂಬಿರ್ವರ್ ತನೂಜೆಯರಿಂದಂ ಆ ಕಡೆಯ ಗರ್ಭದೊಳ್ ನೆಲಸಲೊಡಂ ಅಸ್ಮದನ್ಯಜನ್ಮೋಪಾರ್ಜಿತ ದಾರುಣ ಕರ್ಮಪ್ರೇರಣೆಯಿಂದಂ**

**ಪದವಿಭಾಗ–ಅನ್ವಯ–ಅರ್ಥ:** ಅದೆಂತೆಂದೊಡೆ = ಆ ಕತೆ ಹೇಗೆಂದರೆ: ಆನ್ + ಈ ಭವಕ್ಕೆ ಮೂಱನೆಯ ಭವದೊಳ್ = ಈಗಿನ ಜನ್ಮಕ್ಕೆ ಹಿಂದೆ ಮೂರನೆಯ ಜನ್ಮದಲ್ಲಿ, ಈ ಧಾತಕೀಷಂಡದ ಮೂಡಣ ಸುಮೇರುದ = ಧಾತಕೀಷಂಡದ ಪೂರ್ವಕ್ಕಿರುವ ಅಪರವಿದೇಹದ = ಪಶ್ಚಿಮದ ವಿದೇಹದಲ್ಲಿನ, ಸೀತಾನದಿಯ ಬಡಗಣ ತಡಿಯ = ಸೀತಾನದಿಯ ಉತ್ತರದ ದಡದ ಮೇಲಿನ, ಗಂಧಿಳವಿಷಯದ ಪಾಟಳಿಗ್ರಾಮದೊಳ್ = ಗಂಧಿಳನಾಡಿನ ಪಾಟಳಿ ಎಂಬ ಹಳ್ಳಿಯಲ್ಲಿ, ನಾಗದತ್ತನೆಂಬ ಪರದಂಗಂ + ಆತನ ಪರದಿತಿ ವಸುದತ್ತೆಗಂ ಪುಟ್ಟಿದ = ನಾಗದತ್ತ ಎಂಬ ವ್ಯಾಪಾರಿ ಮತ್ತು ಅವನ ಹೆಂಡತಿ ವಸುದತ್ತೆಯರಿಗೆ ಹುಟ್ಟಿದ, ನಂದ ನಂದಿಮಿತ್ರ ನಂದಿಷೇಣ ವರಷೇಣ ಜಯಸೇನರ್ + ಎಂಬರಯ್ವರ್ ತನಯರಿಂದಂ = ಎಂಬ ಐದು ಮಂದಿ ಗಂಡುಮಕ್ಕಳ ನಂತರ, ಮದನಕಾಂತೆಯುಂ ಶ್ರೀಕಾಂತೆಯುಮೆಂಬ + ಇರ್ವರ್ ತನೂಜೆಯರಿಂದಂ = ಆ ಹೆಸರಿನ ಇಬ್ಬರು

ಹೆಣ್ಣಮಕ್ಕಳ ತರುವಾಯ, ಆ ಕಡೆಯ ಗರ್ಭದೊಳ್ ನೆಲಸಲೊಡಂ = ಕಡೆಯವಳಾಗಿ ತಾಯ ಗರ್ಭವನ್ನು ಸೇರಿ, ಅಸ್ಮತ್ + ಅನ್ಯಜನ್ಮ + ಉಪಾರ್ಜಿತ = ನನ್ನ ಬೇರೆ ಜನ್ಮಗಳಲ್ಲಿ ಗಳಿಸಿದ್ದ, ದಾರುಣಕರ್ಮಪ್ರೇರಣೆಯಿಂದಂ = ಕೆಟ್ಟ ಕರ್ಮಗಳ ಕಾರಣದಿಂದ,

**ಗದ್ಯಾನುಸರಣ:** 'ಆ ಕತೆ ಹೀಗಿದೆ: ಈಗಿನ ಜನ್ಮಕ್ಕೆ ಹಿಂದಿನ ಮೂರನೆಯ ಜನ್ಮದಲ್ಲಿ ಧಾತಕೀಷಂಡದ ಪೂರ್ವಕ್ಕಿರುವ ಪಶ್ಚಿಮದ ವಿದೇಹದಲ್ಲಿನ ಸೀತಾನದಿಯ ಉತ್ತರದ ದಡದ ಮೇಲಿನ ಗಂಧಿಳನಾಡಿನ ಪಾಟಳಿ ಎಂಬ ಹಳ್ಳಿಯಲ್ಲಿ ನಾಗದತ್ತನೆಂಬ ವ್ಯಾಪಾರಿ ಮತ್ತವನ ಹೆಂಡತಿ ವಸುದತ್ತೆ ಇದ್ದರು; ಅವರಿಗೆ ಕ್ರಮವಾಗಿ ನಂದ ನಂದಿಮಿತ್ರ ನಂದಿಷೇಣ ವರಷೇಣ ಜಯಸೇನ ಎಂಬ ಐದು ಮಂದಿ ಗಂಡುಮಕ್ಕಳು ಹುಟ್ಟಿದರು, ಆ ನಂತರ ಮದನಕಾಂತೆ ಶ್ರೀಕಾಂತೆ ಎಂಬ ಇಬ್ಬರು ಹೆಣ್ಣಮಕ್ಕಳಾದರು; ತರುವಾಯ, ಕಡೆಯವಳಾಗಿ ನಾನು ತಾಯ ಗರ್ಭವನ್ನು ಸೇರಿಕೊಂಡೆ. ನನ್ನ ಹಿಂದಿನ ಜನ್ಮಗಳ ಕೆಟ್ಟ ಕರ್ಮಗಳ ಕಾರಣದಿಂದ'

**ಇಡಿದಡರೆ ಕಾಯ್ತ ಚೂತಮ**
**ನಡಸಿ ಸಿಡಿಲ್ ಪೊಯ್ದುದೆನಿಸೆ ನೆವನೆವದಿಂದೆ**
**ನ್ನೊಡವುಟ್ಟಿದರುಂ ತಂದೆಯು**
**ಮಡಗಿರ್ದರ್ ಖಳಕೃತಾಂತದಂತಾಂತರದೊಳ್ ೩೪**

**ಪದವಿಭಾಗ–ಅನ್ವಯ–ಅರ್ಥ:** ಇಡಿದಡರೆ ಕಾಯ್ತ ಚೂತಮನ್ = ಇಡಿಕಿರಿದು ಕಾಯಿಗಳು ಬಿಟ್ಟ ಮಾವಿನ ಮರವನ್ನು, ಅಡಸಿ ಸಿಡಿಲ್ ಪೊಯ್ದುದು + ಎನಿಸೆ = ಜೋರಾಗಿ ಸಿಡಿಲು ಬಡಿದಂತೆ, ನೆವನೆವದಿಂದೆ = ಯಾವಯಾವುದೋ ಕಾರಣದಿಂದ, ಎನ್ನ + ಒಡವುಟ್ಟಿದರುಂ = ನನ್ನ ಒಡಹುಟ್ಟಿದವರೂ, ತಂದೆಯುಂ = ತಂದೆಯೂ, ಖಳಕೃತಾಂತ = ಕ್ರೂರಿಯಾದ ಯಮನ, ದಂತಾಂತರದೊಳ್ = ಹಲ್ಲುಗಳ ನಡುವೆ ಸಿಕ್ಕಿ, ಅಡಗಿರ್ದರ್ = ಅಡಗಿಹೋದರು.

**ಗದ್ಯಾನುಸರಣ:** ಇಡಿಕಿರಿದು ಕಾಯಿಗಳು ಬಿಟ್ಟ ಮಾವಿನ ಮರಕ್ಕೆ ಜೋರಾಗಿ ಸಿಡಿಲು ಬಡಿದಂತೆ, ಯಾವಯಾವುದೋ ಕಾರಣದಿಂದ, ನನ್ನ ಒಡಹುಟ್ಟಿದವರೂ ತಂದೆಯೂ ಕ್ರೂರಿಯಾದ ಯಮನ ಹಲ್ಲುಗಳ ನಡುವೆ ಸಿಕ್ಕಿ ಅಡಗಿಹೋದರು (ಸತ್ತರು).

**ವ। ಅಂತು ಮದೀಯಜನನಿಯುಂ ಜನನಿಯು ಜನನಿಯು ಮುಱಿಯಲುಮುಱಿದವರು ಮೆಲ್ಲಮೊರ್ವರುಱಿಯದಂತೆ ಪೋಪುದು ಮರಸರ ದೆಸೆಯಿಂ**

**ಮನೆಯುಂ ಕವರ್ತೆವೋಪುದುಂ ಪೆಱರ ಕೀೞಿಲೊಳೆಮ್ಮಬ್ಬೆ ಯುಂ ಮುತ್ತಬ್ಬೆಯುಂ ಸಾರ್ದು ಬದಗುಗೆಯ್ದುಣೆ ನವಮಾಸಂ ನೆಱೆದಾಂ ಪುಟ್ಟುವುದುಂ ಎನ್ನ ಮೆಯ್ಯ ದುರ್ಗಂಧಕ್ಕೆ ಪೇಸಿ ಕಂಡವರೆಲ್ಲರುಮೆೞೆದು ಕಳೆಯೆ ಪರೇತವನದ ಭೂಮಿಯೊಳ್ ಜೀರ್ಣಶೀರ್ಣಚೀರಂಗಳಿಂದಂ ಪುದಿದಿರಿಸಿ ಪೋಗಿ ತಾವಿರ್ಬರುಂ ತಿರಿದು ತಂದಿಕ್ಕಿದೆಂಜಲೆವುೞಮಂ ತಿಂದು ಪೆಸರುಮಿಲ್ಲದೆ ನಿರ್ನಾಮಿಕೆಯೆಂದು ಪೆಸರಾಗಿ ಬಳೆಯೆ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹೀಗೆ, ಮದೀಯಜನನಿಯುಂ ಜನನಿಯ ಜನನಿಯುಂ = ನನ್ನ ತಾಯಿಯೂ ತಾಯಿಯ ತಾಯಿಯೂ, ಉೞಿಯಲುಂ = ಉಳಿದುಕೊಂಡು, ಉೞಿದವರುಮೆಲ್ಲಂ = ಮಿಕ್ಕವರೆಲ್ಲರೂ, ಒರ್ವರ್ + ಉೞಿಯದಂತೆ = ಒಬ್ಬರೂ ಉಳಿಯದ ಹಾಗೆ, ಪೋಪುದುಂ = ಸಾಯುವುದೂ; ಅರಸರ ದೆಸೆಯಿಂ = ರಾಜನ ಕಾರಣದಿಂದಾಗಿ, ಮನೆಯುಂ ಕವರ್ತೆ + ಪೋಪುದುಂ = ಮನೆಯೂ ಮುಟ್ಟುಗೋಲಾಗಲು, ಪೆಱರ ಕೀೞಿಲೊಳ್ = ಬೇರೆಯವರ ಗುಡಿಸಿಲಿನಲ್ಲಿ, ಎಮ್ಮಬ್ಬೆಯುಂ ಮುತ್ತಬ್ಬೆಯುಂ ಸಾರ್ದು = ನಮ್ಮ ತಾಯಿ ಅಜ್ಜಿಯರು ಹೋಗಿ, ಬದಗುಗೆಯ್ದು + ಉಣೆ = ಊಳಿಗ ಮಾಡಿ, ನವಮಾಸಂ ನೆಱೆದು + ಆಂ ಪುಟ್ಟುವುದುಂ = ಒಂಬತ್ತು ತಿಂಗಳು ತುಂಬಿ ನಾನು ಹುಟ್ಟುವುದೂ: ಎನ್ನ ಮೆಯ್ಯ ದುರ್ಗಂಧಕ್ಕೆ ಪೇಸಿ = ನನ್ನ ದೇಹದ ಕೆಟ್ಟ ವಾಸನೆಗೆ ಅಸಹ್ಯಪಟ್ಟು, ಕಂಡವರೆಲ್ಲರುಮೆೞೆದು ಕಳೆಯೆ = ಕಂಡವರೆಲ್ಲ ದೂರಮಾಡಲು, ಪರೇತವನದ ಭೂಮಿಯೊಳ್ = ಮಸಣಭೂಮಿಯಲ್ಲಿ, ಜೀರ್ಣಶೀರ್ಣಚೀರಂಗಳಿಂದಂ = ಹಳತಾದ ಚಿಂದಿ ಬಟ್ಟೆಯಲ್ಲಿ, ಪುದಿದು + ಇರಿಸಿ ಪೋಗಿ = ಮುಚ್ಚಿಟ್ಟು ಹೋಗಿ, ತಾವಿರ್ಬರುಂ ತಿರಿದು ತಂದು + ಇಕ್ಕಿದ= ಬಿಕ್ಕೆ ಬೇಡಿ ತಂದ, ಎಂಜಲೆವುೞಮಂ ತಿಂದು = ಎಂಜಲು ಅಗುಳುಗಳನ್ನು ತಿಂದುಕೊಂಡು, (ನಾನು) ಪೆಸರುಂ + ಇಲ್ಲದೆ = ಹೆಸರಿಲ್ಲದೆ, ನಿರ್ನಾಮಿಕೆಯೆಂದು ಪೆಸರಾಗಿ ಬಳೆಯೆ = ಹೆಸರಿಲ್ಲದವಳು ಎಂದೇ ಬೆಳೆದು,

**ಗದ್ಯಾನುಸರಣ:** ಹೀಗೆ, ನನ್ನ ತಾಯಿಯೂ ತಾಯಿಯ ತಾಯಿಯೂ ಉಳಿದುಕೊಂಡು ಮಿಕ್ಕವರೆಲ್ಲರೂ ಒಬ್ಬರೂ ಉಳಿಯದ ಹಾಗೆ ಸತ್ತುಹೋದರು; ರಾಜನ ದೌರ್ಜನ್ಯದಿಂದಾಗಿ ಮನೆಯೂ ಮುಟ್ಟುಗೋಲಾಯಿತು; ಬೇರೆಯವರ ಮನೆಗೆ ಹೋಗಿ ನಮ್ಮ ತಾಯಿ ಅಜ್ಜಿಯರು ಊಳಿಗ ಮಾಡುತ್ತ ಬದುಕಿರಲು, ಒಂಬತ್ತು ತಿಂಗಳು ತುಂಬಿ ನಾನು ಹುಟ್ಟಿದೆ; ಆದರೆ ನನ್ನ ದೇಹದ ಕೆಟ್ಟ ವಾಸನೆಗೆ ಅಸಹ್ಯಪಟ್ಟು ಕಂಡಕಂಡವರೆಲ್ಲ ನನ್ನನ್ನು ದೂರಮಾಡಿದರು; ಮಸಣಭೂಮಿಯಲ್ಲಿ ಹಳತಾದ ಚಿಂದಿ ಬಟ್ಟೆಯಲ್ಲಿ, ನನ್ನನ್ನು ಮುಚ್ಚಿಟ್ಟ ಹೋಗಿ ತಾಯಿ–ಅಜ್ಜಿಯರು

ಬಿಕ್ಕೆ ಬೇಡಿ ತಂದು ಉಂಡು ಉಳಿದ ಎಂಜಲು ಅಗುಳುಗಳನ್ನು ತಿಂದುಕೊಂಡು ನಾನು ಹೆಸರಿಲ್ಲದೆ ಬೆಳೆದೆ.

**ವಿಶೇಷ ವಿಚಾರ:** ಎಲ್. ಬಸವರಾಜು ಅವರು 'ಎಂಜಲುಮೆವುಱ' ಎಂಬುದಕ್ಕೆ 'ಎಂಜಲುಮುಂಜಲು' ಎಂಬ ಅರ್ಥವನ್ನು ಕೊಡುತ್ತಾರೆ.

**ಅವರುಮನಂತಕನೊಯ್ಯನೆ**
**ಸವಿನೋಟ್ಪುದುಮಾನುಮೆನ್ನ ಪಾಪದ ಫಲಮಂ**
**ಸವಿನೋಡೆ ಪೊಕ್ಕೆನೊಡನೊಗೆ**
**ದ ವಿಚಾರಣಚರಿತಮೆಂಬ ಗಹನಾಂತರಮಂ ೩೫**

**ಪದವಿಭಾಗ–ಅನ್ವಯ–ಅರ್ಥ:** ಒಯ್ಯನೆ = ಕಾಲ ಸರಿದಂತೆ, ಅವರುಮನ್ + ಅಂತಕನ್ ಸವಿನೋೞ್ಪುದುಂ = ಅವರನ್ನೂ ಯಮನು ರುಚಿನೋಡಿದ; ಆನುಂ + ಎನ್ನ ಒಡನೆ + ಒಗೆದ ಪಾಪದ ಫಲಮಂ ಸವಿನೋಡೆ = ನಾನೂ ನನ್ನ ಜೊತೆಯಲ್ಲೇ ಹುಟ್ಟಿದ್ದ ಪಾಪದ ಫಲವನ್ನು ಉಣ್ಣಲು, ವಿಚಾರಣಚರಿತಮೆಂಬ, ಗಹನಾಂತರಮಂ = ಕಾಡನ್ನು, ಪೊಕ್ಕೆನ್ = ಸೇರಿದೆ

**ಗದ್ಯಾನುಸರಣ:** ಕಾಲ ಸರಿದಂತೆ, ಅವರೂ ತೀರಿಕೊಂಡರು; ನಾನೂ ನನ್ನ ಜೊತೆಯಲ್ಲೇ ಹುಟ್ಟಿದ್ದ ಪಾಪದ ಫಲವನ್ನು ಉಣ್ಣಲು ವಿಚಾರಣಚರಿತವೆಂಬ ಹೆಸರಿನ ಕಾಡನ್ನು ಸೇರಿದೆ.

**ವ॥ ಅಂತು ಪೊಕ್ಕದರ್ಕೆ ತಿಳಕಮಿರ್ಪಂತಿರ್ದಂಬರತಿಳಕವೆಂಬ ಗಿರಿವರದ ಮೇಗೆ,**

**ಅರ್ಥ:** ಅಂತು ಪೊಕ್ಕು = ಹಾಗೆ ಸೇರಿ, ಅದರ್ಕೆ ತಿಳಕಮಿರ್ಪಂತೆ + ಇರ್ದ = ಆ ಕಾಡಿನ ತಿಲಕದಂತಿದ್ದ, ಅಂಬರತಿಳಕಂ + ಎಂಬ ಗಿರಿವರದ ಮೇಗೆ = ಅಂಬರತಿಲಕ ಎಂಬ ಗಿರಿಶಿಖರದಲ್ಲಿ

**ವಿಸ್ರಸ್ತಬಹಳದೋಷತ**
**ಮಿಸ್ರರನಖಿಳರ್ಧಿಗುಣವಿಭೂಷಣರಂ ಪು**
**ಣ್ಯಾಸ್ರವಕಾರಣರಂ ಪಿಹಿ**
**ತಾಸ್ರವಮುನಿಪತಿಗಳಂ ಮನಂ ಬಿಡೆ ಕಂಡೆಂ ೩೬**

**ಪದವಿಭಾಗ–ಅನ್ವಯ–ಅರ್ಥ:** ವಿಸ್ರಸ್ತ ಬಹಳದೋಷತಮಿಸ್ರರನ್ = ಬಹುದೋಷಗಳೆಂಬ ಕತ್ತಲನ್ನು ಹೊಡೆದೋಡಿಸುವವರೂ, ಅಖಿಳರ್ಧಿಗುಣ ವಿಭೂಷಣರಂ = ಎಲ್ಲ ಬಗೆಯ ಋದ್ಧಿಗಳಿಂದ ಅಲಂಕೃತರಾದವರೂ, ಪುಣ್ಯ

+ ಆಸ್ರವಕಾರಣರಂ = ಪುಣ್ಯಾಸ್ರವ ಕಾರಣರೂ ಆದ, ಪಿಹಿತಾಸ್ರವಮುನಿಪತಿಗಳಂ = ಪಿಹಿತಾಸ್ರವ ಎಂಬ ಮುನಿಗಳನ್ನು, ಮನಂ ಬಿಡೆ ಕಂಡೆಂ = ಮನಃತೃಪ್ತಿಯಿಂದ ನೋಡಿದೆ.

**ಗದ್ಯಾನುಸರಣ;** ಬಹುದೋಷಗಳೆಂಬ ಕತ್ತಲನ್ನು ಹೊಡೆದೋಡಿಸುವವರೂ, ಎಲ್ಲ ಬಗೆಯ ಋದ್ಧಿಗಳಿಂದ ಅಲಂಕೃತರಾದವರೂ, ಪುಣ್ಯಾಸ್ರವ ಕಾರಣರೂ ಆದ ಪಿಹಿತಾಸ್ರವ ಎಂಬ ಮುನಿಗಳನ್ನು ಮನಃತೃಪ್ತಿಯಿಂದ ನೋಡಿದೆ.

**ವಿಶೇಷ ವಿಚಾರ:** ಪುಣ್ಯಾಸ್ರವ ಎಂದರೆ ಉತ್ತಮ ಮನಸ್ಸು-ವಚನ-ಕಾಯ-ಕ್ರಿಯೆಗಳಿಂದ ಉಂಟಾಗುವ ಪುಣ್ಯಕರ್ಮಗಳ ಬರುವಿಕೆ; ಆಸ್ರವ ಎಂಬುದು ಸಪ್ತತತ್ವಗಳಲ್ಲಿ ಒಂದು; ಪುಣ್ಯಪಾಪರೂಪವಾದ ಕರ್ಮವು ಜೀವದೊಳಕ್ಕೆ ಹರಿದು ಬರುವುದು

**ವ ಕಂಡು ಪೊಡೆವಡುವನಿತುವರಮೆನ್ನ ಮನದೊಳಱಿವಿಲ್ಲದೆಯುಂ ಅಸವಸದೊಳಾದ ಮನದೆಱಕದಿನೆಱಗಿ ಪೊಡೆವಟ್ಟು,**

**ಪದವಿಭಾಗ-ಅನ್ವಯ-ಅರ್ಥ:** ಕಂಡು ಪೊಡೆವಡುವನಿತುವರಂ = ಅವರನ್ನು ನೋಡಿ ನಮಸ್ಕರಿಸುವವರೆಗೂ, ಎನ್ನ ಮನದೊಳ್ + ಅಱಿವಿಲ್ಲದೆಯುಂ = ನನ್ನ ಮನಸ್ಸಿಗೆ ಗೊತ್ತಾಗದಿದ್ದರೂ, ಅಸವಸದೊಳಾದ ಮನದ + ಎಱಕದಿನ್ = ಮನಸ್ಸಿನಲ್ಲಿ ಆತುರದಲ್ಲಿಯೇ ಉಂಟಾದ ಗೌರವದಿಂದ, ಎಱಗಿ ಪೊಡೆವಟ್ಟು = ನಮಸ್ಕರಿಸಿ

**ಗದ್ಯಾನುಸರಣ:** ಅವರನ್ನು ನೋಡಿ ಅದುವರೆಗೂ ನನ್ನ ಮನಸ್ಸಿಗೆ ಗೊತ್ತಾಗದಿದ್ದರೂ ದಿಢೀರನೆ ಅವರ ಬಗ್ಗೆ ಗೌರವಭಾವನೆ ಉಂಟಾಯಿತು; ಆಗ ನಾನವರಿಗೆ ನಮಸ್ಕರಿಸಿದೆ.

**ಆವುದು ಕರ್ಮದೊಳಾಯ್ತೆನ**
**ಗೀ ವಿಧದಿಂ ದುಃಖಮಱಿಯೆ ಬೆಸಸುವುದೆನ್ನಂ**
**ಕಾವುದನಾಥೆಯನೆನೆ ಪರ**
**ಮಾವಧಿಯಿಂ ಭವಮನಱಿದು ಯತಿಪತಿ ನುಡಿದಂ ೩೭**

**ಪದವಿಭಾಗ-ಅನ್ವಯ-ಅರ್ಥ:** ಈ ವಿಧದಿಂ ದುಃಖಂ ಎನಗೆ ಆವುದು ಕರ್ಮದೊಳ್ + ಆಯ್ತು = ಈ ವಿಧವಾದ ದುಃಖವು ನನಗೆ ಯಾವ ಕರ್ಮಫಲ್ದಿಂದಾಗಿ ಉಂಟಾಯಿತು, ಅಱಿಯೆ ಬೆಸಸುವುದು = ನನಗೆ ತಿಳಿಯುವ

ಹಾಗೆ ಹೇಳಿ, ಎನ್ನಂ ಕಾವುದು + ಅನಾಥೆಯನ್ = ಅನಾಥೆಯಾದ ನನ್ನನ್ನು ಕಾಪಾಡಿ, ಎನೆ ಪರಮಾವಧಿಯಿಂ = ಎಂದು ಕೇಳಿಕೊಳ್ಳಲು ತಮ್ಮ ಅವಧಿಜ್ಞಾನದಿಂದ, ಭವಮನ್ + ಅಱಿದು = ನನ್ನ ಹಿಂದಿನ ಜನ್ಮವೃತ್ತಾಂತವನ್ನು ತಿಳಿದುಕೊಂಡು, ಯತಿಪತಿ ನುಡಿದಂ = ಮುನಿಶ್ರೇಷ್ಠರು ಹೀಗೆಂದರು

**ಗದ್ಯಾನುಸರಣ:** 'ಈ ವಿಧವಾದ ದುಃಖವು ನನಗೆ ಯಾವ ಕರ್ಮಫಲದಿಂದಾಗಿ ಉಂಟಾಯಿತು, ನನಗೆ ತಿಳಿಯಹೇಳಿ ಅನಾಥೆಯಾದ ನನ್ನನ್ನು ಕಾಪಾಡಿ' ಎಂದು ಕೇಳಿಕೊಳ್ಳಲು ತಮ್ಮ ಅವಧಿಜ್ಞಾನದಿಂದ ನನ್ನ ಹಿಂದಿನ ಜನ್ಮವೃತ್ತಾಂತವನ್ನು ತಿಳಿದುಕೊಂಡು ಆ ಮುನಿಶ್ರೇಷ್ಠರು ಹೀಗೆಂದರು

**ಈ ತೆಱದಿಂದಂ ನಿನ್ನಂ**
**ಘಾತಿಸಿ ಬಿಡದಲೆದು ಪಿಱಿದು ಪಿಂಡಿದ ದುಃಖ**
**ವ್ರಾತಮಿದು ಮಗಳೆ ನಿನ್ನ ಪು**
**ರಾತನದುಷ್ಕರ್ಮವಿಟಪಿಕಟುಫಲಂಗಳ್ ೩೮**

**ಪದವಿಭಾಗ–ಅನ್ವಯ–ಅರ್ಥ:** ಮಗಳೆ, ಈ ತೆಱದಿಂದಂ ನಿನ್ನಂ ಘಾತಿಸಿ = ಈ ರೀತಿ ನಿನಗೆ ತೊಂದರೆಯಿತ್ತು, ಬಿಡದೆ + ಅಲೆದು ಪಿಱಿದು ಪಿಂಡಿದ ದುಃಖವ್ರಾತಂ = ಒಂದೇ ಸಮನೆ ಹಿಂಡಿಹಿಪ್ಪೆ ಮಾಡಿದ ದುಃಖಪರಂಪರೆಯು, ಇದು ನಿನ್ನ ಪುರಾತನದುಷ್ಕರ್ಮವಿಟಪಿಕಟುಫಲಂಗಳ್ = ನಿನ್ನ ಹಿಂದಿನ ಕೆಟ್ಟ ಕೆಲಸಗಳೆಂಬ ಮರದ ಕಹಿಹಣ್ಣುಗಳು

**ಗದ್ಯಾನುಸರಣ:** 'ಮಗಳೆ, ಈ ರೀತಿ ನಿನಗೆ ತೊಂದರೆಯಿತ್ತು, ಒಂದೇ ಸಮನೆ ಹಿಂಡಿಹಿಪ್ಪೆ ಮಾಡಿದ ದುಃಖಪರಂಪರೆಯು ನಿನ್ನ ಹಿಂದಿನ ಕೆಟ್ಟ ಕೆಲಸಗಳೆಂಬ ಮರದ ಕಹಿಹಣ್ಣುಗಳು.'

**ವ॥ ಅದೆಂತೆಂದೊಡೀ ವಿಷಯದ ಪಳಾಳಕೂಟಗ್ರಾಮದೊಳ್ ದೇವಿಲನೆಂಬ ಗ್ರಾಮಕೂಟಂಗಮಾತನ ಕುಟುಂಬಿನಿ ವಸುಮತಿಗಂ ಧನಶ್ರೀಯೆಂಬ ಮಗಳಾಗಿ ಪುಟ್ಟಿ ನೀಂ ಮತ್ತೊಂದು ದಿವಸಮಾತ್ಮೀಯ ವಿಹಾರಭೂಮಿಸಮೀಪಸ್ಥಿತ ತ್ರಿಗುಪ್ತಿಗುಪ್ತ ಸಮಾಧಿಗುಪ್ತರೆಂಬ ಯತಿಪತಿ ಗಳಧ್ಯಯನಮಂ ನಿನಗನಿಷ್ಟಮಪ್ಪುದಱಿನಧ್ಯಯನಾಂತರಾಯಮಂ ಮಾಡ ಲೆಂದ ವರೋದುವಾವಾಸದೊಳ್ ಸಂಕ್ಲೇಶಮಾಗೆ ಸಾರಮೇಯಪೂತಿಕಳೇಬರ'ಮನಿಕ್ಕಿದೊಡವರ್ ನಿನ್ನ ಪಾಪೋಪಚಯಕಾರಣದುರಾಚರಿತಮಂ ನೋಡಿ**

**ಪದವಿಭಾಗ–ಅನ್ವಯ–ಅರ್ಥ:** ಅದು + ಎಂತೆಂದೊಡೆ = ಅದು ಹೇಗ ಎಂದರೆ: ಈ ವಿಷಯದ ಪಳಾಳಕೂಟಗ್ರಾಮದೊಳ್ = ಈ ನಾಡಿನ ಪಳಾಳಕೂಟ

ಎಂಬ ಹಳ್ಳಿಯಲ್ಲಿ, ದೇವಿಲನೆಂಬ ಗ್ರಾಮಕೂಟಂಗವಾತನ ಕುಟುಂಬಿನಿ ವಸುಮತಿಗಂ = ದೇವಿಲನೆಂಬ ಊರಗೌಡನಿಗೂ ಅವನ ಹೆಂಡತಿ ವಸುಮತಿಗೂ, ಧನಶ್ರೀಯೆಂಬ ಮಗಳಾಗಿ ಪುಟ್ಟಿ ನೀಂ = ಮಗಳಾಗಿ ಹುಟ್ಟಿದ ನೀನು, ಮತ್ತೊಂದು ದಿವಸಂ = ಒಂದು ದಿವಸ, ಆತ್ಮೀಯವಿಹಾರಭೂಮಿಸಮೀಪಸ್ಥಿತ = ನಿನ್ನ ವಿಹಾರತಾಣದ ಹತ್ತಿರ, ತ್ರಿಗುಪ್ತಿಗುಪ್ತ = ಮೂರು ಗುಪ್ತಿಗಳಿಂದ ಕೂಡಿದ್ದ, ಸಮಾಧಿಗುಪ್ತರೆಂಬ ಯತಿಪತಿಗಳ = ಆ ಹೆಸರಿನ ಮುನಿವರ್ಯರ, ಅಧ್ಯಯನಂ = ಧಾರ್ಮಿಕ ಓದು, ನಿನಗೆ + ಅನಿಷ್ಟಂ + ಅಪ್ಪುದಱಿನ್ = ನಿನಗೆ ಸರಿಹೋಗದ್ದರಿಂದ, ಅಧ್ಯಯನಾಂತರಾಯಮಂ ಮಾಡಲೆಂದು = ಅಧ್ಯಯನಕ್ಕೆ ತೊಂದರೆಯನ್ನುಂಟುಮಾಡುವ ಉದ್ದೇಶದಿಂದ, ಅವರ + ಓದುವ + ಆವಾಸದೊಳ್ = ಅವರ ಓದುಕೋಣೆಯಲ್ಲಿ, ಸಂಕ್ಲೇಶವಾಗೆ = ತೊಂದರೆಯುಂಟಾಗುವಂತೆ, ಸಾರಮೇಯ = ನಾಯಿಯ, ಪೂತಿಕಳೇಬರಮನ್ + ಇಕ್ಕಿದೊಡೆ = ದುರ್ಗಂಧಮಯವಾದ ಸತ್ತ ದೇಹವನ್ನಿರಿಸಲು, ಅವರ್ ನಿನ್ನ ಪಾಪ + ಉಪಚಯಕಾರಣ = ಆ ಮುನಿಗಳು ನಿನ್ನ ಪಾಪ ಹೆಚ್ಚುವ, ದುರಾಚರಿತಮಂ ನೋಡಿ = ಕೆಟ್ಟ ನಡವಳಿಕೆಯನ್ನು ಕಂಡು,

**ಗದ್ಯಾನುಸರಣ:** ಅದು ಹೇಗೆ ಎಂದರೆ: ಈ ನಾಡಿನ ಪಳಾಳಕೂಟ ಎಂಬ ಹಳ್ಳಿಯ ದೇವಿಲನೆಂಬ ಊರಗೌಡನಿಗೂ ಅವನ ಹೆಂಡತಿ ವಸುಮತಿಗೂ ಮಗಳಾಗಿ ನೀನು ಹುಟ್ಟಿದೆ; ಒಂದು ದಿವಸ ನಿನ್ನ ಪ್ರೀತಿಯ ವಿಹಾರತಾಣದ ಹತ್ತಿರ ಮೂರು ಗುಪ್ತಿಗಳಿಂದ ಕೂಡಿದ್ದ ಸಮಾಧಿಗುಪ್ತರೆಂಬ ಮುನಿವರ್ಯರು ಧಾರ್ಮಿಕ ಓದಿನಲ್ಲಿ ತೊಡಗಿದ್ದರು; ಅದು ನಿನಗೆ ಸರಿಹೋಗದ್ದರಿಂದ ಅವರ ಅಧ್ಯಯನಕ್ಕೆ ತೊಂದರೆಯನ್ನುಂಟುಮಾಡುವ ಉದ್ದೇಶದಿಂದ ಅವರ ಓದುಕೋಣೆಯಲ್ಲಿ ತೊಂದರೆಯುಂಟಾಗುವಂತೆ ಸತ್ತ ನಾಯಿಯ ದುರ್ಗಂಧಮಯವಾದ ದೇಹವನ್ನಿರಿಸಿದೆ; ಪಾಪವನ್ನು ಹೆಚ್ಚಿಸುವ ಈ ನಿನ್ನ ಕೆಟ್ಟ ನಡವಳಿಕೆಯನ್ನು ಆಮುನಿಗಳು ಗಮನಿಸಿದರು.

**ವಿಶೇಷ ವಿಚಾರ:** ಅಂತರಾಯ ಎಂದರೆ ಮೋಕ್ಷಸಂಪಾದನೆಗೆ ಉಂಟಾಗುವ ಅಡ್ಡಿಗಳು; ಇಂತಹವು ಐದು: ದಾನಾಂತರಾಯ, ಲಾಭಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ ಮತ್ತು ವೀರ್ಯಾಂತರಾಯ – ಇವುಗಳು. ತ್ರಿಗುಪ್ತಿಗಳೆಂದರೆ ಮನವಚನಕಾಯಗಳನ್ನು ನಿಗ್ರಹಿಸಿ ಧ್ಯಾನದಲ್ಲಿ ನಿರತವಾಗುವುದು; ಹೀಗೆ ಮಾಡಬಲ್ಲವನು 'ತ್ರಿಗುಪ್ತಿಗುಪ್ತ'

**ಮತಿಗೆಟ್ಟ ಮಗಳೆ ಸಂಸ್ಕೃತಿ**
**ಲತೆಯೊಳ್ ತೊಡರಲ್ಕೆ ನೀನಿದಂ ನೆಗೞ್ದೈ ದು**

**ಗರ್ತಿಹೇತು ಪೂಜ್ಯಪೂಜಾ**
**ವ್ಯತಿಕ್ರಮಮಂ ಕಿಱಿದು ದುಃಖಮಮಂ ಮಾಡುವುದೇ ೩೯**

**ಪದವಿಭಾಗ-ಅನ್ವಯ-ಅರ್ಥ:** ಮತಿಗೆಟ್ಟ ಮಗಳೆ = ಬುದ್ಧಿಹೀನ ಹುಡುಗಿಯೇ, ಸಂಸೃತಿಲತೆಯೊಳ್ ತೊಡರಲ್ಕೆ = ಸಂಸಾರವೆಂಬ ಬಳ್ಳಿಯಲ್ಲಿ ಸಿಕ್ಕಿಹಾಕಿಕೊಳ್ಳಲು, ನೀನಿದಂ ನೆಗೞ್ದೆ = ನೀನು ಇಂತಹ ಕೆಟ್ಟ ಕೆಲಸವನ್ನು ಮಾಡಿದ್ದೀಯೆ; ದುರ್ಗತಿಹೇತು = ದುರ್ಗತಿಗೆ ಕಾರಣವಾಗುವ, ಪೂಜ್ಯಪೂಜಾವ್ಯತಿಕ್ರಮಂ = ಪವಿತ್ರವಾದ ಪೂಜೆಗೆ ಮಾಡುವ ಅಡ್ಡಿಯು, ಕಿಱಿದು ದುಃಖಮಂ ಮಾಡುವುದೇ = ಮಾಡುವ ದುಃಖವು ಸಾಮಾನ್ಯವಾದುದೇ?

**ಗದ್ಯಾನುಸರಣ:** ಬುದ್ಧಿಹೀನ ಹುಡುಗಿಯೇ, ಸಂಸಾರವೆಂಬ ಬಳ್ಳಿಯಲ್ಲಿ ಸಿಕ್ಕಿಹಾಕಿಕೊಳ್ಳಲು ನೀನು ಇಂತಹ ಕೆಟ್ಟ ಕೆಲಸವನ್ನು ಮಾಡಿದ್ದೀಯೆ; ದುರ್ಗತಿಗೆ ಕಾರಣವಾಗುವ ಪವಿತ್ರವಾದ ಪೂಜೆಗೆ ಅಡ್ಡಿಯುಂಟುಮಾಡಿದರೆ ಒದಗುವ ದುಃಖವು ದುಃಖವು ಸಾಮಾನ್ಯವಾದುದೇ?

**ವ। ಎಂಬುದುಮಾ ನುಡಿಗೆ ನೀಂ ಬೆರ್ಚಿ ಬೇಗಮನದನೆೞ್ದು ಕಳೆದು**

**ಅರ್ಥ:** ಎಂಬುದುಂ + ಆ ನುಡಿಗೆ ನೀಂ ಬೆರ್ಚಿ ಬೇಗಮನ್ + ಅದನ್ + ಎೞೆದು ಕಳೆದು = ಎಂದು ಹೇಳಿದಾಗ ಅವರ ಮಾತಿನಿಂದ ಗಾಬರಿಗೊಂಡು ತಕ್ಷಣವೇ ಆ ನಾಯ ದೇಹವನ್ನು ನೀನು ತೆಗೆದು ಬಿಸಾಡಿದೆ.

**ಅಱಿಯದೆ ಗೆಯ್ದುದರ್ಕೆ ಮುನಿಪುಂಗವ ನೀಂ ಕ್ಷಮಿಯಿಪ್ಪುದೆಂದು ಕಾ**
**ಲ್ಗೆಱಗಿದ ನಿನ್ನದೊಂದುಪಶಮಂ ಪಡೆದತ್ತು ಮನುಷ್ಯಜನ್ಮಮಂ**
**ಮಱುಗಿಸಿ ನಿನ್ನನೀ ಪದಕೆ ತಂದುದು ಮುನ್ನಿನ ಗೆಯ್ದ ದೋಷಮಿ**
**ನ್ನಱಿದು ಜಿನೇಂದ್ರಧರ್ಮಜಳದಿಂ ಕಳೆ ಕರ್ಚಿ ಕಳಂಕಪಂಕಮಂ ೪೦**

**ಪದವಿಭಾಗ-ಅನ್ವಯ-ಅರ್ಥ:** ಮುನಿಪುಂಗವ = ಮುನಿಶ್ರೇಷ್ಠರೇ, ಅಱಿಯದೆ ಗೆಯ್ದುದರ್ಕೆ = ತಿಳಿಯದೆ ಮಾಡಿದ ತಪ್ಪನ್ನು, ನೀಂ ಕ್ಷಮಿಯಿಪ್ಪುದು = ಕ್ಷಮಿಸಿರಿ, ಎಂದು ಕಾಲ್ಗೆಱಗಿದ = ಎಂದು ನಮಸ್ಕರಿಸಿದ, ನಿನ್ನ + ಅದೊಂದು + ಉಪಶಮಂ = ನಿನ್ನ ಆ ಪಶ್ಚಾತ್ತಾಪವು, ಪಡೆದತ್ತು ಮನುಷ್ಯಜನ್ಮಮಂ = ಮನುಷ್ಯಜನ್ಮವನ್ನು ಉಂಟುಮಾಡಿದೆ, ಮಱುಗಿಸಿ = ದುಃಖಕ್ಕೆ ಒಳಗುಮಾಡಿ, ನಿನ್ನನೀ ಪದಕೆ ತಂದುದು = ನಿನ್ನನ್ನು ಈ ಸ್ಥಿತಿಗೆ ತಂದಿದೆ; ಮುನ್ನಿನ ಗೆಯ್ದ ದೋಷಂ + ಇನ್ನಱಿದು = ಹಿಂದೆ ಮಾಡಿದ ಪಾಪವನ್ನು ಅರಿತುಕೊಂಡು,

ಜಿನೇಂದ್ರಧರ್ಮಜಳದಿಂ = ಜಿನಧರ್ಮ ಎಂಬ ನೀರಿನಿಂದ, ಕಳಂಕಪಂಕಮಂ ಕರ್ಚಿ ಕಳೆ = ಪಾಪದ ಕೆಸರನ್ನು ತೊಳೆದು ಕಳೆದುಕೋ!

**ಗದ್ಯಾನುಸರಣ:** 'ಮುನಿಶ್ರೇಷ್ಠರೇ, ತಿಳಿಯದೆ ಮಾಡಿದ ತಪ್ಪನ್ನು ದಯವಿಟ್ಟು ಕ್ಷಮಿಸಿರಿ' ಎಂದು ನೀನು ನಮಸ್ಕರಿಸಿದೆ; 'ನಿನ್ನ ಪಶ್ಚಾತ್ತಾಪದಿಂದಾಗಿ ನೀನು ಮನುಷ್ಯಜನ್ಮವನ್ನು ಪಡೆದೆ; ಈ ಜನ್ಮವು ದುಃಖಕ್ಕೆ ಒಳಗುಮಾಡಿ ನಿನ್ನನ್ನು ಈ ಹದಕ್ಕೆ ತಂದಿದೆ; ಹಿಂದೆ ಮಾಡಿದ ಪಾಪವನ್ನು ಅರಿತುಕೊಂಡು ಜಿನಧರ್ಮ ಎಂಬ ನೀರಿನಿಂದ ನಿನ್ನ ಪಾಪವೆಂಬ ಕೆಸರನ್ನು ತೊಳೆದು ಕಳೆದುಕೋ!'

**ವಿಶೇಷ ವಿಚಾರ:** ಅವಳಪೂರ್ವ ಜನ್ಮದ ಕಥೆಯಲ್ಲಿರುವ ವ್ಯಥೆಯನ್ನು ಬಿಚ್ಚಿಡುವಾಗ ನಡವಳಿಕೆಯಲ್ಲಾದ ಲೋಪಗಳನ್ನು ಕಾರಣವಾಗಿ ಕೊಡಲಾಗಿದೆ; ಇದನ್ನು ತಿದ್ದಿಕೊಂಡು ಮತ್ತೆ ಯಥಾಸ್ಥಿತಿಯನ್ನು ಪಡೆಯಲು 'ಜಿನಧರ್ಮ'ವೊಂದೇ ಪರಿಹಾರ ಎಂಬುದನ್ನು ಇಲ್ಲಿ ಸೂಚಿಸಲಾಗಿದೆ. ಅದಕ್ಕಾಗಿಯೇ "ಜಿನೇಂದ್ರಧರ್ಮ ಜಳದಿಂ ಕಳೆ ಕರ್ಚಿ ಕಳಂಕಪಂಕಮಂ" ಎಂಬ ಮಾತು ಬಂದಿದೆ.

**ವ। ಎಂಬುದುಮಾ ಮುಮುಕ್ಷುಗಳ ಸಮಕ್ಷದೊಳವರ ಪೇೞ್ದ ಮಾೞ್ಕೆಯೊಳೆ ಪರಮಜಿನಪತಿಪರಿಭಾಷಿತಮಪ್ಪ ಸಕಳಶ್ರಾವಕವ್ರತಂಗಳಂ ಷೋಡಶತೀರ್ಥಕರಭಾವನೆಗಳಂ ಚತುಸ್ತ್ರಿಂಶದತಿಶಯಂಗಳು ಮನಷ್ಟ ಮಹಾಪ್ರಾತಿಹಾರ್ಯಂಗಳುಮಂ ಪಂಚಮಹಾಕಲ್ಯಾಣಂಗಳುಮಂ ನಾಮೋ ದ್ದೇಶಂ ಗೆಯ್ದು ಪಾರಣೆಯ ದಿವಸಮಲ್ಲದಱುವತ್ತುಮೂಱು ದಿವಸದಿಂದು ಪವಾಸದಿಂ ಸಮೆಯೆ ಜಿನಗುಣಸಂಪತ್ತಿಯುಮನಿರ್ಪತ್ತೊಂದು ಮತಿಜ್ಞಾನ ಭೇದಮುಮಂ ಪನ್ನೊಂದಂಗಮುಮಂ ಎರಡು ಪರಿ ಕರ್ಮಮುಮಂ ಎಂಬತ್ತೆಂಟು ಸೂತ್ರಂಗಳುಮಂ ಪ್ರಥಮಾನು ಯೋಗಂಗಳು ಮಂ ಪದಿನಾಲ್ಕು ಪೂರ್ವಂಗಳುಮಂ ಅಯ್ದು ಚೂಳಿಕೆಯುಮಂ ಆಱುವಧಿಯುಮಂ ಪೆಸರ್ಗೊಂಡು ಪಾರಣೆಯ ದಿವಸಮಲ್ಲದೆ ನೂಱಯ್ವತ್ತೆಂಟು ದಿವಸದಿಂ ಸಮೆವ ನೋಂಪಿಯ ವಿಶ್ರುತಶ್ರುತಜ್ಞಾನಮುಮಂ ಯಥೋಚಿತವಿಧಿಯಿಂ ನೋಂತು ಮದೀಯಾಯುಷ್ಯಾವಸಾನ ದೊಳೀಶಾನಕಲ್ಪದೊಳ್ ಶ್ರೀಪ್ರಭವಿಮಾನದೊಳ್ ಲಲಿತಾಂಗ ದೇವಂಗೆ ವಲ್ಲಭೆಯೆಂ ಸ್ವಯಂಪ್ರಭೆಯೆನೆಂಬೆನಾಗಿ ಪೂರ್ವೋಪಕಾರಮಂ ನೆನೆದು ಬಗೆದು ಪಿಹಿತಾಸ್ರವಭಟ್ಟಾರಕರನಾನುಮಾತನುಂ ಬಂದಿಸಿ ನಾನಾ ವಿಧಾರ್ಚನೆಗಳಿಂದರ್ಚಿಸಿ ಪೂಜಿಸಿ ದಿವ್ಯವಿನೋದಂಗಂ ಮೆಱೆದು ಪೋಗಿ ಸುರ ಲೋಕ ಸುಖಂಗಳನೆನಿತಾನುಂ ಕಾಲಮನುಭವಿಸಿ ನಿಜಪೂರ್ವೋ ಪಾರ್ಜಿತ ಪುಣ್ಯಾವಸಾನದೊಳ್ ನಾಕಲೋಕಮದಾನೇಕಪಂ ನಟ್ಟು ನಿಂದು ಬೀಸಿದೊಡೆ ಬಿಸುಡುವುದುಂ ಮದೀಯಜೀವಿತೇಶನಾಥೋರಣಂ ಕೆಡೆವಂತೆ ಧರಾತಳಕ್ಕೆ ಕೆಡೆವುದುಮಾನುಮಾತನ ವಿಯೋಗದೊಳಱಿದಿಂಗಳ್ವರಂ ಜಿನೇಂದ್ರಮಹಿಮೆಯಂ ಮಾಡಿ ಬಂದಿಲ್ಲಿ ಪುಟ್ಟಿದೆನಿದು ಮದೀಯ ವೃತ್ತಾಂತಂ**

**ಪದವಿಭಾಗ–ಅನ್ವಯ–ಅರ್ಥ:** ಎಂಬುದುಂ = ಎಂದು ಹೇಳುವುದೂ, ಆ ಮುಮುಕ್ಷುಗಳ ಸಮಕ್ಷದೊಳ್ = ಆ ಮೋಕ್ಷಾಪೇಕ್ಷಿಗಳ ಸನ್ನಿಧಿಯಲ್ಲಿ, ಅವರ ಪೇೞ್ದ ಮಾೞ್ಕೆಯೊಳೆ = ಅವರು ಹೇಳಿದ ರೀತಿಯಲ್ಲಿಯೇ, ಪರಮಜಿನ ಪತಿಪರಿಭಾಷಿತಮಪ್ಪ = ಪರಮನಾದ ಅರ್ಹಂತನು ಹೇಳಿದಂತಹ, ಸಕಳಶ್ರಾವಕ ವ್ರತಂಗಳಂ = ಎಲ್ಲ ಶ್ರಾವಕವ್ರತಗಳನ್ನೂ, ಷೋಡಶತೀರ್ಥಕರ'ಭಾವನೆಗಳಂ = ಹದಿನಾರು ತೀರ್ಥಕರ ಭಾವನೆಗಳನ್ನೂ, ಚತುಸ್ತ್ರಿಂಶತ್ + ಅತಿಶಯಂಗಳುಮನ್ = ಮೂವತ್ತನಾಲ್ಕು ಅತಿಶಯಗಳನ್ನೂ, ಅಷ್ಟಮಹಾಪ್ರಾತಿಹಾರ್ಯಂಗಳುಮಂ = ಎಂಟು ಮಹಾ ಪ್ರಾತಿಹಾರ್ಯಗಳನ್ನೂ, ಪಂಚಮಹಾಕಲ್ಯಾಣಂಗಳುಮಂ = ಐದು ಕಲ್ಯಾಣಗಳನ್ನೂ, ನಾಮೋದ್ದೇಶಂಗೆಯ್ದು = ಧ್ಯಾನಿಸಿ, ಪಾರಣೆಯ ದಿವಸಮಲ್ಲದೆ = ಪಾರಣೆಯ ದಿವಸವೊಂದನ್ನುಳಿದು, ಅಱುವತ್ತುಮೂಱು ದಿವಸದಿಂದ + ಉಪವಾಸದಿಂ ಸಮೆಯೆ = ಅರುವತ್ತುಮೂರು ದಿನಗಳ ಕಾಲ ಉಪವಾಸದಿಂದ ಕೃಶಳಾಗಿ, ಜಿನಗುಣಸಂಪತ್ತಿಯುಮನ್ = ಜಿನಗುಣಸಂಪತ್ತಿಯ ಉಪವಾಸವನ್ನೂ, ಇರ್ಪತ್ತೊಂದು ಮತಿಜ್ಞಾನಭೇದಮುಮಂ = ಇಪ್ಪತ್ತೊಂದು ಬಗೆಯ ಮತಿಜ್ಞಾನಭೇದಗಳನ್ನೂ, ಪನ್ನೊಂದಂಗಮುಮಂ = ಹನ್ನೊಂದು ಅಂಗಗಳನ್ನೂ, ಎರಡು ಪರಿಕರ್ಮಮುಮಂ = ಎರಡು ಪರಿಕರ್ಮಗಳನ್ನೂ, ಎಂಬತ್ತೆಂಟು ಸೂತ್ರಂಗಳುಮಂ = ಎಂಬತ್ತೆಂಟು ಸೂತ್ರಗಳನ್ನೂ, ಪ್ರಥಮಾನುಯೋಗಂಗಳುಮಂ = ಪ್ರಥಮಾನುಯೋಗವನ್ನೂ, ಪದಿನಾಲ್ಕು ಪೂರ್ವಂಗಳುಮಂ = ಹದಿನಾಲ್ಕು ಪೂರ್ವಗಳನ್ನೂ, ಅಯ್ದು ಚೂಳಿಕೆಯುಮಂ = ಐದು ಚೂಳಿಕೆಯನ್ನೂ, ಆಱು + ಅವಧಿಯುಮಂ = ಆರು ಅವಧಿಗಳನ್ನೂ, ಪೆಸರ್ಗೊಂಡು = ನಾಮೋಚ್ಚಾರಮಾಡಿ, ಪಾರಣೆಯ ದಿವಸಮಲ್ಲದೆ = ಪಾರಣೆಯ ದಿನದ ಹೊರತು, ನೂಱು + ಅಯ್ವತ್ತೆಂಟು ದಿವಸದಿಂ ಸವೆವ = ನೂರ ಐವತ್ತೆಂಟು ದಿವಸಗಳ ಕಾಲದ ಬಳಿಕ ಮುಗಿಯುವ, ನೋಂಪಿಯ ವಿಶ್ರುತಶ್ರುತಜ್ಞಾನಮುಮಂ = ವ್ರತದ ಶ್ರುತಜ್ಞಾನವನ್ನೂ, ಯಥಾ + ಉಚಿತವಿಧಿಯಿಂ ನೋಂತು = ಸೂಕ್ತವಾದ ರೀತಿಯಲ್ಲಿ ಪೂರೈಸಿ, ಮದೀಯ + ಆಯುಷ್ಯ + ಅವಸಾನದೊಳ್ = ನನ್ನ ಆಯುಷ್ಯದ ಕೊನೆಯಲ್ಲಿ, ಈಶಾನಕಲ್ಪದೊಳ್ ಶ್ರೀಪ್ರಭವಿಮಾನದೊಳ್ = ಈಶಾನಕಲ್ಪದ ಶ್ರೀಪ್ರಭವಿಮಾನದಲ್ಲಿ, ಲಲಿತಾಂಗದೇವಂಗೆ ವಲ್ಲಭೆಯೆಂ + ಲಲಿತಾಂಗನ ಮನಃಪ್ರಿಯೆಯಾಗಿ, ಸ್ವಯಂಪ್ರಭೆಯೆನ್ + ಎಂಬೆನಾಗಿ = ಸ್ವಯಂಪ್ರಭೆಯೆಂದು, ಪೂರ್ವೋಪಕಾರಮಂ ನೆನೆದು ಬಗೆದು = ಹಿಂದಿನ ಉಪಕಾರವನ್ನು ನೆನಪಿಸಿಕೊಂಡು, ಪಿಹಿತಾಸ್ರವಭಟ್ಟಾರಕರನ್ + ನಾನುಂ + ಆತನುಂ ಬಂದಿಸಿ = ಪಿಹಿತಾಸ್ರವಭಟ್ಟಾರಕರಿಗೆ ಅವನೂ ನಾನೂ ನಮಸ್ಕರಿಸಿ, ನಾನಾವಿಧಾರ್ಚನೆಗಳಿಂದರ್ಚಿಸಿ ಪೂಜಿಸಿ = ನಾನಾ ಬಗೆಯ ಅರ್ಚನೆ ಪೂಜೆಗಳನ್ನು ನೆರವೇರಿಸಿ, ದಿವ್ಯವಿನೋದಂಗಳಂ ಮೆಱೆದು ಪೋಗಿ = ದೇವಲೋಕದ

ಸಂತೋಷಗಳನ್ನು ಪಡೆದು, ಸುರಲೋಕಸುಖಂಗಳನ್ + ಎನಿತಾನುಂ ಕಾಲಂ + ಅನುಭವಿಸಿ = ಆ ಲೋಕದ ಸುಖಗಳನ್ನು ಎಷ್ಟೋ ಕಾಲ ಅನುಭವಿಸಿ, ನಿಜಪೂರ್ವ + ಉಪಾರ್ಜಿತಪುಣ್ಯ + ಅವಸಾನದೊಳ್ = ನಮ್ಮ ಹಿಂದಿನ ಜನ್ಮಗಳ ಪುಣ್ಯವು ಮುಗಿಯಲು, ನಾಕಲೋಕ = ಸ್ವರ್ಗಲೋಕದ, ಮದ + ಅನೇಕಪಂ = ಮದಿಸಿದ ಆನೆಯು, ನಟ್ಟು ನಿಂದು ಬೀಸಿದೊಡೆ ಬಿಸುಡುವುದುಂ = ಜೋರಾಗಿ 'ಬೀಳುವಂತೆ ಎಸೆಯುವುದೂ, ಆಧೋರಣಂ ಕೆಡೆವಂತೆ = ಆನೆಯ ಸವಾರ(ಮಾವುತ)ನು ನೆಲಕ್ಕೆ ಬೀಳುವಂತೆ, ಮದೀಯಜೀವಿತೇಶನ್ = ನನ್ನ ಪ್ರಾಣಕಾಂತನು ಧರಾತಳಕ್ಕೆ ಕೆಡೆವುದುಂ = ಭೂಮಿಗೆ ಬೀಳುವುದೂ, ಆನುಂ + ಆತನ ವಿಯೋಗದೊಳ್ = ನಾನೂ ಅವನ ವಿರಹದಿಂದ, ಅಱುದಿಂಗಳ್ವರಂ = ಆರು ತಿಂಗಳವರೆವಿಗೂ, ಜಿನೇಂದ್ರಮಹಿಮೆಯಂ ಮಾಡಿ ಬಂದು = ಜಿನೇಂದ್ರಮಹಿಮೆಗಳನ್ನು ಧ್ಯಾನಿಸಿ ಬಂದು ಇಲ್ಲಿ ಪುಟ್ಟಿದೆನ್ = ಇಲ್ಲಿ ಹುಟ್ಟಿದೆ, ಇದು ಮದೀಯ ವೃತ್ತಾಂತಂ = ನನ್ನ ವಿಚಾರ.

**ಗದ್ಯಾನುಸರಣ:** ಎಂದು ಹೇಳಿದ ಆ ಮೋಕ್ಷಾಪೇಕ್ಷಿಗಳ ಸನ್ನಿಧಿಯಲ್ಲಿ, ಅವರು ಹೇಳಿದ ರೀತಿಯಲ್ಲಿಯೇ, ಪರಮನಾದ ಅರ್ಹಂತನು ಆದೇಶಿಸಿದ ಎಲ್ಲ ಶ್ರಾವಕವ್ರತಗಳನ್ನೂ, ಹದಿನಾರು ತೀರ್ಥಕರ ಭಾವನೆಗಳನ್ನೂ, ಮೂವತ್ತನಾಲ್ಕು ಅತಿಶಯಗಳನ್ನೂ, ಎಂಟು ಮಹಾ ಪ್ರಾತಿಹಾರ್ಯಗಳನ್ನೂ, ಐದು ಕಲ್ಯಾಣಗಳನ್ನೂ ಧ್ಯಾನಿಸಿದೆ. ಪಾರಣೆಯ ದಿವಸವನ್ನು ಬಿಟ್ಟು ಅರುವತ್ತುಮೂರು ದಿನಗಳ ಕಾಲ ಉಪವಾಸ ಮಾಡಿ ಕೃಶಳಾದೆ. ಜಿನಗುಣಸಂಪತ್ತಿಯ ಉಪವಾಸವನ್ನೂ, ಇಪ್ಪತ್ತೊಂದು ಬಗೆಯ ಮತಿಜ್ಞಾನಭೇದಗಳನ್ನೂ, ಹನ್ನೊಂದು ಅಂಗಗಳನ್ನೂ, ಎರಡು ಪರಿಕರ್ಮಗಳನ್ನೂ, ಎಂಬತ್ತೆಂಟು ಸೂತ್ರಗಳನ್ನೂ, ಪ್ರಥಮಾನು ಯೋಗವನ್ನೂ, ಹದಿನಾಲ್ಕು ಪೂರ್ವಗಳನ್ನೂ, ಐದು ಚೂಳಿಕೆಯನ್ನೂ, ಆರು ಅವಧಿಗಳನ್ನೂ ನಾಮೋಚ್ಚಾರಮಾಡಿದೆ. ಪಾರಣೆಯ ದಿನದ ಹೊರತು, ನೂರ ಐವತ್ತೆಂಟು ದಿವಸಗಳ ಕಾಲದ ಬಳಿಕ ಮುಗಿಯುವ ನೋಂಪಿಯ ವಿಶ್ರುತ ಜ್ಞಾನವನ್ನೂ, ಸೂಕ್ತವಾದ ರೀತಿಯಲ್ಲಿ ಪೂರೈಸಿದೆ. ನನ್ನ ಆಯುಷ್ಯದ ಕೊನೆಯಲ್ಲಿ, ಈಶಾನಕಲ್ಪದ ಶ್ರೀಪ್ರಭವಿಮಾನದಲ್ಲಿ ಲಲಿತಾಂಗನ ಮನಃಪ್ರಿಯೆಯಾಗಿ ಸ್ವಯಂಪ್ರಭೆಯೆಂಬ ಹೆಸರಿನಿಂದ ಹುಟ್ಟಿದೆ. ಹಿಂದಿನ ಉಪಕಾರವನ್ನು ನೆನಪಿಸಿಕೊಂಡು ಲಲಿತಾಂಗನೂ ನಾನೂ ಹೋಗಿ ಪಿಹಿತಾಸ್ರವಭಟ್ಟಾರಕರಿಗೆ ನಾನಾ ಬಗೆಯ ಅರ್ಚನೆ ಪೂಜೆಗಳನ್ನು ಸಮರ್ಪಿಸಿದೆವು. ದೇವಲೋಕದ ಸುಖಗಳನ್ನು ದೀರ್ಘ ಕಾಲ ಅನುಭವಿಸಿದ ಬಳಿಕ ನಮ್ಮ ಹಿಂದಿನ ಜನ್ಮಗಳ ಪುಣ್ಯವು ಮುಗಿಯಲು, ಸ್ವರ್ಗಲೋಕದ ಮದಿಸಿದ ಆನೆಯು ಜೋರಾಗಿ ಎಸೆದಾಗ ಮಾವುತನು ನೆಲಕ್ಕೆ ಬೀಳುವಂತೆ, ನನ್ನ ಪ್ರಾಣಕಾಂತನು ಮರಣಹೊಂದಿದ. ಅವನ ವಿರಹದಿಂದ ಆರು ತಿಂಗಳ ಕಾಲ

ನಾನೂ ನವೆದು ಜಿನೇಂದ್ರಮಹಿಮೆಗಳನ್ನು ಧ್ಯಾನಿಸಿ ಬಂದು ಇಲ್ಲಿ ಹುಟ್ಟಿದೆ - ಇದು ನನ್ನ ವಿಚಾರ.

**ವಿಶೇಷ ವಿಚಾರ:** ಶ್ರಾವಕವ್ರತ = ಜೈನ ಗೃಹಸ್ಥರು ಅನುಸರಿಸಬೇಕಾದ ಕಟ್ಟಳೆಗಳು: ಪಂಚಾಣುವ್ರತಗಳು, ಮೂರು ಗುಣವ್ರತಗಳು ಮತ್ತು ನಾಲ್ಕು ಶಿಕ್ಷಾವ್ರತಗಳು: ಷೋಡಶತೀರ್ಥಕರಭಾವನೆ = ತೀರ್ಥಂಕರನಾಗಲು ಕಾರಣವಾಗುವ ಹದಿನಾರು ಮನೋವೃತ್ತಿಗಳು: ದರ್ಶನವಿಶುದ್ಧಿ, ವಿನಯಸಂಪನ್ನತೆ, ಶೀಲವ್ರತಗಳಲ್ಲಿ ಅನತಿಚಾರ, ಅಭೀಕ್ಷ್ಣಜ್ಞಾನೋಪಯೋಗ, ಸಂವೇಗ, ಶಕ್ತಿತ್ಯಾಗ, ಶಕ್ತಿತಸ್ತಪ, ಸಾಧು ಸಮಾಧಿ, ವೈಯಾವೃತ್ಯ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಉಪಾಧ್ಯಾಯಭಕ್ತಿ, ಪ್ರವಚನಭಕ್ತಿ, ಆವಶ್ಯಕಾಪರಿಹಾಣಿ, ಮಾರ್ಗಪ್ರಭಾವನೆ ಮತ್ತು ಪ್ರವಚನವತ್ಸಲತ್ವ; ಚತುಸ್ತ್ರಿಂಶತ್ ಅತಿಶಯಗಳು = ಅರ್ಹಂತನಿಗೆ ಒದಗುವ ಮೂವತ್ತನಾಲ್ಕು ಅತಿಶಯಗಳು ಅಥವಾ ವಿಶೇಷಗಳು: ನಿಸ್ವೇದತೆ, ನಿರ್ಮಲಶರೀರ, ಹಾಲಿನಂತೆ ಬಿಳಿರಕ್ತ, ವಜ್ರವೃಷಭನಾರಾಚನಸಂಹನನ, ಸಮಚತುರಸ್ರ ಶರೀರಸಂಸ್ಥಾನ, ಅನುಪಮರೂಪ, ಸುಗಂಧದ ಉಸಿರು, ಸಾವಿರದೆಂಟು ಉತ್ತಮ ಲಕ್ಷಣಗಳು, ಅನಂತಬಲ ಹಾಗೂ ಹಿತಮಿತಭಾಷಣ ಎಂಬ ಹುಟ್ಟಿನ ಹತ್ತು ವಿಶೇಷಗಳು; ಸುತ್ತ ನೂರು ಯೋಜನ ಸುಭಿಕ್ಷೆ, ಹಿಂಸೆಯ ಅಭಾವ, ಆಕಾಶಗಮನ, ಭೋಜನರಾಹಿತ್ಯ, ಉಪಸರ್ಗರಾಹಿತ್ಯ, ಚತುರ್ದಿಕ್ಕುಗಳಲ್ಲಿ ಅಭಿಮುಖತೆ, ನೆರಳಿಲ್ಲದ ದೇಹ, ರೆಪ್ಪೆ ಮಿಟುಕಿಸದ ಕಣ್ಣು, ಸರ್ವವಿದ್ಯಾಪ್ರಭುತ್ವ, ನಖರೋಮಗಳ ಸಮಾನತೆ ಮತ್ತು ಸರ್ವಭಾಷಾಮಯವಾದ ದಿವ್ಯಧ್ವನಿ ಎಂಬ ಕೇವಲಜ್ಞಾನದಿಂದ ಬರುವ ಹನ್ನೊಂದು ವಿಶೇಷಗಳು; ಸುತ್ತಲೂ ಹೂಹಣ್ಣುಸಮೃದ್ಧಿ, ಸುಖದಾಯಕ ಗಾಳಿ, ಪ್ರಾಣಿಗಳ ಮೈತ್ರಿ, ಸ್ವಚ್ಛವಾದ ಕನ್ನಡಿಯಂತಹ ಭೂಮಿ, ಸುಗಂಧಜಲವೃಷ್ಟಿ, ಸಮೃದ್ಧ ಸಸ್ಯಗಳ ಸೃಷ್ಟಿ, ಸಕಲಜೀವರ ನಿತ್ಯ ಆನಂದ, ತಂಗಾಳಿ, ಜಲಸಮೃದ್ಧಿ, ನಿರ್ಮಲ ಆಕಾಶ, ಸಮಸ್ತಜೀವರ ರೋಗಮುಕ್ತಿ, ಸಮಸ್ತಜೀವ ರೋಗರಾಹಿತ್ಯ ಮತ್ತು ಯಕ್ಷೇಂದ್ರನ ಧರ್ಮಚಕ್ರ ಎಲ್ಲರಿಗೂ ಕಾಣುವುದು ಎಂಬ ಹದಿಮೂರು ದೇವಕೃತ ವಿಶೇಷಗಳು; ಮಹಾ ಪ್ರಾತಿಹಾರ್ಯಗಳು = ಜಿನನಿಗೆ ಒದಗುವ ಅಶೋಕವೃಕ್ಷ, ಸುರಪುಷ್ಪವೃಷ್ಟಿ, ದಿವ್ಯಧ್ವನಿ, ಚಾಮರ, ರತ್ನಜಡಿತ ಸುವರ್ಣಪೀಠ, ಪ್ರಭಾವಲಯ, ದೇವದುಂದುಭಿ, ಛತ್ರತ್ರಯ ಎಂಟು ಮಂಗಳ ಲಾಂಛನಗಳು; ಪಂಚಕಲ್ಯಾಣಗಳು = ಗರ್ಭಾವತರಣ, ಜನ್ಮ, ಪರಿನಿಷ್ಕ್ರಮಣ, ಕೇವಲಜ್ಞಾನ ಮತ್ತು ಪರಿನಿರ್ವಾಣಗಳೆಂಬ ಉತ್ಸವಗಳು; ಜಿನಗುಣಸಂಪತ್ತಿ = ಹದಿನಾರು ಭಾವನೆಗಳು, ಐದು ಕಲ್ಯಾಣಗಳು, ಎಂಟು ಪ್ರಾತಿಹಾರ್ಯಗಳು, ಹಾಹೂ ಮೂವತ್ತನಾಲ್ಕು ಅತಿಶಯಗಳು - ಹೀಗೆ ಅರುವತ್ತುಮೂರು ಗುಣಗಳಿಗೆ ಅರುವತ್ತುಮೂರು ದಿನಗಳ ಕಾಲ ಮಾಡುವ ಉಪವಾಸವ್ರತ; ಮತಿಜ್ಞಾನಭೇದಗಳು = ಎಂಟು ಮತಿಜ್ಞಾನಗಳು ಒಂದು -

ಪಂಚೇಂದ್ರಿಯಗಳಿಂದಲೂ ಮನಸ್ಸಿನಿಂದಲೂ ಉಂಟಾಗುವ ಜ್ಞಾನ; ಅಂಗಗಳು = ತೀರ್ಥಂಕರರ ಉಪದೇಶಗಳನ್ನೊಳಗೊಂಡ ಆಗಮ; ಪರಿಕರ್ಮಗಳು = ದೃಷ್ಟಿವಾದಾಂಗವೆಂಬ ಆಗಮಗ್ರಂಥದ ಐದು ಪ್ರಕಾರಗಳಲ್ಲಿಒಂದು; ಸೂತ್ರಗಳು = ಹನ್ನೆರಡನೇ ಅಂಗವಾದ ದೃಷ್ಟಿವಾದದ ಐದು ಭೇದಗಳಲ್ಲಿ ಒಂದು; ಪ್ರಥಮಾನುಯೋಗ = ತೀರ್ಥಂಕರರು ಉಪದೇಶಿಸಿದ ಶಾಸ್ತ್ರಸಮುದಾಯದಲ್ಲಿ ಮೊದಲನೆಯದು; ಪೂರ್ವ = ಶ್ರುತಾಂಗವನ್ನು ವಿವರಿಸುವ ಉತ್ಪಾದ, ಅಗ್ರಾಯಣೀಯ, ವೀರ್ಯಪ್ರವಾದ, ಆಸ್ತಿನಾಸ್ತಿಪ್ರವಾದ, ಜ್ಞಾನಪ್ರವಾದ, ಸತ್ಯಪ್ರವಾದ, ಆತ್ಮಪ್ರವಾದ, ಕರ್ಮಪ್ರವಾದ, ಪ್ರತ್ಯಾಖ್ಯಾನ, ವಿದ್ಯಾನುವಾದ, ಕಲ್ಯಾಣ, ಪ್ರಾಣವಾಯು, ಕ್ರಿಯಾವಿಶಾಲ ಮತ್ತು ಲೋಕಬಿಂದುಸಾರ ಎಂಬ ಹದಿನಾಲ್ಕು ಭಾಗಗಳಲ್ಲಿ ಒಂದು; ಚೂಳಿಕೆ = ಜಲಗತ, ಸ್ಥಲಗತ. ಮಾಯಾಗತ, ರೂಪಗತ ಮತ್ತು ಗಗನಗತ ಎಂಬ ಐದು ಸೂತ್ರಗಳು; ಆಜಿವಧಿ = ಅನುಗಾಮಿ, ಅನನುಗಾಮಿ, ವರ್ಧಮಾನ, ಹೀಯಮಾನ, ಅವಸ್ಥಿತ ಮತ್ತು ಅನವಸ್ಥಿತ ಎಂಬ ಆರು ಬಗೆಯ ಅವಧಿಜ್ಞಾನಗಳು; ಶ್ರುತಜ್ಞಾನ = ಓದಿ ಕೇಳಿ ಪಡೆಯುವ ಜ್ಞಾನ

**ಲಳಿತಾಂಗಂ ದಿವದಿಂದಮಂದಿೞಿದು ಬಂದೀ ವಿಶ್ವವಿಶ್ವಂಭರಾ**
**ತಳದೊಳ್ ಭೂಚರಖೇಚರರ್ಕಳೊಳಗಿನ್ನೆಲ್ಲಿರ್ದೊಡಾಂ ಕೂಡದಾ**
**ಗಳಣಂ ಕೂಡದು ಬಾೞ್ವ ಮಾತೆನಗದರ್ಕಾರ್ಗೇನನೆಂಬೆನೆಂ**
**ದೊಳಕೊಂಡಿರ್ಪುದಱಿಂದಮಾದುದೆನಗೀ ವಾಚಂಯಮಂ ಸಂಯಮಂ॥೧**

**ಪದವಿಭಾಗ–ಅನ್ವಯ–ಅರ್ಥ:** ಅಂದು, ಲಳಿತಾಂಗಂ ದಿವದಿಂದಂ + ಇೞಿದು ಬಂದು = ಲಲಿತಾಂಗನು ಆಗ ದೇವಲೋಕದಿಂದ ಇಳಿದು ಬಂದು, ಈ ವಿಶ್ವವಿಶ್ವಂಭರಾತಳದೊಳ್ = ಈ ವಿಶ್ವದ ಭೂತಳದಲ್ಲಿಯೋ, ಭೂಚರಖೇಚರರ್ಕಳೊಳಗೆ = ಭೂಚರರು ಅಥವಾ ಖೇಚರರೊಳಗೋ, ಇನ್ನು + ಎಲ್ಲಿರ್ದೊಡೆ + ಆಂ ಕೂಡದಾಗಳ್ = ಮತ್ತೆಲ್ಲಿಯಾದರೋ ಇದ್ದರೆ ಅವನನ್ನು ಸೇರಿದಿದ್ದರೆ, ಬಾೞ್ವ ಮಾತು + ಅಣಂ ಕೂಡದು ಎನಗೆ = ಬದುಕಿರುವ ಮಾತು ನನಗೆ ಸರಿಹೊಂದದು, ಅದರ್ಕೆ + ಆರ್ಗೆ + ಏನನೆಂಬೆನ್ = ಆ ಕಾರಣದಿಂದ ಯಾರಿಗೆ ಏನನ್ನು ತಾನೇ ಹೇಳಲಿ? ಎಂದು + ಒಳಕೊಂಡಿರ್ಪುದಱಿಂದಂ = ಎಂಬ ಭಾವನೆ ಇರುವುದರಿಂದ, ಎನಗೆ + ಈ ವಾಚಂಚಯಂ ಸಂಯಮಂ ಆದುದು = ನನಗೆ ಈ ಮೌನವಾಗಿರುವ ಸಂಯಮವು ಉಂಟಾಗಿದೆ .

**ಗದ್ಯಾನುಸರಣ:** ಆಗ ಲಲಿತಾಂಗನು ದೇವಲೋಕದಿಂದ ಇಳಿದು ಬಂದು ಈ ವಿಶ್ವದ ಭೂತಳದಲ್ಲಿಯೋ ಭೂಚರರು ಅಥವಾ ಖೇಚರರೊಳಗೋ ಅಥವಾ ಮತ್ತೆಲ್ಲಿಯಾದರೋ ಇದ್ದರೆ ಅವನನ್ನು ನಾನು ಸೇರುವುದು ಅಸಾಧ್ಯ; ಹೀಗಾಗಿ

ಬದುಕಿರುವ ಮಾತು ನನಗೆ ಸಲ್ಲದು; ಆ ಕಾರಣದಿಂದ ಯಾರ ಬಳಿ ಏನನ್ನು ತಾನೇ ಹೇಳಿಕೊಳ್ಳಲಿ - ಎಂಬ ಭಾವನೆಯಿಂದಾಗಿ ನನಗೆ ಈ ಅನಿವಾರ್ಯ ಮೌನಸಂಯಮವು ಉಂಟಾಗಿದೆ.

**ಸಹಜಾತಾಂಬರದಿವ್ಯಭೂಷಣದಳನ್ಮಂದಾರಮಾಳಾವಿಳಾ**
**ಸಿ ಹಟದ್ರತ್ನಕಿರೀಟಭಾಸಿ ನಯನಾರ್ಧಾಲೋಕನೋದ್ಭಾಸಿ ಸ**
**ಸ್ಪೃಹಸಾನಂದಸಲೀಲಸಸ್ಮಿತಮುಖವ್ಯಾಭಾಸಿ ನೋಡಿಂತು ಸ**
**ನ್ನಿಹಿತಂ ಸೌಂದರರೂಪಮಿನ್ನುಮೆರ್ದೆಯೊಳ್ ಮಜ್ಜೀವಿತಾಧೀಶನನಾಳ೨**

**ಪದವಿಭಾಗ-ಅನ್ವಯ-ಅರ್ಥ:** ಸಹಜಾತ = ಜೊತೆಯಲ್ಲಿಯೇ ಹುಟ್ಟಿದ, ಅಂಬರದಿವ್ಯಭೂಷಣದಳತ್ = ವೇಷ ಮತ್ತು ದಿವ್ಯವಾದ ಆಭರಣಗಳನ್ನೂ, ಮಂದಾರಮಾಳಾವಿಳಾಸಿ = ಮಂದಾರಮಾಲೆಯನ್ನೂ ಧರಿಸಿದವನಾಗಿ; ಹಟತ್ + ರತ್ನಕಿರೀಟಭಾಸಿ = ಹೊಳೆಯುವ ರತ್ನಕಿರೀಟದ ಕಾಂತಿಯಿಂದ ಬೆಳಗುವ; ನಯನಾರ್ಧ + ಆಲೋಕನ + ಉದ್ಭಾಸಿ = ಅರೆಮುಚ್ಚಿದ ಕಣ್ಣುಗಳಿಂದ ಕೂಡಿದ; ಸಸ್ಪೃಹಸಾನಂದಸಲೀಲಸಸ್ಮಿತಮುಖವ್ಯಾಭಾಸಿ = ಬಯಕೆ ಸಂತೋಷ ಮುಗುಳ್ನಗೆಗಳಿಂದ ಹೊಳಪಿನಿಂದ ಕೂಡಿದ; ಮತ್ + ಜೀವಿತಾಧೀಶನಾ = ನನ್ನ ಪ್ರಾಣಪ್ರಿಯನ, ಸೌಂದರರೂಪ = ಚೆಲುವಾದ ಮೊಗವು, ನೋಡು + ಇಂತು = ನೋಡು, ಹೀಗೆ ಇನ್ನುಂ + ಎರ್ದೆಯೊಳ್ ಸನ್ನಿಹಿತಂ = ಇನ್ನೂ ನನ್ನ ಮನಸ್ಸಿನಲ್ಲಿ ತುಂಬಿಕೊಂಡಿದೆ

**ಗದ್ಯಾನುಸರಣ:** ಜೊತೆಯಲ್ಲಿಯೇ ಹುಟ್ಟಿದ ದಿವ್ಯ ವೇಷ ಆಭರಣ ಮಂದಾರಮಾಲೆಗಳನ್ನು ಧರಿಸಿ, ಹೊಳೆಯುವ ರತ್ನಕಿರೀಟದ ಕಾಂತಿಯಿಂದ ಬೆಳಗುತ್ತ, ಅರೆಮುಚ್ಚಿದ ಕಣ್ಣುಗಳಿಂದ ಕೂಡಿ, ಬಯಕೆ ಸಂತೋಷ ಮುಗುಳ್ನಗೆಗಳಿಂದ ಮಿರುಗುವ ನನ್ನ ಪ್ರಾಣಪ್ರಿಯನ ಚೆಲುವಾದ ಮೊಗವು ಇನ್ನೂ ನನ್ನ ಮನಸ್ಸಿನಲ್ಲಿ ತುಂಬಿಕೊಂಡಿದೆ, ನೋಡು!

**ಎರೆವ ಮರಲ್ವ ಲಲ್ಲಯಿಪ ಕಾಲ್ವಿಡಿವೆಂಬುದನಿಂಬುಕೆಯ್ವಳಂ**
**ಕರಣವಿಳಾಸಮಂ ಮೆಱೆವ ಮೇಳಿಸುವಂದಿನ ರೂಪು ಶಾಸನಂ**
**ಬರೆದುದು ಬರ್ಜಿಸಿತ್ತಮರ್ದುರ್ದಟ್ಟುದಳಂಕಿದುದುರ್ಚಿ ಪೊಕ್ಕು ಬೇ**
**ರ್ವರಿದುದು ಬೆಚ್ಚುದಚ್ಚಿಱಿದುದೆನ್ನೆರ್ದೆಯೊಳ್ ಲಲಿತಾಂಗದೇವನಾ ೪೩**

**ಪದವಿಭಾಗ-ಅನ್ವಯ-ಅರ್ಥ:** ಎರೆವ = ಬೇಡಿಕೊಳ್ಳುವ, ಮರಲ್ವ = ಉಬ್ಬುವ, ಲಲ್ಲಯಿಪ = ಲಲ್ಲೆ ಮಾತನ್ನಾಡುವ, ಕಾಲ್ವಿಡಿವ = ಕಾಲನ್ನು ಹಿಡಿಯುವ, ಎಂಬುದನ್ = ಈ ಮುಂತಾದವುಗಳನ್ನು, ಇಂಬುಕೆಯ್ವ = ಹೊಂದಿದ, ಅಳಂಕರಣವಿಳಾಸಮಂ ಮೆಱೆವ = ಅಲಂಕಾರ ಮಾಡಿಕೊಳ್ಳುವ, ಮೇಳಿಸುವ

= ಮುದ್ದುಮಾಡುವ, ಲಲಿತಾಂಗದೇವನಾ= ಲಲಿತಾಂಗನ, ಅಂದಿನ ರೂಪು = ಹಿಂದಿನ ಜನ್ಮದ ಲಲಿತಾಂಗನ ರೂಪವು, ಎನ್ನ + ಎರ್ದೆಯೊಳ್ = ನನ್ನ ಮನಸ್ಸಿನಲ್ಲಿ, ಶಾಸನಂ ಬರೆದುದು = ಕೆತ್ತಿದ ಹಾಗಿದೆ, ಬರ್ಚಿಸಿತ್ತು = ಬಣ್ಣ ಬಳಿದಂತಿದೆ, ಅಮರ್ದುದು = ಅಂಟಿಕೊಂಡಿದೆ, ಅೞ್ದುದು = ಊರಿಹೋಗಿದೆ, ಅಳಂಕಿದುದು = ಮುದ್ರೆಯೊತ್ತಿದೆ, ಉರ್ಚಿ ಪೊಕ್ಕು ಬೇರ್ವರಿದುದು = ಚುಚ್ಚಿ ಒಳಹೊಕ್ಕು ಬೇರುಬಿಟ್ಟಿದೆ, ಬೆಚ್ಚುದು = ಬೆಸುಗೆ ಹೊಂದಿದೆ, ಅಚ್ಚೞಿದುದು = ಎರಕ ಹೊಯ್ದಂತಿದೆ

**ಗದ್ಯಾನುಸರಣ:** ಬೇಡಿಕೊಳ್ಳುವ, ಉಬ್ಬುವ, ಲಲ್ಲೆ ಮಾತನ್ನಾಡುವ, ಕಾಲನ್ನು ಹಿಡಿದುಕೊಳ್ಳುವ, ಸಿಂಗರಿಸಿಕೊಳ್ಳುವ, ಮುದ್ದುಮಾಡುವ ಲಲಿತಾಂಗನ ಹಿಂದಿನ ಜನ್ಮದ ಲಲಿತಾಂಗನ ರೂಪವು ನನ್ನ ಮನಸ್ಸಿನಲ್ಲಿ ಕೊರೆದ ಹಾಗಿದೆ, ಬಣ್ಣ ಬಳಿದಂತಿದೆ, ಅಂಟಿಕೊಂಡುಬಿಟ್ಟಿದೆ, ಊರಿಹೋಗಿದೆ, ಮುದ್ರೆಯೊತ್ತಿದೆ, ಚುಚ್ಚಿ ಆಳದಲ್ಲಿ ಬೇರೂರಿಬಿಟ್ಟಿದೆ, ಬೆಸುಗೆ ಹೊಂದಿದೆ, ಎರಕ ಹೊಯ್ದಂತಿದೆ.

**ವಿಶೇಷ ವಿಚಾರ:** ತನ್ನ ಮನಸ್ಸಿನಲ್ಲಿ ಲಲಿತಾಂಗನ ರೂಪು ನಿಂತುಬಿಟ್ಟಿದೆ ಎಂದು ಹೇಳುವ ಸ್ವಯಂಪ್ರಭೆಯ ಭಾವವನ್ನು ಸ್ಫುಟಗೊಳಿಸಲು ಕವಿ ಬಳಸುವ ಕ್ರಿಯಾಪದಗಳೆಷ್ಟು! ಓದುಗರ ಮನಸ್ಸಿನಲ್ಲಿಯೂ ಅದೇ ಪರಿಣಾಮವಾಗಿಬಿಡಬೇಕು!

**ವ। ಅದಱಿಂದಮೆನ್ನ ಬಯಸಿದ ಬಯಕೆಯಪ್ಪುದು ವಂಧ್ಯಾಸ್ತನಂಧಯ ಸಮಾಗಮ ಸಮಾನಂ; ಮಾನಸರ ದೆಸೆಯೊಳ್ ತೀರ್ವುದಲ್ತಿದಂ ಮದೀಯ ಮಾನಸದೊಳೆ ತಾಳ್ದು ಸುರಲೋಕಸುಖಾನುಭವ ರತರಹಸ್ಯಂಗಳೊಳೆನ್ನಾತ ನಱಿವತಿರಹಸ್ಯಂಗಳಪ್ಪ ಕೆಲಕೆಲವು ಅವಿನಾಣಂಗಳಂ ನಾಣ್ಚಿ ಬಂಚಿಸಿ ಪಿರಿದು ಮನುರಾಗದಿಂದಮೆನ್ನ ಬರೆದ ಪಟಮನಿದನರ್ಚಿಸಿ ಕನ್ಯಾಬ್ರತದೊಳೆ ಕಾಲ ಮಂ ಕಱಿಪುವೆನಿದಲ್ಲದಿಲ್ಲಿಗೆ ಪೆಱತೊಂದು ಪ್ರತೀಕಾರಮಿಲ್ಲೆಂದು ನುಡಿದು ಮಾಣ್ದ ಕನ್ನೆಯ ನುಡಿಯುಂ ಪಂಡಿತೆ ಮನದೆಗೊಂಡು**

**ಪದವಿಭಾಗ–ಅನ್ವಯ–ಅರ್ಥ:** ಅದಱಿಂದಂ = ಹೀಗಾಗಿ, ಎನ್ನ ಬಯಸಿದ ಬಯಕೆ = ನನ್ನ ಮನಸ್ಸಿನೊಳಗಿನ ಆಸೆಯು, ವಂಧ್ಯಾ = ಬಂಜೆಯ, ಸ್ತನಂಧಯ = ಮೊಲೆ ಕುಡಿಯುವ ಕೂಸನ್ನು, ಸಮಾಗಮಸಮಾನಂ = ಸೇರುವುದಕ್ಕೆ ಸಮಾನ, ಅಪ್ಪುದು = ಆಗಿದೆ; ಮಾನಸರ ದೆಸೆಯೊಳ್ = ಮನುಷ್ಯರ ಮೂಲಕ, ತೀರ್ವುದಲ್ತು = ಈ ಆಸೆ ಕೈಗೂಡುವುದಂಥದಲ್ಲ; ಇದಂ ಮದೀಯ ಮಾನಸದೊಳೆ ತಾಳ್ದು = ಈ ಸತ್ಯವನ್ನು ನನ್ನ ಮನಸ್ಸಿನಲ್ಲಿ ತಾಳಿಕೊಂಡು, ಸುರಲೋಕಸುಖಾನುಭವ = ದೇವಲೋಕದ ಸುಖದ ಅನುಭವಗಳಲ್ಲಿನ, ರತರಹಸ್ಯಂಗಳೊಳ್ = ಸಂಭೋಗದ

ಗುಟ್ಟುಗಳನ್ನು ಎನ್ನ + ಆತನ್ + ಅಱಿವ = ನಾನು ಮತ್ತು ಅವನು ಮಾತ್ರವೇ ತಿಳಿದ, ಅತಿರಹಸ್ಯಂಗಳಪ್ಪ = ತೀರ ಖಾಸಗಿಯಾದ, ಕೆಲಕೆಲವು ಅವಿನಾಣಂಗಳಂ = ಕೆಲವಾರು ಕುರುಹುಗಳನ್ನು, ನಾಣ್ಚಿ ಬಂಚಿಸಿ = ನಾಚಿಕೆಯಿಂದ ಬಿಟ್ಟು, ಪಿರಿದುಂ + ಅನುರಾಗದಿಂದಂ = ಆಳವಾದ ಬಯಕೆಯಿಂದ, ಎನ್ನ ಬರೆದ ಪಟಮನಿದನ್ = ನಾನು ರಚಿಸಿದ ಈ ಚಿತ್ರಪಟವನ್ನು, ಅರ್ಚಿಸಿ = ಪೂಜಿಸುತ್ತ, ಕನ್ಯಾಬ್ರತದೊಳೆ ಕಾಲಮಂ ಕಱಿಪುವೆನ್ = ಕನ್ಯೆಯಾಗಿಯೇ ಬದುಕನ್ನು ಕಳೆಯುತ್ತೇನೆ, ಇದಲ್ಲದೆ + ಇಲ್ಲಿಗೆ ಪೆಱತೊಂದು ಪ್ರತೀಕಾರಮಿಲ್ಲ = ಇದರ ಹೊರತು ನನಗೆ ಬೇರೆ ಪರಿಹಾರವಿಲ್ಲ, ಎಂದು ನುಡಿದು ಮಾಣ್ದ = ಎಂದು ಹೇಳಿ ಮಾತು ನಿಲ್ಲಿಸಿದ, ಕನ್ನೆಯ ನುಡಿಯಂ = ಶ್ರೀಮತಿಯ ಮಾತನ್ನು, ಪಂಡಿತೆ ಮನದೆಗೊಂಡು = ಪಂಡಿತೆಯು ಅರ್ಥಮಾಡಿಕೊಂಡು

**ಗದ್ಯಾನುಸರಣ:** 'ನನ್ನ ಮನಸ್ಸಿನೊಳಗಿನ ಆಸೆ ಬಂಜೆ ತನ್ನ ಮೊಲೆಗೂಸನ್ನು ಸೇರಿದ ಹಾಗೆ; ಇದು ಮನುಷ್ಯಮಾತ್ರರಿಂದ ನೆರವೇರುವುದಂಥದಲ್ಲ ಎಂಬುದು ನನಗೆ ಮನದಟ್ಟಾಗಿದೆ; ಹೀಗಾಗಿ, ದೇವಲೋಕದ ಸುಖಾನುಭವಗಳಲ್ಲಿ ನನಗೆ ಮತ್ತು ಅವನಿಗೆ ಮಾತ್ರವೇ ತಿಳಿದ ಸಂಭೋಗದ ತೀರ ಖಾಸಗಿಯಾದ ಗುಟ್ಟುಗಳಿಗೆ ಸಂಬಂಧಿಸಿದ ಕೆಲವಾರು ಕುರುಹುಗಳನ್ನು ನಾಚಿಕೆಯಿಂದ ಕಾರಣದಿಂದ ಬಿಟ್ಟು ತೀವ್ರ ಅನುರಾಗದಿಂದ ನಾನು ರಚಿಸಿದ ಅವನ ಈ ಚಿತ್ರಪಟವನ್ನು ಪೂಜಿಸುತ್ತ, ಕನ್ಯೆಯಾಗಿಯೇ ಬದುಕನ್ನು ಕಳೆಯುತ್ತೇನೆ, ಇದರ ಹೊರತು ಬೇರೆ ಪರಿಹಾರವಿಲ್ಲ' – ಎಂದು ಹೇಳಿ ಶ್ರೀಮತಿಯು ಮಾತು ನಿಲ್ಲಿಸಿದಳು; ಅವಳ ಭಾವನೆ ಪಂಡಿತೆಗೆ ಮನದಟ್ಟಾಯಿತು.

**ಉಸಿರ್ದೌ ನೀಂ ನಿನ್ನ ನಿರ್ಬೇಗಮನಱಿದೆನಿದಂ ಶಕ್ತಿಯೊಳ್ ಮುಕ್ತಿಯಂಸಂ**
**ಧಿಸಲಕ್ಕುಂ ಮಂತ್ರಶಕ್ತಿಪ್ರಕಟನಪಟುಳ್ಗೇನಸಾಧ್ಯಂಗಳೋ ಪೇೞ್**
**ಬೆಸನಂ ಪಾರ್ದಿರ್ಪುದಾಂ ನಿನ್ನನಿಯನನಱಸಲ್ ಸಾರ್ವೆನೆಲ್ಲಂದದಿಂಚಿಂ**
**ತಿಸದಿರ್ ತಾ ತೋಱು ನಿನ್ನೀ ಬರೆದ ಪಟಮನುತ್ಫುಲ್ಲಪಂಕೇಜನೇತ್ರೇಳಳ**

**ಪದವಿಭಾಗ–ಅನ್ವಯ–ಅರ್ಥ:** ನೀಂ ನಿನ್ನ ನಿರ್ಬೇಗಮನ್ = ನೀನು ಮನಸ್ಸಿನ ವೈರಾಗ್ಯಭಾವವನ್ನು, ಉಸಿರ್ದೌ = ಹೇಳಿಕೊಂಡೆ, ಅಱಿದೆನ್ + ಇದಂ = ಅದನ್ನು ನಾನು ಅರ್ಥಮಾಡಿಕೊಂಡೆ; ಶಕ್ತಿಯೊಳ್ ಮುಕ್ತಿಯಂ ಸಂಧಿಸಲ್ + ಅಕ್ಕುಂ = ಶಕ್ತಿಯಿಂದ ಇದಕ್ಕೆ ಪರಿಹಾರವನ್ನು ಕಾಣಬಹುದು; ಮಂತ್ರಶಕ್ತಿಪ್ರಕಟನಪಟುಗಳ್ಗೆ + ಏನ್ + ಅಸಾಧ್ಯಂಗಳೋ ಪೇೞ್ = ಮಂತ್ರಶಕ್ತಿಯನ್ನು ತೋರ್ಪಡಿಸುವ ಸಾಮರ್ಥ್ಯವುಳ್ಳವರಿಗೆ ಅಸಾಧ್ಯವಾದುದು ಯಾವುದಿದೆ? ಬೆಸನಂ ಪಾರ್ದು + ಇರ್ಪುದು = ಕಾರ್ಯವು ನೆರವೇರುವುದಕ್ಕೆ (ಸ್ವಲ್ಪ) ಕಾಯಬೇಕು;

ಅಂ ನಿನ್ನ + ಇನಿಯನನ್ + ಅಱಸಲ್ ಎಲ್ಲಂದದಿಂ ಸಾರ್ವೆನ್ = ನಿನ್ನ ಪ್ರಿಯಕರನನ್ನು ಹುಡುಕಿಸಲು ನಾನು ಎಲ್ಲ ರೀತಿಯಲ್ಲಿಯೂ ಪ್ರಯತ್ನಿಸುತ್ತೇನೆ, ಚಿಂತಿಸದಿರ್ = ಯೋಚನೆ ಮಾಡಬೇಡ; ಉತ್ಫುಲ್ಲಪಂಕೇಜನೇತ್ರೇ = ಅರಳಿದ ತಾವರೆಯ ಎಸಳಿನಂತಹ ಕಣ್ಣುಗಳನ್ನುಳ್ಳವಳೇ, ನಿನ್ನೀ ಬರೆದ ಪಟಮನ್ ತಾ ತೋಱು = ನೀನು ಬರೆದ ಆ ಚಿತ್ರವನ್ನು ಎಲ್ಲಿ ತೋರಿಸು

**ಗದ್ಯಾನುಸರಣ:** 'ನೀನು ಮನಸ್ಸಿನ ಬೇಗುದಿಯನ್ನು ಹೇಳಿಕೊಂಡೆ, ಅದು ಎಂತಹುದೆಂಬುದು ನನಗೆ ಗೊತ್ತಾಯಿತು; ಶಕ್ತಿಯಿಂದ ಇದಕ್ಕೆ ಪರಿಹಾರವನ್ನು ಕಾಣಬಹುದು, ಮಂತ್ರಶಕ್ತಿಯನ್ನು ಉಳ್ಳವರಿಗೆ ಅಸಾಧ್ಯವಾದುದು ಯಾವುದಿದೆ? ಕಾರ್ಯಸಾಧನೆಗೆ ಸ್ವಲ್ಪ ಕಾಯಬೇಕು, ಅಷ್ಟೆ; ನಿನ್ನ ಪ್ರಿಯಕರನನ್ನು ಹುಡುಕಿಸಲು ನಾನು ಎಲ್ಲ ರೀತಿಯಲ್ಲಿಯೂ ಪ್ರಯತ್ನಿಸುತ್ತೇನೆ, ಯೋಚನೆ ಮಾಡಬೇಡ; ತಾವರೆ ಕಣ್ಗಳವಳೇ, ಎಲ್ಲಿ, ನೀನು ಬರೆದ ಆ ಚಿತ್ರವನ್ನು ತೋರಿಸು'

**ಪಟಮಿದೆ ಸಾಲ್ಗುಮನ್ಯಭವವಲ್ಲಭನಂ ಪಟವಿದ್ದೆಯೆತ್ತಲುಂ**
**ಜಟಮಟಿಕರ್ಕಳಂ ತೊಡರೆ ಸುತ್ತಲುಮಪ್ಪುದಱಂ ಸಮಸ್ತ ಭೂ**
**ಪಟಲಮನಾಂ ತೊಟಲ್ದಱಸಿ ನಿನ್ನೊಡಗೂಡಿ ನಿಜೇಶನಂ ಯಶಃ**
**ಪಟಹನಿನಾದಮಂ ಪರಪುವೆಂ ದೆಸೆಯಂತುವರಂ ತಳೋದರೀಳಿ೫**

**ಪದವಿಭಾಗ–ಅನ್ವಯ–ಅರ್ಥ:** ತಳೋದರೀ = ಬಡನಡುವಿನ ಸುಂದರಿಯೇ, ಅನ್ಯಭವವಲ್ಲಭನಂ ಪಟವಿದ್ಯೆಯೆತ್ತಲುಂ = ಬೇರೊಂದು ಜನ್ಮದ ಪ್ರಿಯಕರನನ್ನು ಕಂಡುಹಿಡಿಯಲು, ಪಟಂ + ಇದೆ ಸಾಲ್ಗುಂ = ಈ ಪಟ ಸಾಕು, ಜಟಮಟಿಕರ್ಕಳಂ ಸುತ್ತಲುಂ ತೊಡರೆ ಅಪ್ಪುದು = ಸುತ್ತಮುತ್ತ ತಂತ್ರಗಾರರನ್ನು ನಿಯೋಜಿಸಿದರೆ (ಕೆಲಸ) ಆಗುತ್ತದೆ; ಅದಱಂ ಸಮಸ್ತ ಭೂಪಟಲಮನಾಂ = ಹೀಗಾಗಿ ಭೂಮಂಡಲವನ್ನೆಲ್ಲ, ತೊಟಲ್ದು + ಅಱಸಿ = ತಿರುಗಾಡಿ ಹುಡುಕಿ, ನಿಜೇಶನಂ ನಿನ್ನೊಡಗೂಡಿ = ನಿನ್ನ ವಲ್ಲಭನನ್ನು ನಿನ್ನ ಜೊತೆಗೂಡಿಸಿ, ದೆಸೆಯಂತುವರಂ = ದಿಕ್ಕಿನ ಅಂಚಿನವರೆಗೂ, ಯಶಃಪಟಹನಿನಾದಮಂ = ಗೆಲವಿನ ಭೇರಿಯ ಶಬ್ದವನ್ನು, ಪರಪುವೆಂ = ಹರಡುತ್ತೇನೆ'

**ಗದ್ಯಾನುಸರಣ:** 'ಬಡನಡುವಿನ ಸುಂದರಿಯೇ, ಹಿಂದಿನ ಜನ್ಮದ ನಿನ್ನ ಪ್ರಿಯಕರನನ್ನು ಕಂಡುಹಿಡಿಯಲು ಈ ಪಟ ಸಾಕು, ಸುತ್ತಮುತ್ತ ತಂತ್ರಗಾರರನ್ನು ನಿಯೋಜಿಸಿದರೆ ಕೆಲಸ ಆಗುತ್ತದೆ; ಹೀಗಾಗಿ ಭೂಮಂಡಲದಲ್ಲೆಲ್ಲ ತಿರುಗಾಡಿ ಹುಡುಕಿಸಿ ನಿನ್ನ ವಲ್ಲಭನನ್ನು ನಿನ್ನ ಜೊತೆಗೂಡಿಸಿ ಜಯಭೇರಿಯನ್ನು ಹೊಡೆಸುತ್ತೇನೆ'

**ವ॥ ಎಂದು ಮುನ್ನಮಾ ಪಟದೊಳಾಕೆ ಬರೆಯದೆ ಬಂಚಿಸಿದ ಅವಿನಾಣಂಗಳನಱಿಯೆ ಬೆಸಗೊಂಡು ಪಟಮಂ ಕೈಕೊಂಡು ಪಂಡಿತೆ ಪೋಗಿ ವಂದಾರು ಮುನೀಂದ್ರ ವೃಂದಾರಕವೃಂದಸೌಂದರಮುಮಾಸನ್ನಭವ್ಯ ವ್ಯೋಮಚರಭೂಚರನಿಚಯನಿಚಿತಮುಮಾಗಿ ಜಗತ್ಪೂತಮೆನಿಸಿದ ಮಹಾಪೂತಜಿನಾಲಯಕ್ಕೆ ಬಂದು ಅನೇಕಧೂರ್ತಜನಮನ ಸ್ಸಮ್ಮೋಹನತಮಃಪಟಮಂ ವಿಚಿತ್ರಚಿತ್ರಪಟಮನಾ ಚೈತ್ಯಾಲಯದ ಕೆಲ ಪಟ್ಟಸಾಲೆಯ ಮುಂದೆ ನೇಱಿ ನಿಜಾಭಿಲಷಿತಕಾರ್ಯಸಿದ್ಧಿಯನೆ ಪಾರುತ್ತುಮಿರ್ದಳ್; ಅನ್ನೆಗಮಿತ್ತ ಷಟ್ಖಂಡಮಂಡಿತ 'ವಸುಧಾಮಂಡಳಮಂ ಬಾಯ್ಕೇಳಿಸಿ**

**ಪದವಿಭಾಗ–ಅನ್ವಯ–ಅರ್ಥ:** ಎಂದು ಆಶ್ವಾಸನೆಯಿತ್ತು, ಮುನ್ನಂ + ಆ ಪಟದೊಳಾಕೆ ಬರೆಯದೆ ಬಂಚಿಸಿದ = ಮೊದಲು ಆ ಪಟದಲ್ಲಿ ಬರೆಯದೆ ಬಿಟ್ಟ, ಅವಿನಾಣಂಗಳನ್ + ಅಱಿಯೆ ಬೆಸಗೊಂಡು = ಗುರುತುಗಳನ್ನು ಕೇಳಿ ತಿಳಿದುಕೊಂಡು, ಪಟಮಂ ಕೈಕೊಂಡು ಪಂಡಿತೆ ಪೋಗಿ = ಪಂಡಿತೆಯು ಚಿತ್ರವನ್ನು ತೆಗೆದುಕೊಂಡು, ಮುನೀಂದ್ರ ವೃಂದಾರಕವೃಂದ = ಮುನೀಂದ್ರೂ ದೇವತೆಗಳೂ ವಂದಾರು = ಸ್ತುತಿಸುವ, ಸೌಂದರಮುಂ = ಸುಂದರವಾದುದೂ, ಆಸನ್ನಭವ್ಯ = ಮೋಕ್ಷಕ್ಕೆ ಸನಿಹರಾಗಿರುವ, ವ್ಯೋಮಚರಭೂಚರನಿಚಯನಿಚಿತಮುಂ + ಆಗಿ = ಖೇಚರ ಹಾಗೂ ಮಾನವ ಸಮುದಾಯದಿಂದ ಕೂಡಿದ, ಜಗತ್ + ಪೂತಮೆನಿಸಿದ = ಜಗತ್ತಿನಲ್ಲಿ ಪವಿತ್ರವಾದ, ಮಹಾಪೂತಜಿನಾಲಯಕ್ಕೆ ಬಂದು, ಅನೇಕಧೂರ್ತ ಜನಮನಃ + ಸಮ್ಮೋಹನತಮಃಪಟಮಂ = ನಾನಾ ಧೂರ್ತಜನರ ಮನಸ್ಸನ್ನು ಸೆರೆಹಿಡಿಯುವ ಚಿತ್ರವಾದ, ವಿಚಿತ್ರಚಿತ್ರಪಟಮನಾ = ಆ ಆಕರ್ಷಕ ಚಿತ್ರಪಟವನ್ನು, ಚೈತ್ಯಾಲಯದ ಕೆಲ = ಜಿನಾಲಯದ ಪಕ್ಕದಲ್ಲಿನ, ಪಟ್ಟಸಾಲೆಯ ಮುಂದೆ ನೇಱಿ = ಪಡಸಾಲೆಯ ಮುಂಭಾಗದಲ್ಲಿ ನೇತು ಹಾಕಿಸಿ, ನಿಜ + ಅಭಿಲಷಿತಕಾರ್ಯ ಸಿದ್ಧಿಯನೆ = ತನ್ನ ಇಷ್ಟಕಾರ್ಯದ ಸಿದ್ಧಿಗಾಗಿ, ಪಾರುತ್ತುಂ + ಇರ್ದಳ್ ಎದುರು ನೋಡುತ್ತಿದ್ದಳು; ಅನ್ನೆಗಂ = ಅಷ್ಟರಲ್ಲಿ, ಇತ್ತ = ಈ ಕಡೆ, ಷಟ್ಖಂಡಮಂಡಿತ ವಸುಧಾಮಂಡಳಮಂ = ಆರು ಖಂಡಗಳಿಂದ ಕೂಡಿದ ಭೂಮಂಡಲವನ್ನು, ಬಾಯ್ಕೇಳಿಸಿ = ಆಜ್ಞಾಧೀನವನ್ನಾಗಿಸಿ,

**ಗದ್ಯಾನುಸರಣ:** ಎಂದು ಆಶ್ವಾಸನೆಯಿತ್ತು, ಆ ಪಟದಲ್ಲಿ ಬರೆಯದೆ ಬಿಟ್ಟಿದ್ದ ಗುರುತುಗಳನ್ನು ಕೇಳಿ ತಿಳಿದುಕೊಂಡ ಪಂಡಿತೆಯು ಚಿತ್ರವನ್ನು ತೆಗೆದುಕೊಂಡು ಹೊರಟು ಮಹಾಪೂತಜಿನಾಲಯಕ್ಕೆ ಬಂದಳು. ಅದು ಮುನೀಂದ್ರರೂ ದೇವತೆಗಳೂ ಸ್ತುತಿಸುವ ಸುಂದರವಾದ ಹಾಗೂ ಆಸನ್ನಭವ್ಯ ಖೇಚರ ಹಾಗೂ ಮಾನವ ಸಮುದಾಯದಿಂದ ಕೂಡಿ ಪವಿತ್ರವಾದ ಚೈತ್ಯಾಲಯ. ಅದರ ಪಕ್ಕದಲ್ಲಿದ್ದ ಪಡಸಾಲೆಯ ಮುಂಭಾಗದಲ್ಲಿ ಆ ಆಕರ್ಷಕ ಚಿತ್ರಪಟವನ್ನು ನೇತು ಹಾಕಿಸಿದಳು.

ಆ ಚಿತ್ರವು ನಾನಾ ಧೂರ್ತಜನರ ಮನಸ್ಸನ್ನು ಸೆರೆಹಿಡಿಯುವ ಹಾಗಿತ್ತು. ಹಾಗೆ ಮಾಡಿ ತನ್ನ ಇಷ್ಟಕಾರ್ಯದ ಸಿದ್ಧಿಗಾಗಿ ಎದುರು ನೋಡುತ್ತಿದ್ದಳು; ಅಷ್ಟರಲ್ಲಿ, ಈ ಕಡೆ ಆರು ಖಂಡಗಳಿಂದ ಕೂಡಿದ ಭೂಮಂಡಲವನ್ನು ಆಜ್ಞಾಧೀನವನ್ನಾಗಿಸಿ ಕೊಂಡು,

**ವಿಶೇಷ ವಿಚಾರ**: ಈ ಜಿನಾಲಯದ ವರ್ಣನೆಗೆ ಪೂರ್ವಪುರಾಣದಲ್ಲಿ ಹತ್ತು ಶ್ಲೋಕಗಳು ಮೀಸಲಾಗಿವೆ: ಪೂಪು, ೬. ೧೮೦-೯೦

**ಪಿರಿದುಂ ಪುಣ್ಯೋದಯಂ ತನ್ನುದಯಮನಱಿಪುತ್ತಿರ್ಪಿನಂ ಮರ್ತ್ಯವಿದ್ಯಾ**
**ಧರರಾಜವ್ಯಂತರಾಧೀಶ್ವರಕರಸರಸೀಜಂಗಳಂ ವಕ್ತ್ರಚಂದ್ರ**
**ಸ್ಫುರಿತೋದ್ಯತ್ಕಾಂತಿ ನಿಚ್ಚಂ ಮುಗಿಯಿಸೆ ಜಿತದಿಙ್ಮಂಡಲಂ ಬಂದು ಪೊಕ್ಕಂ**
**ಪುರಮಂ ಶ್ರೀ ವಜ್ರದಂತಂ ಮಗಳ ಮದುವೆಯಂ ಮಾಡಲುದ್ಯುಕ್ತಚಿತ್ತಂ॥೬॥**

**ಪದವಿಭಾಗ–ಅನ್ವಯ–ಅರ್ಥ:** ಶ್ರೀ ವಜ್ರದಂತಂ = ವಜ್ರದಂತ ನಹಾರಾಜನು, ಪಿರಿದುಂ ಪುಣ್ಯೋದಯಂ = ಹಿರಿದಾದ ಪುಣ್ಯವು ಗಳಿಸಿಕೊಂಡು, ತನ್ನುದಯಮನ್ + ಅಱಿಪುತ್ತಿರ್ಪಿನಂ = ತನ್ನ ಏಳಿಗೆಯನ್ನು ತೋರ್ಪಡಿಸಿಕೊಂಡು, ಮರ್ತ್ಯ = ಮಾನವ, ವಿದ್ಯಾಧರರಾಜ = ಖೇಚರರಾಜರು, ವ್ಯಂತರಾಧೀಶ್ವರ = ವ್ಯಂತರಭೂಪತಿಗಳ ಕರಸರಸೀಜಂಗಳಂ = ಕೈಗಳೆಂಬ ತಾವರೆಗಳನ್ನು ವಕ್ತ್ರಚಂದ್ರಸ್ಫುರಿತ + ಉದ್ಯತ್ + ಕಾಂತಿ = (ತನ್ನ) ಮುಖಚಂದ್ರನ ಬೆಳಗು, ನಿಚ್ಚಂ ಮುಗಿಯಿಸೆ = ಮುಗಿಯುವಂತೆ ಮಾಡಿ, ಜಿತದಿಙ್ಮಂಡಲಂ = ದಿಕ್ಕುಗಳನ್ನೆಲ್ಲ ಗೆದ್ದು, ಬಂದು, ಮಗಳ ಮದುವೆಯಂ ಮಾಡಲುದ್ಯುಕ್ತಚಿತ್ತಂ = ಮಗಳ ಮದುವೆಯನ್ನು ಮಾಡುವ ನಿರ್ಧಾರದಿಂದ, ಪುರಮಂ ಪೊಕ್ಕಂ = ನಗರವನ್ನು ಸೇರಿದ.

**ಗದ್ಯಾನುಸರಣ:** ವಜ್ರದಂತಮಹಾರಾಜನು ತನ್ನ ಹಿರಿದು ಪುಣ್ಯದ ಗಳಿಕೆಯಿಂದಾದ ಏಳಿಗೆಯನ್ನು ಬಿಂಬಿಸುತ್ತ ದಿಕ್ಕುಗಳನ್ನೆಲ್ಲ ಗೆದ್ದು, ಮಾನವಖೇಚರವ್ಯಂತರಭೂಪತಿಗಳೆಲ್ಲರ ಕೈಗಳೆಂಬ ತಾವರೆಗಳನ್ನು ತನ್ನ ಮುಖಚಂದ್ರನ ಬೆಳಗಿನಿಂದ ಮುಗಿಯುವಂತೆ ಮಾಡುತ್ತ, ಮಗಳ ಮದುವೆಯನ್ನು ಮಾಡುವ ನಿರ್ಧಾರದಿಂದ ನಗರವನ್ನು ಸೇರಿದ.

**ವ॥ ಅಂತು ನಿಜಾನ್ವಯರಾಜಧಾನಿಯಂ ಪೊಕ್ಕು ಮೂವತ್ತೆರಡ್ಸಾಸಿರ ಮಕುಟಬದ್ಧರಿಂ ಮೂರ್ಧಾಭಿಷಿಕ್ತನಾಗಿ ಸಕಳಚಕ್ರವರ್ತಿ ಪದದೊಳ್ ನಿಂದು ಸಿಂಹಾಸನರೂಢನಾರೂಢ ಯೌವನೆಯು ಮನಂತ ನಿರ್ಗೂಢ ಶೋಕೋದ್ರೇಕ ಮೂಕೆಯುಮಾಗಿರ್ದ ನಿಜತನೂಜೆಗೆ ಬೞಿಯ ನಟ್ಟಿದಾಗಳ್**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹೀಗೆ, ನಿಜಾನ್ವಯರಾಜಧಾನಿಯಂ ಪೊಕ್ಕು = ತನ್ನ ಪಾರಂಪರಿಕ ರಾಜಧಾನಿಯನ್ನು ಸೇರಿ, ಮೂವತ್ತೆರಣ್ಬಾಸಿರ ಮಕುಟಬದ್ಧರಿಂ = ಮೂವತ್ತೆರಡು ಸಾವಿರ ಮಕುಟಬದ್ಧರಾದ ರಾಜರುಗಳಿಂದ, ಮೂರ್ಧಾ + ಅಭಿಷಿಕ್ತನಾಗಿ = ಪಟ್ಟಾಭಿಷಿಕ್ತನಾಗಿ, ಸಕಳಚಕ್ರವರ್ತಿಪದದೊಳ್ ನಿಂದು = ಎಲ್ಲರ ಚಕ್ರವರ್ತಿಯ ಪದವಿಯಲ್ಲಿ ಸ್ಥಿರಗೊಂಡು, ಸಿಂಹಾಸನರೂಢನ್ = ಸಿಂಹಾಸನವನ್ನೇರಿ, ಆರೂಢಯೌವನೆಯುಮನ್ = ಯಾವನಭರೆಯೂ, ಅಂತರ್ನಿಗೂಢಶೋಕೋದ್ರೇಕಮೂಕೆಯುಂ + ಆಗಿರ್ದ = ಮನಸ್ಸಿನಲ್ಲಿಯೇ ಬಚ್ಚಿಟ್ಟುಕೊಂಡ ದುಃಖದಿಂದ ಮೂಗಿಯೂ ಆಗಿದ್ದ. ನಿಜತನೂಜೆಗೆ = ತನ್ನ ಮಗಳನ್ನು ಕರೆತರಲು, ಬೞಿಯನ್ + ಟ್ಟಿದಾಗಳ್ = ಸೇವಕನನ್ನು ಕಳಿಸಿದ

**ಗದ್ಯಾನುಸರಣ:** ಹೀಗೆ, ತನ್ನ ಪಾರಂಪರಿಕ ರಾಜಧಾನಿಯನ್ನು ಸೇರಿ ಮೂವತ್ತೆರಡು ಸಾವಿರ ಮಕುಟಬದ್ಧರಾದ ರಾಜರುಗಳಿಂದ ಪಟ್ಟಾಭಿಷಿಕ್ತನಾಗಿ ಎಲ್ಲರ ಚಕ್ರವರ್ತಿಯ ಪದವಿಯ ಸಿಂಹಾಸನದಲ್ಲಿ ನೆಲೆಗೊಂಡ. ಆ ಬಳಿಕ ಯೌವನಭರೆಯೂ ಮನಸ್ಸಿನಲ್ಲಿಯೇ ಬಚ್ಚಿಟ್ಟುಕೊಂಡ ಕೊರಗಿನಿಂದ ಮೂಗಿಯೂ ಆಗಿದ್ದ ತನ್ನ ಮಗಳನ್ನು ಕರೆತರಲು ಹೇಳಿಕಳಿಸಿದ.

**ವನಿತಾರೂಪದ ಕಾಮಕಲ್ಪಲತೆಯೋ ಮೇಣಂಗನಾರೂಪದ**
**ಬ್ಜಿನಿಯೋ ಮೇಣ್ ಲಲನಾಸ್ವರೂಪದತನುಶ್ರೀರೂಪಮೋ ಬರ್ಪುದೆಂ**
**ಬಿನೆಗಂ ಮೆಲ್ಲನೆ ಬಂದು ಕಾಲ್ಗೆಱಗೆ ಲೀಲಾಲಂಬಿಲಂಬಾಳಕಾ**
**ಳಿ ನಿಲುಂಬಿರ್ದುವು ಚಕ್ರವರ್ತಿಯ ಪದಾಂಭೋಜಂಗಳೊಳ್ ಕನ್ನೆಯಾ೭**

**ಪದವಿಭಾಗ–ಅನ್ವಯ–ಅರ್ಥ:** ವನಿತಾರೂಪದ ಕಾಮಕಲ್ಪಲತೆಯೋ = ಹೆಣ್ಣಿನ ಆಕಾರವನ್ನು ತಾಳಿದ ಕಾಮನ ಕಲ್ಪಲತೆಯೋ, ಮೇಣ್ + ಅಂಗನಾರೂಪದ + ಅಬ್ಜಿನಿಯೋ = ಇಲ್ಲ, ಸ್ತ್ರೀರೂಪದ ತಾವರೆಯೋ, ಮೇಣ್ ಲಲನಾಸ್ವರೂಪದ + ಅತನುಶ್ರೀರೂಪಮೋ = ಅಥವಾ ಲಲನೆಯ ರೂಪದಲ್ಲಿದ್ದ ಮನ್ಮಥನ ಅನುಪಮ ಸೌಂದರ್ಯವೋ, ಬರ್ಪುದು + ಎಂಬಿನೆಗಂ = ಬರುತ್ತಿದೆ ಎನ್ನಿಸುವಂತೆ, ಮೆಲ್ಲನೆ ಬಂದು ಕಾಲ್ಗೆಱಗೆ = ನಿಧಾನವಾಗಿ ಬಂದು ತಂದೆಯ ಕಾಲಿಗೆ ಎರಗಲು, ಕನ್ನೆಯಾ = ಶ್ರೀಮತಿಯ, ಲೀಲಾಲಂಬಿಲಂಬ + ಅಳಕಾಳಿ = ಮನೋಹರವಾದ ನೀಳ ಮುಂಗುರುಳು, ಚಕ್ರವರ್ತಿಯ ಪದಾಂಭೋಜಂಗಳೊಳ್ = ಚಕ್ರವರ್ತಿಯ ಅಡಿದಾವರೆಗಳಲ್ಲಿ, ನಿಲುಂಬಿರ್ದುವು = ರಾಶಿಯಾಗಿ ಬಿತ್ತು.

**ಗದ್ಯಾನುಸರಣ:** ಹೆಣ್ಣಿನ ಆಕಾರವನ್ನು ತಾಳಿದ ಕಾಮನ ಕಲ್ಪಲತೆಯೋ, ಸ್ತ್ರೀರೂಪದ ತಾವರೆಯೋ, ಲಲನೆಯ ರೂಪದಲ್ಲಿದ್ದ ಮನ್ಮಥನ ಅನುಪಮ ಸೌಂದರ್ಯವೋ ಎನ್ನುವಂತೆ ಶ್ರೀಮತಿಯು ನಿಧಾನವಾಗಿ ಬಂದು ತಂದೆಯ

ಕಾಲಿಗೆ ಎರಗಿದಳು. ಅವಳ ಮನೋಹರವಾದ ನೀಳ ಮುಂಗುರುಳು ಚಕ್ರವರ್ತಿಯ ಅಡಿದಾವರೆಗಳಲ್ಲಿ ಬಿದ್ದು ರಾಶಿಯಾಯಿತು.

**ವ। ಅಂತು ಪೊಡೆವಟ್ಟ ನಿಜತನೂಜೆಯುಂ ಕಲ್ಯಾಣಭೋಗಭಾಗಿಯಾಗೆಂದು ಪರಸಿ ತಕ್ಕೈಸಿಕೊಂಡು**

**ಪದವಿಭಾಗ–ಅನ್ವಯ–ಅರ್ಥ:** ಅಂತು ಪೊಡೆವಟ್ಟ ನಿಜತನೂಜೆಯುಂ = ಹಾಗೆ ನಮಸ್ಕರಿಸಿದ ತನ್ನ ಮಗಳಿಗೆ ಕಲ್ಯಾಣಭೋಗಭಾಗಿಯಾಗೆಂದು ಪರಸಿ = ಕಲ್ಯಾಣಪ್ರಾಪ್ತಿಯಾಗಲಿ ಎಂದು ಹರಸಿ, ತಕ್ಕೈಸಿಕೊಂಡು = ತಬ್ಬಿಕೊಂಡು

**ಗದ್ಯಾನುಸರಣ:** ಹಾಗೆ ನಮಸ್ಕರಿಸಿದ ತನ್ನ ಮಗಳಿಗೆ ಕಲ್ಯಾಣಪ್ರಾಪ್ತಿಯಾಗಲಿ ಎಂದು ಹರಸಿ ಅವಳನ್ನು ತಬ್ಬಿಕೊಂಡ.

**ಒದವಿದ ನೂಲ ತೊಂಗಲುಲಿಯಿಲ್ಲದೆ ಪೀನನಿತಂಬಮಾರಮಿ**
**ಲ್ಲದೆ ಕುಚಮಂಡಲಂ ಪಲವುಮಂದದ ಚೆಂದದ ಚಿನ್ನಪೂಗಳಿ**
**ಲ್ಲದೆ ಲುಳಿತಾಳಕಂ ಕ್ವಣಿತನೂಪುರಮಿಲ್ಲದೆ ಪಾದಪದ್ಮಮೊ**
**ಪ್ಪಿದಪುದು ನೋಡ ರೂಪಿನಿತು ಬೇಸಱೊಳಂ ಸೊಗಯಿಪ್ಪುದೀಕೆಯುಳಲ**

**ಪದವಿಭಾಗ–ಅನ್ವಯ–ಅರ್ಥ:** ಪೀನನಿತಂಬಂ ಒದವಿದ ನೂಲ ತೊಂಗಲುಲಿಯಿಲ್ಲದೆ = ಸುಂದರವಾದ ಗೆಜ್ಜೆಗಳ ಧ್ವನಿಮಾಡುವ ಕಟಿಸೂತ್ರವಿಲ್ಲದ ಸೊಂಟ, ಆರಮಿಲ್ಲದೆ ಕುಚಮಂಡಲಂ = ಮುತ್ತಿನಸರವಿಲ್ಲದ ಎದೆಯ ಪ್ರದೇಶ, ಪಲವುಂ + ಅಂದದ ಚೆಂದದ = ಹಲವು ಬಗೆಯ ಚೆಲುವಾದ, ಚಿನ್ನಪೂಗಳಿಲ್ಲದೆ ಲುಳಿತ + ಅಳಕಂ = ಚಿನ್ನದ ಹೂಗಳಿಲ್ಲದ ತಲೆಗೂದಲು, ಕ್ವಣಿತನೂಪುರಮಿಲ್ಲದೆ ಪಾದಪದ್ಮಂ = ಗೆಜ್ಜೆಗಳ ಕಿಣಿಕಿಣಿ ಸದ್ದಿಲ್ಲದ ಪಾದಗಳು, ಒಪ್ಪಿದಪುದು ನೋಡ = ಹೇಗೆ ಶೋಭಿಸುತ್ತಿವೆ, ನೋಡು! ಬೇಸಱೊಳಂ = ಬೇಸರದಿಂದ ಕೂಡಿದ್ದರೂ, ಈಕೆಯಾ ರೂಪು + ಇನಿತು ಸೊಗಯಿಪ್ಪುದು = ಇವಳ ರೂಪು ಹೀಗೆ ಸೊಗಸುತ್ತಿದೆ!

**ಗದ್ಯಾನುಸರಣ:** ಸೊಂಟದಲ್ಲಿ ಗೆಜ್ಜೆಗಳ ಇನಿದನಿಯ ಕಟಿಸೂತ್ರವಿಲ್ಲ, ಮೊಲೆಗಳ ಮೇಲೆ ಮುತ್ತಿನಸರವಿಲ್ಲ, ತುರುಬಿನಲ್ಲಿ ಹಲವು ಬಗೆಯ ಚೆಲುವಾದ ಚಿನ್ನದ ಹೂಗಳಿಲ್ಲ, ಪಾದಗಳಲ್ಲಿ ಗೆಜ್ಜೆಗಳ ಕಿಣಿಕಿಣಿ ಸದ್ದಿಲ್ಲ, ಆದರೂ ಇವೆಲ್ಲ ಹೇಗೆ ಶೋಭಿಸುತ್ತಿವೆ! ಬೇಸರದಿಂದ ಕೂಡಿದ್ದರೂ ಇವಳ ರೂಪು ಹೇಗೆ ಸೊಗಸುತ್ತಿದೆ!

**ವ। ಎಂದು ತನ್ನ ಮನದೊಳೆ ಬಗೆದು ಮಗಳ ಮೊಗಮಂ ಮುಗುಳ್ನಗೆವೆರಸು ನೋಡಿದಾಗಳ್**

**ಅರ್ಥ:** ಎಂದು ತನ್ನ ಮನಸ್ಸಿನಲ್ಲಿಯೇ ಅಂದುಕೊಂಡು ಮುಗುಳ್ನಗೆಯಿಂದ ಕೂಡಿ ಮಗಳ ಮುಖವನ್ನು ನೋಡಲು,

**ಕುಂದದಳಧವಳನೃಪದಶ**
**ನೇಂದುಜ್ಯೋತ್ಸ್ನಾಮೃತಾಚ್ಛಜಳಪರಿಷೇಕಂ**
**ಮಾಂದಿಸುವಂತಾದುದು ನೃಪ**
**ನಂದನೆಯೆರ್ದೆಯೊಳಗೆ ಬಳೆದ ಶೋಕಾನಳನಂ ೪೯**

**ಪದವಿಭಾಗ-ಅನ್ವಯ-ಅರ್ಥ:** ಕುಂದದಳಧವಳ = ಕುಂದಪುಷ್ಪದ ಎಸಳಿನಂತಹ ಬೆಳ್ಳನೆಯ, ನೃಪದಶನ = ರಾಜನಹಲ್ಲುಗಳೆಂಬ, ಇಂದುಜ್ಯೋತ್ಸ್ನಾ + ಅಮೃತ = ಬೆಳುದಿಂಗಳ ಅಮೃತವೆಂಬ, ಅಚ್ಛಜಳಪರಿಷೇಕಂ = ತಿಳಿನೀರಿನ ಸಿಂಚನವು, ನೃಪನಂದನೆಯ + ಎರ್ದೆಯೊಳಗೆ ಬಳೆದ = ರಾಜಕುವರಿಯ ಹೃದಯದಲ್ಲಿ ತುಂಬಿಕೊಂಡಿದ್ದ, ಶೋಕ + ಅನಳನಂ = ದುಃಖವೆಂಬ ಬೆಂಕಿಯನ್ನು, ಮಾಂದಿಸುವಂತೆ + ಆದುದು = ನಂದಿಸುವ ಹಾಗೆ ಆಯಿತು.

**ಗದ್ಯಾನುಸರಣ:** ರಾಜನ ಮುಗುಳ್ನಗೆಯೆಂಬ ಬೆಳುದಿಂಗಳ ಸಿಂಚನದಿಂದಾಗಿ ರಾಜಕುವರಿಯ ಹೃದಯದಲ್ಲಿ ತುಂಬಿಕೊಂಡಿದ್ದ ದುಃಖದ ಬೆಂಕಿಯು ನಂದುವ ಹಾಗೆ ಆಯಿತು.

**ವ। ಅಂತು ವಜ್ರದಂತನ ವಜ್ರದಂತೆ ಪೊಳೆವ ದಂತಪಜ್ತ್ತಿಗಳ ಕಾಂತಿಯಾ ಕಾಂತೆಯಂ ಮದುಂಗೊಳಿಸೆ ವಜ್ರದಂತನೆಂಬ ಪೆಸರಂ ನನ್ನಿಮಾಡಿ,**

**ಪದವಿಭಾಗ-ಅನ್ವಯ-ಅರ್ಥ:** ಅಂತು = ಹಾಗೆ, ವಜ್ರದಂತನ ವಜ್ರದಂತೆ ಪೊಳೆವ ದಂತಪಜ್ತ್ತಿಗಳ ಕಾಂತಿ = ವಜ್ರದಂತ ಮಹಾರಾಜನ ವಜ್ರದ ಹೊಳಪಿನಂತಹ ಹಲ್ಲುಗಳ ಕಾಂತಿಯು, ಆ ಕಾಂತೆಯಂ ಮದುಂಗೊಳಿಸೆ = ಆ ಕಾಂತೆಯನ್ನು ಆವರಿಸಲು, ವಜ್ರದಂತನೆಂಬ ಪೆಸರಂ ನನ್ನಿಮಾಡಿ ವಜ್ರದಂತಹ ದಂತಪಜ್ತ್ತಿಯವನು ಎಂಬ ಹೆಸರನ್ನು ನಿಜಮಾಡಿ,

**ಗದ್ಯಾನುಸರಣ:** ಹಾಗೆ, ವಜ್ರದಂತ ಮಹಾರಾಜನ ವಜ್ರದ ಹೊಳಪಿನಂತಹ ಹಲ್ಲುಗಳ ಕಾಂತಿಯು ಆ ಕಾಂತೆಯನ್ನು ಆವರಿಸಿ ವಜ್ರದಂತಹ ದಂತಪಜ್ತ್ತಿಯವನು ಎಂಬ ಹೆಸರನ್ನು ನಿಜಮಾಡಿತು.

ಮಗಳೆ ಮನಸ್ತಮಂ ನಿನಗದೀಗಳೆ ಪಿಂಗುಗೆ ಕುಂಕುಮದ್ರವಂ
ನಗೆಮೊಗದೊಳ್ ಕನತ್ಕನಕಮೇಖಳೆ ಪೀನನಿತಂಬದೊಳ್ ಲಯಂ
ನೆಗೞ್ದಿರೆ ನೂಪುರಂ ಪದಪಯೋರುಹದೊಳ್ ನೆಲೆಗೊಳ್ಗೆ ಕೂಡುವೈ
ಬಗೆಗೊಳೆ ನಾಳೆ ನಾಡಿದು ಮಹೋತ್ಸವದಿಂ ನಿಜಜೀವಿತೇಶನಂ ೫೦

**ಪದವಿಭಾಗ–ಅನ್ವಯ–ಅರ್ಥ:** ಮಗಳೆ, ಮನಃ + ತಮಂ = ನಿನ್ನ ಮನಸ್ಸಿನ ಕತ್ತಲೆಯು, ನಿನಗೆ + ಅದೀಗಳೆ ಪಿಂಗುಗೆ = ಬೇಗನೆ ಹಿಂಗಲಿ; ನಗೆಮೊಗದೊಳ್ = ನಗುಮುಖದಲ್ಲಿ, ಕುಂಕುಮದ್ರವಂ = ಕುಂಕುಮದ್ರವವೂ, ಪೀನನಿತಂಬದೊಳ್ = ಸೊಂಟದಲ್ಲಿ, ಕನತ್ + ಕನಕಮೇಖಳೆ = ಹೊಳಪಿನ ಚಿನ್ನದ ಒಡ್ಯಾಣವೂ, ಪದಪಯೋರುಹದೊಳ್ = ಪಾದಕಮಲಗಳಲ್ಲಿ, ಲಯಂ ನೆಗೞ್ದಿರೆ = ಲಯಬದ್ಧವಾಗಿ ಸದ್ದುಮಾಡುವ, ನೂಪುರಂ = ಕಾಲ್ಗಡಗಗಳು, ನೆಲೆಗೊಳ್ಗೆ = ಇರುವಂತಾಗಲಿ; ನಿಜಜೀವಿತೇಶನಂ = ನಿನ್ನ ಮನಃಪ್ರಿಯನನ್ನು, ನಾಳೆ ನಾಡಿದು = ಇಷ್ಟರಲ್ಲಿಯೇ, ಮಹೋತ್ಸವದಿಂ ಬಗೆಗೊಳೆ = ಉತ್ಸಾಹ ಸಂತೋಷಗಳಿಂದ, ಕೂಡುವೈ = ಸೇರುತ್ತೀಯೆ.

**ಗದ್ಯಾನುಸರಣ:** 'ಮಗಳೆ, ನಿನ್ನ ಮನಸ್ಸಿನ ಕತ್ತಲೆಯು ಬೇಗನೆ ಹಿಂಗುವಂತಾಗಲಿ; ನಿನ್ನ ನಗುಮುಖದಲ್ಲಿ ಕುಂಕುಮದ್ರವವೂ, ಸೊಂಟದಲ್ಲಿ ಹೊಳಪಿನ ಚಿನ್ನದ ಒಡ್ಯಾಣವೂ, ಪಾದಕಮಲಗಳಲ್ಲಿ ಲಯಬದ್ಧವಾಗಿ ಸದ್ದುಮಾಡುವ ಕಾಲ್ಗಡಗಗಳೂ ಇರುವಂತಾಗಲಿ; ಇಷ್ಟರಲ್ಲಿಯೇ ನಿನ್ನ ಮನಃಪ್ರಿಯನನ್ನು ಉತ್ಸಾಹ ಸಂತೋಷಗಳಿಂದ ಸೇರುತ್ತೀಯೆ.'

ವ॥ ಅದೆಂತೆಂದೊಡೆ ಮದೀಯಗುರುಗಳುಂ ತ್ರೈಲೋಕ್ಯಗುರುಗಳುಮಪ್ಪ ಯಶೋಧರಗುರುಗಳ ಕೇವಳಜ್ಞಾನೋತ್ಪತ್ತಿಯೊಸಗೆಯೊಳವಿಚಳ ಭಕ್ತಿಯೊಳೆನಗೆ ಪುಟ್ಟಿದವಧಿಜ್ಞಾನದೊಳೆನ್ನ ನಿನ್ನ ನಿನ್ನ ಕಾಂತನ ಜನ್ಮಾಂತರಂ ಗಳನನಂತರಿತಮನಱಿದೆನಾ ಕಥಾಂತರ ಮನಾದ್ಯಂತ ಮನವಧಾರಿಸೆಂದು ಮಿಂತೆಂದು ಪೇೞಲ್ತಗುಳ್ದಂ: ಆನೀ ಭವಕ್ಕೈದನೆಯ ಭವದೊಳೀ ಪುಂಡರೀಕಿಣೀಯೊಳ್ ಕೇಶವಮಹೀಶಂಗೆ ಚಂದ್ರಕೀರ್ತಿಯೆಂಬ ಮಗನೆನಾಗಿ ಜಯಕೀರ್ತಿಯೆಂಬ ಕೆಳೆಯನುಮಾನು ಮೊಡವಳೆದು ಗೃಹೀತಾಣುವ್ರತನೆಂ ಗೃಹಸ್ಥಧರ್ಮಕ್ರಮದೊಳ್ ಮದೀಯ ವಯಸ್ಯನುಮಾನುಂ ನೆಗೞ್ದು ಜೀವಿತಾಂತ್ಯದೊಳ್ ಪ್ರೀತಿವರ್ಧನೋದ್ಯಾನದೊಳ್ ಚಂದ್ರಸೇನಾಚಾರ್ಯರ ಶ್ರೀಪಾದಪದ್ಮಪಾರ್ಶ್ವದೊಳ್ ಸನ್ಯಸನವಿಧಿಯೊಳ್ ಪರಿತ್ಯಕ್ತಾಹಾರ ಶರೀರನೆಂ ಸಮಾಧಿವಡೆದು ಮಹೇಂದ್ರಕಲ್ಪದೊಳ್ ಸಪ್ತಸಾಗರೋಪಮಪ್ರಮಿತಜೀವಿತನೆಂ ಸಾಮಾನಿಕ ದೇವನಾಗಿ ಪುಟ್ಟಿದೆಂ: ಜಯಕೀರ್ತಿಯುಮಾತ್ಮೀಯ ವಿಭವಸದೃಶನಾಗಿ ತತ್ಕಲ್ಪದೊಳ್ ಪುಟ್ಟಿದಂ: ಅಂತಿರ್ವರುಮಮರಾಂಗನಾ ಪಾಂಗ ವಿಲೋಕನಸುಖಮನನುಭವಿಸಿ ಬಂದು ಪುಷ್ಕರವರದ್ವೀಪದ

**ಮೂಡಣ ಸುಮೇರುದ ಪೂರ್ವವಿದೇಹದ ಮಂಗಳಾವತೀವಿಷಯದ ರತ್ನಸಂಚಯಪುರಾಧಿಪಂ ಶ್ರೀಧರಂಗಮಾತನ ಮನೋಹರಿ ಮನೋಹರಿಗಂ ಶ್ರೀವರ್ಮನುಂವಿಭೀಷಣನುಮೆಂಬ ಪೆಸರೊಳ್ ಬಲದೇವವಾಸುದೇವರಾಗಿ ಬಳಿಯೆ ಮದೀಯಜನಕನೆಮ್ಮಿರ್ವರುಮನಧಿರಾಜ ಯುವರಾಜಪದವಿಯೊಳ್ ನಿಱಿಸಿ,**

**ಪದವಿಭಾಗ–ಅನ್ವಯ–ಅರ್ಥ:** ಅದು + ಎಂತೆಂದೊಡೆ = ಅದು ಹೇಗೆಂದರೆ, ಮದೀಯಗುರುಗಳುಂ ತ್ರೈಲೋಕ್ಯಗುರುಗಳುಂ + ಅಪ್ಪ = ನನಗೂ ಮೂರುಲೋಕಗಳಿಗೂ ಗುರುಗಳಾದ, ಯಶೋಧರಗುರುಗಳ, ಕೇವಳಜ್ಞಾನೋತ್ಪತ್ತಿಯೊಸಗೆಯೊಳ್ = ಕೇವಲಜ್ಞಾನವು ಉದಿಸಿದ ಶುಭಸಂದರ್ಭದಲ್ಲಿ, ಅವಿಚಳಭಕ್ತಿಯೊಳ್ = ನಿಶ್ಚಲಭಕ್ತಿಯ ಕಾರಣದಿಂದ, ಎನಗೆ ಪುಟ್ಟಿದ + ಅವಧಿಜ್ಞಾನದೊಳ್ = ನನಗೆ ದೊರಕಿದ ಅವಧಿಜ್ಞಾನದಿಂ, ಎನ್ನ ನಿನ್ನ ನಿನ್ನ ಕಾಂತನ ಜನ್ಮಾಂತರಂಗಳನ್ = ನನ್ನ ನಿನ್ನ ಹಾಗೂ ನಿನ್ನ ಮನಃಪ್ರಿಯನ ವಿವಿಧ ಜನ್ಮಗಳ, ಅನಂತರಿತಮನ್ + ಅಱಿದೆನ್ = ಅನುಕ್ರಮವನ್ನು ತಿಳಿದುಕೊಂಡೆ, ಆ ಕಥಾಂತರಮನ್ = ಆ ಕಥೆಯ ವಿವರಗಳನ್ನು, ಆದ್ಯಂತಮನ್ + ಅವಧಾರಿಸು = ಮೊದಲಿನಿಂದ ಕೊನೆಯವರೆಗೂ ಕೇಳು, ಎಂದುಂ + ಇಂತೆಂದು ಪೇೞಲ್ + ತಗುಳ್ದಂ + ಎಂದು ಹೇಳಿ ನಿರೂಪಿಸಲು ತೊಡಗಿದ: ಆನೀ ಭವಕ್ಕೆ + ಐದನೆಯ ಭವದೊಳ್ = ನಾನು ಈ ಜನ್ಮದ ಹಿಂದಿನ ಐದನೆಯ ಜನ್ಮದಲ್ಲಿ, ಈ ಪುಂಡರೀಕಿಣಿ'ಯೊಳ್ = ಈ ಪುಂಡರೀಕಿಣಿ'ಯಲ್ಲಿ, ಕೇಶವಮಹೀಶಂಗೆ ಚಂದ್ರಕೀರ್ತಿ ಯೆಂಬ ಮಗನೆನ್ + ಆಗಿ = ಕೇಶವಮಹಾರಾಜನಿಗೆ ಚಂದ್ರಕೀರ್ತಿಎಂಬ ಮಗನಾಗಿ ಹುಟ್ಟಿದೆ; ಜಯಕೀರ್ತಿಯೆಂಬ ಕೆಳೆಯನುಂ + ಆನುಂ + ಒಡವಳೆದು = ಆನಂತರ ಜಯಕೀರ್ತಿಯೆಂಬ ಗೆಳೆಯನ ಜೊತೆಗೆ ಬೆಳೆದು, ಗೃಹೀತ + ಅಣುವ್ರತನೆಂ = ಅಣುವ್ರತಗಳನ್ನು ತೊಟ್ಟ ನಾನು, ಗೃಹಸ್ಥಧರ್ಮಕ್ರಮದೊಳ್ = ಹೃಹಸ್ಥದರ್ಮದಲ್ಲಿ, ಮದೀಯ ವಯಸ್ಯನುಂ + ಆನುಂ = ನನ್ನ ಗೆಳೆಯನೂ ನಾನೂ, ನೆಗಱ್ದು = ತೊಡಗಿ, ಜೀವಿತ + ಅಂತ್ಯದೊಳ್ = ಬದುಕಿನ ಕಡೆಯಲ್ಲಿ, ಪ್ರೀತಿವರ್ಧನೋದ್ಯಾನದೊಳ್ = ಪ್ರೀತಿವರ್ಧನ ಉದ್ಯಾನದಲ್ಲಿ, ಚಂದ್ರಸೇನಾ ಚಾರ್ಯರ ಶ್ರೀಪಾದಪದ್ಮಪಾರ್ಶ್ವದೊಳ್ = ಚಂದ್ರಸೇನಾಚಾರ್ಯರ ಪಾವನ ಸನ್ನಿಧಿಲ್ಲಿ, ಸನ್ಯಸನವಿಧಿಯೊಳ್ = ಸನ್ಯಸನವಿಧಿಯನ್ನು ಸ್ವೀಕರಿಸಿ, ಪರಿತ್ಯಕ್ತ + ಆಹಾರಶರೀರನೆಂ = ತೊರೆದ ಆಹಾರದವನಾಗಿ, ಸಮಾಧಿವಡೆದು = ಸಮಾಧಿಮರಣ ಹೊಂದಿ, ಮಹೇಂದ್ರಕಲ್ಪದೊಳ್ = ಮಹೇಂದ್ರಕಲ್ಪದಲ್ಲಿ, ಸಪ್ತಸಾಗರೋ ಪಮಪ್ರಮಿತಜೀವಿತನೆಂ = ಏಳು ಸಾಗರಗಳಷ್ಟು ದೀರ್ಘ ಆಯುಸ್ಸನ್ನು ಪಡೆದವನಾಗಿ, ಸಾಮಾನಿಕ ದೇವನಾಗಿ ಪುಟ್ಟಿದೆಂ = ಸಾಮಾನಿಕದೇವನಾಗಿ ಹುಟ್ಟಿದೆ; ಜಯಕೀತಿಯುಂ + ಆತ್ಮೀಯವಿಭವಸದೃಶನಾಗಿ = ಜಯಕೀರ್ತಿಯೂ ನನ್ನಷ್ಟೇ ವೈಭವವನ್ನು

ಹೊಂದಿದವನಾಗಿ, ತತ್ + ಕಲ್ಪದೊಳ್ ಪುಟ್ಟಿದಂ = ಅದೇ ಕಲ್ಪದಲ್ಲಿ ಹುಟ್ಟಿದ; ಅಂತು + ಇರ್ವರುಂ = ಆ ರೀತಿ ಇಬ್ಬರೂ, ಅಮರಾಂಗನಾ + ಅಪಾಂಗವಿಳೋಕನಸುಖಮನನುಭವಿಸಿ ಬಂದು = ದೇವತಾಸ್ತ್ರೀಯರ ಕುಡಿನೋಟದ ಸುಖವನ್ನು ಅನುಭವಿಸಿ ಬಂದು, ಪುಷ್ಕರವರದ್ವೀಪದ, ಮೂಡಣ ಸುಮೇರುದ = ಪೂರ್ವದಿಕ್ಕಿನಲ್ಲಿನ ಸುಮೇರುದ, ಪೂರ್ವವಿದೇಹದ ಮಂಗಳಾವತೀವಿಷಯದ = ಪೂರ್ವವಿದೇಹದ ಮಂಗಳಾವತೀ ನಾಡಿನ, ರತ್ನಸಂಚಯಪುರಾಧಿಪಂ = ರತ್ನಸಂಚಯಪುರದ ಒಡೆಯನಾದ, ಶ್ರೀಧರಂಗಂ + ಆತನ ಮನೋಹರಿ ಮನೋಹರಿಗಂ = ಶ್ರೀಧರನಿಗೂ ಅವನ ಹೆಂಡತಿ ಮನೋಹರಿಗೂ, ಶ್ರೀವರ್ಮನುಂ ವಿಭೀಷಣನುಂ, ಎಂಬ ಪೆಸರೊಳ್ = ಎಂಬ ಹೆಸರಿನಿಂದ, ಬಲದೇವವಾಸುದೇವರಾಗಿ ಬಳೆಯೆ = ಬಲದೇವ ವಾಸುದೇವರಂತೆ ಬೆಳೆಯಲು, ಮದೀಯಜನಕನ್ = ನಮ್ಮ ತಂದೆಯು, ಎಮ್ಮಿರ್ವರುಮನ್ + ಅಧಿರಾಜಯುವರಾಜಪದವಿಯೊಳ್ ನಿಱಿಸಿ = ನಮ್ಮಿಬ್ಬರನ್ನೂ ಅಧಿರಾಜ ಮತ್ತು ಯುವರಾಜಪದವಿಗಳಲ್ಲಿ ಮಾಡಲು,

**ಗದ್ಯಾನುಸರಣ:** 'ಅದು ಹೇಗೆಂದರೆ, ನನಗೂ ಮೂರುಲೋಕಗಳಿಗೂ ಗುರುಗಳಾದ ಯಶೋಧರಗುರುಗಳಿಗೆ ಕೇವಲಜ್ಞಾನವು ಉದಿಸಿದ ಶುಭಸಂದರ್ಭದಲ್ಲಿ ನಿಶ್ಚಲಭಕ್ತಿಯ ಕಾರಣದಿಂದ ನನಗೆ ಅವಧಿಜ್ಞಾನ ಹುಟ್ಟಿತು; ಹೀಗಾಗಿ ನನ್ನ ನಿನ್ನ ಹಾಗೂ ನಿನ್ನ ಮನಃಪ್ರಿಯನ ಜನ್ಮಾಂತರಗಳ ಅನುಕ್ರಮವನ್ನು ತಿಳಿದುಕೊಂಡೆ; ಅವುಗಳ ವಿವರಗಳನ್ನು ಮೊದಲಿನಿಂದ ಕೊನೆಯವರೆಗೂ ಕೇಳು' ಎಂದು ನಿರೂಪಿಸಲು ತೊಡಗಿದ: ಈ ಜನ್ಮದ ಹಿಂದಿನ ಐದನೆಯ ಜನ್ಮದಲ್ಲಿ ನಾನು ಈ ಪುಂಡರೀಕಿಣಿಯಲ್ಲಿ ಕೇಶವಮಹಾರಾಜನಿಗೆ ಚಂದ್ರಕೀರ್ತಿಎಂಬ ಮಗನಾಗಿ ಹುಟ್ಟಿದೆ; ಆನಂತರ ಜಯಕೀರ್ತಿಯೆಂಬ ಗೆಳೆಯನ ಜೊತೆಗೆ ಬೆಳೆದೆ; ಅಣುವ್ರತಗಳನ್ನು ತೊಟ್ಟು ನಾನೂ ನನ್ನ ಗೆಳೆಯನೂ ನಾನೂ ಗೃಹಸ್ಥಧರ್ಮಕ್ರಮದಲ್ಲಿ ತೊಡಗಿದೆವು; ಬದುಕಿನ ಕಡೆಯಲ್ಲಿ ಪ್ರೀತಿವರ್ಧನ ಉದ್ಯಾನದಲ್ಲಿ ಚಂದ್ರಸೇನಾಚಾರ್ಯರ ಪಾವನ ಸನ್ನಿಧಿಲ್ಲಿ ಸನ್ಯಸನವಿಧಿಯನ್ನು ಸ್ವೀಕರಿಸಿದೆವು; ಆಹಾರವನ್ನು ತೊರೆದು ಸಮಾಧಿಮರಣ ಹೊಂದಿ ಮಹೇಂದ್ರಕಲ್ಪದಲ್ಲಿ ಏಳು ಸಾಗರಗಳಷ್ಟು ದೀರ್ಘ ಆಯುಸ್ಸನ್ನು ಪಡೆದು ಸಾಮಾನಿಕ ದೇವನಾಗಿ ಹುಟ್ಟಿದೆ; ಜಯಕೀರ್ತಿಯೂ ನನ್ನಷ್ಟೇ ವೈಭವದವನ್ನು ಹೊಂದಿದವನಾಗಿ ಅದೇ ಕಲ್ಪದಲ್ಲಿಯೇ ಹುಟ್ಟಿದ; ಹೀಗೆ ಇಬ್ಬರೂ ದೇವತಾಸ್ತ್ರೀಯರ ಸಹವಾಸಸುಖವನ್ನು ಅನುಭವಿಸಿ ಬಂದು ಪುಷ್ಕರವರದ್ವೀಪದ ಪೂರ್ವದಿಕ್ಕಿನಲ್ಲಿನ ಸುಮೇರುದ ಪೂರ್ವವಿದೇಹದ ಮಂಗಳಾವತೀ ನಾಡಿನ ರತ್ನಸಂಚಯಪುರದ ಒಡೆಯನಾದ ಶ್ರೀಧರ–ಮನೋಹರಿ ದಂಪತಿಗೆ ಶ್ರೀವರ್ಮ ವಿಭೀಷಣ ಎಂಬ ಹೆಸರಿನಿಂದ ಮಕ್ಕಳಾಗಿ ಹುಟ್ಟಿ, ಬಲದೇವ ವಾಸುದೇವರಂತೆ ಬೆಳೆಯಲು, ನಮ್ಮ ತಂದೆಯು ನಮ್ಮಿಬ್ಬರಿಗೆ ಅಧಿರಾಜ ಮತ್ತು ಯುವರಾಜಪದವಿಗಳನ್ನಿತ್ತ.

**ವಿಶೇಷ ವಿಚಾರ:** ಬಲದೇವ ವಾಸುದೇವ: ೨೪ ಮಂದಿ ತೀರ್ಥಂಕರರು, ೧೨ ಮಂದಿ ಚಕ್ರವರ್ತಿಗಳು, ೯ ಮಂದಿ ಬಲದೇವರು, ೯ ಮಂದಿ ವಾಸುದೇವರು ಹಾಗೂ ೯ ಮಂದಿ ಪ್ರತಿವಾಸುದೇವರನ್ನು 'ತ್ರಿಷಷ್ಟಿಶಲಾಕಾಪುರುಷ'ರೆಂದು ಕರೆಯುತ್ತಾರೆ (ತ್ರಿಷಷ್ಟಿಶಲಾಪುರುಷರ ಪೂರ್ಣ ಪಟ್ಟಿಗೆ ನೋಡಿ, ಅನುಬಂಧ ೧ – ಜೈನ ಪರಿಭಾಷೆ). ಅವರಲ್ಲಿ ವಿಜಯ, ಅಚಲ, ಸುಧರ್ಮ, ಸುಪ್ರಭ, ಸುದರ್ಶನ, ನಂದಿ, ನಂದಿಮಿತ್ರ, ರಾಮ, ಮತ್ತು ಪದ್ಮ ಎಂಬುವವರು ಬಲದೇವರುಗಳು; ವಾಸುದೇವರನ್ನು ಅರ್ಧಚಕ್ರವರ್ತಿ ಎಂದೂ ಕರೆಯುತ್ತಾರೆ; ಅವರೆಂದರೆ ತ್ರಿಪುಷ್ಠ, ದ್ವಿಪೃಷ್ಠ, ಸ್ವಯಂಭೂ, ಪುರುಷೋತ್ತಮ, ಪುರುಷಸಿಂಹ, ಪುಂಡರೀಕ, ದತ್ತ, ಲಕ್ಷ್ಮಣ ಮತ್ತು ಕೃಷ್ಣ}

**ಅಱಿವಂ ಮೆಱೆದೆರಡಱಿಯದ**
**ತಱಿಸಲವವಮರ್ದಿರೆ ಸುಧರ್ಮಮುನಿಪದ್ಮ**
**ಕ್ಕೆಱಗಿ ಜಿನರೂಪವೆಂಬೊಂ**
**ದಱಿವಿಡಿದಘಬಲಮನಲೆದು ಶಿಲೆಯೊಳ್ ಪೊಯ್ದಂ ೫೧**

**ಪದವಿಭಾಗ–ಅನ್ವಯ–ಅರ್ಥ:** ಅಱಿವಂ = ತಿಳಿವನ್ನು, ಮೆಱೆದು = ಮೆರೆದು, ಎರಡಱಿಯದ ತಱಿಸಲವು + ಅಮರ್ದಿರೆ = ಎರಡಿಲ್ಲದ ನಿರ್ಧಾರವು ಉಂಟಾಗಿರಲು, ಸುಧರ್ಮಮುನಿಪದ್ಮಕ್ಕೆ + ಎಱಗಿ = ಸುಧರ್ಮರೆಂಬ ಮುನಿಗಳ ಪಾದಕ್ಕೆ ನಮಿಸಿ, ಜಿನರೂಪಂ + ಎಂಬೊಂದು + ಅಱಿವು + ಪಿಡಿದು = ಜಿನಸ್ವರೂಪ ಎಂಬ ಜ್ಞಾನವನ್ನು ಹೊಂದಿ, ಅಘಬಲಮನ್ + ಅಲೆದು ಶಿಲೆಯೊಳ್ ಪೊಯ್ದಂ = ಪಾಪವನ್ನು ಎತ್ತಿ ಬಂಡೆಗೆ ಬಡಿದಿಕ್ಕಿದ

**ಗದ್ಯಾನುಸರಣ:** (ತಂದೆಯು) ತಿಳಿವನ್ನು ಹೊಂದಿ, ದೃಢನಿರ್ಧಾರದಿಂದ ಸುಧರ್ಮರೆಂಬ ಮುನಿಗಳ ಪಾದಕ್ಕೆ ನಮಿಸಿ, ಜಿನಸ್ವರೂಪ ಎಂಬ ಜ್ಞಾನವನ್ನು ಹೊಂದಿ ಪಾಪವನ್ನು ಬಂಡೆಗೆ ಬಡಿದಿಕ್ಕಿದ.

**ವ। ಎಮ್ಮ ತಾಯ್ ಮನೋಹರಿಯುಮೆಮ್ಮೊಳಪ್ಪ ಮೋಹಂ ಕಾರಣಮಾಗೆ ತಪಮಂ ಕೈಕೊಳ್ಳದೆ ಸಕಳಶ್ರಾವಕವ್ರತಂಗಳಂ ಕೈಕೊಂಡು ಪಲವುಂ ತೆಱದ ನೋಂಪಿಗಳಂ ನೋಂತು ಜೀವಿತಾಂತ್ಯದೊಳೀಶಾನ ಕಲ್ಪದೊಳ್ ಶ್ರೀಪ್ರಭವಿಮಾನದೊಳ್ ಲಲಿತಾಂಗದೇವನಾದಳ್. ಅನ್ನೆಗಮಿತ್ತ ನಿಧಾನಮಂ ತೋಱಿ ಕಣ್ಣಂ ಕಳೆವಂತೆ**

**ಪದವಿಭಾಗ–ಅನ್ವಯ–ಅರ್ಥ:** (ಆದರೆ) ಎಮ್ಮ ತಾಯ್ ಮನೋ ಹರಿಯುಂ = ನಮ್ಮ ತಾಯಿ ಮನೋಹರಿಯು, ಎಮ್ಮೊಳಪ್ಪ ಮೋಹಂ ಕಾರಣಮಾಗೆ = ನಮ್ಮ ಬಗ್ಗೆಯಿದ್ದ ಮೋಹದ ಕಾರಣದಿಂದ, ತಪಮಂ ಕೈಕೊಳ್ಳದೆ = ದೀಕ್ಷೆಯನ್ನು

ತಾಳದೆ, ಸಕಳಶ್ರಾವಕವ್ರತಂಗಳಂ ಕೈಕೊಂಡು = ಎಲ್ಲ ಶ್ರಾವಕವ್ರತಗಳನ್ನೂ ತೊಟ್ಟು, ಪಲವುಂ ತೆಜಿದ ನೋಂಪಿಗಳಂ ನೋಂತು = ಹಲವು ಬಗೆಯ ನೋಂಪಿಗಳನ್ನು ಕೈಗೊಂಡು, ಜೀವಿತಾಂತ್ಯದೊಳ್ = ಜೀವನದ ಕೊನೆಯಲ್ಲಿ, ಈಶಾನಕಲ್ಪದೊಳ್ ಶ್ರೀಪ್ರಭವಿಮಾನದೊಳ್ ಲಲಿತಾಂಗದೇವನಾದಳ್ = ಈಶಾನಕಲ್ಪದ ಶ್ರೀಪ್ರಭ ವಿಮಾನದಲ್ಲಿ ಲಲಿತಾಂಗದೇವನಾಗಿ ಹುಟ್ಟಿದಳು. ಅನ್ನೆಗಂ + ಇತ್ತ = ಅಷ್ಟರಲ್ಲಿ ಈ ಕಡೆ, ನಿಧಾನಮಂ ತೋಱಿ ಕಣ್ಣಂ ಕಳೆವಂತೆ = ನಿಧಿಯನ್ನು ತೋರಿಸಿ ಕಣ್ಣನ್ನು ಹೋಗಲಾಡಿಸುವಂತೆ

**ಗದ್ಯಾನುಸರಣ:** ಆದರೆ ನಮ್ಮ ತಾಯಿ ಮನೋಹರಿ ಮಾತ್ರ ನಮ್ಮ ಮೇಲಿದ್ದ ಮೋಹದ ಕಾರಣದಿಂದ ದೀಕ್ಷೆಯನ್ನು ತಾಳಲಿಲ್ಲ; ಆದರೆ ಎಲ್ಲ ಶ್ರಾವಕವ್ರತಗಳನ್ನೂ ತೊಟ್ಟು, ಹಲವು ಬಗೆಯ ನೋಂಪಿಗಳನ್ನು ಕೈಗೊಂಡು, ಜೀವನದ ಕೊನೆಯಲ್ಲಿ ಈಶಾನಕಲ್ಪದ ಶ್ರೀಪ್ರಭವಿಮಾನದಲ್ಲಿ ಲಲಿತಾಂಗದೇವನಾಗಿ ಹುಟ್ಟಿದಳು. ಅಷ್ಟರಲ್ಲಿ ಈ ಕಡೆ, ನಿಧಿಯನ್ನು ತೋರಿಸಿ ಕಣ್ಣನ್ನು ಹೋಗಲಾಡಿಸುವಂತೆ

**ಬಿದಿಯೆಂಬಾರಡಿಗಳ್ಳನೆನ್ನನುಜನಂ ಗೋವಿಂದನಂ ನಿರ್ನೆರು**
**ಯ್ಯುದುಮಿನ್ನೇತೊದಳೊಂದೆ ಕಿಚ್ಚೆನಗಮಿಂತೀತಂಗಮಿನ್ನೀತನಿ**
**ಲ್ಲದೆ ಪೇಟ್ ಮಾನಸವಾಟಿ ಮೋಹಮೆನಗಿನ್ನೇಬಾರ್ತೆಯೆಂದುಗ್ರಶೋ**
**ಕದಿನಾಕ್ರಂದಿಸಿದೆಂ ಸಹೋದರವಿಯೋಗೋದ್ವೇಗಮೇಗೆಯ್ಯದೋ॥೨**

**ಪದವಿಭಾಗ–ಅನ್ವಯ–ಅರ್ಥ:** ಬಿದಿಯೆಂಬ + ಆರಡಿಗಳ್ಳನ್ = ವಿಧಿ ಎಂಬ ದರೋಡೆಕಾರನು, ಎನ್ನ + ಅನುಜನಂ ಗೋವಿಂದನಂ = ನನ್ನ ಸೋದರ ವಾಸುದೇವನಂತಿದ್ದ ವಿಭೀಷಣನನ್ನು, ನಿರ್ನೆರ + ಉಯ್ಯುದುಂ = ನಿರ್ದಯನಾಗಿ ಕರೆದೊಯ್ಯಲು, ಇನ್ನು + ಏತೊದಳ್ = ಇನ್ನೇನು ಹಿಂಜರಿಕೆ, ಇಂತು + ಈತಂಗಂ ಎನಗಂ + ಒಂದೆ ಕಿಚ್ಚು = ಇನ್ನು ಇವನಿಗೂ ನನಗೂ ಒಂದೇ ಕಿಚ್ಚು, ಇನ್ನು + ಈತನಿಲ್ಲದೆ = ಮುಂದೆ ಇವನಿಲ್ಲದೆ, ಮಾನಸವಾಟಿ ಮೋಹಂ + ಎನಗಿನ್ನು + ಏಬಾರ್ತೆ ಪೇಟ್ = ಮನುಷ್ಯನಾಗಿ ಬಾಳುವುದು ನನಗಿನ್ನಾವ ಪ್ರಯೋಜನ? ಎಂದು + ಉಗ್ರಶೋಕನ್ + ಆಕ್ರಂದಿಸಿದೆಂ = ಎಂದು ಆಳವಾದ ಶೋಕದಿಂದ ಗೋಳಾಡಿದೆ. ಸಹೋದರವಿಯೋಗ + ಉದ್ವೇಗಂ + ಏಗೆಯ್ಯದೋ = ತಮ್ಮನ ವಿಯೋಗದ ತೀವ್ರತೆಯು ಏನು ತಾನೆ ಮಾಡದು!

**ಗದ್ಯಾನುಸರಣ:** ವಿಧಿ ಎಂಬ ದರೋಡೆಕಾರನು ವಾಸುದೇವನಂತಿದ್ದ ನನ್ನ ಸೋದರ ವಿಭೀಷಣನನ್ನು ನಿರ್ದಯನಾಗಿ ಕರೆದೊಯ್ದ. ಇನ್ನೇನುಹಿದೆಮುಂದೆ ನೋಡುವುದು: ಇನ್ನು ಇವನು ಹೊಗುವ ಬೆಂಕಿಯೇ ನನಗೆ ಗತಿ, ಇವನಿಲ್ಲದೆ

ಮನುಷ್ಯನಾಗಿ ಬಾಳಿ ನನಗಿನ್ನೇನಾಗಬೇಕಾಗಿದೆ? ಎಂದು ಆಳವಾದ ಶೋಕದಿಂದ ಗೋಳಾಡಿದೆ. ತಮ್ಮನ ವಿಯೋಗದ ತೀವ್ರತೆಯು ಏನು ತಾನೆ ಮಾಡದು!

**ವ॥ ಅಂತು ವಿಭೀಷಣವಿಪತ್ತಿಯೊಳತಿಪ್ರಳಾಪಂಗೆಯ್ವನ್ನೆಗಂ ಶೋಕಾವೇಗಮನಱಿದು ಮುನ್ನಿನ ಭವದ ಜನನೀಸಂಬಂಧಮೋಹಂ ಕಾರಣಮಾಗೆ ಲಲಿತಾಂಗದೇವಂ ಬಂದು,**

**ಪದವಿಭಾಗ–ಅನ್ವಯ–ಅರ್ಥ:** ಅಂತು ವಿಭೀಷಣವಿಪತ್ತಿಯೊಳ್ = ಹಾಗೆ ವಿಭೀಷಣನ ವಿಯೋಗದಲ್ಲಿ, ಅತಿಪ್ರಳಾಪಂಗೆಯ್ವನ್ನೆಗಂ = ಗೋಳಡುತ್ತಿರುವಷ್ಟರಲ್ಲಿ, ಶೋಕ + ಆವೇಗಮನ್ + ಅಱಿದು = ಶೋಕತೀವ್ರತೆಯನ್ನು ತಿಳಿದು, ಮುನ್ನಿನ ಭವದ ಜನನೀಸಂಬಂಧಮೋಹಂ ಕಾರಣಮಾಗೆ = ಹಿಂದಿನ ಜನ್ಮದ ತಾಯಿಯ ಸಂಬಂಧದ ಮೋಹದ ಕಾರಣದಿಂದ, ಲಲಿತಾಂಗದೇವಂ ಬಂದು = ಲಲಿತಾಂಗನು ಬಂದು

**ಗದ್ಯಾನುಸರಣ:** ಹಾಗೆ ವಿಭೀಷಣನ ವಿಯೋಗದಿಂದ ನಾನು ಗೋಳಾಡುತ್ತಿರುವಾಗ ಶೋಕತೀವ್ರತೆಯನ್ನು ತಿಳಿದು ಹಿಂದಿನ ಜನ್ಮದ ತಾಯಿಯ ಸಂಬಂಧದ ಮೋಹದ ಕಾರಣದಿಂದ ಲಲಿತಾಂಗನು ಬಂದ.

**ಕಱಿದವರ್ಗಱ್ವುದಱ್ತೊಡವರೇೞ್ವರೇ ಮೇಣವರಿಂ ಬೞಿಕ್ಕೆ ತಾ**
**ಮುೞಿವರೆಯೇೞರಂತವರಣಂ ತಮಗಂ ಬರ್ದುಕಿಲ್ಲ ಧರ್ಮಮಂ**
**ಘಟಿಯಿಸಿಕೊಳ್ವುದೊಂದೆ ಚದುರಿಂತುಟು ಸಂಸೃತಿಧರ್ಮಮೇಕೆ ಬಾ**
**ಯಱುವುದದೇಕೆ ಚಿಂತಿಸುವುದೇಕೆ ಪಲುಂಬುವುದೇಕೆ ನೋವುದೋ ೫೩**

**ಪದವಿಭಾಗ–ಅನ್ವಯ–ಅರ್ಥ:** ಕಱಿದವರ್ಗಱ್ವುದೆ = ಸತ್ತವರಿಗೆ ಅಳುವುದೇ? ಅಱ್ತೊಡೆ + ಅವರೇೞ್ವರೇ = ಅತ್ತರೆ ಅವರು ಎದ್ದು ಬರುತ್ತಾರೆಯೇ? ಮೇಣವರಿಂ ಬೞಿಕ್ಕೆ ತಾಂ + ಉೞಿವರೆ = ಅಲ್ಲದೆ, ಅವರ ನಂತರ ತಾವಾದರೂ ಉಳಿಯುತ್ತಾರೆಯೇ? ಯೇೞರ್ + ಅಂತು + ಅವರ್ = ಅವರು ಹಾಗೆ ಏಳುವುದಿಲ್ಲ, ತಮಗಂ ಅಣಂ ಬರ್ದುಕಿಲ್ಲ = ತಮಗೂ ಸ್ವಲ್ಪ ಬದುಕೂ ಇರುವುದಿಲ್ಲ; ಧರ್ಮಮಂಘಟಿಯಿಸಿಕೊಳ್ವುದೊಂದೆ ಚದುರ್ = ಧರ್ಮವನ್ನು ಗಳಿಸಿಕೊಳ್ಳುವುದೊಂದೆ ಬುದ್ಧಿವಂತಿಕೆ; ಇಂತುಟು ಸಂಸೃತಿಧರ್ಮಂ = ಸಂಸಾರದ ಸ್ವರೂಪ ಇಂತಹುದು. ಏಕೆ ಬಾಯಱುವುದು = ಗೋಳಾಡುವುದೇಕೆ? ಅದೇಕೆ ಚಿಂತಿಸುವುದು = ಚಿಂತಿಸುವುದು ಏಕೆ? ಏಕೆ ಪಲುಂಬುವುದು = ಏಆತಕ್ಕಾಗಿ ಹಲುಬುವುದು? ಏಕೆ ನೋವುದೋ = ಏತಕ್ಕಾಗಿ ನೋಯಬೇಕೋ!

**ಗದ್ಯಾನುಸರಣ:** ಸತ್ತವರಿಗೆ ಅಳುವುದೇಕೆ? ಅತ್ತರೇನು ಅವರು ಎದ್ದು ಬರುತ್ತಾರೆಯೇ? ಅಥವಾ ಅವರ ನಂತರ ಅತ್ತವರಾದರೂ ಉಳಿಯುತ್ತಾರೆಯೇ? ಅವರೂ ಹಾಗೆ ಏಳುವುದಿಲ್ಲ, ತಮಗೂ ಬದುಕು ಇರುವುದಿಲ್ಲ; ಹೀಗಾಗಿ ಧರ್ಮವನ್ನು ಗಳಿಸಿಕೊಳ್ಳುವುದೊಂದೆ ಬುದ್ಧಿವಂತಿಕೆ; ಸಂಸಾರದ ಸ್ವರೂಪವೇ ಇಂತಹುದು. ಗೋಳಾಡುವುದೇಕೆ, ಚಿಂತಿಸುವುದೇಕೆ, ಹಲುಬುವುದೇಕೆ, ನೋಯುವುದೇಕೋ!

**ವಿಶೇಷ ವಿಚಾರ:** ಈ ಪದ್ಯ ಪಂಪಭಾರತದ ೨-೨೭ ನೇ ಪದ್ಯವೇ ಆಗಿದೆ. ಈ ಪದ್ಯವು ಮಾದ್ರಿಯ ಸಾವಿನ ಸನ್ನಿವೇಶದಲ್ಲಿ ಬಂದಿರುವ ಪದ್ಯ; ಮಾದ್ರಿ ಸಹಗಮನ ಮಾಡಿಕೊಂಡಾಗ ತಪೋವೃದ್ಧರು ಕುಂತಿಯನ್ನು ಸಂತೈಸುವ ಪರಿ ಇದು.

**ಅವನೀವ್ಯೋಮಮನೆಯ್ದೆ ಪರ್ಬಿ ಬಳೆದುಂಶೋಕಾನುಬಂಧಾಂಧಬಾಂ**
**ಧವಹಾಹಾರವಮೆಂತುಮೆಯ್ದದು ವಲಂ ಲೋಕಾಂತರಪ್ರಾಪ್ತನ**
**ಪ್ಪವನಂ ನಿರ್ಭರಪೂರಮಾಗಿಯುಮತಿಸ್ನಿಗ್ಧಾಶ್ರುಧಾರಾಜಳ**
**ಪ್ಲವಮುಂ ಬಾರಿಸಲೆಂತುಮಾಱದು ವಲಂ ಕಾಳೋರಗಗ್ರಸ್ತನಂ॥೪**

**ಪದವಿಭಾಗ-ಅನ್ವಯ-ಅರ್ಥ:** ಶೋಕ + ಅನುಬಂಧ + ಅಂಧ = ದುಃಖದಿಂದ ಕೂಡಿ ಕುರುಡರಾದ, ಬಾಂಧವ = ನೆಂಟರಿಷ್ಟರ, ಹಾಹಾರವಂ = ಗೋಳಾಟವು, ಅವನೀವ್ಯೋಮಮನ್ + ಎಯ್ದೆ ಪರ್ಬಿ ಬಳೆದುಂ = ಭೂಮಿ ಆಕಾಶಗಳನ್ನು ಹಬ್ಬಿ ಬೆಳೆದರೂ, ಲೋಕಾಂತರಪ್ರಾಪ್ತನಪ್ಪವನಂ = ಬೇರೆ ಲೋಕಕ್ಕೆ ಹೋದವನನ್ನು, ಎಂತುಂ + ಎಯ್ದದು ವಲಂ = ಹೇಗೂ ಮುಟ್ಟಲಾರದು; ಅತಿಸ್ನಿಗ್ಧ + ಅಶ್ರುಧಾರಾಜಳಪ್ಲವಮುಂ = ಒಂದೇ ಸಮನಾದ ಕಣ್ಣೀರಧಾರೆಯು, ನಿರ್ಭರಪೂರಮಾಗಿಯುಂ = ತುಂಬು ಪ್ರವಾಹವಾಗಿ ಹರಿದರೂ, ಕಾಳ + ಉರಗಗ್ರಸ್ತನಂ = ಕರಿನಾಗರವು ಕಚ್ಚಿದವನನ್ನು, ಬಾರಿಸಲ್ + ಎಂತುಮಾಱದು ವಲಂ = ಹೇಗೂ ಕಾಪಾಡಲು ಸಾಧ್ಯವಾಗದು ತಾನೇ!

**ಗದ್ಯಾನುಸರಣ:** ದುಃಖದಿಂದ ಕೂಡಿ ಕುರುಡರಾದ ನೆಂಟರಿಷ್ಟರ ಗೋಳಾಟವು ಭೂಮಿ ಆಕಾಶಗಳನ್ನು ಹಬ್ಬಿದರೂ ಸತ್ತವನನ್ನು ತಲುಪಲಾರದು; ಕಣ್ಣೀರಧಾರೆಯು ಪ್ರವಾಹವಾಗಿ ಹರಿದರೂ ಕರಿನಾಗರವು ಕಚ್ಚಿದವನನ್ನು ಕಾಪಾಡಲು ಸಾಧ್ಯವಾಗದು, ಅಲ್ಲವೇ!

**ತನಯಂ ತಾಯ್ತಂದೆ ತಮ್ಮಂ ಕೆಳೆಯನಳಿಯನಾಳ್ವಜ್ಜನೆಮ್ಮಜ್ಜನಿಷ್ಟಾಂ**
**ಗನೆಯೆಂದಾರಾರನಾವಾವಱಕೆಯ ಭವಸಂಬಂಧಮಂ ಕಂಡು ನಿಚ್ಚಂ**
**ನೆನೆವೋ ನೀನಾರ್ಗೆ ನಿನ್ನಂ ಪಳಯಿಸುವವರಾರ್ಗೇಕೆ ಶೋಕಿಪ್ಪೆ ಮಾಣ್ಮಾಣ್**
**ಮನದೊಳ್ನೀನಾರ್ಪೊಡಿಂ ನಿನ್ನೊಡಲನೆ ಜಿನದೀಕ್ಷಾಕ್ಷಮಂ ಮಾಡು ಪುತ್ರಾ** ೫೫

**ಪದವಿಭಾಗ–ಅನ್ವಯ–ಅರ್ಥ:** ತನಯಂ = ಮಗ, ತಾಯ್ತಂದೆ, ತಮ್ಮಂ, ಕೆಳೆಯನ್ = ಗೆಳೆಯ, ಅಳಿಯನ್, ಆಳ್ವ + ಅಜ್ಜನ್ + ಆಳುವ ಹಿರಿಯ, ಎಮ್ಮಜ್ಜನ್ = ನಮ್ಮ ಹಿರಿಯ, ಇಷ್ಟಾಂಗನೆ = ಪ್ರಿಯಳಾದ ಹೆಣ್ಣು, ಎಂದು + ಆರಾರನ್ + ಆವಾವ = ಎಂದು ಯಾವುಯಾವುದೋ, ಅಱಕೆಯ ಭವ ಸಂಬಂಧಮಂ ಕಂಡು = ಗೊತ್ತಿರುವ ಇಹದ ಸಂಬಂಧವನ್ನು ನೋಡಿ, ನಿಚ್ಚಂ ನೆನೆವೋ = ಯಾವಾಗಲೂ ನೆನೆಸಿಕೊಳ್ಳುವೆ! ನೀನ್ + ಆರ್ಗೆ = ನೀನು ಯಾರು, ನಿನ್ನಂ ಪಳಯಿಸುವವರ್ + ಆರ್ಗೆ = ನಿನಗಾಗಿ ಗೋಳಾಡುವವರು ಯಾರು? ಏಕೆ ಶೋಕಿಪ್ಪೆ = ಏತಕ್ಕಾಗಿ ಶೋಕಿಸುವೆ, ಮಾಣ್ಮಾಣ್ = ಬಿಟ್ಟುಬಿಡು, ಆರ್ಪೊಡೆ ನೀನ್ ಮನದೊಳ್ = ಸಾಧ್ಯವಾದರೆ ಮನಸ್ಸಿನಲ್ಲಿ ನೀನು, ಪುತ್ರಾ ಇಂ ನಿನ್ನ + ಒಡಲನೆ ಜಿನದೀಕ್ಷಾಕ್ಷಮಂ ಮಾಡು = ಮಗನೆ, ನಿನ್ನ ದೇಹವನ್ನು ಜಿನದೀಕ್ಷೆಗೆ ಮುಡುಪಿಡು

**ಗದ್ಯಾನುಸರಣ:** ಮಗ, ತಾಯ್ತಂದೆ, ತಮ್ಮ, ಗೆಳೆಯ, ಅಳಿಯ, ಆಳುವ ಹಿರಿಯ, ನಮ್ಮ ಹಿರಿಯ, ಪ್ರಿಯೆ – ಎಂದು ಯಾವುಯಾವುದೋ ಇಹದ ಸಂಬಂಧವನ್ನು ನಚ್ಚಿಕೊಂಡು ಯಾಕೆ ನೆನೆಸಿಕೊಳ್ಳುವೆ! ನೀನು ಯಾರು, ನಿನಗಾಗಿ ಅಳುವವರು ಯಾರು? ಏತಕ್ಕಾಗಿ ಶೋಕಿಸುವೆ, ಅದನ್ನೆಲ್ಲ ಬಿಟ್ಟುಬಿಡು; ಮಗನೆ, ಸಾಧ್ಯವಾದರೆ ನಿನ್ನ ದೇಹವನ್ನು ಜಿನದೀಕ್ಷೆಗೆ ಸಮರ್ಪಿಸಿಕೋ.

**ಅತಿಶೋಕಾಗ್ನಿಯೊಳರ್ದು ಬರ್ದು ಪುದಿದಾತ್ಮಧ್ಯಾನದಿಂ ಘೋರದು**
**ರ್ಗತಿಯಂ ಪೊಕ್ಕು ದುರಂತದುಃಖಮನುಣಲ್ವೇಡಿಂಬುಕೆಯ್ ಪೆಂಪುವೆ**
**ತ್ತ ತಪಃಪೋತದಿನಣ್ಣ ನೀಂ ತಡಿಯನೆಯ್ದುಂತಲ್ಲದಿಂತೀ ಚತು**
**ರ್ಗತಿಸಂಸಾರಪಯೋಧಿಯಂ ಪೊಱಮಡಲ್ ಮತ್ತಿಲ್ಲ ನೀನಾರ್ತಪೈ**
೫೬

**ಪದವಿಭಾಗ–ಅನ್ವಯ–ಅರ್ಥ:** ಅತಿಶೋಕಾಗ್ನಿಯೊಳ್ = ತೀವ್ರ ಶೋಕವೆಂಬ ಬೆಂಕಿಯಲ್ಲಿ, ಆರ್ದು ಬರ್ದು ಪುದಿದು = ಬಿದ್ದು ಬದುಕಿನಲ್ಲಿ ಸಿಕ್ಕಿಕೊಂಡು, ಘೋರದುರ್ಗತಿಯುಂ ಪೊಕ್ಕು = ಭಯಂಕರವಾದ ದುರ್ಗತಿಯು, ದುರಂತದುಃಖಮನ್ = ದುರಂತದ ದುಃಖವನ್ನು, ಉಣಲ್ವೇಡ = ಅನುಭವಿಸಬೇಡ; ಆತ್ಮಧ್ಯಾನದಿಂ ಇಂಬುಕೆಯ್ = ಆತ್ಮಧ್ಯಾನವನ್ನು ಸ್ವೀಕರಿಸು; ಅಣ್ಣ ಪೆಂಪು +

ಪೆತ್ತ ತಪಃಪೋತದಿನ್ = ಅಣ್ಣ, ಹಿರಿದಾದ ತಪಸ್ಸು ಎಂಬ ದೋಣಿಯಿಂದ, ನೀಂ ತಡಿಯನೆಯ್ದು = ನೀನು ದಡವನ್ನು ಸೇರಿಕೊ; ಅಂತಲ್ಲದೆ + ಇಂತು + ಈ ಚತುರ್ಗತಿಸಂಸಾರಪಯೋಧಿಯಂ ಪೋಜಿಮಡಲ್ ಮತ್ತಿಲ್ಲ = ಅದರ ಹೊರತು ಚತುರ್ಗತಿಯಿಂದ ಕೂಡಿದ ಇಹವೆಂಬ ಸಾಗರದಿಂದ ಪಾರಾಗಲು ಬೇರೆ ಮಾರ್ಗವಿಲ್ಲ; (ಇದಕ್ಕೆ) ನೀನ್ + ಆರ್ತಪೈ = ನೀನು ಸಮರ್ಥನಾಗಿದ್ದೀಯೆ.

**ಗದ್ಯಾನುಸರಣ:** ತೀವ್ರ ಶೋಕದ ಬೆಂಕಿಯಲ್ಲಿ ಬಿದ್ದು ಬದುಕಿನಲ್ಲಿ ಸಿಕ್ಕಿಕೊಂಡು, ಭಯಂಕರವಾದ ದುರ್ಗತಿಯ ದುರಂತದುಃಖವನ್ನು ಅನುಭವಿಸಬೇಡ; ಆತ್ಮಧ್ಯಾನವನ್ನು ಸ್ವೀಕರಿಸು; ಅಣ್ಣ, ಮಹಿಮೆವಡೆದ ತಪಸ್ಸು ಎಂಬ ದೋಣಿಯ ನೆರವಿನಿಂದ ನೀನು ದಡವನ್ನು ಸೇರಿಕೊ; ಅದರ ಹೊರತು ಚತುರ್ಗತಿಯಿಂದ ಕೂಡಿದ ಇಹವೆಂಬ ಸಾಗರದಿಂದ ಪಾರಾಗಲು ಬೇರೆ ಮಾರ್ಗವಿಲ್ಲ; ಹೀಗೆ ಮಾಡಲು ನಿನಗೆ ಸಾಧ್ಯ.

**ವ। ಎಂಬುದುಂ ಮುನ್ನಾದ ಶೋಕರಸಮೆಲ್ಲಂ ಪೋಗಿ ನಿರ್ವೇಗರಸಂ ಪುಟ್ಟಿ ಸಿದ್ಧರಸಮಂ ಮುಟ್ಟಿದ ಲೋಹದಂತೆ ಶುದ್ಧಾಂತರಙ್ಗನಾಗಿ**

**ಪದವಿಭಾಗ-ಅನ್ವಯ-ಅರ್ಥ:** ಎಂಬುದುಂ = ಎಂದು ಹೇಳುವುದೂ, ಮುನ್ನಾದ ಶೋಕರಸಮೆಲ್ಲಂ ಪೋಗಿ = ಹಿಂದೆ ಉಂಟಾಗಿದ್ದ ದುಃಖವೆಲ್ಲವೂ ಹೋಗಿ, ನಿರ್ವೇಗರಸಂ ಪುಟ್ಟಿ = ವೈರಾಗ್ಯವು ಹುಟ್ಟಿ, ಸಿದ್ಧರಸಮಂ ಮುಟ್ಟಿದ ಲೋಹದಂತೆ = ಸಿದ್ಧರಸದ ಸಂಪರ್ಕಕ್ಕೆ ಬಂದ ಲೋಹದ ಹಾಗೆ ಶುದ್ಧ + ಅಂತರಙ್ಗನಾಗಿ = ಶುದ್ಧವಾದ ಮನಸ್ಸುಳ್ಳವನಾಗಿ,

**ಗದ್ಯಾನುಸರಣ:** ಎಂದು ಬುದ್ಧಿ ಹೇಳಲು ಹಿಂದೆ ಉಂಟಾಗಿದ್ದ ದುಃಖವೆಲ್ಲವೂ ಹೋಗಿ ಸಿದ್ಧರಸದ ಸಂಪರ್ಕಕ್ಕೆ ಬಂದ ಲೋಹದ ಹಾಗೆ ವೈರಾಗ್ಯವು ಹುಟ್ಟಿತು. ಹೀಗೆ ಶುದ್ಧವಾದ ಮನಸ್ಸುಳ್ಳವನಾದ.

**ವಿಶೇಷ ವಿಚಾರ:** ಸಿದ್ಧರಸ: ಕೀಳು ಲೋಹಗಳನ್ನು ಚಿನ್ನವನ್ನಾಗಿ ಪರಿವರ್ತಿಸಲು ಸಿದ್ಧರಸವೇದಿಗಳು ಮಾಡುತ್ತಿದ್ದರೆನ್ನಲಾದ ಒಂದು ದ್ರಾವಣ.

**ಮೊಗಂ ಮುಱಿಯದೆಲ್ಲಮಂ ತೊಱೆದು ವಿಶ್ವವಿಶ್ವಂಭರಾ**
**ದಿಗಂಬರತಟಂಬರಂ ಬಳಸೆ ಕೀರ್ತಿವಲ್ಲೀಚಯಂ**
**ದಿಗಂಬರವಿಳಾಸಮಂ ಬಯಕೆ ತೀರ್ವಿನಂ ತಾಳ್ದಿದಂ**
**ಯುಗಂಧರಮಹಾಮುನೀಂದ್ರಪದಪಂಕಜೋಪಾಂತದೊಳ್ ೫೭**

**ಪದವಿಭಾಗ-ಅನ್ವಯ-ಅರ್ಥ:** ಮೊಗಂ ಮುಱಿಯದ = ಮುಖ

ಕಿವಿಚಿಕೊಳ್ಳದೆ, ಬಯಕೆ ತೀರ್ವಿನಂ = ಆತ್ಮತೃಪ್ತಿಯಿಂದ, ಎಲ್ಲಮಂ ತೊಱೆದು = ಎಲ್ಲವನ್ನೂ ಬಿಟ್ಟು, ವಿಶ್ವವಿಶ್ವಂಭರಾ ದಿಗಂಬರತಟಂಬರಂ = ವಿಶ್ವದ ಭೂಮಿಯ ದಿಕ್ಕುಗಳ ಕೊನೆಯವರೆಗೂ, ಕೀರ್ತಿವಲ್ಲೀಚಯಂ ಬಳಸೆ = ಕೀರ್ತಿಯ ಬಳ್ಳಿಗಳು ಹಬ್ಬಲು, ಯುಗಂಧರಮಹಾಮುನೀಂದ್ರಪದಪಂಕಜ + ಉಪಾಂತದೊಳ್ = ಯುಗಂಧರಮುನಿಗಳ ಪಾದಪದ್ಮಗಳ ಸನ್ನಿಧಿಯಲ್ಲಿ, ದಿಗಂಬರವಿಳಾಸಮಂ ತಾಳ್ದಿದೆಂ = ಬತ್ತಲೆಯ ವೈಭವವನ್ನು ಪಡೆದೆ.

**ಗದ್ಯಾನುಸರಣ:** ಮುಖ ಕಿವಿಚಿಕೊಳ್ಳದೆ ಎಲ್ಲವನ್ನೂ ಸ್ವಸಂತೋಷದಿಂದ ತೊರೆದುಬಿಟ್ಟೆ; ವಿಶ್ವದಲ್ಲೆಲ್ಲ ಕೀರ್ತಿಯು ಹಬ್ಬುವಂತೆ, ಯುಗಂಧರಮುನಿಗಳ ಪಾದಪದ್ಮಗಳ ಸನ್ನಿಧಿಯಲ್ಲಿ ದಿಗಂಬರವೈಭವವನ್ನು ಪಡೆದೆ.

**ವ। ಅಂತು ದಶಸಹಸ್ರಧರಣೀಶ್ವರರೊಡನೆ ಜಿನೇಶ್ವರರೂಪಮಂ ತಾಳ್ದಿ ಸರ್ವತೋ ಭದ್ರಸಿಂಹವಿಕ್ರೀಡಿತಂಗಳೆಂಬ ತಪದೊಳ್ ನೆಗಟ್ದು ಜೀವಿತಾಂತ್ಯ ದೊಳ್ ದ್ವಾವಿಂಶತಿಪಾರಾ ವಾರ ಪರಮಾಯುಷ್ಯನೆನಚ್ಯುತೇಂದ್ರನೆನಾಗಿ,**

**ಪದವಿಭಾಗ-ಅನ್ವಯ-ಅರ್ಥ:** ಅಂತು = ಆ ರೀತಿಯಲ್ಲಿ, ದಶಸಹಸ್ರ ಧರಣೀಶ್ವರರೊಡನೆ = ಹತ್ತು ಸಾವಿರ ಮಂದಿ ರಾಜರುಗಳೊಡನೆ, ಜಿನೇಶ್ವರ ರೂಪಮಂ ತಾಳ್ದಿ = ದಿಗಂಬರತ್ವವನ್ನು ಪಡೆದು, ಸರ್ವತೋಭದ್ರಸಿಂಹವಿ ಕ್ರೀಡಿತಂಗಳೆಂಬ ತಪದೊಳ್ ನೆಗಟ್ದು = ಸರ್ವತೋಭದ್ರ ಮತ್ತು ವಿಕ್ರೀಡಿತಗಳೆಂಬ ಎರಡು ತಪಸ್ಸುಗಳನ್ನು ಮಾಡಿ, ಜೀವಿತಾಂತ್ಯದೊಳ್ = ಆಯುಸ್ಸಿನ ನಂತರ, ದ್ವಾವಿಂಶತಿಪಾರಾವಾರಪರಮಾಯುಷ್ಯನೆನ್ = ಇಪ್ಪತ್ತೆರಡು ಸಾಗರಗಳಷ್ಟು ದೀರ್ಘವಾದ ಆಯುಸ್ಸನ್ನು ಪಡೆದ, ಅಚ್ಯುತೇಂದ್ರನೆನ್ + ಆಗಿ = ಅಚ್ಯುತೇಂದ್ರನಾಗಿ

**ಗದ್ಯಾನುಸರಣ:** ಆ ರೀತಿಯಲ್ಲಿ ಹತ್ತು ಸಾವಿರ ಮಂದಿ ರಾಜರುಗಳೊಡನೆ ದಿಗಂಬರತ್ವವನ್ನು ಪಡೆದು ಸರ್ವತೋಭದ್ರ ಮತ್ತು ವಿಕ್ರೀಡಿತಗಳೆಂಬ ಎರಡು ತಪಸ್ಸುಗಳನ್ನು ಮಾಡಿ ಆಯುಸ್ಸು ಮುಗಿದ ಬಳಿಕ ಇಪ್ಪತ್ತೆರಡು ಸಾಗರಗಳಷ್ಟು ದೀರ್ಘವಾದ ಆಯುಸ್ಸನ್ನು ಪಡೆದ ಅಚ್ಯುತೇಂದ್ರನಾಗಿ ಹುಟ್ಟಿದೆ.

**ವಿಶೇಷ ವಿಚಾರ:** ಸರ್ವತೋಭದ್ರವೆಂಬುದು ದಶವಿಧ ಪೂಜೆಗಳಲ್ಲಿ ಒಂದು; ಮಕುಟಬದ್ಧರಾದ ರಾಜರು ಜಿನನಿಗೆ ಮಾಡುವ ಉಪವಾಸಪೂರ್ವಕವಾದ ಮಹಾಪೂಜೆ. ಸಿಂಹವಿಕ್ರೀಡಿತ ಎಂಬುದೂ ದೀರ್ಘಕಾಲದ ಉಪವಾಸದೊಡನೆ ಮಾಡುವ ಇನ್ನೊಂದು ವ್ರತ.

ಎನಗಿನಿವಿರಿದು ಸುಖಂ ಮ
ಜ್ಜನನೀಚರದಿವಿಜನಿಂದಮಾಯ್ತೆಂದು ಕೃತಂ
ಮನದೊಳ್ ಪುದಿದು ಪೊದಳ್ದಿ
ರ್ಪಿನೆಗಂ ಲಲಿತಾಂಗದೇವನಂ ಪೂಜಿಸಿದೆಂ ೫೮

**ಪದವಿಭಾಗ–ಅನ್ವಯ–ಅರ್ಥ:** ಎನಗೆ + ಇನಿ(ತು) + ಪಿರಿದು ಸುಖಂ = ನನಗೆ ಇಷ್ಟು ದೊಡ್ಡ ಸುಖವು, ಮಜ್ಜನನೀಚರದಿವಿಜನಿಂದಂ + ಆಯ್ತೆಂದು = ನನ್ನ ತಾಯಿ(ಯಾಗಿದ್ದ) ಖೇಚರನಿಂದ ಉಂಟಾಯಿತೆಂದು, ಕೃತಂ ಮನದೊಳ್ ಪುದಿದು = ಕೃತಜ್ಞತೆಯು ಮನಸ್ಸಿನಲ್ಲಿ, ಪೊದಳ್ದು + ಇರ್ಪಿನೆಗಂ = ತುಂಬಿಕೊಂಡು ಇರಲಾಗಿ, ಲಲಿತಾಂಗದೇವನಂ ಪೂಜಿಸಿದೆಂ = ಲಲಿತಾಂಗದೇವನನ್ನು ಪೂಜಿಸಿದೆ

**ಗದ್ಯಾನುಸರಣ:** ನನಗೆ ಇಂಥ ಸುಖವು ಹಿಂದಿನ ಜನ್ಮದಲ್ಲಿ ನನ್ನ ತಾಯಿಯಾಗಿದ್ದ ಖೇಚರನಿಂದ ಉಂಟಾಯಿತೆಂಬ ಕೃತಜ್ಞತೆಯು ಮನಸ್ಸಿನಲ್ಲಿ ತುಂಬಿಕೊಂಡು ಲಲಿತಾಂಗದೇವನನ್ನು ಪೂಜಿಸಿದೆ.

**ವ।** **ಅಂತಾ ದೇವನನೀಶಾನಕಲ್ಪದಿಂದತಿಪ್ರೀತಿವರ್ಧನಕರಮೆಂಬ ಮದ್ವಿಮಾನಮಂ ಪ್ರೀತಿವರ್ಧನಕರಮಾಗೇಱಿಸಿಕೊಂಡುಯ್ದು ಮದೀಯ ಕಲ್ಪದೊಳಗಗ್ಗಳಮಪ್ಪ ದಿವ್ಯಾಭರಣಾಂಬರಾನುಲೇಪಕುಸುಮದಾಮಾದಿಗಳಿನ್ನೆನ್ನಲಂಪು ಮಟ್ಟಱುಂ ನೆಗೞ್ ಪೂಜಿಸಿದೆಂ: ಆ ದಿವಿಜನುಮೇಕರತ್ನಾಕರೋಪಮಾಯುರವಸಾನದೊಳ್ ಜಂಬೂದ್ರುಮೋಪಲಕ್ಷಿತ ಜಂಬೂ ದ್ವೀಪದ ಪೂರ್ವ ವಿದೇಹದ ಮಂಗಳಾವತೀ ವಿಷಯದ ವಿಜಯಾರ್ಧಪರ್ವತದುತ್ತರ ಶ್ರೇಢಿಯ ಗಂಧರ್ವಪುರಮನಾಳ್ವ ವಿದ್ಯಾಧರರಾಜಂ ವಾಸವಂಗಂ ಆತನಂತಃಪುರ ಪ್ರಧಾನೆ ಪ್ರಭಾವತಿಗಂ ಮಹೀಧರನೆಂಬ ತನೂಜನಾಗೆ ವಾಸವನುಂ ಮಹೀಧರಂಗೆ ವಿದ್ಯಾಧರವಿಭೂತಿಯುಂ ಕೊಟ್ಟು ವಿಜಯಾಖ್ಯ ಮುನಿಮುಖ್ಯ ನಿಕಟದೊಳ್ ಮುಕ್ತಾವಳಿತಪಮಂ ಕೈಕೊಂಡು ಗೆಲ್ಲಂಗೊಂಡಂ; ಪ್ರಭಾವತಿಯುಂ ಪದ್ಮಾವತ್ಯಾರ್ಯಿಕಾ ಪಾದಮೂಲದೊಳುಪಾರ್ಜಿತ ರತ್ನಾವಳಿ ತಪದೊಳಚ್ಯುತಕಲ್ಪದೊಳ್ ಪ್ರತೀಂದ್ರಪದವಿಯಂ ಪಡೆದಳ್; ಇತ್ತ ಮಹೀಧರನುಮೊರ್ಮೆ ಪುಷ್ಕರಾರ್ಧದ ಪಡುವಣ ಸುಮೇರುದ ಪೂರ್ವವಿದೇಹದ ವತ್ಸಕಾವತೀವಿಷಯುದ ಪ್ರತಿಬದ್ಧ ಪ್ರಭಾಕರೀಪುರಿಯೊಳ್ ವಿನಯಂಧರ ಯೋಗಿಗಳ ಪರಿನಿರ್ವಾಣಪೂಜೆಯಂ ಮಾಡಿ ಮೇರುಗಿರಿಯ ನಂದನವನದ ಪೂರ್ವ ದಿಗ್ಭಾಗದಕೃತ್ರಿಮ ಚೈತ್ಯಾಲಯದೊಳ್ ವಂದನಾ ಭಕ್ತಿನಿಮಿತ್ತಂ ಬಂದಿರೆ ಮಹೀಧರನನಾನಲ್ಲಿ ಕಾಣಲೊಡಮಱಿದು,**

**ಪದವಿಭಾಗ–ಅನ್ವಯ–ಅರ್ಥ:** ಅಂತು + ಆ ದೇವನನ್ + ಈಶಾನಕಲ್ಪದಿಂದೆ = ಹಾಗೆ ಆ ದೇವನನ್ನು ಈಶಾನಕಲ್ಪದಿಂದ, ಅತಿಪ್ರೀತಿವರ್ಧನಕರಮೆಂಬ ಮತ್ + ವಿಮಾನಮಂ ಪ್ರೀತಿವರ್ಧನಕರ ಎಂಬ ಹೆಸರಿನ ನನ್ನ ವಿಮಾನವನ್ನು, ಪ್ರೀತಿ ವರ್ಧನಕರಮಾಗಿ + ಏಱಿಸಿಕೊಂಡು + ಉಯ್ದು = ಹೆಚ್ಚಿನ ಪ್ರೀತಿಪುರಸ್ಸರವಾಗಿ ಹತ್ತಿಸಿಕೊಂಡು ಹೋಗಿ, ಮದೀಯ ಕಲ್ಪದೊಳಗೆ + ಅಗ್ಗಳಮಪ್ಪ = ನನ್ನ ಕಲ್ಪದಲ್ಲಿ ಬೆಲೆಬಾಳುವ, ದಿವ್ಯ + ಆಭರಣ + ಅಂಬರ + ಅನುಲೇಪ + ಕುಸುಮದಾಮ + ಆದಿಗಳಿನ್ = ದಿವ್ಯವಾದ ಭೂಷಣಗಳು ವಸ್ತ್ರಗಳು ಪರಿಮಳದ್ರವ್ಯಗಳು ಹೂಮಾಲೆಗಳು ಮುಂತಾದವುಗಳಿಂದ, ಎನ್ನ + ಅಲಂಪುಂ + ಅೞ್ಕಱುಂ ನೆಗೞೆ ಪೂಜಿಸಿದೆಂ = ನನ್ನ ವೈಭವವೂ ಪ್ರೀತಿಯೂ ಸೇರುವಂತೆ ಪೂಜಿಸಿದೆ; ಆ ದಿವಿಜನುಂ = ಆ ದೇವನೂ, ಏಕರತ್ನಾಕರ + ಉಪಮ + ಆಯುರ್ + ಅವಸಾನದೊಳ್ = ಒಂದು ಸಾಗರದಷ್ಟು ಆಯುಸ್ಸಿನ ಕೊನೆಯಲ್ಲಿ, ಜಂಬೂದ್ರುಮ + ಉಪಲಕ್ಷಿತ = ನೇರಿಳೆ ಮರಗಳಿಂದ ಕೂಡಿ ವಿಶಿಷ್ಟವೆನಿಸಿದ್ದ, ಜಂಬೂದ್ವೀಪದ ಪೂರ್ವವಿದೇಹದ = ಜಂಬೂದ್ವೀಪದ ಪೂರ್ವವಿದೇಹದ, ಮಂಗಳಾವತೀ ವಿಷಯದ = ಮಂಗಳಾವತೀ ಎಂಬ ನಾಡಿನ, ವಿಜಯಾರ್ಧಪರ್ವತದ + ಉತ್ತರ ಶ್ರೇಢಿಯ = ವಿಜಯಾರ್ಧಪರ್ವತದ ಉತ್ತರಕ್ಕಿದ್ದ ನಾಡಸಮೂಹದಲ್ಲಿ, ಗಂಧರ್ವಪುರಮನ್ + ಆಳ್ವ = ಗಂಧರ್ವಪುರವನ್ನು ಆಳುತ್ತಿದ್ದ, ವಿದ್ಯಾಧರರಾಜಂ ವಾಸವಂಗಂ = ವಿದ್ಯಾಧರರಾಜನಾದ ವಾಸವನಿಗೂ, ಆತನ + ಅಂತಃಪುರಪ್ರಧಾನೆ ಪ್ರಭಾವತಿಗಂ = ಅವನ ಮಹಾರಾಣಿ ಪ್ರಭಾವತಿಗೂ, ಮಹೀಧರನೆಂಬ ತನೂಜನ್ + ಆಗೆ = ಎಂಬ ಮಗನಾಗಲು, ವಾಸವನುಂ ಮಹೀಧರಂಗೆ ವಿದ್ಯಾಧರವಿಭೂತಿಯಂ ಕೊಟ್ಟು = ವಾಸವನು ಮಗ ಮಹೀಧರನಿಗೆ ತನ್ನ ವಿದ್ಯಾಧರ ರಾಜಪಟ್ಟವನ್ನು ಕಟ್ಟಿ, ವಿಜಯ + ಆಖ್ಯಮುನಿಮುಖ್ಯನಿಕಟದೊಳ್ = ವಿಜಯ ಎಂಬ ಹೆಸರಿನ ಮುನಿಶ್ರೇಷ್ಠರ ಸಾನ್ನಿಧ್ಯದಲ್ಲಿ, ಮುಕ್ತಾವಳಿತಪಮಂ ಕೈಕೊಂಡು ಗೆಲ್ಲಂಗೊಂಡಂ = ಮುಕ್ತಾವಳಿ ಎಂಬ ತಪಸ್ಸನ್ನು ತೊಟ್ಟು ಯಶಸ್ವಿಯಾಗಿ ಮುಗಿಸಿದ; ಪ್ರಭಾವತಿಯುಂ ಪದ್ಮಾವತಿ + ಆರ್ಯಿಕಾಪಾದಮೂಲದೊಳ್ = ಪ್ರಭಾವತಿಯೂ ಪದ್ಮಾವತಿ ಎಂಬ ಕಂತಿಶ್ರೇಷ್ಠರ ಸಾನ್ನಿಧ್ಯದಲ್ಲಿ, ರತ್ನಾವಳಿತಪದೊಳ್ = ರತ್ನಾವಳಿ ಎಂಬ ವ್ರತದಲ್ಲಿ, ಉಪಾರ್ಜಿತ = ಪಡೆದ, ಅಚ್ಯುತಕಲ್ಪದೊಳ್ ಪ್ರತೀಂದ್ರಪದವಿಯಂ ಪಡೆದಳ್ = ಅಚ್ಯುತಕಲ್ಪದಲ್ಲಿ ಪ್ರತೀಂದ್ರಪದವಿಯನ್ನು ಪಡೆದಳು; ಇತ್ತ ಮಹೀಧರನುಂ + ಒರ್ಮೆ = ಈ ಕಡೆ ಮಹೀಧರನೂ ಒಂದು ಬಾರಿ, ಪುಷ್ಕರಾರ್ಧದ ಪಡುವಣ ಸುಮೇರುದ ಪೂರ್ವವಿದೇಹದ ವತ್ಸಕಾವತೀವಿಷಯಕ್ಕೆ, ಪ್ರತಿಬದ್ಧ = ಸೇರಿದ, ಪ್ರಭಾಕರೀಪುರಿಯೊಳ್ ವಿನಯಂಧರ ಯೋಗಿಗಳ ಪರಿನಿರ್ವಾಣಪೂಜೆಯಂ ಮಾಡಿ, ಮೇರುಗಿರಿಯ ನಂದನವನದ ಪೂರ್ವದಿಗ್ಭಾಗದ, ಅಕೃತ್ರಿಮಚೈತ್ಯಾಲಯದೊಳ್ = ಸಹಜ ಜಿನಾಲಕ್ಕೆ, ವಂದನಾ ಭಕ್ತಿನಿಮಿತ್ತಂ ಬಂದಿರೆ

= ಪೂಜಿಸಿ ಭಕ್ತಿ ಸಮರ್ಪಿಸಲು ಬಂದಿರಲು, ಮಹೀಧರನನ್ + ಆನಲ್ಲಿ ಕಾಣಲೊಡಂ + ಅಱಿದು = ಮಹೀಧರನನ್ನು ನಾನು ಅಲ್ಲಿ ಕಂಡು ಗುರುತಿಸಿದೆ.

**ಗದ್ಯಾನುಸರಣ:** ಹಾಗೆ ಆ ದೇವನನ್ನು ಈಶಾನಕಲ್ಪದಿಂದ ಪ್ರೀತಿವರ್ಧನಕರ ಎಂಬ ಹೆಸರಿನ ನನ್ನ ವಿಮಾನದಲ್ಲಿ ಪ್ರೀತಿಪುರಸ್ಸರವಾಗಿ ಕರೆದುಕೊಂಡು ಹೋಗಿ ನನ್ನ ಕಲ್ಪದಲ್ಲಿ ದಿವ್ಯವಾದ ಭೂಷಣಗಳು ವಸ್ತ್ರಗಳು ಪರಿಮಳದ್ರವ್ಯಗಳು ಹೂಮಾಲೆಗಳು ಮುಂತಾದವುಗಳಿಂದ ನನ್ನ ವೈಭವವೂ ಪ್ರೀತಿಯೂ ಸೇರುವಂತೆ ಪೂಜಿಸಿದೆ; ಆ ದೇವನೂ ತನ್ನ ಒಂದು ಸಾಗರದಷ್ಟು ಆಯುಸ್ಸು ಮುಗಿದ ಬಳಿಕ ಜಂಬೂದ್ವೀಪದ ಪೂರ್ವವಿದೇಹದ ಮಂಗಳಾವತೀ ನಾಡಿನ ವಿಜಯಾರ್ಧಪರ್ವತದ ಉತ್ತರಕ್ಕಿದ್ದ ನಾಡಸಮೂಹದಲ್ಲಿನ ಗಂಧರ್ವಪುರವನ್ನು ಆಳುತ್ತಿದ್ದ ವಿದ್ಯಾಧರರಾಜನಾದ ವಾಸವ–ಪ್ರಭಾವತಿ ದಂಪತಿಗೆ ಮಹೀಧರನೆಂಬ ಮಗನಾಗಿ ಹುಟ್ಟಿದ; ಆ ಬಳಿಕ, ವಾಸವನು ಮಗ ಮಹೀಧರನಿಗೆ ತನ್ನ ವಿದ್ಯಾಧರ ರಾಜಪಟ್ಟವನ್ನು ಕಟ್ಟಿ ವಿಜಯ ಎಂಬ ಹೆಸರಿನ ಮುನಿಶ್ರೇಷ್ಠರ ಸಾನ್ನಿಧ್ಯದಲ್ಲಿ ಮುಕ್ತಾವಳಿ ತಪಸ್ಸನ್ನು ತೊಟ್ಟು ಯಶಸ್ವಿಯಾಗಿ ಮುಗಿಸಿದ; ಪ್ರಭಾವತಿಯೂ ಪದ್ಮಾವತಿ ಎಂಬ ಕಂತಿಶ್ರೇಷ್ಠರ ಸಾನ್ನಿಧ್ಯದಲ್ಲಿ ರತ್ನಾವಳಿ ಎಂಬ ವ್ರತ ಮಾಡಿ ಗಳಿಸಿದ ಅಚ್ಯುತಕಲ್ಪದಲ್ಲಿ ಪ್ರತೀಂದ್ರಪದವಿಯನ್ನು ಪಡೆದಳು; ಈ ಕಡೆ ಮಹೀಧರನೂ ಒಂದು ಬಾರಿ ಪುಷ್ಕರಾರ್ಧದ ಪಡುವಣ ಸುಮೇರುದ ಪೂರ್ವವಿದೇಹದ ವತ್ಸಕಾವತೀವಿಷಯಕ್ಕೆ ಸೇರಿದ್ದ ಪ್ರಭಾಕರೀಪುರಿಯಲ್ಲಿ ವಿನಯಂಧರ ಯೋಗಿಗಳ ಪರಿನಿರ್ವಾಣಪೂಜೆಯಂ ಮಾಡಿ ಮೇರುಗಿರಿಯ ನಂದನವನದ ಪೂರ್ವದಿಗ್ಭಾಗದ ಸಹಜ ಜಿನಾಲಯಕ್ಕೆ, ಪೂಜಿಸಿ ಭಕ್ತಿ ಸಮರ್ಪಿಸಲು ಬಂದಾಗ ಆ ಮಹೀಧರನನ್ನು ನಾನು ಕಂಡು ಗುರುತಿಸಿದೆ.

**ವಿಶೇಷ ವಿಚಾರ:** ಪ್ರತೀಂದ್ರ: ಇಂದ್ರನ ಕೆಳಗಿರುವ ಇಂದ್ರ: ಭವನವಾಸೀ ದೇವತೆಗಳಲ್ಲಿ ಇಪ್ಪತ್ತು ಜನ ಇಂದ್ರರೂ ಇಪ್ಪತ್ತು ಜನ ಪ್ರತೀಂದ್ರರೂ ಇರುತ್ತಾರೆ; ವ್ಯಂತರ ದೇವತೆಗಳಲ್ಲಿ ಹದಿನಾರು ಜನ ಇಂದ್ರರೂ ಹದಿನಾರು ಜನ ಪ್ರತೀಂದ್ರರೂ ಇರುತ್ತಾರೆ; ಜ್ಯೋತಿಷ್ಕ ದೇವತೆಗಳಲ್ಲಿ ಸೂರ್ಯನು ಇಂದ್ರನಾದರೆ ಚಂದ್ರನು ಪ್ರತೀಂದ್ರ; ಕಲ್ಪವಾಸಿಗಳಲ್ಲಿ ಹನ್ನೆರಡು ಜನ ಇನ ಇಂದ್ರರೂ ಹನ್ನೆರಡು ಜನ ಪ್ರತೀಂದ್ರರೂ ಇರುತ್ತಾರೆ.

**ಏಂ ಗಗನೇಚರ ನೀಂ ಲಲಿ**
**ತಾಂಗನೆಯಾದಂದು ಮಾತೃಚರನೆಂದಱಿದು**
**ತ್ತುಂಗವಿಭವಂಗಳೆಸೆಯೆ ಮ**
**ನಂಗೊಳೆ ಪೂಜಿಸಿದೆನಚ್ಯುತೇಂದ್ರನೆನಱಿವೋ** ೫೯

**ಪದವಿಭಾಗ–ಅನ್ವಯ–ಅರ್ಥ:** ಏಂ ಗಗನೇಚರ = ಹೇ ಖಚರನೇ, ನೀಂ

ಲಲಿತಾಂಗನೆ + ಆದಂದು = ನೀನು ಲಲಿತಾಂಗನಾದಾಗ, ಮಾತೃಚರನೆಂದಱಿದು = ಹಿಂದಿನ ಜನ್ಮದ ತಾಯಿ ಎಂದು ತಿಳಿದು, ಉತ್ತುಂಗವಿಭವಂಗಳ್ + ಎಸೆಯೆ = ಮಹಾ ವೈಭವಗಳಿಂದ ಶೋಭಿಸುವಂತೆ, ಅಚ್ಯುತೇಂದ್ರನೆನ್ = ಅಚ್ಯುತೇಂದ್ರನಾಗಿದ್ದ ನಾನು, ಮನಂಗೊಳೆ ಪೂಜಿಸಿದೆನ್ = ಮನಃತೃಪ್ತಿಯಾಗುವಂತೆ ಪೂಜಿಸಿದೆ, ಅಱಿವೋ = ತಿಳಿದುಕೊ

**ಗದ್ಯಾನುಸರಣ:** ಎಲೈ ಖಚರನೇ, ನೀನು ಲಲಿತಾಂಗನಾದಾಗ ಹಿಂದಿನ ಜನ್ಮದ ತಾಯಿ ಎಂದು ತಿಳಿದು ಅಚ್ಯುತೇಂದ್ರನಾಗಿದ್ದ ನಾನು ಮಹಾ ವೈಭವಗಳಿಂದ ಮನಃತೃಪ್ತಿಯಾಗುವಂತೆ ಪೂಜಿಸಿದೆ!

**ಪೆಸರ್ ನಿನಗೆ ಕೇಳ್ ಮೊಸರ್ ಪೆಱರ್ಗೆ ನಿನ್ನ ಮೆಯ್ ದೊಂಬದ**
**ಡ್ಡಿಸಕ್ಕೆ ಗುಱಿಯಪ್ಪುದೊಡ್ಡಿಱಿದು ತಿಂಬರನ್ಯರ್ಕ್ರಿಯಾ**
**ವಸಾನವಿರಸಂಗಳಿಂದ್ರಿಯಸುಖಂಗಳಿನ್ನಾವ ಸಂ**
**ತಸಂ ಗತವಿವೇಕ ಪೇೞ್ ನಿನಗಸಾರಸಂಸಾರದೊಳ್ ೬೦**

**ಪದವಿಭಾಗ-ಅನ್ವಯ-ಅರ್ಥ:** ಪೆಸರ್ ನಿನಗೆ ಕೇಳ್ ಮೊಸರ್ ಪೆಱರ್ಗೆ = ಹೆಸರು ನಿನ್ನದು ಮೊಸರು ಬೇರೆಯವರದು; ನಿನ್ನ ಮೆಯ್ ದೊಂಬದಡ್ಡಿಸಕ್ಕೆ ಗುಱಿಯಪ್ಪುದು = ನಿನ್ನ ಶರೀರವು ದೊಂಬರ ಡೋಲಿಗೆ ಪಕ್ಕಾಗುತ್ತದೆ; ಅನ್ಯರ್ ಒಡ್ಡಿಱಿದು ತಿಂಬರ್ = ಬೇರೆಯವರು ಮುತ್ತಿಕೊಂಡು ತಿಂದುಮುಕ್ಕುತ್ತಾರೆ; ಇಂದ್ರಿಯಸುಖಂಗಳ್ ಕ್ರಿಯಾ + ಅವಸಾನವಿರಸಂಗಳ್ = ಇಂದ್ರಿಸುಖಗಳೆನ್ನುವುವು ಕೊನೆಗೆ ವಿರಸವನ್ನುಂಟುಮಾಡುವಂಥವು; ಗತವಿವೇಕ = ವಿವೇಕರಹಿತನೇ, ಅಸಾರಸಂಸಾರದೊಳ್ = ಸಾರರಹಿತವಾದ ಈ ಬದುಕಿನಲ್ಲಿ, ಇನ್ನಾವ ಸಂತಸಂ ನಿನಗೆ ಪೇೞ್ = ನಿನಗೆ ಇನ್ನು ಯಾವ ಸುಖವಿದೆ ಹೇಳು.

**ಗದ್ಯಾನುಸರಣ:** 'ಹೆಸರು ನಿನ್ನದು ಮೊಸರು ಬೇರೆಯವರದು' ಎಂದಂತೆ ನಿನ್ನ ಶರೀರವು ದೊಂಬರ ಡೋಲಿಗೆ ಪಕ್ಕಾಗುತ್ತದೆ, ಬೇರೆಯವರು ಮುತ್ತಿಕೊಂಡು ತಿಂದು ಮುಕ್ಕುತ್ತಾರೆ; ಇಂದ್ರಿಸುಖಗಳೆನ್ನುವುವು ಹೀಗೆಯೇ ಕೊನೆಗೆ ವಿರಸವನ್ನು ತರುವಂಥವು; ಅವಿವೇಕಿಯೇ, ಸಾರರಹಿತವಾದ ಈ ಬದುಕಿನಲ್ಲಿ ನಿನಗೆ ಇನ್ನು ಯಾವ ಸುಖವಿದೆ ಹೇಳು?

**ಉಡಿಸಿಂಯುಮೂಡಿಂಯುಮಱ್ತಿಯಿ**
**ನೆಡೆಯುಡುಗದೆ ಸಲಿಸಿ ಪಲವು ಕಾಲಂ ಮದುವಾ**
**ೞ್ದೊಡಲಾತ್ಮನೊಡನೆ ಪೋಗದೆ**
**ಕಡೆಗಣಿಸುವುದೆಂದೊಡುೞದರಂ ನಂಬುವುದೇ ೬೧**

**ಪದವಿಭಾಗ-ಅನ್ವಯ-ಅರ್ಥ:** ಅಱ್ತಿಯಿನ್ + ಎಡೆಯುಡುಗದೆ ಸಲಿಸಿ =

ಪ್ರೀತಿಯಿಂದ ಜೊತೆ ಬಿಡದೆ, ಪಲವು ಕಾಲಂ = ಹಲವು ಸಮಯ, ಉಡಿಸಿಯುಂ + ಊಡಿಯುಂ = ಉಡಿಸಿಯೂ ಊಟಮಾಡಿಸಿಯೂ, ಪುದುವಾಟ್ಟಿ + ಒಡಲ್ = ಜೊತೆಗಿದ್ದ ದೇಹವು, ಅತ್ಮನೊಡನೆ ಪೋಗದೆ ಕಡೆಗಣ್ಸುವುದು = ಆತ್ಮನ ಜೊತೆಗೆ ಹೋಗದೆ ಕಡೆಗಣ್ಸುವುದು, ಎಂದೊಡೆ = ಅಂದ ಮೇಲೆ, ಉಱಿದರಂ ನಂಬುವುದೇ = ಬೇರೆಯದನ್ನು ನಂಬಬಹುದೇ?

**ಗದ್ಯಾನುಸರಣ:** ಪ್ರೀತಿಯಿಂದ ಹಲವು ಸಮಯ ಜೊತೆಯಲ್ಲಿದ್ದು ಉಡಿಸುತ್ತ ಊಟವಾಡಿಸುತ್ತ ಜೊತೆಗಿದ್ದ ದೇಹವು ಆತ್ಮನ ಜೊತೆಗೆ ಹೋಗದೆ ಕಡೆಗಣ್ಸುವುದು; ಅಂದಮೇಲೆ ಬೇರೆಯದನ್ನು ಹೇಗೆ ನಂಬುವುದು?

**ಎನಿತು ಪರಿಗ್ರಹದ ತೊಡ**
**ರ್ಪನಿತೆ ಮನೋದುಃಖಮದಱ ಕುಂದೆನಿತು ಮನ**
**ಕ್ಕನಿತೆ ಸುಖಮೆಂಬುದಂ ನೆ**
**ಟ್ಟನೆ ತಿಳಿದಂ ಜನ್ಮಜಳಧಿಯೊಳ್ ಮುಱುಗುವನೇ ೬೨**

**ಪದವಿಭಾಗ-ಅನ್ವಯ-ಅರ್ಥ:** ಎನಿತು ಪರಿಗ್ರಹದ ತೊಡರ್ಪು = ಸುಖಸಂಪತ್ತುಗಳ ಬಂಧನವಿರುವುದೋ, ಅನಿತೆ ಮನೋದುಃಖಂ = ಅಷ್ಟೇ ಮಾನಸಿಕ ಕ್ಲೇಶವಿರುವುದು; ಅದಱ ಕುಂದು + ಎನಿತು = ಅದು ಎಷ್ಟು ಕಡಿಮೆಯೋ, ಮನಕ್ಕೆ + ಅನಿತೆ ಸುಖಂ = ಮನಸ್ಸಿಗೆ ಅಷ್ಟೇ ಹಿತ, ಎಂಬುದಂ ನೆಟ್ಟನೆ ತಿಳಿದಂ = ಎಂಬುದನ್ನು ಖಚಿತವಾಗಿ ಅರಿತವನು, ಜನ್ಮಜಳಧಿಯೊಳ್ ಮುಱುಗುವನೇ = ಬದುಕಿನ ಸಾಗರದಲ್ಲಿ ಪರಿತಪಿಸುತ್ತಾನೆಯೇ, ಇಲ್ಲ

**ಗದ್ಯಾನುಸರಣ:** ಎಷ್ಟು ಸುಖಸಂಪತ್ತಿನ ಬಂಧನವಿರುವುದೋ ಅಷ್ಟೇ ಮಾನಸಿಕ ಕ್ಲೇಶವಿರುವುದು; ಅದು ಎಷ್ಟು ಕಡಿಮೆಯಾಗುವುದೋ ಮನಸ್ಸಿಗೆ ಅಷ್ಟೇ ಹಿತ ಎಂಬುದನ್ನು ಅರಿತವನು ಬದುಕಿನ ಸಾಗರದಲ್ಲಿ ಸಿಕ್ಕಿ ಪರಿತಪಿಸಲಾರ.

**ಭೋಗಿಪೆನೆನ್ನ ಜವ್ವನಮುಮೀ ಧನಮುಂ ತವುವನ್ನೆಗಂ ಕುಚಾ**
**ಭೋಗಭರಾನತಾಂಗಿಯರೊಳನ್ನೆಗಮತ್ತಱನಂ ತಗುಳ್ವೆನಂ**
**ತಾಗಿಯುಮೆಂಬ ನಿನ್ನ ಮೊಲಗಟ್ಟಲೆಗಾಂ ಬೆಱಗಾದೆನಿಂದು ಪೇ**
**ಱೀಗಳೊ ಬಯ್ಗಿಯೋ ಪೊಗಸೊ ನಾಳೆಯೊ ನಾಡಿದೊ ನಿನ್ನಜೀವಿತಂ**
**೬೩**

**ಪದವಿಭಾಗ-ಅನ್ವಯ-ಅರ್ಥ:** ಎನ್ನ ಜವ್ವನಮುಂ + ಈ ಧನಮುಂ = ನನ್ನ ಈ ಹರೆಯ ಮತ್ತು ಹಣಗಳು, ತವುವ + ಅನ್ನೆಗಂ = ತೀರುವವರೆಗೂ, ಕುಚ + ಆಭೋಗಭರ + ಆನತಾಂಗಿಯರೊಳ್ = ಮೊಲೆಗಳ ಸಿರಿಯ ಭಾರದಿಂದ ಕೂಡಿದ ಹೆಣ್ಣುಗಳಲ್ಲಿ, ಭೋಗಿಪೆಂ = ಸುಖಪಡುತ್ತೇನೆ, ಅನ್ನೆಗಂ=ಅತ್ತ

ಎಂತಾಗಿಯುಂ = ಆ ಬಳಿಕ ಎಷ್ಟಾದರೂ, ಅಜಿನಂ ತಗುಳ್ವೆನ್ = ಧರ್ಮವನ್ನು ಅನುಸರಿಸುತ್ತೇನೆ, ಎಂಬ ನಿನ್ನ ಮೊಲೆ + ಕಟ್ಟಿಲೆಗೆ = ಎಂಬ ನಿನ್ನ ಭ್ರಮೆಗೆ, ಆಂ ಬೆಜಗಾದೆನ್ = ನಾನು ಅಚ್ಚರಿಗೊಂಡಿದ್ದೇನೆ, ನಿನ್ನ ಜೀವಿತಂ = ನಿನ್ನ ಬದುಕು, ಈಗಳೊ ಬಯ್ಗಿಯೋ = ಈಗಲೋ ಸಂಜೆಯೋ, ಪೊಗಸೊ ನಾಳೆಯೊ ನಾಡಿದೊ = ಹಗಲೋ ನಾಳೆಯೋ ನಾಡಿದ್ದೋ, (ಎಂಬುದನ್ನು) ಇಂದು ಪೇೞ್ = ಈಗಲೇ ಹೇಳು, ನೋಡೋಣ!

**ಗದ್ಯಾನುಸರಣ:** 'ನನ್ನ ಈ ಹರೆಯ-ಹಣಗಳು ಇರುವವರೆಗೂ ಮೊಲೆಸಿರಿಯ ಭಾರದ ಹೆಣ್ಣುಗಳಲ್ಲಿ ಸುಖಪಡುತ್ತೇನೆ, ಆ ಬಳಿಕ ಎಷ್ಟು ಬೇಕಾದರೂ ಧರ್ಮವನ್ನು ಅನುಸರಿಸುತ್ತೇನೆ' ಎಂಬ ನಿನ್ನ ಭ್ರಮೆ ನನಗೆ ಅಚ್ಚರಿ ತಂದಿದೆ; ನಿನ್ನ ಬದುಕು ಈಗಲೋ ಸಂಜೆಯೋ ಹಗಲೋ ನಾಳೆಯೋ ನಾಡಿದ್ದೋ ಎಂಬುದನ್ನು ಈಗಲೇ ಹೇಳು, ನೋಡೋಣ!

**ಸಾಲದೆ ವಿಷಯಾಮಿಷವಿಷ**
**ಲೋಲತೆ ಭವವಿಷಮವಿಷಧಿಯೊಳಗೆನಿತಂ ನೀ**
**ನೋಲಾಡುವೆಯೆನೆಯೆಡೆಯಿಂ**
**ದೋಲಾಡಿದ ಬಿರುದಿನಂಕದಂತಿರೆ ಖಚರಂ** ೬೪

**ಪದವಿಭಾಗ-ಅನ್ವಯ-ಅರ್ಥ:** ವಿಷಯಾಮಿಷವಿಷಲೋಲತೆ ಸಾಲದೆ = ಇಂದ್ರಿಯುಗಳ ಆಕರ್ಷಣೆಯ ಲೋಲುಪತೆ ಸಾಕಾಗಲಿಲ್ಲವೇ? ಭವವಿಷಮವಿಷಧಿಯೊಳಗೆ + ಎನಿತಂ ನೀನ್ + ಓಲಾಡುವೆ = ಇಹದ ವಿಷಸಮುದ್ರದಲ್ಲಿ ನೀನು ಓಲಾಡುತ್ತೀಯೆ? ಎನೆ = ಎಂದು ಕೇಳಲು, ಖಚರಂ ಎಡೆಯಿಂದೆ + ಓಲಾಡಿದ ಬಿರುದಿನ + ಅಂಕದಂತಿರೆ = ಖೇಚರನು ಇದ್ದ ಜಾಗದಲ್ಲಿಯೇ ಅಲುಗಾಡುವ ಬಿರುದಿನ ಮಲ್ಲನಂತಾದ

**ಗದ್ಯಾನುಸರಣ:** 'ಇಂದ್ರಿಯಗಳ ಆಕರ್ಷಣೆಯ ಲೋಲುಪತೆ ನಿನಗೆ ಸಾಕಾಗಲಿಲ್ಲವೇ? ಐಹಿಕತೆಯ ವಿಷಸಮುದ್ರದಲ್ಲಿ ಇನ್ನೆಷ್ಟು ಓಲಾಡುತ್ತೀಯೆ?' ಎಂದು ಕೇಳಲು ಖೇಚರನು ಇದ್ದ ಜಾಗದಲ್ಲಿಯೇ ಅಲುಗಾಡುವ ಬಿರುದಿನ ಮಲ್ಲನಂತಾದ.

**ವ। ಇನಿಸಪ್ಪೊಡಂ ತಡೆಯದೆನ್ನ ನುಡಿದ ನುಡಿಯೆ ತನಗೆ ಮನಃಕಂಪಮಂ ಪಡೆಯೆ ಮಹೀಕಲ್ಪನೆಂಬ ನಿಜತನೂಜಂಗೆ ರಾಜ್ಯಭಾರಮಂ ಕೊಟ್ಟು ಜಗನ್ನಂದನ ಗುರುಗಳಲ್ಲಿ ಶಿಷ್ಯತ್ವಮಂ ಪೂಣ್ದು ಕನಕಾವಳಿ ತಪಃಪ್ರಭಾವದೊಳ್ ಪ್ರಾಣಪರಿತ್ಯಾಗದಿಂ ಪ್ರಾಣತೇಂದ್ರನಾಗಿ,**

**ಪದವಿಭಾಗ-ಅನ್ವಯ-ಅರ್ಥ:** ಇನಿಸಪ್ಪೊಡಂ ತಡೆಯದೆ = ಸ್ವಲ್ಪವೂ

ತಡಮಾಡದೆ, ಎನ್ನ ನುಡಿದ ನುಡಿಯೆ ತನಗೆ ಮನಃಕಂಪಮಂ ಪಡೆಯೆ = ನಾನು ಆಡಿದ ಮಾತು ಅವನ ಮನಸ್ಸನ್ನು ಅಲುಗಾಡಿಸಲು, ಮಹೀಕಲ್ಪನೆಂಬ ನಿಜತನೂಜಂಗೆ ರಾಜ್ಯಭಾರಮಂ ಕೊಟ್ಟು = ಮಹೀಕಲ್ಪ ಎಂಬ ತನ್ನ ಮಗನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು, ಜಗನ್ನಂದನ ಗುರುಗಳಲ್ಲಿ ಶಿಷ್ಯತ್ವಮಮಂ ಪೊಣ್ದು = ಜಗನ್ನಂದನ ಎಂಬ ಗುರುಗಳಲ್ಲಿ ಶಿಷ್ಯತ್ವವನ್ನು ಪಡೆದು, ಕನಕಾವಳಿ ತಪಃಪ್ರಭಾವದೊಳ್ = ಕನಕಾವಳಿ ಎಂಬ ತಪಸ್ಸಿನ ಪ್ರಭಾವದಿಂದ, ಪ್ರಾಣಪರಿತ್ಯಾಗದಿಂ ಪ್ರಾಣತ + ಇಂದ್ರನಾಗಿ = ಪ್ರಾಣವನ್ನು ತೊರೆದು ಪ್ರಾಣತ ಎಂಬ ಹದಿನಾಲ್ಕನೆಯ ಸ್ವರ್ಗದ ಇಂದ್ರನಾಗಿ

**ಗದ್ಯಾನುಸರಣ:** ನಾನು ಆಡಿದ ಮಾತು ಅವನ ಮನಸ್ಸನ್ನು ಅಲುಗಾಡಿಸಲು, ಸ್ವಲ್ಪವೂ ತಡಮಾಡದೆ ಮಹೀಕಲ್ಪ ಎಂಬ ತನ್ನ ಮಗನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ಜಗನ್ನಂದನ ಗುರುಗಳಲ್ಲಿ ಶಿಷ್ಯತ್ವವನ್ನು ಪಡೆದು ಕನಕಾವಳಿ ಎಂಬ ತಪಸ್ಸನ್ನು ಮಾಡಿ ಸತ್ತ ಬಳಿಕ ಪ್ರಾಣತ ಎಂಬ ಹದಿನಾಲ್ಕನೆಯ ಸ್ವರ್ಗದ ಇಂದ್ರನಾದ.

**ಇರ್ಪತ್ತುಸಾಗರೋಪಮ**
**ಮಾರ್ಪನ್ನೆಗಮುಂಡು ಸುಖಮನಾತಂಗೆ ಗಡಂ**
**ಬರ್ಪುದುಮಾಯ್ತಿಳೆಗಂತಕ**
**ಸರ್ಪಂ ಕೊಳೆ ಬರ್ದುಕುವನ್ನರಾರ್ ಸಂಸೃತಿಯೊಳ್ ೬೫**

**ಪದವಿಭಾಗ–ಅನ್ವಯ–ಅರ್ಥ:** ಇರ್ಪತ್ತುಸಾಗರೋಪಮಂಆರ್ಪನ್ನೆಗಂ = ಇಪ್ಪತ್ತು ಸಾಗರಗಳಷ್ಟು ಕಾಲ, ಸುಖಮನ್ ಉಂಡು = ಸುಖವನ್ನು ಅನುಭವಿಸಿ, ಅಂತಕಸರ್ಪಂ ಕೊಳೆ = ಯಮನೆಂಬ ಹಾವು ಕಚ್ಚಲು, ಆತಂಗೆ ಗಡಂ ಇಳೆಗೆ ಬರ್ಪುದುಂ + ಆಯ್ತು = ಅವನಿಗೆ ಭೂಮಿಗೆ ಬರುವಂತಾಯಿತು; ಸಂಸೃತಿಯೊಳ್ ಬರ್ದುಕುವನ್ನರಾರ್ = ಸಂಸಾರದಲ್ಲಿ ಚಿರಕಾಲ ಇರುವವರಾರು!

**ಗದ್ಯಾನುಸರಣ:** ಇಪ್ಪತ್ತು ಸಾಗರಗಳಷ್ಟು ಕಾಲ ಸುಖವನ್ನು ಅನುಭವಿಸಿ, ಅವನು ಯಮನೆಂಬ ಹಾವು ಕಚ್ಚಲು ಅವನು ಭೂಮಿಗೆ ಬಂದ; ಈ ಸಂಸಾರದಲ್ಲಿ ಚಿರಕಾಲ ಇರುವವರಾರು!

**ವ। ಅಂತು ಬಂದು ಧಾತಕೀಷಂಡದ ಮೂಡಣ ಸುಮೇರುದಪರ ವಿದೇಹದ ಗಂಧಿಳವಿಷಯದಯೋಧ್ಯೆಯನಾಳ್ವ ಜಯವರ್ಮಂಗಮಾತನರಸಿ ಸುಪ್ರಭೆಗಮಜಿತಂಜಯನೆಂಬ ಮಗನಾಗಿ ಪುಟ್ಟುವುದುಂ, ಜಯವರ್ಮಂ ವರ್ಮಹರನಾದ ನಿಜತನೂಜನಜಿತಂಜಯಂಗೆ ಜಯಜಯನಿನಾದಪೂರ್ವ ಕರ್ಮೀಭಾರಮಂ ಕೊಟ್ಟು ಭವ್ಯಜನ ಮನೋನಂದನ ರನೆನಿಸಿದಭಿನಂದನ ಗುರುಗಳಂ ಸಾರ್ದು ಶಾಶ್ವತಸೌಖ್ಯವರ್ಧನಕರಮಪ್ಪಾ ಚಾಮ್ಲವರ್ಧ ನತಪದೊಳ್ ನೆಗಟ್ದು ಪರಮಪದಮನೆಯ್ದಿದಂ: ಸುಪ್ರಭೆಯುಂ**

**ಸುದರ್ಶನನಾಮಗಣಿನೀ ಸಮಕ್ಷದೊಳ್ ರತ್ನಾವಳಿಯಂ ನೋಂತಚ್ಯುತ ಕಲ್ಪದೊಳ್ ದೇವನಾಗಿ ಪುಟ್ಟಿದಳ್; ಇತ್ತಜಿತಂ ಜಯನುಂ ಚಕ್ರವರ್ತಿಪದಮುಮನೆಯ್ದಿದಿಂಬಳಿಯುಮಭಿನಂದನಜಿನಮಹಿಮೆಯುಂ ಮಾಡಿ ಪಿಹಿತ ಪಾಪಾಸ್ರವಧರನಾದುದಱಿಂ ಪಿಹಿತಾಸ್ರವನೆಂಬೆರಡನೆಯ ಪೆಸರಂ ಪಡೆದು ಸಾಮ್ರಾಜ್ಯಸುಖಮನನುಭವಿಸುತ್ತಿರೆ,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಬಂದು = ಹಾಗೆ ಭೂಮಿಗೆ ಬಂದು, ಧಾತಕೀಷಂಡದ ಮೂಡಣ ಸುಮೇರುದ + ಅಪರವಿದೇಹದ ಗಂಧಿಳವಿಷಯದ + ಅಯೋಧ್ಯೆಯನ್ + ಆಳ್ವ = ಧಾತಕೀಷಂಡದ ಪೂರ್ವಕ್ಕಿದ್ದ ಸುಮೇರುಪರ್ವತದ ಪಶ್ಚಿಮದಲ್ಲಿನ ಗಂಧಿಳ ನಾಡಿನ ಅಯೋಧ್ಯೆಯನ್ನು ಆಳುತ್ತಿದ್ದ, ಜಯವರ್ಮಂಗಂ + ಆತನ + ಅರಸಿ ಸುಪ್ರಭೆಗಂ= ಜಯವರ್ಮ ಮತ್ತವನ ಹೆಂಡತಿ ಸುಪ್ರಭೆಯರಿಗೆ, ಅಜಿತಂಜಯನೆಂಬ ಮಗನಾಗಿ ಪುಟ್ಟುವುದುಂ ಅಜಿತಂಜಯ ನೆಂಬ ಮಗನಾಗಿ ಹುಟ್ಟುವುದೂ, ಜಯವರ್ಮಂ = ಜಯವರ್ಮನು, ವರ್ಮಹರ ನಾದ ನಿಜತನೂಜನ ಜಿತಂಜಯಂಗೆ = ಪ್ರಾಪ್ತವಯಸ್ಕನಾದ ತನ್ನ ಮಗನಿಗೆ, ಜಯಜಯನಿನಾದ ಪೂರ್ವಕಂ = ಜಯಧ್ವನಿಯ ಮಧ್ಯೆ, ಉರ್ವೀಭಾರಮಂ ಕೊಟ್ಟು = ರಾಜ್ಯಭಾರ ವನ್ನು ವಹಿಸಿಕೊಟ್ಟು, ಭವ್ಯಜನಮನೋ ನಂದನರನೆನಿಸಿದ = ಭಾವುಕ ಜನಗಳ ಮನಸ್ಸಿಗೆ ಸಂತಸವನ್ನು ನೀಡುವ, ಅಭಿನಂದನ ಗುರುಗಳಂ ಸಾರ್ದು = ಅಭಿನಂದನ ಗುರುಗಳ ಬಳಿ ಹೋಗಿ, ಶಾಶ್ವತಸೌಖ್ಯ ವರ್ಧನಕರಮಪ್ಪ +ಆಚಾಮ್ಲವರ್ಧನತ ಪದೊಳ್ ನೆಗೞ್ದು= ಶಾಸ್ವತಸುಖ ವನ್ನು ತರುವ ಆಚಾಮ ವರ್ಧನವೆಂಬ ತಪಸ್ಸನ್ನು ಮಾಡಿ, ಪರಮಪದಮನೆಯ್ದಿದಂ = ಸದ್ಗತಿಯನ್ನು ಪಡೆದ; ಸುಪ್ರಭೆಯುಂ = ಹೆಂಡತಿ ಸುಪ್ರಭೆಯೂ, ಸುದರ್ಶನ ನಾಮಗಣಿನೀ ಸಮಕ್ಷದೊಳ್ = ಸುದರ್ಶನ ಎಂಬ ಹೆಸರಿನ ಕಂತಿಯ ಸನ್ನಿಧಿಯಲ್ಲಿ, ರತ್ನಾವಳಿಯಂ ನೋಂತು = ರತ್ನಾವಳಿ ತಪವನ್ನು ಕೈಗೊಂಡು, ಅಚ್ಯುತಕಲ್ಪದೊಳ್ ದೇವನಾಗಿ ಪುಟ್ಟಿದಳ್ = ಅಚ್ಯುತಕಲ್ಪದಲ್ಲಿ ದೇವನಾಗಿ ಹುಟ್ಟಿದಳು; ಇತ್ತ + ಅಜಿತಂಜಯನುಂ = ಈ ಕಡೆ ಅಜಿತಂಜಯನೂ, ಚಕ್ರವರ್ತಿಪದಮುಮನ್ + ಎಯ್ದಿದ + ಇಂಬಳಿಯುಂ = ಚಕ್ರವರ್ತಿ ಪದವಿಯನ್ನು ಹೊಂದಿದ ಬಳಿಕ, ಅಭಿನಂದನಜಿನ ಮಹಿಮೆಯಂ ಮಾಡಿ = ಅಭಿನಂದನ ಗುರುಗಳ ಜಿನಮಹಿಮೆಯನ್ನು ಕೈಗೊಂಡು, ಪಿಹಿತಪಾಪಾಸ್ರವಧರನಾದುದಱಿಂ = ಪಾಪಕರ್ಮವನ್ನು ಕಳೆದುಕೊಂಡದ್ದರಿಂದ, ಪಿಹಿತಾಸ್ರವನೆಂಬೆರಡನೆಯ ಪೆಸರಂ ಪಡೆದು = ಪಿಹಿತಾಸ್ರವ ಎಂಬ ಎರಡನೆಯ ಹೆಸರನ್ನು ಹೊಂದಿ, ಸಾಮ್ರಾಜ್ಯಸುಖ ಮನನುಭವಿಸುತ್ತಿರೆ = ಸಾಮ್ರಾಜ್ಯಸುಖವನ್ನು ಅನಭವಿಸುತ್ತಿರಲು,

**ಗದ್ಯಾನುಸರಣ:** ಹಾಗೆ ಭೂಮಿಗೆ ಬಂದು ಧಾತಕೀಷಂಡದ ಪೂರ್ವಕ್ಕಿದ್ದ ಸುಮೇರುಪರ್ವತದ ಪಶ್ಚಿಮದಲ್ಲಿನ ಗಂಧಿಳ ನಾಡಿನ ಅಯೋಧ್ಯೆಯನ್ನು ಆಳುತ್ತಿದ್ದ ಜಯವರ್ಮರಾಜ ಮತ್ತವನ ಹೆಂಡತಿ ಸುಪ್ರಭೆಯರಿಗೆ ಅಜಿತಂಜಯನೆಂಬ ಮಗನಾಗಿ ಹುಟ್ಟಿದ; ಪ್ರಾಪ್ತವಯಸ್ಕನಾದಾಗ ಜಯವರ್ಮನು ತನ್ನ ಮಗನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟ; ಭಾವುಕ ಜನಗಳ ಮನಸ್ಸಿಗೆ ಸಂತಸವನ್ನು ನೀಡುವ ಅಭಿನಂದನ ಗುರುಗಳ ಬಳಿ ಶಾಸ್ವತಸುಖವನ್ನು ತರುವ ಆಚಾಮ್ಲವರ್ಧನವೆಂಬ ತಪಸ್ಸನ್ನು ಮಾಡಿ ಸದ್ಗತಿಯನ್ನು ಪಡೆದ; ಹೆಂಡತಿ ಸುಪ್ರಭೆಯೂ ಸುದರ್ಶನ ಎಂಬ ಹೆಸರಿನ ಕಂತಿಯ ಸನ್ನಿಧಿಯಲ್ಲಿ ರತ್ನಾವಳಿ ತಪವನ್ನು ಕೈಗೊಂಡು ಅಚ್ಯುತಕಲ್ಪದಲ್ಲಿ ದೇವನಾಗಿ ಹುಟ್ಟಿದಳು; ಈ ಕಡೆ ಅಜಿತಂಜಯನೂ ಚಕ್ರವರ್ತಿ ಪದವಿಯನ್ನು ಹೊಂದಿದ ಬಳಿಕ ಅಭಿನಂದನ ಗುರುಗಳ ಜಿನಮಹಿಮೆಯನ್ನು ಕೈಗೊಂಡು ಪಾಪಕರ್ಮವನ್ನು ಕಳೆದುಕೊಂಡದ್ದರಿಂದ ಪಿಹಿತಾಸ್ರವ ಎಂಬ ಎರಡನೆಯ ಹೆಸರನ್ನು ಹೊಂದಿ, ಸಾಮ್ರಾಜ್ಯಸುಖವನ್ನು ಅನುಭವಿಸುತ್ತಿದ್ದ.

**ಆನೊಂದು ದಿವಸಮಾತನ**
**ನಾನಂದೋದಯದೆ ಸಾರ್ದು ನೀಂ ಭವ್ಯನೆಯ**
**ಜ್ಞಾನಿಯವೊಲ್ ನಿನ್ನಂ ಮಱೆ**
**ದೇನೀ ವಿಷಯದ ಸುಖಕ್ಕೆ ಲಂಪಟನಪ್ಪೋ** ೬೬

**ಪದವಿಭಾಗ-ಅನ್ವಯ-ಅರ್ಥ:** ಆನೊಂದು ದಿವಸಂ = ನಾನು ಒಂದು ದಿನ, ಆನಂದೋದಯದೆ ಆತನನ್ ಸಾರ್ದು = ಸಂತಸದ ತುದಿಯಲ್ಲಿದ್ದ ಅವನ ಬಳಿ ಹೋಗಿ, ನೀಂ ಭವ್ಯನೆ = ನೀನು ಭವ್ಯ, ಅಜ್ಞಾನಿಯವೊಲ್ ನಿನ್ನಂ ಮಱೆದು = ಅಜ್ಞಾನಿಯ ಹಾಗೆ ನಿನ್ನನ್ನೇ ಮರೆತು, ಏನ್ + ಈ ವಿಷಯದ ಸುಖಕ್ಕೆ ಲಂಪಟನಪ್ಪೋ = ಇದೇನು ವಿಷಯಸುಖದ ಲಂಪಟನಾಗಿರುವೆ!

**ಗದ್ಯಾನುಸರಣ:** ನಾನು ಒಂದು ದಿನ ಸಂತಸದ ತುದಿಯಲ್ಲಿದ್ದ ಅವನ ಬಳಿ ಹೋಗಿ, 'ನೀನು ಭವ್ಯ, ಅಜ್ಞಾನಿಯ ಹಾಗೆ ನಿನ್ನನ್ನೇ ಮರೆತು ಇದೇನು ವಿಷಯಸುಖದ ಲಂಪಟನಾಗಿಬಿಟ್ಟೆಯಲ್ಲ!'

**ಅಱಿವುಂ ನೆಱಿವುಂ ತನ್ನೊಳ್**
**ನೆಱಿದಂದಱಿದಱಿದಱಿೊಳೆಸೆಪುದಲ್ಲದೆ ಬಱಿಯಂ**
**ಗುಱಿ ನೆಱಿದೆಡೆಯೊಳ್ ಮಮ್ಮಲ**
**ಮಱುಗಿದೊಡಾ ನೆಱಿವುಮಱಿವುಮೇಂ ಕೂಡುಗುಮೇ** ೬೭

**ಪದವಿಭಾಗ-ಅನ್ವಯ-ಅರ್ಥ:** ಅಱಿವುಂ ನೆಱಿವುಂ ತನ್ನೊಳ್ ನೆಱಿದಂದು

= ತಿಳಿವಳಿಕೆಯೂ ಸಾಧನಗಳೂ ತನ್ನಲ್ಲಿ ಸೇರಿರುವಾಗ, ಅಱಿದಱಿದು + ಅದಱಿೊಳಿಸೆಪುದು ಅಲ್ಲದೆ = ವಿವೇಚನೆಯಿಂದ ಅದನ್ನು ಬಳಸಬೇಕೇ ಹೊರತು, ಬಱಿಯಂ = ಆನಂತರ, ಗುಱಿ ನೆಱಿದೆಡೆಯೊಳ್ = ಗುರಿ ತಲುಪದಾದಾಗ, ಮಮ್ಮಲಮಱುಗಿದೊಡಾ = ಪಶ್ಚಾತ್ತಾಪಪಟ್ಟರೆ, ನೆಱಿವುಂ + ಅಱಿವುಂ + ಏಂ ಕೂಡುಗುಮೇ = ಸಾಧನಗಳೂ ವಿವೇಕವೂ ಮತ್ತೆ ಸೇರುತ್ತವೆಯೇ?

**ಗದ್ಯಾನುಸರಣ:** ತಿಳಿವಳಿಕೆಯೂ ಸಾಧನಗಳೂ ತನ್ನಲ್ಲಿ ಸೇರಿರುವಾಗ ವಿವೇಚನೆಯಿಂದ ಅದನ್ನು ಬಳಸಬೇಕೇ ಹೊರತು ಆನಂತರ ಗುರಿ ತಲುಪದಾದಾಗ ಪಶ್ಚಾತ್ತಾಪಪಟ್ಟರೆ ಸಾಧನಗಳೂ ವಿವೇಕವೂ ಮತ್ತೆ ಸೇರುತ್ತವೆಯೇ?

**ಬಹ್ವಾರಂಭಪರಿಗ್ರಹ**
**ವಿಹ್ವಳನಿಂದ್ರಿಯಸುಖಾರ್ಥಿ ಸಂಸಾರಗುಹಾ**
**ಗಹ್ವರದೊಳಗಿರುಳಿನ ಚ**
**ಕ್ರಾಹ್ವದವೊಲ್ ಮಱುಗದೇಂ ಸುಖಂಬಡೆದಪನೇ** ೬೮

**ಪದವಿಭಾಗ–ಅನ್ವಯ–ಅರ್ಥ:** ಬಹು + ಆರಂಭಪರಿಗ್ರಹ = ನಾನಾ ಕೆಲಸಗಳನ್ನು ಕೈಗೊಂಡು, ವಿಹ್ವಳನ್ = ಚಂಚಲನಾದವನು, ಇಂದ್ರಿಯಸುಖಾರ್ಥಿ = ಇಂದ್ರಿಯಸುಖಕ್ಕೆ ಆಸೆಪಟ್ಟು, ಸಂಸಾರಗುಹಾಗಹ್ವರದೊಳಗೆ = ಸಂಸಾರವೆಂಬ ಗುಹೆಯ ಇರುಕಲಿನಲ್ಲಿ, ಸಿಲುಕಿದ ಇರುಳಿನ ಚಕ್ರಾಹ್ವದವೊಲ್ = ರಾತ್ರಿಯ ಚಕ್ರವಾಕಪಕ್ಷಿಯಂತೆ, ಮಱುಗದೇಂ ಸುಖಂಬಡೆದಪನೇ = ಕೊದಗದೆ ಸುಖಪಡುತ್ತಾನೇನು?

**ಗದ್ಯಾನುಸರಣ:** ನಾನಾ ಕೆಲಸಗಳನ್ನು ಕೈಗೊಂಡು ಚಂಚಲನಾದವನು ಇಂದ್ರಿಯಸುಖಕ್ಕೆ ಆಸೆಪಟ್ಟು ಸಂಸಾರವೆಂಬ ಗುಹೆಯ ಇರುಕಲಿನಲ್ಲಿ ರಾತ್ರಿ ಸಿಲುಕಿಕೊಂಡ ಚಕ್ರವಾಕಪಕ್ಷಿಯಂತೆ ಕೊದಗದೆ ಸುಖಪಡುತ್ತಾನೇನು?

**ತಣಿವುಂಟೇ ಪೆಱತೊಂದಪೂರ್ವರಸಮೇಂ ಕೈಸಾರ್ಗುಮೇ ಮತ್ತಮಾ**
**ವುಣಿಸಾ ತಂಬುಲವಾ ವಿದಗ್ಧಗಣಿಕಾಸಂಭೋಗವಾ ವಸ್ತ್ರಭೂ**
**ಷಣಮಾಲ್ಯಾದಿಗಳೆಂದು ಪಂಬಲಿಸಿ ನಿಚ್ಚಂ ನಿಚ್ಚಮೀ ಪಿಷ್ಟ**
**ಪೇಷಣಮೀ ಚರ್ವಿತಚರ್ವಣಮಿದೇಂ ನಿನ್ನ ಮರುಳ್ಮಾಡಿತೋಅ್ಕೆ**

**ಪದವಿಭಾಗ–ಅನ್ವಯ–ಅರ್ಥ:** ತಣಿವುಂಟೇ = ತೃಪ್ತಿಯಿದೆಯೇ? ಪೆಱತೊಂದು + ಅಪೂರ್ವರಸಂ + ಏಂ ಕೈಸಾರ್ಗುಮೇ = ಬೇರೆ ಯಾವುದಾದರೂ ಅಪೂರ್ವವಾದ ರಸವು ದೊರಕುತ್ತದೆಯೇ? ಮತ್ತಂ + ಆ + ಉಣಿಸು + ಆ ತಂಬುಲಂ + ಆ ವಿದಗ್ಧಗಣಿಕಾಸಂಭೋಗಂ + ಆ ವಸ್ತ್ರಭೂಷಣಮಾಲ್ಯಾದಿಗಳ್

= ಜೊತೆಗೆ, ಆ ಊಟ, ಆ ತಾಂಬೂಲ, ಆ ಪ್ರೌಢವೇಶ್ಯೆಯರ ಸಂಗ, ಆ ಒಡವೆವಸ್ತ್ರಮಾಲೆಗಳು, ಎಂದು ನಿಚ್ಚಂ ನಿಚ್ಚಂ ಪಂಬಲಿಸಿ = ಎಂದು ಪ್ರತಿನಿತ್ಯವೂ ಹಂಬಲಿಸುತ್ತ, ಈ ಪಿಷ್ಟ ಪೇಷಣಂ + ಈ ಚರ್ವಿತಚರ್ವಣಂ = ಅದೇ ಹಿಟ್ಟನ್ನೇ ಕುಟ್ಟುವುದು, ಅಗಿದಿದ್ದನ್ನೇ ಅಗಿಯುವುದು, ಇದು + ಏಂ ನಿನ್ನ ಮರುಳ್ಮಾಡಿತೋ = ಇದೆಲ್ಲ ಏನೆಂದು ನಿನ್ನನ್ನು ಮರುಳು ಮಾಡಿದೆಯೋ!

**ಗದ್ಯಾನುಸರಣ:** ಇದರಿಂದ ತೃಪ್ತಿಯಿದೆಯೇ? ಬೇರೆ ಯಾವುದಾದರೂ ಅಪೂರ್ವಸುಖವು ದೊರಕುತ್ತದೆಯೇ? ಅದೇ ಊಟ, ಅದೇ ತಾಂಬೂಲ, ಅದೇ ಪ್ರೌಢವೇಶ್ಯೆಯರ ಸಂಗ, ಅದೇ ಒಡವೆವಸ್ತ್ರಮಾಲೆಗಳು – ಎಂದು ದಿನನಿತ್ಯವೂ ಹಂಬಲಿಸುತ್ತ ಅದೇ ಹಿಟ್ಟನ್ನೇ ಕುಟ್ಟುವುದು, ಅಗಿದಿದ್ದನ್ನೇ ಅಗಿಯುವುದು; ಇದೆಲ್ಲ ಏನೆಂದು ನಿನ್ನನ್ನು ಮರುಳು ಮಾಡಿದೆಯೋ!

**ಭೋಗಂಗಳ್ ಸಲೆ ಮನದೊಳ್**
**ರಾಗಮನೊದವಿಸುಗುಮಪ್ಪೊಡನುಭವಿಕೆ ಮನೋ**
**ರಾಗಮನೊದವಿಸದವು ಹೃ**
**ದ್ರೋಗಮನೊದವಿಸೆ ರಸಜ್ಞನನುಭವಿಸುಗುಮೇ** ೭೦

**ಪದವಿಭಾಗ–ಅನ್ವಯ–ಅರ್ಥ:** ಭೋಗಂಗಳ್ = ಭೋಗಗಳು, ಸಲೆ ಮನದೊಳ್ ರಾಗಮನೊದವಿಸುಗುಂ + ಅಪ್ಪೊಡೆ = ಮನಸ್ಸಿನಲ್ಲಿ ಸಂತಸವನ್ನು ಉಂಟುಮಾಡುತ್ತವೆ ಎನ್ನುವುದಾದರೆ, ಅನುಭವಿಕೆ = ಅನುಭವಿಸಲಿ; ಮನೋರಾಗಮನ್ + ಒದವಿಸದೆ = ಆದರೆ ಮನಸ್ಸಿಗೆ ಸಂತಸವನ್ನುಂಟು ಮಾಡಲಾರದೆ, ಅವು ಹೃದ್ರೋಗಮನೊದವಿಸೆ = ಹೃದಯಬೇನೆಯನ್ನುಂಟು ಮಾಡಿದರೆ, ರಸಜ್ಞನ್ + ಅನುಭವಿಸುಗುಮೇ = ರಸಿಕನಾದವನು ಅದನ್ನು ಅನುಭವಿಸುತ್ತಾನೆಯೇ!

**ಗದ್ಯಾನುಸರಣ;** ಭೋಗಗಳು ಮನಸ್ಸಿಗೆ ಸಂತಸವನ್ನು ಉಂಟು ಮಾಡುವುದಾದರೆ ಅನುಭವಿಸಲಿ; ಆದರೆ ಅವು ಹಾಗೆ ಮಾಡದೆ ಹೃದಯ ಬೇನೆಯನ್ನುಂಟುಮಾಡಿದರೆ ರಸಿಕನಾದವನು ಅದನ್ನು ಅನುಭವಿಸಬಲ್ಲನೇ!

**ತಣಿಯೆಯೊ ದೇವಲೋಕಸುಖಸಾಗರಮಂ ತವೆ ಪೀರ್ದುಮೀಗಳೇಂ**
**ತಣಿವೊ ಮನುಷ್ಯಕೀಟಕಸುಖಾಂಬುಲವೋದ್ಗಮದೊಳ್ ವಿಚಾರಿಸಲ್**
**ಗಣಿದಮಿದೊಂದುಮಿಲ್ಲ ನಿನಗೀಖಳಸಂಸೃತಿಯೆಂಬುದೊಂದು ಊ**
**ಟಣದೊಳಗಮ್ಮ ನೀಂ ಮೊಗಪೆಯಾಗದೆ ತಾಳ್ದಪವರ್ಗಮಾರ್ಗಮಂ**
೭೧

**ಪದವಿಭಾಗ–ಅನ್ವಯ–ಅರ್ಥ:** ದೇವಲೋಕಸುಖಸಾಗರಮಂ ತವೆ ಪೀರ್ದುಂ = ದೇವಲೋಕದ ಸುಖಸಮುದ್ರವನ್ನೇ ಕಂಠಪೂರ್ತಿ ಕುಡಿದು, ಈಗಳ್ + ಏಂ ತಣಿ೦ಯೆಯೊ = ಇನ್ನೂ ತೃಪ್ತಿಯಾಗಿಲ್ಲವೇ? ಮನುಷ್ಯಕೀಟಕಸುಖಾಂಬುಲವ + ಉದ್ಗಮದೊಳ್ = ಮನುಷ್ಯ ಹುಳುವಿನ ಸುಖವೆಂಬ ಹನಿನೀರಿನಿಂದ, ತಣಿ೦ವೊ = ತೃಪ್ತಿ ಹೊಂದುವೆಯಾ? ವಿಚಾರಿಸಲ್ ಗಣಿ೦ದಂ + ಇದು + ಒಂದುಮಿಲ್ಲ = ಆಲೋಚಿಸಿದರೆ ಇದರಲ್ಲಿ ಲೆಕ್ಕಾಚಾರವೆಂಬುದೇನಿಲ್ಲ, ಅಮ್ಮ ನಿನಗೆ + ಈ ಖಳಸಂಸ್ಕೃತಿಯೆಂಬುದೊಂದು ಜಾಟಣದೊಳಗೆ ನೀಂ ಮೊಗಪೆಯಾಗದೆ = ಅಯ್ಯಾ, ಈ ದುಷ್ಟ ಐಹಿಕತೆಯೆಂಬ ರಾಟಾಳದಲ್ಲಿ ಪಾತ್ರೆಯಾಗದೆ, ಅಪವರ್ಗಮಾರ್ಗಮಂ ತಾಳ್ದು = ಮೋಕ್ಷದ ಹಾದಿಯನ್ನು ಹಿಡಿ.

**ಗದ್ಯಾನುಸರಣ:** ದೇವಲೋಕದ ಸುಖಸಮುದ್ರವನ್ನೇ ಕಂಠಪೂರ್ತಿ ಕುಡಿದೂ ತೃಪ್ತಿಯಾಗಿಲ್ಲವೇ? ಮನುಷ್ಯ ಹುಳುವಿನ ಸುಖವೆಂಬ ಹನಿನೀರಿನಿಂದ ತೃಪ್ತಿ ಹೊಂದುವೆಯಾ? ಇದರಲ್ಲಿ ಲೆಕ್ಕಾಚಾರವೆಂಬುದೇನಿಲ್ಲ, ಅಯ್ಯಾ, ಈ ದುಷ್ಟ ಐಹಿಕತೆಯೆಂಬ ರಾಟಾಳದಲ್ಲಿ ಗಡಿಗೆಯಾಗದೆ ಮೋಕ್ಷದ ಹಾದಿಯನ್ನು ಹಿಡಿ.

**ವ। ನಿಮ್ಮಡಿಯ ಮಾತೃಚರನಪ್ಪುದಱಿಂದಮಾ ಮೋಹಕಾರಣಮಾಗಿ ನಿನ್ನಂ ಪ್ರತಿಬೋಧಿಸಲ್ಬಂದೆಂ**

**ಅರ್ಥ:** ನಿಮ್ಮಡಿಯ ಮಾತೃಚರನಪ್ಪುದಱಿಂದಂ ಆ ಮೋಹಕಾರಣಮಾಗಿ ನಿನ್ನಂ ಪ್ರತಿಬೋಧಿಸಲ್ + ಬಂದೆಂ = ಹಿಂದಿನ ಜನ್ಮದ ತಾಯಿಯಾಗಿದ್ದೆನೆಂಬ ಮೋಹದ ಕಾರಣದಿಂದ ನಿಮಗೀಗ ತಿಳಿವಳಿಕೆ ಹೇಳಿದೆ.

**ತಡೆಯುದೆ ನಿನಗಪ್ಪುದನೀ**
**ಗಡೆ ಬಗೆ ಮೆಟ್ಟಿಡದಿರೆಂದುಂ ನೀಮಿನಿತಂ**
**ನುಡಿದಿರ್ ಮೂದಲಿಸಿದಿರಿಂ**
**ತಡೆವೆನೆ ಕಟ್ಟಿದುದೆ ಸುರಿಗೆ ಮೆಟ್ಟಿದುದೆ ಕಳಂ** ೭೨

**ಪದವಿಭಾಗ–ಅನ್ವಯ–ಅರ್ಥ:** ತಡೆಯದೆ = ತಡಮಾಡದೆ, ನಿನಗಪ್ಪುದನ್ + ಈಗಡೆ ಬಗೆ = ನಿನಗೆ ಆಗುವುದರ ಬಗ್ಗೆ ಈಗಲೇ ಆಲೋಚಿಸು, ಮೆಟ್ಟಿಡದಿರು = ಮರುಳಾಗಬೇಡ, ಎಂದುಂ ನೀಮಿನಿತಂ ನುಡಿದಿರ್ = ಎಂದು ನೀವು ಇಷ್ಟು ಮಾತನ್ನು ಹೇಳಿದಿರಿ, ಮೂದಲಿಸಿದಿರಿ = ಮೂದಲೆ ಮಾಡಿದಿರಿ, ಇಂ ತಡೆವೆನೆ = ಇನ್ನು ತಡಮಾಡುತ್ತೇನೆಯೇ, ಕಟ್ಟಿದುದೆ ಸುರಿಗೆ ಮೆಟ್ಟಿದುದೆ ಕಳಂ = ಕಟ್ಟಿದ್ದೇ ಕತ್ತಿ, ಮೆಟ್ಟಿದ್ದೇ ರಣರಂಗ

**ಗದ್ಯಾನುಸರಣ:** 'ತಡಮಾಡದೆ ಆಗುವುದರ ಬಗ್ಗೆ ಈಗಲೇ ಆಲೋಚಿಸು,

ಮರುಳಾಗಬೇಡ ಎಂದು ನೀವು ಇಷ್ಟು ಮಾತನ್ನು ಹೇಳಿದಿರಿ, ಮೂದಲಿಸಿದಿರಿ. ಇನ್ನು ತಡಮಾಡುತ್ತೇನೆಯೇ, ಕಟ್ಟಿದ್ದೇ ಕತ್ತಿ, ಮೆಟ್ಟಿದ್ದೇ ರಣರಂಗ' ಎಂದ.

**ವ॥ ಎಂದೆನ್ನ ಮಾತಿನೊಳಜಿತಂಜಯನಪ್ಪ ಪಿಹಿತಾಸ್ರವಂ ಜಾತವೈರಾಗ್ಯ ನಾಗಿ ವಿಂಶತಿಸಹಸ್ರರಾಜಸಮಾಜಂಬೆರಸು ಸುಮೇರುಸ್ಥವಿರರೆಂಬ ಮುಮುಕ್ಷು ಗಳ ಸಮಕ್ಷದೊಳ್ ಮೋಕ್ಷಮಾರ್ಗಮಂ ಕೈಕೊಂಡು ಗಗನಚಾರಣಋದ್ಧಿ ಪ್ರಾಪ್ತರೆಂಬ ಅಯ್ನೂರ್ವರಂಬರ ಚಾರಣರೊಡನೆ ವಿಹಾರಿಸುತ್ತುಂ ಬಂದು ಚಾರಣಚರಿತಮೆಂಬ ಪುಣ್ಯಾರಣ್ಯದೊಳಂಬರ ತಿಳಕಮೆಂಬ ಗಿರಿವರದ ನಡುವೆ ಯೋಗಯೋಗ್ಯಮೆಂದದನಳಂಕರಿಸಿ ನೆಲಸಿದಂದು ನಿನ್ನ ನಿರ್ನಾಮಿಕೆ ಯಾದ ಭವದೊಳ್ ಮದೀಯಜನನೀಚರಗುರುಗಳ್ ನಿನಗಂ ಗುರುಗಳಾ ದೊಡವರ್ ಪೇೞ್ದುಪದೇಶದೊಳ್ ನೋಂತು ಮಹಾಬಳಖೇಚರನಾದ ಭವದೊಳ್ ಸ್ವಯಂಬುದ್ಧೋ ಪದೇಶದೊಳೀಶಾನಕಲ್ಪದ ಶ್ರೀಪ್ರಭವ ವಿಮಾನದೊಳ್ ಪುಟ್ಟಿದ ಲಲಿತಾಂಗದೇವಂಗೆ ನೀಂ ಸ್ವಯಂಪ್ರಭೆಯೆಂಬ ದೇವಿಯಾಗಿ ಪುಟ್ಟಿರೆ ಆನುಮಸ್ಮಜ್ಜನನೀಚರನಪ್ಪ ಲಲಿತಾಂಗದೇವನೊಳನು ಬಂಧಿಸಿದ ಮೋಹಸಂಬಂಧದೊಳ್ ನಿನ್ನ ದೇವನಪ್ಪ ಲಲಿತಾಂಗಂ ಬೆರಸಿರ್ಪ್ಪತ್ತಿರ್ವರ್ಲಲಿತಾಂ ಗರುಂ ಕೊಂಡಾಡಿದೆಂ. ಅಂದು ನಿನ್ನ ದೇವನೊಲಾಧ ಕೊಂಡಾಟಮಂ ನೀನುಮಱೆವೌ**

**ಪದವಿಭಾಗ–ಅನ್ವಯ–ಅರ್ಥ:** ಎಂದೆನ್ನ ಮಾತಿನೊಳ್ = ಎಂಬ ನನ್ನ ಮಾತಿನಿಂದ, ಅಜಿತಂಜಯನಪ್ಪ ಪಿಹಿತಾಸ್ರವಂ = ಅಜಿತಂಜಯನಾದ ಪಿಹಿತಾಸ್ರವನು, ಜಾತವೈರಾಗ್ಯನಾಗಿ = ವೈರಾಗ್ಯ ಪಡೆದವನಾಗಿ, ವಿಂಶತಿಸಹಸ್ರರಾಜಸಮಾಜಂಬೆರಸು = ಇಪ್ಪತ್ತು ಸಾವಿರ ರಾಜರ ಸಮೂಹದೊಡನೆ, ಸುಮೇರುಸ್ಥವಿರರೆಂಬ ಮುಮುಕ್ಷುಗಳ ಸಮಕ್ಷದೊಳ್ = ಸುಮೇರುಸ್ಥವಿರರು ಎಂಬ ಮುಮುಕ್ಷುಗಳ ಸನ್ನಿಧಿಯಲ್ಲಿ, ಮೋಕ್ಷಮಾರ್ಗಮಂ ಕೈಕೊಂಡು = ಮೋಕ್ಷದ ಹಾದಿಯನ್ನು ಹಿಡಿದು, ಗಗನಚಾರಣಋದ್ಧಿಪ್ರಾಪ್ತರೆಂಬ = ಗಗನಚಾರಣ ಎಂಬ ಋದ್ಧಿಯನ್ನು ಪಡೆದ, ಅಯ್ನೂರ್ವರ್ + ಅಂಬರಚಾರಣರೊಡನೆ = ಐನೂರು ಮಂದಿ ಅಂಬರಚಾರಣರ ಜೊತೆಯಲ್ಲಿ, ವಿಹಾರಿಸುತ್ತುಂ ಬಂದು = ಸಂಚಾರ ಮಾಡುತ್ತ ಬಂದು, ಚಾರಣಚರಿತಮೆಂಬ ಪುಣ್ಯಾರಣ್ಯದೊಳ್ = ಚಾರಣಚರಿತ ಎಂಬ ಪುಣ್ಯಕರವಾದ ಕಾಡಿನಲ್ಲಿ, ಅಂಬರತಿಳಕಮೆಂಬ ಗಿರಿವರದ ನಡುವೆ = ಅಂಬರತಿಳಕ ಎಂಬ ಶ್ರೇಷ್ಠ ಗಿರಿಶ್ರೇಣಿಯ ಮಧ್ಯೆ, ಯೋಗಯೋಗ್ಯಮೆಂದು + ಅದನ್ + ಅಳಂಕರಿಸಿ ನೆಲಸಿದಂದು = ಯೋಗದಲ್ಲಿ ನಿರತವಾಗಲು ತಕ್ಕುದಾದ ಸ್ಥಳವನ್ನು ಆಯ್ದುಕೊಂಡು ನೆಲೆಸಲು, ನಿನ್ನ ನಿರ್ನಾಮಿಕೆಯಾದ ಭವದೊಳ್ = ನೀನು ಹೆಸರಿಲ್ಲದವಳಾಗಿ ಹುಟ್ಟಿದ್ದ ಜನ್ಮದಲ್ಲಿ, ಮದೀಯಜನನೀಚರಗುರುಗಳ್ = ನನ್ನ ಹಿಂದಿನ ಜನ್ಮದ ಗುರುಗಳು, ನಿನಗಂ ಗುರುಗಳಾದೊಡೆ = ನಿನಗೂ ಗುರುಗಳಾಗಿರಲು, ಅವರ್ ಪೇೞ್ದ + ಉಪದೇಶದೊಳ್ ನೋಂತು = ಅವರು ನೀಡಿದ ಉಪದೇಶವನ್ನನುಸರಿಸಿ

ವ್ರತ ತೊಟ್ಟು, ಮಹಾಬಳಖೇಚರನಾದ ಭವದೊಳ್ = ಮಹಾಬಳ ಖೇಚರನಾಗಿದ್ದ ಜನ್ಮದಲ್ಲಿ, ಸ್ವಯಂಬುದ್ಧ + ಉಪದೇಶದೊಳ್ = ಸ್ವಯಂಬುದ್ಧನ ಉಪದೇಶದ ಕಾರಣದಿಂದಾಗಿ, ಈಶಾನಕಲ್ಪದ ಶ್ರೀಪ್ರಭವವಿಮಾನದೊಳ್ = ಈಶಾನಕಲ್ಪದ ಶ್ರೀಪ್ರಭವಿಮಾನದಲ್ಲಿ, ಪುಟ್ಟಿದ ಲಲಿತಾಂಗದೇವಂಗೆ = ಹುಟ್ಟಿದ್ದ ಲಲಿತಾಂಗನಿಗೆ, ನೀಂ ಸ್ವಯಂಪ್ರಭೆಯೆಂಬ ದೇವಿಯಾಗಿ ಪುಟ್ಟಿರೆ = ನೀನು ಸ್ವಯಂಪ್ರಭೆಯೆಬ ಪ್ರೇಯಸಿಯಾಗಿ ಹುಟ್ಟಿರಲು, ಆನುಂ + ಅಸ್ಮತ್ + ಜನನೀಚರನಪ್ಪ ಲಲಿತಾಂಗದೇವನೊಳ್ = ನಾನೂ ನನ್ನ ಹಿಂದಿನ ಜನ್ಮದ ತಾಯಿಯಾಗಿದ್ದ ಲಲಿತಾಂಗನ, ಅನುಬಂಧಿಸಿದ ಮೋಹಸಂಬಂಧದೊಳ್ = ಬಗ್ಗೆ ಹೊಂದಿದ್ದ ಮೋಹದಿಂದಾಗಿ, ನಿನ್ನ ದೇವನಪ್ಪ ಲಲಿತಾಂಗಂ ಬೆರಸು = ನಿನ್ನ ಸ್ವಾಮಿಯಾದ ಲಲಿತಾಂಗನೂ ಸೇರಿದಂತೆ, ಇರ್ಪತ್ತು + ಇರ್ವರ್ + ಲಲಿತಾಂಗರಂ ಕೊಂಡಾಡಿದೆಂ = ಇಪ್ಪತ್ತೆರಡು ಮಂದಿ ಲಲಿತಾಂಗರನ್ನು ಮೆಚ್ಚಿದೆ. ಅಂದು ನಿನ್ನ ದೇವನೊಳಾದ ಕೊಂಡಾಟಮಂ ನೀನುಂ + ಅಱಿವೌ = ಆಗ ನಿನ್ನ ಸ್ವಾಮಿಯ ಬಗೆಗಿನ ಮೆಚ್ಚಿಕೆ ನಿನಗೂ ತಿಳಿದದ್ದೇ.

**ಗದ್ಯಾನುಸರಣ:** ಎಂಬ ನನ್ನ ಮಾತಿನಿಂದ ಅಜಿತಂಜಯನಾದ ಪಿಹಿತಾಸ್ರವನು ವೈರಾಗ್ಯ ಉಂಟಾಯಿತು; ಇಪ್ಪತ್ತು ಸಾವಿರ ರಾಜರ ಜೊತೆಯಲ್ಲಿ ಸುಮೇರುಸ್ಥವಿರರು ಎಂಬ ಮುಮುಕ್ಷುಗಳ ಸನ್ನಿಧಿಯಲ್ಲಿ ಮೋಕ್ಷದ ಹಾದಿಯನ್ನು ಹಿಡಿದ. ಆನಂತರ ಗಗನಚಾರಣ ಎಂಬ ಋದ್ಧಿಯನ್ನು ಪಡೆದ ಐನೂರು ಮಂದಿ ಅಂಬರಚಾರಣರ ಜೊತೆಯಲ್ಲಿ ಸಂಚಾರ ಮಾಡುತ್ತ ಬಂದು ಚಾರಣಚರಿತ ಎಂಬ ಪುಣ್ಯಕರವಾದ ಕಾಡಿನಲ್ಲಿ ಅಂಬರತಿಳಕ ಎಂಬ ಶ್ರೇಷ್ಠ ಗಿರಿಶ್ರೇಣಿಯ ಮಧ್ಯೆ ಯೋಗದಲ್ಲಿ ನಿರತವಾಗಲು ತಕ್ಕುದಾದ ಸ್ಥಳವನ್ನು ಆಯ್ದುಕೊಂಡು ನೆಲೆಸಿದ. ನನ್ನ ಹಿಂದಿನ ಜನ್ಮದ ಗುರುಗಳು ನೀನು ಹೆಸರಿಲ್ಲದವಳಾಗಿ ಹುಟ್ಟಿದ್ದ ಜನ್ಮದಲ್ಲಿ ನಿನಗೂ ಗುರುಗಳಾಗಿದ್ದರು. ಅವರು ನೀಡಿದ ಉಪದೇಶವನ್ನನುಸರಿಸಿ ವ್ರತ ತೊಟ್ಟು, ಮಹಾಬಳ ಖೇಚರನಾಗಿದ್ದ ಜನ್ಮದಲ್ಲಿ ಸ್ವಯಂಬುದ್ಧನ ಉಪದೇಶದ ಕಾರಣದಿಂದಾಗಿ ಈಶಾನಕಲ್ಪದ ಶ್ರೀಪ್ರಭವಿಮಾನದಲ್ಲಿ ಹುಟ್ಟಿದ್ದ ಲಲಿತಾಂಗನಿಗೆ ನೀನು ಸ್ವಯಂಪ್ರಭೆಯೆಬ ಪ್ರೇಯಸಿಯಾಗಿ ಹುಟ್ಟಿದೆ. ನಾನೂ ನನ್ನ ಹಿಂದಿನ ಜನ್ಮದ ತಾಯಿಯಾಗಿದ್ದ ಲಲಿತಾಂಗನ ಬಗ್ಗೆ ಹೊಂದಿದ್ದ ಮೋಹದಿಂದಾಗಿ ನಿನ್ನ ಸ್ವಾಮಿಯಾದ ಲಲಿತಾಂಗನೂ ಸೇರಿದಂತೆ ಇಪ್ಪತ್ತೆರಡು ಮಂದಿ ಲಲಿತಾಂಗರನ್ನು ಮೆಚ್ಚಿದೆ. ನಿನ್ನ ಸ್ವಾಮಿಯ ಬಗೆಗಿನ ಆಗಿನ ಮೆಚ್ಚಿಕೆ ನಿನಗೂ ತಿಳಿದದ್ದೇ.

**ಮನಮೊಲ್ದೊಂದವಿನಾಣಮಮಂ ಮಗಳೆ ಕೇಳ್ ನಿನ್ನೋಪನುಂ ನೀನುಮಂ**
**ದನುರಾಗೋದಯದಿಂದಮಂದು ನೆಗಟ್ದಾ ಬ್ರಹ್ಮೇಂದ್ರನುಂ ಲಾಂತವೇಂ**
**ದ್ರನುಮಚ್ಚರ್ತಿರದಚ್ಯುತೇಂದ್ರ ತಿಳಿವಂತಾಗೆಯ್ದೆ ಪೇಟ್‌ಎಂಬುದುಂ**
**ನೆನೆವೋ ರಾಗದನಾ ಯುಗಂಧರಜಿನೋಪಾಖ್ಯಾನಮಂ ಪೇಟ್ದುದಂ ೭೩**

**ಪದವಿಭಾಗ–ಅನ್ವಯ–ಅರ್ಥ:** ಮಗಳೆ, ಮನಮೊಲ್ದ + ಒಂದು + ಅವಿನಾಣಮಂ = ನನ್ನ ಮನಸ್ಸಿನಲ್ಲಿರುವ ಾ ಗುರುತೊಂದನ್ನು, (ಹೇಳುತ್ತೇನೆ) ಕೇಳ್ = ಕೇಳು: ಅಂದು ನಿನ್ನ + ಓಪನುಂ ನೀನುಂ ನೆಗಟ್ದ + ಆ ಬ್ರಹ್ಮೇಂದ್ರನುಂ ಲಾಂತವೇಂದ್ರನುಂ = ಆ ದಿನ ನೀನೂ ನಿನ್ನ ಪ್ರಿಯಕರನೂ ಬ್ರಹೇಂದ್ರನೂ ಲಾಂತವೇಂದ್ರನೂ, ಅಚ್ಚರ್ತು = ಪ್ರೀತಿಯಿಂದ, ಇರದೆ, ಅಚ್ಯುತೇಂದ್ರ = ಅಚ್ಯುತೇಂದ್ರನೇ, ತಿಳಿವಂತಾಗೆ + ಎಯ್ದೆ ಪೇಟ್ ಎಂಬುದುಂ = ನಮಗೆ ತಿಳಿಯುವಂತೆ ದಯವಿಟ್ಟು ಹೇಳಿ ಎಂದು ಕೇಳಿಕೊಂಡಾಗ, ರಾಗದಿನ್ + ಆ ಯುಗಂಧರಜಿನ + ಉಪಾಖ್ಯಾನಮಂ ಪೇಟ್ದುದಂ ನೆನೆವೋ = ನಾನು ಯುಗಂಧರ ಜಿನನ ಕತೆಯನ್ನು ನಿರೂಪಿಸಿದುದು ನೆನಪಿದೆಯಾ?

**ಗದ್ಯಾನುಸರಣ:** ಮಗಳೆ, ನನ್ನ ಮನಸ್ಸಿನಲ್ಲಿರುವ ಸಂಗತಿಯೊಂದನ್ನು ಹೇಳುತ್ತೇನೆ: ಆ ದಿನ ನೀನು ನಿನ್ನ ಪ್ರಿಯಕರ ಬ್ರಹೇಂದ್ರ ಹಾಗೂ ಲಾಂತವೇಂದ್ರ – ನಾಲ್ವರು, 'ಅಚ್ಯುತೇಂದ್ರನೇ ದಯವಿಟ್ಟು ಹೇಳಿ' ಎಂದು ಕೇಳಿಕೊಂಡಾಗ, ನಾನು ಯುಗಂಧರ ಜಿನನ ಕತೆಯನ್ನು ನಿರೂಪಿಸಿದುದು ನೆನಪಿದೆ ತಾನೇ?

**ವ। ಅದೆಂತೆಂದೊಡೀ ಜಂಬೂದ್ವೀಪದ ಪೂರ್ವವಿದೇಹದ ಸೀತಾ ನದಿಯ ತೆಂಕಣ ತಡಿಯ ವತ್ಸಕಾವತೀವಿಷಯದ ಸುಸೀಮಾನಗರಮನಾಳ್ವ ಅಜಿತಂಜಯಮಹೀಪಾಳನ ರಾಜ್ಯಪ್ರಾಸಾದಮೂಲಸ್ತಂಭ ಸಚಿವನಮಿತಮತಿ ಗಮಾತನ ಕುಲಲಲನೆ ಸತ್ಯಭಾವೆಗಂ ಪ್ರಹಸಿತನೆಂಬ ಮಗನಾದಂ; ಆತನ ಸಹಚರಂ ವಿಕಸಿತನೆಂಬೊಂ**

**ಪದವಿಭಾಗ–ಅನ್ವಯ–ಅರ್ಥ:** ಅದು + ಎಂತೆಂದೊಡೆ = ಅದು ಹೇಗೆಂದರೆ, ಈ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ತೆಂಕಣ ತಡಿಯ = ಜಂಬೂದ್ವೀಪದ ಪೂರ್ವವಿದೇಹದಲ್ಲಿನ ಸೀತಾನದಿಯ ದಕ್ಷಿಣ ದಡದ ಮೇಲಿನ, ವತ್ಸಕಾವತೀವಿಷಯದ ಸುಸೀಮಾನಗರಮನ್ + ಆಳ್ವ ವತ್ಸಕಾವತಿ ನಾಡಿನ ಸುಸೀಮಾನಗರವನ್ನು ಆಳುವ, ಅಜಿತಂಜಯಮಹೀಪಾಳನ ರಾಜ್ಯಪ್ರಾಸಾದ ಮೂಲಸ್ತಂಭಸಚಿವನ್ = ಅಜಿತಂಜಯ ರಾಜನ ರಾಜ್ಯದ ಮೂಲಸ್ತಂಭದಂತಿದ್ದ ಮಂತ್ರಿಯಾದ, ಅಮಿತಮತಿಗಮಾತನ ಕುಲಲಲನೆ ಸತ್ಯಭಾವೆಗಂ = ಅಮಿತಮತಿ ಮತ್ತವನ ಹೆಂಡತಿ ಸತ್ಯಭಾವೆಗೆ, ಪ್ರಹಸಿತನೆಂಬ ಮಗನಾದಂ = ಪ್ರಹಸಿತ ಎಂಬ ಮಗನಾದನು; ಆತನ ಸಹಚರಂ ವಿಕಸಿತನೆಂಬೊಂ = ಅವನ ಗೆಳೆಯ ವಿಕಸಿತ ಎನ್ನುವವನು

**ಗದ್ಯಾನುಸರಣ:** ಆ ಕತೆ ಹೀಗಿದೆ: ಜಂಬೂದ್ವೀಪದ ಪೂರ್ವವಿದೇಹದಲ್ಲಿನ ಸೀತಾನದಿಯ ದಕ್ಷಿಣ ದಡದ ಮೇಲಿನ, ವತ್ಸಕಾವತಿ ನಾಡಿನ ಸುಸೀಮಾನಗರವನ್ನು ಆಳುತ್ತಿದ್ದವನು ಅಜಿತಂಜಯ ಎಂಬ ರಾಜ; ಅವನ ಮೂಲಸ್ತಂಭದಂತಿದ್ದ ಮಂತ್ರಿ ಅಮಿತಮತಿ; ಅವನು ಮತ್ತವನ ಹೆಂಡತಿ ಸತ್ಯಭಾವೆಗೆ ಪ್ರಹಸಿತ ಎಂಬ ಮಗನಾದ; ಅವನ ಗೆಳೆಯ ವಿಕಸಿತ.

**ಪ್ರಹಸಿತವಿಕಸಿತರಿರ್ವರ**
**ಸಹಜಸ್ನೇಹಮನವರ್ಗಳಿರ್ವರ ವಿದ್ಯಾ**
**ಮಹಿಮೆಯುಮಂ ಬಣ್ಣಿಸಲರಿ**
**ದಹಿರಾಜಂಗುೞಿದ ಜಡರದೇನಂ ಪೊಗೞ್ವರ್** ೭೪

**ಪದವಿಭಾಗ–ಅನ್ವಯ–ಅರ್ಥ:** ಪ್ರಹಸಿತವಿಕಸಿತರ್ + ಇರ್ವರ ಸಹಜಸ್ನೇಹಮನ್ = ಪ್ರಹಸಿತ ಮತ್ತು ವಿಕಸಿತರ ಅಕೃತಕ ಗೆಳೆತನವನ್ನು, (ಮತ್ತು) ಅವರ್ಗಳ್ + ಇರ್ವರ ವಿದ್ಯಾಮಹಿಮೆಯುಮಂ = ಅವರಿಬ್ಬರ ವಿದ್ಯೆಯ ಮಹಿಮೆಯನ್ನೂ, ಬಣ್ಣಿಸಲ್ ಅಹಿರಾಜಂಗೆ ಅರಿದು = ವರ್ಣಿಸುವುದು ನಾಗರಾಜನಿಗೂ ಅಸಾಧ್ಯ; ಅಂದಮೇಲೆ, ಉೞಿದ ಜಡರ್ + ಅದೇನಂ ಪೊಗೞ್ವರ್ = ಮಿಕ್ಕ ಮಂದಮತಿಗಳು ಏನೆಂದು ತಾನೇ ಹೊಗಳುವರು

**ಗದ್ಯಾನುಸರಣ:** ಪ್ರಹಸಿತ ಮತ್ತು ವಿಕಸಿತರ ಅಕೃತಕ ಗೆಳೆತನವನ್ನೂ ವಿದ್ಯೆಯ ಮಹಿಮೆಯನ್ನೂ ವರ್ಣಿಸುವುದು ವಾಸುಕಿಗೂ ಅಸಾಧ್ಯ ಅಂದಮೇಲೆ ಮಿಕ್ಕವರು ಏನೆಂದು ತಾನೇ ಹೊಗಳಿಯಾರು!

**ವಾದಿನಗ ವಾದಿಗಜ ಪರ**
**ವಾದಿತಮಸ್ತಮಮನೊಡೆವ ಬಿಡೆ ಬೆದಱಪ ನಿ**
**ರ್ಭೇದಿಪೆಡಗಶನಿ ಹರಿ ದಿನ**
**ಪೋದಯಮುಮೆನಿಸಿದುದು ವಿದ್ಯೆಯೊಂದುರ್ಕವರಾ** ೭೫

**ಪದವಿಭಾಗ–ಅನ್ವಯ–ಅರ್ಥ:** ಅವರ + ಆ ವಿದ್ಯೆಯೊಂದು + ಉರ್ಕು = ಅವರಿಬ್ಬರ ವಿದ್ಯೆಯ ಸಾಮರ್ಥ್ಯವು ವಾದಿನಗ = ವಾದಿಗಳೆಂಬ ಪರ್ವತವನ್ನು, ಒಡೆವ = ಸೀಳುವ, ವಾದಿಗಜ = ವಾದಿಗಳೆಂಬ ಆನೆಗಳನ್ನು, ಬಿಡೆ ಬೆದಱಪ = ಬಿಡದೆ ಹೆದರಿಸುವ, ಹಾಗೂ ಪರವಾದಿತಮಸ್ತಮಮನ್ = ಪರವಾದಿಗಳೆಂಬ ಕತ್ತಲೆಯನ್ನು, ನಿರ್ಭೇದಿಪ = ಹೊಡೆದೋಡಿಸುವ, ಎಡಗೆ = ವಿಷಯದಲ್ಲಿ, ಅಶನಿ = ವಜ್ರಾಯುಧ, ಹರಿ = ಸಿಂಹ, ದಿನಪ + ಉದಯಂ + ಎನಿಸಿದುದು = ಸೂರ್ಯನ ಉದಯ ಎನ್ನಿಸಿಕೊಂಡಿತು

**ಗದ್ಯಾನುಸರಣ:** ಅವರಿಬ್ಬರ ವಿದ್ಯೆಯ ಸಾಮರ್ಥ್ಯವು ವಾದಿಗಳೆಂಬ ಪರ್ವತವನ್ನು ಸೀಳುವ ವಜ್ರಾಯುಧದಂತೆಯೂ, ವಾದಿಗಳೆಂಬ ಆನೆಗಳನ್ನು ಹೆದರಿಸುವ ಸಿಂಹದಂತೆಯೂ, ಪರವಾದಿಗಳೆಂಬ ಕತ್ತಲೆಯನ್ನು ಹೊಡೆದೋಡಿಸುವ ಸೂರ್ಯೋದಯದಂತೆಯೂ ಇತ್ತು.

**ವ। ಅಂತು ನಿಜವಿದ್ಯಾಜ್ಞಾನಮದಾವಲಿಪ್ತರಿರ್ವರುಮೊಂದುದಿವಸ ಮಜಿತಂಜಯನೊಡನೆ ಪೋಗಿ ತತ್ಪುರೋಪವನದೊಳಿರ್ದ ಮತಿಸಾಗರ ಮುನಿಪತಿಯೊಳ್ ಬಾದುಗೆಯ್ದು ಆತ್ಮೀಯ ವಿದ್ಯಾಗರ್ವಪರ್ವತಮವರ ವಚೋವಜ್ರನಿರ್ಘಾತದಿಂ ನುಚ್ಚುನುಱಿಯಾಗಿ ಪೋದೊಡೆ ಹತಪ್ರಜ್ಞರುಂ ಗಳಿತಗರ್ವರುಮಾಗಿ ತಚ್ಛಿಷ್ಯತ್ವಮಂ ಪೂಣ್ದು,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ನಿಜವಿದ್ಯಾಜ್ಞಾನಮದ + ಅವಲಿಪ್ತರ್ = ತಮ್ಮ ಅರಿವು ಮತ್ತು ತಿಳಿವುಗಳ ಮದದಿಂದ ಕೂಡಿದ್ದ, ಇರ್ವರುಂ + ಒಂದುದಿವಸಂ = ಇಬ್ಬರೂ ಒಂದು ದಿನ, ಅಜಿತಂಜಯನೊಡನೆ ಪೋಗಿ = ಅಜಿತಂಜಯನ ಜೊತೆ ಹೋಗಿ, ತತ್ + ಪುರ + ಉಪವನದೊಳ್ + ಇರ್ದ = ಆ ನಗರದ ಹೊರವಲಯದ ಉದ್ಯಾನದಲ್ಲಿದ್ದ, ಮತಿಸಾಗರಮುನಿ ಪತಿಯೊಳ್ ಬಾದುಗೆಯ್ದು = ಮತಿಸಾಗರ ಮುನಿಗಳೊಡನೆ ವಾದ ಮಾಡಿ, ಆತ್ಮೀಯವಿದ್ಯಾಗರ್ವಪರ್ವತಂ = ತಮ್ಮ ವಿದ್ಯೆಯ ಬೆಟ್ಟವು, ಅವರ ವಚೋವಜ್ರನಿ ರ್ಘಾತದಿಂ = ಅವರ ಮಾತೆಂಬ ವಜ್ರದ ಹೊಡೆತದಿಂದಾಗಿ, ನುಚ್ಚುನುಱಿಯಾಗಿ ಪೋದೊಡೆ = ನುಚ್ಚುನೂರಾಗಲು, ಹತಪ್ರಜ್ಞರುಂ ಗಳಿತಗರ್ವರುಂ + ಆಗಿ = ಹೆಮ್ಮೆಯನ್ನು ಕಳೆದುಕೊಂಡವರೂ ಸೋರಿದ ಅಹಂಕಾರದವರೂ ಆಗಿ, ತತ್ + ಶಿಷ್ಯತ್ವಮಂ ಪೂಣ್ದು = ಅವರ ಶಿಷ್ಯತ್ವವನ್ನು ಸ್ವೀಕರಿಸಿ,

**ಗದ್ಯಾನುಸರಣ:** ಹಾಗೆ ತಮ್ಮ ಅರಿವು ಮತ್ತು ತಿಳಿವುಗಳ ಮದದಿಂದ ಕೂಡಿದ್ದ ಇಬ್ಬರೂ ಒಂದು ದಿನ, ಅಜಿತಂಜಯನೊಡನೆ ಅಜಿತಂಜಯನ ಜೊತೆ ಹೋಗಿ ಆ ನಗರದ ಹೊರವಲಯದ ಉದ್ಯಾನದಲ್ಲಿದ್ದ ಮತಿಸಾಗರ ಮುನಿಗಳೊಡನೆ ವಾದಕ್ಕಿಳಿದರು. ಆದರೆ ತಮ್ಮ ವಿದ್ಯೆಯ ಬೆಟ್ಟವು ಮುನಿಗಳ ಮಾತೆಂಬ ವಜ್ರದ ಹೊಡೆತದಿಂದ ನುಚ್ಚುನೂರಾಯಿತು. ಇದರಿಂದಾಗಿ ತಮ್ಮ ಹೆಮ್ಮೆ ಗರ್ವಗಳನ್ನು ತೊರೆದು ಅವರ ಶಿಷ್ಯತ್ವವನ್ನು ಸ್ವೀಕರಿಸಿದರು.

**ವಿಶೇಷ ವಿಚಾರ:** ಮತಿಸಾಗರರೊಡನೆ 'ಬಾದುಗೆಯ್ದು' ಎಂದಷ್ಟೇ ಪಂಪ ಇಲ್ಲಿ ಹೇಳಿದ್ದರೆ, ಪೂರ್ವಪುರಾಣದಲ್ಲಿ ಈ ವಾದ ಹನ್ನೊಂದು ಶ್ಲೋಕಗಳಲ್ಲಿ ಸಾಗುತ್ತದೆ: ಪೂಪು, ೭.೬೬–೭೬.

**ತನುವಂ ತಂದು ಮಹಾವ್ರತಕ್ಕುಚಿತಕಾಯಕ್ಲೇಶರಾಚಾಮ್ಲವ**
**ರ್ಧನಮಂ ನೋಂತು ಸಮಾಧಿ ಕೈಕೊಳೆ ಮಹಾಶುಕ್ರಕ್ಕೆ ಸಂದೀತನಿಂ**
**ದ್ರನಿವಂ ತತ್ಪ್ರತಿಮಂ ಪ್ರತೀಂದ್ರನೆನೆ ಸಂದಿಂತಿರ್ವರುಂ ಪೂಣ್ದಲಂ**
**ಪಿನೊಳುಂಡರ್ ಕಡೆಯೆಯ್ದೆ ಷೋಡಶನದೀನಾಥೋಪಮಾಯುಷ್ಯಮಂ೭೬**

**ಪದವಿಭಾಗ–ಅನ್ವಯ–ಅರ್ಥ:** ಮಹಾವ್ರತಕ್ಕೆ + ಉಚಿತಕಾಯಕ್ಲೇಶರ್ = ಮಹಾವ್ರತಕ್ಕೆ ತಕ್ಕುನಾದ ದೇಹದಂಡನೆಗೆ, ತನುವಂ ತಂದು = ತಮ್ಮ ದೇಹಗಳನ್ನೊಡ್ಡಿಕೊಂಡು, ಆಚಾಮ್ಲವರ್ಧನಮಂ ನೋಂತು = ಆಚಾಮ್ಲ ವರ್ಧನವ್ರತವನ್ನು ತೊಟ್ಟು, ಸಮಾಧಿ ಕೈಕೊಳೆ = ಸಮಾಧಿಗೊಂಡರು; ಮಹಾಶುಕ್ರಕ್ಕೆ ಸಂದು = ಮಹಾಶುಕ್ರವನ್ನು ಸೇರಿ, ಈತನ್ + ಇಂದ್ರನ್ + ಇವಂ ತತ್ಪ್ರತಿಮಂ ಪ್ರತೀಂದ್ರನೆನೆ ಸಂದು = ಇವನು ಇಂದ್ರನಾಗಿಯೂ ಅವನು ಪ್ರತೀಂದ್ರನಾಗಿಯೂ ಹುಟ್ಟಿ, ಇಂತಿರ್ವರುಂ = ಈ ರೀತಿ ಇಬ್ಬರೂ, ಷೋಡಶನದೀನಾಥ + ಉಪಮಾ ಯುಷ್ಯಮಂ = ಹದಿನಾರು ಸಾಗರಗಳಷ್ಟು ಆಯುಷ್ಯವನ್ನು ಹೊಂದಿ, ಪೂಣ್ದು + ಅಲಂಪಿನೊಳ್ ಕಡೆಯೆಯ್ದೆ ಉಂಡರ್ = ಕೊನೆಯವರೆಗೂ ಸ್ವರ್ಗಸುಖವನ್ನು ಉಂಡರು.

**ಗದ್ಯಾನುಸರಣ:** ಮಹಾವ್ರತಕ್ಕೆ ತಕ್ಕುನಾದ ದೇಹದಂಡನೆಗೆ ತಮ್ಮ ದೇಹಗಳನ್ನೊಡ್ಡಿಕೊಂಡು ಆಚಾಮ್ಲವರ್ಧನವ್ರತವನ್ನು ತೊಟ್ಟು ಸಮಾಧಿಯನ್ನು ಕೈಗೊಂಡರು; ಆ ಬಳಿಕ ಮಹಾಶುಕ್ರವನ್ನು ಸೇರಿ, ಇವನು ಇಂದ್ರನಾಗಿಯೂ ಅವನು ಪ್ರತೀಂದ್ರನಾಗಿಯೂ ಹುಟ್ಟಿದರು. ಈ ರೀತಿ ಇಬ್ಬರೂ ಹದಿನಾರು ಸಾಗರಗಳಷ್ಟು ಆಯುಷ್ಯವನ್ನು ಹೊಂದಿ ಕೊನೆಯವರೆಗೂ ಸ್ವರ್ಗಸುಖವನ್ನು ಉಂಡರು.

**ವಿಶೇಷ ವಿಚಾರ:** ಮಹಾಶುಕ್ರ = ಹದಿನಾರು ಕಲ್ಪಗಳಲ್ಲಿ ಹತ್ತನೆಯದು

**ವ। ಅಂತು ಪರಿಚ್ಯುತನಾಕಲೋಕರಾಗಿ ಧಾತಕೀಷಂಡದ ಪಡುವಣ ಸುಮೇರುದ ಪೂರ್ವವಿದೇಹದ ಪುಷ್ಕಳಾವತೀವಿಷಯದ ಪುಂಡರೀಕಿಣಿಯ ನಾಳ್ವ ಧನಂಜಯನರಸಿಯರಪ್ಪ ಜಯಮತಿಗಂ ಜಯಸೇನೆಗಂ ಮಹಾಬಳ ನುಮತಿಬಳನುಮೆಂಬ ಪೆಸರೊಳ್ ಬಲದೇವ ವಾಸುದೇವರಾಗಿ ಪುಟ್ಟಿ ನಿಜಗುರುಪರೋಕ್ಷದೊಳ್ ಧರಾಭಾರಧುರಂಧರರಾಗಿರೆ,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಪರಿಚ್ಯುತನಾಕಲೋಕರಾಗಿ = ಹಾಗೆ ನಾಕಲೋಕದಿಂದಿಳಿದು, ಧಾತಕೀಷಂಡದ ಪಡುವಣ ಸುಮೇರುದ ಪೂರ್ವವಿದೇಹದ ಪುಷ್ಕಳಾವತೀವಿಷಯದ, ಪುಂಡರೀಕಿಣಿಯನ್ + ಆಳ್ವ = ಪುಂಡರೀಕಿಣೀ ನಗರವನ್ನಾಳುತ್ತಿದ್ದ, ಧನಂಜಯನ + ಅರಸಿಯರಪ್ಪ ಜಯಮತಿಗಂ

ಜಯಸೇನೆಗಂ = ಧನಂಜಯರಾಜನ ರಾಣಿಯರಾದ ಜಯಮತಿ ಮತ್ತು ಜಯಸೇನೆಯರಿಗೆ, ಮಹಾಬಳನುಂ + ಅತಿಬಳನುಮೆಂಬ ಪೆಸರೊಳ್ = ಮಹಾಬಳ ಮತ್ತು ಅತಿಬಳ ಎಂಬ ಹೆಸರುಗಳಿಂದ, ಬಲದೇವ ವಾಸುದೇವರಾಗಿ ಪುಟ್ಟಿ = ಬಲದೇವ ವಾಸುದೇವರಂತೆ ಹುಟ್ಟಿ, ನಿಜಗುರುಪರೋಕ್ಷದೊಳ್ = ತಮ್ಮ ತಂದೆಯ ಮರಣದ ಬಳಿಕ, ಧರಾಭಾರಧುರಂಧರರಾಗಿರೆ = ರಾಜ್ಯಭಾರವನ್ನು ಹೊರಲು ಸಮರ್ಥರಾಗಿರಲು,

**ಗದ್ಯಾನುಸರಣ:** ಹಾಗೆ ನಾಕಲೋಕದಿಂದಿಳಿದು ಅವರು ಧಾತಕೀಷಂಡದ ಪಡುವಣ ಸುಮೇರುದ ಪೂರ್ವವಿದೇಹದ ಪುಷ್ಕಳಾವತೀವಿಷಯದ, ಪುಂಡರೀಕಿಣೀ ನಗರವನ್ನಾಳುತ್ತಿದ್ದ ಧನಂಜಯರಾಜನ ರಾಣಿಯರಾದ ಜಯಮತಿ ಮತ್ತು ಜಯಸೇನೆಯರಿಗೆ ಮಹಾಬಳ ಮತ್ತು ಅತಿಬಳ ಎಂಬ ಹೆಸರುಗಳಿಂದ ಬಲದೇವ ವಾಸುದೇವರಂತೆ ಹುಟ್ಟಿದರು. ಕಾಲಕ್ರಮದಲ್ಲಿ, ತಮ್ಮ ತಂದೆಯ ಮರಣದ ಬಳಿಕ ತಾವೇ ರಾಜ್ಯಭಾರವನ್ನು ಹೊರಲು ಸಮರ್ಥರಾದರು.

**ಅತಿಬಳಕೃಷ್ಣಂ ಗತಜೀ**
**ವಿತನಾಗೆ ಮಹಾಬಳಂ ಮಹಾವ್ರತದಿಂದ**
**ನ್ವಿತಮತಿ ಸಮಾಧಿಗುಪ್ತ**
**ವ್ರತಿಯುಪದೇಶದೊಳೆ ಪುಟ್ಟಿದಂ ಪ್ರಾಣತದೊಳ್** ೭೭

**ಪದವಿಭಾಗ–ಅನ್ವಯ–ಅರ್ಥ:** ಅತಿಬಳಕೃಷ್ಣಂ ಗತಜೀವಿತನಾಗೆ = ವಾಸುದೇವನಾದ ಅತಿಬಳನು ಗತಿಸಲು, ಮಹಾಬಳಂ = ಮಹಾಬಳನು, ಮಹಾವ್ರತದಿಂದ + ಅನ್ವಿತಮತಿ = ಮಹಾವ್ರತವನ್ನು ಹೊಂದಲು ಮನಸ್ಸುಳ್ಳವನಾಗಿ, ಸಮಾಧಿಗುಪ್ತ ವ್ರತಿಯ + ಉಪದೇಶದೊಳೆ = ಸಮಾಧಿಗುಪ್ತ ಮುನಿಗಳ ಉಪದೇಶದಿಂದ, ಪ್ರಾಣತದೊಳ್ ಪುಟ್ಟಿದಂ = ಪ್ರಾಣತದಲ್ಲಿ ಹುಟ್ಟಿದ.

**ಗದ್ಯಾನುಸರಣ:** ವಾಸುದೇವನಾದ ಅತಿಬಳನು ಗತಿಸಲು ಮಹಾಬಳನು ಮಹಾವ್ರತದಿಂದ ಮಹಾವ್ರತವನ್ನು ನಿಶ್ಚೈಸಿ ಸಮಾಧಿಗುಪ್ತ ಮುನಿಗಳ ಉಪದೇಶದಿಂದ ಪ್ರಾಣತದಲ್ಲಿ ಹುಟ್ಟಿದ.

**ವಿಶೇಷ ವಿಚಾರ:** ಪ್ರಾಣತ = ಹದಿನಾರು ಕಲ್ಪಗಳಲ್ಲಿ ಹದಿನಾಲ್ಕನೆಯದು

**ವ॥ ಆಕಲ್ಪದೊಳ್ ಪುಷ್ಪಚೂಳನೆಂಬ ಪೆಸರೆಸೆಯೆ ವಿಂಶತಿ ಸಮುದ್ರೋಪ ಮಾಯುಷ್ಯ ವಿರಾಮದೊಳ್ ಧಾತಕೀಷಂಡದ ಸುಮೇರುದ ಪೂರ್ವ ವಿದೇಹದ ಸೀತಾನದಿಯ ತೆಂಕಣ ತಡಿಯ ವತ್ಸಕಾವತೀ ವಿಷಯದೊಳ್ ಪ್ರಭಾಕರೀಪರೀನಾಥಂ ಮಹಾಸೇನಂಗಂ ತದ್ವನಿತೆ ವಸುಂಧರೆಗಂ ಜಯಸೇನನೆಂಬ ತನೂಜನಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಆ ಕಲ್ಪದೊಳ್ ಪುಷ್ಪಚೂಳನೆಂಬ ಪೆಸರ್ + ಎಸೆಯೆ = ಆ ಕಲ್ಪದಲ್ಲಿ ಪುಷ್ಪಚೂಳನೆಂಬ ಹೆಸರಿನಿಂದ, ವಿಂಶತಿಸಮುದ್ರೋಪಮಾಯುಷ್ಯ ವಿರಾಮದೊಳ್ = ಇಪ್ಪತ್ತು ಸಾಗರಗಳಷ್ಟು ಕಾಲ ಬದುಕಿದ ನಂತರ, ಧಾತಕೀಷಂಡದ ಸುಮೇರುದ ಪೂರ್ವವಿದೇಹದ ಸೀತಾನದಿಯ, ತೆಂಕಣ ತಡಿಯ ವತ್ಸಕಾವತೀವಿಷಯದೊಳ್ = ದಕ್ಷಿಣ ದಡದ ಮೇಲಿದ್ದ, ಪ್ರಭಾಕರೀಪರೀನಾಥಂ ಮಹಾಸೇನಂಗಂ = ಪ್ರಭಾಕರಿಪುರಿಯ ಒಡೆಯನಾದ ಮಹಾಸೇನನಿಗೂ, ತತ್ + ವನಿತೆ ವಸುಂಧರೆಗಂ = ಅವನ ಹೆಂಡತಿ ವಸುಂಧರೆಗೂ, ಜಯಸೇನನೆಂಬ ತನೂಜನಾಗಿ = ಜಯಸೇನನೆಂಬ ಹೆಸರಿನ ಮಗನಾಗಿ ಹುಟ್ಟಿ,

**ಗದ್ಯಾನುಸರಣ:** ಆ ಕಲ್ಪದಲ್ಲಿ ಪುಷ್ಪಚೂಳನೆಂಬ ಹೆಸರಿನಿಂದ ಹುಟ್ಟಿ ಇಪ್ಪತ್ತು ಸಾಗರಗಳಷ್ಟು ಕಾಲ ಬದುಕಿದ ನಂತರ ಧಾತಕೀಷಂಡದ ಸುಮೇರುದ ಪೂರ್ವವಿದೇಹದ ಸೀತಾನದಿಯ ದಕ್ಷಿಣ ದಡದ ಮೇಲಿದ್ದ ಪ್ರಭಾಕರಿಪುರಿಯ ಒಡೆಯನಾದ ಮಹಾಸೇನನಿಗೂ ಅವನ ಹೆಂಡತಿ ವಸುಂಧರೆಗೂ ಜಯಸೇನನೆಂಬ ಹೆಸರಿನ ಮಗನಾಗಿ ಹುಟ್ಟಿದ.

**ಗುರು ಪುರುಷಾರ್ಥಮಂ ನೆಱೆಯೆ ಸಾಧಿಸಿ ಪೋಗೆನಿಜಾನ್ವವಾಯಭೂ**
**ಭರಮನದೊಂದು ಹಸ್ತಕಟಕೋಪಮೆಂಬಿನಿತಾಗೆ ತಾಳ್ದಿಕೊಂ**
**ಡಿರೆಯಿರೆ ಚಕ್ರವರ್ತಿಪದಮುಂ ತನಗಾವಗಮಾದೊಡಾ ಮಹಾ**
**ಪುರುಷನದಂ ಜರತ್ತೃಣಕಣಾನುಗುಣಂ ವಲಮೆಂದೆ ಪೇಸಿದಂ೭೪**

**ಪದವಿಭಾಗ–ಅನ್ವಯ–ಅರ್ಥ:** ಗುರು ಪುರುಷಾರ್ಥಮಂ ನೆಱೆಯೆ ಸಾಧಿಸಿ ಪೋಗೆ = ತಂದೆಯು ಪುರುಷಾರ್ಥವನ್ನು ಸಾಧಿಸಿ ಹೋದ ಬಳಿಕ, ನಿಜ + ಅನ್ವವಾಯ = ವಂಶಪಾರಂಪರ್ಯವಾದ, ಭೂಭರಮನ್ = ರಾಜ್ಯಭರವನ್ನು, ಅದೊಂದು ಹಸ್ತಕಟಕ + ಉಪಂ = ಅದು ಒಂದು ಕೈಕಡಗಕ್ಕೆ ಸಮಾನ, ಎಂಬಿನಿತಾಗೆ ತಾಳ್ದಿಕೊಂಡಿರೆಯಿರೆ = ಎಂದು ಸಹಿಸಿಕೊಂಡಿರಲು, ಕಾಲಕ್ರಮೇಣ, ಚಕ್ರವರ್ತಿಪದಮುಂ = ಚಕ್ರವರ್ತಿ ಪದವಿಯೂ, ತನಗಾವಗಂ + ಆದೊಡೆ, ತನಗೆ ಉಂಟಾಗಲು, ಆ ಮಹಾಪುರುಷನದಂ ಜರತ್ + ತೃಣಕಣ + ಅನುಗುಣಂ ವಲಂ + ಎಂದೆ ಪೇಸಿದಂ = ಆ ಮಹಾಪುರುಷನು, ಅದನ್ನೂ ಒಣಗಿದ ಹುಲ್ಲುತುಂಡಿಗೆ ಸಮಾನವೆಂದೇ ಭಾವಿಸಿ ಅಸಹ್ಯಪಟ್ಟುಕೊಂಡ

**ಗದ್ಯಾನುಸರಣ:** ತಂದೆಯು ಪುರುಷಾರ್ಥವನ್ನು ಸಾಧಿಸಿ ಹೋದ ಬಳಿಕ, ವಂಶಪಾರಂಪರ್ಯವಾದ ರಾಜ್ಯಭರವನ್ನು ಒಂದು ಕೈಕಡಗಕ್ಕೆ ಸಮಾನ ಎಂದು ಸಹಿಸಿಕೊಂಡಿದ್ದ; ಕಾಲಕ್ರಮೇಣ, ಚಕ್ರವರ್ತಿಪದವಿಯುಂಟಾಗಲು ಆ

ಮಹಾಪುರುಷನು ಅದನ್ನೂ ಒಣಗಿದ ಹುಲ್ಲುತುಂಡಿಗೆ ಸಮಾನವೆಂದೇ ಭಾವಿಸಿ ಅಸಹ್ಯಪಟ್ಟುಕೊಂಡ.

**ವ ಅಂತು ಪರಿತ್ಯಕ್ತಸಕಳಸಾಮ್ರಾಜ್ಯನುಂ ದೃಷ್ಟಾನುಭೂತ ಶ್ರಾವಕವಿಷಯವಿತೃಷ್ಣನುಮಾಗಿ ಸೀಮಂಧರಜಿನೇಶ ಪದಕುಶೇಶಯಾಭ್ಯಸನ ದೊಳ್ ದಿಗ್ವಾಸನಾಗಿ ಷೋಡಶಭಾವನೆಗಳಂ ಭಾವಿಸಿ ನಿಜಜೀವಿತಾವಸಾನ ದೊಳ್ ಸೌಮನಸಮೆಂಬೂರ್ಧ್ವಮಧ್ಯಮದ ನವಗ್ರೈವೇಯಕದೊಳ್ ಅಹಮಿಂದ್ರನಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಪರಿತ್ಯಕ್ತಸಕಳಸಾಮ್ರಾಜ್ಯನುಂ = ಸಾಮ್ರಾಜ್ಯವನ್ನೆಲ್ಲ ತೊರೆದವನೂ, ದೃಷ್ಟ + ಅನುಭೂತಶ್ರಾವಕವಿಷಯವಿತೃಷ್ಣನುಂ = ಕಂಡು ಮಾಡಿದ ಶ್ರಾವಕರ ಇಂದ್ರಿಯಸುಖಗಳನ್ನು ತೊರೆದವನೂ, ಆಗಿ, ಸೀಮಂಧರಜಿನೇಶಪದಕುಶೇಶಯ + ಅಭ್ಯಸನದೊಳ್ = ಸೀಮಂಧರ ಜಿನಪತಿಗಳ ಪಾದಕಮಲದಲ್ಲಿ ಅಭ್ಯಾಸ ಮಾಡಿ, ದಿಗ್ವಾಸನಾಗಿ = ದಿಗಂಬರನಾಗಿ, ಷೋಡಶಭಾವನೆಗಳಂ ಭಾವಿಸಿ = ಷೋಡಶಭಾವನೆಗಳನ್ನು ಸ್ಮರಿಸುತ್ತ, ನಿಜಜೀವಿತ + ಅವಸಾನದೊಳ್ = ತನ್ನ ಜೀವನದ ಕೊನೆಯಲ್ಲಿ, ಊರ್ಧ್ವಮಧ್ಯಮದ ಸೌಮನಸಂ + ಎಂಬ ನವಗ್ರೈವೇಯಕದೊಳ್ ಅಹಮಿಂದ್ರನಾಗಿ = ಊರ್ಧ್ವಮಧ್ಯಮದ ಸೌಮನಸ ಎಂಬ ನವಗ್ರೈವೇಯಕದಲ್ಲಿ ಅಹಮಿಂದ್ರನಾಗಿ,

**ಗದ್ಯಾನುಸರಣ:** ಹಾಗೆ, ಸಾಮ್ರಾಜ್ಯವನ್ನೆಲ್ಲ ತೊರೆದು ಕಂಡು ಅನುಭವಿಸಿದ ಇಂದ್ರಿಯಸುಖಗಳನ್ನು ದೂರಮಾಡಿ ಸೀಮಂಧರ ಜಿನಪತಿಗಳ ಪಾದಕಮಲದಲ್ಲಿ ದಿಗಂಬರತ್ವವನ್ನು ಸ್ವೀಕರಿಸಿ ಷೋಡಶಭಾವನೆಗಳನ್ನು ಸ್ಮರಿಸುತ್ತಲಿದ್ದ; ಜೀವನದ ಕೊನೆಯಲ್ಲಿ, ಊರ್ಧ್ವಮಧ್ಯಮದ ಸೌಮನಸ ಎಂಬ ನವಗ್ರೈವೇಯಕದಲ್ಲಿ ಅಹಮಿಂದ್ರನಾದ.

**ವಿಶೇಷ ವಿಚಾರ:** ಊರ್ಧ್ವಮಧ್ಯಮ = ಜೈನ ಪರಿಕಲ್ಪನೆಯಲ್ಲಿ ಲೋಕದಲ್ಲಿ ಮೂರು ನೆಲೆಗಳು: ಸುಮೇರುಪರ್ವತದ ಕೆಳಗಿನ ಅಧೋಲೋಕ, ಸುಮೇರು ಪರ್ವತದ ಸುತ್ತಲೂ ಇರುವ ಮಧ್ಯಮಲೋಕ – ಮತ್ತು ಸುಮೇರು ಪರ್ವತದ ತುದಿಯ ಮೇಲ್ಭಾಗದ ಊರ್ಧ್ವಲೋಕ. ಕೆಳಗಿನ ಲೋಕ ಅಥವಾ ನರಕ ಲೋಕ – ಇದರಲ್ಲಿ ಒಂದರ ಕೆಳಗೊಂದರಂತೆ ರತ್ನಪ್ರಭೆ, ಶರ್ಕರಾಪ್ರಭೆ, ವಾಲುಕಾಪ್ರಭೆ, ಪಂಕಪ್ರಭೆ, ಧೂಮಪ್ರಭೆ, ತಮಃಪ್ರಭೆ ಮತ್ತು ಮಹಾತಮಃಪ್ರಭೆ ಎಂಬ ಏಳು ನರಕಗಳಿವೆ; ಮಧ್ಯಮಲೋಕದಲ್ಲಿ ಅಸಂಖ್ಯಾತ ದ್ವೀಪಸಮುದ್ರ, ವ್ಯಂತರಾವಾಸಿ, ಜ್ಯೋತಿಷ್ಕ ವಿಮಾನಮೊದಲಾದವುಗಳಿವೆ; ಊರ್ಧ್ವಲೋಕದಲ್ಲಿ ವೈಮಾನಿಕ ದೇವತೆಗಳು ವಾಸಿಸುತ್ತಾರೆ. ಇದರಲ್ಲಿ ಎರಡು ಪಟಲಗಳು: ಕಲ್ಪ ಮತ್ತು ಕಲ್ಪಾತೀತ; ಇಂದ್ರ, ಸಾಮಾನಿಕರೇ ಮುಂತಾದ ಹತ್ತು ಕಲ್ಪನೆಗಳಿಂದ ಕೂಡಿದವರು ಕಲ್ಪವಾಸಿಗಳು;

ಐಶ್ವರ್ಯ, ವೈಭವ ಮುಂತಾದವುಗಳಲ್ಲಿ ವ್ಯತ್ಯಾಸಗಳಿರುತ್ತವೆ; ಈ ಕಲ್ಪನೆಗಳಿಂದ ಹೊರತಾದವರು ಕಲ್ಪಾತೀತರಾದ ಅಹಮಿಂದ್ರರು. ನವಗ್ರೈವೇಯಕ = ಹದಿನಾರು ಕಲ್ಪಗಳ ಮೇಲಿನ ಕಲ್ಪಾತೀತ ಸ್ವರ್ಗದ ಭಾಗ; ಇದರಲ್ಲಿ ಸುದರ್ಶನ, ಅಮೋಘ, ಸುಪ್ರಬುದ್ಧ, ಯಶೋಧರ, ಸುಭದ್ರ, ಸುವಿಶಾಳ, ಸುಮನಸ, ಸೌಮನಸ ಮತ್ತು ಪ್ರೀತಿಂಕರ ಎಂಬ ಒಂಬತ್ತು ವಿಭಾಗಗಳು

**ಮೂವತ್ತು ಸಾಗರೋಪಮ**
**ಮಾವಗಮಮರೇಂದ್ರಸುಖಮನುಣುತೆ ನಿಜಸ್ವ**
**ರ್ಗಾವತರಣೋತ್ಸವಕ್ಕಮ**
**ರಾವಳಿ ಪದೆವಿನೆಗಮಿೞಿದನಿಳೆಗೆ ಮಹಾತ್ಮಂ ೭೯**

**ಪದವಿಭಾಗ–ಅನ್ವಯ–ಅರ್ಥ:** ಮೂವತ್ತು ಸಾಗರೋಪಮಂ + ಆವಗಂ + ಅಮರೇಂದ್ರಸುಖಮನ್ + ಉಣುತೆ = ಮೂವತ್ತು ಸಾಗರಗಳಷ್ಟು ಕಾಲ ಸದಾ ಇಂದ್ರಸುಖವನ್ನು ಅನುಭವಿಸಿ, ನಿಜಸ್ವರ್ಗ + ಅವತರಣ + ಉತ್ಸವಕ್ಕೆ = ತನ್ನ ಸ್ವರ್ಗಾವತರಣದ ಉತ್ಸವವನ್ನು ನೆರವೇರಿಸಲು, ಅಮರ + ಆವಳಿ ಪದೆವಿನೆಗಂ = ದೇವತೆಗಳ ಗುಂಪು ಸೇರಿರುವಾಗ, ಮಹಾತ್ಮಂ ಇಳೆಗೆ ಇೞಿದನ್ = ಆ ಮಹಾತ್ಮನು ಭೂಮಿಗೆ ಇಳಿದ.

**ಗದ್ಯಾನುಸರಣ:** = ಮೂವತ್ತು ಸಾಗರಗಳಷ್ಟು ಕಾಲ ಇಂದ್ರಸುಖವನ್ನು ನಿರಂತರವಾಗಿ ಅನುಭವಿಸಿದ. ತನ್ನ ಸ್ವರ್ಗಾವತರಣದ ಉತ್ಸವವನ್ನು ನೆರವೇರಿಸಲು ದೇವತೆಗಳ ಗುಂಪು ಸೇರಿತ್ತು. ಆಗ ಆ ಮಹಾತ್ಮನು ಭೂಮಿಗೆ ಇಳಿದ.

**ವ। ಅಂತು ಪುಣ್ಯಭಾಜನಂಗೆ ನೂಕೆ ಪಾಸೆಂಬಂತೆ ಪುಷ್ಕರಾರ್ಧದ ಮೂಡಣ ಮಂದರದ ಪೂರ್ವವಿದೇಹದ ಸೀತಾನದಿಯ ತೆಂಕಣ ತಡಿಯ ಮಂಗಳಾವತೀ ವಿಷಯುದ ರತ್ನಸಂಚಯ ಪುರಮನಾಳ್ವಜಿತಂಜಯ ಭೂಪಾಳಂಗಮಾತನರಸಿ ವಸುಮತಿಗಂ ಯುಗಂಧರನೆಂಬ ಪೂರ್ವಪುಣ್ಯ ನಾಮುಮಂ ತಾಳ್ದಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಪುಣ್ಯಭಾಜನಂಗೆ ನೂಕೆ ಪಾಸು + ಎಂಬಂತೆ = ಪುಣ್ಯಾತ್ಮನಿಗೆ ನೂಕಿದ್ದೇ ಹಾಸಿಗೆ ಎಂಬ ಗಾದೆಯ ಮಾತಿನಂತೆ, ಪುಷ್ಕರಾರ್ಧದ ಮೂಡಣ ಮಂದರದ ಪೂರ್ವವಿದೇಹದ ಸೀತಾನದಿಯ, ತೆಂಕಣ ತಡಿಯ = ದಕ್ಷಿಣ ದಡದ ಮೇಲಿನ, ಮಂಗಳಾವತೀ ವಿಷಯದ, ರತ್ನಸಂಚಯಪುರಮನ್ + ಆಳ್ವ = ರತ್ನಸಂಚಯಪುರವನ್ನಾಳುತ್ತಿದ್ದ, ಅಜಿತಂಜಯಭೂಪಾಳಂಗಂ + ಆತನರಸಿ ವಸುಮತಿಗಂ = ಅಜಿತಂಜಯ–ವಸುಮತಿ ರಾಜದಂಪತಿಗಳಿಗೆ, ಯುಗಂಧರನೆಂಬಪೂರ್ವಪುಣ್ಯನಾಮಮಂ ತಾಳ್ದಿ

= ಯುಗಂಧರ ಎಂಬ ಅಪೂರ್ವವೂ ಪುಣ್ಯಕರವೂ ಆದ ಹೆಸರನ್ನು ಪಡೆದು,

**ಗದ್ಯಾನುಸರಣ:** ಪುಣ್ಯಾತ್ಮನಿಗೆ ನೂಕಿದ್ದೇ ಹಾಸಿಗೆ (ಚಿಂತಿಲ್ಲದವನಿಗೆ ಸಂತೆಯಲ್ಲೂ ನಿದ್ದೆ) ಎಂಬ ಗಾದೆಯ ಮಾತಿನಂತೆ, ಪುಷ್ಕರಾರ್ಧದ ಮೂಡಣ ಮಂದರದ ಪೂರ್ವವಿದೇಹದ ಸೀತಾನದಿಯ ದಕ್ಷಿಣ ದಡದ ಮೇಲಿನ ಮಂಗಳಾವತೀ ವಿಷಯದ ರತ್ನಸಂಚಯಪುರದ ಅಜಿತಂಜಯ-ವಸುಮತಿ ರಾಜದಂಪತಿಗಳಿಗೆ ಯುಗಂಧರ ಎಂಬ ಅಪೂರ್ವವೂ ಪುಣ್ಯಕರವೂ ಆದ ಹೆಸರನ್ನು ಪಡೆದು ಹುಟ್ಟಿದ.

**ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಜೈನದೀ**
**ಕ್ಷೆಗೆ ಪೂಣ್ದಕ್ಷಯಪುಣ್ಯನುಗ್ರತಪಮೆಂಬುಗ್ರಾಸಿಯಿಂ ಕೂಡೆ ಘಾ**
**ತಿಗಳಂ ಘಾತಿಸಿ ತದ್ಯುಗಂಧರಮಹಾಯೋಗೀಶ್ವರಂ ಪೊರ್ದಿದಂ**
**ನೆಗಳ್ದಾರ್ಹಂತ್ಯಮನೇನನೀಯದೊ ಶುಭಧ್ಯಾನೋಪಯೋಗೋದಯಂ೮೦**

**ಪದವಿಭಾಗ-ಅನ್ವಯ-ಅರ್ಥ:** ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಬಗೆದಂತೆ + ಆಗೆ = ದೇವತೆಗಳಿಂದ ಆಲೋಚಿಸಿದ ರೀತಿಯಲ್ಲಿ ಗರ್ಭಾವತರಣ ಹಾಗೂ ಜನ್ಮಕಲ್ಯಾಣಗಳು ನೆರವೇರಲು, ಅಕ್ಷಯಪುಣ್ಯನ್ ಜೈನದೀಕ್ಷೆಗೆ ಪೂಣ್ದು = ಎಣೆಯಿಲ್ಲದ ಪುಣ್ಯವಂತನಾದ ಆತನು ಜೈನದೀಕ್ಷೆಯನ್ನು ಪಡೆದು, ಉಗ್ರತಪಮೆಂಬ + ಉಗ್ರ + ಅಸಿಯಿಂ = ಉಗ್ರವಾದ ತಪಸ್ಸು ಎಂಬ ಹರಿತವಾದ ಕತ್ತಿಯಿಂದ, ಕೂಡೆ = ತಕ್ಷಣವೇ, ಘಾತಿಗಳಂ ಘಾತಿಸಿ = ಘಾತಿಗಳನ್ನು ನಾಶಮಾಡಿ, ತತ್ + ಯುಗಂಧರಮಹಾಯೋಗೀಶ್ವರಂ = ಆ ಯುಗಂಧರ ಮಹಾಯೋಗಿಯು, ನೆಗಳ್ದ + ಆರ್ಹಂತ್ಯಮನ್ = ಶ್ರೇಷ್ಠವಾದ ಅರ್ಹಂತಪದವಿಯನ್ನು, ಪೊರ್ದಿದಂ = ಪಡೆದ; ಶುಭಧ್ಯಾನ + ಉಪಯೋಗ + ಉದಯಂ ಏನನ್ + ಈಯದೊ = ಶ್ರೇಯಸ್ಕರವಾದ ಧ್ಯಾನವು ಏನನ್ನು ತಾನೇ ನೀಡದು!

**ಗದ್ಯಾನುಸರಣ:** ದೇವತೆಗಳಿಂದ ಆಲೋಚಿಸಿದ ರೀತಿಯಲ್ಲಿ ಗರ್ಭಾವತರಣ ಹಾಗೂ ಜನ್ಮಕಲ್ಯಾಣಗಳು ನೆರವೇರಿದುವು. ಎಣೆಯಿಲ್ಲದ ಪುಣ್ಯವಂತನಾದ ಆತನು ಜೈನದೀಕ್ಷೆಯನ್ನು ಪಡೆದು ತನ್ನ ಉಗ್ರತಪಸ್ಸು ಎಂಬ ಹರಿತವಾದ ಕತ್ತಿಯಿಂದ ಕೂಡೆ ಘಾತಿಗಳನ್ನು ನಾಶಮಾಡಿ ಆ ಯುಗಂಧರ ಮಹಾಯೋಗಿಯು ಶ್ರೇಷ್ಠವಾದ ಅರ್ಹಂತಪದವಿಯನ್ನು ಪಡೆದ; ಶ್ರೇಯಸ್ಕರವಾದ ಧ್ಯಾನವು ಏನನ್ನು ಬೇಕಾದರೂ ನೀಡಬಲ್ಲುದು!

**ಯುಗನಾಯಕನೆನೆ ಜಿನಪದ**
**ಯುಗನಮಿತಸುರೇಂದ್ರನೆನೆ ಯುಗಂಧರದೇವಂ**
**ನೆಗಳ್ದಪನೀಗಳ್ ಭುವನ**
**ಕ್ಕಗಾಧಕೈವಲ್ಯಬೋಧಬೋಧಿತಭವ್ಯಂ ೮೧**

**ಪದವಿಭಾಗ-ಅನ್ವಯ-ಅರ್ಥ:** ಯುಗನಾಯಕನೆನೆ = ಯುಗದ ನಾಯಕನೆನಿಸಿ, ಜಿನಪದಯುಗನಮಿತಸುರೇಂದ್ರನೆನೆ = ದೇವತೆಗಳಿಂದ ಪೂಜಿತನಾದ ಜಿನನಾಗಿ, ಭುವನಕ್ಕೆ + ಅಗಾಧಕೈವಲ್ಯಬೋಧಬೋಧಿತಭವ್ಯಂ = ಲೋಕಕ್ಕೆಲ್ಲ ತನ್ನ ಕೇವಲಜ್ಞಾನದ ಸಾರವನ್ನು ಬೋಧಿಸಿದ, ಯುಗಂಧರದೇವಂ ನೆಗಟ್ದಿಪನ್ + ಈಗಳ್ = ಯುಗಂಧರದೇವನು ಈಗ ಶೋಭಿಸುತ್ತಿದ್ದಾನೆ.

**ಗದ್ಯಾನುಸರಣ:** ಯುಗದ ನಾಯಕನೆನಿಸಿ, ದೇವತೆಗಳಿಂದ ಪೂಜಿತನಾದ ಜಿನನಾಗಿ, ಲೋಕಕ್ಕೆಲ್ಲ ತನ್ನ ಕೇವಲಜ್ಞಾನದ ಸಾರವನ್ನು ಬೋಧಿಸಿ ಯುಗಂಧರದೇವನು ಈಗ ಶೋಭಿಸುತ್ತಿದ್ದಾನೆ.

**ವಿಶೇಷ ವಿಚಾರ:** 'ಯುಗಂಧರನೂ ಭೂತಕಾಲದ ಒಬ್ಬ ತೀರ್ಥಂಕರ, 'ಆರ್ಹಂತ್ಯ' ಎಂಬ ಇಲ್ಲಿನ ಪದವನ್ನು ಪೂರ್ವಪುರಾಣದ (೭. ೯೪) 'ತೀರ್ಥಕೃತ್‌ತ್ರಾಯ ತೇ ಸೋಸ್ಮಾನ್' ಎಂದು ಯುಗಂಧರನನ್ನು ಪೂಜಿಸುವ ಮಾತಿನೊಡನೆ ಸಮೀಕರಿಸಬಹುದು' – ಎಲ್. ಬಸವರಾಜು ತಮ್ಮ ಆವೃತ್ತಿಯಲ್ಲಿ ಈ ಪದ್ಯಕ್ಕೆ ಕೊಟ್ಟಿರುವ ಅಡಿಟಿಪ್ಪಣಿ.[೨]

ಇಲ್ಲಿಯೇ ಜೈನಧರ್ಮದ ಉಗಮದ ಬಗ್ಗೆ ಚರ್ಚಿಸಬಹುದು. ಕೆಲವು ಆಧುನಿಕ ವಿದ್ವಾಂಸರು ಋಷಭದೇವನು ಐತಿಹಾಸಿಕ ವ್ಯಕ್ತಿಯೆಂದೂ ಅವನದ್ದು ಶಿಲಾಯುಗದ ಕೊನೆ ಮತ್ತು ಕೃಷಿಯುಗದ ಆರಂಭಗಳ ನಡುವಣ ಕಾಲ ಎಂದೂ ಭಾವಿಸುತ್ತಾರೆ; ಮತ್ತೂ ಕೆಲವರು ಋಷಭದೇವನು ಸಿಂಧು ಕಣಿವೆಯ ಸಂಸ್ಕೃತಿಯ ಕಾಲದವನೆಂತಲೂ, ಹರಪ್ಪ-ಮೊಹೆಂಜೊದಾರೋಗಳಲ್ಲಿ ಸಿಕ್ಕಿರುವ ಸೀಲ್‌ಗಳಲ್ಲಿ ಕೆಲವು ನಿಂತ ಧ್ಯಾನಸ್ಥ ವ್ಯಕ್ತಿಗಳ ಶಿಲ್ಪವು 'ಕಾಯೋತ್ಸರ್ಗ'ದ ನಿಲುವೆಂದು ಪ್ರತಿಪಾದಿಸಿ, ಕಾಯೋತ್ಸರ್ಗವು ಋಷಭನ ತಪಸ್ಸಿನ ಭಂಗಿಯೆಂದು ವಾದಿಸುತ್ತಾರೆ. ಇನ್ನೂ ಕೆಲವರು, ಜೈನಧರ್ಮವು ವರ್ಧಮಾನನಿಗಿಂತ ಹಿಂದೆಯೂ ಇದ್ದಿತೆಂದೂ, ಯಜುರ್ವೇದದಲ್ಲಿ ಋಷಭ ಅಜಿತನಾಥ ಮತ್ತು ಅರಿಷ್ಟನೇಮಿ ಎಂಬ ಮೂವರು ತೀರ್ಥಂಕರರ ಹೆಸರುಗಳು ದೊರಕುತ್ತವೆಂದರೆ; ಮಗುದೂ ಕೆಲವರು, ಅನೇಕ ವೈದಿಕ ಪುರಾಣಗಳಲ್ಲಿಯೂ ಋಷಭದೇವನ ಹೆಸರು ಉಲ್ಲೇಖಗೊಂಡಿದೆ, ಭಾಗವತ ಪುರಾಣವಂತೂ ಅವನನ್ನು ವಿಷ್ಣುವಿನ ಅವತಾರವೆಂದು ಭಾವಿಸುತ್ತದೆ ಎನ್ನುತ್ತಾರೆ. ಆದರೆ ಸಾಮಾನ್ಯವಾಗಿ ಬುದ್ಧನಿಗಿಂತ ಕೊಂಚ ಮುಂಚೆ ಇದ್ದ ವರ್ಧಮಾನ ಮಹಾವೀರನೇ ಜೈನಮತಸ್ಥಾಪಕನೆಂಬ ಭಾವನೆಯಿದೆ.

**ಎಂದು ಯುಗಂಧರಚರಿತಮ**
**ನಂದಾಂ ನಿನಗಱಿಯೆ ಪೇಟ್ದೆನಲ್ಲದೆಯುಂ ಮ**
**ತ್ತೊಂದಂ ಬಗೆ ನಾಮಂದೊಡ**
**ವಂದಂಬರತಿಳಕಮೆಂಬ ವಿಶ್ರುತವನದೊಳ್** ೮೨

**ಪದವಿಭಾಗ-ಅನ್ವಯ-ಅರ್ಥ:** ಎಂದು ಯುಗಂಧರಚರಿತಮನ್ + ಅಂದು + ಆಂ ನಿನಗೆ + ಅಱಿಯೆ ಪೇೞ್ದೆನ್ = ಎಂದು ಯುಗಂಧರನ ಕತೆಯನ್ನು ಆ ದಿನ ನಾನು ನಿನಗೆ ಬಿಡಿಸಿ ಹೇಳಿದ್ದೆ; ಅಲ್ಲದೆಯುಂ = ಅದಲ್ಲದೆ, ಮತ್ತೊಂದಂ = ಮತ್ತೊಂದು ವಿಷಯವನ್ನೂ, ಬಗೆ = ನೆನಪಿಸಿಕೊ; ನಾಂ + ಅಂದು + ಒಡ + ಬಂದು = ನಾವು ಅಂದು ಜೊತೆಯಲ್ಲಿ ಹೋಗಿ, ಅಂಬರತಿಳಕಮೆಂಬ ವಿಶ್ರುತವನದೊಳ್ = ಅಂಬರತಿಲಕವೆಂಬ ಪ್ರಸಿದ್ಧ ವನದಲ್ಲಿ,

**ಗದ್ಯಾನುಸರಣ:** ಎಂದು ಯುಗಂಧರನ ಕತೆಯನ್ನು ಆ ದಿನ ನಾನು ನಿನಗೆ ಬಿಡಿಸಿ ಹೇಳಿದ್ದೆ; ಅದಲ್ಲದೆ, ಮತ್ತೊಂದು ವಿಷಯನ್ನೂ ನೆನಪಿಸಿಕೊ; ನಾವು ಅಂದು ಜೊತೆಯಲ್ಲಿ ಹೋಗಿ ಅಂಬರತಿಲಕವೆಂಬ ಪ್ರಸಿದ್ಧ ವನದಲ್ಲಿ,

**ವ। ಮುನ್ನ ಪೇೞ್ದ ನಮ್ಮಿರ್ವರ ಗುರುಗಳಪ್ಪ ಪಿಹಿತಾಸ್ರವಭಟ್ಟಾರಕರ ಕೇವಲಜ್ಞಾನೋತ್ಪತ್ತಿಯೊಸಗೆಯಂ ಮಾಡಿ ಬಂದೆವಲ್ಲದೆಯುಂ,**

**ಪದವಿಭಾಗ-ಅನ್ವಯ-ಅರ್ಥ:** ಮುನ್ನ ಪೇೞ್ದ ನಮ್ಮಿರ್ವರ ಗುರುಗಳಪ್ಪ = ಈ ಹಿಂದೆ ಹೇಳಿದ ನಮ್ಮಿಬ್ಬರ ಗುರುಗಳಾದ, ಪಿಹಿತಾಸ್ರವಭಟ್ಟಾರಕರ ಕೇವಲಜ್ಞಾನೋತ್ಪತ್ತಿಯ + ಒಸಗೆಯಂ ಮಾಡಿ ಬಂದೆವು = ಪಿಹಿತಾಸ್ರವ ಭಟ್ಟಾರಕರಿಗೆ ಕೇವಲಜ್ಞಾನವು ಲಭಿಸಿದ ಉತ್ಸವವನ್ನು ಆಚರಿಸಿ ಬಂದೆವು: ಅಲ್ಲದೆಯುಂ = ಅದೂ ಅಲ್ಲದೆ,

**ಗದ್ಯಾನುಸರಣ:** ಈ ಹಿಂದೆ ಹೇಳಿದ ನಮ್ಮಿಬ್ಬರ ಗುರುಗಳಾದ ಪಿಹಿತಾಸ್ರವ ಭಟ್ಟಾರಕರಿಗೆ ಕೇವಲಜ್ಞಾನವು ಲಭಿಸಿದ ಉತ್ಸವವನ್ನು ಆಚರಿಸಿ ಬಂದೆವು; ಅದೂ ಅಲ್ಲದೆ,

**ಮೇರುನಗೋಪಕಂಠದೊಳ್ ವನಕೇಳಿವಿಳಾಸಮಂ ಸ್ವಯಂ**
**ಭೂರಮಣಾಂಬುರಾಶಿವಿಲಸತ್ತಟದೊಳ್ ಜಲಕೇಳಿಲೀಲೆಯಂ**
**ಪಾರಯಿಸಿರ್ದುದಂ ನೆನೆವೊ ನೀನೆನೆ ತಪ್ಪದು ಪೂರ್ವಜನ್ಮಸಂ**
**ಸ್ಕಾರಮದೆಲ್ಲಮಂ ನೆನೆವುದೆನ್ನ ಮನಂ ಮನುಜೇಂದ್ರವಂದಿತಾ ೮೩**

**ಪದವಿಭಾಗ-ಅನ್ವಯ-ಅರ್ಥ:** ಮೇರುನಗ + ಉಪಕಂಠದೊಳ್ = ಮೇರು ಪರ್ವತದ ತಪ್ಪಲಿನಲ್ಲಿ, ವನಕೇಳಿವಿಳಾಸಮಂ = ವನವಿಹಾರದ ಸಂತೋಷವನ್ನೂ, ಸ್ವಯಂಭೂರಮಣ + ಅಂಬುರಾಶಿ = ಸ್ವಯಂಭೂರಮಣ ಎಂಬ ಸಮುದ್ರದ, ವಿಲಸತ್ + ತಟದೊಳ್ ಜಲಕೇಳಿಲೀಲೆಯಂ = ಸುಂದರ ತೀರದಲ್ಲಿ ಈಜಾಟವನ್ನೂ, ಪಾರಯಿಸಿ + ಇರ್ದುದಂ = ಇಷ್ಟಪಟ್ಟುದನ್ನೂ, ನೆನೆವೊ ನೀನು = ನಿನಗೆ ನೆನಪಿದೆಯಲ್ಲವೇ? ಎನೆ = ಎಂದು ಕೇಳಲು, ಮನುಜೇಂದ್ರವಂದಿತಾ = ರಾಜರುಗಳಿಂದ ನಮಸ್ಕೃತನಾದವನೇ,

ಪೂರ್ವಜನ್ಮಸಂಸ್ಕಾರಂ ತಪ್ಪದು = ಪೂರ್ವಜನ್ಮದ ಸಂಸ್ಕಾರವೆಲ್ಲಿ ತಪ್ಪುತ್ತದೆ? ಎನ್ನ ಮನಂ = ನನ್ನ ಮನಸ್ಸು, ಅದೆಲ್ಲಮಂ ನೆನೆವುದು = ಅದೆಲ್ಲವನ್ನೂ ನೆನಪಿಸಿಕೊಳ್ಳುತ್ತದೆ.

**ಗದ್ಯಾನುಸರಣ:** 'ಮೇರು ಪರ್ವತದ ತಪ್ಪಲಿನಲ್ಲಿ ಇಷ್ಟಪಟ್ಟು ಮಾಡಿದ ವನವಿಹಾರದ ಸಂತೋಷವೂ ಸ್ವಯಂಭೂರಮಣ ಸಮುದ್ರದ ಸುಂದರ ತೀರದಲ್ಲಿ ನಡೆಸಿದ ಈಜಾಟವೂ ನಿನಗೆ ನೆನಪಿದೆಯಲ್ಲವೇ?' ಎಂದು ತಂದೆಯು ಕೇಳಲು, 'ರಾಜರುಗಳಿಂದ ನಮಸ್ಕೃತನಾದವನೇ, ಪೂರ್ವಜನ್ಮದ ಸಂಸ್ಕಾರವೆಲ್ಲಿ ತಪ್ಪುತ್ತದೆ? ನನ್ನ ಮನಸ್ಸು ಅದೆಲ್ಲವನ್ನೂ ನೆನಪಿಸಿಕೊಳ್ಳುತ್ತದೆ' ಎಂದು ಶ್ರೀಮತಿಯು ಹೇಳಿದಳು.

**ವ ಇನ್ನೊಂದೆ ಮದೀಯ ಪ್ರಾಣವಲ್ಲಭನಪ್ಪ ಲಲಿತಾಂಗದೇವನೆಲ್ಲಿ ಪುಟ್ಟಿದನೆಂಬುದೆನಗಿದೆ ಸಂದೆಯಮೆನಗದಂ ಬೆಸಸಿಮೆಂಬುದುಂ ಆಂ ನಿಮ್ಮಿಂ ಮುನ್ನಮಚ್ಯುತಕಲ್ಪದಿಂ ಪರಿಚ್ಯುತನೆನಾಗಿ ಬಂದಿಲ್ಲಿ ಯಶೋಧರ ಮಹೀ ಭುಜಂಗಂ ತದ್ವನಿತೆ ವಸುಮತಿಗಂ ವಜ್ರದಂತನಾದೆಂ: ನಿನ್ನ ದೇವನುಮಪ್ಪ ಲಲಿತಾಂಗದೇವನುಮಿಶಾನಕಲ್ಪದಿಂ ಬಂದುತ್ಪಳಖೇಟಮನಾಳ್ವ ಎನ್ನ ಮೆಯ್ದುನನಪ್ಪ ವಜ್ರಬಾಹುಗಮೆನ್ನ ತಂಗೆಯಪ್ಪ ವಸುಂಧರೆಗಂ ವಜ್ರಜಂಘ ನೆಂಬ ತನುಜನಾದಂ: ಆ ಸ್ವಯಂಪ್ರಭೆಯೆ ನೀನಿಮೆನಗೀಗಳ್ ಶ್ರೀಮತಿಯಾಗಿ ಪುಟ್ಟಿದೌ,**

**ಪದವಿಭಾಗ–ಅನ್ವಯ–ಅರ್ಥ:** ಇನ್ನೊಂದೆ = ಇನ್ನೊಂದು ವಿಷಯ, ಮದೀಯ ಪ್ರಾಣವಲ್ಲಭನಪ್ಪ = ನನ್ನ ಪ್ರಾಣಕಾಂತನಾದ, ಲಲಿತಾಂಗದೇವನೆಲ್ಲಿ ಪುಟ್ಟಿದನ್ + ಎಂಬುದೆನಗಿದೆ ಸಂದೆಯಂ = ಲಲಿತಾಂಗನು ಎಲ್ಲಿ ಹುಟ್ಟಿದ್ದಾನೆ ಎಂಬುದೇ ತಿಳಿಯುತ್ತಿಲ್ಲ, ಎನಗೆ + ಅದಂ ಬೆಸಸಿಂ = ನನಗದನ್ನು ತಿಳಿಸಿ, ಎಂಬುದುಂ = ಎಂದಾಗ, ಆಂ ನಿಮ್ಮಿಂ ಮುನ್ನಂ = ನಾನು ನಿಮಗಿಂತ ಮುಂಚೆಯೇ, ಅಚ್ಯುತಕಲ್ಪದಿಂ ಪರಿಚ್ಯುತನೆನ್ + ಆಗಿ ಬಂದು = ಅಚ್ಯುತಕಲ್ಪದಿಂದ ಕೆಳಗಿಳಿದು, ಇಲ್ಲಿ ಯಶೋಧರಮಹೀಭುಜಂಗಂ ತದ್ವನಿತೆ ವಸುಮತಿಗಂ ವಜ್ರದಂತನಾದೆಂ = ಯಶೋಧರ–ವಸುಮತಿಯರಿಗೆ ವಜ್ರದತನೆಂಬ ಮಗನಾಗಿ ಹುಟ್ಟಿದೆ; ನಿನ್ನ ದೇವನುಮಪ್ಪ ಲಲಿತಾಂಗದೇವನುಂ = ನಿನ್ನ ಸ್ವಾಮಿಯಾದ ಲಲಿತಾಂಗದೇವನು, ಈಶಾನಕಲ್ಪದಿಂ ಬಂದು = ಈಶಾನಕಲ್ಪದಿಂದ ಬಂದು, ಉತ್ಪಳಖೇಟಮನಾಳ್ವ = ಉತ್ಪಳಖೇಟವನ್ನಾಳುವ, ಎನ್ನ ಮೆಯ್ದುನನಪ್ಪ ವಜ್ರಬಾಹುಗಮೆನ್ನ ತಂಗೆಯಪ್ಪ ವಸುಂಧರೆಗಂ ನೆಂಬ ತನುಜನಾದಂ = ನನ್ನ ಮೈದುನ ವಜ್ರಬಾಹು ಮತ್ತು ನನ್ನ ತಂಗಿ ವಸುಂಧರೆಯರ ಮಗನಾದ: ಆ ಸ್ವಯಂಪ್ರಭೆಯೆ ನೀನುಂ = ಆಗಿನ ಸ್ವಯಂಪ್ರಭೆಯಾದ ನೀನು, ಎನಗೆ + ಈಗೀಗಳ್ ಶ್ರೀಮತಿಯಾಗಿ ಪುಟ್ಟಿದೌ = ನನಗೀಗ ಶ್ರೀಮತಿಯೆಂಬ ಮಗಳಾಗಿ ಹುಟ್ಟಿದ್ದೀಯೆ,

**ಗದ್ಯಾನುಸರಣ:** 'ಇನ್ನೊಂದು ವಿಷಯ: ನನ್ನ ಪ್ರಾಣಕಾಂತನಾದ ಲಲಿತಾಂಗನು ಎಲ್ಲಿ ಹುಟ್ಟಿದ್ದಾನೆ ಎಂಬುದೇ ತಿಳಿಯುತ್ತಿಲ್ಲ, ನನಗದನ್ನು ತಿಳಿಸಿ' ಎಂದು ಶ್ರೀಮತಿಯು ಕೇಳಲು, 'ನಾನು ನಿಮಗಿಂತ ಮುಂಚೆಯೇ ಅಚ್ಯುತಕಲ್ಪದಿಂದ ಕೆಳಗಿಳಿದು ಯಶೋಧರ-ವಸುಮತಿಯರಿಗೆ ವಜ್ರದಂತನೆಂಬ ಮಗನಾಗಿ ಹುಟ್ಟಿದೆ; ನಿನ್ನ ಸ್ವಾಮಿಯಾದ ಲಲಿತಾಂಗದೇವನು ಈಶಾನಕಲ್ಪದಿಂದ ಬಂದು ಉತ್ಪಳಖೇಟದ ರಾಜ ನನ್ನ ಮೈದುನ ವಜ್ರಬಾಹು ಮತ್ತು ತಂಗಿ ವಸುಂಧರೆಯರ ಮಗನಾದ: ಆಗಿನ ಸ್ವಯಂಪ್ರಭೆಯಾದ ನೀನು ನನಗೀಗ ಶ್ರೀಮತಿಯೆಂಬ ಮಗಳಾಗಿ ಹುಟ್ಟಿದ್ದೀಯೆ' ಎಂದು ವಜ್ರದಂತ ಹೇಳಿದ.

**ಭವದಿಂ ಭವದೊಳ್ ತಗುಳ್ದು ಪರಮಸ್ನೇಹಂಗಳಿಂತೀಗಳಿ**
**ಲ್ಲಿವರಂ ಬಂದುವು ನಿನ್ನ ನಲ್ಲನೆ ಗಡಂ ಮದ್ಭಾಗಿನೇಯಂ ಮಹೋ**
**ತ್ಸವದಿಂ ಬಂದಪನಿಂದೆ ಪಂಡಿತೆಯುಮಾ ವೃತ್ತಾಂತದೊಳ್ ಪುಟ್ಟಿದು**
**ತ್ಸವಮಂ ಮಾಣದೆ ಕೊಂಡುಬರ್ಕುಮದುವಂ ಕೇಳ್ವೌ ಮಹೋತ್ಸಾಹಮಂ ೮೪**

**ಪದವಿಭಾಗ-ಅನ್ವಯ-ಅರ್ಥ:** ಭವದಿಂ ಭವದೊಳ್ ತಗುಳ್ದು = ಜನ್ಮದಿಂದ ಜನ್ಮಕ್ಕೆ ಸೇರಿಕೊಂಡು, ಪರಮಸ್ನೇಹಂಗಳ್ + ಇಂತು + ಈಗಳ್ + ಇಲ್ಲಿವರಂ ಬಂದುವು = ನಮ್ಮ ಗಾಢಸಂಬಂಧವು ಇಲ್ಲಿಯವರೆಗೂ ಹಾಯ್ದು ಬಂದಿದೆ, ನಿನ್ನ ನಲ್ಲನೆ = ನಿನ್ನ ಪ್ರಿಯಕರನು, ಮತ್ + ಭಾಗಿನೇಯಂ ಗಡಂ = ನನ್ನ ಸೋದರಳಿಯ (ಭಗಿನಿಯ ಮಗ) ತಾನೇ! ಮಹೋತ್ಸವದಿಂ ಬಂದಪನ್ = ಉತ್ಸಾಹದಿಂದ ಬರುತ್ತಾನೆ, ಆ ವೃತ್ತಾಂತದೊಳ್ ಪುಟ್ಟಿದ = ಆ ವಿಷಯದ ಕಾರಣದಿಂದ ಉಂಟಾದ = ಉತ್ಸವಮಂ, ಇಂದೆ ಪಂಡಿತೆಯುಂ = ಇವತ್ತೇ ಪಂಡಿತೆಯು, ಮಾಣದೆ ಕೊಂಡು ಬರ್ಕುಂ = ಖಂಡಿತ ಹೊತ್ತು ತರುತ್ತಾಳೆ, ಅದುವಂ ಮಹೋತ್ಸಾಹಮಂ ಕೇಳ್ವೌ = ಆ ಮಹಾ ಸಂಭ್ರಮದ ವಿಷಯವನ್ನು ಕೇಳುತ್ತೀಯೆ

**ಗದ್ಯಾನುಸರಣ:** 'ಜನ್ಮದಿಂದ ಜನ್ಮಕ್ಕೆ ಸೇರಿಕೊಂಡು ನಮ್ಮ ಗಾಢಸಂಬಂಧವು ಇಲಿಯ್ಲುವರೆಗೂ ಹಾಯ್ದು ಬಂದಿದೆ; ನಿನ್ನ ಪ್ರಿಯಕರನು ನನ್ನ ಸೋದರಳಿಯ ತಾನೇ! ಉತ್ಸಾಹದಿಂದ ಬರುತ್ತಾನೆ, ಆ ವಿಷಯದ ಕಾರಣದಿಂದ ಉಂಟಾದ ಸಂಭ್ರಮವಾರ್ತೆಯನ್ನು ಪಂಡಿತೆಯು ಇವತ್ತೇ ಹೊತ್ತು ತರುತ್ತಾಳೆ, ಸಡಗರದ ವಿಷಯವನ್ನು ನೀನೇ ಕೇಳುತ್ತೀಯೆ, ನೋಡುತ್ತಿರು!'

**ವ। ಎಂದು ಕನ್ಯಾರತ್ನಮುಮಂ ಕನ್ಯಾಂತಃಪುರಕ್ಕೆ ಪೋಗಲ್ವೇಳ್ದು ವಜ್ರದಂತನಾಸ್ಥಾನದಿಂದೆರ್ದು ಪೋದಂ; ಅನ್ನೆಗಮಿತ್ತಲುಮಖಂಡಿತಮತಿ ಪಂಡಿತೆಯುಂ**

**ತನ್ನ ಪೂಣ್ದು ಪೋದ ಕಜ್ಜಮಂ ಸಾಧ್ಯಂಮಾಡಿ ಬಂದು ಸಸಂಭ್ರಮದಿಂ ವಿಭ್ರಮವಿಳಾಸವತಿಯಂ ಶ್ರೀಮತಿಯಂ ಕಂಡು,**

**ಪದವಿಭಾಗ–ಅನ್ವಯ–ಅರ್ಥ:** ಎಂದು ಕನ್ಯಾರತ್ನಮಂ ಕನ್ಯಾಂತಃಪುರಕ್ಕೆ ಪೋಗಲ್ + ಪೇಳ್ದು = ಎಂದು ಹೇಳಿ ಶ್ರೀಮತಿಯನ್ನು ಆಕೆಯ ಅಂತಃಪುರಕ್ಕೆ ಹೋಗಲು ಹೇಳಿದ, ವಜ್ರದಂತನ್ + ಆಸ್ಥಾನದಿಂದೆ + ಎರ್ದು ಪೋದಂ = ವಜ್ರದಂತನು ಆಸ್ಥಾನದಿಂದ ಹೊರಟುಹೋದ; ಅನ್ನೆಗಂ ಇತ್ತಲುಂ = ಅಷ್ಟರಲ್ಲಿ ಈ ಕಡೆ, ಅಖಂಡಿತಮತಿ ಪಂಡಿತೆಯುಂ = ಮಹಾ ಜಾಣೆಯಾದ ಪಂಡಿತೆಯೂ, ತನ್ನ ಪೂಣ್ದು ಪೋದ ಕಜ್ಜಮಂ ಸಾಧ್ಯಂಮಾಡಿ ಬಂದು = ತಾನು ಮಾತು ಕೊಟ್ಟು ಹೋಗಿದ್ದ ಕೆಲಸವನ್ನು ಸಾಧಿಸಿಕೊಂಡು ಬಂದು, ವಿಭ್ರಮವಿಳಾಸವತಿಯಂ ಶ್ರೀಮತಿಯಂ ಸಸಂಭ್ರಮದಿಂ ಕಂಡು = ಚೆಲುವು ಬೆಡಗುಗಳಿಂದ ಕೂಡಿದ್ದ ಶ್ರೀಮತಿಯನ್ನು ಸಡಗರದಿಂದ ನೋಡಿ,

**ಗದ್ಯಾನುಸರಣ:** ಎಂದು ಹೇಳಿ ಶ್ರೀಮತಿಯನ್ನು ಅಂತಃಪುರಕ್ಕೆ ಹೋಗಲು ಹೇಳಿದ ಆಸ್ಥಾನದಿಂದ ಎದ್ದುಹೋದ; ಅಷ್ಟರಲ್ಲಿ ಈ ಕಡೆ, ಮಹಾ ಜಾಣೆಯಾದ ಪಂಡಿತೆಯೂ ತಾನು ಮಾತು ಕೊಟ್ಟಂತೆ ಕೆಲಸವನ್ನು ಸಾಧಿಸಿಕೊಂಡು ಬಂದು ಶ್ರೀಮತಿಯನ್ನು ಸಡಗರದಿಂದ ಭೇಟಿಯಾದಳು.

**ಬರವಿನೊಳಾದದೊಂದು ಮೊಗರಾಗಮೆ ಸಂತಸವಾತನಂತನ**
**ಕ್ಷರಮಱಿಪುತ್ತುಮಿರ್ಪಿನೆಗಮೆಂದಳಿಳೇಶ್ವರಪುತ್ರಿ ತೀರ್ದುದಾ**
**ದರದೊಳೆ ನಿನ್ನ ನೆಚ್ಚಿನ ಮನೋರಥಮಾದೊಡಮಂತದಂ ಸವಿ**
**ಸ್ತರದೊಳೆ ಪೇೞದಂದೆನಗೆ ರಾಗದ ಭಾರಮಳುಂಬಮಾಗದೇ ೮೫**

**ಪದವಿಭಾಗ–ಅನ್ವಯ–ಅರ್ಥ:** ಬರವಿನೊಳಾದ + ಅದೊಂದು ಮೊಗರಾಗಮೆ = ಪಂಡಿತೆಯ ಬರುವಿಕೆಯಲ್ಲಿ ಅವಳ ಮುಖದ ಗೆಲವೇ, ಸಂತಸವಾತನ್ = ಸಂತೋಷದ ಸುದ್ದಿಯನ್ನು, ಅಂತು + ಅನಕ್ಷರಂ + ಅಱಿಪುತ್ತುಂ + ಇರ್ಪಿನೆಗಂ = ಆ ಮೂಲಕ ಮಾತಿಲ್ಲದೆ ಸೂಚಿಸುತ್ತಿರಲು, ಎಂದಳ್ = ಹೀಗೆಂದಳು, ಇಳೇಶ್ವರಪುತ್ರಿ ನಿನ್ನ ನೆಚ್ಚಿನ ಮನೋರಥಂ ಆದರದೊಳೆ ತೀರ್ದುದು = ರಾಜಕುಮಾರಿಯೇ ನಿನ್ನ ಆಸೆಯು ನೆರವೇರಿದೆ, ಆದೊಡಂ = ಆದರೂ, ಅಂತದಂ ಸವಿಸ್ತರದೊಳೆ ಪೇೞದಂದು = ಆದರೂ ಅದನ್ನು ವಿವರವಾಗಿ ಹೇಳದಿದ್ದರೆ, ಎನಗೆ ರಾಗದ ಭಾರಂ + ಅಳುಂಬಮಾಗದೇ = ನನಗೆ ಸಂತೋಷದ ಭಾರವು ತಡೆಯಲಸಾಧ್ಯವಾಗುವುದಿಲ್ಲವೇ!

**ಗದ್ಯಾನುಸರಣ:** ಪಂಡಿತೆಯು ಬರುವಾಗಿನ ಅವಳ ಮುಖದ ಗೆಲವೇ ಸಂತೋಷದ ಸುದ್ದಿಯನ್ನು ಮಾತಿಲ್ಲದೆ ಸೂಚಿಸುತ್ತಿತ್ತು; ಬಂದವಳೇ 'ರಾಜಕುವರಿಯೇ,

ನಿನ್ನ ಆಸೆಯು ನೆರವೇರಿದೆಯಾದರೂ ಅದನ್ನು ವಿವರವಾಗಿ ಹೇಳದಿದ್ದರೆ ನನಗೆ ಸಂತೋಷದ ಭಾರವು ತಡೆಯಲಸಾಧ್ಯವಾಗುತ್ತದೆ!' ಎಂದಳು.

**ವ। ಎಂಬುದುಂ ಆ ಪ್ರಸ್ತಾವದೊಳ್ ಶ್ರೀಮತಿ ತರುಣದಿನಕರ ಕರದಳಿತಸರಸೀರು ಹವದನೆಯುಂ ಅತಿಪ್ರೀತಿವಿಸ್ತಾರಿತವಿಲೋಚನೆಯುಮಾಗಿ ಮನಂಗೊಂಡು ಕೇಳಲ್ ತಗುಳ್ದಳ್**

**ಪದವಿಭಾಗ–ಅನ್ವಯ–ಅರ್ಥ:** ಎಂಬುದುಂ = ಎಂದು ಹೇಳಲು, ಆ ಪ್ರಸ್ತಾವದೊಳ್ ಶ್ರೀಮತಿ = ಆಗ ಶ್ರೀಮತಿಯು, ತರುಣದಿನಕರಕರದಳಿತಸರಸೀರು ಹವದನೆಯುಂ = ಬಾಲಸೂರ್ಯನ ಕಿರಣಗಳು ಅರಳಿಸಿದ ಕಮಲದಂತಹ ಮುಖವುಳ್ಳವಳಾಗಿಯೂ, ಅತಿಪ್ರೀತಿವಿಸ್ತಾರಿತವಿಲೋಚನೆಯುಂ + ಆಗಿ = ಪ್ರೇಮದಿಂದ ಅರಳಿದ ಕಣ್ಣುಗಳುಳ್ಳವಳಾಗಿಯೂ, ಮನಂಗೊಂಡು ಕೇಳಲ್ ತಗುಳ್ದಳ್ = ಮನವಿಟ್ಟು ಕೇಳಲು ಸಿದ್ಧಳಾದಳು.

**ಗದ್ಯಾನುಸರಣ:** ಎಂದು ಹೇಳಿದಾಗ ಶ್ರೀಮತಿಯ ಮುಖವು ಬಾಲಸೂರ್ಯನ ಕಿರಣಗಳು ತಾಕಿ ಅರಳಿದ ಕಮಲದಂತಾಯಿತು, ಕಣ್ಣುಗಳು ಪ್ರೇಮದಿಂದ ಬಿರಿದವು; ಹೀಗೆ ಆಕೆಯು ಪಂಡಿತೆಯ ಮಾತುಗಳನ್ನು ಗಮನವಿಟ್ಟು ಕೇಳಲು ಸಿದ್ಧಳಾದಳು.

**ಬಿರಿಯಿಸೆ ಬೇಟದೊಳ್ ಬಿರಿವ ನಲ್ಲರಗಲ್ದು ಕನಲ್ದೊನಲ್ದು ನ**
**ಲ್ಲರ ದೆಸೆಯಿಂದಮಟ್ಟುವರೆ ಕೋಗಿಲೆಯುಕ್ಕೆಲರಕ್ಕೆ ತುಂಬಿಯು**
**ಕ್ಕರಗಿಳಿಯುಕ್ಕೆ ಬಂದೊಡಮೊಱಲ್ದೆರ್ದೆಯಾಱುವರೆಂದೊಡೋತ ದೂ**
**ತರೆ ತರೆ ಬಂದ ಸಬ್ಬವದ ಮಾತುಗಳಂ ಗುಡಿಗಟ್ಟಿ ಕೇಳರೇ ೮೬**

**ಪದವಿಭಾಗ–ಅನ್ವಯ–ಅರ್ಥ:** ಬೇಟದೊಳ್ ಕನಲ್ದು + ಒನಲ್ದು ಬಿರಿಯಿಸೆ ಅಗಲ್ದು = ಪ್ರಣಯದ ಕೋಪದಿಂದ ಸಿಟ್ಟಾಗಿ ಬೇರ್ಪಟ್ಟು ದೂರಾಗುವ ನಲ್ಲರು, ಅಟ್ಟುವರೆ = ಪ್ರೀತಿ ಮರುಕಳಿಸಿದಾಗ, ನಲ್ಲರ ದೆಸೆಯಿಂದಂ = ಪ್ರಿಯಕರರ ಕಡೆಯಿಂದ ಕೋಗಿಲೆಯಕ್ಕೆ + ಎಲರಕ್ಕೆ ತುಂಬಿಯಕ್ಕೆ + ಅರಗಿಳಿಯಕ್ಕೆ = ಕೋಗಿಲೆಯಾಗಲೀ ಗಾಳಿಯಾಗಲೀ ದುಂಬಿಯಾಗಲೀ ರಾಜಗಿಳಿಯಾಗಲೀ, ಬಂದೊಡಂ = ಬಂದರೂ ಒಱಲ್ದು = ಆಸೆಪಟ್ಟು, ಎರ್ದೆಯಾಱುವರ್ = ಮನಃತೃಪ್ತಿ ಪಡೆಯುತ್ತಾರೆ, ಎಂದೊಡೆ = ಎಂದ ಮೇಲೆ, ಓತ ದೂತರೆ ತರೆ ಬಂದ = ಪ್ರೀತಿಪಾತ್ರರಾದ ದೂತರೇ ತರಲು ಬಂದ, ಸಬ್ಬವದ ಮಾತುಗಳಂ = ಪ್ರೀತಿಯ ಮಾತುಗಳನ್ನು, ಗುಡಿಗಟ್ಟಿ ಕೇಳರೇ = ರೋಮಾಂಚನಗೊಂಡು ಕೇಳುವರಲ್ಲವೇ!

**ಗದ್ಯಾನುಸರಣ:** ಪ್ರಣಯದ ಮುಳಿಸಿನಿಂದ ದೂರಾದ ಪ್ರಿಯಕರರು ಪ್ರೀತಿ

ಮರುಕಳಿಸಿದಾಗ ಕೋಗಿಲೆಯೋ ಗಾಳಿಯೋ ದುಂಬಿಯೋ ರಾಜಗಿಳಿಯೋ – ಯಾವುದರ ಮೂಲಕವೋ ಸಂದೇಶ ಕಳಿಸಿದರೆ ಅದನ್ನು ಆಸೆಯಿಂದ ಕೇಳಿ ಸಮಾಧಾನ ಪಡೆಯುತ್ತಾರೆ ಅಂದ ಮೇಲೆ, ಪ್ರೀತಿಪಾತ್ರರಾದ ದೂತರೇ ಹೊತ್ತು ತಂದ ಪ್ರೀತಿಯ ಮಾತುಗಳನ್ನು ಕೇಳಿ ರೋಮಾಂಚನಗೊಳ್ಳುವರಲ್ಲವೇ!

**ವ। ಆಗಳ್ ಪಂಡಿತೆಯುಮಿಂತೆಂದು ಪೇೞಲ್ ತಗುಳ್ದಳ್: ಅಂತು ನಿನ್ನ ಬರೆದ ಪಟಮಂ ಕೊಂಡು ಪೋಗಿ ಮಹಾಪೂತ ಜಿನಾಲಯದ ಮುಂದೆ ನೇಱಿದಾಗಳೆನ್ ಪಸರಿಸಿದ ಚಿತ್ರಪಟಮೆಂಬ ದೀಹಕ್ಕೆ ಖೇಚರ ಭೂಚರಯುವಮೃಗಂಗಳೆಳಸಿ ಬಂದು,**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ ಪಂಡಿತೆಯುಂ + ಇಂತೆಂದು ಪೇೞಲ್ ತಗುಳ್ದಳ್ = ಆಗ ಪಂಡಿತೆಯು ಹೀಗೆಂದು ಹೇಳತೊಡಗಿದಳು: ಅಂತು ನಿನ್ನ ಬರೆದ ಪಟಮಂ ಕೊಂಡು ಪೋಗಿ = ನೀನು ಬರೆದ ಚಿತ್ರವನ್ನು ತೆಗೆದುಕೊಂಡು ಹೋಗಿ, ಮಹಾಪೂತ ಜಿನಾಲಯದ ಮುಂದೆ ನೇಱಿದಾಗಳ್ = ಮಹಾಪೂತ ಜಿನಾಲಯದ ಮುಂಭಾಗದಲ್ಲಿ ನೇತುಹಾಕಲು, ಎನ್ನ ಪಸರಿಸಿದ = ನಾನು ಹರಡಿದ್ದ, ಚಿತ್ರಪಟಮೆಂಬ ದೀಹಕ್ಕೆ = ಚಿತ್ರಪಟವೆಂಬ ದೀಹದ ಬಳಿ, ಖೇಚರಭೂಚರಯುವಮೃಗಂಗಳ್ + ಎಳಸಿ ಬಂದು = ಖೆಚರ ಹಾಗೂ ಮಾನವ ಯುವಕರೆಂಬ ಜಿಂಕೆಗಳು ಆಕರ್ಷಣೆಗೊಂಡು ಬಂದು,

**ಗದ್ಯಾನುಸರಣ:** ಆಗ ಪಂಡಿತೆಯು ಹೀಗೆಂದು ಹೇಳತೊಡಗಿದಳು: 'ಹಾಗೆ ನೀನು ಬರೆದ ಚಿತ್ರವನ್ನು ತೆಗೆದುಕೊಂಡು ಹೋಗಿ, ಮಹಾಪೂತ ಜಿನಾಲಯದ ಮುಂಭಾಗದಲ್ಲಿ ನೇತುಹಾಕಿದೆ; ನಾನು ಹರಡಿದ್ದ ಚಿತ್ರಪಟವೆಂಬ ದೀಹದ ಬಳಿಗೆ ಖೇಚರ ಹಾಗೂ ಮಾನವ ಯುವಕರೆಂಬ ಜಿಂಕೆಗಳು ಆಕರ್ಷಣೆಗೊಂಡು ಬಂದವು'

**ವಿಶೇಷ ವಿಚಾರ:** ದೀಹ = ಬೇಟೆಯಾಡಬೇಕಾದ ಪ್ರಾಣಿಯನ್ನು ಹತ್ತಿರ ಬರುವಂತೆ ಸೆಳೆಯಲು ಬೇಟೆಗಾರರು ಒಡ್ಡುತ್ತಿದ್ದ ಆಕರ್ಷಣೆಯ ಕೂಗು, ಇದನ್ನು 'ಗೋರಿ' ಎಂದೂ ಕರೆಯುತ್ತಿದ್ದರು. ಇದೇ ಕಾವ್ಯದಲ್ಲಿ ಮುಂದೆ 'ಎರಲೆಗೆ ಪಾಡುವ ಗೋರಿಯನರಣ್ಯದೊಳ್ ಮೃಗವಿರೋಧಿಗಂ ಪಾಡುವುದೇ' ಎಂಬ ಮಾತು ಬರುತ್ತದೆ: (೧೪. ೮೧). ಆದರೆ ಹುಲಿ ಸಿಂಹಗಳಂತಹ ಭಾರಿ ಪ್ರಾಣಿಗಳನ್ನು ಸೆಳೆಯಲು ಪ್ರಾಣಿಗಳನ್ನೇ ಕಟ್ಟಿರುತ್ತಿದ್ದರು. ಉದಾಹರಣೆಗೆ ಹುಲಿ ಹತ್ತಿರ ಬರುವಂತೆ ಒಂದು ಹಸುವನ್ನು ಮರಕ್ಕೆ ಕಟ್ಟಿ ಅದರ ವಾಸನೆ ಹಿಡಿದು ಹುಲಿ ಹತ್ತಿರ ಬರುವಂತೆ ಮಾಡುತ್ತಿದ್ದಂಥ ಪರಿಪಾಟ.

**ಇದು ದಲ್ ನೋಡ ಮನುಷ್ಯವಿದ್ಧಮಣಮುಲ್ತೀ ಗಂಡರೂಪಾವುದಿಂ ತ್ರಿದಱೊಳ್ ತಳ್ತೆಸೆದಿರ್ದ ಪೆಣ್ ಸುರವಧೂಬಿಂಬಂ ದಲೀ ಚೆಲ್ವನ**

**ಪ್ಪಿದೆ ದಲ್ ದೇವವಿಮಾನದಂದಮಿದು ಪೇೞ್ ತಾನಾರ ವೃತ್ತಾಂತಮಾ**
**ರಿದನಿಂತಿಲ್ಲಿಗೆ ತಂದರೆಂದು ಪಿರಿದುಂ ಭ್ರಾಂತಿಂ ಜನಂ ನೋೞ್ಪುದುಂ॥೭॥**

**ಪದವಿಭಾಗ–ಅನ್ವಯ–ಅರ್ಥ:** ಇದು ದಲ್ ನೋಡ = ಇದನ್ನು ನೋಡಿದರೆ, ಮನುಷ್ಯವಿದ್ಧಮ್ + ಅಣಂ + ಅಲ್ತು = ಮನುಷ್ಯರ ರೂಪಂತೂ ಖಂಡಿತ ಇದ್ದಂತಿಲ್ಲ; ಈ ಗಂಡರೂಪು + ಆವುದು = ಈ ಸುಂದರ ರೂಪು ಯಾವ ಗಂಡಸಿನದಿರಬಹುದು? ಇಂತು + ಇದಱೊಳ್ ತಳ್ತು + ಎಸೆದಿರ್ದ ಪೆಣ್ = ಹೀಗೆ ಈ ಚಿತ್ರದಲ್ಲಿ ತೋರಿ ಶೋಭಿಸುವ ಹೆಣ್ಣಿನದು, ಸುರವಧೂಬಿಂಬಂ ದಲ್ = ದೇವತಾಸ್ತ್ರೀಯ ಬಿಂಬವಲ್ಲವೇ! ದೇವವಿಮಾನದಂದಂ = ದೇವವಿಮಾನದದ ರೀತಿ, ಚೆಲ್ವನಪ್ಪಿದೆ ದಲ್ = ಎಷ್ಟೊಂದು ಚೆಲುವಾಗಿದೆ, ಇದು ಪೇೞ್ ತಾನ್ + ಆರ ವೃತ್ತಾಂತಂ = ಇದು ಯಾರ ವಿಚಾರಕ್ಕೆ ಸಂಬಂಧಿಸಿದ್ದು, ಆರಿರ್ + ಇದನ್ + ಇಂತು + ಇಲ್ಲಿಗೆ ತಂದರ್ = ಇದನ್ನು ಯಾರು ಇಲ್ಲಿ ತಂದು ಇರಿಸಿದರು? ಎಂದು ಪಿರಿದುಂ ಭ್ರಾಂತಿಂ ಜನಂ ನೋೞ್ಪುದುಂ = ಎಂದು ಮಹಾ ಗೊಂದಲದಿಂದ ಜನರು ಚಿತ್ರಪಟವನ್ನು ನೋಡಿದರು.

**ಗದ್ಯಾನುಸರಣ:** 'ಇದನ್ನು ನೋಡಿದರೆ ಮನುಷ್ಯರ ರೂಪಂತೂ ಖಂಡಿತ ಇದ್ದಂತಿಲ್ಲ; ಈ ಸುಂದರ ರೂಪು ಯಾವ ಗಂಡಸಿನದಿರಬಹುದು? ಅಲದೆ, ಈ ಚಿತ್ರದಲ್ಲಿ ಶೋಭಿಸುವ ಹೆಣ್ಣಿನ ಚಿತ್ರ ದೇವತಾಸ್ತ್ರೀಯ ಬಿಂಬವಲ್ಲವೇ! ದೇವವಿಮಾನದದ ರೀತಿ, ಎಷ್ಟೊಂದು ಚೆಲುವಾಗಿದೆ. ಇದು ಯಾರ ವಿಚಾರಕ್ಕೆ ಸಂಬಂಧಿಸಿದ್ದು, ಇದನ್ನು ಯಾರು ಇಲ್ಲಿ ತಂದು ಇರಿಸಿದರು?' ಎಂದು ಮಹಾ ಗೊಂದಲಗೊಂಡು ಜನರು ಚಿತ್ರಪಟವನ್ನು ನೋಡಿದರು.

**ವಿಶೇಷ ವಿಚಾರ**: ಆದರೆ ತಾವು ಶ್ರೀಮತಿಯ ಹಿಂದಿನ ಜನ್ಮದ ಪ್ರಿಯಕರರೆಂಬಂತೆ ಇವರು ನಟನೆ ಮಾಡುತ್ತಾರೆಂದು ಪೂರ್ವಪುರಾಣದಲ್ಲಿ ಹೇಳಿದೆ: ಪೂಪು, ೭.೧೧೩)

**ವ॥ ವಾಸವದುರ್ದಂತರೆಂಬರನೇಕಕ್ಷುದ್ರವಿದ್ಯಾಗರ್ವ ದುರ್ವಿದಗ್ಧರುಮಳೀಕವಿಚಕ್ಷಣರುಮಪ್ಪುದಱಿಂದಮದನನುಮಾನದಿಂದ ಮಱಿದು ಮೆಲ್ಲನೆ ಸಾರ್ದು ನೋಡುವಲ್ಲಿ ವಾಸವನದಂ ನೀಡುಂ ಭಾವಿಸಿ ನೋಡಿ,**

**ಪದವಿಭಾಗ–ಅನ್ವಯ–ಅರ್ಥ:** ಅನೇಕಕ್ಷುದ್ರವಿದ್ಯಾಗರ್ವದುರ್ವಿದಗ್ಧರುಂ = ನಾನಾ ಕ್ಷುದ್ರವಿದ್ಯೆಗಳಲ್ಲಿ ಪರಿಣತರಾದ, ವಾಸವದುರ್ದಂತರೆಂಬರ್ = ವಾಸವ ದುರ್ದಂತ ಎಂಬವವವರು, ಅಳೀಕವಿಚಕ್ಷಣರುಂ + ಅಪ್ಪುದಱಿಂದಂ = ಕಪಟ

ವಿಶಾರದರೂ ಆದುದರಿಂದ, ಅದನ್ + ಅನುಮಾನದಿಂದಂ + ಅಱಿದು = ಅದನ್ನು ಅನುಮಾನದಿಂದಲೇ ಊಹಿಸಿ, ಮೆಲ್ಲನೆ ಸಾರ್ದು ನೋಡುವಲ್ಲಿ = ಅದರ ಹತ್ತಿರ ಬಂದು ನೋಡುವಾಗ, ವಾಸವನದಂ ನೀಡುಂ ಭಾವಿಸಿ ನೋಡಿ = ವಾಸವನು ಅದನ್ನು ದೀರ್ಘಕಾಲ ತದೇಕವಾಗಿ ನೋಡುತ್ತ,

**ಗದ್ಯಾನುಸರಣ:** ನಾನಾ ಕ್ಷುದ್ರವಿದ್ಯೆಗಳಲ್ಲಿ ಪರಿಣತರಾದ ವಾಸವ ದುರ್ದಂತ ಎಂಬವವವರು ಕಪಟವಿಶಾರದರೂ ಆದುದರಿಂದ, ಅದನ್ನು ಅನುಮಾನದಿಂದಲೇ ಅದರ ಹತ್ತಿರ ಬಂದು ನೋಡಿದರು; ವಾಸವನಂತೂ ಅದನ್ನು ದೀರ್ಘಕಾಲ ತದೇಕವಾಗಿ ನೋಡುತ್ತ ನಿಂತ.

**ಬಗೆ ಪೋಯ್ತಿಂತಿದು ನಾಕಲೋಕವಿಭವಂ ಮದ್ವೃತ್ತಕಂ ತಪ್ಪದೀ**
**ಮೃಗಶಾಬೇಕ್ಷಣೆ ಮನ್ಮನೋರಮೆ ವಿಮಾನಂ ಮದ್ವಿಮಾನಂ ಮನಂ**
**ಬುಗಲಾರ್ತತ್ತೆನಗೆಲ್ಲಿ ಪುಟ್ಟಿದಳೊ ಮತ್ಪ್ರಾಣೇಶೆಯೆಂದಿಲ್ಲದು**
**ಬ್ಬೆಗಮಂ ಭಾವಿಸಿ ತಾಳ್ದಿದಂ ಪಲವನಾ ಶೈಲೂಷವೇಷಂಗಳಂ ೮೮**

**ಪದವಿಭಾಗ–ಅನ್ವಯ–ಅರ್ಥ:** ಬಗೆ ಪೋಯ್ತು = ನನ್ನ ಮನಸ್ಸಿನಲ್ಲಿ ಹೊಳೆಯಿತು, ಇಂತಿದು ನಾಕಲೋಕವಿಭವಂ = ಇದು ದೇವಲೋಕದ ಸಮಾಚಾರ, ಮತ್ + ವೃತ್ತಕಂ ತಪ್ಪದು = ಇದು ಖಂಡಿತ ನನ್ನದೇ ವೃತ್ತಾಂತ, ಈ ಮೃಗಶಾಬೇಕ್ಷಣೆ = ಈ ಜಿಂಕೆಮರಿಯ ಕಣ್ಣುವಳು, ಮತ್ + ಮನೋರಮೆ = ನನ್ನ ಪ್ರೇಯಸಿ, ವಿಮಾನಂ ಮತ್ + ವಿಮಾನಂ = ವಿಮಾನವೂ ನನ್ನ ವಿಮಾನವೇ, ಮನಂಬುಗಲ್ + ಆರ್ತತ್ತು = ನನ್ನ ಮನಸ್ಸನ್ನು ಹೊಕ್ಕಿದೆ, ಎನಗೆಲ್ಲಿ ಪುಟ್ಟಿದಳೊ ಮತ್ + ಪ್ರಾಣೇಶೆ = ನನಗಾಗಿ ಹೃದಯಕಾಂತೆಯು ಈಗ ಎಲ್ಲಿ ಹುಟ್ಟಿದ್ದಾಳೆಯೋ, ಎಂದು + ಇಲ್ಲದು + ಉಬ್ಬೆಗಮಂ ಭಾವಿಸಿ = ಎಂದು ನಾನಾ ಬಗೆಯ ಉದ್ವೇಗವನ್ನು ತೋರುತ್ತ, ಪಲವನ್ ಆ ಶೈಲೂಷವೇಷಂಗಳಂ ತಾಳ್ದಿದಂ = ನಾನಾ ಬಗೆಯಲ್ಲಿ ನಟನೆ ಮಾಡಿದ.

**ಗದ್ಯಾನುಸರಣ:** ನನಗೆ ಹೊಳೆಯಿತು: ಇದು ದೇವಲೋಕದ ಸಮಾಚಾರ, ಇದು ಖಂಡಿತ ನನ್ನದೇ ವೃತ್ತಾಂತ, ಈ ಜಿಂಕೆಮರಿಯ ಕಣ್ಣವಳು ನನ್ನ ಪ್ರೇಯಸಿಯೇ, ವಿಮಾನವೂ ನನ್ನ ವಿಮಾನವೇ; ನನ್ನ ಮನಸ್ಸನ್ನು ಹೊಕ್ಕಿದೆ, ನನಗಾಗಿ ಹೃದಯಕಾಂತೆಯು ಈಗ ಎಲ್ಲಿ ಹುಟ್ಟಿದ್ದಾಳೆಯೋ, ಎಂದು ನಾನಾ ಬಗೆಯ ಉದ್ವೇಗವನ್ನು ತೋರುತ್ತ ನಾನಾ ಬಗೆಯಲ್ಲಿ ನಟನೆ ಮಾಡಿದ.

**ವ। ಆಗಳ್ ಪರಿಹೀತಾಸವನಂತಿರ್ದ ವಾಸವನಂ ದುರ್ದಂತ ನಳೀಕೋದಂತಂ ಗಳಿನಾಱುಸುತ್ತಿರ್ಪುದುಮಾಂ ಮೆಲ್ಲನಲ್ಲಿಗೆ ಪೋಗಿ,**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ = ಆಗ, ಪರಿಪೀತ + ಆಸವನಂತೆ + ಇರ್ದ ವಾಸವನಂ = ಹೆಂಡ ಕುಡಿದವನ ಹಾಗಿದ್ದ ವಾಸವನನ್ನು, ದುರ್ದಂತನ್ = ದುರ್ದಂತನು, ಅಳೀಕ + ಉದಂತಂಗಳಿನ್ ಆಱಿಸುತ್ತಿರ್ಪುದುಂ = ಕಪಟ ಉಪಚಾರಗಳಿಂದ ಹೋಗಲಾಡಿಸುವನಂತೆ ಪ್ರಯತ್ನಿಸುತ್ತಿರಲು, ಮೆಲ್ಲನಲ್ಲಿಗೆ ಪೋಗಿ = ನಾನು ಮೆಲ್ಲನೆ ಅಲ್ಲಿಗೆ ಹೋಗಿ,

**ಗದ್ಯಾನುಸರಣ:** ಆಗ ಹೆಂಡ ಕುಡಿದವನ ಹಾಗಿದ್ದ ವಾಸವನನ್ನು ದುರ್ದಂತನು ಉಪಚಾರಗಳನ್ನು ಮಾಡಿ ಹೋಗಲಾಡಿಸುವನಂತೆ ಸುಳ್ಳು ಸುಳ್ಳೇ ಪ್ರಯತ್ನಿಸುತ್ತಿರಲು ನಾನು ಮೆಲ್ಲನೆ ಅಲ್ಲಿಗೆ ಹೋದೆ.

**ಏಕಿನಿತಾಕುಳಂ ಪ್ರಭುಗಿದಾದುದೊ ಪೂರ್ವಭವಾನುರಾಗಮಿಂ**
**ತೀಕೆಯೊಳುಳ್ಳೊಡೆಮ್ಮ ಪಟಮೆಮ್ಮಯ ಕೂಸಿನ ಚಿತ್ರಮೆಯ್ದೆ**
**ಪೇೞ್ಗಾಕೆಯ ತನ್ನ ಬಯ್ಕೆಯವಿನಾಣಮನೆಂಬುದುಮಾಗಳಾಕುಳ**
**ವ್ಯಾಕುಳರಾಗಿ ನಾಣ್ಚಿ ಜಗುೞ್ದಿರ್ವರುಮಂದೊಳಸಾರ್ದು ಪೋಪುದುಂ ೮೯**

**ಪದವಿಭಾಗ–ಅನ್ವಯ–ಅರ್ಥ:** ಪ್ರಭುಗೆ ಇನಿತು ಆಕುಳಂ ಏಕೆ ಇದಾದುದೊ = ಪ್ರಭುಗಳಿಗೆ ಇಷ್ಟು ದುಃಖ ಏತಕ್ಕೆ ಉಂಟಾಗಿದೆಯೋ! ಪೂರ್ವಭವ + ಅನುರಾಗಂ + ಇಂತು + ಈಕೆಯೊಳ್ = ಉಳ್ಳೊಡೆ ಹಿಂದಿನ ಜನ್ಮದ ಪ್ರೀತಿಯು ಇವಳಲ್ಲಿ ಇದ್ದರೆ, ಎಮ್ಮ ಪಟಂ + ಎಮ್ಮಯ ಕೂಸಿನ ಚಿತ್ರಂ = ಈ ಚಿತ್ರವು ನಮ್ಮ ಮಗಳದ್ದು, ಆಕೆಯ ತನ್ನ ಬಯ್ಕೆಯ + ಅವಿನಾಣಮನ್ ಪೇೞ್ಗೆ = ಅವಳ ರಹಸ್ಯ ಚಿಹ್ನೆಗಳನ್ನು ಎಯ್ದೆ = ಹೇಳಲಿ, ಎಂಬುದುಂ + ಆಗಳ್ + ಆಕುಳವ್ಯಾಕುಳರಾಗಿ ನಾಣ್ಚಿ = ಎಂದಾಗ ಗೊಂದಲಕ್ಕೊಳಗಾಗಿ ನಾಚಿಕೆಯಿಂದ, ಇರ್ವರುಂ + ಅಂದು + ಒಳಸಾರ್ದು ಜಗುೞ್ದು ಪೋಪುದುಂ = ಆಗ ಗೊತ್ತಾಗದಂತೆ ನುಣುಚಿಕೊಂಡು ಹೋಗುವುದೂ,

**ಗದ್ಯಾನುಸರಣ:** 'ಪ್ರಭುಗಳಿಗೆ ಇಷ್ಟು ದುಃಖ ಏತಕ್ಕೆ ಉಂಟಾಗಿದೆಯೋ! ಇವಳಲ್ಲಿ ಹಿಂದಿನ ಜನ್ಮದ ಪ್ರೀತಿಯಿದ್ದರೆ ಹೇಳಿ; ಈ ಚಿತ್ರವು ನಮ್ಮ ಮಗಳದ್ದೇ, ಅವಳ ರಹಸ್ಯ ಅನುಭವದ ಚಿಹ್ನೆಗಳನ್ನು ವಿವರಿಸಿ' ಎಂದೆ. ಆಗ ಗೊಂದಲಕ್ಕೊಳಗಾದ ಅವರಿಬ್ಬರೂ ನಾಚಿಕೆಯಿಂದ ಗೊತ್ತಾಗದ ಹಾಗೆ ನುಣುಚಿಕೊಂಡು ಹೊರಟರು.

**ವ। ಎಮ್ಮ ಪಾಸಿದ ಚಿತ್ರಪಟಮೆಂಬ ಬಲೆಯೊಳ್ ನಿಮ್ಮಂತಪ್ಪ ಬೆಳ್ಮಿಗಂಗಳಾಗಳೆ ತೊಡರ್ಗುವುಸಿರದೆ ಬಿಜಯಂಗೆಯ್ಯಿಮೆಂದವಂದಿರಂ ನಕ್ಕು ಕಳೆಯೆ,**

**ಪದವಿಭಾಗ–ಅನ್ವಯ–ಅರ್ಥ:** ಎಮ್ಮ ಪಾಸಿದ ಚಿತ್ರಪಟಮೆಂಬ ಬಲೆಯೊಳ್

= ನಾವು ಹರಡಿದ ಚಿತ್ರಪಟ ಎಂಬ ಬಲೆಯಲ್ಲಿ, ನಿಮ್ಮಂತಪ್ಪ ಬೆಳ್ಮಿಗಂಗಳ್ + ಆಗಳೆ ತೊಡರ್ಗುಂ = ನಿಮ್ಮಂತಹ ಪೆದ್ದು ಮೃಗಗಳು ಬೀಳುತ್ತವೆ, ಉಸಿರದೆ ಬಿಜಯಂಗೆಯ್ಯಿಂ = ಹೆಚ್ಚು ಮಾತಾಡದೆ ದಯಮಾಡಿಸಿ, ಎಂದು + ಅವಂದಿರಂ ನಕ್ಕು ಕಳೆಯೆ = ಎಂದು ನಕ್ಕು ಅವರನ್ನು ಓಡಿಸಲು,

**ಗದ್ಯಾನುಸರಣ:** 'ನಾವು ಹರಡಿದ ಚಿತ್ರಪಟ ಎಂಬ ಬಲೆಯಲ್ಲಿ ನಿಮ್ಮಂತಹ ಪೆದ್ದು ಮೃಗಗಳು ಆಗಲೆ ಬಿದ್ದಿವೆ, ಹೆಚ್ಚು ಮಾತಾಡದೆ ಹೋಗಿರಿ' ಎಂದು ನಕ್ಕು ಅವರನ್ನು ಓಡಿಸಿದೆ.

**ರಟದಳಿವೃಂದಮೆಂತೆಱಗುಗುಂ ದಳಿತಾಂಬುರುಹಕ್ಕೆ ಗಂಧಲಂ**
**ಪಟತೆಯಿನಂತೆ ದಿಟ್ಟಿ ಮನಮೆಂಬಿವು ತೊಟ್ಟನೆ ನಟ್ಟು ನಟ್ಟವೊಲ್**
**ಘಟಿಯಿಸೆ ಸೋಲ್ತೊಱಲ್ದು ನಡೆ ನೋಟ್ಪೆಡೆಯೊಳ್ ಭವದೀಯರೂಪಲಂ**
**ಪಟವಿಟರಂ ಮರುಳ್ಗೊಳಿಸಿತುತ್ಕಟಮೋಹತಮಃಪಟಂ ಪಟಂ ೯೦**

**ಪದವಿಭಾಗ–ಅನ್ವಯ–ಅರ್ಥ:** ರಟತ್ + ಅಳಿವೃಂದಂ = ಝೇಂಕರಿಸುತ್ತ ದುಂಬಿಯು, ಎಂತು = ಹೇಗೆ, ದಳಿತ + ಅಂಬುರುಹಕ್ಕೆ = ಅರಳಿದ ತಾವರೆಗೆ, ಗಂಧಲಂಪಟತೆಯಿನ್ ಎಱಗುಗುಂ = ಬಂಡಿನ ಆಸೆಯಿಂದ ಮೇಲೆ ಬೀಳುತ್ತದೋ, ಅಂತೆ ಭವದೀಯರೂಪಲಂಪಟವಿಟರಂ = ಹಾಗೆಯೇ ನಿನ್ನ ರೂಪದಿಂದ ಆಕರ್ಷಿತರಾದ ಲಂಪಟರ, ನಡೆ ನೋಟ್ಪ + ಎಡೆಯೊಳ್ = ನೋಡಿದಾಕ್ಷಣವೇ, ದಿಟ್ಟಿ ಮನಂ + ಎಂಬಿವು ತೊಟ್ಟನೆ ನಟ್ಟು = ನೋಟ ಮತ್ತು ಮನಸ್ಸುಗಳು ನಟ್ಟು, ನಟ್ಟವೊಲ್ ಘಟಿಯಿಸೆ ಸೋಲ್ತು = ನಾಟಿದ ಹಾಗೆಯೇ ಮನಸೋತು, ಒಱಲ್ದು = ಮೋಹಗೊಂಡುವು; ಉತ್ಕಟಮೋಹತಮಃಪಟಂ ಪಟಂ = ತೀವ್ರಮೋಹದ ಕತ್ತಲೆಯ ಆವರಣವನ್ನುಂಟುಮಾಡುವ ನಿನ್ನ ಚಿತ್ರವು, ಮರುಳ್ಗೊಳಿಸಿತು = ಮರುಳುಮಾಡಿಬಿಟ್ಟಿತು.

**ಗದ್ಯಾನುಸರಣ:** ಝೇಂಕರಿಸುತ್ತ ದುಂಬಿಯು ಹೇಗೆ ಬಂಡಿನ ಆಸೆಯಿಂದ ಅರಳಿದ ತಾವರೆ ಮೇಲೆ ಬೀಳುತ್ತದೋ ಹಾಗೆಯೇ ನಿನ್ನ ರೂಪದಿಂದ ಆಕರ್ಷಿತರಾದ ಲಂಪಟರ ನೋಟ ಮತ್ತು ಮನಸ್ಸುಗಳು ನೋಡಿದಾಕ್ಷಣವೇ, ಅದರಲ್ಲಿಯೇ ನಾಟಿಕೊಂಡು, ನಾಟಿದ ಹಾಗೆಯೇ ಮನಸೋತು, ಮೋಹಗೊಂಡುವು; ತೀವ್ರಮೋಹದ ಕತ್ತಲೆಯ ಆವರಣವನ್ನುಂಟುಮಾಡುವ ನಿನ್ನ ಚಿತ್ರವು ನೋಡಿದವರನ್ನೆಲ್ಲ ಮರುಳುಮಾಡಿಬಿಟ್ಟಿತು.

**ವ॥ ಅನ್ನೆಗಂ ಗಂಭೀರತರತುರಗಹೇಷಾರವಬಧಿರಿತ ಸಕಳಭುವನ ವಿವರನುಂ ಕತಿಪಯ ಪದಾತಿ ಪರಿಜನಪರಿವೃತಂ ನಿರಂತರೋಚ್ಛ್ರಿತ ವಿಚಿತ್ರಚಂದ್ರ ಕಚ್ಛತ್ರಚ್ಛಾಯಾ ನಿರಾಕೃತಾತಪನುಂ ಶರನ್ನಿಶಾಸಮಯಸಮುದಿತ ತಾರಾತರಳ**

**ಮುಕ್ತಾಭರಣ ಕಿರಣ ಚಂದ್ರಿಕಾಚಂದ್ರಕಬಳವಿಳಸಿತ ದಿಗಂಗನಾಮುಖನುಮಾಗಿ ಅಭಿನವೋದ್ಭಿದ್ಯಮಾನ ಮೃದುಕುಟಿಲಶ್ಮಶ್ರು ಮಧುಕರಪಟಳ ಪರಿವೃತಮುಗ್ಧ ಮುಖಸರಸಿಜನುಂ ಮೃಗಮದವಿಲಿಖಿತ ವಿಚಿತ್ರಚಿತ್ರಪತ್ರಭಂಗಭಾಸುರಭುಜ ಶಿಖರನುಂ ಅತಿಸುರಭಿಸಹಕಾರ ಕಸ್ತೂರಿಕರ್ಪೂರಪಾಳಿಸಮ್ಮಿಶ್ರ ತಾಂಬೂಳ ರಾಗರಕ್ತಾಧರ ಪ್ರವಾಳಪ್ರಭಾಪ್ರಕಟಿತಪೂರ್ವಸಂಧ್ಯಾರಾಗನುಂ ಅಭಿನವ ಯೌವನಾವಷ್ಟಂಭಪ್ರಾಗಲ್ಭ್ಯ ದೃಷ್ಟಿಪಾತತೃಣೀಕೃತತ್ರಿಭುವನಮಪ್ಪನೊರ್ವಂ ರಾಜಕುಮಾರಂ ದೂರೋತ್ಸಾರಿತವಾಹನಂ ಸಸಂಭ್ರಮೋಪಗತ ಪರಿಚಾರಕ ಸ್ಕಂಧವಿನ್ಯಸ್ತವಾಮಹಸ್ತನಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಅನ್ನೆಗಂ = ಅಷ್ಟರಲ್ಲಿ, ಗಂಭೀರತರತುರಗ ಹೇಷಾರವಬಧಿರಿತ = ಗಂಭೀರವಾದ ಕುದುರೆಯ ಕೆನೆತದ ಧ್ವನಿಯಿಂದ ಕಿವುಡಾದ, ಸಕಳಭುವನವಿವರನುಂ = ಭೂಮಂಡಲವನ್ನುಳ್ಳವನೂ, ಕತಿಪಯ ಪದಾತಿಪರಿಜನ ಪರಿವೃತಂ = ಕೆಲವೇ ಮಂದಿ ಕಾಲುದಳದ ಸೈನಿಕರಿಂದ ಕೂಡಿದವನೂ, ನಿರಂತರ + ಉಚ್ಛ್ರಿತವಿಚಿತ್ರಚಂದ್ರಕಚ್ಛತ್ರಚ್ಛಾಯಾನಿರಾಕೃತ + ಆತಪನುಂ = ಸದಾ ಎತ್ತಿ ಹಿಡಯಲ್ಪಟ್ಟಾಕರ್ಷಕವಾದ ನವಿಲುಗರಿಯ ಕೊಡೆಯಿಂದಾಗಿ ನಿವಾರಣೆಗೊಂಡ ಬಿಸಿಲಿನ ತಾಪದವನೂ, ಶರತ್ + ನಿಶಾಸಮಯ = ಶರತ್‌ಕಾಲದ ರಾತ್ರಿಯಲ್ಲಿ, ಸಮುದಿತತಾರಾತರಳ = ಕಾಣಿಸಿದ ನಕ್ಷತ್ರಗಳ, ಮುಕ್ತಾಭರಣ = ಮುತ್ತಿನ ಆಭರಣದ, ಕಿರಣಚಂದ್ರಿಕಾಚಂದ್ರಕಬಳವಿಳಸಿತ = ಕಾಂತಿಯೆಂಬ ಬೆಳುದಿಂಗಳಿನಿಂದ ಶೋಭಿಸುವ, ದಿಗಂಗನಾಮುಖನುಂ + ಆಗಿ = ದಿಕ್ಕೆಂಬ ಹೆಣ್ಣಿನ ಮುಖವು ಶೋಭಿಸುತ್ತಿರಲಾಗಿ, ಅಭಿನವ + ಉದ್ಭಿದ್ಯಮಾನ = ಹೊಸದಾಗಿ ಚಿಗುರಿದ, ಮೃದುಕುಟಿಲಶ್ಮಶ್ರು = ಎಳೆಯ ಡೊಂಕಾದ ಮೀಸೆಯೆಂಬ, ಮಧುಕರಪಟಳಪರಿವೃತ = ದುಂಬಿಗಳಿಂದ ಆವರಿಸಲ್ಪಟ್ಟ, ಮುಗ್ಧಮುಖಸರಸಿಜನುಂ = ಮುಗ್ಧವಾದ ಮುಖಕಮಲವುಳ್ಳವನೂ, ಮೃಗಮದವಿಲಿಖಿತ = ಕಸ್ತೂರಿಯಿಂದ ಬರೆಯಲಾದ, ವಿಚಿತ್ರಚಿತ್ರಪತ್ರಭಂಗಭಾಸುರ = ಸುಂದರ ಪತ್ರಭಂಗದಿಂದ ಹೊಳೆಯುವ, ಭುಜಶಿಖರನುಂ = ಎತ್ತರ ಭುಜಗಳುಳ್ಳವನೂ, ಅತಿಸುರಭಿಸಹಕಾರ ಕಸ್ತೂರಿಕರ್ಪೂರಪಾಳಿ ಸಮ್ಮಿಶ್ರ = ಪರಿಮಳಭರಿತವಾದ ಕರ್ಪೂರ ಕಸ್ತೂರಿಗಳ ಚೂರ್ಣದಿಂದ ಕೂಡಿದ, ತಾಂಬೂಳರಾಗರಕ್ತ + ಅಧರಪ್ರವಾಳ = ತಾಂಬೂಲದಿಂದ ಕೆಂಪಾದ ಕೆಳದುಟಿಯೆಂಬ ಹವಳದ, ಪ್ರಭಾಪ್ರಕಟಿತ ಪೂರ್ವಸಂಧ್ಯಾರಾಗನುಂ = ಕಾಂತಿಯಿಂದ ಪ್ರಕಟಗೊಂಡ ಪೂರ್ವದಿಕ್ಕು ಇರಲಾಗಿ, ಅಭಿನವ ಯೌವನಾವಷ್ಟಂಭಪ್ರಾಗಲ್ಭ್ಯ = ಹೊಸ ಹರೆಯದ ಪ್ರೌಢತೆಯಿಂದ ಕೂಡಿದ, ದೃಷ್ಟಿಪಾತತೃಣೀಕೃತ ತ್ರಿಭುವನಂ = ಯಾವನ ನೋಟವು ಬಿದ್ದು ಮೂರು ಲೋಕಗಳೂ ಅವಗಣಿಸಲ್ಪಟ್ಟವೋ, ಅಪ್ಪನ್ + ಒರ್ವಂ ರಾಜಕುಮಾರಂ =

ಅಂತಹ ಒಬ್ಬ ರಾಜಕುಮಾರನು, ದೂರ + ಉತ್ಸಾರಿತವಾಹನಂ = ದೂರ ನಿಲ್ಲಿಸಲಾದ ವಾಹನದವನಾಗಿ, ಸಸಂಭ್ರಮ + ಉಪಗತಪರಿಚಾರಕ ಸ್ಕಂಧವಿನ್ಯಸ್ತವಾಮಹಸ್ತನಾಗಿ = ಸಡಗರದಿಂದ ಪಕ್ಕದಲ್ಲಿದ್ದ ಸೇವಕನ ಹೆಗಲ ಮೇಲೆ ಎಡಗೈಯನ್ನಿಟ್ಟವನಾಗಿ,

**ಗದ್ಯಾನುಸರಣ:** ಅಷ್ಟರಲ್ಲಿ ಅಲ್ಲಿಗೊಬ್ಬ ರಾಜಕುಮಾರನು ಬಂದ: ಅವನ ಕುದುರೆಯ ಕೆನೆತದ ಧ್ವನಿಯಿಂದ ಭೂಮಂಡಲವೇ ಕಿವುಡಾಗುತ್ತಿತ್ತು; ಅವನ ಜೊತೆಯಲ್ಲಿ ಕೆಲವರು ಪದಾತಿ ಸೈನಿಕರಿದ್ದರು; ಬಿಸಿಲಿನ ತಾಪವನ್ನು ನಿವಾರಿಸಲು ಸೇವಕರು ಸದಾ ನವಿಲುಗರಿಯ ಕೊಡೆಯನ್ನು ಎತ್ತಿ ಹಿಡಿದಿದ್ದರು; ದಿಕ್ಕೆಂಬ ಹೆಣ್ಣಿನ ಮುಖವು ಶರತ್‌ಕಾಲದ ರಾತ್ರಿಯಲ್ಲಿನ ನಕ್ಷತ್ರಗಳೆಂಬ ಮುತ್ತಿನ ಆಭರಣದ ಕಾಂತಿಯೆಂಬ ಬೆಳುದಿಂಗಳಿನಿಂದ ಶೋಭಿಸುತ್ತಿತ್ತು; ಹೊಸದಾಗಿ ಚಿಗುರಿದ ಎಳೆಯ ಡೊಂಕು ಮೀಸೆಯೆಂಬ ದುಂಬಿಗಳು ಅವನ ಮುಖವನ್ನು ಆವರಿಸಿದ್ದವು; ಅವನ ಮುಖಕಮಲವು ಮುಗ್ಧವಾಗಿತ್ತು; ಅವನ ಎತ್ತರವಾದ ಭುಜಗಳ ಮೇಲೆ ಕಸ್ತೂರಿಯಿಂದ ಸುಂದರ ಪತ್ರಭಂಗವನ್ನು ಬರೆಯಲಾಗಿತ್ತು; ಆಗ ಪರಿಮಳಭರಿತ ಕರ್ಪೂರ ಕಸ್ತೂರಿಗಳ ಚೂರ್ಣದಿಂದ ಕೂಡಿದ ತಾಂಬೂಲದಿಂದ ಹವಳದಂತೆ ಪೂರ್ವದಿಕ್ಕಿನ ಕೆಂಪಾದ ತುಟಿಗಳ ಕಾಂತಿಯು ಪ್ರಕಟಗೊಂಡಿತ್ತು; ಹೊಸ ಹರೆಯದ ಪ್ರೌಢತೆಯಿಂದ ಕೂಡಿದ ಅವನ ನೋಟವು ಮೂರು ಲೋಕಗಳನ್ನೂ ಅವಗಣಿಸುವಂತಿತ್ತು; ಆ ರಾಜಕುಮಾರನು ತನ್ನ ವಾಹವನ್ನು ದೂರ ನಿಲ್ಲಿಸಿ, ಸಡಗರದಿಂದ ಕೂಡಿ ಪಕ್ಕದಲ್ಲಿದ್ದ ಸೇವಕನ ಹೆಗಲ ಮೇಲೆ ಎಡಗೈಯನ್ನಿಟ್ಟು ಬಂದ.

**ವಿಶೇಷ ವಿಚಾರ:** ಪತ್ರಭಂಗ = ಮಕರಿಕಾ ಚಿತ್ರ; ಕೆನ್ನೆ ಮುಂತಾದವುಗಳ ಮೇಲೆ ಬರೆಯುವ ಚಿತ್ರ.

**ಧನು ಕಾಮಂಗಿಕ್ಷುದಂಡಂ ಪಱಯಿಗೆ ಮಕರಂ ಬಾಣಸಂಘಾತಮಚ್ಚಂ**
**ನನೆಯೆಂಬೀ ಚಿಹ್ನಮಿಲ್ಲೆಂಬನಿತೆ ಮನಸಿಜಾಕಾರಮಾಕಾರಮೇಂ ಜಾ**
**ಣನೋ ಧಾತ್ರಂ ರೂಪನಿಷ್ಪಾದನವಿಧಿಯೊಳಿವಂ ಮುನ್ನಮೇಂನೋಂಪಿಯಂ ನೋಂ**
**ತನೊ ಪೇೞೆಂಬಂತೆ ಬಂದಂ ಸುಕವಿಜನಮನೋಮಾನಸೋತ್ತಂಸಹಂಸಂ** ೯೧

**ಪದವಿಭಾಗ–ಅನ್ವಯ–ಅರ್ಥ:** ಕಾಮಂಗೆ ಇಕ್ಷುದಂಡಂ ಧನು = ಮನ್ಮಥನ ಬಿಲ್ಲು ಕಬ್ಬಿನ ಜಲ್ಲೆ; ಮಕರಂ ಪಱಯಿಗೆ = ಮೀನು ಅವನ ಬಾವುಟದ ಲಾಂಛನ; ಬಾಣಸಂಘಾತಂ + ಅಚ್ಚಂ ನನೆ = ಬಾಣಸಮೂಹವೆಂದರೆ ಹೊಸ ಹೂಗಳು; ಎಂಬ ಈ ಚಿಹ್ನಂ + ಇಲ್ಲ + ಎಂಬನಿತೆ = ಎಂಬ ಈ ಗುರುತುಗಳು ಇಲ್ಲ ಎಂಬುದಷ್ಟೇ (ವ್ಯತ್ಯಾಸ); ಮನಸಿಜ + ಆಕಾರಂ + ಆಕಾರಂ = ಆದರೆ

ರೂಪವು ಮಾತ್ರ ಮನ್ಮಥನದ್ದೇ; ರೂಪನಿಷ್ಪಾದನವಿಧಿಯೊಳ್ = ರೂಪವನ್ನು ಸೃಷ್ಟಿಸುವ ಪ್ರಕ್ರಿಯೆಯಲ್ಲಿ, ಧಾತ್ರಂ ಎಂ ಜಾಣನೋ = ಬ್ರಹ್ಮನು ಅದೆಷ್ಟು ಬುದ್ಧಿವಂತನೋ; ಇವಂ ಮುನ್ನಮೇಂ ನೋಂಪಿಯಂ ನೋಂತನೊ ಪೇಟ್ + ಎಂಬಂತೆ = ಇವನು ಈ ರೂಪವನ್ನು ಪಡೆಯಲು ಅದೆಷ್ಟು ವ್ರತಗಳನ್ನು ತೊಟ್ಟಿದ್ದನೋ ಎನ್ನುವ ಹಾಗೆ, ಸುಕವಿಜನಮನೋಮಾನಸೋತ್ತಂಸಹಂಸಂ = ಸುಕವಿಗಳ ಮನಸ್ಸುಗಳೆಂಬ ಸರೋವರದಲ್ಲಿ ವಿಹರಿಸುವ ರಾಜಹಂಸದಂತಿದ್ದ (ರಾಜಕುಮಾರನು), ಬಂದಂ = ಬಂದ.

**ಗದ್ಯಾನುಸರಣ:** ಮನ್ಮಥನ ಬಿಲ್ಲು ಕಬ್ಬಿನ ಜಲ್ಲೆ; ಮೀನು ಅವನ ಬಾವುಟದ ಲಾಂಛನ; ಬಾಣಸಮೂಹವೆಂದರೆ ಹೊಸ ಹೂಗಳು – ಎಂಬ ಈ ಗುರುತುಗಳು ಇಲ್ಲ ಎಂಬುದಷ್ಟೇ ವ್ಯತ್ಯಾಸ; ಇವನ ಆದರೆ ರೂಪವು ಮಾತ್ರ ಮನ್ಮಥನದ್ದೇ; ರೂಪವನ್ನು ಸೃಷ್ಟಿಸುವ ಪ್ರಕ್ರಿಯೆಯಲ್ಲಿ ಬ್ರಹ್ಮನು ಅದೆಷ್ಟು ಜಾಣ! ಅವನು ಈ ರೂಪವನ್ನು ಪಡೆಯಲು ಅದೆಷ್ಟು ವ್ರತಗಳನ್ನು ತೊಟ್ಟಿದ್ದನೋ! ಸುಕವಿಗಳ ಮನಸ್ಸುಗಳೆಂಬ ಸರೋವರದಲ್ಲಿ ವಿಹರಿಸುವ ರಾಜಹಂಸದಂತಿದ್ದ ರಾಜಕುಮಾರನು ಬಂದ.

**ವ। ಅಂತು ಬಂದು**

**ಅರ್ಥ:** ಹಾಗೆ ಬಂದು

**ಉದಯಂಗೆಯ್ದಮೃತಾಂಶುಬಿಂಬಮೆರ್ದೆಗಂ ಕಣ್ಗಂ ಮಹೋತ್ಸಾಹದೊಂ**
**ದೊದವಂ ಮುಂದಿಡುವಂತೆ ತನ್ನ ಭುವನಪ್ರಖ್ಯಾತಸೌಂದರ್ಯದಿಂ**
**ವಿದಿತೈಶ್ವರ್ಯದಿನೆನ್ನನಾಗಳೆ ದಲಂತೆಲ್ಲಂದದಿಂ ಸೂಚಿತಾ**
**ಭ್ಯುದಯಂ ಜಾತದಯಂ ಮನಂಗೊಳಿಸಿದಂ ಸಂಸಾರಸಾರೋದಯಂ** ೯೨

**ಪದವಿಭಾಗ–ಅನ್ವಯ–ಅರ್ಥ:** ಉದಯಂಗೆಯ್ದ = ಮೂಡಿದ ಅಮೃತಾಂಶುಬಿಂಬಂ = ಚಂದ್ರಬಿಂಬವು, ಎರ್ದೆಗಂ ಕಣ್ಗಂ ಮಹೋತ್ಸಾಹದ + ಒಂದು + ಒದವಂ ಮುಂದಿಡುವಂತೆ = (ನೋಡುವವರ) ಮನಸ್ಸಿಗೂ ಕಣ್ಣುಗಳಿಗೂ ಸಂತಸವನ್ನುಂಟುಮಾಡುವ ಹಾಗೆ, ತನ್ನ ಭುವನಪ್ರಖ್ಯಾತ ಸೌಂದರ್ಯದಿಂ = ತನ್ನ ಲೋಕಪ್ರಸಿದ್ಧವಾದ ಚೆಲುವಿನಿಂದಲೂ, ವಿದಿತ + ಐಶ್ವರ್ಯದಿನ್ = ಸಂಪತ್ತಿನಿಂದಲೂ, ಸೂಚಿತ + ಅಭ್ಯುದಯಂ = ಏಳಿಗೆಯನ್ನು ತೋರ್ಪಡಿಸುತ್ತ, ಜಾತದಯಂ = ದಯಾರ್ದ್ರನೂ, ಸಂಸಾರಸಾರೋದಯಂ = ಸಂಸಾರದ ಸಾರವನ್ನು ಹೆಚ್ಚಿಸುವವನೂ ಆಗಿ, ಅಂತು + ಎಲ್ಲಂದದಿಂ = ಹಾಗೆ ಎಲ್ಲ ಬಗೆಯಿಂದಲೂ, ಎನ್ನನ್ + ಆಗಳೆ ದಲ್ ಮನಂಗೊಳಿಸಿದಂ = ನನ್ನಲ್ಲಿ ಆ ಕ್ಷಣವೇ ಮುದವನ್ನುಂಟುಮಾಡಿದ.

**ಗದ್ಯಾನುಸರಣ:** ಮೂಡಿದ ಚಂದ್ರಬಿಂಬವು ನೋಡುವವರ ಮನಸ್ಸಿಗೂ ಕಣ್ಣುಗಳಿಗೂ ಸಂತಸವನ್ನುಂಟುಮಾಡುವ ಹಾಗೆ, ಲೋಕಪ್ರಸಿದ್ಧ ಚೆಲುವಿನಿಂದಲೂ ಸಂಪತ್ತಿನಿಂದಲೂ ತನ್ನ ಏಳಿಗೆಯನ್ನು ತೋರ್ಪಡಿಸುತ್ತ, ದಯಾರ್ದ್ರನೂ ಸಂಸಾರದ ಸಾರವನ್ನು ಹೆಚ್ಚಿಸುವವನೂ ಆದ ರಾಜಕುಮಾರನು ಎಲ್ಲ ಬಗೆಯಿಂದಲೂ ಆ ಕ್ಷಣವೇ ನನ್ನಲ್ಲಿ ಮುದವನ್ನುಂಟುಮಾಡಿದ.

ಇಲ್ಲಿಗೆ ವಜ್ರಜಂಘದರ್ಶನವ್ಯಾವರ್ಣನೆ ಎಂಬ
ಮೂರನೆಯ ಆಶ್ವಾಸವು ಮುಗಿಯಿತು

# ನಾಲ್ಕನೆಯ ಆಶ್ವಾಸ

**ಶ್ರೀಮಜ್ಜಿನಭವನಮನಖಿ**
**ಳಾಮರನರಖಚರಚಕ್ರವರ್ತಿಸ್ತುತಮಂ**
**ಮೂಮೆ ಬಲಗೊಂಡು ಭವ್ಯಶಿ**
**ಖಾಮಣಿಯೆನಿಸಿದ ಸರಸ್ವತೀಮಣಿಹಾರಂ** ೧

**ಪದವಿಭಾಗ–ಅನ್ವಯ–ಅರ್ಥ:** ಅಖಿಳ + ಅಮರನರಖಚರಚಕ್ರವರ್ತಿ ಸ್ತುತಮಂ = ಎಲ್ಲ ದೇವ ಮನುಷ್ಯ ಹಾಗೂ ಖೇಚರ ಚಕ್ರವರ್ತಿಗಳಿಂದ ಪೂಜಿತವಾದ, ಶ್ರೀಮತ್ + ಜಿನಭವನಮನ್ = ಪವಿತ್ರ ಜಿನಾಲಯವನ್ನು, ಮೂಮೆ ಬಲಗೊಂಡು = ಮೂರು ಬಾರಿ ಪ್ರದಕ್ಷಿಣೆ ಬಂದು, ಸರಸ್ವತೀಮಣಿಹಾರಂ = ಸರಸ್ವತಿಯ ಮಣಿಹಾರದಂತಿದ್ದ (ವಜ್ರಜಂಘನು), ಭವ್ಯಶಿಖಾಮಣಿಯೆನಿಸಿದ = ಭವ್ಯರಲ್ಲಿ ಶ್ರೇಷ್ಠನೆನಿಸಿ,

**ಗದ್ಯಾನುಸರಣ:** ಎಲ್ಲ ದೇವ ಮನುಷ್ಯ ಹಾಗೂ ಖೇಚರ ಚಕ್ರವರ್ತಿಗಳಿಂದ ಪೂಜಿತವಾದ ಪವಿತ್ರ ಜಿನಾಲಯವನ್ನು, ಮೂರು ಬಾರಿ ಪ್ರದಕ್ಷಿಣೆ ಬಂದು ಸರಸ್ವತಿಯ ಮಣಿಹಾರದಂತಿದ್ದ ವಜ್ರಜಂಘನು ಭವ್ಯರಲ್ಲಿ ಶ್ರೇಷ್ಠನೆನಿಸಿ,ದ.

**ತ್ರಿಕರಣಶುದ್ಧಿಯೊಳ್ ರಾ**
**ಜಕುಮಾರಂ ಮಾರಮಥನನಂ ಸ್ತುತಿಯಿಸಿ ತ**
**ತ್ಪ್ರಕಟಫಲಪ್ರಾಪ್ತಿಗೆ ಸಂ**
**ಚಕರಂಗೊಳ್ವಂತೆ ಸಿದ್ಧಶೇಷೆಯುನಾಗಳ್** ೨

**ಪದವಿಭಾಗ–ಅನ್ವಯ–ಅರ್ಥ:** ತ್ರಿಕರಣಶುದ್ಧಿಯೊಳ್ = ತ್ರಿಕರಣಗಳಲ್ಲಿ ಶುದ್ಧನಾಗಿ, ರಾಜಕುಮಾರಂ = ಆ ರಾಜಕುಮಾರನು, ಮಾರಮಥನನಂ ಸ್ತುತಿಯಿಸಿ = ಕಾಮನನ್ನು ಗೆದ್ದ ಜಿನನನ್ನು ಸ್ತುತಿಮಾಡಿ, ತತ್ + ಪ್ರಕಟಫಲಪ್ರಾಪ್ತಿಗೆ = ಕಣ್ಣಿಗೆ ಕಾಣಿಸುವ ಅದರ ಫಲವು ದೊರಕಲು, ಸಂಚಕರಂಗೊಳ್ವಂತೆ = ಮುಂಗಡವನ್ನು ಪಡೆದನೋ ಎಂಬಂತೆ, ಸಿದ್ಧಶೇಷೆಯನ್ + ಆಗಳ್ = ಪೂಜಿಸಿದ ವಸ್ತುಗಳನ್ನು ಆಗ

**ಗದ್ಯಾನುಸರಣ:** ಆ ರಾಜಕುಮಾರನು ತ್ರಿಕರಣಶುದ್ಧನಾಗಿ ಕಾಮನನ್ನು

ಗೆದ್ದ ಜಿನನನ್ನು ಸ್ತುತಿಮಾಡಿ, ಕಣ್ಣಿಗೆ ಕಾಣುವ ಅದರ ಫಲದ ಮುಂಗಡವನ್ನು ಪಡೆದನೋ ಎಂಬಂತೆ ಆಗ ಪ್ರಸಾದ ವಸ್ತುಗಳನ್ನು (ಪಡೆದ).

**ವಿಶೇಷ ವಿಚಾರ:** ತ್ರಿಕರಣ = ಸಾಮಾನ್ಯವಾಗಿ ದೇಹ ಮನಸ್ಸು ಮಾತು (ಕಾಯ, ವಾಚ ಮತ್ತು ಮನ) ಎಂಬಿವು; ಜೈನ ತಾತ್ವಿಕತೆಯಲ್ಲಿ ಅಧಃಪ್ರವೃತ್ತಿಕರಣ, ಅಪೂರ್ವಕರಣ ಮತ್ತು ಅನಿವೃತ್ತಿಕರಣ – ಇವುಗಳ ಪರಿಶುದ್ಧತೆ.

**ಕೊಂಡು ಜಿನಭವನದಿಂದಾ**
**ಖಂಡಳನಿಭಭವನಿರದೆ ಪೊಱಮಟ್ಟಿದಿರೊಳ್**
**ಕಂಡಂ ನೆರೆದು ನಿಗುಂಬಿಸಿ**
**ತಂಡಂಗೊಡಿರ್ದ ನರರ ಖೇಚರರ ಗುಂಡಂ** ೩

**ಪದವಿಭಾಗ–ಅನ್ವಯ–ಅರ್ಥ:** ಕೊಂಡು = ಪ್ರಸಾದವನ್ನು ಸ್ವೀಕರಿಸಿ, ಆಖಂಡಳನಿಭಭವನಿರದೆ = ಇಂದ್ರಸಮಾನ ಬದುಕನ್ನು ಹೊಂದಿದ್ದ ಆಗ, ಜಿನಭವನದಿಂದ ಪೊಱಮಟ್ಟು = ಜಿನಾಲಯದಿಂದ ಹೊರಬಂದು, ನೆರೆದು ನಿಗುಂಬಿಸಿ ತಂಡಂಗೊಡಿರ್ದ = ಸಂದಣಿಯಾಗಿ ಗುಂಪುಗೂಡಿದ್ದ, ನರರ ಖೇಚರರ ಗುಂಡಂ = ಮಾನವರು ಹಾಗೂ ಖೇಚರರ ಸಮೂಹವನ್ನು, ಇದಿರೊಳ್ ಕಂಡಂ = ಎದುರಲ್ಲಿ ನೋಡಿದ.

**ಗದ್ಯಾನುಸರಣ:** ಪ್ರಸಾದವನ್ನು ಸ್ವೀಕರಿಸಿ ಇಂದ್ರಸಮಾನನಂತಿದ್ದ ರಾಜಕುಮಾರನು ಜಿನಾಲಯದಿಂದ ಹೊರಬಂದ; ಹೊರಗೆ ನೋಡಿದರೆ ಎದುರಿನಲ್ಲಿ ಗುಂಪುಗೂಡಿದ್ದ ಮಾನವರು ಹಾಗೂ ಖೇಚರರ ಸಂದಣಿಯಿತ್ತು.

**ವ। ಕಂಡೀ ನೆರೆದ ನೆರವಿ ವಿಸ್ಮಯಂಬಟ್ಟಿದೇನಂ ನೋಡಿದಪ್ಪುದೇನಾನುಮೊಂದು ಕೌತುಕಮಾಗಲೆವೇೞ್ಕುಮೆಂದೆಯ್ದೆವಂದು ನೋೞ್ಪನ್ನೆಗಮಲ್ಲಿ ಪಸರಿಸಿದ ಚಿತ್ರಪಟಮುಂ ಭೋಂಕೆನೆ ಕಂಡು,**

**ಪದವಿಭಾಗ–ಅನ್ವಯ–ಅರ್ಥ:** ಕಂಡು = ಅದನ್ನು ನೋಡಿ, ಈ ನೆರೆದ ನೆರವಿ ವಿಸ್ಮಯಂಬಟ್ಟು + ಇದೇನಂ ನೋಡಿದಪ್ಪುದು = ಈ ಸೇರಿದ ಸಂದಣಿಯು ಏನನ್ನು ನೋಡುತ್ತಿದೆ; ಏನಾನುಂ + ಒಂದು ಕೌತುಕಂ + ಆಗಲೆವೇೞ್ಕುಂ + ಎಂದು = ಏನಾದರೂ ಕುತೂಹಲಕರವಾದದ್ದಿರಲೇಬೇಕು ಎಂದು, ಎಯ್ದೆವಂದು ನೋೞ್ಪನ್ನೆಗಂ = ಮುಂದೆ ಬಂದು ನೋಡಿದರೆ, ಅಲ್ಲಿ ಪಸರಿಸಿದ ಚಿತ್ರಪಟಮಂ ಭೋಂಕೆನೆ ಕಂಡು = ಬಿಡಿಸಿಟ್ಟಿದ್ದ ಚಿತ್ರವನ್ನು ತಟಕ್ಕನೆ ನೋಡಿ,

**ಗದ್ಯಾನುಸರಣ:** ಅದನ್ನು ನೋಡಿ, 'ಸೇರಿದ ಈ ಸಂದಣಿಯು ಏನನ್ನು ನೋಡುತ್ತಿದೆ; ಏನಾದರೂ ಕುತೂಹಲಕರವಾದದ್ದಿರಲೇಬೇಕು' ಎಂದು ಯೋಚಿಸಿ ಮುಂದೆ ಬಂದು ನೋಡಿದರೆ ಅಲ್ಲಿ ಬಿಡಿಸಿಟ್ಟಿದ್ದ ಒಂದು ಚಿತ್ರವಿತ್ತು. ಅದನ್ನು ತಟಕ್ಕನೆ ನೋಡಿದ.

**ರಸಭಾವಂಗಳೊಳಾದ ಚೆಲ್ವು ನುಡಿವಂತಾದಟ್ಟಿಱಿಂ ನೋಡುವಂ**
**ತುಸಿರ್ವಂತಿರ್ದುದು ರೇಖೆ ಕೋಮಳತೆಯಂ ತಾಳ್ದಿತ್ತು ವರ್ಣಕ್ರಮಂ**
**ರಸವತ್ಕಾಂತಿಯನಾಂತು ನಿಂದುದೆಸೆವೀ ನಿಮ್ನೋನ್ನತಂಗಳ್ ವಿರಾ**
**ಜಿಸಿ ಚೆಲ್ವಂ ಗೆಡೆಗೊಂಡುವಿಂತು ಬರೆಯಲ್ ಬ್ರಹ್ಮಂಗಮೇಂ ಬರ್ಕುಮೇ**
**೪**

**ಪದವಿಭಾಗ–ಅನ್ವಯ–ಅರ್ಥ:** ರಸಭಾವಂಗಳೊಳಾದ ಚೆಲ್ವು = ರಸ ಭಾವಗಳಲ್ಲಿ ಹೊಮ್ಮಿದ ಚೆಲುವು, ನುಡಿವಂತೆ = ಮಾತಾಡುವಂತೆ, ಆದ + ಅಟ್ಟಿಱಿಂ ನೋಡುವಂತೆ = ಉದಿಸಿದ ಪ್ರೀತಿಯಿಂದ ನೋಡುವ ಹಾಗೆ, ಉಸಿರ್ವಂತೆ ರೇಖೆ ಇರ್ದುದು = ಉಸಿರಾಡುತ್ತಿರುವಂತೆ ಗೆರೆಗಳಿದ್ದುವು; ವರ್ಣಕ್ರಮಂ ಕೋಮಳತೆಯಂ ತಾಳ್ದಿತ್ತು = ಬಣ್ಣಗಳ ಸಂಯೋಜನರೆಯು ಕೋಮಲವಾಗಿತ್ತು; ಎಸೆವ + ಈ ನಿಮ್ನ + ಉನ್ನತಂಗಳ್ = ಶೋಭಿಸುವ ಉಬ್ಬುತಗ್ಗುಗಳು, ರಸವತ್ + ಕಾಂತಿಯನ್ + ಆಂತು ನಿಂದುದು = ರಸೋತ್ಕರ್ಷವನ್ನುಂಟು ಮಾಡುತ್ತಿದ್ದುವು; ಇಂತು ವಿರಾಜಿಸಿ ಚೆಲ್ವಂ ಗೆಡೆಗೊಂಡು = ಹೀಗೆ ಸೊಗಸುವ ಚೆಲುವನ್ನು ಹೊತ್ತಿರುವಂತೆ, ಬರೆಯಲ್ ಬ್ರಹ್ಮಂಗಂ + ಏಂ ಬರ್ಕುಮೆ = ಚಿತ್ರ ಬರೆಯಲು ಬ್ರಹ್ಮನಿಗಾದರೂ ಬರುತ್ತದೆಯೇ!

**ಗದ್ಯಾನುಸರಣ:** ಗೆರೆಗಳು ರಸಭಾವಗಳಲ್ಲಿ ಹೊಮ್ಮಿದ ಚಿತ್ರದ ಚೆಲುವು ಮಾತಾಡುವಂತೆ, ಪ್ರೀತಿಯಿಂದ ನೋಡುವಂತೆ, ಉಸಿರಾಡುತ್ತಿರುವಂತೆ ಇದ್ದುವು; ಬಣ್ಣಗಳ ಸಂಯೋಜನೆಯು ಕೋಮಲವಾಗಿತ್ತು; ಶೋಭಿಸುವ ಉಬ್ಬುತಗ್ಗುಗಳು ರಸೋತ್ಕರ್ಷವನ್ನುಂಟುಮಾಡುತ್ತಿದ್ದುವು; ಹೀಗೆ ಸೊಗಸುವ ಚೆಲುವನ್ನು ಹೊತ್ತಿರುವ ಚಿತ್ರವನ್ನು ಬರೆಯಲು ಬ್ರಹ್ಮನಿಗಾದರೂ ಸಾಧ್ಯವಾದೀತೇ!

**ವಿಶೇಷ ವಿಚಾರ:** ರಸಭಾವ = ಸೌಂದರ್ಯಮೀಮಾಂಸೆಯ ಪಾರಿಭಾಷಿಕ ಶಬ್ದಗಳಿವು. ಚಿತ್ರಕಾರ ಅನುಭವಿಸಿದ ಭಾವಗಳು ರಸಾವೇಶದಿಂದ ಅಭಿವ್ಯಕ್ತಗೊಂಡಿರುವುದರಿಂದ ಚಿತ್ರವು ಮಾತಾಡುವಂತೆ, ನೋಡುವಂತೆ, ಉಸಿರಾಡುವಂತೆ ಕಾಣುತ್ತಿತ್ತಂತೆ. ಎಲ್ಲರ ಅನುಭವಗಳ ಮೂಲ ಭಾವಗಳು; ಇದನ್ನು ಸ್ಥಾಯಿಭಾವವೆಂದು ಕರೆಯುವ 'ನಾಟ್ಯಶಾಸ್ತ್ರ'ದ ಕರ್ತೃ ಭರತನು ಮಾನವರಲ್ಲಿ ಇಂತಹ ಮೂಲಭಾವಗಳು ಎಂಟು ಎಂದು ಹೇಳಿದ. ಬದುಕಿನಲ್ಲಿ ಈ ಭಾವಗಳು

ಅರಳುವುದು ವ್ಯಕ್ತಿ ಬೆಳೆದ ಹಿನ್ನೆಲೆಯಲ್ಲಿ, ಹೀಗಾಗಿ ಅದು ವ್ಯಕ್ತಿಗತವಾಗಿರುತ್ತದೆ; ಆದರೆ ಕಲೆಯ ಸಂದರ್ಭದಲ್ಲಿ ವ್ಯಕ್ತಿಗತ ಸಂದರ್ಭವು ಕಣ್ಮರೆಯಾಗಿ ನೋಡುಗರ ಮನಸ್ಸಿನಲ್ಲಿನ ಭಾವಗಳು ತಮ್ಮ ಮೂಲಸ್ವರೂಪದಲ್ಲಿ ಮೇಲೇಳುತ್ತವೆ; ಇದನ್ನು ಅವನು 'ರಸಾನುಭವ' ಎಂದು ಕರೆದ.

**ವ। ಎಂದು ಮುನ್ನಂ ವಿಚಿತ್ರಚಿತ್ರವಿದ್ಯಾಕೌಶಲಮನತಿಕುತೂಹಳೋತ್ತಾರಿತ ಲೋಚನನಾಗಿ ನೀಡುಂ ಭಾವಿಸಿ ನೋಡಿ,**

**ಪದವಿಭಾಗ–ಅನ್ವಯ–ಅರ್ಥ:** ಎಂದು ಮುನ್ನಂ = ಎಂದು ಮೊದಲು, ವಿಚಿತ್ರಚಿತ್ರವಿದ್ಯಾಕೌಶಲಮನ್ = ಮಹಾ ಸುಂದರವಾದ ಚಿತ್ರರಚನೆಯ ಪರಿಣತಿಯನ್ನು, ಅತಿಕುತೂಹಳ + ಉತ್ತಾರಿತಲೋಚನನಾಗಿ = ಗಾಢ ಕುತೂಹಲದಿಂದ ಅರಳಿದ ಕಣ್ಣುಗಳುಳ್ಳವನಾಗಿ, ನೀಡುಂ ಭಾವಿಸಿ ನೋಡಿ = ನಿಡುಗಾಳ ತದೇಕವಾಗಿ ನೋಡಿ,

**ಗದ್ಯಾನುಸರಣ:** ಎಂದು, ಮಹಾ ಸುಂದರವಾದ ಚಿತ್ರರಚನೆಯ ಪರಿಣತಿಯನ್ನು ಗಾಢ ಕುತೂಹಲದಿಂದ ಕಣ್ಣುಗಳನ್ನರಳಿಸಿ ಮೊದಲು ನಿಡುಗಾಲ ತದೇಕವಾಗಿ ನೋಡಿದ.

**ಇದಱಂದಂ ಬಿಸವಂದಮಿಂತಿದಮರೇಂದ್ರಾವಾಸದೊಂದಂದಮಿಂ**
**ತಿದು ದಲ್ ದೇವವಿಮಾನದಂದಮಿದು ದೇವಾನೀಕದೊಂದಂದಮಿಂ**
**ತಿದು ದೇವಾಂಗನೆಯರ್ ಪಲರ್ ಬಳಸಿಕೊಂಡಿರ್ದಂದಮೀ ತಳ್ತರೂ**
**ಪಿದು ದಲ್ ದೇವನ ದೇವಿಯರಂದಮಿದು ಪೇಟ್ ಮುನ್ನೆಲ್ಲಿಕಂಡಂದಮೋ**
**೫೫**

**ಪದವಿಭಾಗ–ಅನ್ವಯ–ಅರ್ಥ:** ಇದಱ=ಅಂದಂ ಬಿಸವಂದಂ = ಇದರ ರೀತಿಯು ಆಶ್ಚರ್ಯಕರ; ಇಂತು + ಇದು + ಅಮರೇಂದ್ರ + ಆವಾಸದೊಂದಂದಂ = ಇದನ್ನು ನೋಡಿದರೆ ದೇವೇಂದ್ರನ ಅರಮನೆಯಂತಿದೆ; ಇಂತು + ಇದು ದಲ್ ದೇವವಿಮಾನದಂದಂ = ಇದು ದೇವವಿಮಾನದ ರೀತಿಯಲ್ಲೇ ಇದೆಯಲ್ಲ; ಇದು ದೇವಾನೀಕದೊಂದಂದಂ = ಇದಂತೂ ದೇವಸಮೂಹದ ಹಾಗಿದೆ; ಇಂತು + ಇದು ಪಲರ್ ದೇವಾಂಗನೆಯರ್ ಬಳಸಿಕೊಂಡಿರ್ದಂದಂ = ಇದು ಹಲವು ದೇವಾಂಗನೆಯರು ಸುತ್ತುವರಿದಂತಿದೆ, ಈ ತಳ್ತ ರೂಪಿದು ದಲ್ ದೇವನ ದೇವಿಯರಂದಂ = ಈ ಶೋಭಿಸುವ ಚೆಲುವು ದೇವದೇವಿಯರದರ ಹಾಗೆಯೇ ಇದೆ; ಇದು ಪೇಟ್ ಮುನ್ನೆಲ್ಲಿ ಕಂಡ + ಅಂದಮೋ = ಇದನ್ನು ಮುಂಚೆ ಎಲ್ಲೋ ಕಂಡಂತಿದೆಯಲ್ಲ.

**ಗದ್ಯಾನುಸರಣ:** ಇದರ ರೀತಿಯು ಆಶ್ಚರ್ಯಕರವೇ ಸರಿ: ಇದನ್ನು ನೋಡಿದರೆ ದೇವೇಂದ್ರನ ಅರಮನೆಯಂತಿದೆ; ಇದು ದೇವವಿಮಾನದ ರೀತಿಯಲ್ಲೇ ಇದೆಯಲ್ಲ; ಇದಂತೂ ದೇವಸಮೂಹದ ಹಾಗಿದೆ; ಇದು ಹಲವು ದೇವಾಂಗನೆಯರು ಗುಂಪುಗೂಡಿದಂತಿದೆ; ಈ ಶೋಭಿಸುವ ಚೆಲುವು ದೇವದೇವಿಯರದರ ಹಾಗೆಯೇ ಇದೆ; ಈ ಮುಖವನ್ನು ಮುಂಚೆ ಎಲ್ಲೋ ಕಂಡಂತಿದೆಯಲ್ಲ!

**ವ। ಎಂದು ಬಗೆದಿರುಳ್ಕಂಡ ಕನಸಂ ಮಱುದೆವಸಂ ನೆನೆವಂತೆ ನಿರತಿಶಯುಸುರಲೋಕ ಸಮುದ್ಭವಸುಖಾನುಭವಮುನಾಗಳೆ ನೆನೆದು,**

**ಪದವಿಭಾಗ-ಅನ್ವಯ-ಅರ್ಥ:** ಎಂದು ಬಗೆದು = ಎಂದು ಆಲೋಚಿಸುತ್ತ, ಇರುಳ್ + ಕಂಡ ಕನಸಂ ಮಱುದೆವಸಂ ನೆನೆವಂತೆ = ಹಿಂದಿನ ರಾತ್ರಿ ಕಂಡ ಕನಸನ್ನು ಮಾರನೆಯ ದಿನ ನೆನಪಿಸಿಕೊಳ್ಳುವ ಹಾಗೆ, ಸುರಲೋಕಸಮುದ್ಭವ = ದೇವಲೋಕದಲ್ಲಿ ಪಡೆದ. ನಿರತಿಶಯ ಸುಖಾನುಭವಮನ್ + ಆಗಳೆ ನೆನೆದು = ಮಧುರ ಸುಖದ ಅನುಭವವನ್ನು ನೆನಪಿಸಿಕೊಂಡು,

**ಗದ್ಯಾನುಸರಣ:** ಎಂದು ಆಲೋಚಿಸುತ್ತ ನಿಂತ: ಹಿಂದಿನ ರಾತ್ರಿ ಕಂಡ ಕನಸನ್ನು ಮಾರನೆಯ ದಿನ ನೆನಪಿಸಿಕೊಳ್ಳುವ ಹಾಗೆ ದೇವಲೋಕದಲ್ಲಿ ತಾನು ಪಡೆದ ಮಧುರ ಸುಖದ ಅನುಭವವನ್ನು ಮೆಲುಕುಹಾಕಿಕೊಂಡ.

**ಎಲೇ ಬಗೆದೆನೀಗಳೀ ಬರೆದ ಕಲ್ಪಮೀಶಾನಮೀ**
**ಚಲಲ್ಲುಳಿತಕೇತನಂ ಸುರವಿಮಾನವಮಾ ಶ್ರೀಪ್ರಭಂ**
**ಸಲೀಲವದನಾರವಿಂದಮಿದು ದೇವವೃಂದಂ ಲಸ**
**ದ್ವಿಲಾಸದರಹಾಸರಮ್ಯಮಿದು ದಿವ್ಯಕಾಂತಾಜನಂ ೬**

**ಪದವಿಭಾಗ-ಅನ್ವಯ-ಅರ್ಥ:** ಎಲೇ ಈಗಳ್ ಬಗೆದೆನ್ = ಎಲಲಾ! ಈಗ ಹೊಳೆಯಿತು! ಈ ಬರೆದ ಕಲ್ಪಂ + ಈಶಾನಂ = ಇಲ್ಲಿ ಬರೆದ ಭಾಗವು ಈಶಾನಕಲ್ಪದ್ದು, ಈ ಚಲತ್ + ಲುಳಿತಕೇತನಂ ಸುರವಿಮಾನಂ + ಆ ಶ್ರೀಪ್ರಭಂ = ಈ ಹರಡಿ ಹಾರಾಡುವ ಬಾವುಟವಿರುವುದು ಶ್ರೀಪ್ರಭ ಸುರವಿಮಾನ; ಸಲೀಲವದನ + ಅರವಿಂದಂ + ಇದು ದೇವವೃಂದಂ = ಈ ಉಲ್ಲಾಸಭರಿತ ಮುಖಕಮಲಗಳು ದೇವಸಮೂಹದ್ದು; ಇದು ಲಸತ್ + ವಿಲಾಸದರಹಾಸರಮ್ಯಂ ದಿವ್ಯಕಾಂತಾಜನಂ = ಈ ಸುಂದರ ಮುಗುಳ್ನಗೆಯು ದೇವಕಾಂತೆಯರದು,

**ಗದ್ಯಾನುಸರಣ:** ಎಲಲಾ, ಈಗ ಹೊಳೆಯಿತು! ಇಲ್ಲಿ ಬರೆದ ಭಾಗವು ಈಶಾನಕಲ್ಪದ್ದು, ಹರಡಿ ಹಾರಾಡುವ ಬಾವುಟವಿರುವುದು ಶ್ರೀಪ್ರಭ ಸುರವಿಮಾನ; ಈ ಉಲ್ಲಾಸಭರಿತ ಮುಖಕಮಲಗಳು ದೇವಸಮೂಹದ್ದು, ಈ ಸುಂದರ ಮುಗುಳ್ನಗೆಯು ದೇವಕಾಂತೆಯರದು,

**ಇದಂದು ಲಲಿತಾಂಗದೇವನೆನೆ ಸಂದ ಮದ್ರೂಪಮೀ**
**ಮದಾಲಸವಿಲೋಲಲೋಚನೆ ದಲೆನ್ನ ಮಾದೇವಿ ತ**
**ಪ್ಪದೀ ಲಲನೆ ತತ್ಸ್ವಯಂಪ್ರಭೆಯೆ ನೋೞ್ಪೊಡೀ ಚಿತ್ರಮಿಂ**
**ತಿದಾಕೆಯದು ಬಲ್ಮೆ ಪೇೞ್ ಪೆಱರ್ಗಮಿಂತುಟೊಂದಕ್ಕುಮೇ ೭**

**ಪದವಿಭಾಗ–ಅನ್ವಯ–ಅರ್ಥ:** ಅಂದು ಲಲಿತಾಂಗದೇವನೆನೆ ಸಂದ ಮತ್ + ರೂಪಂ ಇದು = ಆಗ ಲಲಿತಾಂಗನೆಂಬ ಹೆಸರಿದ್ದ ನನ್ನದೇ ರೂಪು ಇಲ್ಲಿನದು, ಈ ಮದಾಲಸವಿಲೋಲಲೋಚನೆ ಎನ್ನ ಮಾದೇವಿ ದಲ್ = ಇದು ಮದದಿಂದ ಅಲಸಿತವಾದ ಕಣ್ಣುಗಳ ನನ್ನ ಮಹಾದೇವಿಯೇ ತಾನೇ, ಈ ಲಲನೆ ತತ್ + ಸ್ವಯಂಪ್ರಭೆಯೆ ತಪ್ಪದು = ಅಂದರೆ ಈ ಹೆಣ್ಣು ಆ ಸ್ವಯಂಪ್ರಭೆಯೇ, ಅನುಮಾನವಿಲ್ಲ, ನೋೞ್ಪೊಡೆ + ಈ ಚಿತ್ರಂ + ಇಂತಿದು + ಆಕೆಯದು = ಯೋಚಿಸಿದರೆ ಈ ಚಿತ್ರವು ಅವಳದ್ದೇ, ಪೆಱರ್ಗಂ + ಇಂತುಟೊಂದು ಬಲ್ಮೆ ಅಕ್ಕುಮೇ ಪೇೞ್ = ಬೇರೆಯವರಿಗೆ ಇಂತಹುದೊಂದು ಸಾಮರ್ಥ್ಯ ಉಂಟಾಗುವುದೇ ಹೇಳು!

**ಗದ್ಯಾನುಸರಣ:** 'ಇಲ್ಲಿನದು ಆಗ ಲಲಿತಾಂಗನೆಂಬ ಹೆಸರಿದ್ದ ನನ್ನದೇ ರೂಪು, ಇದು ಮದದಿಂದ ಅಲಸಿತವಾದ ಕಣ್ಣುಗಳ ನನ್ನ ಮಹಾದೇವಿಯೇ ತಾನೇ! ಅಂದರೆ ಈ ಹೆಣ್ಣು ಆ ಸ್ವಯಂಪ್ರಭೆಯೇ, ಅನುಮಾನವಿಲ್ಲ, ಯೋಚಿಸಿದರೆ ಈ ಚಿತ್ರವು ಅವಳು ಬರೆದದ್ದೇ. ಬೇರೆಯವರಿಗೆ ಇಂತಹುದೊಂದು ಸಾಮರ್ಥ್ಯವೆಲ್ಲಿ ಬರಬೇಕು' ಎಂದವನು ವಿಸ್ಮಯಗೊಂಡ.

**ವಿಶೇಷ ವಿಚಾರ:** ಹಿಂದಿನ ಜನ್ಮದ ತನ್ನ ಪ್ರೇಯಸಿಯನ್ನು ಚಿತ್ರವನ್ನು ನೋಡಿ ಗುರುತಿಸುವ ಈ ಕ್ರಮಬದ್ಧ ನಿರೂಪಣೆ ಪೂರ್ವಪುರಾಣದಲ್ಲಿಲ್ಲ. ಅಲ್ಲಿ ಚಿತ್ರವನ್ನು ನೋಡಿದಾಕ್ಷಣವೇ ವಜ್ರಜಂಘನು ದಿಢೀರನೆ ತಿಳಿದುಕೊಂಡುಬಿಡುತ್ತಾನೆ: 'ಜ್ಞಾನಪೂರ್ವಮಿವೇದಂ ಮೇ ಚರಿತಂ ಪಟ್ಟಕಸ್ಥಿತಂ' (ಪೂಪು, ೭. ೧೧೮).

'ಭವಾವಳಿ'ಗಳಲ್ಲಿ ಪೂರ್ವಜನ್ಮದ ಸ್ಮರಣೆ ಒಂದು ಲಕ್ಷಣ; ಅದು ಕಥೆಗೆ ತಾಂತ್ರಿಕ ಅಗತ್ಯವಿರುವಂತೆಯೇ ಕಥಾನಾಯಕನಿಗೂ ಅದು ಅಗತ್ಯವಿರುತ್ತದೆ, ಏಕೆಂದರೆ

ಕಥೆಯ ಮುಂದುವರಿಕೆ ಅದರಲ್ಲಿ ಅಡಕವಾಗಿರುತ್ತದೆ. ಆದರೆ ವಾಸ್ತವ ಜೀವನಾನುಭವಕ್ಕೂ ಅದಕ್ಕೂ ಏನೂ ಸಂಬಂಧವಿರುವುದಿಲ್ಲ.

**ಇದೆನ್ನಯ ವಿಮಾನಮಂ ಬಳಸಿ ತಳ್ತ ಪುನ್ನಾಗನಾ**
**ಗದಿವ್ಯತರುನಂದನಂ ಲತೆಯ ಜೊಂಪಮೀ ತೋರ್ಪುದಿ**
**ನ್ನದಲ್ತೆ ನೆರೆದಿರ್ಬರಿರ್ದ ಕೃತಕಾಚಳಂ ಚೆಲ್ವನ**
**ಪ್ಪಿದೇ ಕನಕಪದ್ಮಿನೀನಿಳಯಮೆನ್ನ ಲೀಲಾಸರಂ ೮**

**ಪದವಿಭಾಗ–ಅನ್ವಯ–ಅರ್ಥ:** ಇದು + ಎನ್ನಯ ವಿಮಾನಮಂ ಬಳಸಿ ತಳ್ತ = ನನ್ನ ವಿಮಾನವನ್ನು ಸುತ್ತುವರಿದು ನಿಂತ, ಪುನ್ನಾಗನಾಗದಿವ್ಯತರುನಂದನಂ = ಪುನ್ನಾಗ ಹಾಗೂ ನಾಗಸಂಪಿಗೆ ಮರಗಳಿರುವ ಉದ್ಯಾನವನ; ಈ ತೋರ್ಪುದು ಲತೆಯ ಜೊಂಪಂ = ಇಲ್ಲಿ ಕಾಣಿಸುವುದು ಬಳ್ಳಿಯ ಗೊಂಚಲು; ಇನ್ನು + ಅದಲ್ತೆ ನೆರೆದು + ಇರ್ಬರಿರ್ದ ಕೃತಕಾಚಳಂ = ಇನ್ನು ಅದೋ ನಾವಿಬ್ಬರೂ ಕೂಡಿ ಇದ್ದ ಕೃತಕ ಬೆಟ್ಟ; ಚೆಲ್ವನಪ್ಪ ಕನಕಪದ್ಮಿನೀನಿಳಯಂ + ಎನ್ನ ಲೀಲಾಸರಂ = ಹಳದಿ ತಾವರೆಗಳ ಸುಂದರವಾದ ಮನೆಯಾದ ನನ್ನ ಲೀಲಾಸರವು ಇದೇ!

**ಗದ್ಯಾನುಸರಣ:** 'ಇದು ನನ್ನ ವಿಮಾನವನ್ನು ಸುತ್ತುವರಿದು ನಿಂತ ಪುನ್ನಾಗ ಹಾಗೂ ನಾಗಸಂಪಿಗೆ ಮರಗಳಿರುವ ಉದ್ಯಾನವನ; ಇಲ್ಲಿ ಕಾಣಿಸುವುದು ಬಳ್ಳಿಯ ಗೊಂಚಲು; ಇನ್ನು ಅದೋ ನಾವಿಬ್ಬರೂ ಕೂಡಿ ಇದ್ದ ಕೃತಕ ಬೆಟ್ಟ; ಹಳದಿ ತಾವರೆಗಳ ಸುಂದರವಾದ ಮನೆಯಾದ ನನ್ನ ಲೀಲಾಸರವು ಇದೇ ಅಲ್ಲವೇ

**ಇದು ಲೀಲಾಂದೋಳಮಿಂದೋಳದ ದನಿ ನೆಱೆಗೊಳ್ವನ್ನೆಗಂ ಪಾಡಲೆಂದೇ**
**ಱದಳಂ ತೂಗುತ್ತುಮಿರ್ದೆನ್ನಯ ಪರಿಜಿದುವೇ ಮಾಧವೀಮಂಟಪಂತೋ**
**ರ್ಪುದಿದಂತೇಕಾಂತದೊಳ್ ನೂಪುರರವವಿಳಸದ್ವಾಮಪಾದಪ್ರಹಾರ**
**ಕ್ಕಿದಱೊಳ್ ಪಕ್ಕಾಗಿ ಗೋತ್ರಸ್ಖಲನೆ ನೆಗಟ್ ಪೂಮಾಲೆಯಂ ಮೋದುವೆತ್ತಂ**
**೯**

**ಪದವಿಭಾಗ–ಅನ್ವಯ–ಅರ್ಥ:** ಇದು ಲೀಲಾಂದೋಳಂ = ಇದು ಆಟದ ಉಯ್ಯಾಲೆ; ಇಂದೋಳದ ದನಿ ನೆಱೆಗೊಳ್ವನ್ನೆಗಂ = ಇಂದೋಳದ ರಾಗವು ಪೂರ್ಣಗೊಳ್ಳುವವರೆಗೂ, ಪಾಡಲೆಂದು + ಏಱಿದಳಂ ತೂಗುತ್ತುಮಿರ್ದ = ಹಾಡಲೆಂದು ಹತ್ತಿದ್ದ ಅವಳನ್ನು ತೂಗುತ್ತಿದ್ದ, ಎನ್ನಯ ಪರಿಜು ಇದುವೇ = ನನ್ನ ರೂಪೇ ಇದು, ಖಂಡಿತ; ತೋರ್ಪುದಿದು ಮಾಧವೀಮಂಟಪಂ = ಇಲ್ಲಿ ಕಾಣಿಸುತ್ತಿರುವುದು ಮಾಧವೀಮಂಟಪ, ಇದಱೊಳ್ = ಇದರಲ್ಲಿಯೇ, ಅಂತು + ಏಕಾಂತದೊಳ್ ನೂಪುರರವವಿಳಸತ್ + ವಾಮಪಾದಪ್ರಹಾರಕ್ಕೆ ಪಕ್ಕಾಗಿ = ಹಾಗೆ ಏಕಾಂತದಲ್ಲಿ ಕಾಲ್ಗಡಗದ ದನಿಯಿಂದ ಮೋಹಕವಾದ ಎಡಪಾದದ

ಒದೆತಕ್ಕೆ ಒಳಗಾಗಿ, ಗೋತ್ರಸ್ಖಲನೆ ನೆಗೞೆ = ಬಾಯಿತಪ್ಪಿನಿಂದ ಇನ್ನೊಬ್ಬಳ ಹೆಸರನ್ನು ಕರೆದು, ಪೂಮಾಲೆಯಂ ಮೋದುವೆತ್ತೆಂ = ಹೂಹಾರದ ಏಟಗೆ ತುತ್ತಾಗಿದ್ದೆನಲ್ಲ!

**ಗದ್ಯಾನುಸರಣ:** 'ಇದು ಆಟದ ಉಯ್ಯಾಲೆ; ಇಂದೋಳದ ರಾಗವು ಪೂರ್ಣಗೊಳ್ಳುವವರೆಗೂ ಹಾಡಲೆಂದು ಹತ್ತಿದ್ದ ಅವಳನ್ನು ತೂಗುತ್ತಿದ್ದ ನನ್ನ ರೂಪೇ ಇದು, ಖಂಡಿತ; ಇಲ್ಲಿ ಕಾಣಿಸುತ್ತಿರುವುದು ಮಾಧವೀಮಂಟಪ, ಏಕಾಂತದಲ್ಲಿದ್ದಾಗ ಕಾಲ್ಕಡಗದ ದನಿಯಿಂದ ಮೋಹಕವಾದ ಎಡಪಾದದ ಒದೆತಕ್ಕೆ ಒಳಗಾಗಿ ಬಾಯಿತಪ್ಪಿ ಇನ್ನೊಬ್ಬಳ ಹೆಸರನ್ನು ಕರೆದು ಅವಳ ಹೂಹಾರದ ಏಟಗೆ ತುತ್ತಾಗಿದ್ದುದು ಇಲ್ಲಿಯೇ ತಾನೇ!

**ವ।** **ಮತ್ತಮಮರಸಮಿತಿವೆರಸೋಲಗಂಗೊಟ್ಟಿರ್ದಲ್ಲಿ ಮದೀಯ ಸಿಂಹಾಸನಾರ್ಧೈಕದೇಶಮನಳಂಕರಿಸಿ ಪದವಡೆದು ಸೋಂಕಿ ಕುಳ್ಳಿರ್ದ ರೂಪುಮನಮರಾಂಗನೆಯರ ಬೀಸುವ ಚಾಮರದ ಗಾಳಿಯಲೆಪಿನೊಳಲ್ಲುಗುವ ಬಂಬಲ್ಗುರುಳ್ಗಳ ಬಂಬಲಿಂದಂ ತಳರ್ವ ಚಿನ್ನಪೂಗಳ ನವಯವದೊಳೆ ಸಯ್ಯುಮಾಡುವ ಕೆಯ್ತಮುಮಂ ಅಮರೀಮಧುರಗೀತ ನಿನಾದಕ್ಕಾದ ವೊಱಲ್ದಿರ್ದ ಶಿರಃಕಂಪದೊಳಿನಿಸಾನುಮೆಱಗಿದ ಕರ್ಣಪೂರ ಪಾರಿಜಾತ ಸ್ತಬಕಮನೋಸರಿಸುವ ವಿಳಾಸಮುಮಂ ಕನಕಕದಳೀವನದೊಳ ಗಣ ಮಣಿಮಯಭವನದೊಳಗೆ ಪರಿಮಿತಜನಸಹಿತಮೆನ್ನ ಮನವೊಱಲ್ವಿನೆಗಮೆನ್ನ ಸೋಂಕಿನೊಳ್ ಕುಳ್ಳಿರ್ದು ವೀಣೆಯಂ ಬಾಜಿಸುವ ರೂಪಮುಮಂ ಅಚ್ಯುತೇಂದ್ರಪೂಜಾವಿಳಾಸಮುಮಂ ಮಂದರಕಂದರ ವಿಹಾರಮುಮಂ ಇಲ್ಲಿಯೆ ಕಾಣಲಾದಪುದೊಂದೇ,**

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ + ಅಮರಸಮಿತಿವೆರಸು + ಓಲಗಂ ಗೊಟ್ಟಿರ್ದಲ್ಲಿ = ಅದಲ್ಲದೆ, ದೇವಸಮೂಹದೊಡನೆ ಓಲಗವನ್ನಿತ್ತಿರಲಾಗಿ, ಮದೀಯ ಸಿಂಹಾಸನಾರ್ಧೈಕದೇಶಮನ್ + ಅಳಂಕರಿಸಿ ಪದವಡೆದು = ನನ್ನ ಸಿಂಹಾಸನದಲ್ಲಿ ಅರ್ಧಭಾಗವನ್ನು ಆಕ್ರಮಿಸಿ, ಸೋಂಕಿ ಕುಳ್ಳಿರ್ದ ರೂಪುಮನ್ = ನನ್ನನ್ನು ಸೋಕಿಕೊಂಡೇ ಕುಳಿತಿದ್ದ ರೂಪವನ್ನೂ, ಅಮರಾಂಗನೆಯರ ಬೀಸುವ ಚಾಮರದ ಗಾಳಿಯಲೆಪಿನೊಳ್ + ಅಲ್ಲುಗುವ = ದೇವಾಂಗನೆಯರು ಬೀಸುತ್ತಿದ್ದ ಚಾಮರದ ಗಾಳಿಯಿಂದಾಗಿ ಅಲುಗಾಡುತ್ತಿದ್ದ, ಬಂಬಳ್ + ಕುರುಳ್ಗಳ ಬಂಬಲಿಂದಂ ತಳರ್ವ = ಗುಂಗುರುಕೂದಲರಾಸಿಯಿಂದ ಜಾರುತ್ತಿದ್ದ, ಚಿನ್ನ ಪೂಗಳನ್ + ಅವಯವದೊಳೆ ಸಯ್ಯುಮಾಡುವ ಕೆಯ್ತಮುಮಂ = ಚಿನ್ನದ ಹೂಗಳನ್ನು ತನ್ನ ಅಂಗಾಂಗಗಳಿಂದಲೇ ಸರಿಪಡಿಸಿಕೊಳ್ಳುವ ಕಾರ್ಯವನ್ನೂ, ಅಮರೀಮಧುರಗೀತನಿನಾದಕ್ಕೆ + ಆದಂ + ಒಱಲ್ದಿರ್ದ ಶಿರಃಕಂಪದೊಳ್ =

ಅಮರಿಯರ ಇನಿದನಿಯ ಗಾಯನದಿಂದ ತಲೆದೂಗುವಿಕೆಯಿಂದಾಗಿ, ಇನಿಸಾನುಂ + ಎಱಗಿದ ಕರ್ಣಪೂರಪಾರಿಜಾತ ಸ್ತಬಕಮನ್ = ಸ್ವಲ್ಪವೇ ಬಾಗಿದ ಕಿವಿಯಲ್ಲಿ ಅಲಂಕಾರಕ್ಕಾಗಿ ಧರಿಸಿದ್ದ ಪಾರಿಜಾತದ ಗೊಂಚಲುಗಳನ್ನು, ಓಸರಿಸುವ ವಿಳಾಸಮುಮಂ = ಪಕ್ಕಕ್ಕೆ ಸರಿಸುವ ಒಯ್ಯಾರವನ್ನೂ, ಕನಕಕದಳೀವನದೊಳಗಣ ಮಣಿ ಮಯಭವನದೊಳಗೆ = ಚಿನ್ನದ ಬಾಳೆಯ ತೋಟದ ನಡುವಿನ ಮಣಿಭವನದಲ್ಲಿ, ಪರಿಮಿತಜನಸಹಿತಂ = ಕೆಲವೇ ಜನರೊಡನೆ, ಎನ್ನ ಮನಂ + ಒಱಲ್ವಿನೆಗಂ = ನನ್ನ ಮನಸ್ಸು ಉತ್ಕಂಠಿತವಾಗುಂತೆ, ಎನ್ನ ಸೋಂಕಿನೊಳ್ ಕುಳ್ಳಿರ್ದು = ನನ್ನನ್ನು ಸೋಕಿಕೊಂಡೇ ಕುಳಿತುಕೊಂಡು, ವೀಣೆಯಂ ಬಾಜಿಸುವ ರೂಪಮುಮಂ = ವೀಣಾವಾದನ ಮಾಡುತ್ತಿದ್ದ ಆಕೃತಿಯನ್ನೂ, ಅಚ್ಯುತೇಂದ್ರ ಪೂಜಾವಿಳಾಸಮುಮಂ = ಅಚ್ಯುತೇಂದ್ರನ ಪೂಜೆಯ ವೈಭವವನ್ನೂ, ಮಂದರ ಕಂದರವಿಹಾರಮುಮಂ = ಮಂದರಗುಹೆಯ ವಿಹಾರವನ್ನೂ, ಇಲ್ಲಿಯೇ ಕಾಣಲಾದಪುದು = ಇಲ್ಲಿಯೇ ಕಾಣಬಹುದಾಗಿದೆ, ಒಂದೇ = ಆದರೆ ಒಂದು ವಿಷಯ ಮಾತ್ರ ಇಲ್ಲ,

**ಗದ್ಯಾನುಸರಣ:** 'ಅದಲ್ಲದೆ, ದೇವಸಮೂಹದೊಡನೆ ಓಲಗವನ್ನಿತ್ತಿರಲಾಗಿ, ನನ್ನ ಸಿಂಹಾಸನದಲ್ಲಿ ಅರ್ಧಭಾಗದಲ್ಲಿ ನನ್ನನ್ನು ಸೋಕಿಕೊಂಡೇ ಕುಳಿತಿದ್ದ ರೂಪವನ್ನೂ, ದೇವಾಂಗನೆಯರು ಬೀಸುತ್ತಿದ್ದ ಚಾಮರದ ಗಾಳಿಯಿಂದಾಗಿ ಅಲುಗಾಡುತ್ತಿದ್ದ ಗುಂಗುರುಕೂದಲರಾಸಿಯಿಂದ ಜಾರುತ್ತಿದ್ದ ಚಿನ್ನದ ಹೂಗಳನ್ನು ತನ್ನ ಅಂಗಾಂಗಗಳಿಂದಲೇ ಸರಿಪಡಿಸಿಕೊಳ್ಳುವ ಒನಪನ್ನೂ, ಅಮರಿಯರ ಇನಿದನಿಯ ಗಾಯನ ಕೇಳಿ ತಲೆದೂಗುವಿಕೆಯಿಂದಾಗಿ ಸ್ವಲ್ಪವೇ ಬಾಗಿದ ಕಿವಿಯಲ್ಲಿ ಅಲಂಕಾರಕ್ಕಾಗಿ ಧರಿಸಿದ್ದ ಪಾರಿಜಾತದ ಗೊಂಚಲುಗಳನ್ನು ಪಕ್ಕಕ್ಕೆ ಸರಿಸುವ ಒಯ್ಯಾರವನ್ನೂ, ಚಿನ್ನದ ಬಾಳೆಯ ತೋಟದ ನಡುವಿನ ಮಣಿಭವನದಲ್ಲಿ ಕೆಲವೇ ಜನರೊಡನೆ – ನನ್ನ ಮನಸ್ಸು ಉತ್ಕಂಠಿತವಾಗುಂತೆ – ನನ್ನನ್ನು ಸೋಕಿಕೊಂಡೇ ಕುಳಿತುಕೊಂಡು ವೀಣಾವಾದನ ಮಾಡುತ್ತಿದ್ದ ಆಕೃತಿಯನ್ನೂ, ಅಚ್ಯುತೇಂದ್ರನ ಪೂಜೆಯ ವೈಭವವನ್ನೂ, ಮಂದರಗುಹೆಯ ವಿಹಾರವನ್ನೂ ಇಲ್ಲಿಯೇ ಕಾಣಬಹುದಾಗಿದೆ; ಆದರೆ ಒಂದು ವಿಷಯ ಮಾತ್ರ ಇಲ್ಲ' ಎಂದುಕೊಂಡ.

**ಒದವಿದ ಬೇಟದತ್ತಳಗದೊಳ್ ಮುಳಿಸಂ ಪುರುಡುಂಟುಮಾಡೆ ಜ**
**ರ್ವಿದ ಕಡೆಗಣ್ಣ ಜರ್ಬುಗಳೊ ಮೋದಿದ ನೀಳ ಸರೋಜಮಾಳೆಯಿಂ**
**ದುದಿರ್ದು ಮದಂಗದೊಳ್ ತೊಡರ್ದು ತೋರ್ಪ ದಳಂಗಳೊ ಪೇೞಿಮಾವುದೆಂ**
**ಬುದನೆನೆ ಕಾದಿ ಮೋದಿದವಿನಾಣಮದಿಲ್ಲಿ ದಲಿಲ್ಲ ನಲ್ಲಳಾ ೧೦**

**ಪದವಿಭಾಗ–ಅನ್ವಯ–ಅರ್ಥ:** ಒದವಿದ ಬೇಟದ + ಅತ್ತಳಗದೊಳ್ =

ಉಂಟಾದ ಪ್ರಣಯದ ತಳಮಳದಲ್ಲಿ, ಪುರುಡು ಮುಳಿಸಂ ಉಂಟುಮಾಡೆ = ಹುರುಡು ಕೋಪವನ್ನುಂಟುಮಾಡಲು, ಜರ್ವಿದ ಕಡೆಗಣ್ಣ ಜರ್ಬುಗಳೊ = ದರ್ಪದ ಕುಡಿನೋಟದ ಗದರಿಕೆಗಳೋ, ಮೋದಿದ ನೀಳ ಸರೋಜಮಾಳೆಯಿಂದು ದಿರ್ದು = ಹೊಡೆದ ನೈದಿಲೆಗಳ ಮಾಲೆಯಿಂದ ಉದುರಿ, ಮದಂಗದೊಳ್ ತೊಡರ್ದು ತೋರ್ಪ ದಳಂಗಳೊ = ನನ್ನ ಮೈಮೇಲೆ ಬಿದ್ದು ಕಾಣಿಸುವ ದಳಗಳೋ, ಪೇೞಿಂ + ಆವುದು + ಎಂಬುದನೆನೆ ಕಾದಿ ಮೋದಿದ = ಹೇಳಿ ಯಾವುದು ಎಂದು ಜಗಳವಾಡಿ ಹೊಡೆದ, ನಲ್ಲಳಾ ಅವಿನಾಣಂ + ಅದು + ಇಲ್ಲಿ ದಲ್ + ಇಲ್ಲ = ನಲ್ಲಳ ಕುರುಹು ಮಾತ್ರ ಇಲ್ಲಿಲ್ಲವಲ್ಲ!

**ಗದ್ಯಾನುಸರಣ:** 'ಪ್ರಣಯದ ತಳಮಳದಲ್ಲಿ ಉಂಟಾದ ಹುರುಡು ಕೋಪವನ್ನು ಕೆರಳಿಸಲು, ದರ್ಪದ ಕುಡಿನೋಟದ ಗದರಿಕೆಗಳೋ, ಹೊಡೆದ ನೈದಿಲೆಗಳ ಮಾಲೆಯಿಂದ ಉದುರಿ ನನ್ನ ಮೈಮೇಲೆ ಬಿದ್ದು ಕಾಣಿಸುವ ದಳಗಳೋ ಹೇಳಿ ಯಾವುದು ಎಂದು ಜಗಳವಾಡಿ ಹೊಡೆದ ನಲ್ಲಳ ಕುರುಹು ಮಾತ್ರ ಇಲ್ಲಿಲ್ಲವಲ್ಲ!'

**ವ। ಮತ್ತಮೊರ್ಮೆ ಮಣಿಮಯಸುರತಭವನದೊಳಗೆ ನಿರ್ಭರಪ್ರಣಯ ಕಲಹಕಲುಷಿತ ಪರವಶೆಯಾಗಿ**

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ + ಒರ್ಮೆ = ಇನ್ನೊಮ್ಮೆ, ಮಣಿಮಯಸುರತಭವನದೊಳಗೆ = ರತ್ನಖಚಿತ ಮಲಗುವ ಮನೆಯಲ್ಲಿ, ನಿರ್ಭರಪ್ರಣಯಕಲಹಕಲುಷಿತಪರವಶೆಯಾಗಿ = ಭಾರಿ ಪ್ರಣಯ ಕಲಹದಿಂದ ಹೃದಯಕದಡಿದವಳಾಗಿ,

**ಗದ್ಯಾನುಸರಣ:** ರತ್ನಖಚಿತವಾದ ಮಲಗುವ ಮನೆಯಲ್ಲಿ ಭಾರಿ ಪ್ರಣಯಕಲಹದ ಸಂದರ್ಭದಲ್ಲಿ ಮತ್ತೊಮ್ಮೆ ಅವಳ ಹೃದಯ ಕದಡಿತು,

**ಮುಳಿದಿರೆ ಪಾದಪಂಕಜಮನಾಂ ತಲೆಯೊಳ್ ನಿಲೆ ತಾಳ್ದಿ ನಲ್ಲಳೇ**
**ತಿಳಿಯೆನೆ ನಲ್ಲಳೆನ್ನ ಪೆಸರಲ್ತೆಮಗಾ ಪೆಸರಾಕೆಯುಳ್ಳೊಡಿಂ**
**ತಿಳಿಪೆನೆ ಮತ್ತಮಾ ಪೆಸರ್ಗೆ ನೀನಿರೆ ನೋಂತವಳಾವಳೆಂಬುದುಂ**
**ತಿಳಿದಮರ್ದಪ್ಪಿದಂದಮಣಮಿಲ್ಲಿ ದಲೀ ಪಟದೊಳ್ ಮೃಗಾಕಿಯಾ ॥೧೧॥**

**ಪದವಿಭಾಗ–ಅನ್ವಯ–ಅರ್ಥ:** ಮುಳಿದಿರೆ = (ಅದರಿಂದ) ಕೋಪ ಗೊಂಡಾಗ, ಪಾದಪಂಕಜಮನಾಂ ತಲೆಯೊಳ್ ನಿಲೆ ತಾಳ್ದಿ = ಅವಳ ಪಾದ ಕಮಲವನ್ನು ನನ್ನ ತಲೆಯ ಮೇಲೆ ಹೊತ್ತು, ನಲ್ಲಳೇ ತಿಳಿ + ಎನೆ = ಪ್ರಿಯೇ

ಮನಸ್ಸನ್ನು ತಿಳಿ ಮಾಡಿಕೋ ಎಂದಾಗ, ನಲಳ್ + ಎನ್ನ ಪೆಸರಲ್ತು = ನಲ್ಲೆ ಅನ್ನುವುದು ನನ್ನ ಹೆಸರಲ್ಲ, ಆ ಪೆಸರಾಕೆ + ಉಳ್ಳೊಡೆ ಇಂ ಎಮಗೆ ತಿಳಿಪು ಎನೆ = ಆ ಹೆಸರಿನವಳು ಯಾರಾದರೂ ಇದ್ದರೆ ನನಗೆ ಹೇಳು ಎನ್ನಲು, ಮತ್ತಂ + ಆ ಪೆಸರ್ಗೆ ನೀನಿರೆ ನೋಂತವಳಾವಳ್ = ಮತ್ತೆ ನಾನು ಆ ಹೆಸರಿನವಳು ನೀನೇ ಇರಬೇಕಾದರೆ ಮತ್ತಾರು ಆ ಹೆಸರನ್ನು ಪಡೆದವರು, ಎಂಬುದುಂ ತಿಳಿದು + ಅಮರ್ದಪ್ಪಿದಂದಂ = ಎಂದಾಗ ಮನಸ್ಸನ್ನು ತಿಳಿಯಾಗಿಸಿಕೊಂಡು ಬಿಗಿದಪ್ಪಿ ಕೊಂಡ ರೀತಿಯೂ, ಮೃಗಾಕ್ಷಿಯಾ ಈ ಪಟದೊಳ್ ಅಣಂ + ಇಲ್ಲ ದಲ್ = ಜಿಂಕೆ ಕಣ್ಣ ಅವಳ ಈ ಚಿತ್ರದಲ್ಲಿ ಕೊಂಚವಾದರೂ ಇಲ್ಲಿ ಕಾಣುತ್ತಿಲ್ಲವಲ್ಲ!

**ಗದ್ಯಾನುಸರಣ:** ಅದರಿಂದ ಕೋಪಗೊಂಡಾಗ ಅವಳ ಪಾದಕಮಲವನ್ನು ನನ್ನ ತಲೆಯ ಮೇಲೆ ಹೊತ್ತು, 'ಪ್ರಿಯೇ ಮನಸ್ಸನ್ನು ತಿಳಿಮಾಡಿಕೋ' ಎಂದೆ; ಅದಕ್ಕವಳು, 'ನಲ್ಲೆ ಅನ್ನುವುದು ನನ್ನ ಹೆಸರಲ್ಲ, ಆ ಹೆಸರಿನವಳು ಯಾರಾದರೂ ಇದ್ದರೆ ನನಗೆ ಹೇಳು' ಎಂದಳು; 'ಆ ಹೆಸರಿನವಳು ನೀನೇ ಇರಬೇಕಾದರೆ ಮತ್ತಾರು ಆ ಹೆಸರನ್ನು ಪಡೆದವರು' ಎಂದು ನಾನೆಂದೆ; ತನ್ನ ಮನಸ್ಸನ್ನು ತಿಳಿಯಾಗಿಸಿಕೊಂಡು ಅವಳು ನನ್ನನ್ನು ಬಿಗಿದಪ್ಪಿಕೊಂಡ ರೀತಿಯೂ ಜಿಂಕಕಣ್ಣ ಅವಳ ಈ ಪಟದಲ್ಲಿ ಕೊಂಚವಾದರೂ ಕಾಣುತ್ತಿಲ್ಲವಲ್ಲ! – ಅಂದುಕೊಂಡ.

**ವ ಮತ್ತಮೊರ್ಮೆ ಪಂಚರತ್ನಪ್ರಭಾಪ್ರಸಾಧಿತಪ್ರಸಾಧನಶಾಲೆಯೊಳಗೆ ಸ್ವಯಂಪ್ರಭೆಯನಾನೆ ಪಸದನಂಗೊಳಿಸುತ್ತುಮಿರ್ದು**

**ಪದವಿಭಾಗ–ಅನ್ವಯ–ಅರ್ಥ:** ಮತ್ತಮೊರ್ಮೆ = ಮತ್ತೂ ಒಂದು ಬಾರಿ, ಪಂಚರತ್ನಪ್ರಭಾಪ್ರಸಾಧಿತ = ಪಂಚರತ್ನಗಳ ಕಾಂತಿಯಿಂದ ಬೆಳುಗುತ್ತಿದ್ದ, ಪ್ರಸಾಧನ ಶಾಲೆಯೊಳಗೆ = ಅಲಂಕಾರಕೋಣೆಯಲ್ಲಿ, ಸ್ವಯಂಪ್ರಭೆಯನ್ + ಆನೆ ಪಸದನಂ ಗೊಳಿಸುತ್ತುಂ + ಇರ್ದು = ಸ್ವಯಂಪ್ರಭೆಗೆ ನಾನೇ ಅಲಂಕಾರಮಾಡುತ್ತಿರಲು,

**ಗದ್ಯಾನುಸರಣ:** ಮತ್ತೂ ಒಂದು ಬಾರಿ, ಪಂಚರತ್ನಗಳ ಕಾಂತಿಯಿಂದ ಬೆಳುಗುತ್ತಿದ್ದ ಅಲಂಕಾರಕೋಣೆಯಲ್ಲಿ ಸ್ವಯಂಪ್ರಭೆಯನ್ನು ನಾನೇ ಸಿಂಗರಿಸುತ್ತಿದ್ದೆ.

**ಚಳದಳಕಾಳಿ ನಿನ್ನ ವದನಾಂಬುಜಮಂ ನಡೆ ನೋಡಲೀಯದ**
**ವ್ವಳಿಸುವುದೌಪರಿಷ್ಟಕದೊಳೆನ್ನನಿವೆಂದು ಕನಲ್ದು ಚಿನ್ನಮೂ**
**ಗಳನವಱೊಳ್ ಕದಂಪಿನೊಳ್ ತಗುಳ್ಚದೆ ಮೃಗೋದ್ಭವಪಂಕದೆ ಪತ್ರಭಂಗಮಂ**
**ತೊಳಪ ಕದಂಪಿನೊಳ್ ಬರೆದುದಂ ಬರೆಯಲ್ ಮಱೆದಂದಮಾವುದೋ॥೨**

**ಪದವಿಭಾಗ–ಅನ್ವಯ–ಅರ್ಥ:** ನಿನ್ನ ಚಳತ್ + ಅಳಕಾಳಿ = ನಿನ್ನ ಹಾರಾಡುವ ಮುಂಗುರುಳು, ವದನಾಂಬುಜಮಂ ನಡೆ ನೋಡಲೀಯದೆ = ಮುಖಕಮಲವನ್ನು ಸರಿಯಾಗಿ ನೋಡಲೂ ಅವಕಾಶ ಕೊಡದೆ, ಇವು ಅವ್ವಳಿಸುವುದು + ಔಪರಿಷ್ಟಕ ದೊಳೆನ್ನನ್ ಎಂದು ಕನಲ್ದು = ಮೇಲೆಲ್ಲ ಆವರಿಸುತ್ತಿದೆ ಎಂದು ಕೋಪಗೊಂಡು, ಅವಱೊಳ್ = ಆ ಮುಂಗುರುಳಲ್ಲಿ, ಚಿನ್ನಪೂಗಳನ್ ಕದಂಪಿನೊಳ್ ತಗುಳ್ಚದೆ = ಚಿನ್ನದ ಹೂಗಳನ್ನು ಅವಳ ಕೆನ್ನೆಯಲ್ಲಿ ಸಿಕ್ಕಿಸದೆ, ತೊಳಪ ಕದಂಪಿನೊಳ್ ಮೃಗೋದ್ಭವಪಂಕದೆ ಪತ್ರಭಂಗಮಂ ಬರೆದುದಂ = ಹೊಳೆವ ಅವಳ ಕೆನ್ನೆಗಳಲ್ಲಿ ಕಸ್ತೂರಿಯ ದ್ರವದಿಂದ ಬರೆದೆನಲ್ಲ, ಬರೆಯಲ್ ಮಱೆದಂದಂ + ಆವುದೋ = ಆ ಅಂಶವನ್ನು ಬರೆಯದೆ ಹೋದುದಕ್ಕೆ ಕಾರಣವೇನು!

**ಗದ್ಯಾನುಸರಣ:** 'ಈ ಹಾರಾಡುವ ಮುಂಗುರುಳು ನಿನ್ನ ಮುಖಕಮಲವನ್ನು ಸರಿಯಾಗಿ ನೋಡಲೂ ಅವಕಾಶ ಕೊಡದೆ ಮೇಲೆಲ್ಲ ಆವರಿಸುತ್ತಿದೆ ಎಂದು ಕೋಪಗೊಂಡು, ಆ ಮುಂಗುರುಳಲ್ಲಿ ಚಿನ್ನದ ಹೂಗಳನ್ನು ಸಿಕ್ಕಿಸದೆ, ಹೊಳೆವ ಅವಳ ಕೆನ್ನೆಗಳಲ್ಲಿ ಕಸ್ತೂರಿಯ ದ್ರವದಿಂದ ಪತ್ರಭಂಗವನ್ನು ಬರೆದೆನಲ್ಲ, ಆ ಅಂಶವನ್ನು ಬರೆಯದೆ ಹೋದುದಕ್ಕೆ ಕಾರಣವೇನೋ!' ಅಂದುಕೊಂಡ.

**ವ। ಮತ್ತಮೊರ್ಮೆ ಮಂದಪವನಾಂದೋಳಿತವಿಮಾನೋಪವನದೊಳಗೆ ಪಸರಿಸಿ ಕುಸುಮಿಸಿದ ಕುಸುಮದೆಸಳ ಮಿಸುಗುವ ಪೊಸವಸೆಯೊಳಸದಳ ಮೆಸೆಯೆ ಪಸರಿಸಿ ಪೊಸಯಿಸಿದ ಪೊಸಸುಸಿಲ ಮುಸಕದ ಬಸದೊಳೆ ಬಸದಾಗಿಯುಮಸಿಯಳೆನಗಸವಸದೊಳೆ ಬೆಸೆದು ಪೋಗಿ**

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ + ಒರ್ಮೆ = ಇನ್ನೂ ಒಂದು ಬಾರಿ, ಮಂದಪವನ + ಆಂದೋಳಿತವಿಮಾನ + ಉಪವನದೊಳಗೆ = ಮೆಲುಗಾಳಿಯಿಂದ ತೂಗಾಡುವ ವಿಮಾನದಲ್ಲಿನ ಉದ್ಯಾನದಲ್ಲಿ, ಪಸರಿಸಿ ಕುಸುಮಿಸಿದ = ಹರಡಿಕೊಂಡು ಹೂಬಿಟ್ಟ, ಕುಸುಮದೆಸಳ ಮಿಸುಗುವ ಪೊಸವಸೆಯೊಳ್ ಹೂಪಕಳೆಗಳುಗಳ ಹೊಳೆಯುವ ಹೊಸ ಹಾಸಿನಲ್ಲಿ, ಅಸದಳಂ + ಎಸೆಯೆ ಪಸರಿಸಿ = ಅನುಪಮವಾಗಿ ಶೋಭಿಸುತ್ತ ಎಲ್ಲೆಡೆ, ಪೊಸಯಿಸಿದ ಪೊಸಸು ಸಿಲ ಮಸಕದ ಬಸದೊಳೆ = ಹೊಸದಾಗಿ ನಡೆದ ಸಂಭೋಗದ ಉತ್ಕಂಠತೆ ಯಲ್ಲಿ, ಬಸದಾಗಿಯುಂ = ವಶಳಾಗಿದ್ದರೂ, ಅಸಿಯಳ್ = ಆ ತೆಳುವೆಣ್ಣು, ಎನಗೆ + ಆಸವಸದೊಳೆ ಬೆಸೆದು ಪೋಗಿ = ನನ್ನೊಡನೆ ಕೋಪದಿಂದ ಸೆಟೆದುಕೊಂಡು,

**ಗದ್ಯಾನುಸರಣ:** 'ಇನ್ನೂ ಒಂದು ಬಾರಿ, ವಿಮಾನದಲ್ಲಿ ಮೆಲುಗಾಳಿಯಿಂದ

ತೂಗಾಡುವ ಉದ್ಯಾನದಲ್ಲಿ ಬಿದ್ದ ಹೂಪಕಳೆಗಳು ಹರಡಿ ಹೊಳೆಯುವ ಹೊಸ ಹಾಸನ್ನು ನಿರ್ಮಿಸಿತ್ತು; ಅದರಲ್ಲಿ ಅನುಪಮವಾಗಿ ಶೋಭಿಸುತ್ತ ಹೊಸದಾಗಿ ನಡೆದ ಸಂಭೋಗದ ಉತ್ಕಂಠತೆಯಲ್ಲಿ ವಶವಾಗಿದ್ದಾಗ ಆ ತೆಳುವೆಣ್ಣು ನನ್ನೊಡನೆ ಕೋಪಿಸಿಕೊಂಡು ಹೊರಟುಹೋದಳು.'

**ಮಱೆಗೊಳೆ ಪೂತ ಕಲ್ಪಲತೆಯಂ ಲಲಿತಾಂಗಿಯೆ ಗೆತ್ತಲಂಪಿನಿಂ**
**ದೆಱಗುವುದುಂ ಲತಾಂಗಿ ಮುಳಿಸಿಂ ಲತೆಯಂ ಲಲಿತಾಂಗಿಗೆತ್ತು ನೀ**
**ನೆಱಗಿದೆಯೆನ್ನ ಪಕ್ಕದ ಪೆಱಳ್ಗೆನೆ ಬೆರ್ಚಿ ಲತಾಂಗಿಗಾಗಳಾ**
**ನೆಱಗಿದೆನಾದುದಾ ಲತೆಯಿನಚ್ಚಿಗಮಿಂತೆನಗಂ ಲತಾಂಗಿಗಂ ೧೩**

**ಪದವಿಭಾಗ-ಅನ್ವಯ-ಅರ್ಥ:** ಮಱೆಗೊಳೆ = ಮರೆಯಾಗಲು, ಪೂತ ಕಲ್ಪಲತೆಯಂ ಲಲಿತಾಂಗಿಯೆ ಗೆತ್ತು = ಹೂಬಿಟ್ಟ ಬಳ್ಳಿಯನ್ನೇ ಬಳ್ಳಿವೆಣ್ಣೆಂದು ಭ್ರಮಿಸಿ, ಅಲಂಪಿನಿಂದೆ + ಎಱಗುವುದುಂ = ಕಾಮಗುರುಡಿನಿಂದ ನಮಸ್ಕರಿಸಲು, ಲತಾಂಗಿ ಲತೆಯಂ ಲಲಿತಾಂಗಿಗೆತ್ತು ಮುಳಿಸಿಂ = ಅವಳು ಬಳ್ಳಿಯನ್ನೇ ಬಳ್ಳಿವೆಣ್ಣೆಂಬ ತಿಳಿದು ಕೋಪದಿಂದ, ನೀನೆಱಗಿದೆಯೆನ್ನ ಪಕ್ಕದ ಪೆಱಳ್ಗೆ + ಎನೆ = ನೀನು ನನ್ನ ಪಕ್ಕದಲ್ಲೇ ಇದ್ದ ಬೇರೊಬ್ಬಳಿಗೆ ನಮಸ್ಕರಿಸಿದೆ ಎನ್ನಲು, ಬೆರ್ಚಿ = ನಾನು ಗಾಬರಿಗೊಂಡು, ಲತಾಂಗಿಗೆ + ಆಗಳ್ + ಆನ್ + ಎಱಗಿದೆನ್ = ಅವಳಿಗೆ ನಮಸ್ಕರಿಸಿದೆ, ಇಂತು + ಎನಗಂ ಲತಾಂಗಿಗಂ = ಹೀಗೆ ನನಗೂ ಅವಳಿಗೂ, ಆ ಲತೆಯಿನ್ + ಅಚ್ಚಿಗಂ ಆದುದು = ಆ ಬಳ್ಳಿಯ ಕಾರಣದಿಂದ ಗೊಂದಲವುಂಟಾಯಿತು.

**ಗದ್ಯಾನುಸರಣ:** ಹೋಗಿ ಮರೆಯಾಗಲು ನಾನು ಹೂಬಿಟ್ಟ ಬಳ್ಳಿಯನ್ನೇ ಬಳ್ಳಿವೆಣ್ಣೆಂದು ಭ್ರಮಿಸಿ ಕಾಮಗುರುಡಿನಿಂದ ಕಾಲ್ಗೆರಗಿದೆ; ಅವಳು ಬಳ್ಳಿಯನ್ನೇ ಬಳ್ಳಿವೆಣ್ಣೆಂದು ತಿಳಿದು ಕೋಪದಿಂದ 'ನೀನು ನನ್ನ ಪಕ್ಕದಲ್ಲೇ ಇದ್ದ ಬೇರೊಬ್ಬಳ ಕಾಲ್ಗೆರಗಿದೆ' ಎಂದಳು. ಆಗ ನಾನು ಗಾಬರಿಗೊಂಡು ಅವಳಿಗೆ ನಮಸ್ಕರಿಸಿದೆ. ಹೀಗೆ ಆ ಬಳ್ಳಿಯ ಕಾರಣದಿಂದ ನನಗೂ ಅವಳಿಗೂ ಗೊಂದಲವುಂಟಾಯಿತು.

**ವ। ಇಂತಿವು ಮೊದಲಾಗೆ ಪೆಱವುಮೆನ್ನಾಕೆಯುಱಕೆಯುವಿನಾಣಂಗಳ್ ಕೆಲವು ಬರೆದು ವಿಲ್ಲೆಂದದನಾಕೃಷ್ಟದೃಷ್ಟಿಪ್ರಸರನುಮುಚಳಿತಪಕ್ಷ್ಮವಿಸರನುಮುಕಂಪಿತ ಭ್ರೂವಿಭ್ರನುಂ ಪ್ರಕಟಿತ ಚಿತ್ತವಿಭ್ರಮನುಂ ಅತಿಪ್ರಬಳ ಸ್ವೇದ ಪ್ರಕ್ಷಾಳಿತನುಂ ಕುಸುಮಶರಶಲಾಕಾಕೀಲಿತನುಮಾಗಿ,**

**ಪದವಿಭಾಗ-ಅನ್ವಯ-ಅರ್ಥ:** ಇಂತಿವು ಮೊದಲಾಗೆ = ಇವೇ ಮುಂತಾದ,

ಪೆಱವುಂ = ಬೇರೆಯವೂ, ಎನ್ನ + ಆಕೆಯ + ಅಱಿಕೆಯವಿನಾಣಂಗಳ್ = ನನ್ನ ಮತ್ತು ಅವಳ ತಿಳಿವಳಿಕೆಯ ಗುರುತುಗಳಲ್ಲಿ, ಕೆಲವು ಬರೆದುವಿಲ್ಲೆಂದು = ಕೆಲವನ್ನು ಬರೆದಿಲ್ಲ ಎಂದು, ಅದನ್ = ಅದನ್ನು, ಆಕೃಷ್ಟದೃಷ್ಟಿಪ್ರಸರನುಂ = ಆಕರ್ಷಣೆಗೊಂಡ ತನ್ನ ನೋಟವನ್ನು ಹೊಂದಿದವನೂ, ಅಚಳಿತಪಕ್ಷ್ಮವಿಸರನುಂ = ರೆಪ್ಪೆಗಳನ್ನು ಮಿಟುಕಿಸದವನೂ, ಅಕಂಪಿತಭ್ರೂವಿಭ್ರನುಂ = ಸೆಟೆದ ಹುಬ್ಬುಗಳನ್ನುಳ್ಳವನೂ, ಪ್ರಕಟಿತಚಿತ್ತವಿಭ್ರಮನುಂ = ಗೊಂದಲಗೊಂಡ ಬುದ್ಧಿಯವನೂ, ಅತಿಪ್ರಬಳಸ್ವೇದಪ್ರಕ್ಷಾಳಿತನುಂ = ತೀವ್ರವಾದ ಬೆವರಿನಿಂದ ಕೂಡಿದವನೂ, ಕುಸುಮಶರಶಲಾಕಾಕೀಲಿತನುಂ + ಆಗಿ = ನಾಟಿದ ಕಾಮಬಾಣಗಳವನೂ ಆಗಿ,

**ಗದ್ಯಾನುಸರಣ:** ಇವೇ ಮುಂತಾದ ನನಗೆ ಮತ್ತು ಅವಳಿಗೆ ಮಾತ್ರ ಗೊತ್ತಿದ್ದ ಬೇರೆಯ ಹಲವು ಗುರುತುಗಳಲ್ಲಿ ಕೆಲವನ್ನು ಬರೆದಿಲ್ಲ ಇದರಲ್ಲಿ – ಎಂದುಕೊಂಡ; ಆದರೆ ಆಕರ್ಷಣೆಗೊಂಡ ಅವನ ನೋಟ ಚಿತ್ರಪಟದ ಮೇಲೆಯೇ ನೆಲೆಸಿತ್ತು; ರೆಪ್ಪೆಗಳನ್ನು ಮಿಟುಕಿಸದೆ, ಹುಬ್ಬುಗಳನ್ನು ಸೆಟೆದುಕೊಂಡು ಅವನ ಬುದ್ಧಿ ಗೊಂದಲಗೊಂಡಿತ್ತು; ಮುಖದ ಮೇಲೆ ಬೆವರು ಸುರಿಯುತ್ತಿತ್ತು ಅವನಿಗೆ ಕಾಮಬಾಣಗಳು ನಾಟಿಕೊಂಡಿದ್ದುದು ಸ್ಪಷ್ಟವಾಗಿತ್ತು.

**ತರಳಾಪಾಂಗವಿಳಾಸ**
**ಸ್ಫುರಿತಮೆ ಲೆಕ್ಕಣಿಕೆಯಾಗೆ ನಲ್ಲಳ್ ಮುನ್ನಂ**
**ಬರೆದತನುಚರಿತಮೀಗಳ್**
**ಬರೆದಂತಿರ್ದಪುದು ಮನ್ಮನಃಪುಸ್ತಕದೊಳ್** ೧೪

**ಪದವಿಭಾಗ–ಅನ್ವಯ–ಅರ್ಥ:** ತರಳ + ಅಪಾಂಗವಿಳಾಸಸ್ಫುರಿತಮೆ ಲೆಕ್ಕಣಿಕೆಯಾಗೆ = ಚಂಚಲ ಕುಡಿನೋಟಗಳೇ ಲೇಖನಿಯಾಗಲು, ನಲ್ಲಳ್ ಮುನ್ನಂ ಬರೆದ = ಪ್ರಿಯೆಯು ಮುಂಚೆ ಬರೆದಿದ್ದ, ಅತನುಚರಿತಂ + ಈಗಳ್ = ಕಾಮ ಪ್ರಸಂಗಗಳನ್ನು, ಮತ್ + ಮನಃಪುಸ್ತಕದೊಳ್ = ನನ್ನ ಮನಸ್ಸೆಂಬ ಹೊತ್ತಗೆಯಲ್ಲಿ, ಬರೆದಂತೆ + ಇರ್ದಪುದು = ಬರೆದ ಹಾಗಿದೆ.

**ಗದ್ಯಾನುಸರಣ:** ಚಂಚಲ ಕುಡಿನೋಟಗಳೇ ಲೇಖನಿಯಾಗಿ, ನನ್ನ ಪ್ರಿಯೆಯು ಮುಂಚೆ ಬರೆದಿದ್ದ ಕಾಮಪ್ರಸಂಗಗಳನ್ನು ನನ್ನ ಮನಸ್ಸೆಂಬ ಹೊತ್ತಗೆಯಲ್ಲಿ ಈಗಲೂ ಬರೆದ ಹಾಗಿದೆ.

**ವ॥ ಎಂದು ತನ್ನ ಮನದೊಳೆ ಬಗೆದು ಸಂಕಲ್ಪಸಮಾಗಮಸುಖ ಮನನುಭವಿಸಿ**

**ಪದವಿಭಾಗ-ಅನ್ವಯ-ಅರ್ಥ:** ಎಂದು ತನ್ನ ಮನದೊಳೆ ಬಗೆದು = ಎಂದು ತನ್ನ ಮನಸ್ಸಿನಲ್ಲಿಯೇ ಆಲೋಚಿಸುತ್ತ, ಸಂಕಲ್ಪಸಮಾಗಮಸುಖಮನನುಭವಿಸಿ = ಕಲ್ಪನೆಯ ಕೂಟವನ್ನು ಅನುಭವಿಸಿ,

**ಗದ್ಯಾನುಸರಣ:** ಹೀಗೆಲ್ಲ ತನ್ನ ಮನಸ್ಸಿನಲ್ಲಿಯೇ ಆಲೋಚಿಸುತ್ತ, ಕಲ್ಪನೆಯಲ್ಲಿಯೇ ಅವಳ ಕೂಟವನ್ನು ಅನುಭವಿಸಿದ.

**ಪದಪು ಮನಕ್ಕೆ ಸೊರ್ಕು ನಯನಕ್ಕೆಸೆಯುತ್ತಿರೆ ಚುಂಬನಾಭಿಲಾ**
**ಷದ ತನಿಗೆತ್ತು ಬಾಯ್ಗೆ ಬಳಸಲ್ ಪದೆದಟ್ಟಜಿಳುರ್ಕೆ ತೋಳ್ಗೆ ವಂ**
**ದೊದವಿರೆ ನಾಣನೊಕ್ಕೆರ್ದೆ ವಿಚಿತ್ರವಿಕಾರರಸಾಂತರಂಗದೊಳ್**
**ಪುದಿದಿರೆ ಮಾಣದಾಡಿಸಿದನಾತನನಂಗಜನೆಂಬ ನಟ್ಟುವಂ ೧೫**

**ಪದವಿಭಾಗ-ಅನ್ವಯ-ಅರ್ಥ:** ಮನಕ್ಕೆ ಪದಪು = ಮನಸ್ಸಿನಲ್ಲಿ ಔತ್ಸುಕ್ಯ, ನಯನಕ್ಕೆ ಸೊರ್ಕು = ಕಣ್ಣಿನಲ್ಲಿ ಸೊಕ್ಕು, ಬಾಯ್ಗೆ ಚುಂಬನಾಭಿಲಾಷದ ತನಿಗೆತ್ತು = ಬಾಯಿಗೆ ಮುತ್ತಿಡುವ ತೀವ್ರ ಬಯಕೆ, ಎಸೆಯುತ್ತಿರೆ = ತುಂಬಿಕೊಳ್ಳಲು, ತೋಳ್ಗೆ = ತೋಳುಗಳಿಗೆ, ಬಳಸಲ್ ಪದೆದು = ಅಪ್ಪಿಕೊಳ್ಳಲು, ಅಟ್ಟಜಿ + ಅಳುರ್ಕೆ = ಆಸೆಯ ಆಧಿಕ್ಯವು, ವಂದು + ಒದವಿರೆ = ಬಂದಿರಲು, ನಾಣನ್ + ಒಕ್ಕ + ಎರ್ದೆ = ನಾಚಿಕೆಯನ್ನು ತುಂಬಿಕೊಂಡ ಎದೆಯು, ವಿಚಿತ್ರವಿಕಾರರಸ + ಅಂತರಂಗದೊಳ್ ಪುದಿದಿರೆ = ವಿಚಿತ್ರವಾದ ವಿಕೃತ ರಸವು ಅಂತರಂಗದಲ್ಲಿ, ಆತನನ್ = ಅವನನ್ನು, ಅಂಗಜನೆಂಬ ನಟ್ಟುವಂ = ಕಾಮನೆಂಬ ನಟನಾ ನಿರ್ದೇಶಕನು, ಮಾಣದೆ + ಆಡಿಸಿದಂ = ಬಿಡದೆ ನಟಿಸುವಂತೆ ಮಾಡಿದ.

**ಗದ್ಯಾನುಸರಣ:** ಮನಸ್ಸಿನಲ್ಲಿ ಔತ್ಸುಕ್ಯ, ಕಣ್ಣಿನಲ್ಲಿ ಸೊಕ್ಕು, ಬಾಯಿಗೆ ಮುತ್ತಿಡುವ ತೀವ್ರ ಬಯಕೆ ತುಂಬಿಕೊಂಡಿತು; ತೋಳುಗಳಿಗೆ ಅಪ್ಪಿಕೊಳ್ಳುವ ತೀವ್ರ ಆಸೆಯುಂಟಾಯಿತು; ನಾಚಿಕೆ ತುಂಬಿದ ಅವನೆದೆಯಲ್ಲಿ ವಿಚಿತ್ರ ವಿಕೃತ ರಸತರಂಗಳೆದ್ದುವು. ಹೀಗೆ ಕಾಮನೆಂಬ ನಟನಾ ನಿರ್ದೇಶಕನು ಅವನನ್ನು ಚಿಟುಕುಮುಳ್ಳಾಡಿಸಿದ.

**ವ। ಆಗಳ್ ಕದಂಬ ಸ್ತಬಕಕರ್ಣಪೂರಾಯಮಾಣರೋಮಾಂಚಕಂಚುಕಿತಕಪೋಳಮೂಳಸ್ಖಳನಿಶ್ವಾಸ ಕಲ್ಲೋಳನತಿಸೂಕ್ಷ್ಮಪಾಳಿಪರಿಚ್ಯುತ ತರಳತರನಯನೋದಬಿಂದುಸಂದೋಹರಸವಶಗತನಾಗಿ,**

**ಪದವಿಭಾಗ-ಅನ್ವಯ-ಅರ್ಥ:** ಆಗಳ್ = ಆಗ, ಕದಂಬಸ್ತಬಕಕರ್ಣ ಪೂರಾಯಮಾಣ = ಕಿವಿಯ ಆಭರಣವಾಗಿ ಕದಂಬಪುಷ್ಪಗಳ ಗೊಂಚಲು

ತುಂಬಿಕೊಂಡು, ರೋಮಾಂಚಕಂಚುಕಿತ ಕಪೋಳಮೂಳಸ್ಥಳ = ರೋಮಾಂಚನದಿಂದ ಕೂಡಿದ ಕೆನ್ನೆಗಳ ಕೆಳಭಾಗದಲ್ಲಿ, ನಿಶ್ವಾಸಕಲ್ಲೋಳನ್ = ಬಿಡುವ ಉಸಿರಿನಿಂದ ಕೂಡಿದವನಾಗಿ, ಅತಿಸೂಕ್ಷ್ಮಪಾಳಿಪರಿಚ್ಯುತ = ತುಂಬ ಸಣ್ಣ ಸಣ್ಣದಾಗಿ ತೊಟ್ಟಿಕ್ಕುತ್ತ, ತರಳತರನಯನ + ಉದಬಿಂದುಸಂದೋಹರಸವಶಗತನಾಗಿ = ಇಳಿಯುವ ಕಣ್ಣೀರಿನ ಬಿಂದುಗಳಿಂದ ಕೂಡಿ ಭಾವಾವೇಶಕ್ಕೊಳಗಾಗಿ,

**ಗದ್ಯಾನುಸರಣ:** ಆಗ, ಕಿವಿಯ ಆಭರಣವಾಗಿ ಕದಂಬಪುಷ್ಪಗಳ ಗೊಂಚಲು ತುಂಬಿಕೊಂಡ ಅವನ ಕೆನ್ನೆಗಳ ಕೆಳಭಾಗದಲ್ಲಿ ರೋಮಾಂಚನಗೊಂಡ ಉಸಿರು ಬಿಡುತ್ತ, ಚಿಕ್ಕ ಚಿಕ್ಕ ಹನಿಗಳಾಗಿ ತೊಟ್ಟಿಕ್ಕುತ್ತ ಇಳಿಯುವ ಕಣ್ಣೀರಿನ ಬಿಂದುಗಳಿಂದ ಕೂಡಿ ಅವನು ಭಾವಾವೇಶಕ್ಕೊಳಗಾದ.

**ಪ್ರಿಯದಯಿತೆಯೆನಾಂ ನಿನಗೆಂ**
**ಬೆಯೆಂದು ನೀನೆನ್ನನಿಂತಗಲ್ದಿರ್ಪುದೆ ವಿ**
**ಸ್ಮಯಮಂ ಮಾಡಿದಪುದು ಹಾ**
**ಸ್ವಯಂಪ್ರಭೇ ಎಂದು ಮೂರ್ಛೆವೋಪುದುಮಾಗಳ್ ೧೬**

**ಪದವಿಭಾಗ-ಅನ್ವಯ-ಅರ್ಥ:** ಆಂ ನಿನಗೆ ಪ್ರಿಯದಯಿತೆಯೆನ್ = ನಾನು ನಿನ್ನ ಪ್ರೀತಿಯ ನಲ್ಲೆ, ಎಂಬೆ + ಎಂದು = ಎಂದು ಹೇಳಿ, ನೀನ್ + ಎನ್ನನ್ + ಇಂತು + ಅಗಲ್ದಿರ್ಪುದೆ = ನೀನು ನನ್ನನ್ನು ಹೀಗೆ ಬಿಟ್ಟಿರುವುದೇ? ಹಾ ಸ್ವಯಂಪ್ರಭೇ, ವಿಸ್ಮಯಮಂ ಮಾಡಿದಪುದು = ಇದು ಅಚ್ಚರಿಯುಂಟು ಮಾಡುತ್ತಿದೆ, ಎಂದು ಆಗಳ್ ಮೂರ್ಛೆವೋಪುದುಂ = ಎಂದು ಆಗ ಮೂರ್ಚೆಹೋಗಲು.

**ಗದ್ಯಾನುಸರಣ:** 'ನಾನು ನಿನ್ನ ಪ್ರೀತಿಯ ನಲ್ಲೆ ಎಂದು ಹೇಳಿ, ನೀನು ನನ್ನನ್ನು ಹೀಗೆ ಬಿಟ್ಟಿರುವುದೇ? ಹಾ ಸ್ವಯಂಪ್ರಭೇ, ಇದು ಅಚ್ಚರಿಯುಂಟುಮಾಡುತ್ತಿದೆ' ಎಂದು ಮೂರ್ಚೆಹೋದ.

**ಪರಿಜನಮನಿತುಂ ತುರಿಪದೆ**
**ಪರಿತಂದಿನ್ನೇವೆವೆಂದು ಕಪ್ಪುರದ ರಜಂ**
**ಬೊರೆದ ಕರಕಾಂಬುವ ತಳಿದು**
**ದರವುರನೆಟ್ಟುರಿಸೆ ಮೂರ್ಛೆ ತಿಳಿದು ಕುಮಾರಂ ೧೭**

**ಪದವಿಭಾಗ-ಅನ್ವಯ-ಅರ್ಥ:** ಪರಿಜನಂ + ಅನಿತುಂ ತುರಿಪದೆ ಪರಿತಂದು = ಪರಿವಾರದವರು ತ್ವರಿತವಾಗಿ ಬಂದು, ಇನ್ನೇವೆವು + ಎಂದು = ಏನು

ಮಾಡುವುದು ಏದುಕೊಂಡು, ಕಪ್ಪುರದ ರಜಂ + ಪೊರೆದ ಕರಕಾಂಬುವ ತಳಿದು = ಪಚ್ಚಕರ್ಪೂರದ ಪುಡಿಯಿಂದ ಕೂಡಿದ ತಣ್ಣೀರನ್ನು ಸಿಂಪಡಿಸಿ, ಎಚ್ಚರಿಸೆ = ಎಚ್ಚರಿಸಲು, ದರವುರನೆ ಮೂರ್ಛೆ ಕುಮಾರಂ ತಿಳಿದು = ನಿಧಾನವಾಗಿ ಮೂರ್ಚೆಯಿಂದ ಕುಮಾರನು ಎಚ್ಚರಗೊಂಡು,

**ಗದ್ಯಾನುಸರಣ:** ಪರಿವಾರದವರು ಆತುರವಾಗಿ ಬಂದು ಏನು ಮಾಡುವುದು ಎಂದು ಪೇಚಾಡಿಕೊಂಡು ಪಚ್ಚಕರ್ಪೂರಮಿಶ್ರಿತ ತಣ್ಣೀರನ್ನು ಸಿಂಪಡಿಸಿದಾಗ ಕುಮಾರನು ನಿಧಾನವಾಗಿ ಮೂರ್ಚೆಯಿಂದ ತಿಳಿದೆದ್ದ.

**ವ। ಈ ಪಟಮನಿಲ್ಲಿಗಾರ್ತಂದರೆಂಬನ್ನೆಗಂ ಭವದೀಯಪ್ರಾಣವಲ್ಲಭಂ ಲಲಿತಾಂಗಚರ ವಜ್ರಜಂಘನೆಂಬುದನಾಂ ಮುನ್ನಮೆ ತಿಳಿದಾನುಮಾ ಮಹಾನುಭಾವನಂ ಬೇಗಮೆಯ್ದೆಪೋಗಿ,**

**ಪದವಿಭಾಗ-ಅನ್ವಯ-ಅರ್ಥ:** ಈ ಪಟಮನ್ + ಇಲ್ಲಿಗಾರ್ ತಂದರ್ + ಎಂಬನ್ನೆಗಂ = ಈ ಚಿತ್ರವನ್ನು ಇಲ್ಲಿಗೆ ಯಾರು ತಂದರು ಎಂದು ವಿಚಾರಿಸುವಷ್ಟರಲ್ಲಿ, ಭವದೀಯಪ್ರಾಣವಲ್ಲಭಂ ಲಲಿತಾಂಗಚರ ವಜ್ರಜಂಘನೆಂಬುದನ್ ಆಂ ಮುನ್ನಮೆ ತಿಳಿದು = ನಿನ್ನ ಪ್ರಾಣಕಾಂತನಾದ ಲಲಿತಾಂಗನೇ ಈ ಜನ್ಮದ ವಜ್ರಜಂಘ ಎಂಬುದನ್ನು ನಾನು ಮೊದಲೇ ಅರ್ಥಮಾಡಿಕೊಂಡು, ಆನುಂ ಬೇಗಂ + ಎಯ್ದೆಪೋಗಿ ಆ ಮಹಾನುಭಾವನಂ = ನಾನು ಬೇಗ ಅಲ್ಲಿಗೆ ಹೋಗಿ ಆ ಮಹಾನುಭಾವನನ್ನು,

**ಗದ್ಯಾನುಸರಣ:** 'ಈ ಚಿತ್ರವನ್ನು ಇಲ್ಲಿಗೆ ಯಾರು ತಂದರು' ಎಂದವನು ವಿಚಾರಿಸುವಷ್ಟರಲ್ಲಿ ನಿನ್ನ ಪ್ರಾಣಕಾಂತನಾದ ಲಲಿತಾಂಗನೇ ಈ ಜನ್ಮದಲ್ಲಿ ವಜ್ರಜಂಘನಾಗಿದ್ದಾನೆ ಎಂಬುದು ನನಗೆ ತಿಳಿದುಹೋಯಿತು; ನಾನು ಬೇಗ ಅಲ್ಲಿಗೆ ಹೋಗಿ ಆ ಮಹಾನುಭಾವನನ್ನು ಕಂಡೆ.

**ತುದಿಯೆಯ್ದಿತ್ತೆನಗೆನ್ನ ಪೂಣ್ಕೆ ನಿನಗಂ ಪುಣ್ಯೋದಯಂ ಸಾರ್ಚಿಬಂ**
**ದುದು ಧಾತ್ರಂಗಮಳಂಕೆಗೊಂಡ ಪಿರಿದುಂ ಚಿಂತಾಂತರಂ ಪೋಯ್ತುಕೂ**
**ಡಿದುದು ಶ್ರೀಮತಿಗಂ ಮನೋರಥಫಲಂ ಶ್ರೀವಜ್ರದಂತಂಗಮಾ**
**ದುದು ರಾಗೋತ್ಸವಮೆಲ್ಲಮಿಲ್ಲಿಗೆ ಜಯಂ ಭದ್ರಂ ಶುಭಂ ಮಂಗಳಂ೧೮**

**ಪದವಿಭಾಗ-ಅನ್ವಯ-ಅರ್ಥ:** ಎನಗೆ ಎನ್ನ ಪೂಣ್ಕೆ ತುದಿಯೆಯ್ದಿತ್ತು = ನನಗೆ ನನ್ನ ಪ್ರತಿಜ್ಞೆ ನೆರವೇರಿತು; ನಿನಗಂ ಪುಣ್ಯೋದಯಂ ಸಾರ್ಚೆ ಬಂದುದು = ನಿನಗೆ ಪುಣ್ಯದ ಏಳಿಗೆಯು ಸನಿಹಕ್ಕೆ ಬಂತು, ಧಾತ್ರಂಗಂ + ಅಳಂಕೆಗೊಂಡ

ಪಿರಿದುಂ ಚಿಂತಾಂತರಂ ಪೋಯ್ತು = ಬ್ರಹ್ಮನಿಗೆ ಉಂಟಾಗಿದ್ದ ದೊಡ್ಡ ಚಿಂತೆ ದೂರವಾಯಿತು; ಶ್ರೀಮತಿಗಂ ಮನೋರಥಫಲಂ ಕೂಡಿದುದು = ಶ್ರೀಮತಿಗೆ ತನ್ನ ಮನದಾಸೆ ನೆರವೇರಿತು; ಶ್ರೀವಜ್ರದಂತಂಗಂ ರಾಗೋತ್ಸವಂ ಆದುದು = ವಜ್ರದಂತ ಮಹಾರಾಜನಿಗೆ ಸಂತಸವಾಯಿತು; ಇಲ್ಲಿಗೆ ಎಲ್ಲಂ ಜಯಂ ಭದ್ರಂ ಶುಭಂ ಮಂಗಳಂ = ಇದರಿಂದಾಗಿ ಎಲ್ಲವೂ ಒಳಿತು, ಮಂಗಳವಾಯಿತು.

**ವಿಶೇಷ ವಿಚಾರ**: ಪಂಡಿತೆಯ ಈ ಆತುರದಲ್ಲಿ ಈಗಾಗಲೇ ಶ್ರೀಮತಿ–ವಜ್ರಜಂಘರ ಮದುವೆ ನಡೆದೇ ಹೋದಂತೆನಿಸಿದೆ.

**ಗದ್ಯಾನುಸರಣ:** 'ಕಂಡು, ನನಗೆ ನನ್ನ ಪ್ರತಿಜ್ಞೆ ನೆರವೇರಿತು; ನಿನ್ನ ಪುಣ್ಯದ ಏಳಿಗೆಯು ಸನಿಹಕ್ಕೆ ಬಂತು; ಬ್ರಹ್ಮನಿಗೆ ಉಂಟಾಗಿದ್ದ ದೊಡ್ಡ ಚಿಂತೆ ದೂರವಾಯಿತು; ಶ್ರೀಮತಿಯ ಮನದಾಸೆ ನೆರವೇರಿತು; ವಜ್ರದಂತ ಮಹಾರಾಜನಿಗೆ ಸಂತಸವಾಯಿತು; ಇದರಿಂದಾಗಿ ಎಲ್ಲವೂ ಒಳಿತು, ಮಂಗಳವಾಯಿತು' ಎಂದೆ.

**ವ॥ ಎಂಬುದುಮಾ ವಿಳಾಸರಸವಾರಾಶಿ ವಿಸ್ಮಯಸ್ಮೇರಮುಖ ಚಂದ್ರ ಸಾಂದ್ರಚಂದ್ರಿಕಾ ಮೃತಾಚ್ಛಜಳಶಿಶಿರಶೀಕರಂಗಳೊಳ್ ಮುನ್ನಮೆನ್ನ ಮನ ಮಾಱುವಿನಮುನ್ನಮಿತೈಕಭ್ರೂಲ ತಾವಿಳಾಸನಂತೆಂಬುದ ನೆಂಬುದುಂ ನೀಂ ಲಲಿತಾಂಗಚರನಪ್ಪುದಱಿಂದಂ ಸ್ವಕೀಯಾಪ್ರಾಣೇಶ್ವರಿ ತತ್ಸ್ವಯಂ ಪ್ರಭಾದೇವಿ ನಿಮ್ಮ ಮಾವಂ ವಜ್ರದಂತ ಚಕ್ರವರ್ತಿಗಂ ನಿಮ್ಮತ್ತೆ ಲಕ್ಷ್ಮೀಮತಿ ಮಹಾದೇವಿಗಂ ಶ್ರೀಮತಿಯೆಂಬ ಮಗಳಾಗಿ ಪುಟ್ಟಿದಳ್**

**ಪದವಿಭಾಗ–ಅನ್ವಯ–ಅರ್ಥ:** ಎಂಬುದುಂ = ಎಂದು ಹೇಳಲು, ಆ ವಿಳಾಸರಸವಾರಾಶಿ ವಿಸ್ಮಯಸ್ಮೇರ = ಆ ವಿಲಾಸಪೂರ್ಣವಾದ ರಸಸಮುದ್ರದಲ್ಲಿನ ಅಚ್ಚರಿಯ ಮುಗುಳ್ನಗೆ ಎಂಬ, ಮುಖಚಂದ್ರಸಾಂದ್ರಚಂದ್ರಿಕಾಮೃತ = ಮುಖಚಂದ್ರ ದಟ್ಟ ಬೆಳುದಿಂಗಳಿನ ಅಚ್ಛಜಳಶಿಶಿರಶೀಕರಂಗಳೊಳ್ = ತಿಳಿನೀರಿನ ತಣ್ಣನೆಯ ತುಂತುರಿನಲ್ಲಿ, ಮುನ್ನಂ + ಎನ್ನ ಮನಂ + ಆಱುವಿನಂ = ನನ್ನ ಮನಸ್ಸು ಸಮಾಧಾನಗೊಳ್ಳಲು, ಉನ್ನಮಿತೈಕಭ್ರೂಲತಾವಿಳಾಸನ್ = ಮೇಲೆತ್ತಿದ ಹುಬ್ಬಿನ ಆತನು, ಎಂತು + ಎಂಬುದನ್ + ಎಂಬುದುಂ = ಅದು ಹೇಗೆ ಎಂದು ಕೇಳಲು, ನೀಂ ಲಲಿತಾಂಗಚರನಪ್ಪುದಱಿಂದಂ = ನೀನು ಲಲಿತಾಂಗನ ಈ ಜನ್ಮದ ರೂಪಾದ್ದರಿಂದ, ಸ್ವಕೀಯಾಪ್ರಾಣೇಶ್ವರಿ ತತ್ + ಸ್ವಯಂಪ್ರಭಾದೇವಿ = ನಿನ್ನ ಪ್ರಾಣಕಾಂತೆಯೇ ಆ ಸ್ವಯಂಪ್ರಭೆಯು, ನಿಮ್ಮ ಮಾವಂ ವಜ್ರದಂತ ಚಕ್ರವರ್ತಿಗಂ ನಿಮ್ಮತ್ತೆ ಲಕ್ಷ್ಮೀಮತಿಮಹಾದೇವಿಗಂ = ನಿಮ್ಮ ಸೋದರತ್ತೆ ಮಾವಂದಿರಾದ ಲಕ್ಷ್ಮೀಮತಿ–ವಜ್ರದಂತರಿಗೆ, ಶ್ರೀಮತಿಯೆಂಬ ಮಗಳಾಗಿ ಪುಟ್ಟಿದಳ್ = ಶ್ರೀಮತಿ ಎಂಬ ಮಗಳಾಗಿ ಹುಟ್ಟಿದ್ದಾಳೆ,

**ಗದ್ಯಾನುಸರಣ:** ಎಂದು ಹೇಳಲು, ಆವನ ವಿಲಾಸಪೂರ್ಣ ರಸಸಮುದ್ರದಲ್ಲಿನ ಅಚ್ಚರಿಯ ಮುಗುಳ್ನಗೆ ಎಂಬ ತಿಳಿನೀರಿನ ತಣ್ಣನೆಯ ತುಂತುರಿನಲ್ಲಿ ನನ್ನ ಮನಸ್ಸು ಸಮಾಧಾನಗೊಂಡಿತು; ವಿಸ್ಮಯದಿಂದ ಹುಬ್ಬನ್ನು ಮೇಲೆತ್ತಿ, 'ಅದು ಹೇಗೆ' ಎಂದ: 'ನೀನು ಹಿಂದಿನ ಜನ್ಮದ ಲಲಿತಾಂಗ, ನಿನ್ನ ಪ್ರಾಣಕಾಂತೆ ಸ್ವಯಂಪ್ರಭೆಯು ನಿಮ್ಮ ಸೋದರತ್ತೆ ಸೋದರಮಾವಂದಿರಾದ ಲಕ್ಷ್ಮೀಮತಿ–ವಜ್ರದಂತರಿಗೆ ಶ್ರೀಮತಿ ಎಂಬ ಮಗಳಾಗಿ ಹುಟ್ಟಿದ್ದಾಳೆ' ಎಂದೆ.

**ಅದು ದಿವಿಜೇಂದ್ರಲೋಕಮಿದು ಮನ್ಮಥರೂಪದ ಮನುಷ್ಯಲೋಕಮೆಂ**
**ಬುದೆ ವಿಕಲ್ಪಮಲ್ಲಿ ಸುರಕಾಂತೆ ದಲಿಲ್ಲಿ ಮನುಷ್ಯಕಾಂತೆಯೆಂ**
**ಬಿದುವೆ ವಿಕಲ್ಪಮಲ್ಲದೆ ವಿಳಾಸದ ಕೆಯ್ತದ ರೂಪು ಸೋಲ್ತು ನೋ**
**ಡಿದರ ಮನಕ್ಕಣಂ ಪಡೆಯದಲ್ತೆ ವಿಕಲ್ಪಮನಲ್ಪಮಧ್ಯೆಯಾ ೧೯**

**ಪದವಿಭಾಗ–ಅನ್ವಯ–ಅರ್ಥ:** ಅದು ದಿವಿಜೇಂದ್ರಲೋಕಂ + ಇದು ಮನ್ಮಥರೂಪದ ಮನುಷ್ಯಲೋಕಂ = ಅದು ದೇವಲೋಕ, ಇದು ಮನ್ಮಥರೂಪದ ಮನುಷ್ಯಲೋಕ, ಎಂಬುದೆ ವಿಕಲ್ಪಂ = ಇದಿಷ್ಟೇ ವ್ಯತ್ಯಾಸ; ಅಲ್ಲಿ ಸುರಕಾಂತೆ = ಅಲ್ಲಿ ಅವಳು ದೇವರಮಣಿ, ಇಲ್ಲಿ ದಲ್ ಮನುಷ್ಯಕಾಂತೆ = ಇಲ್ಲವಳು ಮನುಜಹೆಣ್ಣು, ಎಂಬಿದುವೆ ವಿಕಲ್ಪಂ = ಎಂಬುದಷ್ಟೇ ವ್ಯತ್ಯಾಸ; ಅಲ್ಲದೆ = ಅಷ್ಟು ಹೊರತು, ಅಲ್ಪಮಧ್ಯೆಯಾ ವಿಳಾಸದ ಕೆಯ್ತದ ರೂಪು = ಆ ಬಡನಡುವಿನ ಸುಂದರಿಯ ಸೊಬಗು ಕೃತಿ 'ರೂಪು – ಎಲ್ಲ, ಸೋಲ್ತು ನೋಡಿದರ ಮನಕ್ಕೆ + ಅಣಂ ಪಡೆಯದಲ್ತೆ ವಿಕಲ್ಪಮನ್ = ಸೋತು ನೋಡುವವರ ಮನಸ್ಸಿಗೆ ಸ್ವಲ್ಪವೂ ವ್ಯತ್ಯಾಸ ಕಾಣಿಸದು.

**ಗದ್ಯಾನುಸರಣ:** 'ಅದು ದೇವಲೋಕ, ಇದು ಮನ್ಮಥರೂಪದ ಮನುಷ್ಯಲೋಕ – ಇದಿಷ್ಟೇ ವ್ಯತ್ಯಾಸ; ಅಲ್ಲಿ ಅವಳು ದೇವರಮಣಿ, ಇಲ್ಲಿ ಮನುಜಕಾಂತೆ – ಎಂಬುದಷ್ಟೇ ವ್ಯತ್ಯಾಸ; ಅಷ್ಟು ಹೊರತು ನೋಡುವವರಿಗೆ ಬಡನಡುವಿನ ಆ ಸುಂದರಿಯ ಸೊಬಗು ಕೃತಿ ರೂಪು – ಯಾವುದರಲ್ಲೂ ಸ್ವಲ್ಪವೂ ವ್ಯತ್ಯಾಸ ಕಾಣಿಸದು.'

**ಲತೆಯುಂ ಕರ್ನೆಯ್ದಿಲುಂ ಸೋಗೆಯುಮತನುಧನುರ್ಲೇಖೆಯುಂ ವಿದ್ರು ಮೋದ್ಯ**
**ದ್ದ್ಯುತಿಯುಂ ಮುಕ್ತಾಕಳಾಪಸ್ಫುರಿತಮುಮೆಸೆದೆತ್ತೆತ್ತ ಬಂದಿರ್ದುವೆಂದೆಂ**
**ದು ತಮಮಂ ಕೈಕೊಳ್ವಿನಂ ಕೋಮಲತನುವಲರ್ಗಣ್ ನೀಳ್ದ ಧಮ್ಮಿಲ್ಲಮುದ್ಭ್ರೂ**
**ಲತೆ ಸದ್ದಂತಚ್ಛದಂ ದಂತರುಚಿ ರುಚಿರಶೋಭಾಕರಂ ವಜ್ರಜಂಘಾ ೨೦**

**ಪದವಿಭಾಗ–ಅನ್ವಯ–ಅರ್ಥ:** ವಜ್ರಜಂಘಾ, ಲತೆಯುಂ = ಬಳ್ಳಿಯೂ, ಕರ್ನೆಯ್ದಿಲುಂ = ನೈದಿಲೆಪುಷ್ಪವೂ, ಸೋಗೆಯುಂ = ನವಿಲುಗರಿಯೂ, ಅತನುಧನುರ್ಲೇಖೆಯುಂ = ಕಾಮನಬಿಲ್ಲೂ, ವಿದ್ರುಮ + ಉದ್ಯತ್ + ದ್ಯುತಿಯುಂ

= ಹವಳದ ಮಹಾ ಹೊಳಪೂ, ಮುಕ್ತಾಕಳಾಪಸ್ಫುರಿತಮುಂ = ಮುತ್ತಿನಸರದ ಕಾಂತಿಯೂ, ಎಸೆದು + ಎತ್ತೆತ್ತ ಬಂದಿರ್ದುವೆಂದೆಂದು = ಶೋಭಿಸುತ್ತ ಎಲ್ಲೆಲ್ಲಿಂದಲೋ ಬಂದಿವೆ ಎಂದು, ತಮಂ ಕೈಕೊಳ್ವಿನಂ = ಭ್ರಮೆಗೊಳಿಸುವಂತೆ, ಕೋಮಲತನು = ಅವಳ ಕೋಮಲ ದೇಹ, ಅಲರ್ಗಣ್ = ಹೂವಿನಂಥ ಕಣ್ಣುಗಳು, ನೀಳ್ದ ಧಮ್ಮಿಲ್ಲಂ = ನೀಳವಾದ ಕೇಶರಾಶಿ, ಉತ್ + ಭ್ರೂಲತೆ = ಎತ್ತರವಾದ ಹುಬ್ಬೆಂಬ ಬಳ್ಳಿಗಳು, ಸತ್ + ದಂತಚ್ಛದಂ = ಸುಂದರ ತುಟಿಗಳು, ದಂತರುಚಿ = ಹಲ್ಲುಗಳ ಬಿಳಿಪು, ರುಚಿರಶೋಭಾಕರಂ = ಹಿತಕರವಾದ ಶೋಭೆಯಿಂದ ಕೂಡಿವೆ.

**ಗದ್ಯಾನುಸರಣ:** 'ವಜ್ರಜಂಘನೇ, ಬಳ್ಳಿ ನೈದಿಲೆಪುಷ್ಪ ನವಿಲುಗರಿ ಕಾಮನಬಿಲ್ಲು ಹವಳದ ಮಹಾ ಹೊಳಪು ಮುತ್ತಿನಸರ – ಇವುಗಳ ಕಾಂತಿಯು ಶೋಭಿಸುತ್ತ ಎಲ್ಲೆಲ್ಲಿಂದಲೋ ಬಂದಿವೆ ಎಂದು ಭ್ರಮೆಗೊಳಿಸುವಂತೆ, ಅವಳ ಕೋಮಲ ದೇಹ, ಹೂವಿನಂಥ ಕಣ್ಣುಗಳು, ನೀಳ ಕೇಶರಾಶಿ, ಎತ್ತರವಾದ ಹುಬ್ಬೆಂಬ ಬಳ್ಳಿಗಳು, ಸುಂದರ ತುಟಿಗಳು, ಹಲ್ಲುಗಳ ಬಿಳಿಪು – ಎಲ್ಲವೂ ಹಿತಕರವಾದ ಶೋಭೆಯಿಂದ ಕೂಡಿವೆ.'

**ಒಳಪೊಯ್ಯಲ್ ನಿನ್ನನಾ ಕನ್ನೆಯ ತುಱುಗೆಮೆಗಳ್ ಸುತ್ತಲುಂ ನಿನ್ನನಾಕೋ**
**ಮಳೆಯಂದಂಬೆತ್ತ ಸುತ್ತುಂಗುರುಳಳವಡಿಸಲ್ ನಿನ್ನನಾ ತನ್ವಿಯೆತ್ತಂ**
**ಬಳೆದುತ್ತುಂಗಸ್ತನಂ ಮಾಣ್ದಿರದೆ ಬಳಸಲಿಂ ನಿನ್ನನಾ ಕಾಂತೆಯಂತಾ**
**ನಳಿತೋಳ್ಗಳ್ ಪಕ್ಕುವಾರ್ದಿರ್ದುವು ಪಿರಿದು ತೊಡರ್ಪಾದುದಿನ್ನೆತ್ತಪೋಪೈ ೨೧**

**ಪದವಿಭಾಗ–ಅನ್ವಯ–ಅರ್ಥ:** ಆ ಕನ್ನೆಯ ತುಱುಗೆಮೆಗಳ್ ನಿನ್ನನ್ ಒಳಪೊಯ್ಯಲ್ = ಆ ಕನ್ನಿಕೆಯ ದಟ್ಟ ಕೂದಲ ರೆಪ್ಪೆಗಳು ನಿನ್ನನ್ನು ಒಳಹುಗಿಸಲು, ಆ ಕೋಮಳೆಯ + ಅಂದಂಬೆತ್ತ ಸುತ್ತುಂಗುರುಳ್ ನಿನ್ನನ್ ಸುತ್ತಲುಂ = ಆ ಕೋಮಲೆಯ ಸೊಂಪಾದ ಗುಂಗುರುಗೂದಲು ನಿನ್ನನ್ನು ಕಟ್ಟಿಹಾಕಲು, ಆ ತನ್ವಿಯ + ಎತ್ತಂಬಳೆದ + ಉತ್ತುಂಗಸ್ತನಂ ನಿನ್ನನ್ ಮಾಣ್ದಿರದೆ ಅಳವಡಿಸಲ್ = ಆ ಸಪೂರೆಯ ಪುಷ್ಟವಾದ ತೋರಮೊಲೆಗಳು ನಿನ್ನನ್ನು ಹಿಡಿದಿಡಲು, ಇಂ ಆ ಕಾಂತೆಯ + ಅಂತು + ಆ ನಳಿತೋಳ್ಗಳ್ ನಿನ್ನನ್ ಬಳಸಲ್ ಪಕ್ಕುವಾರ್ದು + ಇರ್ದುವು = ಇನ್ನು ಆ ಚೆಲುವೆಯ ಬಳ್ಳಿದೋಳುಗಳು ನಿನ್ನನ್ನು ಸುತ್ತುವರಿಯಲು ಅವಕಾಶಕ್ಕಾಗಿ ಕಾಯುತ್ತಿವೆ; ಪಿರಿದು ತೊಡರ್ಪು + ಆದುದು = ಹೀಗೆ ನಿನಗೆ ಭಾರಿ ತೊಡರು ಉಂಟಾಗಿದೆ; ಇನ್ನೆತ್ತ ಪೋಪೈ = ಮತ್ತೆಲ್ಲಿ ಹೋಗುತ್ತೀಯೆ!

**ಗದ್ಯಾನುಸರಣ:** ಆ ಕನ್ನಿಕೆಯ ದಟ್ಟಕೂದಲ ರೆಪ್ಪೆಗಳು ನಿನ್ನನ್ನು ಒಳಹುಗಿಸಲು, ಆ ಕೋಮಲೆಯ ಸೊಂಪಾದ ಗುಂಗುರುಗೂದಲು ನಿನ್ನನ್ನು ಕಟ್ಟಿಹಾಕಲು, ಆ

ಸಪೂರೆಯ ಪುಷ್ಪವಾದ ತೋರಮೊಲೆಗಳು ನಿನ್ನನ್ನು ಹಿಡಿದಿಡಲು, ಆ ಚೆಲುವೆಯ ಬಳ್ಳಿದೋಳುಗಳು ನಿನ್ನನ್ನು ಸುತ್ತುವರಿಯಲು – ಅವಕಾಶಕ್ಕಾಗಿ ಕಾಯುತ್ತಿವೆ; ಹೀಗೆ ನಿನಗೆ ಭಾರಿ ತೊಡರು ಉಂಟಾಗಿದೆ; ಹೀಗಾಗಿ ಮತ್ತೆಲ್ಲಿ ಹೋಗುತ್ತೀಯೆ!

**ವ॥ ಮತ್ತಮಾಕೆ ನೀಲೋತ್ಪಳದಳನಯನೆಯುಂ ಕುಂದಕುಟ್ಮಲ ದಶನೆಯುಂ ಶಿರೀಷದಾಮಕೋಮಳಬಾಹುಯುಗಳೆಯುಂ ಕಮಳದಳ 'ಕೋಮಳ ಕರತಳೆಯುಂ ವಕುಳಮುಕುಳಸುರಭಿನಿಶ್ವಾಸೆಯುಂ ಚಂಪಕ ದಳದಾಮಾವದಾತೆಯುಮಾಗಿ ಕುಸುಮಸುಕುಮಾರ ತನುವಪ್ಪುದಱಿಂದ ತನುಪರಿತಾಪಮಂ ಸೈರಿಸಲಾಱದೆ ನಿನ್ನೊಳಾದ ವೃತ್ತಾಂತಮನೀ ಪಟದೊಳ್ ಬರೆದು ಆಂ ತನಗೆ ಪರಮವಿಶ್ವಾಸಭೂಮಿಯೆನಾಗಿ ಕಿಱಿಯಂದಿಂದಿತ್ತ ನಡೆಪಿದೋದಿಸಿದ ದಾದಿಯೆನಪ್ಪುದಱಿಂ ಪಂಡಿತೆಯೆಂಬ ಬಱಿಯ ಪೆಸರಲ್ಲದೆ ರಾಜಕುಳಸತತಸಂವಾಸ ಪ್ರಾಪ್ತಪ್ರಾಗಲ್ಭ್ಯತೆಯುಮುಳ್ಳುದಱಿಂದಮೀಪಟಮಂ ಪ್ರಾಣಮನೆ ಕೈಯೆಡೆಗುಡುವಂತೆನ್ನ ಕೈಯೊಳ್ಕೊಟ್ಟು ಮದೀಯ ಪ್ರಾಣ ವಲ್ಲಭನನೆಲ್ಲಿ ಪೊಕ್ಕುಮೆಲ್ಲಂದದೊಳ ಮಱಿಸೆಂದಟ್ಟಿದೊಡೆ ಬಂದಿದನಿಲ್ಲಿ ಪಸರಿಸಿ ಪಾಟ್ಟಿಕ್ಕೆವಟ್ಟಿರ್ದೆಂ: ಮದೀಯ ಕಾಯಕ್ಲೇಶಫಳಮುಂ ಜನ್ಮಫಳ ಮುಮೆನಗಿಂದು ನಿನ್ನ ಬರವಿನಿಂದಂ ಸಫಳಮಾದುದೆಂಬುದುಂ ತೆಂಕಣೆಲರ ಲೆಪದಿಂದಂಕುರಿಸಿದ ಚೂತದಂತೆ ಆತಂ ರೋಮಾಂಚಕಂಚುಕಿತ ಶರೀರನಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ + ಆಕೆ = ಅಷ್ಟಲ್ಲದೆ ಅವಳು, ನೀಲ + ಉತ್ಪಳದಳನಯನೆಯುಂ = ಕನ್ನೈದಿಲೆಯ ಪಕಳೆಯಂತಹ ಕಣ್ಣುಳ್ಳವಳೂ, ಕುಂದಕುಟ್ಮಲದಶನೆಯುಂ = ಕುಂದಪುಷ್ಪದಂತಹ ಹಲ್ಲುಗಳವಳೂ, ಶಿರೀಷದಾಮಕೋಮಳಬಾಹುಯುಗಳೆಯುಂ = ಶಿರೀಷಪುಷ್ಪಮಾಲೆಯಂತಹ ಜೋಡಿ ತೋಳುಗಳವಳೂ, ಕಮಳದಳಕೋಮಳಕರತಳೆಯುಂ = ಕಮಲದ ದಳದಂತಹ ಕೋಮಲವಾದ ಕೈಗಳುಳ್ಳವಳೂ, ವಕುಳಮುಕುಳಸುರಭಿನಿಶ್ವಾಸೆಯುಂ = ಬಕುಲದ ಹೂಗಳಂತೆ ಪರಿಮಳಯುಕ್ತ ನಿಶ್ವಾಸವುಳ್ಳವಳೂ, ಚಂಪಕದಳದಾಮ + ಅವದಾತೆಯುಂ + ಆಗಿ = ಸಂಪಿಗೆಯೆಸಳಿನಂತಹ ಮೈಬಣ್ಣದವಳೂ, ಕುಸುಮಸುಕುಮಾರತನುವಪ್ಪುದಱಿಂದೆ = ಹೂವಿನಂತೆ ಮೃದುವಾದ ಶರೀರದವಳೂ ಆಗಿ, ಅತನುಪರಿತಾಪಮಂ ಸೈರಿಸಲಾಱದೆ = ಮದನತಾಪವನ್ನು ಸಹಿಸಿಕೊಳ್ಳಲಾರದೆ, ನಿನ್ನೊಳಾದ ವೃತ್ತಾಂತಮನ್ = ನಿನ್ನೊಡನೆ ನಡೆದ ಪ್ರಸಂಗಗಳನ್ನು, ಈ ಪಟದೊಳ್ ಬರೆದು = ಈ ಚಿತ್ರದಲ್ಲಿ ಬಣ್ಣಿಸಿ, ಆಂ ತನಗೆ ಪರಮವಿಶ್ವಾಸಭೂಮಿಯೆನ್ + ಆಗಿ = ನಾನು ಅವಳಿಗೆ ಅತ್ಯಂತ ನಂಬಿಕಸ್ಥಳಾದವಳಾದ್ದರಿಂದಲೂ, ಕಿಱಿಯಂದಿಂದಿತ್ತ ನಡೆಪಿದೋದಿಸಿದ ದಾದಿಯೆನ್ + ಅಪ್ಪುದಱಿಂ = ಚಿಕ್ಕಂದಿನಿಂದ ಇಲ್ಲಿಯವರೆಗೂ ಬೆಳೆಸಿ ಓದಿಸಿದ ದಾದಿಯಾಗಿರುವುದರಿಂದಲೂ, ಪಂಡಿತೆಯೆಂಬ ಬಱಿಯ ಪೆಸರಲ್ಲದೆ = ಹೆಸರಿನಲ್ಲಿ ಮಾತ್ರ ಪಂಡಿತೆಯಾಗಿರದೆ, ರಾಜಕುಳಸತತಸಂವಾಸಪ್ರಾಪ್ತ

= ರಾಜಸಮೂಹದೊಡನೆ ನಿರಂತರವಾಗಿ ಬದುಕಿದ್ದುದರಿಂದ ದೊರೆತ, ಪ್ರಾಗಲ್ಭ್ಯತೆಯುಂ + ಉಳ್ಳುದಱಿಂದಮೀ = ಪ್ರೌಢಮೆಯೂ ಇರುವುದರಿಂದಾಗಿ, ಪ್ರಾಣಮನೆ ಕೈಯೆಡೆಗುಡುವಂತೆ ಪಟಮಂ ಎನ್ನ ಕೈಯೊಳ್ಕೊಟ್ಟು = ತನ್ನ ಪ್ರಾಣವನ್ನೇ ನೀಡುವಂತೆ ಈ ಚಿತ್ರವನ್ನು ನನಗೆ ಕೊಟ್ಟು, ಮದೀಯ ಪ್ರಾಣವಲ್ಲಭನನ್ + ಎಲ್ಲಿ ಪೊಕ್ಕುಂ + ಎಲ್ಲಂದದೊಳಂ + ಅಱಸು + ಎಂದು + ಅಟ್ಟಿದೊಡೆ = ನನ್ನ ಪ್ರಾಣಕಾಂತನನ್ನು ಎಲ್ಲ ಕಡೆ ನೋಡಿ ಎಲ್ಲ ಬಗೆಯಿಂದ ಹುಡುಕು ಎಂದು ಕಳಿಸಲು, ಬಂದು + ಇದನ್ + ಇಲ್ಲಿ ಪಸರಿಸಿ ಪಾಱ್ಪೆಕ್ಕೆ + ಪಟ್ಟಿರ್ದೆಂ = ಬಂದ ನಾನು ಚಿತ್ರವನ್ನು ಇಲ್ಲಿ ಹರಡಿ ಈ ಮುರುಕು ಮಂಟಪದಲ್ಲಿಯೇ ಮಲಗಿದ್ದೆ: ನಿನ್ನ ಬರವಿನಿಂದಂ = ನಿನ್ನ ಬರುವಿಕೆಯಿಂದಾಗಿ ಈಗ, ಮದೀಯಕಾಯಕ್ಲೇಶಫಳಮುಂ = ನನ್ನ ದೇಹಶ್ರಮಕ್ಕೆ ತಕ್ಕ ಪ್ರತಿಫಲವೂ, ಜನ್ಮಫಳಮುಂ = ಜೀವನ ಸಾರ್ಥಕ್ಯವೂ, ಎನಗಿಂದು ಸಫಳಮಾದುದು = ನನಗಿವತ್ತು ದೊರೆಯಿತು, ಎಂಬುದುಂ = ಎಂದು ಹೇಳಲು, ಆತಂ ತೆಂಕಣೆಲರಲೆಪದಿಂದೆ + ಅಂಕುರಿಸಿದ ಚೂತದಂತೆ = ಅವನು ತೆಂಗಾಳಿಯ ಬೀಸುವಿಕೆಯಿಂದ ಚಿಗಿತ ಮಾವಿನ ಮರದಂತೆ, ರೋಮಾಂಚಕಂಚುಕಿತಶರೀರನಾಗಿ = ಪುಲಕಗೊಂಡ ದೇಹವುಳ್ಳವನಾಗಿ,

**ಗದ್ಯಾನುಸರಣ:** ಶ್ರೀಮತಿಯ ಕಣ್ಣುಗಳು ಕನ್ನೈದಿಲೆಯ ಪಕಳೆಯಂತಹವು, ಹಲ್ಲುಗಳೋ ಕುಂದಪುಷ್ಪದಂತಹವು, ಜೋಡಿ ತೋಳುಗಳು ಶಿರೀಷಪುಷ್ಪಮಾಲೆಯಂತಹವು, ಕೈಗಳು ಕಮಲದಳದಂತೆ ಕೋಮಲ, ಅವಳ ನಿಶ್ವಾಸ ಬಕುಲದ ಹೂಗಳ ಪರಿಮಳದಿಂದ ಕೂಡಿದುದು, ಮೈಬಣ್ಣ ಸಂಪಿಗೆಯೆಸಳಿನಂತಹುದು, ಅವಳ ಶರೀರ ಹೂವಿನಂತೆ ಮೃದು – ಹೀಗಾಗಿ ಅವಳು ಮದನತಾಪವನ್ನು ಸಹಿಸಿಕೊಳ್ಳಲಾರದೆ ನಿನ್ನೊಡನೆ ನಡೆದ ಪ್ರಸಂಗಗಳನ್ನು ಈ ಚಿತ್ರದಲ್ಲಿ ಬಣ್ಣಿಸಿದ್ದಾಳೆ; ನಾನು ಅವಳಿಗೆ ಅತ್ಯಂತ ನಂಬಿಕಸ್ಥೆಯಾದ ಚಿಕ್ಕಂದಿನಿಂದ ಇಲ್ಲಿಯವರೆಗೂ ಬೆಳೆಸಿ ಓದಿಸಿದ ದಾದಿ, ನನ್ನ ಹೆಸರು ಪಂಡಿತೆ; ಅಷ್ಟೇ ಅಲ್ಲ, ರಾಜಸಮೂಹದೊಡನೆ ನಿರಂತರವಾಗಿ ಇದ್ದುದರಿಂದ ನನ್ನಲ್ಲಿ ಪ್ರೌಢಮೆಯೂ ಇದೆ; ಇಂತಹ ನನಗೆ ತನ್ನ ಪ್ರಾಣವನ್ನೇ ನೀಡುವಂತೆ ಈ ಚಿತ್ರವನ್ನು ಕೊಟ್ಟು, 'ನನ್ನ ಪ್ರಾಣಕಾಂತನನ್ನು ಎಲ್ಲ ಕಡೆ ನೋಡಿ ಎಲ್ಲ ಬಗೆಯಿಂದ ಹುಡುಕು' ಎಂದು ಹೇಳಿ ಕಳಿಸಿದಾಗ ನಾನಿಲ್ಲಿ ಬಂದು ಚಿತ್ರವನ್ನು ಹರಡಿ ಈ ಮುರುಕು ಮಂಟಪದಲ್ಲಿಯೇ ಮಲಗಿದ್ದೆ: ನೀನು ಬಂದದ್ದರಿಂದ ನನ್ನ ಶ್ರಮಕ್ಕೆ ತಕ್ಕ ಪ್ರತಿಫಲವೂ ಜೀವನಕ್ಕೆ ಸಾರ್ಥಕ್ಯವೂ ಉಂಟಾದುವು ಎಂದು ಹೇಳಿದೆ. ಇದನ್ನು ಕೇಳಿದ ಅವನು ತೆಂಗಾಳಿ ಬೀಸಲು (ವಸಂತಕಾಲ ಬರಲು) ಮಾವಿನ ಮರ ಚಿಗುರುವಂತೆ ಪುಲಕಗೊಂಡ.

**ನಿನಗಾನೇನೆಂಬೆನೆನ್ನಿರ್ದಿರವನಱಿದು ನೀನಿರ್ದೆಯಿನ್ನಾಕೆಗಂ ನೀಂ**
**ಮನದನ್ನೈ ತೋಱು ನಿನ್ನೀ ಪಟಮನೆನಗದಂ ನೋಡಿ ಮತ್ಕಾಂತೆಯಂಕಾ**
**ಣ್ಬಿನೆಗಂ ಸೈರಿಪೆನೆನ್ನೀ ಬರೆದ ಪಟಮುಮಂ ಕೊಂಡುಪೋಗಾಕೆಗೆಂದಿಂ**
**ತಿನಿತುಂ ವೃತ್ತಾಂತಮಂ ನಿನ್ನಿನಿಯನಱಿಯೆ ಪೇೞ್ದಟ್ಟಿದಂ ಲೋಲನೇತ್ರೇ ೨೨**

**ಪದವಿಭಾಗ-ಅನ್ವಯ-ಅರ್ಥ:** ನಿನಗಾನ್ + ಏನೆಂಬೆನ್ = ನಿನಗೆ ನಾನೇನು ಹೇಳಲಿ? ಎನ್ನಿರ್ದ + ಇರವನ್ + ಅಱಿದು ನೀನಿರ್ದೆ = ನಾನಿರುವ ಸ್ಥಿತಿಯನ್ನು ನೀನು ಅರಿತಿರುವೆ, ಇನ್ನು + ಆಕೆಗಂ ನೀಂ ಮನದನ್ನೈ = ಅಲ್ಲದೆ ನೀನು ಆಕೆಗೂ ಬೇಕಾದವಳು, ನಿನ್ನೀ ಪಟಮನ್ ಎನಗೆ ತೋಱು = ನೀನು ಈ ಚಿತ್ರವನ್ನು ನನಗೆ ನೀಡು, ಅದಂ ನೋಡಿ ಮತ್ + ಕಾಂತೆಯಂ ಕಾಣ್ಬಿನೆಗಂ ಸೈರಿಪೆನ್ = ಅದನ್ನು ನೋಡುತ್ತ ಕಾಂತೆಯನ್ನೇ ಕಾಣುವವರೆಗೂ ನನ್ನ ವಿರಹವನ್ನು ಸಹಿಸಿಕೊಳ್ಳುತ್ತೇನೆ, ಇನ್ನು + ಈ ಬರೆದ ಪಟಮುಮಂ ಆಕೆಗೆ ಕೊಂಡುಪೋಗು = ಜೊತೆಗೆ ನಾನು ಬರೆದ ಅವಳ ಈ ಚಿತ್ರವನ್ನೂ ತೆಗೆದುಕೊಂಡು ಹೋಗು, ಎಂದು + ಇಂತು + ಇನಿತುಂ ವೃತ್ತಾಂತಮಂ ನಿನ್ನಿನಿಯನ್ + ಅಱಿಯೆ ಪೇೞ್ದು = ಎಂದು ಇಷ್ಟೆಲ್ಲವನ್ನೂ ನಿನ್ನ ಪ್ರಿಯಕರನು ವಿವರವಾಗಿ ಹೇಳಿ, ಅಟ್ಟಿದಂ = ನನ್ನನ್ನು ಕಳಿಸಿಕೊಟ್ಟ.

**ಗದ್ಯಾನುಸರಣ:** ಅವನೆಂದ: 'ನಿನಗೆ ನಾನೇನು ಹೇಳಲಿ? ನಾನಿರುವ ಸ್ಥಿತಿಯನ್ನು ನೀನು ಅರಿತಿರುವೆ, ಅಲ್ಲದೆ ನೀನು ಆಕೆಗೂ ಬೇಕಾದವಳು, ನೀನು ಈ ಚಿತ್ರವನ್ನು ನನಗೆ ನೀಡು, ಅದನ್ನು ನೋಡುತ್ತ ಕಾಂತೆಯನ್ನೇ ಕಾಣುವವರೆಗೂ ವಿರಹವನ್ನು ಸಹಿಸಿಕೊಳ್ಳುತ್ತೇನೆ, ಜೊತೆಗೆ ನಾನು ಬರೆದ ಅವಳ ಈ ಚಿತ್ರವನ್ನೂ ತೆಗೆದುಕೊಂಡು ಹೋಗು' ಎಂದು ಇಷ್ಟೆಲ್ಲವನ್ನೂ ನಿನ್ನ ಪ್ರಿಯಕರನು ವಿವರವಾಗಿ ಹೇಳಿ, ಚಂಚಲನೇತ್ರೆಯೇ, ನನ್ನನ್ನು ಕಳಿಸಿಕೊಟ್ಟ.

**ವಿಶೇಷ ವಿಚಾರ**: ಶ್ರೀಮತಿಯನ್ನು ಕಾಣುವ ಆತುರದಿಂದ ತಾನೇ ಹೋಗದೆ ಅವಳ ಪಟವನ್ನು ಪಂಡಿತೆಯಿಂದ ತೆಗೆದುಕೊಂಡು ಅದನ್ನು ನೋಡುತ್ತ ತನ್ನ ವಿರಹವನ್ನು ಕಳೆಯುತ್ತೇನೆಂಬುದರ ಔಚಿತ್ಯವನ್ನು ಗಮನಿಸಬೇಕು; ಅವನು ಶಿಷ್ಟತೆಯನ್ನು ಬಲ್ಲ ಸುಸಂಸ್ಕೃತ ಯುವಕ ಎಂಬುದನ್ನು ಇದು ನವಿರಾಗಿ ಸೂಚಿಸುತ್ತದೆ.

**ವ॥ ಎಂದು ಮನಃಪ್ರಿಯತಮನ ಬರೆದ ಸಾಭಿಜ್ಞಾನ ಪಟಮನೀವುದು ಮಾಕೆಯುಮದಂ ನಿಮಿರ್ಚಿ ನೋಡಿ,**

**ಪದವಿಭಾಗ-ಅನ್ವಯ-ಅರ್ಥ:** ಎಂದು ಮನಃಪ್ರಿಯತಮನ ಬರೆದ =

ಹೀಗೆಂದು ಪಂಡಿತೆಯು ವಜ್ರಜಂಘನು ಬರೆದಿದ್ದ, ಅ + ಅಭಿಜ್ಞಾನಪಟಮನ್ + ಈವುದುಂ = ಗುರುತುಗಳಿದ್ದ ಚಿತ್ರವನ್ನು ನೀಡುವುದೂ, ಆಕೆಯುಂ + ಅದಂ ನಿಮಿರ್ಚಿ ನೋಡಿ = ಶ್ರೀಮತಿಯು ಅದನನ್ನು ಕಣ್ಣರಳಿಸಿ ನೋಡಿ

**ಗದ್ಯಾನುಸರಣ:** ಹೀಗೆಂದು ಹೇಳಿ ಪಂಡಿತೆಯು ವಜ್ರಜಂಘನು ಬರೆದಿದ್ದ ಚಿತ್ರವನ್ನು ನೀಡಿದಳು; ಶ್ರೀಮತಿಯು ಅದನನ್ನು ಕಣ್ಣರಳಿಸಿ ನೋಡಿದಳು.

**ವಿಶೇಷ ವಿಚಾರ:** ಇಲ್ಲಿ ಶ್ರೀಮತಿ ಚಿತ್ರಪಟವನ್ನು ಬಿಡಿಸಿ ನೋಡಿದರೆ ಪೂರ್ವಪುರಾಣದಲ್ಲಿ ಪಂಡಿತೆ ತಾನೇ ಹಾಗೆ ಮಾಡುತ್ತಾಳೆ; ಜೊತೆಗೆ ಈ ಸಂದರ್ಭದಲ್ಲಿ ಅಲ್ಲಿಗೆ ಬೇಕಿಲ್ಲದ ವಿವರಗಳು ಇಪ್ಪತ್ತು ಶ್ಲೋಕಗಳಲ್ಲಿ ಬಂದಿವೆ (ಪೂಪು, ೭. ೧೫೮-೭೭)

**ಅವಿನಾಣಮನಿತುಮೆರ್ದೆವುಗೆ**
**ಕಿವಿವುಗೆ ಪಂಡಿತೆಗೆ ನುಡಿದ ನಲ್ಲನ ನುಡಿ ತ**
**ಳ್ತವಿರಳರೋಮಾಂಚದೆ ಮಾ**
**ಧವಸಮಯದೊಳಲರ್ದ ಚೂತಲತೆಯನ್ನು ಪೋಳ್ತಳ್ ೨೩**

**ಪದವಿಭಾಗ-ಅನ್ವಯ-ಅರ್ಥ:** ಅವಿನಾಣಂ + ಅನಿತುಂ + ಎರ್ದೆ + ಪುಗೆ = ನೆನಪುಗಳೆಲ್ಲ ತನ್ನ ಮನಸ್ಸನ್ನು ಹೊಕ್ಕು, ಪಂಡಿತೆಗೆ ನುಡಿದ ನಲ್ಲನ ನುಡಿ ಕಿವಿವುಗೆ = ಪಂಡಿತೆಯ ಬಳಿ ತನ್ನ ನಲ್ಲನು ಆಡಿದ ಮಾತುಗಳು ಕಿವಿಯಲ್ಲಿ ತುಂಬಿಕೊಳ್ಳಲು, ಅವಿರಳರೋಮಾಂಚದೆ ತಳ್ತು = ಗಾಢ ರೋಮಾಂಚನದಿಂದ ಕೂಡಿ, ಮಾಧವಸಮಯದೊಳ್ + ಅಲರ್ದ = ವಸಂತಕಾಲದಲ್ಲಿ ಚಿಗುರಿದ, ಚೂತಲತೆಯನ್ನು ಪೋಳ್ತಳ್ = ಶ್ರೀಮತಿಯು ಎಳೆಯ ಮಾವಿನ ಮರವನ್ನು ಹೋತಳು.

**ಗದ್ಯಾನುಸರಣ:** ಚಿತ್ರದಲ್ಲಿನ ನೆನಪುಗಳೆಲ್ಲ ಅವಳ ಮನಸ್ಸನ್ನು ಹೊಕ್ಕವು, ಪಂಡಿತೆಯ ಬಳಿ ತನ್ನ ನಲ್ಲನು ಆಡಿದ ಮಾತುಗಳು ಅವಳ ಕಿವಿಯನ್ನು ತುಂಬಿದುವು; ಗಾಢ ರೋಮಾಂಚನದಿಂದ ಕೂಡಿ ಶ್ರೀಮತಿಯು ವಸಂತಕಾಲದಲ್ಲಿ ಚಿಗುರಿದ ಎಳೆಯ ಮಾವಿನ ಮರದಂತಾದಳು.

**ವ। ಅನ್ನೆಗಮತ್ತ ಶ್ರೀಮತಿವಜ್ರಜಂಘರ ಜನ್ಮಾಂತರಸ್ನೇಹರಸಾಮೃತ ಪಾತ್ರಚಿತ್ರ ಪಟವ್ಯತಿಹಾರಮಂ ವಜ್ರಜಂಘಾನುಚರರಿಂದಮಱಿದು ವಜ್ರಬಾಹುಮಹೀನಾಥಂ ನಿಜತನೂಜಗುಣಮಣಿಮಾಲೆಗೆ ತತ್ಕನ್ಯಾರತ್ನಮಂ ನಾಯಕಮಣಿ ಮಾಡ ಲೆಂದಾತ್ಮೀಯವಿಳಾಸಂ ಬೆರಸು ಬಂದು**

**ಪುಂಡರೀಕಿಣಿಗೆ ಮುಂದಟ್ಟಿದ ದೂತಂಗೆ ಪ್ರೀತನಾಗಿ ಮೆಚ್ಚಿ ಮೆಚ್ಚಿತ್ತು ವಜ್ರದಂತಚಕ್ರವರ್ತಿಯುಮ ನಂತಸಾಮಂತಾಂತಃ ಪುರಪರಿವಾರ ಪರಿವೃತನುಂ ಬಂಧುರಗಂಧಸಿಂಧೂ ರಾರೂಢನುಮಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಅನ್ನೆಗಂ + ಅತ್ತ = ಅಷ್ಟರಲ್ಲಿ ಆ ಕಡೆ, ಶ್ರೀಮತಿವಜ್ರಜಂಘರ ಜನ್ಮಾಂತರಸ್ನೇಹರಸಾಮೃತಪಾತ್ರ = ಶ್ರೀಮತಿ–ವಜ್ರಜಂಘರ ಜನ್ಮಾಂತರಗಳ ಪ್ರೀತಿಯು ಹರಿದು ಬಂದ ಪಾತ್ರವಾದ, ಚಿತ್ರಪಟವ್ಯತಿಹಾರಮಂ = ಚಿತ್ರಪಟದ ವಿನಿಮಯವನ್ನು, ವಜ್ರಜಂಘ + ಅನುಚರರಿಂದಂ + ಅಱಿದು = ವಜ್ರಜಂಘನ ಸೇವಕರಿಂದ ತಿಳಿದು, ವಜ್ರಬಾಹುಮಹೀನಾಥಂ = ವಜ್ರದಂತ ಮಹಾರಾಜನು, ನಿಜತನೂಜಗುಣಮಣಿಮಾಲೆಗೆ = ತನ್ನ ಮಗ ಗುಣರತ್ನಮಾಲೆಗೆ, ತತ್ + ಕನ್ಯಾರತ್ನಮಂ ನಾಯಕಮಣಿ ಮಾಡಲೆಂದು = ಆ ಕನ್ಯಾರತ್ನವನ್ನು ನಾಯಕಮಣಿಯನ್ನಾಗಿ ಮಾಡುವ ಉದ್ದೇಶದಿಂದ, ಆತ್ಮೀಯವಿಳಾಸಂ ಬೆರಸು ಬಂದು = ತನ್ನ ವೈಭವಗಳೊಡನೆ ಬಂದು, ಪುಂಡರೀಕಿಣಿಗೆ ಮುಂದಟ್ಟಿದ ದೂತಂಗೆ = ಪುಂಡರೀಕಿಣಿಗೆ ಈ ಮೊದಲೇ ಕಕಳಿಸಿದ್ದ ಸಂದೇಶವಾಹಕನಿಗೆ, ಪ್ರೀತನಾಗಿ ಮೆಚ್ಚಿ ಮೆಚ್ಚಿತ್ತು = ಪ್ರೀತಿಯಿಂದ ಮೆಚ್ಚಿ ಬಹುಮಾನವನ್ನು ನೀಡಿ, ವಜ್ರದಂತಚಕ್ರವರ್ತಿಯಂ = ವಜ್ರದಂತ ಚಕ್ರವರ್ತಿಯು, ಅನಂತಸಾಮಂತ + ಅಂತಃಪುರಪರಿವಾರಪರಿವೃತನುಂ = ಅಸಂಖ್ಯ ಸಾಮಂತರನ್ನೂ ಅಂತಃಪುರಸ್ತ್ರೀಯರನ್ನೂ ಕೂಡಿಕೊಂಡು, ಬಂಧುರಗಂಧಸಿಂಧೂರ + ಆರೂಢನುಂ + ಆಗಿ = ಸುಂದರವಾದ ಮದಗಜವನ್ನೇರಿ

**ಗದ್ಯಾನುಸರಣ:** ಅಷ್ಟರಲ್ಲಿ ಆ ಕಡೆ, ಶ್ರೀಮತಿ–ವಜ್ರಜಂಘರ ಜನ್ಮಾಂತರಗಳ ಪ್ರೀತಿಯು ಹರಿದು ಬಂದ ಪಾತ್ರವಾದ, ಚಿತ್ರಪಟದ ವಿನಿಮಯದ ವಿಚಾರವು ವಜ್ರಜಂಘನ ಸೇವಕರಿಂದ ವಜ್ರದಂತ ಮಹಾರಾಜನಿಗೆ ತಿಳಿಯಿತು; ಗುಣರತ್ನಮಾಲೆಯಾದ ತನ್ನ ಮಗನಿಗೆ ಆ ಕನ್ಯಾರತ್ನವನ್ನು ನಾಯಕಮಣಿಯನ್ನಾಗಿ ಮಾಡುವ ಉದ್ದೇಶದಿಂದ ಸಕಲ ವೈಭವಗಳೊಡನೆ ಹೊರಟ; ಪುಂಡರೀಕಿಣಿಗೆ ಈ ಮೊದಲೇ ಕಳಿಸಿದ್ದ ಸಂದೇಶವಾಹಕನಿಂದ ಈ ವಿಚಾರ ತಿಳಿದ ವಜ್ರದಂತ ಚಕ್ರವರ್ತಿಯು ಅವನಿಗೆ ಪ್ರೀತಿಯಿಂದ ಮೆಚ್ಚಿಕೆಯನ್ನು ನೀಡಿದ; ಅಸಂಖ್ಯ ಸಾಮಂತರನ್ನೂ ಅಂತಃಪುರಸ್ತ್ರೀಯರನ್ನೂ ಕೂಡಿಕೊಂಡು, ಸುಂದರವಾದ ಮದಗಜವನ್ನೇರಿ (ವಜ್ರಬಾಹುವನ್ನು ಎದಿರುಗೊಳ್ಳಲು) ಬಂದ.

**ಕರಿಸೇನಾಸಾರಿನದ್ಧೋತ್ತರಳಕದಳಿಕಾನನೋಚ್ಚುಂಬ್ಯಮಾನಾಂ**
**ಬರಚಕ್ರಂ ವಾಜಿರಾಜಿಶ್ರವಣಚಮರಜಶ್ರೇಣಿಸಂಜೀವಿತಾಶಾಂ**

**ಬರಭಾಗಂ ಪತ್ತಿಶಸ್ತ್ರದ್ಯುತಿಪರಿಕರಸಾಂದ್ರೀಭವಚ್ಚಂಡರೋಚಿಃ**
**ಕಿರಣೌಘಂ ವಜ್ರಬಾಹುಕ್ಷಿತಿಪತಿಗಿದಿರಂ ಬಂದನುತ್ಸಾಹದಿಂದಂ ೨೪**

**ಪದವಿಭಾಗ–ಅನ್ವಯ–ಅರ್ಥ:** ಕರಿಸೇನಾಸಾರಿನದ್ಧ = ಆನೆಯ ಸೈನ್ಯದಲ್ಲಿ ಲಗತ್ತಿಸಲಾದ, ಉತ್ತರಳ = ಮೇಲೆ ಹಾರಾಡುವ, ಕದಳಿಕಾ = ಬಾವುಟಗಳಿಂದ; ಉಚ್ಚುಂಬ್ಯಮಾನ + ಅಂಬರಚಕ್ರಂ = ಚುಂಬಿಸಲ್ಪಡುತ್ತಿದ್ದ ಗಗನಮಂಡಲ, ವಾಜಿರಾಜಿಶ್ರವಣ = ಕುದುರೆಯ ಕಿವಿಗಳಿಗೆ ಕಟ್ಟಿದ್ದ, ಚಮರಜಶ್ರೇಣೀಸಂಜೀವಿತ + ಆಶಾಂಬರಭಾಗಂ = ಚಾಮರಗಳ ಗುಂಪಿನಿಂದ ಶೋಭಿಸುತ್ತಿದ್ದ ದಿಕ್ಕುಗಳ ಪ್ರದೇಶ, ಪತ್ತಿಶಸ್ತ್ರದ್ಯುತಿಪರಿಕರಸಾಂದ್ರೀಭವತ್ = ಪದಾತಿ ಸೈನ್ಯವು ಹಿಡಿದಿದ್ದ ಆಯುಧಗಳ ಹೊಳಪಿನಿಂದ ದಟ್ಟವಾದ, ಉಚ್ಚಂಡರೋಚಿಃಕಿರಣೌಘಂ = ಸೂರ್ಯಕಿರಣಸಮೂಹ – ಹೀಗಿರಲು, ಮಹಾವಜ್ರಬಾಹುಕ್ಷಿತಿಪತಿಗೆ ಉತ್ಸಾಹದಿಂದಂ ಇದಿರಂ ಬಂದನ್ = ಸಡಗರದಿಂದ ಎದುರು ಬಂದ.

**ಗದ್ಯಾನುಸರಣ:** ಆನೆಯ ಸೈನ್ಯದಲ್ಲಿ ಲಗತ್ತಿಸಲಾದ ಬಾವುಟಗಳು ಗಗನಮಂಡಲವನ್ನು ಮುತ್ತಿಡುತ್ತಿದ್ದುವು, ಕುದುರೆಯ ಕಿವಿಗಳಿಗೆ ಕಟ್ಟಿದ್ದ ಚಾಮರಗಳ ಗುಂಪು ದಿಕ್ಕುಗಳಿಗೆ ಶೋಭೆ ತಂದಿತ್ತು, ಪದಾತಿ ಸೈನ್ಯದ ಆಯುಧಗಳ ಹೊಳಪು ಸೂರ್ಯಕಿರಣಸಮೂಹಕ್ಕೆ ಮತ್ತಷ್ಟು ಉಜ್ವಲಗೊಳಿಸಿತ್ತು – ಹೀಗೆ ವಜ್ರದಂತನು ವಜ್ರಬಾಹು ಮಹಾರಾಜನನ್ನು ಸಡಗರದಿಂದ ಎದುರುಗೊಂಡ.

**ವ। ಅಂತತಿಪ್ರೀತಿಯಿಂ ವಜ್ರಬಾಹುಕ್ಷಿತಿಪತಿಗಿದಿರ್ವೋಗಿ ನಿಜವಿಜಯಗಜದಿನಿಳಿದು ತನಗೆ ಪೊಡೆವಟ್ಟ ವಜ್ರಬಾಹುವನಾ ಶೀರ್ವಾದ ಪುರಸ್ಸರವಪ್ಪಿ ಕೊಂಡಾತ್ಮೀಯ ಶಿಖಂಡಮಣೀಮರೀಚಿಗಳಿಂ ನಿಜಪದಕಮಳ ದೊಡನೆ ವಸುಂಧರೆಯುಮನಳಂಕರಿಸಿದ ವಸುಂಧರೆಯುಮಂ ನಿಜಾನುಜೆ ಯಂ ಪರಸಿ ವಿನಯವಿನಮಿತಮಣೀಮುಕುಟನಾದ ವಜ್ರಜಂಘನನನೇಕ ಭೋಗಭಾಗನಾಗೆಂದು ಪರಸಿ ಪಿರಿದುಮಟ್ಟಿಜ್ನೊಳ್ತಕ್ಕೈರ್ಸಿಕೊಂಡು ನಿಜವಿಜಯ ಗಜೇಂದ್ರಮನೇಱಿಸಿ ಮುಂದಿಟ್ಟೊಡಗೊಂಡು ಬರೆ ಪುರಜನಂಗಳುತ್ತುಂಗಪ್ರಾಸಾದ ಕೂಟ ಕೋಟಿಗಳುಮನುದಗ್ರ ಸೌಧೋ ಪರಿಮತಳಂಗಳುಮನೇಱಿ ನೋಟ್ಟುಲ್ಲಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು + ಅತಿಪ್ರೀತಿಯಿಂ = ಹಾಗೆ ತುಂಬು ಪ್ರೀತಿಯಿಂದ, ವಜ್ರಬಾಹುಕ್ಷಿತಿಪತಿಗೆ + ಇದಿರ್ + ಪೋಗಿ = ವಜ್ರಬಾಹುವಿಗೆ ಎದುರಾಗಿ ಹೋಗಿ, ನಿಜವಿಜಯಗಜದಿನ್ + ಇಳಿದು = ತನ್ನ ಆನೆಯಿಂದ ಕೆಳಗಿಳಿದು, ತನಗೆ ಪೊಡೆವಟ್ಟ ವಜ್ರಬಾಹುವನ್ = ತನಗೆ ನಮಸ್ಕರಿಸಿದ ವಜ್ರಬಾಹುವನ್ನು, ಆಶೀರ್ವಾದಪುರಸ್ಸರವಪ್ಪಿಕೊಂಡು = ಆಶೀರ್ವಾದ ಮಾಡಿ ಅಪ್ಪಿಕೊಂಡು, ಆತ್ಮೀಯ ಶಿಖಂಡಮಣೀಮರೀಚಿಗಳಿಂ = ತನ್ನ ತಲೆಯ ಆಭರಣದ

ಕಾಂತಿಯಿಂದ, ನಿಜಪದಕಮಳದೊಡನೆ = ತನ್ನ ಪಾದಪದ್ಮಗಳ ಜೊತೆಗೆ, ವಸುಂಧರೆಯುಮನ್ + ಅಳಂಕರಿಸಿದ = ಭೂಮಿಯನ್ನೂ, ಬೆಳಗಿದ ನಿಜ + ಅನುಜೆಯಂ ವಸುಂಧರೆಯುಮಂ = ತನ್ನ ತಂಗಿ ವಸುಂಧರೆಯನ್ನೂ ಪರಸಿ, ವಿನಯವಿನಮಿತಮಣಿಮುಕುಟನಾದ = ವಿನಯದಿಂದ ನಮಸ್ಕರಿಸಿದ ಮಣಿಕಿರೀಟಿಯಾದ, ವಜ್ರಜಂಘನನ್ + ಅನೇಕಭೋಗಭಾಗನಾಗೆಂದು ಪರಸಿ = ವಜ್ರಜಂಘನಿಗೆ ಎಲ್ಲ ಭೋಗಗಳನ್ನೂ ಪಡೆ ಎಂದು ಆಶೀರ್ವದಿಸಿ, ಪಿರಿದುಮಕ್ಕಳಿನೊಳ್ + ತಕ್ಕೈಸಿಕೊಂಡು = ತುಂಬು ವಾತ್ಸಲ್ಯದಿಂದ ತಬ್ಬಿಕೊಂಡು, ನಿಜ ವಿಜಯಗಜೇಂದ್ರಮನ್ + ಏಱಿಸಿ = ತನ್ನ ಆನೆಯ ಮೇಲೆ ಅವನನ್ನು ಕೂಡಿಸಿ, ಮುಂದಿಟ್ಟೊಡಗೊಂಡು ಬರೆ = ಅವನನ್ನು ಮುಂದಿಟ್ಟುಕೊಂಡು ಬರಲು, ಪುರಜನಂಗಳ್ + ಉತ್ತುಂಗಪ್ರಾಸಾದಕೂಟಕೋಟಿಗಳುಮನ್ = ಊರ ಜನರು ಎತ್ತರವಾದ ಮಹಲುಗಳ ಮೇಲುಭಾಗವನ್ನೂ, ಉದಗ್ರಸೌಧ + ಉಪರಿಮತಳಂಗಳುಮನ್ + ಏಱಿ ನೋೞ್ಪಲ್ಲಿ = ದೊಡ್ಡ ಸೌಧಗಳ ಮೇಲುಗಡೆ ಹತ್ತಿ ನೋಡುತ್ತಿರಲು,

**ಗದ್ಯಾನುಸರಣ:** ಹಾಗೆ ತುಂಬು ಪ್ರೀತಿಯಿಂದ ವಜ್ರಬಾಹುವಿಗೆ ಎದುರು ಹೋಗಲು, ವಜ್ರಬಾಹುವು ತನ್ನ ಆನೆಯಿಂದ ಕೆಳಗಿಳಿದು ನಮಸ್ಕರಿಸಲು ಅವನನ್ನು ಆಶಿರ್ವದಿಸಿ ಅಪ್ಪಿಕೊಂಡ; ತನ್ನ ತಲೆಯ ಆಭರಣದ ಕಾಂತಿಯಿಂದ ತನ್ನ ಪಾದಪದ್ಮಗಳ ಜೊತೆಗೆ ಭೂಮಿಯನ್ನೂ ಬೆಳಗಿದ ತನ್ನ ತಂಗಿ ವಸುಂಧರೆಯನ್ನು ಹರಸಿದ; ವಿನಯದಿಂದ ನಮಸ್ಕರಿಸಿದ ಮಣಿಕಿರೀಟಿಯಾದ ವಜ್ರಜಂಘನಿಗೆ ಎಲ್ಲ ಭೋಗಗಳನ್ನೂ ಪಡೆ ಎಂದು ಆಶೀರ್ವದಿಸಿ ತುಂಬು ವಾತ್ಸಲ್ಯದಿಂದ ತಬ್ಬಿಕೊಂಡ; ಆ ಬಳಿಕ ಅವನನ್ನು ತನ್ನ ಆನೆಯ ಮೇಲೆ ಕೂಡಿಸಿ ಮುಂದಿಟ್ಟುಕೊಂಡು ಊರಿನತ್ತ ಹೊರಟ; ಊರ ಜನರು ಎತ್ತರವಾದ ಮಹಲುಗಳ ಹಾಗೂ ದೊಡ್ಡ ಸೌಧಗಳ ಮೇಲೇರಿ ಆ ಮೆರವಣಿಗೆಯನ್ನು ನೋಡಿದರು.

> **ಪುದಿದೀ ಶ್ವೇತಾತಪತ್ರೋತ್ಕರದ ನಡುವಣಂ ವಜ್ರದಂತಂ ಸಮಂತೆ**
> **ತ್ತಿದ ಪಿಂಛಚ್ಛತ್ರಷಂಡಂಗಳ ನಡುವೆಸೆವಂ ವಜ್ರಬಾಹುಕ್ಷಿತೀಶಂ**
> **ಮುದಗಂಧಭ್ರಾಂತಭೃಂಗಾವಳಿವಳಯಿತಮತ್ತದ್ವಿಪಂ ಕೂಡೆ ಮಿಂಚಿಂ**
> **ಪುದಿದತ್ತೆಂಬಂತೆ ಕೂರಂಕುಸದ ಪೊಳಪನಾ ತೋಱುವಂ ವಜ್ರಜಂಘಂ**
> ೨೫

**ಪದವಿಭಾಗ-ಅನ್ವಯ-ಅರ್ಥ:** ಪುದಿದ + ಈ ಶ್ವೇತಾತಪತ್ರ + ಉತ್ಕರದ ನಡುವಣಂ ವಜ್ರದಂತಂ = ತುಂಬಿದ ಬೆಳ್ಗೊಡೆಗಳ ಗುಂಪಿನ ನಡುವೆ ಇರುವವನು ವಜ್ರದಂತ; ಸಮಂತು + ಎತ್ತಿದ ಪಿಂಛತ್ + ಛತ್ರಷಂಡಂಗಳ ನಡುವೆ +

ಎಸೆವಂ ವಜ್ರಬಾಹುಕ್ಷಿತೀಶಂ = ಮೇಲೆತ್ತಿದ ನವಿಲುಗರಿಗಳ ಕೊಡೆಗಳ ಮಧ್ಯೆ ಶೋಭಿಸುವವನೇ ವಜ್ರಬಾಹು ಮಹಾರಾಜ; ಮದಗಂಧಭ್ರಾಂತಭೃಂಗಾವಳಿವಳಯಿತ = ಮದಜಲದಿಂದ ಭ್ರಾಂತಿಗೊಂಡ ದುಂಬಿವಿಂಡುಗಳಿಂದ ಸುತ್ತುವರೆಯಲ್ಪಟ್ಟ, ಮತ್ತದ್ವಿಪಂ = ಮದ್ದಾನೆಯು, ಕೂಡೆ ಮಿಂಚಿಂ ಪುದಿದತ್ತು + ಎಂಬಂತೆ = ಮಿಂಚನ್ನು ಸೇರಿತೋ ಎನ್ನುವಂತೆ, ಕೂರ್ + ಅಂಕುಸದ ಪೊಳಪನ್ + ಆ ತೋಱುವಂ ವಜ್ರಜಂಘಂ = ಹೊಳಪಿನ ಅಂಕುಶದ ಕಾಂತಿಯಿಂದ ಕೂಡಿರುವವನು ವಜ್ರಜಂಘ

**ಗದ್ಯಾನುಸರಣ:** 'ಹರಡಿದ ಬೆಳ್ಗೊಡೆಗಳ ನಡುವೆ ಇರುವವನು ವಜ್ರದಂತ; ಮೇಲೆತ್ತಿದ ನವಿಲುಗರಿಗಳ ಕೊಡೆಗಳ ಮಧ್ಯೆ ಶೋಭಿಸುವವನೇ ವಜ್ರಬಾಹು ಮಹಾರಾಜ; ಮದಜಲದಿಂದ ಭ್ರಾಂತಿಗೊಂಡ ದುಂಬಿವಿಂಡುಗಳಿಂದ ಸುತ್ತುವರೆಯಲ್ಪಟ್ಟ ಮದ್ದಾನೆಯು ಮಿಂಚನ್ನು ಸೇರಿತೋ ಎನ್ನುವಂತೆ ಹೊಳೆಯುವ ಅಂಕುಶದ ಕಾಂತಿಯಿಂದ ಕೂಡಿರುವವನು ವಜ್ರಜಂಘ'

**ವ। ಎಂದು ತಮ್ಮೊಳೋರೊರ್ವರೊಳ್ ನುಡಿಯುತ್ತುಂ ಪೌರಜನಂಗಳ್ ಸೂಸುವ ಲಾಜವರ್ಷಮುಮಂ ಕುಸುಮವರ್ಷಮುಮಂ ಆಂತುಕೊಳುತ್ತುಂ ಮುತ್ತಿನ ಮುಱಿದ ಲಂಬಣಂಗಳ್ವೆರಸೆಟಲ್ವ ಪಚ್ಚೆಸಾರದ ಹಾರದ ತೋರಣಂಗಳಂ ನುಗುಳುತ್ತುಂ ಬಂದು ರಾಜಮಂದಿರಮಂ ಪೊಕ್ಕು ಕರುಮಾಡದ ಕೆಲದ ಮಾಡದೊಳ್ ವಜ್ರಬಾಹುನೃಪನನಿರಿಸಿ ಮಜ್ಜನಭೋಜನ ತಾಂಬೂಲಾಂಬರಾನುಲೇಪನ ಭೂಷಣಾದಿ ವಿವಿಧವಿಶೇಷ ಸತ್ಕಾರಂಗಳಿಂ ಸಂತಸಂಬಡಿಸಿ ನಾನಾವಿನೋದಂಗಳಂ ತೋಱಿ ವಜ್ರದಂತ ಚಕ್ರವರ್ತಿ ನಿನಗಾವುದು ಮನೋಮುಖಂ ಬೇಡಿಕೊಳ್ಳೆನೆ,**

**ಪದವಿಭಾಗ–ಅನ್ವಯ–ಅರ್ಥ:** ಎಂದು ತಮ್ಮೊಳ್ + ಓರೊರ್ವರೊಳ್ ನುಡಿಯುತ್ತುಂ = ಎಂದು ತಮ್ಮತಮ್ಮಲ್ಲೇ ಮಾತಾಡಿಕೊಳ್ಳುತ್ತ, ಪೌರಜನಂಗಳ್ ಸೂಸುವ = ಪುರಜನರು ಚೆಲ್ಲುವ, ಲಾಜವರ್ಷಮುಮಂ ಕುಸುಮವರ್ಷಮುಮಂ ಆಂತುಕೊಳುತ್ತುಂ = ಅರಳು ಮತ್ತು ಹೂಗಳ ಮಳೆಯನ್ನು ಸ್ವೀಕರಿಸುತ್ತ, ಮುಱಿದ ಮುತ್ತಿನ ಲಂಬಣಂಗಳ್ವೆರಸು = ತುಂಡರಿಸಲ್ಪಟ್ಟ ಮುತ್ತಿನ ಹಾರಗಳೊಡನೆಯೇ, ಎಟಲ್ವ = ಜೋತಾಡುವ, ಪಚ್ಚೆಸಾರದ ಹಾರದ ತೋರಣಂಗಳಂ ನುಗುಳುತ್ತುಂ = ಪಚ್ಚೆಯ ಹಾರದ ತೋರಣಗಳನ್ನು ಕೆಳಗೆ ಹಾದು, ಬಂದು ರಾಜಮಂದಿರಮಂ ಪೊಕ್ಕು = ಬಂದು ಅರಮನೆಯನ್ನು ಸೇರಿ, ಕರುಮಾಡದ ಕೆಲದ ಮಾಡದೊಳ್ = ಉಪ್ಪರಿಗೆಯ ಪಕ್ಕದಲ್ಲಿನ ಮಹಲಿನಲ್ಲಿ, ವಜ್ರಬಾಹುನೃಪನನಿರಿಸಿ = ವಜ್ರಬಾಹು ಮಹಾರಾಜನಿಗೆ ಬಿಡಾರ ಮಾಡಿಸಿ, ಮಜ್ಜನಭೋಜನತಾಂಬೂಲ + ಅಂಬರ +

ಅನುಲೇಪನಭೂಷಣ + ಆದಿ = ಸ್ನಾನ ಊಟ ತಾಂಬೂಲ ವಸ್ತ್ರ ಪರಿಮಳದ್ರವ್ಯ ಮುಂತಾದ, ವಿವಿಧವಿಶೇಷಸತ್ಕಾರಂಗಳಿಂ ಸಂತಸಂಬಡಿಸಿ = ನಾನಾ ಬಗೆಯ ಉಪಚಾರಗಳಿಂದ ಸಂತೋಷಗೊಳಿಸಿ, ನಾನಾವಿನೋದಂಗಳಂ ತೋಱಿ = ಬಗೆ ಬಗೆಯ ಮನರಂಜನೆಗಳನ್ನು ಏರ್ಪಡಿಸಿ, ವಜ್ರದಂತಚಕ್ರವರ್ತಿ = ವಜ್ರದಂತ ಚಕ್ರವರ್ತಿಯು, ನಿನಗಾವುದು ಮನೋರಥಂ ಬೇಡಿಕೊಳ್ + ಎನೆ = ನಿನ್ನ ಅಭಿಲಾಷೆ ಯಾವುದು ಕೇಳಿಕೋ ಎನ್ನಲು,

**ಗದ್ಯಾನುಸರಣ:** ಎಂದು ತಮ್ಮತಮ್ಮಲ್ಲೇ ಮಾತಾಡಿಕೊಳ್ಳುತ್ತ ಪುರಜನರು ಅರಳು ಮತ್ತು ಹೂಗಳ ಮಳೆಯನ್ನು ಅವರ ಮೇಲೆ ಸೂಸುದರು; ತುಂಡರಿಸಲ್ಪಟ್ಟ ಮುತ್ತಿನ ಹಾರಗಳು ಅವರ ಕೊರಳಲ್ಲಿ ಜೋತಾಡುತ್ತಿದ್ದವು; ಹಾಗೆಯೇ ಜೋತಾಡುವ ಪಚ್ಚೆಯ ಹಾರಗಳ ತೋರಣಗಳ ಕೆಳಗೆ ಹಾದು ಬಂದು ಅರಮನೆಯನ್ನು ಸೇರಿದರು; ಉಪ್ಪರಿಗೆಯ ಪಕ್ಕದಲ್ಲಿನ ಮಹಲಿನಲ್ಲಿ ವಜ್ರಬಾಹು ಮಹಾರಾಜನಿಗೆ ಬಿಡಾರ ಮಾಡಿಸಿ, ಎಲ್ಲರನ್ನೂ ಸ್ನಾನ ಊಟ ತಾಂಬೂಲ ವಸ್ತ್ರ ಪರಿಮಳದ್ರವ್ಯ ಮುಂತಾದ ನಾನಾ ಬಗೆಯ ಉಪಚಾರಗಳಿಂದ ಸಂತೋಷಗೊಳಿಸಿ, ಬಗೆ ಬಗೆಯ ಮನರಂಜನೆಗಳನ್ನು ವಜ್ರದಂತ ಚಕ್ರವರ್ತಿಯು ಏರ್ಪಡಿಸಿದ್ದ; ಆನಂತರ 'ನಿನ್ನ ಅಭಿಲಾಷೆ ಯಾವುದು ಕೇಳಿಕೋ' ಎಂದ.

**ಎನಗರಿದುಂಟೆ ನಿಮ್ಮ ದಯೆಯಿಂದುೞಿದಾವುದುಮೆಲ್ಲಮುಂಟುನೀ**
**ನೆನಗೆ ನರೇಂದ್ರಮೌಳಿಮಣಿರಾಜಿವಿರಾಜಿತಪಾದಪೀಠ ನೆ**
**ಟ್ಟನೆ ದಯೆಗೆಯ್ವೊಡೀ ನಿಜತನೂಜೆಯನುತ್ಸವಮಂಗಳಾನಕ**
**ಧ್ವನಿ ದೆಸೆಯಂ ಪಳಂಚಲೆವಿನಂ ನೆರಪೀಗಳೆ ವಜ್ರಜಂಘನೊಳ್ ೨೬**

**ಪದವಿಭಾಗ–ಅನ್ವಯ–ಅರ್ಥ:** ನಿಮ್ಮ ದಯೆಯಿಂದೆ ಉೞಿದ + ಆವುದುಂ ಎನಗೆ + ಅರಿದುಂಟೆ = ನಿನ್ನ ಕೃಪೆಯಿಂದಾಗಿ ನನಗೆ ಮಿಕ್ಕ ಯಾವ ಕೊರತೆಯಿದೆ? ಎಲ್ಲಂ + ಉಂಟು = ಎಲ್ಲವೂ ಇದೆ, ನರೇಂದ್ರಮೌಳಿಮಣಿರಾಜಿವಿರಾಜಿತಪಾದಪೀಠ = ರಾಜಸಮೂಹದ ಕಿರೀಟಗಳ ಮಣಿಗಳಿಂದ ಶೋಭಿತವಾದ ಪಾದಪೀಠವುಳ್ಳವನೇ, ನೀನ್ + ಎನಗೆ ನೆಟ್ಟನೆ ದಯೆಗೆಯ್ವೊಡೆ = ನೀನು ನನಗೆ ದಯಪಾಲಿಸುವುದಾದರೆ, ಉತ್ಸವಮಂಗಳ + ಆನಕಧ್ವನಿ ದೆಸೆಯಂ ಪಳಂಚಲೆವಿನಂ = ಉತ್ಸವದ ಮಂಗಳವಾದ್ಯಗಳ ಧ್ವನಿಯು ದಿಕ್ಕುಗಳನ್ನೆಲ್ಲ ವ್ಯಾಪಿಸಿರಲು, ಈ ನಿಜತನೂಜೆಯಣ್ = ನಿನ್ನ ಈ ಮಗಳನ್ನು, ವಜ್ರಜಂಘನೊಳ್ ಈಗಳೆ ನೆರಪು = ವಜ್ರಜಂಘನೊಡನೆ ಈಗಲೇ (ಮದುವೆ ಮಾಡಿ) ಒಟ್ಟಾಗಿಸು.

**ಗದ್ಯಾನುಸರಣ:** 'ನಿನ್ನ ಕೃಪೆಯಿಂದಾಗಿ ನನಗೆ ಯಾವ ಕೊರತೆಯೂ ಇಲ್ಲ, ಎಲ್ಲವೂ ಇದೆ, ರಾಜಸಮೂಹದ ಕಿರೀಟಗಳ ಮಣಿಗಳಿಂದ ಶೋಭಿತವಾದ ಪಾದಪೀಠವುಳ್ಳ ಚಕ್ರವರ್ತಿಯೇ, ನಿನಗೆ ಒಪ್ಪಿಗೆಯಿರುವುದಾದರೆ, ಉತ್ಸವದ ಮಂಗಳವಾದ್ಯಗಳ ಧ್ವನಿಯು ದಿಕ್ಕುಗಳನ್ನೆಲ್ಲ ವ್ಯಾಪಿಸಿರಲು, ನಿನ್ನ ಮಗಳು ಶ್ರೀಮತಿಯನ್ನು ನನ್ನ ಮಗ ವಜ್ರಜಂಘನಿಗೆ ಬೇಗ ಮದುವೆ ಮಾಡಿಕೊಡು' ಎಂದು ಕೇಳಿಕೊಂಡ.

**ವ॥ ಎಂಬುದುಂ ಚಕ್ರಧರನಧರಕಿಸಲಯದ ಮೇಲೆ ದಂತಕಾಂತಿಲತಾಂತ ಪ್ರಭೆಗಳ್ ಪಸರಿಸೆ,**

**ಪದವಿಭಾಗ–ಅನ್ವಯ–ಅರ್ಥ:** ಎಂಬುದುಂ = ಎಂದು ಕೇಳಿಕೊಳ್ಳಲು, ಚಕ್ರಧರನ + ಅಧರಕಿಸಲಯದ ಮೇಲೆ = ಚಕ್ರವರ್ತಿಯ ತುಟಿಗಳೆಂಬ ಚಿಗುರಿನ ಮೇಲೆ, ದಂತಕಾಂತಿಲತಾಂತಪ್ರಭೆಗಳ್ ಪಸರಿಸೆ ಹಲ್ಲಿನ ದೀಪ್ತಿ ಎಂಬ ಹೂಗಳ ಕಾಂತಿಯು ಹರಡಿಕೊಳ್ಳಲು,

**ಗದ್ಯಾನುಸರಣ:** ಎಂದು ಕೇಳಿಕೊಳ್ಳಲು, ಚಕ್ರವರ್ತಿಯ ಚಿಗುರಿನಂತಿದ್ದ ತುಟಿಗಳ ಮೇಲೆ ಮಂದಹಾಸ ಮೂಡಿತು.

**ಒಡೆಯಂ ಕೂಸಿಂಗದೊಂದೇ ಕುಲದ ಚಲದ ಪೆಂಪೊಂದೆ ಚೆಲ್ವೊಂದೆ ಸಂದೊ**
**ಳ್ನುಡಿಯೊಂದೇ ವಿದ್ಯೆಯೊಂದೇ ಪುದಿದೊದಗಿದ ಜನ್ಮಾಂತರ ಸ್ನೇಹಮೊಂದೇ**
**ನುಡಿಯುಲ್ಪಿಕ್ಕಲ್ಕದೊಂದೆನಲ್ತೆನಲೆಡೆ ಪೆಱರ್ಗಿನ್ನಿಲ್ಲ ಮುನ್ನಾ ವಿಧಾತ್ರಂ**
**ಕುಡಲಿರ್ದಂ ಕನ್ನೆಯಂ ಪೇೞ್ ನಿನಗಮೆನಗಮೇಂ ದಂದುಗಂವಜ್ರಬಾಹೂ ೨೭**

**ಪದವಿಭಾಗ–ಅನ್ವಯ–ಅರ್ಥ:** ವಜ್ರಬಾಹೂ = ವಜ್ರಬಾಹು ಮಹಾರಾಜನೇ, ಕೂಸಿಂಗೆ ಒಡೆಯಂ = ನನ್ನ ಮಗಳಿಗೆ ಅವನೇ ಯಜಮಾನ, ಕುಲದ ಚಲದ ಪೆಂಪು ಅದು + ಒಂದೇ = ನಮ್ಮ ಕುಲ ಚಲಗಳ ಹಿರಿಮೆ ಸಮಾನವಾದವು, ಚೆಲ್ವು ಒಂದೆ = ಇಬ್ಬರ ಚೆಲವೂ ಸಮಾನ, ಸಂದ + ಒಳ್ನುಡಿ + ಒಂದೆ = ಇಬ್ಬರ ಮೃದು ಮಾತು ಒಂದೇ ಬಗೆ, ವಿದ್ಯೆಯೊಂದೇ = ಅವರ ವಿದ್ಯೆಯೂ ಅನುರೂಪ 'ವಾದುದು, ಪುದಿದು + ಒದಗಿದ ಜನ್ಮಾಂತರಸ್ನೇಹಂ + ಒಂದೇ = ಕೂಡಿ ಪಡೆದ ಜನ್ಮಾಂತರಗಳ ಅವರ ಪ್ರೀತಿಯೂ ಸಮಾನ, ಪೆಱರ್ಗೆ ನುಡಿಯಲ್ + ಪಿಕ್ಕಲ್ಕೆ + ಅದೊಂದು + ಅಲ್ತು + ಎನಲ್ + ಎಡೆ ಇನ್ನಿಲ್ಲ = ಬೇರೆಯವರಿಗೆ ಮಾತಾಡುವುದಕ್ಕಾಗಲೀ ಕೆದಕುವುದಕ್ಕಾಗಲೀ ಅದೊಂದು ಮಾತ್ರ

ಎಂದು ಕೊಂಕು ನುಡಿಯಲಾಗಲೀ ಅವಕಾಶವೇ ಇಲ್ಲ, ಮುನ್ನೆ + ಆ ವಿಧಾತ್ರಂ ಕನ್ನೆಯಂ ಕುಡಲಿರ್ದಂ = ಮೊದಲೇ ಬ್ರಹ್ಮನು ನನ್ನ ಮಗಳನ್ನು ಅವನಿಗೆ ಕೊಡಲಿದ್ದ; ನಿನಗಂ + ಎನಗಂ + ಏಂ ದಂದುಗಂ ಪೇೞ್ = ಹೀಗಾಗಿ, ನಿನಗೂ ನನಗೂ ಇದರಲ್ಲಿ ಏನು ಕೆಲಸ?

**ಗದ್ಯಾನುಸರಣ:** 'ವಜ್ರಬಾಹು ಮಹಾರಾಜನೇ, ನನ್ನ ಮಗಳಿಗೆ ವಜ್ರಜಂಘನೇ ಯಜಮಾನ; ನಮ್ಮ ಕುಲ ಚಲಗಳ ಹಿರಿಮೆ ಸಮಾನವಾದವು, ಇಬ್ಬರ ಚೆಲವೂ ಸಮಾನ, ಇಬ್ಬರ ಮೃದು ಮಾತು ಒಂದೇ ಬಗೆ, ಅವರ ವಿದ್ಯೆಯೂ ಅನುರೂಪವಾದುದು, ಕೂಡಿ ಪಡೆದ ಜನ್ಮಾಂತರಗಳ ಅವರ ಪ್ರೀತಿಯೂ ಸಮಾನ; ಬೇರೆಯವರಿಗೆ ಮಾತಾಡುವುದಕ್ಕಾಗಲೀ ಕೆದಕುವುದಕ್ಕಾಗಲೀ ಅದೊಂದು ಮಾತ್ರ ಎಂದು ಕೊಂಕು ನುಡಿಯಲಾಗಲೀ ಅವಕಾಶವೇ ಇಲ್ಲ; ಮೊದಲೇ ಬ್ರಹ್ಮನು ನನ್ನ ಮಗಳನ್ನು ಅವನಿಗೆ ಕೊಟ್ಟುಬಿಟ್ಟಿದ್ದಾನೆ, ಅಂದ ಮೇಲೆ ನಿನಗೂ ನನಗೂ ಈ ವಿಷಯದಲ್ಲಿ ಮಾಡುವುದಕ್ಕೇನಿದೆ!' ಎಂದ.

**ವ। ಅಂತುಮಲ್ಲದೆಯುಂ**

**ಅರ್ಥ:** ಅಂತುಂ + ಅಲ್ಲದೆಯುಂ = ಅಷ್ಟೇ ಅಲ್ಲದೆ,

**ಬಾಲಸಹಕಾರತರು ನವ**
**ಮಾಲಿಕೆಗತಿಲಲಿತಪೂಗಭೂಜಾತಂ ತಾಂ**
**ಬೂಲಲತೆಗೆಂಬವೊಲ್ ಸಮ**
**ಲೀಲಂ ನಿಜತನಯನೆನ್ನ ನುಜೆಗೆ ತಕ್ಕಂ** ೨೮

**ಪದವಿಭಾಗ-ಅನ್ವಯ-ಅರ್ಥ:** ನವಮಾಲಿಕೆಗೆ ಬಾಲಸಹಕಾರತರು = ಹೊಸ ಜಾಜಿಯ ಬಳ್ಳಿಗೆ ಎಳೆಯ ಮಾವಿನ ಮರ, ತಾಂಬೂಲಲತೆಗೆ ಅತಿಲಲಿತಪೂಗ ಭೂಜಾತಂ = ವೀಳೆಯ ಬಳ್ಳಿಗೆ ಕೋಮಲವಾದ ಅಡಿಕೆಯ ಮರ – ಎಂಬವೊಲ್ = ಎನ್ನುವ ಹಾಗೆಯೇ, ಸಮಲೀಲಂ ನಿಜತನಯನ್ ಎನ್ನ ತನುಜೆಗೆ ತಕ್ಕಂ = ಸಮಾನ ಯೋಗ್ಯತೆಯ ನಿನ್ನ ಮಗ ನನ್ನ ಮಗಳಿಗೆ ಅನುರೂಪನಾದವನು.

**ಗದ್ಯಾನುಸರಣ:** 'ಹೊಸ ಜಾಜಿಯ ಬಳ್ಳಿಗೆ ಎಳೆಯ ಮಾವಿನ ಮರ, ವೀಳೆಯದೆಲೆಯ ಬಳ್ಳಿಗೆ ಕೋಮಲವಾದ ಅಡಿಕೆಯ ಮರ – ಜೋಡಿ ಎನ್ನುವ ಹಾಗೆಯೇ, ಸಮಾನ ಯೋಗ್ಯತೆಯ ನಿನ್ನ ಮಗ ನನ್ನ ಮಗಳಿಗೆ ಅನುರೂಪನಾದವನು.'

**ಸ್ತ್ರೀರತ್ನಮೀಗಳೀಕೆಯೆ**
**ಧಾರಿಣಿಯೊಳ್ ಪುರುಷರತ್ನಮೀತನೆ ಸದೃಶಾ**
**ಕಾರರನಿವರಂ ಕೂಡಿ ಪ**
**ಯೋರುಹಜಂಗಕ್ಕೆ ಸಮಸಮಾಯೋಗಯಶಂ** ೨೯

**ಪದವಿಭಾಗ-ಅನ್ವಯ-ಅರ್ಥ:** ಧಾರಿಣಿಯೊಳ್ ಈಗಳ್ ಈಕೆಯೆ ಸ್ತ್ರೀರತ್ನಂ = ಜಗತ್ತಿನಲ್ಲಿ ಈಗ ಶ್ರೀಮತಿಯೇ ಸ್ತ್ರೀರತ್ನ, ಈತನೆ ಪುರುಷರತ್ನಂ = ವಜ್ರಜಂಘನೇ ಪುರುಷರತ್ನ, ಸದೃಶಾಕಾರರನ್ + ಇವರಂ ಕೂಡಿ = ಒಂದೇ ರೂಪವನ್ನುಳ್ಳ ಇವರನ್ನು ಸೇರಿಸಿ, ಸಮಸಮಾಯೋಗಯಶಂ ಪಯೋರುಹಜಂಗೆ ಅಕ್ಕೆ = ಅನುರೂಪ ಜೋಡಿಯನ್ನು ಕೂಡಿಸಿದ ಎಂಬ ಹೆಗ್ಗಳಿಕೆ ಬ್ರಹ್ಮನಿಗೆ ಉಂಟಾಗಲಿ.

**ಗದ್ಯಾನುಸರಣ:** 'ಜಗತ್ತಿನಲ್ಲಿ ಈಗ ಶ್ರೀಮತಿಯೇ ಸ್ತ್ರೀರತ್ನ, ವಜ್ರಜಂಘನೇ ಪುರುಷರತ್ನ; ಸಮಾನ ರೂಪವನ್ನುಳ್ಳ ಇವರನ್ನು ಸೇರಿಸಿ ಅನುರೂಪ ಜೋಡಿಯನ್ನು ಕೂಡಿಸಿದ ಎಂಬ ಹೆಗ್ಗಳಿಕೆ ಬ್ರಹ್ಮನಿಗೆ ಉಂಟಾಗಲಿ.'

**ವ। ಎಂಬುದುಂ ವಜ್ರಬಾಹುಮಹೀಪತಿ ವಜ್ರದಂತಚಕ್ರವರ್ತಿ ಸೂಕ್ತಾಮೃತಸಿಕ್ತಮಪ್ಪ ನಿಜಮನೋರಥಾಮರದ್ರುಮದಿನೊಗೆದಂ ಕುರಿಸಿ ದಂಕುರನಿಕರಮನನುಕರಿಸುವ ರೋಮಾಂಚ ನಿಚಯದಿಂ ನಿಚಿತಾಂಗನಾಗಿ**

**ಪದವಿಭಾಗ-ಅನ್ವಯ-ಅರ್ಥ:** ಎಂಬುದುಂ = ಎಂದು ಹೇಳುವುದೂ, ವಜ್ರಬಾಹುಮಹೀಪತಿ = ವಜ್ರದಂತ ಮಹಾರಾಜನು, ವಜ್ರದಂತಚಕ್ರವರ್ತಿ = ವಜ್ರದಂತ ಚಕ್ರವರ್ತಿಯ, ಸೂಕ್ತ + ಅಮೃತಸಿಕ್ತಮಪ್ಪ = ಒಳ್ಳೆಯ ಮಾತೆಂಬ ಅಮೃತದಿಂದ ನೆನೆದ, ನಿಜಮನೋರಥಾಮರದ್ರುಮದಿನ್ = ತನ್ನ ಅಭಿಲಾಷೆಯೆಂಬ ಕಲ್ಪತರುವಿನಿಂದ, ಒಗೆದು + ಅಂಕುರಿಸಿದ + ಅಂಕುರನಿಕರಮನ್ + ಅನುಕರಿಸುವ = ಮೂಡಿ ಚಿಗುರಿದ ಚಿಗುರುಗಳನ್ನು ಹೋಲುವ, ರೋಮಾಂಚನಿಚಯದಿಂ ನಿಚಿತ + ಅಂಗನಾಗಿ = ಪುಲಕಗಳಿಂದ ಕೂಡಿದ ದೇಹವುಳ್ಳವನಾಗಿ,

**ಗದ್ಯಾನುಸರಣ:** ಎಂದು ಹೇಳಿದ್ದನ್ನು ಕೇಳಿದ ವಜ್ರದಂತ ಮಹಾರಾಜನಿಗೆ ವಜ್ರದಂತ ಚಕ್ರವರ್ತಿಯ ಒಳ್ಳೆಯ ಮಾತೆಂಬ ಅಮೃತ ಸುರಿದಂತಾಗಿ, ಅದರಿಂದ ತನ್ನ ಅಭಿಲಾಷೆಯೆಂಬ ಕಲ್ಪವೃಕ್ಷವು ಚಿಗುರಿದಂತೆ ಪುಲಕವುಂಟಾಯಿತು.

**ಪ್ರಣಯಮಿದನನ್ಯಸಾಧಾ**
**ರಣಮೆನಿಪ ಭವತ್ಪ್ರಸಾದಮೆಂಬಮೃತದಿನಾಂ**
**ತಣಿದೆಂ ಭೂಭುವನದೊಳಾ**
**ರೆಣೆಯೆನಗೆಂಬೊಂದು ಸಂತಸಕ್ಕೆಡೆಯಾದೆಂ** ೩೦

**ಪದವಿಭಾಗ–ಅನ್ವಯ–ಅರ್ಥ:** ಇದು ಪ್ರಣಯಂ = ಇವರಿಬ್ಬರ ಈ ಪ್ರಣಯ, ಅನನ್ಯಸಾಧಾರಣಂ + ಎನಿಪ = ಅಸಾಧಾರಣವೆನಿಸುವ, ಭವತ್ + ಪ್ರಸಾದಮೆಂಬ + ಅಮೃತದಿನ್ + ಆಂ ತಣ್ದೆಂ = ನಿನ್ನ ಕೃಪೆ ಎಂಬ ಅಮೃತದಿಂದ ನಾನು ತೋಯ್ದುಹೋಗಿದ್ದೇನೆ, ಭೂಭುವನದೊಳ್ + ಆರ್ + ಎಣೆ + ಎನಗೆ = ಈ ಭೂಲೋಕದಲ್ಲಿ ಯಾರು ನನಗೆ ಸಮ, ಎಂಬ + ಒಂದು ಸಂತಸಕ್ಕೆ + ಎಡೆಯಾದೆಂ = ಎಂಬ ಸಂತೋಷಕ್ಕೆ ಪಾತ್ರನಾದೆ.

**ಗದ್ಯಾನುಸರಣ:** 'ಇವರಿಬ್ಬರ ಪ್ರಣಯ ಅಸಾಧಾರಣವೆನಿಸುವ ನಿನ್ನ ಕೃಪೆಯೆಂಬ ಅಮೃತದಿಂದ ನಾನು ತೋಯ್ದುಹೋಗಿದ್ದೇನೆ, ಈ ಭೂಲೋಕದಲ್ಲಿ ಯಾರು ನನಗೆ ಸಮ ಎಂಬ ಸಂತೋಷ ನನ್ನದಾಗಿದೆ.'

**ವ॥ ಎಂದು ನಿಜೋತ್ತರೀಯಾಂಶುಕವನೆ ಮಹೋತ್ಸವಧ್ವಜಮಂ ಮಾಡಿ ವಸುಂಧರಾಸೌಂದರಿಯುಂ ತಾನುಂ ಪ್ರಿಯತನಯನ ವಿವಾಹೋತ್ಸವಲಗ್ನ ಚಿತ್ತರಾಗಿ ಲಗ್ನಮನೆ ಪಾರುತ್ತುಮಿರ್ದರ್. ಆಗಳ್ ವಜ್ರದಂತಚಕ್ರವರ್ತಿ ಯಾತ್ಮೀಯ ಪುತ್ರೀವಿವಾಹೋತ್ಸವಕ್ಕೆ ಮೌಹೂರ್ತಿಕರಂ ಕರೆದು ದಿವಸಮಂ ಬೆಸಗೊಳ್ವುದುಂ ಅವರ್ ಇಂದಿನ ವಾಸರಮೆ ಶೋಭನ ವಿಧೇಯವಾಸರಂ ಇಂದಿನ ದಿವಸಮೆ ಶುಭದಿವಸಾಗ್ರೇಸರಂ ಇಂದಿನ ನಕ್ಷತ್ರಮೆ ಸಕಳಕ್ಷೇಮ ಕ್ಷೇತ್ರಂ ಇಂದಿನ ಯೋಗಮೆ ಸಮಸ್ತಾಭಿವಾಂಚಿತಫಳಸಮಾಯೋಗಂ ಇಂದಿನ ಕರಣಮೆ ಕಲ್ಯಾಣಕರಣೀಯಾದಿಕರಣಂ ಎಂದು ಬಿನ್ನಪಂಗೆಯ್ವುದುಂ ಜಗಜ್ಜನ ಜಂಗಮಕಲ್ಪವೃಕ್ಷಂ ಕಲ್ಪವೃಕ್ಷಮೆಂಬ ಮಹಾಮಹಿಮೆಯಂ ಮಹಾಪೂತ ಜಿನಾಲಯದೊಳ್ ಮುನ್ನ ಮಾಡಿ ಬಳಿಯಂ ನಿಜರಾಜಧಾನಿ ಯೊಳೊಸಗೆಯಂ ಮಾಡಿ ವಿವಾಹಮಂಟಪಮಂ ಸ್ಥಪತಿರತ್ನಕ್ಕೆ ವಿರಚಿಸೆಂದು ಬೆಸಸಿದಾಗಳ್,**

**ಪದವಿಭಾಗ–ಅನ್ವಯ–ಅರ್ಥ:** ಎಂದು = ಎಂಬುದಾಗಿ, ನಿಜ + ಉತ್ತರೀಯ + ಅಂಶುಕವನೆ = ತನ್ನ ಶಲ್ಯದ ಸೆರಗನ್ನೇ, ಮಹೋತ್ಸವಧ್ವಜಮಂ ಮಾಡಿ = ಮಹೋತ್ಸವದ ಧ್ವಜವನ್ನಾಗಿ ಮಾಡಿ, ವಸುಂಧರಾಸೌಂದರಿಯುಂ ತಾನುಂ = ವಸುಂಧರೆಯೂ ತಾನೂ, ಪ್ರಿಯತನಯನ ವಿವಾಹೋತ್ಸವಲಗ್ನಚಿತ್ತರಾಗಿ = ಪ್ರಿಯ ಪುತ್ರನ ಮದುವೆಗೆ ಬಗ್ಗೆ ಮನಸ್ಸನ್ನಿತ್ತು, ಲಗ್ನಮನೆ ಪಾರುತ್ತುಮಿರ್ದರ್ = ಮುಹೂರ್ತಕ್ಕಾಗಿ ಎದುರು ನೋಡುತ್ತಿದ್ದರು; ಆಗಳ್ ವಜ್ರದಂತಚಕ್ರವರ್ತಿ = ಅದೇ ಸಮಯದಲ್ಲಿ ವಜ್ರದಂತ ಚಕ್ರವರ್ತಿಯು, ಆತ್ಮೀಯ ಪುತ್ರೀವಿವಾಹೋತ್ಸವಕ್ಕೆ ಮೌಹೂರ್ತಿಕರಂ ಕರೆದು = ತನ್ನ ಮಗಳ ಮದುವೆಗೆ ಜೋಯಿಸರನ್ನು ಕರೆಸಿ, ದಿವಸಮಂ ಬೆಸಗೊಳ್ವುದುಂ = ಸೂಕ್ತ ದಿವಸದ ಬಗ್ಗೆ ವಿಚಾರಿಸಲಾಗಿ, ಅವರ್ ಇಂದಿನ ವಾಸರಮೆ ಶೋಭನವಿಧೇಯವಾಸರಂ = ಅವರು ಇವತ್ತಿನ ದಿನವೇ ಶುಭದಿನ, ಇಂದಿನ ದಿವಸಮೆ ಶುಭದಿವಸ + ಅಗ್ರೇಸರಂ = ಇವತ್ತಿನ ಹಗಲೇ

ಅತ್ಯಂತ ಪ್ರಶಸ್ತ ಹಗಲು, ಇಂದಿನ ನಕ್ಷತ್ರಮೆ ಸಕಳಕ್ಷೇಮಕ್ಷೇತ್ರಂ = ಇವತ್ತಿನ ನಕ್ಷತ್ರವೇ ಶ್ರೇಷ್ಠ ನಕ್ಷತ್ರ, ಇಂದಿನ ಯೋಗಮೆ ಸಮಸ್ತಾಭಿವಾಂಚಿತಫಳಸಮಾಯೋಗಂ = ಇವತ್ತಿನ ಯೋಗವೇ ಸಕಲ ಅಭೀಷ್ಟ ನೆರವೇರುವ ಯೋಗ, ಇಂದಿನ ಕರಣಮೆ ಕಲ್ಯಾಣಕರಣೀಯಾದಿಕರಣಂ = ಇವತ್ತಿನ ಕರಣವೇ ಅತ್ಯಂತ ಮಂಗಳಕರವಾದ ಕರಣ, ಎಂದು ಬಿನ್ನಪಂಗೆಯ್ವುದುಂ = ಎಂದು ಬಿನ್ನೈಸಿದಾಗ, ಜಗತ್ + ಜನಜಂಗಮಕಲ್ಪವೃಕ್ಷಂ = ಜಗತ್ತಿನ ಜನರಿಗೆ ಕಲ್ಪವೃಕ್ಷದಂತಿದ್ದ ಚಕ್ರವರ್ತಿಯು, ಮುನ್ನ = ಮೊದಲು, ಮಹಾಪೂತಜಿನಾಲಯದೊಳ್ ಕಲ್ಪವೃಕ್ಷ ಮೆಂಬ ಮಹಾಮಹಿಮೆಯಂ ಮಾಡಿ = ಮಹಾಪೂತ ಜಿನಾಲಯದಲ್ಲಿ ಕಲ್ಪವೃಕ್ಷವೆಂಬ ಮಹಾಮಹಿಮೆಯನ್ನು ಮಾಡಿ, ಬೞಿಯಂ = ಅನಂತರ, ನಿಜರಾಜ ಧಾನಿಯೊಳ್ + ಸಗೆಯಂ ಮಾಡಿ = ತನ್ನ ರಾಜಧಾನಿಯಲ್ಲಿ ಉತ್ಸವವನ್ನು ನೆರವೇರಿಸಿ, ವಿವಾಹಮಂಟಪಮಂ ವಿರಚಿಸು + ಎಂದು = ವಿವಾಹಮಂಟಪವನ್ನು ನಿರ್ಮಿಸು ಎಂದು, ಸ್ಥಪತಿರತ್ನಕ್ಕೆ ಬೆಸಸಿದಾಗಳ್ = ತನ್ನ ಶಿಲ್ಪಿಶ್ರೇಷ್ಠನಿಗೆ ಆಣತಿಯಿತ್ತು,

**ಗದ್ಯಾನುಸರಣ:** ಎಂದು ಹೇಳಿ, ತನ್ನ ಶಲ್ಯದ ಸೆರಗನ್ನೇ ಮಹೋತ್ಸವದ ಧ್ವಜವನ್ನಾಗಿ ಮಾಡಿಕೊಂಡು, ವಸುಂಧರೆಯೂ ತಾನೂ ತಮ್ಮ ಪ್ರಿಯ ಪುತ್ರನ ಮದುವೆಗೆ ಬಗ್ಗೆ ಮನಸ್ಸನ್ನಿತ್ತು ಮುಹೂರ್ತಕ್ಕಾಗಿ ಎದುರು ನೋಡುತ್ತಿದ್ದರು; ಅದೇ ಸಮಯದಲ್ಲಿ ವಜ್ರದಂತ ಚಕ್ರವರ್ತಿಯು ತನ್ನ ಮಗಳ ಮದುವೆಗೆ ಜೋಯಿಸರನ್ನು ಕರೆಸಿಕೊಂಡು ಸೂಕ್ತ ದಿವಸದ ಬಗ್ಗೆ ವಿಚಾರಿಸಿದ; ಇವತ್ತೇ ಶುಭವಾಸರ ದಿನ ನಕ್ಷತ್ರ ಕರಣ ಯೋಗಗಳಿಂದ ಕೂಡಿದ ಅತ್ಯುತ್ಕೃಷ್ಟವಾದುದು ಎಂದು ಬಿನ್ನೈಸಿದರು; ಜಗತ್ತಿನ ಜನರಿಗೆ ಕಲ್ಪವೃಕ್ಷದಂತಿದ್ದ ಆ ಚಕ್ರವರ್ತಿಯು ಮೊದಲು ಮಹಾಪೂತ ಜಿನಾಲಯದಲ್ಲಿ ಕಲ್ಪವೃಕ್ಷವೆಂಬ ಮಹಾಮಹಿಮೆಯನ್ನು ನೆರವೇರಿಸಿದ; ಆನಂತರ ತನ್ನ ರಾಜಧಾನಿಯಲ್ಲಿ ಉತ್ಸವವನ್ನು ನೆರವೇರಿಸಿ ವಿವಾಹಮಂಟಪವನ್ನು ನಿರ್ಮಿಸು ಎಂದು ತನ್ನ ಪ್ರಧಾನಶಿಲ್ಪಿಗೆ ಆಣತಿಯಿತ್ತ.

**ವಿಶೇಷ ವಿಚಾರ:** ಜೋಯಿಸರು ಹೇಳುವ ಇಂದಿನ ದಿನವೇ ಶುಭದಿನ ಮುಂತಾದುವು ಕನಕದಾಸನ 'ಇಂದಿನ ದಿನವೇ ಶುಭದಿನವು, ಇಂದಿನ ವಾರ ಶುಭವಾರ.. .. ' ಎಂಬ ಕೀರ್ತನೆಯನ್ನು ನೆನಪಿಸುತ್ತದೆ.

**ಸ್ಫುರಿತೇಂದ್ರನೀಲಮಣಿಖಚಿತಭೂಮಿ।**
**ಚೆಲ್ವಿಂಗಿದು ನೆಟ್ಟನೆ ಜನ್ಮಭೂಮಿ॥**
**ಮರಕತಮಣಿವಿರಚಿತವಿಮಳಭಿತ್ತಿ।**
**ಪೊಗೞಲ್ಕರಮರಿದದು ಬೇೞ್ ಭಿತ್ತಿ॥**

ಪಳಿಕಿನ ಕಂಭಂಗಳ ಪೊಳೆವ ಪೊಳೆಪು।
ನವವಿದ್ಯುದ್ದಾಮದ ಪೊಳೆವ ಪೊಳೆಪು॥
ಲಲಿತೋನ್ನತಮಣಿಮಯಕೂಟದಂದ।
ಮದು ಪಲವುಂ ದೇಸೆಯ ಮಾಟದಂದ॥
ಮೇಟಲಿಕ್ಕಿದ ಮುಕ್ತಾದಾಮಶೋಭೆ।
ಲಕ್ಷ್ಮೀಲಲನಾದರಹಾಸಶೋಭೆ॥
ಚಂದನದೆಳದಳಿರ್ದೋರಣಂಗಳು।
ಸೂಚಿತಮಂಗಳಕಾರಣಂಗಳವು॥
ತುಂಗಕನಕಭೃಂಗಾರವಿರಾಜಿ।
ರಾಜನ್ಮರಕತಮಯಶುಕವಿರಾಜಿ॥
ಪುಣ್ಯಾಂಬುಪೂರ್ಣಕುಂಭಾಗ್ರಮುಚಿತ।
ಕಂಕೇಲಿಪಲ್ಲವೋಲ್ಲಾಸರಚಿತ॥
ಮುಜ್ವಲಮಣಿದರ್ಪಣದೀಪ್ತಿರಮ್ಯ
ಮಾವೇಷ್ಟಿತಸೂತ್ರತ್ರಿತಯಸೌಮ್ಯ॥
ಮಾಲಂಬಿತಮಣಿಘಂಟಾನಿನಾದ।
ಮದು ಕನಕಕಿಂಕಿಣೀಮೃದುನಿನಾದ॥
ಮುನ್ಮೀಲಿತನವಕುಸುಮೋಪಹಾರ।
ಮುದ್ದೀಧಿತಿತಾರಾನಿಕರತಾರ॥
ಮೆನೆ ಪೊಸಹೂನ್ಯದ ಪಸರಮೆನಿಸಲಿದು।
ಮದನನ ಮಂಗಳಭವನಮೆನಿಸಲಿದು॥
ರತಿಯ ವಿವಾಹಾಗಾರಮೆನಿಸಲಿದು।
ಸಕಳವಿಳಾಸನಿವಾಸಮೆನಿಸಲಿದು॥
ಮದನನ ಸಾರಸರ್ವಸ್ವಮೆನಿಸಲಿದು।
ಸುರತೋತ್ಪತ್ತಿಸ್ಥಾನಮೆನಿಸಲಿದು॥
ವಿಭವದ ಮೂಲಸ್ಥಾನಮೆನಿಸಲಿದು।
ಕಾಮದೇವಾಸ್ಥಾನಮೆನಿಸಲಿದು॥
ಓರಂತೆ ನೆರೆದುದೆನೆ ಜನಸಮೂಹ।
ಮಾಗಳೆ ಸಮೆದತ್ತು ವಿವಾಹಗೇಹ॥

**ಪದವಿಭಾಗ–ಅನ್ವಯ–ಅರ್ಥ:** ಸ್ಫುರಿತ + ಇಂದ್ರನೀಲಮಣಿಖಚಿತಭೂಮಿ = (ಆ ವಿವಾಹ ಮಂಟಪದ್ದು) ಹೊಳೆಯುವ ಇಂದ್ರನೀಲಮಣಿಗಳಿಂದ ಮಾಡಿದ ನೆಲಗಟ್ಟು, ಚೆಲ್ವಿಂಗಿದು ನೆಟ್ಟನೆ ಜನ್ಮಭೂಮಿ = ಅದು ಚೆಲುವಿನ ನೆಲೆವನೆ, ಮರಕತಮಣಿವಿರಚಿತವಿಮಳಭಿತ್ತಿ = ಪಚ್ಚೆಯ ಮಣಿಗಳಿಂದ ನಿರ್ಮಿಸಿದ ಸುಂದರ

ಗೋಡೆಗಳು, ಪೊಗೞಲ್ + ಕರಂ + ಅರಿದು = ಹೊಗಳಲು ತೀರ ಕಷ್ಟ, (ಏಕೆಂದರೆ) ಅದು ಬೇಱೆ ಭಿತ್ತಿ = ಆ ಗೋಡೆ ಬೇರೆಯ ಥರದ್ದು, ಪಳಿಕಿನ ಕಂಭಂಗಳ ಪೊಳೆವ ಪೊಳೆಪು = ಸ್ಫಟಿಕದ ಕಂಬಗಳದ್ದು ಮಿರಮಿರನೆ ಮಿಂಚುವ ಹೊಳಪು, ನವವಿದ್ಯುತ್ + ದಾಮದ ಪೊಳೆವ ಪೊಳೆಪು = ಅದರದ್ದು ಹೊಸ ಮಿಂಚಿನ ಮನೆಯ ಕಾಂತಿ, ಅದು ಲಲಿತ + ಉನ್ನತಮಣಿಮಯಕೂಟದಂದಂ = ಅದು ಸುಂದರವಾದ ಎತ್ತರವಾದ ಶಿಖರದ ಚೆಂದ, ಪಲವುಂ ದೇಸೆಯ ಮಾಟದಂದಂ = ನಾನಾ ಚೆಲುವಾದ ಮಾಟ ಅದರದ್ದು, ಏಟಲಿಕ್ಕಿದ ಮುಕ್ತಾದಾಮಶೋಭೆ = ಜೋತಾಡುವ ಮುತ್ತಿನ ಹಾರದ ಸೊಬಗು, ಲಕ್ಷ್ಮೀಲಲನಾ ದರಹಾಸಶೋಭೆ = ಲಕ್ಷ್ಮೀದೇವಿಯ ಮಂದಹಾಸದ ಶೋಭೆ ಅದರದ್ದು, ಚಂದನದ + ಎಳ + ತಳಿರ್ + ತೋರಣಂಗಳು = ಅದರಲ್ಲಿ ಕಟ್ಟಿದ್ದವು ಶ್ರೀಗಂಧದ ಚಿಗುರೆಲೆಗಳಿಂದ ಮಾಡಿದ ತೋರಣಗಳು, ಸೂಚಿತಮಂಗಳಕಾರಣಂಗಳ್ + ಅವು = ಮುಂಬರುವ ಶುಭವನ್ನು ಸೂಚಿಸುವಂಥವು, ತುಂಗಕನಕಭೃಂಗಾರವಿರಾಜಿ = ಎತ್ತರವಾದ ಚಿನ್ನದ ಕಳಶಗಳಿಂದ ವಿರಾಜಿಸುವುದು, ರಾಜತ್ + ಮರಕತಮಯಶುಕವಿರಾಜಿ = ಹೊಳೆಯುವ ಪಚ್ಚೆಯ ಗಿಳಿಗಳಿಂದ ವಿರಾಜಿಸುವುವು, ಪುಣ್ಯಾಂಬುಪೂರ್ಣಕುಂಭಾಗ್ರಂ = ಪುಣ್ಯತೀರ್ಥವು ತುಂಬಿದ ಕಳಸದ ತುದಿಯು, ಉಚಿತ ಕಂಕೇಲಿಪಲ್ಲವ + ಉಲ್ಲಾಸರಚಿತಂ = ತಕ್ಕುನಾದ ಅಶೋಕಮರದ ಚಿಗುರಿನಿಂದ ಲಕಲಕಿಸುವಂಥದು, ಉಜ್ಜ್ವಲಮಣಿದರ್ಪಣದೀಪ್ತಿರಮ್ಯಂ = ಪ್ರಜ್ವಲಿಸುವ ಮಣಿಮಯ ಕನ್ನಡಿಗಳಿಂದ ರಮ್ಯವಾದವು, ವೇಷ್ಟಿತಸೂತ್ರತ್ರಿತಯಸೌಮ್ಯಂ = ಸುತ್ತಲಿನ ದಾರದ ಮೂರೆಳೆಯಿಂದ ಕೂಡಿರುವಂಥವು, ಆಲಂಬತಮಣಿಘಂಟಾನಿನಾದಂ + ಅದು ಕನಕಕಿಂಕಿಣೀ ಮೃದುನಿನಾದಂ = ಕಟ್ಟಿದ ಮಣಿಗಳಿಂದ ಕೂಡಿದ ಗೆಜ್ಜೆಗಳ ನಾದಗಳಿಂದ ಕೂಡಿದೆ, ಉನ್ಮೀಲಿತನವಕುಸುಮ + ಉಪಹಾರಂ + ಉತ್ + ದೀಧಿತಿತಾರಾನಿಕರತಾರಂ + ಎನೆ = ಅರಳಿದ ಹೊಸ ಹೂಗಳ ಅರ್ಪಣೆಯು ಮೇಲೆರಚುವ ಕಾಂತಿಯ ನಕ್ಷತ್ರಸಮೂಹ ಎನ್ನುವಂತಹುದು, ಇದು ಪೊಸಹೂನ್ಯದ ಪಸರಮೆನಿಸಲ್ = ಇದು ಹೊಸ ಪುಣ್ಯದ ರಾಶಿಯಂತಿದೆ, ಇದು ಮದನನ ಮಂಗಳಭವನಮೆನಿಸಲ್ = ಇದು ಕಾಮನ ಮಂಗಳಕರ ಮನೆಯಂತಿದೆ, ಇದು ರತಿಯ ವಿವಾಹ + ಆಗಾರಮೆನಿಸಲ್ = ಇದು ರತಿಯ ಮದುವೆ ಮಂಟಪದಂತಿದೆ, ಇದು ಸಕಳವಿಳಾಸ ನಿವಾಸಮೆನಿಸಲ್ = ಇದು ಎಲ್ಲ ವೈಭವದ ತವರು ಇದ್ದಂತಿದೆ, ಇದು ಮದನನ ಸಾರಸರ್ವಸ್ವಮೆನಿಸಲ್ = ಇದು ಮನ್ಮಥನ ಸಾರಸರ್ವಸ್ವದಂತಿದೆ, ಇದು ಸುರತ + ಉತ್ಪತ್ತಿಸ್ಥಾನಮೆನಿಸಲ್ = ಇದು ಸಂಭೋಗದ ಹುಟ್ಟುದಾಣದಂತಿದೆ, ಇದು ವಿಭವದ ಮೂಲಸ್ಥಾನಮೆನಿಸಲ್ = ಇದು ವೈಭವದ ಮೂಲಸ್ಥಾನವೆನಿಸುತ್ತಿದೆ, ಇದು ಕಾಮದೇವ + ಆಸ್ಥಾನಮೆನಿಸಲ್ = ಇದು ಕಾಮನ ಒಡ್ಡೋಲಗದಂತಿದೆ, ಎನೆ

ವಿವಾಹಗೇಹ ಆಗಳೆ ಸಮೆದತ್ತು = ವಿವಾಹಮಂಟಪವು ಆಗ ಸಿದ್ಧವಾಯಿತು, ಓರಂತೆ ಜನಸಮೂಹಂ ನೆರೆದುದು = ಜನಸಂದಣಿ ಅದರಲ್ಲಿ ಸೇರಿತು.

**ಗದ್ಯಾನುಸರಣ:** ಆ ವಿವಾಹ ಮಂಟಪದ್ದು ಹೊಳೆಯುವ ಇಂದ್ರನೀಲಮಣಿಗಳಿಂದ ಮಾಡಿದ ನೆಲಗಟ್ಟು, ಅದು ಚೆಲುವಿನ ನೆಲೆವನೆ; ಪಚ್ಚೆಯ ಮಣಿಗಳಿಂದ ನಿರ್ಮಿಸಿದ ಸುಂದರ ಗೋಡೆಗಳನ್ನು ಹೊಗಳುವುದು ತೀರ ಕಷ್ಟ, ಏಕೆಂದರೆ ಅವು ಬೇರೆಯ ಥರದ್ದು; ಅಲ್ಲಿನ ಸ್ಫಟಿಕದ ಕಂಬಗಳದ್ದು ಮಿರಮಿರನೆ ಮಿಂಚುವ ಹೊಳಪು, ಹೊಸ ಮಿಂಚಿನ ಮನೆಯ ಕಾಂತಿ ಅದರದ್ದು; ಸುಂದರವಾದ ಎತ್ತರವಾದ ಶಿಖರದ ಚೆಂದ, ನಾನಾ ಬಗೆಯ ಚೆಲುವಾದ ಮಾಟ ಅದರದ್ದು; ಜೋತಾಡುವ ಮುತ್ತಿನ ಹಾರದ ಸೊಬಗು, ಲಕ್ಷ್ಮೀದೇವಿಯ ಮಂದಹಾಸದ ಶೋಭೆ ಅದರದ್ದು; ಅದರಲ್ಲಿ ಕಟ್ಟಿದ್ದವು ಶ್ರೀಗಂಧದ ಚಿಗುರೆಲೆಗಳಿಂದ ಮಾಡಿದ ತೋರಣಗಳು, ಮುಂಬರುವ ಶುಭವನ್ನು ಸೂಚಿಸುವಂತಿದ್ದುವು; ಎತ್ತರವಾದ ಚಿನ್ನದ ಕಳಶಗಳೂ, ಹೊಳೆಯುವ ಪಚ್ಚೆಯ ಗಿಳಿಗಳೂ ಅಲ್ಲಿ ವಿರಾಜಿಸುವುವು; ಪುಣ್ಯತೀರ್ಥವು ತುಂಬಿದ ಕಳಸಗಳ ತುದಿ ತಕ್ಕುನಾದ ಅಶೋಕಮರದ ಚಿಗುರಿನಿಂದ ಲಕಲಕಿಸುತ್ತವೆ; ಪ್ರಜ್ವಲಿಸುವ ಮಣಿಮಯ ಕನ್ನಡಿಗಳಿಂದ ರಮ್ಯವಾಗಿಯೂ, ಸುತ್ತಲೂ ಕಟ್ಟಿದ ಮೂರೆಳೆಯ ದಾರದಿಂದಲೂ ಅವು ಶೋಭಿಸುತ್ತವೆ; ಸುತ್ತ ಕಟ್ಟಿದ ಮಣಿಗಳಿಂದ ಕೂಡಿದ ಗೆಜ್ಜೆಗಳ ನಾದದಿಂದ ಅವು ಕೂಡಿದೆ, ಅರಳಿದ ಹೊಸ ಹೂಗಳ ಅರ್ಪಣೆಯು ಮೇಲೆರಚುವ ಕಾಂತಿಯ ನಕ್ಷತ್ರಸಮೂಹದಂತಿವೆ; ಮಂಟಪವು ಹೊಸ ಪುಣ್ಯದ ರಾಶಿಯಂತೆ, ಕಾಮನ ಮಂಗಳಕರ ಮನೆಯಂತೆ, ರತಿಯ ಮದುವೆ ಮಂಟಪದಂತೆ ಇದೆ; ಎಲ್ಲ ವೈಭವದ ತವರಿನಂತೆ, ಮನ್ಮಥನ ಸಾರಸರ್ವಸ್ವದಂತೆ ಇದೆ; ಇದು ಸಂಭೋಗದ ಹುಟ್ಟುದಾಣದಂತೆಯೂ, ವೈಭವದ ಮೂಲಸ್ಥಾನವೋ ಎನಿಸುವಂತಿದೆ; ಹೀಗೆ ಕಾಮನ ಒಡ್ಡೋಲಗದಂತಿದ್ದ ವಿವಾಹಮಂಟಪವು ಸಿದ್ಧವಾಯಿತು; ಅದರಲ್ಲಿ ಜನಸಂದಣಿ ಬಂದು ಸೇರಿತು.

**ಜಾಗದ ನೆಲೆವಡಲಗೆಗಳ**
**ಜಾಗಂಗಳ ಪಸುರ್ಗಳೆಸೆಯೆ ರತ್ನದ ಕೇರ್ಗಳ್**
**ಜಾಗಂಬೊಯ್ದಂತಿರೆ ಪರ**
**ಭಾಗಂಬಡೆದುವು ವಿವಾಹಗೇಹಾಂತರದೊಳ್** ೩೧

**ಪದವಿಭಾಗ–ಅನ್ವಯ–ಅರ್ಥ:** ವಿವಾಹಗೇಹಾಂತರದೊಳ್ = ಆ ಮದುವೆಯ ಮನೆಯೊಳಗೆ, ಜಾಗದ ನೆಲೆವಡಲಗೆಗಳ = ಪಚ್ಚೆಪೈರಿನ ಅಗಲವಾದ ಬೋಗುಣಿಗಳ, ಜಾಗಂಗಳ ಪಸುರ್ಗಳ್ + ಎಸೆಯೆ = ಜಾಗಗಳಲ್ಲಿನ ಹಸುರು ಶೋಭಿಸಲು, ರತ್ನದ ಕೇರ್ಗಳ್ = ರತ್ನದ ಗೋಡೆಗಳು, ಜಾಗಂ + ಪೊಯ್ದಂತಿರೆ ಪರಭಾಗಂ ಬಡೆದುವು = ಮೇಲೆಲ್ಲ ಪೈರು ಬೆಳೆಸಿದಂತೆ ಸೊಬಗುವಡೆದುವು.

**ಗದ್ಯಾನುಸರಣ:** ಆ ಮದುವೆಯ ಮನೆಯೊಳಗೆ ಪಚ್ಚೆಪೈರಿನ ಅಗಲವಾದ ಬೋಗುಣಿಗಳಲ್ಲಿ ಹಸಿರು ಶೋಭಿಸಿತು; ರತ್ನದ ಗೋಡೆಗಳು ತಮ್ಮ ಮೇಲೆಲ್ಲ ಪೈರು ಬೆಳೆಸಿದಂತೆ ಸೊಬಗುವಡೆದುವು.

**ವಿಶೇಷ ವಿಚಾರ:** ಮದುವೆಯಂತಹ ಶುಭಕಾರ್ಯಗಳಂದು ಹಸಿರು ಪೈರನ್ನು ಬೆಳೆಸುವ ಅಂಕುರಾರ್ಪಣ ಎಂಬ ಸಂಪ್ರದಾಯವಿದೆ.

**ನುಡಿವ ನಡೆ ನೋಡುವಾಡುವ**
**ಪೊಡೆವಡುವವುರ್ದಪ್ಪಿಕೊಳ್ವ ತಮ್ಮಿನಿಯರ ಕಾ**
**ಲ್ವಿಡಿವಂದದ ಚಿತ್ರದ ಪೆ**
**ಣ್ಬಡೆಯಿಂ ಸ್ತ್ರೀರಾಜ್ಯದಂದವುದಱೆಡೆಯೆಡೆಯೊಳ್** ೩೨

**ಪದವಿಭಾಗ–ಅನ್ವಯ–ಅರ್ಥ:** ನುಡಿವ = ಮಾತಾಡುವ, ನಡೆ ನೋಡುವ = ದೃಷ್ಟಿ ನಟ್ಟು ನೋಡುವ, ಆಡುವ = ನರ್ತಿಸುವ, ಪೊಡೆವಡುವ = ನಮಸ್ಕರಿಸುವ, ಅಮರ್ದು + ಅಪ್ಪಿಕೊಳ್ವ = ಬಿಗಿಯಾಗಿ ಅಪ್ಪಿಕೊಳ್ಳುವ, ತಮ್ಮ + ಇನಿಯರ ಕಾಲ್ವಿಡಿವ + ಅಂದದ = ತಮ್ಮ ನಲ್ಲರ ಕಾಲಿಗೆ ಬೀಳುವಂತಿರುವ, ಚಿತ್ರದ ಪೆಣ್ಬಡೆಯಿಂ = ಚಿತ್ರಗಳಲ್ಲಿನ ಹೆಣ್ಣುಗಳ ತಂಡದಿಂದಾಗಿ, ಅದಱೆಡೆಯೆಡೆಯೊಳ್ ಸ್ತ್ರೀರಾಜ್ಯದ + ಅಂದಂ = ಅದರ ಮೂಲೆಮೂಲೆಯೂ ಪ್ರಮೀಳಾರಾಜ್ಯದ ಸೊಬಗನ್ನು ಪಡೆಯಿತು.

**ಗದ್ಯಾನುಸರಣ:** ಮದುವೆಯ ಮನೆಯಲ್ಲಿ ಎಲ್ಲೆಲ್ಲಿ ನೋಡಿದರೂ, ಮಾತಾಡುವ, ದೃಷ್ಟಿ ನಟ್ಟು ನೋಡುವ, ನರ್ತಿಸುವ, ನಮಸ್ಕರಿಸುವ, ಬಿಗಿಯಾಗಿ ಅಪ್ಪಿಕೊಳ್ಳುವ, ತಮ್ಮ ನಲ್ಲರ ಕಾಲಿಗೆ ಬೀಳುವಂತಿರುವ, ಚಿತ್ರಗಳಲ್ಲಿನ ಹೆಣ್ಣುಗಳ ತಂಡವೇ ತುಂಬಿತ್ತು; ಇದರಿಂದ ಅದು ಪ್ರಮೀಳಾರಾಜ್ಯವೇನೋ ಎಂಬ ಸೊಬಗನ್ನು ಪಡೆಯಿತು.

**ಬಿಡುಮುತ್ತಿನ ಬಳಸಿದ ಕಡೆ**
**ನಡುವಣ ಚೆಂಬೊನ್ನ ಪಟ್ಟವಣೆ ರನ್ನದ ಕ**
**ನ್ನಡಿವೆರಸು ಸರ್ವಧಾನ್ಯದ**
**ನಡುವಿರೆ ಮೊಸರಣ್ಕೆವೆರಸಿದೆಳದಳಿರ್ಗಳಸಂ** ೩೩

**ಪದವಿಭಾಗ–ಅನ್ವಯ–ಅರ್ಥ:** ಬಿಡುಮುತ್ತಿನ ಬಳಸಿದ ಕಡೆ = ಬಿಡಿ ಮುತ್ತುಗಳಿಂದ ಬಿಡಿಸಿದ್ದ ರಂಗೋಲಿ, ನಡುವಣ ಚೆಂಬೊನ್ನ ಪಟ್ಟವಣೆ = ನಡುವೆಯಿದ್ದ ಚಿನ್ನದ ಹಸೆಮಣೆ, ರನ್ನದ ಕನ್ನಡಿವೆರಸು = ರತ್ನದ ಕನ್ನಡಿಯಿಂದ ಕೂಡಿ, ಸರ್ವಧಾನ್ಯದ ನಡುವೆ = ಧಾನ್ಯಗಳ ಮಧ್ಯೆ, ಮೊಸರಣ್ಕೆ + ಬೆರಸಿದ +

ಎಳ + ತಳಿರ್ಗಳಸಂ ಇರೆ = ಮೊಸರ ಲೇಪನದಿಂದ ಕೂಡಿದ ಎಳೆ ಚಿಗುರಿನ ಕಳಸವೂ ಇರಲು,

**ಗದ್ಯಾನುಸರಣ:** ಅಲ್ಲಿ ಬಿಡಿ ಮುತ್ತುಗಳಿಂದ ಬಿಡಿಸಿದ್ದ ರಂಗೋಲಿ, ನಡುವೆಯಿದ್ದ ಚಿನ್ನದ ಹಸೆಮಣೆ, ರತ್ನದ ಕನ್ನಡಿಯಿಂದ ಕೂಡಿದ, ಸರ್ವಧಾನ್ಯಗಳ ಮಧ್ಯದಲ್ಲಿ ಮೊಸರ ಲೇಪನದಿಂದ ಕೂಡಿದ ಎಳೆ ಚಿಗುರಿನ ಕಳಸ ಇತ್ತು.

**ವ। ಆ ಚಂಚತ್ಪಂಚರತ್ನವೇದಿಕಾಂತರಾಳವಳಯಕ್ಕಳಂಕಾರಮಾಗಿ,**

**ಅರ್ಥ:** ಆ ಚಂಚತ್ + ಪಂಚರತ್ನವೇದಿಕಾ + ಅಂತರಾಳವಳಯಕ್ಕೆ + ಅಳಂಕಾರಮಾಗಿ = ಆ ಹೊಳೆಯುವ ಪಂಚರತ್ನವೇದಿಕೆಯ ಒಳಭಾಗದಲ್ಲಿ ಅಲಂಕಾರಪ್ರಾಯವಾಗಿ,

**ಬೆಳಗುವ ಮಂಗಳದೀಪಾ**
**ವಳಿಗಳ ಬೆಳಗತ್ತಮಿತ್ತಮಚ್ಚೊತ್ತಿದವೊಲ್**
**ತಳತಳಿಸಿ ಬೆಳಗೆ ಬೆಳಗನೆ**
**ಮೊಳೆತಂತೊಪ್ಪಿದುವು ತೊಳಪ ರನ್ನದ ಕೇರ್ಗಳ್** ೩೪

**ಪದವಿಭಾಗ–ಅನ್ವಯ–ಅರ್ಥ:** ಬೆಳಗುವ ಮಂಗಳದೀಪಾವಳಿಗಳ ಬೆಳಗು = ಬೆಳಗುವ ಮಂಗಳ ದೀಪಸಾಲುಗಳ ಬೆಳಕು, ಅತ್ತಂ + ಇತ್ತಂ + ಅಚ್ಚೊತ್ತಿದವೊಲ್ ತಳತಳಿಸಿ = ಆ ಕಡೆ ಈ ಕಡೆ ಅಚ್ಚೊತ್ತಿದ ಹಾಗೆ ಪ್ರತಿಫಲಿಸಲು, ಬೆಳಗೆ ಬೆಳಗನೆ ಮೊಳೆತಂತೆ = ಬೆಳಕು ಬೆಳಕನ್ನು ಮೊಳೆಯಿಸಿದ ಹಾಗೆ, ತೊಳಪ ರನ್ನದ ಕೇರ್ಗಳ್ ಒಪ್ಪಿದುವು = ಕಾಂತಿಮಯವಾದ ಗೋಡೆಗಳು ಕಾಣಿಸಿದವು.

**ಗದ್ಯಾನುಸರಣ:** ಅಲ್ಲಿ ಬೆಳಗುತ್ತಿದ್ದ ಮಂಗಳ ದೀಪಸಾಲುಗಳ ಬೆಳಕು ಆ ಕಡೆ ಈ ಕಡೆ ಅಚ್ಚೊತ್ತಿದ ಹಾಗೆ ಗೋಡೆಗಳಲ್ಲಿ ಪ್ರತಿಫಲಿಸುತ್ತಿತ್ತು; ಕಾಂತಿಮಯವಾದ ಗೋಡೆಗಳು ಬೆಳಕು ಬೆಳಕನ್ನು ಮೊಳೆಯಿಸಿದ ಹಾಗೆ ಶೋಭಿಸಿದವು.

**ವ। ಆಗಳಾ ವಿವಾಹದೊಸಗೆಯೊಳೊಸಗೆವಡುರುಳ್ಗೊಂಡಂತೆ ಇತ್ತ ವಸುಂಧರಾಸೌಂದರಿಯುಂ ಅತ್ತ ಲಕ್ಷ್ಮೀಮತಿಮಹಾದೇವಿಯುಮೆಕ್ಕೆಕ್ಕೆಯೊಳೆ ಮಂಡಳಿಕಮಹಾ ಸಾಮಂತಮಂತ್ರಿಮಂಡಳಾಂತಃಪುರಾಂಗನಾನಿಕರಕ್ಕೆ ಮಣಿಮಯ ಭಾಜನಂಗಳೊಳ್ತಿಕ್ಕನೆ ತೀವಿದ ಪಂಚರತ್ನದ ಕೆಳಿಯ ಕತ್ತುರಿಯ ಕೊಳತದ ಕಪ್ಪುರದ ಪಳಿಕಿನ ಬಾಯಿನಂಗಳಂ ಬೀಱ ಸಾಹಿಯಾಣದ ಚೀನದ ಧವಳವಟ್ಟದ ಭರ್ಮದ ಜೊಂಗದ ದೇವಾಂಗದ ಸಕಳವಟ್ಟೆಗಳುಮಂ ಮೆಟ್ಟುವೆಡೆಗಳೊಳೆಲ್ಲಂ ಪಾಸಿ ಕಾರೋಹಣದ ಕಕ್ಕರವಳಯಿಗೆಯ ಚಿತ್ರಾವಳಿಯ ಪರಿವೆಡೆಯ ತುಳಿವೆಡೆಯ ನೆಳಲ ಪಾಣಿಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ ಮೊಗಂನೋಡದೆ ಸೂಸಿದಾಗಳ್,**

**ಪದವಿಭಾಗ-ಅನ್ವಯ-ಅರ್ಥ:** ಆಗಳ್ = ಆಗ, ಆ ವಿವಾಹದ + ಒಸಗೆಯೊಳ್ + ಒಸಗೆಮರುಳ್ಗೊಂಡಂತೆ = ಆ ಮದುವೆಯ ಶುಭ ಸನ್ನಿವೇಶದಿಂದ ಸಡಗರಗೊಂಡಂತೆ, ಇತ್ತ = ಈ ಕಡೆ, ವಸುಂಧರಾಸೌಂದರಿಯುಂ = ವಸುಂಧರೆಯೂ, ಅತ್ತ = ಆ ಕಡೆ ಲಕ್ಷ್ಮೀಮತಿಮಹಾದೇವಿಯುಂ = ಲಕ್ಷ್ಮೀಮತಿಯೂ, ಎಕ್ಕೆಕ್ಕೆಯೊಳೆ = ಜೊತೆಯಲ್ಲಿ, ಮಂಡಳಿಕ ಮಹಾಸಾಮಂತ ಮಂತ್ರಿಮಂಡಳ + ಅಂತಃಪುರ + ಅಂಗನಾನಿಕರಕ್ಕೆ = ಮಾಂಡಳಿಕ, ಮಹಾ ಸಾಮಂತ, ಮಂತ್ರಿಸಮೂಹದ ಅಂತಃಪುರದ ಮಹಿಳೆಯರಿಗೆ, ಮಣಿಮಯಭಾಜನಂ ಗಳೊಳ್ + ತೆಕ್ಕನೆ ತೀವಿದ = ಮಣಿಮಯ ಪಾತ್ರೆಗಳಲ್ಲಿ ಪೂರ್ತಿ ತುಂಬಿದ, ಪಂಚರತ್ನದ ಕೆಳಿಯ ಕತ್ತುರಿಯ ಕೊಳತದ ಕಪ್ಪುರದ ಪಳಿಕಿನ = ಪಂಚರತ್ನ ಪರಿಮಳದ್ರವ್ಯ ಕಸ್ತೂರಿ ಹೊಸ ಕರ್ಪೂರಗಳ, ಬಾಯಿನಂಗಳಂ ಬೀಱಿ = ಬಾಗಿನಗಳನ್ನು ಕೊಟ್ಟು, ಸಾಹಿಯಾಣದ ಚೀನದ ಧವಳವಟ್ಟದ ಭರ್ಮದ ಜೊಂಗದ ದೇವಾಂಗದ ಸಕಳವಟ್ಟೆಗಳುಮಂ = ಕಸೂತಿ ಹಾಕಿದ ರೇಷ್ಮೆ ಬಿಳಿಯಬಟ್ಟೆಗಳು ಜರಿರೇಷ್ಮೆವಸ್ತ್ರಗಳು ಹಾಗೂ ದೇವಾಂಗವಸ್ತ್ರಗಳ ಹಾಳೆಗಳನ್ನು, ಮೆಟ್ಟುವ + ಎಡೆಗಳೊಳೆಲ್ಲಂ ಪಾಸಿ = ಓಡಾಡುವ ಜಾಗಗಳಲ್ಲೆಲ್ಲ ಹಾಸಿಸಿ, ಕಾರೋಹಣದ ಕಕ್ಕರವಳಯಿಗೆಯ ಚಿತ್ರಾವಳಿಯ = ಕಾರೋಹಣದಲ್ಲಿ ಸಿದ್ಧವಾದ ಮಾಸಲುಬಣ್ಣದ ಬಣ್ಣಬಣ್ಣದ ಬಟ್ಟೆಗಳ, ನೆಳಲಪಾಣಿಯ = ನೆಲದಪಾಣಿಯೆಂಬ ಬಟ್ಟೆಯ, ಬಣ್ಣದ ಕಣದ = ಬಣ್ಣಬಣ್ಣದ ಕಣಗಳ ಹಾಗೂ, ಬಣ್ಣವಣ್ಣಿಗೆಯ = ಬಣ್ಣದ ಕೆಲಸ ಮಾಡಿದ, ಜವಳಿಗಳನೆ = ವಸ್ತ್ರಗಳನ್ನು, ಪರಿವೆಡೆಯ ತುಳಿವೆಡೆಯ = ಓಡಾಡುವ ಜಾಗಗಳ ಹಾಗೂ ತುಳಿದಾಡುವ ಸ್ಥಳಗಳಲ್ಲಿ, ಮೊಗಂನೋಡದೆ ಸೂಸಿದಾಗಳ್ = ಮುಖ ನೋಡದೆಯೇ ನೀಡಿದಾಗ,

**ಗದ್ಯಾನುಸರಣ:** ಆಗ, ಆ ಮದುವೆಯ ಶುಭ ಸನ್ನಿವೇಶದಿಂದ ಸಡಗರಗೊಂಡಿತ್ತು; ಈ ಕಡೆ ವಸುಂಧರೆಯೂ, ಆ ಕಡೆ ಲಕ್ಷ್ಮೀಮತಿಯೂ ಜೊತೆಯಲ್ಲಿ ಹೋಗಿ ಮಾಂಡಳಿಕ ಮಹಾಸಾಮಂತ ಮಂತ್ರಿಸಮೂಹದ ಅಂತಃಪುರದ ಮಹಿಳೆಯರಿಗೆ ಪಂಚರತ್ನ ಪರಿಮಳದ್ರವ್ಯ ಕಸ್ತೂರಿ ಹೊಸ ಕರ್ಪೂರಗಳಿಂದ ಭರ್ತಿ ತುಂಬಿದ ಮಣಿಮಯ ಪಾತ್ರೆಗಳನ್ನು ಬಾಗಿನವಾಗಿ ಕೊಟ್ಟರು; ಕಸೂತಿ ಹಾಕಿದ ಬಿಳಿಯ ರೇಷ್ಮೆ ಬಟ್ಟೆಗಳು, ಜರಿರೇಷ್ಮೆವಸ್ತ್ರಗಳು ಹಾಗೂ ದೇವಾಂಗವಸ್ತ್ರಗಳ ಹಾಳೆಗಳನ್ನು ಅತಿಥಿಗಳು ಓಡಾಡುವ ಜಾಗಗಳಲ್ಲೆಲ್ಲ ಹಾಸಿಸಿದರು; ಕಾರೋಹಣದಲ್ಲಿ ಸಿದ್ಧವಾದ ಮಾಸಲುಬಣ್ಣದ ಹಾಗೂ ಬಣ್ಣಬಣ್ಣದ ಬಟ್ಟೆಗಳು ಮತ್ತು ನೆಲದಪಾಣಿಯೆಂಬ ಬಟ್ಟೆಯ ಬಣ್ಣಬಣ್ಣದ ಕಣಗಳನ್ನೂ ಬಣ್ಣದ ಕೆಲಸ ಮಾಡಿದ ವಸ್ತ್ರಗಳನ್ನೂ ತಾವು ಹೋದೆಡೆಯಲ್ಲೆಲ್ಲ ಯಾರು ಎಂದು ಪರಿಗಣಿಸದೆ ಎಲ್ಲರಿಗೂ ಕಾಣಿಕೆಯಾಗಿ ನೀಡಿದರು.

**ಇದಿರೊಳ್ ಸೂಸುವ ಹೇಮಭಾಜನಚಯಕ್ಕತ್ಯನ್ತವಸ್ತ್ರಕ್ಕೆ ಮೆ**
**ಚ್ಚಿದನರ್ಘ್ಯಾಭರಣಕ್ಕೆ ಲೆಕ್ಕಮಣಮಿಲ್ಲಿಂತಿತ್ತರಾರ್ ಮುನ್ನ ತ**
**ಪ್ಪದಿವಂ ಜಂಗಮಕಲ್ಪವೃಕ್ಷಮೆನೆ ಕೊಟ್ಟೀ ಮಾಟ್ಕೆಯಿಂ ಭಾಜನಾಂ**
**ಗದ ವಸ್ತ್ರಾಂಗದ ಭೂಷಣಾಂಗದಳವಂ ಚಕ್ರೇಶ್ವರಂ ತಾಳ್ದಿದಂ ೩೫**

**ಪದವಿಭಾಗ–ಅನ್ವಯ–ಅರ್ಥ:** ಇದಿರೊಳ್ ಸೂಸುವ = ಎದುರು ನೀಡುವ, ಹೇಮಭಾಜನಚಯಕ್ಕೆ = ಚಿನ್ನದ ಪಾತ್ರೆಗಳಿಗೆ, ಅತ್ಯನ್ತವಸ್ತ್ರಕ್ಕೆ = ಬೆಲೆಬಾಳುವ ಬಟ್ಟೆಗಳಿಗೆ, ಮೆಚ್ಚಿದ + ಅನರ್ಘ್ಯ + ಆಭರಣಕ್ಕೆ = ಅಮೂಲ್ಯ ಆಭರಣಗಳಿಗೆ, ಲೆಕ್ಕಂ + ಅಣಂ + ಇಲ್ಲ = ಲೆಕ್ಕವೇ ಇಲ್ಲ, ಮುನ್ನ ಇಂತು + ಇತ್ತರಾರ್ = ಈ ಮುಂಚೆ ಹೀಗೆ ಮತ್ತಾರು ಕೊಟ್ಟಿದ್ದರು, ಜಂಗಮಕಲ್ಪವೃಕ್ಷಮೆನೆ = ಓಡಾಡುವ ಕಲ್ಪತರುಗಳಂತೆ, ಇವಂ ಕೊಟ್ಟ + ಈ ಮಾಟ್ಕೆಯಿಂ = ನೀಡಿದ ಈ ರೀತಿಯಿಂದ, ಭಾಜನಾಂಗದ ವಸ್ತ್ರಾಂಗದ ಭೂಷಣಾಂಗದ + ಅಳವಂ ಚಕ್ರೇಶ್ವರಂ ತಾಳ್ದಿದಂ ತಪ್ಪದು = ಭಾಜನಾಂಗ ವಸ್ತ್ರಾಂಗ ಭೂಷಣಾಂಗಗಳ ಸಾಮರ್ಥ್ಯವನ್ನು ಹೊಂಇದ, ಇದು ಖಂಡಿತ.

**ಗದ್ಯಾನುಸರಣ:** ಎದುರು ನೀಡುವ ಚಿನ್ನದ ಪಾತ್ರೆಗಳಿಗೆ, ಬೆಲೆಬಾಳುವ ಬಟ್ಟೆಗಳಿಗೆ, ಅಮೂಲ್ಯ ಆಭರಣಗಳಿಗೆ ಲೆಕ್ಕವೇ ಇಲ್ಲ; ಈ ಮುಂಚೆ ಮತ್ತಾರು ಹೀಗೆ ಕೊಟ್ಟಿದ್ದರು? ಓಡಾಡುವ ಕಲ್ಪತರುಗಳಂತೆ ನೀಡಿದ ಈ ರೀತಿಯಿಂದ ಚಕ್ರವರ್ತಿಯು ಭಾಜನಾಂಗ ವಸ್ತ್ರಾಂಗ ಭೂಷಣಾಂಗಗಳ ಸಾಮರ್ಥ್ಯವನ್ನು ಹೊಂದಿದ್ದನೆಂಬುದು ಖಂಡಿತ.

**ವಿಶೇಷ ವಿಚಾರ:** ಭಾಜನಾಂಗದ ವಸ್ತ್ರಾಂಗದ ಭೂಷಣಾಂಗ = ಪಾತ್ರೆಪಡುಗಗಳನ್ನೂ ದಿವ್ಯವಸ್ತ್ರಗಳನ್ನೂ ಬೆಲೆಬಾಳುವ ಆಭರಣಗಳನ್ನೂ ನೀಡುವ ಕಲ್ಪವೃಕ್ಷಗಳು; ಸ್ವರ್ಗ ಹಾಗೂ ಭೋಗಭೂಮಿಗಳಲ್ಲಿ ಹತ್ತು ಬಗೆಯ ಕಲ್ಪವೃಕ್ಷಗಳಿರುತ್ತವೆ: ಅವುಗಳೆಂದರೆ – ಮದ್ಯಾಂಗ, ಭೂಷಣಾಂಗ, ವಸ್ತ್ರಾಂಗ, ತೂರ್ಯಾಂಗ, ಮಾಲ್ಯಾಂಗ, ಗೃಹಾಂಗ, ಭಾಜನಾಂಗ, ಭೋಜನಾಂಗ, ಜ್ಯೋತಿರಂಗ ಹಾಗೂ ದೀಪಾಂಗ' ಸೂಚಿತವಾದ ವಸ್ತುಗಳನ್ನು ಯಥೇಚ್ಛವಾಗಿ ನೀಡುವಂಥವು

**ವ। ಆಗಳ್ ಪಂಚರತ್ನಗರ್ಭ ವಿವಿಧೌಷಧಿಸಂದರ್ಭ ಶಾತಕುಂಭ ಕುಂಭಸಂಭೃತ ಮಂಗಳಜಳಂಗಳಿಂದಂ ಮಿಸಿಸೆ ಮಿಂದಳಂಕಾರಮಂದಿರಕ್ಕೆ ವಂದು ನೆಱೆಯೆ ಕೈಗೆಯ್ಯೆ,**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ ಪಂಚರತ್ನಗರ್ಭ = ಪಂಚರತ್ನಗಳಿಂದಲೂ, ವಿವಿಧ + ಔಷಧಿಸಂದರ್ಭ = ನಾನಾ ಮೂಲಿಕೆಗಳಿಂದಲೂ

ಕೂಡಿದ, ಶಾತಕುಂಭಕುಂಭಸಂಭೃತ = ಚಿನ್ನದ ಕೊಡಗಳಲ್ಲಿ ತುಂಬಿಕೊಂಡು ಬಂದ, ಮಂಗಳಜಳಂಗಳಿಂದಂ ಮಿಸಿಸೆ = ಪಾವನ ತೀರ್ಥಂಗಳಿಂದ ಜಳಕ ಮಾಡಿಸಲು, ಮಿಂದು + ಅಳಂಕಾರಮಂದಿರಕ್ಕೆ ವಂದು = ಸ್ನಾನಗೈದು ಅಲಂಕಾರ ಕೋಣೆಗೆ ಬಂದು, ನೆಱೆಯೆ ಕೈಗೆಯ್ಯೆ = ಚೆನ್ನಾಗಿ ಅಲಂಕರಿಸಲು,

**ಗದ್ಯಾನುಸರಣ:** ಪಂಚರತ್ನಗಳಿಂದಲೂ ನಾನಾ ಮೂಲಿಕೆಗಳಿಂದಲೂ ಕೂಡಿದ ಚಿನ್ನದ ಕೊಡಗಳಲ್ಲಿ ತುಂಬಿಕೊಂಡು ಬಂದ, ಪಾವನ ತೀರ್ಥಂಗಳಿಂದ ಶ್ರೀಮತಿಗೆ ಜಳಕ ಮಾಡಿಸಿದರು; ಸ್ನಾನಗೈದು ಅಲಂಕಾರಕೋಣೆಗೆ ಬಂದಾಗ ಸಖಿಯರು ಅವಳನ್ನು ಚೆನ್ನಾಗಿ ಸಿಂಗರಿಸಿದರು.

**ಕರವೆರಸಿದ ಪೊಸದುಗುಲದ**
**ತೆರಳ್ಕೆವೆತ್ತುಡೆ ಹಟತ್ಕಟೀಸೂತ್ರಪರಿ**
**ಸ್ಫುರಿತದೊಳಂ ಕಟ್ಟಿದ ಪೊಂ**
**ಜುರಿಗೆಯೊಳಂ ಜನಮನೇಂ ಮನಂಗೊಳಿಸಿದುದೋ** ೩೬

**ಪದವಿಭಾಗ-ಅನ್ವಯ-ಅರ್ಥ:** ಕರವೆರಸಿದ ಪೊಸದುಗುಲದ ತೆರಳ್ಕೆವೆತ್ತ + ಉಡೆ = ಅವಳು ಉಟ್ಟಿದ್ದ ನೆರಿಗೆಗಳ ಅಂಚಿನಿಂದ ಕೂಡಿದ ಹೊಸ ರೇಷ್ಮೆಯ ಸೀರೆಯು, ಹಟತ್ + ಕಟೀಸೂತ್ರಪರಿಸ್ಫುರಿತದೊಳಂ = ಹೊಳೆಯುವ ಡಾಬಿನ ಕಾಂತಿಯಿಂದಲೂ, ಕಟ್ಟಿದ ಪೊಂಜುರಿಗೆಯೊಳಂ = ಚಿನ್ನದ ಕಠಾರಿಯಿಂದಲೂ, ಜನಮನೇಂ ಮನಂಗೊಳಿಸಿದುದೋ = ಜನರನ್ನು ಅದೆಷ್ಟು ಸಂತೋಷಗೊಳಿಸಿತೋ!

**ಗದ್ಯಾನುಸರಣ:** ನೆರಿಗೆಗಳಿಂದ ಕೂಡಿದ ಅಂಚುಳ್ಳ ಹೊಸ ರೇಷ್ಮೆಯ ಸೀರೆಯುನ್ನವಳು ಉಟ್ಟಿದ್ದಳು; ಸೊಂಟದಲ್ಲಿನ ಡಾಬು ಹಾಗೂ ಚಿನ್ನದ ಕಠಾರಿಯ ಕಾಂತಿಯು ಜನರನ್ನು ಮುದಗೊಳಿಸಿತು.

**ತರಳತರವೃತ್ತಮೌಕ್ತಿಕ**
**ಪರಿಕರಮೇಕಾಂತಕಾಂತಮೆಕ್ಕಾವಳಿ ಕಂ**
**ಧರದೊಳಮರ್ದೆಸೆಯೆ ಪೋಲ್ವುದು**
**ಪರಿವೇಷಂಗೊಂಡ ಚಂದ್ರನಂ ಮುಖಚಂದ್ರಂ** ೩೭

**ಪದವಿಭಾಗ-ಅನ್ವಯ-ಅರ್ಥ:** ತರಳತರ = ಮಹಾ ಹೊಳಪಿನ, ವೃತ್ತಮೌಕ್ತಿಕಪರಿಕರಂ = ದುಂಡು ಮುತ್ತುಗಳ ಸಮೂಹವನ್ನು, ಏಕಾಂತಕಾಂತಂ + ಎಕ್ಕಾವಳಿ = ಪೋಣಿಸಿದ ಏಕಾವಳಿ ಸರವು, ಕಂಧರದೊಳ್ + ಅಮರ್ದೆಸೆಯೆ = ಕೊರಳಲ್ಲಿ ಒಪ್ಪಿರಲು, ಮುಖಚಂದ್ರಂ = ಶ್ರೀಮತಿಯ ಮುಖಚಂದ್ರವು, ಪರಿವೇಷಂಗೊಂಡ ಚಂದ್ರನಂ ಪೋಲ್ವುದು = ಪ್ರಭಾವಲಯದಿಂದ ಕೂಡಿದ ಚಂದ್ರನನ್ನು ಹೋಲುತ್ತಿತ್ತು.

**ಗದ್ಯಾನುಸರಣ:** ಮಹಾ ಹೊಳಪಿನ ದುಂಡು ಮುತ್ತುಗಳ ಏಕಾವಳಿ ಸರವು ಕೊರಳಲ್ಲಿ ಒಪ್ಪಿರಲು ಶ್ರೀಮತಿಯ ಮುಖವು ಪ್ರಭಾವಳಿಯಿಂದ ಕೂಡಿದ ಚಂದ್ರನನ್ನು ಹೋಲುತ್ತಿತ್ತು.

**ಹಿಮವದ್ಗಿರಿಕಟಕದಿನೊಗೆ**
**ವಮರಸರಿತ್ಸ್ರೋತಮೆಂಬ ಮಾತಂ ಪಡೆದೇಂ**
**ಹಿಮಗೌರಹಾರವೆಸೆದುದೊ**
**ಹಿಮಶೈಲಶಿಲಾವಿಶಾಲವಕ್ಷದೊಳ್** ೩೮

**ಪದವಿಭಾಗ–ಅನ್ವಯ–ಅರ್ಥ:** ಹಿಮಶೈಲಶಿಲಾವಿಶಾಲವಕ್ಷದೊಳ್ = ಹಿಮಶಿಲೆಯಂತಹ ವಜ್ರಜಂಘನ ವಿಶಾಲ ವಕ್ಷಸ್ಥಳದಲ್ಲಿ, ಹಿಮಗೌರಹಾರಂ = ಹಿಮದಂತೆ ಬೆಳ್ಳಗಿದ್ದ ಹಾರವು, ಹಿಮವದ್ಗಿರಿಕಟಕದಿನ್ + ಒಗೆವ = ಹಿಮಪರ್ವತದ ತಪ್ಪಲಿನಲ್ಲಿ ಹರಿಯುವ, ಅಮರಸರಿತ್ + ಸ್ರೋತಮೆಂಬ ಮಾತಂ = ಗಂಗೆಯ ಧಾರೆಯ ಹೋಲಿಕೆಯನ್ನು, ಪಡೆದು + ಏಂ ಎಸೆದುದೊ = ಹೊಂದಿ ಅದೇನು ರಂಜಿಸಿತೋ!

**ಗದ್ಯಾನುಸರಣ:** ಹಿಮಶಿಲೆಯಂತಹ ವಜ್ರಜಂಘನ ವಿಶಾಲ ವಕ್ಷಸ್ಥಳದಲ್ಲಿ ಹಿಮದಂತೆ ಬೆಳ್ಳಗಿದ್ದ ಹಾರವು ಹಿಮಪರ್ವತದ ತಪ್ಪಲಿನಲ್ಲಿ ಹರಿಯುವ ಗಂಗೆಯ ಧಾರೆಯಂತೆ ರಂಜಿಸಿತು.

**ಶ್ರೀಮತಿಯ ಮನಮನೆಜಿಗಿಸ**
**ಲೀ ಮಣಿಮಯಮಕುಟಮಾಗಳುಂ ಸಾಲ್ವುದೆ ತ**
**ತ್ಕೋಮಳೆ ಮುಳಿದಿರೆ ತಿಳಿಪ**
**ಲ್ಕೀ ಮಕುಟಮೆ ಸಾಲ್ಗುಮೆನಿಸಲಾರ್ತುದು ಮಕುಟಂ** ೩೯

**ಪದವಿಭಾಗ–ಅನ್ವಯ–ಅರ್ಥ:** ಶ್ರೀಮತಿಯ ಮನಮನೆಜಿಗಿಸಲ್ + ಈ ಮಣಿಮಯಮಕುಟಮಾಗಳುಂ ಸಾಲ್ವುದೆ = ಶ್ರೀಮತಿಯ ಮನಸ್ಸನ್ನು ಗೆಲ್ಲಲು ಈ ಮಣಿಖಚಿತ ಕಿರೀಟವು ಯಾವಾಗಲೂ ಸಾಕಾಗುತ್ತದೆಯೇ? ತತ್ + ಕೋಮಳೆ ಮುಳಿದಿರೆ ತಿಳಿಪಲ್ಕೆ = ಆ ಕೋಮಲೆಯು ಕೋಪಿಸಿಕೊಂಡಾಗ ಸಮಾಧಾನಪಡಿಸಲು, ಈ ಮಕುಟಮೆ ಸಾಲ್ಗುಮೆನಿಸಲ್ + ಆರ್ತುದು ಮಕುಟಂ = ಈ ಕಿರೀಟವೆ ಸಾಕು ಎನ್ನಿಸುವಂತೆ ಅವನ ಕಿರೀಟವಿತ್ತು.

**ಗದ್ಯಾನುಸರಣ:** ಶ್ರೀಮತಿಯ ಮನಸ್ಸನ್ನು ಗೆಲ್ಲಲು ಈ ಮಣಿಖಚಿತ ಕಿರೀಟವು ಯಾವಾಗಲೂ ಸಾಕಾಗುತ್ತದೆಯೇ? ಆ ಕೋಮಲೆಯು ಕೋಪಿಸಿಕೊಳ್ಳಲು ಸಮಾಧಾನಪಡಿಸಲು ಈ ಕಿರೀಟವೆ ಸಾಕು ಎನ್ನಿಸುವಂತೆ ಅವನ ಕಿರೀಟವಿತ್ತು.

(ಅಧಿಕಾರದ ಸಂಕೇತವಾದ ಕಿರೀಟ ಅವಳನ್ನು ಆಕರ್ಷಿಸಬಹುದು; ಆದರೆ ಅವಳ ಕೋಪವನ್ನು ತಿಳಿಗೊಳಿಸಲು ಅದನ್ನು ಬಾಗಿಸಿದರೆ ಅಷ್ಟೇ ಸಾಕು!)

**ಕೇಯೂರಕಟಕಸಮಿತಿ ಯು**
**ಗಾಯತಬಾಹುಗಳಿನುನ್ಮಿಷದ್ರತ್ನಹಟ**
**ಚ್ಛಾಯೆಯೊಳೆ ಮುಸುಕಿ ದೇಹ**
**ಚ್ಛಾಯೆಯುಮಂ ಪುದಿಯೆ ರತ್ನತರುವನೆ ಪೋಲ್ತಂ ೪೦**

**ಪದವಿಭಾಗ-ಅನ್ವಯ-ಅರ್ಥ:** ಕೇಯೂರಕಟಕಸಮಿತಿ = ಕಡಗ ತೋಳುಬಂದಿಗಳು, ಆಯತಬಾಹುಯುಗಗಳಿನ್ = ನಿಡಿದಾದ ಎರಡೂ ತೋಳುಗಳಿಂದ, ಉನ್ಮಿಷತ್ + ರತ್ನಹಟತ್ + ಛಾಯೆಯೊಳೆ ಮುಸುಕಿ = ಹೊಮ್ಮುವ ರತ್ನಗಳ ಹೊಳೆವ ಕಾಂತಿಯಿಂದ ಆವರಿಸಲ್ಪಟ್ಟು, ದೇಹಚ್ಛಾಯೆಯುಮಂ ಪುದಿಯೆ = ದೇಹಕಾಂತಿಯನ್ನು ಸೇರಲು, ರತ್ನತರುವನೆ ಪೋಲ್ತಂ = ವಜ್ರಜಂಘನು ರತ್ನದ ಗಿಡದಂತೆ ಶೋಭಿಸಿದ.

**ಗದ್ಯಾನುಸರಣ:** ಕಡಗ ತೋಳುಬಂದಿಗಳನ್ನು ಧರಿಸಿದ್ದ ನಿಡಿದಾದ ಎರಡೂ ತೋಳುಗಳಿಂದ ಹೊಮ್ಮುತ್ತಿದ್ದ ರತ್ನಗಳ ಕಾಂತಿಯು ಹರಡಿ ಅವನ ದೇಹಕಾಂತಿಯ ಜೊತೆಗೂಡಿ ವಜ್ರಜಂಘನು ರತ್ನದ ಗಿಡದಂತೆ ಶೋಭಿಸಿದ.

**ಮನಸಿಜನಂಗನಾಜನವಶೀಕರಣೌಷಧಮಂಗಜನ್ಮನಂ**
**ಬಿನ ಮದಶಕ್ತಿ ಮನ್ಮಥನ ಮೋಹನಯಂತ್ರಮಿದಪ್ಪುದಲ್ಲದಂ**
**ದಿನಿತುವರಂ ಮನಂಗೊಳಿಸದೆಂಬಿನಮುಜ್ಜ್ವಳಮಂಗಳಪ್ರಸಾ**
**ಧನಮೆ ಮನೋಜರಾಜಜಯಸಾಧನಮಾದುದು ವಜ್ರಜಂಘನಾ ೪೧**

**ಪದವಿಭಾಗ-ಅನ್ವಯ-ಅರ್ಥ:** ಇದು, ಮನಸಿಜನ = ಮನ್ಮಥನ, ಅಂಗನಾಜನವಶೀಕರಣ + ಔಷಧಮಂ = ಹೆಣ್ಣುಗಳನ್ನು ವಶೀಕರಿಸಿಕೊಳ್ಳುವ ಔಷಧ, ಅಂಗಜನ್ಮನ + ಅಂಬಿನ ಮದಶಕ್ತಿ = ಕಾಮಬಾಣದ ಸೊಕ್ಕಿನ ಸಾಮರ್ಥ್ಯ, ಮನ್ಮಥನ ಮೋಹನಯಂತ್ರಂ = ಮನ್ಮಥನ ಸಂಮೋಹಿಸುವ ಯಂತ್ರ, ಅಪ್ಪುದು = ಆಗಿದೆ, ಅಲ್ಲದಂದು= ಇಲ್ಲದಿದ್ದರೆ, ಇನಿತುವರಂ ಮನಂಗೊಳಿಸದು = ಇಲ್ಲಿಯವರೆಗೂ ಮನಸ್ಸನ್ನು ಗೆಲಲ್ಲು ಸಾಧ್ಯವಾಗುತ್ತಿರಲಿಲ್ಲ, ಎಂಬಿನಂ = ಎನ್ನುವ ಹಾಗೆ, ವಜ್ರಜಂಘನಾ ಉಜ್ಜ್ವಳಮಂಗಳಪ್ರಸಾಧನಮೆ = ಅವನ ಕಾಂತಿಯುಕ್ತವಾದ ಅಲಂಕಾರವೇ, ಮನೋಜರಾಜಜಯಸಾಧನಮಾದುದು = ಮನ್ಮಥರಾಜನ ಗೆಲುವಿನ ಉಪಕರಣ(ಸೈನ್ಯ)ದಂತೆ ಇತ್ತು.

**ಗದ್ಯಾನುಸರಣ:** ಇದು ಹೆಣ್ಣುಗಳನ್ನು ವಶೀಕರಿಸಿಕೊಳ್ಳುವ ಮನ್ಮಥನ ಔಷಧ, ಕಾಮಬಾಣದ ಸೊಕ್ಕಿನ ಸಾಮರ್ಥ್ಯ, ಮನ್ಮಥನ ಸಂಮೋಹಿಸುವ ಯಂತ್ರವಾಗಿದೆ,

ಇಲ್ಲದಿದ್ದರೆ ಇಲ್ಲಿಯವರೆಗೂ ಶ್ರೀಮತಿಯ ಮನಸ್ಸನ್ನು ಗೆಲಲ್ಲು ಸಾಧ್ಯವಾಗುತ್ತಿರಲಿಲ್ಲ ಎನ್ನುವ ಹಾಗೆ ವಜ್ರಜಂಘನ ಅಲಂಕಾರವೇ ಮನ್ಮಥರಾಜನನ್ನು ಗೆಲ್ಲುವ ಸೈನ್ಯದಂತಿದ್ದಿತು.

ವ। ಅನ್ನೆಗಂ ಶ್ರೀಮತಿಯುಂ ಅನಂತಸಾಮಂತ ಸೀಮಂತಿನೀಪರಿವೃತೆಯುಂ **ಅತಿಪ್ರೌಢವಾರವನಿತಾಪರಿವೃತೆಯುಂ ಆಗಿ ಪಾಲ್ಗಡಲ ತೆರೆಯ ನೊರೆಯ ದೊರೆಯ ದುಕೂಲಾಂಬರಮನುಟ್ಟು ಆತ್ಮೀಯಘನಜಘನದ ನುಣ್ಪಿನೊಳ್ ನುಣ್ಪುಮೆಗೆತ್ತು ಝುಣಝುಣಾಯಮಾನ ಮಣಿಕಿಂಕಿಣೀವಿರಾಜಿತ ಕನಕಕಾಂಚೀಕಳಾಪಮಂ ಅನಂಗರಾಗರ ಸಪ್ರವಾಹಕ್ಕೆ ಕಟ್ಟೆಗಟ್ಟುವಂತೆ ಕಟ್ಟಿ ಸಾಂದ್ರಚಂದನದ್ರವಾನುಲಿಪ್ತಾದೃಪ್ತಕುಚಕಳಶಂಗಳಂ ತರಳತರತಾರಹಾರದಿಂದಳಂಕರಿಸಿ ಚಂಪಕದಳದಾಮಕೋಮಳ ನಿಜಭುಜಲತೆ ಗಳನನೇಕ ಮೌಕ್ತಿಕಮಣಿವಿಭೂಷಣಂಗಳಿಂ ಕುಸುಮಿಸಿ ಮನ್ಮಥೋತ್ಸವಾ ಭಿಮುಖಮುಖಚಂದ್ರನುಂ ಚಂದ್ರಕ ವಳದಿಂ ತೊಡೆದೋರೊಂದೆ ವಜ್ರದ ಬಿರಿಮುಗುಳ್ಗೆತ್ತೆಱಗಿದ ಮಱದುಂಬಿಯಂತೆ ಸೊಗಯಿಸೆ ತೀವಿದ ಕೊಗ್ಗಿಯ ಕತ್ತುರಿಯುಂ ಕತ್ತುರಿಯೊಳಂಟಪರಿಚೆಯುಂ ಪರಿಚೆಯೊಳ್ಪರಿಚಯಂಬಡೆದ ಮದವಟ್ಟೆಯುಂ ಮದವಟ್ಟೆಯೊಳೊಡಂಬಟ್ಟ ವಿಪುಳಕಪೋಳತಳಲಿಖಿತ ವಿಚಿತ್ರಪತ್ರಲೇಖೆಯುಂ ಪತ್ರಲೇಖೆಯಂ ಮುಗುಳ್ನಗೆನಗುವಂತಿರ್ದಧರಮುಂ ಅಧರಮನಧರಂಮಾಡಿ ಪೊಳೆವ ಸುಲಿಪಲ್ಲ ಪೊಳೆಪುಂ ಸುಲಿಪಲ್ಲ ಪೊಳಪೆಂಬ ತನ್ನ ಬಾಳ ಪೊಳಪನೆ ಮೆಱೆದು ನೆಱೆದು ಸಮಱದ ಮದನನೊಡ್ಡಣದಂತೆ ಸಮಱದ ಪುರ್ವುಂ ಪುರ್ಬೆಂಬ ಕರ್ಬಿನ ಬಿಲ್ಲಿಂ ಬರ್ದುಂಕಿದ ಮದನನಲರೆಂಬಿನಮಿಂಬಾಗಿರ್ದ ನೆಲೆವೊಟ್ಟುಂ ನೆಲೆವೊಟ್ಟಿ ನೊಳೊಟ್ಟೈಸಿ ಪಳಂಚಲೆವ ಕುರುಳೋಳಿಯುಂ ಕುರುಳೋಳೊಯೊಳ್ ಮುನ್ನಮೆ ಸೊಗಯಿಸುವ ಚೆನ್ನಪೂಗಳೂಂ ಚೆನ್ನಪೂಗಳೆಡೆಯೆಡೆಯೊಳ್ ನಿಮಿರ್ದು ಮಿಱುಮಿಱುಗುವ ತಲೆದುಡುಗೆಯುಂ ತಲೆದುಡುಗೆಯೊ ಳೊಡಂಬಡಂ ಪಡೆದು ಮಿಳಿರ್ದು ಪೊಳೆವ ಪೊಂದಳಿರುಂ ಪೊಂದಳಿರೊ ಳೊಂದವಿ ಒಂದೆಯಲ್ಲದೊಂದಿ ನಾಡೆಯುಮಂದಂಬಡೆದು ಪದನಱದು ತಳಿದ ಮೃಗಮದ ಸಲಿಲದೊಳ್ ಮೆಲ್ಲಮೆಲ್ಲನುಳ್ಳಲರ್ದ ಚೆಲ್ವಿಂಗೆ ಮುಡಿ ಗವಿದಂತೆ ತೋಱುವ ತೋರಮಲ್ಲಿಗೆಯ ಮುಡಿಯುಮೆಸೆಯೆ ಕೈಗೆಯ್ದಾಗಳ್,**

**ಪದವಿಭಾಗ–ಅನ್ವಯ–ಅರ್ಥ:** ಅನ್ನೆಗಂ = ಅಷ್ಟರಲ್ಲಿ, ಶ್ರೀಮತಿಯುಂ = ಶ್ರೀಮತಿಯೂ, ಅನಂತಸಾಮಂತಸೀಮಂತಿನೀಪರಿವೃತೆಯುಂ = ಅಸಂಖ್ಯ ಸಾಮಂತರ ಪತ್ನಿಯರಿಂದ ಸುತ್ತುವರಿಯಲ್ಪಟ್ಟು, ಅತಿಪ್ರೌಢವಾರವನಿತಾ ಪರಿವೃತೆಯುಂ ಆಗಿ = ಅತಿ ಪ್ರೌಢೆಯರಾದ ಗಣಿಕೆಯ ಗುಂಪಿನಿಂದಲೂ ಸುತ್ತುವರಿಯಲ್ಪಟ್ಟು, ಪಾಲ್ಗಡಲ ತೆರೆಯ ನೊರೆಯ ದೊರೆಯ ದುಕೂಲಾಂಬರಮನ್ + ಉಟ್ಟು = ಹಾಲುಗಡಲ ಅಲೆಗಳಿಂದಾದ ನೊರೆಯಂತೆ ಬೆಳ್ಳಗಿರುವ ರೇಷ್ಮೆ ಸೀರೆಯನ್ನುಟ್ಟು, ಆತ್ಮೀಯಘನಜಘನದ ನುಣ್ಪಿನೊಳ್ = ತನ್ನ ತೋರ ನಿತಂಬಗಳ ನುಣುಪಿನಿಂದಾಗಿ, ನುಣ್ಪುಮೆಗೆತ್ತು = ಹೆಚ್ಚು ಇಂಪಾಗಿ, ಝುಣಝುಣಾಯಮಾನ = ಝುಣಝುಣರೆನ್ನುವ,

ಮಣಿಕಿಂಕಿಣೀವಿರಾಜಿತ ಕನಕಕಾಂಚೀಕಳಾಪಮಂ = ಮಣಿಗಳ ಕಿರುಗೆಜ್ಜೆಗಳಿಂದ ಕೂಡಿದ ಚಿನ್ನದ ಒಡ್ಯಾಣವನ್ನು, ಅನಂಗರಾಗರಸ ಪ್ರವಾಹಕ್ಕೆ = ಕಾಮರಸಪ್ರವಾಹಕ್ಕೆ, ಕಟ್ಟೆಗಟ್ಟುವಂತೆ ಕಟ್ಟಿ = ಅಣೆಕಟ್ಟುವಂತೆ ಕಟ್ಟಿಕೊಂಡು, ಸಾಂದ್ರಚಂದನದ್ರವಾನುಲಿಪ್ತ = ಗಟ್ಟಿಯಾದ ಶ್ರೀಗಂಧದ್ರವವನ್ನು ಲೇಪಿಸಿದ, ಆದೃಪ್ತಕುಚಕಳಶಂಗಳಂ = ಪುಷ್ಟವಾದ ಮೊಲೆಗಳೆಂಬ ಕಳಶಗಳನ್ನು, ತರಳತರತಾರಹಾರದಿಂದಳಂಕರಿಸಿ = ಹೊಳೆಯುವ ಮುತ್ತಿನ ಹಾರದಿಂದ ಸಿಂಗರಿಸಿಕೊಂಡು, ಚಂಪಕದಳದಾಮಕೋಮಳ = ಸಂಪಿಗೆಯೆಸಳಿನಂತೆ ಕೋಮಲವಾದ, ನಿಜಭುಜಲತೆಗಳನ್ = ತನ್ನ ಭುಜಗಳೆಂಬ ಬಳ್ಳಿಗಳನ್ನು, ಅನೇಕ ಮೌಕ್ತಿಕಮಣಿವಿಭೂಷಣಂಗಳಿಂ ಕುಸುಮಿಸಿ = ನಾನಾ ಬಗೆಯ ಮುತ್ತಿನಮಣಿಗಳ ಆಭರಣಗಳಿಂದ ಹೂಬಿಟ್ಟಂತೆ ಧರಿಸಿಕೊಂಡು, ಮನ್ಮಥೋತ್ಸವಾಭಿಮುಖ ಮುಖಚಂದ್ರನುಂ = ಕಾಮನ ಹಬ್ಬಕ್ಕೆ ಎದುರಾದ ಮುಖಚಂದ್ರವನ್ನು, ಚಂದ್ರಕವಳದಿಂ ತೊಡೆದು = ಪರಿಮಳದ್ರವ್ಯದಿಂದ ಲೇಪಿಸಿ, ಓರೊಂದೆ ವಜ್ರದ ಬಿರಿಮುಗುಳ್ಗೆತ್ತು = ಒಂದೊಂದೂ ವಜ್ರದ ಹಣ್ಣುಮೊಗ್ಗೆಂದು ಭ್ರಮಿಸಿ, ಎಱಗಿದ ಮಱಿದುಂಬಿಯಂತೆ ಸೊಗಯಿಸೆ ತೀವಿದ = ಮೇಲೆ ಬೀಳುವ ಮರಿದುಂಬಿಯ ಹಾಗೆ ಸೊಗಸಿನಿಂದ ತುಂಬಿದ, ಕೊಗ್ಗಿಯ ಕತ್ತುರಿಯುಂ = ಔಷಧಿಯುಕ್ತ ಕಸ್ತೂರಿ, ಕತ್ತುರಿಯೊಳಂಟಪರಿಚೆಯುಂ = ಕಸ್ತೂರಿಯ ಹಣೆಯ ಬೊಟ್ಟು, ಪರಿಚೆಯೊಳ್ + ಪರಿಚಯಂಬಡೆದ ಮದವಟ್ಟೆಯುಂ = ಬೊಟ್ಟಿನಲ್ಲಿ ಹೊಂದಿಕೊಂಡ ಕೆನ್ನೆಗಳ ಮೇಲೆ ರೇಖಾಚಿತ್ರಗಳು, ಮದವಟ್ಟೆಯೊಳೊಡಂಬಟ್ಟ = ಅದಕ್ಕೆ ಅನುಗುಣವಾದ, ವಿಪುಳಕಪೋಳತಳಲಿಖಿತವಿಚಿತ್ರಪತ್ರಲೇಖೆಯುಂ = ಬಗೆಬಗೆಯ ಕೆನ್ನೆಗಳ ಮೇಲೆ ರೇಖಿಸಿದ ಪತ್ರಲೇಖೆಗಳು, ಪತ್ರಲೇಖೆಯಂ ಮುಗುಳ್ನಗೆನಗುವಂತಿರ್ದಧರಮುಂ = ಅದನ್ನು ನೋಡಿ ಮಂದಹಾಸ ಬೀರುತ್ತಿದ್ದಂತಹ ತುಟಿಗಳು, ಅಧರಮನಧರಂಮಾಡಿ ಪೊಳೆವ ಸುಲಿಪಲ್ಲ ಪೊಳೆಪುಂ = ತುಟಿಗಳ ಹೊಳಪನ್ನು ಕೀಳ್ಮಾಡಿ ಹೊಳೆಯುವ ಶುಭ್ರ ಹಲ್ಲುಗಳ ಕಾಂತಿ, ಸುಲಿಪಲ್ಲ ಪೊಳಪೆಂಬ ತನ್ನ ಬಾಳ ಪೊಳಪನೆ ಮೆಱೆದು ನೆಱೆದು = ಹಲ್ಲ ಕಾಂತಿ ಎನ್ನುವ ತನ್ನ ಕತ್ತಿಯನ್ನು ಹೊಳಪನ್ನು ತೋರಿಸಿ ಜೋರಾಗಿ, ಸಮಱಿದ ಮದನನ + ಒಡ್ಡಣದಂತೆ = ಝಳಪಿಸಿದ ಕಾಮನ ಕತ್ತಿಯಂತೆ, ಸಮಱಿದ ಪುರ್ವುಂ = ತಿದ್ದಿದ ಹುಬ್ಬುಗಳು, ಪುರ್ಬೆಂಬ ಕರ್ಬಿನ ಬಿಲ್ಲಿಂ ಬರ್ದುಂಕಿದ = ಹುಬ್ಬೆನ್ನುವ ಕಬ್ಬಿನ ಬಿಲ್ಲಿನಿಂದ ಹೂಡಲಾದ, ಮದನನ + ಅಲರ್ + ಎಂಬಿನಂ + ಇಂಬಾಗಿರ್ದ ನೆಲೆವೊಟ್ಟುಂ = ಕಾಮನ ಹೂಬಾಣದಂತೆ ಸುಂದರವಾಗಿದ್ದ ತಿಲಕ, ನೆಲೆವೊಟ್ಟಿನೊಳ್ + ಒಟ್ಟೈಸಿ ಪಳಂಚಲೆವ ಕುರುಳೋಳಿಯುಂ = ತಿಲಕಕ್ಕೆ ಹೊಂದಿಕೊಂಡು ಓಲಾಡುವ ಮುಂಗುರುಳು, ಕುರುಳೋಳಿಯೊಳ್ ಮುನ್ನಮೆ ಸೊಗಯಿಸುವ ಚಿನ್ನಪೂಗಳುಂ = ಮುಂಗುರುಳಲ್ಲಿ ಸಿಂಗರಗೊಂಡ ಚಿನ್ನದ ಹೂಗಳು, ಚಿನ್ನಪೂಗಳೆಡೆಯೆಡೆಯೊಳ್ ನಿಮಿರ್ದು ಮಿಱುಮಿಱುಗುವ

ತಲೆದುಡುಗೆಯುಂ = ಆ ಚಿನ್ನದ ಹೂಗಳ ನಡುವೆ ಎದ್ದು ತೋರಿ ಮಿರಮಿರನೆ ಮಿಂಚುವ ತಲೆಯ ಆಭರಣಗಳು, ತಲೆದುಡುಗೆಯೊಳೊಡಂಬಡಂ ಪಡೆದು ಮಿಳಿರ್ದು ಪೊಳೆವ ಪೊಂದಳಿರುಂ = ಅವುಗಳೊಡನೆ ಕೂಡಿಕೊಂಡು ಕಾಂತಿಯುಕ್ತವಾಗಿ ಹೊಳೆಯುವ ಚಿನ್ನದ ಚಿಗುರು, ಪೊಂದಳಿರೊಳ್ + ಒಂದವಿಂದೆಯಲ್ಲದೆ + ಒಂದಿ = ಅವುಗಳಲ್ಲಿ ಇಜ್ಜೋಡಾಗದೆ ಹೊಂದಿಕೊಂಡು, ನಾಡೆಯುಂ + ಅಂದಂಬಡೆದು = ಬಹುವಾಗಿ ಶೋಭೆವಡೆದು, ಪದನಱಿದು ತಳಿದ = ಹದವಾಗಿ ಲೇಪಿಸಿದ, ಮೃಗಮದಸಲಿಲದೊಳ್ = ಕಸ್ತೂರಿಯ ಪರಿಮಳದಲ್ಲಿ, ಮೆಲ್ಲಮೆಲ್ಲನೆ + ಉಳ್ಳಲರ್ದ ಚೆಲ್ವಿಂಗೆ = ಅರಳುತ್ತಿರುವ ಚೆಲುವಿಗೆ, ಮುಡಿಗವಿದಂತೆ ತೋಱುವ = ಕಳಶವಿಟ್ಟಂತೆ, ತೋರಮಲ್ಲಿಗೆಯ ಮುಡಿಯುಂ + ಎಸೆಯೆ = ದುಂಡುಮಲ್ಲಿಗೆಯ ತುರುಬು ಶೋಭಿಸುವಂತೆ, ಕೈಗೆಯ್ದಾಗಳ್ = ಸಿಂಗರಿಸಿರಲು,

**ಗದ್ಯಾನುಸರಣ:** ಅಷ್ಟರಲ್ಲಿ, ಶ್ರೀಮತಿಯೂ ಬಂದಳು, ಅವಳನ್ನು ಅಸಂಖ್ಯ ಸಾಮಂತರ ಪತ್ನಿಯರೂ ಪ್ರೌಢಗಣಿಕೆಯರೂ ಸುತ್ತುವರಿದಿದ್ದರು; ಹಾಲುಗಡಲ ಅಲೆಗಳಿಂದಾದ ನೊರೆಯಂತೆ ಬೆಳ್ಳಗಿರುವ ರೇಷ್ಮೆ ಸೀರೆಯನ್ನು ಆಕೆಯು ಉಟ್ಟಿದ್ದಳು, ತನ್ನ ತೋರ ನಿತಂಬಗಳ ನುಣುಪಿನಿಂದಾಗಿ ಹೆಚ್ಚು ಇಂಪಾಗಿ ಝಣಝಣರೆನ್ನುವ ಮಣಿಗಳ ಕಿರುಗೆಜ್ಜೆಗಳಿಂದ ಕೂಡಿದ ಚಿನ್ನದ ಒಡ್ಯಾಣವನ್ನು ಕಾಮರಸಪ್ರವಾಹಕ್ಕೆ ಅಣೆಕಟ್ಟುವಂತೆ ತೊಟ್ಟಿದ್ದಳು; ಗಟ್ಟಿಯಾದ ಶ್ರೀಗಂಧದ್ರವವನ್ನು ಲೇಪಿಸಿದ ಪುಷ್ಟವಾದ ಮೊಲೆಗಳೆಂಬ ಕಳಶಗಳನ್ನು ಹೊಳೆಯುವ ಮುತ್ತಿನ ಹಾರದಿಂದ ಸಿಂಗರಿಸಿಕೊಂಡಿದ್ದಳು, ಸಂಪಿಗೆಯೆಸಳಿನಂತೆ ಕೋಮಲವಾದ ತನ್ನ ಭುಜಗಳೆಂಬ ಬಳ್ಳಿಗಳು ಹೂಬಿಟ್ಟಂತೆ ನಾನಾ ಬಗೆಯ ಮುತ್ತಿನಮಣಿಗಳ ಆಭರಣಗಳಿಂದ ಧರಿಸಿಕೊಂಡಿದ್ದಳು; ಕಾಮನ ಹಬ್ಬಕ್ಕೆ ಎದುರಾದ ಮುಖಚಂದ್ರವನ್ನು ಪರಿಮಳದ್ರವ್ಯದಿಂದ ಲೇಪಿಸಿಕೊಂಡಿದ್ದಳು; ವಜ್ರದ ಹಣ್ಣುಮೊಗ್ಗೆಂದು ಭ್ರಮಿಸಿ ಮೇಲೆ ಬೀಳುವ ಮರಿದುಂಬಿಯ ಹಾಗೆ ಸೊಗಸಿನಿಂದ ತುಂಬಿದ್ದ ಕಸ್ತೂರಿಯ ಬೊಟ್ಟನ್ನು ಹಣೆಯಲ್ಲಿಟ್ಟುಕೊಂಡಿದ್ದಳು; ಬೊಟ್ಟಿಗೆ ಹೊಂದಿಕೊಂಡಂತೆ ಕೆನ್ನೆಗಳ ಮೇಲೆ ರೇಖಾಚಿತ್ರಗಳು, ಅವಕ್ಕೆ ಅನುಗುಣವಾಗಿ ಕೆನ್ನೆಗಳ ಮೇಲೆ ರೇಖಿಸಿದ ಬಗೆಬಗೆಯ ಪತ್ರಲೇಖೆಗಳು ಸೊಗವಡೆದಿದ್ದುವು; ಅದನ್ನು ನೋಡಿ ಮಂದಹಾಸ ಬೀರುತ್ತಿದ್ದಂತಹ ತುಟಿಗಳು, ಆ ತುಟಿಗಳ ಹೊಳಪನ್ನು ಕೀಳ್ಮಾಡಿ ಹೊಳೆಯುವ ಶುಭ್ರ ದಂತಕಾಂತಿ, ದಂತಕಾಂತಿ ಎನ್ನುವ ತನ್ನ ಕತ್ತಿಯನ್ನು ಹೊಳಪನ್ನು ತೋರಿಸಿ ಜೋರಾಗಿ, ಝಳಪಿಸಿದ ಕಾಮನ ಕತ್ತಿಯಂತೆ ತಿದ್ದಿದ ಹುಬ್ಬುಗಳು, ಹುಬ್ಬೆನ್ನುವ ಕಬ್ಬಿನ ಬಿಲ್ಲಿನಿಂದ ಹೂಡಲಾದ, ಕಾಮನ ಹೂಬಾಣದಂತೆ ಸುಂದರವಾಗಿದ್ದ ತಿಲಕ, ತಿಲಕಕ್ಕೆ ಹೊಂದಿಕೊಂಡು ಓಲಾಡುವ ಮುಂಗುರುಳು, ಮುಂಗುರುಳಲ್ಲಿ ಸಿಂಗರಗೊಂಡ ಚಿನ್ನದ ಹೂಗಳು, ಆ ಚಿನ್ನದ ಹೂಗಳ ನಡುವೆ ಎದ್ದು ತೋರಿ

ಮಿರಮಿರನೆ ಮಿಂಚುವ ತಲೆಯ ಆಭರಣಗಳು, ಅವುಗಳೊಡನೆ ಕೂಡಿಕೊಂಡು ಕಾಂತಿಯುಕ್ತವಾಗಿ ಹೊಳೆಯುವ ಚಿನ್ನದ ಚಿಗುರು, ಅವುಗಳಲ್ಲಿ ಇಜ್ಜೋಡಾಗದೆ ಹೊಂದಿಕೊಂಡು ಬಹುವಾಗಿ ಶೋಭಿಸುತ್ತಿತ್ತು; ಹದವಾಗಿ ಲೇಪಿಸಿಕೊಂಡ ಕಸ್ತೂರಿಯ ಪರಿಮಳದಲ್ಲಿ ಅರಳುತ್ತಿರುವ ಚೆಲುವಿಗೆ ಕಳಶವಿಟ್ಟಂತೆ ದುಂಡುಮಲ್ಲಿಗೆಯ ದಂಡೆಯು ತುರುಬಿನಲ್ಲಿಸೊಗಸುತ್ತಿತ್ತು. ಅವಳ ಸಿಂಗಾರದ ಪರಿಯಿದು.

**ಹಾರಾದ್ಯಾಭರಣಂಗಳಿ**
**ನಾ ರೂಪಾಶ್ಚರ್ಯಮಾಗೆ ಮಾಣಿಕಚಟ್ಟಂ**
**ನೀರಂಜಿಸಿ ದಳಿವಿಡಿದ ಮ**
**ಹಾರತ್ನದ ದೊರೆಗೆ ವಂದುದಾ ಸ್ತ್ರೀರತ್ನಂ ೪೨**

**ಪದವಿಭಾಗ–ಅನ್ವಯ–ಅರ್ಥ:** ಹಾರಾದಿ + ಆಭರಣಂಗಳಿನ್ = ಹಾರವೇ ಮೊದಲಾದ ಒಡವೆಗಳಿಂದ, ಆ ರೂಪು + ಆಶ್ಚರ್ಯಮಾಗೆ = ಶ್ರೀಮತಿಯ ಚೆಲುವು ಅಚ್ಚರಿಯುಂಟುಮಾಡುತ್ತಿರಲು, ಮಾಣಿಕಚಟ್ಟಂ ನೀರಂಜಿಸಿ ದಳಿವಿಡಿದ = ರತ್ನಪರೀಕ್ಷಕನು ಹೊಳಪು ಕೊಟ್ಟು ಕುಂದಣವಿಟ್ಟ, ಮಹಾರತ್ನದ ದೊರೆಗೆ ಆ ಸ್ತ್ರೀರತ್ನಂ ವಂದುದು = ಮಹಾರತ್ನಕ್ಕೆ ಆ ಸ್ತ್ರೀರತ್ನ ಸಾಟಿಯಾಯಿತು.

**ಗದ್ಯಾನುಸರಣ:** ಹಾರವೇ ಮೊದಲಾದ ಒಡವೆಗಳಿಂದ ಕೂಡಿದ ಶ್ರೀಮತಿಯ ಚೆಲುವು ಅಚ್ಚರಿಯುಂಟುಮಾಡುತ್ತಿತ್ತು. ರತ್ನಪರೀಕ್ಷಕನು ಹೊಳಪು ಕೊಟ್ಟು ಕುಂದಣವಿಟ್ಟ ಮಹಾರತ್ನಕ್ಕೆ ಆ ಸ್ತ್ರೀರತ್ನ ಸಾಟಿಯಾಯಿತು.

**ವ। ಆಗಳನೇಕಪ್ರಸಾಧನಪ್ರಯೋಗಪ್ರವೀಣೆಯರಪ್ಪತಿಪ್ರೌಢಪುರಂಧ್ರಿಯರ್ ನೋಡಿ ನೋಡಿ**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ = ಆಗ, ಅನೇಕಪ್ರಸಾಧನಪ್ರಯೋಗಪ್ರವೀಣೆಯರ್ + ಅಪ್ಪ = ನಾನಾ ಬಗೆಯಲ್ಲಿ ಸಿಂಗರಿಸುವುದರಲ್ಲಿ ಪರಿಣತರಾಗಿದ್ದ, ಅತಿಪ್ರೌಢಪುರಂಧ್ರಿಯರ್ ನೋಡಿ ನೋಡಿ = ಹಿರಿಯ ಪುರಸ್ತ್ರೀಯರು ಅವಳನ್ನು ಕಂಡು,

**ಗದ್ಯಾನುಸರಣ:** ಆಗ, ನಾನಾ ರೀತಿಯ ಸಿಂಗಾರ ಮಾಡುವುದರಲ್ಲಿ ಪರಿಣತರಾದ ಹಿರಿಯ ಪುರಸ್ತ್ರೀಯರು ಅವಳನ್ನು ಎಚ್ಚರದಿಂದ (ಅಲಂಕರಿಸಿ)

**ಮರಕತರತ್ನಚ್ಛವಿ ಪ**
**ದ್ಮರಾಗರತ್ನಪ್ರಭಾಪರಿಸ್ಫುರಣದಧರಂ**
**ಹರಿನೋಳರತ್ನಕಕೇಶಂ**
**ಧರಿತ್ರೀ ಯುವತಿರತ್ನಮೇನೊಪ್ಪಿದುದೋ ೪೩**

**ಪದವಿಭಾಗ-ಅನ್ವಯ-ಅರ್ಥ:** ಮರಕತರತ್ನಚ್ಛವಿ = (ಈಕೆಯ ದೇಹಕಾಂತಿ) ಮರಕತರತ್ನದಂತಹುದು, ಪದ್ಮರಾಗರತ್ನಪ್ರಭಾಪರಿಸ್ಫುರಣದ + ಅಧರಂ = ಪದ್ಮರಾಗದ ಕಾಂತಿಯನ್ನು ಬೀರುವ ತುಟಿಗಳು, ಹರಿನೀಳರತ್ನಕಕೇಶಂ = ನೀಲಮಣಿಯ ಹೊಳಪಿನ ತಲೆಗೂದಲು, ಧರಿತ್ರಿಗೆ + ಈ ಯುವತಿರತ್ನಮೇನೊಪ್ಪಿದುದೋ = ಜಗತ್ತಿನಲ್ಲಿಯೇ ಈ ಯುವತಿರತ್ನವು ಶೋಭಿಸುವಂಥದ್ದು

**ಗದ್ಯಾನುಸರಣ:** ಈಕೆಯ ದೇಹಕಾಂತಿ ಮರಕತರತ್ನದಂತಹುದು (ನಸುಗಪ್ಪು), ತುಟಿಗಳ ಕಾಂತಿ ಪದ್ಮರಾಗದ ಕೆಂಪು, ತಲೆಗೂದಲು ನೀಲಮಣಿಯ ಹೊಳಪಿನದು, ಒಟ್ಟಾರೆ, ಈ ಯುವತಿರತ್ನವು ಜಗತ್ತಿಗೇ ಶೋಭೆ ಎಂದುಕೊಂಡರು.

**ಎಳವಿದಿರ ಬಣ್ಣಮೊಳ್ನಡು**
**ಕಳಶಮನವ್ವಳಿಪ ಮೊಲೆ ಪೊದಲ್ದೆಳಸುವ ಬಾಯ್**
**ಬಳಸುವ ಕಣ್ ಮಿಳಿರ್ವ ಕುರುಳ್**
**ನಳಿಮೊಗಮೆನೆ ಸೊಬಗಿವಳ್ಗೆ ನಾಟ್ವರ್ತನಮೇ ೪೪**

**ಪದವಿಭಾಗ-ಅನ್ವಯ-ಅರ್ಥ:** ಒಳ್ನಡು ಎಳವಿದಿರ ಬಣ್ಣಂ = ಇವಳ ಸೊಂಟ ಎಳೆಯ ಬಿದಿರಿನ ಬಣ್ಣದ್ದು, ಕಳಶವನ್ + ಅವ್ವಳಿಪ ಮೊಲೆ = ಕಳಶಗಳನ್ನು ಹೀಗಳೆವ ತೋರಮೊಲೆ, ಪೊದಲ್ದು + ಎಳಸುವ ಬಾಯ್ = ನಸುವರಳಿ ಬಯಸುವ ಬಾಯಿ, ಬಳಸುವ ಕಣ್ = ಅಗಲವಾದ ಕಣ್ಣು, ಮಿಳಿರ್ವ ಕುರುಳ್ = ಓಲಾಡುವ ಮುಂಗುರುಳು, ನಳಿಮೊಗಂ = ನಳನಳಿಸುವ ಮುಖ, ಎನೆ ಸೊಬಗು + ಇವಳ್ಗೆ ನಾಟ್ವರ್ತನಮೇ = ಎಂಬೀ ಬಗೆಯ ರೂಪು ಸಾಮಾನ್ಯವೇ!

**ಗದ್ಯಾನುಸರಣ:** ಇವಳ ಸೊಂಟ ಎಳೆಯ ಬಿದಿರಿನ ಬಣ್ಣದ್ದು, ಕಳಶಗಳನ್ನು ಹೀಗಳೆವ ತೋರಮೊಲೆ, ನಸುವರಳಿ ಬಯಸುವ ಬಾಯಿ, ಅಗಲವಾದ ಕಣ್ಣು, ಓಲಾಡುವ ಮುಂಗುರುಳು, ನಳನಳಿಸುವ ಮುಖ – ಈ ರೂಪು ಅಸಾಧಾರಣವೇ ಸರಿ! ಎಂದುಕೊಂಡರು.

**ಮದನನ ಮಣಿದರ್ಪಣಕಂ**
**ಮದನನದೀರತ್ನಶುಕ್ತಿಗಂ ಸೆಣಸುವುದಂ**
**ಕದಳೀಗರ್ಭದೊಳೆಣೆಯೆಂ**
**ಬುದಾವ ಚದುರಿವಳ ಬಾಹುಮೂಲದ ಪೊಳೆಪುಂ ೪೫**

**ಪದವಿಭಾಗ-ಅನ್ವಯ-ಅರ್ಥ:** ಮದನನ ಮಣಿದರ್ಪಣಕಂ = ಕಾಮನ ಮಣಿಮಯ ಕನ್ನಡಿಯೊಡನೆಯೂ, ಮದನನದೀರತ್ನಶುಕ್ತಿಗಂ = ಮನ್ಮಥನೆಂಬ

ಮುತ್ತಿನ ಚಿಪ್ಪಿನೊಂದಿಗೂ, ಸೆಣಸುವುದಂ = ಸ್ಪರ್ಧಿಸುವ, ಇವಳ ಬಾಹುಮೂಲದ ಪೊಳೆಪುಂ = ಈಕೆಯ ಕಂಕುಳ ಹೊಳಪು, ಕದಳೀಗರ್ಭದೊಳ್ + ಎಣೆಯೆಂಬುದು ಆವ ಚದುರ್ = ಬಾಳೆಯ ದಿಂಡಿನಂತಿದೆ ಎಂದು ವರ್ಣಿಸುವುದರಲ್ಲೇನಿದೆ!

**ಗದ್ಯಾನುಸರಣ:** ಈಕೆಯ ಕಂಕುಳ ಹೊಳಪು ಕಾಮನ ಮಣಿಮಯ ಕನ್ನಡಿಗಿಂತ, ಮನ್ಮಥನೆಂಬ ಮುತ್ತಿನ ಚಿಪ್ಪಿಗಿಂತ ಮಿಗಿಲು; ಅಂದ ಮೇಲೆ, ಅದು ಬಾಳೆಯ ದಿಂಡಿನಂತಿದೆ ಎಂದು ವರ್ಣಿಸುವುದರಲ್ಲೇನಿದೆ!

**ಈ ಧರೆಯ ಪೆಂಡಿರುದ್ಧಪ**
**ಯೋಧರೆಯ ಮನೋಜರಾಗರಸಪೂರಿತಬಿಂ**
**ಬಾಧರೆಯ ಕಂಬುಕಮ್ರಶಿ**
**ರೋಧರೆಯ ಬೆಡಂಗನಾರುಮೇನೆಯ್ದುವರೇ ೪೬**

**ಪದವಿಭಾಗ–ಅನ್ವಯ–ಅರ್ಥ:** ಈ ಉದ್ಧಪಯೋಧರೆಯ = ತೋರ ಮೊಲೆಯ, ಮನೋಜರಾಗರಸಪೂರಿತ = ಕಾಮರಸ ತುಂಬಿದ, ಬಿಂಬ + ಅಧರೆಯ = ತೊಂಡೆವಣ್ದುಟಿಯ, ಕಂಬುಕಮ್ರಶಿರೋಧರೆಯ = ಶಂಖದಂತೆ ಸುಂದರವಾದ ಕೊರಳಿನ, ಬೆಡಂಗನ್ = ಒನಪನ್ನು, ಧರೆಯ ಆರುಂ ಪೆಂಡಿರ್ = ಭೂಮಿಯ ಮೇಲಿನ ಬೇರಾವ ಹೆಣ್ಣುಗಳು, ಏನ್ + ಎಯ್ದುವರೇ = ಹೊಂದಿರಲು ಶಕ್ಯವೇ?

**ಗದ್ಯಾನುಸರಣ:** ಇವಳು ತೋರಮೊಲೆಯವಳು, ಕಾಮರಸಭರಿತಳು, ತೊಂಡೆವಣ್ದುಟಿಯವಳು, ಶಂಖದಂತಹ ಸುಂದರ ಕೊರಳುಳ್ಳವಳು; ಇಂಥವಳ ಒಯ್ಯಾರವು ಈ ಲೋಕದ ಬೇರೆ ಹೆಣ್ಣುಗಳಲ್ಲಿ ಕಾಣುವುದು ಅಸಾಧ್ಯ.

**ಅಣಮೆವೆಯಿಕ್ಕದೊಪ್ಪುಗುಮೆ ಕಣ್ಮಲರೆಂತುಗೆ ದೇವಸೌಂದರೀ**
**ಗಣದ ವಿಳಾಸಮಂಜಿಸುವವೋಲ್ ಪೆಡೆಯಂ ಮುಡಿಯಲ್ಲಿ ತೋರ್ಪನಾ**
**ಗಿಣಿಯರ ಕೆಯ್ತಮೆಂತೊ ಕಳೆ ಪಾಱುವ ಪಾಱುಗಳಂದಮುಂ ಬೆಡಂ**
**ಗಣಿಯರಮೀಕೆಗೆಂದು ಪೊಗಳ್ವರ್ ಕೆಲರಲ್ಲಿ ಹಿಮಾಂಶುವಕ್ತ್ರೆಯಂ ೪೭**

**ಪದವಿಭಾಗ–ಅನ್ವಯ–ಅರ್ಥ:** ಅಣಂ + ಎಮೆಯಿಕ್ಕದ = ಕೊಂಚವೂ ರೆಪ್ಪೆಯಾಡಿಸದ, ದೇವಸೌಂದರೀಗಣದ = ದೇವಸುಂದರಿಯರ, ಕಣ್ಮಲರ + ವಿಳಾಸಂ = ಕಣ್ಣುಗಳ ಸೊಗಸು, ಎಂತುಗೆ ಒಪ್ಪುಗುಮೇ = ಏನಾದರೂ ಒಪ್ಪುತ್ತದೆಯೇ? ಅಂಜಿಸುವವೋಲ್ = ಹೆದರಿಸುವಂತಹ, ಪೆಡೆಯಂ ಮುಡಿಯಲ್ಲಿ ತೋರ್ಪ = ಹೆಡೆಯನ್ನು ತಲೆಯಲ್ಲಿ ಹೊತ್ತ, ನಾಗಿಣಿಯರ ಕೆಯ್ತಂ + ಎಂತೊ ಕಳೆ = ನಾಗಿಣಿಯರ ಬಿನ್ನಾಣ ಹೇಗೆ ಸುಂದರ? ಪಾಱುವ ಪಾಱುಗಳ + ಅಂದಮಂ = ಹಾರಾಡುವ ಅಪ್ಸರೆಯರ ಚೆಲುವಿಗಿಂತಲೂ, ಈಕೆಗೆ ಬೆಡಂಗು

ಅಣಿಯರಂ = ಈಕೆಯ ಸೊಗಸು ಅಧಿಕ, ಹಿಮಾಂಶುವಕ್ತ್ರೆಯಂ = ಈ ಬೆಳುದಿಂಗಳ ಬಾಲೆಯನ್ನು, ಎಂದು ಕೆಲರಲ್ಲಿ ಪೊಗಳ್ವರ್ = ಎಂದು ಜನರು ಹೊಗಳುತ್ತಾರೆ.

**ಗದ್ಯಾನುಸರಣ:** ರೆಪ್ಪೆಯೇ ಆಡಿಸದ ದೇವಸುಂದರಿಯರ ಕಣ್ಣುಗಳ ಸೊಗಸು ಏನಾದರೂ ಒಪ್ಪುತ್ತದೆಯೇ? ಹೆದರಿಸುವಂತಹ ಹೆಡೆಯನ್ನು ತಲೆಯಲ್ಲಿ ಹೊತ್ತ ನಾಗಿಣಿಯರ ಬಿನ್ನಾಣ ಹೇಗೆ ಸುಂದರ? ಹಾರಾಡುವ ಅಪ್ಸರೆಯರ ಚೆಲುವಿಗಿಂತಲೂ ಈಕೆಯ ಸೊಗಸು ಅಧಿಕ – ಎಂದು ಜನರು ಈ ಬೆಳುದಿಂಗಳ ಬಾಲೆಯ ಚೆಲುವನ್ನು ಹೊಗಳುತ್ತಾರೆ.

**ವಿಶೇಷ ವಿಚಾರ:** 'ಕೆಯ್ತುಮೆಂತೊ ಕಳೆ' ಭಾಗದ ಬದಲು 'ಕೆಯ್ತುಮೇಂ ತೆ ಕಳೆ' ಎಂಬುದು ಎಲ್. ಬಸವರಾಜು ಸ್ವೀಕರಿಸಿರುವ ಪಾಠ

**ವ।** **ಅಂತು ನೆಱಿಯೆ ಕೈಗೆಯ್ದು ವಧೂವರರರಿರ್ವರುಮಂ ಮೌಹೂರ್ತಿಕಗಣನಿರೂಪಿತ ಪ್ರಶಸ್ತಮುಹೂರ್ತದೊಳತಿ ಪ್ರಮೋದ ನಿರ್ಭರ ಪ್ರಣಯಪ್ರಹತ ಮಂಗಳಪಟಹರವಂಗಳು ಮತಿಮಧುರಮಂದ್ರಮನೋಹರ ಮಂಗಳ ಗೀತಾರವಂಗಳುಮಲಕ್ತಕದ್ರವಾರುಣ ಚರಣರಣಿತ ನೂಪುರ ಮುಖರಿತ ದಿಗಂತರಾಂತಃಪುರ ಜನಾಶೀರ್ವಾದ ಕೋಳಾಹಳ ಮುಮೆಸೆಯೆ ಮುಂದಿಟ್ಟು ತಂದು ವಿವಾಹಮಂಟಪದ ನಡುವಣ ಮಣಿಮಯವೇದಿಕೆಯ ಹಾಟಕಪೀಠದ ಮೇಲೆ ಪಾಸಿದ ದುಗುಲದ ದಳಿಂಬದೊಳಿರಿಸಿದಾಗಳನೇಕ ಮಕುಟಬದ್ಧಚೂಡಾಮಣಿಚಕ್ರ ಚುಂಬನೋಚಿತಚರಣಕಮಳನಪ್ಪ ಸಕಳ ಚಕ್ರವರ್ತಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಆ ರೀತಿಯಲ್ಲಿ, ನೆಱಿಯೆ ಕೈಗೆಯ್ದು = ಸೊಗಸಾಗಿ ಅಲಂಕರಿಸಿ, ವಧೂವರರರಿರ್ವರುಮಂ = ಮದುವೆಯ ಹೆಣ್ಣುಗಂಡು ಗಳಿಬ್ಬರನ್ನೂ, ಮೌಹೂರ್ತಿಕಗಣನಿರೂಪಿತ = ಜೋಯಿಸ ತಂಡವು ಸೂಚಿಸಿದ್ದ, ಪ್ರಶಸ್ತಮುಹೂರ್ತದೊಳ್ = ಶುಭಮುಹೂರ್ತದಲ್ಲಿ, ಅತಿಪ್ರಮೋದ ನಿರ್ಭರಪ್ರಣಯಪ್ರಹತ = ಅತ್ಯಂತ ಸಂತಸದಾಯಕವಾದ ರೀತಿಯಲ್ಲಿ ಬಾಜಿಸಲ್ಪಟ್ಟ, ಮಂಗಳಪಟಹರವಂಗಳುಂ = ಮಂಗಳವಾದ್ಯಗಳ ಶಬ್ದವೂ, ಅತಿಮಧುರ ಮಂದ್ರಮನೋಹರ ಮಂಗಳಗೀತಾರವಂಗಳುಂ = ತುಂಬ ಇಂಪಾದ ಮಂದ್ರಸ್ಥಾಯಿಯ ಹಾಡುಗಳ ನಾದವೂ, ಅಲಕ್ತಕದ್ರವಾರುಣಚರಣರಣಿತ= ಅಲಕ್ತದ್ರವ ಲೇಪನದಿಂದ ಕೆಂಪಾದ ಪಾದಗಳಿಂದ ಶೋಭಿಸುವ, ನೂಪುರಮುಖರಿತ = ಕಾಲ್ಗೆಜ್ಜೆಗಳ ಸದ್ದಿನಿಂದ ಕೂಡಿದ, ದಿಗಂತರ + ಅಂತಃಪುರಜನ + ಆಶೀರ್ವಾದಕೋಳಾಹಳಮುಮೆಸೆಯೆ = ದಿಕ್ಕುಗಳವರೆಗೂ ಸೇರಿದ್ದ ಅಂತಃಪುರಸ್ತ್ರೀಯರ ಆಶೀರ್ವಾದದ ಗದ್ದಲ ಆವರಿಸಿರಲು, ಮುಂದಿಟ್ಟು ತಂದು

= ಮುಂದಿಟ್ಟುಕೊಂಡು ಕರೆತಂದು, ವಿವಾಹಮಂಟಪದ ನಡುವಣ ಮಣಿಮಯವೇದಿಕೆಯ = ಮದುವೆ ಮಂಟಪದ ಮಣಿಖಚಿತ ವೇದಿಕೆಯಲ್ಲಿನ, ಹಾಟಕಪೀಠದ ಮೇಲೆ = ಚಿನ್ನದ ಮಣೆಯ ಮೇಲೆ, ಪಾಸಿದ ದುಗುಲದ = ಹಾಸಿದ್ದ ರೇಷ್ಮೆವಸ್ತ್ರದ, ದಳಿಂಬದೊಳ್ + ಇರಿಸಿದಾಗಳ್ = ಮಡಿಬಟ್ಟೆಯ ಮೇಲೆ ಕುಳ್ಳಿರಿಸಿದಾಗ, ಅನೇಕಮಕುಟಬದ್ಧಚೂಡಾಮಣಿಚಕ್ರಚುಂಬನ + ಉಚಿತ = ಎಲ್ಲ ಕಿರೀಠಧಾರಿ ರಾಜರಿಂದ ನಮಸ್ಕರಿಸಲು ಯೋಗ್ಯವಾದ, ಚರಣಕಮಳನಪ್ಪ ಸಕಳಚಕ್ರವರ್ತಿ = ಅಡಿದಾವರೆಗಳ ವಜ್ರದಂತ ಚಕ್ರವರ್ತಿಯು,

**ಗದ್ಯಾನುಸರಣ:** ಆ ರೀತಿಯಲ್ಲಿ ಶ್ರೀಮತಿಯನ್ನು ಸೊಗಸಾಗಿ ಅಲಂಕರಿಸಿದ್ದರು; ಆ ಬಳಿಕ ಮದುಮಕ್ಕಳನ್ನು ಜೋಯಿಸ ತಂಡವು ಸೂಚಿಸಿದ್ದ ಶುಭಮುಹೂರ್ತದಲ್ಲಿ ಕರೆತಂದರು; ರೀತಿಯಲ್ಲಿ ಆಗಿನ ಮಂಗಳವಾದ್ಯಗಳ ಬಾಜನೆ ಅತ್ಯಂತ ಸಂತಸದಾಯಕವಾಗಿತ್ತು; ತುಂಬ ಇಂಪಾದ ಮಂದ್ರಸ್ಥಾಯಿಯ ಹಾಡುಗಳ ನಾದವೂ ಕೇಳಿಬರುತ್ತಿತ್ತು; ಅವುಗಳ ನಡುವೆ ಪಾದಗಳಿಗೆ ಕೆಂಪಾದ ಅಲಕ್ತದ್ರವನ್ನು ತೊಡೆದುಕೋಡಿದ್ದ ಹಾಗೂ ಓಡಾಟದಿಂದ ತಮ್ಮ ಕಾಲ್ಗೆಜ್ಜೆಗಳ ಗಲಗಲ ಸದ್ದಿನಿಂದ ಕೂಡಿದ ಅಸಂಖ್ಯ ಅಂತಃಪುರಸ್ತ್ರೀಯರು ಮಾಡುತ್ತಿದ್ದ ಆಶೀರ್ವಾದದ ಸದ್ದು ಎಲ್ಲೆಡೆ ಆವರಿಸಿತ್ತು; ಹೀಗೆ ಮದುಮಕ್ಕಳನ್ನು ಮುಂದಿಟ್ಟುಕೊಂಡು ಕರೆತಂದು ಮದುವೆ ಮಂಟಪದ ಮಣಿಖಚಿತ ವೇದಿಕೆಯಲ್ಲಿನ ಶುಭ್ರ ರೇಷ್ಮೆವಸ್ತ್ರವನ್ನು ಹಾಸಿದ್ದ ಚಿನ್ನದ ಮಣೆಯ ಮೇಲೆ ಕುಳ್ಳಿರಿಸಿದರು; ಕಿರೀಟಧಾರಿ ರಾಜರು ನಮಸ್ಕರಿಸಲು ಯೋಗ್ಯವಾದ ಅಡಿದಾವರೆಗಳ ವಜ್ರದಂತ ಚಕ್ರವರ್ತಿಯು,

**ನೆಱೆದತ್ತೆತ್ತಾನುಮೀ ದಂಪತಿಯ ಬಯಕೆ ಸಂಪೂರ್ಣಮಾಯ್ತುತ್ಸವಂಕ**
**ಣ್ದೆಱೆದಂತಾಯ್ತೆನ್ನ ಸಾಮ್ರಾಜ್ಯದ ಫಲಮೆನುತುಂ ರಾಗಮಂಬೀಱಲಾದ**
**ಟ್ಟಿಱ ಪೆಂಪಂ ತೋಱಲಾಗಳ್ ಕನಕಕಳಶಮಂ ತಾನೆ ಬಂದೆತ್ತಿ ಕೈನೀ**
**ರೆಱೆದಂ ಶ್ರೀವಜ್ರದಂತಕ್ಷಿತಿಪತಿ ಸತತೋತ್ಸಾಸಂದೋಹದಿಂದಂ ೪೮**

**ಪದವಿಭಾಗ–ಅನ್ವಯ–ಅರ್ಥ:** ಎತ್ತಾನುಮೀ ದಂಪತಿಯ ಬಯಕೆ ನೆಱೆದತ್ತು = ಅಂತೂ ಈ ಜೋಡಿಯ ಆಸೆ ಪೂರೈಸಿದೆ, ಉತ್ಸವಂ ಸಂಪೂರ್ಣಮಾಯ್ತು = ಉತ್ಸವ ಮುಕ್ತಾಯವಾಯಿತು, ಎನ್ನ ಸಾಮ್ರಾಜ್ಯದ ಫಲಂ ಕಣ್ದೆಱೆದಂತಾಯ್ತು = ನನ್ನ ಸಾಮ್ರಾಜ್ಯದ ಫಲವು ಕಣ್ಣು ತೆರೆಯಿತು, ಎನುತುಂ = ಎಂಬುದಾಗಿ, ರಾಗಮಂ ಬೀಱಲ್ = ಸಂತಸವನ್ನು ಹಂಚಲೂ, ಆದ + ಅಟ್ಟಿಱ ಪೆಂಪಂ ತೋಱಲ್ = ಉಂಟಾದ ಪ್ರೀತಿಯ ಆಧಿಕ್ಯವನ್ನೂ ತೋರಿಸಲೂ, ಆಗಳ್ ಶ್ರೀವಜ್ರದಂತಕ್ಷಿತಿಪತಿ = ಆಗ ವಜ್ರದಂತ ಚಕ್ರವರ್ತಿಯು, ಸತತ + ಉತ್ಸಾಸಂದೋಹ 'ದಿಂದಂ = ಮಹಾ ಸಂಭ್ರಮಸಡಗರಗಳಿಂದ, ಬಂದು ಕನಕಕಳಶಮಂ ಎತ್ತಿ ತಾನೆ ಕೈನೀರ್ + ಎಱೆದಂ = ಬಂದು ಚಿನ್ನದ ಕಳಶವನ್ನು ಹಿಡಿದೆತ್ತಿ ತನ್ನ ಕೈಯಾರೆ ಧಾರೆ ಎರೆದ.

**ಗದ್ಯಾನುಸರಣ:** 'ಅಂತೂ ಈ ಜೋಡಿಯ ಆಸೆ ಪೂರೈಸಿತು, ಉತ್ಸವ ಮುಕ್ತಾಯವಾಯಿತು, ನನ್ನ ಸಾಮ್ರಾಜ್ಯದ ಫಲವು ಕಣ್ಣು ತೆರೆಯಿತು' – ಎಂದು ತನಗಾದ ಸಂತಸವನ್ನು ಹಂಚಲೂ ತನ್ನ ಪ್ರೀತಿಯ ಆಧಿಕ್ಯವನ್ನೂ ತೋರಿಸಲೂ ವಜ್ರದಂತ ಚಕ್ರವರ್ತಿಯು ಮಹಾ ಸಂಭ್ರಮಸಡಗರಗಳಿಂದ ಬಂದು ಚಿನ್ನದ ಗಿಂಡಿಯನ್ನು ಹಿಡಿದೆತ್ತಿ ತನ್ನ ಕೈಯಾರೆ ಧಾರೆ ಎರೆದ.

**ವ। ಅಂತು ಕೈನೀರೆಱೆದು ಪಾಣಿಗ್ರಹಣಂಗೆಯಿಸಿದಾಗಳ್ ವಜ್ರಜಂಘಂ ಶ್ರೀಮತಿಯ ನಿಕಾಮಕೋಮಳಕರತಳಪಲ್ಲವ ಸ್ಪರ್ಶನಸುಖೋನ್ಮೀಳಿತ 'ಲೋಚನ ನಾಗೆ,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಕೈನೀರೆಱೆದು = ಹಾಗೆ ಧಾರೆಯೆರೆದು, ಪಾಣಿಗ್ರಹಣಂಗೆಯಿಸಿದಾಗಳ್ = ಅವರಿಬ್ಬರ ಕೈಗಳನ್ನು ಹಿಡಿಸಿದಾಗ, ವಜ್ರಜಂಘಂ ಶ್ರೀಮತಿಯ = ವಜ್ರಜಂಘನು ಶ್ರೀಮತಿಯ, ನಿಕಾಮಕೋಮಳಕರತಳ ಪಲ್ಲವಸ್ಪರ್ಶನ ಸುಖ = ಅತ್ಯಂತ ಮೃದುವಾದ ಅಂಗೈಯ ಸ್ಪರ್ಶಸುಖದಿಂದ, ಉನ್ಮೀಳಿತ ಲೋಚನನ್ + ಆಗೆ = ಅರಳಿದ ಕಣ್ಣುಗಳನ್ನು ಹೊಂದಲು,

**ಗದ್ಯಾನುಸರಣ:** ಹಾಗೆ ಧಾರೆಯೆರೆದು ಚಕ್ರವರ್ತಿಯು ಅವರಿಬ್ಬರ ಕೈಗಳನ್ನು ಹಿಡಿಸಿದ; ಶ್ರೀಮತಿಯ ಅತ್ಯಂತ ಮೃದುವಾದ ಅಂಗೈಯ ಸ್ಪರ್ಶಸುಖದಿಂದ ವಜ್ರಜಂಘನ ಕಣ್ಣುಗಳು ಅರಳಿದುವು.

**ಇನಿಯನ ಕೆಂದಳಂ ತಳಮನೊಯ್ಯನೆ ಸೋಂಕೆ ಪೊದಳ್ದ ನಾಣಪೆಂ**
**ಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜೆ ಬೆ**
**ಚ್ಚನೆ ಬಸಿವಿಂದುಕಾಂತಕರಸಂಕುಳವೊಯ್ಯನವುಂಕಿ ಸೋಂಕೆ ಸೋಂ**
**ಕಿನೊಳೊಘಳಿವಿಂದುಕಾಂತಮಣಿಪುತ್ರಿಕೆಯಂದದಿನೊಪ್ಪಿ ತೋಱಿದಳ್ ೪೯**

**ಪದವಿಭಾಗ–ಅನ್ವಯ–ಅರ್ಥ:** ಇನಿಯನ ಕೆಂದಳಂ = ನಲ್ಲನ ಅಂಗೈ, ತಳಮನ್ + ಒಯ್ಯನೆ ಸೋಂಕೆ = ತನ್ನ ಅಂಗೈಯನ್ನು ಮೆಲುವಾಗಿ ಸೋಕಲು, ಪೊದಳ್ದ ನಾಣ ಪೆಂಪಿನೊಳ್ = ಹೊಮ್ಮಿದ ನಾಚಿಕೆಯ ಆಧಿಕ್ಯದಿಂದ, ಒಗೆತರ್ಪ ಘರ್ಮಜಲಬಿಂದುಗಳಿಂ = ಉಕ್ಕುವ ಬೆವರ ಹನಿಗಳಿಂದ, ನಮಿತ + ಆನನ + ಅಬ್ಜೆ = ಬಾಗಿದ ಆ ತಾವರೆಮೊಗದವಳು, ಬೆಚ್ಚನೆ ಬಸಿವ + ಇಂದುಕಾಂತಕರ ಸಂಕುಳಂ = ಬೆಚ್ಚಗೆ ಹೊಮ್ಮುವ ಚಂದ್ರನಂತಹ ನಲ್ಲನ ಬೆರಳುಗಳು, ಒಯ್ಯನವುಂಕಿ ಸೋಂಕೆ ಮೆಲುವಾಗಿ ಅಮುಕಲು, ಸೋಂಕಿನೊಳೊಱೆವ = ಆ ಸೋಂಕಿನಿಂದ ಉಕ್ಕುವ, ಇಂದುಕಾಂತಮಣಿಪುತ್ರಿಕೆಯಂದದಿನ್ = ಚಂದ್ರಕಾತಮಣಿಯ ಗೊಂಬೆಯಂತೆ, ಒಪ್ಪಿ ತೋಱಿದಳ್ = ಸೊಬಗಿನಿಂದ ಕಾಣಿಸಿದಳು.

**ಗದ್ಯಾನುಸರಣ:** ನಲ್ಲನ ಅಂಗೈ ತನ್ನ ಅಂಗೈಯನ್ನು ಮೆಲುವಾಗಿ ಸೋಕಲು ಉಂಟಾದ ನಾಚಿಕೆಯ ಆಧಿಕ್ಯದಿಂದ ಅವಳಲ್ಲಿ ಬೆವರ ಹನಿಗಳುಕ್ಕಿದುವು; ಅವಳ ಮುಖತಾವರೆ ಬಾಗಿತು; ಹೊಮ್ಮುವ ಚಂದ್ರನಂತಹ ನಲ್ಲನ ಬೆರಳುಗಳು ತನ್ನ ಕೈಗಳನ್ನು ಮೆಲುವಾಗಿ ಅಮುಕಲು ಹೊಮ್ಮುವ ಬೆಚ್ಚನೆಯ ಬೆವರು ಸೋಂಕಿನಿಂದ ಒಸರುವ ಚಂದ್ರಕಾತಮಣಿಯ ಗೊಂಬೆಯಂತೆ ಶ್ರೀಮತಿಯು ಸೊಬಗಿನಿಂದ ಕಾಣಿಸಿದಳು.

**ವ। ಆ ಪ್ರಸ್ತಾವದೊಳ್**

**ಅರ್ಥ:** ಆ ಪ್ರಸ್ತಾವದೊಳ್ = ಆ ಸಂದರ್ಭದಲ್ಲಿ,

**ಪರಿವ ಕಟಾಕ್ಷಂಗಳನೋ**
**ಸರಿಸುತ್ತುಂ ನಿಮಿರ್ವ ಸುಯ್ಯಳಿಂ ಕುಸಿಯುತ್ತುಂ**
**ಶರಪಾಶಂಗಳ ನಡುವಣ**
**ಹರಿಣಿಯವೋಲ್ ಮನದೊಳಾಗಳಾಕುಳೆಯಾದಳ್ ೫೦**

**ಪದವಿಭಾಗ–ಅನ್ವಯ–ಅರ್ಥ:** ಪರಿವ ಕಟಾಕ್ಷಂಗಳನ್ + ಒಸರಿಸುತ್ತುಂ = ಬಿದ್ದ ಕುಡಿನೋಟಗಳನ್ನು ಓರೆ ಮಾಡುತ್ತ, ನಿಮಿರ್ವ ಸುಯ್ಯಳಿಂ ಕುಸಿಯುತ್ತುಂ = ಹೊಮ್ಮುವ ಉಸಿರಿನಿಂದ ಜರ್ಜರಿತಳಾಗಿ, ಶರಪಾಶಂಗಳ ನಡುವಣ ಹರಿಣಿಯವೋಲ್ = ಬಾಣಗಳು ಮತ್ತು ಬಲೆಗಳ ನಡುವೆ ಸಿಲುಕಿದ ಜಿಂಕೆಯ ಹಾಗೆ, ಆಗಳ್ ಮನದೊಳ್ + ಆಕುಳೆಯಾದಳ್ = ಅವಳು ಮನಸ್ಸಿನಲ್ಲಿ ತಲ್ಲಣಗೊಂಡಳು.

**ಗದ್ಯಾನುಸರಣ:** ತನ್ನ ಮೇಲೆ ಬಿದ್ದ ಕುಡಿನೋಟಗಳಿಂದ ತಪ್ಪಿಸಿಕೊಳ್ಳುತ್ತ, ಹೊಮ್ಮುವ ಉಸಿರಿನಿಂದ ಜರ್ಜರಿತಳಾಗಿ, ಬಾಣಗಳು ಮತ್ತು ಬಲೆಗಳ ನಡುವೆ ಸಿಲುಕಿದ ಜಿಂಕೆಯ ಹಾಗೆ ಅವಳು ಮಾನಸಿಕವಾಗಿ ತಲ್ಲಣಗೊಂಡಳು.

**ಪುಳಕಪ್ರೋದ್ಭೇದಘರ್ಮೋದಕವಿಸರವೊತ್ತಂಬದಿಂ ತಾಗೆಯುಂ ನಿ**
**ಶ್ಚಳಧೈರ್ಯವ್ಯಾಜತಿರ್ಯಗ್ವಳನತರಳಿತಂ ದೃಷ್ಟಿ ಪೇಟ್ಟಿತ್ತು ನಿರ್ವ್ಯಾ**
**ಕುಳಮಾಗಳ್ ರಾಜಪುತ್ರಸ್ಮಿತಮಧುಮಧುರಾಪಾಂಗಚೈತ್ರಾಂಗಜಾಸ್ತ್ರಂ**
**ಗಳ ಕೋಳಂ ನೂತನಪ್ರೇಮದೆ ನಿಮಿರ್ವೆಡೆಯೊಳ್ ದೃಷ್ಟಿಯಂ ಕಾವನಾವ**
**೫೧**

**ಪದವಿಭಾಗ–ಅನ್ವಯ–ಅರ್ಥ:** ಪುಳಕಪ್ರೋದ್ಭೇದ = ರೋಮಾಂಚನದಿಂದ ಉಂಟಾದ, ಘರ್ಮೋದಕವಿಸರಂ + ಒತ್ತಂಬದಿಂ ತಾಗೆಯುಂ = ಬೆವರ ಹನಿಗಳ ಧಾರೆಯು ಒತ್ತರಿಸಿಕೊಂಡು ಬರಲು, ನಿಶ್ಚಳಧೈರ್ಯವ್ಯಾಜ = ನಿಶ್ಚಲವಾದ

ಧೈರ್ಯವನ್ನು ತೋರುತ್ತ, ತಿರ್ಯಗ್ವಳನತರಳಿತಂ ದೃಷ್ಟಿ = ಅಡ್ಡಲಾಗಿ ತಿರುಗಿದ ನೋಟವು, ಆಗಳ್ ರಾಜಪುತ್ರಸ್ಮಿತ ಪೇೞ್ದಿತ್ತು ನಿರ್ವ್ಯಾಕುಳಂ = ಆಗ ರಾಜಕುವರನ ಮುಗುಳ್ನಗೆಯು ವ್ಯಾಕುಲಗೊಳ್ಳದಿರಲು ಸೂಚಿಸಿತು, ನೂತನಪ್ರೇಮದೆ ನಿಮಿರ್ವೆಡೆಯೊಳ್ = ಹೊಸ ಒಲವಿನಿಂದ ರೋಮಾಂಚಗೊಳ್ಳುವ ಸಂದರ್ಭದಲ್ಲಿನ, ಮಧುಮಧುರ + ಅಪಾಂಗಚೈತ್ರಾಂಗಜಾಸ್ತ್ರಂಗಳ ಕೋಳಂ = ಜೇನಿನಂತೆ ಸಿಹಿಯಾದ ಓರೆನೋಟವೆಂಬ ವಸಂತ ಮತ್ತು ಮನ್ಮಥರು ಹೂಡುವ ಬಾಣಗಳ ಸಂಕೋಲೆಯು, ದೃಷ್ಟಿಯಂ ಕಾವನ್ + ಆವಂ = ನೋಟವನ್ನು ಯಾರು ತಡೆದಾರು!

**ಗದ್ಯಾನುಸರಣ:** ರೋಮಾಂಚನದಿಂದಾಗಿ ಬೆವರ ಹನಿಗಳ ಧಾರೆಯು ಅವಳಲ್ಲಿ ಒತ್ತರಿಸಿಕೊಂಡು ಬಂತು; ಆದರೂ ನಿಶ್ಚಲವಾದ ಧೈರ್ಯದಿಂದೆಂಬಂತೆ ಅವಳು ಪಕ್ಕಕ್ಕೆ ತಿರುಗಿ ನೋಡಿದಳು; ಆಗ ವಜ್ರಜಂಘನ ಮುಗುಳ್ನಗುವು ವ್ಯಾಕುಲಗೊಳ್ಳದಿರುವಂತೆ ಸೂಚಿಸಿತು; ಹೊಸ ಒಲವಿನಿಂದ ರೋಮಾಂಚಗೊಳ್ಳುವ ಸಂದರ್ಭದಲ್ಲಿನ ಜೇನಿನಂತೆ ಸಿಹಿಯಾದ ಓರೆನೋಟವೆಂಬ ವಸಂತ ಮತ್ತು ಕಾಮರ ಬಾಣಗಳ ಸಂಕೋಲೆಯನ್ನು ಯಾರು ತಾನೇ ತಡೆದಾರು!

**ವ। ಅಂತಭಿನವಸಂಗಸಮುತ್ಪನ್ನಸಾಧ್ವಸರಸರಮಣೀಯತರಂ 'ಮುಗ್ಧ ವಧೂವದನವಿಲೋಕನ ಸುಖಮನನುಭವಿಸಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು + ಅಭಿನವಸಂಗಸಮುತ್ಪನ್ನ = ಹಾಗೆ ಹೊಸತಾದ ಸಂಗಮದಿಂದ ಹೊಮ್ಮಿದ, ಸಾಧ್ವಸರಸರಮಣೀಯತರ = ಗಾಬರಿಯಿಂದ ಹೆಚ್ಚು ಸುಂದರವಾದ, ಮುಗ್ಧವಧೂವದನವಿಲೋಕನಸುಖಮನ್ + ಅನುಭವಿಸಿ = ಮುಗುದೆ ಹೆಣ್ಣಿನ ಮುಖದ ನೋಟದ ಸುಖವನ್ನು ಅನುಭವಿಸಿ,

**ತತ್ಪರ್ಯ:** ಹಾಗೆ ಹೊಸತಾದ ಸಂಗಮದಿಂದ ಹೊಮ್ಮಿದ ಗಾಬರಿಯಿಂದ ಹೆಚ್ಚು ಸುಂದರವಾದ ಮುಗುದೆ ಹೆಣ್ಣಿನ ಮುಖದ ನೋಟದ ಸುಖವನ್ನು ವಜ್ರಜಂಘನು ಅನುಭವಿಸಿದ.

**ಇನಿವಿರಿದೊಂದು ಮೇಳಮುಮೊಡಂಬಡುವಚ್ಚಿಱುಮೆನ್ನ ಮು**
**ನ್ನಿನ ಭವದೊಂದು ಕೂರ್ಮೆಯೊಳೆ ಕೂಡಿದುದೀ ಭವದಿಂದಮಾದವಾ**
**ಸನೆ ಮಱುಮೆಯ್ಗುಮಕ್ಕುಮದಱಿಂದೆನಗಂ ನಿನಗಂ ಸಮಂತು ಮು**
**ನ್ನಿನ ಭವಮೀ ಭವಂ ಮಱುಭವಂ ಸಫಲಂ ಮೃಗಲೋಲಲೋಚನೇ**
**೩೨**

**ಪದವಿಭಾಗ–ಅನ್ವಯ–ಅರ್ಥ:** ಮೃಗಲೋಲಲೋಚನೇ = ಹರಿಣೆಯಂತೆ ಚಂಚಲ ನೋಟವುಳ್ಳವಳೇ, ಇನಿ(ದು) + ಪಿರಿದೊಂದು ಮೇಳಮುಂ +

ಒಡಂಬಡುವ + ಅೞ್ಕಱುಂ = ಇಷ್ಟು ಹಿರಿದಾದ ಕೂಡುವಿಕೆಯೂ ಪರಸ್ಪರ ಅನುರಾಗವೂ, ಎನ್ನ ಮುನ್ನಿನ ಭವದೊಂದು ಕೂರ್ಮೆಯೊಳೆ ಕೂಡಿದುದು = ನನ್ನ ಹಿಂದಿನ ಜನ್ಮದ ಪ್ರೀತಿಯಿಂದಲೇ ಉಂಟಾಗಿದೆ; ಈ ಭವದಿಂದಂ + ಆದ ವಾಸನೆ ಮಱುಮೆಯ್ಗಂ + ಅಕ್ಕುಂ = ಈ ಜನ್ಮದಲ್ಲಿ ಉಂಟಾಗಿರುವ ಈ ಸಂಸ್ಕಾರವು ಮುಂದಿನ ಜನ್ಮಕ್ಕೂ ಮುಂದುವರಿಯುತ್ತದೆ; ಅದಱಿಂದೆ + ಎನಗಂ ನಿನಗಂ ಸಮಂತು = ಇದರಿಂದ ನನಗೂ ನಿನಗೂ, ಮುನ್ನಿನ ಭವಂ + ಈ ಭವಂ ಮಱುಭವಂ = ನನಗೂ ನಿನಗೂ ಹಿಂದಿನ ಜನ್ಮ ಈ ಜನ್ಮ ಹಾಗೂ ಮುಂದಿನ ಜನ್ಮಗಳು, ಸಫಲಂ = ಸಾರ್ಥಕವಾಯಿತು.

**ಗದ್ಯಾನುಸರಣ:** 'ಹರಿಣೆಯಂತೆ ಚಂಚಲ ನೋಟವುಳ್ಳವಳೇ, ಇಷ್ಟು ಮಹತ್ವದ ಕೂಡುವಿಕೆಯೂ ಪರಸ್ಪರ ಅನುರಾಗವೂ ನನ್ನ ಹಿಂದಿನ ಜನ್ಮದ ಪ್ರೀತಿಯ ಫಲ; ಈ ಜನ್ಮದಲ್ಲಿ ಉಂಟಾಗಿರುವ ಈ ಸಂಸ್ಕಾರವು ಮುಂದಿನ ಜನ್ಮಕ್ಕೂ ಮುಂದುವರಿಯುತ್ತದೆ; ಇದರಿಂದ ನನಗೂ ನಿನಗೂ ಹಿಂದಿನ ಜನ್ಮ ಈ ಜನ್ಮ ಹಾಗೂ ಮುಂದಿನ ಜನ್ಮಗಳು ಸಾರ್ಥಕವಾಗುವಂತಾಯಿತು.'

**ವ॥ ಎಂದು ಕೆೞ್ಚುವಿರ್ದ ಮೞ್ಚುಮನುರ್ಚಿಪೋದ ಮೇಳಮುಮನಳವಿ ಗೞಿದಲಂಪುಮಂ ಬಳವಿವಡೆದೞ್ಕಱುಮನೋರೊರ್ವ ರೊಳ್ ನೆಱೆದನೇಕ ವಿಧನಿಧುವನಸುಖ ಸುಧಾರಸಾಧೀನ ಚಿತ್ತರುಂ ಚಿತ್ತಜನೇ ವಿವಿಧವಿಳಾಸ ವಿಭ್ರಮೋಪದೇಶೋಪಾಧ್ಯಾಯ ನಾಗೆಯು ಮುಪವನಾಂತ ರಾಳ ಕನಕ ಕದಳೀಭವನಂಗಳೇನಿವಾಸ ಭವನಂಗಳಾಗೆಯುಂ ಭ್ರಮದ್ಭ್ರ ಮರಭರ ಭಗ್ನ ಮಾಧವೀಲತಾಲ ತಾಂತಸಮಧಿಕ ಮಕರಂದ ಬಿಂದು ಚಿತ್ರಿತ ವಿಮುಳಪುಳಿನತಳಂಗಳೇ ವಿಶ್ರಮಣಭೂಮಿಗಳಾಗೆಯುಂ ದರದಳಿತ ಕಮಳ ವನಗಳಿತ ಮಧುರಮದಮದಿರಾಮೋದಮುದಿತ ಮಧುಕರ ನಿಕರನಿನಾದೋಪವೀಣಿತಕ್ರೀಡಾಸರೋವರಂಗಳೇ ಜಳಕೇಳೀ ಕುತೂಹಳ ನಿಳಯಂಗಳಾಗೆ ಯುಂ ಸಕಳಕಳೋತ್ಕಳಿತ ಸರಸಸಹಕಾರ ಕೋರಕ ಕಬಳನಮಳ ಮದ ಮಧುರ ಕೋಕಿಳ ಕೋಳಾಹಳಾ ಕುಳಿಕೃತಕೃತಕಕೇಳೀಶೈಳಶಿಖರಂಗಳೇ ಸಕಳ ದಿಗವಲೋಕನನಿಕೇತನಂಗಳಾಗೆಯುಂ ಸರಸಸರಸಿಜ ಸಂದರ್ಭಗರ್ಭ ಸರೋವರಸಲಿಲಲುಳಿತಶಿಶಿರಸುರಭಿ ಮಂದಮಾರುತಾಂದೋಳಿತ ಚಂದನವನ ವೀಧಿಗಳೇ ವಿಹಾರಮಾರ್ಗಂಗಳಾಗೆಯುಂ ವಸಂತಸಮಯ ಸಮುದಿತ ಕುಸುಮಕಿ ಸಲಯಂಗಳೇ ವನಕೇಳೀ ವಿಳಾಸ ಭೂಷಣಂಗಳಾಗೆಯುಂ ತ್ರಿಭುವನೈಕಪವಿತ್ರೀಭೂತ ಮಹಾಪೂತ ಜಿನಾಲಯಮೇ ನಿರತಿಶಯ ಭಕ್ತಿಪುರಸ್ಸರ ಪೂಜಾವಿಚಿತ್ರ ವಿರಚನಾದಿ ಸಂಪದಾಸ್ಪದ'ಮಾಗೆಯುಂ ಪಾತ್ರದಾನವಿಧಾನಮೇ ವಿನೋದಮಾಗೆಯುಂ ಇಂತು ನಿತ್ಯೋತ್ಸವಂಗಳ್ ಕೆಲವುಕಾಲಂ ಸಲೆ ಸಲ್ಗೆವೆರಸಿದ ತನ್ನ ನಣ್ಪನೊಟ್ಟಜೆಯಿಂ ತೋಱಿ ವಜ್ರಬಾಹುಮಹೀಪತಿಯಂ ಕರೆದುಮಮಿತತೇಜಂಗೆ ಭವದೀಯಾತ್ಮಜೆಯಂ,**

**ಪದವಿಭಾಗ–ಅನ್ವಯ–ಅರ್ಥ:** ಎಂದು = ಎಂದು, ಕೆಚ್ಚುವಿರ್ದ ಮಚ್ಚುಮನ್ = ಗಾಢವಾದ ಪರಿಚಯವನ್ನೂ, ಉರ್ಚಿಪೋದ ಮೇಳಮುಮನ್ = ಕಳಚಿದ್ದ ಸಮಾಗಮವನ್ನೂ, ಅಳವಿ + ಕಟಿದ + ಅಲಂಪುಮಂ = ಅತ್ಯಧಿಕವಾದ ಪ್ರೀತಿಯನ್ನೂ, ಬಳವಿವಡೆದ + ಅಟ್ಟಿಱುಮನ್ = ಬೆಳೆದಿದ್ದ ಅನುರಾಗವನ್ನೂ, ಓರೋರ್ವರೊಳ್ ನೆಱೆದು = ಪರಸ್ಪರ ಸೇರಿ, ಅನೇಕವಿಧನಿಧುವನ ಸುಖಸುಧಾರ ಸಾಧೀನಚಿತ್ತರುಂ = ನಾನಾ ಬಗೆಯ ಸಂಭೋಗಸುಧೆಯ ಸಂತೋಷದಲ್ಲಿ ಮುಳಗಿದವರಾಗಿ, ಚಿತ್ತಜನೇ ವಿವಿಧವಿಳಾಸವಿಭ್ರಮ + ಉಪದೇಶೋಪಾಧ್ಯಾಯ ನಾಗೆಯುಂ = ಸಾಕ್ಷಾತ್ ಕಾಮನೇ ನಾನಾ ಬಗೆಯ ವಿಲಾಸವಿಭ್ರಮಗಳನ್ನು ಹೇಳಿಕೊಡುವ ಉಪಾಧ್ಯಾಯನಾಗಲು, ಉಪವನ + ಅಂತರಾಳಕನಕಕದಳೀ ಭವನಂಗಳೇ = ಉದ್ಯಾನವನದ ಚಿನ್ನದ ಬಣ್ಣದ ಬಾಳೆಯ ಭವನಗಳೇ, ನಿವಾಸ ಭವನಂಗಳಾಗೆಯುಂ = ತಮ್ಮ ವಾಸದ ಮನೆಗಳಾಗಲು, ಭ್ರಮತ್ + ಭ್ರಮರಭರಭಗ್ನ = ಸುತ್ತಾಡುವ ದುಂಬಿಗಳಿಂದ ಮುರಿದ, ಮಾಧವೀಲತಾಲತಾಂತ ಸಮಧಿಕ = ಮಾಧವೀ ಬಳ್ಳಿಗಳಲ್ಲಿನ ಹೂಗಳಲ್ಲಿನ, ಮಕರಂದಬಿಂದುಚಿತ್ರಿತ = ಮಕರಂದದ ಹನಿಗಳಿಂದ ಚಿತ್ರಿತವಾದ, ವಿಪುಳಪುಳಿನತಳಂಗಳೇ = ವಿಶಾಲವಾದ ಮರಳುದಿಬ್ಬಗಳೇ, ವಿಶ್ರಮಣಭೂಮಿಗಳಾಗೆಯುಂ = ವಿಶ್ರಾಂತಿಯ ನೆಲೆಗಳಗಲು, ದರದಳಿತ ಕಮಳವನಗಳಿತ = ಅರೆಬಿರಿದ ತಾವರೆಯ ಸಮೂಹದಲ್ಲಿ ಸುರಿದ, ಮಧುರಮದಮದಿರ + ಆಮೋದಮುದಿತ = ಸಿಹಿಜೇನೆಂಬ ಮದ್ಯದಿಂದ ಸಂತಸಗೊಂಡ, ಮಧುಕರನಿಕರನಿನಾದ + ಉಪವೀಣಾತಕ್ರೀಡಾಸರೋವರಂಗಳೇ = ದುಂಬಿವಿಂಡಿನ ಝೇಂಕಾರವೆಂಬ ವೀಣಾನಾದದಿಂದ ಕೂಡಿದ ಸರೋವರಗಳೇ, ಜಳಕೇಳೀಕುತೂಹಳನಿಳಯಂಗಳಾಗೆಯುಂ = ನೀರಾಟದ ಕೌತುಕಮಯ ಭವನಗಳಾಗಲು, ಸಕಳಕಳಾ + ಉತ್ಕಳಿತಸರಸ = ಸುಂದರವಾಗಿ ಅರಳಿ ರಸಭರಿತವಾದ, ಸಹಕಾರಕೋರಕಕಬಳನ್ = ಮಾವಿನ ಮೊಗ್ಗನ್ನು ಅಗಿದು, ಅಮಳಮದಮಧುರ = ಮದದಿಂದ ಸೊಕ್ಕಿ ಸಿಹಿಯಾದ, ಕೋಕಿಳಕೋಳಾಹಳ + ಆಕುಳಿಕೃತ = ಕೋಗಿಲೆಗಳ ಗದ್ದಲದಿಂದ ಕೂಡಿದ, ಕೃತಕಕೇಳೀಶೈಳಶಿಖರಂಗಳೇ = ಕೃತಕವಾದ ಆಟದ ಬೆಟ್ಟಗಳ ಶಿಖರಗಳೇ, ಸಕಳದಿಕ್ + ಅವಲೋಕನ ನಿಕೇತನಂಗಳಾಗೆಯುಂ = ಎಲ್ಲ ದಿಕ್ಕುಗಳನ್ನೂ ಅವಲೋಕಿಸುವ ಮನೆಗಳಾಗಲು, ಸರಸಸರಸಿಜಸಂದರ್ಭಗರ್ಭ = ರಸಪೂರಿತ ತಾವರೆಗಳ ಸಮೂಹದಿಂದ ಕೂಡಿದ, ಸರೋವರಸಲಿಲಲುಳಿತ = ಸರೋವರದ ನೀರಿನಲ್ಲಿ ಮುಳುಗಿದ, ಶಿಶಿರಸುರಬಿ ಮಂದಮಾರುತ + ಆಂದೋಳಿತ = ತಂಪುಕಂಪುಗಳ ಮೆಲುಗಾಳಿಯಿಂದ ಅಲುಗಾಡಿಸಲ್ಪಡುವ, ಚಂದನವನವೀಧಿಗಳೇ = ಶ್ರೀಗಂಧದ ಕಾಡಿನ ದಾರಿಗಳೇ, ವಿಹಾರಮಾರ್ಗಂಗಳಾಗೆಯುಂ = ವಿಹಾರದ ದಾರಿಗಳಾಗಲು, ವಸಂತಸಮಯಸಮುದಿತಕುಸುಮಕಿಸಲಯಂಗಳೇ = ವಸಂತಕಾಲದಲ್ಲಿ ಅರಳಿದ

ಹೂಗಳೂ ಚಿಗುರುಗಳೇ, ವನಕೇಳೀವಿಳಾಸಭೂಷಣಂಗಳಾಗೆಯುಂ = ವನವಿಹಾರಕಾಲದ ಆಭರಣಗಳಾಗಲು, ತ್ರಿಭುವನೈಕಪವಿತ್ರೀಭೂತ = ಮೂಲೋಕಗಳಲ್ಲಿಯೂ ಪಾವನಕರವೆನಿಸಿದ, ಮಹಾಪೂತಜಿನಾಲಯಮೇ = ಮಹಾಪೂತ ಜಿನಾಲಯವೇ, ನಿರತಿಶಯಭಕ್ತಿಪುರಸ್ಸರ = ಅತ್ಯಧಿಕ ಭಕ್ತಿಯಿಂದ ಕೂಡಿದ, ಪೂಜಾವಿಚಿತ್ರವಿರಚನ + ಆದಿಸಂಪದ + ಆಸ್ಪದಮಾಗೆಯುಂ = ಪೂಜೆಯ ಕಾಲದಲ್ಲಿ ಮಾಡುವ ಸಂಪತ್ತಿನ ನೆಲೆಯಾಗಲು, ಪಾತ್ರದಾನವಿಧಾನಮೇ ವಿನೋದಮಾಗೆಯುಂ = ಸತ್ಪಾತ್ರರಿಗೆ ಮಾಡುವ ದಾನವೇ ವಿನೋದವಾಗಲು, ಇಂತು ನಿತ್ಯೋತ್ಸವಂಗಳ್ ಕೆಲವುಕಾಲಂ ಸಲೆ = ಹೀಗೆ ನಿತ್ಯೋತ್ಸವಗಳಿಂದ ಕೆಲವು ಕಾಲವು ಕಳೆಯಲು, ಸಲ್ಗೆವೆರಸಿದ ಒಟ್ಟಜೆಯಿಂ ತನ್ನ ನಣ್ಪನ್ ತೋಱಿ = ಸಲುಗೆಯಿಂದ ಕೂಡಿದ ಪ್ರೀತಿಯ ಅತಿಶಯದಿಂದ ತನ್ನ ಬಾಂಧವ್ಯವನ್ನು ವ್ಯಕ್ತಪಡಿಸಿ, (ವಜ್ರದಂತನು) ವಜ್ರಬಾಹುಮಹೀಪತಿಯಂ ಕರೆದುಂ = ವಜ್ರಬಾಹು ಮಹಾರಾಜನನ್ನು ಕರೆದು, ಅಮಿತತೇಜಂಗೆ ಭವದೀಯ + ಆತ್ಮಜೆಯಂ = ಅಮಿತತೇಜನಿಗೆ ನಿನ್ನ ಮಗಳನ್ನು.

**ಗದ್ಯಾನುಸರಣ** ಎಂದು ಗಾಢವಾದ ಪರಿಚಯುವನ್ನೂ, ಕಳಚಿದ್ದ ಸಮಾಗಮವನ್ನೂ, ಅತ್ಯಧಿಕವಾದ ಪ್ರೀತಿಯನ್ನೂ, ಬೆಳೆದಿದ್ದ ಅನುರಾಗವನ್ನೂ ಪರಸ್ಪರ ಕೂಡಿ ನಾನಾ ಬಗೆಯ ಸಂಭೋಗಸುಧೆಯ ಸಂತೋಷದಲ್ಲಿ ಮುಳಗಿದರು; ಸಾಕ್ಷಾತ್ ಕಾಮನೇ ಅವರಿಗೆ ನಾನಾ ಬಗೆಯ ವಿಲಾಸವಿಭ್ರಮಗಳನ್ನು ಹೇಳಿಕೊಡುವ ಉಪಾಧ್ಯಾಯನಾದ; ಉದ್ಯಾನವನದ ಚಿನ್ನದ ಬಣ್ಣದ ಬಾಳೆಯ ಭವನಗಳೇ ಅವರ ವಾಸದ ಮನೆಗಳಾದವು; ಸುತ್ತಾಡುವ ದುಂಬಿಗಳಿಂದಾಗಿ ಮುರಿದ ಮಾಧವೀ ಬಳ್ಳಿಗಳ ಹೂಗಳಲ್ಲಿನ ಮಕರಂದದ ಹನಿಗಳಿಂದ ಚಿತ್ರಿತವಾದ ವಿಶಾಲವಾದ ಮರಳುದಿಬ್ಬಗಳೇ ಅವರ ವಿಶ್ರಾಂತಿಯ ನೆಲೆಗಳಾದುವು; ಅರೆಬಿರಿದ ತಾವರೆಯ ಸಮೂಹದಲ್ಲಿ ಸುರಿದ ಸಿಹಿಜೇನೆಂಬ ಮದ್ಯದಿಂದ ಸಂತಸಗೊಂಡ ದುಂಬಿವಿಂಡಿನ ಝೇಂಕಾರವೆಂಬ ವೀಣಾನಾದದಿಂದ ಕೂಡಿದ ಸರೋವರಗಳೇ ಅವರ ನೀರಾಟದ ಕೌತುಕಮಯ ಭವನಗಳಾದುವು; ಸುಂದರವಾಗಿ ರಸಭರಿತವಾಗಿದ್ದ ಮಾವಿನ ಮೊಗ್ಗನ್ನು ಅಗಿದಗಿದು ಮದದಿಂದ ಸೊಕ್ಕಿದ ಕೋಗಿಲೆಗಳ ಗದ್ದಲದಿಂದ ಕೂಡಿದ ಕೃತಕವಾದ ಆಟದ ಬೆಟ್ಟಗಳ ಶಿಖರಗಳೇ ಅವರು ಎಲ್ಲ ದಿಕ್ಕುಗಳನ್ನೂ ಅವಲೋಕಿಸುವ ಮನೆಗಳಾದುವು; ರಸಪೂರಿತ ತಾವರೆಗಳ ಸಮೂಹದಿಂದ ಕೂಡಿದ ಸರೋವರದ ನೀರಿನಲ್ಲಿ ಮುಳುಗಿದ ತಂಪುಕಂಪುಗಳ ಮೆಲುಗಾಳಿಯಿಂದ ಅಲುಗಾಡುವ ಶ್ರೀಗಂಧದ ಕಾಡಿನ ದಾರಿಗಳೇ ಅವರ ವಿಹಾರದ ದಾರಿಗಳಾದುವು; ವಸಂತಕಾಲದಲ್ಲಿ ಅರಳಿದ ಹೂಗಳೂ ಚಿಗುರುಗಳೇ ವನವಿಹಾರಕಾಲದ ಅವರ ಆಭರಣಗಳಾದುವು; ಮೂಲೋಕಗಳಲ್ಲಿಯೂ ಪಾವನಕರವೆನಿಸಿದ ಮಹಾಪೂತ ಜಿನಾಲಯದಲ್ಲಿ ಅತ್ಯಧಿಕ ಭಕ್ತಿಯಿಂದ ಕೂಡಿದ ಪೂಜಾಪರಿಕರಗಳೇ ಅವರ ಸಂಪತ್ತಿನ ನೆಲೆಯಾಯಿತು;

ಸತ್ಪಾತ್ರರಿಗೆ ಮಾಡುವ ದಾನದ ಪರಿಯೇ ವಿನೋದವಾಯಿತು – ಹೀಗೆ ನಿತ್ಯೋತ್ಸವಗಳಿಂದ ಕೆಲವು ಕಾಲವು ಕಳೆಯಿತು. ಆ ಬಳಿಕ, ಸಲುಗೆಯಿಂದ ಕೂಡಿದ ಪ್ರೀತಿಯ ಅತಿಶಯದಿಂದ ತನ್ನ ಬಾಂಧವ್ಯವನ್ನು ವ್ಯಕ್ತಪಡಿಸಿ, ವಜ್ರದಂತನು ವಜ್ರಬಾಹು ಮಹಾರಾಜನನ್ನು ಕರೆದು, ತನ್ನ ಮಗ ಅಮಿತತೇಜನಿಗೆ ಅವನ ಮಗಳನ್ನು (ಮದುವೆ ಮಾಡಿ ಕೊಡಲು ಕೇಳಿಕೊಂಡ).

**ಕುಡು ಕುಡದದಂದುಮೆನ್ನ ತನಯಂ ಭವದಾತ್ಮಜೆಗೀಶನೆಂದು ಬೆ**
**ಳ್ಗೊಡೆಯಾತನಟ್ಟುವಡೆ ಕೊಳ್ಕೊಡೆಗಾಗಳೆ ವಜ್ರಬಾಹು ದಾಂ**
**ಗುಡಿವಿಡೆ ರಾಗಮಟ್ಟಿಯೊಳನುಂದರಿಯಂ ಕುಡೆ ಬಂಧುಗಳ್ ಮನಂ**
**ಬಡೆ ಕಡುರಯ್ಯಮಾಯ್ತಮಿತತೇಜನೊಳಂದು ವಿವಾಹಮಂಗಳಂ**
**೫೩**

**ಪದವಿಭಾಗ–ಅನ್ವಯ–ಅರ್ಥ:** ಕುಡು = (ಮದುವೆ ಮಾಡಿ) ಕೊಡು, ಕುಡದದಂದುಂ + ಎನ್ನ = ಹಾಗೆ ಮದುವೆಮಾಡಿಕೊಡದಿದ್ದರೂ, ತನಯಂ ಭವತ್ + ಆತ್ಮಜೆಗೆ + ಈಶನ್ = ನನ್ನ ಮಗನೇ ನಿನ್ನ ಮಗಳಿಗೆ ಗಂಡ, ಎಂದು ಬೆಳ್ಗೊಡೆಯಾತನ್ = ಎಂದು ಮಹಾರಾಜನು, ಅಟ್ಟುವಡೆ = ಬಯಸಲು, ಕೊಳ್ಕೊಡೆಗಾಗಳೆ ವಜ್ರಬಾಹು ದಾಂಗುಡಿವಿಡೆ = ಈ ಕೊಡುಕೊಳುವಿಕೆಗೆ ವಜ್ರಬಾಹುವೂ ಒಪ್ಪಿಕೊಳ್ಳಲು, ರಾಗಂ + ಅಟ್ಟಿಯೊಳ್ + ಅನುಂದರಿಯಂ ಕುಡೆ = ಪ್ರೀತಿವಾತ್ಸಲ್ಯಗಳಿಂದ ಮಗಳು ಅನುಂದರಿಯನ್ನು ಮದುವೆಮಾಡಿಕೊಡಲು, ಬಂಧುಗಳ್ ಮನಂಬಡೆ = ನೆಂಟರೆಲ್ಲ ಸಂತಸಗೊಳ್ಳಲು, ಅಮಿತತೇಜನೊಳ್ + ಅಂದು ವಿವಾಹಮಂಗಳಂ ಕಡುರಯ್ಯಮಾಯ್ತು = ಅಮಿತತೇಜನ ಮದುವೆ ಯೊಸಗೆಯು ವಿಜೃಂಭಣೆಯಿಂದ ಕಣ್ಗೊಳಿಸಿತು

**ಗದ್ಯಾನುಸರಣ:** 'ಮದುವೆ ಮಾಡಿ ಕೊಡು, ಹಾಗೆ ಮದುವ 'ಮಾಡಿಕೊಡದಿದ್ದರೂ ನನ್ನ ಮಗನೇ ನಿನ್ನ ಮಗಳಿಗೆ ಗಂಡ' ಎಂದು ಮಹಾರಾಜನು ಕೇಳಿಕೊಳ್ಳಲು, ಈ ಕೊಡುಕೊಳುವಿಕೆಗೆ ವಜ್ರಬಾಹುವೂ ಒಪ್ಪಿದ; ಆತನು ಪ್ರೀತಿವಾತ್ಸಲ್ಯಗಳಿಂದ ಮಗಳು ಅನುಂದರಿಯನ್ನು ಮದುವೆಮಾಡಿಕೊಡಲು ನೆಂಟರೂ ಸಂತಸಗೊಂಡರು; ಅಮಿತತೇಜನ ಮದುವೆಯೊಸಗೆಯು ಆಗ ವಿಜೃಂಭಣೆಯಿಂದ ನಡೆಯಿತು.

**ವ। ಆ ವಿವಾಹಕಲ್ಯಾಣಾನಂತರಂ ನಿಜತನೂಜೆಯುನಳಿಯುನೊಡನೆ ಕಟುಪುವುದ್ಯೋಗಮುನೆತ್ತಿಕೊಂಡು,**

**ಪದವಿಭಾಗ–ಅನ್ವಯ–ಅರ್ಥ**: ಆ ವಿವಾಹಕಲ್ಯಾಣ + ಆನಂತರಂ = ಆ ಮದುವೆಯ ಸಮಾರಂಭದ ಬಳಿಕ, ನಿಜತನೂಜೆಯನ್ = ತನ್ನ ಮಗಳನ್ನು,

ಅಳಿಯನೊಡನೆ ಕಱುಪುವ + ಉದ್ಯೋಗಮನೆತ್ತಿಕೊಂಡು ಅಳಿಯನ ಜೊತೆಗೆ ಕಳುಹಿಸಿಕೊಡುವ ಕೆಲಸದಲ್ಲಿ ನಿರತನಾಗಿ,

**ಗದ್ಯಾನುಸರಣ:** ಮದುವೆಯ ಸಮಾರಂಭದ ಬಳಿಕ ಮಗಳನ್ನು ಅಳಿಯನ ಜೊತೆಗೆ ಕಳುಹಿಸಿಕೊಡುವ ಕೆಲಸದಲ್ಲಿ ನಿರತನಾದ.

**ಎನಗೀ ಷಟ್ಖಂಡಭೂಮಂಡಳಪತಿಯೆನಿಸಲ್ಸಾಲ್ಗುಮುದ್ಯದ್ಯಶೋಲಾಂ**
**ಛನಮೀ ಶ್ವೇತಾತಪತ್ರಂ ಕಳೆದುಱುದುವುವಂ ತನ್ನಿಮಿನ್ನೆಂದು ವಾರಾಂ**
**ಗನೆಯರ್ ಜಾತ್ಯಶ್ವವೃಂದಂ ಸಮದಕರಿಕುಳಂ ತಾರಹಾರಂಗಳೆಂದಿಂ**
**ತೆನಿತಾನುಂ ವಸ್ತುವಂ ತಾಂ ತರಿಸಿದನಧಿಕಪ್ರೀತಿಯಿಂ ವಜ್ರದಂತಂ ೫೪**

**ಪದವಿಭಾಗ–ಅನ್ವಯ–ಅರ್ಥ:** ಎನಗೆ ಈ ಷಟ್ಖಂಡಭೂಮಂಡಳಪತಿಯೆನಿಸಲ್ = ನಾನು ಈ ಆರುಖಂಡಗಳನ್ನೊಳಗೊಂಡ ಭೂಮಂಡದ ಒಡೆಯ ಎನ್ನಿಸಿಕೊಳ್ಳಲು, ಉದ್ಯತ್ + ಯಶೋಲಾಂಛನಮೀ ಶ್ವೇತಾತಪತ್ರಂ ಸಾಲ್ಗುಂ = ಎತ್ತಿದ ಕೀರ್ತಿಯ ಕುರುಹಾದ ಈ ಬೆಳ್ಗೊಡೆಯೇ ಸಾಕು; ಕಳೆದು + ಉಱುದುವುವಂ ತನ್ನಿಂ + ಇನ್ನು + ಎಂದು = ಅದರ ಹೊರತು ಮಿಕ್ಕವನ್ನು ತನ್ನಿ ಎಂದು ಹೇಳಿ, ವಾರಾಂಗನೆಯರ್ = ಗಣಿಕಾಸ್ತ್ರೀಯರು, ಜಾತಿ + ಅಶ್ವವೃಂದಂ = ಜಾತಿ ಕುದುರೆಗಳ ಸಮೂಹ, ಸಮದಕರಿಕುಳಂ = ಮದ್ದಾನೆಗಳ ಹಿಂಡು, ತಾರಹಾರಂಗಳ್ = ಮುತ್ತಿನ ಸರಗಳು, ಎಂದಿಂತು + ಎನಿತಾನುಂ ವಸ್ತುವಂ = ಎಂದು ಇಂತಹ ವಸ್ತುಗಳನ್ನು, ಅಧಿಕಪ್ರೀತಿಯಿಂ ವಜ್ರದಂತಂ ತಾಂ ತರಿಸಿದನ್ = ಅತಿ ಪ್ರೀತಿಯಿಂದ ವಜ್ರದಂತನು ತರಿಸಿದನು.

**ಗದ್ಯಾನುಸರಣ:** 'ಈ ಆರುಖಂಡಗಳನ್ನೊಳಗೊಂಡ ಭೂಮಂಡದ ಒಡೆಯ ಎನ್ನಿಸಿಕೊಳ್ಳಲು ಎತ್ತಿದ ಕೀರ್ತಿಯ ಕುರುಹಾದ ಈ ಬೆಳ್ಗೊಡೆಯೊಂದೇ ನನಗೆ ಸಾಕು; ಅದನ್ನುಳಿದು ಮಿಕ್ಕವನ್ನು ತನ್ನಿ' ಎಂದು ಹೇಳಿ, ವಜ್ರದಂತನು ಗಣಿಕಾಸ್ತ್ರೀಯರು, ಜಾತಿ ಕುದುರೆಗಳ ಸಮೂಹ, ಮದ್ದಾನೆಗಳ ಹಿಂಡು, ಮುತ್ತಿನ ಸರಗಳು ಮುಂತಾದ ವಸ್ತುಗಳನ್ನು ವಜ್ರದಂತನು ತುಂಬುಪ್ರೀತಿಯಿಂದ ತರಿಸಿದ.

**ವ। ಅಂತು ತರಿಸಿ ಮತ್ತಮತ್ಮೀಯಸ್ಥಪತಿ ರತ್ನವಿರಚಿತಮಣಿಕನಕ ಖಚಿತಶಿಬಿಕಾಂದೋಳಾದಿ ಯಾನಂಗಳುಮಂ ಕನಕಯೋಗಾಳಂಕೃತಂಗಳಾಗಿ ಸೊಗಯಿಸುವ ಕರಿಯ ಪಿರಿಯ ಮೆಯ್ಯ ನಿಡಿದು ಕಿವಿಯ ಕುಣಿದು ಮೆಟ್ಟುವ ವಜ್ಜರಿಗಟ್ಟಿಗಳುಮಂ ವ್ಯೂಹದೊಳ್ ನಿಟ್ಟೆವಟ್ಟು ಮಣಿಮಯ ಮಂಡನಾಯೋಗದೊಳೊಡಂಬಟ್ಟ ಪಿಡಿಗಳುಮಂ ಮುಳಿವ ತಿಳಿವ ಗಂಡರ ಪೆಂಡಿರ ನುಡಿಗಳನೆ ಬಣ್ಣಿಸುವ ಪುರುಳಿಗಳುಮಂ ಅಕಾಂಡ ತಾಂಡವಾರಂಭ ಶೌಂಡ ಶಿಖಂಡಿ ಮಂಡಳಮುಮಂ ಲೀಲಾಲಸ ಗಮನಮಂ ಗಜಗಮನೆ ಯರ್ಗುಪದೇಶಂಗೆಯ್ವ ದೀವದ ರಾಜಹಂಸೆ ಗಳುಮಂ ಕುಬ್ಜವಾಮನ ಬಧಿರಮೂಕ ಕಿರಾತೋನ್ಮತ್ತ ಜಡಜನಂಗಳುಮಂ**

**ಗಾಯಕವಾದಕನರ್ತಕ ಪುಣ್ಯಪಾಠಕ ವೈತಾಳಿಕನಿಕರಮುಮಂ ಕೊಟ್ಟು ಪಂಡಿತೆಯುಮನೊಡವೋ ಪಂತು ಮಾಡಿ ರಾಜಾಧಿ ರಾಜನಳಿಯನ ಮೊಗಮಂ ನೋಡಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು ತರಿಸಿ ಮತ್ತಂ = ಹಾಗೆ ತರಿಸಿಕೊಂಡು ಆನಂತರ, ಆತ್ಮೀಯಸ್ಥಪತಿರತ್ನವಿರಚಿತ = ತನ್ನ ಮುಖ್ಯಶಿಲ್ಪಿಯಿಂದ ನಿರ್ಮಿತವಾಗಿದ್ದ, ಮಣಿಕನಕಖಚಿತಶಿಬಿಕಾ + ಆಂದೋಳ + ಆದಿಯಾನಂಗಳುಮಂ = ರತ್ನ ಹಾಗೂ ಚಿನ್ನದಿಂದ ಮಾಡಿದ್ದ ಮೇನೆ ಪಲ್ಲಕ್ಕಿ ಮುಂತಾದ ವಾಹನಗಳನ್ನೂ, ಕನಕಯೋಗ + ಅಳಂಕೃತಂಗಳಾಗಿ ಸೊಗಯಿಸುವ = ಚಿನ್ನದ ಜೀನುಗಳಿಂದ ಅಲಂಕಾರಗೊಂಡ, ಕರಿಯ ಪಿರಿಯ ಮೆಯ್ಯ = ಆನೆಯಂತೆ ದೊಡ್ಡ ದೇಹದ, ನಿಡಿದು ಕಿವಿಯ = ನೀಳ ಕಿವಿಗಳ, ಕುಣಿದು ಮೆಟ್ಟುವ = ಕುಣಿಯುತ್ತ ಸಾಗುವ, ವಜ್ಜರಿಗಟ್ಟೆಗಳುಮಂ = ಹೆಸರಗತ್ತೆಗಳನ್ನೂ, ವ್ಯೂಹದೊಳ್ ನಿಟ್ಟೆವಟ್ಟು = ಖೆಡ್ಡದಲ್ಲಿ ಪಳಗಿಸಿ, ಮಣಿಮಯಮಂಡನಾಯೋಗದೊಳ್ + ಒಡಂಬಟ್ಟ ಪಿಡಿಗಳುಮಂ = ಮಣಿಖಚಿತ ಜೂಲಿನಿಂದ ಸೊಗಸುವ ಹೆಣ್ಣಾನೆಗಳನ್ನೂ, ಮುಳಿವ ತಿಳಿವ ಗಂಡರ ಪೆಂಡಿರ ನುಡಿಗಳನೆ ಬಣ್ಣಿಸುವ = ಕೋಪಗೊಳ್ಳುವ ಸಮಾಧಾನಗೊಳ್ಳುವ ಗಂಡು–ಹೆಣ್ಣುಗಳ ಮಾತುಗಳನ್ನು ವಿವರಿಸುವ, ಪುರುಳಿಗಳುಮಂ = ಗಿಳಿಗಳನ್ನೂ, ಅಕಾಂಡತಾಂಡವ + ಆರಂಭ = ಹೊತ್ತಲ್ಲದ ಹೊತ್ತಿನಲ್ಲಿ ಕುಣಿಯಲು ತೊಡಗುವ, ಶೌಂಡ ಶಿಖಂಡಿಮಂಡಳಮುಮಂ = ಕುಶಲ ನವಿಲುಗಳ ಗುಂಪನ್ನೂ, ಲೀಲಾ + ಆಲಸಗಮನಮಂ ಗಜಗಮನೆಯರ್ಗುಪದೇಶಂಗೆಯ್ವ = ಒಯ್ಯಾರದಿಂದ ನಿಧಾನವಾಗಿ ನಡೆಯುವ ರೀತಿಯನ್ನು ಹೆಂಗಸರಿಗೆ ಹೇಳಿಕೊಡುವ, ದೀವದ ರಾಜಹಂಸೆಗಳುಮಂ = ಸಾಕಿದ ರಾಜಹಂಸಗಳನ್ನೂ, ಕುಬ್ಜವಾಮನಬಧಿರ ಮೂಕಕಿರಾತ + ಉನ್ಮತ್ತಜಡಜನಂಗಳುಮಂ = ಗೂನ ಕುಳ್ಳ ಕಿವುಡ ಮೂಕ ಕಿರಾತ ಹುಚ್ಚ ದಡ್ಡರುಗಳನ್ನೂ, ಗಾಯಕವಾದಕನರ್ತಕಪುಣ್ಯಪಾಠಕವೈತಾಳಿಕ ನಿಕರಮುಮಂ = ಹಾಡುಗಾರ ವಾದ್ಯಗಾರ ನರ್ತಕ ಮಂಗಳಪಾಠಕ ಹೊಗಳುಭಟರ ಸಮೂಹವನ್ನೂ, ಕೊಟ್ಟು ಪಂಡಿತೆಯುಮನ್ + ಒಡವೋಪಂತು ಮಾಡಿ = ನೀಡಿದ್ದಲ್ಲದೆ ಪಂಡಿತೆಯನ್ನೂ ಜೊತೆಗೆ ಹೋಗುವಂತೆ ಏರ್ಪಡಿಸಿ, ರಾಜಾಧಿರಾಜನ್ + ಅಳಿಯನ ಮೊಗಮಂ ನೋಡಿ = ವಜ್ರದಂತ ಚಕ್ರವರ್ತಿಯು ವಜ್ರಜಂಘನ ಮುಖವನ್ನು ನೋಡಿ,

**ಗದ್ಯಾನುಸರಣ:** ಹಾಗೆ ತರಿಸಿಕೊಂಡು, ಮುಖ್ಯಶಿಲ್ಪಿಯಿಂದ ನಿರ್ಮಿತವಾಗಿದ್ದ ರತ್ನ ಹಾಗೂ ಚಿನ್ನದಿಂದ ಮಾಡಿದ್ದ ಮೇನೆ ಪಲ್ಲಕ್ಕಿ ಮುಂತಾದ ವಾಹನಗಳನ್ನೂ, ಚಿನ್ನದ ಜೀನುಗಳಿಂದ ಅಲಂಕಾರಗೊಂಡ ಆನೆಯಂತೆ ದೊಡ್ಡ ದೇಹ ಹಾಗೂ ನೀಳ ಕಿವಿಗಳನ್ನು ಹೊಂದಿ ಕುಣಿಯುತ್ತ ಸಾಗುವ ಹೆಸರಗತ್ತೆಗಳನ್ನೂ, ಖೆಡ್ಡದಲ್ಲಿ ಪಳಗಿಸಿದ ಮಣಿಖಚಿತ ಜೂಲಿನಿಂದ ಸೊಗಸುವ ಹೆಣ್ಣಾನೆಗಳನ್ನೂ, ಕೋಪಗೊಳ್ಳುವ

ಸಮಾಧಾನಗೊಳ್ಳುವ ಗಂಡು–ಹೆಣ್ಣುಗಳ ಮಾತುಗಳನ್ನು ವಿವರಿಸುವ ಗಿಳಿಗಳನ್ನೂ, ಹೊತ್ತಲ್ಲದ ಹೊತ್ತಿನಲ್ಲಿ ಕುಣಿಯಲು ತೊಡಗುವ ಕುಶಲ ನವಿಲುಗಳನ್ನೂ, ಒಯ್ಯಾರದಿಂದ ನಿಧಾನವಾಗಿ ನಡೆಯುವ ರೀತಿಯನ್ನು ಹೆಂಗಸರಿಗೆ ಹೇಳಿಕೊಡುವ ಸಾಕಿದ ರಾಜಹಂಸಗಳನ್ನೂ, ಸೇವಕರುಗಳನ್ನಾಗಿ ಗೂನ ಕುಳ್ಳ ಕಿವುಡ ಮೂಕ ಕಿರಾತ ಹುಚ್ಚ ದಡ್ಡರುಗಳನ್ನೂ, ಹಾಡುಗಾರ ವಾದ್ಯಗಾರ ನರ್ತಕ ಮಂಗಳಪಾಠಕ ಹೊಗಳುಭಟ ಇವರ ಗುಂಪನ್ನೂ ನೀಡಿದ್ದಲ್ಲದೆ ಪಂಡಿತೆಯನ್ನೂ ಜೊತೆಗೆ ಹೋಗುವಂತೆ ಏರ್ಪಡಿಸಿದ ವಜ್ರದಂತ ಚಕ್ರವರ್ತಿಯು ವಜ್ರಜಂಘನ ಮುಖವನ್ನು ನೋಡಿ ಹೀಗೆಂದ.

**ಬಗೆದುಂ ನಿನ್ನನ್ವಾಯೋನ್ನತಿಯನಿವಳತಿಸ್ನೇಹಸಂಬಂಧಮಂ ನೀಂ**
**ಬಗೆದುಂ ಸಂದೆಮ್ಮ ನಣ್ಪಂ ಬಗೆದುಮಱಿಯದೇನಾನುಮೆಂದಾಗಳುಂಮೆ**
**ಲ್ಲಗೆ ನೀಂ ಕಲ್ಪಿಪ್ಪುದೆಮ್ಮಂ ನೆನೆದೆರ್ದೆಗಿಡದಂತಾಗೆ ಪಾಲಿಪ್ಪುದಿಂತೀ**
**ಮೃಗಶಾಬೇಕ್ಷಾಕ್ಷಿಯಂ ಮನ್ನಿಸುವುದಿನಿತನಾಂ ಬೇಡಿದೆಂ ವಜ್ರಜಂಘಾ॥೫॥**

**ಪದವಿಭಾಗ–ಅನ್ವಯ–ಅರ್ಥ:** ನಿನ್ನ + ಅನ್ವವಾಯ + ಉನ್ನತಿಯನ್ ಬಗೆದುಂ = ನಿನ್ನ ಕುಲಮಹಿಮೆಯನ್ನು ಗಮನದಲ್ಲಿರಿಸಿಕೊಂಡು, ಇವಳ + ಅತಿಸ್ನೇಹಸಂಬಂಧಮಂ ಬಗೆದುಂ = = ಇವಳೊಡನಿರುವ ಗಾಢಸಂಬಂಧವನ್ನು ನೆಪಿನಲ್ಲಿಟ್ಟುಕೊಂಡು, ಸಂದ + ಎಮ್ಮ ನಣ್ಪಂ ನೀಂ ಬಗೆದುಂ = ಉಂಟಾಗಿರುವ ನಮ್ಮ ನಂಟನ್ನೂ ನೀನು ಗಮನಿಸಿ, ಅಱಿಯದೆ + ಏನಾನುಂ + ಎಂದಾಗಳುಂ = ತಿಳಿಯದೆ ಏನಾದರೂ ತಪ್ಪು ಮಾತನಾಡಿದರೆ, ಮೆಲ್ಲಗೆ ನೀಂ ಕಲ್ಪಿಪ್ಪುದು = ನಿಧಾನವಾಗಿ ಅವಳಿಗೆ ತಿಳಿಯಹೇಳು, ಎಮ್ಮಂ ನೆನೆದು + ಎರ್ದೆಗಿಡದಂತಾಗೆ ಪಾಲಿಪ್ಪುದು = ನಮ್ಮನ್ನು ನೆನೆಸಿಕೊಂಡು ಅಧೀರಳಾಗದಂತೆ ನೋಡಿಕೋ, ಇಂತು + ಈ ಮೃಗಶಾಬೇಕ್ಷಾಕ್ಷಿಯಂ ಮನ್ನಿಸುವುದು = ಈ ಬಗೆಯಲ್ಲಿ ಈ ಹರಿಣನೇತ್ರೆಯನ್ನು ನೋಡಿಕೋ, ಇನಿತನ್ + ಆಂ ಬೇಡಿದೆಂ ವಜ್ರಜಂಘಾ = ವಜ್ರಜಂಘನೇ, ನಿನ್ನಲ್ಲಿ ನಾನು ಕೇಳಿಕೊಳ್ಳುವುದಿಷ್ಟೇ.

**ಗದ್ಯಾನುಸರಣ:** 'ವಜ್ರಜಂಘನೇ, ನಿನ್ನಲ್ಲಿ ನಾನು ಕೇಳಿಕೊಳ್ಳುವುದಿಷ್ಟೇ: ನಿನ್ನ ಕುಲಮಹಿಮೆ, ಇವಳೊಡನಿರುವ ಗಾಢಪ್ರೀತಿ, ಉಂಟಾಗಿರುವ ನಮ್ಮ ನಂಟು – ಇಷ್ಟನ್ನೂ ನೀನು ಗಮನದಲ್ಲಿರಿಸಿಕೊ; ತಿಳಿಯದೆ ಇವಳು ಏನಾದರೂ ತಪ್ಪು ಮಾತನಾಡಿದರೆ, ನಿಧಾನವಾಗಿ ಅವಳಿಗೆ ತಿಳಿಯಹೇಳು; ನಮ್ಮನ್ನು ನೆನೆಸಿಕೊಂಡು ಅಧೀರಳಾಗದಂತೆ ನೋಡಿಕೋ, ಈ ಬಗೆಯಲ್ಲಿ ಈ ಹರಿಣನೇತ್ರೆಯನ್ನು ನೋಡಿಕೋ' ಎಂದು ಕೇಳಿಕೊಂಡ.

**ವ ಎಂದು ನುಡಿದು ಲಕ್ಷ್ಮೀಮತಿಮಹಾದೇವಿಯುಂ ತಾನುಮಾತ್ಮೀಯ ಪ್ರಿಯಾತ್ಮಜೆಯ ಮೊಗಮನಟ್ಟಿರ್ತು ನೋಡಿ,**

**ಪದವಿಭಾಗ-ಅನ್ವಯ-ಅರ್ಥ:** ಎಂದು ನುಡಿದು ಲಕ್ಷ್ಮೀಮತಿ ಮಹಾದೇವಿಯುಂ ತಾನುಂ = ಎಂದು ಹೇಳಿ ವಜ್ರದಂತನೂ ಲಕ್ಷ್ಮೀಮತಿ ಮಹಾರಾಣಿಯೂ, ಆತ್ಮೀಯಪ್ರಿಯ + ಆತ್ಮಜೆಯ ಮೊಗಮನ್ + ಅಱ್ಕೆಯಿಂ ನೋಡಿ = ತಮ್ಮ ಪ್ರೀತಿಯ ಮಗಳ ಮುಖವನ್ನು ಅಕ್ಕರೆಯಿಂದ ನೋಡಿ,

**ಗದ್ಯಾನುಸರಣ:** ಹೀಗೆಂದು ನುಡಿದು ಲಕ್ಷ್ಮೀಮತಿ ಮಹಾರಾಣಿಯೂ ತಾನೂ ತಮ್ಮ ಪ್ರೀತಿಯ ಮಗಳ ಮುಖವನ್ನು ಅಕ್ಕರೆಯಿಂದ ನೋಡಿ ಹೀಗೆಂದರು.

**ಮನಮಱಿದಂಜಿ ಬೆರ್ಚಿ ಬೆಸಕಯ್, ನಿಜವಲ್ಲಭನೇನನೆಂದೊಡಂ**
**ಕಿನಿಸದಿರೊಂದಿದಗ್ರಮಹಿಷೀಪದದಲ್ಲಿ ಪದಸ್ಥೆಯಾಗು ನಂ**
**ದನರನಗಣ್ಯಪುಣ್ಯಧನರಂ ಪಡೆಯೆಂದಮರ್ದಪ್ಪಿಕೊಂಡು ತ**
**ತ್ತನುಜೆಯಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ॥೬॥**

**ಪದವಿಭಾಗ-ಅನ್ವಯ-ಅರ್ಥ:** ಮನಂ + ಅಱಿದು + ಅಂಜಿ ಬೆರ್ಚಿ ಬೆಸಕಯ್ = ಗಂಡನ ಮನಸ್ಸನ್ನು ತಿಳಿದು ತಗ್ಗಿ ಬಗ್ಗಿ ನಡೆದುಕೊ, ನಿಜವಲ್ಲಭನ್ + ಏನನ್ + ಎಂದೊಡಂ ಕಿನಿಸದಿರ್ = ನಿನ್ನ ಗಂಡನು ಏನು ಹೇಳಿದರೂ ಕೋಪಿಸಿಕೊಳ್ಳಬೇಡ, ಒಂದಿದ + ಅಗ್ರಮಹಿಷೀಪದದಲ್ಲಿ ಪದಸ್ಥೆಯಾಗು = ದೊರೆತ ಪಟ್ಟದ ರಾಣಿಯ ಸ್ಥಾನದಲ್ಲಿ ನೆಲೆನಿಲ್ಲು, ಅಗಣ್ಯಪುಣ್ಯಧನರಂ ನಂದನರನ್ ಪಡೆ = ಎಣೆಯಿಲ್ಲದ ಪುಣ್ಯವಂತರಾದ ಮಕ್ಕಳನ್ನು ಪಡೆ, ಎಂದು + ಅಮರ್ದು + ಅಪ್ಪಿಕೊಂಡು = ಎಂದು ಬಲವಾಗಿ ಅಪ್ಪಿಕೊಂಡು, ತತ್ + ತನುಜೆಯ + ಅಗಲ್ಕೆಯೊಳ್ = ತಮ್ಮ ಮಗಳ ಅಗಲಿಕೆಯಲ್ಲಿ, ಬಸಮಲ್ಲದ ಬಾಷ್ಪವಾರಿಯಂ ನೆಗಪಿದರ್ = ತಮ್ಮ ಹತೋಟಿ ಮೀರಿದ ಕಣ್ಣೀರನ್ನು ಸುರಿಸಿದರು.

**ಗದ್ಯಾನುಸರಣ:** 'ಗಂಡನ ಮನಸ್ಸನ್ನು ತಿಳಿದು ತಗ್ಗಿ ಬಗ್ಗಿ ನಡೆದುಕೊ, ನಿನ್ನ ಗಂಡನು ಏನು ಹೇಳಿದರೂ ಕೋಪಿಸಿಕೊಳ್ಳಬೇಡ, ದೊರೆತ ಪಟ್ಟದ ರಾಣಿಯ ಸ್ಥಾನದಲ್ಲಿ ನೆಲೆನಿಲ್ಲು, ಎಣೆಯಿಲ್ಲದ ಪುಣ್ಯವಂತರಾದ ಮಕ್ಕಳನ್ನು ಪಡೆ' ಎಂದು ಬಲವಾಗಿ ಅಪ್ಪಿಕೊಂಡರು; ತಮ್ಮ ಮಗಳ ಅಗಲಿಕೆಯಿಂದ ಹತೋಟಿ ಮೀರಿ ಅವರ ಕಣ್ಣಲ್ಲಿ ನೀರು ಸುರಿಯಿತು.

**ವಿಶೇಷ ವಿಚಾರ:** ಮದುವೆಯಾದ ಮಗಳನ್ನು ಗಂಡನ ಮನೆಗೆ ಕಳಿಸುವ ಸನ್ನಿವೇಶ ನಮ್ಮ ಅನೇಕ ಜಾನಪದ ಹಾಗೂ ಗ್ರಾಂಥಿಕ ಕಾವ್ಯಗಳಲ್ಲಿ ಮನಂಬುಗುವಂತೆ ವರ್ಣಿತವಾಗಿದೆ. ಚಕ್ರವರ್ತಿ ದಂಪತಿಗಳು ತಮ್ಮ ಮಗಳನ್ನು ನೋಡಿಕೊಳ್ಳಬೇಕಾದ ಬಗೆಯನ್ನು ಅಳಿಯನಲ್ಲಿ ಕೇಳಿಕೊಳ್ಳುವ ರೀತಿ ಹಾಗೂ ಮಗಳಿಗೆ ಗಂಡನ ಮನೆಯಲ್ಲಿ ನಡೆದುಕೊಳ್ಳಬೇಕಾದ ಬಗೆಯನ್ನು ತಿಳಿಸಿಕೊಡುವುದು – ಇವುಗಳನ್ನು ಈ ಎರಡು ಪದ್ಯಗಳಲ್ಲಿ ಪಂಪ ಅನನ್ಯವಾಗಿ ಚಿತ್ರಿಸಿದ್ದಾನೆ. ಇಲ್ಲಿ ಬೆಡಗಿನ

ಮಾತುಗಳಿಲ್ಲ, ಅಲಂಕಾರಗಳ ವಿಜೃಂಭಣೆಯಿಲ್ಲ; ಆದರೆ ತಾಯ್ತಂದೆಯರ ಕೋಮಲ ಭಾವನೆ ಅದೆಷ್ಟು ಸೊಗಸಾಗಿ ಪಡಿಮೂಡಿದೆ! ಈ ಎರಡು ಪದ್ಯಗಳು ಕಾಳಿದಾಸ 'ಅಭಿಜ್ಞಾನ ಶಾಕುಂತಲಂ' ನಾಟಕದಲ್ಲಿ ನಾಲ್ಕನೇ ಅಂಕದ ನಾಲ್ಕನೇ ದೃಶ್ಯದ ಪದ್ಯಗಳಂತಿವೆಯೆಂಬುದು ವಿದ್ವಾಂಸರ ಅಭಿಪ್ರಾಯ. ಜೊತೆಗೆ ವಿ.ಸೀ. ಅವರ 'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು' ಎಂದು ಆರಂಭಗೊಳ್ಳುವ 'ಹೆಣ್ಣೊಪ್ಪಿಸುವ ಹಾಡು' ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ.

**ವ। ಆಗಳ್ ವಜ್ರದಂತನನಂತಸಾಮಂತಾಂತಃಪುರಪರಿವಾರಂ ಬೆರಸು ಪೋಗಿ ಮಗಳನುಮಳಿಯನುಮಂ ಕಿಱುದಂತರಂ ಕಟಿುಪಿ ಮಗುಟ್ವಾಗಳ್,**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ = ಆಗ, ವಜ್ರದಂತನ್ = ವಜ್ರದಂತ ಮಹಾರಾಜನು, ಅನಂತಸಾಮಂತ + ಅಂತಃಪುರಪರಿವಾರಂ ಬೆರಸು ಪೋಗಿ = ಅಸಂಖ್ಯ ಸಾಮಂತರು ಮತ್ತು ಅಂತಃಪುರದ ಸ್ತ್ರೀಯರೊಡನೆ ಹೋಗಿ, ಮಗಳನುಂ + ಅಳಿಯನುಮಮಂ ಕಿಱಿದು + ಅಂತರಂ ಕಟಿುಪಿ ಮಗುಟ್ವಾಗಳ್ = ಮಗಳನ್ನೂ ಅಳಿಯನನ್ನೂ ಸ್ವಲ್ಪ ದೂರ ಕಳಿಸಿ ಮರಳುವಾಗ,

**ಗದ್ಯಾನುಸರಣ:** ಆ ಬಳಿಕ ವಜ್ರದಂತ ಮಹಾರಾಜನು ಅಸಂಖ್ಯ ಸಾಮಂತರು ಮತ್ತು ಅಂತಃಪುರದ ಸ್ತ್ರೀಯರೊಡನೆ ಹೋಗಿ ಮಗಳನ್ನೂ ಅಳಿಯನನ್ನೂ ಸ್ವಲ್ಪ ದೂರ ಕಳಿಸಿ ಮರಳಿದ.

**ಪೊಡವಡುವಪ್ಪಿಕೊಳ್ವ ನೆನೆಯುತ್ತಿರಿಮೆಂಬ ಸಮಸ್ತವಸ್ತುವಂ**
**ಕುಡುವ ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ ಬುದ್ಧಿವೇಟ್ವ ಕೈ**
**ಯೆಡೆ ನಿಮಗೆಂದೊಡಂಬಡಿಪ ನಲ್ಲರಗಲ್ಕೆಗೆ ಕಣ್ಣ ನೀರ್ಗಳಂ**
**ಮಿಡಿವ ಬಹುಪ್ರಕಾರಜನಸಂಕಟಮೊಪ್ಪಿದುದಾ ಪ್ರಯಾಣದೊಳ್ ೫೭**

**ಪದವಿಭಾಗ–ಅನ್ವಯ–ಅರ್ಥ:** ಪೊಡವಡುವ + ಅಪ್ಪಿಕೊಳ್ವ = ನಮಸ್ಕರಿಸುವ ಅಪ್ಪಿಕೊಳ್ಳುವ, ನೆನೆಯುತ್ತಿರಿಂ + ಎಂಬ = ಮರೆಯಬೇಡಿ ಎನ್ನುವ, ಸಮಸ್ತವಸ್ತುವಂ ಕುಡುವ = ನಾನಾ ವಸ್ತುಗಳನ್ನು ನೆನಪಿಗಾಗಿ ನೀಡುವ, ಪಲರ್ಮೆಯಿಂ ಪರಸಿ = ಹಲವು ಸಲ ಹರಸಿ, ಸೇಸೆಯನಿಕ್ಕುವ = ಅಕ್ಷತೆ ಹಾಕುವ, ಬುದ್ಧಿ + ಪೇಟ್ವ = ಬುದ್ಧಿವಾದ ಹೇಳುವ, ಕೈಯೆಡೆ ನಿಮಗೆ + ಎಂದು + ಒಡಂಬಡಿಪ = ಇವು ನಿಮ್ಮ ಹತ್ತಿರದಲ್ಲಿರಲಿ ಎಂದು ಏನನ್ನೋ ನೀಡಿ ಒಪ್ಪಿಸುವ, ನಲ್ಲರ + ಅಗಲ್ಕೆಗೆ ಕಣ್ಣ ನೀರ್ಗಳಂ ಮಿಡಿವ = ಪ್ರಿಯರ ಅಗಲುವಿಕೆಯಿಂದ ಕಣ್ಣೀರನ್ನು ಸುರಿಸುವ, ಬಹುಪ್ರಕಾರಜನಸಂಕಟಂ = ನಾನಾ ಬಗೆಯ ದುಃಖಕರ ದೃಶ್ಯಗಳು, ಆ ಪ್ರಯಾಣದೊಳ್ ಒಪ್ಪಿದುದು = ಆ ಪಯಣಕಾಲದಲ್ಲಿ ಕಂಡುಬಂದುವು.

**ಗದ್ಯಾನುಸರಣ:** ನಮಸ್ಕರಿಸುವ, ಅಪ್ಪಿಕೊಳ್ಳುವ, ಮರೆಯಬೇಡಿ ಎನ್ನುವ, ನಾನಾ ವಸ್ತುಗಳನ್ನು ನೆನಪಿಗಾಗಿ ನೀಡುವ, ಹಲವು ಸಲ ಹರಸಿ ಅಕ್ಷತೆ ಹಾಕುವ, ಬುದ್ಧಿವಾದ ಹೇಳುವ, ಇವು ನಿಮ್ಮ ಹತ್ತಿರದಲ್ಲಿರಲಿ ಎಂದು ಏನನ್ನೋ ನೀಡಿ ಒಪ್ಪಿಸುವ, ಪ್ರಿಯರ ಅಗಲುವಿಕೆಯಿಂದ ಕಣ್ಣೀರನ್ನು ಸುರಿಸುವ – ನಾನಾ ಬಗೆಯ ದುಃಖಕರ ದೃಶ್ಯಗಳು ಆ ಪಯಣಕಾಲದಲ್ಲಿ ಕಂಡುಬಂದುವು.

**ವಿಶೇಷ ವಿಚಾರ:** ಒಂದು ಹೃದಯಂಗಮ ಸನ್ನಿವೇಶದಲ್ಲಿ ನಡೆಯುವ ಹತ್ತಾರು ಕೋಮಲ ಭಾವಗಳನ್ನು ಮೀಟುವ ಚಟುವಟಿಕೆಗಳನ್ನು ಈ ಪದ್ಯ ಅಪೂರ್ವವಾಗಿ ನಿರೂಪಿಸುತ್ತದೆ. ಒಂದು ಚಲನಚಿತ್ರಿಕೆಯಂತೆ ಈ ಪದ್ಯವಿದೆ; ಚಿತ್ರ ಒಂದು, ಕ್ರಿಯೆಗಳು ಹತ್ತಾರು. ಇಂಥ ಸಹಜ ಚಿತ್ರವನ್ನೇ ನಮ್ಮ ಆಲಂಕಾರಿಕರು 'ಸ್ವಭಾವೋಕ್ತಿ' ಎಂದು ಕರೆದುದು; ಅಲ್ಲದೆ ಇಲ್ಲಿ ಉಕ್ಕುವ ಭಾವವು 'ಸ್ವತಃಸಂಭವಿ' ಎಂದು ಕರೆಯುವ ಧ್ವನಿಯಾಗಿದೆ. ಈ ಪದ್ಯದ ಬಗ್ಗೆ ತೀನಂಶ್ರೀ ಹೇಳುವ ಮಾತುಗಳಿವು: "ತೌರುಮನೆಯಲ್ಲಿ ಅಕ್ಕರೆಯ ಮಗುವಾಗಿ, ಆನಂದದ ಬಳ್ಳಿಯಾಗಿ ಬೆಳೆದ ಮಗಳು ಈಗ ತಾಯಿ, ತಂದೆ, ಸಖಿಯರು, ಬಂಧುಗಳು ಈ ಎಲ್ಲರನ್ನೂ ಬಿಟ್ಟು ದೂರಕ್ಕೆ ತೆರಳುತ್ತಿದ್ದಾಳೆ, ಅವಳು ಹೋಗಲಾರಳು, ಇರಲಾರಳು; ಇವರೂ ಕಳಿಸಿಕೊಡಲಾರರು, ಬಿಡಲಾರರು. ಒಟ್ಟಿಇದ್ದಾಗ ಪ್ರೀತಿ ಒಬ್ಬೊಬ್ಬರಿಗೆ ಎಷ್ಟೆಷ್ಟು ಬಲಿದಿತ್ತೋ. ಅಗಲುವಾಗ ಅಷ್ಟಷ್ಟು ಶೋಕವಾಗಿ ತಿರುಗಿದೆ. ಈ ಪದ್ಯವನ್ನು ನಾವು ಓದುವಾಗ, ಇವರೇನು ಮಾಡಿದರು, ಅವರೇನು ಹೇಳಿದರು ಎಂದು ತಿಳಿದುಕೊಂಡಷ್ಟಕ್ಕೇ ತಟಸ್ಥರಾಗಿ ನಿಲ್ಲದೆ, ಈ ಅಗಲಿಕೆಯಿಂದ ಉದ್ಭವಿಸಿದ ಶೋಕವೆಂಬ ಚಿತ್ತವೃತ್ತಿಯನ್ನೇ ಒಂದು ವಿಶೇಷ ರೀತಿಯ ತನ್ಮಯತೆಯಿಂದ ಅನುಭವಿಸುತ್ತೇವೆ; ಇದರಲ್ಲೇ ಅನಿರ್ವಚನೀಯವಾದ ಆಸ್ವಾದವನ್ನು ಪಡೆಯುತ್ತೇವೆ." – 'ಭಾರತೀಯ ಕಾವ್ಯಮೀಮಾಂಸೆ, ೧೯೭೨, ಪು. ೧೧

**ವ। ಅಂತು ವಜ್ರದಂತಚಕ್ರವರ್ತಿ ಕಟಿೞಿ ಮಗುೞ್ ವಜ್ರಬಾಹು ಮಹೀಭುಜಂ ವಜ್ರಜಂಘನುಮಂ ಶ್ರೀಮತಿಯುಮಂ ಮುಂದಿಟ್ಟು ಕತಿಪಯ ಪ್ರಯಾಣಂಗಳಿಂ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹೀಗೆ, ವಜ್ರದಂತಚಕ್ರವರ್ತಿ ಕಟಿೞಿ ಮಗುೞ್ = ವಜ್ರದಂತಚಜಕ್ರವರ್ತಿಯು ಕಳಿಸಿಕೊಟ್ಟು ವಾಪಸಾಗಲು, ವಜ್ರಬಾಹುಮಹೀಭುಜಂ = ವಜ್ರಬಾಹುಮಹಾರಾಜನು, ವಜ್ರಜಂಘನುಮಂ ಶ್ರೀಮತಿಯುಮಂ ಮುಂದಿಟ್ಟು = ವಜ್ರಜಂಘ ಮತ್ತು ಶ್ರೀಮತಿಯರನ್ನು ಮುಂದಿಟ್ಟುಕೊಂಡು, ಕತಿಪಯಪ್ರಯಾಣಂಗಳಿಂ = ಹಲವು ಕಾಲ ಪ್ರಯಾಣಮಾಡಿ,

**ಗದ್ಯಾನುಸರಣ:** ಅಂತು = ಹೀಗೆ ವಜ್ರದಂತಚಜಕ್ರವರ್ತಿಯು ಕಳಿಸಿಕೊಟ್ಟು

ವಾಪಸಾದ; ಇತ್ತ, ವಜ್ರಬಾಹುಮಹಾರಾಜನು, ವಜ್ರಜಂಘ ಮತ್ತು ಶ್ರೀಮತಿಯರನ್ನು ಮುಂದಿಟ್ಟುಕೊಂಡು ಹಲವು ಕಾಲ ಪ್ರಯಾಣಮಾಡಿದ.

**ಜಳವಿಹಂಗಮಭೃಂಗನಿನಾದವ್ಯಾಪ್ತಸರೋವರಸಂಕುಳಂ**
**ಗಳೊಳೆ ಪೂತದಿರ್ಮುಟ್ಟೆಯು ಸುತ್ತಿಂ ಸುತ್ತಿದ ಸೈಕತಭೂತಳಂ**
**ಗಳೊಳೆ ಮೆಲ್ಲನೆ ಬೀಡುವಿಡುತ್ತುಂ ಪೋಗಿ ಮಹೀಭುಜನೆಯ್ದಿದಂ**
**ಫಳವಿನಮ್ರಮಹೀಜಸಹಸ್ರಾಘಾಟಮನುತ್ಪಳಖೇಟಮಂ ೫೮**

**ಪದವಿಭಾಗ-ಅನ್ವಯ-ಅರ್ಥ:** ಜಳವಿಹಂಗಮ = ನೀರುಹಕ್ಕಿಗಳು ಹಾಗೂ, ಭೃಂಗನಿನಾದ ವ್ಯಾಪ್ತ = ದುಂಬಿಗಳ ದನಿಯಿಂದ ತುಂಬಿದ, ಸರೋವರಸಂಕುಳಂಗಳೊಳೆ = ಸರೋವರಗಳ ಹತ್ತಿರದಲ್ಲಿ, ಪೂತದಿರ್ಮುಟ್ಟೆಯ ಸುತ್ತಿಂ ಸುತ್ತಿದ = ಹೂಬಿಟ್ಟ ಇರುವಂತಿಗೆಯ ಬಳ್ಳಿಗಳು ಸುತ್ತುವರಿದ, ಸೈಕತ ಭೂತಳಂಗಳೊಳೆ = ಮರಳುಹಾಸಿನ ಭೂಮಿಯ ಮೇಲೆ, ಬೀಡುವಿಡುತ್ತುಂ = ಬಿಡಾರ ಹೂಡುತ್ತ, ಮೆಲ್ಲನೆ ಪೋಗಿ = ನಿಧಾನವಾಗಿ ಸಾಗಿದ, ಮಹೀಭುಜನ್ = ಮಹಾರಾಜನು, ಫಳವಿನಮ್ರಮಹೀಜಸಹಸ್ರ = ಹಣ್ಣುಗಳ ಭಾರದಿಂದ ಬಾಗಿದ ನೂರಾರು ಮರಗಳ, ಆಘಾಟಮನ್ + ಉತ್ಪಳಖೇಟಮಂ ಎಯ್ದಿದಂ = ಎಲ್ಲೆಯ ಪ್ರದೇಶಗಳ ಉತ್ಪಳಖೇಟವನ್ನು ಸೇರಿದ.

**ಗದ್ಯಾನುಸರಣ:** ನೀರುಹಕ್ಕಿಗಳು ಹಾಗೂ ದುಂಬಿಗಳ ದನಿಯಿಂದ ತುಂಬಿದ ಸರೋವರಗಳ ದಡಗಳಲ್ಲಿಯೂ, ಹೂಬಿಟ್ಟ ಇರುವಂತಿಗೆಯ ಬಳ್ಳಿಗಳು ಸುತ್ತುವರಿದ ಮರಳುಹಾಸಿನ ಭೂಮಿಯ ಮೇಲೆಯೂ ಬಿಡಾರದಲ್ಲಿ ತಂಗುತ್ತ ನಿಧಾನವಾಗಿ ಸಾಗಿದ, ಮಹಾರಾಜನು ಹಣ್ಣುಗಳ ಭಾರದಿಂದ ಬಾಗಿದ ನೂರಾರು ಮರಗಳಿಂದ ಕೂಡಿದ ಎಲ್ಲೆಯ ಪ್ರದೇಶಗಳಿದ್ದ ಉತ್ಪಳಖೇಟವನ್ನು ಸೇರಿದ.

**ವ। ಆಗಳ್ ನಿರಂತರಸಮುತ್ಥಾಪಿತಂಗಳುಂ ಕನಕರಜತಮಯಾನೇಕ ಸ್ಥಾಸಕಾಲಂ ಕೃತಂಗಳುಂ ವಿಚಿತ್ರಚೀನಾಂಶುಕ ರುಚಿರಂಗಳುಂ ಪಿನದ್ಧ ವಿವಿಧ ಮಣಿದರ್ಪಣಧ್ವಜಂಗಳುಂ ಆಲಂಬಿತ ಜಾಂಬೂನದ ಘಂಟಾಜಾಲ ವಿರಾಜಿತಂಗಳುಂ ಆಮೋದಕುಸುಮದಾಮನಿ ಕಾಮಕಮನೀಯಂಗಳುಮಪ್ಪ ತೋರಣಂಗಳನೆ ನುಗುಳುತ್ತುಂ ಕಾಶ್ಮೀರಮೃಗಮದಚ್ಛಟಾ ಸಿಕ್ತಾಂಗಣಮುಂ ಅಂಗಣರಚಿತಮೌಕ್ತಿಕರಂಗಬಲಿಯುಂ ಬಲಿಕುಸುಮನಿಪತದಳಿಕುಳಾರಬ್ಧ ಗೀತಮುಂ ಗೀತಾನುಗತವಾದ್ಯಲಯಲಲಿತವಿಳಾಸಿನೀ ನೃತ್ಯಮುಮಪ್ಪುತ್ಪಳೇಟ ಮಂ ಪುಗುವಾಗಳ್,**

**ಪದವಿಭಾಗ-ಅನ್ವಯ-ಅರ್ಥ:** ಆಗಳ್ = ಆಗ, ನಿರಂತರ ಸಮುತ್ಥಾಪಿತಂಗಳುಂ = ಸದಾ ಎತ್ತರದಲ್ಲಿ ನೆಲೆಗೊಂಡವೂ, ಕನಕರಜತಮಯ

+ ಅನೇಕಸ್ಥಾಸಕ + ಅಲಂಕೃತಂಗಳುಂ = ಬೆಳ್ಳಿಚಿನ್ನಗಳಿಂದ ಲೇಪನಗೊಂಡು ಅಲಂಕಾರಪ್ರಾಯವಾದವೂ, ವಿಚಿತ್ರಚೀನಾಂಶುಕರುಚಿರಂಗಳುಂ = ಆಕರ್ಷಕವಾದ ಚೀನಾಂಬರದಿಂದ ಹೊಳೆಯುವಂತಹವೂ, ಪಿನದ್ಧವಿವಿಧಮಣಿದರ್ಪಣಧ್ವಜಂಗಳುಂ = ಜೋಡಿಸಿರುವ ಅನೇಕ ಮಣಿದರ್ಪಣಗಳಿಂದ ಕೂಡಿದ ಬಾವುಟಗಳಿಂದಲೂ, ಆಲಂಬಿತಜಾಂಬೂನದಘಂಟಾಜಾಲವಿರಾಜಿತಂಗಳುಂ = ನೇತಾಡುವ ಚಿನ್ನದ ಗಂಟೆಗಳಿಂದ ಶೋಭಿಸುವಂತಹವೂ, ಆಮೋದಕುಸುಮದಾಮನಿಕಾಮಕಮನೀಯಂಗಳುಂ = ಕಂಪಾದ ಹೂದಂಡೆಗಳಿಂದ ಅತ್ಯಂತ ಮನೋಹರವಾದವೂ, ಅಪ್ಪ = ಆದ, ತೋರಣಂಗಳನೆ ನುಗುಳುತ್ತುಂ = ತೋರಣಗಳ ಕೆಳಗೆ ಹಾದು ಹೋಗುತ್ತ, ಕಾಶ್ಮೀರಮೃಗಮದತ್ + ಛಟಾಸಿಕ್ತ + ಅಂಗಣಮುಂ = ಕೇಸರಿ ಕಸ್ತೂರಿಗಳ ರಾಶಿಯಿಂದ ಲೇಪಿತವಾದ ಆವರಣವೂ, ಅಂಗಣರಚಿತಮೌಕ್ತಿಕರಂಗಬಲಿಯುಂ = ಆವರಣದಲ್ಲಿ ಚಿತ್ರಿತವಾಗಿದ್ದ ಮುತ್ತಿನ ರಂಗೋಲಿಯೂ, ಬಲಿಕುಸುಮನಿಪತದಳಿಕುಳ + ಆರಬ್ಧಗೀತಮುಂ = ಅರ್ಪಿತವಾದ ಹೂಗಳ ಬಳಿಯ ದುಂಬಿವಿಂಡಿನ ಸ್ವಾಗತಗೀತೆಯೂ, ಗೀತಾನುಗತವಾದ್ಯಲಯಲಲಿತವಿಳಾಸಿನೀನೃತ್ಯಮುಂ = ಗೀತಗಳ ಲಯಕ್ಕನುಗುಣವಾದ ಮನೋಹರ ವಿಳಾಸಿನಿಯರ ನೃತ್ಯವೂ, ಅಪ್ಪ = ಆಗಿದ್ದ, ಉತ್ಪಳಖೇಟಮಂ ಪುಗುವಾಗಳ್ = ಉತ್ಪಳಖೇಟವನ್ನು ಹೊಗುವಾಗ

**ಗದ್ಯಾನುಸರಣ:** ಅಲ್ಲಿ ಎತ್ತರದಲ್ಲಿ ತೋರಣಗಳು ಹಾರಾಡುತ್ತಿದ್ದುವು; ಅವು ಬೆಳ್ಳಿಚಿನ್ನಗಳಿಂದ ಲೇಪನಗೊಂಡ ಅಲಂಕಾರಪ್ರಾಯವಾದ ಚೀನಾಂಬರದಿಂದ ಆಕರ್ಷಕವಾಗಿ ಹೊಳೆಯುತ್ತಿದ್ದುವು; ಅವುಗಳಿಗೆ ಮಣಿದರ್ಪಣಗಳನ್ನು ಜೋಡಿಸಿದ್ದರು; ಅಲ್ಲಿ ಚಿನ್ನದ ಗಂಟೆಗಳು ಶೋಭಿಸುತ್ತಿದ್ದುವು; ಅವುಗಳನ್ನು ಕಂಪಿನಿಂದ ಕೂಡಿದ ಹೂದಂಡೆಗಳಿಂದ ಮನೋಹರವಾಗಿ ಅಲಂಕರಿಸಿದ್ದರು; ಅಂತಹ ತೋರಣಗಳ ಕೆಳಗೆ ಹಾದು ಹೋಗಲು, ಕೇಸರಿ ಕಸ್ತೂರಿಗಳ ರಾಶಿಯಿಂದ ಲೇಪಿತವಾದ ಆವರಣವು ಕಾಣಿಸಿತು; ಆ ಆವರಣದಲ್ಲಿ ಮುತ್ತಿನ ರಂಗೋಲಿಯ ಚಿತ್ರಗಳು ಶೋಭಿಸಿದುವು; ಅಲ್ಲಿ ಚೆಲ್ಲಿದ್ದ ಹೂಗಳ ಬಳಿ ದುಂಬಿವಿಂಡು ಸ್ವಾಗತಗೀತೆಯಂತೆ ಝೇಂಕರಿಸುತ್ತಿದ್ದುವು; ಗೀತಗಳ ಲಯಕ್ಕನುಗುಣವಾದ ಮನೋಹರ ವಿಳಾಸಿನಿಯರು ನರ್ತನಗೈಯುತ್ತಿದ್ದರು. ಇಂತಹ ಉತ್ಪಳಖೇಟವನ್ನು ಅವರು ಬಂದು ಸೇರಿದರು.

**ತಳಿರ್ಗಳ ತೊಂಗಲಿಂದಮಲರೋಳಿಗಳಲ್ಲುಗುವಂತೆ ಕೆಂದಳಂ**
**ಗಳಿನುದಿರ್ವಕ್ಕಿಗಳ್ ನಿಮಿರ್ದ ದಾಂಗುಡಿಯಂತಿರೆ ನೀಳ್ದ ತೋಳ್ಗಳು**
**ಚ್ಚಳದಳಿಗಾನದಂತೆ ಮಣಿಕಂಕಣನಾದವೊಱಲ್ದೆ ಸೇಸೆಯಂ**
**ತಳಿದರನಂಗಜಂಗಮಲತಾಲಲಿತಾಂಗಿಯುರಂದು ರಾಗದಿಂ ೫೯**

**ಪದವಿಭಾಗ–ಅನ್ವಯ–ಅರ್ಥ:** ತಳಿರ್ಗಳ ತೊಂಗಲಿಂದಂ = ಚಿಗುರುಗಳ ಗೊಂಚಲುಗಳಿಂದ, ಅಲರೋಳಿಗಳ್ + ಅಲ್ಲಿ + ಉಗುವಂತೆ = ಹೂಗಳ ಧಾರೆಯು ಬೀಳುವ ಹಾಗೆ, ನಿಮಿರ್ದ ದಾಂಗುಡಿಯಂತಿರೆ = ಚಾಚಿಕೊಂಡ ಬಳ್ಳಿಯಂತೆ, ನೀಳ್ದ ತೋಳ್ಗಳ್ = ನೀಳವಾದ ತೋಳುಗಳಿಂದ, ಕೆಂದಳಂಗಳಿಂ ಉದಿರ್ವ + ಅಕ್ಕಿಗಳ್ = ಕೆಂಪಾದ ಅಂಗೈಗಳಿಂದ ಉದುರುವ ಅಕ್ಷತೆ ಕಾಳುಗಳು, ಮಣಿಕಂಕಣನಾದಂ = ಮಣಿಖಚಿತ ಬಳೆಗಳ ದನಿಯು, ಉಚ್ಚಳತ್ + ಅಳಿಗಾನದಂತೆ = ಹೊಮ್ಮವ ದುಂಬಿಗಳ ಝೇಂಕಾರದಂತೆ, ಒಱಲ್ಚೆ = ಸದ್ದು ಮಾಡಲು, ಅನಂಗಜಂಗಮಲತಾಲಲಿತಾಂಗಿಯರ್ + ಅಂದು = ಕಾಮನ ಬಳ್ಳಿಗಳಂತಿದ್ದ ಕೋಮಲಾಂಗಿಯರು ಆಗ, ರಾಗದಿಂ ಸೇಸೆಯಂ ತಳಿದರ್ = ಪ್ರೀತಿಯಿಂದ ಮಂಗಳಾಕ್ಷತೆಯನ್ನು ಎರಚಿದರು.

**ಗದ್ಯಾನುಸರಣ:** ಚಾಚಿಕೊಂಡ ಬಳ್ಳಿಯಂತೆ ನೀಳವಾದ ತೋಳುಗಳ ಕೆಂಪಾದ ಅಂಗೈಗಳಿಂದ ಉದುರುವ ಅಕ್ಷತೆ ಕಾಳುಗಳು ಚಿಗುರುಗಳ ಗೊಂಚಲುಗಳಿಂದ ಹೂಗಳ ಧಾರೆಯು ಬೀಳುವ ಹಾಗಿರಲು, ಮಣಿಖಚಿತ ಬಳೆಗಳ ದನಿಯು, ಹೊಮ್ಮವ ದುಂಬಿಗಳ ಝೇಂಕಾರದಂತೆ ಸದ್ದು ಮಾಡಲು ಕಾಮನ ಬಳ್ಳಿಗಳಂತಿದ್ದ ಕೋಮಲಾಂಗಿಯರು ಅವರ ಮೇಲೆ ಪ್ರೀತಿಯಿಂದ ಮಂಗಳಾಕ್ಷತೆಯನ್ನು ಸೂಸಿದರು.

**ವ॥ ಆ ಪ್ರಸ್ತಾವದೊಳಪೂರ್ವವಧೂವರದಿರ್ವರಂ ಶ್ರೀಮತೀ ವಜ್ರಜಂಘರಂ ನೋಡಲೆಂದು**

**ಅರ್ಥ:** ಆ ಪ್ರಸ್ತಾವದೊಳ್ + ಅಪೂರ್ವವಧೂವರದಿರ್ವರಂ ಶ್ರೀಮತೀವಜ್ರಜಂಘರಂ ನೋಡಲೆಂದು = ಆಗ ಆ ಅಪೂರ್ವ ಮದುಮಕ್ಕಳಾದ ಶ್ರೀಮತಿ–ವಜ್ರಜಂಘರನ್ನು ನೋಡುವುದಕ್ಕೆಂದು,

**ಅಳಿಕೋತ್ಸಾರಿತಕೇಶಸಂಯಮನನೀವೀಬಂಧನಾವಿಷ್ಕೃತ**
**ಸ್ಖಳಿತಂ ವಿಸ್ಮೃತಿಪಕ್ಷ್ಮಪಾತಮನಪೂರ್ವಾಳೋಕಕೌತುಕಾ**
**ಕುಳಿತಾಂತಃಕರಣಂ ಸ್ವಕೀಯಭವನವ್ಯಾಪಾರಚಿಂತಾಂತರಂ**
**ಗಳನೆಲ್ಲಂ ಮಱೆದಿಂತು ಕೂಡೆ ನೆರೆದತ್ತೆತ್ತಂ ಪುರಸ್ತ್ರೀಜನಂ ೬೦**

**ಪದವಿಭಾಗ–ಅನ್ವಯ–ಅರ್ಥ:** ಅಳಿಕೋತ್ಸಾರಿತಕೇಶಸಂಯಮನ = ಹಣೆಯ ಮೇಲೆ ಕೆದರಿರುವ ಮುಂಗುರುಳನ್ನು ಸರಿಪಡಿಸಿಕೊಳ್ಳುವುದು, ನೀವೀಬಂಧನಾ ವಿಷ್ಕೃತಸ್ಖಳಿತಂ = ಸೀರೆಯ ಗಂಟು ಜಾರಿ ತೊಡರುವುದು, ವಿಸ್ಮೃತಿಪಕ್ಷ್ಮಪಾತಮನ್ = ರೆಪ್ಪೆ ಬಡಿತ ನಿಂತಿರುವುದು – ಇವುಗಳನ್ನು ಗಮನಿಸದೆ,

ಪೂರ್ವ + ಆಲೋಕಕೌತುಕಾ + ಆಕುಳಿತ + ಅಂತಃಕರಣಂ = ಮೊದಲು ನೋಡಬೇಕೆಂಬ ಆತುರದಿಂದ ತುಂಬಿದ ಮನಸ್ಸಿನಿಂದ, ಸ್ವಕೀಯಭವನ ವ್ಯಾಪಾರಚಿಂತಾ + ಅಂತರಂಗಳನೆಲ್ಲಂ ಮಱೆದು = ತಮ್ಮ ಮನೆಯ ಕೆಲಸಕಾರ್ಯಗಳ ಯೋಚನೆಯಿಲ್ಲದೆ, ಇಂತು ಪುರಸ್ತ್ರೀಜನಂ ಎತ್ತೆತ್ತಂ ಕೂಡೆ ನೆರೆದತ್ತು = ಹೀಗೆ ಊರ ಹೆಂಗಸರು ಎಲ್ಲೆಡೆಯೂ ಬಂದು ಸೇರಿದರು.

**ಗದ್ಯಾನುಸರಣ:** ಹಣೆಯ ಮೇಲೆ ಕೆದರಿರುವ ಮುಂಗುರುಳನ್ನು ಸರಿಪಡಿಸಿಕೊಳ್ಳುವುದು, ಸೀರೆಯ ಗಂಟು ಜಾರಿ ತೊಡರುವುದು, ರೆಪ್ಪೆ ಬಡಿತ ನಿಂತಿರುವುದು – ಇವುಗಳನ್ನು ಗಮನಿಸದೆ, ಮೊದಲು ನೋಡಬೇಕೆಂಬ ಆತುರದಿಂದ ತುಂಬಿದ ಮನಸ್ಸಿನಿಂದ ತಮ್ಮ ಮನೆಯ ಕೆಲಸಕಾರ್ಯಗಳ ಯೋಚನೆಯಿಲ್ಲದೆ ಊರ ಹೆಂಗಸರು ಎಲ್ಲೆಡೆಯೂ ಬಂದು ಸೇರಿದರು.

**ವಿಶೇಷ ವಿಚಾರ:** 'ಕೇಶಸಂಯಮನ' ಎಲ್. ಬಸವರಾಜು ಸ್ವೀಕರಿಸಿರುವ ಎಂಬ ಪಾಠ; ವೆಂಕಟಾಚಲಶಾಸ್ತ್ರಿಗಳು 'ಕೇಶಸಂಚಯನ' ಬಳಸುತ್ತಾರೆ.

**ವ। ಅಂತು ನೆರೆದು**

**ಅರ್ಥ:** ಅಂತು ನೆರೆದು = ಹಾಗೆ ಸೇರಿ,

**ದಿವಿಜೇಂದ್ರಾವಾಸದೊಳ್ ಮುನ್ನೊಡನೆ ದಿವಿಜಭೋಗಂಗಳಂಭೋಗಿಸಿರ್ದೀ**
**ಭವದೊಳ್ ಬಂದಿಲ್ಲಿ ಜಾತಿಸ್ಮರರೆನೆ ನೆರೆದೋರೋರ್ವರೊಳ್ ಮತ್ತಮತ್ಯು**
**ತ್ಸವದಿಂದಂ ಮರ್ತ್ಯಭೋಗಂಗಳನನುಭವಿಸಲ್ ನೋಂತರಿಂತೀಗಳೆಂತುಂ**
**ತವದಂತೇಂ ಪುಣ್ಯಮಂ ಪುಂಜಿಸಿದರೊ ಪಿರಿದುಂ ಶ್ರೀಮತೀವಜ್ರಜಂಘರ್**
**೬೧**

**ಪದವಿಭಾಗ–ಅನ್ವಯ–ಅರ್ಥ:** ದಿವಿಜೇಂದ್ರ + ಆವಾಸದೊಳ್ = ದೇವಲೋಕದಲ್ಲಿ, ಮುನ್ನೊಡನೆ ದಿವಿಜಭೋಗಂಗಳಂ ಭೋಗಿಸಿರ್ದು = ಜೊತೆಯಲ್ಲಿಯೇ ದೇವಭೋಗಗಳನ್ನು ಅನುಭವಿಸಿ, ಜಾತಿಸ್ಮರರೆನೆ ಈ ಭವದೊಳ್ ಬಂದು = ಹಿಂದಿನ ಜನ್ಮದ ನೆನಪಿನಿಂದ ಈ ಜನ್ಮದಲ್ಲಿ ಬಂದು, ಇಲ್ಲಿ ನೆರೆದು = ಇಲ್ಲಿ ಸೇರಿ, ಓರೋರ್ವರೊಳ್ = ಪರಸ್ಪರ, ಮತ್ತಂ + ಅತ್ಯುತ್ಸವದಿಂದಂ = ಪುನಃ ಮಹಾ ಉತ್ಸಾಹದಿಂದ ಮರ್ತ್ಯಭೋಗಂಗಳನ್ + ಅನುಭವಿಸಲ್ = ಭೂಮಿಯ ಭೋಗಗಳನ್ನು ಅನುಭವಿಸಲೆಂದು, ನೋಂತರ್ = ವ್ರತತೊಟ್ಟರು, ಇಂತೀಗಳ್ ಶ್ರೀಮತೀವಜ್ರಜಂಘರ್ = ಹೀಗೆ ಈಗ ಶ್ರೀಮತಿವಜ್ರಜಂಘರು, ಎಂತುಂ ತವದಂತು + ಏಂ ಪಿರಿದುಂ ಪುಣ್ಯಮಂ ಪುಂಜಿಸಿದರೊ = ಮುಗಿಯದ ಹಾಗೆ ಅಧಿಕ ಪುಣ್ಯವನ್ನು ಅದೆಂತು ಸಂಪಾದಿಸಿರೋ!

**ಗದ್ಯಾನುಸರಣ:** ದೇವಲೋಕದಲ್ಲಿ ಜೊತೆಯಲ್ಲಿ ದೇವಭೋಗಗಳನ್ನು ಅನುಭವಿಸಿ ಹಿಂದಿನ ಜನ್ಮದ ನೆನಪಿನಿಂದ ಈ ಜನ್ಮದಲ್ಲಿ ಹುಟ್ಟಿ ಸೇರಿ ಮತ್ತೆ ಜೊತೆಯಾಗಿಯೇ ಈ ಭೂಮಿಯ ಭೋಗಗಳನ್ನು ಅನುಭವಿಸಲೆಂದು ಆಶಿಸಿದರು; ಶ್ರೀಮತಿವಜ್ರಜಂಘರು ಹೀಗೆ ಮುಗಿಯದಷ್ಟು ಪುಣ್ಯವನ್ನು ಯಾವ ವ್ರತತೊಟ್ಟು ಸಂಪಾದಿಸಿರೋ!

**ವಿಶೇಷ ವಿಚಾರ:** ಈ ಸಂದರ್ಭದಲಿ ಎಲ್. ಬಸವರಾಜು ಅವರ ವಿವರಣೆ ಹೀಗಿದೆ: 'ಇಲ್ಲಿಗೆ ಪೂರ್ವಪುರಾಣದಲ್ಲಿ ಪರ್ವ (ಎಂಟು) ಮುಗಿಯುವುದು. ಮುಂದಿನ ಒಂಬತ್ತನೇ ಪರ್ವ (ಪೂರ್ವಪುರಾಣದಲ್ಲಿ) ವಜ್ರಜಂಘ-ಶ್ರೀಮತಿಯರ ಶೃಂಗಾರಜೀವನ ಬಣ್ಣಬಣ್ಣವಾಗಿ ವರ್ಣನೆಯಾಗಿದೆ. ಆ ಔಜ್ವಲ್ಯ - ಬರುವ ದುರಂತಕ್ಕೆ ಅಪರಿಮಿತವಾದ ಧ್ವನಿಯನ್ನೂ, ಸೊಬಗನ್ನೂ ಒದಗಿಸಿ ದುರಂತವು ಪಕ್ವವಾಗುವಂತೆ ಪರಿಣಮಿಸಿದೆ - ಪಂಪನು ಈ ಸಂದರ್ಭವನ್ನು ವಿವರಿಸದೆ ಶೋಚನೀಯವಾದ ರೀತಿಯಲ್ಲಿ ಮುಗ್ಗರಿಸಿದ್ದಾನೆ ಎನ್ನಿಸುವುದು' (ಆದಿಪುರಾಣ, ೫.೨೨ ನೇ ಪದ್ಯಕ್ಕೆ ನೀಡಿರುವ ಅಡಿಟಿಪ್ಪಣಿ) ಅವರು ಹೇಳುವ ಭಾಗವೆಂದರೆ - ಪೂಪು. ೯. ೧-೨೭

**ವ| ಎಂದತಿಪ್ರಮೋದಪ್ರಮತ್ತಪುರಜನಜನಿತಾನುರಾಗದೊಡನಾ ದಂಪತಿಯುಮೊಡನೆ ರಾಜಮಂದಿರಮಂ ಪೊಕ್ಕು ರಾಜ್ಯಲಕ್ಷ್ಮೀದೇವತೆಯ ಪರಿವಾರದೇವತೆಯರೆನಿಸುವ ವಾರಸೌಂದರಿಯರ ಸೂಸುವ ಪರಮಾನಂದಸ್ಮಿತಸುಧಾಸ್ಯಂದಿ ಸಂತತಾರ್ದ್ರಂಗಳಪ್ಪಾರ್ದ್ರಾಕ್ಷತ ಸಿತಕುಸುಮಾಂಜಳಿಗಳಿನಿದಿರ್ಗೊಂಡು ಪಂಡಿತೆಗೆ ವಿವಿಧ ವಿನೋದಂಗಳಂ ತೋಱಿ ಮೆಱೆದು ದಾನಸನ್ಮಾನಾದಿಗಳೊಳ್ ಸಂತೋಷಂಬಡಿಸಿ ಪುಂಡರೀಕಿಣಿಗೆ ಕಳಿಪಿ ಕೆಲವುದಿವಸಮಿರ್ಪನ್ನೆಗಂ ಶ್ರೀಮತಿಗೆ ಗರ್ಭಚಿಹ್ನಂಗಳ್ ತೋಱೆ,**

**ಗದ್ಯಾನುಸರಣ:** ಎಂದು + ಅತಿಪ್ರಮೋದಪ್ರಮತ್ತ = ಹಾಗೆ ಅಧಿಕ ಸಂತೋಷದಿಂದ ಕೂಡಿದ, ಪುರಜನಜನಿತ + ಅನುರಾಗದೊಡನೆ = ಪುರಜನಗಳ ಪ್ರೀತಿಯೊಡನೆ, ಆ ದಂಪತಿಯುಮೊಡನೆ ರಾಜಮಂದಿರಮಂ ಪೊಕ್ಕು = ಆ ದಂಪತಿಯು ಅರಮನೆಯನ್ನು ಸೇರಿ, ರಾಜ್ಯಲಕ್ಷ್ಮೀದೇವತೆಯ ಪರಿವಾರದೇವತೆ ಯರೆನಿಸುವ = ರಾಜ್ಯಲಕ್ಷ್ಮಿಯ ಜೊತೆಗಿನ ದೇವತೆಗಳಂತಿದ್ದ, ವಾರಸೌಂದರಿಯರ ಸೂಸುವ = ಗಣಿಕೆಯರು ಬೀರುತ್ತಿದ್ದ, ಪರಮಾನಂದಸ್ಮಿತಸುಧಾಸ್ಯಂದಿ = ಸಂತೋಷದ ಮುಗುಳ್ನಗೆಯೆಂಬ ಅಮೃತದ ಧಾರೆಯು ಸುರಿಸುವಿಕೆಯಿಂದ, ಸಂತತ + ಆರ್ದ್ರಂಗಳಪ್ಪ = ಸದಾ ತೋಯ್ದು, ಆರ್ದ್ರ ಅಕ್ಷತ ಸಿತಕುಸುಮಾಂ ಜಳಿಗಳಿನ್ = ಒದ್ದೆಯಾದ ಅಕ್ಷತೆ ಮತ್ತು ಬಿಳಿಹೂಗಳನ್ನು ಚೆಲ್ಲಿ, ಇದಿರ್ಗೊಂಡು = ಎದುರುಗೊಂಡು, ಪಂಡಿತೆಗೆ ವಿವಿಧ ವಿನೋದಂಗಳಂ ತೋಱಿ ಮೆಱೆದು =

ಪಂಡಿತೆಗಾಗಿ ಹಲವಾರು ಮನರಂಜನೆಗಳನ್ನು ಏರ್ಪಡಿಸಿ, ದಾನಸನ್ಮಾನಾದಿಗಳೊಳ್ ಸಂತೋಷಂಬಡಿಸಿ = ದಾನ ಗೌರವಗಳಿಂದ ಸಂತಸಗೊಳಿಸಿ, ಪುಂಡರೀಕಿಣಿಗೆ ಕಳುಪಿ = ಪುಂಡರೀಕಿಣಿಗೆ ವಾಪಸು ಕಳಿಸಿ, ಕೆಲವುದಿವಸಂ + ಇರ್ಪನ್ನೆಗಂ = ಹಲವು ದಿನಗಳು ಕಳೆದ ಬಳಿಕ, ಶ್ರೀಮತಿಗೆ ಗರ್ಭಚಿಹ್ನಂಗಳ್ ತೋಱೆ = ಶ್ರೀಮತಿಗೆ ಗರ್ಭಚಿಹ್ನೆಗಳು ಕಾಣಿಸಿದುವು.

**ಗದ್ಯಾನುಸರಣ:** ಹಾಗೆ ಅಧಿಕ ಸಂತೋಷದಿಂದ ಕೂಡಿದ ಪುರಜನಗಳ ಪ್ರೀತಿಯೊಡನೆ ಆ ದಂಪತಿಯು ಅರಮನೆಯನ್ನು ಹೊಕ್ಕರು; ಅವರನ್ನು ರಾಜ್ಯಲಕ್ಷ್ಮಿಯ ಪರಿವಾರದೇವತೆಗಳಂತಿದ್ದ ಗಣಿಕೆಯರು ಸಂತೋಷದ ಮುಗುಳ್ನಗೆಯ ಅಮೃತದ ಧಾರೆಯು ಸಿಂಚನದಿಂದ ಸದಾ ತೊಯ್ದ ಅಕ್ಷತೆ ಮತ್ತು ಬಿಳಿಹೂಗಳನ್ನು ಚೆಲ್ಲಿ ಎದುರುಗೊಂಡರು. ಆನಂತರ ಶ್ರೀಮತಿಯು ಪಂಡಿತೆಗಾಗಿ ಹಲವಾರು ಮನರಂಜನೆಗಳನ್ನು ಏರ್ಪಡಿಸಿ, ದಾನ ಗೌರವಗಳಿಂದ ಸಂತಸಗೊಳಿಸಿದಳು; ಕೆಲಕಾದ ಮೇಲೆ ಅವಳನ್ನು ಪುಂಡರೀಕಿಣಿಗೆ ವಾಪಸು ಕಳಿಸಿದಳು; ಹಲವು ದಿನಗಳು ಕಳೆದ ಬಳಿಕ ಶ್ರೀಮತಿಗೆ ಗರ್ಭಚಿಹ್ನೆಗಳು ಕಾಣಿಸಿದುವು.

**ರಮಣೀಯಂ ಪುಷ್ಪಿತಲತೆ**
**ಕಮನೀಯಮುಮಾಯ್ತು ಕಾಯ್ತುದೆನೆ ಭುವನಮನು**
**ಕ್ರಮದಿಂ ನಾಲ್ವತ್ತೊಂಬ**
**ತ್ತಮಳ್ಗಳ್ ಪುಟ್ಟಿದವು ಗುಣದಮಳ್ ಪುಟ್ಟಿದವೋಲ್ ೬೨**

**ಪದವಿಭಾಗ–ಅನ್ವಯ–ಅರ್ಥ:** ರಮಣೀಯಂ ಪುಷ್ಪಿತಲತೆ = ಸುಂದರವಾಗಿ ಹೂಬಿಟ್ಟ ಬಳ್ಳಿಯು, ಕಮನೀಯಮುಂ + ಆಯ್ತು ಭುವನಂ ಕಾಯ್ತುದು + ಎನೆ = ಸುಂದರವೂ ಆಯಿತು ಜಗತ್ತು ಹಣ್ಣನ್ನೂ ಬಿಟ್ಟಿತು ಎಂಬಂತೆ, ಅನುಕ್ರಮದಿಂ = ಕ್ರಮಕ್ರಮವಾಗಿ ಗುಣದಮಳ್ ಪುಟ್ಟಿದವೋಲ್ = ಗುಣಗಳು ಇಮ್ಮಡಿಗೊಂಡವೋ ಎಂಬಂತೆ, ನಾಲ್ವತ್ತೊಂಬತ್ತು + ಅಮಳ್ಗಳ್ ಪುಟ್ಟಿದವು = ನಲವತ್ತೊಂಬತ್ತು ಅವಳಿ ಮಕ್ಕಳು ಹುಟ್ಟಿದ್ದರು.

**ಗದ್ಯಾನುಸರಣ:** ಸುಂದರವಾಗಿ ಹೂಬಿಟ್ಟ ಬಳ್ಳಿಯು ಸುಂದರವೂ ಆಯಿತು ಜಗತ್ತು ಹಣ್ಣನ್ನೂ ನೀಡಿತು ಎಂಬಂತೆ, ಅಂತೆಯೇ ಗುಣಗಳು ಇಮ್ಮಡಿಗೊಂಡವೋ ಎಂಬಂತೆ, ಆಕೆಯಲ್ಲಿ ನಲವತ್ತೊಂಬತ್ತು ಅವಳಿ ಮಕ್ಕಳು ಹುಟ್ಟಿದ್ದರು.

**ವ। ಅನ್ನೆಗಂ ವಜ್ರಬಾಹುಮಹಾರಾಜಂ ಮತ್ತೊಂದು ದಿವಸಂ**

**ಅರ್ಥ:** ಅನ್ನೆಗಂ ವಜ್ರಬಾಹುಮಹಾರಾಜಂ ಮತ್ತೊಂದು ದಿವಸಂ = ಈ ಮಧ್ಯೆ, ವಜ್ರಬಾಹುವು ಒಂದು ದಿನ,

**ಶರದುದಿತೇಂದುಕುಂದಧವಳೋನ್ನತಸೌಧತಳಸ್ಥಿತಂ ಮನೋ**
**ಹರಗಗನಾಂಬುರಾಶಿನವಫೇನಸಮಾನಮನುದ್ಧಕೂಟಸೌಂ**
**ದರಮನದೊಂದು ನೀರದಮನಚ್ಚಿಯೆ ನೋಡಿ ಜಿನೇಂದ್ರರುಂದ್ರಮಂ**
**ದಿರಮನದೊಂದನೀ ದೊರೆತೆ ಮಾಡಿಪೆನೆಂದದಱಂದಮಂ ನೃಪಂ ೬೩**

**ಪದವಿಭಾಗ–ಅನ್ವಯ–ಅರ್ಥ:** ಶರತ್ + ಉದಿತ + ಇಂದುಕುಂದಧವಳ = ಶರತ್ಕಾಲದ ಚಂದ್ರನ ಬೆಳುದಿಂಗಳಂತಹ ಬೆಳ್ಳಗಿನ, ಉನ್ನತಸೌಧತಳಸ್ಥಿತಂ = ಎತ್ತರವಾದ ಉಪ್ಪರಿಗೆಯ ಮೇಲೆ ನಿಂತು, ಮನೋಹರಗಗನಾಂಬುರಾಶಿ = ಸುಂದರವಾದ ಆಕಾಶಸಮುದ್ರದ, ನವಫೇನಸಮಾನಮನ್ = ಬೆಳ್ನೊರೆಯಂತಿದ್ದ, ಮತ್ತು ಉದ್ಧಕೂಟಸೌಂದರಮನ್ = ಎತ್ತರವಾದ ಶಿಖರದಂತಿದ್ದ ಸೊಬಗಿನ, ಅದೊಂದು ನೀರದಮನ್ + ಅಚ್ಚಿಯೆ ನೋಡಿ = ಒಂದು ಮೋಡವನ್ನು ಕುತೂಹಲದಿಂದ ಕಂಡು, ಅದೊಂದನ್ ಜಿನೇಂದ್ರರುಂದ್ರಮಂದಿರಮನ್ = ಒಂದು ದೊಡ್ಡ ಜಿನಾಲಯವನ್ನು, ಈ ದೊರೆತೆ ಮಾಡಿಪೆನ್ ಎಂದು = ಈ ರೀತಿಯಲ್ಲಿಯೇ ಮಾಡಿಸುತ್ತೇನೆ ಎಂದು, ನೃಪಂ ಅದಱಂದಮಂ = ರಾಜನು ಅದರ ಸ್ವರೂಪವನ್ನು

**ಗದ್ಯಾನುಸರಣ:** ವಜ್ರಬಾಹುವು ಒಂದು ದಿನ, ಶರತ್ಕಾಲದ ಚಂದ್ರನ ಬೆಳುದಿಂಗಳಂತೆ ಬೆಳ್ಳಗಿದ್ದ ಎತ್ತರವಾದ ಉಪ್ಪರಿಗೆಯ ಮೇಲೆ ನಿಂತು ಸುಂದರವಾದ ಒಂದು ಮೋಡವನ್ನು ಕುತೂಹಲದಿಂದ ಕಂಡ; ಅದು ಆಕಾಶಸಮುದ್ರದ ಬೆಳ್ನೊರೆಯಂತಿತ್ತು ಮತ್ತು ಎತ್ತರವಾದ ಶಿಖರವನ್ನು ಹೋಲುತ್ತಿತ್ತು; ಇಂತಹುದೇ ಒಂದು ದೊಡ್ಡ ಜಿನಾಲಯವನ್ನು ಮಾಡಿಸುತ್ತೇನೆ ಎಂದು ನಿರ್ಧರಿಸಿದ. ಆನಂತರ, ಅದರ ಸ್ವರೂಪವನ್ನು

**ವ॥ ಬರೆಯಲೆಂದು ಬಟ್ಟಿಗೆವಲಗೆಯಂ ತರಿಸಿ ತಿಟ್ಟಮಿಟ್ಟು ಬರೆವನ್ನೆಗಂ**

**ಅರ್ಥ:** ಬರೆಯಲೆಂದು ಬಟ್ಟಿಗೆವಲಗೆಯಂ ತರಿಸಿ ತಿಟ್ಟಮಿಟ್ಟು ಬರೆವನ್ನೆಗಂ = ಬರೆದುಕೊಳ್ಳಲು ಒಂದು ಮಣ್ಣಿನ ಹಲಗೆಯನ್ನು ತರಿಸಿ ಚಿತ್ರವನ್ನು ರೇಖಿಸಿಕೊಳ್ಳುವಷ್ಟರಲ್ಲಿ,

**ಸಿರಿಯ ಶರೀರದ ರೂಪಿನ**
**ನರರೈಶ್ವರ್ಯದ ಪೊದಳ್ಕೆಗಳ್ ಕರಗುವವೋಲ್**
**ಶರದಂಬುಧರಂ ಭೋಂಕೆನೆ**
**ಕರಗಿದೊಡೆರ್ದೆ ಕರಗಿ ಕೊರಗಿದಂ ಧರಣೀಶಂ ೬೪**

**ಪದವಿಭಾಗ–ಅನ್ವಯ–ಅರ್ಥ:** ನರರ ಸಿರಿಯ ಶರೀರದ ರೂಪಿನ ಐಶ್ವರ್ಯದ ಪೊದಳ್ಕೆಗಳ್ = ಮಾನವರ ಸಿರಿ ದೇಹ ಸಂಪತ್ತುಗಳ ಕಾಂತಿಯು,

ಕರಗುವವೋಲ್ = ಕರಗುವ ಹಾಗೆ, ಶರತ್ + ಅಂಬುಧರಂ ಭೋಂಕೆನೆ ಕರಗಿದೊಡೆ = ಆ ಶರತ್ಕಾಲದ ಮೋಡವು ಇದ್ದಕ್ಕಿದ್ದಂತೆ ಕರಗಿಹೋಗಲು, ಧರಣೀಶಂ ಎರ್ದೆ ಕರಗಿ ಕೊರಗಿದಂ = ಮಹಾರಾಜನ ಎದೆ ಕರಗಿ ಕೊರಗಿನಿಂದ ತುಂಬಿತು.

**ಗದ್ಯಾನುಸರಣ:** ಮಾನವರ ಸಿರಿ ದೇಹ ಸಂಪತ್ತುಗಳ ವೈಭವವು ಕರಗುವ ಹಾಗೆ ಆ ಶರತ್ಕಾಲದ ಮೋಡವು ಇದ್ದಕ್ಕಿದ್ದಂತೆ ಕರಗಿಹೋಯಿತು; ಇದರಿಂದ ಮಹಾರಾಜನ ಎದೆಯೂ ಕರಗಿ ಅಲ್ಲಿ ಕೊರಗು ತುಂಬಿಕೊಂಡಿತು.

**ವ। ಆಗಳ್**

**ಅರ್ಥ:** ಆಗಳ್ = ಆಗ,

**ಘನದ ಕರಗಿದುದನಱಿದಪ**
**ಘನದ ವಿಳಾಸಮನದೆಂತು ನಂಬುವುದೊ ಘನಾ**
**ಘನದಿಂದಮುಱಿಯುಲಾದುದು**
**ಘನಾಘನಂ ಜವನ ದಾಱಿಗಿಲ್ಲೆಂಬಿನಿತಂ** ೬೫

**ಪದವಿಭಾಗ-ಅನ್ವಯ-ಅರ್ಥ:** ಘನದ ಕರಗಿದುದನ್ ಅಱಿದು = ಮೋಡವು ಕರಗಿ ಹೋದದ್ದನ್ನು ತಿಳಿದೂ, ಅಪಘನದ ವಿಳಾಸಮನ್ + ಅದೆಂತು ನಂಬುವುದೊ = ಸ್ಥಿರವಲ್ಲದ ವಿಲಾಸಗಳನ್ನು ಹೇಗೆ ನಂಬುವುದು! ಘನ + ಅಘನದಿಂದಂ = ಮೋಡವು ಅಸ್ಥಿರವಲ್ಲದ್ದನ್ನು ಕಂಡು, ಜವನ ದಾಱಿಗೆ ಘನ + ಅಘನಂ = ಯಮನ ದಾಳಿಗೆ ಸ್ಥಿರ ಅಸ್ಥಿರ, ಇಲ್ಲೆಂಬ + ಇನಿತಂ ಅಱಿಯಲಾದುದು = ಎಂಬ ವ್ಯತ್ಯಾಸವಿಲ್ಲ ಎಂಬುದನ್ನು ತಿಳಿದಂತಾಯಿತು.

**ಗದ್ಯಾನುಸರಣ:** ಮೋಡವು ಕರಗಿ ಹೋದದ್ದನ್ನು ತಿಳಿದೂ ಸ್ಥಿರವಲ್ಲದ ವಿಲಾಸಗಳನ್ನು ಹೇಗೆ ನಂಬುವುದು! ಮೋಡವು ಅಸ್ಥಿರವಲ್ಲದ್ದನ್ನು ಕಂಡು ಯಮನ ದಾಳಿಗೆ ಸ್ಥಿರ ಅಸ್ಥಿರ ಎಂಬ ವ್ಯತ್ಯಾಸವಿಲ್ಲ ಎಂಬುದನ್ನು ತಿಳಿದಂತಾಯಿತು.

**ಆನ್ನೋಡೆನೋಡೆ ನೋಡ ಮ**
**ನನ್ನೋಡುವವೊಲ್ ಶರದ್ಘನಂ ಕರಗಿದುದೆಂ**
**ತೆನ್ನನೆನಗೆಂಬೆನೆಂದೊಡ**
**ಮೆನ್ನಳಿಪಿಂಗೆನ್ನ ತನುವೊಡಂಬಟ್ಟಪುದೇ** ೬೬

**ಪದವಿಭಾಗ-ಅನ್ವಯ-ಅರ್ಥ:** ಆಂ + ನೋಡೆನೋಡೆ = ನಾನು

ನೋಡುತ್ತಿದ್ದಂತೆಯೇ, ಮನಂ + ನೋಡುವವೊಲ್ ಶರತ್ + ಘನಂ ಕರಗಿದುದು ನೋಡ = ಮನಸ್ಸಿಗೆ ಅರಿವಾಗುವಂತೆ ಶರತ್ಕಾಲದ ಮೋಡವು ಕರಗಿಹೋಯಿತಲ್ಲ! ಎಂತು + ಎನ್ನನ್ + ಎನಗೆಂಬೆನ್ ಹೇಗೆ ನಾನು ನನಗಾಗಿಯೇ ಎಂದು ಹೇಳಲಿ! ಎಂದೊಡಂ = ಹಾಗಂದುಕೊಂಡರೂ, ಎನ್ನ + ಅಳಿಪಿಂಗೆ + ಎನ್ನ ತನು + ಒಡಂಬಟ್ಟಪುದೇ = ನನ್ನ ದುರಾಸೆಗೆ ನನ್ನ ದೇಹವು ಹೊಂದಿ ಕೊಳ್ಳಬಲ್ಲುದೇ?

**ಗದ್ಯಾನುಸರಣ:** ನೋಡುತ್ತಿದ್ದಂತೆಯೇ ಮನಸ್ಸಿಗೆ ತಾಕುವಂತೆ ಶರತ್ಕಾಲದ ಮೋಡವು ಕರಗಿಹೋಯಿತಲ್ಲ! ನಾನು ನನಗಾಗಿಯೇ ಎಂದು ಹೇಗೆ ಹೇಳಲಿ! ಹಾಗಂದುಕೊಂಡರೂ ನನ್ನ ದುರಾಸೆಗೆ ನನ್ನ ದೇಹವು ಹೊಂದಿಕೊಳ್ಳಬಲ್ಲುದೇ?

**ಜವನಾಣೆಗಮಾಜ್ಞೆಗಮುಂ**
**ಟೆ ವಕ್ರಮಾ ಖಳನ ತುಱುವುಮಂ ಸೋಂಕುಮನಾ**
**ರವಧರಿಪರೆಂತುಮವನುಮ**
**ನವಯುವದೊಳೆ ಗೆಲ್ವ ಬಗೆಯನೀಗಳೆ ಬಗೆವೆಂ** ೬೭

**ಪದವಿಭಾಗ-ಅನ್ವಯ-ಅರ್ಥ:** ಜವನ + ಆಣೆಗಂ + ಆಜ್ಞೆಗಂ ವಕ್ರಂ ಉಂಟೆ = ಯಮನ ಆಗೆಗೂ ಆಜ್ಞೆಗೂ ಅಡ್ಡಿಯಿದೆಯೇ? ಆ ಖಳನ ತುಱುವುಮಂ ಸೋಂಕುಮನ್ + ಆರ್ + ಅವಧರಿಪರ್ = ಆ ಖೂಳನ ತುಳಿತವನ್ನೂ ಸೋಕನ್ನೂ ಯಾರು ಕಾಣಬಲ್ಲರು? ಎಂತುಂ + ಅವನುಮನ್ + ಅವಯವದೊಳೆ ಗೆಲ್ವ ಬಗೆಯನ್ + ಈಗಳೆ ಬಗೆವೆಂ = ಹೇಗಾದರಾಗಲೀ, ಅವನನ್ನೂ ಇಡಿಯಾಗಿ ಗೆಲ್ಲುವ ಪರಿಯನ್ನು ಕುರಿತು ಈಗಲೇ ಆಲೋಚಿಸುತ್ತೇನೆ.

**ಗದ್ಯಾನುಸರಣ:** ಯಮನ ಆಣೆಗಾಗಲೀ ಆಜ್ಞೆಗಾಗಲೀ ಅಡ್ಡಿಯಿದೆಯೇ? ಆ ಖೂಳನ ತುಳಿತವನ್ನೂ ಸೋಕನ್ನೂ ಯಾರು ಕಾಣಬಲ್ಲರು? ಹೇಗಾದರಾಗಲೀ, ಅವನನ್ನೂ ಇಡಿಯಾಗಿ ಗೆಲ್ಲುವ ಪರಿಯನ್ನು ಕುರಿತು ಈಗಲೇ ಆಲೋಚಿಸುತ್ತೇನೆ.

**ವ। ಎಂದಾ ಮಹಾನುಭಾವನಾ ಜವಂಜವವಿಭಾವಕ್ಕೇವಯಿಸಿ ವಜ್ರಜಂಘನೊಳಾತ್ಮೀಯವಸುಧರಾಭಾರವಮಂ ನಿಱಿಸಿ ವಸುಂಧರೆವೆರಸು ಪಲಂಬರರರಸಿಯರುಂ ಶ್ರೀಮತೀತನೂಜರ್ ವೀರಬಾಹುಪ್ರಭೃತಿಗಳಪ್ಪ ನಾಲ್ವತ್ತೊಂಬತ್ತುಮುಮಳ್ಗಳುಮೈನೂರ್ವರ್ ರುರ್ವಿಶ್ವರರುಂ ಬೆರಸು ಪರಿಚ್ಛೇದಿಸಿ ಯಮಧರಮುನೀಂದ್ರಪಾದಪದ್ಮೋಪಕಂಠದೊಳ್ ಜಾತರೂಪಧರನಾಗಿ ಮೋಕ್ಷಲಕ್ಷ್ಮೀಕಟಾಕ್ಷೈಕಲಕ್ಷ್ಯನಾದನನ್ನೆಗಮಿತ್ತಂ**

**ಪದವಿಭಾಗ-ಅನ್ವಯ-ಅರ್ಥ:** ಎಂದು + ಆ ಮಹಾನುಭಾವನ್ = ಎಂದು ಮಹಾನುಭಾವನಾದ ವಜ್ರಬಾಹುವು, ಆ ಜವಂಜವವಿಭಾವಕ್ಕೆ + ಏವಯಿಸಿ = ಹುಟ್ಟುಸಾವುಗಳ ಪರಂಪರೆಯಾದ ಸಂಸಾರಕ್ಕೆ ಹೇಸಿ, ಆತ್ಮೀಯಧರಾಭಾರಮಂ ವಜ್ರಜಂಘನೊಳ್ ನಿಱಿಸಿ = ಮಗನಾದ ವಜ್ರಜಂಘನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು, ವಸುಂಧರೆವೆರಸು ಪಲಂಬರರಸಿಯರುಂ = ವಸುಂಧರೆಯೊಡನೆ ಹಲವರು ರಾಣಿಯರೂ, ಶ್ರೀಮತೀತನೂಜರ್ ವೀರಬಾಹುಪ್ರಭೃತಿಗಳಪ್ಪ ನಾಲ್ವತ್ತೊಂಬತ್ತುಮಮಳ್ಗಳುಂ = ಶ್ರೀಮತಿಯ ಮಕ್ಕಳಾದ ನಲವತ್ತೊಂಬತ್ತು ಅವಳಿ ಮಕ್ಕಳೂ, ಐನೂರ್ವರ್ + ಉರ್ವಿಶ್ವರರುಂ ಬೆರಸು = ಐನೂರು ಮಂದಿ ರಾಜರುಗಳು ಸೇರಿಕೊಳ್ಳಲು, ಪರಿಚ್ಛೇದಿಸಿ = ನಿರ್ಧಾರ ಮಾಡಿ, ಯಮಧರ ಮುನೀಂದ್ರಪಾದಪದ್ಮೋಪಕಂಠದೊಳ್ = ಯಮಧರಮುನಿಗಳ ಪಾದಮೂಲದಲ್ಲಿ, ಜಾತರೂಪಧರನಾಗಿ = ದಿಗಂಬರತ್ವವನ್ನು ಸ್ವೀಕರಿಸಿ, ಮೋಕ್ಷಲಕ್ಷ್ಮೀಕಟಾಕ್ಷೈಕಲಕ್ಷ್ಯನಾದನ್ = ಮೋಕ್ಷಲಕ್ಷ್ಮಿಯ ಕುಡಿನೋಟಕ್ಕೊಳಗಾಗುವ ಕಡೆ ಗಮನ ಹರಿಸಿದ. ಅನ್ನೆಗಂ + ಇತ್ತಂ = ಅಷ್ಟರಲ್ಲಿ ಇತ್ತ,

**ಗದ್ಯಾನುಸರಣ:** ಎಂದು ಹುಟ್ಟುಸಾವುಗಳ ಪರಂಪರೆಯಾದ ಸಂಸಾರಕ್ಕೆ ಮಹಾನುಭಾವನಾದ ವಜ್ರಬಾಹುವು ಹೇಸಿ ಮಗನಾದ ವಜ್ರಜಂಘನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ಯಮಧರಮುನಿಗಳ ಪಾದಮೂಲದಲ್ಲಿ ದಿಗಂಬರತ್ವವನ್ನು ಸ್ವೀಕರಿಸಲು ನಿರ್ಧರಿಸಿದ. ಅವನೊಡನೆ ವಸುಂಧರೆಯೂ ಹಲವು ಮಂದಿ ರಾಣಿಯರೂ ಶ್ರೀಮತಿಯ ಮಕ್ಕಳಾದ ನಲವತ್ತೊಂಬತ್ತು ಅವಳಿ ಮಕ್ಕಳೂ ಐನೂರು ಮಂದಿ ರಾಜರುಗಳೂ ಅದಕ್ಕೆ ಮುಂದಾದರು. ಆಮೇಲೆ ಅವನು ಮೋಕ್ಷಲಕ್ಷ್ಮಿಯ ಕೃಪಾಕಟಾಕ್ಷಕ್ಕೊಳಗಾಗುವ ಕಡೆ ಗಮನ ಹರಿಸಿದ. ಅಷ್ಟರಲ್ಲಿ ಇತ್ತ,

**ನಿಮ್ಮನೆ ನೋಡಿ ಮತ್ಗುರುವಿಯೋಗಮನಾಱಿಪೆವೀಗಳೀ ತಪ**
**ಕ್ಕಮ್ಮ ಮನಂದರಲ್ ನಿಮಗೆ ಸಲ್ಲದೊಡಂಬಡಿಮೆಂದು ಕಾಲ್ಗಳಂ**
**ತಮ್ಮಯ ನೆತ್ತಿಯೊಳ್ ನಿಱಿಸಿ ಮಾರ್ಕೊಳೆ ಮಾಣದೆ ಪೋದ ಮಕ್ಕಳ**
**ಣ್ಮೆಮ್ಮನದೊಳ್ ಪಳಂಚಿದುದೊ ಚಕ್ರಿತನೂಜೆಯ ವಜ್ರಜಂಘನಾ. ೬೮**

**ಪದವಿಭಾಗ-ಅನ್ವಯ-ಅರ್ಥ:** ನಿಮ್ಮನೆ ನೋಡಿ ಮತ್ + ಗುರುವಿಯೋಗಮನ್ + ಆಱಿಪೆವು = ನಿಮ್ಮನ್ನು ನೋಡಿಕೊಂಡು ತಂದೆಯ ವಿಯೋಗವನ್ನು ಸಹಿಸಿಕೊಳ್ಳುತ್ತೇವೆ, ಅಮ್ಮ ಈಗಳ್ + ಈ ತಪಕ್ಕೆ ಮನಂದರಲ್ ನಿಮಗೆ ಸಲ್ಲದು = ಮಕ್ಕಳೇ, ಈಗಲೇ ತಪಸ್ಸು ಮಾಡುವುದು ನಿಮಗೆ ತರವಲ್ಲ, ಒಡಂಬಡಿಂ = ನಮ್ಮ ಮಾತು ಕೇಳಿ, ಎಂದು ಕಾಲ್ಗಳಂ ತಮ್ಮಯ ನೆತ್ತಿಯೊಳ್

ನಿಱಿಸಿ = ಅವರ ಕಾಲುಗಳಲ್ಲಿ ತಮ್ಮ ತಲೆಯನ್ನಿಟ್ಟು (ಬೇಡಿಕೊಂಡರೂ), ಮಾರ್ಕೊಳೆ ಮಾಣದೆ ಪೋದ ಮಕ್ಕಳ + ಅಣ್ಮು ಒಪ್ಪದೆ ಹೋದ ಮಕ್ಕಳ ನಿರ್ಧಾರವು, ಚಕ್ರಿತನೂಜೆಯ ವಜ್ರಜಂಘನಾ ಮನದೊಳ್ ಏಂ ಪಳಂಚಿದುದೊ = ಶ್ರೀಮತಿ ವಜ್ರಜಂಘರ ಮನಸ್ಸಿನಲ್ಲಿ ಅದೆಂತು ತಾಕಿತು!

**ಗದ್ಯಾನುಸರಣ:** 'ನಿಮ್ಮನ್ನು ನೋಡಿಕೊಂಡು ತಂದೆಯ ವಿಯೋಗವನ್ನು ಸಹಿಸಿಕೊಳ್ಳುತ್ತೇವೆ; ಮಕ್ಕಳೇ, ಈಗಲೇ ತಪಸ್ಸು ಮಾಡುವುದು ನಿಮಗೆ ತರವಲ್ಲ, ನಮ್ಮ ಮಾತು ಕೇಳಿ' ಎಂದು ಶ್ರೀಮತಿ ವಜ್ರಜಂಘರು ಅವರ ಕಾಲಿಗೆ ಬಿದ್ದು ಬೇಡಿಕೊಂಡರೂ ಅವರು ಒಪ್ಪಲಿಲ್ಲ; ಅವರ ನಿರ್ಧಾರವು ಇವರ ಮನಸ್ಸನ್ನು ಆಳವಾಗಿ ತಾಕಿತು.

**ವ। ಅನ್ನೆಗಮಿತ್ತ ವಜ್ರದಂತಚಕ್ರವರ್ತಿಯುಂ ಸಕಳ ಮುಕುಟಬದ್ಧ ಪರಿವೃತನಾಸ್ಥಾನ ಮಂಟಪಮಧ್ಯಸ್ಥಿತ ಸಿಂಹಾಸನ ದೊಳೊಂದು ದಿವಸಂ ಸುಖಾಸೀನನಾಗಿರೆ,**

**ಪದವಿಭಾಗ-ಅನ್ವಯ-ಅರ್ಥ:** ಅನ್ನೆಗಂ + ಇತ್ತ ವಜ್ರದಂತಚಕ್ರವರ್ತಿಯುಂ = ಅಷ್ಟರಲ್ಲಿ ಈ ಕಡೆ ವಜ್ರದಂತ ಚಕ್ರವರ್ತಿಯೂ, ಒಂದುದಿವಸಂ = ಒಂದು ದಿನ, ಸಕಳಮುಕುಟಬದ್ಧಪರಿವೃತನ್ = ಎಲ್ಲ ರಾಜರಿಂದ ಕೂಡಿದವನಾಗಿ, ಆಸ್ಥಾನ ಮಂಟಪಮಧ್ಯಸ್ಥಿತಸಿಂಹಾಸನದೊಳ್ ಸುಖಾಸೀನನಾಗಿರೆ = ಆಸ್ಥಾನಮಂಟಪದ ನಡುವಣ ಸಿಂಹಾಸನದಲ್ಲಿ ಕುಳಿತಿರಲು,

**ಗದ್ಯಾನುಸರಣ:** ಇತ್ತ ವಜ್ರದಂತಚಕ್ರವರ್ತಿ ಒಂದು ದಿನ ತನ್ನ ಸಾಮಂತರ ನಡುವೆ ತನ್ನ ಓಲಗದಲ್ಲಿ ಕುಳಿತಿದ್ದ, ಆಗ

**ವಿಕಸತ್ಕಾಂಚನಪದ್ಮಮುಂ ವಿನಯದಿಂ ತಂದೊಂದನುದ್ಯಾನಪಾ**
**ಳಕನಿತ್ತಲ್ಲಿ ತದಬ್ಜಮುಂ ನೃಪವರಂ ವಕ್ತ್ರಾಬ್ಜದೊಳ್ ಸಾರ್ಚೆ ಕಂ**
**ಮುಕರಂಪೊಂಪುಱಿಯೆಂದು ಸೋಲ್ತಿಸಿರ್ವಿನಂ ಘ್ರಾಣೇಂದ್ರಿಯೌತ್ಸುಕ್ಯಮುಂ**
**ಪ್ರಕಟಂಮಾಡಿ ನೃಪಂಗಲಂಪುವಡೆದತ್ತಂಭೋಜಗಂಧಾಸವಂ ೬೯**

**ಪದವಿಭಾಗ-ಅನ್ವಯ-ಅರ್ಥ:** ಉದ್ಯಾನಪಾಳಕನ್ = ತೋಟದ ಕಾವಲುಗಾರನು, ವಿಕಸತ್ + ಕಾಂಚನಪದ್ಮಮಂ ಒಂದನ್ ತಂದು = ಅರಳಿದ ಚಿನ್ನದ ತಾವರೆಯೊಂದನ್ನು ತಂದು, ವಿನಯದಿಂ ಇತ್ತಲ್ಲಿ = ವಿನಮ್ರನಾಗಿ ನೀಡಲು, ನೃಪವರಂ ತತ್ + ಅಬ್ಜಮಂ = ಚಕ್ರವರ್ತಿಯು ಆ ತಾವರೆಯನ್ನು, ವಕ್ತ್ರ +

ಅಬ್ಜದೊಳ್ ಸಾರ್ಚೆ = ಮುಖಕಮಲದ ಬಳಿ ಇರಿಸಿಕೊಂಡು, ಕಂಪು ಕರಂ ಪೊಂಪುಟಿ + ಎಂದು = ಸುಗಂಧವು ಬಹಳ ಚೆನ್ನಾಗಿದೆ ಎಂದು, ಸೋಲ್ತು + ಉಸಿರ್ವಿನಂ = ಮನಸೋತು ಉಸಿರೆಳೆದುಕೊಳ್ಳಲು, ಘ್ರಾಣೇಂದ್ರಿಯ + ಔತ್ಸುಕ್ಯಮಂ ಪ್ರಕಟಂಮಾಡಿ = ಅದು ಮೂಗನ್ನರಳಿಸಿ ಉತ್ಸುಕತೆಯನ್ನುಂಟು ಮಾಡಲು, ಅಂಭೋಜಂಗಂಧ + ಆಸವಂ = ತಾವರೆಯ ಕಂಪಿನಿಂದ ಕೂಡಿದ ರಸವು, ನೃಪಂಗೆ + ಅಲಂಪುವಡೆದತ್ತು = ರಾಜನಿಗೆ ಸಂತಸವನ್ನುಂಟುಮಾಡಿತು.

**ಗದ್ಯಾನುಸರಣ:** ತೋಟದ ಕಾವಲುಗಾರನು ಒಂದು ಅರಳಿದ ಚಿನ್ನದ ತಾವರೆಯನ್ನು ತಂದು ರಾಜನಿಗೆ ವಿನಯದಿಂದಿತ್ತ; ಚಕ್ರವರ್ತಿಯು ಆ ತಾವರೆಯನ್ನು ಮುಖದ ಬಳಿ ಇರಿಸಿಕೊಂಡು ಸೊಗಸಾದ ಕಂಪು ಎಂದು ಮನಸೋತು ಉಸಿರೆಳೆದುಕೊಂಡ; ತಾವರೆಯ ಕಂಪಿನಿಂದ ಕೂಡಿದ ಅದರ ರಸವು ಅವನ ಮೂಗನ್ನರಳಿಸಿ ಉತ್ಸುಕತೆಯನ್ನುಂಟುಮಾಡಿ ಸಂತಸವನ್ನು ತಂದಿತು.

**ವ॥ ಮತ್ತಮಾ ಲೀಲಾಕಮಳಮನೆ ಲೀಲೆಯಿಂ ತಿರಿಪಿದಾಗಳ್,**

**ಅರ್ಥ:** ಮತ್ತಮ್ + ಆ ಲೀಲಾಕಮಳಮನೆ ಲೀಲೆಯಿಂ ತಿರಿಪಿದಾಗಳ್ = ಆಮೇಲೆ ಆ ಸುಂದರ ಕಮಲವನ್ನು ಆಟಕ್ಕೆಂದು ತಿರುಗಿಸಿದಾಗ,

**ತಿರಿವೆಸಳ್ಗಳ್ ಮುಸುಱುವ ಮಧು**
**ಕರಂಗಳಂ ಸೋಯೆ ಪರಿವ ಮಕರಂದಂರಸಂ**
**ಪರಿವೇಷಂಗೊಂಡಂತಿರೆ**
**ಕರಮೆಸೆದುದು ನೃಪನ ಕಯ್ಯ ಲೀಲಾಂಭೋಜಂ ೭೦**

**ಪದವಿಭಾಗ–ಅನ್ವಯ–ಅರ್ಥ:** ತಿರಿವೆಸಳ್ಗಳ್ = ಆಗ ತಿರುಗುವ ದಳಗಳು, ಮುಸುಱುವ ಮಧುಕರಂಗಳಂ ಸೋಯೆ = ಮುತ್ತಿಕೊಳ್ಳುವ ದುಂಬಿಗಳನ್ನು ಓಡಿಸಲು, ಪರಿವ ಮಕರಂದಂರಸಂ ಪರಿವೇಷಂಗೊಂಡಂತಿರೆ = ಸುರಿಯುವ ಮಕರಂದವು ಪ್ರಭಾವಲಯವನ್ನುಂಟುಮಾಡಿದಂತೆ, ನೃಪನ ಕಯ್ಯ ಲೀಲಾಂಭೋಜಂ ಕರಂ + ಎಸೆದುದು = ರಾಜನ ಕೈಯಲ್ಲಿದ್ದ ಸುಂದರವಾದ ಹೂವು ಮತ್ತಷ್ಟು ಸೊಗಸಿತು.

**ಗದ್ಯಾನುಸರಣ:** ಆಗ ತಿರುಗುವ ದಳಗಳು ಮುತ್ತಿಕೊಳ್ಳುವ ದುಂಬಿಗಳನ್ನು ಓಡಿಸಿದವು; ಅದರಿಂದ ಸುರಿಯುವ ಮಕರಂದವು ಪ್ರಭಾವಲಯವನ್ನುಂಟು ಮಾಡಿದಂತಿರಲು ಆ ಸುಂದರವಾದ ಹೂವು ರಾಜನ ಕೈಯಲ್ಲಿ ಮತ್ತಷ್ಟು ಸೊಗಸಿತು.

**ದಿನಪಾಸ್ತಸಮಯದೊಳ್ ಮು**
**ನ್ನಿನ ದಿವಸಂ ತತ್ಪಯೋಜದೊಳ್ ಮಡಿದಳಿ ತೊ**
**ಟ್ಟನೆ ಬೀಟ್ ತೂಗಿ ತಲೆಯಂ**
**ಜನನಾಥಂ ವಿಸ್ಮಯಸ್ಮಿತಂಬೆರಸಿನಿಸುಂ** ೭೧

**ಪದವಿಭಾಗ–ಅನ್ವಯ–ಅರ್ಥ:** ಮುನ್ನಿನ ದಿವಸಂ = ಹಿಂದಿನ ದಿನ, ದಿನಪ + ಅಸ್ತಸಮಯದೊಳ್ = ಸೂರ್ಯನು ಮುಳುಗುವ ಹೊತ್ತಿನಲ್ಲಿ, ತತ್ + ಪಯೋಜದೊಳ್ = ಆ ಕಮಲದಲ್ಲಿ ಸಿಲುಕಿಕೊಂಡು, ಮಡಿದ + ಅಳಿ = ಸತ್ತಿದ್ದ ದುಂಬಿಯೊಂದು, ತೊಟ್ಟನೆ ಬೀಟ್ = ತಟ್ಕೆಂದು ಬೀಳಲು, ಜನನಾಥಂ ಇನಿಸು ವಿಸ್ಮಯಸ್ಮಿತಂಬೆರಸು = ರಾಜನು ಕೊಂಚ ಆಶ್ಚರ್ಯ ತುಂಬಿದ ಮುಗುಳ್ನಗೆಯೊಡನೆ, ತಲೆಯಂ ತೂಗಿ = ತಲೆದೂಗಿ,

**ಗದ್ಯಾನುಸರಣ:** ಹಿಂದಿನ ದಿನ ಸಂಜೆಯ ಹೊತ್ತಿನಲ್ಲಿ ಆ ಕಮಲದಲ್ಲಿ ಸಿಲುಕಿಕೊಂಡು ಸತ್ತಿದ್ದ ದುಂಬಿಯೊಂದು ತಟ್ಟೆಂದು ಬಿತ್ತು; ಅದನ್ನು ನೋಡಿ ರಾಜನು ಕೊಂಚ ಆಶ್ಚರ್ಯ ತುಂಬಿದ ಮುಗುಳ್ನಗೆಯೊಡನೆ ತಲೆದೂಗಿದ.

**ಈ ಮಧುಪಂ ದಳಿತಾಂಭೋ**
**ಜಾಮೋದಾಸಕ್ತನಕ್ಕಟಾ ಮಡಿದುದು ಪೇ**
**ಟೀ ಮನುಜರಖಿಳಕರಣ**
**ಗ್ರಾಮಮನೊಂದೊಡಲೊಳೆಂತೊಡಂಬಡಿಸಿದರೋ** ೭೨

**ಪದವಿಭಾಗ–ಅನ್ವಯ–ಅರ್ಥ:** ಅಕ್ಕಟಾ, ದಳಿತ + ಅಂಭೋಜ + ಆಮೋದ + ಆಸಕ್ತನ್ ಈ ಮಧುಪಂ = ಅಯ್ಯೋ, ಅರಳಿದ ತಾವರೆಯ ಬಂಡುಣ್ಣಲು ಆಸಕ್ತವಾದ ಈ ದುಂಬಿ, ಮಡಿದುದು = ಸತ್ತುಹೋಯಿತು, ಈ ಮನುಜರ್ ಇನ್ನು ಮನುಷ್ಯರು, ಅಖಿಳಕರಣಗ್ರಾಮಮನ್ = ಎಲ್ಲ ಇಂದ್ರಿಯಗಳ ಸಮೂಹವನ್ನೂ, ಒಂದು + ಒಡಲೊಳ್ + ಎಂತು = ಒಂದೇ ದೇಹದಲ್ಲಿ ಹೇಗೆ ಒಡಂಬಡಿಸಿದರೋ ಪೇಟ್ = ತುಂಬಿಕೊಂಡಿದ್ದಾರೆಯೋ ಹೇಳು!

**ಗದ್ಯಾನುಸರಣ:** ಅಯ್ಯೋ, ಅರಳಿದ ತಾವರೆಯ ಬಂಡುಣ್ಣಲು ಆಸಕ್ತವಾದ ಈ ದುಂಬಿ ಸತ್ತುಹೋಯಿತು; ಇನ್ನು ಮನುಷ್ಯರು ಎಲ್ಲ ಇಂದ್ರಿಯಗಳನ್ನೂ ಒಂದೇ ದೇಹದಲ್ಲಿ ಹೇಗೆ ತುಂಬಿಕೊಂಡಿದ್ದಾರೆಯೋ!

**ಒಂದೊಂದೆ ರಸದ ಸೋಲಮು**
**ದೊಂದೊಂದನೆ ಕೊಲ್ಗುಮೋವೊ ಲಂಪಳರಪ್ಪ**
**ವ್ಮಂದಿಗರಂ ಬಗೆವಂದದೆ**
**ಕೊಂದಿಕ್ಕವೆ ಸಕಳವಿಷಯವಿಷಮವಿಷಂಗಳ್** ೭೩

**ಪದವಿಭಾಗ–ಅನ್ವಯ–ಅರ್ಥ:** ಒಂದೊಂದೆ ರಸದ ಸೋಲಂ + ಅದು + ಒಂದೊಂದನೆ ಕೊಲ್ಗುಂ = ಒಂದು ಇಂದ್ರಿಯದ ಆಮಿಷವೂಒಂದೊಂದು ಜೀವಿಯನ್ನು ಕೊಲ್ಲುವುದು; ಓವೊ ಬಗೆವಂದು = ಓಹ್, ಯೋಚಿಸಿದರೆ, ಅದೆ ಸಕಳವಿಷಯವಿಷಮವಿಷಂಗಳ್ = ಆ ಎಲ್ಲ ಇಂದ್ರಿಯಬಯಕೆಯೆಂಬ ವಿಷವು, ಲಂಪಳರಪ್ಪ + ಎಮ್ಮಂದಿಗರಂ ಕೊಂದಿಕ್ಕವೆ = ಲಂಪಟರಾದ ನಮ್ಮಂತಹವರನ್ನು ಕೊಲ್ಲದಿರುವುವೇ!

**ಗದ್ಯಾನುಸರಣ:** ಒಂದು ಇಂದ್ರಿಯ ಬಯಕೆಯ ಆಮಿಷವೇ ಒಂದೊಂದು ಜೀವಿಯನ್ನು ಕೊಲ್ಲುವುದು ಎಂದ ಮೇಲೆ, ಓಹ್, ಯೋಚಿಸಿದರೆ, ಎಲ್ಲ ಇಂದ್ರಿಯಬಯಕೆಯೆಂಬ ವಿಷವು ಲಂಪಟರಾದ ನಮ್ಮಂತಹವರನ್ನು ಕೊಲ್ಲದಿರುವುವೇ!

**ಪಾಕದೊಳತಿವಿಷಮಂ ಕಿಂ**
**ಪಾಕಫಳಪ್ರತಿಮಮಖಿಳವಿಷಯಸುಖಂ ಪೇ**
**ೞ್ೕಕಱಿ ಸುೞಿವೆನಱಿಯು**
**ತ್ತೇಕೆ ವಿಮೋಹಿಸುವನೇಕೆ ಬರ್ದುಕುವೆನಿದಱ್ೊಳ್** ೭೪

**ಪದವಿಭಾಗ–ಅನ್ವಯ–ಅರ್ಥ:** ಪಾಕದೊಳ್‌ತಿವಿಷಮಂ = ರುಚಿಯಲ್ಲಿ ಅತ್ಯಂತ ವಿಷಕರವಾದದ್ದು, ಕಿಂಪಾಕಫಳಪ್ರತಿಮಂ + ಅಖಿಳವಿಷಯಸುಖಂ = ಕಾರಸ್ಕರ ಮರದ ಹಣ್ಣಿನ ವಿಷಕ್ಕೆ ಸಮಾನವಾದುದೆಂದರೆ ಎಲ್ಲ ಇಂದ್ರಿಯಗಳ ಸುಖ; ಅಱಿಯುತ್ತೆ = ಗೊತ್ತಿದ್ದರೂ, ಏಕೆ + ಅಱಿಪಿ ಸುೞಿವೆನ್ = ಏಕೆ ಆಸೆಯಿಂದ ಅದನ್ನರಸುತ್ತೇನೆ, ಏಕೆ ವಿಮೋಹಿಸುವೆನ್ = ಏಕೆ ವ್ಯಾಮೋಹಗೊಳ್ಳುತ್ತೇನೆ, ಇದಱ್ೊಳ್ ಏಕೆ ಬರ್ದುಕುವೆನ್ ಪೇೞ್ = ಇದರೊಡನೆಯೇ ಏಕೆ ಬದುಕುತ್ತಾನೆ, ಹೇಳು!

**ಗದ್ಯಾನುಸರಣ:** ರುಚಿಯಲ್ಲಿ ಅತ್ಯಂತ ವಿಷಕರವಾದದ್ದೆಂದರೆ ಕಾರಸ್ಕರ ಮರದ ಹಣ್ಣಿನ ವಿಷದಂತಹ ಇಂದ್ರಿಯಸುಖ; ಇದು ಗೊತ್ತಿದ್ದರೂ ಏಕೆ ಆಸೆಯಿಂದ ಅದನ್ನರಸುತ್ತೇನೆ, ಅದರಲ್ಲೇಕೆ ವ್ಯಾಮೋಹಗೊಳ್ಳುತ್ತೇನೆ, ಇದರೊಡನೆಯೇ ಏಕೆ ಬದುಕುತ್ತೇನೆ!

**ತೃಣಶಿಖರಾಧ್ಯುಷಿತಾಂಭಃ**
**ಕಣಸಂಚಳಮಮರಚಾಪಚಪಳಂ ವಿದ್ಯುತ್**
**ಕ್ಷಣಿಕಂ ನಿಟ್ಟೆ ತನುಭೃ**
**ದ್ಗಣಯೌವನರೂಪವಿಭವಭೋಗಾಭೋಗಂ** ೭೫

**ಪದವಿಭಾಗ–ಅನ್ವಯ–ಅರ್ಥ:** ತನುಭೃತ್ + ಗಣ = ಜೀವಸಮುದಾಯದ, ಯೌವನರೂಪವಿಭವಭೋಗ + ಆಭೋಗಂ = ಹರೆಯ ಚೆಲುವು ವೈಭವ ಸುಖ ಸಂತೋಷಗಳು, ತೃಣಶಿಖರ + ಆಧ್ಯುಷಿತ + ಅಂಭಃಕಣಸಂಚಳಂ = ಅಹುಲ್ಲುದಳದ ಮೊನೆಯಲ್ಲಿ ಕೂತ ನೀರಿನ ಕಣದಂತೆ ಅಸ್ಥಿರ, ಅಮರಚಾಪಚಪಳಂ = ಕಾಮನಬಿಲ್ಲಿನಷ್ಟು ಕ್ಷಣಿಕ, ವಿದ್ಯುತ್ ಕ್ಷಣಿಕಂ = ಮಿಂಚಿನಂತೆ ನಶ್ವರ, ನಿಟ್ಟೆ = ನಿಶ್ಚಯ.

**ಗದ್ಯಾನುಸರಣ:** ಜೀವಿಗಳ ಹರೆಯ ಚೆಲುವು ವೈಭವ ಸುಖ ಸಂತೋಷಗಳು ನಿಶ್ಚಯವಾಗಿ ಹುಲ್ಲುದಳದ ಮೊನೆಯಲ್ಲಿ ಕೂತ ನೀರಿನ ಕಣದಂತೆ ಅಸ್ಥಿರ, ಕಾಮನಬಿಲ್ಲಿನಷ್ಟು ಕ್ಷಣಿಕ, ಮಿಂಚಿನಂತೆ ನಶ್ವರ.

**ತೆಱಪನೆ ಪಾರ್ದಿರ್ಪಂ ಮಾ**
**ಯ್ದಱಗುಲಿ ಜವನದಱಿನಿನಿಸು ಪೊೞ್ತುಂ ತನ್ನಂ**
**ಮಱೆದಿರಲಕ್ಕುಮೆ ತಳರದೆ**
**ತಱಿಸಲದಿನ್ನೆಱೆದುಮಱೆದುಮಿರ್ಪುದೆ ಚದುರಂ ೭೬**

**ಪದವಿಭಾಗ–ಅನ್ವಯ–ಅರ್ಥ:** ಅಱಗುಲಿ ಜವನ್ = ದುಷ್ಟ ಯಮನು, ಮಾಯ್ದು ತೆಱಪನೆ ಪಾರ್ದಿರ್ಪಂ = ಮೋಸದಿಂದ ಅವಕಾಶವನ್ನೇ ಕಾಯುತ್ತಿರುತ್ತಾನೆ; ಅದಱಿನ್ = ಹೀಗಾಗಿ, ಇನಿಸು ಪೊೞ್ತುಂ ತನ್ನಂ ಮಱೆದಿರಲ್ + ಅಕ್ಕುಮೆ = ಸ್ವಲ್ಪ ಹೊತ್ತಾದರೂ ಮೈಮರೆತಿರಲು ತಕ್ಕುದೇ? ತಳರದೆ = ತಡಮಾಡದೆ, ತಱಿಸಲದೆ = ನಿರ್ಧರಿಸದೆ, ಇನ್ನು ಎಱೆದುಂ ಅಱೆದುಂ = ಇನ್ನೂ ಕಾಲಕಳೆಯುತ್ತ ಯೋಚಿಸುತ್ತ, ಚದುರಂ ಇರ್ಪುದೆ = ತಿಳಿವಳಿಕಸ್ಥನು ಇರುವನೇ?

**ಗದ್ಯಾನುಸರಣ:** ದುಷ್ಟ ಯಮನು ಅವಕಾಶಕ್ಕಾಗಿ ಹೊಂಚು ಹಾಕಿ ಕಾಯುತ್ತಿರುತ್ತಾನೆ; ಹೀಗಾಗಿ, ಸ್ವಲ್ಪ ಹೊತ್ತಾದರೂ ಮೈಮರೆತಿರಬಾರದು. ಅಳೆದೂ ಸುರಿದೂ ಮಾಡುತ್ತ ತಿಳಿವಳಿಕಸ್ಥನಾದವನು ಬೇಗ ನಿರ್ಧಾರ ಮಾಡದೆ ಸುಮ್ಮನಿರಬಾರದು.

**ಕಿಱಿಯಂ ಮುತ್ತಂ ಧನದಂ**
**ಬಱುವಂ ತೊಱೆದಂ ಗೃಹಸ್ಥನೆನ್ನದೆ ಮುಂಬಿ**
**ಟ್ಟಱಿಸಿ ಕೊಲುತಿರ್ಪ ಜವನೆಂಬ**
**ಬಱಿಕೆಯ ಪಗೆವಂಗಮದೆಂತು ಪಂಗಿಗನಪ್ಪೆಂ ೭೭**

**ಪದವಿಭಾಗ–ಅನ್ವಯ–ಅರ್ಥ:** ಕಿಱಿಯಂ ಮುತ್ತಂ = ಕಿರುವರೆಯದವನು

ಮುದುಕ, ಧನದಂ ಬಱುವಂ = ಹಣವಂತ ಬಡವ, ತೊಱೆದಂ ಗೃಹಸ್ಥನ್ = ವಿರಾಗಿ ಗೃಹಸ್ಥ, ಎನ್ನದೆ = ಎಂಬ ಭೇದ ಮಾಡದೆ, ಮುಂಬಿಟ್ಟು + ಅಱಿಸಿ ಕೊಲುತಿರ್ಪ = ಆಸೆ ತೋರಿ ಹುಡುಕಿ ಕೊಲ್ಲುವ, ಜವನೆಂಬ ಅಱುಕೆಯ ಪಗೆವಂಗಂ = ಯಮನೆಂಬ ಮಹಾ ಶತ್ರುವಿಗೆ, ಅದೆಂತು ಪಂಗಿಗನಪ್ಪೆಂ = ಅದು ಹೇಗೆ ಹಂಗಿಗನಾಗಲಿ?

**ಗದ್ಯಾನುಸರಣ:** ಕಿರುವರೆಯದವನು ಮುದುಕ, ಹಣವಂತ ಬಡವ, ವಿರಾಗಿ ಗೃಹಸ್ಥ ಎಂಬ ಭೇದ ಮಾಡದೆ ಆಸೆ ತೋರಿಸುತ್ತ ಹುಡುಕಿ ಕೊಲ್ಲುವ ಯಮನೆಂಬ ಮಹಾ ಶತ್ರುವಿನ ಹಂಗಿಗೆ ನಾನು ಹೇಗೆ ಒಳಗಾಗಲಿ?

**ನಿಧಿ ರತ್ನವ್ರಾತಮಂತಃಪುರಮೆಸೆವ ಷಡಂಗಂ ಬಲಂ ಹೈಮಶೈಲಾ**
**ವಧಿಷಟ್ಖಂಡಂ ಮಹೀಮಂಡಳಮನಿಧನಮಲ್ತೆಮ್ಮನೀಡಾಡಿ ಸಲ್ಗುಂ**
**ನಿಧನಕ್ಕಂತಪ್ಪುವಂ ಮುಂ ಬಿಸುಡುವುದೆ ಚದುರ್ ನೆಟ್ಟನೆಂದಲ್ತೆ ಮುಂಪೋ**
**ದ ಧರಾಧೀಶರ್ ತಪೋಮಾರ್ಗದೊಳೆಸಗಿದರಾ ಮಾರ್ಗಮಿನ್ನೆಮ್ಮ ಮಾರ್ಗಂ೭೮**

**ಪದವಿಭಾಗ–ಅನ್ವಯ–ಅರ್ಥ:** ನಿಧಿ ರತ್ನವ್ರಾತಂ + ಅಂತಃಪುರಂ = ಸಂಪತ್ತು, ರತ್ನದ ರಾಶಿ, ಅಂತಃಪುರ, ಎಸೆವ ಷಡಂಗಂ ಬಲಂ ಹೈಮಶೈಲ + ಅವಧಿಷಟ್ಖಂಡಂ ಮಹೀಮಂಡಳಂ = ಶೋಭೆಯ ಷಡಂಗಗಳ ಸೈನ್ಯ, ಹಿಮಾಲಯ ದವರೆಗಿನ ಆರು ಖಂಡಗಳು, ಭೂಮಂಡಲ, ಅನಿಧನಮಲ್ತು = ಇವಾವುವೂ ಶಾಶ್ವತವಲ್ಲ; ಎಮ್ಮನ್ + ಈಡಾಡಿ ನಿಧನಕ್ಕೆ ಸಲ್ಗುಂ = ನಮ್ಮನ್ನು ಎಸೆದು ನಾಶವಾಗುತ್ತವೆ; ಅಂತಪ್ಪುವಂ ನೆಟ್ಟನೆ ಮುಂ ಬಿಸುಡುವುದೆ ಚದುರ್ = ಅಂತಹವನ್ನು ನಾವೇ ಮೊದಲು ತೊರೆದುಬಿಡುವುದು ಬುದ್ಧಿವಂತಿಕೆ; ಎಂದಲ್ತೆ ಮುಂ ಪೋದ ಧರಾಧೀಶರ್ ತಪೋಮಾರ್ಗದೊಳೆಸಗಿದರ್ = ಎಂದಲ್ಲವೇ ಹಿಂದೆ ಆಗಿಹೋದ ರಾಜರುಗಳು ತಪಸ್ಸಿನ ಹಾದಿಯನ್ನು ಹಿಡಿದದ್ದು? ಆ ಮಾರ್ಗಂ + ಇನ್ನೆಮ್ಮ ಮಾರ್ಗಂ= ಆ ಹಾದಿಯೇ ನಮ್ಮ ಮುಂದಿರುವ ಹಾದಿ

**ಗದ್ಯಾನುಸರಣ:** ಸಂಪತ್ತು, ರತ್ನದ ರಾಶಿ, ಅಂತಃಪುರ, ಶೋಭೆಯ ಷಡಂಗಸೈನ್ಯ, ಹಿಮಾಲಯದವರೆಗಿನ ಆರು ಖಂಡಗಳು, ಭೂಮಂಡಲ – ಇವಾವುವೂ ಶಾಶ್ವತವಲ್ಲ; ಇವೆಲ್ಲ ನಮ್ಮನ್ನು ಹಾಳುಮಾಡಿ ತಾವೂ ನಾಶವಾಗು ವಂತಹವು; ಅಂತಹವನ್ನು ನಾವೇ ಮೊದಲು ತೊರೆದುಬಿಡುವುದು ಬುದ್ಧಿವಂತಿಕೆ; ಎಂದಲ್ಲವೇ ಹಿಂದೆ ಆಗಿಹೋದ ರಾಜರುಗಳು ತಪಸ್ಸಿನ ಹಾದಿಯನ್ನು ಹಿಡಿದದ್ದು? ಇನ್ನು ಆ ಹಾದಿಯೇ ನಮ್ಮ ಮುಂದಿರುವ ಹಾದಿ.

**ವಿಶೇಷ ವಿಚಾರ:** ಷಡಂಗಂ ಬಲಂ = ರಥ, ಆನೆ, ಕುದುರೆ, ಪದಾತಿ, ದಿವಿಜ ಮತ್ತು ಖೇಚರ ಎಂಬ ಆರು ಬಗೆಯ ಸೈನ್ಯಗಳು. ಷಟ್ಖಂಡಂ = ಆರು ಭೂಭಾಗಗಳು: ಹಿಮವತ್ಪರ್ವತದ ದಕ್ಷಿಣದಲ್ಲಿ ಲವಣಸಮುದ್ರದವರೆಗೂ ವ್ಯಾಪಿಸಿರುವುದು ಭರತಕ್ಷೇತ್ರ; ಇದರ ನಡುವೆ ವಿಜಯಾರ್ಧಪರ್ವತವು ಪೂರ್ವಪಶ್ಚಿಮವಾಗಿ ಹಬ್ಬಿ ಈ ಕ್ಷೇತ್ರವನ್ನು ಉತ್ತರ ಭರತ ಮತ್ತು ದಕ್ಷಿಣ ಭರತ ಎಂದು ಎರಡಾಗಿ ಒಡೆಯುತ್ತದೆ; ಹಿಮವತ್ಪರ್ವತದಲ್ಲಿ ಹುಟ್ಟಿದ ಮಹಾಸಿಂದು ಮಹಾಗಂಗಾ ಎಂಬೆರಡು ನದಿಗಳು ಉತ್ತರದಿಂದ ದಕ್ಷಿಣಕ್ಕೆ ಹರಿದು ಬಂದು ಲವಣಸಮುದ್ರವನ್ನು ಸೇರುತ್ತವೆ; ವಿಜಯಾರ್ಧಪರ್ವತ ಮತ್ತು ಗಂಗಾ ಸಿಂಧೂ ನದಿಗಳಿಂದ ಭರತಕ್ಷೇತ್ರ ಆರು ಖಂಡಗಳಾಗಿ ವಿಂಗಡಣೆಗೊಳ್ಳುತ್ತದೆ; ಉತ್ತರ ಭರತಕ್ಷೇತ್ರದ ಮೂರು ಖಂಡಗಳ ನಡುವೆ ಆರ್ಯಖಂಡವಿದೆ; ಈ ಎರಡೂ ಕ್ಷೇತ್ರಗಳ ಖಂಡಗಳು ಕೂಡಿ ಷಟ್ಖಂಡವೆನಿಸುತ್ತವೆ.

**ವ। ಎಂದು ನಿರ್ವಾಣಸಾಮ್ರಾಜ್ಯಮನೆ ಬಯಸಿ ಸಕಳಸಾಮ್ರಾಜ್ಯಮಂ ರಾಜಾಧಿರಾಜಂ ನಿಜಾಗ್ರತನೂಜಂಗಮಿತತೇಜಂಗೆ ಕೊಟ್ಟಾಗಳಾತನಿಂತೆಂದಂ**

**ಪದವಿಭಾಗ–ಅನ್ವಯ–ಅರ್ಥ:** ಎಂದು ನಿರ್ವಾಣಸಾಮ್ರಾಜ್ಯಮನೆ ಬಯಸಿ = ಎಂದು ಮೋಕ್ಷಪದವಿಯನ್ನು ಅಪೇಕ್ಷೆಪಟ್ಟು, ರಾಜಾಧಿರಾಜಂ = ಚಕ್ರವರ್ತಿಯು, ಸಕಳಸಾಮ್ರಾಜ್ಯಮಂ ನಿಜ + ಅಗ್ರತನೂಜಂಗೆ + ಅಮಿತತೇಜಂಗೆ ಕೊಟ್ಟಾಗಳ್ = ಸಾಮ್ರಾಜ್ಯವನ್ನೆಲ್ಲ ತನ್ನ ಹಿರಿಯ ಮಗನಾದ ಅಮಿತತೇಜನಿಗೆ ನೀಡಿದಾಗ, ಆತನ್ + ಇಂತೆಂದಂ = ಅವನು ಹೀಗೆಂದು ನುಡಿದ:

**ಗದ್ಯಾನುಸರಣ:** ಎಂದು ಮೋಕ್ಷಪದವಿಯನ್ನು ಅಪೇಕ್ಷೆಪಟ್ಟು ವಜ್ರದಂತಚಕ್ರವರ್ತಿಯು ಸಾಮ್ರಾಜ್ಯವನ್ನೆಲ್ಲ ತನ್ನ ಹಿರಿಯ ಮಗನಾದ ಅಮಿತತೇಜನಿಗೆ ನೀಡಲು ಮುಂದಾದ. ಆಗ ಮಗನು ಹೀಗೆಂದು ನುಡಿದ:

**ಇನಿತಂ ನಿಮ್ಮ ಮನಕ್ಕೆ ಕೊಕ್ಕರಿಕೆಯಂ ಮಾಡಿರ್ದ ಸಾಮ್ರಾಜ್ಯಮೆಂ**
**ತೆನಗೊಳ್ಪಂ ಪಡೆದಪ್ಪುದಿಂತೆನಗಿದಾಚಂದ್ರಾರ್ಕಮೇ ದೇವ ನೀ**
**ಮೆನಗೀಗಳ್ ದಯೆಗೆಯ್ವೊಡಿಂತು ಬೆಸಸಲ್ ಸಾಲ್ಗಿಂದೆ ಪೋಪೆಂತಮೋ**
**ವನಕೆನ್ನಟ್ಟಿಯೆ ಪೊರ್ದದಿರ್ಕೆ ಭವದಾಜ್ಞಾಲಂಘನಂ ಭೂಪತೀ॥೭॥**

**ಪದವಿಭಾಗ–ಅನ್ವಯ–ಅರ್ಥ:** ನಿಮ್ಮ ಮನಕ್ಕೆ ಇನಿತಂ ಕೊಕ್ಕರಿಕೆಯಂ ಮಾಡಿರ್ದ ಸಾಮ್ರಾಜ್ಯಂ = ನಿಮ್ಮ ಮನಸ್ಸಿಗೆ ಇಷ್ಟೊಂದು ಹೇಸಿಕೆಯನ್ನುಂಟುಮಾಡಿದ ಸಾಮ್ರಾಜ್ಯವು, ಎನಗೆ + ಒಳ್ಪಂ ಎಂತು ಪಡೆದಪ್ಪುದು = ನನಗೆ ಒಳಿತನ್ನು ಹೇಗೆ ಮಾಡಬಲ್ಲುದು? ಇಂತು + ಇದು ಎನಗೆ + ಆಚಂದ್ರ + ಅರ್ಕಮೇ = ಅಲ್ಲದೆ

ನನಗೆ ಇದು ಚಂದ್ರಸೂರ್ಯರಿರುವರೆಗೂ ಇರುವಂಥದೇ? ದೇವ ಈಗಳ್ ನೀಂ + ಎನಗೆ ದಯೆಗೆಯ್ವೊಡೆ = ದೇವರೇ, ನೀವು ನನಗೆ ಕರುಣಿಸುವುದಾದರೆ, ಇಂತು ಬೆಸಸಲ್ ಸಾಲ್ಗುಂ = ನೀವು ಹೀಗೆ ಹೇಳಿದರೆ, ಇಂದೆ ಎನ್ನ + ಅೞ್ತಿಯೆ ತಪೋವನಕೆ ಪೋಪೆಂ = ಇವತ್ತೇ ನಾನು ಸ್ವಇಚ್ಛೆಯಿಂದ ತಪೋವನಕ್ಕೆ ಹೋಗುತ್ತೇನೆ; ಭೂಪತೀ ಭವತ್ + ಆಜ್ಞಾಲಂಘನಂ ಪೊರ್ದದೆ + ಇರ್ಕೆ = ಚಕ್ರವರ್ತಿಯೇ, ತಮ್ಮ ಆಜ್ಞೆಯನ್ನು ಮೀರುವ ತಪ್ಪು ನನ್ನಿಂದ ಆಗದೆ ಇರಲಿ (ಎಂದು ಕೇಳಿಕೊಂಡ).

**ಗದ್ಯಾನುಸರಣ:** 'ನಿಮ್ಮ ಮನಸ್ಸಿಗೆ ಇಷ್ಟೊಂದು ಹೇಸಿಕೆಯನ್ನುಂಟುಮಾಡಿದ ಸಾಮ್ರಾಜ್ಯವು, ನನಗೆ ಹೇಗೆ ತಾನೇ ಒಳಿತನ್ನು ಮಾಡಬಲ್ಲುದು? ಅಲ್ಲದೆ, ಇದೇನು ನನಗೆ ಶಾಶ್ವತವೇ? ದೇವರೇ, ನೀವು ನನಗೆ ಕರುಣಿಸಿ ಹೇಳಿದರೆ, ಇವತ್ತೇ ನಾನು ಸ್ವಇಚ್ಛೆಯಿಂದ ತಪೋವನಕ್ಕೆ ಹೋಗುತ್ತೇನೆ; ತಮ್ಮ ಆಜ್ಞೆಯನ್ನು ಮೀರುವ ತಪ್ಪು ನನ್ನಿಂದ ಆಗದೆ ಇರಲಿ' ಎಂದು ಕೇಳಿಕೊಂಡ.

**ವ। ಎಂಬುದುಂ ವಜ್ರದಂತ ಚಕ್ರವರ್ತಿ**

**ಅರ್ಥ:** ಎಂಬುದುಂ ವಜ್ರದಂತ ಚಕ್ರವರ್ತಿ = ಎನ್ನಲು ವಜ್ರದಂತ ಚಕ್ರವರ್ತಿಯು,

**ನೀನೆಮ್ಮಂ ಮೀಱದೆ ರಾ**
**ಜ್ಯಾನುಷ್ಠಾನಮನೊಡಂಬಡೀಗಳ್ ನಿಜಸಂ**
**ತಾನಕ್ಕೆ ಮಗಂಬಡೆಯೆ ತ**
**ಪೋನಿಯಮಂ ಮಗನೆ ಕಡೆಯೊಳಿರ್ದಪುದಲ್ತೆ ೮೦**

**ಪದವಿಭಾಗ–ಅನ್ವಯ–ಅರ್ಥ:** ನೀನು + ಎಮ್ಮಂ ಮೀಱದೆ = ನೀನು ನನ್ನ ಮಾತನ್ನು ಮೀರದೆ, ಈಗಳ್ ರಾಜ್ಯಾನುಷ್ಠಾನಮನ್ + ಒಡಂಬಡು = ಈಗ ರಾಜ್ಯಭಾರ ಮಾಡಲು ಒಪ್ಪಿಕೊ; ನಿಜಸಂತಾನಕ್ಕೆ ಮಗಂಬಡೆಯೆ = ನಿನ್ನ ಸಂತಾನವಾಗಿ ಮಗನನ್ನು ಪಡೆದ ಬಳಿಕ, ಮಗನೆ ಕಡೆಯೊಳ್ ತಪೋನಿಯಮಂ ಇರ್ದಪುದಲ್ತೆ = ಮಗು, ಕೊನೆಯಲ್ಲಿ ತಪಸ್ಸಿನ ನಿಯಮವು ಇದ್ದುದು ತಾನೇ?

**ಗದ್ಯಾನುಸರಣ:** 'ನೀನೀಗ ನನ್ನ ಮಾತನ್ನು ಮೀರದೆ ರಾಜ್ಯಭಾರ ಮಾಡಲು ಒಪ್ಪಿಕೊ; ಮಗು, ನಿನ್ನ ಸಂತಾನವಾಗಿ ಮಗನನ್ನು ಪಡೆದ ಬಳಿಕ ಕೊನೆಯಲ್ಲಿ ತಪಸ್ಸಿನ ನಿಯಮವು ಇದ್ದುದೇ ಅಲ್ಲವೇ?' ಎಂದು ವಜ್ರದಂತನು ನುಡಿದ.

**ವ। ಎಂದಾಗಳಮಿತತೇಜಂ ದಂತಾಂಶುಧೌತಕಪೋಳಫಳಕನಾಗಿ**

**ಅರ್ಥ:** ಎಂದಾಗಳ್ + ಅಮಿತತೇಜಂ ದಂತಾಂಶುಧೌತಕಪೋಳಫಳಕನಾಗಿ = ಎಂದಾಗ ಅಮಿತತೇಜನ ಕಪೋಲಪ್ರದೇಶವು ಅವನ ಹಲ್ಲುಗಳ ಕಾಂತಿಯಿಂದ ಬೆಳ್ಳಗಾಯಿತು (ಎಂದರೆ ನಕ್ಕ).

**ಪಿರಿದೊಂದಾಗ್ರಹದಿಂದವಾದ ದಯೆಯಿಂದಂ ದೇವರೆನ್ನಂ ಧರಾ**
**ಭರದೊಳ್ ತಂದು ತೊಡರ್ಕೆ ಪೂಣ್ದು ತಲೆಗೋದಿರ್ದುಂ ಬೞಿಕ್ಕಿಂತುಮೀ**
**ಧರಣೀಭರಮನಾಂ ಬಿಸುಟ್ಟೊಡದು ಚೀ ಲೋಕಕ್ಕೆ ಖಾತ್ವಾ ಸಮೀ**
**ಕರಣಂ ಭೌತಿಕಮೋದಕವ್ಯತಿಕರಂ ತಾನೆಂಬುದಂ ಮಾಡದೇ ೮೧**

**ಪದವಿಭಾಗ–ಅನ್ವಯ–ಅರ್ಥ:** ಆದ ದಯೆಯಿಂದಂ ಪಿರಿದೊಂದು + ಆಗ್ರಹದಿಂದಂ = ನನ್ನ ಮೇಲಿನ ಕರುಣೆಯಿಂದ, ದೇವರ್ + ಎನ್ನಂ ಧರಾಭರದೊಳ್ ತಂದು = ದೇವರು ನನ್ನನ್ನು ರಾಜ್ಯಭಾರದಲ್ಲಿ ನಿಲ್ಲಿಸಲು, ತೊಡರ್ಕೆ ಪೂಣ್ದು ತಲೆಗೋದಿ + ಇರ್ದುಂ ಬೞಿಕ್ಕೆ = ಹೇರಲು ನಿರ್ಧರಿಸಿ ತಲೆಸೀಳಿ ಆನಂತರ, ಇಂತುಂ + ಈ ಧರಣೀಭರಮನಾಂ ಬಿಸುಟ್ಟೊಡೆ = ಈ ಭೂಭಾರವನ್ನು ತೊರೆಯುವುದಾದರೆ, ಅದು ಚೀ ಲೋಕಕ್ಕೆ ಭೌತಿಕ ಮೋದಕವ್ಯತಿಕರಂ ಖಾತ್ವಾ ಸಮೀಕರಣಂ ತಾನ್ + ಎಂಬುದಂ ಮಾಡದೇ = ಛೇ, ಲೋಕದ ಕಣ್ಣಿಗೆ ಈ ದೇಹಸುಖದ ಬಗೆಯು ಅಗೆದು ಮುಚ್ಚುವುದು ಎಂಬಂತಾಗುವುದಿಲ್ಲವೇ?'

**ಗದ್ಯಾನುಸರಣ:** 'ನನ್ನ ಮೇಲಿನ ಕರುಣೆಯಿಂದ ದೇವರು ನನ್ನ ಮೇಲೆ ರಾಜ್ಯಭಾರದ ಹೊಣೆಯನ್ನು ಹೇರಲು ನಿರ್ಧರಿಸಿದ್ದು ನನ್ನ ತಲೆಯನ್ನು ಹೋಳುಮಾಡಿದಂತಾಗಿದೆ; ಈ ಬಗೆಯಲ್ಲಿ ಭೂಭಾರವನ್ನು ತೊರೆಯುವುದಾದರೆ, ಲೋಕದ ಕಣ್ಣಿಗೆ ಈ ದೇಹಸುಖದ ಬಗೆಯು ಅಗೆದು ಮುಚ್ಚುವುದು ಎಂಬಂತೆ ಆಗುವುದಿಲ್ಲವೇ?' ಎಂದ ಅಮಿತತೇಜ.

**ವಿಶೇಷ ವಿಚಾರ:** ಖಾತ್ವಾ ಸಮೀಕರಣಂ = ಗುಂಡಿಯನ್ನು ತೋಡಿ ಮುಚ್ಚುವುದು; ನಿರರ್ಥಕ ಕೆಲಸ – ಇದೊಂದು ಲೌಕಿಕನ್ಯಾಯ.

**ವ। ಎಂಬುದುಮಾತನ ಪರಿಚ್ಛೇದಮನಱಿದು ತತ್ಸಹೋದರ ಸ್ಥಾಸಿರ್ವರೋರ್ವರುಮೊಲ್ಲದಿ ರ್ದೊಡಮಿತತೇಜಂಗಮನುಂದರಿಗಂ ಪುಟ್ಟಿದ ಪುಂಡರೀಕನೆಂಬ ಬಾಳಕನಂ ಸಂತಾನ 'ಪಾಲನಾರ್ಥಂ ನಿಱಿಸಿ**

ಷಷ್ಟಿಸಹಸ್ರಾಂಗನಾಜನಮುಂ ವಿಂಶತಿಸಹಸ್ರ ಮಕುಟಬದ್ಧರುಂ ಸಹಸ್ರಪ್ರಮಿತ ನಿಜತನೂಜರುಂ ಪಂಡಿತೆಯೆಂಬ ಪೆಸರನಾ ಪ್ರಸ್ತಾವದೊಳ್ ನನ್ನಿಮಾಡಿದ ಪಂಡಿತೆಯುಂ ಬೆರಸು ಯಶೋಧರ ಮುನೀಂದ್ರಪಾದಪದ್ಮೋಪಾಂತದೊಳ್ ವಜ್ರದಂತ ಮಹಾರಾಜಾಧಿರಾಜಂ ದಿಗಂಬರವಿಳಾಸದಿಂ ತ್ರಿಲೋಕ ಶಿಖರಿಶೇಖರನಾದಂ; ಲಕ್ಷ್ಮೀಮತಿ ಮಹಾದೇವಿಯುಮನುಂದರಿವೆರಸು ಚಕ್ರವಲ್ಲಭವ್ಯಪಾಯದೊಳ್ ಪುಂಡರೀಕನಂ ಕೈಗೊಂಡಿರೆ,

**ಪದವಿಭಾಗ–ಅನ್ವಯ–ಅರ್ಥ:** ಎಂಬುದುಂ = ಎನ್ನಲು, ಆತನ ಪರಿಚ್ಛೇದಮನ್ + ಅಱಿದು = ಅವನ ದೃಢನಿರ್ಧಾರವನ್ನು ಮನಗಂಡು, ತತ್ + ಸಹೋದರರ್ + ಸಾಸಿರ್ವರ್ + ಓರ್ವರುಂ + ಒಲ್ಲದಿರ್ದೊಡೆ = ಅವನ ಸಾವಿರ ಮಂದಿ ತಮ್ಮಂದಿರಲ್ಲಿ ಒಬ್ಬರೂ (ರಾಜ್ಯಭಾರ ಮಾಡಲು) ಒಪ್ಪದಿದ್ದಾಗ, ಅಮಿತತೇಜಂಗಂ + ಅನುಂದರಿಗಂ ಪುಟ್ಟಿದ ಪುಂಡರೀಕನೆಂಬ ಬಾಳಕನಂ = ಅಮಿತತೇಜ–ಅನುಂದರಿ ದಂಪತಿಯರ ಮಗ ಪುಂಡರೀಕನೆಂಬ ಹುಡುಗನಿಗೆ, ಸಂತಾನಪಾಲನಾರ್ಥಂ ನಿಱಿಸಿ = ಸಂತಾನವನ್ನು ಮುಂದುವರೆಸಲು ಪಟ್ಟಕಟ್ಟಿ ಷಷ್ಟಿಸಹಸ್ರ + ಅಂಗನಾಜನಮುಂ = ಅರುವತ್ತು ಸಾವಿರ ಹೆಣ್ಣುಮಕ್ಕಳೂ, ವಿಂಶತಿಸಹಸ್ರಮಕುಟಬದ್ಧರುಂ = ಇಪ್ಪತ್ತು ಸಾವಿರ ರಾಜರುಗಳೂ, ಸಹಸ್ರಪ್ರಮಿತ ನಿಜತನೂಜರುಂ = ಸಾವಿರ ಮಂದಿ ತನ್ನ ಮಕ್ಕಳೂ, ಆ ಪ್ರಸ್ತಾವದೊಳ್ ಪಂಡಿತೆಯೆಂಬ ಪೆಸರನ್ ನನ್ನಿಮಾಡಿದ ಪಂಡಿತೆಯುಂ ಬೆರಸು = ಆ ಸಂದರ್ಭದಲ್ಲಿ ತನ್ನ ಹೆಸರಿಗೆ ತಕ್ಕಂತಿದ್ದ ಪಂಡಿತೆಯೂ, ಯಶೋಧರಮುನೀಂದ್ರಪಾದಪದ್ಮ + ಉಪಾಂತದೊಳ್ = ಯಶೋಧರ ಮುನಿಗಳ ಪಾದದ ಬಳಿ, ವಜ್ರದಂತ ಮಹಾರಾಜಾಧಿರಾಜಂ = ವಜ್ರದಂತ ಚಕ್ರವರ್ತಿಯು, ದಿಗಂಬರವಿಳಾಸದಿಂ = ದಿಗಂಬರತ್ವದ ವೈಭವದಿಂದ, ತ್ರಿಲೋಕಶಿಖರಿಶೇಖರನಾದಂ = ಮೂರೂ ಲೋಕಗಳ ಪರ್ವತದ ಶಿಖರದಂತಾದನು. ಲಕ್ಷ್ಮೀಮತಿಮಹಾದೇವಿಯುಂ + ಅನುಂದರಿ + ಬೆರಸು = ಲಕ್ಷ್ಮೀಮತಿ ಮಹಾರಾಣಿಯು ಸೊಸೆ ಅನುಂದರಿಯೊಡನೆ, ಚಕ್ರವಲ್ಲಭವ್ಯಪಾಯದೊಳ್ = ಚಕ್ರವರ್ತಿಯ ಅನುಪಸ್ಥಿತಿಯಲ್ಲಿ, ಪುಂಡರೀಕನಂ ಕೈಗೊಂಡಿರೆ = ಪುಂಡರೀಕನ ಜವಾಬ್ದಾರಿಯನ್ನು ಹೊತ್ತಿರಲು,.

**ಗದ್ಯಾನುಸರಣ:** ಎನ್ನಲು, ಅವನ ದೃಢನಿರ್ಧಾರವು ವಜ್ರದಂತನಿಗೆ ಮನವರಿಕೆಯಾಯಿತು; ಆದರೆ ಅಮಿತತೇಜನ ಸಾವಿರ ಮಂದಿ ತಮ್ಮಂದಿರಲ್ಲಿ ಒಬ್ಬರೂ ರಾಜ್ಯದ ಹೊಣೆ ಹೊರಲು ಒಪ್ಪದಿದ್ದಾಗ ಅಮಿತತೇಜ–ಅನುಂದರಿ ದಂಪತಿಯರ ಮಗ ಪುಂಡರೀಕನೆಂಬ ಹುಡುಗನಿಗೆ ಸಂತಾನವನ್ನು ಮುಂದುವರೆಸಲು ಪಟ್ಟಕಟ್ಟಿದ; ಆ ಬಳಿಕ ಅರುವತ್ತು ಸಾವಿರ ಹೆಣ್ಣುಮಕ್ಕಳೂ, ಇಪ್ಪತ್ತು ಸಾವಿರ ರಾಜರುಗಳೂ, ಸಾವಿರ ಮಂದಿ ತನ್ನ ಮಕ್ಕಳೂ, ತನ್ನ ಹೆಸರಿಗೆ ತಕ್ಕಂತಿದ್ದ

ಪಂಡಿತೆಯೂ, ಯಶೋಧರ ಮುನಿಗಳ ಪಾದದ ಬಳಿ ದೀಕ್ಷೆ ಕೈಗೊಂಡರು. ಹೀಗೆ ವಜ್ರದಂತ ಚಕ್ರವರ್ತಿಯು ದಿಗಂಬರತ್ವದ ವೈಭವವನ್ನು ಹೊಂದಿ ಮೂರೂ ಲೋಕಗಳ ಪರ್ವತದ ಶಿಖರದಂತಾದ. ಇತ್ತ ಲಕ್ಷ್ಮೀಮತಿ ಮಹಾರಾಣಿಯು ಸೊಸೆ ಅನುಂದರಿಯೊಡನೆ ಚಕ್ರವರ್ತಿಯ ಅನುಪಸ್ಥಿತಿಯಲ್ಲಿ ಪುಂಡರೀಕನ ಜವಾಬ್ದಾರಿಯನ್ನು ಹೊತ್ತರು.

**ತನುವಿಧುವೊಂದನುಳ್ಳ ನಭದೊಳ್ ಶಿಶುಕೇಸರಿಯೊಂದನುಳ್ಳ ಕಾ**
**ನನದೊಳದೊಂದು ಕುಟ್ಮಳಮನುಳ್ಳ ಸರೋವರದೊಳ್ ಪೊಣರ್ಚಿನೆ**
**ಟ್ಟನೆ ದೊರೆಯಾದುದೀ ಕುಲಮುಮೀ ಶಿಶುವೊರ್ಬನಿನೆಂಬಿನಂ ಜಗ**
**ಜ್ಜನಮತಿಮುಗ್ಧಬಾಳನರಪಾಳಕಮಾದುದು ಚಕ್ರಭೃತ್ಕುಲಂ ೮೨**

**ಪದವಿಭಾಗ-ಅನ್ವಯ-ಅರ್ಥ:** ತನುವಿಧುವೊಂದನ್ + ಉಳ್ಳ ನಭದೊಳ್ = ಬಾಲಚಂದ್ರವೊಂದೇ ಇರುವ ಆಗಸದೊಡನೆ, ಶಿಶುಕೇಸರಿಯೊಂದನ್ + ಉಳ್ಳ ಕಾನನದೊಳ್ = ಸಿಂಹದ ಮರಿಯೊಂದೇ ಇರುವ ಕಾಡಿನೊಡನೆ, ಅದೊಂದು ಕುಟ್ಮಳಮನುಳ್ಳ ಸರೋವರದೊಳ್ = ಒಂದೇ ಮೊಗ್ಗು ಇರುವ ಸರೋವರದೊಡನೆ, ಈ ಕುಲಮುಂ + ಈ ಶಿಶುವೊರ್ಬನಿನ್ = ಕುಲವೂ ಈ ಮಗುವೊಂದರಿಂದಾಗಿ, ಪೊಣರ್ಚಿ = ಸ್ಪರ್ಧಿಸಿ, ನೆಟ್ಟನೆ ದೊರೆಯಾದುದು = ಪೂರ್ತಿ ಸಮವಾಯಿತು, ಜಗತ್ + ಜನಂ ಎಂಬಿನಂ = ಎಂದು ಜಗತ್ತಿನ ಜನರು ಹೇಳುವ ಹಾಗೆ, ಚಕ್ರಭೃತ್ಕುಲಂ = ಚಕ್ರವರ್ತಿಯ ಕುಲವು, ಅತಿಮುಗ್ಧಬಾಳನರಪಾಳಕಂ + ಆದುದು = ತೀರ ಪುಟ್ಟ ಹುಡುಗನ್ನು ರಾಜನಾಗಿ ಪಡೆಯಿತು.

**ಗದ್ಯಾನುಸರಣ:** ಬಾಲಚಂದ್ರವೊಂದೇ ಇರುವ ಆಗಸದಂತೆ, ಸಿಂಹದ ಮರಿಯೊಂದೇ ಇರುವ ಕಾಡಿನಂತೆ, ಒಂದೇ ಮೊಗ್ಗು ಇರುವ ಸರೋವರದಂತೆ ಈ ಕುಲದಲ್ಲಿ ಈ ಮಗುವೊಂದೇ ಉಳಿಯಿತು ಎಂದು ಜಗತ್ತಿನ ಜನರು ಹೇಳುವ ಹಾಗೆ, ವಜ್ರದಂತಚಕ್ರವರ್ತಿಯ ಕುಲವು ತೀರ ಪುಟ್ಟ ಹುಡುಗನನ್ನು ರಾಜನಾಗಿ ಪಡೆಯುವಂತಾತು.

**ವ। ಅಂತದಂ ಕಂಡು ಕಪ್ಪಮೀಯದೆ ಚಪ್ಪರಿಸುವ ಮಂಡಲಿಕರುಮಂ ಅಡಂಗದಾಟ ವಿಕರುಮಂ ಒತ್ತಿ ಬರ್ಪ ಪಾರ್ಷ್ಣಿಗ್ರಾಹಕರುಮಂ ಅಱಿದು ಲಕ್ಷ್ಮೀಮತಿಮಹಾದೇವಿ ವಜ್ರಜಂಘಂಗೆ ಬಱಿಂಯುನಟ್ಟುವ ಕಜ್ಜಮಂ ಮಂತ್ರಿವರ್ಗದೊಳಾಲೋಚಿಸಿ,**

**ಪದವಿಭಾಗ-ಅನ್ವಯ-ಅರ್ಥ:** ಅಂತದಂ ಕಂಡು = ಈ ಪರಿಸ್ಥಿತಿಯನ್ನು

ನೋಡಿ, ಕಪ್ಪಮೀಯದೆ ಚಪ್ಪರಿಸುವ ಮಂಡಲಿಕರುಮಂ = ಕಪ್ಪ ಕೊಡದೆ ಮೀಸೆ ತಿರುವುವ ಮಾಂಡಳಿಕರನ್ನೂ, ಅಡಂಗದ + ಆಟವಿಕರುಮಂ = ಸುಮ್ಮನಿರದ ಕಿರಾತ ಜನರನ್ನೂ, ಒತ್ತಿ ಬರ್ಪ ಪಾರ್ಷ್ಣಿಗ್ರಾಹಕರುಮಂ = ಒತ್ತರಿಸಿಕೊಂಡು ಬಂದು ಎರಗುವ ಶತ್ರುಗಳನ್ನೂ, ಅಱಿದು = ತಿಳಿದು, ಲಕ್ಷ್ಮೀಮತಿಮಹಾದೇವಿ ವಜ್ರಜಂಘಂಗೆ ಬಱಿಯನಟ್ಟುವ ಕಜ್ಜಮಂ = ವಜ್ರಕಂಘನಿಗೆ ಸಂದೇಶವಾಹಕನನ್ನು ಕಳಿಸುವ ಕಾರ್ಯದ ಬಗ್ಗೆ, ಮಂತ್ರಿವರ್ಗದೊಳ್ + ಆಲೋಚಿಸಿ = ಮಂತ್ರಿಮಂಡಲದಲ್ಲಿ ಸಮಾಲೋಚಿಸಲು,

**ಗದ್ಯಾನುಸರಣ:** ಈ ಪರಿಸ್ಥಿತಿಯನ್ನು ನೋಡಿ, ಕಪ್ಪ ಕೊಡದೆ ಮೀಸೆ ತಿರುವುವ ಮಾಂಡಳಿಕರನ್ನೂ, ಸುಮ್ಮನಿರದ ಕಿರಾತ ಜನರನ್ನೂ, ಒತ್ತರಿಸಿಕೊಂಡು ಬಂದು ಎರಗುವ ಶತ್ರುಗಳನ್ನೂ ತಿಳಿದು ಲಕ್ಷ್ಮೀಮತಿಮಹಾದೇವಿಯು ವಜ್ರಜಂಘನಿಗೆ ಹೇಳಿಕಳಿಸುವ ಕುರಿತು ಮಂತ್ರಿಮಂಡಲದೊಡನೆ ಸಮಾಲೋಚಿಸಿದಳು.

**ವನಜಾನೀಕಮೆ ಪಳ್ಳಿವೋಪ ತೆಱದಿಂ ಕಿಟ್ಟಿರ್ದು ಭೂಪಂ ತಪೋ**
**ವನಮಂ ಪುತ್ರಕಳತ್ರಮಿತ್ರಸಹಿತಂ ಪೊಕ್ಕಂ ಕರಂ ಬಾಳನೊ**
**ರ್ಬನಿವಂ ರಾಜ್ಯದೊಳಿರ್ದನಾನಬಲೆಯೆಂ ಕಾದಿರ್ದೆನೇಮತೊ ತ**
**ನ್ನನೆ ನಚ್ಚಿರ್ದುದು ಕಾಗುಮೆಂಬ ಬಗೆಯಿಂದಿಂತೀ ಮಹೀಮಂಡಲಂ೮೩**

**ಪದವಿಭಾಗ–ಅನ್ವಯ–ಅರ್ಥ:** ವನಜ + ಆನೀಕಮೆ ಕಿಟ್ಟಿರ್ದು ಪಳ್ಳಿವೋಪ ತೆಱದಿಂ = ಕಮಲದ ಗುಂಪೇ ಕಿತ್ತುಕೊಂಡು ಗುಳೆ ಹೋಗುವ ಹಾಗೆ, ಭೂಪಂ ಪುತ್ರಕಳತ್ರಮಿತ್ರಸಹಿತಂ ತಪೋವನಮಂ ಪೊಕ್ಕಂ = ಚಕ್ರವರ್ತಿಯು ಮಕ್ಕಳು ಹೆಂಡಿರು ಮತ್ತು ಗೆಳೆಯರೊಡನೆ ತಪೋವನವನ್ನು ಸೇರಿದ; ಕರಂ ಬಾಳನೊರ್ಬನಿವಂ ರಾಜ್ಯದೊಳಿರ್ದನ್ = ತೀರ ಎಳೆಯವನಾದ ಈ ಹುಡುಗ ಒಬ್ಬನೇ ರಾಜ್ಯದಲ್ಲಿದ್ದಾನೆ, ಆನ್ + ಅಬಲೆಯೆಂ ಕಾದಿರ್ದೆನ್ = ಹೆಣ್ಣಾದ ನಾನು ಕಾಯುತ್ತಿರುವೆ, ಕಾಗುಂ + ಎಂಬ ಬಗೆಯಿಂದ + ಇಂತು + ಈ ಮಹೀಮಂಡಲಂ = ಕಾಪಾಡುತ್ತಾಳೆ ಎಂಬ ಭಾವನೆಯಿಂದ ಈ ರಾಜ್ಯವೂ, ಏಮಾತೊ = ಏನು ಹೇಳಲಿ, ತನ್ನನೆ ನಚ್ಚಿರ್ದುದು = ನನ್ನನ್ನೇ ನೆಚ್ಚಿಕೊಂಡಿದೆ

**ಗದ್ಯಾನುಸರಣ:** ಕಮಲದ ಗುಂಪೇ ಕಿತ್ತುಕೊಂಡು ಗುಳೆ ಹೋಗುವ ಹಾಗೆ ಚಕ್ರವರ್ತಿಯು ಮಕ್ಕಳು ಹೆಂಡಿರು ಮತ್ತು ಗೆಳೆಯರೊಡನೆ ತಪೋವನವನ್ನು ಸೇರಿದ; ತೀರ ಎಳೆಯವನಾದ ಈ ಹುಡುಗನೊಬ್ಬನೇ ರಾಜ್ಯದಲ್ಲಿದ್ದಾನೆ, ಹೆಣ್ಣಾದ ನಾನು ಹೇಗೋ ಕಾದುಕೊಂಡಿದ್ದೇನೆ, ಕಾಪಾಡುತ್ತಾಳೆ ಎಂಬ ಭಾವನೆಯಿಂದ ಈ ರಾಜ್ಯವೂ ನನ್ನನ್ನೇ ನೆಚ್ಚಿಕೊಂಡಿದೆ

**ಜಳಧಿತರಂಗತಾಟಿತಧರಾತಳಭಾರಮಿದೆತ್ತ ಬಾಳನೆ**
**ತ್ತಳವಿನಿತುಂಟೆ ತಾಳ್ದಲಿದನೊಟ್ಟಜೆಯಿಂ ಕೊಳಲೆಂದು ವೈರಿಗಳ್**
**ತಳರ್ದಪರೆಂತು ತನ್ನ ಬಲಮಿಲ್ಲದೆ ತಾಳ್ದುವನೊಪ್ಪುಗೊಳ್ಗೆ ತ**
**ನ್ನಳಿಯನನೆಯ್ದೆ ಪಾಲಿಸುಗೆ ಬಂದಿದನೀಗಳನಾಥಯೂಥಮಂ ೮೪**

**ಪದವಿಭಾಗ–ಅನ್ವಯ–ಅರ್ಥ:** ಜಳಧಿತರಂಗತಾಟಿತಧರಾತಳಭಾರಂ + ಇದೆತ್ತ = ಸಮುದ್ರದ ಅಲೆಗಳು ಬಡಿಯುವ ತೀರದವರೆಗಿನ ಈ ರಾಜ್ಯದ ಜವಾಬುದಾರಿಯೆಲ್ಲಿ, ಬಾಳನ್ + ಎತ್ತ = ಈ ಹುಡುಗನೆಲ್ಲಿ, ತಾಳ್ದಲ್ + ಇದನ್ ಇನಿತು ಅಳವು ಉಂಟೆ = ಇದನ್ನು ತಾಳಿಕೊಳ್ಳುವಷ್ಟು ಸಾಮರ್ಥ್ಯವು ಇದೆಯೇ, ವೈರಿಗಳ್ ಕೊಳಲೆಂದು ಒಟ್ಟಜೆಯಿಂ ತಳರ್ದಪರ್ = ಶತ್ರುಗಳು ಆಕ್ರಮಿಸಲು ಒಟ್ಟಾಗಿ ಸಿದ್ಧರಾಗುತ್ತಿದ್ದಾರೆ; ತನ್ನ ಬಲಮಿಲ್ಲದೆ ಎಂತು ತಾಳ್ದುವನ್ = ಬಲವಿಲ್ಲದೆ ಅವನು ಹೇಗೆ ಇದನ್ನೆಲ್ಲ ತಡೆಯಬಲ್ಲ; ತನ್ನ + ಅಳಿಯನನ್ ಒಪ್ಪುಗೊಳ್ಗೆ = ವಜ್ರಜಂಘನನ್ನು ಒಪ್ಪಿಸಲಿ, ಬಂದು ಈಗಳ್ = ಆತನು ಬಂದು ಈಗ, ಇದನ್ ಅನಾಥಯೂಥಮಂ ಎಯ್ದೆ ಪಾಲಿಸುಗೆ = ಈ ದಿಕ್ಕಿಲ್ಲದ ಈ ವಂಶವನ್ನು ಚೆನ್ನಾಗಿ ಕಾಪಾಡಲಿ.

**ಗದ್ಯಾನುಸರಣ:** 'ಸಮುದ್ರದ ಅಲೆಗಳು ಬಡಿಯುವ ತೀರದವರೆಗಿನ ಈ ರಾಜ್ಯದ ಜವಾಬುದಾರಿಯೆಲ್ಲಿ, ಈ ಹುಡುಗನೆಲ್ಲಿ? ಇದನ್ನು ತಾಳಿಕೊಳ್ಳುವಷ್ಟು ಸಾಮರ್ಥ್ಯವು ಅವನಿಗಿದೆಯೇ? ಶತ್ರುಗಳೋ ಆಕ್ರಮಿಸಲು ಒಟ್ಟಾಗಿ ಸಿದ್ಧರಾಗುತ್ತಿದ್ದಾರೆ; ಬಲವಿಲ್ಲದ ಅವನು ಹೇಗೆ ಇದನ್ನೆಲ್ಲ ತಡೆಯಬಲ್ಲ? ವಜ್ರಜಂಘನನ್ನು ಒಪ್ಪಿಸಲಿ, ಆತನು ಬಂದು ಈಗ ಈ ದಿಕ್ಕಿಲ್ಲದ ಈ ವಂಶವನ್ನು ಕಾಪಾಡಲಿ.'

**ವ। ಎಂದು ಬರೆದು ರತ್ನಕರಂಡಕದೊಳಿಟ್ಟು ಮುಚ್ಚಿ ಮುದ್ರಿಸಿದೋಲೆಯುಮನಪೂರ್ವೋಪಾಯನಮುಮಂ ಪರಿಣತಾಶೇಷ ಶಾಸ್ತ್ರಾರ್ಥರು ಮುನ್ನ ತಾನ್ವಯರಂ ಗಂಧರ್ವಪುರಾಧಿ ನಾಯಕರುಮಪ್ಪ ಚಿಂತಾಗತಿಯುಂ ಮನೋಗತಿಯುಮೆಂಬ ವಿದ್ಯಾಧರರ ಕಯ್ಯೊಳ್ಗೊಟ್ಟಿಮ್ಮಳಿಯನಂ ತಡೆಯದೆ ಮುಂದಿಟ್ಟೊಡಗೊಂಡು ಬನ್ನಿಮೆಂದಟ್ಟಿದೊಡಾಗಳಾ ಗಗನಚರರ್ ವಿಮಾನಾರೂಢರತಿತ್ವರಿತಗಮನದಿಂ ಪೋಗೆವೋಗೆ,**

**ಪದವಿಭಾಗ–ಅನ್ವಯ–ಅರ್ಥ;** ಎಂದು ಬರೆದು = ಎಂದು ಬರೆದು, ಮುಚ್ಚಿ ಮುದ್ರಿಸಿದೋಲೆಯುಮನ್ = ಮುಚ್ಚಿ ಮುದ್ರೆ ಹಾಕಿದ ಪತ್ರವೊಂದನ್ನೂ, ಅಪೂರ್ವ + ಉಪಾಯನಮುಮಂ = ಅಪರೂಪದ ಉಡುಗೊರೆಗಳನ್ನೂ, ರತ್ನಕರಂಡಕದೊಳ್ + ಇಟ್ಟು = ಒಂದು ರತ್ನದ ಭರಣಿಯಲ್ಲಿಟ್ಟು, ಪರಿಣತ + ಅಶೇಷಶಾಸ್ತ್ರಾರ್ಥರುಂ = ಎಲ್ಲ ಶಾಸ್ತ್ರಗಳನ್ನು ಬಲ್ಲವರಾದವರೂ, ಉನ್ನತ + ಅನ್ವಯರಂ

= ಸತ್ಕುಲದಲ್ಲಿ ಹುಟ್ಟಿದವರಾದ, ಗಂಧರ್ವಪುರಾಧಿನಾಯಕರುಂ ಅಪ್ಪ = ಗಂಧರ್ವಪುರದ ಮುಂದಾಳುಗಳೂ ಆದ, ಚಿಂತಾಗತಿಯುಂ ಮನೋಗತಿಯುಮೆಂಬ ವಿದ್ಯಾಧರರ ಕಯ್ಯೊಳ್ ಕೊಟ್ಟು = ಚಿಂತಾಗತಿ ಮನೋಗತಿ ಎಂಬ ಹೆಸರಿನ ಖೇಚರರ ಕೈಯಲ್ಲಿ ಕೊಟ್ಟು, ಎಮ್ಮ + ಅಳಿಯನಂ ತಡೆಯದೆ ಮುಂದಿಟ್ಟು + ಒಡಗೊಂಡು ಬನ್ನಿಂ ಎಂದು + ಅಟ್ಟಿದೊಡೆ = ನಮ್ಮ ಅಳಿಯಂದಿರನ್ನು ಬೇಗ ಮುಂದಿಟ್ಟುಕೊಂಡು ಕರೆತನ್ನಿ ಎಂದು ಕಳುಹಿಸಿ ಕೊಡಲು, ಆಗಳ್ ವಿಮಾನಾರೂಢರ್ ಆ ಗಗನಚರರ್ = ವಿಮಾನವನ್ನೇರಿ ಆ ಖೇಚರರು, ಅತಿತ್ವರಿತಗಮನದಿಂ ಪೋಗೆ, = ತುಂಬ ವೇಗವಾಗಿ ಹೋಗಲು,

**ಗದ್ಯಾನುಸರಣ:** ಎಂದು ಬರೆದು ಮುಚ್ಚಿ ಮುದ್ರೆ ಹಾಕಿದ ಪತ್ರವೊಂದನ್ನೂ ಅಪರೂಪದ ಉಡುಗೊರೆಗಳನ್ನೂ ಒಂದು ರತ್ನದ ಭರಣಿಯಲ್ಲಿಟ್ಟಳು; ಎಲ್ಲ ಶಾಸ್ತ್ರಗಳನ್ನು ಬಲ್ಲ ಒಳ್ಳೆಯ ಮನೆತನದ ಗಂಧರ್ವಪುರದ ಮುಂದಾಳುಗಳಾದ ಚಿಂತಾಗತಿ ಮನೋಗತಿ ಎಂಬ ಖೇಚರರ ಕೈಯಲ್ಲಿ ಕೊಟ್ಟು, 'ನಮ್ಮ ಅಳಿಯಂದಿರನ್ನು ಮುಂದಿಟ್ಟುಕೊಂಡು ಬೇಗ ಕರೆತನ್ನಿ' ಎಂದು ಕಳುಹಿಸಿ ಕೊಟ್ಟಳು; ವಿಮಾನವನ್ನೇರಿದ ಆ ಖೇಚರರು ತುಂಬ ವೇಗವಾಗಿ ಪ್ರಯಾಣ ಬೆಳೆಸಿದರು.

**ಗಾಳಿಯನೆಡೆಗಲಿಸಿದುದು ವಿ**
**ನೀಳಘನಾಘನಮನಳಱ್ ಪಱ್ದುದು ಮುಕ್ತಾ**
**ಜಾಳಪರಿಲಂಬಿಲೋಲದು**
**ಕೂಳಪತಾಕಾವಿರಾಜಮಾನವಿಮಾನಂ** ೮೫

**ಪದವಿಭಾಗ–ಅನ್ವಯ–ಅರ್ಥ:** ಗಾಳಿಯನ್ + ಎಡೆ + ಕಲಿಸಿದುದು = ಗಾಳಿಯ ನಡುವೆ ತೂರಿಕೊಂಡು, ವಿನೀಳಘನಾಘನಮನ್ + ಅಳಱ್ = ಕಪ್ಪು ಮೋಡಗಳನ್ನು ಸೀಳಿಕೊಂಡು, ಮುಕ್ತಾಜಾಳಪರಿಲಂಬಿಲೋಲ = ಮುತ್ತಿನ ಹಾರವು ನೇತಾಡುವ, ದುಕೂಳಪತಾಕಾವಿರಾಜಮಾನ = ರೇಷ್ಮೆಯ ಬಾವುಟದಿಂದ ರಾರಾಜಿಸುವ, ವಿಮಾನಂ ಪಱ್ದುದು = ವಿಮಾನವು ಹಾರಿತು.

**ಗದ್ಯಾನುಸರಣ:** ನೇತಾಡುವ ಮುತ್ತಿನ ಹಾರವಿದ್ದ ರೇಷ್ಮೆಯ ಬಾವುಟದಿಂದ ರಾರಾಜಿಸುವ ಅವರ ವಿಮಾನವು ಗಾಳಿಯಲ್ಲಿ ತೂರಿ, ಕಪ್ಪು ಮೋಡಗಳನ್ನು ಸೀಳಿಕೊಂಡು ಹಾರಿತು.

**ಪಾಱುವ ವಿಮಾನದೊಂದ**
**ಳ್ಳೇಱಿಂ ಪಱ್ದುಗುವ ಮುಗಿಲ ನೀರ್ಗಳ ಪಲವುಂ**
**ಪೋಱಗಳೊಳೆಳಸಿ ಖಚರರ**
**ನಾಱಿಸಿದುದು ಗಗನದೊಳ್ ವಿಯತ್ತಳಪವನಂ** ೮೬

**ಪದವಿಭಾಗ–ಅನ್ವಯ–ಅರ್ಥ:** ಪಾಱುವ ವಿಮಾನದ + ಒಂದು + ಅಳ್ಳೇಱಿಂ = ಹಾರುತ್ತಿದ್ದ ವಿಮಾನದ ತಿವಿತದಿಂದ, ಪಱಿದು + ಉಗುವ = ಸೀಳಿ ಉಂಟುಮಾಡಿದ ಜಿನುಗುವ, ಮುಗಿಲ ನೀರ್ಗಳ ಪಲವುಂ ಪೀಱುಗಳೊಳ್ = ಮೋಡದ ನೀರಿನ ಹಲವಾರು ಎರಚಲಿನಿಂದಾಗಿ, ಗಗನದೊಳ್ = ಆಕಾಶಮಾರ್ಗದಲ್ಲಿ, ವಿಯತ್ತಳಪವನಂ = ಆಗಸಗಾಳಿಯು, ಎಳಸಿ ಖಚರರನ್ + ಆಱಿಸಿದುದು = ಬೀಸಿ ಖೇಚರರ ದಣಿವನ್ನಾರಿಸಿತು.

**ಗದ್ಯಾನುಸರಣ:** : ಹಾರುತ್ತಿದ್ದ ವಿಮಾನದ ತಿವಿತದಿಂದ ಮೋಡದಲ್ಲಿ ಸೀಳುಂಟಾಗಿ ಆ ಮೂಲಕ ನೀರು ಸಿಂಪಡಿಸುತ್ತಿತ್ತು; ಹೀಗೆ ಆಕಾಶಮಾರ್ಗದಲ್ಲಿ ಆಗಸಗಾಳಿಯು ಬೀಸಿ ಖೇಚರರ ದಣಿವನ್ನಾರಿಸಿತು.

**ವ॥ ಅಂತು ಬಂದುತ್ಪಳಖೇಟಮನೆಯ್ದಿ ವಜ್ರಜಂಘನುಮಂ ಶ್ರೀಮತಿ ಯುಮಂ ಕಂಡು ದೂರಾವನತಮಸ್ತಕನಾಗಿ ತಮ್ಮ ತಂದುಪಾಯನಂಬೆರಸು ರತ್ನಕರಂಡಕಮಂ ಮುಂದಿಟ್ಟಾಗಳದಱ ಮುದ್ರಿಕೆಯನೊಡೆದಂತಸ್ಸ್ಥಿತ ಕಾರ್ಯಪತ್ರಮಂ ಬಾಜಿಸಿ ನೋಡಿ, ವಿಸ್ಮಯಾಕ್ರಾಂತಚಿತ್ತನಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಬಂದು = ಹಾಗೆ ಬಂದು ಉತ್ಪಳಖೇಟಮನ್ + ಎಯ್ದಿ = ಉತ್ಪಳಖೇಟವನ್ನು ತಲುಪಿ, ವಜ್ರಜಂಘನುಮಂ ಶ್ರೀಮತಿಯುಮಂ ಕಂಡು = ವಜ್ರಜಂಘ–ಶ್ರೀಮತಿಯರನ್ನು ಕಂಡು, ದೂರ + ಅವನತ ಮಸ್ತಕನಾಗಿ = ದೂರದಿಂದ ತಲೆಬಾಗಿ ನಮಸ್ಕರಿಸಿ, ತಮ್ಮ ತಂದ + ಉಪಾಯನಂಬೆರಸು ರತ್ನಕರಂಡಕಮಂ ಮುಂದಿಟ್ಟಾಗಳ್ = ತಾವು ತಂದಿದ್ದ ಉಡುಗೊರೆಗಳನ್ನೂ ರತ್ನಕರಂಡಕವನ್ನೂ ಮುಂದಿಡಲು, ಅದಱ ಮುದ್ರಿಕೆಯನ್ + ಒಡೆದು + ಅಂತಃ + ಸ್ಥಿತಕಾರ್ಯಪತ್ರಮಂ ಬಾಜಿಸಿ ನೋಡಿ = ಅದರ ಮುದ್ರೆಯನ್ನು ಒಡೆದು ಒಳಗಿದ್ದ ಕಾರ್ಯವನ್ನು ಸೂಚಿಸುವ ಪತ್ರವನ್ನು ಓದಿಕೊಂಡು, ವಿಸ್ಮಯ + ಆಕ್ರಾಂತಚಿತ್ತನಾಗಿ = ಅಚ್ಚರಿಯಿಂದ ಕೂಡಿದ ಮನಸ್ಸುಳ್ಳವನಾಗಿ,

**ಗದ್ಯಾನುಸರಣ:** ಹಾಗೆ ಬಂದು ದೂತರು ಉತ್ಪಳಖೇಟವನ್ನು ತಲುಪಿದರು; ವಜ್ರಜಂಘ–ಶ್ರೀಮತಿಯರನ್ನು ಕಂಡು ದೂರದಿಂದ ತಲೆಬಾಗಿ ನಮಸ್ಕರಿಸಿದರು; ತಾವು ತಂದಿದ್ದ ಉಡುಗೊರೆಗಳನ್ನೂ ರತ್ನಕರಂಡಕವನ್ನೂ ಅವರ ಮುಂದಿಟ್ಟರು; ವಜ್ರಜಂಘನು ಅದರ ಮುದ್ರೆಯನ್ನು ಒಡೆದು ಒಳಗಿದ್ದ ಕಾರ್ಯಸೂಚಿ ಪತ್ರವನ್ನು ಓದಿಕೊಂಡು ಅಚ್ಚರಿಗೊಂಡ.

**ಅಱಿಪದೆ ಪದಗೞಿಪದೆ ಪೊಂ**
**ಪುಱಿವೋಗೆ ಯಶಃಪ್ರಕಾಶಮೀಗಳೆ ಧರೆಯುಂ**
**ಪೞಿಕೆಯ್ದು ತೊೞ್ತುೞಿವಂ**
**ತುೞಿದಂ ಸಾಮ್ರಾಜ್ಯಲಕ್ಷ್ಮಿಯಂ ಚಕ್ರಧರಂ** ೮೭

**ಪದವಿಭಾಗ-ಅನ್ವಯ-ಅರ್ಥ:** ಪದಗಱಿಪದೆ = ಪದವಿಗೆ ಆಸೆಪಡದೆ, ಯಶಃಪ್ರಕಾಶಂ ಪೊಂಪುಱಿವೋಗೆ = ಕೀರ್ತಿಯ ದೀಪ್ತಿಯು ಹರಡಲು, ಅಱಿಪದೆ = ಆಸೆಪಡದೆ, ಈಗಳೆ ಧರೆಯಂ ಪಱಿಕೆಯ್ದು = ರಾಜ್ಯವನ್ನು ಕ್ಷಣದಲ್ಲಿ ತೊರೆದು, ಚಕ್ರಧರಂ ಸಾಮ್ರಾಜ್ಯಲಕ್ಷ್ಮಿಯಂ = ಚಕ್ರವರ್ತಿಯು ಸಾಮ್ರಾಜ್ಯದ ಸಿರಿಯನ್ನು ತೊೞ್ತಿನ್ + ಉಱಿವಂತೆ ಉಱಿದಂ = ದಾಸಿಯನ್ನು ಬಿಡುವಂತೆ ಬಿಟ್ಟ

**ಗದ್ಯಾನುಸರಣ:** 'ಪದವಿಗೆ ಆಸೆಪಡದೆ, ಕೀರ್ತಿಯ ದೀಪ್ತಿಯು ಹೆಚ್ಚುವಂತೆ ಚಕ್ರವರ್ತಿಯು ರಾಜ್ಯಕ್ಕಾಗಿ ಆಸೆಪಡದೆ ಸಾಮ್ರಾಜ್ಯದ ಸಿರಿಯನ್ನು ತೊರೆದು ದಾಸಿಯನ್ನು ಬಿಡುವಂತೆ ಕ್ಷಣದಲ್ಲಿ ಬಿಟ್ಟನಲ್ಲ!'

**ತಂದೆ ಕುಡೆ ರಾಜ್ಯಮಂ ತೃಣ**
**ದಿಂದಂ ಲಘುವಾಗೆ ಬಗೆದು ಬಗೆದರ್ ತಾಮುಂ**
**ತಂದೆಯ ಬಗೆದುದನೆಂದೊಡ**
**ಗುಂದಲೆ ಪೊಗೞ್ಕೆ ಚಕ್ರಿನಂದರಳವಂ** ೮೮

**ಪದವಿಭಾಗ-ಅನ್ವಯ-ಅರ್ಥ:** ತಂದೆ ರಾಜ್ಯಮಂ ಕುಡೆ = ತಂದೆಯು ರಾಜ್ಯಭಾರವನ್ನು ವಹಿಸಿಕೊಡಲು, ತೃಣದಿಂದಂ ಲಘುವಾಗೆ ಬಗೆದು = ಅದನ್ನು ಹುಲ್ಲಿಗಿಂತ ಕಡೆಯೆಂದು ತಿಳಿದು, ತಾಮುಂ ತಂದೆಯ ಬಗೆದುದನೆ ಬಗೆದರ್ = ತಾವೂ ತಂದೆಯು ಯೋಚಿಸಿದಂತೆಯೇ ಆಲೋಚಿಸಿದರು, ಎಂದೊಡೆ ಚಕ್ರಿನಂದರ + ಅಳವಂ ಪೊಗೞ್ಕೆ ಅಗುಂದಲೆ = ಅಂದರೆ ಚಕ್ರವರ್ತಿಯ ಮಕ್ಕಳ ಹಿರಿಮೆಯನ್ನು ಹೊಗಳಲು ಅಸಾಧ್ಯ.

**ಗದ್ಯಾನುಸರಣ:** 'ತಂದೆಯು ರಾಜ್ಯಭಾರವನ್ನು ವಹಿಸಿಕೊಟ್ಟಾಗ ಅದನ್ನು ಹುಲ್ಲಿಗಿಂತ ಕಡೆಯೆಂದು ತಿಳಿದು, ತಾವೂ ತಂದೆಯಂತೆಯೇ ಆಲೋಚಿಸಿ ದೀಕ್ಷೆ ಪಡೆದರು ಅಂದರೆ ಚಕ್ರವರ್ತಿಯ ಮಕ್ಕಳ ಹಿರಿಮೆಯು ಹೊಗಳಿಕೆಗೆ ಮೀರಿದ್ದು!'

**ವ। ಎಂದು ನಿಜಸಭಾಜನಕ್ಕೆಲ್ಲಂ ಪೊಗೞ್ದು ತದ್ವಾರ್ತಾ ಕರ್ಣನೋದೀರ್ಣಶೋಕ ವ್ಯಾಕುಳೆಯಾಗಿರ್ದ ನಿಜವಲ್ಲಭೆಯಲ್ಲಿಗೆ ಬಂದು,**

**ಪದವಿಭಾಗ-ಅನ್ವಯ-ಅರ್ಥ:** ಎಂದು ನಿಜಸಭಾಜನಕ್ಕೆಲ್ಲಂ ಪೊಗೞ್ದು = ಹೀಗೆಂದು ತನ್ನ ಆಸ್ಥಾನದಲ್ಲಿದ್ದವರ ಮುಂದೆ ಹೊಗಳಿ, ತತ್ + ವಾರ್ತಾ + ಆಕರ್ಣನ = ಆ ಸುದ್ದಿಯನ್ನು ಕೇಳಿ, ಉದೀರ್ಣಶೋಕವ್ಯಾಕುಳೆಯಾಗಿರ್ದ = ಅಧಿಕ ದುಃಖದಿಂದ ವ್ಯಾಕುಲಗೊಂಡಿದ್ದ, ನಿಜವಲ್ಲಭೆಯಲ್ಲಿಗೆ ಬಂದು = ತನ್ನ ಮನಃಪ್ರಿಯೆಯ ಬಳಿ ಬಂದು,

**ಗದ್ಯಾನುಸರಣ:** ಹೀಗೆಂದು ವಜ್ರಜಂಘನು ತನ್ನ ಆಸ್ಥಾನದಲ್ಲಿದ್ದವರ ಮುಂದೆ ಹೊಗಳಿದ; ಆ ಸುದ್ದಿಯನ್ನು ಕೇಳಿ, ಅಧಿಕ ದುಃಖದಿಂದ ವ್ಯಾಕುಲಗೊಂಡಿದ್ದ ತನ್ನ ಮನಃಪ್ರಿಯೆಂ ಶ್ರೀಮತಿಯ ಬಳಿ ಬಂದ.

**ಗುರುಶೋಕಾವೇಗಮಾದಂ ಗುರುವೆಮಗದೇಕೆನ್ನ ಮುಂ ನಮ್ಮ ಜನ್ಮಾಂ**
**ತರದಿಂದಂ ಬಂದ ಮೋಹಂ ಬಿಡದಲೆವುದಱಂದಾದೊಡಂ ಧೈರ್ಯದಿಂಸಂ**
**ಸರಣಾಂಭೋರಾಶಿಯುಂ ದಾಂಟುವ ಬಗೆಯುನೆ ಕೆಯ್ಕೊಂಡನೆಂದಂದೆ**
**ಮಾವಂ**
**ಚರಿತಾರ್ಥಂ ನೀನಣಂ ಚಿಂತಿಸದಿರು ನಮಗಿನ್ನುಂಟೆ ಶೋಕಾವಕಾಶಂ॥೬**

**ಪದವಿಭಾಗ-ಅನ್ವಯ-ಅರ್ಥ:** ಗುರುಶೋಕ + ಆವೇಗಂ + ಆದಂ ಎಮಗೆ ಗುರುವೆ = ಹಿರಿಯರ ಕಾರಣದಿಂದಾದ ದುಃಖವು ನಮಗೆ ಹಿರಿದೇ, ನಿಜ; ಅದೇಕೆ = ಏಕೆಂದರೆ, ಮುಂ ನಮ್ಮ ಜನ್ಮಾಂತರದಿಂದಂ ಬಂದ ಮೋಹಂ ಎನ್ನ ಬಿಡದಲೆವುದಱಂದೆ = ಜನ್ಮಾಂತರಗಳಿಂದ ಬೆನ್ನಟ್ಟಿ ಬಂದ ಮೋಹ ಅಂಟಿಕೊಂಡಿ ರುವುದರಿಂದ, ಆದೊಡಂ ಸಂಸರಣ + ಅಂಭೋರಾಶಿಯಂ = ಆದರೆ ಅವರು ಸಂಸಾರಸಾಗರವನ್ನು, ದಾಂಟುವ ಬಗೆಯನೆ ಧೈರ್ಯದಿಂ ಕೆಯ್ಕೊಂಡನ್ = ದಾಟುವ ರೀತಿಯನ್ನು ಧೈರ್ಯದಿಂದ ಕೈಗೊಂಡರು; ಎಂದಂದೆ ಮಾವಂ ಚರಿತಾರ್ಥಂ = ಹೀಗಾಗಿ ಮಾವ ಸ್ತುತ್ಯರ್ಹ; ನೀನು + ಅಣಂ ಚಿಂತಿಸದಿರು = ನೀನು ಯೋಚಿಸಬೇಡ; ನಮಗೆ ಶೋಕ + ಅವಕಾಶಂ ಇನ್ನುಂಟೆ = ನಮಗೀಗ ದುಃಖಪಡಲು ಸಮಯವೆಲ್ಲಿದೆ?

**ಗದ್ಯಾನುಸರಣ:** ಹಿರಿಯರ ಕಾರಣದಿಂದಾದ ದುಃಖವು ನಮಗೆ ಹಿರಿದೇ, ನಿಜ; ಜನ್ಮಾಂತರಗಳಿಂದ ಬೆನ್ನಟ್ಟಿ ಬಂದ ಮೋಹ ಅಂಟಿಕೊಂಡಿರುವುದೇ ಅದಕ್ಕೆ ಕಾರಣ; ಆದರೆ ಅವರು ಸಂಸಾರಸಾಗರವನ್ನು ದಾಟುವ ರೀತಿಯನ್ನು ಧೈರ್ಯದಿಂದ ಕೈಗೊಂಡರು; ಹೀಗಾಗಿ ಮಾವ ಸ್ತುತ್ಯರ್ಹರು; ನೀನು ಇದಕ್ಕಾಗಿ ಯೋಚಿಸಬಾರದು; ಜೊತೆಗೆ ನಮಗೀಗ ದುಃಖಪಡಲು ಸಮಯವೆಲ್ಲಿದೆ?

**ವ। ಎಂದು ಆ ಶೋಕಾವೇಗಮುನಾಱಸಿ, ಬಂದ ವಿದ್ಯಾಧರರಂ ಯಥೋಚಿತ ಪ್ರತಿಪತ್ತಿಗಳಿಂ ಸಂತೋಷಂಬಡಿಸಿ ನಿಜಪ್ರಿಯಪ್ರಧಾನಮಂತ್ರಿ ಮತಿವರನೊಳಂ ಸೇನಾನಾಯುನಕಂಪನನೊಳಂ ಪುರೋಹಿತಾನಂದನೊಳಂ ಪ್ರಧಾನಶ್ರೇಷ್ಠಿ ಧನಮಿತ್ರನೊಳಮಾಲೋಚಿಸಿ,**

**ಪದವಿಭಾಗ-ಅನ್ವಯ-ಅರ್ಥ:** ಎಂದು ಆ ಶೋಕಾವೇಗಮನ್ + ಆಱಸಿ = ಎಂದು ಹೆಂಡತಿಯ ತೀವ್ರ ದುಃಖವನ್ನು ಶಮನಗೊಳಿಸಿ, ಬಂದ ವಿದ್ಯಾಧರರಂ

ಯಥೋಚಿತ ಪ್ರತಿಪತ್ತಿಗಳಿಂ ಸಂತೋಷಂಬಡಿಸಿ = ಬಂದ ವಿದ್ಯಾಧರದೂತರನ್ನು ತಕ್ಕ ಸನ್ಮಾನಗಳಿಂದ ಸಂತುಷ್ಟಗೊಳಿಸಿ, ನಿಜಪ್ರಿಯಪ್ರಧಾನಮಂತ್ರಿಮತಿವರನ್ + ಒಳಂ = ತನ್ನ ಪ್ರಧಾನಿ ಮತಿವರ ಇದ್ದಾನೆ, ಸೇನಾನಾಯನಕಂಪನನ್ + ಒಳಂ = ಸೇನಾಧಿಪತಿ ಅಕಂಪನ ಇದ್ದಾನೆ, ಪುರೋಹಿತ + ಆನಂದನ್ + ಒಳಂ = ಪುರೋಹಿತ ಆನಂದ ಇದ್ದಾನೆ, ಪ್ರಧಾನಶ್ರೇಷ್ಠಿ ಧನಮಿತ್ರನ್ + ಒಳಂ = ಪ್ರಧಾನಶ್ರೇಷ್ಠಿ ಧನಮಿತ್ರ ಇದ್ದಾನೆ, (ಇವರೊಡನೆ) ಆಲೋಚಿಸಿ = ಸಮಾಲೋಚಿಸಿ,

**ಗದ್ಯಾನುಸರಣ:** ಎಂದು ಹೇಳಿ ವಜ್ರಜಂಘನು ಹೆಂಡತಿಯ ತೀವ್ರ ದುಃಖವನ್ನು ಶಮನಗೊಳಿಸಿದ; ಬಂದಿದ್ದ ವಿದ್ಯಾಧರದೂತರನ್ನು ತಕ್ಕ ಸನ್ಮಾನಗಳಿಂದ ಸಂತುಷ್ಟಗೊಳಿಸಿದ; ತನ್ನ ಪ್ರಧಾನಿ ಮತಿವರ, ಸೇನಾಧಿಪತಿ ಅಕಂಪನ, ಪುರೋಹಿತ ಆನಂದ, ಪ್ರಧಾನಶ್ರೇಷ್ಠಿ ಧನಮಿತ್ರ ಇವರೊಡನೆ ಸಮಾಲೋಚಿಸಿದ.

**ಸೆಣಸುವಹಿತರ್ ಮೇಳೇಟ್ವುದ್ಯೋಗಮಂ ಬಗೆದಿರ್ದಿರೆ**
**ನ್ನಣುಗಿನಳಿಯಂಗೆನ್ನಿಂ ಮೇಗಿಲ್ಲ ಕೂರ್ಪವರಿಂತಿದೇಂ**
**ಗಣಿಯದೆಡೆಯೇ ಪೋಪೆಂ ಪೋಗೆಂದು ಮಾಣದೆ ಪುಂಡರೀ**
**ಕಿಣಿಗೆ ಪಯಣಂಬೋಗಲ್ ನಿಶ್ಚೈಸಿದಂ ಧರಣೀಶ್ವರಂ ೬೦**

**ಪದವಿಭಾಗ–ಅನ್ವಯ–ಅರ್ಥ:** ಸೆಣಸುವ + ಅಹಿತರ್ = ಪೈಪೋಟಿ ಮಾಡುವ ಶತ್ರುಗಳು, ಮೇಳೇಟ್ವ + ಉದ್ಯೋಗಮಂ ಬಗೆದಿರ್ದಿರ್ = ಮೇಲೆ ಬೀಳುವ ಕೆಲಸವನ್ನು ಕೈಗೊಂಡಿದ್ದಾರೆ; ಎನ್ನಣುಗಿನ + ಅಳಿಯಂಗೆ ಎನ್ನಿಂ ಕೂರ್ಪವರ್ ಮೇಗಿಲ್ಲ = ನನ್ನ ಪ್ರೀತಿಯ ಅಳಿಯನಿಗೆ ನನಗಿಂತ ಹತ್ತಿರದವರು ಯಾರೂ ಇಲ್ಲ; ಇಂತಿದೇಂ ಗಣಿಯದ + ಎಡೆಯೇ = ಇದು ಲೆಕ್ಕಾಚಾರ ಮಾಡುವ ಸಮಯವೇ? ಪೋಪೆಂ ಪೋಗುದು = ಹೋಗಿಯೇ ತೀರುತ್ತೇನೆ ಎಂದು, ಮಾಣದೆ ಧರಣೀಶ್ವರಂ ಪುಂಡರೀಕಿಣಿಗೆ ಪಯಣಂಬೋಗಲ್ ನಿಶ್ಚೈಸಿದಂ = ತಡಮಾಡದೆ ಪುಂಡರೀಕಿಣಿಗೆ ಪಯಣ ಬೆಳೆಸಲು ವಜ್ರಜಂಘನು ತೀರ್ಮಾನಿಸಿದ.

**ಗದ್ಯಾನುಸರಣ:** 'ಪೈಪೋಟಿ ಮಾಡುವ ಶತ್ರುಗಳು ಮೇಲೆ ಬೀಳುವ ಹುನ್ನಾರ ಮಾಡುತ್ತಿದ್ದಾರೆ; ನನ್ನ ಪ್ರೀತಿಯ ಅಳಿಯನಿಗೆ ನನಗಿಂತ ಹತ್ತಿರದವರು ಯಾರೂ ಇಲ್ಲ' ಎಂದು ಬರೆದಿದ್ದಾರೆ. ಇದು ಲೆಕ್ಕಾಚಾರ ಮಾಡುವ ಸಮಯವಲ್ಲ; ಹೋಗಿಯೇ ತೀರುತ್ತೇನೆ ಎಂದು ತಡಮಾಡದೆ ಪುಂಡರೀಕಿಣಿಗೆ ಪಯಣ ಬೆಳೆಸಲು ವಜ್ರಜಂಘನು ತೀರ್ಮಾನಿಸಿದ.

**ವ। ಅಂತತಿತ್ವರಿತಗಮನನಿಶ್ಚಿತಮನನಾಗಿ ಬಲಾಧ್ಯಕ್ಷನಂ ಬರಿಸಿ,**

**ಅರ್ಥ:** ಅಂತು + ಅತಿತ್ವರಿತಗಮನನಿಶ್ಚಿತಮನನಾಗಿ ಬಲಾಧ್ಯಕ್ಷನಂ ಬರಿಸಿ = ಎಂದು ತುಂಬ ವೇಗವಾಗಿ ಹೋಗಲು ನಿರ್ಧರಿಸಿದ ರಾಜನು ಸೇನಾಧ್ಯಕ್ಷನನ್ನು ಬರಮಾಡಿಕೊಂಡ.

**ಮನಮುಳ್ಳುನ್ಮದಗಂಧಸಿಂಧುರಚಯಂ ಚಂಡಾಜಿವಿಕ್ರಾಂತಮ**
**ರ್ತ್ಯನಿಳಾಕ್ರಾಂತಹಯೌಘಮೂರ್ಜಿತಜಯಪ್ರಖ್ಯಾತಜಂಘಾಳಪ**
**ತ್ತಿನಿಕಾಯಂ ಕದನೈಕದುರ್ಜಯಸ್ಕಂಧಪ್ರಯಾಣಕ್ಷಮಾ**
**ವನಿಪಾಳವ್ರಜಮೀಗಳೆಮ್ಮೊಡನೆ ಬರ್ಕೆಂದಂ ರಣಾನಂದದಿಂ ೯೧**

**ಪದವಿಭಾಗ–ಅನ್ವಯ–ಅರ್ಥ:** ಮನಂ + ಉಳ್ಳ + ಉನ್ಮದಗಂಧಸಿಂಧುರ ಚಯಂ = ಬಲಿಷ್ಠವಾದ ಮದ್ದಾನೆಗಳ ಹಿಂಡು, ಚಂಡ + ಆಜಿವಿಕ್ರಾಂತಮರ್ತ್ಯನ್ = ಘೋರಯುದ್ಧದಲ್ಲಿ ಜಯ ಪಡೆದು, ಇಳಾಕ್ರಾಂತಹಯೌಘಂ = ಭೂಮಿಯಲ್ಲಿ ಹಾರುವ ಕುದುರೆಯ ದಂಡು, ಊರ್ಜಿತಜಯಪ್ರಖ್ಯಾತಜಂಘಾಳಪತ್ತಿನಿಕಾಯಂ = ಗೆಲ್ಲುವುದರಲ್ಲಿ ಹೆಸರುವಾಸಿಯಾದ ಹಾಗೂ ವೇಗವಾದ ಪದಾತಿಸೈನ್ಯ, ಕದನೈಕದುರ್ಜಯಸ್ಕಂಧಪ್ರಯಾಣಕ್ಷಮಾವನಿಪಾಳವ್ರಜಂ = ಯುದ್ಧದಲ್ಲಿ ಗೆಲ್ಲಲಸಾಧ್ಯವಾದ ಭುಜಬಲರೂ ಪ್ರಯಾಣಸಮರ್ಥರೂ ಆದ ರಾಜವೃಂದ, ಈಗಳ್ + ಎಮ್ಮೊಡನೆ ಬರ್ಕೆ = ಈಗ ನಮ್ಮ ಜೊತೆಗೆ ಬರಲಿ, ಎಂದಂ ರಣಾನಂದದಿಂ = ಎಂದು ರಣೋತ್ಸಾಹದಿಂದ ಹೇಳಿದ.

**ಗದ್ಯಾನುಸರಣ:** ಬಲಿಷ್ಠವಾದ ಮದ್ದಾನೆಗಳ ಹಿಂಡು, ಘೋರಯುದ್ಧದಲ್ಲಿ ಜಯ ಪಡೆದು ಹಾರುವ ಕುದುರೆಯ ದಂಡು, ಗೆಲ್ಲುವುದರಲ್ಲಿ ಹೆಸರುವಾಸಿಯಾದ ವೇಗದ ಪದಾತಿಸೈನ್ಯ, ಯುದ್ಧದಲ್ಲಿ ಗೆಲ್ಲಲಸಾಧ್ಯವಾದ ಭುಜಬಲರೂ ಪ್ರಯಾಣಸಮರ್ಥರೂ ಆದ ರಾಜವೃಂದ, ಈಗ ನಮ್ಮ ಜೊತೆಗೆ ಬರಲಿ ಎಂದು ವಜ್ರಜಂಘನು ರಣೋತ್ಸಾಹದಿಂದ ಆಜ್ಞಾಪಿಸಿದ.

**ವಿಶೇಷ ವಿಚಾರ:** ಇಲ್ಲಿನ ೯೦ ಮತ್ತು ೯೧ ನೇ ಪದ್ಯಗಳ ಭಾವವು ಪೂರ್ವಪುರಾಣದಲ್ಲಿ ಮೂವತ್ತು ಶ್ಲೋಕಗಳಲ್ಲಿ (ಪೂಪು, ೮.೧೧೯–೧೫೦) ವಿಸ್ತಾರವಾಗಿ ವರ್ಣಿತವಾಗಿದೆ.

**ವ। ಅಂತು ಬೆಸಸಿದಂದದೊಳೆ ಬಂದು ಮುಂದೆ ನಿಂದ ಚತುರಂಗಬಲಂ ಬೆರಸ ಬಳಾಬಾಳವೃದ್ಧೋಕ್ಷಶಕಟಸಂಕಟಮಪ್ಪ ಕಟಕಮಂ ಮೆಲ್ಲಮೆಲ್ಲನೊಡ**

**ಗೊಂಡು ಬರ್ಪಂತು ಕೂರ್ಚಾಳತುಂದಿಳಜರತ್ಸಾಮಂತಸಂದೋಹಕ್ಕಪ್ಪಯಿಸಿ ಶುಭದಿನಮುಹೂರ್ತದೊಳ್ ಪ್ರಯಾಣಭೇರಿಯಂ ಪೊಯಿಸಿಪೋಜಮಟ್ಟಾಗಳ್**

**ಪದವಿಭಾಗ–ಅನ್ವಯ–ಅರ್ಥ:** ಅಂತು ಬೆಸಸಿದ + ಅಂದದೊಳೆ ಬಂದು ಮುಂದೆ ನಿಂದ = ಆಜ್ಞಾಪಿಸಿದ ರೀತಿಯಲ್ಲಿ ಸಿದ್ಧವಾದ, ಚತುರಂಗಬಲಂ ಬೆರಸು = ಚತುರಂಗಸೈನ್ಯದ ಸಮೇತ, ಅಬಳಾಬಾಳವೃದ್ಧ ಹೆಂಗಸರು ಮಕ್ಕಳು ಮುದುಕರು (ಇರುವ) ಉಕ್ಷಶಕಟಸಂಕಟಮಪ್ಪ = ಎತ್ತಿನ ಗಾಡಿಗಳಿಂದ ಕೂಡಿದ ಕಟಕಮಂ = ಸೇನೆಯನ್ನು, ಮೆಲ್ಲಮೆಲ್ಲನೊಡಗೊಂಡು ಬರ್ಪಂತು = ನಿಧಾನವಾಗಿ ಬರುವಂತೆ, ಕೂರ್ಚಾಳತುಂದಿಳ = ಗಡ್ಡಮೀಸೆಗಳ, ಜರತ್ + ಸಾಮಂತಸಂದೋಹಕ್ಕೆ + ಅಪ್ಪಯಿಸಿ = ವಯಸ್ಸಾದ ಸಾಮಂತಸಮೂಹಕ್ಕೆ ಸೂಚಿಸಿ, ಶುಭದಿನಮುಹೂರ್ತದೊಳ್ ಪ್ರಯಾಣಭೇರಿಯಂ ಪೊಯಿಸಿ ಪೋಜಮಟ್ಟಾಗಳ್ = ಒಳ್ಳೆಯ ದಿನ ಮುಹೂರ್ತಗಳಲ್ಲಿ ಪ್ರಯಾಣ ಆರಂಭವಾಗುವ ಭೇರಿಯನ್ನು ಹೊಡೆಸಿ ಹೊರಟಾಗ,

**ಗದ್ಯಾನುಸರಣ:** ಆಜ್ಞಾಪಿಸಿದ ರೀತಿಯಲ್ಲಿ ಚತುರಂಗಬಲ ಸಿದ್ಧವಾಗಿ ಬಂತು; ಸೈನ್ಯದ ಜೊತೆಗೆ ಎತ್ತಿನ ಗಾಡಿಗಳಿಂದ ಕೂಡಿದ ಸೇನೆಯನ್ನು ನಿಧಾನವಾಗಿ ಕರೆತರುವಂತೆ ವಯಸ್ಸಾದ ಸಾಮಂತಸಮೂಹಕ್ಕೆ ಸೂಚಿಸಿದ; ಆನಂತರ ಒಳ್ಳೆಯ ದಿನ ಮುಹೂರ್ತಗಳಲ್ಲಿ ಪ್ರಯಾಣ ಆರಂಭವಾಗುವ ಭೇರಿಯನ್ನು ಹೊಡೆಸಿ ಹೊರಟ.

**ಕೊಡೆ ತಟಿ ತಳ್ತ ಸೀಗುರಿ ಕರೀಂದ್ರಘಟಾಳಿ ತುರಂಗಸೈನ್ಯಮು**
**ರ್ಕುಡುಗದೆ ಬರ್ಪ ನಾಯಕಬಲಂ ರಥಸಂತತಿ ಖಡ್ಗಿವೃಂದವೋ**
**ಗಡಿಸದ ಗಾಡಿಕಾರ್ತಿಯರ ಬರ್ಪ ನಿಯೋಗಿಗಳಾದ ಚೆಲ್ವನಾ**
**ವೆಡೆಯೊಳಮೀಯೆ ಕಣ್ಗೊಸಗೆಯಂ ಪಡೆದತ್ತು ಸಮಸ್ತಸಾಧನಂ ೯೨**

**ಪದವಿಭಾಗ–ಅನ್ವಯ–ಅರ್ಥ:** ಕೊಡೆ ತಟಿ = ಕೊಡೆ, ಛತ್ರಿ, ತಳ್ತ ಸೀಗುರಿ = ಎತ್ತಿದ ಚಾಮರ, ಕರೀಂದ್ರಘಟಾಳಿ = ಆನೆಗಳ ಹಿಂಡು, ತುರಂಗಸೈನ್ಯಂ = ಕುದುರೆ ದಳ, ಉರ್ಕುಡುಗದೆ ಬರ್ಪ ನಾಯಕಬಲಂ = ಗತ್ತು ಕಳೆದುಕೊಳ್ಳದ ಮುಂದಾಳುಗಳ ಗುಂಪು, ರಥಸಂತತಿ = ರಥಸಮೂಹ, ಖಡ್ಗಿವೃಂದಂ = ಕತ್ತಿಹಿಡಿದವರ ತಂಡ, ಓಗಡಿಸದ ಗಾಡಿಕಾರ್ತಿಯರ = ಬೇಸರಗೊಳ್ಳದ ವಿಲಾಸಿನಿಯರ, ಬರ್ಪ ನಿಯೋಗಿಗಳಾದ = ಜೊತೆಯ ಅಧಿಕಾರಿಗಳ, ಚೆಲ್ವನ್ = ಸೊಬಗನ್ನು, ಆವೆಡೆಯೊಳಂ = ಎಲ್ಲೆಡೆಯೂ, ಈಯೆ = ಉಂಟುಮಾಡುತ್ತಿರಲು, ಸಮಸ್ತಸಾಧನಂ ಕಣ್ಗೆ + ಒಸಗೆಯಂ ಪಡೆದತ್ತು = ಇಡೀ ಸೈನ್ಯವು ಕಣ್ಣಿಗೆ ಸಂತಸವನ್ನು ನೀಡುತ್ತಿತ್ತು.

**ಗದ್ಯಾನುಸರಣ:** ಕೊಡೆ, ಛತ್ರಿ, ಎತ್ತಿದ ಚಾಮರ, ಆನೆಗಳ ಹಿಂಡು, ಕುದುರೆ ದಳ, ಗತ್ತು ಕಳೆದುಕೊಳ್ಳದ ಮುಂದಾಳುಗಳ ಗುಂಪು, ರಥಸಮೂಹ, ಕತ್ತಿಹಿಡಿದವರ ತಂಡ, ಬೇಸರಗೊಳ್ಳದ ವಿಲಾಸಿನಿಯರ ಜೊತೆ ಬರುವ ಅಧಿಕಾರಿಗಳ ಸಮೂಹವು ಎಲ್ಲೆಡೆಯೂ ಸೊಬಗನ್ನು ಉಂಟುಮಾಡುತ್ತಿತ್ತು; ಹೀಗೆ ಇಡೀ ಸೈನ್ಯವು ಕಣ್ಣಿಗೆ ಸಂತಸವನ್ನು ನೀಡುತ್ತಿತ್ತು.

**ವ। ಅಂತು ಪುಂಡರೀಕಿಣಿಗಭಿಮುಖನಾಗಿ ಪಯಣಂಬಂದು ಶಷ್ಪಸರೋವರಮೆಂಬ ಕೊಳನಂ ಬಳಸಿದ ಮಾದವೀಲತೆಯ ಮಂಟಪಂಗಳೊಳು ಚೂತಲತೆಯ ಬಳ್ಳಿಗಾವಣಂಗಳೊಳಂ ಅಶೋಕಲತೆಯ ವಿಳಾಸಗೃಹಂಗಳೊಳಂ ನವಮಾಲಿಕೆಯಿಱುಂಬುಗಳೊಳಂ ತಮಾಳಲತೆಯ ಕೊಂಚೆಯಂಗಳೊಳಂ ತಾಂಬೂಲಲತೆಯಳಂಕಾರಭವನಂಗಳೊಳಂ ಎಳಲತೆಯ ಕೇಣಿಕಾವಾಸಂಗಳೊಳಂ ಬೀಡಂ ಬಿಡಿಸಿದಾಗಳ್,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಪುಂಡರೀಕಿಣಿಗಭಿಮುಖನಾಗಿ ಪಯಣಂಬಂದು = ಹೀಗೆ ಪುಂಡರೀಕಿಣಿಯ ಕಡೆ ಪಯಣ ಹೊರಟು, ಶಷ್ಪ ಸರೋವರಮೆಂಬ ಕೊಳನಂ ಬಳಸಿದ = ದಂಡೆಯಲ್ಲಿ ಗರುಕೆ ಬೆಳೆದ ಸರೋವರಗಳನ್ನು ಸುತ್ತುವರಿದ, ಮಾಧವೀಲತೆಯ ಮಂಟಪಂಗಳೊಳಂ = ಮೊಲ್ಲೆ ಬಳ್ಳಿಗಳ ಹಂದರಗಳಲ್ಲಿಯೂ, ಚೂತಲತೆಯ ಬಳ್ಳಿಗಾವಣಂಗಳೊಳಂ = ಮಾವಿನ ಮರಗಳ ಚಪ್ಪರದಂತಹ ನೆರಳಿನಲ್ಲಿಯೂ, ಅಶೋಕಲತೆಯ ವಿಳಾಸಗೃಹಂಗಳೊಳಂ = ಅಶೋಕವೃಕ್ಷಗಳ ಸುಂದರ ತೋಪುಗಳಲ್ಲಿಯೂ, ನವಮಾಲಿಕೆಯಿಱುಂಬುಗಳೊಳಂ = ಮಲ್ಲಿಗೆಯ ಪೊದರುಗಳಲ್ಲಿಯೂ, ತಮಾಳಲತೆಯ ಕೊಂಚೆಯಂಗಳೊಳಂ = ಹೊಂಗೆಮರಗಳ ಬಳ್ಳಿಮಾಡಗಳಲ್ಲಿಯೂ, ತಾಂಬೂಲಲತೆಯ + ಅಳಂಕಾರಭವನಂಗಳೊಳಂ = ವೀಳೆಯದೆಲೆಯ ಬಳ್ಳಿಗಳಿಂದಾದ ಅಲಂಕಾರಗೃಹಗಳಲ್ಲಿಯೂ, ಎಳಲತೆಯ ಕೇಣಿಕಾವಾಸಂಗಳೊಳಂ = ಎಳೆಯ ಬಳ್ಳಿಗಳ ಗುಡಾರಗಳಲ್ಲಿಯೂ, ಬೀಡಂ ಬಿಡಿಸಿದಾಗಳ್ ಬಿಡಾರ ಹೂಡಿಸಿದಾಗ,

**ಗದ್ಯಾನುಸರಣ:** ಹೀಗೆ ಪುಂಡರೀಕಿಣಿಯ ಕಡೆ ಪಯಣ ಹೊರಟು ಸೈನ್ಯವು ದಂಡೆಯಲ್ಲಿ ಗರುಕೆ ಬೆಳೆದ ಸರೋವರಗಳನ್ನು ಸುತ್ತುವರಿದ ಮೊಲ್ಲೆ ಬಳ್ಳಿಗಳ ಹಂದರಗಳಲ್ಲಿ, ಮಾವಿನ ಮರಗಳ ಚಪ್ಪರದಂತಹ ನೆರಳಿನಲ್ಲಿ, ಅಶೋಕವೃಕ್ಷಗಳ ಸುಂದರ ತೋಪುಗಳಲ್ಲಿ, ಮಲ್ಲಿಗೆಯ ಹಂಬುಗಳ ಪೊದರುಗಳಲ್ಲಿ, ಹೊಂಗೆಮರಗಳ ನೆರಳಿನಲ್ಲಿ, ವೀಳೆಯದೆಲೆಯ ಬಳ್ಳಿಗಳಿಂದಾದ ಅಲಂಕಾರಗೃಹಗಳಲ್ಲಿ, ಎಳೆಯ ಬಳ್ಳಿಗಳ ಗುಡಾರಗಳಲ್ಲಿ ಆಗಾಗ್ಗೆ ಬಿಡಾರ ಹೂಡುತ್ತಿತ್ತು.

**ಇದು ಗಹನಾಂತರಾಳಮಿದಱೊಳ್ ನೆಲಸಿರ್ದ ಮದೀಯ ತೋಯದಿಂ**
**ದೊದವಿದ ನೀರಜಾವಳಿಯ ಚೆಲ್ವು ನಿರರ್ಥಕಮಾಗದಿಂದು ಪೊ**
**ರ್ದಿದ ಜನದಿಂ ಕರಂ ಸಫಲಮಾದುದು ಪೆಂಪೆನಗಾದುದೆಂದು ರಾ**
**ಗದಿನುಲಿವಂತುಟಾಯ್ತು ಕಳಹಂಸನಿನಾದದದಿನಾ ಸರೋವರಂ ೯೩**

**ಪದವಿಭಾಗ–ಅನ್ವಯ–ಅರ್ಥ:** ಇದು ಗಹನ + ಅಂತರಾಳಂ = ಇದು ಕಾಡಿನ ನಡುಭಾಗ, ಇದಱೊಳ್ ನೆಲಸಿರ್ದ ಮದೀಯ ತೋಯದಿಂದ + ಒದವಿದ = ಇದರಲ್ಲಿರುವ ನನ್ನ ನೀರಿನಿಂದ ಬೆಳೆದ, ನೀರಜ + ಆವಳಿಯ ಚೆಲ್ವು = ತಾವರೆಗಳ ಗುಂಪಿನ ಸೊಬಗು, ಇಂದು ಪೊರ್ದಿದ ಜನದಿಂ = ಈಗ ಬಂದಿರುವ ಜನರಿಂದಾಗಿ, ನಿರರ್ಥಕಮಾಗದು ಕರಂ ಸಫಲಮಾದುದು = ವ್ಯರ್ಥವಾಗದೆ ಸಾಕಷ್ಟು ಸಫಲವಾಯಿತು, ಎನಗೆ ಪೆಂಪು ಆದುದು + ಎಂದು = ನನಗೆ ಹೆಮ್ಮೆಯುಂಟಾಯಿತು ಎಂದು, ಕಳಹಂಸನಿನಾದದದಿನ್ = ರಾಜಹಂಸಗಳ ಕಲರವದಿಂದಾಗಿ, ಆ ಸರೋವರಂ ರಾಗದಿನ್ + ಉಲಿವಂತುಟಾಯ್ತು = ಆ ಕೊಳವು ಸಂತಸದಿಂದ ಹೇಳಿದಂತಾಯಿತು.

**ಗದ್ಯಾನುಸರಣ:** 'ಇದು ಕಾಡಿನ ನಡುಭಾಗ, ಇದರಲ್ಲಿರುವ ನನ್ನ ನೀರಿನಿಂದ ಬೆಳೆದ ತಾವರೆಗಳ ಗುಂಪಿನ ಸೊಬಗು ಈಗ ಬಂದಿರುವ ಜನರಿಂದಾಗಿ ವ್ಯರ್ಥವಾಗದೆ ಸಾರ್ಥಕವಾಯಿತು, ನನಗೆ ಹೆಮ್ಮೆಯುಂಟಾಗಿದೆ' ಎಂದು ಆ ಕೊಳವು ಸಂತಸದಿಂದ ಹೇಳಿದಂತೆ ರಾಜಹಂಸಗಳ ಕಲರವವು ಕೇಳಿಸಿತು.

**ಆಗಳೆ ಮಾಟ್ಟಿ ಪುಷ್ಪರಚನಾಳಿಗೆ ಜೈನಗೃಹಕ್ಕೆ ಕಾಂತಕಾಂ**
**ತಾಗಣಕರ್ಣಪೂರಕುಸುಮಾಭರಣಾಳಿಗೆ ಯೋಗ್ಯಮಾಗಿ ಮೇ**
**ಲಾಗಿ ತೆರಳ್ದು ಪೊಕ್ಕು ಪೊಱಮಟ್ಟ ಮದೇಭಗಣಕ್ಕೆ ಮಂಡನಾ**
**ಯೋಗಮುಮಾದುದಾ ಕೊಳದ ಕೋಮಳನೀರಜಪುಷ್ಪಜಾತಿಗಳ್ ೯೪**

**ಪದವಿಭಾಗ–ಅನ್ವಯ–ಅರ್ಥ:** ಆ ಕೊಳದ ಕೋಮಳ ನೀರಜ ಪುಷ್ಪ ಜಾತಿಗಳ= ಶಷ್ಪ ಸರೋವರದ ವಿವಿಧ ಬಗೆಯ ಲಲಿತ ತಾವರೆಗಳು, ಆಗಳೆ = ಒಮ್ಮೆಗೇ, ಜೈನಗೃಹಕ್ಕೆ ಮಾಟ್ಟಿ ಪುಷ್ಪರಚನಾಳಿಗೆ = ಜಿನಾಲಯಗಳಿಗೆ ಮಾಡುವ ಹೂವಿನಲಂ ಕಾರಕ್ಕೆ, ಕಾಂತಕಾಂತಾಗಣಕರ್ಣಪೂರಕುಸುಮ + ಆಭರಣ + ಆಳಿಗೆ = ಚೆಲುವೆಯರ ಕವಿಗಳ ತೊಡವು ಮುಂತಾದ ಹೂಗಳ ಆಭರಣಗಳಿಗೆ, ಯೋಗ್ಯಮಾಗಿ = ತಕ್ಕುವಾಗಿ, ಮೇಲಾಗಿ ತೆರಳ್ದು ಪೊಕ್ಕು ಪೊಱಮಟ್ಟ ಮದೇಭಗಣಕ್ಕೆ ಮಂಡನಾಯೋಗಮುಂ + ಆದುದು = ಹೋಗಿ ಮುಳುಗಿ ಹೊರಬಂದ ಮದಗಜಸಮೂಹಕ್ಕೆ ಅಲಂಕಾರದ ಜೂಲೂ ಆಯಿತು,

**ಗದ್ಯಾನುಸರಣ:** ಶಷ್ಪಸರೋವರದ ವಿವಿಧ ಬಗೆಯ ಲಲಿತ ತಾವರೆಗಳು ಒಮ್ಮೆಗೇ ಜಿನಾಲಯಗಳಿಗೆ ಮಾಡುವ ಹೂವಿನಲಂಕಾರಕ್ಕೂ, ಚೆಲುವೆಯರ ಕಿವಿದೊಡವು ಮುಂತಾದ ಹೂಗಳ ಆಭರಣಗಳಂತೆಯೂ, ಮೇಲಾಗಿ ಅದರಲ್ಲಿ ಮುಳುಗಿ ಹೊರಬಂದ ಮದಗಜಸಮೂಹಕ್ಕೆ ಮೈಮೇಲಿನ ಅಲಂಕಾರದ ಜೂಲೂ ಆಯಿತು.

**ಚಳಕಹಂಸಸಾರಸರಥಾಂಗಮದಾಳಿನಿನಾದಕೈರವೋ**
**ತ್ಪಳಶತಪತ್ರಮಂದಮಕರಂದರಸೋತ್ಕಟಗಂಧಬಂಧುರಂ**
**ಲಳಿತನೃಪಾಂಗನಾಳಕಚಯಂಗಳನಾಡಿಪುದಾಯ್ತು ಸಂತತೋ**
**ಚ್ಚಳಿತತರಂಗಶೀಕರತುಷಾರಜಳಂ ಸರಸೀಸಮೀರಣಂ ೯೩**

**ಪದವಿಭಾಗ–ಅನ್ವಯ–ಅರ್ಥ:** ಚಳಕಹಂಸ = ರಾಜಹಂಸ, ಸಾರಸ = ಕೊಕ್ಕರೆ, ರಥಾಂಗ = ಚಕ್ರವಾಕ, ಮದಾಳಿನಿನಾದ = ದುಂಬಿಗಳ ಝೇಂಕಾರದಿಂದ ಕೂಡಿದ, ಕೈರವ + ಉತ್ಪಳ + ಶತಪತ್ರ = ನೈದಿಲೆ ಉತ್ಪಲ ತಾವರೆಗಳ, ಮಂದಮಕರಂದರಸ + ಉತ್ಕಟಗಂಧಬಂಧುರಂ = ದಟ್ಟವಾದ ಬಂಡಿನ ಪರಿಮಳದಿಂದ ಕೂಡಿದ, ಸಂತತ + ಉಚ್ಚಳಿತತರಂಗಶೀಕರತುಷಾರಜಳಂ = ಸದಾ ಮೇಲೇಳುವ ಅಲೆಗಳ ತುಂತುರಿನಿಂದ ಕೂಡಿದ, ಸರಸೀಸಮೀರಣಂ = ಸರೋವರದ ಮೇಲಿನ ಗಾಳಿಯು, ಲಳಿತನೃಪಾಂಗನಾ + ಅಳಕಚಯಂಗಳನ್ + ಆಡಿಪುದಾಯ್ತು = ಕೋಮಲವಾದ ರಾಜಸ್ತ್ರೀಯರ ಮುಂಗುರಳನ್ನು ಆಡಿಸುತ್ತಿತ್ತು.

**ಗದ್ಯಾನುಸರಣ:** ರಾಜಹಂಸ, ಕೊಕ್ಕರೆ, ಚಕ್ರವಾಕ, ನೈದಿಲೆ ಉತ್ಪಲ ತಾವರೆಗಳ ದಟ್ಟವಾದ ಬಂಡಿನ ಪರಿಮಳದಿಂದ ಕೊಬ್ಬಿದ ದುಂಬಿಗಳ ಝೇಂಕಾರ, ಸದಾ ಮೇಲೇಳುವ ಅಲೆಗಳ ತುಂತುರಿನಿಂದ ಕೂಡಿದ ಸರೋವರದ ಮೇಲಿನಿಂದ ಬೀಸುವ ಗಾಳಿಯು, ಕೋಮಲವಾದ ರಾಜಸ್ತ್ರೀಯರ ಮುಂಗುರಳನ್ನು ಆಡಿಸುತ್ತಿತ್ತು.

**ವ। ಅಂತಾ ಮಂಡಳೇಶ್ವರನಾ ಸರೋಜಷಂಡದೊಳ್ ಬೀಡಂಬಿಟ್ಟಿರ್ಪ ನ್ನೆಗಂ ಸ್ವರ್ಗಾಪವರ್ಗಮಾರ್ಗದಂತಪಗತಕಲ್ಮಷರುಂ ಅಂಭೋಧಿಯಂತೆ ಗಂಭೀರಾಶಯರುಂ ಆದಿತ್ಯನಂತೆ ನಿರ್ಧೂತ ತಮಸ್ತಮರುಂ ಅಂಬರದಂತೆ ಸನ್ಮಾರ್ಗರುಂ ಚಂದ್ರನಂತೆ ಸರ್ವಸತ್ತ್ವ ಸೌಮ್ಯರುಂ ಅನಿಲನಂತೆ ನಿಸ್ಸಂಗರುಂ ಚಿಂತಾಮಣಿಯಂತೆ ಭವ್ಯಜನ ಮನೋಭಿಲಷಿತ ಫಲಪ್ರದರುಂ ಮೇರುವಿನಂತಚಳಿತ ಧೈರ್ಯಗುಣರುಮಪ್ಪ ಧರ್ಮವರಸಾಗರಸೇನರೆಂಬ ಗಗನಚಾರಣರ್ ಕಾಂತಾರಚರ್ಯಾಮಾರ್ಗ ದೊಳ್ ತಮ್ಮ ವಾಸಕ್ಕೆ ಬರ್ಪರಂ ಶ್ರೀಮತಿಯುಂ ತಾನುಂ ಕಂಡು ಸಂಭ್ರಮಂಬೆರಸಿದಿರಂ ನಡೆದು ಬದ್ಧಾಂಜಲಿಪುಟಘಟಿತನಿಟಿಲರಾಗಿ ನಿಲ್ಕೆಂದು ನಿಲಿಸಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು + ಆ ಮಂಡಳೇಶ್ವರನ್ = ಹಾಗೆ ಆ ಮಂಡಲೇಶ್ವರನು, ಸರೋಜಷಂಡದೊಳ್ ಬೀಡಂಬಿಟ್ಟಿರ್ಪನ್ನೆಗಂ = ತಾವರೆಯ ಸಮೂಹದ ನಡುವೆ ಬೀಡುಬಿಟ್ಟಿರುವಾಗ, ಸ್ವರ್ಗ + ಅಪವರ್ಗಮಾರ್ಗದಂತೆ = ಸ್ವರ್ಗಮೋಕ್ಷಗಳ ದಾರಿಯ ಹಾಗೆ, ಅಪಗತಕಲ್ಮಷರುಂ = ಕಲ್ಮಷರಹಿತರೂ, ಅಂಭೋಧಿಯಂತೆ ಗಂಭೀರ + ಆಶಯರುಂ = ಸಮುದ್ರದ ಹಾಗೆ ಗಂಭೀರರೂ, ಆದಿತ್ಯನಂತೆ ನಿರ್ಧೂತತಮಸ್ತಮರುಂ = ಸೂರ್ಯನ ಹಾಗೆ ಕತ್ತಲೆಯನ್ನು ಹೋಗಲಾಡಿಸುವವರೂ, ಅಂಬರದಂತೆ ಸನ್ಮಾರ್ಗರುಂ = ಆಕಾಶದ ಹಾಗೆ ಒಳ್ಳೆಯ ಹಾದಿಯಲ್ಲಿ ನಡೆವವರೂ, ಚಂದ್ರನಂತೆ ಸರ್ವಸತ್ತ್ವಸೌಮ್ಯರುಂ = ಚಂದ್ರನ ಹಾಗೆ ಎಲ್ಲ ಜೀವಿಗಳ ಬಗ್ಗೆ ಮೃದುಸ್ವಭಾವ ತೋರುವವರೂ, ಅನಿಲನಂತೆ ನಿಸ್ಸಂಗರುಂ = ಗಾಳಿಯ ಹಾಗೆ ಯಾವುದಕ್ಕೂ ಅಂಟದವರೂ, ಚಿಂತಾಮಣಿಯಂತೆ ಭವ್ಯಜನಮನಃ + ಅಭಿಲಷಿತ ಫಲಪ್ರದರುಂ = ಚಿಂತಾಮಣಿಯ ಹಾಗೆ ಭಾವುಕ ಜನರ ಅಭೀಷ್ಟಗಳನ್ನು ನೆರವೇರಿಸಬಲ್ಲವರೂ, ಮೇರುವಿನಂತೆ + ಅಚಳಿತಧೈರ್ಯ ಗುಣರುಂ + ಅಪ್ಪ = ಮೇರುಪರ್ವತದಂತೆ ನಿಶ್ಚಲವಾದ ಧೈರ್ಯಗುಣವುಳ್ಳವರೂ ಆದ, ಧರ್ಮವರಸಾಗರಸೇನರೆಂಬ ಗಗನಚಾರಣರ್ = ಧರ್ಮವರ ಮತ್ತು ಸಾಗರಸೇನರೆಂಬ ಹೆಸರಿನ ಗಗನಚಾರಣರು, ಕಾಂತಾರಚರ್ಯಾಮಾರ್ಗದೊಳ್ = ಕಾಂತಾರಚರ್ಯೆಯ ಮಾರ್ಗದಲ್ಲಿ, ತಮ್ಮ ವಾಸಕ್ಕೆ ಬರ್ಪರಂ = ತಮ್ಮ ಬೀಡಿಗೆ ಬರುತ್ತಿರುವುದನ್ನು, ಶ್ರೀಮತಿಯುಂ ತಾನುಂ ಕಂಡು = ಶ್ರೀಮತಿ ವಜ್ರಜಘರು ಕಂಡು, ಸಂಭ್ರಮಂಬೆರಸು + ಇದಿರಂ ನಡೆದು = ಸಡಗರದಿಂದ ಎದುರುಗೊಳ್ಳಲು, ಬದ್ಧ + ಅಂಜಲಿಪುಟಘಟಿತನಿಟಿಲರಾಗಿ = ಜೋಡಿಸಿದ ಕೈಗಳನ್ನು ಹಣೆಯಲ್ಲಿ ಹೊತ್ತವರಾಗಿ, ನಿಲ್ಕೆ + ಎಂದು ನಿಲಿಸಿ = ದಯವಿಟ್ಟು ನಿಲ್ಲಿ ಎಂದು ಬೇಡಿ ನಿಲ್ಲಿಸಿಕೊಂಡು,

**ಗದ್ಯಾನುಸರಣ:** ಹಾಗೆ ಆ ಮಂಡಲೇಶ್ವರನು ತಾವರೆಯ ಸಮೂಹದ ನಡುವೆ ಬೀಡುಬಿಟ್ಟಿದ್ದ; ಒಂದು ದಿನ ಸ್ವರ್ಗಮೋಕ್ಷಗಳ ದಾರಿಯ ಹಾಗೆ ಕಲ್ಮಷರಹಿತರೂ, ಸಮುದ್ರದ ಹಾಗೆ ಗಂಭೀರರೂ, ಸೂರ್ಯನ ಹಾಗೆ ಕತ್ತಲೆ (ಅಜ್ಞಾನ)ಯನ್ನು ಹೋಗಲಾಡಿಸುವವರೂ, ಆಕಾಶದ ಹಾಗೆ ಒಳ್ಳೆಯ ಹಾದಿಯಲ್ಲಿ ನಡೆವವರೂ, ಚಂದ್ರನ ಹಾಗೆ ಎಲ್ಲ ಜೀವಿಗಳ ಬಗ್ಗೆ ಮೃದುಸ್ವಭಾವ ತೋರುವವರೂ, ಗಾಳಿಯ ಹಾಗೆ ಯಾವುದಕ್ಕೂ ಅಂಟದವರೂ, ಚಿಂತಾಮಣಿಯ ಹಾಗೆ ಭಾವುಕ ಜನರ ಅಭೀಷ್ಟಗಳನ್ನು ನೆರವೇರಿಸಬಲ್ಲವರೂ, ಮೇರುಪರ್ವತದಂತೆ ನಿಶ್ಚಲವಾದ ಧೈರ್ಯಗುಣವುಳ್ಳವರೂ ಆದ ಧರ್ಮವರ ಮತ್ತು ಸಾಗರಸೇನರೆಂಬ ಗಗನಚಾರಣರು ಕಾಂತಾರಚರ್ಯೆಯ ಮಾರ್ಗದಲ್ಲಿ ತಮ್ಮ ಬೀಡಿಗೆ ಬರುತ್ತಿರುವುದನ್ನು ಕಂಡರು;

ಆಗ ಶ್ರೀಮತಿ ವಜ್ರಜಂಘರು ಸಡಗರದಿಂದ ಕೈಜೋಡಿಸಿ ಹಣೆಯಲ್ಲಿ ಹೊತ್ತು ಎದುರುಗೊಂಡು ದಯವಿಟ್ಟು ನಿಲ್ಲಲು ಬೇಡಿ ನಿಲ್ಲಿಸಿಕೊಂಡರು.

**ವಿಶೇಷ ವಿಚಾರ:** ಕಾಂತಾರಚರ್ಯೆ = ಕಾಡಿನಲ್ಲಿ ಸಿಕ್ಕಿದುದನ್ನು ಮಾತ್ರ ಸೇವಿಸುವ ಋಷಿಗಳ ವ್ರತ.

**ಇದಿರ್ಗೊಳ್ವುದು ಕಾಲ್ಗರ್ಚುವು**
**ದುದಾತ್ತಮಪ್ಪೆಡೆಯೊಳಿರಿಪುದರ್ಚಿಪುದೆಱಗಿ**
**ಪೆರ್ಱದು ಕರಣಶುದ್ಧವಡೆವುದು**
**ಪದೆದನ್ನಮನೀವುದೆಂಬ ನವವಿಧಪುಣ್ಯಂ** ೯೬

**ಪದವಿಭಾಗ–ಅನ್ವಯ–ಅರ್ಥ:** ಇದಿರ್ಗೊಳ್ವುದು= ಎದುರಾಗಿ ಬಂದು ಸ್ವಾಗತಿಸುವುದು, ಕಾಲ್ + ಕರ್ಚುವುದು = ಕಾಲು ತೊಳೆಯುವುದು, ಉದಾತ್ತಮಪ್ಪ + ಎಡೆಯೊಳ್ + ಇರಿಪುದು = ಸೂಕ್ತವಾದ ಜಾಗದಲ್ಲಿ ಉಳಿಸುವುದು, ಅರ್ಚಿಪುದು = ಪೂಜಿಸುವುದು, ಎಱಗಿಪೆರ್ಱದು = ನಮಸ್ಕರಿಸುವುದು, ಕರಣಶುದ್ಧವಡೆವುದು = ಕರಣಶುದ್ಧಿಯನ್ನು ಹೊಂದುವುದು, ಪದೆದು + ಅನ್ನಮನ್ + ಈವುದು = ಭಕ್ತಿಯಿಂದ ಉಣಬಡಿಸುವುದು, ಎಂಬ ನವವಿಧಪುಣ್ಯಂ = ಎನ್ನುವ ನವವಿಧಪುಣ್ಯವು,

**ಗದ್ಯಾನುಸರಣ:** ಎದುರು ಬಂದು ಸ್ವಾಗತಿಸುವುದು, ಕಾಲು ತೊಳೆಯುವುದು, ಸೂಕ್ತವಾದ ಜಾಗದಲ್ಲಿ ಉಳಿಸುವುದು, ಪೂಜಿಸುವುದು, ನಮಸ್ಕರಿಸುವುದು, ಕರಣಶುದ್ಧಿಯನ್ನು ಹೊಂದುವುದು, ಭಕ್ತಿಯಿಂದ ಉಣಬಡಿಸುವುದು ಎನ್ನುವುವು ನವವಿಧಪುಣ್ಯವು,

**ವ॥ ತಮಗೆ ದೊರೆಕೊಳೆ**

**ಅರ್ಥ:** ತಮಗೆ ದೊರೆಕೊಳೆ = ಇವುಗಳು ದೊರೆಯುವ ಹಾಗೆ ಶ್ರೀಮತಿ ವಜ್ರಜಂಘರು ಉಪಚರಿಸಿ,

**ನೆಱೆದಟ್ಟು ಭಕ್ತಿ ದಯೆ ಮದಿ**
**ದಱುವೌದಾರ್ಯಂ ಕ್ಷಮಾಗುಣಂ ಶಕ್ತಿಯುಮೆಂ**
**ಬಱಕೆಯ ಗುಣಮೇೞಱೊಳಂ**
**ನೆಱೆದಿತ್ತರ್ ಮುನಿಯುಗಕ್ಕೆ ದಾನಮನವರ್ಗಳ್** ೯೭

**ಪದವಿಭಾಗ–ಅನ್ವಯ–ಅರ್ಥ:** ನೆಱೆದ = ಸೇರಿದ ಅಟ್ಟು ಭಕ್ತಿ ದಯೆ = ಪ್ರೀತಿ ಭಕ್ತಿ ದಯೆಗಳು, ಮದಿದ + ಅಱುವು + ಔದಾರ್ಯಂ = ತಿಳಿವಳಿಕೆ ಉದಾರತೆ, ಕ್ಷಮಾಗುಣಂ ಶಕ್ತಿಯುಂ = ಕ್ಷಮೆ ಮತ್ತು ಶಕ್ತಿ, ಎಂಬ + ಅಱಕೆಯ ಗುಣಮೇೞಱೊಳಂ = ಎನ್ನು ಶ್ರೇಷ್ಠವಾದ ಏಳುಗುಣಗಳನ್ನೂ ಒಳಗೊಂಡಂತೆ,

ದಾನಮನ್ + ಅವರ್ಗಳ್ ಮುನಿಯುಗಕ್ಕೆ ನೆಱೆದು + ಇತ್ತರ್ = ಅವರು ದಾನಗಳನ್ನು ಆ ಮುನಿಗಳಿಗೆ ಯಥೇಷ್ಟವಾಗಿ ನೀಡಿದರು.

**ಗದ್ಯಾನುಸರಣ:** ಪ್ರೀತಿ ಭಕ್ತಿ ದಯೆ ತಿಳಿವಳಿಕೆ ಉದಾರತೆ ಕ್ಷಮೆ ಮತ್ತು ಶಕ್ತಿ, ಎನ್ನುವ ಶ್ರೇಷ್ಠವಾದ ಏಳುಗುಣಗಳಿಂದಲೂ ಕೂಡಿ ಅವರು ಆ ಮುನಿಗಳಿಗೆ ಯಥೇಷ್ಟವಾಗಿ ದಾನಗಳನ್ನು ನೀಡಿದರು.

**ವಿಶೇಷ ವಿಚಾರ:** ಇದನ್ನೇ ಈ ಕಾವ್ಯದ ಮತ್ತೊಂದೆಡೆ 'ಶ್ರದ್ಧಾದಿ ಸಪ್ತಗುಣ' ಎಂದಿರುವುದು, ಆದಿಪು, ೧೦, ೧ ವ.

**ಸುರತೂರ್ಯಧ್ವಾನಮೆಯ್ತುರ್ಪಲರ ಸರಿ ಪೊದಳ್ದಿರ್ದ ರೈಧಾರೆ ದೇವೇಂ**
**ದ್ರಹೋದಾನಪ್ರಸಿದ್ಧಧ್ವನಿ ಸುರಭಿಸಮೀರಪ್ರಚಾರಂ ಜಗಕ್ಕ**
**ಚ್ಚರಿ ಪಂಚಾಶ್ಚರ್ಯಮೆತ್ತಂ ನೆಗಱೆ ಶಿಬಿರದೊಳ್ ವಿಸ್ಮಯಾಕ್ರಾಂತನಿರ್ದಂ**
**ಪಿರಿದೊಂದಾನಂದದಿಂದಂಸುಕವಿಜನೋಮನೋಮಾನಸೋತ್ತಂಸಹಂಸಂ**
**೯೮**

**ಪದವಿಭಾಗ–ಅನ್ವಯ–ಅರ್ಥ**: ಸುರತೂರ್ಯಧ್ವಾನಂ = ದೇವದುಂದುಭಿಗಳ ಮೊಳಗು, ಎಯ್ತುರ್ಪ + ಅಲರ ಸರಿ = ಸುರಿವ ಹೂಮಳೆ, ಪೊದಳ್ದಿರ್ದರೈಧಾರೆ = ಸೂಸುವ ಚಿನ್ನದ ಮಳೆ, ದೇವೇಂದ್ರ + ಅಹೋದಾನ ಪ್ರಸಿದ್ಧಧ್ವನಿ = ಇಂದ್ರರ'ಅಹೋದಾನ' ಎಂಬ ಪ್ರಸಿದ್ಧವಾದ ಘೋಷಣೆ, ಸುರಭಿಸಮೀರಪ್ರಚಾರಂ = ಕಂಪಿನಿದ ಕೂಡಿ ಬೀಸುವ ಗಾಳಿ, ಜಗಕ್ಕಚ್ಚರಿ = ಜಗತ್ತಿಗೆ ಆಶ್ಚರ್ಯವನ್ನುಂಟು ಮಾಡುವ, ಪಂಚಾಶ್ಚರ್ಯಂ + ಎತ್ತಂ ನೆಗಱೆ = ಐದು ಅಚ್ಚರಿಗಳು ಎಲ್ಲೆಲ್ಲೂ ಕಾಣಿಸಿಕೊಳ್ಳಲು, ಶಿಬಿರದೊಳ್ ಸುಕವಿಜನೋಮನೋ ಮಾನಸೋತ್ತಂಸಹಂಸಂ = ತನ್ನ ಬಿಡಾರದಲ್ಲಿ ಸುಕವಿಮನೋಮಾನಸೋತ್ತಂಸ ಹಂಸನಾದ ವಜ್ರಜಂಘನು, ವಿಸ್ಮಯಾಕ್ರಾಂತನ್ ಪಿರಿದೊಂದಾನಂದದಿಂದಂ ಇರ್ದಂ = ವಿಸ್ಮಯದಿಂದ ಕೂಡಿ ಮಹಾ ಸಂತೋಷದಿಂದ ಇದ್ದ.

**ಗದ್ಯಾನುಸರಣ:** ದೇವದುಂದುಭಿಗಳ ಮೊಳಗು, ಸುರಿವ ಹೂಮಳೆ, ಸೂಸುವ ಚಿನ್ನದ ಮಳೆ, ಇಂದ್ರರ 'ಅಹೋದಾನ' ಎಂಬ ಪ್ರಸಿದ್ಧವಾದ ಘೋಷಣೆ, ಕಂಪಿನಿದ ಕೂಡಿ ಬೀಸುವ ಗಾಳಿ – ಜಗತ್ತಿಗೆ ಆಶ್ಚರ್ಯವನ್ನುಂಟುಮಾಡುವ ಈ ಪಂಚಾಶ್ಚರ್ಯ ಗಳು ಎಲ್ಲೆಲ್ಲೂ ಕಾಣಿಸಿಕೊಳ್ಳಲು, ತನ್ನ ಬಿಡಾರದಲ್ಲಿ ಸುಕವಿಮನೋ ಮಾನಸೋತ್ತಂಸಹಂಸನಾದ ವಜ್ರಜಂಘನು ವಿಸ್ಮಯದಿಂದ ಕೂಡಿದ ಆನಂದವನ್ನು ಹೊಂದಿದ.

ವ। ಅಂತು ಬೀಡಿಂಗಮಾಶ್ಚರ್ಯಂ ನೆಗಟೆ,

**ಅರ್ಥ:** ಅಂತು ಬೀಡಿಂಗಂ + ಆಶ್ಚರ್ಯಂ ನೆಗಟೆ = ಈ ರೀತಿ ಬಿಡಾರದಲ್ಲೆಲ್ಲ ಅಚ್ಚರಿಯುಂಟಾಗಲು,

**ಕ್ಷಿತಿಚಕ್ರಾರ್ಚಿತಚಕ್ರವರ್ತಿಪದಮುಂ ದೇವೇಂದ್ರರಾಜ್ಯೋದಯೋ**
**ನ್ನತಿಯುಂ ಭವ್ಯಜನಂಗಳಾಶೆವಡುತಿರ್ಪಾರ್ಹಂತ್ಯಮುಂ ಸಾರ್ಗುಮ**
**ನ್ವಿತದಾನಂಗರಿದುಂಟೆ ಸೌಖ್ಯಮೆನುತುಂ ದಾನಪ್ರಭಾವಕ್ಕೆ ಸಂ**
**ಚಿತಪುಣ್ಯೋದಯನಾಗಳಾದಮೊಸೆದಂ ಸಂಸಾರಸಾರೋದಯಂ॥**

**ಪದವಿಭಾಗ–ಅನ್ವಯ–ಅರ್ಥ:** ಕ್ಷಿತಿಚಕ್ರ + ಅರ್ಚಿತಚಕ್ರವರ್ತಿಪದಮುಂ = ಭೂಮಂಡಲವೇ ಗೌರವಿಸುವ ಚಕ್ರವರ್ತಿ ಪದವಿಯೂ, ದೇವೇಂದ್ರರಾಜ್ಯೋದಯ + ಉನ್ನತಿಯುಂ = ದೇವೇಂದ್ರನ ರಾಜ್ಯವೇ ದೊರೆಯುವ ಹಿರಿಮೆಯೂ, ಭವ್ಯಜನಂಗಳ್ + ಆಶೆವಡುತಿರ್ಪ + ಆರ್ಹಂತ್ಯಮುಂ = ಭಾವುಕರು ಎದುರು ನೋಡುವ ಅರ್ಹಂತಯೋಗವೂ, ಸಾರ್ಗುಂ = ಉಂಟಾಗುತ್ತವೆ; ಅನ್ವಿತದಾನಂಗೆ ಅರಿದು ಸೌಖ್ಯಂ ಉಂಟೆ = ದಾನಗುಣವುಳ್ಳನಿಗೆ ಅಸಾಧ್ಯವಾದ ಸುಖ ಎಂಬುದುಂಟೆ? ಎನುತುಂ = ಎಂದು, ದಾನಪ್ರಭಾವಕ್ಕೆ = ದಾನದ ಮಹಿಮೆಗೆ, ಆಗಳ್ ಸಂಚಿತಪುಣ್ಯೋದಯನ್ ಸಂಸಾರಸಾರೋದಯಂ ಆದಂ + ಒಸೆದಂ = ಪುಣ್ಯವನ್ನು ಗಳಿಸಿಕೊಂಡ ಸಂಸಾರಸಾರೋದಯನಾದ ವಜ್ರಜಂಘನು ಆಗ ತುಂಬ ಸಂತಸಪಟ್ಟ.

**ಗದ್ಯಾನುಸರಣ:** ಭೂಮಂಡಲವೇ ಗೌರವಿಸುವ ಚಕ್ರವರ್ತಿ ಪದವಿ, ದೇವೇಂದ್ರನ ರಾಜ್ಯವೇ ದೊರೆಯುವ ಹಿರಿಮೆ, ಭಾವುಕರು ಎದುರುನೋಡುವ ಅರ್ಹಂತಯೋಗ – ಇವು ದಾನಗುಣವುಳ್ಳನಿಗೆ ದೊರೆಯುತ್ತವೆ; ಅವನಿಗೆ ಅಸಾಧ್ಯವಾದ ಸುಖ ಎಂಬುದುಂಟೆ? ಎಂದು ದಾನದ ಮಹಿಮೆಯ ಬಗ್ಗೆ ಪುಣ್ಯವನ್ನು ಗಳಿಸಿಕೊಂಡ ಸಂಸಾರಸಾರೋದಯನಾದ ವಜ್ರಜಂಘನು ತುಂಬ ಸಂತಸಪಟ್ಟ.

**ಇಲ್ಲಿಗೆ ಚಾರಣಯುಗಳದಾನೋತ್ಸವವರ್ಣನಂ ಎಂಬ**
**ನಾಲ್ಕನೆಯ ಆಶ್ವಾಸವು ಮುಗಿಯಿತು**

# ಐದನೆಯ ಆಶ್ವಾಸ

**ಶ್ರೀಮತಿವೆರಸಾಗಳತಿ**
**ಪ್ರೇಮದೆ ಮುನಿಯುಗಳನಿಕಟಮಂ ಸಾರ್ದಿನಿತೇ**
**ಕೀ ಮೋಹಮಿವರೊಳೆನಗೆಂ**
**ದಾ ಮಹಿಮಹಿತಂ ಸರಸ್ವತೀಮಣಿಹಾರಂ** ೧

**ಪದವಿಭಾಗ-ಅನ್ವಯ-ಅರ್ಥ:** ಆಗಳ್ = ಆಗ, ಶ್ರೀಮತಿವೆರಸು = ಶ್ರೀಮತಿಯೊಡನೆ, ಮುನಿಯುಗಳನಿಕಟಮಂ ಅತಿಪ್ರೇಮದೆ ಸಾರ್ದು = ಆ ಮುನಿಗಳ ಜೋಡಿಯೆಡೆಗೆ ತುಣಬು ಭಕ್ತಯಿಂದ ಬಂದು, ಇವರೊಳ್ + ಎನಗೆ ಇನಿತೇಕೀ ಮೋಹಂ = ಇವರ ಬಗ್ಗೆ ನನಗೆ ಇಷ್ಟೇಕೆ ಮೋಹ, ಎಂದು + ಆ ಮಹಿಮಹಿತಂ ಸರಸ್ವತೀಮಣಿಹಾರಂ = ಎಂದು ಲೋಕಪೂಜ್ಯನೂ ಸರಸ್ವತೀಮಣಿಹಾರನೂ ಆದ ವಜ್ರಜಂಘನು

**ಪದವಿಭಾಗ-ಅನ್ವಯ-ಅರ್ಥ:** ಲೋಕಪೂಜ್ಯನೂ ಸರಸ್ವತೀಮಣಿಹಾರನೂ ಆದ ವಜ್ರಜಂಘನು ಶ್ರೀಮತಿಯೊಡನೆ ಆ ಮುನಿಗಳ ಜೋಡಿಯೆಡೆಗೆ ತುಂಬು ಭಕ್ತಿಯಿಂದ ಬಂದು 'ಇವರ ಬಗ್ಗೆ ನನಗೆ ಇಷ್ಟೇಕೆ ಮೋಹ' ಎಂದುಕೊಂಡ.

**ವ। ಬೆಸಗೊಂಡಾಗಳ್ ವೃದ್ಧಕಂಚುಕಿ,**

**ಅರ್ಥ:** ಬೆಸಗೊಂಡಾಗಳ್ ವೃದ್ಧಕಂಚುಕಿ = ಹಾಗೆಂದು ಬಾಯಿಬಿಟ್ಟು ಕೇಳಿದಾಗ ವೃದ್ಧಕಂಚುಕಿಯು

**ವಿಶೇಷ ವಿಚಾರ:** ಕಂಚುಕಿ = ಅರಮನೆಯ ಪಾರುಪತ್ತೇದಾರ.

**ಇನಿತುವರಂ ವ್ಯಾಮೋಹಂ**
**ನಿನಗೇಕಾದುದು ಬಗೆದು ಭಾವಿಸಿ ನೋಡೀ**
**ಮುನಿಯರ್ ನಾಲ್ವತ್ತೊಂಬ**
**ತ್ತನೆಯುಮಳ್ಗಳ್ ನಿನ್ನ ತನಯರಲ್ಲರೆ ನೃಪತೀ** ೨

**ಪದವಿಭಾಗ-ಅನ್ವಯ-ಅರ್ಥ:** ಇನಿತುವರಂ ವ್ಯಾಮೋಹಂ ನಿನಗೆ +

ಏಕಾದುದು ಬಗೆದು ಭಾವಿಸಿ ನೋಡು = ಇಷ್ಟೊಂದು ಮೋಹ ನಿನಗೇಕೆ ಉಂಟಾಗಿದೆ ಎಂಬುದನ್ನು ಆಲೋಚಿಸಿ ನೋಡು, ಈ ಮುನಿಯರ್ ನಿನ್ನ ತನಯರ್ = ಈ ಮುನಿಗಳು ನಿನ್ನ ಮಕ್ಕಳಲ್ಲಿ, ನಾಲ್ವತ್ತೊಂಬತ್ತನೆಯಮಳ್ಗಳ್ ಅಲ್ಲರೆ ನೃಪತೀ = ನಲವತ್ತೊಂಬತ್ತನೆಯ ಅವಳಿಮಕ್ಕಳಲ್ಲವೇ?

**ಗದ್ಯಾನುಸರಣ:** 'ಇವರ ಬಗ್ಗೆ ನಿನಗೆ ಇಷ್ಟೊಂದು ಮೋಹ ಏಕೆ ಉಂಟಾಗಿದೆ ಎಂಬುದನ್ನು ಆಲೋಚಿಸಿ ನೋಡು: ಈ ಮುನಿಗಳು ನಿನ್ನ ನಲವತ್ತೊಂಬತ್ತನೆಯ ಅವಳಿಮಕ್ಕಳಲ್ಲವೇ?' ಎಂದು ಕಂಚುಕಿ ಹೇಳಿದ.

ವ। ಎಂಬುದುಮರಸನಱಿದುಸಿರದಿರಿಮೆಂದು ತನ್ಮುನಿಗಳ ಪಾದ ಪ್ರಕ್ಷಾಳನೋದಕದೊಳ್ ಪೊರಳ್ದು ಪುಷ್ಪವರ್ಷದ ಪೂಗಳೊಳ್ ಪುದಿದು ದಾನಾನುಮೋದಪ್ರಭಾವದಿಂದುಪಶಮ ಭಾವಮಂ ತಾಳ್ದಿ ಮುನಿಪತಿಯ ಮುಖಾರವಿಂದಮಂ ನೋಡುತಿರ್ದ ಶಾರ್ದೂಲವರಾಹ ಗೋಲಾಂಗೂಲನ ಕುಳಂಗಳಂ ನೋಡುತ್ತುಮದರ್ಕೆ ಭಕ್ಷ್ಯಾಪೂಪಂಗಳಂ ತರಿಸಿ ನೀಡುತ್ತು ಮಿರ್ದಾತ್ಮೀಯ ಪರಮಪ್ರಸಾದಭೂಮಿಗಳಾಗಿರ್ದ ಮಂತ್ರಿಸೇನಾನಾಯಕ ಪುರೋಹಿತಶ್ರೇಷ್ಠಪದನಿಯುಕ್ತರಪ್ಪ ಮತಿವರಾಕಂಪನಾನಂದ ಧನಮಿತ್ರರೆಂಬ ನಾಲ್ವರ ಭವಾವಳಿಯುಂ ಬೆಸಗೊಳೆ ದಮಧರಮುನಿನಾಥನವಧಿ ಬೋಧ ದಿಂದನುಕ್ರಮಂದಪ್ಪದೆ,

**ಪದವಿಭಾಗ–ಅನ್ವಯ–ಅರ್ಥ:** ಎಂಬುದುಂ = ಎಂದು ಹೇಳಲು, ಅರಸನ್ + ಅಱಿದು = ವಜ್ರಜಂಘನು ತಿಳಿದುಕೊಂಡು, ಉಸಿರದಿರಿಂ + ಎಂದು = ಇನ್ನು ಹೆಚ್ಚು ಹೇಳಬೇಡ ಎಂದು, ತತ್ + ಮುನಿಗಳ ಪಾದಪ್ರಕ್ಷಾಳನ + ಉದಕದೊಳ್ ಪೊರಳ್ದು = ಆ ಮುನಿಗಳ ಕಾಲುತೊಳೆದ ನೀರಿನಲ್ಲಿ ಹೊರಳಿ, ಪುಷ್ಪವರ್ಷದ ಪೂಗಳೊಳ್ ಪುದಿದು = ಹೂಮಳೆಯ ಹೂಗಳಲ್ಲಿ ಸೇರಿ, ದಾನ + ಅನುಮೋದಪ್ರಭಾವದಿಂದೆ + ಉಪಶಮಭಾವಮಂ ತಾಳ್ದಿ = ದಾನವನ್ನು ಒಪ್ಪಿದುದರ ಪ್ರಭಾವದಿಂದಾಗಿ ನಿರುಮ್ಮಳಭಾವವನ್ನು ತಾಳಿ, ಮುನಿಪತಿಯ ಮುಖಾರವಿಂದಮಂ ನೋಡುತಿರ್ದ = ಮುನಿಪತಿಯ ಮುಖಕಮಲವನ್ನೇ ನಿಟ್ಟಿಸುತ್ತಿದ್ದ, ಶಾರ್ದೂಲವರಾಹಗೋಲಾಂಗೂಲನಕುಳಂಗಳಂ ನೋಡುತ್ತುಂ = ಹುಲಿ ಹಂದಿ ಕೋತಿ ಮುಂಗುಸಿಗಳನ್ನು ನೋಡುತ್ತ, ಅದರ್ಕೆ ಭಕ್ಷ್ಯ + ಆಪೂಪಂಗಳಂ ತರಿಸಿ ನೀಡುತ್ತುಮಿರ್ದು = ಅವುಗಳಿಗೆ ತಿಂಡಿತಿನಿಸುಗಳನ್ನು ತರಿಸಿಕೊಟ್ಟು, ಆತ್ಮೀಯಪರಮಪ್ರಸಾದಭೂಮಿಗಳಾಗಿರ್ದ = ತನ್ನ ಆಪ್ತರಾಗಿದ್ದ, ಮಂತ್ರಿಸೇನಾನಾಯಕಪುರೋಹಿತಶ್ರೇಷ್ಠಪದನಿಯುಕ್ತರಪ್ಪ = ಮಂತ್ರಿ ಸೇನಾಪತಿ ಪುರೋಹಿತ ಮತ್ತು ಶ್ರೇಷ್ಠಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದ, ಮತಿವರ + ಆಕಂಪನ

+ ಆನಂದ + ಧನಮಿತ್ರರೆಂಬ ನಾಲ್ವರ ಭವಾವಳಿಯಂ ಬೆಸಗೊಳೆ = ಮತಿವರ ಆಕಂಪನ ಆನಂದ ಮತ್ತು ಧನಮಿತ್ರರ ಭವಾವಳಿಯ ಬಗ್ಗೆ ವಿಚಾರಿಸಲು, ದಮಧರಮುನಿನಾಥನ್ + ಅವಧಿಬೋಧದಿಂದೆ + ಅನುಕ್ರಮಂದಪ್ಪದೆ = ದಮಧರಮುನಿಯು ತನ್ನ ಅವಧಿಜ್ಞಾನದಿಂದ ತಿಳಿದು ಆ ಕ್ರಮದಲ್ಲಿಯೇ, (ಹೇಳತೊಡಗಿದ)

**ಗದ್ಯಾನುಸರಣ:** ಎಂದು ಹೇಳಲು ವಜ್ರಜಂಘನು ತಿಳಿದುಕೊಂಡು, 'ಇನ್ನು ಹೆಚ್ಚು ಹೇಳಬೇಡಿ' ಎಂದು ಸನ್ನೆಮಾಡಿದ; ಆನಂತರ ಆ ಮುನಿಗಳ ಕಾಲುತೊಳೆದ ನೀರಿನಲ್ಲಿ ಹೊರಳಿ, ಹೂಮಳೆಯ ಹೂಗಳಲ್ಲಿ ಸೇರಿ, ಅವರು ತನ್ನ ದಾನವನ್ನು ಒಪ್ಪಿದುದರ ಪ್ರಭಾವದಿಂದಾಗಿ ನಿರುಮ್ಮಳಭಾವವನ್ನು ತಾಳಿದ; ಮುನಿಪತಿಯ ಮುಖಕಮಲವನ್ನೇ ನಿಟ್ಟಿಸುತ್ತಿದ್ದ ಹುಲಿ ಹಂದಿ ಕೋತಿ ಮುಂಗುಸಿಗಳನ್ನು ನೋಡುತ್ತ, ಅವುಗಳಿಗೆ ತಿಂಡಿತಿನಿಸುಗಳನ್ನು ತರಿಸಿಕೊಟ್ಟ; ಆ ಬಳಿಕ ತನ್ನ ಆಪ್ತರಾಗಿದ್ದ ಮಂತ್ರಿ ಸೇನಾಪತಿ ಪುರೋಹಿತ ಮತ್ತು ಶ್ರೇಷ್ಠಿಗಳಾದ ಮತಿವರ ಆಕಂಪನ ಆನಂದ ಮತ್ತು ಧನಮಿತ್ರರ ಭವಾವಳಿಯ ಬಗ್ಗೆ ವಿಚಾರಿಸಿದ; ಆಗ ದಮಧರಮುನಿಯು ತನ್ನ ಅವಧಿಜ್ಞಾನದಿಂದ ಅದನ್ನು ತಿಳಿದು ಅದೇ ಕ್ರಮದಲ್ಲಿಯೇ ಹೇಳತೊಡಗಿದ.

**ಕೆದಱಿದಪುದು ದೆಸೆದೆಸೆಗಮೃ**
**ತದ ಪನಿಯುನಿದೊಂದು ಮುನಿಪಮುಖಚಂದ್ರಮನೆಂ**
**ಬುದನೆನಿಸೆ ದಶನದೀಧಿತಿ**
**ಮೃದುಮಧುರಗಭೀರನಿನದದಿಂ ಮುನಿ ನುಡಿದಂ ೩**

**ಪದವಿಭಾಗ-ಅನ್ವಯ-ಅರ್ಥ:** ಮುನಿಪಮುಖಚಂದ್ರಮನ್ = ಮುನಿಯ ಆ ಒಂದು ಮುಖಚಂದ್ರವು, ದೆಸೆದೆಸೆಗೆ + ಅಮೃತದ ಪನಿಯನ್ ಕೆದಱಿದಪುದು = ಎಲ್ಲ ದಿಕ್ಕುಗಳಿಗೂ ಅಮೃತದ ಹನಿಯನ್ನು ಸಿಂಪಡಿಸುತ್ತಿದೆಯೋ, ಎಂಬುದ + ಎನಿಸೆ = ಎಂದು ಅನಿಸುವಂತೆ, ದಶನದೀಧಿತಿ = ಹಲ್ಲುಗಳ ಕಾಂತಿ, ಮೃದುಮಧುರಗಭೀರನಿನದದಿಂ = ತನ್ನ ಮೃದುವೂ ಹಿತಕರವೂ ಗಂಭೀರವೂ ಆದ ಧ್ವನಿಯಿಂದ, ಮುನಿ ನುಡಿದಂ = ಮುನಿಯು ಹೇಳಿದ.

**ಗದ್ಯಾನುಸರಣ:** ತನ್ನ ಮುಖಚಂದ್ರವು ಎಲ್ಲೆಡೆಗೂ ಅಮೃತದ ಹನಿಯನ್ನು ಸಿಂಪಡಿಸುತ್ತಿದೆಯೋ ಎಂಬಂತೆ ಹಲ್ಲುಗಳ ಕಾಂತಿಯು ಪಸರಿಸಲು ಮೃದುವೂ ಹಿತಕರವೂ ಗಂಭೀರವೂ ಆದ ತನ್ನ ಧ್ವನಿಯಿಂದ ಮುನಿಯು ನಿರೂಪಿಸತೊಡಗಿದ.

**ವ। ಈ ಮತಿವರನೀ ಭವಕ್ಕಯ್ದನೆಯ ಭವದೊಳೀ ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವತೀವಿಷಯದ ಪ್ರತಿಬದ್ಧ ಪ್ರಭಾಕಲೀಪುರದೊಳತಿ ಗೃದ್ಧನೆಂಬರಸನಾಗಿ,**

**ಪದವಿಭಾಗ-ಅನ್ವಯ-ಅರ್ಥ:** ಈ ಮತಿವರನ್ + ಈ ಭವಕ್ಕೆ + ಅಯ್ದನೆಯ ಭವದೊಳ್ = ಮಂತ್ರಿ ಮತಿವರನು ತನ್ನ ಹಿಂದಿನ ಐದನೆಯ ಜನ್ಮದಲ್ಲಿ, ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವತೀವಿಷಯದ ಪ್ರತಿಬದ್ಧಪ್ರಭಾಕರೀಪುರದೊಳ್ = ಈ ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವತೀ ನಾಡಿನ ಪ್ರತಿ ಬದ್ಧಪ್ರಭಾಕರೀಪುರ ಎಂಬ ನಗರದಲ್ಲಿ, ಅತಿಗೃದ್ಧನೆಂಬ + ಅರಸನಾಗಿ = ಅತಿಗೃದ್ಧ ಎಂಬ ಹೆಸರಿನ ರಾಜನಾಗಿ,

**ಗದ್ಯಾನುಸರಣ:** ಮಂತ್ರಿ ಮತಿವರನು ತನ್ನ ಹಿಂದಿನ ಐದನೆಯ ಜನ್ಮದಲ್ಲಿ ಈ ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವತೀ ನಾಡಿನ ಪ್ರತಿಬದ್ಧಪ್ರಭಾಕರೀಪುರ ಎಂಬ ನಗರದಲ್ಲಿ ಅತಿಗೃದ್ಧ ಎಂಬ ಹೆಸರಿನ ರಾಜನಾಗಿದ್ದ.

**ವಿವಿಧಾರಂಭಪರಿಗ್ರಹಂ ವಿಷಯಸೌಖ್ಯಾಯತ್ತನತ್ಯಂತಲೋ**
**ಭವಿಷಗ್ರಸ್ತನುಪಾದ್ರಿಯೊಳ್ ದ್ರವಿಣಮಂ ಬಯ್ತುದ್ಧತಂ ತನ್ನುಸಿರ್**
**ತವೆ ಪಂಕಪ್ರಭೆಯೊಳ್ ದಶಾಬ್ದ್ಯುಪಮೆಯಿಂ ದುಃಖಾಗ್ನಿಯೊಳ್ಬೆಂದುಮ**
**ತ್ತವನಲ್ಲಿಂ ಪೊಱಮಟ್ಟು ಮುನ್ನ ಧನಮಂ ಬಯ್ತಿರ್ದಗಾರಣ್ಯದೊಳ್ಳ**

**ಪದವಿಭಾಗ-ಅನ್ವಯ-ಅರ್ಥ:** ವಿವಿಧ + ಆರಂಭಪರಿಗ್ರಹಂ = ನಾನಾ ಹಿಂಸಾಕೃತ್ಯಗಳಲ್ಲಿ ತೊಡಗಿದವನೂ, ವಿಷಯಸೌಖ್ಯ + ಆಯತ್ತನ್ = ಇಂದ್ರಿಯಸುಖಗಳಲ್ಲಿ ನಿರತನಾದವನೂ, ಅತ್ಯಂತಲೋಭವಿಷಗ್ರಸ್ತನ್ = ಮಹಾ ಜಿಪುಣತನದ ವಿಷದಿಂದ ಕೂಡಿದವನೂ, ಉಪಾದ್ರಿಯೊಳ್ ದ್ರವಿಣಮಂ ಬಯ್ತು + ಉದ್ಧತಂ = ಬೆಟ್ಟದ ಬುಡಗಳಲ್ಲಿ ಹಣವನ್ನು ಬಚ್ಚಿಟ್ಟ ದುಷ್ಟನೂ, ಆಗಿ, ತನ್ನುಸಿರ್ ತವೆ =ತನ್ನ ಆಯುಸ್ಸು ತೀರಲು, ಪಂಕಪ್ರಭೆಯೊಳ್ = ಪಂಕಪ್ರಭೆ ಎಂಬ ನರಕದಲ್ಲಿ, ದಶ + ಅಬ್ದ + ಉಪಮೆಯಿಂ = ಹತ್ತು ಸಾಗರಗಳಷ್ಟು ಕಾಲ, ದುಃಖಾಗ್ನಿಯೊಳ್ ಬೆಂದು = ದುಃಖದ ಬೆಂಕಿಯಲ್ಲಿ ಬೆಂದು, ಮತ್ತೆ + ಅವನಲ್ಲಿಂ ಪೊಱಮಟ್ಟು = ಪುನಃ ಅವನು ಅಲ್ಲಿಂದ ಹೊರಟು, ಮುನ್ನ ಧನಮಂ ಬಯ್ತಿರ್ದ + ಅಗಾರಣ್ಯದೊಳ್ = ಮುಂಚೆ ಹಣವನ್ನು ಬಚ್ಚಿಟ್ಟಿದ್ದ ಬೆಟ್ಟಗಾಡಿನಲ್ಲಿ,

**ಗದ್ಯಾನುಸರಣ:** ನಾನಾ ಹಿಂಸಾಕೃತ್ಯಗಳಲ್ಲಿ ತೊಡಗಿ, ಇಂದ್ರಿಯಸುಖಗಳಲ್ಲಿ ನಿರತನಾಗಿ, ಮಹಾ ಜಿಪುಣತನದ ವಿಷದಿಂದ ಕೂಡಿ, ಬೆಟ್ಟದ ಬುಡಗಳಲ್ಲಿ ಹಣವನ್ನು ಬಚ್ಚಿಟ್ಟು ಕೊನೆಯುಸಿರೆಳೆದ; ಆನಂತರ ಪಂಕಪ್ರಭೆ ಎಂಬ ನರಕದಲ್ಲಿ ಹತ್ತು ಸಾಗರಗಳಷ್ಟು ಕಾಲ ದುಃಖದ ಬೆಂಕಿಯಲ್ಲಿ ಬೆಂದ; ಅಲ್ಲಿಂದ ಹೊರಬಿದ್ದು ಮುಂಚೆ ಹಣವನ್ನು ಬಚ್ಚಿಟ್ಟಿದ್ದ ಬೆಟ್ಟಗಾಡಿನಲ್ಲಿ ಹುಟ್ಟಿದ.

**ಪುಲಿಯಾಗಿ ಪುಟ್ಟೆ ತನ್ಮಂ**
**ಡಲನಾಥಂ ಪ್ರೀತಿವರ್ಧನಂ ರಿಪುನೃಪರಂ**
**ಚಲದಲೆದು ಬಂದು ಚಾತು**
**ರ್ಬಲಯುತನಾ ನಗದ ಬಳಸಿ ಬೀಡಂ ಬಿಟ್ಟಂ** ೫೫

**ಪದವಿಭಾಗ-ಅನ್ವಯ-ಅರ್ಥ**: ಪುಲಿಯಾಗಿ ಪುಟ್ಟೆ = ಹುಲಿಯಾಗಿ ಹುಟ್ಟಲು, ತತ್ + ಮಂಡಲನಾಥಂ ಪ್ರೀತಿವರ್ಧನಂ = ಅಲ್ಲಿನ ಮಾಂಡಳಿಕನಾದ ಪ್ರೀತಿವರ್ಧನನು, ರಿಪುನೃಪರಂ ಚಲದಲೆದು ಬಂದು = ಶತ್ರುರಾಜರನ್ನು ಚಲದಿಂದ ಕಾಡಿ ಬಂದು, ಚಾತುರ್ಬಲಯುತನ್ + ಆ ನಗದೆ ಬಳಸಿ ಬೀಡಂ ಬಿಟ್ಟಂ = ಚತುರಂಗಬಲಸಮೇತನಾಗಿ ಆ ಬೆಟ್ಟದ ಸುತ್ತ ಬೀಡು ಬಿಟ್ಟ.

**ಗದ್ಯಾನುಸರಣ**: ಹೀಗೆ ಹುಲಿಯಾಗು ಹುಟ್ಟಿರಲು, ಒಮ್ಮೆ ಅಲ್ಲಿನ ಮಾಂಡಳಿಕನಾದ ಪ್ರೀತಿವರ್ಧನನು ಶತ್ರುರಾಜರ ಮೇಲೆ ಚಲದಿಂದ ದಂಡೆತ್ತಿ ಹೋಗಿ ಚತುರಂಗಬಲಸಮೇತನಾಗಿ ಆ ಬೆಟ್ಟದ ಸುತ್ತ ಬೀಡು ಬಿಟ್ಟ.

**ಬಿಡೆ ತಿರ್ದಿದ ಶಕುನದ ನಯ**
**ದಡಿವಿಡಿದು ಪುರೋಹಿತಂ ನೃಪಂಗೀ ನುಡಿಯಂ**
**ನುಡಿದಂ ಕನಕದ ಪೂಜೆಯ**
**ಪಡೆಪಾದಪುದಿಲ್ಲಿ ಮುನಿಯ ದಾನದಿನಧಿಪಾ ೬**

**ಪದವಿಭಾಗ-ಅನ್ವಯ-ಅರ್ಥ**: ಬಿಡೆ = ಹೀಗೆ ಬೀಡು ಬಿಟ್ಟರಲು, ಪುರೋಹಿತಂ ತಿರ್ದಿದ ಶಕುನದ ನಯದ + ಅಡಿವಿಡಿದು = ಪುರೋಹಿತನು ಶಕುನದ ಜಾಡುಹಿಡಿದು, ನೃಪಂಗೆ + ಈ ನುಡಿಯಂ ನುಡಿದಂ = ರಾಜನಿಗೆ ಹೀಗೆಂದು ಹೇಳಿದ, ಅಧಿಪಾ ಮುನಿಯ ಪೂಜೆಯ ದಾನದಿನ್ ಕನಕದ ಪಡೆಪು ಇಲ್ಲಿ ಆದಪುದು = ರಾಜನೇ, ಮುನಿಯ ಪೂಜೆ ದಾನಗಳಿಂದ ಇಲ್ಲಿ ಹಣದ ಪ್ರಾಪ್ತಿ ಉಂಟಾಗುತ್ತದೆ.

**ಗದ್ಯಾನುಸರಣ:** ಹೀಗೆ ಬೀಡು ಬಿಟ್ಟರಲು, ಶಕುನದ ಜಾಡುಹಿಡಿದು ಪುರೋಹಿತನು ರಾಜನಿಗೆ ಹೀಗೆಂದು ಹೇಳಿದ: 'ರಾಜನೇ, ಮುನಿಯ ಪೂಜೆ ದಾನಗಳಿಂದ ಇಲ್ಲಿ ಅಪಾರ ಹಣ ದೊರೆಯುತ್ತದೆ'.

**ಈಗಳೆ ನಿನಗೆಂಬುದುಮನು**
**ರಾಗದಿನಾ ಪ್ರೀತಿವರ್ಧನಂ ಮುನಿವರರೆಂ**
**ತೀ ಗಿರಿಗೆ ಚರಿಗೆವರ್ಪರ**
**ನಾಗತಮತಿ ಬಗೆಯ ನೀನುಪಾಯಾಂತರಮಂ ೭**

**ಪದವಿಭಾಗ-ಅನ್ವಯ-ಅರ್ಥ:** ಈಗಳೆ ನಿನಗೆ + ಎಂಬುದುಂ = ಈಗಲೇ ಫಲ ದೊರೆಯುತ್ತದೆ ಎನ್ನಲು, ಆ ಪ್ರೀತಿವರ್ಧನಂ ಅನುರಾಗದಿನ್ = ಆ ಪ್ರೀತಿ ವರ್ಧನನು ಆಸೆಯಿಂದ, ಮುನಿವರರ್ + ಎಂತು + ಈ ಗಿರಿಗೆ ಚರಿಗೆವರ್ಪರ್ = ಮುನಿಗಳು ಈ ಬೆಟ್ಟಕ್ಕೆ ಹೇಗೆ ಬರುತ್ತಾರೆ, ಅನಾಗತಮತಿ ನೀನ್ + ಉಪಾಯಾಂ

ತರಮಂ ಬಗೆಯ = ಭವಿಷ್ಯವನ್ನರಿಯುವವನೇ ನೀನು ಉಪಾಯವನ್ನು ಕಂಡುಹಿಡಿ (ಎಂದ)

ಗದ್ಯಾನುಸರಣ: ಈಗಲೇ ಫಲ ದೊರೆಯುತ್ತದೆ ಎನ್ನಲು ಆ ಪ್ರೀತಿವರ್ಧನನು ಆಸೆಯಿಂದ, 'ಮುನಿಗಳು ಈ ಬೆಟ್ಟಕ್ಕೆ ಹೇಗೆ ಬರುತ್ತಾರೆ, ಭವಿಷ್ಯಜ್ಞಾನಿಯಾದ ನೀನೇ ಉಪಾಯವನ್ನು ಕಂಡುಹಿಡಿ' ಎಂದ.

ಎನೆ ಪೊೞಲ ಬೀದಿವೀದಿಗ
ಳನಿತುಮನೋರಂತೆ ತಳಿದು ಗುಡಿಗಟ್ಟಿಸಿ ನೀಂ
ನನೆಯು ಮುಗುಳಲರ ತುಱುಗಲ
ನನಂತಮಂ ನೆಱೆಯೆ ಕೆದಱವೇೞ್ ನೃಪತಿಳಕಾ ೮

ಪದವಿಭಾಗ-ಅನ್ವಯ-ಅರ್ಥ: ಎನೆ = ಎಂದು ಕೇಳಲು, ನೃಪತಿಳಕಾ = ರಾಜಶ್ರೇಷ್ಠನೇ, ಪೊೞಲ ಬೀದಿವೀದಿಗಳ್ + ಅನಿತುಮನ್ = ನಗರದ ಬೀದಿಬೀದಿಗಳನ್ನು, ಓರಂತೆ ತಳಿದು ಗುಡಿಗಟ್ಟಿಸಿ = ಚೆನ್ನಾಗಿ ನೀರು ಚಿಮುಕಿಸಿ, ಅನಂತಮಂ ನನೆಯ ಮುಗುಳಲರ ತುಱುಗಲನ್ = ಅಪರಿಮಿತ ಮೊಗ್ಗು ಹಣ್ಣುಮೊಗ್ಗು ಮತ್ತು ಹೂಗಳ ಗೊಂಚಲುಗಳನ್ನು, ನೆಱೆಯೆ ಕೆದಱವೇೞ್ = ಚೆನ್ನಾಗಿ ಹರಡಲು ಹೇಳು.

ಗದ್ಯಾನುಸರಣ: ಹೀಗೆನ್ನಲು ಪುರೋಹಿತನು, 'ರಾಜಶ್ರೇಷ್ಠನೇ, ನಗರದ ಬೀದಿಬೀದಿಗಳಲ್ಲಿ ಚೆನ್ನಾಗಿ ನೀರು ಚಿಮುಕಿಸಿ, ಅಪರಿಮಿತ ಮೊಗ್ಗು ಹಣ್ಣುಮೊಗ್ಗು ಮತ್ತು ಹೂಗಳ ಗೊಂಚಲುಗಳನ್ನು ಚೆನ್ನಾಗಿ ಅವುಗಳ ಮೇಲೆ ಹರಡಲು ಹೇಳು.'

ಎಂದೊಡೆ ನೃಪನಾತನ ಪೇ
ೞ್ದಂದದೊಳದನಂತೆ ಮಾಡವೇೞ್ದೊಡೆ ಮುನಿಪಂ
ಸಂದ ಪಿಹಿತಾಸ್ರವಂ ಪುಗು
ತಂದಂ ನೋಂತೊಂದು ತಿಂಗಳಿಂಗಾ ಪುರಮಂ ೯

ಪದವಿಭಾಗ-ಅನ್ವಯ-ಅರ್ಥ: ಎಂದೊಡೆ = ಎಂದು ಹೇಳಲು, ಆತನ ಪೇೞ್ದ + ಅಂದದೊಳ್ ನೃಪನ್ ಅದನಂತೆ ಮಾಡವೇೞ್ದೊಡೆ = ಅವನು ಹೇಳಿದಂತೆಯೇ ಮಾಡಲು ಆಜ್ಞೆಮಾಡಲು, ಸಂದ ಮುನಿಪಂ ಪಿಹಿತಾಸ್ರವಂ = ಪಿಹಿತಾಸ್ರವ ಮುನಿಯು, ನೋಂತ + ಒಂದು ತಿಂಗಳಿಂಗೆ = ವ್ರತ ತೊಟ್ಟ ಒಂದು ತಿಂಗಳ ನಂತರ, ಆ ಪುರಮಂ ಪುಗುತಂದಂ = ಆ ನಗರವನ್ನು ಪ್ರವೇಶಿಸಲು ಬಂದ.

ಗದ್ಯಾನುಸರಣ: ಎಂದು ಪುರೋಹಿತನು ಹೇಳಲು, ಅವನು ಹೇಳಿದಂತೆಯೇ

ಮಾಡಲು ರಾಜ ಆಜ್ಞೆಮಾಡಿದ; ತಾನು ವ್ರತ ತೊಟ್ಟ ಒಂದು ತಿಂಗಳ ಬಳಿಕ ಪಿಹಿತಾಸ್ರವ ಮುನಿಯು ಆ ನಗರವನ್ನು ಪ್ರವೇಶಿಸಲು ಬಂದ.

**ತಳಿಯೆ ಕೆಸಱಾದ ಧರೆ ಪೂ**
**ಗಳ ತುಱುಗಲೊಳೆಸೆಯೆ ಪೊಟಿಲಿದಪ್ರಾಸುಕಮೆಂ**
**ದೊಳಪುಗದೆ ನಿಯಮದಿಂ ನಿ**
**ರ್ಮಳಚರಿತಂ ಚರಿಗೆವೊಕ್ಕನರಸನ ಬೀಡಂ ೧೦**

**ಪದವಿಭಾಗ-ಅನ್ವಯ-ಅರ್ಥ:** ತಳಿಯೆ ಕೆಸಱಾದ ಧರೆ = ನೀರು ಹಾಕಲು ಭೂಮಿ ಕೆಸರಿನಿಂದ ಕೂಡಲು, ಪೂಗಳ ತುಱುಗಲೊಳ್ + ಎಸೆಯೆ ಪೊಟಿಲ್ = ಹೂಗೊಂಚಲುಗಳಿಂದ ಕೂಡಿದ ನಗರವು, ಇದು + ಅಪ್ರಾಸುಕಂ + ಎಂದು = ಇದು ಅಪ್ರಾಸುಕ ಎಂಬ ಕಾರಣದಿಂದ, ನಿಯಮದಿಂ ಒಳಪುಗದೆ = ನಿಯಮಬದ್ಧನಾಗಿ ನಗರದೊಳಗೆ ಬರದೆ, ನಿರ್ಮಳಚರಿತಂ ನಿರ್ಮಲಚರಿತನಾದ ಮುನಿಯು, ಅರಸನ ಬೀಡಂ ಚರಿಗೆವೊಕ್ಕನ್ = ರಾಜನ ಬಿಡಾರಕ್ಕೆ ಚರಿಗೆಗಾಗಿ ಬಂದ.

**ಗದ್ಯಾನುಸರಣ:** ನೀರು ಹಾಕಲು ಭೂಮಿ ಕೆಸರಾಯಿತು, ನಗರವೆಲ್ಲ ಹೂಗೊಂಚಲುಗಳಿಂದ ತುಂಬಿತ್ತು; ಹೀಗಾಗಿ ಇದು ಅಪ್ರಾಸುಕ ಎಂಬ ಕಾರಣದಿಂದ, ನಿಯಮಬದ್ಧನಾಗಿ ಮುನಿಯು ಚರಿಗೆಗಾಗಿ ನಗರದೊಳಗೆ ಹೋಗದೆ ಊರ ಹೊರಗಿನ ರಾಜನ ಬಿಡಾರಕ್ಕೆ ಬಂದ.

**ವಿಶೇಷ ವಿಚಾರ:** ಅಪ್ರಾಸುಕ = ತೇವದಿಂದಾಗಿ ಜೀವಂತವಸ್ತುಗಳಿಂದ ಕೂಡಿ ಚರಿಗೆಗೆ ಯೋಗ್ಯವಲ್ಲದ್ದು; ಚರಿಗೆ = ಮುನಿಗಳ ಭಿಕ್ಷಾಟನೆ.

**ಪುಗೆ ನೃಪನಿದಿರಂ ಬಂದಾ**
**ವಗಮಟ್ಟಿಯೊಳಜಿದು ನಿಜಿಸೆ ದಾನೋನ್ನತಿಯೊಳ್**
**ಗಗನತಳದಿಂದೊರ್ಮೆಯೆ**
**ನೆಗೆದತ್ತಾಶ್ಚರ್ಯವಾಗೆ ಪಂಚಾಶ್ಚರ್ಯಂ ೧೧**

**ಪದವಿಭಾಗ-ಅನ್ವಯ-ಅರ್ಥ:** ಪುಗೆ ನೃಪನ್ + ಇದಿರಂ ಬಂದು = ಹೀಗೆ ಮುನಿ ಅರಣ್ಯವನ್ನು ಹೊಗಲು ರಾಜನು ಎದುರು ಬಂದು, ಆವಗಂ + ಅಟ್ಟಿಯೊಳಜಿದು ದಾನ + ಉನ್ನತಿಯೊಳ್ ನಿಜಿಸೆ = ಚರಿಗೆಗೆಂದು ನಿಲ್ಲಲು ಭಕ್ತಿಯಿಂದ ಕೇಳಿಕೊಂಡು ಉನ್ನತ ದಾನಗಳಿಂದ ಉಪಚರಿಸಲು, ಗಗನತಳದಿಂದ + ಒರ್ಮೆಯೆ ಪಂಚಾಶ್ಚರ್ಯಂ ಆಶ್ಚರ್ಯಮಾಗೆ ನೆಗೆದತ್ತು = ಆಗಸದಲ್ಲಿ ಪಂಚಾಶ್ಚರ್ಯಗಳು ಆಶ್ಚರ್ಯಕರವಾಗಿ ಕಾಣಿಸಿಕೊಂಡವು.

**ಗದ್ಯಾನುಸರಣ:** ಹೀಗೆ ಮುನಿ ಅರಣ್ಯವನ್ನು ಹೊಗಲು ರಾಜನು ಎದುರು ಬಂದು ಚರಿಗೆಗೆಂದು ನಿಲ್ಲಲು ಭಕ್ತಿಯಿಂದ ಕೇಳಿಕೊಂಡು ಉನ್ನತ ದಾನಗಳಿಂದ ಉಪಚರಿಸಿದ; ಆಗ ಆಗಸದಲ್ಲಿ ಪಂಚಾಶ್ಚರ್ಯಗಳು ಕಾಣಿಸಿಕೊಂಡವು.

**ವ। ಆಗಳಾ ಪರ್ವತದೊಳಿರ್ದ ಶಾರ್ದೂಲಂ ಜಾತಿಸ್ಮರನಾಗಿ ಪರಿತ್ಯಕ್ತಾಹಾರಶರೀರನಾಗಿ ಉಪಶಾಂತಸ್ವಾಂತನಿರ್ದುದೆಂಬುದಂ ತನ್ಮುನೀಂದ್ರ ರವಧಿಜ್ಞಾನದಿಂದಱಿದು ಆ ಪ್ರೀತಿವರ್ಧನನಂ ಪ್ರತಿಬೋಧಿಸುವ ಬಗೆಯೊಳಾ ಶಾರ್ದೂಲನ ಪೂರ್ವಭವ ವೃತ್ತಾಂತಮುಮಂ ಕಾಲಲಬ್ಧಿ ದೊರೆಕೊಳೆ ಶರೀರಪರಿತ್ಯಾಂಗೆಯ್ದಿರ್ದುದೆಂಬುದುಮನಱಿಪಿ ತದ್ಗಿರಿತಟದೊಳ್ ಮುನ್ನೆ ಪೂಟ್ದಿ ಸುವರ್ಣಪೂರ್ಣಕಟಾಹಂಗಳಂ ತೋಱಿದಾಗಳ್ ಚೋದ್ಯಂಬಟ್ಟು,**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ + ಆ ಪರ್ವತದೊಳ್ + ಇರ್ದ ಶಾರ್ದೂಲಂ = ಆಗ ಅದೇ ಪರ್ವತದಲ್ಲಿದ್ದ ಹುಲಿಯು, ಜಾತಿಸ್ಮರನಾಗಿ = ಹಿಂದಿನ ಜನ್ಮದ ನೆನಪನ್ನು ಪಡೆದು, ಪರಿತ್ಯಕ್ತ + ಆಹಾರಶರೀರನಾಗಿ = ದೇಹಕ್ಕೆ ಯಾವ ಆಹಾರವನ್ನೂ ತೆಗೆದುಕೊಳ್ಳದೆ, ಉಪಶಾಂತಸ್ವಾಂತನ್ + ಇರ್ದುದು + ಎಂಬುದಂ = ಸಮಾಧಾನಚಿತ್ತದಿಂದ ಇದ್ದುದನ್ನು, ತತ್ + ಮುನೀದ್ರರ್ + ಅವಧಿಜ್ಞಾನದಿಂದೆ + ಅಱಿದು = ಆ ಮುನಿಗಳು ಅವಧಿಜ್ಞಾನದಿಂದ ತಿಳಿದು, ಆ ಪ್ರೀತಿವರ್ಧನನಂ ಪ್ರತಿಬೋಧಿಸುವ ಬಗೆಯೊಳ್ = ಪ್ರೀತಿವರ್ಧನನಿಗೆ ಉಪದೇಶ ಮಾಡುವ ಸಂದರ್ಭದಲ್ಲಿ, ಆ ಶಾರ್ದೂಲನ ಪೂರ್ವಭವ ವೃತ್ತಾಂತಮುಮಂ = ಆ ಹುಲಿಯ ಹಿಂದಿನ ಜನ್ಮದ ಸಂಗತಿಯನ್ನೂ, ಕಾಲಲಬ್ಧಿ ದೊರೆಕೊಳೆ ಶರೀರಪರಿತ್ಯಾಂಗೆಯ್ದಿರ್ದುದು + ಎಂಬುದುಮನ್ + ಅಱಿಪಿ = ಕಾಲವು ಕೂಡಿ ಬಂದಿರಲು ಶರೀರವನ್ನು ಬಿಟ್ಟುದನ್ನೂ ಹೇಳಿ, ತತ್ + ಗಿರಿತಟದೊಳ್ ಮುನ್ನೆ ಪೂಟ್ದಿ = ಆ ಬೆಟ್ಟದ ತಪ್ಪಲಿನಲ್ಲಿ ಹೂತಿದ್ದ, ಸುವರ್ಣಪೂರ್ಣಕಟಾಹಂಗಳಂ ತೋಱಿದಾಗಳ್ = ಚಿನ್ನ ತುಂಬಿದ್ದ ಕಡಾಯಿಗಳನ್ನೂ ತೋರಿಸಲು, ಚೋದ್ಯಂಬಟ್ಟು = ಆಶ್ಚರ್ಯಗೊಂಡು,

**ಗದ್ಯಾನುಸರಣ:** ಆಗ ಅದೇ ಪರ್ವತದಲ್ಲಿದ್ದ ಹುಲಿಯು ಹಿಂದಿನ ಜನ್ಮದ ನೆನಪನ್ನು ಪಡೆದು ದೇಹಕ್ಕೆ ಯಾವ ಆಹಾರವನ್ನೂ ತೆಗೆದುಕೊಳ್ಳದೆ ಸಮಾಧಾನಚಿತ್ತದಿಂದ ಇದ್ದುದನ್ನು ಆ ಮುನಿಗಳು ಅವಧಿಜ್ಞಾನದಿಂದ ತಿಳಿದರು; ಪ್ರೀತಿವರ್ಧನನಿಗೆ ಉಪದೇಶಮಾಡುವ ಸಂದರ್ಭದಲ್ಲಿ, ಆ ಹುಲಿಯ ಹಿಂದಿನ ಜನ್ಮದ ಸಂಗತಿಯನ್ನೂ, ಕಾಲವು ಕೂಡಿ ಬಂದಿರಲು ಅದು ಶರೀರವನ್ನು ಬಿಟ್ಟುದನ್ನೂ ತಿಳಿಸಿದರು; ಅಲ್ಲದೆ, ಆ ಬೆಟ್ಟದ ತಪ್ಪಲಿನಲ್ಲಿ ಹೂತಿದ್ದ ಚಿನ್ನ ತುಂಬಿದ್ದ ಕಡಾಯಿಗಳನ್ನೂ ತೋರಿಸಿದರು. ಇದರಿಂದ ರಾಜ ಆಶ್ಚರ್ಯಗೊಂಡ.

**ಪಿರಿದುಂ ಪೂಜೆಯನರಸಂ**
**ಪರಿವಾರಂಬೆರಸು ಮಾಡೆ ಮುನಿಪತಿಯ ಪದಾಂ**
**ಬುರುಹದ ಮೊದಲೊಳ್ ನೋಂತುದು**
**ಭರದಿಂ ಪದಿನೆಂಟು ದಿವಸಮಂ ಶಾರ್ದೂಲಂ ೧೨**

**ಪದವಿಭಾಗ-ಅನ್ವಯ-ಅರ್ಥ:** ಅರಸಂ ಪರಿವಾರಂಬೆರಸು ಪಿರಿದುಂ ಪೂಜೆಯನ್ ಮಾಡೆ = ರಾಜನು ಪರಿವಾರ ಜನರೊಡನೆ ಸೇರಿ ಹಿರಿದಾದ ಪೂಜೆಯನ್ನು ಕೈಗೊಳ್ಳಲು, ಶಾರ್ದೂಲಂ ಮುನಿಪತಿಯ ಪದಾಂಬುರುಹದ ಮೊದಲೊಳ್ ಪದಿನೆಂಟು ದಿವಸಮಂ ಭರದಿಂ ನೋಂತುದು = ಆ ಹುಲಿಯು ಆ ಮುನಿಗಳ ಅಡಿದಾವರೆಗಳಲ್ಲಿ ಹದಿನೆಂಟು ದಿನಗಳ ವ್ರತವನ್ನು ತೊಟ್ಟಿತು.

**ಗದ್ಯಾನುಸರಣ:** ರಾಜನು ತನ್ನ ಪರಿವಾರಜನರೊಡನೆ ಮುನಿಗಳಿಗೆ ಹಿರಿದಾದ ಪೂಜೆಯನ್ನು ಸಲ್ಲಿಸಿದ; ಆ ಹುಲಿಯು ಆ ಮುನಿಗಳ ಅಡಿದಾವರೆಗಳಲ್ಲಿ ಹದಿನೆಂಟು ದಿನಗಳ ವ್ರತವನ್ನು ಹಿಡಿಯಿತು.

**ವ। ಅಂತು ನೋಂತು,**

**ಅರ್ಥ:** ಅಂತು ನೋಂತು = ಹಾಗೆ ವ್ರತ ತೊಟ್ಟು

**ಸುಡುವುದರಾಗ್ನಿಯುಮೊಡಲಂ**
**ಮಿಡುಕುವಿನಂ ಕಡಿವ ಕಟ್ಟಿಱುಂಪೆಗಳುಮದಾ**
**ವೆಡೆಯನುರಿಸುವುದೊ ನರಕದ**
**ಕಡುದುಃಖದೊಳಗಿದು ಸುಗಿದು ನಮೆದೆನಗೀಗಳ್ ೧೩**

**ಪದವಿಭಾಗ-ಅನ್ವಯ-ಅರ್ಥ:** ಸುಡುವ + ಉದರಾಗ್ನಿಯುಂ = ಸುಡುವ ಹಸಿವೆಂಬ ಬೆಂಕಿಯೂ, ಒಡಲಂ ಮಿಡುಕುವಿನಂ = ದೇಹವೆಲ್ಲ ಉರಿಯುವಂತೆ, ಈಗಳ್ ಕಡಿವ ಕಟ್ಟಿಱುಂಪೆಗಳುಂ = ಈಗ ಕಡಿಯುವ ಕಟ್ಟಿರುವೆಗಳೂ, ನರಕದ ಕಡುದುಃಖದೊಳ್ + ಅಗಿದು ಸುಗಿದು ನಮೆದ + ಎನಗೆ = ನರಕದ ಅತೀವ ಯಾತನೆಯಲ್ಲಿ ಸಿಕ್ಕಿ ನವೆದಿರುವ ನನ್ನನ್ನು, ಅದಾವ + ಎಡೆಯನ್ + ಉರಿಸುವುದೊ = ಇನ್ನಾವ ಭಾಗವನ್ನು ಉರಿಸುತ್ತದೆಯೋ?

**ಗದ್ಯಾನುಸರಣ:** 'ಸುಡುವ ಹಸಿವೆಂಬ ಬೆಂಕಿಯೂ, ದೇಹವೆಲ್ಲ ಉರಿಯುವಂತೆ ಕಡಿಯುವ ಕಟ್ಟಿರುವೆಗಳೂ, ನರಕದ ಅತೀವ ಯಾತನೆಯಲ್ಲಿ ಸಿಕ್ಕಿ ಈಗಾಗಲೇ ನವೆದಿರುವ ನನ್ನ ದೇಹದ ಇನ್ನಾವ ಭಾಗವನ್ನು ಉರಿಸುತ್ತದೆಯೋ!'

**ವ। ಎಂದು ಧೈರ್ಯಮನೆ ಮನದೊಳವಲಂಬಿಸಿ ಸಮಾಧಿವಡೆದೀಶಾನ ಕಲ್ಪದೊಳ್ ದಿವಾಕರಪ್ರಭಮೆಂಬ ವಿಮಾನದೊಳ್ ದೇವನಾದಂ: ಆ**

ಪ್ರೀತಿವರ್ಧನನುಮಾ ಭಟ್ಟಾರಕರ್ ದಯೆಗೆಯ್ದು ದೀಕ್ಷೆಯೆಂಬ ಕಲ್ಪಲತೆಯ ಫಲದಿಂದಮೃತಪದವಿಯುಂ ಪಡೆದಂ: ಆತನ ಸೇನನಾಯಕ ಮಂತ್ರಿಪುಂಗವ ಪುರೋಹಿತರ್ ಮೂವರುಂ ನೃಪನ ದಾನಾನು ಮೋದದ ಫಲದಿಂದಮುತ್ತರ ಕುರುವಿನೊಳಾರ್ಯರಾಗಿ ಜೀವಿತಾಂತ್ಯ ದೊಳೀಶಾನಕಲ್ಪದೊಳ್ ಸೇನಾನಾಯಕ ನಪ್ಪಾರ್ಯನಂ ಪ್ರಭಾಕರ ವಿಮಾನದೊಳೆ ಪ್ರಭಾಕರನೆಂಬೊಂ ದೇವನಾದೊಂ: ಮಂತ್ರಿಯಪ್ಪಾರ್ಯನಂ ಕಾಂಚನವಿಮಾನದೊಳ್ ಕನಕಪ್ರಭನೆಂಬ ದೇವನಾದಂ; ಪುರೋಹಿತನಪ್ಪಾರ್ಯನಂ ರುಷಿತಾಖ್ಯ ವಿಮಾನದೊಳ್ ಪ್ರಭಂಜನನೆಂಬೊಂ ದೇವನಾದಂ; ಮುನ್ನ ಪೇಟ್ದ ಶಾರ್ದೂಲಚರನಪ್ಪ ದೇವಂ ಬೆರಸು ಅಂತು ನಾಲ್ವರ್ ದೇವರ್ ಲಲಿತಾಂಗದೇವನಾದಂದು ನಿನಗೆ ಪರಿವಾರದೇವರಾದರ್: ಆ ಲಲಿತಾಂಗದೇವನ್ಯೆ ನೀನಿಲ್ಲಿ ಬಂದು ವಜ್ರಜಂಘನಾದ್ಯೆ; ನಿನ್ನ ದೇವಿಯುಪ್ಪ ಸ್ವಯಂಪ್ರಭೆಯುಮೀಗಳ್ ಶ್ರೀಮತಿಯಾದಳ್; ಶಾರ್ದೂಲಚರನಪ್ಪ ದಿವಾಕರದೇವಂ ಬಂದು ಮತಿಸಾಗರನೆಂಬಂಗಮಾತನ ಭಾರ್ಯೆ ಶ್ರೀಮತಿಗಂ ತನೂಜನಾಗಿ ನಿನಗೆ ಮಂತ್ರಿ ಮತಿವರನಾದಂ: ಪ್ರಭಾಕರಾಮರಂ ಬಂದು ಅಪರಾಜಿತಂಗಮಾರ್ಜವೆಗಂ ನಂದನನಾಗಿ ಸೇನಾನಾಯಕನಕಂಪನನಾದಂ; ಕನಕಪ್ರಭದೇವಂ ಬಂದು ಶ್ರುತಕೀರ್ತಿಗಮನಂತಮತಿಗಂ ತನಯನಾಗಿ ಪುರೋಹಿತನಾನಂದನಾದಂ; ಪ್ರಭಂಜನಕಲ್ಪಜಂ ಧನದತ್ತಂಗಂ ಧನದತ್ತೆಗಂ ಪುತ್ರನಾಗಿ ನಿಜಶ್ರೇಷ್ಠಿ ಧನಮಿತ್ರನಾದಂ; ಅದು ಕಾರಣದಿಂದಿವರೊಳಪ್ಪ ಸ್ನೇಹ ಪಿರಿದಾದುದು. ಈ ಭವಕ್ಕೆಂಟನೆಯ ಭವದೊಳ್ ಭರತದೊಳ್ ನೀನಾದಿತೀರ್ಥಪ್ರವರ್ತಕನಾದಂದೀ ಶ್ರೀಮತಿ ದಾನತೀರ್ಥಪ್ರವರ್ತಕಂ ಶ್ರೇಯಾಂಸನಕ್ಕುಂ; ಈ ನಿನ್ನ ಮಂತ್ರಿ ಮತಿವರನಂದು ನಿನಗೆ ಭರತೇಶ್ವರ ನೆಂಬನಾತ್ಮಜನಕ್ಕುಂ; ಈ ಭವದೀಯ ಸೇನಾನಾಯಕನಕಂಪನನುಂ ಬಾಹುಬಲಿಯೆಂಬ ತನಯನಕ್ಕುಂ; ಈ ಭವತ್ಪುರಹಿತನಾನಂದಂ ವೃಷಭಸೇನ ನೆಂಬೊಂ ತನೂಜನಕ್ಕುಂ; ಈ ನಿನ್ನ ಶ್ರೇಷ್ಠಿ ಧನಮಿತ್ರನನಂತವೀರ್ಯನೆಂಬ ತನೂಭವನಕ್ಕುಮೆಂಬುದುಮತಿಪ್ರೀತಿಯಿಂ ವಿಕಸಿತವದನಸರೋಜನಾಗಿ,

ಪದವಿಭಾಗ–ಅನ್ವಯ–ಅರ್ಥ: ಎಂದು ಮನದೊಳ್ ಧೈರ್ಯಮನೆ ಅವಲಂಬಿಸಿ = ಎಂದು ಮನಸ್ಸಿನಲ್ಲಿ ಧೈರ್ಯ ತಾಳಿ, ಸಮಾಧಿವಡೆದು + ಈಶಾನಕಲ್ಪದೊಳ್ ದಿವಾಕರಪ್ರಭಮೆಂಬ ವಿಮಾನದೊಳ್ ದೇವನಾದಂ = ಸಮಾದಿ ಮರಣವನ್ನು ಹೊಂದಿ ಈಶಾನಕಲ್ಪದಲ್ಲಿ ದಿವಾಕರಪ್ರಭವೆಂಬ ವಿಮಾನದಲ್ಲಿ ದೇವನಾದ; ಆ ಪ್ರೀತಿವರ್ಧನನುಂ + ಆ ಭಟ್ಟಾರಕರ್ ದಯೆಗೆಯ್ದು ದೀಕ್ಷೆಯೆಂಬ ಕಲ್ಪಲತೆಯ ಫಲದಿಂದೆ = ಆ ಪ್ರೀತಿವರ್ಧನನೂ ಅದೇ ಭಟ್ಟಾರಕರು ದಯಪಾಲಿಸಿದ ದೀಕ್ಷೆ ಎನ್ನುವ ಕಲ್ಪವೃಕ್ಷದಿಂದಾಗಿ, ಅಮೃತಪದವಿಯಂ ಪಡೆದಂ = ದೇವಪದವಿಯನ್ನು ಹೊಂದಿದ: ಆತನ ಸೇನನಾಯಕಮಂತ್ರಿಪುಂಗವಪುರೋಹಿತರ್ ಮೂವರುಂ =

ಅವನ ಸೇನಾಧಿಪತಿ ಮಂತ್ರಿಮುಖ್ಯ ಹಾಗೂ ಪುರೋಹಿತ – ಈ ಮೂವರೂ, ನೃಪನ ದಾನ + ಅನುಮೋದದ ಫಲದಿಂದಂ = ರಾಜನ ದಾನಕ್ಕೆ ಒಪ್ಪಿಗೆ ನೀಡಿದ್ದರಿಂದ, ಉತ್ತರಕುರುವಿನೊಳ್ + ಆರ್ಯರಾಗಿ = ಉತ್ತರಕುರುವಿನಲ್ಲಿ ಆರ್ಯರಾಗಿ, ಜೀವಿತಾಂತ್ಯದೊಳ್ + ಈಶಾನಕಲ್ಪದೊಳ್ = ಆ ಜೀವನದ ಬಳಿಕ ಈಶಾನಕಲ್ಪದಲ್ಲಿ, ಸೇನಾನಾಯಕನಪ್ಪ + ಆರ್ಯಂ = ಸೇನಾಧಿಪತಿಯಾಗಿದ್ದ ಆರ್ಯನು, ಪ್ರಭಾಕರವಿಮಾನದೊಳೆ ಪ್ರಭಾಕರನೆಂಬೊಂ ದೇವನಾದೊಂ = ಪ್ರಭಾಕರವಿಮಾನದಲ್ಲಿ ಪ್ರಭಾಕರ ಎಂಬ ದೇವನಾದ; ಮಂತ್ರಿಯಪ್ಪ + ಆರ್ಯಂ ಕಾಂಚನವಿಮಾನದೊಳ್ ಕನಕಪ್ರಭನೆಂಬ ದೇವನಾದಂ = ಮಂತ್ರಿಯಾದ ಆರ್ಯನು ಕಾಂಚನವಿಮಾನದಲ್ಲಿ ಕನಕಪ್ರಭನೆಂಬ ದೇವನಾದ; ಪುರೋಹಿತನಪ್ಪ + ಆರ್ಯಂ ರುಷಿತಾಖ್ಯ ವಿಮಾನದೊಳ್ ಪ್ರಭಂಜನನೆಂಬೊಂ ದೇವನಾದಂ = ಪುರೋಹಿತನಾಗಿದ್ದ ಆರ್ಯನು ರುಷಿತ ಎಂಬ ಹೆಸರಿನ ವಿಮಾನದಲ್ಲಿ ಪ್ರಭಂಜನ ಎಂಬ ದೇವನಾದ; ಅಂತು ಮುನ್ನ ಪೇಟ್ದ ಶಾರ್ದೂಲ ಚರನಪ್ಪ ದೇವಂ ಬೆರಸು = ಹಾಗೆ ಹಿಂದೆ ಹೇಳಿದ ಶಾರ್ದೂಲಚರನೆನಸಿದ ದೇವನ ಜತೆ, ನಾಲ್ವರ್ ದೇವರ್ ಲಲಿತಾಂಗದೇವನಾದಂದು ನಿನಗೆ ಪರಿವಾರ ದೇವರಾದರ್ = ನಾಲ್ವರೂ ದೇವರುಗಳು ಲಲಿತಾಂಗದೇವನಾಗಿದ್ದ ನಿನಗೆ ಪರಿವಾರದೇವರಾದರು; ಆ ಲಲಿತಾಂಗದೇವನ್ನೆ ನೀನಿಲ್ಲಿ ಬಂದು ವಜ್ರಜಂಘನಾದ್ಯೆ = ಆ ಲಲಿತಾಂಗನೇ ಬಂದು ನೀನೀಗ ವಜ್ರಜಂಘನಾಗಿದ್ದೀಯೆ; ನಿನ್ನ ದೇವಿಯಪ್ಪ ಸ್ವಯಂಪ್ರಭೆಯುಂ + ಈಗಳ್ ಶ್ರೀಮತಿಯಾದಳ್ = ನಿನ್ನ ದೇವಿ ಸ್ವಯಂಪ್ರಭೆಯೇ ಈಗ ಶ್ರೀಮತಿಯಾಗಿದ್ದಾಳೆ; ಶಾರ್ದೂಲಚರನಪ್ಪ ದಿವಾಕರದೇವಂ ಬಂದು = ಶಾರ್ದೂಲಚರನಾಗಿದ್ದ ದಿವಾಕರದೇವನು, ಮತಿಸಾಗರನೆಂಬಂಗಂ + ಆತನ ಭಾರ್ಯೆ ಶ್ರೀಮತಿಗಂ ತನೂಜನಾಗಿ ನಿನಗೆ ಮಂತ್ರಿ ಮತಿವರನಾದಂ ಮತಿಸಾಗರ–ಶ್ರೀಮತಿ ದಂಪತಿಗೆ ಮತಿವರನೆಂಬ ಮಗನಾದ; ಪ್ರಭಾಕರಾಮರಂ ಬಂದು ಅಪರಾಜಿತಂಗಂ + ಆರ್ಜವೆಗಂ ನಂದನನಾಗಿ ಸೇನಾನಾಯಕನ್ + ಅಕಂಪನನ್ + ಅದಂ = ಪ್ರಭಾಕರನು ಅಪರಾಜಿತ–ಆರ್ಜವೆಯರ ಮಗನಾಗಿ ಸೇನಾನಾಯಕ ಅಕಂಪನನಾದ, ಕನಕಪ್ರಭದೇವಂ ಬಂದು ಶ್ರುತಕೀರ್ತಿಗಂ + ಅನಂತಮತಿಗಂ ತನಯನಾಗಿ ಪುರೋಹಿತನ್ + ಆನಂದನ್ + ಆದಂ = ಕನಕಪ್ರಭನು ಶ್ರುತಕೀರ್ತಿ–ಅನಂತಮತಿಯರ ಮಗನಾಗಿ ಪುರೋಹಿತನಾದ; ಪ್ರಭಂಜನಕಲ್ಪಜಂ ಧನದತ್ತಂಗಂ ಧನದತ್ತೆಗಂ ಪುತ್ರನಾಗಿ ನಿಜಶ್ರೇಷ್ಠಿ ಧನಮಿತ್ರನಾದಂ = ಪ್ರಭಂಜನದೇವನು ಧನದತ್ತ–ಧನದತ್ತೆಯರ ಮಗನಾಗಿ ಹುಟ್ಟಿ ನಿನ್ನ ಶ್ರೇಷ್ಠಿಯಾದ ಧನಮಿತ್ರನಾದ; ಅದು ಕಾರಣದಿಂದ + ಇವರೊಳಪ್ಪ ಸ್ನೇಹ ಪಿರಿದಾದುದು = ಆದ್ದರಿಂದಲೇ ಇವರ ಜೊತೆಗಿನ ನಿನ್ನ ಸ್ನೇಹ ಗಾಢವಾದುದು. ಈ ಭವಕ್ಕೆಂಟನೆಯ ಭವದೊಳ್ = ಈ ಜನ್ಮಕ್ಕೆ ಮುಂದಿನ ಎಂಟನೆಯ ಹುಟ್ಟಿನಲ್ಲಿ, ಭರತದೊಳ್ ನೀನ್ +

ಆದಿತೀರ್ಥಪ್ರವರ್ತಕನಾದಂದು = ಭರತವರ್ಷದಲ್ಲಿ ನೀನು ಆದಿ ತೀರ್ಥಂಕರನಾದಾಗ, ಶ್ರೀಮತಿ ದಾನತೀರ್ಥಪ್ರವರ್ತಕಂ ಶ್ರೇಯಾಂಸನಕ್ಕುಂ = ಈ ಶ್ರೀಮತಿಯು ನಿನಗೆ ದಾನನೀಡಿದವರಲ್ಲಿ ಮೊದಲನೆಯವನಾಗುವ ಶ್ರೇಯಾಂಸನಾಗುತ್ತಾನೆ; ಈ ನಿನ್ನ ಮಂತ್ರಿ ಮತಿವರನ್ + ಅಂದು ನಿನಗೆ ಭರತೇಶ್ವರನೆಂಬನ್ + ಆತ್ಮಜನಕ್ಕುಂ = ಈ ನಿನ್ನ ಮಂತ್ರಿಯಾದ ಮತಿವರನು ಆಗ ನಿನ್ನ ಮಗ ಭರತೇಶ್ವರನಾಗುತ್ತಾನೆ; ಈ ಭವದೀಯ ಸೇನಾನಾಯಕನ್ + ಅಕಂಪನನುಂ ಬಾಹುಬಲಿಯೆಂಬ ತನಯನ್ + ಅಕ್ಕುಂ = ಈ ನಿನ್ನ ಸೇನಾಧಿಪತಿಯಾದ ಅಕಂಪನನು ಬಾಹುಬಲಿಯೆಂಬ ಮಗನಾಗುತ್ತಾನೆ; ಈ ಭವತ್ + ಪುರೋಹಿತನ್ + ಆನಂದಂ ವೃಷಭಸೇನನೆಂಬೊಂ ತನೂಜನ್ + ಅಕ್ಕುಂ = ಈ ನಿನ್ನ ಪುರೋಹಿತ ಆನಂದನು ವೃಷಭಸೇನನೆಂಬ ನಿನ್ನ ಮಗನಾಗುತ್ತಾನೆ; ಈ ನಿನ್ನ ಶ್ರೇಷ್ಠಿ ಧನಮಿತ್ರನ್ + ಅನಂತವೀರ್ಯನೆಂಬ ತನೂಭವನಕ್ಕುಂ = ಈ ನಿನ್ನ ಶ್ರೇಷ್ಠಿ ಧನಮಿತ್ರನು ಅನಂತವೀರ್ಯನೆಂಬ ಮಗನಾಗುತ್ತಾನೆ; ಎಂಬುದುಂ + ಅತಿಪ್ರೀತಿಯಿಂ ವಿಕಸಿತವದನಸರೋಜನಾಗಿ = ಎಂದು ಹೇಳಲು ತುಂಬ ಸಂತಸದಿಂದ ಅರಳಿದ ಮುಖವುಳ್ಳವನಾಗಿ,

**ಗದ್ಯಾನುಸರಣ:** ಎಂದು ಹುಲಿಯು ಮನಸ್ಸಿನಲ್ಲಿ ಧೈರ್ಯ ತಾಳಿ ಸಮಾಧಿಮರಣವನ್ನು ಹೊಂದಿ ಈಶಾನಕಲ್ಪದಲ್ಲಿ ದಿವಾಕರಪ್ರಭವೆಂಬ ವಿಮಾನದಲ್ಲಿ ದೇವನಾದ; ಆ ಪ್ರೀತಿವರ್ಧನನೂ ಅದೇ ಭಟ್ಟಾರಕರು ದಯಪಾಲಿಸಿದ ದೀಕ್ಷೆ ಎನ್ನುವ ಕಲ್ಪವೃಕ್ಷದಿಂದಾಗಿ ದೇವಪದವಿಯನ್ನು ಹೊಂದಿದ; ಅವನ ಸೇನಾಧಿಪತಿ ಮಂತ್ರಿಮುಖ್ಯ ಹಾಗೂ ಪುರೋಹಿತ – ಈ ಮೂವರೂ, ರಾಜನ ದಾನಕ್ಕೆ ಒಪ್ಪಿಗೆ ನೀಡಿದ್ದರಿಂದ, ಉತ್ತರಕುರುವಿನಲ್ಲಿ ಆರ್ಯರಾಗಿ ಹುಟ್ಟಿದರು; ಆ ಜೀವನದ ಬಳಿಕ, ಸೇನಾಧಿಪತಿಯಾಗಿದ್ದ ಆರ್ಯನು ಪ್ರಭಾಕರವಿಮಾನದಲ್ಲಿ ಪ್ರಭಾಕರ ಎಂಬ ದೇವನಾದ; ಮಂತ್ರಿಯಾದ ಆರ್ಯನು ಕಾಂಚನವಿಮಾನದಲ್ಲಿ ಕನಕಪ್ರಭನೆಂಬ ದೇವನಾದ; ಪುರೋಹಿತನಾಗಿದ್ದ ಆರ್ಯನು ರುಷಿತ ಎಂಬ ಹೆಸರಿನ ವಿಮಾನದಲ್ಲಿ ಪ್ರಭಂಜನ ಎಂಬ ದೇವನಾದ; ಹಾಗೆ ಹಿಂದೆ ಹೇಳಿದ ಶಾರ್ದೂಲಚರನೆನಸಿದ ದೇವನ ಜತೆ ಈ ನಾಲ್ವರೂ ದೇವರುಗಳು ಲಲಿತಾಂಗದೇವನಾಗಿದ್ದ ನಿನಗೆ ಪರಿವಾರದೇವರಾದರು; ಆ ಲಲಿತಾಂಗನೇ ಬಂದು ನೀನೀಗ ವಜ್ರಜಂಘನಾಗಿದ್ದೀಯೆ; ನಿನ್ನ ದೇವಿ ಸ್ವಯಂಪ್ರಭೆಯೇ ಈಗ ಶ್ರೀಮತಿಯಾಗಿದ್ದಾಳೆ; ಶಾರ್ದೂಲಚರನಾಗಿದ್ದ ದಿವಾಕರದೇವನು ಮತಿಸಾಗರ–ಶ್ರೀಮತಿ ದಂಪತಿಗೆ ಮತಿವರನೆಂಬ ಮಗನಾದ; ಪ್ರಭಾಕರನು ಅಪರಾಜಿತ–ಆರ್ಜವೆಯರ ಮಗನಾಗಿ ಸೇನಾನಾಯಕ ಅಕಂಪನನಾದ; ಕನಕಪ್ರಭನು ಶ್ರುತಕೀರ್ತಿ–ಅನಂತಮತಿಯರ ಮಗನಾಗಿ ಪುರೋಹಿತನಾದ; ಪ್ರಭಂಜನದೇವನು ಧನದತ್ತ–ಧನದತ್ತೆಯರ ಮಗನಾಗಿ ಹುಟ್ಟಿ ನಿನ್ನ ಶ್ರೇಷ್ಠಿಯಾದ ಧನಮಿತ್ರನಾದ; ಆದ್ದರಿಂದಲೇ ಇವರ ಜೊತೆಗಿನ ನಿನ್ನ ಸ್ನೇಹ ಗಾಢವಾದುದು. ಈ ಜನ್ಮಕ್ಕೆ ಮುಂದಿನ ಎಂಟನೆಯ ಹುಟ್ಟಿನಲ್ಲಿ ಭರತವರ್ಷದಲ್ಲಿ ನೀನು ಆದಿ

ತೀರ್ಥಂಕರನಾದಾಗ, ಈ ಶ್ರೀಮತಿಯು ನಿನಗೆ ದಾನನೀಡಿದವರಲ್ಲಿ ಮೊದಲನೆಯವನಾಗುವ ಶ್ರೇಯಾಂಸನಾಗುತ್ತಾನೆ; ಈ ನಿನ್ನ ಮಂತ್ರಿಯಾದ ಮತಿವರನು ಆಗ ನಿನ್ನ ಮಗ ಭರತೇಶ್ವರನಾಗುತ್ತಾನೆ, ಈ ನಿನ್ನ ಸೇನಾಧಿಪತಿಯಾದ ಅಕಂಪನನು ಬಾಹುಬಲಿಯೆಂಬ ಮಗನಾಗುತ್ತಾನೆ, ಈ ನಿನ್ನ ಪುರೋಹಿತ ಆನಂದನು ವೃಷಭಸೇನನೆಂಬ ನಿನ್ನ ಮಗನಾಗುತ್ತಾನೆ, ಈ ನಿನ್ನ ಶ್ರೇಷ್ಠಿ ಧನಮಿತ್ರನು ಅನಂತವೀರ್ಯನೆಂಬ ಮಗನಾಗುತ್ತಾನೆ; ಎಂದು ಹೇಳಲು ವಜ್ರಜಂಘನ ಮುಖ ಸಂತಸದಿಂದ ಅರಳಿತು.

**ಪಿಂಗಿದುದೀಗಳೆನ್ನ ಬೆಸಗೊಂಡೆಡೆಯೊಂದು ತಮಂ ತ್ವದೀಯವಾ**
**ಕ್ಯಂಗಳಿನಿನ್ನುಮೊಂದೆನಗೆ ವಿಸ್ಮಯಮಾದಪುದೀ ತ್ವದಂಘ್ರಿಪ**
**ದ್ಮಂಗಳನೈದೆ ಮುಚ್ಚಿ ನೆಲಸಿರ್ದಪುವೀ ಪುಲಿ ಪಂದಿ ಕೋಡಗಂ**
**ಮುಂಗುರಿಯೆಂಬ ನಾಲ್ಕಱ ಭವಾವಳಿಯುಂ ಬೆಸಸಿಂ ಮುನೀಶ್ವರಾಗಿಳ**

**ಪದವಿಭಾಗ-ಅನ್ವಯ-ಅರ್ಥ:** ಮುನೀಶ್ವರಾ = ಮುನಿಶ್ರೇಷ್ಠರೇ, ಎನ್ನ ಬೆಸಗೊಂಡ + ಎಡೆಯ + ಒಂದು ತಮಂ = ನಿಮ್ಮನ್ನು ಕೇಳಿಕೊಂಡ ವಿಷಯದಲ್ಲಿನ ಒಂದಂಶದ ಅಜ್ಞಾನವು, ತ್ವದೀಯವಾಕ್ಯಂಗಳಿನ್ ಈಗಳ್ ಪಿಂಗಿದುದು = ನಿಮ್ಮ ಮಾತುಗಳಿಂದ ಕಳೆಯಿತು; ಇನ್ನುಂ + ಒಂದೆನಗೆ ವಿಸ್ಮಯಂ + ಆದಪುದು = ಆದರೆ ಇನ್ನೂ ಒಂದು ಪ್ರಶ್ನೆಯು ಕಾಡುತ್ತಿದೆ; ತ್ವದಂಘ್ರಿಪದ್ಮಂಗಳನ್ + ಎಯ್ದೆ ಮಚ್ಚಿ ನೆಲಸಿರ್ದಪುವು = ನಿಮ್ಮ ಪಾದಪದ್ಮಗಳನ್ನೇ ನಂಬಿ ನೆಲಸಿರುವ, ಈ ಪುಲಿ ಪಂದಿ ಕೋಡಗಂ ಮುಂಗುರಿಯೆಂಬ ನಾಲ್ಕಱ ಭವಾವಳಿಯಂ ಬೆಸಸಿಂ = ಈ ಹುಲಿ ಹಂದಿ ಕೋತಿ ಮತ್ತು ಮುಂಗುಸಿಗಳ ಭವಾವಳಿಯನ್ನು ಹೇಳಿರಿ.

**ಗದ್ಯಾನುಸರಣ:** 'ಮುನಿಶ್ರೇಷ್ಠರೇ, ನಿಮ್ಮನ್ನು ಕೇಳಿಕೊಂಡ ವಿಷಯದಲ್ಲಿನ ಒಂದಂಶದ ಅಜ್ಞಾನವು ನಿಮ್ಮ ಮಾತುಗಳಿಂದ ಕಳೆಯಿತು; ಆದರೆ ಇನ್ನೂ ಒಂದು ಪ್ರಶ್ನೆಯು ನನ್ನನ್ನು ಕಾಡುತ್ತಿದೆ: ನಿಮ್ಮ ಪಾದಪದ್ಮಗಳನ್ನೇ ನಂಬಿ ನೆಲಸಿರುವ ಈ ಹುಲಿ ಹಂದಿ ಕೋತಿ ಮತ್ತು ಮುಂಗುಸಿಗಳ ಭವಾವಳಿಯನ್ನು ಹೇಳಿರಿ' ಎಂದು ಕೇಳಿಕೊಂಡ.

**ವ। ಎಂಬುದುಂ ಗಗನಚಾರಣರಿಂತೆಂದು ಬೆಸಸಿದರ್: ಈ ಶಾರ್ದೂಲಂ ಪ್ರಾಗ್ಜನ್ಮದೊಳೀ ವಿಷಯದ ಹಸ್ತಿನಾಪುರದ ಪರದಂ ಧನದತ್ತಂಗಮಾತನ ಪರಿದಿತಿ ಧನತ್ತೆಗಮುಗ್ರಸೇನನೆಂಬೊಂ ತನೂಜನಪ್ರತ್ಯಾಖ್ಯಾನಕ್ರೋಧದಿಂ ತಿರ್ಯಗಾಯುಷ್ಯಂಗಟ್ಟಿ,**

**ಪದವಿಭಾಗ-ಅನ್ವಯ-ಅರ್ಥ:** ಎಂಬುದುಂ = ಎನ್ನಲು, ಗಗನಚಾರಣರ್ + ಇಂತೆಂದು ಬೆಸಸಿದರ್ = ಗಗನಚಾರಣರು ಹೀಗೆಂದು ನಿರೂಪಿಸಿದರು: ಈ

ಶಾರ್ದೂಲಂ ಪಾಕ್ + ಜ್ಜನ್ಮದೊಳ್ = ಈ ಹುಲಿಯು ಹಿಂದಿ ಜನ್ಮದಲ್ಲಿ, ಈ ವಿಷಯದ ಹಸ್ತಿನಾಪುರದ ಪರದಂ ಧನದತ್ತಂಗಂ + ಆತನ ಪರಿದಿತಿ ಧನತ್ತೆಗಂ = ಈ ನಾಡಿನ ಹಸ್ತಿನಾಪುರದ ವ್ಯಾಪಾರಿ ಧನದತ್ತನಿಗೂ ಅವನ ಹೆಂಡತಿ ಧನದತ್ತೆಗೂ, ಉಗ್ರಸೇನನೆಂಬೊಂ ತನೂಜನ್ = ಉಗ್ರಸೇನನೆಂಬ ಮಗನು, ಅಪ್ರತ್ಯಾಖ್ಯಾನಕ್ರೋಧದಿಂ ತಿರ್ಯಗ್ + ಆಯುಷ್ಯಂಗಟ್ಟಿ = ಅಪ್ರತ್ಯಾಖ್ಯಾನ ಕ್ರೋಧದಿಂದ ಪ್ರಾಣಿಜನ್ಮವನ್ನು ಪಡೆದು,

**ಗದ್ಯಾನುಸರಣ:** ಎನ್ನಲು ಗಗನಚಾರಣರು ಹೀಗೆಂದು ನಿರೂಪಿಸಿದರು: ಈ ಹುಲಿಯು ಹಿಂದಿನ ಜನ್ಮದಲ್ಲಿ ಈ ನಾಡಿನ ಹಸ್ತಿನಾಪುರದ ವ್ಯಾಪಾರಿ ಧನದತ್ತನಿಗೂ ಅವನ ಹೆಂಡತಿ ಧನದತ್ತೆಗೂ ಉಗ್ರಸೇನನೆಂಬ ಮಗನಾಗಿ ಹುಟ್ಟಿದ; ಆದರೆ ಅಪ್ರತ್ಯಾಖ್ಯಾನಕ್ರೋಧದಿಂದ ಪ್ರಾಣಿಜನ್ಮವನ್ನು ಪಡೆ.

**ಅರಸನ ಕೋಷ್ಠಗಾರದ**
**ಕರಣಂಗಳ ಕಾಪನೆಯ್ದೆ ಬಂಚಿಸಿ ಕಳ್ದುಂ**
**ಕರೆದುಮೊಳಗೊಳಗೆ ಸುಟಿಯು**
**ತ್ತಿರೆ ನೃಪನದನಱಿದು ಪಿಡಿದು ತರವೇಟಿಳ್ದಾಗಳ್** ೧೫

**ಪದವಿಭಾಗ–ಅನ್ವಯ–ಅರ್ಥ:** ಅರಸನ ಕೋಷ್ಠಗಾರದ ಕರಣಂಗಳ ಕಾಪನ್ + ಎಯ್ದೆ ಬಂಚಿಸಿ = ರಾಜನ ಉಗ್ರಾಣದ ಕಾವಲನ್ನು ಪೂರ್ತಿ ವಂಚಿಸಿ, ಕಳ್ದುಂ ಕರೆದುಂ + ಒಳಗೊಳಗೆ ಸುಟಿಯುತ್ತಿರೆ = ಕದ್ದು ಮುಚ್ಚಿ ಓಡಾಡುತ್ತಿರಲು, ನೃಪನ್ + ಅದನ್ + ಅಱಿದು ಪಿಡಿದು ತರವೇಟಿಳ್ದಾಗಳ್ = ರಾಜನುಅದನ್ನು ತಿಳಿದು ಹಿಡಿದು ತರಲು ಹೇಳಲು,

**ಗದ್ಯಾನುಸರಣ:** ರಾಜನ ಉಗ್ರಾಣದ ಕಾವಲನ್ನು ವಂಚಿಸಿ ಕದ್ದು ಮುಚ್ಚಿ ಓಡಾಡುತ್ತಿದ್ದ; ರಾಜನುಅದನ್ನು ತಿಳಿದು ಹಿಡಿದು ತರಲು ಆಜ್ಞಾಪಿಸಿದ.

**ಘಾತಿಸೆ ಚಪೇಟಚರ[]ಾ**
**ಘಾತದೊಳಟಿದಿಲ್ಲಿ ಬಂದತಿಕ್ರೋಧನನಿಂ**
**ತೀ ತೆಱದಿಂ ಪುಲಿಯಾದನ**
**ತೀತಭವಾಂತರದೊಳೀ ವರಾಹನುಮರಸಾ** ೧೬

**ಪದವಿಭಾಗ–ಅನ್ವಯ–ಅರ್ಥ:** ಅರಸಾ = ರಾಜನೇ, ಚಪೇಟಚರಣಾ ಘಾತದೊಳ್ ಘಾತಿಸೆ = ಅಂಗೈ ಏಟು ಮತ್ತು ಕಾಲೊದೆತಗಳಿಂದ ಕೊಲ್ಲಿಸಲು, ಅತಿಕ್ರೋಧನನ್ ಇಲ್ಲಿ ಬಂದು = ಉಗ್ರಸೇನನು ಇಲ್ಲಿ ಹುಲಿಯಾದನು; ಅತೀತ ಭವಾಂತರದೊಳ್ = ಹಿಂದಿನ ಜನ್ಮದಲ್ಲಿ, ಈ ವರಾಹನುಂ = ಈ ಹಂದಿಯೂ ಆ ಹಂದಿಯು ಇಲ್ಲಿ,

**ಗದ್ಯಾನುಸರಣ:** ರಾಜನೇ, ಅಂಗೈ ಏಟು ಮತ್ತು ಕಾಲೊದೆತಗಳಿಂದ ಕೊಲ್ಲಿಸಲು, ಅತಿಕ್ರೋಧನನ್ ಇಲ್ಲಿ ಬಂದು = ಉಗ್ರಸೇನನು ಇಲ್ಲಿ ಹುಲಿಯಾದನು; ಹಿಂದಿನ ಜನ್ಮದಲ್ಲಿ ಈ ಹಂದಿಯೂ ಇಲ್ಲಿ,

**ವ। ಈ ವಿಷಯದ ವಿಜಯಪುರದೊಳಾನಂದನೃಪತಿಗಂ ವಸಂತ ಸೇನೆಗಂ ಹರಿಕಾಂತ ನೆಂಬ ತನಯನಪ್ರತ್ಯಾಖ್ಯಾನಮಾನದೊಳ್ ತಂದೆ ಗವಿನೀತನಾಗಿ ಪೇೞ್ದುದಂ ಗೆಯ್ಯದೆ,**

**ಪದವಿಭಾಗ–ಅನ್ವಯ–ಅರ್ಥ:** ಈ ವಿಷಯದ ವಿಜಯಪುರದೊಳ್ + ಆನಂದನೃಪತಿಗಂ ವಸಂತಸೇನೆಗಂ = ಈ ನಾಡಿನ ವಿಜಯಪುರದಲ್ಲಿ ಆನಂದ ಮಹಾರಾಜ ಹಾಗೂ ವಸಂತಸೇನೆಯರಿಗೆ, ಹರಿಕಾಂತನೆಂಬ ತನಯನ್ = ಹರಿಕಾಂತ ಎಂಬ ಹೆಸರಿನ ಮಗನಾಗಿ, ಅಪ್ರತ್ಯಾಖ್ಯಾನಮಾನದೊಳ್ ತಂದೆಗೆ + ಅವಿನೀತನಾಗಿ = ಅಪ್ರತ್ಯಾಖ್ಯಾನವೆಂಬ ಮಾನಕಷಾಯದಿಂದ ತಂದೆಗೆ ಅವಿಧೇಯನಾಗಿ, ಪೇೞ್ದುದಂ ಗೆಯ್ಯದೆ = ಹೇಳಿದಂತೆ ನಡೆದುಕೊಳ್ಳದೆ,

**ಶಿಲೆಯೊಳ್ ತಾಟಿಸಿ ತನ್ನಯ**
**ತಲೆಯುಂ ಜರ್ಜರಿತಮಸ್ತಕಂ ಮಡಿದಾತ್ಮಾ**
**ಕುಲನೀ ವರಾಹದೇಹಮ**
**ನಲಸದೆ ಪೊತ್ತಿರ್ದು ನಮೆದಪಂ ಧರಣಿಪತೀ ೧೭**

**ಪದವಿಭಾಗ–ಅನ್ವಯ–ಅರ್ಥ:** ಧರಣಿಪತೀ = ರಾಜನೇ, ತನ್ನಯ ತಲೆಯಂ ಶಿಲೆಯೊಳ್ ತಾಟಿಸಿ = ತನ್ನ ತಲೆಯನ್ನು ಬಂಡೆಗೆ ಜಜ್ಜಿಕೊಂಡು, ಜರ್ಜರಿತಮಸ್ತಕಂ ಮಡಿದು = ಛಿದ್ರವಾದ ತಲೆಯಿಂದಾಗಿ ಸತ್ತು, ಆತ್ಮಾಕುಲನೀ ವರಾಹದೇಹಮನ್ ಪೊತ್ತಿರ್ದು = ಪಶ್ಚಾತ್ತಾಪದಿಂದ ಹಂದಿಯ ದೇಹವನ್ನು ಹೊತ್ತು, ಅಲಸದೆ ನಮೆದಪಂ = ಸಮಚಿತ್ತದಿಂದ ನವೆಯುತ್ತಿದ್ದಾನೆ.

**ಗದ್ಯಾನುಸರಣ:** ರಾಜನೇ, ತನ್ನ ತಲೆಯನ್ನು ಬಂಡೆಗೆ ಜಜ್ಜಿಕೊಂಡು ಛಿದ್ರವಾದ ತಲೆಯಿಂದಾಗಿ ಸತ್ತ; ತನ್ನ ಪಶ್ಚಾತ್ತಾಪದಿಂದ ಹಂದಿಯ ದೇಹವನ್ನು ಹೊತ್ತು ಸಮಚಿತ್ತದಿಂದ ನವೆಯುತ್ತಿದ್ದಾನೆ.

**ವ। ಈ ವಾನರಂ ಪೂರ್ವಜನ್ಮದೊಳ್ ಧಾನ್ಯಪುರದೊಳ್ ವಣಿಗ್ವರಂ ಕುಬೇರದತ್ತಂಗಂ ತದ್ವನಿತೆ ವಸುದತ್ತೆಗಂ ನಾಗದತ್ತನೆಂಬೊಂ ಮಗನಪ್ರತ್ಯಾ ಖ್ಯಾನ ಮಾಯೆಯುಂ ಕೈಕೊಂಡು,**

**ಪದವಿಭಾಗ–ಅನ್ವಯ–ಅರ್ಥ:** ಪೂರ್ವಜನ್ಮದೊಳ್ ಈ ವಾನರಂ = ಹಿಂದಿನ ಜನ್ಮದಲ್ಲಿ ಈ ಕೋತಿಯು, ಧಾನ್ಯಪುರದೊಳ್ ವಣಿಕ್ + ವರಂ ಕುಬೇರದತ್ತಂಗಂ ತತ್ + ವನಿತೆ ವಸುದತ್ತೆಗಂ = ಮುಖ್ಯ ವ್ಯಾಪಾರಿ

ಕುಬೇರದತ್ತನಿಗೂ ಅವನ ಹೆಂಡತಿ ವಸುದತ್ತೆಗೂ, ನಾಗದತ್ತನೆಂಬೊಂ ಮಗನ್ + ಅಪ್ರತ್ಯಾಖ್ಯಾನಮಾಯೆಯಂ ಕೈಕೊಂಡು = ನಾಗದತ್ತನೆಂಬ ಮಗನಾಗಿ ಹುಟ್ಟಿ ಅಪ್ರತ್ಯಾಖ್ಯಾನಮಾಯೆಯಿಂದ,

**ಗದ್ಯಾನುಸರಣ:** ಹಿಂದಿನ ಜನ್ಮದಲ್ಲಿ ಈ ಕೋತಿಯು ಮುಖ್ಯ ವ್ಯಾಪಾರಿ ಕುಬೇರದತ್ತನಿಗೂ ಅವನ ಹೆಂಡತಿ ವಸುದತ್ತೆಗೂ ನಾಗದತ್ತನೆಂಬ ಮಗನಾಗಿ ಹುಟ್ಟಿ ಅಪ್ರತ್ಯಾಖ್ಯಾನಮಾಯೆಯಿಂದ,

**ಬಂಚಿಸಿ ತನ್ನನುಜೆಯ ಧನ**
**ಮಂ ಚಪಳಂ ಕೊಂಡು ಪುಸಿದು ಕಳವಳಿಸಿ ಖಳಂ**
**ಪಂಚತ್ವಮನೈದಿ ಮರು**
**ಚ್ಚಂಚಳಮನನೀಗಳಲ್ತೆ ವಾನರನಾದಂ** ೧೮

**ಪದವಿಭಾಗ-ಅನ್ವಯ-ಅರ್ಥ:** ಚಪಳಂ = ಚಂಚಲನಾಗಿ, ತನ್ನ + ಅನುಜೆಯ ಧನಮಂ ಬಂಚಿಸಿ ಕೊಂಡು = ತನ್ನ ತಂಗಿಯ ಹಣವನ್ನು ಮೋಸಮಾಡಿ ತೆಗೆದುಕೊಂಡು, ಪುಸಿದು ಕಳವಳಿಸಿ ಖಳಂ ಪಂಚತ್ವಮನ್ + ಐದಿ = ಸುಳ್ಳು ಮತ್ತು ಕಳವಳಗಳಿಂದ ಕೂಡಿ ಸತ್ತು, ಮರುತ್ + ಚಂಚಳಮನನ್ ಈಗಳ್ ವಾನರನಾದಂ ಅಲ್ತೆ = ಗಾಳಿಯಂತೆ ಚಂಚಲವಾದ ಮನಸ್ಸನ್ನು ಹೊಂದಿ ಈ ಜನ್ಮದಲ್ಲಿ ಕೋತಿಯಾಗಿ ಹುಟ್ಟಿದ್ದಾನೆ.

**ಗದ್ಯಾನುಸರಣ:** ಚಂಚಲನಾಗಿ, ತನ್ನ ತಂಗಿಯ ಹಣವನ್ನು ಮೋಸಮಾಡಿ ತೆಗೆದುಕೊಂಡು, ಸುಳ್ಳು ಮತ್ತು ಕಳವಳಗಳಿಂದ ಕೂಡಿ ಸತ್ತ; ಗಾಳಿಯಂತೆ ಚಂಚಲವಾದ ಮನಸ್ಸನ್ನು ಹೊಂದಿ ಈ ಜನ್ಮದಲ್ಲಿ ಕೋತಿಯಾಗಿ ಹುಟ್ಟಿದ್ದಾನೆ.

**ವ। ಈ ನಕುಳಂ ಪೋದ ಭವದೊಳ್ ಸುಪ್ರತಿಷ್ಠಪುರದೊಳ್ ಅಪ್ರತ್ಯಾಖ್ಯಾನಲೋಭಾಭಿಭೂತಂ ದ್ರವ್ಯಲೋಲುಪನೆಂಬೊಂ ಕಲ್ಲುರಿಗನಾಗಿ,**

**ಪದವಿಭಾಗ-ಅನ್ವಯ-ಅರ್ಥ:** ಈ ನಕುಳಂ = ಈ ಮುಂಗುಸಿಯು, ಪೋದ ಭವದೊಳ್ ಸುಪ್ರತಿಷ್ಠಪುರದೊಳ್ = ಹೋದಜನ್ಮದಲ್ಲಿ ಸುಪ್ರತಿಷ್ಠಪುರದಲ್ಲಿ, ಅಪ್ರತ್ಯಾಖ್ಯಾನಲೋಭ + ಅಭಿಭೂತಂ = ಅಪ್ರತ್ಯಾಖ್ಯಾನ ಕಷಾಯದಿಂದ ಕೂಡಿದವನಾದ, ದ್ರವ್ಯಲೋಲುಪನೆಂಬೊಂ ಕಲ್ಲುರಿಗನಾಗಿ ಹಣದಾಶೆಯುಳ್ಳವನಾದ ಇಟ್ಟಿಗೆ ಸುಡುವವನಾಗಿ ಹುಟ್ಟಿದ.

**ಗದ್ಯಾನುಸರಣ:** ಈ ಮುಂಗುಸಿಯು ಹೋದಜನ್ಮದಲ್ಲಿ ಸುಪ್ರತಿಷ್ಠಪುರದಲ್ಲಿ ಅಪ್ರತ್ಯಾಖ್ಯಾನ ಕಷಾಯದಿಂದ ಕೂಡಿದವನಾದ ಹಣದಾಶೆಯುಳ್ಳವನಾದ ಇಟ್ಟಿಗೆ ಸುಡುವವನಾಗಿ ಹುಟ್ಟಿದ್ದ.

**ಪುರವರೇಶನ ಮಾಡಿದ ಚೈತ್ಯಕ್ಕಿಟ್ಟಿಗೆಗಳ್ ಬರೆ ನೋಡಿ ಕ**
**ಲ್ಲುರಿಗನೊಯ್ಯನೆ ಪೂರಿಗೆಗೊಟ್ಟೈದಾಱನೆ ಕೊಂಡವನಟ್ಟಿ ಯಿಂ**
**ದೊರಸಿ ನೋೞ್ಪುದುಮೊಂದವಱೊಳ್ ಪೊನ್ನಿಟ್ಟಿಗೆಯಾದೊಡೆ ರಾಗದಿಂ**
**ಪಿರಿಯು ಬಿಟ್ಟಿಯುವಂದಿರ ಕಯ್ಯುಂದಿಟ್ಟಿಗೆಗೊಂಡವನೊಟ್ಟಿದಂ ೧೯**

**ಪದವಿಭಾಗ-ಅನ್ವಯ-ಅರ್ಥ:** ಪುರವರೇಶನ ಮಾಡಿದ ಚೈತ್ಯಕ್ಕೆ = ಊರಿನ ರಾಜನು ಕಟ್ಟಿಸುತ್ತಿದ್ದ ಜಿನಾಲಯಕ್ಕೆಂದು, ಇಟ್ಟಿಗೆಗಳ್ ಬರೆ ನೋಡಿ = ಇಟ್ಟಿಗೆಗಳು ಬರುತ್ತಿರುವುದನ್ನು ಕಂಡು, ಕಲ್ಲುರಿಗನ್ ಒಯ್ಯನೆ ಪೂರಿಗೆಗೊಟ್ಟೈದಾಱನೆ ಕೊಂಡು = ಈ ಇಟ್ಟಿಗೆ ಸುಡುವವನು ಉಪಾಯದಿಂದ ಪೂರಿಗಳನ್ನಿತ್ತು ಅವುಗಳನ್ನು ಖರೀದಿಸಿ, ಅವನ್ + ಅಟ್ಟಿಯಿಂದ + ಒರಸಿ ನೋೞ್ಪುದುಂ = ಅವುಗಳನ್ನು ಮಮತೆಯಿಂದ ಒರೆಸಿ ನೋಡಿದಾಗ, ಅವಱೊಳ್ ಒಂದು ಪೊನ್ನಿಟ್ಟಿಗೆಯಾದೊಡೆ = ಅವುಗಳಲ್ಲಿ ಒಂದು ಚಿನ್ನ ಇಟ್ಟಿಗೆಯಾಗಿದ್ದುದನ್ನು ನೋಡಿ, ರಾಗದಿಂ ಪಿರಿಯ ಬಿಟ್ಟಿಯವಂದಿರ ಕಯ್ಯಂದೆ + ಇಟ್ಟಿಗೆಗೊಂಡು + ಅವನ್ + ಒಟ್ಟಿದಂ = ಆಸೆಯಿಂದ ಹಿರಿಯ ಬಿಟ್ಟಿ ಕೆಲಸಗಾರರಿಂದ ಇಟ್ಟಿಗೆಗಳನ್ನು ಕೊಂಡುಕೊಂಡು ಅವುಗಳನ್ನು ರಾಶಿ ಹಾಕಿದ.

**ಗದ್ಯಾನುಸರಣ:** ಆ ಊರಿನ ರಾಜನು ಕಟ್ಟಿಸುತ್ತಿದ್ದ ಜಿನಾಲಯಕ್ಕೆಂದು ಇಟ್ಟಿಗೆಗಳು ಬರುತ್ತಿದ್ದುವು; ಅದನ್ನು ಕಂಡು ಈ ಇಟ್ಟಿಗೆ ಸುಡುವವನು ಉಪಾಯದಿಂದ ಪೂರಿಗಳನ್ನಿತ್ತು ಅವುಗಳನ್ನು ಖರೀದಿಸಿದ; ಅವುಗಳನ್ನು ಮಮತೆಯಿಂದ ಒರೆಸಿ ನೋಡಿದಾಗ ಅವುಗಳಲ್ಲಿ ಒಂದು ಚಿನ್ನ ಇಟ್ಟಿಗೆಯಾಗಿತ್ತು; ಅದನ್ನು ನೋಡಿ ಅವನಲ್ಲಿ ದುರಾಸೆಯುಂಟಾಗಿ ಹಿರಿಯ ಬಿಟ್ಟಿ ಕೆಲಸಗಾರರಿಂದ ಇಟ್ಟಿಗೆಗಳನ್ನು ಕೊಂಡುಕೊಂಡು ಅವುಗಳನ್ನು ರಾಶಿ ಹಾಕಿದ.

**ವಿಶೇಷ ವಿಚಾರ:** ಇಲ್ಲಿ ಕಲ್ಲುರಿಗ (ಇಟ್ಟಿಗೆ ಸುಡುವವನು) ಎಂಬುದು ಮೂಲದಲ್ಲಿ ಕಾಂದವಿಕ (ತಿಂಡಿ ಮಾಡುವವನು) ಎಂದಿದೆ (ಪೂಪು, ೮.೨೨೪)

**ವ। ಒಂದು ದಿವಸವಾತಂ ಕೆಲದೂರ್ಗೆ ಪೋಗುತ್ತುಂ ತನ್ನ ಮಗಂಗಿಟ್ಟಿಗೆಗೊಳ್ವ ಬೆಸನಂ ಪೇೞ್ದು ಪೋದೊಡನೊಂದುಮಂ ಕೊಳ್ಳದಿರೆ ಮಗುೞ್ದು ಬಂದು,**

**ಪದವಿಭಾಗ-ಅನ್ವಯ-ಅರ್ಥ:** ಒಂದು ದಿವಸಂ + ಆತಂ ಕೆಲದ + ಊದೂರ್ಗೆ ಪೋಗುತ್ತುಂ = ಒಂದು ದಿನ ಅವನು ಪಕ್ಕದ ಊರಿಗೆ ಹಗಬೇಕಾಗಿದ್ದುದರಿಂದ, ಇಟ್ಟಿಗೆಗೊಳ್ವ ಬೆಸನಂ ತನ್ನ ಮಗಂಗೆ ಪೇೞ್ದು ಪೋದೊಡೆ = ಇಟ್ಟಿಗೆಯನ್ನು ಕೊಳ್ಳುವ ಕೆಲಸವನ್ನು ಮಗನಿಗೆ ವಹಿಸಿ ಹೋಗಲು, ಮಗುೞ್ದು

ಬಂದು = ವಾಪಸು ಬಂದು, ಅವನ್ + ಒಂದುಮಂ ಕೊಳ್ಳದಿರೆ = ಅವನು ಒಂದನ್ನೂ ಕೊಂಡುಕೊಳ್ಳದಿರಲು,

**ಗದ್ಯಾನುಸರಣ:** ಒಂದು ದಿನ ಅವನು ಪಕ್ಕದ ಊರಿಗೆ ಹೋಗಬೇಕಾಗಿತ್ತು; ಹೀಗಾಗಿ ಇಟ್ಟಿಗೆಯನ್ನು ಕೊಳ್ಳುವ ಕೆಲಸವನ್ನು ಮಗನಿಗೆ ವಹಿಸಿ ಹೋದ; ಆದರೆ ವಾಪಸು ಬಂದು ನೋಡಿದರೆ ಮಗನು ಒಂದು ಇಟ್ಟಿಗೆಯನ್ನೂ ಕೊಂಡುಕೊಂಡಿರಲಿಲ್ಲ.

**ಬಡಿಯೊಳ್ ನಿಜತನಯನ ತಲೆ**
**ಯೊಡೆವಿನೆಗಂ ಬಡಿದ ಕಾರಣಂ ಕೊಂಡುಯ್ವರ್**
**ಪಡೆಪುಗಿಡುವಿನೆಗಮೆಂದಾ**
**ಕಡುಲೋಭಂ ತನ್ನ ಕಾಲ್ಗಳಂ ಪಿಡಿದುಡಿದಂ ೨೦**

**ಪದವಿಭಾಗ-ಅನ್ವಯ-ಅರ್ಥ:** ನಿಜತನಯನ ತಲೆ + ಒಡೆವಿನೆಗಂ = ತನ್ನ ಮಗನ ತಲೆ ಸೀಳುವವರೆಗೂ, ಬಡಿಯೊಳ್ ಬಡಿದ ಕಾರಣಂ = ದೊಣ್ಣೆಯಿಂದ ಹೊಡೆದುದರಿಂದ, ಪಡೆಪುಗಿಡುವಿನೆಗಂ ಕೊಂಡುಯ್ವರ್ ಎಂದು = ಲಾಭವನ್ನು ಕಿತ್ತುಕೊಂಡು ಭಟರು ತನ್ನನ್ನು ಕರೆದೊಯ್ಯುತ್ತಾರೆ ಎಂದು, ಆ ಕಡುಲೋಭಂ ತನ್ನ ಕಾಲ್ಗಳಂ ಪಿಡಿದು + ಉಡಿದಂ = ಆ ಜಿಪುಣನು ತನ್ನ ಕಾಲುಗಳನ್ನೇ ಕಡಿದು ಮುರಿದುಕೊಂಡ

**ಗದ್ಯಾನುಸರಣ:** ತನ್ನ ಮಗನ ತಲೆ ಸೀಳುವವರೆಗೂ ದೊಣ್ಣೆಯಿಂದ ಹೊಡೆದ; ಇದರಿಂದ ಲಾಭವನ್ನು ಕಿತ್ತುಕೊಂಡು ಭಟರು ತನ್ನನ್ನು ಕರೆದೊಯ್ಯುತ್ತಾರೆ ಎಂದು ಹೆದರಿದ ಆ ಜಿಪುಣನು ತನ್ನ ಕಾಲುಗಳನ್ನೇ ಮುರಿದುಕೊಂಡ.

**ವ। ತದ್ವೃತ್ತಾಂತಮೆಲ್ಲಮನಱಿದು ತತ್ಪುರಾಧೀಶಂ ದಂಡಿಸೆ ಗತಜೀವಿತನಾಗಿ ಬಂದಿಲ್ಲಿ ನಕುಳನಾದಂ; ಇಂತೀ ಶಾರ್ದೂಲವರಾಹ ಗೋಲಾಂಗೂಲ ನಕುಲಂಗಳ್ ನಾಲ್ಕುಂ ಭವದ್ದಾನಾನುಮೋದದಿಂ ಜಾತಿಸ್ಮರಂಗಳಾಗಿ ಭೋಗಭೂಮಿಗೆ ಬದ್ಧಾಯುಷ್ಯಂಗಳಾದುವು. ಅಂತು ದಿವ್ಯಮಾನುಷ ಗೋಚರಪ್ಪ ಸುಖಂಗಳಂ ನಿನ್ನೊಡನುಣುತ್ತುಂ ಬಂದು ಭರತದೊಳ್ ನೀಂ ಭವಿಷ್ಯತ್ತೀರ್ಥಕರನಾದಂದನುಕ್ರಮದೊಳ್ ನಿನಗನಂತವೀರಾಚ್ಯುತ ವೀರ ಸುವೀರರೆಂಬ ತನಯರಪ್ಪರೆಂದಿಂತು ಚಾರಣಮುನೀಂದ್ರರ್ ಬೆಸಸಿ ಸತ್ಪಥೋನ್ನತಿಯುಂ ನನ್ನಿವಾಡುವಂತೆ ಸತ್ಪಥಾತಿಥಿಗಳಾದರ್. ಅರಸನುಂ ಶ್ರೀಮತಿಯುಮುಂದೆಲ್ಲರಯುಮವರ ಗುಣಂಗಳನೆ ಮತಿವರಾದಿಗಳೊಳ್ ನುಡಿಯುತ್ತುಮಿರ್ದು ಮಱುದಿವಸಂ ಸಮಸ್ತಸಾಮಗ್ರಿಯಿಂ ಪಯಣದ ಮೇಲೆ ಪಯಣಂಬೋಗಿ ಪುಂಡರೀಕಿಣಿಯನೆಯ್ದಿ,**

**ಪದವಿಭಾಗ-ಅನ್ವಯ-ಅರ್ಥ:** ತತ್ + ವೃತ್ತಾಂತಮೆಲ್ಲಮನ್ + ಅಱಿದು = ಈ ವಿಷಯಗಳನ್ನೆಲ್ಲ ತಿಳಿದು, ತತ್ + ಪುರಾಧೀಶಂ ದಂಡಿಸೆ = ಆ ರಾಜನು ಶಿಕ್ಷಿಸಲು, ಗತಜೀವಿತನಾಗಿ ಬಂದು + ಇಲ್ಲಿ ನಕುಳನಾದಂ = ಸತ್ತು ಇಲ್ಲಿ ಬಂದು ಮುಂಗುಸಿಯಾದ; ಇಂತೀ ಶಾರ್ದೂಲವರಾಹಗೋಲಾಂ ಗೂಲನಕುಲಂಗಳ್ ನಾಲ್ಕುಂ = ಹೀಗೆ ಈ ಹುಲಿ ಹಂದಿ ಕೋತಿ ಮುಂಗುಸಿಗಳು, ಭವತ್ + ದಾನ + ಅನುಮೋದದಿಂ ಜಾತಿಸ್ಮರಂಗಳಾಗಿ = ನಿನ್ನ ದಾನಕ್ಕೆ ಒಪ್ಪಿಗೆಯಿತ್ತದ್ದರಿಂದ ಹಿಂದಿನ ಜನ್ಮದ ನೆನಪು ಹೊಂದಿ, ಭೋಗಭೂಮಿಗೆ ಬದ್ಧ ಯುಷ್ಯಂಗಳಾದುವು = ಭೋಗಭೂಮಿಗೆ ಅನುಗುಣವಾದ ಆಯುಸ್ಸನ್ನು ಪಡೆದುವು; ಅಂತು ದಿವ್ಯಮಾನುಷಗೋಚರಪ್ಪ ಸುಖಂಗಳಂ ನಿನ್ನೊಡನೆ + ಉಣುತ್ತುಂ ಬಂದು = ಹಾಗೆ ದೇವರೂ ಮನುಷ್ಯರೂ ಹೊಂದುವ ಸುಖಗಳನ್ನು ನಿನ್ನ ಜೊತೆಗೆ ಅನುಭವಿಸುತ್ತ, ಭರತದೊಳ್ ನೀಂ ಭವಿಷ್ಯತ್ + ತೀರ್ಥಕರನಾದಂದು = ಭರತವರ್ಷದಲ್ಲಿ ಮುಂದೆ ನೀನು ತೀರ್ಥಂಕರನಾದಾಗ, ಅನುಕ್ರಮದೊಳ್ ಅನಂತವೀರ + ಅಚ್ಯುತ + ವೀರ + ಸುವೀರರೆಂಬ ನಿನಗೆ + ತನಯರಪ್ಪರ್ = ಕ್ರಮವಾಗಿ ಅನಂತವೀರ ಅಚ್ಯುತ ವೀರ ಸುವೀರರೆಂಬ ನಿನ್ನ ಮಕ್ಕಳಾಗುವರು; ಎಂದು + ಇಂತು ಚಾರಣಮುನೀಂದ್ರರ್ ಬೆಸಸಿ = ಹೀಗೆಂದು ಚಾರಣಮುನಿಗಳು ಹೇಳಿ, ಸತ್ಪಥ + ಉನ್ನತಿಯಂ ನನ್ನಿಮಾಡುವಂತೆ = ಒಳ್ಳೆಯ ಮಾರ್ಗದಿಂದ ದೊರೆಯುವ ಉನ್ನತಿಯನ್ನು ನಿಜಮಾಡುವಂತೆ, ಸತ್ಪಥ + ಅತಿ□ಗಳಾದರ್ ಆಗಸಮಾರ್ಗದಲ್ಲಿ ಸೇರಿದರು. ಅರಸನುಂ ಶ್ರೀಮತಿಯುಂ + ಅಂದು + ಎಲ್ಲರುಂ + ಅವರ ಗುಣಂಗಳನೆ = ವಜ್ರಜಂಘ-ಶ್ರೀಮತಿಯರೆಲ್ಲರೂ ಆಮೇಲೆ ಚಾರಣಮುನಿಗಳ ಗುಣಗಳನ್ನೇ, ಮತಿವರಾದಿಗಳೊಳ್ ನುಡಿಯುತ್ತುಂ + ಇರ್ದು = ಮತಿವರ ಮುಂತಾದವರಿಗೆ ಹೇಳುತ್ತಿದ್ದು, ಮಱುದಿವಸಂ ಸಮಸ್ತಸಾಮಗ್ರಿಯಿಂ = ಮಾರನೆಯ ದಿನ ಎಲ್ಲ ವಸ್ತುಗಳೊಂದಿಗೆ, ಪಯಣದ ಮೇಲೆ ಪಯಣಂ + ಪೋಗಿ ಪುಂಡರೀಕಿಣಿಯನ್ + ಎಯ್ದಿ = ನಿರಂತರವಾಗಿ ಪಯಣ ಬೆಳೆಸುತ್ತ ಪುಂಡರೀಕಿಣಿಯನ್ನು ಸೇರಿ,

**ಗದ್ಯಾನುಸರಣ:** 'ಈ ವಿಷಯಗಳನ್ನೆಲ್ಲ ತಿಳಿದ ರಾಜನು ಅವನಿಗೆ ಶಿಕ್ಷೆಯಿತ್ತ; ಸತ್ತ ಮೇಲೆ ಇಲ್ಲಿ ಬಂದು ಮುಂಗುಸಿಯಾದ; ನಿನ್ನ ದಾನಕ್ಕೆ ಒಪ್ಪಿಗೆಯಿತ್ತದ್ದರಿಂದ ಹೀಗೆ ಈ ಹುಲಿ ಹಂದಿ ಕೋತಿ ಮುಂಗುಸಿಗಳಿಗೆ ಹಿಂದಿನ ಜನ್ಮದ ನೆನಪು ಉಂಟಾಗಿ ಭೋಗಭೂಮಿಗೆ ಅನುಗುಣವಾದ ಆಯುಸ್ಸನ್ನು ಪಡೆದುವು; ಅದರಂತೆ ಅವರು ನಿನ್ನ ಜೊತೆಗೆ ದೇವರೂ ಮನುಷ್ಯರೂ ಹೊಂದುವ ಸುಖಗಳನ್ನು ಅನುಭವಿಸುತ್ತಿದ್ದಾರೆ; ಮುಂದೆ ಭರತವರ್ಷದಲ್ಲಿ ನೀನು ತೀರ್ಥಂಕರನಾದಾಗ ಅವರು ಕ್ರಮವಾಗಿ ಅನಂತವೀರ ಅಚ್ಯುತ ವೀರ ಸುವೀರರೆಂಬ ನಿನ್ನ ಮಕ್ಕಳಾಗುವರು' – ಹೀಗೆಂದು ಚಾರಣಮುನಿಗಳು ಹೇಳಿ, ಒಳ್ಳೆಯ ಮಾರ್ಗದಿಂದ

ದೊರೆಯುವ ಉನ್ನತಿಯನ್ನು ನಿಜಮಾಡುವಂತೆ ಆಗಸಮಾರ್ಗದಲ್ಲಿ ಹೊರಟು ಹೋದರು. ಆಮೇಲೆ ವಜ್ರಜಂಘ-ಶ್ರೀಮತಿ ಮುಂತಾದವರೆಲ್ಲ ಚಾರಣಮುನಿಗಳ ಗುಣಗಳನ್ನೇ ಮತಿವರ ಮುಂತಾದವರಿಗೆ ಹೇಳುತ್ತಿದ್ದರು; ಮಾರನೆಯ ದಿನ ಎಲ್ಲ ವಸ್ತುಗಳೊಂದಿಗೆ ನಿರಂತರವಾಗಿ ಪಯಣ ಬೆಳೆಸುತ್ತ ಪುಂಡರೀಕಿಣಿಯನ್ನು ಸೇರಿದರು.

**ವಿಶೇಷ ವಿಚಾರ:** 'ಆದಿಪುರಾಣ'ದಲ್ಲಿ ಹತ್ತಾರು ಜನರ ಭವಾವಳಿಗಳ ಕಥನವಿದೆ; ಆದರೆ ಎಲ್ಲದರಲ್ಲೂ ಕಂಡುಬರುವ ಒಂದು ಅಂಶವೆಂದರೆ, ಜನ್ಮಜನ್ಮಾಂತರಗಳನ್ನು ಪಡೆಯುವ ಜೀವವು ತನ್ನ ಪರಿಸರದಲ್ಲಿಯೇ ಮತ್ತೆ ಮತ್ತೆ ಹುಟ್ಟುತ್ತ ಹೋಗುವುದು. ಇದು ಸಾಧ್ಯವೇ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತ; ಯಾಕೆಂದರೆ ಪುರಾಣ ಮತ್ತು ಕಾವ್ಯಗಳೆರಡರದೂ ಪ್ರತಿಮಾತ್ಮಕ ಸಂಕಥನ. ಭವಾವಳಿಗಳೆಂದರೆ ಒಂದೇ ಹುಟ್ಟಿನ ಬೇರೆ ಬೇರೆ ಘಟ್ಟಗಳೆಂದು ತಿಳಿಯಬಹುದೇನೋ; ಪ್ರಾಣಿಗಳ ಜನ್ಮಗಳು ಆಯಾ ವ್ಯಕ್ತಿಯು ಕಾಲಕಾಲಕ್ಕೆ ತಾಳುವ ಆಯಾ ಪ್ರಾಣಿಯು ಸಂಕೇತಿಸುವ ವಿಶಿಷ್ಟ ಗುಣವನ್ನು ಪಡೆದುದನ್ನು ಸೂಚಿಸಬಹುದು.

> **ವಿಗಳದ್ಬಾಷ್ಪಾಂಬುದೀನಾನನೆಯೆನಿಸಿದ ಲಕ್ಷ್ಮೀಮತಿದೇವಿಯುಂ ಮೆ**
> **ಲ್ಲಗೆ ಸಂತೈಸುತ್ತುಮಾತ್ಮಾನುಜೆಯ ಮನದ ನಿರ್ವೇಗಮಂ ಪಿಂಗಿಸುತ್ತುಂ**
> **ಬಗೆಯುತ್ತುಂ ಮಂತ್ರಿವರ್ಗಂಗಳೊಳತಿನಯಮಂ ಪುಂಡರೀಕಂಗೆ ಸಾಮಾ**
> **ದಿಗಳಿಂ ನಿಷ್ಕಂಟಕಂಮಾಡಿದನಖಿಳಮಹೀಚಕ್ರಮಂ ವಜ್ರಜಂಘಂ೨೧**

**ಪದವಿಭಾಗ-ಅನ್ವಯ-ಅರ್ಥ:** ವಿಗಳತ್ + ಬಾಷ್ಪಾಂಬುದೀನ + ಆನನೆಯೆನಿಸಿದ ಲಕ್ಷ್ಮೀಮತಿದೇವಿಯಂ = ಕಣ್ಣೀರನ್ನು ಸುರಿಸುತ್ತ ಮುಖ ಮಂಕಾಗಿದ್ದ ಲಕ್ಷ್ಮೀಮತಿದೇವಿಯನ್ನು, ವಜ್ರಜಂಘಂ ಮೆಲ್ಲಗೆ ಸಂತೈಸುತ್ತುಂ = ವಜ್ರಜಂಘನು ಮೆಲುವಾಗಿ ಸಾಂತ್ವನ ಹೇಳುತ್ತ, ಆತ್ಮ + ಆನುಜೆಯ ಮನದ ನಿರ್ವೇಗಮಂ ಪಿಂಗಿಸುತ್ತುಂ = ತನ್ನ ತಂಗಿ ಅನುಂದರಿಯ ಮನಸ್ಸಿನ ಖೇದವನ್ನು ಹೋಗಲಾಡಿಸುತ್ತ, ಮಂತ್ರಿವರ್ಗಂಗಳೊಳ್ + ಅತಿನಯಮಂ ಬಗೆಯುತ್ತುಂ = ಮಂತ್ರಿಗಳೊಡನೆ ಅನುಸರಿಸಬೇಕಾದ ನೀತಿಯ ಬಗ್ಗೆ ಆಲೋಚಿಸುತ್ತ, ಪುಂಡರೀಕಂಗೆ = ಪುಂಡರೀಕನಿಗಾಗಿ, ಸಾಮ + ಆದಿಗಳಿಂ = ಸಾಮ ಮುಂತಾದ ಉಪಾಯಗಳಿಂದ, ಅಖಿಳಮಹೀಚಕ್ರಮಂ ನಿಷ್ಕಂಟಕಂಮಾಡಿದನ್ = ಇಡೀ ರಾಜ್ಯವನ್ನು ನಿರುಮ್ಮಳವಾಗಿ ಮಾಡಿದ.

**ಗದ್ಯಾನುಸರಣ:** ವಜ್ರಜಂಘನು ಮಾಡಿದ ಮೊದಲ ಕೆಲಸವೆಂದರೆ, ಕಣ್ಣೀರನ್ನು ಸುರಿಸುತ್ತ ಮಂಕಾಗಿ ಕೂತಿದ್ದ ಲಕ್ಷ್ಮೀಮತಿದೇವಿಗೆ ಮೆಲುವಾಗಿ ಸಾಂತ್ವನ ಹೇಳಿದ್ದು;

ಆನಂತರ ತನ್ನ ತಂಗಿ ಅನುಂದರಿಯ ಮನಸ್ಸಿನ ಖೇದವನ್ನು ಹೋಗಲಾಡಿಸಿದ; ಕೊನೆಯಲ್ಲಿ ಮಂತ್ರಿಗಳೊಡನೆ ಅನುಸರಿಸಬೇಕಾದ ನೀತಿಯ ಬಗ್ಗೆ ಆಲೋಚಿಸಿ ಪುಂಡರೀಕನಿಗಾಗಿ ಸಾಮ ಮುಂತಾದ ಉಪಾಯಗಳನ್ನು ಬಳಸಿಕೊಂಡು ಇಡೀ ರಾಜ್ಯವನ್ನು ನಿರುಮ್ಮಳವಾಗಿ ಮಾಡಿದ.

**ವ। ಅಂತಾತ್ಮೀಯಭಾಗಿನೇಯನಂ ರಾಜ್ಯದೊಳ್ ಪದುಳಂ ಮಾಡಿ ಮಹಾಸಾಮಂತ ಮಂತ್ರಿಮಂಡಳಕ್ಕಪ್ಪಯಿಸಿ ನಿಜವಿಜಯ ರಾಜಧಾನಿ ಗುತ್ಪಳಖೇಟಕ್ಕೆ ವಂದು,**

**ಪದವಿಭಾಗ-ಅನ್ವಯ-ಅರ್ಥ:** ಅಂತು + ಆತ್ಮೀಯಭಾಗಿನೇಯನಂ ರಾಜ್ಯದೊಳ್ ಪದುಳಂ ಮಾಡಿ = ಹೀಗೆ ತನ್ನ ಸೋದರಳಿಯನಿಗಾಗಿ ರಾಜ್ಯದಲ್ಲಿ ನೆಮ್ಮದಿಯನ್ನು ಸ್ಥಾಪಿಸಿ, ಮಹಾಸಾಮಂತಮಂತ್ರಿಮಂಡಳಕ್ಕಪ್ಪಯಿಸಿ = ಅದನ್ನು ಸಾಮಂತರ ಹಾಗೂ ಮಂತ್ರಿಮಂಡಲದ ಉಸ್ತುವಾರಿಗೆ ಒಪ್ಪಿಸಿ, ನಿಜವಿಜಯ ರಾಜಧಾನಿಗುತ್ಪಳಖೇಟಕ್ಕೆ ವಂದು = ತನ್ನ ರಾಜಧಾನಿಯಾದ ಉತ್ಪಳಖೇಟಕ್ಕೆ ಬಂದು,

**ಗದ್ಯಾನುಸರಣ:** ಹೀಗೆ ತನ್ನ ಸೋದರಳಿಯನಿಗಾಗಿ ರಾಜ್ಯದಲ್ಲಿ ನೆಮ್ಮದಿಯನ್ನು ಸ್ಥಾಪಿಸಿ ಅದನ್ನು ಸಾಮಂತರ ಹಾಗೂ ಮಂತ್ರಿಮಂಡಲದ ಉಸ್ತುವಾರಿಗೆ ಒಪ್ಪಿಸಿದ; ಆನಂತರ ತನ್ನ ರಾಜಧಾನಿಯಾದ ಉತ್ಪಳಖೇಟಕ್ಕೆ ವಾಪಸಾದ.

**ದಿವಿಜೇಂದ್ರಾವಾಸಸೌಖ್ಯಕ್ಕತಿಶಯಮೆಸೆವೀ ಸೌಖ್ಯಮಾ ದೇವಿಗಂ ರೂ**
**ಪವಿಳಾಸಶ್ರೀಯೊಳೀ ದೇವಿಯೆ ಮಿಗಿಲಮರಾಕಾರಮಂ ಗೆಲ್ದುದೀಮಾ**
**ನವದೇಹಾಕಾರಮೆಂಬಂತಿರೆ ಭುವನಜನಂ ಶ್ರೀಮತೀವಕ್ತ್ರಚಂದ್ರ**
**ಚ್ಛವಿ ಚೆಲ್ವಂ ಮಾಟ್ಪಿನಂ ಭೋಗಿಸದನಖಿಳಭೋಗಂಗಳಂ ವಜ್ರಜಂಘಂ**
**೨೨**

**ಪದವಿಭಾಗ-ಅನ್ವಯ-ಅರ್ಥ:** ಎಸೆವ ಈ ಸೌಖ್ಯಂ ದಿವಿಜೇಂದ್ರ + ಆವಾಸಸೌಖ್ಯಕ್ಕೆ + ಅತಿಶಯಂ = ಈ ಸುಖವು ದೇವಲೋಕದ ಸುಖಕ್ಕಿಂತಲೂ ಮಿಗಿಲಾದುದು, ರೂಪವಿಳಾಸಶ್ರೀಯೊಳ್ ಆ ದೇವಿಗಂ ಈ ದೇವಿಯೆ ಮಿಗಿಲ್ = ಚೆಲುವು ಬೆಡಗುಗಳಲ್ಲಿ ಆ ದೇವಾಂಗನೆಗೂ ಈ ದೇವಿಯದೇ ಹೆಚ್ಚಿನದು, ಈ ಮಾನವದೇಹಾಕಾರಂ ಅಮರಾಕಾರಮಂ ಗೆಲ್ದುದು = ಇವರ ಮಾನವಾ ಕೃತಿಗಳು ದೇವತೆಗಳ ಆಕಾರವನ್ನೂ ಮೀರಿಸಿವೆ, ಭುವನಜನಂ ಎಂಬಂತಿರೆ = ಎಂದು ಭೂಮಿಯ ಜನರೆಲ್ಲ ಹೇಳುವ ಹಾಗೆ, ಶ್ರೀಮತೀವಕ್ತ್ರಚಂದ್ರಚ್ಛವಿ ಚೆಲ್ವಂ ಮಾಟ್ಪಿನಂ = ಶ್ರೀಮತಿಯ ಮುಖಚಂದ್ರದ ಕಾಂತಿಯು ಚೆಲುವಾಗಿಸಲು, ವಜ್ರಜಂಘಂ

ಅಖಿಳಭೋಗಂಗಳಂ ಭೋಗಿಸಿದನ್ = ವಜ್ರಜಂಘನು ಎಲ್ಲ ಭೋಗಗಳನ್ನೂ ಅನುಭವಿಸಿದ.

**ಗದ್ಯಾನುಸರಣ:** 'ಈ ಸುಖವು ದೇವಲೋಕದ ಸುಖಕ್ಕಿಂತಲೂ ಮಿಗಿಲಾದುದು, ಚೆಲುವು ಬೆಡಗುಗಳಲ್ಲಿ ಆ ದೇವಾಂಗನೆಗೂ ಈ ದೇವಿಯದೇ ಹೆಚ್ಚಿನದು, ಇವರ ಮಾನವಾಕೃತಿಗಳು ದೇವತೆಗಳ ಆಕಾರವನ್ನೂ ಮೀರಿಸಿವೆ' ಎಂದು ಭೂಮಿಯ ಜನರೆಲ್ಲ ಹೊಗಳುವ ಹಾಗೆಯೂ, ಶ್ರೀಮತಿಯ ಮುಖಕಾಂತಿಯನ್ನು ಹೆಚ್ಚಿಸುವಂತೆಯೂ ವಜ್ರಜಂಘನು ಎಲ್ಲ ಭೋಗಗಳನ್ನೂ ಅನುಭವಿಸಿದ.

**ವಿಶೇಷ ವಿಚಾರ:** ಮಾನವರು ದೇವತೆಗಳ ಆಕಾರವನ್ನು ಮೀರಿಸಿದ್ದಾರೊ ಇಲ್ಲವೊ ಗೊತ್ತಿಲ್ಲ. ಆದರೆ ಪಂಪಕವಿ ತನ್ನ ಅಸಾಧಾರಣ ಪ್ರತಿಭೆಯಿಂದ ತನ್ನ ಅದುಟಿ ವರ್ಣನೆಯ ಮೂಲಕ ದೇವತೆಗಳಿಗೂ ಮೀರಿದ ಆಕೃತಿಗಳನ್ನು ನಮ್ಮ ಮುಂದೆ ಇಟ್ಟಿದ್ದಾನೆ ಅನಿಸುತ್ತದೆ. ನಮ್ಮ ದೇವರು ನಮ್ಮ ಅಳತೆಗೆ ತಕ್ಕಂತೆ ತಾನೆ ಇರಬೇಕು!

ವ॥ ಅಂತನೇಕಸಂವತ್ಸರಂಗಳ್ ಸಲ್ವಿನೆಗಮೊಂದು ದಿವಸಂ ರಜನೀಸಮಯದೊಳನರ್ಘ್ಯಮರಕತಮಣಿಶಿಲಾಸಂಪಾದಿತ ಮೇದಿನೀ ವಿಭಾಗದೊಳ್ ಅಮರಖಚರಕಿನ್ನರಮಿಥುನಸನಾಥ ವಿಚಿತ್ರವಿರಾಜಿತ ದೊಳತಿ ಬಹಳಕಾಳಾಗರುಧೂಪಧೂಮಾಮೋದದೊಳತಿ ವಿಶದ ಮಣಿ ಪ್ರದೀಪಿಕೋದ್ದ್ಯೋತ ದೂರೀಕೃತತಮಸ್ತಮದೊಳನೇಕರತ್ನಖಚಿತ ಪ್ರತಿಪಾದುಕಾ ವಿನ್ಯಸ್ತ ಕಾಂಚನ ಮಂಚೋಪಶೋಭಿತದೊಳ್ ಪಯಃ ಪಯೋನಿಧಿ ಫೇನ ಸಂಕಾಶದುಕೂಲೋಪಪ್ರಚ್ಛದಾಚ್ಛಾದಿತ ವಿಚಿತ್ರ ನೇತ್ರೋಭಯೋಪಧಾನ ಶಯ್ಯಾತಳದೊಳನೇಕವಿಳಾಸಿನೀ ವಿಳಾಸಾವಾಸಭವನದೊಳಾ ದಂಪತಿಗಳನ್ಯೋನ್ಯಾಂಗ ಸ್ಪರ್ಶಸುಖೋನ್ಮೀಳಿತವಿಲೋಚನರಂತಂತೆ ನಿದ್ರಾರಸವಶಗತರಾಗಿರ್ದರ್; ಅನ್ನೆಗಮಲ್ಲಿ ಮುಚ್ಚಿರ್ದ ಹರಿನೀಲಗವಾಕ್ಷ ಜಾಲ ಕವಾಟ ಪುಟಂಗಳಂ ತೆಱೆ ಯಲ್ಮಱೆದು ಸೂರ್ಯಕಾಂತದ ಧೂಪಗುಂಡಿಗೆಯೊಳಳವಱಿಯದೆ ಸೆಜ್ಜೆವಳನಿಕ್ಕಿದ ಕೇಶ ಸಂಸ್ಕಾರಕಾಳಾಗರುಧೂಪಂ,

**ಪದವಿಭಾಗ-ಅನ್ವಯ-ಅರ್ಥ:** ಅಂತು + ಅನೇಕಸಂವತ್ಸರಂಗಳ್ ಸಲ್ವಿನೆಗಂ = ಹೀಗೇ ಅನೇಕ ವರ್ಷಗಳು ಸಂದಿರಲಾಗಿ, ಒಂದು ದಿವಸಂ ರಜನೀಸಮಯದೊಳ್ = ಒಂದು ದಿನ ರಾತ್ರಿಯ ಹೊತ್ತಿನಲ್ಲಿ, ಅನರ್ಘ್ಯಮರಕತಮಣಿಶಿಲಾಸಂಪಾದಿತ = ಅಮೂಲ್ಯವಾದ ಪಚ್ಚೆಯ ನೆಲಗಟ್ಟನ್ನುಳ್ಳ, ಮೇದಿನೀ ವಿಭಾಗದೊಳ್ = ಪ್ರದೇಶದಲ್ಲಿ, ಅಮರಖಚರಕಿನ್ನರಮಿಥುನ ಸನಾಥವಿಚಿತ್ರ

ವಿರಾಜಿತದೊಳ್ = ದೇವತೆಗಳ ಖೇಚರರ ಕಿನ್ನರ ದಂಪತಿಗಳ ಸುಂದರ ಚಿತ್ರಗಳಿರುವಲ್ಲಿ, ಅತಿಬಹಳಕಾಳಾಗರುಧೂಪಧೂಮಾಮೋದದೊಳ್ = ಹೆಚ್ಚಿನ ಕಾಳಾಗರುವಿನ ಹೊಗೆಯ ಪರಿಮಳ ಹರಡಿರುವಲ್ಲಿ, ಅತಿವಿಶದಮಣಿಪ್ರದೀಪಿಕಾ + ಉದ್ಯೋತದೂರೀಕೃತತಮಸ್ತಮದೊಳ್ = ಸ್ಪಷ್ಟವಾದ ಮಣಿಖಚಿತ ದೀಪಗಳ ಬೆಳಕಿನಿಂದ ಕತ್ತಲು ದೂರವಾಗಿರುವಲ್ಲಿ, ಅನೇಕರತ್ನಖಚಿತಪ್ರತಿಪಾದುಕಾವಿನ್ಯಸ್ತ = ನಾನಾ ಮಣಿಗಳನ್ನು ಜೋಡಿಸಿದ ಕಾಲುಗಳಿದ್ದ, ಕಾಂಚನಮಂಚ + ಉಪ ಶೋಭಿತದೊಳ್ = ಅಲಂಕರಣಗೊಂಡ ಚಿನ್ನದ ಮಂಚದಲ್ಲಿ, ಪಯಃಪಯೋ ನಿಧಿಫೇನಸಂಕಾಶ = ಹಾಲ್ಗಡಲಿನ ನೊರೆಯಂತೆ ಬೆಳ್ಳಗಿದ್ದ, ದುಕೂಲ + ಉಪಪ್ರಚ್ಛದ + ಆಚ್ಛಾದಿತ = ರೇಷ್ಮೆವಸ್ತ್ರದ ಹಚ್ಚಡವನ್ನು ಹಾಸಿದ್ದ, ವಿಚಿತ್ರ ನೇತ್ರ + ಉಭಯ + ಉಪಧಾನಶಯ್ಯಾತಳದೊಳ್ = ಎರಡೂ ಬದಿಗಳಲ್ಲಿ ಸುಂದರವಾದ ರೇಷ್ಮೆಯ ದಿಂಬುಗಳನ್ನು ಹೊಂದಿದ್ದ, ಅನೇಕವಿಳಾಸಿನೀ ವಿಳಾಸಾವಾ ಸಭವನದೊಳ್ = ಅನೇಕ ವಿಲಾಸಿನಿಯರ ಆ ಆಶ್ರಯದಾಣದಲ್ಲಿ, ಆ ದಂಪತಿಗಳ್ + ಅನ್ಯೋನ್ಯ + ಅಂಗಸ್ಪರ್ಶಸುಖ + ಉನ್ಮೀಳಿತವಿಲೋಚನರ್ = ವಜ್ರಜಂಘ-ಶ್ರೀಮತಿಯರು ಪರಸ್ಪರರ ಶರೀರಸ್ಪರ್ಶದ ಆನಂದದಲ್ಲಿ ಅರಳಿದ ಕಣ್ಣುಗಳಂತೆ, ಅಂತಂತೆ ನಿದ್ರಾರಸವಶಗತರಾಗಿರ್ದರ್ = ಹಾಗೆಯೇ ನಿದ್ರೆಯಲ್ಲಿ ಮುಳುಗಿದ್ದರು; ಅನ್ನೆಗಂ + ಅಲ್ಲಿ ಮುಚ್ಚಿರ್ದ ಹರಿನೀಲಗವಾಕ್ಷಜಾಲಕವಾಟಪುಟಂಗಳಂ = ಅಷ್ಟರಲ್ಲಿ, ಅಲ್ಲಿ ಮುಚ್ಚಿದ್ದ ಗವಾಕ್ಷದ ಹರಿನೀಲ ಮುಚ್ಚಳಗಳನ್ನು, ತೆಱೆಯಲ್ + ಮಱೆದು = ತೆಗೆದಿಡಲು ಮರೆತು, ಸೂರ್ಯಕಾಂತದ ಧೂಪಗುಂಡಿಗೆಯೊಳ್ = ಸೂರ್ಯಕಾಂತದ ಧೂಪದ ಗುಂಡಿಗೆಯಲ್ಲಿ, ಸೆಜ್ಜೆವಳನ್ ಅಳವು + ಅಱಿಯದೆ ಇಕ್ಕಿದ = ಮಲಗುವ ಮನೆಯ ಸೇವಕನು ಅಳತೆಯನ್ನು ಮೀರಿ ಹಾಕಿದ್ದ, ಕೇಶ ಸಂಸ್ಕಾರಕಾಳಾಗರುಧೂಪಂ = ಕೂದಲನ್ನು ಒಣಗಿಸಿಕೊಳ್ಳಲೆಂದಿದ್ದ ಕಾಳಾಗರುಧೂಪವು,

**ಗದ್ಯಾನುಸರಣ:** ಹೀಗೇ ಅನೇಕ ವರ್ಷಗಳು ಸರಿದುವು. ಒಂದು ದಿನ ಹೀಗಾಯಿತು: ರಾತ್ರಿಯ ಹೊತ್ತಿನಲ್ಲಿ ಅಮೂಲ್ಯವಾದ ಪಚ್ಚೆಯ ನೆಲಗಟ್ಟನ್ನುಳ್ಳ ಪ್ರದೇಶದಲ್ಲಿ ಅನೇಕ ವಿಲಾಸಿನಿಯರ ಒಂದು ಆಶ್ರಯದಾಣವಿತ್ತು; ಅದರಲ್ಲಿ ದೇವತೆಗಳ ಖೇಚರರ ಕಿನ್ನರ ದಂಪತಿಗಳ ಸುಂದರ ಚಿತ್ರಗಳು ಅಲಂಕರಿಸಿದ್ದುವು; ಕಾಳಾಗರುವಿನ ಹೊಗೆಯ ಪರಿಮಳವು ಎಲ್ಲೆಡೆ ಹರಡಿತ್ತು; ಪ್ರಕಾಶಮಾನವಾದ ಮಣಿಖಚಿತ ದೀಪಗಳ ಬೆಳಕಿನಿಂದ ಕತ್ತಲು ದೂರವಾಗಿತ್ತು; ಅಲ್ಲಿ ನಾನಾ ಮಣಿಗಳನ್ನು ಜೋಡಿಸಿದ ಕಾಲುಗಳಿದ್ದ ಅಲಂಕರಣಗೊಂಡ ಚಿನ್ನದ ಮಂಚವೊಂದು ಶೋಭಿಸುತ್ತಿತ್ತು; ಅದರ ಮೇಲೆ ಹಾಲ್ಗಡಲಿನ ನೊರೆಯಂತೆ ಬೆಳ್ಳಗಿದ್ದ ರೇಷ್ಮೆವಸ್ತ್ರದ ಹಚ್ಚಡವನ್ನು ಹಾಸಿದ್ದರು; ಎರಡೂ ಬದಿಗಳಲ್ಲಿ ಸುಂದರವಾದ ರೇಷ್ಮೆಯ ದಿಂಬುಗಳನ್ನುಜೋಡಿಸಲಾಗಿತ್ತು; ಅದರಲ್ಲಿ ವಜ್ರಜಂಘ-ಶ್ರೀಮತಿಯರು ಪರಸ್ಪರರ

ಶರೀರಸ್ಪರ್ಶದ ಆನಂದದಲ್ಲಿ ಅರಳಿದ ಕಣ್ಣುಗಳಂತೆ ನಿದ್ರೆಯಲ್ಲಿ ಮುಳುಗಿದ್ದರು. ಈ ಮಧ್ಯೆ, ಅಲ್ಲಿ ಮುಚ್ಚಿದ್ದ ಗವಾಕ್ಷದ ಹರಿನೀಲ ಮುಚ್ಚಳಗಳನ್ನು ತೆಗೆದಿಡಲು ಮರೆತು ಮಲಗುವ ಮನೆಯ ಸೇವಕನು ಹೊರಟು ಹೋಗಿದ್ದ; ಜೊತೆಗೆ, ಸೂರ್ಯಕಾಂತದ ಒಂದು ಧೂಪದ ಗುಂಡಿಗೆಯಲ್ಲಿ ಕೂದಲನ್ನು ಒಣಗಿಸಿಕೊಳ್ಳಲೆಂದಿದ್ದ ಕಾಳಾಗರುಧೂಪವನ್ನು ಅವನು ಅಳತೆಯನ್ನು ಮೀರಿ ಹಾಕಿದ್ದ.

**ಮೊದಲೊಳ್ ನೀಳ್ದು ಪೊದಳ್ದು ಪರ್ಬಿ ಪದಪಂ ಕೈಕೊಂಡು ಮಂದೈಸಿಮಾ**
**ಣದೆ ತನ್ನಂದದೊಳೇಟಗ್ಗಿಗುಂದದೆ ನಿರುದ್ಧೋಚ್ಛ್ವಾಸಮಪ್ಪನ್ನೆಗಂ**
**ಪುದಿದಾ ದಂಪತಿಯುಂ ಪುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿಕೊಂ**
**ದುದು ಕೃಷ್ಣಾಗರುಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೋಲ್ ೨೩**

**ಪದವಿಭಾಗ-ಅನ್ವಯ-ಅರ್ಥ:** ಮೊದಲೊಳ್ ನೀಳ್ದು ಪೊದಳ್ದು ಪರ್ಬಿ = ಮೊದಲಲ್ಲಿ ಆ ಧೂಪವು ನೀಳವಾಗಿ ಹೊಮ್ಮಿ ಹರಡಿಕೊಂಡು, ಪದಪಂ ಕೈಕೊಂಡು ಮಂದೈಸಿ = ಸರಸರನೆ ಒಟ್ಟುಗೂಡಿ ದಟ್ಟವಾಗಿ, ಮಾಣದೆ ತನ್ನ + ಅಂದದೊಳ್ + ಏಟಗ್ಗಿಗುಂದದೆ = ಅಲ್ಲಿಗೇ ನಿಲ್ಲದೆ ತನ್ನ ಸ್ವರೂಪದಲ್ಲಿ ಕಡಿಮೆಗೊಳ್ಳದೆ, ನಿರುದ್ಧ + ಉಚ್ಛ್ವಾಸಂ + ಅಪ್ಪನ್ನೆಗಂ ಪುದಿದು = ಉಸಿರುಕಟ್ಟುವವರೆಗೂ ತುಂಬಿಕೊಂಡು, ಆ ದಂಪತಿಯಂ ಪುದುಂಗೊಳಿಸಿ = ತನ್ನಲ್ಲಿ ಆ ದಂಪತಿಯನ್ನು ಅಡಗಿಸಿಕೊಂಡು, ಲೋಕಾಶ್ಚರ್ಯಮಂ ಮಾಡಿ = ಜಗತ್ತಿಗೆ ಅಚ್ಚರಿಯುಂಟಾಗುವಂತೆ, ಕೃಷ್ಣಾಗರುಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೋಲ್ ಕೊಂದುದು = ಆ ಕಪ್ಪು ಅಗರುವಿನ ಹೊಗೆಯು ಕಾಳಿಂಗಸರ್ಪದಂತೆ ಕೊಂದುಹಾಕಿತು.

**ಗದ್ಯಾನುಸರಣ:** ಮೊದಲಲ್ಲಿ ಆ ಧೂಪವು ನೀಳವಾಗಿ ಹೊಮ್ಮಿ ಹರಡಿಕೊಂಡಿತು; ಸರಸರನೆ ಒಟ್ಟುಗೂಡಿ ದಟ್ಟವಾಯಿತು; ಅಲ್ಲಿಗೇ ನಿಲ್ಲದೆ ತನ್ನ ಸ್ವರೂಪದಲ್ಲಿ ಕಡಿಮೆಗೊಳ್ಳದೆ ಮತ್ತಷ್ಟು ದಟ್ಟವಾಗಿ ಕೋಣೆಯಲ್ಲಿ ಉಸಿರುಕಟ್ಟುವಷ್ಟು ತುಂಬಿಕೊಂಡಿತು; ಅದರಲ್ಲಿ ಆ ಗಂಡಹೆಂಡಿರು ಅಡಗಿಹೋದರು; ಹೀಗೆ ಜಗತ್ತಿಗೆ ಅಚ್ಚರಿಯುಂಟಾಗುವಂತೆ ಕಪ್ಪು ಅಗರುವಿನ ಹೊಗೆಯು ಕಾಳಿಂಗಸರ್ಪದಂತೆ ಅವರನ್ನು ಕೊಂದುಹಾಕಿತು.

**ವಿಶೇಷ ವಿಚಾರ:** ಕೃಷ್ಣೋರಗದ ಹೋಲಿಕೆ, ಧೂಪಧೂಮವು ಹಬ್ಬಿದ ಬಗೆ, ಅದು ಹಾವಿನಂತಿದ್ದ ವರ್ಣನೆ – ಇವುಗಳು ಮೂಲದಲ್ಲಿಲ್ಲ ಎಂಬುದನ್ನು ಗಮನಿಸಬೇಕು'

ಆದರೆ ಈ ಕಾರಣ ಮತ್ತು ಪರಿಣಾಮಗಳು ನಿರಾಳವಾಗಿರುವಂತೆ ತೋರುವುದಿಲ್ಲ. ಕೃಷ್ಣಾಗರು ಧೂಪ ಧೂಮದ ಪ್ರಸ್ತಾಪವಾಗಲಿ, ಸೇವಕರ ಅಚಾತುರ್ಯವಾಗಲಿ,

ಶ್ರೀಮತಿ ವಜ್ರಜಂಘರ ನಿದ್ರಾಪರವಶಗೆಯಾಗಲಿ ಅತಿಶಯೋಕ್ತಿಯಿಂದ ಪಾರಾಗಿಲ್ಲ. ಅಲ್ಲಮಪ್ರಭು ಹೇಳುವ 'ಅಪರಿಮಿತ ಕತ್ತಲೆಯಂತೆ' ತೋರುತ್ತದೆ. ಇಷ್ಟಕ್ಕೂ ಶ್ರೀಮತಿ ವಜ್ರಜಂಘರ ಹುಟ್ಟು ಸಾವು ನಿರ್ಧರಿತ ಹಳಿಯ ಮೇಲೆ ನಡೆದುಕೊಂಡು ಹೋಗತ್ತಿರುವಂತೆ ಕಾಣುತ್ತದೆ. ಇಲ್ಲಿನ ಪ್ರತಿಯೊಂದು ಕಥಾಂಶವೂ ಕವಿಯ ಅಥವಾ 'ಪುರಾಣಕಾರಣ'ದ ನಿಯೋಜಿತ ಅಂಶದಂತೆಯೇ ಭಾಸವಾಗುತ್ತದೆ. ಪಂಪ ಒಂದು ಪರಂಪರೆಯನ್ನು ಹಾಗೆಯೇ ಮುಂದುವರಿಸಿದ್ದಾನೆ ಅಷ್ಟೆ; ಅದನ್ನು ಪರಿಶೀಲಿಸಲು ಅಥವಾ ಪ್ರಶ್ನಿಸಲು ಯಾವ ಪ್ರಯತ್ನವನ್ನೂ ಮಾಡಿಲ್ಲ.

**ಬಿಡದೆ ಪೊಗೆ ಸುತ್ತೆ ತೋಳಂ**
**ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನಂ**
**ದೊಡಗಳೆದರೋಪರೋಪರೊ**
**ಳೊಡಸಾಯಲ್ಪಡೆದರಿನ್ನವೇಂ ಸಂಖ್ಪೊಳವೇ** ೨೪

**ಪದವಿಭಾಗ-ಅನ್ವಯ-ಅರ್ಥ:** ಬಿಡದೆ ಪೊಗೆ ಸುತ್ತೆ = ಒಂದೇ ಸಮನೆ ಹೊಗೆಯು ಆವರಿಸಲು, ತೋಳಂ ಸಡಿಲಿಸದ + ಆ ಪ್ರಾಣವಲ್ಲಭರ್ = ತಮ್ಮ ಅಪ್ಪುಗೆಯನ್ನು ಸಡಿಲಿಸದ ಆ ಪ್ರಾಣವಲ್ಲಭರು, ಪ್ರಾಣಮನ್ + ಅಂದು + ಒಡಗಳೆದರ್ = ಆಗ ಜೊತೆಯಲ್ಲಿಯೇ ಪ್ರಾಣಬಿಟ್ಟರು; ಓಪರ್ + ಓಪರೊಳ್ + ಒಡಸಾಯಲ್ + ಪಡೆದರ್ = ಪ್ರಿಯರು ಪ್ರಿಯರೊಡನೆಯೇ ಸಾಯುವ ಭಾಗ್ಯವನ್ನು ಪಡೆದರು; ಇನ್ನು + ಅವೇಂ ಸಯ್ಪು + ಒಳವೇ = ಇದಕ್ಕಿಂತಲೂ ಹೆಚ್ಚಿನ ಪುಣ್ಯವಿದ್ದೀತೇ!

**ಗದ್ಯಾನುಸರಣ:** ಒಂದೇ ಸಮನೆ ಹೊಗೆಯು ಆವರಿಸಲು ತಮ್ಮ ಅಪ್ಪುಗೆಯನ್ನು ಸಡಿಲಿಸದ ಆ ಪ್ರಾಣವಲ್ಲಭರು, ಜೊತೆಯಲ್ಲಿಯೇ ಪ್ರಾಣಬಿಟ್ಟರು; ಪ್ರಿಯರು ತಮ್ಮ ಪ್ರಿಯರೊಡನೆಯೇ ಸಾಯುವ ಭಾಗ್ಯವನ್ನು ಪಡೆದರು; ಇದಕ್ಕಿಂತಲೂ ಹೆಚ್ಚಿನ ಪುಣ್ಯವಿದ್ದೀತೇ!

**ವಿಶೇಷ ವಿಚಾರ:** 'ಪ್ರಾಣವಲ್ಲಭರ್' ಎಂಬ ಮಾತಿನ ಶ್ಲೇಷಾರ್ಥ ಎಷ್ಟು ಅದ್ಭುತವಾಗಿ ಪರಿಣಾಮಕಾರಿಯಾಗಿದೆ ಇಲ್ಲಿ! ವಜ್ರಜಂಘ-ಶ್ರೀಮತಿಯರು ಆಲಂಕಾರಿಕ ಅರ್ಥದಲ್ಲಿ ಮಾತ್ರ ಪ್ರಾಣವಲ್ಲಭರಲ್ಲ, ತಮ್ಮ ಪ್ರಾಣವನ್ನು ಮತ್ತೊಬ್ಬರಿಗಾಗಿ ತೆತ್ತವರು! ಇಂಥ ಅನುರಕ್ತಜೀವರು ಜೊತೆಗೆ ಸಾಯುವ

ಪುಣ್ಯವನ್ನು ಪಡೆದುಕೊಂಡು ಬಂದಿದ್ದರು. 'ಪಡೆದು ಬರು'ವುದು ಇಂದಿನ ಕನ್ನಡದಲ್ಲಿಯೂ ಪುಣ್ಯ ಮಾಡು ಎಂಬರ್ಥವನ್ನೇ ಹೊಂದಿದೆ ಎಂಬುದನ್ನು ಗಮನಿಸಿ. ಗಂಡಹೆಂಡಿರ ಈ ಗಾಢಾನುರಕ್ತಿಯ ಬಗ್ಗೆ ಮೂಲದಲ್ಲಿ ಇಂಥ ಉದ್ಗಾರವಿಲ್ಲ (ಏಕೆಂದರೆ 'ಪೂರ್ವಪುರಾಣ'ದ ಕರ್ತೃ ಮುನಿ ಜಿಸೇನಾಚಾರ್ಯ); ಅದಮ್ಯ ಜೀವನಪ್ರೀತಿಯ ಪಂಪನಂತಹವರು ಮಾತ್ರ ಹೀಗೆ ಉದ್ಗರಿಸಬಲ್ಲರು.

**ಭೋಗಾಂಗಮಾಗಿಯುಂ ಕೃ**
**ಷ್ಣಾಗರುಧೂಪಂ ಮುಸುಂಕಿ ಕೊಂದಿಕ್ಕಿದುದಾ**
**ಭೋಗಿಗಳನಿಂತು ಸಂಸೃತಿ**
**ಭೋಗಂಗಳ್ ಭೋಗಿಭೋಗದಿಂ ವಿಷಮಂಗಳ್ ೨೫**

**ಪದವಿಭಾಗ-ಅನ್ವಯ-ಅರ್ಥ:** ಭೋಗಾಂಗಂ + ಆಗಿಯುಂ = ಭೋಗದ ಒಂದು ವಸ್ತುವಾಗಿದ್ದರೂ, ಕೃಷ್ಣಾಗರುಧೂಪಂ ಮುಸುಂಕಿ ಆ ಭೋಗಿಗಳನ್ ಕೊಂದಿಕ್ಕಿದುದು = ಆ ಕೃಷ್ಣಾಗರುವಿನ ಹೊಗೆಯು ಆವರಿಸಿ ಆ ಸುಖಿಗಳನ್ನು ಕೊಂದುಹಾಕಿತು; ಇಂತು ಸಂಸೃತಿಭೋಗಂಗಳ್ = ಹೀಗೆ ಐಹಿಕ ಸುಖಗಳು, ಭೋಗಿಭೋಗದಿಂ ವಿಷಮಂಗಳ್ = ಹಾವಿನ ಹೆಡೆಗಳಿಗಿಂತ ವಿಷಮಯವಾದುವು.

**ಗದ್ಯಾನುಸರಣ:** ಭೋಗದ ಒಂದು ವಸ್ತುವಾಗಿದ್ದರೂ ಕೃಷ್ಣಾಗರುವಿನ ಹೊಗೆಯು ಆವರಿಸಿ ಆ ಸುಖಿಗಳನ್ನು ಕೊಂದುಹಾಕಿತು; ಹೀಗೆ ಐಹಿಕ ಸುಖಗಳು, ಹಾವಿನ ಹೆಡೆಗಳಿಗಿಂತ ವಿಷಮಯವಾದುವು.

**ವಿಶೇಷ ವಿಚಾರ:** ಭೋಗಿ ಮತ್ತು ಭೋಗ ಎಂಬ ಶಬ್ದಗಳಿಗಿರುವ ದ್ವಂದ್ವಾರ್ಥವನ್ನು ಗಮನಿಸಬೇಕು; ಶ್ಲೇಷೆಯ ಮೂಲಕ ಕವಿ ಐಹಿಕ ಸುಖ ಎಂಬುದು ಅಂತಿಮವಾಗಿ ವಿಷವೇ ಎಂಬುದನ್ನು ಸಮರ್ಥವಾಗಿ ಧ್ವನಿಸುತ್ತಾನೆ.

**ಅನಿತು ಸುಖದನಿತು ಭೋಗದ**
**ಮನುಜಯುಗಂ ನೋಡ ನೋಡೆ ತತ್ಕ್ಷಣದೊಳ್ ತಾ**
**ನಿನಿತೊಂದು ದೆಸೆಯನೆಯ್ದಿದು**
**ದೆನೆ ಜಡರೇನೆಂದು ನಂಬುವರ್ ಸಂಸೃತಿಯಂ ೨೬**

**ಪದವಿಭಾಗ-ಅನ್ವಯ-ಅರ್ಥ:** ಅನಿತು ಸುಖದ + ಅನಿತು ಭೋಗದ ಮನುಜಯುಗಂ = ಅಷ್ಟು ಸುಖವನ್ನು ಪಡೆದು ಮೈಮರೆತಿದ್ದ ಆ ಮಾನುಷ ಜೋಡಿಯು, ನೋಡ ನೋಡೆ ತತ್ + ಕ್ಷಣದೊಳ್ ತಾನ್ + ಇನಿತೊಂದು ದೆಸೆಯನ್ + ಎಯ್ದಿದುದು + ಎನೆ = ನೋಡನೋಡುವಷ್ಟರಲ್ಲಿಯೇ ಇಂತಹ ಗತಿಯನ್ನು ಪಡೆಯಿತು ಎಂದರೂ, ಜಡರ್ + ಏನೆಂದು ಸಂಸೃತಿಯಂ ನಂಬುವರ್ = ದಡ್ಡರಾದ ಜನರು ಏನೆಂದು ಈ ಸಂಸಾರವನ್ನು ನೆಚ್ಚಿಕೊಳ್ಳುತ್ತಾರೆಯೋ!

**ಗದ್ಯಾನುಸರಣ:** ಅಷ್ಟು ಸುಖವನ್ನು ಪಡೆದು ಮೈಮರೆತಿದ್ದ ಆ ಮಾನುಷ ಜೋಡಿಯು ನೋಡನೋಡುವಷ್ಟರಲ್ಲಿಯೇ ಇಂತಹ ಗತಿಯನ್ನು ಪಡೆಯಿತು; ಹೀಗಿದ್ದರೂ ದಡ್ಡರಾದ ಜನರು ಯಾಕೆಂದು ಈ ಸಂಸಾರವನ್ನು ನೆಚ್ಚಿಕೊಳ್ಳುತ್ತಾರೋ!

**ಬೆಳಗುವ ಸೊಡರ್ಗುಡಿ ಕಿಡೆ ಮನೆ**
**ಯೊಳಗೆ ತಮಂ ಪರ್ಬುವಂತೆ ಜೀವಂ ತನುವಿಂ**
**ತಳರಲೊಡಂ ವಿಚ್ಛಾಯತೆ**
**ಗೊಳಗಾದುವು ತೊಳಗುವವರ ಸೌಂದರತನುಗಳ್ ೨೭**

**ಪದವಿಭಾಗ-ಅನ್ವಯ-ಅರ್ಥ:** ಬೆಳಗುವ ಸೊಡರ್ಗುಡಿ ಕಿಡೆ = ಬೆಳಗುವ ದೀಪದ ಕುಡಿಯು ನಂದಿಹೋಗಲು, ಮನೆಯೊಳಗೆ ತಮಂ ಪರ್ಬುವಂತೆ = ಮನೆಯಲ್ಲೆಲ್ಲ ಕತ್ತಲು ಹರಡುವಂತೆ, ತನುವಿಂ ಜೀವಂ ತಳರಲೊಡಂ = ದೇಹದಿಂದ ಜೀವವು ಹೊರಟುಹೋಗಲು, ತೊಳಗುವ + ಅವರ ಸೌಂದರತನುಗಳ್ ವಿಚ್ಛಾಯತೆಗೆ + ಒಳಗಾದುವು = ಕಾಂತಿಯುಕ್ತವಾಗಿದ್ದ ಅವರ ದೇಹಗಳು ಕಾಂತಿಗುಂದಿದುವು.

**ಗದ್ಯಾನುಸರಣ:** ಬೆಳಗುವ ದೀಪದ ಕುಡಿಯು ನಂದಿಹೋದರೆ ಮನೆಯಲ್ಲೆಲ್ಲ ಕತ್ತಲು ಹರಡುತ್ತದೆ; ಹಾಗೆಯೇ ದೇಹದಿಂದ ಜೀವವು ಹೊರಟುಹೋಗಲು ಕಾಂತಿಮಯವಾಗಿದ್ದ ಅವರ ದೇಹಗಳು ಕಾಂತಿಗುಂದಿದುವು.

**ವಿಶೇಷ ವಿಚಾರ:** ದೇಹ ಮತ್ತು ಜೀವಗಳನ್ನು ಕವಿ ಮನೆ ಮತ್ತು ದೀಪಗಳಿಗೆ ಹೋಲಿಸುವ ಔಚಿತ್ಯವನ್ನು ಪರಿಭಾವಿಸಬಹುದು. ಈ ಎರಡಕ್ಕೂ ಅವಿನಾ ಸಂಬಂಧವೇನಿಲ್ಲ ಎಂಬುದನ್ನೂ ಕವಿ ಧ್ವನಿಸುತ್ತಿದ್ದಾನೆ.

**ವ॥ ಆಗಳಾದಿತ್ಯೋದಯದಿನವರಂ ನೋಡಿ ಹಾಹಾಕ್ರಂದನಧ್ವನಿ ಗಳಂತಃಪುರಕ್ಕಂ ಪುರಕ್ಕಂ ನೆಗಟೆ ಮತಿವರಾದಿಗಳ್ ತದ್ದಂಪತಿಗಳ್ಗೆ ಶರೀರಶೋಭೆಯಂ ಮಾಡಿ ಚಂದನಹರಿಚಂದನೇಂಧನಂ ಗಳೊಳ್ ದಹನಕ್ರಿಯೆಯಂ ನಿರ್ವರ್ತಿಸಿ ತದ್ಧೂಪಧೂಮ ದೊಳಲ್ಲಿಯೆ ವಿಗತಜೀವಿತಂಗಳಾದ ತಿರ್ಯಗ್ಜಾತಿಗಳುಮಂ ಸಂಸ್ಕರಿಸಿ, ಬಟೆಯಂ ಶ್ರೀಮತೀ ತನಯಂ ವಜ್ರಬಾಹುವೆಂಬಂಗೆ ಧರಾಭಾರಮಂ ಕೊಟ್ಟು ರಾಜ್ಯದೊಳ್ ನಿಜೆಸಿ ತಪೋಭರದೊಳ್ ನಾಲ್ವರುಂ ನಿಂದು ಜೀವಿತವ್ಯಪಾಯ ದೊಳಧೋಗ್ರೈವೇಯಕದೊಳಹಮಿಂದ್ರಪದವಿಯಂ ತಾಳ್ದಿದರ್; ಅಂತು ಪಂಚತ್ವಮನೆಯ್ದಿದ ವಜ್ರಜಂಘಂಗಂ ಶ್ರೀಮತಿಗಮಾ ತಿರಿಕಂಗಳ್ಗಮುತ್ತಮ ಪಾತ್ರದಾನಾನುವೋದದ ಪುಣ್ಯಫಲದಿಂದಮೀ ಜಂಬೂದ್ವೀಪದ ಮಂದರ ಮಹೀಧರದುತ್ತರದಿಗಾಶ್ರಿದೊಳಿರ್ದುತ್ತರಕುರುವೆಂಬುತ್ತಮ ಭೋಗಭೂಮಿಯೆ ಜನ್ಮಭೂಮಿಯಾದುದು; ಅಲ್ಲಿ,**

**ಪದವಿಭಾಗ-ಅನ್ವಯ-ಅರ್ಥ:** ಆಗಳ್ + ಆದಿತ್ಯ + ಉದಯದಿನ್ +

ಅವರಂ ನೋಡಿ = ಸೂರ್ಯ ಹುಟ್ಟಿದ ನಂತರ (ಅಂದರೆ ಬೆಳಿಗ್ಗೆ) ಸತ್ತುಬಿದ್ದಿದ್ದ ಅವರನ್ನು ನೋಡಿ, ಹಾಹಾಕ್ರಂದನಧ್ವನಿಗಳ್ + ಆಂತಃಪುರಕ್ಕಂ ಪುರಕ್ಕಂ ನೆಗಟ್ = ಗೋಳಾಟದ ಧ್ವನಿಯು ಅಂತಃಪುರದಲ್ಲಿಯೂ ಊರಲ್ಲಿಯೂ ತುಂಬಿಕೊಳ್ಳಲು, ಮತಿವರಾದಿಗಳ್ ತತ್ + ದಂಪತಿಗಳ್ಗೆ ಶರೀರಶೋಭೆಯಂ ಮಾಡಿ = ಮತಿವರ ಮುಂತಾದವರು ಸೇರಿ ಆ ದಂಪತಿಗಳ ದೇಹಗಳಿಗೆ ಅಲಂಕಾರ ಮಾಡಿ, ಚಂದನ ಹರಿಚಂದನ + ಇಂಧನಂಗಳೊಳ್ ದಹನಕ್ರಿಯೆಯಂ ನಿರ್ವರ್ತಿಸಿ = ಚಂದನ ಶ್ರೀಗಂಧನಗಳ ಸೌದೆಗಳಿಂದ ದಹಿಸಿ, ತತ್ಧೂಪಧೂಮದೊಳಲ್ಲಿಯೆ ವಿಗತಜೀವಿತಂ ಗಳಾದ ತಿರ್ಯಕ್ + ಜಾತಿಗಳುಮಂ ಸಂಸ್ಕರಿಸಿ = ಕೃಷ್ಣಾಗರುವಿನ ಹೊಗೆಯಲ್ಲಿಯೇ ಸಿಲುಕಿ ಸತ್ತಿದ್ದ ಇತರ ಪ್ರಾಣಿಗಳಿಗೂ ಸಂಸ್ಕಾರ ಮಾಡಿ, ಬಳಿಯಂ ಶ್ರೀಮತೀತನಯಂ ವಜ್ರಬಾಹುವೆಂಬಂಗೆ ಧರಾಭಾರಮಂ ಕೊಟ್ಟು ರಾಜ್ಯದೊಳ್ ನಿಜೆಸಿ = ಆನಂತರ ಶ್ರೀಮತಿ–ವಜ್ರಜಂಘರ ಮಗ ವಜ್ರಬಾಹು ಎಂಬುವವನಿಗೆ ರಾಜ್ಯದ ಹೊಣೆಯನ್ನು ಹೊರಿಸಿ ರಾಜ್ಯದಲ್ಲಿ ನೆಲೆನಿಲ್ಲಿಸಿ, ತಪೋಭರದೊಳ್ ನಾಲ್ವರುಂ ನಿಂದು = ತಾವು ನಾಲ್ವರೂ ತಪಸ್ಸು ಮಾಡಿ, ಜೀವಿತವ್ಯಪಾಯದೊಳ್ + ಅಧೋಗ್ರೈವೇ ಯಕದೊಳ್ + ಅಹಮಿಂದ್ರಪದವಿಯಂ ತಾಳ್ದಿದರ್ = ಜೀವನದ ಕೊನೆಯಲ್ಲಿ ಅಧೋಗ್ರೈವೇಯಕದಲ್ಲಿ ಅಹಮಿಂದ್ರಪದವಿಯನ್ನು ಪಡೆದರು; ಅಂತು ಪಂಚತ್ವಮನೆಯ್ದಿದ ವಜ್ರಜಂಘಂಗಂ ಶ್ರೀಮತಿಗಂ = ಹಾಗೆ ಪ್ರಕೃತಿಯಲ್ಲಿ ಲೀನರಾದ ಶ್ರೀಮತಿ–ವಜ್ರಜಂಘರಿಗೆ, ತಿರಿಕಂಗಳ್ಗಂ + ಉತ್ತಮಪಾತ್ರದಾನ + ಅನುಮೋದದ ಪುಣ್ಯಫಲದಿಂದಂ = ಪ್ರಾಣಿಗಳಿಗೂ ಉತ್ತಮವಾದ ಪಾತ್ರದಾನ ಮಾಡಿದ ಪುಣ್ಯದ ಫಲದಿಂದ, ಈ ಜಂಬೂದ್ವೀಪದ ಮಂದರಮಹೀಧರದ + ಉತ್ತರ ದಿಕ್ + ಭಾಗದೊಳಿರ್ದ = ಮಂದರಪರ್ವತದ ಉತ್ತರಭಗದಲ್ಲಿದ್ದ, ಉತ್ತರಕುರುವೆಂಬ + ಉತ್ತಮಭೋಗಭೂಮಿಯೆ ಜನ್ಮಭೂಮಿಯಾದುದು = ಉತ್ತರಕುರು ಎಂಬ ಭೋಗಭೂಮಿ ಅವರು ಹುಟ್ಟುವ ಜಾಗವಾಯಿತು, ಅಲ್ಲಿ = ಅಲ್ಲಿ,

**ಗದ್ಯಾನುಸರಣ:** ಸತ್ತುಬಿದ್ದಿದ್ದ ಅವರನ್ನು ಬೆಳಿಗ್ಗೆ ನೋಡಿದ ಜನರ ಗೋಳಾಟವು ಅಂತಃಪುರದಲ್ಲಿಯೂ ಊರಲ್ಲಿಯೂ ತುಂಬಿಕೊಂಡಿತು; ಮತಿವರ ಮುಂತಾದವರು ಸೇರಿ ಆ ದಂಪತಿಗಳ ದೇಹಗಳಿಗೆ ಅಲಂಕಾರ ಮಾಡಿ ಚಂದನ ಶ್ರೀಗಂಧನಗಳ ಸೌದೆಗಳಿಂದ ದಹನಕ್ರಿಯೆಯನ್ನು ನೆರವೇರಿಸಿದರು; ಜೊತೆಗೆ ಅವರೊಡನೆ ಕೃಷ್ಣಾಗರುವಿನ ಹೊಗೆಯಲ್ಲಿ ಸಿಲುಕಿ ಸತ್ತಿದ್ದ ಇತರ ಪ್ರಾಣಿಗಳಿಗೂ ಸಂಸ್ಕಾರ ಮಾಡಿದರು; ಆನಂತರ ಶ್ರೀಮತಿ–ವಜ್ರಜಂಘರ ಮಗ ವಜ್ರಬಾಹು ಎಂಬುವವನಿಗೆ ರಾಜ್ಯದ ಹೊಣೆಯನ್ನು ಹೊರಿಸಿ ರಾಜ್ಯದಲ್ಲಿ ನೆಲೆನಿಲ್ಲಿಸಿದರು; ಆನಂತರ ತಾವು ನಾಲ್ವರೂ (ಸೇನಾಧಿಪತಿ ಮಂತ್ರಿಮುಖ್ಯ ಶ್ರೇಷ್ಠಿ ಮತ್ತು ಪುರೋಹಿತರು) ತಪಸ್ಸು ಮಾಡಿ ಜೀವನದ ಕೊನೆಯಲ್ಲಿ ಅಧೋಗ್ರೈವೇಯಕದಲ್ಲಿ

ಅಹಮಿಂದ್ರಪದವಿಯನ್ನು ಪಡೆದರು; ಹಾಗೆ ಪ್ರಕೃತಿಯಲ್ಲಿ ಲೀನರಾದ ಶ್ರೀಮತಿ–ವಜ್ರಜಂಘರು, ಪ್ರಾಣಿಗಳಿಗೂ (ಹುಲಿ ಹಂದಿ ಕೋತಿ ಮತ್ತು ಮುಂಗುಸಿ) ಉತ್ತಮವಾದ ಪಾತ್ರದಾನ ಮಾಡಿದ ಪುಣ್ಯದ ಫಲದಿಂದ, ಮಂದರಪರ್ವತದ ಉತ್ತರಭಾಗದ ಉತ್ತರಕುರು ಎಂಬ ಭೋಗಭೂಮಿಯಲ್ಲಿ ಅವರು ಹುಟ್ಟಿದರು; ಅಲ್ಲಿ,

**ವಿಶೇಷ ವಿಚಾರ:** ಪೂರ್ವಪುರಾಣದಲ್ಲಿ ಈ ಉತ್ತರಕ್ರಿಯೆಯ ವರ್ಣನೆಯಿಲ್ಲ.

**ದರ್ಪಣಸಮತಳಮೆನೆ ಸಂ**
**ಸರ್ಪದ್ರಶ್ಮಾಂಶುಜಾಳಜಟಳಿತಮೆನೆ ಕಂ**
**ದರ್ಪಸುಖನಿಳಯಮೆನೆ ಸಂ**
**ತರ್ಪಣಕರಮುಖಮಖಿಳಭೋಗಭೂಮಿವಿಭಾಗಂ ೨೮**

**ಪದವಿಭಾಗ–ಅನ್ವಯ–ಅರ್ಥ:** ದರ್ಪಣಸಮತಳಂ + ಎನೆ ಕನ್ನಡಿಯ ಸಮತಟ್ಟಾದ ಮೇಲ್ಮೈ ಎನ್ನುವಂತೆಯೂ, ಸಂಸರ್ಪತ್ + ರಶ್ಮಾಂಶುಜಾಳಜಟಳಿತಂ + ಎನೆ = ಹಬ್ಬಿಕೊಂಡಿದ್ದ ರತ್ನಕಾಂತಿಯ ಹರಹಿನಂತೆಯೂ, ಕಂದರ್ಪ ಸುಖನಿಳಯಂ + ಎನೆ = ಕಾಮಸುಖದ ತವರು ಎನ್ನುವಂತೆ, ಅಖಿಳಭೋಗ ಭೂಮಿವಿಭಾಗಂ ಸಂತರ್ಪಣಕರಮುಖಂ = ಇಡೀ ಭೂಗಭೂಮಿಯು ಸಂತೋಷಕರವಾದುದು.

**ಗದ್ಯಾನುಸರಣ:** ಕನ್ನಡಿಯ ಸಮತಟ್ಟಾದ ಮೇಲ್ಮೈಯ ಹಾಗೆಯೂ, ಹಬ್ಬಿಕೊಂಡಿದ್ದ ರತ್ನಕಾಂತಿಯ ಹರಹಿನಂತೆಯೂ ಕಾಮಸುಖದ ತವರು ಎನ್ನುವಂತೆಯೂ ಇಡೀ ಭೂಗಭೂಮಿಯು ಸಂತೋಷಕರವಾದುದು.

**ವ। ಮತ್ತಮಲ್ಲಿ**

**ಅರ್ಥ:** ಮತ್ತಂ + ಅಲ್ಲಿ = ಜೊತೆಗೆ ಅಲ್ಲಿ,

**ಹಿಮಮೆಂದಾತಪಬಾಧೆಯೆಂದು ಮಱೆಯೆಂದಿಲ್ಲಾ ನೆಲಂ ಪಂಚರ**
**ತ್ನಮಯಂ ನಾಲ್ವೆರಲಲ್ಲದಗದೆಳವುಲ್ ನೀಲೋತ್ಪಳಾಬ್ಜಾಕರಾ**
**ಳಿ ಮನಂಗೊಳ್ವುದು ಮೆಲ್ಲನಲ್ಲಿ ಸುಟೆಗುಂ ಮಂದಾನಿಳಂ ನೀರ್‌ಸುಧಾ**
**ಸಮಮುದ್ಯಾನವನಂ ಮದೋತ್ಕಪರಪುಷ್ಪೋದ್ದಾಮಕೋಳಾಹಳಂ೨೯**

**ಪದವಿಭಾಗ–ಅನ್ವಯ–ಅರ್ಥ:** ಹಿಮಂ + ಎಂದು + ಆತಪಬಾಧೆ + ಎಂದು ಮಱೆ + ಎಂದು + ಇಲ್ಲ = ಅಲ್ಲಿ ಹಿಮ ಬಿಸಲು ಮಳೆಗಳ

ತೊಂದರೆಯಿಲ್ಲ; ಆ ನೆಲಂ ಪಂಚರತ್ನಮಯಂ = ಅಲ್ಲಿನ ನೆಲ ಪಂಚರತ್ನ ಖಚಿತವಾದದ್ದು; ಎಳವುಲ್ ನಾಲ್ವೆರಲ್ + ಅಲ್ಲದೆ + ಆಗದು = ಗರಿಕೆಯು ನಾಲ್ಕು ಬೆರಳಿಗಿಂತ ಎತ್ತರವಾಗಿ ಬೆಳೆಯುವುದಿಲ್ಲ; ನೀಲೋತ್ಪಳ + ಅಬ್ಜಾಕರ + ಆಳಿ ಮನಂಗೊಳ್ವುದು = ಅಲ್ಲಿನ ನೈದಿಲೆ ಮತ್ತು ತಾವರೆಗಳು ಮನಮೋಹಕ ವಾದವು; ಅಲ್ಲಿ ಮಂದಾನಿಳಂ ಮೆಲ್ಲನೆ ಸುೞಿಗುಂ = ಅಲ್ಲಿ ತಂಗಾಳಿಯು ಮೆಲುವಾಗಿ ಬೀಸುತ್ತದೆ; ನೀರ್ ಸುಧಾಸಮಂ = ಅಲ್ಲಿನ ನೀರು ಅಮೃತಪ್ರಾಯ ವಾದುದು; ಉದ್ಯಾನವನಂ ಮದ + ಉತ್ಕ + ಪರಪುಷ್ಟ + ಉದ್ದಾಮ ಕೋಳಾಹಳಂ = ಅಲ್ಲಿನ ಉದ್ಯಾನವನಗಳಲ್ಲಿ ಮದಿಸಿದ ಕೋಗಿಲೆಗಳ ಧ್ವನಿಯ ಕಲರವ ತುಂಬಿರುತ್ತದೆ.

**ಗದ್ಯಾನುಸರಣ:** ಅಲ್ಲಿ ಹಿಮ ಬಿಸಿಲು ಮಳೆಗಳ ತೊಂದರೆಯಿಲ್ಲ; ಅಲ್ಲಿನ ನೆಲ ಪಂಚರತ್ನಖಚಿತವಾದದ್ದು; ಗರಿಕೆಯು ಅಲ್ಲಿ ನಾಲ್ಕು ಬೆರಳಿಗಿಂತ ಎತ್ತರವಾಗಿ ಬೆಳೆಯುವುದಿಲ್ಲ; ಅಲ್ಲಿ ಎಲ್ಲೆಡೆ ನೈದಿಲೆ ತಾವರೆಗಳು ಮನಮೋಹಕವಾಗಿ ಕಂಗೊಳಿಸುತ್ತವೆ; ಅಲ್ಲಿ ತಂಗಾಳಿಯು ಮೆಲುವಾಗಿ ಬೀಸುತ್ತದೆ; ಅಲ್ಲಿನ ನೀರು ಅಮೃತಪ್ರಾಯವಾದುದು; ಅಲ್ಲಿನ ಉದ್ಯಾನವನಗಳಲ್ಲಿ ಮದಿಸಿದ ಕೋಗಿಲೆಗಳ ಧ್ವನಿಯ ಕಲರವ ತುಂಬಿರುತ್ತದೆ.

**ಪಗಲಿರುಳೆಂಬ ಭೇದಮನಯಂ ಬಡವರ್ ಕಡುಬಲ್ಲಿದರ್ ವಿಷಾ**
**ಹಿಗಣಮನೇಕರೌದ್ರಮೃಗಜಾತಿಗಳಾಳರಸೆಂಬುದೊಂದು ದಂ**
**ದುಗಮಳಿಪಾಯಿಲಂ ಮಱುಕಮಾಮಯಮಪ್ಪಪಮೃತ್ಯುವೆಂಬಿವ**
**ಲ್ಲಿಗೆ ಪೊಱಗೆಂದೊಡಿಂ ಸುಖಮನೇವೊಗೞ್ವುದೊ ಭೋಗಭೂಮಿಯಾ ೩೦**

**ಪದವಿಭಾಗ-ಅನ್ವಯ-ಅರ್ಥ**: ಪಗಲ್ + ಇರುಳ್ + ಎಂಬ ಭೇದಂ = ಹಗಲು-ರಾತ್ರಿಗಳೆಂಬ ವ್ಯತ್ಯಾಸವಾಗಲೀ, ಅನಯಂ ಬಡವರ್ ಕಡುಬಲ್ಲಿದರ್ ವಿಷ + ಅಹಿಗಣಂ + ಅನೇಕರೌದ್ರಮೃಗಜಾತಿಗಳ್ + ಆಳ್ + ಆಳರಸು + ಎಂಬುದೊಂದು ದಂದುಗಂ = ನೀತಿರಹಿತತೆ ಬಡವ-ಬಲ್ಲಿದ ವಿಷಸರ್ಪಗಳು ನಾನಾ ಬಗೆಯ ಕ್ರೂರಮೃಗಗಳು, ಆಳು-ಅರಸ ಎಂಬ ಭೇದಗಳು ಅಲ್ಲಿಲ್ಲ; ಅಳಿಪು + ಆಯಿಲಂ ಮಱುಕಂ + ಆಮಯಮಪ್ಪ + ಅಪಮೃತ್ಯುವೆಂಬಿವು + ಅಲ್ಲಿಗೆ ಪೊಱಗು = ಆಸೆ ದರೋಡೆ ದುಃಖ ರೋಗ ಅದರಿಂದಾಗುವ ದುರ್ಮರಣ – ಇವೆಲ್ಲಕ್ಕೂ ಅದು ಹೊರತಾದುದು; ಎಂದೊಡೆ ಆ ಭೋಗಭೂಮಿಯ ಇಂ ಸುಖಮನ್ + ಏ + ಪೊಗೞ್ವುದೊ = ಎಂದ ಮೇಲೆ ಆ ಭೋಗಭೂಮಿಯ ಸುಖದ ಸ್ವರೂಪವನ್ನು ಏನೆಂದು ಹೊಗಳುವುದು?

**ಗದ್ಯಾನುಸರಣ:** ಅಲ್ಲಿ ಹಗಲು-ರಾತ್ರಿಗಳೆಂಬ ವ್ಯತ್ಯಾಸವಿಲ್ಲ; ನೀತಿರಹಿತತೆ

ಬಡವ-ಬಲ್ಲಿದ ವಿಷಸರ್ಪಗಳು ನಾನಾ ಬಗೆಯ ಕ್ರೂರಮೃಗಗಳು, ಆಳು-ಅರಸ ಎಂಬ ಭೇದಗಳು ಅಲ್ಲಿಲ್ಲ; ದುರಾಸೆ ದರೋಡೆ ದುಃಖ ರೋಗ ಮತ್ತು ಅದರಿಂದಾಗುವ ದುರ್ಮರಣ – ಇವೆಲ್ಲಕ್ಕೂ ಅದು ಹೊರತು; ಅಂದ ಮೇಲೆ, ಆ ಭೋಗಭೂಮಿಯ ಸುಖದ ಸ್ವರೂಪವನ್ನು ಏನೆಂದು ಹೊಗಳೋಣ!

**ವಿಶೇಷ ವಿಚಾರ:** ಇಲ್ಲಿ ಬಂದಿರುವ ಬಡವ-ಬಲ್ಲಿದ, ಆಳು-ಅರಸು ಎಂಬ ಭೇದವಿರಲಿಲ್ಲ ಎಂಬ ವಿವರ ಪೂರ್ವಪುರಾಣದಲ್ಲಿಲ್ಲ; ಪಂಪನ ಸಾಮಾಜಿಕಪ್ರಜ್ಞೆಯ ಆಳದಲ್ಲಿ ಇಂತಹ ಭೇದಗಳಿಂದಾಗುವ ಅಸಮಾನತೆಯ ಮತ್ತು ಅದರಿಂದಾಗುವ ದುರಂತಗಳ ಕಲ್ಪನೆ ಇದ್ದಿರಬಹುದು.

**ವ। ಮತ್ತಮಲ್ಲಿ**

**ಅರ್ಥ:** ಮತ್ತಂ + ಅಲ್ಲಿ = ಜೊತೆಗೆ ಅಲ್ಲಿ,

**ಮದ್ಯವಿಭೂಷಣವಸ್ತ್ರಾ**
**ತೋದ್ಯಸ್ರಗ್ಭವನಭಾಜನಾಶನದೀಪ**
**ಪ್ರೋದ್ಯಜ್ಜ್ಯೋತಿಸ್ಥಿತಿಯೊಳ**
**ಮುದ್ಯೋತಿಸೆ ತುದಿಯೊಳಂಗಮಿಂತು ದಶಾಂಗಂ** ೩೧

**ಪದವಿಭಾಗ-ಅನ್ವಯ-ಅರ್ಥ:** ಮದ್ಯ + ವಿಭೂಷಣ + ವಸ್ತ್ರ + ಆತೋದ್ಯ = ಮದ್ಯ ಆಭರಣ ವಸ್ತ್ರ ವಾದ್ಯ, ಸ್ರಕ್ + ಭವನ + ಭಾಜನ = ಹೂವು ಮನೆ ಪಾತ್ರಪಡುಗ, ಅಶನ + ದೀಪ ಪ್ರೋದ್ಯತ್ + ಜ್ಯೋತಿ = ಊಟ ದೀಪ ಮತ್ತು ಬೆಳಗುವ ಜ್ಯೋತಿ, ತುದಿಯೊಳ್ + ಅಂಗ = ಅಂಗ ಎಂದು ಕೊನೆಯಾಗುವಂಥ, ಇಂತು ದಶಾಂಗಂ = ಈ ದಶಾಂಗಗಳು ಸ್ಥಿತಿಯೊಳಂ + ಉದ್ಯೋತಿಸೆ = ತಮ್ಮಿರುವಿಕೆಯಿಂದ ಬೆಳಗುತ್ತ,

**ಗದ್ಯಾನುಸರಣ:** ಮದ್ಯ ಆಭರಣ ವಸ್ತ್ರ ವಾದ್ಯ ಹೂವು ಮನೆ ಪಾತ್ರಪಡುಗ ಊಟ ದೀಪ ಮತ್ತು ಜ್ಯೋತಿ ಎಂಬ 'ಅಂಗ' ಎಂದು ಕೊನೆಯಾಗುವಂಥ ದಶಾಂಗಗಳು ಅಲ್ಲಿ ತಮ್ಮಿರುವಿಕೆಯಿಂದ ಬೆಳಗುತ್ತವೆ.

**ವ। ಎನಿಸಿದ ನಾನಾರತ್ನಮಯಂಗಳುಮಪ್ರತಿಹತಪ್ರಭಾದ್ಯೋತಿ ದಿಙ್ಮುಖಂಗಳುಮಪ್ಪ ಕಲ್ಪವೃಕ್ಷಂಗಳ್**

**ಪದವಿಭಾಗ-ಅನ್ವಯ-ಅರ್ಥ:** ಎನಿಸಿದ ನಾನಾರತ್ನಮಯಂಗಳುಂ = ಎಂಬ ಹಲವಾರು ರತ್ನಖಚಿತವಾದ, ಅಪ್ರತಿಹತಪ್ರಭಾದ್ಯೋತಿದಿ□ಮುಖಂಗಳುಂ = ಹೋಲಿಕೆಯಿಲ್ಲದ ಕಾಂತಿಯಿಂದ ದಿಕ್ಕುಗಳನ್ನು ಬೆಳಗುವಂಥವೂ, ಅಪ್ಪ ಕಲ್ಪವೃಕ್ಷಂಗಳ್ = ಆದ ಕಲ್ಪವೃಕ್ಷಗಳು

**ಗದ್ಯಾನುಸರಣ:** ಎಂಬ ಹಲವಾರು ರತ್ನಖಚಿತವಾದ ಹೋಲಿಕೆಯಿಲ್ಲದ ಕಾಂತಿಯಿಂದ ದಿಕ್ಕುಗಳನ್ನು ಬೆಳಗುವಂತಹ ಕಲ್ಪವೃಕ್ಷಗಳು ಅಲ್ಲಿವೆ.

**ವಿಶೇಷ ವಿಚಾರ:** ದಶಾಂಗ = ಭೋಗಭೂಮಿಯಲ್ಲಿ ಇಲ್ಲಿ ಹೇಳಿದ ಹತ್ತು ವಸ್ತುಗಳನ್ನು ಯಥೇಚ್ಛವಾಗಿ ನೀಡುವ ಹತ್ತು ಕಲ್ಪವೃಕ್ಷಗಳಿರುತ್ತವೆ; ಪ್ರತಿಯೊಂದೂ ಅಂಗ ಎಂಬುದರಿಂದ ಕೊನೆಗಳ್ಳುತ್ತದೆ: ಮದ್ಯಾಂಗ ಆಭರಣಾಂಗ ವಸ್ತ್ರಾಂಗ ಇತ್ಯಾದಿ.

**ಕುಡಿದೊಡೆ ಸೊರ್ಕಿಸದವು ನಾ**
**ಣ್ಗೆಡಿಸದವು ಮನಕ್ಕಲಂಪನೀವುವು ರತಮಂ**
**ನಡೆಯಿಪುವೆನಿಸಿಸುವ ಮಧುಗಳ**
**ನೆಡೆಯುಡುಗದೆ ಕುಡುಗುಮುಚಿತಮದ್ಯಾಂಗಕುಜಂ ೩೭**

**ಪದವಿಭಾಗ-ಅನ್ವಯ-ಅರ್ಥ:** ಕುಡಿದೊಡೆ = ಕುಡಿದರೆ, ಸೊರ್ಕಿಸದವು ನಾಣ್ಗೆಡಿಸದವು = ಅಮಲೇರಿಸದಂತಹವು ಹಾಗೂ ನಾಚಿಕೆಗೆಡಿಸದವು, ಮನಕ್ಕಲಂಪನೀವುವು = ಮನಸ್ಸಿಗೆ ಮುದವನ್ನು ಕೊಡುವಂತಹವು, ರತಮಂ ನಡೆಯಿಪುವು + ಎನಿಸಿಸುವ = ಸಂಭೋಗಕ್ಕೆ ಸಹಾಯಕವಾದವು ಎನ್ನಿಸುವ, ಉಚಿತ ಮಧುಗಳನ್ ಮದ್ಯಾಂಗಕುಜಂ ಎಡೆಯುಡುಗದೆ ಕುಡುಗುಂ = ಸೂಕ್ತ ಮದ್ಯಗಳನ್ನು ಮದ್ಯಾಂಗಕಲ್ಪವೃಕ್ಷವು ನಿರಂತರವಾಗಿ ನೀಡುತ್ತದೆ.

**ಗದ್ಯಾನುಸರಣ:** ಕುಡಿದರೆ ಅಮಲೇರಿಸದೆ, ನಾಚಿಕೆಗೆಡಿಸದೆ ಮನಸ್ಸಿಗೆ ಮುದವನ್ನು ಕೊಡಟುವಂತಹ ಹಾಗೂ ಸಂಭೋಗಕ್ಕೆ ಸಹಾಯಕವಾಗುವ ಸೂಕ್ತ ಮದ್ಯಗಳನ್ನು ಮದ್ಯಾಂಗಕಲ್ಪವೃಕ್ಷವು ನಿರಂತರವಾಗಿ ನೀಡುತ್ತದೆ.

**ಮಕುಟಂ ಕೇಯೂರಂ ಕ**
**ರ್ಣಕುಂಡಲಂ ಕೊಪ್ಪು ಸರಿಗೆ ದುಸರಂ ಮಣಿಮು**
**ದ್ರಿಕೆ ತಿಸರಮೆಂಬ ಭೂಷಾ**
**ನಿಕರಮನಾ ಭೂಷಣಾಂಗತರು ಕುಡುತಿರ್ಕುಂ ೩೩**

**ಪದವಿಭಾಗ-ಅನ್ವಯ-ಅರ್ಥ:** ಮಕುಟಂ ಕೇಯೂರಂ ಕರ್ಣಕುಂಡಲಂ = ಕಿರೀಟ ತೋಳುಬಂದಿ ಕಿವಿಯೋಲೆ, ಕೊಪ್ಪು ಸರಿಗೆ ದುಸರಂ ಮಣಿಮುದ್ರಿಕೆ ತಿಸರಮೆಂಬ = ಜಡೆಬಿಲ್ಲೆ ಅಡ್ಡಿಗೆ ಎರಡೆಳೆ ಸರ ಮಣಿಯುಂಗುರ ಮೂರೆಳೆ ಸರ ಮುಂತಾದ, ಭೂಷಾನಿಕರಮನ್ + ಆ ಭೂಷಣಾಂಗತರು ಕುಡುತಿರ್ಕುಂ = ಆಭರಣಗಳನ್ನು ಭೂಷಣಾಂಗವು ನೀಡುತ್ತದೆ.

**ಗದ್ಯಾನುಸರಣ:** ಕಿರೀಟ ತೋಳುಬಂದಿ ಕಿವಿಯೋಲೆ ಜಡೆಬಿಲ್ಲೆ ಅಡ್ಡಿಗೆ

ಎರಡೆಳೆ ಸರ ಮಣಿಯುಂಗುರ ಮೂರೆಳೆ ಸರ ಮುಂತಾದ ಆಭರಣಗಳನ್ನು ಭೂಷಣಾಂಗವು ನೀಡುತ್ತದೆ.

**ಪಟಿ ಚಿತ್ರಾವಳಿ ಜೋನೆಗ**
**ವಟಿಯಂ ದೇವಾಂಗಮೆಂಬ ವಸನಂಗಳನೇಂ**
**ಘಟಿಯಿಸುವುವೊ ಮಡಿವಳ್ಳನ**
**ಪಟಿಯತನಂ ಪೋಲ್ತು ವಿಶದವಸನಾಂಗಕುಜಂ** ೩೪

**ಪದವಿಭಾಗ–ಅನ್ವಯ–ಅರ್ಥ:** ಪಟಿ ಚಿತ್ರಾವಳಿ ಜೋನೆಗವಟಿಯಂ ದೇವಾಂಗಂ + ಎಂಬ = ರೇಷ್ಮೆ ಬಣ್ಣದ ಬಟ್ಟೆ ಯವನರು ತಯಾರಿಸಿದ ಬಟ್ಟೆ ಜರಿ ಬಟ್ಟೆ ಎಂಬ, ವಸನಂಗಳನ್ = ಬಟ್ಟೆಗಳನ್ನು, ಮಡಿವಳ್ಳನ ಪಟಿಯತನಂ ಪೋಲ್ತು = ಮಡಿವಾಳನ ಹಾಗೂ ನೇಯ್ಗೆಯವನ ಹಾಗೆ, ವಿಶದವಸನಾಂಗಕುಜಂ ಏನ್ + ಘಟಿಯಿಸುವುವೊ = ಶ್ರೇಷ್ಠ ವಸನಾಂಗಕಲ್ಪವೃಕ್ಷವು ಅದೇನು ಸೃಷ್ಟಿಸುತ್ತದೋ!

**ಗದ್ಯಾನುಸರಣ:** ರೇಷ್ಮೆ, ಬಣ್ಣದ ಬಟ್ಟೆ, ಯವನರು ತಯಾರಿಸಿದ ಬಟ್ಟೆ, ಜರಿ ಬಟ್ಟೆ ಎಂಬ ಮಡಿವಾಳನ ಹಾಗೆ ಶುಭ್ರವಾಗಿ ಹಾಗೂ ನೇಯ್ಗೆಯವನ ಹಾಗೆ ಶ್ರೇಷ್ಠವಾಗಿ ವಸನಾಂಗಕಲ್ಪವೃಕ್ಷವು ಸೃಷ್ಟಿಸುತ್ತದೆ!

**ಅತಿಮೃದುರವದಾಯಿಗಳಂ**
**ತತಘನಸುಷಿರಾವನದ್ಧವಾದ್ಯಂಗಳನೇಂ**
**ಮತಮಱಿದೋಲಗಿಪುದೊ ದಂ**
**ಪತಿಗೆಂದುಮವಾರ್ಯವೀರ್ಯತೂರ್ಯಕ್ಷ್ಮಾಜಂ** ೩೫

**ಪದವಿಭಾಗ–ಅನ್ವಯ–ಅರ್ಥ:** ಅತಿಮೃದು + ರವದಾಯಿಗಳಂ = ತೀರ ಮೆಲುವಾದ ಧ್ವನಿಯನ್ನುಂಟುಮಾಡುವ, ತತಘನಸುಷಿರ + ಅವನದ್ಧವಾದ್ಯಂಗಳನ್ = ತಂತೀವಾದ್ಯ ತಾಳವಾದ್ಯ ಗಾಳಿ ವಾದ್ಯ ಹಾಗೂ ಚರ್ಮವಾದ್ಯಗಳನ್ನು, ಮತಂ + ಅಱಿದು = ಬೇಕಾದುದನ್ನು, ಅವಾರ್ಯವೀರ್ಯ ತೂರ್ಯಕ್ಷ್ಮಾಜಂ = ಅಪರಿಮಿತ ಸಾಮರ್ಥ್ಯದ ವಾದ್ಯಗಳನ್ನು ವಾದ್ಯಕಲ್ಪವೃಕ್ಷವು, ದಂಪತಿಗೆ ಎಂದುಂ ಏಂ ಓಲಗಿಪುದೊ = ದಂಪತಿಗಳನ್ನು ಸದಾ ಅದೇನು ತೃಪ್ತಿಪಡಿಸುತ್ತದೆಯೋ!

**ಗದ್ಯಾನುಸರಣ:** ತೀರ ಮೆಲುವಾದ ಧ್ವನಿಯನ್ನುಂಟುಮಾಡುವ ತಂತೀವಾದ್ಯ ತಾಳವಾದ್ಯ ಗಾಳಿ ವಾದ್ಯ ಹಾಗೂ ಚರ್ಮವಾದ್ಯಗಳಲ್ಲಿ ಇಷ್ಟವಾದುದನ್ನು ಅಪರಿಮಿತ ಸಾಮರ್ಥ್ಯದ ವಾದ್ಯಗಳಿಂದ ವಾದ್ಯಕಲ್ಪವೃಕ್ಷವು ದಂಪತಿಗಳನ್ನು ಸದಾ ತೃಪ್ತಿಪಡಿಸುತ್ತದೆ.

ಮಗಮಗಿಪ ಜಾದಿ ಪೊಂಗೇ
ದಗೆ ಮಲ್ಲಿಗೆಯೆಂಬ ಪಲವು ಪೂಮಾಲೆಗಳಂ
ಬಗೆಯಱಿದೋಲಗಿಪುದು ಮಾ
ಲೆಗಾಱನಂ ಪೋಲ್ತುದಗ್ರಮಾಲ್ಯಮಹೀಜಂ ೩೬

**ಪದವಿಭಾಗ-ಅನ್ವಯ-ಅರ್ಥ:** ಮಗಮಗಿಪ ಜಾದಿ ಪೊಂಗೇದಗೆ ಮಲ್ಲಿಗೆಯೆಂಬ ಪಲವು ಪೂಮಾಲೆಗಳಂ = ಗಮಗಮಿಸುವ ಜಾಜಿ ಹೊಂಗೇದಗೆ ಮಲ್ಲಿಗೆ ಎಂಬ ನಾನಾ ಬಗೆಯ ಹೂಮಾಲೆಗಳನ್ನು, ಮಾಲೆಗಾಱನಂ ಪೋಲ್ತು = ಮಾಲೆಗಾರನಂತೆ, ಬಗೆಯಱಿದು ಉದಗ್ರಮಾಲ್ಯಮಹೀಜಂ ಓಲಗಿಪುದು = ಮನಸ್ಸನ್ನರಿತು ಮಹಾ ಮಾಲ್ಯವೃಕ್ಷವು ಸಂತಸಗೊಳಿಸುತ್ತದೆ.

**ಗದ್ಯಾನುಸರಣ:** ಗಮಗಮಿಸುವ ಜಾಜಿ ಹೊಂಗೇದಗೆ ಮಲ್ಲಿಗೆ ಮುಂತಾದ ನಾನಾ ಬಗೆಯ ಹೂಮಾಲೆಗಳನ್ನು ಮಾಲೆಗಾರನಂತೆ, ಮನಸ್ಸನ್ನರಿತು ಮಹಾ ಮಾಲ್ಯವೃಕ್ಷವು ಸಂತಸಗೊಳಿಸುತ್ತದೆ.

ಹಾಟಕಭಿತ್ತಿಸಮನ್ವಿತ
ನಾಟಕಶಾಲೆಗಳ ವಿವಿಧಸೌಧಂಗಳ ಕೊಂ
ಡಾಟಮನೆ ಮೆಱೆದು ಮೆಚ್ಚಂ
ಪಾಟಿಸುವುವು ಮಿಥುನತತಿಗೆ ಗೃಹಮಹೀಜಾತಂ ೩೭

**ಪದವಿಭಾಗ-ಅನ್ವಯ-ಅರ್ಥ:** ಹಾಟಕಭಿತ್ತಿಸಮನ್ವಿತನಾಟಕಶಾಲೆಗಳ = ಸುವರ್ಣದ ಗೋಡೆಗಳುಳ್ಳ ನಾಟಕಶಾಲೆಗಳನ್ನೂ, ವಿವಿಧಸೌಧಂಗಳ = ನಾನಾ ಉಪ್ಪರಿಗೆಯ ಮನೆಗಳನ್ನೂ, ಕೊಂಡಾಟಮನೆ ಮೆಱೆದು = ನೀಡುವ ಕಾರ್ಯವನ್ನು ಮೆರೆಯುತ್ತ, ಗೃಹಮಹೀಜಾತಂ = ಭವನಕಲ್ಪವೃಕ್ಷವು, ಮಿಥುನತತಿಗೆ ಮೆಚ್ಚಂ ಪಾಟಿಸುವುವು = ದಂಪತಿ ಸಮೂಹಕ್ಕೆ ಸಂತಸವನ್ನು ನೀಡುತ್ತವೆ.

**ಗದ್ಯಾನುಸರಣ:** ಚಿನ್ನದ ಗೋಡೆಗಳುಳ್ಳ ನಾಟಕಶಾಲೆಗಳನ್ನೂ, ನಾನಾ ಉಪ್ಪರಿಗೆಯ ಮನೆಗಳನ್ನೂ ದಂಪತಿ ಸಮೂಹಕ್ಕೆ ಲೀಲೆಯಿಂದ ನೀಡುತ್ತ ಭವನಕಲ್ಪವೃಕ್ಷವು ಸಂತಸವನ್ನು ನೀಡುತ್ತವೆ.

ಅನತಿಶಯಸೌಖ್ಯಭಾಜನ
ಆನಕ್ಕೆ ಭಾಜನಮಿವಪ್ಪುವೆಂಬಂತೆ ಕನ
ತ್ಕನಕಮಣಿಖಚಿತಬಹುಭಾ
ಜನಂಗಳಂ ಭಾಜನಾಂಗತರು ಕುಡುತಿರ್ಕುಂ ೩೮

**ಪದವಿಭಾಗ-ಅನ್ವಯ-ಅರ್ಥ:** ಅನತಿಶಯಸೌಖ್ಯಭಾಜನಜನಕ್ಕೆ = ಅಸಾಮಾನ್ಯ ಸೌಖ್ಯವನ್ನು ಹೊಂದಿದ ಜನರಿಗೆ, ಇವು ಭಾಜನಂ ಅಪ್ಪುವು + ಎಂಬಂತೆ = ಇವು ಯೋಗ್ಯವಾಗುವ ಹಾಗೆ, ಕನತ್ + ಕನಕಮಣಿಖಚಿತ ಬಹುಭಾಜನಂಗಳಂ = ಹೊಳೆಯುವ ಮಣೀಖಚಿತವಾದ ಚಿನ್ನದ ಪಾತ್ರೆಗಳನ್ನು, ಭಾಜನಾಂಗತರು ಕುಡುತಿರ್ಕುಂ = ಭಾಜನತರು ಕೊಡುತ್ತಿರುತ್ತದೆ.

**ಗದ್ಯಾನುಸರಣ:** ಅಸಾಮಾನ್ಯ ಸೌಖ್ಯವನ್ನು ಹೊಂದಿದ ಜನರಿಗೆ ಇವು ಯೋಗ್ಯವೆನ್ನುವ ಹಾಗೆ ಹೊಳೆಯುವ ಮಣೀಖಚಿತವಾದ ಚಿನ್ನದ ಪಾತ್ರೆಗಳನ್ನು ಭಾಜನತರು ಕೊಡುತ್ತದೆ.

**ವಿಶೇಷ ವಿಚಾರ:** ಪದ್ಯದಲ್ಲಿನ 'ಕುಡು'ಪದವನ್ನು ಗಮನಿಸಿ; ಇದು 'ಕೊಡು' ರೂಪಕ್ಕೆ ಬದಲಾವಣೆ ಹೊಂದಿದೆ. ಭಾಷಿಕವಾಗಿ ನೋಡಿದರೆ 'ಕುಡು' ಪ್ರಾಚೀನ ರೂಪ, 'ಕೊಡು' ಈಚಿನದು ಕುಡು,ಕೊಡು; ಅಂದರೆ ಉ>ಒ ಆಗಿದೆ. ಇದನ್ನು ಸ್ವರ ವ್ಯತ್ಯಯ ಎಂದು ಕರೆಯುತ್ತಾರೆ.

**ಅಮರ್ದಿನ ಸವಿಯೊಳಗೀ ಸವಿ**
**ಸಮನೆನೆ ತೇಜೋಬಳಾಯುರಾರೋಗ್ಯಸಮೇ**
**ತಮನಮೃತಾನ್ನಮನೊಲ್ದೀ**
**ಗುಮಾಗಳುಂ ಭೋಜನಾಂಗಕಲ್ಪಾವನಿಜಂ** ೩೯

**ಪದವಿಭಾಗ-ಅನ್ವಯ-ಅರ್ಥ:** ಈ ಸವಿ ಅಮರ್ದಿನ ಸವಿಯೊಳಗೆ ಸಮನ್ + ಎನೆ = ಈ ರುಚಿಯು ಅಮೃತದ ರುಚಿಯ ಹಾಗೆಯೇ ಎನ್ನುವಂತೆ, ತೇಜಃ + ಬಳ + ಆಯುರ್ + ಆರೋಗ್ಯಸಮೇತಮನ್ + ಅಮೃತಾನ್ನಮನ್ = ಕಾಂತಿ ಶಕ್ತಿ ಆಯುಸ್ಸು ಆರೋಗ್ಯಸಹಿತವಾದ ಅಮೃತಾನ್ನವನ್ನು, ಭೋಜನಾಂಗಕಲ್ಪ + ಅವನಿಜಂ ಆಗಳುಂ ಒಲ್ದು + ಈಗುಂ = ಭೋಜನತರುವು ಪ್ರೀತಿಯಿಂದ ಸದಾ ನೀಡುತ್ತದೆ.

**ಗದ್ಯಾನುಸರಣ:** ಈ ರುಚಿಯು ಅಮೃತದ ಹಾಗಿದೆ ಎನ್ನುವಂತಹ ಹಾಗೂ ಕಾಂತಿ ಶಕ್ತಿ ಆಯುಸ್ಸು ಆರೋಗ್ಯಸಹಿತವಾದ ದಿವ್ಯ ಆಹಾರವನ್ನು ಭೋಜನತರುವು ಪ್ರೀತಿಯಿಂದ ಸದಾ ನೀಡುತ್ತದೆ.

**ಆಪೊತ್ತುಂ ಮಣಿದೀಪಕ**
**ಛಾಪೋದ್ಯಜ್ಜ್ಯೋತಿಗಳ್ ದಿಶಾಮಂಡಲಮಂ**
**ವ್ಯಾಪಿಸುತಿರೆ ಸೊಗಯಿಸುವುವು**
**ದೀಪಾಂಗಜ್ಯೋತಿರಂಗಕಲ್ಪಕುಜಂಗಳ್** ೪೦

**ಪದವಿಭಾಗ-ಅನ್ವಯ-ಅರ್ಥ:** ಮಣಿದೀಪಕಳಾಪ + ಉದ್ಯತ್ + ಜ್ಯೋತಿಗಳ್ = ಮಣಿದೀಪದಂತೆ ದೇದೀಪ್ಯಮಾನವಾದ ಬೆಳಕು, ಆಪೊತ್ತುಂ = ಸದಾ ಕಾಲವೂ, ದಿಶಾಮಂಡಲಮಂ ವ್ಯಾಪಿಸುತಿರೆ = ದಿಕ್ಕುಗಳಲ್ಲೆಲ್ಲ ಹರಡುವಂತೆ, ದೀಪಾಂಗ + ಜ್ಯೋತಿರಂಗಕಲ್ಪಕುಜಂಗಳ್ ಸೊಗಯಿಸುವುವು = ದೀಪಾಂಗ ಮತ್ತು ಜ್ಯೋತಿರಂಗಕಲ್ಪವೃಕ್ಷಗಳು ಸೊಗಸುತ್ತವೆ.

**ಗದ್ಯಾನುಸರಣ:** ಮಣಿದೀಪದಂತೆ ದೇದೀಪ್ಯಮಾನವಾದ ಬೆಳಕು ಸದಾ ಕಾಲವೂ ದಿಕ್ಕುಗಳಲ್ಲೆಲ್ಲ ಹರಡುವಂತೆ ದೀಪಾಂಗ ಮತ್ತು ಜ್ಯೋತಿರಂಗಕಲ್ಪವೃಕ್ಷಗಳು ಸೊಗಸುತ್ತವೆ.

**ನೀಡಿದ ಕಯ್ಗೆ ನೀಡಿರದೆ ಬೇಡಿದ ಭೋಗಮನೇನನಾದೊಡಂ**
**ನೀಡುವ ಕಲ್ಪವೃಕ್ಷನಿಕರಂಗಳೆ ಭೋಗದಲಂಪನಾವಗಂ**
**ಮಾಡೆ ಮನಂ ವಿನೋದರಸದೊಳ್ ತಡಮಾಡೆ ಮಗುಳ್ದು ಮನ್ಮಥ**
**ಕ್ರೀಡೆಗೆ ನೋಡೆ ನಾಡೆ ಗುಜಿಯಪ್ಪುವು ದಂಪತಿ ಭೋಗಭೂಮಿಯೊಳ್**
೪೧

**ಪದವಿಭಾಗ-ಅನ್ವಯ-ಅರ್ಥ:** ನೀಡಿದ ಕಯ್ಗೆ = ಚಾಚುವ ಕೈಗಳಿಗೆ, ಬೇಡಿದ ಭೋಗಮನ್ + ಏನನ್ + ಆದೊಡಂ ನೀಡಿರದೆ ನೀಡುವ = ಬೇಡಿದ್ದು ಏನಾದರೂ ತಡಮಾಡದೆ ನೀಡುವಂತಹ, ಕಲ್ಪವೃಕ್ಷನಿಕರಂಗಳೆ ಭೋಗದ + ಅಲಂಪನ್ + ಆವಗಂ ಮಾಡೆ = ಕಲ್ಪವೃಕ್ಷಸಮೂಹವೇ ಭೋಗದ ಸಂತೋಷವನ್ನು ಸದಾ ಉಂಟುಮಾಡುವ, ವಿನೋದರಸದೊಳ್ ಮನಂ ತಡಮಾಡೆ = ವಿನೋದದಲ್ಲಿ ಮನಸ್ಸು ಒಂದುಗೂಡಲು, ದಂಪತಿ ಭೋಗಭೂಮಿಯೊಳ್ ಮಗುಳ್ದು ಮನ್ಮಥಕ್ರೀಡೆಗೆ ನೋಡೆ ನಾಡೆ ಗುಜಿಯಪ್ಪುವು = ಗಂಡುಹೆಣ್ಣುಗಳು ಆ ಭೋಗಭೂಮಿಯಲ್ಲಿ ಮತ್ತೆ ಮತ್ತೆ ಸಂಭೋಗಕ್ಕೆ ಸಿದ್ಧಪಡಿಸುತ್ತವೆ.

**ಗದ್ಯಾನುಸರಣ:** ಚಾಚುವ ಕೈಗಳಿಗೆ ಬೇಡಿದ್ದು ಏನಾದರೂ ಸರಿಯೆ ತಡಮಾಡದೆ ನೀಡುವಂತಹ ಕಲ್ಪವೃಕ್ಷಸಮೂಹವೇ ಭೋಗದ ಸಂತೋಷವನ್ನು ಸದಾ ಉಂಟುಮಾಡುತ್ತವೆ; ಮನಸ್ಸು ವಿನೋದದಲ್ಲಿ ತೊಡಗಿ ಗಂಡುಹೆಣ್ಣುಗಳು ಆ ಭೋಗಭೂಮಿಯಲ್ಲಿ ಮತ್ತೆ ಮತ್ತೆ ಸಂಭೋಗಕ್ಕೆ ಅವು ಸಿದ್ಧಪಡಿಸುತ್ತವೆ.

**ವ। ಮತ್ತಮಲ್ಲಿ ಕುಶೀಲ ಕುತ್ಸಿತಾಚಾರ ಕುವೇಷ ಕುದೃಷ್ಟಿಗಳುಂ ಗೃಹೀತವ್ರತಪರಿಚ್ಯುತರುಂ ಮಾಯಾಚಾರಪರಿಣತರಪ್ಪಪಾತ್ರದಾನಿಗಳುಂ ತಿರ್ಯಗ್ಜಾತಿತ್ವಮಂ ಪೊರ್ದಿದ ಮಿಥುನಂಗಳಾಗಿ ಪುಟ್ಟಿ ಪರಸ್ಪರವೈರಂಗಳಿಲ್ಲದೆ ಅನಾಮಯಂಗಳುಮಪಗತಬಾಧಂಗಳುಮಾಗಿ ರಮಿಯಿಸುವುವು; ಮತ್ತಮು**

ತ್ತಮ ಪಾತ್ರದಾನಾನುಮೋದಫಲದಿಂದಲ್ಲಿ ಪುಟ್ಟುವ ಜೀವಂಗಳ್ ನಾರೀ ಪುರುಷ ಸಂಯೋಗನಿಯೋಜಿತಶುಕ್ಲಾರ್ತವಂಗಳೊಳ್ ಜೀವಯುಗಳಂ ಗಳಾಗಿ ನೆಲಸಿ ಕಲಿಲಘನಫೇನಬುದ್ಬುದಾದಿಪರಿಣತಿಯಿಂ ನವಮಾಸಾವಸಾನ ಸಮಯದೊಳ್ ಸ್ತ್ರೀಪುರುಷಯು ಗಳಮೆಯಾಗಿ ಪುಟ್ಟುಗುಂ: ಪುಟ್ಟಿದಾಗಳೆ ಮಾತಾಪಿತೃಯುಗಳಂಗಳ್ ಸೀಂತುಮಾಗುಳಿಸಿಯುಂ ಪರಾಸುಗಳಾಗೆ ನಿಜಶರೀರಂಗಳ್ ಮಂಜು ಕರಗುವಂತೆ ಕರಗೆ ಸಹಜದೊಳಪಾಪಿಗಳು ಮಾರ್ಜವಂಗಳುಂ ಅತಿಮೃದುಗಳುಮಪ್ಪುಜಿಂದೆ ನಾಕಲೋಕಪ್ರಾಪ್ತಂಗಳಕ್ಕುಂ: ಅವರ್ಕೆ ಪುಟ್ಟಿದ ಯುಗಳಂಗಳ್ ಏಱುದಿವಸಮುಂ ಪುರಾತನಪುಣ್ಯಕರ್ಮ ಕಾಮಧೇನು ಸ್ತನೋಪಮಾನನಿಜಾಂಗುಳಿಜನಿತ ರಸಾಯನಾಸ್ವಾದನ ದೊಳಮುತ್ತಾನ ಶಯ್ಯೆಯೊಳಂ ಕಟಿಪಿ, ಪೆಱಗೇಱುದಿವಸದೊಳ್ ತೆಮಳ್ದುಂ, ಪೆಱವೇಱುದಿವಸಕ್ಕೆ ತಳರ್ನಡೆದುಂ, ಪೆಱವೇಱುದಿವಸಕ್ಕೆ ಪದುಳಂ ನಡೆದು, ಪೆಱವೇಱುದಿವಸದೊಳ್ ಕಳಾಕಳಾಪಪ್ರವೀಣಂಗಳಾಗಿಯುಂ, ಪೆಱವೇಱುದಿವಸ ದೊಳ್ ವಿಜ್ಞಾನವಿದಂಗಳಾಗೆಯುಂ, ಪೆಱವೇಱುದಿವಸದೊಳ್ ಸಂಪೂರ್ಣ ನವಯೌವನಂಗಳಾಗಿ ಶುಭಲಕ್ಷಣಲಕ್ಷಿತಶರೀರಂಗಳಾಗಿಯುಂ, ಅಂತು ನಾಲ್ವತ್ತೊಂಬತ್ತು ದಿವಸದೊಳ್ ಸಮಚತುರಸ್ರ ಸಂಸ್ಥಾನ ಸಂವಾಹನಂ ಗಳಱುಸಾಸಿರ ಬಿಲ್ನಿಡಿಯವಾಗಿ ದಿನತ್ರಯದೊಳ್ ಬದರೀಫಳ ಮಾತ್ರಾಹಾರಿ ಗಳುಮಾರೋಗ್ಯಶರೀರಂಗಳುಂ ಸೌಂದರಾಕಾರಂಗಳುಂ ತ್ರಿಪಲ್ಯೋಪಮ ಜೀವಿಗಳುಮಾಗಿ,

**ಪದವಿಭಾಗ–ಅನ್ವಯ–ಅರ್ಥ**: ಮತ್ತಂ + ಅಲ್ಲಿ = ಇಷ್ಟಲ್ಲದೆ ಅಲ್ಲಿ, ಕುಶೀಲ ಕುತ್ಸಿತಾಚಾರ ಕುವೇಷ ಕುದೃಷ್ಟಿಗಳುಂ = ಕೆಟ್ಟ ಸ್ವಭಾವ, ಕೆಟ್ಟ ನಡತೆ, ಕೆಟ್ಟ ವೇಷ, ಕೆಟ್ಟ ನೋಟವುಳ್ಳವರೂ, ಗೃಹೀತವ್ರತಪರಿಚ್ಯುತರುಂ = ವ್ರತತೊಟ್ಟು ಕೈಬಿಟ್ಟವರೂ, ಮಾಯಾಚಾರಪರಿಣತರಪ್ಪ + ಅಪಾತ್ರದಾನಿಗಳುಂ = ವಾಮಾಚಾರದಲ್ಲಿ ಪರಿಣತಿ ಹೊಂದಿದವರೂ ಆದ ಅಪಾತ್ರದಾನಿಗಳು; ತಿರ್ಯಕ್ + ಜಾತಿತ್ವಮಂ ಪೊರ್ದಿದ ಮಿಥುನಂಗಳಾಗಿ ಪುಟ್ಟಿ = ಪ್ರಾಣಿಜಾತಿಯಲ್ಲಿ ಜೋಡಿಗಳಾಗಿ ಹುಟ್ಟಿ, ಪರಸ್ಪರವೈರಂಗಳಿಲ್ಲದೆ ಅನಾಮಯಂಗಳುಂ + ಅಪಗತಬಾಧಂಗಳುಮಾಗಿ ರಮಿಯಿಸುವುವು = ಪರಸ್ಪರ ದ್ವೇಷವಿಲ್ಲದೆ ನಿರೋಗಿಗಳಾಗಿಯೂ ನೋವುಗಳಿಲ್ಲದೆಯೂ ಸಂತೋಷಿಸುತ್ತವೆ; ಮತ್ತಂ + ಉತ್ತಮಪಾತ್ರದಾನ + ಅನುಮೋದಫಲದಿಂದ = ಜೊತೆಗೆ, ಉತ್ತಮಪಾತ್ರದಾನಕ್ಕೆ ಒಪ್ಪಿಗೆಯಿತ್ತ ಕಾರಣದಿಂದಾಗಿ, ಅಲ್ಲಿ ಪುಟ್ಟುವ ಜೀವಂಗಳ್ = ಅಲ್ಲಿ ಹುಟ್ಟುವ ಜೀವಿಗಳು, ನಾರೀಪುರುಷ ಸಂಯೋಗನಿಯೋಜಿತಶುಕ್ಲ + ಆರ್ತವಂಗಳೊಳ್ = ಗಂಡು ಹೆಣ್ಣುಗಳ ಕೂಟದಿಂದ ವೀರ್ಯ–ರಜಸ್ಸುಗಳ ಸೇರುವಿಕೆಯಿಂದ, ಜೀವಯುಗಳಂಗಳಾಗಿ ನೆಲಸಿ = ಜೋಡಿ ಜೀವಗಳಾಗಿ ನೆಲಸಿ, ಕಲಿಲಘನ ಫೇನಬುದ್ಬುದ + ಆದಿಪರಿಣತಿಯಿಂ = ನಿಬಿಡವಾದ ಮೋಡ–ನೊರೆ–ನೀರಗುಳ್ಳೆಗಳ ಪರಿಣಾಮವನ್ನು ಹೊಂದಿ, ನವಮಾಸಾವಸಾನಸಮಯದೊಳ್ ಸ್ತ್ರೀಪುರುಷಯುಗಳ

ಮೆಯಾಗಿ ಪುಟ್ಟುಗುಂ = ಒಂಬತ್ತು ತಿಂಗಳ ಕೊನೆಯಲ್ಲಿ ಗಂಡು–ಹೆಣ್ಣು ಜೋಡಿಯಾಗಿಯೇ ಹುಟ್ಟುತ್ತವೆ; ಪುಟ್ಟಿದಾಗಳೆ ಮಾತಾಪಿತೃಯುಗಳಂಗಳ್ = (ಮಕ್ಕಳು) ಹುಟ್ಟಿದ ತಕ್ಷಣ ತಾಯ್ತಂದೆಯರು, ಸೀಂತುಂ + ಆಗುಳಿಸಿಯುಂ ಪರಾಸುಗಳಾಗೆ = ಸೀನು ಆಕಳಿಕೆಗಳಿಂದ ಸಾಯಲು, ನಿಜಶರೀರಂಗಳ್ ಮಂಜು ಕರಗುವಂತೆ ಕರಗೆ = ಅವರ ದೇಹಗಳು ಮಂಜು ಕರಗಿಹೋಗುವಂತೆ ಕಣ್ಮರೆಯಾಗಲು, ಸಹಜದೊಳ್ + ಅಪಾಪಿಗಳುಂ + ಆರ್ಜವಂಗಳುಂ ಅತಿಮೃದುಗಳುಂ + ಅಪ್ಪುದಜಿಂದೆ = ಹುಟ್ಟಿನಿಂದಲೇ ಪಾಪಹೀನರೂ ಸಜ್ಜನರೂ ಮೃದು ಸ್ವಭಾವದವರೂ ಆದುದರಿಂದ, ನಾಕಲೋಕಪ್ರಾಪ್ತಂಗಳಕ್ಕುಂ = ಸ್ವರ್ಗಲೋಕಕ್ಕೆ ಹೋಗುತ್ತಾರೆ; ಅವರ್ಕೆ ಪುಟ್ಟಿದ ಯುಗಳಂಗಳ್ = ಅವರಿಗೆ ಹುಟ್ಟಿದ ಜೋಡಿಗಳು, ಏೞುದಿವಸಮುಂ = ಏಳು ದಿನಗಳ ಕಾಲ, ಪುರಾತನಪುಣ್ಯಕರ್ಮಕಾಮಧೇನುಸ್ತನ + ಉಪಮಾನ = ಹಿಂದಿನ ಪುಣ್ಯಕಾರ್ಯವೆಂಬ ಕಾಮಧೇನುವಿನ ಕೆಚ್ಚಲಿನಂತಹ, ನಿಜ + ಅಂಗುಳಿಜನಿತ ರಸಾಯನ + ಆಸ್ವಾದನದೊಳಂ = ತಮ್ಮ ಬೆರಳುಗಳಲ್ಲಿನ ಹುಟ್ಟುವ ರಸಾಹಾರವನ್ನು ಆಸ್ವಾದಿಸುವುದರಲ್ಲಿಯೂ, ಉತ್ತಾನಶಯ್ಯೆಯೊಳಂ ಕಟಿಪಿ = ಅಂಗತ್ತಲಾಗಿ ಮಲಗುವುದರಲ್ಲಿಯೂ ಕಳೆದು; ಪೆಱಗೆ + ಏೞುದಿವಸದೊಳ್ ತೆಮಳ್ದುಂ + ಆನಂತರ ಏಳು ದಿವಸಗಳಲ್ಲಿ ತೆವಳುತ್ತಲೂ, ಪೆಱ + ಏೞುದಿವಸಕ್ಕೆ ತಳರ್ನಡೆದುಂ = ಆ ಮುಂದಿನ ಏಳು ದಿನಗಳಲ್ಲಿ ದಟ್ಟಡಿಯಿಡುತ್ತ, ಪೆಱ + ಏೞುದಿವಸಕ್ಕೆ ಪದುಳಂ ನಡೆದು = ಮುಂದಿನ ಏಳುದಿನಗಳಲ್ಲಿ ಚೆನ್ನಾಗಿ ನಡೆಯುತ್ತ, ಪೆಱ + ಏೞುದಿವಸದೊಳ್ ಕಳಾಕಳಾಪಪ್ರವೀಣಂಗಳಾಗಿಯುಂ ಆ ಮುಂದಿನ ಏಳು ದಿನಗಳಲ್ಲಿ ನಾನಾ ವಿದ್ಯೆಗಳಲ್ಲಿ ಪರಿಣತರಾಗಿಯೂ, ಪೆಱ + ಏೞುದಿವಸದೊಳ್ ವಿಜ್ಞಾನವಿದಂಗಳಾಗೆಯುಂ = ಆನಂತರ ಏಳು ದಿನಗಳಲ್ಲಿ ಜ್ಞಾನವಂತರಾಗುವರು; ಪೆಱ + ಏೞುದಿವಸದೊಳ್ ಸಂಪೂರ್ಣನವಯೌವನಂಗಳಾಗಿ = ಆ ಮುಂದಿನ ಏಳುದಿನಗಳಲ್ಲಿ ಪೂರ್ಣ ಹರಯವನ್ನು ಹೊಂದಿದವರಾಗಿ, ಶುಭಲಕ್ಷಣಲಕ್ಷಿತ ಶರೀರಂಗಳಾಗಿಯುಂ ಒಳ್ಳೆಯ ಲಕ್ಷಣಗಳುಳ್ಳ ದೇಹಗಳನ್ನು ಹೊಂದಿದವರಾಗಿ, ಅಂತು ನಾಲ್ವತ್ತೊಂಬತ್ತು ದಿವಸದೊಳ್ = ಈ ರೀತಿ ನಲವತ್ತೊಂಬತ್ತು ದಿನಗಳಲ್ಲಿ, ಸಮಚತುರಸ್ರ ಸಂಸ್ಥಾನಸಂವಾಹನಂಗಳಳ್ = ಎಲ್ಲೆಡೆಯೂ ಪ್ರಮಾಣಬದ್ಧವಾದ ಶರೀರಗಳನ್ನು ಹೊಂದಿ, ಅಱುಸಾಸಿರ ಬಿಲ್ನಿಡಿಯವಾಗಿ = ಆರು ಸಾವಿರ ಬಿಲ್ಲುಗಳಷ್ಟು ಎತ್ತರವಾಗಿ ಬೆಳೆದು, ದಿನತ್ರಯದೊಳ್ = ಮೂರು ದಿನಗಳ ಕಾಲ, ಬದರೀಫಳ ಮಾತ್ರ + ಆಹಾರಿಗಳುಂ + ಆರೋಗ್ಯಶರೀರಂಗಳುಂ = ಬೋರೆಯ ಹಣ್ಣನ್ನು ಮಾತ್ರ ಆಹಾರವಾಗಿ ಸೇವಿಸುತ್ತಲೂ, ಸೌಂದರಾಕಾರಂಗಳುಂ = ಸುಂದರ ರೂಪುಳ್ಳವರೂ, ತ್ರಿಪಲ್ಯ + ಉಪಮ ಜೀವಿಗಳುಂ + ಆಗಿ = ಮೂರು ಪಲ್ಯಗಳಷ್ಟು ದೀರ್ಘಾವಧಿಯ ಆಯುಸ್ಸುಳ್ಳವರಾಗಿಯೂ ಆಗಿ,

**ಗದ್ಯಾನುಸರಣ**: ಇಷ್ಟಲ್ಲದೆ ಅಲ್ಲಿ ಕೆಟ್ಟ ಸ್ವಭಾವ, ಕೆಟ್ಟ ನಡತೆ, ಕೆಟ್ಟ ವೇಷ, ಕೆಟ್ಟ ನೋಟವುಳ್ಳವರಾಗಲೀ, ವ್ರತತೊಟ್ಟು ಕೈಬಿಟ್ಟವರಾಗಲೀ, ವಾಮಾಚಾರದಲ್ಲಿ ಪರಿಣತಿ ಹೊಂದಿದವರಾಗಲೀ ಆಗಿ ಅಪಾತ್ರದಾನಿಗಳಾದವರು ಅಲ್ಲಿ ಪ್ರಾಣಿಜಾತಿಯಲ್ಲಿ ಜೋಡಿಗಳಾಗಿ ಹುಟ್ಟುತ್ತಾರೆ; ಅವು ಪರಸ್ಪರ ದ್ವೇಷವಿಲ್ಲದೆ ನಿರೋಗಿಗಳಾಗಿಯೂ ನೋವುಗಳಿಲ್ಲದೆಯೂ ಸಂತೋಷಿಸುತ್ತವೆ;ಅಷ್ಟಲ್ಲದೆ, ಉತ್ತಮಪಾತ್ರದಾನಕ್ಕೆ ಒಪ್ಪಿಗೆಯಿತ್ತ ಕಾರಣದಿಂದಾಗಿ ಅಲ್ಲಿ ಹುಟ್ಟುವ ಜೀವಿಗಳು ಗಂಡು ಹೆಣ್ಣುಗಳ ಕೂಟದಿಂದಾದ ವೀರ್ಯ–ರಜಸ್ಸಗಳ ಸೇರುವಿಕೆಯಿಂದ ಜೋಡಿ ಜೀವಗಳಾಗಿ ನೆಲಸಿ, ನಿಬಿಡವಾದ ಮೋಡ–ನೊರೆ–ನೀರಗುಳ್ಳೆಗಳ ಪರಿಣಾಮವನ್ನು ಹೊಂದಿ, ಒಂಬತ್ತು ತಿಂಗಳ ಕೊನೆಯಲ್ಲಿ ಗಂಡು–ಹೆಣ್ಣು ಜೋಡಿಯಾಗಿಯೇ ಹುಟ್ಟುತ್ತಾರೆ; (ಮಕ್ಕಳು) ಹುಟ್ಟಿದ ತಕ್ಷಣ ತಾಯ್ತಂದೆಯರು, ಸೀನು ಆಕಳಿಕೆಗಳಿಂದ ಸಾಯುತ್ತಾರೆ; ಆಗ ಅವರ ದೇಹಗಳು ಮಂಜು ಕರಗಿಹೋಗುವಂತೆ ಕಣ್ಮರೆಯಾಗುತ್ತವೆ; ಹುಟ್ಟಿನಿಂದಲೇ ಪಾಪಹೀನರೂ ಸಜ್ಜನರೂ ಮೃದುಸ್ವಭಾವದವರೂ ಆದುದರಿಂದ, ಸ್ವರ್ಗಲೋಕಕ್ಕೆ ಹೋಗುತ್ತಾರೆ; ಅವರಿಗೆ ಹುಟ್ಟಿದ ಜೋಡಿಗಳು ಏಳು ದಿನಗಳ ಕಾಲ ಹಿಂದಿನ ಪುಣ್ಯಕಾರ್ಯವೆಂಬ ಕಾಮಧೇನುವಿನ ಕೆಚ್ಚಲಿನಂತಹ ತಮ್ಮ ಬೆರಳುಗಳನ್ನು ಚೀಪಿ ರಸಾಹಾರವನ್ನು ಆಸ್ವಾದಿಸುತ್ತಾರೆ, ಅಂಗತ್ತಲಾಗಿ ಮಲಗುತ್ತಾರೆ; ಆನಂತರ ಏಳು ದಿವಸಗಳಲ್ಲಿ ತೆವಳುತ್ತ, ಆ ಮುಂದಿನ ಏಳು ದಿನಗಳಲ್ಲಿ ದಟ್ಟಡಿಯಿಡುತ್ತ, ಮುಂದಿನ ಏಳುದಿನಗಳಲ್ಲಿ ಚೆನ್ನಾಗಿ ನಡೆಯತೊಡಗುತ್ತಾರೆ; ಆ ಮುಂದಿನ ಏಳು ದಿನಗಳಲ್ಲಿ ನಾನಾ ವಿದ್ಯೆಗಳಲ್ಲಿ ಪರಿಣತರಾಗುತ್ತಾರೆ; ಆನಂತರ ಏಳು ದಿನಗಳಲ್ಲಿ ಜ್ಞಾನವಂತ ರಾಗುವರು; ಆ ಮುಂದಿನ ಏಳುದಿನಗಳಲ್ಲಿ ಪೂರ್ಣ ಹರಯವನ್ನು ಹೊಂದಿ, ಅಲ್ಲಕ್ಷಣಗಳುಳ್ಳ ದೇಹಗಳನ್ನು ಹೊಂದುತ್ತಾರೆ – ಈ ರೀತಿ ನಲವತ್ತೊಂಬತ್ತು ದಿನಗಳಲ್ಲಿ ಅವರು ಪ್ರಮಾಣಬದ್ಧವಾದ ಶರೀರವನ್ನು ಹೊಂದುತ್ತಾರೆ; ಆರು ಸಾವಿರ ಬಿಲ್ಲುಗಳಷ್ಟು ಎತ್ತರವಾಗಿ ಬೆಳೆದು, ಮೂರು ದಿನಗಳಿಗೊಮ್ಮೆ ಬೋರೆಯ ಹಣ್ಣನ್ನು ಮಾತ್ರ ತಿನ್ನುತ್ತ ಸುಂದರ ರೂಪುಳ್ಳರಾಗಿ ಮೂರು ಪಲ್ಯಗಳಷ್ಟು ದೀರ್ಘಾವಧಿಯ ಆಯುಸ್ಸುಳ್ಳವರಾಗುತ್ತಾರೆ.

**ತೊಲಗದ ಜವ್ವನಂ ತವದ ಮೆಚ್ಚು ಮರಲ್ಚುವ ನೋಟಮುಟ್ಟೆಯುಂ**
**ಸಲಿಸುವ ಭೋಗವೊಲ್ದಗಲದೋಪರ ಕೂಟಮನಂಗರಾಗದೊಳ್**
**ನಲಿದ ವಿನೋದವಾದಮೆರ್ದೆಯೊಳ್ ತಡವಾಡೆ ಸುಖಂಗಳೊಳ್ ಪಳಂ**
**ಚಲೆವುದು ನಾಕಲೋಕಮುಮನೇನಿರದೀವುದೊ ಭೋಗಭೂತಳಂ ೪೨**

**ಪದವಿಭಾಗ–ಅನ್ವಯ–ಅರ್ಥ**: ತೊಲಗದ ಜವ್ವನಂ = ಕಡಿಮೆಯಾಗದ ಹರಯ, ತವದ ಮೆಚ್ಚು = ಬತ್ತದ ಬಯಕೆ, ಮರಲ್ಚುವ ನೋಟಂ = ಪರಸ್ಪರ

ನೋಟ, ಅಚ್ಚಿಯಂ ಸಲಿಸುವ ಭೋಗಂ = ಪ್ರೀತಿಯನ್ನುಕ್ಕಿಸುವ ಭೋಗ, ಒಲ್ದು + ಅಗಲದ + ಓಪರ ಕೂಟಂ = ಪ್ರೀತಿಸಿ ಬೇರೆಯಾಗದ ನಲ್ಲರ ಸೇರುವಿಕೆ, ಅನಂಗರಾಗದೊಳ್ ನಲಿದ ವಿನೋದಂ = ಕಾಮದ ಬಯಕೆಯಲ್ಲಿ ಸಂತಸಪಡುವ ರಸಿಕತೆ, ಎರ್ದೆಯೊಳ್ ಆದಂ ತಡಮಾಡೆ ಸುಖಂಗಳೊಳ್ ಪಳಂಚಲೆವುದು = ಎದೆಯಲ್ಲಿ ತೀವ್ರವಾಗಿ ತುಂಬಿದ ಸುಖಗಳಿಂದ ಕೂಡಿ, ಭೋಗಭೂತಳಂ ನಾಕಲೋಕಮುಮನ್ + ಏನ್ + ಇರದೆ + ಈವುದೊ = ಆ ಭೋಗಭೂಮಿಯು ಸ್ವರ್ಗಲೋಕದ ಸುಖವನ್ನು ನಿರಂತರವಾಗಿ ಅದೆಂತು ನೀಡುತ್ತದೆಯೋ!

**ಗದ್ಯಾನುಸರಣ:** ಕಡಿಮೆಯಾಗದ ಹರಯ, ಬತ್ತದ ಬಯಕೆ, ಪರಸ್ಪರ ನೋಟ, ಪ್ರೀತಿಯನ್ನುಕ್ಕಿಸುವ ಭೋಗ, ಪ್ರೀತಿಸಿ ವಿರಹವಿರದ ನಲ್ಲರ ಸೇರುವಿಕೆ, ಕಾಮದ ಬಯಕೆಯಲ್ಲಿ ಸಂತಸಪಡುವ ರಸಿಕತೆ, – ಹೀಗೆ ಎದೆಯಲ್ಲಿ ತೀವ್ರ ಸುಖವನ್ನು ನೀಡುವ ಆ ಭೋಗಭೂಮಿಯು ಸದಾ ಸ್ವರ್ಗಸುಖವನ್ನು ನೀಡುತ್ತದೆ.

**ವ। ಅಂತನೇಕಭೋಗನಿವಾಸಮೆನಿಸುವ ಭೋಗಭೂಮಿಯೊಳ್**

**ಅರ್ಥ:** ಅಂತು + ಅನೇಕಭೋಗನಿವಾಸಂ + ಎನಿಸುವ ಭೋಗ ಭೂಮಿಯೊಳ್ = ಈ ರೀತಿ ನಾನಾ ಭೋಗಗಳ ನೆಲೆ ಎನ್ನಿಸುವ ಆ ಭೋಗಭೂಮಿಯಲ್ಲಿ,

**ಅಗರುವ ಧೂಪಧೂಮದೊಳ್ ಸೊರ್ಕಿದ ಸೊರ್ಕುಗಳಾಗಳಲ್ಲಿ ತೊ**
**ಟ್ಟಗೆ ತಿಳಿದಂತೆ ತನ್ಮನುಜದಂಪತಿ ದಂಪತಿಯಾಗೆ ತೋಳ ತ**
**ಳ್ತಗಲದಲಂಪಿನಿಂಪು ತವದಟ್ಕಱಿಳುರ್ಕೆ ನಿಮಿರ್ಕೆಗುಂದದಾ**
**ವಗಮತಿಸೌಖ್ಯಮುಂ ಪಡೆವುದೀ ದೊರೆಯುನ್ನತಿ ಪಾತ್ರದಾನದಾ ೪೩**

**ಪದವಿಭಾಗ–ಅನ್ವಯ–ಅರ್ಥ:** ಅಗರುವ ಧೂಪಧೂಮದೊಳ್ ಸೊರ್ಕಿದ ಸೊರ್ಕುಗಳ್ = ಕಾಳಾಗರುವಿನ ಹೊಗೆಯ ಉಸಿರುಕಟ್ಟಿಸುವಿಕೆಯು, ಆಗಳಲ್ಲಿ ತೊಟ್ಟಗೆ ತಿಳಿದಂತೆ = ಆಗ ಆ ಭೋಗಭೂಮಿಯಲ್ಲಿ ಇದ್ದಕ್ಕಿದ್ದಂತೆ ಉಪಶಮನ ಗೊಂಡಂತೆ, ತತ್ + ಮನುಜದಂಪತಿ ದಂಪತಿಯಾಗೆ = ವಜ್ರಜಂಘ–ಶ್ರೀಮತಿಯರೆಂಬ ಮಾನವ ಜೋಡಿಯು ಜೊತೆಯಾಗಿ ಹುಟ್ಟಿ, ತೋಳ ತಳ್ತು + ಅಗಲದ + ಅಲಂಪಿನ + ಇಂಪು = ಬಿಗಿದ ತೋಳು ಸಡಿಲಾಗದ ಸಂತಸದ ಸವಿ, ತವದ + ಅಟ್ಕಱ + ಅಳುರ್ಕೆ = ಕೊನೆಯಾಗದ ಪ್ರೀತಿಯ ಅತಿಶಯತೆ, ನಿಮಿರ್ಕೆಗುಂದದೆ + ಆವಗಂ + ಅತಿಸೌಖ್ಯಮಂ ಪಡೆವುದು = ಕಡಿಮೆಯಾಗದೆ ಯಾವಾಗಲೂ ಸುಖವನ್ನು ಹೊಂದುತ್ತದೆ; ಈ ದೊರೆಯ + ಉನ್ನತಿ ಪಾತ್ರದಾನದಾ = ಈ ಬಗೆಯ ಅತಿಶಯತೆ ಪಾತ್ರದಾನದ್ದು.

**ಗದ್ಯಾನುಸರಣ:** ಕಾಳಾಗರುವಿನ ಹೊಗೆಯ ಉಸಿರುಕಟ್ಟಿಸುವಿಕೆಯು ಇದ್ದಕ್ಕಿದ್ದಂತೆ ಉಪಶಮನಗೊಂಡಂತೆ, ಮಾನವ ಜೋಡಿಯಾದ ವಜ್ರಜಂಘ-ಶ್ರೀಮತಿಯರು ಭೋಗಭೂಮಿಯಲ್ಲಿ ಜೊತೆಯಾಗಿ ಹುಟ್ಟಿದರು; ಬಿಗಿದ ತೋಳು ಸಡಿಲಾಗದ ಸಂತಸದ ಸವಿ, ಕೊನೆಯಾಗದ ಪ್ರೀತಿಯ ಅತಿಶಯತೆ, ಯಾವಾಗಲೂ ಕಡಿಮೆಯಾಗದ ಸುಖ ಅವರದಾಯಿತು. ಪಾತ್ರದಾನದ ಮಹಿಮೆ ಈ ಬಗೆಯದು!

**ವಿಶೇಷ ವಿಚಾರ:** 'ತೋಳ ತಳ್ತಗಲದಲಂಪಿನಿಂಪು' ಭಾಗಕ್ಕೆ 'ತೋಳ ತಳ್ಕು ಅಗಲದಲಂಪಿನಿಂಪು' – ಎಲ್. ಬಸವರಾಜು ಅವರ ಪಾಠ.

**ದಾನಾನುವೋದದಿಂದಂ**
**ತಾ ನಾಲ್ಕುಂ ಮೃಗಮುಮಲ್ಲಿ ಪುಟ್ಟಿದುವೆನೆ ಪೇ**
**ೞೇನಂ ಸುಖಮಂ ಮಾಡದೊ**
**ದಾನದ ದಾನಾನುಮೋದದನುಪಮಪುಣ್ಯಂ ೪೪**

**ಪದವಿಭಾಗ-ಅನ್ವಯ-ಅರ್ಥ:** ದಾನ + ಅನುಮೋದದಿಂದ + ಅಂತಾ ನಾಲ್ಕುಂ ಮೃಗಮುಂ = ದಾನಕ್ಕಿತ್ತ ಸಮ್ಮತಿಯ ಕಾರಣದಿಂದ ನಾಲ್ಕೂ ಮೃಗಗಳೂ, ಅಲ್ಲಿ ಪುಟ್ಟಿದುವು + ಎನೆ = ಆ ಭೋಗಭೂಮಿಯಲ್ಲಿ ಹುಟ್ಟಿದವು ಎಂದರೆ, ದಾನದ ದಾನಾನುಮೋದದ + ಅನುಪಮಪುಣ್ಯಂ = ದಾನ ಮತ್ತು ಅದಕ್ಕೆ ನೀಡುವ ಒಪ್ಪಿಗೆಗಳಿಂದ ದೊರೆಯುವ ಅತಿಶಯ ಪುಣ್ಯವು, ಏನಂ ಸುಖಮಂ ಮಾಡದೊ ಪೇೞ್ = ಏನು ಸುಖವನ್ನು ತಾನೆ ಮಾಡಲಾರದು, ಹೇಳು.

**ಗದ್ಯಾನುಸರಣ:** ದಾನಕ್ಕಿತ್ತ ಸಮ್ಮತಿಯ ಕಾರಣದಿಂದ ನಾಲ್ಕೂ ಮೃಗಗಳೂ ಆ ಭೋಗಭೂಮಿಯಲ್ಲಿ ಹುಟ್ಟಿದವು ಎಂದರೆ, ದಾನ ಮತ್ತು ಅದಕ್ಕೆ ನೀಡುವ ಒಪ್ಪಿಗೆಗಳಿಂದ ದೊರೆಯುವ ಅತಿಶಯ ಪುಣ್ಯವು, ಎಂತಹ ಸುಖವನ್ನು ತಾನೆ ನೀಡಲಾರದು!

**ವಿಶೇಷ ವಿಚಾರ:** ಭೋಗಭೂಮಿಯಲ್ಲಿ ಹುಟ್ಟಿದವರ ಹೆಸರಿನ ಮುಂದೆ ಆರ್ಯ ಅಥವಾ ಆರ್ಯೆ ಎಂದು ಸೇರಿಸುವುದು ರೂಢಿ.

**ವ। ಒಂದು ದಿವಸಂ ಆ ವಜ್ರಜಂಘಾರ್ಯನಾತ್ಮೀಯಪ್ರಾಣೇಶ್ವರಿವೆರಸು**

**ಅರ್ಥ:** ಒಂದು ದಿವಸಂ ಆ ವಜ್ರಜಂಘಾರ್ಯನ್ + ಆತ್ಮೀಯಪ್ರಾಣೇಶ್ವರಿವೆರಸು = ಒಂದು ದಿನ ವಜ್ರಜಂಘನು ತನ್ನ ಮನಃಪ್ರಿಯೆ ಶ್ರೀಮತಿಯೊಡನೆ,

**ತುಱುಗಿದುದೊಂದು ಕೊಂಬು ತಳಿರಿಂ ಮುಗುಳಿಂ ಪೆಱತೊಂದು ಕೊಂಬುಸು**
**ತ್ತಿಱಿದುದು ತಳ್ತ ಬಲ್ಮಿಡಿಯ ಕಾಯ್ಗಳ ಗೊಂಚಲನೊಂದು ಕೊಂಬುಪೊ**
**ತ್ತೆಱಗಿದುದೊಂದೆ ಮಾಮರದೊಳೊಂದೆಳಗೊಂಬದು ನೋಡ ನೋಡ ಪ**
**ಣ್ತೆಱಗಿದುದೇನಿದಂಗಜಮಹೀಭುಜನಿರ್ಕೆಯೊ ಚಿತ್ರಶಾಲೆಯೋ ೪೫**

**ಪದವಿಭಾಗ–ಅನ್ವಯ–ಅರ್ಥ:** ಒಂದೆ ಮಾಮರದೊಳ್ = ಒಂದೇ ಮಾವಿನ ಮರದಲ್ಲಿ, ಒಂದು ಕೊಂಬು ತಳಿರಿಂ ತುಱುಗಿದುದು = ಒಂದು ಕೊಂಬೆ ಚಿಗುರಿನಿಂದ ತುಂಬಿದೆ, ಮುಗುಳಿಂ ಪೆಱತೊಂದು ಕೊಂಬು = ಮತ್ತೊಂದು ಕೊಂಬೆ ಮೊಗ್ಗುಗಳಿಂದ ಕೂಡಿದೆ, ಒಂದು ಕೊಂಬು ತಳ್ತ ಬಲ್ಮಿಡಿಯ ಕಾಯ್ಗಳ ಗೊಂಚಲನ್ ಸುತ್ತಿಱಿದುದು = ಮಗುದೊಂದು ಕೊಂಬೆಯು ಮಿಡಿಗಾಯಿಗಳು ಇಡಿಕಿರಿದ ಗೊಂಚಲುಗಳಿಂದ ತುಂಬಿದೆ, ಒಂದು + ಎಳಗೊಂಬು + ಅದು ಪೊತ್ತು + ಎಱಗಿದುದು = ಒಂದು ಎಳೆಯ ರೆಂಬೆ ಬಾಗಿದೆ, ಪಣ್ತು + ಎಱಗಿದುದು = (ಇನ್ನೊಂದು) ಹಣ್ಣು ಬಿಟ್ಟು ಜಗ್ಗಿದೆ, ನೋಡ ನೋಡ = ನೋಡು ನೋಡು, ಏನಿದು + ಅಂಗಜಮಹೀಭುಜನಿರ್ಕೆಯೊ ಚಿತ್ರಶಾಲೆಯೋ = ಇದೇನು ಕಾಮರಾಜನಿರುವ ತಾಣವೋ ಚಿತ್ರಶಾಲೆಯೋ.

**ಗದ್ಯಾನುಸರಣ:** ಈ ಒಂದೇ ಮಾವಿನ ಮರದ ಒಂದು ಕೊಂಬೆಯಲ್ಲಿ ಚಿಗುರು ತುಂಬಿದೆ, ಮತ್ತೊಂದು ಮೊಗ್ಗುಗಳಿಂದ ಕೂಡಿದೆ, ಮಗುದೊಂದರಲ್ಲಿ ಮಿಡಿಗಾಯಿಗಳು ಇಡಿಕಿರಿದ ಗೊಂಚಲುಗಳಿವೆ, ಒಂದು ಎಳೆಯ ರೆಂಬೆ ಭಾರ ತಡೆಯದೆ ಬಾಗಿದೆ: ಇನ್ನೊಂದು ಮರ ಹಣ್ಣು ಬಿಟ್ಟು ಜಗ್ಗಿದೆ, ನೋಡು ನೋಡು, ಇದೇನು ಕಾಮರಾಜನಿರುವ ತಾಣವೋ ಚಿತ್ರಶಾಲೆಯೋ – ಎಂದು ಸಾರ್ವರ್ತುಕೋದ್ಯಾನದ ಮಾವಿನ ಮರನ್ನು ತೋರಿಸಿ ಹೇಳಿದ.

**ವ। ಎಂದು ಮತ್ತಮನೇಕಕುಸುಮಕಿಸಲಯಫಳ ಪರಿಣತಫಳಾವನಮ್ರಾಮ್ರತರುನಿರಂತರಿತ ವನ ಲಕ್ಷ್ಮಿಯುನೊಱಲ್ದು ನೋಡುತಿರ್ಪನ್ನೆಗಂ ಗಗನತಳಜಳಧಿಯೊಳ್ ಬಹಿತ್ರದಂತೆ ಪರಿವ ಸೂರ್ಯಪ್ರಭನೆಂಬ ದೇವನ ವಿಮಾನಮಂ ನೋಡಿ,**

**ಪದವಿಭಾಗ–ಅನ್ವಯ–ಅರ್ಥ:** ಎಂದು ಮತ್ತಂ + ಅನೇಕ ಕುಸುಮ ಕಿಸಲಯ ಫಳಪರಿಣತಫಳಾವ = ಎಂದು ಮತ್ತೆ ಅನೇಕ ಹೂಗಳು ಚಿಗುರು ಮಾಗಿದ ಹಣ್ಣುಗಳು ಬಿಟ್ಟು, ನಮ್ರ + ಆಮ್ರತರುನಿರಂತರಿತ = ಬಾಗಿದ ಮಾವಿನ ಮರಗಳಿಂದ ತುಂಬಿದ, ವನಲಕ್ಷ್ಮಿಯನ್ + ಒಱಲ್ದು ನೋಡುತಿರ್ಪನ್ನೆಗಂ = ವನಲಕ್ಷ್ಮಿಯನ್ನು ಆಸ್ಥೆಯಿಂದ ನೋಡುತ್ತಿರಲು, ಗಗನತಳಜಳಧಿಯೊಳ್ ಬಹಿತ್ರದಂತೆ

ಪರಿವ = ಆಕಾಶವೆಂಬ ಸಮುದ್ರದಲ್ಲಿ ಹಡಗಿನಂತೆ ತೇಲುವ, ಸೂರ್ಯಪ್ರಭನೆಂಬ ದೇವನ ವಿಮಾನಮಂ ನೋಡಿ = ಸೂರ್ಯಪ್ರಭ ಎಂಬ ದೇವನ ವಿಮಾನವನ್ನು ನೋಡಿ,

**ಗದ್ಯಾನುಸರಣ:** ಎಂದು ಮತ್ತೆ ಅನೇಕ ಹೂಗಳು ಚಿಗುರು ಮಾಗಿದ ಹಣ್ಣುಗಳು ಬಿಟ್ಟು ಬಾಗಿದ ಮಾವಿನ ಮರಗಳಿಂದ ತುಂಬಿದ, ವನಲಕ್ಷ್ಮಿಯನ್ನು ಆಸ್ಥೆಯಿಂದ ನೋಡುತ್ತಿದ್ದ; ಆಗ ಆಕಾಶವೆಂಬ ಸಮುದ್ರದಲ್ಲಿ ಹಡಗಿನಂತೆ ಚಲಿಸುತ್ತಿದ್ದ ಸೂರ್ಯಪ್ರಭ ಎಂಬ ದೇವನ ವಿಮಾನವನ್ನು ನೋಡಿದ.

**ಪೋದ ಭವಂಗಳಂ ನೆನೆವಿನಂ ಗಗನಾಂತರದಲ್ಲಿ ಸೂರ್ಯಯು**
**ಗ್ಮೋದಯಮೆಂದುಮಿಲ್ಲದುದಿದಾಪುದೆಂಬಿನೆಗಂ ವಿಶಾಲಪು**
**ಣ್ಯೋದಯಮಂದು ದಂಪತಿಗೆ ಸಾರ್ತರೆ ಸಾರ್ತರೆ ವಂದುದಾರರಾ**
**ಗೋದಯಮಂ ನಿಮಿರ್ಚಿದುದು ಕಣ್ಗೆ ವಿಯತ್ತಳಚಾರಣೋದಯಂ**
**೪೬**

**ಪದವಿಭಾಗ-ಅನ್ವಯ-ಅರ್ಥ:** ಪೋದ ಭವಂಗಳಂ ನೆನೆವಿನಂ = ತನ್ನ ಹಿಂದಿನ ಜನ್ಮಗಳು ನೆನಪಾಗಲು, ಗಗನಾಂತರದಲ್ಲಿ = ಆಕಾಶಮಂಡಲದಲ್ಲಿ, ಎಂದುಮಿಲ್ಲದುದು ಸೂರ್ಯಯುಗ್ಮ + ಉದಯಂ ಇದು + ಆದಾಪುದು + ಎಂಬಿನೆಗಂ = ಯಾವತ್ತೂ ಇಲ್ಲದ ಎರಡು ಸೂರ್ಯರ ಉದಯವು ಹೇಗೆ ಆಗುತ್ತಿದೆ ಎಂದುಕೊಳ್ಳುವಷ್ಟರಲ್ಲಿ, ದಂಪತಿಗೆ ವಿಶಾಲಪುಣ್ಯೋದಯಂ + ಅಂದು ಸಾರ್ತರೆ ಸಾರ್ತರೆ = ಆ ದಂಪತಿಗೆ ಮಹಾಪುಣ್ಯದ ಉದಯವು ಸನ್ನಿಹಿತವಾಗುತ್ತಿರುವಂತೆ, ವಿಯತ್ತಳಚಾರಣೋದಯಂ ವಂದು ಗಗನಚಾರಣರ ಆಗಮನವುಂಟಾಗಿ, ಉದಾರರಾಗೋದಯಮಂ ಕಣ್ಗೆ ನಿಮಿರ್ಚಿದುದು = ಕಣ್ಣಿಗೆ ಉದಾರ ರಾಗೋದಯವನ್ನುಂಟುಮಾಡಿತು.

**ಗದ್ಯಾನುಸರಣ:** ಆಗ ಹಿಂದಿನ ಜನ್ಮಗಳ ನೆನಪಾಯಿತು; ಆಕಾಶಮಂಡಲದಲ್ಲಿ ಯಾವತ್ತೂ ಇಲ್ಲದ ಎರಡು ಸೂರ್ಯರ ಉದಯವು ಹೇಗೆ ಆಗುತ್ತಿದೆ ಎಂದು ಅಚ್ಚರಿಗೊಂಡ; ಅವು ಹತ್ತಿರ ಹತ್ತಿರ ಬಂದಾಗ ಆ ದಂಪತಿಗೆ ಮಹಾಪುಣ್ಯದ ಉದಯವೇ ಸನ್ನಿಹಿತವಾಗುತ್ತಿರುವಂತೆ ಗಗನಚಾರಣರ ಆಗಮನವಾಗಿ ಅವರ ಕಂಗಳಿಗೆ ಉದಾರ ರಾಗೋದಯವನ್ನುಂಟುಮಾಡಿತು.

**ವ। ಅಂತವತರಿಸಿದ ಚಾರಣದ್ವಂದ್ವಕ್ಕಾ ದ್ವಂದ್ವಮಿದಿರ್ವಂದು ಭಕ್ತಿಭರಾನತನಿಪತತ್ಕರ್ಣಪೂರಪಲ್ಲವಂ ತದೀಯಪಾದಪಲ್ಲವಂಗಳನಾ ನಂದಾಶ್ರು ಮಿಶ್ರಿತಜಳಂಗಳೊಳ್**

**ತೊಳೆದುಂ ನಿಜೋತ್ತರೀಯಪಲ್ಲವಂಗಳೊಳ್ ತೊಡೆದುಂ ಸಮುತ್ತುಂಗಮಣಿಮಯಾಸನದೊಳ್ ಕುಳ್ಳಿರಿಸಿ,**

**ಪದವಿಭಾಗ-ಅನ್ವಯ-ಅರ್ಥ:** ಅಂತು + ಅವತರಿಸಿದ ಚಾರಣದ್ವಂದ್ವಕ್ಕೆ = ಹಾಗೆ ಕೆಳಗಿಳಿದು ಬಂದು ಚಾರಣಜೋಡಿಗೆ, ಆ ದ್ವಂದ್ವಂ + ಇದಿರ್ವಂದು = ದಂಪತಿಯು ಎದುರಾಗಿ ಸ್ವಾಗತಿಸಿ, ಭಕ್ತಿಭರ + ಆನತನಿಪತತ್ + ಕರ್ಣಪೂರ ಪಲ್ಲವಂ = ಭಕ್ತಿಯ ಭರದಿಂದ ಬಾಗಿ ಜೋಲಾಡುವ ಕಿವಿಯೊಡವೆಯು, ತದೀಯಪಾದಪಲ್ಲವಂಗಳನ್ = ಅವರ ಪಾದಗಳನ್ನು, ಆನಂದಾಶ್ರುಮಿಶ್ರಿತ ಜಳಂಗಳೊಳ್ ತೊಳೆದುಂ = ಆನಂದದ ಕಣ್ಣೀರು ಬೆರೆತ ನೀರಿನಲ್ಲಿ ತೊಳೆದು, ನಿಜ + ಉತ್ತರೀಯಪಲ್ಲವಂಗಳೊಳ್ ತೊಡೆದುಂ = ತಮ್ಮ ಶಲ್ಯದ ಸೆರಗಿನಿಂದ ಒರೆಸಿ, ಸಮುತ್ತುಂಗಮಣಿಮಯಾಸನದೊಳ್ ಕುಳ್ಳಿರಿಸಿ = ಎತ್ತರವಾದ ಮಣೀಖಚಿತ ಪೀಠದಲ್ಲಿ ಕುಳ್ಳಿರಿಸಿ,

**ಗದ್ಯಾನುಸರಣ:** ಹಾಗೆ ಕೆಳಗಿಳಿದು ಬಂದು ಭಕ್ತಿಯ ಭರದಿಂದ ಬಾಗಿ ಚಾರಣಜೋಡಿಗೆ ದಂಪತಿಯು ಎದುರಾಗಿ ಬಂದು ಸ್ವಾಗತಿಸಿದರು; ಕಿವಿಯೊಡವೆಯು ಜೋಲಾಡಲು ಭಕ್ತಿಯ ಭರದಿಂದ ಬಾಗಿದರು; ಆನಂದದ ಕಣ್ಣೀರು ಬೆರೆತ ನೀರಿನಲ್ಲಿ ಅವರ ಪಾದಗಳನ್ನು ತೊಳೆದು, ತಮ್ಮ ಶಲ್ಯದ ಸೆರಗಿನಿಂದ ಒರೆಸಿ, ಆ ಬಳಿಕ ಅವರನ್ನು ಎತ್ತರವಾದ ಮಣಿಖಚಿತ ಪೀಠದಲ್ಲಿ ಕುಳ್ಳಿರಿಸಿದರು.

**ಮುನಿವೃಂದಾರಕವಂದ್ಯ ನಿಮ್ಮ ಚರಣಾಂಭೋಜಂಗಳಂ ಕಂಡು ಕ**
**ಣ್ಬನಿಗಳ್ ಮಾಣ್ದಪುವಿಲ್ಲ ಕಾರಣಮಿದೇಂ ಚಿತ್ತಕ್ಕತಿಪ್ರೀತಿ ತೊ**
**ಟ್ಟನೆ ಕೈಗಣ್ಮುವುದೇಕೆ ಪೂರ್ವಭವದೊಳ್ ಬಂಧುತ್ವಮುಂಟಕ್ಕುಮಿಂ**
**ತಿನಿತೊಂದಿಲ್ಲದೊಡಾಗಲಾಯ್ತೆನಗಿದಂ ಕೇಳ್ವೊಂದು ಕೌತೂಹಳಂ॥೭**

**ಪದವಿಭಾಗ-ಅನ್ವಯ-ಅರ್ಥ:** ಮುನಿವೃಂದಾರಕವಂದ್ಯ = ಮುನಿಸಮೂಹಕ್ಕೂ ವಂದ್ಯರಾದವರೇ ನಿಮ್ಮ ಚರಣಾಂಭೋಜಂಗಳಂ ಕಂಡು = ನಿಮ್ಮ ಪಾದಕಮಲಗಳನ್ನು ನೋಡಿ, ಕಣ್ಬನಿಗಳ್ ಮಾಣ್ದಪುವಿಲ್ಲ = ಆನಂದಬಾಷ್ಪ ನಿಲ್ಲುತ್ತಲೇ ಇಲ್ಲ, ಕಾರಣಂ + ಇದೇಂ = ಇದಕ್ಕೇನು ಕಾರಣ, ಚಿತ್ತಕ್ಕೆ + ಅತಿಪ್ರೀತಿ ತೊಟ್ಟನೆ ಕೈಗಣ್ಮುವುದೇಕೆ = ಮನಸ್ಸಿನಲ್ಲಿ ವಿಶೇಷ ಪ್ರೀತಿಯುಂಟಾಗುವುದೇಕೆ, ಪೂರ್ವಭವದೊಳ್ ಬಂಧುತ್ವಮುಂಟಕ್ಕುಂ = ಹಿಂದಿನ ಜನ್ಮದಲ್ಲಿ ಯಾವುದೋ ಬಂಧುತ್ತವ ಇದ್ದಿರಬೇಕು, ಇಲ್ಲದೊಡೆ ಇಂತಿನಿತೊಂದು ಆಗಲಾಯ್ತು = ಇಲ್ಲದಿದ್ದರೆ ಹೀಗೆ ಆಗಲಾರದು, ಎನಗಿದಂ ಕೇಳ್ವೊಂದು ಕೌತೂಹಳಂ = ನನಗೆ ಇದನ್ನು ಕೇಳಿ ತಿಳಿದುಕೊಳ್ಳುವ ಕೌತುಕವುಂಟಾಗಿದೆ.

**ಗದ್ಯಾನುಸರಣ:** 'ಮುನಿಸಮೂಹಕ್ಕೂ ವಂದ್ಯರಾದವರೇ, ನಿಮ್ಮ ಪಾದಕಮಲಗಳನ್ನು ನೋಡಿ ಉಕ್ಕಿದ ಆನಂದಬಾಷ್ಪವು ನಿಲ್ಲುತ್ತಲೇ ಇಲ್ಲ; ಇದಕ್ಕೇನು ಕಾರಣ, ಹೀಗೆ ಮನಸ್ಸಿನಲ್ಲಿ ವಿಶೇಷ ಪ್ರೀತಿಯುಂಟಾಗುವುದೇಕೆ? ಹಿಂದಿನ ಜನ್ಮದಲ್ಲಿ ಯಾವುದೋ ಬಂಧುತ್ತವ ಇದ್ದಿರಬೇಕು, ಇಲ್ಲದಿದ್ದರೆ ಹೀಗೆ ಆಗಲಾರದು; ನನಗೆ ಇದನ್ನು ಕೇಳಿ ತಿಳಿದುಕೊಳ್ಳುವ ಕೌತುಕವುಂಟಾಗಿದೆ' ಎಂದು ವಜ್ರಜಂಘ ಹೇಳಿದ.

**ವ। ಎಂಬುದುಮವರೊಳಗ್ರಮುನಿ ಮುಗುಳ್ನಗೆ ನಕ್ಕು ಮಹಾಬಳ ವಿಯತ್ತಳಚರನಾದ ಭವದೊಳಾಂ ನಿನಗೆ ಸಚಿವನೆಂ ಸ್ವಯಂಬುದ್ಧನೆಂಬೆನಾಗಿ,**

**ಪದವಿಭಾಗ-ಅನ್ವಯ-ಅರ್ಥ:** ಎಂಬುದುಂ + ಅವರೊಳ್ + ಅಗ್ರಮುನಿ ಮುಗುಳ್ನಗೆನಕ್ಕು = ಎಂದಾಗ ಅವರಿಬ್ಬರಲ್ಲಿ ಹಿರಿಯನಾದ ಮುನಿಯು ಮುಗುಳ್ನಗೆಯಿಂದ ಕೂಡಿ ಹೀಗೆಂದ, ಮಹಾಬಳವಿಯತ್ತಳಚರನಾದ ಭವದೊಳ್ = ನೀನು ಮಹಾಬಲ ಖೇಚರನಾಗಿದ್ದ ಜನ್ಮದಲ್ಲಿ, ಆಂ ನಿನಗೆ ಸಚಿವನೆಂ ಸ್ವಯಂಬುದ್ಧನೆಂಬೆನ್ + ಆಗಿ = ನಾನು ನಿನ್ನ ಮಂತ್ರಿಯಾಗಿದ್ದ ಸ್ವಯಂಬುದ್ಧನಾಗಿ,

**ಗದ್ಯಾನುಸರಣ:** ಎಂದಾಗ ಅವರಿಬ್ಬರಲ್ಲಿ ಹಿರಿಯನಾದ ಮುನಿಯು ಮುಗುಳ್ನಗೆಯಿಂದ ಕೂಡಿ ಹೀಗೆಂದ: 'ನೀನು ಮಹಾಬಲ ಖೇಚರನಾಗಿದ್ದ ಜನ್ಮದಲ್ಲಿ ನಾನು ನಿನ್ನ ಮಂತ್ರಿಯಾದ ಸ್ವಯಂಬುದ್ಧನಾಗಿದ್ದೆ.'

**ಪಡೆದುಂ ಸಮಾಧಿಯಂ ನಿನಗೆ ನಿನ್ನ ವಿಯೋಗದ ದುಃಖದೊಳ್ ತಪ ಕ್ಕೊಡರಿಸಿ ಘೋರವೀರತಪದೊಳ್ ತನುವಂ ಬಡಮಾಡಿ ನೋಂಪಿಯೊಳ್ ಮುಡಿಪಿ ನಿರಾಕುಳಂ ಮೊದಲ ಸಗ್ಗದೊಳಾಂ ಮಣಿಚೂಳನಾಮಮಂ ಪಡೆದಮರೇಂದ್ರಲೋಕಸುಖಸಾಪಸಮುಚ್ಚಯದಂತನೆಯ್ದಿದೆಮ ೪೮**

**ಪದವಿಭಾಗ-ಅನ್ವಯ-ಅರ್ಥ:** ನಿನಗೆ ಸಮಾಧಿಯಂ ಪಡೆದುಂ = ನೀನು ಸಮಾಧಿಯನ್ನು ಪಡೆಯುವಂತೆ ಮಾಡಿದ ಮೇಲೆ, ನಿನ್ನ ವಿಯೋಗದ ದುಃಖದೊಳ್ ತಪಕ್ಕೊಡರಿಸಿ = ನಿನ್ನ ಅಗಲಿಕೆಯ ದುಃಖದಲ್ಲಿ ನಾನು ತಪವನ್ನು ಕೈಕೊಂಡು, ಘೋರವೀರತಪದೊಳ್ ತನುವಂ ಬಡಮಾಡಿ = ಘೋರವಾದ ವೀರತಪದಿಂದ ದೇಹವನ್ನು ಕೃಶಮಾಡಿಕೊಂಡು, ನೋಂಪಿಯೊಳ್ ಮುಡಿಪಿ = ವ್ರತಗಳಿಂದ ಮರಣವನ್ನು ಹೊಂದಿ, ನಿರಾಕುಳಂ = ವ್ಯಾಕುಲವಿಹೀನನಾಗಿ, ಮೊದಲ ಸಗ್ಗದೊಳ್ ಆಂ = ಮೊದಲನೆಯ ಸ್ವರ್ಗದಲ್ಲಿ ನಾನು, ಮಣಿಚೂಳನಾಮಮಂ ಪಡೆದು = ಮಣಿಚೂಳನೆಂಬ ಹೆಸರನ್ನು ಪಡೆದು, ಅಮರೇಂದ್ರಲೋಕಸುಖಸಾರಸಮುಚ್ಚಯದ + ಅಂತನ್ + ಎಯ್ದಿದೆಂ = ಇಂದ್ರಲೋಕಸುಖಸಾರದ ತುತ್ತತುದಿಯನ್ನು ಹೊಂದಿದೆ.

**ಗದ್ಯಾನುಸರಣ:** 'ನೀನು ಸಮಾಧಿಯನ್ನು ಪಡೆಯುವಂತೆ ಮಾಡಿದ ಮೇಲೆ ನಿನ್ನ ಅಗಲಿಕೆಯ ದುಃಖದಲ್ಲಿ ನಾನು ತಪವನ್ನು ಕೈಕೊಂಡೆ; ಘೋರವಾದ ವೀರತಪದಿಂದ ದೇಹವನ್ನು ಕೃಶಮಾಡಿಕೊಂಡು, ವ್ರತಗಳಿಂದ ಮರಣವನ್ನು ಹೊಂದಿದೆ; ಆನಂತರ ವ್ಯಾಕುಲವಿಹೀನನಾಗಿ ಮೊದಲನೆಯ ಸ್ವರ್ಗದಲ್ಲಿ ನಾನು ಮಣಿಚೂಳನೆಂಬ ಹೆಸರನ್ನು ಪಡೆದು ಇಂದ್ರಲೋಕಸುಖಸಾರದ ತುತ್ತತುದಿಯನ್ನು ಅನುಭವಿಸಿದೆ'

**ವಿಶೇಷ ವಿಚಾರ:** ಮೊದಲ ಸ್ವರ್ಗ = ಹದಿನಾರು ಕಲ್ಪಗಳಲ್ಲಿ ಮೊದಲನೆಯದಾದ ಸೌಧರ್ಮಕಲ್ಪ.

**ವ॥ ಅಲ್ಲಿಂ ತಳರ್ದು ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀ ವಿಷಯದ ಪುಂಡರೀಕಿಣಿಯನಾಳ್ವ ಗುಣಪ್ರಿಯಂ ಪ್ರಿಯಸೇನಮಹೀ ಭೂಜಂಗಂ ತತ್ಸೌಂದರಿ ಸೌಂದರಿಗಂ,**

**ಅರ್ಥ:** ಅಲ್ಲಿಂ ತಳರ್ದು = ಅಲ್ಲಿಂದ ಹೊರಬಿದ್ದು, ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀವಿಷಯದ ಪುಂಡರೀಕಿಣಿಯನ್ + ಆಳ್ವ ಗುಣಪ್ರಿಯಂ ಪ್ರಿಯಸೇನಮಹೀಭೂಜಂಗಂ ತತ್ಸೌಂದರಿ ಸೌಂದರಿಗಂ = ಪೂರ್ವವಿದೇಹದ [ಉಷ್ಕಳಾವತೀ ನಾಡಿನ ಪುಂಡರೀಕಿಣಿಯ ರಾಜ ಪ್ರಿಯಸೇನ ಮತ್ತವನ ಮಡದಿ ಸುಂದರಿಯರಿಗೆ,

**ಪ್ರೀತಿಂಕರನೆಂಬೊಂ ತನು**
**ಜಾತನೆನಾಂ ಪ್ರೀತಿದೇವನೆನ್ನಿಂ ಕಿಱಿಯಂ**
**ಖ್ಯಾತಯಶನೀ ತಪೋಧನ**
**ನೀ ತಪದಿಂದವಧಿಬೆರಸು ಚಾರಣಗುಣಮಂ ೪೯**

**ಪದವಿಭಾಗ-ಅನ್ವಯ-ಅರ್ಥ:** ಪ್ರೀತಿಂಕರನೆಂಬೊಂ ತನುಜಾತನೆನ್ + ಆಂ = ಹುಟ್ಟಿದ ಪ್ರೀತಿಂಕರನೆಂಬ ಮಗನೇ ನಾನು; ಖ್ಯಾತಯಶನ್ ಈ ತಪೋಧನನ್ = ಕೀರ್ತಿವಂತನಾದ ಈ ತಪಸ್ವಿಯು, ಎನ್ನಿಂ ಕಿಱಿಯಂ ಪ್ರೀತಿದೇವನ್ = ನನ್ನ ತಮ್ಮನಾದ ಪ್ರೀತಿದೇವ; ಈ ತಪದಿಂದ + ಅವಧಿಬೆರಸು ಚಾರಣಗುಣಮಂ = ತಪಸ್ಸಿನ ಫಲವಾಗಿ ಅವಧಿಜ್ಞಾನವನ್ನು ಪಡೆದ ಚಾರಣಗುಣವನ್ನು,

**ಗದ್ಯಾನುಸರಣ:** ಹುಟ್ಟಿದ ಪ್ರೀತಿಂಕರನೆಂಬ ಮಗನೇ ನಾನು; ಕೀರ್ತಿವಂತನಾದ ಈ ತಪಸ್ವಿಯು ನನ್ನ ತಮ್ಮನಾದ ಪ್ರೀತಿದೇವ; ತಪಸ್ಸಿನ ಫಲವಾಗಿ ಅವಧಿಜ್ಞಾನವನ್ನು ಪಡೆದ ಚಾರಣಗುಣವನ್ನು,

**ಪಡೆದವಧಿಬೋಧದಿಂದೀ**
**ಯೆಡೆಯೊಳ್ ನೀಂ ಬಂದು ಪುಟ್ಟಿದುದನಱಿದಱಿವಂ**
**ಕುಡಲೆಂದು ಬಂದೆವಿದು ನಿನ**
**ಗೆಡೆಯುಡುಗದೆ ಕುಡುಗುಮುಚಿತಮುಕ್ತಿಶ್ರೀಯಂ** ೫೦

**ಪದವಿಭಾಗ-ಅನ್ವಯ-ಅರ್ಥ**: ಈ + ಎಡೆಯೊಳ್ ನೀಂ ಬಂದು ಪುಟ್ಟಿದುದನ್ ಪಡೆದ + ಅವಧಿಬೋಧದಿಂದ ಅಱಿದು = ಈ ಸ್ಥಳದಲ್ಲಿ ನೀನು ಹುಟ್ಟಿರುವುದನ್ನು ನಾವು ಪಡೆದ ಅವಧಿಜ್ಞಾನದಿಂತ ತಿಳಿದು, ಅಱಿವಂ ಕುಡಲೆಂದು ಬಂದೆವು = ನಿನಗೆ ತಿಳಿವಳಿಕೆಯನ್ನು ಹೇಳಲೆಂದು ಬಂದೆವು, ಇದು ಎಡೆ + ಉಡುಗದೆ ನಿನಗೆ ಉಚಿತಮುಕ್ತಿಶ್ರೀಯಂ ಕುಡುಗುಂ = ಈ ತಿಳಿವು ನಿನಗೆ ತಡವಿಲ್ಲದೆ ಮೋಕ್ಷಲಕ್ಷ್ಮಿಯನ್ನು ನೀಡುತ್ತದೆ.

**ಗದ್ಯಾನುಸರಣ:** 'ಈ ಸ್ಥಳದಲ್ಲಿ ನೀನು ಹುಟ್ಟಿರುವುದನ್ನು ನಾವು ಪಡೆದ ಅವಧಿಜ್ಞಾನದಿಂತ ತಿಳಿದು, ನಿನಗೆ ತಿಳಿವಳಿಕೆಯನ್ನು ಹೇಳಲೆಂದು ಬಂದಿದ್ದೇವೆ; ಇದರಿಂದ ನಿನಗೆ ಮೋಕ್ಷಲಕ್ಷ್ಮಿಯು ತಡವಿಲ್ಲದೆ ದೊರಕುತ್ತದೆ.'

**ನಿನಗೆ ಜಯವರ್ಮನಾದಂ**
**ದಿನ ಭವದಿಂದಿತ್ತ ಭೋಗಾಕಾಂಕ್ಷೆಯೆ ತಿಣ್ಣಂ**
**ಮನದೊಳ್ ಸಮ್ಯಕ್ತ್ವದ ದೆಸೆ**
**ಯಿನಿತಿಲ್ಲ ದಲಮ್ಮ ಕೈಕೊಳಲ್ಕಿದು ಕಾಲಂ** ೫೧

**ಪದವಿಭಾಗ-ಅನ್ವಯ-ಅರ್ಥ:** ಜಯವರ್ಮನಾದಂದಿನ ಭವದಿಂದ + ಇತ್ತ ನಿನಗೆ ಭೋಗಾಕಾಂಕ್ಷೆಯೆ ತಿಣ್ಣಂ = ಜಯವರ್ಮನಾಗಿದ್ದ ತು + ಇಜನ್ಮದಿಂದೀಚೆಗೆ ನಿನ್ನಲ್ಲಿ ಭೋಗದ ಆಸೆ ತೀವ್ರವಾಗಿದೆ; ಮನದೊಳ್ ಸಮ್ಯಕ್ತ್ವದ ದೆಸೆ + ಇನಿತಿಲ್ಲ = ನಿನ್ನ ಮನಸ್ಸಿನಲ್ಲಿ ಸಮ್ಯಕ್ತ್ವ ಯೋಚನೆ ಕಿಂಚಿತ್ತೂ ಇಲ್ಲ; ಅಮ್ಮ ಕೈಕೊಳಲ್ಕಿದು ಕಾಲಂ ದಲ್ = ಅಯ್ಯಾ, ಸಮ್ಯಕ್ತ್ವವನ್ನು ಕೈಕೊಳ್ಳಲು ಇದು ಸೂಕ್ತ ಕಾಲ ಅಲ್ಲವೇ?

**ಗದ್ಯಾನುಸರಣ:** 'ಜಯವರ್ಮನಾಗಿದ್ದ ಜನ್ಮದಿಂದೀಚೆಗೆ ನಿನ್ನಲ್ಲಿ ಭೋಗದ ಆಸೆ ತೀವ್ರವಾಗಿದೆ; ನಿನ್ನ ಮನಸ್ಸಿನಲ್ಲಿ ಸಮ್ಯಕ್ತ್ವ ಯೋಚನೆ ಕಿಂಚಿತ್ತೂ ಇಲ್ಲ; ಅಯ್ಯಾ, ಸಮ್ಯಕ್ತ್ವವನ್ನು ಕೈಕೊಳ್ಳಲು ಇದು ಸೂಕ್ತ ಕಾಲ ಅಲ್ಲವೇ?'

**ವಿಶೇಷ ವಿಚಾರ:** ಸಮ್ಯಕ್ತ್ವ = ಧರ್ಮದ ಬಗೆಗಿನ ಅಚಲ ನಂಬಿಕೆ; ಆರು ದ್ರವ್ಯಗಳು, ಪಂಚಾಸ್ತಿಕಾಯ ಮತ್ತು ನವಪದಾರ್ಥಗಳ ಬಗ್ಗೆ ಜಿನೇಂದ್ರನ ಉಪದೇಶದಂತೆ ಪಡೆಯುವ ತಿಳಿವಳಿಕೆ.

ಘನಮಿಥ್ಯಾತ್ವದವಾನಳ
ಪಿನದ್ಧಜೀವಕ್ಕೆ ದೃಷ್ಟಿಮೋಹಪ್ರವಿನಾ
ಶನಮಿಲ್ಲದಂದು ಪುಟ್ಟದು
ಮನದೊಳ್ ಸ್ವರ್ಮೋಕ್ಷಸಾಧನಂ ಸಮ್ಯಕ್ತ್ವಂ ೫೨

**ಪದವಿಭಾಗ-ಅನ್ವಯ-ಅರ್ಥ:** ಘನಮಿಥ್ಯಾತ್ವದವಾನಳಪಿನದ್ಧಜೀವಕ್ಕೆ = ಗಾಢವಾದ ಮಿಥ್ಯಾತ್ವದ ಕಾಳ್ಗಿಚ್ಚಿನಲ್ಲಿ ಸಿಲುಕಿದ ಜೀವಕ್ಕೆ, ದೃಷ್ಟಿಮೋಹಪ್ರವಿನಾಶನಂ + ಇಲ್ಲದಂದು = ದೃಷ್ಟಿ ಮೋಹವು ನಾಶವಾಗದಿದ್ದರೆ, ಸ್ವರ್ಮೋಕ್ಷಸಾಧನಂ ಸಮ್ಯಕ್ತ್ವಂ ಮನದೊಳ್ ಪುಟ್ಟದು = ಮೋಕ್ಷಸಾಧನವಾದ ಸಮ್ಯಕ್ತ್ವವು ಮನಸ್ಸಿನಲ್ಲಿ ಹುಟ್ಟುವುದಿಲ್ಲ.

**ಗದ್ಯಾನುಸರಣ:** 'ಗಾಢವಾದ ಮಿಥ್ಯಾತ್ವದ ಕಾಳ್ಗಿಚ್ಚಿನಲ್ಲಿ ಸಿಲುಕಿದ ಜೀವಕ್ಕೆ, ದೃಷ್ಟಿ ಮೋಹವು ನಾಶವಾಗದ ಹೊರತು ಮೋಕ್ಷಸಾಧನವಾದ ಸಮ್ಯಕ್ತ್ವವು ಹುಟ್ಟುವುದಿಲ್ಲ.'

**ವಿಶೇಷ ವಿಚಾರ:** ಮಿಥ್ಯಾತ್ವ = ದರ್ಶನ ಮೋಹನೀಯದಲ್ಲಿ ಒಂದು; ನಿಜವಾದ ತತ್ವಜ್ಞಾನವನ್ನು ನಂಬದಿರುವುದು; ಇದರಲ್ಲಿ ವಿಪರೀತ, ಏಕಾಂತ, ವಿನಯ, ಸಂಶಯ, ಅಜ್ಞಾನ ಎಂಬ ಐದು ಬಗೆಗಳು.

ದೊರೆಕೊಳೆ ಕಾಲಲಬ್ಧಿ ಬಗೆದಂತಿರೆ ಕೂಡೆ ಗುರೂಪದೇಶಮಾ
ವರಿಸೆ ಜಿನೇಂದ್ರಭಕ್ತಿ ಪೊಜಪೊಣ್ಮೆ ದಯಾರಸಮಿಂತು ನಾಡೆಯುಂ
ಪರಿಕರದಿಂ ಮನಕ್ಕಜಿವು ಸಾರೆ ಭವಾಬ್ಧಿತಟಂ ಸಮೀಪಮಾ
ಗಿರೆ ದೊರೆಕೊಂಡ ದೃಷ್ಟಿವಿಭವಂ ಕಳೆಗುಂ ಖಳಕರ್ಮಬಂಧಮಮಂ ೫೩

**ಪದವಿಭಾಗ-ಅನ್ವಯ-ಅರ್ಥ:** ಕಾಲಲಬ್ಧಿ ದೊರೆಕೊಳೆ = ಕಾಲಬ್ಧಿಯುಂಟಾಗಲು, ಗುರೂಪದೇಶಂ ಬಗೆದಂತಿರೆ ಕೂಡೆ = ಗುರುವಿನ ಉಪದೇಶವು ಅಂದುಕೊಂಡಂತೆ ದೊರಕಲು, ಜಿನೇಂದ್ರಭಕ್ತಿ ಆವರಿಸೆ = ಜಿನನ ಬಗೆಗಿನ ಭಕ್ತಿ ಆವರಿಸಿರಲು, ದಯಾರಸಂ ಪೊಜಪೊಣ್ಮೆ = ದಯಾರಸವು ಉಕ್ಕಲು, ಇಂತು ನಾಡೆಯುಂ ಪರಿಕರದಿಂ = ಹೀಗೆ ಎಲ್ಲ ಸಾಧನಸಂಪತ್ತಿನಿಂದ, ಮನಕ್ಕಜಿವು ಸಾರೆ = ಮನಸ್ಸಿಗೆ ಜ್ಞಾನವುಂಟಾಗಲು, ಭವಾಬ್ಧಿತಟಂ ಸಮೀಪಮಾಗಿರೆ = ಸಂಸಾರಸಾಗರದ ದಡದ ಹತ್ತಿರ ಬಂದಿರಲು, ದೊರೆಕೊಂಡ ದೃಷ್ಟಿವಿಭವಂ ಖಳಕರ್ಮಬಂಧಮಮಂ ಕಳೆಗುಂ = ಲಭ್ಯವಾಗುವ ದೃಷ್ಟಿವಿಭವವು ದುಷ್ಟ ಕರ್ಮಬಂಧವನ್ನು ಹರಿಯುತ್ತದೆ.

**ಗದ್ಯಾನುಸರಣ:** ಕಾಲಲಬ್ಧಿಯುಂಟಾಗಬೇಕು, ಗುರುವಿನ ಉಪದೇಶವು ಅಂದುಕೊಂಡಂತೆ ದೊರಕಬೇಕು, ಜಿನನ ಬಗೆಗಿನ ಭಕ್ತಿ ಆವರಿಸಬೇಕು, ದಯಾರಸವು ಉಕ್ಕಬೇಕು – ಹೀಗೆ ಈ ಎಲ್ಲ ಸಾಧನಸಂಪತ್ತಿನಿಂದ ಮನಸ್ಸಿಗೆ ಜ್ಞಾನವುಂಟಾಗುತ್ತದೆ; ಸಂಸಾರಸಾಗರದ ದಡದ ಹತ್ತಿರ ಬಂದಿದ್ದರೆ, ಲಭ್ಯವಾಗುವ ಇಂಥ ದೃಷ್ಟಿವಿಭವವು ದುಷ್ಟ ಕರ್ಮಬಂಧವನ್ನು ಹರಿಯುತ್ತದೆ.

**ವಿಶೇಷ ವಿಚಾರ:** ಕಾಲಲಬ್ಧಿ = ಕಾಲ, ಕರಣ, ಉಪದೇಶ, ಉಪಶಮ, ಮತ್ತು ಪ್ರಾಯೋಜ್ಯ ಎಂಬ ಲಬ್ಧಿಪಂಚಕಗಳಲ್ಲಿ ಒಂದು; ಸಮ್ಯಕ್ತ್ವವನ್ನು ಪಡೆಯಲು ಪಕ್ವವಾದ ಕಾಲ ಬರುವುದು. ಈ ಪದ್ಯದಲ್ಲಿ ಇವುಗಳನ್ನು ಕಾಲಲಬ್ಧಿ, ಗುರೂಪದೇಶ, ಜಿನೇಂದ್ರಭಕ್ತಿ, ದಯಾರಸ ಮತ್ತು ಜ್ಞಾನ ಎಂದು ಹೇಳಿದೆ.

**ಸಮವಾಯಮಪ್ಪುದಲ್ತೆಂ**
**ದು ಮನಂ ಬಸಮಾಡಿ ದೋಷವಿರಹಿತನಾಪ್ತಂ**
**ಕ್ರಮದಾಪ್ತನೆ ಪೇೞ್ದುದದಾ**
**ಗಮುವಾಗಮುದರ್ಥವಾವುದದುವೆ ಪದಾರ್ಥಂ** ೫೪

**ಪದವಿಭಾಗ–ಅನ್ವಯ–ಅರ್ಥ:** ಸಮವಾಯಮಪ್ಪುದಲ್ತು + ಎಂದು ಮನಂ ಬಸಮಾಡಿ ದೋಷವಿರಹಿತನ್ + ಆಪ್ತಂ = ತನ್ನಿಂದ ಬೇರ್ಪಡಿಸಲಾದಂತೆ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ದೋಷರಹಿತನಾಗುವವನು ಆಪ್ತ; ಕ್ರಮದೆ + ಆಪ್ತನೆ ಪೇೞ್ದುದು + ಅದು + ಆಗಮಂ = ಆಪ್ತನು ಕ್ರಮವಾಗಿ ಹೇಳಿದುದೇ ಆಗಮ; ಆಗಮದ + ಅರ್ಥಂ + ಆವುದು + ಅದುವೆ ಪದಾರ್ಥಂ = ಆಗಮದ ಅರ್ಥವು ಯಾವುದೋ ಅದೇ ಪದಾರ್ಥ.

**ಗದ್ಯಾನುಸರಣ:** ತನ್ನಿಂದ ಬೇರ್ಪಡಿಸಲಾದಂತೆ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ದೋಷರಹಿತನಾಗುವವನು ಆಪ್ತ; ಆಪ್ತನು ಕ್ರಮವಾಗಿ ಹೇಳಿದುದೇ ಆಗಮ; ಆಗಮದ ಅರ್ಥವು ಯಾವುದೋ ಅದೇ ಪದಾರ್ಥ.

**ಪರಮೋಪಶಮಂ ಧರ್ಮಾ**
**ನುರಾಗಮನುಕಂಪೆ ನೆಱೆದ ನಂಬುಗೆಯೆಂಬೀ**
**ಪರಮಜಿನಗದಿತಗುಣಪರಿ**
**ಕರದೊಳ್ ಕೂಡಿದುದೆ ನಿರುಪಮಂ ಸಮ್ಯಕ್ತ್ವಂ** ೫೫

**ಪದವಿಭಾಗ–ಅನ್ವಯ–ಅರ್ಥ:** ಪರಮ + ಉಪಶಮಂ = ಶ್ರೇಷ್ಠವಾದ ಉಪಶಮ, ಧರ್ಮ + ಅನುರಾಗಂ + ಅನುಕಂಪೆ = ಧರ್ಮದ ಬಗೆಗಿನ ಪ್ರೀತಿ

ಅನುಕಂಪೆ, ನೆಜಿದ ನಂಬುಗೆ = ಪೂರ್ಣ ನಂಬಿಕೆ., ಎಂಬೀ ಪರಮಜಿನಗದಿತ ಗುಣಪರಿಕರದೊಳ್ ಕೂಡಿದುದೆ ನಿರುಪಮಂ ಸಮ್ಯಕ್ತ್ವಂ = ಎನ್ನುವ ಈ ಪರಮ ಜಿನನು ಹೇಳಿದ ಪರಿಕರಗಳಿಂದ ಕೂಡಿರುವುದೇ ಸಮ್ಯಕ್ತ್ವ

**ಗದ್ಯಾನುಸರಣ:** ಶ್ರೇಷ್ಠವಾದ ಉಪಶಮ, ಧರ್ಮದ ಬಗೆಗಿನ ಪ್ರೀತಿ, ಅನುಕಂಪೆ, ಪೂರ್ಣ ನಂಬಿಕೆ. – ಎನ್ನುವ ಪರಮ ಜಿನನು ಹೇಳಿದ ಈ ಪರಿಕರಗಳಿಂದ ಕೂಡಿರುವುದೇ ಸಮ್ಯಕ್ತ್ವ

**ಜೀವಾದಿನವಪದಾರ್ಥದೊ**
**ಳಾವಗಮಟ್ಟಿಯನೆ ಮಾಡು ಮೂಢತ್ರಯದೊಳ್**
**ಭಾವಮನೆ ಬಿಸುಡು ಬೆಳಗುಗು**
**ಮೀ ವಿಧದಿಂ ನೆಗಟ್ಟೆ ನಿನ್ನ ದರ್ಶನರತ್ನಂ** ೫೬

**ಪದವಿಭಾಗ–ಅನ್ವಯ–ಅರ್ಥ:** ಜೀವಾದಿನವಪದಾರ್ಥದೊಳ್ = ಜೀವವೇ ಮೊದಲಾದ ನವಪದಾರ್ಥಗಳಲ್ಲಿ, ಆವಗಂ + ಅಟ್ಟಿಯನೆ ಮಾಡು = ಸದಾ ಪ್ರೀತಿಯನ್ನು ಹೊಂದಿರು, ಮೂಢತ್ರಯದೊಳ್ ಭಾವಮನೆ ಬಿಸುಡು = ನಿನ್ನ ಭಾವನೆಯಲ್ಲಿ ಮೂಢತ್ರಯವನ್ನು ತೊರೆದುಬಿಡು, ಈ ವಿಧದಿಂ ನಿನ್ನ ದರ್ಶನರತ್ನಂ ನೆಗಟ್ಟೆ ಬೆಳಗುಗುಂ = ಈ ರೀತಿಯಲ್ಲಿ ನಿನ್ನ ದರ್ಶನರತ್ನ ಅಥವಾ ಸಮ್ಯಗ್ದರ್ಶನವು ಹೊಳೆದು ಬೆಳಗುತ್ತದೆ.

**ಗದ್ಯಾನುಸರಣ:** ಜೀವವೇ ಮೊದಲಾದ ನವಪದಾರ್ಥಗಳಲ್ಲಿ ಸದಾ ಪ್ರೀತಿಯನ್ನು ಹೊಂದಿರು, ನಿನ್ನ ಭಾವನೆಯಲ್ಲಿ ಮೂಢತ್ರಯವನ್ನು ತೊರೆದುಬಿಡು – ಈ ರೀತಿಯಲ್ಲಿ ನಿನ್ನ ದರ್ಶನರತ್ನ ಅಥವಾ ಸಮ್ಯಗ್ದರ್ಶನವು ಹೊಳೆದು ಬೆಳಗುತ್ತದೆ.

**ಜಿನಮತಪದಾರ್ಥಶಂಕಾ**
**ಪನಯನಮುಂ ಭೋಗಕಾಂಕ್ಷೆಯೊಳ್ ವಿಮುಖತೆಯುಂ**
**ಮುನಿಜನತನುಮಳವಿಚಿಕಿ**
**ತ್ಸನವರ್ಜನಮುಂ ತ್ರಿಮೂಢತಾನಿರಸನಮುಂ** ೫೭

**ಪದವಿಭಾಗ–ಅನ್ವಯ–ಅರ್ಥ:** ಜಿನಮತಪದಾರ್ಥಶಂಕಾ + ಅಪನಯನಮುಂ = ಜೈನಮತದಲ್ಲಿನ ಸಂದೇಹ ನಿವಾರಣೆಯೂ, ಭೋಗಕಾಂಕ್ಷೆಯೊಳ್ ವಿಮುಖತೆಯುಂ = ಭೋಗದ ಬಯಕೆಯಿಂದ ದೂರವಾಗುವುದೂ, ಮುನಿಜನತನುಮಳವಿಚಿಕಿತ್ಸನವರ್ಜನಮುಂ = ಮುನಿಗಳ

ದೇಹದ ಕೊಳಕಿನ ಬಗೆಗಿನ ಸಂಶಯವನ್ನು ತೊರೆಯುವುದು, ತ್ರಿಮೂಢತಾನಿರಸನಮುಂ = ತ್ರಿಮೂಢಗಳನ್ನು ದೂರೀಕರಿಸುವುದೂ

**ಗದ್ಯಾನುಸರಣ:** ಜೈನಮತದ ಬಗೆಗಿನ ಸಂದೇಹ ನಿವಾರಣೆಂ, ಭೋಗದ ಬಯಕೆಯಿಂದ ದೂರವಾಗುವುದು, ಮುನಿಗಳ ದೇಹದ ಕೊಳಕಿನ ಬಗೆಗಿನ ಸಂಶಯವನ್ನು ತೊರೆಯುವುದು, ತ್ರಿಮೂಢಗಳನ್ನು ದೂರೀಕರಿಸುವುದು,

**ಉಪಗೂಹನಮುಂ ಸದ್ಧ**
**ರ್ಮಪಥಚ್ಯುತಭವ್ಯಸಂಹತಿಸ್ಥಾಪನಮುಂ**
**ವಿಪುಳಗುಣವತ್ಸಳಮು**
**ಮಪಗತಮಳಜೈನಶಾಸನೋದ್ಭಾಸಮುಂ** ೫೮

**ಪದವಿಭಾಗ–ಅನ್ವಯ–ಅರ್ಥ:** ಉಪಗೂಹನಮುಂ = ಉಪಗೂಹನವೂ, ಸದ್ಧರ್ಮಪಥಚ್ಯುತಭವ್ಯಸಂಹತಿಸ್ಥಾಪನಮುಂ = ಜಿನಧರ್ಮದ ದಾರಿಯಿಂದ ದೂರವಾದ ಜೈನಸಮುದಾಯವನ್ನು ಸರಿದಾರಿಯಲ್ಲಿ ನೆಲೆಗೊಳಿಸುವುದು, ವಿಪುಳಗುಣವತ್ಸಳಮುಂ = ಮಹಾ ಗುಣಗಳ ಬಗ್ಗೆ ಮಮತೆ, ಅಪಗತಮಳಜೈನಶಾಸನ + ಉದ್ಭಾಸಮುಂ = ದೋಷಮುಕ್ತವಾದ ಜೈನನಿಯಮಗಳನ್ನು ಬೆಳಗುವುದು

**ಗದ್ಯಾನುಸರಣ:** ಉಪಗೂಹನವೂ (ತನ್ನಲ್ಲಿ ಸದ್ಗುಣಗಳನ್ನು ಬೆಳೆಸಿಕೊಂಡು ಸದ್ಧರ್ಮಿಗಳ ದೋಷವನ್ನು ಮುಚ್ಚುವುದು), ಜಿನಧರ್ಮದ ದಾರಿಯಿಂದ ದೂರವಾದ ಜೈನಸಮುದಾಯವನ್ನು ಸರಿದಾರಿಯಲ್ಲಿ ನೆಲೆಗೊಳಿಸುವುದು, ಮಹಾ ಗುಣಗಳ ಬಗ್ಗೆ ಮಮತೆ, ದೋಷಮುಕ್ತವಾದ ಜೈನನಿಯಮಗಳ ಬೆಳಗುವುದು,

**ವ। ಎಂದು ಪೇೞ್ದೀಯೆಂಟುಗುಣಂಗಳುಂ ಸಮ್ಯಗ್ದರ್ಶನಾವಯವಂಗಳ್**

**ಅರ್ಥ:** ಎಂದು ಪೇೞ್ದ + ಈ + ಎಂಟುಗುಣಂಗಳುಂ ಸಮ್ಯಗ್ದರ್ಶನ + ಅವಯವಂಗಳ್ = ಎಂಬ ಈ ಎಂಟು ಸಮ್ಯಗ್ದರ್ಶನದ ಅಂಗಗಳು.

**ವಿಶೇಷ ವಿಚಾರ:** ನಿಶ್ಶಂಕೆ ನಿಷ್ಕಾಂಕ್ಷೆ ನಿರ್ವಿಚಿಕಿತ್ಸೆ ಅಮೂಢದೃಷ್ಟಿತ್ವ ಉಪಗೂಹನ ಸ್ಥಿತಿಕರಣ ವಾತ್ಸಲ್ಯ ಧರ್ಮಪ್ರಭಾವನೆ ಎಂಬಿವು ಸಮ್ಯಗ್ದರ್ಶನದ ಅವಯವಗಳು ಅಥವಾ ಅಂಗಗಳು; ಇವುಗಳನ್ನೇ ಕವಿ ಈ ಮೇಲಿನ ಎರಡು ಪದ್ಯಗಳಲ್ಲಿ ವಿವರಿಸುತ್ತಿರುವುದು.

ಇವಱಿಂ ಸಮ್ಯಗ್ದರ್ಶನ
ಮವಶ್ಯಮುಜ್ಜ್ವಳಿಕುಮದುವೆ ಸಮ್ಯಜ್ಞಾನ
ಕ್ಕವಕಾಶಮಕ್ಕುಮಂತದು
ಕವಲ್ತು ಸಮ್ಯಕ್ಚರಿತ್ರಮಂ ಪ್ರಕಟಿಸುಗುಂ ೫೯

ಪದವಿಭಾಗ-ಅನ್ವಯ-ಅರ್ಥ: ಇವಱಿಂ = ಇವುಗಳಿಂದ, ಸಮ್ಯಗ್ದರ್ಶನಂ + ಅವಶ್ಯಂ + ಉಜ್ಜ್ವಳಿಕುಂ = ಸಮ್ಯಗ್ದರ್ಶನವು ಖಂಡಿತವಾಗಿ ಬೆಳಗುತ್ತದೆ; ಅದುವೆ ಸಮ್ಯಜ್ಞಾನಕ್ಕೆ + ಅವಕಾಶಂ + ಅಕ್ಕುಂ = ಅದು ಸಮ್ಯಜ್ಞಾನಕ್ಕೆ ಎಡೆಮಾಡಿ ಕೊಡುತ್ತದೆ; ಅಂತು + ಅದು ಕವಲ್ತು ಸಮ್ಯಕ್ಚರಿತ್ರಮಂ ಪ್ರಕಟಿಸುಗುಂ = ಹೀಗೆ ಅದು ಕವಲೊಡೆದು ಸಮ್ಯಕ್ಚಾರಿತ್ರವನ್ನು ಹೊಮ್ಮಿಸುತ್ತದೆ.

ಗದ್ಯಾನುಸರಣ: ಇವುಗಳಿಂದ ಸಮ್ಯಗ್ದರ್ಶನವು ಖಂಡಿತವಾಗಿ ಬೆಳಗುತ್ತದೆ; ಅದು ಸಮ್ಯಜ್ಞಾನಕ್ಕೆ ಎಡೆಮಾಡಿ ಕೊಡುತ್ತದೆ; ಅದು ಕವಲೊಡೆದು ಸಮ್ಯಕ್ಚಾರಿತ್ರವನ್ನು ಹೊಮ್ಮಿಸುತ್ತದೆ.

ಈ ಸಂಸಾರಾಂಭೋಧಿಯ
ನೀಸುವ ನಿನಗಿದುವೆ ನಾವೆ ತಡಿಗಾಣ್ಬೆಯನಾ
ಯಾಸದೊಳೆ ನಿನಗೆ ಮುಕ್ತಿ
ಪ್ರಾಸಾದಮನಡರಲಿದುವೆ ಸೋಪಾನಂಗಳ್ ೬೦

ಪದವಿಭಾಗ-ಅನ್ವಯ-ಅರ್ಥ: ಈ ಸಂಸಾರ + ಅಂಭೋಧಿಯನ್ + ಈಸುವ ನಿನಗೆ + ಇದುವೆ ನಾವೆ = ಈ ಸಂಸಾರವೆಂಬ ಸಮುದ್ರವನ್ನು ದಾಟಿ ದಡಸೇರಲು ಇದೇ ನಿನ್ನ ಸಹಾಯಕ್ಕೆ ಬರುವ ದೋಣಿ; ಅನಾಯಾಸದೊಳೆ ತಡಿ + ಕಾಣ್ಬೆ = ಕಷ್ಟವಿಲ್ಲದೆ ನೀನು ದಡವನ್ನು ಸೇರುತ್ತೀಯೆ; ಮುಕ್ತಿಪ್ರಾಸಾದಮನ್ + ಅಡರಲ್ + ಇದುವೆ ನಿನಗೆ ಸೋಪಾನಂಗಳ್ = ಮುಕ್ತಿ ಎಂಬ ಉಪ್ಪರಿಗೆಯ ಮೇಲಕ್ಕೆ ಹೋಗಲು ನಿನಗೆ ಇವು ಮೆಟ್ಟಿಲುಗಳು.

ಗದ್ಯಾನುಸರಣ: ಸಂಸಾರವೆಂಬ ಸಮುದ್ರವನ್ನು ದಾಟಿ ದಡಸೇರಲು ಇದೇ ನಿನ್ನ ಸಹಾಯಕ್ಕೆ ಬರುವ ದೋಣಿ; ಕಷ್ಟವಿಲ್ಲದೆ ನೀನು ದಡವನ್ನು ಸೇರುತ್ತೀಯೆ; ಮುಕ್ತಿ ಎಂಬ ಉಪ್ಪರಿಗೆಯ ಮೇಲಕ್ಕೆ ಹೋಗಲು ನಿನಗೆ ಇವು ಮೆಟ್ಟಿಲುಗಳು.

ಸೂಕ್ತಂ ಭವ್ಯಜನಪ್ರ
ವ್ಯಕ್ತಂ ಜೈನಾಗಮೋಕ್ತಮಿಂ ನಿನಗೆ ಮದೀ
ಯೋಕ್ತಮಿದೆರ್ದೆಯೊಳ್ ನೆಲಸುಗೆ
ಮುಕ್ತಿಶ್ರೀಹಾರವಿಭ್ರಮಂ ಸಮ್ಯಕ್ತ್ವಂ ೬೧

**ಪದವಿಭಾಗ-ಅನ್ವಯ-ಅರ್ಥ:** ಸೂಕ್ತಂ = ಶ್ರೇಷ್ಠ ಮಾತುಗಳೂ, ಭವ್ಯಜನಪ್ರವ್ಯಕ್ತಂ = ಭವ್ಯಜನರಿಗೆ ವೇದ್ಯವಾದುದೂ, ಜೈನಾಗಮ + ಉಕ್ತಂ = ಜಿನಾಗಮಗಳಲ್ಲಿ ಹೇಳಲಾಗಿರುವಂತಹುದೂ, ನಿನಗೆ ಮದೀಯ + ಉಕ್ತಂ = ನಿನಗೆ ನಾನು ಈಗ ಹೇಳುತ್ತಿರುವುದೂ, ಮುಕ್ತಿಶ್ರೀಹಾರವಿಭ್ರಮಂ ಇದು ಸಮ್ಯಕ್ತ್ವಂ = ಮುಕ್ತಿಲಕ್ಷ್ಮಿಯ ಹಾರದ ವೈಭವವಾದ ಈ ಸಮ್ಯಕ್ತ್ವವು, ಇಂ ಎರ್ದೆಯೊಳ್ ನೆಲಸುಗೆ = ಇನ್ನು ಹೃದಯದಲ್ಲಿ ನೆಲೆಗೊಳ್ಳಲಿ.

**ಗದ್ಯಾನುಸರಣ:** ಶ್ರೇಷ್ಠ ಮಾತುಗಳೂ, ಭವ್ಯಜನರಿಗೆ ವೇದ್ಯವಾದುದೂ, ಜಿನಾಗಮಗಳಲ್ಲಿ ಹೇಳಲಾಗಿರುವಂತದೂ, ನಿನಗೆ ನಾನು ಈಗ ಹೇಳುತ್ತಿರುವುದೂ, ಮುಕ್ತಿಲಕ್ಷ್ಮಿಯ ಹಾರದ ವೈಭವವೂ ಆದ ಈ ಸಮ್ಯಕ್ತ್ವವು ಇನ್ನು ಹೃದಯದಲ್ಲಿ ನೆಲೆಗೊಳ್ಳಲಿ.

**ಎಂದೆಂದೊಡಮ್ಮ ನೀನುಂ**
**ಸಂದೆಯಮಣಮಿಲ್ಲದಿದನೆ ನಂಬಿನಿತು ನೀ**
**ನೊಂದಿದ ನಾರೀರೂಪದ**
**ದಂದುಗದೊಳ್ ತೊಡರ್ದು ಬಿಡದೆ ನವೆಯುತ್ತಿರ್ಪೈ ೬೨**

**ಪದವಿಭಾಗ-ಅನ್ವಯ-ಅರ್ಥ:** ಎಂದು + ಎಂದೊಡೆ = ಎಂದು ಹೇಳಿ, ಅಮ್ಮ ನೀನುಂ ಸಂದೆಯಂ + ಅಣಂ + ಇಲ್ಲದೆ + ಇದನೆ ನಂಬು = ಅಯ್ಯಾ, ನೀನು ಸ್ವಲ್ಪವೂ ಅನುಮಾನವಿಲ್ಲದ ಹಾಗೆ ಇನ್ನು ಸಮ್ಯಕ್ತ್ವವನ್ನು ನಂಬಿಕೊ; ನೀನ್ ಒಂದಿದ ನಾರೀರೂಪದ ದಂದುಗದೊಳ್ ಇನಿತು ತೊಡರ್ದು ಬಿಡದೆ ನವೆಯುತ್ತಿರ್ಪೈ = ನೀನು ಕೂಡಿರುವ ಹೆಣ್ಣರೂಪಿನ ಈ ವ್ಯಸನದಲ್ಲಿ ಒಂದೇ ಸಮನೆ ನವೆಯುತ್ತಿದ್ದೀಯೆ.

**ಗದ್ಯಾನುಸರಣ:** ಎಂದು ಹೇಳಿ, 'ಅಯ್ಯಾ, ನೀನು ಸ್ವಲ್ಪವೂ ಅನುಮಾನವಿಲ್ಲದ ಹಾಗೆ ಇನ್ನು ಸಮ್ಯಕ್ತ್ವವನ್ನು ನಂಬಿಕೊ; ಹೆಣ್ಣರೂಪಿನ ಈ ವ್ಯಸನದಲ್ಲಿ ಒಂದೇ ಸಮನೆ ನೀನು ನವೆಯುತ್ತಿದ್ದೀಯೆ.

**ರಮಣೀಜಾತಿಯೊಳಲ್ತೆ ನಂಬಿದವರ್ಗಳ್ ಸಮ್ಯಕ್ತ್ವಮಂ ಪುಟ್ಟರಾ**
**ಱುಮಧೋಭೂಮಿಯೊಳಂತೆ ಮೂಱುಮಮರಾವಾಸಂಗಳೊಳ್‌ಪೇೞ್ವೊಡು**
**ತ್ತಮಸಮ್ಯಕ್ತ್ವಫಲಂ ದಗುಂತಿ ಮಗಳೇ ನೀನಿಂತಿದಂ ನಂಬನು**
**ಕ್ರಮದಿಂದಂ ದೊರೆವೆತ್ತ ಸಪ್ತಪರಮಸ್ಥಾನಂಗಳಂ ಪೊರ್ದುವೈ ೬೩**

**ಪದವಿಭಾಗ-ಅನ್ವಯ-ಅರ್ಥ:** ಸಮ್ಯಕ್ತ್ವಮಂ ನಂಬಿದವರ್ಗಳ್ ಆಱುಂ ರಮಣೀಜಾತಿಯೊಳ್ = ಸಮ್ಯಕ್ತ್ವವನ್ನು ನಂಬಿದವರಾರು ಯಾರೂ ಹೆಣ್ಣಾಗಿಯೂ, ಅಂತೆ ಅಧೋಭೂಮಿಯೊಳ್ = ಹಾಗೆಯೇ ನರಕದಲ್ಲಿಯೂ (ಹುಟ್ಟುವುದಿಲ್ಲ);

ಮೂಱುಂ + ಅಮರಾವಾಸಂಗಳೊಳ್ = (ಅಂತೆಯೇ) ಮೂರು ದೇವಲೋಕಗಳಲ್ಲಿಯೂ ಪುಟ್ಟರ್ ಅಲ್ತೆ = ಹುಟ್ಟುವುದಿಲ್ಲ ಅಲ್ಲವೇ; ಪೇೞ್ವೊಡೆ + ಉತ್ತಮಸಮ್ಯಕ್ತ್ವಫಲಂ ದಗುಂತಿ = ಹೀಗೆ ಸಮ್ಯಕ್ತ್ವದ ಫಲವು ಅಧಿಕವಾದದ್ದು; ಮಗಳೇ ನೀನಿಂತಿದಂ ನಂಬು = ಮಗಳೇ ಶ್ರೀಮತಿ, ನೀನು ಇದನ್ನು ನಂಬಿಕೊ; ದೊರೆವೆತ್ತ ಸಪ್ತಪರಮಸ್ಥಾನಂಗಳಂ ಅನುಕ್ರಮದಿಂದಂ ಪೊರ್ದುವೈ = ಒಂದಾದ ಮೇಲೊಂದರಂತೆ ನೀನು ಸಪ್ತಪರಮಸ್ಥಾನಗಳನ್ನು ಹೊಂದುತ್ತೀಯೆ.

**ಗದ್ಯಾನುಸರಣ:** 'ಸಮ್ಯಕ್ತ್ವವನ್ನು ನಂಬಿದವರಾರು ಯಾರೂ ಹೆಣ್ಣಾಗಿಯೂ, ನರಕದಲ್ಲಿಯೂ ಮೂರು ದೇವಲೋಕಗಳಲ್ಲಿಯೂ ಹುಟ್ಟುವುದಿಲ್ಲ; ಹೀಗೆ ಸಮ್ಯಕ್ತ್ವದ ಫಲವು ಅಧಿಕವಾದದ್ದು; ಆದ್ದರಿಂದ ಮಗಳೇ ಶ್ರೀಮತಿ, ನೀನು ಇದನ್ನು ನಂಬಿಕೊ; ಒಂದಾದ ಮೇಲೊಂದರಂತೆ ನೀನು ಶ್ರೇಷ್ಠವಾದ ಸಪ್ತಪರಮಸ್ಥಾನಗಳನ್ನು ಹೊಂದುತ್ತೀಯೆ.

**ವಿಶೇಷ ವಿಚಾರ:** ಹೆಣ್ಣಿನ ಬಗೆಗಿನ ಈ ಧೋರಣೆ ಪೂರ್ವಪುರಾಣದ್ದು; ನಾಲ್ಕು ಶ್ಲೋಕಗಳಲ್ಲಿ ಹೇಳಿರುವ ಈ ಮಾತನ್ನು (ಪೂಪು, ೯. ೧೪೩–೪೬) ಪಂಪ ಇಲ್ಲಿ ಸಂಗ್ರಹಿಸಿದ್ದಾನೆ; 'ಈ ರೀತಿಯ ಸಂಗ್ರಹಕಾರ್ಯದಲ್ಲಿ ಪಂಪನ ಅಸಮ್ಮತಿಯೂ ಆಂಶಿಕವಾಗಿ ಅಡಗಿದೆಯೋ ಇಲ್ಲವೋ ಎಂದು ಖಚಿತವಾಗಿ ಹೇಳುವುದು ಕಷ್ಟ' ಎಂದು ಬಸವರಾಜು ಹೇಳುತ್ತಾರೆ. ಪಂಪ ನವಜೈನನಾದುದರಿಂದ ತನ್ನ ಧರ್ಮದ ಪ್ರತಿ ಅಂಶವನ್ನೂ ನಂಬಿದ್ದಿರಬಹುದು. 'ಎನಿಸುಜ್ಜ್ವಳಮಾದೊಡೆ ಶಶಿಯ ತೇಜಂ ರವಿಯ ತೇಜಮಂ ಗೆಲ್ಗುಮೆ ಪೆಣ್ಣೆನಿತೊಳ್ಳಿದಳಾದೊಡೆ ಗಂಡಿನೊಳಾದ ಮಹಾಗುಣಂಗಳಂ ಗೆಲ್ದಪಳೇ' ಎಂದು ನಯಸೇನನು ಉದ್ಗರಿಸುವುದನ್ನಿಲ್ಲಿ ನೆನೆಯಬಹುದು.

**ವ।** ಎಂದತಿಪ್ರೀತಿಯಿಂ ಪ್ರೀತಿಂಕರಾಚಾರ್ಯರ್ ವಜ್ರಜಂಘಾರ್ಯಂಗಂ ಶ್ರೀಮತ್ಯಾರ್ಯೆಗಂ ಶಾರ್ದೂಲಾದಿಗಳ್ಗಂ ಮುಕ್ತಿಸಾಮ್ರಾಜ್ಯ ಪದವಿಗಿದುವೆ ಯುವರಾಜ ಚಿಹ್ನಮೆನಿಸಿದ ಸೂತ್ರಾನುಗತಮಪ್ಪ ಸಮ್ಯಗ್ದರ್ಶನವೆಂಬ ಕಂಠಿಕೆಯುಂ ಕಂಠಿಕಾಬಂಧನಮುಂ ಮಾಡಿ,

**ಪದವಿಭಾಗ–ಅನ್ವಯ–ಅರ್ಥ:** ಪ್ರೀತಿಂಕರಾಚಾರ್ಯರ್ = ಪ್ರೀತಿಂಕರ ಭಟ್ಟಾರಕರು, ವಜ್ರಜಂಘ + ಆರ್ಯಂಗಂ ಶ್ರೀಮತಿ + ಆರ್ಯೆಗಂ ಶಾರ್ದೂಲಾದಿಗಳ್ಗಂ ಎಂದು = ವಜ್ರಜಂಘ–ಶ್ರೀಮತಿಯರಿಗೂ ಹುಲಿ ಮುಂತಾದ ನಾಲ್ಕು ಪ್ರಾಣಿಗಳಿಗೂ ಹೇಳಿ, ಮುಕ್ತಿಸಾಮ್ರಾಜ್ಯಪದವಿಗಿದುವೆ ಯುವರಾಜ ಚಿಹ್ನಂ + ಎನಿಸಿದ = ಮುಕ್ತಿಸಾಮ್ರಾಜ್ಯದ ಒಡೆತನಕ್ಕೆ ಮೊದಲ ಹಂತ ಎನ್ನಿಸಿಕೊಂಡ,

ಸೂತ್ರಾನುಗತಮಪ್ಪ ಸಮ್ಯಗ್ದರ್ಶನವೆಂಬ ಕಂಠಿಕೆಯಂ = ಸೂತ್ರಾನುಗತವಾದ ಸಮ್ಯಗ್ದರ್ಶನ ಎಂಬ ಕಂಠೀಹಾರವನ್ನು, ಅತಿಪ್ರೀತಿಯಿಂ ಕಂಠಿಕಾಬಂಧನಮಂ ಮಾಡಿ = ಪ್ರೀತಿಯಿಂದ (ಕತ್ತಿನಲ್ಲಿ) ಕಟ್ಟಿದರು,

**ಗದ್ಯಾನುಸರಣ:** ಪ್ರೀತಿಂಕರ ಭಟ್ಟಾರಕರು, ವಜ್ರಜಂಘ-ಶ್ರೀಮತಿಯರಿಗೂ ಹುಲಿ ಮುಂತಾದ ನಾಲ್ಕು ಪ್ರಾಣಿಗಳಿಗೂ ಹೇಳಿ, ಮುಕ್ತಿಸಾಮ್ರಾಜ್ಯದ ಒಡೆತನಕ್ಕೆ ಮೊದಲ ಹಂತ ಎನ್ನಿಸಿಕೊಂಡ ಸೂತ್ರಾನುಗತವಾದ ಸಮ್ಯಗ್ದರ್ಶನ ಎಂಬ ಕಂಠೀಹಾರವನ್ನು, ಪ್ರೀತಿಯಿಂದ (ಕತ್ತಿನಲ್ಲಿ) ಕಟ್ಟಿದರು.

**ವಿಶೇಷ ವಿಚಾರ:** ಸೂತ್ರಾನುಗತ = ಶಾಸ್ತ್ರೋಕ್ತ ರೀತಿಯಲ್ಲಿ.

**ಕರ್ಶನವಘಸಮಿತಿಗೆ ಸ**
**ದ್ದರ್ಶನದಿಂದಪ್ಪುದಕ್ಕೆ ನಿಮಗಕ್ಕೆ ಪುನ**
**ರ್ದರ್ಶನಮೆಂದಾರಾಧಿತ**
**ದರ್ಶನರಾ ಚಾರಣರ್ ನಭಕ್ಕೊಗೆದರ್** ೬೪

**ಪದವಿಭಾಗ-ಅನ್ವಯ-ಅರ್ಥ:** ಸದ್ದರ್ಶನದಿಂದ ಅಘಸಮಿತಿಗೆ ಕರ್ಶನ ಅಪ್ಪುದಕ್ಕೆ = ಸದ್ದರ್ಶನದಿಂದ ಪಾಪಸಮೂಹಕ್ಕೆ ವಿನಾಶವುಂಟಾಗಲು, ನಿಮಗಕ್ಕೆ ಪುನರ್ದರ್ಶನಂ = ನಿಮಗೆ ಪುನರ್ದರ್ಶನವಾಗಲಿ, ಎಂದು + ಆರಾಧಿತದರ್ಶನರ್ + ಆ ಚಾರಣರ್ ನಭಕ್ಕೆ ಒಗೆದರ್ = ಎಂದು ದರ್ಶನದ ಆರಾಧಕರಾದ ಚಾರಣಮುನಿದ್ವಯರು ಆಗಸಕ್ಕೆ ಹಾರಿದರು.

**ಗದ್ಯಾನುಸರಣ:** 'ಸದ್ದರ್ಶನದಿಂದ ಪಾಪಸಮೂಹಕ್ಕೆ ವಿನಾಶವುಂಟಾಗಿ ನಿಮಗೆ ಪುನರ್ದರ್ಶನವಾಗಲಿ' ಎಂದು ದರ್ಶನದ ಆರಾಧಕರಾದ ಚಾರಣಮುನಿದ್ವಯರು ಆಗಸಕ್ಕೆ ಹಾರಿದರು.

**ಆ ದಂಪತಿಗಳ್ ಜೊಮ್ಮನೆ**
**ವೋದಂತಿರ್ದವರ ಗಗನತಳಗಮನದೊಳಂ**
**ದಾದ ಬೆಡಂಗಂ ನೋಡಿದ**
**ರಾದರದಿಂ ತಮ್ಮ ಕಣ್ಬೊಲಂಗಟಿವಿನಂ** ೬೫

**ಪದವಿಭಾಗ-ಅನ್ವಯ-ಅರ್ಥ:** ಜೊಮ್ಮನೆವೋದಂತಿರ್ದು ಆ ದಂಪತಿಗಳ್ = ಜೋಮು ಹಿಡಿದವರ ಹಾಗೆ ಶ್ರೀಮತಿ-ವಜ್ರಜಂಘರು, ತಮ್ಮ ಕಣ್ಬೊಲಂ + ಕಗಟಿವಿನಂ = ತಮ್ಮ ನೋಟದಿಂದ ಮರೆಯಾಗುವವರೆಗೂ, ಅವರ ಗಗನತಳಗಮನದೊಳ್ + ಅಂದು + ಆದ ಬೆಡಂಗಂ = ಅವರು

ಆಗಸಮಾರ್ಗದಲ್ಲಿ ಸೇರಿಹೋಗುವವರೆಗೂ, ಆದರದಿಂ ನೋಡಿದರ್ = ಗೌರವದಿಂದ ನೋಡಿದರು.

**ಗದ್ಯಾನುಸರಣ:** ಜೋಮು ಹಿಡಿದವರ ಹಾಗೆ ಶ್ರೀಮತಿ-ವಜ್ರಜಂಘರು ತಮ್ಮ ನೋಟದಿಂದ ಮರೆಯಾಗಿ ಅವರು ಆಗಸಮಾರ್ಗದಲ್ಲಿ ಸೇರಿಹೋಗುವುದನ್ನು ಗೌರವದಿಂದ ನೋಡಿದರು.

**ವ।** **ನೋಡಿ ತಮ್ಮ ಮನದೊಳವರುಪದೇಶಪರಾನುಗ್ರಹಬುದ್ಧಿಯುಂ ಸನ್ಮಾರ್ಗದರ್ಶನ ಕೌಶಲಮುಂ ನಿಸರ್ಗಸ್ನೇಹಸಂಬಂಧಮುಮಂತರಂಗದೊಳ್ ತಣ್ಮಲೆಯೆ,**

**ಪದವಿಭಾಗ-ಅನ್ವಯ-ಅರ್ಥ:** ನೋಡಿ = ಹಾಗೆ ನಿಟ್ಟಿಸಿ, ಅವರ + ಉಪದೇಶಪರ + ಅನುಗ್ರಹಬುದ್ಧಿಯುಂ = ಚಾರಣರ ಉಪದೇಶದ ರೀತಿಯ ಅನುಗ್ರಹವನ್ನೂ, ಸನ್ಮಾರ್ಗದರ್ಶನಕೌಶಲಮುಂ = ಸರಿದಾರಿಯನ್ನು ತೋರಿಸುವ ಅವರ ಕುಶಲತೆಯನ್ನೂ, ನಿಸರ್ಗಸ್ನೇಹಸಂಬಂಧಮುಂ = ಸಹಜ ಪ್ರೀತಿವಾತ್ಸಲ್ಯಗಳನ್ನೂ, ತಮ್ಮ ಮನದೊಳ್ ಅಂತರಂಗದೊಳ್ ತಣ್ಮಲೆಯೆ = ತಮ್ಮ ಮನಸ್ಸು ಮತ್ತು ಹೃದಯಗಳಲ್ಲಿ ನೆಲೆಗೊಳ್ಳಲು

**ಗದ್ಯಾನುಸರಣ:** ಹಾಗೆ ನಿಟ್ಟಿಸಿದರು; ಅಷ್ಟರಲ್ಲಿ ಚಾರಣರ ಉಪದೇಶದ ಮೂಲಕ ಅನುಗ್ರಹ ಮಾಡಿದ ಬಗೆ, ಸರಿದಾರಿಯನ್ನು ತೋರಿಸುವ ಅವರ ಕುಶಲತೆ, ಅವರ ಸಹಜ ಪ್ರೀತಿವಾತ್ಸಲ್ಯಗಳು ಅವರ ಮನಸ್ಸು ಮತ್ತು ಹೃದಯಗಳಲ್ಲಿ ನೆಲೆಗೊಂಡುವು.

**ಪರಮತಪೋಧನರ್ ಪುಗುವರೆಂಬುದಸಂಭವಮಲ್ತೆ ಭೋಗಭೂ**
**ಚರರ ನಿವಾಸಮಂ ಕಿಜಿದು ನಮ್ಮ ಪುರಾತನಪುಣ್ಯಮಿಲ್ಲಿಗಂ**
**ಬರಿಸಿದುದೀ ಮುನೀಶ್ವರನೀಯುಪದೇಶದಿನಾದುದುಗ್ರಸಂ**
**ಸರಣಮಹಾಸಮುದ್ರತರಣಂ ಚರಣಂ ಶರಣಂ ಮುನೀಂದ್ರರಾ ೬೬**

**ಪದವಿಭಾಗ-ಅನ್ವಯ-ಅರ್ಥ:** ಭೋಗಭೂಚರರ ನಿವಾಸಮಂ = ಭೋಗಭೂಮಿಯಲ್ಲಿನವರ ಮನೆಗಳನ್ನು, ಪರಮತಪೋಧನರ್ ಪುಗುವರೆಂಬುದು + ಅಸಂಭವಂ + ಅಲ್ತೆ = ಪರಮತಪಸ್ವಿಗಳು ಹೊಗುವರೆಂಬುದು ಅಸಂಭಾವ್ಯ; ನಮ್ಮ ಕಿಜಿದು ಪುರಾತನಪುಣ್ಯಂ + ಇಲ್ಲಿಗಂ ಬರಿಸಿದುದು = ಹಿಂದಿನ ಜನ್ಮದ ನಮ್ಮ ಅಲ್ಪ ಪುಣ್ಯವು ಅವರನ್ನು ಬರುವ ಹಾಗೆ ಮಾಡಿತು; ಈ ಮುನೀಶ್ವರನ + ಈ + ಉಪದೇಶದಿನ್ ಉಗ್ರಸಂಸರಣಮಹಾಸಮುದ್ರತರಣಂ ಆದುದು = ಈ

ಮುನಿಶ್ರೇಷ್ಠರ ಉಪದೇಶದಿಂದ ಭಯಂಕರವಾದ ಸಂಸಾರಸಾಗರವನ್ನು ದಾಟಲು ಸಾಧ್ಯವಾಯಿತು; ಮುನೀಂದ್ರರಾ ಚರಣಂ ಶರಣಂ = ಮುನಿವರ್ಯರ ಪಾದಗಳೆ ನಮಗೆ ಶರಣು.

**ಗದ್ಯಾನುಸರಣ:** ಭೋಗಭೂಮಿಯಲ್ಲಿರುವವರ ಮನೆಗಳನ್ನು ಪರಮತಪಸ್ವಿಗಳು ಹೊಗುವರೆಂಬುದು ಅಸಂಭಾವ್ಯ; ಹಿಂದಿನ ಜನ್ಮದ ನಮ್ಮ ಅಲ್ಪ ಪುಣ್ಯವು ಅವರನ್ನು ಬರುವ ಹಾಗೆ ಮಾಡಿತು; ಈ ಮುನಿಶ್ರೇಷ್ಠರ ಉಪದೇಶದಿಂದ ಭಯಂಕರವಾದ ಸಂಸಾರಸಾಗರವನ್ನು ದಾಟಲು ಸಾಧ್ಯವಾಯಿತು; ಅಂಥ ಮುನಿವರ್ಯರ ಪಾದಗಳೆ ನಮಗೆ ಶರಣು.

**ಮುನ್ನ ಮಹಾಬಳನಾದಂ**
**ದೆನ್ನಂ ಪ್ರಿಯಸಚಿವನಾಗಿ ಸಂಬೋಧಿಸಿ ಮಾ**
**ನೋನ್ನತರೀಗಳುಮಟ್ಕಿಱಿಂೊ**
**ಳೆನ್ನಂ ಸಮಱಿಲ್ಕೆ ಬಂದರಿಂತುಟೆ ಮೋಹಂ** ೬೭

**ಪದವಿಭಾಗ-ಅನ್ವಯ-ಅರ್ಥ:** ಮುನ್ನ ಮಹಾಬಳನಾದಂದು = ಹಿಂದೆ ಮಹಾಬಲನಾಗಿದ್ದಾಗ, ಪ್ರಿಯಸಚಿವನಾಗಿ ಎನ್ನಂ ಸಂಬೋಧಿಸಿ = ಪ್ರಿಯ ಮಂತ್ರಿಯಾಗಿ ತಿಳಿಯ ಹೇಳಿದ್ದ, ಮಾನ + ಉನ್ನತರ್ + ಈಗಳುಂ + ಅಟ್ಕಿಱೊಳ್ + ಎನ್ನಂ ಸಮಱಿಲ್ಕೆ ಬಂದರ್ = ಈ ಗೌರವಾನ್ವಿತರು ಈಗಲೂ ಪ್ರೀತಿಯಿಂದ ನನ್ನನ್ನು ತಿದ್ದುವುದಕ್ಕೆ ಬಂದರು; ಇಂತುಟೆ ಮೋಹಂ = ಇಷ್ಟೊಂದು ಮೋಹವೇ!

**ಗದ್ಯಾನುಸರಣ:** ಹಿಂದೆ ಮಹಾಬಲನಾಗಿದ್ದಾಗ ನನ್ನ ಪ್ರಿಯ ಮಂತ್ರಿಯಾಗಿ ತಿಳಿಯ ಹೇಳಿದ್ದ ಈ ಗೌರವಾನ್ವಿತರು ಈಗಲೂ ಪ್ರೀತಿಯಿಂದ ನನ್ನನ್ನು ತಿದ್ದುವುದಕ್ಕೆ ಬಂದರು; ಅವರಿಗೆ ನನ್ನ ಬಗ್ಗೆ ಅದೆಷ್ಟು ಅಕ್ಕರೆ!

**ಕಾಮಸುಖೋಚಿತಮತಿಗಳ್**
**ನಾಮೆತ್ತ ಮುಮುಕ್ಷುವೃತ್ತಿಯುಂ ತಾಳ್ದಿದವರ್**
**ಕಾಮೆತ್ತೆಂತುಮನುಗ್ರಹ**
**ಮೀ ಮುನಿಪತಿಗೆಮ್ಮೊಳಾಯ್ತೆದೇಂ ವಿಸ್ಮಯಮೋ** ೬೮

**ಪದವಿಭಾಗ-ಅನ್ವಯ-ಅರ್ಥ:** ಕಾಮಸುಖೋಚಿತಮತಿಗಳ್ ನಾಂ +

ಎತ್ತ = ಕಾಮಸುಖಾಸಕ್ತರಾದ ನಾವೆಲ್ಲಿ, ಮುಮುಕ್ಷುವೃತ್ತಿಯಂ ತಾಳ್ದಿದವರ್ ತಾಂ + ಎತೆತ್ತ = ಮೋಕ್ಷಪ್ರಿಯರಾದ ಅವರೆಲ್ಲಿ; ಈ ಮುನಿಪತಿಗೆ + ಎಮ್ಮೊಳ್ ಅನುಗ್ರಹಂ ಎಂತುಂ ಆಯ್ತು = ಈ ಮುನಿವರ್ಯರಿಗೆ ನಮ್ಮ ಮೇಲೆ ಹೇಗೆ ಅನುಗ್ರವುಂಟಾಯಿತು, ಇದೇಂ ವಿಸ್ಮಯಮೋ = ಇದೇನು ಆಶ್ಚರ್ಯ.

**ಗದ್ಯಾನುಸರಣ:** ಕಾಮಸುಖಾಸಕ್ತರಾದ ನಾವೆಲ್ಲಿ, ಮೋಕ್ಷಪ್ರಿಯರಾದ ಅವರೆಲ್ಲಿ; ಈ ಮುನಿವರ್ಯರಿಗೆ ನಮ್ಮ ಮೇಲೆ ಹೇಗೆ ಅನುಗ್ರಹವುಂಟಾಯಿತು, ಆಶ್ಚರ್ಯಕರ!

**ವಾಮಂ ಕರತಳಮದು ಕೆಂ**
**ದಾಮರೆಯರಲೆನಿಪುದುಚಿತಪರ್ಯಂಕದೊಳು**
**ದ್ದಾಮಮುಪದೇಶಹಸ್ತಮ**
**ವಾಮಂ ಮಾರ್ದವಮನಭಿನಯಿಪ್ಪುದು ಮುನಿಯಾ ೬೯**

**ಪದವಿಭಾಗ–ಅನ್ವಯ–ಅರ್ಥ:** ಉಚಿತಪರ್ಯಂಕದೊಳ್ = ಸೂಕ್ತ ಪೀಠದಲ್ಲಿ, ವಾಮಂ ಕರತಳಂ + ಅದು = (ಅವರ) ಎಡ ಅಂಗೈಯು, ಕೆಂದಾಮರೆಯರಲ್ + ಎನಿಪುದು = ಕೆಂದಾವರೆಯ ಹೂವಿನಂತಿದೆ; ಉದ್ದಾಮಂ + ಉಪದೇಶಹಸ್ತಂ + ಅವಾಮಂ = ಸಮರ್ಥವಾದ (ಅವರ) ಬಲಗೈಯು, ಮುನಿಯಾ ಮಾರ್ದವಮನ್ ಅಭಿನಯಿಪ್ಪುದು = ಮುನಿಯ ಮೃದುತೆಯನ್ನು ತೋರಿಸುತ್ತದೆ!

**ಗದ್ಯಾನುಸರಣ:** ಪೀಠದಲ್ಲಿ ಕುಳಿತ ಅವರ ಎಡ ಅಂಗೈಯು ಕೆಂದಾವರೆಯ ಹೂವಿನಂತಿದ್ದರೆ, ಅವರ ಸಮರ್ಥವಾದ ಬಲಗೈ ಮುನಿಯ ಮೃದುತೆಯನ್ನು ಅನುಕರಿಸುತ್ತದೆ!

**ವ। ಎಂದು ತದ್ಗಗನಚಾರಣಮುನಿಗುಣಮಣಿಹಾರಮನಾತ್ಮೀಯ ಹೃದಯದೊಳನಿಬರುಂ ತಾಳ್ದಿ ಸಮ್ಯಗ್ದರ್ಶನಮನಸ್ಖಲಿತಮಾರಾಧಿಸಿ ಪಲ್ಯೋಪಮತ್ರಯಾಯುಷ್ಯಾವಸಾನ ದೊಳೋಷಧಿಗಳಂತೆ ಫಳಪಾಕಾಂತ ದೊಳ್ ಕ್ಷುತವಿಜೃಂಭಣವ್ಯಾಜದಿಂ ಲೋಕಾಂತರಿತರಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಎಂದು ತತ್ + ಗಗನಚಾರಣಮುನಿ ಗುಣಮಣಿಹಾರಮನ್ = ಎಂದು ಆ ಗಗನಚಾರಣಮುನಿಗಳ ಗುಣಗಳ ಹಾರವನ್ನು, ಅನಿಬರುಂ ಆತ್ಮೀಯ ಹೃದಯದೊಳ್ ತಾಳ್ದಿ = ಎಲ್ಲರೂ ತಮ್ಮ ತಮ್ಮ ಹೃದಯಗಳಲ್ಲಿ ತಾಳಿ, ಸಮ್ಯಗ್ದರ್ಶನಮನ್ + ಅಸ್ಖಲಿತಂ + ಆರಾಧಿಸಿ = ಸಮ್ಯಗ್ದರ್ಶನವನ್ನು ಒಂದೇ ಸಮನೆ ಆರಾಧಿಸುತ್ತ, ಪಲ್ಯ ತ್ರಯ + ಉಪಮ ಆಯುಷ್ಯ + ಅವಸಾನದೊಳ್ = ಮೂರು ಪಲ್ಯಗಳಷ್ಟು ಆಯುಷ್ಯದ ಕೊನೆಯಲ್ಲಿ, ಫಳಪಾಕ + ಅಂತದೊಳ್ ಓಷಧಿಗಳಂತೆ = ಹಣ್ಣು ಬಿಟ್ಟ ನಂತರದ ಗಿಡಗಳಂತೆ,

ಕ್ಷುತವಿಜೃಂಭಣವ್ಯಾಜದಿಂ ಲೋಕ + ಅಂತರಿತರಾಗಿ = ಸೀನು ಆಕಳಿಕೆಗಳ ನೆವದಿಂದ ಲೋಕವನ್ನು ತೊರೆದು,

**ಗದ್ಯಾನುಸರಣ:** ಎಂದು ಆ ಗಗನಚಾರಣಮುನಿಗಳ ಗುಣಗಳ ಹಾರವನ್ನು ಎಲ್ಲರೂ ತಮ್ಮ ತಮ್ಮ ಹೃದಯಗಳಲ್ಲಿ ತಾಳಿದರು; ಸಮ್ಯಗ್ದರ್ಶನವನ್ನು ಒಂದೇ ಸಮನೆ ಆರಾಧಿಸುತ್ತ ಮೂರು ಪಲ್ಯಗಳ ತಮ್ಮ ಆಯುಷ್ಯದ ಕೊನೆಯಲ್ಲಿ ಹಣ್ಣು ಬಿಟ್ಟ ನಂತರದ ಗಿಡಗಳಂತೆ ಸೀನು ಆಕಳಿಕೆಗಳ ನೆವದಿಂದ ಲೋಕವನ್ನು ತೊರೆದರು.

**ಮನೆಯಿಂದಂ ಮನೆಗೆಂದು ಪೋಪ ತೆಱದಿಂ ಮೇಣ್ ನೂಕೆ ಪಾಸೆಂಬ ಮಾ**
**ತಿನ ಪಾಂಗಿಂದನಿತುಂ ಯುಗಂ ತಳರ್ದು ತದ್ಭೋಗಾವನೀಭಾಗದೊಳ್**
**ತನುಗಳ್ ವೈಕ್ರಿಯುಕಗಳಂತೆ ಕರಗುತ್ತಿರ್ಪನ್ನೆಗಂ ಪುಣ್ಯಸಂ**
**ಜನಿತೈಶ್ವರ್ಯದಿನಿಂತು ಬಂದು ನೆಲಸಿತ್ತೀಶನಕಲ್ಪಾಗ್ರದೊಳ್** ೭೦

**ಪದವಿಭಾಗ-ಅನ್ವಯ-ಅರ್ಥ:** ಮನೆಯಿಂದಂ ಮನೆಗೆ + ಎಂದು ಪೋಪ ತೆಱದಿಂ = ಒಂದು ಮನೆಯಿಂದ ಇನ್ನೊಂದಕ್ಕೆ ಹೋದ ರೀತಿಯಲ್ಲಿ, ಮೇಣ್ ನೂಕೆ ಪಾಸೆಂಬ ಮಾತಿನ ಪಾಂಗಿಂದೆ = ಹಾಗೂ ನೂಕಿದಲ್ಲಿ ಹಾಸಿಗೆ ಎಂಬ ರೀತಿಯಲ್ಲಿ, ಅನಿತುಂ ಯುಗಂ ತಳರ್ದು = ಅಷ್ಟೂ ಯುಗಗಳು ಕಳೆದ ಮೇಲೆ, ತತ್ + ಭೋಗಾವನೀಭಾಗದೊಳ್ = ಆ ಭೋಗಭೂಮಿಯಲ್ಲಿ, ತನುಗಳ್ ವೈಕ್ರಿಯಕಗಳಂತೆ ಕರಗುತ್ತಿರ್ಪನ್ನೆಗಂ = ದೇಹಗಳು ವೈಕ್ರಿಯಿಕಗಳಂತೆ ಕರಗಿಹೋಗಲು, ಪುಣ್ಯಸಂಜನಿತ + ಐಶ್ವರ್ಯದಿನ್ + ಇಂತು ಬಂದು = ಪುಣ್ಯದಿಂದ ಕೂಡಿಟ್ಟುಕೊಂಡ ಸಂಪತ್ತಿನಿಂದ, ಈಶಾನಕಲ್ಪ + ಅಗ್ರದೊಳ್ ನೆಲಸಿತ್ತು = ಈಶಾನಕಲ್ಪದ ಮೇಲೆ ನೆಲೆಸಿತು.

**ಗದ್ಯಾನುಸರಣ:** ಒಂದು ಮನೆಯಿಂದ ಇನ್ನೊಂದಕ್ಕೆ ಹೋದಂತೆ ಹಾಗೂ ನೂಕಿದಲ್ಲಿ ಹಾಸಿಗೆ ಎಂಬ ರೀತಿಯಲ್ಲಿ ಅಷ್ಟೂ ಕಾಲ ಕಳೆದ ಬಳಿಕ ಆ ಭೋಗಭೂಮಿಯಲ್ಲಿ ವಜ್ರಜಂಘ-ಶ್ರೀಮತಿಯರ ದೇಹಗಳು ವೈಕ್ರಿಯಕಗಳಂತೆ ಕರಗಿಹೋದುವು; ತಮ್ಮ ಪುಣ್ಯದಿಂದ ಗಳಿಸಿದ್ದ ಸಂಪತ್ತಿನಿಂದ ಈಶಾನ ಕಲ್ಪದಲ್ಲಿ ನೆಲೆಸಿದವು.

**ವಿಶೇಷ ವಿಚಾರ:** ವೈಕ್ರಿಯಿಕ = ಔದಾರಿಕ, ವೈಕ್ರಿಯಕ, ಆಹಾರಿಕ, ತೈಜಸ ಮತ್ತು ಕಾರ್ಮಣ ಎಂಬ ಐದು ಶರೀರಭೇದಗಳಲ್ಲಿ ಒಂದು; ತಪಶ್ಚರ್ಯೆಯ ಪ್ರಭಾವದಿಂದ ಲಭಿಸುವ ಅಣಿಮಾ, ಲಘಿಮಾ, ಲಘಿಮಾ, ಮಹಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ, ಅಪ್ರತಿಘಾತ, ಅಂತರ್ಧಾನ, ಕಾಮರೂಪ ಮುಂತಾದ

ಸಾಮರ್ಥ್ಯಗಳಿಂದ ಸ್ಥೂಲಶರೀರದಲ್ಲಿ ವಿಕ್ರಿಯೆ ಎಂದರೆ ಬದಲಾವಣೆ ಮಾಡಿಕೊಳ್ಳುವ ಸಾಮರ್ಥ್ಯದ ಸೂಕ್ಷ್ಮ ಶರೀರ.

**ವ॥ ಅಲ್ಲಿ ವಜ್ರಜಂಘಾರ್ಯಂ ಸುರತಸುಖನಿವಾಸದೊಳ್ ಶ್ರೀಪ್ರಭವಿಮಾನದೊಳ್ ಶ್ರೀಧರನೆಂಬ ದೇವನಾದಂ; ಶ್ರೀಮತ್ಯಾರ್ಯೆಯು ಸಮ್ಯಕ್ತ್ವಮಾಹಾತ್ಮ್ಯದಿಂ ಸ್ತ್ರೀರೂಪಮಂ ಪತ್ತುವಿಟ್ಟು ತತ್ಸ್ವಯಂಪ್ರಭಾ ವಿಮಾನದೊಳ್ ಶ್ರೀಧರಂಗೆ ಸಾಮಾನಿಕದೇವಂ ಸ್ವಯಂಪ್ರಭನೆಂಬ ದಿವಿಜನಾದಂ: ಶಾರ್ದೂಲಾರ್ಯನುಂ ಚಿತ್ರಾಂಗದ ವಿಮಾನದೊಳ್ ಚಿತ್ರಾಂಗ ದಾಮರನಾದಂ; ವರಾಹಾರ್ಯನುಂ ನಂದನವಿಮಾನದೊಳ್ ಮಣಿ ಮಮಕುಟಕೇಯೂರಮಣಿಕುಂಡಲ ವಿಭೂಷಣನಾಗಿ ಮಣಿಕುಂಡಲ ನೆಂಬೊಂ ದಿವಿಜನಾದಂ: ವಾನರಾರ್ಯನುಂ ನಂದ್ಯಾವರ್ತ ವಿಮಾನದೊಳ್ ಸುರನಾರೀಮನೋಹರಂ ಮನೋಹರನೆಂಬನಿಮಿಷನಾದಂ; ನಕುಳಾರ್ಯನುಂ ಪ್ರಭಾಕರವಿಮಾನದೊಳ್ ಮನೋರಥಾವಾಪ್ತದಿವ್ಯಭೋಗಂ ಮನೋರಥನೆಂಬಂ ಕಲ್ಪಜನಾದಂ: ಇಂತಿನಿಬರುಂ ಸಹಾಯರೊಡನೆ,**

ಪದವಿಭಾಗ-ಅನ್ವಯ-ಅರ್ಥ: ಅಲ್ಲಿ ವಜ್ರಜಂಘಾರ್ಯಂ ಸುರತಸುಖನಿವಾಸದೊಳ್ ಶ್ರೀಪ್ರಭವಿಮಾನದೊಳ್ ಶ್ರೀಧರನೆಂಬ ದೇವನಾದಂ = ವಜ್ರಜಂಘನು ಸುರತಸುಖಕ್ಕೆ ನೆಲೆಯಾದ ಶ್ರೀಧರವಿಮಾನದಲ್ಲಿ ಶ್ರೀಧರನೆಂಬ ದೇವನಾದ; ಶ್ರೀಮತಿ + ಆರ್ಯೆಯು ಸಮ್ಯಕ್ತ್ವಮಾಹಾತ್ಮ್ಯದಿಂ ಸ್ತ್ರೀರೂಪಮಂ ಪತ್ತುವಿಟ್ಟು = ಶ್ರೀಮತಿಯು ಸಮ್ಯಕ್ತ್ವದ ಮಹಿಮೆಯಿಂದಾಗಿ ತನ್ನ ಹೆಣ್ಣುರೂಪವನ್ನು ಕೊನೆಗೊಳಿಸಿ, ತತ್ + ಸ್ವಯಂಪ್ರಭಾವಿಮಾನದೊಳ್ ಶ್ರೀಧರಂಗೆ ಸಾಮಾನಿಕದೇವಂ ಸ್ವಯಂಪ್ರಭನೆಂಬ ದಿವಿಜನಾದಂ = ಸ್ವಯಂಪ್ರಭಾವಿಮಾನದಲ್ಲಿ ಶ್ರೀಧರನಿಗೆ ಸಾಮಾನಿಕದೇವನಾಗಿ ಸ್ವಯಂಪ್ರಭ ಎಂಬ ದೇವನಾದ; ಶಾರ್ದೂಲಾರ್ಯನುಂ ಚಿತ್ರಾಂಗದ ವಿಮಾನದೊಳ್ ಚಿತ್ರಾಂಗದ + ಅಮರನಾದಂ = ಹುಲಿಯು ಚಿತ್ರಾಂಗದ ವಿಮಾನದಲ್ಲಿ ಚಿತ್ರಾಂಗದ ಎಂಬ ಹೆಸರಿನ ದೇವನಾದ; ವರಾಹಾರ್ಯನುಂ ನಂದನವಿಮಾನದೊಳ್ ಮಣಿಮಮಕುಟಕೇಯೂರಮಣಿ ಕುಂಡಲವಿಭೂಷಣನಾಗಿ ಮಣಿಕುಂಡಲನೆಂಬೊಂ ದಿವಿಜನಾದಂ = ಹಂದಿಯು ನಂದನವಿಮಾನದಲ್ಲಿ ಮಣಿಖಚಿತ ಕಿರೀಟ ತೋಳುಬಂದಿ ಮಣಿಕುಂಡಲಗಳಿಂದ ಅಲಂಕೃತನಾದ ಮಣಿಕುಂಡಲ ಎಂಬ ಹೆಸರಿನ ದೇವನಾದ; ವಾನರಾರ್ಯನುಂ ನಂದ್ಯಾವರ್ತವಿಮಾನದೊಳ್ ಸುರನಾರೀಮನೋಹರಂ ಮನೋಹರನೆಂಬ + ಅನಿಮಿಷನಾದಂ = ಕಪಿಯು ನಂದ್ಯಾವರ್ತವಿಮಾನದಲ್ಲಿ ದೇವವನಿತೆಯರನ್ನೂ ಸೆಳೆಯಬಲ್ಲ ಮನೋಹರ ಎಂಬ ದೇವನಾದ; ನಕುಳಾರ್ಯನುಂ ಪ್ರಭಾಕರವಿಮಾನದೊಳ್ ಮನೋರಥ + ಆವಾಪ್ತದಿವ್ಯಭೋಗಂ ಮನೋರಥನೆಂಬಂ ಕಲ್ಪಜನಾದಂ = ಮುಂಗುಸಿಯೂ ಪ್ರಭಾಕರವಿಮಾನದಲ್ಲಿ ಇಷ್ಟಾರ್ಥದಂತೆ ಭೋಗವನ್ನು ಅನುಭವಿಸು ಮನೋರಥ ಎಂಬ ಹೆಸರಿನ

ದೇವನಾದ; ಇಂತು + ಇನಿಬರುಂ ಸಹಾಯರೊಡನೆ = ಹೀಗೆ ಈ ಎಲ್ಲ ಸಹಾಯಕರೊಡನೆ,

**ಗದ್ಯಾನುಸರಣ:** ವಜ್ರಜಂಘನು ಸುರತಸುಖಕ್ಕೆ ನೆಲೆಯಾದ ಶ್ರೀಧರವಿಮಾನದಲ್ಲಿ ಶ್ರೀಧರನೆಂಬ ದೇವನಾದರೆ, ಶ್ರೀಮತಿಯು ಸಮ್ಯಕ್ತ್ವದ ಮಹಿಮೆಯಿಂದಾಗಿ ತನ್ನ ಹೆಣ್ಣುರೂಪವನ್ನು ಕೊನೆಗೊಳಿಸಿಕೊಂಡು ಸ್ವಯಂಪ್ರಭಾವಿಮಾನದಲ್ಲಿ ಶ್ರೀಧರನಿಗೆ ಸಾಮಾನಿಕದೇವನಾಗಿ ಸ್ವಯಂಪ್ರಭ ಎಂಬ ದೇವನಾದ; ಹುಲಿಯು ಚಿತ್ರಾಂಗದವಿಮಾನದಲ್ಲಿ ಚಿತ್ರಾಂಗದ ಎಂಬ ಹೆಸರಿನ ದೇವನಾದರೆ, ಹಂದಿಯು ನಂದನವಿಮಾನದಲ್ಲಿ ಮಣಿಖಚಿತ ಕಿರೀಟ ತೋಳುಬಂದಿ ಮಣಿಕುಂಡಲಗಳಿಂದ ಅಲಂಕೃತನಾದ ಮಣಿಕುಂಡಲ ಎಂಬ ಹೆಸರಿನ ದೇವನಾದ; ಕಪಿಯು ನಂದ್ಯಾವರ್ತವಿಮಾನದಲ್ಲಿ ದೇವವನಿತೆಯರನ್ನೂ ಸೆಳೆಯಬಲ್ಲ ಮನೋಹರ ಎಂಬ ದೇವನಾದರೆ, ಮುಂಗುಸಿಯೂ ಪ್ರಭಾಕರವಿಮಾನದಲ್ಲಿ ಇಷ್ಟಾರ್ಥದಂತೆ ಭೋಗವನ್ನು ಅನುಭವಿಸು ಮನೋರಥ ಎಂಬ ಹೆಸರಿನ ದೇವನಾದ; ಹೀಗೆ ಈ ಎಲ್ಲ ಸಹಾಯಕರೊಡನೆ,

**ವಿಶೇಷ ವಿಚಾರ:** ವಿಮಾನ = ದೇವತೆಗಳ ವಾಹನ; ಸಾಮಾನಿಕದೇವ = ಆಜ್ಞೆ–ಐಶ್ವರ್ಯಗಳನ್ನು ಹೊರತುಪಡಿಸಿ ಉಳಿದ ಗುಣಗಳಲ್ಲಿ ಇಂದ್ರರಿಗೆ ಸಮಾನರಾಗಿ ಅವರಿಗೆ ತಾಯ್ತಂದೆಯರಂತಿರುವ ದೇವತಾವರ್ಗದ ಒಬ್ಬ ದೇವ.

**ನಯನಾನಂದವಿಳಾಸರೂಪನಮರೀನೀಲಾಲಕಾಲೀಢಪಾ**
**ದಯುಗಂ ತತ್ಕುಚಕೂಟಘಟ್ಟಿತವಿಶಾಲೋರಸ್ಸ್ಥಲಂ ಸ್ವರ್ಗಲ**
**ಕ್ಷ್ಮಿಯ ಮೇಲಟ್ಕಱಿಗೊಳಂದದೇಂ ನಲಿದನೋ ಸಂಭೋಗಸಮ್ಮರ್ದನಿ**
**ರ್ದಯನಿಷ್ಪೀಡಿತದೇವವಾರವನಿತಾಬಿಂಬಾಧರಂ ಶ್ರೀಧರಂ ೭೧**

**ಪದವಿಭಾಗ–ಅನ್ವಯ–ಅರ್ಥ:** ನಯನ + ಆನಂದವಿಳಾಸರೂಪನ್ = ಕಣ್ಣಿಗೆ ಸಂತಸವೀಯುವ ರೂಪನ್ನುಳ್ಳವನೂ, ಅಮರೀನೀಲಾಲಕ + ಆಲೀಢಪಾದಯುಗಂ = ದೇವತಾಸ್ತ್ರೀಯರ ಕಪ್ಪುಕೂದಲು ಆವರಿಸಿರುವ ಪಾದಗಳನ್ನು ಹೊಂದಿದವನೂ, ತತ್ + ಕುಚಕೂಟಘಟ್ಟಿತವಿಶಾಲ + ಉರಸ್ಸ್ಥಲಂ = ಅವರ ಮೊಲೆಗಳ ತುದಿಯು ತಾಕಿರುವ ಎದೆಯುಳ್ಳವನೂ, ಸ್ವರ್ಗಲಕ್ಷ್ಮಿಯ ಮೇಲಟ್ಕಱಿಗೊಳ್ = ಸ್ವರ್ಗಲಕ್ಷ್ಮಿಯ ಮೇಲಿನ ಪ್ರೀತಿಯಿಂದ, ಸಂಭೋಗ ಸಮ್ಮರ್ದನಿರ್ದಯನಿಷ್ಪೀಡಿತದೇವವಾರವನಿತಾಬಿಂಬಾಧರಂ = ಸಂಭೋಗದ ಕಾಲದಲ್ಲಿ ಚೆಂದುಟಿಗಳ ದೇವಗಣಿಕೆಯರನ್ನು ಬಲವಾಗಿ ಹಿಸುಕಾಡುತ್ತ, ಶ್ರೀಧರಂ ಅಂದು + ಅದೇಂ ನಲಿದನೋ = ಶ್ರೀಧರನು ಅಲ್ಲಿ ಅದೆಷ್ಟು ಸುಖವನನ್ನುಭವಿಸಿದ!

**ಗದ್ಯಾನುಸರಣ:** ಶ್ರೀಧರನದು ಕಣ್ಣಿಗೆ ಸಂತಸವೀಯುವ ರೂಪು; ದೇವತಾಸ್ತ್ರೀಯರ ಕಪ್ಪುಕೂದಲು ಅವನ ಪಾದಗಳನ್ನು ಆವರಿಸಿರುತ್ತಿದ್ದುವು; ಅವರ ಮೊಲೆಗಳ ತುದಿಯು ಅವನ ಎದೆಯನ್ನು ತಾಕಿರುತ್ತಿದ್ದುವು; ಸ್ವರ್ಗಲಕ್ಷ್ಮಿಯ ಮೇಲಿನ ಪ್ರೀತಿಯಿಂದ ಅವನು ಸಂಭೋಗಕಾಲದಲ್ಲಿ ಚೆಂದುಟಿಗಳ ದೇವಗಣಿಕೆಯರನ್ನು ಬಲವಾಗಿ ಹಿಸುಕಾಡುತ್ತ ಅಪಾರ ಸುಖವನನ್ನುಭವಿಸಿದ!

**ವ। ಒಂದು ದಿವಸಮಾ ದೇವನವಧಿಬೋಧದಿಂ ಪ್ರೀತಿಂಕರಾರ್ಯರ ಕೇವಲಜ್ಞಾನೋತ್ಪತ್ತಿಯನಱಿದು ದೇವನಿಕಾಯದೊಡನನೇಕವಿನೋದದೊಳ ಪೂರ್ವಪ್ರಭೆಯಂ ತಾಳ್ದಿರ್ದುತ್ತುಂಗಶ್ರೀಪ್ರಭಾಚಳಕ್ಕೆ ಪೋಗಿ,**

**ಪದವಿಭಾಗ-ಅನ್ವಯ-ಅರ್ಥ:** ಒಂದು ದಿವಸಂ ಆ ದೇವನ್ = ಒಂದು ದಿವಸ ಶ್ರೀಧರದೇವನು, ಪ್ರೀತಿಂಕರಾರ್ಯರ ಕೇವಲಜ್ಞಾನೋತ್ಪತ್ತಿಯನ್ ಅವಧಿಬೋಧದಿಂ ಅಱಿದು = ಪ್ರೀತಿಂಕಾರಾಚಾರ್ಯರಿಗೆ ಕೇವಲಜ್ಞಾನ ಲಭಿಸಿದುದನ್ನು ತನ್ನ ಅವಧಿಜ್ಞಾನದಿಂದ ತಿಳಿದು, ದೇವನಿಕಾಯದ + ಒಡನೆ = ದೇವತೆಗಳ ಸಮೂಹದ ಜೊತೆಯಲ್ಲಿ, ಅನೇಕವಿನೋದದೊಳ್ + ಅಪೂರ್ವಪ್ರಭೆಯಂ ತಾಳ್ದಿರ್ದ = ನಾನಾ ವಿನೋದಗಳಿಂದ ಅದ್ಭುತವಾಗಿ ಹೊಳೆಯುತ್ತಿದ್ದ, ಉತ್ತುಂಗಶ್ರೀಪ್ರಭಾಚಳಕ್ಕೆ ದೇವನಿಕಾಯದೊಡನೆ ಪೋಗಿ = ಉನ್ನತವಾದ ಶ್ರೀಪ್ರಭಾ ಪರ್ವತಕ್ಕೆ ದೇವಸಮೂಹದೊಡನೆ ಹೋಗಿ,

**ಗದ್ಯಾನುಸರಣ:** ಒಂದು ದಿವಸ ಶ್ರೀಧರದೇವನು ಪ್ರೀತಿಂಕಾರಾಚಾರ್ಯರಿಗೆ ಕೇವಲಜ್ಞಾನ ಲಭಿಸಿದುದನ್ನು ತನ್ನ ಅವಧಿಜ್ಞಾನದಿಂದ ತಿಳಿದ; ನಾನಾ ವಿನೋದಗಳಿಂದ ಅದ್ಭುತವಾಗಿ ಹೊಳೆಯುತ್ತಿದ್ದ ಆ ಉನ್ನತವಾದ ಶ್ರೀಪ್ರಭಾ ಪರ್ವತಕ್ಕೆ ದೇವಸಮೂಹದೊಡನೆ ಹೋದ.

**ವಿವಿಧಾರ್ಚನೆಗಳಿನರ್ಚಿಸಿ**
**ವಿವಿಧಸ್ತುತಿಶತಸಹಸ್ರದಿಂ ಸ್ತುತಿಯಿಸಿ ಬಂ**
**ದವನತಮಕುಟಂ ಶ್ರೀಧರ**
**ದಿವಿಜಂ ಬೆಸಗೊಂಡನಖಿಳಭವಭಯಹರನಂ ೭೨**

**ಪದವಿಭಾಗ-ಅನ್ವಯ-ಅರ್ಥ:** ವಿವಿಧಾರ್ಚನೆಗಳಿನ್ + ಅರ್ಚಿಸಿ = ನಾನಾ ಬಗೆಯಲ್ಲಿ ಪೂಜೆ ಮಾಡಿ, ವಿವಿಧಸ್ತುತಿಶತಸಹಸ್ರದಿಂ ಸ್ತುತಿಯಿಸಿ ಬಂದು = ನೂರಾರು ಸಾವಿರಾರು ಬಗೆಯಲ್ಲಿ ಸ್ತುತಿ ಮಾಡಿ ಬಂದು, ಅವನತಮಕುಟಂ ಶ್ರೀಧರದಿವಿಜಂ = ಶ್ರೀಧರದೇವನು ತಲೆಬಾಗಿ, ಅಖಿಳಭವಭಯಹರನಂ

ಬೆಸಗೊಂಡನ್ = ಸಂಸಾರದ ಎಲ್ಲ ಭಯಗಳನ್ನೂ ಹೋಗಲಾಡಿಸುವ ಅವನನ್ನು (ಈ ರೀತಿ) ಕೇಳಿಕೊಂಡ.

**ಗದ್ಯಾನುಸರಣ:** ನಾನಾ ಬಗೆಯಲ್ಲಿ ಪೂಜೆ ಮಾಡಿ, ನೂರಾರು ಸಾವಿರಾರು ಬಗೆಯಲ್ಲಿ ಸ್ತುತಿ ಮಾಡಿದ ಶ್ರೀಧರದೇವನು ತಲೆಬಾಗಿ ಸಂಸಾರದ ಎಲ್ಲ ಭಯಗಳನ್ನೂ ಹೋಗಲಾಡಿಸುವ ಅವನನ್ನು ಈ ರೀತಿ ಕೇಳಿಕೊಂಡ.

**ಪ್ರೀತಿಂಕರ ಶಂಕರ ವಿ**
**ದ್ಯಾತಿಶಯನಿಧಾನ ನಿನ್ನ ದಯೆವೆರಸಿದತಿ**
**ಪ್ರೀತಿಯೊಳಾನತ್ಯುತ್ತಮ**
**ಜಾತಿಗಳೊಳ್ ಪುಟ್ಟಿ ಸುಖಮನುಣುತುಂ ಬಂದೆಂ ೭೩**

**ಪದವಿಭಾಗ–ಅನ್ವಯ–ಅರ್ಥ:** ಪ್ರೀತಿಂಕರ ಶಂಕರ = ಪ್ರೀತಿಯುಳ್ಳವನೇ, ಒಳ್ಳೆಯದನ್ನು ಮಾಡುವವನೇ, ವಿದ್ಯಾ + ಅತಿಶಯನಿಧಾನ = ವಿದ್ಯೆಯ ಅಪೂರ್ವ ನಿಧಿ ಎನಿಸಿದವನೇ, ನಿನ್ನ ದಯೆವೆರಸಿದ + ಅತಿಪ್ರೀತಿಯೊಳ್ = ನೀನು ದಯೆಯಿಟ್ಟು ತೋರಿಸಿದ ಅತೀವ ಪ್ರೀತಿಯಿಂದಾಗಿ, ಆನ್ + ಅತ್ಯುತ್ತಮಜಾತಿ ಗಳೊಳ್ ಪುಟ್ಟಿ ಸುಖಮನ್ + ಉಣುತುಂ ಬಂದೆಂ = ನಾನು ಶ್ರೇಷ್ಠ ವರ್ಗಗಳಲ್ಲಿ ಹುಟ್ಟಿ ಸುಖವನನ್ನು ಅನುಭವಿಸಿಕೊಂಡು ಬಂದೆ.

**ಗದ್ಯಾನುಸರಣ:** ಪ್ರೀತಿಯುಳ್ಳವನೇ, ಒಳ್ಳೆಯದನ್ನು ಮಾಡುವವನೇ, ವಿದ್ಯೆಯ ಅಪೂರ್ವ ನಿಧಿಯಾದವನೇ, ನೀನು ದಯೆಯಿಟ್ಟು ತೋರಿಸಿದ ಅತೀವ ಪ್ರೀತಿಯಿಂದಾಗಿ ನಾನು ಶ್ರೇಷ್ಠ ವರ್ಗಗಳಲ್ಲಿ ಹುಟ್ಟಿ ಅಪೂರ್ವ ಸುಖವನನ್ನು ಅನುಭವಿಸಿಕೊಂಡು ಬಂದೆ.

**ಆನಂಬರಚರನಾದಂ**
**ದಾ ನಾಲ್ವರೊಳಲ್ಲಿ ಮೂವರುಂ ಮಂತ್ರಿಗಳಂ**
**ತೇನಾದರಖಿಳಮಿಥ್ಯಾ**
**ಜ್ಞಾನಾವೃತಚರಿತರುಚಿತಪರಹಿತಚರಿತಾ ೭೪**

**ಪದವಿಭಾಗ–ಅನ್ವಯ–ಅರ್ಥ:** ಉಚಿತಪರಹಿತಚರಿತಾ = ಪರಹಿತವನ್ನೇ ಸದಾ ಬಯಸುವವನೇ, ಆನ್ + ಅಂಬರಚರನಾದಂದು = ನಾನು ಖೇಚರನಾಗಿದ್ದಾಗ, ಆ ನಾಲ್ವರೊಳ್ ಅಖಿಳಮಿಥ್ಯಾಜ್ಞಾನಾವೃತಚರಿತರ್ ಮೂವರುಂ ಮಂತ್ರಿಗಳ್ = ನಾಲ್ವರಲ್ಲಿ ಮಿಥ್ಯಾಜ್ಞಾನದಿಂದ ಕೂಡಿದ್ದ ಮೂವರು ಮಂತ್ರಿಗಳು, ಅಂತು ಅಲ್ಲಿ ಏನಾದರ್ = ಮುಂದೇ ಎನಾದರು?

ಗದ್ಯಾನುಸರಣ: ಪರಹಿತವನ್ನೇ ಸದಾ ಬಯುಸುವವನೇ, ನಾನು ಖೇಚರನಾಗಿದ್ದಾಗ ನಾಲ್ವರಲ್ಲಿ ಮಿಥ್ಯಾಜ್ಞಾನದಿಂದ ಕೂಡಿದ್ದ ಮೂವರು ಮಂತ್ರಿಗಳು ಮುಂದೇ ಏನಾದರು?

ಬೆಸಸೆನೆ ದಿವಿಜನ ಮನದೊಳ್
ಪಸರಿಸಿದ ತಮಸ್ತಮಂ ತೆರಳ್ದಿರೆ ಪರಮಂ
ಬೆಸಸಿದನಾಗಳ್ ಭವ್ಯ
ಪ್ರಸಾದಕರನಿಜವಚೋಂಶುಗಳ್ ಬೆಳಗುವಿನಂ ೭೫

ಪದವಿಭಾಗ–ಅನ್ವಯ–ಅರ್ಥ: ಬೆಸಸು + ಎನೆ = ಹೇಳಿ ಎನ್ನಲು, ದಿವಿಜನ ಮನದೊಳ್ ಪಸರಿಸಿದ ತಮಸ್ತಮಂ ತೆರಳ್ದಿರೆ = ಶ್ರೀಧರನ ಮನಸ್ಸಿನ ಅಜ್ಞಾನವು ದೂರವಾಗುವಂತೆ, ಭವ್ಯಪ್ರಸಾದಕರನಿಜವಚಃ + ಅಂಶುಗಳ್ ಬೆಳಗುವಿನಂ = ಭವ್ಯಜನಕ್ಕೆ ಅನುಗ್ರಹಕರವಾದ ತನ್ನ ಮಾತುಗಳೆಂಬ ಕಿರಣಗಳು ಹೊಳೆಯಲು, ಆಗಳ್ ಪರಮಂ ಬೆಸಸಿದನ್ = ಆಗ ಆ ಪರಮನು ಹೇಳಿದ.

ಗದ್ಯಾನುಸರಣ: ಹೇಳಿ ಎಂದು ಕೇಳಿಕೊಂಡಾಗ ಆ ಪರಮನು ಹೇಳತೊಡಗಿದ; ಅದರಿಂದ. ಶ್ರೀಧರನ ಮನಸ್ಸಿನ ಅಜ್ಞಾನವೆಂಬ ಕತ್ತಲೆ ದೂರವಾಯಿತು, ಭವ್ಯಜನಕ್ಕೆ ಬೆಳಕಾಯಿತು.

ಸಂಭಿನ್ನ ಮಹಾಮತಿಗಳ್
ಗಂಭೀರನಿಗೋದದೊಳ್ ತಮೋಮಯದೊಳ್
ದುಃಖಾಂಭೋಧಿಯುಂ ಕಡೆಗಾಣದೆ
ಜೃಂಭಿತದುಷ್ಕರ್ಮದಿಂದೆ ನವೆದಪರಿನ್ನುಂ ೭೬

ಪದವಿಭಾಗ–ಅನ್ವಯ–ಅರ್ಥ: ಸಂಭಿನ್ನ ಮಹಾಮತಿಗಳ್ = ಸಂಭಿನ್ನಮತಿ ಮತ್ತು ಮಹಾಮತಿಗಳು, ಗಂಭೀರನಿಗೋದದೊಳ್ ತಮೋಮಯದೊಳ್ = ಆಳವಾದ ನರಕದಲ್ಲಿ ಕತ್ತಲಿನಲ್ಲಿ, ದುಃಖ + ಅಂಭೋಧಿಯಂ ಕಡೆಗಾಣದೆ = ದುಃಖಸಮುದ್ರದ ದಡವನ್ನು ಕಾಣದೆ, ಜೃಂಭಿತದುಷ್ಕರ್ಮದಿಂದೆ ಇನ್ನುಂ ನಮೆದಪರ್ = ತಮ್ಮ ಅಧಿಕ ಕೆಟ್ಟಕೆಲಸಗಳ ಕಾರಣದಿಂದಾಗಿ ಇನ್ನೂ ನವೆಯುತ್ತಿದ್ದಾರೆ.

ಗದ್ಯಾನುಸರಣ: ಸಂಭಿನ್ನಮತಿ ಮತ್ತು ಮಹಾಮತಿಗಳು, ತಮ್ಮ ಅಧಿಕ ಕೆಟ್ಟಕೆಲಸಗಳ ಕಾರಣದಿಂದಾಗಿ, ದುಃಖಸಮುದ್ರದ ದಡವನ್ನು ಕಾಣದೆ ಆಳವಾದ ನರಕದ ಕತ್ತಲಿನಲ್ಲಿ ಇನ್ನೂ ನವೆಯುತ್ತಿದ್ದಾರೆ.

ಶತಮತಿ ಮಿಥ್ಯಾಜ್ಞಾನಾ
ವೃತಮತಿ ಸಂದಂ ದ್ವಿತೀಯನರಕಕ್ಕೀ ಸಂ
ಸೃತಿಯೊಳ್ ಧರ್ಮಾಧರ್ಮ
ಸ್ಥಿತಿಯೆ ವಲಂ ಸ್ವರ್ಗನರಕಸುಖದುಃಖಕರಂ ೭೭

**ಪದವಿಭಾಗ-ಅನ್ವಯ-ಅರ್ಥ:** ಮಿಥ್ಯಾಜ್ಞಾನ + ಆವೃತಮತಿ ಶತಮತಿ = ಮಿಥ್ಯಾಜ್ಞಾನದಿಂದ ಸುತ್ತುವರಿದ ಶತಮತಿಯು, ದ್ವಿತೀಯನರಕಕ್ಕೆ ಸಂದಂ = ಎರಡನೆಯ ನರಕವನ್ನು ಸೇರಿದ; ಸಂಸೃತಿಯೊಳ್ ಧರ್ಮ + ಆಧರ್ಮಸ್ಥಿತಿಯೆ = ಈ ಸಂಸಾರದಲ್ಲಿ ಧರ್ಮ ಮತ್ತು ಅಧರ್ಮದ ಸ್ಥಿತಿಯೇ, ಸ್ವರ್ಗನರಕಸುಖ ದುಃಖಕರಂ ವಲಂ = ಸ್ವರ್ಗ ಮತ್ತು ನರಕಗಳನ್ನುಂಟುಮಾಡುವಂಥದು ತಾನೇ?

**ಗದ್ಯಾನುಸರಣ:** ಮಿಥ್ಯಾಜ್ಞಾನ ಸುತ್ತುವರಿದಿದ್ದ ಶತಮತಿಯು ಎರಡನೆಯ ನರಕವನ್ನು ಸೇರಿದ; ಸಂಸೃತಿಯೊಳ್ ಈ ಸಂಸಾರದಲ್ಲಿ ಧರ್ಮ ಮತ್ತು ಅಧರ್ಮದ ಸ್ಥಿತಿಯೇ ಸ್ವರ್ಗ ಮತ್ತು ನರಕಗಳನ್ನುಂಟುಮಾಡುವಂಥದು ತಾನೇ?

**ವಿಶೇಷ ವಿಚಾರ:** ಮಿಥ್ಯಾಜ್ಞಾನ = ದೇವ ಗುರು ಶಾಸ್ತ್ರಗಳಲ್ಲಿ ನಂಬಿಕೆಯಿಲ್ಲದಿರುವುದು; ಎರಡನೆಯ ನರಕ = ರತ್ನಪ್ರಭೆ, ಶರ್ಕರಾಪ್ರಭೆ, ವಾಲುಕಾಪ್ರಭೆ, ಪಂಕಪ್ರಭೆ, ಧೂಮಪ್ರಭೆ, ತಮಃಪ್ರಭೆ ಮತ್ತು ಮಹಾತಮಃಪ್ರಭೆ ಎಂಬ ಏಳು ನರಕಗಳಲ್ಲಿ ಎರಡನೆಯದಾದ ಶರ್ಕರಾಪ್ರಭೆ.

ಧರ್ಮಮಮರೇಂದ್ರಗತಿಯನ
ಧರ್ಮಮಧೋಗತಿಯನೆಸಗುವೆಸಕದೊಳೀಗುಂ
ಧರ್ಮಾಧರ್ಮಕ್ರಿಯೆಗಳೆ
ನೆರ್ಮಂ ಜೀವಕ್ಕೆ ಮನುಜಗತಿಯೊಳ್ ಮಾಳ್ಕುಂ ೭೮

**ಪದವಿಭಾಗ-ಅನ್ವಯ-ಅರ್ಥ:** ಎಸಗುವೆಸಕದೊಳ್ = ಮಾಡುವ ಕೆಲಸದಲ್ಲಿ, ಧರ್ಮಂ + ಅಮರೇಂದ್ರಗತಿಯನ್ = ಧರ್ಮಕಾರ್ಯವು ದೇವಗತಿಯನ್ನೂ, ಅಧರ್ಮಂ + ಅಧೋಗತಿಯನ್ ಈಗುಂ = ಅಧರ್ಮವು ಅಧೋಗತಿಯನ್ನೂ ನೀಡುತ್ತದೆ; ಧರ್ಮ + ಅಧರ್ಮಕ್ರಿಯೆಗಳೆ ಮನುಜಗತಿಯೊಳ್ ಜೀವಕ್ಕೆ ನೆರ್ಮಂ ಮಾಳ್ಕುಂ = ಧರ್ಮ ಮತ್ತು ಅಧರ್ಮಕಾರ್ಯಗಳೆ ಮನುಷ್ಯಜನ್ಮದಲ್ಲಿ ಜೀವನಿಗೆ ಆಸರೆಯನ್ನು ನೀಡುತ್ತದೆ.

**ಗದ್ಯಾನುಸರಣ:** ಮಾಡುವ ಕೆಲಸದಲ್ಲಿ ಧರ್ಮಕಾರ್ಯವು ದೇವಗತಿಯನ್ನೂ, ಅಧರ್ಮವು ಅಧೋಗತಿಯನ್ನೂ ನೀಡುತ್ತದೆ; ಧರ್ಮ ಮತ್ತು ಅಧರ್ಮಕಾರ್ಯಗಳೆ ಮನುಷ್ಯಜನ್ಮದಲ್ಲಿ ಜೀವನಿಗೆ ಆಸರೆಯನ್ನು ನೀಡುತ್ತದೆ.

ಪುಸಿಯದುದು ಪರಾಂಗನೆಗಾ
ಒಸದುದು ಕೊಲ್ಲದುದು ಮೋಹಮಿಲ್ಲದುದಱಿವಂ
ಪೊಸಯಿಸುವುದು ವೈರಾಗ್ಯದ
ದೆಸೆಗೆಸಪುದು ಧರ್ಮಮದಱ ತಡೆವುದಧರ್ಮಂ ೭೯

**ಪದವಿಭಾಗ-ಅನ್ವಯ-ಅರ್ಥ:** ಪುಸಿಯದುದು = ಸುಳ್ಳು ಹೇಳದಿರುವುದು, ಪರಾಂಗನೆಗೆ + ಆಟಿಸದುದು = ಪರಸ್ತ್ರೀಗೆ ಆಸೆಪಡದಿರುವುದು, ಕೊಲ್ಲದುದು = ಹಿಂಸೆ ಮಾಡದಿರುವುದು, ಮೋಹಮಿಲ್ಲದುದು = ಮೋಹವಿಲ್ಲದಿರುವುದು, ಅಱಿವಂ ಪೊಸಯಿಸುವುದು = ಜ್ಞಾನವನ್ನು ಹೊಸತಾಗಿಸಿಕೊಳ್ಳುವುದು, ವೈರಾಗ್ಯದ ದೆಸೆಗೆ + ಎಸಪುದು = ವೈರಾಗ್ಯದ ದಿಸೆಯಲ್ಲಿ ನಡೆಯುವುದು, ಧರ್ಮಂ = ಇವು ಧರ್ಮ; ಅದಱ ತಡೆವುದು + ಅಧರ್ಮಂ = ಅದನ್ನು ತಡೆಯುವುದು ಅಧರ್ಮ

**ಗದ್ಯಾನುಸರಣ:** ಸುಳ್ಳು ಹೇಳದಿರುವುದು, ಪರಸ್ತ್ರೀಗೆ ಆಸೆಪಡದಿರುವುದು, ಹಿಂಸೆ ಮಾಡದಿರುವುದು, ಮೋಹವಿಲ್ಲದಿರುವುದು, ಜ್ಞಾನವನ್ನು ಹೊಸತಾಗಿಸಿಕೊಳ್ಳುವುದು, ವೈರಾಗ್ಯದ ದಿಸೆಯಲ್ಲಿ ನಡೆಯುವುದು – ಇವು ಧರ್ಮ; ಅದನ್ನು ತಡೆಯುವುದು ಅಧರ್ಮ.

**ವಿಶೇಷ ವಿಚಾರ:** ಇಲ್ಲಿ ಸರಳವಾಗಿ ವಿವರಿಸಿ ಪಟ್ಟಿ ಮಾಡಿರುವ ಧ್ಯೇಯಗಳನ್ನು ಜೈನ ಪರಿಭಾಷೆಯಲ್ಲಿ ಶ್ರಾವಕರು ಅಥವಾ ಜೈನ ಗೃಹಸ್ಥರು ಅನುಸರಿಸಬೇಕಾದ ಸತ್ಯ, ಬ್ರಹ್ಮಚರ್ಯ, ಅಹಿಂಸೆ, ಅಸ್ತೇಯ ಮತ್ತು ಅಪರಿಗ್ರಹ ಎಂಬ ಪಂಚಾಣುವ್ರತಗಳು; ಮುನಿಗಳು ತುಂಬ ಸೂಕ್ಷ್ಮ ರೀತಿಯಲ್ಲಿ ಅನುಸರಿಸಿದಾಗ ಇವು ಮಹಾವ್ರತಗಳೆನ್ನಿಸಿಕೊಳ್ಳುತ್ತವೆ.

ಮಾಂಸಮಧುಮದ್ಯಸೇವನೆ
ಹಿಂಸಾರುಚಿ ಪರಮಜಿನಮತಾರುಚಿ ಕುಲಟಾ
ಸಂಸರ್ಗಮೆಂಬಿವಲ್ಲದೆ
ಸಂಸಾರಭ್ರಮಣಕಾರಣಂ ಪೆಱವೊಳವೇ ೮೦

**ಪದವಿಭಾಗ-ಅನ್ವಯ-ಅರ್ಥ:** ಮಾಂಸಮಧುಮದ್ಯಸೇವನೆ = ಮಾಂಸ ಜೇನು ಮತ್ತು ಹೆಂಡಗಳ ಸೇವನೆ, ಹಿಂಸಾರುಚಿ = ಹಿಂಸೆಯಲ್ಲಿ ಆಸಕ್ತಿ, ಪರಮಜಿನಮತ + ಅರುಚಿ = ಶ್ರೇಷ್ಠವಾದ ಜಿನಮತದಲ್ಲಿ ನಿರಾಸಕ್ತಿ, ಕುಲಟಾಸಂಸರ್ಗಂ = ಕೆಟ್ಟ ಹೆಂಗಸರ ಸಹವಾಸ, ಎಂಬ + ಇವಲ್ಲದೆ ಸಂಸಾರ ಭ್ರಮಣಕಾರಣಂ ಪೆಱವು + ಒಳವೇ = ಎನ್ನುವ ಇವುಗಳಲ್ಲದೆ ಸಂಸಾರದಲ್ಲಿ ಮತ್ತೆ ಮತ್ತೆ ತಿರುಗಲು ಕಾರಣವಲ್ಲದೆ ಬೇರಯವು ಇವೆಯೇ?

**ಗದ್ಯಾನುಸರಣ:** ಮಾಂಸ ಜೇನು ಮತ್ತು ಹೆಂಡಗಳ ಸೇವನೆ, ಹಿಂಸೆಯಲ್ಲಿ ಆಸಕ್ತಿ, ಶ್ರೇಷ್ಠವಾದ ಜಿನಮತದಲ್ಲಿ ನಿರಾಸಕ್ತಿ, ಕೆಟ್ಟ ಹೆಂಗಸರ ಸಹವಾಸ – ಎನ್ನುವ ಇವುಗಳೇ ಸಂಸಾರದಲ್ಲಿ ಮತ್ತೆ ಮತ್ತೆ ತಿರುಗಲು ಕಾರಣವಲ್ಲದೆ ಬೇರೆಯಲ್ಲ.

**ಕಳಿಪಂ ಕಳ್ವನಗುರ್ವು ಪರ್ವೆ ಕೊಲಿಪಂ ಕೊಲ್ವಂ ಪರಸ್ತ್ರೀಯರಂ**
**ಕೊಳಿಪಂ ಕೊಳ್ವನೆನಿಪ್ಪ ಪಾಪಿಯುಮತಿಕ್ರೂರಾತ್ಮನುಂ ಸಾಧುಸಂ**
**ಕುಳಮಂ ಕಂಡೊಡೆ ಕಾಯ್ವನುಂ ಪಟಿವನುಂ ಧರ್ಮಕ್ಕತಿದ್ರೋಹನುಂ**
**ಖಳನುಂ ಕಳ್ಕಣಿಯುಂ ಘುಳುಮ್ಮನಿಟಿಗುಂ ಶ್ವಭ್ರಾಂತಮಂ ತಾಪಿನಂ**
**೮೧**

**ಪದವಿಭಾಗ–ಅನ್ವಯ–ಅರ್ಥ:** ಕಳಿಪಂ ಕಳ್ವನ್ = ಕಳ್ಳತನ ಮಾಡಿಸುವವನು ಮತ್ತು ಮಾಡುವವನು, ಅಗುರ್ವು ಪರ್ವೆ ಕೊಲಿಪಂ ಕೊಲ್ವಂ = ಭಯದಿಂದಾಗಿ ಕೊಲ್ಲಿಸುವವನು ಮತ್ತು ಕೊಲ್ಲುವವನು, ಪರಸ್ತ್ರೀಯರಂ ಕೊಳಿಪಂ ಕೊಳ್ವನ್ = ಪರಸ್ತ್ರೀಯರ ಸಹವಾಸ ಮಾಡಿಸುವವನು ಮತ್ತು ಮಾಡುವವನು, ಎನಿಪ್ಪ = ಎನ್ನಿಸಿದ, ಪಾಪಿಯುಂ + ಅತಿಕ್ರೂರಾತ್ಮನುಂ = ಪಾಪಿಯೂ ಕ್ರೂರಿಯೂ, ಸಾಧುಸಂಕುಳಮಂ ಕಂಡೊಡೆ ಕಾಯ್ವನುಂ ಪಟಿವನುಂ = ಸಾಧುಸಮೂಹವನ್ನು ಕಂಡು ಸಿಟ್ಟುಗೊಳ್ಳುವವನೂ ಹೀಯಾಳಿಸುವವನೂ, ಧರ್ಮಕ್ಕತಿದ್ರೋಹನುಂ ಖಳನುಂ = ಧರ್ಮದ್ರೋಹಿಯೂ ಖೂಳನೂ, ಕಳ್ಕಣಿಯುಂ = ಹೆಂಡಕುಡುಕನೂ, ಶ್ವಭ್ರ + ಅಂತಮಂ ತಾಪಿನಂ ಘುಳುಮ್ಮನೆ + ಇಟಿಗುಂ = ನರಕದ ತಳ ಸೇರುವ ಹಾಗೆ ಗುಳುಮ್ ಎಂದು ಬೀಳುತ್ತಾನೆ.

**ಗದ್ಯಾನುಸರಣ:** ಕಳ್ಳತನ ಮಾಡಿಸುವವನು ಮಾಡುವವನು, ಭಯದಿಂದಾಗಿ ಕೊಲ್ಲಿಸುವವನು ಕೊಲ್ಲುವವನು, ಪರಸ್ತ್ರೀಯರ ಸಹವಾಸ ಮಾಡಿಸುವವನು ಮಾಡುವವನು, ಪಾಪಿ, ಕ್ರೂರಿ, ಸಾಧುಸಮೂಹವನ್ನು ಕಂಡು ಸಿಟ್ಟುಗೊಳ್ಳುವವನು ಹೀಯಾಳಿಸುವವನು ಧರ್ಮದ್ರೋಹಿ ಖೂಳ ಹೆಂಡಕುಡುಕ – ಇವರೆಲ್ಲ ನರಕದ ತಳಕ್ಕೆ ಗುಳುಮ್ ಎಂದು ಬೀಳುತ್ತಾರೆ.

**ವಿಶೇಷ ವಿಚಾರ:** '೮೦–೮೧ ರ ಸಂದರ್ಭದಲ್ಲಿ ನರಕವರ್ಣನೆಯನ್ನು ಆರಂಭಿಸುವ ಮುನ್ನ ಪುರಾಣದಲ್ಲಿ ಬರುವ ವಿಷಯಸುಖ ಸಾಮಾನ್ಯದ ಕಡೆಗಿರುವ ಖಂಡನೆಯನ್ನು ಪಂಪನು ಅಷ್ಟಾಗಿ ಲವಲವಿಕೆಯಿಂದ ಒಪ್ಪದೆ .. .. ಸಂದರ್ಭದಿಂದ ಜಾರಿಕೊಳ್ಳುತ್ತಿರುವಂತೆ ಎನಿಸುವುದು' ಎನ್ನುತ್ತಾರೆ ಬಸವರಾಜು ಅವರು – 'ಆದಿಪುರಾಣ' ಈ ಪದ್ಯಗಳಿಗೆ ನೀಡಿರುವ ಟಿಪ್ಪಣಿ. ಈ ಕಾವ್ಯದ ಆರಂಭದಲ್ಲಿ

ಪಂಪನು ಹೇಳಿಕೊಳ್ಳುವ ರಸಿಕತೆಯ ವಿವರಗಳು, ಪಂಪಭಾರತದಲ್ಲಿ ಸ್ತುತಿಸುವ 'ಸಹಜಮನೋಜನೋಜ', ಲೋಕಪೂಜ್ಯವಾದ ತನ್ನ ಕಾವ್ಯವನ್ನು ಓದಿದವರಿಗೆ ಕೇಳಿದವರಿಗೆ ದೊರಕುವ ಫಲಗಳಲ್ಲಿನ 'ಇಷ್ಟಾಂಗನಾಸುರತಂ' – ಇವುಗಳನ್ನು ಬಲ್ಲವರಿಗೆ ಎಲ್. ಬ. ಅವರ ಅಭಿಪ್ರಾಯ ಸಮಂಜಸವಾಗಿ ಕಾಣುತ್ತದೆ.

**ವ॥ ಆ ನರಕಂಗಳುಂ ರತ್ನಶರ್ಕರಾವಾಳುಕಾಪಂಕಧೂಮತಮೋ ಮಹಾತಮಃ ಪ್ರಭಾನಾಮಮಂ ತಾಳ್ದಿದುವವರೊಳ್**

**ಅರ್ಥ:** ಆ ನರಕಂಗಳುಂ ರತ್ನಶರ್ಕರಾವಾಳುಕಾಪಂಕಧೂಮತಮೋಮಹಾತಮಃಪ್ರಭಾನಾಮಮಂ ತಾಳ್ದಿದುವು = ಆ ನರಕಗಳು ರತ್ನಪ್ರಭೆ, ಶರ್ಕರಾಪ್ರಭೆ, ವಾಲುಕಾಪ್ರಭೆ. ಪಂಕಪ್ರಭೆ, ಧೂಮಪ್ರಭೆ, ತಮಃಪ್ರಭೆ ಮತ್ತು ಮಹಾತಮಃಪ್ರಭೆ ಎಂಬ ಹೆಸರುಗಳನ್ನು ಪಡೆದವು; ಅವರೊಳ್ = ಅವುಗಳಲ್ಲಿ,

**ಮೇಗಣ ನಾಲ್ಕಱೊಳೈದಱ**
**ಮೇಗಣ ಭಾಗದೊಳಗುರ್ವು ಘರ್ಮಂ ಹಿಮದಿಂ**
**ದಾಗಳೆ ಮುರುಂಟುವರ್ ಮಹಿ**
**ಭಾಗದೊಳುೞಿದವಱೊಳಿನ್ನವೇೞುಂ ನರಕಂ** ೮೨

**ಪದವಿಭಾಗ–ಅನ್ವಯ–ಅರ್ಥ:** ಮೇಗಣ ನಾಲ್ಕಱೊಳ್ + ಐದಱ ಮೇಗಣ ಭಾಗದೊಳ್ = ಮೇಲಿನ ನಾಲ್ಕು ಮತ್ತು ಐದನೆಯದರ ಮೇಲ್ಭಾಗದಲ್ಲಿಯೂ, ಏೞುಂ ನರಕಂ ಅವಱೊಳ್ ಇನ್ನವು ಉೞಿದ ಮಹಿಭಾಗದೊಳ್ = ಏಳು ನರಕಗಳಲ್ಲಿ ಇನ್ನುಳಿದ ಭಾಗಗಳಲ್ಲಿಯೂ, ಅಗುರ್ವು ಘರ್ಮಂ ಹಿಮದಿಂದೆ + ಆಗಳೆ ಮುರುಂಟುವರ್ = ಭೀಕರತೆ ಉಷ್ಣತೆ ಮತ್ತು ಹಿಮಗಳು ಮುರುಟಿಹೋಗುವಂತೆ ಮಾಡುತ್ತವೆ;

**ಗದ್ಯಾನುಸರಣ:** ಏಳು ನರಕಗಳಲ್ಲಿ ಮೇಲಿನ ನಾಲ್ಕು ಮತ್ತು ಐದನೆಯದರ ಮೇಲ್ಭಾಗದಲ್ಲಿಯೂ, ಇನ್ನುಳಿದ ಭಾಗಗಳಲ್ಲಿನ ಭೀಕರತೆ ಉಷ್ಣತೆ ಮತ್ತು ಹಿಮಗಳು ಜೀವರನ್ನು ಮುರುಟಿಹೋಗುವಂತೆ ಮಾಡುತ್ತವೆ;

**ವ॥ ಮತ್ತಮವಱೊಳನುಕ್ರಮಂದಪ್ಪದೆ**

**ಅರ್ಥ:** ಮತ್ತಂ + ಅವಱೊಳ್ + ಅನುಕ್ರಮ + ತಪ್ಪದೆ = ಮತ್ತೆ ಅವುಗಳಲ್ಲಿ ಅನುಕ್ರಮವಾಗಿ,

**ಮೂವತ್ತಿರ್ಪತ್ತೈದಂ**
**ತಾವಗೆ ಪದಿನೈದು ಪತ್ತುಮಾಱಿಂಟೂನಂ**
**ಭವಿಪೊಡಿಂತಿವು ಲಕ್ಕೆಗ**
**ಳೇವೊಗೞ್ವುದೊ ಬೞಿಯುಮಯ್ದೆ ನರಕಬಿಲಂಗಳ್** ೮೩

**ಪದವಿಭಾಗ–ಅನ್ವಯ–ಅರ್ಥ:** ಮೂವತ್ತು + ಇರ್ಪತ್ತೈದು ಪದಿನೈದು ಪತ್ತುಂ + ಆಱು + ಅಯ್ದೂನಂ ಬೞೆಯುಂ + ಅಯ್ದೆ ಭಾವಿಪೊಡೆ ಇಂತಿವು ಲಕ್ಕೆಗಳ್ ನರಕಬಿಲಂಗಳ್ = ಮೂವತ್ತು ಇಪ್ಪತ್ತೈದು ಹದಿನೈದು ಹತ್ತು ಆರು ಅಯ್ದು ಐದಕ್ಕಿಂತ ಕಡಿಮೆ ಲಕ್ಷಗಳ, ಅಂತು + ಆವಗೆ ಏ + ಪೊಗೞ್ವುದೊ = ಹೀಗಿರುವ ನರಕಬಿಲಗಳನ್ನು ಏನೆಂದು ವಿವರಿಸುವುದು!

**ಗದ್ಯಾನುಸರಣ:** ಮೂವತ್ತು ಇಪ್ಪತ್ತೈದು ಹದಿನೈದು ಹತ್ತು ಆರು ಅಯ್ದು ಐದಕ್ಕಿಂತ ಸ್ವಲ್ಪ ಕಡಿಮೆ ಲಕ್ಷಗಳ ಲೆಕ್ಕದಲ್ಲಿರುವ ನರಕಬಿಲಗಳನ್ನು ಏನೆಂದು ವಿವರಿಸುವುದು!

**ವ॥ ಆ ಬಿಲಂಗಳುಮಿಂದ್ರಕಶ್ರೇಢೀಬದ್ಧಪ್ರಕೀರ್ಣಕಂಗಳೆಂದು ಮೂಱುತೆಱನಕ್ಕುಂ; ಅವಱ ಮೇಗಣಟ್ಟುಗಳೊಳಿಟ್ಟ ಜೇನ ಪುಟ್ಟಿಗಳ ನನುಕರಿಸುವತಿ ರೌದ್ರ ಬೀಭತ್ಸ ಕುತ್ಸತೋತ್ಪತ್ತಿಸ್ಥಾನಂಗಳೊಳ್ ಕೃಷ್ಣನೀಲ ಕಪೋತಲೇಶ್ಯಾರಭಪರಿಗ್ರತ್ವಾದ್ಯಶುಭಪರಿಣಾಮಂಗಳಿಂ ಜೀವಂನೆಲಸಿ ಬೞೆಯಮಂತರ್ಮುಹೂರ್ತದೊಳಾಹಾರ ಶರೀರೇಂದ್ರಿಯೋಚ್ಛ್ವಾಸಭಾಷಾ ಮನಃ ಪರ್ಯಾಪ್ತಿಗಳೊಳ್**

**ಪದವಿಭಾಗ–ಅನ್ವಯ–ಅರ್ಥ:** ಆ ಬಿಲಂಗಳುಂ = ಆ ಬಿಲಗಳು, ಇಂದ್ರಕ–ಶ್ರೇಢೀಬದ್ಧ–ಪ್ರಕೀರ್ಣಕಂಗಳ್ + ಎಂದು ಮೂಱುತೆಱನ್ + ಅಕ್ಕುಂ = ಇಂದ್ರಕ–ಶ್ರೇಢೀಬದ್ಧ–ಪ್ರಕೀರ್ಣಕ ಎಂದು ಮೂರು ಬಗೆಯವಾಗಿವೆ, ಅವಱ ಮೇಗಣಟ್ಟುಗಳೊಳ್ + ಇಟ್ಟ = ಅವುಗಳ ಮೇಲಿನ ಅಟ್ಟಗಳಲ್ಲಿಟ್ಟ, ಜೇನ ಪುಟ್ಟಿಗಳನ್ + ಅನುಕರಿಸುವ = ಜೇನಿನ ಹುಟ್ಟುಗಳನ್ನು ಹೋಲುವ, ಅತಿರೌದ್ರ ಬೀಭತ್ಸ ಕುತ್ಸತೋತ್ಪತ್ತಿ ಸ್ಥಾನಂಗಳೊಳ್ = ಅತಿರೌದ್ರ ಬೀಭತ್ಸ ಕುತ್ಸಿತೋತ್ಪತ್ತಿಸ್ಥಾನಗಳಲ್ಲಿ, ಕೃಷ್ಣ ನೀಲ ಕಪೋತ ಲೇಶ್ಯಾ ಬಹ್ವಾರಂಭ ಪರಿಗ್ರತ್ವ + ಆದಿ + ಅಶುಭ ಪರಿಣಾಮಂಗಳಿಂ = (ಆತ್ಮವನ್ನು ಪಾಪ–ಪುಣ್ಯಗಳಿಗೆ ಅಧೀನಗೊಳಿಸುವ) ಕೃಷ್ಣ ನೀಲ ಕಪೋತ ಲೇಶ್ಯಾ ಬಹ್ವಾರಂಭ ಪರಿಗ್ರಹತ್ವ ಮುಂತಾದ ಅಶುಭಗಳ ಕಾರಣದಿಂದ, ಜೀವಂ ನೆಲಸಿ = ಜೀವವು ನೆಲಸಿ, ಬೞೆಯಂ + ಅಂತರ್ + ಮುಹೂರ್ತದೊಳ್ = ಆನಂತರ ಅಂತರ್ಮುಹೂರ್ತದಲ್ಲಿ ಆಹಾರ + ಶರೀರ + ಇಂದ್ರಿಯ + ಉಚ್ಛ್ವಾಸ + ಭಾಷಾ + ಮನಃಪರ್ಯಾಪ್ತಿಗಳೊಳ್ = ಈ ಪರ್ಯಾಪ್ತಿಗಳಲ್ಲಿ,

**ಗದ್ಯಾನುಸರಣ:** ಆ ಬಿಲಗಳು ಇಂದ್ರಕ ಶ್ರೇಢೀಬದ್ಧ ಪ್ರಕೀರ್ಣಕ ಎಂದು ಮೂರು ಬಗೆಯವಾಗಿವೆ; ಅವುಗಳ ಮೇಲಿನ ಅಟ್ಟಗಳಲ್ಲಿಟ್ಟ, ಜೇನಿನ ಹುಟ್ಟುಗಳನ್ನು ಹೋಲುವ ಅತಿರೌದ್ರ ಬೀಭತ್ಸ ಕುತ್ಸಿತ ಎಂಬ ಹುಟ್ಟುವೆಡೆಗಳಲ್ಲಿ ಕೃಷ್ಣ ನೀಲ ಕಪೋತ ಲೇಶ್ಯಾ ಬಹ್ವಾರಂಭ ಪರಿಗ್ರಹತ್ವ ಮುಂತಾದ ಅಶುಭಗಳ ಕಾರಣದಿಂದ

ಜೀವವು ನೆಲಸಿರುತ್ತದೆ; ಆನಂತರ ಅಂತರ್ಮುಹೂರ್ತದಲ್ಲಿ ಆಹಾರ ಶರೀರ ಇಂದ್ರಿಯ ಉಚ್ಛ್ವಾಸ ಭಾಷೆ ಮತ್ತು ಮನಃಪರ್ಯಾಪ್ತಿಗಳಿಂದ ಕೂಟಡಿರುತ್ತದೆ.

ವಿಶೇಷ ವಿಚಾರ: ಶುಭಗಳು = ಆತ್ಮನನ್ನು ಪಾಪಪುಣ್ಯಗಳಿಗೆ ಅಧೀನಗೊಳಿಸುವ ಕಾರಣಗಳು; ಅಂತರ್ಮುಹೂರ್ತ = ಒಂದು ಮುಹೂರ್ತಕ್ಕಿಂತ ಕಡಿಮೆಯ ಕಾಲ (ಸುಮಾರು ೪೮ ನಿಮಿಷ); ಪರ್ಯಾಪ್ತಿ = ನಾಮಪ್ರಕೃತಿಗಳಲ್ಲಿ ಒಂದು, ಒಂದು ಶರೀರದ (ಸ್ಪರ್ಶ, ರಸ, ಗಂಧ, ವರ್ಣಗಳಿಂದ ಕೂಡಿದ) ಪುದ್ಗಲರಚನೆ ಪೂರ್ಣಗೊಂಡಿರುವುದು.

ಕೊಟ್ಟಸುಗಟ್ಟುಗಳಿಂದಂ
ತೊಟ್ಟನೆ ಪಱಿಪಟ್ಟು ಬೀೞ್ವವೊಲ್ ಬಿರ್ದು ನಭಂ
ಮುಟ್ಟೆ ಸಿಡಿಲ್ದೆಡೆಗಿಡುವಿನ
ಮೊಟ್ಟಿದ ಕೈದುಗಳ ಮೇಲೆ ಬಿರ್ದನನಾಗಳ್ ೮೪

ಪದವಿಭಾಗ-ಅನ್ವಯ-ಅರ್ಥ: ಕೊಟ್ಟಸು + ಕಟ್ಟುಗಳಿಂದಂ ತೊಟ್ಟನೆ ಪಱಿಪಟ್ಟು ಬೀೞ್ವವೊಲ್ ಬಿರ್ದು = ಸುಟ್ಟ ಮಾಂಸವು ಕಟ್ಟಿನಿಂದ ಕಳಚಿಕೊಂಡು ಬೀಳುವ ಹಾಗೆ ಬಿದ್ದು, ನಭಂ ಮುಟ್ಟೆ ಸಿಡಿಲಲ್ದು + ಎಡೆ + ಕಿಡುವಿನಂ + ಒಟ್ಟಿದ ಕೈದುಗಳ ಮೇಲೆ = ಆಕಾಶವನ್ನು ತಾಕುವ ಹಾಗೆ ಸಿಡಿದು ಜಾಗವೇ ಇಲ್ಲದಂತೆ ರಾಶಿಹಾಕಿದ ಆಯುಧಗಳ ಮೇಲೆ, ಬಿರ್ದನನ್ + ಆಗಳ್ = ಬಿದ್ದವನನ್ನು ಆಗ,

ಗದ್ಯಾನುಸರಣ: ಸುಟ್ಟ ಮಾಂಸವು ಕಟ್ಟಿನಿಂದ ಕಳಚಿಕೊಂಡು ಬೀಳುವ ಹಾಗೆ ಬಿದ್ದು, ಆಕಾಶವನ್ನು ತಾಕುವ ಹಾಗೆ ಸಿಡಿದು ಅಲ್ಲಿಂದ ಜಾಗವೇ ಇಲ್ಲದಂತೆ ರಾಶಿಹಾಕಿದ ಆಯುಧಗಳ ಮೇಲೆ ಬಿದ್ದ ಜೀವನನ್ನು ಆಗ,

ಮನದೊಳ್ ಮುನಿಸೊದವೆ ಪುರಾ
ತನನಾರಕರೋವದಿವನನಿಱಿ ತಱಿ ಕೊಲ್ ಮೆಲ್
ಎನೆ ಬಗೆದು ಬಗೆದು ಮನದೊಳ್
ಜನಿಯಿಸುಗುಮವಂಗೆ ಖಳವಿಭಂಗಜ್ಞಾನಂ ೮೫

ಪದವಿಭಾಗ-ಅನ್ವಯ-ಅರ್ಥ: ಪುರಾತನನಾರಕರ್ = ಹಳೆಯ ನರಕವಾಸಿಗಳು, ಮನದೊಳ್ ಮುನಿಸು + ಒದವೆ = ಮನಸ್ಸಿನಲ್ಲಿ ಕೋಪಿಸಿಕೊಂಡು, ಓವದೆ = ದಾಕ್ಷಿಣ್ಯವಿಲ್ಲದೆ, ಇವನನ್ + ಇಱಿ ತಱಿ ಕೊಲ್ ಮೆಲ್ = ಇವನನ್ನು ತಿವಿ ಕೊಚ್ಚಿಹಾಕು ಕೊಲ್ಲು ತಿನ್ನು, ಎನೆ ಬಗೆದು ಬಗೆದು = ಎಂದು ಕೂಗುವಾಗ, ಅವಂಗೆ ಮನದೊಳ್ ಖಳವಿಭಂಗಜ್ಞಾನಂ ಜನಿಯಸುಗುಂ = ಜೀವನ ಮನಸ್ಸಿನಲ್ಲಿ ಖಳವಿಭಂಗಜ್ಞಾನವು ಉಂಟಾಗುತ್ತದೆ.

**ಗದ್ಯಾನುಸರಣ:** ಹಳೆಯ ನರಕವಾಸಿಗಳು ಕೋಪಿಸಿಕೊಂಡು ದಾಕ್ಷಿಣ್ಯವಿಲ್ಲದೆ, 'ಇವನನ್ನು ತಿವಿ ಕೊಚ್ಚಿಹಾಕು ಕೊಲ್ಲು ತಿನ್ನು' ಎಂದು ಕೂಗುವಾಗ ಜೀವನ ಮನಸ್ಸಿನಲ್ಲಿ ಖಳನ ವಿಭಂಗಜ್ಞಾನವು ಉಂಟಾಗುತ್ತದೆ.

**ವಿಶೇಷ ವಿಚಾರ:** ವಿಭಂಗಜ್ಞಾನ = ಆತ್ಮನಿಗೆ ಅಹಿತವನ್ನುಂಟುಮಾಡುವ ಪದಾರ್ಥಗಳನ್ನು ತಿಳಿಯುವ ಮಿಥ್ಯಾಜ್ಞಾನ, ಇದರಲ್ಲಿ ಕುಮತಿ, ಕುಶ್ರುತ ಮತ್ತು ಕುಅವಧಿ ಎಂದು ಮೂರು ಬಗೆ.

ವ। ಅಂತು ಪುಟ್ಟಿದ ವಿಭಂಗಜ್ಞಾನದಿಂದಪಗತನರಕಲೋಕ ವೃತ್ತಾಂತರಾದಿಂ ಬಟಿಯುವೋರೊರ್ವರ ನೆಱಂಗಳುಮನನ್ಯೋನ್ಯ ವೈರ ಕಾರಣಂಗಳುಮನುಗ್ಘಡಿಸುತ್ತುಮೋರೊರ್ವ ರೋರೊರ್ವರನಿಕ್ಷು ಯಂತ್ರಂ ಗಳೊಳ್ ಕಬ್ಬಂ ಪಿಟಿವಂತೆ ಪಿಟಿವರುಂ, ಕಾಯ್ದು ವಜ್ರಮೂಷೆಯೊಳಿಕ್ಕಿ ಲೋಹಮಂ ಕರಗಿಸುವಂತೆ ಕರಗಿಸುವವರುಂ, ಬಾಟಿವಾಟಿ ತಿದಿ ಯುಗಿವರುಂ, ಮಿಡುಮಿಡುಕೆ ಬಡಿತಂಗಾಸುವರುಂ, ನೋಡೆ ನೋಡೆ ಕಣ್ಗಳಂ ಮೀಂಟುವರುಂ, ನುಡಿಯೆ ನುಡಿಯೆ ನಾಲಗೆಯುಂ ಪಿಡಿದು ಪೆಡತಲೆಯಿಂದುರ್ಚುವರುಂ, ಕಾಯ್ದು ಕರ್ಬೊನ್ನ ಸೂಜಿಗಳಂ ಬೆರಲ್ಗಳೊಳ್ ಬೆಟ್ಟುವರುಂ, ನಟ್ಟು ಪರಗುವವರುಂ, ತಳ್ತಳನೆ ಕುದಿವ ಕರ್ಬೊನ್ನ ಕಾಯ್ಗೊಂಡೆಣ್ಣೆಯೊಳ್ ಬಟಲೆ ತೆಗಪುವರುಂ, ಪಸಿಯು ತೊವಲ ತಿದಿಯೊಳ್ ಪುದಿದು ಪುಟಪಾಕಂ ಸುಡುವರುಂ, ಕಾಯ್ದು ಕಾವಲಿಗಳೊಳ್ ಮೊರ್ವುರನಾಗೆ ತಾಳಿಸುವರುಂ, ಕೂಟಶಾಲ್ಮಲಿಗಳನಡರವೇೞ್ದಿದರಂ ಬಟಿಯುನುರ್ಚುವರುಂ, ಉರಿವ ಕೈದೀವಿಗೆಗಳೊಳ್ ಮೊಗಮಂ ಚುರ್ಚುವರುಂ, ಒಳ್ಳನುರಿವ ಪುಣ್ಗಳೊಳ್ ಕ್ಷಾರವಾರಿಗಳನೆಱೆದೊರಸಿ ಕರ್ಚುವರುಂ, ಅಂತುಮಲ್ಲದೆಯುಂ,

**ಪದವಿಭಾಗ–ಅನ್ವಯ–ಅರ್ಥ:** ಅಂತು ಪುಟ್ಟಿದ ವಿಭಂಗಜ್ಞಾನದಿಂದೆ = ಹಾಗೆ ಹುಟ್ಟಿದ ವಿಭಂಗಜ್ಞಾನದಿಂದಾಗಿ, ಅಪಗತನರಕಲೋಕವೃತ್ತಾಂತರಾದಿಂ ಬಟಿಯಂ = ನರಕಲೋಕದ ವೃತ್ತಾಂತವನ್ನು ಅರಿತ ಬಳಿಕ, ಓರೊರ್ವರ ನೆಱಂಗಳುಮನ್ = ಒಬ್ಬರೊಬ್ಬರ ಮರ್ಮಗಳನ್ನು, ಅನ್ಯೋನ್ಯವೈರಕಾರಣಂ ಗಳುಮನ್ = ಪರಸ್ಪರರ ದ್ವೇಷದ ಕಾರಣಗಳನ್ನೂ ಉಗ್ಘಡಿಸುತ್ತುಂ = ಜೋರಾಗಿ ಸಾರುತ್ತ, ಓರೊರ್ವರೋರೊರ್ವರನ್ = ಒಬ್ಬರು ಇನ್ನೊಬ್ಬರನ್ನು, ಇಕ್ಷುಯಂತ್ರಂಗಳೊಳ್ ಕಬ್ಬಂ ಪಿಟಿವಂತೆ ಪಿಟಿವರುಂ = ಕಬ್ಬಿನ ಗಾಣದಲ್ಲಿ ಕಬ್ಬನ್ನಿಟ್ಟು ಹಿಂಡುವ ಹಾಗೆ ಹಿಂಡುವವರು, ಕಾಯ್ದು ವಜ್ರಮೂಷೆಯೊಳಿಕ್ಕಿ ಲೋಹಮಂ ಕರಗಿಸುವಂತೆ ಕರಗಿಸುವವರುಂ = ವಜ್ರದ ಮೂಸೆಗಳಲ್ಲಿಟ್ಟು

ಲೋಹವನ್ನು ಕರಗಿಸುವಂತೆ ಕರಗಿಸುವವರು, ಬಾಟೆವಾಟೆ ತಿದಿ + ಉಗಿವರುಂ ಬದುಕಿರುವಂತೆಯೇ ಚರ್ಮವನ್ನು ಸುಲಿಯುವವರು, ಮಿಡುಮಿಡುಕೆ ಬಡಿತಂ + ಕಾಸುವರುಂ = ಒದ್ದಾಡುವ ಹಾಗೆ ಬಡಿದು ಕಾಯಿಸುವವರು, ನೋಡೆ ನೋಡೆ ಕಣ್ಗಳಂ ಮೀಂಟುವರುಂ = ನೋಡುತ್ತಿರುವಂತೆಯೇ ಕಣ್ಣುಗಳನ್ನು ಕೀಳುವವರು, ನುಡಿಯೆ ನುಡಿಯೆ ನಾಲಗೆಯಂ ಪಿಡಿದು ಪೆಡತಲೆಯಿಂದೆ + ಉರ್ಚುವರುಂ = ಮಾತಾಡುತ್ತಿರುವಂತೆಯೇ ನಾಲಗೆಯನ್ನು ಹಿಡಿದುಕೊಂಡು ಹಿಂದಲೆಯಿಂದ ಎಳೆಯುವವರು, ಕಾಯ್ದ ಕರ್ಬೊನ್ನ ಸೂಜಿಗಳಂ ಬೆರಲ್ಗಳೊಳ್ ಬೆಟ್ಟುವರುಂ = ಕಾದ ಕಬ್ಬಿಣದ ಸೂಜಿಗಳಿಂದ ಬೆರಳುಗಳನ್ನು ಚುಚ್ಚುವವರು, ನಟ್ಟು ಪರಗುವವರುಂ = ಚುಚ್ಚಿ ಎಳೆಯುವವರು, ತಳ್ತಳನೆ ಕುದಿವ ಕರ್ಬೊನ್ನ ಕಾಯ್ಗೊಂಡ + ಎಣ್ಣೆಯೊಳ್ ಬಟಿಲೆ ತೆಗಪುವರುಂ = ತಕತಕನೆ ಕುದಿಯುವ ಎಣ್ಣೆಯಲ್ಲಿ ಬೇಯಿಸಿ ತೆಗೆಯುವವರು. ಪಸಿಯ ತೊವಲ ತಿದಿಯೊಳ್ ಪುದಿದು ಪುಟಪಾಕಂ ಸುಡುವರುಂ = ಹಸಿ ಚರ್ಮದ ತಿದಿಯಲ್ಲಿ ತುರುಕಿ ಬೇಯುವಂತೆ ಸುಡುವವರು, ಕಾಯ್ದ ಕಾವಲಿಗಳೊಳ್ ಮೊರ್ಮರನಾಗೆ ತಾಳಿಸುವರುಂ = ಕಾದ ಕಾವಲಿಗಳಲ್ಲಿ ಚಟಪಟ ಎನ್ನುವಂತೆ ಹುರಿಯುವವರು, ಕೂಟಶಾಲ್ಮಲಿಗಳನ್ + ಅಡರವೇಟ್ಟು + ಇದಿರಂ ಬಟಿಯನ್ + ಉರ್ಚುವರುಂ = ಕೃತಕವಾದ ಬೂರುಗದ ಮರವನ್ನು ಹತ್ತಲು ಹೇಳಿ ಎದುರಿನಿಂದಲೂ ಪಕ್ಕದಿಂದಲೂ ಚುಚ್ಚುವವರು, ಉರಿವ ಕೈದೀವಿಗೆಗಳೊಳ್ ಮೊಗಮಂ ಚುರ್ಚುವರುಂ = ಉರಿಯು ದೊಂದಿಗಳಲ್ಲಿ ಮುಖವನ್ನು ಒಡ್ಡುವವರು, ಒಳ್ಳನೆ + ಉರಿವ ಪುಣ್ಗಳೊಳ್ ಕ್ಷಾರವಾರಿಗಳನೆಜೆದು + ಒರಸಿ ಕರ್ಚುವರುಂ = ಸುಳುಸುಳನೆ ಉರಿಯುವ ಹುಣ್ಣುಗಳ ಮೆಲೆ ಉಪ್ಪು ನೀರನ್ನು ಸುರಿದು ಒರೆಸಿ ತೊಳೆಯುವವರು, ಅಂತುಮಲ್ಲದೆಯುಂ = ಅಷ್ಟೂ ಅಲ್ಲದೆ,

ಗದ್ಯಾನುಸರಣ: ಹಾಗೆ ಹುಟ್ಟಿದ ವಿಭಂಗಜ್ಞಾನದಿಂದಾಗಿ ನರಕಲೋಕದ ವೃತ್ತಾಂತವನ್ನು ಅರಿತ ಬಳಿಕ, ಪರಸ್ಪರರ ದ್ವೇಷದ ಜೋರಾಗಿ ಸಾರುತ್ತ, ಒಬ್ಬರೊಬ್ಬರನ್ನು ಕಬ್ಬನ ಗಾಳದಲ್ಲಿ ಕಬ್ಬನ್ನಿಟ್ಟು ಹಿಂಡುವ ಹಾಗೆ ಹಿಂಡುತ್ತಾರೆ; ಕಾದ ವಜ್ರದ ಮೂಸೆಗಳಲ್ಲಿಟ್ಟು ಲೋಹವನ್ನು ಕರಗಿಸುವಂತೆ ಕರಗಿಸುತ್ತಾರೆ; ಬದುಕಿರುವಂತೆಯೇ ಚರ್ಮವನ್ನು ಸುಲಿಯುತ್ತಾರೆ, ಒದ್ದಾಡುವ ಹಾಗೆ ಬಡಿದು ಕಾಯಿಸುತ್ತಾರೆ. ನೋಡುತ್ತಿರುವಂತೆಯೇ ಕಣ್ಣುಗಳನ್ನು ಕೀಳುತ್ತಾರೆ; ಮಾತಾಡುತ್ತಿರುವಂತೆಯೇ ನಾಲಗೆಯನ್ನು ಹಿಡಿದುಕೊಂಡು ಹಿಂದಲೆಯಿಂದ ಎಳೆಯುತ್ತಾರೆ; ಕಾದ ಕಬ್ಬಿಣದ ಸೂಜಿಗಳಿಂದ ಬೆರಳುಗಳನ್ನು ಚುಚ್ಚುತ್ತಾರೆ; ಚುಚ್ಚಿ ಎಳೆಯುತ್ತಾರೆ; ತಕತಕನೆ ಕುದಿಯುವ ಎಣ್ಣೆಯಲ್ಲಿ ಬೇಯಿಸಿ ತೆಗೆಯುತ್ತಾರೆ; ಹಸಿ ಚರ್ಮದ ತಿದಿಯಲ್ಲಿ ತುರುಕಿ ಬೇಯುವಂತೆ ಸುಡುತ್ತಾರೆ; ಕಾದ ಕಾವಲಿಗಳಲ್ಲಿ ಚಟಪಟ ಎನ್ನುವಂತೆ ಹುರಿಯುತ್ತಾರೆ; ಕೃತಕವಾದ ಬೂರುಗದ ಮರವನ್ನು

ಪತ್ತಲು ಹೇಳಿ ಎದುರಿನಿಂದಲೂ ಪಕ್ಕದಿಂದಲೂ ಚುಚ್ಚುತ್ತಾರೆ; ಉರಿಯು ದೊಂದಿಗಳಲ್ಲಿ ಮುಖವನ್ನು ಒಡ್ಡುತ್ತಾರೆ; ಸುಳುಸುಳನೆ ಉರಿಯುವ ಹುಣ್ಣುಗಳ ಮೇಲೆ ಯಪ್ಪು ನೀರನ್ನು ಸುರಿದು ಒರೆಸಿ ತೊಳೆಯುತ್ತಾರೆ, ಅಷ್ಟೂ ಅಲ್ಲದೆ,

**ಅಡಗಿನ ಬಸನಿಗನ್ನೈ ತಿನ್**
**ಪಿಡಿಯೆಂದವನಡಗನವನ ಬಾಯೊಳ್ ಗಿಡಿವರ್**
**ಕುಡಿ ಕಳ್ಳನೆಂದು ಕರಗಿಸಿ**
**ಕುಡಿಯಿಸುವರ್ ಲೋಹರಸಮನೆರ್ದೆಗರಗುವಿನಂ ೮೬**

**ಪದವಿಭಾಗ-ಅನ್ವಯ-ಅರ್ಥ**: ಅಡಗಿನ ಬಸನಿಗನ್ನೈ = ನೀನು ಮಾಂಸಪ್ರಿಯನಲ್ಲವೇ, ತಿನ್ ಪಿಡಿ + ಎಂದು + ಅವನ + ಅಡಗನ್ + ಅವನ ಬಾಯೊಳ್ ಗಿಡಿವರ್ = ತಿನ್ನು ತಗೋ ಎಂದು ಅವನ ಮಾಂಸವನ್ನೇ ಅವನ ಬಾಯಿಯಲ್ಲಿ ತುರುಕುತ್ತಾರೆ; ಕಳ್ಳನ್ ಕುಡಿ ಎಂದು ಲೋಹರಸಮನ್ ಕರಗಿಸಿ ಎರ್ದೆ + ಕರಗುವಿನಂ ಕುಡಿಯಿಸುವರ್ = ಹೆಂಡ ಕುಡಿ ಎಂದು ಲೋಹರಸವನ್ನು ಕತಗಿಸಿ ಎದೆಯು ಸುಟ್ಟುಹೋಗುವಂತೆ ಕುಡಿಸುತ್ತಾರೆ.

**ಗದ್ಯಾನುಸರಣ**: 'ನೀನು ಮಾಂಸಪ್ರಿಯನಲ್ಲವೇ, ತಿನ್ನು ತಗೋ' ಎಂದು ಅವನ ಮಾಂಸವನ್ನೇ ಅವನ ಬಾಯಿಯಲ್ಲಿ ತುರುಕುತ್ತಾರೆ; 'ಹೆಂಡ ಕುಡಿ' ಎಂದು ಲೋಹರಸವನ್ನು ಕರಗಿಸಿ ಎದೆಯು ಸುಟ್ಟುಹೋಗುವಂತೆ ಕುಡಿಸುತ್ತಾರೆ.

**ಪುಸಿ ಬಸನವೆಂದು ಕೆಲಬರ್**
**ಕುಸಿವರ್ ನಾಲಗೆಯನಿಕ್ಕುಟಿಳೊಳ್ ಪರವಧು ದು**
**ರ್ವ್ಯಸನಂ ನಿನಗೆಂದಮರ್ದ**
**ಪ್ಪಿಸುವರ್ ಕೆಂಪೆಸೆಯೆ ಕಾಯ್ದಯಃಪುತ್ರಿಕೆಯಂ ೮೭**

**ಪದವಿಭಾಗ-ಅನ್ವಯ-ಅರ್ಥ**: ಪುಸಿ ಬಸನವೆಂದು ಕೆಲಬರ್ ನಾಲಗೆಯನ್ ಇಕ್ಕುಟಿಳೊಳ್ ಕುಸಿವರ್ = ಸುಳ್ಳು ಹೇಳುವ ಚಟ ಎಂದು ಕೆಲವರು ನಾಲಗೆಯನ್ನು ಇಕ್ಕುಳದಿಂದ ಹಿಡಿದೆಳೆಯುತ್ತಾರೆ; ಪರವಧು ದುರ್ವ್ಯಸನಂ ನಿನಗೆ + ಎಂದು ಕೆಂಪೆಸೆಯೆ ಕಾಯ್ದಯಃಪುತ್ರಿಕೆಯಂ ಅಮರ್ದಪ್ಪಿಸುವರ್ = ನಿನಗೆ ಪರಸ್ತ್ರೀ ವ್ಯಾಮೋಹ ಎಂದು ಕೆಂಪಗೆ ಕಾದ ಕಬ್ಬಿಣದ ಬೊಂಬೆಯನ್ನು ಬಿಗಿಯಪ್ಪಿಸುತ್ತಾರೆ.

**ಗದ್ಯಾನುಸರಣ**: ಸುಳ್ಳು ಹೇಳುವ ಚಟ ಎಂದು ಕೆಲವರು ನಾಲಗೆಯನ್ನು ಇಕ್ಕುಳದಿಂದ ಹಿಡಿದೆಳೆಯುತ್ತಾರೆ; ನಿನಗೆ ಪರಸ್ತ್ರೀ ವ್ಯಾಮೋಹ ಎಂದು ಕೆಂಪಗೆ ಕಾದ ಕಬ್ಬಿಣದ ಬೊಂಬೆಯನ್ನು ಬಿಗಿಯಪ್ಪಿಸುತ್ತಾರೆ.

ವ। ಅಂತು ಸದ್ಯಸ್ಸಂತಾಪಿತಲೋಹ ಪುತ್ರಿಕಾಪರಿರಂಭಸಂಭೃತ ಪ್ಲೋಷಲಜ್ಜಾಂಗಳ ಗಳದ್ರುಧಿರವಿಚಳ ದಸ್ಥಿನಿರ್ಯನ್ಮಜ್ಜಾ ಶುಷ್ಯತ್ಕಂಠ ಸ್ವಿದ್ಯದ್ವದನ ನಿಮೀಳನೇತ್ರ ಸೀದದ್ಗಾತ್ರ ಮುಹುನ್ಮಾನಸಾಕ್ರಂದಿತ್ ಸ್ವರಪರಿಗತರ್ ಸೈರಿಸಲಾಱದೆ ತಡಬಡಿಸಿ ಪರಿತಂದತಿದ್ರುತ ಪ್ರವಾಹ ಮಾನಾರುಷ್ಕರ ದ್ರವಾವರ್ತಗಂಭೀರೆಯಂ ಗಂಭೀರನಾರಕ ಭೀಷಣ ಮಕರ ಮುಖಕು ಹರನಿಪತಿತಾಕ್ರಂದದಾರ್ತ ಪರುಷಸ್ವರವಿರಸ ಭಯಂಕರೆಯಂ ಭಯಂಕರ ಶಿಂಶುಮಾರವಿಕಟ ದಂಷ್ಟ್ರಾಕ್ರ ಕಚಪಾಟ್ಯಮಾನ ನಾರಕನಿಕರ ರುಧಿರಚ್ಛಟಾಚ್ಛಾ ರುಣಾರುಣಿತ ಸಲಿಲ ಹರಿಕಾನಿಕರ ಕರಾಳೆಯಂ ಕರಾಳನೇತ್ರ ಚಕ್ರಚರ್ವಿತ ನಿಕೀರ್ಣ ನಿರಯಜನಿ ಕುರುಂ ಬಶಲ್ಯಶಕಲ ಪರಿಪೂರಿತ ಧವಳಪ್ಲವ ದುರ್ನಿರೀಕ್ಷಣ ವಿಷಮೆಯಂ ವಿಷಮಕಠೋರಕೂರ್ಮ ಘರ್ಮ ನಿರ್ಭರೋಚ್ಛ್ವಾಸ ಭರದ್ವೈಧೀಭವ ದಂಭಃಪ್ರಕಟಿತಾಗಾಧ ರಾಂಧ್ರಾವರ್ತ ಮಾನಜಳಚರ ಸಂಚರಣ ವಿಸ್ಮಯಯನೀಯ ಭಯಾ ನಕೆಯಂ ಭಯಾನಕೋಭಯತಟಗುಹಾ ಗಹ್ವರನಿರ್ಜಜ್ಝರ ದಜಗರ ಗಳಗಳಿತಗರಳ ಶಬಳಿತಸಲಿಲಪ್ರವಾಹೆಯಂ ಪ್ರವಾಹಾತ್ಯುಷ್ಮತಾಪಹಸಿತ ಪ್ರಳಯ ಕಾಲಪ್ರೌಢತರತರಣಿಯಂ ವೈತರಣಿಯಂ ಪೊಕ್ಕಾಗಳ್,

ಪದವಿಭಾಗ–ಅನ್ವಯ–ಅರ್ಥ: ಅಂತು = ಹೀಗೆ, ಸದ್ಯಃ + ಸಂತಾಪಿತ = ಆಗ ತಾನೆ ಕಾಯಿಸಿದ, ಲೋಹಪುತ್ರಿಕಾಪರಿರಂಭಸಂಭೃತ = ಲೋಹದ ಬೊಂಬೆಯನ್ನು ಅಪ್ಪಿಕೊಂಡದ್ದರಿಂದಾಗಿ, ಪ್ಲೋಷಲಜ್ಜಾಂಗಳ = ಬೀಳುವ ಮಾಂಸ, ಗಳತ್ + ರುಧಿರ = ಸುರಿಯುವ ರಕ್ತ, ವಿಚಳತ್ + ಅಸ್ಥಿ = ಸಡಿಲವಾದ ಮೂಳೆಗಳು, ನಿರ್ಯತ್ + ಮಜ್ಜಾ = ಹೊರಬರುವ ನೆಣ, ಶುಷ್ಯತ್ + ಕಂಠ = ಒಳಗಿದ ಗಂಟಲು, ಸ್ವಿದ್ಯತ್ + ವದನ = ಬೆವರುವ ಮುಖ, ನಿಮೀಳನೇತ್ರ = ಮುಚ್ಚಿದ ಕಣ್ಣಾಲಿ, ಸೀದತ್ + ಗಾತ್ರ = ಬೆಂದು ಹೋದ ಶರೀರ, ಮುಹುತ್ + ಮಾನಸ = ಭ್ರಮೆಗೊಂಡ ಮನಸ್ಸು, ಆಕ್ರಂದಿತ್ ಸ್ವರ = ಗೋಳಾಟದ ಧ್ವನಿ, ಪರಿಗತರ್ = ಕೂಡಿ, ಸೈರಿಸಲಾಱದೆ ತಡಬಡಿಸಿ ಪರಿತಂದು = ಸಹಿಸಿಕೊಳ್ಳಲಾರದೆ ದಡಬಡ ಬಂದು, ಅತಿದ್ರುತಪ್ರವಾಹಮಾನ = ಬಹು ವೇಗವಾಗಿ ಹರಿಯುವ, ಆರುಷ್ಕರದ್ರವ + ಆವರ್ತಗಂಭೀರೆಯಂ = ಗೇರುಮರದ ರಸದ ಸುಳಿಗಳುಳ್ಳ ಆಳವಾದುದೂ, ಗಂಭೀರನಾರಕ ಭೀಷಣ = ಮಹಾ ರುದ್ರ ಭೀಕರವಾದ, ಮಕರಮುಖಕುಹರನಿಪತಿತ = ಮೊಸಳೆಗಳ ಬಾಯೆಂಬ ಗುಂಡಿಯಲ್ಲಿ ಬಿದ್ದು, ಆಕ್ರಂದತ್ + ಆರ್ತಪರುಷಸ್ವರವಿರಸಭಯಂಕರೆಯಂ = ಕಿರಿಚುವ ಕರ್ಕಶಸ್ವರದಿಂದ ಕೂಡಿ ಭಯಂಕರವಾದ, ಭಯಂಕರಶಿಂಶುಮಾರವಿಕಟದಂಷ್ಟ್ರಾಕ್ರಕಚಪಾಟ್ಯಮಾನ = ಭಯಂಕರವಾದ ಮೊಸಳೆಗಳ ವಿಕಟವಾದ ಕೋರೆಗಳೆಂಬ ಗರಗಸದಿಂದ ಸೀಳಲ್ಪಡುವ, ನಾರಕನಿಕರರುಧಿರತ್ + ಛಟ + ಅಚ್ಛ + ಅರುಣಾರುಣಿತಸಲಿಲ = ನಾರಕಿಗಳ ಸಮೂಹದಿಂದ ಸುರಿಯುವ ರಕ್ತದಿಂದ ಕೆಂಪಾದ ನೀರಿನ, ಹರಿಕಾನಿಕರಕರಾಳೆಯಂ = ಅಲೆಗಳ ಪರಂಪರೆಯಿಂದ ಕೂಡಿ ಕರಾಳವಾದ, ಕರಾಳನೇತ್ರ ಚಕ್ರಚರ್ವಿತ = ಭಯಕಂರ ನೋಟದ ಮೊಸಳೆಗಳ ಅಗಿಯುವಿಕೆಯಿಂದ,

ನಿಕೀರ್ಣನಿರಯಜನಿಕುರುಂಬ = ಚೆಲ್ಲಿದ ನರಕವಾಸಿಗಳ ಗುಂಪಿನ, ಶಲ್ಯಶಕಲಪರಿಪೂರಿತ = ಮೂಳೆಗಳ ತುಂಡುಗಳಿಂದ ಕೂಡಿ, ಧವಳಪ್ಲವದುರ್ನಿರೀಕ್ಷಣವಿಷಮೆಯಂ = ಬೆಳ್ಳಗಾದ ಪ್ರವಾಹದಿಂದ ನೋಡಲು ಹೆದರಿಕೆಯುಂಟು ಮಾಡುವ, ವಿಷಮಕಠೋರಕೂರ್ಮಘರ್ಮನಿರ್ಭರ + ಉಚ್ಛ್ವಾಸಭರತ್ = ವಿಷಮಯವೂ ಕಠೋರವೂ ಆದ ಮೊಸಳೆಗಳ ಉಸಿರಾಟದ ಭರದಿಂದ, ದ್ವೈಧೀಭವತ್ = ಎರಡು ಕವಲಾಗಿ, ಅಂಭಃಪ್ರಕಟಿತ + ಅಗಾಧರಂಧ್ರ + ಆವರ್ತಮಾನ = ನೀರಿನಲ್ಲಿನ ಅಗಾಧವಾದ ನೀರಿನ ಸುಳಿಗಳಲ್ಲಿ ಸುಳಿದು, ಜಳಚರ ಸಂಚರಣವಿಸ್ಮಯನೀಯಭಯಾನಕೆಯಂ = ತೇಲಾಡುವ ಜಲಚರಗಳಿಂದ ಕೂಡಿ ಅಚ್ಚರಿ ಹುಟ್ಟಿಸುವಷ್ಟು ಭಯಂಕರವಾದ, ಭಯಾನಕ + ಉಭಯತಟಗುಹಾಗಹ್ವರನಿರ್ಜಜ್ಝರತ್ = ಭೀಕರವಾದ ಎರಡೂ ದಡಗಳಲ್ಲಿನ ಗುಹೆಗಳ ದೊಗರುಗಳಿಂದ ಹೊರಬೀಳುವ, ಅಜಗರಗಳಗಳಿತಗರಳಶಬಳಿತಸಲಿಲಪ್ರವಾಹೆಯಂ = ಹೆಬ್ಬಾವುಗಳ ಗಂಟಲಿನ ವಿಷದಿಂದಾಗಿ ಬಣ್ಣಬಣ್ಣವಾದ ನೀರಿನ ಪ್ರವಾಹದಿಂದ, ಪ್ರವಾಹ + ಅತಿ + ಉಷ್ಮತಾಪಹಸಿತ = ಪ್ರವಾಹದ ಹೆಚ್ಚಿನ ತಾಪದಿಂದ ನಸುನಗುವ, ಪ್ರಳಯಕಾಲಪ್ರೌಢತರತರಣಿಯಂ = ಪ್ರಳಯಕಾಲದ ಬಿರುಸಿನ ಸೂರ್ಯನಂತಿರುವ, ವೈತರಣಿಯಂ ಪೊಕ್ಕಾಗಳ್ = ವೈತರಣಿಯನ್ನು ಹೊಕ್ಕಾಗ,

**ಗದ್ಯಾನುಸರಣ:** ಹೀಗೆ, ಆಗ ತಾನೆ ಕಾಯಿಸಿದ ಲೋಹದ ಬೊಂಬೆಯನ್ನು ಅಪ್ಪಿಕೊಂಡದ್ದರಿಂದಾಗಿ ಬೀಳುವ ಮಾಂಸ, ಸುರಿಯುವ ರಕ್ತ, ಸಡಿಲವಾದ ಮೂಳೆಗಳು, ಹೊರಬರುವ ನೆಣ, ಒಳಗಿದ ಗಂಟಲು, ಬೆವರಿದ ಮುಖ, ಮುಚ್ಚಿದ ಕಣ್ಣಾಲಿ, ಬೆಂದು ಹೋದ ಶರೀರ, ಭ್ರಮೆಗೊಂಡ ಮನಸ್ಸು, ಗೋಳಾಟದ ಧ್ವನಿಗಳಿಂದ ಕೂಡಿ ಸಹಿಸಿಕೊಳ್ಳಲಾರದೆ ನರಕವಾಸಿಗಳು ದಡಬಡ ಬಂದು, ವೈತರಣಿ ನದಿಯಲ್ಲಿ ಬಂದು ಬೀಳುತ್ತಾರೆ; ಆ ನದಿಯಾದರೋ, ಬಹು ವೇಗವಾಗಿ ಹರಿಯುವ ಗೇರುಮರದ ರಸದ ಸುಳಿಗಳಿದ್ದು ಆಳವಾದುದು; ಮಹಾ ರುದ್ರ ಭೀಕರವಾದ ಮೊಸಳೆಗಳ ಬಾಯೆಂಬ ಗುಂಡಿಯಲ್ಲಿ ಬಿದ್ದು ಕಿರಿಚುವವರ ಕರ್ಕಶಸ್ವರದಿಂದ ಕೂಡಿ ಭಯಂಕರವಾದುದು; ಭಯಂಕರವಾದ ಮೊಸಳೆಗಳ ವಿಕಟವಾದ ಕೋರೆಗಳೆಂಬ ಗರಗಸದಿಂದ ಸೀಳಲ್ಪಟ್ಟ ನಾರಕಿಗಳ ಸಮೂಹದಿಂದ ಸುರಿಯುವ ರಕ್ತದಿಂದ ಕೆಂಪಾದ ನೀರಿನ ಅಲೆಗಳ ಪರಂಪರೆಯಿಂದ ಕೂಡಿ ಕರಾಳವಾದುದು; ಭಯಕಂರ ನೋಟದ ಮೊಸಳೆಗಳ ಅಗಿಯುವಿಕೆಯಿಂದ ಚೆಲ್ಲಿದ ನರಕವಾಸಿಗಳ ಗುಂಪಿನ ಮೂಳೆಗಳ ತುಂಡುಗಳಿಂದ ಕೂಡಿ ಬೆಳ್ಳಗಾದ ಪ್ರವಾಹದಿಂದ ನೋಡಲು ಹೆದರಿಕೆಯುಂಟುಮಾಡುವಂಥದು; ವಿಷಮಯವೂ ಕಠೋರವೂ ಆದ ಮೊಸಳೆಗಳ ಉಸಿರಾಟದ ಭರದಿಂದ ಎರಡು ಕವಲಾದ ನೀರಿನಲ್ಲಿನ ಅಗಾಧವಾದ ನೀರಿನ

ಸುಳಿಗಳಲ್ಲಿ ಸುಳಿದು ತೇಲಾಡುವ ಜಲಚರಗಳಿಂದ ಕೂಡಿ ಅಚ್ಚರಿ ಹುಟ್ಟಿಸುವಷ್ಟು ಭಯಂಕರವಾದುದು; ಭೀಕರವಾದ ಎರಡೂ ದಡಗಳಲ್ಲಿನ ಗುಹೆಗಳ ದೊಗರುಗಳಿಂದ ಹೊರಬೀಳುವ ಹೆಬ್ಬಾವುಗಳ ಗಂಟಲಿನ ವಿಷದಿಂದಾಗಿ ಬಣ್ಣಬಣ್ಣವಾದ ನೀರಿನ ಪ್ರವಾಹದ ಹೆಚ್ಚಿನ ತಾಪದಿಂದ ನಸುನಗುವ ಪ್ರಳಯಕಾಲದ ಬಿರುಸಿನ ಸೂರ್ಯನಂತಿರುವಂಥದು.

**ಸುಡುವುದು ನಂಜುನೀರ್ ಪಿಡಿದು ನುಂಗುವುವಲ್ಲಿಯು ಮೀಂಗಳೆತ್ತಮೋ**
**ರಡಿ ಮಿಡುಕಲ್ಕೆ ಬಾರದೆಮಗಾರ್ ಶರಣೆಲ್ಲಿಗೆ ಪೋಪೆವೆಂದು ಮೆ**
**ಟ್ಟಿಡಿನಸಿಪತ್ರನಂದನಮನೊಯ್ಯನೆ ಸಾರ್ವುದುಮಲ್ಲಿ ಮೈಯೊಳ**
**ರ್ದಿಡುವುವು ಪತ್ರಪುಷ್ಪಫಲಸಂಕುಳದಂದದ ಶಸ್ತ್ರಕೋಟಿಗಳ್ ೮೮**

**ಪದವಿಭಾಗ-ಅನ್ವಯ-ಅರ್ಥ:** ಅಲ್ಲಿಯ ನಂಜುನೀರ್ ಸುಡುವುದು = ಆ ನದಿಯ ವಿಷದ ನೀರು ಸುಡುತ್ತದೆ, ಮೀಂಗಳ್ ಪಿಡಿದು ನುಂಗುವುವು = ಮೀನುಗಳು ಹಿಡಿದು ನುಂಗುತ್ತವೆ, ಎತ್ತಂ + ಓರಡಿ ಮಿಡುಕಲ್ಕೆ ಬಾರದು = ಯಾವ ಕಡೆಯೂ ಒಂದು ಅಡಿಯಾದರೂ ಅಲುಗಾಡಲು ಆಸ್ಪದವಿಲ್ಲ, ಎಮಗಾರ್ ಶರಣ್ + ಎಲ್ಲಿಗೆ ಪೋಪೆವು + ಎಂದು = ನಮಗೆ ದಿಕ್ಕು ಯಾರು ಎಲ್ಲಿಗೆ ಹೋಗೋಣ ಎಂದು, ಮೆಟ್ಟಿಡಿನ್ ಒಯ್ಯನೆ ಅಸಿಪತ್ರನಂದನಮನ್ ಸಾರ್ವುದುಂ = ದಿಕ್ಕುಗಾಣದೆ ನಿಧಾನವಾಗಿ ಕತ್ತಿಯಂತಹ ಎಲೆಗಳ ತೋಟವನ್ನು ಹೊಕ್ಕರೆ, ಅಲ್ಲಿ ಪತ್ರಪುಷ್ಪಫಲಸಂಕುಳದಂದದ ಶಸ್ತ್ರಕೋಟಿಗಳ್ ಮೈಯೊಳರ್ದಿ + ಇಡುವುವು = ಅಲ್ಲಿ ಎಲೆ ಹೂ ಹಣ್ಣುಗಳಂತಿರುವ ಅಸಂಖ್ಯಾತ ಆಯುಧಗಳು ಮೈಯನ್ನೆಲ್ಲ ಆಳವಾಗಿ ಇರಿಯುತ್ತವೆ.

**ಗದ್ಯಾನುಸರಣ:** 'ನದಿಯ ವಿಷದ ನೀರು ಸುಡುತ್ತದೆ, ಮೀನುಗಳು ಹಿಡಿದು ನುಂಗುತ್ತವೆ, ಯಾವ ಕಡೆಯೂ ಸ್ವಲ್ಪವಾದರೂ ಅಲುಗಾಡಲು ಆಸ್ಪದವಿಲ್ಲ, ನಮಗೆ ದಿಕ್ಕು ಯಾರು ಎಲ್ಲಿಗೆ ಹೋಗೋಣ' ಎಂದು ದಿಕ್ಕುಗಾಣದೆ ನಿಧಾನವಾಗಿ ಕತ್ತಿಯಂತಹ ಎಲೆಗಳ ತೋಟವನ್ನು ಹೊಕ್ಕರೆ ಅಲ್ಲಿ ಎಲೆ ಹೂ ಹಣ್ಣುಗಳಂತಿರುವ ಅಸಂಖ್ಯಾತ ಆಯುಧಗಳು ಮೈಯನ್ನೆಲ್ಲ ಆಳವಾಗಿ ಇರಿಯುತ್ತವೆ.

**ವ। ಅಂತು ಶಾರೀರಮಾನಸಕ್ಷೇತ್ರಜಪರಸ್ಪರೋದೀರಿತದನುಜೋದೀರೀತಂಗಳೆಂಬಯ್ದುಂ ತೆಱದ ದುಃಖಂಗಳೊಳರ್ದು ನಿಮಿಷಮಾತ್ರಮುಪ್ಪೊಡಮುಸಿರ್ಪತ್ತುಂ ಪಡೆಯದೆ**

**ಪದವಿಭಾಗ-ಅನ್ವಯ-ಅರ್ಥ:** ಅಂತು = ಹೀಗೆ, ಶಾರೀರಮಾನಸಕ್ಷೇತ್ರಜಪರಸ್ಪರೋದೀರಿತದನುಜೋದೀರೀತಂಗಳೆಂಬ = ಶಾರೀರ, ಮಾನಸ, ಕ್ಷೇತ್ರಜ, ಪರಸ್ಪರೋದೀರಿತ, ದನುಜೋದೀರೀತ ಎನ್ನುವ, ಅಯ್ದುಂ ತೆಱದ ದುಃಖಂಗಳೊಳ್ + ಅರ್ದು = ಐದು ಬೆಗಾದ ದುಖಗಳಲ್ಲಿ ಮುಳುಗಿ, ನಿಮಿಷಮಾತ್ರಂ +

ಅಪ್ಪೊಡಂ + ಉಸಿರ್ + ಪತ್ತಂ ಪಡೆಯದೆ = ನಿಮಿಷ ಕಾಲವಾದರೂ ಉಸಿರಾಟಕ್ಕೆ ಅವಕಾಶವಿರದೆ

**ಗದ್ಯಾನುಸರಣ:** ಹೀಗೆ ಅಲ್ಲಿ ಶಾರೀರ, ಮಾನಸ, ಕ್ಷೇತ್ರಜ, ಪರಸ್ಪರೋದೀರಿತ, ದನುಜೋದೀರೀತ ಎನ್ನುವ ಐದು ಬೆಗಾದ ದುಖಗಳಲ್ಲಿ ಮುಳುಗಿ, ನಿಮಿಷ ಕಾಲವಾದರೂ ಉಸಿರಾಟಕ್ಕೆ ಅವಕಾಶವಿರುವುದಿಲ್ಲ.

**ವಿಶೇಷ ವಿಚಾರ:** ಇಲ್ಲಿನ ದುಃಖಗಳು ಕ್ರಮವಾಗಿ ದೇಹದಲ್ಲಿ ಉಂಟಾಗುವ, ಮನಸ್ಸಿನಲ್ಲಿ ಉಂಟಾಗುವ, ಸ್ಥಳದ ಕಾರಣದಿಂದುಂಟಾಗುವ, ಪರಸ್ಪರರಿಂದ ಉಂಟಾಗುವ ಹಾಗೂ ರಾಕ್ಷಸರಿಂದ ಉಂಟಾಗುವ ಕ್ಲೇಶಗಳನ್ನು ಸೂಚಿಸುತ್ತವೆ.

**ನರಕನಗರಲಗ್ನಾಕಸ್ಮಿಕಾಗ್ನಿಸ್ಫುಲಿಂಗ**
**ಸ್ಫುರದವಿರಳಲಾಕ್ಷಗೇಹಪೂರೈಕಭಾವ**
**ತ್ವರಿತವಿಚಳದಸ್ಥಿಗ್ರಂಥಿಸಂಸ್ಥಾನಬಂಧರ್**
**ಖರಪರುಷನಿನಾದರ್ ನಾರಕರ್ ಬರ್ದುಂತಿರ್ಪರ್** ೮೯

**ಪದವಿಭಾಗ-ಅನ್ವಯ-ಅರ್ಥ:** ನರಕನಗರ ಲಗ್ನ = ನರಕನಗರದಲ್ಲಿ ಉಂಟಾಗುವ, ಆಕಸ್ಮಿಕ + ಅಗ್ನಿ ಸ್ಫುಲಿಂಗ ಸ್ಫುರತ್ = ಆಕಸ್ಮಿಕ ಬೆಂಕಿಯಿಂದ ಹೊಮ್ಮುವ ಕಿಡಿಗಳಿಂದ, ಅವಿರಳ = ಒತ್ತೊತ್ತಾಗಿರುವ, ಲಾಕ್ಷಗೇಹಪೂರ = ಅರಗಿನ ಮನೆಗಳ ಪ್ರವಾಹದಿಂದ, ಏಕಭಾವ = ಒಂದೇ ಸಮನೆ, ತ್ವರಿತವಿಚಳತ್ = ಬೇಗನೆ ಸಡಿಲಗೊಳ್ಳುವ, ಅಸ್ಥಿಗ್ರಂಥಿ ಸಂಸ್ಥಾನಬಂಧರ್ = ಮೂಳೆಕೀಲುಗಳು ಮತ್ತು ಶರೀರದಿಂದ ಕೂಡಿದ, ಖರಪರುಷನಿನಾದರ್ ನಾರಕರ್ = ಜೋರಾಗಿ ಕರ್ಕಶವಾಗಿ ಕಿರಿಚುತ್ತ, ಬರ್ದುಂತಿರ್ಪರ್ = ಬದುಕುತ್ತಾರೆ

**ಗದ್ಯಾನುಸರಣ:** ನರಕನಗರದಲ್ಲಿ ಉಂಟಾಗುವ ಆಕಸ್ಮಿಕ ಬೆಂಕಿಯಿಂದ ಹೊಮ್ಮುವ ಕಿಡಿಗಳಿಂದ ಒತ್ತೊತ್ತಾದ ಅರಗಿನ ಮನೆಗಳ ಪ್ರವಾಹ ಒಂದೇ ಸಮನೆ ಹರಿಯುತ್ತದೆ; ಅದರಿಂದ ಮೂಳೆಕೀಲುಗಳು ಮತ್ತು ಶರೀರವು ಬೇಗನೆ ಸಡಿಲಗೊಳುತ್ತವೆ; ಈ ನೋವಿನಿಂದ ಜೋರಾಗಿ ಕರ್ಕಶವಾಗಿ ಕಿರಿಚುತ್ತ ನರಕವಾಸಿಗಳು ಬದುಕುತ್ತಾರೆ.

**ವಾನರವಾರಣೋಷ್ಟ್ರಖರಮತ್ಸ್ಯಕಳೇವರಪೂತಿಗಂಧಮೇ**
**ನೇನೊಳವುಳ್ಳುವೊಂದೆಡೆಗೆ ಬಂದುಮಿವಂದಿರ ಮೆಯ್ಯ ಗಂಧದು**
**ದ್ದಾನಿಗೆ ವಾರದೆಂಬಿನಮದೇಂ ನೆಱೆ ಪೋಲ್ತುದೊ ಚಂಡಹುಂಡಸಂ**
**ಸ್ಥಾನದಗುಂತಿದೀವಿದ ತಡಂಗಮನಂಗದ ಪಾಂಗವಂದಿರಾ** ೯೦

**ಪದವಿಭಾಗ-ಅನ್ವಯ-ಅರ್ಥ:** ವಾನರ ವಾರಣ + ಉಷ್ಟ್ರ ಖರ ಮತ್ಸ್ಯ ಕಳೇವರಪೂತಿಗಂಧಂ = ಕೋತಿ ಆನೆ ಒಂಟೆ ಕತ್ತೆ ಮೀನುಗಳ ಹೆಣಗಳ

ದುರ್ನಾತವು, ಏನೇನೊಳವು + ಉಳ್ಳುವು + ಒಂದೆಡೆಗೆ ಬಂದುಂ = ಏನೇನು ಇವೆಯೋ ಅವೆಲ್ಲ ಒಟ್ಟಿಗೆ ಸೇರಿದರೂ, ಇವಂದಿರ ಮೆಯ್ಯ ಗಂಧದ + ಉದ್ದಾನಿಗೆ ವಾರದು = ಈ ನರಕವಾಸಿಗಳ ದುರ್ವಾನೆಯ ಹೋಲಿಕೆಗೆ ಬರುವುದಿಲ್ಲ; ಎಂಬಿನಂ = ಎನ್ನುವಷ್ಟರ ಮಟ್ಟಿಗೆ, ಅವಂದಿರಾ = ಆ ನರಕವಾಸಿಗಳ, ಅಂಗದ ಪಾಂಗು = ದೇಹದ ರೀತಿಯು, ಚಂಡಹುಂಡಸಂಸ್ಥಾನದ = ಭೀಕರ ಹುಂಡಸಂಸ್ಥಾನದ, ಅಗುಂತಿ + ತೀವಿದ = ಅತಿರೇಕದಿಂದ ಕೂಡಿದ, ತಡಂಗಮನ್ = ತುದಿಯನ್ನು, ಅದೇಂ ನೆಜ಼್ ಪೋಲ್ತುದೊ = ಅದೇನು ಹೋಲುತ್ತದೆಯೋ!

**ಗದ್ಯಾನುಸರಣ:** ಕೋತಿ ಆನೆ ಒಂಟೆ ಕತ್ತೆ ಮೀನುಗಳ ಹೆಣಗಳ ದುರ್ನಾತ ಹಾಗೂ ಇನ್ನೂ ಏನೇನು ಇವೆಯೋ ಅವೆಲ್ಲ ಒಟ್ಟಿಗೆ ಸೇರಿದರೂ ಈ ನರಕವಾಸಿಗಳ ದುರ್ವಾನೆಯ ಹೋಲಿಕೆಗೆ ಬರುವುದಿಲ್ಲ ಎನ್ನುವಷ್ಟರ ಮಟ್ಟಿಗೆ ಆ ನರಕವಾಸಿಗಳ ದೇಹದ ರೀತಿ; ಅದು ಭೀಕರ ಹುಂಡಸಂಸ್ಥಾನದ ಅತಿರೇಕದ ತುದಿ.

**ವಿಶೇಷ ವಿಚಾರ:** ಇಲ್ಲಿನ 'ಚಂಡ ಹುಂಡಸಂಸ್ಥಾನದ ದಗುಂತಿದೀವಿದ' ಎಂಬ ಭಾಗ ಎಲ್. ಬಸವರಾಜು ಅವರ ಆವೃತ್ತಿಯದು; ಟಿವಿವೆಂ ಅವರ ಆವೃತ್ತಿಯಲ್ಲಿ 'ಚಂಡಹುಂಡಸಂಸ್ಥಾನದೆ ಗುಂಡುದೀವಿದ' ಎಂಬ ಪಾಠವಿದೆ.

**ದೊರೆಕೊಂಡ ಕೃಷ್ಣಲೇಶ್ಯಾ**
**ಪರಿಣಾಮಮೆ ಕೃಷ್ಣವರ್ಣಮಂ ಪುಟ್ಟಿಸಿದಂ**
**ತಿರೆ ಕರಿಕರ್ ಪೇಡಿಗಳತಿ**
**ಪರುಷಸ್ವರಪರುಷನಯನಪರುಷಶರೀರರ್** ೯೧

**ಪದವಿಭಾಗ-ಅನ್ವಯ-ಅರ್ಥ:** ದೊರೆಕೊಂಡ ಕೃಷ್ಣಲೇಶ್ಯಾಪರಿಣಾಮಮೆ ಕೃಷ್ಣವರ್ಣಮಂ ಪುಟ್ಟಿಸಿದಂತೆ + ಇರೆ = ಮಾಡಿದ ಕೃಷ್ಣಲೇಶ್ಯೆಯ ಪರಿಣಾಮವೇ ಕಪ್ಪು ಬಣ್ಣವನ್ನುಂಟುಮಾಡಿದಂತಿರಲು, ಕರಿಕರ್ ಪೇಡಿಗಳ್ + ಅತಿಪರುಷಸ್ವರ=ಪರುಷನಯನ = ಪರುಷಶರೀರರ್= ಅವರು ಕರಿಯರಾಗಿಯೂ ಹೇಡಿಗಳಾಗಿಯೂ ಗಡಸು ಧ್ವನಿಯುಳ್ಳವರಾಗಿಯೂ, ಕ್ರೂರ ಕಣ್ಣುಗಳನ್ನುಳ್ಳವರಾಗಿಯೂ, ಒರಟು ದೇಹವುಳ್ಳುವರಾಗಿಯೂ ಇರುತ್ತಾರೆ.

**ಗದ್ಯಾನುಸರಣ:** ಮಾಡಿದ ಕೃಷ್ಣಲೇಶ್ಯೆಯ ಪರಿಣಾಮವೇ ಕಪ್ಪು ಬಣ್ಣವನ್ನುಂಟುಮಾಡಿದಂತಿರಲು, ಅವರು ಕರಿಯರಾಗಿಯೂ ಹೇಡಿಗಳಾಗಿಯೂ ಗಡಸು ಧ್ವನಿಯುಳ್ಳವರಾಗಿಯೂ, ಕ್ರೂರ ಕಣ್ಣುಗಳನ್ನುಳ್ಳವರಾಗಿಯೂ, ಒರಟು ದೇಹವುಳ್ಳವರಾಗಿಯೂ ಇರುತ್ತಾರೆ.

**ಏೞ್ ಧನು ಮೂಱು ಮೊೞನಿಂ**
**ಪೇೞ್ ಷಡಂಗುಲಮೆ ಮೊದಲ ನಾರಕರೊಡಲಂ**
**ತೇೞುವರಂ ತದ್ವಿಗುಣಂ**
**ಸೂೞೊಳ್ ನಾರಕರ ಕಠಿನದೇಹೋತ್ಸೇಧಂ** ೯೨

**ಪದವಿಭಾಗ-ಅನ್ವಯ-ಅರ್ಥ:** ಮೊದಲ ನಾರಕರ + ಒಡಲ್ = ಮೊದಲನೆಯ ನರಕವಾಸಿಗಳ ದೇಹವು, ಏೞ್ ಧನು ಮೂಱು ಮೊೞನಿಂ ಪೇೞ್ ಷಟ್ + ಅಂಗುಲಮೆ = ಏಳು ಬಿಲ್ಲು ಮೂರು ಮೊಳ ಮತ್ತು ಆರಂಗಲಗಳಷ್ಟೇ ಎತ್ತರ; ಅಂತು + ಏೞುವರಂ = ಹೀಗೆ ಏಳನೆಯ ನರಕದವರೆಗೂ, ನಾರಕರ ಕಠಿನದೇಹ + ಉತ್ಸೇಧಂ = ನರಕವಾಸಿಗಳ ಒರಟು ಶರೀರಗಳ ಎತ್ತರವು, ಸೂೞೊಳ್ = ಕ್ರಮವಾಗಿ, ತತ್ + ದ್ವಿಗುಣಂ = ಅದರ ಎರಡೆರಡಷ್ಟು

**ಗದ್ಯಾನುಸರಣ:** ಮೊದಲನೆಯ ನರಕವಾಸಿಗಳ ದೇಹವು ಏಳು ಬಿಲ್ಲು ಮೂರು ಮೊಳ ಮತ್ತು ಆರಂಗಲಗಳಷ್ಟೇ ಎತ್ತರವಾಗಿರುತ್ತವೆ; ಹೀಗೆ ಏಳನೆಯ ನರಕದವರೆಗೂ ನರಕವಾಸಿಗಳ ಒರಟು ಶರೀರಗಳ ಎತ್ತರವು ಕ್ರಮವಾಗಿ ಎರಡೆರಡರಷ್ಟು ಹೆಚ್ಚುತ್ತ ಹೋಗುತ್ತದೆ.

**ಮೊದಲಿಂದಂ ತುದಿಯೆಯ್ದೆ ಸಂದ ನರಕಾಯುಷ್ಯಾಬ್ಧಿ ಕೇಳೊಂದುಮೂ**
**ಱಿದಱಿಂದಂ ಬೞಿಕೇೞು ಪತ್ತು ಪದಿನೇೞಿರ್ಪತ್ತೆರಡ್ಮೂಱು ಪೆ**
**ರ್ಚಿದ ಮೂವತ್ತೆನೆ ತಮ್ಮ ಮುಂ ನೆರಪಿದಾಯುಷ್ಯಂಬರಂ ಮಾಯುವಾ**
**ಗದು ಮೆಯ್ಸಣ್ಣಿಗೆಯೊಳ್ ಮಗುಳ್ಚಿದೊಡಮೇಂ ದುಃಖಕ್ಕವರ್ ನೋಂತರೋ**
೯೩

**ಪದವಿಭಾಗ-ಅನ್ವಯ-ಅರ್ಥ:** ಮೊದಲಿಂದಂ ತುದಿಯೆಯ್ದೆ ಸಂದ ನರಕಾಯುಷ್ಯಾಬ್ಧಿ ಕೇಳ್ = ಮೊದಲನೆಯದರಿಂದ ಏಳನೆಯವರೆಗಿನ ನರಕಗಳಲ್ಲಿನ ಆಯುಷ್ಯ ಸಮುದ್ರಗಳ ಪ್ರಮಾಣದ ಬಗ್ಗೆ ಕೇಳು: ಒಂದು ಮೂಱು, ಇದಱಿಂದಂ ಬೞಿಕ + ಏೞು ಪತ್ತು ಪದಿನೇೞು + ಇರ್ಪತ್ತೆರಡ್ + ಮೂರು ಪೆರ್ಚಿದ ಮೂವತ್ತು + ಎನೆ = ಒಂದು, ಆಮೇಲೆ ಮೂರು, ಆನಂತರ ಏಳು, ಹತ್ತು, ಹದಿನೇಳು, ಇಪ್ಪತ್ತೆರಡು, ಇಪ್ಪತ್ತಮೂರು ಎಂಬಂತೆ, ತಮ್ಮ ಮುಂ ನೆರಪಿದ + ಆಯುಷ್ಯಂಬರಂ = ತಾವು ಗಳಿಸಿದ ಆಯುಷ್ಯ ಮುಗಿಯುವವರೆಗೂ, ಮೆಯ್ + ಸಣ್ಣಿಗೆಯೊಳ್ ಮಗುಳ್ಚಿದೊಡಂ ಮಾಯಮಾಗದು = ದೇಹಗಳನ್ನು ಒರಳಿನಲ್ಲಿ ಹಾಕಿ ರುಬ್ಬಿದರೂ ನಾಶವಾಗುವುದಿಲ್ಲ; ಅವರ್ ದುಃಖಕ್ಕೆ ಏಂ ನೋಂತರೋ = ಅವರು ದುಃಖಕ್ಕೇ ವ್ರತ ತೊಟ್ಟರೇನೋ!

**ಗದ್ಯಾನುಸರಣ:** ಮೊದಲನೆಯದರಿಂದ ಏಳನೆಯವರೆಗಿನ ನರಕಗಳಲ್ಲಿನ ಆಯುಷ್ಯ ಸಮುದ್ರಗಳ ಪ್ರಮಾಣದ ಬಗ್ಗೆ ಕೇಳು: ಕ್ರಮವಾಗಿ ಒಂದು, ಮೂರು, ಏಳು, ಹತ್ತು, ಹದಿನೇಳು, ಇಪ್ಪತ್ತೆರಡು, ಇಪ್ಪತ್ತಮೂರು ಸಮುದ್ರಗಳು ಎಂಬಂತೆ ತಾವು ಗಳಿಸಿದ ಆಯುಷ್ಯ ಮುಗಿಯುವವರೆಗೂ, ದೇಹಗಳನ್ನು ಒರಳಿನಲ್ಲಿ ಹಾಕಿ ರುಬ್ಬಿದರೂ ಅವು ನಾಶವಾಗುವುದಿಲ್ಲ; ಅವರು ದುಃಖಕ್ಕೇ ವ್ರತ ತೊಟ್ಟರೇನೋ!

**ಕ್ರಮದೊಳಸಂಜ್ಞಿಯುಂ ಸರೀಸೃಪಾವಳಿಯುಂ ವಿಹಗಾವಳಿಯುಂ ಭುಜಂ**
**ಗಮತತಿಯುಂ ಮೃಗಾರಿಗಣಮುಂ ಲಲನಾಜನಮುಂ ಮನುಷ್ಯದು**
**ಸ್ತಿಮಿಕುಳಮುಂ ಹಿಮಾಂಶುನಯನಾಗ್ನಿಕಷಾಯಹೃಷೀಕಷಣ್ಮುನಿ**
**ಕ್ರಮನರಕಂಗಳೊಳ್ ನೆಲಸುಗುಂ ದಿವಿಜೋತ್ತಮನಂಬು ನೀನಿದಂ೯೪**

**ಪದವಿಭಾಗ-ಅನ್ವಯ-ಅರ್ಥ:** ಕ್ರಮದೊಳ್ = ಕ್ರಮವಾಗಿ, ಅಸಂಜ್ಞಿಯುಂ ಸರೀಸೃಪ + ಆವಳಿಯುಂ = ಅಸಂಜ್ಞಿಗಳೂ ಉರಗಗಳೂ, ವಿಹಗ + ಆವಳಿಯುಂ ಭುಜಂಗಮತತಿಯುಂ = ಪಕ್ಷಿ ಹಾಗೂ ಹಾವುಗಳ ಸಮೂಹವೂ, ಮೃಗಾರಿಗಣಮುಂ ಲಲನಾಜನಮುಂ = ಸಿಂಹಗಳ ಗುಂಪು ಹಾಗೂ ಹೆಂಗಸರು, ಮನುಷ್ಯ + ದುಃ + ತಿಮಿಕುಳಮುಂ = ಮಾನವರೂ ದುಷ್ಟ ಮೀನುಗಳೂ ಹಿಮಾಂಶು + (ನಯನ + ಅಗ್ನಿ) + ಕಷಾಯ + ಹೃಷೀಕ + ಷಟ್ + ಮುನಿಕ್ರಮ + ನರಕಂಗಳೊಳ್ ನೆಲಸುಗುಂ = ಒಂದು ಎರಡು ಮೂರು ನಾಲ್ಕು ಐದು ಆರು ಮತ್ತು ಏಳನೆಯ ಕ್ರಮದ ನರಕಗಳಲ್ಲಿ ನೆಲಸುತ್ತಾರೆ; ದಿವಿಜ + ಉತ್ತಮ ನೀನಿದಂ ನಂಬು = ಬ್ರಾಹ್ಮಣಶ್ರೇಷ್ಠನೇ ನೀನಿದನ್ನು ನಂಬು.

**ಗದ್ಯಾನುಸರಣ:** ಅಸಂಜ್ಞಿ ಉರಗ ಪಕ್ಷಿ ಹಾವು ಸಿಂಹ ಹೆಂಗಸರು ಮಾನವರು ಮತ್ತು ದುಷ್ಟ ಮೀನುಗಳು ಕ್ರಮವಾಗಿ, ಒಂದು ಎರಡು ಮೂರು ನಾಲ್ಕು ಐದು ಆರು ಮತ್ತು ಏಳನೆಯ ನರಕಗಳಲ್ಲಿ ನೆಲಸುತ್ತವೆ; ಬ್ರಾಹ್ಮಣಶ್ರೇಷ್ಠನೇ ನೀನಿದನ್ನು ನಂಬು.

**ವಿಶೇಷ ವಿಚಾರ:** ಅಸಂಜ್ಞಿ = ಜೀವಗಳಲ್ಲಿ ಸಂಜ್ಞಿಗಳು ಮತ್ತು ಅಸಂಜ್ಞಿಗಳು ಎಂದು ಎರಡು ಭೇದಗಳೂ; ಮನಸ್ಸಿಲ್ಲದ ಅಂದರೆ ಅನುಭವಗ್ರಹಣವಿಲ್ಲದ ಜೀವಗಳು ಹಾಗೂ ಎರಡನೆಯವು ಇದು ಇರುವ ಬಗೆ; ಅಸಂಜ್ಞಿಗಳಿಗೆ ಆಹಾರ, ಮೈಥುನ, ಭಯ ಮತ್ತು ಪರಿಗ್ರಹಗಳಿರುವುದಿಲ್ಲ. ಹಿಮಾಂಶು + (ನಯನ + ಅಗ್ನಿ) + ಕಷಾಯ + ಹೃಷೀಕ + ಷಟ್ + ಮುನಿ = ಕ್ರಮವಾಗಿ ಇವುಗಳ ವಾಚ್ಯಾರ್ಥ ಚಂದ್ರ, ಕಣ್ಣಿನ ಬೆಂಕಿ, ಕಷಾಯ, ಹೃಷೀಕವೆಂಬ ನರಕ, ಆರು ಮತ್ತು ಮುನಿಗಳು ಎಂದು: ಚಂದ್ರ ಒಂದೇ ಇರುವುದರಿಂದ ಇಲ್ಲಿ ಆ ಮಾತು ಒಂದು ಎಂಬ ಸಂಖ್ಯೆಯನ್ನು ಸೂಚಿಸುತ್ತದೆ; ಕಣ್ಣುಗಳು ಸಾಮಾನ್ಯವಾಗಿ ಎರಡು, ಹಾಗಾಗಿ ಅದು ಎರಡನ್ನು ಸೂಚಿಸುತ್ತದೆ; ಬೆಂಕಿಯ ಕಣ್ಣು ಶಿವನ ಮೂರನೆಯ ಕಣ್ಣು,

ಹೀಗಾಗಿ ಅದು ಮೂರನ್ನು ಸೂಚಿಸುತ್ತದೆ; ಅನಂತಾನುಬಂಧಿ ಅಪ್ರತ್ಯಾಖ್ಯಾನಾವರಣ, ಪ್ರತ್ಯಾಖ್ಯಾವರಣ, ಮತ್ತು ಸಂಜ್ವಲನ ಎಂಬ ನಾಲ್ಕು ಕಷಾಯಗಳು, ಹೀಗಾಗಿ ಇದು ನಾಲ್ಕನ್ನು ಸೂಚಿಸುತ್ತದೆ; ಹೃಷೀಕವೆಂಬುದು ಖ, ಅಕ್ಷ, ಇಂದ್ರಿಯ, ಸ್ರೋತ, ಹೃಷೀಕ ಮತ್ತು ಕರಣ ಎಂಬ ಆರು ಜ್ಞಾನೇಂದ್ರಿಯಗಳಲ್ಲಿ ಐದನೆಯದು, ಹೀಗಾಗಿ ಇದು ಐದನ್ನು ಸೂಚಿಸುತ್ತದೆ; ಆರು ಎಂಬುದು ನೇರವಾಗಿಯೇ ಉಕ್ತವಾಗಿದೆ; ಸಪ್ತರ್ಭಂಗಗಳ ಕಲ್ಪನೆಯಿಂದಾಗಿ ಇದು ಏಳು ಎಂಬ ಸಂಖ್ಯೆಯನ್ನು ಸೂಚಿಸುತ್ತದೆ. ಹೀಗೆ ಸಂಖ್ಯೆಗಳನ್ನು ಸೂಚಿಸುವುದು ಒಂದು ಸಂಪ್ರದಾಯ.

**ವ॥ ಮುನ್ನೆ ನಿನ್ನ ಬೆಸಗೊಂಡ ಶತಬುದ್ಧಿಯುಮತ್ಯಂತ ಪಾಪಬುದ್ಧಿಯಿಂದಮಿಂತುಟಪ್ಪ ದುಃಖಮನೆರಡನೆಯ ನರಕದೊಳ ನುಭವಿಸಿದಪ್ಪನೆಂಬುದುಂ ಶ್ರೀಧರಾರನತ್ಯಂತಧರ್ಮಸಂವೇಗಪರಾಯಣನಾಗಿ ಸರ್ವಾಂಗಾಲಿಂಗಿತಮಹೀತಳಂ ಗುರೂಪದೇಶದಿಂದಾತನಂ ಪ್ರತಿಬೋಧಿಸ ಲಲ್ಲಿಗೆ ಪೋಗಿ,**

**ಪದವಿಭಾಗ–ಅನ್ವಯ–ಅರ್ಥ:** ಮುನ್ನೆ ನಿನ್ನ ಬೆಸಗೊಂಡ ಶತಬುದ್ಧಿಯುಂ = ಮೊದಲು ನೀನು ಕೇಳಿದ ಶತಬುದ್ಧಿಯೂ, ಅತ್ಯಂತಪಾಪಬುದ್ಧಿಯಿಂದಂ = ತನ್ನ ಅತೀವ ಪಾಪಬುದ್ಧಿಯಿಂದಾಗಿ, ಇಂತುಟಪ್ಪ ದುಃಖಮನ್ + ಎರಡನೆಯ ನರಕದೊಳ್ + ಅನುಭವಿಸಿದಪ್ಪನ್ ಎಂಬುದುಂ = ಇಂತಹ ನೋವನ್ನು ಎರಡನೆಯ ನರಕವಾದ ಶರ್ಕರಾಪ್ರಭೆಯಲ್ಲಿ ಅನುಭವಿಸುತ್ತಿದ್ದಾನೆ ಎನ್ನಲು, ಸರ್ವ + ಅಂಗ + ಆಲಿಂಗಿತಮಹೀತಳಂ = ಭೂಮಿತಳವನ್ನೆಲ್ಲ ಅಪ್ಪಿಕೊಂಡ, ಶ್ರೀಧರ + ಅಮರನ್ = ಶ್ರೀಧರದೇವನು, ಅತ್ಯಂತಧರ್ಮಸಂವೇಗಪರಾಯಣನಾಗಿ = ದೃಢಸಂಕಲ್ಪದಿಂದ, ಗುರೂಪದೇಶದಿಂದ + ಆತನಂ ಪ್ರತಿಬೋಧಿಸಲ್ + ಅಲ್ಲಿಗೆ ಪೋಗಿ = ಗುರುವಿನ ಉಪದೇಶದಿಂದ ಅವನಿಗೆ ತಿಳಿಹೇಳಲು ಅಲ್ಲಿಗೆ ಹೋಗಿ,

**ಗದ್ಯಾನುಸರಣ:** ಮೊದಲು ನೀನು ಕೇಳಿದ ಶತಬುದ್ಧಿಯೂ ತನ್ನ ಅತೀವ ಪಾಪಬುದ್ಧಿಯಿಂದಾಗಿ ಇಂತಹ ನೋವನ್ನು ಎರಡನೆಯ ನರಕವಾದ ಶರ್ಕರಾಪ್ರಭೆಯಲ್ಲಿ ಅನುಭವಿಸುತ್ತಿದ್ದಾನೆ ಎನ್ನಲು, ಭೂಮಿಯ ಮೇಲಿನ ಎಲ್ಲದರ ಬಗ್ಗೆ ಅನುಕಂಪವುಳ್ಳ ಶ್ರೀಧರದೇವನು ಗುರುವಿನ ಉಪದೇಶದಿಂದ ಅವನಿಗೆ ತಿಳಿಹೇಳಲು ದೃಢಸಂಕಲ್ಪದಿಂದ ಅಲ್ಲಿಗೆ ಹೋದ.

**ಅಱಿಯಮೆ ತಿಣ್ಣಂ ನಿನಗೇ**
**ನಱಿವೊ ಮಹಾಬಳನೆನೆನ್ನನೆಲೆ ಶತಮತಿ ನಿ**
**ನ್ನಱಿಯಮೆಯೆ ನಿನ್ನನಿನಿತಂ**
**ಮಱುಗಿಸಿದುದು ಪಾಪಕರ್ಮ ನೀಂ ಕಂಡುಂಡೈ ೯೫**

**ಪದವಿಭಾಗ-ಅನ್ವಯ-ಅರ್ಥ:** ಎಲೈ ಶತಮತಿ = ಎಲೈ ಶತಮತಿಯೆ, ನಿನಗೆ ಏಂ ಅಱಿಯಮೆ ತಿಣ್ಣಂ = ನಿನ್ನ ಅಜ್ಞಾನವು ಅದೆಷ್ಟು ಗಾಢವಾದುದು, ಮಹಾಬಳನೆನ್ ಎನ್ನನ್ ಅಱಿವೊ = ನಾನು ಮಹಾಬಲ ತಿಳಿಯಿತೇ, ನಿನ್ನ + ಅಱಿಯಮೆಯೆ ನಿನ್ನನ್ + ಇನಿತಂ ಮಱುಗಿಸಿದುದು = ನಿನ್ನ ಅಜ್ಞಾನವೇ ನಿನ್ನನ್ನು ಹೀಗೆ ನೋಯಿಸಿತು, ಪಾಪಕರ್ಮ ನೀಂ ಕಂಡುಂಡೈ = ಎಲೈ ಪಾಪಕರ್ಮನೇ, ನೀನು ಅನುಭವಿಸಿದೆ.

**ಗದ್ಯಾನುಸರಣ:** ಎಲೈ ಶತಮತಿಯೆ, ನಿನ್ನ ಅಜ್ಞಾನವು ಅದೆಷ್ಟು ಗಾಢವಾದುದು! ನಾನು ಮಹಾಬಲ ತಿಳಿಯಿತೇ, ನಿನ್ನ ಅಜ್ಞಾನವೇ ನಿನ್ನನ್ನು ಹೀಗೆ ನೋಯಿಸಿತು; ಎಲೈ ಪಾಪಕರ್ಮನೇ, ಪಾಪಫಲವನ್ನು ನೀನು ಅನುಭವಿಸಿದೆ.

**ಇನ್ನುಂ ನಿಜಮಿಥ್ಯಾಜ್ಞಾ**
**ನೋನ್ನತಿಯುಂ ಬಿಸುಟು ನಂಬು ಸಮ್ಯಕ್ತ್ವಮನಿಂ**
**ತೆನ್ನನೆ ಕಂಡಿಂ ತಿಳಿಯೆನೆ**
**ಸನ್ನುತಸಮ್ಯಕ್ತ್ವರತ್ನಮಂ ಕೈಕೊಂಡಂ** ೯೬

**ಪದವಿಭಾಗ-ಅನ್ವಯ-ಅರ್ಥ:** ಇನ್ನುಂ ನಿಜಮಿಥ್ಯಾಜ್ಞಾನೋನ್ನತಿಯಂ ಬಿಸುಟು ಸಮ್ಯಕ್ತ್ವಮನ್ ನಂಬು = ಇನ್ನಾದರೂ ನಿನ್ನ ತೀವ್ರ ಮಿಥ್ಯಾಜ್ಞಾನವನ್ನು ಬಿಟ್ಟು ಸಮ್ಯಕ್ತ್ವವನ್ನು ನಂಬು; ಇಂತು + ಎನ್ನನೆ ಕಂಡು + ಇಂ ತಿಳಿ + ಎನೆ = ನನ್ನನ್ನು ನೋಡಿ ಅರಿತುಕೊ ಎನ್ನಲು, ಸನ್ನುತಸಮ್ಯಕ್ತ್ವರತ್ನಮಂ ಕೈಕೊಂಡಂ = ಪಾವನವಾದ ಸಮ್ಯಕ್ತ್ವರತ್ನವನ್ನು ಕೈಗೊಂಡ.

**ಗದ್ಯಾನುಸರಣ:** ಇನ್ನಾದರೂ ನಿನ್ನ ಗಾಢ ಮಿಥ್ಯಾಜ್ಞಾನವನ್ನು ಬಿಟ್ಟು ಸಮ್ಯಕ್ತ್ವವನ್ನು ನಂಬು; ನನ್ನನ್ನು ನೋಡಿ ಅರಿತುಕೊ ಎನ್ನಲು, ಶತಮತಿಯು ಪಾವನವಾದ ಸಮ್ಯಕ್ತ್ವರತ್ನವನ್ನು ಕೈಗೊಂಡ.

**ವ। ಕೈಕೊಂಡು ಕಾಲಾಂತರದಿಂದಾ ನರಕದಿಂದಾತಂ ಬಂದು ಪುಷ್ಕರವರದ್ವೀಪದ ಪೂರ್ವಮಂದರದ ಪ್ರಾಗ್ವಿದೇಹದ ಮಂಗಳಾವತೀವಿಷಯದ ರತ್ನಸಂಚಯಪುರಮನಾಳ್ವ ಮಹೀಧರಂಗಂ ತತ್ಸೌಂದರಿ ಸೌಂದರಿಗಂ ಜಯಸೇನನೆಂಬ ಮಗನಾಗಿ ಪುಟ್ಟಿ, ವಿವಾಹಸಮಯದೊಳ್ ತನ್ನನಾ ಶ್ರೀಧರದೇವನೇ ಬಂದು ಮಗುಟ್ಟಿಂ ಮೂದಲಿಸೆ, ಯಮಧರಗುರುಗಳ ಪಾದಮೂಲದೊಳ್ ದುಶ್ಚರತಪಶ್ಚರಣಪರಾಯಣಂ ಜೀವಿತಾಂತ್ಯದೊಳ್ ಸಮಾಹಿತಚಿತ್ತನಾಗಿ,**

**ಪದವಿಭಾಗ-ಅನ್ವಯ-ಅರ್ಥ:** ಕೈಕೊಂಡು ಕಾಲಾಂತರದಿಂದೆ + ಆ ನರಕದಿಂದ + ಆತಂ ಬಂದು = ಹೀಗೆ ಸಮ್ಯಕ್ತ್ವವನ್ನು ಸ್ವೀಕರಿಸಿದ ಅವನು ಸ್ವಲ್ಪ ಕಾಲದ ಬಳಿಕ ನರಕದಿಂದ ಹೊರಬಂದು, ಪುಷ್ಕರವರದ್ವೀಪದ ಪೂರ್ವ ಮಂದರದ ಪ್ರಾಗ್ವಿದೇಹದ ಮಂಗಳಾವತೀವಿಷಯದ ರತ್ನಸಂಚಯಪುರಮನ್ + ಆಳ್ವ = ಪುಷ್ಕರವರ ಎಂಬ ದ್ವೀಪದಲ್ಲಿ ಮಂದರಪರ್ವತದ ಪೂರ್ವದಿಕ್ಕಿನ ಪ್ರಾಗ್ವಿದೇಹದ ಮಂಗಳಾವತೀ ನಾಡಿನ ರತ್ನಸಂಚಯಪುರದ ರಾಜ, ಮಹೀಧರಂಗಂ ತತ್ಸೌಂದರಿ ಸೌಂದರಿಗಂ ಜಯಸೇನನೆಂಬ ಮಗನಾಗಿ ಪುಟ್ಟಿ = ಮಹೀಧರ ಮತ್ತವನ ರಾಣಿ ಸೌಂದರಿಯರಿಗೆ ಜಯಸೇನನೆಂಬ ಮಗನಾಗಿ ಹುಟ್ಟಿ, ವಿವಾಹಸಮಯದೊಳ್ = ಮದುವೆಯ ಹೊತ್ತಿನಲ್ಲಿ, ತನ್ನನಾ ಶ್ರೀಧರದೇವನೇ ಬಂದು ಮಗುಟ್ಬುಂ ಮೂದಲಿಸೆ = ಶ್ರೀಧರದೇವನು ಮತ್ತೆ ಬಂದು ಹೀಯಾಳಿಸಿದಾಗ, ಯಮಧರಗುರುಗಳ ಪಾದಮೂಲದೊಳ್ = ಯಮಧರಗುರುಗಳ ಕಾಲಬಳಿ, ದುಃಚರತಪಶ್ಚರಣಪರಾಯಣಂ ಜೀವಿತಾಂತ್ಯದೊಳ್ ಸಮಾಹಿತಚಿತ್ತನಾಗಿ = ಕಠಿಣವಾದ ತಪಸ್ಸನ್ನು ಮಾಡುವುದರಲ್ಲಿ ನಿರತನಾಗಿ ಬದುಕಿನ ಕೊನೆಗೆ ಶಾಂತಮನಸ್ಸಿನಿಂದ ಕೂಡಿದವನಾಗಿ

**ಗದ್ಯಾನುಸರಣ:** ಹೀಗೆ ಸಮ್ಯಕ್ತ್ವವನ್ನು ಸ್ವೀಕರಿಸಿದ ಶತಮತಿಯು ಸ್ವಲ್ಪ ಕಾಲದ ಬಳಿಕ ನರಕದಿಂದ ಹೊರಬಂದ; ಆನಂತರ ಪುಷ್ಕರವರ ಎಂಬ ದ್ವೀಪದಲ್ಲಿ ಮಂದರಪರ್ವತದ ಪೂರ್ವದಿಕ್ಕಿನ ಪ್ರಾಗ್ವಿದೇಹದ ಮಂಗಳಾವತೀ ನಾಡಿನ ರತ್ನಸಂಚಯಪುರದ ರಾಜ ಮಹೀಧರ ಮತ್ತವನ ರಾಣಿ ಸೌಂದರಿಯರಿಗೆ ಜಯಸೇನನೆಂಬ ಮಗನಾಗಿ ಹುಟ್ಟಿದ; ಅವನ ಮದುವೆಯ ಹೊತ್ತಿನಲ್ಲಿ ಶ್ರೀಧರದೇವನು ಮತ್ತೆ ಬಂದು ಹೀಯಾಳಿಸಿದ; ಇದರಿಂದ ಎಚ್ಚೆತ್ತ ಅವನು ಯಮಧರಗುರುಗಳ ಕಾಲಬಳಿ ಕಠಿಣವಾದ ತಪಸ್ಸನ್ನು ಮಾಡುವುದರಲ್ಲಿ ನಿರತನಾದ; ಬದುಕಿನ ಕೊನೆಗೆ ಶಾಂತಮನಸ್ಸಿನಿಂದ ಕೂಡಿದ್ದ.

**ಪಡೆದಂ ಬ್ರಹ್ಮೇಂದ್ರತೆಯುಂ**
**ಗಡವಾತಂ ಬಗೆದು ನೋಡೆ ನಾರಕನೆತ್ತಲ್**
**ಗಡ ದೇವನೆತ್ತ ಕರ್ಮಮೆ**
**ಕಡುಬಲ್ಲಿತ್ತದಱ ತಿರಿವದೇಂ ಬಹುವಿಧಮೋ** ೯೭

**ಪದವಿಭಾಗ-ಅನ್ವಯ-ಅರ್ಥ:** ಆತಂ ಬ್ರಹ್ಮೇಂದ್ರತೆಯುಂ ಪಡೆದಂ ಗಡಂ = ಅವನು ಬ್ರಹ್ಮೇಂದ್ರತ್ವವನ್ನು ಹೊಂದಿದ; ಬಗೆದು ನೋಡೆ ನಾರಕನ್ + ಎತ್ತಲ್ ಗಡ ದೇವನ್ + ಎತ್ತ = ಯೋಚಿಸಿದರೆ ನರಕವಾಸಿಯಾಗಿದ್ದವನೆಲ್ಲಿ ಈಗ

ದೇವನಾಗಿರುವವನೆಲ್ಲಿ! ಕರ್ಮಮೆ ಕಡುಬಲ್ಲಿತ್ತು = ಕರ್ಮವೆನ್ನುವುದು ತುಂಬ ಬಲಿಷ್ಠವಾದುದು, ಅದಱ ತಿರಿವು + ಅದೇಂ ಬಹುವಿಧಮೋ = ಅದರ ಬಾಗುಗಳು ಅದೆಷ್ಟು ಬಗೆಯವೋ!

ಗದ್ಯಾನುಸರಣ: ಅವನು ಬ್ರಹ್ಮೇಂದ್ರತ್ವವನ್ನು ಹೊಂದಿದ; ಯೋಚಿಸಿದರೆ ನರಕವಾಸಿಯಾಗಿದ್ದವನೆಲ್ಲಿ ಈಗ ದೇವನಾಗಿರುವವನೆಲ್ಲಿ, ಆಶ್ಚರ್ಯಕರ! ಕರ್ಮವೆನ್ನುವುದು ತುಂಬ ಬಲಿಷ್ಠವಾದುದು, ಅದರ ಬಾಗುಗಳು ಅದೆಷ್ಟು ಬಗೆಯವು!

ಉಪಕಾರಸ್ಮರಣೆ ಮನ
ಕ್ಕೆ ಪುಟ್ಟಿ ತದ್ವಿಜವಲ್ಲಭಂ ಶ್ರೀಧರನಂ
ನಿಪುಣಂ ಪೂಜಿಸಿದಂ ಗಡ
ಮುಪಕಾರಮನಱಿಯದಾತಂ ಮಾನಸನೇ ೯೮

ಪದವಿಭಾಗ-ಅನ್ವಯ-ಅರ್ಥ: ಉಪಕಾರಸ್ಮರಣೆ ಮನಕ್ಕೆ ಪುಟ್ಟಿ = ಉಪಕಾರದ ನೆನಪು ಹುಟ್ಟಿ, ತತ್ + ದ್ವಿಜವಲ್ಲಭಂ ಶ್ರೀಧರನಂ ನಿಪುಣಂ ಪೂಜಿಸಿದಂ = ಆ ಬ್ರಹ್ಮೇಂದ್ರನನ್ನು ಭಕ್ತಿಯಿಂದ ಪೂಜಿಸಿದ; ಉಪಕಾರಮನ್ + ಅಱಿಯದಾತಂ ಗಡಂ ಮಾನಸನೇ = ಕೃತಜ್ಞತೆಯಿಲ್ಲದವನು ನಿಜವಾದ ಮನುಷ್ಯನೇ?

ಗದ್ಯಾನುಸರಣ: ಉಪಕಾರದ ನೆನಪು ಹುಟ್ಟಿ ಅವನು ಆ ಬ್ರಹ್ಮೇಂದ್ರನನ್ನು ಭಕ್ತಿಯಿಂದ ಪೂಜಿಸಿದ; ಕೃತಜ್ಞತೆಯಿಲ್ಲದವನು ನಿಜವಾದ ಮನುಷ್ಯನೇ ಅಲ್ಲ.

ವ। ಅನ್ನೆಗಂ

ಅರ್ಥ: ಅನ್ನೆಗಂ = ಈ ಮಧ್ಯೆ,

ದಿವಿಜವನಿತಾಸವಿಭ್ರಮ
ಧವಳಾಪಾಂಗಮೆ ನಿಜಾಯುರಂಭೋನಿಧಿಯುಂ
ತವೆ ಪೀರ್ದುದೆನಿಸೆ ತೊಟ್ಟನೆ
ದಿವದಿಂದಂ ಶ್ರೀಧರಂ ಪರಿಚ್ಯುತನಾದಂ ೯೯

ಪದವಿಭಾಗ-ಅನ್ವಯ-ಅರ್ಥ: ದಿವಿಜವನಿತಾಸವಿಭ್ರಮ ಧವಳ + ಅಪಾಂಗಮೆ = ದೇವವನಿತೆಯರ ವಿಲಾಸಮಯವಾದ ಬೆಳ್ಳನೆಯ ನೋಟವೇ, ನಿಜ + ಆಯುರಂಭೋನಿಧಿಯಂ ತವೆ ಪೀರ್ದುದು + ಎನಿಸೆ = ತನ್ನ ಆಯುಸ್ಸೆಂಬ ಸಮುದ್ರವನ್ನು ಹೀರಿಬಿಟ್ಟಿತೋ ಎನ್ನುವಂತೆ, ಶ್ರೀಧರಂ ದಿವದಿಂದಂ ತೊಟ್ಟನೆ ಪರಿಚ್ಯುತನಾದಂ = ಶ್ರೀಧರದೇವನು ಸ್ವರ್ಗದಿಂದ ಕ್ಷಣದಲ್ಲಿ ಕೆಳಗಿಳಿದ.

ಗದ್ಯಾನುಸರಣ: ದೇವವನಿತೆಯರ ವಿಲಾಸಮಯವಾದ ಬೆಳ್ಳನೆಯ ನೋಟವೇ ತನ್ನ ಆಯುಸ್ಸೆಂಬ ಸಮುದ್ರವನ್ನು ಹೀರಿಬಿಟ್ಟಿತೋ ಎನ್ನುವಂತೆ ಭೋಗವನ್ನುಭವಿಸಿದ ಶ್ರೀಧರದೇವನು ಸ್ವರ್ಗದಿಂದ ಕ್ಷಣದಲ್ಲಿ ಕೆಳಗಿಳಿದ.

ವ। ಆಗಿ ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವಿಷಯದ ಸುಸೀಮಾನಗರಮನಾಳ್ವ ಸುದೃಷ್ಟಿಮಹೀಪಾಳಂಗಂ ಸೌಂದರಸುನಂದಾಮಹಾದೇವಿಗಂ

**ಅರ್ಥ:** ಆಗಿ ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವಿಷಯದ ಸುಸೀಮಾನಗರಮನಾಳ್ವ ಸುದೃಷ್ಟಿಮಹೀಪಾಳಂಗಂ ಸೌಂದರಸುನಂದಾಮಹಾದೇವಿಗಂ = ಹೀಗೆ ಸ್ವರ್ಗದಿಂದ ಕೆಳಗಿಳಿದು ಪೂರ್ವವಿದೇಹದ ವತ್ಸಕಾ ನಾಡಿನ ಸುಸೀಮಾಪುರದ ರಾಜದಂಪತಿಗಳಾದ ಸುದೃಷ್ಟಿ-ಸುನಂದಾದೇವಿಯರಿಗೆ,

**ತವೆ ನೋಡಲ್ ನೋಡಿ ಮೆಚ್ಚಿ ಮನದೊಳಸದಳಂ ಮೆಚ್ಚಿ ನಾನಾವಿಶೇಷ**
**ಸ್ತವದಿಂದಂ ಕೀರ್ತಿಸಲ್ಕತ್ತಳಗಮಮರನಾಥಂಗಮೆಂಬನ್ನೆಗಂ ರೂ**
**ಪವಿಳಾಸಶ್ರೀಯೊಳಾ ಶ್ರೀಧರನಧಿಕಯಶಶ್ಶ್ರೀಧರಂ ಪುತ್ರನಾದಂ**
**ಸುವಿಧಿನಾಮದಿಂದಂ ಸುಕವಿಜನಮನೋಮಾನಸೋತ್ತಂಸಹಂಸಂ ೧೦೦**

**ಪದವಿಭಾಗ–ಅನ್ವಯ–ಅರ್ಥ:** ಶ್ರೀಧರನ್ + ಅಧಿಕಯಶಃ + ಶ್ರೀಧರಂ ಸುವಿಧಿನಾಮದಿಂದಂ ಪುತ್ರನಾದಂ = ಶ್ರೀಧರನು ವಿಪುಲ ಕೀರ್ತಿಯೆಂಬ ಸಂಪತ್ತಿನ ಶ್ರೀಧರನು ಸುವಿಧಿ ಎಂಬ ಹೆಸರಿನ ಮಗನಾಗಿ ಹುಟ್ಟಿದ. ತವೆ ನೋಡಲ್ ನೋಡಿ ಮೆಚ್ಚಿ ಮನದೊಳ್ + ಅಸದಳಂ ಮೆಚ್ಚಿ ನಾನಾವಿಶೇಷಸ್ತವದಿಂದಂ ಕೀರ್ತಿಸಲ್ಕೆ = ಚೆನ್ನಾಗಿ ನೋಡಲು, ನೋಡಿ ಮೆಚ್ಚಲು, ಮನಸ್ಸಿನಲ್ಲಿ ಹುಟ್ಟಿದ ಮೆಚ್ಚಿಕೆಯಿಂದ ನಾನಾ ವಿಶೇಷವಾದ ಮಾತುಗಳಿಂದ ಹೊಗಳಲು, ಅಮರನಾಥಂಗಂ ಅತ್ತಳಗಂ ಎಂಬನ್ನೆಗಂ = ದೇವೇಂದ್ರನಿಗೂ ಅಸಾಧ್ಯ ಎಂಬ ಹಾಗೆ, ಸುಕವಿಜನಮನೋಮಾನಸೋತ್ತಂಸಹಂಸಂ ರೂಪವಿಳಾಸಶ್ರೀಯೊಳ್ = ಸುಕವಿಜನರ ಮನಸ್ಸುಗಳೆಂಬ ಸರೋವರದ ರಾಜಹಂಸದಂತಿದ್ದ ತನ್ನ ಚೆಲುವು ವಿಲಾಸ ಸಂಪತ್ತುಗಳಿಂದ

**ಗದ್ಯಾನುಸರಣ:** ಶ್ರೀಧರನು ವಿಪುಲ ಕೀರ್ತಿಯೆಂಬ ಸಂಪತ್ತಿನ ಶ್ರೀಧರನು ಸುವಿಧಿ ಎಂಬ ಹೆಸರಿನ ಮಗನಾಗಿ ಹುಟ್ಟಿದ. ಚೆನ್ನಾಗಿ ನೋಡಲು, ನೋಡಿ ಮೆಚ್ಚಲು, ಮನಸ್ಸಿನಲ್ಲಿ ಹುಟ್ಟಿದ ಮೆಚ್ಚಿಕೆಯಿಂದ ವಿಶೇಷವಾದ ಮಾತುಗಳಿಂದ ಹೊಗಳಲು ದೇವೇಂದ್ರನಿಗೂ ಅಸಾಧ್ಯ ಎಂಬ ಹಾಗೆ ಸುಕವಿಜನರ ಮನಸ್ಸುಗಳೆಂಬ ಸರೋವರದ ರಾಜಹಂಸದಂತಿದ್ದ ಅವನು ತನ್ನ ಚೆಲುವು ವಿಲಾಸ ಸಂಪತ್ತುಗಳಿಂದ

ಪ್ರಿಯಪುಷ್ಪಸ್ತಬಕಂಗಳಿಂ ತುಱುಗಿದೊಂದಿಮ್ಮಾವನತ್ಯಂತಕಾಂ
ತಿಯೊಳಾಶಾಂತರಮೆಲ್ಲಮಂ ತೊಳಪ ಸಂಪೂರ್ಣೇಂದುವಂ ತನ್ನ ಶೋ
ಭೆಯು ತನ್ನುಜ್ಜ್ವಳಕಾಂತಿಯೊಂದು ವಿಭವಂ ಗೆಲ್ವನ್ನೆಗಂ ಯೌವನೋ
ದಯುದೊಳ್ ನೋಡಿದರಂ ಮನಂಗೊಳಿಸಿದಂ ಸಂಸಾರಸಾರೋದಯಂ
೧೦೧

**ಪದವಿಭಾಗ-ಅನ್ವಯ-ಅರ್ಥ:** ಪ್ರಿಯಪುಷ್ಪಸ್ತಬಕಂಗಳಿಂ ತುಱುಗಿದ + ಒಂದು + ಇಮ್ಮಾವನ್ = ಮೋಹಕವಾದ ಹೂಗೊಂಚಲಿನಿಂದ ಕೂಡಿದ ಸಿಹಿಮಾವಿನ ಮರವನ್ನು, ಅತ್ಯಂತಕಾಂತಿಯೊಳ್ + ಆಶಾಂತರಂ + ಎಲ್ಲಮಂ ತೊಳಪ ಸಂಪೂರ್ಣ + ಇಂದುವಂ = ಮಹಾ ಕಾಂತಿಯಿಂದ ದಿಕ್ಕುಗಳೆಲ್ಲವನ್ನೂ ಬೆಳಗುವ ಹುಣ್ಣಿಮೆಯ ಚಂದ್ರನನ್ನು, ತನ್ನ ಶೋಭೆಯ ತನ್ನ + ಉಜ್ವಳಕಾಂತಿಯ + ಒಂದು ವಿಭವಂ ಗೆಲ್ವ + ಅನ್ನೆಗಂ = ತನ್ನ ಸೊಬಗು, ಉಜ್ವಲಕಾಂತಿಗಳಿಂದ ಮೀರಿಸುವ ಹಾಗೆ, ಸಂಸಾರಸಾರೋದಯಂ ಯೌವನೋದಯದೊಳ್ = ಸಂಸಾರದ ಸಾರವನ್ನು ಹೊಮ್ಮಿಸುವಂತಿದ್ದ ಸುವಿಧಿಯು ತನ್ನ ಯೌವನಾರಂಭದಲ್ಲಿ, ನೋಡಿದರಂ ಮನಂಗೊಳಿಸಿದಂ = ನೋಡಿದವರ ಮನಸ್ಸನ್ನು ಸೆಳೆಯುತ್ತಿದ್ದ.

**ಗದ್ಯಾನುಸರಣ:** ತನ್ನ ಸೊಬಗು-ಉಜ್ವಲಕಾಂತಿಗಳಿಂದ ಮೋಹಕವಾದ ಹೂಗೊಂಚಲಿನಿಂದ ಕೂಡಿದ ಸಿಹಿಮಾವಿನ ಮರವನ್ನೂ, ಮಹಾ ಕಾಂತಿಯಿಂದ ದಿಕ್ಕುಗಳೆಲ್ಲವನ್ನೂ ಬೆಳಗುವ ಹುಣ್ಣಿಮೆಯ ಚಂದ್ರನನ್ನೂ ಮೀರಿಸುವ ಹಾಗೆ, ಸಂಸಾರದ ಸಾರವನ್ನು ಹೊಮ್ಮಿಸುವಂತಿದ್ದ ಸುವಿಧಿಯು ತನ್ನ ಯೌವನಾರಂಭದಲ್ಲಿ ನೋಡಿದವರ ಮನಸೆಳೆಯುತ್ತಿದ್ದ.

ಇಲ್ಲಿಗೆ ಸುವಿಧಿಮಹಿಮೋತ್ಪತ್ತಿವರ್ಣನಂ ಎಂಬ
ಐದನೆಯ ಆಶ್ವಾಸ , ಮುಗಿದುದು

# ಆರನೆಯ ಆಶ್ವಾಸ

ಶ್ರೀಯುಂ ಸೊಗಯಿಸುವ ವಚ
ಶ್ರೀಯುಂ ತನ್ನೇಟಿಗೆಯೊಳ್ ಪೊದಳ್ದೆಸೆಯೆಯುಮಾ
ಶ್ರೀಯುಮನೇಂ ಸುಭಗವಯ
ಶ್ರೀಯುಮನಾಂತನೊ ಸರಸ್ವತೀಮಣಿಹಾರಂ ೧

**ಪದವಿಭಾಗ-ಅನ್ವಯ-ಅರ್ಥ:** ಶ್ರೀಯುಂ = ಸಂಪತ್ತೂ, ಸೊಗಯಿಸುವ ವಚಃ + ಶ್ರೀಯುಂ = ಸೊಗಸಾದ ಮಾತಿನ ಸಿರಿಯೂ, ತನ್ನ + ಏಟ್ಗೆಯೊಳ್ ಪೊದಳ್ದು + ಎಸೆಯೆಯುಂ = ತನ್ನ ಏಳಿಗೆಯಲ್ಲಿ ಹರಡಿ ಸೊಗಯಿಸಲು, ಸರಸ್ವತೀಮಣಿಹಾರಂ = ಸರಸ್ವತೀಮಣಿಕಾರನಾದ ಸುವಿಧಿಯು, ಶ್ರೀಯುಮನ್ ಸುಭಗವಯಃ + ಶ್ರೀಯುಮನ್ ಏಂ ಆಂತನೊ = ಸಂಪತ್ತನ್ನೂ ವಯಸ್ಸಿನ ಸಿರಿಯನ್ನೂ ಅದೇನು ಪಡೆದನೋ!

**ಗದ್ಯಾನುಸರಣ:** ಸಂಪತ್ತೂ ಸೊಗಸಾದ ಮಾತಿನ ಸಿರಿಯೂ ತನ್ನ ಬೆಳವಣಿಗೆಯಲ್ಲಿ ಹರಡಿ ಸೊಗಯಿಸುವಂತೆ ಸರಸ್ವತೀಮಣಿಕಾರನಾದ ಸುವಿಧಿಯು ಸಂಪತ್ತು ವಯಸ್ಸಿನ ಸಿರಿಗಳನ್ನೂ ಅಪಾರವಾಗಿ ಪಡೆದ.

**ವಿಶೇಷ ವಿಚಾರ:** ಪದ್ಯದ ಎರಡನೆಯ ಸಾಲಿನ "'ಯುಮಾ' ಎಂಬ ಸ್ಥಳದಲ್ಲಿ 'ಜಯ ಎಂದೋ 'ಯಶಃ' ಎಂದೋ ಶುದ್ಧಪಾಠವಿರಬಹುದು. 'ಎಸೆಯೆಯುಂ + ಆ ಶ್ರೀಯುಮಂ' ಎಂದು ವಿಭಾಗಮಾಡಿದರೆ ಅರ್ಥಪುಷ್ಟಿ ಏನೂ ಇಲ್ಲ" ಎಂದು ನರಸಿಂಹಶಾಸ್ತ್ರಿಗಳು ಅಭಿಪ್ರಾಯಪಡುತ್ತಾರೆ.

ನೆಗಟ್ದಭಯಘೋಷಚಕ್ರಿಯ
ಮಗಳ ಮನೋರಮೆಯ ಮದುವೆಗಂ ರಾಜ್ಯದ ಪ
ತ್ತುಗೆಗಂ ಗುರೂಪರೋಧ
ಕ್ಕಗಿದು ಮನಂದಂದನೇಂ ಜಿತಾತ್ಮನೋ ಪುರುಷಂ ೨

**ಪದವಿಭಾಗ-ಅನ್ವಯ-ಅರ್ಥ:** ನೆಗಟ್ದ + ಅಭಯಘೋಷಚಕ್ರಿಯ ಮಗಳ ಮನೋರಮೆಯ ಮದುವೆಗಂ = ಕೀರ್ತಿವಂತನಾದ ಅಭಯಘೋಷ ಚಕ್ರವರ್ತಿಯ ಮಗಳು ಮನೋರಮೆಯನ್ನು ಮದುವೆಯಾಗುವುದಕ್ಕೂ, ರಾಜ್ಯದ ಪತ್ತುಗೆಗಂ = ರಾಜ್ಯವನ್ನು ಪಡೆಯುವುದಕ್ಕೂ, ಗುರು + ಉಪರೋಧಕ್ಕೆ + ಅಗಿದು =

ತಂದೆಯ ಒತ್ತಾಯಕ್ಕೆ ಕಟ್ಟುಬಿದ್ದು, ಮನಂದಂದನ್ = ಮನಸ್ಸುಮಾಡಿದ, ಏಂ ಜಿತ + ಆತ್ಮನೋ ಪುರುಷಂ = ಆತನು ಅದೆಷ್ಟು ಸಂಯಮಿ!

**ಗದ್ಯಾನುಸರಣ:** ಕೀರ್ತಿವಂತನಾದ ಅಭಯಘೋಷ ಚಕ್ರವರ್ತಿಯ ಮಗಳು ಮನೋರಮೆಯನ್ನು ಮದುವೆಯಾಗುವುದಕ್ಕೂ, ರಾಜ್ಯವನ್ನು ಪಡೆಯುವುದಕ್ಕೂ ಮನಂದಂದನ್ = ಮನಸ್ಸುಮಾಡಿದ, ಆತನು ಅದೆಷ್ಟು ಸಂಯಮಿ!

**ವ। ಅಂತಗಣ್ಯಪುಣ್ಯನಿಧಿಯೆನಿಸಿದ ಸುವಿಧಿಗಮಾತನ ಮನೋರಮೆ ಮನೋರಮೆಗಂ ಶ್ರೀಮತೀಚರನೆನಿಸಿದ ಸ್ವಯಂಪ್ರಭದೇವಂ ದೇವಲೋಕದಿಂದವತರಿಸಿ,**

**ಪದವಿಭಾಗ-ಅನ್ವಯ-ಅರ್ಥ:** ಅಂತು + ಅಗಣ್ಯಪುಣ್ಯನಿಧಿಯೆನಿಸಿದ ಸುವಿಧಿಗಂ + ಆತನ ಮನೋರಮೆ ಮನೋರಮೆಗಂ = ಹೀಗೆ ಅತಿಶಯಪುಣ್ಯ ನಿಧಿಯೆನಿಸಿದ ಸುವಿಧಿ ಮತ್ತು ಆತನ ಮನಃಪ್ರಿಯೆ ಮನೋರಮೆಗೂ, ಶ್ರೀಮತೀ ಚರನೆನಿಸಿದ ಸ್ವಯಂಪ್ರಭದೇವಂ = ಶ್ರೀಮತಿಯಾಗಿದ್ದ ಸ್ವಯಂಪ್ರಭದೇವನು, ದೇವ ಲೋಕದಿಂದವತರಿಸಿ = ದೇವಲೋಕದಿಂದ ಇಳಿದು ಬಂದು,

**ಗದ್ಯಾನುಸರಣ:** ಹೀಗೆ ಅತಿಶಯಪುಣ್ಯನಿಧಿಯೆನಿಸಿದ ಸುವಿಧಿ ಮತ್ತು ಆತನ ಮನಃಪ್ರಿಯೆ ಮನೋರಮೆಗೂ ಹಿಂದಿನ ಜನ್ಮದಲ್ಲಿ ಶ್ರೀಮತಿಯಾಗಿದ್ದ ಸ್ವಯಂಪ್ರಭದೇವನು ದೇವಲೋಕದಿಂದ ಇಳಿದು ಬಂದು,

**ಪ್ರಿಯವನಿತಾಚರನೆ ಗಡಂ**
**ಪ್ರಿಯತನಯಂ ಕೇಶವಾಂಕನಾದನಿದೇಂ ವಿ**
**ಸ್ಮಯಕರಮೊ ಸಂಸೃತಿಸ್ಥಿತಿ**
**ಬಯಸುವುದೆಂತಯ್ಯ ಪೇಟಿಮಿಂತಪ್ಪುದುಮಂ** ೩

**ಪದವಿಭಾಗ-ಅನ್ವಯ-ಅರ್ಥ:** ಪ್ರಿಯವನಿತಾಚರನೆ = ಹಿಂದಿನ ಜನ್ಮದ ಪ್ರೀತಿಯ ಹೆಂಡತಿಯೇ, ಪ್ರಿಯತನಯಂ ಕೇಶವಾಂಕನ್ ಗಡಂ = ಈಗ ಪ್ರಿಯಪುತ್ರನಾದ ಕೇಶವ ಎಂಬ ಹೆಸರಿನವನಲ್ಲವೇ? ಸಂಸೃತಿಸ್ಥಿತಿ ಇದೇಂ ವಿಸ್ಮಯಕರಮೊ = ಸಂಸಾರದ ರೀತಿಯು ಇದೇನು ಆಶ್ಚರ್ಯಕರವೋ! ಇಂತಪ್ಪುದುಮಂ ಆದನ್ ಬಯಸುವುದು + ಎಂತಯ್ಯ ಪೇಟಿಂ = ಹೀಗಾಗುವ ಅದನ್ನು (ಸಂಸಾರಸ್ಥಿತಿಯನ್ನು) ಬಯಸುವುದು ಹೇಗೆ, ಹೇಳಿ.

**ಗದ್ಯಾನುಸರಣ:** ಹಿಂದಿನ ಜನ್ಮದ ಪ್ರೀತಿಯ ಹೆಂಡತಿಯೇ ಈಗ ಕೇಶವ ಎಂಬ ಪ್ರಿಯಪುತ್ರ; ಸಂಸಾರದ ರೀತಿಯು ಇದೇನು ಆಶ್ಚರ್ಯಕರ! ಇಂತಹ ಸಂಸಾರಸ್ಥಿತಿಯನ್ನು ಹೇಗೆ ಬಯಸುವುದು?

ವ। ಮತ್ತಮಾ ವಿಷಯದೊಳ್ ಶಾರ್ದೂಲಚರನಪ್ಪ ಚಿತ್ರಾಂಗದದೇವಂ ದೇವಲೋಕದಿಂದವತರಿಸೆ ಬಂದು ಸಮಾನಪುಣ್ಯತ್ವಂ ಕಾರಣಮಾಗಿ ಸುವಿಧಿಸಮಾನನಪ್ಪ ಮಂಡಳಿಕಂ ವಿಭೀಷಣಂಗಂ ಪ್ರಿಯದತ್ತೆಯೆಂಬ ತತ್ಪ್ರಿಯಲಲನೆಗಂ ವರದತ್ತನೆಂಬೊಂ ಮಗನಾದೊಂ; ವರಾಹಾರ್ಯಚರನಪ್ಪ ಮಣಿಕುಂಡಲದಿವಿಜಂ ನಂದಿಷೇಣಂಗಮನಂತಮತಿಗಂ ವರಸೇನನೆಂಬೊಂ ತನಯನಾದಂ; ವಾನರಾರ್ಯಚರನಪ್ಪ ಮನೋಹರಾಮರಂ ರತಿಷೇಣಂಗಂ ಚಂದ್ರಮತಿಗಂ ಚಿತ್ರಾಂಗದನೆಂಬೊಂ ತನಯನಾದಂ; ನಕುಳಾರ್ಯಚರನಪ್ಪ ಮನೋರಥಕಲ್ಪಜಂ ಪ್ರಭಂಜನಂಗಂ ಚಿತ್ರಮಾಲೆಗಂ ಶಾಂತಮದನನೆಂಬ ಪುತ್ರನಾದನಾಗಿ,

**ಪದವಿಭಾಗ-ಅನ್ವಯ-ಅರ್ಥ:** ಮತ್ತಂ + ಆ ವಿಷಯದೊಳ್ = ಅಲ್ಲದೆ, ಆ ನಾಡಿನಲ್ಲಿ, ಶಾರ್ದೂಲಚರನಪ್ಪ ಚಿತ್ರಾಂಗದದೇವಂ ದೇವಲೋಕದಿಂದವತರಿಸೆ ಬಂದು = ಹಿಂದಿನ ಜನ್ಮದಲ್ಲಿ ಹುಲಿಯಾಗಿದ್ದ ಚಿತ್ರಾಂಗದದೇವನು ದೇವಲೋಕದಿಂದ ಇಳಿದು ಬಂದು, ಸಮಾನಪುಣ್ಯತ್ವಂ ಕಾರಣಮಾಗಿ = ಅಷ್ಟೇ ಪುಣ್ಯ ಮಾಡಿದ್ದ ಕಾರಣದಿಂದ, ಸುವಿಧಿಸಮಾನನಪ್ಪ ಮಂಡಳಿಕಂ ವಿಭೀಷಣಂಗಂ ಪ್ರಿಯದತ್ತೆಯೆಂಬ ತತ್ಪ್ರಿಯಲಲನೆಗಂ = ಸುವಿಧಿಗೆ ಸಮಾನನೆನಿಸಿದ್ದ ಮಂಡಳಿಕನಾದ ವಿಭೀಷಣ ಮತ್ತವನ ಹೆಂಡತಿ ಪ್ರಿಯದತ್ತೆಗೂ, ವರದತ್ತನೆಂಬೊಂ ಮಗನಾದೊಂ = ವರದತ್ತನೆಂಬ ಮಗನಾದ; ವರಾಹಾರ್ಯಚರನಪ್ಪ ಮಣಿಕುಂಡಲದಿವಿಜಂ = ಹಿಂದಿನ ಜನ್ಮದಲ್ಲಿ ಹಂದಿಯಾಗಿದ್ದ ಮಣಿಕುಂಡಲದೇವನು, ನಂದಿಷೇಣಂಗಂ + ಅನಂತಮತಿಗಂ ವರಸೇನನೆಂಬೊಂ ತನಯನಾದಂ = ನಂದಷೇಣ-ಅನಂತಮತಿಯರಿಗೆ ವರಸೇನ ಎಂಬ ಮಗನಾದ; ವಾನರಾರ್ಯಚರನಪ್ಪ ಮನೋಹರಾಮರಂ = ಹಿಂದಿನ ಜನ್ಮದಲ್ಲಿ ಕೋತಿಯಾಗಿದ್ದ ಮನೋಹರದೇವನು, ರತಿಷೇಣಂಗಂ ಚಂದ್ರಮತಿಗಂ ಚಿತ್ರಾಂಗದನೆಂಬೊಂ ತನಯನಾದಂ = ರತಿಷೇಣ-ಚಂದ್ರಮತಿ ದಂಪತಿಗೆ ಚಿತ್ರಾಂಗದ ಎಂಬ ಮಗನಾದ; ನಕುಳಾರ್ಯಚರನಪ್ಪ ಮನೋರಥಕಲ್ಪಜಂ = ಹಿಂದಿನ ಜನ್ಮದಲ್ಲಿ ಮುಂಗುಸಿಯಾಗಿದ್ದ ಮನೋರಥದೇವನು, ಪ್ರಭಂಜನಂಗಂ ಚಿತ್ರಮಾಲೆಗಂ ಶಾಂತಮದನನೆಂಬ ಪುತ್ರನಾದನ್ = ಪ್ರಭಂಜನ-ಚಿತ್ರಮಾಲೆಯರ ಮಗ ಶಾಂತಮದನನಾದ; ಆಗಿ = ಹೀಗೆ ಜನ್ಮ ತಳೆದು,

**ಗದ್ಯಾನುಸರಣ:** ಅಲ್ಲದೆ, ಅದೇ ನಾಡಿನಲ್ಲಿ ಹಿಂದಿನ ಜನ್ಮದಲ್ಲಿ ಹುಲಿಯಾಗಿದ್ದ ಚಿತ್ರಾಂಗದದೇವನು ದೇವಲೋಕದಿಂದ ಇಳಿದು ಬಂದು ಅಷ್ಟೇ ಪುಣ್ಯ ಪಡೆದಿದ್ದ ಕಾರಣದಿಂದ ಸುವಿಧಿಗೆ ಸಮಾನನೆನಿಸಿದ್ದ ಮಂಡಳಿಕನಾದ ವಿಭೀಷಣ ಮತ್ತವನ ಹೆಂಡತಿ ಪ್ರಿಯದತ್ತೆಗೆ ವರದತ್ತನೆಂಬ ಮಗನಾದ; ಹಿಂದಿನ ಜನ್ಮದಲ್ಲಿ ಹಂದಿಯಾಗಿದ್ದ ಮಣಿಕುಂಡಲದೇವನು ನಂದಷೇಣ-ಅನಂತಮತಿಯರಿಗೆ ವರಸೇನ ಎಂಬ ಮಗನಾದ; ಹಿಂದಿನ ಜನ್ಮದಲ್ಲಿ ಕೋತಿಯಾಗಿದ್ದ ಮನೋಹರದೇವನು ರತಿಷೇಣ-

ಚಂದ್ರಮತಿ ದಂಪತಿಗೆ ಚಿತ್ರಾಂಗದ ಎಂಬ ಮಗನಾದ; ಹಿಂದಿನ ಜನ್ಮದಲ್ಲಿ ಮುಂಗುಸಿಯಾಗಿದ್ದ ಮನೋರಥದೇವನು ಪ್ರಭಂಜನ-ಚಿತ್ರಮಾಲೆಯರ ಮಗ ಶಾಂತಮದನನಾದ; ಹೀಗೆ ಜನ್ಮ ತಳೆದು,

ಪೂರ್ವಭವಸ್ನೇಹಮದೋ
ರೊರ್ವರನಲೆದೊಂದುಮಾಡೆ ತಮ್ಮನಿಬರುಮಂ
ದೊರ್ವುಳಿ ನೆರೆದತಿಲಲಿತತ
ರೋರ್ವೀತಳಸುಖಮನುಣುತುಮಿರೆ ಪಲಕಾಲಂ ೪

**ಪದವಿಭಾಗ-ಅನ್ವಯ-ಅರ್ಥ:** ಪೂರ್ವಭವಸ್ನೇಹಂ + ಅದು = ಹಿಂದಿನ ಜನ್ಮದ ಪ್ರೀತಿಯು, ಓರ್ರೊರ್ವರನ್ + ಅಲೆದು + ಒಂದುಮಾಡೆ = ಒಬ್ಬೊಬ್ಬರನ್ನೂ ತಿರುಗಾಡಿಸಿ ಕೊನೆಗೆ ಒಂದುಮಾಡಲು, ತಮ್ಮನಿಬರುಂ + ಅಂದು + ಒರ್ವುಳಿ ನೆರೆದು = ಅವರೆಲ್ಲರೂ ಒಂದುಕಡೆ ಸೇರಿ, ಅತಿಲಲಿತತರ + ಉರ್ವೀತಳಸುಖಮನ್ ಪಲಕಾಲಂ ಉಣುತುಮಿರೆ = ತುಂಬ ಸುಂದರವಾದ ಭೂಲೋಕ ಸುಖವನ್ನು ಕೆಲವು ಕಾಲ ಅನುಭವಿಸಲು,

**ಗದ್ಯಾನುಸರಣ:** ಹಿಂದಿನ ಜನ್ಮದ ಪ್ರೀತಿಯು ಅವರಲ್ಲಿ ಒಬ್ಬೊಬ್ಬರನ್ನೂ ತಿರುಗಾಡಿಸಿ ಕೊನೆಗೆ ಒಂದುಮಾಡಿತು; ಹೀಗೆ ಅವರೆಲ್ಲರೂ ಒಂದುಕಡೆ ಸೇರಿ ಭೂಲೋಕಸುಖವನ್ನು ಕೆಲವು ಕಾಲ ಅನುಭವಿಸಿದರು.

ವ। ಒಂದು ದಿವಸಂ ಸುವಿಧಿಧರಾಧೀಶಂ ತಮ್ಮ ಮಾವನ ಪ್ಪಭಯಘೋಷ ಚಕ್ರವರ್ತಿ ವಿಮಳವಾಹನಜಿನಚಾರಣವಂದನಾಭಕ್ತಿಗೆ ಪೋಗೆ, ತಾನುಂ ವರದತ್ತ ವರಸೇನ ಚಿತ್ರಾಂಗದ ಶಾಂತಮದನರೆಂಬ ನಾಲ್ವರ್ ಸಹಾಯರುಂ ತನ್ನ ಮಗಂ ಕೇಶವನುಂ ಬೆರಸು ಪೋಗಿ ಸುವಿಧಿ ಸುವಿಧಿಯಿಂ ಜಿನೇಂದ್ರಪಾದಾರವಿಂದಂಗಳಂ ವಂದಿಸುತ್ತಿರ್ಪನ್ನೆಗಮಭಯ ಘೋಷಂ ಧರ್ಮಾಮೃತರಸಮನಾಸ್ವಾದಿಸಿ ಸಂಸಾರಶರೀರಭೋಗನಿರ್ವೇಗ ಪರಾಯಣನಾಗಿ,

**ಪದವಿಭಾಗ-ಅನ್ವಯ-ಅರ್ಥ:** ಒಂದು ದಿವಸಂ ಸುವಿಧಿಧರಾಧೀಶಂ = ಒಂದು ದಿನ ಸುವಿಧಿರಾಜನು, ತಮ್ಮ ಮಾವನಪ್ಪ + ಅಭಯಘೋಷ ಚಕ್ರವರ್ತಿ = ತಮ್ಮ ಮಾವನಾದ ಅಭಯಘೋಷ ಚಕ್ರವರ್ತಿಯು, ವಿಮಳವಾಹನಜಿನಚಾರಣವಂದನಾಭಕ್ತಿಗೆ ಪೋಗೆ = ವಿಮಳವಾಹನರೆಂಬ ಚಾರಣರನ್ನು ಪೂಜಿಸಲು ಹೋದಾಗ, ತಾನುಂ ವರದತ್ತ ವರಸೇನ ಚಿತ್ರಾಂಗದ ಶಾಂತಮದನರೆಂಬ ನಾಲ್ವರ್ ಸಹಾಯರುಂ ತನ್ನ ಮಗಂ ಕೇಶವನುಂ ಬೆರಸು

ಪೋಗಿ = ತಾನೂ ವರದತ್ತ ವರಸೇನ ಚಿತ್ರಾಂಗದ ಶಾಂತಮದನರೆಂಬ ನಾಲ್ವರು ಸಹಾಯಕರು ಹಾಗೂ ಮಗ ಕೇಶವನೊಡನೆ ಹೋಗಿ, ಸುವಿಧಿ ಸುವಿಧಿಯಿಂ ಜಿನೇಂದ್ರಪಾದಾರವಿಂದಂಗಳಂ ವಂದಿಸುತ್ತಿರ್ಪನ್ನೆಗಂ = ಪುಣ್ಯವಿಶೇಷದಿಂದ ಸುವಿಧಿಯು ಜಿನೇಂದ್ರನ ಪಾದಗಳಿಗೆ ನಮಿಸುತ್ತಿರುವಾಗ, ಅಭಯಘೋಷಂ ಧರ್ಮಾಮೃತರಸಮನಾಸ್ವಾದಿಸಿ = ಅಭಯಘೋಷನು ಧರ್ಮಪ್ರವಚನವೆಂಬ ಅಮೃತರಸವನ್ನು ಕುಡಿದು, ಸಂಸಾರಶರೀರಭೋಗನಿರ್ವೇಗಪರಾಯಣನಾಗಿ = ಸಂಸಾರ ಮತ್ತು ಶರೀರಸುಖಗಳ ಬಗ್ಗೆ ವೈರಾಗ್ಯವನ್ನು ಹೊಂದಿ,

**ಗದ್ಯಾನುಸರಣ:** ಒಂದು ದಿನ ಮಾವನಾದ ಅಭಯಘೋಷ ಚಕ್ರವರ್ತಿಯು ವಿಮಳವಾಹನರೆಂಬ ಚಾರಣರನ್ನು ಪೂಜಿಸಲು ಹೋದಾಗ, ಸುವಿಧಿರಾಜನು ವರದತ್ತ ವರಸೇನ ಚಿತ್ರಾಂಗದ ಶಾಂತಮದನರೆಂಬ ನಾಲ್ವರು ಸಹಾಯಕರು ಹಾಗೂ ಮಗ ಕೇಶವನೊಡನೆ ಹೋದ; ಪುಣ್ಯವಿಶೇಷದಿಂದ ಸುವಿಧಿಯು ಜಿನೇಂದ್ರನ ಪಾದಗಳಿಗೆ ನಮಿಸಿದ; ಆಗ ಅಭಯಘೋಷನು ಧರ್ಮಪ್ರವಚನವನ್ನು ಕೇಳಿ ಸಂಸಾರ ಮತ್ತು ಶರೀರಸುಖಗಳ ಬಗ್ಗೆ ವೈರಾಗ್ಯವನ್ನು ಹೊಂದಿದ.

**ಸಾಸಿರ್ವರ್ ವನಿತೆಯರ**
**ಯ್ಯಾಸಿರ್ವರ್ ಪ್ರಿಯತನೂಜರಜಿಕೆಯ ಪದಿನೆ**
**ಣ್ಬಾಸಿರ್ವರರಸುಗಳ್ ವೆರ**
**ಸಾ ಸಾಸಿಗನುಚಿತದೀಕ್ಷೆಯುಂ ಕೈಕೊಂಡಂ ೫**

**ಪದವಿಭಾಗ–ಅನ್ವಯ–ಅರ್ಥ:** ಸಾಸಿರ್ವರ್ ವನಿತೆಯರ್ = ಸಾವಿರ ಮಂದಿ ಮಡದಿಯರು, ಅಯ್ಯಾಸಿರ್ವರ್ ಪ್ರಿಯತನೂಜರ್ = ಐದು ಸಾವಿರ ಮಂದಿ ಪ್ರೀತಿಯ ಮಕ್ಕಳು, ಪದಿನೆಣ್ಬಾಸಿರ್ವರ್ ಅಜಿಕೆಯ ಅರಸುಗಳ್ ವೆರಸು = ಹದಿನೆಂಟು ಸಾವಿರ ಮಂದಿ ಉತ್ತಮ ರಾಜರುಗಳೊಡನೆ, ಆ ಸಾಸಿಗನ್ + ಉಚಿತದೀಕ್ಷೆಯಂ ಕೈಕೊಂಡಂ = ಆ ಸಾಹಸಿಗನು ಸೂಕ್ತವಾದ ದೀಕ್ಷೆಯನ್ನು ಹೊಂದಿದ.

**ಗದ್ಯಾನುಸರಣ:** ಸಾವಿರ ಮಂದಿ ಮಡದಿಯರು, ಐದು ಸಾವಿರ ಮಂದಿ ಪ್ರೀತಿಯ ಮಕ್ಕಳು ಹಾಗೂ ಹದಿನೆಂಟು ಸಾವಿರ ಮಂದಿ ಉತ್ತಮ ರಾಜರುಗಳೊಡನೆ ಅಭಯಘೋಷ ಚಕ್ರವರ್ತಿಯು ದೀಕ್ಷೆಯನ್ನು ಹೊಂದಿದ.

**ಸುವಿಧಿಯುಮಾತ್ಮತನೂ**
**ಭವವಿಪುಳಸ್ನೇಹನಿಗಳದಿಂದಮೆ ತೊಡರ್ದಾ**
**ಧವಳಾತಪವಾರಣಕಕು**
**ದವಿಭತಿಯನುಟಿದು ನೆಗಟ್ದುಪಾಸಕನಾದಂ ೬**

**ಪದವಿಭಾಗ-ಅನ್ವಯ-ಅರ್ಥ:** ಸುವಿಧಿಯುಂ = ಸುವಿಧಿಯು, ಆತ್ಮತನೂಭವವಿಪುಳಸ್ನೇಹನಿಗಳದಿಂದಮೆ ತೊಡರ್ದು = ತನ್ನ ಮಕ್ಕಳ ಬಗೆಗಿನ ಅತಿಶಯ ಪ್ರೀತಿಯೆಂಬ ಸಂಕೋಲೆಯಿಂದ ಬಿಗಿಯಲ್ಪಟ್ಟು, ಆ ಧವಳ + ಆತಪ ವಾರಣ ಕಕುದವಿಭೂತಿಯನ್ + ಉಟಿದು = ಬೆಳ್ಗೊಡೆ ಪಟ್ಟದಾನೆ ಮತ್ತು ರಾಜಚಿಹ್ನೆಗಳೆಂಬ ವೈಭವವನ್ನು ತೊರೆದು, ನೆಗಟ್ದು + ಉಪಾಸಕನಾದಂ = ಉಪಾಸಕನಾದ

**ಗದ್ಯಾನುಸರಣ:** ಸುವಿಧಿಯು ತನ್ನ ಮಕ್ಕಳ ಬಗೆಗಿನ ಅತಿಶಯ ಪ್ರೀತಿಯೆಂಬ ಸಂಕೋಲೆಯಿಂದ ಬಿಗಿಯಲ್ಪಟ್ಟು, ಬೆಳ್ಗೊಡೆ ಪಟ್ಟದಾನೆ ಮತ್ತು ರಾಜಚಿಹೆಗಳೆಂಬ ವೈಭವವನ್ನು ತೊರೆದು ಉಪಾಸಕನಾದ.

**ವಿಶೇಷ ವಿಚಾರ:** ಉಪಾಸಕ = ಅಹಿಂಸೆ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಪರಿಗ್ರಹಗಳೆಂಬ ಅಣುವ್ರತಗಳೊಡನೆ, ದಿಗ್ವ್ರತ ದೇಶವ್ರತ ದಂಡವಿರತಿವ್ರತ ಎಂಬ ಮೂರು ಸಾಮಯಿಕ ವ್ರತಗಳು ಹಾಗೂ ಸಾಮಯಿಕವ್ರತ ಪ್ರೋಷಧವ್ರತ ಅತಿಥಿಸಂಗ್ರಹ ಸಲ್ಲೇಖನ ಎಂಬ ನಾಲ್ಕು ಶಿಕ್ಷಾವ್ರತಗಳನ್ನು ತೊಟ್ಟ ಶ್ರಾವಕ

**ಪದಪು ಜಿನೇಂದ್ರಪಾದಕಮಳಂಗಳೊಳಗಾವಗವಾಗೆ ಕರ್ಮಬಂ**
**ಧದ ಬಿಗಿಪೊಯ್ಯನೊಯ್ಯನೆ ಸಡಿಲ್ದಿರೆ ಬಾದರರೂಪದಿಂದೆ ಕೊ**
**ಲ್ಲದ ಪರನಾರಿಗಾಟಿಸದ ಕಳ್ಳದಸತ್ಯದೊಳೊಂದದಾಗಳುಂ**
**ಕುದಿದಪತೃಷ್ಣೆಯುಂ ಕುಸಿದು ಮಾನಿಸುವಯ್ದುಮಣುವ್ರತಂಗಳಂ ೭**

**ಪದವಿಭಾಗ-ಅನ್ವಯ-ಅರ್ಥ:** ಜಿನೇಂದ್ರಪಾದಕಮಳಂಗಳೊಳಗೆ ಪದಪು ಆವಗಂ + ಆಗೆ = ಜಿನನ ಪಾದಕಮಲಗಳಲ್ಲಿ ಭಕ್ತಿಯು ನಿರಂತರವಾಗಿ ಉಂಟಾಗಲು, ಒಯ್ಯನೆ + ಒಯ್ಯನೆ ಕರ್ಮಬಂಧದ ಬಿಗಿಪು ಸಡಿಲ್ದಿರೆ = ಮೆಲ್ಲಮೆಲ್ಲನೆ ಕರ್ಮಬಂಧಗಳ ಬಿಗಿಯು ಸಡಿಲಗೊಳ್ಳಲು, ಬಾದರರೂಪದಿಂದೆ = ಬಾದರರೂಪದಿಂದಾಗಿ, ಕೊಲ್ಲದ ಪರನಾರಿಗೆ + ಆಟಿಸದ ಕಳ್ಳದ + ಅಸತ್ಯದೊಳ್ + ಒಂದದ + ಆಗಳುಂ ಕುದಿದು + ಅಪತೃಷ್ಣೆಯಂ ಕುಸಿದು ಮಾನಿಸುವ + ಅಯ್ದುಂ + ಅಣುವ್ರತಂಗಳಂ = ಅಹಿಂಸೆ ಬ್ರಹ್ಮಚರ್ಯ ಅಸ್ತೇಯ ಸತ್ಯ, ಸದಾ ದುರಾಸೆಯನ್ನು ಅದುಮಿಕೊಳ್ಳುವುದು (ಅಪರಿಗ್ರಹ) – ಈ ಪಂಚಾಣುವ್ರತಗಳನ್ನು

**ಗದ್ಯಾನುಸರಣ:** ಜಿನನ ಪಾದಕಮಲಗಳಲ್ಲಿ ಭಕ್ತಿಯು ನಿರಂತರವಾಗಿ ಉಂಟಾಗಲು, ಮೆಲ್ಲಮೆಲ್ಲನೆ ಕರ್ಮಬಂಧಗಳ ಬಿಗಿಯು ಸಡಿಲಗೊಳ್ಳಲು, ಬಾದರರೂಪದಿಂದ, ಅಹಿಂಸೆ ಬ್ರಹ್ಮಚರ್ಯ ಅಸ್ತೇಯ ಸತ್ಯ, ಸದಾ ದುರಾಸೆಯನ್ನು ಅದುಮಿಕೊಳ್ಳುವುದು (ಅಪರಿಗ್ರಹ) – ಈ ಪಂಚಾಣುವ್ರತಗಳನ್ನು

**ವಿಶೇಷ ವಿಚಾರ:** ಬಾದರರೂಪ = ಸ್ಥೂಲ, ಸೂಕ್ಷ್ಮವಾದ ಸಸ್ಯ ಮುಂತಾದ ಏಕೇಂದ್ರಿಯ ಜೀವ, ಶ್ರಾವಕನು ಅದನ್ನು ಕೊಲ್ಲಬಹುದು; ಆದರೆ ಕ್ರಿಮಿ ಮುಂತಾದ ದ್ವೀಂದ್ರಿಯ ಮುಂತಾದ ಜೀವಿಗಳೂ ಸ್ಥೂಲ, ಆದರೆ ಅವುಗಳನ್ನು ಕೊಲ್ಲದಿರುವುದೇ ಅಹಿಂಸಾವ್ರತ.

**ದೆಸೆಗಳ ಮೇರೆಯುಂ ನಿಱೆಸಿ ಪೋಪುದುಮಾಭರಣಪ್ರಸೂನಸ**
**ದ್ವಸನವಿಲೇಪನಾದಿಗಳೊಳಂ ಕೆಲವಂ ಗುಱೆಮಾಡಿಕೊಂಡು ಸೇ**
**ವಿಸುವುದುಮಸ್ತ್ರದಂಡವಿಷಪಾಶವಿಶೇಷಮನೀಯದಿರ್ಪುದೊಂ**
**ದೆಸಕಮುಮೆಂದು ಮೂಱುತೆಱದಿಂ ನೆಗಟ್ದಿರ್ದ ಗುಣವ್ರತಂಗಳಂ ೮**

**ಪದವಿಭಾಗ–ಅನ್ವಯ–ಅರ್ಥ:** ದೆಸೆಗಳ ಮೇರೆಯಂ ನಿಱೆಸಿ ಪೋಪುದುಂ = ದಿಕ್ಕುಗಳ ಎಲ್ಲೆಯನ್ನು ನಿಗದಿಪಡಿಸಿಕೊಂಡು ಸಂಚಾರ ಹೋಗುವುದು, ಆಭರಣಪ್ರಸೂನಸದ್ವಸನವಿಲೇಪನ + ಆದಿಗಳೊಳಂ = ಆಭರಣ ಹೂವು ವಸ್ತ್ರಗಳು ಸುಗಂಧದ್ರವ್ಯಗಳು ಮುಂತಾದವುಗಳಲ್ಲಿ, ಕೆಲವಂ ಗುಱೆಮಾಡಿಕೊಂಡು ಸೇವಿಸುವುದುಂ = ಕೆಲವನ್ನು ಮಾತ್ರ ಆರಿಸಿಕೊಂಡು ಬಳಸುವುದು, ಅಸ್ತ್ರದಂಡವಿಷಪಾಶವಿಶೇಷಮನೀಯದಿರ್ಪುದೊಂದು + ಎಸಕಮುಂ = ಆಯುಧ ದಂಡನೆ ವಿಷ ಮತ್ತು ಪಾಶಗಳನ್ನು ನೀಡದ ನಡವಳಿಕೆ, ಎಂದು ಮೂಱುತೆಱದಿಂ ನೆಗಟ್ದಿರ್ದ ಗುಣವ್ರತಂಗಳಂ = ಎಂಬ ಮೂರು ಬಗೆಯ ಗುಣ್ರತಗಳನ್ನು

**ಗದ್ಯಾನುಸರಣ:** ದಿಕ್ಕುಗಳ ಎಲ್ಲೆಯನ್ನು ನಿಗದಿಪಡಿಸಿಕೊಂಡು ಸಂಚಾರ ಹೋಗುವುದು, ಆಭರಣ ಹೂವು ವಸ್ತ್ರಗಳು ಸುಗಂಧದ್ರವ್ಯಗಳು ಮುಂತಾದವುಗಳಲ್ಲಿ ಕೆಲವನ್ನು ಮಾತ್ರ ಆರಿಸಿಕೊಂಡು ಬಳಸುವುದು, ಆಯುಧ ದಂಡನೆ ವಿಷ ಮತ್ತು ಪಾಶಗಳನ್ನು ನೀಡದ ನಡವಳಿಕೆ – ಎಂಬ ಮೂರು ಬಗೆಯ ಗುಣವ್ರತಗಳನ್ನು

**ವಿವಿಧಪ್ರಾಣಿಗಳೊಳ್ ಸಮತೆ ಸಂದಾಹಾರದಾನಂ ಜಿನ**
**ಸ್ತವನಕ್ಕಂ ಜಿನಪೂಜೆಗಂ ಮನಮನೊಲ್ದೋರಂತೆ ತಂದಾದಮು**
**ತ್ಸವದಿಂ ನೋಂಪುದು ಜೀವಿತಾಂತ್ಯದೆಡೆಯೊಳ್ ಸನ್ನ್ಯಾಸಮಂ ಮಾಟ್ಪುದೆಂ**
**ಬಿವು ನೇರ್ಪಟ್ಟೆಸೆವನ್ನೆಗಂ ನೆಗಟ್ದುವುದುಂ ಶಿಕ್ಷಾವ್ರತಂ ನಾಲ್ಕುಮಂ ೯**

**ಪದವಿಭಾಗ–ಅನ್ವಯ–ಅರ್ಥ:** ವಿವಿಧಪ್ರಾಣಿಗಳೊಳ್ ಸಮತೆ = ಬೇರೆ ಬೇರೆ ಬಗೆಯ ಪ್ರಾಣಿಗಳ ವಿಷಯದಲ್ಲಿ ಸಮಾನ ಮನೋಭಾವ, ಸಂದ + ಆಹಾರದಾನಂ = ಮಾಡುವ ಆಹಾರದಾನ, ಜಿನಸ್ತವನಕ್ಕಂ ಜಿನಪೂಜೆಗಂ ಮನಮನೊಲ್ದು + ಓರಂತೆ ತಂದು + ಆದಂ + ಉತ್ಸವದಿಂ ನೋಂಪುದು = ಜಿನಸ್ತುತಿ ಮತ್ತು ಜಿನಪೂಜೆಗಳ ಬಗ್ಗೆ ಗಮನ ಹರಿಸಿ ಉತ್ಸಾಹದಿಂದ ವ್ರತಗಳನ್ನು ನೆರವೇರಿಸುವುದು, ಜೀವಿತ + ಅಂತ್ಯದ + ಎಡೆಯೊಳ್ ಸನ್ನ್ಯಾಸಮಂ ಮಾಟ್ಪುದು

= ಜೀವನದ ಕೊನೆಯಲ್ಲಿ ಸನ್ಯಾಸವನ್ನು ತೊಡುವುದು, ಎಂಬಿವು ನೇರ್ಪಟ್ಟು + ಎಸೆವನ್ನೆಗಂ ನೆಗಟ್ದುವುದುಂ ಶಿಕ್ಷಾವ್ರತಂ ನಾಲ್ಕುಮಂ = ಇವುಗಳು ಮನಸ್ಸಿನಲ್ಲಿ ನೆಲೆಸಿ ಅನುಸರಿಸುವುದು ಎಂಬ ನಾಲ್ಕು ಶಿಕ್ಷಾವ್ರತಗಳನ್ನು

**ಗದ್ಯಾನುಸರಣ:** ಬೇರೆ ಬೇರೆ ಬಗೆಯ ಪ್ರಾಣಿಗಳ ವಿಷಯದಲ್ಲಿ ಸಮಾನ ಮನೋಭಾವ, ಮಾಡುವ ಆಹಾರದಾನ, ಜಿನಸ್ತುತಿ ಮತ್ತು ಜಿನಪೂಜೆಗಳ ಬಗ್ಗೆ ಗಮನ ಹರಿಸಿ ಉತ್ಸಾಹದಿಂದ ವ್ರತಗಳನ್ನು ನೆರವೇರಿಸುವುದು, ಜೀವನದ ಕೊನೆಯಲ್ಲಿ ಸನ್ಯಾಸವನ್ನು ತೊಡುವುದು, ಇವುಗಳು ಮನಸ್ಸಿನಲ್ಲಿ ನೆಲೆಸಿ ಅನುಸರಿಸುವುದು ಎಂಬ ನಾಲ್ಕು ಶಿಕ್ಷಾವ್ರತಗಳನ್ನು

**ವ।** ತಾಳ್ದಿ

**ಅರ್ಥ:** ತಾಳ್ದಿ = ತಳೆದು,

**ನುತಸಮ್ಯಕ್ತ್ವಮಣುವ್ರತಸ್ಥಿತಿ ಸಮತ್ವೀಭಾವನಂ ಪ್ರೋಷಧ**
**ವ್ರತಮೆಂದುಂ ಪಸಿಯೊಂದುಮಂ ಮುಱಿಯೆನೆಂಬೀ ಪೂಣ್ಕೆ ಮಾಡೆಂ ಪಗಲ್**
**ರತಿಯಂ ಸ್ತ್ರೀಯರೊಳೆಂಬುದೊಂದು ನಿಯಮಂ ಸದ್ಬ್ರಹ್ಮಚರ್ಯವ್ರತಂ**
**ಸತತಾರಂಭಪರಿಗ್ರಹಚ್ಯುತಿ ಪರಿತ್ಯಕ್ತಾಮೋದೋದಯಂ ೧೦**

**ಪದವಿಭಾಗ-ಅನ್ವಯ-ಅರ್ಥ:** ನುತಸಮ್ಯಕ್ತ್ವಂ + ಅಣುವ್ರತಸ್ಥಿತಿ ಸಮತ್ವೀಭಾವನಂ ಪ್ರೋಷಧವ್ರತಮೆಂದುಂ = ಶ್ರೇಷ್ಠವಾದ ಸಮ್ಯಕ್ತ್ವ, ಅಣುವ್ರತಧಾರಣೆ, ಸಮತ್ವಭಾವ ಪ್ರೋಷಧವ್ರತ, ಪಸಿಯೊಂದುಮಂ ಮುಱಿಯೆನೆಂಬೀ ಪೂಣ್ಕೆ = ಹಸಿಯಾದ ಯಾವುದನ್ನೂ ಮುರಿಯುವುದಿಲ್ಲ ಎಬ ಶಪಥ, ಸ್ತ್ರೀಯರೊಳ್ ಪಗಲ್ ರತಿಯಂ ಮಾಡೆಂ ಎಂಬುದೊಂದು ನಿಯಮಂ = ಹಗಲುಹೊತ್ತು ಸ್ತ್ರೀಸಮಾಗಮವನ್ನು ಮಾಡುವುದಿಲ್ಲ ಎಂಬ ನಿಯಮ, ಸತ್ + ಬ್ರಹ್ಮಚರ್ಯವ್ರತಂ = ಸರಿಯಾದ ಬ್ರಹ್ಮಚರ್ಯವ್ರತ, ಸತತ + ಆರಂಭಪರಿಗ್ರಹಚ್ಯುತಿ = ಆರಂಭವಿಹೀನತೆ, ಪರಿತ್ಯಕ್ತ + ಆಮೋದ + ಉದಯಂ = ಆಮೋದ ಮತ್ತು ಉದಯಗಳ ವರ್ಜನೆ,

**ಗದ್ಯಾನುಸರಣ:** ಶ್ರೇಷ್ಠವಾದ ಸಮ್ಯಕ್ತ್ವ, ಅಣುವ್ರತಧಾರಣೆ, ಸಮತ್ವಭಾವ, ಪ್ರೋಷಧವ್ರತ, ಹಸಿಯಾದ ಯಾವುದನ್ನೂ ಮುರಿಯುವುದಿಲ್ಲ ಎಂಬ ಶಪಥ, ಹಗಲುಹೊತ್ತು ಸ್ತ್ರೀಸಮಾಗಮನಿಷೇಧ, ಬ್ರಹ್ಮಚರ್ಯವ್ರತ, ಆರಂಭವರ್ಜನೆ, ಆಮೋದ ಮತ್ತು ಉದಯಗಳ ವರ್ಜನೆ,

ಪರಮಮುನಿಗದಿತಮಾರ್ಗಾ
ಚರಣಮುಮೆಂದಿಂತು ನೆರೆಯೆ ಭೂಭುವನದೊಳಂ
ಪರೆದೇಕಾದಶನಿಳಯಮ
ನರಸನನುಕ್ರಮದಿನಿತುಮಂ ಕೈಕೊಂಡಂ ೧೧

**ಪದವಿಭಾಗ–ಅನ್ವಯ–ಅರ್ಥ:** ಪರಮಮುನಿಗದಿತಮಾರ್ಗ + ಆಚರಣಮುಂ + ಎಂದಿಂತು ನೆರೆಯೆ = ಇವು ಶ್ರೇಷ್ಠ ಮುನಿಗಳು ಚರಿಸುವ ಮಾರ್ಗದ ಆಚರಣೆಗಳು ಎಂಬ ಇವು, ಭೂಭುವನದೊಳಂ ಪರೆದು = ಜಗತ್ತನ್ನೆಲ್ಲ ಆವರಿಸಲು, ಏಕಾದಶನಿಳಯಮನ್ + ಅರಸನ್ = ಈ ಹನ್ನೊಂದನ್ನೂ (ಸುವಿಧಿ) ರಾಜನು, ಅನುಕ್ರಮದಿನ್ + ಇನಿತುಮಂ ಕೈಕೊಂಡಂ = ಒಂದೊಂದಾಗಿ ಇವೆಲ್ಲವನ್ನೂ ಅಳವಡಿಸಿಕೊಂಡ.

**ಗದ್ಯಾನುಸರಣ:** ಇವು ಶ್ರೇಷ್ಠ ಮುನಿಗಳು ಚರಿಸುವ ಮಾರ್ಗದ ಆಚರಣೆಗಳು ಎಂಬ ಇವು ಜಗತ್ತನ್ನೆಲ್ಲ ಆವರಿಸಿ, ಈ ಹನ್ನೊಂದನ್ನೂ (ಸುವಿಧಿ) ರಾಜನು, ಒಂದೊಂದಾಗಿ ಇವೆಲ್ಲವನ್ನೂ ಅಳವಡಿಸಿಕೊಂಡ.

**ವಿಶೇಷ ವಿಚಾರ:** ಏಕಾದಶನಿಳಯ = ಶ್ರಾವಕರ ಹನ್ನೊಂದು ನೆಲೆಗಳು: ಇಲ್ಲಿ ವಿವರಿಸಿರುವ ಸಮ್ಯಗ್ದರ್ಶನ, ಅಣುವ್ರತ, ಸಮತ್ವೀಭಾವ, ಪ್ರೋಷಧೋಪವಾಸ (ಕಷಾಯಗಳನ್ನು ಕುಗ್ಗಿಸುತ್ತ ಮಾಡುವ ಉಪವಾಸ), ಹಸಿಯ ಹಣ್ಣು ಮುಂತಾದುವನ್ನು ಸ್ವೀಕರಿಸದಿರುವ ಸಚಿತ್ತವಸ್ತುತ್ಯಾಗ, ಹಗಲು ಸ್ತ್ರೀಸಂಗವರ್ಜನೆ, ಆರಂಭತ್ಯಾಗ (ಆರಂಭ ಎಂದರೆ ಹಿಂಸೆಗೆ ಕಾರಣವಾಗುವ ಕಾರ್ಯ), ಪರಿಗ್ರಹತ್ಯಾಗ, ಅನುಮತಿತ್ಯಾಗ (ಮನೆಯ ಯಜಮಾನಿಕೆಯನ್ನು ತೊರೆಯುವುದು), ಉದಯ ಅಥವಾ ಉದ್ದಿಷ್ಟತ್ಯಾಗ (ಮನೆ ಬಿಟ್ಟು ಕಾಡಿಗೆ ಹೋಗಿ ದೀಕ್ಷೆ ಪಡೆದು ಭಿಕ್ಷೆಯಿಂದ ಜೀವಿಸುವುದು)

**ವ। ಅಂತು ಕೈಕೊಂಡುತ್ಕೃಷ್ಟಚಾರಿತ್ರದೊಳ್ ನೆಗಟ್ದು ಜೀವಿತಾವಸಾನ ದೊಳ್ ಸಂಸಾರಕ್ಷಪಕನಾಗಿ ಸಮಾಧಿವಿಧಿಯಿಂ ಶರೀರಪರಿತ್ಯಾಂಗಗೆಯ್ದು**

**ಪದವಿಭಾಗ–ಅನ್ವಯ–ಅರ್ಥ:** ಅಂತು ಕೈಕೊಂಡು = ಈ ರೀತಿ ಏಕಾದಶನಿಲಯಗಳನ್ನು ಕೈಗೊಂಡು, ಉತ್ಕೃಷ್ಟಚಾರಿತ್ರದೊಳ್ ನೆಗಟ್ದು = ಶ್ರೇಷ್ಠ ಆಚರಣೆಗಳಲ್ಲಿ ತೊಡಗಿ, ಜೀವಿತ + ಅವಸಾನದೊಳ್ = ಜೀವನದ ಕೊನೆಯಲ್ಲಿ, ಸಂಸಾರಕ್ಷಪಕನಾಗಿ = ಸಂಸಾರದ ಬಂಧವನ್ನು ಕಳಚಿಕೊಂಡು, ಸಮಾಧಿವಿಧಿಯಿಂ ಶರೀರಪರಿತ್ಯಾಂಗಗೆಯ್ದು = ಸಮಾಧಿವಿಧಿಯಿಂದ ದೇಹತ್ಯಾಗ ಮಾಡಿ,

**ಗದ್ಯಾನುಸರಣ:** ಈ ರೀತಿ ಏಕಾದಶನಿಲಯಗಳನ್ನು ಕೈಗೊಂಡು, ಶ್ರೇಷ್ಠ

ಆಚರಣೆಗಳಲ್ಲಿ ತೊಡಗಿಕೊಂಡ; ಜೀವನದ ಕೊನೆಯಲ್ಲಿ ಸಂಸಾರದ ಬಂಧವನ್ನು ಕಳಚಿಕೊಂಡು ಸಮಾಧಿವಿಧಿಯಿಂದ ದೇಹತ್ಯಾಗ ಮಾಡಿದ.

**ಎನಗಿದು ಚೋದ್ಯಂ ಪನ್ನೊಂ**
**ದನೆಯದು ನೆಲೆ ತನ್ನ ನೆಗಟ್ಟುದಂತದು ಪದಿನಾ**
**ಱನೆಯ ನೆಲೆಗುಯ್ದುದೆಂಬುದ**
**ನೆನೆ ಸುವಿಧಿನರೇಂದ್ರನಚ್ಯುತೇಂದ್ರನುಮಾದಂ** ೧೨

**ಪದವಿಭಾಗ–ಅನ್ವಯ–ಅರ್ಥ:** ಎನಗಿದು ಚೋದ್ಯಂ = ನನಗೆ ಅಚ್ಚರಿ! ತನ್ನ ನೆಗಟ್ಟುದು ಪನ್ನೊಂದನೆಯದು ನೆಲೆ = ತಾನು ಆಚರಿಸಿದ ಹನ್ನೊಂದನೆಯ ನೆಲೆಯಾದ ಉದ್ದಿಷ್ಟತ್ಯಾಗವು, ಅಂತದು ಪದಿನಾಱನೆಯ ನೆಲೆಗುಯ್ದುದು + ಎಂಬುದನ್ + ಎನೆ = ಹದಿನಾರನೆಯ ನೆಲೆ ಕರೆದೊಯ್ದಿತೋ ಎಂಬಂತೆ, ಸುವಿಧಿನರೇಂದ್ರನ್ + ಅಚ್ಯುತೇಂದ್ರನುಮಾದಂ = ಸುವಿಧಿ ಮಹಾರಾಜನು ಅಚ್ಯುತೇಂದ್ರನಾದ.

**ಗದ್ಯಾನುಸರಣ:** ನನಗೆ ಅಚ್ಚರಿ! ತಾನು ಆಚರಿಸಿದ ಹನ್ನೊಂದನೆಯ ನೆಲೆಯಾದ ಉದ್ದಿಷ್ಟತ್ಯಾಗವು ಹದಿನಾರನೆಯ ನೆಲೆ ಕರೆದೊಯ್ದಿತೋ ಎಂಬಂತೆ ಸುವಿಧಿ ಮಹಾರಾಜನು ಅಚ್ಯುತೇಂದ್ರನಾದ.

**ವ।। ಕೇಶವನುಮಾತ್ಮೀಯಗುರುವಿಯೋಗದೊಳ್ ಪರಿತ್ಯಕ್ತಸಕಲ ರಾಜ್ಯಪರಿಚ್ಛೇದಂ ಪ್ರವ್ರಜ್ಯಪದವಿಯೊಳ್ ಪರಿತ್ಯಕ್ತನುಮಾಗಿ ತದುಚ್ಯುತ ಕಲ್ಪದೊಳ್ ಪ್ರತೀಂದ್ರನಾದಂ**

**ಪದವಿಭಾಗ–ಅನ್ವಯ–ಅರ್ಥ:** ಕೇಶವನುಂ + ಆತ್ಮೀಯಗುರುವಿಯೋಗದೊಳ್ = ಕೇಶವನೂ ತನ್ನ ತಂದೆಯ ಅಗಲಿಕೆಯಿಂದ, ಪರಿತ್ಯಕ್ತಸಕಲರಾಜ್ಯಪರಿಚ್ಛೇದಂ = ಐಹಿಕ ವ್ಯವಹಾರಗಳನ್ನೆಲ್ಲ ತೊರೆಯುವ ನಿರ್ಧಾರಮಾಡಿ, ಪ್ರವ್ರಜ್ಯಪದವಿಯೊಳ್ ಪರಿತ್ಯಕ್ತನುಮಾಗಿ = ಸಂಚಾರಿ ಸನ್ಯಾಸಿಯಾಗಿ, ತತ್ + ಅಚ್ಯುತಕಲ್ಪದೊಳ್ ಪ್ರತೀಂದ್ರನಾದಂ = ಅದೇ ಅಚ್ಯುತಕಲ್ಪದಲ್ಲಿ ಪ್ರತೀಂದ್ರನಾದ.

**ಗದ್ಯಾನುಸರಣ:** ಕೇಶವನೂ ತನ್ನ ತಂದೆಯ ಅಗಲಿಕೆಯಿಂದ ಐಹಿಕ ವ್ಯವಹಾರಗಳನ್ನೆಲ್ಲ ತೊರೆಯುವ ನಿರ್ಧಾರಮಾಡಿದ; ಸಂಚಾರಿ ಸನ್ಯಾಸಿದೀಕ್ಷೆಯನ್ನು ಪಡೆದು ಸತ್ತ ಬಳಿಕ ಅಚ್ಯುತಕಲ್ಪದಲ್ಲಿಯೇ ಪ್ರತೀಂದ್ರನಾದ.

**ವರದತ್ತಂ ಮೊದಲಾಗೆ ಧರಣೀಶರವರ್ಗೆಲ್ಲಂ**
**ಸುರಲೋಕಂ ಸುವಿಧಿಯೊಡನಾದುದಂತುಟೆ**
**ನೆರೆದುದನಿತೀ ಸುರಲೋಕಂ** ೧೩

**ಪದವಿಭಾಗ–ಅನ್ವಯ–ಅರ್ಥ:** ವರದತ್ತಂ ಮೊದಲಾಗೆ ಧರಣೀಶರ್ + ಅವರ್ಗೆ + ಎಲ್ಲಂ = ವರದತ್ತನೇ ಮೊದಲಾದ ರಾಜರುಗಳಿಗೆಲ್ಲ, ಸುವಿಧಿಯೊಡನೆ ಸುರಲೋಕಂ ಆದುದು = ಸುವಿಧಿಯ ಜೊತೆಯಲ್ಲಿಯೇ ದೇವಲೋಕವು ಲಭಿಸಿತು, ಅಂತುಟೆ ಈ ಸುರಲೋಕಂ ನೆರೆದರ್ + ಅನಿತು = ಹೀಗೆ ಆ ದೇವಲೋಕದಲ್ಲಿ ಎಲ್ಲರೂ ಸೇರಿದರು.

**ಗದ್ಯಾನುಸರಣ:** ವರದತ್ತನೇ ಮೊದಲಾದ ರಾಜರುಗಳಿಗೆಲ್ಲ ಸುವಿಧಿಯ ಜೊತೆಯಲ್ಲಿಯೇ ದೇವಲೋಕವು ಲಭಿಸಿತು; ಹೀಗೆ ಆ ದೇವಲೋಕದಲ್ಲಿ ಎಲ್ಲರೂ ಸೇರಿದರು.

**ವಿಶೇಷ ವಿಚಾರ:** ಈ ಪದ್ಯ ಒಂದು ತ್ರಿಪದಿ; ಪಂಪ ತ್ರಿಪದಿಯಲ್ಲೂ ಪ್ರಯೋಗ ಮಾಡಿರುವುದು ವಿಶೇಷ. ಮುಂದೆ ಬಹಳ ಪ್ರಸಿದ್ಧವಾದ ದೇಶೀ ಛಂದಸ್ಸಿನ ತ್ರಿಪದಿಯನ್ನು ಇಲ್ಲಿ ತಂದಿರುವುದು ಅವನಿಗೆ ಅದರಲ್ಲಿ ಪ್ರವೇಶವಿತ್ತೆಂದು ಸ್ಪಷ್ಟವಾಗುವುದು. ತ್ರಿಪದಿಯ ಪ್ರಾಚೀನ ಉಲ್ಲೇಖಗಳಲ್ಲಿ ಪಂಪನ ಈ ತ್ರಿಪದಿಯೂ ಒಂದು.

**ವ} ಅಂತು ಮೇರುಮೂಲದಿಂ ತಗುಳ್ದಾಱುರಜ್ಜು ನೆಗೆದೆಡೆಯೊಳ ಚ್ಯುತಕಲ್ಪ ಮಿರ್ದುದು; ಅಲ್ಲಿ ತನ್ನ ನಾಲ್ವರುಂ ಸಹಾಯುರಪ್ಪ ಸಾಮಾನಿಕ ದೇವರುಂ ತತ್ಪ್ರತೀಂದ್ರನುಂ ಬೆರಸಚ್ಯುತೇಂದ್ರಂ ನವಪಂಚಾಶದಧಿಕ ತ್ರಿಶತ ವಿಮಾನಾಧೀಶನುಂ ತ್ರಯುಸ್ತ್ರಿಂಶತ್ಪರಿಮಿತ ತ್ರಯುಸ್ತ್ರಿಂಶಾಮರಪರಿವೃತನುಂ ಆಯುತಪ್ರಮಿತಸಾಮಾನಿಕ ಸುರಾನೀಕನುಂ ಚತುರಯುತಮಿತಾಂಗ ರಕ್ಷಕ ಪರಿವೃತನುಂ ಲೋಕಪಾಲಚತುಷ್ಟಯಾಧಿಷ್ಠಿತನುಂ ಹಸ್ತ್ಯಶ್ವರಥಪದಾತಿ ವೃಷಭ ಗಂಧರ್ವನರ್ತಕೀಪ್ರಮುಖ ಸಪ್ತಾನೀಕಸಮೇತನುಂ ಅಂತರ್ಮಧ್ಯ ಬಾಹ್ಯ ಪರಿಷತ್ಪ್ರಕಟಿತ ವಿಭವನುಂ ದ್ವಾತ್ರಿಂಶತ್ಪ್ರಮಾಣ ಪ್ರಧಾನದೇವೀ ನಿವಹ ವಿಳಾಸಧವಳವಿಲೋಚನಗೋಚರನುಂ ತ್ರಿಷಷ್ಟಿಸಂಖ್ಯಾತ ವಲ್ಲಭಿಕಾ ವಿಭ್ರಮ ಭ್ರೂಲತಾತ್ರಿಭಾಗನುಮಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಮೇರುಮೂಲದಿಂ ತಗುಳ್ದು = ಹೀಗೆ ಮೇರುಪರ್ವತದ ಬುಡದಿಂದ ಮೊದಲಾಗಿ, ಆಱುರಜ್ಜು ನೆಗೆದೆಡೆಯೊಳ್ + ಅಚ್ಯುತಕಲ್ಪಮಿರ್ದುದು = ಆರು ರಜ್ಜುಗಳಷ್ಟು ಎತ್ತರದಲ್ಲಿ ಅಚ್ಯುತಕಲ್ಪವಿದೆ. ಅಲ್ಲಿ ತನ್ನ ನಾಲ್ವರುಂ ಸಹಾಯುರಪ್ಪ ಸಾಮಾನಿಕದೇವರುಂ ತತ್ + ಪ್ರತೀಂದ್ರನುಂ ಬೆರಸು = ಅಲ್ಲಿ ತನ್ನ ನಾಲ್ಕು ಮಂದಿ ಸಹಾಯಕರಾದ ಸಾಮಾನಿಕದೇವರು ಮತ್ತು ಪ್ರತೀಂದ್ರನ ಜೊತೆಯಲ್ಲಿ, ಅಚ್ಯುತೇಂದ್ರಂ = ಅಚ್ಯುತೇಂದ್ರನು, ನವಪಂಚಾಶತ್

+ ಅಧಿಕತ್ರಿಶತವಿಮಾನಾಧೀಶನುಂ = ನೂರ ಐವತ್ತೊಂಬತ್ತು ವಿಮಾನಗಳ ಒಡೆಯನಾಗಿ, ತ್ರಯಃ + ತ್ರಿಂಶತ್ + ಪರಿಮಿತ = ಮೂವತ್ತು ಮೂರು ಮಂದಿ, ತ್ರಯಸ್ತ್ರಿಂಶ + ಅಮರಪರಿವೃತನುಂ = ತ್ರಯಸ್ತ್ರಿಂಶ ದೇವತೆಗಳಿಂದ ಕೂಡಿ, ಅಯುತಪ್ರಮಿತಸಾಮಾನಿಕಸುರಾನೀಕನುಂ = ಹತ್ತು ಸಾವಿರ ಸಾಮಾನಿಕ ದೇವತೆಗಳ ಸೈನ್ಯದಿಂದ ಕೂಡಿ, ಚತುರಯುತಮಿತ + ಅಂಗರಕ್ಷಕಪರಿವೃತನುಂ = ನಲವತ್ತು ಸಾವಿರ ಮಂದಿ ಅಂಗರಕ್ಷಕರಿಂದಸುತ್ತುವರೆಯಲ್ಪಟ್ಟು, ಲೋಕಪಾಲ ಚತುಷ್ಟಯ + ಅಧಿಷ್ಠಿತನುಂ = ನಾಲ್ಕು ಮಂದಿ ಲೋಕಪಾಲರ ಆಧಿಪತಿಯಾಗಿ, ಹಸ್ತಿ + ಅಶ್ವರಥಪದಾತಿವೃಷಭಗಂಧರ್ವನರ್ತಕೀ ಪ್ರಮುಖಸಪ್ತಾನೀಕಸಮೇತನುಂ = ಆನೆ ಕುದುರೆ ರಥ ಪದಾತಿ ಎತ್ತು ಗಂಧರ್ವ ನರ್ತಕಿಯರೆಂಬ ಏಳು ರೀತಿಯ ಸೈನ್ಯದಿಂದ ಕೂಡಿ, ಅಂತರ್ + ಮಧ್ಯಬಾಹ್ಯಪರಿಷತ್ + ಪ್ರಕಟಿತ ವಿಭವನುಂ = ಒಳಗಿನ ಮಧ್ಯದ ಮತ್ತು ಹೊರಗಿನ ಎಂಬ ಮೂರು ಪರಿಷತ್ತುಗಳ ವೈಭವದಿಂದ ಕೂಡಿ, ದ್ವಾತ್ರಿಂಶತ್ + ಪ್ರಮಾಣಪ್ರಧಾನದೇವೀನಿವಹವಿಳಾಸ = ಮೂವತ್ತೆರಡು ಮಂದಿ ಮುಖ್ಯ ದೇವಿಯರ ಬೆಡಗಿನ, ಧವಳವಿಲೋಚನ ಗೋಚರನುಂ = ಬೆಳ್ನೋಟಗಳಿಗೆ ಗುರಿಯಾಗಿ, ತ್ರಿಷಷ್ಟಿಸಂಖ್ಯಾತವಲ್ಲಭಿಕಾ = ಅರುವತ್ತುಮೂವರು ಹೆಂಡತಿಯರ, ವಿಭ್ರಮಭ್ರೂಲತಾತ್ರಿಭಾಗನುಮಾಗಿ = ವಿಲಾಸಯುಕ್ತ ಹುಬ್ಬಿನ ನಡುವಣ ನೋಟಕ್ಕೆ ಒಳಗಾಗಿ,

**ಗದ್ಯಾನುಸರಣ:** ಹೀಗೆ ಮೇರುಪರ್ವತದ ಬುಡದಿಂದ ಮೊದಲಾಗಿ ಆರು ರಜ್ಜುಗಳಷ್ಟು ಎತ್ತರದಲ್ಲಿ ಅಚ್ಯುತಕಲ್ಪವಿದೆ; ಅಲ್ಲಿ ತನ್ನ ನಾಲ್ಕು ಮಂದಿ ಸಹಾಯಕರಾದ ಸಾಮಾನಿಕದೇವರು ಮತ್ತು ಪ್ರತೀಂದ್ರನ ಜೊತೆಯಲ್ಲಿ ಅಚ್ಯುತೇಂದ್ರನಿದ್ದ; ಆತ ಅಲ್ಲಿ ನೂರ ಐವತ್ತೊಂಬತ್ತು ವಿಮಾನಗಳ ಒಡೆಯ; ಮೂವತ್ತು ಮೂರು ಮಂದಿ ತ್ರಯಸ್ತ್ರಿಂಶ ದೇವತೆಗಳು ಅವನೊಡನಿದ್ದರು; ಹತ್ತು ಸಾವಿರ ಸಾಮಾನಿಕ ದೇವತೆಗಳ ಸೈನ್ಯ ಅವನ ಅಧಿನದಲ್ಲಿತ್ತು; ನಲವತ್ತು ಸಾವಿರ ಮಂದಿ ಅಂಗರಕ್ಷಕರು ಅವನನ್ನು ಸುತ್ತುವರೆದಿದ್ದರು; ಆತ ನಾಲ್ಕು ಮಂದಿ ಲೋಕಪಾಲರ ಆಧಿಪತಿ; ಆನೆ ಕುದುರೆ ರಥ ಪದಾತಿ ಎತ್ತು ಗಂಧರ್ವ ನರ್ತಕಿಯರೆಂಬ ಏಳು ರೀತಿಯ ಸೈನ್ಯದಿಂದ ಅವನದು; ಒಳಗಿನ ಮಧ್ಯದ ಮತ್ತು ಹೊರಗಿನ ಎಂಬ ಮೂರು ಪರಿಷತ್ತುಗಳ ವೈಭವ ಅವನದಾಗಿತ್ತು; ಮೂವತ್ತೆರಡು ಮಂದಿ ಮುಖ್ಯ ದೇವಿಯರು ತಮ್ಮ ಬೆಳ್ನೋಟಗಳನ್ನು ಅವನೆಡೆಗೆ ಬೀರುತ್ತಿದ್ದರು; ಜತೆಗೆ, ಅರುವತ್ತ ಮೂವರು ಹೆಂಡತಿಯರ ವಿಲಾಸಯುಕ್ತ ಹುಬ್ಬಿನ ನಡುವಣ ನೋಟ ಅವನನ್ನು ಆವರಿಸಿದ್ದುವು.

**ವಿಶೇಷ ವಿಚಾರ:** ರಜ್ಜು = ಒಂದು ಉದ್ದಳತೆ, ಒಂದು ಹಸ್ತದಷ್ಟು

**ಮಾದೇವಿಯರೆಣ್ಬರ್ ಮದ**
**ನೋದಯಮುಮಂ ಕುಡೆ ಮನಃಪ್ರವೀಚಾರದೊಳಂ**

**ತಾ ದೇವಂ ಸಂಚಿತಪು**
**ಣ್ಯೋದಯದಿಂದನಿತು ಮಹಿಮೆಯಂ ಕೈಕೊಂಡಂ ೧೪**

**ಪದವಿಭಾಗ–ಅನ್ವಯ–ಅರ್ಥ:** ಮಾದೇವಿಯರ್ + ಎಣ್ಬರ್ = ಎಂಟು ಮಂದಿ ಮಾದೇವಿಯರು, ಮನಃಪ್ರವೀಚಾರದೊಳ್ ಮನಃಪ್ರವೀಚಾರದಿಂದ, ಮದನ + ಉದಯಮಂ ಕುಡೆ = ಕಾಮಸುಖವನ್ನುಂಟು ಮಾಡಲು, ಅಂತಾ ದೇವಂ ಸಂಚಿತಪುಣ್ಯೋದಯದಿಂದೆ = ಹೀಗೆ ಆ ದೇವನು ಗಳಿಸಿದ್ದ ಪುಣ್ಯದ ಪ್ರಭಾವದಿಂದಾಗಿ, ಅನಿತು ಮಹಿಮೆಯಂ ಕೈಕೊಂಡಂ = ಅಷ್ಟೊಂದು ಮಹಿಮೆಯನ್ನು ಹೊಂದಿದ.

**ಗದ್ಯಾನುಸರಣ:** ಎಂಟು ಮಂದಿ ಮಾದೇವಿಯರು, ಮನಃಪ್ರವೀಚಾರದ ಮೂಲಕ ಅವನಿಗೆ ಕಾಮಸುಖವನ್ನುಂಟು ಮಾಡುತ್ತಿದ್ದರು; ಹೀಗೆ ಆ ದೇವನು ತಾನು ಗಳಿಸಿದ್ದ ಪುಣ್ಯದ ಪ್ರಭಾವದಿಂದಾಗಿ ಅಷ್ಟು ಮಹಿಮೆಯನ್ನು ಹೊಂದಿದ.

**ದೇವಿಯರೊಳೊರ್ಬರೊರ್ಬರ್**
**ದೇವಿಯ ಪರಿವಾರದಪ್ಸರೋಗಣಮುಂ ತ**
**ದ್ದೇವೀವಿಕರಣಸಂಭವ**
**ದೇವಿಯರಂ ಪಲಬರೆನಗೆ ಪೊಗಟಲಳುಂಬಂ ೧೫**

**ಪದವಿಭಾಗ–ಅನ್ವಯ–ಅರ್ಥ:** ದೇವಿಯರೊಳೊರ್ಬರೊರ್ಬರ್ = ದೇವಿಯರಲ್ಲಿ ಒಬ್ಬೊಬ್ಬರಿಗೂ, ದೇವಿಯ ಪರಿವಾರದ + ಅಪ್ಸರೋಗಣಮುಂ = ದೇವಿಯ ಪರಿವಾರದ ಅಪ್ಸರೆಯರ ಗಣವೂ, ತತ್ + ದೇವೀವಿಕರಣಸಂಭವ ದೇವಿಯರುಂ ಪಲಬರ್ = ಆ ದೇವಿಯರ ವಿಕ್ರಿಯೆಯಿಂದ ಹೊಮ್ಮುವ ದೇವಿಯರೂ ಆನೇಕ; ಎನಗೆ ಪೊಗಟಲ್ + ಅಳುಂಬಂ = ಅದನ್ನು ಹೊಗಳುವುದು ನನಗೆ ಅಸಾಧ್ಯ.

**ಗದ್ಯಾನುಸರಣ:** ದೇವಿಯರಲ್ಲಿ ಒಬ್ಬೊಬ್ಬರಿಗೂ ಪರಿವಾರದ ಅಪ್ಸರೆಯರ ಗಣವಿರುತ್ತದೆ; ಜೊತೆಗೆ ಆ ದೇವಿಯರ ವಿಕ್ರಿಯೆಯಿಂದ ಹೊಮ್ಮುವ ದೇವಿಯರೂ ಆನೇಕ; ಅದನ್ನು ಹೊಗಳುವುದು ನನಗೆ ಅಸಾಧ್ಯ.

**ವಿಶೇಷ ವಿಚಾರ:** ಪರಿವಾರದ ಅಪ್ಸರೆ = ಪ್ರತಿಯೊಬ್ಬ ದೇವಿಗೂ ೨೫೦ ಮಂದಿ ಪರಿವಾರದೇವಿಯರಿರುತ್ತಾರೆ; ವಿಕಿರಣಸಂಭವ ದೇವಿ = ಅಚ್ಯುತೇಂದ್ರನ ಪ್ರತಿ ದೇವಿಯೂ (ಅಣಿಮಾದಿಗಳಿಂದ ತಮಗಿಷ್ಟ ಬಂದ ದೇಹರೂಪವನ್ನು ಧರಿಸಬಹುದಾದ ವಿಕ್ರಿಯಾಋದ್ಧಿಯಿಂದ) ೧೨೪೦೦೦ ದಿವ್ಯರೂಪಗಳನ್ನು ಧರಿಸುತ್ತಾಳೆ. ಈ ವಿವರ ಪೂರ್ವಪುರಾಣದಲ್ಲಿಯೂ ಇದೆ: 'ಷಟ್ಕಚ್ಚುತಷ್ಕಂ

ಸಹಸ್ರಾಣಿ ನಿಯುತಾನಿ ದಶೈವ ಚ। ವಿಕರೋತ್ಯೇಕಶೋ ದೇವೀ ದಿವ್ಯರೂಪಾಣಿ ಯೋಚಿತಾಂ', ೧೦. ೧೯೭.

ಸ್ಮರಿಯಿಪನಿರ್ಪತ್ತಿರ್ಚ್ಛಾ
ಸಿರ ಬರಿಸಕ್ಕೊರ್ಮೆ ಮನದೊಳುಣಿಸಂ ಸುಯ್ವಂ
ಸುರಯಿಯ ಕಂಪನೆ ಗೆಲೆ ತ
ತ್ಸುರಪತಿ ಪನ್ನೊಂದು ತಿಂಗಳಿಗೊರ್ಮೆ ಗಡಂ ೧೬

**ಪದವಿಭಾಗ–ಅನ್ವಯ–ಅರ್ಥ** ತತ್ + ಸುರಪತಿ = ಆ ಅಚ್ಯುತೇಂದ್ರನು, ಇರ್ಪತ್ತಿರ್ಚ್ಛಾಸಿರ ಬರಿಸಕ್ಕೊರ್ಮೆ ಮನದೊಳುಣಿಸಂ ಸ್ಮರಿಯಿಪನ್ = ಇಪತ್ತೆರಡು ಸಾವಿರ ವರುಷಗಳಿಗೊಮ್ಮೆ ಆಹಾರವನ್ನು ನೆನಪಿಸಿಕೊಳ್ಳುತ್ತಾನೆ, ಪನ್ನೊಂದು ತಿಂಗಳಿಗೆ + ಒರ್ಮೆ = ಹನ್ನೊಂದು ತಿಂಗಳಿಗೆ ಒಂದು ಬಾರಿ, ಸುರಯಿಯ ಕಂಪನೆ ಗೆಲೆ ಸುಯ್ವಂ = ಸುರಿಗೆಯ ಕಂಪಿಗೂ ಮಿಗಿಲಾದ ಪರಿಮಳದಿಂದ ಕೂಡಿದ ಉಸಿರಾಡುತ್ತಾನೆ, ಗಡಂ= ಅಲ್ಲವೇ!

**ಗದ್ಯಾನುಸರಣ:** ಆ ಅಚ್ಯುತೇಂದ್ರನು ಇಪತ್ತೆರಡು ಸಾವಿರ ವರುಷಗಳಿಗೊಮ್ಮೆ ಆಹಾರವನ್ನು ನೆನಪಿಸಿಕೊಳ್ಳುತ್ತಾನೆ; ಹನ್ನೊಂದು ತಿಂಗಳಿಗೆ ಒಂದು ಬಾರಿ ಸುರಿಗೆಯ ಕಂಪಿಗೂ ಮಿಗಿಲಾದ ಪರಿಮಳದಿಂದ ಕೂಡಿದ ಉಸಿರಾಡುತ್ತಾನೆ!

ದ್ವಾವಿಂಶತ್ಯಂಬುಧಿಮಿತ
ಜೀವಿತಮುಂ ಮೂಱುಮೊಟಿದ ದಿವ್ಯಾಂಗಮುಮಾ
ದೇವಂಗಾಯ್ತು ಜಿನಾಗಮ
ಭಾವನೆಯಿಂ ಪಿರಿದುಮಕ್ಕುಮಿದು ಪಿರಿದಾಯ್ತೇ ೧೭

**ಪದವಿಭಾಗ–ಅನ್ವಯ–ಅರ್ಥ:** ಆ ದೇವಂಗೆ = ಆ ಅಚ್ಯುತೇಂದ್ರನಿಗೆ, ದ್ವಾವಿಂಶತಿ + ಅಂಬುಧಿಮಿತಜೀವಿತಮುಂ = ಇಪ್ಪತ್ತೆರಡು ಸಾಗರದಷ್ಟು ಆಯುಸ್ಸೂ, ಮೂಱುಮೊಟಿದ ದಿವ್ಯಾಂಗಮುಂ ಆಯ್ತು = ಮೂರು ಮೊಳದಷ್ಟು ಎತ್ತರವಾದ ದೇಹವೂ ಉಂಟಾಗುತ್ತುದೆ, ಜಿನಾಗಮಭಾವನೆಯಿಂ ಪಿರಿದುಮಕ್ಕುಂ = ಜಿನಾಮಗಮಗಳ ಜ್ಞಾನದಿಂದ ಇನ್ನೂ ಹಿರಿದಾಗುತ್ತದೆ, ಇದು ಪಿರಿದಾಯ್ತೇ = ಅದೇನು ಹಿರಿದು!

**ಗದ್ಯಾನುಸರಣ:** ಆ ಅಚ್ಯುತೇಂದ್ರನಿಗೆ ಇಪ್ಪತ್ತೆರಡು ಸಾಗರದಷ್ಟು ಆಯುಸ್ಸೂ, ಮೂರು ಮೊಳದಷ್ಟು ಎತ್ತರವಾದ ದೇಹವೂ ಉಂಟಾಗುತ್ತುದೆ; ಜಿನಾಮಗಮಗಳ ಜ್ಞಾನದಿಂದ ಇನ್ನೂ ಹಿರಿದಾಗುತ್ತದೆ, ಅದೇನು ಮಹಾ!

ವ। ಅಂತು ದಿವ್ಯಭೋಗಸಂಪತ್ಪರಂಪರಾಪರಿಗತನಾಗಿ,

**ಪದವಿಭಾಗ-ಅನ್ವಯ-ಅರ್ಥ**; ಅಂತು = ಅಂತಹ, ದಿವ್ಯಭೋಗಸಂಪತ್ + ಪರಂಪರಾಪರಿಗತನಾಗಿ = ದಿವ್ಯ ಭೋಗಗಳ ಸಂಪತ್ತಿನಿಂದ ಕೂಡಿದವನಾಗಿ,

**ಗದ್ಯಾನುಸರಣ**: ಅಂತಹ ದಿವ್ಯ ಭೋಗಗಳ ಸಂಪತ್ತಿನಿಂದ ಅಚ್ಯುತೇಂದ್ರನು ಕೂಡಿರುತ್ತಾನೆ.

**ದೆಸೆಯೆಲ್ಲಂ ಪಂಚರತ್ನದ್ಯುತಿಜಟಿಳಿತನಾನಾವಿಮಾನಂಗಳೊಳ್ ರಂ**
**ಜಿಸೆ ದೇಹಚ್ಛಾಯೆಯೆಲ್ಲಂ ಸಹಜಮಣಿವಿಭೂಷಾಮಯೂಂಗಳೊಳ್‌ರಂ**
**ಜಿಸೆ ತನ್ನಾಸ್ಥಾನಮೆಲ್ಲಂ ಲಲಿತಸುರವಧೂರಮ್ಯಸಂಗೀತದಿಂ ರಂ**
**ಜಿಸೆ ಪೀರ್ದಂ ದಿವ್ಯಭೋಗಾಮೃತರಸಮನೊಱಲ್ಲಟ್ಟಿಯಿಂದಚ್ಯುತೇಂದ್ರಂ ೧೮**

**ಪದವಿಭಾಗ-ಅನ್ವಯ-ಅರ್ಥ**: ದೆಸೆಯೆಲ್ಲಂ ಪಂಚರತ್ನದ್ಯುತಿಜಟಿಳಿತನಾನಾ ವಿಮಾನಂಗಳೊಳ್ ರಂಜಿಸೆ = ದಿಕ್ಕುಗಳೆಲ್ಲ ಪಂಚಮಣಿಗಳ ಕಾಂತಿಯಿಂದ ಕೂಡಿದ ಅನೇಕ ವಿಮಾನಗಳಿಂದ ಶೋಭಿಸಲು, ದೇಹಚ್ಛಾಯೆಯೆಲ್ಲಂ ಸಹಜಮಣಿ ವಿಭೂಷಾಮಯೂಂಗಳೊಳ್ ರಂಜಿಸೆ = ದೇಹಕಾಂತಿಯು ಸಹಜವಾದ ಮಣಿಮಯ ಆಭರಣಗಳ ಹೊಳಪಿನಿಂದ ಸೊಗಯಿಸಲು, ತನ್ನ + ಆಸ್ಥಾನಮೆಲ್ಲಂ ಲಲಿತಸುರವಧೂರಮ್ಯಸಂಗೀತದಿಂ ರಂಜಿಸೆ = ಅವನ ಆಸ್ಥಾನವೆಲ್ಲ ದೇವಕನ್ನಿಕೆಯರ ಇಂಪಾದ ಗಾಯನದಿಂದ ಕೂಡಿ ರಂಜಿಸಲು, ಅಚ್ಯುತೇಂದ್ರಂ ದಿವ್ಯಭೋಗಾಮೃತರಸಮನ್ ಒಱಲ್ದು + ಅಟ್ಟಿಯಿಂದೆ ಪೀರ್ದಂ = ಅಚ್ಯುತೇಂದ್ರನು ದಿವ್ಯಭೋಗಗಳೆಂಬ ಅಮೃತರಸವನ್ನು ಇಷ್ಟಪಟ್ಟು ಪ್ರೀತಿಯಿಂದ ಹೀರಿದ.

**ಗದ್ಯಾನುಸರಣ**: ದೇವಲೋಕದ ದಿಕ್ಕುಗಳೆಲ್ಲ ಪಂಚಮಣಿಗಳ ಕಾಂತಿಯಿಂದ ಕೂಡಿದ ಅನೇಕ ವಿಮಾನಗಳಿಂದ ಶೋಭಿಸುತ್ತಿತ್ತು; ಅವನ ದೇಹಕಾಂತಿಯು ಸಹಜವಾದ ಮಣಿಮಯ ಆಭರಣಗಳ ಹೊಳಪಿನಿಂದ ಸೊಗಯಿಸುತ್ತಿತ್ತು; ಅವನ ಆಸ್ಥಾನವೆಲ್ಲ ದೇವಕನ್ನಿಕೆಯರ ಇಂಪಾದ ಗಾಯನದಿಂದ ತುಂಬಿ ರಂಜಿಸುತ್ತಿತ್ತು; ಹೀಗೆ ಅಚ್ಯುತೇಂದ್ರನು ದಿವ್ಯಭೋಗಗಳ ಅಮೃತರಸವನ್ನು ಪ್ರೀತಿಯಿಂದ ಅನುಭವಿಸಿದ.

**ಸಮೆತಂದಪುದು ಸಮುದ್ರೋ**
**ಪಮಮೆನೆ ಮಂದಾರಮಾಳಿಕಾಮ್ಲಾನತೆಯುಂ**
**ಸಮಕೊಳಿಸಲಾರ್ತುದಿಲ್ಲ ದ**
**ಲಮರೇಂದ್ರನದೊಂದು ಮುಖಪರಿಮ್ಲಾನತೆಯಂ ೧೯**

**ಪದವಿಭಾಗ-ಅನ್ವಯ-ಅರ್ಥ:** ಸಮುದ್ರ + ಉಪಮಂ ಸಮೆತಂದಪುದು ಎನೆ = ಸಮುದ್ರದಂತಹ ಭೋಗಗಳು ಸವೆಯುತ್ತಿವೆ ಎನ್ನುವಂತೆ, ಅಮರೇಂದ್ರನ + ಅದೊಂದು ಮುಖಪರಿಮ್ಲಾನತೆಯುಂ = ಅಚ್ಯುತೇಂದ್ರನ ಮುಖದ ಕಾಂತಿಹೀನತೆಯು, ಮಂದಾರಮಾಳಿಕಾಮ್ಲಾನತೆಯುಂ ಸಮಕೊಳಿಸಲ್ + ಆರ್ತುದಿಲ್ಲ ದಲ್ = ಬಾಡಿದ ಮಂದಾರಮಾಲೆಯ ಮ್ಲಾನತೆಯನ್ನು ಸರಿಗಟ್ಟಲಾರದಾಯಿತು.

**ಗದ್ಯಾನುಸರಣ:** ಸಮುದ್ರದಂತೆ ಕೊನೆಯಿಲ್ಲದ ಅವನ ಆಯುಸ್ಸೂ ಭೋಗಗಳೂ ಸವೆಯುತ್ತಿವೆ ಎನ್ನುವುದನ್ನು ಸೂಚಿಸುವಂತೆ ಅಚ್ಯುತೇಂದ್ರನ ಮುಖ ಕಾಂತಿಹೀನವಾಯಿತು; ಅದು ಬಾಡಿದ ಮಂದಾರಮಾಲೆಯ ಮ್ಲಾನತೆಯನ್ನೂ ಮೀರಿಸಿತು.

**ವಿಶೇಷ ವಿಚಾರ:** ಆದರೆ ಪೂರ್ವಪುರಾಣದಲ್ಲಿ ಸ್ವರ್ಗಚ್ಯುತಿಯನ್ನು ತಿಳಿದರೂ ದುಃಖಪಡಲಿಲ್ಲ – 'ತತೋಬೋಧಿ ಸುರೇಂದ್ರೋಸೌ ಸ್ವರ್ಗಪ್ರಚ್ಯುತಿಮಾತ್ಮನಃ। ತಥಾಪಿ ನ ವ್ಯಷೀದತ್ಸ .. ..' (ಪೂಪು, ೧೧.೪) ಎಂದಿದೆ.

**ಜಿನಪತಿಪಂಕಜಮನೆ**
**ಮನದೊಳ್ ಬಗೆದಮರೆ ಮುಗಿದ ಕೈವೆರಸು ಸುರಾಂ**
**ಗನೆಯರ್ ನಿಜವದನಮನಿ**
**ಮ್ಮನೆ ನೋಟ್ಪಿನಮಚ್ಯುತಂ ಪರಿಚ್ಯುತನಾದಂ ೨೦**

**ಪದವಿಭಾಗ-ಅನ್ವಯ-ಅರ್ಥ:** ಜಿನಪತಿಪಂಕಜಮನೆ ಮನದೊಳ್ ಬಗೆದು + ಅಮರೆ = ಜಿನನ ಪಾದಕಮಲಗಳನ್ನು ನೆನೆದು ಮನಸ್ಸಿನಲ್ಲಿ ಆವರಿಸಲು, ಸುರಾಂಗನೆಯರ್ ಮುಗಿದ ಕೈವೆರಸು = ದೇವವನಿತೆಯರು ಕೈಮುಗಿದು, ನಿಜ ವದನಮನ್ + ಇಮ್ಮನೆ ನೋಟ್ಪಿನಂ = ಅವನ ಮುಖವನ್ನೇ ನಿಟ್ಟಿಸಿ ನೋಡುತ್ತಿರಲು, ಅಚ್ಯುತಂ ಪರಿಚ್ಯುತನಾದಂ = ಅಚ್ಯುತೇಂದ್ರನು ಕೆಳಗಿಳಿದ.

**ಗದ್ಯಾನುಸರಣ:** ಜಿನನ ಪಾದಕಮಲಗಳ ಧ್ಯಾನವು ಅವನ ಮನಸ್ಸಿನಲ್ಲಿ ತುಂಬಿತು; ದೇವವನಿತೆಯರು ಕೈಮುಗಿದು ಅವನ ಮುಖವನ್ನೇ ನಿಟ್ಟಿಸಿ ನೋಡುತ್ತಿದ್ದರು; ನೋಡನೋಡುತ್ತಿದ್ದಂತೆ ಅಚ್ಯುತೇಂದ್ರನು ಲೋಕವನ್ನು ತ್ಯಜಿಸಿದ.

**ವ। ಅಂತಾ ದೇವನಲ್ಲಿಂ ತಳರ್ದು ಜಂಬೂದ್ವೀಪದ ಪ್ರಾಗ್ವಿದೇಹದ ಸೀತಾನದಿಯ ಬಡಗಣ ತಡಿಯ ಪುಷ್ಕಳಾವತೀವಿಷಯದ ಪ್ರತಿಬದ್ಧಪುಂಡರೀಕಿಣಿಯೊಳ್,**

ಪದವಿಭಾಗ-ಅನ್ವಯ-ಅರ್ಥ: ಅಂತು + ಆ ದೇವನಲ್ಲಿಂ ತಳರ್ದು = ಹೀಗೆ ಆತನು ಅಲ್ಲಿಂದ ಹೊರಟು, ಜಂಬೂದ್ವೀಪದ ಪ್ರಾಕ್ + ವಿದೇಹದ = ಜಂಬೂದ್ವೀಪದ ಪೂರ್ವವಿದೇಹದ, ಸೀತಾನದಿಯ ಬಡಗಣ ತಡಿಯ = ಸೀತಾನದಿಯ ಉತ್ತರ ದಡದಲ್ಲಿನ, ಪುಷ್ಕಳಾವತೀವಿಷಯದ ಪ್ರತಿಬದ್ಧಪುಂಡರೀಕಿಣಿಯೊಳ್ = ಪುಷ್ಕಳಾವತೀ ನಾಡಿಗೆ ಸೇರಿದ ಪುಂಡರೀಕಿಣೀ ನಗರದಲ್ಲಿ

**ಗದ್ಯಾನುಸರಣ:** ಹೀಗೆ ಆತನು ಅಲ್ಲಿಂದ ಹೊರಟು ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ಉತ್ತರ ದಡದಲ್ಲಿನ ಪುಷ್ಕಳಾವತೀ ನಾಡಿನ ಪುಂಡರೀಕಿಣೀ ನಗರದಲ್ಲಿ,

**ಅಮರೇಂದ್ರಾವಳಿಯಿಂದಮಿಂದ್ರಗಿರಿಯೊಳ್ ಜನ್ಮಾಭಿಷೇಕಕ್ಕೆ ನೋಂ**
**ತು ಮಹೀವಲ್ಲಭನಪ್ಪುದೊಂದು ಪದದೊಳ್ ರಾಜ್ಯಾಭಿಷೇಕಕ್ಕಮಾ**
**ದಮೆ ನೋಂತುನ್ನತವಜ್ರಸೇನವಿಭುಗಂ ಶ್ರೀಕಾಂತೆಗಂ ಪುತ್ರನಾ**
**ಗಿ ಮನೋಜಾಕೃತಿ ವಜ್ರನಾಭಿವೆಸರಿಂದುತ್ಸಾಹಮಂ ತಾಳ್ದಿ ೨೧**

**ಪದವಿಭಾಗ-ಅನ್ವಯ-ಅರ್ಥ:** ಇಂದ್ರಗಿರಿಯೊಳ್ ಅಮರೇಂದ್ರಾವಳಿಯಿಂದಂ ಜನ್ಮಾಭಿಷೇಕಕ್ಕೆ ನೋಂತು = ಇಂದ್ರಗಿರಿಯಲ್ಲಿ ದೇವಸಮುದಾಯವು ನೆರವೇರಿಸುವ ಜನ್ಮಾಭಿಷೇಕಕ್ಕೆ ವ್ರತತೊಟ್ಟು, ಮಹೀವಲ್ಲಭನ್ + ಅಪ್ಪುದೊಂದು ಪದದೊಳ್ = ಚಕ್ರವರ್ತಿಯಾಗುವ ಸಂದರ್ಭದಲ್ಲಿ, ರಾಜ್ಯಾಭಿಷೇಕಕ್ಕಂ + ಆದಮೆ ನೋಂತು = ರಾಜ್ಯಾಭಿಷೇಕಕ್ಕೂ ವ್ರತತೊಟ್ಟು, ಉನ್ನತವಜ್ರಸೇನವಿಭುಗಂ ಶ್ರೀಕಾಂತೆಗಂ ಪುತ್ರನಾಗಿ = ಮಹಿಮಾವಂತನಾದ ವಜ್ರಸೇನ ಮಹಾರಾಜ ಹಾಗೂ ಶ್ರೀಕಾಂತೆಯರ ಮಗನಾಗಿ, ಮನೋಜಾಕೃತಿ = ಮನ್ಮಥನ ರೂಪದವನಾಗಿ, ವಜ್ರನಾಭಿ + ಪೆಸರಿಂದೆ + ಉತ್ಸಾಹಮಂ ತಾಳ್ದಿದಂ = ವಜ್ರನಾಭಿ ಎಂಬ ಹೆಸರಿನಿಂದ ಗೆಲವನ್ನು ಹೊಂದಿದ.

**ಗದ್ಯಾನುಸರಣ:** ಇಂದ್ರಗಿರಿಯಲ್ಲಿ ದೇವಸಮುದಾಯವು ನೆರವೇರಿಸುವ ಜನ್ಮಾಭಿಷೇಕಕ್ಕೂ, ಚಕ್ರವರ್ತಿಯಾಗುವ ಸಂದರ್ಭದಲ್ಲಿ ರಾಜ್ಯಾಭಿಷೇಕಕ್ಕೂ ವ್ರತತೊಟ್ಟವನಂತೆ ಮಹಿಮಾವಂತನಾದ ವಜ್ರಸೇನ-ಶ್ರೀಕಾಂತೆಯರ ಮಗನಾಗಿ ಮನ್ಮಥನ ರೂಪವನ್ನು ಪಡೆದು ವಜ್ರನಾಭಿ ಎಂಬ ಹೆಸರಿನಿಂದ ಗೆಲವನ್ನು ಹೊಂದಿದ.

**ವ। ಮತ್ತಮಾ ಪುಣ್ಯದಂಪತಿಗೆ ಮುಂ ಪೇೞ್ದ ಶಾರ್ದೂಲಾರ್ಯಸುರ ವರದತ್ತ ಚರಸಾಮಾನಿಕನುಂ, ವರಾಹಾರ್ಯದಿವಿಜ ವರಸೇನ ಚರ ಸಾಮಾನಿಕನುಂ, ವಾನರಾರ್ಯ ವೈಮಾನಿಕ ಚಿತ್ರಾಂಗದ ಚರಸಾಮಾನಿಕನುಂ,**

**ನಕುಳಾರ್ಯಾಮರ ಶಾಂತಮದನಚರ ಸಾಮಾನಿಕ ನುಮನುಕ್ರಮ ದೊಳ್ ವಿಜಯ ವೈಜಯಂತ ಜಯಂತಾಪರಾಜಿತರೆಂಬ ನಾಲ್ವರ್ ತನೂಜರಾದರ್; ವಜ್ರಜಂಘನಾದ ಭವದೊಳಾತನ ಮಂತ್ರಿಪುರೋಹಿತ ಸೇನಾಧಿಪ ಪ್ರಧಾನ ರಾಜಶ್ರೇಷ್ಠಿಗಳಪ್ಪ ಮತಿವರಾನಂದಾಕಂಪನಧನಮಿತ್ರರೆಂಬ ನಾಲ್ವರು ಮಧೋಗ್ರೈವೇಯಕದೊಳಹ ಮಿಂದ್ರರಾಗಿರ್ದವರಲ್ಲಿಂ ಬಂದು ಸುಬಾಹು ಮಹಾಬಾಹು ಪೀಠ ಮಹಾಪೀಠರೆಂಬ ತನಯರಾಗಿ ವಜ್ರನಾಬಿಗೆ ಸಹೋದರ ರಾದರ್; ಆ ಶ್ರೀಮತ್ಯಾರ್ಯ ಸ್ವಯಂಪ್ರಭದೇವಂ ಕೇಶವಚರಪ್ರತೀಂದ್ರಂ ಬಂದಾ ಪುರದೊಳ್ ವಣಿಗ್ವಂಶಾಗ್ರಣಿ ಕುಬೇರ ನಿಂದಧಿಕನೆನಿಸಿದ ಕುಬೇರ ದತ್ತಂಗಮನಂತಮತಿಗಂ ಧನದೇವನೆಂಬ ಪ್ರಿಯತನೂಭವನಾದಂ. ಇಂತು**

**ಪದವಿಭಾಗ-ಅನ್ವಯ-ಅರ್ಥ:** ಮತ್ತಮಾ ಪುಣ್ಯದಂಪತಿಗೆ ಮುಂ ಪೇಳ್ದ ಶಾರ್ದೂಲಾರ್ಯಸುರ ವರದತ್ತ ಚರಸಾಮಾನೀಕನುಂ = ಅಲ್ಲದೆ, ಆ ಪುಣ್ಯ ದಂಪತಿಗೆ ಶಾದೂಲಾರ್ಯಸುರ ವರದತ್ತಚರ ಸಾಮಾನಿಕನೂ, ವರಾಹಾರ್ಯ ದಿವಿಜ ವರಸೇನಚರಸಾಮಾನಿಕನುಂ = ವರಾಹಾರ್ಯದಿವಿಜ ವರಸೇನ ಚರಸಾಮಾನಿಕನೂ, ವಾನರಾರ್ಯ ವೈಮಾನಿಕ ಚಿತ್ರಾಂಗದ ಚರಸಾಮಾನಿಕನುಂ = ವಾನರಾರ್ಯ ವೈಮಾನಿಕಚಿತ್ರಾಂಗದ ಚರಸಾಮಾನಿಕನೂ, ನಕುಳಾರ್ಯಾಮರ ಶಾಂತಮದನಚರಸಾಮಾನಿಕನುಂ + ಅನುಕ್ರಮದೊಳ್ = ನಕುಳಾರ್ಯಾಮರ ಶಾಂತಮದನಚರಸಾಮಾನಿಕನೂ ಅದೇ ಕ್ರಮದಲ್ಲಿ, ವಿಜಯ ವೈಜಯಂತ ಜಯಂತಾಪರಾಜಿತರೆಂಬ = ವಿಜಯ ವೈಜಯಂತ ಜಯಂತಾಪರಾಜಿತರೆಂಬ ನಾಲ್ವರ್ ತನೂಜರಾದರ್ ನಾಲ್ಕು ಮಂದಿ ಮಕ್ಕಳಾದರು; ವಜ್ರಜಂಘನಾದ ಭವದೊಳಾತನ ಮಂತ್ರಿಪುರೋಹಿತ ಸೇನಾಧಿಪ ಪ್ರಧಾನರಾಜಶ್ರೇಷ್ಠಿಗಳಪ್ಪ = ವಜ್ರಜಂಘನಾಗಿದ್ದ ಜನ್ಮದಲ್ಲಿ ಮಂತ್ರಿಪುರೋಹಿತ ಸೇನಾಧಿಪತಿ ಮತ್ತು ರಾಜಶ್ರೇಷ್ಠಿಗಳಾಗಿದ್ದ, ಮತಿವರಾನಂದಾಕಂಪನಧನಮಿತ್ರರೆಂಬ ನಾಲ್ವರುಂ = ಮತಿವರ + ಆನಂದ + ಆಕಂಪನ + ಧನಮಿತ್ರರೆಂಬ ನಾಲ್ವ ಜನರೂ, ಅಧೋಗ್ರೈವೇಯಕದೊಳ್ + ಅಹಮಿಂದ್ರರಾಗಿರ್ದವರ್ + ಅಲ್ಲಿಂ ಬಂದು = ಅಧೋಗ್ರೈವೇಯಕದಲ್ಲಿ ಅಹಮಿಂದ್ರರಾಗಿದ್ದವರು ಅಲ್ಲಿಂದ ಬಂದು, ಸುಬಾಹು ಮಹಾಬಾಹು ಪೀಠ ಮಹಾಪೀಠರೆಂಬ ತನಯರಾಗಿ = ಕ್ರಮವಾಗಿ ಈ ನಾಲ್ಕು ಹೆಸರಿನ ಮಕ್ಕಳಾಗಿ, ವಜ್ರನಾಭಿಗೆ ಸಹೋದರರಾದರ್ = ವಜ್ರನಾಭಿಯ ಸಹೋದರರಾದರು; ಆ ಶ್ರೀಮತ್ಯಾರ್ಯಸ್ವಯಪ್ರಭದೇವಂ ಕೇಶವಚರಪ್ರತೀಂದ್ರಂ ಬಂದು = ಶ್ರೀಮತ್ಯಾರ್ಯಸ್ವಯಂಪ್ರಭದೇವ ಕೇಶವಚರಪ್ರತೀಂದ್ರನು ಬಂದು, ಆ ಪುರದೊಳ್ ವಣಿಗ್ವಂಶ + ಅಗ್ರಣಿ ಕುಬೇರನಿಂದಧಿಕನೆನಿಸಿದ = ಆ ನಗರದ ದೊಡ್ಡ ವ್ಯಾಪಾರಿಯಾಗಿ ಕುಬೇರನಿಗಿಂತ ಶ್ರೀಮಂತನೆನಿಸಿದ್ದ, ಕುಬೇರದತ್ತಂಗ + ಅನಂತಮತಿಗಂ = ಕುಬೇರದತ್ತ-ಅನಂತಮತಿಯರಿಗೆ, ಧನದೇವನೆಂಬ

ಪ್ರಿಯತನೂಭವನಾದಂ = ಧನದೇವ ಎಬ ರೀತಿಯ ಮಗನಾಗಿ ಹುಟ್ಟಿದ. ಇಂತು = ಹೀಗೆ

**ಗದ್ಯಾನುಸರಣ:** ಅಲ್ಲದೆ, ಆ ಪುಣ್ಯ ದಂಪತಿಗೆ ಶಾರ್ದೂಲಾರ್ಯಸುರ ವರದತ್ತಚರ ಸಾಮಾನಿಕನೂ, ವರಾಹಾರ್ಯದಿವಿಜ ವರಸೇನಚರಸಾಮಾನಿಕನೂ, ವಾನರಾರ್ಯ ವೈಮಾನಿಕಚಿತ್ರಾಂಗದಚರಸಾಮಾನಿಕನೂ, ನಕುಳಾರ್ಯಾಮರ ಶಾಂತಮದನಚರಸಾಮಾನಿಕನೂ ಕ್ರಮವಾಗಿ ವಿಜಯ ವೈಜಯಂತ ಜಯಂತ ಅಪರಾಜಿತರೆಂಬ ನಾಲ್ಕು ಮಂದಿ ಮಕ್ಕಳಾದರು; ವಜ್ರಜಂಘನಾಗಿದ್ದ ಜನ್ಮದಲ್ಲಿ ಮಂತ್ರಿಪುರೋಹಿತಸೇನಾಧಿಪತಿ ಮತ್ತು ರಾಜಶ್ರೇಷ್ಠಿಗಳಾಗಿದ್ದ, ಮತಿವರ ಆನಂದ ಆಕಂಪನ ಧನಮಿತ್ರರೆಂಬ ನಾಲ್ವರೂ ಅಧೋಗ್ರೈವೇಯಕದಲ್ಲಿ ಅಹಮಿಂದ್ರರಾಗಿದ್ದವರು ಅಲ್ಲಿಂದ ಬಂದು, ಸ ಕ್ರಮವಾಗಿ ಈ ನಾಲ್ಕು ಹೆಸರಿನ ಮಕ್ಕಳಾಗಿ, ವಜ್ರನಾಭಿಯ ಸಹೋದರರಾದರು; ಶ್ರೀಮತಿ ಆರ್ಯಾಸ್ವಯಂಪ್ರಭದೇವನಾಗಿದ್ದ ಕೇಶವಚರಪ್ರತೀಂದ್ರನು ಬಂದು ಆ ನಗರದ ದೊಡ್ಡ ವ್ಯಾಪಾರಿಯಾಗಿ ಕುಬೇರನಿಗಿಂತ ಶ್ರೀಮಂತನೆನಿಸಿದ್ದ ಕುಬೇರದತ್ತ–ಅನಂತಮತಿಯರಿಗೆ ಧನದೇವ ಎಂಬ ಪ್ರೀತಿಯ ಮಗನಾಗಿ ಹುಟ್ಟಿದ. ಹೀಗೆ,

**ನಿಗಳಂಬೊಲ್ ತೊಡರ್ದೊಂದು ಮೋಹನಿಗಳಂ ತಜ್ಜನ್ಮದೊಳ್ ನೋಡೆತೊ**
**ಟ್ಟಗೆ ನಮತ್ತಂ ಪೊಸತಾಗೆ ತಮ್ಮ ಮನದೊಳ್ ತಳ್ಪೊಯ್ದು ತಳ್ತಾ ತಗು**
**ಳ್ಪುಗಳೊಳ್ ಪೊಕ್ಕುವು ವಜ್ರಲೇಪದ ತಗುಳ್ಪಂ ಪೋಲ್ವಿನಂ ವಜ್ರನಾ**
**ಭಿಗತಿಪ್ರೀತಿಯನುಂಟುಮಾಡಿದರವರ್ ಜನ್ಮಾಂತರಸ್ನೇಹದಿಂ ೨೨**

**ಪದವಿಭಾಗ–ಅನ್ವಯ–ಅರ್ಥ:** ನಿಗಳಂಬೊಲ್ ತೊಡರ್ದೊಂದು ಮೋಹನಿಗಳಂ = ಸಂಕೋಲೆಗಳ ಹಾಗೆ ಬಿಗಿದಿದ್ದ ಮೋಹವೆಂಬ ಸಂಕೋಲೆಯು, ನೋಡೆ ತಮ್ಮ ಮನದೊಳ್ ತೊಟ್ಟಗೆ ಮತ್ತಂ ಪೊಸತಾಗೆ = ನೋಡುತ್ತಿರುವಂತೆಯೇ ತಮ್ಮ ಮನಸ್ಸಿನಲ್ಲಿ ಬೇಗ ಹೊಸತಾದ ಹಾಗೆ, ತಳ್ಪೊಯ್ದು ತಳ್ತು = ಬೆಸೆದುಕೊಂಡು ಸೇರಿ, ಆ ತಗುಳ್ಪುಗಳೊಳ್ = ಅಂಥ ಬೆಸುಗೆಗಳಲ್ಲಿ, ತಜ್ಜನ್ಮದೊಳ್ = ಆ ಜನ್ಮದಲ್ಲಿ, ವಜ್ರಲೇಪದ ತಗುಳ್ಪಂ ಪೋಲ್ವಿನಂ ಪೊಕ್ಕುವು = ವಜ್ರನಾಭಿಗೆ ವಜ್ರದಷ್ಟು ಬಲಿಷ್ಠವಾದ ಸಂಕೋಲೆಯನ್ನು ಹೋಲುವಂತೆ ಸೇರಿದುವು, ಜನ್ಮಾಂತರಸ್ನೇಹದಿಂ = ಜನ್ಮಾಂತರದ ಸಂಬಂಧದಿಂದ, ವಜ್ರನಾಭಿಗೆ ಅತಿಪ್ರೀತಿಯನುಂಟುಮಾಡಿದರ್ + ಅವರ್ = ವಜ್ರನಾಭಿಗೆ ತುಂಬ ಪ್ರೀತಿಯನ್ನುಂಟುಮಾಡಿದರು.

**ಗದ್ಯಾನುಸರಣ:** ಸಂಕೋಲೆಗಳ ಹಾಗೆ ಬಿಗಿದಿದ್ದ ಮೋಹವೆಂಬ ಒಂದು ಸಂಕೋಲೆಯು ನೋಡುತ್ತಿರುವಂತೆಯೇ ತಮ್ಮ ಮನಸ್ಸಿನಲ್ಲಿ ಬೇಗ ಹೊಸ ಬಗೆಯಲ್ಲಿ ಬೆಸೆದುಕೊಂಡಿತು; ಅಂಥ ಬೆಸುಗೆಗಳಲ್ಲಿ ಆ ಜನ್ಮದಲ್ಲಿ ವಜ್ರನಾಭಿಗೆ ವಜ್ರದಷ್ಟು

ಬಲಿಷ್ಠವಾದ ಸಂಕೋಲೆಯಂತೆ ಸೇರಿದುದೆಂದರೆ ಜನ್ಮಾಂತರದ ಸಂಬಂಧದಿಂದ ವಜ್ರನಾಭಿಗೆ ತುಂಬ ಪ್ರೀತಿಯನ್ನುಂಟುಮಾಡಿದರು.

**ವ॥ ಅಂತು ವಜ್ರನಾಭಿ ಚೆಲ್ವಿಂಗೆ ನಾಭಿಯುಂ ವಿಳಾಸಕ್ಕಾವಾಸಮುಂ ಅಳವಿಂಗೆ ದಳಮುಂ ಅಱಿವಿಂಗೆ ಗುಱಿಯುಂ ಕಳೆಗೆ ಕುಲಭವನಮುಂ ಪ್ರತಾಪಕ್ಕಡರ್ಪುಮಾಗಿ ಬಳೆವನ್ನೆಗಂ; ವಜ್ರಸೇನ ಮಹಾರಾಜಂ ಆ ಕುಮಾರನೊಳಾದೊಂದು ಯೋಗ್ಯತೆಗೆ ಸಂತೋಷಂಬಟ್ಟು,**

**ಪದವಿಭಾಗ-ಅನ್ವಯ-ಅರ್ಥ:** ಅಂತು ವಜ್ರನಾಭಿ = ಹೀಗೆ ವಜ್ರನಾಭಿಯು, ಚೆಲ್ವಿಂಗೆ ನಾಭಿಯುಂ = ಸೊಬಗಿನ ಕೇಂದ್ರವೂ, ವಿಳಾಸಕ್ಕೆ + ಆವಾಸಮುಂ = ವೈಭವದ ನೆಲೆಯೂ, ಅಳವಿಂಗೆ ದಳಮುಂ = ಪ್ರತಾಪಕ್ಕೆ ಆಧಾರವಾಗಿಯು, ಅಱಿವಿಂಗೆ ಗುಱಿಯುಂ = ಜ್ಞಾನದ ಗುರಿಯಾಗಿ, ಕಳೆಗೆ ಕುಲಭವನಮುಂ = ಕಾಂತಿಗೆ ಆವಾಸವಾಗಿಯೂ, ಪ್ರತಾಪಕ್ಕೆ + ಅಡರ್ಪುಂ + ಆಗಿ ಬಳೆವನ್ನೆಗಂ = ಶೌರ್ಯಕ್ಕೆ ಆಶ್ರಯವಾಗಿಯೂ ಬೆಳೆದಾಗ, ವಜ್ರಸೇನ ಮಹಾರಾಜಂ ಆ ಕುಮಾರನೊಳಾದ + ಒಂದು ಯೋಗ್ಯತೆಗೆ ಸಂತೋಷಂಬಟ್ಟು = ವಜ್ರಸೇನ ಮಹಾರಾಜನು ತನ್ನ ಮಗನು ಪಡೆದ ಅರ್ಹತೆಯನ್ನು ಕಂಡು ಸಂತಸಗೊಂಡು,

**ಗದ್ಯಾನುಸರಣ:** ಹೀಗೆ ವಜ್ರನಾಭಿಯು ಸೊಬಗಿನ ಕೇಂದ್ರವಾಗಿ, ವೈಭವದ ನೆಲೆಯಾಗಿ, ಪ್ರತಾಪಕ್ಕೆ ಆಧಾರವಾಗಿ, ಜ್ಞಾನದ ಗುರಿಯಾಗಿ, ಕಾಂತಿಗೆ ಆವಾಸವಾಗಿ, ಶೌರ್ಯಕ್ಕೆ ಆಶ್ರಯವಾಗಿಯೂ ಬೆಳೆದ; ತನ್ನ ಮಗನು ಪಡೆದ ಯೋಗ್ಯತೆಯನ್ನು ಕಂಡು ವಜ್ರಸೇನ ಮಹಾರಾಜನು ಸಂತಸಗೊಂಡ.

**ನೆಱೆದಂ ಭೂತಳರಾಜ್ಯಭೂರಿಭರಮಂ ತಾಳಲ್ಕೆ ಮತ್ಪುತ್ರನೀ**
**ಪೊಱೆಗಿನ್ನೀತನೆ ಯೋಗ್ಯನೆಂಬ ಬಗೆಯಿಂ ರಾಜ್ಯಾಭಿಷೇಕೋತ್ಸವಂ**
**ಪೊಜಿಪೊಣ್ಮುತ್ತಿರೆ ರಾಜ್ಯಮಂ ಕುಡೆ ಮಗಂಗಾಶ್ಚರ್ಯದೊಳ್ ತಳ್ತದೇ**
**ನೊಱೆಯಿಂದುರ್ಚಿದ ಬಾಳ್ವೊಲಾದುದೊ ಪರಿಚ್ಛೇದಂ ಧರಾಧೀಶನಾ॥೨೩**

**ಪದವಿಭಾಗ-ಅನ್ವಯ-ಅರ್ಥ:** ಮತ್ + ಪುತ್ರನ್ = ನನ್ನ ಮಗನು, ಭೂತಳರಾಜ್ಯಭೂರಿಭರಮಂ ತಾಳಲ್ಕೆ ನೆಱೆದಂ = ಭೂಮಂಡಲ ಪರ್ಯಂತವಾದ ರಾಜ್ಯದ ಹೊಣೆಯನ್ನು ಹೊರಲು ಸಮರ್ಥನಾದ, ಈ ಪೊಱೆಗೆ + ಇನ್ನು + ಈತನೆ ಯೋಗ್ಯನೆಂಬ ಬಗೆಯಿಂ = ಈ ಹೊಣೆಗಾರಿಕೆಗೆ ಇವನು ಅರ್ಹ ಎಂದು ಯೋಚಿಸಿ, ಆಶ್ಚರ್ಯದೊಳ್ ತಳ್ತು ರಾಜ್ಯಾಭಿಷೇಕೋತ್ಸವಂ ಪೊಜಿಪೊಣ್ಮುತ್ತಿರೆ = ಆಶ್ಚರ್ಯದಿಂದ ಕೂಡುವ ಹಾಗೆ ಪಟ್ಟಾಭಿಷೇಕವು ನೆರವೇರಲು, ರಾಜ್ಯಮಂ ಮಗಂಗೆ ಕುಡೆ = ರಾಜ್ಯಭಾರವನ್ನು ಮಗನಿಗೆ ವಹಿಸಲು, ಧರಾಧೀಶನಾ ಪರಿಚ್ಛೇದಂ ಅದೇನ್ + ಒಱೆಯಿಂದುರ್ಚಿದ ಬಾಳ್ + ವೊಲಾದುದೊ = ರಾಜನ ನಿರ್ಧಾರವು ಒರೆಯಿಂದ ಹೊರತೆಗೆದ ಕತ್ತಿಯಂತಾಯಿತು.

**ಗದ್ಯಾನುಸರಣ:** ನನ್ನ ಮಗನು ಭೂಮಂಡಲ ಪರ್ಯಂತವಾದ ರಾಜ್ಯದ ಹೊಣೆಯನ್ನು ಹೊರಲು ಸಮರ್ಥನಾದ, ಈ ಹೊಣೆಗಾರಿಕೆಗೆ ಇವನು ಅರ್ಹ ಎಂದು ಯೋಚಿಸಿ, ಆಶ್ಚರ್ಯದಿಂದ ಕೂಡುವ ಹಾಗೆ ಪಟ್ಟಾಭಿಷೇಕವು ನೆರವೇರಿಸಿ ರಾಜ್ಯಭಾರವನ್ನು ಮಗನಿಗೆ ವಹಿಸಿದ; ರಾಜನ ನಿರ್ಧಾರವು ಒರೆಯಿಂದ ಹೊರತೆಗೆದ ಕತ್ತಿಯಂತಾಯಿತು.

**ವ। ತದನಂತರಮೆ ಲೋಕಾಂತಿಕಾಮರವೃಂದಂ ಬಂದು ಬಿಚ್ಚಳಿಸೆ ವಜ್ರಕ್ಕೆ ಬಳಮಿತ್ತಂತೆವಜ್ರಸೇನಮಹಾರಾಜಂ ಪರಿನಿಷ್ಕ್ರಮಣಕಲ್ಯಾಣ ಪರಿಣತಮನನಾಮ್ರವನದೊಳ್ ಸಹಸ್ರಸಂಖ್ಯಾವನಿಪಾಲಕರೊಡನೆ,**

**ಪದವಿಭಾಗ-ಅನ್ವಯ-ಅರ್ಥ:** ತತ್=ಅನಂತರಮೆ ಲೋಕಾಂತಿಕ + ಅಮರವೃಂದಂ ಬಂದು ಬಿಚ್ಚಳಿಸೆ = ಆನಂತರ ಲೋಕಾಂತಿಕದೇವರುಗಳು ಬಂದು ಹೊಗಳಲು, ವಜ್ರಕ್ಕೆ ಬಳಮಿತ್ತಂತೆ = ವಜ್ರಕ್ಕೆ ಸಾಣೆ ಹಿಡಿದಂತೆ, ವಜ್ರಸೇನಮಹಾರಾಜಂ ಪರಿನಿಷ್ಕ್ರಮಣಕಲ್ಯಾಣಪರಿಣತಮನನ್ = ವಜ್ರಸೇನ ರಾಜನು ಪರಿನಿಷ್ಕ್ರಮಣಕಲ್ಯಾಣಕ್ಕೆ ಪಕ್ವಗೊಂಡ ಮನಸ್ಸುಳ್ಳವನಾಗಿ, ಆಮ್ರವನದೊಳ್ ಸಹಸ್ರಸಂಖ್ಯಾ + ಅವನಿಪಾಲಕರೊಡನೆ = ಮಾವಿನ ತೋಪಿನಲ್ಲಿ ಸಾವಿರ ಮಂದಿ ರಾಜರೊಡನೆ,

**ಗದ್ಯಾನುಸರಣ:** ಅನಂತರ ಲೋಕಾಂತಿಕದೇವರುಗಳು ಬಂದು ಅವನನ್ನು ಹೊಗಳಲು ವಜ್ರಕ್ಕೆ ಸಾಣೆ ಹಿಡಿದಂತೆ, ವಜ್ರಸೇನ ರಾಜನ ಮನಸ್ಸು ಪರಿನಿಷ್ಕ್ರಮಣಕಲ್ಯಾಣಕ್ಕೆ ಪಕ್ವಗೊಂಡಿತು; ಆತನು ಮಾವಿನ ತೋಪಿನಲ್ಲಿ ಸಾವಿರ ಮಂದಿ ರಾಜರೊಡನೆ,

**ಬಡಗಮೊಗದಿರ್ದು ಕರ್ಮದ**
**ತೊಡರಂ ಪಱಿವಂತೆ ಕೇಶಪಾಶಮನಂಆ**
**ಗಡೆ ಪಱಿದು ತಪಂಗೊಂಡಂ**
**ಪೊಡರ್ವರಿಯುಂ ವಜ್ರನಾಭಿಯುಂ ಬೆಂಕೊಂಡಂ ೨೪**

**ಪದವಿಭಾಗ-ಅನ್ವಯ-ಅರ್ಥ:** ಬಡಗಮೊಗದೆ + ಇರ್ದು = ಉತ್ತರಕ್ಕೆ ಮುಖಮಾಡಿ, ಕರ್ಮದ ತೊಡರಂ ಪಱಿವಂತೆ = ಕರ್ಮದ ತೊಡಕನ್ನು ಕತ್ತರಿಸಿಹಾಕುವಂತೆ, ಆಗಡೆ ಕೇಶಪಾಶಮನಂ ಪಱಿದು ತಪಂಗೊಂಡಂ = ಆಗಲೆ ತನ್ನ ಕೂದಲ ರಾಶಿಯನ್ನು ಕಿತ್ತು ತಪಸ್ಸಿನಲ್ಲಿ ತೊಡಗಿದ; ವಜ್ರನಾಭಿಯುಂ ಪೊಡರ್ವ + ಅರಿಯಂ ಬೆಂಕೊಂಡಂ = ಇತ್ತ ವಜ್ರನಾಭಿಯು ಏರಿಬಂದ ಶತ್ರುಗಳ ಬೆನ್ನಟ್ಟಿದ.

ಗದ್ಯಾನುಸರಣ: ಉತ್ತರಕ್ಕೆ ಮುಖಮಾಡಿಕೊಂಡು ಕರ್ಮದ ತೊಡಕನ್ನು ಕತ್ತರಿಸಿಹಾಕುವಂತೆ ತನ್ನ ಕೂದಲ ರಾಶಿಯನ್ನು ಕಿತ್ತು ತಪಸ್ಸಿನಲ್ಲಿ ತೊಡಗಿದ; ಇತ್ತ ವಜ್ರನಾಭಿಯು ಏರಿಬಂದ ಶತ್ರುವನ್ನು ಬೆನ್ನಟ್ಟಿದ.

ವ|| ಅಂತಾ ತ್ರಿಲೋಕಗುರು ಧರಾತಳಂ ಪೊಗೞ್ವಿನಂ ಯತ್ಯಾಶ್ರಮದೊಳ್ ನಿಂದಂ, ಈ ಧರಾಧಿಪಂ ಗುರುರಾಜ್ಯಾಶ್ರಮದೊಳ್ ನಿಂದಂ; ಆ ಮುನೀಂದ್ರಂ ತಪೋನುಷ್ಠಾನದೊಳ್ ನಿಷ್ಠಿತನಾದಂ, ಈ ನರೇಂದ್ರಂ ರಾಜ್ಯಾನುಷ್ಠಾನದೊಳ್ ನಿಷ್ಠಿತನಾದಂ; ಆ ಮುನೀಶಂ ಮುಮುಕ್ಷುವೃತ್ತಿಯೊಳ್ ನೆಗೞ್ದಂ, ಈ ಕ್ಷಿತೀಶಂ ಕ್ಷತ್ರವೃತ್ತಿಯೊಳ್ ನೆಗೞ್ದಂ; ಆ ಮುನಿನಾಥಂ ತ್ರಿಗುಪ್ತಿಯೊಳ್ ನೆರೆದಂ, ಈ ಮಹೀನಾಥಂ ಮಂತ್ರಗುಪ್ತಿಯೊಳ್ ನೆರೆದಂ; ಆ ತಪಸ್ವಿ ಪರೀಷಹಂಗಳಮಂ ಗೆಲ್ದಂ, ಈ ತೇಜಸ್ವಿ ಬಲ್ಲಿದರಂ ಗೆಲ್ದಂ; ಆ ಮಹಾಯೋಗಿ ಗುಣಂಗಳಂ ಪಾಲಿಸಿದಂ, ಈ ಮಹಾಭೋಗಿ ನೆಲನಂ ಪರಿಪಾಲಿಸಿದಂ; ಆ ಮುನಿಯ ಮನೋಗಾರ ದೊಳ್ ಧ್ಯಾನಚಕ್ರಂ ಪುಟ್ಟಿತ್ತು, ಈ ರಾಜ್ಯಾಶ್ರಮಮುನಿಯ ಆಯುಧಗಾರ ದೊಳ್ ಚಕ್ರರತ್ನಂ ಪುಟ್ಟಿತ್ತು; ಆ ಮುನಿಚಕ್ರವರ್ತಿಯ ಮನದೊಳ್ ಮೂಱುರತ್ನಂಗಳ್ ಬೆಳಗಿದುವು, ಈ ಸಕಳಚಕ್ರವರ್ತಿಯ ಮನೆಯೊಳ್ ಪದಿನಾಲ್ಕು ರತ್ನಂಗಳ್ ಬೆಳಗಿದುವು; ಆ ಮುನಿವೃಷಭಂಗೆ ಕೇವಲಜ್ಞಾನೋ ತ್ಪತ್ತಿಯಾದುದು, ಈ ರಾಜ್ಯವೃಷಭಂಗೆ ಸಕಳಸಾಮ್ರಾಜ್ಯ ಸಂಪತ್ತಿಯಾದುದು; ಆ ಪರಮೇಶ್ವರಂಗೆ ದೇವೇಂದ್ರರ್ಕಳೆಱಗಿದರ್, ಈ ಧರಾಧೀಶ್ವರಂಗೆ ನರೇಂದ್ರರ್ಕಳೆಱಗಿದರ್; ಆ ತ್ರಿಲೋಕತಿಲಕಂಗೆ ದಿವ್ಯಧ್ವನಿ ನೆಗೞ್ದುದು, ಈ ಕುಲತಿಲಕಂಗೆ ದಿಗ್ವಿಜಯದುಂದುಭಿಧ್ವನಿ ನೆಗೞ್ದುದು; ಆ ಮುನಿರಾಜಂ ಕರ್ಮಂಗಳಂ ಗಾಳಿಸಿದಂ, ಈ ರಾಜರಾಜಂ ಷಟ್ಖಂಡ ಮಂಡಳಮಂ ಬಾಯ್ಕೇಳಿಸಿದಂ; ಆ ಭವ್ಯರತ್ನಾಕರಂ ಚತುಸ್ತ್ರಿಂಶದತಿಶಯ ಭೋಗದೊಳ್ ಕೂಡಿದಂ, ಈ ಪುರುಷರತ್ನಾಕರಂ ದಶಾಂಗಭೋಗದೊಳ್ ಕೂಡಿದಂ; ಇಂತು

ಪದವಿಭಾಗ–ಅನ್ವಯ–ಅರ್ಥ: ಅಂತು + ಆ ತ್ರಿಲೋಕಗುರು ಧರಾತಳಂ ಪೊಗೞ್ವಿನಂ ಯತ್ಯಾಶ್ರಮದೊಳ್ ನಿಂದಂ = ಹೀಗೆ ಆ ಮೂರು ಲೋಕಗಳ ಗುರುವು ಜಗತ್ತೆಲ್ಲ ಹೊಗಳುವಂತೆ ಸನ್ಯಾಸದಲ್ಲಿ ನಿಂತರೆ, ಈ ಧರಾಧಿಪಂ ಗುರುರಾಜ್ಯಾಶ್ರಮದೊಳ್ ನಿಂದಂ = ಈ ಭೂಮಿಯೊಡೆಯನು ದೊಡ್ಡ ರಾಜ್ಯವೆಂಬ ಆಶ್ರಮದಲ್ಲಿ ಸ್ಥಾಪಿತನಾದ; ಆ ಮುನೀಂದ್ರಂ ತಪೋನುಷ್ಠಾನದೊಳ್ ನಿಷ್ಠಿತನಾದಂ = ಆ ಮುನಿಶ್ರೇಷ್ಠನು ತಪದ ಆಚರಣೆಯಲ್ಲಿ ನಿಷ್ಠಿತನಾದರೆ, ಈ ನರೇಂದ್ರಂ ರಾಜ್ಯಾನುಷ್ಠಾನದೊಳ್ ನಿಷ್ಠಿತನಾದಂ = ಈ ರಾಜಶ್ರೇಷ್ಠನು ರಾಜ್ಯಭಾರದಲ್ಲಿ

ನಿರತನಾದ; ಆ ಮುನೀಶಂ ಮುಮುಕ್ಷುವೃತ್ತಿಯೊಳ್ ನೆಗಟ್ದಂ = ಆ ಮುನಿಪತಿಯು ತಾಪಸಕ್ರಮದಲ್ಲಿ ಆಸಕ್ತನಾದರೆ, ಈ ಕ್ಷಿತೀಶಂ ಕ್ಷತ್ರವೃತ್ತಿಯೊಳ್ ನೆಗಟ್ದಂ = ಈ ಭೂಪತಿಯು ಕ್ಷತ್ರಿಯನ ಕರ್ತವ್ಯದಲ್ಲಿ ನಿರತನಾದ; ಆ ಮುನಿನಾಥಂ ತ್ರಿಗುಪ್ತಿಯೊಳ್ ನೆರೆದಂ = ಆ ಮುನಿರಾಜನು ತ್ರಿಗುಪ್ತಿಯಲ್ಲಿ ತೊಡಗಿದರೆ, ಈ ಮಹೀನಾಥಂ ಮಂತ್ರಗುಪ್ತಿಯೊಳ್ ನೆರೆದಂ = ಈ ಭೂನಾಥನು ಸಮಾಲೋಚನೆಯಲ್ಲಿ ತೊಡಗಿದ; ಆ ತಪಸ್ವಿ ಪರೀಷಹಂಗಳಮ ಗೆಲ್ದಂ = ಆ ತಪಸ್ವಿಯು ಪರೀಷಹಗಳನ್ನು ಗೆದ್ದರೆ, ಈ ತೇಜಸ್ವಿ ಬಲ್ಲಿದರಂ ಗೆಲ್ದಂ = ಈ ತೇಜಸ್ವಿಯು ಬಲಿಷ್ಠರನ್ನು ಮಣಿಸಿದ; ಆ ಮಹಾಯೋಗಿ ಗುಣಂಗಳಂ ಪಾಲಿಸಿದಂ = ಆ ಹಿರಿಯ ಯೋಗಿಯು ಗುಣಗಳನ್ನು ಪರಿಪಾಲಿಸಿದರೆ, ಈ ಮಹಾಭೋಗಿ ನೆಲನಂ ಪರಿಪಾಲಿಸಿದಂ = ಈ ಹಿರಿಯ ಭೋಗಿಯು ನೆಲವನ್ನು ಕಾಪಾಡಿದ; ಆ ಮುನಿಯ ಮನಃ + ಆಗಾರದೊಳ್ ಧ್ಯಾನಚಕ್ರಂ ಪುಟ್ಟಿತ್ತು = ಆ ತಾಪಸನ ಮನಸ್ಸಿನ ಕೋಣೆಯಲ್ಲಿ ಧ್ಯಾನಚಕ್ರವು ಹುಟ್ಟಿದರೆ, ಈ ರಾಜ್ಯಾಶ್ರಮಮುನಿಯ ಆಯುಧಗಾರದೊಳ್ ಚಕ್ರರತ್ನಂ ಪುಟ್ಟಿತ್ತು = ಈ ರಾಜ್ಯವೆಂಬ ಆಶ್ರಮದಲ್ಲಿನ ಆಯುಧಗಳ ಕೋಣೆಯಲ್ಲಿ ಚಕ್ರರತ್ನವು ಹುಟ್ಟಿತು; ಆ ಮುನಿಚಕ್ರವರ್ತಿಯ ಮನದೊಳ್ ಮೂಱುರತ್ನಂಗಳ್ ಬೆಳಗಿದುವು = ಆ ಮುನಿಚಕ್ರವರ್ತಿಯ ಮನಸ್ಸಿನಲ್ಲಿ ರತ್ನತ್ರಯಗಳು ಬೆಳಗಿದರೆ, ಈ ಸಕಳಚಕ್ರವರ್ತಿಯ ಮನೆಯೊಳ್ ಪದಿನಾಲ್ಕು ರತ್ನಂಗಳ್ ಬೆಳಗಿದುವು = ಈ ಸಕಲಚಕ್ರವರ್ತಿಯ ಮನೆಯಲ್ಲಿ ಹದಿನಾಲ್ಕು ರತ್ನಗಳು ಬೆಳಗಿದುವು; ಆ ಮುನಿವೃಷಭಂಗೆ ಕೇವಲಜ್ಞಾನೋತ್ಪತ್ತಿಯಾದುದು = ಆ ಮುನಿಮುಖ್ಯನಿಗೆ ಕೇವಲಜ್ಞಾನವು ಹುಟ್ಟಿದರೆ, ಈ ರಾಜ್ಯವೃಷಭಂಗೆ ಸಕಳಸಾಮ್ರಾಜ್ಯಸಂಪತ್ತಿಯಾದುದು = ಈ ರಾಜಶ್ರೇಷ್ಠನಿಗೆ ಸಾಮ್ರಾಜ್ಯದ ಸಂಪತ್ತೆಲ್ಲವೂ ಕೈವಶವಾದುವು; ಆ ಪರಮೇಶ್ವರಂಗೆ ದೇವೇಂದ್ರರ್ಕಳ್ + ಎಱಗಿದರ್ = ಆ ಪರಮೇಶ್ವರನಿಗೆ ದೇವತೆಗಳು ನಮಸ್ಕರಿಸಿದರೆ, ಈ ಧರಾಧೀಶ್ವರಂಗೆ ನರೇಂದ್ರರ್ಕಳ್ + ಎಱಗಿದರ್ = ಆ ನೆಲದೊಡೆಯನಿಗೆ ರಾಜರುಗಳು ನಮಸ್ಕರಿಸಿದರು; ಆ ತ್ರಿಲೋಕತಿಲಕಂಗೆ ದಿವ್ಯಧ್ವನಿ ನೆಗಟ್ದುದು = ಮೂಲೋಕ ಭೂಷಣನಿಗೆ ದಿವ್ಯಧ್ವನಿ ದೊರಕಿದರೆ, ಈ ಕುಲತಿಲಕಂಗೆ ದಿಗ್ವಿಜಯದುಂದುಭಿಧ್ವನಿ ನೆಗಟ್ದುದು = ಈ ಕುಲಶ್ರೇಷ್ಠನಿಗೆ ಗೆಲವಿನ ದುಂದುಭಿಧ್ವನಿ ಲಭ್ಯವಾಯಿತು; ಆ ಮುನಿರಾಜಂ ಕರ್ಮಂಗಳಂ ಗಾಳಿಸಿದಂ = ಮುನಿಯೊಡೆಯನು ಕರ್ಮಗಳನ್ನು ನಾಶಗೈದರೆ, ಈ ರಾಜರಾಜಂ ಷಟ್ಖಂಡಮಂಡಳಮಂ ಬಾಯ್ಕೇಳಿಸಿದಂ = ಈ ರಾಜಾಧಿರಾಜನು ಆರು ಖಂಡಗಳನ್ನು ತನ್ನ ಕೈವಶ ಮಾಡಿಕೊಂಡ; ಆ ಭವ್ಯರತ್ನಾಕರಂ ಚತುಸ್ತ್ರಿಂಶತ್ + ಅತಿಶಯಭೋಗದೊಳ್ ಕೂಡಿದಂ = ಆ ಭವ್ಯರತ್ನವು ಮೂವತ್ತನಾಲ್ಕು ಅತಿಶಯಭೋಗಗಳನ್ನು ಪಡೆದರೆ, ಈ ಪುರುಷರತ್ನಾಕರಂ ದಶಾಂಗಭೋಗದೊಳ್ ಕೂಡಿದಂ = ಪುರುಷರತ್ನವು ದಶಾಂಗಭೋಗಗಳನ್ನು ಪಡೆಯಿತು; ಇಂತು = ಹೀಗೆ,

ಗದ್ಯಾನುಸರಣ: ಹೀಗೆ ಆ ಮೂರು ಲೋಕಗಳ ಗುರುವು ಜಗತ್ತೆಲ್ಲ ಹೊಗಳುತ್ತಿರಲು ಸನ್ಯಾಸದಲ್ಲಿ ನಿಂತರೆ, ಈ ಭೂಮಿಯೊಡೆಯನು ದೊಡ್ಡ ರಾಜ್ಯವೆಂಬ ಆಶ್ರಮದಲ್ಲಿ ಸ್ಥಾಪಿತನಾದ; ಆ ಮುನಿಶ್ರೇಷ್ಠನು ತಪದ ಆಚರಣೆಯಲ್ಲಿ ನಿಷ್ಠಿತನಾದರೆ, ಈ ರಾಜಶ್ರೇಷ್ಠನು ರಾಜ್ಯಭಾರದಲ್ಲಿ ನಿರತನಾದ; ಆ ಮುನಿಪತಿಯು ತಾಪಸಕ್ರಮದಲ್ಲಿ ಆಸಕ್ತನಾದರೆ, ಈ ಭೂಪತಿಯು ಕ್ಷತ್ರಿಯನ ಕರ್ತವ್ಯದಲ್ಲಿ ನಿರತನಾದ; ಆ ಮುನಿರಾಜನು ತ್ರಿಗುಪ್ತಿಯಲ್ಲಿ ತೊಡಗಿದರೆ, ಈ ಭೂನಾಥನು ಸಮಾಲೋಚನೆಯಲ್ಲಿ ತೊಡಗಿದ; ಆ ತಪಸ್ವಿಯು ಪರೀಷಹಗಳನ್ನು ಗೆದ್ದರೆ, ಈ ತೇಜಸ್ವಿಯು ಬಲಿಷ್ಠರನ್ನು ಮಣಿಸಿದ; ಆ ಹಿರಿಯ ಯೋಗಿಯು ಗುಣಗಳನ್ನು ಪರಿಪಾಲಿಸಿದರೆ, ಈ ಹಿರಿಯ ಭೋಗಿಯು ನೆಲವನ್ನು ಕಾಪಾಡಿದ; ಆ ತಾಪಸನ ಮನಸ್ಸಿ ಕೋಣೆಯಲ್ಲಿ ಧ್ಯಾನಚಕ್ರವು ಹುಟ್ಟಿದರೆ, ಈ ರಾಜ್ಯವೆಂಬ ಆಶ್ರಮದಲ್ಲಿನ ಆಯುಧಗಳ ಕೋಣೆಯಲ್ಲಿ ಚಕ್ರರತ್ನವು ಹುಟ್ಟಿತು; ಆ ಮುನಿಚಕ್ರವರ್ತಿಯ ಮನಸ್ಸಿನಲ್ಲಿ ರತ್ನತ್ರಯಗಳು ಬೆಳಗಿದರೆ, ಈ ಸಕಲಚಕ್ರವರ್ತಿಯ ಮನೆಯಲ್ಲಿ ಹದಿನಾಲ್ಕು ರತ್ನಗಳು ಬೆಳಗಿದುವು; ಆ ಮುನಿಮುಖ್ಯನಿಗೆ ಕೇವಲಜ್ಞಾನವು ಹುಟ್ಟಿದರೆ, ಈ ರಾಜಶ್ರೇಷ್ಠನಿಗೆ ಸಾಮ್ರಾಜ್ಯದ ಸಂಪತ್ತೆಲ್ಲವೂ ಕೈವಶವಾದುವು; ಆ ಪರಮೇಶ್ವರನಿಗೆ ದೇವತೆಗಳು ನಮಸ್ಕರಿಸಿದರೆ, ಆ ನೆಲದೊಡೆಯನಿಗೆ ರಾಜರುಗಳು ನಮಸ್ಕರಿಸಿದರು; ಮೂಲೋಕ ಭೂಷಣನಿಗೆ ದಿವ್ಯಧ್ವನಿ ದೊರಕಿದರೆ, ಈ ಕುಲಶ್ರೇಷ್ಠನಿಗೆ ಗೆಲವಿನ ದುಂದುಭಿಧ್ವನಿ ಲಭ್ಯವಾಯಿತು; ಮುನಿಯೊಡೆಯನು ಕರ್ಮಗಳನ್ನು ನಾಶಗೈದರೆ, ಈ ರಾಜಾಧಿರಾಜನು ಆರೂ ಖಂಡಗಳನ್ನು ತನ್ನ ಕೈವಶ ಮಾಡಿಕೊಂಡ; ಆ ಭವ್ಯರತ್ನವು ಮೂವತ್ತನಾಲ್ಕು ಅತಿಶಯಭೋಗಗಳನ್ನು ಪಡೆದರೆ, ಪುರುಷರತ್ನವು ದಶಾಂಗಭೋಗಗಳನ್ನು ಪಡೆಯಿತು; ಹೀಗೆ

ಗೃಹಪತಿರತ್ನಮಾಗೆ ಧನದೇವನಿಳಾತಳಾತಳನಾಥನಾ ಮಹಾ
ಮಹಿತಳಭೋಗಮಂ ನೆಱೆಯೆ ಭೋಗಿಸೆ ಸಂಸೃತಿಭೋಗೆಯ್ದೆ ನಿ
ಸ್ಪೃಹತೆಯುನಾ ಮಹೀಪತಿಗೆ ತಂದುದು ಭವ್ಯತೆ ಪುಣ್ಯಜೀವಮಂ
ಸಹಜಸುಖಾಸ್ಪದಂಬರೆಗಮುಯ್ವಿನಮಲ್ಲಿ ತೊಡಂಕಲೀಗುಮೇ ೨೫

ಪದವಿಭಾಗ–ಅನ್ವಯ–ಅರ್ಥ: ಧನದೇವನ್ + ಇಳಾತಳಾತಳನಾಥನಾ ಗೃಹಪತಿರತ್ನಂ + ಆಗೆ = ಧನದೇವನು ಚಕ್ರವರ್ತಿಯ ಗೃಪತಿರತ್ನವಾಗಲು, ಮಹಾ ಮಹಿತಳಭೋಗಮಂ ನೆಱೆಯೆ ಭೋಗಿಸೆ = ಈ ಭೂಮಿಯ ಭೋಗಗಳನ್ನು ಚೆನ್ನಾಗಿ ಅನುಭವಿಸಲು, ಆ ಮಹೀಪತಿಗೆ ಸಂಸೃತಿಭೋಗಂ + ಎಯ್ದೆ ನಿಸ್ಪೃಹತೆಯನ್ ತಂದುದು = ಆ ವಜ್ರನಾಭಿಗೆ ಸಂಸಾರ ಭೋಗವು ವೈರಾಗ್ಯವನ್ನು ತಂದಿತು; ಪುಣ್ಯಜೀವಮಂ ಸಹಜಸುಖಾಸ್ಪದಂಬರೆಗಂ + ಉಯ್ವಿನಂ = ಪುಣ್ಯಜೀವವನ್ನು ಸಹಜಸುಖಕ್ಕೆ ಆಸ್ಪದವಾಗುವವರೆಗೆ ಒಯ್ದರೂ, ಭವ್ಯತೆ ಅಲ್ಲಿ ತೊಡಂಕಲ್ + ಈಗುಮೇ = ಭವ್ಯತೆಯು ಅದರಲ್ಲಿ ತೊಡಗುವಂತೆ ಮಾಡುತ್ತದೆಯೇ?

ಗದ್ಯಾನುಸರಣ: ಹಿಂದೆ ಶ್ರೀಮತಿಯಾಗಿದ್ದ ಧನದೇವನು ಚಕ್ರವರ್ತಿಯ

ಗೃಹಪತಿರತ್ನವಾದ, ಈ ಭೂಮಿಯ ಭೋಗಗಳನ್ನು ಚೆನ್ನಾಗಿ ಅನುಭವಿಸಿದರೂ ಆ ವಜ್ರನಾಭಿಗೆ ಸಂಸಾರ ಭೋಗವು ವೈರಾಗ್ಯವನ್ನು ತಂದಿತು; ಪುಣ್ಯಜೀವವನ್ನು ಸಹಜಸುಖಕ್ಕೆ ಆಸ್ಪದವಾಗುವವರೆಗೆ ಒಯ್ದರೂ ಭವ್ಯತೆಯು ಅದರಲ್ಲಿ ತೊಡಗುವಂತೆ ಮಾಡುತ್ತದೆಯೇ?

ವ। ಅಂತು ವಿಷಯವಿರಕ್ತನಾಗಿ

**ಅರ್ಥ**: ಅಂತು ವಿಷಯವಿರಕ್ತನಾಗಿ = ಹೀಗೆ ಭೋಗದ ಬಗ್ಗೆ ವೈರಾಗ್ಯವನ್ನು ಹೊಂದಿ,

**ನೆಗಟ್ದೀ ಷಟ್ಖಂಡಮಂ ಸಾಧಿಸಿದೊಡೆ ಫಲಮೇಂ ಭೋಗದಿಂ ಸಾಧ್ಯಮೇಂ ಬಂ**
**ಧುಗಳಿಂದಂ ಬರ್ಪುದೇಂ ಸುತ್ತಿದ ಪರಿಜನದಿಂದಪ್ಪುದೇನೊಂದುಮಿಲ್ಲ**
**ಚ್ಚಿಗವೊಂದುಂಟಲ್ಲಿ ಗಾಂಪಿಂ ತೊಡರ್ವೆನೆ ಪಡೆವೆಂ ಶಾಶ್ವತಶ್ರೀಯನೆಂಬು**
**ಜ್ಜುಗದೊಳ್ ಚಿತ್ತಂ ಕರಂ ತಣ್ಮಲೆಯೆ ನೆಱಯೆ ನಿಶ್ಚೈಸಿದಂ ಸಾರ್ವಭೌಮಂ ೨೬**

**ಪದವಿಭಾಗ–ಅನ್ವಯ–ಅರ್ಥ**: ನೆಗಟ್ದಿ + ಈ ಷಟ್ಖಂಡಮಂ ಸಾಧಿಸಿದೊಡೆ ಏಂ ಫಲಂ = ಪ್ರಸಿದ್ಧವಾದ ಈ ಷಟ್ಖಂಡಗಳನ್ನೂ ಗೆದ್ದರೆ ತಾನೇ ಏನು ಫಲ? ಭೋಗದಿಂ ಏಂ ಸಾಧ್ಯಂ = ಭೋಗದಿಂದ ಏನು ಬರುತ್ತದೆ? ಬಂಧುಗಳಿಂದಂ ಬರ್ಪುದು + ಏಂ = ನಂಟರಿಂದಲಾದರೂ ಬರುವುದು ಏನು? ಸುತ್ತಿದ ಪರಿಜನದಿಂದೆ + ಅಪ್ಪುದು + ಏನ್ = ಸುತ್ತಲೂ ಇರುವ ಪರಿವಾರದವರಿಂದ ಆಗುವುದೇನು? ಒಂದುಂ + ಇಲ್ಲ = ಯಾವುದೂ ಇಲ್ಲ; ಅಲ್ಲಿ ಅಚ್ಚಿಗಂ + ಒಂದು + ಉಂಟು = ಅಲ್ಲಿ ದುಃಖ ಮಾತ್ರ ಇದೆ; ಗಾಂಪಿಂ ತೊಡರ್ವೆನೆ = ಮರುಳುತನದಿಂದ ಇದರಲ್ಲಿ ಸಿಲುಕೆವೆನೇನು? ಉಹ್ಞೂ; ಶಾಶ್ವತಶ್ರೀಯನ್ ಪಡೆವೆಂ = ನಾಶವಾಗದ ಸಂಪತ್ತನ್ನು ಪಡೆಯುತ್ತೇನೆ, ಎಂಬ + ಉಜ್ಜುಗದೊಳ್ = ಎನ್ನುವ ಕಾರ್ಯದಲ್ಲಿ, ಚಿತ್ತಂ ಕರಂ ತಣ್ಮಲೆಯೆ ನೆಱಯೆ = ಮನಸ್ಸು ದೃಢವಾಗಿ ನಿಲ್ಲುವಂತೆ, ಸಾರ್ವಭೌಮಂ ನಿಶ್ಚೈಸಿದಂ = ಚಕ್ರವರ್ತಿಯು ನಿಶ್ಚಯಮಾಡಿದ.

**ಗದ್ಯಾನುಸರಣ**: 'ಪ್ರಸಿದ್ಧವಾದ ಈ ಷಟ್ಖಂಡಗಳನ್ನೂ ಗೆದ್ದರೆ ತಾನೇ ಏನು ಫಲ? ಭೋಗದಿಂದ ಏನು ಬರುತ್ತದೆ? ನಂಟರಿಂದಲಾದರೂ ಬರುವುದು ಏನು? ಸುತ್ತಲೂ ಇರುವ ಪರಿವಾರದವರಿಂದ ಆಗುವುದೇನು? ಯಾವುದೂ ಇಲ್ಲ; ಅಲ್ಲಿ ದುಃಖ ಮಾತ್ರ ಇದೆ; ಇದರಲ್ಲಿ ಮರುಳುತನದಿಂದ ಸಿಲುಕೆವೆನೇನು, ಉಹ್ಞೂ' ಎಂದು ನಾಶವಾಗದ ಸಂಪತ್ತನ್ನು ಪಡೆಯುವ ಕಾರ್ಯದಲ್ಲಿ ತನ್ನ ಮನಸ್ಸು ದೃಢವಾಗಿ ನೆಲೆಗೊಳಿಸಲು ಚಕ್ರವರ್ತಿಯು ನಿಶ್ಚಯಮಾಡಿದ.

**ವ॥ ಅಂತು ನಿಶ್ಚೈಸಿ ವಸುಂಧರಾಭಾರಮಂ ವಜ್ರದಂತನೆಂಬ ನಿಜಾಗ್ರತನೂಜನೊಳ್ ನಿಜೆಸಿ ನಿಜಗುರುಚರಣಸಮೀಪದೊಳ್**

**ಪದವಿಭಾಗ-ಅನ್ವಯ-ಅರ್ಥ:** ಅಂತು ನಿಶ್ಚೈಸಿ = ಆ ರೀತಿ ನಿಶ್ಚೈಸಿದ ವಜ್ರನಾಭನು, ವಸುಂಧರಾಭಾರಮಂ ವಜ್ರದಂತನೆಂಬ ನಿಜ + ಅಗ್ರತನೂಜನೊಳ್ ನಿಜೆಸಿ = ಭೂಮಿಯ ಹೊಣೆಯನ್ನು ವಜ್ರದಂತನೆಂಬ ತನ್ನ ಮೊದಲ ಮಗನಿಗಿ ವಹಿಸಿ, ನಿಜಗುರುಚರಣಸಮೀಪದೊಳ್ = ತನ್ನ ಗುರುಗಳ ಪಾದಮೂಲದಲ್ಲಿ

**ಗದ್ಯಾನುಸರಣ:** ಆ ರೀತಿ ನಿಶ್ಚೈಸಿದ ವಜ್ರನಾಭಿಯು ಭೂಮಿಯ ಹೊಣೆಯನ್ನು ವಜ್ರದಂತನೆಂಬ ತನ್ನ ಮೊದಲ ಮಗನಿಗಿ ವಹಿಸಿದ; ಆ ಬಳಿಕ ತನ್ನ ಗುರುಗಳ ಬಳಿ,

ನಿಜತನೂಭವರೈಸಾಸಿರ್ವರ್ ಪದಿನಾಱುಸಾಸಿರ್ಬರ್ ಮಕುಟಬದ್ಧರ್
ನಿಜಲತಾಂಗಿಯರಯ್ವತ್ತು ಸಾಸಿರ್ವರೆಣ್ಬರುಮಣುಗಿನ ಸೋದರರ್ಕಳ್
ನಿಜಸಹಾಯಂ ಗೃಹಪತಿರತ್ನಂ ಧನದೇವನುಂ ಬೆರಸಾಗಳ್ ವಜ್ರನಾಭಿ
ನಿಜದ ರೂಪುಮಂ ನಿರ್ಗ್ರಂಥರೂಪುಮಂ ಕೈಕೊಂಡು ನೆಗಟ್ದಿನಿಂತೀ
ಮಾಟ್ಕೆಯಿಂ ೨೭

**ಪದವಿಭಾಗ-ಅನ್ವಯ-ಅರ್ಥ:** ನಿಜತನೂಭವರ್ + ಐಸಾಸಿರ್ವರ್ = ತನ್ನ ಐದು ಸಾವಿರ ಮಂದಿ ಮಕ್ಕಳು, ಪದಿನಾಱುಸಾಸಿರ್ಬರ್ ಮಕುಟಬದ್ಧರ್ = ಹದಿನಾರು ಸಾವಿರ ರಾಜರುಗಳು, ನಿಜಲತಾಂಗಿಯರ್ + ಅಯ್ವತ್ತು ಸಾಸಿರ್ವರ್ = ತನ್ನ ಹೆಂಡಿತಿಯರು ಐವತ್ತು ಸಾವಿರ ಮಂದಿ, ಎಣ್ಬರುಂ + ಅಣುಗಿನ ಸೋದರರ್ಕಳ್ = ಎಂಟು ಮಂದಿ ಪ್ರೀತಿಯ ತಮ್ಮಂದಿರು, ನಿಜಸಹಾಯಂ ಗೃಹಪತಿರತ್ನಂ ಧನದೇವನುಂ = ತನ್ನ ಸಹಾಯನಾದ ಗೃಹಪತಿರತ್ನ ಧನದೇವ, ಬೆರಸು + ಆಗಳ್ ವಜ್ರನಾಭಿ ನಿಜದ ರೂಪುಮಂ ನಿರ್ಗ್ರಂಥರೂಪುಮಂ ಕೈಕೊಂಡು = ಇವರುಗಳೊಡನೆ ವಜ್ರನಾಭಿಯು ನಿಜವಾದ ರೂಪವಾದ ದಿಗಂಬರತ್ವವನ್ನು ಸ್ವೀಕರಿಸಿ, ಇಂತು + ಈ ಮಾಟ್ಕೆಯಿಂ ನೆಗಟ್ದಿನ್ = ಹೀಗೆ, ಈ ರೀತಿಯಲ್ಲಿ ಮೆರೆದ

**ಗದ್ಯಾನುಸರಣ:** ತನ್ನ ಐದು ಸಾವಿರ ಮಂದಿ ಮಕ್ಕಳು, ಹದಿನಾರು ಸಾವಿರ ರಾಜರುಗಳು, ತನ್ನ ಹೆಂಡಿತಿಯರು ಐವತ್ತು ಸಾವಿರ ಮಂದಿ, ಎಂಟು ಮಂದಿ ಪ್ರೀತಿಯ ತಮ್ಮಂದಿರು ಮತ್ತು ತನ್ನ ಸಹಾಯನಾದ ಗೃಹಪತಿರತ್ನ ಧನದೇವ – ಇವರುಗಳೊಡನೆ ವಜ್ರನಾಭಿಯು ನಿಜವಾದ ರೂಪವಾದ ದಿಗಂಬರತ್ವವನ್ನು ಸ್ವೀಕರಿಸಿ ಈ ರೀತಿಯಲ್ಲಿ ಮೆರೆದ.

ವ॥ ಅದೆಂತೆಂದೊಡೆ, ಹಿಂಸಾನೃತಾಸ್ತೇಯಾ ಬ್ರಹ್ಮಪರಿಗ್ರಹ ಪರಿತ್ಯಾಮಗಮೆಬಯ್ದುಂ ಮಹಾವ್ರತಂಗಳೊಳ್ ನೆರೆದು

**ಪದವಿಭಾಗ-ಅನ್ವಯ-ಅರ್ಥ:** ಅದೆಂತು + ಎಂದೊಡೆ = ಅದು ಹೇಗೆಂದರೆ, ಹಿಂಸಾ + ಅನೃತ + ಅಸ್ತೇಯ + ಅಬ್ರಹ್ಮ + ಪರಿಗ್ರಹಪರಿತ್ಯಾಮಗಮೆಬ + ಅಯ್ದುಂ ಮಹಾವ್ರತಂಗಳೊಳ್ ನೆರೆದು = ಹಿಂಸೆ ಅಸತ್ಯ ಕಳವು ಅಬ್ರಹ್ಮಚರ್ಯ ಮತ್ತು ಪರಿಗ್ರಹಗಳನ್ನು ಬಿಡುವ ಮಹಾವ್ರತಗಳಲ್ಲಿ ತೊಡಗಿ

**ಗದ್ಯಾನುಸರಣ:** ಆ ನಂತರ, ಹಿಂಸೆ ಅಸತ್ಯ ಕಳವು ಅಬ್ರಹ್ಮಚರ್ಯ ಮತ್ತು ಪರಿಗ್ರಹಗಳನ್ನು ಬಿಡುವ ಮಹಾವ್ರತಗಳಲ್ಲಿ ತೊಡಗಿಕೊಂಡ.

**ನಡೆವ ನುಡಿವುಣ್ಬ ಕೊಳ್ವಿಡು**
**ವೆಡೆಯೊಳ್ ತಾಂ ಕಾಯಮಲಮನುಗುಟ್ವಿಡೆಯೊಳೆಡಂ**
**ಬಡನೆನಿಸದೋವಿ ಜೀವಮ**
**ನಡಕಂಬೆರಸಯ್ದುಸಮಿತಿಯೊಳ್ ಮುನಿ ನೆಗಟ್ದಂ ೨೮**

**ಪದವಿಭಾಗ-ಅನ್ವಯ-ಅರ್ಥ:** ನಡೆವ ನುಡಿವ + ಉಣ್ಬ ಕೊಳ್ವ + ಇಡುವ + ಎಡೆಯೊಳ್ ತಾಂ = ಓಡಾಡುವಾಗ, ಮಾತನಾಡುವಾಗ, ಊಟ ಮಾಡುವಾಗ, ತೆಗೆದುಕೊಳ್ಳುವಾಗ, ಇಡುವಾಗ, ಕಾಯಮಲಮನ್ + ಉಗುಟ್ವಿ + ಎಡೆಯೊಳ್ = ದೇಹದ ಕೊಳೆಯನ್ನು ವಿಸರ್ಜಿಸುವಾಗ, ಎಡಂಬಡನ್ + ಎನಿಸದೆ = ತೊಂದರೆಯೀಯುವವನಾಗದೆ, ಜೀವಮನ್ ಓವಿ ಅಡಕಂಬೆರಸು = ಜೀವಗಳನ್ನು ಪ್ರೀತಿಯಿಂದ ಸಂಯಮದಿಂದ, ಮುನಿ ಅಯ್ದುಸಮಿತಿಯೊಳ್ ನೆಗಟ್ದಂ = ಮುನಿಯು ಐದು ಸಮಿತಿಗಳಲ್ಲಿ ಪ್ರಖ್ಯಾತಿ ಪಡೆದ.

**ಗದ್ಯಾನುಸರಣ:** ಓಡಾಡುವಾಗ, ಮಾತನಾಡುವಾಗ, ಊಟ ಮಾಡುವಾಗ, ತೆಗೆದುಕೊಳ್ಳುವಾಗ ಮತ್ತು ಇಡುವಾಗ ಹಾಗೂ ದೇಹದ ಕೊಳೆಯನ್ನು ವಿಸರ್ಜಿಸುವಾಗ ಜೀವಿಗಳಿಗೆ ತೊಂದರೆಯೀಯದೆ ಸಂಯಮದಿಂದ ನಡೆದು ಮುನಿಯು ಐದು ಸಮಿತಿಗಳಲ್ಲಿ ಪ್ರಖ್ಯಾತಿ ಪಡೆದ.

ವ॥ ಮತ್ತಮಿವು ಮೊದಲಾಗಿರ್ಪತ್ತೆಂಟು ಮೂಲಗುಣಂಗಳೊಳಮು ತ್ತರಗುಣಂಗಳೊಳಮುತ್ತರೋತ್ತಂ ನೆಗಟ್ದು

**ಅರ್ಥ:** ಮತ್ತಂ + ಇವು ಮೊದಲಾಗಿ + ಇರ್ಪತ್ತೆಂಟುಮೂಲಗುಣಂಗಳೊಳಂ

+ ಎರಡನೆಯ ತಪದೊಳಂ = ಅವಮೋದರ್ಯ ಎಂಬ ಎರಡನೆಯ ವ್ರತದಲ್ಲಿಯೂ, ಇಂತೆಂಬೆಡೆಯೊಳ್ + ಇಂತೆಂಬವರ್ ನಿಱಿಸಿದೊಡಲ್ಲದೆ ನಿಲ್ಲೆನೆಂಬ ನಿಯಮಮಂ ಮೊದಲಾಗೆ = ಇಂತಿಂತಹ ಕಡೆಗಳಲ್ಲಿ ಇಂತಿಂತಹವರು ನಿಲ್ಲಿಸಿದರೆ ಮಾತ್ರ ನಿಲ್ಲುವ ವೃತ್ತಿಪರಿಸಂಖ್ಯಾನನಾಮಮಾದ ಮೂಱನೆಯ ತಪದೊಳಂ = ವೃತ್ತಿಪರಿಸಂಖ್ಯಾನ ಎಂಬ ಹೆಸರಿನ ಮೂರನೆಯ ವ್ರತದಲ್ಲಿಯೂ, ಕ್ಷೀರದಧಿಘೃತಲವಣತೈಲ + ಆದಿರಸಂಗಳಂ ಪರಿತ್ಯಾಗಂಗೆಯ್ವ = ಹಾಲು ಮೊಸರು ತುಪ್ಪ ಉಪ್ಪು ಎಣ್ಣೆ ಮುಂತಾದವುಗಳನ್ನು ಬಿಡುವ, ರಸಪರಿತ್ಯಾಗಮೆಂಬ ನಾಲ್ಕನೆಯ ತಪದೊಳಂ = ರಸಪರಿತ್ಯಾಗ ಎಂಬ ನಾಲ್ಕನೆಯ ವ್ರತದಲ್ಲಿಯೂ, ಸ್ತ್ರೀಪುತ್ + ನಪುಂಸಕಮೃಗಪಶುಪರಿವರ್ಜಿತ = ಹೆಂಗಸರು ಗಂಡಸರು ನಪುಂಸಕರು ಪ್ರಾಣಿಗಳು ಪಶುಗಳು ಇಲ್ಲದ ನಿರ್ಜನಪ್ರದೇಶದಲ್ಲಿ ನೆಲಸುವ, ವಿವಿಕ್ತಸ್ಥಾನಂಗಳೊಳ್ ನೆಲಸುವ ವಿವಿಕ್ತಾವಾಸಮೆಂಬಯ್ದನೆಯ ತಪದೊಳಂ = ವಿವಿಕ್ತಾವಾಸ ಎಂಬ ಐದನೆಯ ವ್ರತದಲ್ಲಿಯೂ, ನೆಱೆದು ಕಾಯಕ್ಲೇಶಮೆಂಬ + ಆಱನೆಯ ತಪಮನ್ + ಎತ್ತಿಕೊಂಡು = ತೊಡಗಿಕೊಂಡು ಕಾಯಕ್ಲೇಶ ಎಂಬ ಆರನೆಯ ವ್ರತವನ್ನು ಅನುಸರಿಸತೊಡಗಿ,

**ಗದ್ಯಾನುಸರಣ:** ಎಂದು ಆಶ್ಚರ್ಯಪಡುವ ಹಾಗೆ ಉತ್ತಮ ಕ್ಷಮಾ ಮಾರ್ದವ ಆರ್ಜವ ಸತ್ಯ ಶೌಚ ಸಂಯಮ ತಪಸ್ ತ್ಯಾಗ ಆಕಿಂಚನ್ಯ ಬ್ರಹ್ಮಚರ್ಯಾ ಪರ್ಯಾಪ್ತ ಎಂಬ ಅನುಸರಿಸಿ, ಸಾಕಾರನಿರಾಕಾರಗತವಾದ ಅನಶನ (ಉಪವಾಸ) ಎಂಬ ಮೊದಲ ವ್ರತದಲ್ಲಿಯೂ, ಒಂದು ತುತ್ತಿನಿಂದ ಮೊದಲಾಗಿ ಒಂದೇ ಅಗುಳು ಪ್ರಮಾಣದವರೆಗೆ ಆಹಾರವನ್ನು ಕಡಿಮೆ ಮಾಡಿಕೊಳ್ಳುವ ಅವಮೋದರ್ಯ ಎಂಬ ಎರಡನೆಯ ವ್ರತದಲ್ಲಿಯೂ, ಇಂತಿಂತಹ ಕಡೆಗಳಲ್ಲಿ ಇಂತಿಂತಹವರು ನಿಲ್ಲಿಸಿದರೆ ಮಾತ್ರ ನಿಲ್ಲುವುದು ಎಂಬ ವೃತ್ತಿಪರಿಸಂಖ್ಯಾನ ಎಂಬ ಹೆಸರಿನ ಮೂರನೆಯ ವ್ರತದಲ್ಲಿಯೂ, ಹಾಲು ಮೊಸರು ತುಪ್ಪ ಉಪ್ಪು ಎಣ್ಣೆ ಮುಂತಾದವುಗಳನ್ನು ಬಿಡುವ ರಸಪರಿತ್ಯಾಗ ಎಂಬ ನಾಲ್ಕನೆಯ ವ್ರತದಲ್ಲಿಯೂ, ಹೆಂಗಸರು ಗಂಡಸರು ನಪುಂಸಕರು ಪ್ರಾಣಿಗಳು ಪಶುಗಳು ಇಲ್ಲದ ಏಕಾಂತ ಪ್ರದೇಶದಲ್ಲಿ ಮಾತ್ರ ನೆಲಸುವ ವಿವಿಕ್ತಾವಾಸ ಎಂಬ ಐದನೆಯ ವ್ರತದಲ್ಲಿಯೂ ತೊಡಗಿಕೊಂಡು ಕಾಯಕ್ಲೇಶ ಎಂಬ ಆರನೆಯ ವ್ರತವನ್ನು ಅನುಸರಿಸತೊಡಗಿದ

**ಸುತ್ತಲುಮುರಿಮಾಲೆಗಳೆನೆ**
**ಪೊತ್ತಿಸಿದವೊಲಳುರೆ ತಪನಕಿರಣಾಳಿ ಮುನೀಂ**
**ದ್ರೋತ್ತಮುಗುರು ಕಲ್ಲೆನೆ ನಿಂ**
**ದೆತ್ತಿದ ಬೆಳ್ಗೊಡೆಯು ನೆಟಿಲೊಳಿರ್ಪಂತಿರ್ದಂ** ೩೧

**ಪದವಿಭಾಗ-ಅನ್ವಯ-ಅರ್ಥ:** ಸುತ್ತಲುಂ + ಉರಿಮಾಲೆಗಳೆನೆ

ಪೊತ್ತಿಸಿದವೊಲ್ ತಪನಕಿರಣಾಳಿ ಅಳುರೆ = ಸುತ್ತಲೂ ಬೆಂಕಿಯ ಮಾಲೆಯನ್ನೇ ಹೊತ್ತಿಸಿದ ಹಾಗೆ ಸೂರ್ಯಕಿರಣಗಳು ಆವರಿಸಿರಲು, ಮುನೀಂದ್ರ + ಉತ್ತಮಗುರು = ತಾಪಸಶ್ರೇಷ್ಠನು, ಕಲ್ + ಎನೆ ನಿಂದು = ಕಲ್ಲಿನ ಹಾಗೆ ನಿಶ್ಚಲವಾಗಿ ನಿಂತುಕೊಂಡು, ಎತ್ತಿದ ಬೆಳ್ಗೊಡೆಯ ನೆೞಲೊಳ್ + ಇರ್ಪಂತೆ + ಇರ್ದಂ = ಮೇಲೆತ್ತಿದ ಬೆಳುಗೊಡೆಯ ನೆರಳಿನಲ್ಲಿದ್ದಂತೆ ಇದ್ದ.

**ಗದ್ಯಾನುಸರಣ:** ಸುತ್ತಲೂ ಬೆಂಕಿಯ ಮಾಲೆಯನ್ನೇ ಹೊತ್ತಿಸಿದ ಹಾಗೆ ಸೂರ್ಯಕಿರಣಗಳು ಆವರಿಸಿದ್ದರೂ ಆ ತಾಪಸಶ್ರೇಷ್ಠನು, ಕಲ್ಲಿನ ಹಾಗೆ ನಿಶ್ಚಲವಾಗಿ ನಿಂತುಕೊಂಡು ಮೇಲೆತ್ತಿದ ಬೆಳುಗೊಡೆಯ ನೆರಳಿನಲ್ಲಿದ್ದಂತೆ ಹಾಯಾಗಿ ಇದ್ದ.

**ಮೊರೆದೆಱಗಿ ಕೊಳ್ವ ಮೞೆ ಭೋ**
**ರ್ಗರೆದೂದುವ ಗಾಳಿ ಸಿಡಿದು ಪೊಯ್ವ ಸಿಡಿಲ್ ಕಾ**
**ರಿರುಳೊಳಗುರ್ವಂ ಪಡೆದಿರೆ**
**ಮರವಾನಸನೆನೆ ತಪಸ್ವಿ ಮರಮೊದಲಿರ್ದಂ ೩೨**

**ಪದವಿಭಾಗ–ಅನ್ವಯ–ಅರ್ಥ:** ಮೊರೆದು + ಎಱಗಿ ಕೊಳ್ವ ಮೞೆ = ಭೋರೆಂದು ಅಪ್ಪಳಿಸಿ ಬೀಳುವ ಮಳೆ, ಭೋರ್ಗರೆದು + ಊದುವ ಗಾಳಿ = ಭೋರ್ಗರೆಯುತ್ತ ಬೀಸುವ ಗಾಳಿ, ಸಿಡಿದು ಪೊಯ್ವ ಸಿಡಿಲ್ = ಸಿಡಿದು ಬಡಿಯುವ ಸಿಡಿಲು, ಕಾರಿರುಳೊಳಗೆ + ಉರ್ವಂ ಪಡೆದಿರೆ = ಇವೆಲ್ಲ ಕಗ್ಗತ್ತಲೆಯಲ್ಲಿ ಭೀಕರವಾಗಿದ್ದರೂ, ತಪಸ್ವಿ ಮರವಾನಸನೆನೆ ಮರಮೊದಲ್ + ಇರ್ದಂ = ತಾಪಸನು ಮರದ ಮನುಷ್ಯನೋ ಎಂಬಂತೆ ಮರದ ಬುಡದಲ್ಲಿದ್ದ.

**ಗದ್ಯಾನುಸರಣ:** ಭೋರೆಂದು ಅಪ್ಪಳಿಸಿ ಬೀಳುವ ಮಳೆ, ಭೋರ್ಗರೆಯುತ್ತ ಸೀಳುವಂತೆ ಬೀಸುವ ಗಾಳಿ, ಸಿಡಿದು ಬಡಿಯುವ ಸಿಡಿಲು ಇವೆಲ್ಲ ಕಗ್ಗತ್ತಲೆಯಲ್ಲಿ ಭೀಕರವಾಗಿದ್ದರೂ, ಮರದ ಮನುಷ್ಯನೋ ಎಂಬಂತೆ ತಾಪಸನು ಮರದ ಬುಡದಲ್ಲಿದ್ದ.

**ತನು ಪಂಜಿವೊಲ್ ಬೆಳರ್ತಿ**
**ರ್ಪಿನೆಗಂ ಹಿಮಮೆಕ್ಕಿದರಲೆವೋಲ್ ಪುದಿದಿರೆಯುಂ**
**ತನು ತನಗಲ್ತೆಂದೇಕಾಂ**
**ತನಿವಾಸದೊಳಿಂತು ಬೆಳ್ಳವಾಸದೊಳಿರ್ದಂ ೩೩**

**ಪದವಿಭಾಗ–ಅನ್ವಯ–ಅರ್ಥ:** ತನು ಪಂಜಿವೊಲ್ ಬೆಳರ್ತು + ಇರ್ಪಿನೆಗಂ = ಶರೀರವು ಹಿಂಜಿದ ಹತ್ತಿಯಂತೆ ಬಿಳಿಚಿಕೊಂಡಿದ್ದರೂ, ಎಕ್ಕಿದ + ಅರಲೆವೋಲ್ ಹಿಮಂ ಪುದಿದಿರೆಯುಂ = ಬಿಡಿಸಿದ ಹತ್ತಿಯಂತೆ ಹಿಮವು

ಆವರಿಸಿದ್ದರೂ, ತನು ತನಗಲ್ತು + ಎಂದು + ಏಕಾಂತನಿವಾಸದೊಳ್ + ಇಂತು ಬೆಳ್ಳವಾಸದೊಳ್ + ಇರ್ದಂ = ದೇಹವು ತನ್ನದಲ್ಲ ಎನ್ನುವ ಹಾಗೆ ತಪಸ್ವಿಯು ಏಕಾಂಗಿಯಾಗಿ ಬೆಳ್ಳವಾಸವನ್ನು ಕೈಗೊಂಡಿದ್ದನು.

**ಗದ್ಯಾನುಸರಣ:** ಶರೀರವು ಹಿಂಜಿದ ಹತ್ತಿಯಂತೆ ಬಿಳಿಚಿಕೊಂಡಿದ್ದರೂ, ಬಿಡಿಸಿದ ಹತ್ತಿಯಂತೆ ಹಿಮವು ಆವರಿಸಿದ್ದರೂ, ದೇಹವು ತನ್ನದಲ್ಲ ಎನ್ನುವ ಹಾಗೆ ತಪಸ್ವಿಯು ಬೆಳ್ಳವಾಸವನ್ನು ಒಂಟಿಯಾಗಿ ಕೈಗೊಂಡಿದ್ದನು.

**ವಿಶೇಷ ವಿಚಾರ:** ಬೆಳ್ಳವಾಸ = ಚಳಿಗಾಲದಲ್ಲಿ ನದಿಯ ಪ್ರವಾಹದಲ್ಲಿ ನಿಂತು ಮಾಡುವ ತಪಸ್ಸು.

**ವ।** **ಮತ್ತಮಭ್ಯಂತರತಪಷ್ಷಟ್ಕದೊಳಂ ಪ್ರಾಯಶ್ಚಿತ್ತವಿನಯವೈಯಾಪೃತ್ಯ ಸ್ವಾಧ್ಯಾಯಧ್ಯಾನವ್ಯುತ್ಸರ್ಗಂಗಳಂ ಕೈಕೊಂಡು ಪನ್ನೆರಡುತಪದೊಳ್ ನೆಱೆದಿರ್ಪತ್ತೆರಡು ಪರೀಷಹಂಗಳಂ ಗೆಲ್ದು ಗಣಧರಗಣಮಂ ಬಿಟ್ಟೇಕವಿಹಾರಿ ಯಾಗಿ ಬೞಿಯಂ ತ್ರೈಲೋಕ್ಯಕ್ಷೋಭಕಾರಣ ತೀರ್ಥಕರಪುಣ್ಯಹೇತುಗಳಪ್ಪ ಷೋಡಶಭಾವನೆಗಳಂ ಭಾವಿಸಿ ಭಾವನೆಯೊಳಾದ ಬುದ್ಧಿತಪೋವಿಕ್ರಿಯೌಷಧಿ ರಸಬಾಕ್ಷೀಣಾಭಿಧಾನಸಪ್ತರ್ಧಿಗಳೊಳಂ ನೆಱೆದು ಬೞಿಯಂ ಮೋಹನೀಯ ಕರ್ಮೋಪಶಮದೊಳ್ ವಿಶುದ್ಧಾತಿಶಯ ವಿಶೇಷದಿನುಪಶಮ ಶ್ರೇಣ್ಯಾರೋ ಹಣಂಗೆಯ್ದು ನಿರವಶೇಷಮೋಹೋಪಶಮೋದ್ಭೂತ ಯಥಾಖ್ಯಾತಚಾರಿತ್ರ ಸಂಪನ್ನನಂತರ್ಮುಹೂರ್ತದಿಂ ಸ್ವಸ್ಥಾನಸ್ಥಿತನಾಗಿ ಕಾಲಾಂತರದೊಳ್ ಶ್ರೀ ಪ್ರಭಾದ್ರಿಶಿಖರದೊಳ್ ಪ್ರಾಯೋಪಗಮನವಿಧಿಯಿಂ ತ್ವಗಸ್ಥಿಭೂತಸರ್ವಾಂಗಂ ಧೈರ್ಯಮನೆ ಮನದೊಳವಲಂಬಿಸಿ,**

**ಪದವಿಭಾಗ-ಅನ್ವಯ-ಅರ್ಥ:** ಮತ್ತಂ + ಅಭ್ಯಂತರತಪಷ್ಷಟ್ಕದೊಳಂ = ಜೊತೆಗೆ, ಆರು ಅಭ್ಯಂತರ ತಪಸ್ಸುಗಳಾದ ಪ್ರಾಯಶ್ಚಿತ್ತ ವಿನಯ ವೈಯಾಪೃತ್ಯ ಸ್ವಾಧ್ಯಾಯ ಧ್ಯಾನ ವ್ಯುತ್ಸರ್ಗಂಗಳಂ ಕೈಕೊಂಡು = ಈ ಹೆಸರಿನ ಆರು ಅಭ್ಯಂತರ ತಪಸ್ಸುಗಳನ್ನೂ ಕೈಗೊಂಡು, ಪನ್ನೆರಡುತಪದೊಳ್ ನೆಱೆದು = ಹನ್ನೆರಡು ತಪಸ್ಸುಗಳಲ್ಲಿ ತೊಡಗಿ, ಇರ್ಪತ್ತೆರಡುಪರೀಷಹಂಗಳಂ ಗೆಲ್ದು = ಇಪ್ಪತ್ತೆರಡು ಪರೀಷಹಗಳನ್ನೂ ಗೆದ್ದು, ಗಣಧರಗಣಮಂ ಬಿಟ್ಟು + ಏಕವಿಹಾರಿಯಾಗಿ = ಗಣಧರಗಣವನ್ನು ಬಿಟ್ಟು ಒಬ್ಬಂಟಿಯಾಗಿ ವಿಹರಿಸುತ್ತ, ಬೞಿಯಂ = ಅನಂತರ, ತ್ರೈಲೋಕ್ಯಕ್ಷೋಭಕಾರಣ ತೀರ್ಥಕರಪುಣ್ಯಹೇತುಗಳಪ್ಪ ಷೋಡಶಭಾವನೆಗಳಂ ಭಾವಿಸಿ = ಮೂರುಲೋಕಗಳ ಕ್ಷೋಭೆಗೂ ತೀರ್ಥಂಕರಪುಣ್ಯಕ್ಕೆ ಕಾರಣಗಳೂ ಆದ ಷೋಡಶಭಾವನೆಗಳನ್ನು ಮನಸ್ಸಿಗೆ ತಂದುಕೊಂಡು, ಭಾವನೆಯೊಳಾದ ಬುದ್ಧಿ ತಪಸ್ ವಿಕ್ರಿಯ ಔಷಧಿ ರಸ ಬಲ + ಅಕ್ಷೀಣ + ಅಭಿಧಾನಸಪ್ತರ್ಧಿಗಳೊಳಂ

ನೆಱೆದು = ಹಾಗೆ ಮಾಡಿದ್ದರಿಂದ ಉಂಟಾದ ಏಳು ಬಗೆಯ ಋದ್ಧಿಗಳಲ್ಲಿ ಸೇರಿ, ಬೞಿಯಂ ಮೋಹನೀಯಕರ್ಮೋಪಶಮದೊಳ್ = ಆನಂತರ ಮೋಹನೀಯ ಕರ್ಮನಿವಾರಣೆಯಿಂದ, ವಿಶುದ್ಧ + ಅತಿಶಯವಿಶೇಷದಿನ್ = ಉಂಟಾದ ಅತಿಶಯ ಶುದ್ಧಿಯಿಂದ, ಉಪಶಮಶ್ರೇಣಿ + ಆರೋಹಣಂಗೆಯ್ದು = ಉಪಶಮಶ್ರೇಣಿಯನ್ನು ಏರಿ, ನಿರವಶೇಷಮೋಹೋಪಶಮ + ಉದ್ಭೂತ = ಕೊಂಚವೂ ಇಲ್ಲದಂತೆ ಮೋಹವನ್ನು ನಿವಾರಿಸಿಕೊಂಡ ಬಳಿಕ ಉಂಟಾಗುವ, ಯಥಾಖ್ಯಾತಚಾರಿತ್ರಸಂಪನ್ನನ್ + ಅಂತರ್ಮುಹೂರ್ತದಿಂ ಸ್ವಸ್ಥಾನಸ್ಥಿತನಾಗಿ = ಯಥಾಖ್ಯಾತಚಾರಿತ್ರಸಂಪತ್ತನ್ನು ಪಡೆದು ತನ್ನ ಜಾಗದಲ್ಲಿ ನಿಂತು, ಕಾಲಾಂತರದೊಳ್ ಶ್ರೀಪ್ರಭಾದ್ರಿಶಿಖರದೊಳ್ = ಸ್ವಲ್ಪ ಕಾಲದ ಬಳಿಕ ಶ್ರೀಪ್ರಭಾ ಗಿರಿಯ ತುದಿಯಲ್ಲಿ, ಪ್ರಾಯೋಪಗಮನವಿಧಿಯಿಂ ತ್ವಕ್ + ಅಸ್ಥಿಭೂತಸರ್ವಾಂಗಂ = ಪ್ರಾಯೋಪಗಮನವಿಧಿಯಿಂದ ದೇಹದ ಅವಯವಗಳಲ್ಲಿ ಚಕ್ಕಳಮೂಳೆಗಳಿಂದ ಮಾತ್ರ ಕೂಡಿದವನಾಗಿ, ಮನದೊಳ್ ಧೈರ್ಯಮನೆ ಅವಲಂಬಿಸಿ = ಮನಸ್ಸಿನಲ್ಲಿ ಧೈರ್ಯವನ್ನೇ ನೆಚ್ಚಿಕೊಂಡು,

**ಗದ್ಯಾನುಸರಣ:** ಜೊತೆಗೆ, ಆರು ಅಭ್ಯಂತರ ತಪಸ್ಸುಗಳಾದ ಪ್ರಾಯಶ್ಚಿತ್ತ ವಿನಯ ವೈಯಾಪೃತ್ಯ ಸ್ವಾಧ್ಯಾಯ ಧ್ಯಾನ ವ್ಯುತ್ಸರ್ಗ ಎಂಬ ಹೆಸರಿನ ಆರು ತಪಸ್ಸುಗನ್ನು ಕೈಗೊಂಡ; ಆಮೇಲೆ ಹನ್ನೆರಡು ತಪಸ್ಸುಗಳಲ್ಲಿ ತೊಡಗಿಕೊಂಡ; ಇಪ್ಪತ್ತೆರಡು ಪರೀಷಹಗಳನ್ನೂ ಗೆದ್ದು, ಗಣಧರಗಣವನ್ನು ಬಿಟ್ಟು ಒಬ್ಬಂಟಿಯಾಗಿ ಸ್ವಲ್ಪ ಕಾಲ ವಿಹರಿಸಿದ; ಆನಂತರ ಮೂಲೋಕಗಳ ಕ್ಷೋಭೆಗೂ ತೀರ್ಥಂಕರಪುಣ್ಯಕ್ಕೆ ಕಾರಣಗಳೂ ಆದ ಷೋಡಶಭಾವನೆಗಳನ್ನು ಮನಸ್ಸಿಗೆ ತಂದುಕೊಂಡು, ಅದರಿಂದುಂಟಾದ ಬುದ್ಧಿ ತಪಸ್ ವಿಕ್ರಿಯ ಔಷಧಿ ರಸ ಬಲ ಅಕ್ಷೀಣ ಎಂಬ ಹೆಸರಿನ ಏಳು ಬಗೆಯ ಋದ್ಧಿಗಳಲ್ಲಿ ಸೇರಿದ; ಆನಂತರ ಮೋಹನೀಯ ಕರ್ಮನಿವಾರಣೆ ಯಿಂದ ಉಂಟಾದ ಅತಿಶಯ ಶುದ್ಧಿಯಿಂದ ಉಪಶಮಶ್ರೇಣಿಯನ್ನು ಏರಿ ನಿಂತ. ಕೊಂಚವೂ ಇಲ್ಲದಂತೆ ಮೋಹವನ್ನು ನಿವಾರಿಸಿಕೊಂಡ ಬಳಿಕ ಉಂಟಾಗುವ = ಯಥಾಖ್ಯಾತಚಾರಿತ್ರಸಂಪತ್ತನ್ನು ಪಡೆದು ತನ್ನ ಜಾಗದಲ್ಲಿ ನಿಂತು ತಪಸ್ಸಿನಲ್ಲಿ ತೊಡಗಿದ; ಸ್ವಲ್ಪ ಕಾಲದ ಬಳಿಕ ಶ್ರೀಪ್ರಭಾ ಗಿರಿಯ ತುದಿಯಲ್ಲಿ ಪ್ರಾಯೋಪಗಮನವಿಧಿಯಿಂದ ದೇಹದ ಅವಯವಗಳಲ್ಲಿ ಚಕ್ಕಳಮೂಳೆಗಳು ಮಾತ್ರ ಉಳಿದವು; ಆದರೆ ಮನಸ್ಸಿನಲ್ಲಿ ಧೈರ್ಯವನ್ನೇ ನೆಚ್ಚಿಕೊಂಡಿದ್ದ.

**ಬಿಸಿಲ್ಬೈಕಿಲ್ ಪಸಿವುಗ್ರದಂಶಮಶಕವ್ಯಾಬಾಧೆ ನೀರಟ್ಟೆ ಪೊ**
**ಯ್ವ ಸಿಡಿಲ್ ತಿಂಬರವಾವು ಪಾಯ್ವ ಪುಲಿಯೆಂಬೀ ಬಾಧೆಯೊಳ್ ಮೆಯ್ಯನೊ**
**ಡ್ಡಿಸಿ ಮೆಯ್ಯೊಳ್ ಮಿಡುಕುಳ್ಳ ತಾಣಮಣಮಿಲ್ಲೆಂಬಂತು ನಿಷ್ಪಂದನಾ**
**ಗಿ ಸಮನ್ವೀತಮನಂ ಗುಣಂಗೊಳಿಸಿದಂ ಯೋಗೀಂದ್ರವೃಂದಂಗಳಂಖಿಳ**

**ಪದವಿಭಾಗ-ಅನ್ವಯ-ಅರ್ಥ:** ಬಿಸಿಲ್ + ಐಕಿಲ್ = ಬಿಸಿಲು ಚಳಿ, ಪಸಿವು + ಉಗ್ರದಂಶಮಶಕವ್ಯಾಬಾಧೆ = ಹಸಿವು ಬಲವಾಗಿ ಕಚ್ಚುವ ಸೊಳ್ಳೆನೊಣಗಳ ಕಾಟ, ನೀರಟ್ಕೆ = ಬಾಯಾರಿಕೆ, ಪೊಯ್ವ ಸಿಡಿಲ್ = ಬಡಿಯುವ ಸಿಡಿಲು, ತಿಂಬರವಾವು = ಕಚ್ಚುವ ಅಥವಾ ನುಂಗುವ ಹೆಬ್ಬಾವು, ಪಾಯ್ವ ಪುಲಿ = ಮೇಲೆ ಬೀಳುವ ಹುಲಿ, ಎಂಬ + ಈ ಬಾಧೆಯೊಳ್ ಮೆಯ್ಯನೊಡ್ಡಿಸಿ = ಎಂಬ ಇವೆಲ್ಲ ತೊಂದರೆಗಳಲ್ಲಿ ತನ್ನ ದೇಹವನ್ನು ಸಿಲುಕಿಸಿ, ಮೆಯ್ಯೊಳ್ ಮಿಡುಕುಳ್ಳ ತಾಣಂ + ಅಣಂ + ಇಲ್ಲ + ಎಂಬಂತು ನಿಷ್ಪಂದನಾಗಿ = ದೇಹದಲ್ಲಿ ಪ್ರತಿಕ್ರಿಯೆಯುಳ್ಳ ಯಾವುದೂ ಇಲ್ಲ ಎನ್ನುವಂತೆ ನಿಶ್ಚಲನಾಗಿ, ಸಮನ್ವಿತಮನಂ = ಏಕಾಗ್ರಚಿತ್ತವುಳ್ಳವನಾಗಿ, ಯೋಗೀಂದ್ರವೃಂದಂಗಳಂ ಗುಣಂಗೊಳಿಸಿದಂ = ಯೋಗಿಶ್ರೇಷ್ಠರನ್ನು ಮೆಚ್ಚುಗೊಳಿಸಿದ.

**ಗದ್ಯಾನುಸರಣ:** ಬಿಸಿಲು ಚಳಿ ಹಸಿವು ಬಲವಾಗಿ ಕಚ್ಚುವ ಸೊಳ್ಳೆನೊಣಗಳ ಕಾಟ ಬಾಯಾರಿಕೆ, ಬಡಿಯುವ ಸಿಡಿಲು, ನುಂಗುವ ಹೆಬ್ಬಾವು ಮೇಲೆ ಬೀಳುವ ಹುಲಿ - ಎಂಬ ಇವೆಲ್ಲ ತೊಂದರೆಗಳಲ್ಲಿ ತಪಸ್ವಿಯು ತನ್ನ ದೇಹವನ್ನು ಸಿಲುಕಿಸಿಕೊಂಡ; ದೇಹದಲ್ಲಿ ಪ್ರತಿಕ್ರಿಯೆಯುಳ್ಳ ಯಾವುದೂ ಇಲ್ಲ ಎನ್ನುವಂತೆ ನಿಶ್ಚಲನಾಗಿ ಏಕಾಗ್ರಚಿತ್ತತೆಯಿಂದ ನಿಂತ; ಈ ರೀತಿ ಆತ ಯೋಗಿಶ್ರೇಷ್ಠರ ಮೆಚ್ಚುಗೆ ಗಳಿಸಿದ.

**ವ। ಅಂತಿರ್ದನಿತ್ಯಾದಿದ್ವಾದಶಾನುಪ್ರೇಕ್ಷಾನುನುಸ್ಮರಣ ಪರಿಣತಾಂತಃಕರಣನಾಗಿ ಮತ್ತಮೆಱಡನೆಯ ಸೂಟಿಯೊಳಮುಪಶಮ ಶ್ರೇಣಿಯನೇಱ ಚತುರ್ವಿಧಶುಕ್ಲ ಧ್ಯಾನದೊಳ್ ಪೂರ್ವಾಪರವಿಷಯ ವಿವಿಕ್ತಾರ್ಥ ವ್ಯಂಜನ ವೀರ್ಯವಿಧಿ ವ್ಯಂಜನಯೋಗಸಂಕ್ರಮಣ ಲಕ್ಷಣ ಲಕ್ಷಿತಮಪ್ಪ ಪೃಥಕ್ತ್ವವಿತರ್ಕ ವಿಚಾರಮೆಂಬ ಮೊದಲ ಶುಕ್ಲಧ್ಯಾನದೊಳ್ ಸಮಾಹಿತನು ಪಶಾಂತಗುಣಸ್ಥಾನ ದೊಳ್ ಪ್ರಾಣಪರಿತ್ಯಾಂಗಂಗೆಯ್ದು ಸರ್ವಾರ್ಥಸಿದ್ಧಿಯೊಳಹಮಿಂದ್ರನಾದಂ: ಅದು ಜಂಬೂದ್ವೀಪೋಪಮಾನವಿಸ್ತಾರ ಪರಿಣಾಕಪರಿಣಾಮುಮಂ ಕೈಕೊಂಡು,**

**ಪದವಿಭಾಗ-ಅನ್ವಯ-ಅರ್ಥ:** ಅಂತಿರ್ದು = ಹಾಗೆ ತಪಸ್ಸಿನಲ್ಲಿ ನಿಂತು, ಅನಿತ್ಯ + ಆದಿ ದ್ವಾದಶ + ಅನುಪ್ರೇಕ್ಷಾನುನುಸ್ಮರಣಪರಿಣತಾಂತಃಕರಣನಾಗಿ = ಅನಿತ್ಯವೇ ಮೊದಲಾದ ದ್ವಾದಶಾನುಪ್ರೇಕ್ಷೆಯ ಸ್ಮರಣೆಯಿಂದ ಪಕ್ವಗೊಂಡ ಮನಸ್ಸುಳ್ಳವನಾಗಿ, ಮತ್ತಂ + ಎಱಡನೆಯ ಸೂಟಿಯೊಳಂ + ಉಪಶಮಶ್ರೇಣಿಯನ್ + ಏಱ = ಮತ್ತೆ ಎರಡನೆಯ ಬಾರಿಯೂ ಉಪಶಮಶ್ರೇಣಿಯನ್ನೇರಿ,

ಚತುರ್ವಿಧಶುಕ್ಲಧ್ಯಾನದೊಳ್ = ಚತುರ್ವಿಧ ಶುಕ್ಲಧ್ಯಾನದಲ್ಲಿ, ಪೂರ್ವಾಪರವಿಷಯವಿವಿಕ್ತಾರ್ಥವ್ಯಂಜನ = ಹಿಂದು ಮುಂದಿನ ವಿಷಯಗಳನ್ನೆಲ್ಲ ತೋರೆಯುವ, ವೀರ್ಯವಿಧಿವ್ಯಂಜನಯೋಗಸಂಕ್ರಮಣಲಕ್ಷಣಲಕ್ಷಿತಂ + ಅಪ್ಪ = ಹಾಗೂ ವೀರ್ಯವಿಧಿವ್ಯಂಜನಗಳ ಸೇರುವಿಕೆಯಿಂದ ಉಂಟಾಗುವ ಲಕ್ಷಣಗಳಿಂದ ಕೂಡಿದ, ಪೃಥಕ್ತ್ವವಿತರ್ಕವಿಚಾರಮೆಂಬ ಮೊದಲ ಶುಕ್ಲಧ್ಯಾನದೊಳ್ = ಪೃಥಕ್ತ್ವವಿತರ್ಕವಿಚಾರವೆನ್ನುವ ಮೊದಲ ಶುಕ್ಲಧ್ಯಾನದಲ್ಲಿ, ಸಮಾಹಿತನ್ + ಉಪಶಾಂತಗುಣಸ್ಥಾನದೊಳ್ = ತೊಡಗಿಕೊಂಡು ಉಪಶಾಂತಗುಣಸ್ಥಾನದಲ್ಲಿ, ಪ್ರಾಣಪರಿತ್ಯಾಗಂಗೆಯ್ದು = ಪ್ರಾಣವನ್ನು ಬಿಟ್ಟು, ಸರ್ವಾರ್ಥಸಿದ್ಧಿಯೊಳ್ + ಅಹಮಿಂದ್ರನಾದಂ = ಪಂಚಾಣೂತ್ತರ ವಿಮಾನಗಳಲ್ಲಿ ತುತ್ತುದಿಯಲ್ಲಿನ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾದ; ಅದು ಜಂಬೂದ್ವೀಪ + ಉಪಮಾನವಿಸ್ತಾರಪರಿಣಾಕಪರಿಣಾಮಮಂ ಕೈಕೊಂಡು = ಆ ವಿಮಾನವು ಜಂಬೂದ್ವೀಪದಷ್ಟು ಹರಹು ವಿಸ್ತೀರ್ಣಗಳನ್ನುಳ್ಳುದಾಗಿ,

**ಗದ್ಯಾನುಸರಣ:** ಹಾಗೆ ತಪಸ್ಸಿನಲ್ಲಿ ನಿಂತು, ಅನಿತ್ಯವೇ ಮೊದಲಾದ ದ್ವಾದಶಾನುಪ್ರೇಕ್ಷೆಯ ಸ್ಮರಣೆಯಿಂದ ಪಕ್ವಗೊಂಡ ಮನಸ್ಸುಳ್ಳವನಾಗಿ ಎರಡನೆಯ ಬಾರಿಯೂ ಉಪಶಮಶ್ರೇಣಿಯನ್ನೇರಿದ; ಆನಂತರ ಚತುರ್ವಿಧ ಶುಕ್ಲಧ್ಯಾನದಲ್ಲಿ ತೊಡಗಿಕೊಂಡು ಹಿಂದು ಮುಂದಿನ ವಿಷಯಗಳನ್ನೆಲ್ಲ ತೋರೆಯುವ ಹಾಗೂ ವೀರ್ಯವಿಧಿವ್ಯಂಜನಗಳ ಸೇರುವಿಕೆಯಿಂದ ಉಂಟಾಗುವ ಪ್ರಾಣವನ್ನು ಬಿಟ್ಟು ಪಂಚಾಣೂತ್ತರ ವಿಮಾನಗಳಲ್ಲಿ ತುತ್ತುದಿಯಲ್ಲಿನ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾದ; ಆ ವಿಮಾನವು ಜಂಬೂದ್ವೀಪದಷ್ಟು ಹರಹು ವಿಸ್ತೀರ್ಣಗಳನ್ನುಳ್ಳದ್ದು.

**ಪನ್ನೆರಡು ಯೋಜನಂ ಲೋ**
**ಕೋನ್ನತಿಯೆನೆ ತತ್ತ್ರಿಷಷ್ಟಿಪಟಲದ ತುದಿಯೊಳ್**
**ರನ್ನದ ಕಳಶಕ್ಕೆಣೆಯೆಂ**
**ಬನ್ನೆಗಮದು ಸುಖಸುಧಾಕರಂ ಸ್ವಸ್ತಿಕರಂ** ೩೫

**ಪದವಿಭಾಗ–ಅನ್ವಯ–ಅರ್ಥ:** ಲೋಕೋನ್ನತಿ ಪನ್ನೆರಡು ಯೋಜನಂ ಎನೆ = ಆ ಲೋಕದ ಎತ್ತರ ಇನ್ನೂ ಹನ್ನೆರಡು ಯೋಜನವಿದೆ ಎಂಬಲ್ಲಿ, ತತ್ + ತ್ರಿಷಷ್ಟಿಪಟಲದ ತುದಿಯೊಳ್ = ಅರುವತ್ತು ಮೂರನೆಯ ಪದರದ ತುದಿಯಲ್ಲಿ, ರನ್ನದ ಕಳಶಕ್ಕೆ + ಎಣೆ + ಎಂಬನ್ನೆಗಂ + ಅದು ಸುಖಸುಧಾಕರಂ ಸ್ವಸ್ತಿಕರಂ = ರತ್ನ ಕಳಶದಂತಹದು ಎನ್ನುವ ಹಾಗೆ ಸುಖವನ್ನೂ ಒಳಿತನ್ನೂ ಉಂಟು ಮಾಡುವಂಥದು.

**ಗದ್ಯಾನುಸರಣ:** ಆ ಲೋಕದ ಎತ್ತರ ಇನ್ನೂ ಹನ್ನೆರಡು ಯೋಜನವಿದೆ ಎಂಬಲ್ಲಿ, ಅರುವತ್ತು ಮೂರನೆಯ ಪದರದ ತುದಿಯಲ್ಲಿ, ರತ್ನದ ಕಳಶದಂತೆ ಸರ್ವಾರ್ಥಸಿದ್ಧಿಯಿದೆ; ಅದು ಸುಖವನ್ನೂ ಒಳಿತನ್ನೂ ಉಂಟುಮಾಡುವಂಥದು.

**ಅದು ನೀಲಮಯಮಹೀತಳ**
**ಮದು ನವಪುಷ್ಪೋಪಹಾರತಾರಕಿತಮದ**
**ಭ್ಯುದಯಸುಖನಿಳಯಮದು ಮೋ**
**ಕ್ಷದ ನೆರೆಮನೆ ಲಂಬಮಾಣಮುಕ್ತಾದಾಮಂ ೩೬**

**ಪದವಿಭಾಗ–ಅನ್ವಯ–ಅರ್ಥ:** ಅದು ನೀಲಮಯಮಹೀತಳಂ = ಅದು ನೀಲಿಯ ಬಣ್ಣದ ಭೂತಳ; ಅದು ನವಪುಷ್ಪ + ಉಪಹಾರತಾರಕಿತಂ = ಅದು ಹೊಸ ಹೂಗಳೆಂಬ ತಾರಗೆಗಳ ಸರಮಾಲೆಯಂತಿದೆ; ಅದು + ಅಭ್ಯುದಯ ಸುಖನಿಳಯಂ = ಅದು ಏಳಿಗೆ ಮತ್ತು ಸುಖಗಳ ಆವಾಸ; ಅದು ಮೋಕ್ಷದ ನೆರೆಮನೆ ಲಂಬಮಾಣಮುಕ್ತಾದಾಮಂ = ಅದು ಮೋಕ್ಷದ ಪಕ್ಕದ ಮನೆ, ಜೋತು ಬಿದ್ದ ಮುತ್ತಿನ ಹಾರ.

**ಗದ್ಯಾನುಸರಣ:** ಅದು ನೀಲಿಯ ಬಣ್ಣದ ಭೂತಳ, ಹೊಸ ಹೂಗಳೆಂಬ ತಾರಗೆಗಳ ಸರಮಾಲೆಯಂತೆ, ಏಳಿಗೆ ಮತ್ತು ಸುಖಗಳ ಆವಾಸ; ಅದು ಮೋಕ್ಷದ ಪಕ್ಕದ ಮನೆಯಂತೆ. ನೇತಾಡುವ ಮುತ್ತಿನ ಹಾರದಂತೆ ಇದೆ.

**ನೆರೆದಹಮಿಂದ್ರರ ತನುಪರಿ**
**ಕರದ ನೆಟಿಲ್ಗಳ್ ಪಳಚ್ಚನೆಸೆದಿರೆ ನೋಟ**
**ಕ್ಕೆರಡನೆಯ ನಾಕಲೋಕದ**
**ವಿರಚನೆಯನೆ ಪಡೆವುದದಱ ರನ್ನದ ಕೇರ್ಗಳ್ ೩೭**

**ಪದವಿಭಾಗ–ಅನ್ವಯ–ಅರ್ಥ:** ನೆರೆದ + ಅಹಮಿಂದ್ರರ ತನುಪರಿಕರದ ನೆಟಿಲ್ಗಳ್ = ಅಲ್ಲಿ ಸೇರಿರುವ ಅಹಮಿಂದ್ರರ ಶರೀರಕಾಂತಿಯ ಪ್ರತಿಬಿಂಬವು, ಪಳಚ್ಚನೆ + ಎಸೆದಿರೆ = ಕೋರೈಸುವಂತಿರಲು, ಅದಱ ರನ್ನದ ಕೇರ್ಗಳ್ = ಆ ವಿಮಾನದ ರತ್ನಮಯ ಗೋಡೆಗಳು. ನೋಟಕ್ಕೆ + ಎರಡನೆಯ ನಾಕಲೋಕದ ವಿರಚನೆಯನೆ ಪಡೆವುದು = ನೋಡಲು ಎರಡನೆಯ ಸ್ವರ್ಗಲೋಕದ ಸಂರಚನೆಯನ್ನು ಹೊಂದಿದೆ.

**ಗದ್ಯಾನುಸರಣ:** ಅಲ್ಲಿ ಸೇರಿರುವ ಅಹಮಿಂದ್ರರ ಶರೀರಕಾಂತಿಯ ಪ್ರತಿಬಿಂಬವು ಆ ವಿಮಾನದ ರತ್ನಮಯ ಗೋಡೆಗಳಲ್ಲಿ ಪ್ರತಿಫಲಿಸಿ ನೋಡಲು ಎರಡನೆಯ ಸ್ವರ್ಗಲೋಕದ ಸಂರಚನೆಯನ್ನು ಹೋಲುತ್ತದೆ.

ವ। ಅದಱ ಪರಾರ್ಥ್ಯರತ್ನರಚನಾವಿಚಿತ್ರೋಪಪಾದಶಯನತಳ ದೊಳಂತ ರ್ಮುಹೂರ್ತದೊಳ್ ಪರ್ಯಾಪ್ತಿಯುಂ ಕೈಕೊಂಡು,

ಪದವಿಭಾಗ-ಅನ್ವಯ-ಅರ್ಥ: ಅದಱ ಪರಾರ್ಥ್ಯರತ್ನರಚನಾವಿಚಿತ್ರ + ಉಪಪಾದಶಯನತಳದೊಳ್ = ಅದರ ಅತ್ಯುತ್ಕೃಷ್ಟವೂ ಅದ್ಭುತವೂ ಅದ ದೇವದೇವಿಯರು ಹುಟ್ಟು ಹಾಸಿಗೆಯಲ್ಲಿ, ಅಂತರ್ಮುಹೂರ್ತದೊಳ್ = ಒಂದು ಮುಹೂರ್ತದ ಅವಧಿಗಿಂತ ಮುಂಚೆಯೇ, ಪರ್ಯಾಪ್ತಿಯಂ ಕೈಕೊಂಡು = ಪರ್ಯಾಪ್ತಿಯನ್ನು ಕೈಗೊಂಡು,

ಗದ್ಯಾನುಸರಣ: ಅದರ ಅತ್ಯುತ್ಕೃಷ್ಟವೂ ಅದ್ಭುತವೂ ಅದ ದೇವದೇವಿಯರು ಹುಟ್ಟು ಹಾಸಿಗೆಯಲ್ಲಿ, ಒಂದು ಮುಹೂರ್ತದ ಅವಧಿಗಿಂತ ಮುಂಚೆಯೇ ಪರ್ಯಾಪ್ತಿಯನ್ನು ಕೈಗೊಂಡ.

ಧಾತುಮಳದೋಷರಹಿತಂ
ವೀತನಖಶ್ಮಶ್ರುಲೋಮಮುಂ ಶೋಭಾ
ನ್ವಿತಪರಿಪೂರ್ಣಯೌವನ
ಮಾತತಶುಭಲಕ್ಷಣಂ ಮನೋಹರರೂಪಂ ೩೮

ಪದವಿಭಾಗ-ಅನ್ವಯ-ಅರ್ಥ: ಧಾತುಮಳದೋಷರಹಿತಂ = ಧಾತುಮಲಗಳ ದೋಷಗಳಿಂದ ಮುಕ್ತವಾದ, ವೀತನಖಶ್ಮಶ್ರುಲೋಮಮಂ = ಉಗುರು ಮೀಸೆ ಕೂದಲಗಳಿಲ್ಲದ, ಶೋಭಾ + ಅನ್ವಿತಪರಿಪೂರ್ಣಯೌವನಂ = ಕಾಂತಿಯಿಂದ ಕೂಡಿದ ಪರಿಪೂರ್ಣವಾದ ಯೌವನ, ಆತತಶುಭಲಕ್ಷಣಂ = ಶುಭಲಕ್ಷಣಗಳನ್ನು ಹೊಂದಿದ, ಮನೋಹರರೂಪಂ = ಚಿತ್ತಾಕರ್ಷಕ ರೂಪ,

ಗದ್ಯಾನುಸರಣ: ಧಾತುಮಲಗಳ ದೋಷಗಳಿಂದ ಮುಕ್ತವಾದ, ಉಗುರು ಮೀಸೆ ಕೂದಲಗಳಿಲ್ಲದ, ಕಾಂತಿಯಿಂದ ಕೂಡಿದ ಪರಿಪೂರ್ಣವಾದ ಯೌವನ ಮತ್ತು ಶುಭಲಕ್ಷಣಗಳನ್ನು ಹೊಂದಿದ ಚಿತ್ತಾಕರ್ಷಕ ರೂಪವನ್ನು ಅವನು ಪಡೆದ.

ಪಳುಕಿನ ಪಾಪೆಯುನಮರ್ದಿಂ
ತೊಳೆದಂತೊರ್ಮೊಟಿದ ದಿವ್ಯವಪು ಮಣಿಮಯುಕುಂ
ಡಲಮುಕುಟಕಟಕಭೂಷಣ
ವಿಳಾಸದಿಂದೇಂ ವಿಳಾಸಮಂ ತಾಳದ್ದಿದುದೋ ೩೯

ಪದವಿಭಾಗ-ಅನ್ವಯ-ಅರ್ಥ: ಪಳುಕಿನ ಪಾಪೆಯನ್ + ಅಮರ್ದಿಂ ತೊಳೆದಂತೆ = ಸ್ಫಟಿಕದ ಬೊಂಬೆಯನ್ನು ಅಮೃತದಿಂದ ತೊಳೆದಂತೆ, ಒರ್ಮೊಟಿದ

ದಿವ್ಯವಪು = ಒಂದು ಮೊಳ ದಿವ್ಯದೇಹ, ಮಣಿಮಯಕುಂಡಲಮಕುಟಕಟಕ ಭೂಷಣ ವಿಳಾಸದಿಂದೆ = ಮಣಿಖಚಿತವಾದ ಕಿವಿಯ ಆಭರಣಗಳು ಮತ್ತು ಕಿರೀಟಗಳ ಕಾಂತಿಯಿಂದ ಕೂಡಿ = ಏಂ ವಿಳಾಸಮಂ ತಾಳದ್ದಿದುದೋ = (ಅವನ ದೇಹವು) ಎಂತಹ ಹೊಳಪನ್ನು ಪಡೆದಿತ್ತು!

ಗದ್ಯಾನುಸರಣ: ಸ್ಫಟಿಕದ ಬೊಂಬೆಯನ್ನು ಅಮೃತದಿಂದ ತೊಳೆದಂತಹ ಒಂದು ಮೊಳ ಎತ್ತರದ ಅವನ ದಿವ್ಯದೇಹವು ಮಣಿಖಚಿತವಾದ ಕಿವಿಯ ಆಭರಣಗಳು ಮತ್ತು ಕಿರೀಟಗಳ ಕಾಂತಿಯಿಂದ ಕೂಡಿ ಅತೀವ ಹೊಳಪಿನಿಂದ ಕೂಡಿತ್ತು!

**ಬಾಡದ ಬಾಸಿಗಮುಡೆ ಚೆ**
**ಲ್ವೋಡದ ದಿವ್ಯಾಂಬರಂ ಮನಂಗೊಳೆ ಸುಖದೊಳ್**
**ಮೂಡುವ ಮುಟ್ಕಾಡುವ ತಡ**
**ಮಾಡುವ ಬಗೆಯಿಲ್ಲದಲ್ಲಿ ಬಗೆ ಪೆಱತುಂಟೇ** ೪೦

ಪದವಿಭಾಗ–ಅನ್ವಯ–ಅರ್ಥ: ಬಾಡದ ಬಾಸಿಗಂ = ಬಾಡದ ಹೂಹಾರ, ಉಡೆ ಚೆಲ್ವು + ಓಡದ ದಿವ್ಯ + ಅಂಬರಂ = ಉಟ್ಟುಕೊಳ್ಳಲು ತನ್ನ ಸೊಬಗನ್ನು ಕಳೆದುಕೊಳ್ಳದ ದಿವ್ಯವಸ್ತ್ರ, ಮನಂಗೊಳೆ = ಮನಸ್ಸನ್ನಾವರಿಸಿ, ಸುಖದೊಳ್ ಮೂಡುವ ಮುಟ್ಕಾಡುವ ತಡಂ + ಆಡುವ ಬಗೆಯಿಲ್ಲದೆ = ಸುಖದಲ್ಲಿ ಸೇರಿ ಮುಳುಗಿ ಉತ್ಸಾಹಗೊಳ್ಳುವ ಮನಸ್ಸಲ್ಲದೆ, ಅಲ್ಲಿ ಬಗೆ ಪೆಱತುಂಟೇ = ಬೇರೆ ರೀತಿ ಅಲ್ಲಿರಲು ಸಾಧ್ಯವೇ!

ಗದ್ಯಾನುಸರಣ: ಬಾಡದ ಹೂಹಾರ, ಉಟ್ಟುಕೊಂಡರೂ ತನ್ನ ಸೊಬಗನ್ನು ಕಳೆದುಕೊಳ್ಳದ ದಿವ್ಯವಸ್ತ್ರ – ಇವು ಆಕರ್ಷಿಸಿ ಸುಖದಲ್ಲಿ ಸೇರಿ ಮುಳುಗಿ ಉತ್ಸಾಹಗೊಳ್ಳುವ ಮನಸ್ಸಲ್ಲದೆ, ಅಲ್ಲಿ ಬೇರೆ ರೀತಿ ಇರಲು ಸಾಧ್ಯವೇ!

**ಅಣಿಮಾದ್ಯಷ್ಟಗುಣಂಗಳ**
**ಕಣಿಯಿರ್ಪಂತಿರ್ದುಮಖಿಳಸುರಲೋಕಶಿಖಾ**
**ಮಣಿಗಳ್ ಲೋಕೈಕಶಿಖಾ**
**ಮಣಿಗಳುಮಲ್ಲಿರ್ದು ವಿನತಮಸ್ತಕರಪ್ಪರ್** ೪೧

ಪದವಿಭಾಗ–ಅನ್ವಯ–ಅರ್ಥ: ಅಣಿಮಾದಿ + ಅಷ್ಟಗುಣಂಗಳ ಕಣಿಯಿರ್ಪಂತೆ + ಇರ್ದುಂ = ಅಣಿಮಾ ಮುಂತಾದ ಅಷ್ಟಸಿದ್ಧಿಗಳ ಗಣಿಯಂತೆ ಇದ್ದರೂ, ಅಖಿಳಸುರಲೋಕಶಿಖಾಮಣಿಗಳ್ = ಇಡೀ ಆ ದೇವಲೋಕದ ದೇವತೆಗಳೂ, ಲೋಕೈಕಶಿಖಾಮಣಿಗಳುಂ = ಎಲ್ಲ ಲೋಕದ ಮುಖ್ಯರೂ, ಅಲ್ಲಿರ್ದು ವಿನತಮಸ್ತಕರಪ್ಪರ್ = ಅಲ್ಲಿದ್ದು (ಈ ಅಹಮಿಂದ್ರನಿಗೆ) ತಲೆಬಾಗುತ್ತಾರೆ.

**ಗದ್ಯಾನುಸರಣ:** ಅಣಿಮಾ ಮುಂತಾದ ಅಷ್ಟಸಿದ್ಧಿಗಳ ಗಣಿಯಂತಿದ್ದ ಅಲ್ಲಿ ನೆಲಸಿದ್ದ ಆ ದೇವಲೋಕದ ದೇವತೆಗಳೂ, ಇತರ ಲೋಕಗಳ ಮುಖ್ಯರೂ ಈ ಅಹಮಿಂದ್ರನಿಗೆ ತಲೆಬಾಗುತ್ತಾರೆ.

**ಶುಭಭಾವಶುಕ್ಲಲೇಶ್ಯಾ**
**ನುಭಾವದಿಂ ಧವಳಪುಂಡರೀಕನಿಕಾಶ**
**ಪ್ರಭೆ ದೊರೆಕೊಂಡುದು ಪರಿಣಾ**
**ಮಭೇದಮೇಂ ಚಿತ್ರವಿಧಮೋ ತನುಭೃದ್ಗಣದಾ** ೪೨

**ಪದವಿಭಾಗ–ಅನ್ವಯ–ಅರ್ಥ:** ಶುಭಭಾವಶುಕ್ಲಲೇಶ್ಯಾನುಭಾವದಿಂ = ಒಳ್ಳೆಯ ಭಾವಗಳು ಹಾಗೂ ಶುಕ್ಲಲೇಶ್ಯೆಗಳ ಪರಿಣಾಮದಿಂದ, ಧವಳಪುಂಡರೀಕನಿಕಾಶಪ್ರಭೆ = ಬಿಳಿ ತಾವರೆಯ ಕಾಂತಿಯಂತಹ ಪ್ರಭೆಯನ್ನು, ದೊರೆಕೊಂಡುದು = ಪಡೆಯಿತು; ತನುಭೃತ್ + ಗಣದಾ ಪರಿಣಾಮಭೇದಂ + ಏಂ ಚಿತ್ರವಿಧಮೋ = ಅಲ್ಲಿನ ಜೀವಸಮುದಾಯದ ಪರಿಣಾಮಭೇದವು ಅದೆಷ್ಟು ವಿಚಿತ್ರ!

**ಗದ್ಯಾನುಸರಣ:** ಒಳ್ಳೆಯ ಭಾವಗಳು ಹಾಗೂ ಶುಕ್ಲಲೇಶ್ಯೆಗಳ ಪರಿಣಾಮದಿಂದ ಅಲ್ಲಿನ ಜೀವಸಮುದಾಯದ ದೇಹಗಳು ಬಿಳಿ ತಾವರೆಯ ಕಾಂತಿಯಂತಹ ಪ್ರಭೆಯನ್ನು ಪಡೆಯುತ್ತವೆ; ಪರಿಣಾಮಭೇದವು ಅದೆಷ್ಟು ವಿಚಿತ್ರ!

**ಪದಿನಾಱು ತಿಂಗಳಿಂದಂ**
**ತುದಿಯೊಳ್ ಪದಿನೈದು ದಿವಸಮಾದೊಡೆ ಸುಯ್ವಂ**
**ತೊದಳುಂಟೆ ನಿಃಪ್ರವೀಚಾ**
**ರದಿಂದಮುಹಮಿಂದ್ರನಖಿಳಸುಖಮಂ ಪಡೆವಂ** ೪೩

**ಪದವಿಭಾಗ–ಅನ್ವಯ–ಅರ್ಥ:** ಪದಿನಾಱು ತಿಂಗಳಿಂದಂ ತುದಿಯೊಳ್ = ಹದಿನಾರು ತಿಂಗಳ ಮೇಲೆ, ಪದಿನೈದು ದಿವಸಂ + ಆದೊಡೆ ಸುಯ್ವಂ = ಹದಿನೈದು ದಿವಸಗಳು ಕಳೆದರೆ ಒಮ್ಮೆ ಉಸಿರು ಬಿಡುತ್ತಾನೆ; ತೊದಳುಂಟೆ = ಹಿಂಜರಿಕೆಯಿಲ್ಲ, ನಿಃಪ್ರವೀಚಾರದಿಂದಂ + ಅಹಮಿಂದ್ರನ್ + ಅಖಿಳಸುಖಮಂ ಪಡೆವಂ = ನಿಃಪ್ರವೀಚಾರದಿಂದ ಅಹಮಿಂದ್ರನು ಎಲ್ಲ ಸುಖಗಳನ್ನೂ ಅನುಭವಿಸುತ್ತಾನೆ.

**ಗದ್ಯಾನುಸರಣ:** ಹದಿನಾರು ತಿಂಗಳು ಮತ್ತು ಹದಿನೈದು ದಿವಸಗಳಿಗೊಮ್ಮೆ ಅಹಮಿಂದ್ರನು ಉಸಿರು ಬಿಡುತ್ತಾನೆ; ನಿಃಪ್ರವೀಚಾರದಿಂದ ಅಹಮಿಂದ್ರನು ಎಲ್ಲ ಸುಖಗಳನ್ನೂ ಅನುಭವಿಸುತ್ತಾನೆ.

ಸ್ತ್ರೀಸಂಸರ್ಗಂ ಸುಖಮೆಂ
ಬೀ ಸಂಸಾರಿಗಳೆ ಜಡರದಪ್ಪೊಡೆ ತನುಗಾ
ಯಾಸಕರಂ ಶುಕ್ಲಾರ್ತವ
ವಾಸಿತಮಾಪಾತಮಾತ್ರರಮಣೀಯತರಂ ೪೪

ಪದವಿಭಾಗ-ಅನ್ವಯ-ಅರ್ಥ: ಸ್ತ್ರೀಸಂಸರ್ಗಂ ಸುಖಂ + ಎಂಬ + ಈ ಸಂಸಾರಿಗಳೆ ಜಡರ್ = ಹೆಣ್ಣಿನ ಸಹವಾಸವು ಸುಖಕರವೆಂದು ಭಾವಿಸುವ ಸಂಸಾರಿಗಳು ಜಡರು; ಅದಪ್ಪೊಡೆ ತನುಗಾಯಾಸಕರಂ = ಅದಾದರೋ ದೇಹಕ್ಕೆ ಆಯಾಸವುಂಟುಮಾಡುವಂತಹುದು; ಶುಕ್ಲ + ಆರ್ತವವಾಸಿತಂ = ರೇತಸ್ಸು-ರಜಸ್ಸುಗಳಿಂದ ಕೂಡುವಿಕೆ; ಆಪಾತಮಾತ್ರರಮಣೀಯತರಂ = ಹೊರನೋಟಕ್ಕೆ ಮಾತ್ರ ಸುಂದರ

ಗದ್ಯಾನುಸರಣ: ಹೆಣ್ಣಿನ ಸಹವಾಸವು ಸುಖಕರವೆಂದು ಭಾವಿಸುವ ಸಂಸಾರಿಗಳು ಜಡರು; ಏಕೆಂದರೆ ಅದು ದೇಹಕ್ಕೆ ಆಯಾಸವುಂಟುಮಾಡುವಂತಹುದು, ರೇತಸ್ಸು-ರಜಸ್ಸುಗಳಿಂದ ಕೂಡುವಿಕೆ; ಹೀಗಾಗಿ ಹೊರನೋಟಕ್ಕೆ ಮಾತ್ರ ಸುಂದರ.

ಅದಱಿಂದಂ ತನ್ನೊಳ್ ಪು
ಟ್ಟಿದ ಸಂತಸದಿಂದಮಾದ ಸುಖಮುದು ಸುಖಮ
ಲ್ಲದುದಲ್ತು ವಸ್ತುವಿಂದಾ
ದುದು ವಸ್ತುವೆ ಕುಂದೆ ಕುಂದುಗುಂ ನಿಮಿರ್ದಪುದೇ ೪೫

ಪದವಿಭಾಗ-ಅನ್ವಯ-ಅರ್ಥ: ಅದಱಿಂದಂ ತನ್ನೊಳ್ ಪುಟ್ಟಿದ ಸಂತಸದಿಂದಂ + ಆದ ಸುಖಮದು ಸುಖಂ = ಹೀಗಾಗಿ ತನ್ನಲ್ಲಿಯೇ ಹುಟ್ಟಿದ ಸಂತೋಷದಿಂದ ಆಗುವ ಸುಖವೇ ನಿಜವಾದ ಸುಖ, ಅಲ್ಲದುದು + ಅಲ್ತು = ಹಾಗಲ್ಲದುದು ಅಲ್ಲ; ವಸ್ತುವಿಂದಾದುದು ವಸ್ತುವೆ = ವಸ್ತುವಿನಿಂದ ಹುಟ್ಟುವಂಥದು ವಸ್ತುವೇ. ಕುಂದೆ ಕುಂದುಗುಂ ನಿಮಿರ್ದಪುದೇ = ನಾಶವಾದರೆ ನಾಶವಾಗುತ್ತದೆಯೇ ಹೊರತು ವರ್ಧಿಸುವುದೇ?

ಗದ್ಯಾನುಸರಣ: ಹೀಗಾಗಿ ತನ್ನಲ್ಲಿ ಹುಟ್ಟುವ ಸಂತೋಷದಿಂದ ಆಗುವ ಸುಖವೇ ನಿಜವಾದ ಸುಖ, ಹಾಗಲ್ಲದುದು ಅಲ್ಲ; ವಸ್ತುವಿನಿಂದ ಹುಟ್ಟುವಂಥದು ವಸ್ತುವೇ, ಅದು ನಾಶವಾದರೆ ಇದೂ ನಾಶವಾಗುತ್ತದೆಯೇ ಹೊರತು ವರ್ಧಿಸುವುದೇ?

ಆ ನಾಕನಿಕಾಯದ ಸುಖ
ಮೇನುಂ ದೊರೆಯುಲ್ಲದರ್ಕೆ ಮೋಕ್ಷದ ಸುಖದಿಂ
ದೇನಾನುಂ ಕುಂದುಗುಮದು
ತಾನೆನೆ ಬಣ್ಣಿಸುವನಾವನಲ್ಲಿಯ ಸುಖಮಂ ೪೬

**ಪದವಿಭಾಗ-ಅನ್ವಯ-ಅರ್ಥ:** ಆ ನಾಕನಿಕಾಯದ ಸುಖಮೇನುಂ ದೊರೆಯಲ್ಲ = ಆ ಸ್ವರ್ಗಸುಖಕ್ಕೆ ಬೇರಾವುದೂ ಸಾಟಿಯಲ್ಲ, ಮೋಕ್ಷದ ಸುಖದಿಂದೆ + ಏನಾನುಂ ಅದರ್ಕೆ ಕುಂದುಗುಂ + ಅದು ತಾನ್ = ಮೋಕ್ಷಸುಖದಿಂದ ಮಾತ್ರ ಅದು ಏನಾದರೂ ಕಡಿಮೆಯಾದದ್ದು, ಎನೆ ಅಲ್ಲಿಯ ಸುಖಮಂ ಆವನ್ ಬಣ್ಣಿಸುವನ್ = ಎನ್ನಲು ಅಲ್ಲಿಯ ಸುಖವನ್ನು ಯಾರು ತಾನೇ ವರ್ಣಿಸಬಲ್ಲ?

**ಗದ್ಯಾನುಸರಣ:** ಆ ಸ್ವರ್ಗಸುಖಕ್ಕೆ ಬೇರಾವುದೂ ಸಾಟಿಯಲ್ಲ ಮೋಕ್ಷಸುಖದಿಂದ ಮಾತ್ರವೇ ಅದು ಕಿಂಚಿದೂನ ಎನ್ನಲು ಅಲ್ಲಿಯ ಸುಖವನ್ನು ಯಾರು ತಾನೇ ವರ್ಣಿಸಬಲ್ಲ?

ನೆನದಹಮಿಂದ್ರಂ ತಣಿವೊಂ
ಮನದೊಳ್ ಮೂವತ್ತಮೂಱುಸಾಸಿರವರ್ಷ
ಕ್ಕನತಿಶಯಸುಧಾಶನದೊಳ್
ವನನಿಧಿ ಮೂವತ್ತಮೂಱುಮಂ ಸಲೆ ಬಾೞ್ವಂ ೪೭

**ಪದವಿಭಾಗ-ಅನ್ವಯ-ಅರ್ಥ:** ಮೂವತ್ತಮೂಱುಸಾಸಿರವರ್ಷಕ್ಕೆ ಅಹಮಿಂದ್ರಂ ಮನದೊಳ್ ನೆನದು ಅನತಿಶಯಸುಧಾ + ಅಶನದೊಳ್ ತಣಿವೊಂ = ಅಹಮಿಂದ್ರನು ಮೂವತ್ತಮೂರು ಸಾವಿರ ವರ್ಷಗಳಿಗೊಮ್ಮೆ ಮನಸ್ಸಿನಲ್ಲಿ ನೆನಪು ಮಾಡಿಕೊಂಡೇ ಶ್ರೇಷ್ಠವಾದ ಅಮೃತಾಹಾರವನ್ನುಂಡು ತಣಿಯುತ್ತಾನೆ; ವನನಿಧಿ ಮೂವತ್ತಮೂಱುಮಂ ಸಲೆ ಬಾೞ್ವಂ = ಹೀಗೆ ಮೂವತ್ತಮೂರು ಸಾಗರ ವರ್ಷಗಳಷ್ಟು ಕಾಲ ಅಲ್ಲಿ ಜೀವಿಸಿರುತ್ತಾನೆ.

**ಗದ್ಯಾನುಸರಣ:** ಅಹಮಿಂದ್ರನು ಮೂವತ್ತಮೂರು ಸಾವಿರ ವರ್ಷಗಳಿಗೊಮ್ಮೆ ಮನಸ್ಸಿನಲ್ಲಿ ನೆನಪು ಮಾಡಿಕೊಂಡೇ ಶ್ರೇಷ್ಠವಾದ ಅಮೃತಾಹಾರವನ್ನುಂಡು ತಣಿಯುತ್ತಾನೆ; ಹೀಗೆ ಅವನು ಮೂವತ್ತಮೂರು ಸಾಗರ ವರ್ಷಗಳಷ್ಟು ಕಾಲ ಅಲ್ಲಿ ಜೀವಿಸಿರುತ್ತಾನೆ.

ಧನದೇವನುಮೆಣ್ಬರ್ ತ
ನ್ನನುಜರುಮಹಮಿಂದ್ರರಾಗೆ ನೆರೆದವರೊಳ್ ಮು
ನ್ನಿನ ಭವದ ಪುಣ್ಯಕಲ್ಪಾ
ವನಿಜದ ತನಿವಣ್ಣರಸದೆ ತಣ್ಣನೆ ತಣಿವಂ ೪೮

**ಪದವಿಭಾಗ-ಅನ್ವಯ-ಅರ್ಥ:** ಧನದೇವನುಂ + ಎಣ್ಬರ್ ತನ್ನ + ಅನುಜರುಂ + ಅಹಮಿಂದ್ರರಾಗೆ = ಧನದೇವನೂ ಎಂಟು ಮಂದಿ ತನ್ನ ತಮ್ಮಂದಿರೂ ಅಹಮಿಂದ್ರರಾಗಿ ಹುಟ್ಟಲು, ಅವರೊಳ್ ನೆರೆದು = ಅವರೊಡನೆ ಸೇರಿ, ಮುನ್ನಿನ ಭವದ ಪುಣ್ಯಕಲ್ಪಾವನಿಜದ ತನಿವಣ್ಣರಸದೆ ತಣ್ಣನೆ ತಣಿವಂ = ಹಿಂದಿನ ಜನ್ಮದ ಪುಣ್ಯವೆಂಬ ಕಲ್ಪವೃಕ್ಷದ ಸಿಹಿ ಹಣ್ಣನ್ನು ಮನಸಾರೆ ಸವಿಯುತ್ತಾನೆ.

**ಗದ್ಯಾನುಸರಣ:** ಧನದೇವನೂ ತನ್ನ ಎಂಟು ಮಂದಿ ತಮ್ಮಂದಿರೂ ಅಹಮಿಂದ್ರರಾಗಿ ಹುಟ್ಟಲು, ಅವರೊಳ್ ನೆರೆದು = ಅವರೊಡನೆ ಸೇರಿ ಹಿಂದಿನ ಜನ್ಮದ ಪುಣ್ಯವೆಂಬ ಕಲ್ಪವೃಕ್ಷದ ಸಿಹಿ ಹಣ್ಣನ್ನು ಮನಸಾರೆ ಸವಿಯುತ್ತಾನೆ.

ವ। ಅನ್ನೆಗಮಿತ್ತ ಮೇರುಗಿರಿಯೆ ತನಗೆ ನಾಭಿಯಾಗೆ ಸೊಗಯಿಸುವ ಜಂಬೂ ಮಹೀರುಹಲಾಂಛನದ್ವೀಪಾಂತರ್ಗತ ಭರತಕ್ಷೇತ್ರಮಧ್ಯ ಮಧ್ಯಮಖಂಡದೊಳ್ ಮುಖ್ಯಂ ವ್ಯವಹಾರಮೆಂಬೆರಡುಂ ಕಾಲದೊಳಗಾದಿಮಧ್ಯಾವಸಾನವಿರಹಿತಮುಂ ವರ್ತನಾಲಕ್ಷಣಮುಂ ಪರಿಣಾಮದ್ರವ್ಯಪರಿವರ್ತನಕಾರಣಮುಂ ಲೋಕಾಕಾಶಪ್ರದೇಶಪ್ರಮಾಣ ಪರಿಮಾಣಮುಂ ಅಸ್ಮದಾದ್ಯನುಮೇಯಮುಂ ಸರ್ವಜ್ಞಪ್ರತ್ಯಕ್ಷಗೋಚರ ಮುಮಪ್ಪುದು ಮುಖ್ಯಕಾಲಂ: ವ್ಯವಹಾರಕಾಲಮೆಂಬುದು ಮುಖ್ಯಕಾಲನಿರ್ವರ್ತಿತ ಕ್ರಿಯಾರೂಪಂ: ಅದು ಸಮಯಾವಳಿ ಕೋಚ್ಛ್ವಾಸಸ್ತೋಕನಿಮೇಷನಾಳಿಕಾ ಮುಹೂರ್ತದಿವಸಪಕ್ಷಮಾಸರ್ತ್ವಯನ ಸಂವತ್ಸರಾದಿ ಗಣನಾನುಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು; ಅದು ಶರೀರಬಳಾಯುರ್ದೇಹ ಪ್ರಮಾಣೋಪಚಯಾಪಚಯ ಹೇತುತ್ವದಿಂದ ಮುತ್ಸರ್ಪಿಣಿ ಯವಸರ್ಪಿಣಿ ನಾಮಮುಂ ಪಡೆದುದ ದೊಂದು ಪತ್ತುಕೋಟಿ ಕೋಟಿ ಸಾಗರೋಪಮಸಂಖ್ಯೆಯುಂ ತಾಳ್ದಿ ಸುಷಮಸುಷಮಂ ಸುಷಮಂ ಸುಷಮದುಷ್ಷಮಂ ದುಷ್ಷಮಸುಷಮಂ ದುಷ್ಷಮಂ ಅತಿದುಷ್ಷಮಂ ಎಂದು ಒಂದೊಂದುಂ ಷಡ್ಭೇದಭಿನ್ನಮಾದುವು; ಅಲ್ಲಿ ಮುನ್ನಮವಸರ್ಪಿಣಿಯೊಳುತ್ತಮ ಭೋಗಭೂಮಿಸ್ಥಿತಿಯೊಳ್ ನಾಲ್ಕುಕೋಟಿಸಾಗರೋ ಪಮಪ್ರಮಾಣಂ ಸುಷಮಸುಷಮಮೆಂಬ ಕಾಲಮುಂ ಮಧ್ಯಮಭೋಗ ಭೂಮಿಸ್ಥಿತಿಯೊಳ್ ಮೂಱುಕೋಟಿಕೋಟಿಸಾಗರೋಪಮ ಪ್ರಮಾಣಂ ಸುಷಮಮೆಂಬ ಕಾಲಮುಂ ಜಘನ್ಯಭೋಗಭೂಮಿಸ್ಥಿಯೊಳ್ ಎರಡು ಕೋಟಿಕೋಟಿ ಸಾಗರೋಪಮ ಪ್ರಮಾಣ ಸುಷಮದುಷ್ಷಮಮೆಂಬ ಕಾಲಮುಂ ಕ್ರಮದೊಳ್ ಷಟ್ಚತುರ್ದ್ವಿ ಸಹಸ್ರಚಾಪೋತ್ಸೇಧಂಗಳುಂ ತ್ರಿದ್ವ್ಯೇಕಪಲ್ಯೋಪಮಾಯುಷ್ಯಂಗಳುಂ ತ್ರಿದ್ವ್ಯೇಕದಿಅಮತರಿತ ಬದರಾಕ್ಷಧಾತ್ರೀಫಳಪ್ರಮಾಣಾ ಹಾರಂಗಳುಮಪ್ಪ ಮಿಥುನಂಗಳ್ಗೆ ಸಂಭೋಗ್ಯಮಾಗಿ ಸಲೆ ಜಘನ್ಯಭೋಗಭೂಮಿಯ ಕಡೆಯ ಪಳಿತೋಪಮದೆಂಟನೆಯ ಭಾಗಮುಟೀದೆಂಬನ್ನೆಗಂ,

**ಪದವಿಭಾಗ–ಅನ್ವಯ–ಅರ್ಥ:** ಅನ್ನೆಗಂ + ಇತ್ತ = ಅಷ್ಟರಲ್ಲಿ ಈ ಕಡೆ, ಮೇರುಗಿರಿಯೆ ತನಗೆ ನಾಭಿಯಾಗೆ ಸೊಗಯಿಸುವ = ಮೇರುಪರ್ವತವೇ ತನ್ನ ಕೇಂದ್ರವಾಗಿ ಶೋಭಿಸುವ, ಜಂಬೂಮಹೀರುಹಲಾಂಛನದ್ವೀಪ + ಅಂತರ್ಗತ = ಜಂಬೂವೃಕ್ಷಗಳ ಗುರುತುಳ್ಳ ದ್ವೀಪದ ನಡುವೆ, ಭರತಕ್ಷೇತ್ರಮಧ್ಯ ಮಧ್ಯಮಖಂಡದೊಳ್ = ಭರತಕ್ಷೇತ್ರದ ನಡುವಣ ಮಧ್ಯಮಖಂಡದಲ್ಲಿ, ಮುಖ್ಯಂ ವ್ಯವಹಾರಂ + ಎಂಬೆರಡುಂ ಕಾಲದೊಳಗೆ = ಮುಖ್ಯ ಮತ್ತು ವ್ಯವಹಾರ ಎಂಬ ಎರಡು ಬಗೆಯ ಕಾಲಗಳಲ್ಲಿ, ಆದಿಮಧ್ಯ + ಅವಸಾನವಿರಹಿತಮುಂ = ಆರಂಭ ನಡುವೆ ಮತ್ತು ಕೊನೆಗಳಿಲ್ಲದ, ವರ್ತನಾಲಕ್ಷಣಮುಂ ಪರಿಣಾಮದ್ರವ್ಯ ಪರಿವರ್ತನಕಾರಣಮುಂ = ವರ್ತನೆಯೇ ಲಕ್ಷಣವಾಗುಳ್ಳುದೂ ಪರಿಣಾಮದ್ರವ್ಯದ ಪರಿವರ್ತನೆಗೆ ಕಾರಣವಾಗುವಂತಹುದೂ, ಲೋಕ + ಆಕಾಶಪ್ರದೇಶಪ್ರಮಾಣ ಪರಿಮಾಣಮುಂ = ಲೋಕ ಮತ್ತು ಆಕಾಶಪ್ರದೇಶಗಳ ಪ್ರಮಾಣಪರಿಣಾಮದ್ದೂ, ಅಸ್ಮತ್ + ಆದಿ + ಅನುಮೇಯಮುಂ = ನಮ್ಮಂಥವರಿಗೆ ಊಹಿಸಿಕೊಳ್ಳಲು ಅಸಾಧ್ಯವಾದುದೂ, ಸರ್ವಜ್ಞಪ್ರತ್ಯಕ್ಷಗೋಚರಮುಂ = ದೇವರಿಗೆ ಮಾತ್ರ ಕಾಣಿಸುವಂಥದ್ದೂ, ಅಪ್ಪುದು ಮುಖ್ಯಕಾಲಂ = ಆಗಿರುವಂಥದ್ದು ಮುಖ್ಯಕಾಲ; ವ್ಯವಹಾರಕಾಲಂ + ಎಂಬುದು ಮುಖ್ಯಕಾಲನಿರ್ವರ್ತಿತಕ್ರಿಯಾರೂಪಂ = ವ್ಯವಹಾರ ಕಾಲ ಎಂಬುದು ಮುಖ್ಯ ಕಾಲದಿಂದ ಉಂಟಾದದ್ದು; ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮೇಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರ + ಆದಿ ಗಣನಾ + ಅನುಕ್ರಮದಿಂದಂ ಪೆರ್ಚಿದೆಣಿಕೆಯೊಳ್ ಕೂಡಿದುದು = ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮಿಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರ ಮೊದಲಾದ ಕ್ರಮದಲ್ಲಿ ಹೆಚ್ಚುವ ಎಣಿಕೆಯಿಂದ ಕೂಡಿರುವಂಥದು; ಅದು ಶರೀರಬಳ + ಆಯುಸ್ + ದೇಹಪ್ರಮಾಣ + ಉಪಚಯ + ಅಪಚಯ ಹೇತುತ್ವದಿಂದಂ = ಅದು ಶರೀರದ ಶಕ್ತಿ ಆಯುಸ್ಸು ದೇಹದ ಗಾತ್ರ ಬೆಳವಣಿಗೆ ಮತ್ತು ಕ್ಷೀಣತೆಯ ಕಾರಣದಿಂದಾಗಿ, ಉತ್ಸರ್ಪಿಣಿ + ಅವಸರ್ಪಿಣಿ ನಾಮಮಂ ಪಡೆದುದು = ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂಬ ಹೆಸರುಗಳನ್ನು ಪಡೆಯುತ್ತದೆ; ಅದು + ಒಂದು ಪತ್ತುಕೋಟಿಕೋಟಿಸಾಗರ + ಉಪಮಸಂಖ್ಯೆಯಂ ತಾಳ್ದಿ = ಅದರಲ್ಲಿ ಒಂದೊಂದೂ ಹತ್ತು ಕೋಟಿ ಕೋಟಿ ಸಾಗರದಷ್ಟು ಪ್ರಮಾಣವನ್ನು ಹೊಂದಿ, ಸುಷಮಸುಷಮಂ ಸುಷಮಂ ಸುಷಮದುಷ್ಷಮಂ ದುಷ್ಷಮಸುಷಮಂ ದುಷ್ಷಮಂ ಅತಿದುಷ್ಷಮಂ ಎಂದು ಒಂದೊಂದುಂ ಷಟ್ + ಭೇದಭಿನ್ನಮಾದುವು = ಸುಷಮಸುಷಮ ಸುಷಮ ಸುಷಮದುಷ್ಷಮ ದುಷ್ಷಮ ಸುಷಮ ದುಷ್ಷಮ ಮತ್ತು ಅತಿದುಷ್ಷಮ ಎಂದು ಒಂದೊಂದರಲ್ಲಿಯೂ ಆರು ಬಗೆಯ ಭಾಗಗಳಾಗುತ್ತವೆ; ಅಲ್ಲಿ ಮುನ್ನಂ + ಅವಸರ್ಪಿಣಿಯೊಳ್ + ಉತ್ತಮಭೋಗಭೂಮಿಸ್ಥಿತಿಯೊಳ್

= ಭರತಕ್ಷೇತ್ರದಲ್ಲಿ ಮೊದಲು ಅವಸರ್ಪಿಣಿಯಲ್ಲಿ ಉತ್ತಮಭೋಗಭೂಮಿಸ್ಥಿತಿಯಲ್ಲಿ ಹಾಗೆ, ನಾಲ್ಕುಕೋಟಿಸಾಗರ + ಉಪಮಪ್ರಮಾಣಂ ಸುಷಮಸುಷಮಮೆಂಬ ಕಾಲಮುಂ = ನಾಲ್ಕುಕೋಟಿಕೋಟಿ ಸಾಗರದಷ್ಟು ಪ್ರಮಾಣವು ಸುಷಮಸುಷಮವೆಂಬ ಕಾಲವಿರುತ್ತದೆ; ಮಧ್ಯಮಭೋಗಭೂಮಿಸ್ಥಿತಿಯೊಳ್ ಮೂಱುಕೋಟಿಕೋಟಿ ಸಾಗರೋಪಮ ಪ್ರಮಾಣಂ ಸುಷಮಮೆಂಬ ಕಾಲಮುಂ = ಮಧ್ಯಮಭೋಗಭೂಮಿ ಸ್ಥಿತಿಯಲ್ಲಿ ಮೂರು ಕೋಟಿಕೋಟಿ ಸಾಗರದಷ್ಟು ಪ್ರಮಾಣವು ಸುಷಮವೆಂಬ ಕಾಲವಿರುತ್ತದೆ; ಜಘನ್ಯಭೋಗಭೂಮಿಸ್ಥಿಯೊಳ್ ಎರಡು ಕೋಟಿಕೋಟಿ ಸಾಗರೋಪವು ಪ್ರವಾಣ ಸುಷವುದುಷ್ಷವುವೆಂಬ ಕಾಲವುುಂ = ಜಘನ್ಯಭೋಗಭೂಮಿಸ್ಥಿತಿಯಲ್ಲಿ ಎರಡು ಕೋಟಿಕೋಟಿ ಸಾಗರದಷ್ಟು ಪ್ರಮಾಣದ ಸುಷಮದುಷ್ಷಮಮೆಂಬ ಕಾಲವಿರುತ್ತದೆ; ಕ್ರಮದೊಳ್ = ಅದೇ ಅನುಕ್ರಮದಲ್ಲಿ, ಷಟ್ + ಚತುರ್ + ದ್ವಿ + ಸಹಸ್ರ ಚಾಪ + ಉತ್ಸೇಧಂಗಳುಂ = ಆರು ನಾಲ್ಕು ಮತ್ತು ಬಿಲ್ಲುಗಳಷ್ಟು ಎತ್ತರವೂ, ತ್ರಿ + ದ್ವಿ + ಏಕ ಪಲ್ಯ + ಉಪಮ + ಆಯುಷ್ಯಂಗಳುಂ = ಮೂರು ಎರಡು ಒಂದು ಪಲ್ಯಗಳಷ್ಟು ಆಯುಸ್ಸೂ, ತ್ರಿ + ದ್ವಿ + ಏಕ ದಿನ + ಅಂತರಿತ = ಮೂರು ಎರಡು ಮತ್ತು ಒಂದು ದಿನಗಳನ್ನು ಬಿಟ್ಟು, ಬದರ + ಅಕ್ಷ + ಧಾತ್ರೀಫಳ ಪ್ರಮಾಣ + ಆಹಾರಂಗಳುಮಪ್ಪ = ಬೋರೆ ಹಣ್ಣು ತಾರೆ ಹಣ್ಣು ಮತ್ತು ನೆಲ್ಲಿಕಾಯಿಗಳಷ್ಟು ಆಹಾರವನ್ನುಣ್ಣುವ, ಮಿಥುನಂಗಳ್ಗೆ ಸಂಭೋಗ್ಯಮಾಗಿ ಸಲೆ = ಗಂಡುಹೆಣ್ಣುಗಳಿಗೆ ಭೋಗಿಸಲು ಅನುಕೂಲವಾಗಿರಲು, ಜಘನ್ಯಭೋಗ ಭೂಮಿಯ ಕಡೆಯ ಪಳಿತ + ಉಪಮ + ಎಂಟನೆಯ ಭಾಗಂ + ಉೞಿದುದು + ಎಂಬನ್ನೆಗಂ = ಅದರಲ್ಲಿ ಜಘನ್ಯಭೋಗಭೂಮಿಯ ಕೊನೆಯ ಪಳಿತದ ಎಂಟನೆಯ ಒಂದು ಭಾಗ ಉಳಿಯಿತು ಎನ್ನುವಾಗ,

**ಗದ್ಯಾನುಸರಣ:** ಅಷ್ಟರಲ್ಲಿ ಈ ಕಡೆ, ಮೇರುಪರ್ವತವೇ ತನ್ನ ಕೇಂದ್ರವಾಗಿ ಶೋಭಿಸುವ, ಜಂಬೂವೃಕ್ಷಗಳ ಗುರುತುಳ್ಳ ದ್ವೀಪದ ನಡುವೆ ಭರತಕ್ಷೇತ್ರದ ನಡುವಣ ಮಧ್ಯಮಖಂಡವಿತ್ತು. ಅಲ್ಲಿ ಮುಖ್ಯ ಮತ್ತು ವ್ಯವಹಾರ ಎಂಬ ಎರಡು ಬಗೆಯ ಕಾಲಗಳು: ಅವುಗಳಲ್ಲಿ ಆರಂಭ ನಡುವೆ ಮತ್ತು ಕೊನೆಗಳಿಲ್ಲದ, ವರ್ತನೆಯೇ ಲಕ್ಷಣವಾಗುಳ್ಳುದೂ, ಪರಿಣಾಮದ್ರವ್ಯದ ಪರಿವರ್ತನೆಗೆ ಕಾರಣವಾಗುವಂತಹುದೂ, ಲೋಕ ಮತ್ತು ಆಕಾಶಪ್ರದೇಶಗಳ ಪ್ರಮಾಣಪರಿಣಾಮದ್ದೂ ನಮ್ಮಂಥವರಿಗೆ ಊಹಿಸಿಕೊಳ್ಳಲು ಅಸಾಧ್ಯವಾದುದೂ, ದೇವರಿಗೆ ಮಾತ್ರ ಕಾಣಿಸುವಂಥದ್ದೂ ಆಗಿರುವಂಥದ್ದು ಮುಖ್ಯಕಾಲ; ವ್ಯವಹಾರ ಕಾಲ ಎಂಬುದು ಮುಖ್ಯ ಕಾಲದಿಂದಲೇ ಉಂಟಾದದ್ದು: ಅದು ಸಮಯ ಆವಳಿಕ ಉಚ್ಛ್ವಾಸ ಸ್ತೋಕ ನಿಮಿಷ ನಾಳಿಕಾ ಮುಹೂರ್ತ ದಿವಸ ಪಕ್ಷ ಮಾಸ ಋತು ಅಯನ ಸಂವತ್ಸರ ಮೊದಲಾದ

ಕ್ರಮದಲ್ಲಿ ಹೆಚ್ಚುವ ಎಣಿಕೆಯಿಂದ ಕೂಡಿರುವಂಥದು; ಅದು ಶರೀರದ ಶಕ್ತಿ ಆಯುಸ್ಸು ದೇಹದ ಗಾತ್ರ ಬೆಳವಣಿಗೆ ಮತ್ತು ಕ್ಷೀಣತೆ ಕಾರಣದಿಂದಾಗಿ, ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂಬ ಹೆಸರುಗಳನ್ನು ಪಡೆಯುತ್ತದೆ; ಅದರಲ್ಲಿ ಒಂದೊಂದೂ ಹತ್ತು ಕೋಟಿ ಕೋಟಿ ಸಾಗರದಷ್ಟು ಪ್ರಮಾಣವನ್ನು ಹೊಂದಿ ಸುಷಮಸುಷಮ ಸುಷಮ ಸುಷಮದುಷ್ಷಮ ದುಷ್ಷಮಸುಷಮ ದುಷ್ಷಮ ಮತ್ತು ಅತಿದುಷ್ಷಮ ಎಂದು ಆರು ಬಗೆಯ ಭಾಗಗಳನ್ನು ಹೊಂದುತ್ತವೆ; ಮೊದಲು ಅವಸರ್ಪಿಣಿಯಲ್ಲಿ ಉತ್ತಮಭೋಗಭೂಮಿಸ್ಥಿತಿಯಲ್ಲಿ ನಾಲ್ಕುಕೋಟಿಕೋಟಿ ಸಾಗರದಷ್ಟು ಪ್ರಮಾಣವು ಸುಷಮಸುಷಮವೆಂಬ ಕಾಲವಿರುತ್ತದೆ; ಮಧ್ಯಮಭೋಗಭೂಮಿಸ್ಥಿತಿಯಲ್ಲಿ ಮೂರು ಕೋಟಿಕೋಟಿ ಸಾಗರದಷ್ಟು ಪ್ರಮಾಣದ ಸುಷಮವೆಂಬ ಕಾಲವಿರುತ್ತದೆ; ಜಘನ್ಯಭೋಗಭೂಮಿಸ್ಥಿತಿಯಲ್ಲಿ ಎರಡು ಕೋಟಿಕೋಟಿ ಸಾಗರದಷ್ಟು ಪ್ರಮಾಣದ ಸುಷಮದುಷ್ಷಮಮೆಂಬ ಕಾಲವಿರುತ್ತದೆ; ಅದೇ ಅನುಕ್ರಮದಲ್ಲಿ ಅಲ್ಲಿನವರು ಆರು ನಾಲ್ಕು ಮತ್ತು ಬಿಲ್ಲುಗಳಷ್ಟು ಎತ್ತರವಿರುತ್ತಾರೆ, ಅವರಿಗೆ ಕ್ರಮವಾಗಿ ಮೂರು ಎರಡು ಒಂದು ಪಲ್ಯಗಳಷ್ಟು ಆಯುಸ್ಸಿರುಇತ್ತದೆ, ಅವರು ಮೂರು ಎರಡು ಮತ್ತು ಒಂದು ದಿನಗಳನ್ನು ಬಿಟ್ಟು ಬೋರೆ ಹಣ್ಣು ತಾರೆ ಹಣ್ಣು ಮತ್ತು ನೆಲ್ಲಿಕಾಯಿಗಳಷ್ಟು ಆಹಾರವನ್ನುಣ್ಣುತ್ತಾರೆ; ಅದು ಇಂತಹ ಗಂಡುಹೆಣ್ಣುಗಳಿಗೆ ಭೋಗಿಸಲು ಅನುಕೂಲವಾಗಿರುತ್ತದೆ. ಹೀಗಿರುವಲ್ಲಿ, ಜಘನ್ಯಭೋಗಭೂಮಿಯ ಕೊನೆಯ ಪಳಿತದ ಎಂಟನೆಯ ಒಂದು ಭಾಗ ಉಳಿಯಿತು; ಆಗ,

**ಉತ್ತಮಮಧ್ಯಮಾಧಮಗುಣಂ ನಿಜದಾನದ ಭೋಗಭೂತಳ**
**ಕ್ಕೆತ್ತವೊಡಂಬಡಂ ಪಡೆಯೆ ಬೇಡಿದ ಭೋಗಮನಿತ್ತು ಪೇಟಿಮಿ**
**ತ್ತಿತ್ತಿವರ್ಗಿತ್ತೆನೆಂಬ ಬಗೆ ತೊಟ್ಟನೆ ಪುಟ್ಟಿರೆ ಮುನ್ನಮಿತ್ತು ಬೆ**
**ಳ್ಕುತ್ತಿನಿಸಿರ್ದ ಪಾರ್ಥಿವರೊಳೇಂ ದೊರೆಯಾದುದೋ ಕಲ್ಪಪಾರ್ಥಿವಂ ೪೯**

**ಪದವಿಭಾಗ-ಅನ್ವಯ-ಅರ್ಥ:** ನಿಜದಾನದ ಭೋಗಭೂತಳಕ್ಕೆ = ತನ್ನ ದಾನಕ್ಕನುಗುಣವಾದ ಭೋಗಭೂಮಿಗೆ, ಉತ್ತಮಮಧ್ಯಮ + ಅಧಮಗುಣಂ ಎತ್ತಂ + ಒಡಂಬಡಂ ಪಡೆಯೆ = ಉತ್ತಮ ಮಧ್ಯಮ ಹಾಗೂ ಅಧಮ ಗುಣಗಳು ಉಂಟಾಗಲು, ಬೇಡಿದ ಭೋಗಮನ್ + ಇತ್ತು = ಬೇಡಿದ ಭೋಗಗಳನ್ನು ನೀಡಿ, ಪೇಟಿಂ + ಇತ್ತು + ಇತ್ತು + ಇವರ್ಗೆ + ಇತ್ತೆನೆಂಬ ಬಗೆ ತೊಟ್ಟನೆ ಪುಟ್ಟಿರೆ = ಇವರಿಗೆ ಕೊಟ್ಟು ಇವರಿಗೆ ಕೊಟ್ಟೆ ಎಂಬ ಬುದ್ಧಿ ಹುಟ್ಟಲು, ಮುನ್ನಂ + ಇತ್ತು ಬೆಳ್ಕುತ್ತು = ಮೊದಲು ಕೊಟ್ಟು ಹಿಂಜರಿದು, ಇನಿಸಿರ್ದ ಪಾರ್ಥಿವರೊಳ್ ಕಲ್ಪಪಾರ್ಥಿವಂ ಏಂ ದೊರೆಯಾದುದೋ = ಹೀಗಿದ್ದ ರಾಜರುಗಳಿಗೆ ಕಲ್ಪವೃಕ್ಷಗಳು ಸಮನಾದುವು.

ಗದ್ಯಾನುಸರಣ: ಭೋಗಭೂಮಿಗೆ ದಾನಕ್ಕನುಗುಣವಾಗಿ ಉತ್ತಮ ಮಧ್ಯಮ ಹಾಗೂ ಅಧಮ ಎಂಬ ಗುಣಗಳು ಉಂಟಾದುವು; ಬೇಡಿದ ಭೋಗಗಳನ್ನು ನೀಡಿದ ಅವಕ್ಕೆ ಅವರಿಗೆ ಕೊಟ್ಟೆ ಇವರಿಗೆ ಕೊಟ್ಟೆ ಎಂಬ ಬುದ್ಧಿ ಹುಟ್ಟಿತು; ಹೀಗೆ ಮೊದಲು ಕೊಟ್ಟು ಆನಂತರ ಹಿಂದೆ ಮುಂದೆ ನೋಡಿದ ಕಲ್ಪವೃಕ್ಷಗಳು ಇತರ ರಾಜರುಗಳಿಗೆ ಸಮಾನವಾಗಿಬಿಟ್ಟವು.

ವಿಶೇಷ ವಿಚಾರ: ಪಾರ್ಥಿವ ಎಂದರೆ ರಾಜ ಮತ್ತು ಮರ ಎಂಬೆರಡೂ ಅರ್ಥಗಳಿವೆ; ದಾನ ಕೊಟ್ಟ ರಾಜರುಗಳ ಮನಸ್ಸಿನಲ್ಲಿ ಹೆಮ್ಮೆ ಮೂಡಿದಂತೆ ಕಲ್ಪವೃಕ್ಷಗಳಲ್ಲಿಯೂ ಆಯಿತೆಂಬುದು ಕವಿಯ ಆಶಯ. ಮೊದಮೊದಲು ಬೇಡಿದ್ದನ್ನು ಕೊಡುತ್ತಿದ್ದ ಕಲ್ಪವೃಕ್ಷಗಳು ಬರಬರುತ್ತ ಕೊಡುವ ಶಕ್ತಿಯನ್ನು ಕಳೆದುಕೊಂಡುದನ್ನು ಕವಿ ಹೀಗೆ ಸೂಚಿಸುತ್ತಿದ್ದಾನೆ – ನೋಡಿ: ಮುಂದಿನ ಎರಡು ಪದ್ಯಗಳು.

ಮರಗಳೆ ಮುನ್ನಿತ್ತಿನಿಸಂ
ಮರವಟ್ಟುವು ಪೆಟ್ಟುವೆರ್ಚಿ ಕುದಿದಿತ್ತೊಡಮೀ
ಧರಣಿತಳಕ್ಕವಿವೇಕಿಯ
ಮರವಾನಸನಿತ್ತ ಚಾಗಮೇನಿರ್ದಪುದೇ ೫೦

ಪದವಿಭಾಗ–ಅನ್ವಯ–ಅರ್ಥ: ಮರಗಳೆ ಇನಿಸಂ ಮುನ್ನಿತ್ತು ಮರವಟ್ಟುವು = ಈ ಕಲ್ಪವೃಕ್ಷಗಳು ಇಷ್ಟೆಲ್ಲವನ್ನೂ ಮೊದಲು ನೀಡಿ ಜಡವಾದುವು; ಪೆಟ್ಟುವೆರ್ಚಿ ಕುದಿದು ಈ ಧರಣಿತಳಕ್ಕೆ ಇತ್ತೊಡಂ = ಬೀಗುತ್ತ ಕುದಿಯುತ್ತ ಈ ಭೂಮಿಗೆ ಕೊಟ್ಟರೂ, ಅವಿವೇಕಿಯ ಮರವಾನಸನ್ + ಇತ್ತ ಚಾಗಂ + ಏನ್ + ಇರ್ದಪುದೇ = ಅವಿವೇಕಿಯಾದ ಮರದ ಬೊಂಬೆಯು ಕೊಡುವ ದಾನವು ಉಳಿಯುತ್ತದೆಯೇ?

ಗದ್ಯಾನುಸರಣ: ಈ ಕಲ್ಪವೃಕ್ಷಗಳು ಇಷ್ಟೆಲ್ಲವನ್ನೂ ಮೊದಲು ನೀಡಿ ಆನಂತರ ಜಡವಾದುವು; ಬೀಗುತ್ತ ಕುದಿಯುತ್ತ ಈ ಭೂಮಿಗೆ ಕೊಟ್ಟರೂ ಅದಕ್ಕೆ ಅವಿವೇಕಿಯಾದ ಮರದ ಬೊಂಬೆಯು ಕೊಡುವ ದಾನವು ಸಮಾನವಾದೀತೇ?

ಪಿಂಗದೆ ಬೆಳಗುವ ಗುಣಮದು
ಪಿಂಗಲೊಡಂ ಜ್ಯೋತಿರಂಗಭೂಜಂಗಳ ತೇ
ಜಂಗಳ್ ಮಸುಳ್ದುವು ದಾನಗು
ಣಂಗಳ್ ಕಿಡೆ ತೇಜದುಡುಕಮೇಂ ಪಿರಿದಾಸ್ಸ್ತೋ ೫೧

ಪದವಿಭಾಗ–ಅನ್ವಯ–ಅರ್ಥ: ಪಿಂಗದೆ ಬೆಳಗುವ ಗುಣಂ + ಅದು ಪಿಂಗಲೊಡಂ = ಕುಂದದೆ ಬೆಳಗುವ ಕಾಂತಿಯು ಕುಂದಿದಾಗ, ಜ್ಯೋತಿರಂಗ ಭೂಜಂಗಳ ತೇಜಂಗಳ್ ಮಸುಳ್ದುವು = ಜ್ಯೋತಿರಂಗ ಕಲ್ಪವೃಕ್ಷಗಳ ತೇಜಸ್ಸೂ

ಕುಂದಿತು; ದಾನಗುಣಂಗಳ್ ಕಿಡೆ ತೇಜದ + ಉಡುಕಂ + ಏಂ ಪಿರಿದಾಯ್ತೇ = ದಾನಗುಣವು ಹಾಳಾದ ಮೇಲೆ ತೇಜಸ್ಸಿನ ಉಡುಗುವಿಕೆಯು ಏನು ಅತಿಶಯವೇ?

**ಗದ್ಯಾನುಸರಣ:** ಕುಂದದೆ ಬೆಳಗುವ ಕಾಂತಿಯು ಕುಂದಿದಾಗ ಜ್ಯೋತಿರಂಗ ಕಲ್ಪವೃಕ್ಷಗಳ ತೇಜಸ್ಸೂ ಕುಂದಿತು; ದಾನಗುಣವು ಹಾಳಾದ ಮೇಲೆ ತೇಜಸ್ಸೂ ಉಡುಗುವುದರಲ್ಲಿ ಏನು ಅತಿಶಯವೇ?

**ವಿಶೇಷ ವಿಚಾರ: ಜ್ಯೋತಿರಂಗಭೂಜ** = ಜ್ಯೋತಿರಂಗ ಎಂಬುದು ದಶವಿಧ ಕಲ್ಪವೃಕ್ಷಗಳಲ್ಲಿ ಒಂದು; ಅದು ಬೆಳಕನ್ನು ನೀಡುವ ಕಲ್ಪವೃಕ್ಷ

**ವ ಅನ್ನೆಗಮಾಷಾಢಪೌರ್ಣಮಾಸೀವಾಸರಸಾಯಂತಸಮಯದೊಳ್ ಪರಭಾಗಂಬಡೆದು ಗಗನೋಭಯಭಾಗದೊಳ್ ದಿಗ್ಭಿತ್ತಿಗಳುಂ ಭೋಗ ಭೂಮಿಜರ ಚಿತ್ತಭಿತ್ತಿಗಳುಂ ಒಡನೊಡನೆ ಬೆಳಗೆ ಕಾಲರಾಜನ ಜಗದ್ಗೃಹ ಪ್ರವೇಶಕ್ಕೆ ನಿಜೆಸಿದ ಕನಕಕಳಶಯುಗಳಮುಮಂ ಪೌರ್ಣಮಾಸೀಸೌಂದರಿಯ ಸಿಂದೂರಾರುಣಕ್ರೀಡಾಗೋಳಕಂಗಳುಮಂ ಪೋಲ್ತು,**

**ಪದವಿಭಾಗ-ಅನ್ವಯ-ಅರ್ಥ:** ಅನ್ನೆಗಂ + ಆಷಾಢಪೌರ್ಣಮಾಸೀವಾ ಸರಸಾಯಂತಸಮಯದೊಳ್ = ಅಷ್ಟರಲ್ಲಿ ಆಷಾಢ ಮಾಸದ ಹುಣ್ಣಿಮೆಯ ದಿನದ ಸಾಯಂಕಾಲದಲ್ಲಿ, ಪರಭಾಗಂಬಡೆದು ಗಗನ + ಉಭಯಭಾಗದೊಳ್ = ಶೋಭೆಯನ್ನು ಹೊಂದಿ ಆಗಸದ ಎರಡೂ ಕಡೆಗಳಲ್ಲಿ, ದಿಕ್ + ಭಿತ್ತಿಗಳುಂ ಭೋಗಭೂಮಿಜರ ಚಿತ್ತಭಿತ್ತಿಗಳುಂ = ದಿಕ್ಕುಗಳೆಂಬ ಗೋಡೆಗಳೂ ಭೋಗಭೂಮಿ ಯಲ್ಲದ್ದವರ ಚಿತ್ತಗಳೆಂಬ ಗೋಡೆಗಳೂ, ಒಡನೊಡನೆ ಬೆಳಗೆ = ಏಕಕಾಲದಲ್ಲಿ ಹೊಳಪಿನಿಂದ ಕೂಡಿ, ಕಾಲರಾಜನ ಜಗತ್ + ಗೃಹಪ್ರವೇಶಕ್ಕೆ ನಿಜೆಸಿದ = ಕಾಲರಾಜನು ಈ ಜಗತ್ತೆಂಬ ಮನೆಯನ್ನು ಪ್ರವೇಶಿಸಲು ಇರಿಸಿದ, ಕನಕಕಳಶಯುಗಳ ಮುಮಂ = ಚಿನ್ನದ ಕಳಶಗಳ ಜೋಡಿಯು, ಪೌರ್ಣಮಾಸೀಸೌಂದರಿಯ = ಹುಣ್ಣಿಮೆ ಎಂಬ ಸುಂದರಿಯ, ಸಿಂದೂರ + ಅರುಣಕ್ರೀಡಾಗೋಳಕಂಗಳುಮಂ ಪೋಲ್ತು = ಸಿಂಧೂರದಿಂದ ಕೆಂಪಾದ ಆಟದ ಚೆಂಡುಗಳಂತೆ

**ಗದ್ಯಾನುಸರಣ:** ಅಷ್ಟರಲ್ಲಿ ಆಷಾಢ ಮಾಸದ ಹುಣ್ಣಿಮೆಯ ಸಾಯಂಕಾಲದಲ್ಲಿ ಆಗಸದ ಎರಡೂ ಕಡೆಗಳು ಶೋಭೆಯಿದ ಕೂಡಿದುವು; ಆಗ ದಿಕ್ಕುಗಳೆಂಬ ಗೋಡೆಗಳೂ ಭೋಗಭೂಮಿಯಲ್ಲದ್ದವರ ಚಿತ್ತಗಳೆಂಬ ಗೋಡೆಗಳೂ, ಏಕಕಾಲದಲ್ಲಿ ಹೊಳಪಿನಿಂದ ಕೂಡಿದವು; ಕಾಲರಾಜನು ಈ ಜಗತ್ತೆಂಬ ಮನೆಯನ್ನು ಪ್ರವೇಶಿಸಲು ಇರಿಸಿದ ಚಿನ್ನದ ಕಳಶಗಳ ಜೋಡಿಯಂತೆಯೂ ಹುಣ್ಣಿಮೆ ಎಂಬ

ಸುಂದರಿಯ ಸಿಂಧೂರದಿಂದ ಕೆಂಪಾದ ಆಟದ ಚೆಂಡುಗಳಂತೆಯೂ (ಸೂರ್ಯಚಂದ್ರರು) ತೋರಿದುವು.

ವಿಶೇಷ ವಿಚಾರ: ಭೋಗಭೂಮಿಯಲ್ಲಿ ಹಗಲು-ರಾತ್ರಿಗಳ ಭೇದವಿರುವುದಿಲ್ಲ, ಅಂದರೆ ಋತುಮಾನಗಳಿರುವುದಿಲ್ಲ; ಸೃಷ್ಟಿಯಲ್ಲಿ ಆಗಷ್ಟೇ ಈ ಭೇದಗಳುಂಟಾದುವು ಎಂಬುದನ್ನು ಕವಿ ಸೂಚಿಸುತ್ತಿದ್ದಾನೆ.

ಗಗನಗಜಕ್ಕಿಕ್ಕಿದ ಪೊ
ನ್ನ ಗಂಟೆಯೆರಡೆನಲುಮಂಬರಾಂಭೋನಿಧಿಯೊಳ್
ನೆಗೆದುರಿವೌರ್ವಾನಳನು
ರ್ಬುಗಳೆನಲುಂ ನೆಗೆದುವಹಿಮಹಿಮಕರಬಿಂಬಂ ೫೨

ಪದವಿಭಾಗ-ಅನ್ವಯ-ಅರ್ಥ: ಗಗನಗಜಕ್ಕಿಕ್ಕಿದ ಪೊನ್ನ ಗಂಟೆಯೆರಡೆನಲುಂ = ಆಕಾಶವೆಂಬ ಆನೆಗೆ ಕಟ್ಟಿದ ಎರಡು ಚಿನ್ನದ ಗಂಟೆಗಳಂತೆ, ಅಂಬರ + ಅಂಭೋನಿಧಿಯೊಳ್ ನೆಗೆದುರಿವ = ಆಗಸವೆಂಬ ಸಮುದ್ರದಲ್ಲಿ ಮೂಡಿ ಉರಿಯುವ, ಔರ್ವಾನಳನ + ಉರ್ಬುಗಳೆನಲುಂ = ಬಾಡಬಾಗ್ನಿಯ ಉಬ್ಬುಗ ಳಂತೆ, ಅಹಿಮಹಿಮಕರಬಿಂಬಂ ನೆಗೆದುವು = ಸೂರ್ಯ ಹಾಗೂ ಚಂದ್ರರು ಮೂಡಿದುವು.

ಗದ್ಯಾನುಸರಣ: ಆಕಾಶವೆಂಬ ಆನೆಗೆ ಕಟ್ಟಿದ ಎರಡು ಚಿನ್ನದ ಗಂಟೆಗಳಂತೆಯೂ, ಆಗಸವೆಂಬ ಸಮುದ್ರದಲ್ಲಿ ಮೂಡಿ ಉರಿಯುವ ಬಾಡಬಾಗ್ನಿಯ ಉಬ್ಬುಗಳಂತೆಯೂ ಸೂರ್ಯ ಹಾಗೂ ಚಂದ್ರಬಿಂಬಗಳು ಮೂಡಿದುವು.

ವ। ಅಂತವಂ ಕಂಡು ಬೆರ್ಚಿ ಬೆಗಡುಗೊಂಡ ಭೋಗಭೂಮಿಜರಂ ಜಾಜ್ವಲ್ಯಮಾನ ಮುಕುಟಕುಂಡಳನುಂ ನಾನಾಭರಣ ಭಾಸುರೋದಾರ ವಿಗ್ರಹನುಂ ನಿಜತೇಜೋ ನಿರ್ಭರನಿರ್ಭರ್ತ್ಸಿತತರವಿಗ್ರಹನುಂ ಜನ್ಮಾಂತರಾಭ್ಯಾಸ ಜನಿತಾ ವಧಿಬೋಧೋ ದಯವಿದಿತಕಾಲ ನಿಯೋಗನುಂ ಅಷ್ಟಶತಾಧಿಕಚಾಪ ಸಹಸ್ರೋತ್ಸೇಧನುಂ ಪಲ್ಯೋಪಮದಶಮ ಭಾಗಾಯುಷ್ಯನುಮಪ್ಪಗ್ರಿಮ ಕುಳಧರಂ ಪ್ರತಿಶ್ರುತಿಯೆಂಬಂ,

ಪದವಿಭಾಗ-ಅನ್ವಯ-ಅರ್ಥ: ಅಂತವಂ ಕಂಡು = ಹೀಗೆ ಅವುಗಳನ್ನು ನೋಡಿ. ಬೆರ್ಚಿ ಬೆಗಡುಗೊಂಡ ಭೋಗಭೂಮಿಜರಂ = ಬೆಚ್ಚಿ ಗಾಬರಿಗೊಂಡ ಭೋಗಭೂಮಿಯಲ್ಲಿರುವವನ್ನು, ಜಾಜ್ವಲ್ಯಮಾನಮುಕುಟಕುಂಡಳನುಂ = ಹೊಳೆಯುವ ಕಿರೀಟ ಮತ್ತು ಕುಂಡಲಗಳನ್ನು ಧರಿಸಿದವನೂ, ನಾನಾ +

ಆಭರಣಭಾಸುರ + ಉದಾರವಿಗ್ರಹನುಂ = ಅನೇಕ ಆಭರಣಗಳ ಕಾಂತಿಯಿಂದ ಬೆಳಗುತ್ತಿದ್ದ ದೇಹದವನೂ, ನಿಜತೇಜೋನಿರ್ಭರನಿರ್ಭರ್ತ್ಸಿತರವಿಗ್ರಹನುಂ = ತನ್ನ ತೇಜಸ್ಸಿನ ಆಧಿಕ್ಯದಿಂದ ಸೂರ್ಯಗ್ರಹವನ್ನೇ ಕೀಳ್ಮಾಡಿದವನೂ, ಜನ್ಮಾಂತರಾ ಭ್ಯಾಸಜನಿತ + ಅವಧಿಬೋಧೋದಯವಿದಿತಕಾಲನಿಯೋಗನುಂ = ನಾನಾ ಜನ್ಮಗಳಲ್ಲಿ ಮಾಡಿದ ಅಭ್ಯಾಸದಿಂದಾಗಿ ಮೂಡಿದ ಅವಧಿಜ್ಞಾನದಿಂದ ಕಾಲದ ಬಗ್ಗೆ ಅರಿವಿದ್ದವನೂ, ಅಷ್ಟಶತ + ಅಧಿಕಚಾಪಸಹಸ್ರೋತ್ಸೇಧನುಂ = ಒಂದು ಸಾವಿರದ ಎಂಟುನೂರಕ್ಕಿಂತ ಹೆಚ್ಚಿನ ಬಿಲ್ಲುಗಳಷ್ಟು ಎತ್ತರವನ್ನು ಹೊಂದಿದವನೂ, ಪಲ್ಯೋಪಮದಶಮಭಾಗ + ಆಯುಷ್ಯನುಂ + ಅಪ್ಪ = ಒಂದು ಪಲ್ಯದ ಹತ್ತನೆಯ ಒಂದು ಭಾಗದಷ್ಟು ಕಾಲದ ಆಯುಸ್ಸುಳ್ಳವನೂ ಆದ, ಅಗ್ರಿಮಕುಳಧರಂ ಪ್ರತಿಶ್ರುತಿಯೆಂಬಂ = ಮೊದಲನೆಯ ಕುಲಧರನಾದ ಪ್ರತಿಶ್ರುತಿ ಎನ್ನುವವನು,

**ಗದ್ಯಾನುಸರಣ:** ಹೀಗೆ ಅವುಗಳನ್ನು ನೋಡಿ ಬೆಚ್ಚಿ ಗಾಬರಿಗೊಂಡ ಭೋಗಭೂಮಿಯಲ್ಲಿರುವವನ್ನು, ಹೊಳೆಯುವ ಕಿರೀಟ ಮತ್ತು ಕುಂಡಲಗಳನ್ನು ಧರಿಸಿದವನೂ, ಅನೇಕ ಆಭರಣಗಳ ಕಾಂತಿಯಿಂದ ಬೆಳಗುತ್ತಿದ್ದ ದೇಹದವನೂ, ತನ್ನ ತೇಜಸ್ಸಿನ ಆಧಿಕ್ಯದಿಂದ ಸೂರ್ಯಗ್ರಹವನ್ನೇ ಕೀಳ್ಮಾಡಿದವನೂ, ನಾನಾ ಜನ್ಮಗಳಲ್ಲಿ ಮಾಡಿದ ಅಭ್ಯಾಸದಿಂದಾಗಿ ಮೂಡಿದ ಅವಧಿಜ್ಞಾನದಿಂದ ಕಾಲದ ಬಗ್ಗೆ ಅರಿವಿದ್ದವನೂ, ಒಂದು ಸಾವಿರದ ಎಂಟುನೂರಕ್ಕಿಂತ ಹೆಚ್ಚಿನ ಬಿಲ್ಲುಗಳಷ್ಟು ಎತ್ತರವಿದ್ದವನೂ, ಒಂದು ಪಲ್ಯದ ಹತ್ತನೆಯ ಒಂದು ಭಾಗದಷ್ಟು ಕಾಲದ ಆಯುಸ್ಸುಳ್ಳವನೂ ಆದ ಮೊದಲನೆಯ ಕುಲಧರನಾದ ಪ್ರತಿಶ್ರುತಿ ಎನ್ನುವವನು,

**ಜ್ಯೋತಿರ್ಭೂಜಾತತೇಜಂ ಪಸರಿಸುವುದಱೆಂದಿನ್ನೆಗಂ ಕಂಡುದಿಲ್ಲಿಂ**
**ತೀ ತೇಜೋರೂಪಮಾಗಿರ್ದಪುವಿನಶಶಿಬಿಂಬಂಗಳೀ ತೋರ್ಪುದೇನಾ**
**ಜ್ಯೋತಿರ್ಲೋಕಂ ಮನಂಗುಂದದಿರಿಮಿವು ಮನಸ್ತಾಪಮಂ ಮಾಡವೆಂದಾ**
**ಭೀತಾತ್ಮಾರ್ಯರ್ಕಳಂ ಸಂತಯಿಸಿದನಮೃತಾಸಾರಸಾರಪ್ರಣಾದಂ ೫೩**

**ಪದವಿಭಾಗ–ಅನ್ವಯ–ಅರ್ಥ:** ಜ್ಯೋತಿರ್ + ಭೂಜಾತತೇಜಂ ಪಸರಿಸುವುದಱೆಂದೆ = ಜ್ಯೋತಿರಂಗ ಕಲ್ಪವೃಕ್ಷವು ಬೆಳಕನ್ನು ಹರಡಿದ್ದರಿಂದಾಗಿ, ಇಂತು ಈ ತೇಜೋರೂಪಮಾಗಿರ್ದಪುವು + ಇನಶಶಿಬಿಂಬಂಗಳ್ ಇನ್ನೆಗಂ ಕಂಡುದಿಲ್ಲ = ಹೀಗೆ ತೇಜೋರೂಪದ ಸೂರ್ಯ ಚಂದ್ರಬಿಂಬಗಳು ಇದುವರೆಗೂ ಕಾಣಿಸುತ್ತಿರಲಿಲ್ಲ, ಈ ತೋರ್ಪುದು ಏನ್ + ಆ ಜ್ಯೋತಿರ್ಲೋಕಂ = ಇಲ್ಲಿ ಕಾಣಿಸುತ್ತಿರುವುದೇ ಜ್ಯೋತಿರ್ಲೋಕ; ಮನಂಗುಂದದೆ + ಇರಿಂ + ಇವು ಮನಸ್ತಾಪಮಂ ಮಾಡವು = ಹೆದರದೆ ಇರಿ, ಅವು ಮನಸ್ಸಿಗೆ ತಾಪವನ್ನೇನೂ ಮಾಡುವುದಿಲ್ಲ; ಎಂದು + ಆಭೀತಾತ್ಮ + ಆರ್ಯರ್ಕಳಂ

ಅಮೃತಾಸಾರಸಾರಪ್ರಣಾದಂ ಸಂತಯಿಸಿದನ್ = ಎಂದು ಭೀತಗೊಂಡ ಮನಸ್ಸಿನ ಆರ್ಯರುಗಳನ್ನು (ತನ್ನ) ಅಮೃತದಂತಹ ಧ್ವನಿಯಿಂದ ಸಮಾಧಾನಗೊಳಿಸಿದ.

**ಗದ್ಯಾನುಸರಣ:** 'ಜ್ಯೋತಿರಂಗ ಕಲ್ಪವೃಕ್ಷವು ಬೆಳಕನ್ನು ಹರಡಿದ್ದರಿಂದಾಗಿ, ಹೀಗೆ ತೇಜೋರೂಪದ ಸೂರ್ಯ ಚಂದ್ರಬಿಂಬಗಳು ಇದುವರೆಗೂ ಕಾಣಿಸುತ್ತಿರಲಿಲ್ಲ, ಇಲ್ಲಿ ಕಾಣಿಸುತ್ತಿರುವುದೇ ಜ್ಯೋತಿರ್ಲೋಕ; ಹೆದರದೆ ಇರಿ, ಅವು ಮನಸ್ಸಿಗೆ ತಾಪವನ್ನೇನೂ ಮಾಡುವುದಿಲ್ಲ' - ಎಂದು ಭೀತಗೊಂಡ ಮನಸ್ಸಿನ ಆರ್ಯರು ಗಳನ್ನು ಅಮೃತದಂತಹ ಮಾತಿನಿಂದ ಪ್ರತಿಶ್ರುತಿಯು ಸಮಾಧಾನಗೊಳಿಸಿದ.

**ವ। ಆ ಮನ್ವಂತರಮಸಂಖ್ಯೇಯವರ್ಷಕೋಟಿ ಕುಂದುತ್ತುಂ ಬರ್ಪಿನಂ ತತ್ಪ್ರಸ್ತಾವದೊಳ್ ತ್ರಿಶತಯುತಸಹಸ್ರದಂಡೋಚ್ಛ್ರಿತಶರೀರನುಂ ಪಲ್ಯೋಪಮದಶಮಭಾಗಾಯುಷ್ಯನುಮಪ್ಪ ಸನ್ಮತಿಯೆಂಬೆರಡನೆಯ ಮನು ಪುಟ್ಟಿದಂದು,**

**ಪದವಿಭಾಗ-ಅನ್ವಯ-ಅರ್ಥ:** ಆ ಅಸಂಖ್ಯೇಯವರ್ಷಕೋಟಿ ಮನ್ವಂತರಂ = ಅಸಂಖ್ಯಕೋಟಿ ವರ್ಷಗಳಷ್ಟು ದೀರ್ಘವಾದ ಪ್ರತಿಶ್ರುತಿ ಮನ್ವಂತರವು, ಕುಂದುತ್ತುಂ ಬರ್ಪಿನಂ = ಕ್ಷೀಣಿಸುತ್ತ ಬಂದಾಗ, ತತ್ + ಪ್ರಸ್ತಾವದೊಳ್ = ಆ ಸಂದರ್ಭದಲ್ಲಿ, ತ್ರಿಶತಯುತಸಹಸ್ರದಂಡ + ಉಚ್ಛ್ರಿತಶರೀರನುಂ = ಒಂದು ಸಾವಿರದ ಮುನ್ನೂರು ಬಿಲ್ಲಗಳಷ್ಟು ಎತ್ತರವಿದ್ದವನೂ, ಪಲ್ಯ + ಉಪಮದಶಮಭಾಗ + ಆಯುಷ್ಯನುಂ + ಅಪ್ಪ ಸನ್ಮತಿಯೆಂಬ + ಎರಡನೆಯ ಮನು ಪುಟ್ಟಿದಂದು = ಪಲ್ಯದ ಹತ್ತನೆಯ ಒಂದು ಭಾಗದಷ್ಟು ಆಯುಸ್ಸಿದ್ದವನೂ ಆದ ಎರಡನೆಯ ಮನು ಅಥವಾ ಕುಲಧರನು ಹುಟ್ಟಿದಾಗ,

**ಗದ್ಯಾನುಸರಣ:** ಅಸಂಖ್ಯಕೋಟಿ ವರ್ಷಗಳಷ್ಟು ದೀರ್ಘವಾದ ಪ್ರತಿಶ್ರುತಿ ಮನ್ವಂತರವು ಮುಗಿಯಲು ಒಂದು ಸಾವಿರದ ಮುನ್ನೂರು ಬಿಲ್ಲಗಳಷ್ಟು ಎತ್ತರವಿದ್ದವನೂ, ಪಲ್ಯದ ಹತ್ತನೆಯ ಒಂದು ಭಾಗದಷ್ಟು ಆಯುಸ್ಸಿದ್ದವನೂ ಆದ ಎರಡನೆಯ ಮನು ಅಥವಾ ಕುಲಧರನು ಹುಟ್ಟಿದ; ಆಗ,

**ತಾರಗೆಗಳಗೆಗಳಂತಿರೆ**
**ತಾರಾಪಥದೊಳ್ ನಿರಂತರಂ ತುಱುಗಿರೆ ಕಂ**
**ಡೋರಂತೆ ನಡುಗುವಾರ್ಯರ**
**ನಾರಾಧಿತಬೋಧನಾತನಂತಿರೆ ನುಡಿದಂ** ೫೪

**ಪದವಿಭಾಗ-ಅನ್ವಯ-ಅರ್ಥ:** ತಾರಾಪಥದೊಳ್ ತಾರಗೆಗಳ್ + ಅಗೆಗಳಂತಿರೆ ನಿರಂತರಂ ತುಱುಗಿರೆ ಕಂಡು = ಆಕಾಶದಲ್ಲಿ ನಕ್ಷತ್ರಗಳು ಮೊಳಕೆಗಳಂತೆ

ಒತ್ತೊತ್ತಾಗಿ ತುಂಬಿರುವುದನ್ನು ಕಂಡು, ಓರಂತೆ ನಡುಗುವ + ಆರ್ಯರನ್ = ಒಂದೇ ಸಮನೆ ನಡುಗುತ್ತಿದ್ದ ಆರ್ಯರನ್ನು ಕುರಿತು, ಆರಾಧಿತ ಬೋಧನ್ + ಆತನ್ + ಅಂತಿರೆ ನುಡಿದಂ = ತಿಳಿವಳಿಕೆ ತುಂಬಿದ್ದ ಕುಲಧರನು ಹೀಗೆ ಹೇಳಿದ:

**ಗದ್ಯಾನುಸರಣ:** ಆಕಾಶದಲ್ಲಿ ನಕ್ಷತ್ರಗಳು ಮೊಳಕೆಗಳಂತೆ ಒತ್ತೊತ್ತಾಗಿ ತುಂಬಿರುವುದನ್ನು ಕಂಡು ಒಂದೇ ಸಮನೆ ನಡುಗುತ್ತಿದ್ದ ಆರ್ಯರನ್ನು ಕುರಿತು ಜ್ಞಾನಿಯಾದ ಸನ್ಮತಿ ಕುಲಧರನು ಹೀಗೆ ಹೇಳಿದ:

**ಉದಯಾಸ್ತಸಮಯಮೀ ಚಂ**
**ದ್ರದಿವಾಕರಮಂಡಲಕ್ಕಮಿಲ್ಲಿಂದಂ ತೋ**
**ರ್ಪುದು ತಾರಕಾಳಿ ನಭಮಂ**
**ಪುದಿರ್ಕುಮಿದರ್ಕೆ ನಿಮಗೆ ಮನಕತಮುಂಟೇ ೫೫**

**ಪದವಿಭಾಗ–ಅನ್ವಯ–ಅರ್ಥ:** ಈ ಚಂದ್ರದಿವಾಕರಮಂಡಲಕ್ಕಂ ಉದಯ + ಅಸ್ತಸಮಯಂ = ಈ ಚಂದ್ರ ಸೂರ್ಯಮಂಡಲಗಳಿಗೂ ಉದಯ ಅಸ್ತಮಾನಗಳಿವೆ; ಇಲ್ಲಿಂದಂ ತೋರ್ಪುದು ತಾರಕಾ + ಆಳಿ ನಭಮಂ ಪುದಿರ್ಕುಂ = ಇಲ್ಲಿಂದ ಕಾಣುತ್ತಿರುವ ನಕ್ಷತ್ರಗಣವು ಆಕಾಶವನ್ನು ತುಂಬಿವೆ; ಇದರ್ಕೆ ನಿಮಗೆ ಮನಕತಮುಂಟೇ = ಇದಕ್ಕೆ ನೀವೇಕೆ ದುಃಖಿಸುವಿರಿ?

**ಗದ್ಯಾನುಸರಣ:** 'ಈ ಚಂದ್ರ ಸೂರ್ಯಮಂಡಲಗಳಿಗೂ ಉದಯ ಅಸ್ತಮಾನಗಳಿವೆ; ಇಲ್ಲಿಂದ ಕಾಣುತ್ತಿರುವ ನಕ್ಷತ್ರಗಣವು ಆಕಾಶವನ್ನು ತುಂಬಿವೆ; ಇದಕ್ಕೆ ನೀವೇಕೆ ದುಃಖಿಸುವಿರಿ?'

**ವ। ಎಂದವರ್ಗೆ ಸನ್ಮತಿವಿಕಾಸಮಂ ಮಾಡಿದುದಱಿನಾ ಮನುಗೆ ಸನ್ಮತಿಯೆಂಬ ಪೆಸರಾದುದು; ಆತನಿಂ ಬಱಿಯಮಸಂಖ್ಯೇಯ ಸಂವತ್ಸರ ಪ್ರಮಿತ ಮನ್ವಂತರಾವಸಾನದೊಳಷ್ಟಶತ ವಿಶಿಖಾಸನೋತ್ಸೇಧನುಮಸಂಖ್ಯೇಯಾಯುಷ್ಯನುಮಾಗಿ ಮೂಱನೆಯ ಕುಳಧರನಾದಂ. ಆ ಕಾಲದೊಳ್,**

**ಪದವಿಭಾಗ–ಅನ್ವಯ–ಅರ್ಥ:** ಎಂದು + ಅವರ್ಗೆ ಸನ್ಮತಿವಿಕಾಸಮಂ ಮಾಡಿದುದಱಿನ್ + ಆ ಮನುಗೆ ಸನ್ಮತಿಯೆಂಬ ಪೆಸರಾದುದು = ಎಂದು ಜನರಿಗೆ ವಾಸ್ತವಜ್ಞಾನವನ್ನು ಉಂಟುಮಾಡಿದ್ದರಿಂದ ಆ ಮನುವಿಗೆ ಸನ್ಮತಿ ಎಂದೇ ಹೆಸರಾಯಿತು; ಆತನಿಂ ಬಱಿಯಂ + ಅಸಂಖ್ಯೇಯಸಂವತ್ಸರಪ್ರಮಿತಮನ್ವಂತರ + ಅವಸಾನದೊಳ್ = ಆತನ ನಂತರ ಅಸಂಖ್ಯಾತ ವರ್ಷಗಳಷ್ಟು ದೀರ್ಘಕಾಲದ ಬಳಿಕ ಆ ಮನ್ವಂತರವು ಕೊನೆಗೊಂಡಾಗ, ಅಷ್ಟಶತವಿಶಿಖಾಸನೋತ್ಸೇಧನುಂ = ಎಂಟುನೂರು ಬಲ್ಲುಗಳಷ್ಟು ಎತ್ತರವಾದವನೂ, ಅಸಂಖ್ಯೇಯ + ಆಯುಷ್ಯನುಂಆಗಿ

ಮೂಱನೆಯ ಕುಳಧರನಾದಂ = ಲೆಕ್ಕವಿಲ್ಲದಷ್ಟು ವರ್ಷಗಳ ಆಯುಸ್ಸುಳ್ಳವನೂ ಆದ ಮೂರನೆಯ ಕುಲಧರನು ಹುಟ್ಟಿದ. ಆ ಕಾಲದೊಳ್ = ಅವನ ಕಾಲದಲ್ಲಿ,

**ಗದ್ಯಾನುಸರಣ:** ಎಂದು ಜನರಿಗೆ ವಾಸ್ತವಜ್ಞಾನವನ್ನು ಉಂಟುಮಾಡಿದ್ದರಿಂದ ಆ ಮನುವಿಗೆ ಸನ್ಮತಿ ಎಂದೇ ಹೆಸರಾಯಿತು; ಆತನ ನಂತರ ಅಸಂಖ್ಯಾತ ವರ್ಷಗಳಷ್ಟು ದೀರ್ಘಕಾಲದ ಬಳಿಕ ಆ ಮನ್ವಂತರವು ಕೊನೆಗೊಂಡಾಗ, ಎಂಟುನೂರು ಬಲ್ಲುಗಳಷ್ಟು ಎತ್ತರವಾದವನೂ, ಲೆಕ್ಕವಿಲ್ಲದಷ್ಟು ವರ್ಷಗಳ ಆಯುಸ್ಸುಳ್ಳವನೂ ಆದ ಮೂರನೆಯ ಕುಲಧರನು ಹುಟ್ಟಿದ. ಅವನ ಕಾಲದಲ್ಲಿ,

ಎಳಸಿ ಬಳಸಿರ್ಪ ಮೃಗಸಂ
ಕುಳಗಳಂದನಿತುಮೊಡನೆ ಕೋಳ್ಮಸಗಿದೊಡಾ
ಕುಳರಾದಾರ್ಯಜನಕ್ಕವ
ನಳವಡಿಸುವ ಬಗೆಯನಾ ಮಹಾತ್ಮಂ ಪೇೞ್ದಂ ೫೬

**ಪದವಿಭಾಗ-ಅನ್ವಯ-ಅರ್ಥ:** ಎಳಸಿ ಬಳಸಿರ್ಪ ಮೃಗಸಂಕುಳಗಳ್ = ಸುತ್ತಲೂ ತುಂಬಿಕೊಂಡಿದ್ದ ಪ್ರಾಣಿಸಮೂಹವು, ಅಂದು + ಅನಿತುಂ + ಒಡನೆ ಕೋಳ್ಮಸಗಿದೊಡೆ = ಎಲ್ಲವೂ ಒಟ್ಟಿಗೇ ಹಿಂಸಿಸತೊಡಗಿದಾಗ, ಆಕುಳರ್ + ಆದ + ಆರ್ಯಜನಕ್ಕೆ = ಭಯಗ್ರಸ್ತರಾದ ಆರ್ಯಜನರಿಗೆ, ಅವನ್ + ಅಳವಡಿಸುವ ಬಗೆಯನ್ + ಆ ಮಹಾತ್ಮಂ ಪೇೞ್ದಂ = ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ರೀತಿಯನ್ನು ಆ ಮಹಾತ್ಮನು ಹೇಳಿಕೊಟ್ಟ.

**ಗದ್ಯಾನುಸರಣ:** ಆ ಹೊತ್ತಿಗೆ ಸುತ್ತಲೂ ತುಂಬಿಕೊಂಡಿದ್ದ ಪ್ರಾಣಿಸಮೂಹವು ಒಟ್ಟಿಗೇ ಹಿಂಸಿಸತೊಡಗಿದಾಗ ಭಯಗ್ರಸ್ತರಾದ ಆರ್ಯಜನರಿಗೆ ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ರೀತಿಯನ್ನು ಆ ಮಹಾತ್ಮನು ಹೇಳಿಕೊಟ್ಟ.

ವ। ಅದಱಿಂದಾತನಂ ಕ್ಷೇಮಂಕರನೆಂದು ಪೆಸರನಿಟ್ಟರ್; ಆತನಿಂ ಬೞಿಯುಮನಿತಾನುಂ ಕಾಲದಿಂ ಪಂಚೋತ್ತರಸಪ್ತತಿಯುತ ಸಪ್ತಶತ ಕಾರ್ಮುಕೋತ್ಸೇಧ ಕಾಯನುಂ ತುಟಿತಾಬ್ದಪ್ರಮಿತಜೀವಿತನುಮಾಗಿ ನಾಲ್ಕನೆಯ ಕುಳಧರಂ ಪುಟ್ಟಿ ಪಾಪಸತ್ವಂಗಳ್ ಕಾಡೆ ಲಕುಟಿಯಷ್ಟ್ಯಾದಿವಿಧಿಯನುಪದೇಶಂ ಗೆಯ್ದಾತಂ ಕ್ಷೇಮಂಧರನೆಂಬ ಪೆಸರಂ ಪಡೆದಂ; ಅಲ್ಲಿಂ ಬೞಿಯುಮನೇಕ ಕೋಟಿ ಸಂವತ್ಸರಂಗಳ್ ಪೋಂದಿದಿಂ ಬೞಿಯುಂ ಪಂಚಾಶದಭ್ಯಧಿಕ ಸಪ್ತಶತ ಕೋದಂಡಪ್ರಮಾಣಮೂರ್ತಿಯುಂ ಕಮಳ ಪ್ರಮಿತಾಯುಷ್ಯನುಮಾಗಿ ಕಮಳವದನಂ ಪಂಚಮಕುಳಧರಂ ಪುಟ್ಟಿ,

**ಪದವಿಭಾಗ-ಅನ್ವಯ-ಅರ್ಥ:** ಅದಱಿಂದೆ + ಆತನಂ ಕ್ಷೇಮಂಕರನೆಂದು

ಪೆಸರನಿಟ್ಟರ್ = ಆದ್ದರಿಂದ ಅವನಿಗೆ ಕ್ಷೇಮಂಕರನೆಂಬ ಹೆಸರನ್ನಿಟ್ಟರು; ಆತನಿಂ ಬಳಿಯಂ + ಎನಿತಾನುಂ ಕಾಲದಿಂ = ಆತನ ಬಳಿಕ ಅದೆಷ್ಟೋ ಕಾಲವಾದ ಬಳಿಕ, ಪಂಚ + ಉತ್ತರಸಪ್ತತಿಯುತಸಪ್ತಶತಕಾರ್ಮುಕೋತ್ಸೇಧಕಾಯನುಂ = ಏಳುನೂರ ಎಪ್ಪತ್ತೈದು ಬಿಲ್ಲುಗಳಷ್ಟು ಎತ್ತರದ ದೇಹದವನೂ, ತುಟಿತಾಬ್ದಪ್ರಮಿತ ಜೀವಿತನುಂ + ಆಗಿ = ಒಂದು ತುಟಿತದಷ್ಟು ಕಾಲದ ಆಯುಷ್ಯವುಳ್ಳವನೂ ಆದ, ನಾಲ್ಕನೆಯ ಕುಳಧರಂ ಪುಟ್ಟಿ = ನಾಲ್ಕನೆಯ ಕುಲಧರನು ಹುಟ್ಟಿ, ಪಾಪಸತ್ವಂಗಳ್ ಕಾಡೆ = ಪ್ರಾಣಿಗಳು ಹಿಂಸೆ ಮಾಡತೊಡಗಿದಾಗ, ಲಕುಟಿಯಷ್ಟಿ + ಆದಿವಿಧಿಯನ್ + ಉಪದೇಶಂಗೆಯ್ದು + ಆತಂ ಕ್ಷೇಮಂಧರನೆಂಬ ಪೆಸರಂ ಪಡೆದಂ = ದೊಣ್ಣೆ ಕೋಲು ಮುಂತಾದವುಗಳ ಬಳಕೆಯನ್ನು ಹೇಳಿಕೊಟ್ಟು ಕ್ಷೇಮಂಧರ ಎಂಬ ಹೆಸರನ್ನು ಪಡೆದ; ಅಲ್ಲಿಂ ಬಳಿಯಂ + ಅನೇಕಕೋಟಿ ಸಂವತ್ಸರಂಗಳ್ ಪೋದಿದಿಂ ಬಳಿಯಂ = ಅಲ್ಲಿಂದ ಮುಂದೆ ಅನೇಕ ಕೋಟಿ ವರ್ಷಗಳು ಕಳೆದ ಬಳಿಕ, ಪಂಚಾಶತ + ಅಭ್ಯಧಿಕಸಪ್ತಶತ ಕೋದಂಡಪ್ರಮಾಣಮೂರ್ತಿಯುಂ = ಏಳುನೂರ ಐವತ್ತು ಬಿಲ್ಲುಗಳಷ್ಟು ದೇಹವುಳ್ಳವನೂ, ಕಮಳಪ್ರಮಿತ + ಆಯುಷ್ಯನುಂ + ಆಗಿ = ಒಂದು ಕಮಲದಷ್ಟು ಆಯುಷ್ಯವನ್ನು ಪಡೆದ, ಕಮಳವದನಂ ಪಂಚಮಕುಳಧರಂ ಪುಟ್ಟಿ = ಕಮಲದಂತಹ ಮುಖ ಹೊಂದಿದ ಐದನೆಯ ಮನುವು ಹುಟ್ಟಿ,

**ಗದ್ಯಾನುಸರಣ:** ಆದ್ದರಿಂದ ಅವನಿಗೆ ಕ್ಷೇಮಂಕರನೆಂಬ ಹೆಸರನ್ನಿಟ್ಟರು; ಆತನ ಬಳಿಕ ಅದೆಷ್ಟೋ ಕಾಲವಾದ ಬಳಿಕ ಏಳುನೂರ ಎಪ್ಪತ್ತೈದು ಬಿಲ್ಲುಗಳಷ್ಟು ಎತ್ತರದ ದೇಹದವನೂ, ಒಂದು ತುಟಡಿತದಷ್ಟು ಕಾಳದ ಆಯುಷ್ಯವುಳ್ಳವನೂ ಆದ ನಾಲ್ಕನೆಯ ಕುಲಧರನು ಹುಟ್ಟಿ, ಪ್ರಾಣಿಗಳು ಹಿಂಸೆ ಮಾಡತೊಡಗಿದಾಗ ದೊಣ್ಣೆ ಕೋಲು ಮುಂತಾದವುಗಳನ್ನು ಬಳಸಿ ರಕ್ಷಿಸಿಕೊಳ್ಳುವ ಬಗೆಯನ್ನು ಹೇಳಿಕೊಟ್ಟು ಕ್ಷೇಮಂಧರ ಎಂಬ ಹೆಸರನ್ನು ಪಡೆದ; ಅಲ್ಲಿಂದ ಮುಂದೆ ಮತ್ತೂ ಅನೇಕ ಕೋಟಿ ವರ್ಷಗಳು ಕಳೆದ ಬಳಿಕ ಏಳುನೂರ ಐವತ್ತು ಬಿಲ್ಲುಗಳಷ್ಟು ದೇಹವುಳ್ಳವನೂ, ಒಂದು ಕಮಲದಷ್ಟು ಆಯುಷ್ಯವನ್ನು ಪಡೆದ ಕಮಲದಂತಹ ಮುಖ ಹೊಂದಿದ ಐದನೆಯ ಮನುವು ಹುಟ್ಟಿದ.

ಸೀಮಾವಿವಾದದಿಂ ತ
ದ್ಭೂಮಿಜರೋರೊರ್ವರಂ ಪಳಂಚಲೆವೆಡೆಯೊಳ್
ಸೀಮೆಗಳ ತೊಡರನುಡುಗಿಸಿ
ಸೀಮಂಕರನೆಂಬುದೊಂದು ಪೆಸರಂ ಪಡೆದಂ ೫೭

**ಪದವಿಭಾಗ-ಅನ್ವಯ-ಅರ್ಥ:** ಸೀಮಾವಿವಾದದಿಂ ತತ್ + ಭೂಮಿಜರ್ + ಓರೊರ್ವರಂ ಪಳಂಚಲೆವ + ಎಡೆಯೊಳ್ = ಕಲ್ಪವೃಕ್ಷಗಳಿದ್ದ ಪ್ರದೇಶದ

ಹಕ್ಕಿಗೆ ಸಂಬಂಧಿಸಿದ ಗಡಿ ವಿವಾದದ ಕಾರಣದಿಂದ ಆ ಭೂಮಿಯ ಜನರು ಒಬ್ಬರೊಬ್ಬರು ಹೋರಾಡುತ್ತಿದ್ದ ಸಂದರ್ಭದಲ್ಲಿ, ಸೀಮೆಗಳ ತೊಡರನ್ + ಉಡುಗಿಸಿ ಸೀಮಂಕರನೆಂಬುದೊಂದು ಪೆಸರಂ ಪಡೆದಂ = ಗಡಿವಿವಾದವನ್ನು ಬಗೆಹರಿಸಿ ಸೀಮಂಕರ ಎಂಬ ಹೆಸರನ್ನು ಪಡೆದ.

ಗದ್ಯಾನುಸರಣ: ಕಲ್ಪವೃಕ್ಷಗಳಿದ್ದ ಪ್ರದೇಶದ ಹಕ್ಕಿಗೆ ಸಂಬಂಧಿಸಿದ ಗಡಿ ವಿವಾದದ ಕಾರಣದಿಂದ ಆ ಭೂಮಿಯ ಜನರು ಒಬ್ಬರೊಬ್ಬರು ಹೋರಾಡುತ್ತಿದ್ದ ಸಂದರ್ಭದಲ್ಲಿ ಅವರ ನಡುವಣ ಗಡಿವಿವಾದವನ್ನು ಬಗೆಹರಿಸಿ ಸೀಮಂಕರ ಎಂಬ ಹೆಸರನ್ನು ಪಡೆದ.

ವ॥ ಆತನ ವಿರಾಮದೊಳನೇಕಾಬ್ದಕೋಟಿಗಳ ಕಡೆಯೊಳ್ ಪಂಚ ವಿಂಶತ್ಯನ್ವಿತ ಸಪ್ತಶತಬಾಣಾಸನೋಚ್ಛ್ರಯನುಂ ನಳಿನಪ್ರಮಾಣಾ ಯುಷ್ಯನು ಮಾಗಿ ನಳಿನಾನನನಾಱನೆಯ ಕುಳಧರಂ ಪುಟ್ಟಿ ಮರ್ಯಾದಾ ವಿಪ್ರಪತ್ತಿ ಯಿಂದಮೂಳ್ವಾರ್ಯ ಜನಕ್ಕಾಘಾಟಶುದ್ಧಿಯುಂ ಮಾಡಿ ಸೀಮಂಧರನಾದಂ; ಆ ಮಹಾಪುರುಷನಿಂ ಬೞಿಯುಮನೇಕವರ್ಷ ಕೋಟ್ಯಂತರದೊಳ್ ಸಪ್ತಶತಶಿಳೀಮುಖಾಸನೋನ್ನತಾಪಘನನುಂ ಪದ್ಮಪ್ರಮಿತಾಯುಷ್ಯನುಮಾಗಿ ಪದ್ಮವದನನೇೞನೆಯ ಕುಳಧರಂ ಪುಟ್ಟಿ,

ಪದವಿಭಾಗ-ಅನ್ವಯ-ಅರ್ಥ: ಆತನ ವಿರಾಮದೊಳ್ + ಅನೇಕಾಬ್ದಕೋಟಿಗಳ ಕಡೆಯೊಳ್ = ಅವನಾದ ಮೇಲೆ ಅನೇಕ ಕೋಟಿ ವರ್ಷಗಳ ಬಳಿಕ, ಪಂಚವಿಂಶತಿ + ಅನ್ವಿತಸಪ್ತಶತಬಾಣಾಸನ + ಉಚ್ಛ್ರಯನುಂ = ಏಳು ನೂರಿಪ್ಪತ್ತೈದು ಬಿಲ್ಲುಗಳಷ್ಟು ಎತ್ತರವಿದ್ದವನೂ, ನಳಿನಪ್ರಮಾಣಾಯುಷ್ಯನುಮಾಗಿ ನಳಿನ + ಆನನನ್ + ಆಱನೆಯ ಕುಳಧರಂ ಪುಟ್ಟಿ = ಒಂದು ಕಮಲದಷ್ಟು ದೀರ್ಘಕಾಲದ ಆಯುಷ್ಯವಿದ್ದ ಕಮಲಮುಖಿಯಾದ ಆರನೆಯ ಕುಳಧರನು ಹುಟ್ಟಿದ; ಮರ್ಯಾದಾವಿಪ್ರಪತ್ತಿಯಿಂದಂ + ಊಳ್ವ + ಆರ್ಯಜನಕ್ಕೆ = ಆತನು ಮತ್ತೆ ಗಡಿವಿದಾದದಲ್ಲಿ ತೊಡಗಿ ಬೈದಾಡುತ್ತಿದ್ದ ಆರ್ಯಜನರಿಗೆ ಸಂಬಂಧಿಸಿದಂತೆ, ಆಘಾಟಶುದ್ಧಿಯಂ ಮಾಡಿ = ನಿಶ್ಚಿತ ಗಡಿಗಳನ್ನು ಗೊತ್ತುಪಡಿಸಿ, ಸೀಮಂಧರನಾದಂ = ಸೀಮಂಧರ ಎನ್ನಿಸಿಕೊಂಡ; ಆ ಮಹಾಪುರುಷನಿಂ ಬೞಿಯಂ + ಅನೇಕವರ್ಷಕೋಟ್ಯಂತರದೊಳ್ = ಆ ಮಹಾನುಭಾವನಾದ ಅನೇಕ ಕೋಟಿ ವರ್ಷಗಳು ಕಳೆದ ಬಳಿಕ, ಸಪ್ತಶತಶಿಳೀಮುಖಾಸ + ಉನ್ನತ + ಅಪಘನನುಂ = ಏಳುನೂರು ಬಿಲ್ಲುಗಳಷ್ಟು ಎತ್ತರವಿದ್ದ, ಪದ್ಮಪ್ರಮಿತ + ಆಯುಷ್ಯನುಂ + ಆಗಿ = ಒಂದು ಕಮಲದಷ್ಟು ಆಯುಸ್ಸಿದ್ದ, ಪದ್ಮವದನನ್ + ಏೞನೆಯ ಕುಳಧರಂ ಪುಟ್ಟಿ = ಪದ್ಮಮುಖಿಯಾದ ಏಳನೆಯ ಮನುವು ಹುಟ್ಟಿದ.

**ಗದ್ಯಾನುಸರಣ:** ಅವನಾದ ಮೇಲೆ ಅನೇಕ ಕೋಟಿ ವರ್ಷಗಳ ಬಳಿಕ ಏಳುನೂರಿಪ್ಪತ್ತೈದು ಬಿಲ್ಲುಗಳಷ್ಟು ಎತ್ತರವಿದ್ದವನೂ, ಒಂದು ಕಮಲದಷ್ಟು ದೀರ್ಘಕಾಲದ ಆಯುಷ್ಯವಿದ್ದ ಕಮಲಮುಖಿಯಾದ ಆರನೆಯ ಕುಳಧರನು ಹುಟ್ಟಿದ; ಮತ್ತೆ ಗಡಿವಿದಾದದಲ್ಲಿ ತೊಡಗಿ ಬೈದಾಡುತ್ತಿದ್ದ ಆರ್ಯಜನರಿಗೆ ಸಂಬಂಧಿಸಿದಂತೆ ನಿಶ್ಚಿತ ಗಡಿಗಳನ್ನು ಗೊತ್ತುಪಡಿಸಿ ಸೀಮಂಧರ ಎನ್ನಿಸಿಕೊಂಡ; ಆ ಮಹಾನುಭಾವನಾದ ಅನೇಕ ಕೋಟಿ ವರ್ಷಗಳು ಕಳೆದ ಬಳಿಕ, ಏಳುನೂರು ಬಿಲ್ಲುಗಳಷ್ಟು ಎತ್ತರವಿದ್ದ ಒಂದು ಕಮಲದಷ್ಟು ಆಯುಸ್ಸಿದ್ದ ಪದ್ಮಮುಖಿಯಾದ ಏಳನೆಯ ಮನುವು ಹುಟ್ಟಿದ.

**ಬನಕಂ ಪೊಲಕಂ ನಡೆಯ**
**ಲ್ಕಿನಿಸಾಱದೆ ಮಱುಗುವಾರ್ಯರಂ ಕಂಡು ಮನೋ**
**ಜನಿತದಯಂ ಕರಿಹರಿವಾ**
**ಹನಂಗಳಂ ಪಡೆದು ವಿಮಳವಾಹನನಾದಂ ೫೮**

**ಪದವಿಭಾಗ–ಅನ್ವಯ–ಅರ್ಥ:** ಬನಕಂ ಪೊಲಕಂ ನಡೆಯಲ್ಕೆ + ಇನಿಸು + ಆಱದೆ = ಕಾಡಿಗೂ ಕಲ್ಪವೃಕ್ಷಗಳಿದ್ದ ಪ್ರದೇಶಕ್ಕೂ ಸ್ವಲ್ಪವೂ ನಡೆಯಲಾರದೆ, ಮಱುಗುವ + ಆರ್ಯರಂ ಕಂಡು = ಆರ್ಯಜನರ ಬಗ್ಗೆ, ಮನೋಜನಿತದಯಂ = ಮನಸ್ಸಿನಲ್ಲಿಯೇ ವ್ಯಥೆಪಟ್ಟು, ಕರಿಹರಿವಾಹನಂಗಳಂ ಪಡೆದು = ಆನೆ ಕುದುರೆಗಳನ್ನು ಪಳಗಿಸಿ ವಾಹನಗಳನ್ನಾಗಿ ಬಳಸುವುದನ್ನು ಹೇಳಿಕೊಟ್ಟು, ವಿಮಳವಾಹನನಾದಂ = ವಿಮಲವಾಹನ ಎನಿಸಿದ.

**ಗದ್ಯಾನುಸರಣ:** ಕಾಡಿಗೂ ಕಲ್ಪವೃಕ್ಷಗಳಿದ್ದ ಪ್ರದೇಶಕ್ಕೂ ಸ್ವಲ್ಪವೂ ನಡೆಯಲಾರದ ಆರ್ಯಜನರ ಬಗ್ಗೆ ಮನಸ್ಸಿನಲ್ಲಿಯೇ ವ್ಯಥೆಪಟ್ಟ ಆತನು ಆನೆ ಕುದುರೆಗಳನ್ನು ಪಳಗಿಸಿ ವಾಹನಗಳನ್ನಾಗಿ ಬಳಸುವುದನ್ನು ಹೇಳಿಕೊಟ್ಟು ವಿಮಲವಾಹನ ಎನಿಸಿದ.

**ವ। ಆತನಿಂ ಬೞಿಯಮಸಂಖ್ಯಾತವರ್ಷಂಗಳ್ ಸಲೆ ಪಂಚಸಪ್ತತ್ಯುತ್ತರ ’ಷಟ್ಛತ ಬಾಣ ಸನೋತ್ಸೇಧನುಂ ಪದ್ಮಾಂಗಪ್ರಮಿತಾಯುಷ್ಯನುಮಪ್ಪೆಂಟನೆಯ ಮನು ಪುಟ್ಟಿ,**

**ಪದವಿಭಾಗ–ಅನ್ವಯ–ಅರ್ಥ:** ಆತನಿಂ ಬೞಿಯಂ + ಅಸಂಖ್ಯಾತವರ್ಷಂಗಳ್ ಸಲೆ = ಆತನ ಬಳಿಕ ಲೆಕ್ಕವಿಡಲಾಗದಷ್ಟು ವರ್ಷಗಳು ಕಳೆದ ಮೇಲೆ, ಪಂಚಸಪ್ತತಿ + ಉತ್ತರಷಟ್ + ಶತಬಾಣಾಸನ + ಉತ್ಸೇಧನುಂ = ಆರುನೂರೆಪ್ಪತ್ತೈದು ಬಿಲ್ಲುಗಳಷ್ಟು ಎತ್ತರದವನೂ, ಪದ್ಮಾಂಗಪ್ರಮಿತ + ಆಯುಷ್ಯನುಂ + ಅಪ್ಪ + ಎಂಟನೆಯ ಮನು ಪುಟ್ಟಿ = ಒಂದು ಕಮಲದಷ್ಟು ಆಯುಸ್ಸಿನ ಎಂಟನೆಯ ಮನು ಹುಟ್ಟಿ,

**ಗದ್ಯಾನುಸರಣ:** ಆತನ ಬಳಿಕ ಲೆಕ್ಕವಿಡಲಾಗದಷ್ಟು ವರ್ಷಗಳು ಕಳೆದ ಮೇಲೆ ಆರುನೂರೆಪ್ಪತ್ತೈದು ಬಿಲ್ಲುಗಳಷ್ಟು ಎತ್ತರದವನೂ, ಒಂದು ಕಮಲದಷ್ಟು ಆಯುಸ್ಸಿನ ಎಂಟನೆಯ ಮನು ಹುಟ್ಟಿದ.

**ಸುತಮುಖಕಮಳಾಲೋಕನ**
**ಮತಿವಿಸ್ಮಯಮಾಗೆ ಮಱುಗುವಾರ್ಯಜನಕ್ಕಾ**
**ಯತಿಯುಕ್ತಂ ತದ್ಯುಕ್ತಿಯ**
**ನತಿವಿದಿತಂ ಮಾಡಿ ತಿಳಿಪಿದಂ ಚಕ್ಷುಷ್ಮಂ ೫೯**

**ಪದವಿಭಾಗ-ಅನ್ವಯ-ಅರ್ಥ:** ಸುತಮುಖಕಮಳ + ಆಲೋಕನಂ + ಅತಿವಿಸ್ಮಯಂ + ಆಗೆ = ಮಕ್ಕಳ ಮುಖವನ್ನು ನೋಡುವುದೇ ಆಶ್ಚರ್ಯವುಂಟುಮಾಡುವಷ್ಟು ಅಪರೂಪದ್ದಾಗಿ, ಮಱುಗುವ + ಆರ್ಯಜನಕ್ಕೆ = ವ್ಯಥೆಪಡುತ್ತಿದ್ದ ಆರ್ಯಜನರಿಗೆ. ಆಯತಿಯುಕ್ತಂ ತತ್ + ಯುಕ್ತಿಯನ್ + ಅತಿವಿದಿತಂ ಮಾಡಿ ಚಕ್ಷುಷ್ಮಂ ತಿಳಿಪಿದಂ = ಪ್ರಕೃತಿಸಹಜವಾದ ಅದರ ಸ್ವರೂಪವನ್ನು ತನ್ನ ಮಾತುಗಳಿಂದ ಸ್ಪಷ್ಟಪಡಿಸಿ ಚಕ್ಷುಷ್ಮ ಎನಿಸಿಕೊಂಡ.

**ಗದ್ಯಾನುಸರಣ:** ಮಕ್ಕಳ ಮುಖವನ್ನು ನೋಡುವುದೇ ಆಶ್ಚರ್ಯವುಂಟು ಮಾಡುವಷ್ಟು ಅಪರೂಪದ್ದಾಗಿ ವ್ಯಥೆಪಡುತ್ತಿದ್ದ ಆರ್ಯಜನರಿಗೆ ಪ್ರಕೃತಿಸಹಜವಾದ ಅದರ ಸ್ವರೂಪವನ್ನು ತನ್ನ ಮಾತುಗಳಿಂದ ಸ್ಪಷ್ಟಪಡಿಸಿ ಚಕ್ಷುಷ್ಮ ಎನಿಸಿಕೊಂಡ.

**ವಿಶೇಷ ವಿಚಾರ:** ಆ ಹಿಂದೆ ಮಕ್ಕಳ ಮುಖವನ್ನು ನೋಡಲಾಗದಷ್ಟು ಬೇಗ ತಾಯ್ತಂದೆಯರು ತೀರಿಕೊಳ್ಳುತ್ತಿದ್ದರೆಂದು ಇದರರ್ಥ.

**ವ॥ ಅಂತಾತನಿಂ ಬಟಿಯಂ ಕೆಲವು ಕಾಲಂ ಕಟಿಯೆ ಪಂಚಾಂಶ ದಧಿಕಷಟ್ಛತ ಚಾಪೋತ್ಸೇಧವಪುವುಂ ಕುಮುದಪರಿಮಿತಾಯುಷ್ಯನುಮ ಪ್ಪೊಂಬತ್ತನೆಯ ಮನು ಪುಟ್ಟಿ,**

**ಪದವಿಭಾಗ-ಅನ್ವಯ-ಅರ್ಥ:** ಅಂತು + ಆತನಿಂ ಬಟಿಯಂ ಕೆಲವು ಕಾಲಂ ಕಟಿಯೆ = ಹೀಗೆ ಆತನ ಬಳಿಕವೂ ಕೆಲವು ಕಾಲ ಸಂದ ಬಳಿಕ, ಪಂಚಾಂಶತ್ + ಅಧಿಕಷಟ್ಛತಚಾಪ + ಉತ್ಸೇಧವಪುವುಂ = ಆರುನೂರೈವತ್ತು ಬಿಲ್ಲುಗಳಷ್ಟು ಎತ್ತರವಾದ ದೇಹವಿದ್ದ, ಕುಮುದಪರಿಮಿತ + ಆಯುಷ್ಯನುಂ + ಅಪ್ಪ = ಒಂದು ನೈದಿಲೆಯಷ್ಟು ಅವಧಿ ಆಯುಸ್ಸಿದ್ದವನೂ ಆದ, ಒಂಬತ್ತನೆಯ ಮನು ಪುಟ್ಟಿ = ಒಂಬತ್ತನೆಯ ಮನು ಹುಟ್ಟಿ,

**ಗದ್ಯಾನುಸರಣ:** ಆತನ ಬಳಿಕವೂ ಕೆಲವು ಕಾಲ ಸಂದ ಬಳಿಕ ಆರುನೂರೈವತ್ತು ಬಿಲ್ಲುಗಳಷ್ಟು ಎತ್ತರವಾದ ದೇಹವಿದ್ದ, ಮತ್ತು ಒಂದು ನೈದಿಲೆಯಷ್ಟು ಅವಧಿ ಆಯುಸ್ಸಿದ್ದ ಒಂಬತ್ತನೆಯ ಮನು ಹುಟ್ಟಿದ.

ಪೆಸರಿಲ್ಲದಾರ್ಯರೆಂಬೀ
ಪೆಸರೊಳ್ ಮುಂ ನಡೆಯೆ ನಡೆಯದೀ ವ್ಯವಹಾರಂ
ಪೆಸರಿಲ್ಲದೊಡೆಂದಾ ಮನು
ಪೆಸರಿಟ್ಟು ಯಶಸ್ವಿಯೆಂಬ ಪೆಸರಂ ಪಡೆದಂ ೬೦

**ಪದವಿಭಾಗ-ಅನ್ವಯ-ಅರ್ಥ:** ಪೆಸರಿಲ್ಲದೆ + ಆರ್ಯರ್ + ಎಂಬೀ ಪೆಸರೊಳ್ ಮುಂ ನಡೆಯೆ = ಈ ಮುಂಚೆ ವೈಯಕ್ತಿಕ ಹೆಸರಿಲ್ಲದೆ ಒಂದು ಗುಂಪಾಗಿ ಆರ್ಯರೆನ್ನಿಕೊಂಡಿದ್ದ ಪದ್ಧತಿಯಿರಲು, ಈ ವ್ಯವಹಾರಂ ಪೆಸರಿಲ್ಲದೊಡೆ ನಡೆಯದು ಎಂದು = ಇನ್ನು ಮುಂದೆ ವ್ಯವಹಾರವು ವ್ಯಕ್ತಿಗತ ಹೆಸರಿಲ್ಲದಿದ್ದರೆ ಕಷ್ಟವಾಗುವುದೆಂದು, ಆ ಮನು ಪೆಸರಿಟ್ಟು ಯಶಸ್ವಿಯೆಂಬ ಪೆಸರಂ ಪಡೆದಂ = ಆತನು ವ್ಯಕ್ತಿಗೆ ಹೆಸರಿಡುವ ಪದ್ಧತಿಯನ್ನು ಜಾರಿಗೊಳಿಸಿ ಯಶಸ್ವಿ ಎಂಬ ಹೆಸರನ್ನು ಪಡೆದ.

**ಗದ್ಯಾನುಸರಣ:** ಈ ಮುಂಚೆ ವೈಯಕ್ತಿಕ ಹೆಸರಿಲ್ಲದೆ ಜನರು ಒಂದು ಗುಂಪಾಗಿ ಆರ್ಯರೆನ್ನಿಕೊಂಡಿದ್ದ ಪದ್ಧತಿಯಿತ್ತು; ಮುಂದೆ ವ್ಯವಹಾರವು ವ್ಯಕ್ತಿಗತ ಹೆಸರಿಲ್ಲದಿದ್ದರೆ ಕಷ್ಟವಾಗುವುದೆಂದು ಬಗೆದು ಆತನು ವ್ಯಕ್ತಿಗೆ ಹೆಸರಿಡುವ ಪದ್ಧತಿಯನ್ನು ಜಾರಿಗೊಳಿಸಿ ಯಶಸ್ವಿ ಎಂಬ ಹೆಸರನ್ನು ಪಡೆದ

**ವ।** ಆತನಿಂ ಬೞಿಯುಮನೇಕಸಂವತ್ಸರಸಹಸ್ರಾತಿಕ್ರಮದೊಳ್ ಪಂಚವಿಂಶತ್ಯಧಿಕಷಟ್ಛತ ಧನುರುತ್ಸೇಧನುಂ ಕುಮುದಾಂಗಸಂಖ್ಯಾತವರ್ಷಾಯುಷ್ಯನುಮಾಗಿ ದಶಮಕುಲಧರಂ ಪುಟ್ಟಿ ಚಂದ್ರನಂ ತೋಱಿ ಕೂಸುಗಳ ನಾಡಿಸುವುದಂ ತೋಱುವನಪ್ಪುದಱಿಂದಾತನಭಿಚಂದ್ರನೆಂಬ ನಾಮಮೆಸೆಯೆ ಪೆಸರ್ವಡೆದಂ: ಆ ಮನುವಿನ ಕಡೆಯೊಳನೇಕವರ್ಷಸಹಸ್ರಂ ಸಲೆ ಷಟ್ಛತ ಕಾಂಡಾಸನೋತ್ಸೇಧಶರೀರನುಮಂಯುತಪ್ರಮಾಣಾಂಯುಷ್ಯನುಮಾಗಿ ಪನ್ನೊಂದನೆಯ ಕುಳಧರಂ ಪುಟ್ಟಿ,

**ಪದವಿಭಾಗ-ಅನ್ವಯ-ಅರ್ಥ:** ಆತನಿಂ ಬೞಿಯುಂ + ಅನೇಕಸಂವತ್ಸರಸಹಸ್ರ + ಅತಿಕ್ರಮದೊಳ್ = ಅವನ ನಂತರ ಅನೇಕ ಸಾವಿರ ವರ್ಷಗಳ ತರುವಾಯ, ಪಂಚವಿಂಶತಿ + ಅಧಿಕಷಟ್ಛತಧನುಸ್ + ಉತ್ಸೇಧನುಂ = ಆರುನೂರಿಪ್ಪತ್ತೈದು ಬಿಲ್ಲುಗಳಷ್ಟು ಎತ್ತರದ, ಕುಮುದಾಂಗಸಂಖ್ಯಾತವರ್ಷ + ಆಯುಷ್ಯನುಂ ಆಗಿ = ಒಂದು ಕುಮುದದಷ್ಟು ದೀರ್ಘವಾದ ಆಯುಸ್ಸನ್ನು ಹೊಂದಿದ, ದಶಮಕುಲಧರಂ ಪುಟ್ಟಿ = ಹತ್ತನೆಯ ಮನುವು ಹುಟ್ಟಿ, ಚಂದ್ರನಂ ತೋಱಿ ಕೂಸುಗಳನ್ + ಆಡಿಸುವುದಂ ತೋಱುವನ್ + ಅಪ್ಪುದಱಿಂದೆ = ಚಂದ್ರನನ್ನು ತೋರಿಸಿ ಮಕ್ಕಳನ್ನು ಆಟವಾಡಿಸುವುದನ್ನು ತೋರಿಸಿಕೊಟ್ಟದ್ದರಿಂದ,

ಆತನ್ + ಅಭಿಚಂದ್ರನೆಂಬ ನಾಮಮೆಸೆಯೆ ಪೆಸರ್ + ಪಡೆದಂ = ಆತನು ಅಭಿಚಂದ್ರನೆಂಬ ಹೆಸರನ್ನು ಪಡೆದ; ಆ ಮನುವಿನ ಕಡೆಯೊಳ್ + ಅನೇಕವರ್ಷಸಹಸ್ರಂ ಸಲೆ = ಆ ಮನುವಿನ ನಂತರ ಅನೇಕ ಸಾವಿರ ವರ್ಷಗಳು ಗತಿಸಿದ ನಂತರ, ಷಟ್ + ಶತಕಾಂಡಾಸನ + ಉತ್ಸೇಧಶರೀರನುಂ = ಆರುನೂರು ಬಿಲ್ಲುಗಳಷ್ಟು ಎತ್ತರವಿದ್ದ, ಅಯುತಪ್ರಮಾಣ + ಆಯುಷ್ಯನುಂ + ಆಗಿ ಪನ್ನೊಂದನೆಯ ಕುಳಧರಂ ಪುಟ್ಟಿ = ಹತ್ತುಸಾವಿರ ವರ್ಷಗಳಷ್ಟು ಆಯುಸ್ಸಿದ್ದ ಹನ್ನೊಂದನೆಯ ಮನುವು ಹುಟ್ಟಿ,

**ಗದ್ಯಾನುಸರಣ:** ಅವನ ನಂತರ ಅನೇಕ ಸಾವಿರ ವರ್ಷಗಳ ತರುವಾಯ ಆರುನೂರಿಪ್ಪತ್ತೈದು ಬಿಲ್ಲುಗಳಷ್ಟು ಎತ್ತರದ ಹಾಗೂ ಒಂದು ಕುಮುದದಷ್ಟು ದೀರ್ಘವಾದ ಆಯುಸ್ಸನ್ನು ಹೊಂದಿದ ಹತ್ತನೆಯ ಮನುವು ಹುಟ್ಟಿದ: ಆತನು ಚಂದ್ರನನ್ನು ತೋರಿಸಿ ಮಕ್ಕಳನ್ನು ಆಟವಾಡಿಸುವುದನ್ನು ತೋರಿಸಿಕೊಟ್ಟದ್ದರಿಂದ ಅಭಿಚಂದ್ರನೆಂಬ ಹೆಸರನ್ನು ಪಡೆದ; ಆ ಮನುವಿನ ನಂತರ ಅನೇಕ ಸಾವಿರ ವರ್ಷಗಳು ಗತಿಸಿದ ನಂತರ ಆರುನೂರು ಬಿಲ್ಲುಗಳಷ್ಟು ಎತ್ತರವಿದ್ದ ಮತ್ತು ಹತ್ತುಸಾವಿರ ವರ್ಷಗಳಷ್ಟು ಆಯುಸ್ಸಿದ್ದ ಹನ್ನೊಂದನೆಯ ಮನುವು ಹುಟ್ಟಿದ.

**ವಿಶೇಷ ವಿಚಾರ:** ಹನ್ನೊಂದನೆಯ ಮನುವಿನ ಆಯುಃಪ್ರಮಾಣವನ್ನು ಕವಿ 'ಅಯುತಪ್ರಮಾಣ' ಎನ್ನುತ್ತಿದ್ದಾನೆ; ಅಯುತ ಎಂದರೆ ಎಣಿಕೆಗೆ ಸಿಕ್ಕಲಾರದಷ್ಟು ಎಂದು ಬೇಕಾದರೂ ಅರ್ಥಮಾಡಿಕೊಳ್ಳಬಹುದು, ಹತ್ತುಸಾವಿರ ಎಂಬ ಸಂಖ್ಯೆಯನ್ನಾದರೂ ಹೇಳಬಹುದು; ಆದರೆ ಎರಡನೆಯದೇ ಹೆಚ್ಚು ಸೂಕ್ತ ಎನಿಸುತ್ತದೆ. ಮನುಗಳ ಎತ್ತರ ಮತ್ತು ಆಯುಸ್ಸಿನ ಪ್ರಮಾಣ ಬರಬರುತ್ತ ಕಡಿಮೆಯಾಗುತ್ತದೆ. ಮನುಗಳು ಅನುಕ್ರಮವಾಗಿ ನೆರವೇರಿಸಿದ ಕಾರ್ಯದ ಮೂಲಕ ಮಾನವ ನಾಗರಿಕತೆಯ ಬೆಳವಣಿಗೆಯನ್ನಿಲ್ಲಿ ಗುರುತಿಸಲಾಗುತ್ತಿದೆ; ಹಾಗಾಗಿ ಎಣಿಕೆಗೆ ಸಿಗಲಾರದ ಸಂಖ್ಯೆಯೆಂಬ ಪೌರಾಣಿಕ ಕಲ್ಪನೆಯಿಂದ ಆರಂಭಗೊಂಡು ಎಣಿಕೆಗೆ ಸಿಕ್ಕುವ ಸಂಖ್ಯೆಯ ಇತಿಹಾಸದ ಕಡೆಗೆ ನಿರೂಪಣೆ ಸಾಗಿದಂತೆ ತೋರುತ್ತದೆ; ಹದಿಮೂರನೆಯ ಮನುವಿನದು 'ಪರಿಮಿತಾಯುಷ್ಯ' ಎಂದು ಕವಿ ಹೇಳುವುದನ್ನು ಗಮನಿಸಬೇಕು (ಪದ್ಯ ೬೪)

ಮಂಜಿನ ಮಟಿಂಗೊಳ್ ಮಸುಳ್ದಿರೆ
ಕಂಜಪ್ರಿಯಕುಮುದಬಂಧುಗಳ್ ಜನಮಂ ನೀ
ಮಂಜಲಿಮೆಂದಜೆವರ್ಮರ್ವಿನ
ಮಂಜವೆುಗೊಟ್ಟಜೆದು ನಿಜೆಸಿದಂ ಚಂದ್ರಾಭಂ ೬೧

**ಪದವಿಭಾಗ-ಅನ್ವಯ-ಅರ್ಥ:** ಕಂಜಪ್ರಿಯಕುಮುದಬಂಧುಗಳ್ ಮಂಜಿನ ಮೞೆಯೊಳ್ ಮಸುಳ್ದಿರೆ = ಸೂರ್ಯಚಂದ್ರರು ಮಂಜಿನ ಮಳೆ ಬಂದಾಗ ಕಾಂತಿಹೀನರಾಗಿದ್ದುದನ್ನು ಕಂಡು (ಹೆದರಿದ್ದ), ಜನಮಂ ಚಂದ್ರಾಭಂ ನೀಂ + ಅಂಜಲಿಂ + ಎಂದು + ಅಱಿವಂ + ಅರ್ಗಿನಂ = ಜನರನ್ನು ಚಂದ್ರಾಭನು 'ನೀವು ಹೆದರದಿರಿ' ಎಂದು ಅವರ ತಿಳಿವಳಿಕೆಯನ್ನು ಹೆಚ್ಚಿಸಿ, ಅಂಜಮೆಗೊಟ್ಟು + ಅಱಿದು ನಿಱಿಸಿದಂ = ಅಭಯ ನೀಡಿ ಸಮಾಧಾನಮಾಡಿದ.

**ಗದ್ಯಾನುಸರಣ:** ಸೂರ್ಯಚಂದ್ರರು ಮಂಜಿನ ಮಳೆ ಬಂದಾಗ ಕಾಂತಿಹೀನರಾಗಿದ್ದುದನ್ನು ಕಂಡು ಹೆದರಿದ್ದ ಜನರಿಗೆ ಚಂದ್ರಾಭನು 'ಹೆದರದಿರಿ' ಎಂದು ಸಮಾಧಾನಮಾಡಿ ಅವರ ತಿಳಿವಳಿಕೆಯನ್ನು ಹೆಚ್ಚಿಸಿದ.

**ವ। ಆತನ ಕಡೆಯೊಳಸಂಖ್ಯೇಯವರ್ಷಾಂತರವಿರಾಮದೊಳ್ ಪಂಚಸಪ್ತತ್ಯುತ್ತರ ಪಂಚಶರಾಸನೋತ್ಸೇಧಸಂಹನನುಂ ಅಯುತಾಂಗಾಯುಷ್ಯನುಮಾಗಿ ಪನ್ನೆರಡನೆಯ ಕುಲಧರಂ ಪುಟ್ಟಿದಂದು,**

**ಪದವಿಭಾಗ-ಅನ್ವಯ-ಅರ್ಥ:** ಆತನ ಕಡೆಯೊಳ್ + ಅಸಂಖ್ಯೇಯವರ್ಷ + ಅಂತರವಿರಾಮದೊಳ್ = ಅವನ ನಂತರ ಲೆಕ್ಕವಿರದಷ್ಟು ಕಾಲ ಕಳೆದ ಬಳಿಕ, ಪಂಚಸಪ್ತತಿ + ಉತ್ತರ ಪಂಚಶರಾಸನ + ಉತ್ಸೇಧಸಂಹನನುಂ = ಐನೂರೆಪ್ಪತ್ತೈದು ಬಿಲ್ಲುಗಳಷ್ಟು ಎತ್ತರದ ದೇಹವಿದ್ದ, ಅಯುತಾಂಗ + ಆಯುಷ್ಯನುಂ + ಆಗಿ ಪನ್ನೆರಡನೆಯ ಕುಲಧರಂ ಪುಟ್ಟಿದಂದು = ಹತ್ತು ಸಾವಿರ ವರ್ಷಗಳ ಆಯುಸ್ಸನ್ನು ಪಡೆದ ಹನ್ನೆರಡನೆಯ ಮನು ಹುಟ್ಟಿದಾಗ,

**ಗದ್ಯಾನುಸರಣ:** ಅವನ ನಂತರ ಲೆಕ್ಕವಿರದಷ್ಟು ಕಾಲ ಕಳೆದ ಬಳಿಕ ಐನೂರೆಪ್ಪತ್ತೈದು ಬಿಲ್ಲುಗಳಷ್ಟು ಎತ್ತರದ ದೇಹವಿದ್ದ ಹಾಗೂ ಹತ್ತು ಸಾವಿರ ವರ್ಷಗಳ ಆಯುಸ್ಸನ್ನು ಪಡೆದ ಹನ್ನೆರಡನೆಯ ಮನು ಹುಟ್ಟಿದ.

**ವಿಶೇಷ ವಿಚಾರ:** 'ಅಯುತಾಂಗಾಯುಷ್ಯ' ಬದಲು 'ನವುತಾಂಗಾಯುಷ್ಯ' ಎಲ್. ಬಸವರಾಜು ಆವೃತ್ತಿಯಲ್ಲಿ.

**ತುಱುಗಿದ ಮುಗಿಲಾ ಮುಗಿಲಿಂ**
**ದೆಱಗುವ ಮೞೆ ಕದಡಿ ಬರ್ಪ ತೊಱೆ ಬೆಟ್ಟು ತೆವರ್**
**ವೊಱಡುಪಜಲಧಿಗಳೆನೆ ಜನ**
**ಮುಱೆಯುಱೆಯೆ ದಲುದ್ದಬಿದ್ದವಾಂತ್ತುವನಿತಳಂ ೬೨**

**ಪದವಿಭಾಗ-ಅನ್ವಯ-ಅರ್ಥ:** ತುಱುಗಿದ ಮುಗಿಲ್ + ಆ ಮುಗಿಲಿಂದೆ + ಎಱಗುವ ಮೞೆ = (ಆಗಸವನ್ನೆಲ್ಲ) ಕವಿದ ಮೋಡ, ಆ ಮೋಡದಿಂದ ಬಿದ್ದ

ಮಳೆ. ಕದಡಿ ಬರ್ಪ ತೊಱೆ = ಒಟ್ಟಾಗಿ ಹರಿಯುವ ಪ್ರವಾಹವು, ಬೆಟ್ಟು ತೆವರ್ ಮೊಱಡು + ಉಪಜಲಧಿಗಳ್ + ಎನೆ = ಬೆಟ್ಟಗಳು ದಿಬ್ಬಗಳು ಮತ್ತು ದಿಣ್ಣೆಗಳ ನಡುವೆ ಸಣ್ಣ ಸಮುದ್ರಗಳಂತೆ ತುಂಬಿಕೊಂಡು, ಜನಂ + ಅಱೆ + ಅಱೆಯೆ ಅವನಿತಳಂ ಉದ್ದಬಿದ್ದಮಾಯ್ತು ದಲ್ = ಜನರು ನೋಡನೋಡುತ್ತಿದ್ದಂತೆ ಭೂತಳವೆಲ್ಲ ನೀರಿನಿಂದ ತುಂಬಿಕೊಂಡಿತಲ್ಲ!

**ಗದ್ಯಾನುಸರಣ:** ಆಗಸವನ್ನೆಲ್ಲ ಕವಿದ ಮೋಡದಿಂದ ಮಳೆ ಬಿದ್ದು ಒಗ್ಗೂಡಿ ಹರಿಯುವ ಪ್ರವಾಹವು ಬೆಟ್ಟಗುಡ್ಡಗಳು ಮತ್ತು ದಿಣ್ಣೆಗಳ ನಡುವೆ ಸಣ್ಣ ಸಮುದ್ರಗಳಂತೆ ತುಂಬಿಕೊಂಡು ಜನರು ನೋಡನೋಡುತ್ತಿದ್ದಂತೆಯೇ ಭೂತಳವೆಲ್ಲ ನೀರಿನಿಂದ ತುಂಬಿಕೊಂಡುಬಿಟ್ಟಿತು!

**ವ।** ಅಂತು ಕರ್ಮಭೂಮಿಸ್ಥಿತಿಯೊಳುಪನದ್ಯುಪಸಮುದ್ರಮುಪಪರ್ವತಂಗಳತಿಪ್ರಕಟಮಾಗೆ ಸೋಪಾನಪದ್ಧತಿಗಳೊಳ್ ಗಿರಿದುರ್ಗಾರೋಹಣಮುಮಂ ದ್ರೋಣಿಯಾನಪಾತ್ರಾದಿಗಳೊಳ್ ಜಲದುರ್ಗೋತ್ತರಣಮುಮನುಪದೇಶಂ ಗೆಯ್ದು,

**ಪದವಿಭಾಗ–ಅನ್ವಯ–ಅರ್ಥ:** ಅಂತು ಕರ್ಮಭೂಮಿಸ್ಥಿತಿಯೊಳ್ = ಹೀಗೆ ಜಗತ್ತು ಕರ್ಮಭೂಮಿಯಾಗಿ ಮಾರ್ಪಟ್ಟಾಗ, ಉಪನದಿ + ಉಪಸಮುದ್ರಂ + ಉಪಪರ್ವತಂಗಳ್ + ಅತಿಪ್ರಕಟಮಾಗೆ = ಉಪನದಿಗಳೂ ಉಪಸಮುದ್ರಗಳೂ ಸಣ್ಣ ಬೆಟ್ಟಗಳೂ ಎದ್ದು ಕಾಣಿಸಿದಾಗ, ಸೋಪಾನಪದ್ಧತಿಗಳೊಳ್ ಗಿರಿದುರ್ಗ + ಆರೋಹಣಮುಮಂ = ಮೆಟ್ಟಿಲುಗಳ ಮೂಲಕ ಬೆಟ್ಟಗುಡ್ಡಗಳನ್ನು ಹತ್ತುವುದನ್ನೂ, ದ್ರೋಣಿಯಾನಪಾತ್ರ + ಆದಿಗಳೊಳ್ = ದೋಣಿ ತೆಪ್ಪ ಮುಂತಾದವುಗಳ ಮೂಲಕ, ಜಲದುರ್ಗ + ಉತ್ತರಣಮುಮನ್ + ಉಪದೇಶಂಗೆಯ್ದು = ಜಲಾಶಯಗಳನ್ನು ದಾಟುವ ಕ್ರಮವನ್ನೂ ಹೇಳಿಕೊಟ್ಟು,

**ಗದ್ಯಾನುಸರಣ:** ಹೀಗೆ ಜಗತ್ತು ಕರ್ಮಭೂಮಿಯಾಗಿ ಮಾರ್ಪಟ್ಟಾಗ ಉಪನದಿಗಳೂ ಉಪಸಮುದ್ರಗಳೂ ಸಣ್ಣ ಬೆಟ್ಟಗಳೂ ಎದ್ದು ಕಾಣಿಸಿಕೊಂಡವು; ಆಗ ಮೆಟ್ಟಿಲುಗಳ ಮೂಲಕ ಬೆಟ್ಟಗುಡ್ಡಗಳನ್ನು ಹತ್ತುವುದನ್ನೂ, ದೋಣಿ ತೆಪ್ಪ ಮುಂತಾದವುಗಳ ಮೂಲಕ ಜಲಾಶಯಗಳನ್ನು ದಾಟುವ ಕ್ರಮವನ್ನೂ ಅವನು ಹೇಳಿಕೊಟ್ಟ.

ಇದು ಕರ್ಮಭೂಮಿಯುಂದಂ
ಪೊದಳ್ದು ತೋಱೆದುದು ಭೋಗಭೂಮಿಸ್ಥಿತಿ ಕುಂ
ದಿದುದೆಂದು ಪೇೞ್ದು ಮನು ಜಸ
ಮೊದವೆ ಮರುದ್ದೇವನೆಂಬ ಪೆಸರಂ ಪಡೆದಂ ೬೩

**ಪದವಿಭಾಗ-ಅನ್ವಯ-ಅರ್ಥ:** ಇದು ಕರ್ಮಭೂಮಿ + ಅಂದಂ ಪೊದಳ್ದು ತೋಜಿದುದು = ಇದು ಕರ್ಮಭೂಮಿಯ ರೀತಿ, ಅದು ಎದ್ದು ಕಾಣಿಸುತ್ತಿದೆ; ಭೋಗಭೂಮಿಸ್ಥಿತಿ ಕುಂದಿದುದು + ಎಂದು ಪೇೞ್ದು = ಭೋಗಭೂಮಿಯ ಮಹಿಮೆ ಕುಂದಿದೆ ಎಂದು ವಿವರಿಸಿ, ಮನು ಮರುದ್ದೇವನೆಂಬ ಪೆಸರಂ ಜಸಂ + ಒದವೆ ಪಡೆದಂ = ಮನುವು ಮರುದ್ದೇವ ಎಂಬ ಹೆಸರನ್ನು ಜಗತ್ತೇ ಅರಿಯುವಂತೆ ಪಡೆದು ಪ್ರಸಿದ್ಧನಾದ.

**ಗದ್ಯಾನುಸರಣ:** ಇದು ಕರ್ಮಭೂಮಿಯ ರೀತಿ, ಅದು ಈಗ ಎದ್ದು ಕಾಣಿಸುತ್ತಿದೆ; ಭೋಗಭೂಮಿಯ ಮಹಿಮೆ ಕುಂದಿಹೋಗಿದೆ ಎಂದು ವಿವರಿಸಿ ಈ ಮನುವು ಮರುದ್ದೇವ ಎಂಬ ಹೆಸರನ್ನು ಜಗತ್ತೇ ಅರಿಯುವಂತೆ ಪಡೆದು ಪ್ರಸಿದ್ಧನಾದ.

**ವ॥ ಆತನ ಕಡೆಯೊಳುಚಿತಮನ್ವಂತರವ್ಯತಿಕ್ರಮದೊಳ್**

**ಅರ್ಥ:** ಆತನ ಕಡೆಯೊಳ್ + ಉಚಿತಮನ್ವಂತರವ್ಯತಿಕ್ರಮದೊಳ್ = ಆತನ ನಂತರ ಸೂಕ್ತವಾಗಿ ಮನ್ವಂತರ ಬದಲಾವಣೆಗೊಂಡು,

**ಆತತಯಶೋವಿತಾನನ**
**ಜಾತಭಯಂ ಪೂರ್ವಪರಿಮಿತಾಯುಷ್ಯಂ ಸಂ**
**ಜಾತದಯಂ ಪಂಚಾಶದು**
**ಪೇತಧನುಃಪಂಚಶತಸಮುಚ್ಛ್ರಿತದೇಹಂ ೬೪**

**ಪದವಿಭಾಗ-ಅನ್ವಯ-ಅರ್ಥ:** ಆತತಯಶೋವಿತಾನನ್ + ಅಜಾತಭಯಂ = ಕೀರ್ತಿಪತಾಕೆಯನ್ನು ಹಾರಿಸಿದವನೂ ಭಯವಿಹೀನನೂ ಆದ, ಪೂರ್ವಪರಿಮಿತ + ಆಯುಷ್ಯಂ ಸಂಜಾತದಯಂ = ಪರಿಮಿತವಾದ ಆಯುಸ್ಸುಳ್ಳವನೂ ದಯಾಮಯನೂ, ಪಂಚಾಶತ್ + ಉಪೇತಧನುಃಪಂಚಶತಸಮುಚ್ಛ್ರಿತದೇಹಂ = ಐನೂರೈವತ್ತು ಬಿಲ್ಲಗಳಷ್ಟು ಎತ್ತರದ ದೇಹದವನೂ ಅದ,

**ಗದ್ಯಾನುಸರಣ:** ಕೀರ್ತಿವಂತನೂ ಭಯವಿಹೀನನೂ ಆದ ಮತ್ತು ಪರಿಮಿತವಾದ ಆಯುಸ್ಸುಳ್ಳವನೂ ದಯಾಮಯನೂ, ಐನೂರೈವತ್ತು ಬಿಲ್ಲಗಳಷ್ಟು ಎತ್ತರದ ದೇಹದವನೂ ಅದ,

**ವ॥ ಪದಿಮೂಱನೆಯ ಕುಲಧರಂ ಪುಟ್ಟಿ,**

**ಅರ್ಥ:** ಪದಿಮೂಱನೆಯ ಕುಲಧರಂ ಪುಟ್ಟಿ = ಹದಿಮೂರನೆಯ ಮನು ಹುಟ್ಟಿದ.

ಪಸರಿಸೆ ಜರಾಯುಪಟಲಂ
ಪಸುಗೂಸುಗಳೊಡಲೊಳವನಗಲ್ಚುವ ಮತಿಯಂ
ವಸುಮತಿಗಱೆಪಿ ಮಹಾತ್ಮಂ
ಪ್ರಸೇನಜಿನ್ನಾಮಧೇಯಮಂ ಪ್ರಕಟಿಸಿದಂ ೬೫

ಪದವಿಭಾಗ-ಅನ್ವಯ-ಅರ್ಥ: ಒಡಲೊಳ್ ಪಸುಗೂಸುಗಳ ಜರಾಯುಪಟಲಂ ಪಸರಿಸೆ = ತಾಯ ಗರ್ಭದಲ್ಲಿ ಹಸುಗೂಸುಗಳ ಸುತ್ತ ಗರ್ಭಕೋಶದ ಪೊರೆ ಆವರಿಸಲು, ಅವನ್ + ಅಗಲ್ಚುವ ಮತಿಯಂ ವಸುಮತಿಗೆ + ಅಱೆಪಿ = ಅವುಗಳನ್ನು ನಿವಾರಿಸುವ ಕ್ರಮವನ್ನು ತಿಳಿಸಿದ, ಮಹಾತ್ಮಂ = ಮಹಾತ್ಮನು. ಪ್ರಸೇನಜಿತ್ + ನಾಮಧೇಯಮಂ ಪ್ರಕಟಿಸಿದಂ = ಪ್ರಸೇನಜಿತು ಎಂಬ ಹೆಸರನ್ನು ಪಡೆದ.

ಗದ್ಯಾನುಸರಣ: ತಾಯ ಗರ್ಭದಲ್ಲಿ ಹಸುಗೂಸುಗಳ ಸುತ್ತ ಗರ್ಭಕೋಶದ ಪೊರೆ ಆವರಿಸಿರುವುದನ್ನು ನಿವಾರಿಸುವ ಕ್ರಮವನ್ನು ತಿಳಿಸಿದ ಮಹಾತ್ಮನು ಪ್ರಸೇನಜಿತು ಎಂಬ ಹೆಸರನ್ನು ಪಡೆದ.

ವ। ಆತನಿಂ ಬೞಿಯಮಸಂಖ್ಯೇಯವರ್ಷ ಪ್ರಮಿತಮನ್ವಂತರಾತಿಕ್ರಮದೊಳ್ ಪದಿನಾಲ್ಕನೆಯ ಮನು ಪುಟ್ಟಿದಂದು,

ಅರ್ಥ: ಆತನಿಂ ಬೞಿಯಂ + ಅಸಂಖ್ಯೇಯವರ್ಷಪ್ರಮಿತಮನ್ವಂತರ + ಅತಿಕ್ರಮದೊಳ್ ಪದಿನಾಲ್ಕನೆಯ ಮನು ಪುಟ್ಟಿದಂದು = ಆತನ ನಂತರ ಲೆಕ್ಕವಿರದಷ್ಟು ವರ್ಷಗಳ ಮನ್ವಂತರವು ಕಳೆದ ಬಳಿಕ ಹದಿನಾಲ್ಕನೆಯ ಮನುವು ಹುಟ್ಟಿದ; ಆಗ,

ಶಶಿವಿಶದಯಶಂ ನಿಜಕುಲ
ವಿಶೇಷಕಂ ಕರುಣಿ ಪಂಚವರ್ಗಾಧಿಕಪಂ
ಚಶತಶರಾಸನತನು ಬುಧ
ಕುಶೇಶಯೋದ್ಬೋಧಕರಲಸತ್ತಿಗ್ಮಕರಂ ೬೬

ಪದವಿಭಾಗ-ಅನ್ವಯ-ಅರ್ಥ: ಶಶಿವಿಶದಯಶಂ = ಚಂದ್ರನಂತೆ ಧವಳಕೀರ್ತಿಯನ್ನು ಪಡೆದವನೂ, ನಿಜಕುಲ ವಿಶೇಷಕಂ ಕರುಣಿ = ತನ್ನ ಕುಲದಲ್ಲಿ ಶ್ರೇಷ್ಠನೆನಿಸಿದವನೂ ದಯಾಮಯಿಯೂ, ಪಂಚವರ್ಗ + ಅಧಿಕಪಂಚಶತಶರಾಸನತನು = ಐನೂರಿಪ್ಪತ್ತೈದು ಬಿಲ್ಲುಗಳಷ್ಟು ಎತ್ತರದ ದೇಹದವನೂ, ಬುಧಕುಶೇಶಯ + ಉದ್ಬೋಧಕರಲಸತ್ + ತಿಗ್ಮಕರಂ = ವಿದ್ವಜ್ಜನರೆಂಬ ತಾವರೆಗಳನ್ನರಳಿಸುವ ಕಿರಣಗಳ ಸೂರ್ಯನಂತಿದ್ದವನೂ ಆದ,

ಗದ್ಯಾನುಸರಣ: ಚಂದ್ರನಂತೆ ಧವಳಕೀರ್ತಿಯನ್ನು ಪಡೆದವನೂ, ತನ್ನ

ಕುಲದಲ್ಲಿ ಶ್ರೇಷ್ಠನೆನಿಸಿದವನೂ, ದಯಾಮಯಿಯೂ, ಐನೂರಿಪ್ಪತ್ತೈದು ಬಿಲ್ಲುಗಳಷ್ಟು ಎತ್ತರದ ದೇಹದವನೂ, ವಿದ್ವಜ್ಜನರೆಂಬ ತಾವರೆಗಳನ್ನರಳಿಸುವ ಕಿರಣಗಳನ್ನುಳ್ಳ ಸೂರ್ಯನಂತಿದ್ದವನೂ ಆದ,

> ಸುಕದ ಕಣಿಯೆನಿಸಿಂಬಾ ಪು
> ಬ್ಬಕೋಟಿಪರಮಾಯು ನಾಭಿನಾಮಮಾಯ್ತು
> ರ್ಭಕರನಿಕರನಾಭಿನಾಳ
> ಪ್ರಕರನಿಕರ್ತನಮನಱಿಯೆ ಪೇೞ್ದುದಱಿಂದಂ ೬೭

**ಪದವಿಭಾಗ–ಅನ್ವಯ–ಅರ್ಥ:** ಸುಕದ ಕಣಿಯೆನಿಸಿ = ಅವನು ಸುಖದ ಗಣಿ ಎನಿಸಿ, ಆ ಪುಬ್ಬಕೋಟಿಪರಮಾಯು = ಪುಬ್ಬಕೋಟಿ ಆಯುಸ್ಸು ಪಡೆದವನಾದ, ಅರ್ಭಕರನಿಕರನಾಭಿನಾಳ ಪ್ರಕರನಿಕರ್ತನಮನ್ = ಮಕ್ಕಳ ಹೊಕ್ಕುಳ ಬಳ್ಳಿಯನ್ನು ಕತ್ತರಿಸುವ ಕ್ರಮವನ್ನು, ಅಱಿಯೆ ಪೇೞ್ದುದಱಿಂದಂ ನಾಭಿನಾಮಮಾಯ್ತು = ಹೇಳಿಕೊಟ್ಟದ್ದರಿಂದಾಗಿ ಅವನಿಗೆ ನಾಭಿ ಎಂಬ ಹೆಸರಾಯಿತು.

**ಗದ್ಯಾನುಸರಣ:** ಅವನು ಸುಖದ ಗಣಿ ಎನಿಸಿದ್ದ, ಪುಬ್ಬಕೋಟಿ ಆಯುಸ್ಸು ಅವನಿಗಿತ್ತು; ಮಕ್ಕಳ ಹೊಕ್ಕುಳ ಬಳ್ಳಿಯುನ್ನು ಕತ್ತರಿಸುವ ಕ್ರಮವನ್ನು ಹೇಳಿಕೊಟ್ಟದ್ದರಿಂದಾಗಿ ಅವನಿಗೆ ನಾಭಿ ಎಂಬ ಹೆಸರಾಯಿತು.

> ಸಹಜಮಣಿಭೂಷಣಂಗಳ
> ಬಹಳೋದ್ಯದ್ದೀಪ್ತಿಯಿಂದೆ ಚಂದ್ರಾದಿತ್ಯ
> ಗ್ರಹತಾರಾದಿನಕ್ಷತ್ರದಿ
> ನಹರ್ನಿಶಂ ಬೆಳಗುವಮರಗಿರಿಯುನೆ ಪೋಲ್ತಂ ೬೮

**ಪದವಿಭಾಗ–ಅನ್ವಯ–ಅರ್ಥ:** ಸಹಜಮಣಿಭೂಷಣಂಗಳ = ಸಹಜವಾದ ಮಣಿಖಚಿತ ಆಭರಣಗಳ, ಬಹಳ + ಉದ್ಯತ್ + ದೀಪ್ತಿಯಿಂದೆ = ಅಧಿಕವಾಗಿ ಬೆಳಗುವ ಕಾಂತಿಯಿಂದ, ಚಂದ್ರ + ಆದಿತ್ಯಗ್ರಹತಾರಾ + ಆದಿನಕ್ಷತ್ರದಿನ್ = ಚಂದ್ರಸೂರ್ಯಗ್ರಹ ಮತ್ತು ನಕ್ಷತ್ರಗಳಿಂದ, ಅಹರ್ನಿಶಂ ಬೆಳಗುವ + ಅಮರಗಿರಿಯನೆ ಪೋಲ್ತಂ = ಹಗಲು–ರಾತ್ರಿ ಬೆಳಗುವ ಮೇರುಗಿರಿಯಂತಿದ್ದ.

**ಗದ್ಯಾನುಸರಣ:** ಸಹಜವಾದ ಮಣಿಖಚಿತ ಆಭರಣಗಳ ಅಧಿಕವಾಗಿ ಬೆಳಗುವ ಕಾಂತಿಯಿಂದ ನಾಭಿಯು ಚಂದ್ರಸೂರ್ಯಗ್ರಹ ಮತ್ತು ನಕ್ಷತ್ರಗಳಿಂದ ಕೂಡಿ ಹಗಲು–ರಾತ್ರಿ ಬೆಳಗುವ ಮೇರುವಿನಂತಿದ್ದ.

> ಮಕರಸರಿಜ್ಜಳನಿಧಿಮ

ತ್ಸ್ಯಕೂರ್ಮಚಂದ್ರಾರ್ಕಲಕ್ಷಣಂ ಪದಯುಗದೊಳ್
ಪ್ರಕಟಂ ನೆಲಸೆ ಚರಾಚರ
ಮೆ ಕಾಲ್ಗೆ ಬಂದೆಱಗಿದಂದದಿಂ ಸೊಗಯಿಸುಗುಂ ೬೯

ಪದವಿಭಾಗ-ಅನ್ವಯ-ಅರ್ಥ: ಪದಯುಗದೊಳ್ ಮಕರ ಸರಿತ್ + ಜಳನಿಧಿ ಮತ್ಸ್ಯ ಕೂರ್ಮ ಚಂದ್ರ + ಅರ್ಕಲಕ್ಷಣಂ ಪ್ರಕಟಂ ನೆಲಸೆ = ನಾಭಿಯ ಎರಡೂ ಪಾದಗಳಲ್ಲಿ ಮೊಸಳೆ, ನದಿ, ಮೀನು, ಆಮೆ, ಚಂದ್ರ, ಸೂರ್ಯರ ಗುರುತುಗಳು ಕಾಣುವಂತಿದ್ದುದರಿಂದ. ಚರಾ + ಅಚರಮೆ ಕಾಲ್ಗೆ ಬಂದೆಱಗಿದಂದದಿಂ ಸೊಗಯಿಸುಗುಂ = ಜೀವವಿರುವ ಮತ್ತು ಜೀವವಿಲ್ಲದ ಎಲ್ಲವೂ ಅವನ ಕಾಲುಗಳಿಗೆ ನಮಸ್ಕರಿಸುವಂತೆ ಕಾಣುತ್ತಿತ್ತು.

ಗದ್ಯಾನುಸರಣ: ನಾಭಿಯ ಎರಡೂ ಪಾದಗಳಲ್ಲಿ ಮೊಸಳೆ, ನದಿ, ಮೀನು, ಆಮೆ, ಚಂದ್ರ, ಸೂರ್ಯರ ಗುರುತುಗಳು ಕಾಣುವಂತಿದ್ದುದರಿಂದ ಜೀವವಿರುವ ಮತ್ತು ಜೀವವಿಲ್ಲದ ಎಲ್ಲವೂ ಅವನ ಕಾಲುಗಳಿಗೆ ನಮಸ್ಕರಿಸುವಂತೆ ಕಾಣುತ್ತಿತ್ತು.

ಮನುಗಳೊಳೀತನೆ ಪದಿನಾ
ಲ್ಕನೆಯಾತಂ ತಪ್ಪದಪ್ಪನೆನಿಸಿಯುಮಂತಾ
ಮನುಗಳೊಳೀತನೇಂ ಮೊದಲಿಗೆ
ನೆನಿಸಿದನೇಂ ನಾಭಿಯೋ ಗುಣಗಣದಾ ೭೦

ಪದವಿಭಾಗ-ಅನ್ವಯ-ಅರ್ಥ: ಮನುಗಳೊಳ್ + ಈತನೆ ಪದಿನಾಲ್ಕನೆಯಾತಂ ತಪ್ಪದು + ಅಪ್ಪನ್ + ಎನಿಸಿಯುಂ = ಮನುಗಳಲ್ಲಿ ಈತ ಹದಿನಾಲ್ಕನೆಯವನು, ಸರಿಯೆ, ಹೀಗಿದ್ದರೂ, ಅಂತು + ಆ ಮನುಗಳೊಳ್ + ಈತನೇಂ ಮೊದಲಿಗೆನ್ + ಎನಿಸಿದಂ = ಆ ಮನುಗಳಲ್ಲಿ ಈತನೇ ಮೊದಲಿಗ ಎನ್ನಿಸಿಕೊಂಡ, ಏಂ ಗುಣಗಣದಾ ನಾಭಿಯೋ = ಈತ ಗುಣಸಮೂಹಗಳ ಕೇಂದ್ರವಾಗಿದ್ದನಲ್ಲ!

ಗದ್ಯಾನುಸರಣ: ಮನುಗಳಲ್ಲಿ ಈತ ಹದಿನಾಲ್ಕನೆಯವನು ಎಂಬುದು ನಿಜ, ಆದರೆ ಆ ಮನುಗಳಲ್ಲಿ ಈತನೇ ಮೊದಲಿಗ ಎನ್ನಿಸಿಕೊಂಡ – ಹೀಗೆ ಈತ ಗುಣಸಮೂಹಗಳ ಕೇಂದ್ರವಾಗಿದ್ದ.

ವ। ಆ ನಾಭಿರಾಜನ ಕಾಲದೊಳ್ ಪಯೋಧರಕಾಲಸ್ವರೂಪಂ ಚಿತ್ರರೂಪದಿಂ ನಭೋಭಾಗಮುಂ ಪರ್ವಿದಾಗಳ್,

ಅರ್ಥ: ಆ ನಾಭಿರಾಜನ ಕಾಲದೊಳ್ ಪಯೋಧರಕಾಲಸ್ವರೂಪಂ

ಚಿತ್ರರೂಪದಿಂ ನಭೋಭಾಗಮಂ ಪರ್ವಿದಾಗಳ್ = ಆ ನಾಭಿರಾಜನ ಕಾಲದಲ್ಲಿ ಮಳೆಗಾಲದ ಸ್ವರೂಪವು ಚಿತ್ರವಿಚಿತ್ರವಾಗಿ ಆಕಾಶವನ್ನೆಲ್ಲ ಹಬ್ಬಿತು.

**ತ್ರಿದಶಶರಾಸನಂ ತಳಿರ ತೋರಣಮಾಗಿರೆ ಕುಕ್ಕಿನೋಳಿ ಚೆ**
**ಲ್ವಿದಿರ್ಗೊಳೆ ಬರ್ಪ ಸೊನ್ನಲಿಗೆಯಾಗೆ ನಿಜಧ್ವನಿ ತೂರ್ಯವಾಗೆರಾ**
**ಗದಿನಿನರಶ್ಮಿಯೆಂಬ ಕಸಮಂ ಕಳೆದಂಬರಮೆಂಬ ಪಾಟಿನೇ**
**ಱೆದುದಸಿತಾಂಬುವಾಹಕುಳಮೆಂಬ ಕುಟುಂಬಕದಂಬಕೋತ್ಕರಂ ೭೧**

**ಪದವಿಭಾಗ–ಅನ್ವಯ–ಅರ್ಥ:** ತ್ರಿದಶಶರಾಸನಂ ತಳಿರ ತೋರಣಮಾಗಿರೆ = ಕಾಮನಬಿಲ್ಲು ಚಿಗುರಿನ ತೋರಣವಾಯಿತು, ಕುಕ್ಕಿನ + ಓಳಿ ಚೆಲ್ವಿದಿರ್ಗೊಳೆ ಬರ್ಪ ಸೊನ್ನಲಿಗೆಯಾಗೆ = ಕೊಕ್ಕರೆಗಳ ಸಾಲಿನ ಸೊಬಗು ಎದುರುಗೊಳ್ಳಲು ಬರುವ ಕಳಶಗಳಾದವು, ನಿಜಧ್ವನಿ ತೂರ್ಯಂ + ಆಗೆ = ಅವುಗಳ ಧ್ವನಿ ವಾದ್ಯವಾದನವಾಯಿತು, ರಾಗದಿನ್ + ಇನರಶ್ಮಿಯೆಂಬ ಕಸಮಂ ಕಳೆದು = ಪ್ರೀತಿಯಿಂದ ಸೂರ್ಯಕಿರಣಗಳೆಂಬ ಕಸವನ್ನು ಬಳಿದು, ಅಸಿತ + ಅಂಬುವಾಹಕುಳಮೆಂಬ ಕುಟುಂಬಕದಂಬಕ + ಉತ್ಕರಂ = ಕಪ್ಪಾದ ಮೋಡಗಳೆಂಬ ರೈತಕುಟುಂಬ ಸಮೂಹವು, ಅಂಬರಂ + ಎಂಬ ಪಾಟಿನ್ + ಏಱೆದುದು = ಆಕಾಶವೆಂಬ ಹೊಲವನ್ನು ಆವರಿಸಿತು.

**ಗದ್ಯಾನುಸರಣ:** ಕಾಮನಬಿಲ್ಲೇ ಚಿಗುರಿನ ತೋರಣ, ಕೊಕ್ಕರೆಗಳ ಹಿಂಡೇ ಸೊಬಗಿನಿಂದ ಎದುರುಗೊಳ್ಳಲು ಬರುವ ಕಳಶಗಳ ಸಾಲು, ಅವುಗಳ ಧ್ವನಿಯೇ ವಾದ್ಯವಾದನ – ಹೀಗೆ ಕಪ್ಪಾದ ಮೋಡಗಳೆಂಬ ರೈತಕುಟುಂಬಗಳು ಪ್ರೀತಿಯಿಂದ ಸೂರ್ಯಕಿರಣಗಳೆಂಬ ಕಸವನ್ನು ಬಳಿದು ಆಕಾಶವೆಂಬ ಹೊಲವನ್ನು ಆವರಿಸಿತು.

**ನವಮೇಘಧ್ವನಿ ಪುಷ್ಕರಧ್ವನಿ ತರತ್ತಾರಾಳಿ ಪುಷ್ಪೋಪಹಾ**
**ರವಿಳಾಸಂ ರುಚಿರಾಂಬುದಂ ಯವನಿಕಾವಿನ್ಯಾಸವಾದಲ್ಲಿ ಚಿ**
**ತ್ರವಿಧಂ ಬಂದವಸರ್ಪಿಣೀನಟನ ಪೇಟಿಯ್ದೊಂದಂದಿಂದೆತ್ತವಾ**
**ಡೆ ವಿಯದ್ರಂಗದೊಳಂದದೇಂ ನಲಿದುದೋ ವಿದ್ಯುನ್ನಟೀನರ್ತನಂ೭೨**

**ಪದವಿಭಾಗ–ಅನ್ವಯ–ಅರ್ಥ:** ನವಮೇಘಧ್ವನಿ ಪುಷ್ಕರಧ್ವನಿ = ಹೊಸತು ಮೋಡಗಳ ಗುಡುಗೇ ಡಮರುಗಧ್ವನಿ, ತರತ್ + ತಾರಾ + ಆಳಿ ಪುಷ್ಪೋಪಹಾರವಿಳಾಸಂ = ಹೊಳೆಯುವ ನಕ್ಷತ್ರಸಾಲೇ ಹೂವಿನ ಹಾರ, ರುಚಿರ + ಅಂಬುದಂ ಯವನಿಕಾವಿನ್ಯಾಸಂ = ಸೊಬಗಿನ ಮೋಡವೇ ತೆರೆಯ ರೀತಿ, ಆದಲ್ಲಿ = ಹೀಗಾಗಿ, ಚಿತ್ರವಿದಂ ಬಂದ + ಅವಸರ್ಪಿಣೀನಟನ = ಆಕರ್ಷಕವಾಗಿ ಬಂದ ಅವಸರ್ಪಿಣಿಕಾಲವೆಂಬ ನರ್ತಕನ, ಪೇಟ್ಟಿ + ಒಂದು + ಅಂದದಿಂದೆ = ಒಂದು ರೀತಿಯಿಂದ, ಅಂದು + ವಿಯತ್ + ರಂಗದೊಳ್ + ಎತ್ತಂ + ಆಡೆ

= ಆಗ ಆಗಸರಂಗದಲ್ಲಿ ಎಲ್ಲೆಲ್ಲೂ ಕುಣಿಯಲು, ವಿದ್ಯುತ್ + ನಟೀನರ್ತನಂ ಅದೇಂ ನಲಿದುದೋ = ಮಿಂಚೆಂಬ ನಟಿಯ ನರ್ತನವು ಅದೆಷ್ಟು ಸೊಗಸಿತೋ!

**ಗದ್ಯಾನುಸರಣ:** ಹೊಸತು ಮೋಡಗಳ ಗುಡುಗೇ ಡಮರುಗಧ್ವನಿ, ಹೊಳೆಯುವ ನಕ್ಷತ್ರಸಾಲೇ ಹೂವಿನ ಹಾರ, ಸೊಬಗಿನ ಮೋಡವೇ ತೆರೆಯ ರೀತಿಯಾಗಲು ಆಕರ್ಷಕ ವೇಷದಿಂದ ಬಂದ ಅವಸರ್ಪಿಣಿಕಾಲವು ನರ್ತಕನ ರೀತಿಯಲ್ಲಿ ಆಗಸರಂಗವಲ್ಲೆಡೆ ಕುಣಿಯಲು – ಮಿಂಚೆಂಬ ನಟಿಯ ನರ್ತನವು ಕಣ್ತುಂಬಿ ಸೊಗಸಿತು!

**ವಿಶೇಷ ವಿಚಾರ:** ಹಿಂದೆ ಇಲ್ಲದಿದ್ದ ಪ್ರಾಕೃತಿಕ ಬದಲಾವಣೆಗಳು ಆಗತೊಡಗಿದವು; ಹಿಂದೆ ಹೇಳಿದವುಗಳ ಜೊತೆಯಲ್ಲಿ ಋತುವ್ಯತ್ಯಾಸಗಳುಂಟಾಗಿ ಮಳೆಗಾಲ ಬಂದ ಚಿತ್ರಣ ಇಲ್ಲಿದೆ; ಧರ್ಮ ಸತ್ಯ ನ್ಯಾಯ ಆಯುಸ್ಸು ಬಲ ಸುಖ ಮುಂತಾದವು ಹೆಚ್ಚಿರುವ ಉತ್ಸರ್ಪಿಣೀಕಾಲ ಹೋಗಿ ಆ ಗುಣಗಳು ಬಬರುತ್ತ ಕಡಿಮೆಯಾಗುವ ಅವಸರ್ಪಿಣಿಕಾಲ ಬಂದಿದೆ; ಭೋಗಭೂಮಿ ಕರ್ಮಭೂಮಿ ಯಾಗಿ ಬದಲಾಗಿದೆ: ಹೀಗಾಗಿ ಮನುಷ್ಯ ತನ್ನ ದುಡಿಮೆಯಿಂದ ಬಾಳಬೇಕಾದ ಕಾಲ ಉಂಟಾಗಿದೆ. ಪಂಪ ಈ ಪದ್ಯದಲ್ಲಿ ಮಳೆಗಾಲದ ಆರ್ಭಟಸಹಿತವಾದ ದೃಶ್ಯವನ್ನು ವಿರಾಟ್ ನೃತ್ಯಕ್ಕೆ ಹೋಲಿಸಿ ಮಹಾದೃಶ್ಯವೊಂದನ್ನು ಕಣ್ಮುಂದೆ ತರುತ್ತಾನೆ. ಮಿಂಚನ್ನು ನರ್ತಕಿಗೆ ಹೋಲಿಸಿರುವ ಚೆಲುವನ್ನು ಪರಿಭಾವಿಸಿ.

**ವ॥ ಅಂತು ಕೊಂಡ ಪದವಟಿಗೆಗಳೊಳ್ ಕಳಮ ಷಷ್ಟಿಕಾ ವ್ರೀಹಿ ಯವನಾಳ ಗೋಧೂಮ ಕಂಗು ಶ್ಯಾಮಾಕ ಕೋದ್ರವ ನೀವಾರ ತಿಳಾತಸಿ ಮಸೂರಿಕಾ ಕುಳಿತ್ಥಮುದ್ಗ ಮಾಷರಾಜಮಾಷಾಢಕೀನಿಷ್ಪಾವ ಚಣಕಕುಸುಂಭ ಕಾರ್ಪಾಸಸರ್ಷಪಜೀರಕಧಾನ್ಯಕಾದಿ ವಿವಿಧಧಾನ್ಯಭೇದಂಗಳುಂ ಕಲ್ಪವೃಕ್ಷ ಪರಿಕ್ಷಯದೊಳ್ ಪ್ರಜಾಜೀವನೋಪಾಯಹೇತು ಗಳಕೃಷ್ಟಪಚ್ಯಂಗಳಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹೀಗೆ, ಕೊಂಡ ಪದವಟಿಗೆಗಳೊಳ್ = ಬಿದ್ದ ಹದವಾದ ಮಳೆಯ ಕಾರಣದಿಂದ, ಕಳಮ = ಬತ್ತ, ಷಷ್ಟಿಕಾವ್ರೀಹಿ = ಅರುವತ್ತು ದಿನಗಳಲ್ಲಿ ಬೆಳೆ ಬರುವ ಬತ್ತ, ಯವನಾಳ = ಜೋಳ, ಗೋಧೂಮ = ಗೋದಿ, ಕಂಗು = ನವಣೆ, ಶ್ಯಾಮಾಕ = ಸಾವೆ, ಕೋದ್ರವ = ಹಾರಕ, ನೀವಾರ = ಬರಗು, ತಿಳ = ಎಳ್ಳು, ಅತಸಿ = ಅಗಸೆ, ಮಸೂರಿಕಾ = ಕಡಲೆ ಕಾಳು, ಕುಳಿತ್ಥ = ಹುರುಳಿ, ಮುದ್ಗ = ಹೆಸರು, ಮಾಷ = ಉದ್ದು, ರಾಜಮಾಷ = ಅಲಸಂದೆ, ಆಢಕೀ = ತೊಗರಿ, ನಿಷ್ಪಾವ = ಅವರೆ, ಚಣಕ = ಕಡಲೆ, ಕುಸುಂಭ = ಕುಸುಬೆ, ಕಾರ್ಪಾಸ = ಹತ್ತಿ, ಸರ್ಷಪ = ಸಾಸಿವೆ, ಜೀರಕ =

ಜೀರಿಗೆ, ಧಾನ್ಯಕಾ = ಕೊತ್ತಂಬರಿ, ಆದಿ ವಿವಿಧಧಾನ್ಯಭೇದಂಗಳುಂ = ಮುಂತಾದ ವಿವಿಧ ಆಹಾರಧಾನ್ಯಗಳು, ಕಲ್ಪವೃಕ್ಷಪರಿಕ್ಷಯದೊಳ್ = ಕಲ್ಪವೃಕ್ಷಗಳು ಕ್ಷೀಣಿಸಿದ ಸಂದರ್ಭದಲ್ಲಿ, ಪ್ರಜಾಜೀವನೋಪಾಯಹೇತುಗಳ್ = ಜನರು ಜೀವಿಸಲು ಕಾರಣಗಳಾದ, ಅಕೃಷ್ಟಪಚ್ಯಂಗಳಾಗಿ = ತಾವಾಗಿ ಬೆಳೆದವುಗಳಾಗಿ,

**ಗದ್ಯಾನುಸರಣ:** ಹೀಗೆ, ಕಲ್ಪವೃಕ್ಷಗಳು ಕ್ಷೀಣಿಸಿದ ಸಂದರ್ಭದಲ್ಲಿ ಬಿದ್ದ ಹದವಾದ ಮಳೆಯ ಕಾರಣದಿಂದ ಬತ್ತ, ಅರುವತ್ತು ದಿನಗಳಲ್ಲಿ ಬೆಳೆ ಬರುವ ಬತ್ತ, ಜೋಳ, ಗೋದಿ, ನವಣೆ, ಸಾವೆ, ಹಾರಕ, ಬರಗು, ಎಳ್ಳು, ಅಗಸೆ, ಕಡಲೆ ಕಾಳು, ಹುರುಳಿ, ಹೆಸರು, ಉದ್ದು, ರಾಜಮಾಷ, ಅಲಸಂದೆ, ತೊಗರಿ, ಅವರೆ, ಕಡಲೆ, ಕುಸುಬೆ, ಹತ್ತಿ, ಸಾಸಿವೆ, ಜೀರಿಗೆ, ಕೊತ್ತಂಬರಿ ಮುಂತಾದ ಜನರು ಜೀವಿಸಲು ಕಾರಣಗಳಾದ ವಿವಿಧ ಆಹಾರಧಾನ್ಯಗಳು ತಾವಾಗಿ ತಾವು ಬೆಳೆದವು.

**ವಿಶೇಷ ವಿಚಾರ:** ಎಲ್. ಬಸವರಾಜು ಅವರ ಆವೃತ್ತಿಯಲ್ಲಿ 'ಜೀರಕ'ದ ಬದಲು 'ಮರೀಚ' ಇದೆ.

**ಬೆಳೆದೆಱಗಿರೆಯುಮವಂ ಪು**
**ಲ್ಗಳೆಂದೆ ಬಗೆದಳುರ್ವ ಪಸಿವನಾಮೇಗೊಂಡೇಂ**
**ಗಳ ಗೆಯ್ವೆವೆಂದು ಪಶ್ಚಿಮ**
**ಕುಳಧರನೆನೆ ನೆಗಟ್ದ ನಾಭಿಯಲ್ಲಿಗೆ ಬಂದು** ೭೩

**ಪದವಿಭಾಗ–ಅನ್ವಯ–ಅರ್ಥ:** ಬೆಳೆದು + ಎಱಗಿರೆಯುಂ = ಬೆಳೆದು ಒರಗಿದ್ದರೂ ಕೂಡ, ಅವಂ ಪುಲ್ಗಳೆಂದೆ ಬಗೆದು = ಅವುಗಳನ್ನು ಹುಲ್ಲುಗಳೆಂದು ತಿಳಿದು, ಅಳುರ್ವ ಪಸಿವನ್ + ಆಂ + ಏಗೊಂಡು + ಏಂ ಗಳ ಗೆಯ್ವೆವು ಎಂದು = ಪೀಡಿಸುವ ಹಸಿವನ್ನು ಏನನ್ನು ತಿಂದು ಹೇಗೆ ಬದುಕೋಣ ಎಂದು, ಪಶ್ಚಿಮಕುಳಧರನ್ + ಎನೆ ನೆಗಟ್ದ ನಾಭಿಯಲ್ಲಿಗೆ ಬಂದು = ಕೊನೆಯ ಮನು ಎಂದು ಪ್ರಸಿದ್ಧನಾದ ನಾಭಿರಾಜನ ಬಳಿ ಬಂದು

**ಗದ್ಯಾನುಸರಣ:** ಬೆಳೆದು ಒರಗಿದ್ದರೂ ಕೂಡ ಅವುಗಳನ್ನು ಹುಲ್ಲುಗಳೆಂದು ತಿಳಿದ ಜನರು, 'ಏನನ್ನು ತಿಂದು ಈ ಪೀಡಿಸುವ ಹಸಿವನ್ನು ನೀಗಿಕೊಳ್ಳೋಣ' ಎಂದು ಕೊನೆಯ ಮನು ಎಂದು ಪ್ರಸಿದ್ಧನಾದ ನಾಭಿರಾಜನ ಬಳಿ ಬಂದರು.

**ಬಂದತಿದೀನಮುಖರ್ ನೆರೆ**
**ದೆಂದರ್ ಮರವಟ್ಟು ಕುಡದೆ ಕಲ್ಪಮಹೀಜಂ**
**ನಿಂದುವು ಜಠರಾನಳನಿಂ**
**ಬೆಂದುವು ತನು ಬಾಟ್ಟುಪಾಯಮಾವುದು ದೇವಾ** ೭೪

**ಪದವಿಭಾಗ-ಅನ್ವಯ-ಅರ್ಥ:** ಬಂದು + ಅತಿದೀನಮುಖರ್ ನೆರೆದು + ಎಂದರ್ = ಹಾಗೆ ಬಂದ ದೈನ್ಯದ ಮುಖ ಹೊತ್ತ ಜನರು ಹೀಗೆಂದರು, ದೇವಾ = ದೇವರೇ, ಮರವಟ್ಟು ಕಲ್ಪಮಹೀಜಂ ಕುಡದೆ ನಿಂದುವು = ಕೊರಡುಗಳಂತೆ ಕಲ್ಪವೃಕ್ಷಗಳು ಆಹಾರವನ್ನು ನೀಡದೆ ನಿಂತುಕೊಂಡಿವೆ, ತನು ಜಠರ + ಅನಳನಿಂ ಬೆಂದುವು = ನಮ್ಮ ದೇಹಗಳು ಹೊಟ್ಟೆಯ ಉರಿಯಿಂದ ಬೆಂದುಹೋಗಿವೆ, ಬಾಟ್ಟೆ + ಉಪಾಯಂ + ಆವುದು = ನಾವು ಬದುಕುವ ಬಗೆ ಹೇಗೆ,

**ಗದ್ಯಾನುಸರಣ:** ಹಾಗೆ ಬಂದ ದೈನ್ಯದ ಮುಖ ಹೊತ್ತ ಜನರು ಹೀಗೆಂದರು: 'ಸ್ವಾಮಿ, ಆಹಾರವನ್ನು ನೀಡದೆ ಕಲ್ಪವೃಕ್ಷಗಳು ಕೊರಡುಗಳಂತೆ ನಿಂತುಕೊಂಡಿವೆ, ನಮ್ಮ ದೇಹಗಳು ಹಸಿವಿನ ಉರಿಯಿಂದ ಬೆಂದುಹೋಗಿವೆ, ನಾವು ಬದುಕುವ ಬಗೆ ಹೇಗೆ?'

ಒಡಲನುಣಿಸಿಲ್ಲದಾಗಳ್
ನಡಪುವುದರಿದಾಮನನ್ಯಶರಣರೆಮೆಮ್ಮಂ
ನಡೆಪುವುಪದೇಶದಿನಲ್ಲದೊ
ಡೊಡಗಟಿದಪೆವಸುವನಿಲ್ಲಿ ನಿನ್ನಡಿವೊದಲೊಳ್ ೭೫

**ಪದವಿಭಾಗ-ಅನ್ವಯ-ಅರ್ಥ:** ಉಣಿಸಿಲ್ಲದಾಗಳ್ ಒಡಲನ್ ನಡಪುವುದು + ಅರಿದು = ಆಹಾರವಿಲ್ಲದಿದ್ದರೆ ದೇಹವನ್ನು ಉಳಿಸಿಕೊಳ್ಳುವುದು ಅಸಾಧ್ಯ, ಆಂ + ಅನನ್ಯಶರಣರೆಂ = ನಾವು ಬೇರೆ ದಾರಿ ಕಾಣದವರು, ಎಮ್ಮಂ ನಡೆಪುವ + ಉಪದೇಶದಿನ್ = ನಾವು ಬದುಕುವ ಉಪಾಯವನ್ನು (ತಿಳಿಸಿ), ಅಲ್ಲದೊಡೆ ಇಲ್ಲಿ ನಿನ್ನಡಿ ಮೊದಲೊಳ್ ಅಸುವನ್ + ಒಡ + ಕಟಿದಪೆವು = ಇಲ್ಲದಿದ್ದರೆ, ಇಲ್ಲಿಯೇ ನಿನ್ನ ಪಾದಗಳ ಬುಡದಲ್ಲಿ ಪ್ರಾಣಗಳನ್ನು ಒಟ್ಟಿಗೇ ಬಿಡುತ್ತೇವೆ.

**ಗದ್ಯಾನುಸರಣ:** 'ಆಹಾರವಿಲ್ಲದಿದ್ದರೆ ಬದುಕುವುದು ಅಸಾಧ್ಯ; ನಮಗೆ ಬೇರೆ ದಾರಿ ಕಾಣದು, ನಾವು ಬದುಕುವ ಉಪಾಯವನ್ನು ತಿಳಿಸಿಕೊಡಿ; ಇಲ್ಲದಿದ್ದರೆ, ಇಲ್ಲಿಯೇ ನಿಮ್ಮ ಪಾದಗಳ ಬಳಿಯೇ ಪ್ರಾಣಗಳನ್ನು ಒಟ್ಟಿಗೇ ಬಿಟ್ಟು ಸಾಯುತ್ತೇವೆ.'

ಎಂಬುದುಮಂಜದಿರೆಂದಮೃ
ತಾಂಬುವನುಗುಳ್ವಭಯವಚನದಿಂದಾಜಿಸಿ ರ
ಕ್ತಾಂಬುಜದ ಚೆಲ್ವನಭಯಕ
ರಾಂಬುಜಮುಳವಡಿಸೆ ನಾಭಿರಾಜಂ ನುಡಿದಂ ೭೬

**ಪದವಿಭಾಗ-ಅನ್ವಯ-ಅರ್ಥ:** ಎಂಬುದುಂ = ಎಂದು ಹೇಳಿಕೊಂಡಾಗ, ಅಂಜದಿರಿ + ಎಂದು + ಅಮೃತಾಂಬುವನ್ + ಉಗುಳ್ವಿ = ಹೆದರಬೇಡಿ, ಎಂದು ಅಮೃತವನ್ನು ಚೆಲ್ಲುವ, ಅಭಯವಚನದಿಂದೆ + ಆಜಿಸಿ = ಮಾತುಗಳಿಂದ ಹೆದರಿಕೆಯನ್ನು ಕಳೆದು, ರಕ್ತಾಂಬುಜದ ಚೆಲ್ವನ್ ಅಭಯಕರಾಂಬುಜಂ ಅಳವಡಿಸೆ ನಾಭಿರಾಜಂ ನುಡಿದಂ = ಕೆಂದಾವರೆಯಂತಹ ಅಭಯ ನೀಡುವ ತನ್ನ ಕರಕಮಲಗಳಿಂದ ನಾಭಿರಾಜನು ನುಡಿದ.

**ಗದ್ಯಾನುಸರಣ:** ಎಂದು ಹೇಳಿಕೊಂಡಾಗ, ಹೆದರಬೇಡಿ ಎಂದು ತನ್ನ ಅಮೃತದಂತಹ ಮಾತುಗಳಿಂದ ಅವರ ಹೆದರಿಕೆಯನ್ನು ಕಳೆದು, ಕೆಂದಾವರೆಯಂತಹ ಅಭಯ ನೀಡುವ ತನ್ನ ಕರಕಮಲಗಳಿಂದ ನಾಭಿರಾಜನು ನುಡಿದ.

**ಬಗೆಯಲ್ವೇಡ ಸುಧಾಮಹೀರುಹದೊಳಾದೌದಾರ್ಯಮಂ ವೀರ್ಯಮೀ**
**ಯುಗದೊಳ್ ತತ್ತರುಗಿಲ್ಲ ಪಕ್ವಫಲನಮ್ರಾಮ್ರಾದಿಭೂಜಂಗಳೀ**
**ಯುಗದೊಳ್ ಕಲ್ಪಕುಜಂಗಳಿಂತಿವಱ ಪಣ್ ಭೋಜ್ಯಂಗಳಾರೋಗ್ಯಹೇ**
**ತುಗಳೀ ಪಣ್ಗಳೆ ಭೋಜ್ಯಮೆಂದು ವಿಳಸದ್ಭಾಗ್ಯೋದಯಂ ತೋಱಿದಂ೭೭**

**ಪದವಿಭಾಗ-ಅನ್ವಯ-ಅರ್ಥ:** ಸುಧಾಮಹೀರುಹದೊಳ್ + ಆದ + ಔದಾರ್ಯಮಂ ಬಗೆಯಲ್ವೇಡ = ಕಲ್ಪವೃಕ್ಷಗಳಲ್ಲಿ ಹಿಂದಿನ ಔದಾರ್ಯವನ್ನು ನಿರೀಕ್ಷಿಸಬೇಡಿ; ಈ ಯುಗದೊಳ್ ತತ್ + ತರುಗೆ ವೀರ್ಯಂ ಇಲ್ಲ = ಈ ಯುಗದಲ್ಲಿ ಆ ಮರಕ್ಕೆ ಅಂತಹ ಸಾಮರ್ಥ್ಯ ಇಲ್ಲ; ಪಕ್ವಫಲನಮ್ರ + ಆಮ್ರ + ಆದಿಭೂಜಂಗಳ್ ಈ ಯುಗದೊಳ್ ಕಲ್ಪಕುಜಂಗಳ್ = ಮಾಗಿದ ಹಣ್ಣುಗಳಿಂದ ಬಾಗಿದ ಮಾವು ಮುಂತಾದ ಮರಗಳೇ ಈ ಯುಗದಲ್ಲಿ ಕಲ್ಪವೃಕ್ಷಗಳು; ಇಂತು + ಇವಱ ಪಣ್ ಭೋಜ್ಯಂಗಳ್ + ಆರೋಗ್ಯಹೇತುಗಳ್ = ಹೀಗೆ ಇವುಗಳ ಹಣ್ಣುಗಳು ತಿನ್ನಬಹುದಾದವು ಮತ್ತು ಆರೋಗ್ಯಕ್ಕೆ ಕಾರಣವಾದವು; ಈ ಪಣ್ಗಳೆ ಭೋಜ್ಯಂ = ಈ ಹಣ್ಣುಗಳು ತಿನ್ನಬಹುದಾದವು, ಎಂದು ವಿಳಸತ್ + ಭಾಗ್ಯ + ಉದಯಂ ತೋಱಿದಂ = ಶ್ರೇಷ್ಠ ಭಾಗ್ಯೋದಯನಾದ ಅವುಗಳನ್ನು ತೋರಿಸಿಕೊಟ್ಟ.

**ಗದ್ಯಾನುಸರಣ:** 'ಕಲ್ಪವೃಕ್ಷಗಳಲ್ಲಿ ಹಿಂದಿನ ಔದಾರ್ಯವನ್ನು ನಿರೀಕ್ಷಿಸಬೇಡಿ; ಆ ಮರಕ್ಕೆ ಈ ಯುಗದಲ್ಲಿ ಅಂತಹ ಸಾಮರ್ಥ್ಯ ಇಲ್ಲ; ಮಾಗಿದ ಹಣ್ಣುಗಳಿಂದ ಕೂಡಿದ ಮಾವು ಮುಂತಾದ ಮರಗಳೇ ಈ ಯುಗದಲ್ಲಿ ಕಲ್ಪವೃಕ್ಷಗಳು; ಇವುಗಳ ಹಣ್ಣುಗಳು ತಿನ್ನಬಹುದಾದವು ಮತ್ತು ಆರೋಗ್ಯಕ್ಕೆ ಕಾರಣವಾದವು; ಈ ಹಣ್ಣುಗಳು ತಿನ್ನಲು ಯೋಗ್ಯವಾದವು' ಎಂದು ಭಾಗ್ಯೋದಯನಾದ ಆತನು ಅವುಗಳನ್ನು ತೋರಿಸಿಕೊಟ್ಟ.

**ವಿಶೇಷ ವಿಚಾರ:** ಪಂಪನಿಗೆ ಮಾವು ತುಂಬ ಇಷ್ಟವೆಂಬುದು ಆಗಾಗ್ಗೆ ಅದರ ಬಗ್ಗೆ ಪ್ರಸ್ತಾಪಿಸುವ ರೀತಿಯಿಂದ ತಿಳಿಯಬಹುದು; ಪಂಪಭಾರತದಲ್ಲಿ

ಕಾವ್ಯ ಹೊಸತಾಗುವುದು ಮಾರ್ಗದಲ್ಲಿ ದೇಸಿ ಸೇರಿದಾಗ ಎಂಬುದನ್ನು ವಿವರಿಸಲು ಆರಿಸಿಕೊಳ್ಳುವುದು ವಸಂತಕಾಲದ ಮಾವಿನ ಮರವನ್ನು.

**ವ। ತೋಱಿ ಫಳಪಾಕಾಂತಂಗಳಪ್ಪೌಷಧಿಗಳಂ ಸ್ತಂಬಕರ್ಯಾದಿ ನಾನಾವಿಧ ಧಾನ್ಯಂಗಳಂ ಪದನಱಿದುಡುಗುವ ಕಣಂ ಮಾಡುವೊಕ್ಕುವಡಕುವ ಬಯ್ತಿಡುವಕ್ಕಿಮಾಡುವ ವಿವಿಧಭಾಜನಂಗಳೊಳಡುವ ಘೃತಲವಣತೈಲಕ್ಷೀರ ದಧಿವ್ಯಂಜನಗಳಂಗಳೊಳ್ ಸಂಸ್ಕಾರಂ ಮಾಡುವಳವಿ ಯಱಿದುಮ್ಬುವು ಪಾಯುಮಂ ಪುಂಡ್ರೇಕ್ಷುದಂಡಂಗಳಂ ಕಡಿಕಡಿದು ಯಂತ್ರ ಪೀಡನೆಯಿಂ ರಸಂಗೊಳ್ವ ತೆಱನುಮನಱಿಸಿ ಪೇೞ್ದು,**

**ಪದವಿಭಾಗ-ಅನ್ವಯ-ಅರ್ಥ:** ತೋಱಿ = ಹಾಗೆ ತೋರಿಸಿ, ಫಳಪಾಕ + ಅಂತಂಗಳಪ್ಪ + ಔಷಧಿಗಳಂ = ಫಸಲು ಬಿಟ್ಟ ಸಸ್ಯಗಳನ್ನೂ, ಸ್ತಂಬಕರಿ + ಆದಿ ನಾನಾವಿಧ ಧಾನ್ಯಂಗಳಂ = ಬತ್ತವೇ ಮುಂತಾದ ಹಲವು ಧಾನ್ಯಗಳನ್ನು, ಪದನ್ + ಅಱಿದು = ಹದ ತಿಳಿದು, ಉಡುಗುವ = ಶುದ್ಧಿ ಮಾಡುವ, ಕಣಂ ಮಾಡುವ = ಕಣ ಮಾಡುವ, ಒಕ್ಕುವ + ಅಡಕುವ = ಕಾಲನ್ನು ಬೇರ್ಪಡಿಸಿ ರಾಸಿ ಮಾಡುವ, ಬಯ್ತಿಡುವ = ಕಾಪಾಡುವ, ಅಕ್ಕಿಮಾಡುವ = ಅಕ್ಕಿ ಮಾಡುವ, ವಿವಿಧಭಾಜನಂಗಳೊಳ್ + ಅಡುವ = ವಿವಿಧ ಪಾತ್ರೆಗಳಲ್ಲಿ ಬೇಯಿಸುವ, ಘೃತಲವಣತೈಲಕ್ಷೀರದಧಿವ್ಯಂಜನಗಳಂಗಳೊಳ್ = ತುಪ್ಪ ಉಪ್ಪು ಹಾಲು ಮೊಸರು ಮುಂತಾದ ವ್ಯಂಜನಗಳೊಡನೆ, ಸಂಸ್ಕಾರಂ ಮಾಡುವ = ಪರಿಷ್ಕರಿಸುವ, ಅಳವಿ + ಅಱಿದು + ಉಮ್ಬುವ + ಉಪಾಯಮಂ = ಸಾಮರ್ಥ್ಯಕ್ಕೆ ತಕ್ಕಂತೆ ಊಟ ಮಾಡುವ ಬಗೆಯನ್ನೂ, ಪುಂಡ್ರ + ಇಕ್ಷುದಂಡಂಗಳಂ = ಪಟ್ಟೆ ಕಬ್ಬು ಜಲ್ಲೆಗಳನ್ನು, ಕಡಿಕಡಿದು = ತುಂಡು ತುಂಡು ಮಾಡಿ, ಯಂತ್ರಪೀಡನೆಯಿಂ ರಸಂ + ಕೊಳ್ವ ತೆಱನುಮನ್ = ಗಾಣದಲ್ಲಿ ಹಿಂಡಿ ರಸವನ್ನು ಪಡೆಯುವ ವಿಧಾನವನ್ನು, ಅಱಿಯೆ ಪೇೞ್ದು = ತಿಳಿಸಿಕೊಟ್ಟು,

**ಗದ್ಯಾನುಸರಣ:** ಹಾಗೆ ತೋರಿಸಿ, ಫಸಲು ಬಿಟ್ಟ ಸಸ್ಯಗಳನ್ನೂ, ಬತ್ತವೇ ಮುಂತಾದ ಹಲವು ಧಾನ್ಯಗಳನ್ನು, ಪದನ್ + ಅಱಿದು = ಹದ ತಿಳಿದು ಶುದ್ಧಿ ಮಾಡುವ, ಕಣ ಮಾಡುವ, ಕಾಲನ್ನು ಬೇರ್ಪಡಿಸಿ ರಾಸಿ ಮಾಡುವ, ಕಾಪಾಡುವ, ಅಕ್ಕಿ ಮಾಡುವ, ವಿವಿಧ ಪಾತ್ರೆಗಳಲ್ಲಿ ಬೇಯಿಸುವ, ತುಪ್ಪ ಉಪ್ಪು ಹಾಲು ಮೊಸರು ಮುಂತಾದ ವ್ಯಂಜನಗಳೊಡನೆ ಪರಿಷ್ಕರಿಸುವ, ಹಾಗೂ ಸಾಮರ್ಥ್ಯಕ್ಕೆ ತಕ್ಕಂತೆ ಊಟಮಾಡುವುದನ್ನು ಹೇಳಿಕೊಟ್ಟ; ಅಲ್ಲದೆ, ಪಟ್ಟೆ ಕಬ್ಬು ಜಲ್ಲೆಗಳನ್ನು ತುಂಡು ತುಂಡು ಮಾಡಿ ಗಾಣದಲ್ಲಿ ಹಿಂಡಿ ರಸವನ್ನು ಪಡೆಯುವ ವಿಧಾನವನ್ನೂ ತಿಳಿಸಿಕೊಟ್ಟ,

**ವಿಶೇಷ ವಿಚಾರ:** 'ಕಣ' ಮಾಡಿ 'ಒಕ್ಕುವ' ಪ್ರಕ್ರಿಯೆಯನ್ನು ಪಂಪ ತಂದಿರುವುದು

ಅದರ ಪ್ರಾಚೀನತೆಯನ್ನು ತೋರಿಸುತ್ತದೆ; ಇವೊತ್ತಿಗೂ 'ಕಣ'ದ ಕಲ್ಪನೆ ವ್ಯತ್ಯಾಸವಾಗಿಲ್ಲ. ಆದರೆ 'ಕಣ' ಮಾಡುವುದನ್ನೆ ಬಿಡುತ್ತಿರುವ ಈಚಿನ ಪ್ರವೃತ್ತಿಯನ್ನು ಇಲ್ಲಿ ಹೇಳಬೇಕಾಗಿದೆ.

**ಚ್ಯುತಿಯಾಗೆ ಭೋಗಭೂಮಿ**
**ಸ್ಥಿತಿ ಕಲ್ಪಮಹೀರುಹವ್ಯಪಾಯದೊಳೆಂತುಂ**
**ಕ್ಷಿತಿಪತಿ ಕಲ್ಪಮಹೀಜ**
**ಸ್ಥಿತಿಯಿಂ ತಾನಿಂತು ಜನಮನೇಂ ನಿಜೆಸಿದನೋ** ೭೮

**ಪದವಿಭಾಗ-ಅನ್ವಯ-ಅರ್ಥ:** ಕಲ್ಪಮಹೀರುಹವ್ಯಪಾಯದೊಳ್ ಭೋಗಭೂಮಿಸ್ಥಿತಿ ಚ್ಯುತಿಯಾಗೆ = ಕಲ್ಪವೃಕ್ಷಗಳು ಇಲ್ಲದ ಸ್ಥಿತಿಯಲ್ಲಿ ಭೋಗಭೂಮಿಯು ಇಲ್ಲವಾಗಲು, ಎಂತುಂ ಕ್ಷಿತಿಪತಿ ಕಲ್ಪಮಹೀಜಸ್ಥಿತಿಯಿಂ ಜನಮನೇಂ ನಿಜೆಸಿದನೋ = ಆದರೂ ನಾಭಿರಾಜನು ಕಲ್ಪವೃಕ್ಷಸ್ವರೂಪದ ಮರಗಳಿಂದ ಜನರನ್ನು ಅದೆಂತು ಕಾಪಾಡಿದ!

**ಗದ್ಯಾನುಸರಣ:** ಕಲ್ಪವೃಕ್ಷಗಳು ಇಲ್ಲದ ಸ್ಥಿತಿಯಲ್ಲಿ ಭೋಗಭೂಮಿಯು ಇಲ್ಲವಾಯಿತು; ಆದರೂ ನಾಭಿರಾಜನು ಕಲ್ಪವೃಕ್ಷಸ್ವರೂಪದ ಮರಗಳಿಂದ ಜನರನ್ನು ಅದೆಂತು ಕಾಪಾಡಿದ!

**ವಿಶೇಷ ವಿಚಾರ:** ಪೂರ್ವಪುರಾಣದಲ್ಲಿ ಆರಂಭದಲ್ಲಿಯೇ ಕಾಲದ ಮತ್ತು ಮನುಗಳ ಈ ವಿವರಗಳು ಬಂದಿವೆ; ಮೊದಲ ತೀರ್ಥಂಕರನ ಜನ್ಮಪೂರ್ವದಲ್ಲಿ ಇವುಗಳನ್ನು ಹೇಳುವುದು ಹೆಚ್ಚು ಉಚಿತವೆಂದು ಪಂಪ ಭಾವಿಸಿರಬೇಕು. ವೈದಿಕ ಪುರಾಣಗಳ ಪ್ರಕಾರ ಬ್ರಹ್ಮನ ಒಂದು ಹಗಲಿನಲ್ಲಿ ದೇವಲೋಕವನ್ನು ಹದಿನಾಲ್ಕು ಮಂದಿ ಇಂದ್ರರೂ, ಭೂಲೋಕವನ್ನು ಹದಿನಾಲ್ಕು ಮಂದಿ ಮನುಗಳೂ ಆಳುತ್ತಾರೆ. ಇದನ್ನೇ ಜೈನಪುರಾಣದ ಇಂದ್ರ-ಮನುಗಳ ಕಲ್ಪನೆಯು ಮೇಲುನೋಟಕ್ಕೆ ಹೋಲಿದರೂ ವಿವರಗಳಲ್ಲಿ ವ್ಯತ್ಯಾಸವಿದೆ. ವೈದಿಕದ ಪ್ರಕಾರ, ಇಂದ್ರರೂ ಮನುಗಳಂತೆ ಒಬ್ಬರಾದ ಮೇಲೆ ಒಬ್ಬರು ಬರುವವರು; ಆದರೆ ಇಲ್ಲಿ ಅವರು ಸಮಕಾಲೀನರು, ಹದಿನಾಲ್ಕು ಕಲ್ಪಗಳ ಒಡೆಯರು; ಮನುಗಳು ಮಾತ್ರ ಇಲ್ಲಿಯೂ ಕಾಲಾನುಕ್ರಮದಲ್ಲಿಯೇ ಬರುತ್ತಾರೆ. ಆದರೆ ಭೋಗಭೂಮಿಸ್ಥಿತಿ ಚ್ಯುತಿಗೊಂಡ ಮೇಲೆ ಪೃಥ್ವಿಯಲ್ಲಿ ಆದ ಬದಲಾವಣೆಗಳಿಗೆ ಮನುಸಂಕುಲವು ಹೊಂದಿಕೊಂಡ ಬಗೆಯನ್ನು, ಅಲೆಮಾರಿ ಭಯಗ್ರಸ್ತ ನೆಲೆಯಿಂದ ಕೃಷಿಸಮಾಜ ಸ್ಥಾಪಿತವಾದ ನೆಲೆಯವರೆಗಿನ ಬೆಳವಣಿಗೆಯನ್ನು, ಮನುಗಳ ಮೂಲಕ ಇಲ್ಲಿ ವರ್ಣಿಸಿರುವುದು ಹೆಚ್ಚು ತಾರ್ಕಿಕವಾಗಿದೆ. ಇದು ಆಧುನಿಕ ಸಾಮಾಜಿಕ ಮಾನವಶಾಸ್ತ್ರದ ವಿವರಗಳನ್ನು ಹೋಲುತ್ತದೆ. ಮನುಸಂಕುಲವನ್ನು ಈ ರೀತಿ ಕ್ರಮಬದ್ಧವಾಗಿ ಮಾರ್ಗದರ್ಶನ

ಮಾಡಿದ್ದರಿಂದಾಗಿ ಮನುಗಳನ್ನು ಕುಲಧರರೆಂದು ಕರೆದಿರುವುದೂ ಹೆಚ್ಚು ಉಚಿತವಾಗಿದೆ. ಆದರೆ ಇಲ್ಲಿ ಸಸ್ಯಾಹಾರಿಗಳನ್ನು ಮಾತ್ರ ಪರಿಗಣಿಸಲಾಗಿದೆ; ಮಾಂಸಾಹಾರಿಗಳ ಪ್ರಸ್ತಾಪವೇ ಇಲ್ಲ. ಆಗ ಜಗತ್ತಿನಲ್ಲಿದ್ದವರೆಲ್ಲ ಜೈನರೇ ಎಂಬ ನಂಬಿಕೆ ಈ ಪುರಾಣದ್ದಿರಹುದು.

**ಕುಳಧರನುಂ ಕುಳಕರನುಂ**
**ಕುಳತಿಳಕನುಮೆನಿಪ ನಾಭಿರಾಜಂಗೆ ಲತಾ**
**ಲಳಿತೆ ದಳಿತಾಂಬುಜಾನನೆ**
**ವಿಳಾಸಲಾವಣ್ಯಕಾಂತಿಯುತೆ ಸತಿ ರತಿವೊಲ್** ೭೯

**ಪದವಿಭಾಗ–ಅನ್ವಯ–ಅರ್ಥ:** ಕುಳಧರನುಂ ಕುಳಕರನುಂ ಕುಳತಿಳಕನುಂ + ಎನಿಪ ನಾಭಿರಾಜಂಗೆ = ಮನು ಕುಲಕರ ಮತ್ತು ಕುಲಶ್ರೇಷ್ಠ ಎನಿಸಿದ ನಾಭಿರಾಜನಿಗೆ, ಲತಾಲಳಿತೆ ದಳಿತಾಂಬುಜ + ಆನನೆ = ಬಳ್ಳಿಯಂತಹ ಸೊಬಗಿನ ಅರಳಿದ ತಾವರೆಯಂತಹ ಮುಖವುಳ್ಳ, ವಿಳಾಸಲಾವಣ್ಯಕಾಂತಿಯುತೆ ಸತಿ ರತಿವೊಲ್ = ಹಾಗೂ ವಿಲಾಸ ಚೆಲುವುಗಳ ಕಾಂತಿಯಿಂದ ಬೆಳಗುತ್ತಿದ್ದ ರತಿಸಮಾನಳಾದ ಹೆಂಡತಿ

**ಗದ್ಯಾನುಸರಣ:** ಮನು. ಕುಲಕರ ಮತ್ತು ಕುಲಶ್ರೇಷ್ಠ ಎನಿಸಿದ ನಾಭಿರಾಜನಿಗೆ ಬಳ್ಳಿಯಂತೆ ಬಳುಕುವ, ತಾವರೆಮೊಗದ ಹಾಗೂ ವಿಲಾಸ ಚೆಲುವುಗಳ ಕಾಂತಿಯಿಂದ ಬೆಳಗುತ್ತಿದ್ದ ರತಿಸಮಾನಳಾದ ಹೆಂಡತಿಯಾಗಿ,

**ಮರುದೇವಿಯೆಂಬಳಂಬರ**
**ಚರನರಸುರಯುವತಿರೂಪಸರ್ವಸ್ವಮನಾ**
**ದರದೆ ಬಿದಿ ನೆರಪಿ ಲಲನಾ**
**ಸ್ವರೂಪದಿಂ ನಿಜಿಸಿತೆನ್ನದಿನ್ನೇವೊಗಟ್ವೆಂ** ೮೦

**ಪದವಿಭಾಗ–ಅನ್ವಯ–ಅರ್ಥ:** ಮರುದೇವಿಯೆಂಬಳ್ = ಮರುದೇವಿ ಎನ್ನುವವಳು; ಅಂಬರಚರ ನರ ಸುರಯುವತಿ ರೂಪಸರ್ವಸ್ವಮನ್ = ಖೇಚರ ಮನುಜ ದೇವತಾ ವನಿತೆಯರ ರೂಪವನ್ನೆಲ್ಲ, ಆದರದೆ ಬಿದಿ ನೆರಪಿ = ವಿಧಿಯು ಪ್ರೀತಿಯಿಂದ ಒಗ್ಗೂಡಿಸಿ, ಲಲನಾಸ್ವರೂಪದಿಂ ನಿಜಿಸಿತು = ಹೆಣ್ಣಿನ ಆಕಾರದಲ್ಲಿ ನಿಲ್ಲಿಸಿತು, ಎನ್ನದೆ + ಇನ್ನು + ಏ + ಪೊಗಟ್ವೆಂ = ಎಂಬುದರ ಹೊರತು ಇನ್ನು ಏನೆಂದು ಹೊಗಳಲಿ!

**ಗದ್ಯಾನುಸರಣ:** ಮರುದೇವಿ ಎನ್ನುವವಳು; ಖೇಚರ ಮನುಜ ದೇವತಾ

ವನಿತೆಯರ ರೂಪವನ್ನೆಲ್ಲ ವಿಧಿಯು ಪ್ರೀತಿಯಿಂದ ಒಗ್ಗೂಡಿಸಿ ಈ ಹೆಣ್ಣಿನ ಆಕಾರದಲ್ಲಿ ನಿಲ್ಲಿಸಿತು ಎಂಬುದರ ಹೊರತು ಅವಳನ್ನು ಇನ್ನು ಹೇಗೆ ಹೊಗಳಲಿ!

**ಪೊಳೆವಲರ್ಗಣ್ ಚಾಮರಮೆನೆ**
**ಲಳಿತಭ್ರೂಲತೆ ಪತಾಕೆಯೆನೆ ಪೆರ್ಮೊಲೆ ಪೊಂ**
**ಗಳಸಮೆನೆ ಮದನಮಂಗಳ**
**ವಿಳಾಸಚಿಹ್ನಂಗಳವಯವಂಗಳ್ ಸತಿಯಾ ೮೧**

**ಪದವಿಭಾಗ–ಅನ್ವಯ–ಅರ್ಥ:** ಪೊಳೆವ + ಅಲರ್ಗಣ್ ಚಾಮರಮ್ + ಎನೆ = ಕಾಂತಿಯುಕ್ತವಾದ ಹೂವಿನಂತಹ ಕಣ್ಣು ಚಾಮದರದಂತೆ, ಲಳಿತಭ್ರೂಲತೆ ಪತಾಕೆ + ಎನೆ = ಸುಂದರವಾದ ಹುಬ್ಬೆಂಬ ಬಳ್ಳಿಯು ಧ್ವಜದಂತೆ, ಪೆರ್ಮೊಲೆ ಪೊಂಗಳಸಂ + ಎನೆ = ತೋರಮೊಲೆಗಳು ಚಿನ್ನದ ಕಳಸಗಳಂತೆ, ಸತಿಯಾ ಅವಯವಂಗಳ್ ಮದನಮಂಗಳ ವಿಳಾಸಚಿಹ್ನಂಗಳ್ = ಹೀಗೆ ಆ ಸತಿಯ ಅಂಗಾಂಗಗಳು ಮಂಗಳಕರವೂ ಸೊಬಗಿನವೂ ಆದ ಕಾಮನ ಚಿಹ್ನೆಗಳಂತಿದ್ದುವು.

**ಗದ್ಯಾನುಸರಣ:** ಕಾಂತಿಯುಕ್ತವಾದ ಹೂವಿನಂತಹ ಕಣ್ಣು ಚಾಮದರದಂತೆ, ಸುಂದರವಾದ ಹುಬ್ಬೆಂಬ ಬಳ್ಳಿಯು ಧ್ವಜದಂತೆ, ತೋರಮೊಲೆಗಳು ಚಿನ್ನದ ಕಳಸಗಳಂತೆ – ಹೀಗೆ ಆ ಸತಿಯ ಅಂಗಾಂಗಗಳು ಮಂಗಳಕರವೂ ಸೊಬಗಿನವೂ ಆದ ಕಾಮನ ಚಿಹ್ನೆಗಳಂತಿದ್ದುವು.

**ಮದಕೋಕಿಳಕಳನಿನದೆಯ**
**ವದನಸುಧಾಸೂತಿ ಬೆಳಗೆ ಪೆಳಜಿದ ತಮಮಿಂ**
**ಪುದಿದು ಪೆಱಗಿರ್ದುದೆನಿಪುದು**
**ಮದಗಜಗಮನೆಯ ವಿನೀಳಕೇಶಕಳಾಪಂ ೮೨**

**ಪದವಿಭಾಗ–ಅನ್ವಯ–ಅರ್ಥ:** ಮದಕೋಕಿಳಕಳನಿನದೆಯ = ಸೊಕ್ಕಿದ ಕೋಗಿಲೆಯ ಧ್ವನಿಯ ಆ ಸತಿಯ, ವದನಸುಧಾಸೂತಿ ಬೆಳಗೆ = ಮುಖಚಂದ್ರನ ಬೆಳುದಿಂಗಳು ಬೆಳಗಲು, ಪೆಳಜಿದ ತಮಮಿಂ ಪುದಿದು ಪೆಱಗಿರ್ದುದು = ಭಯಗೊಂಡ ಕತ್ತಲೆಯು ಒಟ್ಟಾಗಿ ಅಡಗಿತೋ, ಎನಿಪುದು ಮದಗಜಗಮನೆಯ ವಿನೀಳಕೇಶಕಳಾಪಂ = ಎನ್ನುವಂತೆ ನಿಧಾನನಡಿಗೆಯ ಆ ಸುಂದರಿಯ ಕಪ್ಪುಕೂದಲ ವಿಲಾಸವಿತ್ತು.

**ಗದ್ಯಾನುಸರಣ:** ಸೊಕ್ಕಿದ ಕೋಗಿಲೆಯ ಧ್ವನಿಯ ಆ ಸತಿಯ ಮುಖಚಂದ್ರನ ಬೆಳುದಿಂಗಳು ಬೆಳಗಲು ಭಯಗೊಂಡ ಕತ್ತಲೆಯು ಒಟ್ಟಾಗಿ ಅಡಗಿತೋ ಎನ್ನುವಂತೆ ನಿಧಾನನಡಿಗೆಯ ಆ ಸುಂದರಿಯ ಕಪ್ಪುಕೂದಲ ವಿಲಾಸವಿತ್ತು.

**ಘನಕುಚಕಳಶೆಯ ಮುಖರಸ**
**ವನಧಿಯಿನೊಗೆದೊಂದು ಬಿಂದುವಿಂದು ಕರಂ ಚೆ**
**ಲ್ವೆನೆ ಮೆಱೆವ ಕುಮುದಕುವಳಯ**
**ವನಂಗಳಾಕೆಯ ಕಟಾಕ್ಷವಿಕ್ಷೇಪಂಗಳ್** ೮೩

**ಪದವಿಭಾಗ–ಅನ್ವಯ–ಅರ್ಥ:** ಘನಕುಚಕಳಶೆಯ ಮುಖರಸವನಧಿಯಿನ್ = ಕಳಶದಂತಹ ಮೊಲೆಗಳಿದ್ದ ಮುಖಕಾಂತಿಯ ಸಮುದ್ರದಿಂದ, ಒಗೆದ + ಒಂದು ಬಿಂದು + ಇಂದು ಕರಂ ಚೆಲ್ವೆನೆ ಮೆಱೆವ = ಸಿಡಿದ ಒಂದು ಹನಿಯೇ ಸುಂದರವಾಗಿ ಹೊಳೆಯುವ ಚಂದ್ರ, ಆಕೆಯ ಕಟಾಕ್ಷವಿಕ್ಷೇಪಂಗಳ್ ಕುಮುದಕುವಳಯವನಂಗಳ್ = ಅವಳ ಕುಡಿನೋಟಗಳೇ ಬಿಳಿತಾವರೆ ಮತ್ತು ನೈದಿಲೆಯ ವನಗಳು.

**ಗದ್ಯಾನುಸರಣ:** ಕಳಶದಂತಹ ಮೊಲೆಗಳಿದ್ದ ಮುಖಕಾಂತಿಯ ಸಮುದ್ರದಿಂದ ಸಿಡಿದ ಒಂದು ಹನಿಯೇ ಸುಂದರವಾಗಿ ಹೊಳೆಯುವ ಚಂದ್ರ, ಅವಳ ಕುಡಿನೋಟಗಳೇ ಬಿಳಿತಾವರೆ ಮತ್ತು ನೈದಿಲೆಯ ವನಗಳು!

**ಮದನತರುಕುಸುಮಮಂಜರಿ**
**ಮದನಾಂಬುಧಿವೇಳೆ ಮದನಮದಗಜವಿಳಸ**
**ನ್ಮದಲೇಖೆ ಮದನಲಕ್ಷ್ಮೀ**
**ಮದಲಕ್ಷ್ಮಿಯೆನಲ್ ಮದೇಭಗಮನೆಯೆ ತಕ್ಕಳ್** ೮೪

**ಪದವಿಭಾಗ–ಅನ್ವಯ–ಅರ್ಥ:** ಮದನತರುಕುಸುಮಮಂಜರಿ = ಅವಳು ಮನ್ಮಥ ತರುವಿನ ಹೂಗೊಂಚಲು, ಮದನ + ಅಂಬುಧಿವೇಳೆ = ಕಾಮನೆಂಬ ಸಮುದ್ರದ ಅಲೆ, ಮದನಮದಗಜವಿಳಸತ್ + ಮದಲೇಖೆ = ಕಾಮನೆಂಬ ಸೊಕ್ಕಿದಾನೆಯ ಅಲಂಕಾರದ ಪಟ್ಟಿ, ಮದನಲಕ್ಷ್ಮೀ ಮದಲಕ್ಷ್ಮಿ ಎನಲ್ = ಈ ಕಾಮಲಕ್ಷ್ಮಿಯು ಮದಲಕ್ಷ್ಮಿ ಎನ್ನಿಸಿಕೊಳ್ಳಲು = ಮದ + ಇಭಗಮನೆಯೆ ತಕ್ಕಳ್ = ಸೊಕ್ಕಿದಾನೆನ ನಡಿಗೆಯುಳ್ಳ ಮರುದೇವಿಯು ತಕ್ಕವಳು!

**ಗದ್ಯಾನುಸರಣ:** ಮನ್ಮಥ ತರುವಿನ ಹೂಗೊಂಚಲು, ಕಾಮನೆಂಬ ಸಮುದ್ರದ ಅಲೆ, ಕಾಮನೆಂಬ ಸೊಕ್ಕಿದಾನೆಯ ಅಲಂಕಾರದ ಪಟ್ಟಿ, – ಒಟ್ಟಾರೆ ಕಾಮಲಕ್ಷ್ಮಿಯು ಮದಲಕ್ಷ್ಮಿ ಎನ್ನಿಸಿಕೊಳ್ಳಲು ಸೊಕ್ಕಿದಾನೆಯ ನಡಿಗೆಯುಳ್ಳ ಮರುದೇವಿಯು ತಕ್ಕವಳು!

**ಮೊಗಮಂ ತಾವರೆ ಕಣ್ಣನುತ್ಪಳದಳಂ ಧಮ್ಮಿಲ್ಲಮಂ ಸೋಗೆ ಸೆ**
**ಳ್ಳುಗುರಂ ಕೇದಗೆ ಪುರ್ಬನಂಗಜನ ಬಿಲ್ ದಂತಾಳಿಯಂ ಮುತ್ತುಕೈ**
**ಮುಗಿದಾರಾಧಿಸಿ ಪೋಲ್ತುವೆನ್ನದೆ ಸರೋಜಾತಾದಿನಿಸ್ಸಾರವ**
**ಸ್ತುಗಳೊಳ್ ಪೋಲಿಸುವಂತುಟೇಮ್ಮರುಳೆನೆ ರೂಪಂ ವಿಚಿತ್ರಾಂಗಿಯಾಲ೮೫**

**ಪದವಿಭಾಗ-ಅನ್ವಯ-ಅರ್ಥ:** ಮೊಗಮಂ ತಾವರೆ = ಮುಖವನ್ನು ತಾವರೆ, ಕಣ್ಣನ್ + ಉತ್ಪಳದಳಂ = ಕಣ್ಣುಗಳನ್ನು ನೈದಿಲೆಯ ಪಕಳೆ, ಧಮ್ಮಿಲ್ಲಮಂ ಸೋಗೆ = ಕೇಶರಾಶಿಯನ್ನು ನವಿಲ ಗರಿ, ಸೆಳ್ಳುಗುರಂ ಕೇದಗೆ = ತೆಳುವಾದ ಉಗುರುಗಳನ್ನು ಕೇದಗೆ ಎಸಳು, ಪುರ್ಬನ್ + ಅಂಗಜನ ಬಿಲ್ = ಹುಬ್ಬನ್ನು ಕಾಮನ ಬಿಲ್ಲು, ದಂತ + ಆಳಿಯಂ ಮುತ್ತು = ಹಲ್ಲುಸಾಲನ್ನು ಮುತ್ತು, ಕೈಮುಗಿದು + ಆರಾಧಿಸಿ ಪೋಲ್ತುವು = ಕೈಮುಗಿದು ಪೂಜೆಮಾಡಿ ಹೋಲಿವೆ, ಎನ್ನದೆ = ಎಂದು ಹೇಳದೆ, ಸರೋಜಾತಾ + ಆದಿನಿಸ್ಸಾರವಸ್ತುಗಳೊಳ್ ಪೋಲಿಸುವಂತುಟು = ಕಮಲದಂತಹ ನಿಸ್ಸಾರ ವಸ್ತುಗಳ ಜೊತೆ ಹೋಲಿಸುವಷ್ಟು, ಏಂ + ಮರುಳೆ + ಎನೆ ವಿಚಿತ್ರಾಂಗಿಯಾ ರೂಪಂ = ಪೆದ್ದನೇನು ಎನ್ನುವಂಥದು ಆ ಸುಂದರಿಯ ರೂಪ!

**ಗದ್ಯಾನುಸರಣ:** ಮುಖವನ್ನು ತಾವರೆ, ಕಣ್ಣುಗಳನ್ನು ನೈದಿಲೆಯ ಪಕಳೆ, ಕೇಶರಾಶಿಯನ್ನು ನವಿಲ ಗರಿ, ತೆಳುವಾದ ಉಗುರುಗಳನ್ನು ಕೇದಗೆ ಎಸಳು, ಹುಬ್ಬನ್ನು ಕಾಮನ ಬಿಲ್ಲು, ಹಲ್ಲುಸಾಲನ್ನು ಮುತ್ತು – ಇವುಗಳು ವ್ರತ ಮಾಡಿ ಹೋಲುತ್ತವೆ ಎಂದು ಹೇಳದೆ, ಕಮಲದಂತಹ ನಿಸ್ಸಾರ ವಸ್ತುಗಳ ಜೊತೆ ಹೋಲಿಸುವಷ್ಟು ಪೆದ್ದನೇನು ನಾನು – ಎನ್ನುವಂಥದು ಆ ಸುಂದರಿಯ ರೂಪ!

**ಪಿರಿದುಂ ವಿಭೂತಿಯಿಂದಂ**
**ಸುರರಾಜನ ಬೆಸದೊಳಮರನಾಯಕರೆಲ್ಲಂ**
**ನೆರೆದು ವಿವಾಹಮನಾಕೆಗೆ**
**ದೊರೆಕೊಳಿಸಿದರಿಂತು ನೋಂತ ಕಾಂತೆಯರೊಳರೇ ೮೬**

**ಪದವಿಭಾಗ-ಅನ್ವಯ-ಅರ್ಥ:** ಸುರರಾಜನ ಬೆಸದೊಳ್ + ಅಮರನಾಯಕರೆಲ್ಲಂ ನೆರೆದು = ದೇವೇಂದ್ರನ ಆಣತಿಯಂತೆ ದೇವಮುಖಂಡರೆಲ್ಲ ಸೇರಿ, ಪಿರಿದುಂ ವಿಭೂತಿಯಿಂದಂ = ಮಹಾ ವೈಭವದಿಂದ, ಆಕೆಗೆ ವಿವಾಹಮನ್ ದೊರೆಕೊಳಿಸಿದರ್ = ಆಕೆಯ ಮದುವೆಯನ್ನು ನೆರವೇರಿಸಿದರು; ಇಂತು ನೋಂತ ಕಾಂತೆಯರ್ + ಒಳರೇ = ಇಷ್ಟು ಪುಣ್ಯಮಾಡಿದ ಸ್ತ್ರೀಯರಿದ್ದಾರೆಯೇ!

**ಗದ್ಯಾನುಸರಣ:** ದೇವೇಂದ್ರನ ಆಣತಿಯಂತೆ ದೇವಮುಖಂಡರೆಲ್ಲ ಸೇರಿ ಮಹಾ ವೈಭವದಿಂದ ಆಕೆಯ ಮದುವೆಯನ್ನು ನೆರವೇರಿಸಿದರು ಎಂದ ಮೇಲೆ ಇವಳಷ್ಟು ಪುಣ್ಯಮಾಡಿದ ಸ್ತ್ರೀಯರು ಯಾರಿದ್ದಾರೆ!

**ಆ ಭುವನನಾಭಿಯೆನಿಸಿದ**
**ನಾಭಿಮಹೀಭುಜಭುಜಾಂತರಾಳಂ ಲಕ್ಷ್ಮೀ**

ವ್ಯಾಭಾಸಿ ಮತ್ತಮತಿಶಯ
ಶೋಭೆಯುನಾ ಕಾಂತೆಯಿರವಿನೊಳ್ ನೂರ್ಮಡಿಕುಂ ೮೭

ಪದವಿಭಾಗ–ಅನ್ವಯ–ಅರ್ಥ: ಆ ಭುವನನಾಭಿಯೆನಿಸಿದ = ಜಗತ್ತಿನ ಕೇಂದ್ರವೆನಿಸಿದ ಆ. ನಾಭಿಮಹೀಭುಜಭುಜ + ಅಂತರಾಳಂ = ನಾಭಿರಾಜನ ತೋಳುಗಳ ಮಧ್ಯೆ, ಲಕ್ಷ್ಮೀವ್ಯಾಭಾಸಿ = ಲಕ್ಷ್ಮಿಯ ಕಾಂತಿಯು, ಆ ಕಾಂತೆಯ + ಇರವಿನೊಳ್ = ಮರುದೇವಿಯ ಇರುವಿಕೆಯಲ್ಲಿ, ಮತ್ತಂ + ಅತಿಶಯ ಶೋಭೆಯನ್ ನೂರ್ಮಡಿಕುಂ = ಮತ್ತಷ್ಟು ಹೆಚ್ಚಿನ ಶೋಭೆಯನ್ನು ನೂರುಪಟ್ಟು ಪಡೆಯಿತು.

ಗದ್ಯಾನುಸರಣ: ಜಗತ್ತಿನ ಕೇಂದ್ರವೆನಿಸಿದ ಆ ನಾಭಿರಾಜನ ತೋಳುಗಳ ನಡುವೆ ಸಿಲುಕಿದ ಲಕ್ಷ್ಮಿಯ ಕಾಂತಿಯು ಮರುದೇವಿಯ ಇರುವಿಕೆಯಲ್ಲಿ ಮತ್ತೂ ನೂರುಪಟ್ಟು ಹೆಚ್ಚಿನ ಶೋಭೆಯನ್ನು ಪಡೆಯಿತು.

ಧವಳಾಪಾಂಗವಿಲೋಕನಾಮೃತಮಯಂ ಭ್ರೂಲಕ್ಷ್ಮರಮ್ಯಂ ಮನೋ
ಭವರಾಜ್ಯೋದಯಹೇತು ಚಾರುಮರುದೇವೀವಕ್ತ್ರಚಂದ್ರಂ ಸಲೀ
ಲವಿಳಾಸಸ್ಮಿತಚಂದ್ರಿಕಾಪ್ರಸರದಿಂದೋಪಂಗೆ ನೇತ್ರೋತ್ಪಳೋ
ತ್ಸವಮಂ ಮಾಡಿಯುಮೇನೋ ಮಾಡುವುದು ತಚ್ಚಿತ್ತಾಂಬುಧಿಕ್ಷೋಭಮಂ
೮೮

ಪದವಿಭಾಗ–ಅನ್ವಯ–ಅರ್ಥ: ಚಾರುಮರುದೇವೀವಕ್ತ್ರಚಂದ್ರಂ = ಸುಂದರಿಯಾದ ಮರುದೇವಿಯ ಮುಖಚಂದಿರನು, ಧವಳ + ಅಪಾಂಗವಿಲೋಕನ + ಅಮೃತಮಯಂ = ಹೊಳೆಯುವ ಕುಡಿನೋಟಗಳು ಅಮೃತಮಯವಾದರೂ, ಭ್ರೂಲಕ್ಷ್ಮರಮ್ಯಂ = ಹುಬ್ಬುಗಳೆಂಬ ಕಪ್ಪಿನಿಂದ ಸುಂದರವಾದವು, ಮನೋಭವರಾಜ್ಯ + ಉದಯಹೇತು = ಕಾಮರಾಜ್ಯದ ಉದಯಕ್ಕೆ ಕಾರಣ; ಸಲೀಲವಿಳಾಸಸ್ಮಿತ ಚಂದ್ರಿಕಾಪ್ರಸರದಿಂದೆ + ಓಪಂಗೆ ನೇತ್ರ + ಉತ್ಪಳ + ಉತ್ಸವಮಂ ಮಾಡಿಯುಂ + ಏನೋ = ಚೆಲುವಾದ ಮುಗುಳುನಗೆಯೆಂಬ ಬೆಳುದಿಂಗಳಿನ ಹರಡುವಿಕೆಯಿಂದ ರಾಜನ ಕಣ್ಣುಗಳಿಗೆ ಗೆಲವನ್ನು ತಂದಿತ್ತರೂ, ತತ್ + ಚಿತ್ತ + ಅಂಬುಧಿಕ್ಷೋಭಮಂ ಮಾಡುವುದು = ಅವನ ಮನಸ್ಸೆಂಬ ಸಮುದ್ರವನ್ನು ಅಲ್ಲೋಲಕಲ್ಲೋಲ ಮಾಡುವುದು.

ಗದ್ಯಾನುಸರಣ: ಸುಂದರಿಯಾದ ಮರುದೇವಿಯ ಮುಖಚಂದಿರದ ಹೊಳೆಯುವ ಕುಡಿನೋಟಗಳು ಅಮೃತಮಯವಾದರೂ, ಹುಬ್ಬುಗಳೆಂಬ ಕಪ್ಪಿನಿಂದ ಸುಂದರ ಹಾಗೂ ಕಾಮರಾಜ್ಯದ ಉದಯಕ್ಕೆ ಕಾರಣ; ಅವಳ ಚೆಲುವಾದ

ಮುಗುಳುನಗೆಯೆಂಬ ಬೆಳುದಿಂಗಳು ಹರಡಿ ರಾಜನ ಕಣ್ಣುಗಳಿಗೆ ಗೆಲವನ್ನು ತಂದಿತ್ತರೆ ತಾನೇ ಏನು, ಅವನ ಮನಸ್ಸೆಂಬ ಸಮುದ್ರವನ್ನು ಅಲ್ಲೋಲಕಲ್ಲೋಲ ಮಾಡಿಬಿಡುವುದು!

**ವ।** ಅಂತನ್ಯೋನ್ಯಪ್ರೇಮಸಂಜಾತಸ್ವಾಂತಸಂಪತ್ಪರಂಪರಾಪರಿಗತವಾಗಿ ನಿಳಿಂಪದಂಪತಿಯನೆ ಪೋಲ್ವ ದಂಪತಿಗೆ ಪವಿತ್ರೀಭೂತಮಪ್ಪ ಭೂತಳೋದ್ದೇಶ ದೊಳುತ್ಪತ್ಸ್ಯಮಾನಭಾವಿತೀರ್ಥಕರಪುಣ್ಯದೂತಾಹೂತಂ ಪುರುಹೂತಂ ಬಂದು,

**ಪದವಿಭಾಗ–ಅನ್ವಯ–ಅರ್ಥ:** ಅಂತು + ಅನ್ಯೋನ್ಯಪ್ರೇಮಸಂಜಾತ = ಹೀಗೆ ಪರಸ್ಪರ ಪ್ರೇಮದಿಂದ ಕೂಡಿದ, ಸ್ವಾಂತಸಂಪತ್ + ಪರಂಪರಾಪರಿಗತವಾಗಿ = ಮನಸ್ಸಿನ ಸಂಪತ್ತಿನಿಂದ ಕೂಡಿದವರಾಗಿ, ನಿಳಿಂಪದಂಪತಿಯನೆ ಪೋಲ್ವ ದಂಪತಿಗೆ = ದೇವದಂಪತಿಗಳನ್ನು ಹೋಲುವ ಈ ಗಂಡಹೆಂಡಿರಿಗೆ, ಪವಿತ್ರೀಭೂತಂ + ಅಪ್ಪ ಭೂತಳೋದ್ದೇಶದೊಳ್ = ಪವಿತ್ರವಾದ ಅವರ ಭೂಮಿಯಲ್ಲಿ, ಉತ್ಪತ್ಸ್ಯಮಾನಭಾವಿತೀರ್ಥಕರಪುಣ್ಯದೂತ + ಆಹೂತಂ = ಮುಂದೆ ಜನಿಸಲಿರುವ ತೀರ್ಥಂಕರನ ಪುಣ್ಯದ ದೂತನಿಂದ ಆಹ್ವಾನಿಸಲ್ಪಟ್ಟು, ಪುರುಹೂತಂ ಬಂದು = ದೇವೇಂದ್ರನು ಬಂದು,

**ಗದ್ಯಾನುಸರಣ:** ಹೀಗೆ ಈ ಗಂಡಹೆಂಡಿರು ಪರಸ್ಪರ ಪ್ರೇಮದಿಂದ ಕೂಡಿದ ಮನೋಸಂಪತ್ತಿನಿಂದ ದೇವದಂಪತಿಗಳನ್ನು ಹೋಲುತ್ತಿದ್ದರು; ಪವಿತ್ರವಾದ ಅವರ ಈ ಭೂಮಿಯಲ್ಲಿ ಮುಂದೆ ಜನಿಸಲಿರುವ ತೀರ್ಥಂಕರನ ಪುಣ್ಯದ ದೂತನಿಂದ ಆಹ್ವಾನಿಸಲ್ಪಟ್ಟು ದೇವೇಂದ್ರನು ಬಂದ.

**ಕೆದಱಿ ಮನುಷ್ಯದಂಪತಿಗಳಿರ್ದುವನೊಂದೆಡೆಯೊಳ್ ತೆರಳ್ಚಿ ನಾ**
**ಕದ ಫಣಿಲೋಕದಂದದ ಪೊೞಲ್ಗಳನೀ ಪೊೞಲೊಂದು ರಮ್ಯಹ**
**ರ್ಮ್ಯದ ಬೆಲೆಗಂಬರಂ ನೆಱೆಯದೆಂಬಿನಮುಜ್ಜ್ವಳಪಂಚರತ್ನಭಾ**
**ಸ್ವದಸದನಂಗಳಿಂ ನೆಱೆದುದಂ ಸಮೆದಂ ಪುರಮಂ ಪುರಂದರಂ ೮೯**

**ಪದವಿಭಾಗ–ಅನ್ವಯ–ಅರ್ಥ:** ಕೆದಱಿ ಮನುಷ್ಯದಂಪತಿಗಳಿರ್ದುವನ್ + ಒಂದೆಡೆಯೊಳ್ ತೆರಳ್ಚಿ = ಚೆದುರಿಹೋಗಿದ್ದ ಮನುಷ್ಯ ದಂಪತಿಗಳಿದ್ದ (ಮನೆಗಳನ್ನು) ಒಂದೆಡೆ ಸೇರಿಸಿ, ನಾಕದ ಫಣಿಲೋಕದ + ಅಂದದ ಪೊೞಲ್ಗಳನ್ = ದೇವಲೋಕ ನಾಗಲೋಕಗಳ ಸುಂದರವಾದ ನಗರಗಳೂ, ಈ ಪೊೞಲ + ಒಂದು ರಮ್ಯಹರ್ಮ್ಯದ ಬೆಲೆಗಂಬರಂ ನೆಱೆಯದು + ಎಂಬಿನಂ = ಈ ನಗರದ ಒಂದು ಚೆಲುವಾದ ಸೌಧದ ಬೆಲೆಗೆ ಬಾರದು ಎನ್ನುವಂತೆ,

ಉಜ್ಜ್ವಳಪಂಚರತ್ನಭಾಸ್ವದಸದನಂಗಳಿಂ ನೆಱೆದುದಂ ಪುರಮುಂ = ಶೋಭಯಮಾನವಾದ ಪಂಚರತ್ನಗಳಿಂದ ಹೊಳೆಯುವ ಮನೆಗಳಿಂದ ಕೂಡಿದ ನಗರವನ್ನು, ಪುರಂದರಂ ಸಮೆದಂ = ಇಂದ್ರನು ನಿರ್ಮಿಸಿದ.

**ಗದ್ಯಾನುಸರಣ:** ಮನುಷ್ಯ ದಂಪತಿಗಳ ಚೆದುರಿಹೋಗಿದ್ದ ಮನೆಗಳನ್ನೆಲ್ಲ ಒಂದೆಡೆ ಸೇರಿಸಿ, ದೇವಲೋಕ ನಾಗಲೋಕಗಳ ಸುಂದರವಾದ ನಗರಗಳೂ ಈ ನಗರದ ಒಂದು ಚೆಲುವಾದ ಸೌಧದ ಬೆಲೆಗೆ ಬಾರದು ಎನ್ನುವಂತೆ, ಶೋಭಯಮಾನವಾದ ಪಂಚರತ್ನಗಳಿಂದ ಹೊಳೆಯುವ ಮನೆಗಳಿದ ಕೂಡಿದ ಒಂದು ನಗರವನ್ನು ಇಂದ್ರನು ನಿರ್ಮಿಸಿದ.

**ವಿಶೇಷ ವಿಚಾರ:** ಇಲ್ಲಿನ 'ಫಣಿಲೋಕದಂದದ ಪೊಟಿಲ್ಗಳನೀ' ಪಾಠದ ಬದಲು 'ಫಣಿಲೋಕದ ಅಂಕದ ಪೊಟಿಲ್ಗಳನೀ' ಹಾಗೂ 'ಬೆಲೆಗಂಬರಂ' ಬದಲು 'ಬೆಲೆಗಂ ಬರಲ್' – ಎಲ್. ಬಸವರಾಜು ಅವರ ಆವೃತ್ತಿಯ ಪಾಠಗಳು.

**ಕನಕಗಿರಿಶಿಖರರತ್ನಾಂ**
**ಶುನಿಕಾಯಂ ಬೆಳಗೆ ಮೊಳೆದು ಪಜ್ಜಳಿಸುತ್ತಿ**ಇ
**ರ್ಪಿನಪಥಮಣಿಮುಕುರದೊಳಿಂ**
**ದ್ರನ ಪೊಟಿಲಾ ಪೊಟಿಲ ನೆಟಿಲನನುಕರಿಸಿರ್ಕುಂ** ೯೦

**ಪದವಿಭಾಗ–ಅನ್ವಯ–ಅರ್ಥ:** ಕನಕಗಿರಿಶಿಖರರತ್ನಾಂಶುನಿಕಾಯಂ ಬೆಳಗೆ = ಮೇರುಗಿರಿಯ ಶಿಖರರತ್ನದ ಕಿರಣಗಳು ಬೆಳಗಿರಲು, ಮೊಳೆದು ಪಜ್ಜಳಿಸುತ್ತಿರ್ಪ + ಇನಪಥಮಣಿಮುಕುರದೊಳ್ = ಮೊಳಕೆಯೊಡೆದು ಹೊಳೆಯುವ ಸೂರ್ಯಪಥದ ರತ್ನದರ್ಪಣದಲ್ಲಿ, ಇಂದ್ರನ ಪೊಟಿಲ್ + ಆ ಪೊಟಿಲ ನೆಟಿಲನ್ + ಅನುಕರಿಸಿರ್ಕುಂ = ಇಂದ್ರನ ನಗರವು ಆ ನಗರದ ನೆರಳನಂತೆ ಕಾಣುತ್ತಿತ್ತು.

**ಗದ್ಯಾನುಸರಣ:** ಮೇರುಗಿರಿಯ ಶಿಖರರತ್ನದ ಕಿರಣಗಳು ಬೆಳಗಲು ಸೂರ್ಯಪಥವಾದ ಆಗಸವೇ ರತ್ನದರ್ಪಣ; ಅದರಲ್ಲಿ ಇಂದ್ರನ ನಗರವು ಆ ನಗರದ ನೆರಳನಂತೆ ಕಾಣುತ್ತಿತ್ತು.

**ಆ ಪುರಲಲನೆಯ ಕೇಶಕ**
**ಳಾಪದವೊಲ್ ಮಧುಪನಿಕರನಿಳಯಂ ಸುಮನ**
**ಶ್ರೀಪರಿಪೂರ್ಣಮನಂಗನ**
**ಕಾಪೆನೆ ಸೊಗಯಿಪುದುಬಳಸಿದುದ್ಯಾನವನಂ** ೯೧

**ಪದವಿಭಾಗ–ಅನ್ವಯ–ಅರ್ಥ:** ಆ ಪುರಲಲನೆಯ ಕೇಶಕಳಾಪದವೊಲ್

= ಆ ನಗರವೆಂಬ ಸುಂದರಿಯ ಕೇಶರಾಶಿಯಂತೆ, ಮಧುಪನಿಕರನಿಳಯಂ = ದುಂಬಿವಿಂಡಿನ ನೆಲೆಯೂ, ಸುಮನಃ + ಶ್ರೀಪರಿಪೂರ್ಣಂ = ಸುಂದರ ಹೂಗಳಿಂದ ಕೂಡಿದುದೂ, ಬಳಸಿದ + ಉದ್ಯಾನವನಂ ಅನಂಗನ ಕಾಪು + ಎನೆ ಸೊಗಯಿಪುದು = ಆಗಿ ಸುತ್ತುವರಿದ ಉದ್ಯಾನವನವು ಮನ್ಮಥನ ಕಾವಲು ಎಂಬಂತೆ ಸೊಗಸುತ್ತದೆ.

**ಗದ್ಯಾನುಸರಣ:** ಆ ನಗರವೆಂಬ ಸುಂದರಿಯ ಕೇಶರಾಶಿಯಂತೆ ದುಂಬಿವಿಂಡಿನ ನೆಲೆಯೂ, ಸುಂದರ ಹೂಗಳಿಂದ ಕೂಡಿದುದೂ ಆಗಿ ನಗರವನ್ನು ಸುತ್ತುವರಿದ ಉದ್ಯಾನವನವು ಮನ್ಮಥನ ಕಾವಲು ಎಂಬಂತೆ ಸೊಗಸುತ್ತದೆ.

**ತುಂಬಿ ಗಿಳಿ ಪುರುಳಿ ಕೋಗಿಲೆ**
**ಯೆಂಬಿವುವೆರಸಮರತರುಗಳಿಂದ್ರನ ಬೆಸದಿಂ**
**ದಂ ಬಂದುವೆಂದೊಡುಪವನ**
**ಮಂ ಬಣ್ಣಿಸಲೆನಗೆ ನಾಡೆಯುಂ ಕುಜಿಪಲ್ತೇ ೯೨**

**ಪದವಿಭಾಗ-ಅನ್ವಯ-ಅರ್ಥ:** ತುಂಬಿ ಗಿಳಿ ಪುರುಳಿ ಕೋಗಿಲೆ + ಎಂಬಿವು + ಬೆರಸು + ಅಮರತರುಗಳ್ = ದುಂಬಿ ಗಿಳಿ ಹೆಣ್ಣುಗಿಳಿ ಕೋಗಿಲೆ ಎಂಬ ಹಕ್ಕಿಗಳಿಂದ ಕೂಡಿದ ದೇವತರುಗಳು, ಇಂದ್ರನ ಬೆಸದಿಂದಂ ಬಂದುವು + ಎಂದೊಡೆ = ಇಂದ್ರನ ಆಜ್ಞೆಯ ಮೇರೆಗೆ ಬಂದವು ಎಂದ ಮೇಲೆ, ಉಪವನಮಂ ಬಣ್ಣಿಸಲ್ + ಎನಗೆ ನಾಡೆಯುಂ ಕುಜಿಪಲ್ತೇ = ಉದ್ಯಾನವನವನ್ನು ಹೊಗಳಲು ನನಗೆ ಸಾಕಲ್ಲವೇ!

**ಗದ್ಯಾನುಸರಣ:** ದುಂಬಿ ಗಿಳಿ ಹೆಣ್ಣುಗಿಳಿ ಕೋಗಿಲೆ ಎಂಬ ಹಕ್ಕಿಗಳಿಂದ ಕೂಡಿದ ದೇವತರುಗಳು ಇಂದ್ರನ ಆಜ್ಞೆಯ ಮೇರೆಗೆ ಇಲ್ಲಿ ಬಂದವು ಎಂದ ಮೇಲೆ ಆ ಉದ್ಯಾನವನವನ್ನು ಹೊಗಳುವುದು ನನ್ನ ಸಾಮರ್ಥ್ಯವನ್ನು ಮೀರಿದುದಲ್ಲವೇ?

**ವಿಳಸದಳಿಗೀತಮುತ್ಕೋ**
**ಕಿಳನಾದಂ ಸಾಳಕಾನನಂ ಸತ್ತಿಳಕಂ**
**ಲಳಿತಲತಾಂಗಂ ರಮಣೀ**
**ವಿಳಾಸಮಂ ವನವಿಳಾಸಮೇನಿಳಿಸಿದುದೋ ೯೩**

**ಪದವಿಭಾಗ-ಅನ್ವಯ-ಅರ್ಥ:** ವಿಳಸತ್ + ಅಳಿಗೀತಂ = ಇಂಪಾದ

ದುಂಬಿಗಳ ಝೇಂಕಾರ, ಉತ್ + ಕೋಕಿಳನಾದಂ = ಮತ್ತ ಕೋಗಿಲೆಯ ಕೂಜನ, ಸಾಳಕಾನನಂ = ಸಾಲವೃಕ್ಷಗಳ ತೋಪು, ಸತ್ + ತಿಳಕಂ = ಚೆಲುವಾದ ತಿಲಕವೃಕ್ಷಗಳು, ಲಳಿತಲತಾ + ಅಂಗಂ = ಕೋಮಲ ಬಳ್ಳಿಗಳನ್ನು ಹೊಂದಿದ, ವನವಿಳಾಸಂ = ಉದ್ಯಾನದ ಸೊಬಗು, ರಮಣೀವಿಳಾಸಮಂ ಏನ್ + ಇಳಿಸಿದುದೋ = ಚೆಲುವೆಯ ಸೊಬಗನ್ನೂ ಕೀಳ್ಮಾಡಿಬಿಟ್ಟಿತಲ್ಲ!

**ಗದ್ಯಾನುಸರಣ:** ಇಂಪಾದ ದುಂಬಿಗಳ ಝೇಂಕಾರ, ಮತ್ತ ಕೋಗಿಲೆಯ ಕೂಜನ, ಸಾಲವೃಕ್ಷಗಳ ತೋಪು, ಚೆಲುವಾದ ತಿಲಕವೃಕ್ಷಗಳು, ಕೋಮಲ ಬಳ್ಳಿಗಳನ್ನು ಹೊಂದಿದ ಉದ್ಯಾನದ ಸೊಬಗು ಚೆಲುವೆಯ ಸೊಬಗನ್ನೂ ಕೀಳ್ಮಾಡಿಬಿಟ್ಟಿತು!

**ಎಳಸುವ ಪುರುಳಿಯು ಗಟಿಪುವ**
**ಗಿಳಿಯು ತೆಱದಿರಿದು ಮೊರೆವ ಪೆಣ್ದುಂಬಿಯು ಬಿ**
**ಚ್ಚಳಿಪ ಪರಭೃತದ ಕಳಕಳ**
**ದೊಳೆ ಮಸುಳ್ದುದು ದಿವಿಜಯುಗಳಕಳಕಳನಿನದಂ ೯೪**

**ಪದವಿಭಾಗ-ಅನ್ವಯ-ಅರ್ಥ:** ಎಳಸುವ ಪುರುಳಿಯ = ಸಂಗಾತಿಗಾಗಿ ಹಲುಬುವ ಹೆಣ್ಣು ಗಿಳಿ, ಗಟಿಪುವ ಗಿಳಿಯ ತೆಱಂ = ಮತ್ತು ಹರಟುವ ಗಿಳಿಯ ರೀತಿಯಿಂದ, ತಿರಿದು ಮೊರೆವ ಪೆಣ್ದುಂಬಿಯ = ಮಕರಂದವನ್ನು ಹೀರುತ್ತ ಹಾಡುವ ಹೆಣ್ಣು ದುಂಬಿ, ಬಿಚ್ಚಳಿಪ ಪರಭೃತದ ಕಳಕಳದೊಳೆ = ಮತ್ತು ಕೂಜಿಸವ ಕೋಗಿಲೆಯ ಕಲಕಲ ಧ್ವನಿಯಲ್ಲಿ, ದಿವಿಜಯುಗಳಕಳಕಳನಿನದಂ ಮಸುಳ್ದುದು = ದೇವದಂಪತಿಗಳ ಪ್ರೇಮಸಲ್ಲಾಪವು ಕ್ಷೀಣವಾಯಿತು.

**ಗದ್ಯಾನುಸರಣ:** ಸಂಗಾತಿಗಾಗಿ ಹಲುಬುವ ಹೆಣ್ಣು ಗಿಳಿ ಮತ್ತು ಹರಟುವ ಗಿಳಿಯ ರೀತಿಯಿಂದಲೂ, ಮಕರಂದವನ್ನು ಹೀರುತ್ತ ಹಾಡುವ ಹೆಣ್ಣು ದುಂಬಿ ಹಾಗೂ ಕೂಜಿಸವ ಕೋಗಿಲೆಯ ಕಲಕಲ ಧ್ವನಿಯಲ್ಲಿಯೂ ದೇವದಂಪತಿಗಳ ಪ್ರೇಮಸಲ್ಲಾಪವು ಕ್ಷೀಣವಾಯಿತು.

**ವಿಶೇಷ ವಿಚಾರ:** 'ಎಳಸುವ' ಬದಲು ಎಲ್. ಬಸವರಾಜು 'ಅಳಸುವ' ಪಾಠ ಸ್ವೀಕರಿಸುತ್ತಾರೆ.

**ಸಾರಸಹಕಾರಧಾರಾ**
**ಸಾರಂ ಕೊಳದಳವಿಯಂತೆ ಸುರಿತರೆ ಪಲವುಂ**
**ಧಾರಾಗೃಹಂಗಳತನುವಿ**
**ಕಾರಮನೊದವಿಪುದು ದೇವದಂಪತಿಗದಱಿಂ ೯೫**

**ಪದವಿಭಾಗ-ಅನ್ವಯ-ಅರ್ಥ:** ಸಾರಸಹಕಾರಧಾರಾಸಾರಂ = ರಸವತ್ತಾದ

ಮಾವಿನ ರಸದ ಧಾರೆಯು, ಕೊಳದ + ಅಳವಿಯಂತೆ ಸುರಿತರೆ = ಕೊಳದ ಸಂಪನ್ನತೆಯಿಂದ ಸುರಿಯಲು, ಪಲವುಂ ಧಾರಾಗೃಹಂಗಳ್ = ಹಲವಾರು ನೀರ್ಮನೆಗಳು, ಅದಱೊಳ್ ದೇವದಂಪತಿಗೆ ಅತನುವಿಕಾರಮನ್ + ಒದವಿಪುದು = ಅದರಲ್ಲಿರುವಾಗ ದೇವತೆಗಳ ಜೋಡಿಗೆ ಕಾಮತೀವ್ರತೆಯನ್ನುಂಟುಮಾಡುತ್ತವೆ.,

**ಗದ್ಯಾನುಸರಣ:** ರಸವತ್ತಾದ ಮಾವಿನ ರಸದ ಧಾರೆಯು ಕೊಳದ ಸಂಪನ್ನತೆಯಿಂದ ಸುರಿಯುವ ಹಲವಾರು ನೀರ್ಮನೆಗಳು, ಅದರಲ್ಲಿರುವಾಗ ದೇವತೆಗಳ ಜೋಡಿಗೆ ಕಾಮತೀವ್ರತೆಯನ್ನುಂಟುಮಾಡುತ್ತವೆ.

**ವಿಶೇಷ ವಿಚಾರ:** ಇಲ್ಲಿನ 'ಕೊಳದಳವಿಯಂತೆ' ಪದದ ಬದಲು ಎಲ್. ಬಸವರಾಜು 'ಕೊಳದಟವಿವೆಯಂತೆ' ಎಂಭ ಪಾಠವನ್ನು ಸ್ವೀಕರಿಸುತ್ತಾರೆ.

**ಕುಸುಮಾಪಚಯವ್ಯಸನಾ**
**ವಸಕ್ತಸುರಯುವತಿಪಾಣಿಪಲ್ಲವರಾಗಂ**
**ಮುಸುಕಿದುದೆನಿಸಿದುದಸುಗೆಯ**
**ಪೊಸದಳಿರ್ಗಳೊಳೆಸೆವ ಕೆಂಪು ನಂದನವನದೊಳ್** ೯೬

**ಪದವಿಭಾಗ–ಅನ್ವಯ–ಅರ್ಥ:** ನಂದನವನದೊಳ್ = ಉದ್ಯಾನವನದಲ್ಲಿ, ಅಸುಗೆಯ ಪೊಸ + ತಳಿರ್ಗಳೊಳ್ + ಎಸೆವ ಕೆಂಪು = ಶೋಕವೃಕ್ಷಗಳ ಹೊಸ ಚಿಗುರುಗಳ ಹೊಳೆಯುವ ಕೆಂಬಣ್ಣವು, ಕುಸುಮ + ಅಪಚಯವ್ಯಸನ + ಅವಸಕ್ತ = ಹೂ ಬಿಡಿಸಿಕೊಳ್ಳುವುದನ್ನು ಗೀಳು ಮಾಡಿಕೊಂಡ, ಸುರಯುವತಿಪಾಣಿಪಲ್ಲವರಾಗಂ = ದೇವವನಿತೆಯರ ಬೆರಳುಗಳ ಕೆಂಪು, ಮುಸುಕಿದುದು + ಎನಿಸಿದುದು = (ಅಲ್ಲಿಯೂ) ಆವರಿಸಿಬಿಟ್ಟಿದೆಯೇನೋ ಅನ್ನಿಸುವುದು.

**ಗದ್ಯಾನುಸರಣ:** ಉದ್ಯಾನವನದಲ್ಲಿನ ಅಶೋಕಮರಗಳ ಹೊಸ ಚಿಗುರುಗಳ ಹೊಳೆಯುವ ಕೆಂಬಣ್ಣವು, ಗೀಳಿನಂತೆ ಹೂ ಬಿಡಿಸಿಕೊಳ್ಳುವುದರಲ್ಲಿ ನಿರತರಾದ ದೇವವನಿತೆಯರ ಬೆರಳುಗಳ ಕೆಂಪೇ ಅಲ್ಲಿಯೂ ಆವರಿಸಿಬಿಟ್ಟಿದೆಯೇನೋ ಅನ್ನಿಸುವುದು.

**ಬಾಸಣಿಸಿದುದುತ್ಕಟಕುಸು**
**ಮಾಸವಸೌರಭದೆ ದೆಸೆಗಳೊಡನಳಿಕುಳಮಂ**
**ವಾಸವವದನಾ**
**ಬ್ಜಾಸವಸೇಕಪ್ರಭಿನ್ನಮುಕುಳಂ ವಕುಳಂ** ೯೭

**ಪದವಿಭಾಗ–ಅನ್ವಯ–ಅರ್ಥ:** ವಾಸವವದನ + ಅಬ್ಜ + ಆಸವಸೇಕಪ್ರಭಿನ್ನ

ಮುಕುಳಂ ವಕುಳಂ = ಇಂದ್ರನ ಮಡದಿಯ ಮುಖಕಮಲವು ಉಗುಳಿದ ಮದಿರೆಯಿಂದ ಬಕುಲ ವೃಕ್ಷದ ಮೊಗ್ಗುಗಳು ಅರಳಿದವು; ಒಡನೆ ಉತ್ಕಟಕುಸುಮ + ಆಸವಸೌರಭದೆ ದೆಸೆಗಳ್ ಅಳಿಕುಳಮಂ ಬಾಸಣಿಸಿದುದು = ಆ ಕ್ಷಣವೇ ಹೂಗಳ ಗಾಢ ಪರಿಮಳದಿಂದ ದಿಕ್ಕುಗಳು ದುಂಬಿವಿಂಡನ್ನು ಸೆಳೆದವು.

**ಗದ್ಯಾನುಸರಣ:** ಇಂದ್ರನ ಮಡದಿಯ ಮುಖಕಮಲವು ಉಗುಳಿದ ಮದಿರೆಯಿಂದ ಬಕುಲ ವೃಕ್ಷದ ಮೊಗ್ಗುಗಳು ಅರಳಿದವು; ಆ ಕ್ಷಣವೇ ಹೂಗಳ ಗಾಢ ಪರಿಮಳದಿಂದ ದಿಕ್ಕುಗಳು ದುಂಬಿವಿಂಡನ್ನು ಸೆಳೆದವು.

**ವಿಶೇಷ ವಿಚಾರ: ವಾಸವವದನ .. .. ವಕುಳಂ** = ಸುಂದರಿಯೊಬ್ಬಳ ಒದೆತ, ಅಪ್ಪುವಿಕೆ, ನಗು, ಉಗುಳುವಿಕೆ ಇತ್ಯಾದಿಗಳಿಂದ ಮರಗಿಡಗಳು ಹೂಬಿಡುತ್ತವೆಂಬ ನಂಬಿಕೆ; ಇಂತಹ ಮರಗಿಡಗಳನ್ನು ದೋಹದವೃಕ್ಷ ಎಂದೇ ಕರೆಯುತ್ತಾರೆ; ಇವುಗಳಲ್ಲಿಹತ್ತು ಬಗೆ: ಹೂಬಿಡಲು ಒದೆತವನ್ನು ಬಯಸುವುದು ಅಶೋಕ, ಉಗುಳುವಿಕೆಯನ್ನು ಬಯಸುವುದು ಬಕುಲ, ಸ್ಪರ್ಶವನ್ನು ಬಯಸುವುದು ಮಾವು, ನಗುವನ್ನು ಬಯಸುವುದು ಸುರಹೊನ್ನೆ, ನೋಟವನ್ನು ಬಯಸುವುದು ತಿಲಕ, ಮಾತನ್ನು ಬಯಸುವುದು ಕರ್ಣಿಕಾರ, ಅಪ್ಪುವಿಕೆಯನ್ನು ಬಯಸುವುದು ಕುರವಕ, ಉಸುರಿನ ಸೋಂಕನ್ನು ಬಯಸುವುದು ಸಿಂಧುವಾರ, ಹಾಡನ್ನು ಬಯಸುವುದು ಪ್ರಿಯಾಳು, ಮುಖಪ್ರಸನ್ನತೆಯನ್ನು ಬಯಸುವುದು ಚಂಪಕ. ಇದನ್ನು ದೋಹದಕ್ರಿಯೆ ಎನ್ನುತ್ತಾರೆ.

**ಕಿಱುನಿಱಿಯೊಳ್ ಕಿಱಿದೆಲೆಗಳ**
**ತುಱುಗಿದ ಚೆಲ್ವೆಳಸಿ ಬಳಸಿ ವನವನಿತೆಯ ಕ**
**ಯ್ನಿಱಿಯೆನೆ ನಿಱಿಗೊಂಡಿರೆ ನಿಱಿ**
**ನಿಱಿಗನ ನಿಱಿದಳಿರ ನಿಱಿಯನಱಿಯೆಂ ಪೊಗೞಲ್ ೯೮**

**ಪದವಿಭಾಗ-ಅನ್ವಯ-ಅರ್ಥ:** ಕಿಱುನಿಱಿಯೊಳ್ ಕಿಱಿದು + ಎಲೆಗಳ ತುಱುಗಿದ = ಚಿಕ್ಕ ನಿರಿಗೆಗಳಲ್ಲಿ ಪುಟ್ಟ ಪುಟ್ಟ ಎಲೆಗಳನ್ನು ತುಂಬಿಕೊಂಡ, ನಿಱಿನಿಱಿಗನ ಚೆಲ್ವು = ಸಿಹಿಮಾವಿನ ಸೊಬಗು, ಎಳಸಿ ಬಳಸಿ ವನವನಿತೆಯ ಕಯ್ + ನಿಱಿಯೆನೆ ನಿಱಿಗೊಂಡಿರೆ = ಆಸೆಯಿಂದ ಚಾಚುವ ವನದೇವಿಯ ಜೋಡಿಸಿದ ಕೈಗಳಂತಿರುವ, ನಿಱಿದಳಿರ ನಿಱಿಯನ್ ಪೊಗೞಲ್ ಅಱಿಯೆಂ = ಸುರುಳುಸುರುಳಿ ಚಿಗುರಿನ ಬೊಗಸೆಯನ್ನು ಹೊಗಳಲು ನಾನರಿಯೆ.

**ಗದ್ಯಾನುಸರಣ:** ಚಿಕ್ಕ ನಿರಿಗೆಗಳಲ್ಲಿ ಪುಟ್ಟ ಪುಟ್ಟ ಎಲೆಗಳನ್ನು ತುಂಬಿಕೊಂಡ ಸಿಹಿಮಾವಿನ ಮರದ ಸೊಬಗು, ಆಸೆಯಿಂದ ಚಾಚುವ ವನದೇವಿಯ ಬೊಗಸೆಯಂತಿರುವ ಚಿಗುರಿನ ಸುರುಳಿಯನ್ನು ಹೊಗಳಲು ನಾನರಿಯೆ.

**ಶತಮುಖನರಸಿಗೆ ಕರ್ಣಾ**
**ವತಂಸವಾಗಲ್ಕೆ ನೋಂತ ಪಲ್ಲವಪುಷ್ಪ**
**ಪ್ರತತಿಯುನೆ ಮೆಱೆದು ಚೆಲ್ವಿಡೆ**
**ಗತಿಶಂಯುಮೆನಿಸಿದುದು ಪರಿಜಾತಕುಜಾತಂ ೯೯**

**ಪದವಿಭಾಗ–ಅನ್ವಯ–ಅರ್ಥ:** ಶತಮುಖನ + ಅರಸಿಗೆ ಕರ್ಣ + ಅವಸಂತಮಾಗಲ್ಕೆ ನೋಂತ = ಇಂದ್ರನ ಹೆಂಡತಿಯ (ಶಚೀದೇವಿಯ) ಕಿವಿಯ ಆಭರಣವಾಗಬೇಕೆಂದು ಹರಕೆ ಹೊತ್ತ, ಪಲ್ಲವಪುಷ್ಪಪ್ರತತಿಯನೆ ಮೆಱೆದು ಪರಿಜಾತಕುಜಾತಂ = ಚಿಗುರುಗಳ ಗೊಂಚಲುಗಳನ್ನು ಹೊತ್ತು ಪಾರಿಜಾತವೃಕ್ಷವು, ಚೆಲ್ವಿಡೆಗೆ + ಅತಿಶಯಂ + ಎನಿಸಿದುದು = ಚೆಲುವಿನ ವಿಷಯಕ್ಕೆ ವಿಶೇಷವಾದುದು ಎನಿಸಿತು.

**ಗದ್ಯಾನುಸರಣ:** ಇಂದ್ರನ ಹೆಂಡತಿಯಾದ ಶಚೀದೇವಿಯ ಕಿವಿಯ ಆಭರಣವಾಗಬೇಕೆಂದು ಹರಕೆ ಹೊತ್ತಂತೆ ಚಿಗುರುಗಳ ಗೊಂಚಲುಗಳನ್ನು ಹೊತ್ತ ಪಾರಿಜಾತವೃಕ್ಷವು ಚೆಲುವಿನ ವಿಷಯಕ್ಕೆ ವಿಶೇಷವಾದುದು ಎನಿಸಿತು.

**ಸುರಯಿಂಯೊಳ್ಗಿಳಿ ಮುಗುಟ್ವರಗಿಳಿ ಬಿರಯಿಗೆ**
**ಮೊರೆವಂತೆ ಮೊರೆವ ಮುಱಿದುಂಬಿ ತಳಿರೊಳ್**
**ಪರಭೃತಂ ಮುಗುಟ್ವಿ ಪರಭೃತಂ ೧೦೦**

**ಪದವಿಭಾಗ–ಅನ್ವಯ–ಅರ್ಥ:** ಸುರಯಿಯೊಳ್ + ಗಿಳಿ ಮಗುಟ್ವಿ + ಅರಗಿಳಿ = ಸುರಗಿಮರದಲ್ಲಿ ಗಿಳಿ ಮತ್ತದಕ್ಕೆ ವಾಪಸಾಗುವ ರಾಜಕೀರಗಳಿಗಳು, ಬಿರಯಿಗೆ ಮೊರೆವಂತೆ ಮೊರೆವ ಮಱಿದುಂಬಿ = ವಿರಹಿಗಳಿಗಾಗಿ ಪ್ರಾರ್ಥಿಸುವಂತೆ ಝೇಂಕರಿಸುವ ಮರಿದುಂಬಿಗಳು, ತಳಿರೊಳ್ ಪರಭೃತಂ ಮಗುಟ್ವಿ ಪರಭೃತಂ = ಚಿಗುರಿನಲ್ಲಿ ಕೋಗಿಲೆಗಳು ಅದಕ್ಕಾಗಿ ಬರುವ ಕೋಗಿಲೆಗಳೂ

**ಗದ್ಯಾನುಸರಣ:** ಸುರಗಿಮರದಲ್ಲಿ ಗಿಳಿ ಮತ್ತದಕ್ಕೆ ವಾಪಸಾಗುವ ರಾಜಕೀರಗಳಿಗಳು, ವಿರಹಿಗಳಿಗಾಗಿ ಪ್ರಾರ್ಥಿಸುವಂತೆ ಝೇಂಕರಿಸುವ ಮರಿದುಂಬಿಗಳು ಹಾಗೂ ಚಿಗುರಿನ ನಡುವಣ ಕೋಗಿಲೆಗಳು ಮತ್ತು ಅದಕ್ಕಾಗಿ ಬರುವ ಕೋಗಿಲೆಗಳೂ

**ವಿಶೇಷ ವಿಚಾರ:** ಇದೊಂದು ತ್ರಿಪದಿ! ಪಂಪ ಬಳಸಿರುವ ಎರಡನೆಯ ತ್ರಿಪದಿ.

**ವ। ಸೊಗಯಿಸುಗುಂ, ಮತ್ತಮಲ್ಲಿ**

ಅರ್ಥ: ಸೊಗಯಿಸುಗುಂ ಮತ್ತಂ + ಅಲ್ಲಿ = ಸೊಗಸುತ್ತವೆ, ಅಲ್ಲದೆ ಅಲ್ಲಿ

ಸರಯೂತರಂಗಶೀಕರ
ಪರಿಚಿತಮೇಳಾಲವಂಗಕುಸುಮರಜೋಧೂ
ಸರಮುಬಳಾಳಕಸಂಚಳ
ತರಳಂ ಪುಟಿಲೊಳಗೆ ಸುಟಿವುದುಪವನಪವನಂ ೧೦೧

ಪದವಿಭಾಗ-ಅನ್ವಯ-ಅರ್ಥ: ಸರಯೂತರಂಗಶೀಕರ ಪರಿಚಿತಂ = ಸರಯೂ ನದಿಯ ಅಲೆಗಳ ತುಂತುರುಗಳಿಗೆ ಪರಿಚಿತವಾದ, ಏಳಾ + ಲವಂಗಕುಸುಮರಜೋಧೂಸರಂ = ಏಲಕ್ಕಿ ಮತ್ತು ಲವಂಗಗಳ ಹೂಗಳ ಪರಾಗವನ್ನು ಹೊತ್ತು, ಅಬಳಾ + ಅಳಕಸಂಚಳತರಳಂ = ಹೆಣ್ಣುಗಳ ಕೂದಲನ್ನು ಕೆದರುವ, ಉಪವನ + ಪವನಂ ಪುಟಿಲೊಳಗೆ ಸುಟಿವುದು = ಉದ್ಯಾನವನದ ಗಾಳಿಯು ಮರಗಳ ತೋಪಿನಲ್ಲಿ ಬೀಸುತ್ತದೆ.

ಗದ್ಯಾನುಸರಣ: ಸರಯೂ ನದಿಯ ಅಲೆಗಳ ತುಂತುರನ್ನೂ ಏಲಕ್ಕಿ ಮತ್ತು ಲವಂಗಗಳ ಹೂಗಳ ಪರಾಗವನ್ನೂ ಹೊತ್ತು, ಹೆಣ್ಣುಗಳ ಕೂದಲನ್ನು ಕೆದರುತ್ತ ಉದ್ಯಾನವನದ ಮರಗಳ ತೋಪಿನಲ್ಲಿ ಗಾಳಿಯು ಬೀಸುತ್ತದೆ.

ವ। ಮತ್ತಮಕೃತ್ರಿಮಪ್ರಣಯರಸವಿಸರವಶಗತವಿಬುಧ ಮಿಥುನ ಶತ ರತರಭಸಬಧರೀಕೃತ ಕೃತಕಗಿರಿಗಳೊಳಂ ಕೃತಕಗಿರಿಪರೀತ ನೂತಚೂತಲತಾ ಲಿಂಗಿತ ಶಾತಕುಂಭರಂಭಾವನಾಂತ ರ್ಗತಮಣಿಭವನಂಗಳೊಳಂ ಮಣಿ ಮಯ ಭವನ ಮರಕತಸೋಪಾನಪಙ್ತಿ ತಂತನ್ಯಮಾನದೀಪ್ತಿ ಸಂತಾನಾಮೃತ ನಾನಾನೀರಜರಜಃಪಿಂಜರಿತ ಜಳಾಶಯಂಗಳೊಳಂ ನೆಱೆದು ಸೊಗಯಿಸು ವುದ್ಯಾನವನದ ಕುಸುಮಕಿಸಲಯುಪ ರಾಗಪಿಶಂಗಿತರಂಗತ್ತರಂಗ ಮಾದಂತೆ

ಪದವಿಭಾಗ-ಅನ್ವಯ-ಅರ್ಥ: ಮತ್ತಂ = ಅಲ್ಲದೆ, ಅಕೃತ್ರಿಮಪ್ರಣಯ ರಸವಿಸರವಶಗತ = ಸಹಜವಾದ ಪ್ರೀತಿರಸದಲ್ಲಿ ಮುಳುಗಿದ, ವಿಬುಧಮಿಥುನಶತ = ನೂರಾರು ಪ್ರೌಢ ಪ್ರಣಯಿಗಳ, ರತರಭಸಬಧರೀಕೃತ ಕೃತಕಗಿರಿಗಳೊಳಂ = ಪ್ರೀತಿ ತುಂಬಿದ ಕೃತಕ ಬೆಟ್ಟಗಳಲ್ಲಿ, ಕೃತಕಗಿರಿಪರೀತನೂತಚೂತಲತಾ + ಆಲಿಂಗಿತ = ಕೃತಕಗಿರಿಗಳನ್ನು ಸುತ್ತುವರಿದ ಎಳೆಯ ಮಾವಿನ ಮರಗಳನ್ನು ಅಪ್ಪಿಕೊಂಡ, ಶಾತಕುಂಭರಂಭಾವನ + ಅಂತರ್ಗತ ಮಣಿಭವನಂಗಳೊಳಂ = ಚಿನ್ನದಂತಹ (ಹಣ್ಣು ಬಿಟ್ಟ) ಬಾಳೆಯ ತೋಟದಲ್ಲಿರುವ, ಮಣಿಮಯಭವನ = ಮಣಿಖಚಿತ

ಸೌಧಗಳಲ್ಲಿನ, ಮರಕತಸೋಪಾನಪಙ್ತಿ = ಪಚ್ಚೆಯ ಮೆಟ್ಟಿಲಸಾಲುಗಳಲ್ಲಿ, ತಂತನ್ಯಮಾನ = ಮಾರ್ಪೊಳೆಯುವ, ದೀಪ್ತಿಸಂತಾನ + ಅಮೃತ = ಕಿರಣ ಸಮೂಹವೆಂಬ ಅಮೃತವು, ನಾನಾನೀರಜರಜಃಪಿಂಜರಿತ ಜಳಾಶಯಂಗಳೊಳಂ = ನಾನಾ ಬಗೆಯ ತಾವರೆಗಳ ಪರಾಗಗಳಿಂದ ಕೆಂಪಾದ ಸರೋವರಗಳಲ್ಲಿ, ನೆಱೆದು ಸೊಗಯಿಸುವ + ಉದ್ಯಾನವನದ = ಕೂಡಿ ಸೊಗಸುವ ಉದ್ಯಾನವನದ, ಕುಸುಮ ಕಿಸಲಯ ಪರಾಗಪಿಶಂಗಿತರಂಗತ್ + ತರಂಗಂ + ಆದಂತೆ = ಹೂಚಿಗುರುಪರಾಗಗಳಿಂದ ಕೆಂಬಣ್ಣವನ್ನು ತಳೆದು ಕುಣಿಯುವ ಅಲೆಗಳಾಗುವಂತೆ

**ಗದ್ಯಾನುಸರಣ:** ಅಲ್ಲದೆ, ಸಹಜವಾದ ಪ್ರೀತಿರಸದಲ್ಲಿ ಮುಳುಗಿದ ನೂರಾರು ಪ್ರೌಢ ಪ್ರಣಯಿಗಳ ಪ್ರೀತಿ ತುಂಬಿದ ಕೃತಕ ಬೆಟ್ಟಗಳಿಂದಲೂ, ಕೃತಕಗಿರಿಗಳನ್ನು ಸುತ್ತುವರಿದ ಎಳೆಯ ಮಾವಿನ ಮರಗಳನ್ನು ಅಪ್ಪಿಕೊಂಡ ಚಿನ್ನದಂತಹ (ಹಣ್ಣು ಬಿಟ್ಟ) ಬಾಳೆಯ ತೋಟಗಳಿಂದಲೂ, ಮಣಿಖಚಿತ ಸೌಧಗಳಲ್ಲಿನ ಪಚ್ಚೆಯ ಮೆಟ್ಟಿಲುಸಾಲುಗಳಲ್ಲಿ ಮಾರ್ಪೊಳೆಯುವ ಕಿರಣಸಮೂಹವೆಂಬ ಅಮೃತವು ನಾನಾ ಬಗೆಯ ತಾವರೆಗಳ ಪರಾಗಗಳಿಂದ ಕೆಂಪಾದ ಸರೋವರಗಳಿಂದಲೂ, ಸೊಗಸುವ ಉದ್ಯಾನವನದ ಹೂಚಿಗುರುಪರಾಗಗಳಿಂದ ಕೆಂಬಣ್ಣವನ್ನು ತಳೆದು ಕುಣಿಯುವ ಅಲೆಗಳಿಂದಲೂ ಕೂಡಿ,

> **ಕನಕಸರೋಜಸಂಕುಳರಜಃಪಟಲಾರುಣಿತಂ ಸಮಗ್ರಕಾಂ**
> **ಚನಮಯಸಾರದೀಪ್ತಿಜಟಿಳಂ ಕಳಗೀತವಿಹಂಗಭೃಂಗನಿ**
> **ಸ್ವನಸುಭಗಂ ವಿಚಿತ್ರತರಪತ್ರಮಯಂ ನೆಱೆ ಪೋಲ್ಕುಮಾ ಪುರಾಂ**
> **ಗನೆಯ ಪೊದಳ್ದ ಹೇಮರಶನಾತ್ರಯಮಂ ಪರಿಖಾತ್ರಯಾಂತರಂ**
> **೧೧೨**

**ಪದವಿಭಾಗ-ಅನ್ವಯ-ಅರ್ಥ:** ಕನಕಸರೋಜಸಂಕುಳರಜಃಪಟಲಾ + ಅರುಣಿತಂ = ಹೊಂದಾವರೆಯ ಸಮೂಹದ ಪರಾಗದಿಂದ ಕೆಂಪಾಗಿ, ಸಮಗ್ರಕಾಂಚನಮಯಸಾರದೀಪ್ತಿಜಟಿಳಂ = ಅಪ್ಪಟ ಚಿನ್ನದ ಕಾಂತಿಯಿಂದ ಹೊಳೆಯುತ್ತ, ಕಳಗೀತವಿಹಂಗಭೃಂಗನಿಸ್ವನಸುಭಗಂ = ಮಧುರವಾಗಿ ಹಾಡುವ ದುಂಬಿಗಳು ಮತ್ತು ಹಕ್ಕಿಗಳ ಗಾನದಿಂದ ಕೂಡಿ, ವಿಚಿತ್ರತರಪತ್ರಮಯಂ = ಚಿತ್ರವಿಚಿತ್ರವಾದ ಎಲೆಗಳಿಂದ ಕೂಡಿ, ಪರಿಖಾತ್ರಯ + ಅಂತರಂ = ಮೂರು ಕಂದಕಗಳು, ಆ ಪುರಾಂಗನೆಯ ಪೊದಳ್ದ ಹೇಮರಶನಾತ್ರಯಮಂ ನೆಱೆ ಪೋಲ್ಕುಂ = ಆ ನಗರವೆಂಬ ವನಿತೆಯ ಚಾಚಿದ ಮೂರು ಚಿನ್ನದ ಡಾಬುಗಳನ್ನು ಸಂಪೂರ್ಣವಾಗಿ ಹೋಲುತ್ತಿತ್ತು.

ಗದ್ಯಾನುಸರಣ: ಹೊಂದಾವರೆಯ ಸಮೂಹದ ಪರಾಗದಿಂದ ಕೆಂಪಾಗಿ, ಅಪ್ಪಟ ಚಿನ್ನದ ಕಾಂತಿಯಿಂದ ಹೊಳೆಯುತ್ತ, ಮಧುರವಾಗಿ ಹಾಡುವ ದುಂಬಿಗಳು ಮತ್ತು ಹಕ್ಕಿಗಳ ಗಾನದಿಂದ ಕೂಡಿ, ಚಿತ್ರವಿಚಿತ್ರವಾದ ಎಲೆಗಳಿಂದ ತುಂಬಿ - ಸುತ್ತುವರಿದಿದ್ದ ಮೂರು ಕಂದಕಗಳು ಆ ನಗರವೆಂಬ ವನಿತೆಯ ಮೂರು ಚಿನ್ನದ ಡಾಬುಗಳನ್ನು ಹೋಲುತ್ತಿತ್ತು.

ಪರಿಖಾತ್ರಿತಯಕ್ಕೆ ಚತು
ಶ್ಶರಾಸನಾಂತರದೆ ಸುರಶರಾಸನಭಾಭಾ
ಸುರವೊಪ್ಪಿ ತೋಱುಗುಂ ಪಂ
ಚರತ್ನಪಾಂಶೂಚ್ಚದೀಪ್ತಿದೀಪ್ರಂ ವಪ್ರಂ ೧೦೩

ಪದವಿಭಾಗ-ಅನ್ವಯ-ಅರ್ಥ: ಪರಿಖಾತ್ರಿತಯಕ್ಕೆ = ಆ ಮೂರು ಕಂದಕಗಳಿಗೆ, ಚತುಃ + ಶರಾಸನ + ಅಂತರದೆ = ನಾಲ್ಕು ಬಿಲ್ಲುಗಳಷ್ಟು ದೂರದಲ್ಲಿ, ಸುರಶರಾಸನಭಾಭಾಸುರಂ = ಕಾಮನಬಿಲ್ಲಿನ ಕಾಂತಿಯಿಂದ ಕೂಡಿ, ಪಂಚರತ್ನಪಾಂಶು + ಉಚ್ಚದೀಪ್ತಿದೀಪ್ರಂ ವಪ್ರಂ = ಪಂಚರತ್ನಗಳ ದೀಪ್ತಿಯಿಂದ ಬೆಳಗುತ್ತಿದ್ದ ಆಳ್ವೇರಿಯು, ಒಪ್ಪಿ ತೋಱುಗುಂ = ಶೋಭಿಸುತ್ತಿತ್ತು.

ಗದ್ಯಾನುಸರಣ: ಆ ಮೂರು ಕಂದಕಗಳಿಗೆ ನಾಲ್ಕು ಬಿಲ್ಲುಗಳಷ್ಟು ದೂರದಲ್ಲಿ ಕಾಮನಬಿಲ್ಲಿನ ಕಾಂತಿಯಿಂದಲೂ ಪಂಚರತ್ನಗಳ ದೀಪ್ತಿಯ ಬೆಳಗಿನಿಂದಲೂ ಕೂಡಿ ಊರಿನ ಆಳ್ವೇರಿ ಅಥವಾ ಕೋಟೆ ಗೋಡೆಯು ಶೋಭಿಸುತ್ತಿತ್ತು.

ವ। ಆ ವಪ್ರಪ್ರಮದೆಗೆ,

ಅರ್ಥ: ಆ ವಪ್ರಪ್ರಮದೆಗೆ = ಆ ಆಳುವೇರಿಯೆಂಬ ಪ್ರೌಢೆಗೆ,

ಆಕಾಶಾಂತಮನೆಯ್ದೆ ನೀಳ್ದ ವಿಕಟಾಟ್ಟಾಲಂಗಳೊಳ್ ಕೇತನಾ
ನೀಕಂಗಳ್ ರವಿರಶ್ಮಿಗಳ್ ಪುಗಲೆವೇಡೀ ರಶ್ಮಿಗಳ್ ಸಾಲ್ಗುಮಿಂ
ತೇಕಜ್ಜಂ ಬೆಳಗೆಂಬವೊಲ್ ತುಱುಗಿ ತಳ್ತಿಂಬಪ್ಪಿನಂ ಕಾಂಚನ
ಪ್ರಾಕಾರಂ ನಿಲೆ ತಾಳ್ದುಗುಂ ಕೃತಯುಗಪ್ರಾಕರದಾಕರವಾಂ ೧೦೪

ಪದವಿಭಾಗ-ಅನ್ವಯ-ಅರ್ಥ: ಆಕಾಶ + ಅಂತಮನೆಯ್ದೆ ನೀಳ್ದ ವಿಕಟ + ಅಟ್ಟಾಲಂಗಳೊಳ್ = ಆಗಸದ ತುದಿಯವರೆಗೆ ಚಾಚಿಕೊಂಡ ಎತ್ತರವಾದ ಬುರುಜುಗಳಲ್ಲಿನ, ಕೇತನ + ಆನೀಕಂಗಳ್ = ಧ್ವಜಗಳ ಗುಂಪು, ರವಿರಶ್ಮಿಗಳ್ ಪುಗಲೆವೇಡ = ಸೂರ್ಯಕಿರಣಗಳು ಬರುವುದೇ ಬೇಡ, ಈ ರಶ್ಮಿಗಳ್ ಸಾಲ್ಗುಂ = ಇಲ್ಲಿನ ಬೆಳಕೇ ಸಾಕು, ಇಂತು + ಏ + ಕಜ್ಜಂ ಬೆಳಗು + ಎಂಬವೊಲ್ = ಇಲ್ಲಿ ಬೆಳಕಿಗೆ ಏನು ಕೆಲಸ ಎನ್ನುವಂತೆ, ತುಱುಗಿ ತಳ್ತು + ಇನ್ + ಬಪ್ಪಿನಂ =

ಇಡಿಕಿರಿದು ಅಡ್ಡಿಯಾಗಿ, ಕಾಂಚನಪ್ರಾಕಾರಂ ನಿಲೆ = ಚಿನ್ನದ ಗೋಡೆಯು ನಿಂತು, ಕೃತಯುಗಪ್ರಾಕಾರದ + ಆಕಾರಮಂ ತಾಳ್ದುಗುಂ = ಕೃತಯುಗದ ಆಳ್ವೇರಿಯ ಆಕಾರವನ್ನು ತಾಳಿದೆ.

**ಗದ್ಯಾನುಸರಣ:** ಆಗಸದ ತುದಿಯವರೆಗೆ ಚಾಚಿಕೊಂಡ ಎತ್ತರವಾದ ಬುರುಜುಗಳಲ್ಲಿನ ಧ್ವಜಗಳ ಗುಂಪು, ಸೂರ್ಯಕಿರಣಗಳು ಬರುವುದೇ ಬೇಡ, ಇಲ್ಲಿನ ಬೆಳಕೇ ಸಾಕು, ಇಲ್ಲಿ ಅದಕ್ಕೆ ಏನು ಕೆಲಸ ಎನ್ನುವಂತೆ ಇಡಿಕಿರಿದಿರುವ ಚಿನ್ನದ ಗೋಡೆಯು ಅಡ್ಡಲಾಗಿ ನಿಂತು ಕೃತಯುಗದ ಆಳ್ವೇರಿಯ ಆಕಾರವನ್ನು ತಾಳಿದೆ.

**ವಿಶೇಷ ವಿಚಾರ: ಕೃತಯುಗ** = ಆದಿದೇವನಿಂದ ವಿವಿಧ ವೃತ್ತಿಗಳ ಹಾಗು ವರ್ಗಗಳ ವಿಭಜನೆಯಾಗಿ, ಆಷಾಢ ಬಹುಳ ಪಾಡ್ಯದಂದು ಸಮಾಜವ್ಯವಸ್ಥೆಯು 'ಕೃತ'ಗೊಂಡದ್ದರಿಂದ ಅದನ್ನು ಕೃತಯುಗ ಎಂದು ಪುರಾಣವಿದರು ಕರೆಯುತ್ತಾರೆ; ಅಲ್ಲಿಯವರೆಗೆ ಯುಗವಿಭಜನೆ ಇರಲಿಲ್ಲ - ನೋಡಿ: ಇದೇ '**ಆದಿಪುರಾಣ**' ೮. ೬೬)

**ಶಾಳಿಹರಿನೀಲಮಣಿಕಿರ**
**ಣಾಳಿ ಪೊದಳ್ದೆಸೆಯೆ ರಾಹುಗೆತ್ತಗಿದಿರ್ದ**
**ಟ್ಟಾಳಿಕೆಗಳಲ್ಲಿ ನಾಡೆಯು**
**ಮಾಳೋಚಂಬೆರಸು ತಡೆದು ನಡೆವಂ ದಿನಪಂ** ೧೦೫

**ಪದವಿಭಾಗ-ಅನ್ವಯ-ಅರ್ಥ:** ಶಾಳಿಹರಿನೀಲಮಣಿಕಿರಣ + ಆಳಿ ಪೊದಳ್ದು + ಎಸೆಯೆ = ಕೋಟೆ ಗೋಡೆಯ ಹಸುರು-ನೀಲಿ ಮಿಶ್ರ ಕಿರಣಸಮೂಹವು ಹರಡಲು, ರಾಹುಗೆತ್ತು + ಅಗಿದಿರ್ದು = ರಾಹುವೆಂದು ಭ್ರಮಿಸಿ ಹೆದರಿಕೆಯಿಂದ, ಅಟ್ಟಾಳಿಕೆಗಳಲ್ಲಿ ನಾಡೆಯುಂ + ಆಳೋಚಂಬೆರಸು = ದೀರ್ಘ ಕಾಲ ಆಲೋಚನೆ ಮಾಡಿ, ದಿನಪಂ ತಡೆದು ನಡೆವಂ = ಸೂರ್ಯನು ನಿಧಾನವಾಗಿ ಸಾಗುತ್ತಾನೆ.

**ಗದ್ಯಾನುಸರಣ:** ಕೋಟೆ ಗೋಡೆಯ ಹಸುರು-ನೀಲಿ ಮಿಶ್ರವಾದ ಕಿರಣಸಮೂಹವು ಹರಡಲು ರಾಹುವೆಂದು ಭ್ರಮಿಸಿ ಹೆದರಿಕೆಯಿಂದ ದೀರ್ಘ ಕಾಲ ಆಲೋಚನೆ ಮಾಡಿ ಸೂರ್ಯನು ನಿಧಾನವಾಗಿ ಸಾಗುತ್ತಾನೆ.

**ವಿಶೇಷ ವಿಚಾರ: ಶಾಳಿ** = ಶಾಲ ಎಂದರೆ ಕೋಟೆ ಗೋಡೆಯೆಂಬ ಅರ್ಥವೂ ಇದೆ. ಶಾಲಿ ಅಥವಾ ಶಾಳಿ ಎಂದರೆ 'ಕೋಟೆ ಗೋಡೆಯ' ಎಂಬ ವಿಶೇಷಣರೂಪವೆಂದು ಭಾವಿಸಿ ಆ ಅರ್ಥವನ್ನೇ ಇಲ್ಲಿ ಸೂಚಿಸಿದೆ.

ಎರಡೆರಡಟ್ಟಳೆಗೆ ತರಂ
ತರದಿಂದೊಂದೊಂದು ಗೋಪುರಂ ಪ್ರವಿರಾಜ
ನ್ಮರಕತಮಣಿತೋರಣಪರಿ
ಕರಿತಂ ಪುರವಧುಗೆ ವದನಮಿರ್ಪಂತಿರ್ಕುಂ ೧೦೬

ಪದವಿಭಾಗ-ಅನ್ವಯ-ಅರ್ಥ: ಎರಡೆರಡು + ಅಟ್ಟಳೆಗೆ ತರಂತರದಿಂದೆ + ಒಂದೊಂದು ಗೋಪುರಂ = ಎರಡು ಬುರುಜುಗಳಲ್ಲಿ ಒಂದೊಂದಕ್ಕೂ ಒಂದೊಂದು ಗೋಪುರ; ಪ್ರವಿರಾಜತ್ + ಮರಕತಮಣಿತೋರಣಪರಿಕರಿತಂ = ಸೊಗಯಿಸುವ ಪಚ್ಚೆಯ ಮಣಿತೋರಣಗಳಿಂದ ಕೂಡಿ, ಪುರವಧುಗೆ ವದನಂ + ಇರ್ಪಂತೆ + ಇರ್ಕುಂ = ನಗರ ಎಂಬ ಹೆಣ್ಣಿನ ಮುಖ ಇದ್ದ ಹಾಗಿತ್ತು.

ಗದ್ಯಾನುಸರಣ: ಎರಡು ಬುರುಜುಗಳಲ್ಲಿ ಒಂದೊಂದಕ್ಕೂ ಒಂದೊಂದು ಗೋಪುರ; ಅವು ಸೊಗಯಿಸುವ ಪಚ್ಚೆಯ ಮಣಿತೋರಣಗಳಿಂದ ಕೂಡಿ ನಗರ ಎಂಬ ಹೆಣ್ಣಿನ ಮುಖದಂತಿತ್ತು.

ವ। ಅದಱೊಳಗೆ ಸುತ್ರಾಮನೆ ಸೂತ್ರಧಾರನಾಗಿಯುಂ ಕಲ್ಪಜರೆ ಶಿಲ್ಪಿಗಳಾಗಿಯುಂ ಸಮೆದ ಚೆಲ್ವಿಂಗೆ ಸರ್ವತೋಭದ್ರಮೆನಿಸಿದ ಸರ್ವತೋಭದ್ರಂಗಳೊಳಂ ಛಂದೋವಿದ್ಯೆಯಂತೆ ನಾನಾಚ್ಛಂದಮಪ್ಪ ವಳಭಿಚ್ಛಂದಗಳೊಳಂ ನಾಭಿರಾಜಾಂಗ ಸಂಗತಮಪ್ಪ ನಂದ್ಯಾವರ್ತದಂತೆ ಸೊಗಯಿಸುವ ನಂದ್ಯಾವರ್ತದೊಳಂ ಜನಿಷ್ಯಮಾಣವೃಷಭಜಿನಾವತರಣಮಂಗಳ ನಿಹಿತಕಳಶ ದರ್ಪಣದಂತೆ ಪ್ರಶಸ್ತಸ್ವಸ್ತಿಕಾದಿ ನಾನಾಮಣಿಮಯಪ್ರಾಸಾದಂಗಳೊಳಂ ವಿವಿಧ ವೀಥೀಸನಾಥ ಚತುಷ್ಕಶೃಂಗಾಟವೇದಿಕೆಗಳೊಳಂ ವಂದಿವೃಂದಕ್ಕೆ ಚಿಂತಾಮಣಿಭೂಮಿಯುಂ ಗಾಯಕನಿಕಾಯಕ್ಕೆ ಗಂಧರ್ವಭೂಮಿಯುಂ ಕೃತಸುಕೃತಕ್ಕೆ ತಜ್ಜನ್ಮಭೂಮಿಯುಮಿರ್ಪಂತಿರ್ದ ನಗರಲಲನೆಯ ಲಪನಕ್ಕೆ ಕೇಳೀಲೀಲಾಲಲಾಮಲಕ್ಷ್ಮಿಯುಂ ತಾಳ್ದಿ,

ಪದವಿಭಾಗ-ಅನ್ವಯ-ಅರ್ಥ: ಅದಱೊಳಗೆ ಸುತ್ರಾಮನೆ ಸೂತ್ರಧಾರನಾಗಿಯುಂ = ಅದರಲ್ಲಿ ಇಂದ್ರನೇ ಸೂತ್ರಧಾರಿಯಾಗಿ (ಹಾಗೂ), ಕಲ್ಪಜರೆ ಶಿಲ್ಪಿ ಗಳಾಗಿಯುಂ ಸಮೆದ = ದೇವತೆಗಳೆ ಶಿಲ್ಪಿಗಳಾಗಿ ನಿರ್ಮಿಸಿದ, ಚೆಲ್ವಿಂಗೆ ಸರ್ವತೋ ಭದ್ರಮೆನಿಸಿದ ಸರ್ವತೋಭದ್ರಂಗಳೊಳಂ = ಎಲ್ಲ ಬಗೆಯಲ್ಲಿಯೂ ಮಂಗಳಕರವಾದ ಚೌಕಾಕಾರದ ಸರ್ವತೋಭದ್ರವೆಂಬ ಅರಮನೆ ಗಳಿಂದಲೂ, ಛಂದೋವಿದ್ಯೆಯಂತೆ ನಾನಾಚ್ಛಂದಮಪ್ಪ ವಳಭಿಚ್ಛಂದಗಳೊಳಂ = ಛಂದಸ್ಸಿನ ಶಾಸ್ತ್ರದ ಹಾಗೆ ವಿವಿಧ ಬಗೆಯಲ್ಲಿನ ಇಳಿಜಾರಿನ ಉಪ್ಪರಿಗೆಗಳಿಂದಲೂ, ನಾಭಿರಾಜ + ಅಂಗಸಂಗತಮಪ್ಪ ನಂದ್ಯಾವರ್ತದಂತೆ ಸೊಗಯಿಸುವ ನಂದ್ಯಾವರ್ತದೊಳಂ

= ನಾಭಿರಾಜನ ಅಂಗ ಗಳಲ್ಲಿ ಸೇರಿಕೊಂಡ ನಂದಿಬಟ್ಟಲು ಹೂವಿನಂತೆ ಸುಂದರವಾದ ಆ ಹೂವಿನಾಕಾರದ ಸೌಧಗಳಿಂದಲೂ, ಜನಿಷ್ಯಮಾಣ ವೃಷಭಜಿನ + ಅವತರಣ ಮಂಗಳ ನಿಹಿತಕಳಶ ದರ್ಪಣದಂತೆ = ಹುಟ್ಟಲಿರುವ ವೃಷಭಜಿನನ ಜನ್ಮಕಲ್ಯಾಣಕ್ಕೆಂದು ಮೀಸಲಿಟ್ಟ ಕಳಶದರ್ಪಣದಂತೆ, ಪ್ರಶಸ್ತಸ್ವಸ್ತಿಕಾ + ಆದಿ ನಾನಾಮಣಿಮಯ ಪ್ರಾಸಾದಂಗಳೊಳಂ = ಪವಿತ್ರವಾದ ಸ್ವಸ್ತಿಕಾಕಾರದ ಮಣಿಗಳಿಂದ ಕೂಡಿದ ಉಪ್ಪರಿಗೆಗಳಿಂದಲೂ, ವಿವಿಧ ವೀಥೀಸನಾಥ ಚತುಷ್ಕಶೃಂಗಾಟ ವೇದಿಕೆಗಳೊಳಂ = ವಿವಿಧ ಬಗೆಯ ಬೀದಿಗಳು ಕೂಡುವ ಚೌಕಗಳಲ್ಲಿನ ಚೌಕಾಕಾರದ ಜಗುಲಿ ಗಳಿಂದಲೂ, ವಂದಿವೃಂದಕ್ಕೆ ಚಿಂತಾಮಣಿಭೂಮಿಯುಂ = ಹೊಗಳುಭಟರಿಗೆ ಚಿಂತಾಮಣಿಗಳುಳ್ಳ ಭೂಮಿಯಂತೆಯೂ, ಗಾಯಕನಿಕಾಯಕ್ಕೆ ಗಂಧರ್ವ ಭೂಮಿಯುಂ = ಗಾಯಕ ಸಮೂಹಕ್ಕೆ ಗಂಧರ್ವಭೂಮಿಯಂತೆಯೂ, ಕೃತಸುಕೃತಕ್ಕೆ ತತ್ + ಜನ್ಮಭೂಮಿಯುಂ + ಇರ್ಪಂತೆ + ಇರ್ದ = ಪುಣ್ಯವಂತರಿಗೆ ಅದೇ ಜನ್ಮಭೂಮಿಯಂತೆಯೂ ಇದ್ದ, ನಗರಲಲನೆಯ ಲಪನಕ್ಕೆ ಕೇಳೀಲೀಲಾ ಲಲಾಮಲಕ್ಷ್ಮಿಯಂ ತಾಳ್ದಿ = ನಗರವೆಂಬ ಹೆಣ್ಣಿನ ಚೆಲುವಿಗೆ ವಿಹಾರಕ್ಕೆ ಉತ್ಕೃಷ್ಟ ಆಭರಣವಾಗಿ,

**ಗದ್ಯಾನುಸರಣ:** ಅದರಲ್ಲಿ, ಇಂದ್ರನೇ ಸೂತ್ರಧಾರಿಯಾಗಿ ಹಾಗೂ ದೇವತೆಗಳೆ ಶಿಲ್ಪಿಗಳಾಗಿ ನಿರ್ಮಿಸಿದ, ಎಲ್ಲ ಬಗೆಯಲ್ಲಿಯೂ ಮಂಗಳಕರವಾದ ಚೌಕಾಕಾರದ ಸರ್ವತೋಭದ್ರವೆಂಬ ಅರಮನೆಗಳಿಂದಲೂ, ಛಂದಸ್ಸಿನ ಶಾಸ್ತ್ರದ ಹಾಗೆ ವಿವಿಧ ವಿನ್ಯಾಸದ ಇಳಿಜಾರಿನ ಉಪ್ಪರಿಗೆಗಳಿಂದಲೂ, ನಾಭಿರಾಜನ ಅಂಗಗಳಲ್ಲಿ ಸೇರಿಕೊಂಡ ನಂದಿಬಟ್ಟಲು ಹೂವಿನಂತೆ ಸುಂದರವಾದ ಆ ಹೂವಿನಾಕಾರದ ಸೌಧಗಳಿಂದಲೂ, ಹುಟ್ಟಲಿರುವ ವೃಷಭಜಿನನ ಜನ್ಮಕಲ್ಯಾಣಕ್ಕೆಂದು ಮೀಸಲಿಟ್ಟ ಕಳಶದರ್ಪಣದಂತೆ ಪವಿತ್ರವಾದ ಸ್ವಸ್ತಿಕಾಕಾರದ ಮಣಿಗಳಿಂದ ಕೂಡಿದ ಉಪ್ಪರಿಗೆಗಳಿಂದಲೂ, ವಿವಿಧ ಬಗೆಯ ಬೀದಿಗಳು ಕೂಡುವ ಚೌಕಗಳಲ್ಲಿನ ಚೌಕಾಕಾರದ ಜಗುಲಿಗಳಿಂದಲೂ ಕೂಡಿ, ಹೊಗಳುಭಟರಿಗೆ ಚಿಂತಾಮಣಿಗಳುಳ್ಳ ಭೂಮಿಯುಂತೆಯೂ, ಗಾಯುಕಸಮೂಹಕ್ಕೆ ಗಂಧರ್ವಭೂಮಿಯುಂತೆಯೂ, ಪುಣ್ಯವಂತರಿಗೆ ತವರುಭೂಮಿಯಂತೆಯೂ ಇದ್ದು, ನಗರವೆಂಬ ಹೆಣ್ಣಿನ ಚೆಲುವಿಗೆ ವಿಹಾರಕ್ಕೆ ಉತ್ಕೃಷ್ಟ ಆಭರಣದಂತಿತ್ತು.

**ಧೃತದೇವೇಂದ್ರವಿಮಾನರುಂದ್ರಮಹಿಮಂ ಶ್ರೀಸಪ್ತಕಕ್ಷ್ಯಾಸಮ**
**ನ್ವಿತಮಾಲೋಲದುಕೂಲಕೇತನಕುಳಂ ಮಾಣಿಕ್ಯಹರ್ಮ್ಯಾವಳೀ**
**ವೃತಮುದ್ದ್ಯೋತಿತಸಪ್ತಭೂಮಿಕಮನೇಕೋದಗ್ರಕೂಟಂ ವಿರಾ**
**ಜಿತಘಂಟಂ ಕಳಧೌತತುಂಗಕಳಶಂ ಚೆಲ್ವಾಯ್ತು ರಾಜಾಲಯಂ ೧೧೭**

**ಪದವಿಭಾಗ-ಅನ್ವಯ-ಅರ್ಥ:** ಧೃತದೇವೇಂದ್ರವಿಮಾನರುಂದ್ರಮಹಿಮಂ =

ದೇವೇಂದ್ರನ ವಿಮಾನದ ಗಾಢ ಮಹಿಮೆಯನ್ನು ಪಡೆದ, ಶ್ರೀಸಪ್ತಕಕ್ಷ್ಮಾಸಮನ್ವಿತಂ = ಏಳು ಅಂತಸ್ತುಗಳಿಂದ ಕೂಡಿದ, ಆಲೋಲದುಕೂಲಕೇತನಕುಳಂ = ಹಾರಾಡುವ ರೇಷ್ಮೆ ಬಾವುಟಗಳಿಂದಲೂ, ಮಾಣಿಕ್ಯಹರ್ಮ್ಯ + ಆವಳೀವೃತಂ = ಮಾಣಿಕ್ಯದ ಸೌಧಗಳಿಂದ ಸುತ್ತುವರಿಯಲ್ಪಟ್ಟು, ಉದ್ದ್ಯೋತಿತಸಪ್ತಭೂಮಿಕಂ = ಎತ್ತರವಾದ ಏಳು ಮಹಡಿಗಳಿಂದ ಕೂಡಿ, ಅನೇಕ + ಉದಗ್ರಕೂಟಂ ವಿರಾಜಿತಘಂಟಂ= ನಾನಾ ಎತ್ತರವಾದ ಗೋಪುರಗಳಲ್ಲಿ ವಿರಾಜಿಸುವ ಗಂಟೆಗಳಿಂದ, ಕಳಧೌತತುಂಗಕಳಶಂ = ಚಿನ್ನದ ಕಳಶಗಳಿದ್ದ, ರಾಜ + ಆಲಯಂ ಚೆಲ್ವಾಯ್ತು = ಅರಮನೆಯು ಶೋಭಿಸುತ್ತಿತ್ತು.

ಗದ್ಯಾನುಸರಣ: ಅರಮನೆಯು ಶೋಭಿಸುತ್ತಿತ್ತು: ಅದು ದೇವೇಂದ್ರನ ವಿಮಾನದಷ್ಟು ಗಾಢ ಮಹಿಮೆಯುಳ್ಳದ್ದು; ಏಳು ಅಂತಸ್ತುಗಳಿಂದ ಕೂಡಿದುದು; ಮೇಲುಗಡೆ ರೇಷ್ಮೆ ಬಾವುಟಗಳು ಹಾರಾಡುತ್ತಿದ್ದುವು; ಅದರ ಸುತ್ತಲೂ ಮಾಣಿಕ್ಯದ ಸೌಧಗಳಿದ್ದುವು; ಅದರಲ್ಲಿ ಎತ್ತರವಾದ ಏಳು ಮಹಡಿಗಳಿದ್ದವು; ಎತ್ತರವಾದ ಅದರ ಅನೇಕ ಗೋಪುರಗಳಲ್ಲಿ ವಿರಾಜಿಸುವ ಗಂಟೆಗಳೂ ಚಿನ್ನದ ಕಳಶಗಳೂ ವಿರಾಜಿಸುತ್ತಿದ್ದುವು.

**ವ॥ ಅಂತು ಸಮೆದ ಪುರವರಕ್ಕರಾತಿನಿಕರಕ್ಕಯೋಧ್ಯೆ ಯಪ್ಪುದ ಱಿಂದಯೋಧ್ಯೆಯುಮನೇಕನಿಕೇತನಸಮನ್ವಿತಮಪ್ಪುದಱಿಂ ಸಾಕೇತಮುಂ ವಿನೀತಜನಾಕೀರ್ಣಮಪ್ಪುದಱಿಂ ವಿನೀತೆಯುಂ ಭವಿಷ್ಯತ್ಕೌಶಲವಿಷಯ ಸಾಹಚರ್ಯದಿಂ ಸುಕೌಶಲೆಯುಮೆಂಬ ಪೆಸರ್ಗಳನಿಟ್ಟು ನಾಭಿರಾಜಂಗೆ ರಾಜ್ಯಾಭಿಷೇಕಂಗೆಯ್ದು ಮರುದೇವಿಮಹಾದೇವಿವೆರಸು ಸಾಮ್ರಾಜ್ಯಪಟ್ಟಮಂ ಕಟ್ಟಿ ಸಕಳಜನಮುಮನಾಜ್ಞಾಕರಣವಿಧಾನದೊಳ್ ನಿಯೋಜಿಸಿ ದಿವಿಜಕುಜ ಜನಿತವಸನ ಪ್ರಸವವಿಲೇಪನಾಭರಣಂಗಳಿಂ ಪೂಜಿಸಿ ಭಗವದಮರ ಲೋಕಾವತರಣವಿಹಿತಾಂತಃಕರಣನಾಗಿರ್ಪನ್ನೆಗಂ**

ಪದವಿಭಾಗ-ಅನ್ವಯ-ಅರ್ಥ: ಅಂತು ಸಮೆದ ಪುರವರಕ್ಕೆ = ಹಾಗೆ ನಿರ್ಮಿಸಿದ ಶ್ರೇಷ್ಠ ನಗರಕ್ಕೆ, ಅರಾತಿನಿಕರಕ್ಕೆ + ಅಯೋಧ್ಯೆ + ಅಪ್ಪುದಱಿಂದೆ + ಅಯೋಧ್ಯೆಯುಂ = ಶತ್ರುಸಮುದಾಯಕ್ಕೆ ಗೆಲ್ಲಲಸಾಧ್ಯವಾದುದರಿಂದ ಅಯೋಧ್ಯೆಯೆಂದೂ, ಅನೇಕನಿಕೇತನಸಮನ್ವಿತಂ + ಅಪ್ಪುದಱಿಂ ಸಾಕೇತಮುಂ = ನಾನಾ ಸೌಧಗಳನ್ನೊಳಗೊಂಡುದರಿಂದ ಸಾಕೇತವೆಂದೂ, ವಿನೀತಜನ + ಆಕೀರ್ಣ + ಅಪ್ಪುದಱಿಂ ವಿನೀತೆಯುಂ = ಸೌಜನ್ಯಭರಿತ ಜನರಿಂದ ಕೂಡಿದ್ದುದರಿಂದ ವಿನೀತೆಯೆಂದೂ, ಭವಿಷ್ಯತ್ + ಕೌಶಲವಿಷಯಸಾಹಚರ್ಯದಿಂ ಸುಕೌಶಲೆಯುಂ + ಎಂಬ ಪೆಸರ್ಗಳನ್ + ಇಟ್ಟು = ಮುಂದೆ ಅಧಿಕ ಕೌಶಲಗಳನ್ನು

ಹೊಂದುವುದರಿಂದ ಸುಕೌಶಲೆಯೆಂದೂ ಹೆಸರುಗಳನ್ನಿಟ್ಟು, ನಾಭಿರಾಜಂಗೆ ರಾಜ್ಯಾಭಿಷೇಕಂಗೆಯ್ದು = ನಾಭಿರಾಜನಿಗೆ ರಾಜ್ಯಾಭಿಷೇಕವನ್ನು ಮಾಡಿ, ಮರುದೇವಿಮಹಾದೇವಿವೆರಸು ಸಾಮ್ರಾಜ್ಯಪಟ್ಟಮಂ ಕಟ್ಟಿ = ಪಟ್ಟದ ರಾಣಿಯಾದ ಮರುದೇವಿಯ ಜೊತೆಗೆ ಸಾಮ್ರಾಜ್ಯಪಟ್ಟವನ್ನು ಕಟ್ಟಿ, ಸಕಳಜನಮುಮನ್ + ಆಜ್ಞಾಕರಣವಿಧಾನದೊಳ್ ನಿಯೋಜಿಸಿ = ಎಲ್ಲ ಜನರನ್ನೂ ನಾಭಿರಾಜನ ಆಜ್ಞೆಗಳನ್ನು ಪಾಲಿಸುವಂತೆ ನಿಯಮಿಸಿ, ದಿವಿಜಕುಜಜನಿತವಸನಪ್ರಸವವಿಲೇಪನ + ಆಭರಣಂಗಳಿಂ ಪೂಜಿಸಿ = ಕಲ್ಪತರುಗಳಿತ್ತ ಹೂಗಳು ಸುಗಂಧ ಹಾಗೂ ಆಭರಣಗಳಿಂದ ಪೂಜೆ ಮಾಡಿ, ಭಗವತ್ + ಅಮರಲೋಕ + ಅವತರಣವಿಹಿತ = ಆದಿದೇವನ ದೇವಲೋಕದಿಂದ ಇಳಿದುಬರುವ, ಅಂತಃಕರಣನಾಗಿ + ಇರ್ಪನ್ನೆಗಂ = ಬಗ್ಗೆ ಆಸಕ್ತನಾಗಿರುವಾಗ,

**ಗದ್ಯಾನುಸರಣ:** ಹಾಗೆ ನಿರ್ಮಿಸಿದ ಶ್ರೇಷ್ಠ ನಗರಕ್ಕೆ ಇಂದ್ರನು, ಶತ್ರುಸಮುದಾಯಕ್ಕೆ ಗೆಲ್ಲಲಸಾಧ್ಯವಾದುದರಿಂದ ಅಯೋಧ್ಯೆಯೆಂದೂ, ನಾನಾ ಸೌಧಗಳನ್ನೊಳಗೊಂಡುದರಿಂದ ಸಾಕೇತವೆಂದೂ, ಸೌಜನ್ಯಭರಿತ ಜನರಿಂದ ಕೂಡಿದ್ದುದರಿಂದ ವಿನೀತೆಯೆಂದೂ, ಮುಂದೆ ಅಧಿಕ ಕೌಶಲಗಳನ್ನು ಹೊಂದುವುದರಿಂದ ಸುಕೌಶಲೆಯೆಂದೂ ಹೆಸರುಗಳನ್ನಿಟ್ಟ; ಆ ಬಳಿಕ ನಾಭಿರಾಜನಿಗೆ ರಾಜ್ಯಾಭಿಷೇಕವನ್ನು ಮಾಡಿ, ಪಟ್ಟದ ರಾಣಿಯಾದ ಮರುದೇವಿಯ ಜೊತೆಗೆ ಸಾಮ್ರಾಜ್ಯಪಟ್ಟವನ್ನು ಕಟ್ಟಿದ; ಎಲ್ಲ ಜನರನ್ನೂ ನಾಭಿರಾಜನ ಆಜ್ಞೆಗಳನ್ನು ಪಾಲಿಸುವಂತೆ ನಿಯಮಿಸಿದ; ಆನಂತರ ಕಲ್ಪತರುಗಳಿತ್ತ ಹೂಗಳು ಸುಗಂಧ ಆಭರಣಗಳಿಂದ ಪೂಜೆ ಮಾಡಿದ; ಆದಿದೇವನು ದೇವಲೋಕದಿಂದ ಇಳಿದುಬರುವ ಬಗ್ಗೆ ಆಸಕ್ತಿಯನ್ನು ತಾಳಿದ್ದ.

**ಸುರರಾಜಂ ತಾನೆ ರಾಜ್ಯಾಭಿಷವಣವಿಧಿಯಂ ಮಾಡಿದಂ ಸ್ವರ್ಗದಿಂದಂ**
**ಪುರುದೇವಂ ಬಂದಪಂ ನಂದನನೆನಗೆನಿಸಲ್ಕಾನೆ ಸಂಸಾರಸೌಖ್ಯಾ**
**ಕರನಾಗಿರ್ದಪ್ಪೆನೆಂಬುತ್ಸವದೊಳೆ ಸುಖದಿಂದಿರ್ದನೊಪ್ಪಿರ್ದಯೋಧ್ಯಾ**
**ಪುರದೊಳ್ ಶ್ರೀನಾಭಿರಾಜಂ ಸುಕವಿಜನೋಮಾನಸೋತ್ತಂಸಹಂಸಂ ೧೦೪**

**ಪದವಿಭಾಗ–ಅನ್ವಯ–ಅರ್ಥ:** ಸುರರಾಜಂ ತಾನೆ ರಾಜ್ಯಾಭಿಷವಣವಿಧಿಯಂ ಮಾಡಿದಂ = ದೇವೇಂದ್ರ ತಾನೇ ರಾಜ್ಯಾಭಿಷೇಕವನ್ನು ಮಾಡಿದ್ದಾನೆ; ಎನಗೆ ನಂದನನ್ + ಎನಿಸಲ್ಕೆ ಪುರುದೇವಂ ಸ್ವರ್ಗದಿಂದಂ ಬಂದಪಂ = ನನಗೆ ಮಗನಾಗಲು ಪುರುದೇವನು ಸ್ವರ್ಗದಿಂದ ಬರಲಿದ್ದಾನೆ; ಆನೆ ಸಂಸಾರಸೌಖ್ಯ + ಆಕರನಾಗಿರ್ದಪ್ಪೆನ್ + ಎಂಬ + ಉತ್ಸವದೊಳೆ = ನಾನು ಸಂಸಾರ

ಸುಖದ ನೆಲೆಯಾಗಿಬಿಟ್ಟೆ ಎಂಬ ಉತ್ಸಾಹದಿಂದ, ಸುಕವಿಜನೋಮಾನ ಸೋತ್ತಂಸಹಂಸಂ ಶ್ರೀನಾಭಿರಾಜಂ ಒಪ್ಪಿರ್ದ ಅಯೋಧ್ಯಾಪುರದೊಳ್ ಸುಖದಿಂದೆ ಇರ್ದನ್ = ಸುಕವಿಗಳ ಮನಸ್ಸುಗಳೆಂಬ ಸರೋವರದಲ್ಲಿ ವಿಹರಿಸುವ ಹಂಸನಾದ ನಾಭಿರಾಜನು ಅಯೋಧ್ಯೆಯಲ್ಲಿ ಸುಖವಾಗಿದ್ದ

**ಗದ್ಯಾನುಸರಣ:** 'ದೇವೇಂದ್ರ ತಾನೇ ನನಗೆ ರಾಜ್ಯಾಭಿಷೇಕವನ್ನು ಮಾಡಿದ್ದಾನೆ; ನನಗೆ ಮಗನಾಗಲು ಪುರುದೇವನು ಸ್ವರ್ಗದಿಂದ ಬರಲಿದ್ದಾನೆ; ಹೀಗಾಗಿ ನಾನು ಸಂಸಾರಸುಖದ ನೆಲೆಯಾಗಿಬಿಟ್ಟೆ' ಎಂಬ ಉತ್ಸಾಹದಿಂದ ಸುಕವಿಗಳ ಮನಸ್ಸುಗಳೆಂಬ ಸರೋವರದಲ್ಲಿ ವಿಹರಿಸುವ ಹಂಸನಾದ ನಾಭಿರಾಜನು ಅಯೋಧ್ಯೆಯಲ್ಲಿ ಸುಖವಾಗಿದ್ದ.

**ವ। ಆ ಪ್ರಸ್ತಾವದೊಳ್,**

**ಅರ್ಥ:** ಆ ಪ್ರಸ್ತಾವದೊಳ್ = ಆ ಸಂದರ್ಭದಲ್ಲಿ,

**ಲಯಮಂ ಕರ್ಮತಮಸ್ತಮಕ್ಕೆ ಜಯಮಂ ಧರ್ಮಕ್ಕೆ ಪೀನಂ ಪರಾ**
**ಜಯಮಂ ದೋಷಗಣಕ್ಕೆ ಲಕ್ಕೆತೆಱದಿಂ ಮುಂ ಮಾಡಿ ಸರ್ವಾರ್ಥಸಿ**
**ದ್ಧಿಯನೀಯಲ್ಕೆ ವಿನೇಯಸಂತತಿಗಭಿಪ್ರಾಯಾರ್ಥಸರ್ವಾರ್ಥಸಿ**
**ದ್ಧಿಯಿನುದ್ಧೂತತಮಂ ಬರಲ್ಕೆ ಬಗೆದಂ ಸಂಸಾರಸಾರೋದಯಂ ೧೧೯**

**ಪದವಿಭಾಗ-ಅನ್ವಯ-ಅರ್ಥ:** ಕರ್ಮತಮಃ + ತಮಕ್ಕೆ ಲಯಮಂ = ಕರ್ಮವೆಂಬ ಕತ್ತಲರಾಶಿಗೆ ವಿನಾಶವನ್ನೂ, ಧರ್ಮಕ್ಕೆ ಜಯಮಂ = ಧರ್ಮಕ್ಕೆ ಗೆಲುವನ್ನೂ, ದೋಷಗಣಕ್ಕೆ ಪೀನಂ ಪರಾಜಯಮಂ = ದೋಷಸಮೂಹಕ್ಕೆ ಭಾರಿ ಸೋಲನ್ನೂ, ಲಕ್ಕೆತೆಱದಿಂ ಮುಂ ಮಾಡಿ = ಅಸಂಖ್ಯ ಬಗೆಯಿಂದ ಮೊದಲು ಉಂಟುಮಾಡಿ, ವಿನೇಯಸಂತತಿಗೆ = ವಿನಯವಂತ ಜನಸಮೂಹಕ್ಕೆ, ಸರ್ವ + ಅರ್ಥಸಿದ್ಧಿಯನ್ + ಈಯಲ್ಕೆ = ಎಲ್ಲ ಅಭೀಷ್ಟಗಳನ್ನೂ ನೀಡಲು, ಅಭಿಪ್ರಾಯಾರ್ಥ = ಉದ್ದೇಶದಿಂದ, ಸರ್ವಾರ್ಥಸಿದ್ಧಿಯಿನ್ = ಪಂಚಾಣೂತ್ತರ ವಿಮಾನಗಳಲ್ಲಿ ತುತ್ತತುದಿಯ ವಿಮಾನವಾದ ಸರ್ವಾರ್ಥಸಿದ್ಧಿಯಿಂದ, ಉದ್ಧೂತತಮಂ ಸಂಸಾರಸಾರೋದಯಂ = ಕತ್ತಲನ್ನು ಅಥವಾ ಅಜ್ಞಾನವನ್ನು ದೂರಮಾಡುವ ಸಂಸಾರಸಾರೋದಯನಾದ ಆದಿದೇವನು, ಬರಲ್ಕೆ ಬಗೆದಂ = ಬರಲು ನಿರ್ಧರಿಸಿದ.

**ಗದ್ಯಾನುಸರಣ:** ಕರ್ಮವೆಂಬ ಕತ್ತಲರಾಶಿಗೆ ವಿನಾಶವನ್ನೂ, ಧರ್ಮಕ್ಕೆ ಗೆಲುವನ್ನೂ, ದೋಷಸಮೂಹಕ್ಕೆ ಭಾರಿ ಸೋಲನ್ನೂ, ಅಸಂಖ್ಯ ಬಗೆಯಿಂದ

ಮೊದಲು ಉಂಟುಮಾಡಿ, ಆನಂತರ ವಿನಯವಂತ ಜನಸಮೂಹಕ್ಕೆ ಎಲ್ಲ ಅಭೀಷ್ಟಗಳನ್ನೂ ನೆರವೇರಿಸುವ ಉದ್ದೇಶದಿಂದ ಕೂಡಿ ಪಂಚಾಣೂತ್ತರ ವಿಮಾನಗಳಲ್ಲಿ ತುತ್ತತುದಿಯ ವಿಮಾನವಾದ ಸರ್ವಾರ್ಥಸಿದ್ಧಿಯಿಂದ ಕತ್ತಲನ್ನು ಅಥವಾ ಅಜ್ಞಾನವನ್ನು ದೂರಮಾಡುವ ಸಂಸಾರಸಾರೋದಯನಾದ ಆದಿದೇವನು ಬರಲು ನಿರ್ಧರಿಸಿದ.

ಇಲ್ಲಿಗೆ ನಾಭಿರಾಜರಾಜ್ಯಲಾಭವರ್ಣನೆ ಎಂಬ
ಆರನೆಯ ಆಶ್ವಾಸವು ಮುಗಿಯಿತು

# ಏಳನೆಯ ಆಶ್ವಾಸ

ಶ್ರೀನಿಳಯಮಿದುವೆ ನಾಭಿ
ಸ್ಥಾನಮೆನಲ್ ನೆಱೆದಯೋಧ್ಯೆಗವತರಿಸಲ್ ತ್ರಿ
ಜ್ಞಾನಧರಂ ಬಗೆದಂ ಭ
ವ್ಯಾನಂದಕರಂ ಸರಸ್ವತೀಮಣಿಹಾರಂ ೧

ಪದವಿಭಾಗ-ಅನ್ವಯ-ಅರ್ಥ: ಇದುವೆ ಶ್ರೀನಿಳಯಂ ನಾಭಿಸ್ಥಾನಮೆನಲ್ ನೆಱೆದ = ಇದೇ ಸಂಪತ್ತಿನ ನೆಲೆ, ಕೇಂದ್ರಸ್ಥಾನವೆಂದು ನೆಲೆಸಿರುವ ನಾಭಿರಾಜನ ಜಾಗ ಎಂದು, ಅಯೋಧ್ಯೆಗೆ + ಅವತರಿಸಲ್ ತ್ರಿಜ್ಞಾನಧರಂ ಭವ್ಯಾನಂದಕರಂ ಸರಸ್ವತೀಮಣಿಹಾರಂ ಬಗೆದಂ = ಅಯೋಧ್ಯೆಯಲ್ಲಿ ಅವತಾರವೆತ್ತಲು ಮತಿ, ಶ್ರುತ ಮತ್ತು ಅವಧಿಗಳೆಂಬ ಮೂರು ಜ್ಞಾನಗಳನ್ನು ಪಡೆದವನೂ ಭವ್ಯಜನರಿಗೆ ಆನಂದವನ್ನುಂಟುಮಾಡುವವನೂ ಸರಸ್ವತಿಯ ಮಣಿಹಾರನಾದವನೂ ಆದ ಪುರುದೇವನು ಆಲೋಚಿಸಿದ.

ಗದ್ಯಾನುಸರಣ: ಇದೇ ಸಂಪತ್ತಿನ ನೆಲೆ, ಕೇಂದ್ರಸ್ಥಾನವೆಂದು ನೆಲೆಸಿರುವ ನಾಭಿರಾಜನ ಜಾಗ ಎಂದು ಅಯೋಧ್ಯೆಯಲ್ಲಿ ಅವತಾರವೆತ್ತಲು ಮತಿ, ಶ್ರುತ ಮತ್ತು ಅವಧಿಗಳೆಂಬ ಮೂರು ಜ್ಞಾನಗಳನ್ನು ಪಡೆದವನೂ ಭವ್ಯಜನರಿಗೆ ಆನಂದವನ್ನುಂಟುಮಾಡುವವನೂ ಸರಸ್ವತಿಯ ಮಣಿಹಾರನಾದವನೂ ಆದ ಪುರುದೇವನು ಆಲೋಚಿಸಿದ.

ವ। ಅನ್ನೆಗಮಿತ್ತಲ್

ಅರ್ಥ: ಅನ್ನೆಗಂ + ಇತ್ತಲ್ = ಅಷ್ಟರಲ್ಲಿ ಈ ಕಡೆ,

ಯುಗಮಂ ನಿಪ್ಪೊಸತಪ್ಪಿನಂ ಕೃತಯುಗಂಮಾಡಲ್ ಸುರೇಂದ್ರಾಳಿಗಾ
ವಗಮುತ್ಸಾಹಮನುಂಟುಮಾಡಲೆಡೆಗೊಟ್ಟೀ ಧರ್ಮಮಂ ನೀಂ ಜಲ
ಕ್ಕಗೆ ಮಾಡಲ್ಬಗೆದಪ್ಪುದೆಂದು ನಯದಿಂ ಸಾಕೇತಮುತ್ಕೇತುಬಾ
ಹುಗಳಿಂದಂ ಕರೆವಂತದೇನೆಸೆದುದೋ ಸರ್ವಾರ್ಥಸಿದ್ಧೀಶನಂ ೨

ಪದವಿಭಾಗ-ಅನ್ವಯ-ಅರ್ಥ: ಯುಗಮಂ ನಿಪ್ಪೊಸತು + ಅಪ್ಪಿನಂ ಕೃತಯುಗಂ ಮಾಡಲ್ = ಯುಗವನ್ನು ಹೊಚ್ಚ ಹೊಸತಾದ ಕೃತಯುಗವನ್ನಾಗಿ

ಮಾಡಲು, ಸುರೇಂದ್ರ + ಆಳಿಗೆ + ಆವಗಂ + ಉತ್ಸಾಹಮನ್ + ಉಂಟುಮಾಡಲ್ + ಎಡೆಗೊಟ್ಟ + ಈ ಧರ್ಮಮಂ = ದೇವೇಂದ್ರಸಮುದಾಯಕ್ಕೆ ಸದಾ ಉತ್ಸಾಹವನ್ನು ನೀಡಲು ಅವಕಾಶವಿತ್ತ ಈ ಧರ್ಮವನ್ನು, ಜಲಕ್ಕಗೆ ಮಾಡಲ್ ನೀಂ ಬಗೆದರ್ಪುದು = ಪರಿಶುದ್ಧವನ್ನಾಗಿಸಲು ನೀನು ಕೃಪೆಮಾಡು, ಎಂದು ಸರ್ವಾರ್ಥಸಿದ್ಧೀಶನಂ ನಯದಿಂ ಸಾಕೇತಂ + ಉತ್ + ಕೇತು + ಬಾಹುಗಳಿಂದಂ ಕರೆವಂತೆ + ಅದೇನ್ + ಎಸೆದುದೋ = ಎಂದು ವಿನಯದಿಂದ ಸರ್ವಾರ್ಥಸಿದ್ಧಿಯೊಡೆಯನನ್ನು ಸಾಕೇತವು ಎತ್ತರದ ಬಾವುಟಗಳೆಂಬ ತನ್ನ ಚಾಚಿದ ತೋಳುಗಳಿಂದ ಕರೆಯುವಂತೆ ವಿರಾಜಿಸಿತು.

**ಗದ್ಯಾನುಸರಣ:** 'ಯುಗವನ್ನು ಹೊಚ್ಚ ಹೊಸತಾದ ಕೃತಯುಗವನ್ನಾಗಿ ಮಾಡಲು ಮತ್ತು ದೇವೇಂದ್ರಸಮುದಾಯಕ್ಕೆ ಸದಾ ಉತ್ಸಾಹವನ್ನು ನೀಡಲು ಅವಕಾಶವಿತ್ತ ಈ ಧರ್ಮವನ್ನು ಪರಿಶುದ್ಧವನ್ನಾಗಿಸಲು ನೀನು ಕೃಪೆಮಾಡು' ಎಂದು ವಿನಯದಿಂದ ಸರ್ವಾರ್ಥಸಿದ್ಧಿಯೊಡೆಯನನ್ನು ಸಾಕೇತವು ಎತ್ತರದ ಬಾವುಟಗಳೆಂಬ ತನ್ನ ಚಾಚಿದ ತೋಳುಗಳಿಂದ ಕರೆಯುವಂತೆ ವಿರಾಜಿಸಿತು.

**ವ। ಅನ್ನೆಗಮಮರಪತಿ ಪರಮನ ಚರಮಗರ್ಭಾವತರಣಮನವಧಿಯಿಂದಮಱಿದಱುದಿಂಗಳುಂಟೆನೆ ಮುನ್ನಮೆ,**

**ಪದವಿಭಾಗ–ಅನ್ವಯ–ಅರ್ಥ:** ಅನ್ನೆಗಂ + ಅಮರಪತಿ = ಅಷ್ಟರಲ್ಲಿ ದೇವೇಂದ್ರನು, ಪರಮನ ಚರಮಗರ್ಭ + ಅವತರಣಮನ್ = ಪುರುದೇವನು ಕೊಟ್ಟ ಕೊನೆಯ ಬಾರಿಗೆ ತಾಯಗರ್ಭವನ್ನು ಪ್ರವೇಶಿಸುವುದನ್ನು, ಅವಧಿಯಿಂದಂ + ಅಱಿದು = ಅವಧಿಜ್ಞಾನದಿಂದ ತಿಳಿದು, ಅಱುದಿಂಗಳ್ + ಉಂಟೆನೆ ಮುನ್ನಮೆ = ಇನ್ನು ಆರು ತಿಂಗಳಿದೆ ಎನ್ನುವಾಗಲೇ,

**ಗದ್ಯಾನುಸರಣ:** ಅಷ್ಟರಲ್ಲಿ ದೇವೇಂದ್ರನು, ಪುರುದೇವನು ಕೊಟ್ಟ ಕೊನೆಯ ಬಾರಿಗೆ ತಾಯ ಗರ್ಭವನ್ನು ಪ್ರವೇಶಿಸುವುದನ್ನು ಅವಧಿಜ್ಞಾನದಿಂದ ತಿಳಿದ; ಅದಕ್ಕೆ ಇನ್ನು ಆರು ತಿಂಗಳಿದೆ ಎನ್ನುವಾಗ,

**ಸುರಿವುದು ತಡೆಯದಯೋಧ್ಯಾ**
**ಪುರದೊಳ್ ನೀನಿಂದೆ ತೊಡಗಿ ವಸುಧಾರೆಯುನಾ**
**ದರದಿನೆನೆ ಸಹಜಭಕ್ತಿಯ**
**ಭರದಿಂ ಸುರಪತಿಯು ಬೆಸಸಿದನೊಸೆದಂ ಧನದಂ ೩**

ಪದವಿಭಾಗ-ಅನ್ವಯ-ಅರ್ಥ: ತಡೆಯದೆ ನೀನ್ + ಇಂದೆ ತೊಡಗಿ ಅಯೋಧ್ಯಾಪುರದೊಳ್ ವಸುಧಾರೆಯನ್ ಆದರದಿನ್ ಸುರಿವುದು ಎನೆ = ತಡಮಾಡದೆ ನೀನು ಇವತ್ತಿನಿಂದಲೇ ಆರಂಭಿಸಿ ಅಯೋಧ್ಯೆಯಲ್ಲಿ ಚಿನ್ನದ ಮಳೆಯನ್ನು ಭಕ್ತಿಯಿಂದ ಸುರಿಸು ಎನ್ನಲು, ಸುರಪತಿಯ ಬೆಸದಿನ್ ಸಹಜಭಕ್ತಿಯ ಭರದಿಂ ಧನದಂ ಒಸೆದಂ = ದೇವೇಂದ್ರನ ಆಜ್ಞೆಯನ್ನು ಕುಬೇರನು ತನ್ನ ಸಹಜಭಕ್ತಿಯ ತೀವ್ರತೆಯಿಂದ ಕೈಗೊಂಡ.

ಗದ್ಯಾನುಸರಣ: 'ತಡಮಾಡದೆ ನೀನು ಇವತ್ತಿನಿಂದಲೇ ಆರಂಭಿಸಿ ಅಯೋಧ್ಯೆಯಲ್ಲಿ ಚಿನ್ನದ ಮಳೆಯನ್ನು ಭಕ್ತಿಯಿಂದ ಸುರಿಸು' ಎಂದು ದೇವೇಂದ್ರನು ಆಜ್ಞಾಪಿಸಿದ; ಅದನ್ನು ಕುಬೇರನು ತನ್ನ ಭಕ್ತಿಭಾವದಿಂದ ಕೈಗೊಂಡ.

ವ। ಮತ್ತಂ ಕುಲಶಿಖರಿಶೇಖರಾಯಮಾಣಪದ್ಮಾದಿಸರೋವರನಿವಾಸಿನಿಯರಪ್ಪ ಶ್ರೀಹ್ರೀಧೃತಿ ಕೀರ್ತಿಬುದ್ಧಿ ಲಕ್ಷ್ಮಿಗಳೆಂಬಱುವರುಮನಾತ್ಮೀಯಗುಣಗಣ ಮಣಿವಿಭೂಷಣಂ ಗಳಿಂ ಜಿನಜನನಿಯುನಳಂಕರಿಸಲುಮ ನಾದ್ಯನಿಧನಜಿನ ನಿಳಯ ರುಚಿರ ರುಚಕಾಚಳದ ಪೂರ್ವದಿಗ್ಭಾಗದ ವೈಡೂರ್ಯ ಕಾಂಚನಕನಕಾ ರಿಷ್ಟದಿಕ್ಸ್ವಸ್ತಿಕನಂದನಾಂಜನಮೂಳಕಂಗಳೆಂಬೆಂಟುಂ ಕೂಟಂಗಳೊಳ್ ರಮಿಯಿಸುವ ವಿಜಯ ಜಯಂತೆ ಅಪರಾಜಿತೆ ನಂದೆ ನಂದೋತ್ತರೆ ಆನಂದೆ ನಂದಿವರ್ಧನೆಯೆಂಬೆಣ್ಬರುಂ ದಿಗ್ವನಿತೆಯರುಂ ಪರಮಜಿನೋತ್ಸವದೊಳ್ ಶೃಂಗಾರಂಬೆರಸು ಭೃಂಗಾರುಧಾರಿಗಳಾಗಲುಂ ತತ್ಕುಳದರಿಷ್ಟಪ್ರಾಗ್ದಿಗ್ದೇಶ ದಮೋಘ ಸುಪ್ರಬುದ್ಧರುಂದ್ರವಿಮಳ ರುಚಕ ರುಚಿಕೋತ್ತರ ಚಂದ್ರ ಸುಪ್ರತಿಷ್ಠಮೆಂಬ ಕೂಟಾಷ್ಟಕಂಗಳೊಳ್ ರಮಿಯಿಸುವ ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆಯೆಂಬೆಣ್ಬರುಂ ದಿಗಂಗನೆಯರಂ ನಾಭಿರಾಜಾಂಗನೆಗೆ ಮಣಿದರ್ಪಣಮುಂ ಪಿಡಿಯಲುಂ ತನ್ಮಹೀಧರ ವರುಣಾಶಾವಿಶೇಷಕಮಾಗಿರ್ದ ಲೋಹಿತಾಶ್ವ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ದ್ವಿಗುಣ ಚತುಃಕೂಟಂಗಳೊಳಂ ಸಂಚರಿಸುವಿಳಾದೇವಿ ಸುರಾದೇವಿ ಪೃಥ್ವಿ ಪದ್ಮಾವತಿ ಕಾಂಚನೆ ನವಮಿಕೆ ಸೀತೆ ಭದ್ರೆಯೆಂಬೆಣ್ಬರು ಮಾಶಾ ವಧೂವರರನಾದಿಪುರುಷಾಂಬಿಕೆಗೆ ಗಾಯಕೀನಾಯಕಿಯರಾಗಿ ವಿಚಿತ್ರಾತಪತ್ರಂಗಳಂ ಪಿಡಿಯಲುಂ ತದ್ಗಿರೀಂದ್ರೋತ್ತರ ಕಕುದ್ದೇಶದ ಸ್ಫಟಿಕಾಂಜನ ಕಾಂಚನ ರಜನ ರುಚಕ ಕುಂಡಳ ಸುದರ್ಶನಂಗಳೆಂಬೆಂಟುಂ ಕೂಟಂಗಳೊಳಿರ್ಪ ಲಂಬೂಷೆ ಚಿತ್ರರೇಖೆ ಪುಂಡರೀಕಿಣೀ ವಾರುಣಿ ಆದರ್ಶೆ ಶ್ರೀ ಹ್ರೀ ಧೃತಿಯೆಂಬೆಣ್ಬರುಂ ದಿಕ್ಕನ್ಯೆಯರಂ ಮರುದೇವಿ

ಮಹಾದೇವಿಗೆ ಚಾಮರಮನಿಕ್ಕಲುಂ ಮತ್ತಮಾ ಪರ್ವತದ ಪೂರ್ವ ದಿಗ್ಭಾಗದೊಳ್ ನೆಲಸಿದ ವಿಮಳ ನಿತ್ಯಾವಳೋಕ ಸ್ವಯಂಪ್ರಭ ನಿತ್ಯೋದ್ದ್ಯೋತಂಗಳೆಂಬ ನಾಲ್ಕುಂ ಕೂಟಂಗಳರಸಿಯರಪ್ಪ ಚಿತ್ರೆ ಕನಕಚಿತ್ರೆ ತ್ರಿಶರೆ ಸೂತ್ರಾಮಣಿಯೆಂಬ ನಾಲ್ವರುಂ ವಿದ್ಯುತ್ಕುಮಾರಿಯರನು ದ್ಯದ್ವಿಳಾಸಮಣಿ ದರ್ಪಣಮನಾ ವಿಳಾಸರತ್ನಾಕರೆಯಿರ್ದಲ್ಲಿಗೆ ಕಣ್ಗೆ ಸೊಗಯಿಸಿ ತಳದಳಿಸಿ ಬೆಳಗಲುಂ ತದವನೀಧರವಿದಿಙ್ನೆಳಯಂಗಳಪ್ಪ ವೈಡೂರ್ಯ ರುಚಕ ಮಣಿಪ್ರಭ ರುಚಿಕೋತ್ತರಂಗಳೆಂಬ ವಿಕಟಕೂಟಾಧೀಶೆಯರಪ್ಪ ರುಚಕೆ ರುಚಿಕಾಸ್ಯೆ ರುಚಿಕಾಂತೆ ರುಚಕಪ್ರಭೆಯೆಂಬೀ ನಾಲ್ವರುಂ ದಿಕ್ಕುಮಾರಿಕಾ ಮಹತ್ತರಿಕೆಯರುಮಂ ಮತ್ತಮಾ ನಗದ ನೆಗೆದ ರತ್ನಕೂಟ ರತ್ನಪ್ರಭ ಸರ್ವರತ್ನ ರತ್ನೋಚ್ಚಯಂಗಳೆಂಬ ಕೃತಕದ್ವಿಕೃತವಿಕಟಕೂಟಂಗಳೊಳ್ ಕೊಂಡಾಟದಿಂದಿರ್ಪ ವಿಜಯೆ ವೈಜಯಂತೆ ಜಯಂತೆ ಅಪರಾಜಿತೆಯೆಂಬ ವಿದ್ಯುತ್ಕುಮಾರೀಪುರಂಧ್ರಿಯರಂ ತೀರ್ಥಕರಕುಮಾರ ಜಾತಕರ್ಮಕರಣ ಗರ್ಭಶೋಧನಾದಿಗಳ್ಗೆ ವನಿತಾ ಗೂಢವ್ಯಾಪಾರದೊಳ್ ನೆಗಟಲುಂ ಮತ್ತಮನ್ಯನಗನಿವಾಸಿಗಳಪ್ಪ ಮಾಳಿಕೆ ಮಾಳಿನಿ ಕನಕದೇವಿ ಕನಕಚಿತ್ರೆ ಪುಷ್ಪಚೂಳಿಕೆ ಮಾಳತಿ ಸುರದೇವಿ ತ್ರಿಶರೆ ಮೊದಲಾಗಿ ಪೆಱರುಮಮರಕಾಂತೆಯರನಿಂತನಿತಾನುಂ ತೆಱದ ಬೆಸಂಗಳಂ ಧರ್ಮಾನುರಾಗದಿಂದ ಸೌಧರ್ಮೇಂದ್ರಂ ಬೆಸಸುವುದುಮಾಕೆಗಳ್ ಬಂದು,

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ = ಅಲ್ಲದೆ, ಕುಲಶಿಖರಿಶೇಖರಾಯಮಾಣಪದ್ಮ + ಆದಿಸರೋವರನಿವಾಸಿನಿಯರಪ್ಪ = ಕುಲಪರ್ವತಗಳಿಗೆ ಭೂಷಣಪ್ರಾಯವಾದ ಪದ್ಮ ಮುಂತಾದ ಸರೋವರಗಳಲ್ಲಿ ವಾಸಿಸುವ, ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ, ಅಱುವರುಮನ್ = ಆರು ಮಂದಿಯನ್ನು, ಆತ್ಮೀಯಗುಣಗಣಮಣಿವಿಭೂಷಣಂಗಳಿಂ = ತನ್ನ ಗುಣಗಳೆಂಬ ಮಣಿಭೂಷಣಗಳಿಂದ, ಜಿನಜನನಿಯನ್ + ಅಳಂಕರಿಸಲುಂ = ಜಿನನ ತಾಯಿಯನ್ನು ಅಲಂಕರಿಸಲೂ, ಅನಾದಿ + ಅನಿಧನಜಿನನಿಳಯರುಚಿರ = ಮೊದಲು ಕಡೆಯಿಲ್ಲದ ಜಿನಮಂದಿರಗಳಿಂದ ಸೊಬಗುವಡೆದ, ರುಚಕಾಚಳದ ಪೂರ್ವದಿಗ್ಭಾಗದ = ರುಚಕಪರ್ವತದ ಪೂರ್ವದೆಸೆಯ, ವೈಡೂರ್ಯ ಕಾಂಚನ ಕನಕ + ಅರಿಷ್ಟ + ದಿಕ್ಸ್ವಸ್ತಿಕ + ನಂದನ + ಅಂಜನ ಮೂಳಕಂಗಳೆಂಬ, ಎಂಟುಂ ಕೂಟಂಗಳೊಳ್ ರಮಿಯಿಸುವ = ಎಂಟು ಶಿಖರಗಳಲ್ಲಿ ವಿಹರಿಸುವ, ವಿಜಯ ಜಯಂತೆ ಅಪರಾಜಿತೆ ನಂದೆ ನಂದೋತ್ತರೆ ಆನಂದೆ ನಂದಿವರ್ಧನೆಯೆಂಬ, ಎಣ್ಬರುಂ ದಿಕ್ + ವನಿತೆಯರುಂ = ಎಂಟು ಮಂದಿ ದಿಗ್ದೇವತೆಗಳನ್ನು, ಪರಮ ಜಿನೋತ್ಸವದೊಳ್ = ಆದಿದೇವನ ಹುಟ್ಟಿನ ಸಂಭ್ರಮದಲ್ಲಿ, ಶೃಂಗಾರಂಬೆರಸು ಭೃಂಗಾರುಧಾರಿಗಳಾಗಲುಂ =

ಸಿಂಗರಗೊಂಡು ಚಿನ್ನದ ಕಳಸಗಳನ್ನು ಹಿಡಿಯಲೂ, ತತ್ + ಕುಳದ + ಅರಿಷ್ಟಪ್ರಾಗ್ದಿಗ್ದೇಶದ = ಆ ಕೂಟದ ಪೂರ್ವ ದಿಕ್ಕಿನ ಜಾಗದ, ಅಮೋಘ ಸುಪ್ರಬುದ್ಧ ರುಂದ್ರ ವಿಮಳ ರುಚಕ ರುಚಿಕೋತ್ತರ ಚಂದ್ರ ಸುಪ್ರತಿಷ್ಠಂ, ಎಂಬ, ಕೂಟ + ಅಷ್ಟಕಂಗಳೊಳ್ ರಮಿಯಿಸುವ = ಎಂಟು ಶಿಖರಗಳಲ್ಲಿ ರಮಿಸುವ, ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ ವಸುಂಧರೆ ಚಿತ್ರೆಯೆಂಬ, ಎಣ್ಬರುಂ ದಿಗಂಗನೆಯರಂ = ಎಂಟು ಜನ ದಿಗ್ವನಿತೆಯರನ್ನು, ನಾಭಿರಾಜ + ಅಂಗನೆಗೆ ಮಣಿದರ್ಪಣಮಂ ಪಿಡಿಯಲುಂ = ನಾಭಿರಾಜನ ಮಡದಿ ಮರುದೇವಿಗೆ ಮಣಿಖಚಿತ ಕನ್ನಡಿಯನ್ನು ಹಿಡಿಯಲೂ, ತತ್ + ಮಹೀಧರವರುಣ + ಆಶಾವಿಶೇಷಕಂ + ಆಗಿರ್ದ = ಆ ಬೆಟ್ಟದ ಪಶ್ಚಿಮದಿಕ್ಕಿಗೆ ವಿಶೇಷವೆನಿಸಿದ್ದ, ಲೋಹಿತಾಶ್ವ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳ್, ಎಂಬ ದ್ವಿಗುಣ ಚತುಃಕೂಟಂಗಳೊಳಂ ಸಂಚರಿಸುವ = ಎಂಬ ಎಂಟು ಶಿಖರಗಳಲ್ಲಿ ಸಂಚರಿಸುವ, ಇಳಾದೇವಿ ಸುರಾದೇವಿ ಪೃಥ್ವಿ ಪದ್ಮಾವತಿ ಕಾಂಚನೆ ನವಮಿಕೆ ಸೀತೆ ಭದ್ರೆ, ಎಂಬ + ಎಣ್ಬರುಂ + ಆಶಾವಧೂವರರನ್ = ಎಂಬ ಎಂಟು ಜನ ದಿಗ್ವನಿತೆಯರನ್ನು, ಆದಿಪುರುಷ + ಅಂಬಿಕೆಗೆ ಗಾಯಕೀನಾಯಕಿಯರಾಗಿ = ಆದಿದೇವನ ತಾಯಿಗೆ ಗಾಯಕೀನಾಯಕಿಯರಾಗಿ, ವಿಚಿತ್ರ + ಆತಪತ್ರಂಗಳಂ ಪಿಡಿಯಲುಂ = ಸುಂದರವಾದ ಕೊಡೆಗಳನ್ನು ಹಿಡಿಯಲೂ, ತತ್ + ಗಿರೀಂದ್ರ + ಉತ್ತರ ಕಕುತ್ + ದೇಶದ = ಆ ಗಿರಿಶ್ರೇಷ್ಠದ ಉತ್ತರ ದಿಗ್ದೇಶದ, ಸ್ಫಟಿಕ + ಅಂಜನ ಕಾಂಚನ ರಜತ ರುಚಕ ಕುಂಡಳ ಸುದರ್ಶನಂಗಳೆಂ, ಎಂಟುಂ ಕೂಟಂಗಳೊಳ್ + ಇರ್ಪ = ಎಂಟು ಶಿಖರಗಳಲ್ಲಿ ವಾಸಿಸುವ, ಲಂಬೂಷೆ ಚಿತ್ರರೇಖೆ ಪುಂಡರೀಕಿಣೀ ವಾರುಣಿ ಆದರ್ಶೆ ಶ್ರೀ ಹ್ರೀ ಧೃತಿಯೆಂಬ, ಎಣ್ಬರುಂ ದಿಕ್ಕನ್ಯೆಯರಂ = ಎಂಬ ಎಂಟು ಮಂದಿ ದಿಕ್ಕನ್ಯೆಯರನ್ನು, ಮರುದೇವಿ ಮಹಾದೇವಿಗೆ ಚಾಮರಮನಿಕ್ಕಲುಂ = ಮರುದೇವಿ ಮಹಾರಾಣಿಗೆ ಚಾಮರ ಬೀಸಲೂ, ಮತ್ತಂ + ಆ ಪರ್ವತದ ಪೂರ್ವದಿಕ್ + ಭಾಗದೊಳ್ ನೆಲಸಿದ = ಜೊತೆಗೆ ಆ ಪರ್ವತದ ಪೂರ್ವ ದಿಕ್ಕಿನ ಪ್ರದೇಶದಲ್ಲಿ ನೆಲಸಿದ್ದ, ವಿಮಳ ನಿತ್ಯಾವಲೋಕ ಸ್ವಯಂಪ್ರಭ ನಿತ್ಯೋದ್ಯೋತಂಗಳೆಂಬ, ನಾಲ್ಕುಂ ಕೂಟಂಗಳ + ಅರಸಿಯರಪ್ಪ = ಎಂಬ ನಾಲ್ಕು ಶಿಖರಗಳ ರಾಣಿಯರಾದ, ಚಿತ್ರೆ ಕನಕಚಿತ್ರೆ ತ್ರಿಶಿರೆ ಸೂತ್ರಾಮಣಿ, ಎಂಬ ನಾಲ್ವರುಂ ವಿದ್ಯುತ್ಕುಮಾರಿಯರನ್ = ನಾಲ್ಕು ಮಂದಿ ವಿದ್ಯುತ್ಕುಮಾರಿಯರನ್ನು, ಉದ್ಯತ್ + ವಿಳಾಸಮಣಿದರ್ಪಣಮನ್ = ಮಹಾ ಸೊಗಸಿನ ಮಣಿದರ್ಪಣವನ್ನು, ಆ ವಿಳಾಸರತ್ನಾಕರೆಯಿರ್ದಲ್ಲಿಗೆ ಕಣ್ಗೆ ಸೊಗಯಿಸಿ ತಳದಳಿಸಿ ಬೆಳಗಲುಂ = ಆ ವಿಳಾಸಸಾಗರೆಯಿದ್ದ ಜಾಗದಲ್ಲಿ ಕಣ್ಣಿಗೆ ಸೊಗಸುವಂತೆ ತಳತಳ ಹೊಳೆಯುವಂತೆ ಹಚ್ಚಿಸಿಡಲೂ, ತತ್ + ಅವನೀಧರವಿದಿಕ್ + ನಿಳಯಂಗಳಪ್ಪ = ಆ ಬೆಟ್ಟದ ದಿಕ್ಕುಗಳ ನಡುವಣದ, ವೈಡೂರ್ಯ ರುಚಕ

ಮಣಿಪ್ರಭ ರುಚಿಕೋತ್ತರಂಗಳ್, ಎಂಬ ವಿಕಟಕೂಟ + ಅಧೀಶೆಯರ್ + ಅಪ್ಪ = ಎನ್ನುವ ಶಿಖರಗಳ ಒಡತಿಯರಾದ, ರುಚಕೆ ರುಚಿಕಾಸ್ಯೆ ರುಚಿಕಾಂತೆ ರುಚಕಪ್ರಭೆ, ಎಂಬ + ಈ ನಾಲ್ವರುಂ ದಿಕ್ಕುಮಾರಿಕಾ ಮಹತ್ತರಿಕೆಯರುಮಂ = ಎಂಬ ಈ ನಾಲ್ಕು ಮಂದಿ ದಿಕ್ಕುಮಾರಿ ಮಹತ್ತರದೇವಿಯರನ್ನೂ, ಮತ್ತಂ + ಆ ನಗದ ನೆಗೆದ = ಜೊತೆಗೆ, ಆ ಪರ್ವತದ ಎತ್ತರವಾದ, ರತ್ನಕೂಟ ರತ್ನಪ್ರಭ ಸರ್ವರತ್ನ ರತ್ನೋಚ್ಚಯಂಗಳೆಂಬ, ಕೃತಕತ್ + ವಿಕೃತವಿಕಟಕೂಟಂಗಳೊಳ್ ಕೊಂಡಾಟದಿಂದೆ + ಇರ್ಪ = ದಿಕ್ಕುಗಳ ಮಧ್ಯದ ಶಿಖರಗಳಲ್ಲಿ ಕೊಂಡಾಟದಿಂದಿರುವ, ವಿಜಯೆ ವೈಜಯಂತೆ ಜಯಂತೆ ಅಪರಾಜಿತೆ, ಎಂಬ ವಿದ್ಯುತ್ಕುಮಾರೀಪುರಂಧ್ರಿಯರಂ = ವಿದ್ಯುತ್ಕುಮಾರಿಯರಾದ ಪುರಂಧ್ರಿಯರನ್ನೂ, ತೀರ್ಥಕರಕುಮಾರ + ಜಾತಕರ್ಮಕರಣ + ಗರ್ಭಶೋಧನಾದಿಗಳ್ಗೆ ವನಿತಾ ಗೂಢವ್ಯಾಪಾರದೊಳ್ ನೆಗಟಿಲುಂ = ತೀರ್ಥಂಕರಶಿಶುವಿಗೆ ಜಾತಕರ್ಮಗಳು ಗರ್ಭಶೋಧನ ಮುಂತಾದವುಗಳಿಗಾಗಿ ಹೆಂಗಸರು ರಹಸ್ಯದಲ್ಲಿ ಮಾಡುವ ಕೆಲಸಗಳನ್ನು ನೆರವೇರಿಸಲೂ, ಮತ್ತಂ + ಅನ್ಯನಗನಿವಾಸಿಗಳಪ್ಪ ಜೊತೆಗೆ, ಇತರ ಪರ್ವತಗಳಲ್ಲಿ ವಾಸಿಸುವ, ಮಾಳಿಕೆ ಮಾಳಿನಿ ಕನಕದೇವಿ ಕನಕಚಿತ್ರೆ ಪುಷ್ಪಚೂಳಿಕೆ ಮಾಳತಿ ಸುರದೇವಿ ತ್ರಿಶರೆ, ಮೊದಲಾಗಿ ಪೆಱರುಂ + ಅಮರಕಾಂತೆಯರನ್ = ಮುಂತಾದ ಇತರ ದೇವತಾಸ್ತ್ರೀಯರನ್ನು, ಎಂತು + ಎನಿತಾನುಂ ತೆಱದ ಬೆಸಂಗಳಂ = ಎಂಥೆಂಥದೋ ಬಗೆಯ ಕಾರ್ಯಗಳಿಗೆ, ಸೌಧರ್ಮೇಂದ್ರಂ ಧರ್ಮಾನುರಾಗದಿಂ ಬೆಸಸುವುದುಂ = ಸೌಧರ್ಮೇಂದ್ರನು ಧರ್ಮದ ಬಗೆಗಿನ ಪ್ರೀತಿಯಿಂದ ಹೇಳಲು, ಆಕೆಗಳ್ ಬಂದು = ಅವರೆಲ್ಲ ಬಂದು,

**ತಾತ್ಪರ್ಯ:** ಅಲ್ಲದೆ, ಕುಲಪರ್ವತಗಳಿಗೆ ಭೂಷಣಪ್ರಾಯವಾದ ಪದ್ಮ ಮುಂತಾದ ಸರೋವರಗಳಲ್ಲಿ ವಾಸಿಸುವ ಶ್ರೀ ಹ್ರೀ ಧೃತಿ ಕೀರ್ತಿ ಬುದ್ಧಿ ಲಕ್ಷ್ಮಿಗಳೆಂಬ ಆರು ಮಂದಿಯನ್ನು ತನ್ನ ಗುಣಗಳೆಂಬ ಮಣಿಭೂಷಣಗಳಿಂದ ಜಿನನ ತಾಯಿಯನ್ನು ಅಲಂಕರಿಸಲು ಸೌಧರ್ಮೇಂದ್ರನು ನೇಮಿಸಿದ; ಮೊದಲು ಕಡೆಯಿಲ್ಲದ ಜಿನಮಂದಿರಗಳಿಂದ ಸೊಬಗುವಡೆದ ರುಚಕಪರ್ವತದ ಪೂರ್ವದೆಸೆಯಲ್ಲಿನ ವೈಡೂರ್ಯ ಕಾಂಚನ ಕನಕ ಅರಿಷ್ಟ ದಿಕ್ಸ್ವಸ್ತಿಕ ನಂದನ ಅಂಜನ ಮೂಳಕಂಗಳೆಂಬ ಎಂಟು ಶಿಖರಗಳಲ್ಲಿ ವಿಹರಿಸುವ ವಿಜಯ ಜಯಂತೆ ಅಪರಾಜಿತೆ ನಂದೆ ನಂದೋತ್ತರೆ ಆನಂದೆ ನಂದಿವರ್ಧನೆಯೆಂಬ ಎಂಟು ಮಂದಿ ದಿಗ್ದೇವತೆಗಳನ್ನು ಆದಿದೇವನ ಹುಟ್ಟಿನ ಸಂಭ್ರಮದಲ್ಲಿ ಸಿಂಗರಗೊಂಡು ಚಿನ್ನದ ಕಳಸಗಳನ್ನು ಹಿಡಿಯಲು ನೇಮಿಸಿದ; ಆ ಕೂಟದ ಪೂರ್ವ ದಿಕ್ಕಿನ ಜಾಗದ ಅಮೋಘ ಸುಪ್ರಬುದ್ಧ ರುಂದ್ರ ವಿಮಳ ರುಚಕ ರುಚಿಕೋತ್ತರ ಚಂದ್ರ ಸುಪ್ರತಿಷ್ಠ ಎಂಬ ಎಂಟು ಶಿಖರಗಳಲ್ಲಿ ರಮಿಸುವ ಸುಪ್ರತಿಷ್ಠಿತೆ ಸುಪ್ರಣಿಧಿ ಸುಪ್ರಬುದ್ಧೆ ಯಶೋಧರೆ ಲಕ್ಷ್ಮೀಮತಿ ಕೀರ್ತಿಮತಿ

ವಸುಂಧರೆ ಚಿತ್ರೆಯೆಂಬ ಎಂಟು ಜನ ದಿಗ್ವನಿತೆಯರನ್ನು ನಾಭಿರಾಜನ ಮಡದಿ ಮರುದೇವಿಗೆ ಮಣಿಖಚಿತ ಕನ್ನಡಿಯನ್ನು ಹಿಡಿಯಲು ನೇಮಕ ಮಾಡಿದ; ಆ ಬೆಟ್ಟದ ಪಶ್ಚಿಮದಿಕ್ಕಿಗೆ ವಿಶೇಷವೆನಿಸಿದ್ದ ಲೋಹಿತಾಶ್ವ ಜಗತ್ಕುಸುಮ ಪದ್ಮ ನಳಿನ ಕುಮುದ ಸೌಮನಸ ಯಶೋಭದ್ರ ಸರ್ವತೋಭದ್ರಂಗಳೆಂಬ ಎಂಟು ಶಿಖರಗಳಲ್ಲಿ ಸಂಚರಿಸುವ ಇಳಾದೇವಿ ಸುರಾದೇವಿ ಪೃಥ್ವಿ ಪದ್ಮಾವತಿ ಕಾಂಚನೆ ನವಮಿಕೆ ಸೀತೆ ಭದ್ರೆ ಎಂಬ ಎಂಟು ಜನ ದಿಗ್ವನಿತೆಯರನ್ನು ಆದಿದೇವನ ತಾಯಿಗೆ ಗಾಯಕೀನಾಯಕಿಯರಾಗಿ ಸುಂದರವಾದ ಕೊಡೆಗಳನ್ನು ಹಿಡಿಯಲೆಂದು ನಿಯಮಿಸಿದ; ಆ ಗಿರಿಶ್ರೇಷ್ಠದ ಉತ್ತರ ದಿಗ್ದೇಶದ ಸ್ಫಟಿಕ ಅಂಜನ ಕಾಂಚನ ರಜತ ರುಚಕ ಕುಂಡಳ ಸುದರ್ಶನಂಗಳೆಂಬ ಎಂಟು ಶಿಖರಗಳಲ್ಲಿ ವಾಸಿಸುವ ಲಂಬೂಷೆ ಚಿತ್ರರೇಖೆ ಪುಂಡರೀಕಿಣೀ ವಾರುಣಿ ಆದರ್ಶೆ ಶ್ರೀ ಹ್ರೀ ಧೃತಿಯೆಂಬ ಎಂಬ ಎಂಟು ಮಂದಿ ದಿಕ್ಕನ್ಯೆಯರನ್ನು ಮರುದೇವಿ ಮಹಾರಾಣಿಗೆ ಚಾಮರ ಬೀಸಲು ನೇಮಕ ಮಾಡಿದ; ಜೊತೆಗೆ ಆ ಪರ್ವತದ ಪೂರ್ವ ದಿಕ್ಕಿನ ಪ್ರದೇಶದಲ್ಲಿ ನೆಲಸಿದ್ದ ವಿಮಳ ನಿತ್ಯಾವಲೋಕ ಸ್ವಯಂಪ್ರಭ ನಿತ್ಯೋದ್ಯೋತಂಗಳೆಂಬ ಎಂಬ ನಾಲ್ಕು ಶಿಖರಗಳ ರಾಣಿಯರಾದ ಚಿತ್ರೆ ಕನಕಚಿತ್ರೆ ತ್ರಿಶರೆ ಸೂತ್ರಾಮಣಿ ಎಂಬ ನಾಲ್ಕು ಮಂದಿ ವಿದ್ಯುತ್ಕುಮಾರಿಯರನ್ನು ಆ ವಿಳಾಸಸಾಗರೆಯಿದ್ದ ಜಾಗದಲ್ಲಿ ಕಣ್ಣಿಗೆ ಸೊಗಸುವಂತೆ ತಳತಳ ಹೊಳೆಯುವ ಮಹಾ ಸೊಗಸಿನ ಮಣಿದರ್ಪಣವನ್ನು ಮಹಾ ಸೊಗಸಿನ ಮಣಿದರ್ಪಣವನ್ನು ಹಚ್ಚಿಸಿಡಲು ನಿಯಮಿಸಿದ; ಆ ಬೆಟ್ಟದ ದಿಕ್ಕುಗಳ ನಡುವಣದ ವೈಡೂರ್ಯ ರುಚಕ ಮಣಿಪ್ರಭ ರುಚಿಕೋತ್ತರಂಗಳೆಂಬ ಶಿಖರಗಳ ಒಡತಿಯರಾದ ರುಚಕೆ ರುಚಿಕಾಸ್ಯೆ ರುಚಿಕಾಂತೆ ರುಚಕಪ್ರಭೆ ಎಂಬ ನಾಲ್ಕು ಮಂದಿ ದಿಕ್ಕುಮಾರಿ ಮಹತ್ತರದೇವಿಯರನ್ನೂ, ಜೊತೆಗೆ ಆ ಪರ್ವತದ ಎತ್ತರವಾದ ರತ್ನಕೂಟ ರತ್ನಪ್ರಭ ಸರ್ವರತ್ನ ರತ್ನೋಚ್ಚಯಂಗಳ್ ದಿಕ್ಕುಗಳ ಮಧ್ಯದ ಶಿಖರಗಳಲ್ಲಿ ಕೊಂಡಾಟದಿಂದಿರುವ ವಿಜಯೆ ವೈಜಯಂತೆ ಜಯಂತೆ ಅಪರಾಜಿತೆ ಎಂಬ ವಿದ್ಯುತ್ಕುಮಾರಿಯರಾದ ಪುರಂಧ್ರಿಯರನ್ನು ತೀರ್ಥಂಕರಶಿಶುವಿಗೆ ಜಾತಕರ್ಮ ಗರ್ಭಶೋಧನ ಮುಂತಾದವುಗಳಿಗಾಗಿ ಹೆಂಗಸರು ರಹಸ್ಯದಲ್ಲಿ ಮಾಡುವ ಕೆಲಸಗಳನ್ನು ನೆರವೇರಿಸಲು ನಿಯಮಿಸಿದ; ಜೊತೆಗೆ, ಇತರ ಪರ್ವತಗಳಲ್ಲಿ ವಾಸಿಸುವ ಮಾಳಿಕೆ ಮಾಳಿನಿ ಕನಕದೇವಿ ಕನಕಚಿತ್ರೆ ಪುಷ್ಪಚೂಳಿಕೆ ಮಾಳತಿ ಸುರದೇವಿ ತ್ರಿಶರೆ ಮುಂತಾದ ಇತರ ದೇವತಾಸ್ತ್ರೀಯರನ್ನು ಎಂಥೆಂಥದೋ ಬಗೆಯ ಕಾರ್ಯಗಳಿಗೆ ಸೌಧರ್ಮೇಂದ್ರನು ಧರ್ಮದ ಬಗೆಗಿನ ಪ್ರೀತಿಯಿಂದ ಹೇಳಿದ; ಅಂತೆಯೇ ಅವರೆಲ್ಲ ಬಂದು ಕಾರ್ಯೋದ್ಯುಕ್ತರಾದರು.

**ಪದೆವ ಮನಂ ಬೆರಸೆಜಿಗಿದ**
**ಪದದೊಳದೇಂ ಚೆಲ್ವುವಡೆದುವೋ ಜಿನಜನನೀ**
**ಪದಪಲ್ಲವತಳದೊಳ್ ಸುರ**
**ಸುದತೀಚಯದಳಕವಲ್ಲರೀಕುಸುಮಂಗಳ್** ೪

**ಪದವಿಭಾಗ–ಅನ್ವಯ–ಅರ್ಥ:** ಪದೆವ ಮನಂ ಬೆರಸು = ಪ್ರೀತಿ ತುಂಬಿದ ಮನಸ್ಸಿನಿಂದ, ಜಿನಜನನೀ ಪದಪಲ್ಲವತಳದೊಳ್ ಎಱಗಿದ ಪದದೊಳ್ = ಜಿನಮಾತೆಯ ಪಾದಪಲ್ಲವಗಳಿಗೆ ನಮಸ್ಕರಿಸಿದಾಗ, ಸುರಸುದತೀಚಯದ + ಅಳಕವಲ್ಲರೀಕುಸುಮಂಗಳ್ = ಸುರವನಿತೆಯರ ತಲೆಗೂದಲೆಂಬ ಬಳ್ಳಿಗಳ ಹೂಗಳು ಅದೇಂ ಚೆಲ್ವು + ಪಡೆದುವೋ = ಅದೆಂಥ ಚೆಲುವನ್ನು ಪಡೆಯಿತು!

**ಗದ್ಯಾನುಸರಣ:** ಮನಸ್ಸಿನಲ್ಲಿ ಪ್ರೀತಿ ತುಂಬಿಕೊಂಡು ಜಿನಮಾತೆಯ ಪಾದಪಲ್ಲವಗಳಿಗೆ ನಮಸ್ಕರಿಸಿದಾಗ ಆ ಸುರವನಿತೆಯರ ತಲೆಗೂದಲೆಂಬ ಬಳ್ಳಿಗಳಲ್ಲಿದ್ದ ಹೂಗಳು ಅದೆಂಥ ಚೆಲುವನ್ನು ಪಡೆಯಿತು!

**ವ॥ ಅಂತು ಸುರಸುದತೀಸಂದೋಹಮಮರಕಾಮಿನೀಮಹತ್ತರಿಕಾನಿಯಮಿತಾತ್ಮೀಯ ನಿಯೋಗದಿಂ ಜಿನಜನನಿಯ ಮನಮನಱೆದೋಲಗಿಸುವಲ್ಲಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ಸುರಸುದತೀಸಂದೋಹಂ = ದೇವವನಿತೆಯರ ಸಮೂಹವು, ಅಮರಕಾಮಿನೀಮಹತ್ತರಿಕಾನಿಯಮಿತ = ದೇವವನಿತಾ ಮಹತ್ತರಿಕೆಯರಿಂದ ನೇಮಿತರಾಗಿ, ಆತ್ಮೀಯನಿಯೋಗದಿಂ = ತಮ್ಮ ತಮ್ಮ ಕೆಲಸಗಳಿಂದ, ಜಿನಜನನಿಯ ಮನಮನ್ + ಅಱೆದು + ಓಲಗಿಸುವಲ್ಲಿ = ಜಿನಮಾತೆಯ ಮನಸ್ಸನ್ನು ತಿಳಿದುಕೊಂಡು ಸೇವೆಮಾಡುತ್ತಿರಲು,

**ಗದ್ಯಾನುಸರಣ:** ಹಾಗೆ, ದೇವವನಿತೆಯರ ಸಮೂಹವು ದೇವವನಿತಾ ಮಹತ್ತರಿಕೆಯರಿಂದ ನೇಮಿತರಾಗಿ ಜಿನಮಾತೆಯ ಮನಸ್ಸನ್ನು ತಿಳಿದುಕೊಂಡು ತಮ್ಮ ತಮ್ಮ ಕೆಲಸಗಳ ಮೂಲಕ ಸೇವೆಮಾಡುತ್ತಿದ್ದರು.

**ತುಡುಗೆಯ ಮಣಿದೀಧಿತಿಗಳ**
**ಪೊಡರ್ಪು ಮೇಗೊಗೆದು ಕೊಡೆವೊಲೆಸದಪುದೆಂಬೀ**
**ನುಡಿ ನೆಗೞೆ ಪಂಚರತ್ನದ**
**ಕೊಡೆಯಂ ಪಿಡಿದಮರಿಜನದ ಮನದಡಿವಿಡಿದಳ್** ೫

**ಪದವಿಭಾಗ–ಅನ್ವಯ–ಅರ್ಥ:** ತುಡುಗೆಯ ಮಣಿದೀಧಿತಿಗಳ ಪೊಡರ್ಪು ಮೇಗೆ + ಒಗೆದು = ತೊಟ್ಟ ಒಡವೆಗಳ ಮಣಿಗಳ ಹೊಳಪು ಮೇಲೆ ಚಿಮ್ಮಿ, ಕೊಡೆವೊಲ್ + ಎಸದಪುದು + ಎಂಬೀ ನುಡಿ ನೆಗೞೆ = ಕೊಡೆಯ ಹಾಗೆ ಶೋಭಿಸುತ್ತಿದೆ ಎನ್ನುವಂತೆ, ಪಂಚರತ್ನದ ಕೊಡೆಯಂ ಪಿಡಿದ + ಅಮರಿಜನದ

ಮನದ + ಅಡಿವಿಡಿದಳ್ = ಪಂಚರತ್ನದ ಕೊಡೆಯನ್ನು ಹಿಡಿದ ದೇವವನಿತೆಯರ ಮನಸ್ಸನ್ನು ಸೆಳೆದಳು.

ಗದ್ಯಾನುಸರಣ: ತೊಟ್ಟ ಒಡವೆಗಳ ಮಣಿಗಳ ಹೊಳಪು ಮೇಲೆ ಚಿಮ್ಮಿ ಕೊಡೆಯ ಹಾಗೆ ಶೋಭಿಸುತ್ತಿದೆ ಎನ್ನುವಂತೆ ಪಂಚರತ್ನದ ಕೊಡೆಯನ್ನು ಹಿಡಿದ ದೇವವನಿತೆಯು ನೋಡಿದವರ ಮನಸ್ಸನ್ನು ಸೆಳೆಯುತ್ತಿದ್ದಳು.

ಮೃದುಕರತಳವದನದ ಚೆ
ಲ್ವೊದವಿರೆ ಮಣಿವಳಯಕಳರವಂ ಸೊಗಯಿಸೆ ಚೆ
ಲ್ವಿದಿರ್ಗೊಳೆ ಬೀಸುವ ಚಮರೀ
ಜದಿನೊರ್ವಳ್ ಹಂಸೆ ಪಾಯ್ವ ಲತೆಯನೆ ಪೋಲ್ವಳ್ ೬

ಪದವಿಭಾಗ-ಅನ್ವಯ-ಅರ್ಥ: ಮೃದುಕರತಳ + ವದನದ ಚೆಲ್ವು + ಒದವಿರೆ = ಮೃದುವಾದ ಕೈಗಳ ಹಾಗೂ ಮುಖದ ಚೆಲುವು ಸೊಗಸಿರಲು, ಮಣಿವಳಯಕಳರವಂ ಸೊಗಯಿಸೆ = ಮಣಿಮಯವಾದ ಬಳೆಗಳ ಕಲಕಲಧ್ವನಿಯು ಇಂಪಾಗಿ ಕೇಳಿಸಲು, ಚೆಲ್ವು + ಇದಿರ್ಗೊಳೆ ಬೀಸುವ ಚಮರೀಜದಿನ್ + ಒರ್ವಳ್ = ಚೆಲುವನ್ನು ಸೂಸುವ ಚಾಮರದಿಂದ ಗಾಳಿ ಹಾಕುತ್ತ ಒಬ್ಬಳು, ಹಂಸೆ ಪಾಯ್ವ ಲತೆಯನೆ ಪೋಲ್ವಳ್ = ಹಂಸಿನಿಯು ಸಾಗುವ ಬಳ್ಳಿಯಂತೆ ಕಾಣಿಸಿದಳು

ಗದ್ಯಾನುಸರಣ: ಕೈಗಳ ಹಾಗೂ ಮುಖದ ಚೆಲುವು ಸೊಗಸುತ್ತ, ಮಣಿಮಯವಾದ ಬಳೆಗಳ ಕಲಕಲಧ್ವನಿಯು ಇಂಪಾಗಿ ಕೇಳಿಸಲು ಚೆಲುವನ್ನು ಸೂಸುವ ಚಾಮರದಿಂದ ಗಾಳಿ ಹಾಕುವ ದೇವತೆಯೊಬ್ಬಳು ಹಂಸಿನಿಯು ಸಾಗುವ ಬಳ್ಳಿಯಂತಿದ್ದಳು.

ಈಕೆಯ ಮುಖೇಂದುಬಿಂಬದಿ
ನೀ ಕನಕಸರೋಜಮೆಂತು ಮಲರ್ದತ್ತೆಂದೀ
ಲೋಕಂ ಪೊಗಟ್ಬುದು ಕನಕಾ
ಬ್ಜಾಕಾರದ ಡವಿಕೆವಿಡಿದ ಸುರಸೌಂದರಿಯಂ ೭

ಪದವಿಭಾಗ-ಅನ್ವಯ-ಅರ್ಥ: ಈಕೆಯ ಮುಖ + ಇಂದುಬಿಂಬದಿನ್ + ಈ ಕನಕಸರೋಜಂ + ಎಂತು ಮಲರ್ದತ್ತು = ಇವಳ ಮುಖಚಂದ್ರದಿಂದ ಈ ಚಿನ್ನದ ತಾವರೆ ಹೇಗೆ ಅರಳಿದೆ, ಎಂದು ಕನಕ + ಅಬ್ಜ + ಆಕಾರದ ಡವಿಕೆವಿಡಿದ ಸುರಸೌಂದರಿಯಂ = ಚಿನ್ನದ ತಾವರೆಯ ಆಕಾರದ ಪೀಕದಾನಿಯನ್ನು ಹಿಡಿದ ದೇವಸುಂದರಿಯೊಬ್ಬಳನ್ನು, ಈ ಲೋಕಂ ಪೊಗಟ್ಬುದು = ಇಡೀ ಲೋಕವೇ ಹೊಗಳುತ್ತದೆ.

**ಗದ್ಯಾನುಸರಣ:** ಇವಳ ಮುಖಚಂದ್ರದಿಂದ ಈ ಚಿನ್ನದ ತಾವರೆ ಹೇಗೆ ಅರಳಿದೆ ಎಂದು ಚಿನ್ನದ ತಾವರೆಯ ಆಕಾರದ ಪೀಕದಾನಿಯನ್ನು ಹಿಡಿದ ದೇವಸುಂದರಿಯೊಬ್ಬಳನ್ನು ಇಡೀ ಲೋಕವೇ ಹೊಗಳುತ್ತದೆ.

**ಅರುಣಸರಸೀರುಹಂ ಮೃದು**
**ಕರತಳವಿನ್ಯಾಸಮಮರೆ ಜಿನಜನನಿಯುಮೊ**
**ಳ್ಗುರುಳಂ ಸಮಱುವ ಕನ್ಯಕೆ**
**ಕರಮೆಸೆದಳ್ ತಳಿರೊಳಳಿಗಳಂ ಮುಚ್ಚುವವೋಲ್ ೮**

**ಪದವಿಭಾಗ-ಅನ್ವಯ-ಅರ್ಥ:** ಅರುಣಸರಸೀರುಹಂ ಮೃದುಕರತಳ ವಿನ್ಯಾಸಂ + ಅಮರೆ = ತನ್ನ ಕೆಂದಾವರೆಯಂತಹ ಮೃದುವಾದ ಕೈಗಳ ಚಳಕದಿಂದ, ತಳಿರೊಳ್ + ಅಳಿಗಳಂ ಮುಚ್ಚುವವೋಲ್ = ಚಿಗುರಿನಿಂದ ದುಂಬಿಗಳನ್ನು ಮುಚ್ಚುವ ರೀತಿಯಲ್ಲಿ, ಜಿನಜನನಿಯ + ಒಳ್ಗುರುಳಂ ಸಮಱುವ ಕನ್ಯಕೆ = ಜಿನಮಾತೆಯ ಗುಂಗುರುಗೂದಲನ್ನು ಬಾಚುವ ಕನ್ನಿಕೆಯು, ಕರಮೆಸೆದಳ್ = ಸೊಗಸಿದಳು.

**ಗದ್ಯಾನುಸರಣ:** ತನ್ನ ಕೆಂದಾವರೆಯಂತಹ ಮೃದುವಾದ ಕೈಗಳ ಚಳಕದಿಂದ, ಚಿಗುರಿನಿಂದ ದುಂಬಿಗಳನ್ನು ಮುಚ್ಚುವ ರೀತಿಯಲ್ಲಿ, ಜಿನಮಾತೆಯ ಗುಂಗುರುಗೂದಲನ್ನು ಬಾಚುವ ಕನ್ನಿಕೆಯು ಸೊಗಸಿದಳು.

**ತಾಮರೆಗಂ ಚಂದ್ರಂಗಂ**
**ತಾಮಸಮಂ ಕಳೆದು ಕಾಣ್ಕೆಮಾಟ್ಪಂತೆವೊಲಾ**
**ತಾಮರಸನಿಭಾಸ್ಯೆಗೆ ಸುರ**
**ಕಾಮಿನಿ ಕಟ್ಟಿದಿರೊಳೆಸೆಯೆ ಕನ್ನಡಿವಿಡಿದಳ್ ೯**

**ಪದವಿಭಾಗ-ಅನ್ವಯ-ಅರ್ಥ:** ತಾಮರೆಗಂ ಚಂದ್ರಂಗಂ ತಾಮಸಮಂ ಕಳೆದು ಕಾಣ್ಕೆ ಮಾಟ್ಪಂತೆವೊಲ್ = ತಾವರೆಗೂ ಚಂದ್ರನಿಗೂ ಇರುವ ವೈರವನ್ನು ಹೋಗಲಾಡಿಸಿ ಅವರಿಬ್ಬರೂ ಒಬ್ಬರನ್ನೊಬ್ಬರು ನೋಡುವ ಹಾಗೆ, ಆ ತಾಮರಸನಿಭ + ಆಸ್ಯೆಗೆ = ತಾವರೆಮೊಗದವಳಾದ ಮರುದೇವಿಯ ಕಟ್ಟಿದಿರೊಳೆಸೆಯೆ ಸುರಕಾಮಿನಿ ಕನ್ನಡಿವಿಡಿದಳ್ = ಎದುರಿಗೆ ಸರಿಯಾಗಿ ದೇವಕನ್ಯೆಯೊಬ್ಬಳು ಕನ್ನಡಿಯನ್ನು ಹಿಡಿದಳು.

**ಗದ್ಯಾನುಸರಣ:** ತಾವರೆಗೂ ಚಂದ್ರನಿಗೂ ಇರುವ ವೈರವನ್ನು ಹೋಗಲಾಡಿಸಿ ಅವರಿಬ್ಬರೂ ಒಬ್ಬರನ್ನೊಬ್ಬರು ನೋಡುವ ಹಾಗೆ, ತಾವರೆಮೊಗದವಳಾದ ಮರುದೇವಿಯ ಎದುರಿಗೆ ಸರಿಯಾಗಿ ದೇವಕನ್ಯೆಯೊಬ್ಬಳು ಕನ್ನಡಿಯನ್ನು ಹಿಡಿದಳು.

ಬಿನ್ನನೆ ಕುರುಳ ನೆಟಿಲ್ಗಳ್
ತನ್ನೊಳೆ ತಳ್ಪೊಯ್ದು ನೆಗಟ್ದ ಕಱೆಯನೆ ಪೋಲ್ತು
ನ್ನುನ್ನಂ ಸೊಗಯಿಸುತಿರೆ ಸಿರಿ
ಗನ್ನಡಿ ಕನ್ನಡಿಪುದಾದುದಿಂದುಶ್ರೀಯಂ ೧೦

**ಪದವಿಭಾಗ-ಅನ್ವಯ-ಅರ್ಥ:** ಬಿನ್ನನೆ ಕುರುಳ ನೆಟಿಲ್ಗಳ್ ತನ್ನೊಳೆ ತಳ್ಪೊಯ್ದು = ಸುಮ್ಮನೆ ಕೂದಲ ಪ್ರತಿಬಿಂಬವನ್ನು ತನ್ನಲ್ಲಿ ಸೇರಿಸಿಕೊಂಡು, ನೆಗಟ್ದ ಕಱೆಯನೆ ಪೋಲ್ತು + ಉನ್ನುನ್ನಂ ಸೊಗಯಿಸುತಿರೆ = ಪ್ರಸಿದ್ಧವಾದ ತನ್ನ ಕಲೆಯನ್ನು ಹೋತು ಬಹುವಾಗಿ ಶೋಭಿಸಲು, ಸಿರಿಗನ್ನಡಿ = ಆ ಮಣಿಗನ್ನಡಿಯು, ಇಂದುಶ್ರೀಯಂ ಕನ್ನಡಿಪುದು + ಆದುದು = ಚಂದ್ರನ ಚೆಲುವನ್ನು ಪ್ರತಿಬಿಂಬಿಸುವಂತಾಯಿತು.

**ಗದ್ಯಾನುಸರಣ:** ಕೂದಲ ಪ್ರತಿಬಿಂಬವು ತನ್ನಲ್ಲಿ ಸೇರಿಸಿಕೊಂಡು ಪ್ರಸಿದ್ಧವಾದ ತನ್ನ ಕಲೆಯನ್ನು ಹೋಲುತ್ತ ಬಹುವಾಗಿ ಶೋಭಿಸಲು, ಆ ಮಣಿಗನ್ನಡಿಯು ಚಂದ್ರನ ಚೆಲುವನ್ನೇ ಪ್ರತಿಬಿಂಬಿಸುತ್ತಿದ್ದಂತಾಯಿತು.

ಅಡಿಯೂಡಲ್ಕಲತಗೆಯಂ
ತುಡಲ್ಕೆ ತುಡುಗೆಯನುಡಲ್ಕೆ ದಿವ್ಯಾಂಬರಮಂ
ಮುಡಿಯಲ್ ಪೂವಾಲೆಯನೋ
ಗಡಿಸದೆ ಕುಡುವಮರಿ ಕಲ್ಪಲತೆಯನೆ ಪೋಲ್ತಳ್ ೧೧

**ಪದವಿಭಾಗ-ಅನ್ವಯ-ಅರ್ಥ:** ಅಡಿಯ + ಊಡಲ್ಕೆ + ಅಲತಗೆಯಂ = ಪಾದಗಳಿಗೆ ಬಣ್ಣ ಹಾಕಲು ಅರಗನ್ನೂ, ತುಡಲ್ಕೆ ತುಡುಗೆಯನ್ = ತೊಡಲು ಒಡವೆಗಳನ್ನೂ, ಉಡಲ್ಕೆ ದಿವ್ಯ + ಅಂಬರಮಂ = ಉಟ್ಟುಕೊಳ್ಳಲು ರೇಷ್ಮೆ ಬಟ್ಟೆಯನ್ನೂ, ಮುಡಿಯಲ್ ಪೂವಾಲೆಯನ್ = ಮುಡಿದುಕೊಳ್ಳಲು ಹೂದಂಡೆಯನ್ನೂ, ಓಗಡಿಸದೆ ಕುಡುವ + ಅಮರಿ ಕಲ್ಪಲತೆಯನೆ ಪೋಲ್ತಳ್ = ಪಾಲುಮಾರಿಕೆಯಿಲ್ಲದೆ ನೀಡುವ ಅಮರಿಯು ಕಲ್ಪಲತೆಯಂತೆ ಕಾಣಿಸಿದಳು.

**ಗದ್ಯಾನುಸರಣ:** = ಪಾದಗಳಿಗೆ ಬಣ್ಣ ಹಾಕಲು ಅರಗನ್ನೂ, ತೊಡಲು ಒಡವೆಗಳನ್ನೂ, ಉಟ್ಟುಕೊಳ್ಳಲು ರೇಷ್ಮೆ ಬಟ್ಟೆಯನ್ನೂ, ಮುಡಿದುಕೊಳ್ಳಲು ಹೂದಂಡೆಯನ್ನೂ ಪಾಲುಮಾರಿಕೆಯಿಲ್ಲದೆ ನೀಡುವ ಅಮರಿಯು ಕಲ್ಪಲತೆಯಂತೆ ಕಾಣಿಸಿದಳು.

ತಳದೊಳ್ ತಂಬುಲದೆಲೆಗಳ
ಪೊಳೆಪಮರ್ದಿರೆ ದೇವಕನ್ಯೆ ಮತ್ತೊರ್ವಳ್ ಕೋ
ಮಳಲತೆಯ ನಿಮಿರ್ದ ಕುಡಿಯೊಳ್
ಗಿಳಿ ಪಾಯ್ದುತ್ತೆನಿಸಿ ಸತಿಗೆ ತಂಬುಲಮಿತ್ತಳ್ ೧೨

**ಪದವಿಭಾಗ-ಅನ್ವಯ-ಅರ್ಥ:** ತಂಬುಲದ + ಎಲೆಗಳ ಪೊಳೆಪು ತಳದೊಳ್ ಅಮರ್ದಿರೆ = ವೀಳೆಯದೆಲೆಗಳ ಹೊಳಪು ಕೈಯಲ್ಲಿ ತುಂಬಿರಲು, ಮತ್ತೊರ್ವಳ್ ದೇವಕನ್ಯೆ = ಮತ್ತೊಬ್ಬ ದೇವಕನ್ನಿಕೆಯು, ಕೋಮಳಲತೆಯ ನಿಮಿರ್ದ ಕುಡಿಯೊಳ್ = ಕೋಮಲವಾದ ಬಳ್ಳಿಯ ಚಿಗುರಿದ ಕುಡಿಯಿಂದ, ಗಿಳಿ ಪಾಯ್ದತ್ತು + ಎನಿಸಿ ಸತಿಗೆ ತಂಬುಲಮಿತ್ತಳ್ = ಗಿಳಿಯು ಹಾರಿಹೋಗುತ್ತಿದೆಯೋ ಎನ್ನುವಂತೆ ಮರುದೇವಿಗೆ ತಾಂಬೂಲವನ್ನು ನೀಡಿದಳು.

**ಗದ್ಯಾನುಸರಣ:** ವೀಳೆಯದೆಲೆಗಳ ಹಸಿರ ಹೊಳಪು ಕೈಯಲ್ಲಿ ತುಂಬಿರಲು ಮತ್ತೊಬ್ಬ ದೇವಕನ್ನಿಕೆಯು ಮರುದೇವಿಗೆ ತಾಂಬೂಲವನ್ನು ನೀಡಿದಾಗ ಕೋಮಲವಾದ ಬಳ್ಳಿಯ ಚಿಗುರಿದ ಕುಡಿಯಿಂದ ಗಿಳಿಯೊಂದು ಹಾರಿಹೋಗುತ್ತಿದೆಯೋ ಎನ್ನುವಂತೆ ತೋರಿತು.

ಭೀಷಣರಮಣಿಯತೆ ಸುರ
ಯೋಷಿನ್ನಿಕರಕ್ಕೆ ಕಿಟ್ಟಿ ಬಾಳಿಂ ಭೂಷಾ
ವೇಷದಿನಮರ್ದತ್ತೆನೆ ಕಳ
ಭಾಷಿಣಿಗಮರಿಯರೆ ಬಳಸಿ ಮಯ್ಗಾಪಾದರ್ ೧೩

**ಪದವಿಭಾಗ-ಅನ್ವಯ-ಅರ್ಥ:** ಸುರಯೋಷಿತ್ + ನಿಕರಕ್ಕೆ = ದೇವಸ್ತ್ರೀಸಮೂಹಕ್ಕೆ, ಕಿಟ್ಟಿ ಬಾಳಿಂ = ಒರೆಯಿಂದ ತೆಗೆದ ಕತ್ತಿಯಿಂದ, ಭೀಷಣರಮಣಿಯತೆ = ಭಯಂಕರವೆನಿಸುವ ಸೊಬಗು, ಭೂಷಾವೇಷದಿನ್ + ಅಮರ್ದತ್ತು + ಎನೆ = ಆಭರಣ ಮತ್ತು ವೇಷದಿಂದ ಉಂಟಾಯಿತು ಎನ್ನುವಂತೆ, ಬಳಸಿ = ಸುತ್ತುವರಿದು, ಕಳಭಾಷಿಣಿಗೆ = ಮಧುರಭಾಷಿಣಿಯಾದ ಮರುದೇವಿಗೆ, ಅಮರಿಯರೆ ಮಯ್ಗಾಪು + ಆದರ್ = ದೇವವನಿತೆಯರೆ ಮೈಗಾವಲಾದರು.

**ಗದ್ಯಾನುಸರಣ:** ತಮ್ಮ ಆಭರಣ ಮತ್ತು ವೇಷದಿಂದ ದೇವಸ್ತ್ರೀಸಮೂಹಕ್ಕೆ ಒರೆಯಿಂದ ತೆಗೆದ ಕತ್ತಿಯಂತಹ ಭಯಂಕರವೆನಿಸುವ ಸೊಬಗು ಉಂಟಾಯಿತೋ ಎನ್ನುವಂತೆ ಸುತ್ತುವರಿದು ಮಧುರಭಾಷಿಣಿಯಾದ ಮರುದೇವಿಗೆ ದೇವವನಿತೆಯರೆ ಮೈಗಾವಲಾದರು.

ಅತಿಲಲಿತತರ್ಜನೀತ
ರ್ಜಿತಪರಿಜನೆಯರ್ ವಿಚಿತ್ರವೇತ್ರಲತಾಶೋ
ಭಿತತಳಕಮಳೆಯುರಂತು
ಪ್ರತಿಹಾರಿಯುರಾದರಮರಕಾಂತೆಯುರರೆಬರ್ ೧೪

ಪದವಿಭಾಗ–ಅನ್ವಯ–ಅರ್ಥ: ವಿಚಿತ್ರವೇತ್ರಲತಾಶೋಭಿತತಳಕಮಳೆಯರ್ = ಕೈಗಳಲ್ಲಿ ಹಿಡಿದ ವಿಚಿತ್ರವಾದ ಬೆತ್ತಗಳೆಂಬ ಬಳ್ಳಿಗಳಿಂದ ಶೋಭಿತರಾದ, ಅರೆಬರ್ ಅಮರಕಾಂತೆಯರ್ = ಕೆಲವರು ದೇವಕನ್ನಿಕೆಯರು, ಅತಿಲಲಿತ ತರ್ಜನೀತರ್ಜಿತ ಪರಿಜನೆಯುರ್ = ಅತ್ಯಂತ ಸುಂದರವಾದ ತಮ್ಮ ತೋರುಬೆರಳುಗಳಿಂದಲೇ ಹೆದರಿಸುತ್ತ, ಅಂತು ಪ್ರತಿಹಾರಿಯರಾದರ್ = ಹಾಗೆಯೇ ದ್ವಾರಪಾಲಕರಾದರು.

ಗದ್ಯಾನುಸರಣ: ಕೈಗಳಲ್ಲಿ ಹಿಡಿದ ವಿಚಿತ್ರವಾದ ಬೆತ್ತಗಳೆಂಬ ಬಳ್ಳಿಗಳಿಂದ ಶೋಭಿತರಾದ ಕೆಲವರು ದೇವಕನ್ನಿಕೆಯರು ಅತ್ಯಂತ ಸುಂದರವಾದ ತಮ್ಮ ತೋರುಬೆರಳುಗಳಿಂದಲೇ ಎಚ್ಚರಿಕೆ ನೀಡುವ ದ್ವಾರಪಾಲಕರಾದರು.

ಕಳಕಳಿಪಮರಿಯುರಂ ಕ
ಣ್ಣೊಳೆ ಬಗ್ಗಿಸುವಲ್ಲಿ ಕಾಮಕಾರ್ಮುಕಕರಸಂ
ಚಳನಮನೆ ಪೋಲ್ತು ಕರಮೆರ್ದೆ
ಗೊಳಿಸಿದುದಾಕೆಗಳ ವಿಭ್ರಮಭ್ರೂಭಂಗಂ ೧೫

ಪದವಿಭಾಗ–ಅನ್ವಯ–ಅರ್ಥ: ಕಳಕಳಿಪ + ಅಮರಿಯರಂ ಕಣ್ಣೊಳೆ ಬಗ್ಗಿಸುವಲ್ಲಿ = ಕಲಕಲರವವುಂಟುಮಾಡುವ ದೇವವನಿತೆಯರನ್ನು ಕಣ್ಣುಗಳಲ್ಲಿಯೇ ಝುಂಕಿಸುವ, ಆಕೆಗಳ ವಿಭ್ರಮಭ್ರೂಭಂಗಂ = ಅವರ ಹುಬ್ಬಾಡಿಸುಕೆಯು, ಕಾಮಕಾರ್ಮುಕ = ಕಾಮಬಾಣದ, ಕರಸಂಚಳನಮನೆ ಪೋಲ್ತು = ಕೈಚಳಕವನ್ನು ಹೋತು, ಕರಂ + ಎರ್ದೆಗೊಳಿಸಿದುದು = ಬಹುವಾಗಿ ಕಣ್ಸೆಳೆಯಿತು.

ಗದ್ಯಾನುಸರಣ: ಕಲಕಲರವವುಂಟುಮಾಡುವ ದೇವವನಿತೆಯರನ್ನು ಕಣ್ಣುಗಳಲ್ಲಿಯೇ ಝುಂಕಿಸುವ, ಅವರ ಹುಬ್ಬಾಡಿಸುಕೆಯು ಕಾಮಬಾಣದ ಕೈಚಳಕವನ್ನು ಹೋಲುತ್ತ ಬಹುವಾಗಿ ಕಣ್ಸೆಳೆಯಿತು.

ಗಮಕಂ ಪ್ರಯೋಗಮಾಭೋ
ಗಮಳಂಕಾರಂ ಪೊಗರ್ ನಯಂ ಮಿಱುಗು ಪೊದ
ಳ್ದಮರೆ ಕೊಳೆ ಪಾಡುವಮರಿ ದ
ಲಮರ್ದಂ ಮುಕ್ಕುಳಿಸಿಯುಗುಟ್ವ ತೆಱನಂ ಪೋಲ್ಗುಂ ೧೬

**ಪದವಿಭಾಗ-ಅನ್ವಯ-ಅರ್ಥ:** ಗಮಕಂ ಪ್ರಯೋಗಂ + ಆಭೋಗಂ + ಅಳಂಕಾರಂ ಪೊಗರ್ ನಯಂ ಮಿಱುಗು ಪೊದೞ್ದು + ಅಮರೆ ಕೊಳೆ = ಸ್ವರವಿಶೇಷಗಳ ಅಭಿವ್ಯಕ್ತಿ ಆಭೋಗ ಅಲಂಕಾರ ಲಯಬದ್ಧ ಗತಿ ರಾಗವಿನ್ಯಾಸ 'ಕಾಂತಿಗಳು ವಿಸ್ತೃತವಾಗಿ ಹೊಮ್ಮಲು, ಪಾಡುವ + ಅಮರಿ ದಲ್ + ಅಮರ್ದಂ ಮುಕ್ಕುಳಿಸಿ + ಉಗುೞ್ವ ತೆಱನಂ ಪೋಲ್ಗುಂ = ಹಾಡುವ ದೇವವನಿತೆಯು ಅಮೃತವನ್ನು ಮುಕ್ಕುಳಿಸಿ ಉಗುಳುವ ಹಾಗೆ ಕಾಣುತ್ತಿತ್ತು.

**ಗದ್ಯಾನುಸರಣ:** ಸ್ವರವಿಶೇಷಗಳ ಅಭಿವ್ಯಕ್ತಿ ಆಭೋಗ ಅಲಂಕಾರ ಲಯಬದ್ಧ ಗತಿ ರಾಗವಿನ್ಯಾಸಕಾಂತಿಗಳು ವಿಸ್ತೃತವಾಗಿ ಹೊಮ್ಮಲು, ಹಾಡುವ ದೇವವನಿತೆಯು ಅಮೃತವನ್ನು ಮುಕ್ಕುಳಿಸಿ ಉಗುಳುವ ಹಾಗೆ ಕಾಣುತ್ತಿತ್ತು.

**ಜೇನ ಮೞೆ ಕೊಂಡುದಮರ್ದಿನ**
**ಸೋನೆಯೆ ಸುರಿದತ್ತು ರಸದ ತೊಱೆ ಪರಿದತ್ತೆಂ**
**ಬೀ ನುಡಿಯನೆ ನುಡಿಯಿಸಿದ**
**ತ್ತಾ ನಾಕಸ್ತ್ರೀಯ ಗೇಯಮಾಸ್ಥಾಯಿಕೆಯೊಳ್ ೧೭**

**ಪದವಿಭಾಗ-ಅನ್ವಯ-ಅರ್ಥ:** ಆಸ್ಥಾಯಿಕೆಯೊಳ್ = ಆಸ್ಥಾನದಲ್ಲಿ, ಆ ನಾಕಸ್ತ್ರೀಯ ಗೇಯಂ = ಆ ದೇವವನಿತೆಯ ಗಾಯನವು, ಜೇನ ಮೞೆ ಕೊಂಡುದು = ಜೇನಿನ ಮಳೆ ಹನಿಯುತ್ತಿದೆ, ಅಮರ್ದಿನ ಸೋನೆಯೆ ಸುರಿದತ್ತು = ಅಮೃತದ ಸೋನೆ ಸುರಿಯುತ್ತಿದೆ, ರಸದ ತೊಱೆ ಪರಿದತ್ತು = ರಸದ ಪ್ರವಾಹ ಹರಿಯುತ್ತಿದೆ, ಎಂಬ + ಈ ನುಡಿಯನೆ ನುಡಿಯಿಸಿದತ್ತು = ಎನ್ನುವ ಮಾತುಗಳನ್ನು ಹೊಮ್ಮಿಸುತ್ತಿತ್ತು.

**ಗದ್ಯಾನುಸರಣ:** ಆಸ್ಥಾನದಲ್ಲಿನ ಆ ದೇವವನಿತೆಯ ಗಾಯನವು ಜೇನಿನ ಮಳೆ ಹನಿಯುತ್ತಿದೆ, ಅಮೃತದ ಸೋನೆ ಸುರಿಯುತ್ತಿದೆ, ರಸದ ಪ್ರವಾಹ ಹರಿಯುತ್ತಿದೆ ಎಂಬ ಉದ್ಗಾರದ ಮಾತುಗಳನ್ನು ಅದನ್ನು ಆಲಿಸಿದವರು ಸೂಸುತ್ತಿದ್ದರು.

**ಕರಣಾಂಗಹಾರಮೃದುಪದ**
**ಪರಿಕ್ರಮಂಗಳ ಬೆಡಂಗುಗಳ ಜತಿಯೊಳಳಂ**
**ಕರಿಸಿದುದೆಂಬಿನಮಾಡುವ**
**ಸುರನರ್ತಕಿ ಜನನ ಜನನಿಯುಂ ಮೆಚ್ಚಿಸಿದಳ್ ೧೮**

**ಪದವಿಭಾಗ-ಅನ್ವಯ-ಅರ್ಥ:** ಕರಣ + ಅಂಗಹಾರ ಮೃದುಪದ ಪರಿಕ್ರಮಂಗಳ ಬೆಡಂಗುಗಳ ಜತಿಯೊಳ್ ಅಳಂಕರಿಸಿದುದು = ಗತಿವಿನ್ಯಾಸ ಮುದ್ರೆಗಳು ಮೃದುವಾದ ಹೆಜ್ಜೆಯಿಡುವಿಕೆ ಸ್ವರಜೋಡಣೆಗಳಿಂದ

ಅಲಂಕೃತವಾಯಿತು, ಎಂಬಿನಂ = ಎನ್ನುವಂತೆ, ಆಡುವ ಸುರನರ್ತಕಿ = ಕುಣಿಯುತ್ತಿದ್ದ ದೇವನರ್ತಕಿಯು, ಜಿನನ ಜನನಿಯುಂ ಮೆಚ್ಚಿಸಿದಳ್ = ಮರುದೇವಿಯನ್ನು ಮೆಚ್ಚಿಸಿದಳು.

**ಗದ್ಯಾನುಸರಣ:** ಗತಿವಿನ್ಯಾಸ ಮುದ್ರೆಗಳು ಮೃದುವಾದ ಹೆಜ್ಜೆಯ ಗತಿ ಮತ್ತು ಸ್ವರಜೋಡಣೆಗಳಿಂದ ಅಲಂಕೃತವಾಯಿತು ಎನ್ನುವಂತೆ ಕುಣಿಯುತ್ತಿದ್ದ ದೇವನರ್ತಕಿಯು ಮರುದೇವಿಯನ್ನು ಮೆಚ್ಚಿಸಿದಳು.

**ವದನರಸಂ ಮದನರಸಂ**
**ಪೊದಳ್ದುದೆನಿಸುವಿನಮಮರಿ ನರ್ತಿಸೆ ಚೆಲ್ವಂ**
**ಪುದಿದುರಚಲ್ಲಿಯೊಳೆಸೆದುದು**
**ತದುರೋಜಸರೋಜಮುಕುಳಯುಗಸಂಚಳನಂ** ೧೯

**ಪದವಿಭಾಗ–ಅನ್ವಯ–ಅರ್ಥ:** ವದನರಸಂ ಮದನರಸಂ ಪೊದಳ್ದುದು + ಎನಿಸುವಿನಂ = ಜೊಲ್ಲನ್ನೂ ಕಾಮರಸವನ್ನೂ ಉಕ್ಕಿಸುವಂತೆ, ಅಮರಿ ನರ್ತಿಸೆ = ಅಮರಿಯು ನರ್ತಿಸಲು, ಚೆಲ್ವಂ ಪುದಿದು = ಸೊಬಗನ್ನು ತುಂಬಿಕೊಂಡು, ಉರಚಲ್ಲಿಯೊಳ್ = ಮೊಲೆಕಟ್ಟಿನಲ್ಲಿ ತತ್ + ಉರೋಜಸರೋಜಮುಕುಳ ಯುಗಸಂಚಳನಂ = ಆ ಜೋಡಿ ಮೊಲೆಗಳೆಂಬ ಮೊಗ್ಗುಗಳ ಅಲುಗಾಟವು, ಎಸೆದುದು = ಶೋಭಿಸಿತು.

**ಗದ್ಯಾನುಸರಣ:** ಅಮರಿಯು ನರ್ತಿಸಲು ಜೊಲ್ಲನ್ನೂ ಕಾಮರಸವನ್ನೂ ಉಕ್ಕಿಸುವಂತೆ ಮೊಲೆಕಟ್ಟಿನಲ್ಲಿ ಸೊಬಗನ್ನು ತುಂಬಿಕೊಂಡ ಮೊಗ್ಗುಗಳಂತಿದ್ದ ಆ ಜೋಡಿ ಮೊಲೆಗಳ ಅಲುಗಾಟವು ಶೋಭಿಸಿತು.

**ಇದಱ ದನಿ ಮದವದಳಿಕುಳ**
**ಮೃದುನಿನದದೊಳಂ ಮನೋಜಕಾರ್ಮುಕಗುಣನಾ**
**ದದಪಳಂ ಸೆಣಸುವುದೆನೆ ಸುರ**
**ಸುದತಿ ಪೆಱಳ್ ಮೆಱೆದು ಬೀಣೆಯುಂ ಬಾಜಿಸಿದಳ್** ೨೦

**ಪದವಿಭಾಗ–ಅನ್ವಯ–ಅರ್ಥ:** ಇದಱ ದನಿ = ಇದರ ಧ್ವನಿಯು, ಮದವತ್ + ಅಳಿಕುಳ ಮೃದುನಿನದದೊಳಂ = ಮದಿಸಿದ ದುಂಬಿಯ ಮೃದುನಾದದ ಜೊತೆಗೂ, ಮನೋಜಕಾರ್ಮುಕಗುಣನಾದದೊಳಂ = ಮನ್ಮಥನ ಬಿಲ್ಲಿನ ಟಂಕಾರದ ಜೊತೆಗೂ, ಸೆಣಸುವುದು + ಎನೆ = ಸ್ಪರ್ಧಿಸುತ್ತದೆ ಎನ್ನುವಂತೆ, ಮೆಱೆದು = ಶೋಭಿಸುತ್ತ, ಪೆಱಳ್ ಸುರಸುದತಿ = ಮತ್ತೊಬ್ಬ ದೇವಸ್ತ್ರೀಯು, ಬೀಣೆಯಂ ಬಾಜಿಸಿದಳ್ = ವೀಣೆಯನ್ನು ನುಡಿಸಿದಳು.

**ಗದ್ಯಾನುಸರಣ:** ಇದರ ಧ್ವನಿಯು ಮದಿಸಿದ ದುಂಬಿಯ ಮೃದುನಾದದ ಜೊತೆಗೂ, ಮನ್ಮಥನ ಬಿಲ್ಲಿನ ಟಂಕಾರದ ಜೊತೆಗೂ ಸ್ಪರ್ಧಿಸುತ್ತದೆ ಎನ್ನುವಂತೆ ಶೋಭಿಸುತ್ತ ಮತ್ತೊಬ್ಬ ದೇವಸ್ತ್ರೀಯು ವೀಣೆಯನ್ನು ನುಡಿಸಿದಳು.

ತಳದ ಕಡುಗೆಂಪು ಪುದಿದ
ವ್ವಳಿಸಿರೆ ಸುರಯುವತಿ ಮಧುರತಂತ್ರೀನಾದಂ
ಕೊಳೆ ಬೀಣೆಯ ದಂಡಿಗೆಯುಂ
ತಳಿರ್ತುದೆಂಬೊಂದು ಶಂಕೆಯಂ ಪುಟ್ಟಿಸಿದಳ್ ೨೧

**ಪದವಿಭಾಗ-ಅನ್ವಯ-ಅರ್ಥ:** ಸುರಯುವತಿ ಮಧುರತಂತ್ರೀನಾದಂ ಕೊಳೆ = ಆ ದೇವವನಿತೆಯು ಮಧುರವಾದ ತಂತಿಯ ನಾದವನ್ನು ಹೊಮ್ಮಿಸುವಾಗ, ತಳದ ಕಡುಗೆಂಪು ಪುದಿದು + ಅವ್ವಳಿಸಿರೆ = ಅಂಗೈಯ ಕೆಂಬಾರವು ತುಂಬಿ ತುಳುಕಲು, ಬೀಣೆಯ ದಂಡಿಗೆಯುಂ = ವೀಣೆಯ ದಂಡಿಗೆ ಕೂಡ, ತಳಿರ್ತುದು + ಎಂಬ + ಒಂದು ಶಂಕೆಯಂ ಪುಟ್ಟಿಸಿದಳ್ = ಚಿಗುರೊಡೆಯಿತೇನೋ ಎಂಬ ಅನುಮಾನವನ್ನು ಹುಟ್ಟಿಸಿತು.

**ಗದ್ಯಾನುಸರಣ:** ಆ ದೇವವನಿತೆಯು ಮಧುರವಾದ ತಂತಿಯ ನಾದವನ್ನು ಹೊಮ್ಮಿಸುವಾಗ ಅವಳ ಅಂಗೈಯ ಕೆಂಬಾರವು ತುಂಬಿ ತುಳುಕಲು ವೀಣೆಯ ದಂಡಿಗೆ ಕೂಡ ಚಿಗುರೊಡೆಯಿತೇನೋ ಎಂಬ ಅನುಮಾನವನ್ನು ಹುಟ್ಟಿಸಿತು.

ವ। ಮತ್ತಮಾಕೆಗಳ ವದನೇಂದುಬಿಂಬಂಗಳಂ ಬೆಳಗುಗಳೊಳೆ ಗಗನ ಮಂಡಲಂಗಳೆಲ್ಲಮಿಂದುಮಂಡಲಮಯಮುಂ ನಿಕಾಮಕೋಮಳ ಪದ ಪಲ್ಲವ ವಿನ್ಯಾಸಂಗಳೊಳೆ ಮಣಿಕುಟ್ಟಿಮಮೆಲ್ಲಂ ಪಲ್ಲವಮಯಮುಂ ವಿಲೋಲಲೋಚನಮಯೂಖ ಸಂತಾನದೊಳೆ ದೆಸೆಗಳೆಲ್ಲಂ ನೀಲೋತ್ಪಳ ಮಯಮುಂ ಅಂಗಪ್ರಭಾಪ್ರವಾಹದೊಳೆ ದಿವಸಮೆಲ್ಲಂ ಲಾವಣ್ಯಮಯಮು ಮಾಗಿ ನಾಭಿರಾಜನ ಭವನಮೆಲ್ಲಮಿಂತು ಮದನಾಮೃತಮಯಮುಂ ಶೃಂಗಾರಮಯಮುಂ ಸೌಕುಮಾರ್ಯಮಯಮುಮಾಗಿ ತೋಱೆ ಸುರ ಮಹತ್ತರಿಕೆಯರ ಮರಗಣಿಕೆಯುರಂ ಪೆಸರ್ವೆಸರೊಳೆ ಕರೆದು ನಿಪುಣಿಕೆಯಂ ಜಿನಜನನಿಯ ಸೆಜ್ಜೆಯನುಜ್ಜ್ವಳಂ ಮಾಡಲುಂ ಚಂದ್ರಿಕೆಯಂ ಚಂದ್ರಕಾಂತದ ಕರಗಮಂ ತೀವಲುಮಮೃತಮತಿಯುನಮೃತಾಹಾರದ ಬೋನಮನೆತ್ತಲುಂ ಲವಲವಿಕೆಯಂ ಪರಿಯಣಮಂ ಬಿತ್ತರಿಸಲುಂ ಪದ್ಮಿಕೆಯುನಗಲಂ ತಂದು ಮುಂದಿರಿಸಲುಂ ಮನೋಹರಿಯಂ ಪಡಿಸಣಮಂ ನೋಡಲುಂ ಮಾಳತಿಕೆ ಯಂ ಬಡ್ಡಿಸಲುಂ ಉತ್ಪಳಿಕೆಯಂ ಕೈಘಟ್ಟನೀಡಲುಂ ಮಂದಾರಿಕೆಯಂ ಮಂದಾರಮಾಲಿಕೆ ಯನೆತ್ತಲುಂ

**ವಿಳಾಸವತಿಯಂ ಪಸದನಂಗೊಳಿಸಲುಂ ಲವಂಗಿಕೆಯಂ ಲವಂಗಪಲ್ಲವರಸದೊಳ್ ವಿಳಾಸಾವಾಸಭವನಮನು ತ್ತರಿಸಲುಂ ಪ್ರಭಾವತಿಯನಿಂದ್ರನೀಲಮಣಿ ಭವನದೊಳ್ ಮಣಿಪ್ರದೀಪಮಂ ಬೆಳಗಲುಂ ಚಿತ್ರಲೇಖೆಯಂ ಮಣಿಸ್ತಂಭ ಸಾಲಭಂಜಿಕಾಸ್ತಂಭಂಗಳೊಳ್ ಕುಂಕುಮರಸ ಪತ್ರಲೇಖೆಯುಂ ವಿರಚಿಸಲುಂ ಮಯೂರಿಕೆಯುಂ ಧರಾಗೃಹಕ್ಕೆ ಗೃಹಮಯೂರಂಗಳಂ ನಡೆಯಿಸಲುಂ ಚೂತಲತಿಕೆಯುಂ ಕನಕಪಂಜರಾಂತ ರ್ಗತ ಕೋಕಿಳಕ್ಕೆ ಚೂತಲತಿಕಾಂಕುರಂಗಳಂ ನೀಡಲುಂ ಮೃಣಾಳಿಕೆಯುಂ ಭವನಕಳಹಂಸೆಗೆ ಬಾಳಮೃಣಾಳನಾಳಂಗಳಂ ನೀಡಲುಮಿಂತು ಪೆಱವು ಮಿಸುವೆಸಂಗಳನವರವರ್ಗೆ ತಕ್ಕುವಂ ತಕ್ಕಂದದಿಂ ಪೇೞ್ದಾಗಳ್,**

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ + ಆಕೆಗಳ ವದನ + ಇಂದುಬಿಂಬಂಗಳಂ ಬೆಳಗುಗಳೊಳೆ = ಅಲ್ಲದೆ, ಆ ವನಿತೆಯರ ಮುಖಚಂದ್ರಗಳು ಬೆಳಗನ್ನುಂಟುಮಾಡಲು, ಗಗನಮಂಡಲಂಗಳೆಲ್ಲಮಿಂದುಮಂಡಲಮಯಮುಂ = ಆಕಾಶವಲಯವೆಲ್ಲ ಚಂದ್ರಮಂಡಲಗಳಿಂದ ತುಂಬಿ, ನಿಕಾಮಕೋಮಳಪದಪಲ್ಲವವಿನ್ಯಾಸಂಗಳೊಳೆ = ಅತ್ಯಂತ ಕೋಮಲವಾದ ಅವರ ಪಾದಗಳೆಂಬ ಚಿಗುರಿನ ನಡಿಗೆಯಿಂದ, ಮಣಿಕುಟ್ಟಿಮಮೆಲ್ಲಂ ಪಲ್ಲವಮಯಮುಂ = ಮಣೀಖಚಿತ ನೆಲವೆಲ್ಲ ಚಿಗುರಿನಿಂದ ತುಂಬಿ, ವಿಲೋಲಲೋಚನಮಯೂಖಸಂತಾನದೊಳೆ = ಚಂಚಲವಾದ ಅವರ ಕಣ್ಣ ನೋಟಗಳ ಬೆಳಗಿನ ರಾಶಿಯಿಂದ, ದೆಸೆಗಳೆಲ್ಲಂ ನೀಲೋತ್ಪಳಮಯಮುಂ = ದಿಕ್ಕುಗಳೆಲ್ಲ ನೈದಿಲೆಗಳಿಂದ ತುಂಬಿ, ಅಂಗಪ್ರಭಾಪ್ರವಾಹದೊಳೆ = ದೇಹಕಾಂತಿಯ ಪ್ರವಾಹದಿಂದ, ದಿವಸಮೆಲ್ಲಂ ಲಾವಣ್ಯಮಯಮುಂ + ಆಗಿ = ಹಗಲೆಲ್ಲ ಚೆಲುವಿನ ಕೂಡಿ; ನಾಭಿರಾಜನ ಭವನಮೆಲ್ಲಂ + ಇಂತು ಮದನಾಮೃತಮಯಮುಂ = ನಾಭಿರಾಜನ ಅರಮನೆಯೆಲ್ಲ ಹೀಗೆ ಮದನರಸದಿಂದ ಕೂಡಿ, ಶೃಂಗಾರಮಯಮುಂ ಸೌಕುಮಾರ್ಯಮಯಮುಂ + ಆಗಿ ತೋಱೆ = ಶೃಂಗಾರಮಯವೂ ಕೋಮಲಮಯವೂ ಆಗಿ, ಸುರಮಹತ್ತರಿಕೆಯರ್ + ಅಮರಗಣಿಕೆಯರಂ = ದೇವ ಮಹತ್ತರಿಕೆಯರು ದೇವವಿಳಾಸಿನಿಯರನ್ನು, ಪೆಸರ್ + ಪೆಸರೊಳೆ ಕರೆದು = ಹೆಸರು ಹಿಡಿದು ಕರೆಯುತ್ತ, ನಿಪುಣಿಕೆಯಂ ಜಿನಜನನಿಯ ಸೆಜ್ಜೆಯನ್ + ಉಜ್ಜ್ವಳಂ ಮಾಡಲುಂ = ನಿಪುಣಿಕೆಯನ್ನು ಜಿನಮಾತೆಯ ಹಾಸಿಗೆಯನ್ನು ಶುಚಿಮಾಡಲೂ, ಚಂದ್ರಿಕೆಯಂ ಚಂದ್ರಕಾಂತದ ಕರಗಮಂ ತೀವಲುಂ = ಚಂದ್ರಿಕೆಯನ್ನು ಚಂದ್ರಕಾಂತದ ಗಡಿಗೆಯಲ್ಲಿ ನೀರು ತುಂಬಲೂ, ಅಮೃತಮತಿಯನ್ + ಅಮೃತಾಹಾರದ ಬೋನಮನ್ + ಎತ್ತಲುಂ = ಅಮೃತಮತಿಯನ್ನು ಅಮೃತದಂತಹ ಆಹಾರವನ್ನು ನೀಡಲೂ, ಲವಲವಿಕೆಯಂ ಪರಿಯಣಮಂ

ಬಿತ್ತರಿಸಲುಂ = ಲವಲವಿಕೆಯನ್ನು ಊಟದ ತಟ್ಟೆಯನ್ನು ಶುಚಿಗೊಳಿಸುವಂತೆಯೂ, ಪದ್ಮಿಕೆಯನ್ + ಅಗಲಂ ತಂದು ಮುಂದಿರಿಸಲುಂ = ಪದ್ಮಿಕೆಯನ್ನು ತಟ್ಟೆಯನ್ನು ಮುಂದಿಡಲೂ, ಮನೋಹರಿಯುಂ ಪಡಿಸಣವಂ ನೋಡಲುಂ = ಮನೋಹರಿಯನ್ನು ಇವೆಲ್ಲದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲೂ, ಮಾಳತಿಕೆಯಂ ಬಡ್ಡಿಸಲುಂ = ಮಾಳತಿಕೆಯನ್ನು ಬಡಿಸಲೂ, ಉತ್ಪಳಿಕೆಯಂ ಕೈಘಟ್ಟನೀಡಲುಂ = ಉತ್ಪಳಿಕೆಯನ್ನು ಕೈಗೆ ಸುಗಂಧವನ್ನು ನೀಡಲೂ, ಮಂದಾರಿಕೆಯಂ ಮಂದಾರಮಾಲಿಕೆಯನ್ + ಎತ್ತಲುಂ = ಮಂದಾರಿಕೆಯನ್ನು ಮಂದಾರಹೂಗಳ ಹಾರವನ್ನು ಸಿದ್ಧಪಡಿಸಲೂ, ವಿಳಾಸವತಿಯುಂ ಪಸದನಂಗೊಳಿಸಲುಂ = ವಿಳಾಸವತಿಯ ಅಲಂಕಾರ ಮಾಡಲೂ, ಲವಂಗಿಕೆಯಂ ಲವಂಗಪಲ್ಲವರಸದೊಳ್ ವಿಳಾಸ + ಆವಾಸಭವನಮನ್ + ಉತ್ತರಿಸಲುಂ = ವಿಳಾಸವತಿಯನ್ನು ವಿಲಾಸಭರಿತವಾದ ಮನೆಯಲ್ಲೆಲ್ಲ ಲವಂಗರಸವನ್ನು ಸಿಂಪಡಿಸಲೂ, ಪ್ರಭಾವತಿಯುನ್ + ಇಂದ್ರನೀಲಮಣಿಭವನದೊಳ್ ಮಣಿಪ್ರದೀಪಮಂ ಬೆಳಗಲುಂ = ಪ್ರಭಾವತಿಯನ್ನು ಇಂದ್ರನೀಮಮಣಿಗಳಿಂದಾದ ಅರಮನೆಯಲ್ಲಿ ಮಣಿದೀಪಗನ್ನು ಹಚ್ಚಿಸಿಡಲೂ, ಚಿತ್ರಲೇಖೆಯಂ ಮಣಿಸ್ತಂಭ ಸಾಲಭಂಜಿಕಾಸ್ತಂಭಂಗಳೊಳ್ = ಚಿತ್ರಲೇಖೆಯನ್ನು ಮಣಿಸ್ತಂಭಗಳಲ್ಲಿರುವ ಸಾಲುಬೊಂಬೆಗಳಲ್ಲಿ, ಕುಂಕುಮರಸಪತ್ರಲೇಖೆಯಂ ವಿರಚಿಸಲುಂ = ಕೆಂಬಣ್ಣದ ಪತ್ರಲೇಖೆಯುನ್ನು ಬರೆಯುಲೂ, ಮಯೂರಿಕೆಯಂ ಧಾರಾಗೃಹಕ್ಕೆ ಗೃಹಮಯೂರಂಗಳಂ ನಡೆಯಿಸಲುಂ = ಮಯೂರಿಕೆಯನ್ನು ಸಾಕುನವಿಲುಗಳನ್ನು ಧಾರಾಗೃಹಕ್ಕೆ ಕರೆದೊಯ್ಯಲೂ, ಚೂತಲತಿಕೆಯಂ ಕನಕಪಂಜರ + ಅಂತರ್ಗತ ಕೋಕಿಳಕ್ಕೆ ಚೂತಲತಿಕಾಂಕುರಂಗಳಂ ನೀಡಲುಂ = ಚೂತಲತಿಕೆಯನ್ನು ಚಿನ್ನದ ಪಂಜರದಲ್ಲಿದ್ದ ಕೋಗಿಲೆಗೆ ಮಾವಿನ ಎಳೆಯ ಚಿಗುರನ್ನುಣಿಸಲೂ, ಮೃಣಾಳಿಕೆಯಂ ಭವನಕಳಹಂಸೆಗೆ ಬಾಳಮೃಣಾಳನಾಳಂಗಳಂ ನೀಡಲುಂ = ಮೃಣಾಳಿಕೆಗೆ ಅರಮನೆಯ ಕಳಹಂಸಕ್ಕೆ ಎಳೆಯ ತಾವರೆ ದಂಟುಗಳನ್ನು ತಿನ್ನಿಸಲೂ, ಇಂತು ಪೆಱವುಂ + ಇಸುವೆಸಂಗಳನ್ + ಅವರವರ್ಗೆ ತಕ್ಕುವಂ ತಕ್ಕಂದದಿಂ ಪೇೞ್ದಾಗಳ್ = ಹೀಗೆ ಅವರವರಿಗೆ ತಕ್ಕುದಾದ ಹಲವಾರು ಕೆಲಸಗಳನ್ನು ಸೂಕ್ತ ರೀತಿಯಿಂದ ಹೇಳಲು,

**ಗದ್ಯಾನುಸರಣ:** ಆ ವನಿತೆಯರ ಮುಖಚಂದ್ರಗಳು ಕಾಂತಿಯು ಆಕಾಶವಲಯವೆಲ್ಲ ಚಂದ್ರಮಂಡಲಗಳಿಂದ ತುಂಬಿದಂತಾದುವು; ಅತ್ಯಂತ ಕೋಮಲವಾದ ಅವರ ಪಾದಗಳೆಂಬ ಚಿಗುರಿನ ನಡಿಗೆಯಿಂದ ಮಣೀಖಚಿತ ನೆಲವೆಲ್ಲ ಚಿಗುರಿನಿಂದ ತುಂಬಿದಂತಾಯಿತು; ಚಂಚಲವಾದ ಅವರ ಕಣ್ಣ ನೋಟಗಳ ಬೆಳಗಿನ ರಾಶಿಯಿಂದ ದಿಕ್ಕುಗಳೆಲ್ಲ ನೈದಿಲೆಗಳಿಂದ ತುಂಬಿದಂತಾಯಿತು; ಅವರ

ದೇಹಕಾಂತಿಯ ಪ್ರವಾಹದಿಂದ ಹಗಲೆಲ್ಲ ಚೆಲುವಿನಿಂದ ಕೂಡಿತು; ನಾಭಿರಾಜನ ಅರಮನೆಯೆಲ್ಲ ಹೀಗೆ ಮದನರಸದಿಂದ ಕೂಡಿ ಶೃಂಗಾರಮಯವೂ ಕೋಮಲವೂ ಆಯಿತು; ದೇವ ಮಹತ್ತರಿಕೆಯರು ದೇವವಿಳಾಸಿನಿಯರನ್ನು ಅವರವರ ಹೆಸರು ಹಿಡಿದು ಕರೆಯುತ್ತ, ಜಿನಮಾತೆಯ ಹಾಸಿಗೆಯನ್ನು ಶುಚಿಮಾಡಲು ನಿಪುಣಿಕೆಯನ್ನು, ಚಂದ್ರಕಾಂತದ ಗಡಿಗೆಯಲ್ಲಿ ನೀರು ತುಂಬಲು ಚಂದ್ರಿಕೆಯನ್ನು, ಅಮೃತದಂತಹ ಆಹಾರವನ್ನು ನೀಡಲು ಅಮೃತಮತಿಯನ್ನು, ಊಟದ ತಟ್ಟೆಯನ್ನು ಶುಚಿಗೊಳಿಸಲು ಲವಲವಿಕೆಯನ್ನು, ಊಟದ ತಟ್ಟೆಯನ್ನು ಮುಂದಿಡಲು ಪದ್ಮಿಕೆಯನ್ನು, ಇವೆಲ್ಲದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಮನೋಹರಿಯನ್ನು, ಬಡಿಸಲು ಮಾಳತಿಕೆಯನ್ನು, ಕೈಗೆ ಸುಗಂಧವನ್ನು ನೀಡಲು ಉತ್ಪಳಿಕೆಯನ್ನು, ಮಂದಾರಹೂಗಳ ಹಾರವನ್ನು ಸಿದ್ಧಪಡಿಸಲು ಮಂದಾರಿಕೆಯನ್ನು, ಅಲಂಕಾರ ಮಾಡಲು ವಿಳಾಸವತಿಯನ್ನು, ವಿಲಾಸಭರಿತವಾದ ಮನೆಯಲ್ಲೆಲ್ಲ ಲವಂಗರಸವನ್ನು ಸಿಂಪಡಿಸಲು ವಿಳಾಸವತಿಯನ್ನು, ಇಂದ್ರನೀಲಮಣಿಗಳಿಂದಾದ ಅರಮನೆಯಲ್ಲಿ ಮಣಿದೀಪಗಳನ್ನು ಹಚ್ಚಿಸಿಡಲು ಪ್ರಭಾವತಿಯನ್ನು, ಮಣಿಸ್ತಂಭ ಗಳಲ್ಲಿರುವ ಸಾಲುಬೊಂಬೆಗಳಲ್ಲಿ, ಕೆಂಬಣ್ಣದ ಪತ್ರಲೇಖೆಯನ್ನು ಬರೆಯಲು ಚಿತ್ರಲೇಖೆಯನ್ನು, ಸಾಕುನವಿಲುಗಳನ್ನು ಧಾರಾಗೃಹಕ್ಕೆ ಕರೆದೊಯ್ಯಲು ಮಯೂರಿಕೆಯನ್ನು, ಚಿನ್ನದ ಪಂಜರದಲ್ಲಿದ್ದ ಕೋಗಿಲೆಗೆ ಮಾವಿನ ಎಳೆಯ ಚಿಗುರನ್ನುಣಿಸಲು ಚೂತಲತಿಕೆಯನ್ನು, ಅರಮನೆಯ ಕಳಹಂಸಕ್ಕೆ ಎಳೆಯ ತಾವರೆ ದಂಟುಗಳನ್ನು ತಿನ್ನಿಸಲು ಮೃಣಾಳಿಕೆಯನ್ನು – ಹೀಗೆ ಅವರವರಿಗೆ ತಕ್ಕುದಾದ ಹಲವಾರು ಕೆಲಸಗಳನ್ನು ಮಾಡುವಂತೆ ಸೂಕ್ತ ರೀತಿಯಿಂದ ತಿಳಿಸಿದರು.

ವಸುಧೆಯನೇನಿವಳ್ದಿರರುಣಾಬ್ಜದಳಂಗಳೊಳಟ್ಟೆಯಿಂದಮ
ರ್ಚಿಸಿದರೊ ಪೇಟಿಮೆಂಬಿನೆಗಮುಣ್ಮುವ ಪಾದತಳಂಗಳೊಂದು ಕೆಂ
ಪೆಸೆವಿನಮತ್ತಲಿತ್ತಲೆಡೆಯಾಡುವ ದಂದುಗದಾಗಳೇಂ ಪೊದ
ಳ್ದೆಸೆದುದೊ ಚಾರುದೇವಗಣಿಕಾಮಣಿನೂಪುರಮಂಜುಶಿಂಜಿತಂ ೨೨

**ಪದವಿಭಾಗ–ಅನ್ವಯ–ಅರ್ಥ:** ಇವಳ್ದಿರ + ಅರುಣ + ಅಬ್ಜದಳಂಗಳೊಳ್ = ಈ ವನಿತೆಯರ ಕೆಂಪು ಪಾದತಾವರೆಗಳಿಂದ, ವಸುಧೆಯನ್ + ಏನ್ ಅಟ್ಟೆಯಿಂದಂ + ಅರ್ಚಿಸಿದರೊ ಪೇಟಿಂ + ಎಂಬಿನೆಗಂ = ಭೂಮಿಯನ್ನು ಪ್ರೀತಿಯಿಂದ ಪೂಜಿಸಿದರೋ ಎನ್ನುವಂತೆ, ಉಣ್ಮುವ ಪಾದತಳಂಗಳ + ಒಂದು ಕೆಂಪು+ಎಸೆವಿನಂ = ಹೊಮ್ಮುವ ತಮ್ಮ ಅಂಗಾಲುಗಳ ಕೆಂಬಾರವು ಶೋಭಿಸುತ್ತಿರಲು, ಅತ್ತಲಿತ್ತಲ್ + ಎಡೆಯಾಡುವ ದಂದುಗದೆ = ಆ ಕಡೆ ಈ ಕಡೆ ಓಡಿಯಾಡುವ ಕಾರ್ಯದಲ್ಲಿ ಚಾರುದೇವಗಣಿಕಾಮಣಿನೂಪುರ ಮಂಜುಶಿಂಜಿತಂ = ಚೆಲುವೆಯರಾದ ದೇವವಿಲಾಸಿನಿಯರ ಕಾಲ್ಗಜ್ಜೆಗಳ ಇಂಪಾದ ಸದ್ದು, ಆಗಳ್ + ಏಂ ಪೊದಳ್ದು + ಎಸೆದುದೊ = ಆಗ ಅದೇನು ಎಲ್ಲಡೆ ಸೊಗಸಿತ್ತು!

**ಗದ್ಯಾನುಸರಣ:** ಈ ವನಿತೆಯರು ತಮ್ಮ ಕೆಂಪು ಪಾದತಾವರೆಗಳಿಂದ ಭೂಮಿಯನ್ನು ಪ್ರೀತಿಯಿಂದ ಪೂಜಿಸಿದರೋ ಎನ್ನುವಂತೆ, ಅವರ ಅಂಗಾಲುಗಳ ಕೆಂಬಾರವು ನೆಲದಲ್ಲಿ ಪ್ರತಿಫಲಿಸುತ್ತಿತ್ತು; ಆ ಕಡೆ ಈ ಕಡೆ ಓಡಿಯಾಡುವ ಕಾರ್ಯದಲ್ಲಿ ನಿರತರಾದ ಚೆಲುವೆಯರಾದ ದೇವವಿಲಾಸಿನಿಯರ ಕಾಲ್ಗಗೆಜ್ಜೆಗಳ ಇಂಪಾದ ಸದ್ದು ಎಲ್ಲೆಡೆ ಹರಡಿತ್ತು!

**ಮನಮೊಲ್ದಿಂದ್ರನಿವಾಸಸಂಭವಶುಚಿದ್ರವ್ಯಂಗಳಿಂ ಗರ್ಭಶೋ**
**ಧನಮಂ ದೇವಿಯರಿರ್ದು ಮಾಡೆ ಪೆಱದಿನ್ನೇನೆಂಬುದಾ ಕಾಂತೆಗಂ**
**ದು ನಯಂ ಬೇಱೆ ಬೆಡಂಗು ಬೇಱೆ ಪೊಳೆವಂಗಚ್ಛಾಯೆಯುಂ ಬೇಱೆ ತೊ**
**ಟ್ಟನೆ ಮೆಯ್ದೋಱೆ ವಿಶುದ್ಧಮಪ್ಪ ಪಳಿಕಿಂ ಪೆಣ್ಮಾಡಿದಂತೊಪ್ಪಿದಳ್೨೩**

**ಪದವಿಭಾಗ-ಅನ್ವಯ-ಅರ್ಥ:** ದೇವಿಯರ್ + ಇರ್ದು = ದೇವತಾ ಸ್ತ್ರೀಯರೇ ಸ್ವತಃ, ಮನಂ + ಒಲ್ದು = ಮನಃಪೂರ್ವಕವಾಗಿ, ಇಂದ್ರನಿವಾಸ ಸಂಭವಶುಚಿ ದ್ರವ್ಯಂಗಳಿಂ = ಇಂದ್ರನ ಅರಮನೆಯಲ್ಲಿ ಮಾಡಿದ ಶುಚಿಕರ ವಸ್ತುಗಳಿಂದ, ಗರ್ಭಶೋಧನಮಂ ಮಾಡೆ = ಮರುದೇವಿಯ ಗರ್ಭವನ್ನು ಶುಚಿಗೊಳಿಸುವ ಕೆಲಸವನ್ನು ಮಾಡಿದರೆಂದ ಮೇಲೆ, ಪೆಱತು + ಇನ್ನೇನೆಂಬುದು = ಬೇರೆ ಇನ್ನೇನು ಹೇಳಬೇಕು? ಅಂದು ಆ ಕಾಂತೆಗೆ ಬೇಱೆ ನಯಂ ಬೇಱೆ ಬೆಡಂಗು ಬೇಱೆ ಪೊಳೆವಂಗಚ್ಛಾಯೆಯುಂ = ಆಗ ಆಕೆಗೆ ವಿಶೇಷ ರೀತಿಯ ನಯ ಬೆಡಗು ದೇಹಕಾಂತಿ ಇವುಗಳು, ತೊಟ್ಟನೆ ಮೆಯ್ದೋಱೆ = ಹೊಸತಾಗಿ ಮೈದೋರಿದುವು; ವಿಶುದ್ಧಮಪ್ಪ ಪಳಿಕಿಂ ಪೆಣ್ಮಾಡಿದಂತೆ + ಒಪ್ಪಿದಳ್ = ಪರಿಶುದ್ಧ ಸ್ಫಟಿಕದಿಂದ ನಿರ್ಮಿಸಿದ ಹೆಣ್ಣಿನಂತೆ ಅವಳು ಕಂಗೊಳಿಸಿದಳು.

**ಗದ್ಯಾನುಸರಣ:** ದೇವತಾಸ್ತ್ರೀಯರೇ ಸ್ವತಃ ಮನಃಪೂರ್ವಕವಾಗಿ ಇಂದ್ರನ ಅರಮನೆಯಲ್ಲಿ ಮಾಡಿದ ಶುಚಿಕರ ವಸ್ತುಗಳಿಂದ ಮರುದೇವಿಯ ಗರ್ಭವನ್ನು ಶುಚಿಗೊಳಿಸುವ ಕೆಲಸವನ್ನು ಮಾಡಿದರೆಂದ ಮೇಲೆ ಬೇರೆ ಹೇಳುವುದೇನಿದೆ? ಆಗ ಆಕೆಗೆ ವಿಶೇಷ ರೀತಿಯ ನಯ ಬೆಡಗು ದೇಹಕಾಂತಿ ಇವುಗಳು, ಹೊಸತಾಗಿ ಕಾಣಿಸಿಕೊಂಡವು; ಪರಿಶುದ್ಧ ಸ್ಫಟಿಕದಿಂದ ನಿರ್ಮಿಸಿದ ಹೆಣ್ಣಿನಂತೆ ಅವಳು ಕಂಗೊಳಿಸಿದಳು.

**ಧನದಂ ಕಾಂಚನಪಂಚರತ್ನಮಯಮಂ ರೈವೃಷ್ಟಿಯುಂ ಮಾಡುವ**
**ಲ್ಲಿ ನಭೋಭಾಗದಿನಿಂದ್ರಚಾಪಮನಿತುಂ ಭೂಭಾಗದೊಳ್ ಬಂದುತೊ**
**ಟ್ಟನೆ ಬೇರೂಱಿದುವೋ ಕವಲ್ತುವೊ ಚಳದ್ವಿದ್ಯುಲ್ಲತಾದೀಪ್ತಿಯುಂ**
**ಬಿನಮೇಂ ನಾಡೆ ಬೆಡಂಗನಾಳ್ದುದೊ ವಿಯದ್ದಿಗ್ಭೂರಿ ಭೂಮಂಡಲಂ೨೪**

**ಪದವಿಭಾಗ-ಅನ್ವಯ-ಅರ್ಥ:** ಧನದಂ ಕಾಂಚನಪಂಚರತ್ನಮಯಮಂ ರೈವೃಷ್ಟಿಯಂ ಮಾಡುವಲ್ಲಿ = ಕುಬೇರನು ಚಿನ್ನ ಮತ್ತು ರತ್ನಗಳ ಮಳೆಯನ್ನು

ಸುರಿಸಿದಾಗ, ನಭೋಭಾಗದಿನ್ + ಇಂದ್ರಚಾಪಂ + ಅನಿತುಂ ಬಂದು = ಆಕಾಶದಿಂದ ಮಳೆಬಿಲ್ಲುಗಳೆಲ್ಲ, ತೊಟ್ಟನೆ ಭೂಭಾಗದೊಳ್ ಬೇರೂಜಿದುವೋ = ಇದ್ದಕ್ಕಿದ್ದಂತೆ ನೆಲಸಿದುವೋ, ಚಳತ್ + ವಿದ್ಯುಲ್ಲತಾದೀಪ್ತಿ ಕವಲ್ತುವೊ ಎಂಬಿನಂ = ಸುಳಿಯುವ ಮಿಂಚಿನ ಕಾಂತಿ ಕವಲೊಡೆದುವೋ ಎಂಬಂತೆ, ವಿಯತ್ + ದಿಕ್ + ಭೂರಿ ಭೂಮಂಡಲಂ ಏಂ ನಾಡೆ ಬೆಡಂಗನ್ + ಆಳ್ದುದೊ = ಆಗಸ ದೆಸೆಗಳು ವಿಶಾಲ ಭೂಮಿಗಳೆಲ್ಲವೂ ಅದೇನು ವಿಲಾಸವನ್ನು ಪಡೆಯಿತು!

**ಗದ್ಯಾನುಸರಣ:** ಕುಬೇರನು ಚಿನ್ನ ಮತ್ತು ರತ್ನಗಳ ಮಳೆಯನ್ನು ಸುರಿಸಿದಾಗ ಆಕಾಶದಿಂದ ಮಳೆಬಿಲ್ಲುಗಳೆಲ್ಲ ಬಂದು ಇದ್ದಕ್ಕಿದ್ದಂತೆ ನೆಲಸಿದುವೋ ಅಥವಾ ಸುಳಿಯುವ ಮಿಂಚಿನ ಕಾಂತಿ ಕವಲೊಡೆದುವೋ ಎಂಬಂತೆ ಆಗಸ ದೆಸೆಗಳು ವಿಶಾಲ ಭೂಮಿ – ಎಲ್ಲವೂ ಅದೆಂಥ ವಿಲಾಸವನ್ನು ಪಡೆಯಿತು!

> ಕೂಡಿತ್ತುದ್ದಾಮರತ್ನಾಂಶುಗಳೊಳೆ ಧರಣೀಭಾಗಮಾಗಳ್ ಬೆಡಂಗಂ
> ಮಾಡಿತ್ತಂದೊಂದು ಮಂದಾರದ ಸರಿ ವಿರುವದ್ಭೃಂಗಸಂಗೀತಿ ಚೆಲ್ವಂ
> ನೀಡಿತ್ತಾ ರುಂದ್ರದೇವಾನಕದೊಡನೆ ಜಯದ್ಘೋಷಣಂ ಮಂದಮಂದಂ
> ತೀಡಿತ್ತಾಲೋಲಗಂಗಾಲಲಿತಲಹರಿಕಾಸಾರಸಾರಂ ಸಮೀರಂ ೨೫

**ಪದವಿಭಾಗ–ಅನ್ವಯ–ಅರ್ಥ:** ಆಗಳ್ ಧರಣೀಭಾಗಂ ಉದ್ದಾಮರ ತ್ನಾಂಶುಗಳೊಳೆ ಕೂಡಿತ್ತು = ಆಗ ಇಡೀ ಭೂಮಂಡಲವು ಶ್ರೇಷ್ಠವಾದ ರತ್ನಗಳ ಕಾಂತಿಯಿಂದ ಕೂಡಿತು, ಅಂದು + ಒಂದು ಮಂದಾರದ ಸರಿ = ಆಗ ಬಿದ್ದ ಮಂದಾರ ಹೂಗಳ ಮಳೆಯು, ವಿರುವತ್ + ಭೃಂಗಸಂಗೀತಿ ಬೆಡಂಗಂ ಮಾಡಿತ್ತು = ಝೇಂಕರಿಸುವ ದುಂಬಿಗಳ ವಿಲಾಸವನ್ನುಂಟುಮಾಡಿತು, ಆ ರುಂದ್ರದೇವ + ಆನಕದೊಡನೆ ಜಯದ್ಘೋಷಣಂ = ದೇವದುಂದುಭಿಗಳ ಜೊತೆಗೆ ಜಯಘೋಷವು, ಚೆಲ್ವಂ ನೀಡಿತ್ತು = ಚೆಲುವನ್ನುಂಟುಮಾಡಿತು, ಆಲೋಲಗಂಗಾ ಲಲಿತಲಹರಿಕಾಸಾರಸಾರಂ ಸಮೀರಂ ಮಂದಮಂದಂ ತೀಡಿತ್ತು = ಗಂಗೆಯ ನೀರಿನ ಮೆಲುವಾದ ಅಲೆಗಳ ತುಂತುರುಗಳನ್ನು ಹೊತ್ತ ಗಾಳಿಯು ಮೆಲ್ಲನೆ ಬೀಸಿತು.

**ಗದ್ಯಾನುಸರಣ:** ಆಗ ಶ್ರೇಷ್ಠವಾದ ರತ್ನಗಳ ಕಾಂತಿಯಿಂದ ಇಡೀ ಭೂಮಂಡಲವು ರಂಜಿಸಿತು, ಬಿದ್ದ ಮಂದಾರ ಹೂಗಳ ಮಳೆಯು ಝೇಂಕರಿಸುವ ದುಂಬಿಗಳ ಸಂಗೀತದ ಇಂಪನ್ನುಂಟುಮಾಡಿತು, ದೇವದುಂದುಭಿಗಳ ಜೊತೆಗೆ ಜಯಘೋಷವು ಸೇರಿ ವಿಲಾಸವನ್ನುಂಟುಮಾಡಿತು, ಗಂಗೆಯ ನೀರಿನ ಮೆಲುವಾದ ಅಲೆಗಳ ತುಂತುರುಗಳನ್ನು ಹೊತ್ತ ಗಾಳಿಯು ಮೆಲ್ಲನೆ ಬೀಸಿತು.

ವಿಶೇಷ ವಿಚಾರ: 'ಧರಣೀಭಾಗಮಾಗಳ್' ಬದಲು 'ವಸುಧಾಭೋಗಮಾಗಳ್' – ಎಲ್. ಬಸವರಾಜು ಆವೃತ್ತಿ

ವ ಅಂತು ಧನದಂ ಸಾರ್ಧಕೋಟಿತ್ರಯಪ್ರಮಿತಪಂಚರತ್ನವೃಷ್ಟಿಯಂ ಪ್ರತಿದಿನಂ ಸುರಿಯೆ,

ಅರ್ಥ: ಅಂತು ಧನದಂ ಪ್ರತಿದಿನಂ ಸ + ಅರ್ಧಕೋಟಿತ್ರಯಪ್ರಮಿತ = ಹೀಗೆ ಕುಬೇರನು ಪ್ರತಿನಿತ್ಯ ಮೂರೂವರೆ ಕೋಟಿಯಷ್ಟು, ಪಂಚರತ್ನವೃಷ್ಟಿಯಂ ಸುರಿಯೆ = ಪಂಚರತ್ನಗಳ ಮಳೆಯನ್ನು ಸುರಿಸಿದ.

ಧರೆ ರತ್ನಗರ್ಭವಾದುದು
ಸುರರೆಲ್ಲಂ ಹರ್ಷಗರ್ಭರಾದರ್ ಪಿರಿದ
ಚ್ಚರಿಯೆನೆ ಹಿರಣ್ಯಗರ್ಭನ
ನಿರುಪಮಗರ್ಭಾವತರಣಮಂಗಳವಿಧಿಯೊಳ್ ೨೬

ಪದವಿಭಾಗ–ಅನ್ವಯ–ಅರ್ಥ: ಹಿರಣ್ಯಗರ್ಭನ ನಿರುಪಮಗರ್ಭ + ಅವತರಣಮಂಗಳವಿಧಿಯೊಳ್ = ಆದಿಬ್ರಹ್ಮನು ತಾಯ ಗರ್ಭವನ್ನು ಹೊಗುವ ಹೋಲಿಕೆಯಿಲ್ಲದ ಮಂಗಳ ವಿಧಿಯ ಸಂದರ್ಭದಲ್ಲಿ, ಪಿರಿದು + ಅಚ್ಚರಿಯೆನೆ = ಮಹಾ ಆಶ್ಚರ್ಯಕರವಾಗಿ, ಧರೆ ರತ್ನಗರ್ಭಂ + ಆದುದು = ಭೂಮಿಯ ಬಸಿರಲ್ಲಿ ರತ್ನಗಳು ಸೇರಿದುವು, ಸುರರ್ + ಎಲ್ಲಂ ಹರ್ಷಗರ್ಭರಾದರ್ = ದೇವತೆಗಳೆಲ್ಲ ಮನದಲ್ಲಿ ಸಂತಸವು ತುಂಬಿತು.

ಗದ್ಯಾನುಸರಣ: ಆದಿಬ್ರಹ್ಮನು ತಾಯ ಗರ್ಭವನ್ನು ಹೊಗುವ ಹೋಲಿಕೆಯಿಲ್ಲದ ಮಂಗಳ ವಿಧಿಯ ಸಂದರ್ಭದಲ್ಲಿ, ಮಹಾ ಆಶ್ಚರ್ಯಕರವಾಗಿ, ಭೂಮಿಯ ಬಸಿರಲ್ಲಿ ರತ್ನಗಳು ಸೇರಿದುವು, ದೇವತೆಗಳೆಲ್ಲ ಮನದಲ್ಲಿ ಸಂತಸವು ತುಂಬಿತು.

ವ। ಮತ್ತೊಂದು ದಿವಸಮಾ ಮರುದೇವಿಮಹಾದೇವಿ ಚತುರ್ಥಸ್ನಾದೊಳ್ ಕಲ್ಪದ್ರುಮ ದುಕೂಲವಸನೆಯುಮೂರ್ಜಿತದಶನ ಮಯೂಖ ಪ್ರಕ್ಷಾಳಿತದಶನವಸನೆಯುಂ ಸರ್ವಾಂಗೀಣ ಮೌಕ್ತಿಕಾಭರಣ ಕಿರಣಾಕೀರ್ಣ ಸುವರ್ಣದುರ್ಲಕ್ಷ್ಯ ಹರಿಚಂದನಾಂಗರಾಗೆಯುಂ ಝುಂಕಾರಾನುಮಿತ ಕುಂತಳಕುಳಕಾಂತಿ ಮಧುಕರನಿಕರ ನಿಭೃತ ನಿಳಯಮನೋಹರ ಸನ್ಮಲ್ಲಿಕಾ ದಾಮಪರಾಗೆಯುಮಾಗಿ,

ಪದವಿಭಾಗ–ಅನ್ವಯ–ಅರ್ಥ: ಮತ್ತೊಂದು ದಿವಸಂ = ಇನ್ನೊಂದು ದಿನ, ಆ ಮರುದೇವಿಮಹಾದೇವಿ ಚತುರ್ಥಸ್ನಾದೊಳ್ = ಮರುದೇವಿಯು ಚತುರ್ಥ

ಸ್ನಾಮಾಡಿ, ಕಲ್ಪದ್ರುಮದುಕೂಲವಸನೆಯುಂ = ಕಲ್ಪವೃಕ್ಷವು ನೀಡಿದ ರೇಷ್ಮೆವಸ್ತ್ರವನ್ನುಟ್ಟು, ಊರ್ಜಿತದಶನಮಯೂಖಪ್ರಕ್ಷಾಳಿತ ದಶನವಸನೆಯುಂ = ಮಿಗಿಲಾದ ಹಲ್ಲುಗಳ ಕಾಂತಿಯಿಂದ ತೊಳೆದ ತುಟಿಗಳನ್ನು ಹೊಂದಿ, ಸರ್ವಾಂಗೀಣ ಮೌಕ್ತಿಕಾಭರಣಕಿರಣ + ಆಕೀರ್ಣಸುವರ್ಣದುರ್ಲಕ್ಷ್ಯಹರಿಚಂದನ + ಅಂಗರಾಗೆಯುಂ = ದೇಹದ ಎಲ್ಲ ಅಂಗಗಲ್ಲಿಯೂ ಮುತ್ತಿನ ಆಭರಣಗಳ ಕಿರಣಗಳು ತುಂಬಿದ ಕಾಂತಿಯಿಂದಾಗಿ ದೇಹದಲ್ಲಿ ಹರಿಚಂದನದ ಅಂಗರಾಗವು ಕಾಣದಂತಿರಲು, ಝುಂಕಾರ + ಅನುಮಿತ = ಝೇಂಕಾರದಿಂದ ಮಾತ್ರವೇ ಊಹಿಸಬಹುದಾದಂತಹ, ಕುಂತಳಕುಳಕಾಂತಿಮಧುಕರನಿಕರನಿಭೃತನಿಳಯ = ಕೇಶರಾಶಿಯದರಂತೆಯೇ ಕಾಂತಿಯುಳ್ಳ ದುಂಬಿವಿಂಡಿಗೆ ಆಗರವಾದ, ಮನೋಹರಸತ್ + ಮಲ್ಲಿಕಾದಾಮಪರಾಗೆಯುಂ + ಆಗಿ = ಸುಂದರ ಮಲ್ಲಿಗೆಯ ದಂಡೆಯ ಪರಾಗದಿಂದ ಕೂಡಿ,

**ಗದ್ಯಾನುಸರಣ:** ಇನ್ನೊಂದು ದಿನ ಮರುದೇವಿಯು ಚತುರ್ಥಸ್ನಾಮಾಡಿ ಕಲ್ಪವೃಕ್ಷವು ನೀಡಿದ ರೇಷ್ಮೆವಸ್ತ್ರವನ್ನುಟ್ಟಳು, ಮಿಗಿಲಾದ ಹಲ್ಲುಗಳ ಕಾಂತಿಯಿಂದ ತೊಳೆದಂತೆ ತುಟಿಗಳು ಹೊಳೆದುವು, ದೇಹದ ಎಲ್ಲ ಅಂಗಗಲ್ಲಿನ ಮುತ್ತಿನ ಆಭರಣಗಳ ಕಿರಣಗಳ ಕಾಂತಿಯು ತುಂಬಿ ದೇಹದಲ್ಲಿ ಲೇಪಿಸಿಕೊಂಡಿದ್ದ ಹರಿಚಂದನದ ಅಂಗರಾಗವು ಕಾಣದಂತಾಯಿತು; ಝೇಂಕಾರದಿಂದ ಮಾತ್ರವೇ ಊಹಿಸಬಹುದಾದಂತಹ ಕೇಶರಾಶಿಯದರಂತೆಯೇ ಕಾಂತಿಯುಳ್ಳ ದುಂಬಿವಿಂಡಿಗೆ ಆಗರವೆನಿಸಿದ ಸುಂದರ ಮಲ್ಲಿಗೆಯ ದಂಡೆಯ ಪರಾಗದಿಂದ ಕೂಡಿದಳು.

**ಪೊಳೆವಮೃತಾಂಶುಬಿಂಬದಧಿದೇವತೆ ದುಗ್ಧಪಯೋಧಿಯಿಂದಮೀ**
**ಗಳೆ ಪೊಱಮಟ್ಟು ಬಂದ ಕಮಳಾಸನೆ ನಾಭಿನರೇಂದ್ರನೆಯ್ದೆ ಸಂ**
**ಗಳಿಸಿದ ಕೀರ್ತಿಮೂರ್ತಿಮತಿ ತದ್ವದನಾಬ್ಜವಿಳಾಸಾವಾಸದೊಳ್**
**ತಳರದೆ ನಿಂದ ವಾಗ್ವನಿತೆಯೆಂಬಭಿಶಂಕೆಯನುಂಟುಮಾಡಿದಳ್ ೨೭**

**ಪದವಿಭಾಗ–ಅನ್ವಯ–ಅರ್ಥ:** ಪೊಳೆವ + ಅಮೃತಾಂಶುಬಿಂಬದ + ಅಧಿದೇವತೆ = ಹೊಳೆಯುವ ಚಂದ್ರಬಿಂಬದ ಅಧಿದೇವತೆಯೋ, ದುಗ್ಧಪಯೋದಿಯಿಂದಂ + ಈಗಳೆ ಪೊಱಮಟ್ಟು ಬಂದ ಕಮಳಾಸನೆ = ಹಾಲ್ಗಡಲಿನಿಂದ ಈಗತಾನೆ ಹೊರಬಂದಿರುವ ಲಕ್ಷ್ಮಿಯೋ, ನಾಭಿನರೇಂದ್ರನ್ + ಎಯ್ದೆ ಸಂಗಳಿಸಿದ ಕೀರ್ತಿಮೂರ್ತಿಮತಿ = ನಾಭಿರಾಜನು ಸಂಪಾದಿಸಿದ ಕೀತೀಯ ಸಾಕಾರವೋ, ತತ್ + ವದನ + ಅಬ್ಜವಿಳಾಸ + ಆವಾಸದೊಳ್ ತಳರದೆ ನಿಂದ ವಾಗ್ವನಿತೆ = ಮುಖಕಮಲವೆಂಬ ವಿಲಾಸಯುಕ್ತ ಭವನದಲ್ಲಿ ನೆಲಸಿದ ಸರಸ್ವತಿಯೋ, ಎಂಬ

+ ಅಭಿಶಂಕೆಯನ್ + ಉಂಟುಮಾಡಿದಳ್ = ಎಂಬ ಅನುಮಾನವನ್ನು ಉಂಟುಮಾಡುವಂತಿದ್ದಳು.

**ಗದ್ಯಾನುಸರಣ:** ಆಗ ಮರುದೇವಿಯು ಹೊಳೆಯುವ ಚಂದ್ರಬಿಂಬದ ಅಧಿದೇವತೆಯೋ, ಹಾಲ್ಗಡಲಿನಿಂದ ಈಗತಾನೆ ಹೊರಬಂದಿರುವ ಲಕ್ಷ್ಮಿಯೋ, ನಾಭಿರಾಜನು ಸಂಪಾದಿಸಿದ ಕೀರ್ತಿಯ ಸಾಕಾರವೋ, ಮುಖಕಮಲವೆಂಬ ವಿಲಾಸಯುಕ್ತ ಭವನದಲ್ಲಿ ನೆಲಸಿದ ಸರಸ್ವತಿಯೋ ಎಂಬಂತೆ ಕಾಣುತ್ತಿದ್ದಳು.

**ವ।** **ಅಂತು ಸೂಟ್ಗಿವಂದನೇಕಮಸೃಣ ಭಿತ್ತಿವಿಲಿಖಿತೋಪವನ ಲತಾಭವನಮನೋಭವಕೇಳೀಲಂಪಟನಿಳಿಂಪದಂಪತಿ ವಿದ್ಯಾಧರಮಿಥುನ ಮನ್ಮಥೋದ್ದೀಪನದೊಳಾತ್ಮೀಯದೇಹ ಪ್ರಭಾಪ್ರವಾಹ ಲಲಿತ ಮಣಿದೀಪ್ತಿ ಪ್ರಸರದೊಳತುಚ್ಛಮಳಯಜಚ್ಛಟಾಸಿಕ್ತ ಮರಕತಮಣಿ ಕುಟ್ಟಿಮಪ್ರಕೀರ್ಣ ಮಧುಕರಕುಳಶಬಳಮಲ್ಲಿಕಾ ಮುಕುಳದೊಳತಿಬಹಳ ಕಾಳಾಗರು ಧೂಪ ಧೂಮಜಾಳೋದ್ಗಾರಿ ಹರಿನೀಲಗವಾಕ್ಷಜಾಲದೊಳವಿರಳ ಮುಕ್ತಾದಾಮನಿಕಾಮಕ ಮನೀಯವಿತಾನದೊಳಮೃತಕಿರಣ ಮಣಿಪೀಠಿಕಾಧಿಷ್ಠಿತ ಪರ್ಯಂಕದೊಳ್,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಸೂಟ್ಗಿವಂದು = ಹೀಗೆ ಹತ್ತಿರ ಬಂದು, ಅನೇಕಮಸೃಣಭಿತ್ತಿವಿಲಿಖಿತ = ನಯವಾದ ಗೋಡೆಗಳ ಮೇಲೆ ಚಿತ್ರಿಸಿದ್ದ, ಉಪವನಲತಾಭವನ = ಉದ್ಯಾನವನದ ಬಳ್ಳಿವನೆಯಲ್ಲಿ, ಮನೋಭವಕೇಳೀಲಂಪಟ = ಕಾಮಕೇಳಿಯಲ್ಲಿ ಮಗ್ನರಾದ, ನಿಳಿಂಪದಂಪತಿ = ದೇವಜೋಡಿಗಳ, ಹಾಗೂ, ವಿದ್ಯಾಧರಮಿಥುನ = ವಿದ್ಯಾಧರದಂಪತಿಗಳ, ಮನ್ಮಥ + ಉದ್ದೀಪನದೊಳ್ = ಕಾಮೋದ್ದೀಪನದ ಪರಿಸರದಲ್ಲಿ, ಆತ್ಮೀಯದೇಹಪ್ರಭಾಪ್ರವಾಹಲಲಿತ ಮಣಿದೀಪ್ತಿಪ್ರಸರದೊಳ್ = ತನ್ನ ದೇಹಕಾಂತಿಯ ತೊರೆಯು ಸುಂದರವಾದ ಮಣಿಗಳ ಕಿರಣಕಾಂತಿಯಿಂದಲೂ, ಅತುಚ್ಛಮಳಯಜತ್ + ಛಟ + ಆಸಿಕ್ತ = ಶ್ರೇಷ್ಠವಾದ ಚಂದನದಿಂದ ಲೇಪಿತವಾದ, ಮರಕತಮಣಿಕುಟ್ಟಿಮಪ್ರಕೀರ್ಣ = ಪಚ್ಚೆಯ ನೆಲಗಟ್ಟಿನ, ಮಧುಕರಕುಳಶಬಳಮಲ್ಲಿಕಾಮುಕುಳದೊಳ್ = ದುಂಬಿವಿಂಡಿನ ಝೇಂಕಾರದಿಂದ ಕೂಡಿದ ಮಲ್ಲಿಗೆಯ ಹೂಗಳಿಂದ ಕೂಡಿದ, ಅತಿಬಹಳಕಾಳಾಗರುಧೂಪಧೂಮಜಾಳ + ಉದ್ಗಾರಿ = ಬಹುವಾಗಿ ಕಾಳಾಗರುವಿನ ಕಪ್ಪು ಹೊಗೆಯನ್ನು ಹೊಮ್ಮಿಸುತ್ತಿದ್ದ, ಹರಿನೀಲಗವಾಕ್ಷಜಾಲದೊಳ್ = ಪಚ್ಚೆಗಳ ಗವಾಕ್ಷಿಗಳಿಂದಲೂ, ವಿರಳಮುಕ್ತಾದಾಮನಿಕಾಮಕಮನೀ ಯವಿತಾನದೊಳ್ = ಮುತ್ತಿನ ಗೊಂಚಲಿನಿಂದ ಅತ್ಯಂತ ಕಮನೀಯವಾದ ಮೇಲುಗಟ್ಟುಗಳಿಂದ,

ಅಮೃತಕಿರಣಮಣಿಪೀಠಿಕಾ + ಅಧಿಷ್ಠಿತಪರ್ಯಂಕದೊಳ್ = ಬೆಳುದಿಂಗಳಿನಂತಹ ಚಂದ್ರಕಾಂತ ಮಣಿಗಳಿಂದಾದ ಕಾಲುಗಳ ಮೇಲೆ ಅವಲಂಬಿಸಿದ ಮಂಚದಲ್ಲಿ

**ಗದ್ಯಾನುಸರಣ:** ಇಂತಹ ಮರುದೇವಿಯು ಮುತ್ತಿನ ಗೊಂಚಲಿನಿಂದ ಅತ್ಯಂತ ಕಮನೀಯವಾದ ಮೇಲುಗಟ್ಟುಗಳಿಂದ ಕೂಡಿ, ಪಚ್ಚೆಯ ನೆಲಗಟ್ಟಿನ ಮೇಲೆ ಬೆಳುದಿಂಗಳಿನಂತಹ ಚಂದ್ರಕಾಂತ ಮಣಿಗಳಿಂದಾದ ಕಾಲುಗಳ ಮೇಲೆ ಅವಲಂಬಿಸಿದ ಮಂಚದಲ್ಲಿ ಮಲಗಿದಳು. ಅಲ್ಲಿನ ನಯವಾದ ಗೋಡೆಗಳ ಮೇಲೆ ಉದ್ಯಾನವನದ ಬಳ್ಳಿವನೆಯಲ್ಲಿ ಕಾಮಕೇಳಿಯಲ್ಲಿ ನಿರತರಾದ ದೇವಜೋಡಿಗಳ ಹಾಗೂ ವಿದ್ಯಾಧರದಂಪತಿಗಳ ಚಿತ್ರಗಳು ಕಾಮೋದ್ದೀಪನಕರವಾದ ಪರಿಸರವನ್ನು ಸೃಷ್ಟಿಸಿತ್ತು; ಅವಳ ದೇಹಕಾಂತಿಯ ತೊರೆಯು ಸುಂದರವಾದ ಮಣಿಗಳ ಕಿರಣಕಾಂತಿಯಿಂದ ಪ್ರಜ್ವಲಿಸಿತು; ಶ್ರೇಷ್ಠವಾದ ಚಂದನದಿಂದ ಲೇಪಿತವಾದ ಮಲ್ಲಿಗೆಯ ಹೂಗಳ ದಂಡೆಗಳು ದುಂಬಿವಿಂಡಿನ ಝೇಂಕಾರದಿಂದ ಕೂಡಿದ್ದುವು; ಪಚ್ಚೆಗಳ ಗವಾಕ್ಷಿಗಳು ಕಾಳಾಗರುವಿನ ಕಪ್ಪು ಹೊಗೆಯನ್ನು ಬಹುವಾಗಿ ಹೊಮ್ಮಿಸುತ್ತಿದ್ದವು.

**ಶ್ರೀಗೆ ಕುಳಸದನಮೆನೆ ತೊಳಪ ಮಣಿಭವನದೊಳ್**
**ರಾಗರಸಮೊದವೆ ಸರಸಿರುಹಸಮುವದನದೊಳ್ ॥**
**ಪೊಳೆವ ಪಚ್ಚದೊಳೆ ಸೊಗಯಿಸುವ ಮೃದುತಲ್ಪದೊಳ್**
**ಲಲಿತಗಂಗಾನದೀಲಹರಿಕಾತಲ್ಪದೊಳ್ ॥ ॥**

**ಪದವಿಭಾಗ-ಅನ್ವಯ-ಅರ್ಥ:** ಶ್ರೀಗೆ ಕುಳಸದನಮೆನೆ ತೊಳಪ ಮಣಿಭವನದೊಳ್ = ಸಂಪತ್ತಿನ ತವರುಮನೆಯೋ ಎನ್ನುವಂತೆ ಕಾಂತಿಯುಕ್ತವಾದ ಮಣಿಖಚಿತ ಅರಮನೆಯಲ್ಲಿ, ರಾಗರಸಂ + ಒದವೆ ಸರಸಿರುಹಸಮವದನದೊಳ್ = ಪ್ರೀತಿಯ ರಸವುಂಟಾಗಲು ಕಮಲದಂತಹ ಮುಖದಲ್ಲಿ, ಪೊಳೆವ ಪಚ್ಚದೊಳೆ ಸೊಗಯಿಸುವ ಮೃದುತಲ್ಪದೊಳ್ = ಹೊಳೆಯುವ ಮರಕತದ ಸೊಗಸುವ ಮಿದುವಾದ ಹಾಸಿಗೆಯಲ್ಲಿ, ಲಲಿತಗಂಗಾನದೀಲಹರಿಕಾತಲ್ಪದೊಳ್ = ಕೋಮಲವಾದ ಗಂಗಾನದಿಯ ಅಲೆಗಳಂತಹ ಹಾಸಿಗೆಯಲ್ಲಿ (ಮರುದೇವಿಯು ಮಲಗಿದ್ದಳು)

**ಗದ್ಯಾನುಸರಣ:** ಆಕೆಯ ಅರಮನೆ ಸಂಪತ್ತಿನ ತವರುಮನೆಯೋ ಎನ್ನುವಂತೆ ಮಣಿಖಚಿತವಾಗಿ ಕಾಂತಿಯುಕ್ತವಾಗಿತ್ತು; ಹೊಳೆಯುವ ಸೊಗಸಾದ ಮಿದುವಾದ ಮರಕತದಂತಿದ್ದ ಗಂಗಾನದಿಯ ಅಲೆಗಳಂತಹ ಕೋಮಲವಾದ ಹಾಸಿಗೆಯಲ್ಲಿ ಮರುದೇವಿಯು ಮಲಗಿದ್ದಳು; ಅವಳ ಕಮಲದಂತಹ ಮುಖದಲ್ಲಿ ಪ್ರೀತಿಯ ರಸವೊಸರುತ್ತಿತ್ತು.

**ವಿಶೇಷ ವಿಚಾರ:** ಇಲ್ಲಿಂದ ಆರಂಭವಾಗಿ 'ಮೊಗರಾಗದಿಂ' ಎಂದು ಮುಕ್ತಾಯ ಆಗುವವರೆಗಿನ ಪದ್ಯಗಳು 'ಲಲಿತರಗಳೆ'ಯಲ್ಲಿವೆ. ರಗಳೆ ಛಂದಸ್ಸಿನ ಪ್ರಾಚೀನ ಮಾದರಿ ಇದು. ಕವಿಪಂಪ ವೃತ್ತ ಕಂದಗಳನ್ನು ಬಿಟ್ಟು ವೈವಿಧ್ಯಕ್ಕಾಗಿ ಇಂತಹ ರಚನೆಗಳನ್ನು ತಂದಿರುವ ಹಾಗೆ ಕಾಣುತ್ತದೆ. ಇಷ್ಟೂ ಸಾಲುಗಳು ವರ್ಣನೆಗೆ ಮೀಸಲಾಗಿವೆ.

**ದೇವವನಿತೆಯರೆ ಪರಿವಿಡಿಯೊಳಡಿಗುಟ್ಟೆಯುಂ**
**ದೇವಗಣಿಕೆಯರೆ ಕೊಳೆ ಪಾಡೆ ದನಿ ಮುಟ್ಟೆಯುಂ ॥**
**ದೇವಿ ಮರುದೇವಿ ವಿಶದೀಕೃತಾಶಾಂತದೊಳ್**
**ಭಾವಿ ಜಿನಜನನಿ ಸತಿ ಪವಡಿಸಿ ನಿಶಾಂತದೊಳ್ ॥ ॥**

**ಪದವಿಭಾಗ-ಅನ್ವಯ-ಅರ್ಥ:** ಪರಿವಿಡಿಯೊಳ್ ದೇವವನಿತೆಯರೆ ಅಡಿಗುಟ್ಟೆಯುಂ = ಕ್ರಮವಾಗಿ ದೇವಕನ್ನಿಕೆಯರು ಹೆಜ್ಜೆ ಹಾಕುತ್ತಿರಲು, ದೇವಗಣಿಕೆಯರೆ ಕೊಳೆ ಪಾಡೆ ದನಿ ಮುಟ್ಟೆಯುಂ = ದೇವವಿಲಾಸಿನಿಯರು ಇಂಪಾಗಿ ಹಾಡುವ ಧ್ವನಿಯು ತನ್ನನ್ನು ಮೆಚ್ಚಿಸಲು, ದೇವಿ ಮರುದೇವಿ ವಿಶದೀಕೃತ + ಆಶಾಂತದೊಳ್ = ಮಹಾರಾಣಿಯಾದ ಮರುದೇವಿಯು ದಿಕ್ಕುಗಳೆಲ್ಲ ಸ್ವಚ್ಛವಾಗಿರುವಾಗ, ಭಾವಿ ಜಿನಜನನಿ ಸತಿ ಪವಡಿಸಿ = ಮುಂದೆ ಜಿನನ ತಾಯಾಗಲಿರುವ ದೇವಿಯು ಮಲಗಿರಲು, ನಿಶಾ + ಅಂತದೊಳ್ = ಬೆಳಗಿನ ಜಾವದಲ್ಲಿ,

**ಗದ್ಯಾನುಸರಣ:** ದೇವಕನ್ನಿಕೆಯರು ಕ್ರಮವಾಗಿ ಹೆಜ್ಜೆ ಹಾಕುತ್ತ ನರ್ತಿಸುತ್ತಿದ್ದರು; ದೇವವಿಲಾಸಿನಿಯರು ಇಂಪಾಗಿ ಹಾಡುವ ಧ್ವನಿಯು ಅವಳನ್ನು ಮೆಚ್ಚಿಸಿತು; ದಿಕ್ಕುಗಳೆಲ್ಲ ಸ್ವಚ್ಛವಾಗಿರುವಾಗ ಮುಂದೆ ಜಿನನ ತಾಯಾಗಲಿರುವ ದೇವಿಯು ನಿದ್ರಿಸಿದಳು; ಬೆಳಗಿನ ಜಾವದಲ್ಲಿ,

**ಚಂಡಗಜಗಮನೆ ಪರಿಖಂಡಿತಾಘಾಳಿಯುಂ**
**ಕಂಡಳೀರೆಂಟುಮೊಳ್ಗನಸಸಿನೆವೋಳಿಯುಂ ॥**
**ಕರಟತಟಗಳಿತಮದರುಚಿರಮುಖತೇಜನಂ**
**ಶರದಮಳಜಳದನಿಭಧವಳಗಜರಾಜನಂ ॥**

**ಪದವಿಭಾಗ-ಅನ್ವಯ-ಅರ್ಥ:** ಚಂಡಗಜಗಮನೆ = ಆ ಮದಗಜ ಗಮನೆಯು, ಪರಿಖಂಡಿತ + ಅಘಾಳಿಯಂ ಈರೆಂಟುಂ + ಒಳ್ಗನಸಿನ + ಎಸೆವ + ಓಳಿಯಂ ಕಂಡಳ್ = ಪಾಪಸಮೂಹವನ್ನು ನಾಶಮಾಡುವಂತಹ ಹದಿನಾರು

ಒಳ್ಳೆಯ ಕನಸುಗಳ ಸೊಗಸಾದ ಸಾಲನ್ನು ಕಂಡಳು; ಕರಟತಟಗಳಿತಮದ = ಗಂಡಸ್ಥಳದಿಂದ ಸುರಿಯುವ ಮದಜಲದಿಂದ, ರುಚಿರಮುಖತೇಜನಂ = ಕಾಂತಿಯುಕ್ತವಾದ ಮುಖದ, ಶರತ್ + ಅಮಳಜಳದನಿಭಧವಳಗಜರಾಜನಂ = ಶರತ್ಕಾಲದ ಬಿಳಿಯ ಮೋಡದಂತೆ ಬೆಳ್ಳಗಿದ್ದ ಆನೆಯನ್ನು ಕಂಡಳು

**ಗದ್ಯಾನುಸರಣ:** ಪಾಪಸಮೂಹವನ್ನು ನಾಶಮಾಡುವಂತಹ ಹದಿನಾರು ಒಳ್ಳೆಯ ಕನಸುಗಳ ಸೊಗಸಾದ ಸಾಲನ್ನು ಆ ಮದಗಜಗಮನೆಯು ಕಂಡಳು; ಅವುಗಳಲ್ಲಿ ಮೊದಲನೆಯದೆಂದರೆ, ಗಂಡಸ್ಥಳದಿಂದ ಸುರಿಯುವ ಮದಜಲದಿಂದ ಕಾಂತಿಯುಕ್ತವಾದ ಮುಖವಿದ್ದ ಶರತ್ಕಾಲದ ಬಿಳಿಯ ಮೋಡದಂತೆ ಬೆಳ್ಳಗಿದ್ದ ಆನೆಯನ್ನು ಕಂಡಳು.

**ಹಿಮಶಿಖರಿಶಿಖರಸಮವಿಗ್ರಹಸನಾಥನಂ**
**ಕುಮುದದಳಧವಳರುಚಿರವೃಷನಾಥನಂ ॥**
**ಬಾಲಹಿಮಕಿರಣದಂಷ್ಟ್ರಾನನಜ್ಯೋತಿಯಂ**
**ಲೋಲಲಾಂಗೂಲಮದಸಿಂಧುರಾರಾತಿಯಂ ॥**

**ಪದವಿಭಾಗ-ಅನ್ವಯ-ಅರ್ಥ:** ಹಿಮಶಿಖರಿಶಿಖರಸಮವಿಗ್ರಹಸನಾಥನಂ = ಹಿಮಪರ್ವತದ ಶಿಖರದಂತಹ ಆಕೃತಿಯುಳ್ಳ, ಕುಮುದದಳಧವಳರುಚಿರ ವೃಷನಾಥನಂ = ನೈದಿಲೆಯ ಎಸಳಿನಂತೆ ಬೆಳ್ಳಗಿದ್ದ ಒಂದು ಹೋರಿಯನ್ನೂ, ಬಾಲಹಿಮಕಿರಣದಂಷ್ಟ್ರ + ಆನನಜ್ಯೋತಿಯಂ = ಬಾಲಚಂದ್ರನಂತೆ ಬೆಳ್ಳಗಿದ್ದ ಕೋರೆಗಳಿಂದ ಶೋಭಿತವಾದ, ಲೋಲಲಾಂಗೂಲಮದಸಿಂಧುರ + ಅರಾತಿಯಂ = ಬಾಲಗಳನ್ನು ಅಲುಗಾಡಿಸುವ ಮದ್ದಾನೆಯ ಶತ್ರುವಾದ ಸಿಂಹವನ್ನೂ (ಕಂಡಳು)

**ಗದ್ಯಾನುಸರಣ:** ಆನಂತರ, ಹಿಮಪರ್ವತದ ಶಿಖರದಂತಹ ಆಕೃತಿಯುಳ್ಳ ನೈದಿಲೆಯ ಎಸಳಿನಂತೆ ಬೆಳ್ಳಗಿದ್ದ ಒಂದು ಹೋರಿಯನ್ನೂ, ಬಾಲಚಂದ್ರನಂತೆ ಬೆಳ್ಳಗಿದ್ದ ಕೋರೆಗಳಿಂದ ಶೋಭಿತವಾದ ಹಾಗೂ ಬಾಲಗಳನ್ನು ಅಲುಗಾಡಿಸುವ ಮದ್ದಾನೆಯ ಶತ್ರುವಾದ ಸಿಂಹವನ್ನೂ ಕಂಡಳು.

**ಕರಿಕರೋದ್ಧೃತಪಯಃಪೂರ್ಣಘಟವಳೆಯಯುಂ**
**ದರದಳಿತಕರಕಳಿತಸರಸಿರುನಿಳಯೆಯುಂ ॥**
**ಪ್ರಕಟಮೃದುಮಧುರರಸನಿಪತದಳಿಮಾಳೆಯುಂ**
**ವಿಕಚನವಮಾಳಿಕಾಕುಸುಮನವಮಾಳೆಯುಂ ॥**

**ಪದವಿಭಾಗ-ಅನ್ವಯ-ಅರ್ಥ:** ಕರಿಕರ + ಉದ್ಧೃತಪಯಃಪೂರ್ಣ ಘಟವಳೆಯಯಂ = ಆನೆಗಳ ಸೊಂಡಿಲುಗಳು ಎತ್ತಿಹಿಡಿದ ನೀರುತುಂಬಿದ ಗಡಿಗೆಗಳುಳ್ಳ, ದರದಳಿತಕರಕಳಿತಸರಸಿರುನಿಳಯೆಯಂ = ಪೂರ್ಣವಾಗಿ ಅರಳಿದ

ಕಮಲಗಳನ್ನು ಕೈಯಲ್ಲಿ ಹಿಡಿದ (ಲಕ್ಷ್ಮಿಯನ್ನೂ), ಪ್ರಕಟಮೃದುಮಧುರರ ಸನಿಪತದಳಿಮಾಳೆಯಂ = ಸಿಹಿ ಬಂಡುಣ್ಣಲು ಎರಗುವ ದುಂಬಿವಿಂಡನ್ನುಳ್ಳ, ವಿಕಚನವಮಾಳಿಕಾಕುಸುಮನವಮಾಳೆಯಂ = ಅರಳಿದ ಹೊಸ ಮಾಲಿಕಾ ಕುಸುಮಮಾಲೆಯನ್ನೂ (ಕಂಡಳು).

**ಗದ್ಯಾನುಸರಣ:** ಆನೆಗಳ ಸೊಂಡಿಲುಗಳು ಎತ್ತಿಹಿಡಿದ ನೀರುತುಂಬಿದ ಗಡಿಗೆಗಳುಳ್ಳ ಹಾಗೂ ಪೂರ್ಣವಾಗಿ ಅರಳಿದ ಕಮಲಗಳನ್ನು ಕೈಯಲ್ಲಿ ಹಿಡಿದ ಲಕ್ಷ್ಮಿಯನ್ನೂ, ಸಿಹಿ ಬಂಡುಣ್ಣಲು ಎರಗುವ ದುಂಬಿವಿಂಡು ಆವರಿಸಿದ ಅರಳಿದ ಹೊಸ ಮಾಲಿಕಾಕುಸುಮಮಾಲೆಯನ್ನೂ ಕಂಡಳು.

**ಕುಮುದವನವನಧಿವನವಿಶದಕರಕಿರಣನಂ**
**ವಿಮಳತರಗಗನತಳತಿಳಕಹಿಮಕಿರಣನಂ॥**
**ವಿದಿತಕರನಿಕರದಳಿತಾಬ್ಜಿನೀಷಂಡನಂ**
**ಉದಯಗಿರಿಶಿಖರಗತತರುಣಮಾರ್ತಂಡನಂ ॥**

**ಪದವಿಭಾಗ–ಅನ್ವಯ–ಅರ್ಥ:** ಕುಮುದವನವನಧಿವನವಿಶದಕರಕಿರಣನಂ = ನೈದಿಲೆಯ ವನವೆಂಬ ಸಮುದ್ರದ ನೀರನ್ನು ಪರಿಶುದ್ಧಗೊಳಿಸುವ ಕಿರಣಗಳುಳ್ಳ, ವಿಮಳತರಗಗನತಳತಿಳಕಹಿಮಕಿರಣನಂ = ನಿರಭ್ರವಾದ ಆಕಾಶದ ತಿಲಕವೆನ್ನಿಸುವ ಚಂದ್ರನನ್ನೂ, ವಿದಿತಕರನಿಕರದಳಿತ + ಅಬ್ಜಿನೀಷಂಡನಂ = ತಾವರೆಯ ಸಮೂಹವನ್ನು ತನ್ನ ಕಿರಣಗಳಿಂದ ಅರಳಿಸುವ, ಉದಯಗಿರಿಶಿಖರಗತತರುಣ ಮಾರ್ತಂಡನಂ = ಮೂಡಲ ಬೆಟ್ಟದ ತುದಿಯಲ್ಲಿ ಉದಯಿಸುವ ಸೂರ್ಯನನ್ನೂ (ಕಂಡಳು).

**ಗದ್ಯಾನುಸರಣ:** ನೈದಿಲೆಯ ವನವೆಂಬ ಸಮುದ್ರದ ನೀರನ್ನು ಪರಿಶುದ್ಧಗೊಳಿಸುವ ಕಿರಣಗಳುಳ್ಳ ನಿರಭ್ರ ಆಕಾಶದ ತಿಲಕವೆನ್ನಿಸುವ ಚಂದ್ರನನ್ನೂ, ತಾವರೆಯ ಸಮೂಹವನ್ನು ತನ್ನ ಕಿರಣಗಳಿಂದ ಅರಳಿಸುತ್ತ ಮೂಡಲ ಬೆಟ್ಟದ ತುದಿಯಲ್ಲಿ ಉದಯಿಸುವ ಸೂರ್ಯನನ್ನು ಕಂಡಳು.

**ಲಲಿತವಿದ್ಯುಲ್ಲತಾರುಚಿರರುಚಿಮಾಳೆಯುಂ**
**ಮಿಳಿರ್ವ ಜಳದೊಳಗೆ ಪೊಳೆವೆರಡುಮೆಳಮಾಳೆಯುಂ ॥**
**ಕಳಿತಸರಸಿಜರಜೋರಂಜಿತಾಚ್ಛಾದಮುಂ**
**ಜಳಜದಳನಯನಯುಗೆ ಪೊಣರ್ದ ಮಣಿಕುಂಭಮುಂ ॥**

**ಪದವಿಭಾಗ–ಅನ್ವಯ–ಅರ್ಥ:** ಲಲಿತವಿದ್ಯುಲ್ಲತಾರುಚಿರರುಚಿಮಾಳೆಯುಂ = ಮನೋಹರವಾದ ಮಿಂಚಿನಂತೆ ಕಾಂತಿಯುಕ್ತವಾಗಿ, ಮಿಳಿರ್ವ ಜಳದೊಳಗೆ

ಪೊಳೆವ + ಎರಡು + ಎಳ + ಬಾಳೆಯಂ = ಅಲೆಯುಳ್ಳ ನೀರಿನಲ್ಲಿ ಹೊಳೆಯುವ ಎರಡು ಮೀನುಗಳನ್ನೂ, ಕಳಿತಸರಸಿಜರಜೋರಂಜಿತ + ಆಚ್ಛಾದಮಂ = ಅರಳಿದ ತಾವರೆಯ ಪರಾಗದಿಂದ ಕೆಂಪಾದ, ಜಳಜದಳನಯನಯುಗೆ = ತಾವರೆಯ ಎಸಳಿನಂಹ ಜೋಡಿ ಕಣ್ಣುಗಳ (ಮರುದೇವಿಯು), ಪೊಣರ್ದ ಮಣಿಕುಂಭಮಂ = ಜೋಡಿ ಮಣಿಖಚಿತ ಕಳಸಗಳನ್ನೂ (ಕಂಡಳು).

**ಗದ್ಯಾನುಸರಣ:** ಮನೋಹರವಾದ ಮಿಂಚಿನಂತೆ ಕಾಂತಿಯುಕ್ತವಾದ ಅಲೆಯುಳ್ಳ ನೀರಿನಲ್ಲಿ ಹೊಳೆಯುವ ಎರಡು ಮೀನುಗಳನ್ನೂ, ಅರಳಿದ ತಾವರೆಯ ಪರಾಗದಿಂದ ಕೆಂಪಾದ ತಾವರೆಯ ಎಸಳಿನಂಹ ಜೋಡಿ ಕಣ್ಣುಗಳ ಮರುದೇವಿಯು ಮಣಿಖಚಿತ ಜೋಡಿ ಕಳಸಗಳನ್ನೂ ಕನಸಿನಲ್ಲಿ ಕಂಡಳು.

**ಚಳಿತಜಳವಿಹಗರವರವ್ಯಾದಿಗ್ವಳಯುಮಂ**
**ಜಳಜಕುಳನಿಭೃತಜಳಪದ್ಮಿನೀನಿಳಯುಮಂ ॥**
**ಶರದಮಳಗಗನತಳವಿಭವಸಂಕಾಶಿಯುಂ**
**ಕರಿಮಕರಕರದಳಿತವೀಚಿವಾರಾಶಿಯುಂ ॥**

**ಪದವಿಭಾಗ–ಅನ್ವಯ–ಅರ್ಥ:** ಚಳಿತಜಳವಿಹಗರವರವ್ಯಾದಿಕ್ + ವಳಯಮಂ = ಹಾರುವ ನೀರುಹಗಕ್ಕಿಗಳ ದನಿಯು ದಿಕ್ಕುಗಳಲ್ಲಿ ತುಂಬಿರಲು, ಜಳಜಕುಳನಿಭೃತ 'ಜಳಪದ್ಮಿನೀನಿಳಯಮಂ = ಕಮಲಗಳಿಂದ ತುಂಬಿದ ಸರೋವರವನ್ನೂ, ಶರತ್ + ಅಮಳಗಗನತಳವಿಭವಸಂಕಾಶಿಯಂ = ಮಾಗಿಕಾಲದ ಪರಿಶುಭ್ರ ಆಗಸದ ವೈಭವದಂತೆ ಹೊಳೆಯುವ, ಕರಿಮಕರಕರದಳಿತವೀಚಿವಾರಾಶಿಯಂ = ನೀರಾನೆ ಮೊಸಳೆಗಳಿಂದ ಸೀಳಲ್ಪಟ್ಟ ಅಲೆಗಳ ಸಮುದ್ರವನ್ನೂ (ಕಂಡಳು).

**ಗದ್ಯಾನುಸರಣ:** ಹಾರುವ ನೀರುಹಗಕ್ಕಿಗಳ ದನಿಯು ದಿಕ್ಕುಗಳಲ್ಲಿ ತುಂಬಿರಲು ಕಮಲಗಳಿಂದ ಕೂಡಿದ ಸರೋವರವನ್ನೂ, ಮಾಗಿಕಾಲದ ಪರಿಶುಭ್ರ ಆಗಸದ ವೈಭವದಂತೆ ಹೊಳೆಯುತ್ತ ನೀರಾನೆ ಮೊಸಳೆಗಳಿಂದ ಸೀಳಲ್ಪಟ್ಟ ಅಲೆಗಳ ಸಮುದ್ರವನ್ನೂ ಕಂಡಳು.

**ಸೌಂದರಾನೇಕಮಣಿರುಚಿಜಳಸ್ಯಂದಿಯುಂ**
**ಮಂದರೋತ್ತುಂಗಕಂಠೀರವಾಸಂದಿಯುಂ ॥**
**ವ್ಯಾಳಸುರಸೌಂದರೀಜನಿತಬಹುಮಾನಮಂ**
**ಸ್ಥೂಳಮಣಿಖಚಿತಸುರಪರಿವೃಢವಿಮಾನಮಂ ॥**

**ಪದವಿಭಾಗ–ಅನ್ವಯ–ಅರ್ಥ:** ಸೌಂದರ + ಅನೇಕಮಣಿರುಚಿಜಳ

'ಸ್ಯಂದಿಯಂ = ಸುಂದರವಾದ ನಾನಾ ಮಣಿಗಳಂತೆ ಕಾಂತಿಮಯವಾದ ನೀರನ್ನು ಸುರಿಸುವ, ಮಂದರ + ಉತ್ತುಂಗಕಂಠೀರವ + ಆಸಂದಿಯಂ = ಮಂದರ ಪರ್ವತದಂತೆ ಎತ್ತರವಾದ ಸಿಂಹಪೀಠವನ್ನೂ, ವ್ಯಾಳಸುರಸೌಂದರೀ ಜನಿತ ಬಹುಮಾನಮಂ = ಸುಂದರಿಯರಾದ ನಾಗದೇವಿಯರ ಮೆಚ್ಚಿಕೆ ಗಳಿಸಿದ, ಸ್ಥೂಳಮಣಿಖಚಿತ'ಸುರಪರಿವೃಢವಿಮಾನಮಂ = ತೋರ ಮಣಿಗಳಿಂದ ಕೂಡಿದ ದೇವೇಂದ್ರನ ವಿಮಾನವನ್ನೂ (ಕನಸಲ್ಲಿ ಕಂಡಳು).

**ಗದ್ಯಾನುಸರಣ:** ಸುಂದರವಾದ ನಾನಾ ಮಣಿಗಳಂತೆ ಕಾಂತಿಮಯವಾದ ನೀರನ್ನು ಸುರಿಸುವ ಮಂದರ ಪರ್ವತದಂತೆ ಎತ್ತರವಾದ ಸಿಂಹಪೀಠವನ್ನೂ, ಸುಂದರಿಯರಾದ ನಾಗದೇವಿಯರ ಮೆಚ್ಚಿಕೆ ಗಳಿಸಿದ ತೋರ ಮಣಿಗಳಿಂದ ಕೂಡಿದ ದೇವೇಂದ್ರನ ವಿಮಾನವನ್ನೂ ಮರುದೇವಿ ತನ್ನ ಕನಸಲ್ಲಿ ಕಂಡಳು.

**ಫಣಿಫಣಾಸ್ಫುರಿತಮಣಿದೀಪಿಕಾವ್ಯೂಹಮಂ**
**ಕ್ವಣಿತಮಣಿಕಿಂಕಿಣೀನಿನದಫಣಿಗೇಹಮಂ ॥**
**ವಿರಚಿತೋದ್ದಾಮಸುರಪತಿಧನುಬ್ರಾತಮಂ**
**ಸುರುಚಿರಾಂಶೂಲ್ಲಸದ್ರತ್ನಸಂಘಾತಮಂ ॥**

**ಪದವಿಭಾಗ–ಅನ್ವಯ–ಅರ್ಥ:** ಫಣಿಫಣಾಸ್ಫುರಿತಮಣಿದೀಪಿಕಾವ್ಯೂಹಮಂ = ಹಾವಿನ ಹೆಡೆಯಲ್ಲಿನ ಮಣಿಯು ಹೊಮ್ಮಿಸುವ ಕಾಂತಿಯ ಜಾಲವನ್ನೂ, ಕ್ವಣಿತಮಣಿಕಿಂಕಿಣೀನಿನದಫಣಿಗೇಹಮಂ = ಧ್ವನಿಸುವ ಮಣಿಕಿಂಕಿಣಿಗಳ ಧ್ವನಿಯಿಂದ ಕೂಡಿದ ಹುತ್ತವನ್ನೂ, ವಿರಚಿತ + ಉದ್ದಾಮಸುರಪತಿಧನುಬ್ರಾತಮಂ = ಶ್ರೇಷ್ಠ ಕಾಮನಬಿಲ್ಲಗಳ ಸೃಷ್ಟನೆಯನ್ನೂ, ಸುರುಚಿರ + ಅಂಶೂಲ್ಲಸತ್ + ರತ್ನಸಂಘಾತಮಂ = ಮನೋಹರವಾದ ದೀಪ್ತಿಯನ್ನು ಸೂಸುವ ರತ್ನರಾಶಿಯನ್ನೂ (ಮರುದೇವಿ ಕನಸಲ್ಲಿ ಕಂಡಳು).

**ಗದ್ಯಾನುಸರಣ:** ಹಾವಿನ ಹೆಡೆಯಲ್ಲಿನ ಮಣಿಯು ಹೊಮ್ಮಿಸುವ ಕಾಂತಿಯ ಜಾಲವನ್ನೂ, ಧ್ವನಿಸುವ ಮಣಿಕಿಂಕಿಣಿಗಳ ಧ್ವನಿಯಿಂದ ಕೂಡಿದ ಹುತ್ತವನ್ನೂ, ಶ್ರೇಷ್ಠ ಕಾಮನಬಿಲ್ಲಗಳ ಸೃಷ್ಟನೆಯನ್ನೂ, ಮನೋಹರವಾದ ದೀಪ್ತಿಯನ್ನು ಸೂಸುವ ರತ್ನರಾಶಿಯನ್ನೂ ಮರುದೇವಿ ಕನಸಲ್ಲಿ ಕಂಡಳು.

**ಧೃತಧಗದ್ಧಗಿತರವನಿರ್ಮಳಶಿಖಾಳಿಯಂ**
**ಸತತಗತಿಪಥಮನಡರ್ಪುಜ್ಜ್ವಳಜ್ವಾಳೆಯಂ ॥**
**ರಜತಗಿರಿರುಂದ್ರನಂ ಜಿತಶರಚ್ಚಂದ್ರನಂ**
**ನಿಜವದನವನಜಮಂ ಪುಗುವ ವೃಷಭೇಂದ್ರನಂ ॥**

**ಪದವಿಭಾಗ-ಅನ್ವಯ-ಅರ್ಥ:** ಧೃತಧಗದ್ಧಗಿತರವನಿರ್ಮಳಶಿಖಾಳಿಯಂ = ಧಗಧಗ ಎಂದು ಸದ್ದುಮಾಡುತ್ತ ಉರಿಯುವ ನಿರ್ಮಲವಾದ ಬೆಂಕಿಯ ನಾಲಗೆಗಳಿಂದ ಕೂಡಿ, ಸತತಗತಿಪಥಮನಡರ್ವ + ಉಜ್ಜ್ವಳಜ್ವಾಳೆಯಂ = ನಿರಂತರವಾಗಿ ಆಕಾಶಪಥವನ್ನು ಆವರಿಸುವ ಪ್ರಜ್ವಲಿಸುವ ಬೆಂಕಿಯನ್ನೂ, ರಜತಗಿರಿರುಂದ್ರನಂ ಜಿತಶರಚ್ಚಂದ್ರನಂ = ಬೆಳ್ಳಿಬೆಟ್ಟದಂತೆ ಕಾಂತಿಮಯವಾದ ಶರತ್‌ಕಾಲದ ಚಂದ್ರನನ್ನೂ, ನಿಜವದನವನಜಮಂ ಪುಗುವ ವೃಷಭೇಂದ್ರನಂ = ತನ್ನ ಮೊಗದಾವರೆಯನ್ನು ಹೊಗುವ ವೃಷಭನನ್ನೂ (ಆಕೆ ಕನಸಿನಲ್ಲಿ ಕಂಡಳು).

**ಗದ್ಯಾನುಸರಣ:** ಧಗಧಗ ಎಂದು ಸದ್ದುಮಾಡುತ್ತ ಉರಿಯುವ ನಿರ್ಮಲವಾದ ನಾಲಗೆಗಳಿಂದ ಕೂಡಿ ಒಂದೇ ಸಮನೆ ಆಕಾಶಪಥವನ್ನು ಆವರಿಸುವ ಪ್ರಜ್ವಲಿಸುವ ಬೆಂಕಿಯನ್ನೂ, ಬೆಳ್ಳಿಬೆಟ್ಟದಂತೆ ಕಾಂತಿಮಯವಾದ ಶರತ್‌ಕಾಲದ ಚಂದ್ರನನ್ನೂ, ತನ್ನ ಮೊಗದಾವರೆಯನ್ನು ಹೊಗುವ ವೃಷಭನನ್ನೂ ಆಕೆ ಕನಸಿನಲ್ಲಿ ಕಂಡಳು.

**ವಿಶೇಷ ವಿಚಾರ:** ಮುಂದಿನ ಇಪ್ಪತ್ತಾರು ಸಾಲುಗಳ ರಳೆಯ ಭಾಗವು ಪ್ರಕ್ಷಿಪ್ತವೆಂದು ತೀರ್ಮಾನಿಸಿ ಬಸವರಾಜು ಅಡಿಟಿಪ್ಪಣಿಯಲ್ಲಿ ಕೊಡುತ್ತಾರೆ. ಅದಕ್ಕೆ ಅವರು ನೀಡುವ ಕಾರಣ ಇಂತಿದೆ: ಕೆಲವು ಪ್ರತಿಗಳಲ್ಲಿ ಈ ಭಾಗ ಇಲ್ಲ, 'ಈ (ಬಿಟ್ಟಿರುವ) ವಿಷಯ ಮುಂದೆ ಪಾಠದಲ್ಲಿ ಬರುವ ಕಂದಗಳೆರಡರಲ್ಲಿ ಮೊದಲೇ ಉಕ್ತವಾಗಿರುವುದರಿಂದ ಮತ್ತು ಈ ಭಾಗವಿಲ್ಲದಿದ್ದರೂ ಕಥಾಸೂತ್ರಕ್ಕೆ ಭಂಗಬಾರದಿರುವುದರಿಂದ, ಆ ಅಧಿಕರಗಳೆಯ ಭಾಗವನ್ನು ಸೇರಿಸಿಕೊಂಡು ಓದಿದಾಗ ಮುಂದೆ ಬರುವ ಕಂದಪದ್ಯಗಳು ಅನನ್ವಯವಾಗುವುದರಿಂದ, ಈ ಅಧಿಕಭಾಗದಲ್ಲೇ ಎರಡು ಕಡೆ ಪ್ರಾಸಭಂಗವಿರುವುದರಿಂದ – ಈ ಮೇಲೆ ಹೇಳಿದ ಮುಂದಿನ ಪಾಠ ಪ್ರಕ್ಷಿಪ್ತ.' – ಆ ಭಾಗದ ಅಡಿಟಿಪ್ಪಣಿ..

ನೋಡಿ ಗಜಗಮನೆ ಕನಸೆಂದು ಬಗೆವನ್ನೆಗಂ
ತೀಡೆ ಕಿವಿಗುಚಿತಮಂಗಳನಿನದಮನ್ನೆಗಂ ॥
ನಿಜಮುಖಾಂಬುಜಮುಮಂಬುಜಮುಮೊಡನಲರ್ವಿನಂ
ನಿಜದ ಚೆಲ್ವಮರೆ ನಿಡುಮುರ್ಪುಗಳ್ ನಿಮಿರ್ವಿನಂ ॥

**ಪದವಿಭಾಗ-ಅನ್ವಯ-ಅರ್ಥ:** ನೋಡಿ ಗಜಗಮನೆ ಕನಸೆಂದು ಬಗೆವ + ಅನ್ನೆಗಂ = ಕಂಡು ಅದೆಲ್ಲ ಕನಸೆಂದು ಆಕೆಯು ತಿಳಿಯಷ್ಟರಲ್ಲಿ, ಅನ್ನೆಗಂ ಕಿವಿಗುಚಿತಮಂಗಳನಿನದಂ ತೀಡೆ = ಕಿವಿಗೆ ಹಿತಕರವಾಗಿ ಮಂಗಳಧ್ವನಿಯು ಬೀಳಲು, ನಿಜಮುಖ + ಅಂಬುಜಮುಂ + ಅಂಬುಜಮುಂ + ಒಡನೆ + ಅಲರ್ವಿನಂ = ತನ್ನ ಮುಖಮಲವೂ ತಾವರೆಗಳು ಜೊತೆಯಾಗಿ ಅರಳಲು, ನಿಜದ ಚೆಲ್ವಮರೆ ನಿಡು + ಮುರ್ಪುಗಳ್ ನಿಮಿರ್ವಿನಂ = ತನ್ನ ಚೆಲುವು

ಇಮ್ಮಡಿಸುವಂತೆ ನೀಳವಾದ ಹುಬ್ಬುಗಳು ನಿಮಿರಿದುವು.

**ಗದ್ಯಾನುಸರಣ:** ಕಂಡು ಅದೆಲ್ಲ ಕನಸೆಂದು ಆಕೆಯು ತಿಳಿಯಪ್ಪರಲ್ಲಿ ಕಿವಿಗೆ ಹಿತಕರವಾಗಿ ಮಂಗಳಧ್ವನಿಯು ಕೇಳಿಸಿತು; ತನ್ನ ಮುಖಮಲವೂ ತಾವರೆಗಳು ಜೊತೆಯಾಗಿ ಅರಳಲು ನಿಜದ ತನ್ನ ಚೆಲುವು ಇಮ್ಮಡಿಸುವಂತೆ ನೀಳವಾದ ಹುಬ್ಬುಗಳು ನಿಮಿರಿದುವು.

**ತಱತಱಾಗಿರ್ದ ಕುಂಕುಮದ ನಿಜವದನಮಂ**
**ತೆಱೆದ ಕಣ್ಗಳೊಳೆ ಧವಳಿಸಿದ ನಿಜವದನಮಂ ॥**
**ಚಲಿತಮ್ಮಿಲ್ಲದೊಳ್ ತೊಡರ್ದ ಪೂಮಾಲೆಯುಂ**
**ಲಲಿತಮುಖಸೌರಭಕ್ಕೆಱಗುವಳಿಮಾಲೆಯುಂ ॥**

**ಪದವಿಭಾಗ–ಅನ್ವಯ–ಅರ್ಥ:** ತಱತಱಾಗಿರ್ದ ಕುಂಕುಮದ ನಿಜವದನಮಂ = ಬಗೆ ಬಗೆಯಾಗಿ ಕೆಂಪಾದ ತನ್ನ ಮೊಗದಾವರೆಯನ್ನು, ತೆಱೆದ ಕಣ್ಗಳೊಳೆ ಧವಳಿಸಿದ ನಿಜವದನಮಂ = ಅರಳುಗಣ್ಣುಗಳ ಹೊಳಪಿನಿಂದ ಕೂಡಿದ ತನ್ನ ಮುಖವನ್ನು, ಚಲಿತಮ್ಮಿಲ್ಲದೊಳ್ ತೊಡರ್ದ ಪೂಮಾಲೆಯಂ = ಅಲುಗಾಡುವ ತಲೆಗೂದಲಲ್ಲಿ ಸಿಲುಕಿದ ಹೂದಂಡೆಯಿಂದಲೂ, ಲಲಿತಮುಖಸೌರಭಕ್ಕೆ + ಎಱಗುವ + ಅಳಿಮಾಲೆಯಂ = ನಯವಾದ ಮುಖದ ಪರಿಮಳಕ್ಕೆ ಎರಗಿ ಬರುವ ದುಂಬಿವಿಂಡನ್ನೂ,

**ಗದ್ಯಾನುಸರಣ:** ಬಗೆ ಬಗೆಯಾಗಿ ಕೆಂಪಾದ ತನ್ನ ಮೊಗದಾವರೆಯಂತೆ ಅರಳುಗಣ್ಣುಗಳ ಹೊಳಪಿನಿಂದ ಕೂಡಿದ ತನ್ನ ಮುಖವನ್ನೂ, ಅಲುಗಾಡುವ ತಲೆಗೂದಲಲ್ಲಿ ಸಿಲುಕಿದ ಹೂದಂಡೆಯಿಂದಲೂ ನಯವಾದ ಮುಖದ ಪರಿಮಳಕ್ಕೆ ದುಂಬಿವಿಂಡು ಬಂದೆರಗುತ್ತಿದ್ದವು.

**ಬಗೆಗೊಳಿಸಿ ತಳರ್ದು ಗಜಗಮನೆ ಸುರನಾರಿಯರ್**
**ಮುಗಿದ ಕೈವೆರಸು ಬರೆ ಜನಮನೋಹಾರಿಯರ್ ॥**
**ಬಂದು ಜಗದಧಿಪನಂ ಸೋಂಕಿ ಕುಳ್ಳಿರ್ಪುದುಂ**
**ಬಂದ ಬರವನವನಿಪತಿಗೊಸಗೆಯುಂ ತರ್ಪುದುಂ ॥**

**ಪದವಿಭಾಗ–ಅನ್ವಯ–ಅರ್ಥ:** ಗಜಗಮನೆ ಬಗೆಗೊಳಿಸಿ ತಳರ್ದು = ಆಗ ಗಜಗಮನೆಯಾದ ಮರುದೇವಿಯು ಹೊರಟು, ಜನಮನೋಹಾರಿಯರ್ ಸುರನಾರಿಯರ್ ಮುಗಿದ ಕೈವೆರಸು ಬರೆ = ಜನಮನವನ್ನು ಗೆಲ್ಲುವ ದೇವಾಂಗನೆಯರು ಕೈಮುಗಿಯುತ್ತ ಜೊತೆಗೂಡಲು, ಬಂದು ಜಗತ್ + ಅಧಿಪನಂ

ಸೋಂಕಿ ಕುಳ್ಳಿರ್ದುದುಂ = ನಡೆದು ಬಂದು ಜಗದೊಡೆಯನಾದ ನಾಭಿರಾಜನನ್ನು ಸೋಂಕುವಷ್ಟು ಹತ್ತಿರ ಕುಳಿತಾಗ, ಬಂದ ಬರವನ್ + ಅವನಿಪತಿಗೆ + ಒಸಗೆಯಂ ತರ್ಪುದುಂ = ಅವಳ ಬರುವಿಕೆ ಮಹಾರಾಜನಿಗೆ ಸಂತಸವನ್ನು ತಂದಿತು.

**ಗದ್ಯಾನುಸರಣ:** ಆಗ ಗಜಗಮನೆಯಾದ ಮರುದೇವಿಯು ಹೊರಟಳು; ಜನಮನವನ್ನು ಗೆಲ್ಲುವ ದೇವಾಂಗನೆಯರು ಕೈಮುಗಿಯುತ್ತ ಜೊತೆಗೂಡಲು ನಡೆದು ಬಂದು ಜಗದೊಡೆಯನಾದ ನಾಭಿರಾಜನನ್ನು ಸೋಂಕುವಷ್ಟು ಹತ್ತಿರ ಕುಳಿತಳು; ಅವಳ ಬರುವಿಕೆ ಮಹಾರಾಜನಿಗೆ ಸಂತಸವನ್ನು ತಂದಿತು.

ಕುಂದದಳಧವಳದಶನಾಂಶುಗಳ್ ಪೊಳೆವಿನಂ
ಸಂದ ಕನಸುಗಳನವನೊಸೆದು ಸತಿ ಬಗೆವಿನಂ ॥
ಕ್ರಮದಿನಱಿಪುವುದುಮವನಱಿದು ಧರಣೀಶ್ವರಂ
ನಿಮಗೆ ಮಗನುಚಿತಧವಳಾತಪತ್ರೇಶ್ವರಂ ॥

**ಪದವಿಭಾಗ-ಅನ್ವಯ-ಅರ್ಥ:** ಕುಂದದಳಧವಳದಶನ + ಅಂಶುಗಳ್ ಪೊಳೆವಿನಂ = ಕುಂದಪುಷ್ಪದಂತೆ ಬಿಳುಪಾದ ತನ್ನ ಹಲ್ಲುಗಳು ಹೊಳೆಯುತ್ತಿರಲು, ಸಂದ ಕನಸುಗಳನ್ + ಅವನ್ + ಒಸೆದು ಸತಿ ಬಗೆವಿನಂ = ತಾನು ಕಂಡ ಕನಸುಗಳನ್ನು ಸತಿಯು ರಾಜನಿಗೆ ವಿವರವಾಗಿಯೂ, ಕ್ರಮದಿನ್ + ಅಱಿಪುವುದುಂ = ಅನುಕ್ರಮವಾಗಿಯೂ ತಿಳಿಸಿದಾಗ, ಅವನ್ + ಅಱಿದು ಧರಣೀಶ್ವರಂ = ಅವುಗಳ ಅರ್ಥವನ್ನು ತಿಳಿದ ರಾಜನು, ನಿಮಗೆ ಮಗನ್ + ಉಚಿತಧವಳ + ಆತಪತ್ರೇಶ್ವರಂ = ನಿನಗೆ ತಕ್ಕುದಾದ ಬೆಳುಗೊಡೆಯೊಡೆಯನ್ನು ಮಗನಾಗಿ

**ಗದ್ಯಾನುಸರಣ:** ಕುಂದಪುಷ್ಪದಂತೆ ಬಿಳುಪಾದ ತನ್ನ ಹಲ್ಲುಗಳು ಹೊಳೆಯುತ್ತಿರಲು ತಾನು ಕಂಡ ಕನಸುಗಳನ್ನು ಸತಿಯು ರಾಜನಿಗೆ ವಿವರವಾಗಿಯೂ ಅನುಕ್ರಮವಾಗಿಯೂ ತಿಳಿಸಿದಳು; ಅವುಗಳ ಅರ್ಥವನ್ನು ತಿಳಿದ ರಾಜನು 'ನಿನಗೆ ತಕ್ಕುದಾದ ಬೆಳುಗೊಡೆಯೊಡೆಯನ್ನು ಮಗನಾಗಿ ಹುಟ್ಟುವ'ನೆಂದು ಹೇಳಿದನು.

ದಿವದಿನವತರಿಪನಪರಿಮಿತಪುಣ್ಯೋದಯಂ
ದಿವಿಜಪತಿಕೃತಮಹಾಶ್ಚರ್ಯಮಹಿಮೋದಯಂ ॥
ದುರಿತಬಳತಿಮಿರದಳಚಳನಕರಖರಕರಂ
ಲಲಿತಬುಧಕುವಲಯಾನಂದಹಿಮಕರಂ ॥

**ಪದವಿಭಾಗ-ಅನ್ವಯ-ಅರ್ಥ:** ದಿವದಿನ್ + ಅವತರಿಪನ್ + ಅಪರಿಮಿತಪುಣ್ಯೋದಯಂ = ಎಣೆಯಿಲ್ಲದ ಪುಣ್ಯವನ್ನು ತರುವವನೂ, ದಿವಿಜಪತಿ ಕೃತಮಹಾಶ್ಚರ್ಯಮಹಿಮೋದಯಂ = ದೇವೇಂದ್ರನಿಂದಾಗುವ ಮಹಾಶ್ಚರ್ಯಗಳ ಮಹಿಮೆಯನ್ನುಂಟುಮಾಡುವವನೂ, ದುರಿತಬಳತಿಮಿರದಳಚಳನಕರಖರಕರಂ

= ಪಾಪರಾಶಿಯೆಂಬ ಕತ್ತಲ ಮೊತ್ತವನ್ನು ಸೀಳುವ ಸೂರ್ಯನಂತಹವನೂ, ಲಲಿತಬುಧಕುವಲಂಯ + ಆನಂದಹಿಮಕರಂ = ಶ್ರೇಷ್ಠ ವಿದ್ವಜ್ಜನರೆಂಬ ನೈದಿಲೆಗಳನ್ನು ಅರಳಿಸುವ ಚಂದ್ರನೂ, ದಿವದಿನ್ + ಅವತರಿಪನ್ = ದೇವಲೋಕ ದಿಂದ ಇಳಿದು ಬರುತ್ತಾನೆ

**ಗದ್ಯಾನುಸರಣ:** ಎಣೆಯಿಲ್ಲದ ಪುಣ್ಯವನ್ನು ತರುವವನೂ, ದೇವೇಂದ್ರನಿಂದಾಗುವ ಮಹಾಶ್ಚರ್ಯಗಳ ಮಹಿಮೆಯನ್ನುಂಟುಮಾಡುವವನೂ, ಪಾಪರಾಶಿಯೆಂಬ ಕತ್ತಲ ಮೊತ್ತವನ್ನು ಸೀಳುವ ಸೂರ್ಯನಂತಹವನೂ, = ಶ್ರೇಷ್ಠ ವಿದ್ವಜ್ಜನರೆಂಬ ನೈದಿಲೆಗಳನ್ನು ಅರಳಿಸುವ ಚಂದ್ರನೂ ಆದವನು ದೇವಲೋಕದಿಂದ ಇಳಿದು ಬರುತ್ತಾನೆ.

**ತಡೆಯದೆನೆ ವನಜಮುಖಿ ಪಿರಿದುಮನುರಾಗದಿಂ**
**ದಡಿದಡಿಗೆ ಸೊಗಯಿಸಿದಳಾಗ ಮೊಗರಾಗದಿಂ ॥**

**ಪದವಿಭಾಗ–ಅನ್ವಯ–ಅರ್ಥ:** ತಡೆಯದು + ಎನೆ = ಸುಳ್ಳಾಗುವುದಿಲ್ಲ ಎನ್ನಲು, ವನಜಮುಖಿ ಪಿರಿದುಂ + ಅನುರಾಗದಿಂದೆ = ಕಮಲಮುಖಿಯು ಮಹಾ ಸಂತೋಷದಿಂದ, ಆಗ ಮೊಗರಾಗದಿಂ ಅಡಿದಡಿಗೆ ಸೊಗಯಿಸಿದಳ್ = ಉಂಟಾದ ಮುಖಕಾಂತಿಯಿಂದ ಹೆಚ್ಚೆಚ್ಚು ಸೊಗಸಿದಳು;

**ನೆಗಟ್ದ ಕವಿತಾಗುಣಾರ್ಣವನ ವರ್ಣಿಸುವುದಂ**
**ಪೊಗಟ್ದು ಬಗೆದೋದುವರ್ ಮನದೊಳಾಟಿಸುವುದಂ ॥**
**ಪಡೆವರೀ ಷೋಡಶಸ್ವಪ್ನದ ಫಲಂಗಳಂ**
**ಪಡೆಯಲಣಮಾಗದ ಸುಖಂಗಳಂ ಮಂಗಳಂ ॥**

**ಪದವಿಭಾಗ–ಅನ್ವಯ–ಅರ್ಥ:** ಈ ಷೋಡಶಸ್ವಪ್ನದ ಫಲಂಗಳಂ = ಈ ಹದಿನಾರು ಕನಸುಗಳ ಫಲವನ್ನು, ನೆಗಟ್ದ ಕವಿತಾಗುಣಾರ್ಣವನ ವರ್ಣಿಸುವುದಂ = ಪ್ರಸಿದ್ಧನಾದ ಕವಿತಾಗುಣಾರ್ಣವನು ವರ್ಣಿಸಿದುದನ್ನು, ಪೊಗಟ್ದು ಬಗೆದು + ಓದುವರ್ = ಹೊಗಳುವವರೂ ಪರಿಭಾವಿಸುವವರೂ, ಓದುವವರೂ, ಮನದೊಳ್ + ಆಟಿಸುವುದಂ = ಮನಸ್ಸಿನಲ್ಲಿ ಇಷ್ಟಪಟ್ಟಿದ್ದನ್ನೂ, ಪಡೆಯಲ್ + ಅಣಂ + ಆಗದ ಸುಖಂಗಳಂ = ಹೊಂದಲು ಅಶಕ್ಯವೆನಿಸುವ ಸುಖಗಳನ್ನೂ, ಪಡೆವರ್ = ಪಡೆಯುತ್ತಾರೆ; ಮಂಗಳಂ = ಶುಭವಾಗಲಿ.

**ಗದ್ಯಾನುಸರಣ:** ಈ ಹದಿನಾರು ಕನಸುಗಳ ಫಲವನ್ನು ಪ್ರಸಿದ್ಧನಾದ ಕವಿತಾಗುಣಾರ್ಣವನು ವರ್ಣಿಸಿದುದನ್ನು ಹೊಳುವವರು ಪರಿಭಾವಿಸುವವರು

ಹಾಗೂ ಓದುವವರು ಮನಸ್ಸಿನಲ್ಲಿ ಇಷ್ಟಪಟ್ಟಿದ್ದನ್ನೂ, ಹೊಂದಲು ಅಶಕ್ಯವೆನಿಸುವ ಸುಖಗಳನ್ನೂ ಪಡೆಯುತ್ತಾರೆ; ಶುಭವಾಗಲಿ.

ಕಂಡುಪ್ಪವಡಿಸಿ ಮಜ್ಜನ
ಮಂಡನವಿಧಿಯಂ ಲತಾಂಗಿ ನಿರ್ವರ್ತಿಸಿ ಭೂ
ಮಂಡಳಪತಿಗಱಿಪಿದೊಡೆರ್ದೆ
ಗೊಂಡದಱ ಫಲಂಗಳನಿತುಮಂ ಮನು ತಿಳಿದಂ ೨೮

ಪದವಿಭಾಗ-ಅನ್ವಯ-ಅರ್ಥ: ಕಂಡು ಲತಾಂಗಿ ಉಪ್ಪವಡಿಸಿ ಮಜ್ಜನಮಂಡನವಿಧಿಯಂ ನಿರ್ವರ್ತಿಸಿ = ಕಂಡ ಮರುದೇವಿಯು ಮೇಲೆದ್ದು ಸ್ನಾನಾ ಅಲಂಕಾರಗಣ್ನು ಮುಗಿಸಿ, ಭೂಮಂಡಳಪತಿಗೆ + ಅಱಿಪಿದೊಡೆ = ಮಹಾರಾಜನಿಗೆ ನಿರೂಪಿಸಲು, ಅದಱ ಫಲಂಗಳ್ + ಅನಿತುಮಂ ಮನು ಎರ್ದೆಗೊಂಡು ತಿಳಿದಂ = ಅವುಗಳ ಫಲಗಳನ್ನು ತಿಳಿದು ಹದಿನಾಲ್ಕನೆಯ ಮನುವಾದ ನಾಭಿರಾಜನು ಸಂತಸದಿಂದ ಕೂಡಿದ.

ಗದ್ಯಾನುಸರಣ: =ಕನಸುಗಳನ್ನು ಕಂಡ ಮರುದೇವಿಯು ಮೇಲೆದ್ದು ಸ್ನಾನಾಲಂಕಾರಗಳನ್ನು ಮುಗಿಸಿ ಅವುಗಳನ್ನು ಮಹಾರಾಜನಿಗೆ ನಿರೂಪಿಸಿದಾಗ ಅವುಗಳ ಫಲಗಳನ್ನು ತಿಳಿದು ಹದಿನಾಲ್ಕನೆಯ ಮನುವಾದ ನಾಭಿರಾಜನು ಸಂತಸದಿಂದ ಕೂಡಿದ.

ನಿಮಗೆ ತನೂಜಂ ದಿವದಿಂ
ದಮೋಘಮವತರಿಸಿದಪ್ಪನಖಿಳವಿನೇಯ
ಪ್ರಮದಕರಂ ದಿವಿಜೇಂದ್ರ
ಪ್ರಮೋದಕರನೆನೆ ಗುಣಾಕರಂ ತೀರ್ಥಕರಂ ೨೯

ಪದವಿಭಾಗ-ಅನ್ವಯ-ಅರ್ಥ: ನಿಮಗೆ ತನೂಜಂ = ನಿಮಗೆ ಮಗನಾಗಿ ಹುಟ್ಟಲು, ಅಖಿಳವಿನೇಯಪ್ರಮದಕರಂ = ಎಲ್ಲ ವಿನಯವಂತರಿಗೂ ಸಂತಸ ತರುವವನು, ದಿವಿಜೇಂದ್ರಪ್ರಮೋದಕರನ್ = ದೇವೇಂದ್ರನಿಗೆ ಮುದವುಂಟುಮಾಡುವವನು, ಎನೆ ಗುಣಾಕರಂ ತೀರ್ಥಕರಂ = ಎನಿಸಿದ ಗುಣಗಳ ನೆಲೆಯಾದ ತೀರ್ಥಂಕರನು, ದಿವದಿಂದೆ + ಅಮೋಘಂ + ಅವತರಿಸಿದಪ್ಪನ್ = ದೇವಲೋಕದಿಂದ ಇಳಿದು ಬರುವನು.

ಗದ್ಯಾನುಸರಣ: 'ನಿಮಗೆ ಮಗನಾಗಿ ಹುಟ್ಟಲು ವಿನಯವಂತರಿಗೂ ದೇವೇಂದ್ರನಿಗೂ ಮುದವುಂಟುಮಾಡುವ ಗುಣಗಳ ನೆಲೆಯಾದ ತೀರ್ಥಂಕರನು ದೇವಲೋಕದಿಂದ ಇಳಿದು ಬರುತ್ತಾನೆ'

ಎಂಬುದುಮಧೀಶವಚನಕ
ದಂಬಕಮೆಂಬೊಂದು ತೆಂಕಣೆಲರೊಳ್ ನನೆವೋ
ಯ್ತೆಂಬಿನಮಾಕೆಯ ತನುಲತೆ
ತುಂಬಿದುದತಿಬಹಳಪುಳಕವಿಪುಳಶ್ರೀಯಿಂ ೩೦

**ಪದವಿಭಾಗ-ಅನ್ವಯ-ಅರ್ಥ:** ಎಂಬುದುಂ = ಎಂದು ರಾಜನು ಹೇಳಿದಾಗ, ಅಧೀಶವಚನಕದಂಬಕಂ + ಎಂಬೊಂದು ತೆಂಕಣ + ಎಲರೊಳ್ ಆಕೆಯ ತನುಲತೆ ನನೆವೋಯ್ತು + ಎಂಬಿನಂ = ಒಡೆಯನ ಮಾತುಗಳೆಂಬ ತೆಂಗಾಳಿಯಲ್ಲಿ ಆಕೆಯ ದೇಹವೆಂಬ ಬಳ್ಳಿಯು ಮೊಗ್ಗುಬಿಟ್ಟಿತೋ ಎನ್ನುವ ಹಾಗೆ, ಅತಿಬಹಳಪುಳಕವಿಪುಳಶ್ರೀಯಿಂ ತುಂಬಿದುದು = ಅತೀವ ರೋಮಾಂಚನದಿಂದ ಕಾಂತಿವಡೆಯಿತು.

**ಗದ್ಯಾನುಸರಣ:** ಎಂದು ರಾಜನು ಹೇಳಿದಾಗ ಒಡೆಯನ ಮಾತುಗಳೆಂಬ ತೆಂಗಾಳಿಯಲ್ಲಿ ಆಕೆಯ ದೇಹವೆಂಬ ಬಳ್ಳಿಯು ಮೊಗ್ಗುಬಿಟ್ಟಿತೋ ಎನ್ನುವ ಹಾಗೆ ಅತೀವ ರೋಮಾಂಚನದಿಂದ ಕಾಂತಿವಡೆಯಿತು.

**ವಿಶೇಷ ವಿಚಾರ:** ರಗಳೆಯ ಕೊನೆಯ ಇಪ್ಪತ್ತನಾಲ್ಕು ಸಾಲುಗಳಲ್ಲಿ ಹೇಳಿರುವುದನ್ನೇ ೨೮, ೨೯ ಮತ್ತು ೩೦ ನೇ ಪದ್ಯಗಳು ಹೇಳುತ್ತಿವೆ; ಇಂಥ ಪುನರುಕ್ತಿ ಏಕಾಯಿತು? ಪ್ರಾಯಶಃ ಕವಿ ಮರುದೇವಿಯ ಹದಿನಾರು ಕನಸುಗಳನ್ನಷ್ಟೇ ರಗಳೆಯಲ್ಲಿ ವಿವರಿಸಿ, ಆ ನಂತರದ ಸಂಗತಿಯನ್ನು ಈ ಮೂರು ಪದ್ಯಗಳಲ್ಲಿ ಹೇಳಿರಬೇಕು. ಅಲ್ಲದೆ, ರಗಳೆಯ ಭಾಗದ ಕೊನೆಯ ನಾಲ್ಕು ಸಾಲುಗಳು ಫಲಶ್ರುತಿಯಂತೆ ತೋರುತ್ತಿವೆ – ಹೀಗಾಗಿ ಈ ೨೪ ಸಾಲುಗಳು ಪ್ರಕ್ಷಿಪ್ತವೆಂಬ ಎಲ್. ಬಸವರಾಜು ಅವರ ತೀರ್ಮಾನ ಸರಿ ಎನಿಸುವುದು.

ವ। ಅನ್ನೆಗಂ ಪೂರ್ವೋಕ್ತ ಸರ್ವಾರ್ಥಸಿದ್ಧೀಶ್ವರನಾ ಭುವನಾಂಬಿಕೆಯ ಮುಖಾಂಬುಜಾತಮಂ ಪೊಕ್ಕುಮಾ ಗರ್ಭಸರೋವರಾಂಬುವಿನೊಳ್ ಚಂದ್ರಬಿಂಬದಂತೆ ಸಂಕ್ರಮಿಸಿದಾಗಳಾ ಗರ್ಭಸ್ಥಿತಾರ್ಭಕನ ವದನಚಂದ್ರ ನಿರ್ಗತಾಚ್ಛಜಳ ಚಂದ್ರಿಕೆಯೊಳೊದವಿದಂತಾ ಮಹಾದೇವಿಯ ಮುಖೇಂದು ಮಣಿದರ್ಪಣಲಾವಣ್ಯರಸವಿಸರಮನೊದವಿಸೆ ವಿಕಚಧವಳ ಕಮಳದಳದೀರ್ಘ ವಿಳೋಚನಂಗಳಾ ಲಾವಣ್ಯರಸಪ್ರವಾಹಕ್ಕಾಯತಪ್ರಣಾಳಂಗಳಂ ಪೋಲ್ತು ಗರ್ಭಂ ಬಳೆಯೆ ಬಳೆಯೆ,

**ಪದವಿಭಾಗ-ಅನ್ವಯ-ಅರ್ಥ:** ಅನ್ನೆಗಂ = ಈ ಹೊತ್ತಿಗೆ, ಪೂರ್ವ +

ಉಕ್ತ ಸರ್ವಾರ್ಥಸಿದ್ಧೀಶ್ವರನ್ = ಹಿಂದೆ ಹೇಳಿದ ಸರ್ವಾರ್ಥಸಿದ್ಧಿಯ ಒಡೆಯನು, ಆ ಭುವನ + ಅಂಬಿಕೆಯ ಮುಖ + ಅಂಬುಜಾತಮಮಂ ಪೊಕ್ಕುಂ = ಆ ಜಗತ್ತಿನ ತಾಯಿಯ ಮುಖಕಮಲವನ್ನು ಹೊಕ್ಕು, ಆ ಗರ್ಭಸರೋವರ + ಅಂಬುವಿನೊಳ್ = ಆ ಬಸಿರೆಂಬ ಸರೋವರದ ನೀರಿನಲ್ಲಿ, ಚಂದ್ರಬಿಂಬದಂತೆ ಸಂಕ್ರಮಿಸಿದಾಗಳ್ = ಚಂದ್ರಬಿಂಬದ ಹಾಗೆಸೇರಿದಾಗ, ಆ ಗರ್ಭಸ್ಥಿತ + ಅರ್ಭಕನ = ಆ ಗರ್ಭದಲ್ಲಿದ್ದ ಮಗುವಿನ, ವದನಚಂದ್ರನಿರ್ಗತ + ಅಚ್ಛಜಳಚಂದ್ರಿಕೆಯೊಳ್ + ಒದವಿದಂತೆ = ಮುಖಚಂದ್ರನಿಂದ ಹೊರಟ ತಿಳಿನೀರಿನಂತಹ ಬೆಳುದಿಂಗಳು ಸುರಿದಂತೆ, ಆ ಮಹಾದೇವಿಯ ಮುಖೇಂದುಮಣಿದರ್ಪಣಲಾವಣ್ಯರಸವಿಸರಮನ್ + ಒದವಿಸೆ = ಆ ಮರುದೇವಿಯ ಮುಖಚಂದ್ರನೆಂಬ ಮಣಿಗನ್ನಡಿಯ ಚೆಲುವೆಂಬ ಪ್ರವಾಹವನ್ನುಂಟುಮಾಡಿದಂತೆ, ವಿಕಚಧವಳಕಮಳದಳದೀರ್ಘ ವಿಲೋಚನಂಗಳ್ = ಅರಳಿದ ಬೆಳ್ದಾವರೆಯಂತೆ ಅಗಲವಾದ ಕಣ್ಣುಗಳು, ಆ ಲಾವಣ್ಯರಸಪ್ರವಾಹಕ್ಕೆ + ಆಯತಪ್ರಣಾಳಂಗಳಂ ಪೋಲ್ತು = ಆ ಚೆಲುವಿನ ಪ್ರವಾಹಕ್ಕೆ ಅಗಲವಾದ ಕಾಲುವೆಗಳಂತೆ, (ತೋರಿ), ಗರ್ಭಂ ಬಳೆಯೆ ಬಳೆಯೆ = ಗರ್ಭವು ಹಿರಿದಾಗಲು,

**ಗದ್ಯಾನುಸರಣ:** ಈ ಹೊತ್ತಿಗೆ, ಹಿಂದೆ ಹೇಳಿದ ಸರ್ವಾರ್ಥಸಿದ್ಧಿಯ ಒಡೆಯನು ಆ ಜಗತ್ತಿನ ತಾಯಿಯ ಮುಖಕಮಲವನ್ನು ಹೊಕ್ಕು, ಆ ಬಸಿರೆಂಬ ಸರೋವರದ ನೀರಿನಲ್ಲಿ ಚಂದ್ರಬಿಂಬದ ಹಾಗೆ ಸೇರಿಕೊಂಡ; ಆ ಗರ್ಭದಲ್ಲಿದ್ದ ಮಗುವಿನ, ಮುಖಚಂದ್ರನಿಂದ ಹೊರಟ ತಿಳಿನೀರಿನಂತಹ ಬೆಳುದಿಂಗಳು ಸುರಿದಂತೆ ಆ ಮರುದೇವಿಯ ಮುಖಚಂದ್ರನೆಂಬ ಮಣಿಗನ್ನಡಿಯ ಚೆಲುವೆಂಬ ಪ್ರವಾಹವನ್ನುಂಟುಮಾಡಿತು; ಅರಳಿದ ಬೆಳ್ದಾವರೆಯಂತೆ ಅಗಲವಾದ ಅವಳ ಕಣ್ಣುಗಳು ಆ ಚೆಲುವಿನ ಪ್ರವಾಹವು ಹರಿಯುವ ಅಗಲವಾದ ಕಾಲುವೆಗಳಂತೆ ತೋರಿತು; ಹೀಗೆ ಗರ್ಭವು ಬೆಳೆಯಿತು

ಬಸಿಱ ತೆಳ್ಪಟಿದತ್ತೆ ಮೊಗಂ ಬೆಳ್ಪೇಱದುದೇ ಕುಚಚೂಚುಕಂ
ಮಸುಳ್ದುವೇ ತ್ರಿವಳೀರುಚಿಯುಂ ಮೇಣ್ಕುಂದಿತೇ ಮುನ್ನಿನ ಚೆಲ್ವನ
ಪ್ಪಸಿಯ ಬಾಸೆಗೆ ಕರ್ಪೆಸೆದತ್ತೇ ಚೋದ್ಯಮಿದೆಂದು ಮರಲ್ದು ಬ
ಣ್ಣಿಸಿದರಿಂದ್ರನ ಕಾಂತೆಯರಂತರ್ವತ್ನಿಯನಾ ನೃಪಪತ್ನಿಯುಂ ೩೧

**ಪದವಿಭಾಗ-ಅನ್ವಯ-ಅರ್ಥ:** ಬಸಿಱ ತೆಳ್ಪು + ಅಟಿದತ್ತೆ = ಬಸಿರ ತೆಳುತನ ಹೋಯಿತೇ, ಮೊಗಂ ಬೆಳ್ಪೇಱದುದೇ = ಮುಖವು ಬಿಳಿಚಿಕೊಂಡಿತೇ, ಕುಚಚೂಚುಕಂ ಮಸುಳ್ದುವೇ = ಮೊಲೆತೊಟ್ಟುಗಳು ಕಾಂತಿಗುಂದಿದುವೇ, ತ್ರಿವಳೀರುಚಿಯುಂ ಮೇಣ್ + ಕುಂದಿತೇ = ತ್ರಿವಳಿಗಳ ಕಾಂತಿಯು

ಕಡಿಮೆಯಾಯಿತೇ, ಮುನ್ನಿನ ಚೆಲ್ವನಪ್ಪ + ಅಸಿಯ ಬಾಸೆಗೆ ಕರ್ಪು + ಎಸೆದತ್ತೇ = ಹಿಂದಿನ ಚೆಲುವಾದ ತೆಳುವಾದ ರೋಮರಾಜಿಯ ಕಪ್ಪು ಕುಂದಿತೇ, ಉಹ್ಞೂ ಇಲ್ಲ, ಇದು ಚೋದ್ಯಂ + ಎಂದು = ಇದು ಆಶ್ಚರ್ಯಕರ ಎಂದು, ಇಂದ್ರನ ಕಾಂತೆಯರ್ = ಇಂದ್ರನ ವಿಲಾಸಿನಿಯರು, ಅಂತರ್ವತ್ನಿಯನ್ + ಆ ನೃಪಪತ್ನಿಯಂ ಮರಲ್ದು ಬಣ್ಣಿಸಿದರ್ = ಗರ್ಭಿಣಿಯಾಗಿದ್ದ ಮಹಾರಾಣಿಯನ್ನು ಮತ್ತೆ ಮತ್ತೆ ಕೊಂಡಾಡಿದರು.

**ಗದ್ಯಾನುಸರಣ:** ಸಾಮಾನ್ಯ ಬಿಸಿರಿಯರಿಗಾದಂತೆ ಮರುದೇವಿಯ ಬಸಿರ ತೆಳುತನ ಹೋಗಲಿಲ್ಲ, ಮುಖವು ಬಿಳಿಚಿಕೊಳ್ಳಲಿಲ್ಲ, ಮೊಲೆತೊಟ್ಟುಗಳು ಕಾಂತಿಗುಂದಲಿಲ್ಲ, ತ್ರಿವಳಿಗಳ ಕಾಂತಿಯು ಕಡಿಮೆಯಾಗಲಿಲ್ಲ, ಹಿಂದಿನ ಚೆಲುವಾದ ತೆಳುವಾದ ರೋಮರಾಜಿಯ ಕಪ್ಪು ಕುಂದಲಿಲ್ಲ – ಇದು ಆಶ್ಚರ್ಯಕರ ಎಂದು ಇಂದ್ರನ ವಿಲಾಸಿನಿಯರು ಗರ್ಭಿಣಿಯಾಗಿದ್ದ ಮಹಾರಾಣಿಯನ್ನು ಮತ್ತೆ ಮತ್ತೆ ಕೊಂಡಾಡಿದರು.

**ಜ್ಞಾನಮಯಂ ತೇಜೋನಿಧಿ**
**ತಾನಿರ್ದುಂ ತಾಯ ಗರ್ಭದೊಳ್ ಪೀಡೆಯನಂ**
**ತೇನುಂ ಮಾಡಿದನಿಲ್ಲ ಕೃ**
**ಶಾನುವ ನೆಟಿಲುರದಂತೆವೊಲ್ ಕನ್ನಡಿಯುಂ** ೩೨

**ಪದವಿಭಾಗ–ಅನ್ವಯ–ಅರ್ಥ:** ಕೃಶಾನುವ ನೆಟಿಲ್ ಕನ್ನಡಿಯುಂ ಉರದಂತೆವೊಲ್ = ಬೆಂಕಿಯ ಪ್ರತಿಬಿಂಬವು ಕನ್ನಡಿಯನ್ನು ಸುಡದ ಹಾಗೆ, ಜ್ಞಾನಮಯಂ ತೇಜೋನಿಧಿ ತಾಯ ಗರ್ಭದೊಳ್ ತಾನಿರ್ದುಂ = ಜ್ಞಾನಸ್ವರೂಪನೂ ಬೆಳಗಿನಾಗರವೂ ಆದ ಜಿನಶಿಶುವು ತಾಯಿಯ ಬಸಿರಲ್ಲಿದ್ದರೂ, ಪೀಡೆಯನ್ + ಅಂತು + ಏನುಂ ಮಾಡಿದನ್ + ಇಲ್ಲ = ಸ್ವಲ್ಪವೂ ಕಷ್ಟವನ್ನು ಉಂಟುಮಾಡಲಿಲ್ಲ.

**ಗದ್ಯಾನುಸರಣ:** ಬೆಂಕಿಯ ಪ್ರತಿಬಿಂಬವು ಕನ್ನಡಿಯನ್ನು ಸುಡದ ಹಾಗೆ, ಜ್ಞಾನಸ್ವರೂಪನೂ ಬೆಳಗಿನಾಗರವೂ ಆದ ಜಿನಶಿಶುವು ತಾಯಿಯ ಬಸಿರಲ್ಲಿದ್ದರೂ ಸ್ವಲ್ಪವೂ ಕಷ್ಟವನ್ನು ಉಂಟುಮಾಡಲಿಲ್ಲ.

**ಪಳಿಕಿನ ಕೊಡದೊಳ್ ಸೊಡರ್ಗುಡಿ**
**ಬೆಳಗುವವೊಲ್ ಶುದ್ಧಗರ್ಭಗೃಹದೊಳ್ ತೇಜೋ**
**ನಿಳಯಂ ಬೆಳಗಿದನಜಿವಿನ**
**ಬೆಳಗಿನ ಮೊಳೆ ಮೊಳೆತು ಬೆಳೆವುದೊಂದಚ್ಚರಿಯೇ** ೩೩

**ಪದವಿಭಾಗ-ಅನ್ವಯ-ಅರ್ಥ:** ಪಳಿಕಿನ ಕೊಡದೊಳ್ ಸೊಡರ್ಗುಡಿ ಬೆಳಗುವವೊಲ್ = ಸ್ಫಟಿಕದ ಗಡಿಗೆಯಲ್ಲಿ ದೀಪದ ಕುಡಿಯು ಬೆಳಗುವಂತೆ, ಶುದ್ಧಗರ್ಭ ಗೃಹದೊಳ್ ತೇಜೋನಿಳಯಂ ಬೆಳಗಿದನ್ = ಮರುದೇವಿಯ ಪರಿಶುದ್ಧ ಬಸಿರಿನಲ್ಲಿ ತೇಜಸ್ಸಿನ ನೆಲೆಯಾದ ಶಿಶುವು ಬೆಳಗಿದ; ಅಜೆವಿನ ಬೆಳಗಿನ ಮೊಳೆ ಮೊಳೆತು ಬೆಳೆವುದು + ಒಂದಚ್ಚರಿಯೇ = ಜ್ಞಾನದ ಬೀಜವು ಮೊಳಕೆಯೊಡೆದು ಬೆಳೆಯುವುದೇನು ಆಶ್ಚರ್ಯ?

**ಗದ್ಯಾನುಸರಣ:** ಸ್ಫಟಿಕದ ಗಡಿಗೆಯಲ್ಲಿ ದೀಪದ ಕುಡಿಯು ಬೆಳಗುವಂತೆ ಮರುದೇವಿಯ ಪರಿಶುದ್ಧ ಬಸಿರಿನಲ್ಲಿ ತೇಜಸ್ಸಿನ ನೆಲೆಯಾದ ಶಿಶುವು ಬೆಳಗಿದ; ಜ್ಞಾನದ ಬೀಜವು ಮೊಳಕೆಯೊಡೆದು ಬೆಳೆಯುವುದೇನು ಆಶ್ಚರ್ಯ?

ಸುರತಾರಂಭವಿಭೂತಿಯೊಂದು ತಣಿವಂ ಚಿತ್ತಕ್ಕೆ ಮಾಡಲ್ ಮುಖಾಂ
ಬುರುಹಮೋದಮೆ ಸಾಲ್ಗುಮೆಂದು ಮನದೊಳ್ ತಾಳ್ದಿರ್ದದೊಂದಟ್ಟಿಜೆಂ
ಮರುದೇವೀವದನಾಂಬುಜಾತರಸಮಂ ಪೀರ್ದಂ ನೃಪಂ ತುಂಬಿ ಕೇ
ಸರಮಂ ಮುಟ್ಟದೆ ಬಂದು ಪದ್ಮಿನಿಯ ಪದ್ಮಾಮೋದಮಂ ಪೀರ್ವವೊಲ್ ೩೪

**ಪದವಿಭಾಗ-ಅನ್ವಯ-ಅರ್ಥ:** ಸುರತಾರಂಭವಿಭೂತಿ + ಒಂದು ತಣಿವಂ ಚಿತ್ತಕ್ಕೆ ಮಾಡಲ್ = ಆರಂಭದ ಸಂಭೋಗವೈಭವವು ಮನಸ್ಸಿಗೆ ಒಂದು ಬಗೆಯ ತೃಪ್ತಿಯನ್ನು ನೀಡಿರುವಾಗ, ಮುಖ=ಅಂಬುರುಹಮೋದಮೆ ಸಾಲ್ಗುಂ = ಮುಖಕಮಲದ ಬಂಡೇ ಸಾಕು, ಎಂದು ಮನದೊಳ್ ತಾಳ್ದಿರ್ದು = ಎಂಬ ನಿಲವನ್ನು ಮನಸ್ಸಿನಲ್ಲಿ ತಾಳಿ, ನೃಪಂ = ರಾಜನು, ತುಂಬಿ ಕೇಸರಮಂ ಮುಟ್ಟದೆ ಬಂದು ಪದ್ಮಿನಿಯ ಪದ್ಮಾಮೋದಮಂ ಪೀರ್ವವೊಲ್ = ದುಂಬಿಯು ಪರಾಗವನ್ನು ಮುಟ್ಟದೆಯೇ ಕಮಲದ ಬಂಡನ್ನುಣ್ಣುವ ಹಾಗೆ, ಅದೊಂದು + ಅಟ್ಟಿಜೆಂ ಮರುದೇವೀವದನ + ಅಂಬುಜಾತರಸಮಂ ಪೀರ್ದಂ = ವಿಶಿಷ್ಟ ಪ್ರೇಮಭಾವದಿಂದ ಮರುದೇವಿಯ ಮುಖಕಮಲದ ಮಧುವನ್ನು ಹೀರಿದ.

**ಗದ್ಯಾನುಸರಣ:** ಆರಂಭದ ಸಂಭೋಗವೈಭವವು ಮನಸ್ಸಿಗೆ ಒಂದು ಬಗೆಯ ತೃಪ್ತಿಯನ್ನು ನೀಡಿರಲು, ಮುಖಕಮಲದ ಬಂಡೇ ಸಾಕು ಎಂಬ ನಿಲವನ್ನು ರಾಜ ತಾಳಿದ; ಅದರಂತೆ ದುಂಬಿಯು ಪರಾಗವನ್ನು ಮುಟ್ಟದೆಯೇ ಕಮಲದ ಬಂಡನ್ನುಣ್ಣುವ ರೀತಿಯಲ್ಲಿ ವಿಶಿಷ್ಟ ಪ್ರೇಮಭಾವದಿಂದ ಮರುದೇವಿಯ ಮುಖಕಮಲದ ಮಧುವನ್ನು ಹೀರಿದ.

**ವ॥ ಅಂತು ನಿಜಮನೋನಯನಕಾಂತಕಾಂತಾವದನರಸಸರಸಿಜಸೌರಭ ಮನಾಸ್ವಾದಿಸಿ**

**ಅರ್ಥ:** ಅಂತು ನಿಜಮನೋನಯನಕಾಂತಕಾಂತಾವದನರಸಸರಸಿಜ ಸೌರಭಮನ್ + ಆಸ್ವಾದಿಸಿ = ಹಾಗೆ ತನ್ನ ಮನಸ್ಸೆಂಬ ಕಣ್ಣಿಗೆ ಆಕರ್ಷಕವಾಗಿದ್ದ ಹೆಂಡತಿಯ ಮುಖಕಮಲದ ಚೆಲುವೆಂಬ ಬಂಡನ್ನು ರಾಜನು ಸವಿಯುತ್ತಿದ್ದ.

**ಕಿಡಿಸಲ್ ಪಂಕಜದುರ್ಕನೇಂ ನೆಱೆಯದೋ ನೇತ್ರೋತ್ಪಳಾನಂದಮಂ**
**ಪಡೆಯಲ್ ಸಾಲದೊ ಮನ್ಮಥಂಗೆ ಜಯಮಂ ಮೇಣೀಯದೋಸಾಲದೇಂ**
**ಗಡಮೀ ಕಾಂತೆಯ ವಕ್ತ್ರಚಂದ್ರನೆಲೆ ತಾನೇನೆಂದು ಚಂದ್ರಂ ನಭ**
**ಕ್ಕಡರ್ವಂ ಗೆಲ್ಲದೆ ತನ್ನೊಳುಳ್ಳಮೃತಮಂ ಬಿಂಬಾಧರಸ್ಥಾಮೃತಂ ೩೫**

**ಪದವಿಭಾಗ–ಅನ್ವಯ–ಅರ್ಥ:** ಈ ಕಾಂತೆಯ ವಕ್ತ್ರಚಂದ್ರನ್ = ಈ ದೇವಿಯ ಮುಖಚಂದ್ರನು, ಪಂಕಜದ + ಉರ್ಕನ್ ಕಿಡಿಸಲ್ ಏಂ ನೆಱೆಯದೋ = ಕಮಲದ ಸೊಕ್ಕನ್ನು ಅಡಗಿಸಲು ಸಾಲದೇ, ನೇತ್ರ + ಉತ್ಪಳ + ಆನಂದಮಂ ಪಡೆಯಲ್ ಸಾಲದೊ = ಕಣ್ಣುಗಳೆಂಬ ನೈದಿಲೆಯು ಆನಂದವನ್ನು ಪಡೆಯಲು ಸಾಕಾಗದೇ, ಮನ್ಮಥಂಗೆ ಜಯಮಂ ಮೇಣ್ + ಈಯದೋ = ಕಾಮನಿಗೆ ಗೆಲುವನ್ನು ನೀಡಲಾರದೇ, ಬಿಂಬಾಧರಸ್ಥ + ಅಮೃತಂ = ಈಕೆಯ ತೊಂಡೆವಣ್ಣುಟಿಗಳ ಅಮೃತವು, ತನ್ನೊಳ್ + ಉಳ್ಳ + ಅಮೃತಮಂ ಗೆಲ್ಲದೆ ಸಾಲದೇಂ ಗಡಂ = ತನ್ನಲ್ಲಿನ ಅಮೃತವನ್ನು ಸೋಲಿಸಲು ಸಾಕಾಗದೇ, ಎಲೆ ತಾನ್ + ಏನೆಂದು ಚಂದ್ರಂ ನಭಕ್ಕೆ + ಅಡರ್ವಂ = ಹೀಗಾಗಿ ಚಂದ್ರನು ತಾನೇಕೆ ಆಗಸದಲ್ಲಿ ಮೇಲೇರುತ್ತಿರುವನು!

**ಗದ್ಯಾನುಸರಣ:** ಈ ದೇವಿಯ ಮುಖಚಂದ್ರನು ಕಮಲದ ಸೊಕ್ಕನ್ನು ಅಡಗಿಸಲು ಸಾಲದೇ? ಕಣ್ಣುಗಳೆಂಬ ನೈದಿಲೆಯು ಆನಂದವನ್ನು ಪಡೆಯಲು ಸಾಕಾಗದೇ? ಕಾಮನಿಗೆ ಗೆಲುವನ್ನು ನೀಡಲಾರದೇ? ಈಕೆಯ ತೊಂಡೆವಣ್ಣುಟಿಗಳ ಅಮೃತವು ತನ್ನಲ್ಲಿನ ಅಮೃತವನ್ನು ಸೋಲಿಸಲು ಸಾಕಗದೇ? ಹೀಗಿದ್ದರೂ ಚಂದ್ರನು ತಾನೇಕೆ ಆಗಸದಲ್ಲಿ ಮೇಲೇರುತ್ತಿದ್ದಾನೆ!

(**ಟಿಪ್ಪಣಿ:** ಈ ಪದ್ಯವು '**ಕುವಲಯಾನಂದ**'ದಲ್ಲಿ ರೂಪಕಕ್ಕೆ ಉದಾಹರಣೆಯಾಗಿ ನೀಡಿರುವ 'ಕಿಂ ಪದ್ಮಸ್ಯರುಚಿಂ ನ ಹಂತಿ .. ..' ಎಂದು ಮೊದಲಾಗುವ ಸಂಸ್ಕೃತ ಪದ್ಯದ ಅನುವಾದವೆಂದು ಕೆ.ಎಲ್. ನರಸಿಂಹಶಾಸ್ತ್ರಿಗಳು ಗುರುತಿಸಿದ್ದಾರೆ. ನೋಡಿ, '**ಆದಿಪುರಾಣ**'ದ ಅವರ ಅನುವಾದದಲ್ಲಿ ಈ ಪದ್ಯಕ್ಕೆ ಅರ್ಥ ನೀಡಿರುವ ಅಡಿಟಿಪ್ಪಣಿಯಲ್ಲಿ

**ವ॥ ಅಂತು ನಾಭಿರಾಜನನುನಯಪ್ರಚುರವಚನ ರಚನೆಗಳಿನಂತಃಕರಣಾ ನುರಾಗಮಂ**

**ಮಾಡೆಯುಮಮರಮನೋರಮೆಯರುಂ ಮನಮಱಿದು ನಿಜಮನೋರಥಂಗಳಂ ಸಲಿಸೆಯುಮನುಕ್ರಮದೊಳ್ ಪರಿಪೂರ್ಣ ಪ್ರಸವಸಮಯದೊಳ್**

**ಪದವಿಭಾಗ-ಅನ್ವಯ-ಅರ್ಥ:** ಅಂತು ನಾಭಿರಾಜನ್ = ಹೀಗೆ ನಾಭಿರಾಜನು, ಅನುನಯಪ್ರಚುರವಚನರಚನೆಗಳಿನ್ =ಪ್ರೀತಿ ತುಂಬಿದ ಮಾತುಗಾರಿಕೆಯಿಂದ, ಅಂತಃಕರಣ + ಅನುರಾಗಮಂ ಮಾಡೆಯುಂ = ಆಕೆಯ ಮನಸ್ಸಿಗೆ ತೃಪ್ತಿಯನ್ನು ಉಂಟುಮಾಡಿದ, ಅಮರಮನೋರಮೆಯರುಂ ಮನಂ + ಅಱಿದು ನಿಜಮನೋರಥಂಗಳಂ ಸಲಿಸೆಯುಂ = ದೇವವನಿತೆಯರೂ ಅವಳ ಮನಸ್ಸನ್ನರಿತು ಆಕೆಯ ಅಭೀಷ್ಟಗಳನ್ನು ನೆರವೇರಿಸಲು, ಅನುಕ್ರಮದೊಳ್ = ಕಾಲಕ್ರಮದಲ್ಲಿ, ಪರಿಪೂರ್ಣಪ್ರಸವಸಮಯದೊಳ್ = ಹೆರಿಗೆಯ ಕಾಲದಲ್ಲಿ,

**ಗದ್ಯಾನುಸರಣ:** ಹೀಗೆ ನಾಭಿರಾಜನು, ಪ್ರೀತಿ ತುಂಬಿದ ತನ್ನ ಮಾತುಗಳಿಂದ ಆಕೆಯ ಮನಸ್ಸಿಗೆ ತೃಪ್ತಿಯನ್ನುಂಟುಮಾಡಿದ; ದೇವವನಿತೆಯರೂ ಅವಳ ಮನಸ್ಸನ್ನರಿತು ಆಕೆಯ ಅಭೀಷ್ಟಗಳನ್ನು ನೆರವೇರಿಸಿದರು; ಕಾಲಕ್ರಮದಲ್ಲಿ ಹೆರಿಗೆಯ ಕಾಲದಲ್ಲಿ,

**ಬರೆ ಚೈತ್ರಂ ಕೃಷ್ಣಪಕ್ಷಂ ದೊರೆಕೊಳೆ ನವಮೀವಾಸರಂ ಪೊರ್ದೆ ಲೋಕೋ**
**ತ್ತರವಾಗಿರ್ದುತ್ತರಾಷಾಢದೊಳತಿಶುಭದಂ ಬ್ರಹ್ಮಯೋಗಂ ಮನಂಗೊಂ**
**ಡಿರೆ ಭಾಸ್ವನ್ನಾಭಿರಾಜಾಂಗನೆ ವಿಶದಯಶೋಭಾಗಿಯುಂ ಭವ್ಯಪದ್ಮಾ**
**ಕರಬೋಧಾದಾಯಿಯುಂ ತಿಗ್ಮಕರನುದಯದೊಳ್ ಪುತ್ರನಂ ಪೆತ್ತಳಾಗಳ್೩೬**

**ಪದವಿಭಾಗ-ಅನ್ವಯ-ಅರ್ಥ:** ಚೈತ್ರಂ ಬರೆ = ಚೈತ್ರಮಾಸವು ಬರಲು, ಕೃಷ್ಣಪಕ್ಷಂ ದೊರೆಕೊಳೆ = ಕೃಷ್ಣಪಕ್ಷವೂ ಬಂದಿತು, ನವಮೀವಾಸರಂ ಪೊರ್ದೆ = ನವಮಿಯ ತಿಥಿಯು ಉಂಟಾಯಿತು, ಲೋಕೋತ್ತರವಾಗಿರ್ದ + ಉತ್ತರಾಷಾಢದೊಳ್ = ಅತ್ಯತಿಶಯವಾದ ಉತ್ತರಾಷಾಢ ನಕ್ಷತ್ರದಲ್ಲಿ, ಅತಿಶುಭದಂ ಬ್ರಹ್ಮಯೋಗಂ ಮನಂಗೊಂಡಿರೆ = ತುಂಬ ಮಂಗಳಕರವಾದ ಬ್ರಹ್ಮಯೋಗವು ಒದಗಿರಲು, ಆಗಳ್ = ಆ ಹೊತ್ತಿನಲ್ಲಿ, ಭಾಸ್ವತ್ + ನಾಭಿರಾಜ + ಅಂಗನೆ = ತೇಜಃಪೂರ್ಣಳಾದ ನಾಭಿರಾಜನ ರಾಣಿಯು, ತಿಗ್ಮಕರನ + ಉದಯದೊಳ್ = ಸೂರ್ಯ ಮೂಡಿದಾಗ, ವಿಶದಯಶೋಭಾಗಿಯಂ = ನಿರ್ಮಲ ಕೀರ್ತಿಗೆ ಭಾಜನನಾಗುವವನೂ, ಭವ್ಯಪದ್ಮಾಕರಬೋಧಾದಾಯಿಯಂ = ಭವ್ಯರೆಂಬ ಪದ್ಮಗಳಕೊಳಕ್ಕೆ ತಿಳಿವನ್ನುಂಟುಮಾಡುವವನೂ ಆದ, ಪುತ್ರನಂ ಪೆತ್ತಳ್ = ಮಗನನ್ನು ಹೆತ್ತಳು.

**ಗದ್ಯಾನುಸರಣ:** ಚೈತ್ರಮಾಸದ ಕೃಷ್ಣಪಕ್ಷ ನವಮಿಯ ತಿಥಿಯಂದು

ಅತ್ಯತಿಶಯವಾದ ಉತ್ತರಾಷಾಢ ನಕ್ಷತ್ರ ಹಾಗೂ ತುಂಬ ಮಂಗಳಕರವಾದ ಬ್ರಹ್ಮಯೋಗವು ಕೂಡಿಕೊಂಡುವು; ಆಗ ತೇಜಃಪೂರ್ಣಳಾದ ನಾಭಿರಾಜನ ರಾಣಿಯು ಸೂರ್ಯ ಮೂಡುವ ಹೊತ್ತಿನಲ್ಲಿ ನಿರ್ಮಲ ಕೀರ್ತಿಗೆ ಭಾಜನನಾಗುವವನೂ, ಭವ್ಯರೆಂಬ ಪದ್ಮಗಳ ಕೊಳಕ್ಕೆ ತಿಳಿವನ್ನುಂಟುಮಾಡುವವನೂ ಆದ ಮಗನನ್ನು ಹೆತ್ತಳು.

**ವ॥ ಆ ತ್ರಿಲೋಕತಿಳಕನ ಜನ್ಮೋತ್ಸವದೊಳೇಕಸಮಯ ಸಮವತೀರ್ಣ ಸರ್ವರ್ತುಕನಂದನವಿಕಸದಶೋಕವಿಕಚಮಲ್ಲಿಕಾಬದ್ಧ ಕುಟ್ಮಳಾಡಂಬರಕದಂಬ ಸಾನಂದಾರವಿಂದ ವಿಕಸಿತಸಿಂಧುವಾರಪ್ರಬುದ್ಧ ಲೋಧ್ರಂಗಳಿಂ ರಾಗಮಂ ಬೀಱುವಂತೆ ಮುಗುಳ್ನಗೆ ನಗುವಂತೆ ಪುಳಕ 'ಮನೊಳಕೊಂಡಂತೆ ನಗೆಗಣ್ಗಳ ಪೊಳೆಪಂ ಕೆದಱಿದಂತೆ ಚಿನ್ನಪೂಗಳಂ ಮೆಱೆವಂತೆ ಚಂದ್ರಕಬಳಮಂ ತೊಡೆವಂತೆ ಮಹೀಕಾಂತೆ ಸೊಗಯಿಸೆ ನಿಜಪರಿರಕ್ಷಣ ಕ್ಷಮಕ್ಷಮಾ ವಲ್ಲಭಲಾಭಪ್ರಮುದಿತಮೇದಿನೀಹೃದಯದಂತೆ ಜಳಮುಪಗತಕಲುಷಮಾಗೆ ಕರ್ಮಭೂತಳೋಪಸರ್ಗವಿಧ್ವಂಸನನಿಮಿತ್ತಮಾಗಿ ನೀರಾಜನಂಗೆಯ್ವಂತೆ ತದ್ಧರಾನಳಂ ದಕ್ಷಿಣಾವರ್ತವಾಗಿ ಪಜ್ಜಳಿಸೆ ಗಗನಗಂಗಾಶೀಕರನಿಕರಂ ಗಳಿಂದಮಾನಂದನಯನಜಲಂಗಳಂ ಸೂಸುವಂತೆ ದಿವ್ಯಾನಿಳಂ ತೀಡೆ ಶರದ್ವಿಧುವಿಶದತದೀಯ ಯಶಃ ಪ್ರಸರಕ್ಕವಕಾಶಂ ಗುಡುವಂತೆ ಜಲಧರಪಟಲನಿರೋಧ ರಹಿತಮಾಕಾಶಮತಿ ಪ್ರಕಾಶಿತಾ ಶಾಂತಮಾಗೆ,**

**ಪದವಿಭಾಗ-ಅನ್ವಯ-ಅರ್ಥ:** ಆ ತ್ರಿಲೋಕತಿಳಕನ ಜನ್ಮೋತ್ಸವದೊಳ್ = ಆ ಮೂಲೋಕವನ್ನೂ ಬೆಳಗುವವನು ಹುಟ್ಟುವ ಸಮಯದಲ್ಲಿ, ಏಕಸಮಯಸಮವತೀರ್ಣ = ಒಂದೇ ಕಾಲದಲ್ಲಿ ಬಂದಿಳಿದ, ಸರ್ವರ್ತುಕ = ಎಲ್ಲ ಋತುಗಳಲ್ಲಿ, ನಂದನವಿಕಸತ್ + ಅಶೋಕ = ಉದ್ಯಾನದಲ್ಲಿ ಅರಳಿದ ಅಶೋಕ, ವಿಕಚಮಲ್ಲಿಕಾಬದ್ಧಕುಟ್ಮಳ + ಆಡಂಬರಕದಂಬ = ಬಿರಿದ ಮಲ್ಲಿಗೆ ಮೊಗ್ಗುಗಳ ಆಡಂಬರದ ಸಮೂಹದಿಂದ, ಸ + ಆನಂದ + ಅರವಿಂದ = ಆನಂದದಾಯಿಯಾದ ತಾವರೆಗಳಿಂದ, ವಿಕಸಿತಸಿಂಧುವಾರಪ್ರಬುದ್ಧಲೋಧ್ರಂಗಳಿಂ = ಅರಳಿದ ಲೊಕ್ಕಿ ಹಾಗೂ ಸಾಂಬ್ರಾಣಿ ಹೂಗಳಿಂದ, ರಾಗಮಂ ಬೀಱುವಂತೆ = ಪ್ರೀತಿಯನ್ನು ತೋರುವ ಹಾಗೆ, ಮುಗುಳ್ನಗೆ ನಗುವಂತೆ = ಮುಗುಳ್ನಗೆ ಬೀರುವಂತೆ, ಪುಳಕಮನ್ + ಒಳಕೊಂಡಂತೆ = ರೋಮಾಂಚನವನ್ನು ಪಡೆದಂತೆ, ನಗೆಗಣ್ಗಳ ಪೊಳೆಪಂ ಕೆದಱಿದಂತೆ = ನಗುವ ಕಣ್ಣುಗಳ ಹೊಳಪನ್ನು ಹರಡುವಂತೆ, ಚಿನ್ನಪೂಗಳಂ ಮೆಱೆವಂತೆ = ಚಿನ್ನದ ಹೂಗಳನ್ನು ಮೆರೆಸುವ ಹಾಗೆ, ಚಂದ್ರಕಬಳಮಂ ತೊಡೆವಂತೆ = ಪರಿಮಳವನ್ನು ಪೂಸಿದಂತೆ, ಮಹೀಕಾಂತೆ ಸೊಗಯಿಸೆ = ಭೂದೇವಿಯು ಚೆಲುವಾಗಲು, ನಿಜಪರಿರಕ್ಷಣಕ್ಷಮಕ್ಷಮಾ

ವಲ್ಲಭಲಾಭಪ್ರಮುದಿತ = ತನ್ನ ರಕ್ಷಣೆಯನ್ನು ಮಾಡಬಲ್ಲವನನ್ನು ಪಡೆದು ಸಂತುಷ್ಟಗೊಂಡ, ಮೇದಿನೀಹೃದಯದಂತೆ = ಭೂದೇವಿಯ ಹೃದಯದ ಹಾಗೆ, ಜಳಂ + ಅಪಗತಕಲುಷಂ + ಆಗೆ = ನೀರು ಕಲ್ಮಷವನ್ನು ಕಳೆದುಕೊಳ್ಳುವಂತೆ, ಕರ್ಮಭೂತಳ + ಉಪಸರ್ಗವಿಧ್ವಂಸನನಿಮಿತ್ತಂ + ಆಗಿ = ಕರ್ಮಯುಕ್ತ ಭೂಮಿಯ ಬಾಧೆಗಳನ್ನು ನಿವಾರಿಸುವ ಕಾರಣದಿಂದ, ನೀರಾಜನಂಗೆಯ್ವಂತೆ = ಆರತಿಯೆತ್ತುವಂತೆ, ತತ್ + ಧರಾ + ಅನಳಂ ದಕ್ಷಿಣಾವರ್ತಮಾಗಿ ಪಜ್ಜಳಿಸೆ = ಆ ಭೂಮಿಯ ಬೆಂಕಿಯು ಬಲಗಡೆಗೆ ಸುತ್ತುತ್ತ ಬೆಳಗಲು, ಗಗನಗಂಗಾಶೀಕರನಿಕರಂಗಳಿಂದಂ = ಆಕಾಶಗಂಗೆಯ ತುಂತುರುಗಳಿಂದ, ಆನಂದನಯನಜಲಂಗಳಂ ಸೂಸುವಂತೆ = ಆನಂದಬಾಷ್ಪಗಳನ್ನು ಸುರಿಸುವ ಹಾಗೆ, ದಿವ್ಯ + ಅನಿಳಂ ತೀಡೆ = ಲೋಕೋತ್ತರವಾದ ಗಾಳಿಯು ಬೀಸಲು, ಶರತ್ + ವಿಧುವಿಶದ = ಮಾಗಿಕಾಲದ ಚಂದ್ರನಂತೆ ನಿರ್ಮಲವಾದ, ತದೀಯ ಯಶಃಪ್ರಸರಕ್ಕೆ + ಅವಕಾಶಂ + ಕುಡುವಂತೆ = ಅವನ ಕೀರ್ತಿಯು ಹರಡಲು ಎಡೆಗೊಡುವಂತೆ, ಜಲಧರಪಟಲನಿರೋಧರಹಿತಂ + ಆಕಾಶಂ = ಮೋಡ ಸಮೂಹದ ತೆರೆಗಳಿಲ್ಲದ ಆಗಸವು, ಅತಿಪ್ರಕಾಶಿತ + ಆಶಾ + ಅಂತಂ + ಆಗೆ = ಅತೀವ ಪ್ರಭೆಯಿಂದ ಕೂಡಿದ ದಿಕ್ಕುಗಳನ್ನು ಹೊಂದಲು,

**ಗದ್ಯಾನುಸರಣ:** ಮೂಲೋಕವನ್ನೂ ಬೆಳಗುವ ಆ ಮಗುವು ಹುಟ್ಟುವ ಸಮಯದಲ್ಲಿ ಒಟ್ಟಿಗೇ ಎಲ್ಲ ಋತುಗಳೂ ಬಂದಿಳಿದುವು; ಉದ್ಯಾನದಲ್ಲಿ ಅಶೋಕ ಅರಳಿತು, ಬಿರಿದ ಮಲ್ಲಿಗೆ ಮೊಗ್ಗುಗಳ ಆಡಂಬರವುಂಟಾಯಿತು, ಆನಂದದಾಯಿಯಾದ ತಾವರೆಗಳೂ ಲೊಕ್ಕಿ ಹಾಗೂ ಸಾಂಬ್ರಾಣಿ ಹೂಗಳು ಅರಳಿದವು; ಪ್ರೀತಿಯನ್ನು ತೋರುವ ಹಾಗೆ, ಮುಗುಳ್ನಗೆ ಬೀರುವಂತೆ, ರೋಮಾಂಚನವನ್ನು ಪಡೆದಂತೆ, ನಗುವ ಕಣ್ಣುಗಳ ಹೊಳಪು ಹರಡುವಂತೆ, ಚಿನ್ನದ ಹೂಗಳನ್ನು ಮೆರೆಸುವ ಹಾಗೆ, ಪರಿಮಳವನ್ನು ಪೂಸಿದಂತೆ ಭೂದೇವಿಯು ಚೆಲುವನ್ನು ಹೊದ್ದಳು; ತನ್ನ ರಕ್ಷಣೆಯನ್ನು ಮಾಡಬಲ್ಲವನನ್ನು ಪಡೆದು ಸಂತುಷ್ಟಗೊಂಡ ಭೂರಮಣಿಯ ಹೃದಯದ ಹಾಗೆ ನೀರು ನಿರ್ಮಲವಾಯಿತು; ಕರ್ಮಯುಕ್ತ ಭೂಮಿಯ ಬಾಧೆಗಳ ನಿವಾರಣೆಗಾಗಿ ನಿವಾಳಿಸುವಂತೆ ಭೂಮಿಯ ಬೆಂಕಿಯು ಎಡದಿಂದ ಬಲಕ್ಕೆ ಸುತ್ತುತ್ತ ಬೆಳಗಿತು; ಆಕಾಶಗಂಗೆಯ ತುಂತುರುಗಳೆಂಬ ಆನಂದಬಾಷ್ಪಗಳನ್ನು ಸುರಿಸುವ ಹಾಗೆ ಲೋಕೋತ್ತರವಾದ ಗಾಳಿಯು ಬೀಸಿತು; ಮಾಗಿಕಾಲದ ಚಂದ್ರನಂತೆ ನಿರ್ಮಲವಾದ ಅವನ ಕೀರ್ತಿಯು ಹರಡಲು ಎಡೆಗೊಡುವಂತೆ ಮೋಡಗಳಿಲ್ಲದ ಆಗಸ ಮತ್ತು ದಿಗಂತಗಳು ಅತೀವ ಪ್ರಭೆಯಿಂದ ಕೂಡಿದುವು.

ಪುರುಪರಮೇಶ್ವರನಿಳೆಗವ
ತರಿಸಿದನಿಂದರಸುವಡೆದೆವೆಂಬಂತೆ ವಲಂ
ಪರಮಾನಂದಪರಂಪರೆ
ದೊರೆಕೊಂಡತ್ತಿಂತು ಪಂಚಭೂತಂಗಳೊಳಂ ೩೭

ಪದವಿಭಾಗ-ಅನ್ವಯ-ಅರ್ಥ: ಪುರುಪರಮೇಶ್ವರನ್ + ಇಳೆಗೆ + ಅವತರಿಸಿದನ್ = ಪುರುದೇವನು ಭೂಮಿಯಲ್ಲಿ ಬಂದಿಳಿದಿದ್ದಾನೆ, ಇಂದು + ಅರಸುವಡೆದೆವು + ಎಂಬಂತೆ = ಈಗ ನಮಗೆ ರಾಜನು ದೊರೆತಂತಾಯಿತು ಎನ್ನುವ ರೀತಿಯಲ್ಲಿ, ಇಂತು ಪಂಚಭೂತಂಗಳೊಳಂ + ಹೀಗೆ ಪಂಚಭೂತಗಳಲ್ಲಿಯೂ, ಪರಮ + ಆನಂದಪರಂಪರೆ ದೊರೆಕೊಂಡತ್ತು ವಲಂ = ಅತೀವ ಸಂತಸದಲೆಗಳು ಒಲೆದಾಡಿದುವಲ್ಲವೇ!

ಗದ್ಯಾನುಸರಣ: ಪುರುದೇವನು ಭೂಮಿಯಲ್ಲಿ ಬಂದಿಳಿದಿದ್ದಾನೆ, ಹೀಗಾಗಿ ನಮಗೀಗ ರಾಜನು ದೊರೆತಂತಾಯಿತು ಎನ್ನುವ ರೀತಿಯಲ್ಲಿ ಪಂಚಭೂತಗಳಲ್ಲಿಯೂ ಅತೀವ ಸಂತಸದಲೆಗಳು ಒಲೆದಾಡಿದುವಲ್ಲವೇ!

ವ। ಆಗಳುತ್ತುಂಗಪ್ರಾಸಾದಕೂಟಕೋಟಿಗಳ ಮೇಲೆ ಪುರಶ್ರೀವಿಳಾಸಿನಿಯ ರಾಗದ ದಾಂಗುಡಿ ಮಿಳಿರ್ವಂತೆ ಮಿಳರ್ವ ನವಾಮ್ರಕಮ್ರಕಿಸಲಯರಕ್ತಾಂಶುಕ ಧ್ವಜಂಗಳುಂ ಆಕೆಯ ಶೃಂಗಾರಮೆ ಪಲ್ಲವಿಸಿದಂತೆ ಮಹಾದ್ವಾರತೋರಣ ಸ್ತಂಭಗಳೊಳಗೆಸೆವಭಿನವೋ ಲ್ಲಸತ್ಪಲ್ಲವಸಂದಾನಿತ ಸೌಂದರವಂದನಮಾಲೆ ಗಳುಂ ಆಕೆಯ ವಿಳಾಸಹಾಸಮೆ ಪೊಱಪೊಣ್ಮಿದಂತೆ ಬೀದಿಬೀದಿಗಳೊ ಳೆಡೆಗಿಱಿದು ಕೆದಱಿದ ಕುಸುಮರಜಂಗಳುಂ ಆಕೆಯ ನಿರ್ಭರಾನಂದಸಾಂದ್ರ ಲಾವಣ್ಯದ್ರವಮೆ ದೆಸೆದೆಸೆಗೆ ಪಸರಿಸಿದಂತೆ ಕುಂಕುಮಚ್ಛದಪಂಕಜ ಚ್ಛಟಾ ಚ್ಛಾದನದೊಳ್ ಸೊಗಯಿಸುವ ಗೃಹಾಂಗಣಂಗಳುಂ ಆಕೆಯ ಪರಿವಾರ ವಾರಾಂಗನಾಗಣದಂತೆ ಯೌವನ ಮದಮುದಿತ ಮಾರ್ದಳಿಕವಾಂಶಿಕ ಪ್ರಹನ್ಯಮಾನವಾದ್ಯಮಾನಮೃದಂಗ ವಂಶನಿನದ ಲಯಚ್ಛಂದ ಸುಂದರ ನಟತ್ಸುಂದರೀ ಸಂದೋಹಮುಂ ಅಪೂರ್ವ ರಮಣೀಯಮಾಗೆ,

ಪದವಿಭಾಗ-ಅನ್ವಯ-ಅರ್ಥ: ಆಗಳ್ = ಆಗ, ಉತ್ತುಂಗಪ್ರಾಸಾದ ಕೂಟಕೋಟಿಗಳ ಮೇಲೆ = ಎತ್ತರವಾದ ಅಸಂಖ್ಯ ಪ್ರಾಸಾದಗಳ ಮೇಲೆ, ಪುರಶ್ರೀವಿಳಾಸಿನಿಯ ರಾಗದ ದಾಂಗುಡಿ ಮಿಳಿರ್ವಂತೆ ಮಿಳರ್ವ = ನಗರಸುಂದರಿ ಎಂಬ ವಿಲಾಸಿನಿಯ ಪ್ರೇಮದ ಕುಡಿಯು ಓಲಾಡುವಂತೆ ಅಲ್ಲಾಡುವ, ನವ + ಆಮ್ರಕಮ್ರಕಿಸಲಯರಕ್ತಾಂಶುಕಧ್ವಜಂಗಳುಂ = ಹೊಸ ಮಾವಿನ ಚೆಲುವಾದ ಚಿಗುರುಗಳಂತಹ ಕೆಂಪು ಬಾವುಟಗಳೂ, ಆಕೆಯ ಶೃಂಗಾರಮೆ ಪಲ್ಲವಿಸಿದಂತೆ

= ಆ ವಿಲಾಸಿನಿಯ ಚೆಲುವೇ ಚಿಗುರಿದ ಹಾಗೆ, ಮಹಾದ್ವಾರತೋರಣ ಸ್ತಂಭಗಳೊಳಗೆ + ಎಸೆವ = ಮುಖ್ಯ ದ್ವಾರದ ತೋರಣದ ಕಂಬದಲ್ಲಿ ಶೋಭಿಸುವ, ಅಭಿನವ + ಉಲ್ಲಸತ್ + ಪಲ್ಲವಸಂದಾನಿತ = ಹೊಸದಾಗಿ ಕಟ್ಟಿದ ಚಿಗುರುಗಳಂತೆ ಜೋತಾಡುವ, ಸೌಂದರವಂದನಮಾಲೆಗಳುಂ = ಸುಂದರವಾದ ತೋರಣಗಳೂ, ಆಕೆಯ ವಿಳಾಸಹಾಸಮೆ ಪೊಜಿಪೊಣ್ಮಿದಂತೆ = ಅವಳ ಮನೋಹರವಾದ ನಗುವು ಹೊಮ್ಮುವ ಹಾಗೆ, ಬೀದಿಬೀದಿಗಳೊಳ್ + ಎಡೆಗಿಡಿದು ಕೆದಱಿದ ಕುಸುಮರಜಂಗಳುಂ = ಬೀದಿಬೀದಿಗಳಲ್ಲಿ ದಟ್ಟವಾಗಿ ಹರಡಿಕೊಂಡಿದ್ದ ಹೂಗಳ ಪರಾಗಗಳೂ, ಆಕೆಯ ನಿರ್ಭರ + ಆನಂದಸಾಂದ್ರಲಾವಣ್ಯದ್ರವಮೆ ದೆಸೆದೆಸೆಗೆ ಪಸರಿಸಿದಂತೆ = ಅವಳ ತುಂಬಿದ ಸಂತಸದ ದಟ್ಟವಾದ ಲಾವಣ್ಯರಸವೇ ದಿಕ್ಕುದಿಕ್ಕುಗಳಲ್ಲಿ ಪಸರಿಸಿದಂತೆ, ಕುಂಕುಮಚ್ಛದಪಂಕಜಚ್ಛಟ + ಆಚ್ಛಾದನದೊಳೆ ಸೊಗಯಿಸುವ ಗೃಹ + ಅಂಗಣಂಗಳುಂ = ಕುಂಕುಮವು ಆವರಿಸಿದ ಕಮಲರಾಶಿಯಿಂದ ಸೊಗಸುವ ಮನೆಯಂಗಳಗಳೂ, ಆಕೆಯ ಪರಿವಾರ ವಾರಾಂಗನಾಗಣದಂತೆ = ಅವಳ ಸಖಿಯರಾದ ವಿಲಾಸಿನಿಯರ ಗುಂಪಿನಂತೆ, ಯೌವನಮದಮುದಿತಮಾರ್ದಳಿಕ = ಹರೆಯವೆಂಬ ಮದ್ಯದಿಂದ ಅಮಲೇರಿದ, ವಾಂಶಿಕಪ್ರಹನ್ಯಮಾನ = ಕೊಳಲಿಗರಿಂದ ನುಡಿಸಲ್ಪಡುವ, ವಾದ್ಯಮಾನ = ಬಾರಿಸಲ್ಪಡುವ, ಮೃದಂಗವಂಶನಿನದ = ಮದ್ದಳೆ ಹಾಗೂ ಕೊಳಲಿನ, ಲಯಚ್ಛಂದ = ಲಯಕ್ಕನುಗುಣವಾಗಿ, ಸುಂದರನಟತ್ + ಸುಂದರೀಸಂದೋಹಮುಂ = ಆಕರ್ಷಕವಾಗಿಲು ನರ್ತಿಸುವ ಚೆಲುವೆಯರ ಗುಂಪೂ, ಅಪೂರ್ವರಮಣೀಯಂ + ಆಗೆ = ಹಿಂದೆಂದೂ ಇಲ್ಲದ ಸೊಗಸಿನಿಂದ ಕೂಡಿ,

**ಗದ್ಯಾನುಸರಣ:** ಆಗ, ಎತ್ತರವಾದ ಅಸಂಖ್ಯ ಪ್ರಾಸಾದಗಳ ಮೇಲೆ ನಗರಸುಂದರಿ ಎಂಬ ವಿಲಾಸಿನಿಯ ಪ್ರೇಮದ ಕುಡಿಯು ಓಲಾಡುವಂತೆ ಹೊಸ ಮಾವಿನ ಚೆಲುವಾದ ಚಿಗುರುಗಳಂತಹ ಕೆಂಪು ಬಾವುಟಗಳು ಹಾರಾಡುತ್ತಿದ್ದುವು; ಅವಳ ಚೆಲುವೇ ಚಿಗುರಿದ ಹಾಗೆ ಮುಖ್ಯ ದ್ವಾರದ ತೋರಣದ ಕಂಬದಲ್ಲಿ ಹೊಸದಾಗಿ ಕಟ್ಟಿದ ಚಿಗುರುಗಳಂತೆ ಜೋತಾಡುವ ಸುಂದರವಾದ ತೋರಣಗಳು ಶೋಭಿಸುತ್ತಿದ್ದುವು; ಅವಳ ಮನೋಹರವಾದ ನಗುವು ಹೊಮ್ಮುವ ಹಾಗೆ ಬೀದಿಬೀದಿಗಳಲ್ಲಿ ಹೂಗಳ ಪರಾಗರಾಶಿಯು ದಟ್ಟವಾಗಿ ಹರಡಿಕೊಂಡಿತ್ತು; ಅವಳ ತುಂಬಿದ ಸಂತಸದ ದಟ್ಟವಾದ ಲಾವಣ್ಯರಸವೇ ದಿಕ್ಕುದಿಕ್ಕುಗಳಲ್ಲಿ ಪಸರಿಸಿದಂತೆ ಕುಂಕುಮವು ಆವರಿಸಿದ ಕಮಲರಾಶಿಯಿಂದ ಸೊಗಸುವ ಮನೆಯಂಗಳಗಳಿದ್ದುವು; ಅವಳ ಸಖಿಯರಾದ ವಿಲಾಸಿನಿಯರ ಗುಂಪಿನಂತೆ ಹರೆಯವೆಂಬ ಮದ್ಯದಿಂದ ಅಮಲೇರಿದಂತೆ ನುಡಿಸಲಾಗುತ್ತಿದ್ದ ಕೊಳಲು ಮತ್ತು ಮದ್ದಳೆಗಳ ಲಯಕ್ಕನುಗುಣವಾಗಿ ಚೆಲುವೆಯರ ಗುಂಲು ಆಕರ್ಷಕವಾಗಿ ನರ್ತಿಸುತ್ತಿದ್ದರು; ಹೀಗೆ ಆ ನಗರವು ಹಿಂದೆಂದೂ ಇಲ್ಲದ ಸೊಗಸಿನಿಂದ ಕೂಡಿತ್ತು.

ವಿತತೋದ್ಯತ್ಪಟವಾಸವಾಸಿತದಿಶಾಕಾಂತಾಗಣಂ ನಿರ್ಭರೋ
ತ್ಥಿತಪಿಷ್ಟಾತಕಪಿಂಜರೀಕೃತವಿಯಚ್ಚಕ್ರಂ ಧ್ವನತ್ತೂರ್ಯಸಂ
ತತಿನಾದಪ್ರತಿಪೂರಿತಾಖಿಳಕುಳಕ್ಷೋಣೀಧ್ರಕುಂಜಂ ಜಗ
ಕ್ಕತಿಚೋದ್ಯಾವಹಮಾಗೆ ಪೆಂಪುವಡೆದತ್ತಂತಾತ್ಮಜನ್ಮೋತ್ಸವಂ ೩೮

**ಪದವಿಭಾಗ-ಅನ್ವಯ-ಅರ್ಥ:** ಅಂತು + ಆತ್ಮಜನ್ಮೋತ್ಸವಂ = ಹೀಗೆ ಮಗನ ಹುಟ್ಟಿನ ಸಂಭ್ರಮವು, ವಿತತ + ಉದ್ಯತ್ + ಪಟವಾಸವಾಸಿತದಿಶಾಕಾಂತಾಗಣಂ = ಒಂದೇ ಸಮನೆ ಸೂಸುವ ಸುಗಂಧದ ಪುಡಿಯ ವಾಸನೆಯ ದಿಕ್ಕನ್ಯೆಯರೂ, ನಿರ್ಭರ + ಉತ್ಥಿತಪಿಷ್ಟಾತಕಪಿಂಜರೀ ಕೃತವಿಯಚ್ಚಕ್ರಂ = ದಟ್ಟವಾಗಿ ಮೇಲೇಳುವ ಬುಕ್ಕಿ ಹಿಟ್ಟಿನಿಂದ ಹೊಬಣ್ಣಕ್ಕೆ ತಿರುಗಿದ ಭೂಮಂಡಲವೂ, ಧ್ವನಃ + ತೂರ್ಯಸಂತತಿನಾದಪ್ರತಿಪೂರಿತ + ಅಖಿಳಕುಳಕ್ಷೋಣೀಧ್ರಕುಂಜಂ = ನುಡಿಸುವ ವಾದ್ಯಗಳ ಸದ್ದಿನಿಂದ ಕೂಡಿದ ಎಲ್ಲ ಕುಲಪರ್ವತಗಳ ಸಮೂಹವೂ, ಜಗಕ್ಕೆ + ಅತಿಚೋದ್ಯಾವಹಮಾಗೆ ಪೆಂಪುವಡೆದತ್ತು = ಜಗತ್ತಿನ ತೀರ ವಿಸ್ಮಯವನ್ನುಂಟುಮಾಡುತ್ತಿತ್ತು.

**ಗದ್ಯಾನುಸರಣ:** ದಿಕ್ಕನ್ಯೆಯರೆಲ್ಲ ಒಂದೇ ಸಮನೆ ಸೂಸುವ ಸುಗಂಧದ ಪುಡಿಯಿಂದ ಸುವಾಸಿತರಾದರು; ದಟ್ಟವಾಗಿ ಮೇಲೇಳುವ ಬುಕ್ಕಿ ಹಿಟ್ಟಿನಿಂದ ಭೂಮಂಡಲವೆಲ್ಲ ಹೊಬಣ್ಣಕ್ಕೆ ತಿರುಗಿತ್ತು; ನುಡಿಸುವ ವಾದ್ಯಗಳ ಸದ್ದು ಕುಲಪರ್ವತಗಳ ಸಮೂಹವನ್ನು ತುಂಬಿತ್ತು; ಹೀಗೆ ಹೀಗೆ ಮಗನ ಹುಟ್ಟಿನ ಸಂಭ್ರಮವು ಜಗತ್ತಿಗೆ ತೀರ ವಿಸ್ಮಯವನ್ನುಂಟುಮಾಡುವಂತಿತ್ತು.

ವ। ಆ ಪ್ರಮೋದಪ್ರಸ್ತಾವದೊಳ್,

**ಅರ್ಥ:** ಆ ಪ್ರಮೋದಪ್ರಸ್ತಾವದೊಳ್ = ಅಂತಹ ಸಂತಸಕರ ಸನ್ನಿವೇಶದಲ್ಲಿ,

ತ್ರಿದಶಾನೇಕಾನಕಂಗಳ್ ಮೊಳಗಿದುವು ಕರಾಸ್ಫಾಳನಂ ದೇವರಿಂದಾ
ಗದೆ ಮುಂ ಕಲ್ಪದ್ರುಮಂಗಳ್ ಪೊಸತಲರ್ದಲರಂ ತಾಮೆ ಸಾಲ್ವನ್ನೆಗಂಸೂ
ಸಿದುವೇಕಾಯ್ತೋ ಕಿರೀಟಕ್ಕವನತಿಯೆನೆ ದೇವೋತ್ತಮಾಂಗಂಗಳುಂ ಬಾ
ಗಿದುವಾ ತ್ರೈಲೋಕ್ಯನಾಥೋದಯಮನಱಿಪುವಂತಾ ತ್ರಿಳೋಕಕ್ಕಮಾಗಳ್೩೯

**ಪದವಿಭಾಗ-ಅನ್ವಯ-ಅರ್ಥ:** ಆ ತ್ರೈಲೋಕ್ಯನಾಥ + ಉದಯಮನ್ ಆ ತ್ರಿಳೋಕಕ್ಕಂ ಅಱಿಪುವಂತೆ = ಆ ಮೂಲೋಕಗಳ ಒಡೆಯನ ಹುಟ್ಟನ್ನು ಮೂಲೋಕಗಳಿಗೂ ತಿಳಿಸುವಂತೆ, ಆಗಳ್ = ಆಗ, ದೇವರಿಂದೆ ಕರ + ಆಸ್ಫಾಳನಂ ಆಗದೆ ಮುಂ = ದೇವತೆಗಳು ಕೈಯಿಂದ ಬಾರಿಸುವ ಮುಂಚೆಯೇ, ಅನೇಕ

ತ್ರಿದಶ ಆನಕಂಗಳ್ ಮೊಳಗಿದುವು = ನಾನಾ ದೇವವಾದ್ಯಗಳು ಸದ್ದುಮಾಡಿದುವು, ಕಲ್ಪದ್ರುಮಂಗಳ್ ತಾಮೆ ಪೊಸತು + ಅಲರ್ದು + ಅಲರಂ ಸಾಲ್ವನ್ನೆಗಂ ಸೂಸಿದುವು = ಕಲ್ಪವೃಕ್ಷಗಳು ತಾವಾಗಿಯೇ ಹೊಸತಾಗಿ ಹೂಬಿಟ್ಟು ಸಾಕಗುವಂತೆ ಸುರಿಸಿದುವು, ಕಿರೀಟಕ್ಕೆ ಈ ಅವನತಿ ಏಕೆ + ಆಯ್ತು ಎನೆ = ಕಿರೀಟಕ್ಕೆ ಈ ಅವನತಿಯು ಏಕೆ ಉಂಟಾಯಿತು ಎನ್ನುವಂತೆ, ದೇವ + ಉತ್ತಮಾಂಗಂಗಳುಂ ಬಾಗಿದುವು = ದೇವತೆಗಳ ತಲೆಗಳು ತಾವಾಗಿ ಬಾಗಿದುವು,

**ಗದ್ಯಾನುಸರಣ:** ಆ ಮೂಲೋಕದೊಡೆಯನ ಹುಟ್ಟನ್ನು ಮೂಲೋಕಗಳಿಗೂ ತಿಳಿಸುವಂತೆ, ಆಗ ದೇವತೆಗಳು ತಮ್ಮ ಕೈಗಳಿಂದ ಬಾರಿಸುವ ಮುಂಚೆಯೇ ನಾನಾ ದೇವವಾದ್ಯಗಳು ಸದ್ದುಮಾಡಿದುವು, ಕಲ್ಪವೃಕ್ಷಗಳು ತಾವಾಗಿಯೇ ಸಮೃದ್ಧವಾಗಿ ಹೊಸತಾದ ಹೂಬಿಟ್ಟು ಸುರಿಸಿದುವು, ಕಿರೀಟಕ್ಕೆ ಈ ಅವನತಿಯು ಏಕೆ ಉಂಟಾಯಿತು ಎನ್ನುವಂತೆ ದೇವತೆಗಳು ಅರಿವಿಲ್ಲದೆಯೇ ತಲೆಬಾಗಿಸಿದರು.

**ಭವನವನಜ್ಯೋತಿಃಕ**
**ಲ್ಪವಾಸದೊಳ್ ಕ್ರಮದೆ ಶಂಖಭೇರೀಕಂಠೀ**
**ರವಘಂಟಾಧ್ವನಿಗಳ್ ನೆಗ**
**ಳ್ದುವು ಭೋಂಕೆನೆ ಸಕಳವಿಷ್ಟಪಾಶ್ಚರ್ಯಂಗಳ್ ೪೦**

**ಪದವಿಭಾಗ-ಅನ್ವಯ-ಅರ್ಥ:** ಭವನವನಜ್ಯೋತಿಃಕಲ್ಪವಾಸದೊಳ್ ಕ್ರಮದೆ = ಭವನ ವನ ಜ್ಯೋತಿಷ ಮತ್ತು ಕಲ್ಪಗಳ ದೇವತೆಗಳ ಮನೆಗಳಲ್ಲಿ ಕ್ರಮವಾಗಿ, ಶಂಖಭೇರೀಕಂಠೀರವಘಂಟಾಧ್ವನಿಗಳ್ = ಶಂಖ ಭೇರಿ ಸಿಂಹವಾದ್ಯ ಹಾಗೂ ಗಂಟೆಗಳ ಧ್ವನಿಯು, ಭೋಂಕೆನೆ ಸಕಳವಿಷ್ಟಪ + ಆಶ್ಚರ್ಯಂಗಳ್ ನೆಗಳ್ದುವು = ಇದ್ದಕ್ಕಿದ್ದಂತೆ ಎಲ್ಲ ಲೋಕಗಳಲ್ಲಿಯೂ ಆಶ್ಚರ್ಯಕರವಾಗಿ ನಡೆದುವು.

**ಗದ್ಯಾನುಸರಣ:** ಭವನ ವನ ಜ್ಯೋತಿಷ ಮತ್ತು ಕಲ್ಪಗಳ ದೇವತೆಗಳ ಮನೆಗಳಲ್ಲಿ ಕ್ರಮವಾಗಿ ಶಂಖ ಭೇರಿ ಸಿಂಹವಾದ್ಯ ಹಾಗೂ ಗಂಟೆಗಳ ಧ್ವನಿಯು ಆಶ್ಚರ್ಯಕರವಾಗಿ ಇದ್ದಕ್ಕಿದ್ದಂತೆ ಎಲ್ಲ ಲೋಕಗಳಲ್ಲಿಯೂ ನಡೆದುವು.

**ತ್ರಿದಶಾಸನಂಗಳಲ್ಲಾ**
**ಡಿದುವು ಜಗದ್ಗುರುಗೆ ಬೇಗಮುಚ್ಚಾಸನದಿಂ**
**ದಿದಿರೇಟೆವೆಂದು ಪೇೞ್ವವೊ**
**ಲದೇಂ ಕರಂ ತೀರ್ಥಕರರ ಪುಣ್ಯಂ ಪಿರಿದೋ ೪೧**

**ಪದವಿಭಾಗ-ಅನ್ವಯ-ಅರ್ಥ:** ಉಚ್ಚ + ಆಸನದಿಂದೆ ಜಗದ್ಗುರುಗೆ ಬೇಗಂ ಇದಿರೇಟೆಂ + ಎಂದು ಪೇೞ್ವವೊಲ್ = ಎತ್ತರದ ಪೀಠಗಳಿಂದ ಎದ್ದು

ಜಗದ್ಗುರುವನ್ನು ಬೇಗ ಇದಿರುಗೊಳ್ಳಿ ಎಂದು ಹೇಳುವ ಹಾಗೆ, ತ್ರಿದಶ + ಆಸನಂಗಳ್ + ಅಲ್ಲಾಡಿದುವು = ದೇವತೆಗಳ ಪೀಠಗಳು ಅಲ್ಲಾಡಿದುವು, ಕರಂ ತೀರ್ಥಕರರ ಪುಣ್ಯಂ ಅದೇಂ ಪಿರಿದೋ = ತೀರ್ಥಂಕರರ ಪುಣ್ಯವು ಅದೆಷ್ಟು ಹಿರಿದು!

**ಗದ್ಯಾನುಸರಣ:** ನಿಮ್ಮ ಎತ್ತರದ ಪೀಠಗಳಿಂದ ಎದ್ದು ಜಗದ್ಗುರುವನ್ನು ಬೇಗ ಇದಿರುಗೊಳ್ಳಿ ಎಂದು ಹೇಳುವ ಹಾಗೆ ದೇವತೆಗಳ ಪೀಠಗಳು ಅಲ್ಲಾಡಿದುವು; ತೀರ್ಥಂಕರರ ಪುಣ್ಯವು ಅದೆಷ್ಟು ಹಿರಿದು!

**ವಾಸವನಾಸನಕಂಪದಿ**
**ನಾ ಸಮುಯದೊಳವಧಿಯುಂ ಪ್ರಯೋಗಿಸಿ ಬೋಧಾ**
**ವಾಸಪ್ರಿಯನುದಯಮನಱಿ**
**ದಾಸನದಿಂದೆರ್ದು ಮೂಱುಸೂಟಿ್ ಪೊಡೆವಟ್ಟಂ ೪೨**

**ಪದವಿಭಾಗ–ಅನ್ವಯ–ಅರ್ಥ:** ಆ ಸಮಯದೊಳ್ ಆಸನಕಂಪದಿನ್ ವಾಸವನ್ = ಆ ಹೊತ್ತಿನಲ್ಲಾದ ಆಸನಕಂಪದಿಂದ ದೇವೇಂದ್ರನು, ಅವಧಿಯಂ ಪ್ರಯೋಗಿಸಿ = ತನ್ನ ಅವಧಿಜ್ಞಾನದ ಬಲದಿಂದ, ಬೋಧಾವಾಸಪ್ರಿಯನ + ಉದಯಮನ್ + ಅಱಿದು = ಜ್ಞಾನದ ನೆಲೆವನೆಯಾದವನ ಹುಟ್ಟನ್ನು ತಿಳಿದು, ಆಸನದಿಂದೆ + ಎರ್ದು ಮೂಱುಸೂಟಿ್ ಪೊಡೆವಟ್ಟಂ = ತನ್ನ ಪೀಠದಿಂದ ಮೇಲೆದ್ದು ಮೂರು ಬಾರಿ ನಮಸ್ಕರಿಸಿದ.

**ಗದ್ಯಾನುಸರಣ:** ಆ ಹೊತ್ತಿನಲ್ಲಾದ ಆಸನಕಂಪದಿಂದ ದೇವೇಂದ್ರನು ತನ್ನ ಅವಧಿಜ್ಞಾನದ ಬಲದಿಂದ ಜ್ಞಾನದ ನೆಲೆವನೆಯಾದವನ ಹುಟ್ಟನ್ನು ತಿಳಿದ; ತಕ್ಷಣವೇ ತನ್ನ ಪೀಠದಿಂದ ಮೇಲೆದ್ದು ಮೂರು ಬಾರಿ ನಮಸ್ಕರಿಸಿದ.

**ವಿಶೇಷ ವಿಚಾರ: ಆಸನಕಂಪ** = ತೀರ್ಥಂಕರನ ಜೀವಿತದ ವಿಶೇಷ ಪ್ರಸಂಗಗಳಲ್ಲಿ ಆಗುವ ದೇವೇಂದ್ರನ ಸಿಂಹಾಸನದ ಅಲುಗಾಟ.

ಜೈನ ಪುರಾಣಗಳಲ್ಲಿ ದೇವೇಂದ್ರ (ಸೌಧರ್ಮೇಂದ್ರ)ನದು ವಿಶಿಷ್ಟಪಾತ್ರ, ತೀರ್ಥಂಕರನ ಜನನಾದಿ ಮುಂದಿನ ಅನೇಕ ಸಂದರ್ಭಗಳಲ್ಲಿ ಅವನ ಪ್ರವೇಶವಿದೆ. ಅವನು ಇಲ್ಲಿ ಎಲ್ಲ ಸಾರಿಯೂ ವಿರೋಧವಾಗಿ ಕಾಣದೆ, ಸಹಕಾರಿಯಾಗಿ ಕಾಣಿಸಿಕೊಳ್ಳುತ್ತಾನೆ.

**ವ। ಅಂತು ಪೊಡೆವಟ್ಟು ಜನ್ಮಾಭಿಷೇಕೋದ್ಯುಕ್ತಚಿತ್ತನಾದಾಗಳ್ ಚತುರ್ನಿ**

ಕಾಯಾಮರೇಂದ್ರ ಸಮುದಯಮಂಭೋಧಿವೇಳಾವಿಳಾಸದಿಂ ಸಾಮಾನಿಕ ತ್ರಯಸ್ತ್ರಿಂಶತ್ಪಾರಿಷದಾತ್ಮರಕ್ಷಲೋಕಪಾಳಾಭಿಯೋಗ್ಯ ಕಿಲ್ಬಿಷರೊಡನೆ ಗಜ ತುರಗರಥವೃಷಭಗಂಧರ್ವ ನರ್ತಕೀಪದಾತ್ಯನೀಕಂ ಬೆರಸು ಬಂದು ಮುಂದೆ ನಿಲ್ವುದುಂ,

**ಪದವಿಭಾಗ-ಅನ್ವಯ-ಅರ್ಥ:** ಅಂತು ಪೊಡೆವಟ್ಟು = ಹಾಗೆ ನಮಸ್ಕರಿಸಿ, ಜನ್ಮ + ಅಭಿಷೇಕ + ಉದ್ಯುಕ್ತಚಿತ್ತನಾದಾಗಳ್ = ತೀರ್ಥಂಕರನ ಜನನಕಲ್ಯಾಣವನ್ನು ಮಾಡುವ ಆಸಕ್ತಿಯನ್ನು ತಾಳಿ, ಚತುರ್ನಿಕಾಯ + ಅಮರೇಂದ್ರಸಮುದಯಂ = ನಾಲ್ಕು ಬಗೆಯ ದೇವತೆಗಳ ಸಮುದಾಯವು, ಅಂಭೋಧಿವೇಳಾವಿಳಾಸದಿಂ = ಸಮುದ್ರದ ಅಲೆಗಳ ಭೋರ್ಗರೆತದಂತೆ, ಸಾಮಾನಿಕ ತ್ರಾಯಸ್ತ್ರಿಂಶತ್ ಪಾರಿಷದ + ಆತ್ಮರಕ್ಷಲೋಕಪಾಳ + ಅಭಿಯೋಗ್ಯಕಿಲ್ಬಿಷರ + ಒಡನೆ = ಸಾಮಾನಿಕ ತ್ರಾಯಸ್ತ್ರಿಂಶ ಪಾರಿಷದ ಆತ್ಮರಕ್ಷ ಲೋಕಪಾಲ ಅಭಿಯೋಗ್ಯ ಮತ್ತು ಕಿಲ್ಬಿಷ ಎಂಬ ದೇವತಾವರ್ಗಗಳ ಜೊತೆಯಲ್ಲಿ, ಗಜತುರಗರಥವೃಷಭಗಂಧರ್ವ ನರ್ತಕೀಪರಿದಾತಿ + ಅನೀಕಂ ಬೆರಸು ಬಂದು ಮುಂದೆ ನಿಲ್ವುದುಂ = ಆನೆ ಕುದುರೆ ರಥ ಕಾಲಾಳು ಎತ್ತು ಗಂಧರ್ವ ನರ್ತಕಿ ಮತ್ತು ಪದಾತಿಗಳೊಡನೆ ಬಂದು ಮುಂದೆ ನಿಲ್ಲುವುದೂ,

**ಗದ್ಯಾನುಸರಣ:** ಹಾಗೆ ನಮಸ್ಕರಿಸಿದ ದೇವೇಂದ್ರನು ತೀರ್ಥಂಕರನ ಜನನಕಲ್ಯಾಣವನ್ನು ಆಚರಿಸುವುದರತ್ತ ತನ್ನ ಮನಸ್ಸನ್ನು ತೊಡಗಿಸಿದ; ನಾಲ್ಕು ಬಗೆಯ ದೇವತೆಗಳ ಸಮುದಾಯವು ಸಮುದ್ರದ ಅಲೆಗಳ ಭೋರ್ಗರೆತದಂತೆ ಸಾಮಾನಿಕ ತ್ರಾಯಸ್ತ್ರಿಂಶ ಪಾರಿಷದ ಆತ್ಮರಕ್ಷ ಲೋಕಪಾಲ ಅಭಿಯೋಗ್ಯ ಮತ್ತು ಕಿಲ್ಬಿಷ ಎಂಬ ದೇವತಾವರ್ಗಗಳ ಜೊತೆಯಲ್ಲಿ, ಆನೆ ಕುದುರೆ ರಥ ಎತ್ತು ಗಂಧರ್ವ ನರ್ತಕಿ ಮತ್ತು ಪದಾತಿಗಳೊಡನೆ ಬಂದು ಮುಂದೆ ನಿಂತಿತು.

**ವಿಶೇಷ ವಿಚಾರ:** ಸಾಮಾನಿಕ ತ್ರಾಯಸ್ತ್ರಿಂಶ ಇತ್ಯಾದಿ = ಇಂದ್ರ ಸಾಮಾನಿಕ ತ್ರಾಯಸ್ತ್ರಿಂಶ ಪಾರಿಷದ ಆತ್ಮರಕ್ಷ ಲೋಕಪಾಲ ಆನೀಕ ಪ್ರಕೀರ್ಣಕ ಅಭಿಯೋಗ್ಯ ಮತ್ತು ಕಿಲ್ಬಿಷಕ ಎಂಬ ದೇವತೆಗಳ ವರ್ಗಗಳು; ಇವರಲ್ಲಿನ ಆನೀಕ ವರ್ಗದಲ್ಲಿ ಸೈನ್ಯಸಮಾನವಾದ ಇಲ್ಲಿ ಹೇಳಿರುವ ಏಳು ಪ್ರಕಾರದ ದೇವತೆಗಳಿರುತ್ತಾರೆ

**ನೆಗಟ್ದಾ ದೇವೇಂದ್ರರೆಲ್ಲಂ ಬಳಸಿ ಬರೆ ಮದಶ್ರೀಯುತೈರಾವತಸ್ಕಂ**
**ಧಗತಂ ನಾನಾತಪತ್ರಸ್ಥಗಿತದಶದಿಶಾಮಂಡಲಂ ದೇವತೂರ್ಯಾ**
**ನಂದಗೇದೀವೀಗೀತಜೈನಸ್ತವಸಮುಪಹಿತಾತ್ಮೀಯಚಿತ್ತಂ ವಿಳಾಸಂ**
**ಮಿಗೆ ಸೌಧರ್ಮೇಂದ್ರನಂದಾ ಶಚಿವೆರಸು ಮಹೋತ್ಸಾಹದಿಂ ಬಂದನಾಗಳ್ ೪೩**

**ಪದವಿಭಾಗ-ಅನ್ವಯ-ಅರ್ಥ :** ನೆಗಟ್ದಿ + ಆ ದೇವೇಂದ್ರರ್ + ಎಲ್ಲಂ

ಬಳಸಿ ಬರೆ = ಕೀರ್ತಿವಂತ ದೇವೇಂದ್ರರುಗಳೆಲ್ಲ, ಸುತ್ತಲೂ ಬರುತ್ತಿರಲು, ಮದಶ್ರೀಯುತ + ಐರಾವತಸ್ಕಂಧಗತಂ = ಮದವೆಂಬ ಸಂಪತ್ತಿನಿಂದ ಕೂಡಿದ ಐರಾವತದ ಕುತ್ತಿಗೆಯ ಮೇಲೆ ಕುಳಿತು, ನಾನಾ + ಆತಪತ್ರಸ್ಥಗಿತದಶ ದಿಶಾಮಂಡಲಂ = ನಾನಾ ಕೊಡೆಗಳಿಂದ ಹತ್ತು ದಿಕ್ಕುಗಳನ್ನೂ ಮುಚ್ಚಿ, ದೇವತೂರ್ಯ + ಆನಂದಗೇದೀವೀಗೀತ = ದೇವದುಂದುಭಿಗಳೊಡನೆ (ಮರು) ದೇವಿಯ ಬಗೆಗಿನ ಹಾಡು, ಜೈನಸ್ತವಸಮುಪಹಿತ + ಆತ್ಮೀಯಚಿತ್ತಂ = ಹಾಗೂ ಜಿನಸ್ತುತಿಗಳಲ್ಲಿ ತನ್ನ ಮನಸ್ಸನ್ನು ಇಟ್ಟು, ಸೌಧರ್ಮೇಂದ್ರನ್ + ಅಂದು + ಆ ಶಚಿವೆರಸು = ಸೌಧರ್ಮೇಂದ್ರನು ತನ್ನ ಮಡದಿ ಶಚಿಯ ಜೊತೆಯಲ್ಲಿ, ಮಹೋತ್ಸಾಹದಿಂ ಆಗಳ್ ವಿಳಾಸಂ ಮಿಗೆ ಬಂದನ್ = ತುಂಬ ಸಂಭ್ರಮದಿಂದಲೂ ವೈಭವದಿಂದಲೂ ಬಂದ.

**ಗದ್ಯಾನುಸರಣ:** ಕೀರ್ತಿವಂತ ದೇವೇಂದ್ರರುಗಳೆಲ್ಲ ಸುತ್ತಲೂ ಬರುತಿರಲು ಮದವೆಂಬ ಸಂಪತ್ತಿನಿಂದ ಕೂಡಿದ ಐರಾವತದ ಕುತ್ತಿಗೆಯ ಮೇಲೆ ಕುಳಿತು, ನಾನಾ ಕೊಡೆಗಳಿಂದ ಹತ್ತು ದಿಕ್ಕುಗಳನ್ನೂ ಮುಚ್ಚಿರಲು, ದೇವದುಂದುಭಿಗಳೊಡನೆ ಮರುದೇವಿಯ ಬಗೆಗಿನ ಹಾಡು ಹಾಗೂ ಜಿನಸ್ತುತಿಗಳಲ್ಲಿ ತನ್ನ ಮನಸ್ಸನ್ನು ಇಟ್ಟು, ಸೌಧರ್ಮೇಂದ್ರನು ತನ್ನ ಮಡದಿ ಶಚಿಯ ಜೊತೆಯಲ್ಲಿ ತುಂಬ ಸಂಭ್ರಮದಿಂದಲೂ ವೈಭವದಿಂದಲೂ ಬಂದ.

**ವ। ಅಂತು ಗಗನತಳದಿನವನೀತಳಕ್ಕವತರಿಸಿ ವಿವಿಧಮಣಿ ನಿಕೇತನಾಗ್ರಾವಲಗ್ನ ಕೇತುಮಾಳಾವಿಳಸಿತಸಾಕೇತಮಂ ಬಳಸಿ ದೇವನಿಕಾಯಮಿರೆ ಸೌಧರ್ಮೇಂದ್ರಪ್ರಮುಖ ಚತುರ್ನಿಕಾಯಾಮರೇಂದ್ರವೃಂದಂ ನಾಭಿರಾಜರಾಜ ಗೇಹಾಂಗಣದೊಳ್ ಸಂದಣಿಸಿ ಬಂದಿರೆ ಶುಚಿಶಚಿ ಮಹಾದೇವಿ ತಿರೋಹಿತಶರೀರೆಯಾಗಿ,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಗಗನತಳದಿನ್ + ಅವನೀತಳಕ್ಕವತರಿಸಿ = ಹಾಗೆ ಆಕಾಶದಿಂದ ನೆಲದ ಮೇಲೆ ಇಳಿದು, ವಿವಿಧಮಣಿನಿಕೇತನ + ಅಗ್ರ + ಅವಲಗ್ನ = ನಾನಾ ಬಗೆಯ ಮಣಿಸೌಧಗಳ ತುದಿಯಲ್ಲಿ ಹಾರಾಡುತ್ತಿದ್ದ, ಕೇತುಮಾಳಾವಿಳಸಿತ ಸಾಕೇತಮಂ ಬಳಸಿ = ಬಾವುಟಗಳ ಸಾಲಿನಿಂದ ಕಂಗೊಳಿಸುತ್ತಿದ್ದ ಸಾಕೇತಪುರವನ್ನು ಸುತ್ತಿ ಬಂದು, ದೇವನಿಕಾಯಂ + ಇರೆ = ದೇವಸಮುದಾಯವು ನಿಂತಿರಲು, ಸೌಧರ್ಮೇಂದ್ರಪ್ರಮುಖಚತುರ್ನಿಕಾಯ + ಅಮರೇಂದ್ರವೃಂದಂ = ಸೌಧಮೇಂದ್ರನು ಮುಖ್ಯವಾದ ನಾಲ್ಕೂ ಬಗೆಯ ದೇವೇಂದ್ರರು ಗಳು, ನಾಭಿರಾಜರಾಜಗೇಹಾಂಗಣದೊಳ್ ಸಂದಣಿಸಿ ಬಂದಿರೆ = ನಾಭಿರಾಜನ ಅರಮನೆಯ ಅಂಗಳದಲ್ಲಿ ಒಟ್ಟಾಗಿ ಬರಲು, ಶುಚಿಶಚಿಮಹಾದೇವಿ

ತಿರೋಹಿತಶರೀರೆಯಾಗಿ = ಪರಿಶುಭ್ರಳಾದ ಶಚಿದೇವಿಯು ತನ್ನ ಶರೀರವನ್ನು ಅದೃಶ್ಯವಾಗಿಸಿಕೊಂಡು,

**ಗದ್ಯಾನುಸರಣ:** ಹಾಗೆ ಆಕಾಶದಿಂದ ನೆಲದ ಮೇಲೆ ಇಳಿದರು; ನಾನಾ ಬಗೆಯ ಮಣಿಸೌಧಗಳ ತುದಿಯಲ್ಲಿ ಹಾರಾಡುತ್ತಿದ್ದ ಬಾವುಟಗಳ ಸಾಲಿನಿಂದ ಕಂಗೊಳಿಸುತ್ತಿದ್ದ ಸಾಕೇತಪುರವನ್ನು ಸುತ್ತಿ ದೇವಸಮುದಾಯವು ನಿಂತುಕೊಂಡಿತು; ಸೌಧರ್ಮೇಂದ್ರನು ಮುಖ್ಯವಾದ ನಾಲ್ಕೂ ಬಗೆಯ ದೇವೇಂದ್ರರುಗಳು ನಾಭಿರಾಜನ ಅರಮನೆಯ ಅಂಗಳದಲ್ಲಿ ಒಟ್ಟಾಗಿ ಬಂದರು; ಆಗ ಪರಿಶುಭ್ರಳಾದ ಶಚಿದೇವಿಯು ತನ್ನ ಶರೀರವನ್ನು ಮರೆಮಾಚಿಕೊಂಡಳು.

**ಮರುದೇವೀವಿಳಸತ್ಪ್ರಸೂತಿಗೃಹಮಂ ರತ್ನಪ್ರಭಾಭಾರಭಾ**
**ಸುರಮಂ ಪೊಕ್ಕು ತದಂಗನಾಂಕತಳದೊಳ್ ಬಾಲಾರ್ಕನಂ ಪೋಲ್ತು ಭ**
**ಸುರತೇಜೋಧಿಕನಪ್ಪ ಬಾಳನನೊಜಿಲ್ದಟ್ಕಿರ್ತು ನೋಡುತ್ತುಮಿ**
**ರ್ಬರುಮಂ ಮೂಮೆ ಸುರೇಂದ್ರಕಾಮತೆ ಬಲಗೊಂಡುದ್ಯನ್ಮನಃಪ್ರೀತಿಯಿಂ ೪೪**

**ಪದವಿಭಾಗ–ಅನ್ವಯ–ಅರ್ಥ:** ರತ್ನಪ್ರಭಾಭಾರಭಾಸುರಮಂ ರತ್ನಪ್ರಭೆಯ ಆಧಿಕ್ಯದಿಂದ ಕಂಗೊಳಿಸುತ್ತಿದ್ದ, ಮರುದೇವೀವಿಳಸತ್ + ಪ್ರಸೂತಿಗೃಹಮಂ ಪೊಕ್ಕು = = ಮರುದೇವಿ ಮಲಗಿದ್ದ ಬಾಣಂತಿ ಮನೆಯನ್ನು ಹೊಕ್ಕು, ತತ್ + ಅಂಗನಾ + ಅಂಕತಳದೊಳ್ = ಆಕೆಯ ಮಡಿಲಲ್ಲಿ, ಬಾಲಾರ್ಕನಂ ಪೋಲ್ತು ಭಾಸುರತೇಜಃ + ಅಧಿಕನಪ್ಪ ಬಾಳನನ್ = ಬಾಲಸೂರ್ಯನಂತೆ ಅಸೀಮಕಾಂತಿ ಯಿಂದ ಕೂಡಿ ಮಲಗಿದ್ದ ಮಗುವನ್ನು, ಒಜಿಲ್ದು + ಅಟ್ಕಿರ್ತು ನೋಡುತ್ತುಂ = ಪ್ರೀತಿವಾತ್ಸಲ್ಯಗಳಿಂದ ನೋಡಿದ ಕೂಡಲೆ, ಸುರೇಂದ್ರಕಾಂತೆ ಉದ್ಯತ್ + ಮನಃಪ್ರೀತಿಯಿಂ = ಶಚೀದೇವಿಯು ಮನಸ್ಸಿನಲ್ಲಿ ಉಕ್ಕುತ್ತಿರುವ ಪ್ರೀತಿಯಿಂದ ಕೂಡಿ, ಇರ್ಬರುಮಂ ಮೂಮೆ ಬಲಗೊಂಡು = ಇಬ್ಬರ ಸುತ್ತ ಮೂರು ಬಾರಿ ಪ್ರದಕ್ಷಿಣೆ ಬಂದು,

**ಗದ್ಯಾನುಸರಣ:** ರತ್ನಪ್ರಭೆಯ ಆಧಿಕ್ಯದಿಂದ ಕಂಗೊಳಿಸುತ್ತಿದ್ದ ಮರುದೇವಿ ಮಲಗಿದ್ದ ಬಾಣಂತಿ ಮನೆಯನ್ನು ಹೊಕ್ಕಳು; ಆಕೆಯ ಮಡಿಲಲ್ಲಿ ಬಾಲಸೂರ್ಯನಂತೆ ಅಸೀಮಕಾಂತಿಯಿಂದ ಕೂಡಿದ ಮಗು ಮಲಗಿದ್ದುದನ್ನು ಪ್ರೀತಿವಾತ್ಸಲ್ಯಗಳಿಂದ ನೋಡಿದಳು; ಕೂಡಲೇ ಮನಸ್ಸಿನಲ್ಲಿ ಉಕ್ಕುತ್ತಿರುವ ಪ್ರೀತಿಯಿಂದ ಕೂಡಿದ ಶಚೀದೇವಿಯು ತಾಯಿಮಗುವಿನ ಸುತ್ತ ಮೂರು ಬಾರಿ ಪ್ರದಕ್ಷಿಣೆ ಬಂದಳು.

**ಎಱಗಿ ಜಗತ್ತ್ರಯಗುರುಗೆರ್ದೆ**
**ಯೆಱಕದೆ ಪೊಗೞ್ದಖಿಳಭುವನಜನನಿಯನಾಗಳ್**
**ಮಱೆಯಿಸಿ ಮಾಯಾನಿದ್ರೆಯಿ**
**ನುಱೆ ಮಾಯಾಶಿಶುವನಿರಿಸಿ ಮುಂದಂಬಿಕೆಯಾ** ೪೫

**ಪದವಿಭಾಗ-ಅನ್ವಯ-ಅರ್ಥ:** ಜಗತ್ತ್ರಯಗುರುಗೆ + ಎರ್ದೆಯ + ಎಱಕದೆ ಎಱಗಿ = ಮೂಲೋಕಗಳ ಗುರುವಿಗೆ ಹೃದಯದಲ್ಲಿ ಅಕ್ಕರೆ ಉಕ್ಕಲು ನಮಸ್ಕರಿಸಿ, ಆಗಳ್ ಅಖಿಳಭುವನಜನನಿಯನ್ ಪೊಗೞ್ದು = ಆಗ ಜಗನ್ಮಾತೆಯನ್ನು ಸ್ತುತಿ ಮಾಡಿ, ಮಾಯಾನಿದ್ರೆಯಿನ್ ಉಱೆ ಮಱೆಯಿಸಿ = ಮಾಯಾನಿದ್ರೆಯಿಂದ ಪೂರ್ತಿ ಮೈಮರೆಯುವಂತೆ ಮಾಡಿ, ಅಂಬಿಕೆಯಾ ಮುಂದೆ ಮಾಯಾಶಿಶುವನ್ + ಇರಿಸಿ = ತಾಯಿಯ ಮಗ್ಗುಲಲ್ಲಿ ಮಯಾಶಿಶುವೊಂದನ್ನು ಇರಿಸಿ,

**ಗದ್ಯಾನುಸರಣ:** ಹೃದಯದಲ್ಲಿ ಅಕ್ಕರೆ ಉಕ್ಕಲು ಮೂಲೋಕ ಗುರುವಿಗೆ ನಮಸ್ಕರಿಸಿದಳು; ಆಗ ಜಗನ್ಮಾತೆಯನ್ನು ಸ್ತುತಿ ಮಾಡಿ, ಮಾಯಾನಿದ್ರೆಯಿಂದ ಆಕೆ ಪೂರ್ತಿ ಮೈಮರೆಯುವಂತೆ ಮಾಡಿ ತಾಯಿಯ ಮಗ್ಗುಲಲ್ಲಿ ಮಯಾಶಿಶುವೊಂದನ್ನು ಇರಿಸಿದಳು.

**ಪಡೆಯಲ್ಕಾಗದ ನಿಧಿಯಂ**
**ಬಡವಂ ಪಡೆದಂತೆ ಕಮಳದಳಕರತಳದಿಂ**
**ಪಿಡಿದೆತ್ತಿಕೊಂಡ ಸಂತಸ**
**ದೊಡಮೆಯನಾಂ ಪೊಗೞಲಱಿಯೆನಿಂದ್ರಾಂಗನೆಯಾ** ೪೬

**ಪದವಿಭಾಗ-ಅನ್ವಯ-ಅರ್ಥ:** ಪಡೆಯಲ್ಕೆ + ಆಗದ ನಿಧಿಯಂ ಬಡವಂ ಪಡೆದಂತೆ = ಎಂದೂ ಪಡೆಯಲಾರದ ಸಂಪತ್ತನ್ನು ಬಡವನು ಪಡೆದಂತೆ, ಕಮಳದಳಕರತಳದಿಂ ಸಂತಸದೊಡಮೆಯನ್ ಪಿಡಿದೆತ್ತಿಕೊಂಡ ಇಂದ್ರಾಂಗನೆಯನ್ = ತನ್ನ ಕರಕಮಲಗಳಲ್ಲಿ ಆನಂದದ ಒಡವೆಯನ್ನು ಹಿಡಿದೆತ್ತಿಕೊಂಡ ಇಂದ್ರನ ಮಡದಿಯನ್ನು, ಆಂ ಪೊಗೞಲ್ + ಅಱಿಯೆನ್ = ನಾನು ಹೊಗಳಲಸಮರ್ಥ.

**ಗದ್ಯಾನುಸರಣ:** ಎಂದೂ ಪಡೆಯಲಾರದ ಸಂಪತ್ತನ್ನು ಬಡವನು ಪಡೆದಂತೆ, ತನ್ನ ಕರಕಮಲಗಳಲ್ಲಿ ಆನಂದದ ಒಡವೆಯನ್ನು ಇಂದ್ರನ ಮಡದಿ ಹಿಡಿದೆತ್ತಿಕೊಂಡಳು. ಆಕೆಯ ಆನಂದವನ್ನು ವರ್ಣಿಸಲು ನಾನು ಅಸಮರ್ಥ.

**ವಿಶೇಷ ವಿಚಾರ:** ಕವಿಯ ಇಲ್ಲಿನ ಉದ್ಗಾರ ಸರಿಯಾಗಿಯೇ ಇದೆ. ಇದನ್ನು ಓದಿದ ಸಹೃದಯರಿಗೂ ಆ ಆನಂದ ಲಭಿಸುತ್ತದೆ. ಪಂಪ ಹೇಳುವಂತೆ ಅದು

ಅವರ್ಣನೀಯ; ಅನನ್ಯ ಅಸಾಧಾರಣ. ಕಾವ್ಯ ತನ್ನ ಕೆಲಸವನ್ನು ಇಲ್ಲಿ ಸದ್ದಿಲ್ಲದೆ ಸಾಧಿಸುತ್ತದೆ.

**ಅಲರ್ದಲರ್ಗಣ್ಗಳ ನೋಟದೆ**
**ಸುಲಲಿತತನು ಶಿಶುವ ಮೆಯ್ಯ ತೀಟದೆ ತನಗ**
**ಗ್ಗಲಿಸಿದಲಂಪಂ ಕುಡೆ ಪೊಸ**
**ತಲರ್ದಂಕುರಿಸಿರ್ದ ಕಲ್ಪಲತೆಯನೆ ಪೋಲ್ತಳ್** ೪೭

**ಪದವಿಭಾಗ-ಅನ್ವಯ-ಅರ್ಥ:** ಅಲರ್ದ + ಅಲರ್ಗಣ್ಗಳ ನೋಟದೆ = ಅರಳಿದ ಹೂಗಣ್ಣುಗಳ ನೋಟದಿಂದಲೂ, ಶಿಶುವ ಮೆಯ್ಯ ತೀಟದೆ = ಶಿಶುವಿನ ಮೈಯ ಸೋಂಕಿನಿಂದಲೂ, ಸುಲಲಿತತನು ತನಗೆ + ಅಗ್ಗಲಿಸಿದ + ಅಲಂಪಂ ಕುಡೆ = ತನ್ನ ಕೋಮಲ ದೇಹವು ತನಗೆ ಅತಿಶಯವಾದ ಸಂತಸವನ್ನು ನೀಡಲು, ಪೊಸತು + ಅಲರ್ದು + ಅಂಕುರಿಸಿರ್ದ ಕಲ್ಪಲತೆಯನೆ ಪೋಲ್ತಳ್ = ಶಚಿಯು ಹೊಸತಾಗಿ ಚಿಗುರಿ ಹೂಬಿಟ್ಟ ಕಲ್ಪಲತೆಯಂತಿದ್ದಳು.

**ಗದ್ಯಾನುಸರಣ:** ಅರಳಿದ ಹೂಗಣ್ಣುಗಳ ನೋಟದಿಂದಲೂ ಶಿಶುವಿನ ಮೈಯ ಸೋಂಕಿನಿಂದಲೂ ಆಕೆಗೆ ಕೋಮಲ ದೇಹವು ತನಗೆ ಅತಿಶಯವಾದ ಸಂತಸವನ್ನು ನೀಡಿತು; ಆಗ ಶಚಿಯು ಹೊಸತಾಗಿ ಚಿಗುರಿ ಹೂಬಿಟ್ಟ ಕಲ್ಪಲತೆಯಂತಿದ್ದಳು.

**ಮಂಗಳಮನೆ ಪಾಡುತ್ತುಂ**
**ಮಂಗಳಧಾರಿಣಿಯರಾಗಿ ಮುಂದಂ ನಡೆವಾ**
**ಶಾಂಗನೆಯರಿಂದೆ ದಿವಿಜೇಂ**
**ದ್ರಾಂಗನೆ ಕರಮೆಸೆದು ಹಂಸಗತಿಯೊಳ್ ಬಂದಳ್** ೪೮

**ಪದವಿಭಾಗ-ಅನ್ವಯ-ಅರ್ಥ:** ಮಂಗಳಮನೆ ಪಾಡುತ್ತುಂ = ಮಂಗಳ ಗೀತಗಳನ್ನು ಹಾಡುತ್ತ, ಮಂಗಳಧಾರಿಣಿಯರಾಗಿ = ಮಂಗಳದ್ರವ್ಯಗಳನ್ನು ಹಿಡಿದು, ಮುಂದಂ ನಡೆವ + ಆಶಾಂಗನೆಯರಿಂದೆ = ಮುಂದೆ ಸಾಗುವ ದಿಗಂಗನೆಯರ ಜೊತೆಯಲ್ಲಿ, ದಿವಿಜೇಂದ್ರ+ ಅಂಗನೆ ಕರಂ + ಎಸೆದು ಹಂಸಗತಿಯೊಳ್ ಬಂದಳ್ = ಶಚಿದೇವಿಯು ಅತಿಶಯ ಶೋಭೆಯಿಂದ ಹಂಸದಂತೆ ನಡೆದು ಬಂದಳು.

**ಗದ್ಯಾನುಸರಣ:** ಮಂಗಳಗೀತಗಳನ್ನು ಹಾಡುತ್ತ ಮಂಗಳದ್ರವ್ಯಗಳನ್ನು ಹಿಡಿದು ದಿಗಂಗನೆಯರು ಮುಂದೆ ಸಾಗುತ್ತಿರಲು ಶಚಿದೇವಿಯು ಅತಿಶಯ ಶೋಭೆಯಿಂದ ಹಂಸದಂತೆ ಅವರೊಡನೆ ನಡೆದು ಬಂದಳು.

**ವ। ಅಂತು ಬಂದು ಜಗತ್ತ್ರಿತಯಪತಿಯಂ ತ್ರಿದಶಪತಿಯ ನೀಡಿದ ಕೇಯೂರರಶ್ಮಿರಂಜಿತಭುಜಯುಗಳಕ್ಕೆ ನೀಡಿದಾಗಳ್ ದಿವಿಜಕುಜಜನಿತ ಸುಗಂಧದ್ರವ್ಯದ್ರವಸ್ಥಾಸಕಾಂಕಮಂ ನಿಜಾಂಕಮನೇಜಿಸಿಕೊಂಡು,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಬಂದು ಜಗತ್ + ತ್ರಿತಯಪತಿಯಂ = ಹಾಗೆ ಬಂದು ಮೂಲೋಕದೊಡೆಯನನ್ನು, ತ್ರಿದಶಪತಿಯ ನೀಡಿದ = ದೇವೇಂದ್ರನು ಚಾಚಿದ, ಕೇಯೂರರಶ್ಮಿರಂಜಿತಭುಜಯುಗಳಕ್ಕೆ ನೀಡಿದಾಗಳ್ = ತೋಳುಬಂದಿಯ ಕಾಂತಿಯಿಂದ ಶೋಭಿಸುತ್ತಿದ್ದ ತೋಳುಗಳಿಗೆ ನೀಡಲು, ದಿವಿಜಕುಜಜನಿತಸುಗಂಧದ್ರವ್ಯದ್ರವಸ್ಥಾಸಕ + ಅಂಕಮಂ = ಕಲ್ಪವೃಕ್ಷವು ನೀಡಿದ ಪರಿಮಳದ್ರವ್ಯಗಳಿಂದ ಲೇಪಿತವಾದ ಮಗುವನ್ನು, ನಿಜ + ಅಂಕಮನ್ + ಏಱಿಸಿಕೊಂಡು = ತನ್ನ ತೊಡೆಯ ಮೇಲೆ ಇರಿಸಿಕೊಂಡು,

**ಗದ್ಯಾನುಸರಣ:** ಹಾಗೆ ಬಂದ ಶಚಿಯು ಮೂಲೋಕದೊಡೆಯನನ್ನು ದೇವೇಂದ್ರನು ಚಾಚಿದ ತೋಳುಬಂದಿಯ ಕಾಂತಿಯಿಂದ ಶೋಭಿಸುತ್ತಿದ್ದ ತೋಳುಗಳಿಗೆ ನೀಡಿದಳು; ಕಲ್ಪವೃಕ್ಷವು ನೀಡಿದ ಪರಿಮಳದ್ರವ್ಯಗಳಿಂದ ಲೇಪಿತವಾದ ಮಗುವನ್ನು ಸೌಧರ್ಮೇಂದ್ರನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡ.

**ತ್ರಿಜಗನ್ನಾಥನ ಮಜ್ಜನಕ್ಕೆ ಮಣಿಪೀಠಾಕಾರದಂತಾಗಿ ವಿ**
**ಶ್ವಜಗತ್ಪೂಜಿತವಾಗಿ ಪೆಂಪುವಡೆದಾ ಹೇಮಾಚಳೇಂದ್ರಕ್ಕೆ ಕ**
**ಲ್ಪಜರಂ ಪೋಗಲೆ ಸನ್ನೆಗೆಯ್ಯೆ ಭಗವಜ್ಜನ್ಮಾಭಿಷೇಕೋತ್ಸವ**
**ಧ್ವಜಮಂ ಪೋಲ್ತುದು ರತ್ನರಂಜಿತಭುಜಾದಂಡಂ ಸುರಾಧೀಶನಾ॥೯**

**ಪದವಿಭಾಗ-ಅನ್ವಯ-ಅರ್ಥ:** ತ್ರಿಜಗನ್ನಾಥನ ಮಜ್ಜನಕ್ಕೆ = ಮೂಲೋಕದೊಡೆಯನ ಸ್ನಾನಕ್ಕೆ, ಮಣಿಪೀಠ + ಆಕಾರದಂತಾಗಿ = ಮಣಿಪೀಠದ ಆಕಾರವನ್ನು ಪಡೆದು, ವಿಶ್ವಜಗತ್ಪೂಜಿತಂ + ಆಗಿ ಪೆಂಪುವಡೆದ = ಇಡೀ ವಿಶ್ವದ ಗೌರವಕ್ಕೆ ಪಾತ್ರವಾಗಿ ಹಿರಿಮೆವಡೆದ, ಆ ಹೇಮಾಚಳೇಂದ್ರಕ್ಕೆ ಪೋಗಲೆ ಕಲ್ಪಜರಂ ಸನ್ನೆಗೆಯ್ಯೆ = ಹಿಮವತ್ಪರ್ವತಕ್ಕೆ ಹೋಗಲು ಕಲ್ಪಾಮರರಿಗೆ ಸನ್ನೆ ಮಾಡಲು, ಸುರ + ಆಧೀಶನಾ ರತ್ನರಂಜಿತಭುಜಾದಂಡಂ = ದೇವೇಂದ್ರನ ರತ್ನಕಾಂತಿಯುಕ್ತವಾದ ತೋಳು, ಭಗವತ್ + ಜನ್ಮ + ಅಭಿಷೇಕ + ಉತ್ಸವ ಧ್ವಜಮಂ ಪೋಲ್ತುದು = ಭಗವಂತನ ಜನ್ಮಕಲ್ಯಾಣ ಸಂಭ್ರಮಕ್ಕೆಂದು ಎತ್ತಿ ಹಿಡಿದ ಬಾವುಟದಂತೆ ತೋರಿತು.

**ಗದ್ಯಾನುಸರಣ:** ಮೂಲೋಕದೊಡೆಯನ ಸ್ನಾನಕ್ಕೆಂದು ಮಣಿಪೀಠದ ಆಕಾರವನ್ನು ಪಡೆದು ಇಡೀ ವಿಶ್ವದ ಗೌರವಕ್ಕೆ ಪಾತ್ರವಾಗಿ ಹಿಮವತ್ಪರ್ವವು ಹಿರಿಮೆವಡೆದಿತ್ತು; ಅಲ್ಲಿಗೆ ಹೋಗಲು ಇಂದ್ರನು ಕಲ್ಪಾಮರರಿಗೆ ತೋಳೆತ್ತಿ ಸನ್ನೆ ಮಾಡಿದ; ಆಗ ದೇವೇಂದ್ರನ ರತ್ನಕಾಂತಿಯುಕ್ತವಾದ ಆ ತೋಳು ಭಗವಂತನ ಜನ್ಮಕಲ್ಯಾಣ ಸಂಭ್ರಮಕ್ಕೆಂದು ಎತ್ತಿ ಹಿಡಿದ ಬಾವುಟದಂತೆ ತೋರಿತು

**ವ॥ ಆಗಳ್ ಸೌಧರ್ಮೇಂದ್ರನೇಱಿದೈರಾವತಗಜೇಂದ್ರಕ್ಕೆ ನಿಜಗಜೇಂದ್ರಂಗಳಂ ಪಕ್ಕುವಮಾಡಿ,**

**ಅರ್ಥ:** ಆಗಳ್ ಸೌಧರ್ಮೇಂದ್ರನ್ + ಏಱಿದೈರಾವತಗಜೇಂದ್ರಕ್ಕೆ ನಿಜ

ಗಜೇಂದ್ರಂಗಳಂ ಪಕ್ಕುಮಾಡಿ = ಆಗ ಸೌಧರ್ಮೇಂದ್ರನು ಹತ್ತಿದ ಐರಾವತವನ್ನು ತಮ್ಮ ಆನೆಗಳು ಅನುಸರಿಸುವಂತೆ ಕಲ್ಪಜರು ನೋಡಿಕೊಂಡರು.

**ಹಿಮಕರಬಿಂಬನಿಭಚ್ಛ**
**ತ್ರಮನೀಶಾನೇಂದ್ರನೆತ್ತಿದಂ ತತ್ಕರವಿ**
**ಭ್ರಮದಿಂ ಪದಪೊದವೆ ಸನ**
**ತ್ಕುಮಾರಮಾಹೇಂದ್ರರಿಕ್ಕಿದರ್ ಚಾಮರಮಂ** ೫೦

**ಪದವಿಭಾಗ–ಅನ್ವಯ–ಅರ್ಥ:** ಈಶಾನೇಂದ್ರನ್ ಹಿಮಕರಬಿಂಬನಿಭಚ್ಛತ್ರಮನ್ ಎತ್ತಿದಂ = ಈಶಾನೇಂದ್ರನು ಚಂದ್ರಬಿಂಬದಂತಿದ್ದ ಬೆಳ್ಗೊಡೆಯನ್ನು ಮಗುವಿನ ಮೇಲೆ ಎತ್ತಿ ಹಿಡಿದ; ಸನತ್ಕುಮಾರಮಾಹೇಂದ್ರರ್ ತತ್ + ಕರವಿಭ್ರಮದಿಂ = ಸನತ್ಕುಮಾರ ಮಹೇಂದ್ರರು ತಮ್ಮ ಬೆಡಗುಗೈಗಳಿಂದ, ಪದಪು + ಒದವೆ ಚಾಮರಮಂ ಇಕ್ಕಿದರ್ = ಸೊಗಸಾಗಿ ಚಾಮರಗಳಿಂದ ಬೀಸಿದರು.

**ಗದ್ಯಾನುಸರಣ:** ಈಶಾನೇಂದ್ರನು ಚಂದ್ರಬಿಂಬದಂತಿದ್ದ ಬೆಳ್ಗೊಡೆಯನ್ನು ಮಗುವಿನ ಮೇಲೆ ಎತ್ತಿ ಹಿಡಿದ; ಸನತ್ಕುಮಾರ ಮಹೇಂದ್ರರು ತಮ್ಮ ಬೆಡಗುಗೈಗಳಿಂದ ಚಾಮರಗಳಿಂದ ಮೆಲುವಾಗಿ ಬೀಸಿದರು.

**ಲಟಹಯುತಂಗಳ್ ದುಗ್ಧ**
**ಚ್ಛಟೋಜ್ಜ್ವಲಂಗಳ್ ತದಮರಚಮರರುಹಂಗಳ್**
**ಸ್ಫುಟಹಸಿತಮುಕ್ತಿಲಕ್ಷ್ಮೀ**
**ಕಟಾಕ್ಷವಿಕ್ಷೇಪರುಚಿಯನೇಂ ತಾಳ್ದಿದುವೋ** ೫೧

**ಪದವಿಭಾಗ–ಅನ್ವಯ–ಅರ್ಥ:** ಲಟಹಯುತಂಗಳ್ ದುಗ್ಧಚ್ಛಟ + ಉಜ್ಜ್ವಲಂಗಳ್ ತತ್ + ಅಮರಚಮರರುಹಂಗಳ್ = ಲಾವಣ್ಯಯುಕ್ತವೂ ಹಾಲಿನ ಬಿಳುಪಿಂತೆ ಉಜ್ವಲವಾದವೂ ಆದ ಆ ಇಂದ್ರರ ಚಾಮರಗಳು, ಸ್ಫುಟಹಸಿತಮುಕ್ತಿಲಕ್ಷ್ಮೀ ಕಟಾಕ್ಷವಿಕ್ಷೇಪರುಚಿಯನ್ + ಏಂ ತಾಳ್ದಿದುವೋ = ಮುಕ್ತವಾಗಿ ನಗುವ ಮುಕ್ತಿಲಕ್ಷ್ಮಿಯ ಕುಡಿನೋಟದ ಕಾಂತಿಯನ್ನೇನು ಪಡೆದುವೋ!

**ಗದ್ಯಾನುಸರಣ:** ಲಾವಣ್ಯದಿಂದ ಕೂಡಿದ ಹಾಗೂ ಹಾಲಿನ ಬಿಳುಪಿಂತೆ ಉಜ್ವಲವಾದ ಆ ಇಂದ್ರರ ಚಾಮರಗಳು ಮುಕ್ತವಾಗಿ ನಗುವ ಮುಕ್ತಿಲಕ್ಷ್ಮಿಯ ಕುಡಿನೋಟದ ಕಾಂತಿಯನ್ನು ಪಡೆದುವು!

**ಎಱಗುವ ಮಕುಟಂಗಳ್ ಚೋದ್ಯಮೆಂದತ್ತಮಿತ್ತಂ**
**ನಿಱಿವ ಕರಯುಗಂಗಳ್ ಪೊಯ್ವ ದೇವಾನಕಂಗಳ್**
**ಮುಱುಕದಮರಕಾಂತಾನರ್ತನಂಗಳ್ ಬೆಡಂಗಂ**
**ಮೆಱೆಯೆ ದಿವಿಜವೃಂದಂ ತಂದುದಂದೊಂದು ಚೆಲ್ವಂ** ೫೨

**ಪದವಿಭಾಗ-ಅನ್ವಯ-ಅರ್ಥ:** ಎಱಗುವ ಮಕುಟಂಗಳ್ = ಬಾಗುವ ಕಿರೀಟಗಳೂ, ಚೋದ್ಯಮೆಂದತ್ತಮಿತ್ತಂ ನಿಜಿವ ಕರಯುಗಂಗಳ್ = ಅಚ್ಚರಿ ಎಂದು ಆ ಈ ಕಡೆ ಮುಗಿದ ಕೈಗಳೂ, ಪೊಯ್ವ ದೇವ + ಆನಕಂಗಳ್ = ಶಬ್ದಮಾಡುವ ದೇವನಗಾರಿಗಳೂ, ಮುಱುಕದ + ಅಮರಕಾಂತಾನರ್ತನಂಗಳ್ = ಒಯ್ಯಾರದ ದೇವ ವನಿತೆಯರ ಕುಣಿತವೂ, ಬೆಡಂಗಂ ಮೆಱೆಯೆ = ಬೆಡಗನ್ನು ಸೂಸಲು, ದಿವಿಜವೃಂದಂ ಅಂದು + ಒಂದು ಚೆಲ್ವಂ ತಂದುದು = ಇಡೀ ದೇವಗಣವು ವಿಶಿಷ್ಟ ಸೊಬಗನ್ನು ತಂದಿತ್ತು.

**ಗದ್ಯಾನುಸರಣ:** ಬಾಗುವ ಕಿರೀಟಗಳೂ 'ಅಚ್ಚರಿ' ಎಂದು ಉದ್ಗರಿಸುತ್ತ ಆ ಈ ಕಡೆ ಮುಗಿದ ಕೈಗಳೂ ಶಬ್ದಮಾಡುವ ದೇವನಗಾರಿಗಳೂ ಒಯ್ಯಾರದ ದೇವವನಿತೆಯರ ಕುಣಿತವೂ ಬೆಡಗನ್ನು ಸೂಸಲು ಇಡೀ ದೇವಗಣವು ಒಂದು ವಿಶಿಷ್ಟ ಸೊಬಗನ್ನು ತಂದಿತ್ತು.

**ವ। ಆ ಪ್ರಸ್ತಾವದೊಳ್,**

**ಅರ್ಥ:** ಆ ಪ್ರಸ್ತಾವದೊಳ್ = ಆ ಸಂದರ್ಭದಲ್ಲಿ,

**ನೆಗಟ್ದೈರಾವತದಂತಿಗಾದುದು ಮೊಗಂ ಮೂವತ್ತೆರಟ್ನೋಟ್ಪೊಡಾ**
**ಮೊಗಮೊಂದೊಂದಱೊಳೆಂಟು ಕೋಡವಱೊಳಂತೊಂದೊದಱೊಳ್ ಪೂಗೊಳಂ**
**ನೆಗಟ್ದೊಂದೊಂದೆಸೆದಿರ್ಕುಮಾ ಕೊಳಂಗಳಂತೊಂದೊಂದೊದಱೊಳ್ ಚಿತ್ರಪ**
**ತ್ರಗಣಂ ಪದ್ಮಿನಿ ನಾಡೆ ಚೆಲ್ವನೊಳಕೊಂಡೊಂದೊಂದೆ ಕಣ್ಗೊಪ್ಪುಗುಂ೫೩**

**ಪದವಿಭಾಗ-ಅನ್ವಯ-ಅರ್ಥ:** ನೆಗಟ್ದ + ಐರಾವತದಂತಿಗೆ ಮೂವತ್ತೆರಟ್ ಮೊಗಂ ಆದುದು = ಸುಪ್ರಸಿದ್ಧವಾದ ಐರಾವತ ಆನೆಗೆ ಮೂವತ್ತೆರಡು ಮುಖಗಳುಂಟಾದುವು; ನೋಟ್ಪೊಡೆ + ಆ ಮೊಗಂ + ಒಂದೊಂದಱೊಳ್ + ಎಂಟು ಕೋಡು = ನೋಡನೋಡುತ್ತಿರುವಂತೆಯೇ ಒಂದೊಂದು ಮುಖದಲ್ಲಿಯೂ ಎಂಟು ದಂತಗಳು, ಅಂತು ಅವಱೊಳ್ ಒಂದೊದಱೊಳ್ ಒಂದೊಂದು + ಪೂಗೊಳಂ ನೆಗಟ್ದು ಎಸೆದಿರ್ಕುಂ = ಹಾಗೆಯೇ ಅವುಗಳಲ್ಲಿ ಒಂದೊಂದರಲ್ಲಿಯೂ ಒಂದೊಂದು ಹೂವಿನ ಕೊಳವು ಶೋಭಿಸುತ್ತಿತ್ತು; ಅಂತು ಆ ಕೊಳಂಗಳ್ ಒಂದೊಂದೊದಱೊಳ್ = ಅಂತೆಯೇ ಆ ಒಂದೊಂದು ಕೊಳದಲ್ಲಿಯೂ, ನಾಡೆ ಚೆಲ್ವನ್ + ಒಳಕೊಂಡು = ಆಕರ್ಷಕ ಎಲೆಗಳ ಸಮೂಹವುಳ್ಳ, ಚಿತ್ರಪತ್ರಗಣಂ ಪದ್ಮಿನಿ ಒಂದೊಂದೆ ಕಣ್ಗೆ + ಒಪ್ಪುಗುಂ = ಒಂದೊಂದು ತಾವರೆ ಬಳ್ಳಿಯು ಶೋಭಿಸುತ್ತಿತ್ತು.

ಗದ್ಯಾನುಸರಣ: ಸುಪ್ರಸಿದ್ಧವಾದ ಐರಾವತ ಆನೆಗೆ ಮೂವತ್ತೆರಡು ಮುಖಗಳುಂಟಾದುವು; ನೋಡನೋಡುತ್ತಿರುವಂತೆಯೇ ಒಂದೊಂದು ಮುಖದಲ್ಲಿಯೂ ಎಂಟು ದಂತಗಳು; ಹಾಗೆಯೇ ಪ್ರತಿಯೊಂದು ದಂತದಲ್ಲಿ ಒಂದೊಂದು ಹೂವಿನ ಕೊಳವು ಶೋಭಿಸುತ್ತಿತ್ತು; ಅಂತೆಯೇ ಆ ಒಂದೊಂದು ಕೊಳದಲ್ಲಿಯೂ ಆಕರ್ಷಕ ಎಲೆಗಳ ಸಮೂಹವುಳ್ಳ ಒಂದೊಂದು ತಾವರೆ ಬಳ್ಳಿಯು ಶೋಭಿಸುತ್ತಿತ್ತು.

**ಪೊಸಪೂವಬ್ಜಿನಿಂಯೊಂದಱೊಳ್ ಸೊಗಯಿಕುಂ ಮೂವತ್ತೆರಟ್ಪೂವಿನೊಳ್**
**ಪೊಸಗಂಪಂ ಪುದಿದೊಪ್ಪಿ ತೋಱುವೆಸಳ್ಗಳ್ಮೂವತ್ತೆರಟ್ಚೆಲ್ವನ**
**ಪ್ಪೆಸಳೋರೊಂದಱ ಮೇಲೆ ಲೀಲೆ ಮಿಗೆ ಮೂವತ್ತಿರ್ವರೋರಂತೆ ನ**
**ರ್ತಿಸೆ ದೇವಾಂಗನೆಯರ್ ಬೆಡಂಗನೊಳಕೊಂಡತ್ತಿಂದ್ರರುಂದ್ರದ್ವಿಪಂ ೫೪**

ಪದವಿಭಾಗ-ಅನ್ವಯ-ಅರ್ಥ: ಅಬ್ಜಿನಿಯೊಂದಱೊಳ್ ಮೂವತ್ತೆರಟ್ ಪೊಸಪೂವು ಸೊಗಯಿಕುಂ = ತಾವರೆಬಳ್ಳಿಯೊಂದೊಂದರಲ್ಲಿಯೂ ಮೂವತ್ತೆರಡು ಹೊಸಗೂಗಳು ಶೋಭಿಸುತ್ತವೆ; ಪೂವಿನೊಳ್ ಪೊಸಗಂಪಂ ಪುದಿದು + ಒಪ್ಪಿ ತೋಱುವ + ಎಸಳ್ಗಳ್ + ಮೂವತ್ತೆರಟ್ = ಒಂದೊಂದು ಹೂವಿನಲ್ಲಿಯೂ ಹೊಸಗಂಪನ್ನು ತುಂಬಿಕೊಂಡು ಸೊಗಸುವ ಮೂವತ್ತೆರಡು ದಳಗಳು; ಚೆಲ್ವನಪ್ಪ + ಎಸಳ್ + ಓರೊಂದಱ ಮೇಲೆ ಮೂವತ್ತಿರ್ವರ್ ದೇವಾಂಗನೆಯರ್ = ಸುಂದರವಾದ ಒಂದೊಂದು ದಳದ ಮೇಲೆಯೂ ಮೂವತ್ತೆರಡು ಮಂದಿ ದೇವತಾಸ್ತ್ರೀಯರು, ಓರಂತೆ ಲೀಲೆ ಮಿಗೆ ನರ್ತಿಸೆ = ಒಂದೇ ಸಮನೆ ಲೀಲಾವಿಲಾಸ ದಿಂದ ಕುಣಿಯುತ್ತಿರಲು, ಇಂದ್ರರುಂದ್ರದ್ವಿಪಂ ಬೆಡಂಗನ್ + ಒಳಕೊಂಡತ್ತು = ಇಂದ್ರನ ಮಹಾ ಆನೆಯು ಅದ್ಭುತತೆಯನ್ನು ಒಳಗೊಂಡಿತ್ತು.

ಗದ್ಯಾನುಸರಣ: ಒಂದೊಂದು ತಾವರೆಬಳ್ಳಿಯಲ್ಲಿಯೂ ಮೂವತ್ತೆರಡು ಹೊಸಗೂಗಳು ಶೋಭಿಸುತ್ತವೆ; ಒಂದೊಂದು ಹೂವಿನಲ್ಲಿಯೂ ಹೊಸಗಂಪನ್ನು ತುಂಬಿಕೊಂಡು ಸೊಗಸುವ ಮೂವತ್ತೆರಡು ದಳಗಳು; ಸುಂದರವಾದ ಒಂದೊಂದು ದಳದ ಮೇಲೆಯೂ ಮೂವತ್ತೆರಡು ಮಂದಿ ದೇವತಾಸ್ತ್ರೀಯರು ಒಂದೇ ಸಮನೆ ಲೀಲಾವಿಲಾಸದಿಂದ ಕುಣಿಯುತ್ತಿದ್ದರು; ಹೀಗೆ ಇಂದ್ರನ ಮಹಾ ಆನೆಯು ಅದ್ಭುತವಾಗಿ ಕಾಣುತ್ತಿತ್ತು.

**ವದನಕ್ಕೆಮ್ಮ ತಳಕ್ಕೆ ನೀಳ್ದ ನಗೆಗಣ್ಗಂ ತಾಂ ಗಡಂ ತನ್ನ ನೀ**
**ಳ್ದ ದಳಂಗಳ್ ಗಡ ಪೋಲ್ವೆಯೆಂಬ ಸೆಣಸಿಂ ಮಿಕ್ಕೇವದಿಂದಿಕ್ಕಿ ಮೆ**
**ಟ್ಟಿದರೀ ಕಾಂತೆಯರೀ ಸರೋರುಹದಳವ್ರಾತಂಗಳಂ ತಪ್ಪದೆಂ**
**ಬುದನೆಂಬನ್ನೆಗಮೇಂ ಬೆಡಂಗೆಸೆದುದೋ ದೇವಾಂಗನಾನರ್ತನಂ ೫೫**

**ಪದವಿಭಾಗ–ಅನ್ವಯ–ಅರ್ಥ:** ವದನಕ್ಕೆ + ಎಮ್ಮ ತಳಕ್ಕೆ ತಾಂ ಗಡಂ = ಅವರ ಮುಖಕ್ಕೂ ತನ್ನ ತಳಗಳಿಗೂ, ನೀಳ್ದ ನಗೆಗಣ್ಗಂ ತನ್ನ ನೀಳ್ದ ದಳಂಗಳ್ ಗಡ ಪೋಲ್ವೆ = ನೀಳವಾದ ನಗೆಗಣ್ಣುಗಳಿಗೆ ತನ್ನ ನೀಳವಾದ ಎಸಳುಗಳು ಹೋಲಿಕೆಯಲ್ಲವೇ, ಎಂಬ ಸೆಣಸಿಂ = ಎಂಬಂತಹ ಸ್ಪರ್ಧೆಯಿಂದ, ಮಿಕ್ಕ + ಏವದಿಂದೆ ಈ ಸರೋರುಹದಳವ್ರಾತಂಗಳಂ = ಮಿಗಿಲಾದ ಹುರುಪಿನಿಂದ ಈ ತಾವರೆಗಳನ್ನು, ಈ ಕಾಂತೆಯರ್ ಇಕ್ಕಿ ಮೆಟ್ಟಿದರ್ = ಈ ವನಿತೆಯರು ಜೋರಾಗಿ ತುಳಿಯುತ್ತಿದ್ದಾರೆ, ತಪ್ಪದು + ಎಂಬುದನ್ + ಎಂಬನ್ನೆಗಂ = ಖಂಡಿತ ಎನ್ನುವ ಭಾವನೆ ಬರುವಂತೆ, ದೇವಾಂಗನಾನರ್ತನಂ ಏಂ ಬೆಡಂಗು + ಎಸೆದುದೋ = ದೇವಾಂಗನೆಯರ ಕುಣಿತವು ಅದೆಂಥ ಸೊಬಗನ್ನು ಪಡೆಯಿತು.

**ಗದ್ಯಾನುಸರಣ:** ಅವರ ಮುಖಗಳಿಗೆ ತನ್ನ ತಳಗಳೂ, ನೀಳವಾದ ಅವರ ನಗೆಗಣ್ಣುಗಳಿಗೆ ತನ್ನ ನೀಳವಾದ ಎಸಳುಗಳೂ ಹೋಲಿಕೆಯಲ್ಲವೇ ಎಂಬಂತಹ ಸ್ಪರ್ಧೆಯಿಂದ ಮಿಗಿಲಾದ ಹುರುಪಿನಿಂದ ಈ ತಾವರೆಗಳನ್ನು ವನಿತೆಯರು ಜೋರಾಗಿ ತುಳಿಯುತ್ತಿದ್ದಾರೆ, ಇದು ಖಂಡಿತ ಎನ್ನುವ ಭಾವನೆ ಬರುವಂತೆ ದೇವಾಂಗನೆಯರ ಕುಣಿತವು ಅತೀವ ಸೊಬಗನ್ನು ಪಡೆಯಿತು.

**ನವಕಮಳದಳಂಗಳ್ ಭೀಕರಂ ಬಲ್ಪುವಾಗಿ**
**ರ್ಪುವೆ ತಳಕೆ ತಳಂಗಳ್ ನೋಯುವೇ ಮೆಟ್ಟಿದಂದೆಂ**
**ದವಱಿಸಳನವಳ್ದಿರ್ ಮೆಟ್ಟಿದರ್ ಮೆಟ್ಟರೆಂಬಂ**
**ತವಯುವದೊಳೆ ಲೀಲಾನೃತ್ಯದಿಂ ಕಣ್ಗೆ ವಂದರ್** ೫೬

**ಪದವಿಭಾಗ–ಅನ್ವಯ–ಅರ್ಥ:** ನವಕಮಳದಳಂಗಳ್ ಭೀಕರಂ ಬಲ್ಪುಂ + ಆಗಿರ್ಪುವೆ = ಹೊಸತಾದ ಕಮಲದ ಎಸಳುಗಳು ಭಯಂಕರವೂ ಗಡಸೂ ಆಗಿವೆಯೇನು, ತಳಕೆ ಮೆಟ್ಟಿದಂದು ತಳಂಗಳ್ ನೋಯವೇ = ತಳಕ್ಕೆ ತುಳಿದಾಗ ಪಾದತಳಗಳು ನೋಯುವುದಿಲ್ಲವೇ, ಎಂದು + ಅವಱ + ಎಸಳನ್ + ಅವಳ್ದಿರ್ = ಎಂದು ಅವುಗಳ ಎಸಳುಗಳನ್ನು ಅವರು, ಮೆಟ್ಟರ್ + ಎಂಬಂತೆ ಅವಯವ ದೊಳೆ ಮೆಟ್ಟಿದರ್ = ತುಳಿದೂ ತುಳಿಯದ ಹಾಗೆ ನವಿರಾಗಿ ನರ್ತಿಸಿದರು, ಲೀಲಾನೃತ್ಯದಿಂ ಕಣ್ಗೆ ವಂದರ್ = ಹೀಗೆ ತಮ್ಮ ಸೊಬಗಿನ ನರ್ತನದಿಂದ ಕಣ್ಣುಗಳಿಗೆ ಸೊಗಸಿದರು.

**ಗದ್ಯಾನುಸರಣ:** ಹೊಸತಾದ ಕಮಲದ ಎಸಳುಗಳು ತುಂಬ ಗಡುಸಾಗಿವೆಯೇನೋ, ತಳಕ್ಕೆ ತುಳಿದಾಗ ಪಾದತಳಗಳು ನೋಯುತ್ತವೇನೋ ಎಂಬಂತೆ ತಾವರೆಗಳ ಎಸಳುಗಳನ್ನು ಅವರು ತುಳಿದೂ ತುಳಿಯದ ಹಾಗೆ

ನವಿರಾಗಿ ನರ್ತಿಸಿ ನೋಡುವವರ ಕಣ್ಣುಗಳಿಗೆ ಸೊಗಸಿದರು.

**ನಡೆ ನೋಡಲ್ ರೂಪು ಕೇಳಲ್ ನುಡಿ ಪುರದ ಜನಕ್ಕಾಯ್ತು ಮುನ್ನಂತೆ ಮೇಗ**
**ಣ್ಗಡರ್ದಾಗಳ್ ಮೆಯ್ಯ ಕಾಣಲ್ ಕಳಕಳಮಿನಿಸಂ ಕೇಳಲಾಯ್ತಂತು ಮತ್ತಂ**
**ನಡೆಗೊಂಡಾಗಳ್ ತನುವ್ಯಕ್ತಿಯನಜಿಯಣಂ ಬಾರದಾಯ್ತತ್ತಣಂ ಕಾ**
**ಣ್ಬೆಡೆಗಂ ಗೆಂಟಾದುದೆಂಬಂತಿರೆ ಗಗನತಳೋದ್ಗಾಮಿಯಾಯ್ತಿಂದ್ರಸೈನ್ಯಂ॥೭**

**ಪದವಿಭಾಗ–ಅನ್ವಯ–ಅರ್ಥ:** ಮುನ್ನೆ + ಅಂತೆ ನಡೆ ನೋಡಲ್ ರೂಪು = ಮೊದಲು ಹಾಗೆಯೇ ಚೆನ್ನಾಗಿಯೇ ಆಕಾರವನ್ನು ನೋಡಲೂ, ಕೇಳಲ್ ನುಡಿ ಪುರದ ಜನಕ್ಕೆ + ಆಯ್ತು = ಧ್ವನಿ ಕೇಳಲೂ ಊರ ಜನಕ್ಕೆ ಸಾಧ್ಯವಾಯಿತು, ಮೇಗಣ್ಗೆ + ಅಡರ್ದಾಗಳ್ ಮೆಯ್ಯ ಕಾಣಲ್ ಕಳಕಳಂ + ಇನಿಸಂ ಕೇಳಲಾಯ್ತು = ಮೇಲಕ್ಕೆ ಅಡರಿದಾಗ ಅವರ ದೇಹಗಳನ್ನು ನೋಡಲೂ ಧ್ವನಿಯನ್ನು ಕೇಲಲೂ ಸ್ವಲ್ಪವೇ ಸಾಧ್ಯವಾಯಿತು, ಅಂತು ಮತ್ತಂ ನಡೆಗೊಂಡಾಗಳ್ = ಹಾಗೆಯೇ ಮತ್ತೂ ಮುಂದುವರಿದಾಗ, ತನುವ್ಯಕ್ತಿಯನಜಿಯಲ್ + ಅಣಂ ಬಾರದಾಯ್ತು = ವ್ಯಕ್ತಿದೇಹಗಳು ಸ್ವಲ್ಪವೂ ಕಾಣದಾದುವು, ಅತ್ತಣಂ ಕಾಣ್ಬಎಡೆಗಂ ಗೆಂಟಾದುದು = ಆನಂತರ ಕಾಣಲು ಕೂಡ ದೂರವಾಯಿತು, ಎಂಬಂತಿರೆ ಇಂದ್ರಸೈನ್ಯಂ ಗಗನತಳ + ಉದ್ಗಾಮಿಯಾಯ್ತು = ಎನ್ನುವ ರೀತಿಯಲ್ಲಿ ಇಂದ್ರನ ಸೈನ್ಯವು ಆಗಸತಳದಲ್ಲಿ ಪಯಣ ಬೆಳೆಸಿತು.

**ಗದ್ಯಾನುಸರಣ:** ಇಂದ್ರನ ಸೈನ್ಯವು ಆಗಸತಳದಲ್ಲಿ ಪಯಣ ಬೆಳೆಸಿತು: ಮೊದಲು ಅವರ ರೂಪನ್ನು ಚೆನ್ನಾಗಿ ನೋಡಲೂ ನುಡಿಗಳನ್ನು ಸ್ಪಷ್ಟವಾಗಿ ಕೇಳಲೂ ಊರ ಜನಕ್ಕೆ ಸಾಧ್ಯವಾಯಿತು, ಅವರು ಮೇಲಕ್ಕೆ ಅಡರಿದಾಗ ಅವರ ದೇಹಗಳನ್ನು ನೋಡಲೂ ಧ್ವನಿಯನ್ನು ಕೇಳಲೂ ಸ್ವಲ್ಪವೇ ಸಾಧ್ಯವಾಯಿತು, ಮತ್ತೂ ಮುಂದುವರಿದಾಗ ವ್ಯಕ್ತಿದೇಹಗಳು ಸ್ವಲ್ಪವೂ ಕಾಣದಾದುವು, ಆನಂತರ ಕಾಣಲು ಕೂಡ ಸಾಧ್ಯವಾಗದಷ್ಟು ದೂರವಾಯಿತು.

**ವ॥ ಆಗಳ್ ಮೇರುಗಿರೀಂದ್ರಂಬರಮಿಂದ್ರ ನೀಲಶಿಲಾತಳಮಣಿಮಯ ಸೋಪಾನ ಪಜ್ತಿತ್ರಯ ರೂಪದಿನಂಬರಮೆ ಜಿನರಾಜಭಕ್ತಿಯಿಂ ಪರಿಣಾಮಿಸಿ ದಂತೆ ಸೊಗಯಿಸಿರ್ದ ಸೋಪಾನ ಪಜ್ತಿಮಾರ್ಗಂಗಳೊಳ್ ನಿಜಸ್ತಂಬೇರಮ ಘಟಾಟೋಪಮಂ ಬೆರಸಿಂಬಾಗಿ ಪೋಗೆಪೋಗೆ,**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ ಮೇರುಗಿರೀಂದ್ರಂಬರಂ = ಆಗ ಮೇರುಪರ್ವತದವರೆಗೂ, ಇಂದ್ರನೀಲಶಿಲಾತಳಮಣಿಮಯ ಸೋಪಾನಪಜ್ತಿತ್ರಯ ರೂಪದಿನ್ = ಇಂದ್ರನೀಲಮಣಿಗಳ ಚಪ್ಪಡಿಗಳಿಂದ ಮಾಡಿದ ಮೂರು

ಮೆಟ್ಟಿಲುಸಾಲುಗಳ ರೀತಿಯಲ್ಲಿ, ಅಂಬರಮೆ ಜಿನರಾಜಭಕ್ತಿಯಿಂ ಪರಿಣಾಮಿಸಿದಂತೆ = ಆಕಾಶವೇ ಜಿನನ ಬಗೆಗಿನ ಭಕ್ತಿಯಿಂದ ಆನಂದಿಸಿದಂತೆ, ಸೊಗಯಿಸಿರ್ದ ಸೋಪಾನಪಜ್ತಿಮಾರ್ಗಂಗಳೊಳ್ = ಸುಂದರವಾಗಿದ್ದ ಮೆಟ್ಟಿಲುಸಾಲುಗಳಲ್ಲಿ, ನಿಜಸ್ತಂಬೇರಮಘಂಟಾ + ಆಟೋಪಂ ಬೆರಸು + ಇಂಬಾಗಿ ಪೋಗೆ + ಪೋಗೆ = ತಮ್ಮ ಆನೆಗಳ ಗಂಟೆಗಳ ಶಬ್ದದಿಂದೊಡಗೂಡಿ ಮುಂದುವರಿಯಲು,

**ಗದ್ಯಾನುಸರಣ:** ಆಗ ಮೇರುಪರ್ವತದವರೆಗೂ ಇಂದ್ರನೀಲಮಣಿಗಳ ಚಪ್ಪಡಿಗಳಿಂದ ಮಾಡಿದ ಮೂರು ಮೆಟ್ಟಿಲುಸಾಲುಗಳು ರೀತಿಯಲ್ಲಿ ಆಕಾಶವೇ ಜಿನನ ಬಗೆಗಿನ ಭಕ್ತಿಯಿಂದ ಆನಂದಿಸಿದಂತೆ ಸೊಗಸಿದುವು; ಅಂಥ ಸುಂದರವಾಗಿದ್ದ ಮೆಟ್ಟಿಲುಸಾಲುಗಳ ಮೇಲೆ ಮುಂದುವರಿಯಲು ಅವರ ಆನೆಗಳ ಗಂಟೆಗಳು ಜೋರಾಗಿ ಶಬ್ದಮಾಡುತ್ತಿದ್ದುವು.

**ಕಡುಗೆಂಪೇಜಿತ್ತು ನಾನಾಭರಣಕಿರಣದಿಂದಾಗಳಾಕಾಶದೊಂದೊಂ**
**ದೆಡೆ ಬೆಳ್ಪೇಜಿತ್ತು ಚಂಚಚ್ಚಮರರುಸಹಸ್ರಂಗಳಿಂ ವ್ಯೋಮದೊಂದೊಂ**
**ದೆಡೆ ಕರ್ಪೇಜಿತ್ತು ದೇವದ್ವಿರದದ ಘಟೆಯಿಂದಂ ನಭೋಭಾಗದೊಂದೊಂ**
**ದೆಡೆಯೆಂಬಂತಾಗೆ ಚೆಲ್ವಾವೆಡೆಯುಮೆಸೆವಿನಂ ರಯ್ಯಮಾಯ್ತಿಂದ್ರಸೈನ್ಯಂ ೫೮**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ ನಾನಾ + ಆಭರಣಕಿರಣದಿಂದೆ = ಆಗ ವಿವಿಧ ಆಭರಣಗಳ ಕಾಂತಿಯಿಂದ, ಆಕಾಶದ + ಒಂದೊಂದು + ಎಡೆ ಕಡುಗೆಂಪು + ಏಜಿತ್ತು = ಆಗಸದ ಒಂದೊಂದು ಭಾಗವೂ ಕೆಂಪಾಯಿತು, ಚಂಚತ್ + ಚಮರರುಸಹಸ್ರಂಗಳಿಂ = ಓಲಾಡುವ ಸಾವಿರಾರು ಚಾಮರಗಳಿಂದ, ವ್ಯೋಮದ + ಒಂದೊಂದು + ಎಡೆ ಬೆಳ್ಪು + ಏಜಿತ್ತು = ಆಗಸದ ಒಂದೊಂದು ಭಾಗವೂ ಬಿಳಪಾಯಿತು, ದೇವದ್ವಿರದದಘಟೆಯಿಂದಂ = ದೇವತೆಗಳ ಆನೆಯ ಗುಂಪಿನಿಂದಾಗಿ, ನಭೋಭಾಗದ + ಒಂದೊಂದು + ಎಡೆ ಕರ್ಪು + ಏಜಿತ್ತು = ಗಗನದ ಒಂದೊಂದು ಭಾಗವೂ ಕಪ್ಪಾಯಿತು, ಎಂಬಂತಾಗೆ ಇಂದ್ರಸೈನ್ಯಂ ಚೆಲ್ವು + ಆವ + ಎಡೆಯುಂ ಎಸೆವಿನಂ ರಯ್ಯಮಾಯ್ತು = ಎನ್ನುವ ಹಾಗೆ ಇಂದ್ರನ ಸೈನ್ಯವು ಎಲ್ಲ ಕಡೆಗಳಲ್ಲಿಯೂ ಚೆಲುವನ್ನು ಸೂಸಿತು.

**ಗದ್ಯಾನುಸರಣ:** ವಿವಿಧ ಆಭರಣಗಳ ಕಾಂತಿಯಿಂದ ಆಗಸದ ಎಲ್ಲೆಡೆಯೂ ಕೆಂಪಾಯಿತು, ಓಲಾಡುವ ಸಾವಿರಾರು ಚಾಮರಗಳಿಂದ ಆಗಸದ ಎಲ್ಲ ಭಾಗಗಳು ಬಿಳಪಾದುವು, ದೇವತೆಗಳ ಆನೆಯ ಗುಂಪಿನಿಂದಾಗಿ ಗಗನದ ಒಂದೊಂದು ಭಾಗವೂ ಕಪ್ಪಾಯಿತು ಎನ್ನುವ ಹಾಗೆ ಇಂದ್ರನ ಸೈನ್ಯವು ಎಲ್ಲ ಕಡೆಗಳಲ್ಲಿಯೂ ಚೆಲುವನ್ನು ಸೂಸಿತು.

ಅದೊಂದೆಡೆ ಸುರಾನಕಪ್ರಕಟಘೋಷದಿಂ ಚೆಲ್ವುವೆ
ತ್ತದೊಂದೆಡೆ ಸುರಾಂಗನಾಮಧುರಗೀತಿಯಿಂದೊಳ್ಪುವೆ
ತ್ತದೊಂದೆಡೆ ಸುರೇಂದ್ರಸೌಂದರಿಯರಾಟದಿಂ ಗಾಡಿವೆ
ತ್ತದೇಂ ಗಗನಮಂಡಲಂ ನೆಱೆಯೆ ಶೋಭೆಯಂ ಪೆತ್ತುದೋ ೫೯

ಪದವಿಭಾಗ-ಅನ್ವಯ-ಅರ್ಥ: ಗಗನಮಂಡಲಂ ಅದೊಂದೆಡೆ = ಆಕಾಶಪ್ರದೇಶವು ಒಂದು ಕಡೆ, ಸುರ + ಆನಕಪ್ರಕಟಘೋಷದಿಂ ಚೆಲ್ವುವೆತ್ತು = ದೇವತೆಗಳ ನಗಾರಿಯ ಜೋರಾದ ಶಬ್ದದಿಂದು ಚೆಲ್ವನ್ನು ಪಡೆದು, ಅದೊಂದೆಡೆ ಸುರಾಂಗನಾಮಧುರಗೀತಿಯಿಂದೊಳ್ಪುವೆತ್ತು = ಮತ್ತೊಂದೆಡೆ ದೇವಾಂಗನೆಯರ ಮಧುರ ಗಾಯನದಿಂದ ಸೊಬಗುವಡೆದು, ಅದೊಂದೆಡೆ ಸುರೇಂದ್ರಸೌಂದರಿಯರ + ಆಟದಿಂ ಗಾಡಿವೆತ್ತು = ಮಗುದೊಂದೆಡೆ ದೇವವನಿತೆಯರ ಮನೋಹರ ಕುಣಿತದಿಂದ ಸೊಗಸನ್ನು ಪಡೆದು, ಅದೇಂ ನೆಱೆಯೆ ಶೋಭೆಯಂ ಪೆತ್ತುದೋ = ಅದೆಂಥ ಅಧಿಕ ಶೋಭೆಯನ್ನು ಪಡೆಯಿತು!

ಗದ್ಯಾನುಸರಣ: ಆಕಾಶಪ್ರದೇಶವು ಒಂದು ಕಡೆ ದೇವತೆಗಳ ನಗಾರಿಯ ಜೋರಾದ ಶಬ್ದದಿಂದು ಚೆಲ್ವನ್ನು ಪಡೆಯಿತು; ಮತ್ತೊಂದೆಡೆ ದೇವಾಂಗನೆಯರ ಮಧುರ ಗಾಯನದಿಂದ ಸೊಬಗುವಡೆದಯಿತು; ಮಗುದೊಂದೆಡೆ ದೇವವನಿತೆಯರ ಮನೋಹರ ಕುಣಿತದಿಂದ ಸೊಗಸನ್ನು ಪಡೆಯಿತು – ಹೀಗೆ ಎಲ್ಲ ಬಗೆಯಲ್ಲಿ ಅತೀವ ಶೋಭೆಯು ತುಂಬಿತು!

ನಾಕಿನಿಕಾಯಂ ಜ್ಯೋತಿ
ರ್ಲೋಕಮನವಯವದಿನುಱಿಯೆ ಪೋಗೆ ಬೞಿಕ್ಕಾ
ಲೋಕಿಪುದಾಯ್ತದನುತ್ಪಳ
ಕೋಕನದಾಕರಮೆ ಗೆತ್ತು ವಿಸ್ಮಯದಿಂದಂ ೬೦

ಪದವಿಭಾಗ-ಅನ್ವಯ-ಅರ್ಥ: ನಾಕಿನಿಕಾಯಂ = ಹೀಗೆ ದೇವಸಮೂಹವು, ಜ್ಯೋತಿರ್ಲೋಕಮನ್ + ಅವಯವದಿನ್ + ಉಱಿಯೆ ಪೋಗೆ ಬೞಿಕ್ಕೆ = ಜ್ಯೋತಿರ್ಲೋಕವನ್ನು ದಾಟಿ ಹೋದ ನಂತರ, ಅದನ್ + ಉತ್ಪಳಕೋಕನದ + ಆಕರಮೆ ಗೆತ್ತು ಆದನ್ನು (ಮಂದರಪರ್ವತವನ್ನು) ನೈದಿಲೆತಾವರೆಗಳ ಸಮೂಹವೋ ಎಂಬ ಭಾವನೆಯಿಂದ, ವಿಸ್ಮಯದಿಂದಂ ಆಲೋಕಿಪುದಾಯ್ತು = ಅಚ್ಚರಿವಟ್ಟು ನೋಡುವಂತಾಯಿತು.

ಗದ್ಯಾನುಸರಣ: ಹೀಗೆ ದೇವಸಮೂಹವು ಜ್ಯೋತಿರ್ಲೋಕವನ್ನು ದಾಟಿ

ಹೋದ ಮೇಲೆ ಅದನ್ನು (ಮಂದರಪರ್ವತವನ್ನು) ನೈದಿಲೆತಾವರೆಗಳ ಸಮೂಹವೋ ಎಂಬ ಭಾವನೆಯಿಂದ ಅಚ್ಚರಿವಟ್ಟು ನೋಡುವಂತಾಯಿತು.

**ವಿಶೇಷ ವಿಚಾರ:** 'ಪರ್ವತದ ಒಂದು ಭಾಗವು ಕಪ್ಪಾಗಿಯೂ, ಇನ್ನೊಂದು ಭಾಗವು ಕೆಂಪಾಗಿಯೂ ಇದ್ದುದರಿಂದ ಹಾಗೆ ಭ್ರಾಂತಿಯಾಯಿತು' – ಕೆ, ಎಲ್. ನರಸಿಂಹಶಾಸ್ತ್ರಿ

**ವ। ಅಂತು ಪೋಗಿ ಮಂದರಾಚಳಮನೈದಿದಾಗಳ್,**

**ಅರ್ಥ:** ಅಂತು ಪೋಗಿ ಮಂದರಾಚಳಮನ್ + ಎಯ್ದಿದಾಗಳ್ = ಹಾಗೆ ಹೋಗಿ ಮಂದರಪರ್ವತವನ್ನು ಸೇರಿದರು

**ಇದಿರಂ ಬರ್ಪಂತುಟಾಯ್ತುಚ್ಚಳಿಸುವಮರತೂರ್ಯಪ್ರತಿಧ್ವಾನದಿಂ ರಾ**
**ಗದಿನಟ್ಟಿರ್ತಾಡುವಂತಾಯ್ತನಿಲವಶಳಚ್ಛಾಖಾಳಿಯಿಂ ಬಂ**
**ದಿದಿರ್ಗೊಳ್ವಂತಾಯ್ತು ಕಲ್ಪಕ್ಷಿತಿರುಹಬಹುಪುಷ್ಪಾರ್ಘ್ಯದಿಂದೆಂಬಿನಂ ಚೆ**
**ಲ್ವಿದಿರ್ಗೊಂಡಂತಿಂದ್ರಶೈಲಕ್ಕತಿಶಯಮಹಿಮಂ ಬಂದೊಡಂದಾದಿದೇವಂ ೬೧**

**ಪದವಿಭಾಗ–ಅನ್ವಯ–ಅರ್ಥ:** ಅತಿಶಯಮಹಿಮಂ ಆದಿದೇವಂ = ಮಹಾಮಹಿಮನಾದ ಆದಿದೇವಶಿಶುವು, ಇಂದ್ರಶೈಲಕ್ಕೆ ಅಂದು ಬಂದೊಡೆ = ಮಂದರಪರ್ವತಕ್ಕೆ ಆಗ ಬರಲು, ಉತ್ + ಚಳಿಸುವ + ಅಮರತೂರ್ಯ ಪ್ರತಿಧ್ವಾನದಿಂ = ಜೋರಾದ ದೇವದುಂದುಭಿಗಳ ಪ್ರತಿಧ್ವನಿಯಿಂದ, ಇದಿರಂ ಬರ್ಪಂತುಟು + ಆಯ್ತು = (ಪರ್ವತವೇ) ಎದುರು ಬಂದಂತಾಯಿತು, ಅನಿಲ ವಶಳತ್ + ಶಾಖಾ + ಆಳಿಯಿಂ = ಗಾಳಿಗೆ ಸಿಕ್ಕಿ ಅಲ್ಲಾಡುವ ಮರಗಳ ಕೊಂಬೆರೆಂಬೆಗಳು, ರಾಗದಿನ್ + ಅಟ್ಟಿರ್ತು + ಆಡುವಂತಾಯ್ತು = ಪ್ರೀತಿಯಿಂದ ಮೈಮರೆತು ಕುಣಿಯುವಂತಾಯಿತು, ಕಲ್ಪಕ್ಷಿತಿರುಹ ಬಹುಪುಷ್ಪ + ಅರ್ಘ್ಯದಿಂದೆ ಬಂದು = ಕಲ್ಪವೃಕ್ಷಸಮೂಹವು ನಾನಾ ಹೂಗಳ ಕಾಣಿಕೆಯನ್ನು ಹಿಡಿದು, ಇದಿರ್ಗೊಳ್ವಂತೆ + ಆಯ್ತು = ಸ್ವಾಗತಿಸುವಂತಾಯಿತು, ಎಂಬಿನಂ ಚೆಲ್ವು + ಇದಿರ್ಗೊಂಡಂತೆ = ಎನ್ನುವ ಹಾಗೆ ಚೆಲುವೇ ಇದಿರುಗೊಂಡಂತೆ

**ಗದ್ಯಾನುಸರಣ:** ಆಗ ಮಹಾಮಹಿಮನಾದ ಆದಿದೇವಶಿಶುವು ಮಂದರಪರ್ವತಕ್ಕೆ ಬರಲು ಜೋರಾದ ದೇವದುಂದುಭಿಗಳ ಪ್ರತಿಧ್ವನಿಯಿಂದ ಪರ್ವತವೇ ಎದುರು ಬರುವಂತ ತೋರಿದರೆ, ಗಾಳಿಗೆ ಸಿಕ್ಕಿ ಅಲ್ಲಾಡುವ ಮರಗಳ ಕೊಂಬೆರೆಂಬೆಗಳು ಪ್ರೀತಿಯಿಂದ ಮೈಮರೆತು ಕುಣಿಯುವಂತೆ ಕಾಣಿಸಿದುವು; ಕಲ್ಪವೃಕ್ಷಸಮೂಹವೇ ನಾನಾ ಬಗೆಯ ಹೂಗಳ ಕಾಣಿಕೆಯನ್ನು ಹಿಡಿದು

ಸ್ವಾಗತಿಸುವಂತೆ ಭಾಸವಾಯಿತು – ಹೀಗೆ ಒಟ್ಟಾರೆ ಸೊಗಸೇ ಇದಿರುಗೊಂಡಂತೆ ಭಾಸವಾಯಿತು.

ಕಂಬುಲತಾಸುಲಲಿತಲವ
ಣಾಂಬುಧಿಪರಿಧಾನವಾಗೆ ಚೆಲ್ವಂ ಪಡೆದೀ
ಜಂಬೂದ್ವೀಪಪ್ರಭುಗಿದು
ಪೊಂಬೆಸದೊಳ್ ಸಮೆದ ಮಕುಟಮಿರ್ಪಂತಿರ್ಕುಂ ೬೨

**ಪದವಿಭಾಗ-ಅನ್ವಯ-ಅರ್ಥ:** ಚೆಲ್ವಂ ಪಡೆದ + ಈ ಜಂಬೂದ್ವೀಪಪ್ರಭುಗೆ = ಸೊಬಗನ್ನು ಪಡೆದ ಈ ಜಂಬೂದ್ವೀಪವೆಂಬ ರಾಜನಿಗೆ, ಕಂಬುಲತಾ ಸುಲಲಿತಲವಣ + ಅಂಬುಧಿ = ಶಂಖದ ಬಳ್ಳಿಗಳಿಂದ ಚೆಲುವಾದ ಉಪ್ಪುನೀರ ಸಮುದ್ರವು, ಪರಿಧಾನಂ + ಆಗೆ = ಸುತ್ತುವರಿದ ಉಡುಪಿನಂತಾಗಿರಲು, ಇದು ಪೊಂಬೆಸದೊಳ್ ಸಮೆದ ಮಕುಟಂ + ಇರ್ಪಂತೆ + ಇರ್ಕುಂ = ಈ ಮಂದರಪರ್ವತವು ಚಿನ್ನದ ಕೆಲಸ ಮಾಡಿದ ಕಿರೀಟವಿದ್ದಂತೆ ಶೋಭಿಸಿತು.

**ಗದ್ಯಾನುಸರಣ:** ಸೊಬಗನ್ನು ಪಡೆದ ಈ ಜಂಬೂದ್ವೀಪವೆಂಬ ರಾಜನಿಗೆ ಶಂಖದ ಬಳ್ಳಿಗಳಿಂದ ಚೆಲುವಾದ ಉಪ್ಪುನೀರ ಸಮುದ್ರವೇ ಉಟ್ಟ ಉಡುಪು, ಈ ಮಂದರಪರ್ವತವೇ ಚಿನ್ನದ ಕೆಲಸ ಮಾಡಿದ ಕಿರೀಟ ಎಂಬಂತೆ ಶೋಭಿಸಿತು.

ಎಳಸಿ ಸುರಸಮಿತಿ ಕಲ್ಪಂ
ಗಳ ದೆಸೆಯುನೆ ಬಿಸುಟು ರಮಿಯಿಸುತ್ತುಮದಲ್ಲಿಂ
ತಳರದುದಜೆನೀ ಸುರನಗ
ಮೊಳಕೊಂಡುದು ತಾನೆ ನಾಕಲೋಕಶ್ರೀಯುಂ ೬೩

**ಪದವಿಭಾಗ-ಅನ್ವಯ-ಅರ್ಥ:** ಸುರಸಮಿತಿ ಎಳಸಿ ಕಲ್ಪಂಗಳ ದೆಸೆಯನೆ ಬಿಸುಟು = ದೇವತೆಗಳ ಸಮೂಹವು ತಮ್ಮ ಕಲ್ಪಗಳ ಗೊಡವೆಯನ್ನೇ ಬಿಟ್ಟು, ರಮಿಯಿಸುತ್ತುಂ ಆನಂದಿಸುತ್ತ, ಅದು + ಅಲ್ಲಿಂ ತಳರದುದಜೆನ್ + ಈ = ಇಲ್ಲಿಂದ ಹೋಗದಿದ್ದುದರಿಂದಾಗಿ, ಸುರನಗಂ ತಾನೆ ನಾಕಲೋಕಶ್ರೀಯಂ ಒಳಕೊಂಡುದು = ಈ ದೇವಪರ್ವತವು ತಾನಾಗಿಯೇ ದೇವಲೋಕದ ಸೊಬಗನ್ನು ಪಡೆಯಿತು.

**ಗದ್ಯಾನುಸರಣ:** ದೇವತೆಗಳ ಸಮೂಹವು ತಮ್ಮ ಕಲ್ಪಗಳ ಗೊಡವೆಯನ್ನೇ ಬಿಟ್ಟು ಆನಂದಿಸುತ್ತ ಇಲ್ಲಿಯೇ ತಳವೂರಿದ್ದುದರಿಂದಾಗಿ, ಈ ದೇವಪರ್ವತವು ಸಹಜವಾಗಿ ದೇವಲೋಕದ ಸೊಬಗನ್ನು ಪಡೆಯಿತು.

ಸಾಸಿರಯೋಜನಮಮರ್ದು ಸು
ರಾಸುರಸಂಸೇವ್ಯಮಾಗಿ ತೊಂಬತ್ತೊಂಬೈ
ಸಾಸಿರಯೋಜನಮಂ ನೆಗೆ
ದೀ ಸುರಗಿರಿ ಪೆಂಪನೇಂ ಪುದುಂಗೊಳಿಸಿದುದೋ ೬೪

**ಪದವಿಭಾಗ–ಅನ್ವಯ–ಅರ್ಥ:** ಸಾಸಿರಯೋಜನಂ + ಅಮರ್ದು = ಒಂದು ಸಾವಿರ ಯೋಜನಗಳಷ್ಟು ಹರಡಿಕೊಂಡು, ಸುರ + ಅಸುರಸಂಸೇವ್ಯಮಾಗಿ = ಸುರರಿಂದಲೂ ಅನ್ಯರಿಂದಲೂ ಸೇವೆವಡೆಯುತ್ತ, ತೊಂಬತ್ತೊಂಬೈಸಾಸಿರಯೋಜನಮಂ ನೆಗೆದ + ಈ ಸುರಗಿರಿ = ತೊಂಬತ್ತೊಂಬತ್ತು ಸಾವಿರ ಯೋಜನಗಳಷ್ಟು ಮೇಲೆ ನೆಗೆದ ಈ ದೇವಪರ್ವತವು, ಪೆಂಪನ್ + ಏಂ ಪುದುಂಗೊಳಿಸಿದುದೋ = ಎಂತಹ ಶೋಭೆಯನ್ನು ಒಳಗೊಂಡಿದೆಯೋ!

**ಗದ್ಯಾನುಸರಣ:** ಈ ದೇವಪರ್ವತವು ಒಂದು ಸಾವಿರ ಯೋಜನಗಳಷ್ಟು ವಿಸ್ತಾರವಾಗಿಯೂ ತೊಂಬತ್ತೊಂಬತ್ತು ಸಾವಿರ ಯೋಜನಗಳಷ್ಟು ಎತ್ತರವಾಗಿಯೂ ಇದ್ದು, ಸುರರಿಂದಲೂ ಅನ್ಯರಿಂದಲೂ ಸೇವೆವಡೆಯುತ್ತ ಮಹಾ ಶೋಭೆಯನ್ನು ಪಡೆದಿದೆ.

ಜಿನಸವನಮಂಗಳಕ್ಕಾ
ನೆ ನೋಂತೆನೆಂಬಂತೆ ಶಿಖರಿ ನಿಜಶಿಖರದೆ ಪೆಂ
ಪನೆ ಮೆಱೆದು ಪೊಸತೆ ಮಾಡಿದ
ದೆನಗಂ ವಿಸ್ಮಯಮನದಱಿನೀ ನಗಮೀಗಳ್ ೬೫

**ಪದವಿಭಾಗ–ಅನ್ವಯ–ಅರ್ಥ:** ಜಿನಸವನಮಂಗಳಕ್ಕೆ + ಆನೆ ನೋಂತೆನ್ + ಎಂಬಂತೆ = ಜಿನಶಿಶುವಿನ ಮಂಗಳಾಭಿಷೇಕಕ್ಕೆಂದು ನಾನು ಹರಕೆ ಹೊತ್ತಿದ್ದೇನೆ ಎನ್ನುವ ಹಾಗೆ, ಶಿಖರಿ ನಿಜಶಿಖರದೆ ಪೆಂಪನೆ ಮೆಱೆದು = ಆ ಪರ್ವತವು ತನ್ನ ಶಿಖರದ ಔನ್ನತ್ಯವನ್ನು ಮೆರೆಯುತ್ತ, ಅದಱಿನ್ + ಈ ನಗಂ + ಈಗಳ್ = ಹೀಗಾಗಿ ಈ ಪರ್ವತವು, ಎನಗಂ ಪೊಸತೆ ವಿಸ್ಮಯಮನ್ ಮಾಡಿದುದು = ನನಗೂ ಹೊಸತು ಅಚ್ಚರಿಯನ್ನುಂಟುಮಾಡಿದೆ

**ಗದ್ಯಾನುಸರಣ:** ಜಿನಶಿಶುವಿನ ಮಂಗಳಾಭಿಷೇಕಕ್ಕೆಂದು ನಾನು ಹರಕೆ ಹೊತ್ತಿದ್ದೇನೆ ಎನ್ನುವ ಹಾಗೆ ಆ ಪರ್ವತವು ತನ್ನ ಶಿಖರದ ಔನ್ನತ್ಯವನ್ನು ಮೆರೆಯುತ್ತಿದೆ; ಹೀಗಾಗಿ ಈ ಪರ್ವತವು ನನಗೂ ಹೊಸತು ಅಚ್ಚರಿಯನ್ನುಂಟು ಮಾಡಿದೆ.

**ಜಿನನಿಳಯಂಗಳ್ ನಾಲ್ಕುಂ**
**ಬನದೊಳಮವು ನಾಲ್ಕು ನಾಲ್ಕು ನೆಲಸಿರೆ ಗಿರಿ ಪಾ**
**ವನಮುಂ ಪ್ರಸಿದ್ಧಮುಂ ಸುರ**
**ವಿನುತಮುಮಾಯ್ತಿದಱ ದೊರೆಗೆ ಗಿರಿಗಳುಮೊಳವೇ** ೬೬

**ಪದವಿಭಾಗ-ಅನ್ವಯ-ಅರ್ಥ:** ನಾಲ್ಕುಂ ಬನದೊಳಂ ಜಿನನಿಳಯಂಗಳ್ ಅವು ನಾಲ್ಕು ನಾಲ್ಕು ನೆಲಸಿರೆ = ನಾಲ್ಕೂ ಉದ್ಯಾನಗಳಲ್ಲಿ ನಾಲ್ಕು ನಾಲ್ಕು ಜಿನನಿಲಯಗಳನ್ನು ಇದ್ದು, ಗಿರಿ ಪಾವನಮುಂ ಪ್ರಸಿದ್ಧಮುಂ ಸುರವಿನುತಮುಂ + ಆಯ್ತು = ಈ ಪರ್ವತವು ಪವಿತ್ರವೂ ಕೀರ್ತಿಶಾಲಿಯೂ ದೇವಪೂಜ್ಯವೂ ಆಗಿದೆ, ಇದಱ ದೊರೆಗೆ ಗಿರಿಗಳುಂ + ಒಳವೇ = ಹೀಗಾಗಿ ಇದಕ್ಕೆ ಸರಿದೊರೆಯಾದ ಬೇರೆ ಪರ್ವತಗಳಿವೆಯೇ!

ಗದ್ಯಾನುಸರಣ: ಇಲ್ಲಿನ ನಾಲ್ಕೂ ಉದ್ಯಾನಗಳಲ್ಲಿ ನಾಲ್ಕು ನಾಲ್ಕು ಜಿನನಿಲಯಗಳಿರುವುದರಿಂದಾಗಿ ಈ ಪರ್ವತವು ಪವಿತ್ರವೂ ಕೀರ್ತಿಶಾಲಿಯೂ ದೇವಪೂಜ್ಯವೂ ಆಗಿದೆ; ಹೀಗಾಗಿ ಇದಕ್ಕೆ ಸರಿದೊರೆಯಾದ ಬೇರೆ ಪರ್ವತಗಳೆಲ್ಲಿವೆ?

**ವಿಶೇಷ ವಿಚಾರ:** ನಾಲ್ಕುಂ ಬನ = ಮೇರುಪರ್ವತದಲ್ಲಿ ಭದ್ರಶಾಲ, ನಂದನ, ಸವಮನಸ ಮತ್ತು ಪಾಂಡುಕ ಎಂಬ ನಾಲ್ಕು ಉಪವನಗಳಿವೆ.

**ವ॥ ಎಂದು ಮಂದರಮಹೀಧರದ ಮಹಿಮೆಯನಮರೇಂದ್ರನಮರ ಸಮಿತಿಗೆಲ್ಲಂ ಪೇೞ್ದುಪೊಗಳೂತ್ತುಮದಂ ತ್ರಿಃಪ್ರದಕ್ಷಿಣಂಗೆಯ್ಯೆ,**

**ಪದವಿಭಾಗ-ಅನ್ವಯ-ಅರ್ಥ:** ಎಂದು ಅಮರೇಂದ್ರನ್ ಮಂದರಮಹೀಧರದ ಮಹಿಮೆಯನ್ = ಎಂದು ಸೌಧರ್ಮೇಂದ್ರನು ಮಂದರಪರ್ವತದ ಹಿರಿಮೆಯನ್ನು, ಅಮರಸಮಿತಿಗೆಲ್ಲಂ ಪೇೞ್ದು ಪೊಗಳುತ್ತುಂ = ಎಂದು ದೇವಸಮೂಹಕ್ಕೆ ವರ್ಣಿಸುತ್ತ, ಅದಂ ತ್ರಿಃಪ್ರದಕ್ಷಿಣಂಗೆಯ್ಯೆ = ಅದರ ಸುತ್ತ ಮೂರು ಬಾರಿ ಪ್ರದಕ್ಷಿಣೆ ಬರಲು,

ಗದ್ಯಾನುಸರಣ: ಎಂದು ಸೌಧರ್ಮೇಂದ್ರನು ಈ ಮಂದರಪರ್ವತದ ಹಿರಿಮೆಯನ್ನು ಎಂದು ದೇವಸಮೂಹಕ್ಕೆ ವರ್ಣಿಸಿದ; ಆನಂತರ ಅದರ ಸುತ್ತ ಮೂರು ಬಾರಿ ಪ್ರದಕ್ಷಿಣೆ ಬಂದ.

**ತೆರಳ್ದು ಸುರಭೂರುಹಪ್ರಸವಧೂಳಿಯಂ ಮೊಕ್ಕಳಂ**
**ಸುರುಳ್ದು ಸರಸೀಸರೋರುಹದಳಂಗಳಂ ಬಂದು ಮಂ**
**ದರೋಪವನಸಂಭವಂ ನಯದಿನಾಡಿಸಿತ್ತಾಗಳ**
**ಪ್ಸರಃಪ್ರಕರದೊಳ್ಗುರುಳ್ಗಳನದೊಂದು ಮಂದಾನಿಳಂ** ೬೭

**ಪದವಿಭಾಗ-ಅನ್ವಯ-ಅರ್ಥ:** ಮಂದರ + ಉಪವನಸಂಭವಂ = ಮಂದರದ ಉಪವನದಲ್ಲಿ ಉಂಟಾದ, ಅದೊಂದು ಮಂದಾನಿಳಂ = ಮೆಲುಗಾಳಿಯು, ತೆರಳ್ದು = ಬೀಸುತ್ತ, ಸುರಭೂರುಹಪ್ರಸವಧೂಳಿಯಂ ಮೊಕ್ಕಳಂ ಸುರುಳ್ದು = ಕಲ್ಪವೃಕ್ಷಗಳ ಹೂಗಳ ಪರಾಗಗಳಲ್ಲಿ ಯಥೇಚ್ಛವಾಗಿ ಹೊರಳಾಡಿ, ಸರಸೀಸರೋರುಹದಳಂಗಳಂ ಬಂದು = ಸರೋವರದ ತಾವರೆಗಳ ಪಕಳೆಗಳ ಬಳಿ ಸುಳಿದು, ಆಗಳ್ + ಅಪ್ಸರಃಪ್ರಕರದ + ಒಳ್ + ಕುರುಳ್ಗಳನ್ = ಅಪ್ಸರೆಯರ ಗುಂಪಿನ ನಯವಾದ ಕೂದಲನ್ನು, ನಯದಿನ್ + ಆಡಿಸಿತ್ತು = ಮೆಲುವಾಗಿ ಓಲಾಡಿಸಿತು.

**ಗದ್ಯಾನುಸರಣ:** ಮಂದರದ ಉಪವನಗಳಲ್ಲಿ ಉಂಟಾದ ಮೆಲುಗಾಳಿಯು ಬೀಸುತ್ತ ಕಲ್ಪವೃಕ್ಷಗಳ ಹೂಗಳ ಪರಾಗಗಳಲ್ಲಿ ಯಥೇಚ್ಛವಾಗಿ ಹೊರಳಾಡಿ, ಸರೋವರದ ತಾವರೆಗಳ ಪಕಳೆಗಳ ನಡುವೆ ಸುಳಿದು, ಅಪ್ಸರೆಯರ ಗುಂಪಿನ ನಯವಾದ ಕೂದಲನ್ನು ಮೆಲುವಾಗಿ ಓಲಾಡಿಸಿತು.

**ಸುರಗಿರಿಯಂ ಸುರನಿಕರಂ**
**ತರತರದಡರ್ವಾಗಳಮರಗಣಿಕೆಯರ ಮನಂ**
**ವಿರುವದಳಿನಿಕರದೊಡನೊಡ**
**ನಿರದೆಱಗಿದುವಮರತರುಲತಾಂತಾವಳಿಯೊಳ್ ೬೮**

**ಪದವಿಭಾಗ-ಅನ್ವಯ-ಅರ್ಥ:** ಸುರಗಿರಿಯಂ ಸುರನಿಕರಂ ತರತರದೆ + ಅಡರ್ವಾಗಳ್ = ದೇವತೆಗಳ ಗುಂಪು ಮಂದರಪರ್ವತವನ್ನು ವಿವಿಧ ಬಗೆಯಲ್ಲಿ ಹತ್ತುವಾಗ, ಅಮರಗಣಿಕೆಯರ ಮನಂ = ದೇವವಿಲಾಸಿನಿಯರ ಮನಸ್ಸುಗಳೂ, ವಿರುವತ್ + ಅಳಿನಿಕರದೊಡನೊಡನೆ = ಝೇಂಕರಿಸುವ ದುಂಬಿಗಳ ಗುಂಪಿನೊಡನೆ, ಅಮರತರುಲತಾಂತ + ಆವಳಿಯೊಳ್ = ಕಲ್ಪಲತೆಗಳ ಹೂಗಳ ಸಮೂಹದಲ್ಲಿ, ಇರದೆ + ಎಱಗಿದುವು = ಜೊತೆಗೇ ನಾಟಿದುವು.

**ಗದ್ಯಾನುಸರಣ:** ದೇವತೆಗಳ ಗುಂಪು ಮಂದರಪರ್ವತವನ್ನು ವಿವಿಧ ಬಗೆಯಲ್ಲಿ ಹತ್ತುವಾಗ, ದೇವವಿಲಾಸಿನಿಯರ ಮನಸ್ಸುಗಳೂ ಝೇಂಕರಿಸುವ ದುಂಬಿಗಳ ಗುಂಪಿನೊಡನೆ ಕಲ್ಪಲತೆಗಳ ಹೂಗಳ ಸಮೂಹದಲ್ಲಿ ನಾಟಿದುವು.

**ಸರಿಗೆಗಿವು ಲಂಬಣಕ್ಕಿವು**
**ಬರೆಗಲೆಗಿವು ಮುಗುಳ್ಗಳೆಮ್ಮ ಮೇಖಳೆಗಿವು ನೂ**
**ಪುರರಚನೆಗಿಂತಿವೆಂದಾ**
**ದರದಿಂದಂ ಕೊಯ್ದರಾಯ್ದು ದಿವಿಜಾಂಗನೆಯರ್ ೬೯**

**ಪದವಿಭಾಗ-ಅನ್ವಯ-ಅರ್ಥ:** ಇವು ಮುಗುಳ್ಗಳ್ = ಈ ಹೂಗಳು, ಎಮ್ಮ ಸರಿಗೆಗೆ = ನಮ್ಮ ಸರಿಗೆಗೆ, ಇವು ಲಂಬಣಕ್ಕೆ = ಇವು ಹಾರಕ್ಕೆ, ಇವು ಬರೆಗಲೆಗೆ = ಇವು ಬರಗಲೆಗೆ ಇವು, ಇವು ಮೇಖಳೆಗೆ = ಇವು ಸೊಂಟಪಟ್ಟಿಗೆ, ಇಂತು + ಇವು ನೂಪುರರಚನೆಗೆ = ಹಾಗೇ ಇವು ಕಾಲ್ಗಡಗಗಳಿಗೆ ಎನ್ನುತ್ತ, ದಿವಿಜ + ಅಂಗನೆಯರ್ = ದೇವವನಿತೆಯರು, ಆದರದಿಂದಂ ಆಯ್ದು ಕೊಯ್ದರ್ = ಇಷ್ಟಪಟ್ಟು ಆಯ್ಕೆ ಮಾಡಿಕೊಂಡು ಬಿಡಿಸಿಕೊಂಡರು.

**ಗದ್ಯಾನುಸರಣ:** ಈ ಹೂಗಳು ಸರಿಗೆಗೆ, ಇವು ಹಾರಕ್ಕೆ, ಇವು ಬರಗಲೆಗೆ ಇವು, ಇವು ಸೊಂಟಪಟ್ಟಿಗೆ, ಇವು ಕಾಲ್ಗಡಗಗಳಿಗೆ – ಎನ್ನುತ್ತ ದೇವವನಿತೆಯರು ಇಷ್ಟಪಟ್ಟು ಬಗೆ ಬಗೆಯ ಹೂಗಳನ್ನು ಆಯ್ದು ಬಿಡಿಸಿಕೊಂಡರು.

**ಪೊಸಗಂಪುಗೊಂಡುಮವಱೊಳ್**
**ಪಸದನಮಂ ನೆಱೆಯೆ ತಮಗೆ ಮಾಡಿಯುಮೆಂತುಂ**
**ಪೊಸಪೂವಿನ ಪೊಸದುಡುಗೆಯ**
**ಪಸವೋಡಿದುದಿಲ್ಲ ದಿವಿಜವನಿತೆಯರ್ಗಾಗಳ್ ೭೦**

**ಪದವಿಭಾಗ-ಅನ್ವಯ-ಅರ್ಥ:** ಪೊಸ + ಕಂಪು + ಕೊಂಡುಂ = ಹೊಸ ಪರಿಮಳವನ್ನು ಪಡೆದು, ಅವಱೊಳ್ ಪಸದನಮಂ ನೆಱೆಯೆ ತಮಗೆ ಮಾಡಿಯುಂ = ತಮ್ಮ ಅಲಂಕಾರವನ್ನವರು ಮಾಡಿಕೊಂಡರೂ, ಆಗಳ್ ಎಂತುಂ ದಿವಿಜವನಿತೆಯರ್ಗೆ = ಆಗಲೂ ದೇವವನಿತೆಯರಿಗೆ ಸ್ವಲ್ಪವಾದರೂ, ಪೊಸಪೂವಿನ ಪೊಸದುಡುಗೆಯ ಪಸವು + ಓಡಿದುದಿಲ್ಲ = ಹೊಸಹೂಗಳ ಹೊಸ ಒಡವೆಗಳ ಆಸೆಯು ಕಡಿಮೆಯಾಗಲಿಲ್ಲ.

**ಗದ್ಯಾನುಸರಣ:** ಹೊಸ ಪರಿಮಳವನ್ನು ಪಡೆದ ಹೂಗಳಿಂದ ತಮ್ಮನ್ನು ಮನಸದಣಿಯೆ ಅಲಂಕರಿಸಿಕೊಂಡರು; ಆದರೂ ಅವರಿಗೆ ಹೊಸಹೂಗಳ ಒಡವೆಗಳ ಆಸೆಯು ಸ್ವಲ್ಪವಾದರೂ ಕಡಿಮೆಯಾಗಲಿಲ್ಲ.

**ಅಮರೇಶ್ವರನಿಂ ಶಚಿಯಿಂ**
**ನಮಗಿದನಾಘ್ರಾತಪೂತಮೆನಿಸಿ ಪರೀತ**
**ಭ್ರಮರಾವತಂಸಮಾದುದು**
**ನಮೇರುಮಂದಾರಪಾರಿಜಾತಸ್ತಬಕಂ ೭೧**

**ಪದವಿಭಾಗ-ಅನ್ವಯ-ಅರ್ಥ:** ನಮೇರು ಮಂದಾರ ಪಾರಿಜಾತಸ್ತಬಕಂ = ಸುರಗಿ ಮಂದಾರ ಮತ್ತು ಪಾರಿಜಾತದ ಗೊಂಚಲುಗಳು, ಅಮರೇಶ್ವರನಿಂ ಶಚಿಯಿಂ = ಇಂದ್ರನಿಂದಲೂ ಶಚಿಯಿಂದಲೂ, ನಮಗಿದು + ಅನಾಘ್ರಾತಪೂತಂ

+ ಎನಿಸಿ = ಈ ಹೂಗಳು ನಮಗೆ ಬೇರಾರೂ ವಾಸನೆ ನೋಡದುದೂ, ಪರೀತಭ್ರಮರ = ದುಂಬಿಗಳಿಂದ ಕೂಡಿದವೂ ಆದ, ಅವತಂಸಮಾದುದು = ಒಡವೆಗಳಾದವು.

**ಗದ್ಯಾನುಸರಣ:** ಇಂದ್ರ ಹಾಗೂ ಶಚಿಯರಿಂದಾಗಿ, ಈ ಸುರಗಿ ಮಂದಾರ ಮತ್ತು ಪಾರಿಜಾತದ ಹೂಗಳ ಗೊಂಚಲುಗಳು ಬೇರಾರೂ ವಾಸನೆ ನೋಡದುದೂ, ದುಂಬಿಗಳಿಂದ ಕೂಡಿದವೂ ಆದ ಒಡವೆಗಳಾದವು.

**ಘನಸಾರಸರಳಚಂದನ**
**ವನಮೃದುಪಲ್ಲವಮನಗ್ರಹಸ್ತದೆ ಕೊಂಡೊ**
**ಯ್ಯನೆ ಬೀಸೆ ಚೆಲ್ವುವಡೆದುದು**
**ಜಿನಂಗೆ ಚಾಮರಮನಿಕ್ಕುವಂತಮರಗಜಂ** ೭೨

**ಪದವಿಭಾಗ-ಅನ್ವಯ-ಅರ್ಥ:** ಅಮರಗಜಂ = ದೇವಗಜವು, ಘನಸಾರ ಸರಳ ಚಂದನವನ = ಕರ್ಪೂರ ಧೂಪ ಹಾಗೂ ಚಂದನವನಗಳ, ಮೃದುಪಲ್ಲವಮನ್ ಅಗ್ರಹಸ್ತದೆ ಕೊಂಡು ಒಯ್ಯನೆ ಬೀಸೆ = ಕೋಮಲವಾದ ಚಿಗುರುಗಳನ್ನು ತನ್ನ ಸೊಂಡಿಲಿನಲ್ಲಿ ಹಿಡಿದು ನಿಧಾನವಾಗಿ ಬೀಸಲು, ಜಿನಂಗೆ ಚಾಮರಮನ್ + ಇಕ್ಕುವಂತೆ ಚೆಲ್ವುವಡೆದುದು = ಜಿನನಿಗೆ ಚಾಮರ ಬೀಸಿದ ಹಾಗೆ ಚೆಲುವಾಯಿತು.

**ಗದ್ಯಾನುಸರಣ:** ದೇವಗಜವು ಕರ್ಪೂರ ಧೂಪ ಹಾಗೂ ಚಂದನವನಗಳ ಕೋಮಲವಾದ ಚಿಗುರುಗಳನ್ನು ತನ್ನ ಸೊಂಡಿಲಿನಲ್ಲಿ ಹಿಡಿದು ನಿಧಾನವಾಗಿ ಬೀಸಲು ಜಿನನಿಗೆ ಚಾಮರವಿಕ್ಕಿದ ಹಾಗೆ ಚೆಲುವಾಯಿತು.

**ಇಡಿದಿರೆ ಪೂತಮರದ್ರುಮ**
**ದಿಡುವುಗಳೊಳ್ ಬದ್ದವಣದ ಪುಡಿವೊಲ್ ಬೆನ್ನೊಳ್**
**ಬಿಡದಲುಗೆ ಕುಸುಮಕುಳರಜ**
**ಮಡರ್ದುದು ಸುರಗಿರಿಯನಿಂದ್ರರುಂದ್ರಗಜೇಂದ್ರಂ** ೭೩

**ಪದವಿಭಾಗ-ಅನ್ವಯ-ಅರ್ಥ:** ಪೂತ + ಅಮರದ್ರುಮದ + ಇಡುವುಗಳೊಳ್ = ಹೂಬಿಟ್ಟ ದೇವವೃಕ್ಷದ ಸಂದಿಗಳಲ್ಲಿ, ಕುಸುಮಕುಳರಜಂ ಇಡಿದಿರೆ = ಪುಷ್ಪಪರಾಗವು ದಟ್ಟವಾಗಿ ತುಂಬಿ, ಬದ್ದವಣದ ಪುಡಿವೊಲ್ ಬೆನ್ನೊಳ್ ಬಿಡದಲುಗೆ = ಮಂಗಳವಾದ್ಯಗಳ ಹುಡಿಯ ಹಾಗೆ ಬೆನ್ನಿನಲ್ಲಿ ಅಲುಗಾಡಲು, ಇಂದ್ರರುಂದ್ರ ಗಜೇಂದ್ರಂ = ಇಂದ್ರನ ಐರಾವತವು, ಸುರಗಿರಿಯನ್ ಅಡರ್ದುದು = ಮಂದರ ಪರ್ವತವನ್ನು ಹತ್ತಿತು.

**ಗದ್ಯಾನುಸರಣ:** ಹೂಬಿಟ್ಟ ದೇವವೃಕ್ಷದ ಸಂದಿಗಳಲ್ಲಿ ದಟ್ಟವಾಗಿ ತುಂಬಿದ್ದ ಪುಷ್ಪಪರಾಗವು ಮಂಗಳವಾದ್ಯಗಳ ಹುಡಿಯ ಹಾಗೆ ಬೆನ್ನಿನಲ್ಲಿ ಬಿದ್ದು ಅಲುಗಾಡಲು ಇಂದ್ರನ ಐರಾವತವು ಮಂದರಪರ್ವತವನ್ನು ಹತ್ತಿತು.

**ವಿಶೇಷ ವಿಚಾರ:** ೬೭ ರಿಂದ ೭೩ ರವರೆಗಿನ ವರ್ಣನೆ ಪಂಪನ ಸ್ವಂತ ಕಲ್ಪನೆ.

**ವ। ಅಂತು ಬಂದು ಪಾಂಡುಕವನದ ಪೂರ್ವೋತ್ತರಾಶಾಮುಖ ನಿವಾಸಿಯಾಗಿ ಶತಯೋಜನವಿಷ್ಕಂಭದೊಳಂ ಪಂಚಷಡ್ಯೋಜನವಿಸ್ತಾರ ದೊಳಷ್ಟಯೋಜನೋತ್ಸೇಧದೊಳಷ್ಟಮೀಚಂದ್ರಾಕೃತಿ ಯೊಳಮಷ್ಟಮಂಗಳ ಪರಿವೇಷ್ಟನೊಳಂ ನೆಱೆದು,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಬಂದು = ಹಾಗೆ ಬಂದು, ಪಾಂಡುಕವನದ ಪೂರ್ವೋತ್ತರಾಶಾಮುಖನಿವಾಸಿಯಾಗಿ = ಪಾಂಡುಕವನದ ಈಶಾನ್ಯ ದಿಕ್ಕಿಗೆ ಎದುರಾಗಿ, ಶತಯೋಜನವಿಷ್ಕಂಭದೊಳಂ = ನೂರು ಯೋಜನ ಸುತ್ತಳತೆಯುಳ್ಳ, ಪಂಚಷಟ್ + ಯೋಜನವಿಸ್ತಾರದೊಳ್ = ಐದಾರು ಯೋಜನ ವಿಸ್ತಾರವಾದ, ಅಷ್ಟಯೋಜನ + ಉತ್ಸೇಧದೊಳಂ = ಎಂಟು ಯೋಜನ ಎತ್ತರವಾಗಿ, ಅಷ್ಟಮೀಚಂದ್ರಾಕೃತಿಯೊಳ್ = ಅಷ್ಟಮಿಯ ಚಂದ್ರ ಆಕಾರದಲ್ಲಿ, ಅಷ್ಟಮಂಗಳಪರಿವೇಷ್ಟನದೊಳಂ ನೆಱೆದು = ಅಷ್ಟಮಂಗಳಗಳಿಂದ ಸುತ್ತುವರಿದು,

**ಗದ್ಯಾನುಸರಣ:** ಹಾಗೆ ಬಂದು, ಪಾಂಡುಕವನದ ಈಶಾನ್ಯ ದಿಕ್ಕಿಗೆ ಎದುರಾಗಿ, ನೂರು ಯೋಜನ ಸುತ್ತಳತೆಯುಳ್ಳ, ಐದಾರು ಯೋಜನ ವಿಸ್ತಾರವಾದ, ಎಂಟು ಯೋಜನ ಎತ್ತರವಾದ, ಅಷ್ಟಮಿಯ ಚಂದ್ರ ಆಕಾರದಲ್ಲಿ, ಅಷ್ಟಮಂಗಳಗಳಿಂದ ಸುತ್ತುವರಿದಿತ್ತು.

**ಕ್ಷೀರೋದವಾರಿಧಾರಾ**
**ಪೂರದ ಚೆಲ್ವಿಂಗೆ ಸೆಣಸುವಂತಭಿನವನೀ**
**ಹಾರದ ಬೆಳ್ಪನೆ ಬಾರಿಸಿ**
**ಬಾರಿಸಿ ಪಾಂಡುಕಶಿಳಾತಳಂ ಸೊಗಯಿಸುಗುಂ** ೭೪

**ಪದವಿಭಾಗ-ಅನ್ವಯ-ಅರ್ಥ:** ಕ್ಷೀರೋದವಾರಿಧಾರಾಪೂರದ ಚೆಲ್ವಿಂಗೆ ಸೆಣಸುವಂತೆ = ಹಾಲ್ಗಡಲಿನ ನೀರಿನ ಸೊಗಸಿನ ಜೊತೆ ಸ್ಪರ್ಧಿಸುವ ಹಾಗೆ, ಪಾಂಡುಕಶಿಳಾತಳಂ = ಪಾಂಡುಕಶಿಲೆಯು, ಅಭಿನವನೀಹಾರದ ಬೆಳ್ಪನೆ ಬಾರಿಸಿ ಬಾರಿಸಿ ಸೊಗಯಿಸುಗುಂ = ಹೊಸತಾದ ಹಿಮವನ್ನೂ ಮೀರಿಸುವಂತೆ ಬೆಳ್ಳಗೆ ಶೋಭಿಸಿತು.

**ಗದ್ಯಾನುಸರಣ:** ಹಾಲ್ಗಡಲಿನ ನೀರಿನ ಸೊಗಸಿನ ಜೊತೆ ಸ್ಪರ್ಧಿಸುವ ಹಾಗೆ ಆ ಪಾಂಡುಕಶಿಲೆಯು ಹೊಸ ಹಿಮವನ್ನೂ ಮೀರಿಸುವಂತೆ ಬೆಳ್ಳಗೆ ಶೋಭಿಸಿತು.

**ಕಡೆಯೊಳ್ ತಗುಳ್ದ ರತ್ನದ**
**ಬೆಡಂಗುವೆತ್ತೆಸೆವ ದೀಪ್ತಿವಳಯದ ಚೆಲ್ವಂ**
**ಪಡೆದು ಸಲೆ ದೇವಚಾಪದ**
**ನಡುವಣ ಲಲಿತಾರ್ಧಚಂದ್ರನಿರ್ಪಂತಿರ್ಕುಂ ೭೫**

**ಪದವಿಭಾಗ–ಅನ್ವಯ–ಅರ್ಥ:** ಕಡೆಯೊಳ್ ತಗುಳ್ದ ರತ್ನದ ಬೆಡಂಗುವೆತ್ತು + ಎಸೆವ = ಕೊನೆಯಲ್ಲಿ ರತ್ನದ ಬೆಡಗನ್ನು ಹೊಂದಿ ಸೊಗಸುವ, ದೀಪ್ತಿವಳಯದ ಚೆಲ್ವಂ ಪಡೆದು = ಪ್ರಭಾಮಂಡಲದ ಚೆಲುವನ್ನು ಹೊಂದಿ, ಸಲೆ ದೇವಚಾಪದ ನಡುವಣ = ಕಾಮನಬಿಲ್ಲಿನ ಮಧ್ಯದಲ್ಲಿ, ಲಲಿತ + ಅರ್ಧಚಂದ್ರನ್ + ಇರ್ಪಂತೆ + ಇರ್ಕುಂ = ಸುಂದರವಾದ ಅರ್ಧಚಂದ್ರಾಕಾರದಲ್ಲಿ ಆ ಶಿಲಾತಳವಿತ್ತು.

**ಗದ್ಯಾನುಸರಣ:** ಆ ಶಿಲಾತಳವು ಕೊನೆಯಲ್ಲಿ ರತ್ನದ ಬೆಡಗನ್ನು ಹೊಂದಿ ಸೊಗಸುವ ಪ್ರಭಾಮಂಡಲದ ಚೆಲುವನ್ನು ಹೊಂದಿ, ಕಾಮನಬಿಲ್ಲಿನ ಮಧ್ಯದಲ್ಲಿ ಸುಂದರವಾದ ಅರ್ಧಚಂದ್ರಾಕಾರದಲ್ಲಿತ್ತು.

**ತನ್ಮಧ್ಯಭಾಗದಲ್ಲಿ ಕ**
**ನನ್ಮಣಿಮಯಸಿಂಹಪೀಠದೆರಡುಂ ಕೆಲದೊಳ್**
**ಜನ್ಮಾಭಿಷೇಕಕಾರ್ಯದೊ**
**ಳುನ್ಮನರಪ್ಪಿಂದ್ರರೆರಡುವಾಸನಮಿರ್ಕುಂ ೭೬**

**ಪದವಿಭಾಗ–ಅನ್ವಯ–ಅರ್ಥ:** ತತ್ + ಮಧ್ಯಭಾಗದಲ್ಲಿ = ಅದರ ನಡುವೆ, ಕನತ್ + ಮಣಿಮಯಸಿಂಹಪೀಠದ + ಎರಡುಂ ಕೆಲದೊಳ್ = ಹೊಳೆಯುವ ಚಿನ್ನದ ಸಿಂಹಾಸನದ ಎರಡೂ ಬದಿಯಲ್ಲಿ, ಜನ್ಮಾಭಿಷೇಕಕಾರ್ಯದೊಳ್ + ಉನ್ಮನರ್ + ಅಪ್ಪ = ಜನ್ಮಾಭಿಷೇಕ ಕಲ್ಯಾಣದಲ್ಲಿ ಏಕಾಗ್ರಚಿತ್ತರಾಗಿದ್ದ, ಇಂದ್ರರ = ಸೌಧರ್ಮೇಂದ್ರ ಮತ್ತು ಈಶಾನೇಂದ್ರರ, ಎರಡುಂ + ಆಸನಂ + ಇರ್ಕುಂ = ಎರಡು ಪೀಠಗಳಿವೆ.

**ಗದ್ಯಾನುಸರಣ:** ಅದರ ನಡುವೆ ಹೊಳೆಯುವ ಚಿನ್ನದ ಸಿಂಹಾಸನದ ಎರಡೂ ಬದಿಯಲ್ಲಿ ಜನ್ಮಾಭಿಷೇಕ ಕಲ್ಯಾಣದಲ್ಲಿ ಏಕಾಗ್ರಚಿತ್ತರಾಗಿದ್ದ ಸೌಧರ್ಮೇಂದ್ರ ಮತ್ತು ಈಶಾನೇಂದ್ರರ ಎರಡು ಪೀಠಗಳಿವೆ.

ವ॥ ಅಲ್ಲಿ ದೇವರಾಜನನೇಕಮಣಿಖಚಿತ 'ವಿಚಿತ್ರಸ್ತಂಭಸಂಭೃತಮು ಮುತ್ತುಂಗ ವಸ್ತ್ರಾಂಗಕುಜಸಮುದ್ಭೂತವಸನವಿನಿರ್ಮಿತವಿತಾನ ವಿರಾಜಿತಮುಂ ತಾರಾತರಳ ಮುಕ್ತಾಫಳಲಂಬಲಂಬೂಷಭೂಷಿತಮುಂ ಅವಲಂಬಿತಸುರಭಿಕುಸುಮದಾಮಾಕೀರ್ಣಮುಂ ಚತುರ್ನಿಕಾಯಾಮರೇಂದ್ರ ವೃಂದಸಂಕೀರ್ಣಮುಮಪ್ಪ ಶ್ರೀಮಂಟಪಂ ವಿರಚಿಸಿ ಮೃಗರಾಜವಿಷ್ಟರದೊಳ್ ಬಾಳಕನಂ ಪೂರ್ವಾಭಿಮುಖನಿವಿಷ್ಟನಂ ಮಾಡುವುದುಂ,

**ಪದವಿಭಾಗ–ಅನ್ವಯ–ಅರ್ಥ:** ಅಲ್ಲಿ ದೇವರಾಜನ್ = ಅಲ್ಲಿ ದೇವೇಂದ್ರನು, ಅನೇಕಮಣಿಖಚಿತವಿಚಿತ್ರಸ್ತಂಭಸಂಭೃತಮುಂ = ನಾನಾ ಮಣಿಗಳಿಂದ ಕೂಡಿ ಆಕರ್ಷಕವಾದ ಕಂಬಗಳಿಂದ ಕೂಡಿದುದೂ, ಉತ್ತುಂಗವಸ್ತ್ರಾಂಗಕುಜಸಮುದ್ಭೂತ = ಶ್ರೇಷ್ಠವಾದ ವಸ್ತ್ರ ಕಲ್ಪಕುಜವು ನೀಡಿದ, ವಸನವಿನಿರ್ಮಿತವಿತಾನವಿರಾಜಿತಮುಂ = ಬಟ್ಟೆಯಿಂದ ಮಾಡಿದ ಮೇಲ್ಕಟ್ಟುಗಳಿಂದ ಕೂಡಿದುದೂ, ತಾರಾ ತರಳಮುಕ್ತಾಫಳಲಂಬಲಂಬೂಷಭೂಷಿತಮುಂ = ನಕ್ಷತ್ರಗಳಂತೆ ಹೊಳೆಯುವ ಮುತ್ತಿನ ಏಳೆಳೆಯ ಹಾರದಿಂದ ಸೊಗಸುವಂಥದೂ, ಅವಲಂಬಿತಸುರಭಿ ಕುಸುಮದಾಮ + ಆಕೀರ್ಣಮುಂ = ಪರಿಮಳಭರಿತ ಕುಸುಮಗಳಿಂದ ಕೂಡಿದ ಹಾರಗಳಿಂದ ಕೂಡಿದುದೂ, ಚತುರ್ನಿಕಾಯ + ಅಮರೇಂದ್ರವೃಂದಸಂಕೀರ್ಣಮುಂ + ಅಪ್ಪ = ನಾಲ್ಕೂ ಬಗೆಯ ದೇವೇಂದ್ರರ ಗುಂಪಿನಿಂದ ಕೂಡಿದುದೂ ಆದ, ಶ್ರೀಮಂಟಪಂ ವಿರಚಿಸಿ = ಶ್ರೀಮಂಟಪವನ್ನು ನಿರ್ಮಿಸಿ, ಮೃಗರಾಜವಿಷ್ಟರದೊಳ್ = ಸಿಂಹಾಸನದಲ್ಲಿ, ಬಾಳಕನಂ ಪೂರ್ವಾಭಿಮುಖನಿವಿಷ್ಟನಂ ಮಾಡುವುದುಂ = ಆ ಜಿನಶಿಶುವನ್ನು ಪೂರ್ವದಿಕ್ಕಿಗೆದುರಾಗಿ ಮಲಗಿಸಿ,

**ಗದ್ಯಾನುಸರಣ:** ಅಲ್ಲಿ ದೇವೇಂದ್ರನು ಶ್ರೀಮಂಟಪವನ್ನು ನಿರ್ಮಿಸಿದ; ಅದು ನಾನಾ ಮಣಿಗಳಿಂದ ಕೂಡಿ ಆಕರ್ಷಕವಾದ ಕಂಬಗಳಿಂದ ಕೂಡಿತ್ತು, ಶ್ರೇಷ್ಠವಾದ ವಸ್ತ್ರ ಕಲ್ಪಕುಜವು ನೀಡಿದ ಬಟ್ಟೆಯಿಂದ ಮಾಡಿದ ಮೇಲ್ಕಟ್ಟುಗಳಿಂದ ಶೋಭಿಸುತ್ತಿತ್ತು, ನಕ್ಷತ್ರಗಳಂತೆ ಹೊಳೆಯುವ ಮುತ್ತಿನ ಏಳೆಳೆಯ ಹಾರದಿಂದ ಸೊಗಸುತ್ತಿತ್ತು, ಪರಿಮಳಭರಿತ ಕುಸುಮಗಳಿಂದ ಕೂಡಿದ ಹಾರಗಳಿಂದ ಕೂಡಿತ್ತು; ಸುತ್ತ ನಾಲ್ಕೂ ಬಗೆಯ ದೇವೇಂದ್ರರಿದ್ದರು; ಸೌಧರ್ಮೇಂದ್ರನು ಅದರಲ್ಲಿನ ಸಿಂಹಾಸನದಲ್ಲಿ ಆ ಜಿನಶಿಶುವನ್ನು ಪೂರ್ವದಿಕ್ಕಿಗೆದುರಾಗಿ ಮುಖಮಾಡಿ ಮಲಗಿಸಿದ.

**ತನು ಕಿಱಿದಾದೊಡಮುದ್ಯ**
**ತ್ತನುಪ್ರಭಾಪ್ರಸರಮೆಸೆದು ಪಸರಿಸಿ ಸಿಂಹಾ**
**ಸನಮುಂ ಪುದಿದಿರೆ ದೇವಂ**
**ಕನಕಕನಚ್ಛಿಖರಿಶೇಖರನಾದಂ** ೭೭

**ಪದವಿಭಾಗ–ಅನ್ವಯ–ಅರ್ಥ:** ತನು ಕಿಱಿದಾದೊಡಂ = ದೇಹ ಚಿಕ್ಕದಾದರೂ, ಉದ್ಯತ್ + ತನುಪ್ರಭಾಪ್ರಸರಂ + ಎಸೆದು ಪಸರಿಸಿ = ಅದರಿಂದ ಹೊಮ್ಮುವ ಕಾಂತಿರಾಶಿಯು ಉಜ್ವಲವಾಗಿ ಹರಡಿ, ಸಿಂಹಾಸನಮಂ ಪುದಿದಿರೆ = ಸಿಂಹಾಸವನ್ನು ಆವರಿಸಿರಲು, ದೇವಂ ಕನಕಕನತ್ + ಶಿಖರಿಶೇಖರನ್ + ಆದಂ = ಜಿನನು ಹೊಳೆಯುವ ಚಿನ್ನದ ಬೆಟ್ಟದ ತುದಿಯಲ್ಲಿ ಮೆರೆದ.

**ಗದ್ಯಾನುಸರಣ:** ದೇಹ ಚಿಕ್ಕದಾದರೂ ಅದರಿಂದ ಹೊಮ್ಮುವ ಕಾಂತಿರಾಶಿಯು ಉಜ್ವಲವಾಗಿ ಹರಡಿ ಸಿಂಹಾಸವನ್ನು ಆವರಿಸಿತ್ತು; ಹೀಗೆ ಜಿನಶಿಶುವು ಹೊಳೆಯುವ ಚಿನ್ನದ ಬೆಟ್ಟದ ತುದಿಯಲ್ಲಿ ಮೆರೆಯಿತು.

**ವ॥ ಆಗಳಾ ಸೌಧರ್ಮೇಂದ್ರನುಮೀಶಾನೇಂದ್ರನುಂ ಸಿಂಹಾಸನ ದೆರಟ್ಕೆಲದೊಳಂ ದಕ್ಷಿಣೋತ್ತರಭಾಗದೊಳಿದಿರಾಗಿರ್ದ ಮಣಿಮಯ ಭದ್ರಾಸನಂಗಳೊಳ್ ಕುಳ್ಳಿರ್ದು ದಿಕ್ಪಾಳರುಮನವರವರ ದಿಗ್ಭಾಗದೊಳೆ ನಿಜಪರಿವಾರವಾಹನಾಂಗನಾಯುಧಸಮೇತವಿರಿಸಿ ಶೇಷಾ ಶೇಷದೇವನಿಕಾಯ ಮನುಚಿತಸ್ಥಾನದೊಳ್ ನಿಱಿಸಿ ಜನ್ಮಾಭಿಷೇಕಪರಿಣತಾಂ ತಃಕರಣನದಾಗಳ್,**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ + ಆ ಸೌಧರ್ಮೇಂದ್ರನುಂ + ಈಶಾನೇಂದ್ರನುಂ = ಆಗ ಸೌಧಮೇಂದ್ರನೂ ಈಶಾನೇಂದ್ರನೂ, ಸಿಂಹಾಸನದ + ಎರಟ್ಕೆಲದೊಳಂ = ಸಿಂಹಾಸನದ ಎರಡೂ ಕಡೆಗಳಲ್ಲಿ, ದಕ್ಷಿಣ + ಉತ್ತರ ಭಾಗದೊಳ್ + ಇದಿರಾಗಿರ್ದ = ದಕ್ಷಿಣ ಮತ್ತು ಉತ್ತರಭಾಗಗಳಲ್ಲಿ ಎದುರು ಬದುರಾಗಿದ್ದ, ಮಣಿಮಯಭದ್ರ + ಆಸನಂಗಳೊಳ್ ಕುಳ್ಳಿರ್ದು = ಮಣಿಖಚಿತವಾದ ಮಂಗಳಾಸನಗಳಲ್ಲಿ ಕುಳಿತು, ದಿಕ್ಪಾಳರುಮನ್ + ಅವರವರ ದಿಗ್ಭಾಗದೊಳೆ = ದಿಕ್ಪಾಲಕರನ್ನು ಅವರವರ ದಿಕ್ಕುಗಳಲ್ಲಿಯೇ, ನಿಜಪರಿವಾರವಾಹನ + ಅಂಗನಾ + ಆಯುಧಸಮೇತ + ಇರಿಸಿ = ಅವರ ಪರಿವಾರ ವಾಹನ ಮಡದಿಯರು ಹಾಗೂ ಆಯುಧಗಳ ಸಮೇತ ಸ್ಥಾಪಿಸಿ, ಶೇಷ + ಅಶೇಷದೇವನಿಕಾಯಮನ್ = ಉಳಿದ ಎಲ್ಲ ದೇವತೆಗಳನ್ನೂ, ಉಚಿತಸ್ಥಾನದೊಳ್ ನಿಱಿಸಿ = ತಕ್ಕ ಜಾಗಗಳಲ್ಲಿ ಕೂರಿಸಿ, ಜನ್ಮಾಭಿಷೇಕಪರಿಣತ + ಅಂತಃಕರಣನ್ + ಆದಾಗಳ್ = ಜನ್ಮಾಭಿಷೇಕ ಕಲ್ಯಾಣವನ್ನು ನೆರವೇರಿಸಲು ಮನಸ್ಸು ಮಾಡಿ,

**ಗದ್ಯಾನುಸರಣ:** ಆಗ ಸೌಧಮೇಂದ್ರನೂ ಈಶಾನೇಂದ್ರನೂ ಸಿಂಹಾಸನದ ಎರಡೂ ಕಡೆಗಳಲ್ಲಿ ದಕ್ಷಿಣ ಮತ್ತು ಉತ್ತರಭಗಗಳಲ್ಲಿ ಎದುರುಬದುರಾಗಿದ್ದ ಮಣಿಖಚಿತವಾದ ಮಂಗಳಾಸನಗಳಲ್ಲಿ ಕುಳಿತುಕೊಂಡರು; ದಿಕ್ಪಾಲಕರನ್ನೆಲ್ಲ ಅವರವರ ದಿಕ್ಕುಗಳಲ್ಲಿಯೇ ಅವರವರ ಪರಿವಾರ ವಾಹನ ಮಡದಿಯರು ಹಾಗೂ

ಆಯುಧಗಳ ಸಮೇತ ಸ್ಥಾಪಿಸಿದರು; ಉಳಿದ ಎಲ್ಲ ದೇವತೆಗಳನ್ನೂ ತಕ್ಕ ಜಾಗಗಳಲ್ಲಿ ಕೂರಿಸಿ ಜನ್ಮಾಭಿಷೇಕ ಕಲ್ಯಾಣವನ್ನು ನೆರವೇರಿಸಲು ನಿರ್ಧರಿಸಿದರು.

**ಸಾರಕರನಿರ್ಭರಹತಿಯಿಂ**
**ಸುರದುಂದುಭಿನಿನದಮಮರವನಿತಾವದನಾಂ**
**ಬುರುಹದಿನೊರ್ಮೆಯೆ ಮಂಗಳ**
**ಪರಂಪರಾಗೀತನಿನದಮೊದವಿತ್ತೆತ್ತಂ** ೭೮

**ಪದವಿಭಾಗ–ಅನ್ವಯ–ಅರ್ಥ:** ಸಾರಕರನಿರ್ಭರಹತಿಯಿಂ = ಸಾರವತ್ತಾದ ಬಲವಾದ ಹೊಡೆತಗಳಿಂದ, ಸುರದುಂದುಭಿನಿನದಂ = ದೇವದುಂದುಭಿಗಳ ಶಬ್ದವು, ಅಮರವನಿತಾವದನ + ಅಂಬುರುಹದಿನ್ = ದೇವಸ್ತ್ರೀಯರ ಮುಖಕಮಲ ಗಳಿಂದ, ಮಂಗಳ ಪರಂಪರಾಗೀತನಿನದಂ = = ಮಂಗಳಗೀತ ಪರಂಪರೆಯ ಶಬ್ದವೂ, ಒರ್ಮೆಯೆ = ಒಟ್ಟಾಗಿ ಎತ್ತಂ ಒದವಿತ್ತು = ಎಲ್ಲೆಲ್ಲೂ ಉಂಟಾದವು.

**ಗದ್ಯಾನುಸರಣ:** ಸಾರವತ್ತಾದ ಹೊಡೆತಗಳಿಂದ ಹೊಮ್ಮುವ ದೇವದುಂದುಭಿಗಳ ಶಬ್ದವೂ ದೇವಸ್ತ್ರೀಯರ ಮುಖಕಮಲಗಳಿಂದ ಮಂಗಳಗೀತಪರಂಪರೆಯ ಶಬ್ದವೂ ಜೊತೆಜೊತೆಗೇ ಉಂಟಾದವು.

**ದುರಿತಘನತಿಮಿರಮೆತ್ತಂ**
**ತೆರಳ್ದು ಜಿನಸವನಮಂಗಳಕ್ಕಗಿದಾಗಳ್**
**ಪರೆವಂತಾದುದು ಕಾಳಾ**
**ಗರುಧೂಪಶ್ಯಾಮಧೂಮಮಾತ್ತವ್ಯೋಮಂ** ೭೯

**ಪದವಿಭಾಗ–ಅನ್ವಯ–ಅರ್ಥ:** ಕಾಳ + ಅಗರುಧೂಪಶ್ಯಾಮಧೂಮಂ + ಆತ್ತವ್ಯೋಮಂ = ಕಪ್ಪು ಅಗರುವಿನ ಕಪ್ಪು ಹೊಗೆಯು ವ್ಯಾಪಿಸಿಕೊಂಡ ಆಗಸವು, ಜಿನಸವನಮಂಗಳಕ್ಕೆ + ಅಗಿದು = ಜಿನಾಭಿಷೇಕ ಕಲ್ಯಾಣಕ್ಕೆ ಹೆದರಿಕೊಂಡು, ದುರಿತಘನತಿಮಿರಂ + ಎತ್ತಂ ತೆರಳ್ದು = ಪಾಪವೆಂಬ ದಟ್ಟವಾದ ಕತ್ತಲೆಯು, ಆಗಳ್ ಪರೆವಂತೆ + ಆದುದು = ಆಗ ಓಡಿಹೋಗುವಂತೆ ಕಂಡಿತು.

**ಗದ್ಯಾನುಸರಣ:** ಕಾಳಾಗರುವಿನ ಕಪ್ಪು ಹೊಗೆಯು ವ್ಯಾಪಿಸಿಕೊಂಡ ಆಗಸವನ್ನು ನೋಡಿದರೆ ಜಿನಾಭಿಷೇಕ ಕಲ್ಯಾಣಕ್ಕೆ ಹೆದರಿಕೊಂಡು ಪಾಪವೆಂಬ ದಟ್ಟವಾದ ಕತ್ತಲೆಯು ಓಡಿಹೋಗುತ್ತಿರುವಂತೆ ಕಾಣುತ್ತಿತ್ತು.

**ಕಳಮಧವಳಾಕ್ಷತಂಗಳ**
**ಪೊಳೆವಲರ್ಗಳ ಚಂದನದ್ರವೋನ್ಮಿಶ್ರಜಲಂ**
**ಗಳ ಪೊಳೆಪಿನೊಳೆಸೆದು ಏಯ**
**ತ್ತಳಂಬರಂ ನೆಗೆದುದಿಂದ್ರನರ್ಘ್ಯೋದ್ಧರಣಂ** ೮೦

**ಪದವಿಭಾಗ-ಅನ್ವಯ-ಅರ್ಥ:** ಇಂದ್ರನ + ಅರ್ಘ್ಯ + ಉದ್ಧರಣಂ = ಇಂದ್ರನ ಅರ್ಘ್ಯದ ಹಾರುವಿಕೆಯು, ಕಳಮಧವಳ + ಅಕ್ಷತಂಗಳ = ಬೆಳಿಯ ಅಕ್ಕಿಯ ಅಕ್ಷತೆಗಳ, ಪೊಳೆವ + ಅಲರ್ಗಳ = ಹೊಳೆಯುವ ಹೂಗಳ, ಚಂದನದ್ರವ + ಉನ್ಮಿಶ್ರಜಲಂಗಳ ಪೊಳೆಪಿನೊಳ್ = ಶ್ರೀಗಂಧ ಬೆರೆತ ನೀರಿನ ಹೊಳಪಿನಲ್ಲಿ, ಎಸೆದು ವಿಯತ್ತಳಂಬರಂ ನೆಗೆದುದು = ಶೋಭೆಯಿಂದ ಆಕಾಶಪ್ರದೇಶದವರೆಗೂ ನೆಗೆದುವು.

**ಗದ್ಯಾನುಸರಣ:** ಇಂದ್ರನ ಅರ್ಘ್ಯದ ಹಾರುವ ಹನಿಗಳು ಬೆಳಿಯ ಅಕ್ಕಿಯ ಅಕ್ಷತೆಗಳ, ಹೊಳೆಯುವ ಹೂಗಳ ಮತ್ತು ಶ್ರೀಗಂಧ ಬೆರೆತ ನೀರಿನ ಹೊಳಪಿನಿಂದ ಕೂಡಿ ಆಕಾಶಪ್ರದೇಶದವರೆಗೂ ಚೆಲುವಿನಿಂದ ನೆಗೆದುವು.

**ವ॥ ಅಲ್ಲಿಂ ಬಳಿಯಮಶೋಕಪಲ್ಲವೋಲ್ಲಸಿತಚಂದನಚರ್ಚಿತಮಾಳತೀ ಮಾಳಾವೇಷ್ಟಿತಮಣಿದರ್ಪಣಪ್ರಸಾರಿತ ವಿಮಳಾರ್ಣವಪಯಃಪೂರ್ಣ ಕಳಧೌತಕಳಶಂಗಳಂ ಕಳಶೋದ್ಧಾರಮಂತ್ರಪೂರ್ವಕಂ ಪ್ರಣತಿ ಪ್ರಸ್ತಾವನ ಪುರಸ್ಸರಂ ಮಾಡಿ ಪ್ರಥಮಕಲ್ಪೇಶ್ವರನುಮೀಶಾನೇಂದ್ರನುಮೆತ್ತಿಕೊಂಡು,** **ಪದವಿಭಾಗ-ಅನ್ವಯ-ಅರ್ಥ:** ಅಲ್ಲಿಂ ಬಳಿಯಂ = ಆನಂತರ, ಅಶೋಕಪಲ್ಲವ + ಉಲ್ಲಸಿತ = ಅಶೋಕವೃಕ್ಷದ ಚಿಗುರಿನಿಂದ ಹೊಳೆಯುವ, ಚಂದನಚರ್ಚಿತ = ಶ್ರೀಗಂಧದಿಂದ ಲೇಪನಗೊಂಡ, ಮಾಳತೀಮಾಳಾವೇಷ್ಟಿತ = ಜಾಜಿಹೂಗಳ ಹಾರದಿಂದ ಸುತ್ತುವರಿದ, ಮಣಿದರ್ಪಣಪ್ರಸಾರಿತ = ಮಣಿಖಚಿತ ಕನ್ನಡಿಗಳಿಂದ ಶೋಭಿಸುವ, ವಿಮಳ + ಅರ್ಣವಪಯಃಪೂರ್ಣ = ನಿರ್ಮಲವಾದ ಸಮುದ್ರದ ನೀರು ತುಂಬಿದ, ಕಳಧೌತಕಳಶಂಗಳಂ = ಚಿನ್ನದ ಬಿಂದಿಗೆಗಳನ್ನು, ಕಳಶ + ಉದ್ಧಾರಮಂತ್ರಪೂರ್ವಕಂ = ಕಳಶಗಳನ್ನು ಎತ್ತಿ ಹಿಡಿಯುವಾಗ ಹೇಳುವ ಮಂತ್ರಗಳೊಡನೆಯೂ, ಪ್ರಣತಿಪ್ರಸ್ತಾವನಪುರಸ್ಸರಂ ಮಾಡಿ = ನಮಸ್ಕಾರಪೂರ್ವಕವಾಗಿಯೂ, ಪ್ರಥಮಕಲ್ಪೇಶ್ವರನುಂ + ಈಶಾನೇಂದ್ರನುಂ + ಎತ್ತಿಕೊಂಡು = ಮೊದಲನೆಯ ಕಲ್ಪವಾದ ಸೌಧರ್ಮದ ಒಡೆಯನೂ ಈಶಾನಕಲ್ಪದ ಒಡೆಯನೂ ಎತ್ತಿಕೊಂಡು,

**ಗದ್ಯಾನುಸರಣ:** ಆನಂತರ, ಸೌಧರ್ಮೇಂದ್ರ ಹಾಗೂ ಈಶಾನೇಂದ್ರರು ಕಳಶಗಳನ್ನು ಎತ್ತಿ ಹಿಡಿಯುವಾಗ ಹೇಳುವ ಮಂತ್ರಗಳೊಡನೆಯೂ ನಮಸ್ಕಾರಪೂರ್ವಕವಾಗಿಯೂ ಚಿನ್ನದ ಬಿಂದಿಗೆಗಳನ್ನು ಎತ್ತಿಕೊಂಡರು; ಅವುಗಳಿಗೆ ಅಶೋಕವೃಕ್ಷದ ಚಿಗುರಿನಿಂದಅಲಂಕರಿಸಿದ್ದರು, ಶ್ರೀಗಂಧದ ಲೇಪನಮಾಡಿದ್ದರು,

ಜಾಜಿಹೂಗಳ ಹಾರಗಳನ್ನು ಸುತ್ತಿದ್ದರು, ಮಣಿಖಚಿತ ಕನ್ನಡಿಗಳಿಂದ ಶೋಭಿಸುವ ಅವುಗಳ ತುಂಬ ನಿರ್ಮಲವಾದ ಸಮುದ್ರದ ನೀರನ್ನು ತುಂಬಿದ್ದರು.

ಇತರೇಂದ್ರರ್ ಪರಿಚಾರಕಪ್ರಭೃತಿಯಿಂ ಮುಂದಾಡೆ ದೇವಾಂಗನಾ
ನ್ವಿತದೇವಾಧಿಪಕಾಂತೆ ಕನ್ನಡಿ ಸೊಡರ್ ಪೂಮಾಲೆ ಭೃಂಗಾರವ
ಕ್ಷತಮೆಂಬುಜ್ಜ್ವಳಮಂಗಳೋಪಕರಣದ್ರವ್ಯಂಗಳಂ ನೀಡೆ ಸಂ
ತತಮೇನಂದು ಜಿನಾರ್ಭಕಂಗೆಸೆದುದೋ ಜನ್ಮಾಭಿಷೇಕೋತ್ಸವಂ ೮೧

**ಪದವಿಭಾಗ-ಅನ್ವಯ-ಅರ್ಥ:** ಇತರೇಂದ್ರರ್ ಪರಿಚಾರಕಪ್ರಭೃತಿಯಿಂ ಮುಂದಾಡೆ = ಇತರ ಕಲ್ಪಗಳ ಒಡೆಯರು ಸೇವಕರಂತಿರಲು, ದೇವಾಂಗನಾ + ಅನ್ವಿತದೇವಾಧಿಪಕಾಂತೆ = ದೇವವನಿತೆಯರೊಡನಿದ್ದ ಶಚೀದೇವಿಯು, ಕನ್ನಡಿ ಸೊಡರ್ ಪೂಮಾಲೆ ಭೃಂಗಾರಂ + ಅಕ್ಷತಂ + ಎಂಬ + ಉಜ್ಜ್ವಳಮಂಗಳ + ಉಪಕರಣದ್ರವ್ಯಂಗಳಂ ನೀಡೆ = ಕನ್ನಡಿ ದೀಪ ಹೂಹಾರ ಚಿನ್ನದ ಗಿಂಡಿ ಅಕ್ಷತೆಗಳೆಂಬ ಉಜ್ವಲವಾದ ಮಂಗಳ ಉಪಕರಣಗಳನ್ನೂ ವಸ್ತುಗಳನ್ನೂ ನೀಡಲು, ಜಿನಾರ್ಭಕಂಗೆ ಜನ್ಮಾಭಿಷೇಕೋತ್ಸವಂ ಏನಂದು ಸಂತತಂ ಎಸೆದುದೋ = ಜಿನಶಿಶುವಿಗೆ ಜನ್ಮಾಭಿಷೇಕವು ಅದೇನು ವೈಭವದಿಂದ ಒಂದೇ ಸಮನೆ ನಡೆಯಿತು!

**ಗದ್ಯಾನುಸರಣ:** ಇತರ ಕಲ್ಪಗಳ ಒಡೆಯರು ಪರಿಚಾರಕರಂತೆ ಇದ್ದರು; ಆಗ ದೇವವನಿತೆಯರೊಡನಿದ್ದ ಶಚೀದೇವಿಯು ಕನ್ನಡಿ ದೀಪ ಹೂಹಾರ ಚಿನ್ನದ ಗಿಂಡಿ ಅಕ್ಷತೆಗಳೆಂಬ ಉಜ್ವಲವಾದ ಮಂಗಳ ಉಪಕರಣಗಳನ್ನೂ ವಸ್ತುಗಳನ್ನೂ ನೀಡಲು ಜಿನಶಿಶುವಿಗೆ ಜನ್ಮಾಭಿಷೇಕವು ವೈಭವದಿಂದ ನಡೆಯಿತು!

ಕ್ಷೀರಾಬ್ಧಿಯ ನೀರಲ್ಲದೆ
ಧೀರನ ಮಜ್ಜನಕೆ ಪೆಱವು ನೀರ್ ತಗವೆಂದಾ
ವಾರಾಶಿವರಂ ಸುರಜನ
ದಾರಿ ಮನೋಹಾರಿ ನೀಳ್ದುವೆರಡುಂ ಕೆಲದೊಳ್ ೮೨

**ಪದವಿಭಾಗ-ಅನ್ವಯ-ಅರ್ಥ:** ಧೀರನ ಮಜ್ಜನಕೆ = ಧೀರನ ಅಭಿಷೇಕಕ್ಕೆ, ಕ್ಷೀರ + ಅಬ್ಧಿಯ ನೀರಲ್ಲದೆ ಪೆಱವು ನೀರ್ ತಗವು + ಎಂದು = ಹಾಲುಗಡಲಿನ ನೀರಲ್ಲದೆ ಬೇರೆ ಯಾವ ನೀರೂ ಸಲ್ಲದೆಂದು, ವಾರಾಶಿವರಂ = ಸಮುದ್ರದವರೆಗೂ, ಎರಡುಂ ಕೆಲದೊಳ್ = ಎರಡೂ ಕಡೆಗಳಲ್ಲಿ, ಸುರಜನ ದಾರಿ ಮನೋಹಾರಿ ನೀಳ್ದುವು = ದೇವತೆಗಳ ಹಾದಿಯು ಆಕರ್ಷಣೀಯವಾಗಿ ನೀಳವಾಗಿ ಸಾಲುಗಟ್ಟಿತು.

**ಗದ್ಯಾನುಸರಣ:** ಧೀರನ ಅಭಿಷೇಕಕ್ಕೆ ಹಾಲುಗಡಲಿನ ನೀರಲ್ಲದೆ ಬೇರೆ ಯಾವ ನೀರೂ ಸಲ್ಲದೆಂದು ಸಮುದ್ರದವರೆಗೂ ಎರಡೂ ಕಡೆಗಳಲ್ಲಿ ದೇವತೆಗಳ ಹಾದಿಯು ಆಕರ್ಷಣೀಯವಾಗಿ ನೀಳವಾಗಿ ಸಾಲುಗಟ್ಟಿತು.

**ವ॥ ಅಂತು ಸೌಧರ್ಮೇಂದ್ರನುಮೀಶಾನೇಂದ್ರನುಮೆರಡುಂ ದೆಸೆ ಯೊಳಮರ ನಿಕುರುಂಬ ವೋಳಿವಟ್ಟಷ್ಟಯೋಜನ ಗಂಭೀರೈಕಯೋಜನ ಮುಖವಿಸ್ತಾರ ಶಾತಕುಂಭಕುಂಭಂಗಳಂ ಕೊಂಡು,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಸೌಧರ್ಮೇಂದ್ರನುಂ + ಈಶಾನೇಂದ್ರನುಂ = ಹೀಗೆ ಸೌಧಮೇಂದ್ರ ಮತ್ತು ಈಶಾನೇಂದ್ರರ, ಎರಡುಂ ದೆಸೆಯೊಳ್ + ಅಮರನಿಕುರುಂಬಂ + ಓಳಿವಟ್ಟು = ಎರಡೂ ಕಡೆಗಳಲ್ಲಿ ದೇವತೆಗಳ ಸಮೂಹವು ಸಾಲಾಗಿ, ಅಷ್ಟಯೋಜನಗಂಭೀರ = ಎಂಟು ಯೋಜನ ಆಳವೂ, ಏಕಯೋಜನಮುಖವಿಸ್ತಾರ = ಒಂದು ಯೋಜನ ಅಗಲವೂ, ಇದ್ದ, ಶಾತಕುಂಭಕುಂಭಂಗಳಂ ಕೊಂಡು = ಚಿನ್ನದ ಕೊಡಗಳನ್ನು ತೆಗೆದುಕೊಂಡು,

**ಗದ್ಯಾನುಸರಣ:** ಹೀಗೆ ಸೌಧಮೇಂದ್ರ ಮತ್ತು ಈಶಾನೇಂದ್ರರ ಎರಡೂ ಕಡೆಗಳಲ್ಲಿ ದೇವತೆಗಳ ಸಮೂಹವು ಸಾಲಾಗಿ ನಿಂತು ಎಂಟು ಯೋಜನ ಆಳವೂ ಒಂದು ಯೋಜನ ಅಗಲವೂ ಇದ್ದ ಚಿನ್ನದ ಕೊಡಗಳನ್ನು ತೆಗೆದುಕೊಂಡರು.

**ಅಯ್ದನೆಯ ಜಲಧಿವರಮಿರ**
**ದೆಯ್ದುವ ಮೊಗೆವಂತೆ ಮೊಗೆದೋರೊರ್ಬರ ಕೈ**
**ಗೆಯ್ದಿಸುವ ಬೇಗಮಂ ಮನ**
**ಮೆಯ್ದಿದುದಿಲ್ಲಮರಚರಿತಮೇನಚ್ಚರಿಯೋ** ೮೩

**ಪದವಿಭಾಗ-ಅನ್ವಯ-ಅರ್ಥ:** ಅಯ್ದನೆಯ ಜಲಧಿವರಂ = ಐದನೆಯ ಸಮುದ್ರದವರೆಗೂ, ಇರದೆ + ಎಯ್ದುವ = ಎಡೆಬಿಡದಂತೆ ಹೋಗುವ, ಮೊಗೆವಂತೆ ಮೊಗೆದು + ಓರೊರ್ಬರ ಕೈಗೆ + ಎಯ್ದಿಸುವ = ಕೊಡಗಳಲ್ಲಿ ತುಂಬಿ ಒಬ್ಬೊಬ್ಬರ ಕೈಗೆ ತಲುಪಿಸುವ, ಬೇಗಮಂ ಮನಂ + ಎಯ್ದಿದುದಿಲ್ಲ = ವೇಗವನ್ನು ಮನಸ್ಸೂ ತಲುಪಲು ಸಾಧ್ಯವಾಗಲಿಲ್ಲ, ಅಮರಚರಿತಂ + ಏನ್ + ಅಚ್ಚರಿಯೋ = ಅಂದ ಮೇಲೆ ದೇವತೆಗಳ ನಡಾವಳಿಯು ಅದೇನು ಆಶ್ಚರ್ಯಕರ!

**ಗದ್ಯಾನುಸರಣ:** ಐದನೆಯ ಸಮುದ್ರದವರೆಗೂ ಎಡೆಬಿಡದಂತೆ ಹೋಗುವ, ಕೊಡಗಳಲ್ಲಿ ತುಂಬಿ ಒಬ್ಬೊಬ್ಬರ ಕೈಗೆ ತಲುಪಿಸುವ ವೇಗವು ಮನೋವೇಗಕ್ಕೂ ಮಿಗಿಲಾಯಿತು; ಅಂದ ಮೇಲೆ ದೇವತೆಗಳ ನಡಾವಳಿಯು ಅದೇನು ಆಶ್ಚರ್ಯಕರ!

**ಕಳಧೌತಘಟಂ ಮುಕ್ತಾ**
**ಫಳಾಂಚಿತಗ್ರೀವಮೆಟಿಚಿದುಕೊಂಡುದು ತಾರಾ**
**ವಳಿಪರಿವೃತನವಸಂಧ್ಯಾ**
**ಜಳದದ ಗಾಡಿಯುನನೇಕಸುರಕರತಳದೊಳ್** ೮೪

**ಪದವಿಭಾಗ-ಅನ್ವಯ-ಅರ್ಥ:** ಅನೇಕಸುರಕರತಳದೊಳ್= ಅಸಂಖ್ಯ ದೇವತೆಗಳ ಕೈಗಳಲ್ಲಿನ, ಮುಕ್ತಾಫಳ + ಅಂಚಿತಗ್ರೀವಂ ಕಳಧೌತಘಟಂ = ಕಂಠದಲ್ಲಿ ಮುತ್ತಿನ ಹಾರವನ್ನು ಸುತ್ತಿದ ಚಿನ್ನದ ಕೊಡಗಳು, ತಾರಾವಳಿಪರಿವೃತ = ನಕ್ಷತ್ರಮಾಲೆಯಿಂದ ಸುತ್ತುವರಿದ, ನವಸಂಧ್ಯಾಜಳದದ ಗಾಡಿಯನ್ ಎಟಿಚಿದು ಕೊಂಡುದು = ಹೊಸ ಸಂಜೆಯ ಮೋಡದ ಚೆಲುವನ್ನು ಪಡೆದುಕೊಂಡಿತು.

ಗದ್ಯಾನುಸರಣ: ಅಸಂಖ್ಯ ದೇವತೆಗಳ ಕೈಗಳಲ್ಲಿನ ಕಂಠದಲ್ಲಿ ಮುತ್ತಿನ ಹಾರವನ್ನು ಸುತ್ತಿದ ಚಿನ್ನದ ಕೊಡಗಳು ನಕ್ಷತ್ರಮಾಲೆಯಿಂದ ಸುತ್ತುವರಿದ ಹೊಸ ಸಂಜೆಯ ಮೋಡದ ಚೆಲುವನ್ನು ಪಡೆದುಕೊಂಡಿತು.

**ಪೊಸಸಂಜೆಮುಗಿಲ ತುಱುಗಲ್**
**ಮುಸುಕಿದುದು ಪಯಃಪಯೋಧಿಯೆಲ್ಲಮನೆಂಬಂ**
**ತಸದಳಮೆಸೆದುದು ಮೊಗೆವು**
**ದ್ದೆಸದೊಳೆ ತಳತಳಿಸಿ ಪೊನ್ನ ಪೊಸಕಳಸಂಗಳ್** ೮೫

**ಪದವಿಭಾಗ-ಅನ್ವಯ-ಅರ್ಥ:** ಮೊಗೆವ + ಉದ್ದೆಸದೊಳೆ ತಳತಳಿಸಿ ಪೊನ್ನ ಪೊಸಕಳಸಂಗಳ್ = ತುಂಬುವ ಕೆಲಸದಲ್ಲಿ ತಳತಳ ಹೊಳೆಯುವ ಚಿನ್ನದ ಕೊಡಗಳು, ಪಯಃಪಯೋಧಿಯೆಲ್ಲಮನ್ ಪೊಸಸಂಜೆಮುಗಿಲ ತುಱುಗಲ್ ಮುಸುಕಿದುದು = ಹಾಲುಗಡಲನ್ನೆಲ್ಲ ಹೊಸ ಸಂಜೆಯ ಮೋಡಗಳ ರಾಶಿಯು ಮುಸುಕಿಬಿಟ್ಟಿತೋ, ಎಂಬಂತೆ + ಅಸದಳಂ + ಎಸೆದುದು = ಎನ್ನುವಂತೆ ಅಸೀಮವಾಗಿ ಶೋಭಿಸಿತು.

ಗದ್ಯಾನುಸರಣ: ನೀರು ತುಂಬುವ ಕೆಲಸದಲ್ಲಿ ತಳತಳ ಹೊಳೆಯುವ ಚಿನ್ನದ ಕೊಡಗಳು ಹಾಲುಗಡಲನ್ನೆಲ್ಲ ಸಂಜೆಯ ಮೋಡಗಳ ರಾಶಿಯು ಮುಸುಕಿಬಿಟ್ಟಿತೋ ಎನ್ನುವಂತೆ ಅಸೀಮವಾಗಿ ಶೋಭಿಸಿತು.

**ವ। ಅಂತು ದೇವರ್ ದೇವನೊಳಾವಗಮಾದ ತಮ್ಮಾದರದಿಂ ಮಾಲೆಗಟ್ಟಿ ದುಗ್ಧವಾರಿಪೂರಿತಕಳಶಂಗಳಂ ತಂದು ಗೊಂದಳಿಅಸಿ ಸಂದಣಿಸಿ ನಿಂದಾಗಳ್,**

**ಅರ್ಥ:** ಅಂತು ದೇವರ್ ದೇವನೊಳ್ಅರ್ಗೆ + ಆವಗಂ + ಆದ ತಮ್ಮ + ಆದರದಿಂ ಮಾಲೆಗಟ್ಟಿ ದುಗ್ಧವಾರಿಪೂರಿತಕಳಶಂಗಳಂ ತಂದು ಗೊಂದಳಿಸಿ ಸಂದಣಿಸಿ ನಿಂದಾಗಳ್ = ಹಾಗೆ ದೇವತೆಗಳು ದೇವಾಧಿದೇವನ ಬಗ್ಗೆ ಇದ್ದ ತಮ್ಮ ಪ್ರೀತಿಯಿಂದ ಸಾಲುಗಟ್ಟಿ ಹಾಲ್ಗಡಿಲಿನ ನೀರು ತುಂಬಿದ ಕೊಡಗಳನ್ನು ಒಟ್ಟಿಗೇ ತಂದು ಗುಂಪಾಗಿ ನೀಡಿದರು.

**ಸುರಸಂದೋಹದ ತೀವಿತಂದ ಘಟಸಂಘಾತಂಗಳಾನಲ್ಕೆರ**
**ಟ್ಕಿರದಿಂ ಬಾರದೆ ಮಾಣೆ ನಿರ್ಮಿಸಿದ ದೋರ್ದಂಡಂಗಳೊಳ್ ಭೂಷಣೋ**
**ತ್ಕರಮಿಂಬಾಗಿರೆ ಭೂಷಣಾಂಗತರುವಂ ಕುಂಭಂಗಳಾ ತೋಳ್ಗಳೊಳ್**
**ಕರಮಿಂಬಾಗಿರೆ ಭಾಜನಾಂಗತರುವಂ ಪೋಲ್ತಂ ಸುರಾಧೀಶ್ವರಂ೮೬**

**ಪದವಿಭಾಗ–ಅನ್ವಯ–ಅರ್ಥ:** ಸುರಸಂದೋಹದ ತೀವಿತಂದ = ದೇವತೆಗಳ ಗುಂಪು ತುಂಬಿಕೊಂಡು ತಂದ, ಘಟಸಂಘಾತಂಗಳ್ + ಅನಲ್ಕೆ + ಎರಟ್ಕಿರದಿಂ ಬಾರದೆ ಮಾಣೆ = ಬಿಂದಿಗೆಗಳ ಸಮೂಹವನ್ನು ತೆಗೆದುಕೊಳ್ಳಲು ಸಾಧ್ಯವಾಗದೆ, ನಿರ್ಮಿಸಿದ ದೋರ್ದಂಡಂಗಳೊಳ್ = ನಿರ್ಮಿಸಿದ ಬಾಹುದಂಡಗಳಲ್ಲಿ, ಭೂಷಣ + ಉತ್ಕರಂ + ಇಂಬಾಗಿರೆ ಭೂಷಣಾಂಗತರುವಂ = ಆಭರಣ ಸಮೂಹವು ಚೆಂದವಾಗಲು ಭೂಷಣಾಂಗ ಕಲ್ಪವೃಕ್ಷವನ್ನೂ, ಕುಂಭಂಗಳ್ + ಆ ತೋಳ್ಗಳೊಳ್ ಕರಂ + ಇಂಬಾಗಿರೆ ಭಾಜನಾಂಗತರುವಂ = ಬಿಂದಿಗೆಗಳು ಆ ತೋಳುಗಳಲ್ಲಿ ಚೆಲುವಾಗಿರಲು ಭಾಜನಾಂಗ ಕಲ್ಪವೃಕ್ಷವನ್ನೂ, ಸುರಾಧೀಶ್ವರಂ ಪೋಲ್ತಂ = ದೇವಂದ್ರನು ಹೋಲುತ್ತಿದ್ದನು.

**ಗದ್ಯಾನುಸರಣ:** ದೇವತೆಗಳ ಗುಂಪು ತುಂಬಿಕೊಂಡು ತಂದ ಬಿಂದಿಗೆಗಳ ಸಮೂಹವನ್ನು ತೆಗೆದುಕೊಳ್ಳಲು ಸಾಧ್ಯವಾಗದೆ ಇಂದ್ರನು ಇನ್ನೂ ಅನೇಕ ಬಾಹುದಂಡಗಳನ್ನು ನಿರ್ಮಿಸಿಕೊಂಡ; ಆ ಬಾಹುದಂಡಗಳಲ್ಲಿ ಚೆಂದವಾಗಿದ್ದ ಆಭರಣಸಮೂಹದಿಂದಾಗಿ ದೇವೇಂದ್ರನು ಭೂಷಣಾಂಗ ಕಲ್ಪವೃಕ್ಷವನ್ನೂ, ಚೆಲುವಾಗಿದ್ದ ಬಿಂದಿಗೆಗಳಿಂದಾಗಿ ಭಾಜನಾಂಗ ಕಲ್ಪವೃಕ್ಷವನ್ನೂ ಹೋಲುತ್ತಿದ್ದನು.

**ವ।** **ಅಂತು ನಿಜಭುಜಸಹಸ್ರೋದ್ಧೃತಕನಕಕುಂಭಮುಖವಿಗಳಿತಕ್ಷೀರ ವಾರಿಧಾರೆಯುಂ ಜಯಜಯನಿನದಪೂರ್ವಕಂ ಜಿನಸವನಪ್ರಥಮ ಪ್ರಾರಂಭದೊಳ್ ಸೌಧರ್ಮೇಂದ್ರನೀ ಶಾನೇಂದ್ರನುಂ ಮಿಸಿಸಿದಾಗಳ್,**

**ಪದವಿಭಾಗ–ಅನ್ವಯ–ಅರ್ಥ:** ಅಂತು ನಿಜಭುಜಸಹಸ್ರ + ಉತ್ + ಧೃತಕನಕಕುಂಭಮುಖವಿಗಳಿತ = ಹೀಗೆ ತನ್ನ ಸಾವಿರ ಭುಜಗಳಿಂದ ಎತ್ತಿ ಹಿಡಿದು ಚಿನ್ನದ ಕೊಡಗಳ ಬಾಯಿಂದ ಸುರಿಯುವ, ಕ್ಷೀರವಾರಿಧಾರೆಯಂ = ಹಾಲ್ಗಡಲಿನ

ನೀರಿನ ಧಾರೆಯಿಂದ, ಜಿನಸವನಪ್ರಥಮಪ್ರಾರಂಭದೊಳ್ = ಜಿನಶಿಶುವಿನ ಜನ್ಮಾಭಿಷೇಕದ ಮೊದಲಲ್ಲಿ, ಜಯಜಯನಿನದಪೂರ್ವಕಂ = ಜಯಕಾರದೊಂದಿಗೆ, ಸೌಧರ್ಮೇಂದ್ರನ್ + ಈಶಾನೇಂದ್ರನುಂ ಮಿಸಿಸಿದಾಗಳ್ = ಸೌಧರ್ಮೇಂದ್ರನೂ ಈಶಾನೇಂದ್ರನೂ ಸ್ನಾನಮಾಡಿಸಲು,

ಗದ್ಯಾನುಸರಣ: ಹೀಗೆ ತನ್ನ ಸಾವಿರ ಭುಜಗಳಿಂದ ಎತ್ತಿ ಹಿಡಿದು ಚಿನ್ನದ ಕೊಡಗಳ ಬಾಯಿಂದ ಸುರಿಯುವ ಹಾಲ್ಗಡಲಿನ ನೀರಿನ ಧಾರೆಯಿಂದ ಜಿನಶಿಶುವಿನ ಜನ್ಮಾಭಿಷೇಕದ ಮೊದಲಲ್ಲಿ ಸೌಧರ್ಮೇಂದ್ರನೂ ಈಶಾನೇಂದ್ರನೂ ಜಯಕಾರಮಾಡುತ್ತ ಸ್ನಾನಮಾಡಿಸಿದರು.

ಆ ದುಗ್ಧಧಾರೆ ಕರಮಿಂ
ಬಾದುದು ಜಿನಮಸ್ತಕಾಗ್ರದೊಳ್ ಗಂಗಾಕೂ
ಟೋದಗ್ರಶಿಖರದೊಳ್ ಚೆ
ಲ್ವಾದಮೆ ಮಿಗೆ ಸುರಿವ ಗಗನಗಂಗಾನದಿವೊಲ್ ೮೭

ಪದವಿಭಾಗ–ಅನ್ವಯ–ಅರ್ಥ: ಜಿನಮಸ್ತಕ + ಅಗ್ರದೊಳ್ ಆ ದುಗ್ಧಧಾರೆ = ಜಿನಶಿಶುವಿನ ತಲೆಯ ಮೇಲೆ (ಬೀಳುತ್ತಿದ್ದ) ಆ ಹಾಲ್ಗಡಲಿನ ನೀರಿನ ಧಾರೆಯು ಗಂಗಾಕೂಟ + ಉದಗ್ರಶಿಖರದೊಳ್ ಚೆಲ್ವು + ಆದಮೆ ಮಿಗೆ ಸುರಿವ ಗಗನಗಂಗಾನದಿವೊಲ್ = ಹಿಮಾಲಯದ ಗಂಗಾಶಿಖರದಲ್ಲಿ ಜೋರಾಗಿ ಸುಂದರವಾಗಿ ಬೀಳುವ ಆಕಾಶಗಂಗೆಯಂತೆ, ಕರಂ + ಇಂಬಾದುದು = ತುಂಬ ಮನೋಹರವಾಗಿತ್ತು,

ಗದ್ಯಾನುಸರಣ: ಜಿನಶಿಶುವಿನ ತಲೆಯ ಮೇಲೆ ಬೀಳುತ್ತಿದ್ದ ಆ ಹಾಲ್ಗಡಲಿನ ನೀರಿನ ಧಾರೆಯು ಹಿಮಾಲಯದ ಗಂಗಾಶಿಖರದಲ್ಲಿ ಜೋರಾಗಿ ಸುಂದರವಾಗಿ ಬೀಳುವ ಆಕಾಶಗಂಗೆಯಂತೆ ತುಂಬ ಮನೋಹರವಾಗಿತ್ತು,

ಆಗಳ್ ಕಲ್ಪೇಶ್ವರರನು
ರಾಗದಿನೊಡನೊಡನೆಯೆ ಸುರಿಯೆ ಪಾಲ್ಗಡಲೊಂದುಂ
ಟಾಗದೆ ಮೇರುವ ತುದಿಯೊಳ
ಮೀಗಳೆನಲ್ ನೆಱೆದುದಾ ಪಯಃಪ್ಲವದೆಸಕಂ ೮೮

ಪದವಿಭಾಗ–ಅನ್ವಯ–ಅರ್ಥ: ಆಗಳ್ ಕಲ್ಪೇಶ್ವರರ್ + ಅನುರಾಗದಿನ್ + ಒಡನೊಡನೆಯೆ ಸುರಿಯೆ = ಆ ದೇವೇಂದ್ರರುಗಳು ಪ್ರೀತಿಯಿಂದ ಜೊತೆಯಾಗಿ

ಸುರಿದರೆ, ಈಗಳ್ ಮೇರುವ ತುದಿಯೊಳಂ ಒಂದು ಪಾಲ್ಗಡಲ್ ಉಂಟಾಗದೆ = ಈಗ ಮೇರುಪರ್ವತದ ತುದಿಯಲ್ಲಿಯೂ ಒಂದು ಹಾಲ್ಗಡಲು ಉಂಟಾಗುವುದಿಲ್ಲವೇ, ಎನಲ್ ಆ ಪಯಃಪ್ಲವದ + ಎಸಕಂ ನೆಱೆದುದು = ಎನ್ನುವಂತೆ ಆ ಹಾಲ್ಗಡಲ ನೀರಿನ ಸುರಿಯುವಿಕೆಯು ಸಾಗಿತು.

**ಗದ್ಯಾನುಸರಣ:** ಆ ದೇವೇಂದ್ರರುಗಳು ಪ್ರೀತಿಯಿಂದ ಜೊತೆಯಾಗಿ ಸುರಿದರೆ ಈಗ ಮೇರುಪರ್ವತದ ತುದಿಯಲ್ಲಿಯೂ ಮತ್ತೊಂದು ಹಾಲ್ಗಡಲು ಉಂಟಾಗುತ್ತದೆ ಎನ್ನುವಂತೆ ಆ ಹಾಲ್ಗಡಲ ನೀರನ್ನವರು ಸುರಿದರು.

**ಸುರಜಳದಂಗಳ್ ದುಗ್ಧಾಂ**
**ಬುರಾಶಿಯೊಳ್ ಪೇಱೆ ಬಂದ ನೀರ್ಗಳನೆತ್ತಂ**
**ಸುರಿದುವು ಜಿನಾರ್ಭಕಾಚಳ**
**ಶಿರದೊಳ್ ಜಳದಂಗಳಂತು ನಗದೊಳ್ ಸುರಿಗುಂ ೮೯**

**ಪದವಿಭಾಗ–ಅನ್ವಯ–ಅರ್ಥ:** ನಗದೊಳ್ ಜಳದಂಗಳಂತು = ಪರ್ವತದಲ್ಲಿ ಮೋಡಗಳ ಹಾಗೆ, ಸುರಜಳದಂಗಳ್ = ದೇವತೆಗಳೆಂಬ ಮೋಡಗಳು, ದುಗ್ಧ + ಅಂಬುರಾಶಿಯೊಳ್ ಪೇಱೆ ಬಂದ ನೀರ್ಗಳನ್ = ಹೀರಿಕೊಂಡ ಹಾಲುಗಡಲಿನ ನೀರಿನ ರಾಶಿಯನ್ನು ಜಿನ + ಅರ್ಭಕ + ಅಚಳಶಿರದೊಳ್ ಎತ್ತಂ ಸುರಿದುವು = ಜಿನಶಿಶುವಿನ ತಲೆಯೆಂಬ ಶಿಖರದ ಮೇಲೆ ಎಲ್ಲೆಡೆ ಸುರಿಸಿದುವು.

**ಗದ್ಯಾನುಸರಣ:** ಪರ್ವತದಲ್ಲಿ ಮೋಡಗಳು ಹೇಗೋ ಹಾಗೆ, ದೇವತೆಗಳೆಂಬ ಮೋಡಗಳು ಹೀರಿಕೊಂಡು ತಂದ ಹಾಲುಗಡಲಿನ ನೀರಿನ ರಾಶಿಯನ್ನು ಜಿನಶಿಶುವಿನ ತಲೆಯೆಂಬ ಶಿಖರದ ಮೇಲೆ ಎಲ್ಲೆಡೆ ಸುರಿಸಿದುವು.

**ಜಳನಿಧಿ ತೊಱೆಗಳನೆನಿತುಮ**
**ನೊಳಕೊಳ್ವವೊಲಿನಿಸು ತಳರದಾಶ್ಚರ್ಯಮಹಾ**
**ಜಳನಿಧಿ ಪಯಃಪ್ಲವಂಗಳ**
**ನೊಳಕೊಂಡಂ ಸುರರ ಮಿಸಿಸುವವಸರದಾಗಳ್ ೯೦**

**ಪದವಿಭಾಗ–ಅನ್ವಯ–ಅರ್ಥ:** ಜಳನಿಧಿ ಎನಿತುಮನ್ ತೊಱೆಗಳನ್ ಒಳಕೊಳ್ವವೊಲ್ = ಸಮುದ್ರವು ಎಷ್ಟು ನದಿಗಳನ್ನಾದರೂ ಒಳಗೊಳ್ಳುವ ಹಾಗೆ, ಸುರರ ಮಿಸಿಸುವ + ಅವಸರದಾಗಳ್ = ದೇವತೆಗಳು ಮಜ್ಜನಗೈಸುವ ಸಂದರ್ಭದಲ್ಲಿ, ಆಶ್ಚರ್ಯಮಹಾಜಳನಿಧಿ = ಆಶ್ಚರ್ಯಸಾಗರವಾದ ಜಿನಶಿಶುವು,

ಇನಿಸು ತಳರದೆ ಪಯಃಪ್ಲವಂಗಳನ್ + ಒಳಕೊಂಡಂ = ಸ್ವಲ್ಪವಾದರೂ ಗಲಿಬಿಲಿಗೊಳ್ಳದೆ ನೀರಿನ ಧಾರೆಗಳನ್ನೆಲ್ಲ ಒಳಗೊಂಡ.

ಗದ್ಯಾನುಸರಣ: ಸಮುದ್ರವು ಎಷ್ಟು ನದಿಗಳನ್ನಾದರೂ ಒಳಗೊಳ್ಳುವ ಹಾಗೆ, ದೇವತೆಗಳು ಮಜ್ಜನಗೈಸುವ ಸಂದರ್ಭದಲ್ಲಿ ಆಶ್ಚರ್ಯಸಾಗರವಾದ ಜಿನಶಿಶುವು ಸ್ವಲ್ಪವಾದರೂ ಗಲಿಬಿಲಿಗೊಳ್ಳದೆ ಸುರಿದ ನೀರಿನ ಧಾರೆಗಳನ್ನೆಲ್ಲ ಒಳಗೊಂಡ.

ಬಾಳಂ ಬಾಳಮೃಣಾಳದಂತಃಸಿನೆಱಂ ದುಗ್ಧಪ್ಲವಂ ಸ್ಫೂಳಕ
ಲ್ಲೋಳಾಸ್ಫಾಳಿತಹೇಮಶೈಲಮಿದನಿನ್ನೇವಣ್ಣದಂ ಶಕ್ರನೆಂ
ಬಾಳೋಚನಂ ಬೆರಸಿರ್ಪ ದೇವಗಣಮಂ ನಂಬಿಪ್ಪುದಾಯ್ತಾಗಳಾ
ಲೀಳೋಚ್ಛ್ವಾಸಮೆ ತೂಳ್ದಿ ದೇವರೊಡನಾ ನಾನಾವಿಮಾನಂಗಳಂ೯೧

ಪದವಿಭಾಗ-ಅನ್ವಯ-ಅರ್ಥ: ಬಾಳಂ ಬಾಳಮೃಣಾಳದಂತೆ + ಅಃಸಿನೆಱಂ = ಮಗುವು ಎಳೆಯ ತಾವರೆ ದಂಟಿನಂತೆ ತುಂಬ ಸೂಕ್ಷ್ಮಶರೀರಿ, ದುಗ್ಧಪ್ಲವಂ ಸ್ಫೂಳಕಲ್ಲೋಳ + ಆಸ್ಫಾಳಿತಹೇಮಶೈಲಂ = ಈ ಹಾಲಿನ ಧಾರೆಯು ಹಿಮತ್ಪರ್ವತವನ್ನು ಅಪ್ಪಳಿಸುವಂತಹ ದೊಡ್ಡ ಅಲೆಗಳುಳ್ಳುದು, ಶಕ್ರನ್ ಇದನ್ + ಇನ್ನು + ಏ ಪಣ್ಣಿದಂ = ಇಂದ್ರನು ಇದನ್ನು ಏನೆಂದು ಮಾಡಿದನೋ, ಎಂಬ + ಆಳೋಚನಂ ಬೆರಸಿರ್ಪ ದೇವಗಣಮಂ = ಎಂಬ ಚಿಂತೆಯಿಂದ ಕೂಡಿದ ದೇವತಾಸಮೂಹವನ್ನು, ಆ ಲೀಳಾ + ಉಚ್ಛ್ವಾಸಮೆ ದೇವರೊಡನೆ ಆ ನಾನಾವಿಮಾನಂಗಳಂ ತೂಳ್ದಿ ನಂಬಿಪ್ಪುದಾಯ್ತು = ಆ ಮಗುವಿನ ಆಟವೆಂಬಂತೆ ಬಿಟ್ಟ ಉಸಿರು ದೇವತೆಗಳ ಜೊತೆಯಲ್ಲಿ ಅನೇಕ ದೇವವಿಮಾನಗಳನ್ನೂ ಹಿಮ್ಮೆಟ್ಟಿಸಿ ನಂಬಿಸುವಂತಾಯಿತು.

ಗದ್ಯಾನುಸರಣ: 'ಮಗುವು ಎಳೆಯ ತಾವರೆ ದಂಟಿನಂತೆ ತುಂಬ ಸೂಕ್ಷ್ಮಶರೀರಿ, ಈ ಹಾಲಿನ ಧಾರೆಯು ಹಿಮತ್ಪರ್ವತವನ್ನು ಅಪ್ಪಳಿಸುವಂತಹ ದೊಡ್ಡ ಅಲೆಗಳುಳ್ಳುದು, ಇಂದ್ರನು ಹೀಗೇಕೆ ಮಾಡಿದ!' ಎಂಬ ಚಿಂತೆ ದೇವತಾ ಸಮೂಹಕ್ಕುಂಟಾಯಿತು; ಆದರೆ ಆ ಮಗುವು ಆಟವೆಂಬಂತೆ ಬಿಟ್ಟ ಉಸಿರು ದೇವತೆಗಳ ಜೊತೆಯಲ್ಲಿ ಅನೇಕ ದೇವವಿಮಾನಗಳನ್ನೂ ಹಿಮ್ಮೆಟ್ಟಿಸಿತು; ಆಗ ದೇವತೆಗಳು ಮಗುವಿನ ಸಾಮರ್ಥ್ಯವನ್ನು ನಂಬುವಂತಾಯಿತು.

ಪಸರಿಸಿದ ಪಯಃಪೂರದ
ಪೊಸವೆಳ್ಪು ನಿಜಾಂಗರುಚಿಯ ಪೊಱಪೊಱಗೆ ಪೊದ
ಳ್ದೆಸೆದಿರೆ ಬೆಳ್ಮುಗಿಲಿಂದಂ
ಮುಸುಕಿದ ಬಾಳಾರ್ಕಬಿಂಬಮಿರ್ಪಂತಿರ್ದಂ ೯೨

**ಪದವಿಭಾಗ-ಅನ್ವಯ-ಅರ್ಥ:** ಪಸರಿಸಿದ ಪಯಃಪೂರದ ಪೊಸವೆಳ್ಪು = ತುಂಬಿಕೊಂಡ ಹಾಲಿನ ಪ್ರವಾಹದ ಹೊಳೆಯುವ ಬಿಳುಪು, ನಿಜ + ಅಂಗರುಚಿಯ ಪೊಱಪೊಱಗೆ ಪೊದಳ್ದು + ಎಸೆದಿರೆ = ತನ್ನ ದೇಹಕಾಂತಿಯು ಮೇಲೆ ಮೇಲೆ ಹರಡಿಕೊಂಡಿರಲು, ಬೆಳ್ಮುಗಿಲಿಂದಂ ಮುಸುಕಿದ ಬಾಳ + ಅರ್ಕಬಿಂಬಂ + ಇರ್ಪಂತೆ + ಇರ್ದಂ = ಬಿಳಿಯ ಮೋಡವು ಮುಸುಕಿದ ಎಳೆಯ ಸೂರ್ಯನಂತೆ ಆ ಮಗುವು ಇದ್ದಿತು.

**ಗದ್ಯಾನುಸರಣ:** ತುಂಬಿಕೊಂಡ ಹಾಲಿನ ಪ್ರವಾಹದ ಹೊಳೆಯುವ ಬಿಳುಪು ತನ್ನ ದೇಹಕಾಂತಿಯು ಸುತ್ತಲೂ ಹರಡಿಕೊಂಡಿರಲು ಆ ಮಗುವು ಬಿಳಿಯ ಮೋಡವು ಮುಸುಕಿದ ಎಳೆಯ ಸೂರ್ಯನಂತೆ ಕಂಗೊಳಿಸಿತು.

**ಉರದೊಳ್ ಹಾರಂಗಳನೊ**
**ಳ್ಗುರುಳ್ಗಳೊಳ್ ಚಿನ್ನಪೂಗಳಂ ಪೋಲ್ತು ಮನೋ**
**ಹರಮಾದುದಮರಕಾಂತೆಯ**
**ರುರದೊಳ್ ಕುರುಳೊಳ್ ತಗುಳ್ದ ದುಗ್ಧಲವಂಗಳ್ ೯೩**

**ಪದವಿಭಾಗ-ಅನ್ವಯ-ಅರ್ಥ:** ಅಮರಕಾಂತೆಯರ + ಉರದೊಳ್ ಕುರುಳೊಳ್ ತಗುಳ್ದ ದುಗ್ಧಲವಂಗಳ್ = ದೇವಸ್ತ್ರೀಯರ ಎದೆಗಳ ಮೇಲೂ ಕೂದಲುಗಳಲ್ಲಿಯೂ ಅಂಟಿಕೊಂಡ ಹಾಲಹನಿಗಳು, ಉರದೊಳ್ ಹಾರಂಗಳನ್ = ಎದೆಯಲ್ಲಿ ಹಾರಗಳನ್ನೂ, ಒಳ್ + ಕುರುಳ್ಗಳೊಳ್ ಚಿನ್ನಪೂಗಳಂ = ಸೊಂಪಾದ ಕೂದಲಿನಲ್ಲಿ ಚಿನ್ನದ ಹೂಗಳನ್ನೂ, ಪೋಲ್ತು ಮನೋಹರಂ + ಆದುದು = ಹೋಲಿ ಸುಂದರವಾಯಿತು.

**ಗದ್ಯಾನುಸರಣ:** ದೇವಸ್ತ್ರೀಯರ ಎದೆಗಳ ಮೇಲೂ ಕೂದಲುಗಳಲ್ಲಿಯೂ ಅಂಟಿಕೊಂಡ ಹಾಲಹನಿಗಳು ಎದೆಯಲ್ಲಿ ಹಾರಗಳಂತೆಯೂ, ಸೊಂಪಾದ ಕೂದಲಿನಲ್ಲಿ ಚಿನ್ನದ ಹೂಗಳಂತೆಯೂ ಚೆಲುವಾಗಿ ಕಾಣಿಸಿದುವು.

**ಆಕಾಶಕ್ಕುಚ್ಚಳಿಸುವ**
**ನೇಕಪಯುಶ್ಶೀಕರಂಗಳಿಂದಂ ಜ್ಯೋತಿ**
**ರ್ಲೋಕಮಿದೊಂದುಂಟೆಂಬ ವಿ**
**ವೇಕಮನೊಡರಿಸಿದುದಮರಸಮಿತಿಯ ಮನದೊಳ್ ೯೪**

**ಪದವಿಭಾಗ-ಅನ್ವಯ-ಅರ್ಥ:** ಆಕಾಶಕ್ಕೆ + ಉಚ್ಚಳಿಸುವ + ಅನೇಕ ಪಯಃ + ಶೀಕರಂಗಳಿಂದಂ = ಆಕಾಶಕ್ಕೆ ಎರಚಿದ ಅಸಂಖ್ಯ ಹಾಲಹನಿಗಳಿಂದಾಗಿ, ಅಮರಸಮಿತಿಯ ಮನದೊಳ್= ದೇವತಾಸಮೂಹದ ಮನಸ್ಸಿನಲ್ಲಿ, ಇದೊಂದು

ಜ್ಯೋತಿರ್ಲೋಕಂ ಉಂಟೆಂಬ ವಿವೇಕಮನ್ + ಒಡರಿಸಿದುದು = ಇಲ್ಲೊಂದು ಬೆಳಕಿನ ಲೋಕವಿದೆ ಎಂಬ ವಿವೇಕವನ್ನು ಮೂಡಿಸಿತು.

**ಗದ್ಯಾನುಸರಣ:** ಆಕಾಶಕ್ಕೆ ಎರಚಿದ ಅಸಂಖ್ಯ ಹಾಲಹನಿಗಳಿಂದಾಗಿ ದೇವತಾಸಮೂಹದ ಮನಸ್ಸಿನಲ್ಲಿ ಇಲ್ಲೊಂದು ಬೆಳಕಿನ ಲೋಕವಿದೆ ಎಂಬ ಭಾವನೆಯನ್ನು ಮೂಡಿಸಿತು.

**ಕೆಲದೊಳ್ ತೆರಳ್ದು ಸೂಸುವ**
**ಆಲಲವಮಂಜರಿಗಳುಂಟುಮಾಡಿದುವು ದಿಶಾ**
**ಲಲನೆಯರ ವಕ್ತ್ರಮಂಡನ**
**ವಿಲಾಸದೊಳ್ ನೆಗಟ್ದಿ ಕರ್ಣಪೂರಶ್ರೀಯಂ** ೯೫

**ಪದವಿಭಾಗ-ಅನ್ವಯ-ಅರ್ಥ:** ಕೆಲದೊಳ್ ತೆರಳ್ದು ಸೂಸುವ ಜಲಲವಮಂಜರಿಗಳ್ = ಪಕ್ಕದಲ್ಲಿಯೇ ಸಿಡಿದು ಸೂಸುವ ನೀರಹನಿಗಳ ಗುಂಪು, ದಿಶಾಲಲನೆಯರ ವಕ್ತ್ರಮಂಡನವಿಲಾಸದೊಳ್ ನೆಗಟ್ದಿ = ದಿಗ್ದೇವಿಯರ ಮುಖಗಳಲ್ಲಿ ಸೊಬಗಿನಿಂದ ಕಂಗೊಳಿಸುವ, ಕರ್ಣಪೂರಶ್ರೀಯಂ ಉಂಟು ಮಾಡಿದುವು = ಕಿವಿಯ ಆಭರಣಗಳಂತೆ ಶೋಭಿಸಿದುವು.

**ಗದ್ಯಾನುಸರಣ:** ಪಕ್ಕದಲ್ಲಿಯೇ ಸಿಡಿದು ಸೂಸುವ ನೀರಹನಿಗಳ ಗುಂಪು, ದಿಗ್ದೇವಿಯರ ಮುಖದಲ್ಲಿ ಸೊಬಗಿನಿಂದ ಕಂಗೊಳಿಸುವ ಕಿವಿಯ ಆಭರಣಗಳಂತೆ ಶೋಭಿಸಿದುವು.

**ಜಿನನಾಥಸ್ನಪನಾಂಬು ತಜ್ಜಿನತನುಶ್ರೀಸಂಗದಿಂ ತಾನೆ ಪಾ**
**ವನಮಾಯ್ತೇ ತನಗಿರ್ಕೆಯಾದ ಕಡಲಂ ಕುಂಭಂಗಳಂ ಪೊಕ್ಕ ದೇ**
**ವನಿಕಾಯಂಗಳನಿಂದ್ರರಂ ಸುರವಧೂವೃಂದಂಗಳಂ ಮೇರುನಂ**
**ದನಭೂಪ್ರಾಂತಮುಮಂ ಪವಿತ್ರಮೆನಿಸಿತ್ತಾ ನೀರ್ಗದಾಶ್ಚರ್ಯಮೆ** ೯೬

**ಪದವಿಭಾಗ-ಅನ್ವಯ-ಅರ್ಥ:** ಜಿನನಾಥಸ್ನಪನ + ಅಂಬು ತತ್ + ಜಿನತನುಶ್ರೀಸಂಗದಿಂ ತಾನೆ ಪಾವನಮಾಯ್ತೇ = ಜಿನಪತಿಯ ಅಭಿಷೇಕಕ್ಕೆ ಸುರಿದ ನೀರು ಜಿನಶಿಶುವಿನ ಸಂಪರ್ಕದಿಂದ ತಾನೇ ಪಾವನವಾಯಿತೇ, ತನಗೆ + ಇರ್ಕೆಯಾದ ಕಡಲಂ = ತನಗೆ ಇರಲು ಅವಕಾಶವಿತ್ತ ಸಮುದ್ರವನ್ನೂ, ಪೊಕ್ಕ ಕುಂಭಂಗಳಂ = ಸೇರಿದ ಬಿಂದಿಗೆಗಳನ್ನೂ, ದೇವನಿಕಾಯಂಗಳನ್ + ಇಂದ್ರರಂ = ದೇವತಶಸಮೂಹವನ್ನೂ, ಇಂದ್ರರುಗಳನ್ನೂ, ಸುರವಧೂವೃಂದಂಗಳಂ = ದೇವಸ್ತ್ರೀಯರ ಗುಂಪನ್ನೂ, ಮೇರುನಂದನಭೂಪ್ರಾಂತಮುಮಂ = ಮೇರುಪರ್ವತದ

ಉದ್ಯಾನ ಹಾಗೂ ಭೂಮಿವಲಯವನ್ನೂ, ಪವಿತ್ರಮೆನಿಸಿತ್ತು = ಪಾವನವಾಗಿ ಮಾಡಿತು, ಆ ನೀರ್ಗೆ + ಅದು + ಆಶ್ಚರ್ಯಮೆ = ಅದೇನು ಆ ನೀರಿಗೆ ಅಚ್ಚರಿಯೇ!

**ಗದ್ಯಾನುಸರಣ:** ಜಿನಪತಿಯ ಅಭಿಷೇಕಕ್ಕೆ ಸುರಿದ ನೀರು ಜಿನಶಿಶುವಿನ ಸಂಪರ್ಕದಿಂದ ತಾನೇ ಪಾವನವಾಯಿತು; ತನಗೆ ಇರಲು ಅವಕಾಶವಿತ್ತ ಸಮುದ್ರವನ್ನೂ, ಸೇರಿದ ಬಿಂದಿಗೆಗಳನ್ನೂ, ದೇವತಾಸಮೂಹವನ್ನೂ ಇಂದ್ರರುಗಳನ್ನೂ, ದೇವಸ್ತ್ರೀಯರ ಗುಂಪನ್ನೂ, ಮೇರುಪರ್ವತದ ಉದ್ಯಾನ ಹಾಗೂ ಭೂವಲಯವನ್ನೂ ಪಾವನವಾಗಿ ಮಾಡಿತು; ಜಿನಸಂಪರ್ಕ ಪಡೆದ ಆ ನೀರಿಗೆ ಅದೇನುಅಚ್ಚರಿಯ ವಿಷಯವೇ!

**ತ್ರಿದಶೇಂದ್ರಪ್ರಮುಖಾಮರರ್ ಕಳಕಳಪ್ರಧ್ವಾನದಿಂ ಶಾತಕುಂ**
**ಭದ ಕುಂಭಂಗಳ ನೀರನೊರ್ಮೊದಲೆ ಭೋರ್ಭೋರೆಂದು ಪೊಯ್ದಾಗಳ**
**ತ್ತ ದಿಗಂತಂ ದಿವಿಜೇಂದ್ರದುಂದುಭಿನಿನಾದೋನ್ಮಿಶ್ರಮೇನುಣ್ಮೆ ಪೊ**
**ಣ್ಮಿದುದೋ ಮಂದರಕಂದರೋತ್ಥಿತಪಯಃಕಲ್ಲೋಳಕೋಳಾಹಳಂ೯೭**

**ಪದವಿಭಾಗ-ಅನ್ವಯ-ಅರ್ಥ:** ಕಳಕಳಪ್ರಧ್ವಾನದಿಂ ತ್ರಿದಶೇಂದ್ರಪ್ರಮುಖ + ಅಮರರ್ = ಕಲರವ ಮಾಡುತ್ತ ದೇವೇಂದ್ರರೇ ಮುಖ್ಯರಾದ ದೇವತೆಗಳು, ಶಾತಕುಂಭದ ಕುಂಭಂಗಳ ನೀರನ್ + ಒರ್ಮೊದಲೆ ಭೋರ್ಭೋರ್ + ಎಂದು ಪೊಯ್ದಾಗಳ್ = ಚಿನ್ನದ ಬಿಂದಿಗೆಗಳ ನೀರನ್ನು ಜೋರಾಗಿ ಸುರಿದಾಗ, ಅತ್ತ ದಿಗಂತಂ = ಆ ಕಡೆ ದಿಕ್ಕಿನ ಕೊನೆಗಳು, ದಿವಿಜೇಂದ್ರದುಂದುಭಿನಿನಾದ + ಉನ್ಮಿಶ್ರಂ ಉಣ್ಮೆ = ದೇವೇಂದ್ರ ದುಂದುಭಿಗಳ ಶಬ್ದವು ಜೊತೆಯಲ್ಲಿ ಹೊಮ್ಮಿ, ಮಂದರಕಂದರ + ಉತ್ಥಿತ = ಮಂದರದ ಕಣಿವೆಗಳಲ್ಲಿ ಉಂಟಾದ, ಪಯಃಕಲ್ಲೋಳಕೋಳಾಹಳಂ ಏನ್ ಪೊಣ್ಮಿದುದೋ = ನೀರಿನ ಪ್ರವಾಹದ ಮಹಾ ಶಬ್ದವು ಅದೇನು ಹೊಮ್ಮಿತು!

**ಗದ್ಯಾನುಸರಣ:** ಆ ಕಡೆ ಕಲರವ ಮಾಡುತ್ತ ದೇವೇಂದ್ರರೇ ಮುಖ್ಯರಾದ ದೇವತೆಗಳು ಚಿನ್ನದ ಬಿಂದಿಗೆಗಳ ನೀರನ್ನು ಸುರಿಯುವ ಭೋರ್ ಭೋರ್ ಎಂಬ ಶಬ್ದ; ಈ ಕಡೆ ದಿಕ್ಕಿನ ಕೊನೆಗಳು ದೇವೇಂದ್ರ ದುಂದುಭಿಗಳ ಶಬ್ದದ ಜೊತೆ ಸೇರಿದ ಮಂದರದ ಕಣಿವೆಗಳ ನೀರಿನ ಪ್ರವಾಹದ ಮಹಾಶಬ್ದ!

**ವ। ಅಂತು ತಜ್ಜಿನೇಂದ್ರಸವನಸಮಯದೊಳಮರೇಂದ್ರಕರತಳೋದ್ಧೃತ ಕಾರ್ತ ಸ್ವರವಿಳಾಶಕಳಸಮುಖವಿಗಳಿತಸ್ಥೂಲದುಗ್ಧವಾರಿ ಧಾರಾಸಹಸ್ರಂ ಗಳೊಂದೊಂದಱೊಳ್ ಕೂಡಿ ಮಂದರಾಚಳಮರಕತಶಿಳಾತಳಮಂ**

**ಸೋಂಕಿದಲ್ಲಿ ಪುಸರ್ಪೆಸೆದು ಪದ್ಮರಾಗಗ್ರಾಂವಂಗಳೊಳ್ ಕೆಂಪೆಸೆದು ಚಂದ್ರಕಾಂತಶಿಳಾತಳದೊಳೇಕವರ್ಣಮಾಗಿಯುಂ ವನಷಂಡಂಗಳೊಳ್ ತಱುಂಬಿಯುಂ ಸರೋಜಷಂಡಂಗಳೊಳ್ ತುಂಬಿಯುಂ ಪರಿದು ತತ್ಪ್ರವಾಹಂ ಜ್ಯೋತಿರ್ಲೋಕಮನೆಯ್ದುವಂದಾಗಳ್,**

**ಪದವಿಭಾಗ-ಅನ್ವಯ-ಅರ್ಥ:** ಅಂತು ತತ್ + ಜಿನೇಂದ್ರಸವನ ಸಮಯದೊಳ್ = ಹೀಗೆ ಆ ಜಿನಶಿಶುವಿನ ಅಭಿಷೇಕದ ಸಂದರ್ಭದಲ್ಲಿ, ಅಮರೇಂದ್ರಕರತಳೋದ್ಧೃತ = ದೇವೇಂದ್ರನು ತನ್ನ ಕೈಯಲ್ಲಿ ಹಿಡಿದ, ಕಾರ್ತಸ್ವರ ವಿಳಾಸಕಳಶಮುಖವಿಗಳಿತ = ಚಿನ್ನದ ಬಿಂದಿಗೆಗಳ ಬಾಯಿಂದ ಸುರಿದ, ಸ್ಥೂಲ ದುಗ್ಧವಾರಿಧಾರಾಸಹಸ್ರಂಗಳ್ = ದೊಡ್ಡ ಗಾತ್ರದ ಹಾಲ್ಗಡಲ ನೀರಿನ ಧಾರೆಗಳು, ಒಂದೊಂದಱೊಳ್ ಕೂಡಿ = ಒಂದೊಂದರಲ್ಲಿ ಸೇರಿ, ಮಂದರ + ಅಚಳಮರಕತ ಶಿಳಾತಳಮಂ ಸೋಂಕಿದಲ್ಲಿ ಪುಸರ್ಪೆಸೆದು = ಮಂದರಪರ್ವತದ ಪಚ್ಚೆಯ ಕಲ್ಲುಬಂಡೆಗಳನ್ನು ಸ್ಪರ್ಶಿಸಿದಾಗ ಹಸುರಾಗಿ, ಪದ್ಮರಾಗಗ್ರಾಂವಂಗಳೊಳ್ ಕೆಂಪೆಸೆದು = ಪದ್ಮರಾಗದ ಶಿಲೆಗಳನ್ನು ಸೋಂಕಲು ಕೆಂಪು ಬಣ್ಣವನ್ನು ತಳೆದು, ಚಂದ್ರಕಾಂತಶಿಳಾತಳದೊಳ್ + ಏಕವರ್ಣಮಾಗಿಯುಂ = ಅಮೃತಶಿಲೆಯೊಡನೆ ಅದರದೇ ಬಣ್ಣವನ್ನು ತಾಳಿ, ವನಷಂಡಂಗಳೊಳ್ ತಱುಂಬಿಯುಂ = ಕಾಡುಗಳ ಗುಂಪಿನಲ್ಲಿ ಸೇರಿ, ಸರೋಜಷಂಡಂಗಳೊಳ್ ತುಂಬಿಯುಂ = ಸರೋವರಗಳನ್ನು ತುಂಬಿ, ಪರಿದು ತತ್ಪ್ರವಾಹಂ ಜ್ಯೋತಿರ್ಲೋಕಮನ್ + ಎಯ್ದುವಂದಾಗಳ್ = ಹರಿದು ಬಂದ ಆ ಪ್ರವಾಹವು ಬೆಳಕಿನ ಲೋಕದ ಬಳಿ ಬಂದಾಗ

**ಗದ್ಯಾನುಸರಣ:** ಹೀಗೆ ಆ ಜಿನಶಿಶುವಿನ ಅಭಿಷೇಕದ ಸಂದರ್ಭದಲ್ಲಿ, ದೇವೇಂದ್ರನು ತನ್ನ ಕೈಯಲ್ಲಿ ಹಿಡಿದ ಚಿನ್ನದ ಬಿಂದಿಗೆಗಳ ಬಾಯಿಂದ ಸುರಿದ, ದೊಡ್ಡ ಗಾತ್ರದ ಹಾಲ್ಗಡಲ ನೀರಿನ ಧಾರೆಗಳು ಒಂದೊಂದರಲ್ಲಿ ಸೇರಿಕೊಂಡವು; ಆ ಪ್ರವಾಹವು ಹರಿದು ಮಂದರಪರ್ವತದ ಪಚ್ಚೆಯ ಕಲ್ಲುಬಂಡೆಗಳನ್ನು ಸ್ಪರ್ಶಿಸಿದಾಗ ಹಸುರಾಯಿತು, ಪದ್ಮರಾಗದ ಶಿಲೆಗಳನ್ನು ಸೋಂಕಲು ಕೆಂಪು ಬಣ್ಣವನ್ನು ತಳೆಯಿತು, ಅಮೃತಶಿಲೆಯ ಮೇಲೆ ಹರಿದು ಅದರದೇ ಬಣ್ಣವನ್ನು ತಾಳಿತು; ಕಾಡುಗಳ ಗುಂಪಿನಲ್ಲಿ ಸೇರಿ ಸರೋವರಗಳನ್ನು ತುಂಬಿ, ಹರಿದು ಬಂದ ಆ ಪ್ರವಾಹವು ಬೆಳಕಿನ ಲೋಕದವರೆಗೂ ಹರಿದು ಬಂತು.

**ಬೆಳಗುವ ತಾರಕಾನಿಕರಮಾ ಕಡಲೊಳ್ ನಸುತೇಂಕುದೇಂಕಿ ಬೊ**
**ಬ್ಬುಳಿಕೆಗಳಂತೆ ತೋಱಿದುವು ತೀವ್ರಕರಂ ಕರಮೆಯ್ದೆ ಕಾಯ್ದು ಪ**
**ಜ್ಜಳಿಸುವ ಲೋಹಪಿಂಡಮನೆ ಭೋಂಕೆನೆ ನೀರೊಳಗರ್ದಿದಂತೆವೊಲ್**
**ಪೊಳೆಪುಡಿದಿರ್ದನೆಂದೊಡಱಿಯೆಂ ಪೊಗೞಲ್ ಜಿನಮಜ್ಜನಾಂಬುವಂ ೯೮**

**ಪದವಿಭಾಗ-ಅನ್ವಯ-ಅರ್ಥ:** ಬೆಳಗುವ ತಾರಕಾನಿಕರಂ = ಹೊಳೆಯುವ

ನಕ್ಷತ್ರಗಳ ಗುಂಪು, ಆ ಕಡಲೊಳ್ ನಸುತೇಂಕು + ತೇಂಕಿ ಬೊಬ್ಬುಳಿಕೆಗಳಂತೆ ತೋಱಿದುವು = ಆ ಪ್ರವಾಹವೆಂಬ ಸಮುದ್ರದಲ್ಲಿ ಮುಳುಗೇಳುತ್ತ ಗುಳ್ಳೆಗಳಂತೆ ಕಂಡವು; ತೀವ್ರಕರಂ ಕರಮೆಯ್ದೆ ಕಾಯ್ದು = ಬಿಸುಪು ಕಿರಣಗಳ ಸೂರ್ಯನು ಕೆಂಪಾಗಿ ಕಾದು, ಪಜ್ಜಳಿಸುವ ಲೋಹಪಿಂಡಮನೆ ಭೋಂಕೆನೆ ನೀರೊಳಗೆ + ಅರ್ದಿದಂತೆವೊಲ್ = ಬೆಳಗುವ ಲೋಹದ ಗುಂಡನ್ನು ಒಮ್ಮೆಗೇ ನೀರಿನಲ್ಲಿ ಅದ್ದಿದ ಹಾಗೆ, ಪೊಳೆಪು + ಉಡಿದಿರ್ದನ್ = ತನ್ನ ಪ್ರಕಾಶವನ್ನು ಕಳೆದುಕೊಂಡ, ಎಂದೊಡೆ ಜಿನಮಜ್ಜನ + ಅಂಬುವಂ ಪೊಗಟಲ್ ಅಱಿಯೆಂ = ಎನ್ನುವಂತಿರಲು ಜಿನಶಿಶುವಿನ ಸ್ನಾನಮಾಡಿಸಿದ ನೀರನ್ನು ಹೊಗಳಲು ನಾನು ತಿಳಿಯೆ.

**ಪದವಿಭಾಗ–ಅನ್ವಯ–ಅರ್ಥ:** ಹೊಳೆಯುವ ನಕ್ಷತ್ರಗಳ ಗುಂಪು ಆ ಪ್ರವಾಹವೆಂಬ ಸಮುದ್ರದಲ್ಲಿ ಮುಳುಗೇಳುತ್ತ ಗುಳ್ಳೆಗಳಂತೆ ಕಂಡವು; ಬಿಸುಪು ಕಿರಣಗಳ ಸೂರ್ಯನು ಕೆಂಪಾಗಿ ಕಾದು ಬೆಳಗುವ ಲೋಹದ ಗುಂಡನ್ನು ಒಮ್ಮೆಗೇ ನೀರಿನಲ್ಲಿ ಅದ್ದಿದ ಹಾಗೆ ತನ್ನ ಪ್ರಕಾಶವನ್ನು ಕಳೆದುಕೊಂಡ – ಹೀಗಿರಲು ಜಿನಶಿಶುವಿಗೆ ಸ್ನಾನಮಾಡಿಸಿದ ನೀರನ್ನು ಬಣ್ಣಿಸಲು ನಾನು ಅಸಮರ್ಥ.

**ಜಿನಸವನಾಂಬುವಿನೊಳ್ ಭೋಂ**
**ಕೆನೆ ಚಂದ್ರಂ ತೇಂಕಿ ಹಂಸವೃದ್ಧನನಿನಿಸಂ**
**ನೆನೆಯಿಸಿ ಕೊಳದೊಳಗಣ ಸಿತ**
**ವನರುಹಲಕ್ಷ್ಮಿಯುಮನಿನಿಸುಂ ತನಗೊಳಕೊಂಡಂ** ೯೯

**ಪದವಿಭಾಗ–ಅನ್ವಯ–ಅರ್ಥ:** ಜಿನಸವನ + ಅಂಬುವಿನೊಳ್ = ಜಿನನ ಅಭಿಷೇಕದ ನೀರಿನಲ್ಲಿ, ಭೋಂಕೆನೆ ಚಂದ್ರಂ ತೇಂಕಿ = ಇದ್ದಕ್ಕಿದ್ದಂತೆ ಚಂದ್ರನು ತೇಲಿ, ಹಂಸವೃದ್ಧನನ್ + ಇನಿಸಂ ನೆನೆಯಿಸಿ = ಮುದಿಹಂಸವನ್ನು ಕೊಂಚ ಮಟ್ಟಿಗೆ ನೆನಪಿಗೆ ತಂದು, ಕೊಳದೊಳಗಣ ಸಿತವನರುಹಲಕ್ಷ್ಮಿಯುಮನ್ = ಬೆಳ್ದಾವರೆಯಲ್ಲಿದ್ದ ಲಕ್ಷ್ಮಿಯ ಕಾಂತಿಯನ್ನು, ಇನಿಸುಂ ತನಗೆ + ಒಳಕೊಂಡಂ = ತನ್ನಲ್ಲಿ ಕೊಂಚ ಸೇರಿಸಿಕೊಂಡ.

**ಗದ್ಯಾನುಸರಣ:** ಜಿನನ ಅಭಿಷೇಕದ ನೀರಿನಲ್ಲಿ ಇದ್ದಕ್ಕಿದ್ದಂತೆ ಚಂದ್ರನು ತೇಲಿ ಕೊಂಚ ಮಟ್ಟಿಗೆ ಮುದಿಹಂಸವನ್ನು ನೆನಪಿಗೆ ತರುತ್ತಿದ್ದ; ಹಾಗೆಯೇ ಬೆಳ್ದಾವರೆಯಲ್ಲಿದ್ದ ಲಕ್ಷ್ಮಿಯ ಕಾಂತಿಯನ್ನು ತನ್ನಲ್ಲಿಯೂ ಕೊಂಚ ಮೈಗೂಡಿಸಿಕೊಂಡ.

ಕಳಧೌತೋಜ್ಜ್ವಳಕುಂಭನಿರ್ಗತಪಯಃಪೂರಂ ಪೊದಳ್ದೆಯ್ದೆ ಮೇ
ಖಳೆಗಳ್ ನಾಲ್ಕುಮನೀ ನಗಂ ಸುರನಗಂ ಮುನ್ನೀಗಳೆಂತೋ ಹಿಮಾ
ಚಳಮಾಯ್ತೆಂಬಿನಮುರ್ವಿ ಪರ್ವಿ ಪರಿದತ್ತಾಶಾಂತರಕ್ಕಂ ವಿಯ
ದ್ವಳಯಕ್ಕಂ ಕನಕಾದ್ರಿಕಂದರತಟಾಚ್ಛಾಚ್ಛೋಚ್ಚಳಚ್ಛೀಕರಂ ೧೦೦

**ಪದವಿಭಾಗ–ಅನ್ವಯ–ಅರ್ಥ:** ಕಳಧೌತ + ಉಜ್ಜ್ವಳಕುಂಭನಿರ್ಗತಪಯಃಪೂರಂ = ಚಿನ್ನದ ಹೊಳೆಯುವ ಬಿಂದಿಗೆಗಳಿಂದ ಬಿದ್ದ ನೀರಿನ ಧಾರೆಯು, ಮೇಖಳೆಗಳ್ ನಾಲ್ಕುಮನ್ ಪೊದಳ್ದು + ಎಯ್ದೆ = ನಾಲ್ಕೂ ತಪ್ಪಲುಗಳಲ್ಲಿ ತುಂಬಿ ಹರಿಯಲು, ಮುನ್ನೆ ಈ ನಗಂ ಸುರನಗಂ ಈಗಳ್ + ಎಂತೋ ಹಿಮಾಚಳಂ + ಆಯ್ತು + ಎಂಬಿನಂ = ಮುಂಚೆ ಈ ಪರ್ವತವು ಮಂದರವಾಗಿತ್ತು ಈಗ ಹೇಗೆ ಹಿಮಾಲಯವಾಯಿತು ಎನ್ನುವಂತೆ, ಕನಕ + ಅದ್ರಿ ಕಂದರತಟ + ಅಚ್ಛಾಚ್ಛ + ಉಚ್ಚಳತ್ + ಶೀಕರಂ = ಮಂದರಪರ್ವತದ ಕಣಿವೆಗಳ ದಡಗಳಿಗೆ ಅಪ್ಪಳಿಸಿ ಮೇಲೆದ್ದ ನಿರ್ಮಲವಾದ ತುಂತುರುಗಳು, ಆಶಾ + ಅಂತರಕ್ಕಂ = ದಿಕ್ಕುಗಳ ನಡುವೆಯೂ, ವಿಯತ್ + ವಳಯಕ್ಕಂ = ಆಕಾಶಪ್ರದೇಶದಲ್ಲಿಯೂ, ಉರ್ವಿ ಪರ್ವಿ ಪರಿದತ್ತು = ಉಕ್ಕಿ ಹರಡಿಕೊಂಡು ಹರಿಯಿತು.

**ಗದ್ಯಾನುಸರಣ:** ಚಿನ್ನದ ಹೊಳೆಯುವ ಬಿಂದಿಗೆಗಳಿಂದ ಬಿದ್ದ ನೀರಿನ ಧಾರೆಯು ನಾಲ್ಕೂ ದಿಕ್ಕುಗಳ ತಪ್ಪಲುಗಳಲ್ಲಿ ತುಂಬಿ ಹರಿದು ಮುಂಚೆ ಮಂದರವಾಗಿದ್ದ ಈ ಪರ್ವತವು ಈಗ ಹಿಮಾಲಯದಂತೆ ಆಯಿತು; ಮಂದರಪರ್ವತದ ಕಣಿವೆಗಳ ದಡಗಳಿಗೆ ಅಪ್ಪಳಿಸಿ ಮೇಲೆದ್ದ ನಿರ್ಮಲವಾದ ತುಂತುರುಗಳು ದಿಕ್ಕುಗಳ ನಡುವೆಯೂ ಆಕಾಶಪ್ರದೇಶದಲ್ಲಿಯೂ ಉಕ್ಕಿ ಎಲ್ಲೆಡೆ ಹರಿಯಿತು.

ನರಲೋಕಂಬರಮುಣ್ಮಿ ಪೊಣ್ಮಿದ ಪಯಃಪೂರಂಗಳಿಂದಂ ಮಹೀ
ಧರಕಾಂತಾರನದೀನದಪ್ರಕರಮುಂ ವಿಶ್ವಾವನೀಭಾಗಮುಂ
ನರನಾರೀಜನಮುಂ ಪವಿತ್ರತರಮಾಯ್ತೆಂದಂದೆ ಕೇಳ್ವಂಗೆ ಬಿ
ತ್ತರಿಪಂಗಾದಮಳುಂಬಮಲ್ತೆ ಭಗವಜ್ಜನ್ಮಾಭಿಷೇಕೋತ್ಸವಂ ೧೦೧

**ಪದವಿಭಾಗ–ಅನ್ವಯ–ಅರ್ಥ:** ನರಲೋಕಂಬರಂ + ಉಣ್ಮಿ ಪೊಣ್ಮಿದ ಪಯಃಪೂರಂಗಳಿಂದಂ = ಮನುಷ್ಯಲೋಕದವರೆಗೂ ಉಕ್ಕಿ ಸೂಸಿದ ನೀರಿನ ಪ್ರವಾಹದಿಂದ, ಮಹೀಧರಕಾಂತಾರನದೀನದಪ್ರಕರಮುಂ = ಬೆಟ್ಟಗಳು ಕಾಡು ನದೀ ನದಸಮೂಹವೂ, ವಿಶ್ವ + ಅವನೀಭಾಗಮುಂ = ಸಕಲ ಭೂಪ್ರದೇಶವೂ, ನರನಾರೀಜನಮುಂ = ಗಂಡುಹೆಣ್ಣುಗಳೆಲ್ಲವೂ, ಪವಿತ್ರತರಮಾಯ್ತು + ಎಂದಂದೆ = ಹೆಚ್ಚಿನ ಪಾವನತೆಯನ್ನು ಪಡೆದುವು ಎಂದ ಮೇಲೆ, ಕೇಳ್ವಂಗೆ ಬಿತ್ತರಿಪಂಗೆ =

ಈ ವಿಷಯವನ್ನು ಕೇಳುವವನಿಗೂ ಹೇಳುವವನಿಗೂ, ಭಗವತ್ + ಜನ್ಮಾಭಿಷೇಕ + ಉತ್ಸವಂ = ದೇವರ ಜನ್ಮಾಭಿಷೇಕ ಕಲ್ಯಾಣವು, ಆದಂ + ಅಳುಂಬಂ + ಅಲ್ತೆ = ಮಹಾ ವಿಶೇಷವಲ್ಲವೇ!

**ಗದ್ಯಾನುಸರಣ:** ಮನುಷ್ಯಲೋಕದವರೆಗೂ ಉಕ್ಕಿ ಸೂಸಿದ ನೀರಿನ ಪ್ರವಾಹದಿಂದ ಬೆಟ್ಟಗಳೂ ಕಾಡೂ ನದೀನದಸಮೂಹವೂ ಸಕಲ ಭೂಪ್ರದೇಶವೂ ಗಂಡುಹೆಣ್ಣುಗಳೆಲ್ಲವೂ ಮಹಾ ಪಾವನತೆಯನ್ನು ಪಡೆದುವು; ಅಂದ ಮೇಲೆ ದೇವರ ಜನ್ಮಾಭಿಷೇಕ ಕಲ್ಯಾಣವು ಕೇಳುವವನಿಗೂ ಹೇಳುವವನಿಗೂ ಮಹಾ ವಿಶೇಷವೆನಿಸುವುದಿಲ್ಲವೇ!

**ವ॥ ತದನಂತರಮೆ ಸುರೇಂದ್ರಸಮಿತಿ ಸುರತರುಪ್ರಸೂನಕರ್ಪೂರ ಪಾಂಸುಗೋಶೀರ್ಷ ಚಂದನದ್ರವಪರಿಮಳಸುಗಂಧಿಜಲ ಸಂಭೃತಹಾಟಕಘಟಿತ ಘಟಕೋಟಿಗಳನೆತ್ತಿಕೊಂಡು ಸುರಿದಾಗಳ್,**

**ಪದವಿಭಾಗ-ಅನ್ವಯ-ಅರ್ಥ:** ತತ್ + ಅನಂತರಮೆ = ಆ ಬಳಿಕ, ಸುರೇಂದ್ರಸಮಿತಿ = ದೇವತೆಗಳ ಗುಂಪು, ಸುರತರುಪ್ರಸೂನ ಕರ್ಪೂರಪಾಂಸು ಗೋಶೀರ್ಷ ಚಂದನದ್ರವಪರಿಮಳ = ಕಲ್ಪವೃಕ್ಷಗಳ ಹೂಗಳು ಕರ್ಪೂರದ ಪುಡಿ ಗೋರೋಚನ ಗಂಧದ ನೀರಿನ ಪರಿಮಳ, ಸುಗಂಧಿಜಲಸಂಭೃತ = ಇವುಗಳ ಕಂಪಿನಿಂದ ತುಂಬಿದ, ಹಾಟಕಘಟಿತಘಟಕೋಟಿಗಳನ್ = ಚಿನ್ನದಿಂದ ಮಾಡಿದ ಕೋಟ್ಯಂತರ ಬಿಂದಿಗೆಗಳನ್ನು, ಎತ್ತಿಕೊಂಡು ಸುರಿದಾಗಳ್ = ಮೇಲೆತ್ತಿ ಸುರಿಯಲು,

**ಗದ್ಯಾನುಸರಣ:** ಆ ಬಳಿಕ, ಕಲ್ಪವೃಕ್ಷಗಳ ಹೂಗಳು ಕರ್ಪೂರದ ಪುಡಿ ಗೋರೋಚನ ಗಂಧ ಇವುಗಳ ಪರಿಮಳದಿಂದ ತುಂಬಿದ ನೀರನ್ನು ಕೋಟ್ಯಂತರ ಚಿನ್ನದ ಬಿಂದಿಗೆಗಳಲ್ಲಿ ತುಂಬಿಕೊಂಡು ದೇವತೆಗಳೆಲ್ಲ ಒಟ್ಟಾಗಿ ಮೇಲೆತ್ತಿ ಸುರಿದರು.

ವರಗಂಧದ್ರವ್ಯಸಂದೋಹಮೆ ಜಿನತನುಗಂಧಕ್ಕೆ ಸೋಲ್ತಾದ ಲಜ್ಜಾ
ಭರದಿಂ ನೀರಾಗಿ ತಾನುರ್ಕುದುದೆನಿಸಿ ನಗೇಂದ್ರೋಪಕಂಠಂಗಳೊಳ್ನಿ
ರ್ಝರಮಂ ಮಾಡುತ್ತುಮುದ್ಯಲ್ಲವನಿವಹದೆ ದೇವೇಂದ್ರಲೋಕಕ್ಕಮುತ್ಸಾ
ದರಮಂ ಮಾಡುತ್ತುಮೇನಾಳೆಸಿದುದೊ ದಿವಿಜವ್ರಾತಮಂ ಗಂಧತೋಯಂ
೧೦೨

**ಪದವಿಭಾಗ-ಅನ್ವಯ-ಅರ್ಥ:** ವರಗಂಧದ್ರವ್ಯಸಂದೋಹಮೆ = ಶ್ರೇಷ್ಠವಾದ ಸುಗಂಧದ್ರವ್ಯಗಳ ರಾಶಿಯೇ, ಜಿನತನುಗಂಧಕ್ಕೆ ಸೋಲ್ತಾದ ಲಜ್ಜಾಭರದಿಂ =

ಜಿನಶಿಶುವಿನ ದೇಹದ ಪರಿಮಳಕ್ಕೆ ಸೋತು ನಾಚಿಕೆಯ ಭಾರದಿಂದ, ನೀರಾಗಿ ತಾನ್ + ಉರ್ಕುದುದು + ಎನಿಸಿ = ನೀರಾಗಿ ಉಕ್ಕಿ ಹರಿದಿದೆಯೋ ಎನ್ನುವಂತೆ, ನಗೇಂದ್ರ + ಉಪಕಂಠಂಗಳೊಳ್ = ಪರ್ವತಶ್ರೇಷ್ಠದ ತಪ್ಪಲುಗಳಲ್ಲಿ, ನಿರ್ಝರಮಂ ಮಾಡುತ್ತುಂ = ನದಿಗಳನ್ನಾಗಿ ಮಾಡುತ್ತ, ಉದ್ಯತ್ + ಲವನಿವಹದೆ = ಮೇಲೆ ಚಿಮ್ಮುವ ಹನಿಗಳ ರಾಶಿಯಿಂದ, ದೇವೇಂದ್ರಲೋಕಕ್ಕಂ + ಅತ್ಯಾದರಮಂ ಮಾಡುತ್ತುಂ = ದೇವಲೋಕಕ್ಕೂ ಅದೆಂಥ ಸಂತಸವನ್ನುಂಟುಮಾಡಿ, ದಿವಿಜ ವ್ರಾತಮಂ ಗಂಧತೋಯಂ ಏನ್ + ಆಜಿಸಿದುದೊ = ದೇವತೆಗಳ ಗುಂಪನ್ನು ಪರಿಮಳಭರಿತ ನೀರು ತೃಪ್ತಿಪಡಿಸಿತು.

**ಗದ್ಯಾನುಸರಣ:** ಶ್ರೇಷ್ಠವಾದ ಸುಗಂಧದ್ರವ್ಯಗಳ ರಾಶಿಯೇ ಜಿನಶಿಶುವಿನ ದೇಹದ ಪರಿಮಳಕ್ಕೆ ಸೋತು ನಾಚಿಕೆಯ ಭಾರದಿಂದ ನೀರಾಗಿ ಉಕ್ಕಿ ಹರಿದಿದೆಯೋ ಎನ್ನುವಂತೆ ಪರ್ವತಶ್ರೇಷ್ಠದ ತಪ್ಪಲುಗಳಲ್ಲಿ ನದಿಗಳಂತೆ ಹರಿಯಿತು; ಅದರಿಂದ ಮೇಲೆ ಚಿಮ್ಮುವ ಆ ಪರಿಮಳಭರಿತ ನೀರಿನ ತುಂತುರುಗಳು ದೇವಲೋಕಕ್ಕೂ ಸಂತಸವನ್ನುಂಟುಮಾಡಿ ದೇವತೆಗಳ ಗುಂಪನ್ನೂ ತೃಪ್ತಿಪಡಿಸಿತು.

**ಮಜ್ಜನಪೀಠಂ ಸುರಗಿರಿ**
**ಮಜ್ಜನಜಳವಮೃತಜಳಧಿಜಳವಮರೇಂದ್ರಂ**
**ಮಜ್ಜನವಳ್ಳನುಮೆನೆ ಜಿನ**
**ಮಜ್ಜನಮಹಿಮೆಯ ಬೆಡಂಗನೇವಣ್ಣಿಪುದೋ** ೧೦೩

**ಪದವಿಭಾಗ–ಅನ್ವಯ–ಅರ್ಥ:** ಸುರಗಿರಿ ಮಜ್ಜನಪೀಠಂ = ಮಂದರ ಪರ್ವತವೇ ಸ್ನಾನದ ವೇದಿಕೆ, ಅಮೃತಜಳಧಿಜಳ ಮಜ್ಜನಜಳ = ಹಾಲ್ಗಡಲ ನೀರೇ ಸ್ನಾನಕ್ಕೆ ನೀರು, ಅಮರೇಂದ್ರಂ ಮಜ್ಜನವಳ್ಳನುಂ = ದೇವೇಂದ್ರನೇ ಸ್ನಾನ ಮಾಡಿಸುವವನು, ಎನೆ ಜಿನಮಜ್ಜನಮಹಿಮೆಯ ಬೆಡಂಗನ್ + ಏ + ಬಣ್ಣಿಪುದೋ = ಅಂದ ಮೇಲೆ ಜಿನಶಿಶುವಿನ ಅಭಿಷೇಕದ ಮಹಿಮೆಯ ಬೆಡಗನ್ನು ಏನೆಂದು ವರ್ಣಿಸುವುದು!

**ಗದ್ಯಾನುಸರಣ:** ಮಂದರಪರ್ವತವೇ ಸ್ನಾನದ ವೇದಿಕೆ, ಹಾಲ್ಗಡಲೇ ಅವನ ಸ್ನಾನದ ನೀರು, ದೇವೇಂದ್ರನೇ ಸ್ನಾನ ಮಾಡಿಸುವವನು – ಅಂದ ಮೇಲೆ ಜಿನಶಿಶುವಿನ ಅಭಿಷೇಕದ ಮಹಿಮೆಯ ಬೆಡಗನ್ನು ಏನೆಂದು ವರ್ಣಿಸುವುದು!

**ಎನಿತಾನುಂ ಪಱಿಗಳ್ ಘನ**
**ನಿನದಮನನುಕರಿಸೆ ಮನದೊಳೊದವಿದಲಂಪಿಂ**
**ಜಿನಸವನಗಂಧತೋಯದಿ**
**ನನಿಮಿಷಲೋಚನರ್ಗವಾದುದುದವಭೃತಸ್ನಾನಂ** ೧೦೪

**ಪದವಿಭಾಗ-ಅನ್ವಯ-ಅರ್ಥ:** ಎನಿತಾನುಂ ಪಱೆಗಳ್ ಘನನಿನದಮನ್ + ಅನುಕರಿಸೆ = ಅಸಂಖ್ಯ ಹರೆಗಳ ಸದ್ದು ಗುಡುಗಿನ ಶಬ್ದದಂತೆ ಕೇಳಿಸಲು, ಮನದೊಳ್ + ಒದವಿದ + ಅಲಂಪಿಂ = ಮನಸ್ಸಿನಲ್ಲಿ ಉಂಟಾದ ಸಂತಸ ದಿಂದಾಗಿ, ಜಿನಸವನಗಂಧತೋಯದಿನ್ + ಅನಿಮಿಷಲೋಚನರ್ಗಂ = ಜಿನಾಭಿಷೇಕದ ನೀರಿನಿಂದ ದೇವತೆಗಳಿಗೂ, ಅವಭೃತಸ್ನಾನಂ ಆದುದು = ಮಂಗಳಸ್ನಾನವಾಯಿತು.

**ಗದ್ಯಾನುಸರಣ:** ಆಗ ಉಂಟಾದ ಅಸಂಖ್ಯ ಹರೆಗಳ ಸದ್ದು ಗುಡುಗಿನ ಶಬ್ದದಂತೆ ಕೇಳಿಸಿತು; ಮನಸ್ಸಿನಲ್ಲಿ ಉಂಟಾದ ಸಂತಸದಿಂದಾಗಿ ಜಿನಾಭಿಷೇಕದ ನೀರಿನಿಂದ ದೇವತೆಗಳಿಗೂ ಮಂಗಳಸ್ನಾನವಾದಂತಾಯಿತು,

**ಜಳಗಂಧಾಕ್ಷತೆ ಪುಷ್ಪಾ**
**ವಳಿ ಚರು ದೀಪಪ್ರದೀಪಧೂಪಫಲಂಗಳ್**
**ಕುಳಿಶಾಯುಧನರ್ಚಿಸೆ ತೊಳ**
**ತೊಳತೊಳಗಿದುವೆಳಸಿ ಬಳಸಿ ಜಿನನಡಿದಳಿರೊಳ್** ೧೦೫

**ಪದವಿಭಾಗ-ಅನ್ವಯ-ಅರ್ಥ:** ಕುಳಿಶ + ಆಯುಧನ್ + ಅರ್ಚಿಸೆ = ವಜ್ರಾಯುಧನಾದ ದೇವೇಂದ್ರನು ಪೂಜಿಸಿದಾಗ, ಜಿನನಡಿದಳಿರೊಳ್ = ಜಿನಶಿಶುವಿನ ಚಿಗುರಿನಂಥ ಅಡಿಗಳಲ್ಲಿ, ಜಳಗಂಧ + ಅಕ್ಷತೆ ಪುಷ್ಪಾವಳಿ ಚರು ದೀಪಪ್ರದೀಪ ಧೂಪ ಫಲಂಗಳ್ = ಪರಿಮಳಯುಕ್ತ ನೀರು ಹೂಗಳ ರಾಶಿ ನೈವೇದ್ಯ ದೀಪಗಳ ಬೆಳಕು ಧೂಪ ಮತ್ತು ಹಣ್ಣುಗಳು, ಎಳಸಿ ಬಳಸಿ ತೊಳತೊಳತೊಳಗಿದುವು = ಸುತ್ತುವರಿದು ಹೊಳಪುಂಟುಮಾಡಿದವು.

**ಗದ್ಯಾನುಸರಣ:** ವಜ್ರಾಯುಧನಾದ ದೇವೇಂದ್ರನು ಜಿನಶಿಶುವಿನ ಚಿಗುರಿನಂಥ ಅಡಿಗಳನ್ನು ಪೂಜಿಸಿದಾಗ ಪರಿಮಳಯುಕ್ತ ನೀರು, ಹೂಗಳ ರಾಶಿ, ನೈವೇದ್ಯ, ದೀಪಗಳ ಬೆಳಕು, ಧೂಪ ಮತ್ತು ಹಣ್ಣುಗಳು ಸುತ್ತಲೂ ಹೊಳಪುಂಟುಮಾಡಿದವು.

**ವ। ಅಂತರ್ಚಿಸಿ,**

**ಅರ್ಥ:** ಅಂತು + ಅರ್ಚಿಸಿ = ಹಾಗೆ ಪೂಜಿಸಿ,

**ಜಯ ಗುಣಮಣಿರತ್ನಾಕರ**
**ಜಯ ಭುವನತ್ರಯಲಲಾಮ ಜಯ ಮನಸಿಜದು**
**ರ್ಜಯ ಜಯ ವಿನೇಯಬಾಂಧವ**
**ಜಯ ಮಂದರಶಿಖರಿಶಿಖರರತ್ನೋತ್ತಂಸಾ** ೧೦೬

**ಪದವಿಭಾಗ-ಅನ್ವಯ-ಅರ್ಥ:** ಗುಣಮಣಿರತ್ನಾಕರ ಜಯ = ಗುಣಗಳೆಂಬ ಮಣಿಗಲ ಸಮುದ್ರನೇ ನಿನಗೆ ಜಯ, ಭುವನತ್ರಯಲಲಾಮ ಜಯ = ಮೂರು ಲೋಕಗಳ ಶ್ರೇಷ್ಠನೇ ನಿನಗೆ ಜಯ, ಮನಸಿಜದುರ್ಜಯ ಜಯ = ಕಾಮನಿಂದ ಗೆಲ್ಲಲಾಗದವನೇ ನಿನಗೆ ಜಯ, ವಿನೇಯಬಾಂಧವ ಜಯ = ವಿನೀತ ಜನರ ಬಂಧುವೇ ನಿನಗೆ ಜಯ, ಮಂದರಶಿಖರಿಶಿಖರರತ್ನ + ಉತ್ತಂಸಾ ಜಯ = ಮಂದರ ಪರ್ವತದ ತಲೆವಣಿಯೇ ನಿನಗೆ ಜಯ!

**ಗದ್ಯಾನುಸರಣ:** 'ಗುಣಮಣಿಗಳ ಸಮುದ್ರನೇ ನಿನಗೆ ಜಯ, ಮೂರು ಲೋಕಗಳ ಶ್ರೇಷ್ಠನೇ ನಿನಗೆ ಜಯ, ಕಾಮನಿಂದ ಗೆಲ್ಲಲಾಗದವನೇ ನಿನಗೆ ಜಯ, ವಿನೀತ ಜನರ ಬಂಧುವೇ ನಿನಗೆ ಜಯ, ಮಂದರಪರ್ವತದ ತಲೆವಣಿಯೇ ನಿನಗೆ ಜಯ'

ವ। ಎಂದಿಂತು ಪರಿಸಮಾಪ್ತಿಸವನಾರ್ಚನಸ್ತವನಸಮಯಾನಂತರ ಮಿಂದ್ರಾಣಿ ಭಗವದಂಗಸಂಗತಜಳಕಣಂಗಳಂ ದೇವಾಂಗವಸ್ತ್ರಂ ಗಳೊಳೊತ್ತಿ ಕಳೆದು ಸಹಜಸುರಭಿಗಂಧಬಂಧುರೌದಾರಿಕವಪುವಂ ನಿಜ ಪ್ರಮೋದ ಪ್ರಬೋಧಿತ ನಿಜದಿವ್ಯಪರಿಮಳಾ ಮೋದಿತ ದಿಗಂಗನಾಮುಖಂ ಗಳಪ್ಪ ಸುಗಂಧದ್ರವ್ಯಂಗಳಂ ಪೂಸಿ ಇಕ್ಷ್ವಾಕುಕುಳತಿಳಕಂಗೆ ತಿಳಕಮನಿಟ್ಟು ಜಗತ್ತ್ರಯ ಶೇಖರಂಗೆ ಮಂದಾರಮಾಲಾಶೇಖರಮಂ ವಿರಚಿಸಿ ಸುರಗಿರೀಂದ್ರಚೂಡಾ ಮಣಿಗೆ ಚೂಡಾಮಣಿಯುಂ ತಗುಳ್ಚಿ ನೀರಾಂಜನವಿಳಸನಂ ಮಾಡಿ ಸಹಸ್ರ ವಿದ್ಧಚ್ಛಿದ್ರಕರ್ಣಂಗೆ ಕರ್ಣಕುಂಡಲಂಗಳನಿಟ್ಟು ಮುಕ್ತಿಸಾಮ್ರಾಜ್ಯಕಂಠಿಕಾರ್ಹಂಗೆ ಮಣಿಮಯಕಂಠಿಕೆಯುಂ ಕಟ್ಟಿ ವಿಜಯಶ್ರೀನಿವಾಸ ಬಾಹು ಬಾಹುಯುಗಳಕ್ಕೆ ಕೇಯೂರಹಾರಾಂಗದಕಟಕಾಳಂಕಾರಂ ಮಾಡಿ ಸಿಂಹವಿಷ್ಟ ರಾರೋಹಣೋ ಚಿತ ಕಟಿತಟಂಗೆ ಕಟಿತಟದೊಳ್ ಮಾಣಿಕ್ಯಮಣಿಕಿಂಕಿಣೀ ದಾಮಮುಂ ತಗುಳ್ಚಿ ಸುರಾಸುರೇಂದ್ರ ವೃಂದವಂದಿತಪಾದಂಗೆ ಮೃದುಪದಂ ಗಳೊಳ್ ಕಳರವರಣಿತ ನೂಪುರಂಗಳಂ ತುಡಿಸಿ ದಿವಿಜೇಂದ್ರೋತ್ಸಂಗ ಸಂಗತಂ ಮಾಡಿದಾಗಳ್,

**ಪದವಿಭಾಗ-ಅನ್ವಯ-ಅರ್ಥ:** ಎಂದು + ಇಂತು ಪರಿಸಮಾಪ್ತಿಸವನ + ಅರ್ಚನ ಸ್ತವನಸಮಯ ಅನಂತರಂ = ಹೀಗೆಂದು ಅಭಿಷೇಕದ ಕೊನೆಯಲ್ಲಿ ಪೂಜೆ ಸ್ತುತಿಗಳನ್ನು ಪೂರೈಸಿ, ಭಗವತ್ + ಅಂಗಸಂಗತಜಳಕಣಂಗಳಂ = ಜಿನನ ದೇಹದ ಮೇಲೆ ಅಂಟಿದ್ದ ನೀರಿನ ಹನಿಗಳನ್ನು, ಇಂದ್ರಾಣಿ ದೇವಾಂಗ ವಸ್ತ್ರಂಗಳೊಳ್ + ಒತ್ತಿ ಕಳೆದು = ಶಚೀದೇವಿಯು ರೇಷ್ಮೆಯ ಬಟ್ಟೆಯಿಂದ ಒರೆಸಿ ತೆಗೆದು, ಸಹಜಸುರಭಿಗಂಧಬಂಧುರ + ಔದಾರಿಕವಪುವಂ = ನೈಸರ್ಗಿಕವಾದ ಸುವಾಸನೆಯಿಂದ ಮನೋಹರವಾಗಿದ್ದ ಜಿನನ ಮೋಕ್ಷಸುಖದ ದೇಹಕ್ಕೆ, ನಿಜ

ಪ್ರಮೋದಪ್ರಬೋಧಿತ = ಸಂತಸವನ್ನು ಬೀರುವ, ನಿಜದಿವ್ಯಪರಿಮಳ + ಆಮೋದಿತ = ದಿವ್ಯಪರಿಮಳದಿಂದ ಹಿತಕರವಾದ, ದಿಕ್ + ಅಂಗನಾಮುಖಂಗಳಪ್ಪ = ದಿಕ್ಕನ್ಯೆಯರವರೆಗೆ ಹಬ್ಬುವ, ಸುಗಂಧದ್ರವ್ಯಂಗಳಂ ಪೂಸಿ = ಪರಿಮಳದ್ರವ್ಯಗಳನ್ನು ಲೇಪಿಸಿ, ಇಕ್ಷ್ವಾಕುಕುಳತಿಳಕಂಗೆ ತಿಳಕಮನಿಟ್ಟು = ಇಕ್ಷ್ವಾಕುಕುಳದ ಶ್ರೇಷ್ಠನಿಗೆ ತಿಲಕವನ್ನಿಟ್ಟು, ಜಗತ್ + ತ್ರಯಶೇಖರಂಗೆ ಮಂದಾರಮಾಲಾಶೇಖರಮಂ ವಿರಚಿಸಿ = ಮೂರು ಲೋಕಗಳ ತಲೆವಣಿಗೆ ಮಂದಾಪರಪುಷ್ಪಗಳ ಮಾಲೆಯನ್ನು ಸೂಡಿ, ಸುರಗಿರೀಂದ್ರಚೂಡಾಮಣಿಗೆ ಚೂಡಾಮಣಿಯಂ ತಗುಳ್ಚಿ = ಮಂದರಪರ್ವತದ ಶಿರೋರತ್ನಕ್ಕೆ ಹಣೆಯ ಆಭರಣವನ್ನು ತೊಡಿಸಿ, ನೀರಾಂಜನವಿಳಸನಂ ಮಾಡಿ = ಆರತಿಯೆತ್ತಿ, ಸಹಸ್ರವಿದ್ಧ + ಅಚ್ಛಿದ್ರಕರ್ಣಂಗೆ ಕರ್ಣಕುಂಡಲಂಗಳನ್ + ಇಟ್ಟು = ಸಾವಿರ ಏಟು ಬಿದ್ದರೂ ಏಟಾಗದ ಕಿವಿಗೆ ಕರ್ಣಕುಂಡಲಗಳನ್ನು ತೊಡಿಸಿ, ಮುಕ್ತಿಸಾಮ್ರಾಜ್ಯಕಂಠಿಕಾ + ಅರ್ಹಂಗೆ ಮಣಿಮಯಕಂಠಿಕೆಯಂ ಕಟ್ಟಿ = ಮುಕ್ತಿಸಾಮ್ರಾಜ್ಯದ ಕೊರಳ ಆಭರಣವನ್ನು ಧರಿಸುವ ಅರ್ಹಂತನಿಗೆ ಕೊರಳ ಆಭರಣವನ್ನು ಕಟ್ಟಿ, ವಿಜಯಶ್ರೀನಿವಾಸಬಾಹುಬಾಹುಯುಗಳಕ್ಕೆ = ಗೆಲುವಿನ ಸಂಪತ್ತಿನ ಆವಾಸವಾದ ತೋಳುಗಳಿಗೆ, ಕೇಯೂರಹಾರ + ಅಂಗದ ಕಟಕ + ಅಳಂಕಾರಂ ಮಾಡಿ = ಕಡಗ ಹಾರ ತೋಳಬಂದಿಗಳಿಂದ ಅಲಂಕರಿಸಿ, ಸಿಂಹವಿಷ್ಟರ + ಆರೋಹಣ + ಉಚಿತ ಕಟಿತಟಂಗೆ = ಸಿಂಹಾಸನವನ್ನು ಏರುವಂತಹ ಸೊಂಟವುಳ್ಳ ಶಿಶುವಿಗೆ, ಕಟಿತಟದೊಳ್ ಮಾಣಿಕ್ಯಮಣಿಕಿಂಕಿಣೀ ದಾಮಮಂ ತಗುಳ್ಚಿ = ಸೊಂಟದಲ್ಲಿ ಮಾಣಿಕ್ಯದ ಗೆಜ್ಜೆಗಳಿದ್ದ ಉಡಿದಾರವನ್ನು ಕಟ್ಟಿ, ಸುರ + ಅಸುರೇಂದ್ರವೃಂದವಂದಿತಪಾದಂಗೆ = ಸುರಾಸುರರಿಂದ ನಮಸ್ಕರಿಸಲ್ಪಡುವ ಪಾದವುಳ್ಳವನಿಗೆ, ಮೃದುಪದಂಗಳೊಳ್ ಕಳರವರಣಿತ ನೂಪುರಂಗಳಂ ತುಡಿಸಿ = ಮೆಲುವಡಿಗಳಲ್ಲಿ ಕಲಕಲ ಸದ್ದುಮಾಡುವ ಗೆಜ್ಜೆಗಳನ್ನು ಕಟ್ಟಿ, ದಿವಿಜೇಂದ್ರ + ಉತ್ಸಂಗಸಂಗತಂ ಮಾಡಿದಾಗಳ್ = ದೇವೇಂದ್ರನ ತೊಡೆಯ ಮೇಲೆ ಮಲಗಿಸಿ,

**ಗದ್ಯಾನುಸರಣ:** ಹೀಗೆಂದು ಅಭಿಷೇಕದ ಕೊನೆಯಲ್ಲಿ ದೇವೇಂದ್ರನು ಪೂಜೆ ಸ್ತುತಿಗಳನ್ನು ಪೂರೈಸಿದ; ಆನಂತರ ಶಚೀದೇವಿಯು ಜಿನನ ದೇಹದ ಮೇಲೆ ಅಂಟಿದ್ದ ನೀರಿನ ಹನಿಗಳನ್ನು ರೇಷ್ಮೆಯ ಬಟ್ಟೆಯಿಂದ ಒರೆಸಿದಳು; ನೈಸರ್ಗಿಕವಾದ ಸುವಾಸನೆಯಿಂದ ಮನೋಹರವಾಗಿದ್ದ ಜಿನನ ಮೋಕ್ಷಸುಖದ ದೇಹಕ್ಕೆ ದಿಕ್ಕನ್ಯೆಯರವರೆಗೆ ಹಬ್ಬುವ, ದಿವ್ಯಪರಿಮಳವನ್ನು ಲೇಪಿಸಿದಳು; ಇಕ್ಷ್ವಾಕುಕುಳದ ಆ ಶ್ರೇಷ್ಠನಿಗೆ ತಿಲಕವನ್ನಿಟ್ಟಳು, ಮೂರು ಲೋಕಗಳ ಆ ತಲೆವಣಿಗೆ ಮಂದಾಪರಪುಷ್ಪಗಳ ಮಾಲೆಯನ್ನು ಸೂಡಿದಳು; ಮಂದರಪರ್ವತದ ಆ ಶಿರೋರತ್ನಕ್ಕೆ ಹಣೆಯ ಆಭರಣವನ್ನು ತೊಡಿಸಿದಳು; ಆರತಿಯೆತ್ತಿ, ಸಾವಿರ ಏಟು ಬಿದ್ದರೂ ಏಟಾಗದ ಅವನ ಕಿವಿಗೆ ಕರ್ಣಕುಂಡಲಗಳನ್ನು ತೊಡಿಸಿದಳು;

ಮುಕ್ತಿಸಾಮ್ರಾಜ್ಯದ ಕೊರಳ ಆಭರಣವನ್ನು ಧರಿಸುವ ಅರ್ಹಂತನಿಗೆ ಕೊರಳ ಆಭರಣವನ್ನು ಕಟ್ಟಿದಳು; ಅವನ ಗೆಲುವಿನ ಸಂಪತ್ತಿನ ಆವಾಸವಾದ ತೋಳುಗಳಿಗೆ ಕಡಗ ಹಾರ ತೋಳಬಂದಿಗಳನ್ನು ತೊಡಿಸಿ ಅಲಂಕರಿಸಿದಳು; ಸಿಂಹಾಸನವನ್ನು ಏರುವಂತಹ ಸೊಂಟವುಳ್ಳ ಆ ಶಿಶುವಿಗೆ ಸೊಂಟದಲ್ಲಿ ಮಾಣಿಕ್ಯದ ಗೆಜ್ಜೆಗಳಿದ್ದ ಉಡಿದಾರವನ್ನು ಕಟ್ಟಿದಳು; ಸುರಾಸುರರಿಂದ ನಮಸ್ಕರಿಸಲ್ಪಡುವ ಪಾದವುಳ್ಳವನ ಮೆಲುವಡಿಗಳಲ್ಲಿ ಕಲಕಲ ಸದ್ದುಮಾಡುವ ಗೆಜ್ಜೆಗಳನ್ನು ಕಟ್ಟಿದಳು; ಆ ನಂತರ ಮಗುವನ್ನು ದೇವೇಂದ್ರನ ತೊಡೆಯ ಮೇಲೆ ಮಲಗಿಸಿದಳು.

ಪರಮನ ನಿರತಿಶಯಾಂಗ
ಸ್ವರೂಪಮಂ ನೆಱೆಯೆ ನೋಡಲಾವೆಡೆಗಂ ತ
ನ್ನೆರಡುಂ ಕಣ್ಗಳ್ ನೆಱೆಯದೆ
ಸುರೇಂದ್ರನುಂ ಗಡ ಸಹಸ್ರಲೋಚನನಾದಂ ೧೦೭

**ಪದವಿಭಾಗ–ಅನ್ವಯ–ಅರ್ಥ:** ಪರಮನ ನಿರತಿಶಯ + ಅಂಗಸ್ವರೂಪಮಂ = ಅರ್ಹಂತನ ಅತ್ಯತಿಶಯವಾದ ದೇಹಸೌಂದರ್ಯವನ್ನು, ನೆಱೆಯೆ ನೋಡಲ್ = ಚೆನ್ನಾಗಿ ನೋಡಲು, ತನ್ನ + ಎರಡುಂ ಕಣ್ಗಳ್ ಆವ + ಎಡೆಗಂ ನೆಱೆಯದೆ = ತನ್ನ ಎರಡು ಕಣ್ಣುಗಳು ಯಾವುದಕ್ಕೂ ಸಾಕಾಗದೆ, ಸುರೇಂದ್ರನುಂ ಸಹಸ್ರಲೋಚನನ್ + ಆದಂ ಗಡ = ದೇವೇಂದ್ರನು ಸಾವಿರ ಕಣ್ಣುಗಳವನಾದನಲ್ಲವೇ!

**ಗದ್ಯಾನುಸರಣ:** ಅರ್ಹಂತನ ಅತ್ಯತಿಶಯವಾದ ದೇಹಸೌಂದರ್ಯವನ್ನು ಚೆನ್ನಾಗಿ ನೋಡಲು ತನ್ನ ಎರಡು ಕಣ್ಣುಗಳು ಯಾವುದಕ್ಕೂ ಸಾಕಾಗದೆ ದೇವೇಂದ್ರನು ಸಾವಿರ ಕಣ್ಣುಗಳವನಾದನಲ್ಲವೇ!

**ವಿಶೇಷ ವಿಚಾರ:** ಇಂದ್ರನನ್ನು ಸಹಸ್ರಾಕ್ಷನೆಂದು ಕರೆಯಲು ಕಾರಣವನ್ನು ವೈದಿಕ ಪುರಾಣಗಳು ವಿವರಿಸುವ ರೀತಿಗಿಂತ ಇದು ಭಿನ್ನವಾಗಿದೆ. ಜೈನ ಪುರಾಣಗಳು ವೈದಿಕ ಪೌರಾಣೀಕ ಪರಿಕಲ್ಪನೆಗಳನ್ನು ಹೋಲಿದರೂ, ವಿವರಗಳು ಬೇರೆಯಿರುತ್ತವೆ. ಮೊದಲು ಜೈನ ಪುರಾಣಕಲ್ಪನೆ ಬಂದು ಆನಂತರ ವೈದಿಕ ಪುರಾಣಗಳು ಹುಟ್ಟಿಕೊಂಡುವೋ, ಅಥವಾ ತದ್ವಿರುದ್ಧವಾದ ಬೆಳವಣಿಗೆ ಯಾಯಿತೋ ಹೇಳುವುದು ಕಷ್ಟ

**ವ।** ಅಂತು ನಿರ್ವರ್ತಿತಜನ್ಮಾಭಿಷೇಕನನೇಕದುಂದುಭಿಬಧಿರಿತಸಕಳ ದಿಙ್ಮಂಡಳ ನಾಖಂಡಳನಮರಸಮಿತಿವೆರಸಯೋಧ್ಯಾ ಪುರಕ್ಕಭಿಮುಖ ನಾದಾಗಳ್,

**ಪದವಿಭಾಗ-ಅನ್ವಯ-ಅರ್ಥ:** ಅಂತು ನಿರ್ವರ್ತಿತಜನ್ಮಾಭಿಷೇಕನ್ = ಹೀಗೆ ಜನ್ಮಾಭಿಷೇಕವನ್ನು ಮಾಡಿದವನಾಗಿ, ಅನೇಕದುಂದುಭಿಬಧಿರಿತಸಕಳ ದಿಙ್ಮಂಡಳನ್ = ನಾನಾ ದುಂದುಭಿಗಳ ಶಬ್ದವು ಎಲ್ಲ ದಿಕ್ಕುಗಳಲ್ಲಿಯೂ ತುಂಬಿಕೊಂಡಿರಲು, ಆಖಂಡಳನ್ = ದೇವೇಂದ್ರನು, ಅಮರಸಮಿತಿವೆರಸು + ಅಯೋಧ್ಯಾಪುರಕ್ಕೆ + ಅಭಿಮುಖನಾದಾಗಳ್ = ದೇವತೆಗಳ ಸಮೂಹದೊಂದಿಗೆ ಅಯೋಧ್ಯೆಯ ಕಡೆಗೆ ತಿರುಗಿ,

**ಗದ್ಯಾನುಸರಣ:** ಹೀಗೆ ಜನ್ಮಾಭಿಷೇಕವನ್ನು ಮಾಡಿದ ದೇವೇಂದ್ರನು ದೇವತೆಗಳ ಸಮೂಹದೊಂದಿಗೆ ಅಯೋಧ್ಯೆಯ ಕಡೆಗೆ ತಿರುಗಿ, ಹೊರಟ; ಆಗ ಮೊಳಗಲಾರಂಭಿಸಿದ ದುಂದುಭಿಗಳ ಶಬ್ದವು ಎಲ್ಲ ದಿಕ್ಕುಗಳಲ್ಲಿಯೂ ತುಂಬಿಕೊಂಡಿತು.

**ವಿಶೇಷ ವಿಚಾರ:** ಜಿನಶಿಶುವಿನ ಜನ್ಮಾಭಿಷೇಕ ಕಲ್ಯಾಣ ವರ್ಣನೆ, ವಾಸ್ತವವನ್ನು ಮರೆತರೆ, ಒಂದು ಅದ್ಭುತ ಕಾಲ್ಪನಿಕ ಲೋಕವನ್ನೇ ತೆರೆಯುತ್ತದೆ. ಆ ನೆಲೆಯಲ್ಲಿಯೇ ಅದು ಕಲಾತ್ಮಕ ಕೂಡ ಆಗಿದೆ. ಮಹಾಪುರುಷನ ಆಗಮನವನ್ನು ಇಷ್ಟೊಂದು ವೈಭವ, ಗೌರವಾದರಗಳಿಂದ ಬರಮಾಡಿಕೊಂಡ ಈ ಇನ್ನೊಂದು ನಿದರ್ಶನ ಪುರಾಣ ಕಾವ್ಯ ಪ್ರಪಂಚದಲ್ಲಿ ಇಲ್ಲ. ಪಂಪ ಪೂರ್ವ ಪುರಾಣಕ್ಕೆ ಎಷ್ಟೇ ಋಣಿಯಾಗಿದ್ದರೂ, ಅವನ ಅಭಿವ್ಯಕ್ತಿ ಸಾಮರ್ಥ್ಯ ಮತ್ತು ಕಾವ್ಯಕಲೆಯ ಕೌಶಲವನ್ನು ಯಾರೂ ಪ್ರಶ್ನಿಸುವಂತಿರುವುದಿಲ್ಲ. ಅದೇ ಆದಿಪುರಾಣದ ಹೆಗ್ಗಳಿಕೆ. ಕವಿಯ ಕಾವ್ಯರಚನಾ ವಿಶೇಷ.

ಪರಮಜಿನಸವನಜಳನಿ
ರ್ಝರಮುಂ ಸುರಬಲಪಯೋಧಿಕಳಕಳಮುಂ ಮಾ
ಣ್ದಿರೆ ನೋಡೆ ಬಿನ್ನನಿರ್ದುದು
ಸುರಶೈಳಮದೊಂದು ಮದುವೆಗಟಿಪಿದ ಮನೆವೊಲ್ ೧೦೮

**ಪದವಿಭಾಗ-ಅನ್ವಯ-ಅರ್ಥ:** ಪರಮಜಿನಸವನಜಳನಿರ್ಝರಮುಂ = ಜಿನನ ಸ್ನಾನ ಮಾಡಿದ ನೀರಿನ ತೊರೆಗಳ ಹಾಗೂ, ಸುರಬಲಪಯೋಧಿ ಕಳಕಳಮುಂ ಮಾಣ್ದಿರೆ = ದೇವತೆಗಳ ಗುಂಪೆಂಬ ಸಮುದ್ರದ ಕಲಕಲ ಶಬ್ದವೂ ಸ್ತಬ್ದವಾಗಲು, ನೋಡೆ ಸುರಶೈಳಂ + ಅದೊಂದು ಮದುವೆ + ಕಟಿಪಿದ ಮನೆವೊಲ್ ಬಿನ್ನನಿರ್ದುದು = ನೋಡಲು ಮಂದರಪರ್ವತವು ಮದುವೆ ಮುಗಿದ ಮನೆಯ ಹಾಗೆ ಬಿಕೋ ಎನ್ನಿಸಿತು.

**ಗದ್ಯಾನುಸರಣ:** ಆಗ ಜಿನನ ಸ್ನಾನ ಮಾಡಿದ ನೀರಿನ ತೊರೆಗಳ ಹಾಗೂ ದೇವತೆಗಳ ಗುಂಪೆಂಬ ಸಮುದ್ರದ ಕಲಕಲ ಶಬ್ದವೂ ಸ್ತಬ್ದವಾಯಿತು; ಮಂದರ ಪರ್ವತವು ನೋಡಲು ಮದುವೆ ಮುಗಿದ ಮನೆಯ ಹಾಗೆ ಬಿಕೋ ಎನ್ನಿಸುತ್ತಿತ್ತು.

**ವ। ಆಗಳ್ ಕಲ್ಪಾಮರೇಂದ್ರಪ್ರಬಲಬಳಸಮಿತಿ ಗಗನತಳದಿಂದಮಂದಂ ಬಡೆದು ವಿನೀತಾಪುರಕ್ಕವತರಿಸಿ,**

**ಪದವಿಭಾಗ-ಅನ್ವಯ-ಅರ್ಥ:** ಆಗಳ್ ಕಲ್ಪ + ಅಮರೇಂದ್ರಪ್ರಬಲಬಳಸಮಿತಿ = ಆಗ ಕಲ್ಪಗಳ ದೇವೇಂದ್ರರ ಬಲಿಷ್ಠ ಗುಂಪು, ಗಗನತಳದಿಂದಂ + ಅಂದಂ + ಪಡೆದು ವಿನೀತಾಪುರಕ್ಕೆ + ಅವತರಿಸಿ = ಆಕಾಶಪ್ರದೇಶದಿಂದ ಚೆಲುವಾದ ಬಗೆಯಲ್ಲಿ ವಿನೀತಾಪುರದಲ್ಲಿ ಬಂದಿಳಿದು,

**ಗದ್ಯಾನುಸರಣ:** ಆಗ ಕಲ್ಪಗಳ ದೇವೇಂದ್ರರ ಬಲಿಷ್ಠ ಗುಂಪು ಆಕಾಶಪ್ರದೇಶದಿಂದ ಚೆಲುವಾದ ಬಗೆಯಲ್ಲಿ ವಿನೀತಾಪುರದಲ್ಲಿ ಬಂದಿಳಿಯಿತು. (ವಿನೀತಾಪುರ ಎಂಬುದು ಅಯೋಧ್ಯೆಯ ಮತ್ತೊಂದು ಹೆಸರು.)

**ವಿಶೇಷ ವಿಚಾರ:** ಪೂರ್ವಪುರಾಣದಲ್ಲಿ ಈ ಸಂದರ್ಭದಲ್ಲಿ ತೀರ್ಥಂಕರಶಿಶುವನ್ನು ದೇವತೆಗಳು ಹೊಗಳಿದುದನ್ನು ಮೂವತ್ತು ಶ್ಲೋಕ ಗಳಲ್ಲಿಯೂ, ದೇವತೆಗಳು ಅಯೋಧ್ಯೆಗೆ ಬಂದುದನ್ನು ಹದಿನೈದು ಶ್ಲೋಕಗಳಲ್ಲಿಯೂ ವರ್ಣಿಸಿದೆ: ಪೂಪು, ೧೪. ೨೩-೫೨ ಮತ್ತು ೧೪. ೫೬-೭೦.

**ಗಗನಾಭೋಗದೊಳೊಪ್ಪಿ ಬರ್ಪ ಪಲವುಂ ಯಾನಂಗಳಂ ತೋರ್ಪವೇ**
**ಳಿಗೆಗಳ್ಗೆತ್ತು ವಿಳೋಳಕೇತುತತಿಯುಂ ಮೀಂಗೆತ್ತು ಮಾದ್ಯದ್ಗಜಾ**
**ಳಿಗಳಂ ನಾವೆಯೆ ಗೆತ್ತು ದೇಹರುಚಿಯುಂ ರತ್ನಾಂಶುಗೆತ್ತಿಂದ್ರಸೇ**
**ನೆಗಳಂ ವಾರ್ಧಿಯೆ ಗೆತ್ತು ನೋಡಿದುದು ಬಂದೆತ್ತಂ ಪುರಸ್ತ್ರೀಜನಂ ೧೧೯**

**ಪದವಿಭಾಗ-ಅನ್ವಯ-ಅರ್ಥ:** ಗಗನ + ಆಭೋಗದೊಳ್ + ಒಪ್ಪಿ ಬರ್ಪ = ಆಕಾಶದ ವಿಸ್ತಾರದಲ್ಲಿ ಶೋಭೆಯಿಂದ ಬರುವ, ಪಲವುಂ ಯಾನಂಗಳಂ = ಅನೇಕ ವಾಹನಗಳನ್ನು, ತೋರ್ಪ ವೇಳಿಗೆಗಳ್ + ಗೆತ್ತು = ಕಾಣುವ ಅನೇಕ ಅಲೆಗಳೆಂದು ಭಾವಿಸಿ, ವಿಳೋಳಕೇತುತತಿಯಂ ಮೀಂಗೆತ್ತು = ಹಾರಾಡುವ ಧ್ವಜಗಳ ಸಮೂಹವನ್ನು ಮೀನುಗಳೆಂದು ಭಾವಿಸಿ, ಮಾದ್ಯತ್ + ಗಜಾಳಿಗಳಂ ನಾವೆಯೆ ಗೆತ್ತು = ಮದ್ದಾನೆಗಳ ಗುಂಪನ್ನು ಹಡಗುಗಳೆಂದು ಭಾವಿಸಿ, ದೇಹ ರುಚಿಯಂ ರತ್ನಾಂಶುಗೆತ್ತು = ಮೈಕಾಂತಿಯನ್ನು ಮಣಿಗಳ ಪ್ರಭೆಯೆಂದು ತಿಳಿದು,

ಇಂದ್ರಸೇನೆಗಳಂ ವಾರ್ಧಿಯೆ ಗೆತ್ತು = ಇಂದ್ರರ ಸೈನ್ಯಗಳನ್ನು ಸಮುದ್ರವೆಂದು ಭಾವಿಸಿ, ನೋಡಿದುದು ಪುರಸ್ತ್ರೀಜನಂ ಎತ್ತಂ ಬಂದು ನೋಡಿದುದು = ಎಲ್ಲೆಡೆಯಿಂದಲೂ ಬಂದ ಊರಿನ ಹೆಣ್ಣುಮಕ್ಕಳು ನೋಡಿದರು.

**ಗದ್ಯಾನುಸರಣ:** ಹಾಗೆ ಬಂದಿಳಿದುದನ್ನು ಎಲ್ಲೆಡೆಯಿಂದಲೂ ಬಂದ ಊರಿನ ಹೆಣ್ಣುಮಕ್ಕಳು ನೋಡಿದರು. ಅವರಿಗೆ ಇಂದ್ರರ ಸೈನ್ಯಗಳು ಸಮುದ್ರದಂತೆ ತೋರಿತು: ಆಕಾಶದ ವಿಸ್ತಾರದಲ್ಲಿ ಶೋಭೆಯಿಂದ ಬರುವ ವಾಹನಗಳು ಅಲೆಗಳಂತೆಯೂ, ಹಾರಾಡುವ ಧ್ವಜಗಳ ಸಮೂಹವು ಮೀನುಗಳಂತೆಯೂ, ಮದ್ದಾನೆಗಳ ಗುಂಪು ಹಡಗುಗಂತೆಯೂ, ಅವರ ಮೈಕಾಂತಿಯು ಮಣಿಗಳ ಪ್ರಭೆಯಂತೆಯೂ ಭಾಸವಾಯಿತು.

**ವಿಶೇಷ ವಿಚಾರ:** ಪೂರ್ವಪುರಾಣದಲ್ಲಿ ಈ ಸಂದರ್ಭದಲ್ಲಿ ದೇವತೆಗಳು ತೀರ್ಥಂಕರಶಿಶುವನ್ನು ೩೦ ಶ್ಲೋಕಗಳಲ್ಲಿ ವರ್ಣಿಸುತ್ತಾರೆ; ಪಂಪ ಅದನ್ನು ಸಂಗ್ರಹಿಸುತ್ತಾನೆ.

**ವ। ಅಂತವತರಿಸಿ ಚಂಚಚ್ಚೀನಾಂಶುಕಮಣಿದರ್ಪಣಾನೇಕ ಪ್ರಸೂನ ಪಲ್ಲವೋಲ್ಲಸಿತವಿವಿಧಮಂಡನಮಾಲಾಲಂಕೃತ ರಾಜಮಾರ್ಗದಿಂದಂ ಪರಿಮಿತಾಮರೇಂದ್ರಸಮಾಜಂ ಬೆರಸು ರಾಜಭವನಮಂ ಪೊಕ್ಕು,**

**ಪದವಿಭಾಗ–ಅನ್ವಯ–ಅರ್ಥ:** ಅಂತು + ಅವತರಿಸಿ = ಹಾಗೆ ಇಳಿದು ಬಂದು, ಚಂಚತ್ + ಚೀನಾಂಶುಕ = ಹೊಳೆಯುವ ರೇಷ್ಮೆ ಬಟ್ಟೆಗಳಿಂದಲೂ, ಮಣಿದರ್ಪಣ = ಮಣಿಖಚಿತ ಕನ್ನಡಿಗಳಿಂದಲೂ, ಅನೇಕಪ್ರಸೂನಪಲ್ಲವ = ನಾನಾ ಬಗೆಯ ಹೂಗಳು ಮತ್ತು ಚಿಗುರುಗಳಿಂದಲೂ, ಉಲ್ಲಸಿತವಿವಿಧ ಮಂಡನಮಾಲಾ = ಮಾಡಿದ ನಾನಾ ಬಗೆಯ ಅಲಂಕಾರದ ಮಾಲೆಗಳಿಂದ, ಅಲಂಕೃತರಾಜಮಾರ್ಗದಿಂದಂ = ಸಿಂಗರಗೊಂಡ ರಾಜಬೀದಿಯ ಮೂಲಕ, ಪರಿಮಿತ + ಅಮರೇಂದ್ರಸಮಾಜಂಬೆರಸು = ಕೆಲವೇ ದೇವೇಂದ್ರರಿದ್ದ ಗುಂಪಿನೊಡನೆ, ರಾಜಭವನಮಂ ಪೊಕ್ಕು = ಅರಮನೆಯನ್ನು ಸೇರಿ,

**ಗದ್ಯಾನುಸರಣ:** ಹಾಗೆ ಇಳಿದು ರಾಜಬೀದಿಯ ಮೂಲಕ ಕೆಲವೇ ದೇವೇಂದ್ರರಿದ್ದ ಗುಂಪಿನೊಡನೆ ಸೌಧರ್ಮೇಂದ್ರನು ಅರಮನೆಗೆ ಬಂದ; ರಾಜಬೀದಿಯು ಹೊಳೆಯುವ ರೇಷ್ಮೆ ಬಟ್ಟೆಗಳು, ಮಣಿಖಚಿತ ಕನ್ನಡಿಗಳು, ನಾನಾ ಬಗೆಯ ಹೂ ಮತ್ತು ಚಿಗುರುಗಳು ಇವುಗಳಿಂದ ಮಾಡಿದ ಅಲಂಕಾರದ ಮಾಲೆಗಳಿಂದ ಸಿಂಗರಗೊಂಡಿತ್ತು.

ಕಳಧೌತೋಜ್ಜ್ವಳಕೂಟಕೋಟಿಘಟಿತಶ್ರೀಗೇಹದಿಂ ಮುಂದೆ ಮಂ
ಗಳಕಾರ್ಯೋಚಿತವಾಗೆ ಮುನ್ನೆ ಸುರಾನೀಕಂ ಜನಂಗಳ್ ಮನಂ
ಗೊಳೆ ಮಾಡಿಟ್ಟ ವಿಚಿತ್ರಮಂಟಪದ ಸಿಂಹಾಸಂದಿಯೊಳ್ ಬಾಲನಂ
ಕುಳಿಶಾಸ್ತ್ರಂ ಪಿರಿದುಂ ವಿಭೂತಿವೆರಸಿಟ್ಟೇಂ ಸಂತಸಂಬಟ್ಟನೋ ೧೧೦

**ಪದವಿಭಾಗ-ಅನ್ವಯ-ಅರ್ಥ:** ಕಳಧೌತ + ಉಜ್ಜ್ವಳಕೂಟಕೋಟಿಘಟಿತ = ಅಸಂಖ್ಯ ಚಿನ್ನದ ಗೋಪುರಗಳಿಂದ ಕೂಡಿದ, ಶ್ರೀಗೇಹದಿಂ = ಶುಭಕರವಾದ ಮನೆಯಲ್ಲಿ, ಮುಂದೆ ಮಂಗಳಕಾರ್ಯ + ಉಚಿತಂ + ಆಗೆ = ಮುಂದೆ ಶುಭ ಆಚರಣೆಯು ತಕ್ಕನಾದ ರೀತಿಯಲ್ಲಿ ನಡೆಯಲೆಂದು, ಮುನ್ನೆ ಸುರ + ಆನೀಕಂ = ಮುಂಚೆಯೇ ದೇವತೆಗಳ ಗುಂಪು, ಜನಂಗಳ್ ಮನಂಗೊಳೆ ಮಾಡಿಟ್ಟ = ಜನಗಳ ಆಕರ್ಷಣೆಗಾಗಿ ಸಿದ್ಧಪಡಿಸಿದ್ದ, ವಿಚಿತ್ರಮಂಟಪದ ಸಿಂಹ + ಆಸಂದಿಯೊಳ್ = ಚೆಲುವಾದ ಮಂಟಪದಲ್ಲಿನ ಸಿಂಹಪೀಠದಲ್ಲಿ, ಪಿರಿದುಂ ವಿಭೂತಿವೆರಸು ಬಾಲನಂ ಇಟ್ಟು = ಮಹಾ ಸಡಗರದಿಂದ ಜಿನಶಿಶುವನ್ನು ಮಲಗಿಸಿ, ಕುಳಿಶ + ಅಸ್ತ್ರಂ ಏಂ ಸಂತಸಂ + ಪಟ್ಟನೋ = ದೇವೇಂದ್ರನು ಅದೇನು ಸಂತಸಪಟ್ಟ!

**ಗದ್ಯಾನುಸರಣ:** ಅಸಂಖ್ಯ ಚಿನ್ನದ ಗೋಪುರಗಳಿಂದ ಕೂಡಿದ ಆ ಶುಭಕರವಾದ ಅರಮನೆಯಲ್ಲಿ ಚೆಲುವಾದ ಮಂಟಪದಲ್ಲಿನ ಸಿಂಹಪೀಠದಲ್ಲಿ ಮಹಾ ಸಡಗರದಿಂದ ಜಿನಶಿಶುವನ್ನು ಮಲಗಿಸಿ ದೇವೇಂದ್ರನು ಅದೆಷ್ಟು ಸಂತಸಪಟ್ಟ! ನಡೆಯಲಿರುವ ಶುಭ ಆಚರಣೆಯು ತಕ್ಕನಾದ ರೀತಿಯಲ್ಲಿ ಜರುಗಲೆಂದು ಮುಂಚೆಯೇ ದೇವತೆಗಳ ಗುಂಪು ಆಕರ್ಷಕವಾಗಿ ಅದನ್ನು ಅಲಂಕರಿಸಿ ಸಿದ್ಧಪಡಿಸಿದ್ದರು.

ವ। ಆಗಳ್ ಸುತಮುಖನಿರೀಕ್ಷಣಸಮಯಸಮುಪಜನಿತಪುಳಕ ಕಳಿಕಾ ಕಳಿತ ಕಲ್ಪವೃಕ್ಷನಪ್ಪ ನಾಭಿಮಹೀಜನುಂ ಇಂದ್ರಾಣೀವದನ ಚಂದ್ರಚಂದ್ರಿಕಾ ವಿಘಟಿತ ನಿಕೃತನಿದ್ರಾಮುದ್ರಿತನಯನ ನೀಳೋತ್ಪಳೆಯುಪ್ಪ ಜಗದ್ಗುರು ಜನನಿಯುಂ ಬಂದು ನಿಜತನೂಜವದನವನಜಮನಟ್ಟೆರ್ತು ನೋಡಿ,

**ಪದವಿಭಾಗ-ಅನ್ವಯ-ಅರ್ಥ:** ಆಗಳ್ ಸುತಮುಖನಿರೀಕ್ಷಣಸಮಯ ಸಮುಪಜನಿತ = ಆಗ ಮಗನ ಮುಖವನ್ನು ನೋಡುವ ಹೊತ್ತಿನ, ಪುಳಕಕಳಿಕಾಕಳಿತಕಲ್ಪವೃಕ್ಷನಪ್ಪ = ರೋಮಾಂಚನಗಳ ಮೊಗ್ಗುಗಳಿಂದ ಕೂಡಿದ ಕಲ್ಪವೃಕ್ಷದಂತಿದ್ದ, ನಾಭಿಮಹೀಜನುಂ = ನಾಭಿರಾಜನೂ, ಇಂದ್ರಾಣೀವದನಚಂದ್ರ ಚಂದ್ರಿಕಾವಿಘಟಿತ = ಶಚೀದೇವಿಯ ಮುಖಚಂದ್ರನ ಬೆಳುದಿಂಗಳಿಂದ ಅರಳಿದ, ನಿಕೃತನಿದ್ರಾಮುದ್ರಿತನಯನನೀಳೋತ್ಪಳೆಯಪ್ಪ = ಮಾಯಾನಿದ್ರೆಯಿಂದ ಮುಚ್ಚಿಕೊಂಡ ಕಣ್ಣೆಂಬ ನೈದಿಲೆಗಳ, ಜಗದ್ಗುರುಜನನಿಯುಂ = ಜಗದೊಡೆಯನ ತಾಯಿ

ಮರುದೇವಿಯೂ, ಬಂದು ನಿಜತನೂಜವದನವನಜಮನ್ + ಅಟ್ಕಿರ್ತು ನೋಡಿ = ಬಂದು ತಮ್ಮ ಮಗನ ಮೊಗದಾವರೆಯನ್ನು ಅಕ್ಕರೆಯಿಂದ ನೋಡಿ,

**ಗದ್ಯಾನುಸರಣ:** ಆಗ ಮುಗನ ಮುಖವನ್ನು ನೋಡುವ ಸಂಭ್ರಮದ ರೋಮಾಂಚನವೆಂಬ ಮೊಗ್ಗುಗಳು ಅರಳಿದ ಕಲ್ಪವೃಕ್ಷದಂತಿದ್ದ ನಾಭಿರಾಜನೂ, ಮಾಯಾನಿದ್ರೆಯಿಂದ ಮುಚ್ಚಿಕೊಂಡಿದ್ದ ಕಣ್ಣೆಂಬ ನೈದಿಲೆಗಳು ಶಚೀದೇವಿಯ ಮುಖಚಂದ್ರನ ಬೆಳುದಿಂಗಳಿಂದ ಅರಳಿದ ಜಗದೊಡೆಯುನ ತಾಯಿ ಮರುದೇವಿಯೂ ಬಂದು ತಮ್ಮ ಮಗನ ಮೊಗದಾವರೆಯನ್ನು ಅಕ್ಕರೆಯಿಂದ ನೋಡಿದರು.

**ವಿಶೇಷ ವಿಚಾರ:** 'ನಿಕೃತನಿದ್ರಾ' ಬದಲು ಎಲ್. ಬಸವರಾಜು ಅವರು ಸ್ವೀಕರಿಸಿರುವ ಪಾಠ 'ವಿಕೃತನಿದ್ರಾ'

**ಆ ದೊರೆಯ ವಿಭವದೊಳ್ ಪರ**
**ಮಾದರದಿಂ ದಿವಿಜಸಮಿತಿಯಿಂ ತಮ್ಮ ಮಗಂ**
**ಗಾದ ಮಹಿಮೆಗೆ ಮನಂಗೊಳ**
**ಲಾದುತ್ಸವಮರಿದು ಪೊಗಳಲಾ ದಂಪತಿಯಾ ೧೧೧**

**ಪದವಿಭಾಗ-ಅನ್ವಯ-ಅರ್ಥ:** ಆ ದೊರೆಯ ವಿಭವದೊಳ್ = ಇಂತಹ ವೈಭವದಿಂದ, ದಿವಿಜಸಮಿತಿಯಿಂ ಪರಮ + ಆದರದಿಂ ತಮ್ಮ ಮಗಂಗೆ + ಆದ ಮಹಿಮೆಗೆ = ದೇವಸಮೂಹವು ಭಕ್ತಿಯಿಂದ ತಮ್ಮ ಮಗನಿಗೆ ಸಲ್ಲಿಸಿದ ಮಹಿಮೆಯನ್ನು, ಮನಂಗೊಳಲ್ + ಆದ ಆ ದಂಪತಿಯ ಉತ್ಸವಂ ಅರಿದು ಪೊಗಳಲ್ = ತಿಳಿದು ಅನುಭವಿಸಿದ ಆ ದಂಪತಿಯ ಸಂತಸವು ಬಣ್ಣಿಸಲಾಗದ್ದು!

**ಗದ್ಯಾನುಸರಣ:** ದೇವಸಮೂಹವು ಭಕ್ತಿಯಿಂದ ಮಹಾವೈಭವಪೂರ್ವಕವಾಗಿ ತಮ್ಮ ಮಗನಿಗೆ ಸಲ್ಲಿಸಿದ ಮಹಿಮೆಯನ್ನು ತಿಳಿದು ಆ ದಂಪತಿಯು ಅನುಭವಿಸಿದ ಸಂತಸವು ಬಣ್ಣಿಸಲಾಗದ್ದು!

**ವ। ಆಗಳ್**

**ಅರ್ಥ:** ಆಗಳ್ = ಆಗ

**ದೊರೆ ನಿಮಗಿಲ್ಲ ಭೂಭುವನದೊಳ್ ಪೆಱರಿರ್ವರೆ ನೋಂತಿರೀ ಜಗ**
**ದ್ಗುರುಗೆ ಪಿತೃದ್ವಯಂಗಳೆನಿಸಲ್ ಮೆಱೆವರ್ ಪೆಱರಾರೊ ನೀವೆಮೂ**
**ಜ್ಯರಿರೆಮಗೆಂದು ದಿವ್ಯವಸನಪ್ರಸವಾಭರಣಂಗಳಿಂದಮಾ**
**ದರಮಮರ್ವಂತು ತದ್ಯುಗಳಮಂ ಪರಿಪೂಜಿಸಿದಂ ಸುರೇಶ್ವರಂ ೧೧೨**

**ಪದವಿಭಾಗ-ಅನ್ವಯ-ಅರ್ಥ:** ಭೂಭುವನದೊಳ್ ಪೆಱರ್ ನಿಮಗೆ ದೊರೆ ಇಲ್ಲ = ಈ ಜಗತ್ತಿನಲ್ಲಿ ನಿಮಗೆ ಸಮರಾದವರು ಬೇರಾರೂ ಇಲ್ಲ, ಈ ಜಗದ್ಗುರುಗೆ ಪಿತೃದ್ವಯಂಗಳೆನಿಸಲ್ ಇರ್ವರೆ ನೋಂತಿರಿ = ಈ ಜಗದೋಜನ ತಾಯ್ತಂದೆಗಳಾಗಲು ನೀವಿಬ್ಬರೂ ಹರಕೆ ಹೊತ್ತಿರಿ, ಮೆಱೆವರ್ ಪೆಱರಾರೊ = ಹೀಗೆ ಶೋಭಿಸುವವರು ಬೇರಾರು, ನೀವೆ ಪೂಜ್ಯರಿರ್ + ಎಮಗೆ + ಎಂದು = ನೀವು ನಮಗೆ ವಂದನೀಯರು ಎಂದು, ಸುರೇಶ್ವರಂ = ಸೌಧರ್ಮೇಂದ್ರನು, ದಿವ್ಯವಸನಪ್ರಸವ + ಆಭರಣಂಗಳಿಂದಂ = ಶ್ರೇಷ್ಠ ವಸ್ತ್ರಗಳು ಹೂಗಳು ಮತ್ತು ಆಭರಣಗಳಿಂದ, ಆದರಂ + ಅಮರ್ವಂತು ತತ್ + ಯುಗಳಮಂ ಪರಿಪೂಜಿಸಿದಂ = ಗೌರವವು ತುಂಬಿರಲು ಆ ದಂಪತಿಗಳನ್ನು ಪೂಜಿಸಿದ.

**ಗದ್ಯಾನುಸರಣ:** ಈ ಜಗತ್ತಿನಲ್ಲಿ ನಿಮಗೆ ಸಮರಾದವರು ಬೇರಾರೂ ಇಲ್ಲ, ಈ ಜಗದೋಜನ ತಾಯ್ತಂದೆಗಳಾಗಲು ನೀವಿಬ್ಬರೂ ಹರಕೆ ಹೊತ್ತಿರಿ, ನೀವು ನಮಗೆ ವಂದನೀಯರು ಎಂದು ಸೌಧರ್ಮೇಂದ್ರನು ಶ್ರೇಷ್ಠ ವಸ್ತ್ರಗಳು ಹೂಗಳು ಮತ್ತು ಆಭರಣಗಳನ್ನಿತ್ತು ಗೌರವಪೂರ್ವಕವಾಗಿ ಆ ದಂಪತಿಗಳನ್ನು ಪೂಜಿಸಿದ.

**ವ॥ ಅಂತು ಪೂಜಿಸಿ ಜನ್ಮಾಭಿಷೇಕವ್ಯತಿಕರಮನವರ್ಗೆ ಮಹೋತ್ಸಾಹಕರವಾಗೆ ಸವಿಸ್ತರಮಱಿಪಿ ಜಾತಕರ್ಮೋತ್ಸವದೊಳ್ ಪರಿಜನಮುಂ ಪುರಜನಮುಮೊಸಗೆ ಮರುಳ್ಗೊಂಡು ನಿರ್ಭರಕ್ರೀಡಾರಸಪರವಶರಾದಾಗಳ್,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಪೂಜಿಸಿ ಜನ್ಮಾಭಿಷೇಕವ್ಯತಿಕರಮನ್ + ಅವರ್ಗೆ = ಹಾಗೆ ಪೂಜಿಸಿ ಜನ್ಮಾಭಿಷೇಕ ಕಲ್ಯಾಣದ ವೃತ್ತಾಂತವನ್ನು, ಮಹಾ + ಉತ್ಸಾಹಕರಂ + ಆಗೆ ಸವಿಸ್ತರಂ + ಅಱಿಪಿ = ಸಡಗರವುಂಟಾಗುವಂತೆ ವಿವರವಾಗಿ ತಿಳಿಸಿ, ಜಾತಕರ್ಮ + ಉತ್ಸವದೊಳ್ ಪರಿಜನಮುಂ ಪುರಜನಮುಂ = ಜಾತಕರ್ಮದ ಸಂಭ್ರಮದಲ್ಲಿ ಪರಿವಾರದವರೂ ಊರ ಜನರೂ, ಒಸಗೆ ಮರುಳ್ಗೊಂಡು ನಿರ್ಭರಕ್ರೀಡಾರಸಪರವಶರಾದಾಗಳ್ = ಆದರದಿಂದ ಆಟದ ಸಂತಸದಲ್ಲಿ ಮುಳುಗಲು,

**ಗದ್ಯಾನುಸರಣ:** ಹಾಗೆ ಪೂಜೆಗೈದ ಬಳಿಕ ಜನ್ಮಾಭಿಷೇಕ ಕಲ್ಯಾಣದ ವೃತ್ತಾಂತವನ್ನು ದೇವೇಂದ್ರನು ಸಡಗರದಿಂದ ಅವರಿಗೆ ವಿವರವಾಗಿ ತಿಳಿಸಿದ; ಜಾತಕರ್ಮದ ಸಂಭ್ರಮದಲ್ಲಿ ಪರಿವಾರದವರೂ ಊರ ಜನರೂ ಭಾಗಿಗಳಾಗಿ ಸಂತಸದಲ್ಲಿ ಮುಳುಗಿದರು.

**ನೆಲೆಮಾಡಂಗಳೊಳೋಳಿವಟ್ಟ ಗುಡಿಗಳ್ ಗಂಧಾಂಬುವಿಂದಾದ ಪೂ**
**ವಲಿಯಿಂ ಚೆಲ್ವೆಸೆದಿರ್ದ ಬೀದಿಗಳನೇಕಾತೋದ್ಯನಾದಂಗಳೊಳ್**
**ನಲಿಯುತ್ತುಂ ಕುಣಿಯುತ್ತಿಮಿರ್ಪ ಗಣಿಕಾಸಂದೋಹದಿಂ ಚೆಲ್ವನ**
**ಗ್ಗಲಿಸುತ್ತಿತ್ತುವು ತತ್ಪುರಕ್ಕೆ ಸುರರಾಜಾವಾಸಸಾಮ್ರಾಜ್ಯಮಂ ॥೧೩॥**

**ಪದವಿಭಾಗ-ಅನ್ವಯ-ಅರ್ಥ:** ನೆಲೆಮಾಡಂಗಳೊಳ್ ಓಳಿವಟ್ಟ ಗುಡಿಗಳ್ = ಉಪ್ಪರಿಗೆಗಳ ಮೇಲೆ ಸಾಲಾಗಿ ಕಟ್ಟಿದ್ದ ಬಾವುಟಗಳೂ, ಗಂಧ + ಅಂಬುವಿಂದೆ + ಆದ ಪೂವಲಿಯಿಂ ಚೆಲ್ವೆಸೆದಿರ್ದ ಬೀದಿಗಳ್ = ಸುಗಂಧಪೂರಿತ ಹೂಬಲಿಯಿಂದ ಸುಂದರವಾದ ಬೀದಿಗಳೂ, ಅನೇಕ + ಆತೋದ್ಯನಾದಂಗಳೊಳ್ ನಲಿಯುತ್ತುಂ ಕುಣಿಯುತ್ತಿಂ + ಇರ್ಪ ಗಣಿಕಾಸಂದೋಹದಿಂ = ನಾನಾ ವಾದ್ಯಗಳ ಲಯಕ್ಕನುಗುಣವಾಗಿ ಆನಂದದಿಂದ ಕುಣಿಯುತ್ತಿದ್ದ ಗಣಿಕಯರ ಗುಂಪೂ, ಚೆಲ್ವನಗ್ಗಲಿಸುತ್ತೆ = ಸೊಗಸನ್ನು ಹೆಚ್ಚಿಸುತ್ತ, ತತ್ + ಪುರಕ್ಕೆ ಸುರರಾಜ + ಆವಾಸಸಾಮ್ರಾಜ್ಯಮಂ ಇತ್ತುವು = ಆ ಊರಿಗೆ ದೇವೇಂದ್ರನ ಊರಿನ ಸೊಬಗನ್ನು ತಂದಿತ್ತುವು.

**ಗದ್ಯಾನುಸರಣ:** ಉಪ್ಪರಿಗೆಗಳ ಮೇಲೆ ಸಾಲಾಗಿ ಕಟ್ಟಿದ್ದ ಬಾವುಟಗಳೂ, ಸುಗಂಧಪೂರಿತ ಹೂಬಲಿಯಿಂದ ಸುಂದರವಾದ ಬೀದಿಗಳೂ, ನಾನಾ ವಾದ್ಯಗಳ ಲಯಕ್ಕನುಗುಣವಾಗಿ ಆನಂದದಿಂದ ಕುಣಿಯುತ್ತಿದ್ದ ಗಣಿಕಯರ ಗುಂಪೂ ಸೊಗಸನ್ನು ಹೆಚ್ಚಿಸಿ ಆ ಊರಿಗೆ ದೇವೇಂದ್ರನ ಅಮರಾವತಿಯ ಸೊಬಗನ್ನು ತಂದಿತ್ತುವು.

**ಪುರಜನವಟ್ಟಿಯಿಂ ಮುಡಿವ ಕೂಡೆ ತುಱುಂಬುವ ಕಿಂಕಿರಾತಶೇ**
**ಖರರಜದಿಂದೆ ಚಾರುಪಟವಾಸದ ಧೂಳಿಯ ಪರ್ಬಿನಿಂದಮಾ**
**ಭರಣದ ಮಾಣಿಕಂಗಳ ಪೊದಳ್ದರುಣಾಂಶುಗಳಿಂದಮಂದು ಪಿಂ**
**ಜರಿತಪಿಶಂಗಿತಾರುಣಿತದಿಙ್ಮುಖಮಾದುದು ತನ್ಮಹೋತ್ಸವಂ ॥೧೪॥**

**ಪದವಿಭಾಗ-ಅನ್ವಯ-ಅರ್ಥ:** ಪುರಜನವು + ಅಟ್ಟಿಯಿಂ ಮುಡಿವ = ಊರಿನ ಜನರು ಪ್ರೀತಿಯಿಂದ ಮುಡಿಯುವ, ಕೂಡೆ ತುಱುಂಬುವ = ಜೊತೆಗೆ ಸಿಕ್ಕಿಸಿಕೊಳ್ಳುವ, ಕಿಂಕಿರಾತಶೇಖರರಜದಿಂದೆ = ಕೆಂಪು ಗೋರಂಟಿಯ ದಂಡೆಗಳ ಧೂಳಿನಿಂದಲೂ, ಚಾರುಪಟವಾಸದ ಧೂಳಿಯ ಪರ್ಬಿನಿಂದಂ = ಪರಿಮಳಭರಿತ ಬುಕ್ಕಿಹಿಟ್ಟಿನ ಎರಚುವಿಕೆಯಿಂದಲೂ, ಆಭರಣದ ಮಾಣಿಕಂಗಳ ಪೊದಳ್ದ + ಅರುಣಾಂಶುಗಳಿಂದಂ = ಆಭರಣಗಳಲ್ಲಿನ ಮಾಣಿಕ್ಯಗಳ ಕೆಂಪು ಪ್ರಭೆಯಿಂದಲೂ, ತತ್ + ಮಹೋತ್ಸವಂ ದಿಙ್ಮುಖಂ = ಆ ಸಂಭ್ರಮದಲ್ಲಿ ದಿಕ್ಕುಗಳ ವಲಯಗಳು, ಅಂದು ಪಿಂಜರಿತ ಪಿಶಂಗಿತ + ಅರುಣಿತ ಆದುದು = ಹೊಂಬಣ್ಣದಿಂದ ನಸುಗೆಂಪು ಹಾಗೂ ಕೆಂಬಣ್ಣದಿಂದ ಕೂಡಿದುವು.

**ಗದ್ಯಾನುಸರಣ:** ಊರಿನ ಜನರು ಪ್ರೀತಿಯಿಂದ ಮುಡಿಯುವ ಜೊತೆಗೆ ಸಿಕ್ಕಿಸಿಕೊಳ್ಳುವ ಕೆಂಪು ಗೋರಂಟಿಯ ದಂಡೆಗಳ ಧೂಳಿನಿಂದಲೂ, ಪರಿಮಳಭರಿತ ಬುಕ್ಕಿಹಿಟ್ಟಿನ ಹರಡುವಿಕೆಯಿಂದಲೂ, ಆಭರಣಗಳಲ್ಲಿನ ಮಾಣಿಕ್ಯಗಳ ಕೆಂಪು ಪ್ರಭೆಯಿಂದಲೂ ಆ ಸಂಭ್ರಮದಲ್ಲಿ ದಿಕ್ಕುಗಳ ವಲಯಗಳು ಹೊಂಬಣ್ಣ ನಸುಗೆಂಪು ಹಾಗೂ ಕೆಂಬಣ್ಣಗಳನ್ನು ತಾಳಿದುವು.

ನೂತನಮಣಿಭೂಷಣಬಾ
ಳಾತಪಸಿತಮಣಿಮರೀಚಿಚಂದ್ರಾತಪಪಿ
ಷ್ಟಾತಕಪರಾಗಪಿಂಜರಿ
ತಾತಪಮಯಮಾದುದಾ ಧರಾಧಿಪಭವನಂ ೧೧೫

**ಪದವಿಭಾಗ–ಅನ್ವಯ–ಅರ್ಥ:** ಆ ಧರಾ + ಅಧಿಪಭವನಂ = ಆ ಅರಮನೆಯು, ನೂತನಮಣಿಭೂಷಣ ಬಾಳ + ಆತಪ = ಹೊಸ ಮಣಿಮಯ ಆಭರಣಗಳ ಎಳೆಬಿಸಿಲು, ಸಿತಮಣಿಮರೀಚಿಚಂದ್ರ + ಆತಪ = ಬೆಳ್ಳನೆ ರತ್ನಗಳ ಬೆಳುದಿಂಗಳ ಕಾಂತಿ, ಪಿಷ್ಟಾತಕಪರಾಗಪಿಂಜರಿತ + ಆತಪಮಯಂ + ಆದುದು = ಪರಿಮಳದ ಪುಡಿಯ ಗುಲಾಬಿ ಬಣ್ಣದ ಕಿರಣಗಳಿಂದ ಕೂಡಿತು.

**ಗದ್ಯಾನುಸರಣ:** ಆ ಅರಮನೆಯು ಹೊಸ ಮಣಿಮಯ ಆಭರಣಗಳ ಎಳೆಬಿಸಿಲು, ಬೆಳ್ಳನೆ ರತ್ನಗಳ ಬೆಳುದಿಂಗಳ ಕಾಂತಿ, ಪರಿಮಳದ ಪುಡಿಯ ಗುಲಾಬಿ ಬಣ್ಣದ ಕಿರಣಗಳಿಂದ ಕೂಡಿತು.

ವ॥ ಅಂತು ಪುರಮುಮಂತಃಪುರಮುಮಾದಿಪುರುಷಜನ್ಮೋತ್ಸವ ಸುಧಾಂಬುರಾಶಿಯೊಳ್ ಕೂಡಿ ಮೂಡಿ ಮುಳ್ಕಾಡುವುದಂ ನೋಡಿ ತಾನುಮಾನಂದನಾಟಕಮನಾಡಲ್ಬಗೆದು ಕೃತಾನುಕರಣಮೆ ನಾಟಕಮಪ್ಪುದಱಿಂದೆ ಭಗವಜ್ಜನ್ಮಾಭಿಷೇಕಸಂಬಂಧಿಯಾಗೆ ತನ್ನ ಪೊಸತೆ ಸಮೆದ ಸಮವಕಾರ ರೂಪಕಮಂ ದಶಾವತಾರರೂಪಗರ್ಭಸಂದರ್ಭಂಗಳಪ್ಪ ಶೇಷಾಶೇಷರೂಪಕಂಗಳುಮಂ ಸುರಾಸುರಸಭೆಗಂ ನಾಭಿರಾಜಾದಿಮನುಜಸಭೆಗಂ ಮೆಱೆಯಲೆಂದು ಶುದ್ಧಂ ವಿಚಿತ್ರಮೆಂಬ ಪೂರ್ವರಂಗಪ್ರಸಂಗದೊಳ್ ಚರ್ಚರಪೂಜಾಮಂಗಳ ಪದೋಚ್ಚಾರಣಪುಷ್ಪಾಂಜಲಿವಿಕ್ಷೇಪಣಾದಿ ನಾಂದಿವಿಧಿಯುಮಂ ನಿರ್ವರ್ತಿಸಿ ದೃಶ್ಯಶ್ರವ್ಯದೃಢಮಾತ್ರಾದಿ ಪ್ರಯೋಗಂಗಳೊಳಂ ನಾನಾವಿಧ ವಾದ್ಯಂಗಳೊಳಂ ಆಂಗಿಕಾಭಿನಯಂಗಳೊಳಮೆಸೆಯೆ ಮಘವನಘ ವಿಘಾತಮುದ್ಧತಾಭಿನಯ ಪ್ರಾಯಮುಮಾರಭಟೀವೃತ್ತಿಯುಮುಮಪ್ಪ ತಾಂಡವ ಮನಾಡಲುದ್ಯೋಗಂಗೆಯ್ದು ಮಂಗಳಾಲಂಕಾರಾಲಂಕೃತನಾಗಿ ನಾಟ್ಯವಿದ್ಯಾಚಾರ್ಯನಂ ಪೋಲ್ತು ರಂಗಂಬೊಕ್ಕು.

**ಪದವಿಭಾಗ-ಅನ್ವಯ-ಅರ್ಥ:** ಅಂತು ಪುರಮುಂ + ಅಂತಃಪುರಮುವಂ = ಹೀಗೆ ಊರು ಮತ್ತು ಒಳಮನೆಗಳು, ಆದಿಪುರುಷಜನ್ಮ + ಉತ್ಸವಸುಧಾ + ಅಂಬುರಾಶಿಯೊಳ್ = ಆದಿಜಿನನ ಹುಟ್ಟಿನ ಸಂಭ್ರಮವೆಂಬ ಹಾಲ್ಗಡಲಲ್ಲಿ, ಕೂಡಿ ಮೂಡಿ ಮುಟ್ಕಾಡುವುದಂ ನೋಡಿ = ಸೇರಿ ಮುಳುಗಿರುವುದನ್ನು ಕಂಡು, ತಾನುಂ + ಆನಂದನಾಟಕಮನಾಡಲ್ + ಬಗೆದು = ತಾನೂ ಆನಂದನಾಟಕವನ್ನು ಆಡಲು ಆಲೋಚಿಸಿ, ಕೃತಾನುಕರಣಮೆ ನಾಟಕಂ + ಅಪ್ಪುದಱಿಂದೆ = ಮಾಡಿದ್ದನ್ನು ಅನುಕರಿಸುವುದೇ ನಾಟಕವಾದದ್ದರಿಂದ, ಭಗವತ್ + ಜನ್ಮಾಭಿಷೇಕಸಂಬಂಧಿಯಾಗೆ = ಭಗವಂತನ ಹುಟ್ಟಸಂಭ್ರಮಕ್ಕೆ ಸಂಬಂಧಿಸಿದಂತೆ, ತನ್ನ ಪೊಸತೆ ಸಮೆದ ಸಮವಕಾರರೂಪಕಮಂ = ತಾನು ಹೊಸತಾಗಿ ರಚಿಸಿದ ಸಮವಕಾರ ಎಂಬ ರೂಪಕಭೇದವನ್ನು, ದಶಾವತಾರರೂಪಗರ್ಭಸಂದರ್ಭಂಗಳಪ್ಪ = ಹತ್ತು ಅವತಾರಗಳ ಸ್ವರೂಪವನ್ನೊಳಗೊಂಡ ಸಂದರ್ಭಗಳ, ಶೇಷಾ ಶೇಷರೂಪಕಂಗಳುಮಂ = ಇರುವ ಮತ್ತು ಹೊಸತಾದ ರೂಪಕಗಳನ್ನು, ಸುರಾಸುರ ಸಭೆಗಂ ನಾಭಿರಾಜಾದಿಮನುಜಭೆಗಂ ಮೆಱೆಯಲೆಂದು = ಸುರಾಸುರರ ಸಮುದಾಯದ ಹಾಗೂ ನಾಭಿರಾಜನೇ ಮೊದಲಾದ ಮಾನವಸಮುದಾಯದ ಮುಂದೆ ತೋರಿಸುವ ಉದ್ದೇಶದಿಂದ, ಶುದ್ಧಂ ವಿಚಿತ್ರಮೆಂಬ ಪೂರ್ವರಂಗಪ್ರಸಂಗದೊಳ್ = ಶುದ್ಧ ಮತ್ತು ವಿಚಿತ್ರ ಎಂಬ ಪೂರ್ವರಂಗ ಎಂಬ ಭಾಗದಲ್ಲಿ, ಚರ್ಚರಪೂಜಾ ಮಂಗಳಪದೋಚ್ಚಾರಣ ಪುಷ್ಪಾಂಜಲಿವಿಕ್ಷೇಪಣ + ಆದಿ ನಾಂದಿವಿಧಿಯಂ ನಿರ್ವರ್ತಿಸಿ = ಸಂಗೀತನೃತ್ಯಮಯ ಪೂಜೆ ಶುಭಕರ ನುಡಿಗಳನ್ನು ಆಡುವುದು ಬೊಗಸೆಯಲ್ಲಿ ಹೂಗಳನ್ನೆರಚುವುದು ಮುಂತಾದ ನಾಂದಿಯನ್ನು ಪೂರೈಸಿ, ದೃಶ್ಯಶ್ರವ್ಯದೃಢಮಾತ್ರಾ + ಆದಿಪ್ರಯೋಗಂಗಳೊಳಂ = ನೋಡುವ ಕೇಳುವ ಮತ್ತು ದೃಢಸೂತ್ರ ಎಂಬ ಪ್ರಯೋಗಗಳಲ್ಲಿಯೂ, ನಾನಾವಿಧವಾದ್ಯಂಗಳೊಳಂ = ನಾನಾ ಬಗೆಯ ವಾದ್ಯಗಳಿಂದಲೂ, ಆಂಗಿಕಾ + ಅಭಿನಯಂಗಳೊಳಂ + ಎಸೆಯೆ = ದೇಹಚಲನೆ ಮುಂತಾದ ಅಭಿನಯಗಳಿಂದಲೂ ಶೋಭಿಸುವಂತೆ, ಮಘವನ + ಅಘವಿಘಾತಂ = ಇಂದ್ರನ ಪಾಪನಾಶಕ್ಕಾಗಿ, ಉದ್ಧತಾಭಿನಯಪ್ರಾಯಮುಂ + ಆರಭಟೀವೃತ್ತಿಯುಮುಂ + ಅಪ್ಪ = ಉದ್ಧತ ಅಭಿನಯವನ್ನೂ ಆರಭಟೀವೃತ್ತಿಯನ್ನೂ ಒಳಗೊಂಡ, ತಾಂಡವಮನ್ + ಆಡಲ್ + ಉದ್ಯೋಗಂಗೆಯ್ದು = ತಾಂಡವನೃತ್ಯವನ್ನೆಸಗಲು ಆರಂಭಿಸಿ, ಮಂಗಳ + ಅಳಂಕಾರಾಲಂಕೃತನಾಗಿ = ಶುಭಕರ ಅಂಕಾರಗಳನ್ನು ಮಾಡಿಕೊಂಡು, ನಾಟ್ಯವಿದ್ಯಾಚಾರ್ಯನಂ ಪೋಲ್ತು ರಂಗಂಬೊಕ್ಕು = ನಾಟ್ಯಗುರುವಿನಂತೆ ರಂಗಮಂದಿರವನ್ನು ಹೊಕ್ಕು,

**ಗದ್ಯಾನುಸರಣ:** ಹೀಗೆ ಊರು ಮತ್ತು ಒಳಮನೆಗಳು ಆದಿಜಿನನ ಹುಟ್ಟಿನ ಸಂಭ್ರಮವೆಂಬ ಹಾಲ್ಗಡಲಲ್ಲಿ ಸೇರಿ ಮುಳುಗಿರುವುದನ್ನು ಕಂಡು ಇಂದ್ರನು ತಾನೂ

ಆನಂದನಾಟಕವನ್ನು ಆಡಲು ಆಲೋಚಿಸಿದ; ಮಾಡಿದ್ದನ್ನು ಅನುಕರಿಸುವುದೇ ನಾಟಕವಾದದ್ದರಿಂದ ಭಗವಂತನ ಹುಟ್ಟಸಂಭ್ರಮಕ್ಕೆ ಸಂಬಂಧಿಸಿದಂತೆ ಸಮವಕಾರ ಎಂಬ ರೂಪಕಭೇದವನ್ನು ತಾನು ಹೊಸತಾಗಿ ರಚಿಸಿಕೊಂಡ; ಭಗವಂತನ ಹತ್ತು ಅವತಾರಗಳ ಸ್ವರೂಪವನ್ನೊಳಗೊಂಡ ಸಂದರ್ಭಗಳನ್ನು ಇರುವ ಮತ್ತು ಹೊಸತಾದ ರೂಪಕಗಳನ್ನು ಸುರಾಸುರರ ಸಮುದಾಯದ ಹಾಗೂ ನಾಭಿರಾಜನೇ ಮೊದಲಾದ ಮಾನವಸಮುದಾಯದ ಮುಂದೆ ತೋರಿಸುವ ಉದ್ದೇಶ ಅವನದಾಗಿತ್ತು; ಅದರಲ್ಲಿನ ಶುದ್ಧ ಮತ್ತು ವಿಚಿತ್ರ ಎಂಬ ಪೂರ್ವರಂಗ ಎಂಬ ಭಾಗದಲ್ಲಿ ಸಂಗೀತನೃತ್ಯಮಯ ಪೂಜೆ ಶುಭಕರ ನುಡಿಗಳನ್ನು ಆಡುವುದು ಬೊಗಸೆಯಲ್ಲಿ ಹೂಗಳನ್ನೆರಚುವುದು ಮುಂತಾದ ಕ್ರಿಯೆಗಳ ನಾಂದಿಯ ಭಾಗವನ್ನು ಪೂರೈಸಿದ; ಆನಂತರ ನೋಡುವ ಕೇಳುವ ಮತ್ತು ದೃಢಸೂತ್ರ ಎಂಬ ಪ್ರಯೋಗಗಳಲಿ ನಾನಾ ಬಗೆಯ ವಾದ್ಯಗಳಿಂದಲೂ ದೇಹಚಲನೆ ಮುಂತಾದ ಅಭಿನಯಗಳಿಂದಲೂ ಶೋಭಿಸುವಂತೆ, ಇಂದ್ರನ ಪಾಪನಾಶಕಾರಕವಾದ ಪ್ರೌಢ ಅಭಿನಯವನ್ನೂ ಆರಭಟೀವೃತ್ತಿಯನ್ನೂ ಒಳಗೊಂಡ ತಾಂಡವನೃತ್ಯವನ್ನೆಸಗಲು ಶುಭಕರ ಅಂಕಾರಗಳನ್ನು ಮಾಡಿಕೊಂಡು ನಾಟ್ಯಗುರುವಿನಂತೆ ರಂಗಮಂದಿರವನ್ನು ಹೊಕ್ಕ.

**ವಿಶೇಷ ವಿಚಾರ: ಕೃತಾನುಕರಣಮೆ ನಾಟಕಂ** = ಕ್ರಿಶ. ಒಂದನೆಯ ಶತಮಾನದ್ದೆನ್ನಲಾದ ಭರತನ 'ನಾಟ್ಯಶಾಸ್ತ್ರ'ದಲ್ಲಿ **'ನಾಟ್ಯಂ ಭಾವಾನುಕೀರ್ತನಂ'** ಎಂದು ಒಂದು ಕಡೆ, ಇನ್ನೊಂದೆಡೆ **'ಲೋಕವೃತ್ತಾನುಕರಣಂ ನಾಟ್ಯಂ'** ಎಂಬ ಮಾತೂ ಬರುತ್ತದೆ. ಪ್ರಾಯಶಃ ಪಂಪನು ಇವುಗಳಲ್ಲಿ ಎರಡನೆಯ ಮಾತನ್ನು ನಾಟಕ ವಿಷಯದಲ್ಲಿ ಹೇಳುತ್ತಿದ್ದಾನೆ. ಮುಂದೆ ಹತ್ತನೆಯ ಶತಮಾನದ ಧನಂಜಯನ **'ದಶರೂಪಕ'**ದಲ್ಲಿ **'ಅವಸ್ಥಾನುಕೃತಿರ್ನಾಟ್ಯಂ'** ಎಂಬ ಮಾತಿದೆ; ಧನಂಜಯನ ಕಾಲವೂ ಕ್ರಿಶ ಹತ್ತನೆಯ ಶತಮಾನವೆನ್ನುತ್ತಾರೆ; ಹೀಗಾಗಿ ಪಂಪನು ಆ ಕೃತಿಯನ್ನು ನೋಡಿರಲಾರ. **ಸಮವಕಾರ ರೂಪಕ** = ಸಂಸ್ಕೃತ ನಾಟಕಮೀಮಾಂಸೆಯಲ್ಲಿ ಪ್ರಸಿದ್ಧವಾದ ಹತ್ತು ರೂಪಕಪ್ರಭೇದಗಳಲ್ಲಿ ಇದೂ ಒಂದು, ಭರತನ 'ನಾಟ್ಯಶಾಸ್ತ್ರ'ದ ಪ್ರಕಾರ ಮೊದಲು ಪ್ರದರ್ಶಿತವಾದ ನಾಟಕರೂಪವು ಸಮವಕಾರವೇ: ದೇವಾಸುರರಿಗೆ ಸಂಬಂಧಪಟ್ಟ ಪ್ರಖ್ಯಾತ ವಸ್ತುವುಳ್ಳ ಮೂರು ಅಂಕಗಳ ಪ್ರಭೇದ. ಭರತಮುನಿ, ಬ್ರಹ್ಮದೇವನಿಂದ ಪಡೆದ ನಾಟ್ಯವೇದವನ್ನು ಬಳಸಿ, ತನ್ನ ನೂರು ಮಂದಿ ಮಕ್ಕಳೊಡನೆ, 'ಅಮೃತಮಂಥನ' ಸಮವಕಾರವನ್ನು ಭಗವಾನ್ ಶಿವನ ಮುಂದೆ ಪ್ರದರ್ಶಿಸಿದ. ಅದನ್ನು ನೋಡಿ ಆನಂದಿಸಿದ ಶಿವನು, ತಂಡುವನ್ನು ಕರೆದು, ರೇಚಕ, ಅಂಗಹಾರಗಳಿಂದ ಕೂಡಿದ ತನ್ನ ನೃತ್ಯವನ್ನು ಸುಕುಮಾರ ಅಂಗಹಾರಗಳಿಂದ ಕೂಡಿದ ಪಾರ್ವತಿಯ ನೃತ್ಯವನ್ನೂ ಭರತನಿಗೆ ಹೇಳಿಕೊಡೆಂದು ನಿರ್ದೇಶಿಸಿದನು. ಹೀಗೆ ತಂಡುವಿನಿಂದ ಗ್ರಹೀತವಾದ ನೃತ್ಯ 'ತಾಂಡವ'ವೆಂದೂ, ಪಾರ್ವತಿಯಿಂದ ಗ್ರಹೀತವಾದ ನೃತ್ಯ 'ಲಾಸ್ಯ'ವೆಂದೂ ಪ್ರಸಿದ್ಧಿಯಾಯಿತು. **ದಶಾವತಾರ** = ವೈದಿಕ ಸಾಹಿತ್ಯದಲ್ಲಿನ ವಿಷ್ಣು ತಳೆದ ಹತ್ತು ಅವತಾರಗಳನ್ನು ನೆಪಿಗೆ ತರುವಂಥ ಕಲ್ಪನೆ;

ಆದಿತೀರ್ಥಂಕರನಾದ ಪುರುದೇವನು ತನ್ನ ಹಿಂದಿನ ಹತ್ತು ಜನ್ಮಗಳಲ್ಲಿ ಭೋಗತೀವ್ರತೆಯನ್ನು ಕಡಿಮೆ ಮಾಡಿಕೊಂಡು ಶುದ್ಧನಾಗುವುದೇ '**ಆದಿಪುರಾಣ**'ದ ಮೊದಲ ಭಾಗದ ವಸ್ತು ಆ ಹತ್ತು ಅವತಾರಗಳನ್ನೇ ಇಲ್ಲಿ ದಶಾವತಾರ ಎಂದು ಕರೆದಿದೆ; ಅವುಗಳೆಂದರೆ: ಜಯವರ್ಮ, ಮಹಾಬಲ, ಲಲಿತಾಂಗ, ವಜ್ರಜಂಘ, ಭೋಗಭೂಮಿಜ (ವಜ್ರಜಂಘಾರ್ಯ), ಶ್ರೀಧರದೇವ, ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ ಮತ್ತು ಅಹಮಿಂದ್ರ; **ಶುದ್ಧವಿಚಿತ್ರಮೆಂಬ ಪೂರ್ವರಂಗ** = ನೃತ್ಯ ಅಥವಾ ನಾಟಕವು ಆರಂಭಗೊಳ್ಳುವ ಮುಂಚೆ ರಂಗಸ್ಥಳದಲ್ಲಿ ನಡೆಯಬೇಕಾದ ರಂಗಪೂಜೆ ನಾಂದಿ ಮುಂತಾದ ಕಾರ್ಯಗಳು; **ನಾಂದಿವಿಧಿ** = ನಾಟಕದ ಆರಂಭ –'ನಾಂದೀ ಪ್ರರೋಚನಾ ಪ್ರಸ್ತಾವನಾ ಇತಿವೃತ್ತ ಸಂಧಿ ಪ್ರವೇಶ ನಿಷ್ಕಂಭ ಕಪೋತಿಕಾ ವ್ಯಾಳೀಕಾದಿ ಲಕ್ಷಣೋಪೇತಂಗಳಪ್ಪ ಎಂದು ಪಂಪನೇ ತನ್ನ '**ವಿಕ್ರಮಾರ್ಜುನ ವಿಜಯ**'ದಲ್ಲಿ ಒಂದೆಡೆ – ಆಶ್ವಾಸ ೨, ಪದ್ಯ ೩೪ ಗದ್ಯ) ಹೇಳುತ್ತಾನೆ; **ದೃಶ್ಯಶ್ರವ್ಯದೃಢಸೂತ್ರಾದಿಪ್ರಯೋಗ** = ನಾಂದೀವಿಧಿಯಲ್ಲಿನ ಮೂರು ಕ್ರಿಯೆಗಳನ್ನು ಇಲ್ಲಿಯೇ ಸೂಚಿಸಿದೆ; **ಆಂಗಿಕಾಭಿನಯ** = 'ನಾಟ್ಯಶಾಸ್ತ್ರ'ದಲ್ಲಿ ಹೇಳಿರುವ ಆಂಗಿಕ, ವಾಚಿಕಾ, ಸಾತ್ವಿಕ ಮತ್ತು ಆಹಾರ್ಯ ಎಂಬ ನಾಲ್ಕು ಬಗೆಯ ಅಭಿನಯಗಳಲ್ಲಿ ಒಂದು; ದೇಹದ ಮೂಲಕ ತೋರಿಸುವುದೇ ಆಂಗಿಕಾಭಿನಯ; **ಆರಭಟೀವೃತ್ತಿ** = ನಾಟ್ಯದಲ್ಲಿ ರಸಾವಿಷ್ಕರಣ ಮಾಡುವ ತತ್ವಗಳಲ್ಲಿ ('ಭಾವಮಂ ವಿಸ್ತಾರಿಸುವ ಬೆಡಂಗು) ಒಂದು; ಓಜಸ್ವೀ ಮಾತುಗಳಿಂದ ರೌದ್ರ ಬೀಭತ್ಸ ರಸಗಳನ್ನು ಅಭಿನಯಿಸುವ ಕ್ರಮ; 'ಭಾರತಿ ಸಾತ್ವತಿ ಕೈಶಿಕಿ ಆರಭಟಿಯು ಮೆಂಬ ವೃತ್ತಿಯೊಳ್ ಸಂಚಾರಿಸುವ ಭಾವಮಂ ವಿಸ್ತಾರಿಸುವ ಬೆಡಂಗು'; **ತಾಂಡವ** = ಇದೇ ಭಾಗದಲ್ಲಿನ **ಸಮವಕಾರ ರೂಪಕ** ಎಂಬುದಕ್ಕೆ ನೀಡಿರುವ ವಿವರಣೆಯನ್ನು ಗಮನಿಸಿ. **ಪಾಠಾಂತರ ವಿಚಾರ**: 'ನಾಟ್ಯವಿದ್ಯಾಚಾರ್ಯ' ಬದಲು 'ನಾಟ್ಯವೇದಾವತಾರ' – ಎಲ್. ಬಸವರಾಜು ಆವೃತ್ತಿ

**ಲೋಕಾಕಾರಮನಭಿನಯಿ**
**ಪಾಕಾರಂ ನೆಗಟೆ ನಿಂದು ವೈಶಾಖಸ್ಥಾ**
**ನಾಕಾರದೊಳ್ ಮರುದ್ ವೃತ**
**ನಾಕುಳಿಶಾಯುಧನದೊಂದು ಚೆಲ್ವಂ ಪಡೆದಂ** ೧೧೬

**ಪದವಿಭಾಗ-ಅನ್ವಯ-ಅರ್ಥ**: ಲೋಕಾಕಾರಮನ್ + ಅಭಿನಯಿಪ + ಆಕಾರಂ ನೆಗೞೆ = ಲೋಕದ ಆಕಾರವನ್ನು ತೋರಿಸುವ ಭಂಗಿಯಲ್ಲಿ, ವೈಶಾಖಸ್ಥಾನ + ಆಕಾರದೊಳ್ ನಿಂದು = ವೈಶಾಖಸ್ಥಾನದ ಆಕೃತಿಯಲ್ಲಿ ನಿಂತುಕೊಂಡು, ಮರುದ್‌ವೃತನ್ ಆ ಕುಳಿಶಾಯುಧನ್ + ಅದೊಂದು ಚೆಲ್ವಂ ಪಡೆದಂ = ದೇವತೆಗಳಿಂದ ಸುತ್ತುವರಿದ ಆ ವಜ್ರಾಯುಧನಾದ ದೇವೇಂದ್ರನು ವಿಶಿಷ್ಟ ಸೊಬಗನ್ನು ಪಡೆದ.

**ಗದ್ಯಾನುಸರಣ:** ಲೋಕದ ಆಕಾರವನ್ನು ತೋರಿಸುವ ಭಂಗಿಯಲ್ಲಿ, ಅಂದರೆ ವೈಶಾಖಸ್ಥಾನದ ಆಕೃತಿಯಲ್ಲಿ ನಿಂತುಕೊಂಡು, ದೇವತೆಗಳಿಂದ ಸುತ್ತುವರಿದ ಆ ವಜ್ರಾಯುಧನಾದ ದೇವೇಂದ್ರನು ವಿಶಿಷ್ಟ ಸೊಬಗನ್ನು ಪಡೆದ.

**ವಿಶೇಷ ವಿಚಾರ: ವೈಶಾಖಸ್ಥಾನ:** ಎರಡೂ ಪಾದಗಳನ್ನು ದೂರ ಇರಿಸಿಕೊಂಡು ಸೊಂಟದ ಮೇಲೆ ಕೈಗಳನ್ನಿರಿಸಿಕೊಂಡು ನಿಲ್ಲುವ ಒಂದು ಭಂಗಿ; ಜೈನ ಪರಿಕಲ್ಪನೆಯಲ್ಲಿ ಲೋಕದ ಆಕಾರವು ಇದೇ ರೀತಿಯದು: ಅಲೋಕ, ಊರ್ಧ್ವಲೋಕ, ಮಧ್ಯಲೋಕ ಮತ್ತು ಅಧೋಲೋಕಗಳನ್ನೊಳಗೊಂಡ 'ಲೋಕದ ಕೆಳಭಾಗ ವೇತ್ರಾಸನ(ಬೆತ್ತದ ಪೀಠ)ದಂತೆಯೂ ಮಧ್ಯಭಾಗ ಝಲ್ಲರಿಯಂತೆಯೂ ಮೇಲು ಭಾಗ ಮೃದಂಗದಂತೆಯೂ ಇದೆ' – ಲೋಕದ ವಿವರಣೆ ಮತ್ತು ನಕ್ಷೆಗಳಿಗೆ ನೋಡಿ: ಎಲ್. ಗುಂಡಪ್ಪ, **'ಆದಿಪುರಾಣ ಸಂಗ್ರಹ'** ೨೦೦೧, ಪೀಠಿಕೆ – ಪು.೩೨–೩೩)

**ಸೂಸಿದ ಪುಷ್ಪಾಂಜಳಿಯನೆ**
**ಬಾಸಣಿಸಿದ ಮದವದಳಿಕುಳಂಗಳ ಚೆಲ್ವಂ**
**ಮಾಸಿಸಿದುವು ವಾಸವನ ವಿ**
**ಳಾಸಂಬೆರಸಡರೆ ತೊಡರೆ ಬಳಸುವ ಕಣ್ಗಳ್** ೧೧೭

**ಪದವಿಭಾಗ–ಅನ್ವಯ–ಅರ್ಥ:** ಸೂಸಿದ ಪುಷ್ಪಾಂಜಳಿಯನೆ ಬಾಸಣಿಸಿದ = ಎರಚಿದ ಬೊಗಸೆಯ ಹೂಗಳನ್ನು ಮುತ್ತಿಕೊಂಡ, ಮದವತ್ + ಅಳಿಕುಳಂಗಳ ಚೆಲ್ವಂ = ಸೊಕ್ಕಿದ ದುಂಬಿಗಳ ಸೊಬಗನ್ನು, ವಿಳಾಸಂಬೆರಸು + ಅಡರೆ ತೊಡರೆ ಬಳಸುವ = ವಿಲಾಸಭರಿತವಾಗಿ ಎಡರುತೊಡರಾದ, ವಾಸವನ ಕಣ್ಗಳ್ ಮಾಸಿಸಿದುವು = ಇಂದ್ರನ ಕಣ್ಣುಗಳು ಕೀಳ್ಮಾಡಿದುವು.

**ಗದ್ಯಾನುಸರಣ:** ಎರಚಿದ ಬೊಗಸೆಯ ಹೂಗಳನ್ನು ಮುತ್ತಿಕೊಂಡ ಸೊಕ್ಕಿದ ದುಂಬಿಗಳ ಸೊಬಗನ್ನು ವಿಲಾಸಭರಿತವಾಗಿ ಎಡರುತೊಡರಾಗಿ ಚಲಿಸುವ ಇಂದ್ರನ ಕಣ್ಣುಗಳು ಕೀಳ್ಮಾಡಿದುವು.

**ರಸಭಾವಾಲಸನಯನ**
**ಪ್ರಸರಂಗಳ ಪೊಳೆವ ಪೊಳೆಪುಗಳ್ ಬಳ್ವಳ ನೀ**
**ಳ್ದಿಸೆದುವು ರಂಗದೊಳೆತ್ತಂ**
**ಪೊಸಯಿಸುತುಂ ಯುವನಿಕಾವಿಳಾಸಮನಾಗಳ್** ೧೧೮

**ಪದವಿಭಾಗ–ಅನ್ವಯ–ಅರ್ಥ:** ರಸಭಾವ + ಅಲಸ ನಯನಪ್ರಸರಂಗಳ ಪೊಳೆವ ಪೊಳೆಪುಗಳ್ = ರಸಭಾವಗಳನ್ನು ವ್ಯಕ್ತಪಡಿಸುವ ಕಣ್ಣುಗಳ ಚಲನೆಯಿಂದ ಹೊಳೆಯುವ ಕಾಂತಿಯು, ಯವನಿಕಾವಿಳಾಸಮನ್ + ಆಗಳ್ ಪೊಸಯಿಸುತುಂ

= ತೆರೆಯ ಸೊಬಗನ್ನು ಹೊಸದಾಗಿಸುತ್ತ, ರಂಗದೊಳ್ + ಎತ್ತಂ ಬಳ್ವಳ ನೀಳ್ದು + ಎಸೆದುವು = ವೇದಿಕೆಯಲ್ಲಿ ಎಲ್ಲೆಡೆ ವಿಶಾಲವಾಗಿ ಹರಡಿಕೊಂಡು ಶೋಭಿಸಿತು.

**ಗದ್ಯಾನುಸರಣ:** ರಸಭಾವಗಳನ್ನು ವ್ಯಕ್ತಪಡಿಸುವ ದೇವೇಂದ್ರನ ಕಣ್ಣುಗಳ ಚಲನೆಯಿಂದ ಹೊಳೆಯುವ ಕಾಂತಿಯು ವೇದಿಕೆಯಲ್ಲಿ ಎಲ್ಲೆಡೆ ವಿಶಾಲವಾಗಿ ಹರಡಿಕೊಂಡು ಶೋಭಿಸಿತು; ಇದರಿಂದಾಗಿ ತೆರೆಯ ಸೊಬಗು ಹೊಸದಾಯಿತು.

**ಪದವಿನ್ಯಾಸದ ತುಱುಗಲ್**
**ಪೊದಳೆ ಲಯಂಬೆರಸು ರಂಗಮಂ ಬಳಸಿದನಾ**
**ತ್ರಿದಶಾಧಿನಾಥನಳೆವವೊ**
**ಲುದನ್ವದಾವೇಷ್ಟಿತಾಖಿಳಾವನಿತಳಮಂ** ೧೧೯

**ಪದವಿಭಾಗ–ಅನ್ವಯ–ಅರ್ಥ:** ಲಯಂಬೆರಸು ಪದವಿನ್ಯಾಸದ ತುಱುಗಲ್ ರಂಗಮಂ ಪೊದಳೆ = ಲಯಯುಕ್ತವಾದ ಪದಗತಿಗಳ ದಟ್ಟಣೆಯು ವೇದಿಕೆಯನ್ನೆಲ್ಲ ವ್ಯಾಪಿಸಿ, ಉದನ್ವತ್ + ಆವೇಷ್ಟಿತ + ಅಖಿಳ + ಅವನಿತಳಮಂ = ಸಮುದ್ರದಿಂದ ಸುತ್ತುವರಿದ ಭೂಮಂಡಲವನ್ನು, ಅಳೆವವೊಲ್ + ಆ ತ್ರಿದಶಾಧಿನಾಥನ್ ಬಳಸಿದನ್ = ಅಳೆಯುವ ಹಾಗೆ ಆ ದೇವೇಂದ್ರನು ಆವರಿಸಿಬಿಟ್ಟ

**ಗದ್ಯಾನುಸರಣ:** ಸಮುದ್ರದಿಂದ ಸುತ್ತುವರಿದ ಭೂಮಂಡಲವನ್ನು ಅಳೆಯುವ ಹಾಗೆ ಆ ದೇವೇಂದ್ರನು ತನ್ನ ಲಯಯುಕ್ತವಾದ ಪದಗತಿಗಳ ದಟ್ಟಣೆಯಿಂದ ವೇದಿಕೆಯನ್ನೆಲ್ಲ ಆವರಿಸಿಬಿಟ್ಟ.

**ವ। ಆಗಳ್ ನಾಕಲೋಕವಾದ್ಯಂಗಳೊಳನೇಕಭೇದಂಗಳಪ್ಪುಪವಾದಕ ಪರಿವಾದಕವಾದ್ಯಂಗಳೊಳ್ ಕಿನ್ನರೀಜನಮಧುರ ಗೀತಾನುಗತಂಗಳನುಕ್ರಮ ದೊಳ್ ನೆಗೞೆ,**

**ಪದವಿಭಾಗ–ಅನ್ವಯ–ಅರ್ಥ:** ಆಗಳ್ ನಾಕಲೋಕವಾದ್ಯಂಗಳೊಳ್ = ಆಗ ದೇವಲೋಕದ ವಾದ್ಯಗಳೊಡನೆ, ಅನೇಕಭೇದಂಗಳಪ್ಪ + ಉಪವಾದಕ ಪರಿವಾದಕವಾದ್ಯಂಗಳೊಳ್ = ನಾನಾ ಬಗೆಯ ಪಕ್ಕವಾದ್ಯಗಳೊಡನೆ, ಕಿನ್ನರೀಜನಮಧುರಗೀತಾ + ಅನುಗತಂಗಳ್ = ಕಿನ್ನರಸ್ತ್ರೀಯರ ಇಂಪಾದ ಗಾಯನ ಮತ್ತದರ ಅನುಸರಣೆಯು, ಅನುಕ್ರಮದೊಳ್ ನೆಗೞೆ = ಕ್ರಮಬದ್ಧವಾಗಿ ಸಾಗಲು,

**ಗದ್ಯಾನುಸರಣ:** ಆಗ ದೇವಲೋಕದ ವಾದ್ಯಗಳ ಜೊತೆಗೂಡಿದ ನಾನಾ

ಬಗೆಯ ಪಕ್ಕವಾದ್ಯಗಳೊಡನೆ ಕಿನ್ನರಸ್ತ್ರೀಯರ ಇಂಪಾದ ಗಾಯನ ಮತ್ತದರ ಅನುಸರಣೆಯು ಕ್ರಮಬದ್ಧವಾಗಿ ಸಾಗಿತು.

ಕರಣಂ ರೇಚಕವಂಗಹಾರಮಿನಿತೆಂದೋದುತ್ತುಮಿರ್ಪೋರ್ದದ
ತ್ತಿರಲೀ ನಾಟ್ಯರಸಂ ಸಮಸ್ತಸುರವೃಂದಾಧೀಶನಿಂದಂ ಪೊನ
ಲ್ವರಿದತ್ತೆಂಬಿನಮಾಡುವಲ್ಲಿ ಮಕುಟವ್ಯಾಲಗ್ನರತ್ನಪ್ರಭಾ
ಪರಿವೇಷಂ ಲಲಿತೇಂದ್ರಚಾಪರುಚಿಯಂ ಮಾಡಿತ್ತು ದಿಕ್ಚಕ್ರದೊಳ್ ೧೨೦

**ಪದವಿಭಾಗ–ಅನ್ವಯ–ಅರ್ಥ:** ಕರಣಂ ರೇಚಕಂ + ಅಂಗಹಾರಂ + ಇನಿತೆಂದು + ಓದುತ್ತುಂ + ಇರ್ಪ = ಭಂಗಿ ಕೈಚಾಚುವಿಕೆ ಮುದ್ರೆಗಳು ಇಷ್ಟು ಎಂಬ ಲೆಕ್ಕಾಚಾರ ಮಾಡುವ, ಓದು + ಅದು + ಅತ್ತ + ಇರಲಿ = ವಿಷಯ ಆ ಕಡೆ ಇರಲಿ, ಸಮಸ್ತಸುರವೃಂದ + ಅಧೀಶನಿಂದಂ = ದೇವತೆಗಳಿಗೆಲ್ಲ ಯಜಮಾನನಾದ ಇಂದ್ರನಿಂದ, ಈ ನಾಟ್ಯರಸಂ ಪೊನಲ್ + ಪರಿದತ್ತು + ಎಂಬಿನಂ ಆಡುವಲ್ಲಿ = ನಾಟ್ಯರಸವು ಹೊನಲಾಗಿ ಹರಿಯಿತು ಎಂಬಂತೆ ಕುಣಿಯಲು, ಮಕುಟವ್ಯಾಲಗ್ನರತ್ನಪ್ರಭಾ ಪರಿವೇಷಂ = ಕಿರೀಟದಲ್ಲಿ ಜೋಡಣೆಗೊಂಡ ರತ್ನಗಳ ಪ್ರಭಾವಲಯವು, ದಿಕ್ಚಕ್ರದೊಳ್ ಲಲಿತ + ಇಂದ್ರಚಾಪರುಚಿಯಂ ಮಾಡಿತ್ತು = ದಿಗ್ವಲಯದಲ್ಲಿ ಚೆಲುವಾದ ಕಾಮನಬಿಲ್ಲಿನ ಕಾಂತಿಯನ್ನು ಉಂಟುಮಾಡಿತು.

**ಪದವಿಭಾಗ–ಅನ್ವಯ–ಅರ್ಥ:** ನಾಟ್ಯದಲ್ಲಿನ ಭಂಗಿಗಳು, ಕೈಚಾಚುವಿಕೆ, ಮುದ್ರೆಗಳು ಇಷ್ಟು ಎಂಬ ಲೆಕ್ಕಾಚಾರ – ಇವೆಲ್ಲ ಆ ಕಡೆ ಇರಲಿ; ದೇವತೆಗಳ ಯಜಮಾನನಾದ ಇಂದ್ರನಿಂದ ನಾಟ್ಯರಸವು ಹೊನಲಾಗಿ ಹರಿಯಿತು ಎಂಬಂತೆ ಅವನ ಕಿರೀಟದಲ್ಲಿ ಜೋಡಣೆಗೊಂಡ ರತ್ನಗಳ ಪ್ರಭಾವಲಯವು ದಿಗ್ವಲಯದಲ್ಲಿ ಚೆಲುವಾದ ಕಾಮನಬಿಲ್ಲಿನ ಕಾಂತಿಯನ್ನು ಉಂಟುಮಾಡಿತು.

ಕುಳಶೈಳಂಗಳ್ ಪದಾಘಾತದೊಳಲುಗುವಿನಂ ತಾರಕಾಸಂಕುಳಂ ತೋ
ಳ್ಗಳದೊಂದಳ್ಳೇಜಿನೊಳ್ ಪೂವಲಿವೊಲುದಿರ್ವಿನಂ ವಾರ್ಧಿಗಳ್‌ರೇಚಕೋತ್ಥಾ
ನಿಳತೀವ್ರಾಘಾತದಿಂದುಚ್ಚಳಿಪಿನಮುಖಿಳಾಶಾಂತರಂ ದೇವತೂರ್ಯಾ
ವಳಿಗೀತಧ್ವಾನದಿಂದಂ ಮುದುಮಿನಮೆಸೆದತ್ತಿಂದ್ರನಾನಂದನೃತ್ಯಂ ೧೨೧

**ಪದವಿಭಾಗ–ಅನ್ವಯ–ಅರ್ಥ:** ಪದಾಘಾತದೊಳ್ ಕುಳಶೈಳಂಗಳ್ ಅಲುಗುವಿನಂ = ಪದಗಳ ಘಟ್ಟಣೆಯಿಂದ ಕುಲಪರ್ವತಗಳೇ ಅಲುಗುವ ಹಾಗೆ, ತೋಳ್ಗಳ + ಅದೊಂದು + ಅಳ್ಳೇಜಿನೊಳ್ = ತೋಳುಗಳ ವಿಶಿಷ್ಟ ಚಾಚುವಿಕೆ

ಯಿಂದ, ತಾರಕಾಸಂಕುಳಂ ಪೂವಲಿವೊಲ್ + ಉದಿರ್ವಿನಂ = ನಕ್ಷತ್ರಗಳ ಗುಂಪು ಹೂಗಳ ಅರ್ಪಣೆಯಂತೆ ಉದುರುವ ಹಾಗೆ, ರೇಚಕ + ಉತ್ಥ + ಅನಿಳ ತೀವ್ರಾಘಾತದಿಂದೆ ವಾರ್ಧಿಗಳ್ ಉಚ್ಚಳಿಪಿನಂ = ತೋಳುಗಳ ಬೀಸುವಿಕೆ ಯಿಂದ ಉಂಟಾದ ಬಿರುಸು ಗಾಳಿಯ ಭರದಿಂದ ಸಮುದ್ರಗಳು ಉಕ್ಕೇರುವ ಹಾಗೆ, ದೇವತೂರ್ಯಾವಳಿಗೀತಧ್ವಾನದಿಂದಂ = ದೇವವಾದ್ಯಗಳ ಮತ್ತು ಗಾಯನಗಳ ಸದ್ದಿನಿಂದ, ಅಖಿಳ + ಆಶಾಂತರಂ ಪುದುವಿನಂ = ಎಲ್ಲ ದಿಕ್ಕುಗಳೂ ತುಂಬಿ ಹೋಗುವ ಹಾಗೆ, ಇಂದ್ರನ + ಆನಂದನೃತ್ಯಂ ಎಸೆದತ್ತು = ಇಂದ್ರನ ಆನಂದನೃತ್ಯವು ಶೋಭಿಸಿತು.

**ಗದ್ಯಾನುಸರಣ:** ಪದಗಳ ಘಟ್ಟಣೆಯಿಂದ ಕುಲಪರ್ವತಗಳೇ ಅಲುಗುವ ಹಾಗೆ, ತೋಳುಗಳ ವಿಶಿಷ್ಟ ಚಾಚುವಿಕೆಯಿಂದ ನಕ್ಷತ್ರಗಳ ಗುಂಪು ಹೂಗಳ ಅರ್ಪಣೆಯಂತೆ ಉದುರುವ ಹಾಗೆ, ತೋಳುಗಳನ್ನು ಬೀಸಲು ಉಂಟಾದ ಬಿರುಸು ಗಾಳಿಯ ಭರದಿಂದ ಸಮುದ್ರಗಳು ಉಕ್ಕೇರುವ ಹಾಗೆ, ದೇವವಾದ್ಯಗಳ ಮತ್ತು ಗಾಯನಗಳ ಸದ್ದಿನಿಂದ ಎಲ್ಲ ದಿಕ್ಕುಗಳೂ ತುಂಬಿಹೋಗುವ ಹಾಗೆ ಇಂದ್ರನ ಆನಂದನೃತ್ಯವು ಶೋಭಿಸಿತು.

**ಎಳೆಯೊಳ್ ತೋಱಿದ ರೂಪನಾಗಳೆ ನಭೋಭಾಗಾಗ್ರದೊಳ್ ತೋರ್ಪನಾ**
**ಗಳೆ ಗೆಂಟಾಗಳೆ ಸಾರೆಯಾಗಿ ಪೊಳೆವಂ ಸೂಕ್ಷ್ಮಾಂಗನಾಗಿರ್ಪನಾ**
**ಗಳೆ ದಿಗ್ವ್ಯಾಪಕನಪ್ಪನಿಂತು ಪಲವುಂ ಚೋದ್ಯಂಗಳಂ ವಿಕ್ರಿಯಾ**
**ಬಳದಿಂದಾಡಿ ಮಹೇಂದ್ರಜಾಲಿಗನುಮಂ ಪೋಲ್ತಂ ಸುರಾಧೀಶ್ವರಂ ೧೨೨**

**ಪದವಿಭಾಗ-ಅನ್ವಯ-ಅರ್ಥ:** ಎಳೆಯೊಳ್ ತೋಱಿದ ರೂಪನ್ + ಆಗಳೆ ನಭೋಭಾಗಾಗ್ರದೊಳ್ ತೋರ್ಪನ್ = ಭೂಮಿಯಲ್ಲಿ ತೋರಿಸಿದ ರೂಪವನ್ನು ಆಗ ಆಗಸಪ್ರದೇಶದಲ್ಲಿ ತೋರಿಸುವನು; ಆಗಳೆ ಗೆಂಟಾಗಳೆ ಸಾರೆಯಾಗಿ ಪೊಳೆವಂ = ಈಗ ದೂರವಾಗಿ ಈಗ ಹತ್ತಿರವಾಗಿ ಕಾಣುವನು; ಸೂಕ್ಷ್ಮಾಂಗನಾಗಿರ್ಪನ್ + ಆಗಳೆ ದಿಕ್ + ವ್ಯಾಪಕನ್ + ಅಪ್ಪನ್ = ಒಮ್ಮೆ ಸೂಕ್ಷ್ಮ ದೇಹವನ್ನು ಪಡೆಯುತ್ತಾನೆ ಮತ್ತೊಮ್ಮೆ ದಿಕ್ಕುಗಳೆಲ್ಲವನ್ನೂ ವ್ಯಾಪಿಸಿಕೊಳ್ಳುತ್ತಾನೆ; ವಿಕ್ರಿಯಾ ಬಳದಿಂದೆ ಇಂತು ಪಲವುಂ ಚೋದ್ಯಂಗಳಂ ಆಡಿ = ಹೀಗೆ ತನ್ನ ವಿಕ್ರಿಯಾ ಬಲದಿಂದ ಅನೇಕ ವಿಸ್ಮಯಗಳನ್ನು ತೋರ್ಪಡಿಸಿ, ಸುರಾಧೀಶ್ವರಂ ಮಹೇಂದ್ರಜಾಲಿಗನುಮಂ ಪೋಲ್ತಂ = ದೇವೇಂದ್ರನು ಯಕ್ಷಿಣಿಗಾರನಂತೆಯೂ ಕಾಣಿಸಿದ.

**ಗದ್ಯಾನುಸರಣ:** ಈಗ ಭೂಮಿಯಲ್ಲಿ ತೋರಿಸಿದ ರೂಪವನ್ನು ಮರುಚಣ ಆಗಸಪ್ರದೇಶದಲ್ಲಿ ತೋರಿಸುವನು; ಒಮ್ಮೆ ದೂರವಾಗಿ ಮತ್ತೊಮ್ಮೆ ಹತ್ತಿರವಾಗಿ ಕಾಣುವನು; ಈ ಕ್ಷಣ ಸೂಕ್ಷ್ಮದೇಹವನ್ನು ಪಡೆದು ಮುಂದಿನ ಕ್ಷಣವೇ ದಿಕ್ಕುಗಳೆಲ್ಲವನ್ನೂ

ವ್ಯಾಪಿಸಿಕೊಂಡುಬಿಡುತ್ತಾನೆ; ಹೀಗೆ ತನ್ನ ವಿಕ್ರಿಯಾಬಲದಿಂದ ಅನೇಕ ವಿಸ್ಮಯಗಳನ್ನು ತೋರ್ಪಡಿಸಿ ದೇವೆಂದ್ರನು ಯಕ್ಷಿಣಿಗಾರನಂತೆಯೂ ಕಾಣಿಸಿದ.

**ವಿಶೇಷ ವಿಚಾರ:** ಎಳೆ = ಇದು 'ಇಳೆ' ಎಂಬ ಶಬ್ದದ ಪೂರ್ವದ ಹಳಗನ್ನಡ ರೂಪ ಎನ್ನುತ್ತಾರೆ; ಅರ್ಥ ಅದೇ –ಭೂಮಿ ಎಂದು. ಹಳಗನ್ನಡಕ್ಕೂ ಪೂರ್ವದ ಹಳಗನ್ನಡಕ್ಕೂ ಇರುವ ವ್ಯತ್ಯಾಸಗಳನ್ನು ಹೇಳುವಾಗ ದ್ರಾವಿಡ ಭಾಷಾವಿಜ್ಞಾನಿಗಳು ಪೂರ್ವದ ಹಳಗನ್ನಡದಲ್ಲಿನ ಪದಾದಿಯ ಎಕಾರ ಹಳಗನ್ನಡದಲ್ಲಿ ಇಕಾರವಾಗುತ್ತದೆ ಎನ್ನುತ್ತಾರೆ – ಎಲಿ>ಇಲಿ ಆಗುವಂತೆ.

**ವ॥ ಅಂತು ತನ್ನ ತಾಂಡವಾರಂಭದೊಳಳವಿಗಟಿದ ರಾಗದಿಂ ನಿರ್ಮಿಸಿದ ಭುಜಶಾಖಾ ಸಹಸ್ರಂಗಳೊಳ್ ದಾಂಗುಡಿವಿಟ್ಟನಂಗಜಂಗಮಲತೆ ಗಳನನುಕರಿಸಿ ದೇವಗಣಿಕೆಯರಾಡುವಾಗಳ್,**

**ಪದವಿಭಾಗ–ಅನ್ವಯ–ಅರ್ಥ:** ಅಂತು ತನ್ನ ತಾಂಡವ + ಆರಂಭದೊಳ್ = ಹೀಗೆ ತನ್ನ ತಾಂಡವನೃತ್ಯದ ಮೊದಲಿಗೆ, ಅಳವಿಗಟಿದ ರಾಗದಿಂ ನಿರ್ಮಿಸಿದ = ಮೇರೆಮೀರಿದ ಪ್ರೀತಿಯಿಂದ ಸೃಷ್ಟಿಸಿಕೊಂಡ, ಭುಜಶಾಖಾಸಹಸ್ರಂಗಳೊಳ್ ದಾಂಗುಡಿವಿಟ್ಟು = ಸಾವಿರ ತೋಳುಗಳೆಂಬ ರೆಂಬೆಗಳಲ್ಲಿ ಕುಡಿಯೊಡೆದು, ಅನಂಗಜಂಗಮಲತೆಗಳನ್ + ಅನುಕರಿಸಿ = ಓಡಾಡುವ ಕಾಮನ ಬಳ್ಳಿಗಳಂತೆ, ದೇವಗಣಿಕೆಯರ್ + ಆಡುವಾಗಳ್ = ದೇವವಿಲಾಸಿನಿಯರು ಕುಣಿದರು.

**ಗದ್ಯಾನುಸರಣ:** ಹೀಗೆ ತನ್ನ ತಾಂಡವನೃತ್ಯದ ಮೊದಲಿಗೆ ಮೇರೆಮೀರಿದ ಪ್ರೀತಿಯಿಂದ ಸೃಷ್ಟಿಸಿಕೊಂಡ ಇಂದ್ರನ ಸಾವಿರ ತೋಳುಗಳೆಂಬ ರೆಂಬೆಗಳಲ್ಲಿ ಕುಡಿಯೊಡೆದು ಜೀವಂತ ಕಾಮನ ಬಳ್ಳಿಗಳಂತೆ ದೇವವಿಲಾಸಿನಿಯರು ಕುಣಿದರು.

**ರಸಭಾವಾಭಿನಯಂಗಳಂ ಭುಜಲತಾಭ್ರೂಚಾಪನೇತ್ರೋತ್ಪಲ**
**ಪ್ರಸರಂಗಳ್ ಪಸರಂಗೆಯ್ಯುತ್ತಿರೆ ಲಸನ್ನೇತ್ರಂಗಳಂ ಕೂಡೆ ಬಂ**
**ಚಿಸುತುಂ ಮೆಟ್ಟುವ ಮೆಟ್ಟನೊಳ್ಪು ಜನತಾನೇತ್ರಂಗಳಂ ನಾಡೆ ಚೆ**
**ಲ್ವೆಸೆದತ್ತಿಂದ್ರನ ನೀಳ್ದ ತೋಳ್ದುಱುಗಲೊಳ್ ದೇವಾಂಗನಾನರ್ತನಂ॥೨೩॥**

**ಪದವಿಭಾಗ–ಅನ್ವಯ–ಅರ್ಥ:** ಇಂದ್ರನ ನೀಳ್ದ ತೋಳ್ದುಱುಗಲೊಳ್ ದೇವಾಂಗನಾನರ್ತನಂ = ಚಾಚಿದ ದೇವೇಂದ್ರನ ತೋಳ ಗೊಂಚಲುಗಳಲ್ಲಿ, ರಸಭಾವಾಭಿನಯಂಗಳಂ = ರಸ ಭಾವಗಳ ಅಭಿವ್ಯಕ್ತಿಯನ್ನು, ಭುಜಲತಾ ಭ್ರೂಚಾಪ ನೇತ್ರ + ಉತ್ಪಲ ಪ್ರಸರಂಗಳ್ ಪಸರಂಗೆಯ್ಯುತ್ತಿರೆ = ತೋಳಬಳ್ಳಿಗಳ ಹುಬ್ಬು ಬಿಲ್ಲುಗಳ ಕಣ್ಣನೈದಿಲೆಗಳ ಸಮೂಹವು ಸೂಸುತ್ತಿರಲು, ಲಸತ್ + ನೇತ್ರಂಗಳಂ

ಕೂಡೆ ಬಂಚಿಸುತುಂ ಮೆಟ್ಟುವ ಮೆಟ್ಟಿನ ಒಳ್ಪು = ಚಂಚಲ ಕಣ್ಣುಗಳನ್ನು ಮೀರಿಸುವಂತೆ ಇಡುವ ಪದಗತಿಗಳ ಚೆಲುವು, ಜನತಾನೇತ್ರಂಗಳಂ ನಾಡೆ ಚೆಲ್ವೆಸೆದತ್ತು = ನೋಡುಗರ ಕಣ್ಣುಗಳಿಗೆ ಚೆಲುವಾಗಿ ಕಾಣಿಸುತ್ತಿತ್ತು.

**ಗದ್ಯಾನುಸರಣ:** ಚಾಚಿದ ದೇವೇಂದ್ರನ ತೋಳ ಗೊಂಚಲುಗಳಲ್ಲಿ ದೇವಾಂಗನೆಯರ ಕುಣಿತದಲ್ಲಿ ರಸ ಭಾವಗಳ ಅಭಿವ್ಯಕ್ತಿಯು ಅವರ ತೋಳಬಳ್ಳಿಗಳ ಹುಬ್ಬುಬಿಲ್ಲುಗಳ ಕಣ್ಣನೈದಿಲೆಗಳ ಮೂಲಕ ಸೂಸುತ್ತಿತ್ತು; ಚಂಚಲ ಕಣ್ಣುಗಳನ್ನು ಮೀರಿಸುವಂತೆ ಇಡುವ ಅವರ ಪದಗತಿಗಳ ಚೆಲುವು ನೋಡುಗರ ಕಣ್ಣುಗಳಿಗೆ ಚೆಲುವಾಗಿ ಕಾಣಿಸುತ್ತಿತ್ತು.

**ಆನಂದಂಬೆರಸಂಕದಚ್ಚರಸಿಯರ್ ದೇವೇಂದ್ರನೈರಾವತಾ**
**ಳಾನಸ್ತಂಭಸಮಂಗಳಪ್ಪ ಭುಜಸಂದೋಹಂಗಳೊಳ್ ವೀರಕಾಂ**
**ತಾನೀಕಕ್ಕೆಣೆಯಾಗಿ ಕೂಡೆ ಕುಣಿದರ್ ಮತ್ತಂ ಕೆಲರ್ ನೋಡಿ ಸೂ**
**ಚೀನಾಟ್ಯಂಗಳನಾಡಿದರ್ ಖರನಖಪ್ರಾಂತಂಗಳೊಳ್ ಶಕ್ರನಾ ೧೨೪**

**ಪದವಿಭಾಗ–ಅನ್ವಯ–ಅರ್ಥ:** ಆನಂದಂಬೆರಸು + ಅಂಕದ + ಅಚ್ಚರಸಿಯರ್ = ಆನಂದದಿಂದ ಶ್ರೇಷ್ಠ ಅಪ್ಸರೆಯರು, ಐರಾವತ + ಆಳಾನಸ್ತಂಭಸಮಂಗಳ್ + ಅಪ್ಪ ದೇವೇಂದ್ರನ ಭುಜಸಂದೋಹಂಗಳೊಳ್ = ಐರಾವತವನ್ನು ಕಟ್ಟುವ ಕಂಬದಂತಹ ದೇವೇಂದ್ರನ ಬಾಹುಸಹಸ್ರಗಳಲ್ಲಿ, ವೀರಕಾಂತಾನೀಕಕ್ಕೆ + ಎಣೆಯಾಗಿ ಕೂಡೆ ಕುಣಿದರ್ = ವೀರವನಿತೆಯರ ಗುಂಪಿನಂತೆ ಕುಣಿದರು; ಮತ್ತಂ ಕೆಲರ್ ನೋಡಿ ಶಕ್ರನಾ ಖರನಖಪ್ರಾಂತಂಗಳೊಳ್ = ಮತ್ತೆ ಕೆಲವರು ಶಕ್ರನ ಹೊಳಪಾದ ಉಗುರುಗಳ ಭಾಗಗಳಲ್ಲಿ, ಸೂಚೀನಾಟ್ಯಂಗಳನ್ + ಆಡಿದರ್ = ಸೂಚೀನಾಟ್ಯಗಳನ್ನು ಮಾಡಿದರು.

**ಗದ್ಯಾನುಸರಣ:** ಐರಾವತವನ್ನು ಕಟ್ಟುವ ಕಂಬದಂತಹ ದೇವೇಂದ್ರನ ಬಾಹುಸಹಸ್ರಗಳಲ್ಲಿ ಹಲವರು ಶ್ರೇಷ್ಠ ಅಪ್ಸರೆಯರು ಆನಂದದಿಂದ ವೀರವನಿತೆಯರಂತೆ ಕುಣಿದರು; ಮತ್ತೆ ಕೆಲವರು ಅವನ ಹೊಳಪಾದ ಉಗುರುಗಳ ಭಾಗಗಳಲ್ಲಿ ಸೂಚೀನಾಟ್ಯಗಳನ್ನು ಮಾಡಿದರು.

**ವಿಶೇಷ ವಿಚಾರ: ಸೂಚೀನಾಟ್ಯ** = ಒಂದು ಬಗೆಯ ಕುಣಿತ: ರಂಗಸ್ಥಳದಲ್ಲಿ ಸೂಜಿಗಳನ್ನು ಹಾಕಿ ಅದನ್ನು ಮೆಟ್ಟದ ರೀತಿಯಲ್ಲಿ ಮಾಡುವ ಕುಶಲ ನರ್ತನ.

**ತ್ರಿದಶಗಣಾಧಿನಾಯಕನ ಪರ್ವಿದ ತೋಳ್ದುಱುಗಲ್ಗಳೊಳ್ ಪಳಂ**
**ಚದೆ ಗಗನಂಬರಂ ನೆಗೆದು ಸೂಸುವ ಬಾಹುಪರಿಭ್ರಮಂಗಳೊಳ್**
**ಬೆದಱದೆ ಶಕ್ರನೃತ್ಯದೊಳೊಡಂಬಡೆ ನರ್ತಿಸುವಲ್ಲಿ ಜತ್ತವ**
**ಟ್ಟದ ಮಣಿಯಂತದೇಂ ಪದುಳವಾದುದೊ ದಿವ್ಯವಧೂಕದಂಬಕಂ೧೨೫**

**ಪದವಿಭಾಗ-ಅನ್ವಯ-ಅರ್ಥ:** ತ್ರಿದಶಗಣಾಧಿನಾಯಕನ ಪರ್ವಿದ ತೋಳ್ + ತುಱುಗಲ್ಗಳೊಳ್ = ದೇವತೆಗಳ ಗುಂಪಿನ ಒಡೆಯನ ಚಾಚಿದ ತೋಳುಗಳ ಸಮೂಹದಲ್ಲಿ, ಗಗನಂಬರಂ ನೆಗೆದು ಸೂಸುವ ಬಾಹುಪರಿಭ್ರಮಂಗಳೊಳ್ ಪಳಂಚದೆ = ಆಗಸದೆತ್ತರಕ್ಕೆ ಹಾರಿ ಬೀಸುವ ತೋಳ ಬೀಸಾಟದಲ್ಲಿ ತಾಕದೆ, ಬೆದಱದೆ ಶಕ್ರನೃತ್ಯದೊಳೊಡಂಬಡೆ ನರ್ತಿಸುವಲ್ಲಿ = ಹೆದರಿಕೆಯಿಲ್ಲದೆ ಇಂದ್ರನ ಕುಣಿತದಲ್ಲಿ ಹೊಂದಾಣಿಕೆಯಿಂದ ನರ್ತಿಸುವಾಗ, ದಿವ್ಯವಧೂಕದಂಬಕಂ = ದೇವಾಂಗನಾ ಸಮೂಹವು, ಜತ್ತವಟ್ಟದ ಮಣಿಯಂತೆ + ಅದೇಂ ಪದುಳಂ + ಆದುದೊ = ಜತ್ತವಟ್ಟದ ಮಣಿಗಳ ಹಾಗೆ ಅದೆಷ್ಟು ಸೊಗಸಿತು!

**ಗದ್ಯಾನುಸರಣ:** ದೇವತೆಗಳ ಗುಂಪಿನ ಒಡೆಯನು ತೋಳುಗಳನ್ನು ಚಾಚುವಾಗಲೂ, ಆಗಸದೆತ್ತರಕ್ಕೆ ಹಾರಿ ಬೀಸುವ ತೋಳುಗಳನ್ನು ಬೀಸುವಾಗಲೂ ಅವುಗಳಿಗೆ ಡಿಕ್ಕಿ ಹೊಡೆಯದೆ ಅಥವಾ ಬೆದಱದೆ ಇಂದ್ರನ ಕುಣಿತದಲ್ಲಿ ಹೊಂದಾಣಿಕೆಯಿಂದ ನರ್ತಿಸುವಾಗ, ದೇವಾಂಗನಾ ಸಮೂಹವು ಜತ್ತವಟ್ಟದ ಮಣಿಗಳ ಹಾಗೆ ಅದೆಷ್ಟು ಸೊಗಸಿತು!

**ವಿಶೇಷ ವಿಚಾರ: ಜತ್ತವಟ್ಟದ ಮಣಿ:** ಜತ್ತವಟ್ಟ ಎಂದರೆ ಬೊಂಬೆಗಳನ್ನು ಕುಣಿಸುವ ಹಲಗೆ, ಚೆಂದ ಕಾಣಲೆಂದು ಅದಕ್ಕೆ ಮಣಿಗಳನ್ನು ಕಟ್ಟಿರುತ್ತಿದ್ದರು.

**ಯುವಸಂಘಾತಮದೊಂದು ತೋಳ್ದುಱುಗಳೊಳ್ ಮತ್ತೊಂದು ತೋಳೋಳಿಯೊಳ್**
**ಯುವತೀವ್ರಾತಮನೇಕಭೇದರಸಭಾವಂಗಳ್ ಪೊದಳ್ದುಣ್ಮಿ ಪೊ**
**ಣ್ಮುವಿನಂ ನರ್ತಿಸೆ ಸೂತ್ರಧಾರವಿಧಿಯಿಂ ಸುತ್ರಾಮನಂದಿಂತು ತಾಂ**
**ಡವಲಾಸ್ಯಂಗಳ ಚೆಲ್ವನೊರ್ಮೆಯೆ ತದೀಯಾಸ್ಥಾನದೊಳ್ ತೋಱಿದಂ೧೨೬**

**ಪದವಿಭಾಗ-ಅನ್ವಯ-ಅರ್ಥ:** ಅದೊಂದು ತೋಳ್ದುಱುಗಳೊಳ್ ಯುವಸಂಘಾತಂ = ಒಂದು ಕಡೆಯ ಬಾಹುಗಳ ಸಮೂಹದಲ್ಲಿ ಯುವಕರ ಗುಂಪು, ಮತ್ತೊಂದು ತೋಳ + ಓಳಿಯೊಳ್ ಯುವತೀವ್ರಾತಂ = ಇನ್ನೊಂದು ಕಡೆಯ ತೋಳಸಾಲಿನಲ್ಲಿ ಯುವತಿಯರ ಗುಂಪು, ಅನೇಕಭೇದರಸಭಾವಂಗಳ್ ಪೊದಳ್ದುಣ್ಮಿ ಪೊಣ್ಮುವಿನಂ ನರ್ತಿಸೆ = ನಾನಾ ಬಗೆಯ ರಸಭಾವಗಳು ಹೊರಹೊಮ್ಮುವಂತೆ ಕುಣಿಯಲು, ಅಂದಿಂತು ತಾಂಡವಲಾಸ್ಯಂಗಳ ಚೆಲ್ವನ್ ಸೂತ್ರಧಾರವಿಧಿಯಿಂ = ಈ ರೀತಿ ತಾಂಡವನೃತ್ಯದ ಸೊಬಗನ್ನು ಸೂತ್ರಧಾರನ ರೀತಿಯಲ್ಲಿ, ತದೀಯ + ಆಸ್ಥಾನದೊಳ್ ಸುತ್ರಾಮನ್ ಒರ್ಮೆಯೆ ತೋಱಿದಂ = ತನ್ನ ಆಸ್ಥಾನದಲ್ಲಿ ದೇವೇಂದ್ರನು ಒಮ್ಮೆಗೇ ತೋರಿಸಿದ.

**ಗದ್ಯಾನುಸರಣ:** ಒಂದು ಕಡೆಯ ಬಾಹುಗಳ ಸಮೂಹದಲ್ಲಿ ಯುವಕರ ಗುಂಪು, ಇನ್ನೊಂದು ಕಡೆಯ ತೋಳಸಾಲಿನಲ್ಲಿ ಯುವತಿಯರ ಗುಂಪು ನಾನಾ

ಬಗೆಯ ರಸಭಾವಗಳು ಹೊರಹೊಮ್ಮುವಂತೆ ಕುಣಿಯುತ್ತಿದ್ದವು; ಈ ರೀತಿ ಇಂದ್ರನು ತನ್ನ ಆಸ್ಥಾನದಲ್ಲಿ ತಾಂಡವನೃತ್ಯದ ಸೊಬಗನ್ನು ಒಮ್ಮೆಗೇ ನಟನಾಗಿಯೂ ನಿರ್ದೇಶಕನಾಗಿಯೂ ತೋರಿಸಿದ.

**ವ॥ ಅಂತು ದೇವೇಂದ್ರಕರಸರೋಜಾಕರದೊಳ್ ಸಮುತ್ಫುಲ್ಲಮುಖ ಪದ್ಮಂಗಳಿಂ ಪದ್ಮಿನಿಗಳೆನಿಸಿ ಸುರೇಂದ್ರತಾರಹಾರ ಮುಕ್ತಾಫಳ ಪ್ರತಿಬಿಂಬಿತಂ ಗಳಿಂ ವಿದ್ಯಾದೇವತೆಗಳೆನಿಸಿ ದಿವಿಜಸೌಂದರಿಯರ್ ಗೊಂದಣ ಮಾಡುವಲ್ಲಿ ಕಡೆಗಣ್ಣೊಳ್ ತುಳುಂಕಿಯುಂ ಕದಪಿನೊಳ್ ಪೊಂಪುಟಿ ವೋಗಿಯುಂ ಭ್ರೂವಿಭ್ರಮದೊಳ್ ಪೊನಲ್ವರಿದುಂ ಅರುಣಾಧರದೊಳ್ ಕೊಳಂಗೊಂಡು ದರಹಸಿತದೊಳ್ ಬೆಳ್ಳಂಗೆಡೆದುಂ ಅಂಗರಾಗದ್ಭೌ ರಾಗಂಬಡೆದುಂ ಸಿರಿಸದಾಮ ಕೋಮಲೆಯರ ಭುಜಲತೆಗಳೊಳ್ ಪಸರಿಸಿಯುಂ ಘನಸ್ತನಂಗಳೊ ಳೆಡಪಿಯುಂ ಗಂಭೀರ ನಾಭಿಯೊಳ್ ಸುಟಿಗೊಂಡುಂ ನಿತಂಬದೊಳ್ ತಱುಂಬಿಯುಂ ಮೃದುಪದದೊಳಂ ದಂಬಡೆದುಂ ಆಕೆಗಳಂಗೋಪಾಂಗ ದೊಳಿಂತು ನಾಟ್ಯರಸಮೆ ತೀವಿ ತುಳುಂಕುಗುಟ್ಟೆ ದಿವಿಜಸಾಮಾನಿಕಜನಕ್ಕಂ ನಾಭಿರಾಜಾದಿಮನಸಿಜಸಭೆಗಂ ಅತ್ಯಾಶ್ಚರ್ಯಮಂ ಮಾಡಿದಾಗಳ್,**

**ಪದವಿಭಾಗ–ಅನ್ವಯ–ಅರ್ಥ:** ಅಂತು ದೇವೇಂದ್ರಕರಸರೋಜಾಕರದೊಳ್ ಸಮುತ್ಫುಲ್ಲಮುಖಪದ್ಮಂಗಳಿಂ ಪದ್ಮಿನಿಗಳ್ + ಎನಿಸಿ = ಹೀಗೆ ದೇವೇಂದ್ರನ ಅಂಗೈಯೆಂಬ ಸರೋವರದಲ್ಲಿ ಅರಳಿದ ಮೊಗತಾವರೆಗಳಿಂದಾಗಿ ಲಕ್ಷ್ಮಿಯರಂತೆಯೂ, ಸುರೇಂದ್ರತಾರಹಾರಮುಕ್ತಾಫಳಪ್ರತಿಬಿಂಬಿತಂಗಳಿಂ = ಇಂದ್ರನ ಮುತ್ತಿನ ಹಾರಗಳಲ್ಲಿನ ಮುತ್ತುಗಳಲ್ಲಿ ಪ್ರತಿಬಿಂಬಿತವಾಗಿ, ವಿದ್ಯಾದೇವತೆಗಳ್ + ಎನಿಸಿ ಸರಸ್ವತಿಯರಂತೆಯೂ, ದಿವಿಜಸೌಂದರಿಯರ್ ಗೊಂದಣಂ + ಆಡುವಲ್ಲಿ = ದೇವಸುಂದರಿಯರು ಗುಂಪುಕುಣಿತ ಮಾಡುವೆಡೆ, ಕಡೆಗಣ್ಣೊಳ್ ತುಳುಂಕಿಯುಂ = ಕುಡಿಗಣ್ಣಿನಲ್ಲಿ ಹೊರಸೂಸಿ, ಕದಪಿನೊಳ್ ಪೊಂಪುಟಿವೋಗಿಯುಂ = ಕೆನ್ನೆಗಳಲ್ಲಿ ಹರಿದು ಇಳಿಯುತ್ತ, ಭ್ರೂವಿಭ್ರಮದೊಳ್ ಪೊನಲ್ + ಪರಿದುಂ = ಹುಬ್ಬಿನ ಬೆಡಗಿನಲ್ಲಿ ಹೊನಲಾಗಿ ಹರಿಯುತ್ತ, ಅರುಣ + ಅಧರದೊಳ್ ಕೊಳಂಗೊಂಡು = ಕೆಂದುಟಿಗಳಲ್ಲಿ ಮಡುಗಟ್ಟಿ, ದರಹಸಿತದೊಳ್ ಬೆಳ್ಳಂಗೆಡೆದುಂ = ಮುಗುಳ್ನಗೆಯಲ್ಲಿ ಬಿಳುಪಾಗಿ, ಅಂಗರಾಗದೊಳ್ ರಾಗಂಬಡೆದುಂ = ದೇಹಕಾಂತಿಯಲ್ಲಿ ಕೆಂಪಾಗಿ, ಸಿರಿಸದಾಮಕೋಮಲೆಯರ ಭುಜಲತೆಗಳೊಳ್ ಪಸರಿಸಿಯುಂ = ಶಿರೀಷ ಪುಷ್ಪಗಳಂತಹ ತೋಳಬಳ್ಳಿಗಳಲ್ಲಿ ಹರಡಿಕೊಂಡು, ಘನಸ್ತನಂಗಳೊಳ್ + ಎಡಪಿಯುಂ = ತೋರಮೊಲೆಗಳಲ್ಲಿ ಎಡವುತ್ತ, ಗಂಭೀರನಾಭಿಯೊಳ್ ಸುಟಿ ಗೊಂಡುಂ = ಆಳವಾದ ಹೊಕ್ಕುಳಲ್ಲಿ ಸುಳಿಯಾಗಿ, ನಿತಂಬದೊಳ್ ತಱುಂಬಿಯುಂ = ಪಿರ್ರೆಗಳಲ್ಲಿ ನುಗ್ಗಿ, ಮೃದುಪದದೊಳ್ + ಅಂದಂಬಡೆದುಂ = ನಯವಾದ ಅಡಿಗಳಲ್ಲಿ ಸೊಗಸುತ್ತ, ಆಕೆಗಳ + ಅಂಗ + ಉಪಾಂಗದೊಳ್ = ಅವರ ದೇಹದ ಅಂಗಾಂಗಗಳಲ್ಲಿ, ಇಂತು ನಾಟ್ಯರಸಮೆ ತೀವಿ ತುಳುಂಕುಗುಟ್ಟೆ = ಹೀಗೆ ನಾಟ್ಯರಸವು ತುಂಬಿ ತುಳುಕಾಡಿ, ಧಿವಿಜಸಾಮಾನಿಕ ಜನಕ್ಕಂ ನಾಭಿರಾಜ + ಆದಿಮನಸಿಜಸಭೆಗಂ = ದೇವಸಾಮಾನಿಕರಿಗೂ ನಾಭಿರಾಜ

ಮುಂತಾದ ಮಾನವಸಮೂಹಕ್ಕೂ, ಅತ್ಯಾಶ್ಚರ್ಯಮಂ ಮಾಡಿದಾಗಳ್ = ಅತೀವ ಅಚ್ಚರಿಯನ್ನುಂಟುಮಾಡಲು,

**ಗದ್ಯಾನುಸರಣ:** ದೇವೇಂದ್ರನ ಅಂಗೈಯೆಂಬ ಸರೋವರದಲ್ಲಿ ಅರಳಿದ ಮೊಗತಾವರೆಗಳಿಂದಾಗಿ ಲಕ್ಷ್ಮಿಯರಂತೆಯೂ ಇಂದ್ರನ ಮುತ್ತಿನ ಹಾರಗಳಲ್ಲಿನ ಮುತ್ತುಗಳಲ್ಲಿ ಪ್ರತಿಬಿಂಬಿತವಾಗಿ ಸರಸ್ವತಿಯರಂತೆಯೂ ಕಂಗೊಳಿಸುತ್ತ ದೇವಸುಂದರಿಯರು ಗುಂಪುಕುಣಿತ ಮಾಡಿದರು: ಆಗ ನಾಟ್ಯರಸವು ಅವರ ಕುಡಿಗಣ್ಣಿನಲ್ಲಿ ಹೊರಸೂಸಿ, ಕೆನ್ನೆಗಳಲ್ಲಿ ಹರಿದು ಇಳಿದು, ಹುಬ್ಬಿನ ಬೆಡಗಿನಲ್ಲಿ ಹೊನಲಾಗಿ ಹರಿದು, ಕೆಂದುಟಿಗಳಲ್ಲಿ ಮಡುಗಟ್ಟಿ, ಮುಗುಳ್ನಗೆಯಲ್ಲಿ ಬಿಳುಪಾಗಿ, ದೇಹಕಾಂತಿಯಲ್ಲಿ ಕೆಂಪಾಗಿ, ಶಿರೀಷಪುಷ್ಪಗಳಂತಹ ತೋಳಬಳ್ಳಿಗಳಲ್ಲಿ ಹರಡಿಕೊಂಡು, ತೋರಮೊಲೆಗಳಲ್ಲಿ ಎಡವುತ್ತ, ಆಳವಾದ ಹೊಕ್ಕುಳಲ್ಲಿ ಸುಳಿಯಾಗಿ, ಪಿರ್ರೆಗಳಲ್ಲಿ ನುಗ್ಗಿ ನಯವಾದ ಅಡಿಗಳಲ್ಲಿ ಸೊಗಸಿನಿಂದ ನೆಲೆನಿಂತಿತು; ಹೀಗೆ ನಾಟ್ಯರಸವು ಅವರ ದೇಹದ ಅಂಗಾಂಗಗಳಲ್ಲಿ ತುಂಬಿ ತುಳುಕಾಡಿ ದೇವ ಸಾಮಾನಿಕರಿಗೂ ನಾಭಿರಾಜ ಮುಂತಾದ ಮಾನವಸಮೂಹಕ್ಕೂ ಅತೀವ ಅಚ್ಚರಿಯನ್ನುಂಟುಮಾಡಿದರು.

**ವಿಶೇಷ ವಿಚಾರ:** ಜನ್ಮಾಭಿಷೇಕದ ನಂತರ ಬರುವ ದೇವೇಂದ್ರನ 'ಆನಂದ ನರ್ತನ' ಪ್ರತ್ಯೇಕ ವಿಮರ್ಶೆಗೆ ಅರ್ಹವಾದ ಭಾಗ. ಮೂಲದಲ್ಲಿ ಏನೇ ಇರಲಿ, ಪಂಪನಿಗೆ ಇದನ್ನು ಬರೆಯುವ ಸಂದರ್ಭದಲ್ಲಿ ನಾಟ್ಯ, ನಾಟಕ, ರಂಗಭೂಮಿ ಯಂತಹ ವಿಷಯಗಳಲ್ಲಿ ಆಸಕ್ತಿ, ಪ್ರವೇಶ, ಪ್ರಬುದ್ಧತೆಗಳು ಇದ್ದವೆಂಬುದು ಸ್ಪಷ್ಟವಾಗುತ್ತದೆ. ಅವನ ಈ ವಿವರಣೆಯ ಬಗ್ಗೆ ಶಾಸ್ತ್ರೀಯ ಆಲೋಚನೆ ಆಗತ್ಯವಿದೆ.

**ಧರೆ ರಂಗಂ ಗಗನಂ ಮನೋಹರತರಂ ನಾಟ್ಯಾಲಯಂ ನರ್ತಕಂ**
**ಸುರರಾಜಂ ಸಭೆ ದೇವಮರ್ತ್ಯಸಭೆ ಸಂದಾರಾಧ್ಯನೀಶಂ ಜಗ**
**ದ್ಗುರು ತನ್ನೃತ್ಯಫಲಂ ತ್ರಿವರ್ಗವಿಭವಂ ತಾನೆಂದೊಡೇಮಾತೊ ಸಾ**
**ಸಿರಮುಂ ನಾಲಗೆಯುಳ್ಳ ವಾಸುಕಿಯುಮಿನ್ನೇನೆಂದದಂ ಬಣ್ಣಿಪಂ॥೨೭**

**ಪದವಿಭಾಗ–ಅನ್ವಯ–ಅರ್ಥ:** ಧರೆ ರಂಗಂ = ಭೂಮಿಯೇ ರಂಗಸ್ಥಳ, ಗಗನಂ ಮನೋಹರತರಂ ನಾಟ್ಯಾಲಯಂ = ಆಕಾಶವೇ ಸುಂದರವಾದ ನಾಟ್ಯಮಂದಿರ, ನರ್ತಕಂ ಸುರರಾಜಂ = ಕುಣಿಯುವವನು ದೇವೇಂದ್ರ, ಸಭೆ ದೇವಮರ್ತ್ಯಸಭೆ = ನೋಡುಗರು ದೇವತೆಗಳು ಮತ್ತು ಮಾನವರು, ಸಂದ + ಆರಾಧ್ಯನ್ + ಈಶಂ ಜಗದ್ಗುರು = ಒಡೆಯನಾದ ಜಗದ್ಗುರುವಾದ ಜಿನನೇ ಆರಾಧ್ಯ, ತತ್ + ನೃತ್ಯಫಲಂ ತ್ರಿವರ್ಗವಿಭವಂ ತಾನ್ = ಆ ನರ್ತನದ ಫಲವು ತ್ರಿವರ್ಗದ ವೈಭವೀಕರಣವೇ, ಎಂದೊಡೆ + ಏಮಾತೊ = ಅಂದ ಮೇಲೆ

ಇನ್ನೇನು ಮಾತು, ಸಾಸಿರಮುಂ ನಾಲಗೆಯುಳ್ಳ ವಾಸುಕಿಯುಂ = ಸಾವಿರ ನಾಲಗೆಯಿರುವ ವಾಸುಕಿಯಾದರೂ, ಇನ್ನು + ಏನೆಂದು + ಅದಂ ಬಣ್ಣಿಪಂ = ಅಷ್ಟು ಬಿಟ್ಟು ಬೇರೆ ಇನ್ನು ಹೇಗೆ ಬಣ್ಣಿಸಬಲ್ಲ!

**ಗದ್ಯಾನುಸರಣ:** ಭೂಮಿಯೇ ರಂಗಸ್ಥಳ, ಆಕಾಶವೇ ಸುಂದರವಾದ ನಾಟ್ಯಮಂದಿರ, ಕುಣಿಯುವವನು ದೇವೇಂದ್ರ, ನೋಡುಗರು ದೇವತೆಗಳು ಮತ್ತು ಮಾನವರು, ಒಡೆಯನಾದ ಜಗದ್ಗುರುವಾದ ಜಿನನೇ ಅದರ ಆರಾಧ್ಯ, ಆ ನರ್ತನದ ಫಲವು ತ್ರಿವರ್ಗದ ವೈಭವೀಕರಣ – ಅಂದ ಮೇಲೆ ಇನ್ನೇನು ಮಾತು, ಸಾವಿರ ನಾಲಗೆಯಿರುವ ವಾಸುಕಿ ಕೂಡ ಅಷ್ಟು ಬಿಟ್ಟು ಬೇರೆ ಇನ್ನು ಹೇಗೆ ಬಣ್ಣಿಸಬಲ್ಲ!

**ವಿಶೇಷ ವಿಚಾರ: ತ್ರಿವರ್ಗ** = ಮೂರು ಪುರುಷಾರ್ಥಗಳು: ಧರ್ಮ, ಅರ್ಥ ಮತ್ತು ಕಾಮ; ಜೈನವು ಮೂಲತಃ ನಾಸ್ತಿಕಮತವಾದುದರಿಂದ ಅಲ್ಲಿ ಮೋಕ್ಷಕ್ಕೆ ಸ್ಥಾನವಿಲ್ಲ. ಈ ಸಂದರ್ಭದ ಅದ್ಭುತತೆ ಮತ್ತು ಭವ್ಯತಾನುಭವದ ವಿಶ್ಲೇಷಣೆಗೆ ನೋಡಿ, ಕುವೆಂಪು ಅವರ ಸುಪ್ರಸಿದ್ಧ ಲೇಖನ 'ಭೂಮಾನುಭೂತಿ ಮತ್ತು ಭವ್ಯತಾನುಭವ'.

**ವ। ಅಂತು ಪುರಂದರನಾನಂದನೃತ್ತಾವಸಾನದೊಳೀ ಪರಮೇಶ್ವರಂ ಧರ್ಮಾಮೃತವರ್ಷದಿಂ ಭವ್ಯಸಸ್ಯಸಮೃದ್ಧಿಯಂ ಮಾಡುವುದಱಿಂ ವೃಷ ಮೆಂಬುದು ಧರ್ಮಮದಱಿಂದೊಪ್ಪುವುದಱಿಂದಂ ಸ್ವರ್ಗಾವತರಣ ಸಮಯದೊಳ್ ನಿಜಜನನೀವದನವನಜಮಂ ಸ್ವಪ್ನದೊಳ್ ಧವಳವೃಷಭಾಕಾರದಿಂ ಪೊಕ್ಕುದಱಿಂದಂ ವೃಷಭಸ್ವಾಮಿಯೆಂದು ಪೆಸರನಿಟ್ಟು ಮಜ್ಜನ ಮಂಡನ ಕ್ರಿಯೆಗಳ್ಗೆ ದೇವಿಯರನೆ ದಾದಿಯರ್ಮಾಡಿ ಸಮವಯಾನು ರೂಪವೇಷದ ಸುರಕುಮಾರಕರ ನೊಡನಾಡಿಗಳ್ಮಾಡಿ ದೇವಸಮಾಜಂ ಬೆರಸು,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಪುರಂದರನ್ + ಆನಂದನೃತ್ತ + ಅವಸಾನದೊಳ್ = ಹೀಗೆ ಪುರಂದರನು ತನ್ನ ನರ್ತನ ಮುಗಿದ ಬಳಿಕ, ಈ ಪರಮೇಶ್ವರಂ = ಈ ಜಿನೇಶ್ರನು ಧರ್ಮ + ಅಮೃತವರ್ಷದಿಂ ಭವ್ಯಸಸ್ಯಸಮೃದ್ಧಿಯಂ ಮಾಡುವುದಱಿಂ = ಧರ್ಮವೆಂಬ ಅಮೃತದ ಮಳೆಗರೆದು ಭವ್ಯರೆಂಬ ಸಸಿಗಳನ್ನು ಬೆಳಸುವುದರಿಂದಲೂ, ವೃಷಂ + ಎಂಬುದು ಧರ್ಮಂ + ಅದಱಿಂದೆ + ಒಪ್ಪುವುದಱಿಂದಂ = ವೃಷವೆಂದರೆ ಧರ್ಮ ಮತ್ತು ಅದರಿಂದ ಕೂಡಿದವನಾದುದರಿಂದಲೂ, ಸ್ವರ್ಗ + ಅವತರಣಸಮಯದೊಳ್ = ಸ್ವರ್ಗದಿಂದ ಭೂಮಿಗಿಳಿಯುವಾಗ, ನಿಜಜನನೀವದನವನಜಮಂ = ತನ್ನ ತಾಯಿಯ ಮುಖವೆಂಬ ಸರೋವರವನ್ನು, ಸ್ವಪ್ನದೊಳ್ ಧವಳವೃಷಭ + ಆಕಾರದಿಂ ಪೊಕ್ಕುದಱಿಂದಂ = ಕನಸಿನಲ್ಲಿ ಬಿಳಿಯ ಎತ್ತಿನ ರೂಪದಲ್ಲಿ ಬಂದು ಸೇರಿದುದರಿಂದಲೂ,

ವೃಷಭಸ್ವಾಮಿಯೆಂದು ಪೆಸರನಿಟ್ಟು = ಮಗುವಿಗೆ ವೃಷಭಸ್ವಾಮಿ ಎಂದು ನಾಮಕರಣ ಮಾಡಿ, ಮಜ್ಜನಮಂಡನಕ್ರಿಯೆಗಳ್ಗೆ ದೇವಿಯರನೆ ದಾದಿಯರ್ಮಾಡಿ = ಮಗುವಿನ ಸ್ನಾನ ಅಲಂಕಾರಗಳನ್ನು ಮಾಡಲು ದೇವತಾಸ್ತ್ರೀಯರನ್ನೇ ದಾದಿಯರನ್ನಾಗಿ ನೇಮಿಸಿ, ಸಮವಯ + ಅನುರೂಪವೇಷದ ಸುರಕುಮಾರಕರನ್ + ಒಡನಾಡಿಗಳ್ + ಮಾಡಿ = ಸಮವಯಸ್ಕರೂ ಅವನಂತೆಯೇ ಇರುವವರೂ ಆದ ಮಕ್ಕಳನ್ನು ಜೊತೆಗಾರರನ್ನಾಗಿಸಿ, ದೇವಸಮಾಜಂ ಬೆರಸು = ದೇವತೆಗಳ ಸಮೂಹದೊಡನೆ,

**ಗದ್ಯಾನುಸರಣ:** ಹೀಗೆ ದೇವೇಂದ್ರನು ತನ್ನ ನರ್ತನ ಮುಗಿದ ಬಳಿಕ, ಈ ಜಿನೇಶ್ವರನು ಧರ್ಮವೆಂಬ ಅಮೃತದ ಮಳೆಗರೆದು ಭವ್ಯರೆಂಬ ಸಸಿಗಳನ್ನು ಬೆಳಸುವುದರಿಂದಲೂ, ವೃಷವೆಂದರೆ ಧರ್ಮ ಮತ್ತು ಅದರಿಂದ ಕೂಡಿದವನಾದುದರಿಂದಲೂ, ಸ್ವರ್ಗದಿಂದ ಭೂಮಿಗಿಳಿಯುವಾಗ ತನ್ನ ತಾಯಿಯ ಮುಖವೆಂಬ ಸರೋವರವನ್ನು ಕನಸಿನಲ್ಲಿ ಬಿಳಿಯ ಎತ್ತಿನ ರೂಪದಲ್ಲಿ ಬಂದು ಸೇರಿದುದರಿಂದಲೂ, ಮಗುವಿಗೆ ವೃಷಭಸ್ವಾಮಿ ಎಂದು ನಾಮಕರಣ ಮಾಡಿದ; ಅಲ್ಲದೆ, ಮಗುವಿನ ಸ್ನಾನ ಅಲಂಕಾರಗಳನ್ನು ಮಾಡಲು ದೇವತಾಸ್ತ್ರೀಯರನ್ನೇ ದಾದಿಯರನ್ನಾಗಿ ನೇಮಿಸಿದ, ಸಮವಯಸ್ಕರೂ ಅವನಂತೆಯೇ ಇರುವವರೂ ಆದ ಮಕ್ಕಳನ್ನು ಜೊತೆಗಾರರನ್ನಾಗಿಸಿದ; ಬಳಿಕ ದೇವತೆಗಳ ಸಮೂಹದೊಡನೆ,

**ಕ್ರಮದಿಂ ಜನ್ಮಾಭಿಷೇಕೋತ್ಸವಮನಮರಶೈಲಾಗ್ರದೊಳ್ ಮಾಡಿ ಲೋಕೋ**
**ತ್ತಮನಂ ಕೊಂಡೊಯ್ದಯೋಧ್ಯಾಪುರದೊಳೊಸಗೆಯಂ ಮಾಡಿ ಜನ್ಮೋತ್ಸವಪ್ರ**
**ಕ್ರಮಮೆಂದಾನಂದನೃತ್ಯಪ್ರಮದಮನಧಿಕಂ ಮಾಡಿ ತನ್ನಿಂದ್ರಲೋಕ**
**ಕ್ಕಮರೇಂದ್ರಂ ಪೋದನಾಗಳ್ ಸುಕವಿಜನಮನೋಮಾನಸೋತ್ತಂಸಹಂಸಂ** ೧೨೮

**ಪದವಿಭಾಗ-ಅನ್ವಯ-ಅರ್ಥ:** ಜನ್ಮಾಭಿಷೇಕ + ಉತ್ಸವಮನ್ + ಅಮರಶೈಲ + ಅಗ್ರದೊಳ್ ಕ್ರಮದಿಂ ಮಾಡಿ = ಜಿನನ ಜನ್ಮಾಭಿಷೇಕ ಕಲ್ಯಾಣವನ್ನು ಮಂದರ ಪರ್ವತಶಿಖರದಲ್ಲಿ ವಿಧಿಬದ್ಧವಾಗಿ ನೆರವೇರಿಸಿ, ಲೋಕೋತ್ತಮನಂ ಕೊಂಡೊಯ್ದು + ಅಯೋಧ್ಯಾಪುರದೊಳ್ + ಒಸಗೆಯಂ ಮಾಡಿ = ಆನಂತರ ಆ ಲೋಕಶ್ರೇಷ್ಠನನ್ನು ಅಯೋಧ್ಯಾನಗರಕ್ಕೆ ಕೊಂಡೊಯ್ದು ಹಬ್ಬವನ್ನು ಮಾಡಿ, ಜನ್ಮೋತ್ಸವಪ್ರಕ್ರಮಮಂ + ಎಂದು + ಆನಂದನೃತ್ಯಪ್ರಮದಮನ್ + ಅಧಿಕಂ ಮಾಡಿ = ಜನ್ಮಾಭಿಷೇಕದ ವಿಧಿ ಎಂದು ತನ್ನ ಆನಂದನೃತ್ಯದಿಂದ ಸಂತಸವನ್ನು ಹೆಚ್ಚಿಸಿ, ಸುಕವಿಜನಮನೋಮಾನಸೋತ್ತಂಸಹಂಸಂ ಅಮರೇಂದ್ರಂ ತತ್ + ಇಂದ್ರಲೋಕಕ್ಕೆ ಆಗಳ್ ಪೋದನ್ = ಸುಕವಿಗಳ ಮನಸ್ಸೆಂಬ ಮಾನಸಸರೋವರದಲ್ಲಿ ತೇಲುವ ಹಂಸದಂತಹ ದೇವೇಂದ್ರನು ತನ್ನು ದೇವಲೋಕಕ್ಕೆ ಹೊರಟ.

**ಗದ್ಯಾನುಸರಣ:** ಜಿನನ ಜನ್ಮಾಭಿಷೇಕ ಕಲ್ಯಾಣವನ್ನು ಮಂದರಪರ್ವತ ಶಿಖರದಲ್ಲಿ ವಿಧಿಬದ್ಧವಾಗಿ ನೆರವೇರಿಸಿ, ಆನಂತರ ಆ ಲೋಕಶ್ರೇಷ್ಠನನ್ನು ಅಯೋಧ್ಯಾನಗರಕ್ಕೆ ಕೊಂಡೊಯ್ದು ಹಬ್ಬವನ್ನು ಮಾಡಿ, ಜನ್ಮಾಭಿಷೇಕದ ಭಾಗ ಎಂದು ತನ್ನ ಆನಂದನೃತ್ಯದಿಂದ ಅದರ ಸಂತಸವನ್ನು ಹೆಚ್ಚಿಸಿ, ಸುಕವಿಗಳ ಮನಸ್ಸೆಂಬ ಮಾನಸಸರೋವರದಲ್ಲಿ ತೇಲುವ ಹಂಸವಾದ ದೇವೇಂದ್ರನು ದೇವಲೋಕಕ್ಕೆ ಮರಳಿದ.

**ವ॥ ಅನ್ನೆಗಮಿತ್ತಲ್,**

**ಅರ್ಥ:** ಅನ್ನೆಗಂ + ಇತ್ತಲ್ = ಈ ಮಧ್ಯೆ, ಇಲ್ಲಿ

**ಕಿವಿಗಿಂಪಂ ತೊದಲೊಳ್ ಪೊದಳ್ದ ನುಡಿಗಳ್ ಕಣ್ಗಟ್ಟಿಱಿಂ ರಾಗದಾ**
**ಡುವ ಕೂಸಾಟದ ಚೆಲ್ವುಗಳ್ ಕುಡೆ ಪಿತೃದ್ವಂದ್ವಕ್ಕೆ ನಿಚ್ಚಂ ಮನೂ**
**ದ್ಭವನುಂ ಬಂಧುಜನಕ್ಕೆ ಮುಗ್ಧಮುಖಚಂದ್ರಾಲೋಕಮಾಲೋಕನೋ**
**ತ್ಸವಮಂ ಪೆರ್ಚಿಸೆ ಜಾಣನಿಂತೊದವಿದಂ ಸಂಸಾರಸಾರೋದಯಂ ೧೪೫**

**ಪದವಿಭಾಗ–ಅನ್ವಯ–ಅರ್ಥ:** ತೊದಲೊಳ್ ಪೊದಳ್ದ ನುಡಿಗಳ್ ಕಿವಿಗಿಂಪಂ = ತೊದಲಿನಿಂದ ಕೂಡಿ ಹೊಮ್ಮುವ ಮಾತುಗಳಿಂದ ಕಿವಿಗೆ ಇಂಪನ್ನೂ, ರಾಗದೆ + ಆಡುವ ಕೂಸಾಟದ ಚೆಲ್ವುಗಳ್ ಕಣ್ಗೆ + ಅಟ್ಟಿಱಿಂ = ಮುದ್ದು ಮುದ್ದಾಗಿ ಆಡುವ ಮಗುವಿನ ಆಟಗಳ ಸೊಗಸಿನಿಂದ, ಮನೂದ್ಭವನುಂ ನಿಚ್ಚಂ ಪಿತೃದ್ವಂದ್ವಕ್ಕೆ ಕುಡೆ = ಮನುವಿನ ಮಗನಾಗಿ ನಿತ್ಯವೂ ತಾಯ್ತಂದೆಯರಿಗೆ ನೀಡಲು, ಮುಗ್ಧಮುಖಚಂದ್ರ + ಆಲೋಕಂ = ಚಂದ್ರನಂತಿದ್ದ ಮಗುವಿನ ಮುಗ್ಧಮುಖವನ್ನು ನೋಡುವುದು, ಬಂಧುಜನಕ್ಕೆ ಆಲೋಕನೋತ್ಸವಮಂ ಪೆರ್ಚಿಸೆ = ನಂಟರಲ್ಲಿ ನೋಟದ ಸಂತಸವನ್ನು ಹೆಚ್ಚಿಸುತ್ತ, ಜಾಣನ್ ಸಂಸಾರಸಾರೋದಯಂ ಇಂತು + ಒದವಿದಂ = ಜ್ಞಾನಿಯಾದ ಆ ಸಂಸಾರಸಾರೋದಯನು ಈ ರೀತಿ ಬೆಳೆದ.

**ಗದ್ಯಾನುಸರಣ:** ಮನುವಿನ ಮಗನಾದ ಆ ಮಗುವು ತನ್ನ ತೊದಲು ಮಾತುಗಳಿಂದ ಕಿವಿಗೆ ಇಂಪನ್ನೂ, ಮುದ್ದು ಮುದ್ದಾಗಿ ಆಡುವ ಮಗುವಿನ ಆಟಗಳ ಸೊಗಸಿನಿಂದ ಸದಾ ತಾಯ್ತಂದೆಯರಿಗೆ ನೀಡಿದ; ಚಂದ್ರನಂತಿದ್ದ ಮಗುವಿನ ಮುಗ್ಧಮುಖವನ್ನು ನೋಟವು ನಂಟರಲ್ಲಿ ಸಂತಸವನ್ನು ಹೆಚ್ಚಿಸುತ್ತಿತ್ತು; ಜ್ಞಾನಿಯಾದ ಆ ಸಂಸಾರಸಾರೋದಯನು ಹೀಗೇ ಬೆಳೆದ.

**ಇಲ್ಲಿಗೆ ಮಹೇಂದ್ರನಾನಂದನೃತ್ಯವೆಂಬ ಏಳನೆಯ ಆಶ್ವಾಸವು ಮುಗಿಯಿತು**

# ಎಂಟನೆಯ ಆಶ್ವಾಸ

ಶ್ರೀಪತಿ ಸುರದಾರಕರೊಡ
ನಾಪೊತ್ತುಂ ನೆರೆದು ರತ್ನಧೂಳೀಪಟಲ
ವ್ಯಾಪಿತತನು ಮೃದುಮುಗ್ಧಾ
ಳಾಪಂ ಬಳೆದಂ ಸರಸ್ವತೀಮಣಿಹಾರಂ ೧

**ಪದವಿಭಾಗ–ಅನ್ವಯ–ಅರ್ಥ:** ಸರಸ್ವತೀಮಣಿಹಾರಂ ಶ್ರೀಪತಿ = ಸರಸ್ವತಿಯ ಮಣಿಹಾರವಾದ ವೃಷಭದೇವನು, ಆಪೊತ್ತುಂ ಸುರದಾರಕರೊಡನೆ ನೆರೆದು = ಯಾವಾಗಲೂ ದೇವಕುಮಾರರೊನೆ ಸೇರಿ, ರತ್ನಧೂಳೀಪಟಲವ್ಯಾಪಿತತನು ಮೃದುಮುಗ್ಧ + ಆಳಾಪಂ ಬಳೆದಂ = ರತ್ನದಂತಹ ದೂಳಿನಿಂದ ಕೂಡಿದ ದೇಹವುಳ್ಳವನಾಗಿಯೂ ಮಿದುವಾದ ಮುಗ್ಧ ಮಾತುಗಳನ್ನಾಡುತ್ತಲೂ ಬೆಳೆದ.

**ಗದ್ಯಾನುಸರಣ:** ಸರಸ್ವತಿಯ ಮಣಿಹಾರವಾದ ವೃಷಭದೇವನು ಯಾವಾಗಲೂ ದೇವಕುಮಾರರೊನೆ ಸೇರಿ ಆಟವಾಡುತ್ತ ರತ್ನದಂತಹ ದೂಳು ಮೆತಿಕೊಂಡ ದೇಹದಿಂದ ಕೂಡಿ, ಮಿದುವಾದ ಮುದ್ದು ಮಾತುಗಳನ್ನಾಡುತ್ತ ಬೆಳೆದ.

ಕನಕಮಣಿಕಿಂಕಿಣೀಮೃದು
ನಿನದಂ ಕಟಿತಟದೊಳೆಸೆಯೆ ದಾದಿಯರೊಡವಂ
ದಿನಿಸಂ ನಡೆಯಿಸೆ ಲಲಿತೇಂ
ದ್ರನೀಲಮಣಿಭೂಮಿಯೊಳ್ ತಳರ್ನಡೆನಡೆದಂ ೨

**ಪದವಿಭಾಗ–ಅನ್ವಯ–ಅರ್ಥ:** ಕನಕಮಣಿಕಿಂಕಿಣೀಮೃದುನಿನದಂ ಕಟಿತಟದೊಳ್ + ಎಸೆಯೆ = ಚಿನ್ನ ಹಾಗೂ ರತ್ನಗಳಿಂದ ಮಾಡಿದ ಗೆಜ್ಜೆಗಳ ನಿನಾದವು ಸೊಂಟದಲ್ಲಿ ಶೋಭಿಸಲು, ದಾದಿಯರ್ + ಒಡವಂದು = ದಾದಿಯರು ಜೊತೆಯಲ್ಲಿ ನಡೆಯುತ್ತ ಬಂದು, ಲಲಿತೇಂದ್ರನೀಲಮಣಿಭೂಮಿಯೊಳ್ ಇನಿಸಂ ನಡೆಯಿಸೆ = ನಯವಾದ ಇಂದ್ರನೀಲದ ನೆಲದ ಮೇಲೆ ಒಂದಷ್ಟು ಕೈಹಿಡಿದು ನಡೆಸಲು, ತಳರ್ ನಡೆನಡೆದಂ = ದಟ್ಟ ಹೆಜ್ಜೆಗಳನ್ನಿಡತೊಡಗಿದ.

**ಗದ್ಯಾನುಸರಣ:** ದಾದಿಯರು ಜೊತೆಯಲ್ಲಿ ನಡೆಯುತ್ತ ಬಂದು ನಯವಾದ ಇಂದ್ರನೀಲದ ನೆಲದ ಮೇಲೆ ಒಂದಷ್ಟು ಕೈಹಿಡಿದು ನಡೆಸಲು, ಚಿನ್ನ ಹಾಗೂ ರತ್ನಗಳಿಂದ ಮಾಡಿದ ಗೆಜ್ಜೆಗಳ ನಿನಾದವು ಸೊಂಟದಲ್ಲಿ ಸದ್ದುಮಾಡುತ್ತಿರಲು, ದಟ್ಟ ಹೆಜ್ಜೆಗಳನ್ನಿಡತೊಡಗಿದ.

**ಸರಸಿಜದಿಂ ಮಕರಂದ**
**ಸ್ಫುರಿತಂ ಪುದಿದೊದವಿದಪ್ಪುದೆಂಬಿನಮುದ್ಯ**
**ತ್ಪರಿಮಳಮುಖಸರಸಿಜದೊಳ್**
**ದರಹಸಿತಂ ನೆಗೞ್ವಿನಂ ತೊದಳ್ನುಡಿನುಡಿದಂ ೩**

**ಪದವಿಭಾಗ–ಅನ್ವಯ–ಅರ್ಥ:** ಸರಸಿಜದಿಂ ಮಕರಂದಸ್ಫುರಿತಂ ಪುದಿದು + ಒದವಿದಪ್ಪುದು + ಎಂಬಿನಂ = ತಾವರೆಯಲ್ಲಿ ಮಕರಂದವು ತುಂಬಿ ತೊಟ್ಟಿಕ್ಕುವುದೋ ಎನ್ನುವಂತೆ, ಉದ್ಯತ್ + ಪರಿಮಳಮುಖಸರಸಿಜದೊಳ್ = ಕಂಪಿನಿಂದ ಕೂಡಿದ ಮೊಗದಾವರೆಯಿಂದ, ದರಹಸಿತಂ ನೆಗೞ್ವಿನಂ ತೊದಳ್ + ನುಡಿ ನುಡಿದಂ = ಮುಗುಳ್ನಗುವು ಸೂಸುತ್ತಿರಲು ತೊದಲು ನುಡಿಗಳನ್ನಾಡತೊಡಗಿದ.

**ಗದ್ಯಾನುಸರಣ:** ತಾವರೆಯಲ್ಲಿ ಮಕರಂದವು ತುಂಬಿ ತೊಟ್ಟಿಕ್ಕುವುದೋ ಎನ್ನುವಂತೆ ಕಂಪಿನಿಂದ ಕೂಡಿದ ಮೊಗದಾವರೆಯಿಂದ ಮುಗುಳ್ನಗುವು ಸೂಸುತ್ತಿರಲು ತೊದಲು ನುಡಿಗಳನ್ನಾಡತೊಡಗಿದ.

**ವ। ಅಂತು ಬಾಲ್ಯಕಾಲಮಂ ಬಾಳಕೇಳೀಲೀಲೆಯಿಂ ಕಟಿಪಿ ಕುಮಾರಕಾಲದೊಳ್ ಸುಕುಮಾರಪರಿವೃತಂ ಮಹೋತ್ಪನ್ನ ಮತಿಶ್ರುತಾವಧಿ ಬೋಧನಪ್ಪುದಱಿಂ ವಿಶ್ವವಿದ್ಯೇಶ್ವರನುಂ ಅಪಗತಾನೇಕಲೋಕವ್ಯಾಪಾರಕನುಂ ಜನ್ಮಾಂತರಾಭ್ಯಸ್ತಕಳಾಕುಶಲನುಂ ಪ್ರತ್ಯಕ್ಷೀಕೃತ ಸಕಲವಾಙ್ಮಯನಪ್ಪುದಱಿಂದಂ ಛಂದೋವಿದ್ಯಾಳಂಕಾರಪದವಿಚಾರ ಕಾವ್ಯಗೀತನೃತ್ಯಾತೋ ದ್ಯಾದಿಗೋಷ್ಠಿ ಗಳೊಳಂ ಶುಕಶಿಖಂಡಿಹಂಸಸಾರಸ ಕ್ರೌಂಚಕರಿಕಳಭವಲ್ಲಾದ್ಯನೇಕಾ ಕಾರ ವಿಕೃತಾಮರಕುಮಾರ ಪರಿಪಠನನಟನಮೃದುಕೂಜಿತರಸಿತದರಹಸಿತ ಕ್ರೇಂಕಾರಾರೋಹಣ ಯೋಧನಾದಿ ನಾನಾ ವಿನೋದಂಗಳೊಳ ಮಮರಾಧಿಪ ಪ್ರಹಿತಪ್ರತಿದಿನ ಪ್ರವರ್ಧಮಾನಸುರತರು ಪ್ರಸೂನಗ್ರಥಿತ ಸುರಭಿದಾಮ ದುಕೂಲಾಂಬರ ವಿಚಿತ್ರಭೂಷಣಸುರಭಿ ವಿಲೇಪನಪ್ರಮುಖ ಭೋಗೋಪ ಭೋಗಂಗಳೊಳಂ ಪ್ರತಿದಿನಪ್ರವರ್ಧಮಾನ ವಯೋವಿಭವನನುಕ್ರಮದೊಳೆ ಬಳೆಯೆ,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಬಾಲ್ಯಕಾಲಮಂ ಬಾಳಕೇಳೀ ಲೀಲೆಯಿಂ ಕಟಿಪಿ = ಹಾಗೆ ಮಗುತನವನ್ನು ಹುಡುಗಾಟದ ಮೂಲಕ ಕಳೆದು, ಕುಮಾರಕಾಲದೊಳ್ ಸುಕುಮಾರಪರಿವೃತಂ = ಕುಮಾರಾವಸ್ಥೆಯಲ್ಲಿ ಇತರ ಸುಕುಮಾರರೊಡನೆ ಸೇರಿ, ಮಹೋತ್ಪನ್ನಮತಿಶ್ರುತ + ಅವಧಿ ಬೋಧನಪ್ಪುದಜಿಂ = ತುಂಬ ಶ್ರೇಷ್ಠವಾದ ಮತಿ ಶ್ರುತ ಅವಧಿಜ್ಞಾನಗಳಿಂದ ಕೂಡಿದವನಾದ್ದರಿಂದ, ವಿಶ್ವವಿದ್ಯಾ + ಈಶ್ವರನುಂ = ಜಗತ್ತಿನ ವಿದ್ಯೆಗಳಿಗೆ ಒಡೆಯನೂ, ಅಪಗತ + ಅನೇಕ ಲೋಕವ್ಯಾಪಾರಕನುಂ = ಹಲವು ಲೋಕವ್ಯಾಪಾರಗಳನ್ನು ಅರಿತವನಾಗಿಯೂ, ಜನ್ಮಾಂತರ + ಅಭ್ಯಸ್ತಕಳಾಕುಶಲನುಂ = ಹಿಂದಿನ ಜನ್ಮಗಳಲ್ಲಿ ಕಲಿತ ಕಲೆಗಳಲ್ಲಿ ಕುಶಲನಾಗಿಯೂ, ಪ್ರತ್ಯಕ್ಷೀಕೃತಸಕಲವಾಙ್ಮಯನ್ = ಎಲ್ಲ ಸಾಹಿತ್ಯವನ್ನೂ ಕಣ್ಮುಂದೆ ನಿಲ್ಲಿಸಿಕೊಂಡವನಾಗಿಯೂ, ಅಪ್ಪುದಜಿಂದಂ = ಆದುದರಿಂದ, ಛಂದೋವಿದ್ಯಾ + ಅಳಂಕಾರ ಪದವಿಚಾರ ಕಾವ್ಯಗೀತನೃತ್ಯ + ಆತೋದ್ಯ + ಆದಿಗೋಷ್ಠಿಗಳೊಳಂ = ಛಂದಶ್ಶಾಸ್ತ್ರ ಅಲಂಕಾರಶಾಸ್ತ್ರ ವ್ಯಾಕರಣ ಕಾವ್ಯ ಸಂಗೀತ ನೃತ್ಯ ವಾದ್ಯ ಮುಂತಾದ ಗೋಷ್ಠಿಗಳಲ್ಲಿಯೂ, ಶುಕ ಶಿಖಂಡಿ ಹಂಸ ಸಾರಸ ಕ್ರೌಂಚ ಕರಿಕಳಭ ಮಲ್ಲ + ಆದಿ = ಗಿಳಿ ನವಿಲು ಹಂಸ ಕೊಕ್ಕರೆ ಕ್ರೌಂಚ ಆನೆಮರಿ ಕುಸ್ತಿಪಟು ಮುಂತಾದ, ಅನೇಕ + ಆಕಾರವಿಕೃತ = ನಾನಾ ಆಕೃತಿಗಳಲ್ಲಿ ಮೈಮರೆಸಿಕೊಂಡು ಮಾಡುವ, ಅಮರಕುಮಾರ ಪರಿಪಠನ ನಟನ ಮೃದುಕೂಜಿತ ರಸಿತ ದರಹಸಿತ ಕ್ರೇಂಕಾರ + ಆರೋಹಣ ಯೋಧನ + ಆದಿ = ದೇವಕುಮಾರರ ಓದುವಿಕೆ ಅಭಿನಯ ಮೃದುಕೂಜನ ಇನಿದನಿ ಮುಗುಳ್ನಗೆ ಹಂಸದ ಕೂಗು ಸವಾರಿ ಹೋರಾಟ ಮುಂತಾದ, ನಾನಾ ವಿನೋದಂಗಳೊಳಂ = ಅನೇಕ ಮನರಂಜನೆಗಳಲ್ಲಿಯೂ, ಅಮರ + ಅಧಿಪಪ್ರಹಿತ = ದೇವೇಂದ್ರನಿಂದ ಕಳುಹಿಸಲ್ಪಟ್ಟ, ಪ್ರತಿದಿನಪ್ರವರ್ಧಮಾನ = ನಿತ್ಯವೂ ಬೆಳೆಯುವ, ಸುರತರುಪ್ರಸೂನಗ್ರಥಿತಸುರಭಿದಾಮ = ಕಲ್ಪವೃಕ್ಷದ ಹೂಗಳಿಂದ ಕಟ್ಟಿದ ಸುಂವಾಸನೆಯ ಹೂಹಾರ, ದುಕೂಲ + ಅಂಬರ = ರೇಷ್ಮೆವಸ್ತ್ರ, ವಿಚಿತ್ರಭೂಷ = ಆಕರ್ಷಕ ಆಭರಣಗಳು, ಸುರಭಿವಿಲೇಪನಪ್ರಮುಖ = ಪರಿಮಳಲೇಪನವೇ ಮುಖ್ಯವಾದ, ಭೋಗೋಪಭೋಗಂಗಳೊಳಂ = ಭೋಗೋಪಭೋಗಗಳಿಂದಲೂ, ಪ್ರತಿದಿನಪ್ರವರ್ಧಮಾನವಯೋವಿಭವನ್ = ನಿತ್ಯವೂ ಬೆಳೆಯುವ ಹರೆಯದ ಬೆಡಗಿನವನಾಗಿ, ಅನುಕ್ರಮದೊಳೆ ಬಳೆಯೆ = ಕಾಲಾನುಕ್ರಮದಲ್ಲಿ ಬೆಳೆಯಲು,

**ಗದ್ಯಾನುಸರಣ:** ಹಾಗೆ ಆದಿದೇವನು ಮಗುತನವನ್ನು ಹುಡುಗಾಟದ ಮೂಲಕ ಕಳೆದ: ಕುಮಾರಾವಸ್ಥೆಯಲ್ಲಿ ಇತರ ಸುಕುಮಾರರೊಡನೆ ಸೇರಿ, ತುಂಬ ಶ್ರೇಷ್ಠವಾದ ಮತಿ ಶ್ರುತ ಅವಧಿಜ್ಞಾನಗಳಿಂದ ಕೂಡಿದವನಾದ್ದರಿಂದ, ಜಗತ್ತಿನ ವಿದ್ಯೆಗಳ ಪ್ರಭುತ್ವ ಪಡೆದು, ಹಲವು ಲೋಕವ್ಯಾಪಾರಗಳನ್ನು ಅರಿತವನಾದ; ಹಿಂದಿನ

ಜನ್ಮಗಳಲ್ಲಿ ಕಲಿತ ಕಲೆಗಳಲ್ಲಿ ಕುಶಲನಾಗಿ, ಎಲ್ಲ ಸಾಹಿತ್ಯವನ್ನೂ ಕಣ್ಮುಂದೆ ನಿಲ್ಲಿಸಿಕೊಂಡವನಾದ; ಛಂದಶ್ಶಾಸ್ತ್ರ ಅಲಂಕಾರಶಾಸ್ತ್ರ ವ್ಯಾಕರಣ ಕಾವ್ಯ ಸಂಗೀತ ನೃತ್ಯ ವಾದ್ಯ ಮುಂತಾದ ಗೋಷ್ಠಿಗಳಲ್ಲಿಯೂ, ಗಿಳಿ ನವಿಲು ಹಂಸ ಕೊಕ್ಕರೆ ಕ್ರೌಂಚ ಆನೆಮರಿ ಕುಸ್ತಿಪಟು ಮುಂತಾದ ನಾನಾ ಆಕೃತಿಗಳಲ್ಲಿ ಮೈಮರೆಸಿಕೊಂಡು ದೇವಕುಮಾರರು ಮಾಡುವ ಓದುವಿಕೆ ಅಭಿನಯ ಮೃದುಕೂಜನ ಇನಿದನಿ ಮುಗುಳ್ನಗೆ ಹಂಸದ ಕೂಗು ಸವಾರಿ ಹೋರಾಟ ಮುಂತಾದ ಅನೇಕ ಮನರಂಜನೆಗಳಲ್ಲಿಯೂ ಪರಿಣತನಾದ; ದೇವೇಂದ್ರನಿಂದ ಕಳುಹಿಸಲ್ಪಟ್ಟ ನಿತ್ಯವೂ ಬೆಳೆಯುವ ಕಲ್ಪವೃಕ್ಷದ ಹೂಗಳಿಂದ ಕಟ್ಟಿದ ಸುಂವಾಸನೆಯ ಹೂಹಾರ ರೇಷ್ಮೆವಸ್ತ್ರ ಆಕರ್ಷಕ ಆಭರಣಗಳು ಪರಿಮಳಲೇಪನವೇ ಮುಖ್ಯವಾದ ಭೋಗೋಪಭೋಗಗಳಿಂದಲೂ, ನಿತ್ಯವೂ ತುಂಬಿಕೊಳ್ಳುವ ಹರೆಯದ ಬೆಡಗಿನಿಂದಲೂ ಕೂಡಿ ಬೆಳೆದ.

**ಕರಿಕಳಭಂ ಮದದ್ವಿರದಲಕ್ಷ್ಮಿಯೊಳೊಂದಿದವೋಲ್ ಕಿಶೋರಕೇ**
**ಸರಿ ಮೃಗರಾಜಲೀಲೆಯೊಳಳಂಕರಿಸಿರ್ದವೊಲೆಯ್ದೆ ಮುಗ್ಧಸೌಂ**
**ದರಸುರಭೂರುಹಂ ಕುಸುಮಶೋಭೆಯೊಳಗ್ಗಲಿಸಿರ್ದವೊಲ್ ಮನೋ**
**ಹರಮೆನಿಸಿತ್ತು ಯೌನೋದಯಮಿಂದ್ರನರೇಂದ್ರವಂದ್ಯನಾ ೪**

**ಪದವಿಭಾಗ-ಅನ್ವಯ-ಅರ್ಥ:** ಇಂದ್ರನರೇಂದ್ರವಂದ್ಯನಾ ಯೌನೋದಯಂ = ದೇವೇಂದ್ರ ಮತ್ತು ನರೇಂದ್ರರಿಂದ ವಂದಿತನಾದ ಆದಿದೇವನ ಯೌವನ ಪ್ರಾದುರ್ಭಾವವು, ಕರಿಕಳಭಂ = ಮರಿಯಾನೆ, ಮದದ್ವಿರದ = ಮದ್ದಾನೆಗಳ, ಲಕ್ಷ್ಮಿಯೊಳ್ + ಒಂದಿದವೋಲ್ = ಶೋಭೆಯಿಂದ ಕೂಡಿದವನಂತೆ, ಕಿಶೋರಕೇಸರಿ ಮೃಗರಾಜಲೀಲೆಯೊಳ್ + ಅಳಂಕರಿಸಿರ್ದವೊಲ್ = ಸಿಂಹದ ಮರಿಯು ಹುಲಿಯ ಸೊಬಗಿನಿಂದ ಅಲಂಕಾರಗೊಂಡಂತೆ, ಎಯ್ದೆ ಮುಗ್ಧಸೌಂದರ ಸುರಭೂರುಹಂ = ಮುಗ್ಧಸೌಂದರ್ಯವನ್ನು ಪಡೆದ ಕಲ್ಪವೃಕ್ಷವು, ಕುಸುಮ ಶೋಭೆಯೊಳ್ + ಅಗ್ಗಲಿಸಿರ್ದವೊಲ್ = ಹೂಬಿಟ್ಟು ಸೊಬಗಿನಿಂದ ಹಿರಿಮೆ ವಡೆದಂತೆ, ಮನೋಹರಮೆನಿಸಿತ್ತು = ಕಂಗೊಳಿಸಿತು.

**ಗದ್ಯಾನುಸರಣ:** ದೇವೇಂದ್ರ ಮತ್ತು ನರೇಂದ್ರರಿಂದ ವಂದಿತನಾದ ಆದಿದೇವನ ಯೌವನ ಪ್ರಾದುರ್ಭಾವವು ಮರಿಯಾನೆ-ಮದ್ದಾನೆಗಳ ಶೋಭೆಯು ಕೂಡಿದಂತೆಯೂ, ಸಿಂಹದ ಮರಿಯು ಹುಲಿಯ ಸೊಬಗಿನಿಂದ ಅಲಂಕಾರಗೊಂಡಂತೆಯೂ ಮುಗ್ಧಸೌಂದರ್ಯವನ್ನು ಪಡೆದ ಕಲ್ಪವೃಕ್ಷವು ಹೂಬಿಟ್ಟು ಸೊಬಗಿನಿಂದ ಹಿರಿಮೆವಡೆದಂತೆಯೂ ಕಂಗೊಳಿಸಿತು.

ಪರಮೌದಾರಿಕದಿವ್ಯಮೂರ್ತಿ ವಸನಾಳಂಕಾರಮಂದಾರಶೇ
ಖರರಮ್ಯಂ ಧೃತಯೌವನಂ ಮರುಳಿಸಲ್ಕಾರ್ತುಮತ್ಯಂತಸೌಂ
ದರಕಾಂತಾಜನಮಂ ಮರುಳ್ದುದಣಮಿಲ್ಲಂತಾಕೆಗಳ್ಗೇನದ
ಚ್ಚರಿಯೋ ಚಿತ್ರದ ರೂಪು ರೂಪವಿಭವಂ ಮುಕ್ತ್ಯಂಗನಾಕಾಂತನಾ॥

**ಪದವಿಭಾಗ-ಅನ್ವಯ-ಅರ್ಥ:** ಪರಮ + ಔದಾರಿಕದಿವ್ಯಮೂರ್ತಿ = ಶ್ರೇಷ್ಠವಾದ ಔದಾರಿಕಮೂರ್ತಿಯೂ, ವಸನ + ಅಳಂಕಾರಮಂದಾರಶೇಖರರಮ್ಯಂ = ವಸ್ತ್ರ ಅಲಂಕಾರಗಳಿಂದಲೂ ಮಂದಾರಪುಷ್ಪಗಳನ್ನು ಮುಡಿದು ಮನೋಹರನಾದವನೂ, ಧೃತಯೌವನಂ = ಹದಿಹರಯದವನೂ, ಅತ್ಯಂತಸೌಂದರಕಾಂತಾಜನಮಂ ಮರುಳಿಸಲ್ ಆರ್ತುಂ = ಮಹಾಸುಂದರಿಯರನ್ನು ಮರುಳುಗೊಳಿಸಲು ಸಮರ್ಥನಾದರೂ, ಅಂತು ಆಕೆಗಳ್ಗೆ ತಾನ್ ಮರುಳ್ದುದು + ಅಣಂ + ಇಲ್ಲ = ತಾನು ಮಾತ್ರ ಅವರಿಗೆ ಸ್ವಲ್ಪವೂ ಮರುಳಾಗದವನೂ ಆದ, ಮುಕ್ತಿ + ಅಂಗನಾಕಾಂತನಾ ಚಿತ್ರದ ರೂಪು ರೂಪವಿಭವಂ ಏನದು + ಅಚ್ಚರಿಯೋ = ಮುಕ್ತಿಲಕ್ಷ್ಮಿಯ ಒಡೆಯನಾದ ಅವನ ರೂಪವೈಭವಗಳು ಅದೆಷ್ಟು ಆಶ್ಚರ್ಯದಾಯಕ!

**ಗದ್ಯಾನುಸರಣ:** ಶ್ರೇಷ್ಠವಾದ ಔದಾರಿಕಮೂರ್ತಿಯೂ, ವಸ್ತ್ರ ಅಲಂಕಾರಗಳಿಂದಲೂ ಮಂದಾರಪುಷ್ಪಗಳನ್ನು ಮುಡಿದು ಮನೋಹರನಾದವನೂ, ಹದಿಹರಯದವನೂ, ಮಹಾಸುಂದರಿಯರನ್ನು ಮರುಳುಗೊಳಿಸಲು ಸಮರ್ಥನಾದರೂ, ತಾನು ಮಾತ್ರ ಅವರಿಗೆ ಸ್ವಲ್ಪವೂ ಮರುಳಾಗದವನೂ ಆದ ಮುಕ್ತಿಲಕ್ಷ್ಮಿಯ ಒಡೆಯನಾದ ಪುರುದೇವನ ಅವನ ರೂಪವೈಭವಗಳು ಅದೆಷ್ಟು ಆಶ್ಚರ್ಯದಾಯಕವಾದವು!

**ವಿಶೇಷ ವಿಚಾರ:** ಔದಾರಿಕಮೂರ್ತಿ = ಅಭ್ಯುದಯಕ್ಕೂ ಮೋಕ್ಷಸುಖಕ್ಕೂ ಕಾರಣವಾದ ದೇಹ

ಅನಿಪಿರಿದೊಂದು ಯೌವನಮದಕ್ಕೆಡೆಯಾಗಿಯುಮಂದು ರಾಗಸಂ
ಜನನಮನೆಯ್ದೆ ತಾಳ್ದಿಯವಿನಶ್ವರಕೀರ್ತಿಯೊಳಂ ಸರಸ್ವತೀ
ವನಿತೆಯೊಳಂ ವಿಚಾರಿಸೆ ತಟಿದ್ದ್ಯುತಿಚಂಚಲೆಯೆಂಬುದೊಂದು ಭಾ
ವನೆಯೊಳೆ ರಾಜ್ಯಲಕ್ಷ್ಮಿಯೊಳನಾದರಮಾಯ್ತು ಮನಂ ಚಿದಾತ್ಮನಾ॥

**ಪದವಿಭಾಗ-ಅನ್ವಯ-ಅರ್ಥ:** ಅನಿ(ತು) + ಪಿರಿದೊಂದು ಯೌವನಮದಕ್ಕೆ + ಎಡೆಯಾಗಿಯುಂ = ಅಂಥ ಹಿರಿದು ಹರೆಯದ ಸೊಕ್ಕಿಗೆ ಅವಕಾಶವಿದ್ದರೂ, ಅಂದು ಅವಿನಶ್ವರಕೀರ್ತಿಯೊಳಂ ಸರಸ್ವತೀವನಿತೆಯೊಳಂ ರಾಗಸಂಜನನಮನ್

+ ಎಯ್ದೆ ತಾಳ್ದಿ = ಶಾಶ್ವತಕೀರ್ತಿಯಲ್ಲಿಯೂ ಸರಸ್ವತಿಯಲ್ಲಿಯೂ ಹೆಚ್ಚಿನ ಪ್ರೀತಿಯನ್ನು ತಾಳಿ, ವಿಚಾರಿಸೆ ತಟಿತ್ + ದ್ಯುತಿಚಂಚಲೆಯೆಂಬುದೊಂದು ಭಾವನೆಯೊಳೆ = ಆಲೋಚಿಸಿದರೆ ಮಿಂಚಿನಂತೆ ಕ್ಷಣಿಕಳು ಎಂಬ ಭಾವನೆಯಿಂದ, ಚಿದಾತ್ಮನಾ ಮನಂ ರಾಜ್ಯಲಕ್ಷ್ಮಿಯೊಳ್ + ಅನಾದರಂ + ಆಯ್ತು = ರಾಜ್ಯಶ್ರೀಯಲ್ಲಿ ಅನಾದರವನ್ನು ಹೊಂದಿತು.

**ಪದವಿಭಾಗ-ಅನ್ವಯ-ಅರ್ಥ:** ಅಂಥ ಹಿರಿದು ಹರೆಯದ ಸೊಕ್ಕಿಗೆ ಅವಕಾಶವಿದ್ದರೂ, ಶಾಶ್ವತಕೀರ್ತಿಯಲ್ಲಿಯೂ ಸರಸ್ವತಿಯಲ್ಲಿಯೂ ಹೆಚ್ಚಿನ ಪ್ರೀತಿಯನ್ನು ತಾಳಿ, ಆಲೋಚಿಸಿದರೆ ಮಿಂಚಿನಂತೆ ಕ್ಷಣಿಕಳು ಎಂಬ ಭಾವನೆಯಿಂದ ರಾಜ್ಯಶ್ರೀಯಲ್ಲಿ ಅನಾದರವನ್ನು ಹೊಂದಿತು.

**ವ। ಅಂತು ಪರಮಾತಿಶಯರೂಪರಸಗಂಧಸ್ಪರ್ಶಗುಣವತ್ಪರಮಾಣು ಪರಿನಿರ್ವೃತಮೂರ್ತಿಯಪ್ಪ ಪರಮನ ಪರಿಪೂರ್ಣ ಯೌವನಶ್ರೀಯುಮಂ ನಾಭಿರಾಜಂ ನೋಡಿ,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಪರಮ + ಅತಿಶಯರೂಪ ರಸಗಂಧಸ್ಪರ್ಶಗುಣವತ್ = ಹೀಗೆ ಅತ್ಯಂತ ಅತಿಶಯವಾದ ಆಕೃತಿ ರುಚಿ ವಾಸನೆ ಮತ್ತು ಮುಟ್ಟುವಿಕೆಯ ಗುಣಗಳುಳ್ಳ, ಪರಮಾಣುಪರಿನಿರ್ವೃತಮೂರ್ತಿಯಪ್ಪ = ಪರಮಾಣುಗಳಿಂದ ರೂಪಿತವಾದ, ಪರಮನ ಪರಿಪೂರ್ಣಯೌವನಶ್ರೀಯಂ ನಾಭಿರಾಜಂ ನೋಡಿ = ಆದಿದೇವನ ಕೊರೆಯಿಲ್ಲದ ಹರೆಯದ ಸಂಪತ್ತನ್ನು ನಾಭಿರಾಜನು ನೋಡಿ,

**ಗದ್ಯಾನುಸರಣ:** ಹೀಗೆ ಅತ್ಯಂತ ಅತಿಶಯವಾದ ಆಕೃತಿ ರುಚಿ ವಾಸನೆ ಮತ್ತು ಮುಟ್ಟುವಿಕೆಯ ಗುಣಗಳುಳ್ಳ ಪರಮಾಣುಗಳಿಂದ ರೂಪಿತವಾದ ಆದಿದೇವನ ಕೊರೆಯಿಲ್ಲದ ಹರೆಯದ ಸಂಪತ್ತನ್ನು ನಾಭಿರಾಜನು ಗಮನಿಸಿದ.

**ವನಿತಾಚಿತ್ತವಿಕಾರಕಾರಿ ನೆಱೆದತ್ತೀಗಳ್ ಕುಮಾರಂಗೆ ಯೌ**
**ವನಮೀತಂಗೆ ವಿವಾಹಮಂಗಳಮುನಾಂ ಮಾಡಲ್ಕೆವೇಟ್ಕುಂ ತಪೋ**
**ವನಮಂ ಗಂಧಗಜಂ ವನಂಬುಗುವವೋಲ್ ಪೊಕ್ಕಾಗಳೇಗೆಯ್ವುದೀ**
**ತನ ಚಿತ್ತಕ್ಕಮನಂಗರಾಗರಸಮಂ ಮಾಟ್ಪಂದಮಿನ್ನಾವುದೋ ೭**

**ಪದವಿಭಾಗ-ಅನ್ವಯ-ಅರ್ಥ:** ಈಗಳ್ ಕುಮಾರಂಗೆ ವನಿತಾಚಿತ್ತವಿಕಾರಕಾರಿ ಯೌವನಂ ನೆಱೆದತ್ತು = ಈಗ ಮಗನಿಗೆ ಹೆಂಗಳ ಮನಸ್ಸನ್ನು ಕದಡಬಲ್ಲಂತಹ ಹರೆಯವು ಬಂದಿದೆ, ಈತಂಗೆ ಆಂ ವಿವಾಹಮಂಗಳಮನ್ ಮಾಡಲ್ಕೆವೇಟ್ಕುಂ =

ಇವನಿಗೆ ನಾನು ಮದುವೆಯೊಸಗೆಯನ್ನು ನೆರವೇರಿಸಬೇಕು, ಗಂಧಗಜಂ ವನಂ + ಪುಗುವವೋಲ್ = ಮದ್ದಾನೆಯು ಕಾಡನ್ನು ಸೇರುವ ಹಾಗೆ, ಈತನ ಚಿತ್ತಕ್ಕಂ ತಪೋವನಮಂ ಪೊಕ್ಕಾಗಳ್ + ಏಗೆಯ್ವುದು = ಇವನ ಮನಸ್ಸು ತಪೋವನವನ್ನು ಹೊಕ್ಕುಬಿಟ್ಟರೆ ಮಾಡುವುದೇನು, ಅನಂಗರಾಗರಸಮಂ ಮಾಟ್ಟಿ + ಅಂದಂ + ಇನ್ನಾವುದೋ = ಇವನ ಮನಸ್ಸಿನಲ್ಲಿ ಕಾಮಭಾವನೆಯನ್ನು ತುಂಬುವ ಉಪಾಯವಾವುದು!

**ಗದ್ಯಾನುಸರಣ:** ಈಗ ಮಗನಿಗೆ ಹೆಂಗಳ ಮನಸ್ಸನ್ನು ಕದಡಬಲ್ಲಂತಹ ಹರೆಯವು ಬಂದಿದೆ, ಇವನಿಗೆ ನಾನು ಮದುವೆಯೊಸಗೆಯನ್ನು ನೆರವೇರಿಸಬೇಕು, ಮದ್ದಾನೆಯು ಕಾಡನ್ನು ಸೇರುವ ಹಾಗೆ ಇವನ ಮನಸ್ಸು ತಪೋವನವನ್ನು ಹೊಕ್ಕುಬಿಟ್ಟರೆ ಮಾಡುವುದೇನು, ಆದರೆ ಇವನ ಮನಸ್ಸಿನಲ್ಲಿ ಕಾಮಭಾವನೆಯನ್ನು ಉಂಟುಮಾಡುವ ಉಪಾಯವಾವುದು!

**ಕುಲರೂಪವಿಭವಯೌವನ**
**ವಿಳಾಸವತಿ ಪೇೞಿಮಾವಳಿನ್ನೀತನನಾ**
**ಳ್ವಳೊ ಚಿತ್ತಸರೋವರದೊಳ್**
**ಕಳಹಂಸೆವೊಲಗಲದಟ್ಕಱಿಂ ರಮಿಯಿಸುವಳ್** ೮

**ಪದವಿಭಾಗ-ಅನ್ವಯ-ಅರ್ಥ:** ಚಿತ್ತಸರೋವರದೊಳ್ ಕಳಹಂಸೆವೊಲ್ + ಅಗಲದೆ + ಅಟ್ಕಱಿಂ ರಮಿಯಿಸುವಳ್ = ಇವನ ಮನಸ್ಸೆಂಬ ಕೊಳದಲ್ಲಿ ರಾಜಹಂಸದ ಹಾಗೆ ಬಿಟ್ಟಿರದೆ ಪ್ರೀತಿಯಿಂದ ರಮಿಸುವ, ಕುಲರೂಪವಿಭವಯೌವನವಿಳಾಸವತಿ ಆವಳ್ = ಕುಲ ಚೆಲುವು ವೈಭವ ಹರೆಯದ ಬೆಡಗುಗಳುಳ್ಳ ಯಾವಳು, ಇನ್ನು + ಈತನನ್ + ಆಳ್ವಳೊ ಪೇೞಿಂ = ಇನ್ನು ಇವನನ್ನು ಆಳುವಳೋ ತಿಳಿಯದು.

**ಗದ್ಯಾನುಸರಣ:** ಇವನ ಮನಸ್ಸೆಂಬ ಕೊಳದಲ್ಲಿ ರಾಜಹಂಸದ ಹಾಗೆ ಬಿಟ್ಟಿರದೆ ಪ್ರೀತಿಯಿಂದ ರಮಿಸುವ ಕುಲ ಚೆಲುವು ವೈಭವ ಹರೆಯದ ಬೆಡಗುಗಳುಳ್ಳ ಯಾವಳು ಇವನನ್ನು ಆಳುವಳೋ ತಿಳಿಯದಲ್ಲ!

**ವ॥ ಎಂದು ತನ್ನ ಮನದೊಳ್ ಬಗೆದು ಸಕಳವಿಷ್ಟಪಪ್ರಣೂತನ ನೀತ ನನಂತ ರಾಯುಮಾಣಪರಮಾನಂದಸಮುಯುದೊಳ್ ಮುಕ್ತಿಸಾಮ್ರಾಜ್ಯ ದೊಳತಿಪ್ರಾಜ್ಯ ಸಂಜನಿತನಿಸ್ಪೃಹನನನವರತಕಲ್ಯಾಣ ಪರಿಮಿತದೊಳ್ ನಿಜಿಸುವು ದುಂ ಮದುವೆನಿಜಿಸುವುದುಂ ಎನಗಶಕ್ಯಾನುಷ್ಠಾನ ಮಾದೊಡಂ ಎನ್ನ ಬಗೆದ ಬಗೆಯುನೊಡಂಬಡುಗುವೊಡಂಬಡನೆಂಬ ಸಂಭ್ರಮದೊಳ್ ಆಸ್ಥಾನ**

ಮಂಡಪ ಮಂಡನೀಭೂತಮಣಿಮಯಾಸನ ಪ್ರಾಚ್ಯಾಚಳ ಶಿಖಂಡ ರತ್ನ ಮಾಗಿರ್ದ ಕುಮಾರನಂ ಸಾರೆವಂದು ಯಥೋಚಿತ ಹೇಮಾಸನದೊಳ್ ಕುಳ್ಳಿರ್ದು ನಾಭಿರಾಜಂ,

**ಪದವಿಭಾಗ–ಅನ್ವಯ–ಅರ್ಥ:** ಎಂದು ತನ್ನ ಮನದೊಳ್ ಬಗೆದು = ಹೀಗೆಂದು ತನ್ನ ಮನಸ್ಸಿನಲ್ಲಿ ಆಲೋಚಿಸಿ, ಸಕಳವಿಷ್ಟಪಪ್ರಣೂತನನ್ + ಈತನನ್ = ಲೋಕವೆಲ್ಲ ಹೊಗಳುವ ಇವನನ್ನು, ಅಂತರಾಯಮಾಣಪರಮಾನಂದ ಸಮಯದೊಳ್ = ಅಡ್ಡಿಗಳಿಂದ ಕೂಡಿದ ಆದರೆ ಅತ್ಯಂತ ಶ್ರೇಷ್ಠವಾದ ಆನಂದಕರ ಧರ್ಮದಲ್ಲಿಯೂ, ಅತಿಪ್ರಾಜ್ಯ ಮುಕ್ತಿಸಾಮ್ರಾಜ್ಯದೊಳ್ ಸಂಜನಿತನಿಸ್ಪೃಹನನ್ = ಅತ್ಯಂತ ಶ್ರೇಷ್ಠವಾದ ಮುಕ್ತಿಯೆಂಬ ಸಾಮ್ರಾಜ್ಯದ ಬಗ್ಗೆಯೂ ನಿಸ್ಪೃಹತೆಯನ್ನು ತಾಳಿರುವ, ಅನವರತಕಲ್ಯಾಣಪರಿಮಿತದೊಳ್ ನಿಜೆಸುವುದುಂ = ಸದಾ ಕಾಲ ಮಿತಿಯುಳ್ಳ ಒಳಿತಿನಲ್ಲಿ ನೆಲೆಗೊಳಿಸುವುದೂ, ಮದುವೆನಿಜೆಸುವುದುಂ = ಮದುವೆಗೆ ಒಪ್ಪಿಸುವುದೂ, ಎನಗೆ ಅನುಷ್ಠಾನ ಅಶಕ್ಯಂ ಆದೊಡಂ = ನನಗೆ ವಾಸ್ತವವಾಗಿಸಲು ಕಷ್ಟಕರವಾದರೂ, ಎನ್ನ ಬಗೆದ ಬಗೆಯನ್ + ಒಡಂಬಡುಗುಂ + ಒಡಂಬಡನ್ + ಎಂಬ ಸಂಭ್ರಮದೊಳ್ = ನನ್ನ ಮನಸ್ಸಿನ ಆಲೋಚನೆಯನ್ನು ಒಪ್ಪುತ್ತಾನೆಯೋ ಒಪ್ಪುವುದಿಲ್ಲವೋ ಎಂಬ ಸಂದಿಗ್ಧದಲ್ಲಿ, ಆಸ್ಥಾನಮಂಡಪಮಂಡನೀಭೂತ = ಆಸ್ಥಾನ ಮಂಟಪಕ್ಕೆ ಆಭರಣದಂತಿದ್ದ, ಮಣಿಮಯ + ಆಸನ ಪ್ರಾಚ್ಯ + ಅಚಳ ಶಿಖಂಡರತ್ನಂ + ಆಗಿರ್ದ = ಮಣಿಖಚಿತ ಪೀಠವೆಂಬ ಪೂರ್ವಪರ್ವತಕ್ಕೆ ತಲೆವಣಿಯಂತಿದ್ದ, ಕುಮಾರನಂ ನಾಭಿರಾಜಂ ಸಾರೆವಂದು = ಮಗನ ಹತ್ತಿರ ನಾಭಿರಾಜನು ಬಂದು, ಯಥಾ + ಉಚಿತಹೇಮ + ಆಸನದೊಳ್ ಕುಳ್ಳಿರ್ದು = ಸೂಕ್ತವಾದ ಸಿಂಹಪೀಠದಲ್ಲಿ ಕುಳಿತು,

**ಗದ್ಯಾನುಸರಣ:** ಹೀಗೆಂದು ತನ್ನ ಮನಸ್ಸಿನಲ್ಲಿ ಆಲೋಚಿಸಿ, 'ಲೋಕವೆಲ್ಲ ಹೊಗಳುವ ಇವನು ಅಡ್ಡಿಗಳಿಂದ ಕೂಡಿದ ಆದರೆ ಅತ್ಯಂತ ಶ್ರೇಷ್ಠವಾದ ಆನಂದಕರ ಧರ್ಮದಲ್ಲಿಯೂ, ಅತ್ಯಂತ ಶ್ರೇಷ್ಠವಾದ ಮುಕ್ತಿಯೆಂಬ ಸಾಮ್ರಾಜ್ಯದ ಬಗ್ಗೆಯೂ ನಿಸ್ಪೃಹತೆಯನ್ನು ತಾಳಿದ್ದಾನೆ; ಇಂಥವನನ್ನು ಸದಾ ಕಾಲ ಮಿತಿಯುಳ್ಳ ಒಳಿತಿನಲ್ಲಿ ನೆಲೆಗೊಳಿಸುವುದೂ ಮದುವೆಗೆ ಒಪ್ಪಿಸುವುದೂ ನನಗೆ ಕಷ್ಟಕರವೇ; ಆದರೂ ಎನ್ನ ನನ್ನ ಮನಸ್ಸಿನ ಆಲೋಚನೆಯನ್ನು ಒಪ್ಪುತ್ತಾನೆಯೋ ಒಪ್ಪುವುದಿಲ್ಲವೋ' ಎಂಬ ಸಂದಿಗ್ಧದಲ್ಲಿ ನಾಭಿರಾಜನು ಸಿಲುಕಿದ; ಪ್ರಯತ್ನಪಡಲೆಂದು ಆತನು ಆಸ್ಥಾನಮಂಟಪಕ್ಕೆ ಆಭರಣದಂತಿದ್ದ ಮಣಿಖಚಿತ ಪೀಠವೆಂಬ ಪೂರ್ವಪರ್ವತಕ್ಕೆ ತಲೆವಣಿಯಂತೆ ಕುಳಿತಿದ್ದ ಮಗನ ಹತ್ತಿರ ಬಂದು ತನಗೆ ಸೂಕ್ತವಾದ ಸಿಂಹಪೀಠದಲ್ಲಿ ಕುಳಿತ.

**ವಿಶೇಷ ವಿಚಾರ:** ಇಲ್ಲಿನ 'ಸಂಜನಿತನಿಸ್ಪೃಹನನನವರತ ಕಲ್ಯಾಣ ಪರಿಮಿತದೊಳ್' ಎಂಬ ಸಾಲಿನ ಬದಲು 'ಸಂಜೀವಿತ ನಿಸ್ಪೃಹನನ್ ಅವರಪಾರ ಕುಲ್ಯಾಪರಿಕ್ಷೇಪ ಪರಿಮಿತದೊಳ್' ಎಂಬುದು ಎಲ್. ಬಸವರಾಜು ಅವರು ಅಂಗೀಕರಿಸಿರುವ ಪಾಠ.

**ಉದಯಾಚಳಕ್ಕೆ ಪೆಸರಿನ**
**ನುದಯದಿನಾದಂತಿರೆಮಗೆ ಬಗುರುಗಂ ಗುರುವೆಂ**
**ದೊದವಿದ ಪೆಂಪಿದು ನಿನ್ನೊಂ**
**ದುದಯದಿನಾಯ್ತುಮರಮೌಳಿಲಾಲತಚರಣಾ** ೯

**ಪದವಿಭಾಗ-ಅನ್ವಯ-ಅರ್ಥ:** ಅಮರಮೌಳಿಲಾಲಿತಚರಣಾ = ದೇವತೆಗಳ ಕಿರೀಟದಿಂದ ಪೂಜಿತನಾದ ಪಾದಗಳುಳ್ಳವನೇ, ಉದಯಾಚಳಕ್ಕೆ ಪೆಸರ್ + ಇನನ + ಉದಯದಿನ್ + ಆದಂತಿರೆ = ಮೂಡಲಗಿರಿಗೆ ನೇಸರ ಉದಯದಿಂದ ಆ ಹೆಸರು ಬಂದ ಹಾಗೆ, ಗುರುಗಂ ಗುರುವೆಂದು + ಒದವಿದ ಪೆಂಪು + ಇದು = ಗುರುವಿಗೆ ಗುರು ಎನ್ನಿಸಿಕೊಂಡ ಹಿರಿಮೆಯು, ನಿನ್ನೊಂದು + ಉದಯದಿನ್ ಎಮಗೆ ಆಯ್ತು = ನೀನು ಹುಟ್ಟಿದ್ದರಿಂದಾಗಿ ನನಗೆ ಉಂಟಾಯಿತು.

**ಗದ್ಯಾನುಸರಣ:** ದೇವಪೂಜಿತ ಪಾದಗಳುಳ್ಳವನೇ, ಮೂಡಲಗಿರಿಗೆ ನೇಸರ ಉದಯದಿಂದ ಆ ಹೆಸರು ಬಂದ ಹಾಗೆ, ನಿನ್ನ ಹುಟ್ಟುವಿಕೆಯಿಂದಾಗಿ ಗುರುವಿಗೆ ಗುರು ಎನ್ನಿಸಿಕೊಳ್ಳುವ ಹಿರಿಮೆಯು ನನಗೆ ಉಂಟಾಯಿತು.

**ತುಂಗ ಭವದ್ಬೋಧದ ಬೆಳ**
**ಗಿಂಗೊಳಗಪ್ಪನಿತೆನೆನ್ನ ಬಗೆ ಪುಗದು ತಮಂ**
**ಪಿಂಗೆ ದಿನಪತಿಯ ಬೆಳಪ ನ**
**ಭೋಂಗಣಮಂ ಜ್ಯೋತಿರಿಂಗಣಂ ಬೆಳಗುಗುಮೇ** ೧೦

**ಪದವಿಭಾಗ-ಅನ್ವಯ-ಅರ್ಥ:** ಭವತ್ ತುಂಗ ಬೋಧದ ಬೆಳಗಿಂಗೆ = ನಿನ್ನ ಶ್ರೇಷ್ಠ ಜ್ಞಾನದೀಪ್ತಿಗೆ, ಒಳಗಪ್ಪ + ಅನಿತನ್ + ಎನ್ನ ಬಗೆ ಪುಗದು = ಒಳಗಾಗುವುದೆಲ್ಲವನ್ನೂ ನನ್ನ ಬುದ್ಧಿ ಅರ್ಥಮಾಡಿಕೊಳ್ಳಲಾರದು, ತಮಂ ಪಿಂಗೆ ದಿನಪತಿಯ ಬೆಳಪ ನಭೋಂಗಣಮಂ = ಕತ್ತಲು ಹರಿಯುವಂತೆ ಸೂರ್ಯನು ಬೆಳಗುವ ಆಕಾಶವನ್ನು, ಜ್ಯೋತಿರಿಂಗಣಂ ಬೆಳಗುಗುಮೇ = ಮಿಣುಕುಹುಳುವು ಬೆಳಗಬಲ್ಲುದೇ?

**ಗದ್ಯಾನುಸರಣ:** ನಿನ್ನ ಶ್ರೇಷ್ಠ ಜ್ಞಾನದೀಪ್ತಿಗೆ ಒಳಗಾಗುವುದೆಲ್ಲವನ್ನೂ ನನ್ನ ಬುದ್ಧಿ ಅರ್ಥಮಾಡಿಕೊಳ್ಳಲಾರದು; ಕತ್ತಲು ಹರಿಯುವ ಹಾಗೆ ಸೂರ್ಯನು ಬೆಳಗುವ ಆಕಾಶವನ್ನು ಮಿಣುಕುಹುಳುವು ಬೆಳಗಬಲ್ಲುದೇ?

ಇದು ದಲವಸ್ತುವೆನ್ನದೆ ಮದುಕ್ತಿಯನೊಯ್ಯನೆ ಕೇಳ್ದು ದಿವ್ಯಚಿ
ತ್ತದೊಳೊಳವಧಾರಿಸೆಂತೆನೆ ಜಗದ್ಗುರು ಲೋಕಹಿತಾರ್ಥದಿಂದೆ ಸ
ಲ್ವುದು ವಲಮಿಂತಿದಂ ಬಗೆದು ಪುತ್ರಕಳತ್ರಪರಿಗ್ರಹಕ್ಕೆ ಮಾ
ಣದೆ ಬಗೆದರ್ಪುದೊಲ್ಲೆನಿದನೆಂದೊಡೆ ಸೃಷ್ಟಿಯೆ ಕೆಟ್ಟುಪೋಗದೇ೧೧

**ಪದವಿಭಾಗ-ಅನ್ವಯ-ಅರ್ಥ**: ಇದು ಅವಸ್ತು ದಲ್ ಎನ್ನದೆ = ಇದು ಕೆಲಸಕ್ಕೆ ಬಾರದ್ದು ಎನ್ನದೆ, ಮತ್ + ಉಕ್ತಿಯನ್ + ಒಯ್ಯನೆ ಕೇಳ್ದು = ನನ್ನ ಮಾತನ್ನು ಸಾವಧಾನದಿಂದ ಕೇಳಿಸಿಕೊಂಡು, ದಿವ್ಯಚಿತ್ತದೊಳೊಳ್ + ಅವಧಾರಿಸು = ನಿನ್ನ ಶ್ರೇಷ್ಠ ಬುದ್ಧಿಯಲ್ಲಿ ವಿಚಾರಮಾಡು, ಎಂತು + ಎನೆ = ಯಾವುದೆಂದರೆ, ಜಗದ್ಗುರು ಲೋಕಹಿತಾರ್ಥದಿಂದೆ ಸಲ್ವುದು ವಲಂ = ಜಗದ್ಗುರುವೇ, ಲೋಕಕ್ಕೆ ಹಿತವನ್ನುಂಟುಮಾಡಲು ಇವೆಯಲ್ಲವೆ, ಇಂತಿದಂ ಬಗೆದು = ಹೀಗೆಂದು ತಿಳಿದು, ಮಾಣದೆ ಪುತ್ರಕಳತ್ರಪರಿಗ್ರಹಕ್ಕೆ ಬಗೆ + ತರ್ಪುದು = ಬೇಡವೆನ್ನದೆ ಮಕ್ಕಳು ಹೆಂಡತಿಯನ್ನು ಸ್ವೀಕರಿಸಲು ಮನಸ್ಸುಮಾಡು, ಇದನ್ ಒಲ್ಲೆನ್ ಎಂದೊಡೆ = ಇದನ್ನು ಒಪ್ಪಲಾರೆ ಎಂದರೆ, ಸೃಷ್ಟಿಯೆ ಕೆಟ್ಟುಪೋಗದೇ = ಸೃಷ್ಟಿಯೇ ಹಾಳಾಗುವುದಿಲ್ಲವೇ?

**ಗದ್ಯಾನುಸರಣ**: ಕೆಲಸಕ್ಕೆ ಬಾರದ್ದು ಎನ್ನದೆ ನನ್ನ ಮಾತನ್ನು ಸಾವಧಾನದಿಂದ ಕೇಳಿಸಿಕೊಂಡು ನಿನ್ನ ಶ್ರೇಷ್ಠ ಬುದ್ಧಿಯಲ್ಲಿ ಪರಿಶೀಲಿಸು; ಜಗದ್ಗುರುವೇ, ಅದೆಂದರೆ ಲೋಕಕ್ಕೆ ಹಿತವನ್ನುಂಟುಮಾಡುವಂಥದು ಎಂದು ತಿಳಿದು ಮಕ್ಕಳುಹೆಂಡತಿಯನ್ನು ಸ್ವೀಕರಿಸಲು ಮನಸ್ಸುಮಾಡು, ಇದನ್ನು ಒಪ್ಪಲಾರೆ ಎಂದರೆ ಸೃಷ್ಟಿಯೇ ಹಾಳಾಗುವುದಿಲ್ಲವೇ?

ಮನುಮಾರ್ಗನಿಪುಣನೆನಿಸಿದ
ನಿನಗಾಮೀ ರಾಜಮಾರ್ಗಮಂ ತೋಱೆ ಜಗ
ಜ್ಜನಕೆ ನಗೆಯಲ್ತೆ ಕಳಭಂ
ವನಪಥಮಂ ಯೂಥಪತಿಗೆ ತೋರ್ಪಂತಕ್ಕುಂ ೧೨

**ಪದವಿಭಾಗ-ಅನ್ವಯ-ಅರ್ಥ**: ಮನುಮಾರ್ಗನಿಪುಣನೆನಿಸಿದ ನಿನಗೆ + ಆಂ + ಈ ರಾಜಮಾರ್ಗಮಂ ತೋಱೆ = ಮನುಮಾರ್ಗಪರಿಣತನಾದ ನಿನಗೆ ನಾನು ಈ ರಾಜಮಾರ್ಗವನ್ನು ತೋರಿಸಿದರೆ, ಜಗತ್ + ಜನಕೆ ನಗೆಯಲ್ತೆ = ಜಗತ್ತಿನ ಜನರು ನಗುವುದಿಲ್ಲವೇ, ಯೂಥಪತಿಗೆ ವನಪಥಮಂ ಕಳಭಂ ತೋರ್ಪಂತೆ + ಅಕ್ಕುಂ = ಸಲಗಕ್ಕೆ ಮರಿಯಾನೆಯು ಕಾಡಿನ ದಾರಿಯನ್ನು ತೋರಿಸುವಂತಾಗುತ್ತದೆ, ಅಷ್ಟೆ

**ಗದ್ಯಾನುಸರಣ**: ಮನುಮಾರ್ಗಕೋವಿದನಾದ ನಿನಗೆ ನಾನು ಈ

ರಾಜಮಾರ್ಗವನ್ನು ತೋರಿಸಿದರೆ, ಸಲಗಕ್ಕೆ ಮರಿಯಾನೆಯು ಕಾಡಿನ ದಾರಿಯನ್ನು ತೋರಿಸುವಂತೆ ನಗೆಪಾಟಲಾಗುತ್ತದೆ, ಅಷ್ಟೆ.

**ಶಾಂತಾತ್ಮಾ ಮದುವೆ ನಿಲ್ ನೀ**
**ನಿಂತೆನ್ನ ಗೃಹಸ್ಥಧರ್ಮದಿಂದಂ ನೀನೆಂ**
**ತಂತೆ ಸಲೆ ನೆಗೞೆ ಜಗತೀ**
**ಸಂತತಿ ನಿಲೆ ನಿನ್ನ ಧರ್ಮಸಂತತಿ ನಿಲ್ಕುಂ** ೧೩

**ಪದವಿಭಾಗ–ಅನ್ವಯ–ಅರ್ಥ:** ಶಾಂತಾತ್ಮಾ ಮದುವೆ ನಿಲ್ ನೀನ್ = ಶಾಂತ ಮನಸ್ಸುಳ್ಳವನೇ ನೀನು ಮದುವೆಯಾಗು, ಇಂತು + ಎನ್ನ ಗೃಹಸ್ಥಧರ್ಮದಿಂದಂ ನೀನ್ + ಎಂತು + ಅಂತೆ ಸಲೆ ನೆಗೞೆ = ಹೀಗೆ ನನ್ನಂತೆಯೇ ನೀನೂ ಗೃಹಸ್ಥಧರ್ಮವನ್ನು ಸ್ವೀಕರಿಸಿದರೆ, ಜಗತೀಸಂತತಿ ನಿಲೆ ನಿನ್ನ ಧರ್ಮಸಂತತಿ ನಿಲ್ಕುಂ = ಜಗತ್ತಿನ ಸಂತತಿಯೂ ನಿಲ್ಲುತ್ತದೆ ನಿನ್ನ ಧರ್ಮಸಂತತಿಯೂ ಮುಂದುವರಿಯುತ್ತದೆ.

**ಪದವಿಭಾಗ–ಅನ್ವಯ–ಅರ್ಥ:** ಶಾಂತ ಮನಸ್ಸುಳ್ಳವನೇ ಮದುವೆಯಾಗು, ಹೀಗೆ ನನ್ನಂತೆಯೇ ನೀನೂ ಗೃಹಸ್ಥಧರ್ಮವನ್ನು ಸ್ವೀಕರಿಸಿದರೆ ಜಗತ್ತಿನ ಸಂತತಿಯೂ ನಿಲ್ಲುತ್ತದೆ, ನಿನ್ನ ಧರ್ಮಸಂತತಿಯೂ ಮುಂದುವರಿಯುತ್ತದೆ.

**ಸುತನೆಂಬ ಮೇಳದಿಂ ನಿನ**
**ಗತರ್ಕ್ಯಬೋಧಂಗೆ ಯುಕ್ತಿಯಂ ತೋಱೆ ಜಗ**
**ನ್ನುತ ನೋಡ ನನ್ನಿಯಾದುದು**
**ಸುತಂಗೆ ಕಥೆವೇೞ್ದರೆಂಬ ನಾಣ್ಣುಡಿ ಜಗದೊಳ್** ೧೪

**ಪದವಿಭಾಗ–ಅನ್ವಯ–ಅರ್ಥ:** ಸುತನೆಂಬ ಮೇಳದಿಂ = ಮಗನೆಂಬ ಸಲುಗೆಯಿಂದ, ಅತರ್ಕ್ಯಬೋಧಂಗೆ ನಿನಗೆ ಯುಕ್ತಿಯಂ ತೋಱೆ = ಯಾರಿಗೂ ನಿಲುಕದ ಜ್ಞಾನಿಯಾದ ನಿನಗೆ ದಾರಿಯನ್ನು ತೋರಿಸಿದರೆ, ಜಗತ್ + ನುತ = ಜಗದ್ವಂದ್ಯನೇ, ಸುತಂಗೆ ಕಥೆವೇೞ್ದರ್ + ಎಂಬ ನಾಣ್ಣುಡಿ = ಮಗನಿಗೆ ಕತೆ ಹೇಳಿದರು ಎಂಬ ಗಾದೆ ಮಾತು, ಜಗದೊಳ್ ನನ್ನಿಯಾದುದು ನೋಡ = ಜಗತ್ತಿನಲ್ಲಿ ನಿಜವೆನ್ನಿಸುತ್ತದೆ.

**ಗದ್ಯಾನುಸರಣ:** ಜಗದ್ವಂದ್ಯನೇ, ಮಗನೆಂಬ ಸಲುಗೆಯಿಂದ ಯಾರಿಗೂ ನಿಲುಕದ ಜ್ಞಾನಿಯಾದ ನಿನಗೆ ನಾನು ದಾರಿಯನ್ನು ತೋರಿಸಿದರೆ ಮಗನಿಗೆ ಕತೆ ಹೇಳಿದರು ಎಂಬ ಗಾದೆ ಮಾತು ಜಗತ್ತಿನಲ್ಲಿ ನಿಜವೆನ್ನಿಸುತ್ತದೆ, ಅಷ್ಟೆ.

**ವಿಶೇಷ ವಿಚಾರ:** ನಾಭಿರಾಜನು ತನ್ನ ಮಗನನ್ನು ಮದುವೆಗೆ ಒಪ್ಪಿಸುವ ಸಲುವಾಗಿ ಚಿಂತಿಸುವುದು ತಂದೆಗೆ ತಕ್ಕುದೇ ಆದರೂ, ಮಗನಲ್ಲಿ ಲೋಕಗುರುವನ್ನೆ ಕಂಡು ಆ ನೆಲೆಯಲ್ಲೇ ನಿಂತು ಮಾತಾಡುವುದು ಸಹಜವಾಗಿಲ್ಲ ಎನಿಸುತ್ತದೆ. ನಾಭಿರಾಜನು ಒಬ್ಬ ತಂದೆಯಂತೆಯೆ ಲೋಕರೂಢಿಯಲ್ಲಿಯೇ ಮಾತಾಡಿದ್ದರೆ ವಾಸ್ತವಾಗಿರುತ್ತಿತ್ತು; ಚೆನ್ನಾಗಿರುತ್ತಿತ್ತು!

ಎನೆ ದೇವನ ದರಹಸಿತಾ
ನನದೊಳ್ ತನಗಿಂಬುಕೆಯ್ದು ಬಗೆಯುಂ ಪದಿನಾ
ಲ್ಕನೆಯ ಮನು ಜಲಕನಱಿದಂ
ದನಿತುಂ ಭುವನಮುಮನಾಗಳಾಳ್ದಂತೊಸೆದಂ ೧೫

**ಪದವಿಭಾಗ–ಅನ್ವಯ–ಅರ್ಥ:** ಎನೆ = ಎಂದು ಹೇಳಿದಾಗ, ದೇವನ ದರಹಸಿತ + ಆನನದೊಳ್ = ಮಗನ ಮುಗುಳ್ನಗೆಯ ಮುಖದಲ್ಲಿ, ತನಗೆ + ಇಂಬುಕೆಯ್ದು ಬಗೆಯಂ = ತನಗೆ ಒಪ್ಪಿಗೆ ದೊರೆತ ಕುರುಹನ್ನು, ಪದಿನಾಲ್ಕನೆಯ ಮನು ಜಲಕನೆ + ಅಱಿದು = ಹದಿನಾಲ್ಕನೆಯ ಮನುವಾದ ನಾಭಿರಾಜನು ತಕ್ಷಣವೇ ತಿಳಿದು, ಅಂದು + ಅನಿತುಂ ಭುವನಮುಮನ್ + ಆಗಳ್ + ಆಳ್ದಂತೆ + ಒಸೆದಂ = ಆಗ ಇಡೀ ಲೋಕವನ್ನೇ ಗೆದ್ದಂತೆ ಸಂತಸಪಟ್ಟ.

**ಗದ್ಯಾನುಸರಣ:** ಎಂದು ಹೇಳಿದಾಗ, ಮಗನ ಮುಖದಲ್ಲಿ ಮುಗುಳ್ನಗೆ ಕಾಣಿಸಿತು; ಇದು ತನ್ನ ಸಲಹೆಗೆ ದೊರೆತ ಒಪ್ಪಿಗೆಯ ಕುರುಹು ಎಂಬುದನ್ನು ಹದಿನಾಲ್ಕನೆಯ ಮನುವಾದ ನಾಭಿರಾಜನು ತಕ್ಷಣವೇ ತಿಳಿದ; ಇಡೀ ಲೋಕವನ್ನೇ ತಾನು ಗೆದ್ದಂತೆ ಸಂಭ್ರಮಪಟ್ಟ.

ವ। ಅಂತು ತನ್ನುಪರೋಧದೊಳಂ ಪ್ರಜಾನುಗ್ರಹಬುದ್ಧಿಯೊಳಂ ಪೋಗಲಾಱದೊಡಂ ಒಟ್ಟಾದಿಪುರುಷನೊಡಂಬಡನಱಿದು ನಿಶ್ಶಂಕನಾಗಿ ದಿವಿಜೇಂದ್ರನನುಮತದೊಳ್ ಕಚ್ಛಮಹಾಕಚ್ಛರ ತಂಗೆಯರಪ್ಪ ಯಶಸ್ವತಿ ಮಹಾದೇವಿಯುಂ ಸುನಂದಾದೇವಿಯುಮೆಂಬ ಕನ್ಯಾರತ್ನಂಗಳಂ ಮಹೋತ್ಸಾಹದಿಂದಮೆರಡುಂ ದೆಸೆಯೊಳಿರ್ದ ದೇವೇಂದ್ರಶಿಲ್ಪಿಗಳ್ ಸಮೆಯಿಸಿದ ಪಂಚರತ್ನಮಯ ವಿವಾಹಮಂಟಪದೊಳೆಡೆಯಱಿದು ನಿಱಿಸಿದ ಕನಕ ರಜತಮಯಾನೇಕ ಭಂಗಿಭೃಂಗಾರಂಗಳುಮವಱೊಳ್ ಸಂಗಂತಂಗಳಾಗಿ ಮಣಿವಿತಾನಾನಾಮಯೂಖಂಗಳೊಳ್ ಸೆಣಸಿ ಬೆಳಗುವ ಮಣಿಮುಕುರಂ ಗಳುಂ ಅವರ್ಕೆ ತಾಂಗಾಗಿ ಪಚ್ಚೆಯ ಪಸಲೆಯ ಪಸುರನಸಕಟಿದು ನಿಮಿರ್ದ ನೆಲವಡಲಗೆಯ ಜಾಗಂಗಳುಮವನೆ ಸಂಗಡಂಗೊಂಡಿರ್ದ ಸತ್ತಿಸಂಗಡಗಳುಂ ಅವಱ ಕೆಲದೊಳನೇಕನಾಕ

**ಲೋಕೋದ್ಯಾನಪಲ್ಲವೋಲ್ಲಾಸಿತಂಗಳುಂ ಪದ್ಮಾದಿ ಸರೋವರಮಂಗಳ ಜಳವಿಳಸಿತಂಗಳುಮಾಗಿ ಸರ್ವಧಾನ್ಯದ ವಿವಾಹವೇದಿಕೆ ಯ ಮೇಲೆ ನಾಲ್ಕುಂದೆಸೆಯುಮನಳಂಕರಿ ಸಿರ್ದ ಪೂರ್ಣಕಳಶಂಗಳುಮಂ ಅವನಳಂಕಾರಿಸಿ ವಧೂವರರ ರಾಗಾಂಕುರಂಗಳಿರ್ಪಂತಿರ್ದ ರತ್ನದೀಪಂಗಳು ಮೆಸೆಯೆ ಬಳಸಿದ ಚೆಂಬೊನ್ನ ಮಾಂಗಾಯ ಗೊಂಚಲ್ಗಳ ಪೊಂದಳಿರ ತೊಂಗಲ್ಗಳ ಸುತ್ತುಂಗೊಂಡ ಸರಿಗೆಯ ಮುತ್ತಿನ ಬುಂಭುಕಂಗಳ ನಡುವೆ,**

**ಪದವಿಭಾಗ-ಅನ್ವಯ-ಅರ್ಥ:** ಅಂತು ತನಉಪರೋಧದೊಳಂ = ಹೀಗೆ ತಾನು ಮಾಡಿದ ಒತ್ತಾಯದಿಂದಲೂ, ಪ್ರಜಾ + ಅನುಗ್ರಹಬುದ್ಧಿಯೊಳಂ = ಪ್ರಜೆಗಳಿಗೆ ಒಳಿತನ್ನು ಮಾಡುವ ಬುದ್ಧಿಯಿಂದಲೂ, ಪೋಗಲಾಱದೊಡಂ = ತಿರಸ್ಕರಿಸಲಾರದ್ದರಿಂದಲೂ, ಒಟ್ಟು + ಆದಿಪುರುಷನ + ಒಡಂಬಡನ್ + ಅಱಿದು = ಒಟ್ಟಾರೆ ಆದಿದೇವನ ಒಪ್ಪಿಗೆಯನ್ನು ತಿಳಿದು, ನಿಶ್ಶಂಕನಾಗಿ ದಿವಿಜೇಂದ್ರನ + ಅನುಮತದೊಳ್ = ಅನುಮಾನವಿಲ್ಲದೆ ದೇವೇಂದ್ರನ ಸಹಮತಿಯಿಂದ, ಕಚ್ಛಮಹಾಕಚ್ಛರ ತಂಗೆಯರಪ್ಪ = ಕಚ್ಛಮಹಾಕಚ್ಛರ ತಂಗಿಯರಾದ, ಯಶಸ್ವತಿ ಮಹಾದೇವಿಯುಂ ಸುನಂದಾದೇವಿಯುಮೆಂಬ ಕನ್ಯಾರತ್ನಂಗಳಂ = ಯಶಸ್ವತಿ ಮತ್ತು ಸುನಂದಾದೇವಿ ಎಂಬ ಇಬ್ಬರು ಶ್ರೇಷ್ಠ ಕನ್ಯೆಯರನ್ನು, ಮಹಾ + ಉತ್ಸಾಹದಿಂದಂ = ತುಂಬ ಸಂಭ್ರಮದಿಂದ, ಎರಡುಂ ದೆಸೆಯೊಳಿರ್ದ ದೇವೇಂದ್ರ ಶಿಲ್ಪಿಗಳ್ ಸಮೆಯಿಸಿದ = ಎರಡೂ ಕಡೆ ದೇವೇಂದ್ರನ ಶಿಲ್ಪಿಗಳು ನಿರ್ಮಿಸಿದ್ದ, ಪಂಚರತ್ನಮಯವಿವಾಹಮಂಟಪದೊಳ್ = ಪಂಚರತ್ನಗಳಿಂದ ಕೂಡಿದ ಮದುವೆಯ ಹಂದರದಲ್ಲಿ, ಎಡೆಯಱಿದು ನಿಱಿಸಿದ = ಸೂಕ್ತ ಜಾಗಗಳಲ್ಲಿ ಇರಿಸಿದ, ಕನಕರಜತಮಯ + ಅನೇಕಭಂಗಿಭೃಂಗಾರಂಗಳುಂ = ಚಿನ್ನಬೆಳ್ಳಿಗಳಿಂದ ಮಾಡಿದ ನಾನಾ ಆಕಾರದ ಕಳಶಗಳೂ, ಅವಱೊಳ್ ಸಂಗಂತಂಗಳಾಗಿ = ಅವುಗಳ ಜೊತೆಯಾಗಿ, ಮಣಿವಿತಾನಾನಾಮಯೂಖಂಗಳೊಳ್ = ಅನೇಕ ಮೇಲ್ಕಟ್ಟುಗಳ ಕಿರಣಗಳೊಡನೆ, ಸೆಣಸಿ ಬೆಳಗುವ ಮಣಿಮುಕುರಂಗಳುಂ = ಸ್ಪರ್ಧಿಸುತ್ತ ಹೊಳೆಯುತ್ತಿದ್ದ ಮಣಿಮಯ ಕನ್ನಡಿಗಳೂ, ಅವರ್ಕೆ ತಾಂಗಾಗಿ = ಅವುಗಳಿಗೆ ನೆಲೆಯಾಗಿ, ಪಚ್ಚೆಯ ಪಸಲೆಯ ಪಸುರನ್ + ಅಸಕಟಿದು ನಿಮಿರ್ದ = ಹಸಿರು ಹುಲ್ಲುಹಾಸಿನ ಹಸುರನ್ನು ಮೀರಿ ಸೆಟೆತಿದ್ದ, ನೆಲವಡಲಗೆಯ ಜಾಗಂಗಳುಂ = ನೆಲದ ಮೇಲಿನ ಬೆತ್ತದ ತಟ್ಟೆಗಳೂ, ಅವನೆ ಸಂಗಡಂಗೊಂಡಿರ್ದ ಸತ್ತಿಸಂಗಡಗಳುಂ = ಅವುಗಳ ಜೊತೆಗಿನ ಸತ್ತಿಗೆಗಳೂ, ಅವಱ ಕೆಲದೊಳ್ = ಅವುಗಳ ಪಕ್ಕದಲ್ಲಿ, ನಾಕಲೋಕ ಅನೇಕ ಉದ್ಯಾನಪಲ್ಲವ + ಉಲ್ಲಾಸಿತಂಗಳುಂ = ದೇವಲೋಕದ ಉದ್ಯಾನಗಳ ಚಿಗುರಿನಿಂದ ಶೋಭಿಸುವ, ನಾನಾ ಪದ್ಮಾದಿಸರೋವರಮಂಗಳಜಳವಿಳಸಿತಂಗಳುಂ + ಆಗಿ = ಪದ್ಮಸರೋವರ

ಮುಂತಾದವುಗಳ ಪಾವನತೀರ್ಥಗಳಿಂದ ಶೋಭಿತವಾದ, ಸರ್ವಧಾನ್ಯದ ವಿವಾಹವೇದಿಕೆಯ ಮೇಲೆ = ಎಲ್ಲ ಧಾನ್ಯಗಳಿರುವ ಮದುವೆಯ ಜಗುಲಿಯ ಮೇಲೆ, ನಾಲ್ಕುಂದೆಸೆಯುಮನ್ + ಅಳಂಕರಿಸಿರ್ದ = ನಾಲ್ಕೂ ದಿಕ್ಕುಗಳಲ್ಲಿ ಸಿಂಗರಗೊಂಡ, ಪೂರ್ಣಕಳಶಂಗಳುಮಂ = ತುಂಬಿದ ಕಳಶಗಳನ್ನೂ, ಅವನ್ + ಅಳಂಕಾರಿಸಿ = ಅವುಗಳಿಗೆ ಚೆಲುವನ್ನು ತಂದಿದ್ದ, ವಧೂವರರ ರಾಗಾಂಕುರಂಗಳಿರ್ಪಂತಿರ್ದ = ಹೆಣ್ಣುಗಂಡುಗಳ ಪ್ರೀತಿಯ ಮೊಳಕೆಯಂತಿದ್ದ, ರತ್ನದೀಪಂಗಳುಂ + ಎಸೆಯೆ = ರತ್ನದ ಸೊಡರುಗಳು ಬೆಳಗಲು, ಬಳಸಿದ = ಅದು ಸುತ್ತುವರಿದ, ಚೆಂಬೊನ್ನ ಮಾಂಗಾಯ ಗೊಂಚಲ್ಗಳ = ಚಿನ್ನ ಮಾವಿನ ಕಾಯ ಗೊಂಚಲುಗಳ, ಮೊಂದಳಿರ ತೊಂಗಲ್ಗಳ = ಚಿನ್ನದ ಚಿಗುರಿನ ತೊಂಡೆಗಳ, ಸುತ್ತುಂಗೊಂಡ ಸರಿಗೆಯ ಮುತ್ತಿನ ಬುಂಭುಕಂಗಳ ನಡುವೆ = ಸುತ್ತುವರಿದ ಅಡ್ಡಿಗೆ ಮತ್ತು ಮುತ್ತಿನ ಕುಚ್ಚುಗಳ ನಡುವೆ,

**ಗದ್ಯಾನುಸರಣ:** ಹೀಗೆ ತಾನು ಮಾಡಿದ ಒತ್ತಾಯದಿಂದಲೂ, ಪ್ರಜೆಗಳಿಗೆ ಒಳಿತನ್ನು ಮಾಡುವ ಬುದ್ಧಿಯಿಂದಲೂ, ತನ್ನ ಮಾತನ್ನು ತಿರಸ್ಕರಿಸಲಾರದ್ದರಿಂದಲೂ – ಹೇಗೋ ಆದಿದೇವನು ಮದುವೆಗೆ ಒಪ್ಪಿಕೊಂಡದ್ದನ್ನು ನಾಭಿರಾಜನು ತಿಳಿದ: ಆ ಬಳಿಕ ಆತಂಕವಿಲ್ಲದೆ ಕಚ್ಛಮಹಾಕಚ್ಛರ ತಂಗಿಯರಾದ ಯಶಸ್ವತಿ ಮತ್ತು ಸುನಂದಾದೇವಿ ಎಂಬ ಇಬ್ಬರು ಶ್ರೇಷ್ಠ ಕನ್ಯೆಯರೊಡನೆ ಮದುವೆ ಮಾಡಲು ತುಂಬ ಸಂಭ್ರಮದಿಂದ ನಿಶ್ಚಯಿಸಿದ; ಎರಡೂ ಕಡೆ ದೇವೇಂದ್ರನ ಶಿಲ್ಪಿಗಳು ನಿರ್ಮಿಸಿದ್ದ ಪಂಚರತ್ನಗಳಿಂದ ಕೂಡಿದ ಮದುವೆಯ ಹಂದರ ಸಿದ್ಧವಾಯಿತು; ಅದರ ಸೂಕ್ತ ಜಾಗಗಳಲ್ಲಿ ಚಿನ್ನಬೆಳ್ಳಿಗಳಿಂದ ಮಾಡಿದ ನಾನಾ ಆಕಾರದ ಕಳಶಗಳನ್ನಿರಿಸಲಾಗಿತ್ತು; ಅವುಗಳ ಜೊತೆಯಾಗಿ ಅನೇಕ ಮೇಲ್ಕಟ್ಟುಗಳ ಕಿರಣಗಳೊಡನೆ ಸ್ಪರ್ಧಿಸುತ್ತ ಹೊಳೆಯುತ್ತಿದ್ದ ಮಣಿಮಯ ಕನ್ನಡಿಗಳಿದ್ದುವು; ಅವುಗಳಿಗೆ ನೆಲೆಯಾಗಿ ಹುಲ್ಲುಹಾಸಿನ ಹಸುರನ್ನು ಮೀರಿ ಸೆಟೆತಿದ್ದ ನೆಲದ ಮೇಲೆ ಬೆತ್ತದ ತಟ್ಟೆಗಳಿದ್ದುವು; ಅವುಗಳ ಜೊತೆಗೆ ಸತ್ತಿಗೆಗಳಿದ್ದುವು; ಅವುಗಳ ಪಕ್ಕದಲ್ಲಿ ದೇವಲೋಕದ ಉದ್ಯಾನಗಳ ಚಿಗುರಿನಿಂದ ಶೋಭಿಸುವ ಪದ್ಮಸರೋವರ ಮುಂತಾದವುಗಳ ಪಾವನತೀರ್ಥಗಳಿಂದ ಎಲ್ಲ ಧಾನ್ಯಗಳಿಂದ ಕೂಡಿದ ಮದುವೆಯ ಜಗುಲಿಯಿತ್ತು; ಅದರ ನಾಲ್ಕೂ ಕಡೆಗಳಲ್ಲಿ ಸಿಂಗರಗೊಂಡ ತುಂಬಿದ ಕಳಶಗಳಿದ್ದುವು; ಹೆಣ್ಣುಗಂಡುಗಳ ಪ್ರೀತಿಯ ಮೊಳಕೆಯಂತಿದ್ದ ರತ್ನದ ಸೊಡರುಗಳು ಅವುಗಳಿಗೆ ಚೆಲುವನ್ನು ತಂದು ಬೆಳಗುತ್ತಿದ್ದುವು; ಅದು ಸುತ್ತುವರಿದಂತೆ ಇದ್ದ ಚಿನ್ನ ಮಾವಿನ ಕಾಯ ಗೊಂಚಲುಗಳೂ ಚಿನ್ನದ ಚಿಗುರಿನ ತೊಂಡೆಗಳೂ ಸುತ್ತುವರಿದ ಅಡ್ಡಿಗೆ ಮತ್ತು ಮುತ್ತಿನ ಕುಚ್ಚುಗಳ ನಡುವೆ,

**ಕಡೆಯಿಕ್ಕಿದ ಬಿಡುಮುತ್ತಿನ**
**ಪೊಡರ್ದುಣ್ಮುವ ಬೆಳಗು ಪೊಳೆವ ದುಗುಲದ ಪಸೆಯೊಳ್**
**ತೊಡರ್ದಿರೆ ಪೆಱತಲ್ತಿದೆ ಪಾ**
**ಲ್ಗಡಲೆನಿಸಿದುದಾ ವಿವಾಹವೇದಿವಿಳಾಸಂ** ೧೬

**ಪದವಿಭಾಗ-ಅನ್ವಯ-ಅರ್ಥ:** ಕಡೆಯಿಕ್ಕಿದ = ತುದಿಗಳಲ್ಲಿರಿಸಿದ, ಪೊಡರ್ದು + ಉಣ್ಮುವ ಬಿಡುಮುತ್ತಿನ ಬೆಳಗು = ಹೊಮ್ಮಿ ಹೊಳೆಯುವ ಬಿಡಿಮುತ್ತುಗಳ ಬೆಳಕು, ಪೊಳೆವ ದುಗುಲದ ಪಸೆಯೊಳ್ ತೊಡರ್ದಿರೆ = ಹೊಳೆಯುವ ರೇಷ್ಮೆ ಹಸೆಯಲ್ಲಿ ಹರಡಿಕೊಂಡು, ಆ ವಿವಾಹವೇದಿವಿಳಾಸಂ ಇದೆ ಪಾಲ್ಗಡಲ್ ಪೆಱತಲ್ತು ಎನಿಸಿದುದು = ಮದುವೆಯ ಜಗುಲಿಯು ಇದೇ ಹಾಲ್ಗಡಲು ಬೇರೆಯಿಲ್ಲ ಎಂಬ ಭಾವನೆಯನ್ನುಂಟುಮಾಡುತ್ತಿತ್ತು.

**ಗದ್ಯಾನುಸರಣ:** ತುದಿಗಳಲ್ಲಿರಿಸಿದ ಹೊಮ್ಮಿ ಹೊಳೆಯುವ ಬಿಡಿಮುತ್ತುಗಳ ಬೆಳಕು ಹಾಸಿದ್ದ ಹೊಳೆಯುವ ರೇಷ್ಮೆ ಹಸೆಯಲ್ಲಿ ಹರಡಿಕೊಂಡು ಈ ಮದುವೆಯ ಜಗುಲಿಯೇ ಹಾಲ್ಗಡಲು ಬೇರೆ ಇಲ್ಲ ಎಂಬ ಭಾವನೆಯನ್ನುಂಟುಮಾಡುತ್ತಿತ್ತು.

**ಭೃಂಗಾರಹೇಮಚಾಮರ**
**ಮಂಗಳಮಣಿದರ್ಪಣಪ್ರದೀಪಂಗಳ ಜಾ**
**ಗಂಗಳ ದೇವಾಂಗವಿತಾ**
**ನಂಗಳ ತುಱುಗಲ್ ಬೆಡಂಗವಡೆದತ್ತದಱೊಳ್** ೧೭

**ಪದವಿಭಾಗ-ಅನ್ವಯ-ಅರ್ಥ:** ಅದಱೊಳ್ = ಆ ಮಂಟಪದಲ್ಲಿ, ಭೃಂಗಾರ = ಚಿನ್ನದ ಕಳಸ, ಹೇಮಚಾಮರ = ಚಿನ್ನದ ಹಿಡಿಕೆಯ ಚಾಮರ, ಮಂಗಳಮಣಿದರ್ಪಣ = ಮಂಗಳಕರವಾದ ಮಣಿಮಯ ಕನ್ನಡಿ, ಜಾಗಂಗಳ = ಅಂಕುರಾರ್ಪಣದ ಪಯಿರುಗಳ, ದೇವಾಂಗವಿತಾನಂಗಳ = ರೇಷ್ಮೆಯ ಮೇಲ್ಕಟ್ಟುಗಳ, ಪ್ರದೀಪಂಗಳ ತುಱುಗಲ್ = ಕಾಂತಿಯ ಗೊಂಚಲು, ಬೆಡಂಗ + ಪಡೆದತ್ತು = ಶೋಭೆಯನ್ನು ಪಡೆಯಿತು.

**ಗದ್ಯಾನುಸರಣ:** ಆ ಮಂಟಪದಲ್ಲಿ ಚಿನ್ನದ ಕಳಶಗಳು, ಚಿನ್ನದ ಹಿಡಿಕೆಯ ಚಾಮರಗಳು, ಮಂಗಳಕರವಾದ ಮಣಿಮಯ ಕನ್ನಡಿಗಳು ಅಂಕುರಾರ್ಪಣದ ಪಯಿರುಗಳು, ರೇಷ್ಮೆಯ ಮೇಲ್ಕಟ್ಟುಗಳು – ಇವುಗಳ ಕಾಂತಿಯ ತೊಂಗಲು ಶೋಭೆಯನ್ನು ಪಡೆಯಿತು.

**ರಂಜಿಸೆ ಚರಣಾಲಕ್ತಕ**
**ರಂಜನೆ ಮಣಿಕುಟ್ಟಿಮಂಗಳ ಸುರಗಣಿಕಾ**
**ಗುಂಜನ್ಮಣಿರಶನಾಮಣಿ**
**ಮಂಜೀರಮಂಜುಶಿಂಜಿತಂ ರಂಜಿಸುಗುಂ** ೧೮

**ಪದವಿಭಾಗ-ಅನ್ವಯ-ಅರ್ಥ:** ಚರಣ + ಆಲಕ್ತಕರಂಜನೆ = ಕಾಲುಗಳಲ್ಲಿನ ಮದರಂಗಿಯ ಅಲಂಕಾರವು, ಮಣಿಕುಟ್ಟಿಮಂಗಳ ರಂಜಿಸೆ = ಮಣಿಮಯವಾದ ನೆಲಗಟ್ಟನ್ನು ಹೊಳಪುಗೊಳಿಸಲು, ಸುರಗಣಿಕಾಗುಂಜತ್ + ಮಣಿರಶನಾಮಣಿಮಂಜೀರ ಮಂಜುಶಿಂಜಿತಂ = ದೇವವಿಲಾಸಿನಿಯರ ಘಲುಘಲೆನೆನುವ ಮಣಿಮಯ ಒಡ್ಯಾಣ ಮತ್ತು ಕಾಲಂದುಗೆಗಳ ಇನಿದಾದ ಶಬ್ದವು, ರಂಜಿಸುಗುಂ = ರಂಜಿಸಿದುವು.

**ಗದ್ಯಾನುಸರಣ:** ದೇವವಿಲಾಸಿನಿಯರ ಕಾಲುಗಳಲ್ಲಿನ ಮದರಂಗಿಯ ಅಲಂಕಾರವು ಒಂದೆಡೆ ಮಣಿಮಯವಾದ ನೆಲಗಟ್ಟನ್ನು ಹೊಳಪುಗೊಳಿಸಿ ಕಣ್ಣನ್ನು ರಂಜಿಸಿದರೆ, ಮತ್ತೊಂದೆಡೆ, ದೇವವಿಲಾಸಿನಿಯರ ಘಲುಘಲೆನೆನುವ ಮಣಿಮಯ ಒಡ್ಯಾಣ ಮತ್ತು ಕಾಲಂದುಗೆಗಳ ಇನಿದಾದ ಶಬ್ದವು ಕಿವಿಗೆ ರಂಜಿಸಿದುವು.

**ಪರಿಪೂರ್ಣೋತ್ಸವಮುತ್ಸವ**
**ಮುರಜಧ್ವನಿಯಿಂದಮಾ ವಧೂವರರಂ ಪೋ**
**ಬರವೇಟಿಂಬಂತಿರ್ದುದು**
**ಸುರವಾರಸ್ತ್ರೀವಿಳಾಸಪರಿಣಯನಗೃಹಂ ೧೯**

**ಪದವಿಭಾಗ-ಅನ್ವಯ-ಅರ್ಥ:** ಸುರವಾರಸ್ತ್ರೀವಿಳಾಸ = ದೇವಗಣಿಕೆಯರ ಬೆಡಗು, ಹಾಗೂ, ಉತ್ಸವ ಮುರಜಧ್ವನಿಯಿಂದಂ = ಸಂಭ್ರಮದ ಮದ್ದಳೆಯ ದನಿಯಿಂದ, ಪರಿಣಯನಗೃಹಂ = ಆ ಮದುವೆ ಮನೆಯು, ಪರಿಪೂರ್ಣ + ಉತ್ಸವಂ = ಪರಿಪೂರ್ಣ ಉತ್ಸವವನ್ನಾಗಿಯೂ, ಆ ವಧೂವರರಂ ಪೋ ಬರವೇಟ್ + ಎಂಬಂತೆ = ಹೋಗಿ ಗಂಡುಹೆಣ್ಣುಗಳನ್ನು ಕರೆತಾ ಎಂದು ಹೇಳುವಂತೆಯೂ, ಇರ್ದುದು = ಇತ್ತು.

**ಗದ್ಯಾನುಸರಣ:** ದೇವಗಣಿಕೆಯರ ಬೆಡಗು ಸಂಭ್ರಮದ ಮದ್ದಳೆಯ ದನಿಯಿಂದಾಗಿ ಆ ಮದುವೆ ಮನೆಯು ಪರಿಪೂರ್ಣ ಉತ್ಸವವನ್ನಾಗಿಸಿ 'ಹೋಗಿ ಗಂಡುಹೆಣ್ಣುಗಳನ್ನು ಕರೆತಾ' ಎಂದು ಹೇಳುವಂತೆ ಇತ್ತು.

**ಸುರಸಂಗೀತಕಮತ್ತಮೊಂದು ದಿಶೆಯೊಳ್ ಮತ್ತೊಂದು ದಿಗ್ಭಾಗದೊಳ್**
**ನರಸಂಗೀತಕಮೊಂದು ಮೆಯ್ಯೊಳಮರರ್ ಮತ್ತೊಂದು ಮೆಯ್ಯೊಳ್‌ನರರ್**
**ನೆರೆದಿಂಬಾಗಿರೆ ದೇವಮಾನವಸಭಾಸಂದೋಹದಿಂ ನಾಡೆಯುಂ**
**ಪರಭಾಗಂಬಡೆದೇಂ ಬೆಡಂಗಿಡಿದುದೋ ತನ್ನಾಭಿರಾಜಾಲಯಂ ೨೦**

**ಪದವಿಭಾಗ-ಅನ್ವಯ-ಅರ್ಥ:** ಅತ್ತಂ + ಒಂದು ದಿಶೆಯೊಳ್

ಸುರಸಂಗೀತಕಂ = ಅತ್ತ ಒಂದು ಕಡೆ ದೇವತೆಗಳ ಗಾಯನ, ಮತ್ತೊಂದು ದಿಗ್ಭಾಗದೊಳ್ ನರಸಂಗೀತಕಂ = ಇನ್ನೊಂದು ಕಡೆ ಮಾನವರ ಗಾಯನ, ಒಂದು ಮೆಯ್ಯೊಳ್ + ಅಮರರ್ = ಒಂದು ಭಾಗದಲ್ಲಿ ದೇವತೆಗಳು, ಮತ್ತೊಂದು ಮೆಯ್ಯೊಳ್ ನರರ್ = ಮತ್ತೊಂದು ಭಾಗದಲ್ಲಿ ಮಾನವರು, ನೆರೆದು = ಸೇರಿ, ತತ್ + ನಾಭಿರಾಜಾಲಯಮುಂ = ಆ ನಾಭಿರಾಜನ ಮನೆಯು, ದೇವಮಾನವಸಭಾಸಂದೋಹದಿಂ ಇಂಬಾಗಿರೆ = ದೇವತೆಗಳ ಹಾಗೂ ಮಾನವರ ಸಂದಣಿಯಿಂದ, ನಾಡೆಯುಂ ಪರಭಾಗಂಬಡೆದು + ಏಂ ಬೆಡಂಗು + ಇಡಿದುದೋ = ಅತೀವ ಶೋಭೆಯಿಂದ ಕೂಡಿ ಅದೇನು ಬೆಡಗು ತುಂಬಿತೋ!

**ಗದ್ಯಾನುಸರಣ:** ಅತ್ತ ಒಂದು ಕಡೆ ದೇವತೆಗಳ ಗಾಯನ, ಇನ್ನೊಂದು ಕಡೆ ಮಾನವರ ಗಾಯನ; ಒಂದು ಭಾಗದಲ್ಲಿ ದೇವತೆಗಳು, ಮತ್ತೊಂದು ಭಾಗದಲ್ಲಿ ಮಾನವರು ಸೇರಿದ್ದರು; ಹೀಗೆ ನಾಭಿರಾಜನ ಮನೆಯು ಸೇರಿದ್ದ ದೇವತೆಗಳ ಹಾಗೂ ಮಾನವರ ಸಂದಣಿಯಿಂದಾಗಿ ಅತೀವ ಶೋಭೆಯಿಂದ ಮಹಾ ಬೆಡಗನ್ನು ಪಡೆಯಿತು!

ನರಾಮರವಧೂಜನಂ ಬೆರಸಿ ರಾಗದಿಂದಾಡೆ ನೋ
ಟ್ಟರಲ್ಲಿ ಪಿರಿದೊಂದು ಸಂದೆಯದೆ ನೋಡೆ ಪೋಗಿಂತಿವಳ್
ನರಾಂಗನೆಯಿವಳ್ ಸುರಾಂಗನೆ ದಲೆಂಬಿನಂ ಮಾಡುಗುಂ
ಕರಂ ಮನದೊಳಲ್ಲಿ ಮರ್ತ್ಯರಮಣೀಶ್ರಮಾಂಭಃಕಣಂ ೨೧

**ಪದವಿಭಾಗ–ಅನ್ವಯ–ಅರ್ಥ:** ನರ + ಅಮರವಧೂಜನಂ ಬೆರಸಿ ರಾಗದಿಂದೆ + ಆಡೆ = ಮಾನವ ಹಾಗೂ ದೇವತಾಸ್ತ್ರೀಯರು ಒಟ್ಟಾಗಿ ಸೇರಿ ಪ್ರೀತಿಯಿಂದ ಕುಣಿಯುತ್ತಿರಲು, ನೋಟ್ಟರ್ + ಅಲ್ಲಿ ಪಿರಿದೊಂದು ಸಂದೆಯದೆ ನೋಡೆ = ನೋಡುಗರು ಹಿರಿದಾದ ಗೊಂದಲದಿಂದ ನೋಡುತ್ತಿರಲು, ಮರ್ತ್ಯರಮಣೀಶ್ರಮ + ಅಂಭಃಕಣಂ = ಮಾನವ ಸ್ತ್ರೀಯರು ದಣಿವಿನಿಂದ ಬೆವರಿ ಕಣಗಳು ಕಾಣಿಸಿದಾಗ, ಪೋಗು + ಇಂತಿವಳ್ ನರಾಂಗನೆ + ಇವಳ್ ಸುರಾಂಗನೆ ದಲ್ = ಹೋ, ಇವಳು ಮನುಷ್ಯಸ್ತ್ರೀ ಇವಳು ದೇವತಾಸ್ತ್ರೀ, ಎಂಬಿನಂ ಮನದೊಳ್ + ಅಲ್ಲಿ ಕರಂ ಮಾಡುಗುಂ = ಎಂದು ಮನಸ್ಸಿನಲ್ಲಿ ನಿರ್ಧರಿಸುವಂತೆ ಮಾಡುತ್ತಿತ್ತು.

**ಗದ್ಯಾನುಸರಣ:** ಮಾನವ ಹಾಗೂ ದೇವತಾಸ್ತ್ರೀಯರು ಒಟ್ಟಾಗಿ ಸೇರಿ ಪ್ರೀತಿಯಿಂದ ಕುಣಿಯುತ್ತಿದ್ದರೆ ನೋಡುಗರಲ್ಲಿ 'ಮನುಷ್ಯಸ್ತ್ರೀ ಯಾರು, ದೇವತಾಸ್ತ್ರೀ ಯಾರು' ಎಂಬ ಹಿರಿದಾದ ಗೊಂದಲವುಂಟಾಗುತ್ತಿತ್ತು; ಆದರೆ ದಣಿವಿನಿಂದಾಗಿ

ಮಾನವ ಸ್ತ್ರೀಯರಲ್ಲಿ ಬೆವರ ಕಣಗಳು ಕಾಣಿಸಿದಾಗ, 'ಓಹೋ, ಇವಳು ಮನುಷ್ಯಸ್ತ್ರೀ ಇವಳು ದೇವತಾಸ್ತ್ರೀ' ಎಂದು ಮನಸ್ಸಿನಲ್ಲಿ ನಿರ್ಧರಿಸುವಂತೆ ಆಗುತ್ತಿತ್ತು.

ಇದು ಜನ್ಮಸ್ನಪನಕ್ಕೆ ನೂರ್ಮಡಿ ಮಿಗಿಲ್ ಕಲ್ಯಾಣಮೆಂದಟ್ಟಿಜಿಂ
ತ್ರಿದಶೇಂದ್ರಂ ತ್ರಿದಶಾಪ್ಸರಃಪರಿವೃತಂ ಬಂದಾ ವಿವಾಹಕ್ಕೆ ತ
ಕ್ಕುದನಟ್ಟಿರ್ತುು ನಿರಂತರಂ ಸಮಱಿದಂ ಪೆಣ್ತಂಡಮಿಂದ್ರಾಣಿಯೆಂ
ದುದನೆಂದೆಂದೆಡೆಯಾಡುತಿರ್ಪುದೆನೆ ಮತ್ತೇನೆಂದದಂ ಬಣ್ಣಿಪೆಂ॥೨॥

**ಪದವಿಭಾಗ–ಅನ್ವಯ–ಅರ್ಥ**: ಇದು ಜನ್ಮಸ್ನಪನಕ್ಕೆ ನೂರ್ಮಡಿ ಮಿಗಿಲ್ ಕಲ್ಯಾಣಂ = ಇದು ಜನ್ಮಾಭಿಷೇಕಕ್ಕಿಂತ ನೂರು ಪಟ್ಟು ಹೆಚ್ಚಿನ ಕಲ್ಯಾಣ, ಎಂದು + ಅಟ್ಟಿಜಿಂ ತ್ರಿದಶೇಂದ್ರಂ = ಎಂಬ ಭಾವನೆಯಿಂದ ದೇವೇಂದ್ರನು, ಆ ವಿವಾಹಕ್ಕೆ ತ್ರಿದಶ + ಅಪ್ಸರಃಪರಿವೃತಂ ಬಂದು = ಆದಿದೇವನ ಮದುವೆಯ ಒಸಗೆಗೆ ದೇವತೆಗಳ ಮತ್ತು ಅಪ್ಸರೆಯರ ಸಮೇತ ಬಂದು, ತಕ್ಕುದನ್ ಅಟ್ಟಿರ್ತು ನಿರಂತರಂ ಸಮಱಿದಂ = ಆವಶ್ಯಕವಾದುದನ್ನು ಪ್ರೀತಿಯಿಂದ ಒಂದೇ ಸಮನೆ ಮಾಡಿದ, ಪೆಣ್ + ತಂಡಂ + ಇಂದ್ರಾಣಿಯೆಂದುದನ್ = ಹೆಣ್ಣಗುಳ ಸಮೂಹವು ಶಚೀದೇವಿ ಹೇಳಿದುದನ್ನು, ಎಂದು + ಅಂದು + ಎಡೆಯಾಡುತಿರ್ಪುದು + ಎನೆ = ಮಾಡುತ್ತ ಓಡಾಡುತ್ತಿದ್ದರು ಎಂದ ಮೇಲೆ, ಮತ್ತೆ + ಏನೆಂದು + ಅದಂ ಬಣ್ಣಿಪೆಂ = ಮತ್ತೆ ಏನು ತಾನೆ ಬಣ್ಣಿಸಲಿ!

**ಗದ್ಯಾನುಸರಣ**: ಇದು ಜನ್ಮಾಭಿಷೇಕಕ್ಕಿಂತ ನೂರು ಪಟ್ಟು ಹೆಚ್ಚಿನ ಕಲ್ಯಾಣ ಎಂಬ ಭಾವನೆಯಿಂದ ದೇವೇಂದ್ರನು ಆದಿದೇವನ ಮದುವೆಯ ಒಸಗೆಗೆ ದೇವತೆಗಳ ಮತ್ತು ಅಪ್ಸರೆಯರ ಸಮೇತ ಬಂದ; ಒಂದೆಡೆ ಅವನು ದೇವತೆಗಳ ಜೊತೆ ಸೇರಿ ಆವಶ್ಯಕವಾದುದನ್ನು ಪ್ರೀತಿಯಿಂದ ಒಂದೇ ಸಮನೆ ಮಾಡುತ್ತಿದ್ದರೆ, ಇನ್ನೊಂದೆಡೆ ಹೆಂಗೆಳೆಯರ ತಂಡವು ಶಚೀದೇವಿಯು ಹೇಳಿದುದನ್ನು ಮಾಡುತ್ತ ಓಡಾಡುತ್ತಿದ್ದರು; ಅಂದ ಮೇಲೆ ನಾನು ಇನ್ನೇನು ತಾನೆ ಬಣ್ಣಿಸಲಿ!

**ವ। ಅಂತನುವಱಿದೊಸಗೆಯೊಳಮರರಾಜನುಂ ಸನಾಭಿಗಳ್‌ವೆರಸು ನಾಭಿರಾಜನುಂ ಬಂದು ವಿಳಾಸವತಿಯೆನಿಸಿದ ಯಶಸ್ವತಿಯೊಳಂ ಮನೋನಯನಾನಂದೆಯೆನಿಸಿದ ಸುನಂದೆಯೊಳಂ ಒಂದೆ ಪಸೆಯೊಳ್ ಪಾಣಿಗ್ರಹಮುಂ ಗೆಯಿಸಿದಾಗಳ್,**

**ಪದವಿಭಾಗ–ಅನ್ವಯ–ಅರ್ಥ**: ಅಂತು + ಅನುವ + ಅಱಿದು + ಒಸಗೆಯೊಳ್ + ಅಮರರಾಜನುಂ = ಹಾಗೆ ಕ್ರಮವನ್ನರಿತು ಸಂತಸದಿಂದ ದೇವರಾಜನೂ, ಸನಾಭಿಗಳ್‌ವೆರಸು ನಾಭಿರಾಜನುಂ ಬಂದು = ಬಂಧುಜನರೊಡನೆ ನಾಭಿರಾಜನೂ ಬಂದು, ವಿಳಾಸವತಿಯೆನಿಸಿದ ಯಶಸ್ವತಿಯೊಳಂ = ಸುಂದರಿಯಾದ ಯಶಸ್ವತಿಯೊಡನೆಯೂ, ಮನೋನಯನ + ಆನಂದೆಯೆನಿಸಿದ ಸುನಂದೆಯೊಳಂ

= ಮನಸ್ಸಿಗೂ ಕಣ್ಣಿಗೂ ಹಿತಕರಳೆನಿಸಿದ ಸುನಂದೆಯೊಡನೆಯೂ, ಒಂದೆ ಪಸೆಯೊಳ್ ಪಾಣಿಗ್ರಹಣಮಮಂ ಗೆಯಿಸಿದಾಗಳ್ = ಒಂದೇ ಹಸೆಯಲ್ಲಿ ಒಟ್ಟಿಗೆ ಕೈಹಿಡಿಸಿದಾಗ,

**ಗದ್ಯಾನುಸರಣ:** ಕ್ರಮವನ್ನರಿತು ಸಂತಸದಿಂದ ದೇವರಾಜನೂ, ಬಂಧುಜನರೊಡನೆ ನಾಭಿರಾಜನೂ ಬಂದು ಸುಂದರಿಯಾದ ಯಶಸ್ವತಿ ಮತ್ತು ಸುನಂದೆಯರೊಡನೆ ಒಂದೇ ಹಸೆಯಲ್ಲಿ ಪುರುದೇವನೊಡನೆ ಮದುವೆಯನ್ನು ನೆರವೇರಿಸಿದರು.

**ಅತನುಶ್ರೀಕಾಮಿನೀದರ್ಪಣಮೆನಿಸುವ ತದ್ವಕ್ತ್ರಶಿತಾಂಶು ನೇತ್ರಾ**
**ಸಿತನೀರೇಜಾತಯುಗ್ಮಕ್ಕಮೃತಸಲಿಲಸಂಸೇಕಮಂ ಮಾಡೆ ಕಲ್ಪ**
**ಪ್ರತತೀಸಂಯುಕ್ತಕಲ್ಪಕ್ಷಿತಿರುಹಮನೆ ಪೋಲ್ತಿರ್ದನಾ ಕಾಂತೆಯರ್ ತ**
**ಮ್ಮತಿರಾಗಂ ಪೆರ್ಚಿ ತನ್ನಿರ್ಕೆಲದೊಳಮಿರೆ ತನ್ನಾಭಿರಾಜಾಗ್ರಪುತ್ರಂ** ೨೩

**ಪದವಿಭಾಗ-ಅನ್ವಯ-ಅರ್ಥ:** ಅತನುಶ್ರೀಕಾಮಿನೀದರ್ಪಣಂ + ಎನಿಸುವ = ಮನ್ಮಥನ ಕಾಮಿನಿಯ ಕನ್ನಡಿ ಎನಿಸುವಂತಹ, ತತ್ + ವಕ್ತ್ರಶಿತಾಂಶು = ಆ ಹೆಣ್ಣುಗಳ ಮುಖಚಂದ್ರನು, ನೇತ್ರ + ಅಸಿತನೀರೇಜಾತಯುಗ್ಮಕ್ಕೆ = ಕಣ್ಣುಗಳೆಂಬ ಜೋಡಿನೈದಿಲೆಗಳಿಗೆ, ಅಮೃತಸಲಿಲಸಂಸೇಕಮಂ ಮಾಡೆ = ಅಮೃತದ ನೀರನ್ನು ಸಿಂಪಡಿಸಲು, ತಮ್ಮ + ಅತಿರಾಗಂ ಪೆರ್ಚಿ = ತಮ್ಮ ಅತೀವ ಪ್ರೀತಿಯಿಂದ ಕೂಡಿ, ಆ ಕಾಂತೆಯರ್ ತನ್ನ + ಇರ್ಕೆಲದೊಳಂ + ಇರೆ = ಆ ಕಾಮಿನಿಯರು ತನ್ನ ಎರಡೂ ಪಕ್ಕಗಳಲ್ಲಿರಲು, ತತ್ + ನಾಭಿರಾಜ + ಅಗ್ರಪುತ್ರಂ = ನಾಭಿರಾಜನ ಆ ಹಿರಿಯ ಮಗನು, ಕಲ್ಪಪ್ರತತೀಸಂಯುಕ್ತ = ಕಲ್ಪಲತೆಗಳೊಡನಿರುವ, ಕಲ್ಪಕ್ಷಿತಿರುಹಮನೆ ಪೋಲ್ತು + ಇರ್ದನ್ = ಕಲ್ಪವೃಕ್ಷವನ್ನು ಹೋಲುತಿದ್ದ.

**ಗದ್ಯಾನುಸರಣ:** ಮನ್ಮಥನ ಕಾಮಿನಿಯ ಕನ್ನಡಿ ಎನಿಸುವಂತಹ ಆ ಹೆಣ್ಣುಗಳ ಮುಖಚಂದ್ರನು ಕಣ್ಣುಗಳೆಂಬ ಜೋಡಿನೈದಿಲೆಗಳಿಗೆ ಅಮೃತದ ನೀರನ್ನು ಸಿಂಪಡಿಸುತ್ತಿತ್ತು; ಆ ಕಾಮಿನಿಯರು ಅತೀವ ಪ್ರೀತಿಯಿಂದ ಕೂಡಿ ತನ್ನ ಎರಡೂ ಪಕ್ಕಗಳಲ್ಲಿರಲು ನಾಭಿರಾಜನ ಆ ಹಿರಿಯ ಮಗನು ಕಲ್ಪಲತೆಗಳೊಡನಿರುವ ಕಲ್ಪವೃಕ್ಷದಂತಿದ್ದ.

**ವ। ಅಂತಾ ಜಗತ್ಪವಿತ್ರಕ್ಷತ್ರನಂದನೆಯರೊಳ್ ಆ ನಾಭಿರಾಜನಂದನಂ ಆ ನಿಜಕುಲತಿಲಕೆಯರೊಳ್ ಆ ಮನುಕುಲತಿಲಕಂ ಆ ಮಧುಕರನಿಕರ ಕಾಂತಕುಂತಳಾಳಂ ಕತಾರ್ಧೇಂದುಸೌಂದರಲಲಾಟೆಯರೊಳ್ ಆ ಕುಟಿಲ ಕುಂತಳಮಂಡಿತವಿಪುಳಲಲಾಟಂ ಆ ವಿಕಚಮೇಚಕೋತ್ಪಳ ಲೋಚನೆಯ ರೊಳ್ ಆ ವಿಮುಕುಳಕಮಳದಳ ವಿಲೋಲಲೋಚನಂ**

ಆ ಚಂಪಕಕಳಿಕಾ ವಿಳಾಸ ನಾಸಿಕಾವಂಶೆಯರೊಳ್ ಆ ಲಾವಣ್ಯಾಂಭಃಪ್ಲವಪ್ರಣಾಳಾಯ ಮಾನೋತ್ತುಂಗನಾಸಾವಂಶಂ ಆ ಮದನಮಂಗಳ ಮುಕುರಾನುಕಾರಿ ಕಪೋಲತಳೆಯರೊಳ್ ಆ ಕಲ್ಯಾಣಕಾರ್ತಸ್ವರಾದರ್ಶಸದೃಶ ಕಪೋಲತಳಂ ಆ ಮಣಿಮಯಕುಂಡಳಮರೀಚಿ ಮಂಜರೀಮನೋಹರಕನ್ಯೆಯರೊಳ್ ಆ ಪರಾರ್ಘ್ಯರತ್ನಕರ್ಣಪೂರಮಯೂಖಪ್ರವಾಹ ಸಂದೋಹಾಲಂಕೃತಕರ್ಣಂ ಆ ಪರಿಸ್ಫುರನ್ಮಯೂಖದಶನೆಯರೊಳ್ ಆ ರಾಜದ್ವಜ್ರೋಜ್ಜ್ವಳದ್ದಶನಂ ಆ ಪ್ರವಾಳಪಾಟಲಾಧರೆಯರೊಳ್ ಆ ನವಾಮ್ರದ್ರುಮಪಲ್ಲವಾಧರಂ ಆ ರೇಖಾತ್ರಯ ಬಂಧುರಕಂಧರೆಯರೊಳ್ ಆ ಕಂಬುಕುಬ್ಜಕಮನೀಯಕಂಧರಂ ಆ ರಾಜಹಂಸೋನ್ನತಾಂ ಸೆಯರೊಳ್ ಆ ಕನಕಶಿಖರಿಶಿಖರೋನ್ನತಾಂಸಂ ಆ ಶಿರೀಷಕುಸುಮ ದಾಮಸುಕುಮಾರ ಬಾಹುಲತೆಯರೊಳ್ ಆ ಪರಿಘಪರಿವೃತ್ತದೀರ್ಘಬಾಹುಯುಗಳಂ ಆ ಬಾಹುಮೂಲ ಪರ್ಯಂತ 'ವಿಶ್ರಾಂತಕುಚಮಂಡಲೆಯರೊಳ್ ಆ ಲಕ್ಷ್ಮೀಲೀಲಾವಿಹಾರಾ ಚಳರುಚಿರ ವಕ್ಷಸ್ಥಳಂ ಆ ಕಾಮಕಾರ್ಮುಕಯಷ್ಟಿಮುಷ್ಟಿಸಮಾಯತಮಧ್ಯೆಯರೊಳ್ ಆ ರಾಜಕಂಠೀರವಮಧ್ಯಂ ಆ ಮದನಚಕ್ರವರ್ತಿಕ್ರೀಡಾಚಳೋನ್ನತ ಜಘನೆಯ ರೊಳ್ ಆ ಮಹೇಂದ್ರ ವಿರಚಿತಸಿಂಹಾಸನಾರೋಹಣೋಚಿತ ಜಘನಂ ಆ ಕನಕದಳೀಸ್ತಂಭ' ವಿಭ್ರಮಜಂಘಾಯುಗಳೆಯರೊಳ್ ಆ ಭುವನ ಭರಣೋ ತ್ತರಣಸ್ತಂಭರಮಣೀಯ ಜಂಘಾಯುಗಳಂ ಆ ನವಮಣಿಗಣಮರೀಚಿ ಕುಸುಮೋಲ್ಲಸಿತಪದಪಲ್ಲವೆಯರೊಳ್ ಆ ಪುರಂದರ ಚೂಡಾರತ್ನಪ್ರತಿ ಬಿಂಬಿತಚುಂಬಿತನಖೋಲ್ಲಸಿತಪದಲ್ಲವಂ ಆ ಲಾವಣ್ಯ ಜಳಧಿವೇಳೆ ಯರೊಳ್ ಆ ಲಾವಣ್ಯಾರ್ಣವಕಲ್ಲೋಲಂ ಆ ಮನೋಜರಾಜ ಜೈತ್ರ ಪತಾಕೆಯರೊಳ್ ಆ ಮನಸಿಜವಿಜಯಕೇತನವಂಶಂ ನೆರೆದಿರೆ,

**ಪದವಿಭಾಗ-ಅನ್ವಯ-ಅರ್ಥ:** ಅಂತಾ ಜಗತ್ + ಪವಿತ್ರಕ್ಷತ್ರ ನಂದನೆಯರೊಳ್ = ಹೀಗೆ ಜಗತ್ತಿನಲ್ಲಿಯೇ ಪವಿತ್ರವಾದ ಕ್ಷತ್ರಕುಲದ ಕುಮಾರಿಯರೊಡನೆ, ಆ ನಾಭಿರಾಜನಂದನಂ = ಆ ನಾಭಿರಾಜಕುಮಾರನು, ಆ ನಿಜಕುಲತಿಲಕೆಯರೊಳ್ = ತಮ್ಮ ವಂಶದ ತಿಲಕದಂತಿದ್ದ ಅವರೊಡನೆ, ಆ ಮನುಕುಲತಿಲಕಂ = ಆ ಮನುವಂಶದ ತಿಲಕಪ್ರಾಯನು, ಆ ಮಧುಕರನಿಕರ ಕಾಂತಕುಂತಳಾಳಂಕೃತ + ಅರ್ಧೇಂದುಸೌಂದರಲಲಾಟೆಯರೊಳ್ = ದುಂಬಿಗಳ ಸಮೂಹದಂತೆ ಕಾಂತಿಯುಕ್ತವಾದ ಕೂದಲಿನಿಂದ ಚೆಲುವಾದ ಅರ್ಧಚಂದ್ರನಂತೆ ಸುಂದರವಾದ ಹಣೆಯುಳ್ಳವರೊಡನೆ, ಆ ಕುಟಿಲಕುಂತಳಮಂಡಿತವಿಪುಳಲಲಾಟಂ = ಗುಂಗುರು ಕೂದಲಿನಿಂದ ಕೂಡಿದ ಆ ವಿಶಾಳವಾದ ಹಣೆಯುಳ್ಳವನು, ಆ ವಿಕಚಮೇಚಕ + ಉತ್ಪಳಲೋಚನೆಯರೊಳ್ = ಅರಳಿದ ನೀಲೋತ್ಪಲದಂತಹ ಕಣ್ಣುಗಳ್ಳು ಆ ವನಿತೆಯರೊಡನೆ, ಆ ವಿಮುಕುಳಕಮಳದಳವಿಲೋಲಲೋಚನಂ = ಚೆನ್ನಾಗಿ ಅರಳಿದ ತಾವರೆ ದಳದಂತೆ ಚಂಚಲವಾದ ಕಣ್ಣುಗಳುಳ್ಳವನೂ, ಆ ಚಂಪಕಕಳಿಕಾ ವಿಳಾಸನಾಸಿಕಾವಂಶೆಯರೊಳ್ = ಸಂಪಿಗೆಯ ಮೊಗ್ಗಿನಂತೆ

ವಿಳಸಂಯುಕ್ತವಾದ ಮೂಗುದಿಂಡುಗಳ್ಳುವರೊಡನೆ, ಆ ಲಾವಣ್ಯಾಂಭಃಪ್ಲವಪ್ರಣಾಳಾಯ ಮಾನೋ ತ್ತುಂಗನಾಸಾವಂಶಂ = ಲಾವಣ್ಯವೆಂಬ ನೀರಿನ ಧಾರೆಯು ಹರಿಯಲನುಕೂಲಕರ ವಾದ ನೀಳವಾದ ಮೂಗುಳ್ಳವನೂ, ಆ ಮದನಮಂಗಳ ಮುಕುರಾನುಕಾರಿಕಪೋಲ ತಳೆಯರೊಳ್ = ಕಾಮನ ಶುಭಕರವಾದ ಕನ್ನಡಿಯಂತಿರುವ ಕೆನ್ನೆಗಳ ಆ ಹುಡುಗಿಯರೊಡನೆ, ಆ ಕಲ್ಯಾಣಕಾರ್ತಸ್ವರ + ಆದರ್ಶಸದೃಶ ಕಪೋಲತಳಂ = ಶುಭಕರವಾದ ಚಿನ್ನದ ಕನ್ನಡಿಯಂತಹ ಕಪೋಲಗಳುಳ್ಳವನೂ, ಆ ಮಣಿಮಯಕುಂಡಳಮರೀಚಿ ಮಂಜರೀಮನೋಹರಕನ್ಯೆಯರೊಳ್ = ಮಣಿಖಚಿತ ಕರ್ಣಾಭರಣಗಳ ಕಿರಣಸಮೂಹದಿಂದ ಮನೋಹರಿಯರಾದ ಆ ಕನ್ಯೆಯರೊಡನೆ, ಆ ಪರಾರ್ಥ್ಯರತ್ನಕರ್ಣಪೂರಮಯೂಖಪ್ರವಾಹಸಂದೋಹಾಲಂಕೃತಕರ್ಣಂ = ಶ್ರೇಷ್ಠ ರತ್ನಗಳಿಂದ ಇಡಿಕಿರಿದ ಕರ್ಣಆಭರಣಗಳ ಕಾಂತಿಯ ಪ್ರವಾಹದಿಂದ ರಮ್ಯವಾದ ಕಿವಿಗಳುಳ್ಳವನೂ, ಆ ಪರಿಸ್ಫುರತ್ + ಮಯೂಖದಶನೆಯರೊಳ್ = ಹೊಮ್ಮುವ ಕಾಂತಿಯುಳ್ಳ ಹಲ್ಲುಗಳುಳ್ಳವರೊಡನೆ, ಆ ರಾಜತ್ + ವಜ್ರ + ಉಜ್ಜ್ವಳತ್ + ದಶನಂ = ಹೊಳೆಯುವ ವಜ್ರದಂತೆ ಉಜ್ವಲವಾದ ಹಲ್ಲುಗಳುಳ್ಳವನೂ, ಆ ಪ್ರವಾಳಪಾಟಲ + ಅಧರೆಯರೊಳ್ = ಹವಳದಂತೆ ಕೆಂಪಾದ ತುಟಿಗಳುಳ್ಳವರೊಡನೆ, ಆ ನವ + ಆಮ್ರದ್ರುಮಪಲ್ಲವ + ಅಧರಂ = ಹೊಸ ಮಾವಿನ ಚಿಗುರಿನಂತಹ ತುಟಿಗಳುಳ್ಳವನೂ, ಆ ರೇಖಾತ್ರಯಬಂಧುರ ಕಂಧರೆಯರೊಳ್ = ಮೂರು ಗೆರೆಗಳಿಂದ ಸುಂದರವಾದ ಕೊರಳುಳ್ಳವರೊಡನೆ, ಆ ಕಂಬುಕುಬ್ಜಕಮನೀಯಕಂಧರಂ = ಶಂಖದಂತೆ ಹದವಾದ ಕತ್ತುಳ್ಳವನೂ, ಆ ರಾಜಹಂಸ + ಉನ್ನತಾಂಸೆಯರೊಳ್ = ರಾಜಹಂಸದಂತೆ ಉನ್ನತವಾದ ಹೆಗಲುಗಳುಳ್ಳವರೊಡನೆ, ಆ ಕನಕಶಿಖರಿಶಿಖರೋನ್ನತಾಂಸಂ = ಆ ಮೇರು ಪರ್ವತದ ಶಿಖರದಂತೆ ಉನ್ನತವಾದ ಹೆಗಲುಳ್ಳವನೂ, ಆ ಶಿರೀಷಕುಸುಮ ದಾಮಸುಕುಮಾರಬಾಹುಲತೆಯರೊಳ್ = ಬಾಗೆ ಹೂವಿನ ಮಾಲೆಯಂತೆ ಕೋಮಲವಾದ ತೋಳಬಳ್ಳಿಯವರೊಡನೆ, ಆ ಪರಿಘಪರಿವೃತ್ತದೀರ್ಘ ಬಾಹುಯುಗಳಂ = ಪರಿಘಾಯುಧದಂತೆ ದುಂಡಾದ ನೀಳಬಾಹುಗಳುಳ್ಳವನೂ, ಆ ಬಾಹುಮೂಲಪರ್ಯಂತವಿಶ್ರಾಂತ ಕುಚಮಂಡಲೆಯರೊಳ್ = ಕಂಕುಳಿನವರೆಗೂ ಹರಡಿರುವ ತೋರಮೊಲೆಗಳುಳ್ಳವ ರೊಡನೆ, ಆ ಲಕ್ಷ್ಮೀಲೀಲಾವಿಹಾರಾಚಳರುಚಿರ'ವಕ್ಷಸ್ಥಳಂ = ಲಕ್ಷ್ಮಿಯು ವಿಹರಿಸುವ ಬೆಟ್ಟದಂತೆ ಹಿತಕರವಾದ ಎದೆಯುಳ್ಳವನೂ, ಆ ಕಾಮಕಾರ್ಮುಕಯಷ್ಟಿಮುಷ್ಟಿ ಸಮಾಯತಮಧ್ಯೆಯರೊಳ್ = ಮನ್ಮಥನ ಬಾಣದ ಕೋಲನ್ನು ಮುಷ್ಟಿಯಲ್ಲಿ ಹಿಡಿಯಬಹುದಾದಂತಹ ಸೊಂಟವುಳ್ಳವರೊಡನೆ, ಆ ರಾಜಕಂಠೀರವಮಧ್ಯಂ = ಸಿಂಹದಂತಹ ಸಣ್ಣ ನಡುವುಳ್ಳವನೂ, ಆ ಮದನಚಕ್ರವರ್ತಿ ಕ್ರೀಡಾಚಳ + ಉನ್ನತಜಘನೆಯರೊಳ್ = ಕಾಮನೆಂಬ ಚಕ್ರವರ್ತಿಯ ಆಟದ ಬೆಟ್ಟದಂತೆ

ಹರಪಾದ ಪಿರ್ರೆಗಳುಳ್ಳವರೊಡನೆ, ಆ ಮಹೇಂದ್ರವಿರಚಿತಸಿಂಹಾಸನ + ಆರೋಹಣ + ಉಚಿತಜಘನಂ = ದೇವೇಂದ್ರನಿಂದ ರಚಿತವಾದ ಸಿಂಹಪೀಠವನ್ನೇರಲು ತಕ್ಕುದಾದ ಜಘನಗಳುಳ್ಳವನೂ, ಆ ಕನಕದಳೀಸ್ತಂಭ ವಿಭ್ರಮಜಂಘಾಯುಗಳೆಯರೊಳ್ = ಚಿನ್ನದ ಬಾಳೆಯ ಕಂಬಗಳಂತೆ ಶೋಭಿಸುವ ತೊಡೆಗಳುಳ್ಳವರೊಡನೆ, ಆ ಭುವನಭರಣ + ಉತ್ತರಣಸ್ತಂಭ ರಮಣೀಯಜಂಘಾಯುಗಳಂ = ಜಗತ್ತಿನ ಮನೆಯ ತೋರಣಗಂಬದಂತೆ ರಮಣೀಯವಾದ ಜೋಡಿತೊಡೆಗಳವನೂ, ಆ ನವಮಣಿಗಣಮರೀಚಿಕುಸುಮ + ಉಲ್ಲಸಿತಪದಪಲ್ಲವೆಯರೊಳ್ = ಹೊಸತಾದ ಮಣಿಸಮೂಹವೆಂಬ ಹೂಗಳಿಂದ ಉಲ್ಲಾಸಗೊಂಡ ಚಿಗುರುಗಳಂತಹ ಅಡಿಗಳುಳ್ಳವರೊಡನೆ, ಆ ಪುರಂದರಚೂಡಾರತ್ನಪ್ರತಿಬಿಂಬಿತಚುಂಬಿತನಖ + ಉಲ್ಲಸಿತಪದಲ್ಲವಂ = ದೇವೇಂದ್ರನ ಕಿರೀಟದ ಮಣಿಗಳ ಪ್ರತಿಬಿಂಬದಿಂದ ಕೂಡಿರುವ ಹೊಳೆಯುವ ಎಳೆಯ ಪಾದಗಳವನೂ, ಆ ಲಾವಣ್ಯ ಜಳಧಿವೇಳೆಯರೊಳ್ = ಚೆಲುವಿನ ಕಡಲ ಅಲೆಗಳಿಂತಿರುವವರೊಡನೆ, ಆ ಲಾವಣ್ಯ + ಆರ್ಣವಕಲ್ಲೋಲಂ = ಗಂಡುಗಾಡಿಯೆಂಬ ಸಮುದ್ರದ ಅಲೆಯಂತಿರುವವನೂ, ಆ ಮನೋಜರಾಜ ಜೈತ್ರಪತಾಕೆಯರೊಳ್ = ಮನ್ಮಥರಾಜನ ದಿಗ್ವಿಜಯಯಾತ್ರೆಯ ಬಾವುಟಗಳಂತಿ ರುವವರೊಡನೆ, ಆ ಮನಸಿಜವಿಜಯ ಕೇತನವಂಶಂ = ಕಾಮನ ಗೆಲುವಿನ ಪತಾಕೆಯಾದ ಪುರುದೇವನು, ನೆರೆದಿರೆ = ಕೂಡಲು,

**ಗದ್ಯಾನುಸರಣ:** ಹೀಗೆ ಜಗತ್ತಿನಲ್ಲಿಯೇ ಪವಿತ್ರವಾದ ಕ್ಷತ್ರಕುಲದ ಕುಮಾರಿಯರೊಡನೆ ನಾಭಿರಾಜಕುಮಾರನು, ತಮ್ಮ ವಂಶದ ತಿಲಕದಂತಿದ್ದವರೊಡನೆ ಮನುವಂಶದ ತಿಲಕಪ್ರಾಯ, ದುಂಬಿಗಳ ಸಮೂಹದಂತೆ ಕಾಂತಿಯುಕ್ತವಾದ ಕೂದಲಿನಿಂದ ಚೆಲುವಾದ ಅರ್ಧಚಂದ್ರನಂತೆ ಸುಂದರವಾದ ಹಣೆಯುಳ್ಳವರೊಡನೆ ಗುಂಗುರುಕೂದಲಿನಿಂದ ಕೂಡಿದ ಆ ವಿಶಾಳವಾದ ಹಣೆಯುಳ್ಳವನು, ಅರಳಿದ ನೀಲೋತ್ಪಲದಂತಹ ಕಣ್ಣುಗಳ್ಳು ಆ ವನಿತೆಯರೊಡನೆ ಚೆನ್ನಾಗಿ ಅರಳಿದ ತಾವರೆ ದಳದಂತೆ ಚಂಚಲವಾದ ಕಣ್ಣುಗಳುಳ್ಳವನು, ಸಂಪಿಗೆಯ ಮೊಗ್ಗಿನಂತೆ ವಿಳಸಯುಕ್ತವಾದ ಮೂಗುಗಳ್ಳುವರೊಡನೆ ಲಾವಣ್ಯವೆಂಬ ನೀರಿನ ಧಾರೆಯು ಹರಿಯಲನುಕೂಲಕರವಾದ ನೀಳವಾದ ಮೂಗುಳ್ಳವನು, ಕಾಮನ ಶುಭಕರವಾದ ಕನ್ನಡಿಯಂತಿರುವ ಕೆನ್ನೆಗಳ ಆ ಹುಡುಗಿಯರೊಡನೆ, ಶುಭಕರವಾದ ಚಿನ್ನದ ಕನ್ನಡಿಯಂತಹ ಕಪೋಲಗಳುಳ್ಳವನು, ಮಣಿಖಚಿತ ಕರ್ಣಾಭರಣಗಳ ಕಿರಣಸಮೂಹದಿಂದ ಮನೋಹರಿಯರಾದ ಆ ಕನ್ಯೆಯರೊಡನೆ ಶ್ರೇಷ್ಠ ರತ್ನಗಳಿಂದ ಇಡಿಕಿರಿದ ಕರ್ಣಾಭರಣಗಳ ಕಾಂತಿಯ ಪ್ರವಾಹದಿಂದ ರಮ್ಯವಾದ ಕಿವಿಗಳುಳ್ಳವನು, ಹೊಮ್ಮುವ ಕಾಂತಿಯುಳ್ಳ ಹಲ್ಲುಗಳುಳ್ಳವರೊಡನೆ ಹೊಳೆಯುವ ವಜ್ರದಂತೆ

ಉಜ್ವಲವಾದ ಹಲ್ಲುಗಳುಳ್ಳವನು, ಹವಳದಂತೆ ಕೆಂಪಾದ ತುಟಿಗಳುಳ್ಳವರೊಡನೆ ಹೊಸ ಮಾವಿನ ಚಿಗುರಿನಂತಹ ತುಟಿಗಳುಳ್ಳವನು, ಮೂರು ಗೆರೆಗಳಿಂದ ಸುಂದರವಾದ ಕೊರಳುಳ್ಳವರೊಡನೆ ಶಂಖದಂತೆ ಹದವಾದ ಕತ್ತುಳ್ಳವನು, ರಾಜಹಂಸದಂತೆ ಉನ್ನತವಾದ ಹೆಗಲುಗಳುಳ್ಳವರೊಡನೆ ಆ ಮೇರುಪರ್ವತದ ಶಿಖರದಂತೆ ಉನ್ನತವಾದ ಹೆಗಲುಳ್ಳವನು, ಬಾಗೆ ಹೂವಿನ ಮಾಲೆಯಂತೆ ಕೋಮಲವಾದ ತೋಳಬಳ್ಳಿಯವರೊಡನೆ ಪರಿಘಾಯುಧದಂತೆ ದುಂಡಾದ ನೀಳಬಾಹುಗಳುಳ್ಳವನು, ಕಂಕುಳಿನವರೆಗೂ ಹರಡಿರುವ ತೋರವೊಲೆಗಳುಳ್ಳವರೊಡನೆ ಲಕ್ಷ್ಮಿಯು ವಿಹರಿಸುವ ಬೆಟ್ಟದಂತೆ ಹಿತಕರವಾದ ಎದೆಯುಳ್ಳವನು, ಮನ್ಮಥನ ಬಾಣದ ಕೋಲನ್ನು ಮುಷ್ಟಿಯಲ್ಲಿ ಹಿಡಿಯಬಹುದಾದಂತಹ ಸೊಂಟವುಳ್ಳವರೊಡನೆ ರಾಜಸಿಂಹದಂತಹ ಸಣ್ಣ ನಡುವುಳ್ಳವನು, ಕಾಮನೆಂಬ ಚಕ್ರವರ್ತಿಯ ಆಟದ ಬೆಟ್ಟದಂತೆ ಹರಹಾದ ಪಿರ್ರೆಗಳುಳ್ಳವರೊಡನೆ ದೇವೇಂದ್ರನಿಂದ ರಚಿತವಾದ ಸಿಂಹಪೀಠವನ್ನೇರಲು ತಕ್ಕುದಾದ ಜಘನಗಳುಳ್ಳವನು, ಚಿನ್ನದ ಬಾಳೆಯ ಕಂಬಗಳಂತೆ ಶೋಭಿಸುವ ತೊಡೆಗಳುಳ್ಳವರೊಡನೆ ಜಗತ್ತಿನ ಮನೆಯ ತೋರಣಗಂಬದಂತೆ ರಮಣೀಯವಾದ ಜೋಡಿತೊಡೆಗಳವನು, ಹೊಸತಾದ ಮಣಿಸಮೂಹವೆಂಬ ಹೂಗಳಿಂದ ಉಲ್ಲಾಸಗೊಂಡ ಚಿಗುರುಗಳಂತಹ ಅಡಿಗಳುಳ್ಳವರೊಡನೆ ದೇವೇಂದ್ರನ ಕಿರೀಟದ ಮಣಿಗಳ ಪ್ರತಿಬಿಂಬದಿಂದ ಕೂಡಿರುವ ಹೊಳೆಯುವ ಎಳೆಯ ಪಾದಗಳವನು, ಚೆಲುವಿನ ಕಡಲ ಅಲೆಗಳಿಂತಿರುವವರೊಡನೆ ಗಂಡುಗಾಡಿಯೆಂಬ ಸಮುದ್ರದ ಅಲೆಯಂತಿರುವವನು, ಮನ್ಮಥರಾಜನ ದಿಗ್ವಿಜಯಯಾತ್ರೆಯ ಬಾವುಟಗಳಂತಿರುವವರೊಡನೆ ಕಾಮನ ಗೆಲುವಿನ ಪತಾಕೆಯತಹ ಪುರುದೇವನು ಕೂಡಿದ.

**ಸಮಲಾವಣ್ಯಪ್ರಸರದ**
**ಸಮವಿಭವದ ಸಮವಿಳಾಸದಗ್ಗಳಿಕೆಯೊಳಾರ್**
**ಸಮನಿವರ್ಗೆ ಸಮರಸದೊಳ್**
**ಸಮಸಂದತ್ತವರ್ಗೆ ಸಮಸಮಾಯೋಗಸುಖಂ** ೨೪

**ಪದವಿಭಾಗ–ಅನ್ವಯ–ಅರ್ಥ:** ಸಮಲಾವಣ್ಯಪ್ರಸರದ = ಸಮಾನ ಚೆಲುವಿನ ಹರಹಿನ, ಸಮವಿಭವದ = ಸಮಾನ ವೈಭವದ, ಸಮವಿಳಾಸದ = ಸಮಾನ ಹಿರಿಮೆಯ, ಅಗ್ಗಳಿಕೆಯೊಳ್ ಇವರ್ಗೆ ಆರ್ ಸಮನ್ = ಹೆಗ್ಗಳಿಕೆಯಲ್ಲಿ ಇವರಿಗೆ ಯಾರು ಸಮ? ಸಮರಸದೊಳ್ ಸಮಸಮಾಯೋಗಸುಖಂ ಅವರ್ಗೆ ಸಮಸಂದತ್ತು = ಸಾಮರಸ್ಯದಿಂದಾಗಿ ಸಮಾನವಾದ ಕೂಟಸುಖವು ಅವರಿಗೆ ಉಂಟಾಯಿತು.

**ಗದ್ಯಾನುಸರಣ:** ಸಮಾನ ಚೆಲುವಿನ ಹರಹು, ಸಮಾನ ವೈಭವ, ಸಮಾನ ಹಿರಿಮೆಯ, ಹೆಗ್ಗಳಿಕೆಯಲ್ಲಿ ಇವರಿಗೆ ಯಾರು ಸಮ? ಎಂಬಂತೆ ಸಾಮರಸ್ಯದಿಂದಾಗಿ ಸಮಾನವಾದ ಕೂಟಸುಖವು ಅವರಿಗೆ ಉಂಟಾಯಿತು.

**ವ॥ ಅಂತಾ ಗರ್ಭೇಶ್ವರಿಯರ್ ಆ ಪುರುಪರಮೇಶ್ವರನ ಮನಸ್ಸರೋವರ ದೊಳ್ ತಮ್ಮ ಪಾದಪದ್ಮಂಗಳಂ ನೆಲೆಗೊಳಿಸಿಯುಂ ಆ ನವಮಾಳಿ ಕೋದ್ದಾಮ ಕೋಮಳೆಯರ್ ಆ ತ್ರಿಲೋಕತಿಳಕನ ಮನೋ ಮದೇಭಮಂ ತಮ್ಮ ರಂಭಾಸ್ತಭಾಯಮಾನೂರುಸ್ತಂಭಂ ಗಳೊಳಾಳಿಸಿಯುಂ ಆ ಜಿತಾಮರ ಕಾಮಿನಿಯರ್ ಆ ಮಹಾನುಭಾವನ ಮನೋಮದಕಳ ಹಂಸನಂ ತಮ್ಮ ಜಘನವಿಪುಳಪುಳಿನತಳದೊಳಾಡಿಸಿಯುಂ ಆ ಮದಾಲಸ ಗಮನೆಯರ್ ಆ ಜಗತ್ಪತಿಯ ಮನೋಮಯಪಾತ್ರಮಂ ತಮ್ಮ ಕುಚಕುಂಭಂಗಳಿನಳಂಕರಿಸಿ ಯುಂ ಆ ಮದಕೋಕಿಳ ಕಲಾಲಾಪೆಯರ್ ಆ ಸಕಳಕಳಾ ನಿಳಯನ ಮನೋಮೃಗಮಂ ತಮ್ಮ ಮೃದು ಮೃಣಾಳ ಕೋಮಳ ಬಾಹುಪಾಶಂ ಗಳೊಳ್ ತೊಡರ್ಚಿಯುಂ ಆ ಚಂಪಕಮುಕುಳವಿಳಾಸಮನಾ ವಂಶೆಯರ್ ಆ ವಿಶ್ವೇಶ್ವರನ ಮನೋಮಧುಕರಮಂ ತಮ್ಮ ಮುಖಾರವಿಂದ ದೊಳ್ ನಲಿಯಿಸಿಯುಂ ಆ ನೀಲನೀರೇಜನಯನೆಯರ್ ಆ ಮನುವಂಶ ಭವ್ಯ ಕುಮುದಾಕರಬಾಂಧವನ ಮನೋಲತಾಂತಮಾಲೆಯುಂ ತಮ್ಮ ಕೇಶಹಸ್ತದಿಂ ಕೈಕೊಂಡುಂ ಇಂತು,**

**ಪದವಿಭಾಗ–ಅನ್ವಯ–ಅರ್ಥ:** ಅಂತು + ಆ ಗರ್ಭೇಶ್ವರಿಯರ್ = ಹೀಗೆ ಆಗರ್ಭಶ್ರೀಮಂತೆಯರಾದ ಅವರು, ಆ ಪುರುಪರಮೇಶ್ವರನ ಮನಸ್ಸರೋವರದೊಳ್ = ಆ ಪುರುದೇವನ ಮನಸ್ಸೆಂಬ ಕೊಳದಲ್ಲಿ, ತಮ್ಮ ಪಾದಪದ್ಮಂಗಳಂ ನೆಲೆಗೊಳಿಸಿಯುಂ = ತಮ್ಮ ಅಡಿದಾವರೆಗಳನ್ನು ಸ್ಥಾಪಿಸಿಯೂ, ಆ ನವಮಾಳಿಕಾ + ಉದ್ದಾಮಕೋಮಳೆಯರ್ = ಆ ಹೊಸ ಮಾಲೆಯಂತೆ ಅತೀವ ಕೋಮಲ ರಾಗಿದ್ದ ಅವರು, ಆ ತ್ರಿಲೋಕತಿಳಕನ ಮನೋಮದ + ಇಭಮಂ = ಆ ಮೂಲೋಕಶ್ರೇಷ್ಠನ ಮನಸ್ಸೆಂಬ ಮದ್ದಾನೆಯನ್ನು, ತಮ್ಮ ರಂಭಾಸ್ತಭಾಯಾನ + ಊರುಸ್ತಂಭಂಗಳೊಳ್ + ಆಳಿಸಿಯುಂ = ತಮ್ಮ ಬಾಳೆಯ ಕಂಬದಂತಹ ತೊಡೆಗಳಲ್ಲಿ ಕಟ್ಟಿಹಾಕಿಯೂ, ಆ ಜಿತ + ಅಮರಕಾಮಿನಿಯರ್ = ದೇವತೆಗಳನ್ನು ಮೀರಿಸಿದ ಆ ಕಾಮಿನಿಯರು, ಆ ಮಹಾನುಭಾವನ ಮನೋಮದಕಳಹಂಸನಂ = ಆ ಮಹಾಪುರುಷನ ಮನಸ್ಸೆಂಬ ಅರಸಂಚೆಯನ್ನು, ತಮ್ಮ ಜಘನವಿಪುಳ ಪುಳಿನತಳದೊಳ್ + ಆಡಿಸಿಯುಂ = ತಮ್ಮ ಪಿರ್ರೆಗಳೆಂಬ ಮರಳದಂಡೆಯಲ್ಲಿ ಆಡಿಸಿಯೂ, ಆ ಮದ + ಆಲಸಗಮನೆಯರ್ = ಆ ಮದದಿಂದ ಅಲಸಿದಂತೆ ನಿಧಾನಗತಿಯುಳ್ಳ ಅವರು,

ಆ ಜಗತ್ಪತಿಯ ಮನೋಮಯಪಾತ್ರಮಂ = ಆ ಜಗದೊಡೆಯನ ಮನಸ್ಸೆಂಬ ದೋಣಿಯನ್ನು, ತಮ್ಮ ಕುಚಕುಂಭಂಗಳಿನ್ + ಅಳಂಕರಿಸಿಯುಂ = ತಮ್ಮ ತೋರಮೊಲೆಗಳಿಂದ ಸಿಂಗರಿಸಿಯೂ, ಆ ಮದಕೋಕಿಳ ಕಲಾ + ಆಲಾಪೆಯರ್ = ಸೊಕ್ಕಿದ ಕೋಗಿಲೆಯಂತೆ ನುಡಿಯುವ ತರುಣಿಯರು, ಆ ಸಕಳಕಳಾನಿಳಯನ ಮನೋಮೃಗಮಂ = ಎಲ್ಲ ವಿದ್ಯೆಗಳನ್ನೂ ಬಲ್ಲ ಅವನ ಮನಸ್ಸೆಂಬ ಜಿಂಕೆಯನ್ನು, ತಮ್ಮ ಮೃದುಮೃಣಾಳ ಕೋಮಳಬಾಹುಪಾಶಂಗಳೊಳ್ ತೊಡರ್ಚಿಯುಂ = ತಾವರೆದಂಟಿನಂತೆ ಮಿದುವಾದ ತೋಳುಗಳಲ್ಲಿ ಸೆರೆಯಾಗಿಸಿಯೂ, ಆ ಚಂಪಕಮುಕುಳವಿಳಾಸಾ ಸಾವಂಶೆಯರ್ = ಸಂಪಿಗೆಯೆಸಳಿನಂತಹ ಮೂಗುಳ್ಳ ಅವರು, ಆ ವಿಶ್ವೇಶ್ವರನ ಮನೋಮಧುಕರಮಂ = ಆ ವಿಶ್ವಪತಿಯ ಮನಸ್ಸೆಂಬ ದುಂಬಿಯನ್ನು, ತಮ್ಮ ಮುಖ + ಅರವಿಂದದೊಳ್ ನಲಿಯಿಸಿಯುಂ = ತಮ್ಮ ಮೊಗದಾವರೆಯಿಂದ ಸಂತಸಪಡಿಸಿಯೂ. ಆ ನೀಲನೀರೇಜನಯನೆಯರ್ = ಕನ್ನೈದಿಲೆಯಂತಹ ಕಣ್ಣುಗಳುಳ್ಳ ಅವರು, ಆ ಮನುವಂಶಭವ್ಯಕುಮುದಾಕರಬಾಂಧವನ ಮನೋ ಲತಾಂತಮಾಲೆಯಂ = ಮನುಸಂಕುಲವೆಂಬ ಭವ್ಯಕುಮುದಸಮೂಹದ ಗೆಳೆಯನ ಮನಸ್ಸೆಂಬ ಹೂಮಾಲೆಯನ್ನು, ತಮ್ಮ ಕೇಶಹಸ್ತದಿಂ ಕೈಕೊಂಡುಂ = ತಮ್ಮ ತಲೆಗೂದಲೆಂಬ ಕೈಗಳಿಂದ ಹಿಡಿದೂ, ಇಂತು = ಹೀಗೆ,

**ಗದ್ಯಾನುಸರಣ:** ಹೀಗೆ ಆಗರ್ಭಶ್ರೀಮಂತೆಯರಾದ ಅವರು ಪುರುದೇವನ ಮನಸ್ಸೆಂಬ ಕೊಳದಲ್ಲಿ ತಮ್ಮ ಅಡಿದಾವರೆಗಳನ್ನು ನೆಲೆಯೂರಿಸಿದರು; ಹೊಸ ಮಾಲೆಯಂತೆ ಅತೀವ ಕೋಮಲೆಯರಾದ ಅವರು ಆ ಮೂಲೋಕಶ್ರೇಷ್ಠನ ಮನಸ್ಸೆಂಬ ಮದ್ದಾನೆಯನ್ನು ತಮ್ಮ ಬಾಳೆಯ ಕಂಬದಂತಹ ತೊಡೆಗಳಲ್ಲಿ ಕಟ್ಟಿಹಾಕಿದರು; ದೇವತೆಗಳನ್ನು ಮೀರಿಸಿದ ಆ ಕಾಮಿನಿಯರು ಆ ಮಹಾಪುರುಷನ ಮನಸ್ಸೆಂಬ ಅರಸಂಚೆಯನ್ನು ತಮ್ಮ ಪಿರ್ರೆಗಳೆಂಬ ಮರಳದಂಡೆಯಲ್ಲಿ ಆಡಿಸಿದರು; ಮದದಿಂದ ಅಲಸಿದಂತೆ ನಿಧಾನಗತಿಯುಳ್ಳ ಅವರು ಆ ಜಗದೊಡೆಯನ ಮನಸ್ಸೆಂಬ ದೋಣಿಯನ್ನು ತಮ್ಮ ತೋರಮೊಲೆಗಳಿಂದ ಸಿಂಗರಿಸಿದರು; ಸೊಕ್ಕಿದ ಕೋಗಿಲೆಯಂತೆ ಇನಿದನಿಯ ಆ ತರುಣಿಯರು ಎಲ್ಲ ವಿದ್ಯೆಗಳನ್ನೂ ಬಲ್ಲ ಅವನ ಮನಸ್ಸೆಂಬ ಜಿಂಕೆಯನ್ನು ತಾವರೆದಂಟಿನಂತೆ ಮಿದುವಾದ ತಮ್ಮ ತೋಳುಗಳಲ್ಲಿ ಸೆರೆಯಾಗಿಸಿದರು; ಸಂಪಿಗೆಯೆಸಳಿನಂತಹ ಮೂಗುಳ್ಳ ಆ ಚೆಲುವೆಯರು ಆ ವಿಶ್ವಪತಿಯ ಮನಸ್ಸೆಂಬ ದುಂಬಿಯನ್ನು ತಮ್ಮ ಮೊಗದಾವರೆಯಿಂದ ಸಂತಸಪಡಿಸಿದರು; ಕನ್ನೈದಿಲೆಯಂತಹ ಕಣ್ಣುಗಳುಳ್ಳ ಅವರು ಮನುಸಂಕುಲವೆಂಬ ಭವ್ಯಕುಮುದಸಮೂಹದ ಗೆಳೆಯನ ಮನಸ್ಸೆಂಬ ಹೂಮಾಲೆಯನ್ನು ತಮ್ಮ ತಲೆಗೂದಲೆಂಬ ಕೈಗಳಿಂದ ಹಿಡಿದುಕೊಂಡರು.

**ಆ ಪುಣ್ಯವತಿಯರಿರ್ಬರು**

ಮಾ ಪರಮೇಶ್ವರನ ಮನಮನಿರ್ಕುಳಿಗೊಳೆ ಮ
ತ್ತಾ ಪೀನವೃಷಸ್ಕಂಧನು
ಮಾ ಪದ್ಮಾಸ್ಯೆಯರ ಮನಮನಿರ್ಕುಳಿಗೊಂಡಂ ೨೫

ಪದವಿಭಾಗ-ಅನ್ವಯ-ಅರ್ಥ: ಆ ಪುಣ್ಯವತಿಯರ್ + ಇರ್ಬರುಂ = ಆ ಇಬ್ಬರೂ ಪುಣ್ಯವಂತೆಯರು, ಆ ಪರಮೇಶ್ವರನ ಮನಮನ್ + ಇರ್ಕುಳಿಗೊಳೆ = ಆ ಒಡೆಯನ ಮನಸ್ಸನ್ನು ಬಂಧಿಸಿದರೆ, ಮತ್ತೆ + ಆ ಪೀನವೃಷಸ್ಕಂಧನುಂ = ಅದೇ ರೀತಿ ಆ ಹರಹಾದ ಭುಜಗಳವನೂ, ಆ ಪದ್ಮ + ಆಸ್ಯೆಯರ ಮನಮನ್ + ಇರ್ಕುಳಿಗೊಂಡಂ = ಆ ತಾವರೆಮೊಗದವರ ಮನಸ್ಸನ್ನು ಕಟ್ಟಿಹಾಕಿದ.

ಗದ್ಯಾನುಸರಣ: ಆ ಇಬ್ಬರೂ ಪುಣ್ಯವಂತೆಯರು ತಮ್ಮ ಆ ಒಡೆಯನ ಮನಸ್ಸನ್ನು ಬಂಧಿಸಿದರು; ಅದೇ ರೀತಿ ಆ ಹರಹಾದ ಭುಜಗಳವನು ಆ ತಾವರೆಮೊಗದವರ ಮನಸ್ಸನ್ನು ಕಟ್ಟಿಹಾಕಿದ.

ವ। ಅಂತಾ ಲತಾಂಗಿಯರೊಳ್ ಆದಿಪುರುಷನಶೇಷಸಂಸಾರಸುಖಮನನುಭವಿಸುತ್ತಿರ್ಪಿನಂ ಅನೇಕ ಸಂವತ್ಸರಂಗಳ್ ಅವಿದಿತಸ್ವರೂಪಂಗಳೇಕ ಸಂವತ್ಸರ ಸಮಾನಂಗಳಾಗಿ ಪೋಗೆ ಯಶಸ್ವತಿಮಹಾದೇವಿ ಮತ್ತೊಂದು ದಿವಸಮಾ ಚತುರ್ಥಸ್ನಾನದೊಳ್ ಸುಧಾರಮ್ಯಹರ್ಮ್ಯತಳದೊಳೇಟನೆಯ ನೆಲೆಯೊಳ್ ಪುರುಪರಮೇಶ್ವರನೊಡನೆ ಪವಡಿಸಿ ಯಾಮಿನೀ ವಿರಾಮ ಸಮಯದೊಳ್,

ಪದವಿಭಾಗ-ಅನ್ವಯ-ಅರ್ಥ: ಅಂತಾ ಲತಾಂಗಿಯರೊಳ್ ಆದಿಪುರುಷನ್ = ಹೀಗೆ ಹೆಂಡತಿಯರೊಡನೆ ಆದಿದೇವನು, ಅಶೇಷಸಂಸಾರಸುಖಮನ್ + ಅನುಭವಿಸುತ್ತೆ + ಇರ್ಪಿನಂ = ಎಲ್ಲ ಸಾಂಸಾರಿಕ ಸುಖವನ್ನೂ ಸವಿಯುತ್ತಿರಲು, ಅನೇಕ ಸಂವತ್ಸರಂಗಳ್ ಅವಿದಿತಸ್ವರೂಪಂಗಳ್ = ಅನೇಕ ವರ್ಷಗಳು ಗೊತ್ತಾಗದ ರೀತಿಯಲ್ಲಿ, ಏಕಸಂವತ್ಸರಸಮಾನಂಗಳಾಗಿ ಪೋಗೆ = ಒಂದು ವರ್ಷದಂತೆ ಕಳೆದು ಹೋದುವು, ಮತ್ತೊಂದು ದಿವಸಂ ಯಶಸ್ವತಿಮಹಾದೇವಿ ಅ ಚತುರ್ಥ ಸ್ನಾನದೊಳ್ = ಮುಂದೆ ಒಂದು ದಿನ ಯಶಸ್ವತಿಯು, ಸುಧಾರಮ್ಯಹರ್ಮ್ಯತಳ ದೊಳ್ + ಏಟನೆಯ ನೆಲೆಯೊಳ್ = ಬೆಳ್ಳಗಿನ ಉಪ್ಪರಿಗೆಯ ಏಳನೆಯ ಅಂತಸ್ತಿನಲ್ಲಿ, ಪುರುಪರಮೇಶ್ವರನೊಡನೆ ಪವಡಿಸಿ = ಪುರುದೇವನೊಡನೆ ಮಲ ಗಿರಲು, ಯಾಮಿನೀವಿರಾಮಸಮಯದೊಳ್ = ರಾತ್ರಿ ಮುಗಿಯುವ ಹೊತ್ತಿನಲ್ಲಿ,

ಗದ್ಯಾನುಸರಣ: ಹೀಗೆ ಹೆಂಡತಿಯರೊಡನೆ ಆದಿದೇವನು ಎಲ್ಲ ಸಾಂಸಾರಿಕ ಸುಖವನ್ನೂ ಸವಿಯುತ್ತಿರಲು ಅನೇಕ ವರ್ಷಗಳು ಗೊತ್ತಾಗದೆ ಸರಿಯುತ್ತ ಒಂದು ವರ್ಷದಂತೆ ಕಳೆದು ಹೋದುವು; ಆನಂತರ ಮುಂದೆ ಒಂದು ದಿನ ಯಶಸ್ವತಿಯು

ಬೆಳ್ಳಗಿನ ಉಪ್ಪರಿಗೆಯ ಏಳನೆಯ ಅಂತಸ್ತಿನಲಿ ಪುರುದೇವನೊಡನೆ ಮಲಗಿದ್ದಳು; ಅಂದು ಬೆಳಗಿನ ಜಾವದಲ್ಲಿ,

ಗಗನಾಂಭೋರಾಶಿಶಂಖೋಪಮಹಿಮಕರನಂ ದೀಪ್ಯಮಾನಪ್ರತಾಪ
ಸ್ಥಗಿತಾಶಾಚಕ್ರಚಂಡಾಂಶುವನಮರಮನೋಹಾರಿಹೇಮಾದ್ರಿಯಂ ವ್ಯೋ
ಮಗಕಲ್ಲೋಲಾಬ್ಧಿಯಂ ತಾಮರಸಪಯೋಜಾಶ್ರಿತಶ್ರೀಯನಾಲೋ
ಕಗತಾಂಶುವ್ರಾತರತ್ನೋಜ್ಜ್ವಳಸುರತರುವಂ ಸ್ವಪ್ನದೊಳ್ ದೇವಿ ಕಂಡಳ್ ೨೬

**ಪದವಿಭಾಗ–ಅನ್ವಯ–ಅರ್ಥ:** ಗಗನ + ಅಂಭೋರಾಶಿಶಂಖೋಪ ಮಹಿಮಕರನಂ = ಆಗಸವೆಂಬ ಸಮುದ್ರದಲ್ಲಿ ಶಂಖದಂತೆ ಹೊಳೆಯುವ ಚಂದ್ರನನ್ನೂ, ದೀಪ್ಯಮಾನಪ್ರತಾಪಸ್ಥಗಿತ + ಆಶಾಚಕ್ರಚಂಡಾಂಶುವನ್ = ಬೆಳಗುವ ಪ್ರತಾಪದಿಂದ ದಿಕ್ಚಕ್ರಗಳನ್ನು ನಿಲ್ಲಿಸಿರುವ ಸೂರ್ಯನನ್ನೂ, ಅಮರ ಮನೋಹಾರಿಹೇಮಾದ್ರಿಯಂ = ದೇವತೆಗಳ ಮನಸ್ಸನ್ನಪಹರಿಸುವ ಹಿಮಪರ್ವತ ವನ್ನೂ, ವ್ಯೋಮಗಕಲ್ಲೋಲ + ಅಬ್ಧಿಯಂ = ಆಗಸದೆತ್ತರಕ್ಕೆ ಏಳುವ ಅಲೆಗಳ ಸಮುದ್ರವನ್ನೂ, ತಾಮರಸಪಯೋಜಾಶ್ರಿತಶ್ರೀಯನ್ = ತಾವರೆಯಹೂವಿನಲ್ಲಿ ನೆಲೆನಿಂತ ಲಕ್ಷ್ಮಿಯನ್ನೂ, ಆಲೋಕಗತ + ಅಂಶುವ್ರಾತರತ್ನ + ಉಜ್ಜ್ವಳಸುರತರುವಂ = ದೇದೀಪ್ಯಮಾನವಾದ ಕಿರಣಗಳಸಮೂಹಗಳ ರತ್ನಗಳಿಂದ ಶೋಭಿಸುವ ಕಲ್ಪವೃಕ್ಷವನ್ನೂ, ದೇವಿ ಸ್ವಪ್ನದೊಳ್ ಕಂಡಳ್ = ದೇವಿಯು ಕನಸಿನಲ್ಲಿ ಕಂಡಳು.

**ಗದ್ಯಾನುಸರಣ:** ಮಹಾದೇವಿಯು ತನ್ನ ಕನಸಿನಲ್ಲಿ ಆಗಸವೆಂಬ ಸಮುದ್ರದಲ್ಲಿ ಶಂಖದಂತೆ ಹೊಳೆಯುವ ಚಂದ್ರನನ್ನೂ, ಬೆಳಗುವ ಪ್ರತಾಪದಿಂದ ದಿಕ್ಚಕ್ರಗಳನ್ನು ನಿಲ್ಲಿಸಿರುವ ಸೂರ್ಯನನ್ನೂ, ದೇವತೆಗಳ ಮನಸ್ಸನ್ನಪಹರಿಸುವ ಹಿಮಪರ್ವತವನ್ನೂ, ಆಗಸದೆತ್ತರಕ್ಕೆ ಏಳುವ ಅಲೆಗಳ ಸಮುದ್ರವನ್ನೂ, ತಾವರೆಹೂವಿನಲ್ಲಿ ನೆಲೆನಿಂತ ಲಕ್ಷ್ಮಿಯನ್ನೂ, ದೇದೀಪ್ಯಮಾನವಾದ ಕಿರಣಗಳಸಮೂಹಗಳ ರತ್ನಗಳಿಂದ ಶೋಭಿಸುವ ಕಲ್ಪವೃಕ್ಷವನ್ನೂ ಕಂಡಳು.

ವ॥ ಆಗಳಮರವಾದಕವಾದ್ಯಮಾನದುಂದುಭಿಶಂಖ ಕಾಹಳಾ ಪ್ರಭಾತಪಟಹಧ್ವನಿಗಳ್ ದೆಸೆದೆಸೆಗೆಸೆಯುಂ ಅನೇಕಮಾಗಧ ಮಂಗಳ ಪಾಠಕ ಕೋಳಾಹಳಂಗಳ್ ನೆಗಟೆಯುಂ ಉದಯಾಚಳಚೂಡಾಮಣಿ ಮರೀಚಿ ನಿಚಯಚುಂಬಿತಾಂಬುಜ ವನಲಕ್ಷ್ಮಿಯೊಡನೆ ಲಬ್ಧಪ್ರಬೋಧೆಯಾಗಿ ಪೂಜಿತ ಕುಲದೇವತೆ ರಾಜ್ಯಾಧಿದೇವತೆಯಂತೆ ಗೃಹೀತಮಂಗಳ ಪ್ರಸಾಧನೆಯುಂ ಪರಿವಾರವಾರಾಂಗನಾಪರೀತೆಯುಮಾಗಿ ಮನೋವಲ್ಲಭನಲ್ಲಿಗೆ ವಂದು ತದರ್ಧಾಸನಮನಳಂಕರಿಸಿ ತನ್ನ ಕಂಡ ಕನಸುಗಳನನು ಕ್ರಮಂದಪ್ಪದ ಬಿಪುವುದುಂ ಅನಿತುಮಂ ಪುರುಮರಮೇಶ್ವರನವಧಾರಿಸಿ ತತ್ಸ್ವಪ್ನಫಲಂಗಳ ನಿಂತೆಂದು ಬೆಸಸಿದಂ

**ಪದವಿಭಾಗ–ಅನ್ವಯ–ಅರ್ಥ:** ಆಗಳ್ + ಅಮರವಾದಕವಾದ್ಯಮಾನ

ದುಂದುಭಿಶಂಖಕಾಹಳಾಪ್ರಭಾತಪಟಹಧ್ವನಿಗಳ್ = ಆಗ ದೇವವಾದಕರು ವಾದನಮಾಡಿದ ದುಂದುಭಿ ಶಂಖ ಕಹಳೆಗಳ ವಾದ್ಯಗಳ ಸದ್ದು, ದೆಸೆದೆಸೆಗೆಸೆಯುಂ = ದಿಕ್ಕುದಿಕ್ಕಿಗೆ ಹಬ್ಬಲು, ಅನೇಕಮಾಗಧಮಂಗಳಪಾಠಕಕೋಳಾಹಳಂಗಳ್ ನೆಗಟೆಯುಂ = ನಾನಾ ವಂದಿಮಾಗಧರು ಹಾಗೂ ಮಂಗಳಗೀತಗಳ ಹಾಡುಗಾರರ ಕೋಲಾಹಲ ವುಂಟಾಗಲು, ಉದಯಾಚಳಚೂಡಾಮಣಿ ಮರೀಚಿನಿಚಯಚುಂಬಿತ = ಮೂಡುದಿಕ್ಕಿನ ರತ್ನದ ಕಿರಣಸಮೂಹದಿಂದ ಮುತ್ತಿಕ್ಕಲ್ಪಟ್ಟ, ಅಂಬುಜವನಲಕ್ಷ್ಮಿಯೊಡನೆ = ತಾವರೆಯ ಲಕ್ಷ್ಮಿಯೊಡನೆ, ಲಬ್ಧಪ್ರಬೋಧೆಯಾಗಿ = ಎಚ್ಚರಗೊಂಡು, ಪೂಜಿತಕುಲದೇವತೆ ರಾಜ್ಯಾಧಿದೇವತೆಯಂತೆ = ಕುಲದೇವತೆ ಯನ್ನು ಪೂಜಿಸಿದವಳಾಗಿ ರಾಜ್ಯದೊಡತಿಯಂತೆ, ಗೃಹೀತಮಂಗಳಪ್ರಸಾಧನೆಯುಂ = ಮಂಗಳಕರ ಅಲಂಕಾರವನ್ನು ಮಾಡಿಕೊಂಡು, ಪರಿವಾರವಾರಾಂಗನಾ ಪರೀತೆಯುಂ + ಆಗಿ = ಪರಿವಾರದ ಮತ್ತು ವಾರವನಿತೆಯರೊಡನೆ, ಮನೋವಲ್ಲಭನಲ್ಲಿಗೆ ವಂದು = ಮನಃಪ್ರಿಯನ ಬಳಿ ಬಂದು, ತತ್ + ಅರ್ಧಾಸನಮನ್ + ಅಳಂಕರಿಸಿ = ಅವನ ಆಸನದಲ್ಲಿ ತಾನೂ ಕುಳಿತುಕೊಂಡು, ತನ್ನ ಕಂಡ ಕನಸುಗಳನ್ + ಅನುಕ್ರಮಂ + ತಪ್ಪದೆ + ಅಜಿಪುವುದುಂ = ತಾನು ಕಂಡ ಕನಸುಗಳನ್ನು ಅದೇ ಕ್ರಮದಲ್ಲಿ ವಿವರಿಸಲು, ಪುರುಪರಮೇಶ್ವರನ್ ಅನಿತುಮಂ ಅವಧಾರಿಸಿ = ಪುರುದೇವನು ಎಲ್ಲವನ್ನೂ ಕೇಳಿ, ತತ್ + ಸ್ವಪ್ನಫಲಂಗಳನ್ + ಇಂತೆಂದು ಬೆಸಸಿದಂ = ಆ ಕನಸುಗಳ ಫಲವನ್ನು ಹೀಗೆ ನಿರೂಪಿಸಿದ.

**ಗದ್ಯಾನುಸರಣ**: ಆ ಹೊತ್ತಿಗೆ ದೇವವಾದಕರು ವಾದನಮಾಡಿದ ದುಂದುಭಿ ಶಂಖ ಕಹಳೆಗಳ ವಾದ್ಯಗಳ ಸದ್ದು ದಿಕ್ಕುದಿಕ್ಕಿಗೆ ಹಬ್ಬಿತು, ನಾನಾ ವಂದಿಮಾಗಧರ ಹಗೂ ಮಂಗಳಗೀತಗಳ ಹಾಡುಗಾರರ ಕೋಲಾಹಲವುಂಟಾಯಿತು; ಮೂಡುದಿಕ್ಕಿನ ರತ್ನದ ಕಿರಣಸಮೂಹದಿಂದ ಮುತ್ತಿಕ್ಕಲ್ಪಟ್ಟ ತಾವರೆಯ ಲಕ್ಷ್ಮಿಯೊಡನೆ ಯಶಸ್ವತಿಯೂ ಎಚ್ಚರಗೊಂಡಳು; ಕುಲದೇವತೆಯನ್ನು ಪೂಜಿಸಿದವಳಾಗಿ ರಾಜ್ಯದೊಡತಿಯಂತೆ ಮಂಗಳಕರ ಅಲಂಕಾರವನ್ನು ಮಾಡಿಕೊಂಡು ಪರಿವಾರದವರು ಮತ್ತು ವಾರವನಿತೆಯರೊಡನೆ ಮನಃಪ್ರಿಯನ ಬಳಿ ಬಂದು ಅವನ ಆಸನದಲ್ಲಿ ತಾನೂ ಕುಳಿತುಕೊಂಡಳು; ಆನಂತರ ತಾನು ಕಂಡ ಕನಸುಗಳನ್ನು ಅದೇ ಕ್ರಮದಲ್ಲಿ ವಿವರಿಸಿದಳು; ಪುರುದೇವನು ಎಲ್ಲವನ್ನೂ ಕೇಳಿ ಆ ಕನಸುಗಳ ಫಲವನ್ನು ಹೀಗೆಂದು ನಿರೂಪಿಸಿದ.

ಪರಿಪೂರ್ಣೇಂದುವಿನನ್ವಯಾಭ್ರತಿಳಕಂ ತಿಗ್ಮಾಂಶುವಿಂ ತೀವ್ರಭಾ
ಸುರತತೇಜಂ ಸುರಶೈಲದಿಂ ಸಕಳಭೂಭೃನ್ಮುಖ್ಯನಂಭೋಧಿಯಿಂ
ಪರಮಾಗಾಧಗುಣಂ ಪಯೋರುಹವಿಳಾಸಸ್ಥಾನೆಯಿಂ ಭೂವಧೂ
ವರನಬ್ಜೇಕ್ಷಣೆ ಕಲ್ಪವೃಕ್ಷದಿನಿಳಾಲೋಕೈಕಕಲ್ಪದ್ರುಮಂ ೨೭

**ಪದವಿಭಾಗ-ಅನ್ವಯ-ಅರ್ಥ:** ಪರಿಪೂರ್ಣೇಂದುವಿನ್ + ಅನ್ವಯ + ಅಭ್ರತಿಳಕಂ = ಪೂರ್ಣಚಂದ್ರನ್ನು ಕಂಡದ್ದರಿಂದಾಗಿ ವಂಶವೆಂಬ ಆಗಸಕ್ಕೆ ತಿಳಕಪ್ರಾಯನಾದ, ತಿಗ್ಮಾಂಶುವಿಂ ತೀವ್ರಭಾಸುರತತೇಜಂ = ಸೂರ್ಯದರ್ಶನದಿಂದಾಗಿ ಅತೀವ ತೇಜೋವಂತನಾದ, ಸುರಶೈಲದಿಂ ಸಕಳಭೂಭೃತ್ + ಮುಖ್ಯನ್ = ಮೇರುಪರ್ವತವನ್ನು ಕಂಡದ್ದರಿಂದಾಗಿ ಇಡೀ ರಾಜಸಮೂಹಕ್ಕೆ ಮುಖ್ಯನಾದ, ಅಂಭೋಧಿಯಿಂ ಪರಮ + ಅಗಾಧಗುಣಂ = ಸಮುದ್ರವನ್ನು ಕಂಡದ್ದರಿಂದಾಗಿ ಅತ್ಯಂತ ಗುಣವಂತನಾದ, ಪಯೋರುಹವಿಳಾಸಸ್ಥಾನೆಯಿಂ ಭೂವಧೂವರನ್ = ಲಕ್ಷ್ಮೀದರ್ಶನದಿಂದಾಗಿ ಭೂಪತಿಯಾದ, ಕಲ್ಪವೃಕ್ಷದಿನ್ + ಇಳಾಲೋಕೈಕಕಲ್ಪದ್ರುಮಂ = ಕಲ್ಪವೃಕ್ಷವನ್ನು ಕಂಡದ್ದರಿಂದಾಗಿ ಭೂಮಿಗೆ ಕಲ್ಪವೃಕ್ಷನಾಗುವಂತಹ, ಅಬ್ಜ + ಈಕ್ಷಣೆ = ಕಮಲದಳನೇತ್ರೆಯೇ,

**ಗದ್ಯಾನುಸರಣ:** ಕಮಲದಳನೇತ್ರೆಯೇ, ಪೂರ್ಣಚಂದ್ರನ್ನು ಕನಸಿನಲ್ಲಿ ಕಂಡದ್ದರಿಂದಾಗಿ ವಂಶವೆಂಬ ಆಗಸಕ್ಕೆ ತಿಳಕಪ್ರಾಯನಾದ, ಸೂರ್ಯದರ್ಶನದಿಂದಾಗಿ ಅತೀವ ತೇಜೋವಂತನಾದ, ಮೇರುಪರ್ವತವನ್ನು ಕಂಡದ್ದರಿಂದಾಗಿ ಇಡೀ ರಾಜಸಮೂಹಕ್ಕೆ ಮುಖ್ಯನಾದ, ಸಮುದ್ರವನ್ನು ಕಂಡದ್ದರಿಂದಾಗಿ ಅತ್ಯಂತ ಗುಣವಂತನಾದ, ಲಕ್ಷ್ಮೀದರ್ಶನದಿಂದಾಗಿ ಭೂಪತಿಯಾದ, ಕಲ್ಪವೃಕ್ಷವನ್ನು ಕಂಡದ್ದರಿಂದಾಗಿ ಭೂಮಿಗೆ ಕಲ್ಪವೃಕ್ಷನಾಗುವಂತಹ,

**ನಿನಗೆ ಭರತಾವನೀತಳ**
**ಮೆನಿತನಿತುವರಮನಾಳ್ವನೊರ್ವನಾದಪ್ಪಂ ನಂ**
**ದನನಾತನನುಜರಘಕುಳ**
**ವನದಹನರ್ ಪಲರುಮಪ್ಪರಪ್ರತಿಮಲ್ಲರ್ ೨೮**

**ಪದವಿಭಾಗ-ಅನ್ವಯ-ಅರ್ಥ:** ಭರತ + ಅವನೀತಳಂ + ಎನಿತು = ಭರತಭೂಮಿ ಎಷ್ಟಿದೆಯೋ, ಅನಿತುವರಮನ್ + ಆಳ್ವನ್ + ಒರ್ವನ್ ನಂದನನ್ ನಿನಗೆ ಆದಪ್ಪಂ = ಅಲ್ಲಿಯವರೆಗೂ ಆಳುವಂತಹ ಒಬ್ಬ ಮಗನು ನಿನಗೆ ಹುಟ್ಟುತ್ತಾನೆ, ಆತನ ಪಲರುಂ ಅನುಜರ್ + ಅಘಕುಳವನದಹನರ್ ಅಪ್ರತಿಮಲ್ಲರ್ ಅಪ್ಪರ್ = ಅವನ ತಮ್ಮಂದಿರಾಗಿ ಪಾಪರಾಶಿಯನ್ನು ಸುಡುವಂತಹವರೂ ಸಮನಿಲ್ಲದ ವೀರರೂ ಆದವರು ಹುಟ್ಟುತ್ತಾರೆ.

**ಗದ್ಯಾನುಸರಣ:** ಭರತಭೂಮಿ ಎಷ್ಟಿದೆಯೋ ಅದೆಲ್ಲವನ್ನೂ ಆಳುವಂತಹವನು ಒಬ್ಬನು ನಿನಗೆ ಮಗನಾಗಿ ಹುಟ್ಟುತ್ತಾನೆ, ಆನಂತರ ಅವನ ತಮ್ಮಂದಿರಾಗಿ ಪಾಪರಾಶಿಯನ್ನು ಸುಡುವಂತಹವರೂ ಸಮನಿಲ್ಲದ ವೀರರೂ ಆದವರು ಹುಟ್ಟುತ್ತಾರೆ.

**ವ। ಎಂದು ಬೆಸಸಸಿದಾಗಳ್,**

ಅರ್ಥ: ಎಂದು ಬೆಸಸಸಿದಾಗಳ್ = ಎಂದು ವಿವರಿಸಲು,

ಪುಳಕಂ ಪುದಿದಿರೆ ರಾಗಂ
ಪೊಳೆಪಂ ತನುರುಚಿಗೆ ಕೂಡೆ ತೆಂಬೆಲರಲೆಪಿಂ
ಕಳಿಕೆಯೊಳ್ ತುಱುಗಿ ತಳಿರೊಳೆ
ತಳತಳಿಸಿದುದೊಂದಶೋಕಲತೆಯುನೆ ಪೋಲ್ತಳ್ ೨೯

ಪದವಿಭಾಗ–ಅನ್ವಯ–ಅರ್ಥ: ಪುಳಕಂ ಪುದಿದಿರೆ = ರೋಮಾಂಚವುಂಟಾಗಿ, ರಾಗಂ ತನುರುಚಿಗೆ ಪೊಳೆಪಂ ಕೂಡೆ = ಸಂತಸವು ದೇಹಕ್ಕೆ ಹೊಸ ಹೊಳಪನ್ನು ನೀಡಲು, ತೆಂಬೆಲರ + ಅಲೆಪಿಂ = ತೆಂಕಣ ಗಾಳಿಯ ಬೀಸುವಿಕೆಯಿಂದ, ಕಳಿಕೆಯೊಳ್ ತುಱುಗಿ = ಮೊಗ್ಗುಗಳಿಂದ ಕೂಡಿ, ತಳಿರೊಳೆ ತಳತಳಿಸಿದುದು + ಒಂದಶೋಕಲತೆಯನೆ ಪೋಲ್ತಳ್ = ಚಿಗುರಿನಿಂದ ತಳತಳಿಸುವ ಒಂದು ಅಶೋಕದ ಬಳ್ಳಿಯನ್ನು ಹೋತಳು.

ಗದ್ಯಾನುಸರಣ: ರೋಮಾಂಚಗೊಂಡು ಸಂತಸದಿಂದಾಗಿ ಅವಳ ದೇಹಕ್ಕೆ ಹೊಸ ಹೊಳಪುಂಟಾಗಿ ಯಶಸ್ವತಿಯು ತೆಂಕಣ ಗಾಳಿಯ ಬೀಸುವಿಕೆಯಿಂದಾಗಿ ಮೊಗ್ಗುಗಳಿಂದ ಕೂಡಿ ಚಿಗುರಿನಿಂದ ತಳತಳಿಸುವ ಒಂದು ಅಶೋಕದ ಒಂದು ಬಳ್ಳಿಯಂತೆ ಕಂಡಳು.

ವ॥ ಅನ್ನೆಗಂ ಅತಿಗೃಧ್ರಮಹೀಶನುಂ ನಾರಕನುಂ ವ್ಯಾಘ್ರನುಂ ದಿವಾಕರಪ್ರಭನುಂ ಮತಿವರಮಂತ್ರಿಯುಂ ಅಧೋಗ್ರೈವೇಯಕದಿವಿಜನುಂ ಸುಬಾಹುಮಹೀಪತಿಯುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ಯಶಸ್ವತಿ ಮಹಾದೇವಿಯ ಗರ್ಭಾವಾಸದೊಳ್ ಶುಕ್ತಿಪುಟೋದರ ವರ್ತಿಯಪ್ಪ ನಿರ್ಮಳೋದಕಬಿಂದುವಿನಂತೆ ಸಂಕ್ರಮಿಸೆ ಗರ್ಭಮಂ ತಾಳ್ದಿ,

ಪದವಿಭಾಗ–ಅನ್ವಯ–ಅರ್ಥ: ಅನ್ನೆಗಂ = ಅಷ್ಟರಲ್ಲಿ, ಅತಿಗೃಧ್ರಮಹೀಶನುಂ ನಾರಕನುಂ ವ್ಯಾಘ್ರನುಂ ದಿವಾಕರಪ್ರಭನುಂ ಮತಿವರಮಂತ್ರಿಯುಂ ಅಧೋಗ್ರೈವೇಯಕದಿವಿಜನುಂ ಸುಬಾಹುಮಹೀಪತಿಯುಂ + ಆಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ + ಅಹಮಿಂದ್ರಂ ಬಂದು = ಕ್ರಮವಾಗಿ ಅತಿಗೃಧ್ರ ನಾರಕ ವ್ಯಾಘ್ರ ದಿವಾಕರಪ್ರಭ ಮತಿವರಮಂತ್ರಿ ಅಧೋಗ್ರೈವೇಯಕದಿವಿಜ ಸುಬಾಹುಮಹೀಪತಿಯಾಗಿ ಹುಟ್ಟುತ್ತ ಬಂದು ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರಬು ಬಂದು, ಯಶಸ್ವತಿ ಮಹಾದೇವಿಯ ಗರ್ಭ + ಆವಾಸದೊಳ್ = ಯಶಸ್ವತಿ ಮಹಾದೇವಿಯ ಬಸಿರಿನಲ್ಲಿ, ಶುಕ್ತಿಪುಟ + ಉದರವರ್ತಿಯಪ್ಪ ನಿರ್ಮಳ + ಉದಕಬಿಂದುವಿನಂತೆ ಸಂಕ್ರಮಿಸೆ = ಮುತ್ತಿನ ಚಿಪ್ಪಿನ ಸೇರಿದ ಪರಿಶುದ್ಧ ನೀರಿನ ಹನಿಯಂತೆ ಸೇರಲು, ಗರ್ಭಮಂ ತಾಳ್ದಿ = ಗರ್ಭವತಿಯಾಗಿ,

ಗದ್ಯಾನುಸರಣ: ಅಷ್ಟರಲ್ಲಿ, ಅತಿಗೃಧ್ರ ನಾರಕ ವ್ಯಾಘ್ರ ದಿವಾಕರಪ್ರಭ ಮತಿವರಮಂತ್ರಿ ಅಧೋಗ್ರೈವೇಯಕದಿವಿಜ ಸುಬಾಹುಮಹೀಪತಿಯಾಗಿ ಕ್ರಮವಾಗಿ ಹುಟ್ಟುತ್ತ ಬಂದು ಸರ್ವಾರ್ಥಸಿದ್ಧಿಯಲ್ಲಿದ್ದ ಅಹಮಿಂದ್ರನು ಬಂದು ಯಶಸ್ವತಿ ಮಹಾದೇವಿಯ ಬಸಿರಿನಲಿ ಮುತ್ತಿನ ಚಿಪ್ಪಿನ ಸೇರಿದ ಪರಿಶುದ್ಧ ನೀರಿನ ಹನಿಯಂತೆ ಸೇರಲು ಆಕೆಯು ಗರ್ಭವತಿಯಾದಳು.

ನೆಗಟ್ದ ಹಿರಣ್ಯಗರ್ಭನ ಮನಃಪ್ರಿಯವಲ್ಲಭೆ ರತ್ನಗರ್ಭಭೂ
ಮಿಗೆ ಫಳಗರ್ಭವಲ್ಲರಿಗೆ ಬಾಳದಿವಾಕರಗರ್ಭವಾಸವಾ
ಶೆಗೆ ಕಳಹಂಸಗರ್ಭಕಳಹಂಸಿಗೆ ಸಿಂಹಕಿಶೋರಗರ್ಭಸಿಂ
ಹಿಗೆ ದೊರೆಯಾಗಿ ಗರ್ಭನಿಳಯಾರ್ಭಕನುನ್ನತಿಯಂ ನಿಮಿರ್ಚಿದಳ್
೩೦

ಪದವಿಭಾಗ–ಅನ್ವಯ–ಅರ್ಥ: ನೆಗಟ್ದ ಹಿರಣ್ಯಗರ್ಭನ ಮನಃಪ್ರಿಯವಲ್ಲಭೆ = ಹೆಸರಾಂತ ಆದಿಬ್ರಹ್ಮನ ನಲ್ಲೆಯು, ರತ್ನಗರ್ಭಭೂಮಿಗೆ = ರತ್ನವನ್ನು ಬಸಿರಲ್ಲಿ ಹೊತ್ತ ಭೂಮಿಗೆ, ಫಳಗರ್ಭವಲ್ಲರಿಗೆ = ಹಣ್ಣುಗಳನ್ನು ಬಿಟ್ಟ ಬಳ್ಳಿಗೂ, ಬಾಳ ದಿವಾಕರಗರ್ಭವಾಸವ + ಆಶೆಗೆ = ಬಾಲಸೂರ್ಯನನ್ನು ಪಡೆದ ಪೂರ್ವದಿಕ್ಕಿಗೆ, ಕಳಹಂಸಗರ್ಭಕಳಹಂಸಿಗೆ = ಮರಿಯನ್ನು ಬಸಿರಲ್ಲಿ ಹೊತ್ತ ಕಲಹಂಸಕ್ಕೆ, ಸಿಂಹಕಿಶೋರಗರ್ಭಸಿಂಹಿಗೆ = ಮರಿಯನ್ನು ಬಸಿರಲ್ಲಿಟ್ಟುಕೊಂಡ ಸಿಂಹಿಣಿಗೆ, ದೊರೆಯಾಗಿ ಗರ್ಭನಿಳಯ + ಅರ್ಭಕನ + ಉನ್ನತಿಯಂ ನಿಮಿರ್ಚಿದಳ್ = ಸಮನಾಗಿ ಬಸಿರಲ್ಲಿನ ಮಗುವಿನ ಬೆಳವಣಿಗೆಯನ್ನು ಪೋಷಿಸಿದಳು.

ಗದ್ಯಾನುಸರಣ: ಹೆಸರಾಂತ ಆದಿಬ್ರಹ್ಮನ ನಲ್ಲೆಯು ರತ್ನವನ್ನು ಬಸಿರಲ್ಲಿ ಹೊತ್ತ ಭೂಮಿಗೆ, ಹಣ್ಣುಗಳನ್ನು ಬಿಟ್ಟ ಬಳ್ಳಿಗೆ, ಬಾಲಸೂರ್ಯನನ್ನು ಪಡೆದ ಪೂರ್ವದಿಕ್ಕಿಗೆ, ಮರಿಯನ್ನು ಬಸಿರಲ್ಲಿ ಹೊತ್ತ ಕಲಹಂಸಕ್ಕೆ, ಮರಿಯನ್ನು ಬಸಿರಲ್ಲಿಟ್ಟುಕೊಂಡ ಸಿಂಹಿಣಿಗೆ ಸಮನಾಗಿ ಬಸಿರಲ್ಲಿನ ಮಗುವಿನ ಬೆಳವಣಿಗೆಯನ್ನು ಪೋಷಿಸಿದಳು.

ಜಗದ ಬಡತನಮನೊರ್ಮೆಯೆ
ಬಗೆದಂತಿರೆ ಕಿಡಿಪ ಚಚಕ್ರಿ ತನ್ನಿರ್ದೆಡೆಯೊಳ್
ನೆಗಟ್ದ ಬಡತನಮನದನೇ
ಕೆ ಗಡಂ ಸೈರಿಸುವನೆನೆ ಪೊರದಳ್ದುದು ಮಧ್ಯಂ ೩೧

ಪದವಿಭಾಗ–ಅನ್ವಯ–ಅರ್ಥ: ಜಗದ ಬಡತನಮನ್ + ಒರ್ಮೆಯೆ

ಬಗೆದಂತಿರೆ ಕಿಡಿಪ ಚಕ್ರಿ = ಪ್ರಪಂಚದ ಬಡತನವನ್ನೆಲ್ಲ ಒಮ್ಮೆಗೇ ಅಂದುಕೊಂಡಂತೆಯೇ ಹೋಗಲಾಡಿಸುವ ಚಕ್ರವರ್ತಿಯು, ತನ್ನಿರ್ದ + ಎಡೆಯೊಳ್ ನೆಗೞ್ದ ಬಡತನಮನ್ + ಅದನ್ + ಏಕೆ ಗಡಂ ಸೈರಿಸುವನ್ + ಎನೆ = ತಾನಿರುವ ಜಾಗದ ಬಡತನವನ್ನು ಅದೇಕೆ ಸಹಿಸಿಕೊಳ್ಳುತ್ತಾನೆ ಎಂಬಂತೆ, ಮಧ್ಯಂ ಮೊದಳ್ದುದು = ಯಶಸ್ವತಿಯ ನಡುವು ಹಿಗ್ಗಿತು.

**ಗದ್ಯಾನುಸರಣ:** ಪ್ರಪಂಚದ ಬಡತನವನ್ನೆಲ್ಲ ಒಮ್ಮೆಗೇ ತಾನಂದುಕೊಂಡಂತೆಯೇ ಹೋಗಲಾಡಿಸುವ ಚಕ್ರವರ್ತಿಯು ತಾನಿರುವ ಜಾಗದ ಬಡತನವನ್ನು ಹೇಗೆ ಸಹಸಿಕೊಳ್ಳುತ್ತಾನೆ ಎಂಬಂತೆ ಯಶಸ್ವತಿಯ ನಡುವು ಹಿರಿದಾಯಿತು.

**ವಿಶೇಷ ವಿಚಾರ: ಬಡತನ** ಎಂಬ ಶಬ್ದವನ್ನು ಕವಿ ಶ್ಲೇಷೆಯಿಂದ ಬಳಸಿದ್ದಾನೆ; ಚಕ್ರವರ್ತಿ ಜನರ ಬಡತನವನ್ನು ಹೋಗಲಾಡಿಸಿದರೆ ಬಸಿರು ಸೊಂಟದ ಕೃಶತೆಯನ್ನು ಹೋಗಲಾಡಿಸುತ್ತದೆ.

**ಚತುರಂತಕ್ಷಿತಿ ಗರ್ಭ**
**ಸ್ಥಿತನದು ಗಡಿಮೆಂದು ಮುದ್ರಿಪಂತಾಯ್ತು ಯಶ**
**ಸ್ವತಿಯ ಪದನ್ಯಾಸಂ ವಿಳ**
**ಸಿತಲಾಕ್ಷಾರಸಮಪೂರ್ವಮಣಿಕುಟ್ಟಿಮದೊಳ್** ೩೨

**ಪದವಿಭಾಗ-ಅನ್ವಯ-ಅರ್ಥ:** ಅಪೂರ್ವಮಣಿಕುಟ್ಟಿಮದೊಳ್ ಯಶಸ್ವತಿಯ ಪದನ್ಯಾಸಂ = ಅಪರೂಪದ ಮಣಿಮಯ ನೆಲಗಟ್ಟಿನ ಮೇಲೆ ಇಟ್ಟ ಯಶಸ್ವತಿಯ ಹೆಜ್ಜೆಗಳ, ವಿಳಸಿತಲಾಕ್ಷಾರಸಂ = ಅರಗಿನ ರಸವು, ಚತುರಂತಕ್ಷಿತಿ ಗರ್ಭಸ್ಥಿತನದು ಗಡಿಂ ನಾಲ್ಕೂ ದಿಕ್ಕಿನೊಳಗಣ ಬುವಿಯು ತನ್ನ ಗರ್ಭದಲ್ಲಿರುವವನದು, ಎಂದು ಮುದ್ರಿಪಂತೆ + ಆಯ್ತು = ಎಂದು ಮುದ್ರೆಯೊತ್ತುವಂತೆ ಕಾಣಿಸಿತು.

**ಗದ್ಯಾನುಸರಣ:** ಅಪರೂಪದ ಮಣಿಮಯ ನೆಲಗಟ್ಟಿನ ಮೇಲೆ ಇಟ್ಟ ಯಶಸ್ವತಿಯ ಹೆಜ್ಜೆಗಳ ಅರಗಿನ ರಸದ ಗುರುತು, ನಾಲ್ಕೂ ದಿಕ್ಕಿನೊಳಗಣ ಬುವಿಯು ತನ್ನ ಗರ್ಭದಲ್ಲಿರುವವನದೇ ಎಂದು ಮುದ್ರೆಯೊತ್ತುವಂತೆ ಕಾಣಿಸಿತು.

**ವ॥ ಅಂತು ಗರ್ಭಚಿಹ್ನಂಗಳ್ ತೋಱೆ ಲೀಲಾಭವನೋಪವನ ಕೃತಕಗಿರಿಗಳಿರ್ದಂತೆ ವಿಜಯಾರ್ಧ ಹಿಮವದಚಳಕೂಟಂಗಳೊಳ್ ವಿಹಾರಿಸಲುಂ**

**ನಿಜಗೃಹೋಪವನಕ್ರೀಡಾ ಸರೋವರಂಗಳಿರ್ದಂತೆ ಮಳಯಾ ಚಳ ಚಂದನ ನಂದನಂಗಳೊಳ್ ರಮಿಯಿಸಲುಂ ಕುಮಾರಭೃತ್ಯ ಕುಶಲ ಭಿಷಕ್ಪರಿಷತ್ಸಂಪಾದಿತ ಕಲ್ಯಾಣಾಮೃತಾಹಾರಂಗಳಿರ್ದಂತೆ ಷಟ್ಖಂಡಕ್ಷೇತ್ರಮೃತ್ತಿಕೆ ಯನೆ ಸವಿನೋಡಲುಂ ಸೇವಾಭಿಜ್ಞವಾರಾಂಗನಾಶೃಂಗಾರ ಸುಧಾಸಿಕ್ತ ಸೂಕ್ತಿ ಗಳಿರ್ದಂತೆ ನಿಸ್ಸಹಾಯಸಾಹಸೋತ್ತೀರ್ಣ ಮಹಾರ್ಣವಪ್ರವೀರಪ್ರಾರಬ್ಧಾರ ಭಟೀಸಮುದ್ಭಟಕಥೆಗಳನೆ ಕೇಳಲುಂ ಮೃದುಮಧುರವಿದಗ್ಧ ಮುಗ್ಧಪರಿಹಾಸ ಮನೋ ಹರಾಳಾಪಶುಕಗಳಿರ್ದಂತೆ ಪಂಜರಗತ ಕುಂಜರಾ ರಾತಿ ಕಿಶೋರ ಕೇಸರಿಗಳನೆ ತರಿಸಿ ನೋಡುತ್ತಿರಲುಂ,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಗರ್ಭಚಿಹ್ನಂಗಳ್ ತೋಱೆ = ಹಾಗೆ ಬಸಿರಿನ ಕುರುಹುಗಳು ಕಾಣಿಸಿಕೊಳ್ಳಲು, ಲೀಲಾಭವನ + ಉಪವನಕೃತಕಗಿರಿಗಳಿರ್ದಂತೆ = ಆಟದ ಮನೆ ಉದ್ಯಾನ ಮತ್ತು ಮಾಡಿದ ಬೆಟ್ಟಗಳಿದ್ದರೂ, ವಿಜಯಾರ್ಧಹಿಮವತ್ + ಅಚಳಕೂಟಂಗಳೊಳ್ ವಿಹಾರಿಸಲುಂ = ವಿಜಯಾರ್ಧ ಮತ್ತು ಹಿಮಾಚಲದ ಶಿಖರಗಳಲ್ಲಿ ಓಡಾಡಲೂ, ನಿಜಗೃಹ + ಉಪವನಕ್ರೀಡಾಸರೋವರಂಗಳಿರ್ದಂತೆ = ತನ್ನರಮನೆ ಮತ್ತು ಉದ್ಯಾನವನಗಳಲ್ಲಿ ಆಟವಾಡಲು ಕೊಳಗಳಿದ್ದರೂ, ಮಳಯಾಚಳಚಂದನನಂದನಂಗಳೊಳ್ ರಮಿಯಿಸಲುಂ = ಮಲಯ ಪರ್ವತದ ಶ್ರೀಗಂಧದ ಕಾವಲಿನಲ್ಲಿ ಕೂತು ಸಂತೋಷಿಸಲೂ, ಕುಮಾರಭೃತ್ಯಕುಶಲಭಿಷಕ್ + ಪರಿಷತ್ + ಸಂಪಾದಿತಕಲ್ಯಾಣ + ಅಮೃತಾಹಾರಂಗಳಿರ್ದಂತೆ = ಮಕ್ಕಳನ್ನು ನೋಡಿಕೊಳ್ಳುವ ದಾದಿಯರೂ ಪರಿಣತವೈದ್ಯರು ಸಲಹೆಯೀಯುವ ಆರೋಗ್ಯಕರವಾದ ಅಮೃತಾಹಾರಗಳಿದ್ದರೂ, ಷಟ್ಖಂಡಕ್ಷೇತ್ರಮೃತ್ತಿಕೆಯನೆ ಸವಿನೋಡಲುಂ = ಆರೂ ಖಂಡಗಳ ಮಣ್ಣಿನ ರುಚಿ ನೋಡಲೂ, ಸೇವಾಭಿಜ್ಞವಾರಾಂಗನಾಶೃಂಗಾರಸುಧಾಸಿಕ್ತಸೂಕ್ತಿಗಳಿರ್ದಂತೆ = ಸೇವೆಯನ್ನು ಬಲ್ಲ ವಾರಾಂಗನೆಯರು ಆಡುವ ಸವಿಯಾದ ಮಾತುಗಳಿದ್ದರೂ, ನಿಸ್ಸಹಾಯಸಾಹಸ + ಉತ್ತೀರ್ಣಮಹಾರ್ಣವಪ್ರವೀರಪ್ರಾರಬ್ಧ + ಆರಭಟೀ ಸಮುದ್ಭಟಕಥೆಗಳನೆ ಕೇಳಲುಂ = ಅಸಹಾಯಶೂರರು ಸಮುದ್ರಗಳನ್ನು ದಾಟುವುದರ ಅನುಭವಕಥನಗಳನ್ನು ಕೇಳಲೂ, ಮೃದುಮಧುರವಿದಗ್ಧಮುಗ್ಧ ಪರಿಹಾಸಮನೋಹರ + ಆಳಾಪಶುಕಗಳಿರ್ದಂತೆ = ನಯವಾದ ಇನಿದೂ ಪ್ರೌಢವೂ ಸರಳ ವಿನೋದದಿಂದಲೂ ಕೂಡಿದ ಸವಿಯಾದ ಮಾತುಗಳನ್ನಾಡುವ ಗಿಳಿಗಳಿದ್ದರೂ, ಪಂಜರಗತಕುಂಜರ + ಅರಾತಿಕಿಶೋರಕೇಸರಿಗಳನೆ ತರಿಸಿ ನೋಡುತ್ತಿರಲುಂ ಪಂಜರದಲ್ಲಿರಿಸಿದ ಮದವೈರಿಯಾದ ಸಿಂಹದ ಮರಿಗಳನ್ನು ನೋಡಲೂ,

**ಗದ್ಯಾನುಸರಣ:** ಹಾಗೆ ಬಸಿರಿನ ಕುರುಹುಗಳು ಕಾಣಿಸಿಕೊಳ್ಳಲು ಯಶಸ್ವತಿಗೆ ವಿಶಿಷ್ಟ ಬಸಿರ ಬಯಕೆಗಳಾದವು; ಆಟದ ಮನೆ ಉದ್ಯಾನ ಮತ್ತು ಮಾಡಿದ ಬೆಟ್ಟಗಳಿದ್ದರೂ, ವಿಜಯಾರ್ಧ ಮತ್ತು ಹಿಮಾಚಲದ ಶಿಖರಗಳಲ್ಲಿ ಓಡಾಡುವ ಆಸೆ, ತನ್ನರಮನೆ ಮತ್ತು ಉದ್ಯಾನವನಗಳಲ್ಲಿ ಆಟವಾಡಲು ಕೊಳಗಳಿದ್ದರೂ ಮಲಯ ಪರ್ವತದ ಶ್ರೀಗಂಧದ ಕಾವಲಿನಲ್ಲಿ ಕೂತು ಸಂತೋಷಿಸುವ ಹಂಬಲ, ಮಕ್ಕಳನ್ನು ನೋಡಿಕೊಳ್ಳುವ ದಾದಿಯರೂ ಪರಿಣತವೈದ್ಯರು ಸಲಹೆಯೀಯುವ ಆರೋಗ್ಯಕರವಾದ ಅಮೃತಾಹಾರಗಳಿದ್ದರೂ ಆರೂ ಖಂಡಗಳ ಮಣ್ಣಿನ ರುಚಿ ನೋಡುವ ಇಷ್ಟ, ಸೇವೆಯನ್ನು ಬಲ್ಲ ವಾರಾಂಗನೆಯರು ಆಡುವ ಸವಿಯಾದ ಮಾತುಗಳಿದ್ದರೂ ಅಸಹಾಯಶೂರರು ಸಮುದ್ರಗಳನ್ನು ದಾಟುವುದರ ಅನುಭವಕಥನಗಳನ್ನು ಕೇಳುವ ಬಯಕೆ, ನಯವೂ ಇನಿದೂ ಪ್ರೌಢವೂ ಸರಳ ವಿನೋದದಿಂದಲೂ ಕೂಡಿದ ಸವಿಯಾದ ಮಾತುಗಳನ್ನಾಡುವ ಗಿಳಿಗಳಿದ್ದರೂ ಪಂಜರದಲ್ಲಿರಿಸಿದ ಮದವೈರಿಯಾದ ಸಿಂಹದ ಮರಿಗಳನ್ನು ಇರಿಸಿ ನೋಡುವ ಮಹದಾಸೆ,

**ಕೆಲದೊಳ್ ಶ್ರೀದರ್ಪಣಂ ಬಂದಿರೆಯುಮೊಸೆದು ವಕ್ತ್ರೇಂದುವಂ ಖಡ್ಗದೊಳ್ ನೋ**
**ಡಲುಮಾತೋದ್ಯಗೀತಧ್ವನಿಗಳಿರೆ ಧನುರ್ದಂಡಟಂಕಾರಮಂ ಕೇ**
**ಳಲುಮಟ್ಟಿರ್ಪೆರ್ಚೆ ತತ್ಕಾಂತೆಗೆ ನೆಗಟ್ದುವು ಗರ್ಭಸ್ಥನುತ್ಸಾಹಮಂ ತೋ**
**ಳ್ವಲಮಂ ಸಾಮ್ರಾಜ್ಯಮಂ ಸೂಚಿಸುವೊಲತಿಚೋದ್ಯಂಗಳೀ ದೌಹೃದಂಗಳ್ ೩೩**

**ಪದವಿಭಾಗ–ಅನ್ವಯ–ಅರ್ಥ:** ಕೆಲದೊಳ್ ಶ್ರೀದರ್ಪಣಂ ಬಂದಿರೆಯುಂ = ಪಕ್ಕದಲ್ಲಿಯೇ ಮಣಿಗನ್ನಡಿಯಿದ್ದರೂ, ವಕ್ತ್ರೇಂದುವಂ ಖಡ್ಗದೊಳ್ ಒಸೆದು ನೋಡಲುಂ = ತನ್ನ ಮುಖಚಂದ್ರನನ್ನು ಕತ್ತಿಯ ಅಲಗಿನಲ್ಲಿ ನೋಡಿಕೊಳ್ಳುವ, ಆತೋದ್ಯಗೀತಧ್ವನಿಗಳ್ + ಇರೆ = ವಾದ್ಯಗಳು ಮತ್ತು ಗಾಯನದ ಧ್ವನಿಗಳಿದ್ದರೂ, ಧನುರ್ದಂಡಟಂಕಾರಮಂ ಕೇಳಲುಂ = ಬಿಲ್ಲಿನ ಹೆದೆಯ ಟಂಕಾರವನ್ನು ಕೇಳುವ, ತತ್ + ಕಾಂತೆಗೆ ಅಟ್ಟಿಜ್ + ಪೆರ್ಚೆ = ಆ ದೇವಿಗೆ ಆಸೆಯು ತೀವ್ರವಾಗಿ, ಗರ್ಭಸ್ಥನ + ಉತ್ಸಾಹಮಂ ತೋಳ್ವಲಮಂ ಸಾಮ್ರಾಜ್ಯಮಂ ಸೂಚಿಸುವೊಲ್ = ಬಸಿರಲ್ಲಿದ್ದವನ ಉತ್ಸಾಹ ಸಾಮ್ರಾಜ್ಯವೈಶಾಲ್ಯಹಂಬಲ ತೋಳ ಬಲಗಳನ್ನು ಸೂಚಿಸುವಂತೆ, ಅತಿಚೋದ್ಯಂಗಳ್ + ಈ ದೌಹೃದಂಗಳ್ ನೆಗಟ್ದುವು = ತೀರ ವಿಸ್ಮಯಕರವಾದ ಇಂತಹ ಬಯಕೆಗಳು ಕಾಣಿಸಿಕೊಂಡುವು.

**ಗದ್ಯಾನುಸರಣ:** ಪಕ್ಕದಲ್ಲಿಯೇ ಮಣಿಗನ್ನಡಿಯಿದ್ದರೂ ತನ್ನ ಮುಖಚಂದ್ರನನ್ನು ಕತ್ತಿಯ ಅಲಗಿನಲ್ಲಿ ನೋಡಿಕೊಳ್ಳುವ ಬಯಕೆ, ವಾದ್ಯಗಳು ಮತ್ತು ಗಾಯನದ

ಧ್ವನಿಗಳಿದ್ದರೂ ಬಿಲ್ಲಿನ ಹೆದೆಯ ಟಂಕಾರವನ್ನು ಕೇಳುವ ಆಸಕ್ತಿಗಳು ಆ ದೇವಿಗೆ ತೀವ್ರವಾಗಿ, ಬಸಿರಲ್ಲಿದ್ದವನ ಉತ್ಸಾಹ, ಸಾಮ್ರಾಜ್ಯವೈಶಾಲ್ಯಹಂಬಲ ಹಾಗೂ ತೋಳ ಬಲಗಳನ್ನು ಸೂಚಿಸುವಂತೆ ತೀರ ವಿಸ್ಮಯಕರವಾದ ಬಯಕೆಗಳು ಕಾಣಿಸಿಕೊಂಡುವು.

**ವ॥ ಅಂತು ಚಕ್ರವರ್ತಿ ಜನ್ಮೋತ್ಸವ ಸೂಚಕಮಪ್ಪನೇಕದೋಹಳ ಸಂದೋಹಂ ನೆಗಟಿ[3] ಸುಖಪ್ರಸೂತಿಸಮಯದೊಳ್,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಚಕ್ರವರ್ತಿಜನ್ಮೋತ್ಸವಸೂಚಕಮಪ್ಪ = ಹೀಗೆ ಚಕ್ರವರ್ತಿಯು ಹುಟ್ಟುವ ಸೂಚನೆಗಳಾದ, ಅನೇಕದೋಹಳಸಂದೋಹಂ ನೆಗಟಿ[3] = ನಾನಾ ಬಗೆಯ ಬಯಕಗಳ ಗುಂಪು ತಲೆದೋರಲು, ಸುಖಪ್ರಸೂತಿಸಮಯದೊಳ್ = ಸುಖ ಹೆರಿಗೆಯ ಸಮಯದಲ್ಲಿ,

**ಗದ್ಯಾನುಸರಣ:** ಹೀಗೆ ಚಕ್ರವರ್ತಿಯು ಹುಟ್ಟುವ ಸೂಚನೆಗಳಾದ ನಾನಾ ಬಗೆಯ ಬಯಕಗಳ ಗುಂಪು ತಲೆದೋರಿತು; ಸುಖ ಹೆರಿಗೆಯ ಸಮಯದಲ್ಲಿ,

**ಮನುಗೋತ್ರಾಂಭೋಧಿಚಂದ್ರಂ ಮನುಕುಲಸರಸೀ ವಿಭ್ರಮೋತ್ತಂಸ ಹಂಸಂ**
**ಮನುವಂಶಪ್ರಾಚ್ಯಶೈಲದ್ಯುಮಣಿ ಮನುನೃಪಾಮ್ನಾಯದುರ್ಗಾದ್ರಿ ಸಿಂಹಂ**
**ಮನುಭೂಪಾಳಾನ್ವಯಶ್ರೀಭವನಕಳಶಮೆಂಬಂತು ವಿಖ್ಯಾತಪುಣ್ಯಂ**
**ಮನುಧಾತ್ರೀಪಾಲಚೂಡಾಮಣಿ ಜನಿಯಿಸಿದಂ ಚಕ್ರವರ್ತಿಪ್ರಧಾನಂ ೩೪**

**ಪದವಿಭಾಗ–ಅನ್ವಯ–ಅರ್ಥ:** ಮನುಗೋತ್ರ + ಅಂಭೋಧಿಚಂದ್ರಂ = ಮನುವಂಶವೆಂಬ ಕಡಲಿಗೆ ಚಂದ್ರನಾದವನೂ, ಮನುಕುಲಸರಸೀವಿಭ್ರಮ + ಉತ್ತಂಸಹಂಸಂ = ಮನುಕುಲವೆಂಬ ಕೊಳದಲ್ಲಿ ಸಡಗರದಿಂದ ವಿಹರಿಸುವ ಹಂಸವಾದವನೂ, ಮನುವಂಶಪ್ರಾಚ್ಯಶೈಲದ್ಯುಮಣಿ = ಮನುಕುಲವೆಂಬ ಮೂಡಲಗಿರಿಯ ನೇಸರದಂತಹವನೂ, ಮನುನೃಪ + ಆಮ್ನಾಯದುರ್ಗ + ಅದ್ರಿಸಿಂಹಂ = ಮನುಕುಲದ ರಾಜರ ವಂಶವೆಂಬ ಬೆಟ್ಟಕ್ಕೆ ಸಿಂಹದಂತಿರುವವನೂ, ಮನುಭೂಪಾಳ + ಅನ್ವಯಶ್ರೀಭವನಕಳಶಂ = ಮನುವಂಶದ ದೊರೆಗಳ ಸಂತತಿಯ ಅರಮನೆಯ ಕಳಶದಂತಿರುವವನೂ, ಎಂಬಂತು ವಿಖ್ಯಾತಪುಣ್ಯಂ = ಎಂಬಂತೆ ವಿಖ್ಯಾತಪುಣ್ಯನಾದ, ಮನುಧಾತ್ರೀಪಾಲಚೂಡಾಮಣಿ ಚಕ್ರವರ್ತಿಪ್ರಧಾನಂ ಜನಿಯಿಸಿದಂ = ಮನುಸಂತತಿಯ ದೊರೆಗಳಲ್ಲಿ ತಲೆವಣಿಯಾದ ಮೊದಲ ಚಕ್ರವರ್ತಿಯು ಜನಿಸಿದ.

**ಗದ್ಯಾನುಸರಣ:** ಮನುವಂಶವೆಂಬ ಕಡಲಿಗೆ ಚಂದ್ರನಾದ, ಮನುಕುಲವೆಂಬ ಕೊಳದಲ್ಲಿ ಸಡಗರದಿಂದ ವಿಹರಿಸುವ ಹಂಸವಾದ, ಮನುಕುಲವೆಂಬ

ಮೂಡಲಗಿರಿಯ ನೇಸರದಂತಹ, ಮನುಕುಲದ ರಾಜರ ವಂಶವೆಂಬ ಬೆಟ್ಟಕ್ಕೆ ಸಿಂಹದಂತಿರುವ, ಮನುವಂಶದ ದೊರೆಗಳ ಸಂತತಿಯ ಅರಮನೆಯ ಕಳಶದಂತಿರುವ ವ್ಯಕ್ತಿ ಎಂಬಂತೆ ವಿಖ್ಯಾತಪುಣ್ಯನೂ ಮನುಸಂತತಿಯ ದೊರೆಗಳಲ್ಲಿ ತಲೆವಣಿಯೂ ಆದ ಮೊದಲ ಚಕ್ರವರ್ತಿಯು ಜನಿಸಿದ.

**ವಿಶೇಷ ವಿಚಾರ:** ಮಗುವು ಎರಡೂ ತೋಳುಗಳಿಂದ ಭೂಮಿಯನ್ನು ಆಲಂಗಿಸಿಕೊಂಡು ಹುಟ್ಟಿದುದರಿಂದ ಜ್ಯೋತಿಷಿಗಳು ಅವನು ಚಕ್ರವರ್ತಿಯಾಗುವುದಾಗಿ ಭವಿಷ್ಯ ನುಡಿದರೆಂದು ಪೂರ್ವ ಪುರಾಣ ಹೇಳುತ್ತದೆ, ಪೂಪು, ೧೪. ೧೪೨

**ವ। ಆ ಪ್ರಸ್ತಾವದೊಳ್**

**ಅರ್ಥ:** ಆ ಪ್ರಸ್ತಾವದೊಳ್ = ಆ ಸಮಯದಲ್ಲಿ,

**ಎಸಗಿದುದು ಸಮೀರಂ ಶೈತ್ಯಸೌರಭ್ಯಮಾಂದ್ಯಾ**
**ವಸಥಮೆಸೆದುದಾಶಾಚಕ್ರಮಂಭೋದಮಾರ್ಗಂ**
**ಪೊಸತೆ ತೊಳೆದುದೀಗಳ್ ಪಾಲೊಳೆಂಬಂತುಟಾಂತ್ರೋ**
**ನೆಸೆದು ಸೊಗಯಿಸಿತ್ತಾ ಚಕ್ರಿಜನ್ಮೋತ್ಸವಾಹಂ ೩೫**

**ಪದವಿಭಾಗ–ಅನ್ವಯ–ಅರ್ಥ:** ಶೈತ್ಯಸೌರಭ್ಯಮಾಂದ್ಯ + ಅವಸಥಂ ಸಮೀರಂ ಎಸಗಿದುದು = ತಂಪಾದ ಪರಿಮಳದ ಮೆಲುಗಾಳಿಯು ಬೀಸಿತು, ಆಶಾಚಕ್ರಂ ಎಸೆದುದು = ದಿಕ್ಕುಗಳು ಹೊಳಪುಗೊಂಡುವು, ಅಂಭೋದಮಾರ್ಗಂ ಈಗಳ್ ಪಾಲೊಳ್ ಪೊಸತೆ ತೊಳೆದುದು = ಮೋಡದ ದಾರಿಯಾದ ಆಗಸವು ಹಾಲಿನಿಂದ ಈಗ ಹೊಸತಾಗಿ ತೊಳೆದಂತಾಯಿತು, ಎಂಬಂತುಟು ಆ ಚಕ್ರಿಜನ್ಮೋತವ + ಅಹಂ ಆಯ್ತು = ಎಂಬಂತೆ ಆ ಚಕ್ರವರ್ತಿಯು ಹುಟ್ಟಿದ ದಿನವು, ಏನ್ + ಎಸೆದು ಸೊಗಯಿಸಿತ್ತು = ಅದೇನು ಶೋಭೆಯಿಂದ ಸೊಗಯಿಸಿತೋ!

**ಗದ್ಯಾನುಸರಣ:** ತಂಪಾದ ಪರಿಮಳದ ಮೆಲುಗಾಳಿಯು ಬೀಸಿತು, ದಿಕ್ಕುಗಳು ಹೊಳಪುಗೊಂಡುವು, ಮೋಡದ ದಾರಿಯಾದ ಆಗಸವು ಹಾಲಿನಿಂದ ಈಗ ಹೊಸತಾಗಿ ತೊಳೆದಂತಾಯಿತು – ಎಂಬಂತೆ ಆ ಚಕ್ರವರ್ತಿಯು ಹುಟ್ಟಿದ ದಿನವು ಅತೀವ ಶೋಭೆಯಿಂದ ಸೊಗಯಿಸಿತು!

**ವ। ಆಗಳ್ ಸರಭಸಪ್ರಚಾರಿತಪರಿಜನಪದಕ್ಷೋಭವಿಚಳಿತಮಹೀತಳಮುಂ ಪ್ರತಿನಿಕೇತನೋತ್ಥಾಪಿತವಿಚಿತ್ರಕೇತನಮುಂ ಮೃಗಮದಜಳಚ್ಛಟಾಸಿಕ್ತಪ್ರಾಂಗಣ ಮುಂ ಮಧುಕರ**

ನಿಕರಝುಂಕಾರಹಾರಿಕುಸುಮೋಪಹಾರಮುಂ ಮಹೀಪತಿ ನಿವೇದನಸಂಭ್ರಮಗಮನ ಸ್ಖಲಿತ ವೃದ್ಧಕಂಚುಕೀನಿಕರಮುಂ ಅಂತಃಪುರ ಪರಿಜನ ನಿರ್ದಯ ಸಂಮರ್ದನಪತಿತ ಕುಬ್ಜವಾಮನ ವರ್ಷಧರ ನಿಕುರುಂಬ ಮುಂ ನಾಭಿವಿಲಂಬಮಾನಲಂಬಸ್ತನವಿಸ್ರಸ್ತಾಂತರಿತೋತ್ತರೀಯ ವೃದ್ಧ ಧಾತ್ರೀನರ್ತನನಿರೀಕ್ಷಣಜನತಾಜನಿತನಿವಾಸಮುಂ ಯುಗಪದುತ್ಥಿತ ಮಂಗಳ ಗೀತ ನೃತ್ಯೋನ್ಮಿಶ್ರಿತಾನೇಕಾನಕಲಯಾನುಗತ ಲೀಲಾಲಾಸ್ಯಪ್ರಸಕ್ತ ಕಾಮಿನೀ ಕಮನೀಯಮುಮಾಗಿ,

**ಪದವಿಭಾಗ-ಅನ್ವಯ-ಅರ್ಥ:** ಆಗಳ್ = ಆಗ, ಸರಭಸಪ್ರಚಾರಿತಪರಿಜನ = ಜೋರಾಗಿ ಓಡಿದ ಪರಿವಾರದವರ, ಪದಕ್ಷೋಭವಿಚಳಿತಮಹೀತಳಮುಂ = ಪಾದಗಳ ತುಳಿತದಿಂದ ಅಲುಗಾಡುವ ಭೂಮಿ, ಪ್ರತಿನಿಕೇತನ + ಉತ್ಥಾಪಿತ ವಿಚಿತ್ರಕೇತನಮುಂ = ಪ್ರತಿಯೊಂದು ಮನೆಯ ಮೇಲೆಯೂ ಹಾರಿಸಿರುವ ಆಕರ್ಷಕ ಬಾವುಟಗಳು, ಮೃಗಮದಜಳಚ್ + ಛಟಾಸಿಕ್ತಪ್ರಾಂಗಣಮುಂ = ಕಸ್ತೂರಿ ಬೆರೆತ ನೀರಿನ ರಾಶಿಯಿಂದ ತೊಯ್ದ ಅಂಗಳ, ಮಧುಕರನಿಕರ ಝುಂಕಾರಹಾರಿಕುಸುಮ + ಉಪಹಾರಮುಂ = ದುಂಬಿಗಳ ಹಿಂಡು ಝೇಂಕರಿಸುವ ಮನೋಹರವಾದ ಹೂಗಳ ಚೆಲ್ಲುವಿಕೆ, ಮಹೀಪತಿನಿವೇದನ ಸಂಭ್ರಮಗಮನಸ್ಖಲಿತ ವೃದ್ಧಕಂಚುಕೀನಿಕರಮುಂ = ರಾಜನಿಗೆ ಬಿನ್ನವಿಸಲು ಸಡಗರದಿಂದ ಸಾಗುವಾಗಿ ಮುಗ್ಗರಿಸುವ ಮುದಿ ಕಂಚುಕಿಯರ ಸಾಲು, ಅಂತಃಪುರಪರಿಜನನಿ ರ್ದಯಸಂಮರ್ದನಪತಿತ = ಅಂತಃಪುರದ ಪರಿಜನರು ಒರಟಾಗಿ ತಳ್ಳಲು ದಟ್ಟಣೆಯಿಂದ ಬೀಳುವ, ಕುಬ್ಜ ವಾಮನ ವರ್ಷಧರನಿ ಕುರುಂಬಮುಂ = ಕುಳರ ಗಿಡ್ಡರು ಮತ್ತು ಅಂತಃಪುರದ ನಪುಂಸಕರ ಗುಂಪು, ನಾಭಿವಿಲಂಬಮಾನಲಂಬಸ್ತನವಿಸ್ರಸ್ತ = ಹೊಕ್ಕುಳವರೆಗೆ ಜೋತುಬಿದ್ದ ತೋರವೊಲೆಗಳಿಂದ ಜಾರಿಬಿದ್ದ, ಅಂತರಿತ + ಉತ್ತರೀಯ ವೃದ್ಧಧಾತ್ರೀನರ್ತನನಿರೀಕ್ಷಣ = ಸೆರಗು ಮತ್ತು ಭುಜವಸ್ತ್ರಗಳ ಮುದುಕ ದಾದಿಯರ ಕುಣಿತವನ್ನು ನೋಡುವ, ಜನತಾಜನಿತನಿವಾಸಮುಂ = ಜನರಿಂದ ಕೂಡಿದ ಸ್ಥಳವೂ, ಯುಗಪತ್ + ಉತ್ಥಿತಮಂಗಳಗೀತನೃತ್ಯ + ಉನ್ಮಿಶ್ರಿತ = ಒಟ್ಟಿಗೇ ಉಂಟಾದ ಮಂಗಳ ಗಾಯನ ನರ್ತನಗಳಿಂದ ಕೂಡಿದ, ಅನೇಕ + ಆನಕಲಯ + ಅನುಗತ = ನಾನಾ ವಾದ್ಯಗಳ ಲಯಕ್ಕನುಗುಣವಾದ, ಲೀಲಾಲಾ ಸ್ಯಪ್ರಸಕ್ತಕಾಮಿನೀಕಮನೀಯಮುಂ + ಆಗಿ = ಸುಂದರ ನಾಟ್ಯದಲ್ಲಿ ತೊಡಗಿದ ಕಾಮಿನಿಯರಿಂದ ಆಕರ್ಷಕವಾಗಿ,

**ಗದ್ಯಾನುಸರಣ:** ಜೋರಾಗಿ ಓಡಿದ ಪರಿವಾರದವರ ಪಾದಗಳ ತುಳಿತದಿಂದ ಭೂಮಿ ಅಲುಗಾಡುತ್ತಿತ್ತು; ಪ್ರತಿಯೊಂದು ಮನೆಯ ಮೇಲೆಯೂ ಆಕರ್ಷಕ ಬಾವುಟಗಳು ಹಾರಾಡುತ್ತಿದ್ದುವು; ಕಸ್ತೂರಿ ಬೆರೆತ ನೀರಿನ ರಾಶಿಯಿಂದ ಅಂಗಳತೊಯ್ದು ಹೋಗಿತ್ತು; ಮನೋಹರವಾಗಿ ಹೂಗಳನ್ನು ಎರಚಿದ್ದರಿಂದಾಗಿ

ಅವುಗಳ ಬಳಿ ದುಂಬಿಗಳ ಹಿಂಡು ಝೇಂಕರಿಸುತ್ತಿದ್ದುವು; ರಾಜನಿಗೆ ಬಿನ್ನವಿಸಲೆಂದು ಸಡಗರದಿಂದ ಸಾಗುವಾಗಿ ಮುದಿ ಕಂಚುಕಿಯರು ಮುಗ್ಗರಿಸುತ್ತಿದ್ದರು; ಅಂತಃಪುರದ ಪರಿಜನರು ಒರಟಾಗಿ ತಳ್ಳಲು ಉಂಟಾದ ದಟ್ಟಣೆಯಿಂದ ಕುಳ್ಳರು ಗಿಡ್ಡರು ಮತ್ತು ಅಂತಃಪುರದ ನಪುಂಸಕರು ಬೀಳುತ್ತಿದ್ದರು; ಹೊಕ್ಕುಳವರೆಗೆ ಜೋತುಬಿದ್ದ ತೋರಮೊಲೆಗಳಿಂದ ಜಾರುವ ಸೆರಗು ಮತ್ತು ಭುಜವಸ್ತ್ರಗಳ ಮುದುಕ ದಾದಿಯರ ಕುಣಿತವನ್ನು ಜನರು ನೋಡುತ್ತ ನಿಂತಿದ್ದರು; ಒಟ್ಟಿಗೇ ಉಂಟಾದ ಮಂಗಳ ಗಾಯನ ನರ್ತನಗಳಿಂದ ಕೂಡಿದ ಮತ್ತು ನಾನಾ ವಾದ್ಯಗಳ ಲಯಕ್ಕನುಗುಣವಾದ ಸುಂದರ ನಾಟ್ಯದಲ್ಲಿ ಕಾಮಿನಿಯರು ತೊಡಗಿದ್ದರು; ಹೀಗೆ ಅರಮನೆಯು ಆಕರ್ಷಕವಾಯಿತು.

**ಮನುಜಾಧೀಶಸಮೂಹಸಂಚರಣದಿಂ ಸಾಮಂತಸೀಮಂತಿನೀ**
**ಜನಸಮ್ಮರ್ದದಿನುತ್ಸವಧ್ವಜಪಟಪ್ರಾಸಾದದಿಂ ರತ್ನವಂ**
**ದನಮಾಲಾಪ್ರಚುರಪ್ರಭಾಪ್ರಸರದಿಂದಾನಂದಭೇರೀಬೃಹ**
**ದ್ಧ್ವನಿಯಿಂದಾಲಯಮಾಯ್ತದೊಂದು ಪಿರಿದುಂ ಚೆಲ್ವಿಂಗೆ ರಾಜಾಲಯಂ೩೬**

**ಪದವಿಭಾಗ–ಅನ್ವಯ–ಅರ್ಥ:** ಮನುಜಾಧೀಶಸಮೂಹಸಂಚರಣದಿಂ = ರಾಜರುಗಳ ಗುಂಪಿನ ಓಡಾಟದಿಂದಲೂ, ಸಾಮಂತಸೀಮಂತಿನೀಜನಸಮ್ಮರ್ದದಿನ್ = ಸಾಮಂತಸ್ತ್ರೀಯರ ದಟ್ಟಣೆಯಿಂದಲೂ, ಉತ್ಸವಧ್ವಜಪಟಪ್ರಾಸಾದದಿಂ = ಉತ್ಸವದ ಬಾವುಟಗಳ ಹಾರುವಿಕೆಯಿಂದಲೂ, ರತ್ನವಂದನಮಾಲಾಪ್ರಚುರಪ್ರಭಾಪ್ರಸರದಿಂದೆ = ಮಣಿಖಚಿತವಾದ ತೋರಣಗಳ ಕಾಂತಿಯ ಹರಡುವಿಕೆಯಿಂದಲೂ, ಆನಂದಭೇರೀಬೃಹತ್ + ಧ್ವನಿಯಿಂದೆ = ಆನಂದಭೇರಿಯ ಮಹಾ ಶಬ್ದದಿಂದಲೂ, ರಾಜಾಲಯಂ ಪಿರಿದುಂ ಚೆಲ್ವಿಂಗೆ ಅದೊಂದು ಆಲಯಮಾಯ್ತು = ಅರಮನೆಯು ಅದೊಂದು ಅತೀವ ಸೊಗಸಿನ ತಾಣವಾಯಿತು.

**ಗದ್ಯಾನುಸರಣ:** ರಾಜರುಗಳ ಗುಂಪಿನ ಓಡಾಟದಿಂದಲೂ, ಸಾಮಂತಸ್ತ್ರೀಯರ ದಟ್ಟಣೆಯಿಂದಲೂ, ಉತ್ಸವದ ಬಾವುಟಗಳ ಹಾರುವಿಕೆಯಿಂದಲೂ, ಮಣಿಖಚಿತವಾದ ತೋರಣಗಳ ಕಾಂತಿಯ ಹರಡುವಿಕೆಯಿಂದಲೂ, ಆನಂದಭೇರಿಯ ಮಹಾ ಶಬ್ದದಿಂದಲೂ ಅರಮನೆಯು ಅತೀವ ಸೊಗಸಿನ ಅತಾಣವಾಯಿತು.

**ವ।** **ಆಗಳ್ ನಾಭಿರಾಜಕಚ್ಛಮಹಾಕಚ್ಛಪ್ರಮುಖಪ್ರಭುಗಳ್ ನೆರೆದು ಜಾತಕರ್ಮೋತ್ಸವಮಂ ಮಾಡಿದ ತದನಂತರದೊಳ್,**

**ಪದವಿಭಾಗ–ಅನ್ವಯ–ಅರ್ಥ:** ಆಗಳ್= ಆಗ, ನಾಭಿರಾಜಕಚ್ಛ ಮಹಾಕಚ್ಛಪ್ರಮುಖಪ್ರಭುಗಳ್ ನೆರೆದು = ನಾಭಿರಾಜ ಕಚ್ಛ ಮತ್ತು ಮಹಾಕಚ್ಛ ಮುಂತಾದ ಮುಖ್ಯ ಪ್ರಭುಗಳು ಸೇರಿ, ಜಾತಕರ್ಮ + ಉತ್ಸವಮಂ ಮಾಡಿದ

ತತ್ + ಅನಂತರದೊಳ್ = ಜಾತಕರ್ಮ ಉತ್ಸವವನ್ನು ಮಾಡಿದ ಆನಂತರದಲ್ಲಿ,

**ಗದ್ಯಾನುಸರಣ:** ಆಗ, ನಾಭಿರಾಜ ಕಚ್ಛ ಮತ್ತು ಮಹಾಕಚ್ಛ ಮುಂತಾದ ಮುಖ್ಯ ಪ್ರಭುಗಳು ಸೇರಿ ಮಗುವಿನ ಜಾತಕರ್ಮ ಉತ್ಸವವನ್ನು ನೆರವೇರಿಸಿದರು; ಆನಂತರದಲ್ಲಿ,

**ಭಾವೀಭರತೇಶಪದಮುಮಿ**
**ಳಾವಿಪುಳಪ್ರೇಮಭರಮುಮೆರ್ದೆಗೊಂಡಿರೆ ಸ**
**ದ್ಭಾವದಿನಿಟ್ಟುದು ಬಂಧುಜ**
**ನಾವಳಿ ಕೂಸಿಂಗೆ ಭರತನೆಂಬೀ ಪೆಸರಂ** ೩೭

**ಪದವಿಭಾಗ–ಅನ್ವಯ–ಅರ್ಥ:** ಭಾವೀಭರತೇಶಪದಮುಂ = ಮುಂದೆ ಬರುವ ಭರತೇಶ ಪದವಿಯೂ, ಇಳಾವಿಪುಳಪ್ರೇಮಭರಮುಂ = ತುಂಬಿದ ಪ್ರೇಮಾಧಿಕ್ಯವೂ, ಎರ್ದೆಗೊಂಡಿರೆ = ಮನಸೂರೆಗೊಂಡು, ಬಂಧುಜನ + ಆವಳಿ ಸದ್ಭಾವದಿನ್ ಕೂಸಿಂಗೆ ಭರತನೆಂಬೀ ಪೆಸರಂ ಇಟ್ಟುದು = ಬಂಧುಜನಸಮೂಹವು ಸೇರಿ ಒಳ್ಳೆಯ ಮನಸ್ಸಿನಿಂದ ಕೂಸಿಗೆ ಭರತ ಎಂಬ ಹೆಸರನ್ನು ಇಟ್ಟರು.

**ಗದ್ಯಾನುಸರಣ:** ಮುಂದೆ ಬರುವ ಭರತೇಶ ಪದವಿಯೂ, ತುಂಬಿದ ಪ್ರೇಮಾಧಿಕ್ಯವೂ ಮನಸೂರೆಗೊಂಡು ಬಂಧುಜನಸಮೂಹವು ಸೇರಿ ಒಳ್ಳೆಯ ಮನಸ್ಸಿನಿಂದ ಕೂಸಿಗೆ ಭರತ ಎಂಬ ಹೆಸರನ್ನಿಟ್ಟರು.

**ವ। ಅಂತು ನಿಜದೇಹಪ್ರಭಾಪ್ರವಾಹಜಲಂಗಳೊಳಂ ಕರಚರಣ ತಳರಕ್ತಾಂಭೋರುಹಂಗಳೊಳಂ ಅತಿಮೃದುಳಬಾಹು ಬಾಳಮೃಣಾಳ ಕಾಂಡಂಗಳೊಳಂ ರಾಜ್ಯಲಕ್ಷ್ಮೀಲೀಲಾ ಕರನಪ್ಪುದಂ ನನ್ನಿಮಾಡುತ್ತು ಮಂತಃಪುರ ಕಾಂತಾಕರಪರಂಪರಾಸಂಚಾರ ರತ್ನದರ್ಪಣನುಂ ಬಂಧುಜನ ಕರಕಮಳವನವಿಹಾರಕೇಳೀಕಳಹಂಸನುಂ ಗುರುಜನ ನಯನೇಂದೀ ವರಾ ನಂದ ಶರಚ್ಚಂದ್ರನುಮಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು = ಹಾಗೆ, ನಿಜದೇಹಪ್ರಭಾ ಪ್ರವಾಹಜಲಂಗಳೊಳಂ = ತನ್ನ ಶರೀರಕಾಂತಿಯೆಂಬ ನೀರಿನ ಧಾರೆಯಿಂದಲೂ, ಕರಚರಣತಳರಕ್ತ + ಅಂಭೋರುಹಂಗಳೊಳಂ = ಅಂಗೈ ಅಂಗಾಲುಗಳೆಂಬ ಕೆಂದಾವರೆಗಳಿಂದಲೂ, ಅತಿಮೃದುಳಬಾಹುಬಾಳಮೃಣಾಳಕಾಂಡಂಗಳೊಳಂ = ತುಂಬ ಮೆತ್ತಗಿನ ತೋಳುಗಳೆಂಬ ಎಳೆಯ ತಾವರೆದಂಟುಗಳಿಂದಲೂ, ರಾಜ್ಯಲಕ್ಷ್ಮೀಲೀಲಾಕರನ್ + ಅಪ್ಪುದಂ ನನ್ನಿಮಾಡುತ್ತುಂ = ರಾಜ್ಯಲಕ್ಷ್ಮಿಯ ವೈಭವಕ್ಕೆ (ತಾನು) ನೆಲೆಯಾಗುವುದನ್ನು ನಿಜವಾಗಿಸುತ್ತ, ಅಂತಃಪುರಕಾಂತಾ ಕರಪರಂಪರಾಸಂಚಾರರತ್ನದರ್ಪಣನುಂ = ಅಂತಃಪುರದ ವನಿತೆಯರ ಗುಂಪಿನಲ್ಲಿ

ಸಂಚರಿಸುವ ಮಣಿದರ್ಪಣವೂ, ಬಂಧುಜನಕರಕಮಳವನವಿಹಾರಕೇಳೀ ಕಳಹಂಸನುಂ = ನಂಟರಿಷ್ಟರೆಂಬ ಸರೋವರದಲ್ಲಿ ತೇಲಾಡುವ ರಾಜಹಂಸನೂ, ಗುರುಜನನಯನ + ಇಂದೀವರ + ಆನಂದಶರತ್ + ಚಂದ್ರನುಂ + ಆಗಿ = ಹಿರಿಯರ ಕಣ್ಣುಗಳೆಂಬ ನೈದಿಲೆಗಳಿಗೆ ಆನಂದವನ್ನುಂಟುಮಾಡುವ ಶರತ್ಕಾಲದ ಚಂದ್ರನೂ ಅಗಿ,

**ಗದ್ಯಾನುಸರಣ:** ಹಾಗೆ, ತನ್ನ ಶರೀರಕಾಂತಿಯೆಂಬ ನೀರಿನ ಧಾರೆ ಯಿಂದಲೂ, ಅಂಗೈ ಅಂಗಾಲುಗಳೆಂಬ ಕೆಂದಾವರೆಗಳಿಂದಲೂ, ತುಂಬ ಮೆತ್ತಗಿನ ತೋಳು ಗಳೆಂಬ ಎಳೆಯ ತಾವರೆದಂಟುಗಳಿಂದಲೂ, ತಾನು ರಾಜ್ಯಲಕ್ಷ್ಮಿಯ ವೈಭವಕ್ಕೆ ನೆಲೆಯಾಗುವುದನ್ನು ನಿಜವಾಗಿಸುತ್ತ, ಅಂತಃಪುರದ ವನಿತೆಯರ ಗುಂಪಿನಲ್ಲಿ ಸಂಚರಿಸುವ ಮಣಿದರ್ಪಣದಂತೆ, ನಂಟರಿಷ್ಟರೆಂಬ ಸರೋವರದಲ್ಲಿ ತೇಲಾಡುವ ರಾಜಹಂಸನಂತೆ, ಹಿರಿಯರ ಕಣ್ಣುಗಳೆಂಬ ನೈದಿಲೆಗಳಿಗೆ ಆನಂದವನ್ನುಂಟು ಮಾಡುವ ಶರತ್ಕಾಲದ ಚಂದ್ರನಂತೆ ಕೂಸು ಕಂಗೊಳಿಸಿತು.

**ದರಹಸಿತಂ ಹಸಿತಂ ಸುಂ**
**ದರಮನ್ಮನಲಪಿತರುಚಿತರಂಗಿತಮೆಂಬೀ**
**ಪರಿವಿಡಿದು ಬಾಲಕೇಳಿಯೆ**
**ಕರಮೆ ಮರುಳ್ಚಿದುದು ತಾಯುಮಂ ತಂದೆಯುಮಂ** ೩೮

**ಪದವಿಭಾಗ–ಅನ್ವಯ–ಅರ್ಥ:** ದರಹಸಿತಂ ಹಸಿತಂ ಸುಂದರ ಮನ್ಮನಲಪಿತ ರುಚಿತರಂಗಿತಂ = ಮಗುಳ್ನಗೆ, ನಗೆ, ಸುಂದರವಾದ ತೊದಲ್ನುಡಿ ಕಾಂತಿಯ ಅಲೆಗಳು, ಎಂಬೀ ಪರಿವಿಡಿದು = ಎಂಬ ಪರಿಯಿಂದ, ಬಾಲಕೇಳಿಯೆ ತಾಯುಮಂ ತಂದೆಯುಮಂ ಕರಮೆ ಮರುಳ್ಚಿದುದು = ಮಗುವಿನಾಟವು ತಾಯ್ತಂದೆಯರನ್ನು ಅತೀವವಾಗಿ ಮರುಳುಗೊಳಿಸಿತು.

**ಗದ್ಯಾನುಸರಣ:** ಮಗುಳ್ನಗೆ, ನಗೆ, ಸುಂದರವಾದ ತೊದಲ್ನುಡಿ ಕಾಂತಿಯ ಅಲೆಗಳು ಮುಂತಾದ ಪರಿಯಿಂದ ಮಗುವಿನಾಟವು ತಾಯ್ತಂದೆಯರನ್ನು ಅತೀವವಾಗಿ ಮರುಳುಗೊಳಿಸಿತು.

**ವಿಶೇಷ ವಿಚಾರ:** ಶಿಶು ಭರತನ ವರ್ಣನೆ ಪೂರ್ವಪುರಾಣದಲ್ಲಿ ಅರುವತ್ತೈದು ಶ್ಲೋಕಗಳಲ್ಲಿ ಹರಿದಿದೆ; ಪೂಪು, ೧೫. ೧೬೦–೨೨೪

**ನುಡಿಯ ತೊದಳ್ ನಡೆಯ ತಳರ್**
**ಜೆಡೆಗಳ ಕರ್ಪಲರ್ದ ಮೊಗದ ಕಿಱುನಗೆ ಕೆಂಪಂ**
**ಪಡೆದಧರಮಣಿಯ ಚೆಲ್ವಡಿ**
**ಗಡಿಗೆಸೆದುದು ಬಾಳಭಾವದೊಳ್ ಪುರುಸುತನಾ** ೩೯

**ಪದವಿಭಾಗ-ಅನ್ವಯ-ಅರ್ಥ:** ನುಡಿಯ ತೊದಳ್ = ಮಾತಿನ ತೊದಲು, ನಡೆಯ ತಳರ್ = ನಡಿಗೆಯ ಎಡವುವಿಕೆ, ಜೆಡೆಗಳ ಕರ್ಪು = ಜಡೆಗಳ ಕಪ್ಪು ಬಣ್ಣ, ಅಲರ್ದ ಮೊಗದ ಕಿಱುನಗೆ = ಅರಳಿದ ಮುಖದ ಕಿರುನಗೆ, ಕೆಂಪಂ ಪಡೆದ + ಅಧರಂ = ಕೆಂಪಾದ ತುಟಿಗಳು, ಪುರುಸುತನ + ಆ
ಅಣಿಯ ಚೆಲ್ವು = ಇವುಗಳಿಂದ ಕೂಡಿದ ಪುರುದೇವನ ಮಗನ ಮನೋಹರವಾದ ಚೆಲುವು, ಬಾಳಭಾವದೊಳ್ ಅಡಿಗಡಿಗೆ + ಎಸೆದುದು = ಬಾಲಕತನದಲ್ಲಿ ಹೆಜ್ಜೆಹೆಜ್ಜೆಗೂ ಸೊಗಸಾಯಿತು.

**ಗದ್ಯಾನುಸರಣ:** ಮಾತಿನ ತೊದಲು, ನಡಿಗೆಯ ಎಡವುವಿಕೆ, ಜಡೆಗಳ ಕಪ್ಪು ಬಣ್ಣ, ಅರಳಿದ ಮುಖದ ಕಿರುನಗೆ, ಕೆಂಪಾದ ತುಟಿಗಳು – ಇವುಗಳಿಂದ ಕೂಡಿದ ಪುರುದೇವನ ಮಗನ ಮನೋಹರವಾದ ಚೆಲುವು ಬಾಲಕತನದಲ್ಲಿ ಹೆಜ್ಜೆಹೆಜ್ಜೆಗೂ ಸೊಗಸಾಯಿತು.

**ಕೊರಲೊಳ್ ಶಾರ್ದೂಲನಖಾಂ**
**ಕುರಂಗಳುಂ ಹರಿನಖಾಂಕುರಂಳುಮಂದೇಂ**
**ಕರಮೆಸೆದಿರ್ದುವೊ ಶೌಂರ್ಯಾಂ**
**ಕುರಂಗಳೆಂಬಿನೆಗಮಾದಿದೇವಾತ್ಮಜನಾ** ೪೦

**ಪದವಿಭಾಗ-ಅನ್ವಯ-ಅರ್ಥ:** ಆದಿದೇವ + ಆತ್ಮಜನಾ = ಆದಿದೇವನ ಮಗನ, ಕೊರಲೊಳ್ ಶಾರ್ದೂಲನಖ + ಅಂಕುರಂಗಳುಂ = ಕೊರಳಿನಲ್ಲಿ ಹುಲಿಯುಗುರುಗಳೂ, ಹರಿನಖಾಂಕುರಂಳುಂ = ಸಿಂಹದ ಉಗುರುಗಳೂ, ಶೌರ್ಯ + ಅಂಕುರಂಗಳ್ + ಎಂಬಿನೆಗಂ = ಪ್ರತಾಪದ ಕುರುಹುಗಳೆಂಬಂತೆ, ಅಂದೇಂ ಕರಂ + ಎಸೆದು + ಇರ್ದುವೊ = ಅದೇನು ಶೋಭಿಸುತ್ತಿದ್ದುವೋ!

**ಗದ್ಯಾನುಸರಣ:** ಆದಿದೇವನ ಮಗನ ಕೊರಳಿನಲ್ಲಿ ಹುಲಿಯುಗುರುಗಳೂ ಸಿಂಹದ ಉಗುರುಗಳೂ ಪ್ರತಾಪದ ಕುರುಹುಗಳೆಂಬಂತೆ ಶೋಭಿಸುತ್ತಿದ್ದುವು!

**ವಿಶೇಷ ವಿಚಾರ:** ಹುಲಿಯುಗುರು ಮತ್ತು ಸಿಂಹದ ಉಗುರುಗಳು ಆ ಆಕಾರದ ಆಭರಣಗಳು

**ನುಡಿಯ ಪೊದಳ್ಕೆಯೊಳ್ನುಡಿ**
**ನುಡಿದಂ ನಿಜಸಕಳಚಕ್ರವರ್ತಿತ್ವಕ್ಕಂ**
**ದಡಿಯಿಡುವಂತೆ ನಿರಂತರ**
**ಮುಡಿಯಿಟ್ಟಂ ಪದ್ಮರಾಗಕುಟ್ಟಿಮತಳದೊಳ್** ೪೧

**ಪದವಿಭಾಗ-ಅನ್ವಯ-ಅರ್ಥ:** ನುಡಿಯ ಪೊದಳ್ಕೆಯ + ಒಳ್ನುಡಿ ನುಡಿದಂ = ಮಾತಿನ ಹೊಂದಿಕೆಯ ಒಳುನುಡಿಗಳನ್ನು ಆಡಿದ; ಅಂದು ನಿಜಸಕಳಚಕ್ರವರ್ತಿತ್ವಕ್ಕೆ ಅಡಿಯಿಡುವಂತೆ = ತನ್ನ ಚಕ್ರವರ್ತಿಪದವಿಗೆ ನಡೆದು ಬರುವಂತೆ, ಪದ್ಮರಾಗಕುಟ್ಟಿಮತಳದೊಳ್ ನಿರಂತರಂ + ಅಡಿಯಿಟ್ಟಂ = ಮಾಣಿಕ್ಯದ ನೆಲಗಟ್ಟಿನಲ್ಲಿ ಗಟ್ಟಿಯಾದ ಹೆಜ್ಜೆಗಳನ್ನಿಟ್ಟ.

**ಗದ್ಯಾನುಸರಣ:** ಬಾಲಕನು ಮಾತಿನ ಹೊಂದಿಕೆಯ ಒಳುನುಡಿಗಳನ್ನು ಆಡಿದ; ತನ್ನ ಚಕ್ರವರ್ತಿಪದವಿಗೆ ನಡೆದು ಬರುವಂತೆ ಮಾಣಿಕ್ಯದ ನೆಲಗಟ್ಟಿನಲ್ಲಿ ಗಟ್ಟಿಯಾದ ಹೆಜ್ಜೆಗಳನ್ನಿಟ್ಟ.

**ವ।** **ನಿಜಾನ್ವಯಲೀಲಾಲಲಾಮಂಗೆ ಲೋಕಯಾತ್ರಾಪ್ರವರ್ತನ ನಿಮಿತ್ತಮಾದಿಬ್ರಹ್ಮ ನನ್ನಪ್ರಾಶನಚೌಲೋಪನಯನಾದಿ ಕ್ರಿಯೆಗಳನನುಕ್ರಮದಿಂ ತಾನೆ ಮಾಡಿ ಸಹಪಾಂಸುಕ್ರೀಡಾನೇಕವಿಭ್ರಮ ಕ್ರೀಡಾರಸೋದಾರರಾಜದಾರಕ ಪರಿವೃತನಾಗಿ ಮೃಗಮದಕರ್ದಮ ಸಂಪಾದಿತಮದಲೇಖಾಮಂಡಿತ ಗಂಡಸ್ಥಳನುಂ ಕುಂಕುಮಪಾಂಸುಪಟಲ ಸಾಂದ್ರಸಿಂದೂರಿತಮಸ್ತಕಪಿಂಡನುಂ ದಕ್ಷಿಣಕರಾಳಂಬಿತ ನಿಬಿಡವೇಷ್ಟಿತಾಂಶುಕವಿಶಾಲಸ್ಥೂಲ ವೃತ್ತಹಸ್ತನುಂ ಮದಾಂಧವಿಜಯಸಿಂಧುರ ಸಿಂದೂರೀಕೃತನುಂ ದಶೈಕಾದಶವರ್ಷ ದೇಶೀಯನುಂ ಅಂತಃಪುರದಾಸೇರಕನನೇಜಿ ಕಿಂಚಿದಾಕುಂಚಿತಾಗ್ರತರ್ಜ ನೀನಿಶಿತಾಂಕುಶನಂತಃಪುರಪ್ರಮದವನ ಪ್ರವಿಷ್ಟನಾಗಿ ಕೃತಕಗಿರಿಶಿಖರಂಗಳಂ ಗಿರಿದುರ್ಗೋತ್ತುಂಗಶಿಖರಂಗಳೆಂದು ಪಾಯಿಸಿಯುಂ ಅತಿನಿಬಿಡ ಬಾಳಕದಳೀಷಂಡಂಗಳಂ ವನದುರ್ಗಂಗಳೆಂದೆ ಪಡಲ್ವಡಿಸಿಯುಂ ಶತಸಹಸ್ರ ಮುಖಾವಹಜಾನುದಘ್ನ ದೀರ್ಘಿಕಾಂಭಃಕುಲ್ಯಾಪ್ರವಾಹಂಗಳಂ ಜಲದುರ್ಗ ಗಳೆಂದೆ ನೂಂಕಿ ಕದಡಿಸಿಯುಂ ಲೀಲಾಕಮಲಾಕರಾನೀಕರಕ್ತಕಮಳಂಗಳ ನಾಸ್ಯಾನುಶೋಣಿತ ಶೋಣರಿಪುನೃಪಶಿರಂಗಳೆಂದು ತುಳಿಯಿಸಿಯುಂ ಉದ್ದಂಡ ಪುಂಡರೀಕಂಗಳಂ ಶ್ವೇತಾತಪತ್ರಂಗಳೆಂದೇ ಮಾಡಿಪಿಡಿಸಿಯುಂ ಅಭಿನವೋದ್ವೃತ್ತಧೌತಶಂಖಶಶಾಂಕ ವಿಶದಜಳಾರ್ದ್ರಕುಸುಮಂಗಳಂ ಸಾರ್ವಭೌಮೋಚಿತ ದ್ವಾತ್ರಿಂಶಚ್ಚಾರುಚಾಮರಂಗಳಂ ಮಾಡಿ ಪಿಡಿಸಿಯುಂ ಸಮುಲ್ಲಸದ ಶೋಕಪಲ್ಲವಂಗಳನನೇಕ ವಿಜಯವೈಜಯಂತಿಗಳೆಂದೇ ಮಾಡಿಸಿಕೊಂಡೆತ್ತಿಯುಂ ವಂದಿಬಾಳಕ ವೃಂದ ಜಯಜಯಾನಂದ ಕೋಳಾಹಳಮೆಸೆಯೆ ಲತಾಗೃಹಮೆಂಬ ರಾಜಗೃಹಕ್ಕೆ ವಂದು,**

**ಪದವಿಭಾಗ-ಅನ್ವಯ-ಅರ್ಥ:** ನಿಜ + ಅನ್ವಯಲೀಲಾಲಲಾಮಂಗೆ = ತನ್ನ ವಂಶದ ಶ್ರೇಷ್ಠನಾದ ಅವನಿಗೆ, ಲೋಕಯಾತ್ರಾಪ್ರವರ್ತನನಿಮಿತ್ತಂ = ಲೋಕಯಾತ್ರೆಯಲ್ಲಿ ತೊಡಗಿಕೊಳ್ಳಲೆಂಬ ಉದ್ದೇಶದಿಂದ, ಆದಿಬ್ರಹ್ಮನ್ + ಅನ್ನಪ್ರಾಶನ ಚೌಲ + ಉಪನಯನ + ಆದಿಕ್ರಿಯೆಗಳನ್ + ಅನುಕ್ರಮದಿಂ ತಾನೆ ಮಾಡಿ = ಆದಿದೇವನು ಅನ್ನಮುಹೂರ್ತ ಕೂದಲು ಬಿಡಿಸುವುದು

ಮುಂಜಿ ಮುಂತಾದ ಸಂಸ್ಕಾರವಿಧಿಗಳನ್ನು ತಾನೇ ಅನುಕ್ರಮದಿಂದ ಮಾಡಿ, ಸಹಪಾಂಸುಕ್ರೀಡಾ + ಅನೇಕವಿಭ್ರಮಕ್ರೀಡಾರಸ + ಉದಾರರಾಜದಾರಕ ಪರಿವೃತನಾಗಿ = ದೂಳಾಟದ ಜೊತೆಗಾರರೊಂದಿಗೆ ಅನೇಕ ಸಾಹಸದ ಆಟಗಳಲ್ಲಿ ಆಸಕ್ತರಾದ ರಾಜಕುಮಾರರೊಡನೆ ಸೇರಿ, ಮೃಗಮದಕರ್ದಮಸಂಪಾದಿತ ಮದಲೇಖಾಮಂಡಿತಗಂಡಸ್ಥಳನುಂ = ಕಸ್ತೂರಿ ಪರಿಮಳದಿಂದ ರಚಿಸಿದ ಮದಲೇಖೆಯಿಂದ ಕೂಡಿದ ಕಪೋಲವುಳ್ಳವನಾಗಿ, ಕುಂಕುಮಪಾಂಸುಪಟಲ ಸಾಂದ್ರಸಿಂದೂರಿತಮಸ್ತಕಪಿಂಡನುಂ = ಕುಂಕುಮಪುಡಿಯಿಂದ ಕೂಡಿದ ಸಿಂದೂರಚಂದ್ರದಿಂದ ಕೂಡಿದ ತಲೆಯುಳ್ಳವನೂ, ದಕ್ಷಿಣಕರ + ಆಳಂಬಿತ ನಿಬಿಡವೇಷ್ಟಿತ + ಆಂಶುಕವಿಶಾಲಸ್ಥೂಲವೃತ್ತಹಸ್ತನುಂ = ಬಲಗೈಯನ್ನು ಹಿಡಿದು ದಟ್ಟವಾಗಿ ಬಟ್ಟೆಯಿಂದ ಸುತ್ತಿದ ದೊಡ್ಡ ಕೈಯೆಂಬ, ಮದಾಂಧ ವಿಜಯಸಿಂಧುರಸಿಂದೂರೀಕೃತನುಂ = ಮದಿಸಿದ ವಿಜಯಗಜದ ಸೊಂಡಿಲನ್ನುಳ್ಳವನೂ, ದಶ + ಏಕಾದಶವರ್ಷದೇಶೀಯನುಂ = ಹತ್ತು-ಹನ್ನೊಂದು ವರ್ಷದ ಹುಡುಗನೂ, ಅಂತಃಪುರದಾಸೇರಕನನ್ + ಏಱಿ = ಆದ ಅಂತಃಪುರದ ಸೇವಕಿಯ ಮಗನ ಬೆನ್ನೇರಿ, ಕಿಂಚಿದಾಕುಂಚಿತಾಗ್ರತರ್ಜನೀನಿಶಿತ + ಅಂಕುಶನ್ = ತುಸು ಬಾಗಿದ ಬೆರಳೆಂಬ ತೋರುಬೆರಳ ಹರಿತವಾದ ತುದಿಯೆಂಬ ಅಂಕುಶವುಳ್ಳವನೂ, ಅಂತಃಪುರಪ್ರಮದವನಪ್ರವಿಷ್ಟನಾಗಿ = ಅಂತಃಪುರದ ಹೆಂಗೆಳೆಯರ ಉದ್ಯಾನವನ್ನು ಹೊಕ್ಕು, ಕೃತಕಗಿರಿಶಿಖರಂಗಳಂ ಗಿರಿದುರ್ಗ + ಉತ್ತುಂಗಶಿಖರಂಗಳ್ + ಎಂದು ಪಾಯಿಸಿಯುಂ = ಕಥಕ ಬೆಟ್ಟಗಳ ಕೋಡುಗಳನ್ನೇ ಗಿರಿದುರ್ಗದ ಎತ್ತರವಾದ ಶಿಖರಗಳೆಂಬಂತೆ ದಾಟಿಸಿ, ಅತಿನಿಬಿಡಬಾಳಕ ದಳೀಷಂಡಂಗಳಂ ವನದುರ್ಗಂಗಳೆಂದೆ ಪಡಲ್ವಡಿಸಿಯುಂ = ತುಂಬ ದಟ್ಟವಾಗಿ ಬೆಳೆದ ಎಳೆಯ ಬಾಳೆಯತೋಟವನ್ನೇ ವನದುರ್ಗವೆಂಬಂತೆ ಕತ್ತರಿಸಿ, ಶತಸಹಸ್ರ ಮುಖ + ಆವಹಜಾನುದಘ್ನ = ನೂರು ಸಾವಿರ ಮುಖವಾಗಿ ಹರಿಯುವ ಮಂಡಿಯುದ್ದದ, ದೀರ್ಘಿಕಾ + ಅಂಭಃಕುಲ್ಯಾಪ್ರವಾಹಂಗಳಂ ಜಲದುರ್ಗಗಳೆಂದೆ ನೂಂಕಿ ಕದಡಿಸಿಯುಂ = ಕೊಳಗಳ ನೀರಪ್ರವಾಹಗಳನ್ನು ಜಲದುರ್ಗಗಳೆಂದು ನುಗ್ಗಿ ಕದಡಿ, ಲೀಲಾಕಮಲಾಕರಾನೀಕರಕ್ತಕಮಳಂಗಳನ್ + ಆಸ್ಯ + ಅನುಶೋಣಿತ ಶೋಣರಿಪುನೃಪಶಿರಂಗಳೆಂದು ತುಟಿಯಿಸಿಯುಂ = ಆಟದ ತಾವರೆಗೊಳಗಳಲ್ಲಿನ ಕೆಂದಾವರೆಗಳನ್ನು ಹಾಗೆಯೇ ಇರುವ ರಕ್ತ ತೊಟ್ಟಿಕ್ಕುವ ಶತ್ರುರಾಜರ ತಲೆಗಳೆಂದು ತುಳಿಸಿ, ಉದ್ದಂಡಪುಂಡರೀಕಂಗಳಂ ಶ್ವೇತ + ಆತಪತ್ರಂಗಳೆಂದೇ ಮಾಡಿ ಪಿಡಿಸಿಯುಂ = ನೀಳವಾದ ನೈದಿಲೆಗಳನ್ನು ಬೆಳ್ಗೊಡೆಗಳಂತೆ ಮಾಡಿಲು ಹಿಡಿಸಿ, ಅಭಿನವ + ಉದ್ದ್ವೃತ್ತಧೌತಶಂಖಶಶಾಂಕವಿಶದಜಳಾರ್ದ್ರಕುಸುಮಂಗಳಂ = ಹೊಸತಾದ ಗುಂಡಗಿನ ಶಂಖಚಂದ್ರರ ಬಿಳಿಯಂತಹ ತಿಳಿನೀರಿನಲ್ಲಿ ತೊಯ್ದ ಹೂಗಳನ್ನು, ಸಾರ್ವಭೌಮ + ಉಚಿತ ದ್ವಾತ್ರಿಂಶತ್ + ಚಾರುಚಾಮರಂಗಳಂ ಮಾಡಿ ಪಿಡಿಸಿಯುಂ = ಚಕ್ರವರ್ತಿಗಳಿಗೆ ತಕ್ಕುನಾದ ಮೂವತ್ತೆರಡು ಸುಂದರವಾದ

ಚಾಮರಗಳಂತೆ ಹಿಡಿಸಿ, ಸಮುಲ್ಲಸತ್ + ಅಶೋಕಪಲ್ಲವಂಗಳನ್ + ಅನೇಕವಿಜಯವೈಜಯಂತಿಗಳೆಂದೇ ಮಾಡಿಸಿಕೊಂಡು + ಎತ್ತಿಯುಂ = ಚೆನ್ನಾದ ಹೊಳಪುಳ್ಳ ಅಶೋಕದ ಚಿಗುರುಗಳನ್ನು ಅನೇಕ ವಿಜಯಪತಾಕೆಗಳಂತೆ ಎತ್ತಿ ಹಿಡಿಸಿ, ವಂದಿಬಾಳಕವೃಂದಜಯಜಯ + ಅನಂದಕೋಳಾಹಳಂ + ಎಸೆಯೆ = ಮಕ್ಕಳಾದ ಹೊಗಳುಭಟಸಮೂಹವು ಜಯಕಾರಧ್ವನಿಯನ್ನು ಮಾಡುತ್ತ ಸಂತೋಷದಿಂದ ಶೋಭಿಸಲು, ಲತಾಗೃಹಮೆಂಬ ರಾಜಗೃಹಕ್ಕೆ ವಂದು = ಬಳ್ಳಿವನೆಯೆಂಬ ಅರಮನೆಗೆ ಬಂದು,

**ಗದ್ಯಾನುಸರಣ:** ತನ್ನ ವಂಶದ ಶ್ರೇಷ್ಠನಾದ ಅವನಿಗೆ ಲೋಕಯಾತ್ರೆಯಲ್ಲಿ ತೊಡಗಿಕೊಳ್ಳಲೆಂಬ ಉದ್ದೇಶದಿಂದ ಆದಿದೇವನು ಅನ್ನಮುಹೂರ್ತ ಕೂದಲು ಬಿಡಿಸುವುದು ಮುಂಜಿ ಮುಂತಾದ ಸಂಸ್ಕಾರವಿಧಿಗಳನ್ನು ತಾನೇ ಅನುಕ್ರಮದಿಂದ ಮಾಡಿದ; ಆನಂತರ ರಾಜಕುಮಾರನು ದೂಳಾಟದ ಜೊತೆಗಾರರೊಂದಿಗೆ ಅನೇಕ ಸಾಹಸದ ಆಟಗಳಲ್ಲಿ ಆಸಕ್ತರಾದ ರಾಜಕುಮಾರರೊಡನೆ ಸೇರಿ ಆಟವಾಡುತ್ತಿದ್ದ; ಅವನ ಕಪೋಲಗಳಲ್ಲಿ ಕಸ್ತೂರಿ ಪರಿಮಳದಿಂದ ರಚಿಸಿದ ಮದಲೇಖೆಯು ಹೊಳೆಯುತ್ತಿತ್ತು, ತಲೆಯ ಮೇಲೆ ಕುಂಕುಮಪುಡಿಯನ್ನು ಚಿಮುಕಿಸಿರುತ್ತಿತ್ತು: ಹತ್ತು-ಹನ್ನೊಂದು ವರ್ಷದ ಅಂತಃಪುರದ ಸೇವಕಿಯ ಮಗನ ಬಲಗೈಯನ್ನು ಬಟ್ಟೆಯಿಂದ ದಪ್ಪವಾಗಿ ಸುತ್ತಿಸಿ ದೊಡ್ಡದಾದ ಸೊಂಡಿಲನ್ನಾಗಿಸಿ ಮದಿಸಿದ ವಿಜಯಗಜದಂತೆ ಕಾಣಿಸುತ್ತಲಿದ್ದ ಅವನ ಬೆನ್ನೇರಿ, ತುಸು ಬಾಗಿದ ತನ್ನ ತೋರುಬೆರಳ ಹರಿತವಾದ ಉಗುರತುದಿಯನ್ನೇ ಅಂಕುಶವನ್ನಾಗಿಸಿಕೊಂಡು ಅಂತಃಪುರದ ಹೆಂಗೆಳೆಯರ ಉದ್ಯಾನವನ್ನು ಹೊಗುತ್ತಿದ್ದ; ಅಲ್ಲಿನ ಕೃತಕ ಬೆಟ್ಟಗಳ ಶಿಖರಗಳನ್ನೇ ಗಿರಿದುರ್ಗದ ಎತ್ತರವಾದ ಶಿಖರಗಳೆಂಬಂತೆ ದಾಟಿಸುತ್ತಿದ್ದ, ತುಂಬ ದಟ್ಟವಾಗಿ ಬೆಳೆದ ಎಳೆಯ ಬಾಳೆಯತೋಟವನ್ನೇ ವನದುರ್ಗವೆಂಬಂತೆ ಕತ್ತರಿಸಿ ಹಾಕುತ್ತಿದ್ದ, ನೂರು ಸಾವಿರ ಮುಖವಾಗಿ ಹರಿಯುವ ಮಂಡಿಯುದ್ದ ನೀರಿರುವ ಕೊಳಗಳ ನೀರಪ್ರವಾಹಗಳಲ್ಲಿ ಜಲದುರ್ಗಗಳೆಂಬಂತೆ ನುಗ್ಗಿ ಕದಡುತ್ತಿದ್ದ, ಆಟದ ತಾವರೆಗೊಳಗಳಲ್ಲಿನ ಕೆಂದಾವರೆಗಳನ್ನು ರಕ್ತ ತೊಟ್ಟಿಕ್ಕುವ ಶತ್ರುರಾಜರ ತಲೆಗಳೆಂಬಂತೆ ತುಳಿಸುತ್ತಿದ್ದ; ಆ ಬಳಿಕ, ನೀಳವಾದ ನೈದಿಲೆಗಳನ್ನು ಬೆಳ್ಗೊಡೆಗಳಂತೆ ಮಾಡಿಸಿ ಹಿಡಿಸಿ, ಹೊಸತಾದ ಗುಂಡಗೆ ಶಂಖಚಂದ್ರರಂತೆ ಬಿಳಿಯಾದ ತಿಳಿನೀರಿನಲ್ಲಿ ತೊಯ್ದ ಹೂಗಳನ್ನು ಚಕ್ರವರ್ತಿಗಳಿಗೆ ತಕ್ಕುನಾದ ಮೂವತ್ತೆರಡು ಸುಂದರವಾದ ಚಾಮರಗಳಂತೆ ಹಿಡಿಸಿ, ಚೆನ್ನಾದ ಹೊಳಪುಳ್ಳ ಅಶೋಕದ ಚಿಗುರುಗಳನ್ನು ವಿಜಯಪತಾಕೆಗಳಂತೆ ಎತ್ತಿ ಹಿಡಿಸಿ, ಮಕ್ಕಳಾದ ಹೊಗಳುಭಟಸಮೂಹವು ಜಯಕಾರಧ್ವನಿಯನ್ನು ಮಾಡುತ್ತ ಸಂತೋಷದಿಂದ ಶೋಭಿಸಲು ಬಳ್ಳಿವನೆಯೆಂಬ ಅರಮನೆಗೆ ಬರುತ್ತಿದ್ದ.

**ವಿಶೇಷ ವಿಚಾರ: ಗಿರಿದುರ್ಗ ವನದುರ್ಗ ಜಲದುರ್ಗ** = ದುರ್ಗಸಿಂಹನ **‘ಕರ್ಣಾಟಕ ಪಂಚತಂತ್ರ’**ವು ವಿವಿಧ ಬಗೆಯ ‘ದುರ್ಗ’ಗಳ ಬಗ್ಗೆ ಈ ವಿವರಣೆ ನೀಡುತ್ತದೆ: ‘ಜಲದುರ್ಗ, ಗಿರಿದುರ್ಗ, ಸ್ಥಳದುರ್ಗ, ವನದುರ್ಗ ಮೆಂದಿಂತು ದುರ್ಗಂಗಳ್ ನಾಲ್ಕು ತೆಱನಕ್ಕುಂ. ಇಂತು ಚತುರ್ವಿಧಮಾಗಿಯುಮಷ್ಟವಿಧ ಮಕ್ಕುಮದೆಂತೆಂದೊಡೆ: ಉಭಯ ನದೀಸಂಗಮುಮಪ್ಪ ಮಧ್ಯಪ್ರದೇಶಮಂತ ರ್ದ್ವೀಪಮೆಂಬುದಕ್ಕುಂ; ಅಗಾಧಮಪ್ಪ ಬೃಹತ್ತಟಾಕಂಗಳಿಂ ಕರ್ಕಶಖರದಂಡಸಲಿಲ ವಿತಾನವಿರಾಜಿತ ಸರೋವರಪರಿವೃತಮಪ್ಪ ಭೂಪ್ರದೇಶಂ ಮಹಾಸ್ಥಳಮೆಂಬು ದಕ್ಕುಮೀಯೆರಡುಂ ಜಲದುರ್ಗಭೇದಂಗಳ್. ಗರುಡಂಗಂ ಅಡರಲ್ಬಾರದ ಸಮುತ್ತುಂಗಶಿಖರಂಗಳ್ ನಾಲ್ಕುಂ ದೆಸೆಯೊಳುಮಾಗಿ ಬಾಗಿಲೊಂದೆಯಾಗಿರ್ಪುದು ಗುಹ್ಯಾಖ್ಯಮೆಂಬುದಕ್ಕುಂ; ಆವ ದೆಸೆಯೊಳುಂ ಬಟ್ಟೆಯಿಲ್ಲದೆ ಸಜೀವೀಟ್ಟುಚ್ಚಮಪ್ಪ ಬೆಟ್ಟುಗಳ ನಡುವೆ ಕರಮಸಿದಪ್ಪ ಬಟ್ಟೆಯಾಗೇ ಱುವುದುಂ ಪ್ರಸ್ತರಮೆಂಬುದಕ್ಕುಂ; ಈಯೆರಡುಂ ಗಿರಿದುರ್ಗದ ಭೇದಂಗಳ್. ಪೊಱಗೆ ನೀರುಂ ಭೂರಿಭೂರುಹ ಸಂದೋಹಮುಂ ತೃಣಗುಲ್ಮಲತಾಸ್ತೋಮಮುಮಿಲ್ಲದೆ ಒಳಗೆ ತೃಣಕಾಷ್ಠಜಲ ಸಂಪೂರ್ಣಮಪ್ಪುದು ಉದಕಸ್ತಂಭಮೆಂಬುದಕ್ಕುಂ; ಪೊಱಗೆ ಕರಮುಪ್ಪುಮಪೇಯ ಮುಮಲ್ಪ ಜಲಪರಿಪೂರ್ಣಜಲಾಶಯಮುಂ ದುರ್ದರ ಕರ್ದಮೋಪೇತಾ ತಿಶೀತಮಪ್ಪುದು ಕರ್ದಮೋದಕಮೆಂಬುದಕ್ಕುಂ; ಅನೇಕತರುನಿಕರಪರಿವೃತಮುಂ ತೃಣಪಟಣಪ್ರಾವೃತಮುಮಪ್ಪುದು ಸ್ತಂಭನಗಹನಮೆಂಬುದಕ್ಕುಂ; ಈಯೆರಡುಂ ವನದುರ್ಗದ ಭೇದಂಗಳ್.’ – ನೋಡಿ, ಸಂ: ಪಿ. ವಿ. ನಾರಾಯಣ, **‘ಕರ್ಣಾಟಕ ಪಂಚತಂತ್ರಂ’** (೨೦೧೨): ಪು. ೧೪೨–೪೩; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

**ವಿವಿಧಕಳಿಂಗವಂಗಖಸಘೂರ್ಜರಮಾಳವಚೋಳಪಾಂಡ್ಯಪ**
**ಲ್ಲವನೃಪಮಂಡಲಂಗಳೊಳಿವಂಗಿವು ಜೀವಿತಮೆಂದು ಕೊಟ್ಟು ಪೊ**
**ಣ್ಮುವ ನಿಜವಿಕ್ರಮೈಕರಸಮಂ ಶಿಶುಭಾವದೊಳಂ ನಿರಂತರಂ**
**ಭುವನಜನಕ್ಕೆ ಸೂಚಿಸಿದನೀ ತೆಱದಿಂ ಪುರುದೇವನಂದನಂ ೪೨**

**ಪದವಿಭಾಗ–ಅನ್ವಯ–ಅರ್ಥ:** ವಿವಿಧಕಳಿಂಗವಂಗಖಸಘೂರ್ಜರಮಾಳವ ಚೋಳಪಾಂಡ್ಯಪಲ್ಲವನೃಪಮಂಡಲಂಗಳೊಳ್ = ಕಳಿಂಗ ವಂಗ ಖಸ ಘೂರ್ಜರ ಮಾಳವ ಚೋಳ ಪಾಂಡ್ಯ ಪಲ್ಲವ ರಾಜರ ಗುಂಪುಗಳಲ್ಲಿ, ಇವಗೆ + ಇವು ಜೀವಿತಂ + ಎಂದು ಕೊಟ್ಟು ಪೊಣ್ಮುವ = ಇವನಿಗೆ ಇದು ಎಂದು ನಿಗದಿಪಡಿಸುವುದರಿಂದ ಉಂಟಾಗುವ, ನಿಜವಿಕ್ರಮೈಕರಸಮಂ ಈ ತೆಱದಿಂ ಪುರುದೇವನಂದನಂ = ತನ್ನ ವೀರತನದ ಸಂತಸವನ್ನು ಈ ರೀತಿಯಲ್ಲಿ

ಪರುದೇವತನಯನಾದ ಭರತನು, ಶಿಶುಭಾವದೊಳಂ ಭುವನಜನಕ್ಕೆ ನಿರಂತರಂ ಸೂಚಿಸಿದನ್ = ಮಗುತನದಲ್ಲಿಯೇ ಲೋಕದ ಜನರಿಗೆ ಸೂಚಿಸಿದ.

**ಗದ್ಯಾನುಸರಣ:** ಕಳಿಂಗ ವಂಗ ಖಸ ಘೂರ್ಜರ ಮಾಳವ ಚೋಳ ಪಾಂಡ್ಯ ಪಲ್ಲವ ರಾಜರ ಗುಂಪುಗಳಲ್ಲಿ – ಇವನಿಗೆ ಇದು ಎಂದು ನಿಗದಿಪಡಿಸುವುದರಿಂದ ಉಂಟಾಗುವ ತನ್ನ ವೀರತನದ ಸಂತಸವನ್ನು – ಈ ರೀತಿಯಲ್ಲಿ ಪರುದೇವತನಯನಾದ ಭರತನು, ಮಗುತನದಲ್ಲಿಯೇ ಲೋಕದ ಜನರಿಗೆ ಸೂಚಿಸಿದ.

**ವ॥ ಅಂತು ನಿಖಿಳಜಗದಾಶ್ಚರ್ಯಶೌರ್ಯರಸಬಹಳಬಾಲಕ್ರೀಡಾ ಚಮತ್ಕಾರಿತ ವೀರಚಕ್ರನುಂ ನಿಜೋದಯಾನಂದಿತ ಜಗಚ್ಚಕ್ರನುಮಾಗಿ ಯೌವನಪ್ರಾಪ್ತನಾಗೆ,**

**ಪದವಿಭಾಗ–ಅನ್ವಯ–ಅರ್ಥ:** ಅಂತು ನಿಖಿಳಜಗದ + ಆಶ್ಚರ್ಯ ಶೌರ್ಯರಸಬಹಳಬಾಲಕ್ರೀಡಾಚಮತ್ಕಾರಿತ ವೀರಚಕ್ರನುಂ = ಹೀಗೆ ಇಡೀ ಜಗತ್ತಿನ ಅಚ್ಚರಿಯೆನಿಸುವ ಪ್ರತಾಪರಸದಿಂದ ತುಂಬಿದ ಹುಡುಗುತನದ ಆಟಗಳ ಸೊಗಸಿನಿಂದ ವೀರಚಕ್ರನೆನಿಸಿ, ನಿಜ + ಉದಯ + ಆನಂದಿತ ಜಗತ್ + ಚಕ್ರನುಂ + ಆಗಿ ಯೌವನಪ್ರಾಪ್ತನಾಗೆ = ತನ್ನ ಏಳಿಗೆಯಿಂದ ಭೂಮಂಡಲವನ್ನು ಆನಂದಗೊಳಿಸುತ್ತ ಯೌವನವನ್ನು ಹೊಂದಲು,

**ಗದ್ಯಾನುಸರಣ:** ಹೀಗೆ ಇಡೀ ಜಗತ್ತಿನ ಅಚ್ಚರಿಯೆನಿಸುವ ಪ್ರತಾಪರಸದಿಂದ ತುಂಬಿದ ಹುಡುಗುತನದ ಆಟಗಳ ಸೊಗಸಿನಿಂದ ವೀರಚಕ್ರನೆನಿಸಿ ತನ್ನ ಏಳಿಗೆಯಿಂದ ಭೂಮಂಡಲವನ್ನು ಆನಂದಗೊಳಿಸುತ್ತ ಯುವಕನಾಗಿ ಬೆಳೆದ.

**ತಂದೆಯ ರೂಪೆ ತಂದೆಯ ವಿಳಾಸಮೆ ತಂದೆಯ ಚೆಲ್ವೆ ತಂದೆಯೊಂ**
**ದಂದಮೆ ತಂದೆಯೊಂದು ನುಡಿಯೋಜೆಯೆ ತನ್ನೊಳಮರ್ಕೆವೆತ್ತುದಾ**
**ನಂದಕರಂ ಕರಂ ಸೊಗಯಿಸುತ್ತಿರೆ ಶೋಭಿಸಿದಂ ಕುಮಾರನಾ**
**ನಂದಿತರೂಪನಂದೆಸೆಯೆ ತಂದೆಯೊಳಚ್ಚಿನೊಳೊತ್ತಿದಂತೆವೋಲ್ ೪೩**

**ಪದವಿಭಾಗ–ಅನ್ವಯ–ಅರ್ಥ:** ತಂದೆಯ ರೂಪೆ ತಂದೆಯ ವಿಳಾಸಮೆ ತಂದೆಯ ಚೆಲ್ವೆ = ತಂದೆಯ ರೂಪ ವಿಲಾಸ ಚೆಲುವು, ತಂದೆಯ + ಒಂದು + ಅಂದಮೆ ತಂದೆಯ + ಒಂದು ನುಡಿಯ + ಓಜೆಯೆ = ತಂದೆಯ ಅಂದ ಮಾತಿನ ರೀತಿ, ತನ್ನೊಳ್ ಆನಂದಕರಂ ಅಮರ್ಕೆ + ಪೆತ್ತುದು = ಮಗನಲ್ಲಿ ಸಂತಸದಾಯಕವಾಗಿ ಎಣೆಯಾಯಿತು; ಆನಂದಿತರೂಪನ್ ಕುಮಾರನ್ ಅಂದು + ಎಸೆಯೆ = ಆನಂದದಾಯಕನಾದ ಮಗನು ಕಾಣಿಸಲು, ತಂದೆಯೊಳ್ +

ಅಚ್ಚಿನೊಳ್ + ಒತ್ತಿದಂತೆವೋಲ್ ಕರಂ ಸೊಗಯಿಸುತ್ತಿರೆ ಶೋಭಿಸಿದಂ = ತಂದೆಯ ಅಚ್ಚಿನಲ್ಲಿ ಒತ್ತಿದ ಹಾಗೆ ಸೊಗಸುತ್ತ ಶೋಭಿಸಿದ.

ಗದ್ಯಾನುಸರಣ: ರೂಪ ವಿಲಾಸ ಚೆಲುವು ಅಂದ ಮಾತಿನ ರೀತಿಗಳು ಮಗನಲ್ಲಿ ಸಂತಸದಾಯಕವಾಗಿ ಎಣೆಯಾಯಿತು; ಹೀಗೆ ಆನಂದದಾಯಕನಾದ ಮಗನು ಕಾಣಿಸಲು ತಂದೆಯ ಅಚ್ಚಿನಲ್ಲಿ ಒತ್ತಿದ ಹಾಗೆ ಸೊಗಸುತ್ತ ಶೋಭಿಸಿದ.

ವಿಪುಳಯಶಃಪಿಂಡಂ ಪು
ಣ್ಯಪುಂಜವಾ ಕ್ಷತ್ರಧಾಮಧಾಮಂ ತಾನಾ
ನೃಪಸುತನೆನ್ನದೆ ಪೆಱತೊಂ
ದು ಪಾಂಗಿನೊಳ್ ನೆಗೞ್ದ ಭರತನಂ ಬಣ್ಣಿಪರಾರ್ ೪೪

ಪದವಿಭಾಗ–ಅನ್ವಯ–ಅರ್ಥ: ವಿಪುಳಯಶಃಪಿಂಡಂ = ಮಹಾ ಯಶಸ್ಸಿನ ಮುದ್ದೆಯೂ, ಪುಣ್ಯಪುಂಜವಂ + ಪುಣ್ಯದ ರಾಶಿಯೂ, ಆ ಕ್ಷತ್ರಧಾಮಧಾಮಂ ತಾನ್ = ಕ್ಷತ್ರಿಯಗುಣಗಳ ನೆಲೆಯಾಗಿ ಅವನು, ಆ ನೃಪಸುತನ್ + ಎನ್ನದೆ = ರಾಜನ ಮಗ ಎನ್ನಿಸದೆ, ಪೆಱತೆ + ಒಂದು ಪಾಂಗಿನೊಳ್ ನೆಗೞ್ದ ಭರತನಂ ಬಣ್ಣಿಪರ್ + ಆರ್ = ಬೇರೆಯೇ ಒಂದು ರೀತಿಯಿಂದ ಇದ್ದ ಭರತನನ್ನು ಯಾರು ಸಮರ್ಥವಾಗಿ ಬಣ್ಣಿಸಬಲ್ಲರು?

ಗದ್ಯಾನುಸರಣ: ಯಶಸ್ಸಿನ ಮುದ್ದೆ, ಪುಣ್ಯದ ರಾಶಿ, ಕ್ಷತ್ರಿಯಗುಣಗಳ ನೆಲೆಯಾಗಿ ಅವನು ರಾಜನ ಮಗ ಎನ್ನಿಸದೆ ಬೇರೆಯೇ ಆದ ಒಂದು ರೀತಿಯಿಂದ ಇದ್ದ ಭರತನನ್ನು ಯಾರು ಸಮರ್ಥವಾಗಿ ಬಣ್ಣಿಸಬಲ್ಲರು?

ವ। ಮತ್ತಮಾ ಕುಮಾರನಿಂ ನೇರ್ಗಿಱಿಯನಾಗಿ ಮುನ್ನ ಪೇೞ್ದ ಪುರೋಹಿತನಾನಂದನುಂ ಅಧೋಗ್ರೈವೇಯಕಾಹಮಿಂದ್ರನುಂ ಪೀಠನುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ ಅಹಮಿಂದ್ರಂ ಬಂದು ವೃಷಭಸೇನನೆಂಬೊಂ ತನಯನಾದಂ ಶ್ರೇಷ್ಠಿ ಧನಮಿತ್ರಂ ಅಧೋಗ್ರೈವೇಯ ಕಾಹಮಿಂದ್ರನುಂ ಮಹಾಪೀಠನುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದನಂತವಿಜಯನೆಂಬಂ ತನಯನಾದಂ ಶಾರ್ದೂಲಾರ್ಯನು ಚಿತ್ರಾಂಗದದೇವನುಂ ವರದತ್ತ ನೃಪನುಮಚ್ಯುತ ಸಾಮಾನಿಕನುಂ ವಿಜಯನೃಪನುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದನಂತವೀರ್ಯನೆಂಬಂ ತನೂಭವನಾದಂ ವರಾಹಾರ್ಯನುಂ ಮಣಿಕುಂಡಲಾಮರನುಂ ವರಸೇನ ಭೂಮಿಪನು ಮಚ್ಯುತಸಾಮಾನಿಕನುಂ ವೈಜಯಂತಭೂಪನುಮಾಗಿ ಸರ್ವಾರ್ಥ ಸಿದ್ಧಿ ಯೊಳ್ ಅಹಮಿಂದ್ರನಾಗಿ ಪುಟ್ಟಿದ ದಿವಿಜೇಂದ್ರಂ ಬಂದಚ್ಯುತನೆಂಬಾತ್ಮಜ ನಾದಂ ವಾನರಾರ್ಯನುಂ ಮನೋಹರದಿವಿಜನುಂ ಚಿತ್ರಾಂಗದಾವನಿಪನುಂ ಅಚ್ಯುತಸಾಮಾನಿಕಾಮರನುಂ ಜಯಂತಮಹೀಪಾಳನುಮಾಗಿ ಸರ್ವಾರ್ಥ ಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು

**ವೀರನೆಂಬೊನಾತ್ಮಭವನಾದಂ ನಕುಳಾರ್ಯನುಂ ಮನೋರಥದಿವ್ಯನುಂ ಶಾಂತಮದನ ಮಹೀನಾಥನು ಮಚ್ಯುತ ಸಾಮಾನಿಕನುಮಪರಾಜಿತ ನೃಪನಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ಸುವೀರನೆಂಬೊಂ ನಂದನನಾದಂ ಇಂತು ಭರತಕುಮಾರಂಬೆರಸು ಏಟ್ಟರ್ ಕುಮಾರರಾದಿಯಾಗಿ ನೂರ್ವರ್ ಕುಮಾರರುಮನಿಬರಿಂ ಕಿಱಿಯಳ್ ಬ್ರಹ್ಮಿಯೆಂಬ ಮಗಳುಮಂ ಪಡೆದು,**

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ + ಆ ಕುಮಾರನಿಂ ನೇರ್ಗಿಱಿಯನಾಗಿ = ಅಲ್ಲದೆ, ಆ ಭರತನಿಗಿಂತ ಕೊಂಚ ಕಿರಿಯವನಾಗಿ, ಮುನ್ನ ಪೇೞ್ದ ಪುರೋಹಿತನ್ ಆನಂದನುಂ = ಮುಂಚೆ ಹೇಳಿದ ಪುರೋಹಿತನಾದ ಆನಂದನು, ಅಧೋಗ್ರೈವೇಯಕ + ಅಹಮಿಂದ್ರನುಂ ಪೀಠನುಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ ಅಹಮಿಂದ್ರಂ ಬಂದು = ಅಧೋಗ್ರೈವೇಯಕದಲ್ಲಿ ಅಹಮಿಂದ್ರನೂ ಪೀಠನೂ ಆಗಿ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದ ಅಹಮಿಂದ್ರನು, ವೃಷಭಸೇನ ನೆಂಬೊಂ ತನಯನಾದಂ = ವೃಷಭಸೇನ ಎಂಬ ಒಬ್ಬ ಮಗನಾಗಿ ಹುಟ್ಟಿದ; ಶ್ರೇಷ್ಠಿ ಧನಮಿತ್ರಂ ಅಧೋಗ್ರೈವೇಯಕ + ಅಹಮಿಂದ್ರನುಂ ಮಹಾಪೀಠನುಮಾಗಿ = ಶ್ರೇಷ್ಠಿಯಾದ ಧನಮಿತ್ರನು ಅಹಮಿಂದ್ರನೂ ಪೀಠನೂ ಆಗಿದ್ದು, ಸರ್ವಾರ್ಥ ಸಿದ್ಧಿಯೊಳ್ ಪುಟ್ಟಿದ + ಅಹಮಿಂದ್ರಂ ಬಂದು + ಅನಂತವಿಜಯನೆಂಬಂ ತನಯನಾದಂ = ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದ್ದ ಅಹಮಿಂದ್ರನು ಬಂದು ಅನಂತ ವಿಜಯನೆಂಬ ಮಗನಾದ; ಶಾರ್ದೂಲಾರ್ಯನುಂ ಚಿತ್ರಾಂಗದದೇವನುಂ ವರದತ್ತ ನೃಪನುಂ + ಅಚ್ಯುತಸಾಮಾನಿಕನುಂ ವಿಜಯನೃಪನುಂ + ಆಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ + ಅಹಮಿಂದ್ರಂ ಬಂದು = ಶಾರ್ದೂಲಾರ್ಯನು ಚಿತ್ರಾಂಗದೇವ ವರದತ್ತನೃಪ ಅಚ್ಯುತಸಾಮಾನಿಕೂ ವಿಜಯನೃಪನೂ ಆಗಿ ಸರ್ವಾರ್ಥ ಸಿದ್ಧಿಯಲ್ಲಿ ಹುಟ್ಟಿದ ಅಹಮಿಂದ್ರನು ಬಂದು, ಅನಂತವೀರ್ಯನೆಂಬಂ ತನೂಭವನಾದಂ = ಅನಂತವೀರ್ಯ ಎಂಬ ಸುತನಾದ; ವರಾಹಾರ್ಯನುಂ ಮಣಿಕುಂಡಲ + ಅಮರನುಂ ವರಸೇನಭೂಮಿಪನುಂ + ಅಚ್ಯುತಸಾಮಾನಿಕನುಂ ವೈಜಯಂತಭೂಪನುಂ + ಆಗಿ ಸರ್ವಾರ್ಥಸಿದ್ಧಿಯೊಳ್ ಅಹಮಿಂದ್ರನಾಗಿ ಪುಟ್ಟಿದ ದಿವಿಜೇಂದ್ರಂ ಬಂದು + ಅಚ್ಯುತನೆಂಬ + ಆತ್ಮಜನಾದಂ = ವರಾಹಾರ್ಯನು ಮಣಿಕುಂಡಲ ಅಮರ ವರಸೇನಭೂಮಿಪ ಅಚ್ಯುತಸಾಮಾನಿಕ ವೈಜಯಂತ ಭೂಪನಾಗಿ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾಗಿ ಹುಟ್ಟಿದ್ದ ದಿವಿಜೇಂದ್ರನು ಅಚ್ಯುತನೆಂಬ ಮಗನಾದ; ವಾನರಾರ್ಯನುಂ ಮನೋಹರದಿವಿಜನುಂ ಚಿತ್ರಾಂಗದಾ ವನಿಪನುಂ ಅಚ್ಯುತಸಾಮಾನಿಕಾಮರನುಂ ಜಯಂತಮಹೀಪಾಳನು ಮಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ವೀರನೆಂಬೊನಾತ್ಮಭವನಾದಂ = ವಾನರಾರ್ಯನು ಮನೋಹರದಿವಿಜ ಚಿತ್ರಾಂಗದ ಅವನಿಪ ಅಚ್ಯುತಸಾಮಾನಿಕದೇವ

ಜಯಂತಮಹಾರಾಜನಾಗಿ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದ್ದ ಅಹಮಿಂದ್ರನು ವೀರ ಎಂಬ ಹೆಸರಿನ ತನಯನಾದ; ನಕುಳಾರ್ಯನುಂ ಮನೋರಥದಿವ್ಯನುಂ ಶಾಂತಮದನಮಹೀನಾಥನುಂ + ಅಚ್ಯುತಸಾಮಾನಿಕನುಂ + ಅಪರಾಜಿತನೃಪನಾಗಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದ + ಅಹಮಿಂದ್ರಂ ಬಂದು ಸುವೀರನೆಂಬೊಂ ನಂದನನಾದಂ = ನಕುಳಾರ್ಯನು ಮನೋರಥದಿವ್ಯ ಶಾಂತಮದನಮಹೀನಾಥ ಅಚ್ಯುತಸಾಮಾನಿಕದೇವ ಅಪರಾಜಿತನೃಪನಾಗಿ ಸರ್ವಾರ್ಥಸಿದ್ಧಿಯೊಳ್ ಹುಟ್ಟಿದ್ದ ಅಹಮಿಂದ್ರನು ಸುವೀರನೆಂಬ ಮಗನಾದ; ಇಂತು ಭರತಕುಮಾರಂಬೆರಸು ಏೞ್ವರ್ ಕುಮಾರರ್ + ಆದಿಯಾಗಿ ನೂರ್ವರ್ ಕುಮಾರರುಂ = ಹೀಗೆ ಭರತನೂ ಸೇರಿದಂತೆ ಏಳು ಮಂದಿ ಗಂಡುಮಕ್ಕಳೇ ಮೊದಲಾದ ನೂರು ಮಂದು ಗಂಡುಮಕ್ಕಳು, ಅನಿಬರಿಂ ಕಿಱಿಯಳ್ ಬ್ರಹ್ಮಿಯೆಂಬ ಮಗಳುಮಂ ಪಡೆದು = ಎಲ್ಲರಿಗಿಂತ ಕಿರಿಯಳಾದ ಬ್ರಹ್ಮಿ ಎಂಬ ಮಗಳನ್ನೂ ಪಡೆದು,

**ಗದ್ಯಾನುಸರಣ:** ಅಲ್ಲದೆ, ಆ ಭರತನಿಗಿಂತ ಕೊಂಚ ಕಿರಿಯವನಾಗಿ, ಮುಂಚೆ ಹೇಳಿದ ಪುರೋಹಿತನಾದ ಆನಂದನು ಅಧೋಗ್ರೈವೇಯಕದಲ್ಲಿ ಅಹಮಿಂದ್ರನೂ ಪೀಠನೂ ಆಗಿ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದ್ದ ಅಹಮಿಂದ್ರನು ವೃಷಭಸೇನ ಎಂಬ ಒಬ್ಬ ಮಗನಾಗಿ ಹುಟ್ಟಿದ; ಶ್ರೇಷ್ಠಿಯಾದ ಧನಮಿತ್ರನು ಅಹಮಿಂದ್ರನೂ ಪೀಠನೂ ಆಗಿದ್ದು ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದ್ದ ಅಹಮಿಂದ್ರನು ಬಂದು ಅನಂತವಿಜಯನೆಂಬ ಮಗನಾದ; ಶಾರ್ದೂಲಾರ್ಯನು ಚಿತ್ರಾಂಗದೇವ ವರದತ್ತನೃಪ ಅಚ್ಯುತಸಾಮಾನಿಕದೇವ ವಿಜಯನೃಪನಾಗಿ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದ್ದ ಅಹಮಿಂದ್ರನು ಅನಂತವೀರ್ಯ ಎಂಬ ಸುತನಾದ; ವರಾಹಾರ್ಯನು ಮಣಿಕುಂಡಲ ಅಮರ ವರಸೇನಭೂಮಿಪ ಅಚ್ಯುತಸಾಮಾನಿಕ ವೈಜಯಂತ ಭೂಪನಾಗಿ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾಗಿ ಹುಟ್ಟಿದ್ದ ದಿವಿಜೇಂದ್ರನು ಅಚ್ಯುತನೆಂಬ ಮಗನಾದ; ವಾನರಾರ್ಯನು ಮನೋಹರದಿವಿಜ ಚಿತ್ರಾಂಗದರಾಜ ಅಚ್ಯುತಸಾಮಾನಿಕದೇವ ಜಯಂತಮಹಾರಾಜನಾಗಿ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದ್ದ ಅಹಮಿಂದ್ರನು ವೀರ ಎಂಬ ಹೆಸರಿನ ತನಯನಾದ; ನಕುಳಾರ್ಯನು ಮನೋರಥದಿವ್ಯ ಶಾಂತಮದನಮಹೀನಾಥ ಅಚ್ಯುತಸಾಮಾನಿಕದೇವ ಅಪರಾಜಿತನೃಪನಾಗಿ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದ್ದ ಅಹಮಿಂದ್ರನು ಸುವೀರನೆಂಬ ಮಗನಾದ; ಹೀಗೆ ಭರತನೂ ಸೇರಿದ ಹಾಗೆ ಏಳು ಮಂದಿ ಗಂಡುಮಕ್ಕಳೇ ಮೊದಲಾದ ನೂರು ಮಂದಿ ಗಂಡುಮಕ್ಕಳು ಹಾಗೂ ಎಲ್ಲರಿಗಿಂತ ಕಿರಿಯಳಾದ ಬ್ರಹ್ಮಿ ಎಂಬ ಮಗಳನ್ನೂ ಪುರುದೇವನು ಪಡೆದ.

ಫಳಲಲಿತಂ ವಿನೂತಕಳಿಕಾಕಳಿತಂ ಕಡುರಯ್ಯಮಾಯ್ತು ಕೋ
ಮಳಲತೆಯೆಂಬಿನಂ ಚರಮದೇಹಶತಾತ್ಮಜರಿಂದಮಾ ಮಹೋ
ತ್ಪಳಮುಖಿಯಿಂದಮಾ ಸತಿ ಯಶಸ್ವತಿ ವಿಶ್ವಮಹೀತಳಂ ಗುಣಂ
ಗೊಳೆ ಪಡೆದಳ್ ತದಗ್ರಮಹಿಷೀಪದದೊಳ್ ಪಿರಿದೊಂದು ಮೈಮೆಯಂ॥೪೫॥

**ಪದವಿಭಾಗ-ಅನ್ವಯ-ಅರ್ಥ:** ಕೋಮಳಲತೆ = ಕೋಮಲವಾದ ಬಳ್ಳಿಯು, ಫಳಲಲಿತಂ = ಹಣ್ಣುಗಳಿಂದ ಸುಂದರವೂ, ವಿನೂತಕಳಿಕಾಕಳಿತಂ = ಹೊಸ ಮೊಗ್ಗುಹೂಗಳಿಂದ ಕೂಡಿಯೂ, ಕಡುರಯ್ಯಮಾಯ್ತು ಎಂಬಿನಂ = ತುಂಬ ಚೆಲುವಾಗುವಂತೆ, ಚರಮದೇಹಶತ + ಆತ್ಮಜರಿಂದಂ = ಕೊನೆಯ ಜನ್ಮದ ನೂರು ಮಂದಿ ಮಕ್ಕಳಿಂದ, ಆ ಮಹೋತ್ಪಳಮುಖಿಯಿಂದಂ = ಆ ನೈದಿಲೆಮೊಗದವಳಿಂದ, ವಿಶ್ವಮಹೀತಳಂ ಗುಣಂಗೊಳೆ = ಭೂಮಂಡಲವು ಅತಿಶಯವೆನಿಸುವಂತೆ, ಆ ಸತಿ ಯಶಸ್ವತಿ = ಆ ಸತಿ ಯಶಸ್ವತಿಯು, ತತ್ + ಅಗ್ರಮಹಿಷೀಪದದೊಳ್ ಪಿರಿದೊಂದು ಮೈಮೆಯಂ ಪಡೆದಳ್ = ಪಟ್ಟದ ರಾಣಿಯ ಪದವಿಯಲ್ಲಿ ಹಿರಿದಾದ ಸೊಬಗನ್ನು ಹೊಂದಿದಳು.

**ಗದ್ಯಾನುಸರಣ:** ಕೋಮಲವಾದ ಬಳ್ಳಿಯು ಹಣ್ಣುಗಳಿಂದಲೂ ಹೊಸ ಮೊಗ್ಗುಹೂಗಳಿಂದಲೂ ಕೂಡಿ ಚರಮದೇಹಿಗಳಾದ ನೂರು ಮಂದಿ ಮಕ್ಕಳಿಂದಾಗಿ ಆ ನೈದಿಲೆಮೊಗದವಳಿಂದ ಭೂಮಂಡಲವು ಅತಿಶಯವೆನಿಸಿತು; ಅಲ್ಲದೆ, ಆ ಯಶಸ್ವತಿಯು ಪಟ್ಟದ ರಾಣಿಯ ಪದವಿಯನ್ನು ಹೊಂದಿ ಹಿರಿದಾದ ಸೊಬಗನ್ನು ಹೊಂದಿದಳು.

**ವ॥ ಮುನ್ನ ಪೇಟ್ದ ವಜ್ರಜಂಘನ ಸೇನಾನಾಯಕನಕಂಪನನುಮ ಧೋಗ್ರೈವೇಯ ಕಾಹಮಿಂದ್ರನುಂ ಮಹಾಬಾಹು ಮಹೀಪತಿಯುಮಾಗಿ ಸೌರ್ವಾರ್ಥಸಿದ್ಧಿಯೊಳ್ ಪುಟ್ಟಿದಹಮಿಂದ್ರಂ ಬಂದು ಸುನಂದಾಮಹಾದೇವಿಯ ಗರ್ಭದೊಳ್ ಅವತರಿಸಿ,**

**ಪದವಿಭಾಗ-ಅನ್ವಯ-ಅರ್ಥ:** ಮುನ್ನ ಪೇಟ್ದ ವಜ್ರಜಂಘನ ಸೇನಾನಾಯಕನ್ + ಅಕಂಪನನುಂ = ಮುಂಚೆ ಉಕ್ತವಾದ ವಜ್ರಜಂಘನ ಸೇನಾಧಿಪತಿಯಾದ ಅಕಂಪನನೂ, ಅಧೋಗ್ರೈವೇಯಕ + ಅಹಮಿಂದ್ರನುಂ ಮಹಾಬಾಹು ಮಹೀಪತಿಯುಂ + ಆಗಿ ಸೌರ್ವಾರ್ಥಸಿದ್ಧಿಯೊಳ್ ಪುಟ್ಟಿದ + ಅಹಮಿಂದ್ರಂ ಬಂದು = ಅಧೋಗ್ರೈವೇಯಕದಲ್ಲಿ ಅಹಮಿಂದ್ರನಾಗಿಯೂ ಮಹಾಬಾಹು ಮಹಾರಾಜನೂ ಆಗಿ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾಗಿ ಹುಟ್ಟಿದ್ದವನು ಬಂದು, ಸುನಂದಾಮಹಾದೇವಿಯ ಗರ್ಭದೊಳ್ ಅವತರಿಸಿ = ಸುನಂದೆಯ ಗರ್ಭದಲ್ಲಿ ಅವತರಿಸಿ,

**ಗದ್ಯಾನುಸರಣ:** ಮುಂಚೆ ಉಕ್ತವಾದ ವಜ್ರಜಂಘನ ಸೇನಾಧಿಪತಿಯಾದ ಅಕಂಪನನೂ ಅಧೋಗ್ರೈವೇಯಕದಲ್ಲಿ ಅಹಮಿಂದ್ರನಾಗಿಯೂ ಮಹಾಬಾಹು ಮಹಾರಾಜನೂ ಆಗಿ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾಗಿ ಹುಟ್ಟಿದ್ದವನು ಈಗ ಸುನಂದೆಯ ಗರ್ಭದಲ್ಲಿ ಅವತರಿಸಿದ.

**ತನುವಳಿರೇಖೆಗಳ್ ಕಿಡೆಯುಮೆಟ್ಟಿ ಬೆಡಂಗಿನದೊಂದು ರೇಖೆಯುಂ**
**ತನಗೆಡೆಮಾಡಿ ಪೊಂಗೆ ನಡು ಬಂದುದಯಂಗೆಯಲಿರ್ದ ಪೂರ್ಣಚಂ**
**ದ್ರನನೊಳಕೊಂಡು ಬೆಳ್ಪಸೆವ ವಾಸವದಿಗ್ವನಿತಾನನಂಬೊಲಾ**
**ನನರುಚಿ ಚೆಲ್ವನೇಂ ನೆಱಿಯೆ ತಾಳ್ದಿದುದೋ ಬಿಸಕಾಂಡಪಾಂಡುರಂ ೪೬**

**ಪದವಿಭಾಗ-ಅನ್ವಯ-ಅರ್ಥ:** ತನುವಳಿರೇಖೆಗಳ್ ಕಿಡೆಯುಂ = ತ್ರಿವಳಿಗಳು ಅಳಿಸಿಹೋಗಿ, ಎಟ್ಟಿ ಬೆಡಂಗಿನದೊಂದು ರೇಖೆಯುಂ = ಕಾಣಿಸಿದ ಚೆಲುವಾದ ಹೊಸ ಗೆರೆಯೊಂದು, ತನಗೆ + ಎಡೆಮಾಡಿ ನಡು ಪೊಂಗೆ = ಅವಕಾಶವಾಗುವಂತೆ ನಡುವಿನಲ್ಲಿ ಕಾಣಿಸಿಕೊಳ್ಳಲು, ಬಂದು + ಉದಯಂಗೆಯಲ್ + ಇರ್ದ ಪೂರ್ಣಚಂದ್ರನನ್ + ಒಳಕೊಂಡು ಬೆಳ್ಪಸೆವ = ಹುಟ್ಟಲಿರುವ ಹುಣ್ಣಿಮೆಯ ಚಂದ್ರನನ್ನು ಸೇರಿಸಿಕೊಡು ಬೆಳ್ಳಗಾದ, ವಾಸವದಿಗ್ವನಿತಾ + ಆನನಂಬೊಲ್ = ಪೂರ್ವದಿಕ್ಕನ್ಯೆಯ ಮುಖದಂತೆ, ಆನನರುಚಿ ಬಿಸಕಾಂಡಪಾಂಡುರಂ ಚೆಲ್ವನೇಂ ನೆಱಿಯೆ ತಾಳ್ದಿದುದೋ = ಮುಖದ ಕಾಂತಿಯು ತಾವರೆದಂಟಿನಂತೆ ಹೊಳೆಯುವ ಚೆಲುವನ್ನು ಅದೇನು ತಾಳಿತೋ!

**ಗದ್ಯಾನುಸರಣ:** ಸುನಂದೆಯ ನಡುವಿನಲ್ಲಿನ ತ್ರಿವಳಿಗಳು ಅಳಿಸಿಹೋಗಿ ಚೆಲುವಾದ ಹೊಸ ಗೆರೆಯೊಂದು ಮೂಡಿತು; ಹುಟ್ಟಲಿರುವ ಹುಣ್ಣಿಮೆಯ ಚಂದ್ರನನ್ನು ಸೇರಿಸಿಕೊಡು ತಾವರೆದಂಟಿನಂತೆ ಹೊಳೆಯುವ ಅವಳ ಮುಖಕಾಂತಿಯು ಪೂರ್ವದಿಕ್ಕನ್ಯೆಯ ಮುಖದಂತೆ ಚೆಲುವನ್ನು ತಾಳಿತು.

**ಒದವಿದ ಕರ್ಪನೆಯ್ದೆ ಪರಿವೃತ್ತಪಯೋಧರಚೂಚುಕಕ್ಕೆ ಮಾ**
**ಡದೆ ವಳಿಭಂಗಮಂ ಕಟಿಯೆ ತೋರ್ಪುದನಂತೆ ತನೂದರಕ್ಕೆ ಮಾ**
**ಡದೆ ಕಡುವೆಳ್ಪುಮಂ ನಿಮಿರ್ದ ಸುಯ್ಯುಮನಾನನಪಂಕಜಕ್ಕೆ ಮಾ**
**ಡದೆ ಬಳೆದೊಂದು ಗರ್ಭಮೆ ಮನಂದರಲಾರ್ತುದು ಮಂದಯಾನೆಯಾ ೪೭**

**ಪದವಿಭಾಗ-ಅನ್ವಯ-ಅರ್ಥ:** ಪರಿವೃತ್ತಪಯೋಧರಚೂಚುಕಕ್ಕೆ ಒದವಿದ ಕರ್ಪನೆಯ್ದೆ ಮಾಡದೆ = ಗುಂಡಗಿನ ಮೊಲೆಗಳ ತೊಟ್ಟುಗಳಿಗೆ ಕಪ್ಪನ್ನು ಉಂಟು ಮಾಡದಿರುವುದೇ? ಅಂತೆ ತನು + ಉದರಕ್ಕೆ ತೋರ್ಪುದನ್ ವಳಿಭಂಗಮಂ ಕಟಿಯೆ ಮಾಡದೆ = ಹಾಗೆಯೇ ದೇಹದ ಬಸಿರಿನಲ್ಲಿ ಕಾಣುವ ವಳಿತ್ರಯವನ್ನು ಅಳಿಸದಿರುತ್ತದೆಯೇ? ಆನನಪಂಕಜಕ್ಕೆ ಕಡುವೆಳ್ಪುಮಂ ನಿಮಿರ್ದ ಸುಯ್ಯುಮನ್

ಮಾಡದೆ = ಅವಳ ಮೊಗದಾವರೆಗೆ ಬಿಳಿಪನ್ನೂ ಹೊರಸೂಸುವ ನಿಟ್ಟುಸಿರನ್ನೂ ಉಂಟು ಮಾಡದಿರುತ್ತದೆಯೇ? ಬಳೆದೊಂದು ಗರ್ಭಮೆ ಮಂದಯಾನೆಯಾ ಮನಂ + ತರಲ್ + ಆರ್ತುದು = ಹೀಗೆ ಬೆಳೆದ ಬಸಿರು ಆ ಮಂದಗಮನೆಯ ಮನೋಹರವಾಗಿ ಆಯಿತು.

**ಗದ್ಯಾನುಸರಣ:** ಆ ಮಂದಗಮನೆಯ ಬೆಳೆದ ಬಸಿರು ಮನೋಹರವಾಯಿತು. ಅದು ಅವಳ ಗುಂಡಗಿನ ಮೊಲೆಗಳ ತೊಟ್ಟುಗಳನ್ನು ಕಪ್ಪಾಗಿ ಮಾಡದಿರುವುದೇ? ಹಾಗೆಯೇ ದೇಹದ ಬಸಿರಿನಲ್ಲಿ ಕಾಣುವ ವಳಿತ್ರಯವು ಅಳಿಯದಿರುತ್ತದೆಯೇ? ಮೊಗದಾವರೆಗೆ ಬಿಳಿಪನ್ನೂ ಹೊರಸೂಸುವ ನಿಟ್ಟುಸಿರನ್ನೂ ಉಂಟುಮಾಡದಿರುತ್ತದೆಯೇ? (ಎಂದರೆ ಹೀಗೆಲ್ಲ ಆಯಿತು ಎಂದರ್ಥ)

**ವ। ಅಂತು ಗರ್ಭಂ ಬಳೆಯೆ,**

**ಅರ್ಥ:** ಅಂತು ಗರ್ಭಂ ಬಳೆಯೆ = ಹೀಗೆ ಸುನಂದೆಯ ಬಸಿರು ಬೆಳೆಯಿತು.

**ದಿಗಿಭನಿಭಂಗಳಪ್ಪ ಸಮರದ್ವಿರದಂಗಳ ಯುದ್ಧಕೇಳಿಯಂ**
**ಬಗೆಗೊಳೆ ನೋಡಲುಂ ನೆಗಟ್ದಿ ಮಲ್ಲರುಮಂ ಪಿಡಿದೊತ್ತಿ ಗೆಲ್ದ ಜೆ**
**ಟ್ಟಿಗರೆನೆ ಸಂದ ಮಲ್ಲರನೆ ಪೋರಿಸಲುಂ ಪಿರಿದೊಂದುದೋಹಳಂ**
**ನೆಗೞ್ದುದು ಗರ್ಭದರ್ಭಕನ ದೋರ್ಬಲಗರ್ಬಮನಂದು ಪೇೞ್ವವೊಲ್ ೪೮**

**ಪದವಿಭಾಗ–ಅನ್ವಯ–ಅರ್ಥ:** ಗರ್ಭದ + ಅರ್ಭಕನ ದೋರ್ಬಲ ಗರ್ಬಮನ್ + ಅಂದು ಪೇೞ್ವವೊಲ್ = ಬಸಿರಲ್ಲಿನ ಮಗುವಿನ ತೋಳ್ಬಲದ ಹಿರಿಮೆಯನ್ನು ಸೂಚಿಸುವ ಹಾಗೆ, ದಿಗಿಭನಿಭಂಗಳಪ್ಪ ಸಮರದ್ವಿರದಂಗಳ ಯುದ್ಧ ಕೇಳಿಯಂ ಬಗೆಗೊಳೆ ನೋಡಲುಂ = ದಿಕ್ಕರಿಗಳಂತಹ ಯುದ್ಧದಾನೆಗಳ ಹೋರಾಟವನ್ನು ಮನದುಂಬಿ ನೋಡಲೂ, ನೆಗಟ್ದಿ ಮಲ್ಲರುಮಂ ಪಿಡಿದೊತ್ತಿ ಗೆಲ್ದ ಜೆಟ್ಟಿಗರೆನೆ ಸಂದ ಮಲ್ಲರನೆ ಪೋರಿಸಲುಂ = ಕೀರ್ತಿವಂತರಾದ ಮಲ್ಲರನ್ನೂ ಹಿಡಿದು ಕುಕ್ಕಿ ಗೆದ್ದ ಜಟ್ಟಿಗಳಂತಹ ಮಲ್ಲರ ಕಾದಾಟವನ್ನೂ ಏರ್ಪಡಿಸಲೂ, ಪಿರಿದೊಂದು ದೋಹಳಂ ನೆಗೞ್ದುದು = ಹಿರಿದಾದ ಬಸಿರಬಯಕೆ ಅವಳಲ್ಲುಂಟಾಯಿತು.

**ಗದ್ಯಾನುಸರಣ:** ತನ್ನ ಬಸಿರಲ್ಲಿನ ಮಗುವಿನ ತೋಳ್ಬಲದ ಹಿರಿಮೆಯನ್ನು ಸೂಚಿಸುವ ಹಾಗೆ ದಿಕ್ಕರಿಗಳಂತಹ ಯುದ್ಧದಾನೆಗಳ ಹೋರಾಟವನ್ನು ಮನದುಂಬಿ ನೋಡುವ, ಕೀರ್ತಿವಂತರಾದ ಮಲ್ಲರನ್ನೂ ಹಿಡಿದು ಕುಕ್ಕಿ ಗೆದ್ದ ಜಟ್ಟಿಗಳಂತಹ ಮಲ್ಲರ ಕಾದಾಟವನ್ನೂ ಏರ್ಪಡಿಸಬೇಕೆಂಬ ಹಿರಿದಾದ ಬಸಿರಬಯಕೆ ಅವಳಲ್ಲುಂಟಾಯಿತು.

ವ॥ ಅಂತು ಗರ್ಭದೋಹಳಂ ನೆಗೞೆ,

ಅರ್ಥ: ಅಂತು ಗರ್ಭದೋಹಳಂ ನೆಗೞೆ = ಹೀಗೆ ಬಸಿರ ಬಯಕೆ ಯುಂಟಾಗಲು,

ಜನನೀಗರ್ಭಾವತಾರೋತ್ಸವಮುದಿತಸುರಾನೀಕುದ್ವೃತ್ತವಿಶ್ವಾ
ವನಿಭೃದ್ಬಾಹಾಬಳೋನ್ಮೂಲನಪಟುತರದೋರ್ವಿಕ್ರಮಂ ದೇವತೂರ್ಯ
ಧ್ವನಿಮಿಶ್ರಾತೋದ್ಯನೃತ್ಯಂ ಮನುನೃಪತಿಕುಲಶ್ರೀಯಶಶ್ರೀಜಯಶ್ರೀ
ವನಿತೌಘಂ ಪುಣ್ಯಪುಂಜೋದಯನುದಯಿಸಿದಂ ವಂಶಲಕ್ಷ್ಮೀಲಲಾಮಂ ೪೯

ಪದವಿಭಾಗ–ಅನ್ವಯ–ಅರ್ಥ: ಜನನೀಗರ್ಭ + ಅವತಾರ + ಉತ್ಸವಮುದಿತ = ಮಗುವು ತಾಯ ಬಸಿರಲ್ಲಿ ಬಂದು ಸೇರಿದ್ದರಿಂದ ಸಂತಸಭರಿತರಾದ, ಸುರ + ಆನೀಕ = ದೇವತೆಗಳ ಸಮೂಹವು, ಉದ್ವೃತ್ತ ವಿಶ್ವ + ಅವನಿಭೃಭತ್ = ಜಗತ್ತಿನ ಅಹಂಕಾರಿಗಳಾದ ರಾಜರುಗಳ, ಬಾಹಾಬಳ + ಉನ್ಮೂಲನಪಟುತರ ದೋರ್ + ವಿಕ್ರಮಂ = ತೋಳ್ಬಲವನ್ನು ಕಿತ್ತೆಸೆಯುವ ತೋಳ್ಬಲವನ್ನುಳ್ಳವನು, ಮನುನೃಪತಿಕುಲಶ್ರೀಯಶ್ರೀಜಯಶ್ರೀವನಿತೌಘಂ = ಮನುಗಳ ವಂಶದ ಕುಲಲಕ್ಷ್ಮಿ ಮತ್ತು ಜಯಲಕ್ಷ್ಮಿಯರಿಂದ ಕೂಡಿದ್ದವನೂ, ಪುಣ್ಯಪುಂಜೋದಯನ್ = ಪುಣ್ಯದ ಉಂಡೆಯಂತಹವನೂ, ವಂಶಲಕ್ಷ್ಮೀಲಲಾಮಂ = ತನ್ನ ವಂಶಲಕ್ಷ್ಮಿಯ ತಲೆವಣಿಯೂ (ಆದ ಮಗುವು), ದೇವತೂರ್ಯಧ್ವನಿಮಿಶ್ರ + ಆತೋದ್ಯನೃತ್ಯಂ = ನಾನಾ ದೇವವಾದ್ಯಗಳ ಧ್ವನಿ ಹಾಗೂ ಲಯಬದ್ಧ ನರ್ತನವು ನಡೆಯುತ್ತಿರಲು, ಉದಯಿಸಿದಂ = ಹುಟ್ಟಿತು.

ಗದ್ಯಾನುಸರಣ: ಮನುಗಳ ವಂಶದ ಕುಲಲಕ್ಷ್ಮಿ ಮತ್ತು ಜಯಲಕ್ಷ್ಮಿಯರಿಂದ ಕೂಡಿದ್ದವನೂ, ವಂಶಲಕ್ಷ್ಮಿಯ ತಲೆವಣಿಯೂ ಜಗತ್ತಿನ ಅಹಂಕಾರಿಗಳಾದ ರಾಜರುಗಳ ತೋಳ್ಬಲವನ್ನು ಕಿತ್ತೆಸೆಯುವ ತೋಳ್ಬಲವನ್ನುಳ್ಳವನೂ ಆದ ಮಗನು ಪುಣ್ಯದ ಉಂಡೆಯೇ ಹುಟ್ಟಿದಂತೆ ಹುಟ್ಟಿದ; ಮಗುವು ತಾಯ ಬಸಿರಲ್ಲಿ ಬಂದು ಸೇರಿದ್ದರಿಂದಲೇ ದೇವತೆಗಳ ಸಮೂಹವು ಸಂತಸಭರಿತರಾಗಿದ್ದರು; ಈಗ ಅವರಿಂದ ನಾನಾ ದೇವವಾದ್ಯಗಳ ಧ್ವನಿ ಹಾಗೂ ಲಯಬದ್ಧ ನರ್ತನವು ನಡೆದುವು.

ವ॥ ಆ ಬಾಳಕನ ಜನ್ಮೋತ್ಸವದೊಳ್,

ಅರ್ಥ: ಆ ಬಾಳಕನ ಜನ್ಮ + ಉತ್ಸವದೊಳ್ = ಆ ಮಗುವಿನ ಹುಟ್ಟಿದ ಹಬ್ಬದಲ್ಲಿ,

ವಾರವಿಲಾಸಿನೀಲಟಪನರ್ತನಚಂಚಳಕಾಂಚೀದಾಮಮಂ
ಜೀರಕಕಿಂಕಿಣೀರಣಿತದಿಂ ವಿಕಸತ್ಕುಸುಮೋಪಹಾರವಿ
ಸ್ತಾರದಿನಂದದೇಂ ಸೊಗಯಿಸಿದುದೊ ತತ್ಪುರಮುತ್ಪತಾಕಮು
ತ್ತೋರಣಮುದ್ವಿಳಾಸರಸಮುತ್ಪಟಕಸ್ನಮುತ್ಸವಾನಕಂ ೫೦

**ಪದವಿಭಾಗ-ಅನ್ವಯ-ಅರ್ಥ:** ವಾರವಿಲಾಸಿನೀಲಟಹನರ್ತನಚಂಚಳ = ವಿಲಾಸಿನಿಯರ ಕುಣಿತದಿಂದ ಅಲುಗಾಡುವ, ಕಾಂಚೀದಾಮಮಂಜೀರಕ ಕಿಂಕಿಣೀರಣಿತದಿಂ = ನೂಪುರ ಒಡ್ಯಾಣ ಕಾಲ್ಗೆಜ್ಜೆಗಳ ದನಿಯಿಂದ, ವಿಕಸತ್ + ಕುಸುಮ + ಉಪಹಾರವಿಸ್ತಾರದಿನ್ = ಅರ್ಪಿತವಾದ ಹೂಗಳ ಹರಹಿನಿಂದ, ಉತ್ + ಪತಾಕಂ + ಉತ್ + ತೋರಣಂ = ಎತ್ತರದಲ್ಲಿ ಹಾರಾಡುವ ಧ್ವಜಗಳಿಂದಲೂ ತೋರಣಗಳಿಂದಲೂ, ಉತ್ + ವಿಳಾಸರಸಂ + ಉತ್ + ಪಟಹಸ್ವನಂ + ಉತ್ಸವ + ಆನಕಂ = ವಿಲಾಸದ ಸಂತಸದಿಂದಲೂ ಜೋರಾದ ಭೇರಿಗಳ ಧ್ವನಿಯಿಂದಲೂ ಹಬ್ಬದ ನಗಾರಿಯಿಂದಲೂ, ತತ್ + ಪುರಂ ಅಂದು + ಅದೇಂ ಸೊಗಯಿಸಿದುದೊ = ಆ ನಗರವು ಅಂದು ಅದೆಷ್ಟು ಸೊಗಸಾಯಿತೋ!

**ಗದ್ಯಾನುಸರಣ:** ವಿಲಾಸಿನಿಯರ ಕುಣಿತದಿಂದ ಅಲುಗಾಡುವ ನೂಪುರ ಒಡ್ಯಾಣ ಕಾಲ್ಗೆಜ್ಜೆಗಳ ದನಿಯಿಂದಲೂ, ವಿಲಾಸದ ಸಂತಸದಿಂದಲೂ ಜೋರಾದ ಭೇರಿಗಳ ಧ್ವನಿಯಿಂದಲೂ ಹಬ್ಬದ ನಗಾರಿಯಿಂದಲೂ, ಅರ್ಪಿತವಾದ ಹೂಗಳ ಹರಹಿನಿಂದಲೂ, ಎತ್ತರದಲ್ಲಿ ಹಾರಾಡುವ ಧ್ವಜಗಳಿಂದಲೂ ತೋರಣಗಳಿಂದಲೂ ಆ ನಗರವು ಅಂದು ಅದೆಷ್ಟು ಸೊಗಸಾಯಿತೋ!

**ವ। ಅಂತು ಜನ್ಮೋತ್ಸವಾನಂತರಮಾ ಬಾಳಕಂಗೆ ಬಾಹುಬಲಿಯೆಂಬನ್ವರ್ಥಾಭಿಧಾನಮನಿಟ್ಟಾತನ ಲಲಿತೋತ್ತಾನಶಯಿತ ದರಹಸಿತ ತರಂಗಿತ ಗತಿಸ್ಖಲಿತಮುಗ್ಧಜಲ್ಪಿತಾದಿ ಬಾಲ್ಯವಿಳಾಸಂಗಳಿಂದಂ ಕರಿಕರೋದ್ಧೂತ ಧೂಳೀ ವಿಳಾಸಪಾಂಸುಕೇಳಿಯಿಂದಂ ಮಲ್ಲಮೇಷೋದ್ಧತರಾಜ ದಾರಕನಿಯುದ್ಧದಿಂದಮಾನಂದಿತಹೃದಯನಾಗಿ ನಾಭಿರಾಜಾನಂದ ನಂದನನಿರ್ಪನ್ನೆಗಂ ಯೌವನಪ್ರವೇಶಸಮಯದೊಳ್,**

**ಪದವಿಭಾಗ-ಅನ್ವಯ-ಅರ್ಥ:** ಅಂತು ಜನ್ಮೋತ್ಸವ + ಆನಂತರಂ + ಆ ಬಾಳಕಂಗೆ = ಹುಟ್ಟಿದ ಸಂಭ್ರಮದ ಬಳಿಕ ಆ ಮಗುವಿಗೆ, ಬಾಹುಬಲಿಯೆಂಬ + ಅನ್ವರ್ಥ + ಅಭಿಧಾನಮನ್ + ಇಟ್ಟು ಬಾಹುಬಲಿ ಎಂಬ ಸನುಗುಣವಾದ ಹೆಸರನ್ನಿಟ್ಟು, ಆತನ ಲಲಿತ + ಉತ್ತಾನಶಯಿತ ದರಹಸಿತ ತರಂಗಿತ ಗತಿಸ್ಖಲಿತ ಮುಗ್ಧಜಲ್ಪಿತ = ಅವನ ಚೆಲುವಾದ ಅಂಗಾತ ಮಲಗುವುದು ಮುಗುಳ್ನಗುವುದು ಅಂಬೆಗಾಲಿಡುವುದು ನಡೆದು ಬೀಳುವುದು ತೊದಲಾಡುವುದು, ಆದಿ ಬಾಲ್ಯ ವಿಳಾಸಂಗಳಿಂದಂ = ಮುಂತಾದ ಬಾಲಲೀಲೆಗಳಿಂದಲೂ, ಕರಿಕರ + ಉದ್ಧೂತಧೂಳೀವಿಳಾಸಪಾಂಸುಕೇಳಿಯಿಂದಂ = ಆನೆಗಳ ಸೊಂಡಿಲುಗಳ ಮೇಲೆಸೆಯುವ ಮಣ್ಣಾಟದಿಂದಲೂ, ಮಲ್ಲಮೇಷ + ಉದ್ಧತರಾಜದಾರಕ ನಿಯುದ್ಧದಿಂದಂ = ಜಟ್ಟಿಗಳೂ ಟಗರುಗಳು ಹಾಗೂ ಬಲಿಷ್ಠ ರಾಜಕುಮಾರರ ಹೋರಾಟದಿಂದಲೂ, ನಾಭಿರಾಜಾನಂದನಂದನನ್ ಆನಂದಿತಹೃದಯನಾಗಿ =

ನಾಭಿರಾಜನ ಮಗನ ಮಗನು ಸಂತಸದಿಂದ = ಇರ್ಪನ್ನೆಗಂ ಯೌವನಪ್ರವೇಶಸಮಯದೊಳ್ = ಇದ್ದು ಅವನು ಹರೆಯದ ಸಮಯದಲ್ಲಿ,

**ಗದ್ಯಾನುಸರಣ:** ಹೀಗೆ ಹುಟ್ಟಿದ ಸಂಭ್ರಮದ ಬಳಿಕ ಆ ಮಗುವಿಗೆ ಬಾಹುಬಲಿ ಎಂಬ ಸನುಗುಣವಾದ ಹೆಸರನ್ನಿಟ್ಟರು; ಮಗುವಿನ ಚೆಲುವಾದ ಅಂಗಾತ ಮಲಗುವುದು ಮುಗುಳ್ನಗುವುದು ಅಂಬೆಗಾಲಿಡುವುದು ನಡೆದು ಬೀಳುವುದು ತೊದಲಾಡುವುದು ಮುಂತಾದ ಬಾಲಲೀಲೆಗಳಿಂದ ಸಂತಸಪಡಿಸುತ್ತ, ಆನೆಗಳ ಸೊಂಡಿಲುಗಳ ಮೇಲೆಸೆಯುವ ಮಣ್ಣಾಟದಿಂದ, ಜಟ್ಟಿಗಳು ಟಗರುಗಳು ಹಾಗೂ ಬಲಿಷ್ಠ ರಾಜಕುಮಾರರ ಹೋರಾಟದಿಂದಲೂ ನಾಭಿರಾಜನ ಮಗನ ಮಗನು ಸಂತಸದಿಂದ ಇದ್ದು ಹರೆಯವನ್ನು ಪ್ರವೇಶಿಸಿದ.

**ದಳಿತಾಂಭೋಜಾಸ್ಯನಿಂದೀವರದಳನಯನಂ ಪಕ್ವಬಿಂಬಾಧರಂ ಕೋ**
**ಮಳವಂಶಶ್ಯಾಮನಂಭೋಧರರವನಳಿನೀಕುಂತಳಂ ವ್ಯೂಢವಕ್ಷ**
**ಸ್ಸ್ಥಳನಾಜಾನುಪ್ರಲಂಬಪ್ರಬಲಭುಜಯುಗಂ ಚಾರುವೃತ್ತೋರುಯುಗ್ಮಂ**
**ಕುಳಶೈಲೇಂದ್ರೋನ್ನತಂ ಬಾಹುಬಲಿ ಸಕಲಸೌಂದರ್ಯಸಂಪನ್ನನಾದಂ ೫೧**

**ಪದವಿಭಾಗ-ಅನ್ವಯ-ಅರ್ಥ:** ದಳಿತ + ಅಂಭೋಜ + ಆಸ್ಯನ್ = ಅರಳಿದ ತಾವರೆಯಂಥ ಮುಖದವನೂ, ಇಂದೀವರದಳನಯನಂ = ನೈದಿಲೆಯೆಸಳಿನಂತಹ ಕಣ್ಣುಗಳವನೂ, ಪಕ್ವಬಿಂಬ + ಆಧರಂ = ತೊಂಡೆಹಣ್ಣ ತುಟಿಗಳವನೂ, ಕೋಮಳವಂಶಶ್ಯಾಮನ್ = ಎಳೆಯಬಿದಿರಿನ ಶ್ಯಾಮಲ ಬಣ್ಣದವನೂ, ಅಂಭೋಧರರವ = ಗುಡುಗಿನಂತಹ ದನಿಯುವನೂ, ನಳಿನೀಕುಂತಳಂ = ಕನ್ನೈದಿಲೆಯಂತಹ ಕಪ್ಪು ಕೂದಲಿನವನೂ, ವ್ಯೂಢವಕ್ಷಸ್ಸ್ಥಳನ್ = ಹರಹಾದ ಎದೆಯವನೂ, ಆಜಾನುಪ್ರಲಂಬಪ್ರಬಲಭುಜಯುಗಂ = ಮಂಡಿಯವರೆಗೆ ನೀಳವಾಗಿದ್ದ ತೋಳುಗಳವನೂ, ಚಾರುವೃತ್ತ + ಊರುಯುಗ್ಮಂ = ಸುಂದರವಾದ ಗುಂಡು ತೊಡೆಗಳವನೂ, ಕುಳಶೈಲೇಂದ್ರ + ಉನ್ನತಂ = ಕುಲಪರ್ವತದಂತೆ ಎತ್ತರದವನೂ, (ಆಗಿ). ಬಾಹುಬಲಿ ಸಕಲ ಸೌಂದರ್ಯಸಂಪನ್ನನಾದಂ = ಬಾಹುಬಲಿಯು ಪರಿಪೂರ್ಣ ಚೆಲುವನ್ನು ಪಡೆದ.

**ಗದ್ಯಾನುಸರಣ:** ಅರಳಿದ ತಾವರೆಯಂಥ ಮುಖದವನೂ, ನೈದಿಲೆಯೆಸಳಿ ನಂತಹ ಕಣ್ಣುಗಳವನೂ, ತೊಂಡೆಹಣ್ಣ ತುಟಿಗಳವನೂ, ಎಳೆಯಬಿದಿರಿನ ಶ್ಯಾಮಲಬಣ್ಣದವನೂ, ಗುಡುಗಿನಂತಹ ದನಿಯವನೂ, ಕನ್ನೈದಿಲೆಯಂತಹ ಕಪ್ಪು ಕೂದಲಿನವನೂ, ಹರಹಾದ ಎದೆಯವನೂ, ಮಂಡಿಯವರೆಗೆ ನೀಳವಾಗಿದ್ದ ತೋಳುಗಳವನೂ, ಸುಂದರವಾದ ದುಂಡು ತೊಡೆಗಳವನೂ, ಕುಲಪರ್ವತದಂತೆ ಎತ್ತರದವನೂ ಆಗಿ ಬಾಹುಬಲಿಯು ಪರಿಪೂರ್ಣ ಚೆಲುವನ್ನು ಪಡೆದ.

ಆ ಕಮನೀಯವಿಲೋಕನ
ನಾ ಕಾಲದ ಕಾಮದೇವನೆಂದೊಡೆ ಕಾಂತಾ
ನೀಕದ ಮುರುಳ್ವುದಂ ಮದ
ನಾಕುಳತೆಯುಮುಂತೆ ಪೇೞ್ವುದೊಂದೆಗ್ಗಲ್ತೇ ೫೨

**ಪದವಿಭಾಗ-ಅನ್ವಯ-ಅರ್ಥ:** ಆ ಕಮನೀಯವಿಲೋಕನನ್ + ಆ ಕಾಲದ ಕಾಮದೇವನ್ + ಎಂದೊಡೆ = ನೋಡಲು ಆಕರ್ಷಕವಾದ ಅವನು ಆ ಕಾಲದ ಮನ್ಮಥ ಎಂದ ಮೇಲೆ, ಕಾಂತಾ + ಆನೀಕದ ಮುರುಳ್ವುದಂ = ಹೆಣ್ಣುಗಳು ಮರುಳಾಗುವುದನ್ನೂ, ಮದನ + ಆಕುಳತೆಯನ್ = ಕಾಮಾತುರ ಗೊಳ್ಳುವುದನ್ನೂ, ಉಂತೆ ಪೇೞ್ವುದು + ಒಂದು + ಎಗ್ಗಲ್ತೇ = ಹಾಗೆಯೇ ಹೇಳುವುದು ಬೆಪ್ಪುತನ ತಾನೇ!

**ಗದ್ಯಾನುಸರಣ:** ನೋಡಲು ಆಕರ್ಷಕವಾದ ಅವನು ಆ ಕಾಲದ ಮನ್ಮಥ ಎಂದ ಮೇಲೆ, ಅವನಿಗೆ ಹೆಣ್ಣುಗಳು ಮರುಳಾಗುವುದನ್ನೂ ಕಾಮಾತುರಗೊಳ್ಳುವುದನ್ನೂ ವರ್ಣಿಸುವುದು ಬೆಪ್ಪುತನ ಅಲ್ಲವೇ!

ಕನಸಿನೊಳಮಾ ಕುಮಾರನೆ
ಮನಮುಂ ತಣ್ಮಲೆಯೆ ಚಿತ್ತಜಂ ಚಿತ್ತಭವಂ
ಮನಸಿಜನನಂಗನಹಂಗಜ
ನೆನೆ ನೆಗೞ್ದುವು ಬಾಹುಬಲಿಗೆ ಪಲವುಂ ಪೆಸರ್ಗಳ್ ೫೩

**ಪದವಿಭಾಗ-ಅನ್ವಯ-ಅರ್ಥ:** ಕನಸಿನೊಳಂ + ಆ ಕುಮಾರನೆ ಮನಮಂ ತಣ್ಮಲೆಯೆ = ಕನಸಿನಲ್ಲಿಯೂ ಆ ಯುವಕನೆ ಮನಸ್ಸನ್ನಾವರಿಸಲು, ಚಿತ್ತಜಂ ಚಿತ್ತಭವಂ ಮನಸಿಜನ್ + ಅನಂಗನ್ + ಅಂಗಜನ್ + ಎನೆ = ಚಿತ್ತಜ ಚಿತ್ತಭವ ಮನಸಿಜ ಅನಂಗ ಅಂಗಜ ಎಂಬ, ಪಲವುಂ ಪೆಸರ್ಗಳ್ ಬಾಹುಬಲಿಗೆ ನೆಗೞ್ದುವು = ಅನೇಕ ಹೆಸರುಗಳು ಬಾಹುಬಲಿಗೆ ಉಂಟಾದವು.

**ಗದ್ಯಾನುಸರಣ:** ಕನಸಿನಲ್ಲಿಯೂ ಆ ಯುವಕನೆ ಮನಸ್ಸನ್ನಾವರಿಸಲು ಬಾಹುಬಲಿಗೆ ಚಿತ್ತಜ ಚಿತ್ತಭವ ಮನಸಿಜ ಅನಂಗ ಅಂಗಜ ಎಂಬ ಅನೇಕ ಹೆಸರುಗಳು ಉಂಟಾದವು.

**ವ॥ ಮುನ್ನಂ ವೃಷಭೇಶ್ವರಂ ವಜ್ರಜಂಘನಾದ ಭವದೊಳಾ ಮಹಾತ್ಮಂಗೆ ತಂಗೆಯಾದನುಂದರಿಯೆ ಕತಿಪಯಭವಪರಿಕ್ರಮಣದಿಂ ಬಂದು ಬಾಹುಬಲಿಕುಮಾರನಿಂ ನೇರ್ಗಿಜೆಯಳಾಗಿ,**

**ಪದವಿಭಾಗ–ಅನ್ವಯ–ಅರ್ಥ:** ಮುನ್ನಂ = ಈ ಮೊದಲು, ವೃಷಭೇಶ್ವರಂ ವಜ್ರಜಂಘನಾದ ಭವದೊಳ್ = ವೃಷಭದೇವನು ವಜ್ರಜಂಘನಾಗಿದ್ದ ಜನ್ಮದಲ್ಲಿ, ಆ ಮಹಾತ್ಮಂಗೆ ತಂಗೆಯಾದ + ಅನುಂದರಿಯೆ = ಆ ಪುಣ್ಯಾತ್ಮನಿಗೆ ತಂಗಿಯಾಗಿದ್ದ ಅನುಂದರಿಯೆ, ಕತಿಪಯಭವಪರಿಕ್ರಮಣದಿಂ ಬಂದು = ಕೆಲವು ಜನ್ಮಗಳಲ್ಲಿ ಸುತ್ತಿ ಬಂದು, ಬಾಹುಬಲಿಕುಮಾರನಿಂ ನೇರ್ಗಿಜೆಯಳಾಗಿ = ಬಾಹುಬಲಿಗಿಂತ ಕೊಂಚವೇ ಚಿಕ್ಕವಳಾಗಿ,

**ಗದ್ಯಾನುಸರಣ:** ಈ ಹಿಂದೆ ವೃಷಭದೇವನು ವಜ್ರಜಂಘನಾಗಿದ್ದ ಜನ್ಮದಲ್ಲಿ ಆ ಮಹಾತ್ಮನಿಗೆ ತಂಗಿಯಾಗಿದ್ದ ಅನುಂದರಿಯೆ, ಕೆಲವು ಜನ್ಮಗಳಲ್ಲಿ ಸುತ್ತಿ ಬಂದು ಬಾಹುಬಲಿಗಿಂತ ಕೊಂಚವೇ ಚಿಕ್ಕವಳಾಗಿ,

**ಸೌಂದರತನುರುಚಿಯೊಳ್ ಸುರ**
**ಸೌಂದರಿಯೆನೆ ಸೌಂದರಾಂಗಿ ಸೌಂದರಿಯೆಂಬಳ್**
**ಸೌಂದರವೃಷಭಮಹೀಜಭುಜ**
**ಸೌಂದರಿಗೆ ಸುನಂದೆಗಂದು ನಂದನೆಯಾದಳ್** ೫೪

**ಪದವಿಭಾಗ–ಅನ್ವಯ–ಅರ್ಥ:** ಸೌಂದರತನುರುಚಿಯೊಳ್ = ಸುಂದರವಾದ ದೇಹಕಾಂತಿಯಲ್ಲಿ, ಸುರಸೌಂದರಿಯೆನೆ ಸೌಂದರಾಂಗಿ = ಸುರಸುಂದರಿ ಎಂಬಂತೆ ಚೆಲುವೆಯಾದ, ಸೌಂದರಿಯೆಂಬಳ್ = ಸೌಂದರಿ ಎನ್ನುವವಳು, ಸೌಂದರವೃಷಭಮಹೀಜಭುಜಸೌಂದರಿಗೆ ಸುನಂದೆಗೆ = ಸುಂದರನಾದ ವೃಷಭಮಹಾರಾಜನ ಹೆಂಡತಿಯಾದ ಸುನಂದೆಗೆ, ಅಂದು ನಂದನೆಯಾದಳ್ = ಈಗ ಮಗಳಾಗಿ ಹುಟ್ಟಿದಳು.

**ಗದ್ಯಾನುಸರಣ:** ತನ್ನ ಸುಂದರವಾದ ದೇಹಕಾಂತಿಯಿಂದ ಸುರಸುಂದರಿ ಎಂಬಂತೆ ಚೆಲುವೆಯಾದ ಸೌಂದರಿ ಎನ್ನುವವಳು ಸುಂದರನಾದ ವೃಷಭಮಹಾರಾಜನ ಹೆಂಡತಿಯಾದ ಸುನಂದೆಗೆ ಈಗ ಮಗಳಾಗಿ ಹುಟ್ಟಿದಳು.

**ವ। ಅಂತು ಭರತೇಶ್ವರಂ ಬಾಹುಬಲಿಕುಮಾರಂ ಮೊದಲಾಗೆ ನೂರ್ವರ್ ಕುಮಾರರುಮನಿರ್ವರ್ ಕನ್ಯೆಯರುಮನಾದಿಪುರುಷಂ ನೋಡಿ ಮನದೊ ಳಾದಟ್ಟಜೆಂ ನಿಜಾನ್ವಯಭೂಷಣತನಯವರ್ಗಕ್ಕೆ ಭೂಷಣವಿಶೇಷಂಗಳಂ ತನಗಮಿಂದ್ರಂಗಂ ಸಕಳ ಚಕ್ರವರ್ತಿಗಂ ತುಡಲ್ಕೆ ಸಾಸಿರದೆಂಟು ತೋರಮುತ್ತಿನ ಸರದಿಂದ್ರಚ್ಛಂದಂ ಮೊದಲಾಗೆ ವಿಜಯಚ್ಛಂದಹಾರದೇವಚ್ಛಂದಾರ್ಧಹಾರ ರಶ್ಮಿಕಳಾಪ ಗುಚ್ಛನಕ್ಷತ್ರ ಮಾಳಾರ್ಧಗುಚ್ಛಮಾಣವಕಾರ್ಧಮಾಣವಕಂಗಳೆಂಬ ಪನ್ನೊಂದು ನಾನಾರತ್ನದ ಸುವರ್ಣಪದಕವಿರಚನಾದಿಭೇದದಿಂ ಪ್ರತ್ಯೇಕಶೀರ್ಷಕೋಪಶೀರ್ಷಕಾ ವಘಾಟಕಪ್ರಕಾಂಡಕತರಳತರ ಬಂಧೋಪಪದ ಪಂಚಕ**

**ಸಮೇತಂಗಳಾಗಿ ಪಂಚಪಂಚಾಶತ್ಪ್ರಮಾಣಂಗಳೊಳಾದ ಹಾರಂ ಗಳುಮಂ ಪೆಱವುಂ ಪ್ರತ್ಯಂಗೋಚಿತಮಣಿಭೂಷಣಂಗಳುಮಂ ಸ್ವಮತಿ ಪರಿಕಲ್ಪನದಿಂ ಯುಗಾರಂಭದೊಳ್ ಪಡೆದು,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಭರತೇಶ್ವರಂ ಬಾಹುಬಲಿಕುಮಾರಂ ಮೊದಲಾಗೆ = ಹೀಗೆ ಭರತ ಬಾಹುಬಲಿ ಮೊದಲಾದ, ನೂರ್ವರ್ ಕುಮಾರರುಮನ್ = ನೂರು ಮಂದಿ ಗಂಡುಮಕ್ಕಳನ್ನೂ, ಇರ್ವರ್ ಕನ್ಯೆಯರುಮನ್ = ಇಬ್ಬರು ಹೆಣ್ಣುಮಕ್ಕಳನ್ನೂ, ಆದಿಪುರುಷಂ ನೋಡಿ ಮನದೊಳಾದ + ಅಟ್ಕಱಿಂ = ಆದಿದೇವನು ನೋಡಿ ಮನಸ್ಸಿನಲ್ಲಾದ ಅಕ್ಕರೆಯಿಂದ, ನಿಜ + ಅನ್ವಯ ಭೂಷಣತನಯವರ್ಗಕ್ಕೆ = ತನ್ನ ವಂಶದ ಆಭರಣಗಳಾದ ಮಕ್ಕಳಿಗೆ, ಭೂಷಣ ವಿಶೇಷಂಗಳಂ = ವಿಶಿಷ್ಟವಾದ ಒಡವೆಗಳನ್ನೂ, ತನಗಂ + ಇಂದ್ರಂಗಂ ಸಕಳ ಚಕ್ರವರ್ತಿಗಂ = ತನಗೂ ಇಂದ್ರನಿಗೂ ಎಲ್ಲ ಚಕ್ರವರ್ತಿಗಳಿಗೂ, ತುಡಲ್ಕೆ ಸಾಸಿರದ + ಎಂಟು ತೋರಮುತ್ತಿನ ಸರದ + ಇಂದ್ರಚ್ಛಂದಂ ಮೊದಲಾಗೆ = ತೊಟ್ಟುಕೊಳ್ಳಲು ಸಾವಿರದೆಂಟು ದೊಡ್ಡ ಮುತ್ತುಗಳ ಹಾರವಾದ ಇಂದ್ರಚ್ಛಂದ ಮುಂತಾದ, ವಿಜಯಚ್ಛಂದ ಹಾರ ದೇವಚ್ಛಂದ ಅರ್ಧಹಾರ ರಶ್ಮಿಕಳಾಪ ಗುಚ್ಛ ನಕ್ಷತ್ರಮಾಳಾ + ಅರ್ಧಗುಚ್ಛ ಮಾಣವಕ + ಅರ್ಧಮಾಣವಕಂಗಳೆಂಬ = ವಿಜಯಚ್ಛಂದ ಹಾರ ದೇವಚ್ಛಂದ ಅರ್ಧಹಾರ ರಶ್ಮಿಕಳಾಪ ನಕ್ಷತ್ರಮಾಳಾ ಅರ್ಧಗುಚ್ಛ ಮಾಣವಕ ಅರ್ಧಮಾಣವಕ ಎಂಬ, ಪನ್ನೊಂದು ನಾನಾರತ್ನದ ಸುವರ್ಣಪದಕ ವಿರಚನಾದಿಭೇದದಿಂ = ಹನ್ನೊಂದು ಬಗೆಯ ರತ್ನಗಳಿಂದ ಕೂಡಿದ ಚಿನ್ನದ ಪದಕಗಳಿಂದ ಮಾಡಿದ, ಪ್ರತ್ಯೇಕ ಶೀರ್ಷಕ + ಉಪಶೀರ್ಷಕ + ಅವಘಾಟಕ ಪ್ರಕಾಂಡಕ ತರಳತರ ಬಂಧ + ಉಪಪದ ಪಂಚಕಸಮೇತಂಗಳಾಗಿ = ಬೇರೆಬೇರೆಯಾದ ಶೀರ್ಷಕ ಉಪಶೀರ್ಷಕ ಅವಘಾಟಕ ಪ್ರಕಾಂಡಕ ತರಳತರಬಂಧ ಎಂಬ ಉಪಪದ ಪಂಚಕಗಳಿಂದಾದ, ಪಂಚಪಂಚಾಶತ್ + ಪ್ರಮಾಣಂಗಳೊಳ್ + ಆದ ಹಾರಂಗಳುಮಂ = ಐವತ್ತೈದು ಸಂಖ್ಯೆಯಷ್ಟು ಹಾರಗಳನ್ನೂ, ಪೆಱವುಂ ಪ್ರತ್ಯಂಗ + ಉಚಿತ ಮಣಿಭೂಷಣಂಗಳುಮಂ = ಇತರ ಹಲವು ಸೂಕ್ತವಾದ ರತ್ನದ ಆಭರಣಗಳನ್ನೂ, ಯುಗಾರಂಭದೊಳ್ ಸ್ವಮತಿಪರಿಕಲ್ಪನದಿಂ ಪಡೆದು = ಯುಗದ ಮೊದಲಲ್ಲಿ ತಾನೇ ಕಲ್ಪನೆ ಮಾಡಿಕೊಂಡು ಸೃಷ್ಟಿಮಾಡಿ,

**ಗದ್ಯಾನುಸರಣ:** ಹೀಗೆ ಭರತ ಬಾಹುಬಲಿ ಮೊದಲಾದ ತನ್ನ ನೂರು ಮಂದಿ ಗಂಡುಮಕ್ಕಳನ್ನೂ, ಇಬ್ಬರು ಹೆಣ್ಣುಮಕ್ಕಳನ್ನೂ ನೋಡಿ ಆದಿದೇವನ ಮನಸ್ಸಿನಲ್ಲಿ ಅಕ್ಕರೆ ಉಕ್ಕಿತು; ತನ್ನ ವಂಶದ ಆಭರಣಗಳಾದ ಮಕ್ಕಳಿಗೆ ವಿಶಿಷ್ಟವಾದ ಒಡವೆಗಳನ್ನೂ, ತನಗೂ ಇಂದ್ರನಿಗೂ ಎಲ್ಲ ಚಕ್ರವರ್ತಿಗಳಿಗೂ ತೊಟ್ಟುಕೊಳ್ಳಲು ಸಾವಿರದೆಂಟು ದೊಡ್ಡ ಮುತ್ತುಗಳ ಹಾರವಾದ ಇಂದ್ರಚ್ಛಂದ ಮುಂತಾದ ವಿಜಯಚ್ಛಂದ ಹಾರ ದೇವಚ್ಛಂದ ಅರ್ಧಹಾರ ರಶ್ಮಿಕಳಾಪ ನಕ್ಷತ್ರಮಾಳಾ ಅರ್ಧಗುಚ್ಛ

ಮಾಣವಕ ಅರ್ಧಮಾಣವಕ ಎಂಬ ಹನ್ನೊಂದು ಬಗೆಯ ರತ್ನಗಳಿಂದ ಕೂಡಿದ ಚಿನ್ನದ ಪದಕಗಳಿಂದ ಮಾಡಿದ ಬೇರೆಬೇರೆಯಾದ ಶೀರ್ಷಕ ಉಪಶೀರ್ಷಕ ಅವಘಾಟಕ ಪ್ರಕಾಂಡಕ ತರಳತರಬಂಧ ಎಂಬ ಉಪಪದ ಪಂಚಕಗಳಿಂದಾದ ಐವತ್ತೈದು ಸಂಖ್ಯೆಯ ವಿಭಿನ್ನ ಹಾರಗಳನ್ನೂ ಇತರ ಹಲವು ಸೂಕ್ತವಾದ ರತ್ನದ ಆಭರಣಗಳನ್ನೂ ಯುಗದ ಮೊದಲಲ್ಲಿ ತಾನೇ ಕಲ್ಪನೆ ಮಾಡಿಕೊಂಡು ಸೃಷ್ಟಿಮಾಡಿದ.

**ವಿಶೇಷ ವಿಚಾರ:** 'ಯಷ್ಟಿಗಳ (ಎಳೆಗಳ) ಸಂಖ್ಯೆಯನ್ನನುಸರಿಸಿ ಮುತ್ತಿನ ಸರಗಳು ಬೇರೆ ಬೇರೆ ಹೆಸರನ್ನು ಪಡೆಯುತ್ತವೆ. ಹೇಗೆಂದರೆ, ಇಂದ್ರಚ್ಛಂದ = ೧೦೦೮ ಎಳೆ, ವಿಜಯಚ್ಛಂದ = ೫೦೪ ಎಳೆ, ಹಾರ = ೧೦೮ ಎಳೆ, ದೇವಚ್ಛಂದ = ೮೧ ಎಳೆ, ಅರ್ಧಹಾರ, ೬೪ ಎಳೆ, ರಶ್ಮಿಕಲಾಪ = ೫೪ ಎಳೆ, ಗುಚ್ಛ = ೩೨ ಎಳೆ, ನಕ್ಷತ್ರಮಾಲಾ = ೨೭ ಎಳೆ, ಅರ್ಧಗುಚ್ಛ = ೨೪ ಎಳೆ, ಮಾಣವ = ೨೦ ಇಳಇ, ಅರ್ಧಮಾಣವ = ೧೦ ಎಳೆ, ಮಧ್ಯದಲ್ಲಿ ದೊಡ್ಡಮುತ್ತುಳ್ಳ ಯಷ್ಟಿಗೆ ಶೀರ್ಷಕವೆಂದು ಹೆಸರು. ಹೀಗೆಯೇ ಅಂತರ್ಭೇದಗಿಂದ ಶಿರ್ಷಕ, ಉಪಶಿರ್ಷಕ ಮೊದಲಾದ ೫ ವಿಭಾಗಗಳಿವೆ. ಇಂದ್ರಚ್ಛಂದಾದಿ ಹಾರಗಳಲ್ಲಿ ಒಂದೊಂದರಲ್ಲಿಯೂ ಶಿರ್ಷಕಾದಿ ಪಂಚವಿಭಗಗಳು ಸೇರಿದರೆ ಒಟ್ಟು ೫೫ ಬಗೆಯ ಹಾರಗಳಾಗುತ್ತವೆ' – 'ಆದಿಪುರಾಣಂ' (ಅನುವಾದ: ಕೆ.ಎಲ್. ನರಸಿಂಹಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೪: ಪು. ೩೩೫, ಅಡಿಟಿಪ್ಪಣಿ)

ಆದಿನಾಥನ ಮಕ್ಕಳಲ್ಲಿ ಭರತ ಮತ್ತು ಬಾಹುಬಲಿ ಅವರನ್ನು ಮಾತ್ರಕವಿ ವಿಶೇಷವಾಗಿ ಪರಿಗಣಿಸಿ (ಪುರಾಣಕಾರನ ಮತದಂತೆ) ಇಲ್ಲಿ ವರ್ಣಿಸಿದ್ದಾನೆ. ಅವರಿಬ್ಬರೂ ಮುಂದೆ ಪರಸ್ಪರ ಮುಖಾಮುಖಿಯಾಗುತ್ತಾರೆ ಎಂಬ ಕಾರಣದಿಂದಲೂ ಇದು ಸರಿಯಾದುದು. ಆದರೆ ಈ ಇಬ್ಬರ ವರ್ಣನೆಯಲ್ಲಿಯೂ ಭರತನ ವರ್ಣನೆಯನ್ನು ಸ್ವಲ್ಪ ಹೆಚ್ಚಾಗಿಯೇ ಸಂಭ್ರಮದಿಂದ ಪಂಪ ಚಿತ್ರಿಸಿಧ್ದಾನೆ. ಇದಕ್ಕೆ ಅವನು 'ಚಕ್ರವರ್ತಿ' ಯಾಗುತ್ತಾನೆಂಬ ಕಾರಣವಿರಬಹುದು.

**ಇವರ್ಗಿವು ತಕ್ಕುವೆಂದವರ್ಗವಂ ಕೊಟ್ಟು ದಯೆಯಿಂ ದಯೆಗೆಯ್ಯೆ ರಾಗದಿಂ**
**ದವರವನೆಲ್ಲಮಂ ನೆಱಿಯೆ ತೊಟ್ಟು ತದುಜ್ಜ್ವಳರತ್ನದೀಪ್ತಿ ದಿ**
**ಗ್ವಿವರನಭೋವಿಭಾಗಪರಿಪೂರಿತವಾಗಿರೆ ತಮ್ಮನೊಲ್ದು ನೋ**
**ಟ್ಪವರ್ಗಳ ಕಣ್ಗೆ ದೀಪ್ತಿಪರವಾಣುಗಳಿಂ ಸಮೆದಂತೆ ತೋಱಿದರ್ ೫೫**

**ಪದವಿಭಾಗ-ಅನ್ವಯ-ಅರ್ಥ:** ಇವರ್ಗಿವು ತಕ್ಕುವೆಂದು + ಅವರ್ಗೆ + ಅವಂ ಕೊಟ್ಟು = ಇವರಿಗೆ ಇದು ತಕ್ಕುದು ಎಂದು ಅವರವರಿಗೆ ಆ ಆಭರಣವನ್ನಿತ್ತು, ದಯೆಯಿಂ ದಯೆಗೆಯ್ಯೆ = ಪ್ರೀತಿಯಿಂದ ದಯೆಗೆಯ್ಯಲು, ಅವರ್ + ಅವನ್ + ಎಲ್ಲಮಂ ರಾಗದಿಂದೆ ನೆಱಿಯೆ ತೊಟ್ಟು = ಅವರೆಲ್ಲ ಆ ಒಡವೆಗಳೆಲ್ಲವನ್ನೂ

ಸಂಭ್ರಮದಿಂದ ಧರಿಸಿ, ತತ್ + ಉಜ್ಜ್ವಳರತ್ನದೀಪ್ತಿ = ಅವುಗಳ ಪ್ರಕಾಶಮಾನವಾದ ಕಾಂತಿಯು, ದಿಕ್ + ವಿವರ ನಭೋವಿಭಾಗಪರಿ ಪೂರಿತಮಾಗಿರೆ = ದಿಕ್ಕುಗಳ ಮೂಲೆಗಳು ಆಗಸದ ಭಾಗಗಳೆಲ್ಲ ತುಂಬಿಕೊಳ್ಳಲು, ತಮ್ಮನ್ + ಒಲ್ದು ನೋೞ್ಪವರ್ಗಳ ಕಣ್ಗೆ ದೀಪ್ತಿಪರಮಾಣುಗಳಿಂ ಸಮೆದಂತೆ ತೋಜಿದರ್ = ತಮ್ಮನ್ನು ಪ್ರೀತಿಯಿಂದ ನೋಡುವವರ ಕಣ್ಣಿಗೆ ಬೆಳಕಿನ ಕಣಗಳಿಂದ ನಿರ್ಮಿತವಾದಂತೆ ಕಾಣಿಸಿದರು.

**ಗದ್ಯಾನುಸರಣ:** ಇವರಿಗೆ ಇದು ತಕ್ಕುದು ಎಂದು ಅವರವರಿಗೆ ಆ ಆಭರಣಗಳನ್ನು ಆದಿದೇವನು ಪ್ರೀತಿಯಿಂದ ದಯೆಗೆಯ್ದು; ಅವರೆಲ್ಲ ಆ ಒಡವೆಗಳೆಲ್ಲವನ್ನೂ ಸಂಭ್ರಮದಿಂದ ಧರಿಸಿ ಅವುಗಳ ಪ್ರಕಾಶಮಾನವಾದ ಕಾಂತಿಯು ದಿಕ್ಕುಗಳ ಮೂಲೆಗಳು ಆಗಸದ ಭಾಗಗಳೆಲ್ಲ ತುಂಬಿಕೊಂಡಿತು; ತಮ್ಮನ್ನು ಪ್ರೀತಿಯಿಂದ ನೋಡುವವರ ಕಣ್ಣಿಗೆ ಆ ಮಕ್ಕಳು ಬೆಳಕಿನ ಕಣಗಳಿಂದ ನಿರ್ಮಿತವಾದಂತೆ ಕಾಣಿಸಿದರು.

**ವ। ಮತ್ತೊಂದು ದಿವಸಮಮರಕುಮಾರಕರಪಲ್ಲವವಿಧೂಯಮಾನ ಚಾರುಚಾಮರಜನಿತ ಮಂದಮಾರುತಾಂದೋಳಿತ ಸೂಕ್ಷ್ಮಕ್ಷೌಮಾಂಬರ ಪಲ್ಲವಂ ಅನೇಕದಿವಿಜವಂದಿವೃಂದಸಂ ಸ್ತೂಯಮಾನ ತ್ರಿದಿವಾವತರಣ ಜನ್ಮಾಭಿಷೇಕ ನಾನಾಪ್ರತಿಬದ್ಧನಿಸರ್ಗ ಮಹಿಮಾಕರ್ಣ ನೋದೀರ್ಣದರಹಸಿತ 'ವದನಸರಸೀರುಹಂ ಅವನತ ದಿವಿಜದನುಜಮನುಜ ಮಕುಟಮಣಿ ಮರೀಚಿಪುಂಜ ಪಿಂಜರಿತೋತ್ತುಂಗ ಸಿಂಹಾಸನಾಸೀನವೃಭೇಶ್ವರಂ ಸಕಳಕಳಾ ಕಳಾ ಪವಿದ್ಯೋಪದೇಶೋತ್ಸುಕಾಶಯ ಕುಶೇಶಶಯನಾಗಿರ್ಪನ್ನೆಗಂ,**

**ಪದವಿಭಾಗ-ಅನ್ವಯ-ಅರ್ಥ:** ಮತ್ತೊಂದು ದಿವಸಂ = ಹೀಗಿರಲು ಒಂದು ದಿನ, ಅಮರಕುಮಾರಕರಪಲ್ಲವವಿಧೂಯಮಾನ = ದೇವತಾಕುಮಾರರ ಕೈಗಳೆಂಬ ಚಿಗುರಿನಿಂದ ಬೀಲ್ಪಡುತ್ತಿರುವ, ಚಾರುಚಾಮರಜನಿತ ಮಂದಮಾರುತ = ಸುಂದರವಾದ ಚಾಮರಗಳ ಮೆಲುಗಾಳಿಯಿಂದ, ಆಂದೋಳಿತ ಸೂಕ್ಷ್ಮಕ್ಷೌಮ + ಅಂಬರಪಲ್ಲವಂ = ಅಲುಗಾಡುವ ತೆಳುವಾದ ರೇಷ್ಮೆ ಬಟ್ಟೆಯ ಅಂಚುಗಳಿಂದ ಕೂಡಿದವನೂ, ಅನೇಕದಿವಿಜವಂದಿವೃಂದಸಂಸ್ತೂಯಮಾನ = ನಾನಾ ದೇವತಾ ಸಮೂಹದಿಂದ ಹೊಗಳಲ್ಪಡುವ, ತ್ರಿದಿವ + ಅವತರಣ ಜನ್ಮಾಭಿಷೇಕ ನಾನಾ ಪ್ರತಿಬದ್ಧನಿಸರ್ಗಮಹಿಮಾ = ಮೂರು ಸ್ವರ್ಗಗಳಲ್ಲಿನ ಅವತಾರ ಜನ್ಮಕಲ್ಯಾಣ ಮುಂತಾದವುಗಳಿಂದ ಕೂಡಿದ ಸಹಜ ಹಿರಿಮೆಗಳನ್ನು, ಆಕರ್ಣನ + ಉದೀರ್ಣ= ಕೇಳುವಿಕೆಯಿಂದ ಅರಳಿದ, ದರಹಸಿತವದನಸರಸೀರುಹಂ = ಮುಗುಳ್ನಗೆಯ ಮೊಗದಾವರೆಯುಳ್ಳವನೂ, ಅವನತದಿವಿಜದನುಜ ಮನುಜಮಕುಟಮಣಿಮರೀ ಚಿಪುಂಜಪಿಂಜರಿತ = ತಲೆಬಾಗಿದ ದೇವತೆಗಳು ದಿವಿಜರು ಮತ್ತು ಮಾನವ ದೊರೆಗಳ ಕಿರೀಟಗಳ ರತ್ನಕಿರಣಸಮೂಹದಿಂದ ಹೊಂಬಣ್ಣವಾದ, ಉತ್ತುಂಗ

ಸಿಂಹಾಸನಾಸೀನವೃಭೇಶ್ವರಂ = ಎತ್ತರದ ಸಿಂಹಾಸನದಲ್ಲಿ ಆಸೀನನಾದ ವೃಷಭದೇವನು, ಸಕಳಕಳಾಕಳಾಪವಿದ್ಯಾ + ಉಪದೇಶ + ಉತ್ಸುಕ + ಆಶಯಕುಶೇಶಯನ್ + ಆಗಿರ್ಪನ್ನೆಗಂ = ಎಲ್ಲ ಕಲೆಗಳು ಮತ್ತು ವಿದ್ಯೆಗಳನ್ನು ಹೇಳಿಕೊಡಲು ಉತ್ಸಾಹವುಳ್ಳ (ಹೃದಯ)ಕಮಲವನ್ನು ಹೊಂದಿರುವಾಗ,

**ಗದ್ಯಾನುಸರಣ:** ಹೀಗಿರಲು ಒಂದು ದಿನ ಎತ್ತರದ ಸಿಂಹಾಸನದಲ್ಲಿ ವೃಷಭದೇವನು ಆಸೀನನಾಗಿದ್ದ; ದೇವತಾಕುಮಾರರು ತಮ್ಮ ಕೈಗಳೆಂಬ ಚಿಗುರಿನಿಂದ ಬೀಸುವ ಸುಂದರವಾದ ಚಾಮರಗಳ ಮೆಲುಗಾಳಿಯಿಂದ ಅವನ ತೆಳುವಾದ ರೇಷ್ಮೆ ಬಟ್ಟೆಯ ಅಂಚುಗಳು ಅಲುಗಾಡುತ್ತಿದ್ದುವು; ನಾನಾ ದೇವತಾಸಮೂಹವು ಅವನ ಮೂರು ಸ್ವರ್ಗಗಳಲ್ಲಿನ ಅವತಾರ ಜನ್ಮಕಲ್ಯಾಣ ಮುಂತಾದವುಗಳಿಂದ ಕೂಡಿದ ಸಹಜ ಹಿರಿಮೆಗಳನ್ನು ಸ್ತುತಿ ಮಾಡುತ್ತಿತ್ತು;, ಇದನ್ನು ಕೇಳಿ ಅವನ ಮೊಗದಾವರೆಯಲ್ಲಿ ಮುಗುಳ್ನಗೆಯರಳಿತು; ತಲೆಬಾಗಿದ ದೇವತೆಗಳು ದಿವಿಜರು ಮತ್ತು ಮಾನವ ದೊರೆಗಳ ಕಿರೀಟಗಳ ರತ್ನಕಿರಣಸಮೂಹದಿಂದ ಅವನ ಎತ್ತರವಾದ ಸಿಂಹಪೀಠವು ಹೊಂಬಣ್ಣವಾಗಿತ್ತು; ಆಗ (ಹೃದಯ)ಕಮಲದಲ್ಲಿ ಮಕ್ಕಳಿಗೆ ಎಲ್ಲ ಕಲೆಗಳು ಮತ್ತು ವಿದ್ಯೆಗಳನ್ನು ಹೇಳಿಕೊಡಲು ಉತ್ಸಾಹ ತುಂಬಿಕೊಂಡಿತ್ತು.

**ಸ್ಫುರದೀಷತ್ಪ್ರೋದ್ಗತೋರೋರುಹಮುಕುಳೆಯರುನ್ಮತ್ತಹಂಸೀಕ್ವಣನ್ನೂ**
**ಪುರೆಯರ್ ಮಾಣಿಕ್ಯಕಾಂಚೀರುಚಿರುಚಿರವರಾರೋಹೆಯರ್ ತಾರತಾರಾ**
**ತರಳೋದ್ಯದ್ದೀಪ್ತಿಮುಕ್ತಾಫಲವಿಳಸದಳಂಕಾರೆಯುರ್ ಬ್ರಹ್ಮಿಯುಂ ಸೌಂ**
**ದರಿಯುಂ ಮೆಯ್ಯಿಕ್ಕಿ ದೂರಾಂತರದೊಳೆ ಪೊಡೆವಟ್ಟೆಯ್ದೆವಂದಿರ್ದರಾಗಳ್**
**೫೬**

**ಪದವಿಭಾಗ-ಅನ್ವಯ-ಅರ್ಥ:** ಸ್ಫುರತೀಷತ್ + ಪ್ರೋದ್ಗತ + ಉರೋರುಹಮುಕುಳೆಯರ್ = ಕೊಂಚ ಮೇಲೆದ್ದ ಮೊಲೆಗಳೆಂಬ ಮೊಗ್ಗುಗಳಿಂದ ಕೂಡಿದ, ಉನ್ಮತ್ತಹಂಸೀಕ್ವಣತ್ + ನೂಪುರೆಯರ್ = ಹಂಸಗಳಂತೆ ಸದ್ದು ಮಾಡುತ್ತಿದ್ದ ಕಾಲ್ಗಡಗಗಳನ್ನು ಧರಿಸಿದವರೂ, ಮಾಣಿಕ್ಯಕಾಂಚೀರುಚಿರುಚಿರವರ + ಆರೋಹೆಯರ್ = ಮಾಣಿಕ್ಯದ ಒಡ್ಯಾಣದ ಕಾಂತಿಯಿಂದ ಬೆಳಗುತ್ತಿದ್ದವರೂ, ತಾರತಾರಾತರಳ + ಉದ್ಯತ್ + ದೀಪ್ತಿಮುಕ್ತಾಫಲವಿಳಸತ್ + ಅಳಂಕಾರೆಯರ್ = ನಕ್ಷತ್ರಗಳಂತೆ ಮಿನುಗುವ ಮುತ್ತಿನ ಹಾರದಿಂದ ಅಲಂಕೃತರಾದವರೂ, ಆದ, ಬ್ರಹ್ಮಿಯುಂ ಸೌಂದರಿಯುಂ ದೂರ + ಅಂತರದೊಳೆ ಮೆಯ್ಯಿಕ್ಕಿ = ಬ್ರಹ್ಮಿ ಮತ್ತು ಸೌಂದರಿಯರು ದೂರದಿಂದಲೇ ಸಾಷ್ಟಾಂಗಪೂರ್ವಕವಾಗಿ, ಪೊಡೆವಟ್ಟು ಆಗಳ್ ಎಯ್ದೆವಂದಿರ್ದರ್ = ನಮಸ್ಕರಿಸಿ ಹತ್ತಿರ ಬಂದರು.

**ಗದ್ಯಾನುಸರಣ:** ಬ್ರಹ್ಮಿ ಮತ್ತು ಸೌಂದರಿಯರು ದೂರದಿಂದಲೇ ಸಾಷ್ಟಾಂಗ

ಪೂರ್ವಕವಾಗಿ ನಮಸ್ಕರಿಸಿ ತಂದೆಯ ಹತ್ತಿರ ಬಂದರು. ಅವರ ಮೊಲೆಗಳು ಕೊಂಚ ಮೇಲೆದ್ದ ಮೊಗ್ಗುಗಳಂತಿದ್ದುವು, ಹಂಸಗಳಂತೆ ಸದ್ದುಮಾಡುತ್ತಿದ್ದ ಕಾಲ್ಗಡಗಗಳನ್ನು ಧರಿಸಿದ್ದರು, ಧರಿಸಿದ್ದ ಮಾಣಿಕ್ಯದ ಒಡ್ಯಾಣದ ಕಾಂತಿಯಿಂದ ಬೆಳಗು ತ್ತಿದ್ದರು, ನಕ್ಷತ್ರಗಳಂತೆ ಮಿನುಗುವ ಮುತ್ತಿನ ಹಾರದಿಂದ ಅಲಂಕೃತರಾಗಿದ್ದರು.

**ತೆಗೆದುತ್ಸಂಗದೊಳಿಟ್ಟೊ**
**ಯ್ಯಗೆ ಮೊಗಮಂ ನೋಡಿ ಕರ್ಚಿ ಕದಪಂ ನುಡಿದಂ**
**ಜಗದಧಿಪತಿ ನಿಮ್ಮಿರ್ಬರ**
**ನೆಗಟ್ಟೆ ಮಕ್ಕಳಿರ ವಿನಯವಿಳಾಸನಿಳಯಂ ೫೭**

**ಪದವಿಭಾಗ–ಅನ್ವಯ–ಅರ್ಥ:** ತೆಗೆದು + ಉತ್ಸಂಗದೊಳ್ ಇಟ್ಟು = (ಅವರನ್ನು) ಎತ್ತಿ ತೊಡೆಯ ಮೇಲಿರಿಸಿಕೊಂಡು, ಒಯ್ಯಗೆ ಮೊಗಮಂ ನೋಡಿ = ನಿಧಾನವಾಗಿ ಮುಖವನ್ನು ನೋಡಿ, ಕದಪಂ ಕರ್ಚಿ = ಕೆನ್ನೆಗಳನ್ನು ಮುದ್ದಿಸಿ, ಜಗತ್ + ಅಧಿಪತಿ ನುಡಿದಂ = ಜಗದೊಡೆಯನು ಹೀಗೆಂದ, ಮಕ್ಕಳಿರ ನಿಮ್ಮಿರ್ಬರ ನೆಗಟ್ಟೆ ವಿನಯವಿಳಾಸನಿಳಯಂ = ನಿಮ್ಮಿಬ್ಬರ ನಡವಳಿಕೆಯು ವಿನಯ ಸೊಬಗಿನ ನೆಲೆಯಾಗಿದೆ.

**ಗದ್ಯಾನುಸರಣ:** ಅವರನ್ನೆಎತ್ತಿ ತನ್ನ ತೊಡೆಯ ಮೇಲಿರಿಸಿಕೊಂಡು ನಿಧಾನವಾಗಿ ಮುಖವನ್ನು ನೋಡಿ ಅವರ ಕೆನ್ನೆಗಳನ್ನು ಮುದ್ದಿಸಿ ಜಗದೊಡೆಯನು ಹೀಗೆಂದ: 'ಮಕ್ಕಳೇ, ನಿಮ್ಮಿಬ್ಬರ ನಡವಳಿಕೆಯು ವಿನಯ ಸೊಬಗಿನ ನೆಲೆಯಾಗಿದೆ.'

**ವ। ಅದು ಕಾರಣಂ**

**ಅರ್ಥ:** ಅದು ಕಾರಣಂ = ಅದರಿಂದಾಗಿ,

**ಈ ವಯಸಮನೀ ಶೀಲಮ**
**ನೀ ವಿನಯಮನೆಯ್ದೆ ವಿದ್ಯೆಯಿಂ ಪುದಿದೊಡೆ ಮ**
**ತ್ತೇವೇೞ್ವುದೋ ನೀವೆ ಜಗ**
**ತ್ಪಾವನೆಯರಿರಕ್ಕ ನಿಮಗಗ್ಗಳವೊಳರೇ ೫೮**

**ಪದವಿಭಾಗ–ಅನ್ವಯ–ಅರ್ಥ:** ಈ ವಯಸಮನ್ = ನಿಮ್ಮ ಈ ವಯಸ್ಸು, ಈ ಶೀಲಮನ್ = ಈ ನಡತೆ, ಈ ವಿನಯಮನ್ = ಈ ವಿನಯಗಳನ್ನು, ಎಯ್ದೆ ವಿದ್ಯೆಯಿಂ ಪುದಿದೊಡೆ = ವಿದ್ಯೆಯಿಂದ ಕೂಡಿದರೆ, ಮತ್ತೆ + ಏ + ಪೇೞ್ವುದೋ = ಮತ್ತೇನು ಹೇಳುವುದು, ನೀವೆ ಜಗತ್ಪಾವನೆಯರಿರ್ = ನೀವೇ ಜಗತ್ತಿನಲ್ಲಿ ಪಾವನರೆನಿಸುವಿರಿ, ಅಕ್ಕ ನಿಮಗೆ + ಅಗ್ಗಳಂ + ಒಳರೇ = ನಿಮಗಿಂತ ಮಿಗಿಲಾದವರು ಇರಲು ಸಾಧ್ಯವೇ?

**ಗದ್ಯಾನುಸರಣ:** 'ನಿಮ್ಮ ಈ ವಯಸ್ಸು, ಈ ನಡತೆ, ಈ ವಿನಯಗಳೊಡನೆ ಒಳ್ಳೆಯ ವಿದ್ಯೆಯು ಕೂಡಿದರೆ, ಮತ್ತೇನು ಹೇಳುವುದು, ನೀವೇ ಜಗತ್ತಿನಲ್ಲಿ ಪಾವನರೆನಿಸುವಿರಿ, ನಿಮಗಿಂತ ಮಿಗಿಲಾದವರು ಇರಲು ಸಾಧ್ಯವೇ?'

**ವ। ಅದರಿಂ ನಿಮಗೆ ವಯಸಮೆಂಬುದು ವಿದ್ಯಾಭ್ಯಾಸಯೋಗ್ಯಮೆಂದು ವಿಶಾಲ ಹೇಮಪಟ್ಟಕದೊಳ್ ಆತ್ಮಹೃತ್ಪದ್ಮಸದ್ಮೆಯಂ ಸರಸ್ವತಿಯುಂ ಪೂಜಾ ಪೂರ್ವಕಮಧಿವಾಸಿಸಿ ನಿಜತನೂಜೆಯರಿರ್ವರುಮನೆರಡುಂ ಕೆಲದೊಳಿರಿಸಿ,**

**ಪದವಿಭಾಗ–ಅನ್ವಯ–ಅರ್ಥ:** ಅದರಿಂ ನಿಮಗೆ ವಯಸಂ + ಎಂಬುದು ವಿದ್ಯಾಭ್ಯಾಸಯೋಗ್ಯಂ + ಎಂದು = ಹೀಗಾಗಿ ನಿಮ್ಮ ವಯಸ್ಸು ವಿದ್ಯೆ ಕಲಿಯಲು ತಕ್ಕುದಾದುದು ಎಂದು, ಆತ್ಮಹೃತ್ಪದ್ಮಸದ್ಮೆಯಂ ಸರಸ್ವತಿಯಂ = ತನ್ನ ಹೃದಯದಲ್ಲಿ ನೆಲಸಿದ್ದ ಸರಸ್ವತಿಯನ್ನು, ವಿಶಾಲ ಹೇಮಪಟ್ಟಕದೊಳ್ ಪೂಜಾಪೂರ್ವಕಂ ಅಧಿವಾಸಿಸಿ = ಅಗಲವಾದ ಚಿನ್ನದ ವೇದಿಕೆಯಲ್ಲಿ ಪೂಜೆಯೊಡನೆ ಸ್ಥಾಪನೆ ಮಾಡಿ, ನಿಜತನೂಜೆಯರ್ + ಇರ್ವರುಮನ್ + ಎರಡುಂ ಕೆಲದೊಳಿರಿಸಿ = ತನ್ನ ಇಬ್ಬರು ಮಗಳಂದಿರನ್ನು ತನ್ನ ಎರಡು ಪಕ್ಕಗಳಲ್ಲಿ ಕೂರಿಸಿ,

**ಗದ್ಯಾನುಸರಣ:** 'ಹೀಗಾಗಿ ನಿಮ್ಮ ವಯಸ್ಸು ವಿದ್ಯೆ ಕಲಿಯಲು ತಕ್ಕುದಾದುದು' ಎಂದು, ತನ್ನ ಹೃದಯದಲ್ಲಿ ನೆಲಸಿದ್ದ ಸರಸ್ವತಿಯನ್ನು ಅಗಲವಾದ ಚಿನ್ನದ ವೇದಿಕೆಯಲ್ಲಿ ಪೂಜೆಯೊಡನೆ ಸ್ಥಾಪನೆ ಮಾಡಿ ತನ್ನ ಇಬ್ಬರು ಮಗಳಂದಿರನ್ನು ತನ್ನ ಎರಡು ಪಕ್ಕಗಳಲ್ಲಿ ಕೂರಿಸಿಕೊಂಡ.

**ವಿಶೇಷ ವಿಚಾರ;** ಇದೇ ಕಾವ್ಯದ ಮೊದಲ ಆಶ್ವಾಸದ ಒಂಬತ್ತನೆಯ ಪದ್ಯದಲ್ಲಿ 'ಪರಮಜಿನೇಂದ್ರವಾಣಿಯೆ ಸರಸ್ವತಿ ಬೇಱದು ಪೆಣ್ಣುರೂಪಮಂ ಧರಿಯಿಸಿ ನಿಂದುದಲ್ತು' ಎಂದು ಹೊಸ ಬಗೆಯಲ್ಲಿ ಹೇಳಿರುವ ಪಂಪನೇ ಇಲ್ಲಿ ಸರಸ್ವತಿಯ ವಿಗ್ರಹಸ್ಥಾಪನೆ ಮಾಡಿಸುತ್ತಿದ್ದಾನೆ!

**ಮುನ್ನಂ ತ್ರಿಲೋಕಗುರು ಸಿ**
**ದ್ಧನ್ನಮಂಯೆಂದಱಿಪಿ ಮುಖ್ಯಮಂಗಳಪದಮಂ**
**ಕನ್ಯೆಗೆ ಪಿರಿಯಾಕೆಗೆ ಬಟಿ**
**ಯನ್ನಂಯದಿಂ ಬರೆದು ತೋಱಿದಂ ಲಿಪಿಗಳುಮಂ ೫೯**

**ಪದವಿಭಾಗ–ಅನ್ವಯ–ಅರ್ಥ:** ತ್ರಿಲೋಕಗುರು ಮುನ್ನಂ ಮುಖ್ಯಮಂಗಳ ಪದಮಂ ಸಿದ್ಧಂ + ನಮಃ + ಎಂದು = ಮೂಲೋಕಗುರುವು ಮೊದಲು ಮಂಗಳಶಬ್ದಗಳಾದ ಸಿದ್ಧನ್ನಮಃ ಎಂದು, ಪಿರಿಯಾಕೆಗೆ ಕನ್ಯೆಗೆ ಅಱಿಪಿ = ಮೊದಲ ಮಗಳಿಗೆ ಬೋಧಿಸಿ, ಬಟಿಯನ್ನಯದಿಂ ಬರೆದು ತೋಱಿದಂ ಲಿಪಿಗಳುಮಂ = ಆನಂತರ ಅದನ್ನು ಲಿಪಿಯಲ್ಲಿ ಬರೆದು ತೋರಿಸಿದ.

**ಗದ್ಯಾನುಸರಣ:** ಮೂಲೋಕಗುರುವು ಮೊದಲು ಮಂಗಳಶಬ್ದಗಳಾದ ಸಿದ್ಧನ್ನಮಃ ಎಂದು ಮೊದಲ ಮಗಳಿಗೆ ಬೋಧಿಸಿದ; ಆನಂತರ ಅದನ್ನೇ ಲಿಪಿಯಲ್ಲಿ ಬರೆದು ತೋರಿಸಿದ.

**ವ॥ ಅಂತಕಾರಾದಿ ಹಕಾರಾಂತಸ್ವರವ್ಯಂಜನಭೇದಭಿನ್ನಶುದ್ಧಾಕ್ಷರಂಗಳು ಮಂ ಅಯೋಗ ವಾಹಚತುಷ್ಕಮುಮಂ ಸಂಯೋಗಾಕ್ಷರಂಗಳುಮಂ ಬ್ರಹ್ಮಿಗೆ ದಕ್ಷಿಣಹಸ್ತದೊಳುಪದೇಶಂಗೆಯ್ದು,**

**ಪದವಿಭಾಗ-ಅನ್ವಯ-ಅರ್ಥ:** ಅಂತು + ಅಕಾರ + ಆದಿ ಹಕಾರ + ಅಂತ = ಹೀಗೆ ಅ ಇಂದ ಮೊದಲುಗೊಂಡು ಹ ಇಂದ ಕೊನೆಯಾಗುವವರೆಗಿನ, ಸ್ವರ ವ್ಯಂಜನಭೇದಭಿನ್ನಶುದ್ಧಾಕ್ಷರಂಗಳುಮಂ = ಸ್ವರ ವ್ಯಂಜನ ವ್ಯತ್ಯಾಸಗಳ ಮೂಲಾಕ್ಷರಗಳನ್ನೂ, ಅಯೋಗವಾಹಚತುಷ್ಕಮುಮಂ = ನಾಲ್ಕು ಯೋಗವಾಹಗಳನ್ನೂ, ಸಂಯೋಗ + ಅಕ್ಷರಂಗಳುಮಂ = ದ್ವಿತ್ವಗಳನ್ನೂ, ದಕ್ಷಿಣಹಸ್ತದೊಳ್ ಬ್ರಹ್ಮಿಗೆ ಉಪದೇಶಂಗೆಯ್ದು = ಬಲಗೈಯಿಂದ ಬ್ರಹ್ಮಿಗೆ ಹೇಳಿಕೊಟ್ಟು,

**ಗದ್ಯಾನುಸರಣ:** ಹೀಗೆ ಅ ಇಂದ ಮೊದಲುಗೊಂಡು ಹ ಇಂದ ಕೊನೆಯಾಗುವವರೆಗಿನ ಸ್ವರ ವ್ಯಂಜನ ವ್ಯತ್ಯಾಸಗಳ ಮೂಲಾಕ್ಷರಗಳನ್ನೂ, ನಾಲ್ಕು ಯೋಗವಾಹಗಳನ್ನೂ, ದ್ವಿತ್ವ (ಒತ್ತಕ್ಷರ=ಎರಡು ಅಥವಾ ಅದಕ್ಕಿಂತ ಹೆಚ್ಚು ವ್ಯಂಜನಗಳು ಸೇರಿ ಆಗುವ) ಗಳನ್ನೂ ಬಲಗೈಯಿಂದ ಬರೆದು ಬ್ರಹ್ಮಿಗೆ ಹೇಳಿಕೊಟ್ಟ.

**ವಿಶೇಷ ವಿಚಾರ:** ಅ ದಿಂದ ಹವರೆಗಿನ ಅಕ್ಷರಗಳನ್ನು ಹೇಳಿಕೊಟ್ಟ ಎಂಬ ಮಾತು ಸಂಸ್ಕೃತ ವರ್ಣಮಾಲೆಗೆ ಸಂಬಂಧಿಸಿದ್ದು; ಕನ್ನಡದಲ್ಲಿ ಅ ದಿಂದ ಳವರೆಗಿನ ಎಂದು ಹೇಳಬೇಕು; ನಾಲ್ಕು ಯೋಗವಾಹಗಳೆಂದರೆ, ಅನುಸ್ವಾರ, ವಿಸರ್ಗ, ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯ ಎಂಬಿವು; ಕನ್ನಡದಲ್ಲಿ ಈಗ ಅನುಸ್ವಾರ ಮತ್ತು ವಿಸರ್ಗಗಳು ಮಾತ್ರ ಬಳಕೆಯಲ್ಲಿವೆ. ಈ ಕಾರಣದಿಂದಲೇ ಇಲ್ಲಿನ ಮೂಲಲಿಪಿಗೆ ಬ್ರಾಹ್ಮಿ ಎಂಬ ಹೆಸರು ಬಂತೇ?

**ಸುಂದರಿಗೆ ಗಣಿತಮಂ ದಳಿ**
**ತೇಂದೀವರನಯನೆಗೆಡದ ಕಯ್ಯೊಳ್ ಭವ್ಯಾ**
**ನಂದಕರಂ ಸ್ಥಾನಕ್ರಮ**
**ದಿಂದಂ ಪುರುದೇವನಱಿಯೆ ತೋಱಿದನಾಗಳ್ ೬೦**

**ಪದವಿಭಾಗ-ಅನ್ವಯ-ಅರ್ಥ:** ಭವ್ಯಾನಂದಕರಂ ಪುರುದೇವನ್ = ಭವ್ಯಾನಂದಕರನಾದ ಪುರುದೇವನು, ದಳಿತೇಂದೀವರನಯನೆಗೆ ಸುಂದರಿಗೆ = ಅರಳಿದ ನೈದಿಲೆಯಂತಹ ಕಣ್ಣುಗಳುಳ್ಳ ಸುಂದರಿಗೆ, ಗಣಿತಮಂ ಸ್ಥಾನಕ್ರಮದಿಂದಂ ಅಱಿಯೆ = ಗಣಿತವನ್ನು ಬಿಡಿ ಹತ್ತು ನೂರು ಹೀಗೆ ಸಂಖ್ಯೆಯ ಸ್ಥಾನದಿಂದ

ನಿಗದಿತವಾಗುವುದನ್ನು, ಆಗಳ್ ಎಡದ ಕಯ್ಯೊಳ್ ತೋಱಿದನ್ = ಆಗ ಎಡಗೈಯಿಂದ ಹೇಳಿಕೊಟ್ಟ.

ಗದ್ಯಾನುಸರಣ: ಭವ್ಯಾನಂದಕರನಾದ ಪುರುದೇವನು ಅರಳಿದ ನೈದಿಲೆಯಂತಹ ಕಣ್ಣುಗಳುಳ್ಳ ಸುಂದರಿಗೆ ಬಿಡಿ ಹತ್ತು ನೂರು ಹೀಗೆ ಸಂಖ್ಯೆಯ ಸ್ಥಾನದಿಂದ ನಿಗದಿತವಾಗುವ ಗಣಿತವನ್ನು ಆಗ ಎಡಗೈಯಿಂದ ಹೇಳಿಕೊಟ್ಟ.

**ವ॥ ಮತ್ತಂ ಸ್ವಯಂಭುವಾಭಿಧಾನಪದವಿದ್ಯಾಚ್ಛಂದೋವಿಚಿತ್ಯಲಂಕಾರಳ ಗಳೆಂಬ ಮೂಱುಂ ಪೆಸರ್ವಡೆದ ವಾಙ್ಮಯಮುಮಂ ಸಮಸ್ತಕಳಾಕಲಾಪ ಮುಮಂ ಆದಿಬ್ರಹ್ಮನು ಪದೇಶಂಗೆಯ್ದು ನಿಜಾತ್ಮಜೆಯರಿರ್ವರುಮಂ ವಿದ್ಯಾ ಪರಿಪೂರ್ಣೆಯಪ್ಪರುಮಂತು ಮಾಡಿ ಭರತಂಗೆ ಭರತಮುಮರ್ಥಶಾಸ್ತ್ರ ಮುಮಂ ವೃಷಭಸೇನಂಗೆ ಗೀತವಾದ್ಯಾರ್ಥಸಂಗ್ರಹಮಪ್ಪ ಗಾಂಧರ್ವಶಾಸ್ತ್ರ ಮುಮಂ ಅನಂತವಿಜಯಂಗೆ ವಿಚಿತ್ರ ಚಿತ್ರಕಳೆಯುಮಂ ವಾಸ್ತುವಿದ್ಯೆ ಯುಮಂ ಉಪದೇಶಂಗೆಯ್ದು ಬಾಹುಬಲಿಗೆ ಕಾಮತಂತ್ರ ಸಾಮುದ್ರಿಕಾ ಯುರ್ವೇದ ಧನುರ್ವೇದ ಹಸ್ತ್ಯಶ್ವತಂತ್ರರತ್ನಪರೀಕ್ಷೆಗಳುಮಂ ಮತ್ತಮಿವು ಮೊದಲಾಗೆ ಪೆಱವುಂ ಲೋಕೋಪಕಾರಿಗಳಪ್ಪ ಶಾಸ್ತ್ರಂಗಳೆನಿತೊಳವನಿತುಮಂ ಮತ್ತಿನ ತನೂಜವರ್ಗಕ್ಕೆಲ್ಲಮುಪದೇಶಂಗೆಯ್ದಂ. ಇಂತು**

ಪದವಿಭಾಗ-ಅನ್ವಯ-ಅರ್ಥ: ಮತ್ತಂ ಸ್ವಯಂಭುವ + ಅಭಿಧಾನ ಪದವಿದ್ಯಾ = ಆನಂತರ ಸ್ವಯಂಭುವ ಹೆಸರಿನ ವ್ಯಾಕರಣ, ಛಂದೋವಿಚಿತಿ + ಅಲಂಕಾರಳಗಳ್ = ಛಂಧೋವಿಚಿತಿ ಮತ್ತು ಅಲಂಕಾರಗಳು, ಎಂಬ ಮೂಱುಂ ಪೆಸರ್ + ಪಡೆದ ವಾಙ್ಮಯಮುಮಂ = ಎಂಬ ಮೂರು ಹೆಸರುಗಳಿಂದ ಪ್ರಸಿದ್ಧವಾದ ಸಾಹಿತ್ಯಶಾಸ್ತ್ರವನ್ನೂ, ಸಮಸ್ತಕಳಾಕಲಾಪಮುಮಂ ಆದಿಬ್ರಹ್ಮನು ಪದೇಶಂಗೆಯ್ದು = ಎಲ್ಲ ಕಲೆಗಳ ಸ್ವರೂಪವನ್ನೂ ಹೇಳಿಕೊಟ್ಟು, ನಿಜ + ಆತ್ಮಜೆಯರ್ + ಇರ್ವರುಮಂ = ತನ್ನ ಇಬ್ಬರೂ ಮಗಳಂದಿರನ್ನು, ಅಂತು ವಿದ್ಯಾಪರಿಪೂರ್ಣೆಯಪ್ಪರುಂ ಮಾಡಿ = ಹೀಗೆ ವಿದ್ಯೆಯಲ್ಲಿ ಪರಿಪೂರ್ಣರನ್ನಾಗಿ ಮಾಡಿ, ಭರತಂಗೆ ಭರತಮುಂ + ಅರ್ಥಶಾಸ್ತ್ರಮುಮಂ = ಭರತನಿಗೆ ನಾಟ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳನ್ನೂ, ವೃಷಭಸೇನಂಗೆ ಗೀತವಾದ್ಯಾರ್ಥಸಂಗ್ರಹಮಪ್ಪ ಗಾಂಧರ್ವಶಾಸ್ತ್ರಮುಮಂ = ವೃಷಭಸೇನನಿಗೆ ಗೀತ ಮತ್ತು ವಾದ್ಯಗಳ ಅರ್ಥ ಸಂಗ್ರಹವಾದ ಸಂಗೀತಶಾಸ್ತ್ರವನ್ನೂ, ಅನಂತವಿಜಯಂಗೆ ವಿಚಿತ್ರ ಚಿತ್ರಕಳೆಯುಮಂ ವಾಸ್ತುವಿದ್ಯೆಯುಮಂ ಉಪದೇಶಂಗೆಯ್ದು = ಅನಂತವಿಜಯನಿಗೆ ಆಕರ್ಷಕವಾದ ಚಿತ್ರಕಲೆಯನ್ನೂ ವಾಸ್ತುಶಾಸ್ತ್ರವನ್ನೂ ಹೇಳಿಕೊಟ್ಟು, ಬಾಹುಬಲಿಗೆ ಕಾಮತಂತ್ರಸಾಮುದ್ರಿಕ + ಆಯುರ್ವೇದ ಧನುರ್ವೇದ ಹಸ್ತಿ + ಅಶ್ವತಂತ್ರ ರತ್ನಪರೀಕ್ಷೆಗಳುಮಂ = ಬಾಹುಬಲಿಗೆ ಕಾಮಶಾಸ್ತ್ರ ಹಸ್ತಸಾಮುದ್ರಿಕ ಬಿಲ್ವಿದ್ಯೆ ಹಾಗೂ ಆನೆ ಮತ್ತು ಕುದುರೆಗಳಿಗೆ ಸಂಬಂಧಿಸಿದ ಶಾಸ್ತ್ರಗಳನ್ನೂ, ಮತ್ತಂ + ಇವು ಮೊದಲಾಗೆ ಪೆಱವುಂ ಲೋಕ + ಉಪಕಾರಿಗಳಪ್ಪ ಶಾಸ್ತ್ರಂಗಳ್ +

ಎನಿತೊಳವು + ಅನಿತುಮಂ = ಜೊತೆಗೆ, ಇವುಗಳಲ್ಲದೆ ಜಗತ್ತಿಗೆ ಸಹಾಯಮಾಡಬಲ್ಲ ಇತರ ಶಾಸ್ತ್ರಗಳು ಏನೇನಿವೆಯೋ ಅವೆಲ್ಲವನ್ನೂ, ಮತ್ತಿನತನೂಜವರ್ಗಕ್ಕೆಲ್ಲಂ + ಉಪದೇಶಂಗೆಯ್ದಂ = ಇನ್ನಿತರ ಮಕ್ಕಳಿಗೆ ಹೇಳಿಕೊಟ್ಟ. ಇಂತು = ಹೀಗೆ

**ಗದ್ಯಾನುಸರಣ:** ಆನಂತರ ಸ್ವಯಂಭುವ ಹೆಸರಿನ ವ್ಯಾಕರಣ ಛಂಧೋವಿಚಿತಿ ಮತ್ತು ಅಲಂಕಾರಗಳು ಎಂಬ ಮೂರು ಹೆಸರುಗಳಿಂದ ಪ್ರಸಿದ್ಧವಾದ ಸಾಹಿತ್ಯಶಾಸ್ತ್ರವನ್ನೂ, ಎಲ್ಲ ಕಲೆಗಳ ಸ್ವರೂಪವನ್ನೂ ಹೇಳಿಕೊಟ್ಟು ತನ್ನ ಇಬ್ಬರೂ ಮಗಳಂದಿರನ್ನು ವಿದ್ಯೆಯಲ್ಲಿ ಪೂರ್ಣರನ್ನಾಗಿ ಮಾಡಿದ; ಭರತನಿಗೆ ನಾಟ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳನ್ನೂ, ವೃಷಭಸೇನನಿಗೆ ಗೀತ ಮತ್ತು ವಾದ್ಯಗಳ ಅರ್ಥಸಂಗ್ರಹವಾದ ಸಂಗೀತಶಾಸ್ತ್ರವನ್ನೂ, ಅನಂತವಿಜಯನಿಗೆ ಆಕರ್ಷಕವಾದ ಚಿತ್ರಕಲೆಯನ್ನೂ ವಾಸ್ತುಶಾಸ್ತ್ರವನ್ನೂ ಹೇಳಿಕೊಟ್ಟ; ಬಾಹುಬಲಿಗೆ ಕಾಮಶಾಸ್ತ್ರ ಹಸ್ತಸಾಮುದ್ರಿಕ ಬಿಲ್ವಿದ್ಯೆ ಆನೆ ಮತ್ತು ಕುದುರೆಗಳಿಗೆ ಸಂಬಂಧಿಸಿದ ಶಾಸ್ತ್ರಗಳನ್ನೂ ಕಲಿಸಿದ; ಜೊತೆಗೆ, ಇವುಗಳಲ್ಲದೆ ಬೇರೆ ಜಗತ್ತಿಗೆ ಸಹಾಯಮಾಡಬಲ್ಲ ಶಾಸ್ತ್ರಗಳು ಏನೇನಿವೆಯೋ ಅವೆಲ್ಲವನ್ನೂ ಇನ್ನಿತರ ಮಕ್ಕಳಿಗೆ ಹೇಳಿಕೊಟ್ಟ.

**ವಿಶೇಷ ವಿಚಾರ:** ಕೊನೆಯವರಾದರೂ ತನ್ನಿಬ್ಬರು ಮಗಳಂದಿರಿಗೆ ಮೊದಲು ಅಕ್ಷರಾಭ್ಯಾಸ ಮಾಡಿಸಿ, ಗಣಿತವನ್ನು ಹೇಳಿಕೊಟ್ಟು ಆನಂತರ ಅವರನ್ನು ವಿದ್ಯೆಯಲ್ಲಿ ಪರಿಪೂರ್ಣರಾಗಿ ಮಾಡಿದ್ದು ಗಮನಾರ್ಹ ವಿಷಯ. ಹೆಣ್ಣುಮಕ್ಕಳ ವಿದ್ಯೆ ಎಷ್ಟು ಮುಖ್ಯ ಎಂಬುದನ್ನಿದು ಸೂಚಿಸುವಂತಿದೆ; ಆದರೆ ವಿಪರ್ಯಾಸವೆಂಬಂತೆ, ಜೈನಮತದಲ್ಲಿ ಹೆಣ್ಣಿಗೆ ಎರಡನೆಯ ಸ್ಥಾನ; ಇದೇ ಕಾವ್ಯದಲ್ಲಿಯೇ ಲಲಿತಾಂಗನ ಜನ್ಮದಿಂದ ಆರ್ಯನಾಗುವವರೆಗಿನ ಮೂರು ಜನ್ಮಗಳಲ್ಲಿಯೂ ಸ್ವಯಂಪ್ರಭೆ–ಶ್ರೀಮತಿ–ಶ್ರೀಮತ್ಯಾರ್ಯೆಯು ಅವನು ಶ್ರೀಧರದೇವನಾದಾಗ ಆರ್ಯೆಯ ಜನ್ಮವಾದ ಬಳಿಕ 'ಶ್ರೀಮತ್ಯಾರ್ಯೆಯು ಸಮ್ಯಕ್ತ್ವಮಾಹಾತ್ಮ್ಯದಿಂ ಸ್ತ್ರೀರೂಪಮಂ ಪತ್ತುವಿಟ್ಟು ತತ್ಸ್ವಯಂಪ್ರಭಾವಿಮಾನದೊಳ್ ಶ್ರೀಧರಂಗೆ ಸಾಮಾನಿಕದೇವಂ ಸ್ವಯಂಪ್ರಭನೆಂಬ ದಿವಿಜನಾದಂ' – ಆಶ್ವಾಸ ೫, ಪದ್ಯ ೭೦ ರ ನಂತರದ ವಚನ – ಎಂಬ ವಿವರಣೆಯಿದೆ. ಅಂದರೆ ಹೆಣ್ಣು ಜನ್ಮವು ಹೋಗಿ ಗಂಡು ಜನ್ಮ ಬರುವುದರಿಂದಲೇ ಜೀವದ ಏಳಿಗೆ!

**ಉತ್ತಮವಿದ್ಯೆಗಳ್ಗೆ ಗುಜೆಯಾದ ತನೂಭವರೆಯ್ದೆ ಚಿತ್ತಮಂ**
**ಪತ್ತಿಸೆ ಪತ್ತಿದಂಗನೆಯರೊಳ್ಪೆಸಕೆಯ್ವಮರೇಂದ್ರರಾಗಸಂ**
**ಪತ್ತು ಮನಂಗೊಳುತ್ತುಮಿರೆ ಲಕ್ಕೆಯ ಲೆಕ್ಕದೊಳೊಂದಿ ಪೂರ್ವಮಿ**
**ರ್ಪತ್ತು ನಿರಂತರಂ ನಡೆದುವಾ ವೃಷಭಂಗೆ ಕುಮಾರಕಾಲದೊಳ್** ೬೧

**ಪದವಿಭಾಗ–ಅನ್ವಯ–ಅರ್ಥ:** ಉತ್ತಮವಿದ್ಯೆಗಳ್ಗೆ ಗುಜೆಯಾದ ತನೂಭವರ್= ಒಳ್ಳೆಯ ವಿದ್ಯೆಯನ್ನು ಪಡೆದ ಮಕ್ಕಳು, ಎಯ್ದೆ ಚಿತ್ತಮಂ ಪತ್ತಿಸೆ = ಚೆನ್ನಾಗಿ ಮನಸ್ಸನ್ನು ಸಂತಸಗೊಳಿಸುತ್ತಿರಲು, ಪತ್ತಿದ + ಅಂಗನೆಯರ್ + ಒಳ್ವೆಸಕೆಯ್ವ + ಅಮರೇಂದ್ರರ್ = ಒಡಗೂಡಿದ ಹೆಂಡತಿಯರೂ ಆಜ್ಞಾವರ್ತಿಗಳಾದಸ ದೇವೇಂದ್ರರೂ, ಆಗ ಸಂಪತ್ತು ಮನಂಗೊಳುತ್ತುಂ + -ಇರೆ = ಆಗ ಸಂಪತ್ತು ಮನಸ್ಸನ್ನು ಹರ್ಷಗೊಳಿಸುತ್ತಿರಲು, ಲಕ್ಕೆಯ ಲೆಕ್ಕದೊಳೊಂದಿ ಇರ್ಪತ್ತು ಪೂರ್ವಂ = ಲಕ್ಷದ ಲೆಕ್ಕದಲ್ಲಿ ಇಪ್ಪತ್ತು ಪೂರ್ವ ವರ್ಷಗಳು, ನಿರಂತರಂ ಆ ವೃಷಭಂಗೆ ಕುಮಾರಕಾಲದೊಳ್ ನಡೆದುವು = ಸತತವಾಗಿ ಆ ವೃಷಭ'ನಿಗೆ ಕುಮಾರಕಾಲದಲ್ಲಿ ಕಳೆದುವು.

**ಗದ್ಯಾನುಸರಣ:** ಒಳ್ಳೆಯ ವಿದ್ಯೆಯನ್ನು ಪಡೆದ ಮಕ್ಕಳು, ತನ್ನ ಮನಸ್ಸನ್ನು ಸಂತಸಗೊಳಿಸುತ್ತಿರಲು, ಒಡಗೂಡಿದ ಹೆಂಡತಿಯರೂ ಆಜ್ಞಾವರ್ತಿಗಳಾದ ದೇವೇಂದ್ರರೂ ಸಂಪತ್ತೂ ಮನಸ್ಸನ್ನು ಹರ್ಷಗೊಳಿಸುತ್ತಿರಲು, ಸತತವಾಗಿ ಆ ವೃಷಭನಿಗೆ ಕುಮಾರಕಾಲದಲ್ಲಿ ಇಪ್ಪತ್ತು ಲಕ್ಷ ಪೂರ್ವ ವರ್ಷಗಳು ಕಳೆದುವು.

**ವ। ಆ ಪ್ರಸ್ತಾವದೊಳ್ ಫಳಪಾಕವಿರಾಮಂಗಳಪ್ಪ ಗರ್ಭಷಷ್ಟಿವ್ರೀಹಿಯುವ ಗೋಧೂಮಾದಿ ಮಹೌಷಧಂಗಳು ತಿಳಾತಸೀಕುಸುಂಭಾದಿದೀಪ್ರೌಷಧಿಗಳುಂ ಯಾವನಾಳಕಂಗುಕ್ರೋದ್ರವಾದಿ ಸರ್ವೌಷಧಂಗಳುಂ ಮುನ್ನಮಪಕೃಷ್ಟ ಪಚ್ಯಂಗಳಪ್ಪುವಂದು ವಿರಳಂಗಳಾಗಿಯುಂ ಅನಲ್ಪಕಲ್ಪಾವನಿಜಂಗಳಪೇತರಸ ವೀರ್ಯಪಾಕಂಗಳಾಗಿಯುಂ ಅಧಿವ್ಯಾಧಿಬಾಧಿತಶರೀರರ್ ಮಾನವರಭಿ ಮಾನವಂ ಬಿಸುಟು ನಾಭಿರಾಜನನುಮತದಿಂದಮಾದಿಬ್ರಹ್ಮನಲ್ಲಿಗೆ ವಂದು ಮೆಯ್ಯಿಕ್ಕಿಪೊಡವಟ್ಟು,**

**ಪದವಿಭಾಗ–ಅನ್ವಯ–ಅರ್ಥ:** ಆ ಪ್ರಸ್ತಾವದೊಳ್ = ಆ ಹೊತ್ತಿಗೆ, ಫಳಪಾಕ ವಿರಾಮಂಗಳ್ + ಅಪ್ಪ = ಕಾಳುಗಳು ಪಕ್ವವಾಗಿ ಒಣಗಿದ, ಗರ್ಭಷಷ್ಟಿವ್ರೀಹಿ = ಅರುವತ್ತು ದಿನಗಳ ಬತ್ತ, ಯವ ಗೋಧೂಮ + ಆದಿ ಮಹಾ + ಔಷಧಂಗಳು = ಜವೆಗೋಧಿ ಮತ್ತು ಗೋಧಿಯಂತಹ ಸಸ್ಯಗಳೂ, ತಿಳ + ಅತಸೀ ಕುಸುಂಭಾ + ಆದಿ ದೀಪ್ರ + ಔಷಧಿಗಳುಂ = ಎಳ್ಳು ಅಗಸೆ ಕುಸುಬೆಯಂತಹ ಎಣ್ಣೆಕಾಳುಗಳೂ, ಯಾವನಾಳ ಕಂಗು ಕ್ರೋದ್ರವ + ಆದಿ ಸರ್ವ + ಔಷಧಂಗಳುಂ = ಜೋಳ ಅಡಕೆ ಹಾರಕ ಮುಂತಾದ ಸಾಮಾನ್ಯ ಸಸ್ಯಗಳೂ, ಮುನ್ನಂ + ಅಪಕೃಷ್ಟಪಚ್ಯಂ ಗಳಪ್ಪುವು = ಈ ಮಂಚೆ ಬೇಸಾಯ ಮಾಡದೆ ಬೆಳೆಯುತ್ತಿದ್ದುವು, ಅಂದು ವಿರಳಂಗಳಾಗಿಯುಂ = ಈಗ ಅವು ಅಪರೂಪವಾಗಿ, ಅನಲ್ಪಕಲ್ಪ + ಅವನಿಜಂಗಳ್ + ಅಪೇತರಸವೀರ್ಯಪಾಕಂಗಳಾಗಿಯುಂ = ಬಹುಪಾಲು ಕಲ್ಪವೃಕ್ಷಗಳು ರುಚಿ ಮತ್ತು ಪೌಷ್ಟಿಕತೆಗಳನ್ನು ಕಳೆದುಕೊಳ್ಳಲು, ಅಧಿವ್ಯಾಧಿಬಾಧಿತಶರೀರರ್ ಮಾನವರ್ = ರೋಗಗಳಿಗೊಳಗಾದ ಶರೀರವುಳ್ಳವರಾಗಿ, ಅಭಿಮಾನವಂ ಬಿಸುಟು =

ಸ್ವಾಭಿಮಾನವನ್ನು ತೊರೆದು, ನಾಭಿರಾಜನ + ಅನುಮತದಿಂದೆ + ಆದಿಬ್ರಹ್ಮನಲ್ಲಿಗೆ ವಂದು = ನಾಭಿರಾಜನ ಅನುಮತಿಯಿಂದ ಪುರುದೇವನಲ್ಲಿಗೆ ಬಂದು, ಮೆಯ್ಯಿಕ್ಕಿ ಪೊಡವಟ್ಟು = ಸಾಷ್ಟಾಂಗ ನಮಸ್ಕಾರಮಾಡಿ,

**ಗದ್ಯಾನುಸರಣ:** ಆ ಹೊತ್ತಿಗೆ, ಕಾಳುಗಳು ಪಕ್ವವಾಗಿ ಒಣಗಿದ ಅರುವತ್ತು ದಿನಗಳ ಬತ್ತ, ಜವೆಗೋಧಿ ಮತ್ತು ಗೋಧಿಯಂತಹ ಸಸ್ಯಗಳೂ, ಎಳ್ಳು ಅಗಸೆ ಕುಸುಬೆಯಂತಹ ಎಣ್ಣೆಕಾಳುಗಳೂ, ಜೋಳ ಅಡಕೆ ಹಾರಕ ಮುಂತಾದ ಸಾಮಾನ್ಯ ಸಸ್ಯಗಳೂ, ಈ ಮಂಚೆ ಬೇಸಾಯ ಮಾಡದೆ ಬೆಳೆಯುತ್ತಿದ್ದುವು, ಆದರೀಗ ಅವು ಅಪರೂಪವಾಗಿ, ಬಹುಪಾಲು ಕಲ್ಪವೃಕ್ಷಗಳು ರುಚಿ ಮತ್ತು ಪೌಷ್ಟಿಕತೆಗಳನ್ನು ಕಳೆದುಕೊಂಡುಬಿಟ್ಟುವು; ಇದರಿಂದಾಗಿ ಶರೀರದಲ್ಲಿ ರೋಗಗಳುಂಟಾಗಿ ಜನರು ನಾಭಿರಾಜನ ಅನುಮತಿಯಿಂದ ಪುರುದೇವನಲ್ಲಿಗೆ ಬಂದು ಸಾಷ್ಟಾಂಗ ನಮಸ್ಕಾರಮಾಡಿ ಹೀಗೆ ಬಿನ್ನವಿಸಿಕೊಂಡರು.

**ವಿರಳಫಳಂಗಳಾದುವಖಿಳೌಷಧಿಗಳ್ ರಸವೀರ್ಯಪಾಕಮುಂ**
**ವಿರಳಮೆವೃಕ್ಷಜಾತಿಗಳೊಳ್ ಪಸಿವಾರ್ದಳುರ್ದಟ್ಟಿ ನಿಪ್ಪುಟಂ**
**ಕರಗಿದುದೆಮ್ಮ ಬಾಳ್ವ ತೆಱನಾವುದು ದೇವ ಶರಣ್ಗೆ ವಂದೆವಾ**
**ದರದೆಮಗಪ್ಪುದಂ ಬೆಸಸಿ ಕಾವುದು ಲೋಕಮನಾದಿಪೂರುಷಾ ೬೭**

**ಪದವಿಭಾಗ–ಅನ್ವಯ–ಅರ್ಥ:** ಆದಿಪೂರುಷಾ = ಆದಿದೇವನೇ, ಅಖಿಳ + ಔಷಧಿಗಳ್ ವಿರಳಫಳಂಗಳ್ + ಆದುವು = ಎಲ್ಲ ಸಸ್ಯಗಳ ಫಲವೂ ಅಪರೂಪವಾಗಿದೆ, ವೃಕ್ಷಜಾತಿಗಳೊಳ್ ರಸವೀರ್ಯಪಾಕಮುಂ ವಿರಳಮೆ = ಮರಗಳಲ್ಲಿಯೂ ರುಚಿ ಮತ್ತು ಪೌಷ್ಟಿಕತೆಗಳು ಅಪರೂಪ; ಪಸಿವು + ಆರ್ದು + ಅಳುರ್ದು + ಅಟ್ಟೆ ನಿಪ್ಪುಟಂ ಕರಗಿದುದು = ಹಸಿವು ಹೆಚ್ಚಾಗಿ ಪೀಡಿಸಿ ಸುಡಲು (ನಮ್ಮ ದೇಹಗಳು) ಪೂರ್ತಿ ಕೃಶವಾಗಿವೆ; ದೇವ ಎಮ್ಮ ಬಾಳ್ವ ತೆಱನಾವುದು = ದೇವರೇ, ನಾವು ಬದುಕುವ ರೀತಿಯಾವುದು, ಶರಣ್ಗೆ ವಂದೆವು = ಶರಣಾಗಿ ಬಂದಿದ್ದೇವೆ, ಆದರದೆ + ಎಮಗೆ + ಅಪ್ಪುದಂ ಬೆಸಸಿ ಲೋಕಮನ್ ಕಾವುದು = ಕರುಣೆಯಿಂದ ನಮಗೆ ಸಾಧ್ಯವಾಗುವುದನ್ನು ಹೇಳಿ ಜಗತ್ತನ್ನು ಕಾಪಾಡು

**ಗದ್ಯಾನುಸರಣ:** ಆದಿದೇವನೇ, ಎಲ್ಲ ಸಸ್ಯಗಳ ಫಲವೂ ಅಪರೂಪವಾಗಿದೆ, ಮರಗಳಲ್ಲಿಯೂ ರುಚಿ ಮತ್ತು ಪೌಷ್ಟಿಕತೆಗಳು ಅಪರೂಪ; ಹಸಿವು ಹೆಚ್ಚಾಗಿ ಪೀಡಿಸಿ ಸುಡಲು (ನಮ್ಮ ದೇಹಗಳು) ಪೂರ್ತಿ ಕೃಶವಾಗಿವೆ; ದೇವರೇ, ನಾವು ಬದುಕುವ ರೀತಿಯಾವುದು, ಶರಣಾಗಿ ಬಂದಿದ್ದೇವೆ ಕರುಣೆಯಿಂದ ನಮಗೆ ಸಾಧ್ಯವಾಗುವುದನ್ನು ಹೇಳಿ ಜಗತ್ತನ್ನು ಕಾಪಾಡು,

**ವ।** **ಎಂಬುದುಂ ತದೀಯಕರುಣಾರಸಪ್ರೇರಿತಾದ್ರಾಶಯುಂ**

**ತತ್ಪ್ರಜಾಜೀವನೋ ಪಾಯಮಂ ಪೂರ್ವಾಪರವಿದೇಹಸ್ಥಿತಿ ಸಮಾನಮಾಗೆ ಷಟ್ಕರ್ಮಂಗಳುಮಂ ವರ್ಣಾಶ್ರಮ ವಿಭಾಗಂಗಳುಮಂ ಗಾಮಗೃಹಾದಿ ಭೇದಂಗಳುಮಂ ಭೋಗಭೂಮಿವಿರಾಮದೊಳ್ ಈ ಕರ್ಮಭೂಮಿ ಪ್ರಾರಂಭದೊಳೆಮಗೆ ನಿಜಿಸಲ್ವೇಟ್ಕುಮೆಂದು ಮನದೊಳ್ ಬಗೆದು, ಅವರಂ ಅಜಿಜದಿರಿಮೆಂದು ತದಭಿಮುಖಪ್ರಕಂಪಿತಕರಪಲ್ಲವದಿಂ ಸಂತಯಿಸಿ ತದನಂತರಂ ಭಗವದನುಸ್ಮರಣಮಾತ್ರದಿಂದಮರಸಮಿತಿವೆರಸಮರೇಂದ್ರಂ ಬಂದು,**

**ಪದವಿಭಾಗ–ಅನ್ವಯ–ಅರ್ಥ:** ಎಂಬುದುಂ = ಎಂದು ಬೇಡಿಕೊಳ್ಳಲು, ತದೀಯ ಕರುಣಾರಸಪ್ರೇರಿತ + ಆರ್ದ್ರ + ಆಶಯಂ = ಅವರ (ಬಗೆಗಿನ) ಕರುಣೆಯಿಂದ ತೊಯ್ದು ಮನಸ್ಸಿನವನಾಗಿ, ತತ್ + ಪ್ರಜಾಜೀವನ + ಉಪಾಯಮಂ = ಆ ಪ್ರಜೆಗಳ ಜೀವನ ನಿರ್ವಹಣೆಯ ಉಪಾಯವನ್ನು, ಪೂರ್ವಾಪರವಿದೇಹಸ್ಥಿತಿಸಮಾನಮಾಗೆ = ಪೂರ್ವ ಮತ್ತು ಪಶ್ಚಿಮ ವಿದೇಹಗಳ ರೀತಿಗನುಗುಣವಾಗಿ, ಷಟ್ಕರ್ಮಂಗಳುಮಂ ವರ್ಣಾಶ್ರಮವಿಭಾಗಂಗಳುಮಂ = ಆರು ಬಗೆಯ ಕೆಲಸಗಳನ್ನೂ ವರ್ಣ ಮತ್ತು ಆಶ್ರಮಗಳ ವಿಭಾಗಗಳನ್ನೂ, ಗಾಮಗೃಹ + ಆದಿಭೇದಂಗಳುಮಂ = ಗ್ರಾಮ ಮತ್ತು ಮನೆಗಳ ಸ್ವರೂಪವ್ಯತ್ಯಾಸವನ್ನೂ, ಭೋಗಭೂಮಿವಿರಾಮದೊಳ್ ಈ ಕರ್ಮಭೂಮಿಪ್ರಾರಂಭದೊಳ್ = ಭೋಗಭೂಮಿಯ ಸ್ಥಿತಿ ಮುಗಿದು ಕರ್ಮಭೂಮಿಯ ಸ್ಥಿತಿ ಆರಂಭವಾಗುವ ಸಮಯದಲ್ಲಿ, ಎಮಗೆ ನಿಜಿಸಲ್ವೇಟ್ಕುಂ + ಎಂದು = ನಾವು ಸ್ಥಾಪಿಸಬೇಕೆಂದು, ಮನದೊಳ್ ಬಗೆದು = ಮನಸ್ಸಿನಲ್ಲಿ ಆಲೋಚನೆ ಮಾಡಿ, ಅವರಂ ಅಂಜದಿರಿಂ + ಎಂದು = ಅವರಿಗೆ ಹೆದರಬೇಡಿ ಎಂದು, ತತ್ + ಅಭಿಮುಖಪ್ರಕಂಪಿತ ಕರಪಲ್ಲವದಿಂ ಸಂತಯಿಸಿ = ತನ್ನೆದುರಾಗಿ ಕೈಗಳನ್ನು ಅಲ್ಲಾಡಿಸಿ ಸಮಾಧಾನಪಡಿಸಿ, ತತ್ + ಅನಂತರಂ ಭಗವತ್ + ಅನುಸ್ಮರಣಮಾತ್ರದಿಂದೆ + ಅಮರಸಮಿತಿವೆಂಸು + ಅಮರೇಂದ್ರಂ ಬಂದು = ಆ ಬಳಿಕ ಆದಿದೇವನು ಅಂದುಕೊಂಡ ಮಾತ್ರದಿಂದಲೇ ದೇವತೆಗಳ ಸಮೂಹದೊಡನೆ ದೇವೇಂದ್ರನು ಬಂದು,

**ಗದ್ಯಾನುಸರಣ:** ಎಂದು ಬೇಡಿಕೊಂಡರು; ಅವರ ಬಗೆಗಿನ ಕರುಣೆಯಿಂದ ಮನಸ್ಸು ತೊಯ್ದು ಆದಿದೇವನು ಪ್ರಜೆಗಳ ಜೀವನ ನಿರ್ವಹಣೆಯ ಉಪಾಯವನ್ನೂ, ಪೂರ್ವ ಮತ್ತು ಪಶ್ಚಿಮ ವಿದೇಹಗಳ ರೀತಿಗನುಗುಣವಾಗಿ ಆರು ಬಗೆಯ ಕೆಲಸಗಳನ್ನೂ ವರ್ಣ ಮತ್ತು ಆಶ್ರಮಗಳ ವಿಭಾಗಗಳನ್ನೂ, ಗ್ರಾಮ ಮತ್ತು ಮನೆಗಳ ಸ್ವರೂಪವ್ಯತ್ಯಾಸವನ್ನೂ ಭೋಗಭೂಮಿಯ ಸ್ಥಿತಿ ಮುಗಿದು ಕರ್ಮಭೂಮಿಯ ಸ್ಥಿತಿ ಆರಂಭವಾಗುವ ಸಮಯದಲ್ಲಿ ಸ್ಥಾಪಿಸಬೇಕೆಂದು ಆಲೋಚನೆ ಮಾಡಿದ; 'ಹೆದರಬೇಡಿ' ಎಂದು ತನ್ನ ಕೈಗಳನ್ನು ಬೀಸಿ ಜನಗಳನ್ನು ಸಮಾಧಾನಪಡಿಸಿದ; ಆ ಬಳಿಕ ಆದಿದೇವನು ದೇವೇಂದ್ರನನ್ನು ನೆನಸಿಕೊಂಡ ಮರುಕ್ಷಣವೇ ಅವನು ದೇವತೆಗಳ ಸಮೂಹದೊಡನೆ ಬಂದ.

ನಿಜಮಕುಟಮಣಿಮರೀಚಿಯಿ
ನಜನ ಪದಾಂಬುಜದ ಕೆಂಪನಿರ್ಮಡಿಸಿ ಕುಲ
ಧ್ವಜ ಬೆಸಸು ನಿನ್ನವೊಲೀ
ಪ್ರಜಾಪತಿತ್ವಕ್ಕೆ ಮುನ್ನ ನೋಂತರುವೊಳರೇ ೬೩

**ಪದವಿಭಾಗ–ಅನ್ವಯ–ಅರ್ಥ:** ನಿಜಮಕುಟಮಣಿಮರೀಚಿಯಿನ್ + ಅಜನ ಪದ + ಅಂಬುಜದ ಕೆಂಪನ್ + ಇರ್ಮಡಿಸಿ = ತನ್ನ ಮಣಿಮಯ ಕಿರೀಟದಿಂದ ಆದಿಬ್ರಹ್ಮನ ಅಡಿದಾವರೆಗಳ ಕೆಂಪನ್ನು ಇಮ್ಮಡಿಗೊಳಿಸಿ, ಕುಲಧ್ವಜ ಬೆಸಸು ನಿನ್ನವೊಲ್ + ಈಪ್ರಜಾಪತಿತ್ವಕ್ಕೆ ಮುನ್ನ ನೋಂತರುಂ + ಒಳರೇ = ಕುಲಶ್ರೇಷ್ಠನೇ ಆಜ್ಞೆ ಮಾಡು, ನಿನ್ನಂತೆ ಈ ಮೊದಲು ಪ್ರಜೆಗಳ ಒಡೆಯನಾಗಿ ಕರ್ತವ್ಯಮುಖರಾದವರಿ ಯಾರಿದ್ದಾರೆ

**ಗದ್ಯಾನುಸರಣ:** ಪಾದಗಳಲ್ಲಿ ತಲೆಯಿಟ್ಟು ನಮಸ್ಕರಿಸಿ ತನ್ನ ಮಣಿಮಯ ಕಿರೀಟದಿಂದ ಆದಿಬ್ರಹ್ಮನ ಅಡಿದಾವರೆಗಳ ಕೆಂಪನ್ನು ಇಮ್ಮಡಿಗೊಳಿಸಿದ: ಆನಂತರ, 'ಕುಲಶ್ರೇಷ್ಠನೇ ಆಜ್ಞೆ ಮಾಡು, ನಿನ್ನಂತೆ ಪ್ರಜೆಗಳ ಒಡೆಯನಾಗಿ ಕರ್ತವ್ಯಮುಖರಾದವರು ಬೇರೆ ಯಾರಿದ್ದಾರೆ?' ಎಂದು ಕೇಳಿದ.

**ವ।** ಎಂದು ನುಡಿದು ತದನುಮತದಿಂ ಶುಭದಿನನಕ್ಷತ್ರಮುಹೂರ್ತದೊಳ್ ಜಗದ್ಗುರುವಿನ ನುಮತದೊಳಯೋಧ್ಯಾ ಮಧ್ಯಮಪ್ಪ ತನ್ಮಹಾದಿಗ್ವಿಭಾಗಂಗಳೊಳ್ ಜಿನೇಂದ್ರ ಮಂದಿರಂಗಳಂ ನಿರ್ಮಿಸಿ ಬಳಿಕಂ ದೇವಮಾತೃಕ ಸಾಧಾರಣಾನೂಪಜಾಂಗಳ ಭೇದಂಗಳುಮನಂತ ಪಾಳಪಾಳಿತದುರ್ಗ ಪರಿವೃತಾಂತಂಗಳಂ ಲುಬ್ಧಕಾರಣ್ಯಚರ ಪುಳಿಂದಶಬರಾದಿಪರಿ ರಕ್ಷಿತಾಂತರಾಳ ದೇಶಂಗಳುಮಪ್ಪ ಕಾಶಿ ಕೌಸಲ ಕಳಿಂಗ ವಂಗ ಕಾಶ್ಮೀರ ಕರಹಾಟ ಕರ್ನಾಟ ಚೋಳ ಕೇರಳ ಪಾಂಚಾಲ ಮಾಳವ ಮಹಾರಾಷ್ಟ್ರ ಸೌರಾಷ್ಟ್ರ ವನವಾಸ್ಯಾಂಧ್ರ ಕಾಂಭೋಜ ಕಾಂಭೋಜ ಬಾಹ್ಲಿಕ ತುರುಷ್ಕ ಸೌವೀರಾಭೀರ ಚೇರ ಶೂರಸೇನಾಪರಾಂತಿಕವಿದೇಹ ಸಿಂಧು ಗಾಂಧಾರ ಕುರುಜಾಂಗಣ ವಿದರ್ಭ ವತ್ಸ ಯವನ ಚೇದಿ ಪಲ್ಲವ ದಶಾರ್ಣ ಕಚ್ಛ ಮಹಾಕಚ್ಛ ಮಗಧಾವನಿ ರಮ್ಯಕ ಕುರು ಸಮುದ್ರಕಾದಿ ವಿವಿಧ ವಿಷಯಂಗಳುಮಂ ತಜ್ಜನಪದ ಮಧ್ಯಂಗಳೊಳ್ ಪರಿಖಾಪಪ್ರಾಕಾರ ಗೋಪುರಾಟ್ಟಾಳ ಕಾಳಂಕೃತಂಗಳಪ್ಪ ರಾಜಧಾನಿಗಳುಮಂ ಅವರಿ ಬಳಸಿಯುಂ ಯಥೋಚಿತ ಪ್ರದೇಶಂಗಳೊಳ್ ವಿಕಪರಿವೃತಂಗಳುಂ ಅತಿಸಮೃದ್ಧಕೃಷೀವಲ ಕುಳಾಧಿಷ್ಠಿತಂಗಳುಮಪ್ಪ ಅಭಿರಾಮಜಲಾಶಯಂಗಳು ಮಂ ಪ್ರಭೂತಯವ ಸೋದಕಂಗಳುಮಂ ಸಮಸ್ತಸಸ್ಯಸಂಪತ್ಸಂಪನ್ನ ಸುಕ್ಷೇತ್ರಂಗಳುಮಂ ಕ್ರೋಶ ದ್ವಿಕ್ರೋಶ ಸೀಮಾಭಾಗಯೋಜನಪಂಚಶತಕುಟುಂಬಿ ಕುಲಾವಿರ್ಭಾ ವಿತಾಥಮೋತ್ತಮ

**ಭೇದಂಗಳುಮಂ ಸರಿದ್ಗಿರಿದರೀಭೂರುಹ ಸೇತುವನಸೀಮೋಪಲಕ್ಷಿತಂಳುಮಪ್ಪ ಮಹಾಗ್ರಾಮಂಗಳುಮಂ ಪೂರ್ವೋತ್ತರಾಂಭಃ ಪ್ಲವಂಗಳುಮಂ ಪರಿಖಾವಪ್ರಪ್ರಕಾರ ಗೋಪುರಾಟ್ಟಾಲ ಪರಿವೃತಂಗಳುಮಂ ನಾನಾಭವನವಿನ್ಯಾಸೋದ್ಯಾನಲೀಲಾ ಜಲಾಶಯಂ ಗಳುಮಂ ಪ್ರಧಾನಪುರುಷಾಧ್ಯಾಸಿತಂಗಳಪ್ಪ ಪುರಂಗಳುಮಂ ಗಿರಿಸರಿತ್ಸಂರುದ್ಧಂಗಳಪ್ಪ ಖೇಡಂಗಳುಮಂ ಉರ್ವೀಧರನಿರುದ್ಧಂಗಳಪ್ಪ ಖರ್ವಡಗಳುಮಂ ಪಂಚಶತ ಗ್ರಾಮಪರೀತಂಗಳಪ್ಪ ಮಡಂಬಗಳುಮಂ ಸಮುದ್ರೋತ್ತೀರ್ಣನಿವಾಸಂಗಳಪ್ಪ ಪಟ್ಟಣಂಗಳುಮಂ ನಿಮ್ನಗಾತಟ ನಿಕಟವರ್ತಿಗಳಪ್ಪ ಮಹಾದ್ರೋಣಾಮುಖಂ ಗಳುಮಂ ಶಿರೋವ್ಯೂಢಧಾನ್ಯ ಸಂಚಯೋಪಭೋಗಿ ಜನನಿವಾಸಿಗಳಪ್ಪ ಸಂವಾಹಂಗಳುಮಂ ಘೋಷಾಕರ ಸಂಗ್ರಹಾಕರಗೋವ್ರಜಂಗಳುಮಂ ಅವನಾಳ್ವ ತೆಱಿಗೊಳ್ವ ಬಿಟ್ಟಬೆಸಕೆಯಿಸಿಕೊಳ್ವ ಭೋಗಿಪ ನಿಯೋಗಂಗಳುಮಂ ಮಾಡಿದಂ, ಇಂತು**

**ಪದವಿಭಾಗ–ಅನ್ವಯ–ಅರ್ಥ:** ಎಂದು ನುಡಿದು ತತ್ + ಅನುಮತದಿಂ = ಎಂದು ಹೇಳಿದ ದೇವೇಂದ್ರನು ಆದಿದೇವನ ಅನುಮತಿ ಪಡೆದು, ಶುಭದಿನನಕ್ಷತ್ರ ಮುಹೂರ್ತದೊಳ್ = ಒಳ್ಳೆಯ ದಿನ ನಕ್ಷತ್ರ ಮತ್ತು ಮುಹೂರ್ತಗಳಲ್ಲಿ, ಜಗದ್ಗುರುವಿನ + ಅನುಮತದೊಳ್ = ಜಗದೋಜನ ಅಪ್ಪಣೆ ಪಡೆದು, ಅಯೋಧ್ಯಾ ಮಧ್ಯಮಪ್ಪ ತತ್ + ಮಹಾದಿಕ್ + ವಿಭಾಗಂಗಳೊಳ್ = ಅಯೋಧ್ಯಾ ನಗರದ ಮಧ್ಯದಲ್ಲಿನ ವಿಶಾಲ ಪ್ರದೇಶಗಳಲ್ಲಿ, ಜಿನೇಂದ್ರ ಮಂದಿರಂಗಳಂ ನಿರ್ಮಿಸಿ = ಜಿನಾಲಯಗಳನ್ನು ಕಟ್ಟಿ, ಬಟಿಕಂ ದೇವಮಾತೃಕ ಸಾಧಾರಣ + ಅನೂಪ ಜಾಂಗಳ ಭೇದಂಗಳುಮನ್ = ಮಳೆಯ ನೀರಿನಿಂದ ಬೇಸಾಯಯೋಗ್ಯವಾದುದು ಸಾಧಾರಣವಾದುದು ನೀರು ಸಮೃದ್ಧವಾದುದು ಹಾಗೂ ಬರಡಾದುದು ಎಂಬ ಕೃಷಿಪ್ರದೇಶಗಳನ್ನೂ, ಅಂತಪಾಳಪಾಳಿತ = ಗಡಿಕಾಪಿನವರಿಂದ ರಕ್ಷಿತವಾದ, ದುರ್ಗಪರಿವೃತಾಂತಂಗಳಂ = ದುರ್ಗಗಳಿಂದ ಕೂಡಿದ ಪ್ರದೇಶಗಳನ್ನೂ, ಲುಬ್ಧಕ + ಅರಣ್ಯಚರ ಪುಳಿಂದ ಶಬರ + ಆದಿ ಪರಿರಕ್ಷಿತ + ಅಂತರಾಳದೇಶಂಗಳುಂ + ಅಪ್ಪ = ಬೇಡರು ಕಾಡುನಿವಾಸಿಗಳು ಬೇಟೆಗಾರರು ಶಬರ ಮುಂತಾದವರಿಂದ ಕಾಪಿಡಲಾದ, ಕಾಶಿ ಕೌಸಲ ಕಳಿಂಗ ವಂಗ ಕಾಶ್ಮೀರ ಕರಹಾಟ ಕರ್ನಾಟ ಚೋಳ ಕೇರಳ ಪಾಂಚಾಲ ಮಾಳವ ಮಹಾರಾಷ್ಟ್ರ ಸೌರಾಷ್ಟ್ರ ವನವಾಸಿ + ಆಂಧ್ರ ಕಾಂಭೋಜ ಬಾಹ್ಲಿಕ ತುರುಷ್ಕ ಕೇಕಯಸೌವೀರ + ಆಭೀರ ಚೇರ ಶೂರಸೇನಾ + ಅಪರಾಂತಿಕ ವಿದೇಹ ಸಿಂಧು ಗಾಂಧಾರ ಕುರುಜಾಂಗಣ ವಿದರ್ಭ ವತ್ಸ ಯವನ ಚೇದಿ ಪಲ್ಲವ ದಶಾರ್ಣ ಕಚ್ಛ ಮಹಾಕಚ್ಛ ಮಗಧಾವನಿ ರಮ್ಯಕ ಕುರು ಸಮುದ್ರಕ = ಆದಿ ವಿವಿಧ ವಿಷಯಂಗಳುಮಂ = ಮುಂತಾದ ವಿಭಿನ್ನ ರಾಜ್ಯಗಳನ್ನೂ, ತತ್ + ಜನಪದಮಧ್ಯಂಗಳೊಳ್ = ಆ ಜನಪದಗಳ ನಡುವೆ, ಪರಿಖಾ ವಪ್ರ ಪ್ರಾಕಾರ

ಗೋಪುರ + ಅಟ್ಟಾಳಕ + ಅಳಂಕೃತಂಗಳ್ + ಅಪ್ಪ ರಾಜಧಾನಿಗಳುಮಂ = ಕಂದಕ ಆಳ್ವೇರಿ ಸುತ್ತುಗೋಡೆ ಬುರುಜುಗಳಿಂದ ಸಿಂಗರಗೊಂಡ ರಾಜಧಾನಿಗಳನ್ನೂ, ಅವಱ ಬಳಸಿಯುಂ = ಅವುಗಳನ್ನು ಸುತ್ತುವರಿದಂತೆ, ಯಥೋಚಿತ ಪ್ರದೇಶಂಗಳೊಳ್ = ಸೂಕ್ತ ಜಾಗಗಳಲ್ಲಿ, ಏಕಪರಿವೃತಂಗಳುಂ ಅತಿಸಮೃದ್ಧಕೃಷೀವಲಕುಳ + ಅಧಿಷ್ಠಿತಂಗಳುಂ + ಅಪ್ಪ = ಒಂದೇ ಬಗೆಯವೂ ಸಮೃದ್ಧರಾದ ಬೇಸಾಯಗಾರರ ಸಮೂಹಗಳಿಂದ ಕೂಡಿದ, ಅಭಿರಾಮಜಲಾಶಯಂಗಳುಮಂ = ಸುಂದರ ಜಲಾಶಯಗಳನ್ನೂ, ಪ್ರಭೂತಯವಸ + ಉದಕಂಗಳುಮಂ = ಸಮೃದ್ಧವಾದ ಹುಲ್ಲು ನೀರುಗಳಿಂದ, ಸಮಸ್ತಸಸ್ಯಸಂಪತ್ಸಂಪನ್ನ ಸುಕ್ಷೇತ್ರಂಗಳುಮಂ = ಎಲ್ಲ ಬಗೆಯ ಸಸ್ಯಗಳಿಂದ ತುಂಬಿದ ಪ್ರದೇಶಗಳನ್ನೂ, ಕ್ರೋಶ ದ್ವಿಕ್ರೋಶ ಸೀಮಾಭಾಗ ಯೋಜನ = ಒಂದು ಕ್ರೋಶ ಎರಡು ಕ್ರೋಶಗಳ ವಿಸ್ತೀರ್ಣದ ಪ್ರದೇಶಗಳಲ್ಲಿ, ಪಂಚಶತ ಕುಟುಂಬಿಕುಲ + ಆವಿರ್ಭಾವಿತ + ಅಧಮ + ಉತ್ತಮಭೇದಂಗಳುಮಂ = ಐನೂರು ಕುಟುಂಬಗಳಿಂದ ಕೂಡಿದ ಅಧಮ ಮತ್ತು ಉತ್ತಮ ಎಂಬ ವ್ಯತ್ಯಾಸದ, ಸರಿತ್ + ಗಿರಿ ದರೀಭೂರುಹ ಸೇತು ವನಸೀಮಾ + ಉಪಲಕ್ಷಿತಂಗಳುಮಪ್ಪ ಮಹಾಗ್ರಾಮಂಗಳುಮಂ = ನದಿ ಬೆಟ್ಟ ತಗ್ಗುಪ್ರದೇಶ ಸೇತುವೆ ಅರಣ್ಯಪ್ರದೇಶ ಎಂಬ ಭೇದದ ದೊಡ್ಡ ಹಳ್ಳಿಗಳನ್ನೂ, ಪೂರ್ವ + ಉತ್ತರ + ಅಂಭಃಪ್ಲವಂಗಳುಮಂ = ಪೂರ್ವ ಮತ್ತು ಉತ್ತರದಿಕ್ಕುಗಳಲ್ಲಿ ಹರಿಯುವ ಹರಿಯುವ ನೀರಿನ ಪ್ರವಾಹಗಳನ್ನೂ, ಪರಿಖಾ ವಪ್ರ ಪ್ರಾಕಾರ ಗೋಪುರ + ಅಟ್ಟಾಲಪರಿವೃತಂಗಳುಮಂ = ಕಂದಕ, ಆಳುವೇರಿ, ಗೋಡೆ, ಬುರುಜುಗಳಿಂದ ಕೂಡಿದ, ನಾನಾಭವನವಿನ್ಯಾಸ + ಉದ್ಯಾನಲೀಲಾಜಲಾಶಯಂಗಳುಮಂ = ವಿವಿಧ ವಿನ್ಯಾಸಗಳಿಂದ ಕೂಡಿದ ಮನೆಗಳು ಉದ್ಯಾನವನಗಳು ಮತ್ತು ಈಜುವ ಕೊಳಗಳನ್ನೂ, ಪ್ರಧಾನಪುರುಷ + ಅಧ್ಯಾಸಿತಂಗಳಪ್ಪ ಪುರಂಗಳುಮಂ = ಮುಖ್ಯ ವ್ಯಕ್ತಿಗಳು ವಾಸಿಸುವ ನಗರಗಳನ್ನೂ, ಗಿರಿಸರಿತ್ + ಸಂರುದ್ಧಂಗಳಪ್ಪ ಖೇಡಂಗಳುಮಂ = ಬೆಟ್ಟ ನದಿಗಳಿಂದ ಸುತ್ತುವರಿದ ಖೇಡಗಳನ್ನೂ, ಉರ್ವೀಧರನಿರುದ್ಧಂಗಳಪ್ಪ ಖರ್ವಡಗಳುಮಂ = ಬೆಟ್ಟಗಳಿಂದ ಆವೃತವಾದ ಖರ್ವಡಗಳನ್ನೂ, ಪಂಚಶತಗ್ರಾಮ ಪರೀತಂಗಳಪ್ಪ ಮಡಂಬಗಳುಮಂ = ಐದು ನೂರು ಹಳ್ಳಿಗಳಿಂದ ಕೂಡಿದ ಮಡಂಬಗಳನ್ನೂ, ಸಮುದ್ರ + ಉತ್ತೀರ್ಣನಿವಾಸಂಗಳಪ್ಪ ಪಟ್ಟಣಂಗಳುಮಂ = ಸಮುದ್ರದ ಕರೆಯಲ್ಲಿ ವಾಸಿಸುವವರಿಂದ ಕೂಡಿದ ಪಟ್ಟಣಗಳನ್ನೂ, ನಿಮ್ನಗಾತಟನಿಕಟವರ್ತಿಗಳಪ್ಪ ಮಹಾದ್ರೋಣಾಮುಖಂಗಳುಮಂ = ನದೀತೀರಕ್ಕೆ ಹತ್ತಿರವಾದ ಮಹಾದ್ರೋಣಗಳನ್ನೂ, ಶಿರೋವ್ಯೂಢಧಾನ್ಯಸಂಚಯ + ಉಪಭೋಗಿಜನನಿವಾಸಿಗಳಪ್ಪ ಸಂವಾಹಂಗಳುಮಂ = ಕತ್ತಿನವರೆಗೆ ಹೇರಿದ ಧಾನ್ಯಗಳನ್ನು ಕೂಡಿಟ್ಟುಕೊಂಡು ಉಪಯೋಗಿಸುವ ಜನರಿಂದ ಕೂಡಿದ

ಸಂವಾಹಗಳನ್ನೂ, ಘೋಷ + ಆಕರ ಸಂಗ್ರಹ + ಆಕರ ಗೋವ್ರಜಂಗಳುಮಂ = ಕಣಜಗಳು ದೊಡ್ಡ ಊರುಗಳು ಮತ್ತು ಗೊಲ್ಲರ ಹಟ್ಟಿಗಳನ್ನೂ, ಅವನಾಳ್ವ ತೆಱೆಗೊಳ್ವ ಬಿಟ್ಟಿಬೆಸಕೆಯಿಸಿಕೊಳ್ವ ಭೋಗಿಪ ನಿಯೋಗಂಗಳುಮಂ ಮಾಡಿದಂ = ಅವುಗಳನ್ನು ಆಳುವ, ತೆರಿಗೆ ವಸೂಲು ಮಾಡುವ, ಬಿಟ್ಟಿ ಕೆಲಸಗಳನ್ನು ಮಾಡಿಸುವ, ಅದನ್ನು ಅನುಭವಿಸುವ ರಾಜಪ್ರತಿನಿಧಿಗಳನ್ನೂ ಮಾಡಿದ; ಇಂತು = ಹೀಗೆ,

**ಗದ್ಯಾನುಸರಣ:** ಎಂದು ಹೇಳಿದ ದೇವೇಂದ್ರನು ಆದಿದೇವನ ಅನುಮತಿ ಪಡೆದು, ಒಳ್ಳೆಯ ದಿನ ನಕ್ಷತ್ರ ಮತ್ತು ಮುಹೂರ್ತಗಳಲ್ಲಿ, ಜಗದೋಜನ ಅಪ್ಪಣೆಯಂತೆ ಅಯೋಧ್ಯಾ ನಗರದ ಮಧ್ಯದಲ್ಲಿನ ವಿಶಾಲ ಪ್ರದೇಶಗಳಲ್ಲಿ ಜಿನಾಲಯಗಳನ್ನು ಕಟ್ಟಿಸಿದ; ಆನಂತರ, ಮಳೆಯ ನೀರಿನಿಂದ ಬೇಸಾಯ ಯೋಗ್ಯವಾದುದು ಸಾಧಾರಣವಾದುದು ನೀರು ಸಮೃದ್ಧವಾದುದು ಹಾಗೂ ಬರಡಾದುದು ಎಂಬ ಕೃಷಿಪ್ರದೇಶಗಳನ್ನೂ, ದುರ್ಗಗಳಿಂದ ಕೂಡಿದ ಪ್ರದೇಶಗಳನ್ನೂ, ಬೇಡರು ಕಾಡುನಿವಾಸಿಗಳು ಬೇಟೆಗಾರರು ಶಬರ ಮುಂತಾದವರಿಂದ ಕಾಪಿಡಲಾದ ಕಾಶಿ ಕೌಸಲ ಕಳಿಂಗ ವಂಗ ಕಾಶ್ಮೀರ ಕರಹಾಟ ಕರ್ನಾಟ ಚೋಳ ಕೇರಳ ಪಾಂಚಾಲ ಮಾಳವ ಮಹಾರಾಷ್ಟ್ರ ಸೌರಾಷ್ಟ್ರ ವನವಾಸಿ ಆಂಧ್ರ ಕಾಂಭೋಜ ಬಾಹ್ಲಿಕ ತುರುಷ್ಕ ಕೇಕಯ ಸೌವೀರ ಆಭೀರ ಚೇರ ಶೂರಸೇನಾ ಅಪರಾಂತಿಕ ವಿದೇಹ ಸಿಂಧು ಗಾಂಧಾರ ಕುರುಜಾಂಗಣ ವಿದರ್ಭ ವತ್ಸ ಯವನ ಚೇದಿ ಪಲ್ಲವ ದಶಾರ್ಣ ಕಚ್ಛ ಮಹಾಕಚ್ಛ ಮಗಧಾವನಿ ರಮ್ಯಕ ಕುರು ಸಮುದ್ರಕ ಮುಂತಾದ ವಿಭಿನ್ನ ರಾಜ್ಯಗಳನ್ನು ವಿಂಗಡಿಸಿದ; ಆ ಜನಪದಗಳ ನಡುವೆ ಕಂದಕ ಆಳ್ವೇರಿ ಸುತ್ತುಗೋಡೆ ಬುರುಜುಗಳಿಂದ ಸಿಂಗರಗೊಂಡ ರಾಜಧಾನಿಗಳನ್ನು ನಿರ್ಮಿಸಿದ; ಅವುಗಳನ್ನು ಸುತ್ತುವರಿದಂತೆ ಸೂಕ್ತ ಜಾಗಗಳಲ್ಲಿ ಒಂದೇ ಬಗೆಯವೂ ಸಮೃದ್ಧರಾದ ಬೇಸಾಯಗಾರರ ಸಮೂಹಗಳಿಂದ ಕೂಡಿದ ಸುಂದರ ಜಲಾಶಯಗಳನ್ನೂ, ಸಮೃದ್ಧವಾದ ಹುಲ್ಲು ನೀರುಗಳಿಂದ ಎಲ್ಲ ಬಗೆಯ ಸಸ್ಯಗಳಿಂದ ತುಂಬಿದ ಪ್ರದೇಶಗಳನ್ನೂ ನಿರ್ಮಾಣ ಮಾಡಿದ; ಒಂದು ಕ್ರೋಶ ಎರಡು ಕ್ರೋಶಗಳ ವಿಸ್ತೀರ್ಣದ ಪ್ರದೇಶಗಳಲ್ಲಿ ಐನೂರು ಕುಟುಂಬಗಳಿಂದ ಕೂಡಿದ ಅಧಮ ಮತ್ತು ಉತ್ತಮ ಎಂಬ ವ್ಯತ್ಯಾಸವುಳ್ಳ ನದಿ ಬೆಟ್ಟ ತಗ್ಗುಪ್ರದೇಶ ಸೇತುವೆ ಅರಣ್ಯಪ್ರದೇಶ ಎಂಬ ಭೇದದ ದೊಡ್ಡ ಹಳ್ಳಿಗಳನ್ನು ಕಟ್ಟಿದ; ಪೂರ್ವ ಮತ್ತು ಉತ್ತರದಿಕ್ಕುಗಳಲ್ಲಿ ಹರಿಯುವ ಹರಿಯುವ ನೀರಿನ ಪ್ರವಾಹಗಳನ್ನೂ, ಕಂದಕ ಆಳುವೇರಿ ಕೋಟೆಗೋಡೆ ಬುರುಜುಗಳಿಂದ ಕೂಡಿದ ಹಾಗೂ ವಿವಿಧ ವಿನ್ಯಾಸಗಳಿಂದ ಕೂಡಿದ ಮನೆಗಳು ಉದ್ಯಾನವನಗಳು ಮತ್ತು ಈಜುವ ಕೊಳಗಳನ್ನೂ ಸೃಷ್ಟಿಸಿದ; ಮುಖ್ಯ ವ್ಯಕ್ತಿಗಳು ವಾಸಿಸುವ ನಗರಗಳನ್ನೂ, ಬೆಟ್ಟ ನದಿಗಳಿಂದ ಸುತ್ತುವರಿದ ಖೇಡಗಳನ್ನೂ, ಬೆಟ್ಟಗಳಿಂದ ಆವೃತವಾದ ಖರ್ವಡಗಳನ್ನೂ, ಐದು ನೂರು ಹಳ್ಳಿಗಳಿಂದ ಕೂಡಿದ ಮಡಂಬಗಳನ್ನೂ, ಸಮುದ್ರದ ಕರೆಯಲ್ಲಿ

ವಾಸಿಸುವವರಿಂದ ಕೂಡಿದ ಪಟ್ಟಣಗಳನ್ನೂ, ನದೀತೀರಕ್ಕೆ ಹತ್ತಿರವಾದ ಮಹಾದ್ರೋಣಗಳನ್ನೂ, ಕತ್ತಿನವರೆಗೆ ಹೇರಿದ ಧಾನ್ಯಗಳನ್ನು ಕೂಡಿಟ್ಟುಕೊಂಡು ಉಪಯೋಗಿಸುವ ಜನರಿಂದ ಕೂಡಿದ ಸಂವಾಹಗಳನ್ನೂ, ಕಣಜಗಳು ದೊಡ್ಡ ಊರುಗಳು ಮತ್ತು ಗೊಲ್ಲರ ಹಟ್ಟಿಗಳನ್ನೂ ನಿರ್ಮಿಸಿದ; ಅಲ್ಲದೆ, ಅವುಗಳನ್ನು ಆಳುವ, ತೆರಿಗೆ ವಸೂಲು ಮಾಡುವ, ಬಿಟ್ಟಿ ಕೆಲಸಗಳನ್ನು ಮಾಡಿಸುವ, ಅದನ್ನು ಅನುಭವಿಸುವ ರಾಜಪ್ರತಿನಿಧಿಗಳನ್ನೂ ನೇಮಿಸಿದ.

**ವಿಶೇಷ ವಿಚಾರ: ಬಿಟ್ಟಿ** = ಬಿಟ್ಟಿ ಎಂಬುದು ಸಂಸ್ಕೃತದ 'ವಿಷ್ಟಿ' ಎಂಬ ಸಂಸ್ಕೃತ ಶಬ್ದದ ತದ್ಭವ; ಇದು ಪ್ರಾಕೃತದಲ್ಲಿ ವಿಟ್ಠಿ ಎಂಬ ರೂಪದಲ್ಲಿ ದೊರೆಯುತ್ತದೆ. ಯುದ್ಧಕಾಲದಲ್ಲಿ 'ಕೂಲಿಯಿಲ್ಲದೆ ನಿರ್ಬಂಧದಿಂದ ಮಾಡಿಸುತ್ತಿದ್ದ ಕೆಲಸ'ವನ್ನು ಬಿಟ್ಟಿ ಎನ್ನುತ್ತಿದ್ದರು. ವಿಷ್ಟಿ ಶಬ್ದವು ಮೊದಲು ಕಾಣಿಸಿಕೊಳ್ಳುವುದು ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ. 'ಶಿಬಿರ ಮಾರ್ಗ ಸೇತು ಕೂಪ ತೀರ್ಥ ಶೋಧನಕರ್ಮ, ಯಂತ್ರಾಯುಧೋಪಕರಣಗ್ರಾಸ ವಹನಂ, ಅಯೋಧನಾಚ್ಚ ಪ್ರಹರಣಾವರಣ ಪ್ರತಿವಿದ್ಧ ಅಪನಯನಮಿತಿ ವಿಷ್ಟಿಕರ್ಮಾಣಿ' ಎಂಬುದು ಅಲ್ಲಿನ ವಿವರಣೆ. ಎಂದರೆ ಶಿಬಿರ, ದಾರಿ, ಸೇತುವೆ, ಬಾವಿ, ನೀರು ಇವುಗಳನ್ನು ಸರಿಪಡಿಸುವುದು ಶೊಧನ ಕರ್ಮ ಎಂಬ ಬಿಟ್ಟಿ; ಆಯುಧಗಳು, ಯಂತ್ರಗಳು, ಆವರಣಗಳು, ಉಪಕರಣಗಳು ಆಹಾರ – ಇವುಗಳನ್ನು ಹೊತ್ತು ಸಾಗಿಸುವುದು ವಹನಕರ್ಮ ಎಂಬ ಬಿಟ್ಟಿ; ಯುದ್ಧದಲ್ಲಿ ಸತ್ತವರನ್ನು ಅಥವಾ ಗಾಯಗೊಂಡವರನ್ನು ಹೊತ್ತೊಯ್ಯುವುದು ಅಪನಯನ ಕರ್ಮ ಎಂಬ ಬಿಟ್ಟಿ, ಹೀಗೆ ಬಿಟ್ಟಿಗಳು ಮೂರು ಬಗೆಯಾದ್ದರಿಂದ ಕನ್ನಡದಲ್ಲಿ ಅದನ್ನು ಮೂವಿಟ್ಟಿ ಎನ್ನುತ್ತಿದ್ದರು (ಮೂಱು + ಬಿಟ್ಟಿ).

**ಗುರು ಬೆಸಸೆ ಸಮೆದು ಪಲವುಂ**
**ಪುರಂಗಳಂ ದೇವನಿಡೆ ಪುರಂದರವೆಸರಂ**
**ಧರಿಯಿಸಿ ಭಕ್ತಿಭರಾನತ**
**ಕಿರೀಟನಮರೇಂದ್ರನಮರಲೋಕಕ್ಕೊಗೆದಂ** ೬೪

**ಪದವಿಭಾಗ-ಅನ್ವಯ-ಅರ್ಥ:** ಗುರು ಬೆಸಸೆ ಸಮೆದು ಪಲವುಂ ಪುರಂಗಳಂ = ಆದಿದೇವನ ಆಜ್ಞೆಗನುಗುಣವಾಗಿ ಹಲವಾರು ಪುರಗಳನ್ನು ನಿರ್ಮಿಸಿದ ದೇವೇಂದ್ರನು, ಪುರಂದರವೆಸರಂ ದೇವನ್ + ಇಡೆ = ಆತನು ಪುರಂದರ ಎಂಬ ಹೆಸರನ್ನಿಡಲು, ಧರಿಯಿಸಿ ಭಕ್ತಿಭರಾನತ ಕಿರೀಟನ್ + ಅಮರೇಂದ್ರನ್ ಅಮರಲೋಕಕ್ಕೆ + ಒಗೆದಂ = ಅದನ್ನು ಹೊಂದಿ ಭಕ್ತಿಭಾರದಿಂದ ಬಾಗಿದ ಕಿರೀಟವುಳ್ಳ ದೇವೇಂದ್ರನು ದೇವಲೋಕಕ್ಕೆ ಹೋದ.

**ಗದ್ಯಾನುಸರಣ:** ಆದಿದೇವನ ಆಜ್ಞೆಗನುಗುಣವಾಗಿ ದೇವೇಂದ್ರನು ಹಲವಾರು

ಪುರಗಳನ್ನು ನಿರ್ಮಿಸಿದ; ಇದರಿಂದಾಗಿ ಜಿನೇಂದ್ರನು ಆತನಿಗೆ ಪುರಂದರ ಎಂಬ ಹೆಸರನ್ನಿಟ್ಟ; ಅದನ್ನು ಹೊಂದಿ ಭಕ್ತಿಭಾರದಿಂದ ಬಾಗಿದ ಕಿರೀಟವುಳ್ಳ ದೇವೇಂದ್ರನು ದೇವಲೋಕಕ್ಕೆ ಹೋದ.

ವ। ತದನಂತರಂ ಪ್ರಜಾಪತಿಯುಂ ಪ್ರಜೋಪಜೀವನನಿಮಿತ್ತವಾಗೆ ಸೇವಾಧರ್ಮೋಚಿತವೆನಿಸುವ ಅಸಿಕರ್ಮಮುಮಂ ಅನೇಕಲಿಪಿವಿಧಾನಂಗಳಪ್ಪ ಮಷಿಯುಮಂ ಕೃಷೀವಲಕುಲೋಚಿತಮಪ್ಪ ಕೃಷಿಯುಮಂ ಶಾಸ್ತ್ರಾನುಗತ ಮಪ್ಪ ವಿದ್ಯೆಯುಮಂ ವಣಿಗ್ವ್ಯವಹಾರಾನುಕಾರಿಯಪ್ಪ ವಾಣಿಜ್ಯಮುಮಂ ಹಸ್ತಕೌಶಲಕಳಿತಮಪ್ಪ ಚಿತ್ರಕಳಾಪತ್ರಚ್ಛೇದ್ಯಾದಿಸಮನ್ವಿತಮಪ್ಪ ಶಿಲ್ಪಮುಮಂ ಪಡೆದು ತನ್ನ ಪಡೆದ ಸಕಳಕ್ಷತ್ರಿಯವಣಿಕ್ಶೂದ್ರರೆಂಬ ಮೂಱುವರ್ಣಂಗಳೊಳಗೆ ಕ್ಷತ್ರತ್ರಾಣಾದಿಗುಣೋಪೇತಮಪ್ಪ ಅಖಿಳ ಕ್ಷತ್ರಿಯ ಸಮೂಹಕ್ಕೆ ಶಸ್ತ್ರಕರ್ಮಮು ಮಂ ವಣಿಗ್ವಂಶಕ್ಕೆ ಪಾಶುಪಾಲ್ಯಕೃಷಿಪಣ್ಯ ಕರ್ಮಂಗಳುಮಂ ಮತ್ತಂ ಸ್ಪೃಶ್ಯಾಸ್ಪೃಶ್ಯಕಾರುಗಳಮೆಂಬಿತರ್ತೆಱದ ಶೂದ್ರಸಂತತಿಗೆ ಶುಶ್ರೂಷಾನಿಯೋಗಂ ಗಳುಮಂ ಯಥಾಯೋಗ್ಯಮುಪದೇಶಂಗೆಯ್ದು ವರ್ಣಸಂಕರಮಾಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ,

ಪದವಿಭಾಗ-ಅನ್ವಯ-ಅರ್ಥ: ತತ್ + ಅನಂತರಂ = ಆ ಬಳಿಕ, ಪ್ರಜಾಪತಿಯುಂ ಪ್ರಜೋಪಜೀವನನಿಮಿತ್ತಂ + ಆಗೆ = ಆದಿಬ್ರಹ್ಮನು ಪ್ರಜೆಗಳ ಜೀವನನಿರ್ವಹಣೆಗೆ ಅನುಕೂಲವಾಗುವಂತೆ, ಸೇವಾಧರ್ಮ + ಉಚಿತವೆನಿಸುವ = ಸೇವೆಯನ್ನು ನಿರ್ವಹಿಸಲು ತಕ್ಕುವಾದ, ಅಸಿಕರ್ಮವುಮಂ ಅನೇಕಲಿಪಿವಿಧಾನಂಗಳಪ್ಪ ಮಷಿಯುಮಂ ಕೃಷೀವಲಕುಲೋಚಿತಮಪ್ಪ ಕೃಷಿಯುಮಂ ಶಾಸ್ತ್ರ + ಅನುಗತಮಪ್ಪ ವಿದ್ಯೆಯುಮಂ ವಣಿಕ್ + ವ್ಯವಹಾರ + ಅನುಕಾರಿಯಪ್ಪ ವಾಣಿಜ್ಯಮುಮಂ ಹಸ್ತಕೌಶಲಕಳಿತಮಪ್ಪ ಚಿತ್ರಕಳಾ ಪತ್ರಚ್ಛೇದ + ಆದಿ ಸಮನ್ವಿತಮಪ್ಪ ಶಿಲ್ಪಮುಮಂ ಪಡೆದು = ಕತ್ತಿಯ ಕೆಲಸವನ್ನೂ, ವಿವಿಧ ಲಿಪಿಗಳನ್ನು ಬರೆಯುವ ವಿಧಾನವಾದ ಮಸಿಕರ್ಮವನ್ನೂ, ಶಾಸ್ತ್ರಕ್ಕನುಗುಣವಾದ ವಿದ್ಯೆಯನ್ನೂ, ವ್ಯಾಪಾರವ್ಯವಹಾರಗಳನ್ನು ನಡೆಸಬಹುದಾದ ವಾಣಿಜ್ಯವನ್ನೂ, ಕರಕುಶಲತೆಯಿಂದ ಮಾಡಬೇಕಾದ ಚಿತ್ರಕಲೆ ಪತ್ರಚ್ಛೇದ ಮುಂತಾದ ಶಿಲ್ಪಗಳನ್ನೂ ವಿಂಗಡಿಸಿಕೊಂಡ; ತನ್ನ ಪಡೆದ ಸಕಳಕ್ಷತ್ರಿಯವಣಿಕ್ + ಶೂದ್ರರೆಂಬ ಮೂಱು ವರ್ಣಂಗಳೊಳಗೆ = ತಾನು ವಿಂಗಡಿಸಿಕೊಂಡ ಮೂರು ವರ್ಣಗಳವರಲ್ಲಿ, ಕ್ಷತ್ರತ್ರಾಣ + ಆದಿಗುಣ + ಉಪೇತಂ + ಅಪ್ಪ ಅಖಿಳಕ್ಷತ್ರಿಯಸಮೂಹಕ್ಕೆ ಶಸ್ತ್ರಕರ್ಮಮುಮಂ = ಏಟಿನಿಂದ ಕಾಪಾಡಬಲ್ಲ ಗುಣಗಳಿಂದ ಕೂಡಿದ ಕ್ಷತ್ರಿಯವರ್ಗಕ್ಕೆ ಆಯುಧವಿದ್ಯೆಯನ್ನೂ, ವಣಿಕ್ + ವಂಶಕ್ಕೆ ಪಾಶುಪಾಲ್ಯ ಕೃಷಿಪಣ್ಯಕರ್ಮಂಗಳುಮಂ = ವಣಿಕರಿಗೆ ಪಶುಪಾಲನೆ ಬೇಸಾಯ ಮತ್ತು ವ್ಯಾಪಾರ 'ಗಳನ್ನೂ, ಮತ್ತಂ ಸ್ಪೃಶ್ಯ + ಅಸ್ಪೃಶ್ಯಕಾರುಗಳಂ + ಎಂಬ + ಇತರ್ + ತೆಱದ ಶೂದ್ರಸಂತತಿಗೆ

ಶುಶ್ರೂಷಾನಿಯೋಗಂಗಳುಮಂ = ಕೊನೆಯಲ್ಲಿ, ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂಬ ಎರಡು ಬಗೆಯ ಶೂದ್ರವರ್ಗಕ್ಕೆ ಸೇವೆಮಾಡುವ ಕೆಲಸವನ್ನೂ, ಯಥಾಯೋಗ್ಯಂ + ಉಪದೇಶಂಗೆಯ್ದು = ಸೂಕ್ತವಾದ ಬಗೆಯಲ್ಲಿ ಹೇಳಿಕೊಟ್ಟು, ವರ್ಣಸಂಕರಂ + ಆಗಲೀಯದೆ ತಮ್ಮ ತಮ್ಮ ಜಾತಿಗಳೊಳ್ ನಣ್ಪುಮಂ ಕೊಳ್ಕೊಡೆಯುಮಂ ನಿಯೋಜಿಸಿ = ವರ್ಣಗಳ ಬೆರಕೆಯಾಗದ ಹಾಗೆ ಅವರವರ ಜಾತಿಗಳಲ್ಲಿಯೇ ನಂಟುತನ ಮತ್ತು ಹೆಣ್ಣು ಕೊಟ್ಟುಕೊಳ್ಳುವುದನ್ನೂ ಆಜ್ಞಾಪಿಸಿ,

**ಗದ್ಯಾನುಸರಣ:** ಆ ಬಳಿಕ, ಬ್ರಹ್ಮನು ಪ್ರಜೆಗಳ ಜೀವನನಿರ್ವಹಣೆಗೆ ಅನುಕೂಲವಾಗುವಂತೆ ಸೇವೆಯನ್ನು ನಿರ್ವಹಿಸಲು ತಕ್ಕುವಾದ ಕತ್ತಿಯ ಕೆಲಸ, ವಿವಿಧ ಲಿಪಿಗಳನ್ನು ಬರೆಯುವ ವಿಧಾನವಾದ ಮಸಿಕರ್ಮ, ಶಾಸ್ತ್ರಕ್ಕನುಗುಣವಾದ ವಿದ್ಯೆ, ವ್ಯಾಪಾರವ್ಯವಹಾರಗಳನ್ನು ನಡೆಸಬಹುದಾದ ವಾಣಿಜ್ಯ, ಕರಕುಶಲತೆಯಿಂದ ಮಾಡಬೇಕಾದ ಚಿತ್ರಕಲೆ ಪತ್ರಚ್ಛೇದ ಮುಂತಾ ದಶಿಲ್ಪಗಳನ್ನೂ ವಿಂಗಡಿಸಿಕೊಂಡ; ತಾನು ವಿಭಜಿಸಿಕೊಂಡ ಮೂರು ವರ್ಣಗಳವರಲ್ಲಿ, ಏಟಿನಿಂದ ಕಾಪಾಡಬಲ್ಲ ಗುಣಗಳಿಂದ ಕೂಡಿದ ಕ್ಷತ್ರಿಯವರ್ಗಕ್ಕೆ ಆಯುಧವಿದ್ಯೆಯನ್ನೂ, ವಣಿಕರಿಗೆ ಪಶುಪಾಲನೆ ಬೇಸಾಯ ಮತ್ತು ವ್ಯಾಪಾರಗಳನ್ನೂ, ಕೊನೆಯಲ್ಲಿ, ಸ್ಪೃಶ್ಯರು ಮತ್ತು ಅಸ್ಪೃಶ್ಯರು ಎಂಬ ಎರಡು ಬಗೆಯ ಶೂದ್ರವರ್ಗಕ್ಕೆ ಸೇವೆಮಾಡುವ ಕೆಲಸವನ್ನೂ ಸೂಕ್ತವಾದ ಬಗೆಯಲ್ಲಿ ಹೇಳಿಕೊಟ್ಟ; ಅಲ್ಲದೆ, ವರ್ಣಗಳ ಬೆರಕೆಯಾಗದ ಹಾಗೆ ಅವರವರ ಜಾತಿಗಳಲ್ಲಿಯೇ ನಂಟುತನ ಮತ್ತು ಹೆಣ್ಣನ್ನು ಕೊಡುವುದು–ತರುವುದನ್ನೂ ಕಟ್ಟುಮಾಡಿದ.

**ವಿಶೇಷ ವಿಚಾರ: 'ಬ್ರಹ್ಮ'** = ಬ್ರಹ್ಮ ಎಂದರೆ ಸೃಷ್ಟಿಕರ್ತ; ಆದರೆ ಆದಿದೇವನು ಸೃಷ್ಟಿಸಿದ್ದು ವಿಶ್ವವನ್ನಲ್ಲ, ವಿವಿಧ ವಿದ್ಯೆಗಳನ್ನು ಮತ್ತು ಸಮಾಜವಿಂಗಡಣೆಯನ್ನು ಎಂಬ ವಿವರಣೆ ಸಮಂಜಸವಾಗಿದೆ. ಇಲ್ಲಿನ ವರ್ಣವಿಂಗಡಣೆಯಲ್ಲಿ **'ಬ್ರಾಹ್ಮಣ'** ಇಲ್ಲ; ಇದನ್ನು ಮುಂದೆ ಭರತ ಸೃಷ್ಟಿಸಿದ ಎಂಬುದು ನಿಜವಾದರೂ (ಆದರೆ ಆ ವರ್ಣವು ಬಹುಬೇಗ ಭ್ರಷ್ಟವಾಗುತ್ತದೆ ಎಂಬುದು ಆದಿದೇವನ ಭವಿಷ್ಯವಾಕ್ಕು), ಜೈನರಲ್ಲಿ ಬ್ರಾಹ್ಮಣನಿಗೆ ಅತ್ಯಂತ ಶ್ರೇಷ್ಠ ಸ್ಥಾನವಿಲ್ಲ, ಅದೇನಿದ್ದರೂ ಕ್ಷತ್ರಿಯನದು. ಜೈನಧರ್ಮದ ಪರಂಪರೆಯಲ್ಲಿಯೇ ಇದ್ದ ರಾಜತ್ವದ ಬಗೆಗಿನ ಅನನ್ಯ ಗೌರವ, ಮತ್ತೊಂದೆಡೆ ತನ್ನ ಕಾಲದ ಗಾಳಿಯಲ್ಲಿದ್ದ ರಾಜಭಕ್ತಿ ಇವುಗಳು ಪಂಪನ ವ್ಯಕ್ತಿತ್ವದ ಭಾಗವಾಗಿ ತನ್ನ ಕಾವ್ಯದಲ್ಲವನು ರಾಜತ್ವಕ್ಕೆ ಅಪಾರ ಗೌರವವನ್ನು ತೋರಿಸಲು ಕಾರಣವಾಗಿವೆ. ಹೀಗಾಗಿ ಪಂಪನಿಗೂ ರಾಜತ್ವಕ್ಕೂ ಎಲ್ಲಿಲ್ಲದ ನಂಟು. ಪಂಪನ ಎರಡೂ ಕಾವ್ಯಗಳು ರಾಜರನ್ನು ಕುರಿತವು. ಪಂಪನ ಮೊದಲ ಕಾವ್ಯವಾದ **'ಆದಿಪುರಾಣ'**ವು ಮೊದಲನೆಯ ತೀರ್ಥಂಕರನ ಚರಿತೆ. ಜೈನಪರಂಪರೆಯ ಪ್ರಕಾರ ಎಲ್ಲ ತೀರ್ಥಂಕರರೂ ರಾಜರುಗಳೇ, ಮೊದಲನೆಯ

ತೀರ್ಥಂಕರನೂ ಇದಕ್ಕೆ ಹೊರತಲ್ಲ. ಜೊತೆಗೆ 'ಭವಾವಳಿ'ಯಲ್ಲಿ ಚಿತ್ರಿತವಾಗಿರುವ ಹಿಂದಿನ ಜನ್ಮಗಳೆಲ್ಲದರಲ್ಲಿಯೂ ಅವನು ರಾಜನಾಗಿದ್ದವನನು. ಇನ್ನು ಎರಡನೆಯ ಕಾವ್ಯ **ವಿಕ್ರಮಾರ್ಜುನವಿಜಯಂ**'ನಲ್ಲಿ ತನ್ನ ಆಶ್ರಯದಾತ ರಾಜನನ್ನು ಕಥಾನಾಯಕನಾದ ಅರ್ಜುನನೊಡನೆ ಸಮೀಕರಿಸಿ ಅವನಿಗೆ ಅರೆದೈವತ್ವವನ್ನು ಒದಗಿಸಿದವನು. ಇದರಿಂದ ಉಭಯತ್ರರಿಗೂ ಲಾಭವಾಯಿತು. ಈ ಎಲ್ಲ ಪಾತ್ರಗಳೂ ತಮ್ಮ ವಿಶಿಷ್ಟ ಗುಣಗಳನ್ನು ಮೆರೆದದ್ದು ಯುದ್ಧಭೂಮಿಯಲ್ಲಿ, ತಮ್ಮ ಪ್ರಾಣಗಳನ್ನು ಒತ್ತೆಯಿಟ್ಟು (ಬೇರೊಂದು ಸಂದರ್ಭದಲ್ಲಿ ಈ ಕಾವ್ಯದಲ್ಲಿಯೇ 'ಭಾರತಂ ಕಲಹಂ' ಎಂಬ ಮಾತಿದೆ). ಅಂದರೆ ಈ ಎಲ್ಲ ಪಾತ್ರಗಳ ಒರೆಗಲ್ಲು ಯುದ್ಧ, ಉಳಿದಂತೆ ಬದುಕಿನ ಬಗೆಯಲ್ಲ. ಯುದ್ಧ ರಾಜರ ಸುತ್ತ ತಾನೆ ಹೆಣೆದುಕೊಳ್ಳುವುದು? ಅಂದರೆ ಭಾರತವನ್ನು 'ಲೋಕಪೂಜ್ಯವಾಗಿಸುವ' ಈ ಗುಣಗಳೂ ಪೂಜ್ಯವಾದವು. ಅವೆಲ್ಲ ಯುದ್ಧಸಂಬಂಧಿ ಗುಣಗಳು, ರಾಜಪರವಾದ ಮೌಲ್ಯಗಳು. ಅಂದರೆ ಪಂಪ ಈ ಮೌಲ್ಯಗಳಿಂದಾಗಿ ಬದುಕು ಮೌಲಿಕವಾಗುತ್ತದೆ, ಅಂಥ ಬದುಕು ಲೋಕಪೂಜಿತವಾಗುತ್ತದೆ ಎಂಬ ಧ್ವನಿಯನ್ನು ಸೂಸುತ್ತಿದ್ದಾನೆ. ಪ್ರಾಯಃ ಪಂಪನ ಅಭಿಪ್ರಾಯದಲ್ಲಿ, ತನ್ನ ಕಾಲದ ಮನೋಭಾವಕ್ಕೆ ತಕ್ಕಂತೆ, ಒಬ್ಬ ವ್ಯಕ್ತಿಯ ಲೌಕಿಕ ಬದುಕು ಸಾರ್ಥಕವಾಗುವುದು ಈ ಮೌಲ್ಯಗಳಿಂದ, ಯುದ್ಧಸಂಬಂಧೀ ಮೌಲ್ಯಗಳ ಪಾಲನೆಯಿಂದ. ಹನ್ನೆರಡನೇ ಶತಮಾನದ ಬ್ರಹ್ಮಶಿವನಂತೂ ತನ್ನ '**ಸಮಯ ಪರೀಕ್ಷೆ**'ಯಲ್ಲಿ ಕ್ಷತ್ರಿಯನ ಶ್ರೇಷ್ಠತೆಯನ್ನು ನೇರವಾಗಿ ಹೇಳುತ್ತಾನೆ: 'ಕ್ಷತ್ರಿಯನೆ ಧಾತ್ರಿಗೊಡೆಯಂ ಕ್ಷತ್ರಿಯನಾರ್ಗೇನನಿತ್ತನದು ದೆಯ್ವಕೃತಂ ಕ್ಷತ್ರಿಯನೆ ತೀರ್ಥಕರನಾ ಕ್ಷತ್ರಿಯನದಱಿಂದೆ ಪಿರಿಯನೆಲ್ಲಂದದೊಳಂ' ('**ಸಮಯಪರೀಕ್ಷೆ**, ೨. ೨೩).

**ಮತ್ತೊಂದು ಅಂಶ**: ಜೈನ-ಬೌದ್ಧಗಳೆರಡೂ ವೈದಿಕವನ್ನು ತೀವ್ರವಾಗಿ ವಿರೋಧಿಸಿದ ಮತಗಳು; ಆದರೆ ವೈದಿಕವನ್ನು ಕಟುವಾಗಿ ವಿರೋಧಿಸಿದ ಕಾರಣದಿಂದಾಗಿ ಬೌದ್ಧವು ಇಲ್ಲಿಂದ ಕಾಲ್ತೆಗೆಯಬೇಕಾಯಿತು; ಆದರೆ ಅದರೊಡನೆ ರಾಜಿಯಾಗಿ ಅಲ್ಲಿನ ಪೌರಾಣಿಕತೆ, ಮೂರ್ತಿಪೂಜೆ, ಧಾರ್ಮಿಕಾಚರಣೆ, ವರ್ಣವ್ಯವಸ್ಥೆ ಮುಂತಾದವುಗಳನ್ನು ಅನುಸರಿಸಿದ ಜೈನ ಉಳಿದುಕೊಂಡಿತು. ಮುಂದೆಯೂ ಅದು ವೈದಿಕ ಪ್ರಭಾವಕ್ಕೆ ಒಳಗಾಗುತ್ತಲೇ ಹೋಯಿತು. ಪಂಪನ '**ಆದಿಪುರಾಣ**'ದಲ್ಲಿ ಎರಡು ಪ್ರಸಂಗಗಳಿವೆ: ಒಂದು, ಇಲ್ಲಿನ ಸನ್ನಿವೇಶ: ಆದಿದೇವನು ವರ್ಣವಿಂಗಡಣೆ ಮಾಡಿ ಅವರಿಗೆ ವೃತ್ತಿಗಳನ್ನು ನಿಗದಿಗೊಳಿಸಿ ವರ್ಣಸಂಕರಕ್ಕೆಡೆಯಾಗದಂತೆ ನಿಯೋಜಿಸಿದ ಸನ್ನಿವೇಶ. ಎರಡು, ಮುಂದೆ ಅವನ ಮಗನಾದ ಭರತನು ಸೂಕ್ಷ್ಮಮನಸ್ಸು ಹಾಗೂ ವಿವೇಚನೆಗಳನ್ನು ತೋರಿಸಿದ ಕೆಲವರನ್ನು 'ಮೆಚ್ಚಿ ದಾನಸನ್ಮಾನಯೋಗ್ಯರಪ್ಪರೆಂದು ಪದ್ಮನಿಧಿಯಂ ತರಿಸಿ ತಪನೀಯಸೂತ್ರದೊಳೇಕಾದಶೋತ್ತರದಶಾಂತಂಬರಂ ಅವರವರ ನೆಲೆಗಳೊಳ್ ಬ್ರಹ್ಮಸೂತ್ರಾಭಿಧಾನ ಯಜ್ಞೋಪವೀತದಿಂ ಪವಿತ್ರಗಾರ್ತಮ್ಮಾಡಿ' ಅವರಿಗೆ ಆರು

ಆರ್ಯರ ಷಟ್ಕರ್ಮಗಳನ್ನು ನಿಗದಿಪಡಿಸಿದ ಸನ್ನಿವೇಶ ('ಆದಿಪುರಾಣಂ':. ೧೫. ೧೩ ವ). ಹೀಗೆ ಬ್ರಾಹಣವೂ ಸೇರಿ ವೈದಿಕದಲ್ಲಿದ್ದಂತೆ ಚಾತುರ್ವರ್ಣ್ಯ ಅಲ್ಲಿಯೂ ಕಾಲಿಟ್ಟಿತು. ಅಂದರೆ ಮೂಲದಲ್ಲಿ ತಾನು ವಿರೋಧಿಸಿದ್ದ ವರ್ಣವ್ಯವಸ್ಥೆಯನ್ನು ಜೈನವು ಮತ್ತೆ ಸ್ವೀಕರಿಸಿತು, ವರ್ಣಸಂಕರವನ್ನು ನಿಷೇಧಿಸಿತು; ಅಸ್ಪೃಶ್ಯತೆಗೂ ಅವಕಾಶವುಂಟಾಯಿತು.

**ಜನಪದಂಗಳನೆಯ್ದೆ ಮಾಡಿ ಪುರಂಗಳಂ ಸಮಕಟ್ಟಿ ಮೂ**
**ಳ್ಪ ಎನಿಸಿ ವರ್ಣಮನಿಂತು ಮುಂ ಸಮಕಟ್ಟಿಯುಂ ಬಳಿಕಂ ಜಗ**
**ಜ್ಜನಕನೊಟ್ಟಿದ ಪೊನ್ನ ರಾಶಿಗಳಂ ಜಗಜ್ಜನಕಿತ್ತು ತ**
**ತ್ಕನಕವರ್ಣದಿನೇಕವರ್ಣಮೆ ಮಾಡಿದಂ ಜಗಮೆಲ್ಲಮಂ ೬೫**

**ಪದವಿಭಾಗ-ಅನ್ವಯ-ಅರ್ಥ**: ಜನಪದಂಗಳನ್ + ಎಯ್ದೆ ಮಾಡಿ = ನಾಡುಗಳನ್ನು ವಿಂಗಡಿಸಿ, ಪುರಂಗಳಂ ಸಮಕಟ್ಟಿ = ಪುರಗಳನ್ನು ನಿರ್ಮಿಸಿ, ವರ್ಣಮನ್ ಮೂಱು ಎನಿಸಿ ಇಂತು ಮುಂ ಸಮಕಟ್ಟಿಯುಂ = ವರ್ಣಗಳನ್ನು ಮೂರು ಎಂದು ಮೊದಲು ವಿಂಗಡಿಸಿಯೂ, ಬಳಿಕಂ ಜಗತ್ + ಜನಕನ್ + ಒಟ್ಟಿದ ಪೊನ್ನ ರಾಶಿಗಳಂ ಜಗತ್ + ಜನಕಿತ್ತು = ಆನಂತರ ಆ ಜಗತ್ತಿನ ತಂದೆಯು ಕೂಡಿದ್ದ ಹೊನ್ನ ರಾಶಿಗಳನ್ನು ಜಗತ್ತಿನ ಜನಕ್ಕೇ ಕೊಟ್ಟು, ತತ್ + ಕನಕವರ್ಣದಿನ್ ಜಗಂ + ಎಲ್ಲಮಂ ಏಕವರ್ಣಮೆ ಮಾಡಿದಂ = ಆ ಚಿನ್ನದ ಬಣ್ಣದಿಂದಾಗಿ ಜಗತ್ತನ್ನೆಲ್ಲ ಒಂದೇ ಬಣ್ಣದ್ದನ್ನಾಗಿ ಮಾಡಿದ.

**ಗದ್ಯಾನುಸರಣ**: ನಾಡುಗಳನ್ನು ವಿಂಗಡಿಸಿ, ಪುರಗಳನ್ನು ನಿರ್ಮಿಸಿ, ವರ್ಣಗಳನ್ನು ಮೂರು ಎಂದು ಮೊದಲು ವಿಂಗಡಿಸಿದ; ಆದರೆ ಆನಂತರ ಆ ಜಗತ್ತಿನ ತಂದೆಯು ಕೂಡಿದ್ದ ಹೊನ್ನ ರಾಶಿಗಳನ್ನು ಜಗತ್ತಿನ ಜನಕ್ಕೇ ಕೊಟ್ಟು, ಆ ಚಿನ್ನದ ಬಣ್ಣದಿಂದಾಗಿ ಜಗತ್ತನ್ನೆಲ್ಲ ಒಂದೇ ಬಣ್ಣದ್ದನ್ನಾಗಿ ಮಾಡಿದ.

**ವಿಶೇಷ ವಿಚಾರ**: ಜನರಿಗೆ ಚಿನ್ನವನ್ನು ಹಂಚಿ ಆ ಚಿನ್ನದ ಬಣ್ಣದಿಂದಾಗಿ ತಾನೇ ಮೂರಾಗಿ ವಿಂಗಡಿಸಿದ್ದ ವರ್ಣಗಳನ್ನೆಲ್ಲ ಒಂದೇ ವರ್ಣವಾಗಿ ಮಾಡಿದ ಎಂಬುದರ ಆಶಯವೇನೋ ಸ್ಪಷ್ಟವಾಗುವುದಿಲ್ಲ. ವೃತ್ತಿಭೇದದಿಂದ ವರ್ಣಗಳು ಮೂರಾದರೂ ಅವುಗಳಲ್ಲಿ ಭೇದವಿಲ್ಲ ಎಂದೋ (ಆದರೆ ಆತನೇ ವರ್ಣಗಳ ನಡುವೆ ವಿವಾಹಸಂಬಂಧಗಳನ್ನು ನಿಷೇಧಿಸುತ್ತಾನಲ್ಲ!), ಎಲ್ಲರೂ ಚಿನ್ನದ ಆಕರ್ಷಣೆಗೊಳಗಾಗುವುದರಿಂದ ಎಲ್ಲರೂ ಒಂದೇ ಎಂದೋ, ಅಥವಾ ಬಹುತೇಕ ಜೈನರು ವ್ಯಾಪಾರಿಗಳಾಗಿ ಚಿನ್ನವನ್ನು ಸಂಪಾದಿಸುತ್ತಿದ್ದುದರಿಂದ ಅವರೆಲ್ಲ ಒಂದೇ ಎಂದೋ ಇರಬಹುದೇ?

'ಜನಪದ' ಎನ್ನುವ ಮಾತು ಜನರನ್ನು ಸೂಚಿಸಲು ಬಳಕೆಯಾದುದು;

ಇವೊತ್ತು ಈ ಪದಕ್ಕೆ ವಿಶೇಷ ಆಶಯ ಕಲ್ಪಿತವಾಗಿದೆ. ಜಾನಪದ ಅಧ್ಯಯನ ಆರಂಭವಾದ ಮೇಲೆ 'folk' – 'floklore' ಪದ ವಿಭಜನೆ ಮಾಡಿ 'ಜನಪದ'– 'ಜಾನಪದ' ಎಂಬುದಾಗಿ ಪಾರಿಭಾಷಿಕವಾಗಿ ಬಳಸಲಾಗುತ್ತಿದೆ.

**ವಿತತಾಷಾಢದ ಬಹುಳ**
**ಪ್ರತಿಪದ್ದಿನದಂದು ಕೀರ್ತಿ ನೆಗಟ್ದಿರೆ ಭಗವ**
**ತ್ಕೃತಂಯುಗವಮಾದುದಜೆಂದಂ**
**ಕೃತಂಯುಗವೆಂಬರ್ ಪುರಾಣವಿದರಿದನೀಗಳ್ ೬೬**

**ಪದವಿಭಾಗ–ಅನ್ವಯ–ಅರ್ಥ:** ವಿತತ + ಆಷಾಢದ ಬಹುಳ ಪ್ರತಿಪತ್ + ದಿನದಂದು = ಶ್ರೇಷ್ಠವಾದ ಆಷಾಢ ಮಾಸದ ಪಾಡ್ಯದಂದು, ಕೀರ್ತಿ ನೆಗಟ್ದಿರೆ = ಕೀರ್ತಿಯುಂಟಾಗಲು, ಭಗವತ್ + ಕೃತಯುಗಂ + ಆದುದಜೆಂದಂ = ಭಗವತನಿಂದ ಮಾಡಲ್ಪಟ್ಟುದರಿಂದ, ಪುರಾಣವಿದರ್ + ಇದನ್ + ಈಗಳ್ ಕೃತಯುಗಂ + ಎಂಬರ್ = ಪುರಾಣವನ್ನು ಬಲ್ಲವರು ಇದನ್ನೀಗ ಕೃತಯುಗ ಎಂದು ಕರೆಯುತ್ತಾರೆ.

**ಗದ್ಯಾನುಸರಣ:** ಶ್ರೇಷ್ಠವಾದ ಆಷಾಢ ಮಾಸದ ಪಾಡ್ಯದಂದು ಭಗವಂತನು ಯುಗವನ್ನು ಮಾಡಿದುದರಿಂದಾಗಿ ಇದನ್ನೀಗ ಪುರಾಣವನ್ನು ಬಲ್ಲವರು ಕೃತಯುಗ ಎಂದು ಕರೆಯುತ್ತಾರೆ.

**ವ। ಅಂತು ಕೃತಂಯುಗಾರಂಭಸೂತ್ರಧಾರನೆನಿಸಿದಾದಿಬ್ರಹ್ಮಂಗೆ ರಾಜ್ಯಾಭಿಷೇಕಂ ಗೆಯ್ವ ಬಗೆಯುಂ ಬಗೆದು,**

**ಅರ್ಥ:** ಅಂತು ಕೃತಯುಗ + ಆರಂಭಸೂತ್ರಧಾರನ್ + ಎನಿಸಿದ + ಆದಿಬ್ರಹ್ಮಂಗೆ ರಾಜ್ಯಾಭಿಷೇಕಂ ಗೆಯ್ವ ಬಗೆಯಂ ಬಗೆದು = ಹೀಗೆ ಕೃತಯುಗವು ಆರಂಭಕ್ಕೆ ಸೂತ್ರಧಾರನಾದ ಆದಿದೇವನಿಗೆ ದೇವೇಂದ್ರನು ರಾಜ್ಯಾಭಿಷೇಕವನ್ನು ಮಾಡಲು ಯೋಚಿಸಿದ.

**ಸುರಕಾಂತಾನೃತ್ಯಮೆತ್ತಂ ಪಸರಿಸಿರೆ ನಭೋಭಾಗದೊಳ್ ದೇವತೂರ್ಯ**
**ಸ್ವರಮಾಶಾಚಕ್ರದೊಳ್ ಬಳ್ವಳಬಳೆದಿರೆ ನಾನಾವಿಮಾನಂಗಳೊಳ್ ಭಾ**
**ಸುರರತ್ನಜ್ಯೋತಿಗಳ್ ತಳ್ತಳಿಸಿರೆ ಸುರವೃಂದಾನ್ವಿತಂ ಬಂದನಾಗಳ್**
**ಸುರರಾಜಂ ರಾಜದೈರಾವತವಿಪುಳತರಸ್ಕಂಧದೇಶಾಭಿರಾಮಂ ೬೭**

**ಪದವಿಭಾಗ–ಅನ್ವಯ–ಅರ್ಥ:** ನಭೋಭಾಗದೊಳ್ ಎತ್ತಂ ಸುರಕಾಂತಾನೃತ್ಯಂ

ಪಸರಿಸಿರೆ = ಆಕಾಶದಲ್ಲಿ ಎಲ್ಲೆಡೆಯೂ ದೇವವನಿತೆಯರ ನರ್ತನವು ನಡೆಯುತ್ತಿರಲು, ಆಶಾಚಕ್ರದೊಳ್ ದೇವತೂರ್ಯಸ್ವರಂ ಬಳ್ವಳಬಳೆದಿರೆ = ದಿಕ್ಕಿನ ಪ್ರದೇಶಗಳಲ್ಲಿ ದೇವದುಂದುಭಿಗಳ ದನಿಯು ತುಂಬಿಕೊಂಡಿರಲು, ಭಾಸುರರತ್ನ ಜ್ಯೋತಿಗಳ್ ನಾನಾವಿಮಾನಂಗಳೊಳ್ ತಳ್ತಳಿಸಿರೆ = ಕಾಂತಿಮಯವಾದ ರತ್ನಗಳ ಬೆಳಗು ಅನೇಕ ವಿಮಾನಗಳಲ್ಲಿ ಫಳಫಳ ಹೊಳೆಯುತ್ತಿರಲು, ರಾಜತ್ + ಐರಾವತವಿಪುಳತರಸ್ಕಂಧದೇಶ + ಅಭಿರಾಮಂ = ಶೋಭಿಸುವ ಐರಾವತದ ವಿಶಾಲ ಕತ್ತಿನ ಮೇಲೆ ವಿರಾಜಮಾನನಾದ, ಸುರರಾಜಂ ಸುರವೃಂದ + ಅನ್ವಿತಂ ಬಂದನಾಗಳ್ = ದೇವೇಂದ್ರನು ದೇವತೆಗಳ ಗುಂಪಿನೊಡನೆ ಆಗಮಿಸಿದ.

**ಗದ್ಯಾನುಸರಣ:** ಆಕಾಶದಲ್ಲಿ ಎಲ್ಲೆಡೆಯೂ ದೇವವನಿತೆಯರ ನರ್ತನವು ನಡೆಯುತ್ತಿತ್ತು, ದಿಕ್ಕಿನ ಪ್ರದೇಶಗಳಲ್ಲಿ ದೇವದುಂದುಭಿಗಳ ದನಿಯು ತುಂಬಿಕೊಂಡಿತ್ತು, ಕಾಂತಿಮಯವಾದ ರತ್ನಗಳ ಬೆಳಗು ಅನೇಕ ವಿಮಾನಗಳಲ್ಲಿ ಫಳಫಳ ಹೊಳೆಯುತ್ತಿತ್ತು, ಆಗ ಶೋಭಿಸುವ ಐರಾವತದ ವಿಶಾಲ ಕತ್ತಿನ ಮೇಲೆ ವಿರಾಜಮಾನನಾದ ದೇವೇಂದ್ರನು ದೇವತೆಗಳ ಗುಂಪಿನೊಡನೆ ಆಗಮಿಸಿದ.

ವ॥ ಅಂತು ಭುವನತ್ರಯಚೂಡಾಮಣಿಯ ರಾಜ್ಯಾಭಿಷೇಕದೊಸಗೆಯುಂ ನಾಭಿರಾಜಾಧಿರಾಜಸಭೆಗಱಿಪಿ ಮಹಾನದ್ಯುಭಯತಟ ಮೃದುಮೃತ್ಸ್ನಾ ವಿಲಸಿತವೇದಿಕಾ ವಿರಾಜಮಾನದೊಳ್ ಚಂಚತ್ಪಂಚರತ್ನಚೂರ್ಣವಿರಚಿತ ರಂಗವಲ್ಲೀ ವಿಳಾಸ ವಿರಾಜಿತ ಸುನಾಸೀರಶರಾಸನದೊಳ್ ಪರಸ್ಪರಸ್ಪರ್ಧಮಾನ ಪರಿಕ್ಷಿಪ್ತಮಲ್ಲಿಕಾಮುಕುಳ ಮುಕ್ತಾಫಳೋಪಶೋಭಿತದೊಳಿಂದ್ರನೀಲ ಮಣಿಕುಟ್ಟಿಮಸಂಕ್ರಾಂತಮೌಕ್ತಿಕ ದಾಮಾಭಿ ರಾಮದೊಳ್ ಪರಿವಿರಚಿತ ಚಿತ್ರಾಂಬರ ವಿತಾನಚ್ಛಾಯಾಚ್ಛುರಿತರಂಗಭೂಮಿಯೊಳ್ ಮಂಗಳೋಪಕರಣಸಮುದ್ಧರಣನಿಯಮಿತಾನೇಕಕಾಮಿನೀಕರಪಲ್ಲವ ವಿಧೂಯಮಾನ ಚಾರುಚಾಮರಮರುದಾಂದೋಳಿತ ಪ್ರಾಕಾರಪ್ರಲಂಬಮಾನ ಮಂದಾರ ಮಾಳಾವಿಳಸನ ದೊಳ್ ನಿಯಮಿತಾನೇಕಕಾಮಿನೀನಿರುದ್ಧಸಂಚಾರ ಮಾರ್ಗದೊಳ್ ಪರ್ಯಂಕನಿಹಿತ ಬಹುಪ್ರಕಾರಭೃಂಗಾರಮಂಗಳಜಲ ಸಂಭೃತಶಾತಕುಂಭಮಣಿದರ್ಪಣಪ್ರಸಾರಿತ ದಿಗಂಗನಾಮುಖದೊಳ್ ಅಮರ ವಾರವನಿತಾ ಕರಪಲ್ಲವವಿಧೂಯಮಾನವಿಳಾಸದೊಳ್ ಗಂಧರ್ವಸಮಾರಬ್ಧ ಸಂಗೀತ ಮೃದಂಗನಾದಪ್ರಮೋದಿತಾಶೇಷ ರಾಜದ್ರಾಜಭವನದೊಳ್ ಸಂಚರತ್ಸುರವಿಳಾಸಿನೀಲಲಿತ ಮೃದುಪದವಿನ್ಯಾಸಮಂಜು ಗುಂಜನ್ಮಂಜೀರಕ ಮನೋಹರ ಝಂಕಾರಪ್ರವರ್ಧಮಾನ ಮದಾಳಿಕುಳ ಕೋಳಾಹಳದೊಳ್ ರಾಜಭವನಾಂಗಣಮಧ್ಯಸ್ಥಿತ ರಾಜ್ಯಾಭಿಷೇಕಮಂಟಪದೊಳ್,

**ಪದವಿಭಾಗ–ಅನ್ವಯ–ಅರ್ಥ:** ಅಂತು ಭುವನತ್ರಯಚೂಡಾಮಣಿಯ

ರಾಜ್ಯಾಭಿಷೇಕದ + ಒಸಗೆಯಂ = ಈ ರೀತಿ ಮೂಲೋಕದ ತಲೆವಣಿಯ ಪಟ್ಟಾಭಿಷೇಕದ ಹಬ್ಬವನ್ನು, ನಾಭಿರಾರಾಜ + ಅಧಿರಾಜಸಭೆಗೆ + ಅಱಿಪಿ = ನಾಭಿರಾಜ ಮತ್ತವನ ಅಧೀನರಾಜರ ಸಭೆಗೆ ತಿಳಿಸಿ, ಮಹಾನದಿ + ಉಭಯತಟ ಮೃದುಮೃತ್ಸ್ನಾವಿಲಸಿತ = ಮಹಾನದಿಯ ಎರಡೂ ದಡಗಳಲ್ಲಿನ ನಯವಾದ ಮಣ್ಣಿನಿಂದ ಮಾಡಿದ, ವೇದಿಕಾವಿರಾಜಮಾನದೊಳ್ = ವೇದಿಕೆಯ ಹೊಳಪಿನಲ್ಲಿ, ಚಂಚತ್ + ಪಂಚರತ್ನಚೂರ್ಣವಿರಚಿತ = ಬೆಳಗುವ ಪಂಚರತ್ನಗಳಿಂದ ಹಾಕಿದ, ರಂಗವಲ್ಲೀವಿಳಾಸವಿರಾಜಿತ ಸುನಾಸೀರಶರಾಸನದೊಳ್ = ರಂಗೋಲಿಯ ಸೊಗಸಿನಿಂದ ಕೂಡಿದ ಕಾಮನಬಿಲ್ಲಿನೊಡನೆ, ಪರಸ್ಪರಸ್ಪರ್ಧಮಾನಪರಿಕ್ಷಿಪ್ತ = ಮೇಲಾಟ ನಡೆಸುವಂತೆ ಚೆಲ್ಲಿದ್ದ, ಮಲ್ಲಿಕಾಮುಕುಳಮುಕ್ತಾಫಳ + ಉಪಶೋಭಿತದೊಳ್ = ಮಲ್ಲಿಗೆಗಳ ಮೊಗ್ಗುಗಳೆಂಬ ಮುತ್ತುಗಳಿಂದ ಶೋಭೆಯಲ್ಲಿ, ಇಂದ್ರನೀಲಮಣಿಕುಟ್ಟಿಮಸಂಕ್ರಾಂತ = ಇಂದ್ರನೀಲದ ಮಣಿಗಳಿಂದ ಮಾಡಿದ ನೆಲಗಟ್ಟಿನ, ಮೌಕ್ತಿಕದಾಮ + ಅಭಿರಾಮದೊಳ್ = ಮುತ್ತಿನ ಹಾರಗಳ ಸೊಗಸಿನಿಂದಲೂ, ಪರಿವಿರಚಿತಚಿತ್ರಾಂಬರವಿತಾನತ್ + ಛಾಯಾತ್ + ಛುರಿತರಂಗಭೂಮಿಯೊಳ್ = ಸುತ್ತಲೂ. ಕಟ್ಟಿದ್ದ ಆಕರ್ಷಕ ಬಟ್ಟೆಗಳ ಧ್ವಜಗಳ ನೆರಳಿನೊಡನೆ ಬೆರೆತ ರಂಗಭೂಮಿಯಲ್ಲಿ, ಮಂಗಳ + ಉಪಕರಣ ಸಮುದ್ಧರಣನಿಯಮಿತ = ಮಂಗಳಸಾಮಗ್ರಿಗಳನ್ನು ತರಲು ನಿಯೋಜಿತರಾಗಿದ್ದ, ಅನೇಕಕಾಮಿನೀಕರಪಲ್ಲವವಿಧೂಯಮಾನ = ಹಲವಾರು ಸ್ತ್ರೀಯರ ಚಿಗುರು ಕೈಗಳಿಂದ ಬೀಸಲ್ಪಡುತ್ತಿದ್ದ, ಚಾರುಚಾಮರಮರುದ + ಆಂದೋಳಿತ = ಸುಂದರ ಚಾಮರಗಳ ಗಾಳಿಯಿಂದ ಅಲುಗಾಡುವ, ಪ್ರಾಕಾರಪ್ರಲಂಬಮಾನ = ಪ್ರಾಕಾರಗಳಲ್ಲಿ ತೂಗುಹಾಕಿದ, ಮಂದಾರಮಾಳಾವಿಳಸನದೊಳ್ = ಮಂದಾರಮಾಲೆಗಳ ಸೊಗಸಿನಲ್ಲಿ, ನಿಯಮಿತ + ಅನೇಕಕಾಮಿನೀನಿರುದ್ಧ ಸಂಚಾರಮಾರ್ಗದೊಳ್ = ಸೇವಾತತ್ಪರರಾದ ಅನೇಕ ವನಿತೆಯರಿಂದ ತಡೆಯಲಾದ ದಾರಿಯಲ್ಲಿ, ಪರ್ಯಂಕನಿಹಿತಬಹುಪ್ರಕಾರಭೃಂಗಾರ = ಮಂಚಗಳ ಮೇಲೆ ಇರಿಸಿದ್ದ ನಾನಾ ಬಗೆಯ ಕಳಶಗಳಿಂದಲೂ, ಮಂಗಳಜಲಸಂಭೃತ ಶಾತಕುಂಭ = ಮಂಗಳಜಲವನ್ನು ತುಂಬಿದ ಚಿನ್ನದ ಬಿಂದಿಗೆಗಳಿಂದಲೂ, ಮಣಿದರ್ಪಣಪ್ರಸಾರಿತದಿಕ್ + ಅಂಗನಾಮುಖದೊಳ್ = ಮಣಿಮಯ ಕನ್ನಡಿಗಳಲ್ಲಿ ಪ್ರತಿಬಿಂಬಿತವಾದ ಹೆಂಗಸರ ಮುಖಗಳಿಂದಲೂ, ಅಮರವಾರವನಿತಾಕರಪಲ್ಲವವಿಧೂಯಮಾನವಿಳಾಸದೊಳ್ = ದೇವವಿಲಾಸಿನಿಯರ ಚಿಗುರುಕೈಗಳಿಂದ ಬೀಸಲ್ಪಡುವ ಬೆಡಗಿನಿಂದ, ಗಂಧರ್ವಸಮಾರಬ್ಧಸಂಗೀತಮೃದಂಗನಾದಪ್ರಮೋದಿತ = ಗಂಧರ್ವರು ಆರಂಭಿಸಿದ ಸಂಗೀತ ಮತ್ತು ಮೃದಂಗಗಳ ಇನಿದನಿಯ ಸೊಗಸಿನಿಂದ, ಅಶೇಷರಾಜತ್ + ರಾಜಭವನದೊಳ್ = ಬೆಳಗುವ ಅರಮನೆಯಲ್ಲಿ, ಸಂಚರತ್ + ಸುರವಿಳಾಸಿನೀ ಲಲಿತಮೃದುಪದವಿನ್ಯಾಸ = ಓಡಾಡುವ ದೇವವಿಲಾಸಿನಿಯರ ಕೋಮಲವೂ

ನಯವೂ ಆದ ಹೆಜ್ಜೆಗಳಿಂದ, ಮಂಜುಗುಂಜತ್ + ಮಜೀರಕಮನೋಹರ = ಇಂಪಾದ ಸದ್ದಿನ ಕಾಲಂದುಗೆಗಳ ಚೆಲುವಿನೊಡನೆ, ಝುಂಕಾರಪ್ರವರ್ಧಮಾನಮದ + ಅಳಿಕುಳಕೋಳಾಹಳದೊಳ್ = ಝೇಂಕಾರ ಮಾಡುವ ಸೊಕ್ಕಿದ ದುಂಬಿವಿಂಡಿನ ಗದ್ದಲದಲ್ಲಿ, ರಾಜಭವನ + ಅಂಗಣಮಧ್ಯಸ್ಥಿತ ರಾಜ್ಯಾಭಿಷೇಕಮಂಟಪದೊಳ್ = ಅರಮನೆಯ ಅಂಗಳದ ಮಧ್ಯದಲ್ಲಿ ರಚಿತವಾಗಿದ್ದ ಪಟ್ಟಾಭಿಷೇಕ ಮಂಟಪದಲ್ಲಿ,

**ಗದ್ಯಾನುಸರಣ:** ಈ ರೀತಿ ಮೂಲೋಕದ ತಲೆವಣಿಯ ಪಟ್ಟಾಭಿಷೇಕದ ಸಂತಸವನ್ನು ದೇವೇಂದ್ರನು ನಾಭಿರಾಜ ಮತ್ತವನ ಅಧೀನರಾಜರ ಸಭೆಗೆ ತಿಳಿಸಿದ; ಮಹಾನದಿಯ ಎರಡೂ ದಡಗಳಲ್ಲಿನ ನಯವಾದ ಮಣ್ಣಿನಿಂದ ಮಾಡಿದ ಹೊಳಪಿನ ವೇದಿಕೆಯಿತು; ಬೆಳಗುವ ಪಂಚರತ್ನಗಳಿಂದ ಹಾಕಿದ ರಂಗೋಲಿಯ ಸೊಗಸಿನಿಂದ ಕೂಡಿ ಕಾಮನಬಿಲ್ಲಿನೊಡನೆ ಮೇಲಾಟ ನಡೆಸುವಂತಿತ್ತು; ಚೆಲ್ಲಿದ್ದ ಮಲ್ಲಿಗೆಗಳ ಮೊಗ್ಗುಗಳೆಂಬ ಮುತ್ತುಗಳಿಂದ ಶೋಭೆಯಲ್ಲಿಯೂ, ಇಂದ್ರನೀಲದ ಮಣಿಗಳಿಂದ ಮಾಡಿದ ನೆಲಗಟ್ಟಿನಲ್ಲಿನ ಮುತ್ತಿನ ಹಾರಗಳ ಸೊಗಸಿನಿಂದಲೂ, ಸುತ್ತಲೂ ಕಟ್ಟಿದ್ದ ಆಕರ್ಷಕ ಬಟ್ಟೆಗಳ ಧ್ವಜಗಳ ನೆರಳಿನೊಡನೆ ಬೆರೆತ ರಂಗಭೂಮಿಯಿತ್ತು; ಮಂಗಳಸಾಮಗ್ರಿಗಳನ್ನು ತರಲು ನಿಯೋಜಿತರಾಗಿದ್ದ ಹಲವಾರು ಸ್ತ್ರೀಯರ ಚಿಗುರು ಕೈಗಳಿಂದ ಬೀಸಲ್ಪಡುತ್ತಿದ್ದ ಸುಂದರ ಚಾಮರಗಳ ಗಾಳಿಯಿಂದ ಅಲುಗಾಡುವ ಪ್ರಾಕಾರಗಳಲ್ಲಿ ತೂಗುಹಾಕಿದ್ದ ಮಂದಾರಮಾಲೆಗಳು ಸೊಗಸುತ್ತಿದ್ದುವು; ಸೇವಾತತ್ಪರರಾದ ಅನೇಕ ವನಿತೆಯರು ದಾರಿಯಲ್ಲಿ ಅಡ್ಡಲಾಗಿ ನಿಂತಿದ್ದರು; ಮಂಚಗಳ ಮೇಲೆ ಇರಿಸಿದ್ದ ನಾನಾ ಬಗೆಯ ಕಳಶಗಳೂ, ಮಂಗಳಜಲವನ್ನು ತುಂಬಿದ ಚಿನ್ನದ ಬಿಂದಿಗೆಗಳೂ, ಮಣಿಮಯ ಕನ್ನಡಿಗಳಲ್ಲಿ ಪ್ರತಿಬಿಂಬಿತವಾದ ಹೆಂಗಸರ ಮುಖಗಳೂ ಬೆಳಗುತ್ತಿದ್ದುವು; ದೇವವಿಲಾಸಿನಿಯರ ಚಿಗುರುಕೈಗಳಿಂದ ಬೀಸಲ್ಪಡುವ ಬೆಡಗಿನಿಂದ, ಗಂಧರ್ವರು ಆರಂಭಿಸಿದ ಸಂಗೀತ ಮತ್ತು ಮೃದಂಗಗಳ ಇನಿದನಿಂಯ ಸೊಗಸಿನಿಂದ, ಅರಮನೆಯು ಕೂಡಿತ್ತು; ಓಡಾಡುವ ದೇವವಿಲಾಸಿನಿಯರ ಕೋಮಲವೂ ನಯವೂ ಆದ ಹೆಜ್ಜೆಗಳಿಂದ ಹೊಮ್ಮುವ ಇಂಪಾದ ಸದ್ದಿನ ಕಾಲಂದುಗೆಗಳ ಚೆಲುವಿನೊಡನೆ ಝೇಂಕಾರ ಮಾಡುವ ಸೊಕ್ಕಿದ ದುಂಬಿಗಳ ಗದ್ದಲವು ಸೇರಿತ್ತು; ಹೀಗಿದ್ದ ಅರಮನೆಯ ಅಂಗಳದ ಮಧ್ಯದಲ್ಲಿ ಪಟ್ಟಾಭಿಷೇಕ ಮಂಟಪವು ರಚಿತವಾಗಿತ್ತು.

**ಮುನ್ನಮೆ ನಿಜೆಸಿದ ಮಣಿಖಚಿ**
**ತೋನ್ನತಹರಿಪೀಠದೊಳ್ ಜಗತ್ಪತಿಯಂ ಮಾ**
**ನೋನ್ನತನಂ ಪ್ರಾಙ್ಮುಖದಿಂ**
**ದುನ್ನತಸುರಮೌಳಿಲಾಲಿತಾಂಘ್ರಿದ್ವಯನಂ** ೭೮

**ಪದವಿಭಾಗ-ಅನ್ವಯ-ಅರ್ಥ:** ಮುನ್ನಮೆ ನಿಜೆಸಿದ = ಮುಂಚೆಯೇ ಇರಿಸಿದ್ದ, ಉನ್ನತ ಮಣಿಖಚಿತ ಹರಿಪೀಠದೊಳ್ = ಎತ್ತರವಾದ ಮಣಿಮಯ ಸಿಂಹಾಸನದಲ್ಲಿ, ಉನ್ನತಸುರಮೌಳಿಲಾಲಿತ + ಆಂಘ್ರಿದ್ವಯನಂ = ಶ್ರೇಷ್ಠ ದೇವತೆಗಳ ಕಿರೀಟಗಳಿಂದ ಬೆಳಗುವ ಪಾದದ್ವಯದಿಂದ ಕೂಡಿದವನಾದ, ಮಾನ + ಉನ್ನತನಂ ಜಗತ್ + ಪತಿಯಂ = ಹಾಗೂ ಉನ್ನತ ಗೌರವನೀಯನಾದ ಜಗದೊಡೆಯನನ್ನು, ಪ್ರಾಙ್ಮುಖದಿಂದೆ = ಪೂರ್ವಾಭಿಮುಖವಾಗಿ,

**ಗದ್ಯಾನುಸರಣ:** ಮುಂಚೆಯೇ ಇರಿಸಿದ್ದ ಎತ್ತರವಾದ ಮಣಿಮಯ ಸಿಂಹಾಸನದಲ್ಲಿ ಶ್ರೇಷ್ಠ ದೇವತೆಗಳ ಕಿರೀಟಗಳಿಂದ ಬೆಳಗುವ ಪಾದದ್ವಯದಿಂದ ಕೂಡಿದವನೂ ಉನ್ನತ ಗೌರವಾರ್ಹನೂ ಆದ ಜಗದೊಡೆಯನನ್ನು ಪೂರ್ವಾಭಿಮುಖವಾಗಿ ಕೂರಿಸಿದರು.

ವ॥ ಇರಿಸಿ ಮಹಾಸರಿತ್ಸರಸೀಸಮುದ್ರನಂದೀಶ್ವರದ್ವೀಪವಾಸಿಗಳಿಂದಂ ಬಂದ ತೀರ್ಥೋದಕಗಳಿಂದಂತೀವಿದ ಕಳಧೌತಕಳಶಂಗಳನಮರತರು ಪಲ್ಲವ ಪ್ರಸೂನ ಪರಿಪೂರ್ಣ ಮುಖಂಗಳನಮರರಾಜಸಮಾಜಮುಂ ನಾಭಿರಾಜಂ ಬೆರಸೆತ್ತಿಕೊಂಡು,

**ಪದವಿಭಾಗ-ಅನ್ವಯ-ಅರ್ಥ:** ಇರಿಸಿ = ಕೂರಿಸಿ, ಮಹಾಸರಿತ್ಸರಸೀ ಸಮುದ್ರನಂದೀಶ್ವರದ್ವೀಪವಾಸಿಗಳಿಂದಂ ಬಂದ = ದೊಡ್ಡ ಸರೋವರಗಳು ಸಮುದ್ರಗಳು ಹಾಗೂ ನಂದೀಶ್ವರದ ದ್ವೀಪದಲ್ಲಿ ವಾಸಿಸುವವರಿಂದ ಬಂದ, ತೀರ್ಥ + ಉದಕಗಳಿಂದಂ ತೀವಿದ = ಪಾವನ ಜಲದಿಂದ ತುಂಬಿದ, ಅಮರತರು ಪಲ್ಲವಪ್ರಸೂನಪರಿಪೂರ್ಣಮುಖಂಗಳನ್ = ಕಲ್ಪವೃಕ್ಷಗಳ ಚಿಗುರುಗಳಿಂದ ಸಿಂಗರಗೊಂಡ, ಕಳಧೌತಕಳಶಂಗಳನ್ = ಚಿನ್ನದ ಬಿಂದಿಗೆಗಳನ್ನು, ಅಮರರಾಜ ಸಮಾಜಮುಂ = ದೇವೇಂದ್ರ ಸಂಕುಲವು, ನಾಭಿರಾಜಂ ಬೆರಸು + ಎತ್ತಿಕೊಂಡು = ನಾಭಿರಾಜನ ಜೊತೆಯಲ್ಲಿ ಎತ್ತಿಕೊಂಡು,

**ಗದ್ಯಾನುಸರಣ:** ದೊಡ್ಡ ಸರೋವರಗಳಿಂದ ಸಮುದ್ರಗಳಿಂದ ಹಾಗೂ ನಂದೀಶ್ವರದ ದ್ವೀಪದಲ್ಲಿ ವಾಸಿಸುವವರಿಂದ ಬಂದ ಪಾವನ ಜಲದಿಂದ ತುಂಬಿದ ಕಲ್ಪವೃಕ್ಷಗಳ ಚಿಗುರುಗಳಿಂದ ಸಿಂಗರಗೊಂಡ ಚಿನ್ನದ ಬಿಂದಿಗೆಗಳನ್ನು ದೇವೇಂದ್ರ ಸಂಕುಲವು ನಾಭಿರಾಜನ ಜೊತೆಯಲ್ಲಿ ಎತ್ತಿಕೊಂಡರು.

ದೆಸೆಗಳ್ ದೇವಾಂಗನಾಮಂಗಳ ಕಳಕಳದಿಂ ದಿಗಂತಂಬರಂ ಘೂ
ರ್ಣಿಸೆ ಕೈಮಿಕ್ಕಿರ್ದ ರಾಗಂಬೆರಸು ಸುರಿಯೆ ತದ್ವಾರಿಧಾರಾಸಹಸ್ರ
ಪ್ರಸರಂಬೆತ್ತತ್ತಮಿತ್ತಂ ಪುದಿದೊದವಿರೆ ಮುಂ ಪೋದ ಜನ್ಮಾಭಿಷೇಕ
ಕ್ಕೆ ಸಮಂ ಮೇಲೆಂಬಿನಂ ಕಣ್ಗೆಸೆದುದು ಜಗತೀರಾಜರಾಜ್ಯಾಭಿಷೇಕಂ॥

**ಪದವಿಭಾಗ-ಅನ್ವಯ-ಅರ್ಥ:** ದೇವ + ಅಂಗನಾ ಮಂಗಳ ಕಳಕಳದಿಂ = ದೇವವನಿತೆಯರ ಮಂಗಳಧ್ವನಿಗಳ ಕಳರವದಿಂದ, ದೆಸೆಗಳ್ ದಿಗಂತಂಬರಂ ಘೂರ್ಣಿಸೆ = ದಿಕ್ಕುಗಳು ಕ್ಷಿತಿಜದವರೆಗೂ ಭೋರ್ಗರೆಯುತ್ತಿರಲು, ಕೈಮಿಕ್ಕಿರ್ದ ರಾಗಂಬೆರಸು ಸುರಿಯೆ = ಮೀರಿದ ಪ್ರೀತಿಯಿಂದ ಸುರಿದಾಗ, ತತ್ + ವಾರಿಧಾರಾ ಸಹಸ್ರಪ್ರಸರಂ + ಪೆತ್ತು = ಆ ನೀರಿನ ಧಾರೆಗಳ ಸಮೂಹವು ಸೇರಿ, ಅತ್ತಂ + ಇತ್ತಂ ಪುದಿದು + ಒದವಿರೆ = ಆ ಕಡೆ ಈ ಕಡೆ ತುಂಬಿ ಹರಿಯಲು, ಜಗತೀರಾಜರಾಜ್ಯಾಭಿಷೇಕಂ = ಜಗತ್ತಿನ ರಾಜನ ಪಟ್ಟಾಭಿಷೇಕವು, ಮುಂ ಪೋದ ಜನ್ಮಾಭಿಷೇಕಕ್ಕೆ ಸಮಮಂ ಮೇಲೆಂಬಿನಂ ಕಣ್ಗೆ + ಎಸೆದುದು = ಆಗಿ ಹೋದ ಜನ್ಮಾಭಿಷೇಕದಷ್ಟೇ ಮಿಗಿಲೆಂಬಂತೆ ಕಣ್ಣುಗಳಿಗೆ ಶೋಭಿಸಿತು.

**ಗದ್ಯಾನುಸರಣ:** ದೇವವನಿತೆಯರ ಮಂಗಳಧ್ವನಿಗಳ ಕಳರವದಿಂದ ದಿಕ್ಕುಗಳು ಕ್ಷಿತಿಜದವರೆಗೂ ಭೋರ್ಗರೆಯುತ್ತಿದ್ದುವು; ಅವರೆಲ್ಲ ಮೀರಿದ ಪ್ರೀತಿಯಿಂದ ಸುರಿದಾಗ ನೀರಿನ ಧಾರೆಗಳು ಸೇರಿ ಎಲ್ಲೆಡೆ ತುಂಬಿ ಹರಿಯಿತು; ಹೀಗೆ ಜಗತ್ತಿನ ರಾಜನ ಪಟ್ಟಾಭಿಷೇಕವು ಆಗಿ ಹೋದ ಜನ್ಮಾಭಿಷೇಕದಷ್ಟೇ ಮಿಗಿಲೆಂಬಂತೆ ಶೋಭಿಸಿತು.

**ವ॥ ತದನಂತರಮೆ ಮಾಗಧಾದಿವ್ಯಂತರರಾಮರರ್ ಮಾಡಿದ ಧಾರಾಭಿಷೇಕದೊಳಂ ಪೌರರ್ ಮಾಡಿದ ನಳಿನೀಪತ್ರ ಪುಟಪ್ರಸಾದಿತ ಸಾರವಜಳ ಪಾದಾಭಿಷೇಚನದೊಳಂ ಅಭಿಷೇಕವಿಧಿಯುಂ ನಿರ್ವರ್ತಿಸಿ ವಿಶದಯಶಸ್ಸಿದ್ಧಾಧಿಷ್ಠಾನಪೀಠಮೆನಿಪ ಮಜ್ಜನಪೀಠಮನಧಿಷ್ಠಿಸಿದಾಗಳ್ ಕೆಲಂಬರರುಣ ಮಣಿಕುಳಪ್ರಭಾ ಜಾಳಜಟಿಳಿ ತಪಿಂಜರಂಗಳಾಗಿ ನಿಜರಾಗಪ್ರವಾಹ ಶಂಕೆಯಂ ಮಾಡುವ ಜಳಂಗಳಿಂದಂ ಕೆಲಂಬ ರಿಂದು ಕಾಂತ ಕಳಶ ಕಿರಣ ದ್ವಿಗುಣಧವಳನಿಜ ದಂತಕಾಂತಿ ಬಹಳ ಪರಿಹಾಸಚ್ಛಾಯಾ ವಿಭ್ರಮಮಂ ಪುಟ್ಟಿಸುವ ತೋಯಂಗಳಿಂದಂ ಕೆಲಂಬರಿಂದ್ರನೀಲಕಳಶರುಚಿ ನಿಚಯನಿಚಿತಂಗಳಾಗಿ ನಿಕ್ಷಿಪ್ತನೀಳನಳಿನದ್ಯುತಿಪಟಳವಿಭ್ರಾಂತಿಯಂ ಪಡೆವ ಸಲಿಲಂಗಳಿಂದಂ,**

**ಪದವಿಭಾಗ-ಅನ್ವಯ-ಅರ್ಥ:** ತತ್ ಅನಂತರಮೆ = ಆ ಬಳಿಕ, ಮಾಗಧ + ಆದಿವ್ಯಂತರರ + ಅಮರರ್ ಮಾಡಿದ ಧಾರಾ + ಅಭಿಷೇಕದೊಳಂ = ಮಾಗಧರೇ ಮುಂತಾದ ವ್ಯಂತರದೇವತೆಗಳು ಮಾಡಿದ ಅಭಿಷೇಕದಿಂದಲೂ, ಪೌರರ್ ಮಾಡಿದ ನಳಿನೀಪತ್ರಪುಟಪ್ರಸಾದಿತಸಾರವಜಳ ಪಾದ + ಅಭಿಷೇಚನದೊಳಂ = ಪುರಜನರು ತಾವರೆಯೆಲೆಯ ದೊನ್ನೆಗಳಲ್ಲಿ ತುಂಬಿಕೊಂಡು ತಂದು ಮಾಡಿದ ತಿಳಿನೀರಿನ ಪಾದಗಳ ಅಭಿಷೇಕದಿಂದಲೂ, ಅಭಿಷೇಕವಿಧಿಯುಂ ನಿರ್ವರ್ತಿಸಿ = ಅಭಿಷೇಕದ ವಿಧಿಯನ್ನು ಮಾಡಿ, ವಿಶದಯಶಸ್ಸಿದ್ಧ + ಅಧಿಷ್ಠಾನಪೀಠಂ + ಎನಿಪ = ಶುಭ್ರವಾದುದೂ ಕೀರ್ತಿಯಿಂದ ಕೂಡಿದುದೂ ಸಿದ್ಧರು ಏರಲು ಯೋಗ್ಯವೆನಿಸುವ, ಮಜ್ಜನಪೀಠಮನ್ + ಅಧಿಷ್ಠಿಸಿದಾಗಳ್ = ಸ್ನಾನಗದ್ದುಗೆಯನ್ನು (ಆದಿದೇವನು) ಏರಿದಾಗ, ಕೆಲಂಬರ್

= ಕೆಲವರು, ಅರುಣಮಣಿಕುಳಪ್ರಭಾಜಾಳಜಟಿಳಿತಪಿಂಜರಂಗಳಾಗಿ = ಕೆಂಪುಮಣಿಗಳ ಕಿರಣಸಮೂಹದಿಂದ ಕೆಂಪಾಗಿ, ನಿಜರಾಗಪ್ರವಾಹಶಂಕೆಯಂ ಮಾಡುವ ಜಳಂಗಳಿಂದಂ = ತಮ್ಮ ಪ್ರೀತಿಯ ಧಾರೆಯೋ ಎಂಬಂತೆ ತೋರವ ನೀರುಗಳಿಂದ, ಕೆಲಂಬರ್ ಕೆಲವರು, ಇಂದುಕಾಂತಕಳಶಕಿರಣದ್ವಿಗುಣಧವಳ = ಚಂದ್ರಕಾಂತದ ಬಿಂದಿಗೆಗಳ ಕಿರಣಗಳಿಗಿಂತ ಇಮ್ಮಡಿ ಬೆಳ್ಳಗಿರುವ, ನಿಜದಂತಕಾಂತಿಬಹಳ ಪರಿಹಾಸಚ್ಛಾಯಾವಿಭ್ರಮಮಂ ಪುಟ್ಟಿಸುವ = ನಗುವಿನಿಂದ ತಮ್ಮ ಹಲ್ಲುಗಳ ಕಾಂತಿಯ ಭ್ರಮೆಯನ್ನು ಉಂಟುಮಾಡುವ, ತೋಯಂಗಳಿಂದಂ = ನೀರುಗಳಿಂದಲೂ, ಕೆಲಂಬರ್ ಕೆಲವರು, ಇಂದ್ರನೀಲಕಳಶರುಚಿನಿಚಯನಿಚಿತಂ ಗಳಾಗಿ = ಇಂದ್ರ ನೀಲದ ಬಿಂದಿಗೆಗಳ ಕಿರಣಸಮೂಹದಿಂದ ಕೂಡಿ, ನಿಕ್ಷಿಪ್ತನೀಳ ನಳಿನದ್ಯುತಿಪಟಳವಿಭ್ರಾಂತಿಯಂ ಪಡೆವ = ಒಳಗಿಟ್ಟ ನೀಲೋತ್ಪಲದ ಕಾಂತಿಯ ಭ್ರಮೆಯನ್ನು ಉಂಟುಮಾಡುವ, ಸಲಿಲಂಗಳಿಂದಂ = ನೀರುಗಳಿಂದಲೂ,

**ಗದ್ಯಾನುಸರಣ:** ಆ ಬಳಿಕ, ಮಾಗಧರೇ ಮುಂತಾದ ವ್ಯಂತರದೇವತೆಗಳು ಸ್ವಾಮಿಗೆ ಅಭಿಷೇಕ ಮಾಡಿದರು; ಪುರಜನರು ತಾವರೆಯೆಲೆಯ ದೊನ್ನೆಗಳಲ್ಲಿ ತುಂಬಿಕೊಂಡು ತಂದ ತಿಳಿನೀರಿನಿಂದ ಪಾದಗಳನ್ನು ತೊಳೆದು ಅಭಿಷೇಕದ ವಿಧಿಯನ್ನು ಮಾಡಿದರು; ಆನಂತರ ಶುಭ್ರವಾದುದೂ ಕೀರ್ತಿಯಿಂದ ಕೂಡಿದುದೂ ಸಿದ್ಧರು ಏರಲು ಯೋಗ್ಯವೆನಿಸುವ ಸ್ನಾನಗದ್ದುಗೆಯನ್ನು (ಆದಿದೇವನು) ಏರಿದ; ಆಗ ಕೆಂಪುಮಣಿಗಳ ಕಿರಣಸಮೂಹದಿಂದ ಕೆಂಪಾಗಿ ತಮ್ಮ ಪ್ರೀತಿಯ ಧಾರೆಯೋ ಎಂಬಂತೆ ತೋರವ ನೀರನ್ನು ಕೆಲವರು ಸುರಿದರೆ, ಇನ್ನು ಕೆಲವರು ಚಂದ್ರಕಾಂತದ ಬಿಂದಿಗೆಗಳ ಕಿರಣಗಳಿಗಿಂತ ನಗುವಾಗ ತಮ್ಮ ಹಲ್ಲುಗಳ ಕಾಂತಿಯು ಇಮ್ಮಡಿ ಬೆಳ್ಳಗಿರುವ ಭ್ರಮೆಯನ್ನು ನೀರನ್ನು ಸುರಿದರು; ಮತ್ತೂ ಕೆಲವರು ನೀರನ್ನು ಸುರಿದಾಗ ಅದು ಇಂದ್ರನೀಲದ ಬಿಂದಿಗೆಗಳ ಕಿರಣಸಮೂಹದಿಂದ ಕೂಡಿ ಒಳಗಿಟ್ಟ ನೀಲೋತ್ಪಲದ ಕಾಂತಿಯ ಭ್ರಮೆಯನ್ನು ಉಂಟುಮಾಡುತ್ತಿತ್ತು.

> ನಿಮಿರ್ದಲ್ಲಾಡುವ ಕಾಂತಕುಂತಳಕುಳಂ ತುಂಗಸ್ತನಕ್ಷೋಭವಿ
> ಭ್ರಮಮುತ್ಕಂಪದರಿದ್ರಮಧ್ಯಮುಚಿತಸ್ವೇದೋದ್ಗಮಂ ಮಜ್ಜನ
> ಶ್ರಮದೊಳ್ ಗಾಡಿಯನೀಯೆ ಸೌಂದರಿಯರೇಕಚ್ಛತ್ರರಾಜ್ಯಾಭಿಷೇ
> ಕಮಿದೆಂಬಂತಿರೆ ಮಜ್ಜನಂಬುಗಿಸಿದರ್ ಮನ್ವನ್ವಯೋತ್ತಂಸನಂ ೭೦

**ಪದವಿಭಾಗ–ಅನ್ವಯ–ಅರ್ಥ:** ಇದು ಏಕಚ್ಛತ್ರರಾಜ್ಯಾಭಿಷೇಕಂ ಎಂಬಂತಿರೆ = ಇದು ಏಕಚ್ಛದ್ರಾಧಿಪತ್ಯದ ಅಭಿಷೇಕವೋ ಎನ್ನುವಂತೆ, ಸೌಂದರಿಯರ್ = ಚೆಲುವೆಯರು, ಮನು + ಅನ್ವಯ + ಉತ್ತಂಸನಂ ಮಜ್ಜನಂ + ಪುಗಿಸಿದರ್ = ಮನುಕುಲಲಲಾಮನಿಗೆ ಸ್ನಾನ ಮಾಡಿಸಿದರು; ನಿಮಿರ್ದು + ಅಲ್ಲಾಡುವ ಕಾಂತಕುಂತಳಕುಳಂ = ನಿಮಿರಿ ಅಲ್ಲಾಡುವ ಆಕರ್ಷಕ ಕೇಶರಾಶಿ, ತುಂಗ

ಸ್ತನಕ್ಷೋಭವಿಭ್ರಮಂ = ತೋರಮೊಲೆಗಳ ಅಲ್ಲಾಡುವಿಕೆಯ ಬೆಡಗು, ಉತ್ಕಂಪದರಿದ್ರಮಧ್ಯಂ = ಬಳುಕುವ ಬಡನಡು, ಮಜ್ಜನಶ್ರಮದೊಳ್ ಉಚಿತಸ್ವೇದ + ಉದ್ಗಮಂ = ಅಭಿಷೇಕದ ದಣಿವಿನಿಂದ ಉಕ್ಕಿದ ಬೆವರು, ಗಾಡಿಯನ್ + ಈಯೆ = ಸೊಬಗನ್ನು ಉಂಟುಮಾಡಲು,

**ಗದ್ಯಾನುಸರಣ:** ಇದು ಏಕಚ್ಛದ್ರಾಧಿಪತ್ಯದ ಅಭಿಷೇಕವೋ ಎನ್ನುವಂತೆ ಚೆಲುವೆಯರು ಆ ಮನುಕುಲಲಲಾಮನಿಗೆ ಸ್ನಾನ ಮಾಡಿಸಿದರು; ಆಗ ನಿಮಿರಿ ಅಲ್ಲಾಡುವ ಅವರ ಆಕರ್ಷಕ ಕೇಶರಾಶಿ, ತೋರಮೊಲೆಗಳ ಅಲ್ಲಾಡುವಿಕೆಯ ಬೆಡಗು, ಬಳುಕುವ ಬಡನಡು, ಅಭಿಷೇಕ ಮಾಡಿಸುವಾಗ ದಣಿವಿನಿಂದ ಉಕ್ಕಿದ ಬೆವರು ಸೊಬಗನ್ನು ಉಂಟುಮಾಡಿತು.

**ವ। ಆಗಳ್ ಮಜ್ಜನಾವಸರಮಂಗಳಪಾಠಕಮಧುರನಿನದಮನಾಲಿಸುತ್ತುಂ,**

**ಅರ್ಥ:** ಆಗಳ್ ಮಜ್ಜನ + ಅವಸರಮಂಗಳಪಾಠಕ ಮಧುರನಿನದಮನ್ + ಆಲಿಸುತ್ತುಂ = ಆಗ ಸ್ನಾನಸಮಯದಲ್ಲಿ ಮಂಗಳಪಾಠಕರು ಮಾಡುವ ಮಧುರಧ್ವನಿಯನ್ನು ಕೇಳುತ್ತ,

**ಅಂಭೋಭಾರವಿಜೃಂಭಿತ**
**ಕುಂಭಾಂಭೋದಂಗಳಂದದಿಂ ಸುರಿಯೆ ಚತುಃ**
**ಕುಂಭಂಗಳ್ ಭೂಭುವನ**
**ಸ್ತಂಭಂ ಮಜ್ಜನಮನೆಯ್ದೆ ನಿರ್ವರ್ತಿಸಿದಂ** ೭೧

**ಪದವಿಭಾಗ–ಅನ್ವಯ–ಅರ್ಥ:** ಅಂಭೋಭಾರವಿಜೃಂಭಿತಕುಂಭ = ನೀರಿನ ಭಾರದಿಂದ ಕೂಡಿದ (ಕೊಡಗಳು), ಚತುಃಕುಂಭಂಗಳ್ = ನಾಲ್ಕು ಕೊಡಗಳು, ಅಂಭೋದಂಗಳ + ಅಂದದಿಂ ಸುರಿಯೆ = ಮೋಡಗಳಂತೆ (ನೀರನ್ನು) ಸುರಿಯಲು, ಭೂಭುವನಸ್ತಂಭಂ ಮಜ್ಜನಮನ್ + ಎಯ್ದೆ ನಿರ್ವರ್ತಿಸಿದಂ = ಭೂಮಿಯೆಂಬ ಮನೆಯ ಕಂಬಂದಂತಿದ್ದ (ಆದಿದೇವನು) ಸ್ನಾನವನ್ನು ಮುಗಿಸಿದ.

**ಗದ್ಯಾನುಸರಣ:** ನೀರಿನ ಭಾರದಿಂದ ಕೂಡಿದ ನಾಲ್ಕು ಕೊಡಗಳು ಮೋಡಗಳಂತೆ ನೀರನ್ನು ಸುರಿಯಲು, ಭೂಮಿಗಾಧಾರನಾದ ಆದಿದೇವನು ಸ್ನಾನವನ್ನು ಮುಗಿಸಿದ.

**ವ। ಅಂತು ನಿಷ್ಪನ್ನಮಜ್ಜನನುಂ ವಿನಿಹಿತನೀರಾಜನನುಮಾಗಿ ಸುರರಾಜನ ಸಮರ್ಪಿತಸಂತಾನ ಕುಸುಮದಾಮಾಂಬರಭೂಷಣಪ್ರಸಾಧಿತಂ ಪುರುದೇವಂ ಮೃಗೇಂದ್ರ ವಿಷ್ಟರದೊಳಿರೆ ನಾಭಿರಾಜಂ ಬೆರಸು ಬಂದು,**

**ಪದವಿಭಾಗ-ಅನ್ವಯ-ಅರ್ಥ**: ಅಂತು = ಹೀಗೆ, ನಿಷ್ಪನ್ನಮಜ್ಜನನುಂ = ಸ್ನಾನ ಮುಗಿಸಿದವನೂ, ವಿನಿಹಿತನೀರಾಜನನುಂ + ಆಗಿ = ಆರತಿಯನ್ನು ಬೆಳಗಿಸಿಕೊಂಡವನೂ ಆಗಿ, ಸುರರಾಜನ ಸಮರ್ಪಿತ = ದೇವೇಂದ್ರನಿಂದ ಅರ್ಪಿಸಲ್ಪಟ್ಟ, ಸಂತಾನಕುಸುಮದಾಮ + ಅಂಬರ ಭೂಷಣ ಪ್ರಸಾಧಿತಂ = ಸಂತಾನಕುಸುಮಗಳು ಬಟ್ಟೆಗಳು ಮತ್ತು ಆಭರಣಗಳಿಂದ ಸಿಂಗರಿಸಲ್ಪಟ್ಟ, ಪುರುದೇವಂ ಮೃಗೇಂದ್ರವಿಷ್ಟರದೊಳ್ + ಇರೆ = ಪುರುದೇವನು ಸಿಂಹಾಸನದಲ್ಲಿರಲು, ನಾಭಿರಾಜಂ ಬೆರಸು ಬಂದು = (ಇಂದ್ರನು) ನಾಭಿರಾಜನೊಡನೆ ಬಂದು,

**ಗದ್ಯಾನುಸರಣ**: ಹೀಗೆ, ಸ್ನಾನ ಮುಗಿಸಿ, ಎತ್ತಿದ ಆರತಿಯನ್ನು ಬೆಳಗಿಸಿಕೊಂಡು, ದೇವೇಂದ್ರನು ಅರ್ಪಿಸಿದ ಸಂತಾನಕುಸುಮಗಳು ಬಟ್ಟೆಗಳು ಮತ್ತು ಆಭರಣಗಳಿಂದ ಸಿಂಗರಗೊಂಡು ಪುರುದೇವನು ಸಿಂಹಾಸನದಲ್ಲಿ ಕುಳಿತ; ಆಗ ಇಂದ್ರನು ನಾಭಿರಾಜನೊಡನೆ ಬಂದ.

**ಸಕಲಮಕುಟಬದ್ಧಾಧೀಶನೈ ದೇವ ನೀನುಂ**
**ಮಕುಟಧರನುಮಾಗಲ್ಕೆವೇಟ್ಕುಮೆಂದಾಗಳಿಂದ್ರಂ**
**ಮಕುಟದೊಡನಲಂಪಿಂ ಪಟ್ಟಮಂ ಕಟ್ಟಿ ಲೋಕ**
**ಪ್ರಕಟಮನೆ ಪೊದಳ್ದತ್ತಾದಿದೇವಪ್ರಭಾವಂ** ೭೨

**ಪದವಿಭಾಗ-ಅನ್ವಯ-ಅರ್ಥ**: ದೇವ ನೀನುಂ ಸಕಲಮಕುಟಬದ್ಧ= ಅಧೀಶನೈ = ದೇವ ನೀನು ಕಿರೀಟವನ್ನು ಧರಿಸಿದವರ ಒಡೆಯ, ಮಕುಟಧರನುಂ + ಆಗಲ್ಕೆವೇಟ್ಕುಂ = (ಹೀಗಾಗಿ ನೀನೂ) ಕಿರೀಟಧಾರಿಯಾಗಬೇಕು, ಎಂದು ಆಗಳ್ + ಇಂದ್ರಂ ಮಕುಟದೊಡನೆ + ಅಲಂಪಿಂ ಪಟ್ಟಮಂ ಕಟ್ಟಿ = ಎಂದು ಇಂದ್ರನು ಆಗ ಕಿರೀಟದ ಸಮೇತ ಪ್ರೀತಿಯಿಂದ ಪಟ್ಟಕಟ್ಟಿ(ದಾಗ), ಆದಿದೇವಪ್ರಭಾವಂ ಲೋಕಪ್ರಕಟಮನೆ ಪೊದಳ್ದತ್ತು = ಆದಿದೇವನ ಪ್ರಭಾವವು ಜಗತ್ತಿಗೆಲ್ಲ ತಿಳಿಯುವಂತೆ ಹಬ್ಬಿತು.

**ಗದ್ಯಾನುಸರಣ**: 'ದೇವ, ನೀನೀಗ ಕಿರೀಟವನ್ನು ಧರಿಸಿದವರ ಒಡೆಯ, ಹೀಗಾಗಿ ನೀನೂ ಕಿರೀಟಧಾರಿಯಾಗಬೇಕು' ಎಂದು ಇಂದ್ರನು ಆಗ ಕಿರೀಟದ ಸಮೇತ ಪ್ರೀತಿಯಿಂದ ಪಟ್ಟಕಟ್ಟಿದ; ಆಗ ಆದಿದೇವನ ಪ್ರಭಾವವು ಜಗತ್ತಿಗೆಲ್ಲ ತಿಳಿಯುವಂತೆ ಹಬ್ಬಿತು.

**ವ। ಅಂತನೇಕಮಕುಟಬದ್ಧಮಣಿಮಕುಟಮಣಿಕರ್ಷಣಮಸೃಣಿತ ಚರಣಂ ಆಪ್ತಾಧಿರಾಜ್ಯಂ ನಾಭಿರಾಜಸನ್ನಿಧಾನದೊಳಖಿಲ ಪ್ರಜಾಪಾಲನ ದೊಳತಿಪ್ರಯತ್ನಪರನಾಗಿ ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ ಭರತನಿಂದ ಮಪ್ಪ ವಿಪ್ರವರ್ಣಕ್ಕಂ ಯಥೋಚಿತವೃತ್ತಿಗಳನಜಿಪಲೆಂದು,**

**ಪದವಿಭಾಗ-ಅನ್ವಯ-ಅರ್ಥ:** ಅಂತು + ಅನೇಕಮಕುಟಬದ್ಧ = ಹೀಗೆ ಅನೇಕ ಕಿರೀಟಧಾರಿಗಳ, ಮಣಿಮಕುಟಮಣಿಕರ್ಷಣಮಸೃಣಿತಚರಣಂ = ಮಣಿಮಯ ಕಿರೀಟಗಳ ರತ್ನಗಳ ತೀಡುವಿಕೆಯಿಂದ ಹೊಳಪುಗೊಂಡ ಪಾದಗಳವನು, ಆಪ್ತ + ಅಧಿರಾಜ್ಯಂ = ಅಧಿರಾಜನಾಗಿ, ನಾಭಿರಾಜಸನ್ನಿಧಾನದೊಳ್ = ನಾಭಿರಾಜನ ಇರುವಿಕೆಯುಲ್ಲಿ, ಅಖಿಲಪ್ರಜಾಪಾಲನದೊಳ್ + ಅತಿಪ್ರಯತ್ನಪರನಾಗಿ = ಎಲ್ಲ ಪ್ರಜೆಗಳ ರಕ್ಷಣೆಮಾಡುವುದರಲ್ಲಿ ತುಂಬ ಯತ್ನಶೀಲನಾಗಿ, ತನ್ನ ಮುನ್ನ ಪಡೆದ ವರ್ಣತ್ರಯಕ್ಕಂ = ತಾನು ಈ ಮುಂಚೆ ವಿಭಾಗೀಕರಿಸಿದ್ದ ಮೂರು ವರ್ಣಗಳವರಿಗೂ, ಭರತನಿಂದಂ + ಅಪ್ಪ ವಿಪ್ರವರ್ಣಕ್ಕಂ = ಭರತನಿಂದ ಆಗಲಿರುವ ಬ್ರಾಹ್ಮಣವರ್ಣಕ್ಕೂ, ಯಥಾ + ಉಚಿತವೃತ್ತಿಗಳನ್ + ಅಱಿಪಲ್ + ಎಂದು = ಯಾವುದು ತಕ್ಕುದೋ ಅಂತಹ ವೃತ್ತಿಗಳನ್ನು ವಿವರಿಸುವ ಉದ್ದೇಶದಿಂದ,

**ಗದ್ಯಾನುಸರಣ:** ಹೀಗೆ ಅನೇಕ ಕಿರೀಟಧಾರಿಗಳ ಮಣಿಮಯ ಕಿರೀಟಗಳ ರತ್ನಗಳ ತೀಡುವಿಕೆಯಿಂದ ಪಾದಗಳು ಹೊಳಪಾಗುತ್ತಿತ್ತು; ಅಧಿರಾಜನಾಗಿ ನಾಭಿರಾಜನ ಸನ್ನಿಧಿಯಲ್ಲಿ ಎಲ್ಲ ಪ್ರಜೆಗಳ ರಕ್ಷಣೆಮಾಡುವುದರಲ್ಲಿ ಯತ್ನಶೀಲನಾದ; ತಾನು ಈ ಮುಂಚೆ ವಿಭಾಗೀಕರಿಸಿದ್ದ ಮೂರು ವರ್ಣಗಳವರಿಗೂ ಭರತನಿಂದ ಆಗಲಿರುವ ಬ್ರಾಹ್ಮಣವರ್ಣಕ್ಕೂ ಯಾವುದು ತಕ್ಕುದೋ ಅಂತಹ ವೃತ್ತಿಗಳನ್ನು ವಿವರಿಸುವ ಉದ್ದೇಶದಿಂದ,

**ವದನಂ ತೋಳ್ ತೊಡೆ ಪಾದಮೆಂಬಿವನಿವರ್ ಶುಶ್ರೂಷೆಗೆಯ್ಯಲ್ಕೆ ಲಾ**
**ಭದಲಂಪಿಂ ನಡೆಯಲ್ಕೆ ಕೈದುವಿಡಿಯಲ್ಕೋದಲ್ಕಜಂ ಬೇಱೆ ತೋ**
**ಱಿದೊಡಾ ವರ್ಣಚತುಷ್ಕಮಂ ಕುಮತಿಗಳ್ ತತ್ಸ್ಥಾನದೊಳ್ ಮುನ್ನಪು**
**ಟ್ಟಿದುವೆಂಬರ್ ಪುಸಿ ನನ್ನಿಯೆಂದಱಿಯದೇಂ ಲೋಕಂ ಮರುಳ್ಗೊಂ ಡುದೋ ೭೩**

**ಪದವಿಭಾಗ-ಅನ್ವಯ-ಅರ್ಥ:** ವದನಂ ತೋಳ್ ತೊಡೆ ಪಾದಂ + ಎಂಬ + ಇವನ್ = ಮುಖ ತೋಳು ತೊಡೆ ಪಾದ ಎಂಬುವುಗಳನ್ನು, ಇವರ್ = ಇವುಗಳು, ಓದಲ್ಕೆ ಕೈದುವಿಡಿಯಲ್ಕೆ ಲಾಭದ + ಅಲಂಪಿಂ ನಡೆಯಲ್ಕೆ ಶುಶ್ರೂಷೆಗೆಯ್ಯಲ್ಕೆ = ಓದಲೂ ಆಯುಧ ಹಿಡಿಯಲೂ ಲಾಭಕ್ಕಾಗಿ (ವ್ಯಾಪಾರ) ಮಾಡುವುದಕ್ಕೂ ಸೇವೆ ಮಾಡಲೂ (ಇವೆ) ಎಂದು = ಅಜಂ ಬೇಱೆ ತೋಱಿದೊಡೆ = ಬ್ರಹ್ಮನು ವಿಂಗಡಿಸಿ ತೋರಿಸಿದರೆ, ಕುಮತಿಗಳ್ ಆ ವರ್ಣಚತುಷ್ಕಮಂ ತತ್ + ಸ್ಥಾನದೊಳ್ ಮುನ್ನ ಪುಟ್ಟಿದುವು + ಎಂಬರ್ = ಕೆಟ್ಟ ಬುದ್ಧಿಯವರು ಆ ನಾಲ್ಕು ವರ್ಣಗಳನ್ನು ಆಯಾ ಜಾಗಗಳಲ್ಲಿ ಮೊದಲು ಹುಟ್ಟಿದುವು ಎನ್ನುತ್ತಾರೆ, ಪುಸಿ ನನ್ನಿ + ಎಂದು + ಅಱಿಯದೆ ಲೋಕಂ ಏಂ ಮರುಳ್ಗೊಂಡುದೋ = ನಿಜವೋ ಸುಳ್ಳೋ ಎಂದು ತಿಳಿಯದೆ ಲೋಕವು ಅದೇನು ಮರುಳಾಗಿದೆಯೋ!

**ಗದ್ಯಾನುಸರಣ:** ಮುಖ ತೋಳು ತೊಡೆ ಪಾದ ಎಂಬ ಅಂಗಗಳು ಓದಲೂ ಆಯುಧ ಹಿಡಿಯಲೂ ಲಾಭಕ್ಕಾಗಿ (ವ್ಯಾಪಾರ) ಮಾಡುವುದಕ್ಕೂ ಸೇವೆ ಮಾಡಲೂ (ಇವೆ) ಎಂದು ಬ್ರಹ್ಮನು ವಿಂಗಡಿಸಿ ತೋರಿಸಿದರೆ, ಕೆಟ್ಟ ಬುದ್ಧಿಯವರು ಆ ನಾಲ್ಕು ವರ್ಣಗಳನ್ನು ಆಯಾ ಜಾಗಗಳಲ್ಲಿ ಮೊದಲು ಹುಟ್ಟಿದುವು ಎನ್ನುತ್ತಾರೆ, ನಿಜವೋ ಸುಳ್ಳೋ ಎಂದು ತಿಳಿಯದೆ ಲೋಕವು ಅದೇನು ಮರುಳಾಗಿದೆಯೋ!

**ವಿಶೇಷ ವಿಚಾರ:** ಈ ಪದ್ಯವು ಋಗ್ವೇದದ ಭಾಗ ಎನ್ನಲಾದ ಪುರುಷಸೂಕ್ತದಲ್ಲಿನ 'ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹೂ ರಾಜನ್ಯ ಕೃತಃ। ಊರೂ ತದಸ್ಯ ಯದ್ವೈಶ್ಯಃ ಪದ್ಭಾಗಂ ಶೂದ್ರೋ ಅಜಾಯತಃ॥' (ಅವನ ಮುಖ ಬ್ರಾಹ್ಮಣವಾಗಿದ್ದಿತು, ಬಾಹುಗಳು ಕ್ಷತ್ರಿಯವೆಂದಾಯ್ತು, ತೊಡೆಗಳಿಂದ ವೈಶ್ಯ ಹಾಗೂ ಪಾದಗಳಿಂದ ಶೂದ್ರವು ಹುಟ್ಟಿಕೊಂಡಿತು) – ಎಂಬ ಶ್ಲೋಕದಲ್ಲಿ ನಾಲ್ಕು ವರ್ಣಗಳು ಬ್ರಹ್ಮನ ವಿವಿಧ ಅಂಗಗಳಲ್ಲಿ ಹುಟ್ಟಿದುವೆಂದು ಹೇಳಲಾದ (ಕೆಲವರು ಪುರುಷಸೂಕ್ತವನ್ನು ಪ್ರಕ್ಷೇಪ ಎಂದೂ ಹೇಳುತ್ತಾರೆ; ಆರ್. ಎಸ್. ಶರ್ಮ ಅವರು ಇದು ಅಥರ್ವವೇದದ ಕೊನೆಯ ಭಾಗವೆಂದೂ, ಋಗ್ವೇದದ ಕಾಲಕ್ಕೇ ವೃತ್ತಿಭೇದಗಳುಂಟಾಗಿದ್ದರೂ ಅವುಗಳಲ್ಲಿ ಕೀಳು–ಮೇಲು ಮನೋಭವ ವುಂಟಾಗಿರಲಿಲ್ಲ. ಆದರೆ ಅಥರ್ವವೇದ ಕಾಲದ ಕೊನೆಯ ವೇಳೆಗೆ ವೃತ್ತಿಭೇದವು ಅವುಗಳನ್ನನುಸರಿಸುವವರ ಸಾಮಾಜಿಕ ಸ್ಥಾನಮಾನಗಳಲ್ಲಿಯೂ ವ್ಯತ್ಯಾಸವುಂ ಟಾಗಲು ಕಾರಣವಾಯಿತು ಎನ್ನುತ್ತಾರೆ, ನೋಡಿ, R. S. Sharma: 'Sudras in Ancient India' ೧೯೫೮, ಪು. ೨೮) – ಅಭಿಪ್ರಾಯಕ್ಕೆ ಪಂಪನ ಅಥವಾ ಜೈನಮತದ ಪ್ರತಿಕ್ರಿಯೆಯಾಗಿದೆ. ಎಂದರೆ ಜಿಸೇನನ ಕಾಲದಲ್ಲಿಯೇ ವೈದಿಕರಲ್ಲಿ ಈ ಶ್ಲೋಕದ ಅಭಿಪ್ರಾಯವು ಪ್ರಚಲಿತವಾಗಿತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

**ವ। ಅಂತು ಭವಿಷ್ಯದ್ ದ್ವಿಜನ್ಮವರ್ಣಕಧ್ಯಯನಾಧ್ಯಾಪನದಾನಪ್ರತಿ ಗ್ರಹಯಜನಯಾಜನವಿಶಿಷ್ಟವೃತ್ತಿಯುಮಂ ಕ್ಷತ್ರಿಯಜಾತಿಗೆ ಸತ್ಯತ್ಯಾಗ ಪ್ರಜಾಪಾಲನಶರಣಾಗತ ರಕ್ಷಣಪ್ರಹರಣಕ್ಷಮಾದಿಗುಣಾಚರಣಮುಮಂ ವಣಿಗ್ವಂಶಕ್ಕೆ ಜಳಸ್ಥಳಯಾತ್ರಾಸಂವೃತಮರ್ಥ ಪ್ರವರ್ತನಮುಮಂ ಶೂದ್ರಾನ್ವಯಕ್ಕೆ ಬ್ರಾಹ್ಮಣಾದಿವರ್ಣತ್ರಯಕ್ಕಂ ಶುಶ್ರೂಷಾದ್ಯನ್ಯಕರ್ಮ ಕರಣೋಪಜೀವನಮುಮಂ ನಿಜೆಸಿ,**

**ಪದವಿಭಾಗ–ಅನ್ವಯ–ಅರ್ಥ:** ಅಂತು ಭವಿಷ್ಯದ್ ದ್ವಿಜನ್ಮವರ್ಣಕೆ = ಹೀಗೆ ಮುಂದೆ ಉಂಟಾಗಲಿರುವ ಬ್ರಾಹ್ಮಣವರ್ಣಕ್ಕೆ, ಅಧ್ಯಯನ + ಅಧ್ಯಾಪನ ದಾನಪ್ರತಿಗ್ರಹ ಯಜನ ಯಾಜನ ವಿಶಿಷ್ಟವೃತ್ತಿಯುಮಂ = ಓದುವುದು ಕಲಿಸುವುದು ದಾನ ಕೊಡುವುದು ದಾನ ತೆಗೆದುಕೊಳ್ಳುವುದು ಯಜ್ಞ ಮಾಡುವುದು ಮತ್ತು ಯಜ್ಞ ಮಾಡಿಸುವುದು ಎಂಬ ವಿಶಿಷ್ಟವಾದ ಕಾರ್ಯಗಳನ್ನೂ, ಕ್ಷತ್ರಿಯಜಾತಿಗೆ

ಸತ್ಯ ತ್ಯಾಗ ಪ್ರಜಾಪಾಲನ ಶರಣಾಗತರಕ್ಷಣ ಪ್ರಹರಣ ಕ್ಷಮಾ + ಆದಿಗುಣ + ಆಚರಣಮುಮಂ = ಕ್ಷತ್ರಿಯರಿಗೆ ಸತ್ಯವಂತಿಕೆ ತ್ಯಾಗಬುದ್ಧಿ ಪ್ರಜಾಪಾಲನೆ ಶರಣಾದವರ ರಕ್ಷಣೆ ಯುದ್ಧಗೈಯುವುದು ಕ್ಷಮಾದಾನ ಮುಂತಾದ ಕರ್ತವ್ಯಗಳನ್ನೂ, ವಣಿಕ್ + ವಂಶಕ್ಕೆ ಜಳಸ್ಥಳಯಾತ್ರಾ ಸಂವೃತಂ + ಅರ್ಥಪ್ರವರ್ತನಮುಮಂ = ವಣಿಕರಿಗೆ ನೆಲ ಜಲಗಳ ಪ್ರಯಾಣದಲ್ಲಿ ಹಣ ಗಳಿಸುವುದೂ, ಶೂದ್ರ + ಅನ್ವಯಕ್ಕೆ ಬ್ರಾಹ್ಮಣ + ಆದಿವರ್ಣತ್ರಯುಕ್ಕಂ ಶುಶ್ರೂಷಾ + ಆದಿ + ಅನ್ಯಕರ್ಮಕರಣ + ಉಪಜೀವನಮುಮಂ ನಿಜೆಸಿ = ಶೂದ್ರವಂಶದವರಿಗೆ ಬ್ರಾಹ್ಮಣ ಮುಂತಾದ ಮೂರೂ ವರ್ಣಗಳವರಿಗೆ ಸೇವೆಯೇ ಮುಂತಾದ ಇತರ ಕಾರ್ಯಗಳನ್ನು ಮಾಡುವ ಮೂಲಕ ಜೀವನೋಪಾಯವನ್ನು ಏರ್ಪಡಿಸಿ,

**ಗದ್ಯಾನುಸರಣ:** ಹೀಗೆ ಮುಂದೆ ಉಂಟಾಗಲಿರುವ ಬ್ರಾಹ್ಮಣವರ್ಣಕ್ಕೆ ಓದುವುದು ಕಲಿಸುವುದು ದಾನ ಕೊಡುವುದು ದಾನ ತೆಗೆದುಕೊಳ್ಳುವುದು ಯಜ್ಞ ಮಾಡುವುದು ಮತ್ತು ಯಜ್ಞ ಮಾಡಿಸುವುದು ಎಂಬ ವಿಶಿಷ್ಟವಾದ ಕಾರ್ಯಗಳನ್ನೂ; ಕ್ಷತ್ರಿಯರಿಗೆ ಸತ್ಯವಂತಿಕೆ, ತ್ಯಾಗಬುದ್ಧಿ, ಪ್ರಜಾಪಾಲನೆ, ಶರಣಾದವರ ರಕ್ಷಣೆ, ಯುದ್ಧಗೈಯುವುದು, ಕ್ಷಮಾದಾನ ಮುಂತಾದ ಕರ್ತವ್ಯಗಳನ್ನೂ; ವಣಿಕರಿಗೆ ನೆಲ ಜಲಗಳ ಪ್ರಯಾಣದಲ್ಲಿ ಹಣ ಗಳಿಸುವುದೂ; ಶೂದ್ರವಂಶದವರಿಗೆ ಬ್ರಾಹ್ಮಣ ಮುಂತಾದ ಮೂರೂ ವರ್ಣಗಳವರಿಗೆ ಸೇವೆಯೇ ಮುಂತಾದ ಇತರ ಕಾರ್ಯಗಳನ್ನು ಮಾಡುವ ಮೂಲಕ ಜೀವನೋಪಾಯವನ್ನು ಏರ್ಪಡಿಸಿದ.

**ವಿಶೇಷ ವಿಚಾರ:** ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ ಯಜನ ಯಾಜನ – ಇವುಗಳು ವೈದಿಕ ವಲಯದಲ್ಲಿ ಬ್ರಾಹ್ಮಣರ 'ಷಟ್ಕರ್ಮ'ಗಳೆಂದು ಪ್ರಸಿದ್ಧವಾಗಿದೆ; ಇವು ಕ್ರಮವಾಗಿ ವೇದಗಳ ಅಧ್ಯಯನ, ಅವುಗಳನ್ನು ಬೋಧಿಸುವುದು, ದಾನವನ್ನು ನೀಡುವುದು, ಕೊಟ್ಟ ದಾನವನ್ನು ತೆಗೆದುಕೊಳ್ಳುವು, ತಾವೇ ಯಜ್ಞಗಳನ್ನು ಮಾಡುವುದು, ಇತರ ದ್ವಿಜವರ್ಣಗಳವರು ಮಾಡಬಯಸಿದಾಗ ಅವರಿಂದ ಯಜ್ಞಗಳನ್ನು ಮಾಡಿಸುವುದು ಇವುಗಳನ್ನು ಸೂಚಿಸುತ್ತವೆ. ಈ ಆರರಲ್ಲಿ ಕ್ಷತ್ರಿಯ ಮತ್ತು ವೈಶ್ಯರೆಂಬ ದ್ವಿಜರಿಗೆ ಮೊದಲನೆಯ, ಮೂರನೆಯ ಮತ್ತು ಐದನೆಯದು ಮಾತ್ರ ಅನ್ವಯವಾಗುತ್ತವೆ. ಆಶ್ಚರ್ಯಕರವೆಂದರೆ, ಇಲ್ಲಿ ಜೈನ ಬ್ರಾಹ್ಮಣರಿಗೂ ಆದಿಬ್ರಹ್ಮನು ಯಜ್ಞಗಳನ್ನು ಮಾಡುವುದನ್ನು ನಿಗದಿಪಡಿಸುತ್ತಿದ್ದಾನೆ! ಇಪ್ಪತ್ತನಾಲ್ಕನೆಯ ತೀರ್ಥಂಕರನೆಂದು ಪ್ರಖ್ಯಾತನಾದ ವರ್ಧಮಾನನ ಕಾಲದಲ್ಲಿ ಜೈನವು ವೈದಿಕದ ಎಲ್ಲ ಪರಿಕಲ್ಪನೆಗಳನ್ನೂ ತಿರಸ್ಕರಿಸಿತು; ಆದರೆ ಮೊದಲನೆಯ ತೀರ್ಥಂಕರನಾದ ಆದಿದೇವನು ಇವುಗಳನ್ನು ನಿಗದಿಪಡಿಸುತ್ತಿದ್ದಾನೆ! ಯಜ್ಞವೆಂದರೆ ಪ್ರಾಣಿಬಲಿ ಸಹಿತವಾದುದು; ಅಹಿಂಸೆಯನ್ನು ತಿರಸ್ಕರಿಸಿದ ಜೈನಮತದ ಆದಿಬ್ರಹ್ಮನೇ ಅವುಗಳ ಆಚರಣೆಯನ್ನು ಪ್ರತಿಪಾದಿಸುವುದು, ಪ್ರಾಯಶಃ ಜಿನಸೇನರ ಕಾಲದ ಹೊತ್ತಿಗಾಗಲೇ

ಜೈನವು ಎಲ್ಲ ಬಗೆಗಳಲ್ಲೂ ವೈದಿಕದ ದಟ್ಟ ನೆರಳಿಗೆ ಬಂದು ಬಹುತೇಕ ಆಚರಣೆಗಳನ್ನು ಅಳವಡಿಸಿಕೊಂಡಿದ್ದಿರಬೇಕು. ಇಲ್ಲಿ ಕವಿ ಗೊಂದಲಗೊಂಡಿದ್ದಾನೆ; ಆದರೆ ಪಂಪನೇ ಈ ಕಾವ್ಯದಲ್ಲಿ ಮುಂದೆ ಭರತನು ತಾನೇ ಸೃಷ್ಟಿಸಿದ ಬ್ರಾಹ್ಮಣವರ್ಣಕ್ಕೆ ನಿಯೋಜಿಸಿದ ಷಟ್ಕರ್ಮಗಳು ಬೇರೆಯೇ ಆಗಿವೆ: ಅವುಗಳೆಂದರೆ, 'ಎಂಟುಂ ತೆಱದ ಪೂಜೆ .. .. ಶುದ್ಧವೃತ್ತಿಯಿಂದರ್ಥೋಪಾರ್ಜನಂಗೈವ ವಾರ್ತೆ .. .. ಚತುರ್ವಿಧಮಪ್ಪ ದತ್ತಿ .. .. ಪರಮಸ್ವಾಧ್ಯಾಯ .. .. ಪಂಚಾಣು ವ್ರತಾದಿಪ್ರವರ್ತನಸ್ವಭಾವ ಸಂಯಮ .. .. ಅನಶನವೃತ್ತ್ಯಾದಿ ತಪೋನುಷ್ಠಾನ .. .. ಆರ್ಯಷಟ್ಕರ್ಮಂಗಳಂ' –'ಆದಿಪುರಾಣ', ೧೫.೧೩ ವ. ಕೆಲವು ವಿದ್ವಾಂಸರು ಯಜನ ಯಾಜನ ಮುಂತಾದವುಗಳಿಗೂ ಜೈನಪರವಾದ ಅರ್ಥವನ್ನು ನೀಡುತ್ತಾರೆ.

ವರ್ಣವ್ಯವಸ್ಥೆಯ ವಿಷಯದಲ್ಲಿ ಪಂಪ ಪುರಾಣಮಂಡಿತ ಯಥಾಸ್ಥಿತಿ ವಾದವನ್ನೇ ಮುಂದುವರಿಸುತ್ತಿರುವಂತೆ ತೋರುತ್ತದೆ; ಶೂದ್ರರು ಬ್ರಾಹ್ಮಣಾದಿ ಮೂರು ವರ್ಣಗಳ ಸೇವೆಯನ್ನು ಮಾಡಿಕೊಂಡಿರಬೇಕೆಂಬ ನಿಲುವು (ಪದ್ಯ ೭೩ರ ಗದ್ಯ) ಅಚ್ಚರಿಯನ್ನುಂಟುಮಾಡುತ್ತದೆ. ಅವನೇ ಹೇಳಿದ '**ವಿಕ್ರಮಾರ್ಜುನ ವಿಜಯ**'ದ 'ಕುಲಂ ಕುಲಮಲ್ತು' ಎಂಬ ಮಾತಿಗೆ ಇದು ತದ್ವಿರುದ್ಧವಾಗಿದೆ. ಪಂಪ ತನ್ನ ಎರಡೂ ಕಾವ್ಯಗಳಲ್ಲಿ ಈ ದ್ವಂದ್ವವನ್ನು ಎದುರಿಸುತ್ತಿದ್ದಾನೆಂದೇ ಹೇಳಬೇಕು.

**ಈ ಮಾಟಕ್ಕೆಯೊಳೆಸಗದರಂ**
**ಹಾ ಮಾ ಧಿಕ್ಕಾರದಂಡದಿಂ ದಂಡಿಪುದೆಂ**
**ದಾ ಮನುಕುಳತಿಳಕಂ ಪೇ**
**ಟ್ದೀ ಮಹಿಗಾತ್ಮೀಯಮಹಿಮೆಯುಂ ಪ್ರಕಟಿಸಿದಂ** ೭೪

**ಪದವಿಭಾಗ–ಅನ್ವಯ–ಅರ್ಥ**: ಈ ಮಾಟ್ಕೆಯೊಳ್ + ಎಸಗದರಂ = ಈ ಪ್ರಕಾರ ನಡೆದುಕೊಳ್ಳದಿರುವವರನ್ನು, ಹಾ ಮಾ ಧಿಕ್ಕಾರದಂಡದಿಂ ದಂಡಿಪುದು = 'ಹಾ ಮಾ' ಎಂಬ ಧಿಕ್ಕಾರದ ದಂಡನೆಯಿಂದ ದಂಡಿಸುವುದು, ಎಂದು ಆ ಮನುಕುಳತಿಳಕಂ ಪೇಟ್ದು + ಈ ಮಹಿಗೆ + ಆತ್ಮೀಯಮಹಿಮೆಯಂ ಪ್ರಕಟಿಸಿದಂ = ಎಂದು ಆ ಮನುಕುಲತಿಲಕನು ವಿಧಿಸಿ ತನ್ನ ಮಹಿಮೆಯನ್ನು ತೋರ್ಪಡಿಸಿದ.

**ಗದ್ಯಾನುಸರಣ**: ಈ ಪ್ರಕಾರ ನಡೆದುಕೊಳ್ಳದಿರುವವರನ್ನು 'ಹಾ ಮಾ ಧಿಕ್ಕಾರ' ಎಂಬ ಎಂಬ ಧಿಕ್ಕಾರದ ದಂಡನೆಯಿಂದ ದಂಡಿಸುವುದು– ಎಂದು ಆ ಮನುಕುಲತಿಲಕನು ವಿಧಿಸಿ ತನ್ನ ಮಹಿಮೆಯನ್ನು ತೋರ್ಪಡಿಸಿದ.

ವ॥ **ಮತ್ತಂ ದಂಡಧರರಿಲ್ಲದಂದು ತಂತಮ್ಮ ವೃತ್ತಿಗಳಂ ಪ್ರಜೆಗಳತಿಕ್ರಮಿಸಿ ನಡೆಗುಮೆಂದುಂ ಅತ್ಯಂತ ದುಷ್ಟಬಳವಜ್ಜನಗ್ರಸನದಿಂ ದುರ್ಬಳಜನಂಗಳೊಳ್ ಮತ್ಸ್ಯನ್ಯಾಯಂ ಪ್ರವರ್ತಿಸುಗು ಮೆಂದುಂ ಯಥೋಚಿತಧರಣೀಧರರಪ್ಪ**

ಭೂಪಾಳಕರನವರವರ ಪದವಿಯೊಳ್ ನಿಜಿಸಲ್ ಬಗೆದು ಮೂರ್ಧಾಭಿಷಿಕ್ತ ಮಂಡಳಿಕರಂ ಚತುಸ್ಸಹಸ್ರಮುಕುಟಬದ್ಧಪರಿವೃತರಂ ಸೋಮಪ್ರಭಹರ್ಯ ಕಂಪನಕಾಶ್ಯಪರಂ ಬರಿಸಿ ತದುಚಿತಪ್ರತಿಪತ್ತಿಗಳೊಳಿರಿಸಿ ತನಗಾಪ್ತನಪ್ಪ ಸೋಮಪ್ರಭಂಗೆ ಕುರುರಾಜಾಭಿಧಾನಮನಿಟ್ಟು ಕುರುಕುಲಾ ಗ್ರಗಣ್ಯನಂ ಹರಿಗೆ ಹರಿಕಾಂತನಾಮಮನಿಟ್ಟು ಹರಿವಂಶಧ್ವಜನಂ ಅಕಂಪನಂಗೆ ಶ್ರೀಧರಾಂಕ ನಾಮಮನಿಟ್ಟು ನಾಥಾನ್ವಯಪುರಸ್ಸರನಂ ಕಾಶ್ಯಪಂಗೆ ಮಘ ವಾಖ್ಯನಾಮ ಮನಿಟ್ಟು ಉಗ್ರವಂಶಲಲಾಮನಂ ಮಾಡಿ ಕಚ್ಛಮಹಾಕಚ್ಛ ಪ್ರಮುಖಧರಾಧಿನಾಥರುಮನಧಿರಾಜಪದವಿಯೊಳ್ ನಿಜಿಸಿ,

**ಪದವಿಭಾಗ–ಅನ್ವಯ–ಅರ್ಥ:** ಮತ್ತಂ ದಂಡಧರರ್ + ಇಲ್ಲದಂದು = ಅಲ್ಲದೆ ದಂಡಧದರು ಇಲ್ಲದಿದ್ದರೆ, ಪ್ರಜೆಗಳ್ ತಂತಮ್ಮ ವೃತ್ತಿಗಳಂ ಅತಿಕ್ರಮಿಸಿ ನಡೆಗುಂ + ಎಂದುಂ = ಪ್ರಜೆಗಳು ತಮಗೆ ನಿಯೋಜಿತವಾದ ವೃತ್ತಿಗಳನ್ನು ಬಿಟ್ಟು ನಡೆಯುತ್ತಾರೆಂದೂ, ಅತ್ಯಂತ ದುಷ್ಟಬಳವತ್ + ಜನಗ್ರಸನದಿಂ ದುರ್ಬಳಜನಂಗಳೊಳ್ ಮತ್ಸ್ಯನ್ಯಾಯಂ ಪ್ರವರ್ತಿಸುಗುಂ + ಎಂದುಂ = ತುಂಬ ಕೆಟ್ಟವರಾದ ಬಲಿಷ್ಠ ಜನರು ಕೈಲಾಗದ ಜನಗಳೊಡನೆ ಮತ್ಸ್ಯನ್ಯಾಯದಿಂದ ನಡೆದುಕೊಳ್ಳುವರೆಂದೂ, ಯಥಾ + ಉಚಿತಧರಣೀಧರರಪ್ಪ ಭೂಪಾಳಕರನ್ + ಅವರವರ ಪದವಿಯೊಳ್ ನಿಜಿಸಲ್ ಬಗೆದು = ಸಮರ್ಥರಾದ ರಾಜರನ್ನು ಅವರವರ ಪದವಿಯಲ್ಲಿ ನೆಲೆಗೊಳಿಸಬೇಕೆಂದೂ ಆಲೋಚಿಸಿ, ಚತುಃ + ಸಹಸ್ರ ಮೂರ್ಧಾ+ ಅಭಿಷಿಕ್ತಮಂಡಳಿಕರಂ ಮಕುಟಬದ್ಧಪರಿವೃತರಂ ಸೋಮಪ್ರಭ ಹರಿ + ಅಕಂಪನ ಕಾಶ್ಯಪರಂ ಬರಿಸಿ = ನಾಲ್ಕುಸಾವಿರ ಪಟ್ಟಾಭಿಷಿಕ್ತ ಮಂಡಳಿಕರೂ ಕಿರೀಟಧಾರಿಗಳೂ ಆದ ಸೋಮಪ್ರಭ ಹರಿ ಅಕಂಪನ ಮತ್ತು ಕಾಶ್ಯಪರನ್ನು ಕರೆಸಿಕೊಂಡು, ತತ್ + ಉಚಿತಪ್ರತಿಪತ್ತಿಗಳೊಳ್ + ಇರಿಸಿ = ಅವರನ್ನು ಸೂಕ್ತವಾದ ಮರ್ಯಾದೆಯನ್ನು ಮಾಡಿ, ತನಗೆ + ಆಪ್ತನಪ್ಪ ಸೋಮಪ್ರಭಂಗೆ ಕುರುರಾಜ + ಅಭಿಧಾನಮನ್+ಇಟ್ಟು ಕುರುಕುಲಾಗ್ರಗಣ್ಯನಂ = ತನಗೆ ಆತ್ಮೀಯನಾದ ಸೋಮಪ್ರಭನಿಗೆ ಕುರುರಾಜ ಎಂಬ ಹೆಸರನ್ನಿರಿಸಿ ಕುರುಕುಲದ ಮುಖಂಡನನ್ನಾಗಿಯೂ, ಹರಿಗೆ ಹರಿಕಾಂತನಾಮಮನ್ + ಇಟ್ಟು ಹರಿವಂಶ ಧ್ವಜನಂ = ಹರಿಗೆ ಹರಿಕಾಂತ ಎಂಬ ಹೆಸರನ್ನಿಟ್ಟು ಹರಿವಂಶಮುಖ್ಯನನ್ನಾಗಿಯೂ, ಅಕಂಪನಂಗೆ ಶ್ರೀಧರ + ಅಂಕನಾಮಮನ್+ಇಟ್ಟು ನಾಥ + ಅನ್ವಯಪುರಸ್ಸರನಂ = ಅಕಂಪನನಿಗೆ ಶ್ರೀಧರ ಎಂಬ ಹೆಸರನ್ನು ಕೊಟ್ಟು ನಾಥವಂಶದ ಮುಂದಾಳು ವನ್ನಾಗಿಯೂ, ಕಾಶ್ಯಪಂಗೆ ಮಘವಾಖ್ಯನಾಮಮನ್ + ಇಟ್ಟು ಉಗ್ರವಂಶಲಲಾಮನಂ = ಕಾಶ್ಯಪನಿಗೆ ಮಘವ ಎಂಬ ಹೆಸರನ್ನಿತ್ತು ಉಗ್ರವಂಶ ಶ್ರೇಷ್ಠನನ್ನಾಗಿಯೂ. ಮಾಡಿ, ಕಚ್ಛಮಹಾಕಚ್ಛ ಪ್ರಮುಖಧರಾ+ಅಧಿನಾಥರುಮನ್ + ಅಧಿರಾಜಪದವಿಯೊಳ್ ನಿಜಿಸಿ = ಕಚ್ಛಮಹಾಕಚ್ಛರೇ ಮುಂತಾದ ಮುಖ್ಯ ರಾಜರುಗಳನ್ನು ಅಧಿರಾಜಪದವಿಯನ್ನು ಸ್ಥಾಪಿಸಿ,

**ಗದ್ಯಾನುಸರಣ:** ಅಲ್ಲದೆ ದಂಡಧದರು ಇಲ್ಲದಿದ್ದರೆ ಪ್ರಜೆಗಳು ತಮಗೆ

ನಿಯೋಜಿತವಾದ ವೃತ್ತಿಗಳನ್ನು ಬಿಟ್ಟು ನಡೆಯುತ್ತಾರೆಂದೂ, ತುಂಬ ಕೆಟ್ಟವರಾದ ಬಲಿಷ್ಠ ಜನರು ಕೈಲಾಗದ ಜನಗಳೊಡನೆ ಮತ್ಸ್ಯನ್ಯಾಯದಿಂದ ನಡೆದುಕೊಳ್ಳುವರೆಂದೂ ಸಮರ್ಥರಾದ ರಾಜರನ್ನು ಅವರವರ ಪದವಿಯಲ್ಲಿ ನೆಲೆಗೊಳಿಸಬೇಕೆಂದೂ ಆದಿದೇವನು ಆಲೋಚಿಸಿದ; ನಾಲ್ಕುಸಾವಿರ ಮಂದಿ ಪಟ್ಟಾಭಿಷಿಕ್ತ ಮಂಡಳಿಕರೂ ಕಿರೀಟಧಾರಿಗಳೂ ಆದ ಸೋಮಪ್ರಭ ಹರಿ ಅಕಂಪನ ಮತ್ತು ಕಾಶ್ಯಪರನ್ನು ಕರೆಸಿಕೊಂಡು, ಅವರನ್ನು ಸೂಕ್ತವಾದ ಮರ್ಯಾದೆಯನ್ನು ಮಾಡಿದ; ತನಗೆ ಆತ್ಮೀಯನಾದ ಸೋಮಪ್ರಭನಿಗೆ ಕುರುರಾಜ ಎಂಬ ಹೆಸರನ್ನಿರಿಸಿ ಕುರುಕುಲದ ಮುಖಂಡನನ್ನಾಗಿಯೂ, ಹರಿಗೆ ಹರಿಕಾಂತ ಎಂಬ ಹೆಸರನ್ನಿಟ್ಟು ಹರಿವಂಶಮುಖ್ಯನನ್ನಾಗಿಯೂ, ಅಕಂಪನನಿಗೆ ಶ್ರೀಧರ ಎಂಬ ಹೆಸರನ್ನು ಕೊಟ್ಟು ನಾಥವಂಶದ ಮುಂದಾಳುವನ್ನಾಗಿಯೂ, ಕಾಶ್ಯಪನಿಗೆ ಮಘವ ಎಂಬ ಹೆಸರನ್ನಿತ್ತು ಉಗ್ರವಂಶಶ್ರೇಷ್ಠನನ್ನಾಗಿಯೂ. ಮಾಡಿದ; ಕಚ್ಛಮಹಾಕಚ್ಛರೇ ಮುಂತಾದ ಮುಖ್ಯ ರಾಜರುಗಳನ್ನು ಅಧಿರಾಜಪದವಿಯನ್ನು ಸ್ಥಾಪಿಸಿದ.

**ಸುತರುಮನವರ್ಗೆವರಭಿ**
**ಮತಮೆಂತದನಿತ್ತು ನಿಜಿಸಿದಂ ಪ್ರಭು ನಿಜಸಂ**
**ತತಿಯಂ ತಣಿಪಿ ಸುಹೃತ್ಸಂ**
**ತತಿಯಂ ಪೆರ್ಚಿಪುದು ರಾಜ್ಯಫಲಮಿನಿತೆ ವಲಂ** ೭೫

**ಪದವಿಭಾಗ–ಅನ್ವಯ–ಅರ್ಥ:** ಸುತರುಮನ್ + ಅವರ್ಗೆ + ಅವರ + ಅಭಿಮತಂ + ಎಂತು + ಅದನ್ + ಇತ್ತು = ಮಕ್ಕಳನ್ನೂ ಅವರವರ ಅಭಿಪ್ರಾಯಕ್ಕನುಗುಣವಾಗಿ ಅದನ್ನಿತ್ತು, ಪ್ರಭು ನಿಜಸಂತತಿಯಂ ತಣಿಪಿ = ಒಡೆಯನು ತನ್ನ ಸಂತಾನವನ್ನು ತೃಪ್ತಿಪಡಿಸಿದ; ಸುಹೃತ್ + ಸಂತತಿಯಂ ಪೆರ್ಚಿಪುದು ರಾಜ್ಯಫಲಂ + ಇನಿತೆ ವಲಂ = ಗೆಳೆಯವರ್ಗವನ್ನು ಹೆಚ್ಚಿಸಿಕೊಳ್ಳುವ ರಾಜ್ಯಫಲವು ಇಷ್ಟೇ ಅಲ್ಲವೇ?

ಗದ್ಯಾನುಸರಣ: ಮಕ್ಕಳಿಗೆ ಅವರವರ ಅಭಿಪ್ರಾಯಕ್ಕನುಗುಣವಾಗಿ ಅದನ್ನಿತ್ತು ಒಡೆಯನು ತನ್ನ ಸಂತಾನವನ್ನು ತೃಪ್ತಿಪಡಿಸಿದ; ಗೆಳೆಯವರ್ಗವನ್ನು ಹೆಚ್ಚಿಸಿಕೊಳ್ಳುವ ರಾಜ್ಯಫಲವು ಇಷ್ಟೇ ಅಲ್ಲವೇ?

**ವ॥ ಅಂತಾದಿದೇವನಿಕ್ಷುರಸಸಂಗ್ರಹಣ ಸಮಯಾ ಹೂತಭೂತಳ'ನಪ್ಪುದಱಿಂದಂ ಇಕ್ಷ್ವಾಕುಕುಳತಿಳಕನುಂ ಪ್ರಜಾ ಜೀವನೋ ಪಾಯ ಮನನದಿಂದೆ ಮನುವುಂ ನಿಜಕು ಲೋದ್ಧರಣದಿಂ ಕುಲಧರನುಂ ತೇಜೋ ವಾಚಕಮಪ್ಪ ಕಾಶ್ಯಮಂ ಪಾಲಿಸುವುದಱಿಂ ಕಾಶ್ಯಪನುಂ ಕೃತಯುಗಾ ರಂಭಕ್ಕಾದಿಯಾದುದಱಿಂದಂ ಆದಿಬ್ರಹ್ಮನುಂ ಎಂಬ ಅಪೂರ್ವಾ ಭಿಧಾನಮಂ ಪ್ರಯೋಗಿಪ್ಪನ್ವರ್ಥನಾಮಂಗಳುಂ ಲೋಕ ಪ್ರಸಿದ್ಧಮಾಗಿರಲ್ ಅಱುವತ್ತುಮೂಱುಲಕ್ಕೆ ಪುಬ್ಬಂ ರಾಜ್ಯಕಾಲಂ ಸಲೆ**

**ಪದವಿಭಾಗ-ಅನ್ವಯ-ಅರ್ಥ:** ಅಂತು + ಆದಿದೇವನ್ = ಹೀಗೆ ಆದಿದೇವನು, ಇಕ್ಷುರಸಸಂಗ್ರಹಣಸಮಯಾಹೂತಭೂತಳನ್ + ಅಪ್ಪುಱಿಂದಂ = ಕಬ್ಬಿನ ರಸವನ್ನು ತೆಗೆಯುವ ಪದ್ಧತಿಯನ್ನಾರಂಭಿಸಿದ್ದರಿಂದಾಗಿ, ಇಕ್ಷ್ವಾಕುಕುಳತಿಳಕನುಂ = ಇಕ್ಷ್ವಾಕುಕುಲತಿಲಕ, ಪ್ರಜಾಜೀವನೋಪಾಯಮನನದಿಂದೆ ಮನುವುಂ = ಪ್ರಜೆಗಳ ಜೀವನೋಪಾಯವನ್ನು ಆಲೋಚಿಸಿದ್ದರಿಂದಾಗಿ ಮನು, ನಿಜಕುಲ + ಉದ್ಧರಣದಿಂ ಕುಲಧರನುಂ = ತನ್ನ ಕುಲವನ್ನು ಉದ್ಧಾರಮಾಡಿದ್ದರಿಂದಾಗಿ ಕುಲಧರ, ತೇಜೋವಾಚಕಮಪ್ಪ ಕಾಶ್ಯಮಂ ಪಾಲಿಸುವುದಱಿಂ ಕಾಶ್ಯಪನುಂ = ತೇಜಸ್ಸನ್ನು ಸೂಚಿಸುವ ಹೊಳಪನ್ನು ಪಡೆದಿದ್ದುದ'ರಿಂದ ಕಾಶ್ಯಪ, ಕೃತಯುಗ + ಆರಂಭಕ್ಕೆ + ಆದಿಯಾದುದಱಿಂದಂ ಆದಿಬ್ರಹ್ಮನುಂ = ಕೃತಯುಗದ ಆರಂಭಕ್ಕೆ ಕಾರಣನಾದುದರಿಂದ ಆದಿಬ್ರಹ್ಮ, ಎಂಬ ಅಪೂರ್ವ + ಅಭಿಧಾನಮಂ ಪ್ರಯೋಗಿಪ್ಪ + ಅನ್ವರ್ಥನಾಮಂಗಳುಂ ಲೋಕಪ್ರಸಿದ್ಧಮಾಗಿರಲ್ = ಎನ್ನುವ ಅಪರೂಪವಾದ ಹೆಸರುಗಳು ಅರ್ಥಕ್ಕನುಗುಣವಾಗಿ ಬಳಕೆಗೊಂಡು ಜಗತ್ತಿನಲ್ಲಿ ಪ್ರಸಿದ್ಧವಾಗಿ, ಅಱುವತ್ತುಮೂಱುಲಕ್ಕೆ ಪುಬ್ಬಂ ರಾಜ್ಯಕಾಲಂ ಸಲೆ = ಹೀಗೆ ಅರುವತ್ತುಮೂರು ಲಕ್ಷ ಪೂರ್ವಗಳ ಕಾಲ ರಾಜ್ಯಭಾರ ನಡೆಯಲು,

**ಗದ್ಯಾನುಸರಣ:** ಹೀಗೆ ಆದಿದೇವನು ಕಬ್ಬಿನ ರಸವನ್ನು ತೆಗೆಯುವ ಪದ್ಧತಿಯನ್ನಾರಂಭಿಸಿದ್ದರಿಂದಾಗಿ, ಇಕ್ಷ್ವಾಕುಕುಲತಿಲಕ, ಪ್ರಜೆಗಳ ಜೀವನೋಪಾಯವನ್ನು ಆಲೋಚಿಸಿದ್ದರಿಂದಾಗಿ ಮನು, ತನ್ನ ಕುಲವನ್ನು ಉದ್ಧಾರ ಮಾಡಿದ್ದರಿಂದಾಗಿ ಕುಲಧರ, ತೇಜಸ್ಸನ್ನು ಸೂಚಿಸುವ ಹೊಳಪನ್ನು ಪಡೆದಿದ್ದುದರಿಂದ ಕಾಶ್ಯ, ಕೃತಯುಗದ ಆರಂಭಕ್ಕೆ ಕಾರಣನಾದುದರಿಂದ ಆದಿಬ್ರಹ್ಮ – ಎನ್ನುವ ಅಪರೂಪವಾದ ಹೆಸರುಗಳು ಅರ್ಥಕ್ಕನುಗುಣವಾಗಿ ಬಳಕೆಗೊಂಡು ಜಗತ್ತಿನಲ್ಲಿ ಪ್ರಸಿದ್ಧನಾದ; ಹೀಗೆ ಆತನು ಅರುವತ್ತುಮೂರು ಲಕ್ಷ ಪೂರ್ವಗಳ ಕಾಲ ರಾಜ್ಯಭಾರ ನಡೆಸಿದ.

**ಪೆಸರ್ಗಳ್ ಕರ್ಣಾಮೃತಸ್ಯಂದಿಗಳೊದವಿದಪೂರ್ವಾಭಿಧಾನಂಗಳೋರಂ**
**ತೆಸಗುತ್ತಿರ್ಪನ್ನೆಗಂ ಮಾಡಿದ ಕುರುಹರಿನಾಥೋಗ್ರವಂಶಂಗಳಿಂತೀ**
**ವಸುಧಾಚಕ್ರಕ್ಕೆ ಸಲ್ವನ್ನೆಗಮೆಸೆದಿರೆ ವರ್ಣಕ್ರಮಂ ಕರ್ಮಭೂಮಿ**
**ಪ್ರಸರಕ್ಕಿಂತಾದಿಯಾದಂ ಸುಕವಿಜನೋಮಾನಸೋತ್ತಂಸಹಂಸಂ೭೬**

**ಪದವಿಭಾಗ-ಅನ್ವಯ-ಅರ್ಥ:** ಕರ್ಣ + ಅಮೃತಸ್ಯಂದಿಗಳ್ ಪೆಸರ್ಗಳ್ = ಕಿವಿಗಳಿಗೆ ಹಾಲೆರೆಯುವಂತಹ ಹೆಸರುಗಳಾಗಿ, ಒದವಿದ + ಅಪೂರ್ವ + ಅಭಿಧಾನಂಗಳ್ = ದೊರೆತ ಅಪರೂಪದ ವಿಶೇಷಣಗಳೂ, ಓರಂತೆ + ಎಸಗುತ್ತಿರ್ಪನ್ನೆಗಂ ಮಾಡಿದ = ನಿರಂತರವಾಗಿ ಪ್ರಸಿದ್ಧವಾಗಿರುವಂತೆ ಮಾಡಿದ, ಕುರು ಹರಿ ನಾಥ ಉಗ್ರವಂಶಂಗಳ್ = ಕುರು ಹರಿ ನಾಥ ಮತ್ತು ಉಗ್ರ ಎಂಬ ಹೆಸರಿನ ವಂಶಗಳೂ, ಇಂತು + ಈವಸುಧಾಚಕ್ರಕ್ಕೆ ಸಲ್ವನ್ನೆಗಂ + ಎಸೆದಿರೆ = ಈ ಭೂಮಂಡಲವು ಇರುವವರೆಗೂ ಶೋಭಿಸಲು, ಸುಕವಿಜನೋಮಾನಸೋತ್ತಂಸಹಂಸಂ ವರ್ಣಕ್ರಮಂ ಕರ್ಮಭೂಮಿಪ್ರಸರಕ್ಕೆ + ಇಂತು ಆದಿ +

ಆದಂ = ಸುಕವಿಜನರ ಮನಸ್ಸೆಂಬ ಸರೋವರದಲ್ಲಿ ವಿಹರಿಸುವ ಆದಿದೇವನು ಕರ್ಮಭೂಮಿಯು ನೆಲೆಸಲು ಕಾರಣನಾದ.

**ಗದ್ಯಾನುಸರಣ:** ಕಿವಿಗಳಿಗೆ ಹಾಲೆರೆಯುವಂತಹ ಹೆಸರುಗಳಾಗಿ ದೊರೆತ ಅಪರೂಪದ ಈ ವಿಶೇಷಣಗಳೂ, ನಿರಂತರವಾಗಿ ಪ್ರಸಿದ್ಧವಾಗಿರುವಂತೆ ಮಾಡಿದ ಕುರು ಹರಿ ನಾಥ ಮತ್ತು ಉಗ್ರ ಎಂಬ ಹೆಸರಿನ ವಂಶಗಳೂ ಭೂಮಂಡಲವು ಇರುವವರೆಗೂ ಶೋಭಿಸುವಂತೆ ಮಾಡಿ ಸುಕವಿಜನರ ಮನಸ್ಸೆಂಬ ಸರೋವರದಲ್ಲಿ ವಿಹರಿಸುವ ಆದಿದೇವನು ಕರ್ಮಭೂಮಿಯು ನೆಲೆಸಲು ಕಾರಣನಾದ.

ನಾನಾಮಾನ್ಯಜನಾಂತರಂಗನಿಹಿತಾನಂದೋದಯಂ ದಿವ್ಯಸಂ
ತಾನಸ್ರಗ್ಮಣಿಭೂಷಣಾಂಬರಧರಂ ಸ್ವಾಧೀನಸಂಗತ್ವಸಂ
ತಾನಂ ಪುತ್ರಕಳತ್ರಮಿತ್ರಸಹಿತಂ ಸಾಕೇತಸಿಂಹಾಸನಾ
ಸೀನಂ ಪಾಲಿಸಿದಂ ಮಹೀವಳಯಮಂ ಸಂಸಾರಸಾರೋದಯಂ೭೭

**ಪದವಿಭಾಗ-ಅನ್ವಯ-ಅರ್ಥ:** ನಾನಾಮಾನ್ಯಜನ + ಅಂತರಂಗನಿಹಿತ + ಆನಂದ + ಉದಯಂ = ಮಾನ್ಯರಾಧ ಜನಗಳ ಮನಸ್ಸಿನಲ್ಲಿ ಆನಂದವನ್ನುಂಟುಮಾಡುವವನೂ, ದಿವ್ಯಸಂತಾನಸ್ರಗ್ಮಣಿಭೂಷಣ + ಅಂಬರಧರಂ = ಶ್ರೇಷ್ಠವಾದ ಸಂತಾನಪುಷ್ಪ ರತ್ನಖಚಿತ ಆಭರಣಗಳು ಮತ್ತು ವಸ್ತ್ರಗಳನ್ನು ಧರಿಸಿದವನಾಗಿ, ಸ್ವಾಧೀನಸಂಗತ್ವಸಂತಾನಂ = ಸಂಪಾದಿಸಿಕೊಂಡ ಮೈತ್ರಿಗಳನ್ನುಳ್ಳವನಾಗಿ, ಪುತ್ರಕಳತ್ರಮಿತ್ರಸಹಿತಂ = ಮಕ್ಕಳು ಹೆಂಡಂದಿರ ಜೊತೆಯಲ್ಲಿ, ಸಾಕೇತ ಸಿಂಹಾಸನಾಸೀನಂ ಸಂಸಾರಸಾರೋದಯಂ ಪಾಲಿಸಿದಂ ಮಹೀವಳಯಮಂ = ಸಾಕೇತದ ಸಿಂಹಾಸನಸ್ಥನಾದ ಸಂಸಾರಸಾರೋದಯನು ಭೂಮಂಡಲವನ್ನು ಪಾಲಿಸಿದ.

**ಗದ್ಯಾನುಸರಣ:** ಮಾನ್ಯರಾಧ ಜನಗಳ ಮನಸ್ಸಿಗೆ ಆನಂದವನ್ನುಂಟು ಮಾಡುವವನಾಗಿ, ಶ್ರೇಷ್ಠವಾದ ಸಂತಾನಪುಷ್ಪ ರತ್ನಖಚಿತ ಆಭರಣಗಳು ಮತ್ತು ವಸ್ತ್ರಗಳನ್ನು ಧರಿಸಿ, ಮೈತ್ರಿಸಂತಾನವನ್ನು ಸಂಪಾದಿಸಿಕೊಂಡು ಸಾಕೇತದ ಸಿಂಹಾಸನಸ್ಥನಾದ ಮಕ್ಕಳು ಹೆಂಡಂದಿರ ಜೊತೆಯಲ್ಲಿ ಸಂಸಾರಸಾರೋದಯನು ಭೂಮಂಡಲವನ್ನು ಪಾಲಿಸಿದ.

**ಇಲ್ಲಿಗೆ ಕರ್ಮಭೂಮಿನಿಯೋಗನಿರೂಪಣ ಎಂಬ ಎಂಟನೆಯ ಆಶ್ವಾಸ ಮುಗಿಯಿತು**

ಹತ್ತನೆಯ ಶತಮಾನದ ಮೊದಲರ್ಧದಲ್ಲಿದ್ದ ಆದಿ ಕವಿ ಪಂಪನ ಮೊದಲ ಕಾವ್ಯವಾದ 'ಆದಿಪುರಾಣ'ವು ಹೊರ ಪರಿವೇಷದಲ್ಲಿ ಜೈನಧರ್ಮೀಯರಿಗೆ ಸಂಬಂಧಿಸಿದಂತೆ ಕಂಡರೂ ಆಂತರ್ಯದಲ್ಲಿ ಅದು ಬದುಕನ್ನು ಕುರಿತ ಹುಡುಕಾಟವೇ ಆಗಿದೆ. ಕಾವ್ಯಕ್ಕೆ ಆ ಹೆಸರು ಬಂದಿರುವುದು ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಮೊದಲನೆಯವನಾದ ಋಷಭನಾಥನ ಕಥಾನಕ ಎಂಬುದಾದರೂ, ಇಡೀ ಮನುಷ್ಯಕುಲದ ಇತಿವೃತ್ತವೂ ಅದರಲ್ಲಿ ಅಂತರ್ಗತವಾಗಿದೆ. ಕಾವ್ಯದ ಮೊದಲಲ್ಲಿ ಮಾನವ ಸಂಕುಲವು ತನ್ನ ಅಸ್ತಿತ್ವದ ಆದಿಮ ಹಂತದಲ್ಲಿ ಪ್ರಕೃತಿಯೊಡನೆ ಹೊಂದಿಕೊಳ್ಳುವ ಕ್ರಮಾಗತವಾದ ರೀತಿಯ ಕುರಿತ ಬಣ್ಣನೆಯಿದ್ದರೆ, ಮುಂದಿನ ನಿರೂಪಣೆಯಲ್ಲಿ ಮಾನವ ಚೇತನವು ಎದುರಿಸುವ ಬದುಕಿನ ನಿತ್ಯನಿಗೂಢಗಳು ಹಾಗೂ ಇರುವಿಕೆಯ ಸಾರ್ಥಕತೆಯ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಪರಿಯನ್ನು ಚಿತ್ರಿಸುತ್ತದೆ. ಇಲ್ಲಿನ ಕಥಾವಸ್ತುವನ್ನು ಹಾಗೂ ಅನೇಕ ವಿವರಗಳನ್ನು ಒಂಬತ್ತನೆಯ ಶತಮಾನದಲ್ಲಿದ್ದು, ಜಿನಸೇನಾಚಾರ್ಯನ 'ಪೂರ್ವಪುರಾಣ'ವೆಂಬ ಸಂಸ್ಕೃತ ಕಾವ್ಯದಿಂದ ಪಂಪ ತೆಗೆದುಕೊಂಡಿದ್ದರೂ, ಅದರಲ್ಲಿ ತನ್ನ ಒಳನೋಟಗಳ ದ್ರವ್ಯವನ್ನು ತುಂಬಿ ಕಾವ್ಯವನ್ನು "ಇದು ನಿಚ್ಚಂ ಪೊಸತು" ಎನಿಸುವಂತೆ ಮಾಡಿದ್ದಾನೆ. ಪ್ರಸಿದ್ಧ ವಿದ್ವಾಂಸರಾದ ಡಾ. ಪಿ.ವಿ. ನಾರಾಯಣ ಅವರು ಕನ್ನಡದ ಓದುಗರು ಆದಿಪುರಾಣದ ಅನುಭೂತಿಗೆ ಒಳಗಾಗುವಂತೆ ವಿಸ್ತೃತವಾದ ವಿವರಣೆ ನೀಡಿದ್ದಾರೆ.

**ಡಾ॥ ವಸುಂಧರಾ ಭೂಪತಿ**

**ಅಧ್ಯಕ್ಷರು**

KANNADA PUSTAKA PRADHIKARA
KPP 0376 AND 0377 PRICE Rs:1200/-
9 789352 892075
ಆದಿ ಪುರಾಣ ಸಂಪುಟ-1 & 2